ಅತಿಥಿಗಳ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿ ವಕೀಲರಾದ ಶ್ರೀ ಹೆಚ್. ಸುಬ್ಬರಾಯರು ಸಮಯೋಚಿತವಾಗಿ ಭಾಷಣ ಮಾಡಿ, ಸಾಧ್ವಿ ಪತ್ರಿಕೆಗೆ ಶುಭಾಶಯವನ್ನು ಕೋರಿದರು.

ಮುಖ್ಯಮಂತ್ರಿ ಶ್ರೀ ಚಂಗಲರಾಯ ರೆಡ್ಡಿಯವರು ಮಾತನಾಡಿ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಪಾತ್ರವನ್ನು ಸೂಕ್ಷ್ಮವಾಗಿ ವಿವರಿಸಿದರು. ಪತ್ರಿಕೆಗಳು ವಿವೇಚನೆಯಿಲ್ಲದೆ ಬರೆಯುವುದರ ಅನರ್ಥವನ್ನು ವರ್ಣಿಸಿ, ಹಿಂದೆ ಇದ್ದ ಸರ್ಕಾರಗಳ ಕೆಲಸಕಾರ್ಯಗಳಿಗಿಂತ ಬಹು ಹತ್ತರಷ್ಟು ಹೆಚ್ಚಾಗಿ ಕಾರ್ಯಭಾರವನ್ನು ಈಗಿನ ಪ್ರಜಾಪ್ರಭುತ್ವ ಸರ್ಕಾರವು ನಡೆಸಬೇಕಾಗಿದೆಯೆಂದೂ, ಪ್ರಜೆಗಳು ಸನ್ಮಾರ್ಗದಲ್ಲಿ ನಡೆಯುವಂತೆ ಪತ್ರಿಕೆಗಳು ಮಾರ್ಗದರ್ಶನ ಮಾಡಬೇಕೆಂದೂ ಕೋರಿದರು. ಪ್ರಜಾಪ್ರಭುತ್ವವು ಎಲ್ಲ ಆಡಳಿತ ಪದ್ಧತಿಗಳಿಗಿಂತಲೂ ಹೆಚ್ಚು ಕಠಿಣತರವಾದುದೆಂದು ಅವರು ಹೇಳಿ ಅದರ ಯಶಸ್ಸಿಗೆ ಪತ್ರಿಕಾಪಾಲಕರು ಸಂಪೂರ್ಣ ನೆರವು ನೀಡಬೇಕೆಂದು ಕೋರಿದರು.

ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಭಾರತದ ಮೇಲೆ ಬೀಳಲು ಆಜಾದ್ ಕಾಶ್ಮೀರಿಗಳ ಆತುರ

ಭಾರತದ ಜನರ ಮೇಲೆ ಬೀಳಲು ಪಾಕಿಸ್ತಾನ ಸರ್ಕಾರದ ಆಜ್ಞೆಯನ್ನು ಕಾದು ಇದಿರು ನೋಡುತ್ತಿರುವುದಾಗಿ ಆಜಾದ್ ಕಾಶ್ಮೀರ ವಿಮೋಚನಾ ಚಳುವಳಿಯ ಪ್ರಧಾನ ನಾಯಕ ಚೌದರಿ ಗುಲಾಂ ಅಬ್ಬಾಸ್‌ರವರು ಘೋಷಿಸಿರುತ್ತಾರೆ, ಭಾರತೀಯರ ಸಂಗ್ರಾಮದ ಸವಾಲನ್ನು ಪಾಕಿಸ್ತಾನ ಮತ್ತು ಆಜಾದ್ ಕಾಶ್ಮೀರದ ಜನರು ಎದುರಿಸುವುದಕ್ಕಾಗಿ ತಮ್ಮ ಮನೆಮಠಗಳನ್ನು ತೊರೆದು ಮುಂದೆ ಬರಲು ಸಿದ್ಧರಾಗಿರುವುದಾಗಿಯೂ ಸಹ ಅವರು ಹೇಳಿದ್ದಾರೆ.

ಪಾಕಿಸ್ತಾನದ ರಕ್ಷಣಾ ಸಿದ್ಧತೆ

ಲಾಹೋರಿನ ಡೆಪ್ಯುಟಿ ಕಮೀಷನರು ಪಾಕಿಸ್ತಾನದ ಮುಖ್ಯಾಧಿಕಾರಿಗಳ ರಹಸ್ಯ ಸಭೆಯೊಂದನ್ನು ಕರೆದು ಅದರಲ್ಲಿ ಪಾಕಿಸ್ತಾನದ ರಕ್ಷಣಾ ಕ್ರಮಗಳನ್ನು ಕುರಿತ ಚರ್ಚೆ ನಡೆಸಿದರೆಂದು ತಿಳಿದು ಬಂದಿದೆ.

ರಾವಲ್ಪಿಂಡಿ ನಗರದ ಸುತ್ತಲೂ ಕಳೆದ ೪೮ ಗಂಟೆಗಳಲ್ಲಿ ಸಾವಿರಾರು ಕಂದಕಗಳನ್ನು ಅಲ್ಲಿನ ಜನರು ತೋಡಿರುವುದಾಗಿ ವರದಿಯಾಗಿದೆ.

ಪಾಕಿಸ್ತಾನದಿಂದ ಭಾರತಕ್ಕೆ ಪ್ರತಿಭಟನೆ

ಭಾರತದಲ್ಲಿ ಪಾಕಿಸ್ತಾನದ ವಿರುದ್ಧವಾಗಿ ನಡೆಯುತ್ತಿರುವ ಚಟುವಟಿಕೆಗಳಿಗಾಗಿ ಪಾಕಿಸ್ತಾನ ಸರ್ಕಾರವು ಭಾರತ ಸರ್ಕಾರಕ್ಕೆ ಪ್ರತಿಭಟನೆಯನ್ನು ಸೂಚಿಸಿರುತ್ತದೆ. ಕಲ್ಕತ್ತಾ ಪತ್ರಿಕೆಗಳಲ್ಲಿ ಉಗ್ರ ಲೇಖನಗಳು ಬರುತ್ತಿವೆಯೆಂದೂ, ಹಿಂದೂ ಮಹಾ ಸಭೆಯ ಮುಖಂಡರಿಂದ ವಿರೋಧ ಭಾಷಣಗಳಾಗುತ್ತಿವೆಯೆಂದೂ ಆಪಾದಿಸಲಾಗಿದೆ. ಭಾರತದ ವಿರುದ್ಧವಾಗಿ ಪಾಕಿಸ್ತಾನದಲ್ಲಿ "ಧರ್ಮಯುದ್ಧದ" ಚಳುವಳಿ ನಡೆಯುತ್ತಿದೆಯೆಂಬುದನ್ನೂ ನಿರಾಕರಿಸಲಾಗಿದೆ. ಪಾಕಿಸ್ತಾನ ವಿರೋಧಿಗಳಿಂದುಂಟಾದ ಕೋಮುವಾರು ಅನಿಶ್ಚಿತ ಪರಿಸ್ಥಿತಿಯಿಂದ ಅನೇಕ ಮುಸ್ಲಿಮರು ಭಾರತವನ್ನು ಬಿಟ್ಟು ಹೊರಡುವಂತಾಗಿದೆಯೆಂದೂ ಸಹ ಸೂಚಿಸಲಾಗಿದೆ.

ಯುದ್ಧಕ್ಕೆ ಸೇರಲು ಗುಡ್ಡಗಾಡು ಪಠಾಣರ ನಿರಾಕರಣೆ

ಕಾಶ್ಮೀರದ ಉತ್ತರದ ತುದಿಯಲ್ಲಿರುವ ಗಿಲ್ಗಿಟ್ ಮತ್ತು ಸುತ್ತಮುತ್ತಲೂ ವಾಸವಾಗಿರುವ ಪಠಾಣರು ಭಾರತದ ವಿರುದ್ಧವಾಗಿ ಪಾಕಿಸ್ತಾನವು ಸಿದ್ಧತೆ ಮಾಡಿಕೊಳ್ಳುತ್ತಿರುವ "ಧರ್ಮ ಯುದ್ಧಕ್ಕೆ" ಸೇರಲು ನಿರಾಕರಿಸಿರುತ್ತಾರೆಂದು ಗೊತ್ತಾಗಿದೆ. ಅಲ್ಲಿರುವವರು ಕಾಶ್ಮೀರ ಸರ್ಕಾರದ ಆಧಿಪತ್ಯವನ್ನು ಒಪ್ಪಿರುತ್ತಾರೆ. ಹೋದ ಶತಮಾನದಲ್ಲಿ ಕಾಶ್ಮೀರದ ಅರಸರು ಆ ಪ್ರದೇಶವನ್ನು ಆಕ್ರಮಿಸಿಕೊಂಡಾಗಿನಿಂದ ಅಲ್ಲಿನ ಜನರು ಸ್ವತಂತ್ರರಾಗಿರಲು ಅವಕಾಶವೇ ಇಲ್ಲವಾಗಿದೆ.

ಮಂತ್ರಿಗಳು ವಾಪಸು

ವರ್ಧಂತಿ ಸಂಬಂಧವಾಗಿ ಆಗಮಿಸಿದ್ದ ಮಂತ್ರಿಗಳೆಲ್ಲರೂ ಈ ದಿನ ಬೆಂಗಳೂರಿಗೆ ಹಿಂತಿರುಗಿದರು.

ಕಸಿನ್ಸ್‌ರವರ ವರ್ಧಂತಿ

ಕೆ ಸಿ. ರೆಡ್ಡಿಯವರ ಭಾಷಣ

ಒ ಬಾ] ಮದನಪಲ್ಲಿ ೨೩

ಇಲ್ಲಿನ ಬೆಸೆಂಟ್ ಭವನದಲ್ಲಿ ನೆನ್ನೆ ನಡೆದ ಸಭೆಯಲ್ಲಿ ಡಾ|| ಜೇಮ್ಸ್ ಹೆಚ್ ಕಸಿನ್ಸ್‌ರವರ ೭೯ನೇ ವರ್ಷದ ವರ್ಧಂತಿಯ ಸಮಾರಂಭದಲ್ಲಿ ಅವರು ಭಾರತದ ಕಲೆ ಮತ್ತು ವಿದ್ಯಾಭ್ಯಾಸಗಳಿಗೆ ಸಲ್ಲಿಸಿದ ಸೇವೆಗಾಗಿ ಶ್ಲಾಘನೆ ಮಾಡಲಾಯಿತು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು ಕಸಿನ್ಸ್ ದಂಪತಿಗಳೂ ಹಾಜರಿದ್ದರು ಭಾರತ ಸಮಾಜ ಪೂಜೆ, ಪ್ರಾರ್ಥನೆಗಳಾದ ನಂತರ ಇಲ್ಲಿನ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ ಬಿ ಆರ್ ಕುಮಾರ್‌ರವರು ಸ್ವಾಗತ ಭಾಷಣ ಮಾಡಿದರು

ಅಧ್ಯಕ್ಷರು ಭಾಷಣ ಮಾಡಿ ಕಸಿನ್ಸ್‌ರವರು ತತ್ವಜ್ಞಾನಿ, ಕವಿ, ಮತ್ತು ವಿದ್ಯಾಪಾರಂಗತರಾಗಿರುವರಲ್ಲದೆ ಸತ್ಯವನ್ನು ಅರಸುತ್ತಿರುವ ಯಾತ್ರಾರ್ಥಿಗಳೆಂದು ಹೇಳಿದರು ಮೈಸೂರಿನಲ್ಲಿರುವ ಕಲಾಶಾಲೆಯು ಡಾ|| ಕಸಿನ್ಸ್‌ರವರ ಕೌಶಲ್ಯಯುತ ಬುದ್ಧಿಯಿಂದ ಬಂದುದೆಂದೂ ಬೆಂಗಳೂರಿನಲ್ಲೂ ಸಹ ಅವರ ಸಹಾಯದಿಂದ ಒಂದು ಕಲಾ ಎಂಪೋರಿಯಂ ಅನ್ನು ಸ್ಥಾಪಿಸಲಾಗುವುದೆಂದೂ, ತಿಳಿಸಿದರು ಅವರ ಪತ್ನಿಯು ಭಾರತ ಮಹಿಳೆಯರಿಗೆ ಮಾಡಿದ ಸೇವೆಯನ್ನು ಕೊಂಡಾಡಿದರು

ಡಾ|| ಕಸಿನ್ಸ್‌ರವರು ಕೃತಜ್ಞತೆಯನ್ನು ಸೂಚಿಸಿದರು

೧|| ಲಕ್ಷ ರೂ. ಕೃತಕ ನೋಟು ಬಗ್ಗೆ ೨ ಸ್ತ್ರೀಯರ ದಸ್ತಗಿರಿ

ತಿರುವಾಂಕೂರಿನ ಹುಜೂರ್ ಸೆಕ್ರೆಟೇರಿಯಟ್ಟಿನಲ್ಲಿ ಗುಮಾಸ್ತೆಯಾಗಿರುವ ಕೆ ವಿ ಮರಿಯಮ್ಮ ಮತ್ತು ಟೈಪಿಸ್ಟ್ ಆಗಿರುವ ಕೆ ವಿ ಸೇಸಮ್ಮ ಎಂಬುವರು ಸಹೋದರಿಯರನ್ನು ಇತ್ತೀಚೆಗೆ ಅಲ್ಲಿ ೧|| ಲಕ್ಷ ರೂ ಮೊತ್ತದ ಕೃತಕ ನೋಟು ತಯಾರಿ ಸಂಬಂಧವಾಗಿ ದಸ್ತಗಿರಿ ಮಾಡಲಾಗಿದೆ ಇವರಲ್ಲದೆ ಇನ್ನೂ ನಾಲ್ಕು ಜನ ಗಂಡಸರನ್ನು ಬಂಧಿಸಲಾಗಿದೆ

ನೆಹರೂ ಮತ್ತು ಲಿಯಾಖತ್‌ರವರ ಭೇಟಿಯೇ ?

ಭಾರತದ ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಮಾತು ಕತೆ ನಡೆಸಬೇಕೆಂದು ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಆಲಿಖಾನರಿಗೆ ವಿಶ್ವಸಂಸ್ಥೆಯ ಕಾಶ್ಮೀರದ ಮಧ್ಯಸ್ಥಿಕೆಗಾರರಾದ ಡಾ|| ಫ್ರಾಂಕ್ ಗ್ರಹಾಂರವರು ಮಾಡಿರುವ ಸಲಹೆಗೆ ಲಿಯಾಖತ್ತರು ಒಪ್ಪಿರುವುದಾಗಿಯೂ ಇದೇ ರೀತಿಯಲ್ಲಿ ಅವರು ನೆಹರೂರವರಿಗೂ ಸಲಹೆಯಾಯಬಹುದೆಂದೂ, ಅವರಿಬ್ಬರಿಗೂ ಭೇಟಿ ನಡೆಯ ಬಹುದೆಂದೂ ಕರಾಚಿಯ ವಾರ್ತೆಯೊಂದು ತಿಳಿಸುತ್ತದೆ

ಪಾಕಿಸ್ತಾನಕ್ಕೆ ಹೊರದೇಶಗಳ ಬೆಂಬಲವಿಲ್ಲ

ಪಾಕಿಸ್ತಾನವು ಸ್ವಲ್ಪ ದುಡುಕಿದರೂ ಅದಕ್ಕೆ ಹೊರಗಿನ ಪ್ರಪಂಚದಿಂದ ಎಳ್ಳಷ್ಟು ಸಹಾನುಭೂತಿ ದೊರೆಯದೆಂದೂ, ಯುದ್ಧವೇನಾದರೂ ನಡೆದರೆ ಹೊರಗಡೆಯಿಂದ ಪಾಕಿಸ್ತಾನಕ್ಕೆ ಬಹು ಶೀಘ್ರವಾದ ರಕ್ಷಣೆಯು ಸಿಗುವ ಸಂಭವವೇ ಇಲ್ಲವೆಂದೂ ಎಚ್ಚರಿಸಿ, ಇಂಗ್ಲೆಂಡಿನ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ತಿಳಿಸುತ್ತದೆ

ಉ|| ಕೊರಿಯಾ ರಾಜಧಾನಿ ಮೇಲೆ ಪುನಃ ಬಾಂಬು ಧಾಳಿ

ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್ಯಾಂಗ್ ನಗರದ ಮೇಲೆ ವಿಶ್ವಸಂಸ್ಥೆ ವಿಮಾನಗಳು ಧಾಳಿ ನಡೆಸಿದುದಾಗಿ ರಷ್ಯದ ಟಾಸ್ ವರ್ತಮಾನ ಸಂಸ್ಥೆಯು ವರದಿ ಮಾಡಿರುತ್ತದೆ

ಕೇಂದ್ರ ಮಂತ್ರಿ ಮಂಡಲ, ಕಾಂಗ್ರೆಸ್‌ಪಕ್ಷದಲ್ಲಿ ಬಿಕ್ಕಟ್ಟು

ಕಿದ್ವಾಯ್ ಮತ್ತು ಜೈನ್ ರವರು ಕಾಂಗ್ರೆಸ್ ಅಧ್ಯಕ್ಷರನ್ನು ಮೂಸಿ ಡೀಳ್ ಕೆ ಹೊರತಿಸಿರುವುದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಕೇಂದ್ರ ಮಂತ್ರಿಮಂಡಲ ಮತ್ತು ಪಾರ್ಲಿಮೆಂಟರಿ ಪಕ್ಷದಲ್ಲಿ ತೀವ್ರ ಬಿಕ್ಕಟ್ಟಿಗೆ ಅವಕಾಶ ಕೊಟ್ಟಿರುವುದಾಗಿ ತಿಳಿದು ಬಂದಿದೆ ಕಾಂಗ್ರೆಸ್ ಅಧ್ಯಕ್ಷರನ್ನು ನಿಂದಿಸಿರುವುದನ್ನು ಕೆ. ಎಂ ಮುನ್ಷಿ, ಮುರಾರ್ಜಿ ದೇಸಾಯ್ ಬಿ ಸಿ ರಾಯ್, ಗೋವಿಂದ ವಲ್ಲಭ ಪಂತ್, ಅನುಗ್ರಹ ನಾರಾಯಣ ಸಿನ್ಹ ಮುಂತಾದ ನಾನಾ ಮಂತ್ರಿಗಳು ಕಟುವಾಗಿ ಟೀಕಿಸಿ ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿರುತ್ತಾರೆಂದು ಹೇಳಲಾಗಿದೆ. ಕಿದ್ವಾಯ್‌ರವರು ತಾವು ಆಡಿರುವ ಮಾತುಗಳನ್ನು ವಾಪಸು ತೆಗೆದುಕೊಂಡ ಹೊರತು ಬಿಕ್ಕಟ್ಟು ಪರಿಹಾರವಾಗುವುದಿಲ್ಲವೆಂದು ಹೇಳಲಾಗುತ್ತಿದೆ

ಪರಕಾಲ ಸ್ವಾಮಿಗಳ ತಿರುನಕ್ಷತ್ರ

ಶ್ರೀ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರ ೭೭ನೇ ತಿರುನಕ್ಷತ್ರ (ವರ್ಧಂತಿ) ಬರುವ ೧ನೇ ತಾ|| ಬುಧವಾರ ಶ್ರೀ ಶ್ರೀಯವರ ಮಠದಲ್ಲಿ ಜರುಗುವುದು ಅದೇ ದಿನ ವೇದ ಶಾಸ್ತ್ರ ಮತ ತ್ರಯ ಬ್ರಾಹ್ಮಣರ ೭೦ ನೇ ವಿದ್ವತ್ಸಭೆಯು ಮಧ್ಯಾಹ್ನ ೪|| ಗಂಟೆಗೆ ಆರಂಭವಾಗುವುದು. ವಿದ್ವಾಂಸರುಗಳು ೩ ದಿನಗಳ ಮುಂಚೆಯೇ ದಯಮಾಡಿಸಬೇಕೆಂದು ಮಠದ ಶ್ರೀ ಕಾರ್ಯಕರ್ತರು ಕೋರಿರುತ್ತಾರೆ

ಕಾಂಗ್ರೆಸ್ ವಿರೋಧಿಗಳಿಗೆ ದ್ರಾವಿಡ ಸಂಘದ ಬೆಂಬಲ

ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ವಿರೋಧಿಗಳಿಗೆ ಮದ್ರಾಸಿನ ದ್ರಾವಿಡ ಸಂಘದವರು ಬೆಂಬಲ ಕೊಡಲು ಸಿದ್ಧರಾಗಿರುವರು ಕಾಂಗ್ರೆಸ್ಸು ಅಧಿಕಾರಕ್ಕೆ ಬಾರದಂತೆ ನೋಡಿಕೊಳ್ಳ ಬೇಕೆಂದು ಸಂಘದ ನಾಯಕರಾದ ಇ. ವಿ. ರಾಮಸ್ವಾಮಿ ನಾಯಕರು ತಿಳಿಸಿರುತ್ತಾರೆ

ಅತ್ಯಂತ ಹೆಚ್ಚಿನ ಭತ್ತದ ಬೆಳೆ

ಸೇಲಮ್ಮಿನ ವೆಲ್ಲಾಯ ಗೌಂಡರ್ ಎಂಬುವರು ಒಂದು ಎಕರೆಗೆ ೧೨ ಸಾವಿರ ಪೌಂಡು ಭತ್ತವನ್ನು ಬೆಳೆದು ಪ್ರಪಂಚದ ರಿಕಾರ್ಡನ್ನು ಸ್ಥಾಪಿಸಿರುತ್ತಾರೆ. ಅವರಿಗೆ ಕೇಂದ್ರ ಆಹಾರ ಮಂತ್ರಿಯವರು ಕೊಡುವ ಬಹುಮಾನ ಮತ್ತು ಚಿನ್ನದ ಪದಕಗಳು ದೊರಕುವುವು

ಕಾಳಿದಾಸನ ಬಗ್ಗೆ ಭಾಷಣ

ನಂಜನಗೂಡು ೨೩

ಇಲ್ಲಿನ ಭಾರತಿ ಮಂದಿರದಲ್ಲಿ ಭಾರತದ ರಾಷ್ಟ್ರ ಕವಿ ಕಾಳಿದಾಸನ ವಿಷಯವಾಗಿ ಮಹಾರಾಜಾ ಕಾಲೇಜಿನ ಶ್ರೀ ಎಸ್ ವಿ ಪರಮೇಶ್ವರ ಭಟ್ಟರು ಉಪನ್ಯಾಸ ಮಾಡಿದರು. ಭಾರತದ ರಾಷ್ಟ್ರ ಹೃದಯವನ್ನು ತನ್ನ ಕಾವ್ಯಗಳಲ್ಲಿ ಪ್ರತಿಬಿಂಬಿಸಿರುವುದರಿಂದ ಕಾಳಿದಾಸನು ರಾಷ್ಟ್ರ ಕವಿಯೆಂದು ಪರಿಗಣಿಸಲ್ಪಟ್ಟಿರುವನೆಂದೂ, ವಿಶ್ವದ ಕವಿಗಳಲ್ಲೊಬ್ಬನಾದುದರಿಂದ ವಿಶ್ವಕವಿಯೆಂದೂ ಪ್ರಖ್ಯಾತನಾಗಿರುತ್ತಾನೆಂದೂ ಹೇಳಿದರು. ಮೇಘದೂತ, ಶಾಕುಂತಲ ನಾಟಕಗಳಲ್ಲಿರುವ ಪ್ರಕೃತಿ ವರ್ಣನೆ, ಮತ್ತು ದೈವೀ ಭಕ್ತಿ ಇವುಗಳ ಬಗ್ಗೆ ಅವನ ಶ್ಲೋಕಗಳು ಆ ಮರವಾದುವೆಂದು ಅವರು ತಿಳಿಸಿದರು

ರಾಜಕಮಲ್, ಮೈಸೂರು

27—7—51 ರಿಂದ ಪ್ರತಿ ದಿನವೂ ೩ ಆಟಗಳು

- ಫ್ಲಾಷ್ ಗಾರ್ಡನ್ -

ರೋಮಾಂಚಕರವಾದ ಫೋಟೋ ಸೀರಿಯಲ್

(ಹೊಸ ಪ್ರಿಂಟು)

ಟಿಕೆಟ್ ದರ ಗಂಡಸರಿಗೆ ಮಹಡಿಮೇಲೆ, 2 6-0, 1 12-0, 1 3 0, ಕೆಳಗಡೆ 0 13 0 0 8-0, 0 5 0 ಹೆಂಗಸರಿಗೆ 0 8-0 0 5 0

ಶ್ರೀ ಚಾಮುಂಡೇಶ್ವರಿ ಟಾಕೀಸ್

27-7-51 ನೇ ಶುಕ್ರವಾರದಿಂದ :: ಅಮೋಘ ಪ್ರದರ್ಶನಾರಂಭ

ಪ್ರತಿ ದಿನ 3 ಆಟಗಳು

ಚಲನಚಿತ್ರ ಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡಿದ ತ್ಯಾಗರಾಜ ಗಣಪತಿ ಪಿಕ್ಚರ್ಸ್‌ರವರ ಅಮೋಘ ತಮಿಳು ಚಿತ್ರ

* ದೇವಕಿ *

ತಾರಾಗಣ ವಿ ಎನ್ ಜಾನಕಿ, ಮಾಧುರಿ ದೇವಿ, ಬಾಲಚಂದ್ರ, ಲಲಿತ ಮತ್ತು ಪದ್ಮಿನಿ

ಪ್ರಭುದೇವಾ ಟಾಕೀಸ್

27-7-51 ನೇ ಶುಕ್ರವಾರದಿಂದ 3 ನೇ ವಾರ

ದಿನವೂ 3 ಆಟಗಳು .. ಮ್ಯಾಟಿನಿ 3 ಕ್ಕೆ

* ಮಂಗಳಗೌರಿ *

(ಪೇರಂಟಾಲು) (ತೆಲುಗು)

ಪಾತ್ರ.— ಕೃಷ್ಣವೇಣಿ ಮಾಲತಿ ನಾರಾಯಣರಾವ್, ಮುಕ್ಕಾಮಲ ಲಕ್ಷ್ಮೀಕಾಂತಂ ಮುಂತಾದವರು

ಒಲಂಪಿಯಾ

26 7 51 ರಿಂದ ಅಮೋಘ ಪ್ರಾರಂಭ

ಗುಡ್‌ಲಕ್ ಪಿಕ್ಚರ್ಸ್‌ರವರ

- ವಷ -

ಪಾತ್ರ ಶ್ರೀಪ್ಪ ತಮು—ಪಿಸಬಿಯುರಾದಪ್ಪ, ಯಾಕೆವನ್, ಗೋಪಾ ವಿತ್ತು ಕರಾವಿಯಾ

ದರಗಳು- 0-5 0, 0 8 0, 0 13 0 1 1 0, 1 10 0, 2 6 0

ಶ್ರೀ ಲಕ್ಷ್ಮೀ ಥಿಯೇಟರ್

ಮೈಸೂರು

27-7 51 ರಿಂದ ಪ್ರತಿ ದಿನ 3 ಆಟಗಳು

- ಚಂದ್ರವಂಕ -

(ತೆಲುಗು)

ಪಾತ್ರ.— ಕಾಂಚನ, ರಘುರಾಮಯ್ಯ, ಕನಕಂ, ಲಲಿತ ಪದ್ಮಿನಿ

SRI GAYATHRI.

Mysore

Daily 3 Shows

20th Century s

LOVE THAT BRUTE

With Paul Douglas and Jean Peters

— TO-MORROW —

THE SNAKE PIT

— MORNING SHOWS —

On 28th Sat & 29th Sun

WALT DISNEY'S

CINDERELLA

(In Technicolour)

P S No Concession rates for this Morning Show

Special admission rates for Ladies - 0-8-0, 0-6-0

Coming Attraction

DESERT HAWK

Edited, printed and published by A. R. Nagarajan, at Sadhvi Press D Subbiah Road, Mysore.

ಫೋನ್ ನಂ 792 | ವಂದೇ ಮಾತರಂ | ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ [illegible] [ಸಂಚಿಕೆ [illegible]

ನೆಹರೂರವರಿಗೆ ಲಿಯಾಖತ್ತರ ಆಹ್ವಾನ

ಷರತ್ತಿನ ಮೇಲೆ ನೆಹರೂರಿಗೆ ಲಿಯಾಖತ್ತರ ಆಹ್ವಾನ

ಪ್ರಧಾನಿ ನೆಹರೂರವರು ಕರಾಚಿಗೆ ಭೇಟಿ ಕೊಟ್ಟು ತನ್ನೊಡನೆ ಮಾತನಾಡಲು ಪಾಕಿಸ್ತಾನ್ ಪ್ರಧಾನಿ ಲಿಯಾಖತ್ ಆಲಿಯವರು ಆಹ್ವಾನವನ್ನಿತ್ತು, ಹಾಗೆ ಭೇಟಿ ಕೊಡುವ ಮುನ್ನ ಗಡಿ ಬಳಿ ಇರುವ ಭಾರತ ಸೈನ್ಯಗಳನ್ನು ಹಿಂದಕ್ಕೆ ಕರೆಸಬೇಕೆಂದು ಸೂಚಿಸಿರುತ್ತಾರೆ ಈ ಬಗ್ಗೆ ದೆಹಲಿಯಲ್ಲಿ ಸಮರ್ಥನೆ ದೊರೆತಿಲ್ಲವಾದರೂ, ಇಂತಹ ಷರತ್ತುಗಳದ್ದರೆ ಆಹ್ವಾನವನ್ನು ಅಂಗೀಕರಿಸಲು ನೆಹರೂರವರಿಗೆ ಸಾಧ್ಯವಿಲ್ಲವೆಂದು ಹೇಳಲಾಗಿದೆ. ಗಡಿ ಭಾಗದಿಂದ ಸೈನ್ಯಗಳನ್ನು ಹಿಂದಕ್ಕೆ ಕರೆಸಿದ ನಂತರ, ಕಾಶ್ಮೀರದ ವಿಲೀನೀಕರಣದ ಬಗ್ಗೆ ವಿಶ್ವಸಂಸ್ಥೆಯ ಆಶ್ರಯದಲ್ಲಿ ನಿಷ್ಪಕ್ಷಪಾತವಾದ ಜನಮತಗಣನೆ ತೆಗೆದುಕೊಂಡು, ಭಾರತ ಮತ್ತು ಪಾಕಿಸ್ತಾನಗಳು ಒಪ್ಪಬೇಕು ಮತ್ತು ಯಾವುದೇ ವ್ಯಾಜ್ಯವಿದ್ದರೂ [illegible] ಬಗ್ಗೆ ಎರಡು ಸರಕಾರಗಳೂ ಒಪ್ಪಬೇಕು ದೆಹಲಿ ಒಪ್ಪಂದದ ಪ್ರಕಾರ ಪರಸ್ಪರ ವಿರೋಧ ಪ್ರಚಾರದ ಬಗ್ಗೆ [illegible] ಮತ್ತು ಪಶ್ಚಿಮ ಬಂಗಾಳದ [illegible] ಆಕ್ರಮಣ ನಡೆಸಕೂಡದು ಎಂಬುದಾಗಿ ಲಿಯಾಖತ್ತರು ಷರತ್ತು ಹಾಕಿರುತ್ತಾರೆ

ಇಂಡೋನೇಷ್ಯಾ ಭಾರತೀಯ ವರ್ತಕರ ಹರತಾಳ

ಇಂಡೋನೇಷ್ಯಾ [illegible] ಭಾರತೀಯ ವರ್ತಕರನ್ನು [illegible] ಮಾಡಿರುವ ಸಂದರ್ಭದಲ್ಲಿ [illegible] ಭಾರತೀಯ ವರ್ತಕರು [illegible] ಹರತಾಳವನ್ನಾಚರಿಸಿದರು. [illegible] ಕನ್ನು ಕೊಡದೆ ಎರಡು ಪಟ್ಟು ಲೆಕ್ಕ ಪುಸ್ತಕಗಳನ್ನಿಟ್ಟಿದ್ದರೆಂಬುದೇ ದಸ್ತಗಿರಿಗೆ ಕಾರಣವಾಗಿತ್ತು

ಬಂಗಾಳಾ ಗಡಿ ಬಳಿ ಪಾಕ್ ಗೂಢಚಾರರು

ಪ॥ ಬಂಗಾಳದ ಗಡಿ ನಗರಗಳಾದ ಬಷಿರ್ಹಾತ್ ಮತ್ತು ಬನಗ್ರಾಮಗಳಲ್ಲಿ ಜನ ವಿದೇಶೀ ಗೂಢಚಾರರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ ಆ ಪೈಕಿ ಒಬ್ಬ ಪಾಕಿಸ್ತಾನ್ ಸೈನ್ಯದವನು ಕೆಲಸ ಬಿಟ್ಟವನಾಗಿರುತ್ತಾನೆ ಇವನ ಬಳಿ ಕೆಲವು ಮಿಲಿಟರಿ ಕಾಗದ ಪತ್ರಗಳು ದೊರೆತುವೆಂದು ಹೇಳಲಾಗಿದೆ

ಭಾರತ ಕಥಾ ಶ್ರವಣ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಶ್ರೀ ಶಂಕರನಾರಾಯಣಸ್ವಾಮಿ ದೇವಾಲಯದಲ್ಲಿ [illegible] ಭಾರತ ಕಥಾ ಶ್ರವಣವು [illegible] ಸಹೋದರರಿಂದ ಪ್ರವಚನ ನಡೆಯುವುದು

ಶ್ರೀ ವನ ಮೋಹಿನಿ ಅಲಂಕಾರ

ರಾಜಧಾನಿಯ ಕೋಟೆಯಲ್ಲಿರುವ ಶ್ರೀ ಸೋಮೇಶ್ವರಸ್ವಾಮಿಯವರ ದೇವಸ್ಥಾನದಲ್ಲಿ ಈ ದಿನ [illegible] ಶುಕ್ರವಾರದ ಪ್ರಯುಕ್ತ ಅಮ್ಮನವರಿಗೆ ವನಮೋಹಿನಿ ಅಲಂಕಾರವನ್ನು ಹಾಕಲಾಗುವುದು

ಕೇಂದ್ರ ಮಂತ್ರಿ ಮಂಡಲಕ್ಕೆ ಶಿದ್ವಾಯರ ರಾಜೀನಾಮೆ

[illegible]

ರಿಸಾಲ್ದರ್ ತೋರಿಸಿ ಕ್ರಿಶ್ಚಿಯನ್ನರ ಸ್ಟೇಷನ್ನಿನಲ್ಲಿ ದರೋಡೆ

[illegible] ವಿಜಯವಾಡ [illegible] ಜನ [illegible] ಕೊಟಡಿಯ ಬಾಗಿಲನ್ನು ತೆರೆದ ನಂತರ [illegible] ಪೆಟ್ಟಿಗೆಯಲ್ಲಿದ್ದ ಹಣವನ್ನು ದೋಚಿಕೊಂಡು ಹೋದರೆಂದು ವರದಿಯಾಗಿದೆ. [illegible] ರಿಕಾರ್ಡುಗಳನ್ನು ಸುಡಲಾಗಿದೆ

ಕಾಳಸಂತೆ ಕೇಂದ್ರದ ಪತ್ತೆ

[illegible] ಮತ್ತು ಸುತ್ತಮುತ್ತಲಿನ [illegible] ನಡೆಯುತ್ತಿರುವ ಕಾಳಸಂತೆ [illegible] ಪೋಲೀಸರು ಪತ್ತೆ ಹಚ್ಚಿ [illegible] ಗಡಿಯಲ್ಲಿ [illegible] ಈ ರೀತಿ [illegible] ಗೊತ್ತಾಗಿ ಅನೇಕರ ದಸ್ತಗಿರಿಯಾಗಿರುತ್ತದೆ

ಮಹಾ ಮಂಗಳಾರತಿ

ಬಿ. ಶುಕ್ರವಾರದ ಬಂಗಾರಿನಜರ್ ಪಾರ್ಕ ಬಸವನಗುಡಿಯಲ್ಲಿರುವ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಈ ಸಾಯಂಕಾಲ [illegible] ಗಂಟೆಗೆ ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲರ್ ಶ್ರೀ [illegible] ರಂಗಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ಮಹಾ ಮಂಗಳಾರತಿ ನಡೆಯುವುದು

ಭಾರತ ಪಾಕಿಸ್ತಾನಗಳ ಮಧ್ಯೆ ಹೋರಾಟ ಸಧ್ಯಕ್ಕಿಲ್ಲ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಧ್ಯದಲ್ಲಿಯೇ ಹೋರಾಟ ನಡೆಯುವ ಸಂಭವವಿಲ್ಲವೆಂದು ದೆಹಲಿಯಲ್ಲಿ ಅಭಿಪ್ರಾಯ ಪಡಲಾಗಿದೆ. ಪಾಕಿಸ್ತಾನದಲ್ಲಿ ಧರ್ಮಯುದ್ಧ ಪ್ರಚಾರವು ವಿಪರೀತವಾಗಿ ನಡೆಯುತ್ತಿದ್ದರೂ ಸಹ ಅಂತಹ ವಾತಾವರಣವನ್ನುಂಟುಮಾಡಲು ಭಾರತ ಸರ್ಕಾರದವರು ಅವಕಾಶವೀಯುತ್ತಿಲ್ಲವೆಂದೂ, ಗಡಿ ಬಳಿ ಇರುವ ಸೈನ್ಯಗಳು ಭಾರತದ ರಕ್ಷಣಾ ಕಾರ್ಯಕ್ಕಾಗಿಯೇ ಇವೆಯೆಂದೂ ಹೇಳಲಾಗಿದೆ. [illegible] ಪಾಕಿಸ್ತಾನದಲ್ಲಿ ನಡೆದ [illegible] ಸಮ್ಮೇಳನದಲ್ಲಿ ಯುದ್ಧ ಪ್ರಚಾರವನ್ನು ಕಡಿಮೆ ಮಾಡುವಂತೆ ಲಿಯಾಖತ್ತರು ಸೂಚಿಸಿರಬಹುದೆಂದು ಭಾವಿಸಲಾಗಿದೆ

ಪಾಕ್ ಪೋಲೀಸರಿಂದ ಶಿವ ದೇವಾಲಯದ ನಾಶ

ಪೂರ್ವ ಪಾಕಿಸ್ತಾನದ ನಲ್ಕಾಂಗ ಕೋಟೆಯಲ್ಲಿರುವ ಗುಂಜಾಬಾಘ್ ಶಿವ ದೇವಾಲಯವನ್ನು ಅಲ್ಲಿನ ಪೋಲೀಸರು ನಾಶಮಾಡಿರುವುದಾಗಿ ಗೊತ್ತಾಗಿದೆ. [illegible] ಒಬ್ಬರು ಹಿಂದೂ ಮುಖಂಡರನ್ನು ಬಂಧಿಸಲಾಗಿದೆ

ಸಿಕ್ಕರ ಗುರುದ್ವಾರದ ಮೇಲೆ ಪಾಕ್ ಪೋಲೀಸರ ಧಾಳಿ

ಪಶ್ಚಿಮ ಪಾಕಿಸ್ತಾನದಲ್ಲಿರುವ ನಂಕಾನಾ ಸಾಹೆಬ್ ಎಂಬ ಸಿಕ್ಕರ ಗುರುದ್ವಾರದ ಮೇಲೆ ಪಾಕಿಸ್ತಾನ ಪೋಲೀಸರು ಧಾಳಿ ನಡೆಸಿ, ಅಲ್ಲಿದ್ದ ಸೇವಾದಾರರಿಂದ [illegible] ಬಂದೂಕ, [illegible] ತೋಟಾ ಮತ್ತು [illegible] ನಡುಕಟ್ಟನ್ನು ಕಿತ್ತುಕೊಂಡು ಹೋಗಿರುತ್ತಾರೆಂದು ವರದಿಯಾಗಿದೆ

ಇಂಜನಿಯರಿಂಗ್ ಪರೀಕ್ಷಾ ಫಲಿತಾಂಶ

ವಿಶ್ವ ವಿದ್ಯಾಲಯದ ಹೊಸ ಆರ್ಡಿನೆನ್ಸ್ ಪ್ರಕಾರ ಹೊರಡಿಸಲಾದ ಇಂಜನಿಯರಿಂಗ್ ಪರೀಕ್ಷೆಗಳ ಫಲಿತಾಂಶದ ಬಗ್ಗೆ ಉತ್ತೀರ್ಣರಾದ ವಿದ್ಯಾರ್ಥಿಗಳ ಹೊಸ ಪಟ್ಟಿಯನ್ನು ಈ ದಿನ ಪ್ರಕಟಿಸಲಾಗಿದೆ

ಎಕ್ಸ್‌ಪ್ರೆಸ್ ರೈಲಿನ ಮೇಲೆ ಪಾಕಿಸ್ತಾನಿಗಳ ಧಾಳಿ

ಬಾರಿಸಾಲಿನಿಂದ ಕಲ್ಕತ್ತಾ ವಿನ ಮಂಗಳವಾರ ಬರುತ್ತಿದ್ದ ಎಕ್ಸ್‌ಪ್ರೆಸ್ ರೈಲು ಗಡಿ ಬಳಿ ಬಂದಾಗ [illegible] ಪಾಕಿಸ್ತಾನಿಗಳು ಕಲ್ಲುಗಳನ್ನು ಹಿಡಿದು ಅದರ ಮೇಲೆ ಬಿದ್ದು [illegible] ಗಾಡಿಯಲ್ಲಿದ್ದ ಪ್ರಯಾಣಿಕರು [illegible] ಹೇಳದರೆಂದೂ ಅವರು ಪ್ರತಿಭಟಿಸಲು, ಅವರನ್ನು ಹೊಡೆದರೆಂದೂ, ಅನೇಕರ ಹಣ ಮುಂತಾದುವನ್ನು ದೋಚಿದರೆಂದೂ ಹೇಳಲಾಗಿದೆ. ಅನೇಕ ಹಿಂದುಗಳನ್ನು ಪಾಕಿಸ್ತಾನದ ಗಡಿಯೊಳಗೆ ಬಲಾತ್ಕಾರದಿಂದ ತಡೆದು ನಿಲ್ಲಿಸಲಾಗಿದೆ. ಇನ್ನೂ ಹಲವು ಪ್ರಯಾಣಿಕರು ದಿಕ್ಕೆಟ್ಟು ಓಡಿ ಹೋಗಿರುತ್ತಾರೆ

ಹೆಚ್ಚು ಸಸಿ ನೆಟ್ಟುದುದಕ್ಕೆ ಬಹುಮಾನ

ಭಾರತದಲ್ಲೆಲ್ಲಾ ಅತ್ಯಂತ ಹೆಚ್ಚಿನ ಸಸಿಗಳನ್ನು ವನಮಹೋತ್ಸವದ ಸಂಬಂಧವಾಗಿ ನೆಟ್ಟಿರುವ ಕೋಲಾರ ಜಿಲ್ಲೆ [illegible] ಮಾದಮಂಗಲ ಹಳ್ಳಿಗೆ ಅಖಿಲ ಭಾರತದ ಬಹುಮಾನವನ್ನು ಕೊಡುವ ಬಗ್ಗೆ ಬೆಂಗಳೂರು ಪುಟ್ಟಣ್ಣಶೆಟ್ಟಿ ಟೌನ್ ಹಾಲ್ ಭವನದಲ್ಲಿ ವಿಶೇಷ ಸಮಾರಂಭವನ್ನು ನಾಳೆ ಸಂಜೆ [illegible] ಗಂಟೆಗೆ ಏರ್ಪಡಿಸಲಾಗಿದೆ. ಭಾರತದ ಆಹಾರ ಮಂತ್ರಿ [illegible] ಮುನ್ಷಿಯವರು ಅಧ್ಯಕ್ಷತೆ ವಹಿಸುವರು

ತುರ್ಕಿ ಫಿರಂಗಿಗಳಿಂದ ರಷ್ಯಾ ನೌಕೆಗಳ ಮೇಲೆ ಗುಂಡು

[illegible] ನಡೆಸುತ್ತಿದ್ದ ರಷ್ಯಾ [illegible] ಪಡೆಗೆ ಸೇರಿದ [illegible] ನೌಕೆಗಳು ತುರ್ಕಿಯ ಪ್ರಾದೇಶಿಕ ಕಡಲಿನ ಎಲ್ಲೆಯೊಳಗೆ ಬಂದುದರಿಂದ ತುರ್ಕಿಯ ತೀರದ ಫಿರಂಗಿಗಳು ಅವುಗಳ ಮೇಲೆ ಗುಂಡನ್ನು ಹಾರಿಸಿದವಾಗಿ ಗೊತ್ತಾಗಿದೆ

ಭಾರತದ ಗಂಧಾಸೆ ರವಾನೆಗೆ ಲಂಡನ್ ನಿಷೇಧ

ಭಾರತದಿಂದ ಲಂಡನ್ ಮೈಗಾಲಯಕ್ಕೆ ಗಂಧಾಸೆಗಳನ್ನು ಕಳುಹುವುದರ ಮೇಲೆ ನಿಷೇಧಾಜ್ಞೆಯನ್ನು ಆ ಮೃಗಾಲಯದವರು ಹಾಕಿರುತ್ತಾರೆ. ಕಳೆದ ವಾರ [illegible] ಎಂಬ ಗಂಧಾಸೆಯು ತಂಟೆ ಮಾಡಿದ ಸಂಬಂಧವಾಗಿ ಅದನ್ನು ಗುಂಡಿಟ್ಟು ಕೊಲ್ಲಲಾದ ಪರಿಸ್ಥಿತಿಯೇ ನಿಷೇಧಕ್ಕೆ ಕಾರಣವಾಗಿರುತ್ತದೆ

ತಲೆ ಮರೆಸಿಕೊಂಡಿದ್ದ ಕಮ್ಯೂನಿಸ್ಟನ ದಸ್ತಗಿರಿ

ಸುಮಾರು ೩॥ ವರ್ಷಗಳಿಂದಲೂ ತಲೆ ಮರೆಸಿಕೊಂಡಿದ್ದ [illegible] ಕಮ್ಯೂನಿಸ್ಟ್ ಶ್ರೀ [illegible] ಎಂಬುವನನ್ನು ನಿನ್ನೆ ಬೆಂಗಳೂರಿನಲ್ಲಿ ದಸ್ತಗಿರಿ ಮಾಡಲಾಯಿತು [illegible] ರಲ್ಲಿ ಹೊಳೆ ಎಂಬ ಕಮ್ಯೂನಿಸ್ಟ್ ಮುಖಂಡರನ್ನು ಬೆಂಗಳೂರು ಪೋಲೀಸರು ಕರೆದೊಯ್ಯುತ್ತಿದ್ದಾಗ ಈತನು [illegible] ಜನರ ಗುಂಪಿನೊಡನೆ ಪೋಲೀಸರ ಮೇಲೆ ಬಿದ್ದು, ಬಂದೂಕದ ಬಾಯೊನೆಟ್ಟುಗಳನ್ನು ಕಿತ್ತುಕೊಂಡು [illegible] ಹಲವಾರು ಪೋಲೀಸರಿಗೆ ಗಾಯಪಡಿಸಿ

ಹೊಸ ಮಾದರಿಯ ಸ್ಟಾಂಪು

ಭಾರತ ಸರ್ಕಾರ ನರು ಶೀಘ್ರವೆ ಹೊಸ ಮಾದರಿಯ ಅಂಚೆ ಸ್ಟಾಂಪುಗಳನ್ನು ಬಿಡುಗಡೆ ಮಾಡಲಿದೆ. ಇದುವರೆಗೆ ಕೊಡಲಾಗುತ್ತಿದ್ದ ಚಿತ್ರಗಳ ಬದಲು ಭಾರತದಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಮತ್ತು ಮುಂದೆ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳನ್ನು ಸೂಚಿಸುವ ಚಿತ್ರಗಳನ್ನು ಅವುಗಳಲ್ಲಿ ಮುದ್ರಿಸಲಾಗುವುದೆಂದೂ ಹೇಳಲಾಗಿದೆ.

ಭಾರತದ ನೌಕಾ ದಳಕ್ಕೆ ಹೊಸ ಮುಖ್ಯಾಧಿಕಾರಿ

ಭಾರತದ ನೌಕಾ ದಳಕ್ಕೆ ರಿಯರ್ ಅಡ್ಮಿರಲ್ ಸಾರ್ಮನ್ ವಿನ್ಸೆಂಟ್ ಡಿಕೆಸ್ಟರವರನ್ನು ಜನರಾಲ್ ರವರ ಸ್ಥಾನದಲ್ಲಿ ಮುಖ್ಯಾಧಿಕಾರಿಯನ್ನಾಗಿ ನೇಮಿಸಲಾಗಿದೆ.

೩೭೦೦ ಮೈಲಿ ದೂರ ಹಾರಬಲ್ಲ ಆಯುಧ

೩೭೦೦ ಮೈಲಿ ದೂರ ಯಂತ್ರ ಶಕ್ತಿಯಿಂದ ಹಾರಿ ಗುರಿಯ ಮೇಲೆ ಸರಿಯಾಗಿ ಹೊಡೆಯುವ ಹೊಸ ನೌಕಾಸ್ತ್ರವನ್ನು ಅಮೆರಿಕದಲ್ಲಿ ತಯಾರಿಸಲಾಗಿದೆ. ಯುದ್ಧ ... ಅಸ್ತ್ರ ... ಮೇಲೆ ಅದು ಬೀಳಬಲ್ಲದೆಂದೂ ಗುರಿಗೆ ಸರಿಯಾಗಿ ಹೊಡೆಯಬಲ್ಲದೆಂದೂ ಹೇಳಲಾಗಿದೆ.

ಮೈಸೂರಿನಲ್ಲಿ ಹೊಸ ಬ್ಯಾಂಕ್

ಕೆ. ಎಚ್. ಪಿ. ಬಾರ್ಕ್ಲೇ ಬ್ಯಾಂಕ್

(ಶ್ರೀಲಾಕ್ ಭವನದ ಪಕ್ಕದ ಮಳಿಗೆ ಬೀದಿ) ಶ್ರೀರಾಂಪೇಟೆ ಮೈಸೂರು

ನಮ್ಮ ಬ್ಯಾಂಕಿನಲ್ಲಿ ಚಿನ್ನ ಮತ್ತು ಬೆಳ್ಳಿ ಒಡವೆಗಳ ಸೆಕ್ಯೂರಿಟಿಯ ಮೇಲೆ ಎಲ್ಲರಿಗೂ ಅನುಕೂಲವಾಗುವಂತೆ ಸುಲಭ ದರದ ಬಡ್ಡಿಯಲ್ಲಿ ಸಾಲ ದೊರೆಯುತ್ತೆ.

ಬ್ಯಾಂಕು ನಡೆಯುವ ಕಾಲ ಬೆಳಿಗ್ಗೆ ... ರಿಂದ ಸಂಜೆ ... ಘಂಟೆವರೆಗೆ

ಶ್ರೀ ಲಕ್ಷ್ಮೀ ಥಿಯೇಟರ್

ಮೈಸೂರು

27 7 51 ರಿಂದ ಪ್ರತಿ ದಿನ 3 ಆಟಗಳು

- ಚಂದ್ರಹಾಸ -

(ತಮಿಳು)

ಪಾತ್ರ ... ರಂಜನ್, ... ಮುಮ್ಮ, ಕನಕಂ, ಲಲಿತ ಪದ್ಮಿನಿ

ಒಲಿಂಪಿಯಾ

26-7-51 ರಿಂದ ಅಮೋಘ ಪ್ರಾರಂಭ

ಗುಡ್‌ಲಕ್ ಪಿಕ್ಚರ್ಸ್ ರವರ

- ಪ್ರಭ -

ಪಾತ್ರ—ಶ್ರೀಕೃಷ್ಣ ... ನಾಗಭೂಷಣ ... ಕಲ ... ದರಗಳು— 0 5 0, 0 8 0, 0 14 0, 1 1 0, 1 10 0, 2 6 0

ರೇಷನ್ ದಾರರು ಪಾಕಿಸ್ತಾನಿಗೆ ಗಿ ಪಡಿತರ ಪಡೆಯಲವಕಾಶ

ಕಾಶ್ಮೀರದ ಪಡಿತರವನ್ನು ... ರುವ ಕಡೆ ... ರೇಷನ್ ಕಾರ್ಡು ದಾರರು ತಮ್ಮ ಪಡಿತರದ ಅರ್ಜಿಯನ್ನು ಪಾಕಿಸ್ತಾನಿಗಾಗಿ ... ಸರ್ಕಾರದವರಿಂದ ಮಾಡಲಾಗಿರುವ ಸಲಹೆಯನ್ನು ಅವರು ಒಪ್ಪಿರುತ್ತಾರೆ. ... ಅರ್ಜಿಯನ್ನು ಹೊರಡಿಸಲಾಗುವುದೆಂದು ತಿಳಿದು ಬಂದಿದೆ.

ಪಾಕಿಸ್ತಾನದ ರಕ್ಷಣಾ ವಿಚಾರಣೆ

ಈ ... ನಗರದಲ್ಲಿ ... ದಿನ ... ಸರದ ಸಭೆ ... ಪಾಕಿಸ್ತಾನದ ... ರಕ್ಷಣೆಯನ್ನು ... ವ್ಯವಸ್ಥೆ ... ಕಾಶ್ಮೀರ ... ಮತ್ತು ... ಮಂತ್ರಿಗಳ ... ರವರ ... ಗಳಿಗೆ ಕಳುಹಿಸಲಾಯಿತು.

- ಪ್ರಭಾ -

27 7 51 ರಿಂದ ... ಪ್ರತಿ ದಿನ 3 ಆಟಗಳು

- ಬಾ ... -

ಪಾತ್ರ ದೇವಾನಂದ್, ... ಮತ್ತು ಕಲ್ಪನಾ ಕಾರ್ತಿಕ್

Morning Shows

REIGN OF TERROR

ಸಾಲ ಕೊಡುವವರ ಮೇಲೆ ಹತೋಟಿಗಾಗಿ ಶಾಸನ

ಯುಪಿ ... ಸರ್ಕಾರ ... ಪಡೆಯುವುದರಿಂದ ... ಸಾಲ ಕೊಡುವವರ ಸಂಖ್ಯೆ ... ತಿಳಿಸುವ ... ನವರೇ ಸಾಲ ಕೊಡಬೇಕೆಂದು ವಿಧಿಸುವ ಬಗ್ಗೆ ಒಂದು ಶಾಸನವನ್ನು ಮದ್ರಾಸು ಸರ್ಕಾರದವರು ತರಲಿರುವರು. ಸಾಲ ಕೊಡುವವರ ಮೇಲೆ ಶಾಸನ ... ಹತೋಟಿಯ ... ಗತ್ಯ ...

ಕೊರಿಯಾದಿಂದ ವಿದೇಶೀ ಸೈನ್ಯ ಹೊರಡಬೇಕು

... ಸಂಧಾನ ... ಕೊರಿಯಾದಿಂದ ... ಹೊರಡಬೇಕೆಂದು ...

ಅಮೆರಿಕಕ್ಕೆ ಭಾರಿ ಅಪಾಯ

... ಅಮೆರಿಕನ್ನರು ...

SRI GAYATHRI

Mysore

To Day Only

THE SNAKE PIT

MORNING SHOWS

EVENING SHOWS

CINDERELLA

Morning Shows

ಮೈಸೂರು ... ಕಾಂಚೀಪುರದ ... ಸೀರೆಗಳಿವೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ,

... ಭವನ ಹೋಟೆಲ್ ಪಕ್ಕ, ಮೈಸೂರು.

ಶ್ರೀ ಚಾಮುಂಡೇಶ್ವರಿ ಟಾಕೀಸ್

27-7-51 ನೇ ಶುಕ್ರವಾರದಿಂದ ಅಮೋಘ ಪ್ರದರ್ಶನಾರಂಭ

ಪ್ರತಿ ದಿನ 3 ಆಟಗಳು

... ಚಿತ್ರ ... ಅಮೋಘ ... ಚಿತ್ರ

*** ದೇವಕಿ ***

... ಲಲಿತ ಪದ್ಮಿನಿ ... ನಟಿಸಿರುವ

ಆಬಿದ್ ನವರ

ಮಹಾರಾಜ ಮಾರಾಟ

29 7-51 ನೇ ಭಾನುವಾರ ಬೆಳಿಗ್ಗೆ 10 ಗಂಟೆಗೆ

ಹೋ ರೂಮುಗಳ ಬಳಿ

... ಸಾಮಾನು ... ಬಗೆಬಗೆ ... ಕುರ್ಚಿಗಳು ... ಅನೇಕ ಉಪಯುಕ್ತ ಪದಾರ್ಥಗಳು

ನಾಳೆ 28 7 51 ಅಜಮಾಯಿಷಿ ಮಾಡಬಹುದು

ಕಾಂಗ್ರೆಸ್ಸಿನ ವಿರೋಧವಾಗಿ ಎಡ ಪಕ್ಷಗಳ ಒಕ್ಕೂಟ

ಕಮ್ಯೂನಿಸ್ಟ್, ಫಾರ್ವರ್ಡ್ ಬ್ಲಾಕ್ ಮತ್ತು ಎಡ ಸೋಷಲಿಸ್ಟ್ ಪಕ್ಷಗಳ ಪ್ರತಿನಿಧಿಗಳ ಸಭೆಯು ದಿಹಲಿಯಲ್ಲಿ ಸೇರಿ ಕಾಂಗ್ರೆಸ್ಸು ಮುಂತಾದ ಪ್ರತಿಗಾಮಿ ಪಕ್ಷಗಳೊಡನೆ ಬರುವ ಚುನಾವಣೆಯಲ್ಲಿ ಹೋರಾಟ ನಡೆಸಬೇಕೆಂದು ನಿರ್ಧರಿಸಲಾಯಿತು.

ಆಹಾರದ ಹಡಗು ಬರುವುದು ತಡ

ಸೂಯಜ್ ಕಾಲುವೆಯಲ್ಲಿ ಹಡಗುಗಳ ಘರ್ಷಣೆಯಾದುದರಿಂದ ಭಾರತಕ್ಕೆ ಆಹಾರವನ್ನು ತರುತ್ತಲಿರುವ ಅಮೆರಿಕಾ ಹಡಗು ಬಂದು ಸೇರಲು ಇನ್ನೂ ತಡವಾಗುವುದೆಂದು ಹೇಳಲಾಗಿದೆ.

ಕಂಟ್ರಾಕ್ಟರುಗಳ ಸಹಕಾರ ಸಂಘ

ಚಾಮರಾಜನಗರದ ಮರಾಮತ್ತು ಇಲಾಖೆಯ ಕಂಟ್ರಾಕ್ಟರುಗಳ ಸಹಕಾರ ಸಂಘದ ಸಾಮಾನ್ಯ ಸದಸ್ಯರ ಸಭೆಯು ... ಸಹಕಾರ ಸಂಘಗಳ ... ಅಧ್ಯಕ್ಷತೆಯಲ್ಲಿ ... ರುಗಳ ಚುನಾವಣೆಯು ನಡೆಯಿತು.

ಗಣೇಶ ...

28-7-51 ರಿಂದ ದಿನವಹಿ 4 ಆಟಗಳು

*** ನಸೀಬ್ ***

... ಪಾತ್ರ ...

ಮನೆ ಕ್ರಯಕ್ಕಿದೆ

1 ನಂ. 883 ರಾಮಾನುಜಾ ರಸ್ತೆ, ಮೈಸೂರು. ... ಪ್ರತ್ಯೇಕ ... ಮನೆ

2 ನಂ. 727. ಶ್ರೀರಾಮಪೇಟೆ ಹಿಂಭಾಗದ ರಸ್ತೆ, ಮೈಸೂರು. ... ಮನೆ ... ಸ್ಥಾನ ...

3. ವಾಣಿವಿಲಾಸ ಮೊಹಲ್ಲಾ 2. ಸಿ. ಬ್ಲಾಕಿನಲ್ಲಿ 2ನೇ ಮೇಯಿನ್ ರಸ್ತೆಯಲ್ಲಿ ಒಂದು ದೊಡ್ಡ ... ಮನೆ

4. ನಂ. 2821. ಜಯನಗರ ಮೈಸೂರು. ದೊಡ್ಡ ... ಮನೆ

5. ... ಕೇರಿಯಲ್ಲಿ ... ಮನೆ ...

- ವಿವರಗಳಿಗೆ -

ಆರ್ ಗುಂಡೂ ರಾವ್ ಮತ್ತು ಬಿ. ಗೋಪಾಲ ರಾವ್

ಜಯ ಅಂಡ್ ಕಂಪೆನಿ

ಜಮೀನು ಮನೆ ಮತ್ತು ಹಣಕಾಸಿನ ಏಜೆಂಟರು

... ಮೈಸೂರು ಬ್ಯಾಂಕ್ ರಸ್ತೆ ಮೈಸೂರು

PHONE No 520

Edited, printed and published by A R Nagarajan at Sadhvi Press D Subbiah Road, Mysore

ಕ್ರೀ ಸಂ 792 ॥ ಜಯತೇ ಮಾತರಂ ॥ ಇಂಡಿಯನ್ ಪತ್ರಿಕೆ ಶಾಖೆ

ಸಾಧ್ವಿ

ಸಂಪುಟ ೧೧] ಶನಿವಾರ ೨೮-೭-೫೧ [ಸಂಚಿಕೆ ೩

ಲಿಯಾಖತ್ ಅಲಿರವರ ವಜ್ರ ಮುಷ್ಟಿ ಘರ್ಜನೆ

ಜನತಾ ಪಕ್ಷದ ಸಭೆ

ಮೈಸೂರು ೨೮

ನಾಳೆ ಸಂಜೆ ೬ ಘಂಟೆಗೆ ಟೌನ್ ಹಾಲಿನಲ್ಲಿ ಮೈಸೂರು ಜನತಾ ಪಕ್ಷದವರು ಬಹಿರಂಗ ಸಭೆಯೊಂದನ್ನು ಏರ್ಪಡಿಸಿದ್ದಾರೆ. ಪಕ್ಷದ ಕಾರ್ಯಕ್ರಮ ಮತ್ತು ದೇಶದ ರಾಜಕೀಯ ಪರಿಸ್ಥಿತಿಗಳನ್ನು ವಿವರಿಸಲಾಗುವುದು

ಎಂ. ಸಿ. ಎಫ್. ಮಹಿಳಾ ಸಮಾಜ

ಜುಲೈ ೨೫ನೇ ತಾರೀಖು ಬುಧವಾರ ಸಾಯಂಕಾಲ ಎಂ ಸಿ ಎಫ್ ಕಂಪನಿ ಫ್ಯಾಕ್ಟರಿಯ ಕಾಲೋನಿ ಆವರಣದಲ್ಲಿ ಮಹಿಳಾ ಸಮಾಜ ಮತ್ತು ಶಿಶುವಿಹಾರದ ಆರಂಭೋತ್ಸವವು ಶ್ರೀಮತಿ ಅಂಬಿಕಾ ಬಾಲಕೃಷ್ಣರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು ಕಂಪನಿಯವರು ಸಮಾಜಕ್ಕೂ ಮತ್ತು ಅದಕ್ಕೆ ಸೇರಿದ ಶಿಶುವಿಹಾರಕ್ಕೂ ಉದಾರವಾಗಿ ಸಹಾಯ ಮಾಡಿರುತ್ತಾರೆ ಈ ಸಹಾಯಕ್ಕಾಗಿ ಕಾಲೋನಿ ನಿವಾಸಿಗಳೆಲ್ಲಾ ಕಂಪೆನಿಯ ಆಡಳಿತ ವರ್ಗಕ್ಕೆ ಕೃತಜ್ಞರಾಗಿದ್ದಾರೆ

ನಗರದ ಶಿಕ್ಷಣ ಸಮಿತಿ

ಮೇಲ್ಕಂಡ ಸಮಿತಿಯ ಸಾಧಾರಣ ಸಭೆಯು ತಾ॥೨೬ ರಂದು ಸಮಿತಿಯ ಕಾರ್ಯಾಲಯದಲ್ಲಿ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು ಗೌರವ ಕಾರ್ಯದರ್ಶಿಗಳಾದ ಶ್ರೀ ಎಸ್ ವಿ ಮಂಜುನಾಥನ್‌ರವರು ಒಪ್ಪಿಸಿದ ತ್ರೈಮಾಸಿಕ ವರದಿಯನ್ನು ರಿಕಾರ್ಡು ಮಾಡಿಕೊಂಡನಂತರ ಪೌರ ಸಭೆಯು ತನ್ನ ಸದಸ್ಯರ ಪೈಕಿ ಮೂರು ಮಂದಿಯನ್ನು ಚುನಾಯಿಸಿ ಈ ಸಮಿತಿಗೆ ಸದಸ್ಯರಾಗಿ ಕಳುಹಿಸಿ ಕೊಡುವಂತೆ ಕೋರಬೇಕೆಂದೂ, ಮೈಸೂರು ತಾಲ್ಲೋಕು ಅಭಿವೃದ್ಧಿ ಸಮಿತಿ ಅಧ್ಯಕ್ಷರನ್ನು ಸಮಿತಿಯ ಸದಸ್ಯರನ್ನಾಗಿ ತಗೆದು ಕೊಳ್ಳಬೇಕೆಂತಲೂ, ಕೇಂದ್ರ ಸಂಸ್ಥೆಯನ್ನು ಪ್ರಾರಂಭಿಸುವ ನಿರ್ಣಯವನ್ನು ಮಾಡಲಾಯಿತು

ಮಹಿಳಾ ಸದನದಲ್ಲಿ ಸಂತೋಷ ಕೂಟ

ತಾ॥ ೨೧ನೇ ಶನಿವಾರ ಸಂಜೆ ಸದನದಲ್ಲಿನ ವಿದ್ಯಾರ್ಥಿನಿಯರೂ, ಸದಸ್ಯರೂ, ಉಪಾಧ್ಯಾಯರೂ ಸೇರಿ ಕಳೆದ ವರ್ಷದಂತೆ ಒಂದು ಸಂತೋಷ ಕೂಟವನ್ನೇರ್ಪಡಿಸಿದ್ದರು ಸದನದ ವಿದ್ಯಾರ್ಥಿನಿಯರಾದ ಶ್ರೀಮತಿ ಆರ್ ಎಸ್ ಸಾವಿತ್ರಮ್ಮನವರು ಅಧ್ಯಕ್ಷತೆ ವಹಿಸಿದ್ದರು ಉಪಹಾರದ ನಂತರ ವಿದ್ಯಾರ್ಥಿನಿಯರಿಂದ ಸುಶ್ರಾವ್ಯವಾದ ಗಾನ ಗೋಷ್ಠಿ ಮತ್ತು 'ಹಿತೈಷಿ' ಎಂಬ ಸಾಮಾಜಿಕ ನಾಟಕ ಪ್ರದರ್ಶನ ನಡೆದಿತು ವಿನೋದ ಮನರಂಜನೆಯ ಕಾರ್ಯಕ್ರಮಗಳು ಜರುಗಿದ ಮೇಲೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ನಾಳಿದ್ದು ಸಂಜೆ ೬ ಗಂಟೆಗೆ ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಈ ಸಾಲಿನ ಅಧಿಕಾರ ವರ್ಗದವರ ಚುನಾವಣೆಗಾಗಿ ಸಂಘದ ಕಛೇರಿಯಲ್ಲಿ ಸೇರುವುದು ಕೆಲಸಗಾರರೆಲ್ಲರೂ ತಪ್ಪದೆ ಭಾಗವಹಿಸಬೇಕಾಗಿ ಕೋರಲಾಗಿದೆ

ಖೈದಿಗಳಿಗೆ ಕೂಲಿ ಕೊಡಬೇಕು ಯೋಜನೆ

ಸ್ವಂ ವರದಿಗಾರ] ಬೆಂಗಳೂರು ೨೮

ಗಿರಣಿಗಳ ಕಾರ್ಮಿಕರು ... ಜೈಲುಗಳಲ್ಲಿರುವ ಖೈದಿಗಳ ... ಮಾಡುವ ಕೆಲಸಕ್ಕೆ ... ಕೂಲಿಯನ್ನು ಕೊಡಬೇಕು ... ಯನ್ನು ಮೈಸೂರು ... ಪರಿಶೀಲಿಸುತ್ತಿದೆ ... ಇದು ಭಾರತದಲ್ಲಿ ... ಯತ್ನವೆಂದು ಹೇಳಲಾಗಿದೆ ... ಸಚಿವರಾದ ಶ್ರೀ ... ತಿಯಲ್ಲಿ ಒಂದು ಸಭೆ ... ತ್ತಿದೆ

ಮುನ್ಶಿಯವರ ಆಗಮನ

ಕೇಂದ್ರ ಸರ್ಕಾರದ ... ಗಳಾದ ಶ್ರೀ ಕೆ ಎಂ ಮುನ್ಶಿಯವರು ಈ ವರ್ಷ ... ಈ ಸಂದರ್ಭದಲ್ಲಿ ... ಸ್ವಾಗತ ... ದವರಿಗೆ ... ರಂಭವೊಂದು ... ಸಾಧ್ಯವಿರುವುದಾಗಿ ... ಸುವರು

ಹೋಟೆಲುಗಳನ್ನು ಮುಚ್ಚಬೇಕು ಒಪ್ಪಿಗೆ

ವಾರಕ್ಕೆ ಒಂದು ದಿನ ಹೋಟೆಲುಗಳನ್ನು ಮುಚ್ಚಲು ಹಾಸನದ ಮಾಲೀಕರುಗಳು ಒಪ್ಪಿರುವುದಾಗಿ ತಿಳಿದುಬಂದಿದೆ

ರೈಲ್ವೆಯವರಿಂದ ಹೊಸ ಸಂಘಟನ ಪ್ರಯತ್ನ

ಪ್ರಧಾನಿಯವರಿಗೂ ರೈಲ್ವೆ ಸಚಿವರಿಗೂ ಶ್ರಮ ರೈಲ್ವೆ ಕಾರ್ಮಿಕ ಸಂಘದವರ ... ಪತ್ರ ... ಹೊಸ ಸಂಘಟನಕ್ಕೆ ಪ್ರಯತ್ನಿಸುವುದಾಗಿ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎಸ್ ಗುರುಸ್ವಾಮಿಯವರು ಹೇಳುತ್ತಾರೆ ಸಂಘದ ಇಬ್ಬರು ಮಾಜಿ ಅಧ್ಯಕ್ಷರ ಸಹಾಯದಿಂದ ಈ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ಅವರು ತಿಳಿಸಿರುತ್ತಾರೆ

ಕೃಷ್ಣರಾಜಸಾಗರದಲ್ಲಿ ೧೧೧೮ ಅಡಿ ನೀರು

ಕೃಷ್ಣರಾಜಸಾಗರದಲ್ಲಿ ಈಗ ನೀರಿನ ಮಟ್ಟವು ೧೧೧೮ ಅಡಿಗಳಷ್ಟಿದೆ ಪ್ರತಿನಿತ್ಯವೂ ೮೮೦೦೦ ಕ್ಯೂಸೆಕ್‌ಗಳಷ್ಟು ನೀರು ಸೇರುತ್ತಿದೆ

ಪಾಕಿಸ್ತಾನದ ಹೊಸ ರಾಷ್ಟ್ರೀಯ ಚಿಹ್ನೆ

ರಕ್ಷಣಾ ದಿನಾಚರಣೆಯಲ್ಲಿ ಭಾರತ ವಿರುದ್ಧ ಪ್ರದರ್ಶನ

ನಿನ್ನೆ ದಿನ ಕರಾಚಿಯಲ್ಲಿ ನಡೆದ ರಕ್ಷಣಾ ದಿನಾಚರಣೆಯ ಸಂದರ್ಭದಲ್ಲಿ ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಅಲಿಯವರು ಒಂದು ಘೋಷಣೆಯನ್ನು ಮಾಡಿ ತಮ್ಮ ಮುಂಡಿ ಬೀಸಿದ ವಜ್ರಮುಷ್ಟಿಯೇ ಪಾಕಿಸ್ತಾನದ ರಾಷ್ಟ್ರೀಯ ಚಿಹ್ನೆಯೆಂದು ಸಾರಿದರು ಅವನ್ನೇ ಎತ್ತಿ ... ಪಾಕಿಸ್ತಾನದ ಸೈನಿಕರ ಶಿಸ್ತು ಮತ್ತು ... ವನ್ನು ವ್ಯಕ್ತಪಡಿಸುವುದಕ್ಕಾಗಿ ಈ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ಸಭೆಯಲ್ಲಿ ಲಕ್ಷ ಮೇಲ್ಪಟ್ಟ ಜನರು ನೆರೆದಿದ್ದರು. ಪಾಕಿಸ್ತಾನವು ಶಾಂತಿ ಮತ್ತು ನ್ಯಾಯವನ್ನು ಬಯಸುತ್ತದೆ, ಆದರೆ ಶಾಂತಿಯ ಹೆಸರಿನಲ್ಲಿ ತನ್ನ ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನು ಎಂದಿಗೂ ಬಲಿಕೊಡಲು ಸಿದ್ಧವಿಲ್ಲ ಎಂದು ಅವರು ಘೋಷಿಸಿದರು. ಪಾಕಿಸ್ತಾನವು ಕಾಂಗ್ರೆಸ್ಸನ್ನು ಎದುರಿಸುತ್ತಿದೆಯೆಂದೂ ಎಲ್ಲರೂ ಐಕಮತ್ಯ ಮತ್ತು ಶಿಸ್ತಿನಿಂದ ವರ್ತಿಸಬೇಕೆಂದೂ ಸೂಚಿಸಿದರು

ಬಳಿಕ ಅವರು ಬೀಸಿದ ಕವಚವನ್ನು ತಮ್ಮ ಹಸ್ತಕ್ಕೆ ಧರಿಸಿ "ಇನ್ನು ಮುಂದೆ ನಮ್ಮ ಚಿಹ್ನೆಯು ಇದು" ಎಂದು ಹೇಳಿ ತಮ್ಮ ವಜ್ರಮುಷ್ಟಿಯನ್ನು ಮೇಲಕ್ಕೆತ್ತಿ ಹಿಡಿದು ಮೂರು ನಿಮಿಷ ಕಾಲ ಪ್ರದರ್ಶನ ಮಾಡಿದರು. ಜನರ ಗುಂಪು ಸಹಾ ಅದರಂತೆಯೇ ಮಾಡಿ 'ಪಾಕಿಸ್ತಾನ್ ಜಿಂದಾಬಾದ್' ಎಂಬುದಾಗಿ ಕೂಗಿತು 'ಒಂದೊಂದು ಇಂಚು ಪಾಕಿಸ್ತಾನವನ್ನು ನಾವು ಸಂರಕ್ಷಿಸಿಕೊಳ್ಳುತ್ತೇವೆ' ಎಂಬುದಾಗಿಯೂ ಸಹಾ ಗುಂಪು ಕೂಗಿಕೊಂಡಿತು

ಪಾಲೆಸ್ಟೈನ್, ಕಾಶ್ಮೀರ ಮತ್ತು ಭಾರತವನ್ನು ಆಕ್ರಮಿಸಿರಿ ಎಂಬುದಾಗಿ ಎಂಬುದಾಗಿ ಬರೆದಿದ್ದ ಬಟ್ಟೆಯ ಬೋರ್ಡನ್ನೂ ಸಹಾ ಗುಂಪಿನವರು ಹಿಡಿದಿದ್ದರು ಇನ್ನೂ ಅನೇಕ ಬೋರ್ಡುಗಳನ್ನು ಹಿಡಿದು ಮೆರವಣಿಗೆಯನ್ನು ಮಾಡಲಾಯಿತು

ಅಂಗಡಿ ಮುಂಗಟ್ಟುಗಳೆಲ್ಲವೂ ನೆನ್ನೆ

ಸಂಸ್ಥಾನದಲ್ಲಿ ಕಾಲರಾ ಹಾವಳಿ

ಬೆಂಗಳೂರು ೨೮

ಸಂಸ್ಥಾನದ ಅನೇಕ ಭಾಗಗಳಲ್ಲಿ ಕಾಲರಾ ವ್ಯಾಧಿಯು ವ್ಯಾಪಿಸಿರುವುದಾಗಿ ವರದಿಯಾಗಿದೆ ಮೈಸೂರು, ಬೆಂಗಳೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಅದು ವಿಶೇಷವಾಗಿ ಹರಡುತ್ತಿದೆ. ಮೈಸೂರು, ಬೆಂಗಳೂರು ನಗರಗಳಲ್ಲಿಯೂ ಅದು ಅಲ್ಲಲ್ಲಿ ಕಾಣಬರುತ್ತಿದೆ. ಕಳೆದ ಫೆಬ್ರವರಿಯಿಂದ ೨೫೦೦ ಜನರಿಗೆ ರೋಗವು ತಗಲಿ ೧೫೦೦ ಜನರು ಮೃತಪಟ್ಟರು. ಗ್ರಾಮನಗರದಲ್ಲಿ ರೋಗವು ವಿಪರೀತ ಪ್ರಬಲವಾಗಿದ್ದಿತು. ಕಳೆದ ಎರಡು ವರ್ಷಗಳಿಂದಲೂ ವ್ಯಾಧಿಯು ಹರಡುತ್ತಿತ್ತೆಂದೂ ಜನರಿಗೆ ಇನಾಕ್ಯುಲೇಷನ್ ಮಾಡಲು ೨೦ ಲಕ್ಷ ಡೋಸುಗಳಷ್ಟು ಔಷಧಿಯನ್ನು ಸಂಸ್ಥಾನದಲ್ಲೆಲ್ಲಾ ಹಂಚಲಾಗಿದೆಯೆಂದೂ ಆರೋಗ್ಯ ಅಧಿಕಾರಿಗಳಾದ ಡಾ॥ ಟಿ ಚಂದ್ರಶೇಖರಯ್ಯನವರು ತಿಳಿಸಿರುತ್ತಾರೆ

ಅಧಿಕ ಬಟ್ಟೆ ತಯಾರಿ

ರಾಷ್ಟ್ರ ವಿಭಜನೆಯಾದಂದಿಗಿಂತ ಹತ್ತಿ ಬೆಳೆಯನ್ನು ಎರಡರಷ್ಟು ಹೆಚ್ಚಿಸಲಾಗಿದೆಯೆಂದೂ ಸಧ್ಯದಲ್ಲಿಯೇ ಅದನ್ನು ಇನ್ನೂ ೭ ಲಕ್ಷ ಬೇಲುಗಳಷ್ಟು ಹೆಚ್ಚಿಸಲಾಗುವುದೆಂದೂ ಕೇಂದ್ರ ಸರ್ಕಾರದ ಮಂತ್ರಿ ಕೆ ಎಂ ಮುನ್ಶಿಯವರು ತಿಳಿಸಿರುತ್ತಾರೆ ೫ ಕೋಟಿ ಗಜದಷ್ಟು ಬಟ್ಟೆಯನ್ನು ಪ್ರತಿ ತಿಂಗಳಲ್ಲಿಯೂ ಹೆಚ್ಚಾಗಿ ತಯಾರುಮಾಡಲಾಗುವುದೆಂದೂ ಸಹಾ ಅವರು ತಿಳಿಸಿರುವರು

ರಹದಾರಿ ಇಲ್ಲದೆ ದನದ ಮಾಂಸದ ಮಾರಾಟ

ಲಷ್ಕರ್ ಮೊಹಲ್ಲೆಯ ಅಣ್ಣಮ್ಮನ ಕೇರಿಯಲ್ಲಿ ರಹದಾರಿಯಿಲ್ಲದೆ ಪೀರ್‌ಸಾಬ್ ಮತ್ತು ಹಾಜರಾಬಿ ಎಂಬುವರು ದನದ ಮಾಂಸವನ್ನು ಮಾರಾಟ ಮಾಡುತ್ತಿದ್ದುದನ್ನು ಪೋಲೀಸರು ಪತ್ತೆ ಹಚ್ಚಿ ಅವರುಗಳ ಮೇಲೆ ಮುಂದಿನ ಕ್ರಮ ಜರುಗಿಸುತ್ತಿದ್ದಾರೆ.

ದನ ಕೊಯ್ಯಲು ಹೊರಟಿದ್ದವರ ದಸ್ತಗಿರಿ

ಮಂಡಿ ಮೊಹಲ್ಲಾ ಬುಡುಬುಡಿಕೆ ಕೇರಿಯ ಮಾದ, ಗುರುನಾಥ, ನಂಜಯ್ಯ ಎಂಬ ಮೂವರು ಒಂದು ಮನೆಯಲ್ಲಿ ನಾಡಿಗೆ ಕಟ್ಟುವ ಎತ್ತನ್ನು ಕುಯ್ಯಲು ಹೊರಟಿದ್ದಾಗ ಪೋಲೀಸ್ ಇನ್ಸ್‌ಪೆಕ್ಟರು ಸ್ಥಳದಿಯೊಡನೆ ಹೋಗಿ ಎತ್ತನ್ನು ವಶಪಡಿಸಿಕೊಂಡು ಮೂವರನ್ನು ದಸ್ತಗಿರಿ ಮಾಡಿರುವರೆಂದೂ ಇನ್ನೂ ಓಡುವವರು ಪರಾರಿಯಾಗಿರುವರೆಂದೂ ತಿಳಿದು ಬಂದಿದೆ

ನಿನ್ನೆ ನಿಲ್ಸಿಯ್ಯವು ಪಾಕಿಸ್ತಾನದ ರಕ್ಷಣೆಗಾಗಿ ಜುಮ್ಮಾ ಪ್ರಾರ್ಥನೆಯನಂತರ ವಿಶೇಷ ಪ್ರಾರ್ಥನೆಗಳು ಸಹಾ ನಡೆದುವು. ಪಾಕಿಸ್ತಾನದ ಗಡಿಯಲ್ಲಿ ಭಾರತವು ಸೈನ್ಯ ಶೇಖರಣೆ ಮಾಡುತ್ತಿದೆಯೆಂದು ಲಿಯಾಖತ್ ಆಲಿಖಾನರು ಮಾಡಿದ ಘೋಷಣೆಯ ಪರಿಣಾಮವಾಗಿಯೇ ಈ ಸಭೆಯನ್ನು ಏರ್ಪಡಿಸಲಾಗಿತ್ತು. ಅಂದಿನಿಂದೀಚೆಗೆ ಪಾಕಿಸ್ತಾನದಲ್ಲೆಲ್ಲಾ ಸಭೆಗಳೂ ಪ್ರದರ್ಶನಗಳೂ ನಡೆಯುತ್ತಲೇ ಇವೆ

ನಾಗರಿಕರ ರಕ್ಷಣೆ ಬಗ್ಗೆ ಪಾಕಿಸ್ತಾನದಲ್ಲಿ ಪರೀಕ್ಷಾಚ್ಛ

ಪಾಕಿಸ್ತಾನದ ನಾಗರಿಕರ ರಕ್ಷಣೆ ಬಗ್ಗೆ ನೊನ್ನೆ ರಾತ್ರಿ ಪಾಕಿಸ್ತಾನ ಸರ್ಕಾರದವರ ಪರೀಕ್ಷಾರ್ಥ ಯತ್ನ ನಡೆಸಿದ್ದಾರೆ. ವಿಮಾನ ದಾಳಿ ಮತ್ತು ಬೆಂಕಿ ಮುಂತಾದವುಗಳ ಬಗ್ಗೆ ಕ್ರಮಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಸಹಕರಿಸಿರುವ ನಾಗರಿಕ ಸ್ವಯಂಸೇವಕರು, ಮಿಲಿಟರಿ ಪೋಲೀಸ್ ಅಧಿಕಾರಿಗಳು ಮುಂತಾದ ದೊಡ್ಡ ಅಧಿಕಾರಿಗಳ ಸಭೆಯು ನಡೆದು ಪ್ರಸ್ತುತ ಪರಿಸ್ಥಿತಿ ಬಗ್ಗೆ ಪರಿಶೀಲನೆ ನಡೆಸಲಾಯಿತೆಂದು ಹೇಳಲಾಗಿದೆ

ಪಾಕಿಸ್ತಾನ ಸೇನಾ ನಿಲ್ದಾಣ

ಆಫ್ಘಾನಿಸ್ತಾನ ಮತ್ತು ಪಠಾಣಿಸ್ತಾನದ ಮೇಲೆ ಕಣ್ಣಿಡಲು ತಕ್ಕ ಸ್ಥಳವಾದ ಚಿತ್ರಾಲ್ ಪ್ರದೇಶದಲ್ಲಿ ಪಾಕಿಸ್ತಾನ ಸರ್ಕಾರದವರು ಆಧುನಿಕ ವಿಮಾನ ನಿಲ್ದಾಣವನ್ನು ನಿರ್ಮಿಸಿರುವರಲ್ಲದೆ ಹಿಮಾಚ್ಛಾದಿತ ಕಾರ್ಯಾಚರಣೆಗಾಗಿ ಶಿಕ್ಷಣ ಕೊಡುವ ಶಾಲೆಯೊಂದನ್ನು ಏರ್ಪಡಿಸಿರುತ್ತಾರೆಂದು ಗೊತ್ತಾಗಿದೆ

ಪಾಕಿಸ್ತಾನಕ್ಕೆ ಹೊಸ ಕಾಲ

ಬರುವ ಅಕ್ಟೋಬರ್ ರಿಂದ ಪಾಕಿಸ್ತಾನದಲ್ಲಿ ಸ್ವತಂತ್ರ ಸ್ಟಾಂಡರ್ಡ್ ಟೈಂ ಎಂಬ ಕಾಲ ಜಾರಿಗೆ ತರಲಾಗುವುದು. ಇದು ಪ್ರಿನ್ಸಿಪಲ್ ಟೈಂ ಕಾಲಕ್ಕೆ ... ಗಂಟೆಯಷ್ಟು ಮುಂದಾಗಿರುವುದ ... ಈಗ ಜಾರಿಯಲ್ಲಿರುವ ಕಾಲಕ್ಕೆ ... ಮುಂದಾಗಿರುವುದು

ಪಾಕ್ ಸೈನಿಕರಿಂದ ಭಾರತದ ೩ ಹಳ್ಳಿಗಳ ಆಕ್ರಮಣ

... ಗಡಿ ಬಳಿ ಗೋಯಲ್‌ಪಾರ ... ಪಾಕಿಸ್ತಾನ ಸೈನಿಕರು ಭಾರತಕ್ಕೆ ಸೇರಿರುವ ೩ ಹಳ್ಳಿಗಳನ್ನು ಆಕ್ರಮಿಸಿಕೊಂಡಿರುವುದಾಗಿ ಗೊತ್ತಾಗಿದೆ

ಪಾಕಿಸ್ತಾನಕ್ಕೆ ಭಾರತದ ಕಲ್ಲಿದ್ದಲಿನ ಖೋತಾ

ಪಾಕಿಸ್ತಾನಕ್ಕೆ ಭಾರತವು ಕಳುಹಿಸಿಕೊಡುತ್ತಿದ್ದ ಕಲ್ಲಿದ್ದಲಿನ ಸರಬರಾಜಿನಲ್ಲಿ ಅರ್ಧದಷ್ಟು ಖೋತಾ ಮಾಡಲಾಗಿದೆ ಇನ್ನು ಮೇಲೆ ತಿಂಗಳಿಗೆ ೬೦ ಸಾವಿರ ಟನ್‌ಗಳಷ್ಟನ್ನು ಮಾತ್ರ ಕಳುಹಿಸಲಾಗುವುದು

ಪಾಕಿಸ್ತಾನದ ಮಹಿಳೆಯರಿಗೆ ರಕ್ಷಣಾ ತರಬೇತು

ಭಾರತ-ಪಾಕಿಸ್ತಾನಗಳ ನಡುವೆ ಯುದ್ಧವಾದರೆ ಸಾರ್ವಜನಿಕ ರಕ್ಷಣಾ ವಿಷಯಗಳ ಬಗ್ಗೆ ಪಾಕಿಸ್ತಾನದ ಮಹಿಳೆಯರಿಗೆ ಶಿಕ್ಷಣವನ್ನೀಯಲು ಪಾಕಿಸ್ತಾನ್ ಮಹಿಳಾ ಸಂಘದವರು ಬಹಿರಂಗ ಸಭೆಯನ್ನು ಏರ್ಪಡಿಸಿದ್ದಾರೆ ಬೇಗಂ ಲಿಯಾಖತ್ತರು ಭಾಷಣ ಮಾಡುವರು

ರಾಜಭಕ್ತಿ ಸಮರ್ಪಣೆ

ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಗ್ರಾಮಪಂಚಾಯಿತಿಯವರು ಶ್ರೀವರ್ಮ ಮಹಾರಾಜರ ವರ್ಧಂತ್ಯುತ್ಸವದ ಸಮಯದಲ್ಲಿ ಪ್ರಭುಗಳಲ್ಲಿ ಅಚಲ ರಾಜಭಕ್ತಿಯನ್ನು ವ್ಯಕ್ತಪಡಿಸಿ ನಿರ್ಣಯ ಮಾಡಿರುತ್ತಾರೆ

Edited, printed and published by A R Nagarajan, at Sadhvi Press D. Subbiah Road, Mysore

ಮುಷ್ಕರದ ಬದಲು ತುಟ್ಟಿ ಭತ್ಯಕ್ಕಾಗಿ ದೇವರಲ್ಲಿ ಮೊರೆ

ತುಟ್ಟಿ ಭತ್ಯವನ್ನು ಹೆಚ್ಚಿಸಲು ಮದ್ರಾಸು ಸರ್ಕಾರದವರು ನಿರಾಕರಿಸಿರುವುದರಿಂದ ನಾನ್ ಗೆಜೆಟೆಡ್ ಅಧಿಕಾರಿಗಳ ಸಂಘದವರು ನಿರ್ಧರಿಸಿರುವ ಪ್ರಕಾರ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಪ್ರಾರ್ಥನೆ ಮಾಡುವ ಕಾರ್ಯ ಮಾತ್ರ ಸಂಘದ ಸದಸ್ಯರಿಗೆ ಉಳಿದಿದೆ. ಅದರಿಂದ ಅವರ ವರಮಾನ ಉತ್ತಮಗೊಳ್ಳುವುದೆಂದು ನಂಬಲಾಗಿದೆ. ಅದರಂತೆ ಬರುವ ತಿಂಗಳು ೭ನೇ ತಾ ಮತ್ತು ಪ್ರತಿ ಮಂಗಳವಾರವೂ ಅವರು ದೇವರಲ್ಲಿ ಪ್ರಾರ್ಥನೆ ಮಾಡಬೇಕೆಂದು ಕೋರಲಾಗಿದೆ

ಕಲಾಕ್ಷೇತ್ರ

ಎರಡನೇ ವರ್ಷದ ಮೊದಲನೇ ಸಂಚಿಕೆ ಹೊರಬಿದ್ದ "ಕಲಾಕ್ಷೇತ್ರವು ಪಿ ವಿ ರಾಮಸ್ವಾಮಿ, ಹೆಚ್ ಆರ್ ರಾಮದಾಸ್, ಮತ್ತು ಸಿ ಆರ್ ಶಿವಸ್ವಾಮಿಯವರ ಸಂಪಾದಕತ್ವದಲ್ಲಿ ಜ್ಞಾನಮಂದಿರ, ಸಚಿತ್ರ ಸ್ವಾಗತ ಕವಿತೆಗಳಿಂದಲೂ, ಚಿತ್ರಕಲೆ ಬಡಜನರ ಭಾರತ ... ಕುಸುಮ ಕತೆಗಳಿಂದಲೂ ಮತ್ತು ಮಹಿಷಾಸುರ ಮತ್ತು ಇತರ ವರ್ಣರಂಜಿತ ಚಿತ್ರಗಳಿಂದಲೂ ಕೂಡಿದ ಸುಂದರವಾದ ಮಾಸ ಸಂಚಿಕೆಯು ಈಗ ಪ್ರಕಟವಾಗಿದೆ. ಇದಕ್ಕೆ ಶ್ರೀ ಅರ್ಚಕ ವೆಂಕಟೇಶರವರು ಸಂದೇಶವನ್ನು ಕಳುಹಿಸಿದ್ದಾರೆ. ಈ ಪತ್ರಿಕೆಯನ್ನು ವಿಶ್ವವಿದ್ಯಾನಿಲಯದ ಲೈಬ್ರರಿಯಲ್ಲಿ ಇಡಲಾಗಿದೆ

ಮಹಾರಾಜರ ವರ್ಧಂತ್ಯುತ್ಸವ

ಚೆಟ್ಟಿಪಟ್ಟರದ ಸಂಚಾಯಿತರ ಆಶ್ರಯದಲ್ಲಿ ಎಲ್ಲ ವಿದ್ಯಾ ಸಂಸ್ಥೆಗಳು ಮತ್ತು ಎಲ್ಲಾ ಇಲಾಖೆಯವರು ಸೇರಿ ಶ್ರೀಮನ್ಮಹಾರಾಜರವರ ವರ್ಧಂತಿಯನ್ನು ತಾ ಅಮಲ್ದಾರರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಚೆಟ್ಟಿಪಟ್ಟರದ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಬಿ ವಿ ನಂಜುಂಡಯ್ಯನವರು, ಪಿರಿಯಾಪಟ್ಟಣದ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಸಿ ಬಿ ನರಸಿಂಹ ಮೂರ್ತಿಯವರು ಮತ್ತು ಮಾಧ್ಯಮಿಕ ಪಾಠಶಾಲಾ ಹೆಡ್ಮಾಸ್ಟರ್ ಶ್ರೀ ಪಿ ನರಸಿಂಹಯ್ಯನವರು, ಶ್ರೀಮನ್ಮಹಾರಾಜರ ವಿಷಯವಾಗಿ ಭಾಷಣ ಮಾಡಿದರು. ಸಿಹಿ ತಿಂಡಿ ವಿನಿಯೋಗವಾದ ಮೇಲೆ ಸಭೆಯು ವಿಸರ್ಜನೆಯಾಯಿತು.

ಹರಿಕಥೆ

ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಮಧ್ಯಾಹ್ನ ೩॥ ಗಂಟೆಗೆ ಶ್ರೀ ಎಂ ಎಲ್ ನಾರಾಯಣ ದಾಸರು "ಶ್ರೀ ಕೃಷ್ಣ ಗಾರುಡಿ" ಎಂಬ ಹರಿಕಥೆಯನ್ನು ಮಾಡುವರು. ಹೆಂಗಸರಿಗೆ ಮಾತ್ರ ಆಹ್ವಾನವುಂಟು.

ಗಣೇಶಾ ಟಾಕೀಸ್
28-7-51 ರಿಂದ ದಿನವಹಿ ೩ ಆಟಗಳು
✱ ನಜಾರೆ ✱
ಪಾತ್ರ, ಆಗಾ, ಶಶಿಕಲಾ

ಕಾಶ್ಮೀರದ ಬಗ್ಗೆ ಬ್ರಿಟಿಷ್ ಅಧಿಕಾರಿಗಳ ಕೈವಾಡವಿಲ್ಲ

ಕಾಮನ್ಸ್ ಸಭೆಯಲ್ಲಿ ನಿನ್ನೆ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರವೀಯುತ್ತಾ ಪ್ರಧಾನಿ ಅಟ್ಲೀಯವರು ಕಾಶ್ಮೀರದ ಸಂಬಂಧವಾಗಿ ಘರ್ಷಣೆ ನಡೆಯಲು ಬ್ರಿಟಿಷ್ ಅಧಿಕಾರಿಗಳು ಎತ್ತಿ ಕಟ್ಟುತ್ತಿರುವರೆಂದು ನೆಹರೂರವರು ಮಾಡಿದ ಆರೋಪಣೆಗೆ ಬುಡವಿಲ್ಲವೆಂದು ತಿಳಿಸಿರುತ್ತಾರೆ. ನೆಹರೂರೊಡನೆ ಈ ಬಗ್ಗೆ ಪತ್ರವ್ಯವಹಾರ ನಡೆಸುತ್ತಿರುವುದಾಗಿ ಅವರು ತಿಳಿಸಿರುತ್ತಾರೆ

"ಇದು ಭಾರತ" ಚಿತ್ರ

ಅಮೆರಿಕದ ಹಾಲಿವುಡ್ಡಿನ ವರ್ಣರಂಜಿತ ಚಿತ್ರ ತಯಾರಿಕರಾದ ಪೀಟರ್ ಫ್ರಾಂಕ್ಲಿನ್‌ರವರು ಈಗ ಭಾರತಕ್ಕೆ ಆಗಮಿಸಿರುತ್ತಾರೆ. ದೆಹಲಿ, ಆಗ್ರಾ, ಜೈಪುರ, ಕಾಶಿ, ಮೈಸೂರು, ಕಾಶ್ಮೀರ ಮುಂತಾದ ನಾನಾ ಭಾಗಗಳ ಸುಂದರ ದೃಶ್ಯಗಳನ್ನು ಅವರು ತೆಗೆದು ಅವುಗಳನ್ನು ಜೋಡಿಸಿ "ಇದು ಭಾರತ" ಎಂಬ ಚಿತ್ರವನ್ನು ತಯಾರಿಸಲು ಇಚ್ಛಿಸಿರುವುದಾಗಿ ಹೇಳಲಾಗಿದೆ.

ಭಾರತಕ್ಕೆ ಅಮೆರಿಕದ ತಾಮ್ರವಿಲ್ಲ

ಭಾರತ ಮತ್ತು ಪಾಕಿಸ್ತಾನಗಳಿಗೆ ಯುದ್ಧವಾದರೆ ಈ ದೇಶಕ್ಕೆ ಅಮೆರಿಕವು ತಾಮ್ರವನ್ನು ರಫ್ತು ಮಾಡುವುದಿಲ್ಲವೆಂದೂ, ಇದು ಭಾರತದ ವಿರೋಧವಾಗಿ ಬೆದರಿಕೆ ಹಾಕಿದಂತಲ್ಲವೆಂದೂ ಅಮೆರಿಕದ ವಿದೇಶಾಂಗ ಇಲಾಖಾಧಿಕಾರಿಯೊಬ್ಬರು ಹೇಳಿರುತ್ತಾರೆ

ಪ್ರದೋಷ ಸಂಗೀತ

ಶ್ರೀ ಬಿಹಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ಇದೇ ತಿಂಗಳು ೩೧ನೇ ತಾರೀಖು ಮಂಗಳವಾರ ಪ್ರದೋಷದ ಪ್ರಯುಕ್ತ ಶ್ರೀಮತಿ ಆರ್ ಪದ್ಮಾವತಮ್ಮನವರ ಸಂಗೀತವನ್ನು ವಿ॥ ಸುಬ್ಬರತ್ನಂರವರ ಪಿಟೀಲು ಮತ್ತು ವಿ॥ ರಾಮಚಂದ್ರಾಚಾರ್ಯರ ಮೃದಂಗದೊಡನೆ ಏರ್ಪಡಿಸಲಾಗಿದೆ ಸರ್ವರಿಗೂ ಆಹ್ವಾನವುಂಟು

ಉಪನ್ಯಾಸ

ರಾಜಧಾನಿಯ ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ ಈ ಸಂಜೆ ೬ ಗಂಟೆಗೆ ಶ್ರೀ ಎ ಶೇಷಯ್ಯಂಗಾರ್‌ರವರು ಭಾರತದ ಪಂಚ ವಾರ್ಷಿಕ ಯೋಜನೆ ಎಂಬ ವಿಷಯವಾಗಿ ಮಾದರಿ ಶಾಲೆಯಲ್ಲಿ ಭಾಷಣ ಮಾಡುವರು

ಒಂಟಿಕೊಪ್ಪಲಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೬ ಗಂಟೆಗೆ ಸ್ವಾಮಿ ಸೋಮನಾಥಾನಂದಜಿಯವರು ರಾಜಯೋಗ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಜೈನ ಸಾಹಿತ್ಯ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಜೈನ ಸಾಹಿತ್ಯ ಪ್ರಚಾರ ಸಂಘದವರು ನಾಳೆ ಸಂಜೆ ೬ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಂಘದ ಕಛೇರಿಯಲ್ಲಿರುವ ಪ್ರಥಮ ವಾರ್ಷಿಕೋತ್ಸವವನ್ನು ನೆರವೇರಿಸುವರು. ಹುಜೂರು ಕಾರ್ಯದರ್ಶಿಗಳಾದ ಶ್ರೀ ಹೆಚ್ ಎಂ ನಾಗೇಗೌಡರು ಅಧ್ಯಕ್ಷತೆ ವಹಿಸುವರು

ಕಿದ್ವಾಯಿ ರಾಜೀನಾಮೆ ಇಲ್ಲ

ಕೇಂದ್ರ ಸಂಚಾರ ಶಾಖಾ ಸಚಿವ ಜ॥ ರಫಿ ಅಹಮದ್ ಕಿದ್ವಾಯಿಯವರು ತಮ್ಮ ಪದವಿಗೆ ರಾಜೀನಾಮೆಯೀಯುವ ವದಂತಿಯು ನಿರಾಧಾರವಾದುದೆಂದು ಗೊತ್ತಾಗಿದೆ. ಆದರೆ ಮಂತ್ರಿಮಂಡಲದಲ್ಲಿ ತಾವು ಇರುವುದರಿಂದ ಕಾಂಗ್ರೆಸ್ಸಿನ ಶ್ರೇಷ್ಠರನ್ನಾ ... ಭಿನ್ನಾಭಿಪ್ರಾಯ ತಲೆದೋರುವುದಾದರೆ ಮಾತ್ರ ರಾಜೀನಾಮೆ ಕೊಡುವುದಾಗಿ ಅವರು ತಿಳಿಸಿರುತ್ತಾರೆ.

ಪ್ರವಾಹದಲ್ಲಿ ಕೊಚ್ಚಿಕೊಂಡು ಬಂದ ಮೋಟಾರು

ನೊನ್ನೆ ಇಂದೂರಿನ ಬಳಿ ವಿಪರೀತ ಮಳೆ ಬಿದ್ದುದರ ಪರಿಣಾಮವಾಗಿ ಒಂದು ನದಿಯಲ್ಲಿ ಬಂದ ಮಿತಿಮೀರಿದ ಪ್ರವಾಹವು ಮೋಟಾರು ಕಾರೊಂದನ್ನು ಕೊಚ್ಚಿಕೊಂಡು ಬಂದಿತೆಂದೂ ಅದರಲ್ಲಿದ್ದ ಮೂವರೂ ಜೀವಸಹಿತ ಪಾರಾದರೆಂದೂ ತಿಳಿದು ಬಂದಿದೆ.

ಅಬಿಸೀನಿಯದ ದೊರೆಯ ಕೊಲೆಗೆ ಸಂಚು

ಅಬಿಸೀನಿಯದ ದೊರೆ ಹೇಲಿ ಸೆಲಾಸಿಯವರನ್ನು ಕೊಲೆ ಮಾಡಿ, ಅಲ್ಲಿ ಪ್ರಜಾಪ್ರಭುತ್ವದ ಆಧಾರದ ಮೇಲೆ ರಾಜ್ಯ ಕಟ್ಟಬೇಕೆಂದು ಪಿತೂರಿ ನಡೆಸಿದ ಎಂಟು ಜನರಿಗೆ ಮರಣ ದಂಡನೆಯನ್ನು ವಿಧಿಸಲಾಗಿದೆ

ದಸರಾ ವಸ್ತುಪ್ರದರ್ಶನದಲ್ಲಿ ಕಾಂಪ್ಲಿಮೆಂಟರಿ ಪಾಸುಗಳಿಲ್ಲ

ಬರುವ ಅಕ್ಟೋಬರ್ ೨ರಿಂದ ಪ್ರಾರಂಭವಾಗುವ ದಸರಾ ವಸ್ತುಪ್ರದರ್ಶನ ಕಾಲದಲ್ಲಿ ಯಾರಿಗೂ ಕಾಂಪ್ಲಿಮೆಂಟರಿ ಪಾಸುಗಳನ್ನು ಕೊಡಕೂಡದೆಂದು ನಿರ್ಧರಿಸಲಾಗಿದೆ. ಜೀವನದಾಯಕ ಪೆಟ್ಟಿಗೆಯಲ್ಲೂ ಪ್ರದರ್ಶನವನ್ನು ನಡೆಸಲಾಗುವುದು

ಮನೆ ಕ್ರಯಕ್ಕಿದೆ

1. ನಂ. 883. ರಾಮಾನುಜಾ ರಸ್ತೆ, ಮೈಸೂರು.
ನಾಲ್ಕು ಸಂಸಾರಗಳಿಗೆ ಪ್ರತ್ಯೇಕ ಅನುಕೂಲಗಳಿರುವ ದೊಡ್ಡ ಮನೆ

2. ವಾಣಿವಿಲಾಸ ಮೊಹಲ್ಲಾ 2. ಸಿ. ಬ್ಲಾಕಿನಲ್ಲಿ 2ನೇ ಮೇಯಿನ್ ರಸ್ತೆಯಲ್ಲಿ
ಒಂದು ದೊಡ್ಡ ಕಾಂಪೌಂಡು ಉಳ್ಳ ಹೊಸ ತಾರಸೀ ಮನೆ.

3. ನಂ. 2821. ಜಯನಗರ ಮೈಸೂರು.
ದೊಡ್ಡ ಕಾಂಪೌಂಡು, ಇರತಕ್ಕ ಔಟ್ ಹೌಸು ಉಳ್ಳ ಮನೆ

4. ಮೈಸೂರು ಹಳ್ಳದ ಕೇರಿಯಲ್ಲಿ
ಹೊಸದಾಗಿ ಕಟ್ಟಿರತಕ್ಕ ಒಂದು ಮನೆ. ಈ ಮನೆ ಕೂಡಲೇ ಸ್ವಾಧೀನ ಸಿಗುತ್ತೆ
-.ವಿವರಗಳಿಗೆ.-

ಆರ್. ಗುಂಡೂರಾವ್ ಮತ್ತು
ದಿ. ಗೋಪಾಲ ರಾವ್
ಜಯ ಅಂಡ್ ಕಂಪೆನಿ
ಜಮೀನು ಮನೆ ಮತ್ತು ಹಣಕಾಸಿನ ಏಜೆಂಟರು
ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು
PHONE No. 520

[illegible] ನಂ 792 WEEKLY EDITION [illegible]
[illegible]
ಸಂಪುಟ ೧೬] ಭಾನುವಾರ ೨೯-೬-೫೦ [ಸಂಚಿಕೆ ೧

ರಷ್ಯದ ಯುದ್ಧ ಸಿದ್ಧತೆ ಬಗ್ಗೆ ಟ್ರೂಮನ್ ಆಪಾದನೆ

ಮೈಸೂರು ಹಳ್ಳಿಗೆ ಅಖಿಲ ಭಾರತದ ಬಹುಮಾನ

ಬೆಂಗಳೂರು —

ವನಮಹೋತ್ಸವದ ಸಂಬಂಧವಾಗಿ [illegible] ಹಳ್ಳಿ ಯ ಒಟ್ಟು [illegible] ಅತ್ಯಂತ ಹೆಚ್ಚಿನ ಸಸಿಗಳ[illegible] ನೆಟ್ಟುದಕ್ಕಾಗಿ ನೆನ್ನೆ ಕೇಂದ್ರ [illegible] ಮಂತ್ರಿ ಶ್ರೀ ಕೆ ಎಂ ಮುನ್ಷಿಯವರು ಸ್ವರಭನದಲ್ಲಿ ನಡದ ಸಮಾರಂಭದಲ್ಲಿ [illegible] ಭಾರತದ [illegible] ಬಹುಮಾನವಾಗಿ [illegible] ಕೊಟ್ಟರು. [illegible] ಮಾತ್ರ ತೆಗೆದುಕೊಂಡು [illegible] ಬಹುಮಾನವನ್ನು [illegible] ಮುನ್ಷಿಯವರು [illegible] ಯವರನ್ನು ಅಭಿನಂದಿಸಿ ವನಮಹೋತ್ಸವ [illegible] ವನ್ನು ಹರಡಬೇಕೆಂದು [illegible] ಕೋಶ ಸ್ಥಾಪನನ್ನು [illegible] ಮಂತ್ರಿ [illegible] ಸ್ವಾಗತ [illegible] ಸಂಸ್ಥಾನದ [illegible]

ಪ್ರವಾಹದಿಂದ [illegible] ಮೇಲೆ ಜನರ ನಾಶ

[illegible]

ಕಾಂಗ್ರೆಸ್ ಪರ [illegible] ಬಹುಮಾನ

[illegible] ಕಾಂಗ್ರೆಸ್ [illegible] ಗೊತ್ತಾಗಿದೆ [illegible] ಆಗಿದೆ

ಪಟ್ಟಾಭಿ ಶ್ರೀನಿವಾಸ ಶೆಟ್ಟರ ನಿಧನ

ಮೈಸೂರು —

ರಾಜಧಾನಿಯ [illegible] ಕಾಂಗ್ರೆಸ್ [illegible] ಶ್ರೀ ಪಟ್ಟಾಭಿ ಶ್ರೀನಿವಾಸ ಶೆಟ್ಟರು [illegible] ಗುರುವಾರ [illegible] ಅತ್ಯಂತ [illegible] ಹಲವು ಕಾಲ ನಗರದ [illegible] ಸದಸ್ಯರಾಗಿದ್ದರು [illegible] ಸ್ವಾತಂತ್ರ್ಯ ಮತ್ತು ಮೈಸೂರು ಜವಾಬ್ದಾರಿ [illegible] ಚಳುವಳಿಗಳಲ್ಲಿ ಅವರು [illegible] ಸುಭವಿಸಿದ್ದರು ಅವರ ನಿಧನದಿಂ[illegible] ದಾದ ಶೋಕವನ್ನು ಭರಿಸ[illegible] ಭಾಗ[illegible] ಸ್ಥೈರ್ಯವನ್ನು ಕೊಡಲೆಂದೂ [illegible] ತರ ಆತ್ಮಕ್ಕೆ ಶಾಂತಿಯನ್ನೀಯಲೆಂ[illegible] ಭಗವಂತನನ್ನು ಪ್ರಾರ್ಥಿಸುತ್ತೇವೆ

ಪಾಕಿಸ್ತಾನದ "ರಕ್ಷಣೆ"ಗೆ [illegible] ಲಕ್ಷ ರಜಾಕರರ ಸೇನೆ

ಪಾಕಿಸ್ತಾನದಲ್ಲಿ [illegible]

[illegible] ವಿಮಾನವನ್ನು [illegible] ಕೊಟ್ಟ [illegible] ರಕ್ಷಣೆ [illegible] ಪಾಕಿಸ್ತಾನದ [illegible] ವಾದಿಲು [illegible] ವಾಗಿ ತಿಳಿಸಿರುವ [illegible] ಗಿದೆ

ಕರಾಚಿಗೆ ನೆಹರೂ ಭೇಟಿಯಿಲ್ಲ

[illegible] ರಾಚಿಗೆ ಭೇಟಿ ಕೊಡಬೇಕೆಂದು [illegible] ಕಿಸ್ತಾನದ ಪ್ರಧಾನಿಯವರು ಕಳು[illegible] ರುವ [illegible] ಪತ್ರಕ್ಕೆ ಪಂಡಿತ ನೆಹರೂರವರ [illegible] ಉತ್ತರಕೊಟ್ಟು ಈಗ ಅವರು ಕರಾಚಿಗೆ ಭೇಟಿಕೊಡ[illegible] ವ ವಿಷಯ [illegible] ಗಿರುವುದೆಂದೂ [illegible] ಸಾಧ್ಯವಿಲ್ಲ [illegible] ಪ್ರಕೃತ ಸಂದರ್ಭದ[illegible] ಸಾಧ್ಯವಿಲ್ಲ [illegible] ಭಾವಿಸಲಾಗಿದೆ

ಪ್ಲೇಗ್ ನಿರ್ಮೂಲನಕ್ಕೆ ಜಂಟಿ ಕಾರ್ಯಕ್ರಮ

ಮೈಸೂರು ಮತ್ತು ಮದ್ರಾಸು ಸರ್ಕಾರಗಳ ಯೋಜನೆ

ಬೆಂಗಳೂರು —

ಮೈಸೂರು ಮತ್ತು ಮದ್ರಾಸು [illegible] ಪ್ಲೇಗ್ [illegible] ಸಮಸ್ಯೆ [illegible] ಜಂಟಿಯಾಗಿ [illegible] ಕಾರ್ಯಕ್ರಮವನ್ನು ಕೈಗೊ[illegible] ಯೋಜನೆಯನ್ನು [illegible] ತೀರ್ಮಾನಿಸಿದೆ [illegible] ಆರೋಗ್ಯ [illegible] ಸಭೆಯು ನಡೆದು [illegible] ಯೋಜನೆಯು ತಯಾರಾಗಿದೆ [illegible] ಕೆಲವು [illegible] ಅನೇಕ ಪ್ರಕರಣಗಳು ನಡೆದಿವೆ [illegible] ಕೋಲಾರ [illegible] ಮತ್ತು [illegible] ಈ ವ್ಯಾಧಿಯು ಸಾಮಾನ್ಯವಾಗಿ ಆಗಸ್ಟ್ ಮತ್ತು [illegible] ನೀಲಗಿರಿ ಮತ್ತು ಮಲಬಾರಿನಲ್ಲೂ, ಕೊಡಗಿನಲ್ಲೂ [illegible] ಮತ್ತು [illegible] ಪ್ರದೇಶಗಳಲ್ಲೂ, ಈ ವ್ಯಾಧಿಯು [illegible] ಸಾಧ್ಯತೆಯುಂಟು. [illegible] ಡಿ.ಡಿ.ಟಿ ಸ್ಪ್ರೇಯಿಂಗ್ ನಡಸಲು [illegible] ಮಾಡಲಾಗುವುದು [illegible] ತೆಗೆದುಕೊಳ್ಳಬಾದ ಕ್ರಮಗಳಿಂದ ಅಲ್ಲಿ ಪ್ಲೇಗ್ ವ್ಯಾಧಿಯು [illegible] ಶಾಂತವಾಗಿದೆ

ರಷ್ಯಾವು ಯುದ್ಧಕ್ಕೆ ಸಿದ್ಧವಾಗುತ್ತಿದೆಯೆಂದು ಟ್ರೂಮನ್

'ಪ್ರಪಂಚದ ಸುತ್ತಲೂ' ರಷ್ಯವು ಯುದ್ಧಕ್ಕೆ ಸನ್ನದ್ಧವಾಗುವ ರೀತಿಯ ಸೈನಿಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದಾಗಿ ಅಮೆರಿಕದ ಅಧ್ಯಕ್ಷ ಟ್ರೂಮನ್ನರು ಆಪಾದಿಸಿರುತ್ತಾರೆ. ಅಮೆರಿಕವು ಯಾವ ಪರಿಸ್ಥಿತಿಯನ್ನಾದರೂ ಎದುರಿಸಲು ಸಿದ್ಧವಾಗಿರಬೇಕೆಂದು ಎಚ್ಚರಿಸಿರುತ್ತಾರೆ

ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಲಾಯಕ್ ಅಲಿ ಇಂಗ್ಲೆಂಡಿಗೆ

ಭಾರತದಿಂದ ಓಡಿಹೋದ ಹೈದರಾಬಾದಿನ ಮಾಜಿ ಮುಖ್ಯಮಂತ್ರಿ ಲಾಯಕ್ ಅಲಿಯವರು ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳನ್ನು ಪಾಕಿಸ್ತಾನಕ್ಕಾಗಿ ಕೊಳ್ಳಲು ವಿದೇಶಗಳಿಗೆ ಹೋಗುತ್ತಾರೆಂದು ಗೊತ್ತಾಗಿದೆ. ಅವರು ಶೀಘ್ರದಲ್ಲೇ ಇಂಗ್ಲೆಂಡಿಗೂ ಹೋಗುವರೆಂದು ಹೇಳಲಾಗಿದೆ

ಪಾಕಿಸ್ತಾನದ ಸೈನ್ಯಕ್ಕೆ ಜನರ ಜಮಾವಣೆ

ಕೆಲವು ತಿಂಗಳ ಹಿಂದೆ ಸೇನೆಗಾಗಿ ಕರೆಯಲ್ಪಟ್ಟ ಮಾಜಿ ಸೈನಿಕರು ಪಾಕಿಸ್ತಾನದ ಸೈನ್ಯದ ದಳಗಳಿಗೆ ಶೀಘ್ರದಲ್ಲೇ ಸೇರಲು ತಯಾರಾಗಿರಬೇಕೆಂದು ಸೂಚಿಸಲ್ಪಟ್ಟಿರುವುದಾಗಿ ವರದಿಯಾಗಿದೆ. ಮಿಲಿಷಿಯಾ ಮುಂತಾದ ಇತರ ದಳಗಳಿಗೆ ಜನರನ್ನು ಸೇರಿಸಲು ಗಡಿನಾಡು ಮತ್ತು ಬೆಲೂಚಿಸ್ತಾನದಲ್ಲಿ ಏರ್ಪಾಡಾಗಿದೆ

ದೇವಸ್ಥಾನದ ಗಂಟೆ ಕದ್ದವನ ಕಣ್ಣಿಗೆ ಕತ್ತಲುಕವಿಯಿತು

ಗೋಬಿಚೆಟ್ಟಿಪಾಳ್ಯ(?) ತಾಲ್ಲೂಕಿನ [illegible] ಎಂಬ [illegible] ದೇವಸ್ಥಾನದಲ್ಲಿ ಕೆಲವು ದಿನಗಳ ಹಿಂದೆ ಒಬ್ಬನು ರಾತ್ರಿ ಸಮಯದಲ್ಲಿ ನುಗ್ಗಿ [illegible] ಗಂಟೆಗಳನ್ನು ಕಿತ್ತುಕೊಂಡು ಹೊರಡಲು ಪ್ರಯತ್ನಿಸಿದಾಗ, ಅವನಿಗೆ ಕಣ್ಣುಗಳೇ ಕಾಣಿಸದೆ ಪ್ರಜ್ಞೆ ತಪ್ಪಿ ಕೆಳಕ್ಕೆ ಬಿದ್ದು ಹೊರಳಾಡುತ್ತಿದ್ದನೆಂದೂ, ಮಾರನೇ ದಿನ ಬೆಳಗ್ಗೆ ಹೊಲಕ್ಕೆ ಹೋಗುತ್ತಿದ್ದ ರೈತನೊಬ್ಬನು ಇವನನ್ನು ಹಿಡಿದು [illegible] ಗಂಟೆಗಳನ್ನು ವಶಪಡಿಸಿಕೊಂಡ ನಂತರ ಕಳ್ಳನು ಹಿಡಿದನು

ಶ್ರೀಮನ್ ಮಹಾರಾಜರ ವರ್ಧಂತ್ಯುತ್ಸವ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದಲ್ಲಿ ಶ್ರೀಮನ್ ಮಹಾರಾಜರ [illegible] ನೇ ವರ್ಷದ ವರ್ಧಂತ್ಯುತ್ಸವವು ನೆನ್ನೆ ಸಂಜೆ ದಿವಾನ್ [illegible] ಶ್ರೀ ಜೆ ಎಚ್ ದೇವರಾಜೆ ಅರಸರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಮತ್ತು ಸಂಘದ ಅಧ್ಯಕ್ಷ ಡಾ|| ಬಿ. ಎಂ. ರಾಮಸ್ವಾಮಿಯವರಿಂದ ಸ್ವಾಗತ ಭಾಷಣವಾದನಂತರ ಸಂಗೀತ ಶಾಸ್ತ್ರ ವಿಶಾರದ ಕ ವಾಸುದೇವಾಚಾರ್ಯರು ಭಾಷಣಮಾಡಿದರು. ಸಂಗೀತ ಮತ್ತು ಶ್ರೀ ಕೆ ಎಸ್ ರಾಜಗೋಪಾಲ್‌ರವರ ನೃತ್ಯಗಳಾದವು. ಅಧ್ಯಕ್ಷರು ಭಾಷಣ ಮಾಡಿ, ಪ್ರಭುಗಳ [illegible] ಗಳನ್ನು ಕೊಂಡಾಡಿದರು. ಮಂಗಳಾರತಿ, ಪ್ರಿಯ ಪ್ರಾರ್ಥನೆ ವಂದನಾರ್ಪಣೆ ಮತ್ತು ಸಿಹಿ ತಿಂಡಿ ವಿನಿಯೋಗಗಳನಂತರ ಸಮಾರಂಭವು ಮುಕ್ತಾಯವಾಯಿತು

[illegible] ರಾಜಧಾನಿಯ [illegible] ಕರ್ನಾಟಕ [illegible] ಪುರದ ಎನ್ ಟಿ ಎಂ ಶಾಲೆಯಲ್ಲಿ [illegible] ನೇ ತಾ|| ಬೆಳಗ್ಗೆ ಶ್ರೀಮನ್ ಮಹಾರಾಜರ ವರ್ಧಂತ್ಯುತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ನಗರದ [illegible] ಪೌರಸಭಾಸದಸ್ಯರಾದ ಶ್ರೀ ಕೆ [illegible] ಸಿದ್ದಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಲಾಯಿತು

ವಾರ ಭವಿಷ್ಯ

[illegible]

ಮೇಷ [illegible] ರೋಗ್ಯ [illegible] ವ್ಯವಹಾರಗ [illegible] ಮಿತ್ರರ [illegible]

ವೃಷಭ [illegible] ಯೋಗದ [illegible] ಸುವುದ [illegible] ಸುವಾರ್ತೆ [illegible]

ಮಿಥುನ ಕೈಗೊಂಡ [illegible] ಹೆಚ್ಚು [illegible] ಕಲಹ

[illegible]

ಕನ್ಯಾ [illegible] ಆರೋಗ್ಯ [illegible] ಸುದ್ದಿ

ವೃಶ್ಚಿಕ [illegible] ವುದು ಆರೋಗ್ಯದ [illegible]

ಧನು ಕೈಗೊಂಡ ಕೆಲಸ [illegible] ಆರೋಗ್ಯ [illegible] ಸಂಭವ [illegible]

Edited printed and published by A R [illegible] rajan at Sadhvi [illegible] Subbiah Road, Mysore

ಪ್ರಪಂಚದ ಉಪವಾಸದ ದಿ ಕಾ ರ್ಡ

[illegible]

ಪ್ರೆಡ್ ಅಂಗಡಿಗಳ ಶೋಧನೆ

[illegible]

ಪಾಕಿಸ್ತಾನದಲ್ಲಿ ಸ್ವಸ್ಥದ ಬ ಡಾ ವ ಣೆ

ಪಾಕಿಸ್ತಾನ್ ನ್ಯಾಷನಲ್ [illegible] ತಂಡಗಳು [illegible] ಪ್ರಕಟಿಸಿರು [illegible]

ಸಂಯಾಲ್‌ಕೋಟಿನಲ್ಲಿ ಬ್ಲ್ಯಾಕ್ ಔಟ್

[illegible]

ಚಿಯಾಂಗ್ ಕೈಷೇಕ್‌ರಿಗೂ ಜಪಾನಿಗೂ ಒಪ್ಪಂದ

[illegible]

ಶ್ರೀ ರಾಮ ಸಹಾಯ ಸಂಘ

[illegible]

ಮದ್ರಾಸಿನ ಅಕ್ಕಿ ಪಡಿತರ ಪ್ರಮಾಣದಲ್ಲಿ ಇಳಿತಾಯ

ಬರುವ ತಿಂಗಳು ೧ ರಿಂದ ಮದ್ರಾಸಿನಲ್ಲಿ ಅಕ್ಕಿಯ ಪಡಿತರವನ್ನು ೮ ರಿಂದ [illegible] ಉಳಿದ [illegible] ಪಡಿತರ [illegible] ಸವಾಗುವು ದಿಲ್ಲವೆಂದು ಹೇಳಲಾಗಿದೆ

ಗಾಂಧೀಜಿ ಜೀವನ ಚರಿತ್ರೆ ೨ಯ ಭಾಗದ ಪ್ರಕಟಣೆ

[illegible] ಸಂಪುಟಗಳನ್ನುಳ್ಳ ಮಹಾತ್ಮ ಗಾಂಧಿಯವರ ಜೀವನ ಚರಿತ್ರೆಯ [illegible] ಗ್ರಂಥವು ಬರುವ ತಿಂಗಳು [illegible] ಪ್ರಕಟಿಸಲ್ಪಡುವುದೆಂದು ಹೇಳಲಾಗಿದೆ

ತನ್ನನ್ನೇ ಗಲ್ಲಿಗೆ ಹಾಕಲು ಅರ್ಜಿ

[illegible]

SRI GAYATHRI. Mysore

To morrow also

WALT DISNEY'S

CINDERELLA

In Technicolor

NEXT CHANGE - From 31 7 51

BLOOD & SAND

With Tyrone Power and Rita Hayworth

Nalins

KEEP IN MIND

AUCTION on 4 8 51 at 4 P M

Await Special Auction NEXT MONTH

V V Market MYSORE

MYSORE CITY MUNICIPALITY

NOTIFICATION NO [illegible] 78 51 52

Sealed quotations are hereby invited from the intending contractors for the work of improvements and alterations to the Gandhi Memorial Stoopa at Gandhi Square so as to reach the Municipal Engineer on or before the 10th instant. For details of work and design please ascertain in the same either by contacting the undersigned or from the office notice board.

Sd V K MUKUNDAN
Municipal Engineer

ಮೈಸೂರು [illegible]

D. L. ನರಸಿಹ್ಮಯ್ಯ & ಬ್ರದರ್ಸ್,

ಜವಳಿ ಅಂಗಡಿ.

[illegible]

ಶ್ರೀ ಚಾಮುಂಡೇಶ್ವರಿ ಟಾಕೀಸ್

27-7-51 ರಿಂದ ಅಸಂಖ್ಯಾತ ಜನಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ

[illegible]

* ದೇ [illegible] ತಿ *

[illegible]

ರಿಜಿ ನಂ. 792 | ೬ ಪುಟಗಳು | ಬಿಡಿ ಪ್ರತಿ 3 ಕಾಸು

ಸಂಪುಟ ೧೦] ಸೋಮವಾರ ೨೦-೬-೫೦ [ಸಂಚಿಕೆ ೭

ಪಾಕಿಸ್ತಾನದ ಮುಷ್ಟಿಗೆ ಬದಲು ಅಶೋಕ ಚಕ್ರ

ಪ್ರಜಾಪ್ರಭುತ್ವ ರಾಜ್ಯದಲ್ಲಿ ವಿರೋಧ ಪಕ್ಷಗಳ ಅಗತ್ಯ

ಜನತಾ ಪಕ್ಷದ ಬಹಿರಂಗ ಸಭೆಯಲ್ಲಿ ಭಾಷಣಗಳು

ಮೈಸೂರು ೨೦

ನೆನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಜನತಾ ಪಕ್ಷದ ಆಶ್ರಯದಲ್ಲಿ ಸೇರಿದ್ದ ಬಹಿರಂಗ ಸಭೆಯಲ್ಲಿ ಪಕ್ಷದ ಸದಸ್ಯರು ಮಾತನಾಡಿ ಪ್ರಜಾ ಪ್ರಭುತ್ವವಿರುವ ರಾಜ್ಯಗಳಲ್ಲಿ ವಿರೋಧ ಪಕ್ಷದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಪಕ್ಷದ ಅಧ್ಯಕ್ಷರಾದ ತುಮಕೂರಿನ ಶ್ರೀ ಬಿ. ತುಪ್ಪೀಗೌಡರು ಅಗ್ರಾಸನವನ್ನು ವಹಿಸಿದ್ದರು.

ಸ್ವಾಗತ ಮತ್ತು ಶ್ರೀ ಜೆ ಸ್ವಾಮಿದಾಸರಿಂದ ಪರಿಚಯ ಭಾಷಣಗಳಾದ ನಂತರ, ಬೆಂಗಳೂರು ಪ್ರಜಾಮತ ಪತ್ರಿಕೆಯ ಸಂಪಾದಕರಾದ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಮಾತನಾಡಿ, ಸ್ವಾತಂತ್ರ್ಯ ಬಂದ ಮೇಲೆ ದೇಶದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ವಿವರಿಸಿ, ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ ಪ್ರಜಾಪ್ರಭುತ್ವ ರಾಜ್ಯಭಾರ ಕ್ರಮದಲ್ಲಿ ವಿರೋಧ ಪಕ್ಷಗಳ ಪಾತ್ರವನ್ನು ತಿಳಿಸಿದರು. ಸರ್ಕಾರವು ಸಕಲ ಪ್ರಜೆಗಳಿಗೂ ಸೇರಿದ ಸ್ವತ್ತೆಂದು ಹೇಳಿ, ಜನತಾ ಪಕ್ಷದ ಧ್ಯೇಯಗಳನ್ನು ವಿವರಿಸಿದರು. ಸತ್ತೋಟಗಳು ಹೋಗಬೇಕೆಂದು ಅವರು ಹೇಳಿದರು.

ಕ್ರಾಂತಿ ಪತ್ರಿಕೆಯ ಶ್ರೀ ದಯಾನಂದ ಸಾಗರ್‌ರವರು ಮಾತನಾಡಿ, ಜನರು ಯಾವ ಪಕ್ಷವು ಅತ್ಯುತ್ತಮವಾಗಿ ಸೇವೆ ಸಲ್ಲಿಸುವುದೋ ಅದಕ್ಕೆ ಬೆಂಬಲ ನೀಡುವುದು ಸಹಜವಾಗಿದೆಯೆಂದು ಅಭಿಪ್ರಾಯಪಟ್ಟರು. ರಹದಾರಿ ಮತ್ತು ಹೌಸಿಂಗ್ ಕಂಟ್ರೋಲ್ ಬಗ್ಗೆ ಕಾಂಗ್ರೆಸ್ಸಿನವರ ತಪ್ಪು ಹೆಜ್ಜೆಯನ್ನು ಟೀಕಿಸಿದರು.

ಬಾಲಿಗ್ರಾಮದ ಶ್ರೀ ಸುಬ್ಬರಾಯರು ಮಾತನಾಡಿ, ಸರ್ಕಾರಕ್ಕೆ ಸರ್ವರೂ ಸಮಾನವಾಗಿರಬೇಕೆಂದೂ ಭೇದ ಭಾವವಿರಕೂಡದೆಂದೂ ತಿಳಿಸಿದರು.

ಅಧ್ಯಕ್ಷರು ಮುಕ್ತಾಯ ಭಾಷಣ ಮಾಡುತ್ತಾ, ಕಾಂಗ್ರೆಸ್ಸು ಅಧಿಕಾರಕ್ಕೆ ಬಂದ ವೇಳೆ ಆಡಳಿತದಲ್ಲಿ ಉಂಟಾದ ಶಿಥಿಲತೆ ಒಂದೇ ವಿಧದ ನೀತಿ ಇಲ್ಲದಿರುವುದು, ಕೇಂದ್ರಕ್ಕೆ ಹಣಕಾಸಿನ ವಿಲೀನೀಕರಣ ಇನ್ನೇ ಮುಂತಾದ ಅನಿಷ್ಟಯ ಕ್ರಮಗಳನ್ನು ತಿಳಿಸಿ, ಜನಾನುರಾಗದ ಬಗ್ಗೆ ಪರಿಹಾರ ಕೊಡುವುದು ಅವಶ್ಯಕವೆಂದು ಹೇಳಿದರು.

ಎಸ್ ಚನ್ನಯ್ಯನವರು ಪುನಃ ವಿದೇಶಕ್ಕೆ

ರಾಜಧಾನಿಯ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಬರುವ ತಿಂಗಳು ೭ ನೇ ತಾರೀಖು ಬೊಂಬಾಯಿಯಿಂದ ಏರ್ ಇಂಡಿಯಾ ಇಂಟರ್‌ನ್ಯಾಷನಲ್ ವಿಮಾನದಲ್ಲಿ ಯೂರೋಪಿಗೆ ತೆರಳುವ ಸಲುವಾಗಿ ೫ ನೇ ತಾರೀಖು ಮೈಸೂರಿನಿಂದ ಹೊರಡುವರು. ಕೆಲವು ಕಾಲ ಅವರು ಅಲ್ಲಿ ವಿಶ್ರಾಂತಿಯನ್ನು ಪಡೆಯುವರು. ರಾಜಧಾನಿಯ ವರ್ತಕರಾದ ಶ್ರೀ ಅಂಬಣ್ಣ ಸೆಟ್ಟಪ್ಪನವರೂ, ಅವರ ಪತ್ನಿಯವರೂ ಸಹ ಯೂರೋಪಿಗೆ ತೆರಳುವರೆಂದು ತಿಳಿದುಬಂದಿದೆ.

ಜಮೀನಿಗೆ ಪ್ರವೇಶಿಸದಂತೆ ಕೆ. ಜಿ. ಒಡೆಯರಿಗೆ ಆಜ್ಞೆ

ಸಾಗರ ತಾಲ್ಲೂಕು ಕಾಗೋಡಿನಲ್ಲಿ ೨೬೩ ನೇ ಸರ್ವೆ ನಂಬರು ಜಮೀನಿಗೆ ಶ್ರೀ ಕೆ ಜಿ ಒಡೆಯರಾಗಲೀ ಅವರ ಕುಟುಂಬ ವರ್ಗದವರಾಗಲೀ ಪ್ರವೇಶಿಸದಂತೆ ಆಜ್ಞೆಯಾಗಬೇಕೆಂದು ಜಿಲ್ಲಿನ ಗೇಣಿದಾರ ಕೆರಿಯ ಎಂಬುವರು ದಾವಾ ಹೂಡಲಾಗಿ ಸಾಗರದ ಮುನ್ಸೀಫರು ಮೊನ್ನೆ ಅದೇ ರೀತಿ ಇಂಜಂಕ್ಷನ್ ಅನ್ನು ಕೊಟ್ಟಿದ್ದಾರೆ. ಈ ಗೇಣಿದಾರರು ಅತಿಕ್ರಮ ಪ್ರವೇಶ ಮಾಡಿದರೆಂದು ಸ್ಥಾನಬಹಿಷ್ಕಾರನ್ನಾಗಿ ಮಾಡಲಾಗಿದೆ.

ನ್ಯಾಯಾಲಯಕ್ಕೆ ಬ್ಯಾಂಕು ನೌಕರರ ಬಹಿಷ್ಕಾರ

ಬ್ಯಾಂಕುಗಳು ಮತ್ತು ಅವುಗಳ ನೌಕರರ ಮಧ್ಯೆ ಒಗೆಕರಿಯದೇ ಇರುವ ವ್ಯಾಜ್ಯಗಳನ್ನು ತೀರ್ಮಾನಿಸಲು ಭಾರತ ಸರ್ಕಾರದವರು ನೇಮಿಸಿರುವ ಜಡ್ಜ್ ದಿವೇತಿಯಾರವರ ನ್ಯಾಯಾಲಯಕ್ಕೆ ಬಹಿಷ್ಕಾರ ಹಾಕಲು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಕೇಂದ್ರ ಸಮಿತಿಯು ನಿರ್ಧರಿಸಿರುತ್ತದೆ. ಈ ನ್ಯಾಯಾಲಯದ ವಿಚಾರಣೆ ಬಗ್ಗೆಯೂ ಸಮಿತಿಯವರು ಸವಾಲ್ ಹಾಕಲು ನಿರ್ಧರಿಸಿರುತ್ತಾರೆ.

ಕಳುವಿಗಾಗಿ ದಸ್ತಗಿರಿ

ರಾಜಧಾನಿಯ ನರಸಿಂಹರಾಜ ಮೊಹಲ್ಲಾದಲ್ಲಿ ಕಳೆದ ಒಂದೂವರೆ ತಿಂಗಳುಗಳಿಂದ ಕಳ್ಳತನಗಳು ನಡೆದ ಸಂದರ್ಭದಲ್ಲಿ ಕ್ರೈಂ ಬ್ರಾಂಚ್ ಪೋಲೀಸಿನವರು ರಿಜಿಸ್ಟರ್ಡ್ ಒಡ್ಡರ ಗ್ಯಾಂಗಿನ ಚಿನ್ನ ಎಲ್ಲಿಗ ಉರುಫ್ ಎಲ್ಲಿಗಡು ಎಂಬುವನನ್ನು ದಸ್ತಗಿರಿ ಮಾಡಿ ಹಲವು ಮಾಲುಗಳನ್ನು ವಶಪಡಿಸಿಕೊಂಡಿರುತ್ತಾರೆ. ಸೆಂಟ್ ಫಿಲೊಮಿನಾ ಕಾಲೇಜು, ಮತ್ತು ಹತ್ತಿರ ಇರುವ ಮನೆಗಳಲ್ಲಿ ಹಂಡೆ, ಪಾತ್ರೆಗಳು ಮತ್ತು ಕೋಳಿಗಳನ್ನು ಕಳುವು ಮಾಡಲಾಗುತ್ತಿತ್ತೆಂದು ಪೋಲೀಸರಿಗೆ ದೂರುಗಳು ಬಂದಿದ್ದವು.

○ ದಿವಾನರ ರಕ್ಷೆಯಲ್ಲಿರುವ ಶ್ರೀ ಜಗನ್ನಾಥ ನಂಬಾ ಶಿಶುವಿಹಾರದಲ್ಲಿ ಕಳೆದ ಗುರುವಾರ ಪ್ರಭುಗಳ ವರ್ಧಂತ್ಯುತ್ಸವವನ್ನು ಆಚರಿಸಿ ಆ ಸಂಬಂಧವಾಗಿ ಹುಡುಗರಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು.

ಉಪಾಧ್ಯಾಯರಿಂದ ಕನ್ಯಾಪಹಾರ ?

ಮೈಸೂರು ೨೦

ರಾಜಧಾನಿಯ ಕುದಿಗದಲ್ಲಿರುವ ಶ್ರೀಮತಿ ಶೇಷಮ್ಮ ಎಂಬುವರ ಮಗಳು ಜಯಲಕ್ಷ್ಮಮ್ಮ ಎಂಬ ಕನ್ಯೆಯನ್ನು ಚಾಮರಾಜನಗರ ತಾಲ್ಲೂಕು ಮೂಡಾಪುರದಲ್ಲಿ ಉಪಾಧ್ಯಾಯರಾಗಿರುವ ಶ್ರೀ ವೇದಮಿತ್ರ ಎಂಬುವರು ಅಪಹರಿಸಿಕೊಂಡು ಹೋಗಿರುವರೆಂದು ದೂರು ಬಂದುದರಿಂದಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರು ಅಲ್ಲಿಗೆ ಹೋಗಿ ಉಪಾಧ್ಯಾಯರನ್ನು ದಸ್ತಗಿರಿ ಮಾಡಿ ಅಲ್ಲಿಂದ ಕರೆದುಕೊಂಡು ಬಂದಿರುವುದಾಗಿ ತಿಳಿದುಬಂದಿದೆ. ಆ ಸಮಯದಲ್ಲಿ ಅಲ್ಲಿಯೇ ಇದ್ದ ಹುಡುಗಿಯನ್ನೂ ಕರೆತರಲಾಗಿದೆ.

ಬಹಿರಂಗ ಸಭೆ

ರಾಜಧಾನಿಯ ವಿದ್ಯುಚ್ಛಕ್ತಿ ಇಲಾಖೆಯ ಕೆಲಸಗಾರರ ಬಹಿರಂಗ ಸಭೆಯು ನಾಳೆ ಸಂಜೆ ೭ ಘಂಟೆಗೆ ಎಂ ಪಿ ಎಲ್ ಆಫೀಸ್ ಎದುರಿಗಿರುವ ಪಾರ್ಕಿನಲ್ಲಿ ನಡೆಯುವುದು. ಶ್ರೀ ರಾಮಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀಗಳಾದ ಬಿ ಶ್ರೀಕಂಠಪ್ಪ, ಟಿ ವಿ ಶ್ರೀನಿವಾಸರಾವ್ ಮತ್ತು ಕೆ ಪಿ ಶಾಂತಮೂರ್ತಿಯವರು ಭಾಷಣ ಮಾಡುವರು.

ಕಾರು ಅಪಘಾತದಲ್ಲಿ ನ್ಯಾಯಾಧೀಶರು

ಬೆಂಗಳೂರು ಸಿವಿಲ್ ಪ್ರದೇಶದ ಸಬಾರ್ಡಿನೇಟ್ ಜಡ್ಜ್ ರಾದ ಶ್ರೀರಂಗರಾವ್ ಕದಮ್‌ರವರು ಮೊನ್ನೆ ಸಂಜೆ ಕಾರಿನಲ್ಲಿ ಹೋಗುತ್ತಿದ್ದಾಗ ಶಿವಾಜಿ ಟಾಕೀಸು ಬಳಿ, ಅವರಕಾರು ಬಿ ಟಿ ಸಿ ಕಂಪೆನಿಯ ಬಸ್ಸಿಗೂ ಡಿಕ್ಕಿಯಾಗಿ ಕಾರಿಗೆ ಜಖಂ ಆಗಿರುತ್ತದೆ. ಕಾರನ್ನು ನಡೆಸುತ್ತಿದ್ದ ಶ್ರೀರಂಗರಾಯರ ಕೈ ಮೇಲೆ ಕೊಂಚ ಗಾಯವಾಗಿದೆ.

ಪೂರ್ವ ಪಾಕಿಸ್ತಾನದಲ್ಲಿ ೧ ಲಕ್ಷ ಸ್ವಯಂಸೇವಕರು

ಪೂರ್ವ ಬಂಗಾಳದ ರಕ್ಷಣೆಗಾಗಿ ಒಂದು ಲಕ್ಷ ಸ್ವಯಂಸೇವಕರ ತಂಡವನ್ನು ನಿರ್ಮಿಸುವುದಾಗಿ ಪಾಕಿಸ್ತಾನ ಪ್ರಧಾನಿಯವರಿಗೆ ಪಶ್ಚಿಮ ಮುಸ್ಲಿಂ ಲೀಗು ವಾಗ್ದಾನ ಮಾಡಿರುವುದಾಗಿ ಗೊತ್ತಾಗಿದೆ.

ಸಂಸ್ಥಾನದ ರಾಜಕೀಯ ಸಮ್ಮೇಳನ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪರ್ಯಾಲೋಚನೆ

ಸ್ವಂ ಸು ಪ್ರೆಸ್] ಬೆಂಗಳೂರು ೨೦

ಈ ದಿನ ಬೆಳಗ್ಗೆ ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆಯು ನಡೆದು ಕಾಂಗ್ರೆಸ್ ಸಂಸ್ಥೆಯಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಹೋಗಲಾಡಿಸುವ ಸಲುವಾಗಿ ಬರುವ ತಿಂಗಳು ೨೫, ೨೬ನೇ ತಾ|| ತುಮಕೂರಿನಲ್ಲಿ ರಾಜಕೀಯ ಸಮ್ಮೇಳನವನ್ನು ಸೇರಿಸುವಂತೆ ನಿರ್ಧರಿಸಲಾಗಿದೆ.

○ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಈ ದಿನ ದೆಹಲಿಯಿಂದ ಇಲ್ಲಿಗೆ ಆಗಮಿಸಿದರು.

○ ಹಣಕಾಸಿನ ಇಲಾಖೆಯ ಕಾರ್ಯದರ್ಶಿ ಶ್ರೀ ಎಂ ರಾಮಣ್ಣನವರಿಗೆ ೧ ತಿಂಗಳ ಫರ್ಲೋ ರಜ. ಶ್ರೀ ಯು ಕೆ. ಸೋಮಪ್ಪನವರಿಗೆ ಕಳೆದ ಜೂನ್ ೭೦ ರಿಂದ ೩ ತಿಂಗಳ ಫರ್ಲೋ ರಜ ಮತ್ತು ಬರುವ ತಿಂಗಳು ಅಸ್ಸಾರೀಖುವರೆಗೂ ಶ್ರೀ ಸಿ ವಿ ಮಾಚಯ್ಯನವರಿಗೆ ರಜಾ ಮಂಜೂರಾಗಿದೆ.

ಪಾಕಿಸ್ತಾನದ ಮುಷ್ಟಿ ಚಿಹ್ನೆಗೆ ಪ್ರತಿ ಅಶೋಕ ಚಕ್ರ

ದೆಹಲಿಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಭಾಷಣ ಮಾಡಿ ಪಾಕಿಸ್ತಾನದ ಮೇಲೆ ಭಾರತವು ಯುದ್ಧ ಹೂಡುವುದಿಲ್ಲವೆಂದೂ, ತನ್ನ ಗಡಿ ರಕ್ಷಣೆಗೆ ಭಾರತವು ಮಾಡಿಕೊಂಡ ಏರ್ಪಾಡಿನಿಂದ ಯುದ್ಧದ ಸಂಭವವು ಕಡಿಮೆಯಾಗಿರುವುದೆಂದೂ ತಿಳಿಸಿದರು. ಪಾಕಿಸ್ತಾನದ ಪ್ರಜೆಗಳಿಗೆ ವಜ ಮುಷ್ಟಿಯನ್ನು ಚಿಹ್ನೆಯಾಗಿ ಕೊಟ್ಟಿದ್ದಾರೆ. ಭಾರತೀಯರಿಗೆ ಅಶೋಕ ಚಕ್ರ ಚಿಹ್ನೆಯಾಗಿದೆ. ಶಾಂತಿ, ನೈತಿಕ ಜೀವನ, ಪ್ರಾಚೀನ ಸಂಸ್ಕೃತಿ ಮುಂತಾದ ಸದ್ಗುಣಗಳನ್ನು ಅದು ಸೂಚಿಸುತ್ತದೆ ಎಂದು ನೆಹರೂರವರು ತಿಳಿಸಿ ಪಾಕಿಸ್ತಾನದಂತೆಯೇ ಭಾರತವೂ ತಪ್ಪು ದಾರಿಗೆ ಹೋಗಬಾರದೆಂದು ನುಡಿದರು.

ಮುಷ್ಕರ ಹೂಡಲು ಬ್ಯಾಂಕ್ ನೌಕರರ ನಿರ್ಧಾರ

ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ವಿಶೇಷ ಸಭೆಯು ನೆನ್ನೆ ಕಾನ್ಪುರದಲ್ಲಿ ನಡೆದು ಬರುವ ಆಕ್ಟೋಬರ್ ೧ ರಿಂದ ಮುಷ್ಕರ ಹೂಡಬೇಕೆಂದು ನಿರ್ಧರಿಸಲಾಯಿತು. ಪಾಕಿಸ್ತಾನದಲ್ಲಿ ಯುದ್ಧದ ಮಾತು ಕೇಳುತ್ತಿರುವುದರಿಂದ ಮುಷ್ಕರ ಹೂಡುವುದನ್ನು ಮುಂದಕ್ಕೆ ಹಾಕಬೇಕೆಂಬ ಸಂಘದ ಕೇಂದ್ರ ಸಮಿತಿಯವರ ಶಿಫಾರಸನ್ನು ಸಭೆಯು ತಿರಸ್ಕರಿಸಿತು.

ಮೈಸೂರಿಗೆ ಎ ಸಂಸ್ಥಾನದ ಸ್ಥಾನಮಾನ

ಮೈಸೂರು ಸಂಸ್ಥಾನವನ್ನು ಎ ವರ್ಗಕ್ಕೆ ಸೇರಿದ ಸಂಸ್ಥಾನವೆಂದು ಪರಿಗಣಿಸುವ ಬಗ್ಗೆ ಶೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದೆಂದು ತಮಗೆ ಭರವಸೆಯುಂಟಾಗಿರುವುದಾಗಿ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿರುತ್ತಾರೆ. ಸಂಸ್ಥಾನಕ್ಕೆ ಇನ್ನೂ ಹೆಚ್ಚಿನ ಅಕ್ಕಿ ಮತ್ತು ನೂಲಿನ ಸರಬರಾಜು ಬಗ್ಗೆ ಅವರು ಒತ್ತಾಯಪಡಿಸಿರುತ್ತಾರೆಂದು ತಿಳಿದುಬಂದಿದೆ.

ಬಸ್ ಕ್ಯೂವಿನಿಂದ ನಿರಾಶ್ರಿತ ಮಹಿಳೆಯ ಜೀವನ

ಜೀವನ ನಡೆಸಲು ದೆಹಲಿಯ ಮಧ್ಯವಯಸ್ಸಿನ ಮಹಿಳೆಯೊಬ್ಬಳು ಪ್ರತಿನಿತ್ಯವೂ ನಗರದ ಬಸ್ ನಿಲ್ದಾಣದ ಬಳಿ ಕ್ಯೂವಿನಲ್ಲಿ ಮೊದಲು ನಿಂತು, ಅವಸರದಲ್ಲಿ ಹೋಗಬೇಕಾದವರಿಂದ ೪-೬ ಆಣೆ ರುಸುಂ ಪಡೆದು ತನ್ನ ಸ್ಥಾನವನ್ನು ಅವರಿಗೆ ಬಿಟ್ಟುಕೊಡುವಳೆಂದೂ, ಈ ರೀತಿ ದಿನವಹಿ ೧ ರಿಂದ ೨ ರೂ ವರೆಗೆ ಆಕೆಯು ಸಂಪಾದಿಸುತ್ತಿರುವಳೆಂದೂ ವರದಿಯಾಗಿದೆ

ಅಂತರ ರಾಷ್ಟ್ರೀಯ ಕಮ್ಯೂನಿಸ್ಟ್ ಪಡೆ

ಮಂಚೂರಿಯದ ರಾಜಧಾನಿ ಮುಕ್ಡೆನ್ನಿನಲ್ಲಿ ಕಮ್ಯೂನಿಸ್ಟರ ಅಂತರ ರಾಷ್ಟ್ರೀಯ ಪಡೆಯೊಂದನ್ನು ರಚಿಸಲಾಗುತ್ತಿದೆಯೆಂದು ಲಂಡನ್ನಿನ ಡೈಲಿ ಟೆಲಿಗ್ರಾಫ್ ಪತ್ರಿಕೆಯು ಪ್ರಕಟಿಸಿದೆ. ಇದನ್ನು ಸೇರಬಿಚ್ಛಿಸುವವರ ಪಟ್ಟಿಗಳನ್ನು ನಾನಾ ರಾಷ್ಟ್ರಗಳಿಂದ ತರಿಸಲೂ ಏರ್ಪಾಡಾಗುತ್ತಿದೆಯೆಂದು ತಿಳಿಸಲಾಗಿದೆ

ಅಬದಾನಿನ ಎಣ್ಣೆ ಗಣಿ ನಾಳೆಯಿಂದ ಬಂದ್

ಪ್ರಪಂಚದಲ್ಲೆಲ್ಲಾ ಅತ್ಯಂತ ಹಿರಿಯ ಎಣ್ಣೆ ಪರಿಷ್ಕರಣದ ಗಣಿಯಾದ ಪರ್ಷಿಯದ ಆಂಗ್ಲೋ ಇರಾನಿಯನ್ ಎಣ್ಣೆ ಕಾರ್ಖಾನೆಯು ನಾಳೆಯಿಂದ ಪೂರ್ತಿಯಾಗಿ ಮುಚ್ಚಲ್ಪಡುವುದೆಂದು ಟೆಹರಾನಿನಲ್ಲಿ ಪ್ರಕಟಿಸಲಾಗಿದೆ. ಅಲ್ಲಿ ವರ್ಷಕ್ಕೆ ೨೫ ಲಕ್ಷ ಗ್ಯಾಲನ್ ಎಣ್ಣೆಯನ್ನು ಶುದ್ಧಿ ಮಾಡಲಾಗುತ್ತಿತ್ತು

ಊಟದಲ್ಲಿ ಚೆಲ್ಲುವ ಪದಾರ್ಥದಿಂದ ೨೦ ಲಕ್ಷ ಟನ್ ನಷ್ಟ

ಊಟಕ್ಕೆ ಕುಳಿತಾಗಲೂ ಮತ್ತು ಅತಿಥಿಗಳಿಗೆ ಉತ್ಸಾಹವಾಗಿ ಬಡಿಸುವಾಗಲೂ ಚೆಲ್ಲುವ ಅನ್ನ ಮುಂತಾದ ಆಹಾರ ಪದಾರ್ಥಗಳ ಒಟ್ಟು ಪ್ರಮಾಣವು ಒಂದು ವರ್ಷಕ್ಕೆ ೨೦ ಲಕ್ಷ ಟನ್ನಿನಷ್ಟಾಗುವುದೆಂದು ಕೇಂದ್ರ ಆಹಾರ ಮಂತ್ರಿ ಕೆ. ಎಂ. ಮುನ್ಷಿಯವರು ತಿಳಿಸಿರುತ್ತಾರೆ

ಸಗಣಿಯಿಂದ ಸುಗಂಧ ದ್ರವ್ಯ

ಸ್ವಿಟ್ಜರ್ಲೆಂಡಿನ ಬಾಸೆಲ್ ನಗರದ ರಾಸಾಯನಿಕ ತಜ್ಞರೊಬ್ಬರು ಸಗಣಿಯಿಂದ ಸುಗಂಧ ದ್ರವ್ಯಗಳನ್ನು ತಯಾರಿಸುವ ವಿಧಾನವೊಂದನ್ನು ಕಂಡುಹಿಡಿದಿದ್ದಾರೆ. ಅಮೆರಿಕದ ವ್ಯಾಪಾರಿ ಸಂಸ್ಥೆಯೊಂದು ಅವುಗಳನ್ನು ಕೊಳ್ಳಲು ಮುಂದೆ ಬಂದಿದೆ

ಗಣೇಶಾ ಟಾಕೀಸ್
31-7-51 ರಿಂದ ದಿನವಹಿ 3 ಆಟಗಳು
ಆಧಿ ರಾತ್
ಅಶೋಕ್ ಕುಮಾರ್ ಮತ್ತು ನರ್ಗೀಸ್ ಪಾತ್ರ ವಹಿಸಿರುವ ಹಿಂದಿ ಚಿತ್ರ

Edited printed and published by A R Nagarajan, at Sadhvi Press D. Subbiah Road, Mysore

ವ್ಯವಸಾಯದಲ್ಲಿ ಕ್ರಾಂತಿಯನ್ನುಂಟು ಮಾಡುವ ಯಂತ್ರ

ಕುಂಭಕೋಣದ ಬಳಿ ಒಂದು ಕಡೆ "ರೋಟೋವೇಟರ್" ಎಂಬ ಯಂತ್ರದ ಪ್ರದರ್ಶನವನ್ನು ನಡೆಯಿಸಲಾಯಿತು. ಮೊದಲು ಉತ್ತು, ಅನಂತರ ಹುಕ್ಕೆ ಒಡೆದು ನೆಲವನ್ನು ಸರಿಮಾಡಿ ಕಾಳು ಬಿತ್ತನೆಯನ್ನು ಮಾಡುವ ಎಲ್ಲ ಕೆಲಸಗಳನ್ನೂ ಏಕ ಕಾಲದಲ್ಲಿ ಮಾಡಲು ಈ ಯಂತ್ರದಿಂದ ಸಹಾಯವಾಗುವುದೆಂದೂ, ಇದರಿಂದ ವ್ಯವಸಾಯದಲ್ಲಿ ಒಂದು ವಿಧವಾದ ಕ್ರಾಂತಿಯೇ ಆಗುವುದೆಂದೂ ಹೇಳಲಾಗಿದೆ ಈ ಯಂತ್ರವನ್ನು ತರಿ ಮತ್ತು ಖುಷ್ಕಿ ಜಮೀನುಗಳಿಗೆ ಉಪಯೋಗಿಸಬಹುದೆಂದು ಗೊತ್ತಾಗಿದೆ.

ಭಾರತೀಯರು ಸಿಲೋನ್ ಬಿಡಲು ಒತ್ತಾಯ

ಸಿಲೋನಿನಲ್ಲಿ ನೆಲೆಸಿರುವ ಭಾರತೀಯರು ಶಾಸನದ ಪ್ರಕಾರ ಕಳೆದ ೧೨ ವರ್ಷಗಳಿಂದಲೂ ಸಿಂಹಳದ ನಾಗರೀಕರಾಗಲು ಪ್ರಯತ್ನಪಡದೇ ಇರುವರೆಂದೂ, ಬ್ರಿಟಿಷರು ಭಾರತವನ್ನು ಬಿಟ್ಟು ಹೋದಂತೆಯೇ ದೊಡ್ಡತನವನ್ನು ತೋರಿ, ಭಾರತೀಯರೂ ಸಿಲೋನ್ ದ್ವೀಪವನ್ನು ಬಿಡಬೇಕೆಂದೂ ಅಲ್ಲಿನ ಪ್ರಧಾನಿ ಸೇನಾನಾಯಕೆಯವರು ತಿಳಿಸಿರುತ್ತಾರೆ

ತಿರುವಾಂಕೂರಿನಲ್ಲಿ ಪಡಿತರ ಮುರಿದು ಬಿತ್ತು ?

ತಿರುವಾಂಕೂರಿನ ಹಲವು ಪ್ರದೇಶಗಳಲ್ಲಿ ಕೆಲವು ವಾರಗಳಿಂದ ಪಡಿತರದ ಪದ್ಧತಿಯು ಪೂರ್ಣವಾಗಿ ಮುರಿದು ಬಿದ್ದಿರುವುದಾಗಿಯೂ, ತಿರುವಾಂಕೂರಿನ ಆಹಾರಧಾನ್ಯಗಳ ತೌರೂರಾದ ಕುಂಡನಾಡ್ ಪ್ರದೇಶದಲ್ಲಿ ವ್ಯವಸಾಯದಲ್ಲಿ ನಿರತರಾಗಿರುವ ಕುಟುಂಬಗಳೂ ಉಪವಾಸ ಮಾಡುತ್ತಿರುವುವೆಂದೂ ತಿಳಿದು ಬಂದಿದೆ

ಮಂಡ್ಯ ಮತ್ತು ದಾವಣಗೆರೆಗಳಿಗೆ ಪ್ರಭುಗಳ ಭೇಟಿ

ಬರುವ ತಿಂಗಳು ೬ ನೇ ತಾ|| ಶ್ರೀಮನ್ ಮಹಾರಾಜರು ದಾವಣಗೆರೆಗೆ ತೆರಳಿ ಅಲ್ಲಿ ಇಂಜನಿಯರಿಂಗ್ ಕಾಲೇಜು ಕಟ್ಟಡದ ಶಂಕು ಸ್ಥಾಪನೆಯನ್ನೂ, ಹೊಸ ಪೌರಸಭಾ ಕಛೇರಿಯ ಪ್ರಾರಂಭೋತ್ಸವವನ್ನೂ ನೆರವೇರಿಸುವರು. ಈ ಕಾಲೇಜು ಅಕ್ಟೋಬರ್ ತಿಂಗಳಿಂದ ಪ್ರಾರಂಭವಾಗುವುದೆಂದು ಹೇಳಲಾಗಿದೆ. ಆಗಸ್ಟ್ ೮ನೇ ತಾ|| ಪ್ರಭುಗಳು ಮಂಡ್ಯಕ್ಕೆ ಭೇಟಿ ಕೊಟ್ಟು ಅಲ್ಲಿ ಟರ್ಮಾರ್ಕೆಟ್ಟಿನ ಕಟ್ಟಡದ ಶಂಕು ಸ್ಥಾಪನೆಯನ್ನು ನೆರವೇರಿಸುವರು

ಕೊಲಂಬಸ್ಸನಿಗಿಂತ ಮುಂಚೆ ರಷ್ಯನನು ಅಮೆರಿಕವನ್ನು ಕಂಡುಹಿಡಿದನೇ ?

ಅಮೆರಿಕಾ ಖಂಡವನ್ನು ಮೊದಲು ಕಂಡುಹಿಡಿದನೆಂದು ಪ್ರಖ್ಯಾತನಾಗಿರುವ ಸ್ಪೇನಿನ ಕೊಲಂಬಸ್ಸನಿಗಿಂತ ಒಂದು ದಿನ ಮುಂಚಿತವಾಗಿ ರಷ್ಯದ ಒಬ್ಬ ಪ್ರಜೆಯು ಆ ದೇಶವನ್ನು ಕಂಡುಹಿಡಿದನೆಂದು ಮಾಸ್ಕೋ ರೇಡಿಯೋವು ಪ್ರಸಾರ ಮಾಡಿರುತ್ತದೆ. ಕೊಲಂಬಸ್ಸನು ಆ ದೇಶದಲ್ಲಿ ಕಾಲಿಡುವುದಕ್ಕೆ ಒಂದು ದಿನ ಮುಂಚೆ ರಷ್ಯನನು ಅಮೆರಿಕದ ವಾಯುವ್ಯ ತೀರದಲ್ಲಿ ಇಳಿದುದಾಗಿ ಹೇಳಲಾಗಿದೆ

ಪೊಲೀಸ್ ಅಧಿಕಾರಿಗಳ ಸಮ್ಮೇಳನ

ಭಾರತ ಸರ್ಕಾರದ ವಿಶೇಷ ಪೊಲೀಸು ಅಧಿಕಾರಿಗಳ ಸಮ್ಮೇಳನದ ಆರಂಭೋತ್ಸವವನ್ನು ಇಂದು ದೆಹಲಿಯಲ್ಲಿ ರಾಜಾಜಿಯವರು ನೆರವೇರಿಸಲಿರುವರು. ಸಮ್ಮೇಳನವು ನಾಳೆಯೂ ನಡೆಯುವುದು ಈ ಸಂದರ್ಭದಲ್ಲಿ ಇಬ್ಬರು ಪೊಲೀಸು ಅಧಿಕಾರಿಗಳಿಗೆ ಗೃಹ ಮಂತ್ರಿಗಳು ಎರಡು ಪದಕಗಳನ್ನು ಕೊಡಲಿರುವರು. ಈ ಸಮ್ಮೇಳನದಲ್ಲಿ ಎ ತರಗತಿಯ ೯ ಸಂಸ್ಥಾನಗಳು ಮತ್ತು ದೆಹಲಿ, ಅಜ್ಮೀರಗಳ ಒಟ್ಟು ೧೭ ಜನ ಪೊಲೀಸು ಅಧಿಕಾರಿಗಳು ಭಾಗವಹಿಸುವರೆಂದು ತಿಳಿದು ಬಂದಿದೆ

ಕಲ್ಕತ್ತ ವಿದ್ಯುಚ್ಛಕ್ತಿ ಕಾರ್ಯಾಲಯಕ್ಕೆ ಬೆಂಕಿ

ಕಲ್ಕತ್ತಾ ವಿದ್ಯುಚ್ಛಕ್ತಿ ತಯಾರಿಕಾ ಕಾರ್ಯಾಲಯಕ್ಕೆ ೨೫ ನೇ ತಾ|| ಬೆಂಕಿ ಬಿದ್ದುದರಿಂದ ಅದನ್ನು ಆರಿಸಲು ೨ ಗಂಟೆ ಕಾಲ ಹಿಡಿಯಿತೆಂದು ವರದಿಯಾಗಿದೆ. ಬೆಂಕಿಯ ಕಾರಣವು ಇನ್ನೂ ತಿಳಿಯದಾಗಿದೆ.

ಮುಷ್ಕರ ನಡೆದರೆ ನಿವೃತ್ತ ನೌಕರರು ರೈಲು ನಡೆಸುವರು

ನಿವೃತ್ತ ರೈಲ್ವೆ ಕಾರ್ಮಿಕರು, ನೌಕರರು ಭಾರತ ಸರ್ಕಾರಕ್ಕೆ ಪತ್ರಗಳನ್ನು ಬರೆದು ಮುಷ್ಕರವು ನಡೆಯುವುದಾದರೆ ತಾವು ರೈಲುಗಳನ್ನು ನಡೆಸಲು ಮುಂದೆ ಬರುವುದಾಗಿ ಆಶ್ವಾಸನೆಯನ್ನಿತ್ತಿರುವುದಾಗಿ ತಿಳಿದುಬಂದಿದೆ.

ಉ ದಾ ರ ದಾ ನ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ವಿಶ್ವೇಶ್ವರ ಸ್ವಾಮಿ ದೇವರಿಗೆ ಬೆಳ್ಳಿ ಕವಚವನ್ನು ಮಾಡಿಸಲು ಶ್ರೀ ಎಸ್. ರಘುನಾಥರಾಯರೂ ಮತ್ತು ಶ್ರೀಮತಿ ಭಾಗೀರಥಮ್ಮನವರೂ [illegible] ರೂಪಾಯಿಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ

ರಾ ಜ ಕ ಮ ಲ್, ಮೈ ಸೂ ರು
27-7-51 ರಿಂದ :: ಪ್ರತಿ ದಿನ 3 ಆಟಗಳು
- ಫ್ಲಾಷ್ ಗಾರ್ಡನ್ -
ರೋಮಾಂಚಕರವಾದ ಪೂರ್ಣ ಸೀರಿಯಲ್
(ಹೊಸ ಪ್ರಿಂಟು)
ಟಿಕೆಟ್ ದರ ಗಂಡಸರಿಗೆ ಮಹಡಿಮೇಲೆ 2 6 0, 1 12 0, 1-3-0,
ಕೆಳಗೆ 0-13 0, 0-8 0, 0 5 0 ಹೆಂಗಸರಿಗೆ 0 8 0, 0-5-0

ಚುನಾವಣೆಗಳಾದ ನಂತರ ಭಾಷಾ ಪ್ರಾಂತ ರಚನೆ

ಸಾರ್ವತ್ರಿಕ ಚುನಾವಣೆಗಳಾದ ನಂತರ ಏರ್ಪಡುವ ಹೊಸ ಪಾರ್ಲಿಮೆಂಟಿನಲ್ಲಿ ಭಾಷಾವಾರು ಪ್ರಾಂತಗಳ ರಚನೆ ಬಗ್ಗೆ ಒಂದು ಮಸೂದೆಯನ್ನು ತರಲಾಗುವುದೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಹುಬ್ಬಳ್ಳಿಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುತ್ತಾರೆ. ಬರುವ ತಿಂಗಳು ಮಧ್ಯ ಭಾಗದಲ್ಲಿ ಕಾಂಗ್ರೆಸ್ ಅಧ್ಯಕ್ಷ ಟಂಡನರವರು ಕರ್ನಾಟಕ ಪ್ರದೇಶದಲ್ಲಿ ಚುನಾವಣಾ ಚಳುವಳಿಯನ್ನು ಪ್ರಾರಂಭಿಸುವರೆಂದೂ ಅವರು ಹೇಳಿರುತ್ತಾರೆ.

ಕೊರಿಯದಲ್ಲಿ ಮಧ್ಯವರ್ತಿ ಪ್ರದೇಶದ ನಿರ್ಮಾಣ ?

ಉತ್ತರ ಮತ್ತು ದಕ್ಷಿಣ ಕೊರಿಯಗಳ ಮಧ್ಯೆ ಕೆಲವು ಪ್ರದೇಶಗಳನ್ನು ಪ್ರತ್ಯೇಕಿಸಿ ಅದನ್ನು ಮಧ್ಯವರ್ತಿ ರಾಜ್ಯವನ್ನಾಗಿ ಪರಿವರ್ತಿಸಬೇಕೆಂದು ಕಮ್ಯೂನಿಸ್ಟರು ಮಾತುಕತೆ ಸಮಯದಲ್ಲಿ ಸೂಚನೆಯಿತ್ತುದರಿಂದ, ಸಂಧಾನವು ಮುಂದುವರಿದಿರುವುದಾಗಿ ಗೊತ್ತಾಗಿದೆ.

ಯಳಂದೂರು ವಿದ್ಯಾ ನಿಧಿ

ಯಳಂದೂರು ವಿದ್ಯಾನಿಧಿಯ ೫೦-೫೧ನೇ ಸಾಲಿನ ವಾರ್ಷಿಕ ವರದಿಯ ಪ್ರತಿಯೊಂದು ನಮ್ಮ ಹಸ್ತಗತವಾಗಿರುತ್ತದೆ. ಕಳೆದ ೬೧|| ವರ್ಷಗಳಲ್ಲಿ ಒಟ್ಟು ೩೨೭೦೩ ರೂ.ಗಳ ಚಂದಾ ಹಣ ವಸೂಲಾಗಿ ೩೧೯೭೩ ರೂ.ಗಳು ಖರ್ಚಾಗಿವೆ ಎಲ್ಲ ಕೋಮುಗಳ ೧೫೭೮ ಬಡ ವಿದ್ಯಾರ್ಥಿಗಳಿಗೆ ಹೈ ಸ್ಕೂಲು ಮತ್ತು ಮೇಲ್ಪಟ್ಟ, ಕಸುಬು, ಕೈಗಾರಿಕೆ ಮತ್ತು ಇತರ ಶಿಕ್ಷಣ ಶಾಲೆಗಳ ವ್ಯಾಸಂಗಕ್ಕಾಗಿ ೨೯೩೩೧ ರೂ.ಗಳಷ್ಟು ಹಂಚಲಾಗಿದೆ ವರಮಾನ ಕಡಿಮೆಯಾಗಿರುವುದರಿಂದ ಇಂಟರ್ ಮತ್ತು ಬಿ. ಎ. ತರಗತಿಗಳಿಗೆ ಸಹಾಯ ಮಾಡಲು ಈಚೆಗೆ ಸಾಧ್ಯವಾಗಿಲ್ಲ. ಈ ನಿಧಿಗೆ ಯಳಂದೂರು ಜಹಗೀರುದಾರರು ಮಹಾ ಪೋಷಕರು. ಜಹಗೀರಿನ ವಾರ್ಷಿಕ ಸಹಾಯವನ್ನು ಸರ್ಕಾರದವರು ೪೭-೪೮ರಿಂದ ೨೫೦ ಇದ್ದುದನ್ನು ೫೦೦ ರೂ.ಗಳಿಗೆ ಹೆಚ್ಚಿಸಿರುತ್ತಾರೆ. ಈ [illegible]ಯು ಈ ವರ್ಷದಲ್ಲಿ ಮುಗಿಯುವುದಾದ್ದರಿಂದ ಪುನಃ ಸರ್ಕಾರದವರು ಅದನ್ನು ಖಾಯಂ ಮಾಡಲು ಕೇಳಿಕೊಳ್ಳಲಾಗುವುದು ಎಂಬುದಾಗಿ ವರದಿಯಲ್ಲಿ ತಿಳಿಸಲಾಗಿದೆ.

SRI GAYATHRI.
Mysore
LAST DAY
CINDERELLA
To-morrow Only
20th Century's
BLOOD & SAND
(In Technicolour)
With Tyronne Power
Linda Darnell & RitaHayworth
-: NEXT CHANGE :-
Where Danger Lives

ಸೂಚನೆ ನಂ 792 ಒಂದೇ ಬೇಕಾಗಿದೆ ಇಂದಿನ ಪತ್ರಿಕೆ ಆಣೆ

ಸಂಪುಟ ೧೦] ಮಂಗಳವಾರ ೩೦-೭-೫೦ [ಸಂಚಿಕೆ ೮

ಜನವರಿ ತಿಂಗಳಿನಿಂದ ಭಾರತದಲ್ಲಿ ಚುನಾವಣೆ

ಮೊಹಲ್ಲಾ ದಿನಾಚರಣೆ

ಮೈಸೂರು ೩೧

ನಗರದ ಪೌರ ಸಭೆಯವರು ಮಂಡಿ ಮೊಹಲ್ಲೆಯ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಮೊಹಲ್ಲಾ ದಿನಾಚರಣೆಯನ್ನು ನಾಳಿದ್ದು ಏರ್ಪಡಿಸಿರುತ್ತಾರೆ. ಅದರ ಅಂಗವಾಗಿ ಬೆಳಿಗ್ಗೆ ೬॥ ರಿಂದ ೯॥ ಗಂಟೆವರೆಗೆ ಸದರಿ ಪ್ರದೇಶವನ್ನು ಪಾಳಿಜು ಮಾಡುವುದು,೧೧ರಿಂದ ೧೧ರವರೆಗೆ ಚೊಕ್ಕಟವಾಗಿರುವ ಮನೆಗಳ ಪರಿಶೀಲನೆ ೧ ರಿಂದ ೧೨ರ ವರೆಗೆ ಶಾಲಾ ಇನಾಕ್ಯುಲೇಷನ್ ಮತ್ತು ಸಿಡುಬು ಹಾಕುವುದು, ಸಂಜೆ ೬ ಗಂಟೆಗೆ ದೇವಸ್ಥಾನದಲ್ಲಿ ಸಭೆ, ಬಹುಮಾನ ವಿನಿಯೋಗ ಇವುಗಳು ನಡೆಯುವುವು. ಮಹಾಜನರು ದಯಮಾಡಿಸಬೇಕೆಂದು ಪೌರ ಸಭಾಧ್ಯಕ್ಷರಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ಕೋರಿರುತ್ತಾರೆ

ಕೃತಕ ವಿಧಾನಗಳಿಂದ ೫ ಸಾವಿರ ಕರುಗಳ ಜನನ

ಮೈಸೂರು ಸರ್ಕಾರದ ಪಶು ವೈದ್ಯಶಾಲೆಯವರು ಕೃತಕ ಗರ್ಭಾದಾನ ವಿಧಾನದಿಂದ ಕರುಗಳು ಹುಟ್ಟುವಂತೆ ಮಾಡುವ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸಿರುತ್ತಾರೆ ಕಳೆದ ಎರಡು ವರ್ಷಗಳಿಂದ ಇದುವರೆಗೆ ೫ ಸಾವಿರ ಕರುಗಳು ಈ ವಿಧಾನದಿಂದ ಜನಿಸಿರುತ್ತವೆ. ನಾಳೆ ಈ ಕರುಗಳ ಪ್ರದರ್ಶನವನ್ನು ಬೆಂಗಳೂರಿನಲ್ಲಿ ನಡೆಸಲಾಗುವುದು ಕೇಂದ್ರ ವ್ಯವಸಾಯ ಮಂತ್ರಿಗಳಾದ ಕೆ ಎಂ ಮುನ್ಷಿಯವರು ಈ ಪೈಕಿ ಉತ್ತಮವಾದ ಕರುಗಳಿಗೆ ಬಹುಮಾನವನ್ನೀಯುವರು.

ಸಂಸ್ಥಾನ ಶಾಖೆಗೆ ಹೊಸ ಕಾರ್ಯದರ್ಶಿ

ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖಾ ಕಾರ್ಯದರ್ಶಿಯವರಾದ ವಿ ಪಿ ಮೆನನ್ನರ ಸ್ಥಾನದಲ್ಲಿ ರಾಜಾಸ್ಥಾನದ ರಾಜಪ್ರಮುಖರಿಗೆ ಸಲಹೆಗಾರರಾಗಿರುವ ಸಿ. ಎಸ್ ವೆಂಕಟಾಚಾರ್ಯರನ್ನು ನೇಮಿಸುವ ಸಂಭವವಿರುವುದಾಗಿ ಗೊತ್ತಾಗಿದೆ.

ಯುದ್ಧವಾದರೆ ಭಾರತಕ್ಕೆ ರಷ್ಯದ ಸಹಾಯ

ಕಾಶ್ಮೀರದ ಮೇಲೆ ಪಾಕಿಸ್ತಾನವು ದಾಳಿ ನಡೆಸಿದರೆ ಭಾರತಕ್ಕೆ ಅಗತ್ಯವಾಗಿ ಬೇಕಾದ ಶಸ್ತ್ರ ಸಹಾಯ ಮಾಡಲು ರಷ್ಯವು ಸಿದ್ಧವಿರುವುದಾಗಿ ಸೋವಿಯಟ್ ಪ್ರದೇಶದ ವಾಸಗೀ ಸಂಸ್ಥೆಯೊಂದು ಭಾರತಕ್ಕೆ ಸಂದೇಶವನ್ನು ಕಳುಹಿಸಿರುವುದೆಂದು ತಿಳಿದುಬಂದಿದೆ

ಕೊರಿಯಾ ಶಾಂತಿ ಸಂಧಾನ ಮುರಿದು ಬೀಳುವುದೇ ?

ಕೊರಿಯಾ ಶಾಂತಿ ಸಂಧಾನಗಳು ಸ್ಥಿರವಾಗಿ ಮುಂದುವರಿಯುತ್ತಿವೆ ಎಂದು ಉತ್ತರ ಕೊರಿಯದ ರೇಡಿಯೊ ತಿಳಿಸಿ, ಈ ಮಾತುಕತೆಗಳು ಮುರಿದು ಬೀಳುವ ಸಂಭವವಿರುವುದೆಂದು ಅಭಿಪ್ರಾಯಪಟ್ಟಿರುತ್ತದೆ ಅಮೆರಿಕವು ಇಂತಿಯ ಬಗ್ಗೆ ತುದಿ ನಾಲಿಗೆಯ ಮಾತಾಡುತ್ತಿರುವುದಾಗಿ ಆ ರೇಡಿಯೊವು ವಾದಿಸಿರುತ್ತದೆ ಸೀಸ್ ಫೈರ್ ಚಾಲ್ತಿಗೆ ಬರಲು ಒಂದೆರಡು ತಿಂಗಳು ತಡವಾಗಬಹುದೆಂದು ಹೇಳಲಾಗುತ್ತಿದೆ.

ಕಿದ್ವಾಯಿಯರ ಸ್ಥಾನಕ್ಕೆ ಆಸಫ್ ಆಲಿ ?

ಕೇಂದ್ರ ಮಂತ್ರಿ ಮಂಡಲದಿಂದ ರಫಿ ಅಹಮದ್ ಕಿದ್ವಾಯಿಯವರು ಹೊರಕ್ಕೆ ಬಂದರೆ ಅವರ ಸ್ಥಾನದಲ್ಲಿ ಒರಿಸ್ಸಾ ಗವರ್ನರರಾದ ಆಸಫ್ ಅಲಿಯವರನ್ನೂ, ಪ್ರಕಾಶ್ ಪ್ರಸಾದ್ ಜೈನರವರೂ ರಾಜೀನಾಮೆಯಿತ್ತರೆ ಅವರ ಬದಲು ಲಾಲಾ ದೇಶಬಂಧುಗುಪ್ತರವರನ್ನೂ ನೇಮಿಸುವ ಸಂಭವವಿರುವುದಾಗಿ ಗೊತ್ತಾಗಿದೆ

ಬ್ರಿಟಿಷ್ ಸರ್ಕಾರಕ್ಕೆ ಕಾರ್ಮಿಕರ ಎಚ್ಚರಿಕೆ

ಬ್ರಿಟನ್ನಿನಲ್ಲಿ ಹೆಚ್ಚುತ್ತಿರುವ ಜೀವನದ ವೆಚ್ಚವನ್ನು ಕೂಡಲೇ ಇಳಿಸಬೇಕೆಂದು ಅಲ್ಲಿನ ಎಲ್ಲ ಕಾರ್ಮಿಕರುಗಳ ಸಂಘಗಳು ಸರ್ಕಾರಕ್ಕೆ ಎಚ್ಚರಿಕೆಯನ್ನಿತ್ತಿರುತ್ತವೆ

ಪಶ್ಚಿಮ ಜರ್ಮನಿಯಲ್ಲಿ ಮಾಜಿ ನಾಜಿಗಳಿಗೆ ಹುದ್ದೆ

ಹಿಟ್ಲರನ ಕಾಲದಲ್ಲಿ ವಿದೇಶಾಂಗ ಮಂತ್ರಿಯಾಗಿದ್ದ ರಿಬ್ಬೆನ್‌ಟ್ರಾಪರ ಕೈಕೆಳಗೆ ಇದ್ದ ಅನೇಕ ಮಾಜಿ ನಾಜಿ ಅಧಿಕಾರಿಗಳನ್ನು ಪಶ್ಚಿಮ ಜರ್ಮನಿಯ ಪ್ರಮುಖ ಹುದ್ದೆಗಳಿಗೆ ನೇಮಿಸಲಾಗುತ್ತಿರುವುದಾಗಿ ಪ್ರಪಂಚದ ಯಹೂದ್ಯರ ಕಾಂಗ್ರೆಸ್ಸು ತಿಳಿಸಿರುತ್ತದೆ

ವಿಜಯ ರಾಘವಾಚಾರ್ಯರ ಸ್ಮಾರಕ ಭವನ

ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರುಗಳಲ್ಲೊಬ್ಬರಾದ ಸೇಲಮ್ಮಿನ ವಿಜಯ ರಾಘವಾಚಾರ್ಯರ ಸ್ಮಾರಕ ಭವನದ ಆರಂಭೋತ್ಸವವನ್ನು ನೊನ್ನೆ ೨ ಊರಿನಲ್ಲಿ ಮದ್ರಾಸಿನ ಮುಖ್ಯ ಮಂತ್ರಿ ಸಿ. ಎಸ್ ಕುಮಾರಸ್ವಾಮಿ ರಾಜಾರವರು ನೆರವೇರಿಸಿದರು

ಬಹಿರಂಗ ಸಭೆಯಲ್ಲಿ ಕೋಳಿ ಮೊಟ್ಟೆ ಎಸೆಯಲಾಯಿತು

ಇಂಗ್ಲೆಂಡಿನ ಸ್ವಾಕ್‌ಟೋರ್ನ್ ನಗರದಲ್ಲಿ ಕಳೆದ ಶನಿವಾರ ಬ್ರಿಟನ್ನಿನ ರಕ್ಷಣಾ ಮಂತ್ರಿ ಷಿನ್ವೆಲ್‌ರವರು ಭಾಷಣ ಮಾಡುತ್ತಿದ್ದಾಗ ವೇದಿಕೆಯ ಮೇಲೆ ಎರಡು ಮೊಟ್ಟೆಗಳನ್ನೂ ಹಸ್ತಪತ್ರಿಕೆಗಳನ್ನೂ ಒಬ್ಬ ಮಹಿಳೆಯು ಎಸೆದಳೆಂದು ವರದಿಯಾಗಿದೆ

ಅಕ್ಕಿ ಪಡಿತರ ೮ ಔನ್ಸಿಗೆ ಹೆಚ್ಚಿಸಲು ಪೌರಸಭೆನಿರ್ಧಾರ

ಮೈಸೂರು ೩೧

ಅನುಕೂಲವಾಗುವಂತೆ ಕೂಡಲೇ ಅಕ್ಕಿಯ ಪಡಿತರವನ್ನು ೮ ಔನ್ಸಿಗೆ ಹೆಚ್ಚಿಸಬೇಕೆಂಬ ನಿರ್ಣಯವು ನೆನ್ನೆ ಸೇರಿದ್ದ ಪೌರಸಭೆಯ ಸಾಮಾನ್ಯ ಅಧಿವೇಶನದಲ್ಲಿ ಅಂಗೀಕೃತವಾಯಿತು ದಸರಾ ಕಾಲದಲ್ಲಿ ನಡೆಯುವ ಕುಮಾರಿ ಪೂಜನ ಎಂಬ ಭಾಗವನ್ನು ಪೌರ ಸಭೆಗೆ ಒಪ್ಪಿಸಬೇಕೆಂದು ಸರ್ಕಾರವನ್ನು ಕೋರಬೇಕೆಂದು ಶ್ರೀ ಬಿ ಜಿ ದಾಸರ ನಿರ್ಣಯವು ಬಿದ್ದು ಹೋಯಿತು. ಕುಮಾರಿ ಪೂಜನ್ನು ನಿಲ್ಲಿಸಬೇಕೆಂದು ಪ್ರಭುಗಳನ್ನು ಕೋರಲು ಅವರ ಬಳಿಗೆ ನಿಯೋಗ ಹೋಗಬೇಕೆಂದು ಶ್ರೀ ಟಿ ವೆಂಕಟರಮಣಯ್ಯನವರು ಸೂಚಿಸಿದರು

ಮಾಜಿ ಸದಸ್ಯರಾದ ಶ್ರೀ ಪಟ್ಟಣ್ಣ ಶ್ರೀನಿವಾಸ ಶೆಟ್ಟರ ನಿಧನದ ಒಗ್ಗೆ ಸಭೆಯು ಆರಂಭದಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಾಡಲಾಯಿತು

ಪ್ರಭುಗಳ ವರ್ಧಂತ್ಯುತ್ಸವ

ರಾಜಧಾನಿಯ ಬಿನ್ನಾಣ ರಸ್ತೆಯಲ್ಲಿರುವ ಮಹಿಳಾ ಸದನದಲ್ಲಿ ಕಳೆದ ಭಾನುವಾರ ಶ್ರೀಮನ್ ಮಹಾರಾಜರ ವರ್ಧಂತ್ಯುತ್ಸವವು ನಡೆಯಿತು ಭಾರತೀ ಸ್ತ್ರೀ ಸಮಾಜದ ಅಧ್ಯಕ್ಷರಾದ ಶ್ರೀಮತಿ ನಾರಾಯಣಮ್ಮನವರು ಅಧ್ಯಕ್ಷತೆ ವಹಿಸಿದರು. ಪ್ರಾರ್ಥನೆ, ಪರಿಚಯ ಭಾಷಣಗಳ ನಂತರ ಶ್ರೀ ರಾಜೇಶ್ವರಿ ಮತ್ತು ಶ್ರೀ ಅನುಸೂಯರವರುಗಳ ಸಂಗೀತವು ನಡೆಯಿತು ಶ್ರೀಮತಿ ಶಾರದಮ್ಮನವರು ರಾಜ ಭಕ್ತಿಯ ವಿಷಯವಾಗಿ ಮಾತನಾಡಿದರು ವಂದನಾರ್ಪಣೆಯೊಡನೆ ಉತ್ಸವವು ಮುಕ್ತಾಯವಾಯಿತು

ಜನವರಿಯಿಂದ ಭಾರತದಲ್ಲಿ ಚುನಾವಣೆ

ಬರುವ ಜನವರಿ ತಿಂಗಳಿನಿಂದ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಬೇಕೆಂದು ಭಾರತ ಸರ್ಕಾರದವರು ನಿರ್ಧರಿಸಿರುವುದಾಗಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಮೋಹನ ಲಾಲ್ ಗೌತಮ್ ರವರು ತಿಳಿಸಿರುತ್ತಾರೆ. ಆಯವ್ಯಯಗಳ ಪರಿಶೀಲನೆ ಹೊತ್ತಿಗೆ ಎಲ್ಲ ಸಂಸ್ಥಾನಗಳಲ್ಲೂ ಚುನಾವಣೆಗಳು ಮುಗಿದಿರುವುವೆಂದು ಅವರು ಅಭಿಪ್ರಾಯ ಪಟ್ಟಿರುತ್ತಾರೆ

ಬೆಂಗಳೂರು ಮತ್ತು ಸೇಲಂ ಗಳಿಗೆ ರೈಲು ಮಾರ್ಗ

ಬೆಂಗಳೂರು ೩೧

ಧರ್ಮಪುರಿಯ ಮಾರ್ಗವಾಗಿ ಸೇಲಮ್ಮಿನಿಂದ ಹೊಸೂರಿಗೆ ರೈಲನ್ನು ಹಾಕಿ ಬೆಂಗಳೂರು ಮತ್ತು ಸೇಲಂಗಳಿಗೆ ಮಾರ್ಗವನ್ನು ಏರ್ಪಡಿಸುವ ವಿಷಯವನ್ನು ಕೇಂದ್ರ ಸಂಚಾರ ಬೋರ್ಡಿನಲ್ಲಿ ಪರಿಶೀಲಿಸಲಾಯಿತು. ಚಾಮರಾಜನಗರ ಮತ್ತು ಸತ್ಯಮಂಗಲ ರೈಲ್ವೆ ಯೋಜನೆಯನ್ನು ಆದಷ್ಟು ಬೇಗನೆ ಕೈಗೊಳ್ಳಲು ಬೋರ್ಡಿನವರು ಒಪ್ಪಿರುತ್ತಾರೆ ಆದರೆ ಹಣದ ಅಭಾವದಿಂದ ಅದಚಣೆಯಾಗಿದೆಯೆಂದು ಕೇಂದ್ರ ಸರ್ಕಾರದವರು ಹಾದಿಸುತ್ತಿದ್ದಾರೆ

ಬೆಂಗಳೂರಿಗೆ ೩೫ ಲಕ್ಷ ರೂ.ನ ನೀರು ಸರಬರಾಜು ವ್ಯವಸ್ಥೆ

ಬೆಂಗಳೂರಿನಾಗಿ ೩೫ ಲಕ್ಷ ರೂ. ಖರ್ಚಿನ ನೀರು ಸರಬರಾಜಿನ ಯೋಜನೆಯೊಂದನ್ನು ಸಿದ್ಧಗೊಳಿಸಲಾಗಿರುವುದೆಂದೂ, ತಿಪ್ಪಗೊಂಡನಹಳ್ಳಿಯ ಜಲಾಶಯವನ್ನು ಇನ್ನೂ ೧೦ ಅಡಿಯಷ್ಟು ಎತ್ತರ ಮಾಡಲಾಗುವುದೆಂದೂ ಗೃಹ ಸಚಿವ ಶ್ರೀ ಟಿ ಮರಿಯಪ್ಪನವರು ತಿಳಿಸಿರುತ್ತಾರೆ

ಸಿ. ಜಿ. ಕೆ. ರೆಡ್ಡಿಯವರ ಅರ್ಜಿಗೆ ಹೈ ಕೋರ್ಟಿನ ತಿರಸ್ಕಾರ

ಕಾಗೋಡು ಪ್ರದೇಶದಲ್ಲಿ ಶಾಂತಿ ಪಾಲಿಸಲು ಸಮಾಜವಾದಿ ಪಕ್ಷದ ನಾಯಕರಾದ ಸಿ ಜಿ ಕೆ ರೆಡ್ಡಿಯವರು ನೇಕ್ ಚಾಲ್ ಜಾಮೀನನ್ನು ಕೊಡಬೇಕೆಂದು ಸಾಗರದ ನ್ಯಾಯಾಧೀಶರು ಮಾಡಿರುವ ಆಜ್ಞೆಯ ವಿರುದ್ಧವಾಗಿ ಶ್ರೀ ರೆಡ್ಡಿಯವರು ಹೈ ಕೋರ್ಟಿಗೆ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನೆನ್ನೆ ಪ್ರಧಾನ ನ್ಯಾಯಾಧೀಶರು ಮತ್ತು ಜಸ್ಟಿಸ್ ಶ್ರೀ ಬಿ ವಾಸುದೇವಮೂರ್ತಿಯವರು ತಿರಸ್ಕರಿಸಿದರು. ಅರ್ಜಿದಾರರೇ ತಮ್ಮ ಅರ್ಜಿಯನ್ನು ಹಿಂತೆಗೆದುಕೊಂಡರು

ಲಿಯಾಖತ್ತರಿಗೆ ನೆಹರೂರ ಷರತ್ತಿಲ್ಲದ ಆಹ್ವಾನ

ಪಾಕಿಸ್ತಾನ ಪ್ರಧಾನಿಯವರಿಗೆ ನೆಹರೂರವರು ಷರತ್ತಿಲ್ಲದ ಆಹ್ವಾನವನ್ನು ಕಳುಹಿಸಿ, ದೆಹಲಿಗೆ ಬಂದು ತನ್ನೊಡನೆ ಮಾತನಾಡಬೇಕೆಂದು ಸೂಚಿಸಿರುತ್ತಾರೆ. ಈ ವಿಷಯವನ್ನು ಅವರು ಲಿಯಾಖತ್ತರಿಗೆ ತಂತಿ ಮೂಲಕ ಕಳಿಸಿ, ಅವರು ಯಾವಾಗ ಬೇಕಾದರೂ ದೆಹಲಿಗೆ ಬಂದು ತಮ್ಮನ್ನು ಕಾಣಬಹುದೆಂದು ಹೇಳಿರುತ್ತಾರೆ ಭಾರತೀಯರ ವಿರುದ್ಧವಾಗಿ ಬಗೆ ಬಗೆ ಮುಷ್ಟಿಯನ್ನು ಪಾಕಿಸ್ತಾನವು ತೋರಿಸುತ್ತಿರುವಾಗ ನಮ್ಮ ದೇಶದ ಗಡಿಗಳನ್ನು ರಕ್ಷಣಾ ರಹಿತವನ್ನಾಗಿ ಮಾಡಿ ಆಕ್ರಮಣಕ್ಕೆ ಬಾಗಿಲು ತೆರೆದಿಡಬೇಕೆಂದು ಲಿಯಾಖತ್ತರು ಬಯಸುವರೇ—ಎಂದು ನೆಹರೂರವರು ಕೇಳಿರುತ್ತಾರೆ. ಭಾರತಕ್ಕೆ ಯುದ್ಧದ ಮನೋವೃತ್ತಿಯೇ ಇಲ್ಲವೆಂದೂ, ಕಾಶ್ಮೀರದ ವ್ಯಾಜ್ಯವನ್ನು ಪರಿಹರಿಸಲು ಬಲ ಪ್ರಯೋಗ ಮಾಡುವುದಾಗಿ ಪಾಕಿಸ್ತಾನ ಸರ್ಕಾರದವರು ಹೇಳುತ್ತಿರುವುದೇ ಈಗ ಉಂಟಾಗಿರುವ ಕ್ಲಿಷ್ಟ ಪರಿಸ್ಥಿತಿಗೆ ಕಾರಣವಾಗಿದೆಯೆಂದೂ ಅವರು ತಿಳಿಸಿರುತ್ತಾರೆ.

ತಿರುವಾಂಕೂರು ಮಂತ್ರಿ ಮಂಡಲದ ರಾಜೀನಾಮೆ ?

ತಿರುವಾಂಕೂರು ಮಂತ್ರಿಮಂಡಲವು ರಾಜೀನಾಮೆ ಕೊಡಲಿರುವುದೆಂದು ಪತ್ರಿಕೆಗಳು ವರದಿಮಾಡಿರುವುದಾಗಿಯೂ ಮಂತ್ರಿಮಂಡಲಕ್ಕೆ ಇನ್ನಾರು ಕೊಟ್ಟ ನಂತರ ರನ್ನು ತೆಗೆದುಕೊಳ್ಳುವ ಬಗ್ಗೆ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಒಪ್ಪಿಗೆ ಇನ್ನೂ ದೊರೆತಿಲ್ಲವೆಂದೂ ತಿಳಿದುಬಂದಿದೆ

ಲಾಹೋರು, ರಾವಲ್ಪಿಂಡಿಗಳಲ್ಲಿ ವಿಮಾನ ಧಾಳಿ ಶಿಕ್ಷಣ

ಲಾಹೋರು ಮತ್ತು ರಾವಲ್ಪಿಂಡಿ ನಗರಗಳಲ್ಲಿ ೩ ಸಾವಿರ ಜನ ವಿಮಾನ ಧಾಳಿ ಎಚ್ಚರಿಕೆ ಅಧಿಕಾರಿಗಳಿಗೆ ಶಿಕ್ಷಣ ಕೊಡಲು ಏರ್ಪಾಡಾಗಿದೆ ಲಾಹೋರಿನಲ್ಲಿ ಸ್ತ್ರೀಯರಿಗೂ ಈ ಶಿಕ್ಷಣವನ್ನೀಯಲಾಗುವುದು

ಕೈಲೆ ಮುಷ್ಕರ ತಡೆಯಲು ಐ. ಎನ್ ಟಿ. ಯು ಸಿ ನಿರ್ಧಾರ

ಆ ಇ ರೈಲೆ ಫಡರೇಷನ್ನಿನವರು ನಡೆಸಬೇಕೆಂದಿರುವ ಮುಷ್ಕರವನ್ನು ತಡೆಯಲು ಅಖಿಲ ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಭೆಯು ನಿರ್ಧರಿಸಿರುತ್ತದೆ.

ಸಾಹಿತ್ಯ ಶಿಕ್ಷಣ ಮಂದಿರ

ರಾಜಧಾನಿಯಲ್ಲಿರುವ ಸಾಹಿತ್ಯ ಶಿಕ್ಷಣ ಮಂದಿರದ ಅಧಿಕಾರ ವರ್ಗಕ್ಕೆ ಪ್ರಸಕ್ತ ಸಾಲಿನಲ್ಲಿ ಶ್ರೀಗಳಾದ ವೆ. ನರಸಿಂಹಾಚಾರ್ಯರನ್ನು ಅಧ್ಯಕ್ಷರನ್ನಾಗಿಯೂ ಎಂ ಎಸ್ ಕೃಷ್ಣಮೂರ್ತಿಗಳನ್ನು ಕಾರ್ಯದರ್ಶಿಯನ್ನಾಗಿಯೂ, ಟಿ ಪಿ ವೆಂಕಟಾಚಲ ಶಾಸ್ತ್ರಿ, ಕೆ ಪಿ ಗೋಪಾಲಕೃಷ್ಣ, ಕೆ ಎಸ್ ವೆಂಕಟರಾಮಯ್ಯ ಮತ್ತು ಬಿ ವಿ ರಾಮಸ್ವಾಮಿಯವರನ್ನು ಸದಸ್ಯರನ್ನಾಗಿಯೂ ನೆನ್ನೆ ಸಂಜೆ ಸೇರಿದ್ದ ಕಾರ್ಯಕಾರಿ ಸಮಿತಿಯಲ್ಲಿ ಸರ್ವಾನುಮತದಿಂದ ಚುನಾಯಿಸಲಾಯಿತು ಎಂದಿನಂತೆ ಎಂದಿ ಶಿಕ್ಷಣ ಕೊಡುವುದು, "ಸಾಹಿತ್ಯ ರತ್ನ" ಮಾಸಪತ್ರಿಕೆ ಹೊರಡಿಸುವುದು ಮುಂತಾದ ಕಾರ್ಯಗಳನ್ನು ಮಾಡಲಾಗುವುದು ಇನ್ನು ಮುಂದೆ ಈ ಸಂಸ್ಥೆಯನ್ನು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ನಡೆಸಲಾಗುವುದು

ಭಾರತದ ನೆಲೆಗಳ ಮೇಲೆ ಪಾಕಿಸ್ತಾನದ ಕಣ್ಣು

ಪಾಕಿಸ್ತಾನ ಮತ್ತು ಭಾರತಗಳಿಗೆ ಯುದ್ಧವಾದರೆ ಭಾರತದ ಪ್ರಮುಖ ನೆಲೆಗಳಮೇಲೆ ಪಾಕಿಸ್ತಾನವು ಧಾಳಿ ಮಾಡಲು ಪಟ್ಟಿಮಾಡಿಕೆಯನ್ನು ಹಾಕಿರುವುದಾಗಿಯೂ, ದೆಹಲಿ, ಬೆಂಗಳೂರು, ಕಶೀರ್, ಡಂಡಂ ಡೆಹರಡೂನ್, ಪಿಪಾರಕ್ ಮುಂತಾದ ಕೇಂದ್ರಗಳ ಮೇಲೆ ಅದಕ್ಕೆ ಕಣ್ಣಿರುವುದೆಂದೂ ಹೇಳಲಾಗಿದೆ

ಸಂಸ್ಥಾನಗಳ ಆಹಾರಕ್ಕಾಗಿ ೫೦ ಕೋಟಿ ರೂ. ಸಹಾಯ

ಪ್ರಸಕ್ತ ಸಾಲಿನಲ್ಲಿ ಸಂಸ್ಥಾನಗಳಿಗೆ ಕೇಂದ್ರ ಸರ್ಕಾರವು ಆಹಾರದ ಬಗ್ಗೆ ೫೦ ಕೋಟಿ ರೂ ಸಹಾಯ ಮಾಡಲಿರುವುದೆಂದು ಕೇಂದ್ರ ಸರ್ಕಾರದ ಆಹಾರ ಮಂತ್ರಿ ಮುನ್ಷಿಯವರು ತಿಳಿಸಿರುತ್ತಾರೆ ಕಷ್ಟವನ್ನು ಕಡಿಮೆ ಮಾಡಿ ಜನರು ಧಾನ್ಯ ಮತ್ತು ಇತರ ಆಹಾರಗಳನ್ನು ಬೆಳಸಬೇಕೆಂದು ಅವರು ತಿಳಿಸಿದರು

ಜೈನ ಸಾಹಿತ್ಯ ಪ್ರಚಾರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಜೈನ ಪ್ರಚಾರ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ಮಾಸ್ತಿ ಸಂಜೆ ಸಂಘದ ಕಛೇರಿಯಲ್ಲಿ ನಡೆಯಿತು. ಮುಜರಾಯಿ ಕಾರ್ಯದರ್ಶಿ, ಶ್ರೀ ಪಾರ್ಶ್ವನಾಥ್ ರವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಬಿ ಸಾಗರರಾಜ ಶಾಸ್ತ್ರಿಯವರಿಂದ ಮಂಗಳಾಚರಣೆ, ಬಿ ಧನ್ಯಕುಮಾರರವರಿಂದ ಸ್ವಾಗತ ಭಾಷಣಗಳಾದನಂತರ ಸಾಹಿತ್ಯದಲ್ಲಿ ಜೈನ ಕವಿಗಳ ಹಿರಿಮೆ ಬಗ್ಗೆ ಶ್ರೀ ಎಸ್ ಬಿ ಪದ್ಮ ಪಂಡಿತರೂ, ಭಕ್ತಿ, ತತ್ವ ವೈಶಿಷ್ಟ್ಯಗಳ ಬಗ್ಗೆ ಶ್ರೀ ಹೆಚ್ ಚಾರುಚಂದ್ರಯ್ಯರೂ ಭಾಷಣಗಳನ್ನು ಮಾಡಿದರು ೨೭ ತಿಂಗಳ ವಿನಿಯೋಗದಿಂದ ಸಮಾರಂಭವು ಮುಕ್ತಾಯವಾಯಿತು

ಗಣೇಶಾ ಟಾಕೀಸ್

೩೧ 7 51ರಿಂದ ದಿನವಹಿ ೩ ಆಟಗಳು

ಅಧಿರಾತ್

ಒಕೆ ಕಿಶೋರ್ ಕುಮಾರ ಮತ್ತು ಸುಗೀತ ಹಾಸ್ಯ ವಸಿರುವ ಹಿಂದಿ ಚಿತ್ರ

ಪಾಕಿಸ್ತಾನ ರಕ್ಷಿಸಲು ರಕ್ತದಲ್ಲಿ ಬರೆದ ಪ್ರತಿಜ್ಞೆ

ಪಾಕಿಸ್ತಾನದ ರಕ್ಷಣೆಗೆ ಪ್ರಾಣಗಳನ್ನು ತೆರಲು ಸಿದ್ಧವಾಗಿರುವುದಾಗಿ ಸೂಚಿಸಿ, ಕರಾಚಿಯಲ್ಲಿ ಐನೂರು ಮಂದಿ ಲೀಗ್ ಗಾರ್ಡುಗಳು ತಮ್ಮ ರಕ್ತದಲ್ಲಿ ಬರೆದ ಪ್ರತಿಜ್ಞಾ ವಚನಗಳನ್ನು ಸಲ್ಲಿಸಿರುವುದಾಗಿ ಗೊತ್ತಾಗಿದೆ ಜಿನ್ನಾರವರ ಗೋರಿಯ ಬಳಿ ಈ ಸಂಬಂಧವಾಗಿ ಒಂದು ಸಮಾರಂಭವು ನಡೆಯಿತು. ಲೀಗ್ ಗಾರ್ಡೊಬ್ಬನು ಕುಶಾಲು ತೋಪನ್ನು ಹಾರಿಸಿದ ನಂತರ ಸಮಾರಂಭವು ಜರುಗಿ, ಅವರ ಮುಖಂಡನು ೧೦ ಅಂಗುಲದ ಕಠಾರಿಯನ್ನು ತನ್ನ ಎಡ ಮೊಳಕೈ ಬಳಿ ಇರಿದು, ಬಂದ ರಕ್ತದಿಂದ ಪ್ರತಿಜ್ಞಾ ವಚನವನ್ನು ಬರೆದನು ಬೆಂಕಿ ಕಡ್ಡಿಯನ್ನು ಲೇಖನಿಯಾಗಿ ಉಪಯೋಗಿಸಲಾಯಿತು ಬಳಿಕ ಸ್ತ್ರೀ ವೈದ್ಯರು ಇತರರ ಬೆರಳಿಗೆ ಗುಂಡು ಸೂಜಿ ಚುಚ್ಚಲು, ಬಂದ ರಕ್ತದಿಂದ ಇತರರು ತಮ್ಮ ತಮ್ಮ ಒಪ್ಪಿಗೆಗಳನ್ನು ಸೂಚಿಸಿದರು

ಸಾಯಿಬಾಬಾ ಉತ್ಸವ

ರಾಜಧಾನಿಯ ಪಡುವಾರಹಳ್ಳಿಯಲ್ಲಿರುವ ಶ್ರೀ ದತ್ತ ಸಾಯಿನಾಥಾಶ್ರಮದಲ್ಲಿ ಗುರು ಪೂರ್ಣಿಮಾ ಉತ್ಸವದ ಅಂಗವಾಗಿ ಕಳೆದ ಗುರುವಾರ ಸಾಯಿಬಾಬಾರವರ ಚಿತ್ರದ ಮೆರವಣಿಗೆಯನ್ನು ಪಡುವಾರ ಹಳ್ಳಿ ಮತ್ತು ಒಂಟಿಕೊಪ್ಪಲಿನ ಮುಖ್ಯ ಬೀದಿಗಳಲ್ಲಿ ವೈಭವದಿಂದ ನಡೆಸಲಾಯಿತು ಸಾಯಿಬಾಬಾ ಮಂಡಲಿಯವರ ವಾದ್ಯ ಗೋಷ್ಠಿಯು ಮೆರವಣಿಗೆ ಸಮಯದಲ್ಲಿ ಮೊಳಗುತ್ತಿತ್ತು, ನಾದ ಸ್ವರವೂ ಏರ್ಪಾಡಾಗಿತ್ತು.

Edited, printed and published by A R Nagarajan, at Sadhvi Press D Subbiah Road, Mysore

ಮಹಾರಾಜರ ವರ್ಧಂತ್ಯುತ್ಸವ

ರಾಜಧಾನಿಯ ಚಾಮರಾಜಪುರ ಪ್ರಾಥಮಿಕ ಬಾಲಕರ ಪಾಠಶಾಲೆಯಲ್ಲಿ ನೆನ್ನೆ ಬೆಳಗ್ಗೆ ಶ್ರೀಮನ್ ಮಹಾರಾಜರ ವರ್ಧಂತ್ಯುತ್ಸವವನ್ನು ನೆರವೇರಿಸಲಾಯಿತು. ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆ ವಹಿಸಿದ್ದರು. ಎಲ್. ಶಂಗಾಜು ಮತ್ತು ಎಂ. ಸೂರಯ್ಯ ಎಂಬ ವಿದ್ಯಾರ್ಥಿಗಳಿಂದ ದೇವತಾ ಪ್ರಾರ್ಥನೆಯಾದ ನಂತರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರಾಜಯ್ಯನವರು ಪ್ರಭುಗಳ ವಂಶಾವಳಿಯ ಚರಿತ್ರೆಯನ್ನು ಸೂಕ್ಷ್ಮವಾಗಿ ವಿವರಿಸಿದರು. ಪ್ರಾಕ್ಟೀಸಿಂಗ್ ಮಿಡಲ್ ಸ್ಕೂಲಿನ ಉಪಾಧ್ಯಾಯರಾದ ಶ್ರೀ ನಾಗೇಶರಾಯರು ವಿದ್ಯಾರ್ಥಿಗಳಿಗೆ ಹಿತವಚನಗಳನ್ನು ಹೇಳಿದ ನಂತರ ಅಧ್ಯಕ್ಷರು ಮಾತನಾಡಿ ವರ್ಧಂತ್ಯುತ್ಸವದ ಮಹತ್ವವನ್ನು ವಿವರಿಸಿ, ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ನೀಡಿದರು ನವ ಮಹೋತ್ಸವವನ್ನೂ ಸಹ ಆಚರಿಸಿ, ೨ ಆಲದ ಸಸಿಗಳನ್ನು ನೆಡಲಾಯಿತು. ವಂದನಾರ್ಪಣೆ, ತಾಂಬೂಲ ವಿನಿಯೋಗ ಮತ್ತು ಮಕ್ಕಳಿಗೆ ಸಿಹಿ ತಿಂಡಿಗಳ ಹಂಚಿಕೆಗಳಾದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

THE MYSORE CITY Co OPERATIVE HOUSING SOCIETY Ltd, MYSORE

TENDER NOTIFICATION

The time for receiving tenders as notified in the SADHVI, dated 11-7-51 for the construction of twelve model houses in the Manantody Road Extension, is extended up to 11 A. M. on 10.8.51

(Sd) A. KRISHNAMURTHY RAO
Hon. Secretary

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಹ್ಮಯ್ಯ & ಬ್ರದರ್ಸ್

ಜವಳೀ ಅಂಗಡಿ,

ಬೋಂಡಾಯ ಆನಂದ ಭವನ ಹೋಟೆಲ್ ಹತ್ತಿರ ಮೈಸೂರು

CITY MUNICIPAL OFFICE, MYSORE.

NOTIFICATION

Notice is hereby given to all concerned that the 3 and half per cent Debenture Loan of five and a half Lakhs issued by the City Municipal Council, Mysore in 1936 to the Indian Bank Ltd, Madras and other registered holders for the time being will be ready for final redemption on the 30th November 1951.

All registered debenture-holders are hereby requested to surrender on or before the 30th November 1951 to this Office their Debenture Bonds duly discharged for payment.

Debenture-holders will not be entitled to any interest after that date

Mysore, 27 7 51

M. S. SWAMINATHAN,
Municipal Commissioner

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ - ಕೀರ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ

ತಡವಿಲ್ಲದ ವಿಮಾ ಮೊಬಲಗಿನ ಪಾವತಿ

ಸುಲಭವಾದ ಸಾಲದ ಸೌಕರ್ಯ

ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ ಕೊಡುತ್ತಿರುವುದು

ಇವೆಲ್ಲಾ ಕೇಳಿರಿ

ಮೈಸೂರು ಸರ್ಕಾರದ ವಿಮಾ ಇಲಾಖೆ

ಪ್ರಜೆಗಳ ಸಾಮೆಯಲ್ಲಿ

ವಿಮೆ ಮಾಡಲು ಇಂದೇ ನಿರ್ಧರಿಸಿರಿ

ಸಾಲಿಸರಿಕೆ

ರಿಜಿ ನಂ 792 | ಶಾಂತೀ ಸೂಚಕೆ | ಅಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಬುಧವಾರ ೧-೬-೫೧ [ಸಂಚಿಕೆ

ಅಧಿಕಾರಿಗಳ ಆಸ್ತಿ ಬಗ್ಗೆ ತನಿಖೆಗಾಗಿ ಕ್ರಮ

ಅಮೆರಿಕಕ್ಕೆ ತೆರಳಲಿರುವ ತರುಣರಿಗೆ ಶುಭಾಶಯ

ಮೈಸೂರು ೧

ಬಟ್ಟೆ ಕೈಗಾರಿಕೆಯಲ್ಲಿ ವಿಶೇಷ ಜ್ಞಾನವನ್ನು ಪಡೆಯುವ ಸಲುವಾಗಿ ಅಮೆರಿಕ್ಕೆ ತೆರಳಲಿರುವ ಶ್ರೀ ಎಸ್ ಆರ್ ಅನಂತ ಕೃಷ್ಣಶೆಟ್ಟರಿಗೆ ನೆನ್ನೆ ಸಂಜೆ ದಾನಪ್ರಕಾಶ ಭವನದಲ್ಲಿ ಶ್ರೀಯುತರ ಸೋದರ ಮಾವಂದಿರಾದ ಶ್ರೀ ಜಿ. ಪಿ. ಗೋಪಾಲಕೃಷ್ಣಶೆಟ್ಟಿ ಮತ್ತು ಅವರ ಸಹೋದರರು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ ಆರ್. ತಿಮ್ಮಯಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಸಂಗೀತವಾದಮೇಲೆ ಶ್ರೀಗಳಾದ ಪಿ. ಗೋಪಾಲಕೃಷ್ಣಶೆಟ್ಟಿ, ಎಸ್ ಟಿ ಸ್ವಾಮಿಶೆಟ್ಟಿ, ಎ. ರಾಮಶೆಟ್ಟಿ, ಕೆ ಧರ್ಮೋಟಶೆಟ್ಟಿ ಮತ್ತು ಗಂಗಾಧರಶೆಟ್ಟಿ ಯವರು ಭಾಷಣ ಮಾಡಿ ಶ್ರೀಯುತರಿಗೆ ಶುಭಾಶಯಗಳನ್ನು ಕೋರಿದರು. ಮುಖ್ಯ ಅತಿಥಿಗಳು ಉತ್ತರವಿತ್ತು, ಬಟ್ಟೆ ಕೈಗಾರಿಕೆಯಲ್ಲಿ ಹೊಸ ಶೋಧನೆಯ ಅನುಭವ ಪಡೆದು ನಮ್ಮ ದೇಶದ ಆರ್ಥಿಕಾಭಿವೃದ್ಧಿಗೆ ಸೇವೆ ಸಲ್ಲಿಸುವುದಾಗಿ ತಿಳಿಸಿ, ತಮಗೆ ಕೊಟ್ಟ ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು. ಅಧ್ಯಕ್ಷರು ಭಾಷಣ ಮಾಡಿದ ನಂತರ ಶಾಸನ ಸಭಾ ಸದಸ್ಯರಾದ ಹೊಳೇನರಸೀಪುರದ ಶ್ರೀ ಎಸ್ ಸಿ ಸೂರ್ಯನಾರಾಯಣ ಶೆಟ್ಟರು ವಂದನಾರ್ಪಣೆ ಸಮರ್ಪಿಸಿದರು. ಶ್ರೀ ಅನಂತ ಕೃಷ್ಣಶೆಟ್ಟರು ಬೆಂಗಳೂರಿನ ಯಾದಾಳಂ ಸುಬ್ಬಯ್ಯಶೆಟ್ಟಿ ಅಂಡ್ ಸನ್ಸ್‌ರವರ ಆಶ್ರಯ ಪಡೆದು ಸಧ್ಯದಲ್ಲೇ ಅಮೆರಿಕಕ್ಕೆ ತೆರಳುವರು

ವಿದ್ಯಾ ಮಂದಿರದ ಅಧಿಕಾರಿ ವರ್ಗ

ಕಳೆದ ಭಾನುವಾರ ರಾಜಧಾನಿಯ ವಿದ್ಯಾ ಮಂದಿರದ ಕಾರ್ಯಕಾರಿ ಸಮಿತಿಯ ಸಭೆಯು ನಡೆದು ಪ್ರಸಕ್ತ ಸಾಲಿಗೆ ಶ್ರೀ ಕೆ. ಜಿ. ಎ ಶಾಸ್ತ್ರಿಯವರು ಅಧ್ಯಕ್ಷರು, ಶ್ರೀ. ಹೆಚ್ ಆರ್ ಕೃಷ್ಣಾಚಾರ್ಯರು ಕಾರ್ಯದರ್ಶಿ, ಶ್ರೀಗಳಾದ ಶ್ರೀನಿವಾಸಮೂರ್ತಿ, ಕೃಷ್ಣಸ್ವಾಮಿ, ಆರ್ ಎಸ್ ರಾಜಗೋಪಾಲ್, ಎಂ ಆರ್. ರಾಮಚಂದ್ರರಾವ್ ಮತ್ತು ಎಂ ಗಂಗಾಧರ್‌ರವರು ಸದಸ್ಯರುಗಳಾಗಿ ಚುನಾಯಿತರಾದರು. ಭಾರತ ಸೇವಾ ದಳದ ನಿಯಮಗಳ ಪ್ರಕಾರ ಅಂಗಸಾಧನೆ, ಹಿಂದಿ ಶಿಕ್ಷಣವನ್ನು ಏರ್ಪಡಿಸುವುದು, ಮಂದಿರವನ್ನು ಸ್ವತಂತ್ರ ಸಂಸ್ಥೆಯಾಗಿ ನಡೆಸುವುದು ಆಗಸ್ಟ್ ೧೫ರ ದಿನಾಚರಣೆ ನಡೆಸುವುದು ಇವೇ ಮುಂತಾದ ಹಲವು ನಿರ್ಣಯಗಳನ್ನು ಮಾಡಲಾಯಿತು

ರೇಷ್ಮೆ ಕಾರ್ಖಾನೆ ಕೆಲಸಗಾರರ ಸಂಘ

ರಾಜಧಾನಿಯ ಸರ್ಕಾರಿ ರೇಷ್ಮೆ ನೆಯ್ಗೆ ಕಾರ್ಖಾನೆಯ ಕಾರ್ಮಿಕರ ಸಂಘದ ಪ್ರಸಕ್ತ ಸಾಲಿನ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆದು ಶ್ರೀ ಕೆ ಆರ್ ಪ್ರಸಾದರು ಅಧ್ಯಕ್ಷರು, ಜನಾಬ್ ಎಂ ಹುಸೇನರವರು ಉಪಾಧ್ಯಕ್ಷರು, ಶ್ರೀ ಎಸ್ ರಂಗಯ್ಯನವರು ಕಾರ್ಯದರ್ಶಿ, ಶ್ರೀ ಪುಟ್ಟಯ್ಯ ಜಂಟಿ ಕಾರ್ಯದರ್ಶಿ ಮತ್ತು ಶ್ರೀ ಲಿಂಗಯ್ಯನವರು ಖಜಾಂಚಿಗಳಾಗಿ ಚುನಾಯಿತರಾಗಿರುವರು. ೧೦ ಜನ ಸದಸ್ಯರನ್ನು ಸಮಿತಿಯ ಸದಸ್ಯರನ್ನಾಗಿ ತೆಗೆದುಕೊಳ್ಳಲಾಗಿದೆ

ಪಾಕ್ ಸರ್ಕಾರದಿಂದ ನೆಹ್ರೂ ಉತ್ತರದ ಪರಿಶೀಲನೆ

ಲಿಯಾಖತ್ತರನ್ನು ಅಭ್ಯಾಸಿಸಿ ನೆಹರೂರವರು ಕಳುಹಿಸಿರುವ ಉತ್ತರವನ್ನು ಈ ದಿನ ಪಾಕಿಸ್ತಾನ ಸರ್ಕಾರವು ಪರಿಶೀಲಿಸುವುದಾಗಿದೆ. ಗಡಿಯಿಂದ ಭಾರತ ಸೈನ್ಯಗಳನ್ನು ಹಿಂದಕ್ಕೆ ಕರೆಸದಿರುವುದರಿಂದ ಆ ಅಭಿಪ್ರಾಯವನ್ನು ಮನ್ನಿಸಲು ಲಿಯಾಖತ್ತರಿಗೆ ಸಾಧ್ಯವಿಲ್ಲವೆಂದು ಹೇಳಲಾಗಿದೆ

ಪಾಕಿಸ್ತಾನದ ಪ್ರಧಾನಿ

ಪ್ರಧಾನ ಮಂತ್ರಿಯ

ಲಿಯಾಖತ್ ಅಲಿ ಖಾನ್

ಪಂಜಾಬಿನಲ್ಲಿ ಪ್ರವಾಹದ ಹಾವಳಿ

ಪೂರ್ವ ಪಂಜಾಬು ಪ್ರದೇಶದಲ್ಲಿ ಕಳೆದ ವಾರ ವಿಪರೀತ ಮಳೆಯಾಗಿ ಶತದ್ರು ಮತ್ತು ಇತರ ಹಲವು ನದಿಗಳಲ್ಲಿ ಪ್ರವಾಹ ಬಂದು ಎಗಡು ಹಳ್ಳಿಗಳು ನೀರಿನಲ್ಲಿ ಮುಳುಗಿವೆ. ೨೦೦ ದವಸ ಕರುಗಳು ಕೊಚ್ಚಿ ಹೋಗಿವೆ. ನೀರಿನ ಮಧ್ಯೆ ಸಿಕ್ಕಿಬಿದ್ದ ೧೫೦ ಮಂದಿಯನ್ನು ರಕ್ಷಿಸಲಾಗಿದೆ. ತಂತಿ ಮತ್ತು ಟೆಲಿಫೋನ್ ವ್ಯವಸ್ಥೆಗೆ ಅಡಚಣೆಯಾಗಿರುತ್ತದೆ. ರೈಲು ಸಂಚಾರಕ್ಕೂ ಅಡ್ಡಿಯುಂಟಾಗಿದೆ

ಕೈಗಾರಿಕಾ ನ್ಯಾಯಾಲಯಕ್ಕೆ ವಿವಾದಗಳನ್ನು ಒಪ್ಪಿಸಬೇಕು

ಮೋಟಾರು ಕೆಲಸಗಾರರ ಸಂಘದ ನಿರ್ಣಯ

ಮೈಸೂರು ೧

ರಾಜಧಾನಿಯ ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಮೊನ್ನೆ ನಡೆಯಿತು. ಹಿಂದಿನ ಸಭೆಯಲ್ಲಿ ತೀರ್ಮಾನಿಸಿದಂತೆ ಕಾರ್ಮಿಕ ಸಮಾಧಾನದ ಪರಿಶೀಲನೆಗೆ ಒಪ್ಪಿಸಿದ್ದ ಬೇಡಿಕೆಗಳನ್ನೂ, ಅವಶ್ಯಕ ಸೇವೆಯ ಕಾನೂನು ಪ್ರಕಾರ ಜಿಲ್ಲಾಧಿಕಾರಿಗಳ ತೀರ್ಮಾನಕ್ಕೆ ವರ್ಗಾಯಿಸಿದ ವಿವಾದಗಳನ್ನೂ ಕೈಗಾರಿಕಾ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯ ಮಾಡಲಾಯಿತು. ಜಿಲ್ಲೆಯ ಎಲ್ಲ ಮೋಟಾರು ಕೆಲಸಗಾರರನ್ನೂ ಸಂಘವು ಪ್ರತಿನಿಧಿಸುವುದೆಂದೂ, ಇದ್ದರಿಂದ ಸಂಘದ ಬೇಡಿಕೆಗಳನ್ನು ಕೈಗಾರಿಕಾ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದೂ ಸರ್ಕಾರವನ್ನು ಒತ್ತಾಯಪಡಿಸಲಾಯಿತು. ಬರುವ ಸಾಲಿಗೆ ಕಾರ್ಯಕಾರಿ ಸಮಿತಿಯ ಚುನಾವಣೆ ನಡೆದು ಶ್ರೀ ಸಿ ಜಿ ದೇವನಾಥರು ಅಧ್ಯಕ್ಷರಾಗಿಯೂ, ಶ್ರೀ ಪೌಲಿಕ್ ರಾವ್ ಮತ್ತು ಶ್ರೀ ಟಿ ಎಸ್ ಸುಬ್ಬಣ್ಣನವರು ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿಯೂ, ಶ್ರೀ ಕೆ ರಂಗಸ್ವಾಮಿಯವರು ಖಜಾಂಚಿಯಾಗಿಯೂ, ಶ್ರೀನಿವಾಸಗೃಷ್ಣನವರು ಉಪಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ೧೦ ಜನರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳಲಾಯಿತು

ಅಬಡಾನಿನ ಎಣ್ಣೆ ಕಾರ್ಖಾನೆ ಮುಚ್ಚಿತು

ನೆನ್ನೆ ಮಧ್ಯ ಪರ್ಷಿಯದ ಅಬಡಾನಿನ ಎಣ್ಣೆ ಕಾರ್ಖಾನೆಯು ಪೂರ್ಣವಾಗಿ ಮುಚ್ಚಲ್ಪಟ್ಟಿರುವುದಾಗಿ ಗೊತ್ತಾಗಿದೆ. ಪರ್ಷಿಯದ ಎಣ್ಣೆ ಗಣಿಗಳ ರಾಷ್ಟ್ರೀಕರಣದ ತತ್ವವನ್ನು ಬ್ರಿಟನ್ನು ಒಪ್ಪಿರುವುದಾಗಿಯೂ, ಇರಾನಿನ ಸರ್ಕಾರದೊಡನೆ ಸಾಲುವಾರಿಕೆ ಬಗ್ಗೆ ಬ್ರಿಟನ್ನು ಒಪ್ಪಬೇಕಾಗಿದೆಯೆಂದೂ ಬ್ರಿಟನ್ನಿನ ಕಾಮನ್ಸ್ ಸಭೆಯಲ್ಲಿ ಪ್ರಧಾನಿ ಅಟ್ಲಿಯವರು ತಿಳಿಸಿರುತ್ತಾರೆ. ಪರ್ಷಿಯದಿಂದ ಪೂರ್ಣವಾಗಿ ಬ್ರಿಟನ್ನು ವಾಪಸಾಗುವುದಿಲ್ಲವೆಂದು ಅವರು ಸ್ಪಷ್ಟಪಡಿಸಿರುತ್ತಾರೆ

ಸರ್ಕಾರಿ ಅಧಿಕಾರಿಗಳ ಆಸ್ತಿ ಬಗ್ಗೆ ತನಿಖೆಗೆ ಸೂಚನೆ

ಸರ್ಕಾರಿ ಅಧಿಕಾರಿಗಳ ಆಸ್ತಿಪಾಸ್ತಿಗಳ ಬಗ್ಗೆ ಆಗಾಗ್ಗೆ ತನಿಖೆ ನಡೆಸುವ ಸಲುವಾಗಿ ನಿಬಂಧನೆಗಳನ್ನು ಮಾಡಬೇಕೆಂಬ ನಿರ್ಣಯವನ್ನು ಪಾರ್ಲಿಮೆಂಟಿನ ಪರಿಶೀಲನೆಗಾಗಿ ಬೊಂಬಾಯಿಯ ಸದಸ್ಯರಾದ ಕೆ ೮ ಪಾರಕರು ಕಳುಹಿಸಿರುವರು. ಅಧಿಕಾರಿಗಳು ತಮಗಿರುವ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳದಿರಲು ಈ ತನಿಖೆಯು ಅವಶ್ಯಕವೆಂದೂ, ತನಿಖೆಯಲ್ಲಿ ತಪ್ಪು ಕಂಡುಬಂದರೆ ಅಂತಹ ಅಧಿಕಾರಿಯನ್ನು ಕೆಲಸದಿಂದ ತೆಗೆದು, ಯಾವ ಸರ್ಕಾರಿ ನೌಕರಿಯನ್ನೂ ಕೊಡಕೂಡದೆಂದೂ ನಿರ್ಣಯದಲ್ಲಿ ಸೂಚಿಸಲಾಗಿದೆ.

ಪಾಕ್ ಸೈನ್ಯಗಳ ಅತಿಕ್ರಮ ಪ್ರವೇಶವೇ ಭಾರತದ ಕಾರ್ಯಾಚರಣೆಗೆ ಕಾರಣ

ಕಾಶ್ಮೀರದಲ್ಲಿ ಭಾರತಕ್ಕೆ ಸೇರಿದ ೧೫ ಮೈಲಿ ದೂರ ಪಾಕಿಸ್ತಾನ ಸೈನ್ಯಗಳು ನುಗ್ಗಿದುದಾಗಿಯೂ, ಹಾಗೆ ಪ್ರವೇಶ ಮಾಡಿದ ನಂತರವೇ ಭಾರತ ಸೈನ್ಯಗಳನ್ನು ಪಾಕಿಸ್ತಾನದ ಗಡಿಯಲ್ಲೆಲ್ಲಾ ನಿಲ್ಲಿಸಲಾಯಿತೆಂದೂ ಪ್ರಧಾನಿ ನೆಹರೂರವರು ತಮಗೆ ತಿಳಿಸಿದುದಾಗಿ ಅಮೆರಿಕದ ರೇಡಿಯೊ ವ್ಯಾಖ್ಯಾನಕಾರರಾದ ಜಾನ್ ಮಾರ್ಲೀಯವರು ಹೇಳಿರುತ್ತಾರೆ.

ಮತ್ತೆ ವಾರಕ್ಕೊಂದಾವರ್ತಿ ಮಾತ್ರ ಪಡಿತರ

ಮೈಸೂರು ೧

ಈ ದಿನದಿಂದ, ರಾಜಧಾನಿಯಲ್ಲಿರುವ ಪಡಿತರದ ಡಿಪೋಗಳಲ್ಲಿ ರೇಷನ್‌ದಾರರು ಒಂದು ವಾರದ ಪಡಿತರವನ್ನು ಮಾತ್ರ ಕೊಳ್ಳಲು ಅವಕಾಶವಿರುವುದಾಗಿ ಸರ್ಕಾರದ ಆಜ್ಞೆಯಾಗಿರುತ್ತದೆ.

ಭಾರತ ವಾಚನ

ರಾಜಧಾನಿಯ ರಾಮಾನುಜ ರಸ್ತೆಯಲ್ಲಿರುವ ಶ್ರೀ ಎಂ ಪಿ ದೇವಣ್ಣನವರ ಕೊಟ್ಟಿಯಲ್ಲಿ ಪ್ರತಿ ಸಂಜೆ ೬ರಿಂದ ಶ್ರೀ ಮಹಾಭಾರತದ ವಾಚನವು ವೇ|| ವಿ ನಾರಾಯಣ ಶಾಸ್ತ್ರಿಯವರು ಮತ್ತು ಗಾಯತ್ರಿ ಯಜ್ಞದೀಕ್ಷಿತ ಶ್ರೀ ರಾಮ ಕೃಷ್ಣಶಾಸ್ತ್ರಿ ಗಮಕಿಯವರಿಂದ ನಡೆಯುವುದು. ಸರ್ವರಿಗೂ ಆಹ್ವಾನವಿದೆ

ಎಲ್. ಎಸ್. ರಾಜೂ ಆಸ್ಪತ್ರೆಯಿಂದ ಜೈಲಿಗೆ

ಬೆಂಗಳೂರು ೧

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶ್ರೀ ಎಲ್ ಎಸ್. ರಾಜೂರವರನ್ನು ನೆನ್ನೆ ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು. ಅವರು ಆರೋಗ್ಯವಾಗುವವರೆಗೂ ಆಸ್ಪತ್ರೆಯಲ್ಲಿ ಅವರನ್ನು ಇಡಬೇಕೆಂದು ಹಿಂದೆ ಸುಪ್ರೀಂ ಕೋರ್ಟಿನ ಆಜ್ಞೆಯಾಗಿತ್ತು

ಆಗಸ್ಟ್ ತಿಂಗಳ

ಮೋಹಿನಿ .

ಬಾಲಮಿತ್ರ

ಬಂದಿವೆ

ಏಜೆಂಟರು ನ್ಯೂಸ್ ಪೇಪರ್ ಹೌಸ್

ಮೈಸೂರು

ಅಮೇರಿಕದ ಎಣ್ಣೆ ಹಿತಗಳಿಗೂ ಧಕ್ಕೆ ?

ಪ್ರಟಿಸ್ಸಿನ ನಂತರ ಈಗ ಅಮೇರಿಕಾ ಎಣ್ಣೆ ಹಿತಗಳಿಗೆ ಪರ್ಷಿಯದಲ್ಲಿ ತಲೆ ನೋವು ಉಂಟಾಗಿರುವುದಾಗಿ ಹೇಳಲಾಗಿದೆ ಬ್ರಿಟಿಷ್ ಎಣ್ಣೆ ಗಣಿಗಳನ್ನು ರಾಷ್ಟ್ರೀಕರಿಸಿದಂತೆಯೇ ಅಮೇರಿಕನ್ನರಿಗೆ ಸೇರಿರುವ ಏಪ್ರೇಸ್ ದ್ವೀಪಗಳ ಗಣಿಗಳನ್ನು ರಾಷ್ಟ್ರೀಕರಿಸಬೇಕೆಂದು ಪರ್ಷಿಯದ ಕಮ್ಯೂನಿಸ್ಟರು ಪ್ರಚಾರವನ್ನಾರಂಭಿಸಿರುತ್ತಾರೆ

ಮಾದಕ ದ್ರವ್ಯದ ಕೊಳಕ್ಕೆ ಸಿಡಿಲು ಬಡಿತ

ಅಮೇರಿಕದ ಪಶ್ಚಿಮ ವರ್ಜೀನಿಯದ ಚಾರಲ್ಸ್ಟನ್ ನಗರದಲ್ಲಿರುವ ಮಾದಕ ದ್ರವ್ಯದ ರಿಸರ್ವಾಯರಿಗೆ ನೊನ್ನೆ ರಾತ್ರಿ ಸಿಡಿಲು ಬಡಿದು ಬೆಂಕಿ ಹತ್ತಿಕೊಂಡಿತೆಂದು ಹೇಳಲಾಗಿದೆ ಅದರಲ್ಲಿ ೧೦ ಲಕ್ಷ ಗ್ಯಾಲನ್ನಿಗೂ ಮೇಲ್ಪಟ್ಟು ಎಥಿಲ್ ಆಲ್ಕೋಹಾಲ್ ದ್ರವ್ಯವಿತ್ತೆಂದು ಹೇಳಲಾಗಿದೆ ಬೆಂಕಿಯನ್ನು ಆರಿಸುವ ಪಡೆಗಳನ್ನು ಅಲ್ಲಿಗೆ ಕಳುಹಲಾಗಿದೆ ಯಾರಿಗೂ ಅಪಾಯವಾಗಿಲ್ಲ

ಮರಿ ಸತ್ತುದನ್ನು ನೋಡಿ ತಾಯಿ ಕೋತಿಯ ಮರಣ

ಉತ್ತರ ಭಾರತದ ಚಪ್ರಾ ಎಂಬಲ್ಲಿ ಒಂದು ಕೋತಿ ಮರಿಗೆ ವಿದ್ಯುಚ್ಛಕ್ತಿಯು ತಗುಲಿ ಸತ್ತುದರಿಂದ ಅದರ ತಾಯಿ ಅದನ್ನು ನೋಡಿ ಎದೆಯೊಡೆದು ಸತ್ತಿತು. ಯಾವ ತಂತಿಯಿಂದ ಮರಿಯು ಸತ್ತಿತೋ ಅದನ್ನೇ ಹಿಡಿದು ತಾನೂ ಮೃತಿಯನ್ನೈದಿತೆಂದು ತಿಳಿದುಬಂದಿದೆ ಊರಿನ ಜನರು ಅವೆರಡಕ್ಕೂ ಉತ್ತರ ಕ್ರಿಯೆಗಳನ್ನು ನಡೆಸಿದರು

ಹರಿಕಥಾ ಕಾಲಕ್ಷೇಪ

ರಾಜಧಾನಿಯ ಸುಬ್ಬರಾಯನ ಕೆರೆ ಬಳಿ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಬರುವ ೧೦, ೧೧, ೧೨ನೇ ತಾ|| ನಡೆಯುವ ಶ್ರೀ ಗುರುರಾಜರ ಆರಾಧನಾ ಮಹೋತ್ಸವದ ಅಂಗವಾಗಿ ಈ ದಿನದಿಂದ ಪ್ರತಿ ಸಂಜೆ ೬ ರಿಂದ ೭|| ಗಂಟೆವರೆಗೆ ಹರಿಕಥಾ ವಿದ್ವಾಂಸರಾದ ವೇ|| ವೇಣುಗೋಪಾಲದಾಸರಿಂದ ಮೊದಲು ೩ ದಿನಗಳು ಶ್ರೀ ರಾಘವೇಂದ್ರ ಸ್ವಾಮಿಗಳವರ ಚರಿತ್ರೆ, ನಂತರ ಏಳು ದಿನಗಳು ವಿರಾಟ ಪರ್ವ ಕಥೆಗಳನ್ನು ಏರ್ಪಡಿಸಲಾಗಿದೆ ಆಸ್ತಿಕ ಮಹಾಶಯರು ದಯಮಾಡಿಸಬೇಕೆಂದು ಕೋರಲಾಗಿದೆ

ಒಲಂಪಿಯಾ

2-8-51 ರಿಂದ ಯಶಸ್ವಿ 2 ನೇ ವಾರ

ಗುಹ್‌ಲಕ್ ಪಿಕ್ಚರ್ಸ್‌ರವರ

- ವಫ -

ಪಾತ್ರ: ನಿಮ್ಮಿ ಮೋತಿಲಾಲ್, ಗೀತಾಬಾಲಿ ಮತ್ತು ಕರಣದಿವಾನ್

— ಬೆಳಗಿನ ಪ್ರದರ್ಶನ :—

3-8-51 ರಿಂದ 3 ದಿನಗಳು

ಕಾನನ ದೇವಿ ಅಭಿನಯಿಸಿರುವ ...

- ನಮೂನೆ -

ಭಾರತ ಸರ್ಕಾರದ ವ್ಯವಸಾಯ ಯೋಜನೆ

ಬರುವ ಹತ್ತು ವರ್ಷಗಳಲ್ಲಿ ೪೫೦ ಲಕ್ಷ ಎಕರೆಯಷ್ಟು ನೀರಾವರಿಯ ಜಮೀನಿನಲ್ಲಿ ವ್ಯವಸಾಯ ಮಾಡುವುದಲ್ಲದೇ, ೧೦ ಲಕ್ಷ ಎಕರೆಯ ಹೊಸ ಜಮೀನನ್ನು ಆರಂಭಕ್ಕೆ ಸಿದ್ಧಮಾಡುವುದೂ, ಹಳ್ಳಿಗಳ ೫೦ ಲಕ್ಷ ಜನರ ಭೂ ಸೈನ್ಯ ದಳವನ್ನು ಕಟ್ಟುವುದೂ, ವರ್ಷಕ್ಕೆ ೬೦ ಸಾವಿರ ಹೋರಿಗಳನ್ನು ಸಾಕುವುದೂ, ೩೦ ಕೋಟಿ ಗಿಡಗಳನ್ನು ನೆಡುವುದೂ, ಭಾರತ ಸರ್ಕಾರದ ೫ ಅಂಶಗಳ ವ್ಯವಸಾಯ ಯೋಜನೆಯಲ್ಲಿ ಸೇರಿರುವುದಾಗಿ ಗೊತ್ತಾಗಿದೆ

ರಷ್ಯಾ, ಕಮ್ಯೂನಿಸ್ಟರ ಪಕ್ಷಕ್ಕೆ ಸೇರಲು ಇತರರಿಗೆ ಆಹ್ವಾನ

ಯಾವ ಪಕ್ಷಕ್ಕೂ ಸೇರದೆ ಇರುವ ಪ್ರಭಾವ ಶಾಲಿಗಳಾದ ಜನರನ್ನು ತಮ್ಮ ಪಕ್ಷದೊಳಗೆ ಸೇರಿಸಿಕೊಳ್ಳಲು ರಷ್ಯದ ಕಮ್ಯೂನಿಸ್ಟ್ ಪಕ್ಷವು ಇಚ್ಛಿಸಿರುವುದಾಗಿ ಗೊತ್ತಾಗಿದೆ ಈ ಬಗ್ಗೆ ಮಾಸ್ಕೋ ರೇಡಿಯೋವಿನಲ್ಲಿ ಪ್ರಸಾರವನ್ನು ಮಾಡಲಾಗಿದೆ ಇಮವರೆಗೆ ಆ ಪಕ್ಷದ ಸದಸ್ಯತ್ವದ ಗೌರವವು ಹಲವರಿಗೆ ಮಾತ್ರ ಮೀಸಲಾಗಿಡಲಾಗಿತ್ತೆಂದು ಹೇಳಲಾಗಿದೆ

ಕಾಳಸಂತೆಗಾಗಿ ಗಿರಣಿ ಮಾಲೀಕನ ಆಸ್ತಿ ಸರ್ಕಾರಕ್ಕೆ

ಕಾಳಸಂತೆಯನ್ನು ನಡೆಸುತ್ತಿದ್ದನೆಂಬ ಕಾರಣಕ್ಕಾಗಿ ಓಂಬಾಲದ ಒಬ್ಬ ಗಿರಣಿ ಮಾಲೀಕನನ್ನು ಬಂಧಿಸುವ ಬಗ್ಗೆ ಸರ್ಕಾರದವರು ಏರ್ಪಾಡು ಮಾಡಿರುತ್ತಾರೆ ಅವನು ತಲೆ ಮರೆಸಿಕೊಂಡಿರುವುದರಿಂದ ಅವನ ಆಸ್ತಿಯನ್ನು ವಶಪಡಿಸಿಕೊಳ್ಳಲಾಗಿದೆ

Edited printed and published by A R Nagarajan, at Sadhvi Press Tr Subbiah Road, Mysore

ಚಾಮುಂಡಿ ಬೆಟ್ಟದಲ್ಲಿ ಅನೈರ್ಮಲ್ಯ

ಸುಪ್ರಸಿದ್ಧ ಯಾತ್ರಾಸ್ಥಳವಾದ ಚಾಮುಂಡಿ ಬೆಟ್ಟದ ಮೇಲೆ ದಿನೇ ದಿನೇ ಕಶ್ಮಲವು ಹೆಚ್ಚುತ್ತಾ ಅನಾರೋಗ್ಯಕ್ಕೆ ಎಡೆಯುಂಟಾಗುತ್ತಿರುವುದು ವಿಷಾದಕರ. ಇದರ ಪರಿಣಾಮವಾಗಿ ಇತ್ತೀಚಿಗೆ ಅಲ್ಲಿ ಆಮಶಂಕೆ, ಮಲೇರಿಯಾ ಮುಂತಾದ ವ್ಯಾಧಿಗಳಿಗೆ ಹಲವು ನಿವಾಸಿಗಳು ತುತ್ತಾಗಿರುತ್ತಾರೆ ದೇವಸ್ಥಾನದ ಸುತ್ತಲೂ ಅರಮನೆ ಇಲಾಖೆಯವರು ಕುಲಾಯಿಗಳನ್ನು ಇಟ್ಟಿರುತ್ತಾರೆ. ಆದರೆ ಊರಿನೊಳಗೆ ಗ್ರಾಮ ಪಂಚಾಯಿತಿಯವರು ಕೇಳುವವರೇ ಇಲ್ಲ ದೇವಿಕೆರೆಗೆ ಹೋಗುವ ದಾರಿಯೂ ಬಹಳ ಕಶ್ಮಲಮಯವಾಗಿರುತ್ತದೆ

ಈ ಪ್ರದೇಶವು ಜಿಲ್ಲಾ ಬೋರ್ಡಿನ ಆಡಳಿತಕ್ಕೊಳಪಟ್ಟಿರುವುದಾಗಿ ತಿಳಿದುಬಂದಿದೆ ಇಲ್ಲಿನ ಪಂಚಾಯಿತಿಯಿಂದ ಬರುವ ವರಮಾನವು ಅತ್ಯಂತ ಕಡಿಮೆಯಾಗಿರುವುದೇನೋ ದಿಟ ರಾಜಧಾನಿಗೆ ಹತ್ತಿರವಾಗಿದ್ದು ಶ್ರೀಮನ್ಮಹಾರಾಜರವರ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗಿ ಅನೇಕ ಯಾತ್ರಾರ್ಥಿಗಳು ಭೇಟಿ ಕೊಡುತ್ತಿರುವ ಈ ಸ್ಥಳವು ಇಂತಹ ಹೀನಸ್ಥಿತಿಯಲ್ಲಿರುವುದು ಸ್ವಲ್ಪವೂ ಸರಿಯಲ್ಲ ಸಂಬಂಧಪಟ್ಟವರು ಈ ವಿಷಯಕ್ಕೆ ಕೂಡಲೇ ಗಮನ ಕೊಟ್ಟು ಇಲ್ಲಿನ ನೈರ್ಮಲ್ಯವನ್ನು ಕಾಪಾಡಲು ಸಹಾಯ ಮಾಡುವರೆಂದು ನಂಬಲಾಗಿದೆ —ಒಬ್ಬ ಜಿ

೦ಕನ್ನಂಬಾಡಿಯಲ್ಲಿ ನೀರಿನ ಮಟ್ಟ ದಿನೇ ದಿನೇ ಹೆಚ್ಚುತ್ತಿರುವುದೆಂದು ತಿಳಿದುಬಂದಿದೆ

ವೆಂಕಟ ಕೃಷ್ಣಯ್ಯನವರ ಮನೆ, ವಕೀಲರಿಗೂ, ಬುದ್ಧಿಶಾಲಿಗೂ ರಸ್ತೆ ಈ ಮಧ್ಯೆ ಇರುವ ಮುನಿಸಿಪಲ್ ೬೦೬ನೇ ನಂಬರು ಮನೆ ಮತ್ತು ಇದರ ಪೂರ್ವ ಭಾಗದಲ್ಲಿರುವ ಖಾಲಿ ಜಾಗ ಮತ್ತು ರಾಟೆ ಭಾವಿ ಸಹಾ, ಪೂ ಪ ಅಡಿ ೫೫, ದ ಉ ಅಡಿ ಉಳ್ಳದ್ದು —ರಾಜಮ್ಮನವರು

ಸ್ಥಾಪನೆ 1891 ದಶವಾರ್ಷಿಕ 1948

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಅವರು

ರಾಜಕುಮಾರ ಇಂಡಸ್ಟ್ರೀಸ್ ಸಂಘಾಗದ

ರತ್ನಾವಳಿ ಥಿಯೇಟರಿನಲ್ಲಿ

4-8-51 ರಿಂದ :: ಪ್ರತಿ ದಿನವೂ

ಪಂಚವಾರ್ಷಿಕೋತ್ಸವದ ಕಾಣಿಕೆಯಾಗಿ

ರಾಜಾ ಗೋಪಿ ಚಂದ್

ಪ್ರತಿ ಶನಿವಾರ ಆದಿವಾರ ಭಾನುವಾರ ಬುಧವಾರ ರಾತ್ರಿ 9.45ಕ್ಕೆ

ಭಾನುವಾರ ದಿನಗಳಲ್ಲಿ ಮ್ಯಾಟಿನಿ ಸಂಜೆ 6 45

ಪ್ರಭುದೇವಾ ಟಾಕೀಸ್

2—8—51ನೇ :: ಗುರುವಾರದಿಂದ

ಅಮೋಘ ಪ್ರಾರಂಭ — ದಿನವಹಿ 3 ಆಟಗಳು

• ರೂ ಪ ವ ತಿ •

(ತೆಲುಗು)

ಪಾತ್ರ:- ಬಾಲಸರಸ್ವತಿ, ಜಿ. ಎಸ್. ಸ್ವಾಮಿ, ಸೂರ್ಯ ಪ್ರಭಾ, ಶಿವರಾವ್, ಮುಂತಾದವರು

ಗೃಹಕೃತ್ಯದ ನೋಟೀಸು

ಚಾಮರಾಜನಗರದ ತಾಲ್ಲೂಕು ರಾಮಸಮುದ್ರದಲ್ಲಿ ಪಟ್ಯಾಲು ಗನೇ ಬಿಟಂ ಮನೆಯಲ್ಲಿರುವ ಚಾಮರಾಜನಗರದ ಅಧ್ಯಾಪಕರು ಮುತ್ಸದ್ದಿ ಆರ್.ವಿ.ವೆಂಕಟದಾಸಪ್ಪನವರ ಹೆಂಡತಿ ರಾಜಮ್ಮನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ.—

ಈ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ೧ ಮತ್ತು ೨ನೇ ಐಟಂ ಸೊತ್ತುಗಳು ನನ್ನ ಯಜಮಾನರು,ಮೇಲ್ಕಂಡ ವೆಂಕಟದಾಸಪ್ಪನವರಿಗೆ ಪಿತ್ರಾರ್ಜಿತವಾಗಿ ಬಂದದ್ದು ಷೆಡ್ಯೂಲು ೩ನೇ ಐಟಂ ಸೊತ್ತು ನನ್ನ ಬಾಬ್ತು ಸ್ತ್ರೀ ಧನದಿಂದ ಕೊಂಡುಕೊಂಡು ನೆಲ ಮಾತ್ರಕ್ಕೆ ನನ್ನ ಯಜಮಾನರ ಹೆಸರಿಗೆ ಕ್ರಯಕ್ಕೆ ಬರೆಸಿದ್ದಾಗಿರುತ್ತೆ ಇದರ ಪೂರಾ ಹಕ್ಕು ನನ್ನದಾಗಿರುತ್ತೆ. ನನಗೆ ಭಾಗ್ಯಲಕ್ಷ್ಮಿ ಎಂಬ ೧೧ ವರ್ಷದ ಮಗಳೂ, ೩ ವರ್ಷದ ನಾಗರಾಜ ಎಂಬ ಮಗನೂ ಇರುತ್ತಾರೆ ನನ್ನ ಮಾವ ವೆಂಕಟರಮಣಯ್ಯನವರೂ,ನನ್ನ ಯಜಮಾನರೂ ಒಂದಾಗಿ ನನಗೂ ನನ್ನ ಮೈನರು ಮಕ್ಕಳಿಗೂ ಮೋಸ ಪಡಿಸಬೇಕೆಂದು ಷೆಡ್ಯೂಲ್ ಸೊತ್ತುಗಳನ್ನು ಪರಭಾರೆ ಮಾಡಲು ಯತ್ನಪಡುತ್ತಿದ್ದಾರೆ ಇವರು ನನಗೂ ನನ್ನ ಮಕ್ಕಳಿಗೂ ಸರಿಯಾಗಿ ಅನ್ನ ವಸ್ತ್ರಗಳನ್ನು ಕೊಡದೇ ಕಾಡುತ್ತಿರುತ್ತಾರೆ ಈ ಅಂಶಕ್ಕೆ ನಾನು ಹಿಂದೆಯೇ ಮೈಸೂರು ಡಿಸ್ಟ್ರಿಕ್ಟ್ ಪೊಲೀಸು ಸೂಪರಿಂಟೆಂಡೆಂಟರವರಿಗೂ, ಚಾಮರಾಜನಗರದ ತಾಲ್ಲೂಕು ಪೊಲೀಸು ಆಫೀಸಿಗೂ ದೂರು ಕೊಟ್ಟಿರುತ್ತೇನೆ. ಯಾರಾದರೂ ನನ್ನ ಯಜಮಾನರಿಂದಾಗಲೀ, ನನ್ನ ಮಾವನವರಿಂದಾಗಲೀ ಷೆಡ್ಯೂಲ್ ಸೊತ್ತುಗಳನ್ನು ಆಧಾರ, ಭೋಗ್ಯ, ಕ್ರಯ ಮಾಡಿಸಿಕೊಂಡಲ್ಲಿ ಅಂಥಾ ಪರಭಾರೆಯು ನನ್ನನ್ನೂ, ನನ್ನ ಮೈನರು ಮಕ್ಕಳನ್ನೂ ಬದ್ಧಪಡಿಸುವುದಿಲ್ಲ. ಅಂಥವರು ನಮಗೆ ಸಂಭವಿಸಬಹುದಾದ ನಷ್ಟಗಳಿಗೆ ಜವಾಬ್ದಾರರಾಗಬೇಕಾಗುತ್ತೆಂಬುದನ್ನು ಈ ಮೂಲಕ ಪ್ರಕಟಿಸಿದೆ.—

ಷೆಡ್ಯೂಲು. ೧ ಚಾಮರಾಜನಗರ ತಾಲ್ಲೂಕು ರಾಮಸಮುದ್ರದಲ್ಲಿ ಚೌಡೇಶ್ವರಿ ಬೀದಿಯಲ್ಲಿರುವ ಮುನಿಸಿಪಲ್ ಡೋರ್ ನಂಬರು ೬೦೭, ೬೦೭, ೬೦೮ನೇ ನಂಬರು ನಾಡು ಹೆಂಚಿನ ಮನೆ ಮತ್ತು ಇದರ ಪಶ್ಚಿಮ ಭಾಗದಲ್ಲಿರುವ ಖಾಲಿ ಸ್ಥಳ ಮತ್ತು ರಾಟೆ ಭಾವಿ ಸಹಾ ದರಲ್ಲಿ ನನ್ನ ಚಿಕ್ಕ ಮಾವ ಸಂಜೀವಯ್ಯನವರ ಹಿಸ್ಸೆ ಜಾತಾ ಬಾಕಿ ಮನೆ ಹಿತ್ತಲು ಭಾವಿ ಸಹಾ

೨ ಚಾಮರಾಜನಗರದ ತಾಲ್ಲೂಕು ಕಸಬಾ ಹೋಬಳಿ ಕರ್ನಂಬೀಪುರದ ಗ್ರಾಮದಲ್ಲಿ ಇರುವ ಸರ್ವೆ ನಂ ೨ ನಂ ಖುಷ್ಕಿ ಜಮೀನು ೨ ಎಕರೆ ೧ ಗುಂಟೆ,ಆಕಾರ ೫-೧೨-೦ ಉಳ್ಳದ್ದರಲ್ಲಿ ಸಂಜೀವಯ್ಯನವರ ಹಿಸ್ಸೆ ಜಾತಾ ನಮ್ಮ ಬಾಬ್ತು ಜಮೀನು

೩ ಚಾಮರಾಜನಗರದ ಟೌನ್ ಗೆ ರಾಮಸಮುದ್ರದ ಬಡಾವಣೆಯಲ್ಲಿರುವುದು ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಕಂಡಿಗೆ

(ಬಂದಿನ ಕಾಲಂನ್ನು ನೋಡಿ)

ಗುರುವಾರ ೨-೮-೫೧

ಇರಾನ್ ಮೇಲೆ ಕ್ಷಿಪ್ರದಲ್ಲೇ ರಷ್ಯದ ಆಕ್ರಮಣ ಭೀತಿ

ಸಂಧಾನ ವಿಫಲವಾದರೆ ವಿಶ್ವದ ರೈಲ್ವೆ ಮುಷ್ಕರವೇ ?

ಕಾರ್ಮಿಕರ ಸಭೆಯಲ್ಲಿ ಮುಖಂಡರ ಭಾಷಣ

ಮೈಸೂರು ೨

ಭಾರತ ಸರ್ಕಾರಕ್ಕೂ ರೈಲ್ವೆ ಕಾರ್ಮಿಕರಿಗೂ ತೃಪ್ತಿಕರವಾದ ಒಪ್ಪಂದವು ಆಗದಿದ್ದರೆ ಆ|| ಭಾ|| ರೈಲ್ವೆ ಪೆಡರೇಷನ್ನಿಗೆ ಬೆಂಬಲವೀಯಲು ಈ ತಿಂಗಳು ೧೩ ರಲ್ಲಿ ಹಾಲೆಂಡಿನಲ್ಲಿ ಸೇರಲಿರುವ ಪ್ರಪಂಚದ ಸಂಚಾರ ಶಾಖಾ ಕಾರ್ಮಿಕರ ಸಂಘವು ವಿಶ್ವದಲ್ಲೆಲ್ಲಾ ಸಾರ್ವತ್ರಿಕ ಮುಷ್ಕರ ಹೂಡಲು ನಿರ್ಧಾರ ಕೈಗೊಳ್ಳಬಹುದೆಂದು ಮೊನ್ನೆ ಸಂಜೆ ಮೈಸೂರು ರೈಲ್ವೆ ಕಾರ್ಮಿಕರನ್ನುದ್ದೇಶಿಸಿ ಎಂ ಎಸ್ ಎಂ ರೈಲ್ವೆ ಕಾರ್ಮಿಕ ಸಂಘದ ಕಾರ್ಯದರ್ಶಿ ಶ್ರೀ ಬಿ ಎ ಆನಂದರವರು ಭಾಷಣ ಮಾಡುತ್ತಾ ನುಡಿದರು. ಇವರಲ್ಲದೆ ಜಾಲಾರ್ ಪೇಟೆ ಮತ್ತು ಕುಂಭಕೋಣದ ಶಾಖೆಗಳ ಕಾರ್ಯದರ್ಶಿಗಳಾದ ಶ್ರೀಗಳಾದ ಸ್ವಾಮಿನಾಥಯ್ಯರ್, ರಾಜು ಮತ್ತು ನಾರಾಯಣ್ ರವರೂ ಸಹ ಭಾಷಣ ಮಾಡಿದರು

ಶ್ರೀ ಆನಂದರು ಮುಂದುವರಿದು ರೈಲ್ವೆ ಕೆಲಸಗಾರರ ಬೇಡಿಕೆಗಳು ನ್ಯಾಯವಾದುವೆಂದೂ, ನೆಹರೂರವರು ಕಾರ್ಮಿಕ ಕಷ್ಟ ಸುಖಗಳನ್ನು ಖುದ್ದಾಗಿ ಅರಿತು ಸಂಧಾನ ನಡೆಸುವುದಾದರೆ ಎಲ್ಲ ಕಷ್ಟಗಳೂ ಪರಿಹಾರವಾಗುವುವೆಂದೂ ನುಡಿದರು. ಚುನಾವಣೆಗಳಿಗಾಗಿ ಕಾರ್ಮಿಕರನ್ನು ಐ ಎನ್ ಟಿ ಯು. ಸಿ. ಸಂಸ್ಥೆಯು ದುರುಪಯೋಗಪಡಿಸಿಕೊಳ್ಳುತ್ತಿದೆಯೆಂದು ಹೇಳಿ ರೈಲ್ವೆಯ ಕಾರ್ಮಿಕರು ಒಗ್ಗಟ್ಟಾಗಿರಬೇಕೆಂದು ಶ್ರೀ ಸ್ವಾಮಿನಾಥ ಅಯ್ಯರ್ ರವರು ತಿಳಿಸಿದರು.

ಪಿ ವ ಕ ಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ದೇವಾಂಗ ಸಂಘದವರು ಈ ಸಂಜೆ ೭ ಗಂಟೆಗೆ ಅಮಾವಾಸ್ಯೆ ಪ್ರಯುಕ್ತ ಶ್ರೀ ಭೀಮ್ ಎನ್ ಶಿವಲಿಂಗಸ್ವಾಮಿಗಳಿಂದ ಆಕ್ಕ ಮಹಾ ದೇವಿ ಎಂಬ ಹರಿಕಥೆಯನ್ನು ಏರ್ಪಡಿಸಿರುತ್ತಾರೆ. ಅಮ್ಮನವರಿಗೆ ಕಾಳ ಅಲಂಕಾರವನ್ನು ಮಾಡಲಾಗುವುದು

ಇರಾನಿನಮೇಲೆ ಕ್ಷಿಪ್ರದಲ್ಲೇ ರಷ್ಯದ ಆಕ್ರಮಣವೇ ?

ಇರಾನ್ ಅಥವಾ ಯುಗೋಸ್ಲೇವಿಯಾ ಮೇಲೆ ರಷ್ಯದ ಆಕ್ರಮಣವು ಸನ್ನಿಹಿತವಾಗಿದೆಯೆಂದು ಅಮೆರಿಕದ ಸೆನೆಟ್ ಸಭೆಯಲ್ಲಿ ಸೈನ್ಯ ಶಾಖಾ ಮಂತ್ರಿ ಫ್ರಾಂಕ್ ಪೇಸ್ ರವರು ಎಚ್ಚರಿಕೆಯನ್ನಿತ್ತು, ಯಾವ ಕ್ಷಣದಲ್ಲಾದರೂ ಅಮೆರಿಕವು ತೃತೀಯ ಪ್ರಪಂಚ ಯುದ್ಧವನ್ನು ಮಾಡಬೇಕಾದ ಪ್ರಸಂಗವುಂಟಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ

ಕಿದ್ವಾಯಿಯವರು ರಾಜೀನಾಮೆ ಕೊಟ್ಟರು

ಉತ್ತರ ಪ್ರದೇಶದ ಪ್ರಜಾ ಕಾಂಗ್ರೆಸ್ ಕಾರ್ಯಕರ್ತರ ಅಭಿಪ್ರಾಯವನ್ನು ಮನ್ನಿಸಿ, ರಫಿ ಅಹಮದ್ ಕಿದ್ವಾಯಿಯವರು ಪ್ರಧಾನಿ ನೆಹರೂರವರಿಗೆ ತಮ್ಮ ಮಂತ್ರಿ ಪದವಿಯ ರಾಜೀನಾಮೆ ಸಲ್ಲಿಸಿರುತ್ತಾರೆ

ಪ್ರತಿಭಟನಾ ದಿನಾಚರಣೆ

ಆಹಾರ ಧಾನ್ಯಗಳನ್ನು ಮಾರುವ ಸಹಕಾರ ಸಂಘಗಳಲ್ಲಿ ೫೦೦ ರೂ ಡಿಪಾಸಿಟ್ಟನ್ನು ಕೊಟ್ಟು ಧಾನ್ಯದ ವ್ಯಾಪಾರದಲ್ಲಿ ನಷ್ಟವೇನಾದರೂ ಸಂಭವಿಸಿದರೆ, ಸಂಘದವರೇ ಜವಾಬ್ದಾರರಾಗಬೇಕಾಗುವುದೆಂದು ಆಹಾರ ಇಲಾಖೆಯ ಡೈರೆಕ್ಟರು ಮಾಡಿರುವ ಸೂಚನೆಯನ್ನು ವಿರೋಧಿಸಲು ನಾಳೆ ಸಂಜೆ ೬|| ಘಂಟೆಗೆ ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದವರು ಸಹಕಾರ ಭವನದಲ್ಲಿ ಪ್ರತಿಭಟನಾ ದಿನಾಚರಣೆಯನ್ನು ನಡೆಸುವರು. ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು

ಮಿಷನ್ ಆಸ್ಪತ್ರೆಯ ಬದಲಾವಣೆ

ರಾಜಧಾನಿಯ ಉದಿಗಿದದಲ್ಲಿರುವ ಹೋಲ್ಡ್ಸ್‌ವರ್ತ್ ಸ್ಮಾರಕ ಮಿಷನ್ ಆಸ್ಪತ್ರೆಯನ್ನು ವಿಶಾಲಗೊಳಿಸಲು ಆಲೋಚಿಸಲಾಗಿದೆ. ಈ ಸಂಸ್ಥೆಯನ್ನು ೧೯೦೬ ರಲ್ಲಿ ಸ್ಥಾಪಿಸಲಾಯಿತು. ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯಾಗಿ ಪರಿವರ್ತಿಸಲು ಆಲೋಚಿಸಲಾಗಿದೆ. ಅದಕ್ಕಾಗಿ ೫ ಲಕ್ಷ ರೂ ವೆಚ್ಚವಾಗುವುದೆಂದು ಅಂದಾಜಾಗಿದೆ

ಆಗಸ್ಟ್ ೧೫ರಂದು ಸಂಬಳದ ರಜಾ

ಈ ತಿಂಗಳು ೧೫ ನೇ ತಾ|| ಸ್ವಾತಂತ್ರ್ಯ ದಿನವಾದ ಪ್ರಯುಕ್ತ ಸರ್ಕಾರದ ಎಲ್ಲ ಕೈಗಾರಿಕೆಗಳಿಗೂ ಸಂಬಳದ ಸಹಿತ ರಜಾ ಕೊಡಲಾಗುವುದು. ಇತರ ಖಾಸಗಿ ಉದ್ಯಮಿಗಳೂ ಸರ್ಕಾರದ ನೀತಿಯನ್ನು ಅನುಸರಿಸಬೇಕೆಂದು ಭಾರತ ಸರ್ಕಾರದವರು ಕೋರಿರುತ್ತಾರೆ.

ಸ್ವಾತಂತ್ರ್ಯದ ದಿನ ಔತಣ ಸಮಾರಂಭಗಳು ಕೂಡದು

ಆಹಾರ ಪರಿಸ್ಥಿತಿಯು ಉತ್ಕಟವಾಗಿರುವುದರಿಂದಲೂ, ಮಿತವ್ಯಯವನ್ನು ಅನುಸರಿಸಬೇಕಾಗಿರುವುದರಿಂದಲೂ, ಈ ಸಾರಿಯೂ ಸಹ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಔತಣ ಕೂಟಗಳನ್ನು ನಡೆಸಲಾಗದೆಂದು ಕೇಂದ್ರ ಸರ್ಕಾರದವರು ಎಲ್ಲ ಸಂಸ್ಥಾನಗಳಿಗೂ ಸೂಚನೆಯನ್ನಿತ್ತಿರುತ್ತಾರೆ

ಸ್ಟಾಂಪುಗಳ ಮೇಲೆ ಷೇಕ್ ಅಬ್ದುಲ್ಲಾ ಚಿತ್ರ

ಒಂದು ಆಣೆಯ ಸ್ಟಾಂಪುಗಳನ್ನು ಜಮ್ಮು ಮತ್ತು ಕಾಶ್ಮೀರಗಳ ರಾಷ್ಟ್ರೀಯ ಸಮ್ಮೇಳನದವರು ಮುದ್ರಿಸಿರುತ್ತಾರೆ. ಅದರಲ್ಲಿ ಒಂದು ಕಡೆ ಷೇಕ್ ಅಬ್ದುಲ್ಲಾರವರ, ಮತ್ತೊಂದು ಕಡೆ ನೇಗಿಲಿನ ಚಿತ್ರಗಳೂ ಇವೆ. ಆ ಸಮ್ಮೇಳನಕ್ಕೆ ನಿಧಿಯನ್ನು ಕೂಡಿಸಲು ಈ ಸ್ಟಾಂಪುಗಳನ್ನು ಮಾರಲಾಗುವುದು.

ಪಕ್ಷಗಳ ಚುನಾವಣಾ ಚಿಹ್ನೆಗಳು

ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸುವ ಪಕ್ಷಗಳ ಉಮೇದುವಾರರಿಗೆ ಕೊಡಬಹುದಾದ ಗುರುತುಗಳ ಬಗ್ಗೆ ನಿರ್ಧಾರವಾಯಿತು. ಎತ್ತುಗಳನ್ನು ಹೂಡಿದ ನೇಗಿಲು ಕಾಂಗ್ರೆಸ್ಸಿಗೂ, ಗುಡಿಸಲು ಪ್ರಜಾ ಪಕ್ಷಕ್ಕೂ, ನೇಗಿಲು ಸಮಾಜವಾದಿ ಪಕ್ಷಕ್ಕೂ, ಮನುಷ್ಯನ ಕೈ ಮತ್ತು ಫಾರ್ವರ್ಡ್ ಬ್ಲಾಕಿನ ಎರಡು ಪಂಗಡಗಳಿಗೂ, ಸ್ವಸ್ತಿಕ್ ಮತ್ತು ಕತ್ತಿ ಹಿಂದೂ ಮಹಾ ಸಭೆಗೂ, ಹಸುವಿನ ಕರುವನ್ನು ಕರೆಯುತ್ತಿರುವ ಮಹಿಳೆ ರಾಮರಾಜ್ಯ ಪರಿಷತ್ತು ಮತ್ತು ಆನೆ ಪರಿಶಿಷ್ಟ ವರ್ಗದ ಫೆಡರೇಷನ್ನಿಗೂ ಕೊಡಲು ನಿರ್ಧಾರವಾಯಿತು

ಶ್ರೀಮತಿ ಕೃಷ್ಣಮ್ಮನವರಿಗೆ ಸತ್ಕಾರ

ರಾಜಧಾನಿಯ ಮಕ್ಕಳ ಕೂಟದವರು ಕಳೆದ ಶನಿವಾರ ಸಂಜೆ ಮೈಸೂರು ಕ್ರಾಸ್ ಸಂಸ್ಥೆಯ ಕಾರ್ಯದರ್ಶಿಯೂ, ಮಕ್ಕಳ ಕೂಟದ ಉಪಾಧ್ಯಕ್ಷಿಣಿಯರಾದ ಶ್ರೀಮತಿ ಲಕ್ಷ್ಮಿ ಪಿ. ಕೃಷ್ಣಮ್ಮನವರ ಗೌರವಾರ್ಥವಾಗಿ ಮಹಿಳಾ ಸಮಾಜದ ಸಭಾಂಗಣದಲ್ಲಿ ಸನ್ಮಾನ ಸಭೆಯೊಂದನ್ನು ಏರ್ಪಡಿಸಿದ್ದರು. ಶ್ರೀಮತಿ ಎಚ್. ಜಯಮ್ಮನವರಿಂದ ವೀಣಾವಾದನ, ಕುಮಾರಿ ಗೀತಾ, ಲತಾ, ...ರವರುಗಳಿಂದ ನಾಟ್ಯ, ಕುಮಾರಿ ...ಳಾ ಪಾಪು ಮತ್ತು ಕಲಾವತಿಯವರ ವಿವಿಧ ವೇಷ ಪ್ರದರ್ಶನಗಳಾದ ಮೇಲೆ ಅತಿಥಿಗಳು ಯೂರೋಪು ದೇಶದ ಮಕ್ಕಳ ಸಂಸ್ಥೆಗಳ ವಿಷಯವಾಗಿ ಮಾತನಾಡಿದರು. ವಂದನಾರ್ಪಣೆ, ...ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ರಾಷ್ಟ್ರಾಧ್ಯಕ್ಷರ ಚುನಾವಣೆ ಮಾರ್ಚಿಯಲ್ಲಿ

ಬರುವ ಮಾರ್ಚಿ ತಿಂಗಳು ಅಥವಾ ಏಪ್ರಿಲ್ ಅರ್ಧ ಭಾಗದಲ್ಲಿ ಭಾರತದ ರಾಷ್ಟ್ರಾಧ್ಯಕ್ಷರ ಚುನಾವಣೆ ನಡೆಯುವುದೆಂದು ಗೊತ್ತಾಗಿದೆ. ಈಗಿನ ಪಾರ್ಲಿಮೆಂಟ್ ಸಭೆಯೇ ಮುಂದಿನ ವರ್ಷದ ಆಯವ್ಯಯ ಪಟ್ಟಿಯನ್ನೂ ಪರಿಶೀಲಿಸುವುದಾಗಿ ಹೇಳಲಾಗಿದೆ

ಒರಿಸ್ಸಾ ವಿದ್ಯಾರ್ಥಿಗಳ ಮುಷ್ಕರದ ಮುಕ್ತಾಯ

ಒರಿಸ್ಸದ ೧೪ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳು ನಡೆಸುತ್ತಿದ್ದ ಮೂರು ವಾರಗಳ ಮುಷ್ಕರವು ನೆನ್ನೆ ಮುಕ್ತಾಯವಾಯಿತು. ವಿದ್ಯಾರ್ಥಿಗಳಿಗೆ ತೃಪ್ತಿಕರವಾದ ಶಾಂತಿಯುತವಾದ ಒಪ್ಪಂದಕ್ಕಾಗಿ ಹಲವು ಖಾಸಗಿ ಮುಖಂಡರು ನಡೆಸಿದ ಪ್ರಯತ್ನವು ಯಶಸ್ವಿಯಾದುದರಿಂದ ಮುಷ್ಕರವು ನಿಂತಿತು.

ಕಮ್ಯೂನಿಸ್ಟ್ ಚೀಣದೊಳಗೆ ರಾಷ್ಟ್ರೀಯರ ಪ್ರವೇಶ

ಬರ್ಮಾ ಗಡಿ ಕಡೆಯಿಂದ ರಾಷ್ಟ್ರೀಯ ಚೀಣರು ಕಮ್ಯೂನಿಸ್ಟರ ಹತೋಟಿಯಲ್ಲಿರುವ ಯುನಾನ್ ಪ್ರಾಂತದೊಳಗೆ ನುಗ್ಗಿ ಹತ್ತು ಮೈಲಿ ದೂರ ಪ್ರವೇಶಿಸಿರುವುದಾಗಿ ಗೊತ್ತಾಗಿದೆ.

ಕೃತಕ ಕರುಗಳ ಪ್ರದರ್ಶನದಲ್ಲಿ ಸಚಿವರಿಗೆ ಬಹುಮಾನ

ಬೆಂಗಳೂರಿನಲ್ಲಿ ನೆನ್ನೆ ನಡೆದ ಕೃತಕ ವಿಧಾನದಿಂದ ಉತ್ಪನ್ನವಾದ ಕರುಗಳ ಪ್ರದರ್ಶನದಲ್ಲಿ ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಆರ್ ಚನ್ನಿಗರಾಮಯ್ಯನವರಿಗೂ ಒಂದು ಬಹುಮಾನವು ದೊರೆಯಿತು

ನೀರಾವರಿಯ ವಿಶೇಷ ಚೀಫ್ ಇಂಜನಿಯರ್

ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಶಿಕ್ಷಣ ಶಾಲೆಯ ಸೂಪರಿಂಟೆಂಡೆಂಟರಾದ ಶ್ರೀ ಡಿ. ಎಸ್ ವೆಂಕಟಪ್ಪನವರನ್ನು ನೀರಾವರಿ ಯೋಜನೆಗಳ ಚೀಫ್ ಇಂಜನಿಯರನ್ನಾಗಿ ನೇಮಿಸಲಾಗಿರುವುದೆಂದು ತಿಳಿದುಬಂದಿದೆ.

ವ್ಯವಸಾಯಾಧಿಕಾರಿಗಳಿಗೆ ರಜಾ

ಸಂಸ್ಥಾನದ ವ್ಯವಸಾಯ ಇಲಾಖೆಯ ಅಧಿಕಾರಿಗಳಾದ ಶ್ರೀ ಕೆ ಹೆಚ್ ಶ್ರೀನಿವಾಸರವರಿಗೆ ಕಳೆದ ೧೬ನೇ ತಾ|| ನಿಂದ ೩ ತಿಂಗಳು ರಜಾ ಮಂಜೂರಾಗಿದೆ. ಅವರ ಕೆಲಸವನ್ನೂ ಆಹಾರೋತ್ಪತ್ತಿ ಕಮಿಷನರಾದ ಶ್ರೀ ಎಂ ಕೆ ಅಪ್ಪಾಜಪ್ಪನವರು ನೋಡಿಕೊಳ್ಳುವರು

ಒಲಂಪಿಯಾ

2 8 51 ರಿಂದ ಯಶಸ್ವಿ 2 ನೇ ವಾರ

ಗುಪ್ ಆರ್ ಪಿಕ್ಚರ್ಸ್‌ರವರ

- ಏ ಷೆ -

ಪಾತ್ರ - ನಿಮ್ಮಿ, ದಿಲೀಪ್, ಗೀತಾ, ಮತ್ತು ಶರದರ್ಶನ

-: ಬೆಳಗಿನ ಪ್ರದರ್ಶನ :-

3.8.51 ರಿಂದ 3 ದಿನಗಳು

ಕಾಮಿನಿ ಕೌಶಲ್, ಕಿಶೋರ್ ಸಾಹು ನೇತಾಗಳಾಗಿ ಪಾತ್ರವಹಿಸಿರುವ

ನ ದ ಯಾ ನ -

ಅರಣ್ಯವಾಭಿವೃದ್ಧಿಗೆ ಪಂಚ ವಾರ್ಷಿಕ ಯೋಜನೆ

ಬೆಂಗಳೂರು ೩-೮

ದೇಶದಲ್ಲಿರುವ ವನಕಳುಗಳ ಸಂಪತ್ತನ್ನು ಹೆಚ್ಚಿಸಲು ಐದು ವರ್ಷದ ಯೋಜನೆಯನ್ನು ಮೈಸೂರು ಸರ್ಕಾರದವರು ಕೈಗೊಂಡಿರುವರೆಂದು ತಿಳಿದುಬಂದಿದೆ ಈ ಯೋಜನೆ ಪ್ರಕಾರ ೧೫ ರಿಂದ ೨೦ ಹಳ್ಳಿಗಳನ್ನು ಚುನಾಯಿಸಿ ಅವುಗಳ ಮಧ್ಯೆ ಮುಖ್ಯವಾದ ಒಂದು ಹಳ್ಳಿಯಲ್ಲಿ ವನಕರುಗಳನ್ನು ಸಾಕುವ ಏರ್ಪಾಡು ಮಾಡಲಾಗುವುದು. ಪ್ರತಿ ೩, ೪ ಹಳ್ಳಿಗಳಿಗೆ ಒಂದು ಹೋರಿಯನ್ನು ಸಾಕಲಾಗುವುದು ಈ ಯೋಜನೆಗೆ ಬೇಕಾಗುವ ಹಣದ ಸೈಕಿ ಕೇಂದ್ರದವರು ಮುಕ್ಕಾಲು ಭಾಗವನ್ನು ಕೊಡಬೇಕೆಂದು ಕೋರಲಾಗಿದೆ ಬೆಂಗಳೂರಿನ ಬಳಿ ಹೆಸರಘಟ್ಟ, ಇಂಡಿಯನ್ ಡೈರಿ ಇನ್ಸ್ಟಿಟ್ಯೂಟ್, ಮೈಸೂರಿನ ರಾಯನಕೆರೆ ಮತ್ತು ಅಜ್ಜಂಪುರಗಳಲ್ಲಿ ಮೊದಲು ಕೇಂದ್ರಗಳನ್ನು ನಿರ್ಮಿಸಲಾಗುವುದು

ಶ್ರೀ ಲಕ್ಷ್ಮೀ ಥಿಯೇಟರ್

3-8-51 ರಿಂದ ಪ್ರತಿ ದಿನ 3 ಆಟಗಳು

ಜೂಪಿಟರ್ ಥಿಯೇಟರ್ಸ್‌ರವರ

ತಮಿಳು ಚಿತ್ರ

ಮಂತ್ರಿ ಕುಮಾರಿ

ಪಾತ್ರ:- ಎಂ. ಜಿ. ರಾಮಚಂದ್ರನ್ ... ಮಾಧುರಿದೇವಿ ... ಲಲಿತಾ ಪದ್ಮಿನಿ

ಪ್ರಭಾ 3-8-51 ರಿಂದ ಅಮೋಘವಾದ 4ನೇ ವಾರ

ಪ್ರತಿ ದಿನ 3 ಆಟಗಳು

- ಬಾ ಜಿ - (ಹಿಂದಿ)

ಪಾತ್ರ:- ದೇವಾನಂದ್ ಗೀತಾಬಾಲಿ ಮತ್ತು ಕಲ್ಪನಾ ಕಾರ್ತಿಕ್

Morning Shows

From 3-8-51 for 3 days

THE MAN FROM TEXAS

HOUSE FOR SALE

DOOR NO. 2875

BALLADAKERI

Enquire-

JAYA & Co.,

Old Bank Buildings

Sayaji Rao Road, MYSORE

Edited, printed and published by A R Nagarajan, at Sadhvi Press D Subbiah Road, Mysore

ರಾಜಕಮಲ್, ಮೈಸೂರು

3-8-51 ರಿಂದ 2ನೇ ವಾರ

ಫ್ಲಾಷ್ ಗಾರ್ಡನ್

ಚಾಮುಂಡೇಶ್ವರಿ ಟಾಕೀಸ್

3-8-51 ರಿಂದ ಜಯಪ್ರದವಾದ 2ನೇ ವಾರ

ದೇವಕಿ (ತಮಿಳು)

ಪಾತ್ರ:- ವಿ. ಎನ್. ಜಾನಕಿ ಮಾಧುರಿದೇವಿ, ಬಾಲಚಂದ್ರನ್, ಲಲಿತಾ ಪದ್ಮಿನಿ ನಗಿನ ಚಿತ್ರ ಕುಮಾರ ಕಮಲ

SRI GAYATHRI.

MYSORE

Written by GERALD DRAYSON ADAMS
Directed by FREDERICK de CORDOVA
Produced by LEONARD GOLDSTEIN
A UNIVERSAL INTERNATIONAL PICTURE

From 3-8-51 Daily 3 Shows

ಗೃಹಕೃತ್ಯದ ನೋಟೀಸು

ಚಾಮರಾಜನಗರದ ತಾಲ್ಲೂಕು ಹರದನಹಳ್ಳಿ ಗ್ರಾಮದಲ್ಲಿರುವ ಪರಿವಾರದ ಜಾತಿ ಬೆಳಗಿರಿ ರಂಗನಾಯ್ಕನ ಮಗ ರಂಗಸ್ವಾಮಿ ನಾಯ್ಕನ ಹೆಂಡತಿ ಪುಟ್ಟಮಾದಮ್ಮನು ಸಮಸ್ತ ಜನಗಳಿಗೆ ತಿಳುವಳಿಕೆ ಕೊಡುವುದೇನೆಂದರೆ:—

ಮೇಲ್ಕಂಡ ನಮ್ಮ ಮಾವನಿಗೆ ನಮ್ಮ ಭಾವ ಲಿಂಗನಾಯ್ಕ ಮತ್ತು ನನ್ನ ಗಂಡ ರಂಗಸ್ವಾಮಿನಾಯ್ಕ ಇಬ್ಬರೇ ಗಂಡು ಮಕ್ಕಳು. ನನ್ನ ಗಂಡ ಪಾಲಿಯಾದ ಮೇಲೆ ನಾನೂ ನಮ್ಮ ಭಾವ ಲಿಂಗನಾಯ್ಕನೂ ಏಕ ಕುಟುಂಬವಲ್ಲಿಯೇ ವಾಸವಾಗಿದ್ದೆವು ಮೇಲ್ಕಂಡ ನನ್ನ ಗಂಡನಿಗೆ ನನ್ನ ಹೊಟ್ಟೆಯಲ್ಲಿ ಒಂದು ಗಂಡು, ಒಂದು ಹೆಣ್ಣು ಮಗು ಆಗಿರುತ್ತವೆ ನನ್ನ ಗಂಡು ಮಗ ಇನ್ನೂ ಮೈನರ್ ಆಗಿರುತ್ತಾನೆ. ಮೇಲ್ಕಂಡ ಲಿಂಗನಾಯ್ಕನು ನನ್ನ ಮತ್ತು ನನ್ನ ಮೈನರ್ ಮಗನನ್ನೂ ಸಹ ಸೇರಿಸಿ ಚಾಮರಾಜನಗರದ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಐದು ಸಾವಿರ ರೂ ಗಳನ್ನು ಸಾಲ ತೆಗೆದುಕೊಂಡಿರುತ್ತಾನೆ ರಿಜಿಸ್ಟರ್ ಆಗುವಾಗ ನಾನು ನನ್ನ ಹೆಬ್ಬೆಟ್ಟಿನ ರುಜು ಹಾಕಲು ತಿರಸ್ಕರಿಸಲು ನನ್ನ ಎಡಗೈ ಹೆಬ್ಬೆಟ್ಟಿನ ಬದಲಾಗಿ ತನ್ನ ಹೆಂಡತಿ ರಂಗಮ್ಮನ ಎಡಗೈ ಹೆಬ್ಬೆಟ್ಟಿನ ರುಜುವನ್ನು ಹಾಕಿಸಿ ಮೇಲ್ಕಂಡ ಸಾಲವನ್ನು ತೆಗೆದುಕೊಂಡಿರುತ್ತಾನೆ ಸದರಿ ವಿಷಯವಲ್ಲಿ ನಂಜನಗೂಡು ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿದೆ ಅಂದಿನಿಂದ ನನ್ನನ್ನೂ ನನ್ನ ಮೈನರ್ ಮಗನನ್ನೂ ಲಿಂಗನಾಯ್ಕನು ಮನೆಯಿಂದ ಹೊರಕ್ಕೆ ಕಳುಹಿಸಿರುತ್ತಾನೆ. ಇವಾದ ಮೇಲೆ ಈ ಕೆಳಗೆ ಕಂಡ ಷೆಡ್ಯೂಲ್ ಸ್ವತ್ತುಗಳ ಸ್ವತಿ ಕೆಲವು ಸ್ವತ್ತುಗಳನ್ನು ನನಗೂ ಮತ್ತು ಮೈನರ್ ಮಗನಿಗೂ ಸಹ ಮೋಸಮಾಡುವ ಉದ್ದೇಶದಿಂದ ಸದರಿ ಲಿಂಗನಾಯ್ಕನು ಪರಭಾರೆ ಮಾಡಲು ತರಮೂದಿನಲ್ಲಿರುವುದಾಗಿ ತಿಳಿದುಬಂದಿದೆ. ಲಿಂಗನಾಯ್ಕನು ಮಾಡುವ ಕ್ರಯ, ಭೋಗ್ಯ, ಆಧಾರ ವಗೈರೆಗಳ್ಯಾವುವೂ ನನ್ನ ಮತ್ತು ನನ್ನ ಮೈನರ್ ಮಗನಿಗೆ ಷೆಡ್ಯೂಲ್ ಸ್ವತ್ತಿನಲ್ಲಿರತಕ್ಕ ಹಕ್ಕನ್ನು ಬದ್ಧ ಪಡಿಸತಕ್ಕದ್ದಲ್ಲ. ಹಾಗೇನಾದರೂ ಯಾರಾದರೂ ಲಿಂಗನಾಯ್ಕನಿಂದ ಕ್ರಯ, ಭೋಗ್ಯ, ಆಧಾರ ವಗೈರೆಗಳನ್ನು ಮಾಡಿಕೊಂಡಲ್ಲಿ ನನಗೂ ಮತ್ತು ನನ್ನ ಮೈನರ್ ಮಗನಿಗೂ ಮುಂದೆ ಉಂಟಾಗತಕ್ಕ ಕೋರ್ಟು ಖರ್ಚು ವಗೈರೆ ನಷ್ಟಗಳಿಗೆ ಹೊಣೆಯಾಗಬೇಕಾಗುತ್ತದೆ. ಇಲ್ಲದೆ ನಮ್ಮ ಹಿಸ್ಸೆ ಸ್ವತ್ತುಗಳನ್ನು ಸುಮ್ಮನೆ ಬಿಡಬೇಕಾಗಿರುತ್ತದೆ

—: ಷೆಡ್ಯೂಲ್ :—

ಹರದನ ಹಳ್ಳಿ:- ೧ ಸ.ನಂ. ೮೮-೫ ರಿ ೧ ಎಕರೆ ೧೭ ಗುಂಟೆ; ೨. ಸ.ನಂ. ೫೦೦ ಕುಷ್ಕಿ ೩೮ ಗುಂಟೆ;

ಅಮಚವಾಡಿ.- ೩. ಸ.ನಂ. ೧೧೮-೩ ಕುಷ್ಕಿ ೩ ಎಕರೆ ೧೮ ಗುಂಟೆ; ೪. ಸ.ನಂ ೧೦೫ ೧ ಕುಷ್ಕಿ ೨ ಎಕರೆ ೧೪ ಗುಂಟೆ; ೫. ಸ. ನಂ. ೧೦೫ ೨ ಕುಷ್ಕಿ ೨ ಎಕರೆ ೨೧ ಗುಂಟೆ,

ಬಂಡಿಗೆರೆ:- ೬. ಸ ನಂ ೨೦೯-೨ ಕುಷ್ಕಿ ೧ ಎಕರೆ ೧೪ ಗುಂಟೆ; ೭.ಸ.ನಂ. ೯೦ ತರಿ ೨ ಎಕರೆ ೧ ಗುಂಟೆ; ೮. ಸ ನಂ ೧೫೭ ತರಿ ೧ ಎಕರೆ ೨೨ ಗುಂಟೆ, ೯. ಸ. ನಂ. ೧೫೮ ತರಿ ೧ ಎಕರೆ ೧೦ ಗುಂಟೆ,

ಅಂಕನ ಶೆಟ್ಟಿಪುರ :- ೧೦. ಸ. ನಂ ೫೧-೨ ಕುಷ್ಕಿ ೩೦ ಗುಂಟೆ; ೧೧. ಸ. ನಂ. ೫೮ ೩ ಕುಷ್ಕಿ ೨ ಎಕರೆ ೩೨ ಗುಂಟೆ,

ಬಸವಾಪುರ.- ೧೨ ೧೫೧-೭ ಬಾಗಾಯ್ತು ೨೦ ಗುಂಟೆ, ೧೩. ೮೯-೧-ತರಿ ೩೧ ಗುಂಟೆ, ೧೪. ೧೫೧-೪ ಬಾಗಾಯ್ತು ೫ ಗುಂಟೆ, ೧೫. ಹರದನ ಹಳ್ಳಿಯಲ್ಲಿರುವ ೧೨ ಕಂಬದ ತೊಟ್ಟಿ ಮನೆ ಖಾನೇಷು ಮಾರಿ ನಂ. ೧೯೭-೧೯೭ ಇದಕ್ಕೆ ಸೇರಿದ್ದ ಪೂರ್ವ, ದಕ್ಷಿಣ ಭಾಗದ ಹೊರ ಸುತ್ತು ಮತ್ತು ಒಂದು ಪಾಳಿ ನಿವೇಶನ ಸಹಾ.

○ ಪುಟ್ಟಮಾದಮ್ಮನ ಎಡಗೈ ಹೆಬ್ಬೆಟ್ಟಿನ ಗುರುತು

ನೆನಪಿನಲ್ಲಿರಲಿ!

ಶ್ರೀ ಬಿ. ಡಿ. ರವರ

ಹರಾಜು ಮಾರಾಟ

ಪ್ರತಿ ಭಾನುವಾರವೂ

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ,

ಬೋಂಬಾಯಿ ಆನಂದ ಭವನ ಹೋಟೆಲ್ ಪಕ್ಕ, ಮೈಸೂರು

ಸ್ಥಾಪನೆ 1891 ವಜ್ರೋತ್ಸವ 1948

ನಾಟಕ ರತ್ನ ಸೀರಣ್ಣನವರ ಗುಬ್ಬಿ ಕಂಪೆನಿ (ಲಿ) ಇವರು

ನಾಟಕರಂಗ ಲಾಕೀಸಿನ ಹಿಂಭಾಗದ

ರತ್ನಾವಳಿ ಥಿಯೇಟರಿನಲ್ಲಿ

4-8-51 ರಿಂದ :: ಪ್ರತಿ ದಿನವೂ

ವಜ್ರೋತ್ಸವದ ಕಾಣಿಕೆಯಾಗಿ

ರಾಜಾ ಗೋಪಿ ಚಂದ್

ಈ ನಾಟಕವನ್ನು ಅಭಿನಯಿಸುವರು ಶನಿವಾರ ಮತ್ತು ಬುಧವಾರ ರಾತ್ರಿ 9-30ಕ್ಕೆ ಬಾಕಿ ದಿನಗಳಲ್ಲಿ ಪ್ರಾರಂಭ ಸಂಜೆ 6-45

ಪ್ರಭುದೇವಾ ಟಾಕೀಸ್

2—8—51ನೇ :: ಗುರುವಾರದಿಂದ

ಅಮೋಘ ಪ್ರಾರಂಭ — ದಿನವಹಿ 3 ಆಟಗಳು

ರೂಪವತಿ

(ತೆಲುಗು)

ಪಾತ್ರ:- ಬಾಲಸರಸ್ವತಿ, ಜಿ. ಎಸ್. ಸ್ವಾಮಿ, ಸೂರ್ಪಕ ಪ್ರಭಾ, ಶಿವರಾವ್, ಮುಂತಾದವರು

ಸಂಪುಟ ೧೦] ಶುಕ್ರವಾರ ೩-೮-೫೦ [ಸಂಚಿಕೆ ೧೦

ಚೀಣದ ಯುನಾನ್ ಪ್ರಾಂತದಲ್ಲಿ ಯುದ್ಧ

ಭಾರತದ ಸಹಕಾರ ಕಾಂಗ್ರೆಸ್ ಅಧಿವೇಶನ

ಮೈಸೂರು ೩.

ಬರುವ ನವೆಂಬರ್ ತಿಂಗಳು ೩ನೇ ತಾರೀಕು ಬೊಂಬಾಯಿಯಲ್ಲಿ ಭಾರತದ ಸಹಕಾರ ಕಾಂಗ್ರೆಸ್ ಅಧಿವೇಶನವು ಸೇರುವುದು. ಅದರ ಪ್ರಾರಂಭೋತ್ಸವವನ್ನು ನೆರವೇರಿಸಲು ಪ್ರಧಾನಿ ನೆಹರೂರವರನ್ನು ಕೋರಲಾಗುವುದು. ಈ ಅಧಿವೇಶನಕ್ಕಾಗಿ ಭಾರತ ಸರ್ಕಾರದವರು [illegible] ಸಾವಿರ ರೂಪಾಯಿಗಳ ಸಹಾಯ ನೀಡಲು ಒಪ್ಪಿರುತ್ತಾರೆ. ಇದರ ಅಂಗವಾಗಿ ಗೃಹ ಕೈಗಾರಿಕೆ, ಸಹಕಾರ ವಿಮೆ, ಸಹಕಾರ ವಿದ್ಯಾಭ್ಯಾಸ ಮತ್ತು ಶಿಕ್ಷಣ, ಗೃಹ ಸಹಕಾರ, ಬಳಸುವವರ ಸಹಕಾರ, ಸಹಕಾರ ಮಾರಾಟ, ಗ್ರಾಮಾಂತರ ಮತ್ತು ನಗರ ಸಹಕಾರ ಬ್ಯಾಂಕಿಂಗ್ ಮತ್ತು ರಿಜಿಸ್ಟ್ರಾರರುಗಳ ಇತ್ಯಾದಿ [illegible] ಸಮ್ಮೇಳನಗಳು ನಡೆಯುವುವು. ಗೃಹ ಸಹಕಾರದ ಉಪ ಸಮ್ಮೇಳನದ ಅಧ್ಯಕ್ಷತೆಯನ್ನು ಇಲ್ಲಿನ ವಕೀಲರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ವಹಿಸುವರು. ಮದರಾಸಿನ ಪ್ರಧಾನಿ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜರವರು ಸಹಕಾರ ವಿಮೆ ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

ಸಹಾಯಾರ್ಥ ನಾಟಕ

ರಾಜಧಾನಿಯ ಕಾಲೇಜು ರಸ್ತೆಯಲ್ಲಿರುವ ಶ್ರೀ ರಾಮ ಸೇವಾ ಸಂಘದ ಸಹಾಯಾರ್ಥವಾಗಿ ಪ್ರಬುದ್ಧ ಕಲಾ ಮಂಡಳಿಯವರು ನಾಳೆ ಸಂಜೆ [illegible] ಗಂಟೆಗೆ [illegible] ಹಾಲಿನಲ್ಲಿ 'ಬಂಡಾಡಿ ಗುಂಡ' ಎಂಬ ಕನ್ನಡ ನಾಟಕವನ್ನು ಅಭಿನಯಿಸುವರು. ಪೌರ ಸಭಾಧ್ಯಕ್ಷರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು. ಕಲಾಭಿಮಾನಿಗಳು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಉಪನ್ಯಾಸ

ಕೃಷ್ಣವಿಲಾಸ ರಸ್ತೆಯಲ್ಲಿರುವ ಸರ್ಕಾರೀ ಶಾಲೆಯಲ್ಲಿ ನಾಳೆ ಸಂಜೆ [illegible] ಗಂಟೆಗೆ ಮೈಸೂರು ಸಾರ್ವಜನಿಕ ವಿಚಾರ ಸಂಘದವರು ಶ್ರೀ [illegible] ಪ್ರಸಾದರವರಿಂದ [illegible] ಮರಾಠೀಯ ವೃತ್ತ ಪತ್ರಿಕೆಗಳು ಎಂಬ ವಿಷಯವಾಗಿ ಉಪನ್ಯಾಸವನ್ನು ಏರ್ಪಡಿಸಿರುತ್ತಾರೆ. ಸರ್ವರಿಗೂ ಆಹ್ವಾನವುಂಟು.

ವಿಶೇಷ ಸೇವೆ

ರಾಜಧಾನಿಯ ರಾಮಾನುಜಾ ರಸ್ತೆಯಲ್ಲಿರುವ [illegible] ನಂಬರ್ ಮನೆಯಲ್ಲಿ ಡೂರು ಶ್ರೀ ವೆಂಕಟರಮಣ ಶಾಸ್ತ್ರಿಯವರು ಶ್ರಾವಣ ಮಾಸದ ಪ್ರಯುಕ್ತ ಶ್ರೀನಿವಾಸ ಮಹಾತ್ಮೆ ಪಾರಾಯಣವನ್ನು ಶುದ್ಧ ಪಾಡ್ಯದಿಂದ ಬಹುಳ ಪಾಡ್ಯವರೆಗೂ, ಅನಂತರ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆಯನ್ನು [illegible] ದಿನಗಳ ವರೆಗೂ, ಪೂರ್ಣಿಮಾ [illegible] ವ್ರತ ಮುಂತಾದ ವಿಶೇಷ ಸೇವೆ, ಶ್ರೀನಿವಾಸ ಕಲ್ಯಾಣ ಇವುಗಳನ್ನೂ ನಡೆಸುತ್ತಾರೆ.

ಕೂಚ್‌ಬಿಹಾರಿನಲ್ಲಿ ಅಪರಿಚಿತ ವಿಮಾನ

ಪಶ್ಚಿಮ ಬಂಗಾಳದ ಕೂಚ್ [illegible] ಜಿಲ್ಲಾಧಿಕಾರಿಗೆ ಅಪರಿಚಿತ ವಿಮಾನವು ಬಂದು, ಅದರ ಗುರುತನ್ನು ಅವರು ಪತ್ತೆ ಹಚ್ಚುವುದಕ್ಕಿಂತ ಮುಂಚೆಯೇ ಹಾರಿಹೋಯಿತೆಂದು ವರದಿಯಾಗಿದೆ.

ಮೊಹಲ್ಲಾ ದಿನಾಚರಣೆ

ಮೈಸೂರು ೩.

ರಾಜಧಾನಿಯ [illegible] ನಗರ ಪೌರ ಸಭೆಯವರ [illegible]

ದಕ್ಷಿಣ ಭಾರತ ಕ್ಷೇತ್ರಗಳಿಗೆ ಪ್ರಭುಗಳ ಭೇಟಿ

ಮೈಸೂರು ೩.

[illegible]

ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರವಾಸ

[illegible]

ಸಂಸ್ಥಾನದಲ್ಲಿ ಬಾರ್ ಕೌನ್ಸಿಲ್ ವ್ಯವಸ್ಥೆ

[illegible]

ಪೂರ್ವ ಬಂಗಾಳದ ಹೊಸ ವಿಮಾನ ನೆಲೆಗಳು

ಪೂರ್ವ ಬಂಗಾಳದ ಗಡಿ [illegible] ಹೊಸ ವಿಮಾನ ನೆಲೆ [illegible] ಪಾಕಿಸ್ತಾನದ [illegible] ವರದಿಯಾಗಿದೆ.

ಆಸ್ತಿಯನ್ನೆಲ್ಲಾ ನೆಹ್ರೂರಿಗೆ ದಾನ ಮಾಡಿದ ಮಹಿಳೆ

ಪೂನಾದ ಸರಸ್ವತಿ [illegible] ಎಂಬ ವೃದ್ಧ ಮಹಿಳೆಯು ತನ್ನ [illegible] ತನ್ನ [illegible] ಸಾವಿರ ರೂ [illegible] ವಿಶ್ವವಿದ್ಯಾಲಯಕ್ಕೆ ಕೊಡಲು [illegible] ದಾನ ಮಾಡಲು ನಿರ್ಧರಿಸಿರುತ್ತಾಳೆ.

ಮೋಕ್ಷ ಮುಲ್ತಾರ ರಾಗದ ಗಾಯನದಿಂದ ಮಳೆ

ನಾಗಪ್ಪರದ [illegible] ನಗರದಲ್ಲಿ ಮೋಕ್ಷ ಮುಲ್ತಾರ ರಾಗವನ್ನು ಹಾಡಿದನಂತರ ಮಳೆಯು [illegible]

ಯುನಾನ್‌ನಲ್ಲಿ ಯುದ್ಧ

ಹದಿನೈದು ಸಾವಿರ ರಾಷ್ಟ್ರೀಯ ಚೀನಾ ಸೈನಿಕರು ಯುನಾನ್ ಪ್ರಾಂತದಲ್ಲಿ ಪ್ರಾರಂಭಿಸಿರುವ ದಾಳಿಯನ್ನು ಎದುರಿಸಲು ಕಮ್ಯೂನಿಸ್ಟ್ ಚೀನಾ ಸೈನಿಕರು ದಕ್ಷಿಣಕ್ಕೆ ಧಾವಿಸುತ್ತಿರುವುದಾಗಿ ಗೊತ್ತಾಗಿದೆ. ರಾಷ್ಟ್ರೀಯರ ಪೈಕಿ, ಹಲವರು ವಿಮಾನಗಳಿಂದ ಧುಮುಕಿದವ್ರಾದಾಚೂಟ್ ಪಡೆಯವರೆಂದೂ, ಅವರಲ್ಲಿ ೩ ಸಾವಿರ ಗೆರಿಲ್ಲಾಗಳಿರುವರೆಂದೂ ಗೊತ್ತಾಗಿದೆ. ರಾಷ್ಟ್ರೀಯರ ವೇಗವನ್ನು ಅಡ್ಡಿಪಡಿಸುವ ಸಣ್ಣ ಕಮ್ಯೂನಿಸ್ಟ್ ದಳಗಳು ಎದುರಿಸುತ್ತಿರುವುದಾಗಿ ಹೇಳಲಾಗಿದೆ.

ನೇಪಾಳದ ಸೇನಾಧಿಕಾರಿಗಳ ಮನೆಗಳ ಶೋಧನೆ

ಹೆಚ್ಚು ಆಹಾರ ಧಾನ್ಯ ಸಂಗ್ರಹಣೆಯ ಆಪಾದನೆ ಮೇಲೆ ನೇಪಾಳದ [illegible] ಜನರಲ್ ಶಂಶೇರ್ ಜಂಗ್ [illegible] ರಾಣಾ, ಕಮ್ಯಾಂಡಿಂಗ್ ಜನರಲ್ ಹರಿ ಶಂಶೇರ್, [illegible] ಶಂಶೇರ್ [illegible] ಯುವರಾಜ್ [illegible] ಮತ್ತು ಇತರ ಇವರ [illegible] ಮನೆಗಳನ್ನು ಅಧಿಕಾರಿಗಳು [illegible] ಪತ್ರಗಳನ್ನು ವಶಪಡಿಸಿಕೊಂಡಿರುವರು.

ದೆಹಲಿಗೆ ಬರಲು ಲಿಯಾಖತ್ತರ ನಿರಾಕರಣೆ

[illegible] ಕೊಟ್ಟು [illegible] ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಖತ್ ಅಲಿಯವರು [illegible] ಗಡಿ ಭಾಗಗಳಿಂದ ಭಾರತವು ಸೈನ್ಯವನ್ನು [illegible] ದೆಹಲಿಗೆ ಬರಲು ತಾವು [illegible] ಹಿಂದೆಯೇ ಕರಾಚಿಗೆ ಬರಬೇಕೆಂದು [illegible] ಆಹ್ವಾನವನ್ನು [illegible] ಗಡಿ [illegible] ಸೈನ್ಯಗಳನ್ನು [illegible] ಬರಬೇಕೆಂದು ಲಿಯಾಖತ್ [illegible] ಭಾರತವು [illegible] ಸೈನ್ಯಗಳನ್ನು [illegible] ಪಾಕಿಸ್ತಾನದ [illegible] ದೆಹಲಿಗೆ [illegible] ಪ್ರವಾಸವನ್ನು [illegible] ದೆಹಲಿಗೆ ಬರಬಹುದು [illegible] ಹೇಳುತ್ತಾರೆ.

[illegible] ಪಾಕಿಸ್ತಾನದ ಗವರ್ನರ್ [illegible] ಯವರನ್ನು ನೇಮಿಸಲಾಗಿದೆ.

ಎ. ಆರ್ ಪಿ. ಕಾರ್ಯಕ್ರಮಕ್ಕೆ ಸಿದ್ಧರಾಗಲು ಮೆರವಣಿಗೆ

ಲಾಹೋರಿನ ನಾಗರೀಕ ರಕ್ಷಣಾ ಸಮಿತಿಯು ಒಂದು ಭಾರಿ ಮೆರವಣಿಗೆಯನ್ನು ಕಳೆದ ಸೋಮವಾರ ನಡೆಸಿತೆಂದು ವರದಿಯಾಗಿದೆ ಜರೂರು ಪರಿಸ್ಥಿತಿಯನ್ನು ಎದುರಿಸಲು ಎ ಆರ್ ಪಿ ಮತ್ತು ನಾಗರೀಕ ರಕ್ಷಣಾ ಶಿಕ್ಷಣಗಳನ್ನು ಪಡೆಯುವಂತೆ ಜನರನ್ನು ಎಚ್ಚರಿಸುವ ಬಗ್ಗೆ ಅನೇಕ ಕಡೆಗಳಲ್ಲಿ ಭಾಷಣಗಳಾದುವು

ಜಾಡಮಾಲಿಗಳ ಸ್ಥಿತಿ ಉತ್ತಮಪಡಿಸಲು ಮಸೂದೆ

ಭಾರತದಾದ್ಯಂತ ಜಾಡಮಾಲಿಗಳ ಕೆಲಸದ ಸ್ಥಿತಿ ಗತಿ ಮತ್ತು ಸಂಬಳ ದರಗಳನ್ನು ಉತ್ತಮ ಪಡಿಸಲು ಒಂದು ಮಸೂದೆಯನ್ನು ತಾವ ತಯಾರಿಸುತ್ತಿರುವುದಾಗಿ ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿ ಜಗಜೀವನರಾಂರವರು ತಿಳಿಸಿರುತ್ತಾರೆ

ಪರ್ಷಿಯಾ ಖಾರಿಗೆ ನಾಲ್ಕು ಬ್ರಿಟಿಷ್ ಯುದ್ಧ ನೌಕೆಗಳು

ಪರ್ಷಿಯಾ ಮತ್ತು ಇರಾಕ್ ರಾಜ್ಯಗಳನ್ನು ಪ್ರತ್ಯೇಕಿಸುವ ಷಾಟ್ ಎಲ್ ಅರಬ್ ನದಿಯ ಮುಖಕ್ಕೆ ಬ್ರಿಟಿಷ್ ಡಿಸ್ಟ್ರಾಯರ್ ಯುದ್ಧ ನೌಕೆಗಳು ಬಂದಿವೆ

ಹರಿಕಥೆ

ಮಂಡಿ ಮೊಹಲ್ಲಾ ಕಲ್ಲುಬಾವಿ ಬೀದಿಯಲ್ಲಿರುವ ಸೌಂದರ್ಯ ಆಂಜನೇಯಸ್ವಾಮಿ ದೇವಾಲಯದಲ್ಲಿ ಈ ಸಂಜೆ ೬ ಗಂಟೆಗೆ ಶ್ರೀ ಹೆಚ್ ಎಲ್ ನಿವಾಸಿಂಗರಾಯನವರಿಂದ ಏನು ಜಲಂಧರ ಎಂಬ ಹರಿಕಥೆಯು ನಡೆಯುವುದು ಅನ್ನುನವರಿಗೆ ತಾಂಡವೇಶ್ವರ ಸ್ವಾಮಿ ಅಲಂಕಾರವನ್ನು ಮಾಡಲಾಗುವುದು

ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರ

ರಾಜಧಾನಿಯ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರ ಕೃಷ್ಣಮೂರ್ತಿ ಪುರದ ಶಾಖೆಯಲ್ಲಿ ನಾಳೆ ಸಂಜೆ ೭ ಗಂಟೆಗೆ ರಾ॥ ಶ್ರೀ ವಿ ದೊರೆಸ್ವಾಮಿಯ್ಯಂಗಾರ್‌ರವರ ವೀಣೆ ಕಛೇರಿಯು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು ಕಲಾಭಿಮಾನಿಗಳಿಗೆ ಸುಸ್ವಾಗತವಿದೆ

ವೇತನ ತೆಗೆದುಕೊಳ್ಳದ ಪ್ರಧಾನ ಮಂತ್ರಿ

ಇರಾನಿನ ಪ್ರಧಾನಿ ಡಾ॥ ಮಹಮದ್ ಮುಸ್ಸಾದಿಕ್‌ರವರು ಅತ್ಯಂತ ಸರಳ ಜೀವಿಗಳೆಂದೂ ನಿಸ್ಪೃಹರೆಂದೂ ಭಾರತದ ವಿದ್ಯಾಮಂತ್ರಿ ಮೌಲಾನಾ ಆಜಾದ್‌ರವರು ಹೇಳಿರುತ್ತಾರೆ ಅವರು ಸರ್ಕಾರಿ ಮೋಟಾರನ್ನು ಉಪಯೋಗಿಸುವುದಿಲ್ಲ ಮತ್ತು ಸಂಬಳವನ್ನು ತೆಗೆದುಕೊಳ್ಳುವುದಿಲ್ಲ ಅಲ್ಲದೆ ಸರ್ಕಾರಿ ಭವನದಲ್ಲಿ ವಾಸ ಮಾಡದೆ ತಮ್ಮ ಸ್ವಂತವಾದ ಮನೆಯೊಂದರಲ್ಲೇ ಇರುತ್ತಾರೆ ಎಂದು ಆಜಾದರು ತಿಳಿಸಿರುತ್ತಾರೆ

೧೨೫ ವರ್ಷದ ವೃದ್ಧನ ಮರಣ

ಕಲ್ಕತ್ತೆಯಲ್ಲಿ ಅಶೋಕ ಚಂದ್ರ ಎಂಬುವರು ತಮ್ಮ ೧೨೫ ನೇ ವಯಸ್ಸಿನಲ್ಲಿ ಕಳೆದ ಶುಕ್ರವಾರ ಕಾಲವಾದರು ಸಿಪಾಯಿ ದಂಗೆ ನಡೆದಾಗ ಅವರಿಗೆ ೩೦ ವರ್ಷ ವಯಸ್ಸಾಗಿತ್ತೆಂದೂ ಒಂದಾನೊಂದು ಕಾಲದ ಅತ್ಯುತ್ತಮ ಬಿಲ್ಲುಗಾರರು ಇವರು ರೂಪಾಯಿಗೆ ಅಕ್ಕಿ ಒಂದು ಮಣ ಅಕ್ಕಿಯನ್ನು ಕೊಂಡಿದ್ದರೆಂದೂ ಹೇಳಲಾಗಿದೆ

ಸಂಯಾಲ್ಕೋಟೆಯಲ್ಲಿ ಬಾಕ್ಸರರ ಪ್ರದರ್ಶನ

ಬಾಕ್ಸರ್ ಸಂಘಕ್ಕೆ ಸೇರಿದ ೧೦೦ ಜನರು ಕಳೆದ ರವಿವಾರ ಸಯಾಲ್ ಕೋಟೆಯಲ್ಲಿ ಪ್ರದರ್ಶನ ನಡೆಸಿ ತಮ್ಮ ಮುಂದಿನ ಆಜ್ಞೆ ಮತ್ತು ಕಾಶ್ಮೀರದ ಬಂಧ ವಿಮುಕ್ತರನ್ನಾಗಿ ಮಾಡಲು, ಕೊ. ಮುಸ್ಲಿಂ ಪಾಕಿಸ್ತಾನದ ಗಡಿ ಭಾರತದ ಸೈನ್ಯಗಳನ್ನು ಇಟ್ಟಿರುವುದಕ್ಕಾಗಿ ಪ್ರತಿಭಟನೆಯನ್ನು ಮಾಡಿದರು

ಅಬೀದ್ ನಗರ
ಮುಂದಿನ
ಹರಾಜು ಮಾರಾಟ
5—8—51 ನೇ
ಭಾನುವಾರ ಬೆಳಿಗ್ಗೆ
10 ಗಂಟೆಗೆ

ಮಧ್ಯವರ್ತಿ ಪ್ರದೇಶ ನಿರ್ಮಾಣಕ್ಕೆ ತಿರಸ್ಕಾರ

ಕೊರಿಯದ ೩೮ ನೇ ಸಮಾನಾಂತರ ರೇಖೆಯ ಉದ್ದಕ್ಕೂ ಮಧ್ಯವರ್ತಿ ಪ್ರದೇಶವನ್ನು ನಿರ್ಮಿಸಬೇಕೆಂದು ಕೇಸಾಂಗ್ ಮಾತುಕತೆಗಳಲ್ಲಿ ಕಮ್ಯೂನಿಸ್ಟ್ ಪ್ರತಿನಿಧಿಗಳು ಮಾಡಿರುವ ಸಲಹೆಯನ್ನು ಅಮೇರಿಕದ ವಿದೇಶಾಂಗ ಮಂತ್ರಿ ಡೀನ್ ಏಚೆಸನ್‌ರವರು ಪೂರ್ಣವಾಗಿ ನಿರಾಕರಿಸಿರುತ್ತಾರೆ ಕೊರಿಯದಲ್ಲಿರುವ ಅಮೇರಿಕಾ ಸೈನ್ಯವು ಎಂತಹ ಜರೂರು ಪರಿಸ್ಥಿತಿಯನ್ನಾದರೂ ಎದುರಿಸಲು ಸಿದ್ಧವಾಗಿರಬೇಕೆಂದು ಸೂಚಿಸಲಾಗಿದೆ

ಪ್ರವಾಹದಿಂದ ಅಸ್ಸಾಂ ನಗರಕ್ಕೆ ವಿನಾಶದ ಭೀತಿ

ಅಸ್ಸಾಂ ಪ್ರಾಂತದ ಮಿಷ್ಮಿ ಗುಡ್ಡದಲ್ಲಿರುವ ಸಾದಿಯಾ ನಗರವನ್ನು ಬ್ರಹ್ಮಪುತ್ರದ ಉಪ ನದಿ ಲೋಹಿತ್ ಪೂರ್ಣವಾಗಿ ನಾಶಮಾಡುವ ಭೀತಿಯುಂಟಾಗಿದೆ ಪ್ರತಿ ನಿತ್ಯವೂ ನಗರದ ಭಾಗವು ನೀರಿನಲ್ಲಿ ಕೊಚ್ಚಿ ಹೋಗುತ್ತಿರುವುದಾಗಿ ಗೊತ್ತಾಗಿದೆ

ಲಾಹೋರಿನಲ್ಲಿ ಬಿಗಿ ಮುಷ್ಟಿ ಸಂಘ

ಲಾಹೋರಿನಲ್ಲಿ ಕಳೆದ ಸೋಮವಾರ ಬಿಗಿ ಮುಷ್ಟಿ ಸಂಘವನ್ನು ಬಹಿರಂಗ ಸಭೆಯಲ್ಲಿ ಸ್ಥಾಪಿಸಲಾಯಿತು ಸಭೆಗೆ ವಿಜ್ಞಾನಿಗಳು, ಮನಶ್ಶಾಸ್ತ್ರ ಮತ್ತು ತತ್ವಶಾಸ್ತ್ರಜ್ಞರೂ ಬಂದಿದ್ದರೆಂದು ಹೇಳಲಾಗಿದೆ

ದೊಡ್ಡ ಮನೆ ಖರೀದಿಗಿದೆ

ಮೈಸೂರು ಒಂಟಿಕೊಪ್ಪಲಿನಲ್ಲಿ ಬೆಲೆ ರೂ 15000/-ಇಂದಾಜಾಗಿದೆ

1486 ಸಯ್ಯಾಜಿರಾವ್ ರೋಡಿನಲ್ಲಿ ವಿಚಾರಿಸಿ

Edited, printed and published by A R Nagarajan at Sadhvi Press D Subbiah Road, Mysore

ಪಾಕಿಸ್ತಾನ, ಭಾರತಗಳ ರಕ್ಷಣಾ ವೆಚ್ಚ

ಪಾಕಿಸ್ತಾನವು ರಕ್ಷಣಾ ಕ್ರಮಗಳಿಗಾಗಿ ತನ್ನ ಆಯವ್ಯಯದಲ್ಲಿ ಶೇಕಡ ೭೧ ರಷ್ಟು ವೆಚ್ಚ ಮಾಡುತ್ತಿರುವುದೆಂದೂ ಭಾರತದಲ್ಲಿ ಮೂರನೇ ಒಂದು ಭಾಗವನ್ನು ರಕ್ಷಣೆಗಾಗಿ ಉಪಯೋಗಿಸಲಾಗುತ್ತಿದೆಯೆಂದೂ ತಿಳಿದುಬಂದಿದೆ ಪಾಕಿಸ್ತಾನದಲ್ಲಿ ೫೫ ಕೋಟಿ ಮತ್ತು ಭಾರತದಲ್ಲಿ ೧೬೮ ಕೋಟಿ ರೂ ಈ ಕಾರ್ಯಕ್ಕಾಗಿ ವೆಚ್ಚವಾಗುತ್ತಿವೆ

ಉತ್ತೀರ್ಣರಾಗದ ಇಂಜನಿಯರಿಂಗ್ ಡಿಪ್ಲೊಮಾ ವಿದ್ಯಾರ್ಥಿಗಳ ಸಭೆ

ರಾಜಧಾನಿಯ ಉತ್ತೀರ್ಣರಾಗದ ಇಂಜನಿಯರಿಂಗ್ ಡಿಪ್ಲೊಮಾ ವಿದ್ಯಾರ್ಥಿಗಳು ಮೊನ್ನೆ ಸಭೆ ನಡೆಸಿ, ಕಳೆದ ವರ್ಷಗಳ ಡಿಪ್ಲೊಮಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದಷ್ಟು ವಿದ್ಯಾರ್ಥಿಗಳ ಸಂಖ್ಯೆಯು ಈ ಬಾರಿ ಇಲ್ಲದಿರುವುದನ್ನು ಕುರಿತು ಚರ್ಚಿಸಲು ವಿದ್ಯಾರ್ಥಿಗಳ ಪರ ಹತ್ತು ಜನರ ನಿಯೋಗವನ್ನು ಅಧಿಕಾರಿಗಳೊಡನೆ ಭೇಟಿ ಮಾಡಲು ಕಳುಹಿಸಬೇಕೆಂದೂ, ವಿದ್ಯಾರ್ಥಿಗಳಿಗೆ ಸೂಕ್ತ ರೀತಿಯ ರಿಯಾಯಿತಿಗಳನ್ನು ಕೊಡುವಂತೆ ಅವರನ್ನು ಕೇಳಿಕೊಳ್ಳಬೇಕೆಂದೂ ತೀರ್ಮಾನಿಸಲಾಯಿತು ಶ್ರೀ ಎಂ ನಂಜುಂಡಪ್ಪನವರು ಸಭಾಧ್ಯಕ್ಷತೆ ವಹಿಸಿದ್ದರು

ಮೊನ್ನೆ ಕರಾಚಿಯಲ್ಲಿ ಪಾಕಿಸ್ತಾನ ಪ್ರಧಾನಿಯವರ ಪತ್ನಿ ಬೇಗಂ ಲಿಯಾಖತ್ ರವರ ಅಧ್ಯಕ್ಷತೆಯಲ್ಲಿ ಸ್ತ್ರೀಯರು ಸಭೆ ನಡೆಸಿ ದೇಶದ ರಕ್ಷಣೆಗಾಗಿ ಸ್ತ್ರೀಯರು ಸಕಲ ತ್ಯಾಗಕ್ಕೂ ಸಿದ್ಧವಾಗಿರುವುದಾಗಿ ನಿರ್ಣಯ ಮಾಡಿದರು

ಚಂದಾದಾರರಲ್ಲಿ ವಿಜ್ಞಾಪನೆ

ಚಂದಾ ಹಣವನ್ನು ದಯವಿಟ್ಟು ಮುಂಗಡವಾಗಿ ಕೊಟ್ಟು ರಶೀತಿ ಪಡೆಯಬೇಕಾಗಿ ಕೋರುತ್ತೇವೆ

ಸಾಧ್ವಿ ಏಜೆಂಟರು
ನ್ಯೂಸ್ ಪೇಪರ್ ಹೌಸ್
ಮೈ ಸೂರು

City Municipal Office,
Mysore, Dated 1st August 1951

NOTIFICATION

Notice is hereby given to the inhabitants of the Municipality of Mysore city that the Municipal Council desire to frame bye laws under Section 51 (1) (b) (iii) and Section 181 of the Mysore City Municipalities Act 1933 for the control of the trade of tanneries including taxidermy where one, or all the processes of c l e a n i n g and preparing hides and skins are involved The details of the bye laws are published on page 88 of the Official Gazette Part III Section 3 dated July 12 1951

Any inhabitant of the Municipality objecting to the proposed bye laws may, within one month from the date of publication of this n o t i c e, send his objection in writing to the undersigned

(Sd) M S SWAMINATHAN,
Municipal Commissioner

Nalini
V V Market
MYSORE

Grand Auction Sale

Furniture [illegible]
Consisting [illegible] Chairs
Almirahs Motors [illegible]
[illegible] Stools & such
other [illegible]
AWAIT SPECIAL AUCTION

ಸ್ಥಾಪಿತ 1891 ವಜ್ರೋತ್ಸವ 1948

ನಾಟಕ ರತ್ನ ಎಂ ಗುಬ್ಬಿ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು

ರಾಜಕಮಲ್ ಪಿಕ್ಚರ್ಸ್ ಹಿಂಭಾಗದ

ರತ್ನಾವಳಿ ಥಿಯೇಟರಿನಲ್ಲಿ

4-8-51 ರಿಂದ :: ಪ್ರತಿ ದಿನವೂ

ವಜ್ರೋತ್ಸವದ ಕಾಣಿಕೆಯಾಗಿ

ರಾಜಾ ಗೋಪಿ ಚಂದ್

ಎಂಟು ನಾಟಕದ ಅಧಿಕವಾದ ಸುವರು ಶನಿವಾರ ಮತ್ತು ಬುಧವಾರ ರಾತ್ರಿ 9 ಗಂಟೆಗೆ

ಟಾಕಿ ದಿನಗಳಲ್ಲಿ ಮ್ಯಾಟಿನಿ ಸಂಜೆ 6 15

ರೀಜಿ ನಂ 792 ॥ ಸಾಧ್ವಿ ಪತ್ರಿಕೆ ॥ ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೪-೮-೫೧ [ಸಂಚಿಕೆ ೧೩

ಕೊರಿಯಾ ಸಂಧಾನ ಭಗ್ನವಾಗುವುದೇ ?

ಟಾಂಡನರವರ ಹೆಸರಿನ ಫೋರ್ಜರಿ

ಉತ್ತರ ಪ್ರದೇಶದ ವಿದ್ಯಾ ಮಂತ್ರಿ ಶ್ರೀ ಸಂಪೂರ್ಣಾನಂದ ಮತ್ತು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮ ದಾಸ್ ಟಾಂಡನರವರ ರುಜುಗಳನ್ನು ಫೋರ್ಜರಿ ಮಾಡಿ ಅನೇಕ ವ್ಯಕ್ತಿ ಕಾರ್ಖಾನೆಗಳಿಂದ ಸಾವಿರಾರು ರೂ.ಗಳನ್ನು ಶೇಖರಿಸಿದನೆಂದು ಲಾಹಿಯ ಕೋರ್ಟಿನವರು ಒಬ್ಬ ಯುವಕನಿಗೆ ೪ ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿರುವರು

ಬೊಂಬಾಯಿಯಲ್ಲಿ ಗುಂಡಿನೇಟು

ಕಳೆದ ಬುಧವಾರ ರಾತ್ರಿ ಬೊಂಬಾಯಿನ ಭೈಕುಲ್ಲಾ ಬಳಿ ಎರಡು ಪಕ್ಷಗಳವರು ಸೋಡಾವಾಟರ್ ಸೀಸೆಗಳನ್ನು ಎಸೆದು ಹೊಡೆದಾಡುತ್ತಿದ್ದುದನ್ನು ನಿಲ್ಲಿಸಲು ಪೊಲೀಸರು ಮೂರು ಬಾರಿ ಗುಂಡು ಹಾರಿಸಿದರೆಂದೂ ಇದರಿಂದ ಮೂವರಿಗೆ ಗಾಯವಾಯಿತೆಂದೂ ತಿಳಿದುಬಂದಿದೆ

ಹೆಚ್ಚು ಗೋಧಿ ಬೆಳೆದವರಿಗೆ ಟ್ರಾಕ್ಟರ್ ಬಹುಮಾನ

ಭಾರತದಲ್ಲಿ ಈ ವರ್ಷ ಹೆಚ್ಚು ಗೋಧಿಯನ್ನು ಬೆಳೆಯುವ ರೈತನಿಗೆ ಬಹುಮಾನವಾಗಿ ಕೊಡುವಂತೆ ಫರ್ಗ್ಯುಸನ್ ಲಿಮಿಟೆಡ್ ಸಂಸ್ಥೆಯವರು ಕೊಡಬೇಕೆಂದಿದ್ದ ಒಂದು ಟ್ರಾಕ್ಟರನ್ನು ಭಾರತ ಸರ್ಕಾರದ ಆಹಾರ ಶಾಖೆಯವರು ಸ್ವೀಕರಿಸಿರುತ್ತಾರೆ ಈಗಾಗಲೆ ಭಾರತ ಸರ್ಕಾರದವರು ಬಹುಮಾನವಾಗಿ ಕೊಡುವುದಾಗಿ ತಿಳಿಸಿರುವ ೫೦೦೦ ರೂ ಗಳ ಬದಲು ಈ ಟ್ರಾಕ್ಟರನ್ನು ಕೊಡಲಾಗುವುದು

ಬಡ ವಿದ್ಯಾರ್ಥಿಗಳಿಗೆ ಅನ್ನದಾನಕ್ಕಾಗಿ ಸಹಾಯನೀಡಿರಿ

ರಾಜಧಾನಿಯ ಪೌರ ಸಭೆಯವರು ಕಳೆದ ೮ ವರ್ಷಗಳಿಂದಲೂ ಪುರ ನಿವಾಸಿಗಳಿಂದ ಸಹಾಯ ಪಡೆದು ೩ ಕೋಟೆಗಳ ಬಡ ವಿದ್ಯಾರ್ಥಿಗಳಿಗೂ ಉಚಿತ ಭೋಜನವನ್ನು ಏರ್ಪಡಿಸಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ವರ್ಷವೂ ಸಹ ಅದೇ ರೀತಿ ನಡೆಸಬೇಕೆಂದು ಬಡ ವಿದ್ಯಾರ್ಥಿಗಳ ಉಚಿತ ಭೋಜನ ಸಮಿತಿಯವರು ತೀರ್ಮಾನಿಸಿರುವರು ಅದಕ್ಕಾಗಿ ರಾಜಧಾನಿಯ ಮಹಾಜನರು ಧನ ಸಹಾಯ ಮಾಡಿ ಅನ್ನ ಮತ್ತು ವಿದ್ಯಾ ದಾನಕ್ಕೆ ನೆರವು ನೀಡಬೇಕೆಂದು ಪೌರ ಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಕೋರುತ್ತಾರೆ

ಗ್ರಾಮಾಭಿವೃದ್ಧಿ ಕಾರ್ಯಕ್ಕೆ ಸಹಕಾರ ತತ್ವ ಅಗತ್ಯ

ರಾಜಧಾನಿಯ ವಯಸ್ಕರ ಶಿಕ್ಷಣ ಸಮಿತಿಯವರು ಈ ತಾಲ್ಲೂಕು ಇಲವಾಲ ಹೋಬಳಿ ದೊಡ್ಡಮಾರನ ಹಳ್ಳಿಯ ಮಂಗಳವಾರ ಬಹಿರಂಗ ಸಭೆಯೊಂದನ್ನು ಏರ್ಪಡಿಸಿದ್ದರು ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಎಸ್ ವಿ ರಘುನಾಥರಾವರು ಭಾಷಣ ಮಾಡಿ, ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ಸಹಕಾರ ತತ್ವದ ಅಗತ್ಯವನ್ನೂ ಮತ್ತು ಅದರ ಪ್ರಭಾವವನ್ನೂ ವಿವರಿಸಿದರು ನಂತರ ಶಿಕ್ಷಣ ಚಲನ ಚಿತ್ರ ಪ್ರದರ್ಶನವು ನಡೆಯಿತು

ರೈಲ್ವೆ ಮುಷ್ಕರ ಅನಿವಾರ್ಯವೇ ?

ಪಂಡಿತ ನೆಹರೂರವರೊಡನೆ ತಾವು ನಡೆಸಿದ ಪತ್ರವ್ಯವಹಾರದಿಂದ ಯಾವ ವಿಧವಾದ ಒಪ್ಪಂದವೂ ಆಗುವ ಸಂಭವ ವಿಲ್ಲವೆಂದು ರೈಲ್ವೆ ಫೆಡರೇಷನ್ನಿನ ಅಧ್ಯಕ್ಷರಾದ ಶ್ರೀ ಜಯ ಪ್ರಕಾಶ ನಾರಾಯಣರವರು ಹೇಳಿದ್ದಾರೆ ಜಯಪುರ ಸಂಸ್ಥಾನದ ರೈಲ್ವೆ ಕೆಲಸಗಾರರು ಆಗಸ್ಟ್ ೨೭ನೇ ತಾ॥ ಬೆಳಿಗ್ಗೆ ೬ ಗಂಟೆಯಿಂದ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ ಈ ಬಗ್ಗೆ ಸಧ್ಯದಲ್ಲಿಯೇ ನೋಟೀಸ್ ಕೊಡಲಾಗುವುದೆಂದು ತಿಳಿದುಬಂದಿದೆ

ಪುನಃ ಲಿಯಾಕತ್ತರ ಮುಷ್ಟಿ ಪ್ರದರ್ಶನ

ಮೊನ್ನೆ ದಿನ ಪಾಕಿಸ್ತಾನದ ಸರ್ಕಾರಿ ಮುದ್ರಣಾಲಯದ ಪ್ರಾರಂಭೋತ್ಸವವನ್ನು ಪ್ರಧಾನಿ ಲಿಯಾಕತ್ ಅಲಿ ಖಾನರು ನೆರವೇರಿಸಿದಾಗ ತಮ್ಮ ಸಂಕೇತವಾದ ಬಿಗಿ ಮುಷ್ಟಿಯನ್ನು ಬಹಿರಂಗವಾಗಿ ಎರಡನೇ ಬಾರಿ ಪ್ರದರ್ಶಿಸಿದರು ಪಾಕಿಸ್ತಾನದಲ್ಲಿ ರಕ್ಷಣಾ ಕಾರ್ಯಕ್ರಮಗಳು ಮುಂದುವರಿಯುತ್ತಲಿವೆ ಮೊನ್ನೆ ದಿನ ಲಾಹೋರಿನಲ್ಲಿ ೫೦೦ ಜನ ಮಹಿಳೆಯರ ಎ ಡಬ್ ಸಿ ಪ್ರದರ್ಶನವೊಂದು ಪಂಜಾಬ್ ಮುಸ್ಲಿಂ ಲೀಗ್ ಮಹಿಳಾ ಶಾಖೆಯ ಆಶ್ರಯದಲ್ಲಿ ನಡೆಯಿತು ನಾಳೆ ದಿನ ಕರಾಚಿಯಲ್ಲಿ ೩೦ ಸಿವಿಲ್ ಪಗಳ ಕಾಲ ಒಮ್ಲಿಕ್ ಡ್ರಿಲ್ ನಡೆಯಲಿದೆ ಪಾಕಿಸ್ತಾನದ ಗೂಢಚಾರರ ಪಡೆಯೊಂದು ಬಿಹಾರಿನಲ್ಲಿ ಪತ್ತೆಯಾಗಿದೆ ಈ ಸಂಬಂಧವಾಗಿ ಹಲವು ಮನೆಗಳನ್ನು ಶೋಧಿಸಿ ಕಾಗದಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ

ಹಿಂದಿ ನಿಕೇತನದ ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ಶಾರದಾಂಬ ಹಿಂದೀ ನಿಕೇತನದ ಪ್ರಥಮ ವಾರ್ಷಿಕೋತ್ಸವವು ನಾಳೆ ಸಂಜೆ ೫-೩೦ ಗಂಟೆಗೆ ಸೂರಡಿ ರಸ್ತೆಯ ಸಹಕಾರ ಭವನದಲ್ಲಿ ನಡೆಯುತ್ತದೆ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್ ಕಾಳಪ್ಪನವರು ಅಧ್ಯಕ್ಷತೆ ವಹಿಸುವರು ಹಿಂದಿ ಪ್ರಚಾರ ಸಭಾ ಕಾರ್ಯಕರ್ತರಾದ ಶ್ರೀ ಕೆ ವಿ ಶ್ರೀನಿವಾಸಮೂರ್ತಿಯವರು ಭಾಷಣ ಮಾಡುವರು

ಲಿಯಾಕತ್ತರ ಪತ್ರದ ಬಗ್ಗೆ ಭಾರತದ ಪರಿಶೀಲನೆ

ಪಾಕ್ ಪ್ರಧಾನಿ ಲಿಯಾಕತ್ ಅಲಿ ಖಾನರು ಪಂಡಿತ ನೆಹರೂರವರಿಗೆ ಮೊನ್ನೆ ಕಳುಹಿಸಿದ ಪತ್ರವನ್ನು ಭಾರತ ವಿದೇಶಾಂಗ ಇಲಾಖೆಯು ನೆನ್ನೆ ಪರಿಶೀಲಿಸಿತು ಈ ಪತ್ರದಲ್ಲಿ ಹೆಚ್ಚಿನ ಮಹತ್ವದ ಅಂಶಗಳಾವುವೂ ಇಲ್ಲವೆಂದೂ, ಲಿಯಾಕತ್ತರ ಆಹ್ವಾನವನ್ನು ನೆಹರೂರವರು ಅಂಗೀಕರಿಸುವುದಿಲ್ಲವೆಂದೂ ಹೇಳಲಾಗಿದೆ ಉಭಯ ರಾಷ್ಟ್ರಗಳೂ ಗಡಿಯಿಂದ ತಮ್ಮ ಸೈನ್ಯಗಳನ್ನು ವಾಪಸು ಕರೆಸಿಕೊಳ್ಳಬೇಕೆಂದು ಅಮೆರಿಕವು ಭಾರತ ಪಾಕಿಸ್ತಾನಗಳಿಗೆ ಸಲಹೆ ಮಾಡಿದೆಯೆಂದು ತಿಳಿದುಬಂದಿದೆ

ಅಂಚೆ ಇಲಾಖೆಯವರ ಮುಷ್ಕರವೇ ?

ಭಾರತ ಸರ್ಕಾರದವರು ಅಂಚೆ ಇಲಾಖೆಯವರ ಆವಶ್ಯಕ ಬೇಡಿಕೆಗಳನ್ನು ಪರಿಹರಿಸದಿರುವುದರಿಂದ ಮುಂದೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆಯೂ ಮತ್ತು ಅವರ್‍ಯ ಇಲಾಖೆಗಳಲ್ಲಿ ಮುಷ್ಕರವನ್ನು ನಿಬಂಧಿಸಲು ಹೊರಡಿಸಿರುವ ಆಜ್ಞೆಯ ಬಗ್ಗೆಯೂ ಇದೇ ತಿಂಗಳು ೧೧ರಿಂದ ೧೫ನೇ ತಾರೀಖಿನ ವರೆಗೆ ಬೊಂಬಾಯಿನಲ್ಲಿ ಸೇರಲಿರುವ ಅಂಚೆ ಮತ್ತು ತಂತಿ ಇಲಾಖೆಯ ನೌಕರರ ಸಂಘದ ಸುಪ್ರೀಂ ಕೌನ್ಸಿಲ್ಲಿನಲ್ಲಿ ಪರಿಶೀಲನೆ ನಡೆಸಲಾಗುವುದೆಂದು ಗೊತ್ತಾಗಿದೆ ನೆನ್ನೆ ಸೇರಿದ್ದ ಮದ್ರಾಸು ಶಾಖೆಯ ಸಭೆಯಲ್ಲಿ ಸುಪ್ರೀಂ ಕೌನ್ಸಿಲಿನ ತೀರ್ಮಾನಕ್ಕೆ ಬೆಂಬಲ ಕೊಡಬೇಕೆಂದೂ ಅವಶ್ಯ ಬಿದ್ದರೆ ಮುಷ್ಕರಕ್ಕೂ ಸಿದ್ಧರಾಗಬೇಕೆಂದೂ ತೀರ್ಮಾನಿಸಲಾಯಿತೆಂದು ಗೊತ್ತಾಗಿದೆ

ಶಾರದಾ ವಿಲಾಸ ಕಾಲೇಜಿನಲ್ಲಿ ಇನ್ನೊಂದು ಪಿ. ಸಿ. ಎಂ. ಸೆಕ್ಷನ್

ವಿಶ್ವ ವಿದ್ಯಾಲಯದವರ ಆಜ್ಞೆಯ ಮೇರೆ ರಾಜಧಾನಿಯ ಶಾರದಾ ವಿಲಾಸ ಕಾಲೇಜಿನಲ್ಲಿ ಜೂನಿಯರ್ ಇಂಟರ್ ತರಗತಿಯ ಪಿ ಸಿ ಎಂ ವಿಭಾಗದ ಇನ್ನೊಂದು ಸೆಕ್ಷನ್ ಅನ್ನು ತೆರೆಯಲಾಗಿದೆ ಅಪೇಕ್ಷೆಯುಳ್ಳ ವಿದ್ಯಾರ್ಥಿಗಳು ಸೇರಬಹುದೆಂದು ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಎಂ ಎಸ್ ರಾಮಸ್ವಾಮಿಯವರು ತಿಳಿಸಿದ್ದಾರೆ

ಕೇಸಾಂಗ್ ಮಾತುಕತೆ ಮುರಿದು ಬೀಳುವ ಸಂಭವ ?

ಕೇಸಾಂಗ್‌ನಲ್ಲಿ ನಡೆಯುತ್ತಿರುವ ಮಾತುಕತೆಯಲ್ಲಿ ತಟಸ್ಥ ಪ್ರದೇಶದ ನಿರ್ಮಾಣದ ಬಗ್ಗೆ ಇದುವರೆಗೂ ಯಾವ ನಿರ್ಧಾರಕ್ಕೂ ಬರಲಾಗಿಲ್ಲವೆಂದೂ, ವಿಶ್ವಸಂಸ್ಥೆಯ ಪ್ರಧಾನ ಸೇನಾಪತಿ ರಿಡ್ಜ್ ವೇರವರು ಆಪ್ತರು ಇತ್ಯರ್ಥಕ್ಕೆ ಪ್ರಯತ್ನಿಸುವರೆಂದೂ ಗೊತ್ತಾಗಿದೆ ಚರ್ಚೆಗಳನ್ನು ಇದೊಂದು ವಿಷಯಕ್ಕಾಗಿ ಮುಂದುವರಿಸುವುದು ಸಾಧ್ಯವಿಲ್ಲವೆಂದು ಅವರು ಸೂಚಿಸಿರುತ್ತಾರೆ ಸಂಧಾನ ವಿಫಲವಾಗಬಹುದೆಂದು ಅರಿತು ಒನೇ ಪಡೆಯು ತನ್ನ ಸೇನೆಗಳನ್ನು ೩೮ನೇ ರೇಖೆಯ ೩೦ ಮೈಲಿ ಉತ್ತರದಲ್ಲಿ ಸಜ್ಜುಗೊಳಿಸುತ್ತಿದೆಯೆಂದು ತಿಳಿದುಬಂದಿದೆ

ಪಾಕಿಸ್ತಾನಕ್ಕೆ ವಿದೇಶಗಳಿಂದ ಶಸ್ತ್ರಾಸ್ತ್ರಗಳು

ಪಾಕಿಸ್ತಾನಕ್ಕೆ ಪರದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳು ಈ ವರ್ಷದ ಆದಿಯಿಂದಲೂ ಬರುತ್ತಲೇ ಇವೆಯೆಂದೂ, ಪೂರ್ವ ಪಾಕಿಸ್ತಾನದ ಎರಡು ದೊಡ್ಡ ಬಂದರಾದ ಚಿತ್ತಗಾಂಗಿನಲ್ಲಿ ಇವುಗಳನ್ನು ಇಳಿಸಲಾಗುತ್ತಿದೆಯೆಂದು ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ ಇಟಲಿ ಮತ್ತು ಕೆನಡಗಳಿಂದ ಇವುಗಳನ್ನು ತರಿಸಲಾಗುತ್ತಿದೆಯೆಂದು ಹೇಳಲಾಗಿದೆ

ಪೂರ್ವ ಪಾಕಿಸ್ತಾನದ ಸರ್ಕಾರವು ಎ ಆರ್ ಪಿ ಮುಂತಾದ ರಕ್ಷಣಾ ಕಾರ್ಯಗಳನ್ನು ನಡೆಸುತ್ತಿದೆಯೆಂದೂ ಶಸ್ತ್ರಾಸ್ತ್ರಗಳನ್ನು ಖಾಸಗಿಯಾಗಿ ಇಟ್ಟುಕೊಳ್ಳುವ ಬಗ್ಗೆ ಇದ್ದ ನಿರ್ಬಂಧವನ್ನು ಸಡಿಲಿಸಿದೆಯೆಂದೂ ಗೊತ್ತಾಗಿದೆ

ತಾಯಿಯೇ ೫ ರೂಪಾಯಿಗೆ ಮಗುವನ್ನು ಮಾರಿದಳು

ದೇವನಕೋಟೆಯ ೧೬ ನೇ ಮೈಲಿನ ಎಂಬಳ್ಳಿಯ ಮರುತಾಯಿ ಎಂಬ ಹೆಂಗಸು ತನ್ನ ಮೊದಲನೇ ನಾಲ್ಕು ಮಕ್ಕಳನ್ನು ಸಾಕುವ ಸಲುವಾಗಿ ೫ ತಿಂಗಳ ಮತ್ತೊಂದು ಮಗುವನ್ನು ೫ ರೂಪಾಯಿಗೆ ಮಾರಿದಳೆಂದು ಗೊತ್ತಾಗಿದೆ

ಬಹಿರಂಗ ಸಭೆ

ರಾಜಧಾನಿಯ ಪ್ರಜಾ ಮಂಡಲದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಬೌರಿಂಗ್ ಪ್ರೆಸ್ ಮೈದಾನದಲ್ಲಿ ಬಹಿರಂಗ ಸಭೆ ಏರ್ಪಡಿಸಿದೆ ಶ್ರೀ ಟಿ ತಿಮ್ಮಪ್ಪನವರು ಅಧ್ಯಕ್ಷತೆ ವಹಿಸುವರು ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸಬೇಕೆಂದು ಸಂಚಾಲಕ ಶ್ರೀ ವೆಂಕಟ ಸುಬ್ಬಯ್ಯನವರು ಕೋರಿರುತ್ತಾರೆ

ಹರಿಕಥೆ

ರಾಜಧಾನಿಯ ಕೊತ್ವಾಲರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬ ಆಲಯದಲ್ಲಿ ನಾಳೆ ಮಧ್ಯಾಹ್ನ ೩-೩೦ ಗಂಟೆಗೆ ಶ್ರೀ ಎಂ ಎಲ್ ನಾರಾಯಣ ದಾಸರಿಂದ 'ಶ್ರೀನಿವಾಸ ಕಲ್ಯಾಣ' ಎಂಬ ಹರಿಕಥೆಯೂ ಮತ್ತು ರಥವಾಹನೋತ್ಸವವೂ ನಡೆಯುತ್ತವೆ ಡಾ॥ ಬಿ ಜಿ ದಾಸ್‌ರವರು ಅಧ್ಯಕ್ಷತೆ ವಹಿಸುವರು ದೊಡ್ಡವರಿಗೆ ಮಾತ್ರ ಆಹ್ವಾನವೆಂದು ತಿಳಿಸಲಾಗಿದೆ

ಕಾಶ್ಮೀರದ ಮೇಲೆ ಪಾಕಿಸ್ತಾನ ಬಿದ್ದರೆ ತಪ್ಪಲ್ಲವಂತೆ

ಕಾಶ್ಮೀರದಲ್ಲಿ ರಾಜ್ಯಾಂಗ ರಚನಾ ಸಭೆಯನ್ನು ಸೇರಿಸಲು ಭಾರತವು ಮಾಡಿಕೊಂಡಿರುವ "ಅಪವಿತ್ರ ಸಂಚಿಕೆ"ಯನ್ನು ಮುರಿಯಲು ಕಾಶ್ಮೀರದ ಮೇಲೆ ಪಾಕಿಸ್ತಾನವು ಸೈನಿಕ ಕಾರ್ಯಾಚರಣೆಯನ್ನು ನಡೆಸಿದರೆ, ಅದು ಅಕ್ರಮಣ ಕಾರ್ಯವೆಂದು ಪ್ರಜಾ ಸತ್ತಾತ್ಮಕ ರಾಷ್ಟ್ರಗಳು ಭಾವಿಸುವುದಿಲ್ಲವೆಂದು ಪಾಕಿಸ್ತಾನದ ಮುಸ್ಲಿಂ ಲೀಗಿನ ಮಾಜಿ ಅಧ್ಯಕ್ಷ ಮಲಿಕ್ ಖಾನ್ ಜಮಾನರು ಹೇಳಿಕೆಯನ್ನಿತ್ತಿರುವರು

ಆಂಧ್ರ ಪ್ರಾಂತ ರಚನೆಗಾಗಿ ಕಾಲು ನಡಗೆಯ ಪ್ರಚಾರ

ಆಂಧ್ರದ ಪ್ರಾಂತ ರಚನೆಯಾಗಬೇಕೆಂಬ ತೀರುವಳಿಯನ್ನು ಮಾಡಿ ಅಖಿಲ ಕಾಂಗ್ರೆಸ್ ಮುಖಂಡರಾದ ಸ್ವಾಮಿ ಸೀತಾರಾಂರವರು ರಾಜಮಹೇಂದ್ರಿಯಿಂದ ಕಳೆದ ಜೂನ್ ಮಧ್ಯಭಾಗದಲ್ಲಿ ಹೊರಟು [illegible] ಮೈಲಿಗಳನ್ನು ಕಾಲು ನಡಗೆಯಲ್ಲೇ ಸುತ್ತಿಕೊಂಡು ಈಗ ಗುಂಟೂರಿಗೆ ಬಂದಿರುತ್ತಾರೆ

ಸಾವಿರ ರೂ. ನೋಟಿನ ಮಾರಾಟದ ಪ್ರಯತ್ನ

ಬೊಂಬಾಯಿಯಲ್ಲಿ ನೊನ್ನೆ ಜನರು ಸಾವಿರ ರೂ ನೋಟುಗಳನ್ನು ತಲಾ ೨೫೦ ರೂ ಗಳಿಗೆ ಮಾರುವ ಪ್ರಯತ್ನದಲ್ಲಿದ್ದಾಗ ಅವರನ್ನು ದಸ್ತಗಿರಿ ಮಾಡಲಾಯಿತು [illegible] ರಲ್ಲಿ ಜಾರಿಯಾದ ಆರ್ಡಿನೆನ್ಸ್ ಪ್ರಕಾರ [illegible] ರೂಗೆ ಮೇಲ್ಪಟ್ಟ ನೋಟುಗಳನ್ನು ಸರ್ಕಾರದವರು ಚಲಾವಣೆಯಿಂದ ವಾಪಸು ಪಡೆದಿದ್ದರು

ಸ್ತ್ರೀಯನ್ನು ನಿಂದಿಸಿದುದಕ್ಕೆ ಪಾದರಕ್ಷಾ ಪ್ರಯೋಗ ಶಿಕ್ಷೆ

ಜಲಂಧರದ ಬಳಿ ಮಾಂಡ ಎಂಬ ಹಳ್ಳಿಯ ಪಂಚಾಯತರು ಸ್ತ್ರೀಯೊಬ್ಬಳ ಮೇಲೆ ಕುತ್ಸಿತ ಟೀಕೆಯನ್ನು ಮಾಡಿದ ಹಳ್ಳಿಯ ನೌಕರನೊಬ್ಬನಿಗೆ ಪಾದರಕ್ಷೆಗಳಲ್ಲಿ ೧೦ ಬಾರಿ ಪ್ರಯೋಗ ಮಾಡುವಂತೆ ನಿರ್ಧರಿಸಿ, ಅವನಿಗೆ ಅದರಂತೆ ಏಟು ಕೊಡಿಸಿದರೆಂದು ಗೊತ್ತಾಗಿದೆ

ಹರಿಕಥೆ

ಮಂಡಿ ಮೊಹಲ್ಲಾ [illegible] ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ಈ ಸಂಜೆ ● ಕೃಷ್ಣ ಗಾರುಡಿ ಎಂಬ ಹರಿಕಥೆಯು ನಡೆಯುವುದು [illegible] ಸೂರ್ಯನಾರಾಯಣ ಸ್ವಾಮಿ ಅಲಂಕಾರವನ್ನು ಮಾಡಲಾಗುವುದು

ಸುಬ್ಬಕೃಷ್ಣಯ್ಯ ಸ್ಮಾರಕ ಫುಟ್‌ಬಾಲ್ ಪಂದ್ಯ

ರಾಜಧಾನಿಯ ದೊಡ್ಡ ಕೆರೆ ಮೈದಾನದಲ್ಲಿ ಎಂ ಸುಬ್ಬಕೃಷ್ಣಯ್ಯ ಸ್ಮಾರಕ ಫುಟ್‌ಬಾಲ್ ಪಂದ್ಯದ ಸೆಮಿ ಫೈನಲ್ ಆಟವು ನೊನ್ನೆ ಸಂಜೆ ನಡೆದು ನೇತಾಜಿ ಟೀಮಿನ ಶ್ರೀ ಎಂ ಎಸ್ ನಂಜಪ್ಪನವರು ಬ್ರದರ್ಸ್ ಕ್ಲಬ್ಬಿನ ಮೇಲೆ ೧ ಗೋಲನ್ನು ಹೊಡೆದುದರಿಂದ ನೇತಾಜಿ ಟೀಮಿನವರು ಈಗ ಫೈನಲ್ ಆಟಕ್ಕೆ ಅರ್ಹರಾಗಿರುತ್ತಾರೆ

ಕೋತಿಯಿಂದ ವಿದ್ಯುಚ್ಛಕ್ತಿ ನಿಂತು ೧ ಲಕ್ಷ ರೂ. ನಷ್ಟ

ಶಿವನಸಮುದ್ರದ ವಿದ್ಯುತ್ ಕೇಂದ್ರದ ಒಂದು ಟ್ರಾನ್ಸ್‌ಫಾರ್ಮರಿಗೆ ಕೋತಿಯೊಂದು ಬಿದ್ದುದರಿಂದ ಮೂರು ಟ್ರಾನ್ಸ್‌ಫಾರ್ಮರುಗಳು ಸುಟ್ಟು ಹೋದವಂತೆ. ಕೊಳ್ಳೇಗಾಲ, ತಲಕಾಡು, ಬೆಳಕವಾಡಿ [illegible] ಮತ್ತು ಮುಡಿಗುಂಡಗಳಲ್ಲಿ ಕೈಗಾರಿಕೆಗಳು ನಿಂತು ಹೋದುವಲ್ಲದೆ ದೀಪಗಳೂ ನಂದಿಹೋದುವೆಂದೂ ಇದರಿಂದ ೧ ಲಕ್ಷ ರೂ ನಷ್ಟವಾಗಿರುವುದಾಗಿಯೂ ಅಂದಾಜಾಗಿದೆ

ಭಾಷಾವಾರು ಪ್ರಾಂತಕ್ಕೆ ಕೃಪಲಾನಿ ಪಕ್ಷದ ಸಮ್ಮತಿ

ಕೃಪಲಾನಿಯವರ ಪ್ರಜಾ ಪಕ್ಷದವರು ತಮ್ಮ ಚುನಾವಣಾ ಘೋಷಣೆಯಲ್ಲಿ ಭಾಷಾವಾರು ಪ್ರಾಂತ ನಿರ್ಮಾಣದ ವಿಷಯವನ್ನು ಸೇರಿಸುವರೆಂದು ಬೊಂಬಾಯಿಯ ಶಾಸನ ಸಭೆಯ ಉಪಾಧ್ಯಕ್ಷ ಶ್ರೀ ಎಸ್ ಆರ್ ಅಂಗಡಿಯವರು ತಿಳಿಸಿರುತ್ತಾರೆ

ಶಾಸನ ಸಭೆಗೆ ಉಪ ಚುನಾವಣೆ

ಶಾಸನ ಸಭೆಗೆ ಬೆಂಗಳೂರು ನಗರದಿಂದ ನಡೆದಿರುವ ಶ್ರೀ ಪಿ ಎಸ್ ನಾರಾಯಣರಾಯರ ಚುನಾವಣೆಯು [illegible] ತೀರ್ಮಾನವಾಗುವವರೆಗೆ [illegible] ಮತ್ತೆ ಮುಂದಿನ ತಿಂಗಳು [illegible] ತಾ|| ಉಪ ಚುನಾವಣೆ ನಡೆಯುವುದು

ಕಂದ

ರಾಜಧಾನಿಯ ವನಿತಾ ಸದನದ [illegible] ಪ್ರಕಟಿಸುತ್ತಿರುವ ಕನ್ನಡ [illegible] ಕಂದ ಎಂಬ ಮಾಸ ಪತ್ರಿಕೆಯ ಮುದ್ದಾದ ಮೂರನೇ ವರ್ಷದ ಮೊದಲನೇ ಸಂಚಿಕೆಯು ನಮ್ಮ ಕೈ ಸೇರಿದೆ ಮಕ್ಕಳು ಸುಲಭವಾಗಿ ಅದು ಮಾಡಿಕೊಳ್ಳುವ ವಿಷಯಗಳೂ ಚಿತ್ರಗಳೂ, ಸ್ವಾರಸ್ಯವಾದ ಕತೆಗಳೂ ಇವೆ ಮಕ್ಕಳ ಅಭಿವೃದ್ಧಿಯನ್ನು ಬಯಸುವವರೂ, ಮಾತಾ ಪಿತೃಗಳೂ ಅವರ [illegible] ಪ್ರೋತ್ಸಾಹಿಸಬೇಕು [illegible]

ವ್ಯಾಪಾರಸ್ಥರು ಗಾಂಧಿಜಿ ಹೆಸರನ್ನು ಉಪಯೋಗಿಸಕೂಡದು

ವ್ಯಾಪಾರದ ಉದ್ದೇಶ್ಯಕ್ಕಾಗಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಹೆಸರನ್ನು ದುರುಪಯೋಗಪಡಿಸಕೂಡದೆಂದು ವರ್ತಕರನ್ನು ಕೋರಿ ಭಾರತ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ ಕಾನೂನು ಪ್ರಕಾರ ಕ್ರಮ ಜರುಗಿಸಲು ಸರ್ಕಾರಕ್ಕೆ ಅವಕಾಶವಿದ್ದರೂ ಸಹ, ರಾಷ್ಟ್ರಪಿತನ ಹೆಸರಿನಲ್ಲಿ ಕ್ರಮ ಕೈಗೊಳ್ಳಬಾರದೆಂಬುದು ಸರ್ಕಾರದವರ ಇಚ್ಛೆಯಾಗಿರುತ್ತದೆ

ಹಳದಿ ಬಣ್ಣದ ವಜ್ರ

ದಕ್ಷಿಣ ಆಫ್ರಿಕದ ಕಿಂಬರ್ಲಿಯಲ್ಲಿ [illegible] ವರ್ಷದ ಗಣಿ ಕೆಲಸದ ಅನುಭವವಿರುವ ಒಬ್ಬ ದೇಶೀಯನಿಗೆ [illegible] ಕ್ಯಾರೆಟ್ಟಿನ ಹಳದಿ ಬಣ್ಣದ ವಜ್ರವು ದೊರೆತುದಾಗಿ ವರದಿಯಾಗಿದೆ ಅದಕ್ಕೆ [illegible] ಒಂದು ಕಳಂಕವಿರುವುದಾಗಿಯೂ ಹೇಳಲಾಗಿದೆ ಆದ್ದರಿಂದ ಅದರ ಬೆಲೆಯನ್ನು ನಿಗದಿ ಮಾಡಲು ಸಾಧ್ಯವಾಗಿಲ್ಲ ಇದಕ್ಕೆ ಮುಂಚೆ ದೊರೆತ ಒಂದು ವಜ್ರಕ್ಕೆ ೭೦ ಸಾವಿರ ಪೌಂಡು ಬೆಲೆ ಬಂದಿತ್ತು

ಕಾಂಗ್ರೆಸ್ ಸಂಸ್ಥೆಗೆ ಕ್ಯಾಥೊಲಿಕ್ ಸಂಘದ ಬೆಂಬಲ

ಕಾಂಗ್ರೆಸ್ಸಿನ ಚುನಾವಣಾ ಘೋಷಣೆಯಲ್ಲಿ ಅಲ್ಪ ಸಂಖ್ಯಾತರಿಗೆ ಕೊಟ್ಟಿರುವ ಭರವಸೆಯು ತೃಪ್ತಿಕರವಾಗಿರುವುದರಿಂದ ಮೈಸೂರಿನ ಕ್ಯಾಥೊಲಿಕ್ ಸಂಘದವರು ಕಳೆದ ೨೯ನೇ ತಾ|| ಸಭೆ ನಡೆಸಿ ತಮ್ಮ ಸಂಘದವರು ಕಾಂಗ್ರೆಸ್ಸಿಗೆ ಬೆಂಬಲವೀಯಬೇಕೆಂದು ನಿರ್ಣಯಿಸಿದರು ಬರುವ ಚುನಾವಣೆಗಳಲ್ಲಿ ಪಾರ್ಲಿಮೆಂಟಿಗೆ ಶ್ರೀ ಡಬ್ಲ್ಯು ಹೆಚ್ ಥಿಯೋಬಾಲ್ಡರನ್ನೂ, ಮೈಸೂರು ಶಾಸನ ಸಭೆಗೆ ಮಿ| ಗುರುಪಾದಂರವರನ್ನೂ ನಿಲ್ಲಿಸಲು ಅವಕಾಶ ಕೊಡಬೇಕೆಂದು ಕಾಂಗ್ರೆಸ್ಸನ್ನು ಕೋರಲಾಯಿತು

ಉಪನ್ಯಾಸ

ಫೋಂಟಿಕೊಪ್ಪಲಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೬ ಗಂಟೆಗೆ ಸ್ವಾಮಿ ಸೋಮನಾಥಾನಂದಜಿಯವರು "ರಾಜಯೋಗ" ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವರು

ವರ್ಧಂತ್ಯುತ್ಸವ

ಸ್ವಂ ಸು] ಚಾಮರಾಜನಗರ ೩೧ ಈ ತಾಲ್ಲೂಕು ಶಿವಪುರದ ಪ್ರಾಥಮಿಕ ಪಾಠಶಾಲೆಯಲ್ಲಿ ಕಳೆದ ೨೮ನೇ ತಾ|| ಶ್ರೀಮನ್ ಮಹಾರಾಜರ ವರ್ಧಂತ್ಯುತ್ಸವವನ್ನು ನೆರವೇರಿಸಲಾಯಿತು. ಪಂಚಾಯತಿಯ ಅಧ್ಯಕ್ಷರಾದ ಶ್ರೀ ಚಿಕ್ಕ ದೊಡ್ಡೇಗೌಡರು ಅಧ್ಯಕ್ಷತೆ ವಹಿಸಿದ್ದರು ಶಾಲಾ ಉಪಾಧ್ಯಾಯರಾದ ಶ್ರೀ ಟಿ. ಎಸ್ ನಾಗಪ್ಪನವರು ಯದುವಂಶದ ಚರಿತ್ರೆಯನ್ನು ವಿವರಿಸಿದರು ಅಧ್ಯಕ್ಷರು ಮಾತನಾಡಿ ವರ್ಧಂತಿಯ ಮಹತ್ವವನ್ನು ವಿವರಿಸಿ ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನು ಹೇಳಿದರು. ವಂದನಾರ್ಪಣೆ, ತಾಂಬೂಲ ಮತ್ತು ಸಿಹಿ ತಿಂಡಿ ವಿನಿಯೋಗ ಮತ್ತು ರಾಷ್ಟ್ರಗೀತೆಗಳಾಗಿ ಸಮಾರಂಭವು ಮುಕ್ತಾಯವಾಯಿತು.

ಫ್ರಾನ್ಸಿನಲ್ಲಿ ಮತ್ತೆ ಬಿಕ್ಕಟ್ಟು

ಕಳೆದ ೩ ವಾರಗಳಿಂದಲೂ ಫ್ರೆಂಚ್ ಅಸೆಂಬ್ಲಿಯು ಮಂತ್ರಿ ಮಂಡಲವನ್ನು ರಚಿಸಲು ಮಾಡಿದ ಪ್ರಯತ್ನಗಳು ಭಗ್ನವಾಗುತ್ತಲೇ ಇವೆ ಅಂತೆಯೇ ನೊನ್ನೆ ಫ್ರಾನ್ಸಿನ ಮಾಜಿ ಪ್ರಧಾನಿ ಮಾರಿಸ್ ಪೆಟ್ಸಿಂಯವರು ಯುಕ್ತ ಪ್ರಾತಿನಿಧ್ಯವುಳ್ಳ ಮಂತ್ರಿ ಮಂಡಲವೊಂದನ್ನು ರಚಿಸಲು ಪ್ರಯತ್ನಪಟ್ಟಾಗ ಸಾಕಾದಷ್ಟು ಬಹುಮತ ದೊರಕದೆ ವಿಫಲವಾಯಿತು

ವರ್ಗಾವಣೆ

ಡೆಪ್ಯುಟಿ ಕಮಿಷನರ್, ಜ|| ಮಹಮದ್ ಇಸ್ಮೇಲ್ ಷರೀಫ್‌ರವರಿಗೆ ಕಳೆದ ತಿಂಗಳು ೨ನೇ ತಾ|| ನಿಂದ ರಜವನ್ನು ೩ ತಿಂಗಳು ಹೆಚ್ಚಿಸಲಾಗಿದೆ ಬೆಂಗಳೂರು ಜಿಲ್ಲಾ ನ್ಯಾಯಾಧೀಶರಾಗಿ ಬಡ್ತಿ ಕೊಡಲ್ಪಟ್ಟ ಶ್ರೀ ಕೆ. ವಿಶ್ವೇಶ್ವರಯ್ಯನವರ ಸ್ಥಾನದಲ್ಲಿ ಜ|| ಹಬೀಬುಲ್ಲಾಖಾನರನ್ನು ಅಡಿಷನಲ್ ಸಬಾರ್ಡಿನೇಟ್ ಜಡ್ಜರನ್ನಾಗಿಯೂ, ರಾಮನಗರದ ಮುನ್ಸೀಫ್ ಶ್ರೀ ವಿ ಚನ್ನಯ್ಯನವರನ್ನು ಬೆಂಗಳೂರಿನ ಜ|| ಸ|| ಜಡ್ಜ್‌ರನ್ನಾಗಿಯೂ ನೇಮಿಸಲಾಗಿದೆ

|| ಶ್ರೀ ||

ಗಣೇಶಾ ಟಾಕೀಸ್

೧-8-51 ರಿಂದ ದಿನವೂ 3 ಆಟಗಳು

ನವ ಜೀವನಂ

(ತಮಿಳು)

ಮುಖ್ಯ ಪಾತ್ರ ನಾಗಯ್ಯ, ಕನ್ನಾಂಬಾ ಎಸ್ ವರಲಕ್ಷ್ಮಿ ಟಿ ಆರ್ ರಾಮಚಂದ್ರನ್ ಮತ್ತು ಎನ್ ನಾರಾಯಣರಾವ್

ಚಂದಾದಾರರಲ್ಲಿ ವಿಜ್ಞಾಪನೆ

ಚಂದಾ ಹಣವನ್ನು ದಯವಿಟ್ಟು ಮುಂಗಡವಾಗಿ ಕೊಟ್ಟು ರಶೀದಿ ಪಡೆಯಬೇಕಾಗಿ ಕೋರುತ್ತೇವೆ

ಸಾಧ್ವಿ ಏಜೆಂಟರು

ನ್ಯೂಸ್ ಪೇಪರ್ ಹೌಸ್,

ಮೈಸೂರು

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಹ್ಮಯ್ಯ & ಬ್ರದರ್ಸ್,

ಜವಳಿ ಅಂಗಡಿ,

ಬೊಂಬಾಯಿ ಆನಂದ ಭವನ್ ಹೋಟೆಲ್ ಪಕ್ಕ ಮೈಸೂರು

ಸ್ಥಾಪನೆ 1891 ವಜ್ರೋತ್ಸವ 1948

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪನಿ (ರಿ) ಇವರು

ರಾಜಕಮಲ್ ಟಾಕೀಸಿನ ಹಿಂಭಾಗದ

ರತ್ನಾವಳಿ ಥಿಯೇಟರಿನಲ್ಲಿ

4-8-51 ರಿಂದ :: ಪ್ರತಿ ದಿನವೂ

ರಜತೋತ್ಸವದ ಕಾಣಿಕೆಯಾಗಿ

ರಾಜಾ ಗೋಪಿ ಚಂದ್

ಎಂಬ ನಾಟಕವನ್ನು ಅಭಿನಯಿಸುವರು ಶನಿವಾರ ಮತ್ತು ಬುಧವಾರ ರಾತ್ರಿ 9-45ಕ್ಕೆ

ಬಾಕಿ ದಿನಗಳಲ್ಲಿ ಮ್ಯಾಟಿನಿ ಸಂಜೆ 6-45

Edited, printed and published by A. R. Nagarajan, at Sadhvi Press D Subbiah Road, Mysore

ಅಂಕ ಸಂ 792 WEEKLY EDITION ೧೯೫೧ ಏಪ್ರಿಲ್ 6 ಶುಕ್ರ

ಸಾಧ್ವಿ

ಸಂಪುಟ ೧೬] ಭಾನುವಾರ ೫-೪-೫೧ [ಸಂಚಿಕೆ ೨

ರಾಷ್ಟ್ರೀಯ ಚೀಣಾ ಮತ್ತು ಬರ್ಮ ಸೈನ್ಯಗಳ ಘರ್ಷಣೆ

ಚಿತ್ರದುರ್ಗದಲ್ಲಿ ವಾಸ್ತುಶಿಲ್ಪ ಪ್ರದರ್ಶನ ಶಾಲೆ

ಬೆಂಗಳೂರು ೫

ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಬಳಿ ದೊರೆತಿರುವ ವಾಸ್ತುಶಿಲ್ಪದ ಪೂರ್ವ ವಸ್ತುಗಳನ್ನು ಪ್ರದರ್ಶಿಸಲು ಚಿತ್ರದುರ್ಗ ಟೌನ್ನಿನಲ್ಲಿ ಒಂದು ಶಾಲೆಯನ್ನು ತೆರೆಯಲು ಸರ್ಕಾರದವರು ನಿರ್ಧರಿಸಿರುತ್ತಾರೆ ಇದರ ಪ್ರಾರಂಭದ ಖರ್ಚಿಗಾಗಿ ೩ ಸಾವಿರ ರೂ ಗಳನ್ನು ಒದಗಿಸಲಾಗಿದೆ ಶ್ರೀಮನ್ ಮಹಾರಾಜರು ಅದನ್ನು ತೆರೆಯುವರು

ಸಂಸ್ಥಾನಕ್ಕೆ ಈ ತಿಂಗಳು ೧೦ ಸಾವಿರ ಟನ್ ಗೋಧಿ

ಕೇಂದ್ರ ಸರ್ಕಾರದವರು ಮೈಸೂರು ಸಂಸ್ಥಾನಕ್ಕೆ ಈ ತಿಂಗಳಿಗಾಗಿ ೧೦ ಸಾವಿರ ಟನ್ ಗೋಧಿ, ೧೨ ಸಾವಿರ ಟನ್ ಮೈದಾವನ್ನು ಕೊಟ್ಟಿರುತ್ತಾರೆ

ನಗವನ್ನಪಹರಿಸಲು ಮಗುವನ್ನು ನೀರಿಗೆ ತಳ್ಳಿದಳು

ಚನ್ನಪಟ್ಟಣ ತಾಲ್ಲೂಕು ಚಕ್ಕನದೊಡ್ಡಿಯಲ್ಲಿ ೧೪ ವರ್ಷದ ಹುಡುಗಿಯು ಕಳೆದ ಮಂಗಳವಾರ ೧೨ ವರ್ಷದ ಲಿಂಗಿ ಎಂಬ ಹುಡುಗಿಯ ಕಿವಿಯಲ್ಲಿದ್ದ ಓಲೆಗಳನ್ನು ದುಷ್ಕೃತ್ಯಮಾಡಿಕೊಳ್ಳುವುದಾಗಿ ಪುಸಲಾಯಿಸಿ ನೀರಿನ ಬಳಿ ಕರೆದುಕೊಂಡು ಹೋಗಿ ಅಲ್ಲಿ ಹುಡುಗಿಯನ್ನು ತಳ್ಳಿದಳೆಂದೂ ಅನೇ ತಾರೀಖು ಹುಡುಗಿಯ ಶವ ತೇಲಿತೆಂದೂ ವರದಿಯಾಗಿದೆ

ಹಾವು ಕಡಿದುದರಿಂದ ಹಾವಾಡಿಗನ ಮರಣ

ಟ್ರಿಚೂರಿನ ಮೈದಾನವೊಂದರಲ್ಲಿ ಪ್ರದರ್ಶನ ನಡೆಸುತ್ತಿದ್ದ ಹಾವಾಡಿಗನು ತನ್ನ ವಾದ್ಯಕ್ಕೆ ತಕ್ಕಂತೆ ನರ್ತಿಸದಿದ್ದುದಕ್ಕಾಗಿ ಹಾವು ಹೊಸದಾಗಿ ಹಿಡಿದು ತಂದಿದ್ದ ಸರ್ಪದ ತಲೆಯ ಮೇಲೆ ಹೊಡೆದನೆಂದೂ, ಸರ್ಪವು ರೋಷಗೊಂಡು ಆತನ ಮುಂಗೈಯ ಮೇಲೆ ಕಚ್ಚಿತೆಂದೂ ಕೂಡಲೇ ಆವನನ್ನು ಆಸ್ಪತ್ರೆಗೆ ಸಾಗಿಸಲಾಗಿ ನಾಲ್ಕು ಗಂಟೆಗಳ ನಂತರ ಆವನು ಮೃತನಾದನೆಂದೂ ತಿಳಿದುಬಂದಿದೆ.

ಯುದ್ಧ ನಿರೋಧ ಘೋಷಣೆಯಲ್ಲಿ ಕಾಶ್ಮೀರವು ಸೇರಲಿ

ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳು ಹೊರಡಿಸುವ "ಯುದ್ಧ ಬೇಡ" ಎಂಬ ಘೋಷಣೆಯಲ್ಲಿ ಕಾಶ್ಮೀರ ಮತ್ತು ಜಮ್ಮು ಸೇರಿರಬೇಕೆಂದು ನೆಹರೂರವರು ಲಿಯಾಖತ್ ಆಲಿಯವರಿಗೆ ಕೊಟ್ಟ ಉತ್ತರದಲ್ಲಿ ಷರತ್ತು ಹಾಕಿರುವುದಾಗಿ ತಿಳಿದುಬಂದಿದೆ

ದೆಹಲಿ ಸಿಂಹಾಸನವೇ ಪಾಕಿಸ್ತಾನಿಗಳ ಗುರಿ

ಲಾಹೋರಿನ ಜಮೀನ್ದಾರ್ ಪತ್ರಿಕೆಯ ಸಂಪಾದಕ ಮೌಲಾನಾ ಜಾಫರ್ ಆಲಿಖಾನರು ಕವನವೊಂದನ್ನು ಬರೆದು ಅದನ್ನು ಜರ್ನಲ್ಲಿನಲ್ಲಿ ಪ್ರಕಟಿಸಿದ್ದರು ಖಡ್ಗಗಳ ನೆರಳಿನಲ್ಲಿ ಕೀರ್ತಿಯು ಇರುವುದೆಂದೂ, ಶತಮಾನಗಳಿಂದಲೂ ತಮ್ಮ ಸರ್ಕಾರದ ರಾಜಧಾನಿಯಾದ ದೆಹಲಿಯಲ್ಲಿನ ಸಿಂಹಾಸನದ ಮೇಲೆ ಎಂದಾದರೊಂದು ದಿನ ಮುಸ್ಲಿಮರು ಹತ್ತುವರೆಂದೂ ಅದರಲ್ಲಿ ಕಾಣಿಸಲಾಗಿದೆ

ಬಸ್ ಅಪಘಾತದಿಂದ ಒಬ್ಬನ ಮರಣ

ಮೈಸೂರು ೫

ನೊನ್ನೆ ರಾಜಧಾನಿಯಿಂದ ಸ್ವಸ್ಥಳಗೆ ಹೊರಟ ಶ್ರೀ ಮಲ್ಲೇಶ್ವರ ಮೋಟಾರು ಸರ್ವೀಸ್ಸಿನ ಬಸ್ಸೊಂದು ಕಡಕೊಳದ ಬಳಿ ಸ್ಟಿಯರಿಂಗ್ ಕಿತ್ತು ಒಂದುದರಿಂದ ಒಂದು ಒಲವ ಮರಕ್ಕೆ ಹೊಡೆದು ಪಕ್ಕದ ಹಳ್ಳದಲ್ಲಿ ಸೂತ ಮೋಯಿತೆಂದೂ, ೪ ಜನರಿಗೆ ಗಾಯಗಳಾಗಿ ಅವರ ಪೈಕಿ ಮಹದೇವು ಎಂ ಎನ್ನುವ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೃತಪಟ್ಟನೆಂದೂ, ಉಳಿದವರು ಗುಣ ಹೊಂದುತ್ತಿರುವರೆಂದೂ ವರದಿಯಾಗಿದೆ

ಚನ್ನಯ್ಯನವರ ವಿದೇಶ ಪ್ರಯಾಣ

ನಗರ ಕಾಂಗ್ರೆಸ್ ಸಮಿತಿಯ ಅದ್ಯಕ್ಷರಾದ ಶ್ರೀ ಎಸ್ ಚೆನ್ನಯ್ಯನವರು ಈ ಬೆಳಿಗ್ಗೆ ೧೧-೩೦ ಗಂಟೆಗೆ ತನ್ನ ಪತ್ನಿಯವರ ಸಮೇತ ಬೆಂಗಳೂರಿಗೆ ಕಾರಿನಲ್ಲಿ ಪ್ರಯಾಣ ಮಾಡಿದರು ನಾಳೆ ಅವರು ಬೆಂಗಳೂರಿನಿಂದ ವಿಮಾನದಲ್ಲಿ ಬೊಂಬಾಯಿಗೆ ತೆರಳಿ ಅಲ್ಲಿಂದ ವಿದೇಶಕ್ಕೆ ತೆರಳುವರು ೬ ವಾರಗಳ ನಂತರ ಅವರು ಹಿಂತಿರುಗುವರೆಂದು ಹೇಳಲಾಗಿದೆ ಶ್ರೀ ಮತ್ತು ಶ್ರೀಮತಿ ಕೆ ಎಸ್ ಅಂಜನಪ್ಪನವರೂ ಪ್ರಯಾಣ ಮಾಡಿದರು

ಮತ್ತೊಬ್ಬ ಸಚಿವರ ರಾಜೀನಾಮೆ

ಉತ್ತರ ಪ್ರದೇಶದ ವ್ಯವಸಾಯ ಮಂತ್ರಿ ನಿಸ್ಸಾರ್ ಅಹಮದ್ ಷರ್ವಾನಿಯವರು ಮುಖ್ಯ ಮಂತ್ರಿ ಪಂತರಿಗೆ ಪತ್ರವನ್ನು ಬರೆದು ಸಚಿವ ಪದವಿಯಿಂದ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ

ಹೈದ್ರಾಬಾದಿಗೆ ರಾಷ್ಟ್ರಾಧ್ಯಕ್ಷರ ಭೇಟಿ

ಈ ತಿಂಗಳು ೨೧ನೇ ತಾ॥ ಹೈದರಾಬಾದಿಗೆ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಭೇಟಿ ಕೊಟ್ಟು ಅಲ್ಲಿ ೩ ದಿನಗಳವರೆಗೆ ಇರುವರು ಸೆಪ್ಟೆಂಬರ್ ೧೧ನೇ ತಾ॥ ಔರಂಗಾಬಾದಿಗೆ ಭೇಟಿಯಿತ್ತು ಅಲ್ಲಿ ಸಿದ್ಧಾರ್ಥ ಕಾಲೇಜನ್ನು ತೆರೆಯುವರು ಎಲ್ಲೋರ ಮತ್ತು ಅಜಂತ ಗುಹೆಗಳನ್ನು ನೋಡಿಕೊಂಡು, ದೆಹಲಿಗೆ ೩ನೇ ತಾ॥ ವಾಪಸು ತೆರಳುವರು

ಬರ್ಮ ಸೈನ್ಯದೊಡನೆ ರಾಷ್ಟ್ರೀಯ ಚೀಣರ ಹೋರಾಟ

ಚೀಣದ ಯುನ್ನಾನ್ ಮತ್ತು ಬರ್ಮಾಗಳ ನಡುವೆ ಇರುವ ವಿಸ್ತಾರವಾದ ಮತ್ತು ಡೊಂಕು ಡೊಂಕಿನ ಗಡಿ ಪ್ರದೇಶದಲ್ಲಿ ಸಹಸ್ರಗಟ್ಟಲೆ ರಾಷ್ಟ್ರೀಯ ಚೀಣಾ ಸೈನಿಕರು ಬರ್ಮಾ ಸರ್ಕಾರಿ ಸೇನೆಗೆ ಕಂಟಕವೆನ್ನೆ ಹೋರಾಡುವುದಾಗಿ ವರದಿಯಾಗಿದೆ ಗಡಿ ಕಡೆಗೆ ಅಸಂಖ್ಯಾತ ಬರ್ಮಾ ಸೈನಿಕರು ಹೋಗುತ್ತಿರುವುದಾಗಿಯೂ, ಬರ್ಮಾ ಗಡಿ ಸುರಕ್ಷತೆಗೆ ಧಕ್ಕೆ ಒದಗಿರುವುದಾಗಿಯೂ ಹೇಳಲಾಗಿದೆ ತತ್ತ ಕಮ್ಯೂನಿಸ್ಟ್ ಚೀಣಾ ಪಡೆಗಳೊಡನೆಯೂ ಘರ್ಷಣೆಯಾಗುತ್ತಿರುವುದಾಗಿ ತಿಳಿದುಬಂದಿದೆ.

ಸಿನಿಮಾ ತೆರಿಗೆ ಅಕ್ರಮ ಎಂದು ತೀರ್ಪು

ಪ್ರಾಂತ ರಾಂಡಿನ ಪೌರಸಭೆಯವರು ಅಲ್ಲಿನ ಸಿನಿಮಾ ಮಂದಿರಗಳ ಪ್ರದರ್ಶನ ವೊಂದಕ್ಕೆ ೧೦ ಮತ್ತು ೫ ರೂಗಳಂತೆ ಕಳೆದ ಮೂರು ತಿಂಗಳು ಅಕ್ಟೋಬರಿಂದ ಮನೋರಂಜನೆ ತೆರಿಗೆ ವಿಧಿಸಿರುವುದರ ಮೇಲೆ ಸಿವಿಲ್ ನ್ಯಾಯಾಧೀಶರ ಮುಂದೆ ದಾವಾ ಹೂಡಲಾಗಿ ಅವನ್ನು ಅಕ್ರಮ ಮತ್ತು ಕಾನೂನು ಬಾಹಿರವೆಂದು ನ್ಯಾಯಾಧೀಶರು ತೀರ್ಪಿತ್ತಿರುವರು ವೆಸ್ಟರ್ನ್ ಇಂಡಿಯಾ ಥಿಯೇಟರ್ಸ್ನವರಿಂದ ವಸೂಲಾದ ೫೧,೬೦೦ ರೂ ಹಣವನ್ನು ವಾಪಸುಕೊಡಬೇಕೆಂದು ಪೌರಸಭೆಗೆ ಸೂಚಿಸಿದೆ

ಚಿತ್ರದುರ್ಗ, ತುಮಕೂರು ಮತ್ತು ಕೋಲಾರಗಳಿಗೆ ಪ್ರಭುಗಳ ಭೇಟಿ

ಶ್ರೀಮನ್ ಮಹಾರಾಜರು ೬ನೇ ತಾ॥ ದಾವಣಗೆರೆ ಹರಿಹರಗಳಿಗೂ ೭ನೇ ತಾ॥ ಚಿತ್ರದುರ್ಗ ಮತ್ತು ಹೊಳಲ್ಕೆರೆಗೂ ೯ನೇ ತಾ॥ ಹಿರಿಯೂರು, ಶಿವಗಂಗೆ, ತುರುವೆಕೆರೆಗೂ ಮತ್ತು ೧೦ನೇ ತಾ॥ ತುಮಕೂರಿಗೂ ಭೇಟಿ ಕೊಡುವ ದಿನಗಳಲ್ಲಿ ಆಯಾಯ ದಿನ ಅಲ್ಲಿ ಎಲ್ಲಾ ಸಾರ್ವಜನಿಕ ಕಛೇರಿ ಮತ್ತು ಶಾಲೆಗಳಿಗೂ ರಜವನ್ನು ಕೊಡಲಾಗುವುದು

ಬರುವ ೧೧ನೇ ತಾ॥ ಶ್ರೀಮನ್ ಮಹಾರಾಜರು ಕೋಲಾರ, ಮುಳಬಾಗಿಲು ಮತ್ತು ಚಿಂತಾಮಣಿಗಳಿಗೆ ಭೇಟಿಯಿತ್ತುವರು.

ರಜಾ ಆದ ರೈಲ್ವೆ ನೌಕರರು ಮತ್ತೆ ಕೆಲಸಕ್ಕೆ

ಮೈಸೂರು ೫

ಮೈಸೂರು ರೈಲ್ವೆಯ ಕಾರ್ಮಿಕರು ೧೯೪೭ರಲ್ಲಿ ನಡೆಸಿದ ಮುಷ್ಕರದ ಮುಖಂಡರಾಗಿದ್ದ ಶ್ರೀ ಹೆಚ್ ಡಿ. ರಾಘವರಾಜ್, ಕೆ ಎಸ್ ಎಸ್ ಮೂರ್ತಿಯವರುಗಳನ್ನು ಪುನಃ ಅವರ ಹಿಂದಿನ ಅಥವಾ ಅದೇ ದರ್ಜೆಯ ಹೊಸ ಕೆಲಸಕ್ಕೆ ತೆಗೆದುಕೊಳ್ಳಲು ಭಾರತದ ರೈಲ್ವೆ ಇಲಾಖೆಯವರು ನಿರ್ಧರಿಸಿರುವುದಾಗಿ ಗೊತ್ತಾಗಿದೆ

ಸೋಬುಲ್ಲಾಖಾನ್ ಕೊಲೆ ಆಪಾದಿತನೊಬ್ಬನ ಪರಾರಿ

ಹೈದರಾಬಾದಿನ ಹೈಕೋರ್ಟಿನವರು ಬಿಡುಗಡೆ ಮಾಡಿದ ಸೋಬುಲ್ಲಾ ಕೊಲೆ ಮೊಕದ್ದಮೆ ಆಪಾದಿತ ಮೋಹ್ಸಿನ್ ರಾಜಾ ಎಂಬುವರು ಪಾಕಿಸ್ತಾನಕ್ಕೆ ಕದ್ದೋಡಿರಬಹುದೆಂದು ಅಲ್ಲಿನ ಸರ್ಕಾರದ ಪ್ರೆಸ್ಸ್ ಕಾರ್ಯದರ್ಶಿಯವರು ಹೇಳಿರುತ್ತಾರೆ ಅವರ ಬಿಡುಗಡೆಗೆ ವಿರುದ್ಧವಾಗಿ ಸುಪ್ರೀಂ ಕೋರ್ಟಿಗೆ ಅಪೀಲು ಮಾಡುವ ಬಗ್ಗೆ ಅವಕಾಶಕ್ಕಾಗಿ ಹೈಕೋರ್ಟಿಗೆ ಸರ್ಕಾರದವರು ಅರ್ಜಿಯನ್ನು ಸಲ್ಲಿಸಿರುವುದು ಇನ್ನೂ ಹಾಗೆಯೇ ಇದೆ

ಬ್ರಾಹ್ಮಣರ ಸಾಮ್ರಾಜ್ಯಶಾಹಿ ಎಂದು ಪಾಕ್ ಮಂತ್ರಿ

ಭಾರತದಲ್ಲಿನ ಬ್ರಾಹ್ಮಣ ಸಾಮ್ರಾಜ್ಯಶಾಹಿಗೂ, ದೇಶದ ಬಟವಾರೆಗೆ ತಮ್ಮ ಮಾಡುವ ತಂತ್ರಗಳಿಗೂ ಪಾಕಿಸ್ತಾನವು ಆಹುತಿಯಾಗಿರುವುದೆಂದು ಪಾಕಿಸ್ತಾನದ ಕಾಶ್ಮೀರ ವ್ಯವಹಾರಗಳ ಮಂತ್ರಿ ಎಂ ಎ ಗುರ್ಮಾನಿಯವರು ನೆನ್ನೆ ರಾವಲ್ಪಿಂಡಿಯಲ್ಲಿ ನಡೆದ ರಕ್ಷಣಾ ದಿನಾಚರಣೆಯಲ್ಲಿ ನುಡಿದರು

ಯುದ್ಧ ಪ್ರಚಾರದ ಬಗ್ಗೆ ಭಾರತದ ಶ್ವೇತ ಪತ್ರ

ಭಾರತದ ವಿರುದ್ಧವಾಗಿ ಪಾಕಿಸ್ತಾನವು ದ್ವೇಷ ವಿಚಾರಗಳನ್ನು ನಡೆಸುತ್ತಿರುವ ಯುದ್ಧದ ಪ್ರಚಾರವನ್ನು ಕುರಿತು ಭಾರತ ಸರ್ಕಾರದ ವಿದೇಶಾಂಗ ಇಲಾಖೆಯು ಶ್ವೇತ ಪತ್ರವೊಂದನ್ನು ಹೊರಡಿಸಿರುತ್ತದೆ ಕಾಶ್ಮೀರದ ಮೇಲೆ ಧಾಳಿ ಮಾಡಿದ ದಿನದಿಂದಲೇ ಈ ಆಪ ಪ್ರಚಾರವನ್ನು ಎಲ್ಲಾ ವಿಧಾನಗಳಿಂದಲೂ ಮಾಡಲಾಗುತ್ತಿರುವುದಾಗಿಯೂ, ಪ್ರಸಂಚ ಸಂಸ್ಥೆಯ ಮಧ್ಯಸ್ತಿಕೆಗಾಗಿ ಒಪ್ಪಿದ್ದ ಒಪ್ಪಂದಗಳನ್ನು ಪಾಕಿಸ್ತಾನವು ಉಲ್ಲಂಘನೆ ಮಾಡಿರುವುದೆಂದು ಘೋಷಿಸಿದುದರಿಂದ ಅದಕ್ಕೆ ಇನ್ನೂ ವೇಗಿತೆಂದೂ ತಿಳಿಸಲಾಗಿದೆ ಭಾರತದ ಮೇಲೆ ಪಾಕಿಸ್ತಾನದ ಜನರಲ್ಲಿ ದ್ವೇಷ ಹುಟ್ಟಿಸಲು ಕಾಫಿರ್ ಎಂಬ ಪದ ಪ್ರಯೋಗಗಳನ್ನು ಮಾಡಲಾಗಿರುವುದೆಂದೂ, ಉದ್ರೇಕ ಪೂರಿತವಾದ ಕವನಗಳನ್ನು ಮಾಡಿ ಜನಸ್ವರಸ್ತರ ಬಾಯಿ ಪಾರ ಮಾಡಲು ಏರ್ಪಾಡಾಗಿರುವುದೆಂದೂ ಪ್ರಕಟನೆಯು ತಿಳಿಸಿ, ಪಾಕಿಸ್ತಾನದ ಪತ್ರಿಕೆಗಳಂತೂ ಧರ್ಮ ಯುದ್ಧದ ಕೂಗನ್ನು ಸತತವಾಗಿ ಕೂಗುತ್ತಾ ಕೆಂಪು ಅಕ್ಷರಗಳಲ್ಲಿ "ಧರ್ಮ ಯುದ್ಧ"ದ ಬಗ್ಗೆ ಲೇಖನವನ್ನು ಬರೆಯುತ್ತಿರುವುದಾಗಿ ಶ್ವೇತ ಪತ್ರದಲ್ಲಿ ತಿಳಿಸಲಾಗಿದೆ

ವಾರ ಭವಿಷ್ಯ

ಶ್ರೀ

ತಾ|| ೫-೮-೫೧ ರಿಂದ ೧೧-೮-೫೧ರ ವರೆಗೆ

ಮೇಷ. ಮನಸ್ಸಿನ ಉದ್ವೇಗ ಹೆಚ್ಚು ಆರೋಗ್ಯ ಚೆನ್ನಾಗಿರದು ಅಪರಿಮಿತವಾದ ಖರ್ಚು ವ್ಯವಹಾರಗಳಲ್ಲಿ ಸೋಂದರೆ ತಾ|| ೬, ೭, ೮, ಕುಟುಂಬದ ಅನಾರೋಗ್ಯ ಕಲಹ

ವೃಷಭ – ಸಮಾಜ ಸೇವೆಯಲ್ಲಿ ಉತ್ಸಾಹ ಆರೋಗ್ಯ ಉತ್ತಮ ವ್ಯಾಪಾರ ಉದ್ಯೋಗಗಳಲ್ಲಿ ಪ್ರಗತಿ ಶೀಘ್ರಗಳಿಸು ವರಿ ತಾ|| ೯, ೧೦, ಖರ್ಚು, ಬೇಸರ

ಮಿಥುನ– ಮನಸ್ಸಮಾಧಾನ ವಿದ್ದು ಆರೋಗ್ಯ ಉತ್ತಮ ಆರ್ಥಿಕ ಮುಗ್ಗಟ್ಟು ಹೆಚ್ಚು ವ್ಯವಹಾರಗಳಲ್ಲಿ ಅಭಿವೃದ್ಧಿ ತಾ|| ೬, ೭, ನೇತ್ರ, ಬಾಧೆ ಕಳುವಿನ ಸಂಭವ

ಕರ್ಕ.— ಆರೋಗ್ಯದ ಒಗ್ಗೆ ಎಚ್ಚರಿಕೆಯಿಂದಿರಿ ನಿರುತ್ಸಾಹ ಹೆಚ್ಚು ವ್ಯಾಪಾರ ಉದ್ಯೋಗಗಳಲ್ಲಿ ಹಾನಿ ಆರ್ಥಿಕ ಮುಗ್ಗಟ್ಟು ತಾ|| ೯, ೧೦, ಚಿಂತೆ ದೇಹಾಲಸ್ಯ

ಸಿಂಹ: ಅವಮಾನವಾಗುವ ಸಂಭವ ಆರೋಗ್ಯ ಚೆನ್ನಾಗಿರದು ಪ್ರವಾಸ ಬೇಡ ಅಪಘಾತ ಸಂಭವ ಖರ್ಚು ಹೆಚ್ಚು. ತಾ|| ೮, ೯, ಆಪ್ತರಿಂದ ಧನ ಸಹಾಯ

ಕನ್ಯಾ— ಉತ್ಸಾಹ ಹೆಚ್ಚುವುದು ಎದುರಾಳಿಗಳಿಗೆ ಸೋಲು ಆರೋಗ್ಯ ಉತ್ತಮ. ವ್ಯವಹಾರಗಳಲ್ಲಿ ಪ್ರಗತಿ ತಾ|| ೯, ೧೦ ಮಿತ್ರರ ಭೇಟಿ ಷಡ್ರಸ ಭೋಜನ.

ತುಲ – ಎಚ್ಚರಿಕೆಯಿಂದಿದ್ದರೆ ಕಾರ್ಯ ಸಿದ್ಧಿಸುವುದು ಆರೋಗ್ಯ ಉತ್ತಮ. ವ್ಯಾಪಾರ, ಉದ್ಯೋಗಗಳಲ್ಲಿ ಯಶಸ್ಸು ತಾ|| ೬, ೭ ಖರ್ಚು ಹೆಚ್ಚು, ವಿಶ್ರಾಂತಿ ಕಮ್ಮಿ

ವೃಶ್ಚಿಕ – ಮಹತ್ಕಾರ್ಯಗಳಲ್ಲಿ ಜಯ, ಆರೋಗ್ಯ ಉತ್ತಮ ವ್ಯಾಪಾರ ಉದ್ಯೋಗಗಳಲ್ಲಿ ಪ್ರಗತಿ ತಾ|| ೯, ೧೦ ಶುಭ ಕಾರ್ಯಕ್ಕಾಗಿ ಖರ್ಚು, ಮಿತ್ರರ ಸಹಾಯ

ಧನು –ಶತ್ರು ಬಂಧುಗಳಿಂದ ಅಂಜಬೇಡಿ ಆರೋಗ್ಯ ಚೆನ್ನಾಗಿರದು ಅಪಘಾತ ಭಯ, ವ್ಯವಹಾರಗಳಲ್ಲಿ ತೊಂದರೆ ಖರ್ಚು ಹೆಚ್ಚು. ತಾ|| ೬,೭ ಚಿಂತಾ ಪಾಕ ಪರೋಪಕಾರ

ಮಕರ — ನಿರುತ್ಸಾಹ ಹೆಚ್ಚು ಆರೋಗ್ಯ ಉತ್ತಮ ಆಪ್ತರ ದೇಹಾಲಸ್ಯ ವ್ಯವಹಾರಗಳಲ್ಲಿ ತೊಂದರೆ ತಾ|| ೫,೬ ಕೆಟ್ಟ ಸುದ್ದಿ, ಅವಮಾನ ಸಂಭವ

ಕುಂಭ. ಕೈಗೊಂಡ ಕಾರ್ಯ ಸಿದ್ಧಿ. ಎದುರಾಳಿಗಳಿಗೆ ಸೋಲು ಆರೋಗ್ಯ ಉತ್ತಮ ವ್ಯವಹಾರಗಳಲ್ಲಿ ಪ್ರಗತಿ ತಾ|| ೯, ೧೦ ಧನಲಾಭ, ಪ್ರವಾಸ ಸಂಭವ

ಮೀನ ಮನಸ್ಸಮಾಧಾನ ಕಮ್ಮಿ ಆರೋಗ್ಯ ಚೆನ್ನಾಗಿರದು ವ್ಯವಹಾರಗಳಲ್ಲಿ ತೊಂದರೆ ಆರ್ಥಿಕ ಮುಗ್ಗಟ್ಟು ತಾ|| ೯, ೧೦ ಕುಟುಂಬದ ಅನಾರೋಗ್ಯ, ಖರ್ಚು

ರಾಜಾ ಗೋಪಿ ಚಂದ್ ನಾಟಕದ ಪ್ರದರ್ಶನ

ನಾಟಕ ರತ್ನ ಜಿ ಎಚ್ ವೀರಣ್ಣನವರ ಶ್ರೀ ಗುಬ್ಬಿ ಚನ್ನಬಸವೇಶ್ವರ ನಾಟಕ ಸಂಸ್ಥೆಯವರು ಈಗ ರಾಜಧಾನಿಗೆ ಆಗಮಿಸಿ ತಮ್ಮ ಅಮೋಘ ನಾಟಕ ಪ್ರದರ್ಶನಗಳನ್ನು ಆರಂಭಿಸಿರುವರು ನೆನ್ನೆ ದಿನ ಅವರು ರತ್ನಾವಳಿ ಥಿಯೇಟರಿನಲ್ಲಿ ತಮ್ಮ ಸಂಸ್ಥೆಯ ಷಷ್ಠ್ಯಬ್ದ ಮಹೋತ್ಸವದ ಕಾಣಿಕೆಯಾಗಿ ರಾಜಾ ಗೋಪಿ ಚಂದ್ ಎಂಬ ಸುಪ್ರಸಿದ್ಧ ಇತಿಹಾಸ ಪ್ರಸಿದ್ಧ ನಾಟಕವನ್ನು ಅಭಿನಯಿಸಿದರು ಪೌರ ಸಭಾ ಕಮಿಷನರಾದ ಶ್ರೀ ಎಂ ಎಸ್ ಸ್ವಾಮಿನಾಥರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ಭಾಷಣ ಮಾಡಿ, ನಾಟಕದ ಕಲಾ ಕೌಶಲ್ಯವನ್ನು ಪ್ರಶಂಸಿಸಿ ಸಂಸ್ಥೆಗೆ ಯಶಸ್ಸನ್ನು ಕೋರಿದರು

ಮಹಿಳೆಯರ ಫೋಟೋ ತೆಗೆಯುವುದು ಅಪರಾಧವೇ

ದೆಹಲಿಯಿಂದ ಪ್ರವಾಸಾರ್ಥವಾಗಿ ಹೊರಟಿದ್ದ ವಿದ್ಯಾರ್ಥಿನಿಯರ ತಂಡದ ಫೋಟೋವನ್ನು ತೆಗೆದ ತಪ್ಪಿಗಾಗಿ ಒಬ್ಬ ವಿದ್ಯಾರ್ಥಿಯನ್ನು ಕಾಲೇಜಿನ ಅಧಿಕಾರಿವರ್ಗದವರು ವಜಾ ಮಾಡಿರುವುದಾಗಿ ವರದಿಯಾಗಿದೆ ಆತನು ವಿದ್ಯಾರ್ಥಿನಿಯರ ಸ್ವಂತ ಕೋರಿಕೆಯ ಮೇರೆ ಫೋಟೋ ತೆಗೆದುದೂ ಅಪರಾಧವೆಂದು ಪರಿಗಣಿಸಿ ಈ ರೀತಿ ಕ್ರಮ ಕೈಗೊಳ್ಳಲಾಗಿದೆಯೆಂದು ವರದಿಯಾಗಿದೆ

ಶ್ರೀ ರಾಮ ಸಹಾಯ ಸಂಘ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮೇಲ್ಕಂಡ ಸಂಘಕ್ಕೆ ನೆನ್ನೆ ಸಂಜೆ ಶ್ರೀಮನ್ಮಹಾರಾಜರವರ ಎ ಡಿ ಸಿ ಗಳೂ ಮತ್ತು ಮಿಲಿಟರಿ ಕಾರ್ಯದರ್ಶಿಗಳೂ ಆದ ಶ್ರೀ ಎಂ ಜಿ ಗೋಪಾಲ ಕೃಷ್ಣೇ ಅರಸ್ ಅವರು ಭೇಟಿಯಿತ್ತು ಸಂಘದ ಕಾರ್ಯ ಕಲಾಪಗಳನ್ನು ವೀಕ್ಷಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಮಕ್ಕಳಿಗೆ ಆಶೀರ್ವಾದ ಮಾಡಿದರು

ತೂಕದ ಪದ್ಧತಿಯಲ್ಲಿ ಉಪ್ಪಿನ ಮಾರಾಟ

ಉಪ್ಪನ್ನು ಅಳತೆಗೆ ಬದಲು ತೂಕದ ಪದ್ಧತಿಯಲ್ಲಿ ಮಾರಾಟ ಮಾಡುವಂತೆ ಉಪ್ಪಿನ ಸಲಹಾ ಸಮಿತಿಯವರು ಮಾಡಿದ್ದ ಶಿಫಾರಸನ್ನು ಭಾರತ ಸರ್ಕಾರದವರು ಅಂಗೀಕರಿಸಿದ್ದಾರೆಂದು ಗೊತ್ತಾಗಿದೆ

ವಿದೇಶ ಪ್ರಯಾಣ ಮಾಡುವವರಿಗೆ ಶುಭಾಶಯ

ಯೂರೋಪಿನ ಹಲವು ದೇಶಗಳಲ್ಲಿ ಪ್ರಯಾಣ ಬೆಳೆಸುವ ಶ್ರೀಗಂಧದ ಎಸ್ ಚನ್ನಯ್ಯ ಕೆ ಎ ಅಂಜನಪ್ಪ ಮತ್ತು ಶ್ರೀಮತಿ ಲೀಲಾವತಿ ಅಂಜನಪ್ಪನವರು ಇವರಿಗೆ ನೆನ್ನೆ ಹಲವಾರು ಕಡೆಗಳಲ್ಲಿ ಶುಭ ಪ್ರಯಾಣ ಕೋರಲು ಸತ್ಕಾರ ಸಮಾರಂಭಗಳು ನಡೆದವು ಸಂಜೆ ಗಂಟೆಗೆ ನಗರ ಕಾಂಗ್ರೆಸ್ ಸಮಿತಿಯವರು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಮಧ್ಯಾಹ್ನ ರಾಜಧಾನಿಯ ಒಬ್ಬ ವರ್ತಕರಾದ ಶ್ರೀ ಕೆ ಎಸ್ ಸತ್ಯನಾರಾಯಣರಾಯರೂ ಅವರ ಸಹೋದರ ಶ್ರೀ ಕೆ ಎಸ್ ಸೂರ್ಯನಾರಾಯಣರಾಯರೂ ತಮ್ಮ ಮನೆಯಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದರು ರಾಜಧಾನಿಯ ಓರಿಯಂಟಲ್ ಇಂಡಸ್ಟ್ರೀಸಿನ ಮಾಲೀಕರಾದ ಶ್ರೀ ... ಎಸ್ ಸುಬ್ಬರಾಯರು ಮತ್ತು ಅವರ ಪತ್ನಿ ಶ್ರೀಮತಿ ಶಾರದಮ್ಮನವರು ಅವರ ಮನೆಯಲ್ಲಿ ಮೋತಿಖಾನೆಯ ಮಹಡಿ ಮೇಲೆ ಅತಿಥಿಗಳನ್ನು ಸತ್ಕರಿಸಿದರು, ಗಾನವಿಶಾರದ ವಿ ದೇವೇಂದ್ರಪ್ಪನವರ ಸಂಗೀತವು ಶ್ರೀ ಜೆಸ್ ವಿ ರಾಮರಾಯರ ಪಿಟೀಲು ಮತ್ತು ಶ್ರೀ ಎಸ್ ಗೋಪಾಲರಾಯರ ಮೃದಂಗಗಳೊಡನೆ ನಡೆಯಿತು. ಉಪಾಹಾರಾನಂತರ ಶ್ರೀ ಪಿ ಎಸ್ ಸುಬ್ಬರಾಯರು ಶ್ರೀ ಎಂ ಎ ಜೋಯಿಸ್ ಮತ್ತು ಶ್ರೀ ಎಂ ಆರ್ ಬಸಪ್ಪನವರು ಭಾಷಣಗಳನ್ನು ಮಾಡಿ ಅತಿಥಿಗಳಿಗೆ ಶುಭ ಪ್ರಯಾಣವನ್ನು ಕೋರಿದರು ಅತಿಥಿಗಳು ಸೂಕ್ತ ಉತ್ತರವಿತ್ತರು ಈ ಬೆಳಿಗ್ಗೆ ನಗರದ ಪತ್ರಿಕೋದ್ಯೋಗಿ ಸಂಘದವರು ಸತ್ಕಾರ ಸಮಾರಂಭವನ್ನು ನಡೆಸಿದರು

ಚಂದಾದಾರರಲ್ಲಿ ವಿಜ್ಞಾಪನೆ

ಚಂದಾ ಹಣವನ್ನು ದಯವಿಟ್ಟು ಮುಂಗಡವಾಗಿ ಕೊಟ್ಟು ರಶೀತಿ ಪಡೆಯಬೇಕಾಗಿ ಕೋರುತ್ತೇವೆ

ಸಾಧ್ವಿ ಏಜೆಂಟರು

ನ್ಯೂಸ್ ಪೇಪರ್ ಹೌಸ್,

ಮೈಸೂರು

|| ಶ್ರೀ ||

ಗಣೇಶಾ ಟಾಕೀಸ್

೯-8-51 ರಿಂದ ದಿನವೂ 3 ಆಟಗಳು

ನವ ಜೀವನಂ

(ತಮಿಳು)

ವೈಜಯಂತಿಮಾಲಾ ನಾಗಯ್ಯ ಕಸ್ತೂರಿ ಎಸ್ ವರಲಕ್ಷ್ಮಿ ಟಿ ಆರ್ ರಾಮಚಂದ್ರ ಮತ್ತು ಎಲ್ ನಾರಾಯಣರಾವ್

ಅಬೀದ್‌ರವರ, ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ

ಮನೆ ಸಾಮಾನುಗಳ ಹರಾಜು ಮಾರಾಟ

ಬಾಕ್ಸ್, ಮೈಸೂರು ಇಲ್ಲಿನ ಕಾರ್ಯದರ್ಶಿಯವರ ಸೂಚನೆ ಮೇರೆ

12-8-51 ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ

ಸ್ವಾಚ್ಯ ಚೌಕದಲ್ಲಿರುವ ಸೋ ರೂಮಿನಲ್ಲಿ

ತೇಗದ ಮರದ ರಾಕ್ಸರುಗಳು ದಿವಾನುಗಳು, ಡ್ರಾಯಿಂಗ್ ಸ್ಟೀಲ್ ಕೇಸುಗಳು ಸರಗಳು, ಕನ್ನಡಿಗಳಿರುವ ಮತ್ತು ಇಲ್ಲದಿರುವ ಟೇಬಲುಗಳು ಮತ್ತು ಬಾಗಿಲುಗಳು, ಸಿ ವ ಕೈಲಿಂಗುಗಳು ಅಕ್ಸೆಸ್ಸರೀಸ್ ಸಿಮೆಂಟ್ ಕಾರುಗೇಟೆಡ್ ಷೀಟುಗಳು ಯುವ ವಿಲೆ ಸಿಂಗಿನ ಕೊಳಾಯಿಗಳು ನೆಲದ ಬಿರುದ ಬಿಲ್ಲೆಗಳು, ಕಡಪಾ ಕಲ್ಲುಗಳು ಸ್ಟೀಲ್ ಸೆಟ್ಟಿಂಗುಗಳು ಫರ್ನಿಚರುಗಳು, ಮತ್ತು ಗೃಹೋಪಯುಕ್ತ ಸಾಮಾನುಗಳು ಮನೆ ಸಾಮಾನುಗಳನ್ನು ಕೆಲಸದ ವೇಳೆಯಲ್ಲಿ ನೋಡಿ ಅಭಿಪ್ರಾಯಿಸಿ ಮಾಡಬಹುದು

ಸ್ನೇಹಭಾವಕ್ಕಾಗಿ ಪಾಕಿಸ್ತಾನಕ್ಕೆ ಭಾರತ ಮುಸ್ಲಿಮರ ಕರೆ

ತಿರುಚಿರಾಪಳ್ಳಿಯ ಜಮಿಯತ್ ಉಲ್ ಉಲೇಮಾ ಎಂಬ ಮುಸ್ಲಿಂ ಪಕ್ಷದ ಕಾರ್ಯಕಾರಿ ಸಮಿತಿಯವರು ಮೊನ್ನೆ ಸಭೆ ಸೇರಿ ಪಂಡಿತ ನೆಹರೂರವರಿಗೆ ಬೆಂಬಲ ಕೊಡುವ ನಿರ್ಣಯವನ್ನು ಅಂಗೀಕರಿಸಿದರು ಭಾರತ ಪಾಕಿಸ್ತಾನಗಳಲ್ಲಿ ಸಂಖ್ಯಾತರ ರಕ್ಷಣಾ ದೃಷ್ಟಿಯ ವ ಧರ್ಮ ಯುದ್ಧದ ಪ್ರಚಾರವನ್ನು ಬಿಟ್ಟು ಭಾರತಕ್ಕೆ ಸ್ನೇಹ ಹಸ್ತ ನೀಡಿ ಪಾಕಿಸ್ತಾನಕ್ಕೆ ಸಲಹೆ ಮಾಡುವ ನಿರ್ಣಯವನ್ನೂ ಅಂಗೀಕರಿಸಲಾಯಿತು

CITY IMPROVEMENT TRUST BOARD MYSORE

SALE OF MODEL HOUSES

NOTIFICATION

It is hereby notified for the information of the public that **applications in the** prescribed form with a deposit of Rs **500/-** as earnest money, will be received up to 3 P M on 20 8-1951 *from houseless persons for* purchase of 6 double bed room model houses constructed by the Board, near Zoo Gardens, facing Race Course in Ittigegud, Nazarbad Mohalla, Mysore City The earnest money will be refunded if house is not allotted The allottee should pay **Rs.8900/-** being the balance of full value of Rs **9400/** within a month from the date of receipt of the allotment letter Failing this, the earnest money will be forfeited Applications received without the earnest money or other than in the prescribed form will not be considered Persons who have already applied other than in the prescribed form should apply again, in the prescribed form with the required deposit. Further particulars and the prescribed form of application can be had in the office during office hours.

(Sd) P. GOPALA KRISHNA SETT

Chairman.

Edited, printed and published by A. R. Nagarajan, at Sadhvi Press D Subbiah Road, Mysore

ರಿಜಿ. ನಂ. 792 • ಸಾಧ್ವೀ ಮುದ್ರಣಂ • ಈ ದಿನದ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೬ ೮ ೫೧ [ಸಂಚಿಕೆ ೧೩

ಎಣ್ಣೆ ಸಂಧಾನಕ್ಕೆ ಪರ್ಷಿಯದ ಸಮ್ಮತಿ

ಧಾನ್ಯ ಮಾರುವ ಸಹಕಾರ ಸಂಘಗಳಿಂದ ಕೇವಣಿ ಕೇಳ ಕೂಡದು

ಜಿಲ್ಲಾ ಸಹಕಾರ ಪ್ರಚಾರ ಸಂಘದ ಪ್ರತಿಭಟನೆ

ಮೈಸೂರು ೫

ರಾಜಧಾನಿಯಲ್ಲಿರುವ ಸಹಕಾರ ಭವನದಲ್ಲಿ ಕಳೆದ ಶುಕ್ರವಾರ ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯೊಂದು ನಡೆಯಿತು. ಶ್ರೀ ಟಿ. ಎಸ್. ರಾಜಗೋಪಾಲ ಐಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಧಾನ್ಯವನ್ನು ಮಾರುವ ಸಹಕಾರ ಸಂಘಗಳು ೫೦೦ ರೂ ಜಾಮೀನು ಹಣವನ್ನು ಕೊಡಬೇಕೆಂದು ಹೊರಡಿಸಿರುವ ಆಜ್ಞೆಯ ಬಗ್ಗೆ ತೀವ್ರ ಪ್ರತಿಭಟನೆಯನ್ನು ಸೂಚಿಸಿ, ಈ ಆಜ್ಞೆಯು ಅತ್ಯಂತ ಹೀನಾಯವಾದುದೆಂದೂ, ಅನವಶ್ಯಕ ಮತ್ತು ಅವಿಚಾರಪೂರಿತವಾದುದೆಂದೂ, ಸಹಕಾರ ಸಂಘಗಳು ಧಾನ್ಯದ ಡಿಪೋಗಳನ್ನು ಇಟ್ಟಿರುವುದು ಹೆಚ್ಚು ಲಾಭದ ಆಸೆಯಿಂದಲ್ಲವೆಂದೂ, ಸಂಘದ ಸದಸ್ಯರು ಮತ್ತು ಇತರರಿಗೆ ಸೌಲಭ್ಯ ಒದಗಿಸುವುದಕ್ಕಾಗಿಯೇ ಎಂದೂ ತಿಳಿಸಿ, ಸದರಿ ಆಜ್ಞೆಯನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಬೇಕೆಂದು ಕೋರಲಾಯಿತು. ಧಾನ್ಯದ ಇಳುವರಿಯ ಬಗ್ಗೆ ಸಹಕಾರ ಸಂಘಗಳು ಮತ್ತು ಡಿಪೋ ಮಾಲೀಕರು ಶೇಕಡಾ ನೂರರಷ್ಟು ನಷ್ಟದ ಹಣ ಕಟ್ಟಿಕೊಡಬೇಕೆಂದು ಆಹಾರ ಡೈರೆಕ್ಟರ್ ಮಾಡಿರುವ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲಾಯಿತು

ಶ್ರೀಗಳಾದ ಪಿ. ಗೋಪಾಲಕೃಷ್ಣ ಶೆಟ್ಟಿ, ಬಿ ಕೆ ರಾಮಕೃಷ್ಣಯ್ಯ, ಎಸ್ ಚಿನ್ನಸ್ವಾಮಿ ಶೆಟ್ಟಿ, ಎ. ಕೃಷ್ಣಮೂರ್ತಿ ರಾವ್, ಎಂ ರಾಮಸ್ವಾಮಿ, ವೈ. ಶ್ರೀನಿವಾಸಯ್ಯ ಮತ್ತು ಹೆಚ್. ಎಸ್ ಶ್ರೀನಿವಾಸಮೂರ್ತಿಯವರುಗಳು ಭಾಷಣ ಮಾಡಿದರು.

ಸಾರ್ವಜನಿಕ ವಿದ್ಯಾರ್ಥಿ ನಿಲಯದ ಸಂಘ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಸಂಘದ ಅಧಿಕಾರ ವರ್ಗದ ಚುನಾವಣೆಯು ನಡೆದು ಶ್ರೀ ವಾಸುದೇವ ಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀ ಬಿ. ಎಸ್ ವೆಂಕಟೇಶ್ವರನ್ ಮತ್ತು ಶ್ರೀ ಕೆ ಎನ್ ಕೃಷ್ಣಮೂರ್ತಿಯವರುಗಳು ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಭಾರತಕ್ಕೆ ಧಾನ್ಯ ಸರಬರಾಜು ನಿಲ್ಲಿಸಲು ಪಾಕ್ ನಿರ್ಧಾರ

ಗಡಿಯಲ್ಲಿರುವ ಸೇನೆಗಳನ್ನು ಭಾರತ ಸರ್ಕಾರದವರು ವಾಪಸು ಕರೆಸಿಕೊಳ್ಳಲು ಸಿದ್ಧವಿಲ್ಲದಿರುವುದರಿಂದ ಪಾಕಿಸ್ಥಾನವು ಭಾರತದ ಮೇಲೆ ಕ್ರಮ ಕೈಕೊಂಡು, ಇನ್ನಿಗೆ ಆಹಾರ ಧಾನ್ಯವನ್ನು ಕಳುಹಿಸುವುದಿಲ್ಲವೆಂದು ಹೇಳಿದೆ. ಈ ಬಗ್ಗೆ ಇರುವ ಎಲ್ಲಾ ವ್ಯಾಪಾರ ಒಪ್ಪಂದಗಳನ್ನೂ ಅದು ರದ್ದು ಮಾಡುವುದೆಂದು ತಿಳಿದು ಬಂದಿದೆ

ಇಬ್ಬರು ಆಹಾರ ಇಲಾಖೆ ನೌಕರರ ಸಸ್ಪೆಂಡು

ಬೆಂಗಳೂರು ೬

ತುಮಕೂರು ಜಿಲ್ಲಾ ತೊಂಡಗೆರೆಯ ಎರಡನೇ ಸರ್ಕಲ್ಲಿನ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ರಂಗಪ್ಪ ಎಂಬುವರು ಕಿರುಕುಳ ಕೊಡುತ್ತಿರುವರೆಂದು ಸರ್ಕಾರಕ್ಕೆ ದೂರು ಬಂದು ತನಿಖೆ ನಡೆಸಲಾಗಿ ಅವರು ಮತ್ತು ಸ್ಪೆಷಲ್ ರೆವಿನ್ಯೂ ದಾರ್ ಜಿ|| ರಘುವರಾಚಾರರು ಅಕ್ರಮವಾಗಿ ಶ್ರೀ ಮುನಿಯಪ್ಪ ಎಂಬ ಮೇಸ್ತ್ರಿ ಧಾನ್ಯವಿಟ್ಟಿರುವವರ ಮೇಲೆ ಸಿಟ್ಟು ತೀರಿಸಿಕೊಳ್ಳಲು, ಅವರಿಂದ ಬಲಾತ್ಕಾರವಾಗಿ ಧಾನ್ಯವನ್ನು ವಸೂಲು ಮಾಡಿಕೊಂಡ ಕಾರಣಕ್ಕಾಗಿ ಇಬ್ಬರು ನೌಕರರನ್ನೂ ೬ ತಿಂಗಳು ಕಾಲ ಸಸ್ಪೆಂಡ್ ಮಾಡಲಾಗಿದೆ

ಅಮೆರಿಕದ ಧಾನ್ಯದ ಹಡಗು ಬೊಂಬಾಯಿ ತಲಪಿತು

೮೦,೦೦೦ ಟನ್ ಅಮೆರಿಕಾ ಗೋಧಿಯನ್ನು ತಂದ ಟನ್ಯಾ ವಿಕ್ಟರಿ ಎಂಬ ಹಡಗು ನೆನ್ನೆ ಬೊಂಬಾಯಿಯನ್ನು ತಲಪಿತು

ಸೂಚನೆ

ಗರುಡ ಪಂಚಮಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

ಮನುಷ್ಯನನ್ನು ಕಡಿದ ಹಾವಿನ ಮರಣ

ಅಮೆರಿಕದ ಕೆಲ್ಲಿ ವಿಮಾನ ನೆಲೆಯಲ್ಲಿ ನೌಕರನಾಗಿರುವ ಡಿ ಮಕ್ರ್ಯೊ ಗೊಮೆಜ್ ಎಂಬುವನನ್ನು ಮೊನ್ನೆ ಒಂದು ವಿಷಪೂರಿತ ಹಾವು ಕಡಿದು, ನಂತರ ೧೫ ಅಡಿ ದೂರ ಹರಿದು ಹೋಗಿ ಸಂಕಟ ಪಟ್ಟು ಸತ್ತ ಸುದ್ದಿಯು ವರದಿಯಾಗಿದೆ. ಕಡಿಯಲ್ಪಟ್ಟ ನೌಕರನ ಮೇಲೆ ಏನು ಪರಿಣಾಮವೂ ಆಗಲಿಲ್ಲವೆಂದು ಹೇಳಲಾಗಿದೆ ಅತ್ಯಂತ ಭಯಂಕರವಾದ ಸೋಡಿಯಂ ಸೈಯಾನೈಡ್ ಎಂಬ ವಿಷವನ್ನು ಅವನು ದಿನವೂ ಮುಟ್ಟುತ್ತಿರುವನೆಂದೂ, ಅವನ ಶರೀರವೆಲ್ಲಾ ವಿಷಮಯವಾಗಿದೆಯೆಂದೂ, ಆದ್ದರಿಂದ ಹಾವು ಸತ್ತಿರಬೇಕೆಂದೂ ಅವನೇ ತರ್ಕಿಸಿರುತ್ತಾನೆ

ನೇಪಾಳಕ್ಕೆ ಪಾಕಿಸ್ಥಾನದ ಸ್ನೇಹ ಬೇಡ

ಪಾಕಿಸ್ಥಾನವು ಕೋಮುವಾರು ರಾಜ್ಯವಾಗಿರುವುದರಿಂದ ನೇಪಾಳವು ಅದರ ಸ್ನೇಹವನ್ನು ಎಂದಿಗೂ ಬೆಳಸುವುದಿಲ್ಲವೆಂದು ನೇಪಾಳದ ಮಂತ್ರಿ ಎಸ್ ಕೊಯಿರಾಲಾರವರು ಹೇಳಿರುತ್ತಾರೆ ನೇಪಾಳದ ಮಿತ್ರರಾಷ್ಟ್ರವಾದ ಭಾರತದ ಮೇಲೆ ಪಾಕಿಸ್ಥಾನವು ಸಲ್ಲದ ಆರೋಪಣೆಗಳನ್ನು ಮಾಡುತ್ತಿರುವುದಾಗಿಯೂ, ಅಂತಹ ರಾಷ್ಟ್ರಗಳು ನೇಪಾಳದ ಶತ್ರುವೆಂದು ಭಾವಿಸುವುದಾಗಿಯೂ ಅವರು ಸ್ಪಷ್ಟ ಪಡಿಸಿರುತ್ತಾರೆ

ರೈಲ್ವೆ ಮುಷ್ಕರಕ್ಕೆ ಪ್ರೇರೇಪಿಸಿದವನ ಬಂಧನ

ರೈಲ್ವೆ ಮುಷ್ಕರ ನಡೆಸಲು ತನ್ನ ಸಹೋದ್ಯೋಗಿಗಳನ್ನು ಪ್ರೇರೇಪಿಸುತ್ತಿದ್ದ ರೈಲ್ವೆ ಕಾರ್ಮಿಕ ಚರಣ್‌ಸಿಂಗ್ ಎಂಬುವನನ್ನು ಸ್ಥಾನಬದ್ಧ ಶಾಸನದ ಪ್ರಕಾರ ಅಂಬಾಲದಲ್ಲಿ ದಸ್ತಗಿರಿ ಮಾಡಲಾಗಿದೆ

ಹೈದ್ರಾಬಾದ್ ನೌಕರರ ಚಿಕಿತ್ಸೆ ವೆಚ್ಚ ಸರ್ಕಾರದ್ದು

ಹೈದರಾಬಾದಿನ ಸರ್ಕಾರೀ ನೌಕರರು ಖಾಸಗಿ ಅಥವಾ ಸರ್ಕಾರಿ ಔಷಧಾಲಯಗಳಲ್ಲಿ ತಮ್ಮ ಅನಾರೋಗ್ಯದ ಬಗ್ಗೆ ಚಿಕಿತ್ಸೆ ಪಡೆಯಬಹುದೆಂದೂ, ಅದಕ್ಕಾಗಿ ತಗಲುವ ವೆಚ್ಚವನ್ನು ಸರ್ಕಾರವೇ ವಹಿಸುವುದೆಂದೂ ನಿಜಾಮರು ಒಂದು ಫರ್ಮಾನ್ ಅನ್ನು ಹೊರಡಿಸಿರುವರು

ಮಂತ್ರಿಗಳೊಡನೆ ಚಾಮರಾಜನಗರದ ಪೌರ ಸಭಾಧ್ಯಕ್ಷರ ಭೇಟಿ

ಚಾಮರಾಜನಗರದ ಪೌರ ಸಭಾಧ್ಯಕ್ಷರಾದ ಶ್ರೀ ವೆಂಕಟಸುಬ್ಬ ಶೆಟ್ಟರು ಬೆಂಗಳೂರಿನಲ್ಲಿ ಸಚಿವರುಗಳಾದ ಶ್ರೀ ಎಚ್. ಸಿ. ದಾಸಪ್ಪ ಮತ್ತು ಆರ್ ಚೆನ್ನಿಗರಾಮಯ್ಯನವರನ್ನು ಕಂಡು ಚಾಮರಾಜನಗರದ ಹೈಸ್ಕೂಲು ಕಟ್ಟಡ, ನೀರಿನ ಸರಬರಾಜು, ಒಳ ಚರಂಡಿ ವ್ಯವಸ್ಥೆ ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಸರ್ಕಾರದ ಒಪ್ಪಿಗೆಯು ದೊರೆತೊಡನೆ ಚಾಮರಾಜನಗರದ ಸೈಟುಗಳ ವಿಂಗಡಣೆಯ ವಿಷಯವನ್ನು ಶ್ರೀಯುತರು ಚರ್ಚಿಸಿದರು

ಎಣ್ಣೆ ಸಂಧಾನಕ್ಕೆ ಇರಾಣ ಪಾರ್ಲಿಮೆಂಟಿನ ಒಪ್ಪಿಗೆ

ಬ್ರಿಟಿಷ್ ನಿಯೋಗದೊಡನೆ ಎಣ್ಣೆ ಸಂಧಾನವನ್ನು ಪುನಃ ನಡೆಸಲು ಪರ್ಷಿಯಾ ಪ್ರಧಾನಿ ಡಾ|| ಮುಸಾದಿಕ್‌ರವರಿಗೆ ಅಲ್ಲಿನ ಪಾರ್ಲಿಮೆಂಟು ಅನುಮತಿಯನ್ನಿತ್ತಿರುವುದು ರಾಷ್ಟ್ರೀಯ ತೀವ್ರಗಾಮಿ ಪಕ್ಷದ ಸದಸ್ಯರು ಪ್ರಧಾನಿಯವರ ಭಾಷಣದ ಕಾಲದಲ್ಲಿ ಬಲವಾಗಿ ಪ್ರತಿಭಟನೆ ತೋರಿ, ದ್ರೋಹಿ ಎಂದು ಕರೆದಾಗ ಮುಸ್ಸಾದಿಕ್‌ರವರ ಕೈಗಳು ನಡುಗಿ ಅವರು ಹಿಡಿದಿದ್ದ ಕಾಗದ ಪತ್ರಗಳು ಹಾಗೆಯೇ ಬಿದ್ದುವು ಅವರಲ್ಲಿ ಅವಿಶ್ವಾಸ ಸೂಚನೆಯನ್ನು ತರಲು ನಿರ್ಧರಿಸಿದ್ದರೂ, ಅದನ್ನು ಒತ್ತಾಯ ಮಾಡಲಿಲ್ಲ ಬ್ರಿಟಿಷ್ ಸಂಧಾನ ನಿಯೋಗವು ಮಂತ್ರಿ ಸ್ಟೋಕ್ಸ್‌ರವರ ನೇತೃತ್ವದಲ್ಲಿ ಹೊರಟು ಇರಾನನ್ನು ತಲಪಿರುತ್ತದೆ

ಆಕಿನ್‌ಲೆಕ್ ಮತ್ತು ಗ್ರೇಸಿ ಪಾಕಿಸ್ತಾನದಿಂದ ವಾಪಸ್?

ಭಾರತ ಮತ್ತು ಪಾಕಿಸ್ತಾನಗಳಿಗೆ ಯುದ್ಧ ಸಂಭವಿಸಿದರೆ ಪಾಕಿಸ್ಥಾನದಲ್ಲಿರುವ ಬ್ರಿಟಿಷ್ ಮಾಜಿ ಸೇನಾಪತಿಗಳು ಆಕಿನ್‌ಲೆಕ್ ಮತ್ತು ಜ|| ಗ್ರೇಸಿ ಮುಂತಾದವರನ್ನು ವಾಪಸ್ ಕರೆಸಲು ಬ್ರಿಟಿಷ್ ಸರ್ಕಾರದವರು ನಿರ್ಧರಿಸಿ, ಈ ಬಗ್ಗೆ ಪಾಕಿಸ್ತಾನದ ಪ್ರಧಾನಿಯವರಿಗೆ ಪತ್ರವನ್ನು ಬರೆದಿರುವರೆಂದು ಹೇಳಲಾಗಿದೆ

ರೋಗಿಯ ಶುಶ್ರೂಷೆಗೆ ಹೋದ ದಾದಿಯ ಮೇಲೆ ಅತ್ಯಾಚಾರ

ಮದ್ರಾಸಿನ ತಿರುಮಂಗಲಿಯ ತ್ಯಾಗ ಸುಂದರ ನಾಡರ್ ಮತ್ತು ಮುತ್ತು ನಾಡರ್ ಎಂಬುವರ ಕಳೆದ ಮಾರ್ಚಿ ೭ರ ರಾತ್ರಿ ತಿರುನಲ್ವೇಲಿಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿದ್ದ ದಾದಿಯನ್ನು ಮುತ್ತುನಾಡರನ ಪತ್ನಿಯ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿ, ಸ್ವಲ್ಪ ದೂರದಲ್ಲಿ ಆಕೆಯ ಮೇಲೆ ಅತ್ಯಾಚಾರ ನಡೆಸಿದ ಕಾರಣಕ್ಕಾಗಿ ಅವರಿಬ್ಬರಿಗೂ ೫ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ

ಮೈಸೂರು ನಗರದ ಆಸ್ಪತ್ರೆ ಪರಿಹಾರ ನಿಧಿ ಸಮಿತಿ

ಕಳೆದ ಮಂಗಳವಾರ ರಾಜಧಾನಿಯ ಆಸ್ಪತ್ರೆ ಘೋರಂತ ಪರಿಹಾರ ನಿಧಿ ಸಮಿತಿಯು ಸಭೆ ಸೇರಿ ನಿಧಿ ವೀಂಗಡಣೆಯ ಬಗ್ಗೆ ಆಡಿಟರು ಮತ್ತು ಆಡಿಟ್ ಆದ ಲೆಕ್ಕಗಳನ್ನು ಪರಿಶೀಲಿಸಿತು. ಒಟ್ಟು ರೂ [illegible] ಗಳು ವಸೂಲಾಗಿದ್ದ ಈ ಹಣವನ್ನು ಮುಖ್ಯ ಮಂತ್ರಿಗಳ ನಿಧಿಗೆ ಕಳುಹಿಸಲಾಯಿತು

ತ್ಯಾಗೀಶಾನಂದಜಿಯವರ ನಿಧನ

ಕೋಲಾರದ ಚಿನ್ನದ ಗಣಿಗೆ ತೆರಳಿದ್ದ ಬೆಂಗಳೂರು ರಾಮಕೃಷ್ಣಾಶ್ರಮದ ಸ್ವಾಮಿ ತ್ಯಾಗೀಶಾನಂದಜಿಯವರು ಈ ದಿನ ಬೆಳಗ್ಗೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಮೂರು ತಿಂಗಳ ಕೆಳಗೆ ಅವರು ಕೋಲಾರದಲ್ಲಿ ಸ್ನಾನಕ್ಕಾಗಿ ಬಚ್ಚಲು ಮನೆಗೆ ಹೋದಾಗ ಬಿದ್ದು, ದೇಹಾಲಸ್ಯದಿಂದ ನರಳುತ್ತಿದ್ದರೆಂದು ಹೇಳಲಾಗಿದೆ.

ವಿಭಜಿತ ಭಾರತದ ಗಡಿ ಸಮಸ್ಯೆಗಳ ತೀವ್ರತೆ

ಭಾರತವು ವಿಭಾಗವಾದ ಮೇಲೆ ಸಮ್ಮೇಳನದ ಗಡಿಗಳ ಸಮಸ್ಯೆಯು ಒಂದೆ ಪ್ರಿಟಿಷರಿದ್ದಾಗ ಇದ್ದುದಕ್ಕಿಂತಲೂ ಹೆಚ್ಚು ತೀವ್ರವಾಗಿರುವುದಾಗಿಯೂ ಅವುಗಳನ್ನು ಹೆಚ್ಚು ಜಾಗರೂಕತೆಯಿಂದ ಪರಿಶೀಲನೆ ಮಾಡಬೇಕಾಗುವುದು ಅಗತ್ಯವೆಂದೂ ಕೇಂದ್ರದ ಮಂತ್ರಿ ಶ್ರೀ ಪ್ರಕಾಶರವರು ತಿಳಿಸಿರುತ್ತಾರೆ ಬ್ರಿಟಿಷರು ೨೦ ಮೈಲಿ ಉದ್ದದ ಟ್ರ್ಯಾಬರ್ ಕಣಿವೆಯನ್ನು ಮಾತ್ರ ಕಾಯಬೇಕಾಗಿತ್ತು ಈಗ ೫ ಸಾವಿರ ಮೈಲಿ ಗಡಿಯನ್ನು ಸಕ್ರಮವಾಗಿ ... ಮೈಲಿ ಗಡಿಯನ್ನು ... ರಕ್ಷಿಸಬೇಕಾಗಿದೆ ... ಭಾರತ ಮತ್ತು ಟಿಬೆಟ್ಟು ... ಇರುವ ಭಾರತದ ಪ್ರದೇಶವನ್ನು ಭಾರತ ಸರ್ಕಾರದವರೇ ಕಾಯಬೇಕಾಗಿದೆ ಅಲ್ಲಿ ಪೋಲೀಸು ವ್ಯವಸ್ಥೆಯು ತೃಪ್ತಿಕರವಾಗಿಲ್ಲ ಎಂಬುದಾಗಿ ಶ್ರೀ ಪ್ರಕಾಶರವರು ತಿಳಿಸಿರುತ್ತಾರೆ

೨೦೦ ತೊಲ ಕಳ್ಳ ರವಾನೆ ಚಿನ್ನದ ವಶ

ಕಳ್ಳತನದಲ್ಲಿ ರವಾನೆಯಾಗುತ್ತಿದ್ದ ೩೦೦೦೦ ರೂ ಬೆಲೆಯ ೨೦೦ ತೊಲ ಚಿನ್ನವನ್ನು ಬೊಂಬಾಯಿ ಸುಂಕದ ಅಧಿಕಾರಿಗಳು ಒಬ್ಬ ನಾವಿಕನಿಂದ ವಶಪಡಿಸಿಕೊಂಡಿರುತ್ತಾರೆ ಅವನು ಅದನ್ನು ತನ್ನ ನಡುವಿನ ಸುತ್ತಲೂ ಕಟ್ಟಿಕೊಂಡಿದ್ದನೆಂದು ಹೇಳಲಾಗಿದೆ

ರೈಲಿನಲ್ಲಿ ಆಸ್ಫೋಟಕ ವಸ್ತುಗಳನ್ನು ತರಲಾಗದು

ರೈಲು ಪ್ರಯಾಣಿಕರು ತಮ್ಮೊಡನೆ ಆಸ್ಫೋಟಕ ವಸ್ತುಗಳನ್ನು ತರಕೂಡದೆಂದು ನಿಷೇಧಿಸಿ, ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯವರು ಪ್ರಕಟಣೆ ಹೊರಡಿಸಿರುವರು

ಸೀಸ್‌ಫೈರ್ ಸಂಧಾನ ಭಂಗವಾಯಿತು

ಕೇಸಾಂಗ್ ಬಳಿ ಕಮ್ಯೂನಿಸ್ಟರು ತಟಸ್ಥ ಪ್ರದೇಶದ ಉಲ್ಲಂಘನೆಯನ್ನು ಮಾಡಿದುದಕ್ಕಾಗಿ ವಿಶ್ವ ಸಂಸ್ಥೆಯ ಸೇನಾನಿ ಜ ರಿಜ್‌ವೇಯವರು ಸೀಸ್‌ಫೈರ್ ಮಾತು ಕತೆಗಳನ್ನು ನಿಲ್ಲಿಸಿಬಿಟ್ಟರೆಂದು ನ್ಯೂಯಾರ್ಕ್ ರೇಡಿಯೋವು ವರದಿ ಮಾಡಿದೆ ಈ ಉಲ್ಲಂಘನೆ ಬಗ್ಗೆ ಕಮ್ಯೂನಿಸ್ಟರು ಉತ್ತರ ಕೊಡುವವರೆಗೂ ಸಂಧಾನಗಳು ಮುಂದುವರಿಯುವುದಿಲ್ಲವೆಂದು ಹೇಳಲಾಗಿದೆ

ರಷ್ಯಾ-ಕೆಂಪು ಚೀನಾಗಳಿಗೆ ಭಿನ್ನತೆ?

ಕೊರಿಯಾದಲ್ಲಿ ಕೆಂಪು ಚೀನಾ ... ಕರ ಮೇಲೆ ನಡೆಯುತ್ತಿರುವ ಪ್ರಬಂಧ ಘಾತಿಯಿಂದ ರಷ್ಯಾ ಮತ್ತು ಚೀನಾಗಳ ಬಾಂಧವ್ಯದಲ್ಲಿ ಒಡಕುಂಟಾಗುತ್ತಿರುವುದು ಗಿಯಮ, ಕೊನೆಗೆ ಚೀನಾವು ಯುಗೊಸ್ಲಾವಿಯದ ಮಾರ್ಷಲ್ ಟಿಟೊರವರ ದಾರಿಯನ್ನು ಹಿಡಿಯುವುದೆಂದೂ ವಿಶ್ವ ಸಂಸ್ಥೆ ಸೇನಾನಿ ರಿಜ್ವೇರವರು ಹೇಳುತ್ತಾರೆ

ಪಾಕಿಸ್ತಾನಕ್ಕೆ ಭಾರತದ ಪ್ರತಿಭಟನೆ

ಪಶ್ಚಿಮ ಪಂಜಾಬಿನಲ್ಲಿರುವ ಶ್ರೀ ಗುರುದ್ವಾರ ನಂಕಾನಾ ಸಾಹೆಬ್ ದೇವಾಲಯಕ್ಕೆ ಪೋಲೀಸರು ನುಗ್ಗಿ ಧಾಳಿ ಮಾಡಿದುದಕ್ಕಾಗಿ ಪಾಕಿಸ್ತಾನಕ್ಕೆ ಭಾರತ ಸರ್ಕಾರದವರು ಪ್ರಬಲವಾದ ಪ್ರತಿಭಟನೆಯನ್ನು ಸೂಚಿಸಿದರು

ಕಾರವಾರದಲ್ಲಿ ಕಬ್ಬಿಣದ ಅದಿರು

ಕಾರವಾರ ಜಿಲ್ಲೆಯಲ್ಲಿ ಕಬ್ಬಿಣದ ಅದಿರುಗಳು ಹೇರಳವಾಗಿ ಸಿಗುವುದಾಗಿ ಅಧಿಕಾರ ಮೂಲಗಳಿಂದ ತಿಳಿದುಬಂದಿದೆ

ಭಾರತ-ಪಾಕಿಸ್ತಾನ್ ವ್ಯಾಜ್ಯದಲ್ಲಿ ಅಮೆರಿಕಾ ಪ್ರವೇಶ

ಭಾರತ ಮತ್ತು ಪಾಕಿಸ್ತಾನಗಳಿಗೆ ಕಾಶ್ಮೀರದ ಸಂಬಂಧವಾಗಿ ಉಂಟಾಗಿರುವ ಬಿಕ್ಕಟ್ಟಿನ ನಿವಾರಣೆಗಾಗಿ ಅಮೆರಿಕವು ಯಾವುದಾದರೂ ಒಂದು ರೀತಿಯಲ್ಲಿ ಬಹಿರಂಗವಾಗಿ ಪ್ರವೇಶಿಸಬಹುದೆಂದು ಲಂಡನ್ನಿನಲ್ಲಿ ಹೇಳಲಾಗುತ್ತಿದೆ ಕಾಶ್ಮೀರದ ಪರಿಸ್ಥಿತಿ ಬಗ್ಗೆ ಅಮೆರಿಕವು ಕಳವಳವನ್ನು ವ್ಯಕ್ತಪಡಿಸಿರುವುದಾಗಿ ತಿಳಿದುಬಂದಿದೆ

ಒಡೆಯನ ಬದಲು ಸೇವಕನಿಗೆ ಗುಂಡೇಟು

ಉತ್ತರ ಪ್ರದೇಶ ಶಾಸನ ಸಭೆಯ ... ಪುರಿನ ಸದಸ್ಯರಾದ ಪಾಕೂರ ... ರವರೆಂದು ಭಾವಿಸಿ ಕೊಲೆಪಾತಕರು ಅವರ ಸೇವಕ ... ಗೆ ಗುಂಡು ಹೊಡೆದು ಕೊಂದಿರುವರು

ಕಲಾಕ್ಷೇತ್ರದ ಕಾರ್ಯಕಾರಿ ಮಂಡಲಿ

ರಾಜಧಾನಿಯ ಕನ್ನಡ ಕೈಬರಹದ ಮಾಸ ಪತ್ರಿಕೆಯಾದ ಕಲಾಕ್ಷೇತ್ರ ... ಕಾರ್ಯಕಾರಿ ಮಂಡಲಿಗೆ ಈ ವರ್ಷ ಕೆಳಕಂಡವರನ್ನು ಚುನಾಯಿಸಲಾಗಿದೆ

ಅಧ್ಯಕ್ಷರು ಶ್ರೀಗಳಾದ ಎಂ ಆರ್ ಗುರು ... ಪಿ ಎಲ್ ತಿಪ್ಪೆಸ್ವಾಮಿ, ಸದಸ್ಯರು ಶ್ರೀಗಳಾದ ಬಿ ವಿ ರಾಮಸ್ವಾಮಿ, ಜಿ ರಾಮಚಂದ್ರ, ಎಸ್ ಎಸ್ ಪ್ರಭುಸ್ವಾಮಿ ಮೆಚ್ ಆರ್ ರಾಮದಾಸ್ ಡಿ ನಂಜಪ್ಪ ಎಸ್ ವಿ ನಾಗೇಂದ್ರಯ್ಯ, ಜಿ ನಾಗೇಂದ್ರಪ್ಪ ಎಸ್ ಎ ಮೂರ್ತಿ ಮತ್ತು ಕುಮಾರಿ ಬಿ ವಿ ಸುಬ್ಬಮ್ಮ ಎಂದಿನಂತೆ ಸ್ವಾತಂತ್ರ್ಯದ ವಿಶೇಷ ಸಂಚಿಕೆಯು ಬಹಳ ಸುಂದರವಾಗಿ ಪ್ರಕಟವಾಗುವುದು

ರುಮೇನಿಯಾ-ಬಲ್ಗೇರಿಯಾಗಳಿಂದ ಗಡಿ ಉಲ್ಲಂಘನೆ

ರುಮೇನಿಯದ ಗಡಿಕಾವಲುಗಾರರು ಕಳೆದ ೬ ತಿಂಗಳುಗಳಲ್ಲಿ ೫೦ ಬಾರಿ ಯುಗೋಸ್ಲೇವಿಯದ ಗಡಿಗಳನ್ನು ದಾಟಿ ಅಂತರ ರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿ ಯುಗೋಸ್ಲೇವಿಯವನ್ನು ... ಇರುತ್ತಿರುವುದಾಗಿ ನೆನ್ನೆ ಅದು ಪ್ರತಿಭಟಿಸಿತು ಬಲ್ಗೇರಿಯದ ಮೇಲೂ ಸಹ ಇದೇ ರೀತಿ ಆಪಾದಿಸಿ ಅಲ್ಲಿನ ಜನರು ೬೮ ಸಲ ಗಡಿ ಉಲ್ಲಂಘಿಸಿದರೆಂದು ಹೇಳಲಾಗಿದೆ

ವಾರಂಟು ಹೊರಡಿಸಿದ ೧೯ ವರ್ಷದ ನಂತರ ಬಂಧನ

ಕಳುವಿನ ಅಪಾದನೆ ಮೇಲೆ ನಾ... ದೇವ ಸಿಳೆ ಎಂಬುವನನ್ನು ದಸ್ತಗಿರಿ ಮಾಡಲು ... ನೇ ಇಸವಿಯಲ್ಲಿ ವಾರಂಟನ್ನು ಹೊರಡಿಸಲಾಗಿತ್ತು ಅವನು ... ವೆ ಕಡೆಗೆ ಕುಂಬಕೋಣದ ಪೋಲೀಸರು ಕಳೆದ ತಿಂಗಳು ಪತ್ತೆ ಹಚ್ಚಿ ಬಂಧಿಸಿರರೆಂದು ಗೊತ್ತಾಗಿದೆ

ಸಂಸ್ಥಾನದಲ್ಲಿ ... ಪುರಣ

ಕಳೆದ ೨೬ನೇ ತಾ॥ಗೆ ಅಪ್ಪೈರಾದ ವಾರದಲ್ಲಿ ಸಂಸ್ಥಾನದ ನಾನಾ ಭಾಗಗಳಲ್ಲಿ ೨೦೭ ಜನರಿಗೆ ಕಾಲರಾ ತಗಲಿ, ... ಜನರು ಮಡಿದುದಾಗಿ ವರದಿಯಾಗಿದೆ ಬೆಂಗಳೂರು ಮೈಸೂರು, ಚಿಕ್ಕಮಗಳೂರು, ನಗರಗಳಲ್ಲೂ ಈ ವ್ಯಾಧಿಯು ಹರಡಿದುದಾಗಿ ವರದಿಯಾಗಿದೆ

ರಾಜಕಮಲ್, ಮೈಸೂರು
3 8 51 ರಿಂದ ೩ನೇ ವಾ...
ಫ್ಲಾವರ್ ಗಾರ್ಡನ್

Edited printed and published by A R Nagarajan, at Sadhvi Press D Subbiah Road, Mysore

ಮೈಸೂರು ಕ್ರೇಪ್, ಧರ್ಮಾವರ ಕಾಂಚೀಪುರದ ರೇಷ್ಮೆ ಸೀರೆಗಳಿಗೆ
D. L. ನರಸಿಹ್ಮಯ್ಯ & ಬ್ರದರ್ಸ್,
ಜವಳೀ ಅಂಗಡಿ,
ಬೆಂಗಳೂರು ... ಭವನ ಹೋಟೆಲ್ ಪಕ್ಕ ಮೈಸೂರು

ಭದ್ರತೆ ಮತ್ತು ಸೇವೆ
ಪೂರ್ಣ ಭದ್ರತೆ - ತೀರ ಕಡಿಮೆ ವೆಚ್ಚ
ಅತ್ಯನುಕೂಲವಾದ ಪ್ರೀಮಿಯಂ ದರ
ತಡವಿಲ್ಲದ ವಿಮಾ ಮೊಬಲಗಿನ ಪಾವತಿ
ಸುಲಭವಾದ ಸಾಲದ ಸೌಕರ್ಯ
ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚಿರುವುದು
ಇದಲ್ಲ ದೇ ತಾ ದ ರ
ಮೈಸೂರು ಸರ್ಕಾರದ
ವಿಮಾ ಇಲಾಖೆ
ಪ್ರತಿಗಳ ಶಾಖೆಯಲ್ಲಿ
ವಿಮೆ ಮಾಡಲು ಇಂದೇ ನಿರ್ಧರಿಸಿರಿ
ಬಾ ಕಿ ನಿ ದೇ ಡಿ

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಇವರು
ರತ್ನಾವಳಿ ಥಿಯೇಟರಿನಲ್ಲಿ
4-8-51 ರಿಂದ ಪ್ರತಿ ದಿನವೂ
ರಾಜಾ ಗೋಪಿ ಚಂದ್

ರಣಜಿತ್ :: 10-8-51 ರಿಂದ
ವನಮಾಲ ಫಿಲಂಸ್‌ರವರ ಮಹೋನ್ನತ ಹಿಂದಿ ಚಿತ್ರ
ರಾಬಿನ್‌ಹುಡ್ ಕಥೆಯ ಆಧಾರ
— ಬಾದಲ್ —
ಭೂಮಿಕೆಯಲ್ಲಿ ಮಧುಬಾಲ ಪ್ರೇಮನಾಥ್
ಡೈರೆಕ್ಟರ್ ಅಮಿಯಾ ಚಕ್ರವರ್ತಿ ಸಂಗೀತ ಶಂಕರ್ ಮತ್ತು ಜೈಕಿಶನ್
[ASHOK RELEAS

ಅಬೀದ್‌ರವರ
ಅಮೋಘ ಹರಾಜು ಮಾರಾಟ
12-8-51 ನೇ ಭಾನುವಾರ
ಉತ್ತಮವಾದ ಮನೆ ಸಾಮಾನುಗಳು, ರಾಕ್ಸ್‌ರುಗಳು, ಮೇಜುಗಳು, ಕುರ್ಚಿಗಳು, ಸ್ಟೀಲ್ ಬೀರುಗಳು ಕಿಟಿಕಿಗಳು ಮತ್ತು ಕದಗಳು, ... ಅಕ್ಸಿಸ್ಟೀಲ್ ಸಿಮೆಂಟ್ ಶೀಟುಗಳು, ಪೈಪುಗಳು, ಕಂಬಗಳು, ... ಗಳು, ವೈರ್ ನೆಟ್ಟಿಂಗ್ ಮತ್ತಿತರ ಉಪಯುಕ್ತ ಸಾಮಾನುಗಳು, ಮತ್ತು ... ರುಗಳು, ಗೃಹ ಸಲಕರಣೆಗಳು ಸೈಕಲ್ಲುಗಳು ಟ್ರೈಸಿಕಲ್ಲುಗಳು ... ರಿಸ್ಟ್ ವಾಚುಗಳು ಇತ್ಯಾದಿ

ರಿಜಿ ನಂ 792 — ಬಿಡಿ ಪ್ರತಿಗೆ 7 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೮-೮-೫೧ [ಸಂಚಿಕೆ ೧೪

ನಾಗರಿಕರ ರಕ್ಷಣೆಗೆ ಭಾರತ ಸರ್ಕಾರದ ಕ್ರಮ

ಭಕ್ತಾದಿಗಳಿಗೆ ಶೃಂಗೇರಿ ಹಿರಿಯ ಸ್ವಾಮಿಗಳ ದರ್ಶನ

ಸ್ವಂ. ಸು. ತಂತಿ] ಶೃಂಗೇರಿ ೭

ಕಳೆದ ಒಂದು ತಿಂಗಳಿಂದಲೂ ಇಲ್ಲಿನ ಶ್ರೀ ಮಠದ ಹಿರಿಯ ಸ್ವಾಮಿಗಳವರು ಚಾತುರ್ಮಾಸ್ಯ ವ್ರತ ಬದ್ಧರಾಗಿ ಅನೇಕ ಭಕ್ತಾದಿಗಳಿಗೆ ದರ್ಶನವನ್ನೀಯುತ್ತಾ ಆಶೀರ್ವದಿಸುತ್ತಿರುವರು ಶ್ರೀ ಸ್ವಾಮಿಗಳವರು ಆರೋಗ್ಯವಾಗಿಯೂ, ಹಸನ್ಮುಖಿಗಳಾಗಿಯೂ ಇರುವರು ಮಠದಲ್ಲಿ ಒಂದು ವಿಧವಾದ ಆಧ್ಯಾತ್ಮಿಕ ಸ್ಫೂರ್ತಿಯು ಮೂಡಿ ದಿವ್ಯವಾಗಿ ಬೆಳಗುತ್ತಿದೆ ಶ್ರೀ ಸ್ವಾಮಿಗಳವರ ದರ್ಶನಾರ್ಥವಾಗಿ ನೂರಾರು ಮಂದಿ ಭಕ್ತಾದಿಗಳು ಬಂದು ಹೋಗುತ್ತಿರುವರು ಇಲ್ಲಿಗೆ ಬರುವ ಮಾರ್ಗವು ಮಳೆಯ ದೆಸೆಯಿಂದ ಬಹಳವಾಗಿ ಕೆಟ್ಟುಹೋಗಿರುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗಿದೆ ಮತ್ತು ಮುಂದಿನ ವಾರದಿಂದ, ರಸ್ತೆಯು ದುರಸ್ತಾಗುವವರೆಗೆ ಬಸ್ಸುಗಳ ಸಂಚಾರವನ್ನು ನಿಲ್ಲಿಸಲು ಅವುಗಳ ಮಾಲೀಕರು ನಿರ್ಧರಿಸಿರುತ್ತಾರೆ ಸಂಬಂಧಪಟ್ಟ ಅಧಿಕಾರಿಗಳು ಈ ಕಡೆ ಗಮನ ಕೊಟ್ಟು ರಸ್ತೆಯನ್ನು ದುರಸ್ತು ಮಾಡಿಸಿ ಇಲ್ಲಿಗೆ ಬರುವ ಭಕ್ತಾದಿಗಳಿಗೆ ಸೌಲಭ್ಯ ಕಲ್ಪಿಸುವರೆಂದು ಆಶಿಸಲಾಗಿದೆ

ಯಜುರುಪಾಕರ್ಮ ಮುಂದಿನ ತಿಂಗಳು

ಸ್ಥಳೀಯ ವಿದ್ವಾಂಸರುಗಳು ಸಭೆ ಸೇರಿ ಇದೇ ೧೭ ನೇ ತಾರೀಕು ಹುಣ್ಣಿಮೆ ದಿನ ಸಂಕ್ರಮಣವಾಗುವುದರಿಂದ ಯಜುರುಪಾಕರ್ಮವನ್ನು ಮುಂದಿನ ತಿಂಗಳು ಆಚರಿಸತಕ್ಕದ್ದೆಂದು ನಿರ್ಧರಿಸಿರುವರು

ಭಾರತ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ರಚನೆ

ಕೇಂದ್ರ ಪಾರ್ಲಿಮೆಂಟಿನ ನಾಲ್ಕನೇ ಅಧಿವೇಶನವನ್ನು ಮೊನ್ನೆ ದಿನ ಆರಂಭಿಸುತ್ತಾ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಭಾಷಣ ಮಾಡಿ ಭಾರತ ಪಾಕಿಸ್ತಾನಗಳಿಗೆ ಉಂಟಾಗಿರುವ ಬಿಕ್ಕಟ್ಟು ಪರಿಹಾರವಾಗುವ ಸನ್ನಿವೇಶವು ಒದಗಿ, ಉಭಯ ರಾಷ್ಟ್ರಗಳ ಸಮಸ್ಯೆಗಳೂ ಸುಮುಖವಾಗಿ ಪರಿಹಾರವಾಗುವುವೆಂಬ ಭರವಸೆಯನ್ನು ವ್ಯಕ್ತ ಪಡಿಸಿದರು ದೇಶದ ಅಭಿವೃದ್ಧಿಗಾಗಿ ತಯಾರಿಸಲಾಗಿರುವ ಪಂಚ ವಾರ್ಷಿಕ ಯೋಜನೆಯ ಬಗ್ಗೆ ಆಗಾಗ್ಗೆ ಪರಿಶೀಲನೆ ನಡೆಸುವ ಕೆಲಸವಾಗಿ ಭಾರತದ ಪ್ರಧಾನಿ ಮತ್ತು ಪ್ರಾಂತ್ಯಗಳ ಮುಖ್ಯ ಮಂತ್ರಿಗಳಿಂದ ಕೂಡಿದ ಒಂದು ರಾಷ್ಟ್ರೀಯ ಅಭಿವೃದ್ಧಿ ಸಮಿತಿಯನ್ನು ಸಧ್ಯದಲ್ಲೇ ರಚಿಸಲಾಗುವುದೆಂದೂ ಅವರು ತಿಳಿಸಿದರು

ಪಡಿತರದ ಜೊತೆಗೆ ಹೊರಗಡೆ ಧಾನ್ಯ ಕೊಳ್ಳಲು ಅವಕಾಶಬೇಕು

ಪಡಿತರ ಪ್ರದೇಶಗಳಲ್ಲಿರುವ ಪ್ರಜೆಗಳು ಡಿಪೋಗಳಲ್ಲಿ ಕೊಳ್ಳುವ ಧಾನ್ಯದ ಜೊತೆಗೆ ಇತರ ಮೂಲಗಳಿಂದ ೫ [illegible] ೧೦ ಸೇರು ಧಾನ್ಯವನ್ನು ಕೊಂಡು ತರಲು ಅನುಮತಿ ಕೊಡಬೇಕೆಂದು ಸರ್ಕಾರದವರನ್ನು ಕೋರುವ ನಿರ್ಣಯವನ್ನು [illegible] ಟೌನ್ ಹಾಲ್ ಬಳಿ ನಡೆದ ಜಿಲ್ಲಾ ಮಂಡಳದ ಬಹಿರಂಗ ಸಭೆಯಲ್ಲಿ [illegible]ರ್ಣಯ ಮಾಡಲಾಯಿತು

ಸಾರ್ವಜನಿಕ ರಕ್ಷಣೆಗೆ ಭಾರತದಲ್ಲಿ ಕ್ರಮ

ಭಾರತದ ನಾಗರಿಕ ಜನಸಮುದಾಯವನ್ನು ಪಾಕಿಸ್ತಾನದ ಕಡೆಯಿಂದ ಆಗಬಹುದಾದ ಆಕ್ರಮಣದಿಂದ ರಕ್ಷಿಸುವ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನೆಲ್ಲಾ ಕೊಟ್ಟಿರುವುದಲ್ಲದೆ ಹಲವು ನಿರ್ಧಾರಗಳನ್ನು ಕೈಗೊಂಡಿರುವುದಾಗಿಯೂ, ಈ ಸಂಬಂಧವಾಗಿ ಈಗ ನಾವುಗಳು ಚಿಂತಿಸಬೇಕಾದುದಿಲ್ಲವೆಂದೂ ಪ್ರಧಾನಿ ನೆಹ್ರೂರವರು ಪಾರ್ಲಿಮೆಂಟ್ ಸಭೆಯಲ್ಲಿ ಹೆಚ್ ವಿ ಕಾಮತ್ತರ ಪ್ರಶ್ನೆಗೆ ಉತ್ತರವಾಗಿ ಮೊನ್ನೆ ತಿಳಿಸಿದರು ಪಾಕಿಸ್ತಾನವು ನಮ್ಮ [illegible]ಯ ಮೇಲೆ ಮಾಡಬಹುದಾದ ದಂಡಯಾತ್ರೆಯನ್ನು ಎದುರಿಸಲು ಇಲ್ಲಿನ ನಾಗರೀಕರು ಸಿದ್ಧತೆ ಮಾಡಿಕೊಳ್ಳಲು ಭಾರತ ಸರ್ಕಾರದವರು ತಕ್ಕಷ್ಟು ಕ್ರಮ ಕೈಗೊಂಡಿಲ್ಲವೆಂದು ಆಕ್ಷೇಪಿಸಿ, ವಿಮಾನಧಾಳಿ ಮುಂಜಾಗ್ರತೆ ಮುಂತಾದುವನ್ನು ನಡೆಸದಿರುವುದರ ಬಗ್ಗೆ ಪ್ಯಾರೇಲಾಲ್ ಸಾಕ್ಸೇನಾರವರು ತಂದಿದ್ದ ನಿಲುವಳಿ ಸೂಚನೆಯನ್ನು ಉಪಾಧ್ಯಕ್ಷರು ತಳ್ಳಿ ಹಾಕಿದರು

ಭಾರತದ ರಕ್ಷಣೆ ಬಗ್ಗೆ ಮಹಾಸಭೆಯ ರಕ್ತದ ಪ್ರತಿಜ್ಞೆ

ಹಿಂದೂ ಮಹಾಸಭೆಯ ಹಲವು ಮುಖಂಡರು ಮತ್ತು ಇತರ ಒಂದು ಸಾವಿರ ಜನರು ಕಳೆದ ಭಾನುವಾರ ದೆಹಲಿಯಲ್ಲಿ ಸಭೆ ಸೇರಿ ಭಾರತದ ಮೇಲೆ ಪಾಕಿಸ್ತಾನವೇನಾದರೂ ಧಾಳಿ ನಡೆಸಿದರೆ ದೇಶದ ರಕ್ಷಣೆಗಾಗಿ ತಾವು ಸರ್ವತ್ಯಾಗ ಮಾಡಲೂ ಸಿದ್ಧರಿರುವುದಾಗಿ ಸೂಚಿಸುವ ಪ್ರತಿಜ್ಞೆಗೆ ತಮ್ಮ ರಕ್ತದಿಂದ ರುಜು ಹಾಕಿ ಅದನ್ನು ಸ್ವೀಕರಿಸಿದರು ಭಾರತದ ರಕ್ಷಣೆಗಾಗಿ ೫೦ ಸಾವಿರ ಸ್ವಯಂ ಸೇವಕರ ತಂಡವನ್ನು ಕಳುಹಿಸಲು ಹಿಂದೂ ಮಹಾ ಸಭೆಯು ಮುಂದೆ ಬಂದಿದೆ

ಪ್ರಭುಗಳಿಗೆ ತಿರುಪತಿಯಲ್ಲಿ ಉಪಾಕರ್ಮ

ಶ್ರೀಮನ್ ಮಹಾರಾಜರು ೧೬ ನೇ ತಾ|| ತಿರುಪತಿಯಲ್ಲಿ ಉಪಾಕರ್ಮವನ್ನು ನೆರವೇರಿಸಿಕೊಳ್ಳುವರೆಂದು ತಿಳಿದು ಬಂದಿದೆ

ದಾವಣಗೆರೆಗೆ ಪ್ರಭುಗಳ ಪ್ರಯಾಣ

ಮೈಸೂರು ೬

ಶ್ರೀಮನ್ ಮಹಾರಾಜರು ಮೊನ್ನೆ ರಾತ್ರಿ ವಿಶೇಷ ರೈಲಿನಲ್ಲಿ ದಾವಣಗೆರೆಗೆ ಪ್ರಯಾಣ ಮಾಡಿದರು ಅವರೊಡನೆ ಗೃಹ ಮಂತ್ರಿ ಶ್ರೀ ಕೆ ಸಿ ರೆಡ್ಡಿ, ಮತ್ತು ಇತರ ಪರಿವಾರದವರು ತೆರಳಿದರು ನಿನ್ನೆ ದಾವಣಗೆರೆಯಲ್ಲಿ ದಿವ್ಯಾಲಂಕೃತವಾದ ಮೋಟಾರಿನಲ್ಲಿ ಪ್ರಭುಗಳ ಮೆರವಣಿಗೆಯು ಸಕಲ ಮರ್ಯಾದೆಗಳೊಡನೆ ನಡೆಯಿತು ನಂತರ ಅವರು [illegible] ಖಾದಿ ಮತ್ತು ಪೌರ ಸಭಾ ಕಟ್ಟಡಗಳ ಪ್ರಾರಂಭೋತ್ಸವವನ್ನು ನೆರವೇರಿಸಿದರು ಅಲ್ಲಿಂದ ಹರಿಹರಕ್ಕೆ ತೆರಳಿ ಚಿತ್ರದುರ್ಗವನ್ನು ತಲಪಿದರು

ಶೀಘ್ರ ಕಾರ್ಯವಿಚಾರರ ಪ್ರತಿಭಟನೆ

ಕಳೆದ ತಿಂಗಳು ರಾಜಧಾನಿಗೆ ಆಗಮಿಸಿದ್ದ ಪ್ರಧಾನಿ ಪಂಡಿತ ನೆಹರೂರವರನ್ನು ಇಲ್ಲಿನ ಶೀಘ್ರ ಕಾರ್ಯವಿಚಾರರ ಸಂಘದ ನಿಯೋಗದವರು ಭೇಟಿ ಮಾಡಬಹುದೆಂದು ಸೂಚನೆಯು ಮೈಸೂರು ಸರ್ಕಾರಕ್ಕೆ ಬಂದಿದ್ದರೂ ಸಹ, ಅದಕ್ಕೆ ಇಲ್ಲಿನವರು ಅವಕಾಶ ಮಾಡಿಕೊಡಲಿಲ್ಲವೆಂದು ಸಂಘವು ಸರ್ಕಾರಕ್ಕೆ ಪ್ರತಿಭಟನೆಯನ್ನು ಸೂಚಿಸಿರುತ್ತದೆ ಇಲ್ಲಿನ ಆಹಾರ ಪರಿಸ್ಥಿತಿಯನ್ನು ಸರಿಪಡಿಸಿ ಕೊಡಬೇಕೆಂದು ಮತ್ತೊಮ್ಮೆ ಪ್ರಧಾನಿಯವರಿಗೆ ಸಂಘವು ಅರಿಕೆ ಮಾಡಿಕೊಂಡಿರುತ್ತದೆ

ವರ್ತಕರ ಸಂಘ

ರಾಜಧಾನಿಯ ವರ್ತಕರ ಸಂಘದ ಸಾಮಾನ್ಯ ಸದಸ್ಯರ ಸಭೆಯು ಕಳೆದ ಭಾನುವಾರ ನಡೆದು ಕೆಳಗೆ ಕಂಡವರು ಸಂಘದ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿರುತ್ತಾರೆ –

ಶ್ರೀಗಳಾದ ಟಿ ಶಾಂತರಾಜಪ್ಪ ಸಿ ಎಸ್ ಸಂಗಪ್ಪ, ಟಿ ವಸುಪಾಲರಾವ್, ಪಿ ತಮ್ಮಯ್ಯ ಕೆ ಶ್ರೀಕಂಠಯ್ಯ [illegible] ಎಸ್ ಸುಬ್ಬಣ್ಣ, ಜಿ ಕೆ ವೀರಭದ್ರಯ್ಯ, ಕೆ ಜಿ ಸುಂದರರಾಜ್, ರಂಗಯ್ಯ ಪಿ ಸುಬ್ಬಣ್ಣ, ಕೆ ನಂದಿ ಬಸಪ್ಪ ಎಂ ಆರ್ ಸಿ ಬಸಪ್ಪ [illegible] ಬಿ ನಾಗಪ್ಪ, ರಾಮಪ್ಪಶೆಟ್ಟಿ [illegible] ಮತ್ತು ಪಿ ಪುಟ್ಟಸ್ವಾಮಯ್ಯ

ನೆಹರೂರವರಿಗೆ ಪುನಃ ಲಿಯಾಖತ್ತರ ಉತ್ತರ

ಪ್ರಧಾನಿ ನೆಹರೂರವರು ಮೊನ್ನೆ ಕೊಟ್ಟ ತಂತಿಗೆ ಪ್ರತಿಯಾಗಿ ಪಾಕಿಸ್ತಾನದ ಪ್ರಧಾನಿ ಲಿಯಾಖತ್ತರು ಉತ್ತರವಿತ್ತು ಕಾಶ್ಮೀರದ ಬಗ್ಗೆ ಭಾರತವಿಟ್ಟುಕೊಂಡಿರುವ ಅಭಿಪ್ರಾಯವು ವಿಶ್ವಸಂಸ್ಥೆಗೆ ಒಂದು ಸವಾಲಿನಂತಿರುವುದೆಂದೂ ಕಾಶ್ಮೀರದಲ್ಲಿ ಭಾರತವು ನಡೆಸಿದ ಆಕ್ರಮಣದ ಬಗ್ಗೆ ಅದು ರಾಜಕೀಯ ಪರಿಭಾಷೆ ನಾಟಕ ಆಡುತ್ತಿರುವುದಾಗಿಯೂ, ಅದರಿಂದ ಅಂತರ ರಾಷ್ಟ್ರೀಯ ಶಾಂತಿಗೆ ಭಂಗ ಉಂಟಾಗುವುದೆಂದೂ ಹೇಳಿರುತ್ತಾರೆ

ಅವಶ್ಯಕ ಇಲಾಖೆಗಳ ಮುಷ್ಕರ ತಪ್ಪಿಸಲು ಕ್ರಮ

ಅವಶ್ಯಕ ಇಲಾಖೆಗಳ ನೌಕರರು ಮುಷ್ಕರ ಹೂಡುವುದನ್ನು ತಪ್ಪಿಸುವ ಬಗ್ಗೆ ಪಾರ್ಲಿಮೆಂಟಿನಲ್ಲಿ ಸಂಚಾರ ಮಂತ್ರಿ ಎನ್ ಜಿ ಅಯ್ಯಂಗಾರ್ಯರು ಒಂದು ಜರೂರು ಮಸೂದೆಯನ್ನು ತಂದಿರುತ್ತಾರೆ

ಕಬ್ಬಿಣದ ಕಾರ್ಖಾನೆ ಮುಷ್ಕರಕ್ಕೆ ಬ್ಯಾಲೆಟ್

ಮೊನ್ನೆ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕ ಸಂಘದ ಸದಸ್ಯರ ಸಭೆಯು ನಡೆದು ಮುಷ್ಕರ ಹೂಡುವ ಬಗ್ಗೆ ೧೫ ದಿನಗಳಲ್ಲಿ ಬ್ಯಾಲೆಟ್‌ನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಿರುತ್ತಾರೆ

ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಒಂದು ಓಟೂ ಬರಲಿಲ್ಲ

ಅನಂತಪುರ ಜಿಲ್ಲೆಯ ಪೌರಸಭಾ ಕ್ಷೇತ್ರಗಳಿಂದ ಮದರಾಸು ವಿಶ್ವವಿದ್ಯಾಲಯದ ಸೆನೇಟಿಗೆ ನಡೆದ ಚುನಾವಣೆಯಲ್ಲಿ ಶ್ರೀ ಪಿ ರಂಗನಾಥ ಎಂಬುವರು ೧೧ ಓಟುಗಳನ್ನು ಪಡೆದು ಜಯಶಾಲಿಗಳಾದರು ಇವರ ಪ್ರತಿಸ್ಪರ್ಧಿಗಳಾಗಿದ್ದ ಜನಾಬ್ ದಾವೂದ್ ಸಾಹೇಬ್ ಎಂಬುವರು ೧೦ ಓಟುಗಳನ್ನು ಗಳಿಸಿದರು ಕಾಂಗ್ರೆಸ್ ಪರ ಉಮೇದುವಾರರಾಗಿ ಸ್ಪರ್ಧಿಸಿದ ಜನಾಬ್ ಕೆ ರಹೀಂತುಲ್ಲಾ ಎಂಬುವರಿಗೆ ಒಂದು ಓಟು ಸಹಾ ಬರಲಿಲ್ಲ

ಹಾರ್ಲಿಕ್ಸ್ ಹಾಲಿನ ಬೆಲೆಯು ನಿಗದಿ

ಹಾರ್ಲಿಕ್ಸ್ ಹಾಲಿನ ಪುಡಿ ವಿಕ್ರಯ ಪರಮಾವಧಿ ಬೆಲೆಯನ್ನು ೧ ಪೌಂಡ್ ಸೀಸೆಗೆ ೩-೧೦-೦, ಅರ್ಧ ಪೌಂಡಿಗೆ ೨ ರೂ, ೫ ಪೌಂಡಿಗೆ ೧೭-೧೪-೦ ಯಂತೆ ನಿಗದಿ ಮಾಡಲಾಗಿದೆ

ರೈಲು ಸರಪಳಿಯ ದುರುಪಯೋಗಕ್ಕೆ ೧೨೦ ರೂ ದಂಡ

ರೈಲುಗಳ ಅಲಾರಂ ಸರಪಳಿಗಳನ್ನು ದುರುಪಯೋಗ ಪಡಿಸುವ ಪ್ರಯಾಣಿಕರಿಗೆ ೧೨೦ ರೂ ದಂಡವನ್ನು ವಿಧಿಸುವ ಬಗ್ಗೆ ಪಾರ್ಲಿಮೆಂಟಿನಲ್ಲಿ ಮಸೂದೆಯೊಂದನ್ನು ತರಲಾಗಿದೆ ಇದುವರೆಗೆ ೫೦ ರೂ ಗಳನ್ನು ವಿಧಿಸಲಾಗುತ್ತಿತ್ತು ಅಲ್ಲದೆ ರೈಲುಗಳ ಫುಟ್‌ಬೋರ್ಡ್ ಮತ್ತು ಗಾಡಿಯ ಮೇಲ್ಭಾಗದಲ್ಲಿ ಕುಳಿತು ಪ್ರಯಾಣ ಮಾಡುವುದನ್ನೂ ನಿಷೇಧಿಸಲಾಗುವುದು

ಸ್ವಾತಂತ್ರ್ಯೋತ್ಸವ ವೆಚ್ಚದ ಮಿತಿ

ಇದೇ ಆಗಸ್ಟ್ ತಾರೀಖು ಸ್ವಾತಂತ್ರ್ಯ ದಿನಾಚರಣೆಯನ್ನು ಒಹಳ ಸರಳ ರೀತಿಯಲ್ಲಿ ಆಚರಿಸಬೇಕೆಂದು ಸೂಚಿಸಿ ಮದರಾಸು ಸರ್ಕಾರದವರು [illegible] ಸ್ಥಳೀಯ ಸಂಸ್ಥೆಗಳಿಗೂ ಸೂಚಿಸಿದ್ದಾರೆ. [illegible] ಜಿಲ್ಲಾ ಬೋರ್ಡ್, ಮತ್ತು ಪ್ರಥಮ ದರ್ಜೆ ಪೌರ ಸಭೆಗಳು ಇದಕ್ಕಾಗಿ ತಲಾ [illegible] ರೂ ಇತರ ಪೌರ ಸಭೆಗಳವರು ತಲಾ [illegible] ರೂ [illegible] ವೆಚ್ಚ ಮಾಡಬಹುದೆಂದು [illegible] ಮತ್ತು ಪ್ಯಾನಲ್ ಪಂಚಾಯಿತಿಗಳವರ [illegible] ಕ್ರಮವಾಗಿ [illegible] ಮತ್ತು [illegible] ರೂ ವೆಚ್ಚಮಾಡಲು ಅನುಮತಿ ಕೊಡಲಾಗಿದೆ

ಬಿಗಿ ಮುಷ್ಠಿಯು ಶಾಂತಿ ಸಲಹೆ ತರವಲ್ಲ

ಕಾಶ್ಮೀರದ ಮೇಲೆ ನಡೆಯುವ [illegible] ಭಾರತದ ಮೇಲೆ [illegible] ಪೂರ್ಣವಾಗಿ [illegible] ಪ್ರಧಾನಿ [illegible] ಲಿಯಾಖತ್ [illegible] ಉತ್ತರವಾಗಿ [illegible] ಮುಷ್ಠಿ ಪ್ರದರ್ಶನ ಮಾಡಿಯಾಗಲಿ [illegible] ಯುದ್ಧದ [illegible] ಶಾಂತಿ ಪ್ರದರ್ಶನ [illegible] ನೆಹರೂರವರು [illegible]

ಉಡುಪಿಯಲ್ಲಿ ಮೆಡಿಕಲ್ ಕಾಲೇಜು

ಉಡುಪಿ

[illegible] ಮೊದಲನೇ [illegible] ಮೆಡಿಕಲ್ ಕಾಲೇಜನ್ನು [illegible] ಸ್ಥಾಪಿಸಬೇಕೆಂದು [illegible] ಅಕೆಡೆಮಿ ಆಫ್ ಜನರಲ್ [illegible] ಕಾಲೇಜು [illegible] ಉಡುಪಿಯಲ್ಲಿ [illegible]

ಷೇಕ್ ಅಬ್ದುಲ್ಲಾರವರ ಕೊಲೆಗೆ ಪಾಕ್ ಪಿತೂರಿ

ಕಾಶ್ಮೀರ ಸಂಸ್ಥಾನದಲ್ಲಿ ಭಾರಿ ಕ್ರಾಂತಿಯನ್ನುಂಟು ಮಾಡಿ ಜಲ್ಲಿ ದಂಗೆಯನ್ನೆಬ್ಬಿಸಿ ಸಂಸ್ಥಾನದ ಪ್ರಧಾನಿ ಷೇಕ್ ಅಬ್ದುಲ್ಲಾ ಮತ್ತು ಉಪ ಪ್ರಧಾನಿ ಗುಲಾಂ ಮಹಮದ್ ಭಕ್ಷಿ ರವರುಗಳನ್ನು ಕೊಲೆ ಮಾಡಲು ಪಾಕಿಸ್ತಾನದ ಗೂಢಚಾರರನ್ನು ಕಳುಹಿಸಲಾಗಿದೆಯೆಂದೂ ಅವರ [illegible] ಈಗಾಗಲೇ [illegible] ವರದಿಯಾಗಿದೆ [illegible] ಮೈಸೂರು ರೈಲ್ವೆ ಕೆಲಸಗಾರರ ಸಂಘದ ಕಾರ್ಯಕಾರಿ [illegible] ರೈಲ್ವೆ ನೌಕರರನ್ನು [illegible] ಕೊಡುವಂತೆ ನಿರ್ಧರಿಸಲಾಯಿತು

[illegible] ಕೊಡಲಿದ್ದಾರೆ [illegible] ಉಡುಪಿಯಲ್ಲಿ [illegible] ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜನ್ನು ನಡೆಸಿಕೊಂಡು ಬರುತ್ತಿರುವುದು [illegible]

ಪರ್ಷಿಯಾ ಎಣ್ಣೆ ಗಣಿ ಸಂಧಾನ

ಪರ್ಷಿಯಾದ ಎಣ್ಣೆ ಗಣಿ ವಿವಾದ ಬಗ್ಗೆ ಟೆಹರಾನಿನಲ್ಲಿ ಪರ್ಷಿಯಾ ಸರ್ಕಾರದ [illegible] ಬ್ರಿಟಿಷ್ ನಿಯೋಗದವರಿಗೂ, [illegible] ಎಣ್ಣೆ ಗಣಿ ರಾಷ್ಟ್ರೀಕರಣ [illegible] ಸಂಧಾನ ಆರಂಭವಾಯಿತು. [illegible]

ಒಲಂಪಿಯಾ ಟಾಕೀಸ್

9 8 51 ರಿಂದ ಪ್ರತಿದಿನ 3 ಆಟ

ಬಸ್ರ್ಯಾತ್-ಕೆ-ಏಕ್ ರಾತ್

ಬೆಳಗಿನ ಪ್ರದರ್ಶನ 10-8 51 ರಿಂದ ಮೂರು ದಿನಗಳು ಮಾತ್ರ

ಬಾಂಬೆ ಟಾಕೀಸ್ ರವರ ಬಸಂತ್

Edited printed and published by A R. Nagarajan at Sadhvi Press Subbiah Road, Mysore

ಶ್ರೀ ಗಣೇಶಾ ಟಾಕೀಸ್

9—8—51 ರಿಂದ :: ಅಮೋಘ ಪ್ರಾರಂಭ

ದಿನವಹಿ 4 ಪ್ರದರ್ಶನಗಳು, ಮ್ಯಾಟಿನಿ 2-30ಕ್ಕೆ

ಜೆಮಿನಿ ಯವರ * ಬಾಲನಾಗಮ್ಮ *

ಮುಖ್ಯ ಪಾತ್ರ:- ಕಾಂಚನಮಾಲಾ, ಪುಷ್ಪವಲ್ಲಿ, ಡಾ|| ಸುಬ್ಬರಾವ್

ಮೈಸೂರು ಕ್ರೇಪ್, ಧರ್ಮಾವರ [illegible]

D. L. ನರಸಿಹ್ಮಯ್ಯ & ಬ್ರದರ್ಸ್,

ಜವಳೀ ಅಂಗಡಿ,

ರಾಜಕಮಲ್, ಮೈಸೂರು

10-8-51 ರಿಂದ : ಅಮೋಘ ಪ್ರಾರಂಭ . ದಿನವಹಿ 3 ಆಟಗಳು

ಮಹಾತ್ಮಾರವರ ಮಹೋನ್ನತ ಕನ್ನಡ ಕಲಾ ಕೃತಿ

* ಜಗನ್ಮೋಹಿನಿ *

[illegible]

ಕಡೇ 6 ದಿನಗಳು - ಫ್ಲಾಷ್ ಗಾರ್ಡನ್ - ಸೀರಿಯಲ್

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

4-8-51 ರಿಂದ :: ಪ್ರತಿ ದಿನವೂ

ರಾಜಾ ಗೋಪಿ ಚಂದ್

ರಣಜಿತ್ :: 10-8-51 ರಿಂದ

ಮಹೋನ್ನತ ಹಿಂದಿ ಚಿತ್ರ

ರಾಬಿನ್ ಹುಡ್ ಕಥೆಯ ಆಧಾರ

— ಬಾದಲ್ —

ಭೂಮಿಕೆಯಲ್ಲಿ ಮಧುಬಾಲ, ಪ್ರೇಮನಾಥ್

ನಿರ್ದೇಶಕ ಅಮಿಯಾ ಚಕ್ರವರ್ತಿ ಸಂಗೀತ - ಶಂಕರ್ ಮತ್ತು ಜೈಕಿಷನ್

ASHOK RELEASE

ಪ್ರಭುದೇವಾ ಟಾಕೀಸ್

9-8-51 ರಿಂದ ಅಮೋಘ 2 ನೇ ವಾರ

* ರೂಪವತಿ *

(ತೆಲುಗು)

13-8-51 ನೇ ಸೋಮವಾರದ ಬಾಗಾಯ್ತು ಎಂ. ಜಿ. ಎಂ ರವರಿಂದ ತಯಾರಿಸಲ್ಪಟ್ಟ ಮೊದಲನೇ ತಮಿಳು ನ್ಯೂಸ್ ರೀಲನ್ನು ತೋರಿಸಲಾಗುತ್ತದೆ

CITY MUNICIPAL OFFICE, MYSORE.

NOTIFICATION

Notice is hereby given to all concerned that the 3 and half per cent Debenture Loan of five and a half Lakhs issued by the City Municipal Council, Mysore in 1936 to the Indian Bank Ltd., Madras and other registered holders for the time being will be redeemed for final redemption on the 30th November 1951

All registered debenture-holders are hereby requested to surrender on or before the 30th November 1951 to this Office their Debenture Bonds duly discharged for payment

Debenture-holders will not be entitled to interest after that date

Mysore, 27-7 51

M. S. SWAMINATHAN, Municipal Commissioner

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೯-೮-೫೧ [ಸಂಚಿಕೆ ೧೫

ಅಕ್ಕಿ ಪರಿಸ್ಥಿತಿ ಬಗ್ಗೆ ಕೇಂದ್ರ ಸರ್ಕಾರದ ಕಾತರ

ಸಿ. ಆರ್. ಅಧಿಕಾರ ಬಿಡುವರೇ?

ಪಾರ್ಲಿಮೆಂಟಿನ ಈ ಅಧಿವೇಶನದ ನಂತರ ರಾಜಾಜಿಯವರು ಮಂತ್ರಿ ಮಂಡಲವನ್ನು ಬಿಡುವರೆಂದು ಹೇಳಲಾಗಿದೆ. ಈಗಾಗಲೇ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಕೋರಿದ್ದಾಗಿಯೂ, ಆದರೆ ನೆಹರೂರವರು ಅವರನ್ನು ಉಳಿದಿರಬೇಕೆಂದು ಪ್ರಾರ್ಥಿಸಿದುದಾಗಿಯೂ ಗೊತ್ತಾಗಿದೆ.

ಅಂಚೆ ಮುಷ್ಕರ ಕೂಡದೆಂದು ನಿರ್ಧಾರ

"ಭಾರತದ ಭದ್ರತೆಗೆ ಉಂಟಾಗಿರುವ ಭೀತಿ" ಯ ದೆಸೆಯಿಂದ ಮುಷ್ಕರವನ್ನು ಕೈಗೊಳ್ಳದಿರಬೇಕೆಂದು ಅಂಚೆ ಮತ್ತು ತಂತಿ ಇಲಾಖಾ ನೌಕರರಿಗೆ ಸಂಘದ ಕಾರ್ಯನಿರ್ವಾಹಕ ಮಂಡಲಿಯು ಸೂಚನೆಯನ್ನಿತ್ತಿರುವುದು ಸಾಮಾನ್ಯ ಕಾಲದಲ್ಲಿ ಮುಷ್ಕರವು ನ್ಯಾಯವಾದರೂ ಸಹ, ಈಗ ಅದು ಸರಿಯಲ್ಲವೆಂದು ಮಂಡಲಿಯು ಅಭಿಪ್ರಾಯ ಪಟ್ಟಿರುತ್ತದೆ. ಆ ರೀತಿ ಮುಷ್ಕರ ಹೂಡಿದರೆ ದೇಶಕ್ಕೆ ಅಪಾಯವನ್ನುಂಟುಮಾಡಿ ದ್ರೋಹ ಮಾಡಿದಂತೆ ಆಗುವುದೆಂದು ಅಭಿಪ್ರಾಯ ಪಡಲಾಗಿದೆ.

ಆಕಿನ್ಲೆಕ್ ಈ ದಿನ ವಾಪಸು

ಈ ದಿನ ಕರಾಚಿಯಿಂದ ಮಾಜಿ ಭಾರತದ ಸೇನಾನಿ ಫೀ|| ಮಾ|| ಆಕಿನ್ಲೆಕ್ಕರು ಲಂಡನ್ನಿಗೆ ತೆರಳುವರು. ಅವರು ಏಪ್ರಿಲ್ ೭ ಕ್ಕೆ ಪಾಕಿಸ್ತಾನಕ್ಕೆ ಬಂದು ಪೂರ್ವ ಮತ್ತು ಪಶ್ಚಿಮ ದೇಶಗಳಲ್ಲಿ ಸಂಚರಿಸಿದ್ದರು

೧ನೇ ಆನರ್ಸ್ ವಿದ್ಯಾರ್ಥಿಗಳ ಕುಂದು ಕೊರತೆ

ರಾಜಧಾನಿಯ ಮಹಾರಾಜಾ ಕಾಲೇಜಿನ ಕೆಲವು ೧ನೇ ಆನರ್ಸ್ ವಿದ್ಯಾರ್ಥಿಗಳನ್ನು ಮೇಲಿನ ತರಗತಿಗೆ ಕಳುಹಿಸದ ಪಾಸ್ ಕೋರ್ಸಿಗೆ ಹೋಗುವಂತೆ ಸೂಚಿಸಲಾಗುತ್ತಿರುವುದಾಗಿಯೂ, ಇಂಜನಿಯರಿಂಗ್ ಅವರು ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಪಾಸು ಕೊಡಬೇಕೆಂದು ಆರ್ಡಿನೆನ್ಸ್ ಹೊರಡಿಸಿರುವಾಗಲೂ ಸಹ, ಆನರ್ಸ್ ವಿದ್ಯಾರ್ಥಿಗಳಿಗೆ ಏಕೆ ನ್ಯಾಯವನ್ನು ದೊರಕಿಸಿಕೊಡಬಾರದೆಂದು ವಿಶ್ವವಿದ್ಯಾಲಯದ ಅಧಿಕಾರಿಗಳನ್ನೂ ಸರ್ಕಾರದವರನ್ನೂ ವಿದ್ಯಾರ್ಥಿಗಳ ಹಿತಚಿಂತಕರೊಬ್ಬರು ಕೇಳಿರುತ್ತಾರೆ.

ಮಹಾಭಿಷೇಕ ಮತ್ತು ಅಲಂಕಾರ

ಮಂಡಿ ಮೊಹಲ್ಲಾ ಕಾಳಿಕಾಂಬ ಮಹದೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ನಾಳೆ ಬೆಳಗ್ಗೆ ಮಹಾಭಿಷೇಕ ಮತ್ತು ಶ್ರೀ ದೇವಿಯವರಿಗೆ ಅಲಂಕಾರ, ಸಂಜೆ ೭ ಗಂಟೆಗೆ ಬ್ರಂ|| ಶ್ರೀ|| ಸಂಬಂಧಮೂರ್ತಿ ಭಾಗವತರಿಂದ "ಭಕ್ತ ನಂದನಾರ್" ಎಂಬ ಹರಿಕಥೆಯು ಏರ್ಪಡಿಸಲ್ಪಟ್ಟಿದೆ ಸರ್ವರಿಗೂ ಆಹ್ವಾನವಿದೆ

ಕೈಗಾರಿಕಾ ನ್ಯಾಯಾಲಯಕ್ಕೆ ಬಸ್ ವಿವಾದಗಳು

ಮೈಸೂರು ಜಿಲ್ಲೆಯಲ್ಲಿರುವ ೪೭ ಜನ ಬಸ್ ಮಾಲೀಕರಿಗೂ ಕಾರ್ಮಿಕರಿಗೂ ಇರುವ ವ್ಯಾಜ್ಯಗಳನ್ನು ಕೈಗಾರಿಕಾ ನ್ಯಾಯಾಲಯದ ತೀರ್ಮಾನಕ್ಕೆ ಒಪ್ಪಿಸಲಾಗಿದೆ ಇಲ್ಲಿನ ಜಿಲ್ಲಾ ಮೋಟಾರು ಕೆಲಸಗಾರರ ಸಂಘದವರು ೩೦ ಬೇಡಿಕೆಗಳನ್ನು ಸಲ್ಲಿಸಿದ್ದರು

ವಿಷ ಪ್ರಾಶನ ಮೊಕದ್ದಮೆಯಲ್ಲಿ ಮೇದಪ್ಪನವರ ಸಾಕ್ಷ್ಯ

ಬೆಂಗಳೂರು ೭

ಶ್ರೀ ಎಲ್ ಎಸ್ ರಾಜು ಮುಂತಾದವರ ಮೇಲೆ ನಡೆಯುತ್ತಿರುವ ವಿಷ ಪ್ರಾಶನ ಪ್ರಯತ್ನದ ಮೊಕದ್ದಮೆಯಲ್ಲಿ ಮೂರು ಕೋರ್ಟು ಸ್ಪೆಷಲ್ ನ್ಯಾಯಾಧೀಶರಾದ ಶ್ರೀ ಸಿ ಮೇದಪ್ಪನವರು ನೆನ್ನೆ ಸಾಕ್ಷ್ಯವಿತ್ತು ಈ ರೀತಿ ಹೇಳಿದರು.-

ನಾನು ಹೈಕೋರ್ಟಿನ ಸ್ಪೆಷಲ್ ನ್ಯಾಯಾಧೀಶನಾಗಿರುತ್ತೇನೆ ಜನವರಿ ೨೯ ನೇ ತಾ|| ಎಂದಿನಂತೆ ಹೈಕೋರ್ಟಿನಿಂದ ಸಂಜೆ ಮನೆಗೆ ಬಂದೆ ನಂತರ ಉಪಾಹಾರ ಮತ್ತು ಟೀ ತರಿಸಿಕೊಂಡು ಗಾಳಿ ಸಂಚಾರಕ್ಕೆ ಹೊರಟೆ ಅಷ್ಟು ಹೊತ್ತಿಗೆ ಹಿಂಭಾಗದಿಂದ ನನ್ನ ಗಂಗನು ಹತ್ತಿರ ಬಂದು ನಿಂತ ವಿಚಾರವೇನೆಂದು ಕೇಳಿದೆ ತಾಮ್ರದ ಪಾತ್ರೆಯಲ್ಲಿ ಟೀ ನಾಗಿ ನೀರನ್ನಿಟ್ಟು, ಉಪಾಹಾರ ತರಲು ಹೊರಕ್ಕೆ ಹೋದುದಾಗಿಯೂ, ಹಿಂತಿರುಗಿ ಬಂದ ಮೇಲೆ ನಾನು ಬರುವ ಹೊತ್ತಾಯಿತೆಂದು ಟೀ ಡಿಕಾಕ್ಷನ್ ಮಾಡಲು ಲಕ್ಕಯ್ಯನಿಗೆ ತಿಳಿಸಿ, ತಾನು ಟೀ ಮೇಜನ್ನು ಅಣಿ ಮಾಡಲು ಹೋದನೆಂದೂ ತಿಳಿಸಿದ ಅನಂತರ ಒಳಕ್ಕೆ ಹೋಗಿ ಟೀ ತಟ್ಟೆಯಲ್ಲಿ ಜಗ್ಗನ್ನು ತಂದನೆಂದೂ, ಡಿಕಾಕ್ಷನ್ ಅನ್ನು ಶೋಧಿಸುವಾಗ ಅದು ಸ್ವಲ್ಪ ಬಿಳುಪಾದುದು ಕಂಡು ಬಂದು ಮಾಮೂಲಿನಂತೆ ಇರಲಿಲ್ಲವೆಂದೂ ಹೇಳಿದ ನಂತರ ಹಾಲಿನ ಹಿತ್ತಾಳೆ ಪಾತ್ರೆಯನ್ನು ತರಲು ಹೋದಾಗ ಅದರ ಮೇಲೆ ಬಿಳಿ ಗೆರೆ ಹೆಪ್ಪು ಕಟ್ಟಿದ್ದುದು ಗೋಚರವಾದುದರಿಂದ ಬೇರೆ ಟೀಯನ್ನು ತಯಾರಿಸುವುದಾಗಿಯೂ ಹೇಳಿದ ಆ ಪಾತ್ರೆಯನ್ನು ತಂದು ತೋರಿಸಿದ ಕಂಠದಿಂದ ಹೊರಭಾಗದಲ್ಲಿ ಸುಮಾರು ೩-೪ ಅಂಗುಲ ಬಿಳಿ ಹೆಪ್ಪು ಕಾಣಬಂತು. ಪಾತ್ರೆ ಸುತ್ತಲೂ, ತಳದಲ್ಲೂ, ಹೊರಭಾಗದಲ್ಲೂ ಹೆಪ್ಪು ಇತ್ತು. ಹಾಲು ಮತ್ತು ಡಿಕಾಕ್ಷನ್ ಎಲ್ಲಿ ಎಂದು ಕೇಳಲಾಗಿ, ಅವನು ಬಚ್ಚಲಿನಲ್ಲಿ ಚೆಲ್ಲಿದುದಾಗಿ ಹೇಳಿದ ತಾಮ್ರದ ಪಾತ್ರೆಯನ್ನು ಪರೀಕ್ಷಿಸಿದೆ ಕಲಾಯ ಇದ್ದ ಆ ಪಾತ್ರೆಯಲ್ಲಿ ಏನೂ ಕಾಣಲಿಲ್ಲ ಲಕ್ಕನನ್ನು ಕರೆದು ಕೇಳಿದೆ ಟೀ ಸೊಪ್ಪನ್ನು ಜಗ್ಗಿಗೆ ಹಾಕಿ, ಅದಕ್ಕೆ ತಾಮ್ರದ ಪಾತ್ರೆಯ ಬಿಸಿ ನೀರನ್ನು ಸುರಿದುದಾಗಿಯೂ, ಹಾಲನ್ನು ಬಿಸಿ ಮಾಡಲು ಹಾಲಿನ ಪಾತ್ರೆಯನ್ನು ತಾಮ್ರದ ಪಾತ್ರೆಯೊಳಗೆ ಇಟ್ಟುದಾಗಿಯೂ ಅವನು ಹೇಳಿದ ಅಂಗನನ್ನೂ ಕರೆಸಿ ಕೇಳಿದ ನಂತರ ಪೋಲೀಸು ಸೂಪರಿಂಟೆಂಡೆಂಟರಿಗೆ ಫೋನ್ ಮಾಡಿ ದೂರು ಕೊಡಬೇಕಾಗಿದೆಯೆಂದು ಅವರನ್ನು ಬರಹೇಳಿದೆ ಅನಂತರ ದೂರನ್ನು ತಯಾರಿಸಿದೆ ಡಿ ಎಸ್ ಪಿ ಯವರೂ ಇಬ್ಬರು ಪೋಲೀಸು ಅಧಿಕಾರಿಗಳೂ ಬಂದರು ದೂರನ್ನು ಓದಿ ನೋಡಿ ಡಿ ಎಸ್. ಪಿ ಯವರು ಪಾತ್ರೆಗಳ ಅಜಮಾಯಿಷಿ ಮಾಡಿದರು ನನಗೆ ಕೆಲವು ಪ್ರಶ್ನೆಗಳನ್ನು ಹಾಕಿದರು ಪಂಚಾಯಿತಿದಾರನ್ನು ಕರೆಕಳುಹಿ ಅವರು ಮಹಜರು ಕ್ರಮ ನಡೆಸಿದರು ರಂಗೈಯನ್ ನನಗೆ ಗೊತ್ತು ಮೂರು ಕೋರ್ಟು ಜಿನ ನಾನು ಮನೆಗೆ ೭ ಗಂಟೆಗೆ ಬಂದಾಗ ಅವನನ್ನು ಕಂಡಿದ್ದೆ. ಒಂದು ಡಿಸೆಂಬರ್ ಆದಿಯಲ್ಲಿ ಒಂದು ದಿನ ಬೆಳಗ್ಗೆ ಹಸುಗಳ ಕೊಟ್ಟಿಗೆ ಬಳಿ ಒಂದ ಪೊಟ್ಟಣ ಬಿದ್ದಿದ್ದಿತೆಂದು ನನ್ನ ಡ್ರೈವರ್ ತಿಳಿಸಿದ್ದ ಅದು ಲೆಡ್ ಪಿಸ್ರಾಕ್ಸೈಡ್ ಎಂದೂ, ದನಗಳಿಗೆ ಪ್ರಯೋಗಿಸುವ ವಿಷ ಮತ್ತು ಗರ್ಭಿಣಿಯರ ಪ್ರಾಣ ತೆಗೆಯುವ ಪದಾರ್ಥವೆಂದೂ ಗೊತ್ತಾಯಿತು.

ಆ ಪೊಟ್ಟಣವನ್ನು ನಾನು ಕಣ್ಣಾರೆ ಕಾಣಲಿಲ್ಲ. ಹಿತ್ತಾಳೆ ಪಾತ್ರೆಯ ಮೇಲೆ ಹೆಪ್ಪು ಕಟ್ಟಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು ಶ್ರೀ ರಾಜುರವರನ್ನು ನನ್ನ ಕಾಲೇಜು ದಿನಗಳಿಂದಲೂ ಬಲ್ಲೆ. ನನಗೆ ತಿಳಿದಂತೆ ಅವರು ಅಧ್ಯಾಪಕರಾಗಿದ್ದರು. ನಾನು ಸಿವಿಲ್ ಪ್ರದೇಶದ ನ್ಯಾಯಾಧೀಶನಾಗಿದ್ದಾಗ ನನ್ನ ಬಳಿ ರಾಜುರವರಿಗೆ ಸ್ವಲ್ಪ ಕೆಲಸವಿರುತ್ತಿತ್ತು ಚಾಟರ್ಜಿಯವರು ದಕ್ಷರಾದ ಪೋಲೀಸು ಅಧಿಕಾರಿ ಎಂಬುದು ನನಗೆ ಗೊತ್ತು

ಭಾರತಕ್ಕೆ ಅನೇಕ ಗೂಢಚಾರರು

ಪೂರ್ವ ಪಂಜಾಬಿಗೆ ಅನೇಕ ಪಾಕಿಸ್ತಾನ್ ಗೂಢಚಾರರು ಪ್ರವೇಶಿಸಿರುವುದಾಗಿ ಜಲಂಧರ್ ಡಿವಿಜನ್ ಕಮೀಷನರರು ತಿಳಿಸಿರುತ್ತಾರೆ ಈ ಬಗ್ಗೆ ಅವರು ವಿವರ ಕೊಡಲಿಲ್ಲ

ನಡು ರಸ್ತೆಯಲ್ಲಿ ವಕೀಲರನ್ನು ಹೊಡೆದ ಪ್ರಸಂಗ

ಸ್ವಂ ಸು. ಫೋನ್] ಬೆಂಗಳೂರು ೯

ನೆನ್ನೆ ರಾತ್ರಿ ಲಾಲ್ಬಾಗ್ ಗಾರ್ಡನ್ ಬಳಿ ರಸ್ತೆಯಲ್ಲಿ ಹೋಗುತ್ತಿದ್ದ ಶ್ರೀ ವಿ ರಾಮಕೃಷ್ಣಯ್ಯ ಎಂಬ ಒಬ್ಬ ವಕೀಲರನ್ನು ಹಲವರು ಹಿಡಿದು ಚೆನ್ನಾಗಿ ಪೆಟ್ಟು ಹೊಡೆದ ಪರಿಣಾಮವಾಗಿ ಅವರಿಗೆ ತೀವ್ರ ಗಾಯಗಳಾಗಿವೆಯೆಂದೂ, ಚಿಕಿತ್ಸೆಗಾಗಿ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲು ಅವರ ಕೈ ಬೆರಳಿಗೆ ತೀವ್ರ ಘಾಸಿಯಾಗಿದ್ದುದರಿಂದ ಅದನ್ನು ಕತ್ತರಿಸಲಾಯಿತೆಂದೂ ಗೊತ್ತಾಗಿದೆ

○ ಬೊಂಬಾಯಿ ರಿಸರ್ವ್ ಬ್ಯಾಂಕಿನ ನೌಕರರಾದ ಶ್ರೀಗಳು ವೆಂಕಟಪತಯ್ಯ, ಸರ್ವೋತ್ತಮರಾವ್ ಮತ್ತು ನಂಜಯ್ಯ ಎಂಬುವರು ಸಂಸ್ಥಾನದ ಸಹಕಾರ ಸಂಸ್ಥೆಗಳ ಸ್ಥಿತಿಗತಿಗಳನ್ನು ಪರಿಶೀಲಿಸುವ ಸಲುವಾಗಿ ಇಲ್ಲಿಗೆ ಆಗಮಿಸಿರುವರು

○ ಸೀನಿಯರ್ ಸರ್ಜನರಾದ ಡಾ|| ಲಕ್ಷ್ಮಣರಾವ್ ಪವಕಿಯವರ ಅಧಿಕಾರಾವಧಿಯನ್ನು ಬರುವ ತಿಂಗಳಿನಿಂದ ಒಂದು ವರ್ಷ ಹೆಚ್ಚಿಸಲಾಗಿದೆ.

ದಾವಣಗೆರೆಯಲ್ಲಿ ವಿಮಾನ ನಿಲ್ದಾಣದ ಸ್ಥಾಪನೆ

ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿರುವುದಾಗಿ ಪ್ರಭುಗಳು

ದಾವಣಗೆರೆ ೮

ಇಲ್ಲಿನ ಪೌರ ಸಭೆಯವರು ಮತ್ತು ಇಬ್ಬರು ವರ್ತಕರು ನೆನ್ನೆ ಕೊಟ್ಟ ಬಿನ್ನವತ್ತಳೆಗೆ ಉತ್ತರವೀಯುತ್ತಾ ಶ್ರೀ ಮನ್ ಮಹಾರಾಜರು ದಾವಣಗೆರೆಯಲ್ಲಿ ವಿಮಾನ ನಿಲ್ದಾಣವನ್ನು ಕಟ್ಟಲೂ ಮತ್ತು ಭಟ್ಕಳ್ ರೇವನ್ನು ಅಭಿವೃದ್ಧಿ ಮಾಡಲೂ ಕೇಂದ್ರ ಸರ್ಕಾರಕ್ಕೆ ತಮ್ಮ ಸರ್ಕಾರದವರು ಮನವಿ ಮಾಡಿಕೊಂಡಿರುವುದಾಗಿ ತಿಳಿಸಿದರು ವಿಮಾನ ನಿಲ್ದಾಣ ಮತ್ತು ರೇವಿನ ಅಭಿವೃದ್ಧಿ ಬಗ್ಗೆ ಇರುವ ಅವಶ್ಯಕತೆಯನ್ನು ಸರ್ಕಾರದವರು ಮನಗಂಡಿರುವುದಾಗಿಯೂ ಆದ್ದರಿಂದಲೇ ಕೇಂದ್ರದವರನ್ನು ಪ್ರಾರ್ಥಿಸಿರುವುದಾಗಿಯೂ ಹೇಳಿದರು.

ಅಕ್ಕಿಯ ಪರಿಸ್ಥಿತಿ ಕಷ್ಟಕರ ಎಂದು ಮುನ್ಷಿ

ಅಕ್ಕಿಯ ಪರಿಸ್ಥಿತಿಯು ಕಷ್ಟಕರವಾಗಿರುವುದಲ್ಲದೆ ಸರ್ಕಾರದಲ್ಲಿ ಬಹಳ ಕಡಿಮೆ ದಾಸ್ತಾನು ಇರುವುದಾಗಿ ಆಹಾರ ಮಂತ್ರಿ ಮುನ್ಷಿಯವರು ಹೇಳಿರುತ್ತಾರೆ ಈಗಾಗಲೇ ಮೈಸೂರು ಮುಂತಾದ ೧೯ ಪ್ರದೇಶಗಳಲ್ಲಿ ೧೨ ಔನ್ಸ್ ಪಡಿತರ ಜಾರಿಗೆ ಬಂದಿರುವುದೆಂದೂ ಮದ್ರಾಸಿಗೆ ಹೆಚ್ಚು ಅಕ್ಕಿ ಕೊಡುವುದು ಸಾಧ್ಯವಿಲ್ಲವೆಂದೂ ಅವರು ಹೇಳಿರುತ್ತಾರೆ

ಭೂತಾನಿಗೆ ಭಾರತದ ಭಾಗ

ಅಸ್ಸಾಮಿನ ೩೩ ಚದುರ ಮೈಲಿ ಪ್ರದೇಶವನ್ನು ಭೂತಾನ್ ದೇಶಕ್ಕೆ ವರ್ಗಾಯಿಸಲು ಭಾರತ ಪಾರ್ಲಿಮೆಂಟಿನಲ್ಲಿ ತರಲಾದ ಮಸೂದೆಯನ್ನು ಒಪ್ಪಲಾಗಿದೆ ಈ ಸಂಬಂಧವಾಗಿ ನ್ಯಾಯಾಂಗ ಮಂತ್ರಿ ಅಂಬೇಡ್ಕರರಿಗೂ, ಡಾ|| ಶ್ಯಾಮ್ ಪ್ರಸಾದ್ ಮುಖರ್ಜಿಯವರಿಗೂ ವಾಗ್ವಾದವೇ ಆಯಿತು

ಭಾರತದಲ್ಲಿ ಈ ವರ್ಷ ರೈಲು ಇಂಜನ್ ತಯಾರಿಕೆ

ಈ ವರ್ಷಾಂತ್ಯದೊಳಗೆ ಶಾಶ್ವತ ರೈಲು ಇಂಜನ್ನುಗಳನ್ನು ತಯಾರಿಸಲು ಶಕ್ಯವಾಗುವುದೆಂದು [illegible] ಇಂಜಿನಿಯರಿಂಗ್ ವರ್ಕ್ಸಿನ [illegible] ಜೆ. ಆರ್. ಡಿ. ಟಾಟಾರವರು [illegible] ತ್ತಾರೆ

ಹಿಮಾಲಯ ಪತ್ತೆ ಹೋದ ಇಬ್ಬರ ಪತ್ತೆ ಇಲ್ಲ

ಹಿಮಾಲಯದ ನಂದಾದೇವಿ [illegible] ಶಿಖರವನ್ನು ಏರಲು ಹೋಗಿದ್ದ ಫ್ರೆಂಚ್ [illegible] ಗೋಪಿನಿಗೆ [illegible] ಇಬ್ಬರು [illegible] ಎಷ್ಟು ಹುಡುಕಿದರೂ [illegible] ಗಾಣಸು [illegible]ದಿರುತ್ತಾರೆ

ಪಾಕಿಸ್ತಾನ್ ಆಕ್ರಮ ನರ್ತನೆಗೆ ವಿಶ್ವಸಂಸ್ಥೆಯ ಎಚ್ಚರಿಕೆ

ಭಾರತದ [illegible] ನಡೆಸುತ್ತಿರುವ [illegible] ಪುಸ್ತಕ ಮಾಲೆಗಳ [illegible] ಚಿತ್ರಗಳನ್ನು [illegible] ಯೋಗ ಪಡಿಸ [illegible] ಸಂಸ್ಥೆಯ [illegible] ಪಾಕಿಸ್ತಾನಕ್ಕೆ ಎಚ್ಚರಿಕೆಯು [illegible]

[illegible] ಕಾಲಿಯ [illegible] ಮಾಜಿ [illegible] ಮತ್ತಾಯರವರನ್ನು [illegible]

ರುಕ್ಮಿಣಿ ಲಕ್ಷ್ಮೀಪತಿಯವರ ನಿಧನ

[illegible] ರುಕ್ಮಿಣಿ ಲಕ್ಷ್ಮೀಪತಿಯವರು [illegible]

ಅರಗನ್ನು ತಯಾರಿಸುವ ನೂತನ ಕಂಪನಿ

[illegible]

ಮುಂಗಡವಾಗಿ ಜಮೀನು ಕಂದಾಯವ ವಸೂಲಿಯೇ ?

[illegible] ಮುಂಗಡವಾಗಿ [illegible]

ಪಟೇಲು [illegible] ರಂಗಸ್ವಾಮಿ ಅಯ್ಯಂಗಾರ್ಯರ ನಿಧನ

[illegible]

ಸಿಹ್ಮಳಕ್ಕೆ ಪಿ. ಆರ್. ಬಾಲಕೃಷ್ಣ

ಸಿಂಹಳ ದ್ವೀಪದ ಸರ್ಕಾರದವರು ಸ್ಥಾಪಿಸಬೇಕೆಂದಿರುವ ಕಬ್ಬಿಣ ಮತ್ತು [illegible] ಕಾರ್ಖಾನೆಯ ಬಗ್ಗೆ ಅವರಿಗೆ ಸಲಹೆ ನೀಡಲು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಅಧ್ಯಕ್ಷರಾದ ಶ್ರೀ ಪಿ. ಆರ್. ಬಾಲಕೃಷ್ಣರವರನ್ನು ಕಳುಹಿಸಲು ಮೈಸೂರು ಸರ್ಕಾರದವರು ಒಪ್ಪಿರುತ್ತಾರೆ. ಅವರು ಸಾಧ್ಯವಾದಷ್ಟು ಶೀಘ್ರವಾಗಿ ಕೊಲಂಬೊವಿಗೆ ಹೋಗುವರು

Office of The Secretary, MYSORE GOVERNMENT LIFE INSURANCE DEPARTMENT
Bangalore
PUBLIC BRANCH)

Application having been received for the issue of duplicate policies Numbers 46425 C 85480/C, and 97743 C on the life of B Siddamadiah, Clerk, Office of the Chief Accounts Officer Southern Railway Mysore it is hereby notified that the duplicates will be issued unless valid objection therefor is received by the undersigned within one month from this date

M S NARASIMHA SASTRI
Secretary

Edited printed and published by A R Nagarajan at Sadhvi Press D. Subbiah Road, Mysore

ಚಾಮುಂಡೇಶ್ವರಿ ಟಾಕೀಸ್

10 8 51 ರಿಂದ [illegible]

3ನೇ ವಾರ

ದೇವಕಿ (ತಮಿಳು)

ಪಾತ್ರ [illegible]

ಪ್ರಭಾತ್ [illegible] 10 8 51 [illegible]

[illegible] **ಪ್ಯಾರ್**

[illegible]

ಸಾಮ್ರಾಟ್ ಅಶೋಕ್

SRI GAYATHRI
Mysore
LAST DAY
DESERT HAWK
[illegible]

BORDERLINE
[illegible]

ADVENTURE ISLAND
In [illegible]
From 15th K I M

ಶ್ರೀ ಗಣೇಶಾ ಟಾಕೀಸ್

9—8—51 ರಿಂದ : ಅಪೋಷಿ ಪ್ರಾರಂಭ

[illegible]

ಜೆಮಿನಿ ಯವರ * **ಬಾಲನಾಗಮ್ಮ** * [illegible]

[illegible] ಪಾತ್ರ ಕಾಂಚನಮಾಲಾ ಪುಷ್ಪವಲ್ಲಿ ಡಾ|| ಸುಬ್ಬರಾವ್, ಬಳ್ಳಾರಿ ಲಲಿತ ಮುಂತಾದವರು

ಗೌ|| ಕ್ರೇಪ್ ಸಿಲ್ಕ್ ಸೀರೆಗಳೂ-ಧರ್ಮಾವರಂ-ಅಗ್ಗ

[illegible]

M. V. ಭೋಜಯ್ಯ [illegible]

[illegible]

ನಾಟಕ ರತ್ನ ಹೀರಣ್ಣನವರ ಗುಬ್ಬಿ ಕಂಪೆನಿ (ಲಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

4-8-51 ರಿಂದ ಪ್ರತಿ ದಿನವೂ

ರಾಜಾ ಗೋಪಿ ಚಂದ್

ರಾಜಕಮಲ್, ಮೈಸೂರು

10-8 51 ರಿಂದ ಅಪೋಷಿ ಪ್ರಾರಂಭ ದಿನವಹಿ 3 ಆಟಗಳು

ಮಹಾತ್ಮಾರವರ ಮಹೋನ್ನತ ಕನ್ನಡ ಕಲಾ ಕೃತಿ

• ಜಗನ್ಮೋಹಿನಿ •

[illegible]

ರಣಜಿತ್ :: 10-8-51 ರಿಂದ

[illegible] ಮಹೋನ್ನತ ಹಿಂದಿ ಚಿತ್ರ

— ಬಾದಲ್ —

[illegible]

ASHOK RELEASE

ಒಲಂಪಿಯಾ ಟಾಕೀಸ್ 9 8 51 ರಿಂದ ಪ್ರತಿ ದಿನ 3 ಆಟಗಳು

ಬರ್ಸಾತ್ - ಕಿ - ಏಕ್‌ರಾತ್

ಪಾತ್ರ [illegible]

ಚಿರಗಿನ ಪ್ರದರ್ಶನ 10 8 51 ರಿಂದ ಮೂರು ದಿನಗಳು ಮಾತ್ರ

[illegible] ಟಾಕೀಸ್‌ರವರ : ಬರ್ಸಾತ್

ಪಾತ್ರ [illegible]

ಪೋಸ್ಟ್ ನಂ. 792 || ವಂದೇ ಮಾತರಂ || ಒಂದು ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೧೦-೮ ೫೧ [ಸಂಚಿಕೆ ೧೬

ರೈಲ್ವೆ ಮುಷ್ಕರವು ಮುಂದೆ ಹೋಯಿತು

೯ ಅಕ್ರಮ ರೇಷನ್ ಕಾರ್ಡು ಗಳಿದ್ದುದಾಗಿ ಆಪಾದನೆ

ಮೈಸೂರು ೯

ರಾಜಧಾನಿಯ ಮಂಡಿ ಮೊಹಲ್ಲಾದ ರಾಮವಿಲಾಸ್ ಬೀದಿಯಲ್ಲಿರುವ ಬ||ಸುಸ್ವಾಮಿ ಶರ್ಮ ಎಂಬುವರ ಹತ್ತಿರ ನ್ಯಾಯವಾದ ೧ ಕಾರ್ಡಿನೊಡನೆ ಅಕ್ರಮವಾದ ೯ ಪಡಿತರದ ಕಾರ್ಡುಗಳಿದ್ದುದನ್ನು ನಗರದ ಆಹಾರ ಶೋಧನಾ ಪಡೆಯವರು ಪತ್ತೆ ಹಚ್ಚಿ ಸದರಿಯವರ ಮೇಲೆ ಮೊಕದ್ದಮೆಯನ್ನು ಹೂಡಿರುತ್ತಾರೆ.

ಬೆಂಕಿ ನವಾಬರ ಬೀದಿಯಲ್ಲಿ ಮಿಲಿಟರಿ ಹೋಟೇಲನ್ನು ಇಟ್ಟಿರುವ ಸಿದ್ದಯ್ಯ ಎಂಬುವನು ಅಕ್ಕಿಯನ್ನು ಉಪಯೋಗಿ ಪಲಾವ್ ಮಾಡುವುದಕ್ಕೂ, ಮಂಡಿ ಮೊಹಲ್ಲೆಯಲ್ಲಿ ರಹದಾರಿಯಿಲ್ಲದೆ ಸೊಪ್ಪುಗಳನ್ನು ಮಲ್ಲಯ್ಯ ಎಂಬುವನು ಸಾಗಿಸುವುದಕ್ಕೂ ಅವರುಗಳಿಗೆ ಕಲಾ ಕೋರ್ಟು ಏಳುವವರೆಗೆ ಸಜಾ, ೫೦ ರೂ ದಂಡ ತಪ್ಪಿದರೆ ೧೫ ದಿನ ಸಾದಾ ಸಜವನ್ನು ವಿಧಿಸಲಾಗಿದೆ

ವರ್ತಕರ ಸಂಘದ ವ್ಯವಹಾರಗಳು

ರಾಜಧಾನಿಯ ವರ್ತಕ ಸಂಘದ ಸದಸ್ಯರ ಚುನಾವಣೆಯು ನಡೆಯದು ಸರಿಯಷ್ಟೆ? ಸಂಘದ ಸಮಿತಿಯ ಸದಸ್ಯರು ತಮ್ಮ ಕಚೇರಿ ಓಟನ್ನು ಗಳಿಸುವ ಸಲುವಾಗಿ ಸಾಧಾರಣ ಸಭೆಯು ನಡೆಯುವುದಕ್ಕೆ ೧೧ ದಿನ ಮುಂಚೆ ಹೊಸದಾಗಿ ಅನೇಕರನ್ನು ಸದಸ್ಯರನ್ನಾಗಿ ಸೇರಿಸಿಕೊಂಡು, ಕ್ರಮಬದ್ಧವಲ್ಲದ ರೀತಿಯಲ್ಲಿ ನಡೆದುಕೊಂಡರೆಂಬ ಕಾರಣಕ್ಕಾಗಿ ಉಮೇದುವಾರರಾಗಿ ನಿಂತಿದ್ದ ಶ್ರೀಗಳು ಎಂ ಜಿ ಪುಟ್ಟಸ್ವಾಮಯ್ಯ, ೨ ಚಿನ್ನಸ್ವಾಮಿ ಮೊದಲಿಯಾರ್, ಎಸ್ ನಾರಾಯಣ್ ಎ ಮಹೇಶ್ವರಯ್ಯ, ಕೆ. ಶೇಷಾದ್ರಿ ಶೆಟ್ಟಿ, ಎ ನಾರಾಯಣಸ್ವಾಮಿ, ಮತ್ತು ಎಸ್ ಮರಿದಾಸಪ್ಪನವರು ತಮ್ಮ ಉಮೇದುವಾರಿ ಅರ್ಜಿಗಳನ್ನು ವಾಪಸು ತೆಗೆದುಕೊಂಡಿರುವುದಾಗಿ ಶ್ರೀ ಕೆ ಶೇಷಾದ್ರಿ ಶೆಟ್ಟರು ತಿಳಿಸಿರುತ್ತಾರೆ. ಚುನಾವಣೆಯು ನಡೆಯದೇ ೧೩ ಜನರ ಜೊತೆಗೆ ಇನ್ನೂ ಇಬ್ಬರು ಸದಸ್ಯರನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳುತ್ತಾರೆ

ಹ ರಿ ಕ ಥೆ

ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಈ ಸಂಜೆ ೬ ಘಂಟೆಗೆ ಶ್ರೀ ಹೆಚ್ ಎಸ್ ಶಿವಲಿಂಗಸ್ವಾಮಿಗಳಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯನ್ನು ದೇವಾಂಗ ಸಂಘದವರು ಏರ್ಪಡಿಸಿರುವರು. ಅಮ್ಮನವರಿಗೆ ಗಜಲಕ್ಷ್ಮಿ ಅಲಂಕಾರವನ್ನು ಮಾಡಲಾಗುವುದು.

ಸೇಂಟ್ ಫಿಲೊಮಿನಾ ಮೆರವಣಿಗೆ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಸೇಂಟ್ ಫಿಲೊಮಿನಾ ಚರ್ಚಿನಿಂದ ನಾಳೆ ಸಂಜೆ ೬ ಘಂಟೆಗೆ ಅಮ್ಮನವರ ವಿಗ್ರಹವನ್ನು ದಿವ್ಯಾಲಂಕೃತವಾದ ರಥದಮೇಲೆ ಅರಮನೆ ವಾದ್ಯಗಳೊಡನೆ ಬೆಂಗಳೂರು ನೀಲಗಿರಿ ರಸ್ತೆ ಇರ್ವಿನ್ ರಸ್ತೆ ಮೂಲಕ ನೆಹರೂ ಸರ್ಕಲ್ ಮುಖಾಂತರ ಅಶೋಕಾ ರಸ್ತೆಯ ಬಂದು ಹಾಗೆಯೇ ಪುನಃ ಚರ್ಚಿಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುವುದು

ಅಂಟು ರೋಗದ ತಡೆಗೆ ಪುರಸಭೆಯ ಕಾರ್ಯಕ್ರಮ,

ಪತ್ರಿಕಾ ಗೋಷ್ಠಿಯಲ್ಲಿ ಪೌರ ಸಭಾಧ್ಯಕ್ಷರ ವಿವರಣೆ

ಮೈಸೂರು ೧೦

ಮೈಸೂರು ನಗರದಲ್ಲಿ ಕಾಲರಾ ರೋಗವು ಈಚೆಗೆ ಉಂಟಾಗಿರುವುದಕ್ಕೆ ಅನೈರ್ಮಲ್ಯವೇ ಕಾರಣ. ರಸ್ತೆಗಳ ಅಂಚಿನಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಜಲಮಲ ವಿಸರ್ಜನೆ ಮತ್ತು ಇತರ ವಿಧವಾದ ಪೌರನೀತಿಗೆ ವಿರುದ್ಧ ಕಾರ್ಯಗಳನ್ನು ಮಾಡುವುದರಿಂದ ರೋಗಗಳು ಹರಡಲು ಅವಕಾಶವಾಗುವುದು. ಇವನ್ನು ಹೋಗಲಾಡಿಸಲು ಸಿನಿಮಾ ಸ್ಲೈಡುಗಳ ಮತ್ತು ವ್ಯಾಸಿನ ಪ್ರಚಾರದ ಮೂಲಕ ಶಕ್ಯ ಕಾರ್ಯಕ್ರಮವನ್ನು ಕೈಗೊಳ್ಳಲು ಪುರಸಭೆಯು ಯೋಚಿಸುತ್ತಿದೆ-ಎಂದು ಶ್ರೀ ಟಿ ನರಸಿಂಹಯ್ಯಂಗಾರ್ಯರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು. ಪ್ರಭುಗಳು ನಗರಾಭಿವೃದ್ಧಿ ಸಮಿತಿಯ ಕೆಲಸಗಳನ್ನು ಪರಿಶೀಲಿಸುವ ಕಾರ್ಯಕ್ರಮವು ಶೀಘ್ರದಲ್ಲಿ ರಾಜಕೀಯನಿದೆಯೆಂಬ ಅಂಶವನ್ನು ಅಧ್ಯಕ್ಷರು ನಿರಾಕರಿಸಿದರು

ಪ್ರಭುಗಳ ಸ್ವಂತ ಸವಾರಿ ವಳಗಿನ ನಿವಾಸಗಳನ್ನು ವಹಿಸಿಕೊಂಡು ಅದನ್ನು ಮನೆಗಳಿಲ್ಲದ ಜನರಿಗೆ ಬಾಡಿಗೆಗೆ ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿರುವುದಾಗಿಯೂ, ಅದಕ್ಕೆ ಸುಮಾರು ೧೬ ಲಕ್ಷ ರೂ ವೆಚ್ಚ ತಗಲುವುದೆಂದೂ ಅವರು ಹೇಳಿದರು

ರಾಜಧಾನಿಯಲ್ಲಿ

೬ ದಿನಗಳ ಕುದುರೆ ಜೂಜು

ಬರುವ ತಿಂಗಳು ೨೬, ೩೦ ಅಕ್ಟೋಬರ್ ೩, ೬, ೧೧ ಮತ್ತು ೧೬ನೇ ತಾ|| ಗಳಲ್ಲಿ ದಸರಾ ಹಬ್ಬದ ಕುದುರೆ ಜೂಜು ನಡೆಯುವುದು. ಈ ಬಗ್ಗೆ ಎಲ್ಲ ಏರ್ಪಾಡುಗಳನ್ನೂ ಮಾಡಲಾಗುತ್ತಿದೆ

ಕಾಶ್ಮೀರದ ಮೇಲೆ ಯುದ್ಧದ ಪರಿಣಾಮ

ಕಾಶ್ಮೀರದ ಮೇಲೆ ಧಾಳಿ ನಡೆಸಿದರೆ, ಆ ದೇಶದ ಗುಡ್ಡಗಾಡು ಪ್ರದೇಶಗಳಲ್ಲಿ ಮಾತ್ರ ಯುದ್ಧವಾಗದೇ ಭಾರತ ಮತ್ತು ಪಾಕಿಸ್ತಾನಗಳಿಗೆಲ್ಲಾ ಹರಡುವುದೆಂದು ನೆಹರೂರವರು ಸ್ಪಷ್ಟ ಪಡಿಸಿರುತ್ತಾರೆ

ರೈಲ್ವೆ ಮುಷ್ಕರ ೨ ತಿಂಗಳವರೆಗೆ ಇಲ್ಲ

ಈ ತಿಂಗಳು ೨೭ ನೇ ತಾರೀಖು ಪ್ರಾರಂಭವಾಗಬೇಕಾಗಿದ್ದ ರೈಲ್ವೆ ನೌಕರರ ಮುಷ್ಕರವನ್ನು ೨ ತಿಂಗಳು ಕಾಲ ಸಸ್ಪೆಂಡ್ ಮಾಡಲು ರೈಲ್ವೆ ನೌಕರರ ಸಂಘದ ಕಾರ್ಯ ಸಮಿತಿಯು ನಿರ್ಧರಿಸಿರುತ್ತದೆ. ಅನಂತರ ಇರುವ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಹೇಳಲಾಗಿದೆ. ಪ್ರಧಾನಿ ನೆಹರೂರವರೂ ರೈಲ್ವೆ ಮಂತ್ರಿ ಎನ್ ಜಿ ಅಯ್ಯಂಗಾರ್ಯರೂ ಈ ಸಂಘದ ಅಧ್ಯಕ್ಷರಾದ ಜೈಪ್ರಕಾಶ್ ನಾರಾಯಣ್‌ರವರಿಗೆ ಪತ್ರಗಳನ್ನು ಬರೆದಿದ್ದರೆಂದು ಹೇಳಲಾಗಿದೆ

ಕಾಶ್ಮೀರ ಮಹಾರಾಜರ ರಾಜ ಧನ

ಒಮ್ಮೆ ಮತ್ತು ಕಾಶ್ಮೀರದ ಮಹಾರಾಜರಿಗೆ ವರ್ಷಂಪ್ರತಿ ೧೫ ಲಕ್ಷ ರೂ ರಾಜಧನವನ್ನು ಕೊಡಲಾಗುವುದು. ಸಂಸ್ಥಾನ ಸರ್ಕಾರದವರು ೬ ಲಕ್ಷ ಮತ್ತು ಕೇಂದ್ರದವರು ೯ ಲಕ್ಷ ರೂ ಗಳನ್ನು ಕೊಡುವರು. ಯುವ ರಾಜರಿಗೆ ಪ್ರತ್ಯೇಕ ಧನವನ್ನು ಗೊತ್ತು ಮಾಡಿಲ್ಲ

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಹವರ್ತನೆ

ಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಮುಸ್ಲಿಂ ಲೀಗಿನ ಸದಸ್ಯರ ಸಹವರ್ತನೆಯನ್ನು ಪಡೆಯುವ ಬಗ್ಗೆ ಮದ್ರಾಸಿನ ಹಣಕಾಸಿನ ಮಂತ್ರಿ ಎ ಗೋಪಾಲ ರೆಡ್ಡಿಯವರು ಲೀಗ್ ಅಧ್ಯಕ್ಷರಾದ ಮಹಮದ್ ಇಸ್ಮಾಯಿಲರೊಡನೆ ಸಂಧಾನವನ್ನು ಪ್ರಾರಂಭಿಸಿರುವುದಾಗಿ ಗೊತ್ತಾಗಿದೆ

ಪುನಃ ಫ್ರೆಂಚ್ ಪ್ರಧಾನಿ ಯಾಗಿ ಪ್ಲೆವೀನ್

ಫ್ರಾನ್ಸಿನ ಶಾಸನ ಸಭೆಯಲ್ಲಿ ಕಳೆದ ೩೦ ದಿನಗಳಿಂದಲೂ ಇದ್ದ ಬಿಕ್ಕಟ್ಟು ಕಳೆದು ಮೊನ್ನೆ ದಿನ ರ್‍ಯಾಡಿಕಲ್ ಪಕ್ಷದ ಮುಖಂಡರಾದ ರೆನೆ ಪ್ಲೆವಿನ್‌ರವರು ಮುಖ್ಯ ಮಂತ್ರಿಗಳಾಗಿ ಚುನಾಯಿತರಾದರು. ಆದರೆ ಮಂತ್ರಿ ಮಂಡಲವನ್ನು ರಚಿಸಲು ಅವರಿಗೆ ಸಾಧ್ಯವಾಗಿಲ್ಲವೆಂದು ಹೇಳಲಾಗಿದೆ

ಪಾಕಿಸ್ತಾನ್ ಪೋಲೀಸರಿಂದ ಎರಡು ದ್ವೀಪಗಳ ಆಕ್ರಮಣ

ಕಳೆದ ಜೂನ್ ತಿಂಗಳಿನಲ್ಲಿ ಪೂರ್ವ ಬಂಗಾಳದ ಪೋಲೀಸರು ಆಕ್ರಮಿಸಿಕೊಂಡಿರುವ ಅಸ್ಸಾಮಿನ ಗೋಲ್ಪಾರ ಜಿಲ್ಲೆಯ ಎರಡು ಹಳ್ಳಿಗಳಿಂದ ತಮ್ಮ ಸೈನ್ಯಗಳನ್ನ ವಾಪಸು ಕರೆಸಿಕೊಳ್ಳುವಂತೆ ಪಾಕಿಸ್ತಾನ ಸರ್ಕಾರಕ್ಕೆ ಸೂಚಿಸಲಾಗಿದೆ ಎಂದು ಭಾರತ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ. ಬ್ರಹ್ಮಪುತ್ರ ನದಿಯೊಳಗಿನ ಈ ದ್ವೀಪಗಳ ಸ್ವಾಮ್ಯದ ಬಗ್ಗೆ ಎರಡು ಸರ್ಕಾರಗಳ ಸಂಯುಕ್ತ ಮಂಡಳವು ಪರಿಶೀಲನ ನಡೆಸಿ ಒಂದು ತೀರ್ಮಾನಕ್ಕೆ ಬರುವವರೆಗೂ ಭಾರತ ಸರ್ಕಾರವು ಅಲ್ಲಿಗೆ ತನ್ನ ಸೈನ್ಯವನ್ನು ಕಳುಹಿಸುವುದಿಲ್ಲವೆಂದು ಅದರಲ್ಲಿ ತಿಳಿಸಲಾಗಿದೆ

ಅಗ್ಗದ ಬೆಲೆಗೆ ಸಕ್ಕರೆ

ಅಗ್ಗದ ಬೆಲೆಗೆ ಸಕ್ಕರೆಯನ್ನು ಮಾರುವ ಬಗ್ಗೆ ಸಕ್ಕರೆ ಕಾರ್ಖಾನೆಯವರು ಪರ್ಯಾಲೋಚನೆ ನಡೆಸುತ್ತಿರುವುದಾಗಿ ಗೊತ್ತಾಗಿದೆ. ಸಕ್ಕರೆಯನ್ನು ದಾಸ್ತಾನು ಮಾಡಕೂಡದೆಂದು ವ್ಯಾಪಾರಸ್ಥರಿಗೂ, ಕೈಗಾರಿಕೆಯವರಿಗೂ ಎಚ್ಚರಿಕೆ ಕೊಡಲಾಗಿದೆ

ಪಾಕಿಸ್ತಾನವನ್ನೆದುರಿಸಲು ಮುಸ್ಲಿಂ ಸೈನ್ಯ

ಪಾಕಿಸ್ತಾನವು ಮಾಡಬಹುದಾದ ಆಕ್ರಮಣವನ್ನು ಎದುರಿಸಲು ಮುಸಿಮರ ಸೈನ್ಯವನ್ನು ವ್ಯವಸ್ಥೆ ಮಾಡಬೇಕೆಂದು ಪಶ್ಚಿಮ ಬಂಗಾಳದ ರಾಷ್ಟ್ರೀಯ ಮುಸ್ಲಿಮರ ಸಂಸ್ಥೆಯೊಂದು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ

ಚುನಾವಣೆಯಲ್ಲಿ ವಿ.ಪಿ. ಮೆನನ್ನರ ಸ್ಪರ್ಧೆ

ಮಹಾಚುನಾವಣೆಯಲ್ಲಿ ಮಲಬಾರ್ ಕ್ಷೇತ್ರದಿಂದ ಪಾರ್ಲಿಮೆಂಟಿನ ಚುನಾವಣೆಗೆ ಉಮೇದುವಾರರಾಗಲು ಭಾರತದ ಸಂಸ್ಥಾನ ಇಲಾಖಾ ಕಾರ್ಯದರ್ಶಿ ವಿ ಪಿ ಮೆನನ್ನರು ಆಲೋಚಿಸುತ್ತಿರುವರು

ಪಶ್ಚಿಮ ಆಫ್ರಿಕದಲ್ಲಿ ನರ ಭಕ್ಷಕರು

ಪಶ್ಚಿಮ ಆಫ್ರಿಕದ ಐವರಿ ಕೋಸ್ಟ್ ಎಂಬ ದೇಶದಲ್ಲಿರುವ ವಿಕ್ಟರ್ ಬಯಾಕ್ ಜ್ಯೋಡಾ ಎಂ. ಫ್ರೆಂಚ್ ಪಾರ್ಲಿಮೆಂಟಿನ ಸದಸ್ಯನನ್ನು ಅವನ ಕಡೆಯ ಜನರು ಕೊಂದು ತಿಂದುದಾಗಿ ವರದಿ ಮಾಡಲಾಗಿದೆ. ಆತನ ದೇಹದ ಭಾಗಗಳು ಕಾಡಿನಲ್ಲಿ ದೊರೆತ ಮೇಲೆ ಅವನ ಇಬ್ಬರು ಪತ್ನಿಯರು ಪೋಲೀಸು ಠಾಣೆಗೆ ದೂರು ಕೊಟ್ಟಿದ್ದರು. ಆತನು ಅದೃಶ್ಯವಾದ ವಿಷಯವು ಹೇಗೆಂದು ಇನ್ನೂ ಗೊತ್ತಾಗಿಲ್ಲ

ಶಿವ ಕಥಾ ಕಾಲಕ್ಷೇಪ

ಕೃಷ್ಣರಾಜಪೇಟೆ ೬

ಕರ್ನಾಟಕದ ನಾನಾ ಕಡೆಗಳಲ್ಲಿ ಸಂಚರಿಸಿರುವ ಶಿವಕಥಾ ವಿದ್ವಾಂಸರಾದ ಶ್ರೀ ನಂಜುಂಡಾರಾಧ್ಯರು ಇಲ್ಲಿನ ಧರ್ಮಛತ್ರದಲ್ಲಿ ಕಳೆದ ವಾರ ರಾತ್ರಿಯ ಸಮಯಗಳನ್ನು ಕೀರ್ತನಾ ರೂಪವಾಗಿ ತಿಳಿಸಿದರು. ಇವನ್ನು ಕೇಳಲು ಅನೇಕ ಸ್ತ್ರೀ ಪುರುಷರು ಆಗಮಿಸಿದ್ದರು

ಬ್ರಿಟಿಷ್-ಭಾರತ ಪತ್ರಗಳಲ್ಲಿ ಬ್ರಿಟಿಷರ ಕೈವಾಡ ?

ಲಿಯಾಖತ್ತರು ನೆಹರೂರವರಿಗೆ ಇತ್ತ ಉತ್ತರಗಳನ್ನು ಲಂಡನ್ನಿನಲ್ಲಿರುವ ವೈಟ್ ಹಾಲ್ ಅಥವಾ ಕರಾಚಿಯಲ್ಲಿರುವ ಬ್ರಿಟಿಷ್ ಹೈ ಕಮಿಷನರ ಕಚೇರಿಯಲ್ಲಿ ತಯಾರಿಸಲಾಯಿತೆಂದು ದೆಹಲಿಯಲ್ಲಿ ನಂಬಲಾಗಿದೆ. ಕಾಂಗ್ರೆಸ್ಸಿನೊಡನೆ ಹೋರಾಡಿದ ಮಾಜಿ ವೈಸ್‌ರಾಯರಾದ ಲಿನ್‌ಲಿತ್‌ಗೋ ರವರ ಆಪ್ತ ಕಾರ್ಯದರ್ಶಿ ಗಿಲ್ಬರ್ಟ್ ಲೈತ್‌ವೈಟ್ ರವರನ್ನು ಪಾಕಿಸ್ತಾನಕ್ಕೆ ಹೈ ಕಮಿಷನರಾಗಿ ಕಳುಹಿಸಲಾಗುವುದೆಂದು ಹೇಳಲಾಗಿದೆ.

ಉತ್ತರ ಪ್ರದೇಶ ಮಂತ್ರಿ ಮಂಡಲಕ್ಕೆ ಆಲಿ ಜಾಹಿರ್

ಉತ್ತರ ಪ್ರದೇಶದ ಮಂತ್ರಿಮಂಡಲಕ್ಕೆ ಇಂಡೊನೇಷ್ಯಕ್ಕೆ ರಾಯಭಾರಿಯಾಗಿ ನೇಮಕರಾಗಿರುವ ಸೈಯದ್ ಆಲಿ ಜಾಹಿರ್ ಮತ್ತು ಪಾರ್ಲಿಮೆಂಟರಿ ಕಾರ್ಯದರ್ಶಿ ಪರಗೋವಿಂದ ಸಿಂಗರನ್ನು ರಾಜೀನಾಮೆಯಿತ್ತ ಇಬ್ಬರು ಮಂತ್ರಿಗಳ ಬದಲು ತೆಗೆದುಕೊಳ್ಳಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ

ನಂಜನಗೂಡು ೮

ಇಲ್ಲಿನ ಕರ್ನಾಟಕ ಸಂಘದವರು ಬರುವ ಬುಧವಾರ ಸ್ವಾತಂತ್ರ್ಯದಿನಾಚರಣೆಯನ್ನು ನೆರವೇರಿಸಲಿರುವರು. ದಕ್ಷಿಣ ಕನ್ನಡ ಪ್ರಸಿದ್ಧ ಕಾದಂಬರಿಕಾರರಾದ ಶ್ರೀ ಕೆ. ಶಿವರಾಮ ಕಾರಂತ್‌ರವರು ಭಾಷಣ ಮಾಡುವರು. ಸಾರ್ವಜನಿಕರು ಈ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ಆಗಸ್ಟ್ ದಿನಾಚರಣೆಯ ಸವಿನೆನಪಿಗಾಗಿ ಸಂಘದ ಆಶ್ರಯದಲ್ಲಿ ವಿಶ್ವಶಾಂತಿಗೆ ಗಾಂಧೀಜಿಯವರ ತತ್ವ ಒಂದೇ ಮಾರ್ಗವೆಂಬ ವಿಷಯದ ಮೇಲೆ ಪ್ರಬಂಧ ಸ್ಪರ್ಧೆಯು ನಡೆಯಿತು. ಗೆದ್ದವರಿಗೆ ಸ್ವಾತಂತ್ರ್ಯೋತ್ಸವದ ಸಮಾರಂಭದಲ್ಲಿ ಬಹುಮಾನವನ್ನು ಕೊಡಲಾಗುವುದು.

○ ಪ್ಯಾರಿಸ್ ಕೊಲಿಯರಿಯವರು ಕಳೆದ ಜೂನ್ ೨೦ರಲ್ಲಿ ವಿಷ ವಾಯುವನ್ನು ಪ್ರಯೋಗಿಸಿದುದರಿಂದ ಇಬ್ಬರು ಸತ್ತು ೨೫ ಮಂದಿಗೆ ತೊಂದರೆಯಾಗಿರುವುದಾಗಿ ಸೀಕಿಂಗ್ ರೇಡಿಯೊವು ತಿಳಿಸುತ್ತದೆ.

ಹೊಸ ರೇಷ್ಮೆ ಅಂಗಡಿ

ರಾಜಧಾನಿಯ ಎಲ್. ಕೆ. ಎಸ್. ಸುಬ್ಬರಂಗಯ್ಯ ಸನ್ಸ್‌ರವರ ಮಾಲೀಕರಾದ ಶ್ರೀಗಳಾದ ಎಲ್. ಎಸ್. ಸುಬ್ಬರಾಯಪ್ಪ ಮತ್ತು ಎಲ್. ಎಸ್. ಸುಬ್ಬಕೃಷ್ಣರವರು ನೆನ್ನೆ ಬೆಳಿಗ್ಗೆ ಸಯ್ಯಾಜಿರಾವ್ ರಸ್ತೆಯಲ್ಲಿ ಎಲ್ ಕಾಳಯ್ಯನವರ ರೇಷ್ಮೆ ಅಂಗಡಿಯನ್ನು ಹೊಸದಾಗಿ ತೆರೆದು, ಇಷ್ಟಮಿತ್ರರನ್ನು ತಾಂಬೂಲಾದಿಗಳಿಂದ ಸತ್ಕರಿಸಿದರು.

○ ಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಸಕಲ ಪಕ್ಷಗಳೂ ಭಾಗವಹಿಸಲು ಅವಕಾಶವನ್ನು ಉಂಟುಮಾಡಿಕೊಡುವ ಸಲುವಾಗಿ ಬಿಹಾರ್ ಜೈಲುಗಳಲ್ಲಿರುವ ಎಲ್ಲ ರಾಜಕೀಯ ಬಂದಿಗಳನ್ನೂ ಸರ್ಕಾರದವರು ಬಿಡುಗಡೆ ಮಾಡಲು ನಿರ್ಧರಿಸಿರುತ್ತಾರೆ. ಅಲ್ಲಿ ೪೦ ಮಂದಿ ಬಂಧನದಲ್ಲಿರುವರು.

ಮನೆ ಬಿಕರಿಗಿದೆ

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ, ನಾರಾಯಣ ಶಾಸ್ತ್ರಿ ರಸ್ತೆ ಮತ್ತು ಡಿ. ಸುಬ್ಬಯ್ಯನವರ ರಸ್ತೆ ಚೌಕದಲ್ಲಿರುವ ಡೋರ್ ನಂಬರು ೩೭೩ ಉಳ್ಳ, ಸಿಮೆಂಟು ಗಾರೆ, ಎಲೆಕ್ಟ್ರಿಕ್ ದೀಪ, ನಲ್ಲಿ ಇರುವ ಹೊಸ ಮನೆ. ಇದಕ್ಕೆ ನಾರಾಯಣ ಶಾಸ್ತ್ರಿ ರಸ್ತೆಗೆ ಸುಂದರ ಭರ್ಜರಿ ಹೋಟೆಲ್ ಮತ್ತು ೬ ಮಳಿಗೆಗಳು ಇರುತ್ತವೆ. ವಿವರಗಳಿಗೆ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ.

ಕೆ. ಎನ್. ವಿಶ್ವನಾಥರಾವ್,
ಭವಾನಿ ಸ್ಟೀಲ್ ಷಾಪ್,
ಡಿ. ಸುಬ್ಬಯ್ಯ ರಸ್ತೆ

Edited, printed and published by A. R. Nagarajan, at Sadhvi Press D Subbiah Road, Mysore

ಉಪನ್ಯಾಸ

ನಂಜನಗೂಡು ೮

ಇಲ್ಲಿನ ಕರ್ನಾಟಕ ಸಂಘದಲ್ಲಿ ಸಾಂಗಲಿಯ ವಿಲಿಂಗ್ಡನ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಶ್ರೀ ಮುಗಳಿಯವರು ಕನ್ನಡಿಗರ ಮಾತಿನ ಭಾಷೆಯ ವಿಷಯವಾಗಿ ಉಪನ್ಯಾಸ ಮಾಡಿದರು. ಶೇಕಡ ೫೦ ರಷ್ಟು ಸಂಸ್ಕೃತ ಪದಗಳು ಕನ್ನಡದಲ್ಲಿ ಬೆರೆತಿರುವುದಾಗಿಯೂ, ಆದರೂ ಕನ್ನಡವು ಕಳೆಗುಂದಿಲ್ಲವೆಂದೂ ಅವರು ಹೇಳಿದರು.

ಭೋಗ್ಯಕ್ಕೆ ಮನೆಗಳು

ದೀಪ, ಬಾವಿ, ಫ್ಲಷ್, ನಲ್ಲಿ ಇರುವ
ಆರ್. ಸಿ. ಸಿ. ಕಟ್ಟಡಗಳು
ಕೃಷ್ಣರಾಜ ವನಂನಲ್ಲಿ
ರೂ. 3000/
ಚಾಮುಂಡೀಪುರಂ ಕಾಲೋನಿ
ರೂ 4000/
ವಿಶಾಲವಾದ ಮನೆ
ರೂ. ೭000/-

ಖರೀದಿಗಿರುವುವು

ದೀಪ, ನಲ್ಲಿ ಫ್ಲಷ್ ಇವೆ
ಚಾಮುಂಡೀಪುರಂ ಕಾಲೋನಿ
ಮಂಗಳೂರು ಹೆಂಚಿನ ಮನೆ
ರೂ. 5750/-
ಆರ್. ಸಿ. ಸಿ. ಭಾರಿ ಮನೆ
ರೂ. 14000/
ತಾರಸಿ ಮತ್ತು ಹೆಂಚಿನ ಮನೆ
ರೂ. 5500/-
ಅ ಶೋ ಕ ಪಾ ಕ್ ಬ ಳಿ
೪ ಸಂಸಾರಕ್ಕನುಕೂಲವಾದ
ಆರ್. ಸಿ. ಸಿ. ಮನೆ
ರೂ 18,000/-
ಅಲ್ಲೇ ಇನ್ನೊಂದು ಮನೆ
ರೂ 12500/-

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ಬಳಿ · ಮೈಸೂರು.

ಮೈಸೂರು ಕ್ರೇಪ್, ಧರ್ಮಾವರ ಕಾಂಚೀಪುರದ ರೇಷ್ಮೆ ಸೀರೆಗಳಿವೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ,
ಬೊಂಬಾಯಿ ಆನಂದ ಭವನ ಹೋಟೆಲ್ ಪಕ್ಕ ಮೈಸೂರು

ರಾಜಕಮಲ್, ಮೈಸೂರು

10-8 51 ರಿಂದ, ಅಮೋಘ ಪ್ರಾರಂಭ ದಿನವೂ 3 ಆಟಗಳು
ಮಹಾತ್ಮಾರವರ ಮಹೋನ್ನತ ಕನ್ನಡ ಕಲಾ ಕೃತಿ

• ಜಗನ್ಮೋಹಿನಿ •

ಭೂಮಿಕೆ ಹರಿಣಿ ಪ್ರತಿಮಾದೇವಿ ಜಯಶ್ರೀ ನಾಗರಾಜು
ಶ್ರೀನಿವಾಸರಾವ್ ನರಸಿಂಹರಾವ್ ಮತ್ತು ಮಹಾಬಲ ರಾವ್

Nalins
Premier Auctioneers
House Furnishers
V V M Square Mysore

PROUDLY ANNOUNCE
To the public that they will be holding a
GRAND SPECIAL AUCTION SALE
ON THE INDEPENDENCE DAY

ರಣಜಿತ್ ಟಾಕೀಸ್

10-8-51 ರಿಂದ :: ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ನಮಾ ಫಿಲಂಸ್‌ರವರ ಮಹೋನ್ನತ ಹಿಂದಿ ಚಿತ್ರ

• ಬಾದಲ್ •

(ರಾಬಿನ್‌ಹುಡ್ ಕಥೆಯ ಆಧಾರ)
ಭೂಮಿಕೆಯಲ್ಲಿ ಮಧುಬಾಲ ಪ್ರೇಮನಾಥ್
ನೈರೆಕ್ಟರ್ ಅಮಿಯಾ ಚಕ್ರವರ್ತಿ ಸಂಗೀತ: ಶಂಕರ್‌ಜಯಕಿಷನ್
ASHOK RELEASE

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು
ರತ್ನಾವಳಿ ಥಿಯೇಟರಿನಲ್ಲಿ
4-8-51 ರಿಂದ :: ಪ್ರತಿ ದಿನವೂ

ರಾಜಾ ಗೋಪಿಚಂದ್

ಗಮನಿಸಿರಿ ! :: ಗಮನಿಸಿರಿ !

ಅಬೀದ್‌ರವರ ವಿಶೇಷ ಆಕರ್ಷಣೀಯ

ಅಮೋಘ ಹರಾಜು ಮಾರಾಟ

12-8-51 ನೇ — ಭಾನುವಾರ — ಬೆಳಗ್ಗೆ 10 ಘಂಟೆಗೆ
ಸ್ಟ್ರೆಚ್ಚಿ ಚೌಕದ ಬಳಿ ಇರುವ ಸೇಲ್ ರೂಮಿನಲ್ಲಿ

ಶ್ರೀ ದೊರೆಸ್ವಾಮಿ ಅಯ್ಯಂಗಾರ್ ಮತ್ತಿತರರ ಸೂಚನೆ ಮೇರೆ ಕೆಳಗೆ ಕಂಡ ಪದಾರ್ಥಗಳ ಹರಾಜು ಮಾರಾಟವನ್ನು ಏರ್ಪಡಿಸಲಾಗಿದೆ.

1 ಉತ್ತಮ ದರ್ಜೆಯ ಕನ್ನಡಿಗಳು, ಕಬ್ಬಿಣದ ಸ್ಪ್ರಿಂಗ್ ಮಂಚಗಳು, ಟೀಕ್ ಮರದ ಟೈಪ್ ಮೇಜು, ಕುರ್ಚಿಗಳು, ಬೀರುಗಳು, ಗಾಜಿನ ಬಾಗಿಲುಗಳು, ಡ್ರೆಸ್ಸಿಂಗ್ ಟೇಬಲ್ ಸೋಫಾಸೆಟ್ಟುಗಳು, ಟೀಪಾಯಿಗಳು ಮತ್ತು ಸ್ಟೂಲ್‌ಗಳು ಇತ್ಯಾದಿ

2 ತೇಗ ಮೊದಲಾದ ಮರದ ಮತ್ತು ಕಬ್ಬಿಣದ ಸಾಮಾನುಗಳ ಭಾರಿ ಕಾಟು, ಮಂಗಲುಗಳು, ಕಿಟಕಿಗಳು, ಕನ್ನಾರು ಶೀಟುಗಳು, ತೇಗದ ಮರದ ರಾಫ್ಟರುಗಳು, ಕಲಾಮುಗಳು, ಸರಗಳು, ಗಾಜು ಹಂಡುಗಳು, ಕಡಿಮಾ ಕಲ್ಲುಗಳು, ಸಿ. ಐ. ಶೀಟುಗಳು, ಶೌಚ ಕಪ್ಪುಗಳು, ವೈರ್ ಕಟ್ಟಿಂಗ್‌ಗಳು, ಮತ್ತು ರಿಪೇರುಗಳು ಇತ್ಯಾದಿ

3. ಹೊಸ ಗಾಜಿನ ಬೋಟಲುಗಳು, ಕೆಡವಲ್ ನಂ 2 ಮುದ್ರಿಸಲ್ಪಟ್ಟ ಕ್ಯಾಮರಾ, ಹೊಸ ಟಕ್ ಟಕ್ ಯಂತ್ರ, ಇಂಗ್ಲಿಷ್ ದರ್ಜೆಯವರಿಂದ ಹೊಲೆದ ಹೊಸ ಉತ್ತಮ ಉಲ್ಲನ್ ಕೋಟುಗಳು, ಪೋಟುಗಳು ಓವರ್ ಕೋಟು, ಟವೆಲ್‌ಗಳು, ರಾತ್ರಿ ಉಡುಪುಗಳು ಮತ್ತು ಇತರ ಅನೇಕ ಪದಾರ್ಥಗಳು

11ನೇ ತಾ|| ಶನಿವಾರ ಸಾಮಾನುಗಳನ್ನು ಪರೀಕ್ಷೆ ಮಾಡಬಹುದು.

ರಿಜಿ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 1 ಆಣೆ

ಸಾಧ್ವಿ

ಸಂಪುಟ ೧೦] ಶನಿವಾರ ೧೧-೮-೫೧ [ಸಂಚಿಕೆ ೧೭

ಕಾಂ॥ ಕಾರ್ಯಕಾರಿ ಸಮಿತಿಗೆ - ನೆಹರೂರ ರಾಜೀನಾಮೆ -

ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ನೆಹರೂರವರ ರಾಜೀನಾಮೆ

ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಮತ್ತು ಚುನಾವಣಾ ಸಮಿತಿಗಳಿಗೆ ಪ್ರಧಾನಿ ಪಂಡಿತ ನೆಹರೂರವರು ರಾಜೀನಾಮೆಯನ್ನಿತ್ತಿದ್ದಾರೆಂದು ಗೊತ್ತಾಗಿದೆ. ಕೇಂದ್ರ ಮಂತ್ರಿಮಂಡಲದ ಸದಸ್ಯರನ್ನು ಆರಿಸಿಕೊಳ್ಳುವ ಬಗ್ಗೆ ಪ್ರಧಾನಿಯವರ ಅಧಿಕಾರ ವ್ಯಾಪ್ತಿಯನ್ನು ಕುರಿತು ಈ ಬಾರಿ ಸೇರುವ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಲಾಗುವುದೆಂದು ತಿಳಿದುಬಂದಿದೆ. ಕಾಂಗ್ರೆಸ್ಸಿಗೆ ರಾಜೀನಾಮೆಯನ್ನಿತ್ತರೂ ಸಹ ಕೇಂದ್ರ ಮಂತ್ರಿಮಂಡಲದಲ್ಲಿ ಅಜಿತ್ ಪ್ರಸಾದ್ ಜೈನ್‌ರವರು ಇನ್ನೂ ಸದಸ್ಯರಾಗಿರುವ ಬಗ್ಗೆ ಬಂದಿರುವ ಟೀಕೆಗಳೇ ಪ್ರಧಾನಿಯವರ ರಾಜೀನಾಮೆಗೆ ಕಾರಣವೆಂದು ಹೇಳಲಾಗಿದೆ.

ಭಾರತದ ಹೊಸ ೫೦ ಕೋಟಿ ರೂ. ಸಾಲ

ಭಾರತ ಸರ್ಕಾರವು ಶೇಕಡ ೩ ರೂ. ಬಡ್ಡಿಯ ೫೦ ಕೋಟಿ ರೂ ಸಾಲವನ್ನು ಎತ್ತಲು ನಿರ್ಧರಿಸಿದೆ. ಈ ಹೊಸ ಸಾಲದ ಅವಧಿಯು ೧೯೬೦ ರ ಆಗಸ್ಟ್ ೧೫ಕ್ಕೆ ಮುಕ್ತಾಯವಾಗುವುದು. ಮತ್ತು ಮದರಾಸು, ಬೊಂಬಾಯಿ, ಪಶ್ಚಿಮ ಬಂಗಾಳ, ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶ ಸರ್ಕಾರಗಳೂ ಹೊಸ ಸಾಲ ಎತ್ತಲಿವೆ.

ಪಾಕಿಸ್ತಾನದ ಮೇಲೆ ಆರ್ಥಿಕ ದಿಗ್ಬಂಧನ

ಪಾಕಿಸ್ತಾನವು ಭಾರತದ ಮೇಲೆ ಜಿಹಾದ್ 'ಧರ್ಮ ಯುದ್ಧ'ವನ್ನು ಹೂಡುವ ಬೆದರಿಕೆಯನ್ನು ಹಾಕಿರುವುದರಿಂದ ಭಾರತವು ಪಾಕಿಸ್ತಾನದ ಮೇಲೆ ಆರ್ಥಿಕ ದಿಗ್ಬಂಧನವನ್ನು ವಿಧಿಸಬೇಕೆಂದು ನೆನ್ನೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಡಾ॥ ಶ್ಯಾಮಪ್ರಸಾದ್ ಮುಖರ್ಜಿಯವರು ಒತ್ತಾಯಪಡಿಸಿದರು.

ನಪಾಸಾದ ಇಂಜನಿಯರಿಂಗ್ ವಿದ್ಯಾರ್ಥಿಗಳ ಸಭೆ

ಈಗ ವಿಶ್ವ ವಿದ್ಯಾನಿಲಯದ ಕೌನ್ಸಿಲಿನವರು ಕೊಟ್ಟಿರುವ ಡಬ್ಬಲ್ ಆರ್ಡಿನೆನ್ಸ್ ರಿಯಾಯಿತಿಯನ್ನು ಮೊದಲ ವರ್ಷದ ಇಂಜನಿಯರಿಂಗ್ ವಿದ್ಯಾರ್ಥಿಗಳಿಗೂ ಅನ್ವಯಿಸುವಂತೆ ಮಾಡಿ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ, ಫೇಲಾದ ವಿಷಯಗಳಿಗೆ ಮಾತ್ರ ಕುಳಿತುಕೊಳ್ಳಲು ಅನುಮತಿ ಕೊಡಬೇಕೆಂದು ಅಧಿಕಾರಿಗಳನ್ನು ಪ್ರಾರ್ಥಿಸುವ ನಿರ್ಣಯವು ನೆನ್ನೆ ಸೇರಿದ್ದ ಫೇಲಾದ ಇಂಜನಿಯರಿಂಗ್ ವಿದ್ಯಾರ್ಥಿಗಳ ಸಭೆಯಲ್ಲಿ ಅಂಗೀಕಾರವಾಯಿತು.

ಸ್ವಾತಂತ್ರ್ಯೋತ್ಸವದ ದಿನ ರೇಷನ್ ಡಿಪೋಗಳಿಗೆ ರಜಾ

ಇದೇ ೧೫ ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ರಾಜಧಾನಿಯ ಎಲ್ಲ ರೇಷನ್ ಡಿಪೋಗಳಿಗೂ ರಜಾ ಕೊಡಲಾಗಿದೆಯೆಂದೂ, ೧೬ ನೇ ತಾ॥ ಉಪಾಕರ್ಮದ ಪ್ರಯುಕ್ತ ಹಿಂದುಗಳು ನಡೆಸುವ ಡಿಪೋಗಳು ಬೆಳಿಗ್ಗೆ ಮುಚ್ಚಲ್ಪಡುವುವೆಂದೂ, ಇತರ ಡಿಪೋಗಳು ಮಾಮೂಲಿನಂತೆ ಕೆಲಸ ಮಾಡುವುವೆಂದೂ ರೇಷನಿಂಗ್ ಅಧಿಕಾರಿಗಳು ತಿಳಿಸುತ್ತಾರೆ.

ಭಾರತದ ರಕ್ಷಣಾ ಕ್ರಮಗಳು ಮುಂದುವರಿಯುವುವು

ಭಾರತದ ಬಗ್ಗೆ ಪಾಕಿಸ್ತಾನವು ತನ್ನ ನೀತಿಯನ್ನು ಬದಲಾಯಿಸದಿದ್ದಲ್ಲಿ ಭಾರತದ ರಕ್ಷಣಾ ಕ್ರಮಗಳನ್ನು ಬಿಡದೆ ಮುಂದುವರಿಸಲಾಗುವುದೆಂದೂ ಪಾಕಿಸ್ತಾನದ ಪತ್ರಗಳನ್ನು ಪ್ರಕಟಿಸಲು ಸಾಧ್ಯವಿಲ್ಲವೆಂದೂ ಪಂಡಿತ ನೆಹರೂರವರು ಪಾಕಿಸ್ತಾನದ ಪ್ರಧಾನಿಯವರ ಇತ್ತೀಚಿನ ಪತ್ರಕ್ಕೆ ಉತ್ತರವಿತ್ತಿರುವರು.

ಗೋಪಾಲನ್ ಬಿಡುಗಡೆ ಬಗ್ಗೆ ಅಪೀಲಿಗೆ ಅವಕಾಶ ಇಲ್ಲ

ಮದ್ರಾಸಿನ ಕಮ್ಯೂನಿಸ್ಟ್ ನಾಯಕ ಎ. ಕೆ. ಗೋಪಾಲನ್‌ರವರ ಬಿಡುಗಡೆ ವಿರುದ್ಧ ಸುಪ್ರೀಂ ಕೋರ್ಟಿಗೆ ಅಪೀಲು ಮಾಡಲು ಅವಕಾಶವನ್ನು ಕೇಳಿದ್ದ ಮದ್ರಾಸು ಸರ್ಕಾರದ ಅರ್ಜಿಯನ್ನು ಮದ್ರಾಸಿನ ಹೈಕೋರ್ಟು ತಿರಸ್ಕರಿಸಿರುತ್ತದೆ.

ಕಾಲುವೆಯೊಳಗೆ ಬಸ್ ಬಿತ್ತು

೩೦ ಜನ ಪ್ರಯಾಣಿಕರನ್ನು ಸಾಗಿಸುತ್ತಿದ್ದ ಬಸ್ಸೊಂದು ತೆನಾಲಿ ಮತ್ತು ಪೆಡಾಪೆಲ್ಲಿನ ನಡುವೆ ಒಂದು ಕಾಲುವೆಯೊಳಗೆ ಮೊನ್ನೆ ಮಗುಚಿಕೊಂಡುದರಿಂದ ಶೇಕ್ ಮಹಮದ್ ಎಂಬುವರು ಮಡಿದರು. ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಇತರರು ಸುಖವಾಗಿರುತ್ತಾರೆ. ಡ್ರೈವರನನ್ನು ದಸ್ತಗಿರಿ ಮಾಡಲಾಗಿದೆ.

ರಾಜಕೀಯ ಸಮ್ಮೇಳನ ಮುಂದಕ್ಕೆ

ತುಮಕೂರು ಜಿಲ್ಲಾ ಕಾಂಗ್ರೆಸ್ ಸಮಿತಿಯು ಮೊನ್ನೆ ಸಭೆ ನಡೆಸಿ ಈ ತಿಂಗಳು ೨೫ ಮತ್ತು ೨೬ ನೇ ತಾ॥ ಸೇರಲಿದ್ದ ರಾಜಕೀಯ ಸಮ್ಮೇಳನವನ್ನು ಬರುವ ತಿಂಗಳು ೧೫ ಮತ್ತು ೧೬ ರಲ್ಲಿ ನಡೆಸಬೇಕೆಂದು ತೀರ್ಮಾನಿಸಿತು. ಪ್ರತಿನಿಧಿ ಶುಲ್ಕವನ್ನು ೪ ರೂ ಗಳೆಂದು ಗೊತ್ತು ಮಾಡಲಾಯಿತು.

೧೫ನೇ ತಾ॥ ಸಂಬಳ ಸಹಿತ ರಜಾ

ಇದೇ ೧೫ ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಎಲ್ಲ ಸರ್ಕಾರಿ ಕೈಗಾರಿಕಾ ಕಾರ್ಖಾನೆಗಳಿಗೂ ಸಂಬಳಸಹಿತ ರಜವನ್ನು ಕೊಟ್ಟು ಮೈಸೂರು ಸರ್ಕಾರಿ ಪ್ರಕಟಣೆಯು ಹೊರಬಿದ್ದಿದೆ. ಖಾಸಗೀ ಕೈಗಾರಿಕಾ ಸಂಸ್ಥೆಗಳವರೂ ಇದೇ ರೀತಿ ರಜಾ ಕೊಡಬೇಕೆಂದೂ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

ಕೇಸಾಂಗಿನಲ್ಲಿ ಮತ್ತೆ ಶಾಂತಿ ಸಂಧಾನದ ಆರಂಭ

ಕೇಸಾಂಗ್ ಸೀಸ್‌ಫೈರ್ ಮಾತುಕತೆಗಳಲ್ಲಿ ಕಮ್ಯೂನಿಸ್ಟರು ನಿಶ್ಶಸ್ತ್ರೀಕೃತ ಪ್ರದೇಶವನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಕಳೆದ ಶನಿವಾರದಿಂದ ನಿಂತು ಹೋಗಿದ್ದ ಕೊರಿಯಾ ಶಾಂತಿ ಸಂಧಾನವು ಮತ್ತೆ ನೆನ್ನೆ ಮಧ್ಯಾಹ್ನ ಆರಂಭವಾಯಿತು. ಇನ್ನು ಮುಂದೆ ನೋಟ್ಟಿಂಡಂತೆ ಉಲ್ಲಂಘನೆಗೆ ಅವಕಾಶ ಕೊಡುವುದಿಲ್ಲವೆಂದು ಕಮ್ಯೂನಿಸ್ಟರು ಭರವಸೆ ಕೊಟ್ಟುದರಿಂದ ಸಂಧಾನವು ಮತ್ತೆ ಆರಂಭವಾಯಿತೆಂದು ಹೇಳಲಾಗಿದೆ.

ಇಟಲಿಯಲ್ಲಿ ೩೬ ಗಂಟೆಗಳ ಕಾಲ ಎಡಬಿಡದ ಮಳೆ

ಉತ್ತರ ಇಟಲಿಯಲ್ಲಿ ನಿನ್ನೆಯಿಂದ ಎಡೆಬಿಡದೆ ೩೬ ಗಂಟೆಗಳ ಕಾಲ ಮಳೆ ಸುರಿದುದರಿಂದ ನದಿ ಪ್ರವಾಹಗಳು ಉಕ್ಕಿ ಬಂದುದಾಗಿ ಸುಮಾರು ೩೬ ಜನರು ಕೊಚ್ಚಿ ಹೋದರೆಂದೂ, ೩೦೦ ಜನರು ಗಾಯಗೊಂಡರೆಂದೂ ವರದಿಯಾಗಿದೆ. ಅನೇಕ ಮನೆಗಳು ನೆಲಸಮವಾದುವು. ಪೈರು ಪಚ್ಚೆಗಳಿಗೂ ಅಗಾಧ ನಷ್ಟ ಸಂಭವಿಸಿದೆ.

ತಿರುವಾಂಕೂರು-ಕೊಚ್ಚಿಯಲ್ಲಿ ಗೌರ್ನರ್ ಆಡಳಿತವೇ?

ಪೆಪ್ಸು ಸಂಸ್ಥಾನದಲ್ಲಿ ಗೌರ್ನರ್ ಆಡಳಿತ ಜಾರಿಯಾದ ಸಸ್ನೇಶಗಳೇ ತಿರುವಾಂಕೂರು-ಕೊಚ್ಚಿಯಲ್ಲೂ ಉದ್ಭವಿಸಿರುವುದಾಗಿಯೂ, ಈ ಬಗ್ಗೆ ದೆಹಲಿಯಲ್ಲಿ ನಡೆಯುವ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನಲ್ಲಿ ತೀರ್ಮಾನವಾಗುವುದೆಂದೂ ಹೇಳಲಾಗಿದೆ. ಅಲ್ಲಿ ಆಡಳಿತವು ಕುಸಿಯದಿರುವಂತೆ ನೋಡಿಕೊಳ್ಳಲು ರಾಷ್ಟ್ರಾಧ್ಯಕ್ಷರೇ ಅಧಿಕಾರ ವಹಿಸಬೇಕಾಗುವ ಸ್ಥಿತಿ ಒದಗಿರುವುದೆಂದು ಹೇಳಲಾಗಿದೆ.

ತಿರುಚಿರಾಪಳ್ಳಿಗೆ ಪಲ್ಲವಂ ನಾಗರಾಜರಾಯರ ಪ್ರಯಾಣ

ಮೈಸೂರು ಜಯನಗರದ ೨೬೭೬ ನೇ ನಂಬರು ಮನೆಯಲ್ಲಿರುವ ವೇಣುಗಾನ ವಿದ್ವಾನ್ ಪಲ್ಲಡಂ ನಾಗರಾಜರಾಯರು ಈ ದಿನ ತಿರುಚಿರಾಪಳ್ಳಿಗೆ ಪ್ರಯಾಣ ಬೆಳೆಸಿದರು. ಇದೇ ೧೫ನೇ ತಾ॥ ಅಲ್ಲಿ ಅವರ ವೇಣುಗಾನವನ್ನು ಏರ್ಪಡಿಸಲಾಗಿದೆ. ಇದೇ ೨೬ನೇ ತಾ॥ ಭಾನುವಾರ ಬೆಂಗಳೂರು ಗಾಯನ ಸಮಾಜದ ಆಶ್ರಯದಲ್ಲಿ ಅವರ ಕಛೇರಿಯನ್ನು ಏರ್ಪಡಿಸಲಾಗಿದೆ.

ಜಿ. ಐ. ಪಿ. ರೈಲ್ವೆಯೊಡನೆ ನೈಜಾಂ ಸ್ಟೇಟ್ ರೈಲ್ವೆ ಐಕ್ಯ

ಬರುವ ಅಕ್ಟೋಬರ್ ತಿಂಗಳ ವೇಳೆಗೆ ನೈಜಾಂ ಸ್ಟೇಟ್ ರೈಲ್ವೆಯನ್ನು ಜಿ. ಐ. ಪಿ. ರೈಲ್ವೆಯೊಡನೆ ಐಕ್ಯಗೊಳಿಸಿ ಪಶ್ಚಿಮ ಜೋನ್ ರೈಲ್ವೆಯನ್ನು ಸ್ಥಾಪಿಸುವ ಬಗ್ಗೆ ಎರಡು ರೈಲ್ವೆಗಳ ಅಧಿಕಾರಿಗಳಿಗೂ ಹೈದರಾಬಾದಿನಲ್ಲಿ ಮಾತುಕತೆ ನಡೆಯುತ್ತಿದೆ. ನೈಜಾಂ ಸ್ಟೇಟ್ ರೈಲ್ವೆ ನೌಕರರ ಸಂಘದವರು ತಮ್ಮ ರೈಲ್ವೆಯನ್ನು ಜಿ. ಐ. ಪಿ. ಯೊಡನೆ ಐಕ್ಯಗೊಳಿಸುವುದನ್ನು ವಿರೋಧಿಸುತ್ತಿರುವರೆಂದು ಹೇಳಲಾಗಿದೆ.

ಮೈಸೂರು ರೇಡಿಯೋ ಅಭಿವೃದ್ಧಿ

ಮೈಸೂರು ರೇಡಿಯೋ ನಿಲಯ ಮತ್ತು ಕಾರ್ಯಕ್ರಮಗಳ ಅಭಿವೃದ್ಧಿಯ ವಿಷಯವು ಗಮನದಲ್ಲಿರುವುದಾಗಿ ಕೇಂದ್ರ ವಾರ್ತಾ ಮಂತ್ರಿ ದಿವಾಕರ್‌ರವರು ತಿಳಿಸಿರುತ್ತಾರೆ. ಆಕಾಶವಾಣಿಯು ಕೇಂದ್ರದಲ್ಲಿ ಐಕ್ಯವಾದಾಗಿನಿಂದಲೂ ಸಿಬ್ಬಂದಿಯ ಶ್ರೋತಾ ಆಗಿಲ್ಲವೆಂದೂ, ಕೇಂದ್ರ ಸರ್ಕಾರದ ಇತರ ರೇಡಿಯೋಗಳ ಅಧಿಕಾರ ವರ್ಗಕ್ಕೆ ಸಮಸಮವಾಗಿ ಅಲ್ಲಿನ ನೌಕರರ ವರ್ಗವನ್ನು ಗೊತ್ತುಪಡಿಸಲಾಗುವುದೆಂದೂ ಅವರು ಹೇಳಿ, ಈಗಾಗಲೇ ಅವರುಗಳಿಗೆ ಕೇಂದ್ರದ ತುಟ್ಟಿಭತ್ಯದ ಪ್ರಮಾಣವನ್ನು ನಿಗದಿ ಮಾಡಲಾಗಿದೆ ಎಂದು ಅವರು ತಿಳಿಸಿರುತ್ತಾರೆ.

ಪತ್ರಿಕೋದ್ಯೋಗಿಗಳ ಸ್ಥಿತಿಗತಿಗಳ ಬಗ್ಗೆ ತನಿಖೆ

ಪತ್ರಿಕೋದ್ಯೋಗಿಗಳ ಯೋಗಕ್ಷೇಮ, ಸಂಬಳ ಮತ್ತು ಕೆಲಸದ ಸ್ಥಿತಿಗತಿಗಳೂ ಸೇರಿ, ಭಾರತದ ಪತ್ರಿಕೆಗಳ ಪರಿಸ್ಥಿತಿಯನ್ನು ಕುರಿತು ಭಾರತ ಸರ್ಕಾರವು ತನಿಖೆ ನಡೆಸಬೇಕೆಂದು ಪಾರ್ಲಿಮೆಂಟಿನ ಸದಸ್ಯರೊಬ್ಬರು ನಿರ್ಣಯವನ್ನು ತಂದಿರುತ್ತಾರೆ.

ಬೆಂಗಳೂರಿಗೆ ರಿಸರ್ವ್ ಬ್ಯಾಂಕ್ ಶಾಖೆಗಾಗಿ ಮನವಿ

ಬೆಂಗಳೂರಿನಲ್ಲಿ ರಿಸರ್ವ್ ಬ್ಯಾಂಕಿನ ಶಾಖೆಯನ್ನು ಸ್ಥಾಪಿಸುವ ಅವಶ್ಯಕತೆಯ ಬಗ್ಗೆ ಕೇಂದ್ರ ಸರ್ಕಾರಕ್ಕೂ ರಿಸರ್ವ್ ಬ್ಯಾಂಕಿಗೂ ಮೈಸೂರು ಸರ್ಕಾರದವರು ಮನವಿ ಮಾಡಿಕೊಂಡಿರುವುದಾಗಿ ಗೊತ್ತಾಗಿದೆ.

ಚಿನ್ನದ ಗಣಿಯಲ್ಲಿ ಬೆಂಕಿ

ಕೋಲಾರದ ಚಿನ್ನದ ಗಣಿಗಳಲ್ಲಿ ಒಂದಾದ ನಂದೀದುರ್ಗದ ಗಣಿಯ ೪೬ನೇ ಹಂತದ ಕೆಳಭಾಗದಲ್ಲಿ ೭ನೇ ತಾ॥ ಬೆಂಕಿಯುಂಟಾದುದರಿಂದ ಕೆಲಸವನ್ನು ನಿಲ್ಲಿಸಿ ಆ ಭಾಗವನ್ನು ಮೊಹರು ಮಾಡಿ ಕೆಲಸಗಾರರನ್ನು ವಾಪಸು ಕರೆಸಲಾಯಿತೆಂದು ಗೊತ್ತಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣ ಮಹೋತ್ಸವ

ಶ್ರೀಮನ್ ಮಹಾರಾಜರು ಈ ತಿಂಗಳು ೨೨ ನೇ ತಾ॥ ಬೆಳಿಗ್ಗೆ ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣ ಮಹೋತ್ಸವವನ್ನು ಉದ್ಘಾಟಿಸುವರು. ಅದೇ ಸಮಯದಲ್ಲಿ ಕಟ್ಟಬೇಕೆಂದಿರುವ ಹೊಸ ಕಟ್ಟಡಗಳ ಮತ್ತು ಪ್ಯಾಥಾಲಜಿಯ ಲ್ಯಾಬರೇಟರಿಯ ಅಸ್ತಿಭಾರಗಳನ್ನು ಹಾಕುವರು.

ರಾಜಧಾನಿಯಲ್ಲಿ ಸ್ವಾತಂತ್ರ್ಯೋತ್ಸವ

ಮೈಸೂರು —

ಬರುವ [illegible] ನಡೆಯುವ ಸ್ವಾತಂತ್ರ್ಯೋತ್ಸವ [illegible] ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ಪುರಜನರಲ್ಲಿ ಮನವಿಯೊಂದನ್ನು ಹೊರಡಿಸಿ, [illegible] ಆ ದಿನ [illegible] ಗೆ [illegible] ಅರ್ಪಿಸಿರುವುದಾಗಿಯೂ, [illegible] ಸಭೆಯು ನಡೆಯುವುದೆಂದೂ [illegible] ಈ ಉತ್ಸವದಲ್ಲಿ ಭಾಗವಹಿಸಬೇಕೆಂದೂ ಕೋರಿರುತ್ತಾರೆ.

[illegible] ಯನ್ನು ಹೊರಡಿಸಿ ಸರ್ಕಾರಿ [illegible] ರಜಾ [illegible] ಕೈಗಾರಿಕೆಯ [illegible] ಕರು [illegible] ರಜವನ್ನು ಕೊಡಬೇಕೆಂದು [illegible] ಕೋರಿದ್ದಾರೆ.

ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ

[illegible] ರಾಘವೇಂದ್ರ ಸ್ವಾಮಿಗಳ [illegible] ಆರಾಧನಾ ಮಹೋತ್ಸವವು [illegible] ಪ್ರಾತಃ [illegible] ಪೂಜಾದಿಗಳು ನಡೆಯುವುವು [illegible] ಈ ಮೂರು [illegible] ನ್ನು ಕೊಡಲಾಗಿದೆ ಉತ್ಸವಕ್ಕಾಗಿ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಬ್ರಿಟನ್ನಿನಲ್ಲಿ ಭಾರಿ ಪ್ರಮಾಣದ ಯುದ್ಧ ಪ್ರಯೋಗ

ದಕ್ಷಿಣ ಇಂಗ್ಲೆಂಡಿನಲ್ಲಿ ಬರುವ ಅಕ್ಟೋಬರ್ ತಿಂಗಳ ಮಧ್ಯ ಭಾಗದಲ್ಲಿ ಅತ್ಯಂತ ಭಾರಿ ಪ್ರಮಾಣದ ಯುದ್ಧ ಪ್ರಯೋಗವು ನಡೆಯುವುದು. ಎರಡನೇ ಮಹಾ ಯುದ್ಧದ ನಂತರ ಇಂಥದು ನಡೆಯುತ್ತಿರುವುದು ಇದೇ ಮೊದಲು.

ಪಂಚಾಯಿತಿ ಸದಸ್ಯರ ಬಗ್ಗೆ ಅಸಭ್ಯ ವರ್ತನೆಯೇ?

ನಂಜನಗೂಡು ತಾಲ್ಲೂಕು ಹೆಮ್ಮರಗಾಲದ [illegible] ಪಂಚಾಯಿತಿಯ [illegible] ಹೆಡ್ [illegible] ಯವರು ನಮಗೆ ಬರೆದಿರುವ ಪತ್ರದಲ್ಲಿ [illegible] ಪೋಲೀಸು ಅಧಿಕಾರಿಗಳು ಬಂದಿದ್ದಾಗಿಯೂ, ಪಂಚಾಯಿತಿ ಸದಸ್ಯರನ್ನೂ, ಇತರ ಸಭ್ಯ ಗೃಹಸ್ಥರನ್ನೂ [illegible] ಕರೆಕಳುಹಿ, [illegible] ಅವಮಾನ ಮತ್ತು ಅ[illegible]ವನ್ನು ಮಾಡಿರುವುದಾಗಿಯೂ ತಿಳಿಸಿರುತ್ತಾರೆ.

ಹಿಂದೂಸ್ಥಾನ್ ಕಾರ್ಖಾನೆಯ ಪ್ರಥಮ ವಿಮಾನ

[illegible] ಹಿಂದೂಸ್ಥಾನ್ ವಿಮಾನ [illegible] ಯು ಈಗ ತಾನೆ ತಯಾರಿಸಿದ ಪ್ರಥಮ [illegible] ವಿಮಾನದ ಹಾರಾಟವು [illegible] ಎರಡು ದಿನಗಳಲ್ಲಿ ನಡೆ[illegible] ಮುಖ್ಯ ಚಾಲಕರಾದ [illegible] ಯವರು ವಿಮಾನದ ಬಗ್ಗೆ ತಮ್ಮ [illegible] ವನ್ನು ತಿಳಿಸಿ [illegible] ಸಿದ್ಧ ಪಡಿಸಬಹುದೆಂದು [illegible] ಮತ್ತು ವರ್ಷಗಳ ಹಿಂದೆ [illegible] ಮೊದಲನೆ ವಿಮಾನವನ್ನು [illegible] ಇತ್ತು.

ಸಾರ್ವತ್ರಿಕ ಚುನಾವಣೆ ಜನವರಿ ೩ ರಿಂದ ೨೭ರ ವರೆಗೆ

ಬರುವ ಜನವರಿ ೩ ರಿಂದ ೨೭ನೇ ತಾರೀಖಿನೊಳಗೆ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವುವೆಂದು ಕೇಂದ್ರ ನ್ಯಾಯಾಂಗ ಮಂತ್ರಿ ಅಂಬೇಡ್ಕರ್ ರವರು ತಿಳಿಸಿರುತ್ತಾರೆ.

ಮರುಭೂಮಿಯನ್ನು ಮುಚ್ಚಲು ಅರಣ್ಯ ನಿರ್ಮಾಣ

ವಾಯುವ್ಯ ಚೀಣಾದಲ್ಲಿ ಅಲ್ಲಿನ ಭಾರಿ ಗೋಡೆಗೆ ಸಮಾನಾಂತರವಾಗಿ ಸಾವಿರ ಮೈಲಿಯವರೆಗೂ ಅರಣ್ಯವನ್ನು ನಿರ್ಮಿಸಲು ಚೀಣಾ ಸರ್ಕಾರವು ೩ ಲಕ್ಷ ಜನರನ್ನು ನೇಮಿಸಿರುವುದಾಗಿ ಗೊತ್ತಾಗಿದೆ. ಮಂಗೋಲಿಯದ ಗೋಬಿ ಮರುಭೂಮಿಯನ್ನು ಮುಚ್ಚಲು ಹೀಗೆ ಮಾಡಲಾಗುವುದು.

ಕಮ್ಯೂನಿಸ್ಟ್ ಸಂಧಾನ ಪ್ರತಿನಿಧಿಗಳ ಲಾರಿ ಮೇಲೆ ಧಾಳಿ

ಕಳೆದ ಮಂಗಳವಾರ ಪ್ಯಾಂಗ್ಯಾಂಗ್ ಮತ್ತು ಕೇಸಾಂಗ್ ಮಧ್ಯೆ ಸಂಧಾನಕ್ಕಾಗಿ ಬರುತ್ತಿದ್ದ ಕಮ್ಯೂನಿಸ್ಟ್ ಪ್ರತಿನಿಧಿಗಳ ಲಾರಿಯೊಂದರ ಮೇಲೆ ವಿಶ್ವಸಂಸ್ಥೆ ವಿಮಾನವು ಧಾಳಿ ಮಾಡಿರುವುದೆಂದು ವಿಶ್ವಸಂಸ್ಥೆಯ ಸಂಧಾನ ಪ್ರತಿನಿಧಿ ಮುಖಂಡರಿಗೆ ಪ್ರತಿಭಟನೆಯನ್ನು ಸೂಚಿಸಲಾಗಿದೆ.

ಹಿಂದೂಕೋಡ್ ಮಸೂದೆ: ಕಾಂಗ್ರೆಸ್ ಪಕ್ಷದ ಒಪ್ಪಿಗೆ

ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷವು ಹಿಂದೂ ಕೋಡು ಮಸೂದೆಗೆ ಒಪ್ಪಿಗೆಯನ್ನು ಕೊಟ್ಟಿರುವುದಾಗಿ ತಿಳಿದು ಬಂದಿದೆ. ಈ ಮಸೂದೆಯ ಬಗ್ಗೆ ನೆಹರು ಮತ್ತು ರಾಜಾಜಿಯವರು ಭಾಷಣ ಮಾಡಿದರೆಂದು ಹೇಳಲಾಗಿದೆ.

ಚಿಯಾಂಗರಿಗೆ ೩೧ ಕೋಟಿ ಡಾಲರ್ ಸಹಾಯ

ಫಾರ್ಮೋಸಾದಲ್ಲಿರುವ ಚಿಯಾಂಗ್ ರಾಷ್ಟ್ರೀಯ ಸೈನ್ಯಗಳಿಗೆ ೩೧ ಕೋಟಿ ಡಾಲರುಗಳ ಸಹಾಯ ನೀಡುವ [illegible] ಕಾಂಗ್ರೆಸ್ಸಿನ ಒಪ್ಪಿಗೆಯನ್ನು ಅಮೆರಿಕ ಸರ್ಕಾರವು ಕೇಳುತ್ತದೆ.

ಅಕ್ರಮವಾಗಿ ರೇಷನ್ ಕಾರ್ಡ್ ಪಡೆದ್ದವರಿಗೆ ಜುಲ್ಮಾನೆ

ಮಂಡಿ ಮೊಹಲ್ಲಾದ ರಾಜ್[illegible] ಬೀದಿಯಲ್ಲಿರುವ ಜನಾಬ್ ಮಸ್ತಾನ್ ಎಂಬುವರು ಅಕ್ರಮವಾಗಿ [illegible] ಷನ್ ಕಾರ್ಡುಗಳನ್ನು ಇಟ್ಟುಕೊಂಡಿರೆಂಬ ಅಪಾದನೆಯ ಮೇಲೆ [illegible] ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಪ್ರಾಸಿಕ್ಯೂಷನ್ ಪಾರ್ಟಿಯವರು ಹೂಡಿದ್ದ ಮೊಕದ್ದಮೆಯು ನಿನ್ನೆ ವಿಚಾರಣೆಯಾಗಿ ಆಪಾದಿತರಿಗೆ ೧೦೦ ರೂ ಜುಲ್ಮಾನೆ, ತಪ್ಪಿದರೆ ೧½ ತಿಂಗಳು ಸಾದಾ ಸಜೆಯನ್ನು ವಿಧಿಸಲಾಯಿತು.

ಗಾ॥ ಕ್ರೇಪ್ ಸಿಲ್ಕ್ ಸೀರೆಗಳೂ-ಧರ್ಮಾವರಂ-ಆರ್ಣಿ ಸ್ಪೂನಾ ನಾಗಪುರ್ ಸೀರೆಗಳು

M. V. ಭೋಜಯ್ಯ [illegible]

[illegible] ಬ್ಯಾಂಕ್ [illegible], ಮೈಸೂರು.

ರಾಜಕಮಲ್, ಮೈಸೂರು

10-8-51 ರಿಂದ · ಆರೋಪ ಪ್ರಾರಂಭ · ದಿನವಹಿ 3 ಆಟಗಳು

ಮಹಾತ್ಮಾರವರ ಮಹೋನ್ನತ ಕನ್ನಡ ಚಲನಚಿತ್ರ

• ಜಗನ್ಮೋಹಿನಿ •

[illegible] ಪ್ರತಿಮಾದೇವಿ [illegible]

[illegible] ಮತ್ತು [illegible]

ಫ್ಲೋರ್ ಮಿಲ್ ಮತ್ತು ಹಲ್ಲರು

ಬಿಕರಿಗಿವೆ

ಮೈಸೂರು ನಗರದ ಮಧ್ಯ ರಾಷ್ಟ್ರದಲ್ಲಿ ಒಳ್ಳೆಯ ಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವ ಒಂದು ಫ್ಲೋರ್ ಮಿಲ್ ಮತ್ತು ಹಲರು. 25 ಹೈಕಲ್ಲಿನ 7 1 2 [illegible] ಎಲೆಕ್ಟ್ರಿಕ್ ಮೋಟಾರಿನ ಸಮೇತ ಬಿಕರಿಗಿದೆ. ಕೆಳಗೆ ಕಂಡವರಲ್ಲಿ ವಿಚಾರಿಸಿರಿ.

ವಿ ಎಸ್. ಮನೋಹರ್,

ಮಿಷಿನರಿ ವ್ಯಾಪಾರಿಗಳು, ಪ್ರಭಾ ಟಾಕೀಸ್ ಹತ್ತಿರ, ಮೈಸೂರು.

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

4-8-51 ರಿಂದ :: ಪ್ರತಿ ದಿನವೂ

ರಾಜಾ ಗೋಪಿಚಂದ್

ಮೈಸೂರು ದಸರಾ ವಸ್ತು ಪ್ರದರ್ಶನ 1951

(2-10-51 ರಿಂದ 17-10-51 ರ ವರೆಗೆ, ಎರಡು ದಿನಗಳೂ ಸೇರಿ)

ಮೈಸೂರು ದಸರಾ ವಸ್ತು ಪ್ರದರ್ಶನವು ಮಾಮೂಲಿನ ಮೇರೆ, ಬರುವ ಅಕ್ಟೋಬರ್ ೨ನೇ ತಾರೀಕಿನಿಂದ ಅಕ್ಟೋಬರ್ ೧೭ರ ವರೆಗೆ, ಎರಡು ದಿನಗಳೂ ಸೇರಿ, ವಸ್ತು ಪ್ರದರ್ಶನಾಲಯ ಮತ್ತು ಜೀವಣ್ಣರಾಯನ ಕಟ್ಟೆಗಳಲ್ಲಿ ನಡೆಯುವುದು.

ಸ್ಟಾಲುಗಳು, ಇತ್ಯಾದಿಗಳಿಗೆ ಅರ್ಜಿ ಸ್ವೀಕರಿಸಲು ಕಡೇದಿನ		5-9-1951
ಫೈನ್ ಆರ್ಟ್ಸ್ ಮತ್ತು ಕ್ರಾಫ್ಟ್ಸ್ ವಿಭಾಗದಲ್ಲಿ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಲು	,,	15-9-1951
ಮಹಿಳಾ ವಿಭಾಗದಲ್ಲಿ ಪ್ರದರ್ಶಿಸುವ ವಸ್ತುಗಳನ್ನು ಕಳುಹಿಸಲು	,,	೭೦ 9-1951
ನಾಸಿಂಗ್ನ ಸೈಟುಗಳ ಸರಬರಾಜು ಬಗ್ಗೆ ಟೆಂಡರುಗಳನ್ನು ಸಲ್ಲಿಸಲು	,,	15-9-1951
ಎಲೆಕ್ಟ್ರಿಕಲ್ ಸ್ಟಾಂಡು ಕಂಟ್ರ್ಯಾಕ್ಟು ಬಗ್ಗೆ ಟೆಂಡರುಗಳನ್ನು ಸಲ್ಲಿಸಲು	,,	ಡಿಟೊ
"ಎ" ಬ್ಲಾಕಿನಲ್ಲೂ ಮತ್ತು ಜೀವಣ್ಣರಾಯನ ಕಟ್ಟೆಯಲ್ಲೂ ಉಪಾಹಾರ ಗೃಹವನ್ನು ತೆರೆಯುವ ಬಗ್ಗೆ ಟೆಂಡರುಗಳನ್ನು ಸಲ್ಲಿಸಲು	,,	ಡಿಟೊ
ರೂಪೆಟ್ ಪ್ಯಾಡ್ಕುಗಳನ್ನು ಸರಬರಾಜು ಮಾಡುವ ಬಗ್ಗೆ ಟೆಂಡರುಗಳನ್ನು ಸಲ್ಲಿಸಲು	,,	ಡಿಟೊ
ಲೌಡ್ ಸ್ಪೀಕರ್ ವ್ಯವಸ್ಥೆ ಬಗ್ಗೆ ಟೆಂಡರುಗಳನ್ನು ಸಲ್ಲಿಸಲು	,,	ಡಿಟೊ

ಇತರ ವಿವರಗಳನ್ನು ತಿಳಿಯಲಪೇಕ್ಷಿಸುವವರು ಮೈಸೂರು ದಸರಾ ವಸ್ತು ಪ್ರದರ್ಶನದ ಕಛೇರಿಯಲ್ಲಿರುವ ಪ್ರಕಟಣೆಗಳನ್ನು ನೋಡಿ ತಿಳಿಯಬಹುದು. ಪ್ರಾಸ್ಪೆಕ್ಟಸ್ಸುಗಳಿಗಾಗಿ ಕೆಳಗೆ ಕಂಡವರಿಗೆ ಬರೆಯಿರಿ.

ಕಾರ್ಯದರ್ಶಿ, ದಸರಾ ವಸ್ತು ಪ್ರದರ್ಶನ ಸಮಿತಿ, ಮೈಸೂರು.

Edited printed and published by A R Nagarajan at Sadhvi Press D Subbiah Road, Mysore.

ಫೋನ್ ನಂ 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೧೨-೮-೫೧ [ಸಂಚಿಕೆ ೩

ನೆಹರೂರಂತೆಯೇ ಅಜಾದರ ರಾಜೀನಾಮೆ

ನೆಹರೂ ರಾಜೀನಾಮೆ ಬಗ್ಗೆ ಕಾರ್ಯಕಾರಿ ಸಮಿತಿಯ ಚರ್ಚೆ

ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಮತ್ತು ಪಾರ್ಲಿಮೆಂಟರಿ ಬೋರ್ಡಿಗೆ ರಾಜೀನಾಮೆ ಸಲ್ಲಿಸಿ ನೆಹರೂರವರು ಕಾಂಗ್ರೆಸ್ ಅಧ್ಯಕ್ಷ ಟಾಂಡನ್‌ರವರಿಗೆ ಬರೆದ ಪತ್ರವನ್ನು ನೆನ್ನೆ ಕಾರ್ಯ ಕಾರಿ ಸಮಿತಿಯು ದೆಹಲಿಯಲ್ಲಿ ಸಭೆ ಸೇರಿ ಚರ್ಚಿಸಿತೆಂದೂ ಈ ಸಂಜೆವರೆಗೂ ಅಂತ್ಯ ನಿರ್ಧಾರವಾಗಲಿಲ್ಲವೆಂದೂ ಗೊತ್ತಾಗಿದೆ. ಪತ್ರ ವಿವರಗಳೇನೆಂಬುದು ತಿಳಿಯ ಬಂದಿಲ್ಲ. ಈ ಮಧ್ಯಾಹ್ನ ಕಲ್ಕತ್ತಾದಿಂದ ಡಾ|| ಬಿ. ಸಿ. ರಾಯ್‌ರವರು ಬಂದನಂತರ ಅವರೊಡನೆ ಮಾತುಕತೆ ನಡೆಸಿ ನಿರ್ಧಾರಕ್ಕೆ ಬರಲಾಗುವುದು. ಶ್ರೀ ರಾಯ್‌ರವರು ಬೆಂಗಳೂರು ಮತ್ತು ದೆಹಲಿಗಳಲ್ಲಿ ಕಿದ್ವಾಯ್ ಮತ್ತು ಜೈನ್ ರಾಜೀನಾಮೆ ಪ್ರಕರಣದಲ್ಲಿ ಮಧ್ಯಸ್ಥಿಕೆಗಾರರಾಗಿ ಓಡಾಡಿದ್ದರು. ಹಲವು ಸದಸ್ಯರ ಅಭಿಪ್ರಾಯದಲ್ಲಿ ಟಾಂಡನ್ ಮತ್ತು ಅವರು ನೇಮಿಸಿದ ಕಾರ್ಯಕಾರಿ ಸಮಿತಿಯು ರಾಜೀನಾಮೆ ಸಲ್ಲಿಸಿ ನೆಹರೂರವರೇ ಕಾಂಗ್ರೆಸ್ಸಿನ ನಾಯಕತ್ವವನ್ನು ವಹಿಸಿಕೊಳ್ಳುವಂತೆ ಅನುಕೂಲ ಕಲ್ಪಿಸಬೇಕೆಂಬ [illegible] ಇರುವುದಾಗಿ ಗೊತ್ತಾಗಿದೆ. [illegible] ರಾಜೀನಾಮೆಯನ್ನು ಟಾಂಡನ್‌ರವರು [illegible] ಸ್ವೀಕರಿಸದಿದ್ದರೂ [illegible] ವ ಬಿಕ್ಕಟ್ಟಿನ ಮಹತ್ವವನ್ನು [illegible] ರಿತಿರುವರೆಂದೂ ರಾಜೀನಾಮೆ ಪತ್ರವನ್ನು [illegible] ಸ್ವೀಕರಿಸಿ [illegible] ದೆಯಾಗಿದೆ [illegible].

ಅಂಚೆ ಮುಷ್ಕರ ಮುಂದಕ್ಕೆ

ಕೃಳಿ ಮುಷ್ಕರವು [illegible] ತಿಂಗಳು [illegible] ನೋಂದಾಯಿತ ಅಂಚೆ ಮತ್ತು ತಂತಿ [illegible] ಯ ಮುಷ್ಕರವು ಮುಂದೂಡಿರುವ ಮುಷ್ಕರಗಳನ್ನು ನಿರೋಧಿಸುವ [illegible] ನ್ಯಾಯ ಪರೀಕ್ಷೆಯನ್ನು ಒಂದಿಸುವ ನಿರ್ಣಯವನ್ನು ಅಂಚೆ ನೌಕರರ ಸಂಘದ ಕಾರ್ಯ ಸಮಿತಿಯು ಮಾಡಿರುತ್ತದೆ. ಸಮಾಧಾನಕರ ಮಂತ್ರಿಗಳೊಡನೆ ಈ ತಿಂಗಳು [illegible] ಮತ್ತು [illegible] ರಲ್ಲಿ ಸಂಧಾನ ನಡೆಸಲು ಸಂಘದ ಅಧ್ಯಕ್ಷ ಶ್ರೀ [illegible] ನ ರಾಯ್ ಮತ್ತು ಕಾರ್ಯದರ್ಶಿ [illegible] ಲ್ಲಿಯವರನ್ನು ನೇಮಿಸಲಾಗಿದೆ.

ಭಾರತದ ಬಗ್ಗೆ ಪಾಕಿಸ್ತಾನದ ಶ್ವೇತ ಪತ್ರ

[illegible] ಭಾರತದ ಬಗೆ [illegible] ಪುಟಗಳುಳ್ಳ ಶ್ವೇತ ಪತ್ರವನ್ನು ಪಾಕಿಸ್ತಾನದವರು ಇಂದು ಹೊರಡಿಸುವರೆಂದು ಗೊತ್ತಾಗಿದೆ. ಪಾಕಿಸ್ತಾನಕ್ಕೆ ಮತ್ತು ಅಂತರರಾಷ್ಟ್ರೀಯ ಶಾಂತಿಗೆ ಭಾರತವು ತಂದೊಡ್ಡಿರುವ ಭೀತಿಯನ್ನು ಅದರಲ್ಲಿ ಪ್ರಸ್ತಾಪಿಸಲಾಗುವುದೆಂದು ತಿಳಿದುಬಂದಿದೆ.

ಜಿಲ್ಲಾ ಬೋರ್ಡ್ ಅಧ್ಯಕ್ಷರ ಪ್ರವಾಸ

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಎಚ್. ಎಂ. ಚೆನ್ನಬಸಪ್ಪನವರು ನನ್ನೆ ದಿನ ಹೆಗ್ಗಡದೇವನ ಕೋಟೆ ತಾಲ್ಲೂಕಿನ [illegible] ಹಳ್ಳಿಗಳಿಗೆ ಭೇಟಿಯಿತ್ತು ನೆನ್ನೆ ಸಂಜೆ ಹಿಂದಿರುಗಿದರು. [illegible] ಗ್ರಾಮದಲ್ಲಿ [illegible] ಅಧಿಕಾರಿಗಳಿಗೂ ಇತರ ಕಾರ್ಯಕರ್ತರಿಗೂ ಇದ್ದ ವೈಮನಸ್ಯವನ್ನು ಸೂಕ್ತ ಹಿತೋಕ್ತಿಯೊಡನೆ ಮುಗಿಸ್ಸಿಯನಾಗಿ ಅವರು ಬಗೆಹರಿಸಿದರು.

ಚರಖಾ ಜಯಂತಿ ಕಾರ್ಯಕ್ರಮ

ವರ್ಧಾದಲ್ಲಿರುವ ಅಖಿಲ ಭಾರತ ಚರಖಾ ಸಂಘದ ಮಂತ್ರಿ ಶ್ರೀ ಕೃಷ್ಣದಾಸ ಗಾಂಧಿಯವರು ಚರಖಾ [illegible] ಕಾರ್ಯಕ್ರಮವನ್ನು [illegible] ವಾಗಿ [illegible] ಮೇಲ್ಕಂಡವನ್ನು ಸೂಚಿಸಿರುತ್ತಾರೆ. ಜಯಂತಿಯನ್ನು ಆಚರಿಸುವ [illegible] ನಿರ್ಧರಿಸುವಾಗ [illegible] ಸೇರಿ ದಿಂದ ನೂಲುವುದು, [illegible] ತ್ತು ಕ್ರಮವರಿತು ನೂಲುವುದು [illegible] ಮೂರು ಜವಾಬ್ದಾರಿ [illegible] ವಾಗಿಯೂ [illegible] ದವರು [illegible] ಒದಗಿ [illegible] ಗೆಯ [illegible] ಅವರು ಸೇರುತ್ತಾರೆ. [illegible] ಸದಸ್ಯರ [illegible] ಜಯಂತಿ [illegible] ಸಂಕಲ್ಪ ತೊಡಬೇಕೆಂದೂ [illegible] ಸ್ಥಳಗಳಲ್ಲಿ [illegible] ಕಾರ್ಯಕ್ರಮ [illegible] ನಡೆಸಬೇಕೆಂದೂ ಶ್ರೀಯುತರು ಕೇಳಿರುತ್ತಾರೆ.

ಹಳ್ಳಿಗರ ಘರ್ಷಣೆಯಲ್ಲಿ ಪೋಲೀಸರ ಗುಂಡು

ಸಂಗಾರೆಡ್ಡಿ ಜಿಲ್ಲೆಯ [illegible] ಹೊಸಕೆರೆಯಲ್ಲಿ ನೀರು ಹೆಚ್ಚಾಗಿ ಒಂದು, ಅದನ್ನು ಹೊರಕ್ಕೆ ಬಿಡಲು, ಕೆರೆಯನ್ನು ಒಡೆಯುವ ಪ್ರಯತ್ನವನ್ನು ನನ್ನೆ ಕೆಲವು ಹಳ್ಳಿಗರು ಮಾಡಿದಾಗ ಅವರನ್ನು ಇತರರು ವಿರೋಧಿಸಿದಾಗ ಎರಡು ಪಂಗಡಗಳಿಗೂ ಉಂಟಾದ ಘರ್ಷಣೆಯನ್ನು ಹತೋಟಿಗೆ ತರಲು ಪೋಲೀಸರು ಗುಂಡು ಹಾರಿಸಿದ ಸಂಬಂಧವಾಗಿ [illegible] ಜನರು ಸತ್ತರೆಂದೂ, [illegible] ಜನರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆಯೆಂದೂ ಗೊತ್ತಾಗಿದೆ. ಬಹುಶಃ ವರ್ತಮಾನದ ಪ್ರಕಾರ [illegible] ಜನರು ಸತ್ತಿರುವುದಾಗಿ ಹೇಳಲಾಗಿದೆ.

ಕಾಳಸಂತೆ ಬಿಡಲು ಪಾಕಿಸ್ತಾನ ವರ್ತಕರ ನಿರ್ಧಾರ

ಯುದ್ಧ ಪ್ರಯತ್ನಗಳ ಮೇಲೆ ವಿರುದ್ಧ ಪರಿಣಾಮವನ್ನುಂಟು ಮಾಡುವ ಯಾವ ವಿಧವಾದ ಕಾಳಸಂತೆ ವ್ಯಾಪಾರವನ್ನೂ ಕೈ ಹಾಕಕೂಡದೆಂದು ಪಾಕಿಸ್ತಾನದ ವ್ಯಾಪಾರಿಗಳು ಸಂಕಲ್ಪಿಸಿರುತ್ತಾರೆ.

ಮೌಲಾನಾ ಅಜಾದರೂ ರಾಜೀನಾಮೆ ಕೊಡುವರೇ?

ಪ್ರಧಾನಿ ನೆಹರೂರವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ಯಿತ್ತಿರುವಂತೆಯೇ ಮೌಲಾನಾ ಅಜಾದರೂ ಸಹ ಅದಕ್ಕೆ ರಾಜೀನಾಮೆ ಕೊಡಲು ಇಚ್ಛಿಸಿರುವುದಾಗಿ ತಿಳಿಸಿರುವರೆಂದು ಗೊತ್ತಾಗಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಇತರ ಸಾಮಾನ್ಯ ವಿಷಯಗಳ ಪರಿಶೀಲನೆಯನ್ನು [illegible] ನೆಹರೂ ಪತ್ರವನ್ನು ಪರಿಶೀಲಿಸಿತೆಂದು ಹೇಳಲಾಗಿದೆ. ನೆಹರೂರವರು ಸ್ವಪ್ರಕಾಶ ಹಾಜರಿದ್ದು ರಾಜೀನಾಮೆ ವಿಷಯವನ್ನು ತನ್ನ ನೈರುಹಾಜರಿಯಲ್ಲಿ ಚರ್ಚಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸಭೆಯಿಂದ ಹೊರ ಬಂದರು, ಮಧ್ಯಾಹ್ನದ ಸಭೆಗೆ ಅವರೂ, ಮೌಲಾನಾ ಅಜಾದ್‌ರವರು ಹೋಗಿರಲಿಲ್ಲ. ಅವರುಗಳು ಮಂತ್ರಿ ಮಂಡಲದ ಖಾಸಗಿ ಸಭೆಯಲ್ಲಿ ಅದೇ ಸಮಯದಲ್ಲಿ ಭಾಗವಹಿಸಿದ್ದರೆಂದು ಹೇಳಲಾಗಿದೆ.

ಪೂರ್ವ ಪಾಕಿಸ್ತಾನ ಮತ್ತು ಅಸ್ಸಾಂಗಳಿಗೆ ಒಪ್ಪಂದ

ಬ್ರಹ್ಮಪುತ್ರಾ ನದಿಯ ಮಧ್ಯೆ ಇರುವ ಎರಡು ದ್ವೀಪಗಳನ್ನು ಆಕ್ರಮಿಸಿರುವ ಬಗ್ಗೆ ಪೂರ್ವ ಪಾಕಿಸ್ತಾನ ಮತ್ತು ಅಸ್ಸಾಂ ಸರ್ಕಾರಗಳ ಜಂಟಿ ತನಿಖೆಯು ನಡೆಯುವ ಬಗ್ಗೆ ಒಪ್ಪಂದವಾಗಿರುತ್ತದೆ. ಇಬ್ಬರು ಜಿಲ್ಲಾ ಮ್ಯಾಜಿಸ್ಟ್ರೇಟರು ತನಿಖೆ ನಡೆಸುವರೆಂದು ಹೇಳಲಾಗಿದೆ.

ಹಣ್ಣು ಮತ್ತು ತರಕಾರಿಗಳ ಬಗ್ಗೆ ಪ್ರಬಂಧ

ಹಣ್ಣು ಮತ್ತು ತರಕಾರಿಗಳನ್ನು ಬೆಳೆಗಳಲ್ಲಿ ಚಪ್ಪರಿಸಿಡುವುದರ ಭವಿಷ್ಯವನ್ನು ಕುರಿತು ಪ್ರಬಂಧವನ್ನು ಏರ್ಪಡಿಸಲಾಗಿದೆಯೆಂದು ರಾಜಧಾನಿಯ ಕೇಂದ್ರ ಆಹಾರ ಸಂಶೋಧನಾಲಯದವರು ತಿಳಿಸಿರುತ್ತಾರೆ. ಬರುವ ಡಿಸೆಂಬರ್ [illegible] ರೊಳಗ ಪ್ರಬಂಧಗಳನ್ನು ಸಹದೇವಲಿಯ ಔರಂಗಜೇಬ್ ರಸ್ತೆಯ [illegible] ಆಲ್ ಇಂಡಿಯಾ ಫುಡ್ ಪ್ರಿಸರ್ವರ್ಸ್ ಅಸೋಸಿಯೇಷನ್ ಅಧ್ಯಕ್ಷರ ವಿಳಾಸಕ್ಕೆ ಬರೆದು ಕಳುಹಿಸಬಹುದು. ಅತ್ಯುತ್ತಮವಾದ ಪ್ರಬಂಧಕ್ಕೆ ಬೊಂಬಾಯಿ ಗೌರ್ನರರು ಪ್ರಶಸ್ತಿ ಪತ್ರವನ್ನು ಕೊಡುವರು.

ಕಾಶ್ಮೀರ ಯುದ್ಧದಲ್ಲಿ ಪಾಕಿಸ್ತಾನಕ್ಕೆ ಸೋಲು

ಕಾಶ್ಮೀರದ ಯುದ್ಧದಲ್ಲಿ ಪಾಕಿಸ್ತಾನವು ಸೋತುದಾಗಿ ಅದರ ಮುಖಂಡರು ಅರಿತಿರುವರೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ. ಆ ದೇಶದ ಮುಖಂಡರಲ್ಲಿ ತೇಜೋ ಭಂಗವಾಗಿ ಭಾರತವು ಎಲ್ಲ ರೀತಿಯಲ್ಲೂ ಜಯಗಳಿಸಿರವುದಾಗಿ ಅವರು ಹೇಳಿ, ಭಾರತದ ಸೈನ್ಯ ಕಾಶ್ಮೀರದಲ್ಲಿರುವುದರಿಂದ ಜಯವುಂಟಾಯಿತೆಂಬುದಕ್ಕಿಂತಲೂ ಪಾಕಿಸ್ತಾನದ ದ್ವಿರಾಷ್ಟ್ರ ತತ್ವವನ್ನು ಕಾಶ್ಮೀರವು ತಿರಸ್ಕರಿಸಿದುದೇ ಜಯಕ್ಕೆ ಕಾರಣವೆಂದೂ ತಿಳಿಸಿದರು. ಭಾರತದ ಮೇಲೆ ಎಂದಿಗೂ ಆಕ್ರಮಣವಾಗದೆಂದು ಅವರು ಅಭಿಪ್ರಾಯಪಟ್ಟರು.

ಬೊಂಬಾಯಿ ಹೋಟೇಲು ಕಾರ್ಮಿಕರ ಮುಷ್ಕರ

ನಾಳಿದ್ದು ಬೊಂಬಾಯಿಯಲ್ಲಿರುವ [illegible] ಸಾವಿರ ಹೋಟೇಲು ಕಾರ್ಮಿಕರು ಕೆಲಸದ ಬಗ್ಗೆ ಉತ್ತಮ ಸ್ಥಿತಿ ಗತಿಗಳಿಗಾಗಿ ಬೇಡಿಕೆಯಿಟ್ಟು [illegible] ನೇ ತಾರೀಖು [illegible] ದಿನದ ಮುಷ್ಕರ ಹೂಡಲು ನಿರ್ಧರಿಸಿರುತ್ತಾರೆ.

ಲೀಗ್ ಸಹ ವರ್ತನೆ ಬಗ್ಗೆ ವ್ಯವಹಾರದ ಖಂಡನೆ

ಮದ್ರಾಸಿನ ಹಣಕಾಸಿನ ಮಂತ್ರಿ ಬಿ. ಗೋಪಾಲರೆಡ್ಡಿಯವರು ಮುಸ್ಲಿಂ ಲೀಗಿನ ಅಧ್ಯಕ್ಷ ಮಹಮದ್ ಇಸ್ಮೇಲ್‌ರವರೊಡನೆ ಚುನಾವಣಾ ಸಹ ವರ್ತನೆ ಬಗ್ಗೆ ನಡೆಸಲು ಪ್ರಕ್ರಮಿಸಿದ ಮಾತುಕತೆಗಳನ್ನು ಮುಖ್ಯ ಮಂತ್ರಿ ಕುಮಾರ ಸ್ವಾಮಿ ರಾಜಾರವರು ಖಂಡಿಸಿ ತಾವು ಅದನ್ನು ಒಪ್ಪುವುದಿಲ್ಲವೆಂದೂ ಮದ್ರಾಸು ಶಾಸನ ಸಭಾ ಕಾಂಗ್ರೆಸ್ ಪಕ್ಷಕ್ಕೂ ಅದಕ್ಕೂ ಸಂಬಂಧವಿಲ್ಲವೆಂದೂ ತಿಳಿಸಿಯುತ್ತಾರೆ.

ಮೈಸೂರು ಬಗ್ಗೆ ವಾಸ್ತವಿಕಾಂಶಗಳು

ಮೈಸೂರು ಸಂಸ್ಥಾನದ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದ ಕಳೆದ ನಾಲ್ಕು ವರ್ಷಗಳಂದ ಬೇರೆವಲ್ಲಿ ಸಾಧಿಸಿರುವ ಪ್ರಗತಿಯ ಬಗ್ಗೆ ಸರ್ಕಾರದವರು [illegible] ಪುಸ್ತಕಗಳನ್ನು ಪ್ರಕಟಿಸಿ ನಾನಾ ಇಲಾಖೆಗಳಲ್ಲಿನ ಕಾರ್ಯ ಚಟುವಟಿಕೆಗಳನ್ನು ಚಿತ್ರಗಳ ಸಮೇತ ಕೊಟ್ಟಿರುತ್ತಾರೆ. ಸರ್ಕಾರದವರು ಪ್ರತಿಷ್ಠಿತವನ್ನು ಬಹಳ ಜಾಗರೂಕತೆಯಿಂದ ಕಾಯ್ದುಕೊಂಡು ಬಂದಿರುವುದಾಗಿಯೂ, ತಿಳಿಸಲಾಗಿದೆ. ಪ್ರಗತಿಯನ್ನು ಸಾಧಿಸಿರುವ ಬಗ್ಗೆ ಮೈಸೂರು ಸಂಸ್ಥಾನದ ವಿವಿಧ ವರ್ಣ ಫೋಟೋಗಳ ಪುಸ್ತಕವನ್ನೂ ಪ್ರಕಟಿಸಲಾಗಿದೆ. ಹಿಂದಿನಿಂದಲೂ ಬಂದ ಮೈಸೂರಿನ ರಾಜವಂಶದ ಆಳ್ವಿಕೆ, ಪ್ರಗತಿ ಶೀಲ ಮನೋಭಾವ ಮತ್ತು ಜವಾಬ್ದಾರಿ ಸರ್ಕಾರದ ಸ್ಥಾಪನೆ ಇವುಗಳಿಂದ ಮೈಸೂರಿನ ಗೌರವ ಮತ್ತು ಪ್ರತಿಷ್ಠೆಗಳು ಕಾಪಾಡಲ್ಪಟ್ಟಿರುವುದಾಗಿ ಹೇಳಲಾಗಿದೆ.

ಮಧು ಮಂದಿರ

ರಾಜಧಾನಿಯ ಹಲವು ಉತ್ಸಾಹೀ ತರುಣರು ಸಾಹಿತ್ಯಾಭಿವೃದ್ಧಿಗಾಗಿ ಮಧು ಮಂದಿರವೆಂಬ ಸಂಘವನ್ನು ಸ್ಥಾಪಿಸಿಕೊಂಡು ಕನ್ನಡದಲ್ಲಿ ಕೈ ಬರಹದ ಮಧುಪ ಎಂಬ ಮಾಸ ಪತ್ರಿಕೆಯನ್ನು ಹೊರಡಿಸಲು ನಿರ್ಧರಿಸಿರುತ್ತಾರೆ.

ವಾರ ಭವಿಷ್ಯ

ta॥ ೧೨-೮ ೫೧ ರಿಂದ ೧೮-೮-೫೧ರ ವರೆಗೆ

ಮೇಷ — ಆರೋಗ್ಯ ಉತ್ತಮ ಕೈಗೊಂಡ ಕಾರ್ಯ ಸಿದ್ಧಿ ವ್ಯವಹಾರಗಳಲ್ಲಿ ಯಶಸ್ಸು ಸಾಹಿತ್ಯ ಸೇವೆಗೆ ಉತ್ತಮ ತಾ॥ ೧೬, ೧೭ ವಿಶೇಷ ಸುದ್ದಿ ಸ್ನೇಹಿತರ ಭೇಟಿ

ವೃಷಭ — ಆರೋಗ್ಯದ ಕಡೆ ಗಮನ ಕೊಡಿ ಮನಸ್ಸಿನ ತಳಮಳ ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ ಪ್ರವಾಸ ಬೇಡ ತಾ॥ ೧೬, ೧೭ ಧನ ಲಾಭ, ಚಿಂತಾನಾಶ

ಮಿಥುನ — ಚಿಂತೆ ಹೆಚ್ಚು ವ್ಯಾಪಾರ, ವ್ಯವಹಾರಗಳಲ್ಲಿ ಹಾನಿ ಸಾಲ ಮಾಡುವ ಸಂಭವ ಆರೋಗ್ಯ ಜಾಸ್ತಿ ಗಮನ ಖರ್ಚು ಹೆಚ್ಚು ತಾ॥ ೧೬, ೧೭ ಅಪಘಾತ ಸಂಭವ ಚಿಂತೆ

ಕರ್ಕ — ಮಿತ್ರರಿಂದ ಸಹಾಯ ಕೈಗೊಂಡ ಕಾರ್ಯ ಸಿದ್ಧಿ ವ್ಯವಹಾರಗಳಲ್ಲಿ ಪ್ರಗತಿ ಆರೋಗ್ಯ ಉತ್ತಮ ತಾ॥ ೧೫, ೧೬ ಅಪ್ತರ ಆಗಮನ ಶುಭ ಕಾರ್ಯಕ್ಕಾಗಿ ಖರ್ಚು

ಸಿಂಹ — ಆರೋಗ್ಯ ಉತ್ತಮ ಸುಖ ಪ್ರವಾಸ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ವಿದ್ಯಾರ್ಥಿಗಳಿಗೆ ಉತ್ತಮ ತಾ॥ ೧೬, ೧೭ ಮಿತ್ರರ ಭೇಟಿ, ಧನ ಲಾಭ

ಕನ್ಯಾ — ಆರೋಗ್ಯ ಸಾಧಾರಣ ಮನಶ್ಶಾಂತಿ ಕಮ್ಮಿ ವ್ಯವಹಾರಗಳಲ್ಲಿ ಅಡ್ಡಿ, ಪ್ರವಾಸ ಬೇಡ ಖರ್ಚು ಹೆಚ್ಚು ತಾ॥ ೧೬, ೧೭, ೧೮ ವೃಥಾ ಕಲಹ. ಅಪಘಾತ ಸಂಭವ

ತುಲ — ಎದುರಾಳಿಗಳಿಗೆ ಸೋಲು ಆರೋಗ್ಯ ಉತ್ತಮ ಅಪಘಾತ ಸಂಭವ ಆರ್ಥಿಕ ಪರಿಸ್ಥಿತಿ ಉತ್ತಮ ಕುಟುಂಬದಲ್ಲಿ ತೊಂದರೆ ತಾ॥ ೧೩, ೧೮ ಶುಭ ವಾರ್ತೆ, ಮೃಷ್ಟ ಭೋಜನ

ವೃಶ್ಚಿಕ — ಆರೋಗ್ಯ ಉತ್ತಮ ಕೈಗೊಂಡ ಕಾರ್ಯ ಸಿದ್ಧಿ ಹಣ ಕಾಸಿನ ಸ್ಥಿತಿ ಉತ್ತಮ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ತಾ॥ ೧೬ ೧೭ ಕಲಹ ಧನ ನಾಶ.

ಧನು — ಶತ್ರುಗಳಿಗೆ ಸೋಲು ವ್ಯಾಪಾರ ವ್ಯವಹಾರಗಳಲ್ಲಿ ಪ್ರಸಿದ್ಧಿ ತೀರ್ಥ ಕ್ಷೇತ್ರಗಳ ಯಾತ್ರೆ ಸಾಹಿತ್ಯೋಪಾಸಕರಿಗೆ ಉತ್ತಮ ತಾ॥ ೧೬ ೧೭ ಶುಭ ಕಾರ್ಯಕ್ಕೆ ಖರ್ಚು ಮಿತ್ರರ ಭೇಟಿ

ಆದರ್ಶ ಕನ್ನಡ

ನಾಟಕ ಸಂಘ, ಮೈಸೂರು

12.8.51 ರಿಂದ ಪ್ರದರ್ಶನದ ಆರಂಭ

ಪ್ರತಿ ದಿನ ಸಂಜೆ 6.45ಕ್ಕೆ

ಟೌನ್ ಹಾಲಿನಲ್ಲಿ

✱ ಚಂಚಲ ✱

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುತ್ತಾರೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ

ಪ್ರೊ॥ ಎಂ. ಪಿ. ದಾಸ್, ಪಿ ಕೆ ಶೇರವ[illegible]

ಬೆಂಕಿಯಿಂದ ೧೦೦ ವರ್ಷದ ಹಳೆಯ ಕಟ್ಟಡ ಭಸ್ಮ

ಮಧ್ಯ ಅಮೆರಿಕದ ಸ್ಯಾನ್ ಸಲ್ವಡಾರ್ ಎಂಬಲ್ಲಿ ಕಳೆದ ಬುಧವಾರ ಬಾರಿ ಬೆಂಕಿ ಪ್ರಮಾದ ಸಂಭವಿಸಿ ಏಳು ಘಂಟೆ ಕಾಲ ಉರಿಯಿತೆಂದೂ, ಇದರ ಪರಿಣಾಮವಾಗಿ ಒಂದು ಸಿನಿಮಾ ಕಟ್ಟಡವೂ ನೂರು ವರ್ಷದ ಹಿಂದಿನ ಒಂದು ಕ್ರೈಸ್ತ ದೇವಾಲಯವೂ, ಹೊಸದಾಗಿ ಕಟ್ಟಿದ ಮತ್ತು ಸರ್ಕಾರದ ಒಂದು ಕಲಾಶಾಲೆಯೂ ಭಸ್ಮವಾಗಿ ಹೋಗಿ ಅನೇಕ ಪದಾರ್ಥಗಳು ಸುಟ್ಟು ಹೋದುವೆಂದು, ವರದಿಯಾಗಿದೆ

೧೩೦ ಮೈಲಿ ಎತ್ತರಕ್ಕೆ ರಾಕೆಟ್ ಹಾರಿತು

[illegible] ಟನ್ ತೂಕದ ವೈಕಿಂಗ್ ರಾಕೆಟ್ ಯಂತ್ರವು ಗಂಟೆಗೆ ೫೦೦೦ ಮೈಲಿ ವೇಗದಲ್ಲಿ ೧೩೦ ಮೈಲಿಗಳಷ್ಟು ಮೇಲಕ್ಕೆ ಹಾರಿ ಹೊಸ ದಾಖಲೆಯನ್ನು ಸ್ಥಾಪಿಸಿರುವುದಾಗಿ ಗೊತ್ತಾಗಿದೆ

ಮಕರ — ಆರೋಗ್ಯ ಉತ್ತಮ ಕಾರ್ಯಗಳಲ್ಲಿ ಅಪಮಾನ ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ ಕಾರ್ಯ ನಷ್ಟ, ಪ್ರವಾಸ ಬೇಡ ತಾ॥ ೧೬ ೧೭ ಚಿಂತಾನಾಶ ಮಿತ್ರರ ಭೇಟಿ

ಕುಂಭ — ಆರ್ಥಿಕ ಸ್ಥಿತಿ ಉತ್ತಮ ಆರೋಗ್ಯ ಚೆನ್ನಾಗಿರುವುದು ಮನಸ್ಸಂತೋಷ ಹೆಚ್ಚು ವ್ಯವಹಾರಗಳಲ್ಲಿ ಪ್ರಗತಿ ಪ್ರವಾಸ ಸಂಭವ ತಾ॥ ೧೬ ೧೭ ಖರ್ಚು ಚಿಂತೆ

ಮೀನ — ಆರ್ಥಿಕ ಮುಗ್ಗಟ್ಟು ಹೆಚ್ಚು ಮನಶ್ಶಾಂತಿ ಕಮ್ಮಿ ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ ಪ್ರವಾಸದಲ್ಲಿ ಕಷ್ಟ ತಾ॥ ೧೬ ೧೭ ಕಾರ್ಯ ಸಿದ್ಧಿ ಧನ ಲಾಭ

ರಷ್ಯದಲ್ಲಿ ಮುಸ್ಲಿಂ ಜನಾಂಗದ ಹೆಸರಿಲ್ಲ

ಮುಸ್ಲಿಂ ಜನಾಂಗದ ಹೆಸರನ್ನು ರದ್ದುಗೊಳಿಸುವ ಶಾಸನವು ರಷ್ಯದಲ್ಲಿ ಜಾರಿಯಲ್ಲಿರುವುದಾಗಿ ವಿಶ್ವ ಸಂಸ್ಥೆಯ ಆರ್ಥಿಕ ಸಾಮಾಜಿಕ ಸಮಿತಿಯಲ್ಲಿ ಬ್ರಿಟಿಷ್ ಪ್ರತಿನಿಧಿಯೊಬ್ಬರು ತಿಳಿಸಿ, ಇದು ಕಠೋರವಾದುದೆಂದು ಟೀಕಿಸಿರುತ್ತಾರೆ ಯಹೂದ್ಯರನ್ನು ಬಹಿಷ್ಕರಿಸಲು ಹಿಟ್ಲರನು ಮಾಡಿದ್ದ ಶಾಸನದಷ್ಟೇ ಕ್ರೂರವಾದ ಶಾಸನವಿದೆಂದೂ ಹೇಳಿ ಅವರು ಖಂಡಿಸಿರುತ್ತಾರೆ

೧ ಗೋಣಿ ಚೀಲಕ್ಕೆ ೫॥ ರೂ. ಬೆಲೆ

ಭಾರತದ ಗೋಣಿ ಚೀಲಗಳಿಗೆ ಹೇರಳವಾಗಿ ವಿಪರೀತ ಬೆಲೆಯಾಗಿ ಒಂದು ಚೀಲಕ್ಕೆ ೫ ರೂ ನಂತೆ ಮಾರಾಟವಾಗುತ್ತಿರುವುದಾಗಿ ಹೇಳಲಾಗಿದೆ

ಸೈಕಲ್ ಸಿಕ್ಕಿದೆ

ರಾಜಧಾನಿಯ ಗಾಂಧಿ ಚೌಕದ ಬಳಿಯಿರುವ ಮೈಸೂರು. ಸಿಟಿ ಕೋ ಆಪರೇಟಿವ್ ಸೊಸೈಟಿ ಕಟ್ಟಡದ ಬಳಿ ೩ ದಿನಗಳ ಹಿಂದೆ ಯಾರೋ ತಮ್ಮ ಸೈಕಲ್ಲನ್ನು ಬಿಟ್ಟು ಹೋಗಿರುತ್ತಾರೆಂದೂ, ಆದರ ಮಾಲೀಕರು ಸರಿಯಾದ ರುಜುವಾತು ಕೊಟ್ಟು ಸಂಘದ ಕಾರ್ಯದರ್ಶಿಯವರಿಂದ ಪಡೆಯಬಹುದೆಂದೂ ಸೂಚಿಸಲಾಗಿದೆ

ನೌಕೆಯಿಂದ ಸಮುದ್ರಕ್ಕೆ ಹಾರಿದ

ದಕ್ಷಿಣ ಭಾರತದ ಮಹಮದ್ ಎಂಬುವನು ಮಲಯದಿಂದ ಭಾರತಕ್ಕೆ ಬರುತ್ತಿದ್ದ ಹಡಗಿನಿಂದ ರಾತ್ರಿ ಅದು ಸಮುದ್ರ ಮಧ್ಯಕ್ಕೆ ಬಂದಾಗ ನೀರಿಗೆ ಹಾರಿ ಸಿಕ್ಕದೆ ಮುಳುಗಿಹೋದನೆಂದೂ, ಕಾರಣವೇನೆಂಬುದು ಗೊತ್ತಿಲ್ಲವೆಂದೂ ಹೇಳಲಾಗಿದೆ

ಕಾಂಗ್ರೆಸ್ಸಿಗೆ ಇನ್ನೂ ಅನೇಕರ ರಾಜೀನಾಮೆ

ಮದ್ರಾಸಿನ ಮಾಜಿ ಮಂತ್ರಿ ಮಂಗಳೂರಿನ ಕೆ ಆರ್ ಕಾರಂತರು ಕಾಂಗ್ರೆಸ್ಸಿಗೆ ರಾಜೀನಾಮೆಯನ್ನಿತ್ತಿರುವರು. ಮಧ್ಯ ಪ್ರದೇಶದ ಮಾಜಿ ಮಂತ್ರಿ ಹರ್ಷದವರೂ, ಉತ್ತರ ಪ್ರದೇಶದ ಶಾಸನ ಸಭಾ ಸದಸ್ಯಳೆ ಕಮಲಾ ಚೌಧುರಿಯವರೂ ರಾಜೀನಾಮೆಯನ್ನು ಕೊಟ್ಟಿರುತ್ತಾರೆ

೨ ಲಕ್ಷ ಭಾರತೀಯರಿಗೆ ಸಿಂಹಳದಲ್ಲಿ ಓಟಿನ ಹಕ್ಕಿಲ್ಲ

ಸಿಂಹಳದ ಚುನಾವಣಾ ಓಟರು ಪಟ್ಟಿಯಿಂದ ೨ ಲಕ್ಷ ಜನ ಭಾರತೀಯರ ಹೆಸರುಗಳನ್ನು ತೆಗೆದುಹಾಕಲಾಗಿದೆಯೆಂದು ಗೊತ್ತಾಗಿದೆ

ಶಿಶುಗಳನ್ನು ಅಪಹರಿಸುವ ತಂಡದ ಬಂಧನ

ಮೊನ್ನೆ ದಿಹಲಿಯಲ್ಲಿ ಶಿಶುಗಳನ್ನು ಅಪಹರಿಸುವ ೩೦ ಜನರ ತಂಡವೊಂದನ್ನು ಬಂಧಿಸಿ ೫೦ ಮಕ್ಕಳನ್ನು ಸಂರಕ್ಷಿಸಿರುವುದಾಗಿ ಪಾರ್ಲಿಮೆಂಟಿನಲ್ಲಿ ರಾಜಾಜಿಯವರು ತಿಳಿಸಿದರು

ನೇಪಾಳದ ದಂಗೆಕೋರ ನಾಯಕನ ಬಂಧನ

ಪಶ್ಚಿಮ ನೇಪಾಳದ ದಂಗೆಕೋರ ನಾಯಕನಾದ ಡಾ॥ ಕೆ ಐ. ಸಿಂಗ್ ಮತ್ತು ಅವನ ಪರಿವಾರದವರನ್ನು ನೆನ್ನೆ ದಿನ ಬಂಧಿಸಲಾಯಿತೆಂದು ವರದಿಯಾಗಿದೆ

ಪರ್ಷಿಯಾ ಎಣ್ಣೆ ವ್ಯಾಜ್ಯದ ಒಪ್ಪಂದದ ಆಶಾ ಭಾವನೆ

ಪರ್ಷಿಯಾ ಮತ್ತು ಬ್ರಿಟನ್ನಿಗಳಿಗೆ ಬೇಗನೆ ಒಪ್ಪಂದವಾಗುವ ಒಗ್ಗೆ ನಿರ್ದಿಷ್ಟವಾದ ಸೂಚನೆಯನ್ನು ಮಾಡುವುದಾಗಿ ಬ್ರಿಟಿಷ್ ನಿಯೋಗದ ಮುಖಂಡರಾದ ರಿಚರ್ಡ್ ಸ್ಟೋಕ್ಸ್‌ರವರು ತಿಳಿಸಿರುತ್ತಾರೆ

ವಿವಾಹ ಮಹೋತ್ಸವ

ರಾಜಧಾನಿಯ ಸೋನಾರ್ ರಸ್ತೆಯಲ್ಲಿರುವ ಡಾ॥ ಅಂಬಳೆ ವೆಂಕಟಸುಬ್ಬಯ್ಯನವರ ತಮ್ಮ ಶ್ರೀ ಎ. ವಾಸುದೇವಯ್ಯನವರ ಹಿರಿಯ ಮಗಳು ಚಿ॥ ಸೌ॥ ರುಕ್ಮಿಣಿಯನ್ನು ಮಳವಳ್ಳಿ ತಾಲ್ಲೂಕು ಸುಬ್ಬಲೂರಿನಲ್ಲಿರುವ ಶ್ರೀ ಎಂ ಸುಬ್ಬರಾಯರ ಜ್ಯೇಷ್ಠ ಪುತ್ರ ಚಿ॥ ಎಸ್ ಕೃಷ್ಣಮೂರ್ತಿಯವರಿಗೆ ಕೊಟ್ಟು ಕಳೆದ ಗುರುವಾರ ಮದ್ರಾಸಿನ ಅಡಿಯಾರು ಥಿಯಸಾಫಿಕಲ್ ಸೊಸೈಟಿಯ ಆವರಣದಲ್ಲಿರುವ ಭಾರತ ಸಮಾಜ ದೇವಾಲಯದಲ್ಲಿ ವಿವಾಹವು ನಡೆಯಿತು.

ಉದಾರ ಸಹಾಯ

ರಾಜಧಾನಿಯ ಶಾರದಾವಿಲಾಸ ಹೈಸ್ಕೂಲಿನ ವರವನಾನಕ್ಕಾಗಿ ನಿರ್ಮಿತವಾಗುತ್ತಲಿರುವ ವಾಸದ ಮನೆಗಳಿಗಾಗಿ ಮೈಸೂರು ಪ್ರಿಂಟ್ ಮತ್ತು ಟೈಲ್ ಫ್ಯಾಕ್ಟರಿ ಶ್ರೀ ಸನತ್ಕುಮಾರ್‌ರವರು ೩೦೦೦ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ ಮಹಾ ಜನರು ಈ ರೀತಿ ಸಹಾಯವನ್ನು ಮಾಡಬೇಕೆಂದು ಕೋರಲಾಗಿದೆ

ಮೈಸೂರು ಶ್ರೇಷ್ಠ, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ,

ದೊಡ್ಡಪೇಟೆ ಆನಂದ ಭವನ ಹೋಟೆಲ್ ಪಕ್ಕ ಮೈಸೂರು.

ನಾಟಕ ರತ್ನ ಗುಬ್ಬಿ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಅಮೋಘವಾದ 2ನೇ ವಾರ **ರಾಜಾ ಗೋಪಿಚಂದ್**

ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ

ರಾತ್ರಿ 9 15 ಘಂಟೆಗೆ, ಉಳಿದ ದಿನಗಳಲ್ಲಿ ಮ್ಯಾಟಿನಿ 6 15ಕ್ಕೆ

ಫ್ಲೋರ್ ಮಿಲ್ ಮತ್ತು ಹಲ್ಲರು

ಬಿಕರಿಗಿವೆ

ಮೈಸೂರು ನಗರದ ಮಧ್ಯ ರಸ್ತೆಯಲ್ಲಿ ಒಳ್ಳೆಯ ಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವ ಒಂದು ಫ್ಲೋರ್ ಮಿಲ್ ಮತ್ತು ಹಲ್ಲರು, 25 ಸೈಕಲ್ಲಿನ 7 1/2 ಎಚ್.ಪಿ ಎಲೆಕ್ಟ್ರಿಕ್ ಮೋಟಾರು ಮತ್ತು ಮಿಸಿನರಿ ಲೈಸೆನ್ಸ್ ಸಮೇತ ಬಿಕರಿಗಿದೆ ಕೆಳಗೆ ಕಂಡವರಲ್ಲಿ ವಿಚಾರಿಸಿರಿ

ವಿ. ಎಸ್. ಮನೋಹರ್,

ಮೆಷಿನರಿ ವ್ಯಾಪಾರಿಗಳು, ಪ್ರಭಾ ಟಾಕೀಸ್ ಹತ್ತಿರ, ಮೈಸೂರು.

Edited, printed and published by A R Nagarajan, at Sadhvi Press D Subbiah Road, Mysore

ಫೋನ್ ನಂ 792 । ವಂದೇ ಮಾತರಂ । ಈ ದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧೩-೮-೫೧ [ಸಂಚಿಕೆ ೧೮

ದಕ್ಷಿಣ ಭಾರತದಲ್ಲಿ ಭಾಷಾ ಪ್ರಾಂತ ರಚನೆ

...ಲ್ಲಾ ಬೋರ್ಡು ಅಧ್ಯಕ್ಷರ ಪ್ರವಾಸ

ಮೈಸೂರು ೧೨

...ಸೂರಿನ ಜಿಲ್ಲಾಬೋರ್ಡು ಅಧ್ಯ... ಶ್ರೀ ಹೆಚ್. ಎಂ. ಚನ್ನಬಸಪ್ಪ ...ನ್ನೆ ಟಿ. ನರಸೀಪುರ, ಬನ್ನೂರು ...ತುಗಳಿಗೆ ಭೇಟಿಯಿತ್ತು, ಶಾಲಾ ...ಯನ್ನು ನಿರ್ಮಿಸುವ ಏರ್ಪಾಡಾ... ...ಗೆ ಹೋಗಿದ್ದರು. ಆ ಊರಿನ ...ಸುತ್ತಮುತ್ತಲಿನ ಗ್ರಾಮಸ್ಥರು ...ಗಿ ನಾಲ್ಕು ಸಾವಿರ ರೂ ಗಳನ್ನು ...ವಾಗ್ದಾನ ಮಾಡಿದರು ತಲ... ...ಪ್ರಾಥಮಿಕ ಶಾಲಾ ಕಟ್ಟಡದ ...ಘೋಷ್ಠವನ್ನು ಶ್ರೀಯುತರು ...ಸಿದರು ಹೈಸ್ಕೂಲು ಕಟ್ಟಡ ...ಶ್ರೀ ರಾಜಶೇಖರಮೂರ್ತಿ ಎಂ.ಎ, ...ದರ ತಾತಾಚಾರ್ ಮತ್ತು ಶ್ರೀ ...ಚಲರವರಿಂದ ಹಲಾ ...ರೂ ...ದ್ವಾನ ಪಡೆದುಕೊಂಡು ಹೆಚ್ಚಿನ ವಸೂಲಿಗಾಗಿ ಒಂದು ಸಮಿತಿಯ... ಏರ್ಪಡಿಸಿ ವಾಪಸು ಬಂದರು

...ನಸಾಚಾರ್ಯರ ಜಯಂತಿ

...ದ ಗುರುವಾರ ಶ್ರೀಮ...ಮಹಾ ಸಂಸ್ಕೃತ ಕಾಲೇಜಿನ ವೇದ ...ಶ್ರೀ ವಿಬುಧಸಾಚಾರ್ಯರ ... ...ತಿ ಮಹೋತ್ಸವವು ನಡೆಯು... ...ನ ವಿಶಾರದ ತಿಟ್ಟೆ ಕೃಷ್ಣ... ...ರ್ಯರು ಮತ್ತು ಪಾರ್ಥಸಾರಥಿ ...ಯವರಿಂ... ...ಗೆ ಸಂಗೀತವನ್ನು ...ಸಲಾಗಿದೆ ಬೆಳಗ್ಗೆ ಅರ್ಚನ... ...ದ ವೇದಪಾಠ ಕಾರ್ಯಗಳಾಗಿ ಸಂ... ...ಯಿಂದ ಉಪನ್ಯಾಸವಿರುತ್ತದೆ

...ಶಾಸನ ಸಚಿವರ ಕಾರ್ಯಕ್ರಮ

...ಸೂರು ಹಣಕಾಸಿನ ಸಚಿವರಾದ ... ...ವಾಸಪ್ಪನವರು ಮೈ... ...ಲ್ಲೆ ಬನ್ನೂರು ಬಳಿ ಇರುವ ... ಹಳ್ಳಿ ...ನೇ ಮತ್ತು ... ಗುಂಡ್ಲುಪೇಟೆ ತಾಲ್ಲೂಕು ...ಸರಸ್ವತಿ ಪ್ರಾಥಮಿಕ ಶಾಲೆಗಳ ...ಘೋಷ್ಠವನ್ನು ನೆರವೇರಿಸುವ... ...ತ್ತಾರೆ

...ಯಾದಲ್ಲಿ ವಿಷವಾಯು ಪ್ರಯೋಗವೇ?

...ದ ಪೂರ್ವ ಭಾಗದ ರಣರಂ... ...ದಲ್ಲಿ ವಿಶ್ವ ಸಂಸ್ಥೆ ಸೈನ್ಯಗಳು ... ಮತ್ತು ...ನೇ ತಾರೀ... ...ವಿಷವಾಯುವನ್ನು ಪ್ರಯೋ... ...ದಾಗಿ ಉತ್ತರ ಕೊರಿಯದ ವಿ... ...ಮಂತ್ರಿ ಯಾನ್ ಹ್ಯಾರವರು ...ತ್ತಾರೆ. ಈ ಬಗ್ಗೆ ಅವರು ವಿ... ...ಯ ಮಹಾ ಸಭೆ ಮತ್ತು ಭದ್ರ... ...ತಿಗಳಿಗೆ ಪ್ರತಿಭಟನೆಯನ್ನು ...ತ್ತಾರೆ

...ಾರಿ ಬೆಳೆ ಜಮೀನುಗಳ ಮೇಲೆ ಹೆಚ್ಚಿನ ತೆರಿಗೆ

...ರಿ ಬೆಳೆಯನ್ನು ಬೆಳೆಯುವ ...ಗಳ ಕಂದಾಯವನ್ನು ಹೆಚ್ಚಿ... ...ಸು ಸರ್ಕಾರದವರು ನಿರ್ಧ... ...ರೆ. ಆ ಪ್ರಾಂತದ ಅಭಿವೃದ್ಧಿ... ...ಬೇಕಾಗುವ ಹಣವನ್ನು ಒ... ...ವುದಕ್ಕಾಗಿ ಸರ್ಕಾರದ ವರ... ...ವನ್ನು ಹೆಚ್ಚಿಸಲು ಮೇಲ್ಕಂಡಂತೆ ...ನ್ನು ವಿಧಿಸಲಾಗುವುದು

ದ॥ ಭಾ॥ ಭಾಷಾವಾರು ಪ್ರಾಂತ ರಚನೆಗೆ ಸೂಚನೆ

ಭಾಷಾವಾರು ಪ್ರಾಂತದ ರಚನೆಯ ಬಗ್ಗೆ ಕಾಂಗ್ರೆಸ್ಸಿನ ಒಪ್ಪಿಗೆಯನ್ನು ಕಾರ್ಯಕಾರಿ ಸಮಿತಿಯು ಒತ್ತಿ ಹೇಳಿ ... ದಕ್ಷಿಣ ಭಾರತದಲ್ಲಿ ಈ ವಿಷಯವಾಗಿ ಸಂ... ...ಪಟ್ಟ ... ಶಾಸನ... ...ಸಂಬಂಧಿಕೆಯಿರುವುದಾಗಿ" ಅಭಿಪ್ರಾಯ ಪಟ್ಟಿರುತ್ತದೆ. ಈ ಸಂಬಂಧವಾಗಿ ... ನಿರ್ಣಯದಲ್ಲಿ ಭಾರತ ಸರ್ಕಾರದವರಿಗೆ ತೃಪ್ತಿಯಾಗಿದ್ದರೆ ತಕ್ಕ ಕ್ರಮ ಕೈಗೊಂಡು ... ಸಮಿತಿಯನ್ನು ರಚಿಸಬೇಕೆಂದ... ...ಲಾಗಿದೆ

ಕಾಂ॥ ಅಧ್ಯಕ್ಷ ಟಾಂಡನ್ ರಾಜೀನಾಮೆ ಕೊಡಲು ಸಿದ್ಧ

ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ಬಿಕ್ಕಟ್ಟು ಇನ್ನೂ ತೀವ್ರವಾಗುತ್ತಿರುವುದಾಗಿ ಹೇಳಲಾಗಿದೆ. ನೆನ್ನೆ ಹಲವು ಕಾರ್ಯಕಾರಿ ಸಮಿತಿ ಸದಸ್ಯರು ಈಗ ಉಂಟಾಗಿರುವ ಸ್ಥಿತಿಯನ್ನು ಬಗೆಹರಿಸಲು ನಿರ್ದಿಷ್ಟವಾದ ಸೂಚನೆಯನ್ನು ಕೊಡಬೇಕೆಂದು ಅಧ್ಯಕ್ಷರನ್ನು ಭೇಟಿಮಾಡಿ ಕೇಳಿದರೆಂದೂ, ಈ ದಿನವೂ ಪುನಃ ನೋಡುವರೆಂದೂ ಗೊತ್ತಾಗಿದೆ ಕಾರ್ಯಕಾರಿ ಸಮಿತಿಯನ್ನು ಪುನರ್ರಚಿಸಬೇಕೆಂದೂ, ಕಾಂಗ್ರೆಸ್ ಅಧ್ಯಕ್ಷರು ಟಂಡನ್‌ರವರೇ ಇದ್ದುಕೊಂಡು ಇತರ ಅಧಿಕಾರಿ ವರ್ಗದವರ ... ಲಾವಣೆಯಾಗಬೇಕೆಂದು ನೆಹರೂರವರ ಅಭಿಪ್ರಾಯ ಪಟ್ಟಿರುವರೆಂದೂ ಹೇಳಲಾಗಿದೆ ಆದರೆ ಟಂಡನ್‌ರವರು ತಮ್ಮ ರಾಜೀನಾಮೆಯನ್ನು ಎ. ಐ. ಸಿ. ಸಿ. ಗೆ ಒಪ್ಪಿಸಿ, ಪ್ರಧಾನಿಯವರೇ ಆದರೆ ಮುಖಂಡತ್ವವನ್ನು ವಹಿಸಲು ಅವಕಾಶ ಕಲ್ಪಿಸಬೇಕೆಂದು ಇಚ್ಛಿಸಿರುವರೆಂದೂ ಗೊತ್ತಾಗಿದೆ

ಮೈ॥ ಗ್ರಾಮಸ್ಥರ ಆದಾಯ ಮತ್ತು ವ್ಯಯದ ಸರ್ವೆ

ಮೈಸೂರು ಸಂಸ್ಥಾನದ ...ಕರ ಹಳ್ಳಿಯಲ್ಲಿ ಕೇಂದ್ರ ಸರ್ಕಾರದವರು ನಡೆಸಿದ ಸರ್ವೆಯ ಪ್ರಕಾರ ಒಬ್ಬ ರೈತನಿಗೆ ಪ್ರತಿ ವರ್ಷವೂ ... ರೂ ಸಂಪಾದನೆಯಾಗುವುದೆಂದೂ, ... ರೂ ಖರ್ಚಾಗುವುದೆಂದೂ ಗೊತ್ತಾಗಿದೆ. ... ಹಳ್ಳಿಗಳನ್ನು ಅಲ್ಲಲ್ಲಿ ಆರಿಸಿ ಈ ರೀತಿ ತನಿಖೆಯಾಗುವುದು

ಮಹಾ ಚುನಾವಣೆಗಳಿಗೆ ಕಾಂಗ್ರೆಸ್ಸಿನ ನೇತಾ ಪಟ್ಟಿ

ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯವರು ಮಹಾ ಚುನಾವಣೆಗಳಿಗೆ ತಮ್ಮ ಸಂಸ್ಥೆಯ ಪರವಾಗಿ ... ಮಹಾರಥರನ್ನು ನಿಲ್ಲಿಸುವ ಬಗ್ಗೆ ಒಂದು ನೇತಾ ಪಟ್ಟಿಯನ್ನು ತಯಾರಿಸಿರುತ್ತಾರೆ ಅದರ ಪ್ರಕಾರ ಉಮೇದುವಾರರಾಗಿರಲು ಇಚ್ಛಿಸುವವರು ಪ್ರಾಂತ ಕಾಂಗ್ರೆಸ್ ಸಮಿತಿಗೆ ಸೆಪ್ಟೆಂಬರ್ ... ರಲ್ಲಿ ಅರ್ಜಿ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಪ್ರಾಂತ ಸಮಿತಿಗಳು ... ತಮ್ಮ ಅಭಿಪ್ರಾಯವನ್ನು ಕಳುಹಿಸುವ ದಿನ ಅಕ್ಟೋಬರ್ ... ರವರೆಗೆ ಅಕ್ಷೇಪಣೆ ಮತ್ತು ... ಸ್ವೀಕರಿಸಿ ... ನವೆಂಬರ್ ಅಷ್ಟರೊಳಗೆ ಅಷ್ಟರು ತೀರ್ಮಾನವನ್ನು ಕೇಂದ್ರದವರು ಮಾಡುವರು

ಮೂರನೇ ಮಹಾಯುದ್ಧಕ್ಕೆ ಸಿದ್ಧತೆಯೇ ?

ಪಶ್ಚಿಮ ಜರ್ಮನಿಯಲ್ಲಿ ಕೆಲವು ವಾರಗಳಲ್ಲೇ ಹೊಸ ಜರ್ಮನ್ ಸೈನ್ಯವನ್ನು ಸ್ಥಾಪಿಸಲಾಗುವುದೆಂದೂ ಮೂರನೇ ಮಹಾಯುದ್ಧಕ್ಕೆ ಇದೇ ಸಿದ್ಧತೆಯಾಗುವುದೆಂದೂ ಪೂರ್ವ ಜರ್ಮನಿಯ ಪ್ರಧಾನಿಯವರು ಹೇಳಿರುತ್ತಾರೆ

ಭಾರತದ ಮೇಲೆ ಪುನಃ ಪಾಕಿಸ್ತಾನದ ಆರೋಪ

ಪಾಕಿಸ್ತಾನ ಸರ್ಕಾರದವರ ಒಂದು ಶ್ವೇತ ಪತ್ರವನ್ನು ಹೊರಡಿಸಿ, ಭಾರತದ ಮುಖಂಡರು ಮತ್ತು ಪತ್ರಿಕೆಗಳು ಭಾರತದ ವಿಭಜನೆಯನ್ನು ಹೋಗಲಾಡಿಸಲು ಪ್ರಯತ್ನ ನಡೆಸುತ್ತಿರುವರೆಂದು ... ನ್ನು ಸೂಚಿಸಲಿಚ್ಛಿಸಿರುತ್ತಾರೆ.

ದೆಹಲಿಯಲ್ಲಿ ಸ್ವಾತಂತ್ರ್ಯೋತ್ಸವ

ನಾ ಮ್ಮ ದೇಶದ ಪ್ರಧಾನಿ ನೆಹರೂರವರು ದೆಹಲಿಯ ಕೆಂಪು ಕೋಟೆಯ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಿ, ...ನೇ ಸ್ವಾತಂತ್ರ್ಯೋತ್ಸವದ ಉಂಟಾರಂಭವನ್ನು ಮಾಡುವರು ನಂತರ ಆ ಸ್ಥಳದಲ್ಲಿಯೇ ಭಾಷಣವನ್ನೂ ಮಾಡುವರು ಸೈನ್ಯ ನೌಕೆ ಮತ್ತು ವಿಮಾನ ಬಲಗಳ ಸಮೂಹವು ಅವರಿಗೆ ಗೌರವವನ್ನು ಸಲ್ಲಿಸುವುದು

ನೆಹರೂರವರಿಗೆ ಲಿಯಾಖತ್ತರ ಅವ್ವರು ತಂತಿ

ನೆಹರೂರವರಿಗೆ ಪಾಕಿಸ್ತಾನದ ಪ್ರಧಾನಿಯವರ ... ತಂತಿಯನ್ನು ಕಳುಹಿಸಿ, ಗಡಿಗಳಿಂದ ಸೈನ್ಯಗಳನ್ನು ಭಾರತವು ಹಿಂಪಡೆಯುವ ... ಯುದ್ಧದ ಸನ್ನಿವೇಶಕ್ಕೆ ತಕ್ಕಷ್ಟು ಜನರನ್ನು ಜಮಾಯಿಸಿರುವುದಾಗಿ ತಿಳಿಸಿರುತ್ತಾರೆ. ತಾವು ಮಾಡಿರುವ ... ಷರತ್ತುಗಳ ಸಲಹೆಯನ್ನು ನೆಹರೂರವರು ಅಂಗೀಕರಿಸಬೇಕೆಂದು ಕೋರುವುದಿಲ್ಲವೆಂದೂ, ವಿಶ್ವ ಸಂಸ್ಥೆಯವರು ಎರಡು ನಿರ್ಣಯಗಳಲ್ಲಿ ಸೂಚಿಸಿರುವ ಅಂಶಗಳನ್ನು ಭಾರತವು ಮಾನ್ಯ ಮಾಡಬೇಕೆಂದೂ ಅವರು ಕೋರುತ್ತಾರೆ ಕಾಶ್ಮೀರದ ಮಹಾರಾಜರು ಅಲ್ಲಿನ ಅನೇಕ ಮುಸಲ್ಮಾನರನ್ನು ಹೊಡೆದು ಹಾಕಿದರೆಂದೂ ಅವರ ಅಧಿಕಾರವು ಉರುಳುವ ಸಮಯದಲ್ಲಿ ಭಾರತ ಸೈನ್ಯಗಳನ್ನು ಅವರ ನೆರವಿಗೆ ಕಳುಹಿ ಸಹಾಯಿತೆಂದೂ ಲಿಯಾಖತ್ತರು ತಿಳಿಸಿರುತ್ತಾರೆ

ನೆಹರೂ ಚುನಾವಣೆಗೆ ನಿಲ್ಲ ಕೂಡದೆಂದು ಕಿದ್ವಾಯ್

ದೇಶದ ಮುಖಂಡರಾಗಿರುವ ನೆಹರೂರವರು ಬರುವ ಚುನಾವಣೆಗಳಲ್ಲಿ ತಟಸ್ಥರಾಗಿದ್ದು ಅಧಿಕಾರದಲ್ಲಿರುವ ಪಕ್ಷವು ... ಸಮಯದಲ್ಲಿ ತನ್ನ ಸ್ಥಾನದ ದುರುಪಯೋಗ ಪಡಿಸದಿರುವಂತೆ ನೋಡಿಕೊಳ್ಳಬೇಕೆಂದು ರಫಿ ಅಹಮದ್ ಕಿದ್ವಾಯಿರು ಹೇಳಿರುತ್ತಾರೆ

ಬ್ರಿಟನ್ ಮತ್ತು ಪರ್ಷಿಯಾಗಳಿಂದ ಜಂಟಿ ಕಾರ್ಯಕ್ರಮ

ಪರ್ಷಿಯದ ಎಣ್ಣೆ ಗಣಿಗಳ ಕೆಲಸವನ್ನು ಬ್ರಿಟನ್ ಮತ್ತು ಪರ್ಷಿಯಾಗಳು ಜಂಟಿಯಾಗಿ ನಡೆಸಬೇಕೆಂದು ಬ್ರಿಟನ್ ನಿಯೋಗದ ನಾಯಕರಾದ ಸ್ಟೋಕ್ಸ್‌ರವರು ಪರ್ಷಿಯಾ ಸರ್ಕಾರಕ್ಕೆ ಸೂಚಿಸುವರೆಂದು ಹೇಳಲಾಗಿದೆ ಈ ಬಗ್ಗೆ ಬ್ರಿಟಿಷ್ ಸರ್ಕಾರದೊಡನೆ ರಿಚರ್ಡ್ ಸ್ಟೋಕ್ಸ್‌ರವರು ವ್ಯವಹರಿಸುವ ಸಲುವಾಗಿ ಸಂಧಾನವನ್ನು ಮುಂದೆ ಹಾಕಲಾಗಿದೆ

ಶಾಸನಸಭೆಗಳಿಗೆ ಕಾಂಗ್ರೆಸ್ ಬಿಟ್ಟವರ ರಾಜೀನಾಮೆ ಕೂಡದು

ಕಾಂಗ್ರೆಸ್ಸನ್ನು ಬಿಟ್ಟು ಹೊರಬಂದಿರುವ ಶಾಸನ ಸಭಾ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕಾಗಿಲ್ಲವೆಂದು ಆಚಾರ್ಯ ಕೃಪಲಾನಿಯವರು ಸೂಚಿಸಿ, ಈ ಬಗ್ಗೆ ಯಾವ ವಿಧವಾದ ಸಂಗತಿಯೂ ಮತ್ತು ನೈತಿಕ ಕಟ್ಟಳೆಯೂ ಇಲ್ಲವೆಂದು ತಿಳಿಸಿರುತ್ತಾರೆ

ಹೈದರಾಬಾದಿನ ಪ್ರಮುಖ ಕಮ್ಯೂನಿಸ್ಟರ ದಸ್ತಗಿರಿ

ತಲೆ ಮರೆಸಿಕೊಂಡಿದ್ದ ಸುಮಾರು ... ಜನ ಅತ್ಯಂತ ಪ್ರಮುಖರಾದ ಹೈದರಾಬಾದು ಕಮ್ಯೂನಿಸ್ಟ್ ಮುಖಂಡರನ್ನು ದಸ್ತಗಿರಿ ಮಾಡಲಾಗಿದೆ ಇವರ ಪೈಕಿ ಒ ಜನ ಸ್ತ್ರೀಯರಿರುವರು ಅವರುಗಳ ಹೆಸರುಗಳನ್ನು ಕೊಡಲು ಪೋಲೀಸರಿಗೆ ಇಷ್ಟವಿಲ್ಲ. ಅನೇಕ ವೇಳೆ ತಪ್ಪಿಸಿಕೊಂಡ ವೆಂಕಟರಾವ್ ಎಂಬುವರನ್ನೂ ದಸ್ತಗಿರಿ ಮಾಡಲಾಗಿದೆ

ಮಲೆನಾಡು ಅಭಿವೃದ್ಧಿಗಾಗಿ ಮನವಿ

ಮೈಸೂರಿನ ಶ್ರೀ ... ಸರ್ಕಾರದವರ ...

ಜನ್ನದ ಗಣಿಯಲ್ಲಿ ನಿಮ್ನ ವರ್ಗದವರ ಸಮ್ಮೇಳನ

ಚಲಿತ್ರ

ಪ್ರಭಾತ ಸಂಗೀತ

... ನೆ ನಡೆಯಲಿದೆ

ರೂಪಾಯಿ ನಾಣ್ಯದ ಪುನರ್ಮೌಲ್ಯಕ್ಕೆ ಸಕಾಲವಲ್ಲ

... ಗುರುವಾರ ...

ಯಜುರುಪಾಕರ್ಮ

ನಾರಾಯಣಸ್ವಾಮಿ ಪೂಜೆ

ವೈದ್ಯ ಶಿಕ್ಷಣದ ಅವಧಿ ಕಡಿಮೆ ಮಾಡಲು ಶಿಫಾರಸು

ವೈದ್ಯ ಶಿಕ್ಷಣದ ಅವಧಿಯನ್ನು ೫ರಿಂದ ೪½ ವರ್ಷಗಳಿಗೆ ಇಳಿಸಿ ಅವರಲ್ಲಿ ಒಂದು ವರ್ಷ ಗ್ರಾಮಾಂತರಪ್ರದೇಶದಲ್ಲಿ ತರಬೇತು ಹೊಂದಬೇಕೆಂದು ವಿಧಾಯಕವಾಡಬೇಕಾಗಿ ಭಾರತೀಯ ಮೆಡಿಕಲ್ ಕೌನ್ಸಿಲಿನ ಕಾರ್ಯಕಾರಿ ಮಂಡಲಿಯು ಶಿಫಾರಸು ಮಾಡಿರುತ್ತದೆ

ಚಂಚಲ ನಾಟಕಾಭಿನಯ

ರಾಜಧಾನಿಯ ಆದರ್ಶ ಕನ್ನಡ ನಾಟಕ ಸಂಘದವರು ನೆನ್ನೆ ಸಂಜೆ ಟೌನ್ ಹಾಲಿನಲ್ಲಿ ಚಂಚಲ ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಿ ... ಮೆಚ್ಚುಗೆಯನ್ನು ಪಡೆದರು. ಅನೇಕ ಪ್ರೇಕ್ಷಕರು ಬಂದಿದ್ದರು. ನಾಟಕವನ್ನು ಶ್ರೀ ಪರಮಾನಂದ ದಾಸರು ರಚಿಸಿರುತ್ತಾರೆ

ಸರ್ಕಾರದಿಂದ ಉಪ್ಪು ಮಾರಾಟವಿಲ್ಲ

ಸರ್ಕಾರದವರು ತಾವೇ ಸ್ವಂತ ಉಪ್ಪು ಮಾರುವ ಯೋಚನೆಯನ್ನು ಬಿಟ್ಟುಬಿಟ್ಟಿರುತ್ತಾರೆ

ನಾರದ ಲೈಸನ್ಸ್ ಕೊಳ್ಳುವ ಅಕ್ಕಿಯಿಂದ ತೊಂದರೆ

ನಾರದ ಪಡಿತರವನ್ನು ಕೊಳ್ಳಬೇಕೆಂದು ಸರ್ಕಾರದವರು ಮಾಡಿರುವುದು ... ತೊಂದರೆಯಾಗಿರುತ್ತದೆ ... ಪಡಿತರವನ್ನು ಕೊಳ್ಳ ... ನಗರದಲ್ಲಿನ ಜನರ ಹಿತವನ್ನು ಗಮನಿಸಿ ಸರ್ಕಾರದವರು ... ಮಾಡಬೇಕೆಂದು ... ಮುರಳಿಯವರು ...

ಮೈಸೂರು ಎಲೆಕ್ಟ್ರೋಪ್ಲೇಟಿಂಗ್ ವರ್ಕ್ಸ್

ನಮ್ಮಲ್ಲಿ ... ಹಂಚಿಕೆ ... ಕೊಡಲು ...

ಎಂ. ಎಸ್ ಸೀತಾರಾಮಯ್ಯ,

ಪ್ರೊಪ್ರೈಟರ್

GRAND AUCTION On 15th INDEPENDENCE DAY

P. M.

... Spring Cots ... Kensington Type ... Gramophone Records ... Electrical Appliances

NALINS,

Premier Auctioneers & House Furnishers

... Market Square, Mysore

ಪ್ರಭಾ

ಪ್ರಾರಂಭ

ಪಾರ್

ಬಡಿಬಹೇರ್

17-8-51 ...

ಆದರ್ಶ ಕನ್ನಡ ನಾಟಕ ಸಂಘ, ಮೈಸೂರು

ಬುಧವಾರ ಮತ್ತು ಶನಿವಾರಗಳಲ್ಲಿ ರಾತ್ರಿ 9-45ಕ್ಕೆ

ಉಳಿದ ದಿನಗಳಲ್ಲಿ ಸಂಜೆ 6 45ಕ್ಕೆ

ಟೌನ್ ಹಾಲಿನಲ್ಲಿ

* ಚಂಚಲ *

ಸಾಮಾಜಿಕ ನಾಟಕವು ...

ಶ್ರೀ ... ದಾಸ್ ...

...ಗೌ॥ ಕ್ರೇಪ್ ಸಿಲ್ಕ್ ಸೀರೆಗಳೂ-ಧರ್ಮಾವರಂ-...

ಪೂನಾ, ನಾಗಪುರ್ ...

M. V. ಭೋಜಯ್ಯ

...

ರಾಜಕಮಲ್, ಮೈಸೂರು

10-8-51 ರಿಂದ ಅಪೇಕ್ಷಿತ ಪ್ರಾರಂಭ ದಿನವೂ 3 ಆಟಗಳು

ಚಿತ್ರರಸಿಕ ಜನರೆಲ್ಲರೂ ... ಮಹಾತ್ಮರವರ ಕನ್ನಡ ಕಲಾಕೃತಿ

ಜಗನ್ಮೋಹಿನಿ

... ಪ್ರೇಮಾದೇವಿ ...

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಅವರು

ರತ್ನಾವಳಿ ಥಿಯೇಟರಿನಲ್ಲಿ

ಅಪೇಕ್ಷಿತವಾದ 2ನೇ ವಾರ

ರಾಜಾ ಗೋಪಿಚಂದ್

...

ಪ್ರಭುದೇವಾ ಟಾಕೀಸ್

15-8-51 ನೇ ಬುಧವಾರದಿಂದ ಪ್ರತಿ ದಿನ 3 ಆಟಗಳು

ಕೋಹಿನೂರಿನವರ ತೆಲುಗು ಚಿತ್ರ

ಗೃಹಲಕ್ಷ್ಮಿ

... ಮುಂತಾದವರು

Edited printed and published by A. R. Nagarajan at Sadhvi Press D Subbiah Road, Mysore.

ರಿಜಿ ನಂ. 192 ॥ ಶುಭಂ ಭೂಯಾತ್ ॥ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೧೪-೮-೫೧ [ಸಂಚಿಕೆ ೧೯

ಈ ದಿನ ನೆಹರೂ ಟಾಂಡನ್‌ರವರ ಭೇಟಿ

ಭಾರತ ಸ್ವಾತಂತ್ರ್ಯೋತ್ಸವ ಸಮಾರಂಭ

ರಾಜಧಾನಿಯ ನಾನಾ ಸಂಸ್ಥೆಗಳ ಕಾರ್ಯಕ್ರಮಗಳು

ಮೈಸೂರು ೧೪

ಭಾರತದ ನಾಲ್ಕನೇ ಸ್ವಾತಂತ್ರ್ಯೋತ್ಸವದ ದಿನಾಚರಣೆಯನ್ನು ನಾಳೆ ರಾಜಧಾನಿಯ ನಾನಾ ಸಂಸ್ಥೆಗಳು ಆಚರಿಸುವುವು.

ನಗರದ ಕಾಂಗ್ರೆಸ್ ಸಮಿತಿ ಮತ್ತು ಪೌರಸಭೆಯವರು ಈ ಸಂಬಂಧವಾಗಿ ಜಂಟಿ ಕಾರ್ಯಕ್ರಮವನ್ನು ಕೈಗೊಂಡು ಟೌನ್ ಹಾಲ್ ಮೈದಾನದಲ್ಲಿ ನಾಳೆ ಬೆಳಗ್ಗೆ ೯ ಗಂಟೆಗೆ ಧ್ವಜಾರೋಹಣ ಮತ್ತು ಸೈನಿಕರ ಮಾರ್ಚ್‌ಪಾಸ್ಟ್ ಮತ್ತು ಸಂಜೆ ೬ ಗಂಟೆಗೆ ಅದೇ ಸ್ಥಳದಲ್ಲಿ ಬಹಿರಂಗ ಸಭೆ ಇವುಗಳನ್ನು ಏರ್ಪಡಿಸಿರುತ್ತಾರೆ. ಸರ್ವರಿಗೂ ಆಹ್ವಾನವಿದೆ.

ಶ್ರೀ ಶಾರದಾ ಸಂಗೀತ ವಿದ್ಯಾ ಮಂದಿರದವರು ತಮ್ಮ ಕೃಷ್ಣಮೂರ್ತಿಪುರದ ಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಪೌರಸಭಾ ಸದಸ್ಯರಾದ ಶ್ರೀ ಎ. ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ಸಮಾರಂಭವೊಂದನ್ನು ನೆರವೇರಿಸುವರು.

ರಾಜಧಾನಿಯ ಹೋಟೇಲು ಕೆಲಸಗಾರರ ಸಂಘದವರು ಸಂಘದ ಕಟ್ಟಡದಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ ಸಭೆಯನ್ನು ಏರ್ಪಡಿಸಿರುತ್ತಾರೆ. ಪೌರಸಭಾ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ರಾತ್ರಿ ೯ ಗಂಟೆಗೆ ರಾಜಸೂಯ ಯಾಗ ಎಂಬ ಯಕ್ಷಗಾನವನ್ನು ಏರ್ಪಡಿಸಲಾಗಿದೆ.

ರಾಜಧಾನಿಯ ಹೋಟೇಲು ಮಾಲೀಕರು ಸ್ವಾತಂತ್ರ್ಯೋತ್ಸವದ ಸಲುವಾಗಿ ತಮ್ಮ ಕೆಲಸಗಾರರಿಗೆ ಅರ್ಧ ದಿನದ ರಜವನ್ನು ಕೊಟ್ಟಿರುತ್ತಾರೆ.

ರಾಜಧಾನಿಯ ಅಂಚೆ ಮತ್ತು ತಂತಿ ಕಛೇರಿಯ ರಿಕ್ರಿಯೇಷನ್ ಕ್ಲಬ್ಬಿನವರು ನಾಳೆ ಬೆಳಗ್ಗೆ ೮॥ ಗಂಟೆಯಿಂದ ಮಧ್ಯಾಹ್ನ ೧೨ ರವರೆಗೆ ಪ್ರಾರ್ಥನೆ, ಧ್ವಜಾರೋಹಣ ಮತ್ತು ಗೌರವ ಸೂಚನೆಯನ್ನೂ, ಸಂಜೆ ೫॥ ಯಿಂದ ರಾತ್ರಿ ೯ ಗಂಟೆವರೆಗೆ ವಿವಿಧ ವಿನೋದಾವಳಿ ಮತ್ತು ವೇಷ ಸ್ಪರ್ಧೆ ಮತ್ತು ಬಹುಮಾನ ವಿತರಣೆಯೊಡನೆ ಸಮಾರಂಭವನ್ನು ನೆರವೇರಿಸುವರು. ಅಂಚೆ ಕಛೇರಿಗಳ ಸೂಪರಿಂಟೆಂಡೆಂಟರಾದ ಶ್ರೀ ಜಿ. ಹ. ರೇನೂರರವರು ಅಧ್ಯಕ್ಷತೆ ವಹಿಸುವರು.

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದಲ್ಲಿ ನಾಳೆ ಬೆಳಗ್ಗೆ ೭॥ ಘಂಟೆಗೆ ಧ್ವಜಾರೋಹಣ, ಸಂಜೆ ೩॥ ಘಂಟೆಗೆ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ. ಶ್ರೀಗಳಾದ ಟಿ. ಎಸ್. ರಾಜಗೋಪಾಲಯ್ಯಂಗಾರ್, ವಿಜಾಪುರದ ಹುಸೇನ್ ಮತ್ತು ವರ್ತಮಾನ ಪತ್ರಿಕೆಯ ಸಂಪಾದಕ ಶ್ರೀ ಎಂ. ಎ. ತಿಮ್ಮಯ್ಯನವರುಗಳಿಂದ ಭಾಷಣಗಳು ಮತ್ತು ಗಾ॥ ವಿ॥ ಬಿ. ದೇವೇಂದ್ರಪ್ಪನವರ ಸಂಗೀತ, ಈ ಕಾರ್ಯಕ್ರಮಗಳಿವೆ.

ಪತ್ರಿಕೋದ್ಯೋಗಿಗಳ ಸಂಘದಲ್ಲಿ ನಾಳೆ ಬೆಳಗ್ಗೆ ೮ ಗಂಟೆಗೆ ಉತ್ಸವದ ಸಂಬಂಧವಾಗಿ ರಾಷ್ಟ್ರಧ್ವಜವನ್ನು ಹಾರಿಸುವ ಕಾರ್ಯಕ್ರಮವಿದೆ. ಸದಸ್ಯರೆಲ್ಲರೂ ಹಾಜರಾಗಬೇಕೆಂದು ಕೋರಲಾಗಿದೆ.

ಯಜುರ್ವೇದೋಪಾಕರ್ಮ

ಮೈಸೂರು ೧೪,

ನಾಳಿದ್ದು ಗುರುವಾರ ಬೆಳಗ್ಗೆ ೯॥ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ವೇದರತ್ನಂ ಕಪ್ಪೀನುಳಲವಾಡಿ ವೆಂಕಟರಾಮಶಾಸ್ತ್ರಿಗಳವರಿಂದ ಯಜುರ್ವೇದ ಉಪಾಕರ್ಮವನ್ನು ನೆರವೇರಿಸಲಾಗುತ್ತದೆ ಇದರ ಶಾಖೆಯವರು ದಯಮಾಡಿಸಬೇಕಾಗಿ ಕೋರಲಾಗಿದೆ

ನಾಳಿದ್ದು ಬೆಳಗ್ಗೆ ೯ ರಿಂದ ೧೨ ಘಂಟೆವರೆಗೆ ಕಾಲೇಜು ರಸ್ತೆ ಸುಬ್ರಾಯನಕೆರೆ ಮೇಲಿರುವ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಹೆಬ್ಬಾರು ಶ್ರೀವೈಷ್ಣವ ಸಭೆಯವರು ಉಪಾಕರ್ಮವನ್ನು ಏರ್ಪಡಿಸಿರುತ್ತಾರೆ.

ಅಶೋಕಾ ರಸ್ತೆಯಲ್ಲಿರುವ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಆರ್ಯವೈಶ್ಯ ಮಹಾಜನಗಳಿಗಾಗಿ ಬರುವ ತಿಂಗಳು ೧೫ನೇ ತಾ॥ ಪೌರ್ಣಮಿ ದಿನ ಉಪಾಕರ್ಮವನ್ನು ಏರ್ಪಡಿಸಿರುವುದಾಗಿ ತಿಳಿಸಲಾಗಿದೆ

ಸಾಹಿತ್ಯ ಶಿಕ್ಷಣ ಮಂದಿರದ ಪ್ರಾರಂಭೋತ್ಸವ

ರಾಜಧಾನಿಯ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸಾಹಿತ್ಯ ಶಿಕ್ಷಣ ಮಂದಿರದ ಪ್ರಾರಂಭೋತ್ಸವವನ್ನು ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರವರು ನಾಳೆ ಬುಧವಾರ ಸಂಜೆ ೪ ಘಂಟೆಗೆ ನೆರವೇರಿಸುವರು. ಸರ್ವರಿಗೂ ಆಹ್ವಾನವುಂಟು.

ದೆಹಲಿ ಸ್ವಾತಂತ್ರ್ಯೋತ್ಸವದಲ್ಲಿ ಮೈಸೂರು ಬ್ಯಾಂಡು

ದೆಹಲಿಯಲ್ಲಿ ನಾಳೆ ನಡೆಯುವ ಸ್ವಾತಂತ್ರ್ಯೋತ್ಸವದ ಸಮಾರಂಭದಲ್ಲಿ ಪ್ರಧಾನಿ ನೆಹರೂರವರ ಇಚ್ಛೆ ಪ್ರಕಾರ ಭಾಗವಹಿಸಲು ಮೈಸೂರು ಅರಮನೆಯ ಇಂಗ್ಲಿಷ್ ಮತ್ತು ಕರ್ನಾಟಕ ಬ್ಯಾಂಡಿನವರು ಮೊನ್ನೆ ಇಲ್ಲಿಂದ ದೆಹಲಿಗೆ ತೆರಳಿದರು.

ಬೀಗದ ಕೈ ಗೊಂಚಲು ಸಿಕ್ಕಿದೆ

ರಾಜಧಾನಿಯ ಶ್ರೀ ಸೀತಾವಿಲಾಸ ಛತ್ರದ ಬಳಿ ಈ ಬೆಳಗ್ಗೆ ಒಂದು ಬೀಗದ ಕೈ ಗೊಂಚಲು ಸಿಕ್ಕಿದೆ. ಅದರ ಮಾಲೀಕರು ತಕ್ಕ ರುಜುವಾತು ಕೊಟ್ಟು ಸಾಧ್ವಿ ಕಛೇರಿಯಲ್ಲಿ ಪಡೆಯಬಹುದು

ಕಾಂಗ್ರೆಸ್ ಬಿಕ್ಕಟ್ಟು ಪರಿಹಾರದ ಸೂಚನೆ

ಭಾರತ ಕಾಂಗ್ರೆಸ್ ಸಂಸ್ಥೆಯಲ್ಲಿಂಟಾಗಿರುವ ಬಿಕ್ಕಟ್ಟು ಬಗೆಹರಿಯುವ ಸೂಚನೆಗಳು ಕಾಣಬರುತ್ತಿರುವುದಾಗಿ ತಿಳಿದುಬಂದಿದೆ. ಸತ್ಯನಾರಾಯಣ ಸಿನ್ಹ, ಡಾ॥ ಬಿ. ಸಿ. ರಾಯ್, ಪಂಡಿತ್ ಪಂತ್ ಮತ್ತು ಸಂಪೂರ್ಣಾನಂದ್‌ರವರುಗಳ ಮಧ್ಯಸ್ತಿಕೆಯ ಮಾತುಕತೆಗಳ ಪರಿಣಾಮವಾಗಿ ಟಾಂಡನ್‌ರವರು ಕಾರ್ಯಕಾರಿ ಸಮಿತಿಯನ್ನು ಪುನರ್ರಚಿಸಲು ಒಪ್ಪುವ ಸನ್ನಿವೇಶವುಂಟಾಗಿರುತ್ತವೆ. ನೆಹರೂ ಮತ್ತು ಟಾಂಡನ್‌ರವರು ಪರಸ್ಪರ ಭೇಟಿ ಮಾಡಬೇಕೆಂದು ಕಾರ್ಯಕಾರಿ ಸಮಿತಿಯು ನಿರ್ಣಯ ಮಾಡಿರುತ್ತದೆ. ಇಂದು ಅವರಿಬ್ಬರ ಭೇಟಿ ನಡೆಯುವುದೆಂದು ತಿಳಿದುಬಂದಿದೆ ಐತನ್ಮಧ್ಯೆ ನೆಹರೂರವರು ಕಾರ್ಯಕಾರಿ ಸಮಿತಿಯಲ್ಲಿರುವರೆಂದು ಹೇಳಲಾಗಿದೆ ಹೊಸದಾಗಿ ರಚಿತವಾಗುವ ಸಮಿತಿಯಲ್ಲಿ ಈಗ ಇರುವ ಹಲವು ಸದಸ್ಯರೂ ಇರುವರೆಂದು ಭಾವಿಸಲಾಗಿದೆ ಕಾರ್ಯಕಾರಿ ಸಮಿತಿಯನ್ನು ಸ್ವಲ್ಪ ಮಟ್ಟಿಗೆ ಪುನರ್ರಚಿಸಲು ಟಾಂಡನ್‌ರವರಲ್ಲಿಯೇ ಸೂಚನೆ ಇದ್ದುದಾಗಿಯೂ ಸ್ಪಷ್ಟವಾಗಿದೆ. ನೆಹರೂ ಮತ್ತು ಟಾಂಡನ್ ರಾಜೀನಾಮೆಗಳ ಪರಿಣಾಮವನ್ನು ಊಹಿಸಿಯೇ ಮಧ್ಯಸ್ತಿಕೆಗಾರರು ಅವರುಗಳೊಡನೆ ಮನಬಿಚ್ಚಿ ಮಾತನಾಡಿರುತ್ತಾರೆಂದು ಹೇಳಲಾಗಿದೆ.

ಟಿ. ನರಸೀಪುರದ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ದಿನಾಚರಣೆ

ನಾಳೆ ಮಧ್ಯಾಹ್ನ ೨ ಗಂಟೆಗೆ ಟಿ. ನರಸೀಪುರದ ಭಗವಾನ್ ಟಾಕೀಸಿನಲ್ಲಿ ಜಿಲ್ಲಾ ರೈತರ ಸಂಘ, ತಾ॥ ಕಾಂಗ್ರೆಸ್ ಸಮಿತಿ ಮತ್ತು ಗ್ರಾಮ ವಿದ್ಯೋದಯ ಸಂಘಗಳ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಡೆಯುವುದು. ಸಂಜೆ ೪॥ ಗೆ ಸೋಸಲೆ ಹೋಬಳಿಯ ರೈತರು ನಂಜುಂಡೇಶ್ವರ ಅಕ್ಕಿ ಗಿರಣಿಯಲ್ಲಿ ಉತ್ಸವವನ್ನು ನೆರವೇರಿಸುವರು. ಬನ್ನೂರಿನ ಶ್ರೀ ರಾಮದೇವರ ದೇವಸ್ಥಾನದಲ್ಲಿ ಉತ್ಸವದ ಅಂಗವಾಗಿ ಗಾಂಧೀಜಿ ಮತ್ತು ಶ್ರೀಮನ್ಮಹಾರಾಜರ ಚಿತ್ರಗಳ ಅನಾವರಣಗಳಾಗುವುವು ಈ ಮೂರು ಕಡೆಗಳಲ್ಲೂ ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸುವರು

ಕೇಂದ್ರ ಆಹಾರ ಮಂತ್ರಿ ಅಕ್ಕಿ ಉಪಯೋಗಿಸುವುದಿಲ್ಲ

ಕೇಂದ್ರ ಆಹಾರ ಮಂತ್ರಿ ಮುನ್ಷಿಯವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ತಾವು ಅಕ್ಕಿಯನ್ನು ಉಪಯೋಗಿಸುವುದಿಲ್ಲವಾಗಿ ತಿಳಿಸಿರುತ್ತಾರೆ.

ಮಂತ್ರಿಯಾದ ೨೪ ಗಂಟೆಯೊಳಗೆ ಪತ್ನಿಯಿಂದ ಕೊಲೆ

ಕ್ರಾಂತಿಯ ರೀತಿ ಪ್ರಮಾಣವಚನ ಮಂತ್ರಿ ಮಂಡಲದಲ್ಲಿ ಸದಸ್ಯರಾದ ಅಲಿಯಾರ್ ನಗರದ ನೋಯಿದ್ ಖಾನ್ ಶಾಖಿಯವರು ಮಂತ್ರಿಪದವಿಯನ್ನು ಸ್ವೀಕರಿಸಿ, ವಾಪಸು ತಮ್ಮ ಮನೆಗೆ ಹೋದಾಗ ಅವರ ಪತ್ನಿಯು ಗಂಡನ ಮೇಲೆ ೮ ಬಾರಿ ಗುಂಡು ಹಾರಿಸಿ ಕೊಂದಳೆಂದು ಹೇಳಲಾಗಿದೆ. ಗಂಡನು ಮನೆಯನ್ನು ಬಿಟ್ಟು ಹೊರಟ ಬಗ್ಗೆ ಆಕೆಗೆ ಕೋಪವುಂಟಾಯಿತು. ಆತನು ಮನೆಗೆ ವಾಪಸು ಬಂದಾಗ ಅವರಿಬ್ಬರಿಗೂ ರಾಜಕೀಯ ವಿಷಯವಾದ ಮಾತುಕತೆ ಬೆಳೆದು ಕೊನೆಗೆ ಪತ್ನಿಯು ಗುಂಡು ಹಾರಿಸಿ, ನಂತರ ಪೊಲೀಸರಿಗೆ ವಿಷಯವನ್ನು ತಿಳಿಸಿ ತನ್ನ ಅಪರಾಧವನ್ನು ಒಪ್ಪಿಕೊಂಡಳೆಂದು ಹೇಳಲಾಗಿದೆ. ಮೃತರು ಹಿಂದೆ ಒಂದು ವಾರ ದಿವಸದ ಮಂತ್ರಿಮಂಡಲದ ರಚನೆ ಸಂಬಂಧವಾಗಿ ಮಾತುಕತೆ ನಡೆಸಲು ಕ್ರಾಚಿಗೆ ಹೋಗಿದ್ದರು..

ಈ ರಾತ್ರಿ ರಾಷ್ಟ್ರಾಧ್ಯಕ್ಷರ ಸಂದೇಶ

ಸ್ವಾತಂತ್ರ್ಯೋತ್ಸವದ ಪೂರ್ವಭಾವಿಯಾಗಿ ರಾಷ್ಟ್ರಾಧ್ಯಕ್ಷರು ಈ ರಾತ್ರಿ ೮ ಗಂಟೆಗೆ ಅಖಿಲ ಭಾರತ ರೇಡಿಯೋ ಮೂಲಕ ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪ್ರಜೆಗಳಿಗೆ ಸಂದೇಶವನ್ನು ಕೊಡುವರು.

ಭಾರತದ ಪ್ರಧಾನಿಯವರಲ್ಲಿ ಮೈಸೂರು ಮುಸ್ಲಿಮರ ನಿಷ್ಠೆ

ಸಂಸ್ಥಾನದ ನಾನಾ ಭಾಗಗಳಿಂದ ಬಂದ ಸುಮಾರು ೩೦೦ ಜನ ಮುಸ್ಲಿಮರು ನೆನ್ನೆ ಬೆಂಗಳೂರಿನಲ್ಲಿ ಸಭೆ ನಡೆಸಿ ಭಾರತ ಸರ್ಕಾರದಲ್ಲೂ, ನೆಹರೂರವರಲ್ಲೂ ತಮ್ಮ ಅಚಲ ಭಕ್ತಿಯನ್ನು ವ್ಯಕ್ತಪಡಿಸಿದರು ಭಾರತ ಮತ್ತು ಪಾಕಿಸ್ತಾನಗಳಿಗೆ ಉಂಟಾಗಿರುವ ಮನಸ್ತಾಪದ ಬಗ್ಗೆ ಅವರು ಕಳವಳವನ್ನು ವ್ಯಕ್ತಪಡಿಸಿ ಇಲ್ಲಿನ ಸರ್ಕಾರದವರು ತೆಗೆದುಕೊಳ್ಳುವ ಎಲ್ಲಾ ಕಾರ್ಯಕ್ರಮಗಳಿಗೂ ಬೆಂಬಲ ನೀಡುವುದಾಗಿ ನಿರ್ಣಯ ಮಾಡಿದರು.

ಉದಾರ ದಾನ

ರಾಜಧಾನಿಯ ಶ್ರೀ ಶಾರದಾವಿಲಾಸ ಹೈಸ್ಕೂಲಿನ ಶಾಲೆಯ ಆವಾರದ ಹತ್ತಿರ ಕಟ್ಟುತ್ತಿರುವ ಕಟ್ಟಡಕ್ಕಾಗಿ ಶ್ರೀ ಸತ್ಯನಾರಾಯಣರವರು ಕೊಟ್ಟಿರುವ ೩,೦೦೦ ರೂ.ಗಳನ್ನು ಮೈಸೂರು ಪ್ರಿಂಟ್ ಅಂಡ್ ಸ್ಟೈಲ್ ವರ್ಕ್ಸ್‌ರವರ ಪರವಾಗಿ ಕೊಡಲಾಗಿದೆ ಯೆಂದು ಸದರಿ ಶಾಲೆಯವರು ತಿಳಿಸಿರುತ್ತಾರೆ.

ಸ್ವಾತಂತ್ರ್ಯೋತ್ಸವ

ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಘಂಟೆಗೆ ಶ್ರೀ ಹೆಚ್. ಎನ್. ಶಿವಲಿಂಗಸ್ವಾಮಿಯವರಿಂದ ಸ್ವಾತಂತ್ರ್ಯೋದಯ ಎಂಬ ಹರಿಕಥೆಯನ್ನು ಮೇಳ್ಯಂತ ಸಮಾರಂಭದ ಸಂಬಂಧವಾಗಿ ಏರ್ಪಡಿಸಲಾಗಿದೆ. ಅಮ್ಮನವರಿಗೆ ಭಾರತ ಮಾತೆಯ ಅಲಂಕಾರವನ್ನು ಮಾಡಲಾಗುವುದು.

ಸೂಚನೆ

ಸ್ವಾತಂತ್ರ್ಯೋತ್ಸವದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ.

ಮಾದಕ ದ್ರವ್ಯಗಳ ಪಡಿತರ ಕ್ಕಾಗಿ ಕಲಹ

ಮಧ್ಯಪ್ರದೇಶದಲ್ಲಿ ಏಪ್ರಿಲ್ ಮತ್ತು ಮೇಯಲ್ಲಿ ಮಾದಕ ದ್ರವ್ಯಗಳ ವೈಯಕ್ತಿಕ ಪಡಿತರವನ್ನು ಜಾರಿಗೆ ತರಬೇಕೆಂದು ಅಲ್ಲಿನ ಪಾನನಿರೋಧ ತನಿಖೆ ಸಮಿತಿಯು ಸರ್ವಾನುಮತದಿಂದ ಸರ್ಕಾರಕ್ಕೆ ಶಿಫಾರಸು ಮಾಡಿರುತ್ತದೆ. ಪಾನನಿರೋಧವು ಯಶಸ್ವಿಯಾಗಿಲ್ಲವೆಂದೂ ಅದು ಅಭಿಪ್ರಾಯ ಪಟ್ಟಿರುತ್ತದೆ. ವೈಯಕ್ತಿಕ ಪಡಿತರಕ್ಕಾಗಿ ವರ್ಷಕ್ಕೊಂದು ಬಾರಿ ರಹದಾರಿಯನ್ನು ಕೊಡಬೇಕೆಂದು ಸಹ ಸಮಿತಿಯು ಸಲಹೆಯಿತ್ತಿದೆ.

೫ ಲಕ್ಷ ಎಕರೆ ಪ್ರದೇಶದಲ್ಲಿ ಬೆಂಕಿ

ಆಸ್ಟ್ರೇಲಿಯದ ಮಧ್ಯ ಕ್ವೀನ್ಸ್‌ಲೆಂಡ್ ಪ್ರಾಂತದಲ್ಲಿ ಒಂದು ವಾರದ ಹಿಂದೆ ಉಂಟಾದ ಬೆಂಕಿಯು ೫ ಲಕ್ಷ ಎಕರೆ ಪ್ರದೇಶವನ್ನು ಆವರಿಸಿ ಸಹಸ್ರಗಟ್ಟಲೆ ಕುರಿಗಳು ಬೆಂದುಹೋದುವಲ್ಲದೇ ಅನೇಕ ಕಾಡುಮೃಗಗಳೂ ಸತ್ತುವೆಂದು ಗೊತ್ತಾಗಿದೆ. ೪೦ ಸಾವಿರ ಪೌಂಡಿಗಿಂತಲೂ ಹೆಚ್ಚು ಬೆಲೆಯ ತುಪ್ಪಳ ಮುಂತಾದ ಸಾಮಾನುಗಳ ನಷ್ಟವಾಗಿರುತ್ತದೆ.

ರಷ್ಯದಲ್ಲಿ ಅಣು ಸ್ಫೋಟನೆ

ನ್ಯೂಯಾರ್ಕ್ ಪೋಸ್ಟ್ ಪತ್ರಿಕೆಯು ಪ್ರಕಟಿಸಿರುವ ಪ್ರಕಾರ, ಕಳೆದ ಮೇ ೨೭ ರಲ್ಲಿ ರಷ್ಯನರು ಎರಡನೆ ಸಾರಿ ಅಣು ಸ್ಫೋಟನೆ ಮಾಡಿರುವರೆಂದು ಗೊತ್ತಾಗುತ್ತದೆ. ಅಮೇರಿಕದ ಅಧಿಕಾರ ವಲಯಗಳಿಂದ ಈ ವಿಷಯವು ತಿಳಿದು ಬಂದಿರುವುದು. ಚೀಣಾದ ಸಿಕಿಯಾಂಗ್ ಪ್ರಾಂತದಲ್ಲಿ ಅಣು ಬಾಂಬನ್ನು ಸಿಡಿಸಲಾಯಿತೆಂದೂ ಈ ಪ್ರದೇಶದಲ್ಲಿ ಭಾರಿ ಅಣು ಕೇಂದ್ರಗಳನ್ನು ನಿರ್ಮಿಸಲಾಗಿದೆಯೆಂದೂ ಹೇಳಲಾಗಿದೆ.

ಸುಮಾತ್ರ ದ್ವೀಪದಲ್ಲಿ ದಂಗೆ

ಸುಮಾತ್ರಾ ದ್ವೀಪದ ಕ್ರಾಂತಿಕಾರಿ ದಂಗೆಕೋರರನ್ನು ಬಂಧಿಸಲು ಇಂಡೊನೇಷ್ಯದ ಸೈನ್ಯಗಳು ಕಾರ್ಯಾಚರಣೆ ನಡೆಸಿ ನೂರುಗಟ್ಟಲೆ ಜನರನ್ನು ದಸ್ತಗಿರಿ ಮಾಡಿಯುತ್ತವೆ. ಬ್ಯಾಂಕುಗಳು ಮತ್ತು ಶಸ್ತ್ರ ಸಜ್ಜಿತ ಮೋಟಾರುಗಳು ಮುಖ್ಯ ನಗರವಾದ ಮೆಡಾನ್‌ನಲ್ಲಿ ಸಂಚರಿಸುತ್ತಿವೆ. ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ರಬೇಕೆಂದು ಜನರಿಗೆ ಸೂಚಿಸಲಾಗಿದೆ.

ಮಹಾಸಭೆಯವರಿಂದ ಕಾಶ್ಮೀರ ದಿನಾಚರಣೆ

ಬರುವ ತಿಂಗಳು ೨ನೇ ತಾ॥ ದೇಶದ ನಾನಾ ಭಾಗಗಳಲ್ಲಿರುವ ಹಿಂದೂ ಮಹಾಸಭಾ ಶಾಖೆಗಳು ಕಾಶ್ಮೀರ ದಿನಾಚರಣೆಯನ್ನು ನಡೆಸಬೇಕೆಂದು ಅ॥ ಭಾ॥ ಹಿಂದೂ ಮಹಾಸಭೆಯು ಸೂಚಿಸಿರುತ್ತದೆ.

ಭದ್ರಾಚಲಕ್ಕೆ ಪ್ರವಾಹಭೀತಿ

ಗೋದಾವರಿ ನದಿಯಲ್ಲಿ ಪ್ರವಾಹವುಂಟಾಗಿ ಭದ್ರಾಚಲವು ಇತರ ಭಾಗಗಳಿಂದ ಪ್ರತ್ಯೇಕಿಸಲ್ಪಟ್ಟಿದೆಯೆಂದೂ, ಊರು ನೀರಿನೊಳಗೆ ಮುಳುಗಿ ಹೋಗುವ ಸ್ಥಿತಿಯುಂಟಾಗಿರುವುದೆಂದೂ ವರದಿಯಾಗಿದೆ.

ಶಾಸ್ತ್ರದ ಶ್ರೀ ವೈಷ್ಣವ ಯುವಕ ಸಂಘ

ರಾಜಧಾನಿಯ ಶಾಸ್ತ್ರದ ಶ್ರೀ ವೈಷ್ಣವ ಯುವಕ ಸಂಘದ ಸರ್ವ ಸದಸ್ಯರ ಸಭೆಯು ಬರುವ ಗುರುವಾರ ಸಂಜೆ ೮ ಗಂಟೆಗೆ ಮಂಡಿ ಮೊಹಲ್ಲಾ ಕೊಗರಿ ಬೀದಿಯ ೧೫೬೭ನೇ ನಂಬರು ಮನೆಯಲ್ಲಿ ಸೇರುವುದು. ಆ ಸಂಗಡಿಗರು ಸಭೆಗೆ ದಯಮಾಡಿಸಬೇಕೆಂದು ಕೋರಲಾಗಿದೆ.

ಪೂರ್ವ ಬಂಗಾಳ ಗಡಿ ಬಳಿ ಹೆಚ್ಚು ಪಾಕಿಸ್ತಾನ ಸೈನ್ಯ

ಪೂರ್ವ ಬಂಗಾಳದ ಗಡಿ ಜಿಲ್ಲೆಯಾದ ಜಲಪೈಗುರಿ ಬಳಿ ಹೆಚ್ಚು ಪಾಕಿಸ್ತಾನ ಸೈನ್ಯಗಳನ್ನು ಇಡಲಾಗಿದೆ. ದಿನಾಜಪುರದಲ್ಲಿ ಸೈನ್ಯ ಶಿಬಿರವನ್ನು ಏರ್ಪಡಿಸುತ ಕಡೆ ಸಾರ್ವಜನಿಕರ ಪ್ರವೇಶವನ್ನು ತಡೆಯಲಾಗಿದೆ.

ಕಾಂಗ್ರೆಸ್ ಸಂಸ್ಥೆಗೆ ಸದಸ್ಯರನ್ನು ಸೇರಿಸುವ ಕಾರ್ಯ

ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಗೆ ಸದಸ್ಯರನ್ನು ಕೂಡಿಸುವ ಕಾರ್ಯವನ್ನು ನಗರದ ಕಾಂಗ್ರೆಸ್ ಸಮಿತಿಯವರು ನಾಳೆ ಸ್ವಾತಂತ್ರ್ಯದಿನೋತ್ಸವದಿಂದ ಪ್ರಾರಂಭಿಸುವರು.

ಆಗಸ್ಟ್ ೧೫ರ ಚುನಾವಣಾ ಸ್ಥಾನಗಳಿಗೂ ಕಾಂ॥ ನ ಸ್ಪರ್ಧೆ

ಕೇಂದ್ರ ಮತ್ತು ಪ್ರಾಂತ ಶಾಸನಸಭೆಗಳಲ್ಲಿರುವ ಒಟ್ಟು ಆಗಸ್ಟ್ ಸದಸ್ಯ ಸ್ಥಾನಗಳಿಗೂ ಕಾಂಗ್ರೆಸ್ಸು ಸ್ಪರ್ಧಿಸಲು ನಿರ್ಧರಿಸಿರುವುದಾಗಿ ಆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕಲಾ ವೆಂಕಟರಾಯರು ತಿಳಿಸಿರುತ್ತಾರೆ.

ಆ ದ ರ್ಶ ಕ ನ್ನ ಡ
ನಾಟಕ ಸಂಘ, ಮೈಸೂರು
ಬುಧವಾರ ಮತ್ತು ಶನಿವಾರಗಳಲ್ಲಿ
ರಾತ್ರಿ 9-45ಕ್ಕೆ
ಉಳಿದ ದಿನಗಳಲ್ಲಿ ಸಂಜೆ 6-45ಕ್ಕೆ
ಟೌನ್ ಹಾಲಿನಲ್ಲಿ
* ಚೆಂಚೆಲ *
ಎಂಬ ನಾಟಕದ ಕಾಣಿಕೆಯನ್ನು
ಅರ್ಪಿಸಲಿದ್ದಾರೆ. ಸಹಕಾರ ...
ಶ್ರೀ॥ ಎಂ.ವಿ. ದಾಸ್, ಜಿ.ಎಸ್. ...

SRI GAYATHRI, TALKIES
From 15-8-51 Daily 3 Shows
Masterpiece of Adventure in Spectacular Picture in Glorious Technicolor
* KIM *
Starring:– Errol Flynn
(This Picture was produced by M. G. M. in India)
MORNING SHOWS On 18th and 19th
LES MISERABLES
With: Frederic March & Charles Laughton

ಪ್ರಭಾತ್ ಈ ರಾತ್ರಿ
ಪ್ರತಿದಿನ 3 ಆಟಗಳು
ನರ್ಗಿಸ್ ಪಿಕ್ಚರ್ಸ್ ರವರ ಹಿಂದಿ ಚಿತ್ರ * ಪ್ಯಾರ್
ಪಾತ್ರ:- ನರ್ಗಿಸ್, ರಾಜ್‌ಕಪೂರ್, ... ಮತ್ತು ...
—: ಬೆಳಗಿನ ಪ್ರದರ್ಶನ :—
15-8-51 ರಿಂದ 5 ದಿನಗಳು ಮಾತ್ರ
... ಪಿಕ್ಚರ್ಸ್‌ರವರ
ಬಡಿ ಬಹೆನ್

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪನಿ (೧) ಅವರು
ರತ್ನಾವಳಿ ಥಿಯೇಟರಿನಲ್ಲಿ
ಅಮೋಘವಾದ 2ನೇ ವಾರ ರಾಜಾ ಗೋಪಿಚಂದ್
ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ
ರಾತ್ರಿ 9-45 ಘಂಟೆಗೆ, ಉಳಿದ ದಿನಗಳಲ್ಲಿ ಸಂಜೆ 6-45ಕ್ಕೆ

ಒಲಂಪಿಯಾ ಟಾಕೀಸ್
ಸ್ವಾತಂತ್ರ್ಯ ದಿನೋತ್ಸವದ ಪ್ರಯುಕ್ತ
15-8-51 ರಿಂದ :: ಅಮೋಘ ಪ್ರಾರಂಭ :: ಪ್ರತಿ ದಿನ 3 ಪ್ರದರ್ಶನಗಳು
- ಹಮಾರಿ ಬೇಟಿ -
ಪಾತ್ರ:- ಬೆಳಗಿನ ರಾಣಿ ... ಮತ್ತು ...
15—8—51 ರಿಂದ ‡ ಬೆಳಗಿನ ಪ್ರದರ್ಶನ ‡ 5 ದಿನಗಳು
ಫಿಲ್ಮಿಸ್ತಾನ್ ರವರ - ಷಹೀದ್ -
ಕಾಮಿನಿ ಕೌಶಲ್ ಮತ್ತು ದಿಲೀಪ್ ಕುಮಾರ್ ಪಾತ್ರ

ರಣಜಿತ್ ಟಾಕೀಸ್
10-8-51 ರಿಂದ ಜಯಪ್ರದವಾಗಿ ಪ್ರದರ್ಶಿಸಲ್ಪಡುತ್ತಿದೆ.
ಪ್ರತಿ ದಿನ 3 ಆಟಗಳು
ಅಮರ್ ಫಿಲಂಸ್‌ರವರ ಮಹೋನ್ನತ ಹಿಂದಿ ಚಿತ್ರ
* ಬಾದಲ್ *
(ರಾಬಿನ್‌ಹುಡ್ ಕಥೆಯ ಆಧಾರ)
ಪ್ರಧಾನಪಾತ್ರದಲ್ಲಿ :- ಮಧುಬಾಲಾ, ಪ್ರೇಮನಾಥ್.
ನಿರ್ದೇಶಕ:- ಅಮಿಯ ಚಕ್ರವರ್ತಿ :: ಸಂಗೀತ:- ಶಂಕರ್‌ಜೈಕಿಶನ್
(ASHOK RELEASE

ಅಬೀದ್‌ರವರ ಮುಂದಿನ ಹರಾಜು ಮಾರಾಟ
19-8-51 ನೇ ಭಾನುವಾರ ಬೆಳಗ್ಗೆ 10 ಗಂಟೆಗೆ

NALINS,
V. V. Market Square Mysore
GRAND AUCTION
TOMORROW
at 4 P. M.

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿವೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳಿ ಅಂಗಡಿ,
ದೊಡ್ಡ ಅಂಗಡಿ ಬೀದಿ ... ಹೋಟೆಲ್ ಹತ್ತಿರ, ಮೈಸೂರು.

ಪ್ರಭುದೇವಾ ಟಾಕೀಸ್
15-8-51 ನೇ ಬುಧವಾರದಿಂದ ಪ್ರತಿ ದಿನ 3 ಆಟಗಳು
ರೋಹಿಣಿಯವರ ತೆಲುಗು ಚಿತ್ರ ಗೃಹಲಕ್ಷ್ಮಿ
ಪಾತ್ರ:- ನಾಗಯ್ಯ, ಕಾಂಚನ ಮಾಲ, ಕನ್ನಾಂಬ ಮುಂತಾದವರು.
ಸೂಚನೆ:- ೧೬ ನೇ ತಾರೀಖು ಗುರುವಾರದಿಂದ ಚಿತ್ರದ ಜೊತೆಯಲ್ಲಿ ಎಂ. ಜಿ. ಎಂ. ರವರ ಮೊದಲನೇ ... ನ್ಯೂಸ್ ರೀಲನ್ನು ಸಹ ತೋರಿಸಲಾಗುವುದು.

Edited, printed and published by A. R. Nagarajan, at Sadhvi Press D. Subbiah Road, Mysore

ರಿಜಿ ನಂ. 792 ೧ ಸಂಚಿಕೆ ಮೂರಾಣೆ ೧ ಬಿಡಿ ಪ್ರತಿ 3 ಕಾಸು

ಸಂಪುಟ ೦೦] ಗುರುವಾರ ೧೬-೮-೫೧ [ಸಂಚಿಕೆ ೨೦

ಸ್ವಾತಂತ್ರ್ಯದಿನಾಚರಣೆಗೆ ರಾಷ್ಟ್ರಪತಿಯ ಸಂದೇಶ

ದಪ್ಪಕ್ಕಿ ಮತ್ತು ಗೋಧಿ ಬೆಲೆ ಹೆಚ್ಚುವುದು

ಸ್ವಂ.ಸು.ಪ್ರೋ] ಬೆಂಗಳೂರು ೧೬

ಪರದೇಶಗಳಿಂದ ತರಿಸುತ್ತಿರುವ ಆಹಾರದ ಬೆಲೆಯು ಅಧಿಕವಾಗಿರುವುದರಿಂದ ದಪ್ಪಕ್ಕಿಯನ್ನು ರೂ. ಒಂದಕ್ಕೆ ೩ ಸೇ. ೧|| ಪಾವಿನಿಂದ ೨ ಸೇರಿಗೂ ಗೋಧಿಯನ್ನು ರೂ. ೧ಕ್ಕೆ ೨ ಸೇರಿಗೂ ಇಳಿಸಲಾಗುವುದೆಂದು ಗೊತ್ತಾಗಿದೆ. ಸಣ್ಣಕ್ಕಿಯ ಬೆಲೆ ಇದ್ದಂತೆಯೇ ಇರುತ್ತದೆ.

ಮದ್ರಾಸಿಗೆ ಪ್ರಭುಗಳ ಪ್ರಯಾಣ

ಶ್ರೀ ಮನ್ಮಹಾರಾಜರು ನೆನ್ನೆ ದಿನ ಮದ್ರಾಸಿಗೆ ಪ್ರಯಾಣ ಬೆಳೆಸಿದರು. ನಾಳಿದ್ದು ವಾಪಸು ಬರುವರು ಅವರು ೨೧ನೇ ತಾರೀಖು ಬೆಂಗಳೂರು ವಕೀಲರ ಸಂಘದ ಸುವರ್ಣ ಮಹೋತ್ಸವದ ಆರಂಭೋತ್ಸವವನ್ನು ನೆರವೇರಿಸುವರು ಘನತೆವೆತ್ತ ಡಾ|| ಎಂ. ಆರ್. ಜಯಕರ್‌ರವರು ಈ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಬಾಲ್ಕನ್ನಲ್ಲಿ ಈ ವರ್ಷವೇ ರಷ್ಯದ ಯುದ್ಧ ?

ಈ ವರ್ಷದ ಅಂತ್ಯದಲ್ಲಿಯೇ ಬಾಲ್ಕನ್ ರಾಜ್ಯಗಳಲ್ಲಿ ಯುದ್ಧವನ್ನು ರಷ್ಯ ಪ್ರಾರಂಭಿಸಬಹುದೆಂದು ಅಮೆರಿಕದ ಪರದೇಶಾಂಗ ಇಲಾಖೆಗೆ ಸುದ್ದಿ ಬಂದಿದೆ. ಮೊದಲು ರಷ್ಯವು ಯುಗೊಸ್ಲೇವಿಯವನ್ನು ಹಿಡಿದು ನಂತರ ಗ್ರೀಸ್ ಮುಖಾಂತರ ಮೆಡಿಟರೇನಿಯನ್ ಸಮುದ್ರ ದಾರಿ ಉಪಕ್ರಮವನ್ನು ಹಿಡಿಯಲು ಪ್ರಯತ್ನಿಸುವುದೆಂದು ಹೇಳಲಾಗಿದೆ.

ಸಿನಿಮಾ ಟಿಕೆಟ್ ಕೊಳ್ಳುವ ನುಗ್ಗಾಟದಲ್ಲಿ ಒಬ್ಬನ ಮರಣ

ಅಹಮದಾಬಾದಿನಲ್ಲಿ ಸಿನಿಮಾ ಟಿಕೆಟ್ ಕೊಳ್ಳುವ ಸಮಯದಲ್ಲಿ ನೊನ್ನೆ ನೂಕು ನುಗ್ಗಲು ಹೆಚ್ಚಾಗಿ, ಜನರ ನೂಕಾಟವನ್ನು ತಪ್ಪಿಸಿಕೊಳ್ಳಲು ಕಿಟಕಿಯ ಸರಳುಗಳಿಗೆ ಅಂಟಿಕೊಂಡ ಒಬ್ಬನು ಬಿದ್ದು ಪೆಟ್ಟು ಬಿದ್ದು ಸತ್ತನೆಂದು ಗೊತ್ತಾಗಿದೆ

ಪಾಕಿಸ್ತಾನಿಗಳಿಗೆ ಮತ್ತೆ ಲಿಯಾಖತ್ತರ ಬಿಗಿ ಮುಷ್ಟಿ ಪ್ರದರ್ಶನ

ಪಾಕಿಸ್ತಾನದ ಆರನೇ ಸ್ವಾತಂತ್ರ್ಯ ದಿನದ ಆಚರಣೆಯ ಸಂಬಂಧದಲ್ಲಿ ನೊನ್ನೆ ದಿನ ಲಿಯಾಖತ್ ಅಲಿಖಾನರು ಭಾಷಣ ಮಾಡುತ್ತಾ ಭಾರತವು ತನ್ನ ಸೈನ್ಯದಲ್ಲಿ ೫೦. ೧೦೦ರಷ್ಟನ್ನು ಪಾಕಿಸ್ತಾನದ ಮೇಲೆ ಬೀಳಲು ಗಡಿಯ ಬಳಿಗೆ ತಂದಿದೆಯೆಂದೂ, ಅವಕ್ಕಾಗಿ ಪಾಕಿಸ್ತಾನಿಗಳು ಎದೆಗುಂದಬಾರದೆಂದೂ ತಿಳಿಸಿದರು. ಯುದ್ಧವೇನಾದರೂ ಆದಲ್ಲಿ ತಾವೂ ತಮ್ಮ ರಕ್ತವನ್ನು ಸುರಿಸಿ ಸ್ವದೇಶ ರಕ್ಷಣೆ ಮಾಡಲು ಸಿದ್ಧರಾಗಿರುವುದಾಗಿ ಹೇಳಿದರು. ಇಂಗ್ಲೆಂಡ್, ಅಮೆರಿಕಗಳು ಪಾಕಿಸ್ತಾನಕ್ಕೆ ಸಹಾಯಕವಾಗಿವೆಯೆಂದು ದೂರುವ ಭಾರತದ ಅಮೆರಿಕದಿಂದ ಆಹಾರ ಧಾನ್ಯಗಳನ್ನು ಹೊಂದಿದೆಯೆಂದು ಕಾಗದದಿಂದ ಮಾಡಲ್ಪಟ್ಟ ಬಿಗಿ ಮುಷ್ಟಿಗಳಿಂದ ಅಲಂಕರಿಸಲಾಗಿದ್ದ ವೇದಿಕೆಯ ಮೇಲೆ ನಿಂತು ಅವರು ಮಾತಾಡಿ ತಮ್ಮ ಬಿಗಿ ಮುಷ್ಟಿಯನ್ನು ಪ್ರದರ್ಶಿಸಿದರು.

ಧೈರ್ಯ ಮತ್ತು ಆತ್ಮವಿಶ್ವಾಸಗಳಿಂದ ಕಾರ್ಯನಿರತರಾಗಿರಿ

—:o:—

ರಾಷ್ಟ್ರಾಧ್ಯಕ್ಷರ ಸ್ವಾತಂತ್ರ್ಯ ದಿನದ ಸಂದೇಶ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಈ ಕೆಳಗೆ ಕಂಡ ಸಂದೇಶವನ್ನು ನೀಡಿರುತ್ತಾರೆ:

ಇಂದು ನಾವು ಆಚರಿಸುತ್ತಿರುವ ಉತ್ಸವವು ಸ್ವಾತಂತ್ರ್ಯ ಸಾಧನೆಗೆ ನಾವು ನಡೆಸಿದ ಹೋರಾಟಗಳ ನೆನಪನ್ನುಂಟು ಮಾಡಿಕೊಡುತ್ತದೆ. ಬಡತನ, ಅಜ್ಞಾನ, ಅನ್ಯಾಯ ಮತ್ತು ರೋಗಗಳನ್ನು ತೊಡೆದುಹಾಕುವುದಾಗಿ ನಾವು ಪ್ರತಿಜ್ಞೆಗಳನ್ನು ಮಾಡಿದ್ದೆವು. ಈಗ ಕಳೆದಿರುವ ದಿನಗಳಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ, ರಾಜಕೀಯ ಸುಧಾರಣೆ, ನ್ಯಾಯ ಮತ್ತು ಶಿಸ್ತುಗಳ ಪರಿಷ್ಕರಣೆ, ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಅಭಿವೃದ್ಧಿ ಯೋಜನೆ ಮುಂತಾದ ಕಾರ್ಯಗಳನ್ನು ಮಾಡಿ ರಾಮರಾಜ್ಯ ಸ್ಥಾಪನೆಗೆ ತಳಪಾಯವನ್ನು ಹಾಕಿದ್ದೇವೆ.

ಕಳೆದ ಮಹಾಯುದ್ಧ ಮತ್ತು ರಾಷ್ಟ್ರ ವಿಭಜನೆಗಳಿಂದುಂಟಾದ ಪರಿಸ್ಥಿತಿಗಳನ್ನೆಲ್ಲಾ ಎದುರಿಸಿ ಈ ಕಾರ್ಯಗಳನ್ನು ಸಾಧಿಸಲಾಗಿದೆ.

ನಮ್ಮ ಮುಂದಿರುವ ಆಹಾರ ಮತ್ತು ಬಟ್ಟೆಯ ಸಮಸ್ಯೆಯು ಅಧಿಕ ಉತ್ಪನ್ನಗಳಿಂದ ಪರಿಹಾರವಾಗುವ ದಿನವು ಹತ್ತಿರವಾಗುತ್ತಿದೆಯೆಂದು ಆಶಿಸೋಣ.

ಕಳೆದ ನಾಲ್ಕು ವರ್ಷಗಳಿಂದ ನಮ್ಮ ಜನತೆ ಕಟುತರವಾದ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಅವೆಲ್ಲವನ್ನೂ ಅವರು ಸಾಹಸದಿಂದ ಬಗೆಹರಿಸುತ್ತ ಬಂದು ಇತಿಹಾಸದಲ್ಲಿ ಹಿರಿಮೆಯನ್ನು ಪಡೆದಿದ್ದಾರೆ.

ದಿಗಂತದಲ್ಲಿ ಇನ್ನೂ ಗುಡುಗು ಮಿಂಚುಗಳ ಆರ್ಭಟ ಕೇಳಿಬರುತ್ತಿದೆ. ಮುಂಬರುವ ದಿವಸಗಳಲ್ಲಿ ಇನ್ನೂ ಹೆಚ್ಚಿನ ಪರೀಕ್ಷೆ ಎದುರಾಗಬಹುದೆಂದು ಯಾರೂ ಹೇಳುವಂತಿಲ್ಲ. ಸರಿಯಾದ ಸಾತ್ವಿಕವಾಗಿ ಮಾಡಲ್ಪಡುವ ಪರಿಸ್ಥಿತಿಯನ್ನು ನಿವಾರಿಸಲು ನಾವು ಸತತವಾಗಿ ಪ್ರಯತ್ನಿಸುತ್ತಿದ್ದೇವೆ. ಇದರಿಂದ ಮಾನವರಿಗಾದ ಉಂಟಾಗುವ ಏನನ್ನು ಎದುರಿಸಲು ಭಾರತಾಂಬೆಯ ಪ್ರತಿಯೊಬ್ಬ ಸುಪುತ್ರ ಪುತ್ರಿಯರೂ ಸಿದ್ಧರಾಗುವರೆಂದು ನಂಬಿದ್ದೇನೆ.

ಇಂದು, ಈ ಸಂತೋಷದ ದಿವಸ ನಮ್ಮ ನಾಡ ಜನರಿಗೆ ಶುಭಾಶಯಗಳನ್ನು ಕೋರಿ ಪ್ರತಿಯೊಬ್ಬರೂ ರಾಷ್ಟ್ರ ಸಾಧನೆಗೆ ಧೈರ್ಯ ಮತ್ತು ಆತ್ಮವಿಶ್ವಾಸಗಳಿಂದ ಮುನ್ನುಗ್ಗಬೇಕೆಂದು ಹಾರೈಸುತ್ತೇನೆ.

ರಾಷ್ಟ್ರಪತಿ

ರಾಜೇಂದ್ರ ಪ್ರಸಾದ್

ರಾಜೀನಾಮೆ ಹಿಂತೆಗೆದುಕೊಳ್ಳಲು ನೆಹರೂರವರ ನಿರಾಕರಣೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ತಾವು ಇತ್ತ ರಾಜೀನಾಮೆಯನ್ನು ಪಂಡಿತ ನೆಹರೂರವರು ವಾಪಸು ತೆಗೆದುಕೊಳ್ಳಲು ನಿರಾಕರಿಸಿದ್ದಾರೆಂದು ತಿಳಿದು ಬಂದಿದೆ ಟಂಡನ್‌ರವರು ಅವರೊಡನೆ ನಡೆಸಿದ ಮಾತುಕತೆಗಳೂ ವಿಫಲವಾದುವೆಂದೂ ಮತ್ತು ಆಜಾದರೂ ಸಹ ರಾಜೀನಾಮೆ ಕೊಟ್ಟಿದ್ದಾರೆಂದೂ ಗೊತ್ತಾಗಿದೆ. ತಾವೂ ಸಹ ರಾಜೀನಾಮೆಯಿತ್ತು ಎಲ್ಲ ವಿಷಯಗಳನ್ನೂ ಎ. ಐ. ಸಿ. ಸಿ. ಯ ಮುಂದೆ ಇಡಲಿರುವುದಾಗಿ ಟಂಡನ್‌ರವರು ತಿಳಿಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೬

ನಗರದ ಪೌರಸಭೆ ಮತ್ತು ಕಾಂಗ್ರೆಸ್ ಸಮಿತಿಗಳ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಸಿಲ್ವರ್-ಟೌನ್ ಹಾಲ್ ಮೈದಾನದಲ್ಲಿ ವೈಭವದಿಂದ ನೆರವೇರಿತು. ಬೆಳಗ್ಗೆ ಪೌರಸಭಾಧ್ಯಕ್ಷರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರು ರಾಷ್ಟ್ರ ಧ್ವಜವನ್ನು ಹಾರಿಸಿದರು. ಜಿಲ್ಲಾಧಿಕಾರಿಗಳು ಮಿಲಿಟರಿ ಪೋಲೀಸ್ ಮತ್ತು ಬಾಲಚಮೂಗಳಿಂದ ವಂದನೆಗಳನ್ನು ಸ್ವೀಕರಿಸಿದರು. ಭಾರತ ಸೇವಾದಳದ ಸ್ವಯಂ ಸೇವಕಿಯರಿಂದ ಕ್ರೀಡಾ ಪ್ರದರ್ಶನಗಳೂ, ಸೈನಿಕರಿಂದ ಕವಾಯತು ಆದುವು. ಸುಮಾರು ೧೦ ಸಾವಿರ ಜನರು ಭಾಗವಹಿಸಿದ್ದರು.

ಸಂಜೆ ಬಹಿರಂಗ ಸಭೆಯು ಶ್ರೀ ಟಿ. ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ರಾಷ್ಟ್ರಗೀತೆ ಮತ್ತು ಕುಮಾರಿ ಪದ್ಮರವರ ಗಾಯನಗಳಾದುವು. ರಿಪಬ್ಲಿಕ್ ದಿನಾಚರಣೆಯ ಕ್ರೀಡೆಗಳಲ್ಲಿ ಗೆದ್ದವರಿಗೆ ಬಹುಮಾನವನ್ನು ನಗರದ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷರಾದ ಶ್ರೀ ಡಿ. ನಾರಾಯಣಸ್ವಾಮಿಯವರು ಹಂಚಿದರು.

ಶ್ರೀ ಮೇಜರ್. ಕೆ. ಕುಮಾರಸ್ವಾಮಿ ಮತ್ತು ಡಾ|| ಅಬ್ದುಲ್ ರಸಲ್ದಾರರವರು ಭಾಷಣ ಮಾಡಿ ಸ್ವಾತಂತ್ರ್ಯದ ಮಹತ್ವ ಮತ್ತು ನಾಡಿನ ರಕ್ಷಣೆಯ ವಿಷಯವನ್ನು ವಿವರಿಸಿದರು. ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ನಗರದ ಅನೇಕ ಸಂಸ್ಥೆಗಳಲ್ಲೂ ಮತ್ತು ಸಂಸ್ಥಾನದ ಇತರ ಕಡೆಗಳಲ್ಲೂ ಉತ್ಸವವು ವೈಭವದಿಂದ ಆಚರಿಸಲ್ಪಟ್ಟಿತು.

ಎಣ್ಣೆ ಕಂಪೆನಿ ಮುಚ್ಚಲು ಬ್ರಿಟನ್ನಿನ ಒಪ್ಪಿಗೆ

ಪರ್ಷಿಯದಲ್ಲಿ ತಾವು ನಡೆಸುತ್ತಿರುವ ಎಣ್ಣೆ ಕಂಪೆನಿಗಳನ್ನು ಸೂಕ್ತ ಪರಿಹಾರ ಪಡೆದು ಪರ್ಷಿಯಾ ಸರ್ಕಾರಕ್ಕೆ ಒಪ್ಪಿಸಲು ಆಂಗ್ಲೋ-ಇರಾನಿಯನ್ ಕಂಪೆನಿಗಳು ಒಪ್ಪಿರುವುದಾಗಿ ಬ್ರಿಟನ್ನಿನ ರಾಯಭಾರಿ ರಿಚರ್ಡ್ ಸ್ಟೋಕ್ಸ್‌ರವರು ತಿಳಿಸಿರುತ್ತಾರೆ. ಒಪ್ಪಂದವು ಸಾಧ್ಯವಾಗಬಹುದೆಂದು ಪರ್ಷಿಯದ ಪ್ರತಿನಿಧಿಗಳು ಹೇಳಿದ್ದಾರೆ.

ಇಂಡೊನೇಷ್ಯ ಸರ್ಕಾರಕ್ಕೆ ಹಯಾತರ ವರ್ಗ

ಇಂಡೊನೇಷ್ಯ ಸರ್ಕಾರದವರ ಕೋರಿಕೆಯ ಮೇರೆ ಮೈಸೂರು ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ ಡಾ|| ಎಂ. ಹಯಾತರನ್ನು ಆ ಸರ್ಕಾರದ ಸಹಾಯಕ್ಕಾಗಿ ೬ ತಿಂಗಳ ಮಟ್ಟಿಗೆ ಕಳುಹಿಸಿಕೊಡುವ ಅಂಶವನ್ನು ಮಂತ್ರಿಮಂಡಲದಲ್ಲಿ ಪರಿಶೀಲಿಸಲಾಗುತ್ತಿದೆಯೆಂದು ಗೊತ್ತಾಗಿದೆ.

ಹಿಟ್ಲರ್ ಅರ್ಜೆಂಟೈನಾದಲ್ಲಿದ್ದಾನೆ

ಹಿಟ್ಲರನು ಇನ್ನೂ ಜೀವಿಸಿರುವುದಾಗಿಯೂ, ಅವನು ಅರ್ಜೆಂಟೈನಾದಲ್ಲಿರುವುದಾಗಿ ತಮಗೆ ಬ್ರೆಜಿಲ್‌ನಲ್ಲಿ ತಿಳಿದು ಬಂದುದಾಗಿಯೂ ಯೂರೋಪಿನ ಪಾದ್ರಿ ಫಿ. ಜೆ. ಪಿಲ್ಗ್ರಿಮ್‌ರವರು ತಿಳಿಸಿದ್ದಾರೆ.

೧೯೫೨ರ ಆದಿಯಲ್ಲಿ ೨೦ ಲಕ್ಷ ಟನ್ ಆಹಾರ

ಆಹಾರಧಾನ್ಯದ ದಾಸ್ತಾನು ಭಾರತದಲ್ಲಿ ಇರುವುದೆಂದು ಕೇಂದ್ರ ಆಹಾರ ಮಂತ್ರಿ ಕೆ ಎಂ ಮುನ್ಷಿಯವರು ಹೇಳುತ್ತಾರೆ ...

ಸ್ವಾತಂತ್ರ್ಯೋತ್ಸವ

... ಸ್ವಾತಂತ್ರ್ಯೋತ್ಸವವನ್ನು ... ನಡೆಸಿದರು

ರಾಜಕಮಲ್, ಮೈಸೂರು
10-8-51 ರಿಂದ ಅನೋಘ
ಪ್ರಾರಂಭ ದಿನವಹಿ 3 ಆಟಗಳು
ಜಗನ್ಮೋಹಿನಿ

ಆದರ್ಶ ಕನ್ನಡ
ನಾಟಕ ಸಂಘ, ಮೈಸೂರು
ಬುಧವಾರ ಮತ್ತು ಶನಿವಾರಗಳಲ್ಲಿ ರಾತ್ರಿ 9-45ಕ್ಕೆ
ಉಳಿದ ದಿನಗಳಲ್ಲಿ ಸಂಜೆ 6 45ಕ್ಕೆ
ಟೌನ್ ಹಾಲಿನಲ್ಲಿ
* ಚಂಚಲ *

Edited printed and published by A S Nagarajan, at Sadhvi Press D Subbiah Road, Mysore

Office of the President, DISTRICT BOARD, MYSORE.

1 Sealed tenders will be received at the office of the President, Distr Board, Mysore, at 4 p m on 22-8 51 for the construction of the works noted below –

2 The works have to be completed by the end of March 1952

3 Tenders should be given on percentage basis, either above or below sanctioned estimate

4 Items not provided in the sanctioned estimate will be paid on the approv schedule of rates in force or data worked out during the execution of the wor

5 Each tender must be accompanied by a Treasury chellan for having c dited into treasury the earnest deposit of the amount noted against each work

6 Adequate progress should be shown from the very commencement, t is, from the date of agreement failing which, the earnest money will be forfeit contract cancelled without further notice and the balance of work will be carr out at his risk

7 Controlled articles required for the work will be supplied departmenta and the cost thereof will be adjusted in the bills that come for payment

8 The successful tenderer will be required to produce an Income T clearance or verification certificate before executing the work

9 The President reserves the right of accepting or rejecting the ten without assigning any reason

10 The decision of the District Board in respect of any dispute regard rates or other matters arising will be final

11 Plans, estimates and other details connected with the work can be s in the office on any working day during office hours

Sl No	Name of work	Estimate	Earnest mo require
1	Primary School at K [illegible] Chamarajanagar Taluk	4700	250
2	Do [illegible] Gundlupet Tq	4700	250
3	Do at [illegible] Mysore Taluk	2500	150
4	do [illegible] K R Nagar Taluk	4700	250
5	do [illegible] K R Nagar Taluk	4700	250
6	do [illegible] K R Nagar Taluk	2500,	150
7	do [illegible] Hunsur Taluk	2500,	150
8	do [illegible] Heggadadevanakote Taluk	2500	150
9	do [illegible] Heggadadevanakote Tq	2500	150
10	Extension of P S at Malange T Narasipur Taluk	9400	500
11	Primary School at [illegible] Periyapatna Taluk	2500	150
12	do [illegible] Periyapatna Taluk	7200	400
13	do [illegible] Yelandur Taluk	2500	150
14	do [illegible] Nanjangud Taluk	2500	150
15	Constructing Veterinary dispensary Bilikere Hunsur Taluk	7500	400
16	Adding rooms to the High School at K R Nagar	12000	600
17	Constructing a culvert at 2/3 of [illegible] Road	3000	150
18	Improvements to the open Stall in [illegible] Shandy	1240	60
19	Constructing Doctors quarters at [illegible] Periyapatna Taluk	4000	250
20	do do [illegible]	4000	250
21	do [illegible] Gundlupet Taluk	4000	250
22	do [illegible] for Compounder & Midwife at [illegible]	4700	250
23	do do [illegible]	4700	250
24	do do [illegible] Gundlupet Taluk	4700	250
25	do Rest House at Periyapatna	6200	300

U M. CHANNABASAPPA,
President
DISTRICT BOARD, MYSORE

ನಾಟಕ ರತ್ನ ಪೀರಣ್ಣನವರ ಗುಬ್ಬಿ ಕಂಪನಿ (ರಿ) ಇವರು
ರತ್ನಾವಳಿ ಥಿಯೇಟರಿನಲ್ಲಿ
ಅನೋಘವಾದ 2ನೇ ವಾರ
ರಾಜಾ ಗೋಪಿಚಂದ್
ಪ್ರತಿ ಶನಿವಾರ ಬುಧವಾರ ಮತ್ತು ರವಿವಾರಗಳಲ್ಲಿ
ರಾತ್ರಿ 9 15 ಘಂಟೆಗೆ ಉಳಿದ ದಿನಗಳಲ್ಲಿ ಸಂಜೆ 6 45ಕ್ಕೆ

ಗೌರಿ ಹಬ್ಬಕ್ಕಾಗಿ,
D. L. ನರಸಿಹ್ಮಯ್ಯ & ಬ್ರದರ್ಸ್

ರಿ. ನಂ. 792 ॥ ವಾರ್ತಾ ಪತ್ರಿಕೆ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಶುಕ್ರವಾರ ೧೭-೮-೫೧ [ಸಂಚಿಕೆ ೨೧

ಕೊರಿಯಾ ಸಂಧಾನಕ್ಕೆ ಉಪ ಸಮಿತಿ ನೇಮಕ

ನಾಗಪುರದಲ್ಲಿ ರಹಸ್ಯ ಎ. ಐ. ಸಿ. ಸಿ. ಅಧಿವೇಶನ

ಪ್ರಧಾನಿ ನೆಹರೂರವರು ಕಾಂಗ್ರೆಸ್ ಕಾರ್ಯಕಾರಿ ಮತ್ತು ಚುನಾವಣಾ ಸಮಿತಿಗಳಿಗೆ ಕೊಟ್ಟಿರುವ ರಾಜೀನಾಮೆಯನ್ನು ಅಂಗೀಕರಿಸಲು ಕಾಂಗ್ರೆಸ್ ಅಧ್ಯಕ್ಷ ಟಂಡನ್‌ರವರು ಇಚ್ಛಿಸದೇ, ಈಗ ಉಂಟಾಗಿರುವ ಪರಿಸ್ಥಿತಿಯನ್ನು ಪರಿಶೀಲಿಸಲು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನವನ್ನು ಬರುವ ತಿಂಗಳು ೮ ಮತ್ತು ೯ನೇ ತಾ॥ ನಾಗಪುರದಲ್ಲಿ ಸೇರಿಸಲು ನಿಶ್ಚಯಿಸಿರುತ್ತಾರೆ. ರಾಜೀನಾಮೆಯನ್ನು ವಾಪಸು ಪಡೆಯಬೇಕೆಂದು ತಾವು ನೆಹರೂರವರನ್ನು ಕೋರಿರುವುದಾಗಿ ಟಂಡನ್‌ರವರು ತಿಳಿಸಿ ತತ್ವವನ್ನು ತಾವು ಎಂದಿಗೂ ಬಿಡುವುದಿಲ್ಲವೆಂದು ಹೇಳಿದರು. ಕರ್ನಾಟಕದಲ್ಲಿ ಚುನಾವಣಾ ಪ್ರಚಾರವನ್ನು ಕೈಗೊಳ್ಳಲು ಅವರು ನೆನ್ನೆ ಬಿಜಾಪುರಕ್ಕೆ ತೆರಳಿದರು.

ಅಧಿವೇಶನವು ಸೀತಾಬಲ್ಡಿ ಕೋಟೆ ಬಳಿ ಇರುವ ಉಪವನದಲ್ಲಿ ರಹಸ್ಯವಾಗಿ ನಡೆಯುವುದೆಂದು ಗೊತ್ತಾಗಿದೆ. ಬಾಹಿರ ನಿರ್ಣಯಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಲಾಗಿದೆ. ಬಿಹಾರಿನ ಇಬ್ಬರು ಸದಸ್ಯರು ಅಧಿವೇಶನಕ್ಕೆ ಒಂದು ನಿರ್ಣಯವನ್ನು ಕಳುಹಿ, ಕಾರ್ಯಕಾರಿ ಮತ್ತು ಚುನಾವಣಾ ಸಮಿತಿಯ ಸದಸ್ಯರುಗಳು ರಾಜೀನಾಮೆಯನ್ನಿತ್ತು ಅಧ್ಯಕ್ಷ ಟಂಡನ್‌ರವರು ನೆಹರೂರವರ ಸಲಹೆ ಪಡೆದು ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಲು ಸಾಧ್ಯವಾಗುವಂತೆ ಮಾಡಿ ಸಂಸ್ಥೆ ಮತ್ತು ದೇಶವನ್ನು ಉಳಿಸಲು ಇರುವ ಒಂದೇ ಮಾರ್ಗವನ್ನು ಅವಲಂಬಿಸಬೇಕೆಂದು ಕೋರಿರುತ್ತಾರೆ.

ಆದಿವಾಸಿಗಳ ಕಲಹದಲ್ಲಿ ನೂರು ಜನರ ಶಿರಚ್ಛೇದನ

ಅಸ್ಸಾಮಿನ ಆದಿವಾಸಿಗಳಾದ ನಾಗ ಎಂಬುವರ ಎರಡು ಪಂಗಡಗಳಲ್ಲಿ ಅತ್ಯಂತ ಭಯಂಕರವಾದ ತಿಕ್ಕಾಟವೊಂದು ಕಳೆದ ಮಂಗಳವಾರ ನಡೆದು ಗೆದ್ದ ಪಂಗಡದವರು ಸೋತವರಲ್ಲಿ ಸುಮಾರು ನೂರು ಜನರ ತಲೆಗಳನ್ನು ಕಡಿದು ತೆಗೆದುಕೊಂಡು ಹೋದರೆಂದು ತಿಳಿದುಬಂದಿದೆ. ಇಂತಹ ಕಲಹಗಳು ಆ ಪಂಗಡಗಳ ಲ್ಲಾಗ್ಯೆ ನಡೆಯುತ್ತಲೇ ಇರುವುವು.

ವಿಮಾನ ಕಾರ್ಖಾನೆಯ ಬಡಾವಣೆಗೆ ೨ ಕೋಟಿ ರೂ.

ಮೊನ್ನೆ ಬೊಂಬಾಯಿನಲ್ಲಿ ಸೇರಿದ್ದ ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಡೈರೆಕ್ಟರುಗಳ ಸಭೆಯಲ್ಲಿ ಕಾರ್ಖಾನೆಯ ಬಡಾವಣೆಗೆ ೨ ಕೋಟಿ ರೂಗಳ ಮೂಲಧನವನ್ನು ಹೆಚ್ಚಿಸಲು ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಬೇಕೆಂದು ತೀರ್ಮಾನಿಸಲಾಯಿತು. ಹೊಸ ವಿಧದ ವಿಮಾನಗಳ ತಯಾರಿಕೆಯ ಬಗ್ಗೆ ಪರ್ಯಾಲೋಚನೆಯಾಯಿತೆಂದು ಗೊತ್ತಾಗಿದೆ.

ಶ್ರೀ ವರಾಹಾ ದೇವರ ಅಲಂಕಾರ

ರಾಜಧಾನಿಯ ಕೋಟೆ ಶ್ರೀ ಕೋದಿ ಸೋಮೇಶ್ವರ (ಪವಗ್ರಹ) ದೇವಸ್ಥಾನದಲ್ಲಿ ನಾಳೆ ಶ್ರಾವಣ ಶನಿವಾರದ ಪ್ರಯುಕ್ತ ನಾರಾಯಣಸ್ವಾಮಿಯವರಿಗೆ ಶ್ರೀ ವರಾಹ ದೇವರ ಅಲಂಕಾರ ಮಾಡಲ್ಪಡುತ್ತದೆ.

ಪಾಕಿಸ್ತಾನದ ನೀತಿಯಿಂದ ಅನರ್ಥವೆಂದು ಭಾರತದ ಮುಸ್ಲಿಂ ನಾಯಕರು

ವಿಶ್ವ ಸಂಸ್ಥೆಯ ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ॥ ಫ್ರಾಂಕ್ ಗ್ರಹಾಂರವರಿಗೆ ಭಾರತದ ಹದಿನಾಲ್ಕು ಜನ ಮುಸ್ಲಿಂ ನಾಯಕರ ರುಜುವಿರುವ ೬೦೦ ಪದಗಳ ಒಂದು ಮನವಿಯನ್ನು ಸಲ್ಲಿಸಲಾಗಿದೆ. ಅಲಿಘಡದ ವಿಶ್ವ ವಿದ್ಯಾಲಯದ ಉಪ ಕುಲಪತಿ ಡಾ॥ ಜಾಕಿರ್ ಹುಸೇನ್, ಹೈದರಾಬಾದಿನ ಮಾಜಿ ಮುಖ್ಯ ಮಂತ್ರಿ ಚತಾರಿ ನವಾಬ್, ಮದ್ರಾಸಿನ ಮಾಜಿ ಮಂತ್ರಿ ಮಹಮದ್ ಇಸ್ಮಾಯಿಲ್, ಮಾಜಿ ಕೇಂದ್ರ ಮಂತ್ರಿ ಸರ್ ಸುಲ್ತಾನ್ ಅಹಮದ್ ಮತ್ತು ಮಾಜಿ ಹೈಕೋರ್ಟ್ ನ್ಯಾಯಾಧೀಶ ಇಕ್ಬಾಲ್ ಅಹಮದ್‌ರವರು ಅದಕ್ಕೆ ರುಜು ಹಾಕಿರುತ್ತಾರೆ. ವಿಭಜನೆಯಾದ ಮೇಲೆ ಆದಕ್ಕೆ ಮುಂಚೆಯೂ ಮುಸ್ಲಿಂ ಲೀಗು ಅನುಸರಿಸಿದ ನೀತಿಯನ್ನು ಮುಂದರಿಸಿ, ಪಾಕಿಸ್ತಾನಕ್ಕೆ ಲೀಗ್ ಪಂಗಡರು ಓಡಿಹೋದುದನ್ನು ಖಂಡಿಸಿರುತ್ತಾರೆ. ಭಾರತದಲ್ಲಿರುವ ನಾಲ್ಕು ಕೋಟಿ ಮುಸ್ಲಿಮರ ಹಿತಕ್ಕೆ ಪಾಕಿಸ್ತಾನದ ಈಗಿನ ನೀತಿಯು ಅಪಾಯವನ್ನು ತಂದೊಡ್ಡುತ್ತಿರುವುದಾಗಿ ತಿಳಿಸಿ ಕಾಶ್ಮೀರ ಶಾಂತಿಯನ್ನು ವಿಶ್ವ ಸಂಸ್ಥೆಯು ಬಯಸುವುದಾದರೆ ಭಾರತದ ಮುಸಲ್ಮಾನರ ಎಚ್ಚರಿಕೆಯನ್ನು ಗಮನಿಸಬೇಕಾದುದು ಅದರ ಕರ್ತವ್ಯವೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಕಾಶ್ಮೀರದ ಬಂದುಗಳಿಗೆ ಪಾಕಿಸ್ತಾನಿಗಳು ಏನಾದರೂ ತೊಂದರೆ ಕೊಟ್ಟಲ್ಲಿ ಭಾರತದ ಮುಸ್ಲಿಮರ ಸ್ಥಿತಿ ಚಿಂತಾಜನಕವಾಗುವುದೆಂದು ಅವರು ಹೇಳಿರುತ್ತಾರೆ. ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಖಾನ್ ಸಾಹೇಬರ ಮೇಲಿನ ದಬ್ಬಾಳಿಕೆಯನ್ನು ಖಂಡಿಸಿರುವರು.

ಗಡಿ ಪ್ರದೇಶದಲ್ಲಿ ಲಿಯಾಖತ್ತರ ಸಂಚಾರ

ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಅಲಿಖಾನರು ಗಡಿಭಾಗದ ಸಯಲ್ ಕೋಟೆ ನರೊವಾಲ್ ಮತ್ತು ಪಸರಾರ್ ಭಾಗಗಳಲ್ಲಿ ಪರಿಶೀಲನೆ ನಡೆಸಲು ನೆನ್ನೆ ರಾವಲ್ಪಿಂಡಿಗೆ ತೆರಳಿದರು.

ದೆಹಲಿಯಲ್ಲಿ ಸ್ವಾತಂತ್ರ್ಯೋತ್ಸವ

ದೆಹಲಿಯಲ್ಲಿ ಮೊನ್ನೆ ಸ್ವಾತಂತ್ರ್ಯೋತ್ಸವವು ವೈಭವದಿಂದ ನಡೆಯಿತು. ಪ್ರಧಾನಿ ನೆಹರೂರವರು ಬೆಳಿಗ್ಗೆ ರಾಷ್ಟ್ರಧ್ವಜವನ್ನು ಕೆಂಪು ಕೋಟೆಯ ಮೇಲೆ ಹಾರಿಸಿ ಸೈನ್ಯಗಳ ಗೌರವವನ್ನು ಸ್ವೀಕರಿಸಿದರು. ನೆರೆದಿದ್ದ ೫ ಲಕ್ಷ ಜನರನ್ನುದ್ದೇಶಿಸಿ ಮಾತನಾಡುತ್ತಾ ನೆಹರೂರವರು ವಿಶ್ವದಲ್ಲಿ ಉಂಟಾಗಿರುವ ಭಯಂಕರ ಸನ್ನಿವೇಶದ ಕಡೆ ಪ್ರಜೆಗಳ ಗಮನವನ್ನು ಸೆಳೆದು ಪರಕ್ತ ರಾಷ್ಟ್ರಗಳ ತೊಂದರೆಯುಂಟಾಗುವುದೆಂದು ಎಚ್ಚರಿಸಿದರು. ಅದ್ದರಿಂದ ಭಾರತೀಯರು ಒಗ್ಗಟ್ಟಿನಿಂದ ಐಕ್ಯ ಮತ್ತು ಶಕ್ತಿಯನ್ನು ಬೆಳೆಸಿಕೊಂಡು ಮುಂದುವರಿಯಬೇಕೆಂದು ಹೇಳಿ, ಭಾರತ ಮತ್ತು ಪಾಕಿಸ್ತಾನಗಳ ಬಾಂಧವ್ಯವು ಕೆಟ್ಟಿರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದರು. ಈ ಎರಡು ರಾಷ್ಟ್ರಗಳನ್ನು ಒಂದುಗೂಡಿಸುವ ಯೋಚನೆಯು ಸಾಧುವಲ್ಲವೆಂದು ಅವರು ಸ್ಪಷ್ಟಪಡಿಸಿದರು.

ರೈಲ್ವೆ ವ್ಯಾಜ್ಯಗಳನ್ನು ಬಗೆಹರಿಸಲು ಖಾಯಂ ಸಮಿತಿ

ರೈಲ್ವೆ ಆಡಳಿತ ವರ್ಗ ಮತ್ತು ಕಾರ್ಮಿಕರುಗಳಿಗೆ ಉಂಟಾಗಬಹುದಾದ ವ್ಯಾಜ್ಯಗಳನ್ನು ಬಗೆಹರಿಸಲು ಒಂದು ಖಾಯಂ ಸಮಿತಿಯನ್ನು ರಚಿಸುವ ಆವಶ್ಯಕತೆಯನ್ನು ಕೇಂದ್ರ ಮಂತ್ರಿ ಎನ್. ಜಿ. ಅಯ್ಯಂಗಾರ್ಯರು ಸೂಚಿಸಿರುತ್ತಾರೆ. ಈ ಸಂಬಂಧವಾಗಿ ಅ ಂಶಗಳ ಸಲಹೆಯನ್ನು ಅವರು ಕಾರ್ಮಿಕ ಸಂಘದ ಮುಖಂಡರಿಗೆ ಕಳುಹಿಸಿರುತ್ತಾರೆ.

ಹ ರಿ ಕ ಥೆ

ನಾಳೆ ಮೊದಲ್ಗೊಂಡು ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಈ ಸಂಜೆ ೬ ಗಂಟೆಯಿಂದ ಶರವರಿಗೆ ಶರವೀರ ಭೂಪಾಲ ಎಂಬ ಶಿವಕಥೆಯನ್ನು ಶ್ರೀ ಎಚ್. ಎಸ್. ಶಿವಲಿಂಗಸ್ವಾಮಿ ಹಿರೇಮಠರವರಿಂದ ದೇವಾಂಗ ಸಂಘದವರು ಏರ್ಪಡಿಸಿರುತ್ತಾರೆ. ನಾಳೆ ಸಂಜೆ ಶ್ರೀ ಕೃಷ್ಣ ಪಾರಿಜಾತ ಎಂಬ ಹರಿಕಥೆಯೂ, ಅಮ್ಮನವರಿಗೆ ಹೂಳಲು ಗೋಪಾಲಕೃಷ್ಣಸ್ವಾಮಿ ಅಲಂಕಾರವೂ ಉಂಟು. ಸರ್ವರಿಗೂ ಆಹ್ವಾನವಿರುತ್ತದೆ.

ಕೊರಿಯಾ ಸೀಜ್ ಫೈರ್ ಸಂಧಾನದ ಪ್ರಗತಿ

ಕೊರಿಯಾ ಸೀಜ್ ಫೈರ್ ವಿಷಯದ ಬಗ್ಗೆ ಸಂಧಾನದ ಮಾತು ಕತೆಗಳನ್ನು ಮುಂದುವರಿಸಿ ತಾಟಸ್ಥ್ಯ ಪ್ರದೇಶವನ್ನು ಗೊತ್ತುಪಡಿಸುವ ಬಗ್ಗೆ ವಿಶ್ವ ಸಂಸ್ಥೆ ಮತ್ತು ಕಮ್ಯೂನಿಸ್ಟರ ಪರ ತಲಾ ಇಬ್ಬರು ಪ್ರತಿನಿಧಿಗಳಿಂದ ಕೂಡಿದ ಒಂದು ಉಪ ಸಮಿತಿಯನ್ನು ರಚಿಸಬೇಕೆಂದು ವೈಸ್ ಅಡ್ಮಿರಲ್ ಚಾರಲ್ಸ್ ಜಾಯ್‌ರವರು ಸಲಹೆ ಮಾಡಿದ್ದರು. ಈ ಸಲಹೆಯನ್ನು ಎರಡು ಪಕ್ಷಗಳವರೂ ಅಂಗೀಕರಿಸಿರುವರು. ವಿಶ್ವ ಸಂಸ್ಥೆ ಸೈನಿಕರ ಪರವಾಗಿ ಮೇಜರ್ ಜನರಲ್ ಎಚ್. ಐ. ಹೋಡ್ಸ್ ಎಂಬುವರನ್ನು ಉಪ ಸಮಿತಿಗೆ ನೇಮಿಸಲಾಗಿದೆ. ಮತ್ತೊಬ್ಬರ ಹೆಸರನ್ನು ಸಧ್ಯದಲ್ಲೇ ಸೂಚಿಸಲಾಗುವುದು. ಮೇಜರ್ ಜನರಲ್ ಸಾಂಗ್ ಚೊ ಮತ್ತು ಜನರಲ್ ಹ್ಸೀ ಫಾಂಗ್‌ರವರು ಕ್ರಮವಾಗಿ ಉತ್ತರ ಕೊರಿಯಾ ಮತ್ತು ಚೀನಾಗಳ ಪರವಾಗಿ ಮೇಲ್ಕಂಡ ಸಮಿತಿಗೆ ನೇಮಿಸಲ್ಪಟ್ಟಿರುವರು.

ಸೇಲಮ್ಮಿಗೆ ಪ್ರಭುಗಳ ಭೇಟಿ

ಶ್ರೀಮನ್ ಮಹಾರಾಜರು ಮೊನ್ನೆ ಬೆಂಗಳೂರಿನಿಂದ ಸೇಲಮ್ಮಿಗೆ ಹೋಗಿ ಮೆಟ್ಟೂರು ಅಣೆಕಟ್ಟನ್ನು ಸಂದರ್ಶಿಸಿದರು. ಅಲ್ಲಿಂದ ತಿರುಪತಿಗೆ ತೆರಳುವರು. ೧೯ನೇ ತಾ॥ ಬೆಂಗಳೂರಿಗೆ ಹಿಂತಿರುಗುವರು.

ಟರ್ಕಿಯಲ್ಲಿ ಭಾರಿ ಭೂಕಂಪ

ಕಳೆದ ಸೋಮವಾರ ಟರ್ಕಿಯಲ್ಲಾದ ಭೂಕಂಪದಿಂದ ೧೦೩ ಜನರು ಇದುವರೆಗೆ ಸತ್ತಿರುವುದಾಗಿ ಗೊತ್ತಾಗಿದೆ. ಸಾವು ನೋವುಗಳಿಗೆ ಈಡಾದವರ ಸಂಖ್ಯೆಯು ವಿಪರೀತವಾಗಿದೆ ಎಂದು ಕಡೆಯ ವರದಿ. ಹಳ್ಳಿಗಳೂ ಅನೇಕ ವಸತಿಗಳೂ ನಾಶವಾಗಿವೆ.

ಕಾಂಗ್ರೆಸ್ಸಿಗೆ ಚುನಾವಣಾ ಚಿಹ್ನೆ

ಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ನೊಗವನ್ನು ಹಾಕಿದ ಎರಡು ಎತ್ತುಗಳ ಚಿಹ್ನೆಯನ್ನು ಕೊಡಲಾಗಿದೆ. ಸಮಾಜವಾದಿ ಪಕ್ಷಕ್ಕೆ ಮರದ ಚಿಹ್ನೆಯು ದೊರಕಿದೆ. ಅಕ್ರಮಕೂಟವೆಂದು ಸಾರದಿರುವ ಪ್ರದೇಶಗಳಲ್ಲಿ ಕಮ್ಯೂನಿಸ್ಟರು ಧಾನ್ಯದ ತೆನೆ ಮತ್ತು ಕುಡುಗೋಲನ್ನು ತಮ್ಮ ಚಿಹ್ನೆಯಾಗಿ ಮಾಡಿಕೊಳ್ಳಲು ಅವಕಾಶ ಕೊಂಡಿದೆ.

ರಾಘವೇಂದ್ರ ಸ್ವಾಮಿಗಳ ಆರಾಧನೆ

ಶಿವರಾಂಪೇಟೆಯ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ಶ್ರೀ ರಾಘವೇಂದ್ರ ಗುರುರಾಜರ ಆರಾಧನಾ ಮಹೋತ್ಸವವು ೩ ದಿನ ನಾಳೆ ಮತ್ತು ನಾಡಿದ್ದು ನಡೆಯುವುದು. ಈ ರಾತ್ರಿ ೭॥ ಗೆ ದೇವಸ್ಥಾನದಲ್ಲಿ ಶ್ರೀ ವಿ. ಕೃಷ್ಣಾಚಾರ್ಯರಿಂದ ಗುರುಚರಿತ್ರೆ ಕಥೆ. ನಾಳೆ ಸಂಜೆ ೬-೧ ಗಂಟೆಗೆ ವಿದ್ವಾನ್ ಶೇಷಣ್ಣ ವಿದ್ಯಾರ್ಥಿ ನಿಲಯದಲ್ಲಿ ಮಹಾರಾಜಾ ಕಾಲೇಜು ಪ್ರೊಫೆಸರ್ ಶ್ರೀ ಹೆಚ್. ಎನ್. ರಾಘವೇಂದ್ರಾಚಾರ್ಯರಿಂದ ಉಪನ್ಯಾಸ ಮತ್ತು ನಾಳಿದ್ದು ಸಂಜೆ ಅದೇ ಸ್ಥಳದಲ್ಲಿಯೇ ಶ್ರೀ ಎಂ. ನಾಗರಾಜ ಪಂಡಿತರಿಂದ ಭಾಷಣಗಳಾಗುವುವು.

ಸ್ವಾತಂತ್ರ್ಯೋತ್ಸವ

ಮೈಸೂರು

ಬನುಮಯ್ಯ ಕಾಲೇಜಿನಲ್ಲಿ

ರಾಜಧಾನಿಯ ಡಿ ಬನುಮಯ್ಯನವರ ಕಾಮರ್ಸ್ ಕಾಲೇಜಿನ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಘಂಟೆಗೆ ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನೆರವೇರುವುದು. ಮೈಸೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಎಂ ವಿ ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು. ತತ್ವಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಎಂ ಯಾಮುನಾಚಾರ್ಯರವರು ಭಾಷಣ ಮಾಡುವರು. ಸರ್ವರಿಗೂ ಆಹ್ವಾನವಿರುವುದು

ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ

ಸ್ವಾತಂತ್ರ್ಯ ದಿನೋತ್ಸವವನ್ನು ಸಾರ್ವಜನಿಕ ನಿಲಯದ ವಿದ್ಯಾರ್ಥಿಗಳು ವೈಭವದಿಂದ ಆಚರಿಸಿದರು. ಬೆಳಗಿನ ಬ್ರಾಹ್ಮೀ ಮುಹೂರ್ತದಲ್ಲಿ ಪ್ರಭಾತ ಫೇರಿ ಮತ್ತು ಪ್ರಾರ್ಥನೆಗಳಾದ ನಂತರ ನಿಲಯದ ಆವರಣದಲ್ಲಿ ಕಾಂಗ್ರೆಸ್ಸಿನ ಕಾರ್ಯಕರ್ತರಾದ ಶ್ರೀ ಎ ಶಿವಣ್ಣನವರ ಅಧ್ಯಕ್ಷತೆಯಲ್ಲಿ ಮೈಸೂರು ಟ್ರಸ್ಟ್ ಬೋರ್ಡ್ ಛೇರ್‌ಮನ್ನರಾದ ಶ್ರೀ ಎ ಗೋಪಾಲಕೃಷ್ಣ ಶೆಟ್ಟರು ಧ್ವಜಾರೋಹಣ ಮಾಡಿದರು ಮಧ್ಯಾಹ್ನ ಇಂದ್ರಭವನದ ಮಾಲೀಕರು ವಿದ್ಯಾರ್ಥಿಗಳಿಗೆ ಭೋಜನಕೂಟವನ್ನು ಏರ್ಪಡಿಸಿದ್ದರು.

ಶ್ರೀ ಶಾರದಾ ಬಾ ಹಿಂದಿ ನಿಕೇತನದಲ್ಲಿ

ಮಲ್ಲಿಕಾರ್ಜುನ ಸಂಸ್ಥೆಯವರು ಮೈಸೂರಿನ ಸಿಮೆಂಟ್ ಬ್ರಾಂಚ್ ನಂ ಪ್ರೈಮರಿ ಸ್ಕೂಲಿನ ಆವರಣದಲ್ಲಿ ೪ನೆಯ ಸ್ವಾತಂತ್ರ್ಯ ದಿನಾಚರಣೆಯು ಚೆಂದವಾಗಿ ನೊನ್ನೆ ಪ್ರಾತಃಕಾಲ ರಾಷ್ಟ್ರ ಧ್ವಜಾರೋಹಣವನ್ನು ನೆರವೇರಿಸಿದರು ಮೈಸೂರಿನ ಪೌರಸಭೆಯ ಸದಸ್ಯರಾದ ಶ್ರೀ ಚೌಡಯ್ಯನವರ ಅಧ್ಯಕ್ಷತೆಯಲ್ಲಿ ಕಾರ್ಯಕಲಾಪಗಳು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು ಅಧ್ಯಕ್ಷರು ಸಂಸ್ಥೆಯ ಕಾರ್ಯಕಲಾಪಗಳನ್ನು ಬಹಳವಾಗಿ ಪ್ರಶಂಸಿಸಿ ಕಾರ್ಯಕರ್ತರುಗಳಿಗೂ ಮತ್ತು ಬಾಲಕ ಬಾಲಕಿಯರುಗಳಿಗೂ ಹಿತವಚನಗಳನ್ನಿತ್ತರು ಸಿಹಿ ತಿಂಡಿ ಹಂಚಲಾಯಿತು

ವಿಜಯಾ ಕ್ರಿಕೆಟ್ ಕ್ಲಬ್ಬಿನಲ್ಲಿ

ಶ್ರೀ ವಿಜಯಾ ಕ್ರಿಕೆಟ್ ಕ್ಲಬ್ಬಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು, ಡೆಪ್ಯುಟಿ ಅಸಿಸ್ಟೆಂಟ್ ಕಮಿಷನರ್ ಶ್ರೀ ಪಿ. ವೆಂಕಟರಾಮರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಸಿದರು

ದಾವಣಗೆರೆಯಲ್ಲಿ ರಾಜಕೀಯ ಸಮ್ಮೇಳನ

ತುಮಕೂರಿನಲ್ಲಿ ನಡೆಯಬೇಕಾಗಿದ್ದ ಹಿಂದಿನ ಮೈಸೂರು ರಾಜಕೀಯ ಸಮ್ಮೇಳನವನ್ನು ಈ ತಿಂಗಳು ೨೬ ಮತ್ತು ೨೭ನೇ ತಾರೀಖು ದಾವಣಗೆರೆಯಲ್ಲಿ ನಡೆಸುವಂತೆ ನಿರ್ಧರಿಸಲಾಗಿದೆ ಆದಕಾರಣ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಆಧಿಪತ್ಯದಲ್ಲಿ ನಡೆಯುವುದು. ಪ್ರಧಾನ ಮಂತ್ರಿ ಪಂಡಿತ ಜವಹರಲಾಲ್ ನೆಹರೂ, ಶೇಕ್ ಅಬ್ದುಲ್ಲಾ ಮತ್ತು ಉತ್ತರ ಪ್ರದೇಶದ ಮುಖ್ಯ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್ ಇವರುಗಳ ಸ್ವಾಗತ ಸಮಿತಿಯವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವಂತೆ ಪ್ರಾರ್ಥಿಸಲಾಗಿದೆ

ಪ್ರತಿನಿಧಿಗಳಾಗಬಯಸುವವರು ರೂ ಶುಲ್ಕವನ್ನು ೨೦ನೇ ತಾ ಒಳಗೆ ಪ್ರಧಾನ ಕಾರ್ಯದರ್ಶಿ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ, ಬೆಂಗಳೂರು ಈ ವಿಳಾಸಕ್ಕೆ ಕಳುಹಿಸಬೇಕು ಈಗಿನ ಮತ್ತು ಹಿಂದಿನ ಶಾಸನ ಸಭೆಗಳು, ಸ್ಥಳೀಯ ಸಂಸ್ಥೆಗಳು, ಕಾಂಗ್ರೆಸ್ ಸಮಿತಿಗಳು ಸ್ವಾತಂತ್ರ್ಯ ಹೋರಾಟಗಳಲ್ಲಿ ಸೇರಿದವರು ಪ್ರತಿನಿಧಿಗಳಾಗಬಹುದು

ಚಿಕ್ಕ ಅಂಕನಹಳ್ಳಿಯಲ್ಲಿ ಕಾಲರಾ ವ್ಯಾಧಿ

ಶ್ರೀರಂಗಪಟ್ಟಣದ ತಾಲ್ಲೂಕು ಚಿಕ್ಕ ಅಂಕನಹಳ್ಳಿ (ಕೆಂಪಯ್ಯನ ಹುಂಡಿ) ಯಲ್ಲಿ ೨ ತಿಂಗಳಿಂದ ಕಾಲರಾ ವ್ಯಾಧಿಯು ವ್ಯಾಪಿಸಿ ಕಳೆದ ತಿಂಗಳು ೨೩ನೇ ತಾರೀಖಿನ ವರೆಗೆ ಸುಮಾರು ೪೦ ಜನರಿಗೆ ಸ್ಪರ್ಶವಾದರು. ಇನಾಕ್ಯುಲೇಷನ್ ಮಾಡಿದರೆಂದೂ ಇನ್ನೂ ಇದೇ ಸಂಖ್ಯೆಯಷ್ಟು ಜನರಿಗೆ ಮಾಡಿದ್ದಾರೆಂದೂ, ಇದುವರೆಗೆ ಅಲ್ಲಿ ೧೦ ಜನರು ಈ ವ್ಯಾಧಿಗೆ ತುತ್ತಾಗಿರುವರೆಂದೂ, ಕೂಡಲೇ ಸಂಬಂಧಪಟ್ಟವರು ಇದರ ಬಗ್ಗೆ ಹೆಚ್ಚು ಗಮನ ಕೊಟ್ಟು ವ್ಯಾಧಿಯ ತಡೆಗೆ ಕ್ರಮ ಕೈಗೊಳ್ಳಬೇಕೆಂದೂ ಅಲ್ಲಿನ ಗ್ರಾಮಸ್ಥರು ಕೋರಿರುತ್ತಾರೆ

ಸೆಲ್ಯುಲಾಯಿಡ್ಡಿನ ಮುಷ್ಠಿಗಳ ಮಾರಾಟ

ಪಾಕಿಸ್ತಾನದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಸೆಲ್ಯುಲಾಯಿಡ್ಡಿನಿಂದ ಮಾಡಲ್ಪಟ್ಟ ಮುಷ್ಠಿಗಳನ್ನು ಕರಾಚಿಯ ಬೀದಿಗಳಲ್ಲಿ ನೆಹರೂರವರ ವಿರುದ್ಧ ಘೋಷಣೆಗಳನ್ನು ಮಾಡುತ್ತಾ ಮಾರಲಾಯಿತೆಂದು ಗೊತ್ತಾಗಿದೆ ವಿದ್ಯಾರ್ಥಿಗಳೂ ಮತ್ತು ಇತರರೂ ಅವುಗಳನ್ನು ಧರಿಸಿಕೊಂಡಿದ್ದರೆಂದು ಹೇಳಲಾಗಿದೆ

ಕೊಯಮುತ್ತೂರಿನ ಬಸ್ ಕೆಲಸಗಾರರ ವಜಾ

ಪ್ರಯಾಣಿಕರ ಬಗ್ಗೆ ಸ್ವೇಚ್ಛೆಯಾಗಿ ವರ್ತಿಸಿದುದಲ್ಲದೆ ವಾಹನಗಳನ್ನು ಅಪಾಯಕರ ಸ್ಥಿತಿಯಲ್ಲಿ ನಡೆಸಿದರೆಂಬ ಕಾರಣಕ್ಕಾಗಿ ಕೊಯಮುತ್ತೂರು ನಗರದ ಟ್ರಾನ್ಸ್‌ಪೋರ್ಟು ಕಂಪೆನಿಯ ೫೭ ಮಂದಿ ಕೆಲಸಗಾರರನ್ನು ವಜಾ ಮಾಡಲಾಗಿದೆಯೆಂದು ಗೊತ್ತಾಗಿದೆ

ದಕ್ಷಿಣ ಅಮೆರಿಕಾ ರಾಜ್ಯಗಳಿಗೆ ಘರ್ಷಣೆ

ದಕ್ಷಿಣ ಅಮೆರಿಕದ ಪೆರು ದೇಶದ ಸೈನ್ಯಗಳು ಈಕ್ವೆಡಾರ್ ದೇಶದ ಗಡಿ ಸೈನ್ಯಗಳ ಮೇಲೆ ಕಳೆದ ಗುರುವಾರ ಆಕ್ರಮಣ ನಡೆಸಿರುವುದಾಗಿ ವರದಿಯಾಗಿದೆ

ಜಿಲ್ಲಾ ಕೈಮಗ್ಗದವರ ಸಂಘ

ಮೈಸೂರು ಜಿಲ್ಲಾ ಕೈಮಗ್ಗದವರ ಸಂಘದ ವಿಶೇಷ ಸಭೆಯು ಕಳೆದ ೧೨ನೇ ತಾ॥ ಶ್ರೀ ಡಿ ಸಿ ತಿಪ್ಪಾರಿಯವರ ಅಧ್ಯಕ್ಷತೆಯಲ್ಲಿ ನಡೆದು ಆಡಳಿತ ವರ್ಗದ ಚುನಾವಣೆಯಾಗಿ ಶ್ರೀ ಡಿ ಸಿ ತಿಪ್ಪಾರಿಯವರು ಅಧ್ಯಕ್ಷರಾಗಿಯೂ, ಆರ್. ಶಾಮರಾಯರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್ ಸಿ ಗೋವಿಂದರಾಜುರವರು ಗೌ॥ ಕಾರ್ಯದರ್ಶಿಯಾಗಿಯೂ, ಚಿಂತಲ್ಪಲ್ಲಿ ಶ್ರೀ ಸಿ ಎ ಸಣ್ಣಪ್ಪನವರು ಖಜಾಂಚಿಗಳಾಗಿ ಚುನಾಯಿತರಾದರು ನೂಲಿನ ಸರಬರಾಜು ಪರಿಸ್ಥಿತಿಯನ್ನು ಸಭೆಯಲ್ಲಿ ಪರಿಶೀಲಿಸಲಾಯಿತು

ಪಾಕಿಸ್ತಾನಕ್ಕೆ ಮತ್ತೆರಡು ಯುದ್ಧ ವಿಮಾನಗಳು

ಪಾಕಿಸ್ತಾನಕ್ಕೆ ಬ್ರಿಟನ್ನಿನಿಂದ ಮತ್ತೆರಡು ಫೈಟರ್ ವಿಮಾನಗಳು ಬಂದುವೆಂದು ಹೇಳಲಾಗಿದೆ. ಇದುವರೆಗೆ ಆ ದೇಶವು ಕಳಿಸಲಿರುವ ೩೬ ವಿಮಾನಗಳ ಪೈಕಿ ೬ ವಿಮಾನಗಳು ಬಂದಿವೆ.

ಮೈಸೂರಿನಲ್ಲಿ ಶ್ರೀ ಮಧುರಾದಾಸರವರು

ಗಾಂಧಿ ಸ್ಮಾರಕ ನಿಧಿಯ ಕೇಂದ್ರ ಸಮಿತಿ ಸದಸ್ಯರಾದ ಶ್ರೀ ಮಧುರಾದಾಸ್ ಪುರುಷೋತ್ತಮ್‌ರವರು ಈ ದಿನ ಮೈಸೂರಿಗೆ ಆಗಮಿಸುವರು ೧೮ನೇ ತಾ॥ ಪೂರ್ತ ಇದ್ದು ಮರುದಿನ ಮದರಾಸ್ ಪ್ರಾಂತಕ್ಕೆ ತೆರಳುವರು. ಗಾಂಧಿ ತತ್ವದಲ್ಲಿ ನಿಷ್ಠಾವಂತರಾದ ಮಾನ್ಯರೂ ಸಾರ್ವಜನಿಕ ಸಂಸ್ಥೆಗಳ ಅಧಿಕಾರವರ್ಗವೂ ಮುಖ್ಯವಾಗಿ ಯುವಜನ ಸಂಸ್ಥೆಗಳೂ ಶ್ರೀಯುತರ ಸಂಪರ್ಕವನ್ನು ದಯಮಾಡಿ ಹೊಂದುವುದು. ಹೆಚ್ಚಿನ ವಿವರವನ್ನು ಭಾರತ ಸೇವಾದಳದ ಜಿಲ್ಲಾ ಅಧ್ಯಕ್ಷರಾದ ಟಿ. ಎಸ್ ಸುಬ್ಬಣ್ಣನವರಿಂದ (ದೊಡ್ಡ ಗಡಿಯಾರದ ಬಳಿಯ ಮೋಟಾರ್ ಯೂನಿಯನ್ ಕಛೇರಿ) ಪಡೆಯಬಹುದು

ಮೈಸೂರು ಸಾರ್ವಜನಿಕ ವಿಚಾರ ಸಂಸ್ಥೆ

ನೋಟ್ಬ್ಯಾಂಡ ಸಂಸ್ಥೆಯ ಆಶ್ರಯದಲ್ಲಿ ಶ್ರೀ ಬಿ ಶ್ರೀಕಂಠಪ್ಪನವರು ೧೮-೮-೫೧ನೇ ಶನಿವಾರ ಸಂಜೆ ೬ ಗಂಟೆಗೆ ಮಾಪರಿ ಶಾಲೆಯಲ್ಲಿ ಶಾಸನೋಕ್ತ ಸಮಸ್ಯೆಗಳು ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಆಹ್ವಾನ ಉಂಟು

ಆದರ್ಶ ಕನ್ನಡ

ನಾಟಕ ಸಂಘ, ಮೈಸೂರು

ಬುಧವಾರ ಮತ್ತು ಶನಿವಾರಗಳಲ್ಲಿ ರಾತ್ರಿ 9-45ಕ್ಕೆ

ಉಳಿದ ದಿನಗಳಲ್ಲಿ ಸಂಜೆ 6-45ಕ್ಕೆ

ಟೌನ್ ಹಾಲಿನಲ್ಲಿ

* ಚಂಚಲ *

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುತ್ತಾರೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ

ಪ್ರೊ॥ ಎಂ ವಿ ದಾಸ್, ಹೆ.ಎಸ್ ಶೇಷಗಿರಿ

WANTED

An accountant who has passed Senior Accountancy and Type-writing and has plenty of experience People who have no experience and who are unable to give a cash security and enter into an agreement to serve at least for five years need not apply Selected candidate has to join service forthwith

Hon. SECRETARY,
Sarada Vilas College, Mysore.

ಗೌ॥ ಕ್ರೇಪ್ ಸಿಲ್ಕ್ ಸೀರೆಗಳೂ-ಧರ್ಮಾವರಂ-ಆರ್ಣಿ

ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಬಿ ಎ,

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಅನೋಘವಾದ 2ನೇ ವಾರ ರಾಜಾ ಗೋಪಿಚಂದ್

ಪ್ರತಿ ಸೋಮವಾರ ಬುಧವಾರ ಮತ್ತು ಶನಿವಾರಗಳಲ್ಲಿ ರಾತ್ರಿ 9-45 ಘಂಟೆಗೆ, ಉಳಿದ ದಿನಗಳಲ್ಲಿ ಮ್ಯಾಟಿನಿ 6 45ಕ್ಕೆ

ಚಾಮುಂಡೇಶ್ವರಿ ಟಾಕೀಸ್

17 8 51 ರಿಂದ ಆಕರ್ಷಣೀಯ 4ನೇ ವಾರ

ದೇವಕಿ (ತಮಿಳು)

ಶಾಸ್ತ್ರಿ ವಿ ಎನ್ ಜಾನಕಿ ಪಾರ್ಥಸಾರಥಿ ಮಾಲತಿ ಪ್ರಾಣ ಬಳಿಕ ಪಣ್ಣೈ ನಾಗಿನ ಮತ್ತು ಕುಮಾರಿ ಕಮಲ

ರಣಜಿತ್ ಟಾಕೀಸ್

17-8-51 ರಿಂದ ಜನಭರಿತ 2 ನೇ ವಾರ

ವರ್ಮಾ ಫಿಲಂಸ್‌ರವರ ಮಹೋನ್ನತ ಹಿಂದಿ ಚಿತ್ರ * ಬಾದಲ್

ಭೂಮಿಕೆಯಲ್ಲಿ ಮಧುಬಾಲ, ಪ್ರೇಮನಾಥ್

ಡೈರೆಕ್ಟರ್ ಅಮೀಯ ಚಕ್ರವರ್ತಿ ಸಂಗೀತ -ಶಂಕರ್ ಮತ್ತು ಜೈ ಕಿಶನ್

[ASHOK RELEASE

Edited, printed and published by A R Nagarajan, at Sadhvi Press D. Subbiah Road, Mysore

ಫೋನ್ ನಂ 792 ॥ ಪ್ರಜಾಮತ ॥ ಇಂದಿನ ಪ್ರತಿಗೆ 3 ಕಾಸು

ಸಂಪುಟ ೧೧] ಶನಿವಾರ ೧೮-೮-೫೦ [ಸಂಚಿಕೆ ೨೨

ಕಾಶ್ಮೀರ ಬಿಟ್ಟುಹೋದ ಜನರ ಭೂಮಿ ರೈತರಿಗೆ

ನಗರಾಭಿವೃದ್ಧಿಯ ಮುಸೂದೆ
ಪೌರಸಭೆಯಲ್ಲಿ ವಿಮರ್ಶೆ

ಮೈಸೂರು ೧೮

ಮೈಸೂರು ನಗರಾಭಿವೃದ್ಧಿ ಮುಸೂದೆಯ ಬಗ್ಗೆ ಅಭಿಪ್ರಾಯಗಳನ್ನು ಕೇಳಿ ಸರಕಾರ ಮುಸೂದೆಯ ವಿಶೇಷ ಸಮಿತಿಯ ಮುಂದೆ ಸಲಹೆಯನ್ನು ಕೊಡಲು ೩ ಜನ ಸದಸ್ಯರನ್ನು ಕಳುಹಿಸುವ ಬಗ್ಗೆ ಮೈಸೂರು ಶಾಸನ ಸಭೆಯ ಕಾರ್ಯದರ್ಶಿಯವರಿಂದ ಒಂದಿದ್ದ ಪತ್ರವನ್ನು ಪರಿಶೀಲಿಸಲು ನಿನ್ನೆ ಪೌರಸಭೆಯ ವಿಶೇಷ ಅಧಿವೇಶನವು ಸೇರಿತ್ತು. ಈ ಮುಸೂದೆಯ ವಿಷಯವಾಗಿ ಹಿಂದೆಯೇ ಪೌರಸಭೆಯು ತನ್ನ ಸಲಹೆಯನ್ನು ವ್ಯಕ್ತಪಡಿಸಿದ್ದುದರಿಂದ ಈಗ ಪುನಃ ಆ ವಿಷಯವನ್ನು ಪರಿಶೀಲಿಸುವ ಅವಶ್ಯಕತೆ ಇಲ್ಲವೆಂದೂ, ಸಮಿತಿಯ ಮುಂದೆ ಹಾಜರಾಗಲು ಸಭೆಯ ಪ್ರತಿನಿಧಿಗಳನ್ನು ಕಳುಹಿಸುವ ಅಗತ್ಯವಿಲ್ಲವೆಂದೂ ತೀರ್ಮಾನ ಮಾಡಲಾಯಿತು

ಗಾಂಧಿ ಸ್ಮಾರಕ ನಿಧಿಯೊಂದಿಗೆ ಭಾರತ ಸೇವಾದಳದ ಸಂಯೋಜನೆ

ಭಾರತ ಸೇವಾ ದಳದ ಕೇಂದ್ರ ಸಮಿತಿಯ ಸಭೆಯು ೧೭-೮ ನೇ ಭಾನುವಾರ ಬೆಂಗಳೂರು ಅರಳೇಪೇಟೆಯಲ್ಲಿನ ಸೇವಾ ದಳದ ಕಾರ್ಯಾಲಯದಲ್ಲಿ ಅಧ್ಯಕ್ಷರಾದ ಶ್ರೀ ಎ ಜಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸೇರಿ ರಚನಾತ್ಮಕ ಕಾರ್ಯಗಳಿಗಾಗಿಯೇ ಸಂಕಲ್ಪ ಮಾಡಿರುವ ಈ ಸಂಸ್ಥೆಯು ಗಾಂಧಿ ಸ್ಮಾರಕ ನಿಧಿಯೊಂದಿಗೆ ಸಂಯೋಜಿತವಾಗುವುದು ಸೂಕ್ತವೆಂದು ಸರ್ವಾನುಮತದಿಂದ ತೀರ್ಮಾನಿಸಿ, ಅದನ್ನು ಅಂಗೀಕರಿಸಲು ಸರ್ವ ಸದಸ್ಯರ ಸಭೆಗೆ ಶಿಫಾರಸು ಮಾಡಲಾಯಿತು ಗಾಂಧೀ ಸ್ಮಾರಕ ನಿಧಿಯ ಮಾರ್ಗದರ್ಶಕರಾದ ಶ್ರೀ ಮಧುರಾ ದಾಸ್ ಪುರುಷೋತ್ತಮರವರೂ ಸಂಸ್ಥಾನದ ನಿಧಿಯ ಸಂಚಾಲಕರಾದ ಶ್ರೀ ಬೆಳಗುಂಬ ನಾರಣಪ್ಪನವರೂ ಆಹ್ವಾನಿತರಾಗಿ ಸಭೆಯಲ್ಲಿ ಹಾಜರಿದ್ದರು.

ಹರಿಕಥೆ

ರಾಜಧಾನಿಯ ವಿ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೯ ಘಂಟೆಗೆ ಶ್ರೀಮತಿ ಸುಭದ್ರಾ ಸಹೋದರಿಯರಿಂದ ಹರಿಕಥೆಯು ನಡೆಯುವುದು

ಉಪನ್ಯಾಸ

ಪೋಂಟಿಕೊಪ್ಪಲಿನಲ್ಲಿರುವ ಶ್ರೀರಾಮ ವ್ಯಾಸ್ವರ್ಮದಲ್ಲಿ ನಾಳೆ ಸಂಜೆ ೬ ಘಂಟೆಗೆ ಸ್ವಾಮಿ ಸೋಮನಾಥಾನಂದರವರು ಜ್ಞಾನ ಯೋಗ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಫ್ರೆಂಡ್ಸ್ ಕ್ರಿಕೆಟ್ ಕ್ಲಬ್ಬಿನ ಆಶ್ರಯದಲ್ಲಿ

ರಾಜಧಾನಿಯ ಫ್ರೆಂಡ್ಸ್ ಕ್ರಿಕೆಟ್ ಕ್ಲಬ್ಬಿನ ಆಶ್ರಯದಲ್ಲಿ ಸ್ವಾತಂತ್ರ್ಯ ದಿನವು ಜರುಗಿತು ಕನಾಟ್ ಪತ್ರಿಕೆಯ ಶ್ರೀ ರಾಘವೇಂದ್ರರಾಯರು ಧ್ವಜಾರೋಹಣವನ್ನು ನೆರವೇರಿಸಿದರು, ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಶ್ರೀನಿವಾಸರಾಯರು ಭಾಷಣ ಮಾಡಿದರು ಶ್ರೀ ಎಸ್ ಕೃಷ್ಣಸ್ವಾಮಿಯವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

ಅಖಿಲ ಮೈಸೂರು ರಾಜಕೀಯ ಸಮ್ಮೇಳನ

ಬೆಂಗಳೂರು ೧೮

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಅಖಿಲ ಮೈಸೂರು ರಾಜಕೀಯ ಸಮ್ಮೇಳನವು ದಾವಣಗೆರೆಯಲ್ಲಿ ಇದೇ ಆಗಸ್ಟು ೨೬ ಮತ್ತು ೨೭ ನೆಯ ತಾರೀಖುಗಳಲ್ಲಿ ಸೇರುತ್ತಿದೆ ಸಮ್ಮೇಳನಕ್ಕೆ ಕೆಳಗೆ ಕಂಡ ಕಾಂಗ್ರೆಸ್ ಸದಸ್ಯರನ್ನು ಆಹ್ವಾನಿಸಲಾಗಿದೆ

೧ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರು ೨ ಕೇಂದ್ರ ಮತ್ತು ಪ್ರದೇಶ ಶಾಸನ ಸಭೆಗಳಲ್ಲಿರುವ ಕಾಂಗ್ರೆಸ್ ಸದಸ್ಯರು ೩ ಸ್ಥಳೀಯ ಸಂಸ್ಥೆಗಳಲ್ಲಿರುವ ಕಾಂಗ್ರೆಸ್ ಸದಸ್ಯರು ೪ ಜಿಲ್ಲೆ ಮತ್ತು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಗಳಲ್ಲಿರುವ ಕಾಂಗ್ರೆಸ್ ಸದಸ್ಯರು ೫ ಜಿಲ್ಲೆ ಮತ್ತು ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಕಾರ್ಯಕಾರಿ ಸಮಿತಿಗಳ ಸದಸ್ಯರು ೬ ಪ್ರಾಥಮಿಕ ಕಾಂಗ್ರೆಸ್ ಪಂಚಾಯಿತಿಗಳ ಸದಸ್ಯರು.

೭ ಕಾಂಗ್ರೆಸ್ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಕಾರಾಗೃಹವಾಸವನ್ನು ಅನುಭವಿಸಿ ಕಾಂಗ್ರೆಸ್ಸಿಗೆ ಸೇವೆಸಲ್ಲಿಸಿರತಕ್ಕ ದೇಶಸೇವಕರು ೮ ಮಾಜಿ ಪ್ರಜಾಪ್ರತಿನಿಧಿ ಸಭೆಯ ಮತ್ತು ಶಾಸನ ಸಭೆಯ ಕಾಂಗ್ರೆಸ್ ಸದಸ್ಯರು ಪ್ರತಿ ತಾಲ್ಲೂಕು ಕಾಂಗ್ರೆಸ್ ಸಮಿತಿಯೂ ಕನಿಷ್ಠ ಪಕ್ಷ ಹತ್ತು ಪ್ರತಿನಿಧಿಗಳನ್ನಾದರೂ ಸೇರಿಸಬೇಕಾಗಿ ಕೋರಲಾಗಿದೆ ಎಂದು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು ತಿಳಿಸಿಯುತ್ತಾರೆ

ಮಳೆಗಾಗಿ ಪರ್ಜನ್ಯ ಯಜ್ಞ

ಉತ್ತರ ಪ್ರದೇಶದ ಗಯಾ ಕ್ಷೇತ್ರದಲ್ಲಿ ಮಳೆಯಿಲ್ಲದೆ ಪೈರು ಪಚ್ಚೆಗಳು ಒಣಗಿ ನಾಶವಾಗುತ್ತಿರುವುದನ್ನು ತಪ್ಪಿಸಲು ಅಲ್ಲಿನ ವೈದಿಕ ಮಂಡಲಿಯವರು ಪರ್ಜನ್ಯ ಮಹಾ ಯಜ್ಞವನ್ನು ಆರಂಭಿಸಿರುವರೆಂದು ವರದಿಯಾಗಿದೆ.

ಜಪಾನ್ ಶಾಂತಿ ಒಪ್ಪಂದಕ್ಕೆ ಚೀಣಾದ ತಿರಸ್ಕಾರ

ಜಪಾನ್ ಶಾಂತಿ ಸಂಧಾನದ ಬಗ್ಗೆ ಬ್ರಿಟನ್ ಮತ್ತು ಅಮೇರಿಕಗಳು ತಯಾರಿಸಿರುವ ಒಪ್ಪಂದದ ಕರಡನ್ನು ಚೀಣಾವು ತಿರಸ್ಕರಿಸಿದೆ

ಜಪಾನ್ ಶಾಂತಿ ಸಂಧಾನದ ಬಗ್ಗೆ ಟ್ರೂಮನ್ನರ ವಿವರಣೆ

ಅಮೇರಿಕದ ಅಧ್ಯಕ್ಷ ಟ್ರೂಮನ್ನರು ಮೊನ್ನೆ ಎಂದು ಪತ್ರಿಕಾ ಸಮ್ಮೇಳನದಲ್ಲಿ ಕರೆದು ಜಪಾನ್ ಶಾಂತಿ ಒಪ್ಪಂದದ ಬಗ್ಗೆ ವಿವರಣೆಯನ್ನಿತ್ತರು ಬರುವ ತಿಂಗಳು ೬ನೇ ತಾ|| ಸ್ಯಾನ್‌ಫ್ರಾನ್ಸಿಸ್ಕೋವಿನಲ್ಲಿ ಒಪ್ಪಂದಕ್ಕೆ ರುಜು ಹಾಕಲಾಗುವುದೆಂದೂ ಪೆಸಿಫಿಕ್ ರಾಷ್ಟ್ರಗಳಲ್ಲಿ ಶಾಂತಿ ಕಾಪಿಸುವ ಉದ್ದೇಶದಿಂದ ಆಸ್ಟ್ರೇಲಿಯಾ ನ್ಯೂಜಿಲೆಂಡ್ ಅಮೇರಿಕಾ ರಕ್ಷಣಾ ಒಪ್ಪಂದ, ಅಮೇರಿಕಾ ಫಿಲಿಪೈನ್ಸ್ ರಕ್ಷಣಾ ಒಪ್ಪಂದ ಮತ್ತು ಅಮೇರಿಕಾ ಜಪಾನ್ ರಕ್ಷಣಾ ಒಪ್ಪಂದವಾಗಲಿದೆಯೆಂದೂ ಅವರು ಹೇಳಿದರು ಶಾಂತಿ ಒಪ್ಪಂದಕ್ಕೆ ರುಜು ಹಾಕುವ ಬಗ್ಗೆ ಯಾರೂ ಅಡ್ಡಿ ಬರಲಾಗದೆಂದೂ ಅಧ್ಯಕ್ಷ ಟ್ರೂಮನ್ನರು ಖಚಿತಗೊಳಿಸಿದರು

ಕಮ್ಯೂನಿಸ್ಟ್ ಮುಖಂಡರಿಗೆ ನೆಹರೂ ಭೇಟಿ ಇಲ್ಲ

ಬಂಧಿತರಾಗಿರುವ ಕ್ರಾಂತಿಕಾರಿ ಕಮ್ಯೂನಿಸ್ಟ್ ಪಕ್ಷದ ಬಂಗಾಳದ ಮುಖಂಡ ಪನ್ನಾಲಾಲ್ ದಾಸ್ ಗುಪ್ತರವರು ನೆಹರೂರವರನ್ನು ಕಾಣಬೇಕೆಂದು ಬಂಗಾಳಾ ಸರ್ಕಾರದ ಮೂಲಕ ಪ್ರಾರ್ಥಿಸಿಕೊಂಡುದಕ್ಕೆ ನೆಹರೂರವರು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ

ಕಾರ್ಮಿಕರು ಮತ್ತು ವಿದ್ಯಾರ್ಥಿಗಳಿಗೆ ಘರ್ಷಣೆ

ಅಸ್ಸಾಮಿನ ಗೌಹಾತಿಯ ಪ್ರಮುಖ ವ್ಯಾಪಾರ ಸ್ಥಳವಾದ ಫ್ಯಾನ್ಸಿ ಬಜಾರ್ ಎಂಬಲ್ಲಿ ಮೊನ್ನೆ ರಾತ್ರಿ ರಿಕ್ಷಾ ಕಾರ್ಮಿಕರಿಗೂ ವಿದ್ಯಾರ್ಥಿಗಳಿಗೂ ಘರ್ಷಣೆಯಾಗಿ ೩೪ ಜನರಿಗೆ ಗಾಯವಾಗಿ ೧೦ ಜನರಿಗೆ ತುಂಬಾ ಪೆಟ್ಟಾಗಿದೆ

"ಹಸಿವಿನ ಬಿಲ್ಲೆಗಳು"

ಭಾರತದ ರಿಸರ್ವ್ ಬ್ಯಾಂಕಿನ ನೌಕರರು "ಹಸಿವಿನ ಬಿಲ್ಲೆ"ಗಳನ್ನು ಎದೆಯ ಮೇಲೆ ಧರಿಸುತ್ತಿದ್ದಾರೆ ಹೆಚ್ಚಿನ ತುಟ್ಟಿಭತ್ಯ, ಬಾಡಿಗೆ ಭತ್ಯ ಮತ್ತು ಸಂಬಳದ ಪುನರ್ವಿಮರ್ಶೆಯಾಗಬೇಕೆಂಬ ತರದಲ್ಲಿ ಬರೆಯಲಾಗಿದೆ ನೌಕರರು ಮುಷ್ಕರ ಹೂಡುವ ಬಗ್ಗೆ ೨೦ನೇ ತಾ|| ಅಭಿಪ್ರಾಯ ತೆಗೆದುಕೊಳ್ಳಲಾಗುವುದು

ಕಾಶ್ಮೀರವನ್ನು ಬಿಟ್ಟು ಹೋದವರ ಜಮೀನು ರೈತರಿಗೆ

ಕಾಶ್ಮೀರವನ್ನು ಬಿಟ್ಟು ಹೋಗಿರುವ ಜಮೀನ್ದಾರರುಗಳ ಭೂಮಿಯನ್ನು ಸಾಗುವಳಿ ಮಾಡುವ ರೈತರಿಗೇ ಹಂಚಲು ಅಲ್ಲಿನ ಸರ್ಕಾರವು ನಿರ್ಧರಿಸಿದೆ ಸಾಗುವಳಿಯಲ್ಲಿರುವ ಜಮೀನನ್ನು ಸಂಸಾರವೊಂದಕ್ಕೆ ೪ ಎಕರೆಯಂತೆಯೂ ಬಂಜರು ಜಮೀನನ್ನು ೬ ಎಕರೆಯಂತೆಯೂ ಹಂಚಲಾಗುವುದು

ಭಾರತದ ರಕ್ಷಣೆಯ ಪ್ರತಿಜ್ಞಾ ಪತ್ರಕ್ಕೆ ರಕ್ತದ ಸಹಿ

ಕಳೆದ ಬುಧವಾರ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕಾಶಿಯ ಹಲವು ಮಹಿಳೆಯರೂ ಸೇರಿ ಒಟ್ಟು ೩೦೦ ಜನರು ಭಾರತದ ರಕ್ಷಣೆಗಾಗಿ ತಮ್ಮ ಸರ್ವಸ್ವವನ್ನೂ ಅರ್ಪಣೆ ಮಾಡುವುದಾಗಿ ಪ್ರತಿಜ್ಞೆ ಸ್ವೀಕರಿಸಿ, ಅದಕ್ಕೆ ತಮ್ಮ ರಕ್ತದಿಂದ ರುಜು ಹಾಕಿದರು

ಕೇಸಾಂಗ್ ಮಾತುಕತೆಗಳಲ್ಲಿ ಆಶಾಭಾವನೆ

ಕೊರಿಯಾ ಶಾಂತಿ ಸಂಧಾನ ಕೇಂದ್ರವಾದ ಕೇಸಾಂಗ್ ನಗರದ ಬಳಿ ತಾಟಸ್ಥ್ಯ ಪ್ರದೇಶ ನಿರ್ಮಾಣದ ಬಗ್ಗೆ ಕಮ್ಯೂನಿಸ್ಟರು ಮತ್ತು ವಿಶ್ವಸಂಸ್ಥೆಯವರು ತಮ್ಮ ತಮ್ಮ ಸೇನಾಂಕಿಗಳನ್ನು ಸಡಿಲಿಸಲು ನಿರ್ಧರಿಸಿರುವರು ಇದರಿಂದ ಸಂಧಾನದ ಮಾತು ಕತೆಗಳು ಮತ್ತಷ್ಟು ಸುಗಮವಾಗಿ ನಡೆಯಲು ಅನುಕೂಲವಾಯಿತು

ಸರ್ ಸಿ. ಪಿ. ಯವರಿಗೆ ಅಮೇರಿಕದಲ್ಲಿ ಹೊಸಹುದ್ದೆ

ತಿರುವಾಂಕೂರಿನ ಮಾಜಿ ದಿವಾನರಾದ ಸರ್ ಸಿ. ಪಿ ರಾಮಸ್ವಾಮಿ ಅಯ್ಯರ್ ರವರಿಗೆ ಅಮೇರಿಕದ ಒಂದು ವಿಶ್ವವಿದ್ಯಾಲಯದ ಪ್ರೊಫೆಸರ್ ಕೆಲಸವನ್ನು ಸ್ವೀಕರಿಸಲು ಆಹ್ವಾನ ಬಂದಿರುವುದಾಗಿ ವರದಿಯಾಗಿದೆ

ಮಧ್ಯ ಪ್ರದೇಶ ಸರ್ಕಾರಕ್ಕೆ ಮಿಶ್ರಾರವರ ರಾಜೀನಾಮೆ

ಪಂಡಿತ ನೆಹರು ಮತ್ತು ಪುರುಷೋತ್ತಮದಾಸ್ ಟಂಡನ್‌ರವರಲ್ಲಿ ಉಂಟಾಗಿರುವ ವಿರಸದ ಪರಿಣಾಮವಾಗಿ ಮಧ್ಯ ಪ್ರದೇಶ ಸರ್ಕಾರದ ಗೃಹ ಸಚಿವರಾದ ಶ್ರೀ ಡಿ ಪಿ ಮಿಶ್ರಾರವರೂ ತಮ್ಮ ಪದವಿಗೆ ರಾಜೀನಾಮೆ ಕೊಡಲು ನಿರ್ಧರಿಸಿರುವರೆಂದು ಹೇಳಲಾಗಿದೆ ಶ್ರೀ ಮಿಶ್ರಾರವರು ಶ್ರೀ ಟಂಡನ್‌ರವರ ಅನುಯಾಯಿಗಳು

ಆಂಧ್ರ ಪ್ರಾಂತ ರಚನೆಗಾಗಿ ಆಮರಣಾಂತ ಉಪವಾಸ

ಆಂಧ್ರ ಪ್ರಾಂತ್ಯದ ಕಾಂಗ್ರೆಸ್ ಮುಖಂಡರಾದ ಸ್ವಾಮಿ ಸೀತಾರಾಮರವರು ಸರ್ವೋದಯದ ವಿಷಯವಾಗಿ ತಿರುಪತಿಯಲ್ಲಿ ಉಪನ್ಯಾಸ ಮಾಡುತ್ತಾ ಸರ್ವೋದಯಕ್ಕೆ ಆಧಾರವಾದ ಪ್ರಾಂತ್ಯ ನಿರ್ಮಾಣವು ಅತ್ಯಗತ್ಯವೆಂದು ತಿಳಿಸಿ, ಈವೇಳೆ ಕೆಯು ಪ್ರತಿಯೊಬ್ಬ ಪ್ರಜೆಯ ಅಜನ್ಮಸಿದ್ಧ ಹಕ್ಕೆಂದು ಹೇಳಿದರು ಆಂಧ್ರ ಪ್ರಾಂತ್ಯ ರಚನೆಗಾಗಿ ಒತ್ತಾಯ ಪಡಿಸಿ ಅದಕ್ಕಾಗಿ ಅವರು ಆಜನ್ಮ ಪರ್ಯಂತ ಉಪವಾಸವನ್ನು ಆರಂಭಿಸಿದರು

ಸ್ವಾತಂತ್ರ್ಯೋತ್ಸವ

ರಾಜಧಾನಿಯ [illegible] ಕೆಲಸಗಾರರ [illegible] ದಿನಾಚರಣೆಯು [illegible] ಡಿ ಶ್, ಸಿ ವೀರಭದ್ರ [illegible] ಪ್ಪನವರು ಪಾತಕ [illegible] ತ್ವವನ್ನು ವಿವರಿಸಿ [illegible] ರಾಟದ ಮಹಾತ್ಮರಿಗೆ [illegible] ಕೋರಿದರು [illegible] ರ ಪ್ರಸಾದ ವಿನಿಯೋಗದೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು.

ಶ್ರೀ ಪಟ್ಟಪ್ಪನವರ [illegible] ಮಹದೇವಪ್ಪ [illegible] ಕೋಚರಿನ್ [illegible] ಕಾರ್ಯಕ್ರಮವು [illegible]

ರಾಜಧಾನಿಯ [illegible] ಪಂಚಲಾಯಿತು

ರಾಜಧಾನಿಯ [illegible] ನಡೆಯಿತು [illegible]

[illegible] ನಿರ್ಣಯವನ್ನು [illegible] ರಸ್ತೆಯಲ್ಲಿರುವ [illegible] ಸಮಾರಂಭದ [illegible] ಮತ್ತು [illegible] ಜಯಗಳ [illegible]

[illegible] ಹರಿಜನ [illegible]

ಸಿದ್ದ್ಯಾ ಮಂದಿರದಲ್ಲಿ

[illegible] ದಿನಾಚರಣೆಯನ್ನು [illegible]

ಪರ್ಷಿಯಾ-ಬ್ರಿಟಿಷ್ ಎಣ್ಣೆ ಸಂಧಾನದಲ್ಲಿ ತೊಡಕು ?

ಪರ್ಷಿಯದ ಎಣ್ಣೆ ಸಂಧಾನದ ಬಗ್ಗೆ ಮಾಡಿರುವ ಹೊಸ ಬ್ರಿಟಿಷ್ ಸಲಹೆಯನ್ನು ತಿರಸ್ಕರಿಸಿರುವುದಾಗಿ ಇರಾಣಿನ ಪ್ರಧಾನಿಯವರ ತಿಳಿಸಿರುತ್ತಾರೆ ಆದರೆ ಬ್ರಿಟಿಶ್ ಸಂಧಾನದ ನಾಯಕರಾದ ರಿಚರ್ಡ್ ಸ್ಟೋಕ್ಸ್‌ರವರು ಪರ್ಷಿಯನ್ನರು [illegible] ತಿರಸ್ಕರಿಸಿರುವರೆಂಬ [illegible] ವನ್ನು [illegible] ವೆಂದು ಹೇಳಲಾಗಿದೆ

ನಗರದ ಸ್ಕೌಟ್ ಕೌನ್ಸಿಲ್ ವಾರ್ಷಿಕ ಸಭೆ

ರಾಜಧಾನಿಯ ಸ್ಕೌಟ್ ಕೌನ್ಸಿಲ್ ಸಭೆಯ [illegible] ನೇ ವಾರ್ಷಿಕ ಅಧಿವೇಶನವು ಬರುವ [illegible] ನೇ ತಾ|| ಬುಧವಾರ ಸಂ. [illegible] ಗಂಟೆಗೆ ಪುರ ಸಭಾ ಭವನದಲ್ಲಿ ಸೇರುವುದು. ಚಮೂಗಳಿಗೆ ಮಹಾರಾಜಾ ಪ್ರಶಸ್ತಿ ಪತ್ರಗಳನ್ನು ಕೊಡುವುದು, ಅಧಿಕಾರ ವರ್ಗದ ಚುನಾವಣೆ, ವನ ಮಹೋತ್ಸವದ ಏರ್ಪಾಡು, ಶಿಬಿರಗಳನ್ನು ನಡೆಸುವುದು ಇವೇ ಮುಂತಾದ ವಿಷಯಗಳ ಪರಿಶೀಲನೆಯಾಗುವುದು

ಸುಪ್ರಭಾತ

ವಿದ್ಯಾರ್ಥಿಗಳ ಕೈಬರಹದ ಮಾಸಿಕ ಪತ್ರಿಕೆ ಆಗಸ್ಟ್ ಸಂಚಿಕೆಯು ತಿರು. ಶ್ರೀರಂಗರ ಸಂಪಾದಕತ್ವದಲ್ಲಿ ಸ ಪ್ರಸಿದ್ಧ ಸಾಹಿತಿ ಶ್ರೀ [illegible] ರವರ ಮುನ್ನುಡಿಯೊಡನೆ ಹೊರಬಿದ್ದಿದೆ ಶ್ರೀ ಡಿ ಸುಂದರ್‌ರವರ 'ದಾಂಪತ್ಯ ಜೀವನ' ಎಂಬ ಲೇಖನವೂ, ಎಲ್ಲದೆ ಇತರ ಅನೇಕ ಕಥೆ ಕವನಗಳೂ ಇವೆ ಸಂಚಿಕೆಯು ಶ್ರೀ ಅನಿಲಾ ಮತ್ತು ಪಿ [illegible] ಶಿಲ್ಪೇಸ್ವಾಮಿ. ಇವರ ಚಿತ್ರಗಳೊಂದಿಗೆ ಕೆಲವರ ಶುಭಸಂದೇಶಗಳಿಂ ವಲೂ ಕೂಡಿದೆ

ಗೌರೀಶಂಕರಕ್ಕೆ ಆನೇ ಯಾ[illegible]

ಪ್ರಪಂಚದ ಅತ್ಯಂತ ಎತ್ತರ ಶಿ[illegible]ವಾದ ಗೌರಿಶಂಕರವನ್ನು ಏರಲು [illegible] ಬ್ರಿಟಿಷ್ ಪ್ರಜೆಗಳು ಬರುವ [illegible] ಪ್ರಯತ್ನ ನಡುವರೆಂದು ಗೊತ್ತಾಗಿ[illegible] ಈ ರೀತಿ ಪ್ರಯತ್ನ ನಡುವ ಗುಂಪಿ[illegible]ರಲ್ಲಿ ಇವರು [illegible] ನೆಯವರು [illegible] ದಿಂದ ಈ ಶಿಖರಾರೋಹಣಕ್ಕೆ ಪ್ರ[illegible]ತ್ನಗಳು ನಡೆದಿವೆ

ಕಿಸಾನ್ ಮಜದೂರ್ ಪ್ರಜಾ ಪಕ್ಷ ಸ್ಥಾಪನೆ

ಕಳೆದ [illegible] ನೇ ತಾ|| ಶ್ರೀ [illegible] ಪನ್ನಾ ತಸ್ತೂರ್‌ರವರ ಗೃಹದಲ್ಲಿ ಗಣ್ಯ ವ್ಯಕ್ತಿಗಳು ಸಭೆ ಸೇರಿ ಆಚಾ[illegible]ರ್ಯ ಕೃಪಲಾನಿಯವರು ಸ್ಥಾಪಿಸಿರ[illegible] ಕಿಸಾನ್ ಮಜದೂರ್ ಪ್ರಜಾಪಕ್ಷದ [illegible]ಯನ್ನು ನಗರದಲ್ಲಿ ಸ್ಥಾಪಿಸಲು ನಿಶ್[illegible]ಸಿದರು ರಾಜಧಾನಿಯ ವಕೀಲರ[illegible] ಶ್ರೀ ಎಸ್ ಕೆ ಅನಂತಶೆಟ್ಟರು [illegible]ಯ ತಾತ್ಕಾಲಿಕ ಅಧ್ಯಕ್ಷರೂ, ಶ್ರೀಗಿ[illegible] ಪನ್ನಾತಪೂರ್ ಮತ್ತು ಎಸ್ ಎ[illegible] ನಾರಾಯಣಸ್ವಾಮಿಯವರು ಸಂಚಾ[illegible]ಕರೂ ಆಗಿ ಆರಿಸಲ್ಪಟ್ಟರು ಅವರುಗ[illegible] ಪಕ್ಷದ ವ್ಯವಸ್ಥಾಪನೆಯನ್ನು ನೋ[illegible]ಕೊಳ್ಳಲು ತೀರ್ಮಾನವಾಯಿತು [illegible]ಲ ಭಾರತ ಮುಖಂಡರು ಮತ್ತು [illegible] ತರರೊಡನೆ ಸಂಪರ್ಕವನ್ನಿಟ್ಟುಕೊಳ್ಳಲು ತೀರ್ಮಾನವಾಗಿರುವುದ, ಪಕ್ಷದ ಸದಸ್ಯರನ್ನು ಕೂಡಿಸಲು [illegible]ರಂಗ ಸಭೆಯನ್ನು ಕರೆಯಲಾಗುವು[illegible] ಈ ಸಂಸ್ಥೆಯ ಕಛೇರಿಯನ್ನು ತಾ[illegible]ಲಿಕವಾಗಿ ಸಂತೇಪೇಟೆಯಲ್ಲಿರುವ ಚನ್ನಪ್ಪನವರ ಭವನದ ಮಹಡಿ[illegible] ಸ್ಥಾಪಿಸಲಾಗಿದೆ

ಗೌರಿ ಹಬ್ಬಕ್ಕಾಗಿ

[illegible]

D. L. ನರಸಿಂಹಯ್ಯ & ಬ್ರದರ್ಸ್,

[illegible] ಮೈಸೂರು.

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ - ತೀರ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ

ಕಡೆವಿಲ್ಲದ ವಿಮಾ ಮೊಬಲಗಿನ ಖಾವತಿ

ಸುಲಭವಾದ ಸಾಲದ ಸೌಕರ್ಯ

ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚಲಾಗುವುದು

ಇವೆಲ್ಲಾ ಬೇಕಾದರೆ

ಮೈಸೂರು ಸರ್ಕಾರದ

ವಿಮಾ ಇಲಾಖೆ

ಪ್ರಜೆಗಳ ಶಾಖೆಯಲ್ಲಿ

ವಿಮೆ ಮಾಡಲು ಇಂದೇ ನಿರ್ಧರಿಸಿ

ಡೈರೆಕ್ಟರ್

ಚಾಮುಂಡೇಶ್ವರಿ

ದೇವಕಿ (ತಮಿಳು)

4 ನೇ ವಾರ

|| ಶ್ರೀ ||

ಗಣೇಶಾ ಟಾಕೀಸ್

ಬಾಲನಾಗಮ್ಮ

2 ನೇ ವಾರ

ಆದರ್ಶ ಕನ್ನಡ

ನಾಟಕ ಸಂಘ, ಮೈಸೂರು

ಬುಧವಾರ ಮತ್ತು ಶನಿವಾರಗ[illegible]

ರಾತ್ರಿ 9-45ಕ್ಕೆ

ಉಳಿದ ದಿನಗಳಲ್ಲಿ ಸಂಜೆ 6-4[illegible]

ಟೌನ್ ಹಾಲಿನಲ್ಲಿ

* ಚಂಚಲೆ

[illegible]

ABIDS

OUTRIGHT AUCTION SALE

To-morrow : 19-8-51 : At 10 A. M

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಬಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಅನೋಘವಾದ 3 ನೇ ವಾರ

ರಾಜಾ ಗೋಪಿಚಂದ

ಪ್ರತಿ ಸೋಮವಾರ ಬುಧವಾರ ಮತ್ತು ಶನಿವಾರಗಳಲ್ಲಿ

ರಾತ್ರಿ 9 [illegible] ಗಂಟೆಗೆ ಉಳಿದ ದಿನಗಳಲ್ಲಿ ಸಾಯಂಕಾಲ 6 [illegible]

Edited, printed [illegible] published by A R Na[illegible]rajan, at Sadhvi Press Subbiah Road, Mysore

ಲೋಕ ನಂ 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೧೯-೮-೫೦ [ಸಂಚಿಕೆ ೪

ವಿಶ್ವ ಸಂಸ್ಥೆ-ಕೊರಿಯಾ ಸೈನ್ಯಗಳಿಗೆ ಪುನಃ ಘರ್ಷಣೆ

ರಾಜಧಾನಿಯಲ್ಲಿ ಶಾಸನ ಸಭೆಯ ಅಧಿವೇಶನ

ಬೆಂಗಳೂರು ೧೯

ಸಂಸ್ಥಾನದ ಶಾಸನ ಸಭೆಯ ಅಧಿವೇಶನವು ಬರುವ ಅಕ್ಟೋಬರ್ ಪ್ರಥಮ ವಾರದಲ್ಲಿ ರಾಜಧಾನಿಯಲ್ಲಿ ಸೇರುವುದೆಂದು ಗೊತ್ತಾಗಿದೆ. ವಿಶ್ವ ವಿದ್ಯಾಲಯದ ತಿದ್ದು ಪಡಿ ಮಸೂದೆ, ಗುತ್ತಿಗೆದಾರರ ಮಸೂದೆ, ಇನಾಂ ಮತ್ತು ಜೋಡಿಗಳ ರದ್ದಿನ ಮಸೂದೆ ಇವುಗಳ ಬಗ್ಗೆ ಜಂಟಿ ಸಮಿತಿಗಳ ವರದಿಗಳನ್ನು ಸಭೆಯು ಪರಿಶೀಲಿಸುವುದು.

ರಾಜಕೀಯ ಪಕ್ಷಗಳಿಗೆ ಚುನಾವಣಾ ಚಿಹ್ನೆ

ಸಂಸ್ಥಾನದ ನ್ಯಾಯಾಂಗ ಮಂತ್ರಿಗಳ ಕಛೇರಿಯಲ್ಲಿ ನೆನ್ನೆ ಐದು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆ ಸೇರಿ ವಿವಿಧ ಪಕ್ಷಗಳಿಗೆ ಕೊಡಬಹುದಾದ ಚುನಾವಣಾ ಚಿಹ್ನೆಗಳ ಬಗ್ಗೆ ಪರಿಶೀಲನೆಯನ್ನು ನಡೆಸಲಾಯಿತು. ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳಿಗೆ ಕ್ರಮವಾಗಿ ನೊಗವುಳ್ಳ ಜೋಡಿ ಎತ್ತು ಮತ್ತು ಮರಗಳ ಚಿಹ್ನೆಗಳನ್ನು ಕೊಟ್ಟಿರುವುದರಿಂದ ಅವುಗಳ ಬಗ್ಗೆ ಹೆಚ್ಚು ಪ್ರಸ್ತಾಪವಾಗಲಿಲ್ಲ. ಸಂಸ್ಥಾನದ ಜನತಾ ಪಕ್ಷದ ಗುರುತಿನ ಬಗ್ಗೆ ಕೊಂಚ ತೊಡಕಾಗಿ ಈ ವಾರದೊಳಗೆ ಅದರ ನಿರ್ಧಾರವಾಗುವುದು. ಕಮ್ಯೂನಿಸ್ಟ್ ಮತ್ತು ಕಿಸಾನ್ ಮಜದೂರ್ ಪ್ರಜಾ ಪಕ್ಷಗಳಿಗೆ ಕುಡುಗೋಲು ಸಮೇತದ ಧಾನ್ಯದ ತೆನೆ ಮತ್ತು ಗುಡಿಸಿಲು ಚಿಹ್ನೆಗಳು ಕೊಡಲ್ಪಟ್ಟಿವೆ.

ಹಿಂದೂಸ್ತಾನ್ ಕಾರ್ಖಾನೆಯಲ್ಲಿ ಮಿಲಿಟರಿ ವಿಮಾನಗಳ ತಯಾರಿಕೆ

ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಮಿಲಿಟರಿ ಶಿಕ್ಷಣ ವಿಮಾನಗಳನ್ನು ತಯಾರಿಸುವ ಏರ್ಪಾಡು ನಡೆಯುತ್ತಿರುವುದಾಗಿಯೂ, ಒಂದೊಂದು ವಿಮಾನಕ್ಕೂ ೧೯ ಲಕ್ಷ ರೂ. ವೆಚ್ಚವಾಗುವುದೆಂದೂ ಗೊತ್ತಾಗಿದೆ. ೩೦೦ ವಿಮಾನಗಳನ್ನು ಅಲ್ಲಿ ತಯಾರಿಸಲಾಗುವುದು. ವಿದೇಶಗಳಿಗೂ ಈ ವಿಮಾನಗಳನ್ನು ಮಾರಲು ಅವಕಾಶವುಂಟಾದರೆ ಇನ್ನೂ ಹೆಚ್ಚಿನ ಸಂಖ್ಯೆ ವಿಮಾನಗಳನ್ನು ತಯಾರಿಸಲಾಗುವುದೆಂದು ಹೇಳಲಾಗಿದೆ.

ಹೋಟೇಲು ಮಾಲೀಕರು ಕತ್ತು ಕುಯ್ದುಕೊಂಡರು

ಭದ್ರಾವತಿಯ ತಂಜಾವೂರು ಹೋಟೇಲು ಮಾಲೀಕರಾದ ಶ್ರೀ ರಾಘವೇಂದ್ರರಾಯರು ನೆನ್ನೆ ಬೆಳಗ್ಗೆ ತಮ್ಮ ಹೋಟೆಲಿನ ಕಕ್ಕಸಿಗೆ ಹೋಗಿ ಅಲ್ಲಿ ಕತ್ತು ಕೊಯ್ದುಕೊಂಡ ಪ್ರಸಂಗವು ನಡೆಯಿತೆಂದು ವರದಿಯಾಗಿದೆ. ಹೋಟೇಲಿನಲ್ಲಿ ಆಸ್ತಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿರುವರೆಂಬುದನ್ನು ಶೋಧಿಸುವ ಸಲುವಾಗಿ ಪೋಲೀಸರು ಅಲ್ಲಿಗೆ ಹೋದಾಗ ಶ್ರೀಯುತರು ಅವರಿಗೆ ಅವಕಾಶ ಕೊಟ್ಟು ಕಕ್ಕಸ್ಸಿಗೆ ಹೋಗುವುದಾಗಿ ಹೇಳಿ ಅಲ್ಲಿ ಚಾಕುವಿನಿಂದ ಕತ್ತನ್ನು ಕೊಯ್ದುಕೊಂಡರೆಂದು ಹೇಳಲಾಗಿದೆ. ಅವರನ್ನು ಶಿವಮೊಗ್ಗಾ ಆಸ್ಪತ್ರೆಗೆ ಸಾಗಿಸಲಾಗಿದೆ. ಇವರು ಅಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿರುವರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಜೈಲಿಗೆ ಹೋಗಿದ್ದರು.

ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣೋತ್ಸವ

ಶ್ರೀಮನ್ಮಹಾರಾಜರವರ ಭಾಷಣ

ಸ್ವಂ ಸು ಪ್ರೋ] ಬೆಂಗಳೂರು ೧೯

ಈ ದಿನ ಬೆಳಗ್ಗೆ ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣೋತ್ಸವವು ವೈಭವದಿಂದ ಆಚರಿಸಲ್ಪಟ್ಟಿತು. ಸ್ವಾಗತ ಸಮಿತಿ ಅಧ್ಯಕ್ಷರಾದ ಡಾ|| ಸುಬ್ಬರಾಯರು, ಪಡಿತರದಂತದ ಬೆಳ್ಳಿಬಿನ್ನವತ್ತಳೆಯನ್ನು ಶ್ರೀಮನ್ಮಹಾರಾಜರಿಗೆ ಒಪ್ಪಿಸಿದರು.

ಸೀನಿಯರ್ ಸರ್ಜನರಾದ ಡಾ. ಲಕ್ಷ್ಮಣ್ ರಾವ್ ಪಡಕಿಯವರು ವರದಿ ಓದಿ ೫೦ ವರ್ಷಗಳಿಂದ ಆಸ್ಪತ್ರೆಯು ಸಲ್ಲಿಸಿರುವ ಸೇವೆಯನ್ನು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಭುಗಳವರು ಆಸ್ಪತ್ರೆಯ ಪ್ರಗತಿಗಾಗಿ ಸಂತೋಷವನ್ನು ವ್ಯಕ್ತಪಡಿಸಿ ನಿಷ್ಕಾಮದಾಸ ವೈದ್ಯರುಗಳ ಸೇವೆಯಿಂದ ಆಸ್ಪತ್ರೆ ದೊರೆತಿರುವ ಪ್ರಖ್ಯಾತಿಗಾಗಿ ಮೆಚ್ಚುಗೆಯನ್ನು ಸೂಚಿಸಿದರು. ಸರ್ಕಾರದವರೂ ಸಹ ಆಸ್ಪತ್ರೆಯ ಪ್ರಗತಿಯಲ್ಲಿ ಹೊಂದಿರುವ ಆಸಕ್ತಿಗಾಗಿ ಸಂತೋಷವನ್ನು ಸೂಚಿಸಿದರು. ಪ್ರತಿ ವರ್ಷವೂ ೧೫ ಸಾವಿರಕ್ಕಿಂತ ಹೆಚ್ಚು ಮಂದಿ ಆಸ್ಪತ್ರೆಯಲ್ಲಿಯೇ ಇದ್ದು ಸುಮಾರು ೬ ಲಕ್ಷಕ್ಕೂ ಮೀರಿ ಹೊರಗಿನಿಂದ ಬಂದು ಚಿಕಿತ್ಸೆ ಪಡೆಯುತ್ತಿರುವುದೇ ಈ ಸಂಸ್ಥೆಯ ಘನತೆಗೆ ಕಾರಣವಾಗಿದೆಯೆಂದು ಅಭಿಪ್ರಾಯಪಟ್ಟರು.

ತಿರುಪತಿ ಮತ್ತು ಕಂಚಿಗೆ ಪ್ರಭುಗಳ ಭೇಟಿ

ಶ್ರೀಮನ್ಮಹಾರಾಜರು ... ಸೇತ್ತು ತಿರುಪತಿಯನ್ನು ತಲುಪಿ, ಅಲ್ಲಿ ಉಪಾಕರ್ಮವನ್ನು ನೆರವೇರಿಸಿದರು. ಶ್ರೀನಿವಾಸ ದೇವರ ದರ್ಶನವನ್ನು ಪಡೆದರು. ಶ್ರೀಮನ್ಮಹಾರಾಜರಿಗೆ ದೇವರ ಆಭರಣಗಳನ್ನು ತೋರಿಸಲಾಯಿತು. ಅಲ್ಲದೇ ದೇವರ ಶೇಷವಸ್ತ್ರವನ್ನು ಕೊಡಲಾಯಿತು. ತಿರುಪತಿಯಿಂದ ಕಂಚಿಗೆ ತೆರಳಿ ಕಾಮಾಕ್ಷಿ, ಏಕಾಂಬರೇಶ್ವರರು ಮತ್ತು ವರದರಾಜರ ದರ್ಶನವನ್ನು ಪಡೆದರು. ನಂತರ ಮದ್ರಾಸಿಗೆ ಆಗಮಿಸಿ ಅಲ್ಲಿನ ಗವರ್ನರರ ಅತಿಥಿಗಳಾಗಿ ಬಿಡಾರ ಮಾಡಿರುತ್ತಾರೆ.

ಕುಸ್ತಿ ಪಂದ್ಯಗಳ ಮೇಲೆ ಮನೋರಂಜನೆ ತೆರಿಗೆ ಇಲ್ಲ

ಬೆಂಗಳೂರು ೧೯

ಕುಸ್ತಿ ಪಂದ್ಯಗಳ ಟಿಕೆಟ್ಟುಗಳ ಮೇಲೆ ಮನೋರಂಜನೆ ತೆರಿಗೆಯನ್ನು ವಿಧಿಸಕೂಡದೆಂದು ಮೈಸೂರಿನ ರಾಜಪ್ರಮುಖರು ಆಜ್ಞೆ ಮಾಡಿರುತ್ತಾರೆ.

ಕಾಂಗ್ರೆಸ್ ಚುನಾವಣಾ ನಿಧಿಗೆ ೨ ಲಕ್ಷ ರೂ.

ಬೆಂಗಳೂರು ೧೯

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಲಿಯು ಈ ದಿನ ಸಭೆ ಸೇರಿ ಬರುವ ಸಾರ್ವತ್ರಿಕ ಚುನಾವಣೆಗಳ ಸಂಬಂಧವಾಗಿ ಪ್ರತ್ಯೇಕವಾದ ಘೋಷಣೆ ಹೊರಡಿಸಬೇಕೆಂಬ ಹಲವು ಸದಸ್ಯರ ಸೂಚನೆಯನ್ನು ಪರಿಶೀಲಿಸಿ ಮೈಸೂರಿನ ವಿಶೇಷ ಸಮಸ್ಯೆಗಳ ಬಗ್ಗೆ ಕಾಂಗ್ರೆಸ್ಸಿನ ನೀತಿಯನ್ನು ಘೋಷಣಾ ರೂಪದಲ್ಲಲ್ಲದೆ ಬೇರೆ ವಿಧಾನಗಳಿಂದ ತಿಳಿಸಬಹುದೆಂದು ಅಭಿಪ್ರಾಯಪಡಲಾಯಿತು. ಚುನಾವಣೆಗಳಿಗಾಗಿ ಕನಿಷ್ಠವಾಗಿ ೨ ಲಕ್ಷ ರೂ. ಗಳನ್ನು ಸೇರಿಸಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿತು. ಕಾಂಗ್ರೆಸ್ಸಿನ ವ್ಯವಸ್ಥಾತ್ಮಕ ಕಾರ್ಯಗಳಿಗಾಗಿ ಜಿಲ್ಲಾ ಸಮಿತಿಗಳಿಗೆ ತಲಾ ೧ ಸಾವಿರ ರೂ. ಗಳನ್ನು ಕೊಡಬೇಕೆಂದು ನಿರ್ಧರಿಸಲಾಯಿತು.

ಕಾಂಗ್ರೆಸ್ಸಿನ ಚುನಾವಣಾ ಸಮಿತಿಯು ನೆನ್ನೆ ಸಭೆ ನಡೆಸಿ, ಇಲ್ಲಿನ ಶಾಸನ ಸಭೆ ಮತ್ತು ಕೇಂದ್ರದ ಪಾರ್ಲಿಮೆಂಟ್ ಸಭೆಗಳಿಗೆ ಇರುವ ಎಲ್ಲ ಸ್ಥಾನಗಳಿಗೂ ಸ್ಪರ್ಧಿಸಬೇಕೆಂದು ಗೊತ್ತುಮಾಡಲಾಯಿತು.

ಚೀಣಾ ಅಧ್ಯಕ್ಷರ ಕೊಲೆ ಪ್ರಯತ್ನಕ್ಕಾಗಿ ಗಲ್ಲು

ಕೆಂಪು ಚೀಣದ ಅಧ್ಯಕ್ಷರಾದ ಮಾವೋತ್ಸೆ ಟುಂಗ್‌ರವರನ್ನು ಕೊಲೆ ಮಾಡಲು ಕಳೆದ ಅಕ್ಟೋಬರ್‌ನಲ್ಲಿ ನಡೆಸಿದ ಪಿತೂರಿಯ ಸಂಬಂಧವಾಗಿ ಆಂಟೋನಿಯೋ ರೀವಾ ಎಂಬ ಇಟಲಿಯವನನ್ನೂ ಮತ್ತು ರಿಚಿ ಯಾಮಾ ಗುಚಿ ಎಂಬ ಜಪಾನಿನವನನ್ನೂ ನೆನ್ನೆ ಚೀಣದಲ್ಲಿ ಗಲ್ಲಿಗೇರಿಸಲಾಯಿತು. ಈ ಕೃತ್ಯವು ಪಾರ್ಶ್ವವಾದದಲ್ಲಿರುವ ಅಮೆರಿಕಾ ರಾಯಭಾರಿಯ ಕೈ ಕೆಳಗಿನ ಮಿಲಿಟರಿ ಅಧಿಕಾರಿ ಕರ್ನಲ್ ಡೇವಿಡ್ ಬ್ಯಾರೆಟ್‌ರವರ ಪ್ರೇರಣೆ ಪ್ರಕಾರ ನಡೆಯಲೇರ್ಪಾಟಾಗಿತ್ತೆಂದು ಹೇಳಲಾಗಿದೆ. ಇವರಲ್ಲದೆ ಇಟಲಿಯವರಿಬ್ಬರು ಫ್ರೆಂಚ್, ಜರ್ಮನ್ ಮತ್ತು ಚೀಣದ ಒಬ್ಬೊಬ್ಬರಿಗೂ ವಿವಿಧ ಶಿಕ್ಷೆಗಳನ್ನು ಕೊಡಲಾಗಿದೆ.

ಉತ್ತಮ ನೀತಿಯು ಆದರ್ಶವೇ ನ್ಯಾಯ ನಿರ್ವಹಣೆಯ ತಳಹದಿ

ವಕೀಲರ ಸಂಘದ ಸಮಾರಂಭದಲ್ಲಿ ಪ್ರಭುಗಳ ಭಾಷಣ

ಸ್ವಂ ಸು ಪ್ರೋ] ಬೆಂಗಳೂರು ೧೯

ಇಲ್ಲಿನ ವಕೀಲರ ಸಂಘದ ಸುವರ್ಣ ಮಹೋತ್ಸವವನ್ನು ಈ ದಿನ ಶ್ರೀಮನ್ಮಹಾರಾಜರು ಆರಂಭಗೊಳಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಪಿ. ಸೋಮಶೇಖರರಾಯರು ಗಂಧದ ಪೆಟ್ಟಿಗೆಯಲ್ಲಿ ಬಿನ್ನವತ್ತಳೆಯನ್ನು ಶ್ರೀಮನ್ಮಹಾರಾಜರಿಗೆ ಅರ್ಪಿಸಿದರು. ಎಲ್ಲಾ ಕೋರ್ಟುಗಳೂ ಒಂದೇ ಆವರಣದಲ್ಲಿರುವಂತೆ ಮಾಡಬೇಕೆಂದೂ ನ್ಯಾಯಾಂಗವನ್ನು ಆಡಳಿತಾಂಗದಿಂದ ಬೇರ್ಪಡಿಸಬೇಕೆಂದೂ ಅವರು ಬಿನ್ನವತ್ತಳೆಯಲ್ಲಿ ಅರಿಕೆ ಮಾಡಿದರು.

ಶ್ರೀಮನ್ಮಹಾರಾಜರವರು ಸಮಾರಂಭವನ್ನು ಆರಂಭಗೊಳಿಸಿ ಸಂಘದ ಅಭಿವೃದ್ಧಿಗಾಗಿ ಅಭಿನಂದನೆಯನ್ನು ಸಲ್ಲಿಸಿದರು. ನ್ಯಾಯ ದೇವತೆಯ ಭವ್ಯ ಭವನವನ್ನು ನಿರ್ಮಿಸಲು ವಕೀಲರುಗಳೂ, ನ್ಯಾಯಾಧೀಶರುಗಳೂ ಸಹಕರಿಸಿ ಪ್ರಯತ್ನ ಮಾಡಬೇಕೆಂದು ಸೂಚಿಸಿದರು. ಇತ್ತೀಚೆಗೆ ದೇಶದಲ್ಲಿ ಉಂಟಾಗಿರುವ ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳಿಂದ ಹೆಚ್ಚಿನ ಜವಾಬ್ದಾರಿಯೂ ಮತ್ತು ಬಿಕ್ಕಟ್ಟಿನ ಸಮಸ್ಯೆಗಳೂ ಉಂಟಾಗಿರುವುದಾಗಿ ಅವರು ಹೇಳಿ, ಎಲ್ಲಾ ನ್ಯಾಯ ನಿರ್ವಹಣೆಯ ಕಾರ್ಯಗಳಿಗೂ ನೀತಿಯ ಮಟ್ಟವೇ ಮುಖ್ಯವಾದ ತಳಹದಿಯೆಂದು ತಿಳಿಸಿದರು. ರಾಷ್ಟ್ರದ ಭದ್ರತೆಯನ್ನೇ ವ್ಯಕ್ತಿಯ ಸ್ವಾತಂತ್ರ್ಯವು ಅವಲಂಬಿಸಿರಬೇಕೆಂದು ಅಭಿಪ್ರಾಯಪಟ್ಟರು.

ಬಾರ್ ಕೌನ್ಸಿಲ್ ಶಾಸನವಿರುವುದರಿಂದ ವಕೀಲರ ಸಂಘಗಳು ಹೆಚ್ಚು ಯಶಸ್ವಿಯಾಗಿ ಸೇವೆ ಸಲ್ಲಿಸಲು ಅವಕಾಶವಾಗಿರುವುದು. ಆಡಳಿತಾಂಗದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸುವ ಕಾರ್ಯವು ಶೀಘ್ರದಲ್ಲಿಯೇ ಪೂರೈಸುವುದೆಂದು ಹಾರೈಸುತ್ತೇನೆ. ಅಲ್ಲದೆ ಪ್ರಮುಖ ಕೋರ್ಟುಗಳೆಲ್ಲವೂ ಒಂದೇ ಕಡೆ ಇರುವಂತೆಯೂ ಸಹ ಏರ್ಪಾಟಾಗುವುದೆಂದೂ ನಂಬುತ್ತೇನೆ. ಮುಂದಿನ ನ್ಯಾಯ ವಿಮರ್ಶಾ ಕಾರ್ಯಗಳಲ್ಲಿ ತರುಣ ವಕೀಲರುಗಳು ಹೊಸ ಸಂಶೋಧನೆಗಳನ್ನು ಮತ್ತು ಆದರ್ಶಗಳನ್ನು ಸಾಧಿಸಲು ಹೇರಳವಾಗಿ ಅವಕಾಶವು ದೊರೆಯುತ್ತದೆ—ಎಂದು ಪ್ರಭುಗಳು ಅಪ್ಪಣೆ ಕೊಟ್ಟರು.

ಬೊಂಬಾಯಿನ ಸುಪ್ರಸಿದ್ಧ ವಕೀಲರಾದ ಡಾ|| ಎಂ. ಆರ್. ಜಯಕರ್‌ರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಕೇಸಾಂಗ್ ಬಳಿ ಪುನಃ ಹೋರಾಟ

ಕೊರಿಯಾ ನೀಸ್ ಪ್ರತಿ ಸೂಚಕ ವ ನಡೆಯುತ್ತಿರುವ ಕೇಸಾಂಗ್ ನಗರಕ್ಕೆ ೬೦ ಮೈಲಿ ದೂರದಲ್ಲಿ ಕಮ್ಯೂನಿಸ್ಟರಿಗೂ ವಿಶ್ವ ಸಂಸ್ಥೆ ಸೈನಿಕರಿಗೂ ಪುನಃ ಹೋರಾಟವು ಪ್ರಾರಂಭವಾಗಿರುತ್ತದೆ. ೧೯ ವಿಶ್ವ ಸಂಸ್ಥೆ ವಿಮಾನಗಳಿಗೂ, ೩೦ ಕಮ್ಯೂನಿಸ್ಟರ ವಿಮಾನಗಳಿಗೂ ನೆನ್ನೆ ಘರ್ಷಣೆ ನಡೆಯಿತೆಂದು ಗೊತ್ತಾಗಿದೆ.

ಸ್ವಾತಂತ್ರ್ಯೋತ್ಸವ

ಮೈಸೂರು

ರಾಜಧಾನಿಯ ಎಲ್ಲಾ ... ಯಗಳ ಕೆಲಸಗಾರರ ಸಂಘದ ... ಕಳೆದ ... ಪ್ಪನವರ ಅಧ್ಯಕ್ಷತೆಯ ... ದಿನಾಚರಣೆಯು ... ಆಚರಿಸಲ್ಪಟ್ಟಿತು. ... ಶ್ರೀ ಟಿ. ಎಸ್. ... ಶಿವ್, ಸಿ. ... ಪ್ಪನವರು ಮಾತನಾಡಿ ... ತ್ಸವನ್ನು ... ಹೋರಾಟದ ಹುತಾತ್ಮರಿಗೆ ... ಶ್ರೀಯವರು ... ರ ಪ್ರಸಾದ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು.

ಶ್ರೀ ಜಟ್ಟಪ್ಪನವರ ... ಸಮಾರಂಭ ... ಕಾಲೇಜಿನ ... ಎಯರ್, ಶ್ರೀ ... ಮಹದೇವಪ್ಪ, ಶ್ರೀ ಎಲ್. ... ಕೋ ... ಮಾಡಿದರು ... ಗ್ರಂಥ ಕಾಲೇಜಿನ ... ವೆಂಕಟರಾಮ ... ಮಾಡಿದ ನಂತರ ... ಸಮಾರಂಭವು ಮುಕ್ತಾಯವಾಯಿತು.

ರಾಜಧಾನಿಯ ... ಹಂಚಲಾಯಿತು.

ರಾಜಧಾನಿಯ ... ದರ ಸಂಘದಲ್ಲಿ ಸ್ವಾತಂತ್ರ್ಯ ... ಗೆಯು ಪೌರ ಸಭಾ ... ಪುಟ್ಟಸ್ವಾಮಿಯವರ ... ನಡೆಯಿತು. ... ಕರಿಸುವ ... ಸ್ವಾಮಿನಾಯಕರಿಗೆ ... ರವನ್ನು ... ನಿರ್ಣಯವನ್ನು ... ಕೈಗೊಳ್ಳಲಾಯಿತು.

... ರವರ ... ಸಮಾರಂಭದ ... ಸಂಸ್ಥೆಗಳಲ್ಲಿ ... ಮತ್ತು ... ಜಯಗಳ ... ಹುತಾತ್ಮರಗಳನ್ನು ...

... ಹರಿಜನ ... ಹರಿಜನ ... ಸರಸ್ವತಿ ... ಹಂಚಲಾಯಿತು.

ಸಿದ್ಧ್ಯ ಮಂದಿರದಲ್ಲಿ

... ಮಂಗಳಾರತಿ ... ಬಾಲಕರಿಗೆ ... ಹಂಚಲಾಯಿತು.

ಪರ್ಷಿಯಾ-ಬ್ರಿಟಿಷ್ ಎಣ್ಣೆ ಸಂಧಾನದಲ್ಲಿ ತೊಡಕು ?

ಪರ್ಷಿಯಾದ ಎಣ್ಣೆ ಸಂಧಾನದ ಬಗ್ಗೆ ಮಾಡಿರುವ ಹೊಸ ಬ್ರಿಟಿಷ್ ಸಲಹೆಯನ್ನು ತಿರಸ್ಕರಿಸಿರುವುದಾಗಿ ಇರಾನಿನ ಪ್ರಧಾನಿಯವರು ತಿಳಿಸಿರುತ್ತಾರೆ. ಆದರೆ ಬ್ರಿಟಿಷ್ ಸಂಧಾನದ ನಾಯಕರಾದ ರಿಚರ್ಡ್ ಸ್ಟೋಕ್ಸ್‌ರವರು ಪರ್ಷಿಯಾವು ಆ ರೀತಿ ನಿರಾಕರಿಸಿರುವರೆಂಬ ಅಂಶವನ್ನು ಒಪ್ಪಿಲ್ಲವೆಂದು ಹೇಳಲಾಗಿದೆ.

ನಗರದ ಪ್ರೈವೇಟ್ ಕೌನ್ಸಿಲ್ ವಾರ್ಷಿಕ ಸಭೆ

ರಾಜಧಾನಿಯ ಪ್ರೈವೇಟ್ ಕೌನ್ಸಿಲ್ ಸಭೆಯ ...ನೇ ವಾರ್ಷಿಕ ಅಧಿವೇಶನವು ಬರುವ ...ನೇ ತಾ|| ಬುಧವಾರ ಸಂಜೆ ...|| ಗಂಟೆಗೆ ಪೌರ ಸಭಾ ಭವನದಲ್ಲಿ ಸೇರುವುದು. ಜಮೂಗಳಿಗೆ ಮಹಾರಾಜಾ ಪ್ರಶಸ್ತಿ ಪತ್ರಗಳನ್ನು ಕೊಡುವುದು ಅಧಿಕಾರ ವರ್ಗದ ಚುನಾವಣೆ, ವನಮಹೋತ್ಸವದ ಏರ್ಪಾಡು, ಶಿಬಿರಗಳನ್ನು ನಡೆಸುವುದು-ಇವೇ ಮುಂತಾದ ವಿಷಯಗಳ ಪರಿಶೀಲನೆಯಾಗುವುದು.

ಸುಪ್ರಭಾತ

ಸಿದ್ಧ್ಯಾರ್ಥಿಗಳ ಕೈಬರಹದ ಮೇಲ್ಮಟ್ಟದ ಮಾಸಪತ್ರಿಕೆ ಆಗಸ್ಟ್ ಸಂಚಿಕೆಯು ಶ್ರೀರಂಗರ ಸಂಪಾದಕತ್ವದಲ್ಲಿ ಸುಪ್ರಸಿದ್ಧ ... ಶ್ರೀ ... ರವರ ಮುನ್ನುಡಿಯೊಡನೆ ಹೊರಬಿದ್ದಿದೆ. ಶ್ರೀ ಡಿ. ಸುಂದರ್‌ರವರ 'ಪ್ರಾಂತ ಜೀವನ' ಎಂಬ ನೀಳ್ಗತೆಯೂ, ಇತರ ಅನೇಕ ಕಥೆ ಕವನಗಳೂ ಇವೆ. ಸಂಚಿಕೆಯು ಶ್ರೀ ಶಿಲ್ಪಿ ವಾಸ್ತು ... ಶಿಲ್ಪ ಸ್ವಾಮಿ ಇವರ ಚಿತ್ರಗಳೊಂದಿಗೆ ಕೆಲವರ ಶುಭಸಂದೇಶಗಳಿಂದಲೂ ಕೂಡಿದೆ.

ಗೌರೀಶಂಕರಕ್ಕೆ ಏನೇ ಯಾ...

ಪ್ರಪಂಚದ ಅತ್ಯಂತ ಎತ್ತರ ... ವಾದ ಗೌರೀಶಂಕರವನ್ನು ಏರಲು ಬ್ರಿಟಿಷ್ ಪ್ರಜೆಗಳು ಬರುವ ... ಪ್ರಯತ್ನ ಪಡುವರೆಂದು ಗೊತ್ತಾ... ಈ ರೀತಿ ಪ್ರಯತ್ನ ಪಡುವ ಗುಂ... ದಲ್ಲಿ ... ನೆಯವರು ... ರಿಂದ ಈ ಶಿಖರಾರೋಹಣಕ್ಕೆ ... ತ್ನಗಳು ನಡೆದಿವೆ.

ಕಸ್ತೂರ್ಬಾ ಮಜುಮೂರ್ ಪ್ರಜಾ ... ಸ್ಥಾಪನೆ

ಕಳೆದ ...ನೇ ತಾ|| ಶ್ರೀ ... ಸನ್ನಾತಪ್ಪೂರ್‌ರವರ ಗೃಹದಲ್ಲಿ ಗಣ್ಯ ವ್ಯಕ್ತಿಗಳು ಸಭೆ ಸೇರಿ ... ಶ್ರೀ ... ಯವರು ... ಕಸ್ತೂರ್ಬಾ ಮಜುಮೂರ್ ಪ್ರಜಾಪಕ್ಷ... ಯನ್ನು ನಗರದಲ್ಲಿ ಸ್ಥಾಪಿಸಲು ... ಸಿದರು. ರಾಜಧಾನಿಯ ವಕೀ... ಶ್ರೀ ಎಸ್. ಕೆ. ಅನಂತಶೆಟ್ಟರು ... ಯ ತಾತ್ಕಾಲಿಕ ಅಧ್ಯಕ್ಷರೂ, ಶ್ರೀ ... ಸನ್ನಾತಪ್ಪೂರ್ ಮತ್ತು ಎಲ್. ... ನಾರಾಯಣಸ್ವಾಮಿಯವರು ... ಕರೂ ಆಗಿ ಆರಿಸಲ್ಪಟ್ಟು ... ಪಕ್ಷದ ವ್ಯವಸ್ಥಾಪನೆಯನ್ನು ಕೊಳ್ಳಲು ತೀರ್ಮಾನವಾಯಿತು. ... ಭಾರತ ಮುಖಂಡರು ಮತ್ತು ... ತರೊಡನೆ ಸಂಪರ್ಕವನ್ನು ... ಕೊಳ್ಳಲು ತೀರ್ಮಾನವಾಗಿರುವ ... ಪಕ್ಷದ ಸದಸ್ಯರನ್ನು ಕೂಡಿಸಿ ... ರಂಗ ಸಭೆಯನ್ನು ಕರೆಯಲಾಗು... ಈ ಸಂಸ್ಥೆಯ ಕಛೇರಿಯನ್ನು ... ಲಿಕವಾಗಿ ಸಂತೇಪೇಟೆಯಲ್ಲಿರ... ಚನ್ನಪ್ಪನವರ ಭವನದ ಮ... ಸ್ಥಾಪಿಸಲಾಗಿದೆ.

ಗೌರಿ ಹಬ್ಬಕ್ಕಾಗಿ

ಸಾವಿರಾರು ಮಾದರಿ ರೇಷ್ಮೆ ಸೀರೆಗಳು, ... ಬಂದಿವೆ ... ಕೊಳ್ಳಿರಿ

D. L. ನರಸಿಹ್ಮಯ್ಯ & ಬ್ರದರ್ಸ್,

ಅವೆನ್ಯೂ ರೋಡು, ... ಭವನ ಹೋಟೆಲ್ ಪಕ್ಕ, ಮೈಸೂರು.

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ - ಅತಿ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ

ತಡವಿಲ್ಲದ ವಿಮಾ ಮೊಬಲಗಿನ ಪಾವತಿ

ಸುಲಭವಾದ ಸಾಲದ ಸೌಕರ್ಯ

ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚುವುದು

ಇವೆಲ್ಲಾ ಬೇಕಾದರೆ

ಮೈಸೂರು ಸರ್ಕಾರದ

ವಿಮಾ ಇಲಾಖೆ

ಪ್ರಜೆಗಳ ಸಾಸುವೆಯಲ್ಲಿ

ವಿಮೆ ಮಾಡಲು ಇಂದೇ ನಿರ್ಧರಿಸಿರಿ

ನಾ ... ಎ ... ... ರ

ಚಾಮುಂಡೇಶ್ವರಿ ಟಾಕೀಸ್

ದೇವಕಿ (ತಮಿಳು)

4 ನೇ ವಾರ

|| ಶ್ರೀ ||

ಗಣೇಶ ಟಾಕೀಸ್

ಬಾಲನಾಗಮ್ಮ

2 ನೇ ವಾರ

ಆದರ್ಶ ಕನ್ನಡ ನಾಟಕ ಸಂಘ, ಮೈಸೂರು

ಬುಧವಾರ ಮತ್ತು ಶನಿವಾರ

ರಾತ್ರಿ 9-45ಕ್ಕೆ

ಉಳಿದ ದಿನಗಳಲ್ಲಿ ಸಂಜೆ 6-...

ಟೌನ್ ಹಾಲಿನಲ್ಲಿ

* ಚಂಚಲ

ಎಂಬ ಸಾಮಾಜಿಕ ನಾಟಕವ... ಅಭಿನಯಿಸುತ್ತಾರೆ ಸರ್ವ...

ಪ್ರೋತ್ಸಾಹಿಸಬೇಕಾಗಿ ಕೋರುವ...

ಪ್ರೊ|| ಎಂ. ವಿ. ವಾಸ್... ಎಸ್...

ABIDS

OUTRIGHT AUCTION SAL...

To-morrow : 19-8-51 : At 10 A. M.

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಅಮೋಘವಾದ 3 ನೇ ವಾರ

ರಾಜಾ ಗೋಪಿಚಂ...

ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ

ರಾತ್ರಿ 9-15 ಘಂಟೆಗೆ, ಉಳಿದ ದಿನಗಳಲ್ಲಿ ಮ್ಯಾಟಿನಿ 6-15ಕ್ಕೆ

Edited, printed and published by A. R. N...rayan, at Sadhvi Press, Subbiah Road, Mys...

ಪುಟ ಸಂ 792 WEEKLY EDITION ಬಿಡಿ ಪ್ರತಿಗೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೧೯-೮-೫೦ [ಸಂಚಿಕೆ ೪

ವಿಶ್ವ ಸಂಸ್ಥೆ-ಕೊರಿಯಾ ಸೈನ್ಯಗಳಿಗೆ ಪುನಃ ಘರ್ಷಣೆ

ರಾಜಧಾನಿಯಲ್ಲಿ ಶಾಸನ ಸಭೆಯ ಅಧಿವೇಶನ

ಬೆಂಗಳೂರು ೧೯

ಸಂಸ್ಥಾನದ ಶಾಸನ ಸಭೆಯ ಅಧಿವೇಶನವು ಬರುವ ಅಕ್ಟೋಬರ್ ಪ್ರಥಮ ವಾರದಲ್ಲಿ ರಾಜಧಾನಿಯಲ್ಲಿ ಸೇರುವುದೆಂದು ಗೊತ್ತಾಗಿದೆ. ವಿಶ್ವ ವಿದ್ಯಾಲಯದ ತಿದ್ದುಪಡಿ ಮಸೂದೆ, ಗುತ್ತಿಗೆದಾರರ ಮಸೂದೆ, ಇನಾಂ ಮತ್ತು ಜೋಡಿಗಳ ರದ್ದಿನ ಮಸೂದೆ ಇವುಗಳ ಬಗ್ಗೆ ಚುನಾಯಿತ ಸಮಿತಿಗಳ ವರದಿಗಳನ್ನು ಸಭೆಯು ಪರಿಶೀಲಿಸುವುದು.

ರಾಜಕೀಯ ಪಕ್ಷಗಳಿಗೆ ಚುನಾವಣಾ ಚಿಹ್ನೆ

ಸಂಸ್ಥಾನದ ನ್ಯಾಯಾಂಗ ಮಂತ್ರಿಗಳ ಕಛೇರಿಯಲ್ಲಿ ನೆನ್ನೆ ಐದು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆ ಸೇರಿ ವಿವಿಧ ಪಕ್ಷಗಳಿಗೆ ಕೊಡಲಾಗುವ ಚುನಾವಣಾ ಚಿಹ್ನೆಗಳ ಬಗ್ಗೆ ಪರಿಶೀಲನೆಯನ್ನು ನಡೆಸಲಾಯಿತು. ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳಿಗೆ ಈಗಾಗಲೇ ನೊಗವುಳ್ಳ ಜೋಡಿ ಎತ್ತು ಮತ್ತು ಮರಗಳ ಚಿಹ್ನೆಗಳನ್ನು ಕೊಟ್ಟಿರುವುದರಿಂದ ಅವುಗಳ ಬಗ್ಗೆ ಚರ್ಚಿಸಲು ಪ್ರಸಂಗವಾಗಲಿಲ್ಲ. ಸಂಸ್ಥಾನದ ಜನತಾ ಪಕ್ಷದ ಗುರುತಿನ ಬಗ್ಗೆ ಕೊಂಚ ತೊಡಕಾಗಿ ಈ ವಾರದೊಳಗೆ ಅದರ ನಿರ್ಧಾರವಾಗುವುದು. ಕಮ್ಯೂನಿಸ್ಟ್ ಮತ್ತು ಕಿಸಾನ್ ಮಜದೂರ್ ಪ್ರಜಾ ಪಕ್ಷಗಳಿಗೆ ಕುಡುಗೋಲು ಸಮೇತವಾದ ಧಾನ್ಯದ ತೆನೆ ಮತ್ತು ಗುಡಿಸಿಲು ಚಿಹ್ನೆಗಳು ಕೊಡಲ್ಪಟ್ಟಿವೆ.

ಹಿಂದೂಸ್ಥಾನ್ ಕಾರ್ಖಾನೆಯಲ್ಲಿ ಲಘು ವಿಮಾನಗಳ ತಯಾರಿಕೆ

ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ಮಿಲಿಟರಿ ಶಿಕ್ಷಣ ವಿಮಾನಗಳ ತಯಾರಿಸುವ ಏರ್ಪಾಡು ಆಗುತ್ತಿರುವುದಾಗಿಯೂ, ಒಂದೊಂದು ವಿಮಾನಕ್ಕೆ ೧೯ ಲಕ್ಷ ರೂ. ವೆಚ್ಚವಾಗುವುದೆಂದು ಗೊತ್ತಾಗಿದೆ. ೨೦೦ ವಿಮಾನಗಳನ್ನು ಅಲ್ಲಿ ತಯಾರಿಸಲಾಗುವುದು. ಇತರರಿಗೂ ಈ ವಿಮಾನಗಳನ್ನು ಮಾರಲು ಅವಕಾಶವುಂಟಾದರೆ ಇನ್ನೂ ಹೆಚ್ಚಿನ ಸಂಖ್ಯೆ ವಿಮಾನಗಳನ್ನು ತಯಾರಿಸಲಾಗುವುದೆಂದು ಹೇಳಲಾಗಿದೆ.

ಹೋಟೇಲು ಮಾಲೀಕರು ತಮ್ಮನ್ನು ಕೊಯ್ದುಕೊಂಡರು

ದಕ್ಷಿಣಾವರ್ತಿಯ ತಂಜಾವೂರು ಹೋಟೇಲು ಮಾಲೀಕರಾದ ಶ್ರೀ ರಾಘವೇಂದ್ರರಾಯರು ನೆನ್ನೆ ಬೆಳಿಗ್ಗೆ ತಮ್ಮ ಹೋಟೇಲಿನ ಹಿತ್ತಲಿಗೆ ಹೋಗಿ ಅಲ್ಲಿ ಕತ್ತು ಕೊಯ್ದುಕೊಂಡ ಪ್ರಸಂಗವು ನಡೆಯಿತೆಂದು ವರದಿಯಾಗಿದೆ. ಹೋಟೇಲಿನವರೊಬ್ಬರು ಅವರನ್ನು ಅಕ್ರಮವಾಗಿ ವಾಸ್ತಾನು ಇಟ್ಟುಕೊಂಡಿರುವರೆಂಬುದನ್ನು ಶೋಧಿಸುವ ಸಲುವಾಗಿ ಪೋಲೀಸರು ಅಲ್ಲಿಗೆ ಹೋದಾಗ ಮಾಲೀಕರು ಅವರಿಗೆ ಅವಕಾಶ ಕೊಟ್ಟು ಹಿತ್ತಲಿಗೆ ಹೋಗುವುದಾಗಿ ಹೇಳಿ ಚಾಕುವಿನಿಂದ ಕತ್ತನ್ನು ಕೊಯ್ದುಕೊಂಡರೆಂದು ಹೇಳಲಾಗಿದೆ. ಅವರನ್ನು ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಗಿದೆ. ಇವರು ಅಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿರುವರು. ಬ್ರಿಟಿಷ್ ಇಂಡಿಯಾ ಚಳುವಳಿಯಲ್ಲಿ ಸೆರೆಮನೆಗೆ ಹೋಗಿದ್ದರು.

ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣೋತ್ಸವ

ಶ್ರೀಮನ್ ಮಹಾರಾಜರವರ ಭಾಷಣ

ಸ್ವಂ ಸು ಪೋ] ಬೆಂಗಳೂರು ೧೯

ಈ ದಿನ ಬೆಳಿಗ್ಗೆ ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣೋತ್ಸವವು ವೈಭವದಿಂದ ಆಚರಿಸಲ್ಪಟ್ಟಿತು. ಸ್ವಾಗತ ಸಮಿತಿ ಅಧ್ಯಕ್ಷರಾದ ಡಾ. ಸುಬ್ಬರಾಯರು ಸಮಾರಂಭದಲ್ಲಿ ಬಿನ್ನವತ್ತಳೆಯನ್ನು ಶ್ರೀಮನ್ ಮಹಾರಾಜರಿಗೆ ಒಪ್ಪಿಸಿದರು.

ಶಸ್ತ್ರವೈದ್ಯ ಶಾಸ್ತ್ರಜ್ಞರಾದ ಡಾ. ಅಕ್ಕಿರಾಜ್ ಪ್ರಸಂಗಿಸುತ್ತ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಲ್ಲಿ ಆಸ್ಪತ್ರೆಯ ಸಲ್ಲಿಸಿರುವ ಸೇವೆಯನ್ನು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಭುಗಳವರು ಆಸ್ಪತ್ರೆಯ ಸ್ಥಾಪನೆಗಾಗಿ ಶ್ರಮಿಸಿದವರನ್ನು ಸ್ಮರಿಸಿ, ನಿಸ್ವಾರ್ಥ ವೈದ್ಯರುಗಳ ಸೇವೆಯಿಂದ ಜನಕ್ಕೆ ದೊರೆತಿರುವ ಪ್ರಯೋಜನಗಳನ್ನು ಸೂಚಿಸಿದರು. ಸರ್ಕಾರದವರು ಈ ಆಸ್ಪತ್ರೆಯ ಪ್ರಗತಿಯಲ್ಲಿ ಹೊಂದಿರುವ ಆಸಕ್ತಿಯನ್ನು ತಿಳಿಸಿದರು. ಪ್ರತಿ ವರ್ಷವೂ ಸಾವಿರಾರು ರೋಗಿಗಳು ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗುತ್ತಿರುವುದೇ ಈ ಸಂಸ್ಥೆಯ ಸೇವೆಗೆ ಸಾಕ್ಷಿಯಾಗಿದೆಯೆಂದು ಅಭಿಪ್ರಾಯಪಟ್ಟರು.

ತಿರುಪತಿ ಮತ್ತು ಕಂಚಿಗೆ ಪ್ರಭುಗಳ ಭೇಟಿ

ಶ್ರೀಮನ್ ಮಹಾರಾಜರು ೧೭ನೇ ತಾ|| ತಿರುಪತಿಯನ್ನು ತಲುಪಿ, ಅಲ್ಲಿ ಅಭಿಷೇಕವನ್ನು ನೆರವೇರಿಸಿದರು. ಶ್ರೀನಿವಾಸ ದೇವರ ದರ್ಶನವನ್ನು ಪಡೆದರು. ಶ್ರೀಮನ್ ಮಹಾರಾಜರಿಗೆ ದೇವರ ಆಭರಣಗಳನ್ನು ತೋರಿಸಲಾಯಿತು. ಅಲ್ಲದೇ ದೇವರ ಶೇಷವಸ್ತ್ರವನ್ನು ಕೊಡಲಾಯಿತು. ತಿರುಪತಿಯಿಂದ ಕಂಚಿಗೆ ತೆರಳಿ ಕಾಮಾಕ್ಷಿ, ಏಕಾಂಬರೇಶ್ವರರು ಮತ್ತು ವರದ ರಾಜರ ದರ್ಶನವನ್ನು ಪಡೆದರು. ನಂತರ ಮದ್ರಾಸಿಗೆ ಆಗಮಿಸಿ ಅಲ್ಲಿನ ಗೌರ್ನರರ ಅತಿಥಿಗಳಾಗಿ ಬಿಡಾರ ಮಾಡಿರುತ್ತಾರೆ.

ಕುಸ್ತಿ ಪಂದ್ಯಗಳ ಮೇಲೆ ಮನರಂಜನೆ ತೆರಿಗೆ ಇಲ್ಲ

ಬೆಂಗಳೂರು ೧೯

ಕುಸ್ತಿ ಪಂದ್ಯಗಳ ಟಿಕೆಟ್ಟುಗಳ ಮೇಲೆ ಮನರಂಜನೆ ತೆರಿಗೆಯನ್ನು ವಿಧಿಸಕೂಡದೆಂದು ಮೈಸೂರಿನ ಸರ್ಕಾರವು ಆಜ್ಞೆ ಮಾಡಿರುತ್ತಾರೆ.

ಕಾಂಗ್ರೆಸ್ ಚುನಾವಣಾ ನಿಧಿಗೆ ೨ ಲಕ್ಷ ರೂ.

ಬೆಂಗಳೂರು ೧೯

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಲಿಯು ಈ ದಿನ ಸಭೆ ಸೇರಿ ಬರುವ ಸಾರ್ವತ್ರಿಕ ಚುನಾವಣೆಗಳ ಸಂಬಂಧವಾಗಿ ಪ್ರತ್ಯೇಕವಾದ ಘೋಷಣೆ ಹೊರಡಿಸಬೇಕೆಂಬ ಹಲವು ಸದಸ್ಯರ ಸೂಚನೆಯನ್ನು ಪರಿಶೀಲಿಸಿ ಮೈಸೂರಿನ ವಿಶೇಷ ಸಮಸ್ಯೆಗಳ ಬಗ್ಗೆ ಕಾಂಗ್ರೆಸ್ಸಿನ ನೀತಿಯನ್ನು ಘೋಷಣಾ ರೂಪದಲ್ಲಲ್ಲದೆ ಬೇರೆ ವಿಧಾನಗಳಿಂದ ತಿಳಿಸಬಹುದೆಂದು ಅಭಿಪ್ರಾಯಪಡಲಾಯಿತು. ಚುನಾವಣೆಗಳಿಗಾಗಿ ಕನಿಷ್ಠವಾಗಿ ೨ ಲಕ್ಷ ರೂ ಗಳನ್ನು ಸೇರಿಸಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿತು. ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳಿಗಾಗಿ ಜಿಲ್ಲಾ ಸಮಿತಿಗಳಿಗೆ ತಲಾ ೧ ಸಾವಿರ ರೂ.ಗಳನ್ನು ಕೊಡಬೇಕೆಂದು ನಿರ್ಧರಿಸಲಾಯಿತು.

ಕಾಂಗ್ರೆಸ್ಸಿನ ಚುನಾವಣಾ ಸಮಿತಿಯು ನೆನ್ನೆ ಸಭೆ ನಡೆಸಿ, ಇಲ್ಲಿನ ಶಾಸನ ಸಭೆ ಮತ್ತು ಕೇಂದ್ರದ ಪಾರ್ಲಿಮೆಂಟ್ ಸಭೆಗಳಿಗೆ ಬರುವ ಎಲ್ಲಾ ಸ್ಥಾನಗಳಿಗೂ ಸ್ಪರ್ಧಿಸಬೇಕೆಂದು ಗೊತ್ತುಮಾಡಲಾಯಿತು.

ಚೀಣಾ ಅಧ್ಯಕ್ಷರ ಕೊಲೆ ಪ್ರಯತ್ನಕ್ಕಾಗಿ ಗಲ್ಲು

ಕೆಂಪು ಚೀಣದ ಅಧ್ಯಕ್ಷರಾದ ಮಾವೋತ್ಸೆ ಟುಂಗ್‌ರವರನ್ನು ಕೊಲೆ ಮಾಡಲು ಕಳೆದ ಅಕ್ಟೋಬರ್‌ನಲ್ಲಿ ನಡೆಸಿದ ಪಿತೂರಿಯ ಸಂಬಂಧವಾಗಿ ಆಂಟೋನಿಯೊ ರೀವಾ ಎಂಬ ಇಟಲಿಯವನನ್ನೂ ಮತ್ತು ರಿಸಿಚಿ ಯಾಮಾ ಗುಚಿ ಎಂಬ ಜಪಾನನನ್ನೂ ನೆನ್ನೆ ಚೀಣದಲ್ಲಿ ಗಲ್ಲಿಗೇರಿಸಲಾಯಿತು. ಈ ಕೃತ್ಯವು ಫಾರ್ಮೋಸಾದಲ್ಲಿರುವ ಅಮೇರಿಕಾ ರಾಯಭಾರಿಯ ಕೈಕೆಳಗಿನ ಮಿಲಿಟರಿ ಅಧಿಕಾರಿ ಕರ್ನಲ್ ಡೇವಿಡ್ ಬ್ಯಾರೆಟ್‌ರವರ ಪ್ರೇರಣೆ ಪ್ರಕಾರ ನಡೆಯಲೇರ್ಪಾಡಾಗಿತ್ತೆಂದು ಹೇಳಲಾಗಿದೆ. ಇವರಲ್ಲದೆ ಇಟಲಿಯವರಿಬ್ಬರು ಫ್ರೆಂಚ್, ಜರ್ಮನ್ ಮತ್ತು ಚೀಣದ ಒಬ್ಬೊಬ್ಬರಿಗೂ ವಿವಿಧ ಶಿಕ್ಷೆಗಳನ್ನು ಕೊಡಲಾಗಿದೆ.

ಉತ್ತಮ ನೀತಿಯು ಆದರ್ಶವೇ ನ್ಯಾಯ ನಿರ್ವಹಣೆಯ ತಳಹದಿ

ವಕೀಲರ ಸಂಘದ ಸಮಾರಂಭದಲ್ಲಿ ಪ್ರಭುಗಳ ಭಾಷಣ

ಸ್ವಂ.ಸು.ಪೋ] ಬೆಂಗಳೂರು ೧೯

ಇಲ್ಲಿನ ವಕೀಲರ ಸಂಘದ ಸುವರ್ಣ ಮಹೋತ್ಸವವನ್ನು ಈ ದಿನ ಶ್ರೀಮನ್ಮಹಾರಾಜರು ಆರಂಭಗೊಳಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಪಿ. ಸೋಮಶೇಖರರಾಯರು ಸಂಘದ ಪರವಾಗಿ ಬಿನ್ನವತ್ತಳೆಯನ್ನು ಶ್ರೀಮನ್ಮಹಾರಾಜರಿಗೆ ಅರ್ಪಿಸಿದರು. ಎಲ್ಲಾ ಕೋರ್ಟುಗಳೂ ಒಂದೇ ಆವರಣದಲ್ಲಿರುವಂತೆ ಮಾಡಬೇಕೆಂದೂ ನ್ಯಾಯಾಂಗವನ್ನು ಆಡಳಿತಾಂಗದಿಂದ ಬೇರ್ಪಡಿಸಬೇಕೆಂದೂ ಅವರು ಬಿನ್ನವತ್ತಳೆಯಲ್ಲಿ ಅರಿಕೆ ಮಾಡಿದರು.

ಶ್ರೀಮನ್ ಮಹಾರಾಜರವರು ಸಮಾರಂಭವನ್ನು ಆರಂಭಗೊಳಿಸಿ ಸಂಘದ ಅಭಿವೃದ್ಧಿಗಾಗಿ ಅಭಿನಂದನೆಯನ್ನು ಸಲ್ಲಿಸಿದರು. ನ್ಯಾಯ ದೇವತೆಯ ಭವ್ಯ ಭವನವನ್ನು ನಿರ್ಮಿಸಲು ವಕೀಲರುಗಳೂ, ನ್ಯಾಯಾಧೀಶರುಗಳೂ ಸಹಕರಿಸಿ ಪ್ರಯತ್ನ ಮಾಡಬೇಕೆಂದು ಸೂಚಿಸಿದರು. ಇತ್ತೀಚೆಗೆ ದೇಶದಲ್ಲಿ ಉಂಟಾಗಿರುವ ರಾಜಕೀಯ ಮತ್ತು ಆರ್ಥಿಕ ಸುಧಾರಣೆಗಳಿಂದ ಹೆಚ್ಚಿನ ಜವಾಬ್ದಾರಿಯೂ ಮತ್ತು ಕ್ಲಿಷ್ಟವಾದ ಸಮಸ್ಯೆಗಳೂ ಉಂಟಾಗಿರುವುದಾಗಿ ಅವರು ಹೇಳಿ, ಎಲ್ಲಾ ನ್ಯಾಯ ನಿರ್ವಹಣೆಯ ಕಾರ್ಯಗಳಿಗೂ ನೀತಿಯು ಮುಖ್ಯವೇ ಮುಖ್ಯವಾದ ತಳಹದಿಯೆಂದು ತಿಳಿಸಿದರು. ರಾಜ್ಯದ ಭದ್ರತೆಯನ್ನೂ ವ್ಯಕ್ತಿಯ ಸ್ವಾತಂತ್ರ್ಯವನ್ನೂ ಸಂರಕ್ಷಿಸಬೇಕೆಂದು ಅಭಿಪ್ರಾಯಪಟ್ಟರು.

ಬಾರ್ ಕೌನ್ಸಿಲ್ ಶಾಸನವಿರುವುದರಿಂದ ವಕೀಲರ ಸಂಘಗಳು ಹೆಚ್ಚು ಯಶಸ್ವಿಯಾಗಿ ಸೇವೆಸಲ್ಲಿಸಲು ಅವಕಾಶವಾಗಿರುವುದು. ಆಡಳಿತಾಂಗದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸುವ ಕಾರ್ಯವು ಶೀಘ್ರದಲ್ಲಿಯೇ ಪೂರೈಸುವುದೆಂದು ಹಾರೈಸುತ್ತೇನೆ. ಅಲ್ಲದೆ ಪ್ರಮುಖ ಕೋರ್ಟುಗಳೆಲ್ಲವೂ ಒಂದೇ ಕಡೆ ಇರುವಂತೆಯೂ ಸಹ ಏರ್ಪಾಡಾಗುವುದೆಂದೂ ನಂಬುತ್ತೇನೆ. ಮುಂದಿನ ನ್ಯಾಯ ವಿಮರ್ಶಾ ಕಾರ್ಯಗಳಲ್ಲಿ ತರುಣ ವಕೀಲರುಗಳು ಹೊಸ ಸಂಶೋಧನೆಗಳನ್ನು ಮತ್ತು ಆದರ್ಶಗಳನ್ನು ಸಾಧಿಸಲು ಹೇರಳವಾಗಿ ಅವಕಾಶವು ದೊರೆಯುತ್ತದೆ—ಎಂದು ಪ್ರಭುಗಳು ಅಪ್ಪಣೆ ಕೊಟ್ಟರು.

ಮೊಂಬಾಯಿನ ಸುಪ್ರಸಿದ್ಧ ವಕೀಲರಾದ ಡಾ|| ಎಂ. ಆರ್ ಜಯಕರ್‌ರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಕೇಸಾಂಗ್ ಬಳಿ ಪುನಃ ಹೋರಾಟ

ಕೊರಿಯಾ ಸೀಸ್ ಫೈರ್ ಮಾತುಕತೆ ನಡೆಯುತ್ತಿರುವ ಕೇಸಾಂಗ್ ನಗರಕ್ಕೆ ೪೦ ಮೈಲಿ ದೂರದಲ್ಲಿ ಕಮ್ಯೂನಿಸ್ಟರಿಗೂ ವಿಶ್ವ ಸಂಸ್ಥೆ ಸೈನಿಕರಿಗೂ ಪುನಃ ಹೋರಾಟವು ಪ್ರಾರಂಭವಾಗಿರುತ್ತದೆ. ೩೯ ವಿಶ್ವ ಸಂಸ್ಥೆ ವಿಮಾನಗಳಿಗೂ, ೩೦ ಕಮ್ಯೂನಿಸ್ಟರ ವಿಮಾನಗಳಿಗೂ ನೆನ್ನೆ ಘರ್ಷಣೆ ನಡೆಯಿತೆಂದು ಗೊತ್ತಾಗಿದೆ.

ವಾರ ಭವಿಷ್ಯ

ತಾ|| [illegible] ರಿಂದ [illegible] ರ ವರೆಗೆ

ಮೇಷ — ಹೊಸ ವ್ಯವಹಾರಗಳ [illegible] ಕ್ಕೆ ಹಾಕದಿರುವುದು ಉತ್ತಮ. ಸಹೋದ್ಯೋಗಿಗಳೊಡನೆ ಕಲಹ, ಆರೋಗ್ಯ ಚೆನ್ನಾಗಿರದು. ಪ್ರವಾಸ ಬೇಡ. ತಾ|| [illegible] ಖರ್ಚು, ಚಿಂತೆ

ವೃಷಭ — ಸ್ವಾತಂತ್ರ್ಯೋಪಾಸಕರಿಗೆ ಕಿವಿಮಾತು. ಆರೋಗ್ಯ ಉತ್ತಮ. ಕಲಾವಿದರಿಗೆ ಪ್ರೋತ್ಸಾಹ. ಅಪ್ತರ ಭೇಟಿ. ವ್ಯವಹಾರಗಳಲ್ಲಿ ಪ್ರಗತಿ. ತಾ|| [illegible] ಶುಭ ಕಾರ್ಯಕ್ಕೆ ಖರ್ಚು, ಸಂತೋಷ

ಮಿಥುನ — ಕಾರ್ಯ ಭಂಗದಿಂದ ಸಿಟ್ಟು. ಆರ್ಥಿಕ ಮುಗ್ಗಟ್ಟು ಹೆಚ್ಚುವುದು. ದೇಹಾಲಸ್ಯ. ಪ್ರವಾಸದಲ್ಲಿ ತೊಂದರೆ. ಕುಟುಂಬದಲ್ಲಿ ಕಲಹ. ತಾ|| [illegible] ಜವಾಬ್ದಾರಿ ನಿರ್ವಹಣೆ

ಕರ್ಕ — ಆರ್ಥಿಕ ಮುಗ್ಗಟ್ಟಿನಿಂದ ಬೇಸರ ಹೆಚ್ಚು. ಆರೋಗ್ಯ ಚೆನ್ನಾಗಿರಲಾರದು. ನೌಕರಿಯಲ್ಲಿ ತೊಂದರೆ. ವ್ಯವಹಾರಗಳಲ್ಲಿ ಅಭಿವೃದ್ಧಿ. ತಾ|| [illegible] ಚಿಂತಾ ನಾಶ, ಸತ್ಪ್ರಾಗಮನ

ಸಿಂಹ — ಬೆಲೆ ಬಾಳುವ ವಸ್ತುಗಳು ಕಳವಾಗುವ ಸಂಭವ. ಅಧಿಕ ಖರ್ಚು. ಆರೋಗ್ಯ ಚೆನ್ನಾಗಿರದು. ಅಪಘಾತ ಸಂಭವ. ವೃಥಾ ಕಲಹ. ತಾ|| [illegible] ದುಃಖ, ಜಾಗರಣ

ಕನ್ಯಾ — ಆರೋಗ್ಯ ಉತ್ತಮ. ಪ್ರಮುಖ ವ್ಯಕ್ತಿಗಳ ಪರಿಚಯ. ಅಪ್ತ ಜನರ ಭೇಟಿ. ವ್ಯವಹಾರಗಳಲ್ಲಿ ಪ್ರಗತಿ. ಪ್ರವಾಸ ಉತ್ತಮ. ತಾ|| [illegible] ಶುಭವಾರ್ತೆ, ಧನಲಾಭ

ತುಲ — ಆರೋಗ್ಯ ಉತ್ತಮ. ಕೈಗೊಂಡ ಕಾರ್ಯ ಸಿದ್ಧಿ. ಹರ್ಷ ವಾತಾವರಣ. ವ್ಯವಹಾರಗಳಲ್ಲಿ ಯಶಸ್ಸು. ಆರ್ಥಿಕ ಸ್ಥಿತಿ ಉತ್ತಮ. ತಾ|| [illegible] ಖರ್ಚು, ಅಪ್ತರ ಆಗಮನ

ವೃಶ್ಚಿಕ — ಪಟ್ಟ ಶ್ರಮಕ್ಕೆ ಪ್ರತಿಫಲ ದೊರೆಯುವುದು. ಆರೋಗ್ಯ ಉತ್ತಮ. ಸಾರ್ವಜನಿಕ ಸೇವೆ ಜರುಗುವುದು. ಪ್ರವಾಸ ಸಂಭವ. ತಾ|| [illegible] ಶತ್ರುನಾಶ, ಶುಭವಾರ್ತೆ

ಧನು — ಕುಟುಂಬದ ಕಷ್ಟಗಳು ಅಧಿಕವಾಗುವುವು. ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಮುಗ್ಗಟ್ಟು ಹೆಚ್ಚುವ ಭಯ. ತಾ|| [illegible], ೩೦ ಚಿಂತೆ, ಗೊಂದಲ

ಮಕರ — ಆರೋಗ್ಯ ಉತ್ತಮ. ಚಿಂತೆ ಹೆಚ್ಚು. ಖರ್ಚು ಅಧಿಕವಾಗುವುದು. ಕುಟುಂಬದ ದೇಹಾಲಸ್ಯ. ವ್ಯವಹಾರಗಳಲ್ಲಿ ತೊಂದರೆ. ಪ್ರವಾಸಕ್ಕೆ ಅಡ್ಡಿ. ತಾ|| [illegible] ಅಪ್ರಿಯ ವಾರ್ತೆ, ದುಃಖ

ಕುಂಭ — ಎದುರಾಳಿಗಳಿಗೆ ಸೋಲು. ಆರೋಗ್ಯ ಉತ್ತಮ. ಆರ್ಥಿಕ ಸ್ಥಿತಿ ಉತ್ತಮ. ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು. ಪ್ರವಾಸ ಉತ್ತಮ. ತಾ|| [illegible] ಪ್ರವಾಸ, ಅಪ್ತರ ಭೇಟಿ

ಮೀನ — ಆರೋಗ್ಯದ ಕಡೆ ಎಚ್ಚರಿಕೆಯಿಂದಿರಿ. ಆರ್ಥಿಕ ಮುಗ್ಗಟ್ಟು ಹೆಚ್ಚು. ಸಂತತಿಗೆ ಕ್ಲೇಶ. ಸಾಹಿತ್ಯ ಸೇವಕರಿಗೆ ಆಲಸ್ಯ. ತಾ|| [illegible], ೩೦ ಅಪಮಾನ, ಗೊಂದಲ

ಮಹಾ ಚುನಾವಣೆಗಳಿಗೆ ಕಾಂಗ್ರೆಸ್ಸಿನ ವೇಳಾ ಪಟ್ಟಿ

ಬರಲಿರುವ ಮಹಾಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಉಮೇದುವಾರರು ಸ್ಪರ್ಧಿಸಲು ಕೇಂದ್ರ ಚುನಾವಣಾ ಸಮಿತಿಯವರು ವೇಳಾಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಅದರ ಪ್ರಕಾರ ಪ್ರಾಂತ ಕಾಂಗ್ರೆಸ್ ಸಮಿತಿಗಳಿಗೆ ಉಮೇದುವಾರಿಕೆ ಅರ್ಜಿಗಳನ್ನು ತಲುಪಿಸಲು ಕೊನೆಯ ದಿನ ಸಪ್ಟೆಂಬರ್ [illegible] ಪ್ರಾಂತ್ಯ ಸಮಿತಿಯು ಕೇಂದ್ರಕ್ಕೆ ತನ್ನ ಅಂತಿಮ ಸಿಫಾರಸನ್ನು ಕಳುಹಿಸಲು ಕೊನೆಯ ದಿನ ಅಕ್ಟೋಬರ್ [illegible] ಕೇಂದ್ರ ಚುನಾವಣಾ ಸಮಿತಿ ತನ್ನ ಅಂತಿಮ ನಿರ್ಧಾರವನ್ನು ತಿಳಿಸಲು ಕೊನೆಯ ದಿನ ನವೆಂಬರ್ [illegible]

ಕಾಂಗ್ರೆಸ್ ಪರವಾಗಿ ಸ್ಪರ್ಧಿಸುವ ಉಮೇದುವಾರರು ಅರ್ಜಿ ನಮೂನೆಯಲ್ಲಿ ವಿವರಗಳನ್ನು ಕೊಟ್ಟು ಪ್ರಾಂತೀಯ ಶಾಸನ ಸಭಾ ಉಮೇದುವಾರಿಕೆ ಅರ್ಜಿಗೆ [illegible]೦ ರೂ ಶುಲ್ಕವನ್ನೂ ಕೇಂದ್ರ ಶಾಸನ ಸಭೆಗೆ ಉಮೇದುವಾರಿಕೆ ಅರ್ಜಿಗಳೊಡನೆ [illegible] ರೂ ಶುಲ್ಕವನ್ನೂ ಸೆಪ್ಟೆಂಬರ್ [illegible] ರೊಳಗೆ ತಲುಪುವಂತೆ ಪ್ರಾಂತ ಕಾಂಗ್ರೆಸ್ ಸಮಿತಿಗೆ ಕಳುಹಿಸಬೇಕು. ಅರ್ಜಿ ಮತ್ತು ವಿವರಣ ಫಾರಂಗಳನ್ನು ಪ್ರಾದೇಶಿಕ ಅಥವಾ ಜಿಲ್ಲಾ ಕಾಂಗ್ರೆಸ್ ಕಛೇರಿಗಳಿಂದ ಪಡೆಯಬಹುದು

ಸಾಹಿತ್ಯ ಶಿಕ್ಷಣ ಮಂದಿರ

ರಾಜಧಾನಿಯ ಸಾಹಿತ್ಯ ಶಿಕ್ಷಣ ಮಂದಿರದ ಪ್ರಾರಂಭೋತ್ಸವವನ್ನು ಕಳೆದ ಬುಧವಾರ ಮಂದಿರದ ಆವರಣದಲ್ಲಿ ಶ್ರೀ ಎಸ್ ವಿ ಪರಮೇಶ್ವರ ಭಟ್ಟರು ನೆರವೇರಿಸಿದರು. ಮಂದಿರದ ಅಧ್ಯಕ್ಷರಾದ ಶ್ರೀ ವೆಂಕಟಾಚಲ ಶಾಸ್ತ್ರಿಯವರು ಪ್ರಾಸ್ತಾವಿಕ ಭಾಷಣ ಮಾಡಿದ್ದರು. ಸಾಹಿತ್ಯರತ್ನ ಎಂಬ ಮಾಸ ಪತ್ರಿಕೆಯ ಪ್ರಕಟಣಾರಂಭವಾಯಿತು. 'ಕುವೆಂಪು ದರ್ಶನ' ದ ಒಗ್ಗೆ ಭಾಷಣ ನಡೆಯಿತು

ವಿದ್ಯಾರ್ಥಿ ಸಂಘದ ಆರಂಭೋತ್ಸವ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದ ಪ್ರಾರಂಭೋತ್ಸವವು ಕಳೆದ ಮಂಗಳವಾರ ಶ್ರೀ ಆರ್ ವಾಸುದೇವ ಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಪ್ರಸಿದ್ಧ ಕತೆಗಾರರಾದ ಶ್ರೀ ಆನಂದರವರು ಭಾಷಣ ಮಾಡಿದರು. ಶ್ರೀ ಕಂಠಾ ಕೃಷ್ಣಮೂರ್ತಿಯವರು ಪರಿಚಯ ಭಾಷಣವನ್ನು ಮಾಡಿದರು. ವಂದನಾರ್ಪಣೆ ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಗಿಯಿತು

೧೨೫೦ ತೊಲ ಚಿನ್ನದ ಕಳ್ಳ ರವಾನೆ ಪತ್ತೆ

ಕಳೆದ ಗುರುವಾರ ಪೂರ್ವ ಪಾಕಿಸ್ತಾನದ ಢಕ್ಕಾದಿಂದ ಕಲ್ಕತ್ತೆಯ ಡಂಡಂ ವಿಮಾನ ನಿಲ್ದಾಣದಲ್ಲಿ ಇಳಿದ ಒಬ್ಬ ಪ್ರಯಾಣಿಕನನ್ನು ಸುಂಕದ ಅಧಿಕಾರಿಗಳು ಶೋಧಿಸಲಾಗಿ ಅವನಲ್ಲಿ [illegible] ಲಕ್ಷ [illegible] ಸಾವಿರ ರೂ ಬೆಲೆ ಬಾಳುವ ೧೨೫೦ ತೊಲ ಚಿನ್ನವು ಸಿಕ್ಕಿತೆಂದೂ ಅಕ್ರಮವಾಗಿ ಚಿನ್ನವನ್ನು ತಂದ ಪ್ರಯಾಣಿಕನನ್ನು ಬಂಧಿಸಲಾಗಿದೆಯೆಂದೂ ಗೊತ್ತಾಗಿದೆ

ಓಡುತ್ತಿದ್ದಾಗಲೇ ಜೂಜಿನ ಕುದುರೆ ಮರಣ

ಪೂನಾದಲ್ಲಿ ಮೊನ್ನೆ ನಡೆದ ಕುದುರೆ ಪಂದ್ಯಪೋಟಿಯಲ್ಲಿ ಭಾಗವಹಿಸಿದ ಚಾಂದ್ ಚಕೋರ್ ಎಂಬ ಕುದುರೆಯು ಓಡುತ್ತಿದ್ದಾಗಲೇ ಕೆಳಗೆ ಬಿದ್ದು ಮರಣಹೊಂದಿತು. ಅದು ಗೆಲ್ಲುವುದೆಂದು ಆಸೆ ಇಟ್ಟು ಪಣ ಒಡ್ಡಿದವರೆಲ್ಲರಿಗೂ ದಂಗು ಬಡಿಯಿತು

ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆ

ಮೈಸೂರು ಪತ್ರಿಕೆ 'ಸಮಾಚಾರ' ಮತ್ತು ವರ್ತಮಾನ ಗಳ ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆಗಳು ನಮ್ಮ ಕೈಸೇರಿವೆ. ಅವುಗಳನ್ನು ಆದರದಿಂದ ಸ್ವೀಕರಿಸಿರುತ್ತೇವೆ. ಪತ್ರಿಕೆಗಳು ಉಪಯುಕ್ತ ಲೇಖನಗಳನ್ನೊಳಗೊಂಡು ಜನಾದರಣೀಯವಾಗಿವೆ. ಕೆಲವು ದಿನಗಳಿಂದ ಪ್ರಕಟವಾಗದೇ ಇದ್ದ 'ಸಿಂಹನಾದ' ದಿನಪತ್ರಿಕೆಯು ಸ್ವಾತಂತ್ರ್ಯ ದಿನೋತ್ಸವದಂದಿನಿಂದ ಪುನಃ ಶ್ರೀ ಎನ್ ಶ್ರೀಕಂಠಯ್ಯನವರ ಸಂಪಾದಕತ್ವದಲ್ಲಿ ಮೈಸೂರಿನಲ್ಲಿ ಆರಂಭವಾಗಿದೆ. ಈ ಪತ್ರಿಕೆಯು ಚಿರಕಾಲ ಸೇವೆ ಸಲ್ಲಿಸಲೆಂದು ಹಾರೈಸುತ್ತೇವೆ

ಡಿಪೋಗಳಿಗೆ ರಜಾ

ಇದೇ ೨೨ ನೇ ತಾರೀಖಿನಿಂದ ಧಾನ್ಯಗಳ ಪುನರ್ವಿಮರ್ಶಿತ ಬೆಲೆಯನ್ನು ಜಾರಿಗೆ ತರುವುದಕ್ಕೆ ಪೂರ್ವಭಾವಿ ನಗರದಲ್ಲಿರುವ ಎಲ್ಲ ಆಹಾರ ಡಿಪೋಗಳು, ಆಹಾರ ವಸ್ತು ಮಾರುವ ಸೊಸೈಟಿಗಳು, ಇಲಾಖೆಯ ಸ್ಟೋರ್‌ಗಳು ಮತ್ತು ಮೊಫಲ್ಲಾ ಸಬ್ ಗೋದಾಮುಗಳು ಇಂದೇ ತಾ|| ಮಂಗಳವಾರ ದಾಸ್ತಾನು ಪತ್ತೆಗಾಗಿ ಮಧ್ಯಾಹ್ನ ಮುಚ್ಚಲ್ಪಡುವುವೆಂದು ನಗರದ ರೇಷನಿಂಗ್ ಅಧಿಕಾರಿ ಶ್ರೀ ಹೆಚ್ ಜಿ ವಿಜಯ ರಾಘವ ರೆಡ್ಡಿಯವರು ತಿಳಿಸಿರುತ್ತಾರೆ

ಸ್ವಾತಂತ್ರ್ಯೋತ್ಸವ

ಶ್ರೀರಂಗಪಟ್ಟಣ

ಇಲ್ಲಿನ ಪ್ರೌಢಶಾಲಾ ಸಂಘದ [illegible] ಯವಲ್ಲಿ ಕಳೆದ ಬುಧವಾರ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ರಂಗನಾಥ ಆಟದ ಮೈದಾನದಲ್ಲಿ ಧ್ವಜಾರೋಹಣ ಮತ್ತು ವ್ಯಾಯಾಮ ಪ್ರದರ್ಶನ ನಡೆಯಿತು. ನಂತರ ಚಾಮರಾಜೇಂದ್ರ ಸ್ಮಾರಕ ಛತ್ರದ ಆವರಣದಲ್ಲಿ ಸಭೆ ಜರುಗಿತು. ಶ್ರೀ ಸಿ. ಬಂದೀಗೌಡರು ಅಧ್ಯಕ್ಷತೆವಹಿಸಿದ್ದರು. ಪ್ರಾರ್ಥನೆ, ಸ್ವಾಗತಗಳನಂತರ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ ಎಸ್ ನಂಜುಂಡಯ್ಯನವರು ಮತ್ತು ವಿದ್ಯಾರ್ಥಿಯಾದ ಬಿ. ವೆಂಕಟನಾರಾಯಣರವರು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಕಾರ್ಯಕ್ರಮ ಮುಕ್ತಾಯವಾಯಿತು.

ಹೆಮ್ಮರಗಾಲದ ಗ್ರಾಮ ಪಂಚಾಯಿತಿಯಲ್ಲಿ

ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಕಳೆದ ಬುಧವಾರ ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಗ್ರಾಮ ಪಂಚಾಯಿತಿ ಸಭೆಯು ನಂಜನಗೂಡು ಪೌರ ಸಭಾ ಮಾಜಿ ಅಧ್ಯಕ್ಷರವರಾದ ಬಿ ಎಸ್ ಎಸ್ ಆರಾಧ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು. ಕುಮಾರಿ ಉಷಾದೇವಿ ಮತ್ತು ಕುಮಾರಿ ಸರಸ್ವತಿಯರಿಂದ ಸುಶ್ರಾವ್ಯವಾದ ಸಂಗೀತವು [illegible] ಮ ಎ ವಿ ಥೀರ್ಥ ಶ್ರೀ ಹೆಚ್ ವೀರಭದ್ರಯ್ಯನವರಿಂದ ಗ್ರಾಮ ಮಹಾಜನರಿಗೂ ಹಾಗೂ ದೇಶದ ನಾಯಕರುಗಳಿಗೂ ಶುಭಾಶಯಗಳು ಕೋರಲ್ಪಟ್ಟವು. ಶ್ರೀ ವಿ ವಿಶ್ವನಾಥರವರ ಸ್ವತಂತ್ರ ಭಾರತದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂಬ ಭಾಷಣವಾದುದು. ರಾಷ್ಟ್ರ ಗೀತೆಯೊಡನೆ ಸಭೆ ಮುಕ್ತಾಯವಾಯಿತು

○ ಕಾಶ್ಮೀರದಲ್ಲಿ ಆಕ್ರಮಣಕಾರರ ವಶದಲ್ಲಿರುವ ಮುಜಫರಾಬಾದ್, ಪೂಂಚ್ ಮತ್ತು ಗಿಲ್ಗಿಟ್ ಪ್ರದೇಶಗಳಲ್ಲಿ ಕಳೆದ ಮೂರು ವಾರಗಳಿಂದ ಪಾಕಿಸ್ತಾನದ ಸೈನಿಕರ ಚಲನ ವಲನಗಳು ಹೆಚ್ಚಾಗಿರುವುದಾಗಿ ವರದಿಯಾಗಿದೆ

ಗೌಟ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ

ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಬಿ ಎ.

ಎಂಪಿರಿಯಲ್ ಬ್ಯಾಂಕ್ ಎದುರು ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಅನೋಘವಾದ 3ನೇ ವಾರ

ರಾಜಾ ಗೋಪಿಚಂದ್

ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ

ರಾತ್ರಿ 9-45 ಘಂಟೆಗೆ, ಉಳಿದ ದಿನಗಳಲ್ಲಿ ಮ್ಯಾಟಿನಿ 6 ಗಂಟೆಗೆ

ಸರ್ ಸಿ. ವಿ. ರಾಮನ್‌ರವರು

ನಿತ್ಯವೂ ಉಪಯೋಗಿಸುವ ಮತ್ತು ಶಿಫಾರಸ್ಸು ಮಾಡಿರುವ

ಹಲ್ಲುಪುಡಿ

ಪೈರೆಕ್ಸ್

§ ರೋಗವನ್ನು ಹೋಗಲಾಡಿಸುತ್ತದೆ

§ ರಕ್ತ ಸ್ರಾವವನ್ನು ನಿಲ್ಲಿಸುತ್ತದೆ

§ ದಂತ ರೋಗಗಳನ್ನು ತಡೆಗಟ್ಟುತ್ತದೆ

- ತಯಾರಕರು -

ದಿ ಪಯೋರಿಯಾ-ಕ್ಯೂರ್ ಲ್ಯಾಬೋರೇಟರೀಸ್ ಬೆಂಗಳೂರು

ಮೈಸೂರಿನ ಏಜಂಟರು

ಎಸ್. ಗೋಪಾಲನ್,

ಕುಪ್ಪಣ್ಣ ಬಜಾರ್ [illegible]

ಮೈಸೂರು

Edited, printed published by A. R. N rajan, at Sadhvi Press Subbiah Road, Mysore

ರಿಜಿ ನಂ 792 । ವಂದೇ ಮಾತರಂ । ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೩೦-೮-೫೦ [ಸಂಚಿಕೆ ೨೩

ಈ ವರ್ಷ ಆಹಾರದ ಬಿಕ್ಕಟ್ಟಿನ ನಿವಾರಣೆ

ಜೈಪ್ರಕಾಶ್ ಮತ್ತು ರೈಲ್ವೆ ಮಂತ್ರಿಗಳ ಭೇಟಿ

ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಅಧ್ಯಕ್ಷರಾದ ಜೈ ಪ್ರಕಾಶ್ ನಾರಾಯಣ್‌ರವರು ರೈಲ್ವೆ ಮಂತ್ರಿ ಎನ್. ಜಿ. ಅಯ್ಯಂಗಾರ್ಯರೊಡನೆ ಭೇಟಿ ನಡೆಸಿದರು ಇಬ್ಬರಿಗೂ ಪೂರ್ವಭಾವಿ ಸಂಭಾಷಣೆಗಳಾದುವು. ಪುನಃ ೨೯ನೇ ತಾ॥ ಅವರು ಸಂಧಿಸುವರೆಂದು ಹೇಳಲಾಗಿದೆ

ಭಾರತ ಮತ್ತು ಪಾಕಿಸ್ತಾನಗಳ ದೇವಾಲಯಗಳ ರಕ್ಷಣೆ

ಭಾರತ ಮತ್ತು ಪಾಕಿಸ್ತಾನಗಳಲ್ಲಿರುವ ದೇವಾಲಯ, ಮಸೀದಿ ಮತ್ತು ಗುರುದ್ವಾರ ಮುಂತಾದ ಪವಿತ್ರ ಮಂದಿರಗಳ ರಕ್ಷಣೆ, ಆಸ್ತಿಪಾಸ್ತಿ ನಿರ್ವಹಣೆಗಳ ಬಗ್ಗೆ ಸೂಕ್ತ ಏರ್ಪಾಡು ಮಾಡುವ ಸಲುವಾಗಿ ಎರಡು ರಾಷ್ಟ್ರಗಳ ಸಮ್ಮೇಳನವನ್ನು ನಡೆಸಲು ಶೀಘ್ರದಲ್ಲಿ ತಾರೀಕನ್ನು ಗೊತ್ತುಮಾಡಬೇಕೆಂದು ಪಾಕಿಸ್ತಾನಕ್ಕೆ ಭಾರತ ಸರ್ಕಾರದವರು ..ತ್ತಾಯ ಮಾಡಿರುತ್ತಾರೆ

ಲಕ್ಷ ಎಕರೆಯಲ್ಲಿ ಭತ್ತದ ಸಾಗುವಳಿ

ಹೆಚ್ಚು ಆಹಾರ ಬೆಳೆಯುವ ಯೋಜನೆ ರೀತ್ಯಾ ಶಿವಮೊಗ್ಗಾ ಜಿಲ್ಲೆಯ ಒಂದು ಲಕ್ಷ ಎಕರೆಯಲ್ಲಿ ಭತ್ತದ ವ್ಯವಸಾಯವನ್ನು ನಡೆಸಬೇಕೆಂದು ಗೃಹಮಂತ್ರಿ ಶ್ರೀ.ಟಿ.ಮರಿಯಪ್ಪನವರು ಅಧಿಕಾರಿಗಳಿಗೆ ಒತ್ತಾಯವಾಗಿ ಸೂಚಿಸಿರುತ್ತಾರೆ

ಪ್ರಪಂಚದ ದೇಹ ಪುಷ್ಟಿ ಪಂದ್ಯ

ದೇಹ ಪುಷ್ಟಿಯ ಬಗ್ಗೆ ಪ್ರಪಂಚದ ಪಂದ್ಯವನ್ನು ಇಂಗ್ಲೆಂಡಿನಲ್ಲಿ ಸಪ್ಟೆಂಬರ್ ೧ ಮತ್ತು ೨ ರಲ್ಲಿ ಏರ್ಪಡಿಸಲಾಗಿದೆ. ಇದರಲ್ಲಿ ಭಾಗವಹಿಸಲು ಕಲ್ಕತ್ತದ ಮನೋಹರ್ ಏಕ್‌ರವರು ೨೬ನೇ ತಾ॥ ಲಂಡನ್ನಿಗೆ ಪ್ರಯಾಣ ಬೆಳೆಸುವರು.

ಗಾಳಿಯನ್ನು ತಡೆಯಲು ಅರಣ್ಯ ನಿರ್ಮಾಣ

ರಾಜಸ್ತಾನದಲ್ಲಿರುವ ಥಾರ್ ಮರುಭೂಮಿಯ ಮೇಲೆ ಬೀಸುವ ಗಾಳಿಯ ವೇಗವನ್ನು ತಡೆಯುವುದಕ್ಕಾಗಿ ಅಲ್ಲಿ ಭಾರಿ ಅರಣ್ಯವನ್ನು ನಿರ್ಮಿಸಲು ಭಾರತ ಸರ್ಕಾರದವರು ಆಲೋಚಿಸಿರುತ್ತಾರೆ

ಬಟ್ಟೆಹಂಚಿಕೆ ಸರಿಯಾಗಿಲ್ಲವೆಂದು ವರ್ತಕನ ಉಪವಾಸ

ಗಿರಣಿ ಬಟ್ಟೆಗಳ ಹಂಚಿಕೆವಿಧಾನದಲ್ಲಿ ತುಂಬಾ ಲೋಪ ದೋಷಗಳಿರುವುದಾಗಿ ಸೂಚಿಸಿ ಬೊಂಬಾಯಿಯ ಒಬ್ಬ ಚಿಲ್ಲರೆ ಬಟ್ಟೆ ವ್ಯಾಪಾರಿಯು ನಗರ ಭವನದ ಎದುರಿನಲ್ಲಿ ಮೊನ್ನೆಯಿಂದ ಉಪವಾಸ ಮಾಡಲುಪಕ್ರಮಿಸಿರುತ್ತಾನೆ

ಮದ್ರಾಸು ವಿದ್ಯಾರ್ಥಿಗಳ ಪ್ರವಾಸ

ಮದ್ರಾಸಿನ ತಿರುಚಿಯ ಬಳಿ ಇರುವ ..ಪ್ಪಾಕುಲಂ ಬಿಷಪ್ ಹೇಬರ್ ಹೈಸ್ಕೂಲಿನ ೬೦ ಮಂದಿ ವಿದ್ಯಾರ್ಥಿಗಳು ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳುವ ಸಲುವಾಗಿ ರಾಜಧಾನಿಗೆ ಆಗಮಿಸಿರುವರು. ನಗರದ ಸ್ಟೇಟ್ ಕೌನ್ಸಿಲ್ಲಿನ ..ಯ ಟೆಕ್ನಿಕಲ್ ಅಸಿಸ್ಟೆಂಟಾದ ..ಕೆ. ವಿ. ವೆಂಕಟಸುಬ್ಬಯ್ಯನವರು ..ವರುಗಳಿಗೆ ಬೇಕಾದ ಸಹಾಯವನ್ನು ..ದಗಿಸುತ್ತಿರುವರು

ಮೂಲಭೂತ ಹಕ್ಕಿನ ಬದಲಾವಣೆ ಯಾವಾಗ ?

ಬೆಂಗಳೂರ ಸಂಘದ ಸುವರ್ಣೋತ್ಸವದಲ್ಲಿ ಜಯಕರರ ವಿಮರ್ಶೆ

ಬೆಂಗಳೂರು ೨೦

ಪೂನಾ ವಿಶ್ವ ವಿದ್ಯಾಲಯದ ವೈಸ್ ಚಾನ್ಸೆಲರಾದ ಡಾ॥ ಎಂ ಆರ್ ಜಯಕರ್‌ರವರು ನೆನ್ನೆ ಇಲ್ಲಿನ ವಕೀಲರ ಸಂಘದ ಸುವರ್ಣೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಭಾಷಣ ಮಾಡುತ್ತಾ ಮೂಲಭೂತ ಹಕ್ಕುಗಳ ಬದಲಾವಣೆ ಮಾಡಬೇಕಾದರೆ, ಸಕಲ ಜನರ ಸ್ಥಿತಿಗತಿಗಳನ್ನೂ ಮೂಲಭೂತ ವ್ಯತ್ಯಾಸವಿಲ್ಲದ ಹಾಗೆ ಮಾತ್ರ ಮಾಡಬಹುದೆಂದು ತಿಳಿಸಿದರು ಸರ್ಕಾರದವರು ..ತು. ಸಂಪೂರ್ಣತರ ..ತ್ತಾಯಕ್ಕೆ ಯಾವನೀತಿಯನ್ನೂ ಪುಷ್ಟೀಕರಿಸಲು ಮೂಲಭೂತ ಹಕ್ಕನ್ನು ಬದಲಾಯಿಸಬಾರದೆಂದು ಅಭಿಪ್ರಾಯಪಟ್ಟರು ಪತ್ರಿಕೆಗಳ ಹತೋಟಿ ಬಗ್ಗೆ ತರಲಿರುವ ಶಾಸನದಿಂದ ಮೂಲ ಭೂತ ಹಕ್ಕಿಗೆ ಚ್ಯುತಿಯುಂಟಾಗುವುದಿಲ್ಲವೇ ಎಂಬುದನ್ನು ಎಚ್ಚರಿಕೆಯಿಂದ ಪರಿಶೀಲಿಸುವುದು ಅಗತ್ಯವೆಂದು ಅವರು ತಿಳಿಸಿದರು. ದೇಶಕ್ಕೆ ರಾಜ್ಯಾಂಗವೇ ಮುಖ್ಯ ಭದ್ರತೆಯೆಂದೂ, ಆದ್ದರಿಂದ ಅದರ ಬದಲಾವಣೆಯನ್ನು ಸುಲಭದ ಮೇಲೆ ಮಾಡುವುದುಚಿತವಲ್ಲವೆಂದೂ ಹೇಳಿದರು ಪ್ರಿವಿ ಕೌನ್ಸಿಲ್ಲಿನ ನ್ಯಾಯಸಮಿತಿಯನ್ನು ಆತುರವಾಗಿ ರದ್ದು ಮಾಡಿದುದನ್ನು ಅವರು ಟೀಕಿಸಿದರು. ಸುಪ್ರೀಂ ಕೋರ್ಟ್ ಅತ್ಯುತ್ತಮ ನ್ಯಾಯಾಸ್ಥಾನವಾಗಿರುವುದೆಂದು ಹೇಳಿದರು. ಡಾ॥ ಜಯಕರರ ಶ್ರೀಗಳಾದ ಎಚ್ ಎಸ್ ನಾರಾಯಣ ಶಾಸ್ತ್ರಿ, ಹೆಚ್. ವಿ ನಾರಾಯಣರಾವ್, ವಿ ನಾರಾಯಣ ಶೆಟ್ಟಿ, ಎಸ್ ರಾಮಸ್ವಾಮಿ ಅಯ್ಯರ್, ರಾಮಸ್ವಾಮಿಶೆಟ್ಟಿ ಮತ್ತು ಡಾ॥ ಬಿ ವಾಸುದೇವಮೂರ್ತಿಯವರುಗಳ ಭಾವಚಿತ್ರಗಳನ್ನು ಅನಾವರಣ ಮಾಡಿದರು

ಪುರಸಭಾಧ್ಯಕ್ಷರ ಕೃತಜ್ಞತೆ

ಕಳೆದ ೨೫ನೇ ತಾ॥ ನಡೆದ ಸರ್ವತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಸಾರ್ವಜನಿಕರು ನೀಡಿದ ಸಹಾಯಕ್ಕಾಗಿ ಪೌರಸಭೆಯ ಪರವಾಗಿ ಅಧ್ಯಕ್ಷರು ಕೃತಜ್ಞತೆಯನ್ನು ಸೂಚಿಸುತ್ತಾರೆ

ಪತ್ರಿಕಾ ಹರತಾಳ ಮುಂದಕ್ಕೆ ಹೋಯಿತು

ಭಾರತದಲ್ಲಿ ಪತ್ರಿಕಾ ಹರತಾಳವನ್ನು ಮುಂದುವರಿಸಲು ದೆಹಲಿಯಲ್ಲಿ ಸೇರಿರುವ ಅಖಿಲ ಭಾರತ ಪತ್ರಿಕಾ ಸಮ್ಮೇಳನದ ಸ್ಥಾಯಿ ಸಮಿತಿಯು ನಿರ್ಧರಿಸಿರುತ್ತದೆ ಕಳೆದ ಜೂಲೈ ೧೬ ರಲ್ಲಿ ನಡೆಯಬೇಕಾಗಿದ್ದ ಹರತಾಳವನ್ನು ಮುಂದುವರಿಸಬೇಕೆಂದು ಅಧ್ಯಕ್ಷರು ಆಗ ಸೂಚಿಸಿದ್ದುದನ್ನು ಸಮಿತಿಯು ಪರಿಶೀಲಿಸಿ ಮೇಲ್ಕಂಡಂತೆ ನಿರ್ಣಯಮಾಡಿರುತ್ತದೆ ನೆನ್ನೆ ದಿನ ಗೃಹಮಂತ್ರಿ ರಾಜಾಜಿಯವರು ಸ್ಥಾಯಿಸಮಿತಿ ಸದಸ್ಯರೊಡನೆ ಪತ್ರಿಕಾ ಮಸೂದೆ ಬಗ್ಗೆ ಚರ್ಚೆ ನಡೆಸಿದರು ಪೂರ್ವಭಾವಿ ಸನ್ಸಾರ್‌ಷಿಪ್ಪನ್ನು ತೆಗೆಯಬಹುದೆಂದೂ, ಪತ್ರಿಕೆಗಳಿಂದ ಠೇವಣಿಯನ್ನು ಸರ್ಕಾರದವರು ಕೇಳಲು ಅವಕಾಶವಿರದೇ ನ್ಯಾಯಾಧೀಶರು ಕೇಳಲು, ಹೊಸಮಸೂದೆಯಲ್ಲಿ ನಿಬಂಧನೆಗಳನ್ನು ಸೇರಿಸಲಾಗುವುದೆಂದೂ ತಿಳಿದು ಬಂದಿದೆ

ಭಾಷಾವಾರು ಪ್ರಾಂತಗಳ ಗಡಿ ಸಮಿತಿ ರಚನೆ

ದಕ್ಷಿಣ ಭಾರತದಲ್ಲಿ ಭಾಷಾವಾರು ಪ್ರಾಂತ ರಚನೆಯನ್ನು ಸುಗಮಗೊಳಿಸುವ ಸಲುವಾಗಿ ಚುನಾವಣೆಗೆ ಮುಂಚೆ ಅಥವಾ ಅನಂತರ ಗಡಿ ನಿರ್ದೇಶ ಸಮಿತಿಯನ್ನು ಭಾರತ ಸರ್ಕಾರದವರು ರಚಿಸುವರೆಂದು ಕಾಂಗ್ರೆಸ್ ಅಧ್ಯಕ್ಷ ಟಂಡನ್‌ರವರು ಮೊನ್ನೆ ಹೊಸಪೇಟೆಯ ಬಹಿರಂಗ ಸಭೆಯಲ್ಲಿ ತಿಳಿಸಿದರು. ಕರ್ನಾಟಕ ಪ್ರಾಂತ ರಚನೆಯು ಖಂಡಿತವೆಂದು ಅವರು ಹೇಳಿ, ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಓಟು ಕೊಡಬೇಕೆಂದು ಕೋರಿದರು

ಮಧ್ಯ ಪ್ರದೇಶ ಮಂತ್ರಿ ಮಂಡಲದಲ್ಲಿ ಅವಿಶ್ವಾಸ

ಮಧ್ಯಪ್ರದೇಶ ಶಾಸನ ಸಭೆಯಲ್ಲಿ ಹೊಸದಾಗಿ ರಚಿತವಾಗಿರುವ ಪ್ರಜಾಪಕ್ಷವು ಅಲ್ಲಿನ ಕಾಂಗ್ರೆಸ್ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವೊಂದನ್ನು ತರಲಿದೆ ಈ ದಿನದಿಂದ ಶಾಸನ ಸಭಾಧಿವೇಶನವು ಪ್ರಾರಂಭವಾಗುವುದು ಪ್ರಜಾಪಕ್ಷದಲ್ಲಿ ..ಜನ ಸದಸ್ಯರಿರುತ್ತಾರೆ

ಆಶಾದಾಯಕವಾದ ಆಹಾರ ಪರಿಸ್ಥಿತಿ

ಇದುವರೆಗೂ ಕಠಿಣವಾಗಿದ್ದ ಆಹಾರ ಪರಿಸ್ಥಿತಿಯು ಈಗ ಕೊನೆಗಂಡಿದೆ ಮದ್ರಾಸು, ಮೈಸೂರು, ಹೈದರಾಬಾದ್, ಬಿಹಾರ, ಪಶ್ಚಿಮ ಬಂಗಾಳ ಮುಂತಾದ ಸಂಸ್ಥಾನಗಳಲ್ಲಿನ ಪರಿಸ್ಥಿತಿಯು ಉತ್ತಮಗೊಂಡಿದೆ ಈ ವರ್ಷದ ಭವಿಷ್ಯ ಆಶಾದಾಯಕವಾಗಿದೆ ಕಳೆದ ವರ್ಷ ಇದ್ದಂತಹ ಕಠಿಣ ಪರಿಸ್ಥಿತಿ ಈಗ ಕಾಣಬರುವುದಿಲ್ಲ—ಎಂಬುದಾಗಿ ಕೇಂದ್ರ ಆಹಾರ ಮಂತ್ರಿ ಶ್ರೀ ಕೆ ಎಂ. ಮುನ್ಷಿಯವರು ತಿಳಿಸಿರುವರು

ಪೂರ್ವ ಕೊರಿಯಾಂಗ್ ಬಳಿ ವಿಶ್ವ ಸಂಸ್ಥೆಯ ಹೊಸ ಧಾಳಿ

ಕೊರಿಯಾಂಗ್ ಸಂಧಾನಕಿಗ್ಗಿ ಸೂಚನೆಯಾದ ೫೦ ದಿನಗಳ ನಂತರ ನೆನ್ನೆ ಅಲ್ಲಿಗೆ ಪೂರ್ವದಲ್ಲಿ ಕೊರಿಯದ ಅತ್ಯಂತ ಭೀಕರ ಕದನವು ಉಪಕ್ರಮವಾಯಿತು. ಸನೀಮಕಾಳಗ ಮತ್ತು ಫಿರಂಗಿಗಳ ಬೆಂಕಿಯು ಬಲವಾಗಿ ನಡೆಯುತ್ತಿವೆ. ವಿಶ್ವಸಂಸ್ಥೆ ಸೈನ್ಯಗಳು ಧಾಳಿಯನ್ನು ಪ್ರಾರಂಭಿಸಿ, ವಿಮಾನ ಮತ್ತು ನೌಕೆಯ ಸಹಾಯವನ್ನು ಪಡೆದು ಕದನದಲ್ಲಿ ತೊಡಗಿವೆ. ಕಮ್ಯೂನಿಸ್ಟರು ಕೆಲವು ಗುಡ್ಡಪ್ರದೇಶಗಳನ್ನು ಬಿಟ್ಟುಕೊಟ್ಟು ಎತ್ತರ ಕಡೆ ವಿಶ್ವಸಂಸ್ಥೆ ಸೈನ್ಯಗಳನ್ನು ಒಂದಕ್ಕೆ ಅಟ್ಟಿದರೆಂದು ಹೇಳಲಾಗಿದೆ ಇತ್ತ ಕೊರಿಯಾ ಸೀಸ್‌ಫೈರ್ ಸಂಧಾನವು ಇನ್ನೂ ನಡೆಯುತ್ತಲೇ ಇದೆ

ವಿಶ್ವಸಂಸ್ಥೆ ಸೈನ್ಯಗಳಿಂದ ತಾಟಸ್ಥ್ಯ ಭಂಗವೇ ?

ಕೇಸಾಂಗ್ ಪ್ರದೇಶದಲ್ಲಿ ವಿಶ್ವಸಂಸ್ಥೆಯು ತಾಟಸ್ಥ್ಯ ಭಂಗಮಾಡಿರುವುದಾಗಿ ಕಮ್ಯೂನಿಸ್ಟರು ಆರೋಪಣೆ ಮಾಡಿರುತ್ತಾರೆ. ಇದನ್ನು ವಿಚಾರಿಸಲು ನೆನ್ನೆ ಜಂಟಿ ಸ್ಥಳಪರಿಶೀಲನೆ ಪ್ರಾರಂಭವಾಯಿತು ತಾಟಸ್ಥ್ಯ ಪ್ರದೇಶದಲ್ಲಿನ ಕಮ್ಯೂನಿಸ್ಟ್ ಸೈನಿಕರ ಮೇಲೆ ಗುಂಡು ಹಾರಿಸಲಾಗಿತ್ತೆಂದೂ ಅಪಾದನೆ ಮಾಡಲಾಗಿದೆ

ಕಾಶ್ಮೀರದ ಬಗ್ಗೆ ಅರಬ್ ಮುಖಂಡರ ಮಧ್ಯಸ್ತಿಕೆ ?

ಕಾಶ್ಮೀರದ ಸಂಬಂಧವಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇರುವ ವಿವಾದವನ್ನು ಪರಿಹರಿಸಲು ಅರಬ್ ಲೀಗಿನ ಪ್ರಧಾನ ಕಾರ್ಯದರ್ಶಿ ಅಜಾಮ್ ಪಾಷಾರವರು ಪ್ರಯತ್ನಿಸುತ್ತಿರುವುದಾಗಿ ವರದಿಯಾಗಿದೆ. ಈಗಾಗಲೇ ಅವರು ಈಜಿಪ್ಟಿನಲ್ಲಿರುವ ಪಾಕಿಸ್ತಾನ ಮತ್ತು ಭಾರತಗಳ ರಾಯಭಾರಿಗಳನ್ನು ಭೇಟಿ ಮಾಡಿರುವರೆಂದು ಹೇಳಲಾಗಿದೆ

ಭದ್ರಾವತಿ ಪೊಟೇಲು ಮಾಲೀಕರ ನಿಧನ

ಭದ್ರಾವತಿ ಟೌನ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ರಾಘವೇಂದ್ರರಾಯರು ಮೊನ್ನೆ ರಾತ್ರಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ನಿಧನರಾದರು ತಮ್ಮ ಹೋಟೇಲಿಗೆ ಪೋಲೀಸರು ಶೋಧನೆಗಾಗಿ ಆ ದಿನ ಬೆಳಿಗ್ಗೆ ಹೋದಾಗ ಕಕ್ಕಸ್ಸಿಗೆ ಹೋಗುವುದಾಗಿ ತಿಳಿಸಿ, ಅಲ್ಲಿ ಕತ್ತನ್ನು ಕುಯ್ದುಕೊಂಡು ಆಸ್ಪತ್ರೆಗೆ ಸೇರಿಸಲಾಗಿದ್ದರು

ಥಿಯೋಬಾಲ್ಡ್ ರಸ್ತೆಯಲ್ಲಿ ಲಾರಿ ಸಂಚಾರದಿಂದ ತೊಂದರೆ

ರಾಜಧಾನಿಯ ನಜರ್‌ಬಾದ್ ಮೊಹಲ್ಲಾದ ಥಿಯೋಬಾಲ್ಡ್ ರಸ್ತೆಯಲ್ಲಿ ಲಾರಿಗಳು ಸಂಚರಿಸ ಕೂಡದೆಂದು ಪುರಸಭೆಯವರು ಬೋರ್ಡನ್ನು ಹಾಕಿದ್ದರೂ ಸಹ ಅನೇಕ ಬಸ್ಸು ಮತ್ತು ಲಾರಿಗಳು ಬಹು ವೇಗವಾಗಿ ತಿರುಗುತ್ತಲೇ ಇವೆ ಜನರಿಗೆ ಇದರಿಂದ ತುಂಬ ಅನಾನುಕೂಲವಾಗಿದೆ ಜಲಪುರಿಯಲ್ಲಿರುವ ಮಿಲಿಟರಿಗೆ ಸೇರಿದ ಲಾರಿಯು ಈ ರಸ್ತೆಯಲ್ಲಿ ದಿನಕ್ಕೆ ಎರಡು ಮೂರು ಬಾರಿ ಅತಿ ವೇಗವಾಗಿ ಓಡಾಡುತ್ತದೆ ಲಾರಿಗಳು ಗೌರ್ನಮೆಂಟ್ ಹೌಸ್ ದಾರಿಯಲ್ಲಿ ಹೋಗುವಂತೆ ಅಧಿಕಾರಿಗಳು [illegible] ವುದು ಅವಶ್ಯಕ ಪೌರಸಭೆಯವರು ಹಾಕಿರುವ ತಮ್ಮ ಬೋರ್ಡುಗಳಿಗೆ ಮಾನ್ಯತೆ ದೊರಕುವಂತೆಯೂ ಜನರಿಗೆ ಇರುವ ತೊಂದರೆಯು ನಿವಾರಣೆಯಾಗುವಂತೆಯೂ ಏರ್ಪಡಿಸುವರೆಂದು ನಂಬಲಾಗಿದೆ

ಕನ್ನಡ ಕಲಿ ಸಿರುಮನ ಚರಿತೆ

ಇತಿಹಾಸ ಸಂಶೋಧನ ಪ್ರವೀಣ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಪ್ರಕಟಿಸಿರುವ ಕನ್ನಡ ಕಲಿ ಸಿರುಮನ ಚರಿತೆ ಎಂಬ ಗ್ರಂಥವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ ಇದರಲ್ಲಿ ಚಿತ್ರದುರ್ಗ ಜಿಲ್ಲಾ ಬೂದಿಹಾಳು ಗ್ರಾಮದ ಪಾಳೇಗಾರರ ವೀರ ಪರಾಕ್ರಮವನ್ನು ವಿವರಿಸಲಾಗಿದೆ ಈ ಗ್ರಂಥದ ಭಾಗಗಳು ಮೊದಲು ಕರ್ಣಾಟಕ ಸಾಹಿತ್ಯ ಮಾಲೆಯಲ್ಲಿ ಪ್ರಕಟವಾಗಿದ್ದವು ಈಗ ಪುಸ್ತಕ ರೂಪದಲ್ಲಿ ಹೊರಬಿದ್ದಿದೆ ಪ್ರಕಾಶಕರು ಬೆಂಗಳೂರಿನಲ್ಲಿರುವ ಡಾ|| ಬಿ|| ಶಿವಮೂರ್ತಿ ಶಾಸ್ತ್ರಿಗಳು ಬೆಲೆ [illegible] ಕರ್ಣಾಟಕದ ಗತವೈಭವದಲ್ಲಿ ಆಸಕ್ತಿ ಇರುವವರೆಲ್ಲರೂ ಅಗತ್ಯವಾಗಿ ಓದಬೇಕು

ವಿದ್ಯುಚ್ಛಕ್ತಿ ಇಲಾಖಾಧಿಕಾರಿಗಳು

ಜ|| ಹಯಾತ್‌ರವರು ೪ ತಿಂಗಳುಗಳ ಕಾಲ ಇಂಡೋನೇಷ್ಯದ ವಿದ್ಯುಚ್ಛಕ್ತಿ ಸಲಹೆಗಾರರಾಗಿರಲು ಈ ತಿಂಗಳು ಕೊನೇ ತಾರೀಖು ತೆರಳಲಿರುವರು ಶಿವನಸಮುದ್ರದಲ್ಲಿ ಜ|| ಸೂಪರಿಂಟೆಂಡೆಂಟರಾಗಿರುವ ಶ್ರೀ ಚಾಂಡಿಯವರು ಅವರ ಸ್ಥಾನಕ್ಕೆ ವರ್ಗಾಯಿಸಲ್ಪಡುವರೆಂದು ಹೇಳಲಾಗಿದೆ

ಡಿಮೆಲ್ಲೊಯವರ ವರ್ಧಂತಿ ಗೌರವಕ್ಕಾಗಿ ಕನ್ನಡ ಚಲಾವಣೆ

ಹಾಲಿವುಡ್ಡಿನ ಸುಪ್ರಸಿದ್ಧ ಚಲನಚಿತ್ರಕಾರರಾದ ಸೆಸಿಲ್ ಡಿಮೆಲ್ಲೊಯವರಿಗೆ ಕಳೆದ ಭಾನುವಾರ ೭೦ ವರ್ಷ ತುಂಬಿದ ಸಂದರ್ಭದಲ್ಲಿ ರಾಜಧಾನಿಯ [illegible] ಶ್ರೀ ಚಿತ್ರಮಂದಿರಗಳ ಸಮೂಹದ ಪರವಾಗಿ ಶ್ರೀ ಎಂ ವೈ ಸ್ವಾಮಿಯವರು ಸ್ಯಾಂಸನ್ ಅಂಡ್ ಡಲೈಲ ಎಂಬ ಚಿತ್ರದ ಕಥಾಭಾಗವನ್ನು ರಾಜಧಾನಿಯ ಪ್ರಸಿದ್ಧ [illegible] ಶ್ರೀ [illegible] ಅವರಿಂದ ಕನ್ನಡದಲ್ಲಿ [illegible] ರಚಿಸಿ ಪ್ರಕಟಿಸಿದರು [illegible] ಪ್ರಮಾಣ [illegible] ಗಮನಕ್ಕೆ ಬಾಯಿತು ಇದರ ಮೊದಲ ಪ್ರತಿಯನ್ನು ಡಿಮೆಲ್ಲೊಯವರಿಗೆ [illegible] ಚಿತ್ರ ಪ್ರಗತಿಪರ ಪ್ರಚಾರಕರಾದ ಶ್ರೀ ಕೆ ಎಸ್ [illegible] ರವರ ಮೂಲಕ ಕಳುಹಿಸಲಾಗಿದೆ [illegible] ಕನ್ನಡದಲ್ಲಿರುವ ಈ ಚಲಾವಣೆಯ [illegible] ವನ್ನು ತಿಳಿಯಲು ಡಿಮೆಲ್ಲೊಯವರು ಈ ಭಾಷೆಯನ್ನು ಕಲಿಯಬಹುದು [illegible] ಪಿಸಲಾಗಿದೆ

ಭಾರತಕ್ಕೆ ಅಂತರ ರಾಷ್ಟ್ರೀಯ ಕಾರ್ಮಿಕರ ಪ್ರತಿಭಟನೆ

[illegible] ಸರ್ಕಾರ ಮತ್ತು [illegible] ಕರರುಗಳಿಗ ಇರುವ [illegible] ಧರಾಗಿ ಸರ್ಕಾರದವರು [illegible] ಇರುವ [illegible] ಸ್ವಾತಂತ್ರ್ಯವನ್ನು [illegible] ಮಾಡಿರುವುದಾಗಿ [illegible] ಪ್ರತಿಭಟನೆಯನ್ನು [illegible] ಅಂತರ ರಾಷ್ಟ್ರೀಯ ಸಂಚಾರ [illegible] ಸಂಘವು ಸಿದ್ಧರಿಸಿರುತ್ತದೆ

ಕ್ರಿಕೆಟ್ ಸಂಸ್ಥೆಗಳಿಂದ ೭ ಲಕ್ಷ ರೂ ಆದಾಯ

ಬೊಂಬಾಯಿ ನಗರದಲ್ಲಿ ಕಳೆದ ೨೫ ವರ್ಷಗಳ ಕಾಲದಲ್ಲಿ ನಡೆದ ಕ್ರಿಕೆಟ್ ಸಂಸ್ಥೆಗಳ ಸೇಲ್ ಹಾಕಲಾದ ಮನರಂಜನೆ ತೆರಿಗೆಯಿಂದ ತಿಕ್ಷಿನ ಸರ್ಕಾರಕ್ಕೆ ಒಟ್ಟು ೭ ಲಕ್ಷ ರೂ ಗಳಷ್ಟು ಆದಾಯವು ಬಂದಿದೆಯೆಂದು ತಿಳಿದುಬಂದಿದೆ

ಮೈಸೂರು ಕಲೆ ಬಗ್ಗೆ ಸರ್ವೆ

ಕಲ್ಕತ್ತದ ಕೈಗಾರಿಕಾ ಕಲಾ ಶಾಲೆಯ ಪ್ರಿನ್ಸಿಪಾಲರಲ್ಲಿಯೂ ಮತ್ತು ಇಂಡ್ಯ ದೇಶದಲ್ಲಿಯೂ ಹಳ್ಳಿಗಳಲ್ಲಿರುವ ಪರಂಪರಾನುಗತವಾದ ಕಲೆಗಳು ಮತ್ತು ಕಸಬುಗಳ ಬಗ್ಗೆ ಸರ್ವೆ ತೆಗೆದುಕೊಳ್ಳಲು ನಿರ್ಧರಿಸಿರುತ್ತದೆ

ದೇವಸ್ಥಾನಗಳ ನಾಶದ ಬಗ್ಗೆ ಕೇಂದ್ರ ಸಚಿವರಿಗೆ ಮನವಿ

ತಿರುವಾಂಕೂರ ಸಂಸ್ಥಾನದಲ್ಲಿ ಇತ್ತೀಚಿಗೆ ದೇವಾಲಯಗಳನ್ನು ನಾಶ ಮಾಡುವ ಕಾರ್ಯ ಹೆಚ್ಚಾಗಿರುವುದರ ಬಗ್ಗೆ ಕೇಂದ್ರ ಸರ್ಕಾರದ ಗೃಹ ಸಚಿವ [illegible] ಜಗದ್ಗುರು ಶಂಕರಾಚಾರ್ಯರ [illegible] ಕೃಷ್ಣ [illegible] ಮಂತ್ರಿ [illegible] ಇತರ ಪ್ರಮುಖರು ಒಂದು ಮನವಿ [illegible] ದಿನೇ ದಿನೇ ಈ ಕಾರ್ಯವು ಹೆಚ್ಚುತ್ತಿರುವುದಕ್ಕೆ ಅಧಿಕಾರಿಗಳಲ್ಲಿ [illegible] ಇರುವುದೇ ಕಾರಣವೆಂದೂ ಮತ್ತು ಇದನ್ನು ನಿಲ್ಲಿಸದಿದ್ದಲ್ಲಿ [illegible] ತೊಂದರೆ [illegible] ಸೂಚಿಸಲಾಗಿದೆ

ಗಡಿನಾಡು ಗಾಂಧಿ ಪ್ರಸ್ತಾಪಕ್ಕೆ ಪಾಕಿಸ್ತಾನ ಪ್ರತಿಭಟನೆ

ಭಾರತ ಸರ್ಕಾರವು ಹೊರಡಿಸಿರುವ ಪ್ರಕಟಣೆಗಳಲ್ಲಿ [illegible] ಗಡಿನಾಡು ಗಾಂಧಿ [illegible] ಬಗ್ಗೆ ಮಾಡಿ [illegible] ಪಾಕಿಸ್ತಾನವು ಭಾರತ ಸರ್ಕಾರಕ್ಕೆ ಪ್ರತಿಭಟನೆ [illegible] ಪಾಕಿಸ್ತಾನ [illegible] ಭಾರತ [illegible] ಸಲಾಗಿದೆ

ಪೂರ್ವ ಬಂಗಾಳದ ಹಿಂದುಗಳ ದುಸ್ಥಿತಿ

[illegible] ಭಾರತಕ್ಕೆ ಬರು [illegible] ಭಾರತ ಸರ್ಕಾರದವರ [illegible] ಪಾಕಿಸ್ತಾನಕ್ಕೆ [illegible] ಸರ್ಕಾರವು ಕೈಗೊಂಡಿರುವ ಹಲವು ಕಾರ್ಯಕ್ರಮಗಳ [illegible] ತಿಮಯಾಗಿ ಅವರು ಭಾರತಕ್ಕೆ ಬರುತ್ತಿರುವರೆಂದು ತಿಳಿಸಿರುತ್ತಾರೆ ಹಿಂದುಗಳ ಭಯ ನಿವಾರಣೆಗೆ ಕ್ರಮ ಕೈಗೊಳ್ಳಬೇಕೆಂದು ಭಾರತ ಸರ್ಕಾರದವರು ಕೋರಿರುತ್ತಾರೆ

ರಾಜಕಮಲ್, ಮೈಸೂರು

17-8-51 ರಿಂದ 2ನೇ ವಾರ

ಜಗನ್ಮೋಹಿನಿ

Edited, printed and published by A R Nagarajan at Sadhvi Press D Subbiah Road Mysore

ಕುದಿಯುವ ಗಂಜಲಕ್ಕೆ ಬೆರಳನ್ನು ಅದ್ದಿಸಿದ ಪ್ರಸಂಗ

ಮುಜಾಫರಿನ ಶಾಲೆಯೊಂದರ ಉಪಾಧ್ಯಾಯರ ಮನೆಯಲ್ಲಿ ಒಬ್ಬ ವಿದ್ಯಾರ್ಥಿಯು ೩ ರೂಪಾಯಿಗಳನ್ನು ಕದ್ದಿರಬಹುದೆಂಬ ಅನುಮಾನದ ಮೇಲೆ ಸದರಿ ಉಪಾಧ್ಯಾಯರು ಕಳ್ಳತನ ಪತ್ತೆ ಹಚ್ಚುವ ಸಲುವಾಗಿ ಆ ವಿದ್ಯಾರ್ಥಿಯ ಕೈ ಬೆರಳನ್ನು ಕುದಿಯುವ ಗಂಜಲದಲ್ಲಿ ಅದ್ದಿದ ಪ್ರಸಂಗವು ನಡೆದು ಉಪಾಧ್ಯಾಯರಿಗೆ ೫೦ ರೂ ಜುಲ್ಮಾನೆ ವಿಧಿಸಲಾಗಿದೆ

ಕಾಶ್ಮೀರದ ಚುನಾವಣೆವರೆಗೆ ಆಕ್ರಮಣ ಭೀತಿ ತಪ್ಪಿದ್ದಲ್ಲ

ಸೂಕ್ತವಾದ ರಕ್ಷಣಾ ಏರ್ಪಾಡುಗಳನ್ನು ಭಾರತವು ಕೈಗೊಂಡಿರುವುದರಿಂದ ಪಾಕಿಸ್ತಾನದ ಬಗ್ಗೆ ಜನರು ಭಯಪಡಬೇಕಾಗಿಲ್ಲವೆಂದೂ ಆದರೆ ಕಾಶ್ಮೀರದ ಶಾಸನ ರಾಜ್ಯಾಂಗ ಸಭೆಗೆ ಚುನಾವಣೆ ಮುಗಿಯುವವರೆಗೂ ಆಕ್ರಮಣದ ಭಯ ತಪ್ಪಿದ್ದಲ್ಲವೆಂದೂ ಕೇಂದ್ರ ವಿಶೇಷಾಂಗ ಉಪ ಮಂತ್ರಿ ಡಾ|| ಬಿ ವಿ ಕೇಸ್ಕರ್‌ರವರು ತಿಳಿಸಿರುತ್ತಾರೆ

ಈಜಿಪ್ಟ್ ದೊರೆ ಅಪಮಾನಕ್ಕಾಗಿ ಬಹುಮಾನ ತಿರಸ್ಕಾರ

ಈಜಿಪ್ಟ್ ದೇಶದ ದೊರೆ ಫರೂಕರ ಮೇಲೆ ಅಪಮಾನಕರ ಮತ್ತು ಆಧಾರವಿಲ್ಲದ ಆರೋಪಣೆಗಳನ್ನು ಬ್ರಿಟನ್ನಿನಲ್ಲಿ ಮಾಡಿರುವುದನ್ನು ಪ್ರತಿಭಟಿಸಿ ಇಂಗ್ಲಿಷ್ ಕಡಲ್ಗಾಲುವೆಯನ್ನು ಈಜುವ ಪಂದ್ಯಗಳಲ್ಲಿ ಗೆದ್ದ ಆ ದೇಶದ ಮೂವರು ಸ್ಪರ್ಧಿಗಾರರು ಒಟ್ಟು ೧೫೦೦ ಪೌಂಡುಗಳ ಬಹುಮಾನಗಳನ್ನು ನಿರಾಕರಿಸಿರುತ್ತಾರೆ

ಬನ್ನೂರು ಬಳಿ ಕಾವೇರಿ ಸೇತುವೆ ಅಸ್ತಿಭಾರ

ಬರುವ ಅಕ್ಟೋಬರ್ ತಿಂಗಳಿನಲ್ಲಿ ಶ್ರೀಮನ್ ಮಹಾರಾಜರು ಬನ್ನೂರು ಬಳಿ ಕಾವೇರಿ ನದಿ ಸೇತುವೆಯ ಅಸ್ತಿಭಾರವನ್ನು ಹಾಕುವರೆಂದು ಗೊತ್ತಾಗಿದೆ

WANTED

Applications are invited for the post of a Daily Auditor for daily audit of accounts on a monthly pay of Rs 50/- with the usual rate of Dearness allowance The applicant must have passed the Accountancy Examination & must be able to attend to the Daily Audit of the Stores

Applications should reach the undersigned on or before the 31st August 1951

D. VENKATARAMA RAO
Hon Secretary
Chamarajapuram Co operative Stores Ltd , Mysore
MYSORE,
Dated 19th Aug 1951

The National Institute of Engineering, Mysore

TENDER NOTIFICATION

Sealed tenders for constructing two Workshop-sheds will be received by the undersigned till the 25th inst Plans and details of work to be done can be seen at the Institute, 944, Laxmipuram, Mysore.

D V NARASIMHA RAO,
Honorary Secretary

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (೦) ಇವರು

ರತ್ನಾವಳಿ ಥಿಯೇಟರಿನಲ್ಲಿ

ಅಮೋಘವಾದ 3ನೇ ವಾರ **ರಾಜಾ ಗೋಪಿಚಂದ್**

ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ ರಾತ್ರಿ 9 45 ಘಂಟೆಗೆ ಉಳಿದ ದಿನಗಳಲ್ಲಿ ಮ್ಯಾಟಿನಿ 6 45ಕ್ಕೆ

ಗೌರಿ ಹಬ್ಬಕ್ಕಾಗಿ ★ ನಾಜೂಕಾದ ಹೊಸ ರೀತಿಯ ಸೀರೆಗಳು ಮತ್ತು ಜರಿ ಸೀರೆಗಳು ಬಂದಿವೆ ನೇರವಾಗಿ ಬಂದು ಕೊಳ್ಳಿರಿ

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ ಬೊಂಬಾಯಿ ಆನಂದ ಭವನ ಹೋಟೆಲ್ ಪಕ್ಕ, ಮೈಸೂರು

ರಿಜಿ ನಂ 792 ೧ವರ ಜೇ ಮುಖಬೆಲೆ ೧ ಇಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಮಂಗಳವಾರ ೨೧-೬-೫೧ [ಸಂಚಿಕೆ ೨೪

ಸಂಸ್ಥಾನದಲ್ಲಿ ಆಹಾರದ - ಬೆಲೆ ಹೆಚ್ಚುವುದಿಲ್ಲ -

ಕೊಲೆ ಪ್ರಯತ್ನದ ಆಪಾದನೆಗಾಗಿ ವಕೀಲರ ದಸ್ತಗಿರಿ

೧೦೦೦೦ ರೂ. ಜಾಮೀನಿನ ಮೇಲೆ ಬಿಡುಗಡೆ

ಸ್ವಂ ಸು ಫೋ] ಬೆಂಗಳೂರು ೨೧

ಕೆಲವು ದಿನಗಳ ಹಿಂದೆ ಇಲ್ಲಿನ ಬಿ ಟಿ ಸಿ ಕಂಪೆನಿಯ ಬಳಿ ದೊಡ್ಡಬಳ್ಳಾಪುರದ ವಕೀಲರಾಗಿದ್ದ ಶ್ರೀ ರಾಮಕೃಷ್ಣಯ್ಯ ಎಂಬುವರನ್ನು ಹೊಡೆದು ಗಾಯಗೊಳಿಸಿದ ಸಂಬಂಧವಾಗಿ ಪೊಲೀಸರು ಅವರ ಹಿರಿಯ ಮಗ ಬೆಂಗಳೂರಿನ ಅಡ್ವೊಕೇಟ್ ಶ್ರೀ ಪಿ ಬಾಲಕೃಷ್ಣರವರನ್ನೂ, ಚೌರಿ ಮತ್ತು ಹನುಮಂತ ಎಂಬುವರನ್ನೂ ದಸ್ತಗಿರಿ ಮಾಡಿ ಈ ದಿನ ಇಲ್ಲಿನ ಮೊದಲನೇ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ತೀವ್ರ ಗಾಯಗೊಳಿಸಿದ ಮತ್ತು ಕೊಲೆ ಪ್ರಯತ್ನದ ಆಪಾದನೆ ಮೇಲೆ ಮೊಕದ್ದಮೆ ಹೂಡಿದರು ಶ್ರೀ ಬಾಲಕೃಷ್ಣರವರನ್ನು ಹತ್ತು ಸಾವಿರ ರೂಪಾಯಿನ ಎರಡು ಜಾಮೀನುಗಳು ಮತ್ತು ಅದೇ ಮೊತ್ತದ ಸ್ವಂತ ಜಾಮೀನು ಮೇಲೆ ಈ ದಿನ ಬಿಡುಗಡೆ ಮಾಡಲು ನ್ಯಾಯಾಧೀಶರು ಅಪ್ಪಣೆ ಮಾಡಿದರು

ಉಪಚುನಾವಣೆಗೆ ಉಮೇದುವಾರರು

ಮೈಸೂರು ಶಾಸನ ಸಭೆಗೆ ಬೆಂಗಳೂರು ನಗರ ಕ್ಷೇತ್ರದಿಂದ ನಡೆಯಬೇಕಾಗಿರುವ ಉಪ ಚುನಾವಣೆಗೆ ನೆನ್ನೆ ಶ್ರೀ ವಿ ಎಸ್ ನಾರಾಯಣರಾಯರೇ ಪುನಃ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರಿಕೆ ಸಲ್ಲಿಸಿದ್ದಾರೆ ಸಮಾಜವಾದಿ ಪಕ್ಷದ ಪರ ಡಾ|| ಕೆ ಆರ್ ಶ್ರೀಕಂಠೇಶ್ವರರವರು ಅರ್ಜಿ ಸಲ್ಲಿಸಿರುತ್ತಾರೆ

ಕೇವಲ ೨ ಘಂಟೆಯೊಳಗೆ ೫೦ ಕೋಟಿ ರೂ. ವಸೂಲಿ

ಭಾರತ ಸರ್ಕಾರದವರು ಹೊಸದಾಗಿ ಎತ್ತಿದ ನೇಕಡ ೩ ರೂ ಬಡ್ಡಿಯ ೫೦ ಕೋಟಿ ರೂ ಗಳ ಹೊಸ ಸಾಲಕ್ಕೆ ನೆನ್ನೆ ದಿನ ಕೇವಲ ಎರಡು ಗಂಟೆಗಳೊಳಗೆ ಪೂರ್ತಿ ಮೊಬಲಗು ವಸೂಲಾಯಿತೆಂದೂ ಹೆಚ್ಚಿಗೆ ಬಂದ ಮೊಬಲಗನ್ನು ನಿರಾಕರಿಸಲಾಯಿತೆಂದೂ ತಿಳಿದುಬಂದಿದೆ

ಬಿಸಿಲ್ಝಳದಿಂದ ೧೧೯ ಜನರ ಮರಣ

ಅಮೆರಿಕದ ಬಳಿ ಇರುವ ಜಮೈಕಾ ದ್ವೀಪದ ಮೇಲೆ ಅತ್ಯಂತ ಘೋರ ಬಿಸಿಲ್ಗಾಳಿಯು ಶುಕ್ರವಾರ ರಾತ್ರಿ ಬೀಸಿದುದರ ಪರಿಣಾಮವಾಗಿ ಅಲ್ಲಿ ೧೧೯ ಜನ ಸತ್ತರು ಸಾವಿರಾರು ಮಂದಿ ಮನೆ ಮಠಗಳನ್ನು ಕಳೆದುಕೊಂಡರು ೩೦ ಕೋಟಿ ರೂ ಗಳಷ್ಟು ನಷ್ಟವಾಗಿರುವುದಾಗಿ ವರದಿಯಾಗಿದೆ ಗಂಟೆಗೆ ೧೦೦ ಮೈಲಿ ವೇಗದಲ್ಲಿ ಗಾಳಿಯು ಚಲಿಸಿತೆಂದು ಹೇಳಲಾಗಿದೆ

ಅರಗು ಮತ್ತು ಬಣ್ಣದ ಕಾರ್ಖಾನೆಯಲ್ಲಿ ಲಾಕ್ ಔಟ್ ?

ರಾಜಧಾನಿಯ ಈದಿಗಾ ಬಡಾವಣೆಯಲ್ಲಿರುವ ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯವರು ಕಾರ್ಮಿಕರಿಗೆ ಮುಂಚೆ ತಿಳಿಸದೆ ಕಾರ್ಖಾನೆಯನ್ನು ನೆನ್ನೆಯಿಂದ ಮುಚ್ಚಿರುವುದಾಗಿ ಗೊತ್ತಾಗಿದೆ

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ವರ್ಗಾವರ್ಗಿ

ಸ್ವಂ ಸು ಫೋ] ಬೆಂಗಳೂರು ೨೧

ಮಿಸ್ಟರ್ ಎಂ ಹಂಗಾರ್ಫೋರ್ಡರ ನಾಲ್ಕು ತಿಂಗಳ ಕಾಲ ವಿಶ್ವ ಸಂಸ್ಥೆಯ ಸಲಹೆಗಾರರಾಗಿ ನಾಳೆ ತೆರಳಲಿರುವುದರಿಂದ ಅವರ ಸ್ಥಾನದಲ್ಲಿ ಶಿವನಸಮುದ್ರದ ಸೂಪರಿಂಟೆಂಡೆಂಟರಾದ ಶ್ರೀ ಇ ವಿ ಗಾಂಧಿಯವರನ್ನು ವಿದ್ಯುಚ್ಛಕ್ತಿ ಇಲಾಖೆ ಮುಖ್ಯಾಧಿಕಾರಿಯಾಗಿಯೂ, ೧೧ ರಿಂದ ಶ್ರೀ ಹೆಚ್ ಪಿ ನಾರಾಯಣರಾವ್ ರವರನ್ನು ಶಿವನಸಮುದ್ರಕ್ಕೂ, ಶಿವನಸಮುದ್ರದಲ್ಲಿರುವ ಶ್ರೀ ಎಸ್ ಪಿ ರಾಮರಾಯರನ್ನು ಬೆಂಗಳೂರಿಗೂ ... ಡಿಲ್ ಪರ್ಡೆಕರ್ ರವರನ್ನು ... ಗೂ ವರ್ಗಾಯಿಸಲಾಗಿದೆ

ಭದ್ರಾವತಿಯಲ್ಲಿ ಸ್ಟೇ-ಇನ್-ಸ್ಟ್ರೈಕ್

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ೩೦೦೦ ಕಾರ್ಮಿಕರು ನೆನ್ನೆ ಸಭೆ ಸೇರಿ ತಮ್ಮ ಬೇಡಿಕೆಗಳನ್ನು ಪರಿಹರಿಸದೇ ಹೋದರೆ ಬರುವ ೧ ನೇ ತಾ|| ನಿಂದ ಸ್ಟೇ ಇನ್ ಸ್ಟ್ರೈಕ್ ಮುಷ್ಕರ ಹೂಡಲು ನಿರ್ಧರಿಸಿದರು ಮುಷ್ಕರದ ಬ್ಯಾಲಟ್ಟನ್ನು ಅಲ್ಲೇ ತಾ|| ತೆಗೆದುಕೊಳ್ಳಲಾಗುವುದು

ಬ್ಲಾಕ್ ಶೀಟ್ ಕಳವು ಸಂಚಿಗಾಗಿ ದಸ್ತಗಿರಿ ಮತ್ತು ಜಾಮೀನು

ರಾಜಧಾನಿಯ ಮೆಕ್ಯಾಬ್ ಚೌಕದಲ್ಲಿ ಮೊನ್ನೆ ಜಂಕ್ ಶೀಟುಗಳನ್ನು ಕಳವು ಸಂತೆಯಲ್ಲಿ ಮಾರುತ್ತಿದ್ದರೆಂಬ ಆಪಾದನೆಗಾಗಿ ಸೈಯದ್ ಮಹಮದ್ ಮತ್ತು ಮಹಮದ್ ಗೌಸರನ್ನು ದೇವರಾಜ ಪೊಲೀಸರು ದಸ್ತಗಿರಿ ಮಾಡಿದ್ದರು ಅವರನ್ನು ಜಾಮೀನಿನ ಮೇಲೆ ಬಿಡಲಾಗಿದೆ

ದಕ್ಷಿಣ ಕ್ಷೇತ್ರಗಳಿಗೆ ಪ್ರಭುಗಳ ಭೇಟಿ ರದ್ದು

ದಕ್ಷಿಣ ಭಾಗದಲ್ಲಿರುವ ಪುಣ್ಯ ಕ್ಷೇತ್ರಗಳಿಗೆ ಭೇಟಿ ಕೊಡಲು ಶ್ರೀಮನ್ಮಹಾರಾಜರು ಮೊದಲು ಹಾಕಿಕೊಂಡಿದ್ದ ಕಾರ್ಯಕ್ರಮವನ್ನು ಅವರ ದೇಹಾಲಸ್ಯದ ನಿಮಿತ್ತ ಈಗ ರದ್ದುಗೊಳಿಸಲಾಗಿದೆ ಈ ದಿನ ಬೆಂಗಳೂರಿನಿಂದ ಅವರ ರಾಜಧಾನಿಗೆ ವಾಪಸು ಬರುವರು

ಸಂಸ್ಥಾನದಲ್ಲಿ ಆಹಾರದ ಬೆಲೆ ಹೆಚ್ಚುವುದಿಲ್ಲ

ಮುಖ್ಯ ಮಂತ್ರಿ ಕೆ. ಸಿ. ರೆಡ್ಡಿಯವರ ಭರವಸೆ

ಬೆಂಗಳೂರು ೨೧

ನಾಳೆಯಿಂದ ಪುನರ್ವಿಮರ್ಶೆಯಾಗುವುದೆಂದು ಹೇಳಲಾಗಿದ್ದ ಆಹಾರದ ಬೆಲೆಯನ್ನು ಸಧ್ಯಕ್ಕೆ ಹೆಚ್ಚಿಸಲಾಗುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿರುತ್ತಾರೆ ಈ ರೀತಿ ಬೆಲೆಯನ್ನು ಹೆಚ್ಚಿಸುವ ಬಗ್ಗೆ ಅಖಿಲ ಭಾರತಕ್ಕೆಲ್ಲಾ ಒಂದೇ ನೀತಿಯನ್ನು ಅನುಸರಿಸಬೇಕು ಎಂಬ ವಿಷಯವಾಗಿ ಕೇಂದ್ರ ಸರ್ಕಾರದೊಡನೆ ಮೈಸೂರು ಸರ್ಕಾರದವರು ಪತ್ರ ವ್ಯವಹಾರವನ್ನು ನಡೆಸುತ್ತಿರುವುದಾಗಿ ಅವರು ಹೇಳಿರುತ್ತಾರೆ

ಫೋರ್ಜರಿ ಮಾಡುವವನ ದಸ್ತಗಿರಿ

ನೆನ್ನೆ ಸುತ್ತು ಮೈಸೂರಿನ ವಿಶೇಷ ದಸ್ತ ಪತ್ತೆ ಪೊಲೀಸು ಪಡೆಯಲ್ಲಿ ಇದ್ದ ರಾಡ್ರಿಗ್ಸ್ ಎಂಬುವನು ರೀಗೆ ಚೇವರ್ಸ್ ಎಂಬುವರ ಹೆಸರಿಗೆ ಬರುತ್ತಿದ್ದ ಬ್ಯಾಂಕ ಚೆಕ್ಕನ್ನು ೨ ಸಾರಿ ಸುಳ್ಳು ರುಜು ಮಾಡಿ ಒಳ್ಳೆ ಖಜಾನೆಯಿಂದ ೪|| ಸಾವಿರ ರೂ ಪಡೆದನೆಂದೂ, ಮತ್ತೊಂದು ಸಲ ಇದೇ ಪ್ರಯತ್ನ ನಡೆಸುತ್ತಿದ್ದಾಗ ನೆನ್ನೆ ಪೊಲೀಸರು ಅವನನ್ನು ದಸ್ತಗಿರಿ ಮಾಡಿದರೆಂದೂ ಹೇಳಲಾಗಿದೆ ಅವನು ಇದ್ದ ಕೊಠಡಿಯನ್ನು ಶೋಧಿಸಲಾಗಿ ೩ ಸಾವಿರ ರೂ ನುತ್ತು ಹಣ ಪಡೆಯುವ ಎರಡು ಖಾಲಿ ಫಾರ್ಮುಗಳು ದೊರಕು ವೆಂದು ತಿಳಿದುಬಂದಿದೆ

೫೦೦ ಡ್ರಾಂ ಅಕ್ರಮ ಸರಾಬಿನ ಪತ್ತೆ

ಖಾಸಗಿ ತಂತಿ] ಚನ್ನರಾಯಪಟ್ಟಣ ೨೦

ಬೇಲೂರಿನಿಂದ ಚನ್ನರಾಯಪಟ್ಟಣಕ್ಕೆ ಎತ್ತಿನಗಾಡಿಯಲ್ಲಿ ರಹದಾರಿಯಿಲ್ಲದೆ ೬೦೭ ಡ್ರಾಂ ಸರಾಬನ್ನು ಸಾಗಿಸುತ್ತಿದ್ದವನನ್ನು ಇಲ್ಲಿನ ಇನ್ಸ್‌ಪೆಕ್ಟರ್ ಜ|| ಅಹಮದ್ ಹುಸೇನ್ ರವರು ಪತ್ತೆ ಹಚ್ಚಿರುತ್ತಾರೆ ಮುಂದಿನ ತನಿಖೆ ಕ್ರಮಗಳು ನಡೆಯುತ್ತಿವೆ

○ ಕಳೆದ ವರ್ಷದಲ್ಲಿ ಅಮೆರಿಕದ ಬಾಡಿಗೆ ಜನರಿಗೆ ಎಂದಿರುವ ಒಟ್ಟು ಆದಾಯವು ೨೧,೬೦೦ ಕೋಟಿ ಡಾಲರುಗಳೆಂದೂ ಇತಿಹಾಸದಲ್ಲೇ ಇದು ಅತ್ಯಂತ ಭಾರಿಯಾದುದೆಂದೂ ಹೇಳಲಾಗಿದೆ

ಚುನಾವಣೆಗಳಲ್ಲಿ ಕೋಮುವಾರು ಭಾವನೆಗಳಿಗೆ ಬೆಲೆ ಕೊಡುವುದಿಲ್ಲ

ಪತ್ರಿಕಾ ಸಮ್ಮೇಳನದಲ್ಲಿ ಕೆ. ಹನುಮಂತಯ್ಯನವರ ಹೇಳಿಕೆ

ಸ್ವಂ ಸು ಫೋ] ಬೆಂಗಳೂರು ೨೧

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಹನುಮಂತಯ್ಯನವರು ಈ ದಿನ ಪತ್ರಿಕಾ ಸಮ್ಮೇಳನವನ್ನು ನಡೆಸಿ, ಬರುವ ಚುನಾವಣೆಗಳಲ್ಲಿ ಕೋಮುವಾರು ಭಾವನೆಗಳಿಗೆ ಸ್ವಲ್ಪವೂ ಬೆಲೆ ಕೊಡುವುದಿಲ್ಲವೆಂಬ ಭರವಸೆಯನ್ನು ನೀಡಿದರು ಉಮೇದುವಾರರ ಪ್ರಾಮಾಣಿಕತೆ, ಅರ್ಹತೆ ಮತ್ತು ಅನುಭವಗಳಿಗೇ ಪುರಸ್ಕಾರವೀಯಲಾಗುವುದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಾಡಿದ ತ್ಯಾಗ ಮತ್ತು ಸೇವೆಗಳನ್ನೂ ಗಣನೆಗೆ ತೆಗೆದುಕೊಳ್ಳಲಾಗುವುದು ಅಲ್ಪಸಂಖ್ಯಾತರಿಗೂ, ಮಹಿಳೆಯರಿಗೂ ಸರಿಯಾದ ಪ್ರಾತಿನಿಧ್ಯ ದೊರೆಯುವುದು ಮುಸ್ಲಿಮರ ಪರವಾಗಿ ಮುಸ್ಲಿಂಲೀಗಿನವರಾಗಲಿ ಯಾವ ಸಂಸ್ಥೆಯೂ ಇಲ್ಲವಾದರೂ ಆ ಕೋಮಿನ ನಾಯಕರು ಕಾಂಗ್ರೆಸ್ಸಿಗೆ ಬೆಂಬಲದ ಭರವಸೆಯನ್ನು ನೀಡಿರುತ್ತಾರೆ ಚುನಾವಣೆಯಲ್ಲಿ ಒಟ್ಟು ಶೇ|| ೭೦-೮೦ ಸ್ಥಾನಗಳು ಕಾಂಗ್ರೆಸ್ಸಿಗೆ ದೊರೆಯುವ ಭರವಸೆ ಇದೆ ಸುಭದ್ರವಾದ ಸರ್ಕಾರವನ್ನು ಸ್ಥಾಪಿಸಿ, ದೇಶದ ಅಭ್ಯುದಯದ ಜವಾಬ್ದಾರಿಯನ್ನು ಹೊರಲು ಕಾಂಗ್ರೆಸ್ಸು ಸಂಸ್ಥೆಯೊಂದಕ್ಕೇ ಶಕ್ತಿಯಿರುತ್ತದೆ ಕಾಂಗ್ರೆಸ್ಸಿನಲ್ಲಿ ಏಕ ನಾಯಕತ್ವಕ್ಕೆ ಅವಕಾಶವಿರುವುದಿಲ್ಲವೆಂಬುದಾಗಿ ಅವರು ತಿಳಿಸಿದರು

ನೆಹರೂ-ಟಂಡನ್ ವಿವಾದದಲ್ಲಿ ಮೈಸೂರಿನವರು ಯಾವ ಪಕ್ಷವನ್ನೂ ವಹಿಸುವುದಿಲ್ಲವೆಂದು ಹೇಳಿದರು ಚುನಾವಣೆಗಳು ಪರಿಶುದ್ಧ ರೀತಿಯಿಂದ ನಡೆಯುವುವೆಂದು ಭರವಸೆಯಿತ್ತರು

ದಾವಣಗೆರೆ ಸಮ್ಮೇಳನದ ವಿಷಯವನ್ನು ಪ್ರಸ್ತಾಪಿಸುತ್ತಾ, ಅವರು ಇದುವರೆಗೂ ಕಾಂಗ್ರೆಸ್ಸಿನ ವಿವಿಧ ಚಳುವಳಿಗಳಲ್ಲೂ ಕಾರ್ಯಕ್ರಮಗಳಲ್ಲೂ ಸಹಕರಿಸಿದವರೆಲ್ಲರ ಸಲಹೆ ಮತ್ತು ಸಹಕಾರವನ್ನು ತೆಗೆದುಕೊಳ್ಳುವುದೇ ಸಮ್ಮೇಳನದ ಉದ್ದೇಶವೆಂದು ಹೇಳಿದರು ಆಹಾರದ ಹತೋಟಿ, ಮಂತ್ರಿಮಂಡಲದ ಕಾರ್ಯಕಲಾಪ, ಗಾಂಧೀಜಿಯವರ ಆದರ್ಶಕ್ಕನುಗುಣವಾಗಿ ಕಾಂಗ್ರೆಸ್ಸಿನ ಪುನಃರಚನೆ, ವಿದ್ಯಾಭ್ಯಾಸ ಪದ್ಧತಿಯ ಪರಿಷ್ಕರಣ ಮುಂತಾದ ವಿಷಯಗಳನ್ನು ಸಮ್ಮೇಳನದಲ್ಲಿ ಚರ್ಚಿಸಲಾಗುವುದೆಂದು ಹೇಳಿದರು

ಬೆಂಗಳೂರಿನ ಉಪಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಮಹಾಜನರು ಬೆಂಬಲ ನೀಡಬೇಕೆಂದು ಪ್ರಾರ್ಥಿಸಿದರು

ದುರ್ವ್ಯವಹಾರಕ್ಕಾಗಿ ಜುಲ್ಮಾನೆ

ಮೈಸೂರು ೨೧

ಲಕ್ಷ್ಮಣ್ ಗೋಪಾಲ್ದಾಸ್ ರುದ್ರಮ್ಮ ಎಂಬುವರ ಮನೆಯಲ್ಲಿ ಮಲ್ಲಿ ಶೆಟ್ಟಿಯ ಮಗಳು ಜಯಮ್ಮ ಎಂಬಾಕೆಯೂ, ಶ್ರೀ ಪುಟ್ಟಸ್ವಾಮಿಯವರ ಮನೆಯಲ್ಲಿ ಪಾರ್ವತಿ ಎಂಬುವಳೂ ವ್ಯಭಿಚಾರ ವೃತ್ತಿಯನ್ನು ನಡೆಸುತ್ತಿದ್ದರೆಂದು ಅವರುಗಳಿಗೆ ೧ನೇ ನಗರ ನ್ಯಾಯಾಧೀಶರು ತಲಾ ೧೦೦ ರೂಪಾಯಿ ದಂಡವನ್ನು ವಿಧಿಸಿರುವರು.

ಪಶ್ಚಿಮ ಇಂಡಿಯಾ ದ್ವೀಪದಲ್ಲಿ ಹಿಂದೂ ದೇವಸ್ಥಾನ

ಪಶ್ಚಿಮ ಇಂಡಿಯಾ ದ್ವೀಪದಲ್ಲಿ ಟ್ರಿನಿಡಾಡ್ ನಗರದಲ್ಲಿ ಕಳೆದ ಅನೇಕ ತಾ|| ...ಂದು ಒಂದು ದೇವಾಲಯವನ್ನು ತೆರೆಯಲಾಯಿತು. ಭಾರತ ಸೇವಾಶ್ರಮ ಸಂಘದ ಪರವಾಗಿ ಹೋಗಿರುವ ಪಂಡಿತ ತಾರಾನಂದರವರು ಇದನ್ನು ಸ್ಥಾಪಿಸಿರುತ್ತಾರೆ. ಪ್ರತಿಷ್ಠಾಪನಾ ಸಮಾರಂಭದ ಕಾಲದಲ್ಲಿ ಬಳಿಯ ... ಗಳ ಪ್ರಾರ್ಥನೆಯೊಡನೆ ಇವರು ದೇವಸ್ಥಾನದ ಅಂಗವಾಗಿ ನಡೆಸುವ ಶಾಲೆ ಮತ್ತು ಪುಸ್ತಕಾಲಯಗಳಿಗೂ ಅವರುಗಳು ಸಹಾಯ ಮಾಡಲೊಪ್ಪಿರುತ್ತಾರೆ.

ರಷ್ಯದಲ್ಲಿ ಅಗಾಧ ಸಬ್‌ಮೆರೀನ್‌ಗಳ ಶೇಖರಣೆ

...ರಲ್ಲಿ ಜರ್ಮನಿಯು ಹೊಂದಿದ್ದ ಸಬ್‌ಮೆರೀನ್‌ಗಳ ಸಂಖ್ಯೆಗಿಂತ ...ಷ್ಟು ಈಗ ರಷ್ಯದಲ್ಲಿ ಇರುವುವೆಂದು ಅಮೆರಿಕದ ನೌಕಾ ಇಲಾಖಾಮಂತ್ರಿ ಮಿ. ಕಿಂಬಾಲ್‌ರವರು ಹೇಳಿರುತ್ತಾರೆ. ದೇಶದಲ್ಲಿ ೪೦ ಟನ್ನು ... ಇರುವುದಾಗಿ ಹೇಳಲಾಗಿದೆ.

ವಿದ್ಯಾರ್ಥಿಗಳಿಗೆ ಮಥುರಾನಾಥಜಿರವರ ಉಪದೇಶ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಹಾತ್ಮಾ ಗಾಂಧಿ ಸ್ಮಾರಕ ನಿಧಿಯ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಮಥುರಾನಾಥಜಿಯವರು ಮೊನ್ನೆ ಮಾತನಾಡಿದರು. ಸರ್ಕಾರಿ ನೌಕರಿಗಳ ಕಡೆ ವಿದ್ಯಾರ್ಥಿಗಳು ಗಮನಕೊಡದೇ ಸ್ವಾವಲಂಬಿಗಳಾಗಬೇಕೆಂದು ಅವರು ಸೂಚಿಸಿ ಅಮೆರಿಕಾ ಮತ್ತು ಭಾರತ ವಿದ್ಯಾರ್ಥಿಗಳ ಹೋಲಿಕೆಯನ್ನು ಮಾಡಿ, ಭಾರತೀಯರು ಸ್ವಾವಲಂಬನೆ ವಿಷಯದಲ್ಲಿ ಹಿಂದುಳಿದಿರುವರೆಂದು ಹೇಳಿದರು. ವಿದ್ಯಾರ್ಥಿಗಳಿಗೆ ಆತ್ಮಾವಲಂಬನೆಯೇ ಮುಖ್ಯವೆಂದು ಹೇಳಿದರು. ಶ್ರೀ ದ. ಮಾಲೆ ಚನ್ನಬಸವಯ್ಯನವರು ಭಾಷಣಕಾರರ ಪರಿಚಯ ಮಾಡಿಕೊಟ್ಟರು.

ACCOUNTS Hr. EXAMN. NOV. 51
Coaching classes start
From 22-8-51
between 7-9 p.m.
at 1260 Vehval Road Mysore

Edited, printed and published by A R Nagarajan at Sadhvi Press D Subbiah Road, Mysore

ಪೂರ್ವ ಪಾಕಿಸ್ತಾನದಲ್ಲಿ ಹಿಂದುಗಳ ದಸ್ತಗಿರಿ

ಭದ್ರತಾ ಶಾಸನದ ಪ್ರಕಾರ ಪೂರ್ವ ಪಾಕಿಸ್ತಾನದ ರಂಗಪುರ ಜಿಲ್ಲೆಯಲ್ಲಿ ನೂರಕ್ಕಿಂತಲೂ ಹೆಚ್ಚು ಹಿಂದುಗಳನ್ನು ಬಂಧಿಸಲಾಗಿದೆ. ಪೂರ್ವ ಪಾಕಿಸ್ತಾನದ ಪ್ರಧಾನ ನಾಯಕರುಗಳಾದ ಮುಸ್ಲಿಮರಿಗೆ ಪಶ್ಚಿಮ ... ಹೋಗುತ್ತಿರುವ ಜಿಹಾದ್ (ಧರ್ಮ ಯುದ್ಧ) ಒಗ್ಗೆ ತುಂಬಾ ವಿರೋಧವುಂಟಾಗಿದೆ. ಯುದ್ಧದ ಮಾತುಗಳನ್ನೇ ಆಡುತ್ತಾ ಬಂಡವಾಳಗಾರರು ಹಣವನ್ನು ತೆಗೆದು ಬೆಲೆಗೆ ... ಪಾಕಿಸ್ತಾನ ... ವಿರಸವು ... ಕಾಲ ... ಹೇಳಲಾಗಿದೆ.

ಪಶ್ಚಿಮ ಜರ್ಮನಿಯಲ್ಲಿ ನಗದು ಹಣ ಇಲ್ಲ

ಪಶ್ಚಿಮ ಜರ್ಮನಿಯ ಖಜಾನೆಯಲ್ಲಿ ನಗದು ಹಣವಿಲ್ಲದೆ ಕೊಡಬೇಕಾದವರಿಗೆ ಹಣದ ಪಾವತಿಯನ್ನು ನಿಲ್ಲಿಸಬೇಕಾಗುವ ... ಪರಿಸ್ಥಿತಿಯುಂಟಾಗಿರುವುದಾಗಿ ... ಹಣಕಾಸಿನ ಮಂತ್ರಿಯು ಹೇಳಿರುತ್ತಾರೆ.

ಕೃಷ್ಣರಾಜಸಾಗರದಲ್ಲಿ ಸ್ವಾತಂತ್ರ್ಯೋತ್ಸವ

ಕೃಷ್ಣರಾಜ ಸಾಗರದ ಉತ್ತರ ದಡದ ... ಶ್ರೀ ಶ್ರೀನಿವಾಸಗಿರಿಯವರ ... ಸ್ವಾತಂತ್ರ್ಯ ದಿನಾಚರಣೆಯು ... ನೆರವೇರಿಸಲ್ಪಟ್ಟಿತು. ಶ್ರೀಗಳಾದ ಕೆ. ಜಿ. ಶ್ರೀನಿವಾಸ್ ಮತ್ತು ಟಿ. ತಿಮ್ಮೇಗೌಡರು ಉತ್ಸವದ ಏರ್ಪಾಡುಗಳನ್ನು ಮಾಡಿದ್ದರು. ... ಕನ್ನೇಗೌಡನ ಕೊಪ್ಪಲಿನ ಶ್ರೀ ಎಸ್. ನಾರಾಯಣ ಸ್ವಾಮಿಯವರು ಭಾಷಣ ಮಾಡಿದರು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಗಿರಣಿ ಮಾಲೀಕರು ಬಹುಮಾನಗಳನ್ನು ಹಂಚಿದರು.

GRAND AUCTION SALE
By Messrs
NALINS
V. V. Mohal Square Mysore
On 23-8-51 at 4-30 p.m.

SRI GAYATHRI,
TALKIES
From 21-8-51 Daily 3 Shows
Universal's most powerful picture
With Richard Basehart
OUTSIDE THE WALL

ರೈಲ್ವೆ ವಿವಾದದ ಮಾತುಕತೆಯ ಅಂಶಗಳು

ಕೇಂದ್ರ ರೈಲ್ವೆ ಮಂತ್ರಿ ಮತ್ತು ಜೈಪ್ರಕಾಶ್ ನಾರಾಯಣರವರ ಭೇಟಿಯು ಮೊನ್ನೆ ನಡೆದಾಗ ಜೈಪ್ರಕಾಶರು ಕಾರ್ಮಿಕರ ಪರವಾಗಿ ೫ ಷರತ್ತುಗಳನ್ನು ಮುಂದಿಸಿದರು. ವಿವಾದಗಳಲ್ಲಿ ಸಂಧಾನ ಮತ್ತು ತೀರ್ಮಾನಕ್ಕಾಗಿ ಒಂದು ಖಾಯಂ ಸಮಿತಿ ನಿರ್ಮಾಣ, ಸಂಧಾನ ಮುಂದುವರಿಕೆ, ಸರ್ಕಾರವೇ ನಡೆಸುತ್ತಿರುವ ರೈಲ್ವೆಗಳಲ್ಲಿ ವಿವಾದವನ್ನು ನ್ಯಾಯಾಧೀಶರ ತೀರ್ಮಾನಕ್ಕೆ ಬಿಡುವುದು, ಕಾರ್ಮಿಕ ಸಂಘಗಳಲ್ಲಿ ಯಾವುದಕ್ಕೆ ಮತ್ತು ಹೇಗೆ ಮನ್ನಣೆ ಕೊಡಬೇಕು, ಕಾರ್ಮಿಕರ ಅಂತಸ್ತು ಏನು ಮತ್ತು ರೈಲ್ವೆ ... ವನ್ನು ಸ್ವತಂತ್ರ ಸಾರ್ವಜನಿಕ ಮಂಡಲಿಗೆ ಒಪ್ಪಿಸುವುದು ಇವೇ ಆ ಷರತ್ತುಗಳು. ಈ ವಿಷಯಗಳನ್ನು ಚರ್ಚಿಸಲು ರೈಲ್ವೆ ಮಂತ್ರಿಗಳು ತಮ್ಮ ಸಮ್ಮತಿಯನ್ನು ಸೂಚಿಸಿರುವುದಾಗಿ ಗೊತ್ತಾಗಿದೆ.

ಪಾಕಿಸ್ತಾನ್ ವಿದ್ಯಾರ್ಥಿಗಳಿಗೆ ಒತ್ತಾಯದ ಮಿಲಿಟರಿ ಶಿಕ್ಷಣ

ಪಶ್ಚಿಮ ಪಂಜಾಬು ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿ, ಅಲ್ಲಿನ ಶಾಲಾ ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಒತ್ತಾಯದ ಮಿಲಿಟರಿ ಶಿಕ್ಷಣ ಕೊಡಲು ನಿರ್ಧರಿಸಿರುವರು.

ಕಾಂಗ್ರೆಸ್ ಸಂಸ್ಥೆಗೆ ಸದಸ್ಯರನ್ನು ಕೂಡಿಸುವ ಕಾರ್ಯ

ಕಾಂಗ್ರೆಸ್ ಸಂಸ್ಥೆಗೆ ಸದಸ್ಯರನ್ನು ಕೂಡಿಸುವ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ಸದಸ್ಯತನದ ಪುಸ್ತಕವನ್ನು ಸಾಧ್ವಿ ಪತ್ರಿಕಾ ಕಚೇರಿಯಲ್ಲಿ ಇಡಲಾಗಿದೆ. ಸೇರಬಯಸುವವರು ... ರೂ. ಕೊಟ್ಟು ಸದಸ್ಯರಾಗಬಹುದು.

SRI KRISHNARAJENDRA MILLS' CO-OPERATIVE SOCIETY, Ltd.,
MYSORE
WANTED
A Daily Auditor. Please apply stating qualifications Experience and Salary required to the Hon. Secretary

ಸ್ವರಾಜ್ಯ ವಾರ ಪತ್ರಿಕೆ

ಹೈದರಾಬಾದಿನ ಕಲ್ಬುರ್ಗಿಯ ಶ್ರೀ ವಿ. ಫ. ಮೋದಿಯವರು "ಸ್ವರಾಜ್ಯ" ಎಂಬ ಕನ್ನಡ ವಾರ ಪತ್ರಿಕೆಯನ್ನು ಇದೇ ೧೫ನೇ ತಾ|| ಹೊರಡಿಸಿ, ಅದರ ಪ್ರಥಮ ಸಂಚಿಕೆಯನ್ನು ನಮಗೆ ಕಳುಹಿಸಿರುವುದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಮುಖಪತ್ರದಲ್ಲಿ ಗಾಂಧಿ ಮತ್ತು ನೆಹರುರವರ ನಗೆಮೊಗಗಳ ಚಿತ್ರವು ಇರುತ್ತದೆ. ಅದು ಉದಾರ ಭಾವನೆಯ ಜನತಾಪತ್ರಿಕೆಯೆಂದೂ ವ್ಯಕ್ತಿ, ಪಕ್ಷ, ಕೋಮು ಅಥವಾ ಜಾತಿಯ ಪಂಥವನ್ನು ಹಿಡಿದು ವಾದಿಸುವ ಗುರಿಯನ್ನಿಟ್ಟುಕೊಂಡಿಲ್ಲವೆಂದೂ ಸಂಪಾದಕೀಯವು ತಿಳಿಸಿರುತ್ತದೆ. ಸಂಪಾದಕರು ಹೇಳುವಂತೆ "ಸ್ವರಾಜ್ಯ"ವು ಜನತೆಯ ದೀವಟಿಗೆಯಾಗಿ, ಸಾಧಿಸಲು ಹೊರಟಿರುವ ಮಹಾ ಕಾರ್ಯದಲ್ಲಿ ಯಶಸ್ವಿಯಾಗಲಿ. ಬೆಲೆ ೦-೧-೬

೧೯೪೫ರಿಂದ ೧೫ ಅಣು ಬಾಂಬುಗಳ ಸ್ಫೋಟನೆ

೧೯೪೫ರಿಂದ ಇದುವರೆಗೆ ಅಣು ಬಾಂಬುಗಳನ್ನು ಸ್ಫೋಟಿಸಲಾಯಿತೆಂದು ಅಮೆರಿಕದ ಅಣು ಶಕ್ತಿ ಸಮಿತಿಯ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ. ಅವುಗಳಲ್ಲಿ ಒಂದೂ ಸಹ ಕೆಟ್ಟಿರಲಿಲ್ಲವೆಂದು ಹೇಳಲಾಗಿದೆ.

ಮಳೆಗರೆಸಲು ಮುಂಡೂಕ ವಿವಾಹ

ಬರ್ದ್ವಾನ್ ಜಿಲ್ಲೆಯ ಹಳ್ಳಿಗರು ಮಳೆಯನ್ನು ಬರಿಸಲು ಹಳೇ ಕಾಲದ ಪದ್ಧತಿಯೊಂದನ್ನು ಅನುಷ್ಠಾನಕ್ಕೆ ತಂದು ಕಪ್ಪೆಗಳಿಗೆ ವಿವಾಹಗಳನ್ನು ಏರ್ಪಾಡು ಮಾಡಿ, ಆ ಮೂಲಕ ವರುಣನನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿರುವರೆಂದು ವರದಿಯಾಗಿದೆ.

ಒಲಂಪಿಯಾ
ಟಾಕೀಸ್
೨೩-೮ರಿಂದ ಕಿಕ್ಕಿರಿದ ೨ನೇ ವಾರ
ಶೋಭನಾ ಪಿಕ್ಚರ್ಸ್‌ರವರ
ಹಮಾರಿ ಬೇಟಿ
ಪಾತ್ರ:— ನೂತನ್, ಶೇಖರ್, ಮೋತಿಲಾಲ್, ಇತ.

ಗೌ|| ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ.,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಗೌರಿ ಹಬ್ಬಕ್ಕಾಗಿ ★ ನಾದಿದಾರು ಕೂದಲಿ ರೇಷ್ಮೆ ಸೀರೆಗಳು ಮತ್ತು ನೂಲಿನ ಸೀರೆಗಳು ಬಂದಿವೆ ನೇರವಾಗಿ ಬಂದು ಕೊಳ್ಳಿರಿ
D. L. ನರಸಿಹ್ಮಯ್ಯ & ಬ್ರದರ್ಸ್,
ಜವಳಿ ಅಂಗಡಿ ಬೆಂಗಳೂರು ಆನಂದ ಭವನ ಹೋಟೆಲ್ ಪಕ್ಕ, ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು
ರತ್ನಾವಳಿ ಥಿಯೇಟರಿನಲ್ಲಿ
ಅಮೋಘವಾದ 3ನೇ ವಾರ **ರಾಜಾ ಗೋಪಿಚಂದ್**
ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ
ರಾತ್ರಿ 9-15 ಘಂಟೆಗೆ, ಉಳಿದ ದಿನಗಳಲ್ಲಿ ಮ್ಯಾಟಿನಿ 6-15ಕ್ಕೆ

ಪ್ರಭಾ ಪಿಕ್ಚರ್ ಹೌಸ್
24-8-51 ರಿಂದ ಅಮೋಘ ಪ್ರಾರಂಭ. ಪ್ರತಿ ದಿನ 3 ಆಟಗಳು
ಕಶ್ಯಪ್‌ರವರ ಅತ್ಯುತ್ತಮವಾದ ಹಿಂದಿ ಚಿತ್ರ
ಆರಾಮ್ AARAM
ಪಾತ್ರ: ಮಧುಬಾಲ, ದೇವಾನಂದ್, ಮುಗ್ಗಾ ಜೋಟಿ, ಪ್ರೇಂ ನಾಥ್
ಸಂಗೀತ: ಅನಿಲ್ ಬಿಶ್ವಾಸ್ — ನಿರ್ದೇಶನ: ಡಿ. ಡಿ. ಕಶ್ಯಪ್
ಬೆಳಗಿನ ಪ್ರದರ್ಶನ 24-8-51 ರಿಂದ 3 ದಿನಗಳು
ಶಾಂತಿ ಟಾಕೀಸ್‌ರವರ - ನಕೀಜ -

ರೋ ನಂ 792 ಒಂದು ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೨೨-೮-೫೧ [ಸಂಚಿಕೆ ೨೫

ನೆಹರೂರವರಲ್ಲಿ ಕಾಂ|| ಪಕ್ಷದ ವಿಶ್ವಾಸ

ಸಂಸ್ಥಾನದ ವಯಸ್ಕರ ಶಿಕ್ಷಣ ಸಮ್ಮೇಳನ

ರಾಜ ಪ್ರಮುಖರಿಂದ ಆರಂಭೋತ್ಸವ

ಮೈಸೂರು ೨೨

ಬರುವ ೭ನೇ ತಾ|| ನಿಂದ ೩ ದಿನಗಳ ವರೆಗೆ ರಾಜಧಾನಿಯಲ್ಲಿ ಸಂಸ್ಥಾನದ ಳ ಲೇ ವಯಸ್ಕರ ಶಿಕ್ಷಣ ಸಮ್ಮೇಳನವು ನಡೆಯಲಿದೆ. ಮೈಸೂರಿನ ರಾಜಪ್ರಮುಖರು ಅವರ ಆರಂಭೋತ್ಸವವನ್ನು ನೆರವೇರಿಸುವರು.

ಸಮ್ಮೇಳನದ ಕಾಲದಲ್ಲಿ ನಗರದ ಮಹಿಳೆಯರಿಗಾಗಿ ರಂಗವಲ್ಲಿ ಹಾಕುವುದು, ಆರತಿ ತಟ್ಟೆ ಅಲಂಕರಿಸುವುದು, ಹೂ ಕಟ್ಟುವುದು ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಪ್ರತಿಯೊಂದು ಸ್ಪರ್ಧೆಯಲ್ಲೂ ಶ್ರೇಷ್ಠ ಕಲಾ ಪ್ರದರ್ಶನ ಮಾಡಿದವರಿಗೆ ಒಂದೊಂದು ಬಹುಮಾನವನ್ನು ಕೊಡಲಾಗುವುದು. ನಗರದಲ್ಲಿರುವ ಉತ್ತಮವಾದ ಗರಡಿ ಮನೆ ಮತ್ತು ರಾಮ ಮಂದಿರಗಳಿಗೆ ಒಂದೊಂದು ಬಹುಮಾನವನ್ನು ನಿಯಲೇರ್ಪಾಡಾಗಿದೆ. ಒಂದು ವಸ್ತು ಪ್ರದರ್ಶನವೂ ಸಹ ಏರ್ಪಾಡಾಗಿದೆ. ಗೃಹ ಕೈಗಾರಿಕೆ, ಚಿತ್ರಪಟಗಳು ಮತ್ತು ಇತರ ಕುಶಲ ಕಲೆಗಳ ಸಾಮಾನುಗಳನ್ನು ನಗರವಾಸಿಗಳು ಒದಗಿಸಿ ಪ್ರದರ್ಶನವು ಯಶಸ್ವಿಯಾಗುವಂತೆ ಮಾಡಬೇಕೆಂದು ಕೋರಲಾಗಿದೆ.

ಮೇಲ್ಕಂಡ ಸ್ಪರ್ಧೆಗಳಿಗೆ ಸೇರಲಿಚ್ಛಿಸುವವರು ಬರುವ ೧ನೇ ತಾ|| ನೊಳಗೆ ಕೃಷ್ಣಮೂರ್ತಿಪುರದಲ್ಲಿರುವ ಸ್ವಾಗತ ಸಮಿತಿಯ ಕಛೇರಿಯಲ್ಲಿ ತಮ್ಮ ಹೆಸರು ಮತ್ತು ವಿಳಾಸಗಳನ್ನು ಕೊಡಬೇಕೆಂದು ಪ್ರಾರ್ಥಿಸಲಾಗಿದೆ.

ಅರಮನೆ ಕೋಟೆಯಲ್ಲಿ ಕೃಷ್ಣೋತ್ಸವ ಮತ್ತು ರಥೋತ್ಸವ

ರಾಜಧಾನಿಯ ಅರಮನೆಯ ಕೋಟೆಯಲ್ಲಿರುವ ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಇದೇ ೨೩ನೇ ತಾ|| ನಿಂದ ಬರುವ ತಿಂಗಳು ೨ನೇ ತಾರೀಖಿನವರೆಗೂ ಶ್ರೀ ಕೃಷ್ಣೋತ್ಸವದ ಅಂಗವಾಗಿ ಪ್ರತಿ ಸಂಜೆ ೫|| ಗಂಟೆಯಿಂದ ವಿವಿಧ ಉತ್ಸವಗಳು ನಡೆಯುವುವು. ೩ ತಿಂಗಳ ೨ನೇ ತಾ|| ಬೆಳಗ್ಗೆ ೧೦ ಗಂಟೆಗೆ ರಥೋತ್ಸವವು ಜರುಗುವುದು.

ಶ್ರೀ ಕೃಷ್ಣ ಜಯಂತಿ

ಮೈಸೂರು ಚಲುವಾಂಬಾಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ಪದ್ಧತಿಯಂತೆ ಈ ವರ್ಷವೂ ಇದೇ ೨೬ನೇ ತಾ|| ನಿಂದ ಬರುವ ತಿಂಗಳು ೨ನೇ ತಾ|| ವರೆಗೂ ದೇವರ ಉತ್ಸವಾದಿಗಳೂ, ಸಂಗೀತ ಮತ್ತು ಹರಿಕಥೆಗಳೂ ನಡೆಯುವುವು.

ಪಂಚ ವಾರ್ಷಿಕ ಯೋಜನೆಯ ಪ್ರಕಟಣೆ

ಸಾರ್ವಜನಿಕರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಸಲುವಾಗಿ ಮೈಸೂರು ಸರ್ಕಾರದ ಪಂಚ ವಾರ್ಷಿಕ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರ್ಕಾರದ ಪರಿಶೀಲನೆಗೆ ಒಪ್ಪಿಸಲಾಗಿದೆಯೆಂದೂ, ಬಹುಶಃ ನವೆಂಬರ್ ತಿಂಗಳಿನಲ್ಲಿ ಅದನ್ನು ಸಿದ್ಧಗೊಳಿಸಲಾಗುವುದೆಂದೂ ಗೊತ್ತಾಗಿದೆ.

ನೆಹರೂರವರಲ್ಲಿ ಕಾಂಗ್ರೆಸ್ ಪಕ್ಷದ ಪೂರ್ಣ ವಿಶ್ವಾಸ

ಪಾರ್ಲಿಮೆಂಟಿನಲ್ಲಿರುವ ಕಾಂಗ್ರೆಸ್ ಪಕ್ಷವು ನಿನ್ನೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ರಾಜೀನಾಮೆಯನ್ನಿತ್ತಿರುವ [illegible] ಪ್ರಸಂಗದ ಬಗ್ಗೆ ನೆಹರೂರವರು ಕೊಟ್ಟ ೯೦ ನಿಮಿಷಗಳ ವಿವರಣೆಯನ್ನು ಕೇಳಿದನಂತರ ಪ್ರಧಾನಿಯವರಲ್ಲಿ ತನಗೆ ಸಂಪೂರ್ಣ ವಿಶ್ವಾಸವಿರುವುದಾಗಿ ಸರ್ವಾನುಮತದಿಂದ ನಿರ್ಣಯವನ್ನು ಮಾಡಿತು. ಪಕ್ಷದ ೩೦೦ ಸದಸ್ಯರ ಪೈಕಿ ೩೦೦ ಜನರು ಸೇರಿದ್ದರು.

ಪ್ರಧಾನಿ ನೆಹರೂ

ಕೊರಿಯಾ ಯುದ್ಧದಲ್ಲಿ ದಕ್ಷಿಣದವರು ಹಿಮ್ಮೆಟ್ಟಿದರು

ಬಲವಾದ ಸೇನಾ ಸಮೂಹಗಳ ಸಹಾಯದಿಂದ ಕಮ್ಯೂನಿಸ್ಟರು ನೆನ್ನೆ ಕೊರಿಯಾ ರಂಗದಲ್ಲಿ ದಕ್ಷಿಣ ಕೊರಿಯನ್ನರನ್ನು ಹಲವು ಗುಡ್ಡಪ್ರದೇಶಗಳಿಂದ ಹಿಂದಕ್ಕೆ ಅಟ್ಟಿದರು. ವಿಶ್ವಸಂಸ್ಥೆಯ ವಿಮಾನ, ಫಿರಂಗಿ ಮತ್ತು ನೌಕಾ ಕಾರ್ಯಾಚರಣೆಗಳು ಪ್ರಬಲವಾಗಿದ್ದರೂ ಲೆಕ್ಕಿಸದೆ ಕಮ್ಯೂನಿಸ್ಟರು ಧಾಳಿ ಮಾಡುತ್ತಿದ್ದಾರೆ.

○ ಎಂಟ್ರಿಯಾದವನೊಬ್ಬನು ಪೋಲೀಸರಿಗೆ ದಾರಿ ಹೇಳುವನೆಂದು ಬಗೆದು ಅವನ ನಾಲಿಗೆ ಮತ್ತು ಕಿವಿಯನ್ನು [illegible] ಇಬ್ಬರು ಕಮ್ಯೂನಿಸ್ಟರು ಜನರ [illegible] ಎಂಟ್ರಿಯಾದವನನ್ನೂ ಮೊನ್ನೆ ಗಲ್ಲಿಗೆ ಹಾಕಲಾಯಿತು.

ಪಾಕಿಸ್ತಾನಕ್ಕೆ ಆಫ್ಘಾನಿಸ್ತಾನದ ಎಚ್ಚರಿಕೆ

ಅಫ್ಘಾನಿಸ್ತಾನದ ಗಡಿ ಕಡೆಗೆ ಪಾಕಿಸ್ತಾನ್ ಸೈನ್ಯಗಳನ್ನು ಕಳುಹಲು ಅಲ್ಲಿನ ಸರ್ಕಾರದವರು ಮಾಡಿರುವ ನಿರ್ಧಾರದ ಬಗ್ಗೆ ಅಫ್ಘಾನ್ ಸರ್ಕಾರವು ಎಚ್ಚರಿಕೆ ಇತ್ತಿದೆ. ಪಖ್ತೂನಿಸ್ತಾನ್ ಪ್ರದೇಶವನ್ನು ಪಾಕಿಸ್ತಾನ್ ಸೈನ್ಯಗಳು ಆಕ್ರಮಿಸುವುದಾದರೆ ಪಾಕಿಸ್ತಾನದ ವಿನಾಶವು ಖಂಡಿತವೆಂದು ಕಾಬೂಲಿನ ರೇಡಿಯೋವು ತಿಳಿಸಿದೆ.

ಕಾಗೋಡಿನಲ್ಲಿ ಗರುಡ ಶರ್ಮರ ದಸ್ತಗಿರಿ

ಕಾಗೋಡಿನ ಸ್ವತ ಚಳುವಳಿಯ ಸಂಬಂಧವಾಗಿ ಹಾಸನದ ಸಮಾಜವಾದಿ ಪಕ್ಷದ ಮುಖಂಡರಾದ ಶ್ರೀ ಗರುಡ ಶರ್ಮರವರನ್ನು ಪೊಲೀಸರು [illegible] ದಸ್ತಗಿರಿ ಮಾಡಿ [illegible] ಸಾಗರದ [illegible] ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಿ ಒಂದು ವಾರದ ರಿಮ್ಯಾಂಡ್ ತೆಗೆದುಕೊಂಡಿರುತ್ತಾರೆ.

ಯುಕ್ರೇನಿನಲ್ಲಿ ರಷ್ಯಾ ಸರ್ಕಾರದ ವಿರುದ್ಧ ಚಟುವಟಿಕೆ

ರಷ್ಯಾ ಸರ್ಕಾರದ ವಿರುದ್ಧವಾಗಿ ಕಳೆದ ಯುದ್ಧದಲ್ಲಿ ಭಾಗಿಯಾಗಿದ್ದ ಯುಕ್ರೇನಿನ ೧ಲಕ್ಷ ಜನರು ತಮ್ಮ ದೇಶದಲ್ಲಿ ಹೋರಾಟ ನಡೆಯಿಸುತ್ತಿರುವುದಾಗಿ ಗೊತ್ತಾಗಿದೆ. ಯುಕ್ರೇನಿಯನ್ ರಾಷ್ಟ್ರೀಯ ಗಾರ್ಡಿನ ಮುಖಂಡರಾದ ಜ|| ಟಾರಾಸ್ ಬಲ್ಬಾ ಬಾರೋವಿಟ್ಸ್‌ರವರು ಈ ವಿಷಯವನ್ನು ತಿಳಿಸುತ್ತಾ, ಅನೇಕರು ಅಲ್ಲಿನ ಅರಣ್ಯಗಳಲ್ಲಿ ಸೇರಿಕೊಂಡು ತಮ್ಮ ಚಟುವಟಿಕೆಗಳನ್ನು ಮುಂದುವರಿಸುತ್ತಿರುವುದಾಗಿ ಹೇಳಿರುತ್ತಾರೆ.

ಕಾಂಗ್ರೆಸ್ ಉಮೇದುವಾರಿಕೆ ಅರ್ಜಿಗಳು

ಮೈಸೂರು ಶಾಸನ ಸಭೆಗಳು ಮತ್ತು ಕೇಂದ್ರ ಪಾರ್ಲಿಮೆಂಟ್ ಸಭೆಗಳಿಗೆ ಉಮೇದುವಾರರಾಗುವವರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಸಂಜೆ ೬-೩೦ ರಿಂದ ೮-೩೦ ರ ವರೆಗೆ ಅರ್ಜಿ ನಮೂನೆಗಳನ್ನು ಪಡೆಯಬಹುದು. ಅರ್ಜಿ ಸಲ್ಲಿಸಲು ತಾ|| [illegible] ಕಡೆಯ ದಿನ.

ಕಾಂಗ್ರೆಸ್ಸಿನಲ್ಲಿ ನೆಹರೂರವರ ವಿರೋಧ ಶಕ್ತಿಗಳ ಪ್ರಭಾವವೇ ?

ಪ್ರಧಾನಿ ನೆಹರೂರವರು ನೆನ್ನೆ ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷದವರನ್ನುದ್ದೇಶಿಸಿ ಇಂದಿನ ಕಾಂಗ್ರೆಸ್ಸಿನ ಬಿಕ್ಕಟ್ಟಿಗೂ ತಮ್ಮ ರಾಜೀನಾಮೆಗೂ ಕಾರಣಗಳನ್ನು ವಿವರಿಸಿದರು. ಕಾಂಗ್ರೆಸ್ಸಿನ ಧ್ಯೇಯವನ್ನು ಕೂಟಿಸಿ ಶಾಸಿಕದಲ್ಲಿ ತಾವು ತಂದಿದ್ದ ನಿರ್ಣಯವು ಕಾರ್ಯರೂಪಕ್ಕೆ ಬರದೆ ವಿರೋಧ ಶಕ್ತಿಗಳ ಪ್ರಭಾವವೇ ಪ್ರಬಲವಾಗುತ್ತಿದೆಯೆಂಬ ಭಾವನೆಯು ತಮ್ಮಲ್ಲಿ ಉಂಟಾಗಿರುವುದೆಂದು ಹೇಳಿದರು. ಕಾರ್ಯಕಾರಿ ಸಮಿತಿಯಿಂದ ಒಬ್ಬ ವ್ಯಕ್ತಿಯನ್ನು ತೆಗೆದು ಮತ್ತೊಬ್ಬ ವ್ಯಕ್ತಿಯನ್ನು ತರುವುದು, ತಮ್ಮ ಉದ್ದೇಶವಲ್ಲವೆಂದೂ, ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾದ ಮಾರ್ಪಾಡಾಗಿರುವುದೆಂಬ ಕಲ್ಪನೆಯು ಜನರಿಗೆ ಉಂಟಾಗುವಂತೆ ನಡೆಯಬೇಕೆಂಬುದೇ ತಮ್ಮ ಅಭಿಪ್ರಾಯವೆಂದೂ ತಿಳಿಸಿದರು.

ನದಿಯ ಪ್ರವಾಹದಿಂದ ೪೦ ಸಾವಿರ ಚೀಣಾರಿಗೆ ತೊಂದರೆ

ಚೀಣಾದ ಬ್ರಾಹ್ಮಪುತ್ರಾ ನದಿಯಲ್ಲಿ ಪ್ರವಾಹವುಂಟಾಗಿರುವುದರಿಂದ ಮಂಚೂರಿಯಾ ರಾಜಧಾನಿ ಮುಕ್ಡೆನ್ ನಗರದ ಸ್ವಲ್ಪ ಭಾಗವು ನೀರಿನೊಳಗೆ ಮುಳುಗಿ ಹೋಗಿದೆಯೆಂದು ಮುಕ್ಡೆನ್ ರೇಡಿಯೋವು ವರದಿ ಮಾಡಿದೆ. ೪೦ ಸಾವಿರ ಜನರಿಗೆ ವಸತಿ ಸೌಕರ್ಯವಿಲ್ಲವಾಗಿದೆ.

ಏಕ ಕಾಲದಲ್ಲಿ ನಾಲ್ಕು ಮಕ್ಕಳ ಜನನ

ಇಂಗ್ಲೆಂಡಿನ ಕೆಂಟ್ ಪ್ರಾಂತದ ಬಿಸ್ಲಿ ಎಂಬಲ್ಲಿರುವ ಹೆರಿಗೆ ಆಸ್ಪತ್ರೆಯಲ್ಲಿ ಮಾರ್ಗರೆಟ್ [illegible] ಎಂಬಾಕೆಯು ೨ ಗಂಡು, ೨ ಹೆಣ್ಣು ಮಕ್ಕಳನ್ನು ಒಂದೇ ಬಾರಿಗೆ ಪ್ರಸವಿಸಿರುತ್ತಾಳೆ.

ಪಾಕಿಸ್ತಾನ್ ಅಭಿಮಾನಿಗಳ ದಸ್ತಗಿರಿ

ಚಿಕ್ಕಮಗಳೂರು ೨೧

ಇಲ್ಲಿನ ರಸ್ತಾಕರ ಕೋಮುವಿರಿಯ ಎಂ. ಹೋಟೆಲಿನ ರೇಡಿಯೋ ಹಲವು ಮುಸ್ಲಿಮರು ಸೇರಿ ಪಾಕಿಸ್ತಾನದ ಸುದ್ದಿಗಾಗಿ ಹಿಲ್ಲದ ರೇಡಿಯೋವನ್ನು ತಿರುಗಿಸಲು ಒತ್ತಾಯ ಪಡಿಸಿ, ಹಲವನ್ನು ಹೊಡೆದು ದೌರ್ಜನ್ಯಕೃತ್ಯ ನಡೆಸಿ ಪರಾರಿಯಾದರೆಂದು ತಿಳಿದುಬಂದಿದೆ. ಸುದ್ದಿಯು ತಿಳಿದ ಕೂಡಲೆ ಪೋಲೀಸರು ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನು ವಿಚಾರಿಸಿದರು. ಇಲ್ಲಿನ ಎಲ್ಲಾ ಮುಖ್ಯ ಸ್ಥಳಗಳ ಹಿಡಿ ಸಿನಿಮಾ ಮಂದಿರಗಳಲ್ಲಿ ಪೋಲೀಸು ಕಾವಲನ್ನು ಹಾಕಲಾಗಿದೆ. ದೌರ್ಜನ್ಯ ಕೃತ್ಯ ನಡೆಸಿದರೆಂದು ಹೇಳಲಾದವ ರಜ್ಜಾಕ್, ದಸ್ತು, ಬಾದರ್ ಮತ್ತು ಏಲಂವರ್ ಎಂಬ ಮೂವರನ್ನು ಬಂಧಿಸಲಾಗಿದೆ. ಇವರ ಮುಖಂಡ ಡ್ರೈವರ್ ಅವಿನಾಶನು ತಲೆ ತಪ್ಪಿಸಿಕೊಂಡಿರುತ್ತಾನೆಂದು ಹೇಳಲಾಗಿದೆ.

○ ರಾಜಧಾನಿಯ ಶ್ರೀ ರಂಗನಾಥ ಭಾರದ್ವಾಜರವರ ಸಂಪಾದಕತ್ವದಲ್ಲಿ ಹೊರಟಿರುವ ಕನ್ನಡ ಮಾಸ ಪತ್ರಿಕೆ ತಾರಾಲೋಕದ ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆಯನ್ನು ಆದರಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಮದ್ರಾಸಿನಲ್ಲಿ ೩ ಸಾವಿರ ಖೈದಿಗಳ ಬಿಡುಗಡೆ

ಮದ್ರಾಸು ಜೈಲುಗಳಲ್ಲಿ [illegible] ಸ್ಥಳ ಸ್ವಾತಂತ್ರ್ಯ [illegible] ಖೈದಿಗಳನ್ನು ಬಿಡುಗಡೆ ಮಾಡಲಾಯಿತು [illegible] ಯಾವವರು [illegible] ಗಡಿಯ ಫಲವಾಗಿ [illegible]

ಎಣ್ಣೆ ಹಡಗಿನ ಸಿಡಿತದಿಂದ ೨೬ ಜನರ ಮರಣ

ಸಿಂಗಪ್ಪುರದ [illegible] ಹಡಗಿನಲ್ಲಿ [illegible] ಜನರು ಸತ್ತಿರುತ್ತಾರೆ [illegible] ಫಿಲಿಪ್ಪೈನ್ ದ್ವೀಪಗಳಿಗೆ [illegible] ಡೀಸೆಲ್ ಎಣ್ಣೆಗಳನ್ನು [illegible] ಸಾಗಿಸಲಾಗುತ್ತಿತ್ತು

ಮೈಸೂರಿಗೆ ರಿಸರ್ವ್ ಬ್ಯಾಂಕ್ ಶಾಖೆ?

ಮೈಸೂರು ಸರ್ಕಾರ [illegible] ಯೋಚನೆಯನ್ನು [illegible] ಒಬ್ಬ ಸಾರ್ವಜನಿಕ [illegible] ವಿಷಯವಾಗಿ ಬನ್ನೂ ಪತ್ರ [illegible] ನಡೆಯುತ್ತಿರುವುದು [illegible] ಹಣಕಾಸಿನ ಸಚಿವರ [illegible] ಅಧಿಕಾರಿಗಳೊಡನೆ [illegible] ತಿಳಿಸಲಾಗಿದೆ

೧ ಅಂಗುಲ ಭೂಮಿಯನ್ನೂ ಪಾಕಿಸ್ತಾನಕ್ಕೆ ಬಿಡುವುದಿಲ್ಲ

[illegible] ಒಂದು ಅಂಗುಲ ಭಾರತ [illegible] ಭೂಮಿಯನ್ನೂ ಪಾಕಿಸ್ತಾನವು [illegible] ಟಂಡನರ [illegible] ಕಾಶ್ಮೀರದ [illegible] ಭಾರತದ [illegible]

ಪಾಕಿಸ್ತಾನದ ರಕ್ಷಣೆಗೆ ೫೦ ಸಾವಿರ ರಜಕಾರರು

[illegible] ಸಾವಿರ ರಜಾಕಾರರು [illegible] ಪ್ರಧಾನಿ [illegible]

ಟಿಬೆಟ್ ರಾಜಧಾನಿಗೆ ದಲೈ ಲಾಮ

[illegible]

ಮಧ್ಯ ಭಾರತದ ಪ್ರಾದೇಶಿಕ ಕಮಿಷನರ ರಾಜೀನಾಮೆ

ಮಧ್ಯ ಭಾರತದಲ್ಲಿ ಭಾರತ ಸರ್ಕಾರದವರು ನೇಮಿಸಿರುವ ಪ್ರಾದೇಶಿಕ ಕಮಿಷನರ್ ಸಿ ಎಸ್ ರಾವ್‌ರವರು ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖೆಯ ಕಾರ್ಯದರ್ಶಿ ವಿ ಪಿ ಮೆನನ್ನರ [illegible] ನಂತರ [illegible] ಸ್ಥಾನಕ್ಕೆ ಬರಬೇಕಾಗಿತ್ತೆಂದೂ [illegible] ಜೂನಿಯರ್ ಆಗಿರುವ [illegible] ಎಸ್ ವೆಂಕಟಾಚಾರಿಯವರನ್ನು ನೇಮಿಸಿರುವುದು ಸರಿಯಲ್ಲವೆಂದೂ ಪ್ರತಿಭಟಿಸಿ ತಮ್ಮ ನೌಕರಿಗೆ ರಾಜೀನಾಮೆಯನ್ನು ಕೊಟ್ಟಿರುವುದಾಗಿ [illegible] ಬಂದಿದೆ

ಮಂತ್ರಿ [illegible] ಸ್ಥಾನಕ್ಕೆ ತಮಗೆ ಬೇಕಾದವರನ್ನು ತೆಗೆದುಕೊಳ್ಳುವ ಅಧಿಕಾರ ಸರ್ಕಾರದವರಿಗೆ ಇರುವುದರಿಂದ ಈ ವಿಷಯದಲ್ಲಿ ಸೀನಿಯಾರಿಟಿಯ ನಿಯಮಗಳಿಗೆ [illegible] ರಬೇಕಾಗಿಲ್ಲವೆಂದು ಸರ್ಕಾರದ ಅಭಿಪ್ರಾಯವಾಗಿದೆಯೆಂದು ಹೇಳಲಾಗಿದೆ

SRI GAYATHRI TALKIES

[illegible]

I WAS A SHOPLIFTER

ಒಲಿಂಪಿಯಾ

[illegible] ಶೋಭನಾ ಪಿಕ್ಚರ್ಸ್‌ರವರ

ಕುಮಾರಿ ಬೇಟಿ

ಪಾತ್ರ – ನೂತನ್, ಶೇಖರ್, ಮೋತಿಲಾಲ್, ಆಗ

Edited printed and published by A R Nagaraja, at Sadhvi Press D Subbiah Road, Mysore

ಭಾರತದ ಚಿತ್ರಕ್ಕೆ ಪ್ರಥಮ ಬಹುಮಾನ

ಭಾರತ ಸರ್ಕಾರದವರು ತಯಾರಿಸಿರುವ ರಾಜಾಸ್ಥಾನ್ ಎಂಬ ಚಿತ್ರಕ್ಕೆ ವೆನಿಸ್ಸಿನಲ್ಲಾದ [illegible] ಚಿತ್ರಗಳ ಉತ್ಸವದಲ್ಲಿ ಪ್ರಥಮ ಬಹುಮಾನವು ದೊರೆತಿರುತ್ತದೆ

ವಿವಾಹ ಮಹೋತ್ಸವ

ರಾಜಧಾನಿಯ ಶ್ರೀ ಎಂ ವಿ ಕೃಷ್ಣಮಾಚಾರ್ಯರು ತಮ್ಮ ಸೋದರ, ಬೆಂಗಳೂರಿನ ವಕೀಲರಾದ ಶ್ರೀ ಎಂ ವಿ ಶ್ರೀನಿವಾಸಯ್ಯಂಗಾರ್ಯರ ಮಗಳು ಸೌ॥ ಸೀತಾ ಎಂಬ ಕನ್ಯೆಯನ್ನು ಮೈಸೂರು ರೈಲ್ವೆ ಆಡಿಟ್ ಇಲಾಖೆಯಲ್ಲಿದ್ದು ನಿವೃತ್ತರಾಗಿರುವ ಶ್ರೀ ಎಸ್ ನಾರಾಯಣಯ್ಯಂಗಾರ್ಯರ ಮಗ [illegible] ಎಸ್ ಎಸ್ ವರದರಾಜರವರಿಗೆ ಕೊಟ್ಟು ನೊನ್ನೆ ವಿವಾಹವನ್ನು ನೆರವೇರಿಸಿದರು

ಗೃಹಕೃತ್ಯದ ನೋಟೀಸು

[illegible]

ಆರ್ ವಿ. ವೆಂಕಟದಾಸಪ್ಪ.

Hullo! — YOUR LUCK IS IN Hurry up!

NEW FURNITURE

[illegible]

GRAND AUCTION SALE

[illegible] NALINS [illegible]

Auctioneers [illegible] Mysore

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಅನೋಘ ಪ್ರಾರಂಭ ಅಕ್ಕ ಮಹಾದೇವಿ 22 8 51 ರಿಂದ

ಪ್ರತಿ ಸೋಮವಾರ ಬುಧವಾರ ಮತ್ತು ಶನಿವಾರಗಳಲ್ಲಿ

ರಾತ್ರಿ 9 15 ಗಂಟೆಗೆ ರಜಾ ದಿವಸಗಳಲ್ಲಿ ಮ್ಯಾಟನಿ 6 45ಕ್ಕೆ

ಮುನಿಸಿಪಲ್ ಕಮಿಷನರ್‌ರವರ ಆಫೀಸ್,

ಮೈಸೂರು ಸಿಟಿ ಮುನಿಸಿಪಾಲಿಟಿ

ತಾರೀಖು ೨೧ ೮ ೫೧

ಟೆಂಡರ್ ನೋಟಿಫಿಕೇಷನ್

ಮೈಸೂರು ಸಿಟಿ ಮುನಿಸಿಪಲ್ ಶಾಲೆಗಳಿಗೆ ಸೇರಿದ ಸುಮಾರು ೧೦೦ ಶಾಲೆಯ ಬಾಗಿಲುಗಳನ್ನು [illegible] ಕೋಟೆಗಳ ಕಾಲ ಗುತ್ತಿಗೆಗೆ ಪಡೆಯಬೇಕೆನ್ನುವವರು ೫೦ ರೂ ಗಳ ಡಿಪಾಸಿಟ್ ಮಾಡಿ ತಮ್ಮ ಟೆಂಡರುಗಳನ್ನು ತಾ॥ [illegible] ರೊಳಗೆ ಮುನಿಸಿಪಲ್ ಇಂಜನಿಯರ್‌ರವರಿಗೆ ಕೊಡಬಹುದು ಪೂರ್ತಿ ವಿವರಗಳನ್ನು ಮುನಿಸಿಪಲ್ ಛಾರಂ ಮ್ಯಾನೇಜರ್‌ರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು

ಎಂ. ಎಸ್. ಸ್ವಾಮಿನಾಥನ್,

ಮುನಿಸಿಪಲ್ ಕಮಿಷನರ್,

ಮೈಸೂರು ಮುನಿಸಿಪಾಲಿಟಿ, ಮೈಸೂರು

ಗೌರಿ ಹಬ್ಬಕ್ಕಾಗಿ

ನಾವಿಂದರು ಮೂವರು ರೇಷ್ಮೆ ಸೀರೆಗಳು ಮತ್ತು ನೂತನ ಸೀರೆಗಳು ಬಂದಿವೆ ಸೀದವಾಗಿ ಬಂದು ಕೊಳ್ಳಿರಿ

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ ದೊಂಬಾರು ಆನಂದ ಭವನ ಹೋಟೆಲ್ ಹತ್ತಿರ ಮೈಸೂರು

ಪ್ರಭುದೇವಾ ಟಾಕೀಸ್

ಪ್ರತಿ ದಿನ 3 ಆಟಗಳು ಮ್ಯಾಟನಿ 2-45ಕ್ಕೆ

23-8-51 ನೇ ಗುರುವಾರದಿಂದ ಅನೋಘ ಪ್ರಾರಂಭ

ಮಹಾತ್ಮ ಉದಂಗರ್

(ತಮಿಳು)

ಪಾತ್ರ ಅಂಜಲಿ ದೇವಿ, ಟಿ ಆರ್ ರಾಮಚಂದ್ರನ್, ಕೊತ್ತಮಂಗಲಂ ಸೀನು ಬೇಬಿ ಕಮಲ ಮುಂತಾದವರು

ರಿಜಿ ನಂ 792   (ಬೆಲೆ: ಒಂದಾಣೆ)   ಇಂದಿನ ಪತ್ರಿಕೆ 3 ಪುಟ

ಸಾಧ್ವಿ

ಸಂಪುಟ ೧೧]   ಗುರುವಾರ ೨೩-೮-೫೧   [ಸಂಚಿಕೆ ೨೬

ಪರ್ಷಿಯಾ ಎಣ್ಣೆ ಸಂಧಾನ ಮುರಿದು ಬಿದ್ದಿತು

ಸಿಂಹಳದ ಭಾರತ ಹೈಕಮಿಷನರ ಮನೆಯಲ್ಲಿ ದರೋಡೆ

ಸಿಂಹಳದ ರಾಜಧಾನಿ ಕೊಲಂಬೋದಲ್ಲಿ ಭಾರತದ ಪರ ಹೈಕಮಿಷನರಾಗಿರುವ ಕೇಶವ ಮೆನನ್‌ರವರ ಮನೆಗೆ ೨೦ನೇ ತಾ|| ರಾತ್ರಿ ಇಬ್ಬರು ದರೋಡೆಕಾರರು ನುಗ್ಗಿ ಅವರ ಮಗಳು ಶ್ರೀಮತಿ ಫಿಷರ್‌ರವರು ಮಲಗಿದ್ದ ಕೊಠಡಿಗೆ ಹೋಗಿ ಆಕೆಗೆ ಪ್ರಜ್ಞೆ ತಪ್ಪಿಸುವ ಔಷಧಿಯನ್ನು ಮೂಸಿಸಿ, ಒಡವೆಗಳನ್ನು ಕಳ್ಳತನಕ್ಕೊಂಡು ಹೋಗಿರುವುದಾಗಿ ವರದಿಯಾಗಿದೆ. ಆಭರಣಗಳನ್ನು ಕಿತ್ತುಕೊಳ್ಳುವಾಗ ಆಕೆಯು ಹೋರಾಡಲು ಕ್ಲೋರೋಫಾರಂ ಕೊಟ್ಟು ಆಕೆಯನ್ನು ಪ್ರಜ್ಞೆ ತಪ್ಪಿಸಿದರೆಂದು ಹೇಳಲಾಗಿದೆ. ಹೈಕಮಿಷನರ ಮನೆಗೆ ನುಗ್ಗಿರುವುದು ಒಂದು ತಿಂಗಳಲ್ಲಿ ಇದು ಎರಡನೇ ಬಾರಿ. ಯಾರನ್ನೂ ಇದುವರೆಗೆ ದಸ್ತಗಿರಿ ಮಾಡಿಲ್ಲ.

ದೆಹಲಿ ಚಲೋ ಕವನಕ್ಕಾಗಿ ಪ್ರತಾಪ್ ಪತ್ರಿಕೆಗೆ ಎಚ್ಚರಿಕೆ

ಲಾಹೋರಿನ ಜಮೀನ್‌ದಾರ್ ಪತ್ರಿಕೆಯು ಈ ತಿಂಗಳು ಪ್ರಕಟಿಸಿದ್ದ "ದೆಹಲಿ ಚಲೋ" ಎಂಬ ಕವನದ ಬಗ್ಗೆ ಪಶ್ಚಿಮ ಪಂಜಾಬಿನ ಪತ್ರಿಕಾ ಸಲಹಾ ಸಮಿತಿಯು ಆಕ್ಷೇಪಿಸಿ, ಎಚ್ಚರಿಕೆಯನ್ನು ಪತ್ರಿಕೆಗೆ ಕೊಡಬೇಕೆಂದು ಸರ್ಕಾರಕ್ಕೆ ಸೂಚಿಸಿರುವುದು. ಇಂಥಹ ಪ್ರಕಟಣೆಗಳು ಬಂದಲ್ಲಿ ತೀವ್ರವಾಗಿ ಪರಿಶೀಲಿಸುವುದಾಗಿಯೂ ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ.

ಅಮೆಜಾನ್ ನದಿ ಮೂಲ

ಪ್ರಪಂಚದ ಅತ್ಯಂತ ಅಗಲವಾದ ನದಿ ಅಮೆಜಾನಿನ ಮೂಲವನ್ನು ಬ್ರಿಟಿಷ್ ಸಂಶೋಧನಾ ಗುಂಪೊಂದು ಕಂಡು ಹಿಡಿದಿರುವುದಾಗಿ ಗೊತ್ತಾಗಿದೆ. ಅದಕ್ಕಾಗಿ ಅಗಾಧವಾದ ಆಂಡೀಸ್ ಪರ್ವತ ಶ್ರೇಣಿಯನ್ನು ಆ ಗುಂಪು ಹತ್ತಿ ಇಳಿಯಬೇಕಾಯಿತು. ನದಿಯ ಉಗಮಸ್ಥಾನವು ಸ್ಥಳ ಮಧ್ಯ ಪೆರುವಿನ ಆಂಡೀಸ್ ಪರ್ವತ ಶ್ರೇಣಿಯಲ್ಲಿ ೧೭೫೦೦ ಅಡಿ ಎತ್ತರದಲ್ಲಿರುವ ನಿನೊಕೋಚಾ ಎಂಬ ಸರೋವರದಿಂದ ಈ ನದಿಯು ಆರಂಭವಾಗಿರುತ್ತದೆ.

ಶ್ರೀಕಂಠೇಶ್ವರಾದ್ವೈತ ಸಭೆ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಾದ್ವೈತ ಸಭೆಯ ವಾರ್ಷಿಕೋತ್ಸವವು ಈ ತಿಂಗಳು ೨೫ ಮತ್ತು ೨೬ನೇ ತಾ|| ಎರಡು ದಿನಗಳಲ್ಲಿ ನಡೆಯುತ್ತದೆ. ಬೆಂಗಳೂರು ಶ್ರೀ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರಾದ ಕೆ. ಬಿ. ವಸಂತ ಮೂರ್ತಿ ಶಾಸ್ತ್ರಿಯವರು ೨೫ನೇ ತಾ|| ಸಂಜೆ ೫ ಘಂಟೆಗೆ ಮಂದಿರದಲ್ಲಿ "ಭಗವದ್ಗೀತೆಯು ಜಾವ ದರ್ಶನಕ್ಕೆ ಸೇರಿದ್ದು" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ೨೬ನೇ ತಾ|| ಸಂಜೆ ೫ ಘಂಟೆಗೆ ಭಾಗವತದಲ್ಲಿ ಪ್ರಹ್ಲಾದ ಚರಿತ್ರೆ ಎಂಬ ವಿಷಯವಾಗಿ ಉಪನ್ಯಾಸವೂ ನಡೆಯಲಿದ್ದು, ಪಾರಿತೋಷಕ ಮುಖ್ಯಾತಿಥ್ಯವನ್ನು ವಹಿಸಬೇಕೆಂದು ಸಭಾ ಕಾರ್ಯದರ್ಶಿ ಶ್ರೀ ಕೆ. ಚಂದ್ರಶೇಖರ ಶಾಸ್ತ್ರಿಯವರು ತಿಳಿಸಿರುತ್ತಾರೆ.

ಭಾಷಾವಾರು ಸಂಸ್ಥಾನಗಳ ನಿರ್ಮಾಣಕ್ಕೆ ಕೇಂದ್ರದ ಸಹಾನುಭೂತಿ

ಭಾಷಾವಾರು ಸಂಸ್ಥಾನಗಳ ನಿರ್ಮಾಣದ ವಿಷಯವಾಗಿ ಸಂಬಂಧಪಟ್ಟ ಸಂಸ್ಥಾನಗಳಲ್ಲಿ ಒಪ್ಪಿಗೆಯು ದೊರೆಯುವ ಕಡೆ ಗಡಿ ನಿರ್ದೇಶನ ಸಮಿತಿ ನೇಮಕ ಮತ್ತು ಇತರ ವ್ಯವಸ್ಥೆಗಳನ್ನು ಸರ್ಕಾರದವರು ಮಾಡಲು ಕ್ರಮ ಕೈಗೊಳ್ಳುವುದಾಗಿ ನೆನ್ನೆ ಪಾರ್ಲಿಮೆಂಟಿನಲ್ಲಿ ಪ್ರಧಾನಿ ನೆಹರೂರವರು ತಿಳಿಸಿದರು. ಆಂಧ್ರ ಪ್ರಾಂತ ರಚನೆ ಬಗ್ಗೆ ಸರ್ಕಾರವು ನಿರಾಸಕ್ತಿ ವಹಿಸಿರುವುದನ್ನು ಕಂಡು, ಶ್ರೀ ಸೀತಾರಾಂ ಬಿಲ್ಲಾಸ ಸ್ವಾಮಿಗಳು, ಬಸವಯ್ಯ ಮತ್ತು ಅವರ ಪಕ್ಷದ ಮುಂತಾದವರು ಉಪವಾಸ ದೀಕ್ಷೆಯನ್ನು ಕೈಗೊಂಡ ಸಂದರ್ಭದಲ್ಲಿ ಎನ್. ಜಿ. ರಂಗಾರವರು ಪಾರ್ಲಿಮೆಂಟಿನಲ್ಲಿ ನಿಲುವಳಿ ಸೂಚನೆಯನ್ನು ತಂದಾಗ ನೆಹರೂರವರು ಸರ್ಕಾರದ ಅಭಿಪ್ರಾಯವನ್ನು ತಿಳಿಸಿದರು. ಉಪವಾಸ ಸತ್ಯಾಗ್ರಹಗಳು ಭಾಷಾವಾರು ಪ್ರಾಂತ ನಿರ್ಮಾಣಕ್ಕೆ ಸಾಧನಗಳಲ್ಲವೆಂದು ನೆಹರೂರವರು ಹೇಳಿ, ಪ್ರಾಂತ ರಚನೆಗೆ ಸರ್ಕಾರದವರು ಸಹಾನುಭೂತಿಯುಳ್ಳವರಾಗಿಯೇ ಇರುವರೆಂದು ಸ್ಪಷ್ಟಪಡಿಸಿದರು. ಸಾರ್ವತ್ರಿಕ ಅಭಿಪ್ರಾಯವನ್ನು ಪರಿಗಣಿಸುತ್ತಾ ಕೇವಲ ಗಡಿಗಳ ವಿಚಾರವಾಗಿ ಒಪ್ಪಂದವು ಮಾತ್ರ ಸಾಲದೆಂದೂ ಹಣಕಾಸು, ಸಿವಿಲ್ ಸರ್ವಿಸ್ ಮುಂತಾದ ನಾನಾ ಸಮಸ್ಯೆಗಳೂ ಇತ್ಯರ್ಥವಾಗಬೇಕೆಂದೂ, ಹಾಗಿಲ್ಲದೇ ಪ್ರಾಂತ ನಿರ್ಮಾಣವನ್ನು ಮಾಡಿದರೆ ಹೊಸ ಕಷ್ಟಗಳು ಉದ್ಭವಿಸುತ್ತವೆಂದೂ ಅವರು ಹೇಳಿದರು.

ಚಕ್ರ ಮುತ್ತಿನ ಅಲಂಕಾರ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಚಾಮುಂಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶ್ರಾವಣ ಶುಕ್ರವಾರ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಶ್ರೀ ಹೆಚ್. ಎಸ್. ಶಿವಲಿಂಗಸ್ವಾಮಿಯವರಿಂದ ಶ್ರೀ ಕೃಷ್ಣ ಜನನ ಎಂಬ ಹರಿಕಥೆಯೂ, ಅಮ್ಮನವರಿಗೆ ಚಕ್ರ ಮುತ್ತಿನ ಅಲಂಕಾರವೂ ನಡೆಯಲಿದೆ.

ಪರ್ಷಿಯಾ ಎಣ್ಣೆ ಸಂಧಾನ ಮುರಿದು ಬಿತ್ತು

ಪರ್ಷಿಯಾದೊಡನೆ ಬ್ರಿಟನ್ನು ನಡೆಸುತ್ತಿದ್ದ ಸಂಧಾನವು ಮುರಿಯಿತೆಂದು ವರದಿಯಾಗಿದೆ. ಅಬದಾನಿನ ಎಣ್ಣೆ ಪರಿಷ್ಕರಣದ ಕಾರ್ಖಾನೆಯು ಬ್ರಿಟಿಷ್ ವ್ಯವಸ್ಥಾಪಕರ ಹತೋಟಿಯಲ್ಲಿರಬೇಕೆಂದ ಬ್ರಿಟಿಷ್ ಸಂಧಾನವಾದಿಯಾದ ಸ್ಟೋಕ್ಸ್‌ರವರು ಮಾಡಿದ ಬೇಡಿಕೆಯನ್ನು ಪರ್ಷಿಯನ್ನರು ನಿರಾಕರಿಸಿದುದರಿಂದ ಸಂಧಾನವು ಮುರಿದು ಈ ದಿನ ಸ್ಟೋಕ್ಸ್‌ರವರು ಸ್ವದೇಶಕ್ಕೆ ಮರಳಲಿರುವರು. ಎಣ್ಣೆ ಗಣಿಗಳನ್ನು ಬಿಟ್ಟುಕೊಡಕೂಡದೆಂದು ಬ್ರಿಟಿಷ್ ಮಂತ್ರಿಮಂಡಲವು ನಿರ್ಧರಿಸಿರುತ್ತದೆ.

ಕೊರಿಯಾದಲ್ಲಿ ಭಾರಿ ಕದನಗಳ ಸೂಚನೆ

ದಕ್ಷಿಣ ಕೊರಿಯನವರು ಪ್ರಾರಂಭಿಸಿದ ಧಾಳಿಗೆ ಪ್ರತಿಯಾಗಿ ಕಮ್ಯೂನಿಸ್ಟರು ರಕ್ಷಣೆಯಾಗಿ ಸೈನ್ಯ ಸಮೂಹವನ್ನು ತಂದಿರುವುದರಿಂದ ಕೊರಿಯಾದ ಪೂರ್ವ ರಣರಂಗದಲ್ಲಿ ಭಾರಿ ಕಾಳಗವಾಗುವ ಸಂಭಾವನೆಯಿರುವುದಾಗಿ ಹೇಳಲಾಗಿದೆ. ಹಲವು ಕಡೆಗಳಲ್ಲಿ ಶಸ್ತ್ರ ಸಂಗ್ರಹಗಳನ್ನು ಕಮ್ಯೂನಿಸ್ಟರು ವಾಪಸು ಹೋಗುವಂತೆ ಮಾಡಿರುತ್ತಾರೆ. ಕಮ್ಯೂನಿಸ್ಟರ ಹಿಂಭಾಗದಲ್ಲಿ ಯಥೇಚ್ಛವಾಗಿ ಜನ ಮತ್ತು ಸಾಮಗ್ರಿಗಳ ಶೇಖರಣೆಯಾಗುತ್ತಿದೆ.

ಕೋ ಆಪರೇಟಿವ್ ಬ್ಯಾಂಕಿನ ಕಾರ್ಯದರ್ಶಿ ಸ್ಥಾನದ ವ್ಯವಹಾರ

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಕಾರ್ಯದರ್ಶಿಯಾಗಿದ್ದ ಡಾ|| ಬಿ. ಎಸ್. ಸೂರ್ಯನಾರಾಯಣರಾಯರಲ್ಲಿ ಹಿಂದೆ ಅವಿಶ್ವಾಸವನ್ನು ಸೂಚಿಸಿ ಡೈರೆಕ್ಟರುಗಳು ಅವರನ್ನು ಆ ಸ್ಥಾನದಿಂದ ತೆಗೆದು ಹಾಕಿದ ಬಗ್ಗೆ ಸದರಿಯವರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಕೋರ್ಟಿನಲ್ಲಿ ಅಪೀಲು ಹಾಕಲಾಗಿ, ಕಳೆದ ಸೋಮವಾರ ರಿಜಿಸ್ಟ್ರಾರ್‌ರವರು ಡೈರೆಕ್ಟರುಗಳ ನಿರ್ಣಯವು ಕ್ರಮಬದ್ಧವಲ್ಲವೆಂದು ತೀರ್ಪಿತ್ತು ಸೂರ್ಯನಾರಾಯಣರಾಯರನ್ನು ಗೌರವ ಕಾರ್ಯದರ್ಶಿಯಾಗಿ ತೆಗೆದುಕೊಳ್ಳಬೇಕೆಂದು ಸೂಚನೆ ಇತ್ತರು.

ಮಂತ್ರಿ ಮಂಡಲದ ಬಿಕ್ಕಟ್ಟು ಪರಿಹಾರಕ್ಕೆ ಸತ್ಯಾಗ್ರಹ

ತಿರುವಾಂಕೂರು-ಕೊಚ್ಚಿ ಸಂಸ್ಥಾನದ ಮುಖಂಡರಲ್ಲಿರುವ ಭಿನ್ನಾಭಿಪ್ರಾಯವನ್ನು ಹೋಗಲಾಡಿಸುವ ಸಲುವಾಗಿ ಉತ್ತರ ತಿರುವಾಂಕೂರಿನ ಕಡೆಯಿಂದ ೨೦೦ ಜನರು ಅಲ್ಲಿನ ರಾಜಧಾನಿಗೆ ಆಗಮಿಸಿರುತ್ತಾರೆ. ಅವರು ಮಂತ್ರಿಗಳು, ಶಾಸನ ಸಭಾ ಮತ್ತು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರುಗಳ ಭವನಗಳ ಎದುರಿಗೆ ಸತ್ಯಾಗ್ರಹವನ್ನು ಹೂಡುವರೆಂದು ಹೇಳಲಾಗಿದೆ. ಒಟ್ಟು ಎರಡು ಸಾವಿರ ಜನರು ಈ ಸತ್ಯಾಗ್ರಹದಲ್ಲಿ ಭಾಗವಹಿಸುವರೆಂದು ತಿಳಿದುಬಂದಿದೆ. ಮಂತ್ರಿಮಂಡಲದ ರಾಜೀನಾಮೆ ಅಥವಾ ಕಾಂಗ್ರೆಸ್ಸಿನಲ್ಲಿರುವ ಭಿನ್ನಾಭಿಪ್ರಾಯದ ನಿವಾರಣೆ ಇವೆರಡರಲ್ಲಿ ಒಂದು ಖಂಡಿತವಾಗಿ ಆಗುವುದೆಂದು ನಂಬಲಾಗಿದೆ.

ಅಭಿವೃದ್ಧಿ ಯೋಜನೆಗಳಿಗಾಗಿ ಒಂದು ಸಹಸ್ರ ಕೋಟಿ ರೂ.

ರಾಷ್ಟ್ರದ ಅಭಿವೃದ್ಧಿ ಯೋಜನೆಗಳಿಗಾಗಿ ಒಂದು ಸಹಸ್ರ ಕೋಟಿ ರೂ.ಗಳನ್ನು ಕೇಂದ್ರ ಮತ್ತು ಸಂಸ್ಥಾನಗಳು ಆದಾಯದ ಖಾತೆಯ ಮತ್ತು ಸಾಲಗಳಿಂದ ಒದಗಿಸಿಕೊಳ್ಳುವ ನಿರೀಕ್ಷೆ ಇದೆ ಎಂದೂ, ಕೊಲಂಬೋ ಯೋಜನೆಯ ಪ್ರಕಾರ ಕೆನಡಾವು ೫ ಕೋಟಿ ಮತ್ತು ಆಸ್ಟ್ರೇಲಿಯಾವು ೫|| ಕೋಟಿ ರೂ.ಗಳ ನೆರವನ್ನು ನೀಡುವುವೆಂದೂ ಕೇಂದ್ರ ಸರ್ಕಾರದ ಅರ್ಥಿಕ ಸಚಿವ, ಸಿ. ಡಿ. ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಬಲಾತ್ಕಾರದೊಡನೆ ವ್ಯಾಜ್ಯವಾದಿ ಯುವತಿ ಬಾವಿಗೆ ಬಿದ್ದ ಪ್ರಸಂಗ

ಮಂಡಿ ಮೊಹಲ್ಲಾ ತಿಗಳರ ಬೀದಿ ವಾಸಿ ಲಲಿತಮ್ಮ ಎಂಬ ೧೭ ವರ್ಷದ ಲಿಂಗಾಯಿತ ಯುವತಿಯು ನೆನ್ನೆ ಮಧ್ಯಾಹ್ನ ಸುಮಾರು ೪ ಗಂಟೆ ಸಮಯದಲ್ಲಿ ಬಸ್ ಟರ್ಮಿನಸ್ ಬಳಿ ಇರುವ ಬಾವಿಯೊಳಕ್ಕೆ ಹಾರಿದ ಪ್ರಸಂಗವು ವರದಿಯಾಗಿದೆ. ಬಾವಿಯಲ್ಲಿ ಮೂರು ಕಾಲಿನಷ್ಟು ಮಾತ್ರ ನೀರಿದ್ದುದರಿಂದ ಆಕೆಗೆ ಹೆಚ್ಚು ಪೆಟ್ಟುಗಳಿಲ್ಲ. ಕೂಡಲೇ ಸುತ್ತಮುತ್ತಲಿನ ಜನರು ಬಂದು ಆಕೆಯನ್ನು ಮೇಲಕ್ಕೆ ಬರುವಂತೆ ಕರೆದರೆಂದೂ ಬರಲು ನಿರಾಕರಿಸಿದುದರಿಂದ ಒಬ್ಬ ಯುವಕನನ್ನು ಕೆಳಗೆ ಇಳಿಸಿ, ಅವನು ಆಕೆಯನ್ನು ಮೇಲಕ್ಕೆ ಕರೆತಂದನೆಂದೂ ಹೇಳಲಾಗಿದೆ. ಆಕೆಯನ್ನು ಪೋಲೀಸರು ಅವರ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ಬಲಾತ್ಕಾರದೊಡನೆ ವ್ಯಾಜ್ಯವಾಡಿ ಹುಡುಗಿಯು ಬಾವಿಗೆ ಬೀಳಲು ಹೋದಳೆಂದು ಹೇಳಲಾಗಿದೆ.

ಕನ್ನಡ ಭಾಷೆಯಲ್ಲಿ ಅಭಿರುಚಿಯಿರುವ ಫ್ರೆಂಚ್ ಸಾಹಿತಿ

ರಾಜಧಾನಿಯ ವಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘಕ್ಕೆ ನೆನ್ನೆ ಸಂಜೆ ಫ್ರೆಂಚ್ ಸಾಹಿತಿ ಫಾದರ್ ಲೂಯಿ ಹಂಡ್ರಿಕೋರ್ಟ್‌ರವರು ಭೇಟಿಯಿತ್ತು ಸಂಘದ ಚಟುವಟಿಕೆಗಳನ್ನು ಪರಿಶೀಲಿಸಿ ಸಂತೋಷವನ್ನು ವ್ಯಕ್ತಪಡಿಸಿದರು. ಕನ್ನಡವನ್ನು ಹೇಳಿಕೊಡುವ ತರಗತಿಯ ಮಕ್ಕಳನ್ನುದ್ದೇಶಿಸಿ ಅವರು ಮಾತನಾಡಿ, ಆ ಭಾಷೆಯಲ್ಲಿ ತಮಗಿರುವ ಅಭಿರುಚಿಯನ್ನು ವ್ಯಕ್ತಪಡಿಸಿ, ಶಾಸ್ತ್ರ ವನ್ನು ಕಲಿಯುತ್ತಿರುವುದಾಗಿ ಹೇಳಿದರು.

ಚೀಣದಲ್ಲಿ ರಾಷ್ಟ್ರೀಯ ಚೀಣರ ಭದ್ರ ನೆಲೆ

ಬರ್ಮದ ಈಶಾನ್ಯಗಡಿ ಮತ್ತು ಚೀಣಾದ ಯುನ್ನಾನ್ ಪ್ರಾಂತದ ನೈಋತ್ಯ ಭಾಗದಲ್ಲಿ ರಾಷ್ಟ್ರೀಯ ಚೀಣ ಸೈನ್ಯವು ಭದ್ರ ಸ್ಥಾನವನ್ನು ಸ್ಥಾಪಿಸಿಕೊಂಡಿರುವುದಾಗಿ ರಂಗೂನಿನಲ್ಲಿರುವ ರಾಯಭಾರಿಗಳ ವಲಯದಿಂದ ತಿಳಿದುಬಂದಿರುತ್ತದೆ

ಲಾರಿಗೆ ವಿಮಾನ ಡಿಕ್ಕಿಯಾಗಿ ೧೦ ಜನರ ಮರಣ

ಅಮೆರಿಕದ ಸೂಪರ್‌ಫೋರ್ಟ್ [illegible] ವಿಮಾನ ನಿನ್ನೆ ಹತ್ತಿ ... ವಿಮಾನ ನಿಲ್ದಾಣದಿಂದ ... ಡಿಕ್ಕಿ ಹೊಡೆದುದರಿಂದ ೧೦ ಜನರು ಸತ್ತರು. ವಿಮಾನಕ್ಕೆ ಬೆಂಕಿ ಹತ್ತಿತು. ಇನ್ನೂ ಹತ್ತು ಜನರಿಗೆ ಗಾಯವಾಗಿದೆ

ಲಾಹೋರಿನಲ್ಲಿ ರಾಷ್ಟ್ರೀಯ ದಳದ ರ್‍ಯಾಲಿ

ಲಾಹೋರಿನಲ್ಲಿ ನೆನ್ನೆ ಪಾಕಿಸ್ತಾನದ ರಾಷ್ಟ್ರೀಯ ದಳಕ್ಕೆ ಸೇರಿದ ೧೫ ಸಾವಿರ ಜನರ ರ್‍ಯಾಲಿಯು ನಡೆಯಿತು. ಇದನ್ನು ನೋಡಿದ ೧ ಲಕ್ಷ ಜನರ ಪೈಕಿ ಪ್ರಧಾನಿ ಲಿಯಾಖತ್ ಅಲಿ ಖಾನರೂ ಇದ್ದರು.

ಕಾಂಗ್ರೆಸ್ ಉಮೇದುವಾರಿಕೆ

ಕಾಂಗ್ರೆಸ್ ಪಕ್ಷದಿಂದ ಶಾಸನ ಸಭೆ ಮತ್ತು ಪಾರ್ಲಿಮೆಂಟ್ ಸಭೆಗಳಿಗೆ ಉಮೇದುವಾರಿಕೆ ಅರ್ಜಿಗಳನ್ನು ಸ್ವೀಕರಿಸಲು ಸೆಪ್ಟೆಂಬರ್ ೫ನೇ ತಾ|| ಕಡೆಯ ದಿನ. ಆದರೆ ಸೆಪ್ಟೆಂಬರ್ ೧ನೇ ತಾ|| ಎಂಬುದಾಗಿ ನೆನ್ನೆಯ ದಿನದ ನಮ್ಮ ಪತ್ರಿಕೆಯಲ್ಲಿ ತಪ್ಪು ಬಿದ್ದಿತು.

ಟೈಮ್ಸ್ ಆಫ್ ಕಲಾ

ರಾಜಧಾನಿಯ ಕಲಾಕ್ಷೇತ್ರದ ಕನ್ನಡ ಕೈಬರಹದ ಮಾಸ ಪತ್ರಿಕೆಯ ವಿಭಾಗವಾಗಿ "ಟೈಮ್ಸ್ ಆಫ್ ಕಲಾ" ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸಲು ತೀರ್ಮಾನಿಸಿ, ಈ ತಿಂಗಳಿನ ಪ್ರಥಮ ಸಂಚಿಕೆಯು ಈಗತಾನೇ ಹೊರಬಿದ್ದಿದೆ. ಇದನ್ನು ಮಹಾರಾಜಾ ಕಾಲೇಜು ಯೂನಿಯನ್ನಿನಲ್ಲಿ ಇಡಲಾಗಿದೆ. ಇನ್ನೊಂದು ಪ್ರತಿಯನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಡಲಾಗುವುದು. ಇತರ ಕಾಲೇಜುಗಳಿಗೂ ಬೇರೆ ಪ್ರತಿಗಳನ್ನು ಕಳುಹಿಸಲಾಗುವುದು. ಪತ್ರಿಕೆಯ ಸಂಪಾದಕರು ಮಹಾರಾಜಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿ ಶ್ರೀ ಪಿ. ನಾಗೇಂದ್ರಪ್ಪ ಚಿತ್ರಕಾರರು ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು.

ಉಪ್ಪಿನಮೋಳೆ ಕೆರೆಯ ರಿಪೇರಿಯ ಅವಶ್ಯಕತೆ

ಯಳಂದೂರು ತಾಲ್ಲೂಕು ಉಪ್ಪಿನಮೋಳೆಯ ಕೆರೆಯನ್ನು ರಿಪೇರಿ ಮಾಡಲು ಸರ್ಕಾರವನ್ನು ಅಲ್ಲಿನ ನಿವಾಸಿಗಳು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಕೆರೆಯು ೧೯೩೬ರಲ್ಲಿ ಒಡೆದುಹೋಯಿತು. ಅದರ ಅಂಗಳ ಸುಮಾರು ೫೦ ಎಕರೆ ಆಗುವುದು ೧೫೦ ಎಕರೆ ಜಮೀನು ಅದರ ಕೆಳಗೆ ಸಾಗುವಳಿ ಆಗುತ್ತಿರುವುದು. ಮಳೆಯ ನೀರಿನಿಂದಲೇ ಕೆರೆಯು ತುಂಬಬೇಕಾಗಿದೆ. ಮಳೆಗಾಲದಲ್ಲಿ ಮಾತ್ರ ಹೊನ್ನುಹೊಳೆ ನಾಲೆಯಿಂದ ಅಚ್ಚುಕಟ್ಟುದಾರರಿಗೆ ನೀರು ದೊರೆಯುವುದು. ಪ್ರತಿವರ್ಷವೂ ಭತ್ತವನ್ನು ಬೆಳೆಯಲು ಆ ನೀರು ಸಾಲದು. ಕೆರೆಯಲ್ಲಿ ನೀರನ್ನು ನಿಲ್ಲಿಸಿ ಭತ್ತದ ಗದ್ದೆಗಳಿಗೆ ಹಾಯಿಸಿಕೊಳ್ಳಬೇಕಾಗಿದೆ.

ಹಳ್ಳಿನ ರೈತರಿಗೆ ಹೆಚ್ಚು ಆಹಾರ ಬೆಳೆಯುವ ಯೋಜನೆಯ ಪ್ರತಿಫಲವು ದೊರೆತಿಲ್ಲ. ಸರ್ಕಾರದವರು ಈ ಕೂಡಲೇ ಕೆರೆಯನ್ನು ರಿಪೇರಿ ಮಾಡಿಸಿಕೊಟ್ಟು ರೈತರನ್ನು ಕಾಪಾಡಬೇಕು ಎಂಬುದಾಗಿ ಅರ್ಜಿಯಲ್ಲಿ ಕೋರಲಾಗಿದೆ.

ಗುರುದೇವಾ ಹಾಲ್
ಗೌರಿಹಬ್ಬದ ಸಲುವಾಗಿ
ರಿಯಾಯಿತಿ ಬೆಲೆ
ಕ್ರೇಪ್, ಜಾರ್ಜೆಟ್, ಧರ್ಮಾವರಂ, ಆರಣಿ, ಕಂಚಿ ರೇಷ್ಮೆ ಸೀರೆಗಳು ದೊರೆಯುತ್ತವೆ.
ಶಿವರಾಂಪೇಟೆ, ಮೈಸೂರು.

|| ಶ್ರೀ ||
ಗಣೇಶಾ ಟಾಕೀಸ್
24-8-51ನೇ ಶುಕ್ರವಾರದಿಂದ
ರಾಮದಾಸ್
ಕನ್ನಡ ಚಿತ್ರ
ರಾಜಾ ವಿಕ್ರಮರ ಪ್ರಖ್ಯಾತಿಯ
ಕೆಂಪರಾಜ್, ಮಹಾಬಲರಾವ್,
ಸುರಿರಾವ್, ಸುಶೀಲಾ,
ಮುಂತಾದವರು ಪಾತ್ರ ವಹಿಸಿರುವರು.

ಚಾಮುಂಡೇಶ್ವರಿ
ಟಾಕೀಸ್
* ದೇವಕಿ *
(ತಮಿಳು)
24-8-51ರಿಂದ
ಅಕರ್ಷಣೀಯವಾದ
5ನೇ ವಾರ

Edited, printed and published by A. R. Nagarajan, at Sadhvi Press D. Subbiah Road, Mysore.

ರಾಜಕಮಲ್, ಮೈಸೂರು
24-8-51 ರಿಂದ 3ನೇ ವಾರ
ಜಗನ್ಮೋಹಿನಿ

SRI KRISHNARAJENDRA MILLS' CO-OPERATIVE SOCIETY, Ltd.,
MYSORE
WANTED
A Daily Auditor. Please apply stating qualifications Experience and Salary required to the Hon Secretary

SRI GAYATHRI,
TALKIES
From 23-8-51 Daily 3 Shows
Universal's
I WAS A SHOPLIFTER

ಗೌನ್ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರಣಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ.,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ಪ್ರಭುದೇವಾ ಟಾಕೀಸ್
ಪ್ರತಿ ದಿನ 3 ಆಟಗಳು . ಮ್ಯಾಟಿನಿ 2-45ಕ್ಕೆ
23-8-51 ನೇ ಗುರುವಾರದಿಂದ ಅಮೋಘ ಪ್ರಾರಂಭ
ಮಹಾತ್ಮ ಉದಂಗರ್
(ತಮಿಳು)
ಪಾತ್ರ: ಅಂಜಲಿ ದೇವಿ, ಟಿ. ಆರ್. ರಾಮಚಂದ್ರನ್, ಕೊತ್ತಮಂಗಲಂ ಸೀನು, ಬೇಬಿ ಕಮಲ ಮುಂತಾದವರು

ಗೌರಿ ಹಬ್ಬದ ಸ್ಪೆಷಲ್ ೬ ಮತ್ತು ೬ ಗಜಗಳಲ್ಲಿ ಸೇಲಂ, ಮಧುರೆ, ಕೊಯಮತ್ತೂರು
ಜರಿಯ ನವೀನ ಮಾದರಿ ಸೀರೆಗಳು, ಮತ್ತು ಮೈಸೂರು ರೇಷ್ಮೆ ಸೀರೆಗಳು ಬೇಕಾದಷ್ಟು ಬಂದಿವೆ ಭೇಟಿ ಕೊಡಿರಿ.
M. P. ನರಸಿಹ್ಮಯ್ಯ ಜವಳಿ ಅಂಗಡಿ, ದೊಡ್ಡಪೇಟೆ ಮೈಸೂರು

ANNOUNCEMENT
Due to unforeseen and unavoidable circumstances our Sunday's Auction has been postponed to 2-9-1951, and our patrons are kindly requested to extend their hearty co-operation with us as before.
Inserted by Messrs NALINS Auctioneers V. V. Market Square, Mysore.

ABIDS OUTRIGHT AUCTION SALE
EVERY SUNDAY AT 10 A. M.
The Long-awaited Auction at
THE GOVERNMENT HOUSE, MYSORE
Will be held during SEPTEMBER 1951
WATCH FOR THE DATE AND DETAILS
On 1-9-1951 In this Paper

ಗೌರಿ ಹಬ್ಬಕ್ಕಾಗಿ. ಬನಾರಸ್, ಮಾದರಿ ರೇಷ್ಮೆ ಸೀರೆಗಳು ಮತ್ತು ನೂತನ ಸೀರೆಗಳು ಬಂದಿವೆ. ನೇರವಾಗಿ ಬಂದು ಕೊಳ್ಳಿರಿ.
D. L. ನರಸಿಹ್ಮಯ್ಯ & ಬ್ರದರ್ಸ್,
ಜವಳಿ ಅಂಗಡಿ, ಬೊಂಬಾಯಿ ಆನಂದ ಭವನ ಹೋಟಲ್ ಹಳ್ಳಿ, ಮೈಸೂರು.

ರಣಜಿತ್ ಟಾಕೀಸ್ ಯಶಸ್ವಿ 3ನೇ ಯ ಯೂಪದ ವಾರ
ಜೆಮಿನಿ ಫಿಲಂಸ್‌ರವರ ಮಹೋನ್ನತ ಹಿಂದಿ ಚಿತ್ರ * ಬಾದಲ್
ಭೂಮಿಕೆಯಲ್ಲಿ :- ಮಧುಬಾಲಾ, ಪ್ರೇಮನಾಥ್.
ಡೈರೆಕ್ಟರ್:-ಅಮೀಯ ಚಕ್ರವರ್ತಿ :: ಸಂಗೀತ:-ಶಂಕರ್‌ಜಯಕಿಶನ್
ASHOK RELEASE

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು
ರತ್ನಾವಳಿ ಥಿಯೇಟರಿನಲ್ಲಿ
ಅಮೋಘ ಪ್ರಾರಂಭ ಅಕ್ಕ ಮಹಾದೇವಿ 22-8-51 ರಿಂದ
ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ ರಾತ್ರಿ 9-15 ಘಂಟೆಗೆ, ಉಳಿದ ದಿನಗಳಲ್ಲಿ ಮ್ಯಾಟಿನಿ 6-15ಕ್ಕೆ

ಫೋನ್ ನಂ. 792 ॥ ಸಂಜೆ ಪತ್ರಿಕೆ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೪-೮-೫೧ [ಸಂಚಿಕೆ ೨೭

ಕೇಸಾಂಗ್ ಸೀಸ್‌ಫೈರ್ ಸಂಧಾನದ ಭಂಗ

ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ ೨ನೇ ತಾ॥

ದಾವಣಗೆರೆಯಲ್ಲಿ ಸಂಸ್ಥಾನದ ರಾಜಕೀಯ ಸಮ್ಮೇಳನವು ೨೬ ಮತ್ತು ೨೭ನೇ ತಾ॥ ನಡೆಯಲಿರುವುದರಿಂದ ೨೬ನೇ ತಾ॥ ಸೇರಬೇಕಾಗಿದ್ದ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯನ್ನು ಬರುವ ತಿಂಗಳು ೨ನೇ ತಾ॥ ಗೆ ಮುಂದುವರಿಸಲಾಗಿದೆಯೆಂದು ಕಾರ್ಯದರ್ಶಿ ಶ್ರೀ ಹೆಚ್. ಕೆ. ಕುಮಾರ ಸ್ವಾಮಿಯವರು ತಿಳಿಸಿರುತ್ತಾರೆ.

ರಾಮಚಂದ್ರ ದೇವಸ್ಥಾನದಲ್ಲಿ ಶ್ರೀ ಕೃಷ್ಣೋತ್ಸವ

ರಾಜಧಾನಿಯ ಶ್ರೀರಾಮಪೇಟೆಯ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ಕೃಷ್ಣಾಷ್ಟಮಿ ಪ್ರಯುಕ್ತ ಈ ದಿನದಿಂದ ಬರುವ ತಿಂಗಳು ೩ನೇ ತಾ॥ ರ ವರೆಗೂ ದೇವರಿಗೆ ವಿವಿಧಾಲಂಕಾರಗಳನ್ನು ಮಾಡಲು ಏರ್ಪಾಡು ಮಾಡಲಾಗಿದೆ.

ಹರಿಕಥೆ

ಮಂಡಿಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ನಾಳೆ ಸಂಜೆ ೭ ಘಂಟೆಗೆ ಶ್ರೀ ಹೆಚ್. ಎಸ್. ಶಿವಲಿಂಗಸ್ವಾಮಿಯವರಿಂದ ಸೀತಾ ಕಲ್ಯಾಣ ಎಂಬ ಹರಿಕಥೆಯೂ, ಅಮ್ಮನವರಿಗೆ ಕೋದಂಡರಾಮನ ಅಲಂಕಾರವೂ ಏರ್ಪಾಡಾಗಿವೆ.

ಪ್ರಜಾ ಸಂಘದ ಕಾರ್ಯಕರ್ತರ ಸಭೆ

ಮೈಸೂರು ಪ್ರಜಾಸಂಘದ ಕಾರ್ಯಕರ್ತರ ಸಭೆಯು ನಾಳೆ ಮಧ್ಯಾಹ್ನ ೪ ಗಂಟೆಗೆ ಸಂತೇಪೇಟೆಯಲ್ಲಿರುವ ಶ್ರೀ॥ ದೊಡ್ಡಮುನಿಯಪ್ಪನವರ ಗೃಹದಲ್ಲಿ ನಡೆಯುವುದು. ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕಾರ್ಯದರ್ಶಿಯವರು ಕೋರಿರುತ್ತಾರೆ.

ಹಿಂದೀ ಪರೀಕ್ಷೆಗಳು

ರಾಜಧಾನಿಯ ಹಿಂದೀ ಪ್ರಚಾರಸಭೆಯ ಆಶ್ರಯದಲ್ಲಿ ನಡೆಯಲಿರುವ ಹಿಂದಿ ಪ್ರಥಮಾ, ವಿಶಾರದ ಮತ್ತು ಪ್ರವೇಶಿಕಾ ಪರೀಕ್ಷೆಗಳು ನಾಳೆಯಿಂದ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ಪ್ರಾರಂಭವಾಗುವುವು. ೨೬ನೇ ತಾ॥ ಭಾನುವಾರ ಪ್ರಥಮ ಮಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು ನಡೆಯುವುವು. ಇಂದಿಗಾಗಿ ಪ್ರಥಮ ಮತ್ತು ಮಧ್ಯಮ ಪರೀಕ್ಷೆಗಳನ್ನು ದಳವಾಯ್ ಹೈಸ್ಕೂಲಿನಲ್ಲಿ ಏರ್ಪಡಿಸಲಾಗಿದೆ. ಪ್ರವೇಶಪತ್ರಗಳನ್ನು ಸಭಾ ಕಾರ್ಯಾಲಯದಲ್ಲಿ ಪಡೆಯಬಹುದೆಂದು ಸೂಚಿಸಲಾಗಿದೆ

ಉಪನ್ಯಾಸ

ನಂಜನಗೂಡು ಮಾಧ್ಯಮಿಕ ಶಾಲೆಯ ಆವರಣದಲ್ಲಿ ಭಾರತಿ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೫ಗಂಟೆಗೆ ಪ್ರೊ॥ ಡಾ॥. ಎಸ್. ನರಸಿಂಹಯ್ಯನವರು "ನಮ್ಮ ಪಂಚಾಂಗವು ಶಾಸ್ತ್ರೀಯವೇ?" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಸೂಚನೆ

ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ. — ವ್ಯವಸ್ಥಾಪಕ.

ಕೊರಿಯಾ ಸೀಸ್ ಫೈರ್ ಸಂಧಾನ ಭಂಗ

ಕೇಸಾಂಗಿನಲ್ಲಿ ಕಳೆದ ೪೫ ದಿನಗಳಿಂದಲೂ ನಡೆಯುತ್ತಿದ್ದ ಕೊರಿಯಾ ಸೀಸ್ ಫೈರ್ ಸಂಧಾನವನ್ನು ಮುಕ್ತಾಯಗೊಳಿಸಿರುವುದಾಗಿ ವಿಶ್ವ ಸಂಸ್ಥೆಯ ಸೇನಾನಿ ರಿಜ್ವೇಯವರು ತಿಳಿಸಿರುವರೆಂದು ವರದಿಯಾಗಿದೆ. ಸೀಸ್ ಫೈರ್ ಸಂಧಾನ ನಗರದ ಮೇಲೆ ವಿಶ್ವ ಸಂಸ್ಥೆ ವಿಮಾನಗಳು ಧಾಳಿ ನಡೆಸುತ್ತಿರುವುದಾಗಿ ಹೇಳಿ ಕಮ್ಯೂನಿಸ್ಟರು ಮಾತುಕತೆಯನ್ನು ಮು

ಜ॥ ರಿಜ್ವೇಯವರು

ವಿಶ್ವಸಂಸ್ಥೆ ಸೇನಾನಿ

ರಿದವರೆಂದು ಹೇಳಲಾಗಿದೆ. ಈ ಬಗ್ಗೆ ವಿಶ್ವ ಸಂಸ್ಥೆಯ ಪ್ರಕಟಣೆಯೊಂದು ಹೊರಟು ಸಂಧಾನ ಭಂಗ ಮಾಡಿದವರು ಕಮ್ಯೂನಿಸ್ಟರೇ ಎಂದು ತಿಳಿಸಿರುತ್ತದೆ ಕೇಸಾಂಗ್ ಪ್ರದೇಶದಲ್ಲಿ ವಿಶ್ವ ಸಂಸ್ಥೆ ವಿಮಾನಗಳು ನೇಪಾಂ ಬಾಂಬುಗಳನ್ನು ಹಾಕಿದುದಾಗಿ ಕಮ್ಯೂನಿಸ್ಟರು ಆರೋಪಿಸಿರುತ್ತಾರೆ. ಮಾತುಕತೆ ಮುಕ್ತಾಯವಾದ ಬಗ್ಗೆ ಪ್ರಪಂಚ ಸಂಸ್ಥೆಯ ಪತ್ರಿಕೆಗಳಲ್ಲಿ ಕಳವಳವನ್ನು ವ್ಯಕ್ತಪಡಿಸಲಾಗುತ್ತಿದೆ.

○ ಕಮ್ಯೂನಿಸ್ಟ್ ಚೀಣಕ್ಕೆ ೩ ಕೋಟಿ ಗಜಗಳಷ್ಟು ಹರಟು ಮತ್ತು ಮಧ್ಯಮ ದರ್ಜೆಯ ಬಟ್ಟೆಯನ್ನು ರಫ್ತು ಮಾಡಲು ಭಾರತ ಸರ್ಕಾರದವರು ಅನುಮತಿ ಇತ್ತಿರುತ್ತಾರೆ.

ರಷ್ಯಾ-ಚೀಣಾಗಳ ಮೇಲೆ ಜಪಾನ್ ಯುದ್ಧ ಘೋಷಣೆ!

ಜಪಾನಿನ ಶಾಂತಿ ಒಪ್ಪಂದದ ಬಗ್ಗೆ ರಷ್ಯಾ ಮತ್ತು ಚೀಣಗಳ ಮೇಲೆ ಜಪಾನು ತೋರಿಸುತ್ತಿರುವ ಆಸಕ್ತಿಯನ್ನು ನೋಡಿದರೆ ಆದು ಆವೆರಡು ರಾಜ್ಯಗಳ ಮೇಲೂ ಯುದ್ಧ ಘೋಷಿಸುವುದೆಂದು ಅರ್ಥವಾಗುವುದಾಗಿ ಪಾಂಗ್ರ್ಯ ಪತ್ರಿಕೆಯೊಂದು ತಿಳಿಸಿರುವುದು

ಎನ್. ಜಿ. ರಂಗಾರವರಿಂದ ಹೊಸ ಪಕ್ಷದ ಸ್ಥಾಪನೆ

ಭಾರತ ಕೃಷಕ್ ಮಜದೂರ್ ಜನತಾ ಪಕ್ಷವೆಂಬ ಹೊಸ ಸಂಸ್ಥೆಯನ್ನು ಪಾರ್ಲಿಮೆಂಟಿನ ಸದಸ್ಯರಾದ ಎನ್. ಜಿ. ರಂಗಾರವರು ಸ್ಥಾಪಿಸಲುದ್ದೇಶಿಸಿ ಅದರ ಧ್ಯೇಯಗಳ ಘೋಷಣೆಯನ್ನು ಹೊರಡಿಸಿರುತ್ತಾರೆ. ಈ ಸಂಬಂಧವಾಗಿ ದೆಹಲಿಯಲ್ಲಿ ೩೦೦ ಜನ ಪ್ರತಿನಿಧಿಗಳುಳ್ಳ ಸಮ್ಮೇಳನವು ನಡೆಯುವುದು.

ವಿಮಾನದಲ್ಲಿ ಆತ್ಮಹತ್ಯೆ ಪ್ರಯತ್ನ

ಇಟಲಿಯ ಮೂಲಕ ಹಾದು ಹೋಗುವ ಬ್ರಿಟಿಷರ ಪ್ರಯಾಣಿಕರ ವಿಮಾನವೊಂದನ್ನು ಹತ್ತಿದ ಗ್ರೀಕ್ ಪ್ರಯಾಣಿಕನೊಬ್ಬನು, ವಿಮಾನವು ಅಂತರಿಕ್ಷದಲ್ಲಿ ಹೋಗುತ್ತಿದ್ದಾಗ, ಪಕ್ಕದಲ್ಲಿ ಕುಳಿತು ನೀಸದ ಕಷ್ಟಿಯನ್ನು ಓದುತ್ತಿದ್ದವನ ಕೈಯಿಂದ ಚಾಕುವನ್ನು ಕಿತ್ತುಕೊಂಡು ತನ್ನನ್ನು ಇರಿದು ಕೊಂಡನೆಂದು ಹೇಳಲಾಗಿದೆ. ಅವನನ್ನು ಬಾರಿ ಎಂಬಲ್ಲಿ ಆಸ್ಪತ್ರೆಗೆ ಸೇರಿಸಲಾಗಿದೆ

ಭಾರತ ಸೈನ್ಯ ಹಿಂದಕ್ಕೆ ಕರೆಸಲು ಸಿರಿಯಾದವರ ತಂತಿ

ಕಾಶ್ಮೀರದಲ್ಲಿರುವ ಭಾರತ ಸೈನ್ಯವನ್ನು ಹಿಂದಕ್ಕೆ ಕರೆಸಿ ಪ್ರಪಂಚದ ಶಾಂತಿಯನ್ನು ಕಾಪಾಡಬೇಕೆಂದು ಪ್ರಧಾನಿ ನೆಹರೂರವರಿಗೆ ೨೪ ಜನ ಸಿರಿಯಾ ಶಾಸನ ಸಭಾ ಸದಸ್ಯರು ತಂತಿ ಕಳುಹಿಸಿರುತ್ತಾರೆ.

ಉಪನ್ಯಾಸ

ರಾಜಧಾನಿಯ ವಾಣಿವಿಲಾಸ ಮೊಹಲ್ಲಾದ ಶ್ರೀ ರಾಮಕೃಷ್ಣಾಶ್ರಮದಲ್ಲಿ ಬರುವ ಭಾನುವಾರ ಸಂಜೆ ೬ ಗಂಟೆಗೆ ಸ್ವಾಮಿ ಸೋಮನಾಥಾನಂದರು "ಶ್ರೀ ಕೃಷ್ಣ ಮತ್ತು ಅವನ ಸಂದೇಶ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ತೂಗಾಡುವ ದೇವಾಲಯ

ಕರೂರಿನಲ್ಲಿ ಒಂದು ಕಡೆ ಹೊಸದಾಗಿ ನಿರ್ಮಿತವಾಗಿರುವ ವಿಶ್ವೇಶ್ವರ ದೇವಾಲಯವು ಕಳೆದ ಎರಡು ಮೂರು ದಿನಗಳಿಂದ ೨ ನಿಮಿಷಕ್ಕೊಂದಾವರ್ತಿ ತೂಗಾಡುತ್ತಿರುವುದನ್ನು ನೋಡಲು ಜನರು ತಂಡೋಪತಂಡವಾಗಿ ಸೇರುತ್ತಿದ್ದಾರೆ. ೧೫ ಅಡಿಯ ಈ ದೇವಾಲಯದ ಗೋಪುರ ಈಚೆಗೆ ಕಟ್ಟಲ್ಪಟ್ಟಿತ್ತು. ದೇವರ ಪ್ರತಿಷ್ಠೆಯನ್ನು ಇನ್ನೂ ಮಾಡಿಲ್ಲ.

ಪರ್ಷಿಯಾ ಎಣ್ಣೆ ಕಂಪೆನಿ ಸಿಬ್ಬಂದಿಯ ಪೂರ್ತಾ ರವಾನೆ

ದಕ್ಷಿಣ ಪರ್ಷಿಯಾದ ಎಣ್ಣೆಗಣಿಗಳಲ್ಲಿರುವ ಎಲ್ಲಾ ಬ್ರಿಟಿಷ್, ಭಾರತೀಯ, ಮತ್ತು ಪಾಕಿಸ್ತಾನಿ ಸಿಬ್ಬಂದಿಯವರು ಅಲ್ಲಿಂದ ವಾಪಸು ಹೊರಡಬೇಕೆಂದು ಆಂಗ್ಲೋ-ಇರಾನಿಯನ್ ಎಣ್ಣೆ ಕಂಪೆನಿಯು ಆಜ್ಞೆ ಮಾಡಿರುತ್ತದೆ. ಅಬಡಾನಿನ ಕ್ಷೇತ್ರದಲ್ಲಿರುವ ಪರಿಷ್ಕರಣದ ಕಾರ್ಖಾನೆಯ ಸಿಬ್ಬಂದಿಯನ್ನು ಮಾತ್ರ ೩೦೦ ಕ್ಕೆ ಇಳಿಸಲಾಗಿದೆ. ಪರ್ಷಿಯನ್ನರೇ ಈ ಕಾರ್ಖಾನೆಗಳನ್ನು ನಡೆಸಲು ಸಿದ್ಧರಾಗಿರುವರು.

ವಕೀಲರ ಕೊಲೆ ಪ್ರಯತ್ನದಲ್ಲಿ ಆಯುಧದ ಪತ್ತೆ

ದೊಡ್ಡಬಳ್ಳಾಪುರದ ವಕೀಲರಾದ ಶ್ರೀ ರಾಮಕೃಷ್ಣಯ್ಯನವರ ಕೊಲೆ ಪ್ರಯತ್ನದ ಸಂಬಂಧವಾಗಿ ದಸ್ತಗಿರಿಯಾಗಿರುವವರ ಪೈಕಿ ಒಬ್ಬನು ಇತ್ತ ಸಮಾಚಾರದ ಆಧಾರದ ಮೇಲೆ ಬೆಂಗಳೂರು ಪೋಲೀಸರು ಆಯುಧವೊಂದನ್ನು ಪತ್ತೆ ಮಾಡಿ ವಶಪಡಿಸಿಕೊಂಡಿರುತ್ತಾರೆ. ೩ ಮತ್ತು ೭ನೇ ಆಪಾದಿತರಾದ ಚೌಂ ಮತ್ತು ಹನುಮಂತರವರನ್ನು ಜೈಲಿನಲ್ಲಿ ರಿಮ್ಯಾಂಡಿನಲ್ಲಿಡಲಾಗಿದೆ.

ನಗರೇಶ್ವರಿ ಖೈದಿಯ ಜೀವಾವಧಿ ಶಿಕ್ಷೆ ೫ ವರ್ಷಕ್ಕೆ ಇಳಿಯಿತು

ಕಳೆದ ವರ್ಷ ಏಪ್ರಿಲ್‌ನಲ್ಲಿ ಮಗಳನ್ನು ಕರೆದುಕೊಂಡುಹೋಗಲು ಬಂದಿದ್ದ ಅಳಿಯನನ್ನು ಖೂನಿ ಮಾಡಿದ ಆಪಾದನೆಗಾಗಿ ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟಿದ್ದ ಟಿ. ನರಸೀಪುರದ ತಾ॥ ನಗರೇಶ್ವರಿಯ ಸಿದ್ದೇಗೌಡನ ಸಜವನ್ನು ೫ ವರ್ಷಕ್ಕೆ ನೆನ್ನೆ ಮೈಸೂರು ಹೈಕೋರ್ಟಿನಲ್ಲಿ ಇಳಿಸಲಾಯಿತು

ವಯಸ್ಕರ ಶಿಕ್ಷಣ ಸಮ್ಮೇಳನದ ಕಾರ್ಯಕ್ರಮ

ಬರುವ ೭ನೇ ತಾ॥ ನಿಂದ ೧೦ರವರೆಗೆ ವಯಸ್ಕರ ಶಿಕ್ಷಣ ಸಮ್ಮೇಳನವು ದಸರಾ ವಸ್ತುಪ್ರದರ್ಶನಾಲಯದಲ್ಲಿ ನಡೆಯುವುದು. ಅದಕ್ಕಾಗಿ ರಾಜಧಾನಿಯ ನಗರದ ವಿದ್ಯಾಸಂಸ್ಥೆಗಳಿಗೆ ೭ನೇ ತಾ॥ ರಜ ಕೊಡಲಾಗುವುದು. ಸಂಸ್ಥಾನದ ಇತರ ಭಾಗಗಳ ಉಪಾಧ್ಯಾಯರುಗಳಿಗೆ ಆ ದಿನಗಳಲ್ಲಿ ಸಂಬಳದ ರಜವನ್ನೀಯಲಾಗುವುದೆಂದು ತಿಳಿದುಬಂದಿದೆ.

ಉಪನ್ಯಾಸ

ರಾಜಧಾನಿಯ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನಲ್ಲಿ ಬರುವ ಭಾನುವಾರ ಮಧ್ಯಾಹ್ನ ೪ ಗಂಟೆಗೆ ಕಾಲೇಜಿನ ಪದವೀಧರರ ಸಂಘದ ಕ್ಲಿನಿಕಲ್ ಅಧಿವೇಶನವು ನಡೆಯುವುದು ಡಾ॥ ಎಲ್. ಅಶ್ವತ್ಥನಾರಾಯಣರಾಯರು "ವಿಷೂಚಿಕಾ" ಎಂಬ ವಿಷಯವಾಗಿ ತಮ್ಮ ಅನುಭವಸಿದ್ಧವಾದ ಉಪನ್ಯಾಸ ಮಾಡುವರು.

ಬೇಗ ಮುಕ್ತಿಯೇ ಪಾಕಿಸ್ತಾನದ ಅಣುಬಾಂಬು

ಬೇಗ ಮುಕ್ತಿಯೇ ಪಾಕಿಸ್ತಾನದ ಅಣುಬಾಂಬೆಂದು ಅಲ್ಲಿನ ಪ್ರಧಾನಿ ಲಿಯಾಖತ್ ಅಲಿಖಾನರು ಹೇಳಿರುತ್ತಾರೆ. ಕಾಶ್ಮೀರದ ವಿಷಯದಲ್ಲಿ ಭದ್ರತಾ ಸಂಸ್ಥೆಯು ಸರಿಯಾದ ಕ್ರಮ ಕೈಗೊಳ್ಳದೆ ಸೋಮಾರಿಯಾಗಿ ಕುಳಿತಿರುವುದಾಗಿ ಹೇಳಿ, ಈ ಪ್ರದೇಶದಲ್ಲಿ ಶಾಂತಿ ಭಂಗವಾದರೆ, ಅದಕ್ಕೆ ಭಾರತ, ಭದ್ರತಾ ಸಮಿತಿ ಮತ್ತು ಐಕ್ಯ ರಾಷ್ಟ್ರಗಳೇ ಜವಾಬ್ದಾರರಾಗಬೇಕಾಗುವುದೆಂದು ಲಿಯಾಖತ್ತರು ತಿಳಿಸಿರುತ್ತಾರೆ. ಪಾಕಿಸ್ತಾನಕ್ಕೆ ಯುದ್ಧವು ಬೇಕಾಗಿಲ್ಲ. ಆದರೆ ಅದು ಪ್ರಾಪ್ತಿಯಾದರೆ ನಾವಿಗೆ ಹಿಂತೆಗೆಯಲಾರೆವು, ಮಾತೃಭೂಮಿಯನ್ನು ರಕ್ಷಿಸಿಕೊಳ್ಳಲು ಕೊನೆಯ ರಕ್ತಬಿಂದುವು ಬೀಳುವವರೆಗೂ ಹೋರಾಡುವೆವು. ಹಿಂದೆ ಸೂಚಿಸಿದ ಅಂಶಗಳ ಮೇಲೆ ಎರಡು ರಾಷ್ಟ್ರಗಳಿಗೂ ತಗಲೂ ಒಪ್ಪಂದವು ಸಾಧ್ಯ. ಭಾರತದ ಪ್ರಧಾನಿಯವರು ವಿವೇಕ ಮಾರ್ಗವನ್ನು ಅನುಸರಿಸಬೇಕು ಎಂಬುದಾಗಿ ಅವರು ತಿಳಿಸಿರುತ್ತಾರೆ.

ಚುನಾವಣೆಗಳಿಗೆ ಜಿಲ್ಲೆಯಿಂದ ಕಾಂಗ್ರೆಸ್ ಉಮೇದುವಾರಿಕೆ

ಮೈಸೂರು ಶಾಸನ ಸಭಾ ಮತ್ತು ಕೇಂದ್ರ ಪಾರ್ಲಿಮೆಂಟ್ ಸಭೆಗಳಿಗೆ ಕಾಂಗ್ರೆಸ್ ಪರ ಉಮೇದುವಾರರಾಗ ಬಯಸುವವರು ಶಾಸನ ಸಭೆಗೆ 100 ರೂ ಅರ್ಜಿ ರುಸುಂ ಮತ್ತು 400 ರೂ ಚುನಾವಣಾ ನಿಧಿ, ಒಟ್ಟು 500 ರೂ ಮತ್ತು ಪಾರ್ಲಿಮೆಂಟಿಗೆ 250 ರೂ ರುಸುಂ, 1000 ರೂ ಚುನಾವಣಾ ನಿಧಿ, ಒಟ್ಟು 1250 ರೂ ಗಳೊಡನೆ ಉಮೇದುವಾರಿಕೆ ಅರ್ಜಿಗಳನ್ನು 15 ನೇ ತಾ॥ ನೊಳಗೆ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಕಛೇರಿಗೆ ತಲುಪಿಸಬೇಕು. ಉಮೇದುವಾರಿಕೆ ಅರ್ಜಿಗಳಲ್ಲಿ ಪುರಸ್ಕಾರ ದೊರೆಯದಿರುವವರ ಚುನಾವಣಾ ನಿಧಿಗಳನ್ನು ಮಾತ್ರ ವಾಪಸು ಕೊಡಲಾಗುವುದು. ಅರ್ಜಿ ನಮೂನೆಗಳನ್ನು ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಹೆಚ್ ಕೆ ಕುಮಾರ ಸ್ವಾಮಿಯವರಿಂದ ಪಡೆಯಬಹುದೆಂದು ಸೂಚಿಸಲಾಗಿದೆ.

ಸಾದಿಲ್ವಾರಿಗಾಗಿ ಪೋಸ್ಟ್ ಮಾಸ್ಟರುಗಳಿಗೆ 2 ಆಣೆ

ಬ್ರಾಂಚು ಪೋಸ್ಟ್ ಮಾಸ್ಟರುಗಳಿಗೆ 10 ರಿಂದ 20 ರೂ ಭತ್ಯವನ್ನು ಕೊಡಲಾಗುತ್ತಿರುವುದೆಂದೂ ಕಾಗದ ಕಡ್ಡಿ ಇವುಗಳ ವೆಚ್ಚಕ್ಕಾಗಿ ಅವರುಗಳಿಗೆ ತಿಂಗಳಿಗೆ 2 ಆಣೆಯಂತೆ ಗೊತ್ತು ಮಾಡಿರುವುದಾಗಿಯೂ ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

ಈ ಶತಮಾನದೊಳಗೇ ಚಂದ್ರಗ್ರಹಕ್ಕೆ ಪ್ರಯಾಣ

ಈ ಶತಮಾನವು ಕಳೆಯುವುದಕ್ಕಿಂತ ಮುಂಚೆ ಚಂದ್ರಗ್ರಹಕ್ಕೆ ವಿಮಾನದಲ್ಲಿ ಹೋಗಿ ಭೂಮಿಗೆ ಹಿಂತಿರುಗಬಹುದೆಂದು ಬ್ರಿಟಿಷ್ ಅಂತರ ಗ್ರಹ ಸಂಘದ ವಿಜ್ಞಾನರು ಅಭಿಪ್ರಾಯ ಪಟ್ಟಿರುತ್ತಾರೆ.

ನೆಲ್ಲಾಳರ ಸಂಘ

ರಾಜಧಾನಿಯ ಇಟ್ಟಿಗೆಗೂಡಿನಲ್ಲಿರುವ ಮೈಸೂರು ನೆಲ್ಲಾಳ ಸಂಘದ ಅಧಿಕಾರ ವರ್ಗಕ್ಕೆ ಹೊಸದಾಗಿ ನಡೆಯುವ ಚುನಾವಣೆಗೆ ಸ್ಪರ್ಧಿಸಲಿರುವ ಸದಸ್ಯರು ತಮ್ಮ ನಾಮಕರಣ ಪತ್ರಗಳನ್ನು ಬರುವ 31 ನೇ ತಾ॥ ನೊಳಗಾಗಿ ತಲುಪಿಸಬೇಕೆಂದು ಸಂಘದ ಕಾರ್ಯದರ್ಶಿಯವರು ಕೋರಿರುತ್ತಾರೆ.

ಕೃಷ್ಣಾಪುರದಲ್ಲಿ ● ಕೃಷ್ಣೋತ್ಸವ

ಟಿ ನರಸೀಪುರ ತಾಲ್ಲೂಕು ಸೋಲಿಗರ ಕೃಷ್ಣಾಪುರದ ಶ್ರೀ ಸಂತಾನ ಗೋಪಾಲ ಕೃಷ್ಣ ಸ್ವಾಮಿಯವರ ದೇವಾಲಯದಲ್ಲಿ ಶನಿವಾರ ಮತ್ತು ಭಾನುವಾರಗಳಲ್ಲಿ ಕೃಷ್ಣೋತ್ಸವವು ನಡೆಯುವುದು. 5ನೇ ತಾ॥ ಗೋವಿಂದರಾಜ ಪಟ್ಟಾಭಿಷೇಕೋತ್ಸವವೂ, ಆ ಸಂಜೆ ರುಕ್ಮಿಣಿ ಕಲ್ಯಾಣ ಮಹೋತ್ಸವವೂ ಉಂಟು.

ಸರ್ವಾಧಿಕಾರಿಯಾಗಲು ನೆಹರೂರವರ ಆಶೆಯೇ ?

ಪಂಡಿತ ನೆಹರೂರವರು ಕಾಂಗ್ರೆಸ್ಸಿನ ಸರ್ವಾಧಿಕಾರಿಯಾಗಲು ಅಪೇಕ್ಷಿಸುತ್ತಿರುವುದಾಗಿ ಮಧ್ಯ ಪ್ರದೇಶ ಸರ್ಕಾರದ ಗೃಹ ಮಂತ್ರಿ ಡಿ. ಪಿ. ಮಿಶ್ರಾರವರು ಆಪಾದನೆ ಮಾಡಿರುತ್ತಾರೆ. ಇಂತಹ ಘಟನೆಯಾಗುವುದನ್ನು ತಪ್ಪಿಸಲು ಕಾಂಗ್ರೆಸ್ಸು ತನ್ನ ಕೈಲಾದ ಪ್ರಯತ್ನವೆಲ್ಲವನ್ನೂ ಮಾಡಬೇಕೆಂದೂ, ನೆಹರೂರವರ ತಲೆಯಲ್ಲಿರುವ ಸರ್ವಾಧಿಕಾರ ಮನೋಭಾವವನ್ನು ಓಡಿಸಲು ಕಾಂಗ್ರೆಸ್ ಸಂಸ್ಥೆಯು ಪ್ರಯತ್ನಿಸಬೇಕೆಂದೂ ಅವರು ಹೇಳಿರುತ್ತಾರೆ.

ಜಮ್ಮುವಿನಲ್ಲಿ ಶಾಂತಿ ದಳದ ಸ್ಥಾಪನೆ

ಜಮ್ಮು ಪ್ರಾಂತದಲ್ಲೆಲ್ಲಾ ಶಾಂತಿ ಮತ್ತು ಶಿಸ್ತನ್ನು ಕಾಪಾಡುವ ಸಲುವಾಗಿ ಶಾಂತಿ ದಳ ಮತ್ತು ಬಾಲ ಸೇನಾ ಸ್ಥಾಪನೆಗೆ ಕಾಶ್ಮೀರ ಸರ್ಕಾರದವರು ಅನುಮತಿಯಿತ್ತಿರುತ್ತಾರೆ.

ಉಪವಾಸ ಮಾಡುವವರು ತಿರುಪತಿಇಂದ ಗುಂಟೂರಿಗೆ

ತಿರುಪತಿಯಲ್ಲಿ ಉಪವಾಸ ಕೈಗೊಂಡಿರುವ ಆಂಧ್ರ ಪ್ರಾಂತ ಪ್ರೇಮಿ ಸ್ವಾಮಿ ಸೀತಾರಾಂರವರು ಗುಂಟೂರಿಗೆ ತೆರಳಿ ಅಲ್ಲಿ ಉಪವಾಸವನ್ನು ಮುಂದುವರಿಸುವರೆಂದು ಹೇಳಲಾಗಿದೆ.

ಸಿಮ್ಲಾದಲ್ಲಿ ಭಾರಿ ಮಳೆಯಿಂದ 9 ಜನರ ಮರಣ

ಸಿಮ್ಲಾದಲ್ಲಿ ಕಳೆದ ಮಂಗಳವಾರ ಸಂಜೆ ಆರಂಭವಾದ ಭಾರಿ ಮಳೆ ಬೆಳಗ್ಗೆ ಎಂಟು ಗಂಟೆವರೆಗೆ ಬಿದ್ದುದರಿಂದ ಅನೇಕ ಮನೆಗಳು ಬಿದ್ದು ಹೋಗಿ ಒಂಭತ್ತು ಮಂದಿ ಸತ್ತಿರುವರೆಂದೂ, ಮೂವರಿಗೆ ತೀವ್ರ ಗಾಯಗಳಾಗಿವೆಯೆಂದು ಗೊತ್ತಾಗಿದೆ.

ಪಾಕಿಸ್ತಾನ ಯುದ್ಧ ಮಾಡಿದರೆ ಅದರ ನಾಶ ಖಂಡಿತ

ಭಾರತದೊಡನೆ ಪಾಕಿಸ್ತಾನವು ಯುದ್ಧ ಹೂಡಿದರೆ ಅದರ ವಿನಾಶವು ಖಂಡಿತವೆಂದು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ತಿಳಿಸಿರುತ್ತದೆ. ಕಾಶ್ಮೀರದ ಬಿಕ್ಕಟ್ಟನ್ನು ಪರಿಹರಿಸಲು ಕಾಲವು ಮಿಂಚಿಹೋಗುತ್ತಿರುವುದಾಗಿ ಅದು ಹೇಳಿರುತ್ತದೆ.

ಗಮನಿಸಿರಿ

ಮನೆಗಳ ಮತ್ತು ಸ್ಥಿರ ಆಸ್ತಿಗಳ ಕ್ರಯ, ವಿಕ್ರಯ, ಭೋಗ್ಯ ಅಥಾರ ವಗೈರೆ ನಡೆಸಲಾಗುತ್ತೆ. ಎಲ್ಲಾ ವಿಚಾರದಲ್ಲೂ ಭರವಸೆ ಕೊಡುತ್ತೇವೆ.

ಎಂ. ಮಲ್ಲರಾಜೆ ಅರಸ್,
ಮೈಸೂರು ಬ್ರೋಕರ್ಸ್ಸ ಪರವಾಗಿ,
1 877 ರುಕ್ಮಿಣಿ ಛತ್ರದ ಹತ್ತಿರ,
ಮೈಸೂರು.

ರಣಜಿತ್

ಯಶಸ್ವಿಯಾದ 3ನೇ ವಾರ

ನವರ್ಗ ಫಿಲಂಸ್‌ರವರ ಹಿಂದೀ ಚಿತ್ರ

ಬಾದಲ್

ಭೂಮಿಕೆ:- ಮಧುಬಾಲ, ಪ್ರೇಮನಾಥ
ಡೈರೆಕ್ಟರ್. ಅಮಿಯಾ ಚಕ್ರವರ್ತಿ
ಸಂಗೀತ:- ಶಂಕರ್ ಜೈಕಿಷನ್
[ASHOK Release

ಶ್ರೀ ಚಾಮುಂಡೇಶ್ವರಿ ಟಾಕೀಸ್

24 8-51 ರಿಂದ ಅಮೋಘ 5ನೇ ವಾರ

★ ದೇವಕಿ ★

ಬೆಳಗಿನ ಪ್ರದರ್ಶನ

ಶನಿವಾರ ಮತ್ತು ಭಾನುವಾರಗಳಲ್ಲಿ ಮಾತ್ರ

ದೇ ಖೋ ಜಿ

Edited, printed and published by A R. Nagarajan, at Sadhvi Press D Subbiah Road, Mysore

---

|| ಶ್ರೀ ||

ಗಣೇಶಾ ಟಾಕೀಸ್

24–8–51ನೇ ಶುಕ್ರವಾರದಿಂದ

ರಾಮದಾಸ್

ಕನ್ನಡ ಚಿತ್ರ

ರಾಜಾ ವಿಕ್ರಮದ ಪ್ರಖ್ಯಾತಿಯ ಕೆಂಪರಾಜ್, ಮಹಾಬಲರಾವ್, ಮುರಿರಾವ್, ಸುಶೀಲಾ, ಮುಂತಾದವರು ಪಾತ್ರ ವಹಿಸಿರುವರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಅವರು

ರತ್ನಾವಳಿ ಥಿಯೇಟರಿನಲ್ಲಿ

ಅಮೋಘ ಪ್ರಾರಂಭ **ಅಕ್ಕ ಮಹಾದೇವಿ** 22.8.5 ರಿಂದ

ಪ್ರತಿ ಸೋಮವಾರ ಬುಧವಾರ ಮತ್ತು ಶುಕ್ರವಾರಗಳಲ್ಲಿ

ರಾತ್ರಿ 9 45 ಘಂಟೆಗೆ, ಉಳಿದ ದಿನಗಳಲ್ಲಿ ಸಂಜೆ 6-45ಕ್ಕೆ

ಅಬೀದ್‌ರವರ

ಭಾರಿ ಹರಾಜು ಮಾರಾಟ

26–8–51ನೇ ಭಾನುವಾರ . ಬೆಳಗ್ಗೆ 10 ಗಂಟೆ

ಸುಸಜ್ಜಿತವಾದ ಸ್ಪ್ರಿಂಗ್ ಸೋಫಾ ಸೆಟ್ಟುಗಳು, ಕುರ್ಚಿಗಳು, ಕಬ್ಬಿಣದ ಮಕ್ಕಳ ಮಂಚ, ಟೀ ಟ್ರಾಲಿ, ಪೆರಾಂಬುಲೇಟರ್, ಲೆಟರ್ ರ್‍ಯಾಕುಗಳು ಬುಕ್ಕು ಜಮಖಾನೆಗಳು, ಮೇಜು ಮತ್ತು ಡೆಸ್ಕು, ಅಮೇರಿಕನ್ ರೀಡುಗಳುಳ್ಳ ಚೆನ್ನಾಗಿರುವ ಹಾರ್ಮೋನಿಯಂ, ಪೆಟ್ಟಿಗೆ ಸಮೇತ, ಕೈಹೊಲಿಯುವ ಯಂತ್ರ ರಿಮಿಂಗ್ಟನ್ ಪೋರ್ಟಬಲ್ ಟೈಪ್‌ರೈಟರು, ಕೊಡಕ್ ನಂ. 2 ಪೋರ್ಟಬಲ್ ಕ್ಯಾಮರಾ ಕೊಡಕ್ ಬಾಕ್ಸ್ ಕ್ಯಾಮರಾ ಬ್ರೌನಿ, ಮತ್ತು ಇತರ ಅನೇಕ ಉಪಯುಕ್ತ ಸಾಮಾನುಗಳು

ಸಾಮಾನುಗಳನ್ನು ಶನಿವಾರ ಮಧ್ಯಾಹ್ನ 3ರಿಂದ 6ರ ವರೆಗೆ ಅಜಮಾಯಿಷಿ ಮಾಡಬಹುದು.

ಗೌರಿ ಹಬ್ಬಕ್ಕಾಗಿ.

ಸಾವಿರಾರು ಜರಿ ರೇಷ್ಮೆ ಸೀರೆಗಳು ಮತ್ತು ನೂಲಿನ ಸೀರೆಗಳು ಬಂದಿವೆ ನೇರವಾಗಿ ಬಂದು ಕೊಳ್ಳಿರಿ.

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ ದೊಡ್ಡಪೇಟೆ ಆನಂದ ಭವನ ಹೋಟೆಲ್ ಹತ್ತಿರ, ಮೈಸೂರು

ಪ್ರಭಾ ★ ಇಂದಿನಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

ಕಪೂರ್‌ರವರ ಅತ್ಯುತ್ತಮವಾದ ಹಿಂದಿ ಚಿತ್ರ

ಆರಾಮ್ AARAM

ಪಾತ್ರ ಮಧುಬಾಲ, ದೇವಾನಂದ್ ತಲತ್ ಮೆಹಮೂದ್, ಪ್ರೇಂನಾಥ್
ಸಂಗೀತ ಅನಿಲ್ ಬಿಸ್ವಾಸ್ ನಿರ್ದೇಶಕ ಡಿ ಡಿ ಕಶ್ಯಪ್

ಬೆಳಗಿನ ಪ್ರದರ್ಶನ 24 8 51 ರಿಂದ 4 ದಿನಗಳು

ಜಾಂಟಿ ಟಾಕೀಸ್‌ರವರ - ನಕೀಜ -

ರಿಜಿ ನಂ. 792 WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೨೭-೮-೫೦ [ಸಂಚಿಕೆ ೫

ಬೆಲೆಗಳು ಹೆಚ್ಚಿದುದಕ್ಕೆ ಕಲ್ಕತ್ತದಲ್ಲಿ ಪ್ರದರ್ಶನ

ಭಾಷಾವಾರು ಪ್ರಾಂತ ರಚನೆ ಬಗ್ಗೆ ಸಮ್ಮೇಳನ

ಭಾಷಾವಾರು ಪ್ರಾಂತ ರಚನೆ ಬಗ್ಗೆ ಒಮ್ಮತದ ಒಪ್ಪಂದಕ್ಕೆ ಬಂದು ಪ್ರಧಾನಿಯವರಿಗೆ ಸಂಯುಕ್ತ ಬೇಡಿಕೆಯನ್ನು ಸಲ್ಲಿಸಲು ದಕ್ಷಿಣ ಭಾರತದ ವಿವಿಧ ಭಾಷಾ ಪ್ರಾಂತ ನಾಯಕರುಗಳ ಸಮ್ಮೇಳನವೊಂದನ್ನು ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಸೇರಿಸಲಾಗುವುದೆಂದು ಕಲಾ ವೆಂಕಟರಾಯರು ತಿಳಿಸಿರುತ್ತಾರೆ

ಈಜಿಪ್ಟ್ ದೊರೆಯ ಕೊಲೆಗೆ ಪ್ರಯತ್ನವೇ ?

ನೂತನವಾಗಿ ವಿವಾಹಿತರಾದ ಈಜಿಪ್ಟಿನ ಫರೂಕ್ ದೊರೆಯು ಪತ್ನಿಯೊಡನೆ ವಿದೇಶಗಳಲ್ಲಿ ವಿಹಾರಾರ್ಥವಾಗಿ ಸಂಚರಿಸುತ್ತಿರುವಾಗ ಅವರನ್ನು ಕೊಲ್ಲಲು ನಿರ್ಧರಿಸಿ ಇಬ್ಬರು ಈಜಿಪ್ಟಿನವರ ಸ್ವಿಟ್ಜರ್ಲೆಂಡಿಗೆ ಆಗಮಿಸುವರೆಂಬ ಭೀತಿಯುಂಟಾಗಿ ಈಗಾಗಲೇ ಪೋಲೀಸರು ವಿಶೇಷ ಎಚ್ಚರಿಕೆ ಕ್ರಮವನ್ನು ಕೈಗೊಂಡಿರುತ್ತಾರೆ

ಅಮೇರಿಕದಲ್ಲಿ ಪದಾರ್ಥಗಳ ಬೆಲೆ ಏರಿತು

ಕೊರಿಯಾ ಶೀಘ್ರ ಶಾಂತಿ ಸಂಧಾನವು ಭಂಗವಾದ ಸುದ್ದಿ ಮುಟ್ಟಿದ ಕೂಡಲೇ ನ್ಯೂಯಾರ್ಕಿನಲ್ಲಿ ಪದಾರ್ಥಗಳ ಬೆಲೆ ಏರಿತು ಉಣ್ಣೆ ಬೆಲೆಯು ಪೌಂಡು ಒಂದಕ್ಕೆ ೨೦ ಸೆಂಟುಗಳಷ್ಟೂ, ಹತ್ತಿಯು ಬೇಲೊಂದಕ್ಕೆ ೧೦೦ ಡಾಲರಿನಷ್ಟು ಹೆಚ್ಚಿತು

ಓಟು ಕೊಡುವ ವಿಧಾನ ತೋರಿಸಲು ಚಿತ್ರ

ಸಾರ್ವತ್ರಿಕ ಚುನಾವಣೆಗಳಲ್ಲಿ ಜನರು ಓಟು ಕೊಡುವ ವಿಧಾನವನ್ನು ತೋರಿಸುವ ಬಗ್ಗೆ ಸಣ್ಣ ಚಿತ್ರಗಳನ್ನು ಪ್ರದರ್ಶಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ

ಭಿಕ್ಷುಕರ ಮೇಲೂ ತೆರಿಗೆ

ಭಿಕ್ಷುಕರು ಭಿಕ್ಷೆ ತೆಗೆದುಕೊಳ್ಳುವಂತೆ ನಿರ್ಬಂಧ ಮಾಡಿ, ಅವರ ಮೇಲೆ ತೆರಿಗೆ ಹಾಕಲು ಉತ್ತರ ಪ್ರದೇಶ ಸರ್ಕಾರದವರು ನಿರ್ಧರಿಸಿರುವರೆಂದು ಗೊತ್ತಾಗಿದೆ ಮದುವೆಗಳ ಮೇಲೂ ಸಹ ತೆರಿಗೆಯನ್ನು ಹಾಕುವ ಆಲೋಚನೆಯನ್ನು ಮಾಡಲಾಗುತ್ತಿದೆಯೆಂದು ವರದಿಯಾಗಿದೆ

ವ್ಯವಸಾಯಗಾರರ ಸಮ್ಮೇಳನ

ಮೈಸೂರು ಜಿಲ್ಲೆಯ ಬನ್ನೂರು ಹೋಬಳಿ ಕೇಹಳ್ಳಿ ಗ್ರಾಮದಲ್ಲಿ ಈ ತಿಂಗಳು ೨೦ ನೇ ತಾ॥ ಬೆಳಿಗ್ಗೆ ೧೧ ಗಂಟೆಗೆ ಹೋಬಳಿ ವ್ಯವಸಾಯಗಾರರ ಸಮ್ಮೇಳನವು ಜಿಲ್ಲಾಧಿಕಾರಿಗಳಾದ ಜ॥ ಮಹಮದ್ ಅಹಮದ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು ವ್ಯವಸಾಯ ಇಲಾಖೆಯ ಡೈರೆಕ್ಟರ್ ಆದ ಶ್ರೀ ಎಂ ಕೆ ಸಿದ್ದಪ್ಪನವರು ಅವರ ಪ್ರಾರಂಭೋತ್ಸವವನ್ನು ನೆರವೇರಿಸುವರು

ಬಂಡೀಪುರಕ್ಕೆ ಪ್ರಭುಗಳು

ಶ್ರೀಮನ್ ಮಹಾರಾಜರು ಮೊನ್ನೆ ಬಂಡೀಪುರಕ್ಕೆ ಪ್ರಯಾಣ ಬೆಳೆಸಿ ಅಲ್ಲಿ ಮೊಕ್ಕಾಂ ಮಾಡಿರುವರು

ಜಪಾನು ಶಾಂತಿ ಸಮ್ಮೇಳನಕ್ಕೆ ಭಾರತ ಹೋಗುವುದಿಲ್ಲ

ಜಪಾನಿನೊಡನೆ ಶಾಂತಿ ಕರಾರು ಮಾಡಿಕೊಳ್ಳುವ ಬಗ್ಗೆ ಅಮೇರಿಕಾ ಮತ್ತು ಬ್ರಿಟನ್‌ಗಳು ತಯಾರಿಸುವ ಕರಡು ಕೌಲು ಪ್ರತಿಯ ಪರಿಶೀಲನೆ ಮಾಡಿ ರುಜು ಹಾಕುವ ಬಗ್ಗೆ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ನಡೆಯುವ ಸಮ್ಮೇಳನದಲ್ಲಿ ಭಾರತವು ಭಾಗವಹಿಸುವುದಿಲ್ಲವೆಂದು ಹೇಳಲಾಗಿದೆ ಭಾರತವು ಪ್ರತ್ಯೇಕವಾಗಿ ಜಪಾನಿನೊಡನೆ ಶಾಂತಿ ಕರಾರನ್ನು ಮಾಡಿಕೊಳ್ಳುವುದೆಂದು ತಿಳಿದುಬಂದಿದೆ ಪಾಕಿಸ್ತಾನವು ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ಹೋಗಲು ನಿರ್ಧರಿಸಿರುತ್ತದೆ

ಸಿಡಿಲು ಬಡಿತದಿಂದ ೩೭ ಜನರ ಸಾವು

ಇಟಲಿಯ ವಿವಿಧ ಭಾಗಗಳಲ್ಲಿ ನೆನ್ನೆ ಸಿಡಿಲು ಹೊಡೆದ ನಿಮಿತ್ತ ಏಳು ಜನರು ಸತ್ತು ಮಂದಿಗೆ ತೀವ್ರ ಗಾಯಗಳಾಗಿವೆಯೆಂದು ಗೊತ್ತಾಗಿದೆ ಎಮಿಲಿಯ ಕೊಸಿರೇ ದೂರದ ಒಂದು ವಿದ್ಯುಚ್ಛಕ್ತಿ ಯಂತ್ರದ ಕಟ್ಟಡವನ್ನು ಕಟ್ಟುತ್ತಿದ್ದಾಗ ಮೊನ್ನೆ ಸಿಡಿಲು ಬಡಿದು ೩೦ ಜನ ಕೆಲಸಗಾರರು ಮಡಿದರು

ಅಸ್ಸಾಮಿನಲ್ಲಿ ಒಂದು ಮಣ ಅಕ್ಕಿಗೆ ೫೦ ರೂ.

ಅಸ್ಸಾಮಿನ ಕಣಜವೆಂದು ಪ್ರಸಿದ್ಧವಾಗಿರುವ ನೋ ಅಲ್ಪಾರ್ ಎಂಬ ಪ್ರದೇಶ ಅನಾವೃಷ್ಟಿಯ ಸಲುವಾಗಿ ಭತ್ತದ ಪೈರು ಪತ್ತಿಗಳಿಗೆ ನೀರಿಲ್ಲವಾಗಿದೆ. ಈ ಪ್ರದೇಶದಲ್ಲಿ ಅಕ್ಕಿಯ ಬೆಲೆಯು ಮಣವೊಂದಕ್ಕೆ ೫೦ ರೂ ವರೆಗೆ ಏರಿರುವುದಾಗಿ ಹೇಳಲಾಗಿದೆ

ಇನ್ಷೂರೆನ್ಸ್ ಪಾವತಿ ತೀರುವಳಿಕೆಗಾಗಿ ೧ ಆಣೆ ರುಸುಂ

ಇನ್ಷೂರೆನ್ಸುಗಳು ಪಾವತಿಯಾದ ಬಗ್ಗೆ ಉಚಿತವಾಗಿ ಕೊಡಲಾಗುತ್ತಿದ್ದ ಅಂಚೆ ಇಲಾಖೆಯ ತೀರುವಳಿ ಸೂಚನೆಯ ಮೇಲೆ ಬರುವ ೧ನೇ ತಾ॥ ನಿಂದ ೧ ಆಣೆಯಂತೆ ರುಸುಂ ಅನ್ನು ವಿಧಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ

ಬೆಲೆ ಏರಿದುದಕ್ಕೆ ಕಲ್ಕತ್ತದಲ್ಲಿ ೩೦೦೦ ಜನರ ಪ್ರದರ್ಶನ

ಪೋಲೀಸರಿಂದ ಗುಂಡು, ಲಾಠಿ ಮತ್ತು ಅಶ್ರುವಾಯು ಪ್ರಯೋಗ

ಆಹಾರ ಮತ್ತು ಬಟ್ಟೆಯ ಬೆಲೆಗಳು ವಿಪರೀತವಾಗಿ ಹೆಚ್ಚುತ್ತಿರುವುದನ್ನು ಪ್ರತಿಭಟಿಸಲು ನೆನ್ನೆ ಕಲ್ಕತ್ತಾದಲ್ಲಿ ೩ ಸಾವಿರ ಜನರು ಸೆಕ್ರೆಟೇರಿಯಟ್ಟಿನ ಬಳಿ ಪ್ರದರ್ಶನ ನಡೆಸಿದಾಗ ಪೋಲೀಸರು ಮಧ್ಯ ಪ್ರವೇಶಿಸಿ, ಬೇಟನ್, ಲಾಠಿ ಮತ್ತು ಅಶ್ರುವಾಯು ಪ್ರಯೋಗ ಮಾಡಿ ಜನರನ್ನು ಚದುರಿಸಿದರು ಇಬ್ಬರು ಹೆಂಗಸರೂ ಸೇರಿ ೭ ಜನ ಪ್ರದರ್ಶನಕಾರರಿಗೂ, ಒಬ್ಬ ಪೋಲೀಸ್ ಇನ್ಸ್‌ಪೆಕ್ಟರಿಗೂ ಮತ್ತು ೧೧ ಜನ ಪೋಲೀಸರಿಗೂ ಗಾಯಗಳಾಗಿವೆ ಅಲ್ಪ ವಿಷಯಕ್ಕೆ ಕೆಲವರು ಕೈಕಾಲು ಮುರಿದುಕೊಂಡಿದ್ದಾರೆ

ಪ್ರದರ್ಶನವನ್ನು ಫಾರ್ವರ್ಡ್ ಬ್ಲಾಕಿನವರು ಏರ್ಪಡಿಸಿದ್ದರು ಮಂತ್ರಿಗಳ ಪೈಕಿ ಒಬ್ಬರು ತಮ್ಮನ್ನು ಬಂದು ಕಾಣಬೇಕೆಂದೂ ಅಥವಾ ತಮ್ಮ ಪೈಕಿ ಹಲವರು ಅವರಲ್ಲಿಗೆ ಹೋಗಿ ವಿಷಯವನ್ನು ತಿಳಿಸಲು ಅವಕಾಶ ಬೇಕೆಂದೂ ಪ್ರದರ್ಶನಕಾರರು ಪೋಲೀಸರಿಗೆ ತಿಳಿಸಿದರು

ಒಂದು ಗಂಟೆ ಚರ್ಚೆಯ ನಂತರ ಗುಂಪು ಚದುರಿಹೋದರೂ ಹಲವರು ಪೋಲೀಸರ ಮೇಲೆ ಕಲ್ಲುಗಳನ್ನು ಎಸೆದುದರಿಂದ ಅವರು — ಜನರನ್ನು ವಶಕ್ಕೆ ಮಾಡಿದರು ಜನರನ್ನು ಚದುರಿಸಲು ಅವರು ಎರಡು ಬಾರಿ ಆಕಾಶಕ್ಕೆ ಗುಂಡು ಹಾರಿಸಿದರು ಪ್ರತಿಬಂಧಕಾಜ್ಞೆಯು ಜಾರಿಯಲ್ಲಿರುವ ಪ್ರದೇಶಕ್ಕೆ ಗುಂಪು ಪ್ರವೇಶಿಸಲು ಪ್ರಯತ್ನಿಸಿದಾಗ ಈ ಪ್ರಕರಣವು ನಡೆಯಿತು

ಘೋಷಿತಾ ಆಗಿದ್ದ ಆಹಾರದ ಶೇಕಡ ೨೫ ರಷ್ಟು ಪ್ರಮಾಣವನ್ನು ಈಗ ಭರ್ತಿ ಮಾಡಿಕೊಡಲಿರುವುದಾಗಿ ಅಲ್ಲಿಗೆ ತೆರಳುವ ಕೇಂದ್ರದ ಆಹಾರ ಮಂತ್ರಿ ಮುನ್ಷಿಯವರು ತಿಳಿಸಿರುತ್ತಾರೆ

ವಿಮಾನಾಪಘಾತದಿಂದ ೫೦ ಮಂದಿ ಮರಣ

ಅಮೇರಿಕದ ಕ್ಯಾಲಿಫೋರ್ನಿಯ ಪ್ರಾಂತದ ಓಕ್ಲೆಂಡಿನ ಸಮೀಪದ ಗುಡ್ಡ ಪ್ರದೇಶದಲ್ಲಿ ಭಾರಿ ಪ್ರಯಾಣಿಕರ ವಿಮಾನವೊಂದು ಮುರಿದು ಬಿದ್ದು ಅವರಲ್ಲಿದ್ದ ೫೦ ಜನರೂ ಮೃತಪಟ್ಟರು

ಉತ್ತರ ಕೊರಿಯಾ ರೇವಿನ ಮೇಲೆ ಬಾಂಬು

ರಷ್ಯದ ಪೂರ್ವದ ಗಡಿಗೆ ಸಮೀಪದಲ್ಲಿರುವ ಉತ್ತರ ಕೊರಿಯಾ ರೇವು ನಗರವಾದ ರಾಷಿ ಎಂಬುದರ ಮೇಲೆ ನೆನ್ನೆ ೩೦೦ ಅಮೇರಿಕಾ ವಿಮಾನಗಳು ಬಾಂಬು ಹಾಕಿದವು. ಯಾವ ವಿಮಾನವೂ ಪ್ರತಿಭಟಿಸಲಿಲ್ಲವೆಂದು ಹೇಳಲಾಗಿದೆ

೩೫ ಸಾವಿರ ಗೇರುಪೊಪ್ಪು ಕಾರ್ಮಿಕರ ಮುಷ್ಕರ

ಕ್ವಿಲಾನ್ ಮತ್ತು ಕೊಟ್ಟಯಂಗಳ ತಾಲ್ಲೂಕುಗಳಲ್ಲಿರುವ ಗೇರುಪೊಪ್ಪು ಕಾರ್ಖಾನೆಗಳಲ್ಲಿನ ೩೫ ಸಾವಿರ ಕಾರ್ಮಿಕರು ಬೋನಸ್ಸು ಮತ್ತು ಹೆಚ್ಚು ಸಂಬಳಗಳ ಬೇಡಿಕೆಯನ್ನಿಟ್ಟು ಮೊನ್ನೆಯಿಂದ ಮುಷ್ಕರವನ್ನು ಹೂಡಿರುತ್ತಾರೆ.

ಹಣ್ಣಿನೊಳಗೆ ಹಣ್ಣು

ಮದ್ರಾಸಿನ ಸ್ಟಾನ್ಲಿ ಮೆಡಿಕಲ್ ಕಾಲೇಜು ಆವರಣದಲ್ಲಿ ಸಾತಗಾಡು ಚಿತ್ರಲೇ ಹಣ್ಣಿನ ಗಿಡದ ಒಂದು ಹಣ್ಣಿನೊಳಗೆ ಮತ್ತೊಂದು ಹಣ್ಣು ಇರುವುದಾಗಿ ಹೇಳಲಾಗಿದೆ ಅದನ್ನು ಮದ್ರಾಸು ಮ್ಯೂಸಿಯಮ್ಮಿಗೆ ಕಳುಹಿಸಲಾಗಿದೆ

ಗಡಿ ಸಮಿತಿ ರಚನೆಗಾಗಿ ಕರ್ನಾಟಕ ಕಾಂ॥ ನಿರ್ಣಯ

ಕಳೆದ ೨೩ ನೇ ತಾ॥ ರಾತ್ರಿ ಹುಬ್ಬಳ್ಳಿಯಲ್ಲಿ ಶ್ರೀ ಎಸ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಸಭೆಯು ಕೂಡಲೇ ಭಾಷಾವಾರು ಪ್ರಾಂತಗಳ ಗಡಿ ನಿರ್ದೇಶನಾ ಸಮಿತಿಯನ್ನು ನಿರ್ಮಾಣ ಮಾಡಬೇಕೆಂದು ಭಾರತ ಸರ್ಕಾರದವರನ್ನು ಒತ್ತಾಯ ಪಡಿಸುವ ನಿರ್ಣಯವನ್ನು ಮಾಡಿದೆ

ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಉಪಚುನಾವಣೆ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಗುಂಡ್ಲುಪೇಟೆ ತಾಲ್ಲೂಕಿನಿಂದ ಇಬ್ಬರು ಮತ್ತು ಹೆಗ್ಗಡದೇವನಕೋಟೆಯಿಂದ ಒಬ್ಬರನ್ನು ಉಪ ಚುನಾವಣೆ ಮೂಲಕ ಸೇರಿಸಿಕೊಳ್ಳಲು ನಿರ್ಧರಿಸಿ ಅದಕ್ಕಾಗಿ ವೇಳಾ ಪಟ್ಟಿಯನ್ನು ಕೊಡಲಾಗಿದೆ ನಾಳಿದ್ದು ಮಧ್ಯಾಹ್ನ ೩ ಗಂಟೆಯೊಳಗೆ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯವರಿಗೆ ಅರ್ಜಿ ಸಲ್ಲಿಸಬೇಕು. ಚುನಾವಣೆಯು ಬರುವ ತಿಂಗಳು ೩ ನೇ ತಾ॥ ಮಧ್ಯಾಹ್ನ ೧ ರಿಂದ ೫॥ ವರೆಗೆ ರಾಜಧಾನಿಯ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದು

ಗೋಮಟಗಿರಿಯಲ್ಲಿ ಮಸ್ತಕಾಭಿಷೇಕ

ಶ್ರೀ ಗೋಮಟಗಿರಿ ಕ್ಷೇತ್ರದಲ್ಲಿ ಸೇವಾ ಸಮಿತಿಯವರು ಬರುವ ತಿಂಗಳು ೫ ನೇ ತಾ॥ ೧೦೦೦ ಗೋಮಟೇಶ್ವರ ಸ್ವಾಮಿಗೆ ದ್ವಿತೀಯ ಮಸ್ತಕಾಭಿಷೇಕವನ್ನು ಏರ್ಪಡಿಸಿರುತ್ತಾರೆ ಮಹಾ ಜನರು ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಕೋರಲಾಗಿದೆ.

ಸರ್ಕಾರದ ಜೀವವಿಮಾ ಶಾಖೆಯ ಹೊಸ ಕಾರ್ಯದರ್ಶಿ

ಬರುವ ಜನವರಿ ೧ ರಿಂದ ಮೈಸೂರು ಸರ್ಕಾರದ ಜೀವವಿಮಾ ಇಲಾಖೆಯ ಕಾರ್ಯದರ್ಶಿಯನ್ನಾಗಿ ಡೆಪ್ಯೂಟಿ ಸೆಕ್ರೆಟರಿಗಳಾದ ಶ್ರೀ ಎನ್ ಎಸ್ ನರಸಿಂಹ ಶಾಸ್ತ್ರಿಯವರನ್ನು ನೇಮಿಸಲಾಗುವುದು

ವಾರ ಭವಿಷ್ಯ

ತಾ|| [illegible] ರಿಂದ [illegible] ರ ವರೆಗೆ

ಮೇಷ– ಆರೋಗ್ಯ ಸಾಧಾರಣ ಪ್ರಿಯ ಜನರ ವಿಯೋಗ ದುಃಖ ವ್ಯವಹಾರಗಳಲ್ಲಿ ತೊಂದರೆ ವೃಧಾ ಕಲಹ ತಾ|| [illegible] ಅಪಘಾತ ಭಯ, ಜಾಗರೂಕ

ವೃಷಭ – ಸಾಹಸಿಗಳನ್ನು ಪತ್ರ್ಯರಿ ಹುಬಿರಿ ಆರೋಗ್ಯ ಉತ್ತಮ ಕೈ ಗೊಂಡ ಕಾರ್ಯ ಸಿದ್ಧಿ ವ್ಯಾಪಾರ, ಉದ್ಯೋಗಗಳಲ್ಲಿ ಯಶಸ್ಸು ತಾ|| [illegible] ವಿಶೇಷ ಸುದ್ದಿ, ಸನ್ಮಾನ

ಮಿಥುನ ಆರೋಗ್ಯ ಉತ್ತಮ ಆರ್ಥಿಕ ಮುಗ್ಗಟ್ಟು ಹೆಚ್ಚು ಸಾಹಿತಿಗಳಿಗೆ ಸಿರುತ್ಸಾಹ ವ್ಯವಹಾರಗಳಲ್ಲಿ ತೊಂದರೆ ತಾ|| [illegible] ಚಿಂತಾಜನಕ, ಪ್ರವಾಸ

ಕರ್ಕ ಧೈರ್ಯದಿಂದ ಕಷ್ಟಗಳನ್ನು ಎದುರಿಸಬೇಕು ಪ್ರವಾಸ ಬೇಡಿ ವ್ಯವಹಾರಗಳಲ್ಲಿ ಇಳ್ಳಿ ಅಗ್ನಿ ಭಯ, ಖರ್ಚು ತಾ [illegible] ಅನಾರೋಗ್ಯ, ಕೆಟ್ಟ ಸುದ್ದಿ

ಸಿಂಹ ಕೈಗೊಂಡ ಕಾರ್ಯ [illegible] ಆರ್ಥಿಕ ಮುಗ್ಗಟ್ಟು ಹೆಚ್ಚು ಕಳುವಾಗುವ ಸಂಭವ ವ್ಯವಹಾರಗಳಲ್ಲಿ ಕಳವಳ ತಾ|| [illegible] ಎತ್ತರೊಡನೆ ಕಲಹ ಆಸ್ತಿಗಳ ಚಿಂತೆ

ಕನ್ಯಾ– ವಿದ್ವಾಂಸರಿಂದ ಸನ್ಮಾನ ಸಾಹಿತ್ಯೋಪಾಸಕರಿಗೆ ಉತ್ತೇಜನ ಪ್ರವಾಸ ಉತ್ತಮ ವ್ಯಾಪಾರ ಸೌಕರ್ಯಗಳಲ್ಲಿ ಯಶಸ್ಸು ತಾ|| [illegible] ಧನ ಲಾಭ, ಸುವಾರ್ತೆ

ತುಲಾ ಕಲಾ ಚಾತುರ್ಯದಿಂದ ಯಶಸ್ಸನ್ನು ಗಳಿಸುವಿರಿ ಕೀರ್ತಿ ಹರಡುವುದು. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ತಾ|| [illegible] ಪ್ರವಾಸ, ಆಪ್ತರ ಭೇಟಿ

ವೃಶ್ಚಿಕ– ಕಷ್ಟಗಳ ನಿವಾರಣೆ ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದು ಶುಭಕಾರ್ಯಗಳು ನೆರವೇರುವುವು ತಾ [illegible] ವಿಶೇಷ ಸುದ್ದಿ, ಪ್ರವಾಸ

ಧನು ಕಾರ್ಯ ಸಾಧನೆಯಲ್ಲಿ ನಂಬಿಕೆ ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದಿರಿ. ಪ್ರವಾಸ ಕೈಗೊಳ್ಳದಿರುವುದು ಉತ್ತಮ. ತಾ|| [illegible] ಅಪಘಾತ ಭಯ, ದುಃಖ ವಾರ್ತೆ.

ಮಕರ– ಅವಮಾನಕರ ಘಟನೆಗಳು ಜರುಗುವುವು. ಕುಟುಂಬದ ಅನಾರೋಗ್ಯ. ಆರ್ಥಿಕ ಮುಗ್ಗಟ್ಟು. ತಾ. [illegible]

ಹಣಕಾಸಿನ ಬಿಕ್ಕಟ್ಟಿನಿಂದ ಕಾಲೇಜುಗಳಲ್ಲಿ ಸಂಬಳವಿಲ್ಲ

ಅಲಹಾಬಾದಿನ ವಿಶ್ವ ವಿದ್ಯಾಲಯದಲ್ಲಿ ಉಂಟಾಗಿರುವ ತೀವ್ರವಾದ ಹಣಕಾಸಿನ ಬಿಕ್ಕಟ್ಟು ಪರಿಹಾರವಾಗದಿದ್ದರೆ ಈ ತಿಂಗಳಿನ ಸಂಬಳವನ್ನು ಉಪಾಧ್ಯಾಯರುಗಳಿಗೆ ಪಾವತಿ ಮಾಡಲು ಸಾಧ್ಯವಿಲ್ಲವೆಂದು ಆ ವಿಶ್ವ ವಿದ್ಯಾಲಯದ ರಿಜಿಸ್ಟ್ರಾರರು ತಿಳಿಸಿರುತ್ತಾರೆ ವಿಶ್ವ ವಿದ್ಯಾಲಯದಲ್ಲಿ [illegible] ಲಕ್ಷ ರೂ ಕೊರತೆ ಇರುವುದೆಂದು ಹೇಳಲಾಗಿದೆ

ಮರದ ಪೊಟ್ಟರೆಯಲ್ಲಿ ಖೈದಿ

[illegible] ವರ್ಷ ಶಿಕ್ಷೆಗೆ ಗುರಿಯಾಗಿ ಕಾಶಿಯ ಸೆಂಟ್ರಲ್ ಜೈಲಿನಲ್ಲಿದ್ದ ಡಕಾಯಿತನೊಬ್ಬನು ಕಾಣದೇ ಇದ್ದ ಸಲುವಾಗಿ ಪೋಲೀಸರು ಅವನನ್ನು ಹುಡುಕಲು ಬುಧವಾರ [illegible] ಗಂಟೆ ಕಾಲ ಊರಿನಲ್ಲೆಲ್ಲಾ ಅಲೆದರೆಂದೂ, ಕಡೆಗೆ ಅವನು ಜೈಲಿನ ಹುಣಸೇ ಮರವೊಂದರ ಪೊಟ್ಟರೆಯಲ್ಲಿ ಅಡಗಿದ್ದು ಪತ್ತೆಯಾಯಿತೆಂದೂ ವರದಿಯಾಗಿದೆ

ಪಂಢರಾಪುರದಲ್ಲಿ ಪ್ರೌಢಶಾಲೆ

ಕಳೆದ ತಿಂಗಳು ಮಧ್ಯಭಾಗದಲ್ಲಿ ಅಖಿಲ ಭಾರತ ಭಾವಸಾರ ಕ್ಷತ್ರಿಯರ ಮಹಾಸಭೆಯು ಪಂಢರಾಪುರದಲ್ಲಿ ಮೈಸೂರಿನ ಒಬ್ಬ ವ್ಯಾಪಾರಿಗಳೂ, ಪೌರ ಸಭಾಸದಸ್ಯರೂ ಆದ ಶ್ರೀ ಯು ಎಲ್ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಮಹಾಂತ್ [illegible] ಗಾಡೆ ಮಹಾರಾಜರ ಹೆಸರಿನಲ್ಲಿ [illegible] ಲಕ್ಷ ರೂ ವೆಚ್ಚದಲ್ಲಿ ಒಂದು ಪ್ರೌಢಶಾಲೆಯನ್ನು ಆ ಸ್ಥಳದಲ್ಲಿ ಬರುವ ವರ್ಷದೊಳಗಾಗಿ ನಿರ್ಮಾಣ ಮಾಡಬೇಕೆಂದು ತೀರ್ಮಾನವಾಯಿತು ಈಗಾಗಲೇ [illegible] ಸಾವಿರ ರೂ ಗಳ ವಾಗ್ದಾನವನ್ನು ಪಡೆಯಲಾಗಿದೆ

[illegible] ಆಪ್ತರಿಂದ ಅಪಮಾನ ಸಹವರ್ತಿಗಳಿಂದ ಮೋಸ

ಕುಂಭ ಪರೋಪಕಾರ ಜರುಗುವುದು. ಆರೋಗ್ಯ ಉತ್ತಮ ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು ಪ್ರವಾಸ ಸುಖಕರವಾಗಿರುವುದು ತಾ|| [illegible] ವಿಶೇಷ ವ್ಯವಹಾರ

ಮೀನ ದುರ್ಘಟನೆಯಿಂದ ಪಾರಾಗುವಿರಿ ಹಣಕಾಸಿನ ಪರಿಸ್ಥಿತಿಯು ಸುಧಾರಣೆ, ವ್ಯವಹಾರಗಳಲ್ಲಿ ಉತ್ಸಾಹ ತಾ|| [illegible] ವಿಶೇಷ ಸುದ್ದಿ ಹರ್ಷ ವಾತಾವರಣ.

ಕಮ್ಯೂನಿಸ್ಟ್ ಸಂಧಾನ ಪ್ರತಿನಿಧಿಗಳ ಕೊಲೆ ಪ್ರಯತ್ನವೇ

ಕೇಸಾಂಗ್ ಮಾತುಕತೆಗಾಗಿ ಬಂದಿದ್ದ ಕಮ್ಯೂನಿಸ್ಟ್ ಪ್ರತಿನಿಧಿಗಳನ್ನು ಕೊಲ್ಲುವ ಪ್ರಯತ್ನವನ್ನು ವಿಶ್ವ ಸಂಸ್ಥೆ ಸೈನ್ಯಗಳು ಮಾಡಿದ್ದವೆಂದು ಕಮ್ಯೂನಿಸ್ಟರು ಮಾಡಿರುವ ಆರೋಪಣೆಯನ್ನು ಜ|| ರಿಡ್ಜ್‌ವೆಯವರು ನಿರಾಕರಿಸಿ, ಇದು ದುರುದ್ದೇಶಪೂರಿತವಾಗಿ ಸೃಷ್ಟಿ ಮಾಡಲ್ಪಟ್ಟ ಕತೆಯೆಂದು ತಿಳಿಸಿರುತ್ತಾರೆ ಕಮ್ಯೂನಿಸ್ಟರು ಒಪ್ಪಿದರೆ ನಿಂತು ಹೋಗಿರುವ ಮಾತುಕತೆಗಳನ್ನು ಪುನರ್ ಆರಂಭಿಸಬಹುದೆಂದು ಅವರು ಸ್ಪಷ್ಟ ಪಡಿಸಿರುತ್ತಾರೆ

ಬೊಂಬಾಯಿ ಝಾಡಮಾಲಿಗಳ ಮುಷ್ಕರವೇ ?

ಬೊಂಬಾಯಿ ಪೌರ ಸಭೆಯ [illegible] ಝಾಡಮಾಲಿಗಳು ಹೆಚ್ಚಿನ ಕೂಲಿಗಾಗಿ ಇಟ್ಟ ಬೇಡಿಕೆಯನ್ನು ಪೌರಸಭೆಯವರು ನಿರಾಕರಿಸಿರುತ್ತಾರೆ ಮುಷ್ಕರದ ನೋಟೀಸನ್ನು ಝಾಡಮಾಲಿಗಳ ಸಂಘವು ಹಿಂದೆಯೇ ಕೊಟ್ಟಿತ್ತು ತಾನು ಸಾರ್ವತ್ರಿಕ ಮುಷ್ಕರವನ್ನು ಯಾವಾಗ ಬೇಕಾದರೂ ಹೂಡಲು ಸ್ವತಂತ್ರವಾಗಿರುವುದಾಗಿ ಸಂಘವು ತಿಳಿಸಿದೆ

ನೋಟೀಸು ವಾಪಸು ಪಡೆಯಲು ಸೂಚನೆ

ಮೈಸೂರು ಜಿಲ್ಲಾ ಮುದ್ರಣಾಲಯಗಳ ಕಾರ್ಮಿಕರ ಸಂಘದ ಸದಸ್ಯರಾದ ಶ್ರೀಗಳು ಬಿ ಶ್ರೀನಿವಾಸ ಶೆಟ್ಟಿ, ಎಂ ಬೆಟ್ಟಯ್ಯ ಮತ್ತು ಚೆಲುವಯ್ಯನವರುಗಳಿಗೆ ಕೃಷ್ಣಾ ಪ್ರೆಸ್ ಮಾಲೀಕರು ವಕೀಲರ ಮೂಲಕ ನೋಟೀಸನ್ನು ಕೊಡಿಸಿ ಕೆಲಸದಿಂದ ತೆಗೆದ ಹಾಕಿದ ಸಂಬಂಧವಾಗಿ ಸಂಘದವರು ಪಾಪ್ ಎಸ್ಟಾಬ್ಲಿಷ್‌ಮೆಂಟ್ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡುದರಿಂದ ಸದರಿ ನೋಟೀಸನ್ನು ವಾಪಸು ಪಡೆಯಬೇಕೆಂದು ಅವರು ಸೂಚಿಸಿರುವರೆಂದು ಗೊತ್ತಾಗಿದೆ

ಬ್ರಿಟನ್ ಮತ್ತು ಈಜಿಪ್ಟ್ ಒಪ್ಪಂದದ ರದ್ದಿಗೆ ನಿರ್ಧಾರ

[illegible] ರಲ್ಲಿ ಬ್ರಿಟನ್ನಿನೊಡನೆ [illegible]ಷ್ಟು ಮಾಡಿಕೊಂಡಿದ್ದ ಒಪ್ಪಂದವನ್ನು ರದ್ದುಪಡಿಸಲು ಅದು ನಿರ್ಧರಿಸಿರುತ್ತ[illegible]ಯೆಂದು ಹೇಳಲಾಗಿದೆ.

ಪುನಃ ಒರಿಸ್ಸಾ ಕಾಲೇಜುಗಳಲ್ಲಿ ಮುಷ್ಕ[illegible]

ಒರಿಸ್ಸಾ ರಾಜಧಾನಿ ಕಟಕ್ಕಿನ [illegible]ಲೇಜುಗಳಲ್ಲಿರುವ ವಿದ್ಯಾರ್ಥಿಗಳು ಪು[illegible] ಮುಷ್ಕರವನ್ನು ಪ್ರಾರಂಭಿಸಿರುವರು. [illegible]ರು ಹಾಜರಾಗುವ ವಿದ್ಯಾರ್ಥಿಗಳ [illegible]ರುಗಳನ್ನು ಹೊರೆದುಹಾಕಲಾಗುವುದೆ[illegible]ದು ರೇವನ್ ಷಾ ಕಾಲೇಜು ಮುಖ್ಯೋಪಾಧ್ಯಾಯರು ಎಚ್ಚರಿಕೆಯಿತ್ತಿರುವರ[illegible]

ಮೋಟಾರು ಕೆಲಸಗಾರರಿಗೆ ಗೃಹ ವಸತಿ

ಮೊನ್ನೆ ಸಂಜೆ ಮೈಸೂರು ಜಿ[illegible] ಮೋಟಾರು ಕೆಲಸಗಾರರ ಸಂಘದ ಕಾ[illegible]ಕಾರಿ ಸಮಿತಿಯು ಶ್ರೀ ಕೆ. ದೌಲತ್[illegible]ನ್‌ರವರ ಅಧ್ಯಕ್ಷತೆಯಲ್ಲಿ ನಡೆದು, [illegible] ಸಿಸಲು ಮನೆಗಳು ಇಲ್ಲದೆ ಇರುವ [illegible]ಘದ ಸದಸ್ಯರಿಗ ಇಟ್ಟಿಗೆಗೂಡಿನಲ್ಲಿ [illegible] ಸದಾಗಿ ಕಟ್ಟಲಾಗಿರುವ ಮನೆಗಳನ[illegible] ಮತ್ತು ನಿವೇಶನಗಳನ್ನೂ ನಗರಾಭಿವೃದ್ಧಿ ಸಮಿತಿಯವರು ಕೊಡಬೇಕೆಂ[illegible] ಪ್ರಾರ್ಥಿಸಲಾಯಿತು ಸಂಘಕ್ಕೆ [illegible] ಮದಕ್ಕಾಗಿ ಅವರನ್ನು ಬಸ್ ಮಾಲೀ[illegible]ರು ಕೆಲಸದಿಂದ ವಜಾ ಮಾಡಿರುವ[illegible]ನ್ನು ಖಂಡಿಸಿ, ಅವರು ಮುಂದೆ ಇಂತ[illegible] ನಡವಳಿಕೆಯನ್ನು ಬಿಟ್ಟುಬಿಡುವ[illegible] ಒತ್ತಾಯ ಪಡಿಸಲಾಯಿತು

ಸರ್ ಸಿ. ವಿ. ರಾಮನ್‌ರವರು
ನಿತ್ಯವೂ ಉಪಯೋಗಿಸುವ ಮತ್ತು ಶಿಫಾರಸು ಮಾಡಿರುವ
ಹಲ್ಲು ಪುಡಿ
ಪೈರಿಕ್ಸ್
§ ನೋವನ್ನು ಹೋಗಲಾಡಿಸುತ್ತ[illegible]
§ ರಕ್ತ ಸ್ರಾವವನ್ನು ನಿಲ್ಲಿಸುತ್ತ[illegible]
§ ದಂತ ರೋಗಗಳನ್ನು ತಡೆಯುತ್ತ[illegible]
– ತಯಾರಕರು –
ದಿ ಪಯೋರಿಯಾ-ಕ್ಯೂರ್ [illegible]
ಕೋಟೆ ಬೆಂಗಳೂರು [illegible]
ಮೈಸೂರಿನ ಏಜೆಂಟರು
ಎಸ್. ಗೋಪಾಲನ್,
[illegible] ಬಜಾರ್ [illegible] ರಸ್ತೆ
ಮೈಸೂರು

ಗುರುದೇವಾ ಹಾಲ್
ಗೌರಿಹಬ್ಬದ ಸಲುವಾಗಿ
ರಿಯಾಯಿತಿ ಬೆಲೆ
ಕ್ರೇಪ್, ಜಾರ್ಜೆಟ್, ಧರ್ಮಾವರಂ,
ಆರಣಿ, ಕಂಚಿ ರೇಷ್ಮೆ ಸೀರೆಗಳು
ದೊರೆಯುತ್ತವೆ
ಶಿವರಾಂಪೇಟೆ ಮೈಸೂರು.

ಗೌರಿ ಹಬ್ಬದ ಸ್ಪೆಷಲ್ • 6 ಮತ್ತು 8 ಗಜಗಳಲ್ಲಿ ಸೇಲಂ ಮಧುರೆ, ಕೊಯಮತ್ತೂರು
ನೂಲಿನ ನವೀನ ಮಾದರಿ ಸೀರೆಗಳು ಮತ್ತು ಮೈಸೂರು ರೇಷ್ಮೆ ಸೀರೆಗಳು
ಬೇಕಾದರೆ ಇಂದೇ ಭೇಟಿ ಕೊಡಿರಿ
M.P. ನರಸಿಂಹಯ್ಯ ಜವಳಿ ಅಂಗಡಿ, ದೊಡ್ಡಪೇಟೆ ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು
ರತ್ನಾವಳಿ ಥಿಯೇಟರಿನಲ್ಲಿ
ಅಮೋಘ ಪ್ರಾರಂಭ ಅಕ್ಕಮಹಾದೇವಿ 22.8.51 ರಿಂದ
ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ
ರಾತ್ರಿ 9-45 ಘಂಟೆಗೆ ರಜಾದ ದಿನಗಳಲ್ಲಿ ಮ್ಯಾಟಿನಿ 6-45ಕ್ಕೆ

ಗೌರಿ ಹಬ್ಬಕ್ಕಾಗಿ, ನಾನಾ ಮಾದರಿ ರೇಷ್ಮೆ ಸೀರೆಗಳ ಮತ್ತು ನೂಲಿನ ಸೀರೆಗಳು ಬಂದಿವೆ ನೇರವಾಗಿ ಬಂದು ಕೊಳ್ಳಿರಿ.
D.L. ನರಸಿಂಹಯ್ಯ & ಬ್ರದರ್ಸ್.
ಜವಳಿ ಅಂಗಡಿ ಲ್ಯಾನ್ಸ್‌ಡೌನ್ ಬಜಾರ್ ಹೋಟೆಲ್ [illegible] ಮೈಸೂರು

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ
M.V. ಭೋಜಯ್ಯ ಬಿ ಎ.,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

Edited, printed and published by A R Nagarajan, at Sadhvi Press Jr Subbiah Road, Mysore

ರಿಜಿ ನಂ 792 । ವಂದೇ ಮಾತರಂ । ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೨೭-೮-೫೧ [ಸಂಚಿಕೆ ..

ಬ್ರಿಟಿಷ್ ಸರ್ಕಾರಕ್ಕೆ ಈಜಿಪ್ಟಿನ ಕಡೇ ಎಚ್ಚರಿಕೆ

ಅಬರ್ಡಾ ಎಣ್ಣೆ ಕ್ಷೇತ್ರಕ್ಕೆ ಸರ್ ಮಿರ್ಜಾರವರು ?

ಇಂಡೋನೇಷ್ಯದಲ್ಲಿ ವಿಶ್ವ ಸಂಸ್ಥೆ ಪ್ರತಿನಿಧಿಯಾಗಿರುವ ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರನ್ನು ಪರ್ಷಿಯದ ಎಣ್ಣೆ ಕ್ಷೇತ್ರಗಳ ಮೇಲ್ವಿಚಾರಕರನ್ನಾಗಿ ನೇಮಿಸಬೇಕೆಂದೂ ಅದರಿಂದ ಎಣ್ಣೆ ವಿವಾದವು ಬಗೆಹರಿಯಲು ಮಾರ್ಗವು ಸುಗಮವಾಗುವುದೆಂದೂ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯು ಸೂಚಿಸಿರುತ್ತದೆ

ಭೂಪಾಲ್ ರೀಜೆಂಟರ ಆಸ್ತಿಯ ಮುಟ್ಟುಗೋಲು

ಭೂಪಾಲ್ ಸಂಸ್ಥಾನದ ರೀಜೆಂಟ್ ಬೇಗಂ ಅಬೀದ್ ಸುಲ್ತಾನಾರವರು ಪಾಕಿಸ್ತಾನಕ್ಕೆ ಹೋದುದರಿಂದ ಅವರು ದೇಶ ಬಿಟ್ಟುಹೋದವರೆಂದು ಪರಿಗಣಿಸಿ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಭಾರತ ಸರ್ಕಾರದ ಸಂಸ್ಥಾನ ಇಲಾಖೆಯ ಮಂತ್ರಿ ಎನ್ ಜಿ ಅಯ್ಯಂಗಾರ್ಯರು ತಿಳಿಸಿರುತ್ತಾರೆ

ಭಾರತದೊಳಗೆ ನುಗ್ಗಿ ಪಾಕಿಸ್ತಾನಿಗಳಿಂದ ಭತ್ತದ ಲೂಟಿ

ಮುರ್ಷಿದಾಬಾದು ಜಿಲ್ಲೆಯ ಪ್ರದೇಶಕ್ಕೆ ಪೂರ್ವ ಪಾಕಿಸ್ತಾನದ ಸಶಸ್ತ್ರ ಸೈನಿಕರ ತಂಡವೊಂದು ಗುರುವಾರ ನುಗ್ಗಿ ಬಲ ಪ್ರಯೋಗ ಮಾಡಿ ಜನಿವಾಸದಲ್ಲಿದ್ದ ಭತ್ತವನ್ನು ಹೊತ್ತುಕೊಂಡು ಹೋಯಿತೆಂದೂ, ಭಾರತೀಯ ಪಡೆಗಳನ್ನು ಕಾಣುತ್ತಲೇ ಅದು ಮಾಲು ಸಮೇತ ಓಡಿತೆಂದೂ ಹೇಳಲಾಗಿದೆ

ಅವಶ್ಯಬಿದ್ದರೆ ಕಾಂಗ್ರೆಸ್ ಅಧ್ಯಕ್ಷತೆಗೆ ನೆಹರೂ ಒಪ್ಪಿಗೆ

ಕಾಂಗ್ರೆಸ್ಸಿನಲ್ಲಿ ಈಗ ಉಂಟಾಗಿರುವ ಬಿಕ್ಕಟ್ಟಿನ ಬಗ್ಗೆ ಮಾತನಾಡುತ್ತಾ ಅವಶ್ಯವಿದ್ದರೆ ನೆಹರೂರವರು ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲೂ ತೀರ್ಮಾನಿಸಿರುವುದಾಗಿ ಕೇಂದ್ರ ಸರ್ಕಾರದ ಮಂತ್ರಿ ಪರೀಕ್ಷಿತ್ ಮಹತಾಬ್‌ರವರು ತಿಳಿಸಿರುತ್ತಾರೆ

ಸಿನಿಮಾದಲ್ಲಿ ಸಿಗರೇಟು ಸೇದದಂತೆ ಸೂಚನೆ

(ಸಂ ಸು) ಶ್ರೀರಂಗಪಟ್ಟಣ ೨೬

ಈ ಊರಿನ ವಿಜಯಲಕ್ಷ್ಮಿ ಟಾಕೀಸಿನಲ್ಲಿ ತೋರಿಸಲಾಗುವ ಚಲನ ಚಿತ್ರಗಳನ್ನು ನೋಡಬಯಸುವವರು ಮುಂದಿರಕೊಳ್ಳ ಗಿರುವಿ, ಸಿಗರೇಟು ಮುಂತಾದುವನ್ನು ಸೇವಿಸಕೂಡದೆಂದು ತಿಳುವಳಿಕೆ ನೀಡಲಾಗುತ್ತಿದೆ

ಧಾನ್ಯದ ಅಳತೆಯಲ್ಲಿ ಕಡಿಮೆ

ಇಲ್ಲಿನ ಸರ್ಕಾರಿ ಡಿಪ್ಪೋಗಳಲ್ಲಿ ಕೊಡಲಾಗುತ್ತಿರುವ ಅಕ್ಕಿ, ಗೋಧಿ ಮುಂತಾದ ಧಾನ್ಯಗಳು ೧ ರೂ ಗೆ ೧ ಸೇರಿನಷ್ಟು ಕಡಿಮೆ ಬರುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ತನಿಖೆ ನಡೆಸಿ ನ್ಯೂನತೆಯನ್ನು ಸರಿಪಡಿಸಬೇಕೆಂದು ಕೋರಲಾಗಿದೆ

ಸ್ವಾತಂತ್ರ್ಯೋತ್ಸವ

ಈ ಊರಿನ ನಾನ್ ಗೆಜೆಟೆಡ್ ನೌಕರರು ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ನಡೆಸಿದರು. ಬಾಲಕರ ಶಾಲೆಗಳಲ್ಲೂ ಸವಿ ಉತ್ಸವವು ಆಚರಿಸಲ್ಪಟ್ಟಿತು

ಯೋಗ್ಯರಾದವರಿಗೆ ಕಾಂಗ್ರೆಸ್ ಪರ ಉಮೇದುವಾರಿಕೆ

ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಸುಬ್ರಹ್ಮಣ್ಯಂರವರ ಭರವಸೆ

ದಾವಣಗೆರೆ ೨೬

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ನೆನ್ನೆ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಚುನಾವಣೆಗೆ ಸಂಬಂಧಪಟ್ಟ ವಿಷಯವನ್ನು ಚರ್ಚಿಸಲಾಯಿತು. ಯೋಗ್ಯರಾದವರನ್ನೇ ಉಮೇದುವಾರರನ್ನಾಗಿ ನಿಲ್ಲಿಸಲಾಗುವುದೆಂದೂ, ಈ ಸಂಬಂಧವಾಗಿ ಚುನಾವಣಾ ಸಮಿತಿಯವರು ಸಂಸ್ಥಾನದಲ್ಲಿ ಪ್ರವಾಸ ಮಾಡ ವರೆಂದೂ ಚುನಾವಣಾ ಸಮಿತಿ ಸದಸ್ಯರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಭರವಸೆಯಿತ್ತರು.

ಶ್ರೀ ಹನುಮಂತಯ್ಯನವರು, ಸಭೆಯು ಉಪಕ್ರಮವಾದ ಸಮಯದಲ್ಲಿ, ಬೆಂಗಳೂರಿನಲ್ಲಿ ಕಾಂಗ್ರೆಸ್ ಭವನವನ್ನು ನಿರ್ಮಾಣ ಮಾಡುವ ಆವಶ್ಯಕತೆಯನ್ನು ಒತ್ತಿಹೇಳಿ ಈಗಾಗಲೇ ೩ ಲಕ್ಷ ರೂ ಮತ್ತು ಒಂದು ನಿವೇಶನ ದೊರಕಿರುವುದಾಗಿ ತಿಳಿಸಿದರು

ಸಮ್ಮೇಳನಕ್ಕೆ ಸಂಸ್ಥಾನದ ನಾನಾ ಕಡೆಗಳಿಂದ ೯೭೦ ಪ್ರತಿನಿಧಿಗಳು ಬಂದಿದ್ದರು

ಭಾರತದ ಸೇನಾಧಿಕಾರಿಗೆ ಮಹಾವೀರ ಚಕ್ರ

ವಿಶ್ವ ಸಂಸ್ಥೆಯ ಸೈನ್ಯಗಳೊಡನೆ ಇರುವ ಭಾರತದ ಪ್ರಥಮ ಚಿಕಿತ್ಸೆ ದಳದ ನಾಯಕರಾದ ವೆಲ್ಲೂರಿನ ಲೆ॥ ಕ॥ ಎ. ಜಿ. ರಂಗರಾಜ್‌ರವರಿಗೆ ಭಾರತದ ಅಧ್ಯಕ್ಷರು ಮಹಾವೀರ ಚಕ್ರದ ಪ್ರಶಸ್ತಿಯನ್ನು ದಯಪಾಲಿಸಿರುತ್ತಾರೆ. ಇವರೂ, ಇವರ ದಳದವರೂ ಪ್ಯಾರಾಚ್ಯೂಟುಗಳಿಂದ ಕೊರಿಯಾದಲ್ಲಿ ಕೆಳಗಿಳಿದು ತಮ್ಮ ಸಾಹಸವನ್ನು ವ್ಯಕ್ತಪಡಿಸಿದ್ದರು

೩೦ ಲಕ್ಷ ರೂ. ಗೃಹನಿರ್ಮಾಣ ಯೋಜನೆ

ಮೈಸೂರು ಸರ್ಕಾರದವರು ೬೦ ಲಕ್ಷ ರೂ ವೆಚ್ಚದಲ್ಲಿ ಗೃಹಗಳನ್ನು ನಿರ್ಮಾಣ ಮಾಡಲು ಯೋಜನೆಯೊಂದನ್ನು ಸಿದ್ಧಗೊಳಿಸುತ್ತಿರುವುದಾಗಿ ತಿಳಿದುಬಂದಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದವರು ೩೦ ಲಕ್ಷ ರೂ ಗಳ ಸಹಾಯವನ್ನು ಕೊಡಲೊಪ್ಪಿರುವರು

ಬ್ರಿಟನ್ನಿಗೆ ಈಜಿಪ್ಟಿನ ಅಂತಿಮ ಎಚ್ಚರಿಕೆ

ಈಜಿಪ್ಟಿನ ಪಾರ್ಲಿಮೆಂಟ್ ಅಧಿವೇಶನವು ಮುಕ್ತಾಯವಾಗುವಷ್ಟರಲ್ಲಿಯೇ ಬ್ರಿಟನ್ನು ಹೊಸ ರಚನಾತ್ಮಕ ಸಲಹೆಯನ್ನು ಮಾಡದಿದ್ದರೆ ಆಂಗ್ಲೋ ಈಜಿಪ್ಷಿಯನ್ ಒಪ್ಪಂದದ ಪುನರ್ವಿಮರ್ಶೆ ಮಾತುಕತೆಗಳನ್ನು ಮುಕ್ತಾಯ ಮಾಡಲಾಗುವುದೆಂದು ಈಜಿಪ್ಟ್ ಪ್ರಧಾನಿ ನಹಾಸ್ ಪಾಷಾರವರು ಅಂತಿಮ ಎಚ್ಚರಿಕೆಯನ್ನು ಬ್ರಿಟನ್ನಿಗೆ ಕೊಟ್ಟಿರುತ್ತಾರೆ

ಪ್ರಜಾಸಂಘದವರ ಕಾರ್ಯಕಲಾಪ

ರಾಜಧಾನಿಯ ಮೈಸೂರು ಪ್ರಜಾಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ನಡೆಯಿತು. ಪೌರಸಭೆಯಲ್ಲಿರುವ ಸಂಘದ ಸದಸ್ಯರು ಕಳೆದ ೧॥ ವರ್ಷಗಳಿಂದ ನಡೆಸಿದ ಕಾರ್ಯಗಳನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಈ ವಿಷಯಗಳನ್ನು ಪುರಜನರ ಮುಂದೆ ಇಡಲು ಬರುವ ೭ನೇ ತಾ॥ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಗುವುದು

ಟಿಪ್ಪುಸುಲ್ತಾನರ ಉರುಸ್ಸಿನ ಸಂಬಂಧವಾಗಿ ಪ್ರತಿಬಂಧಕಾಜ್ಞೆ

ಶ್ರೀರಂಗಪಟ್ಟಣ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಕಾಲರಾ ರೋಗವಿರುವುದರಿಂದ ಗಂಜಾಮಿನ ಗುಂಬಜ್ಜಿನಲ್ಲಿ ಈ ತಿಂಗಳು ೩೦ ಮತ್ತು ಸೆಪ್ಟೆಂಬರ್ ೧ನೇ ತಾ॥ ನಡೆಯಲಿರುವ ಟಿಪ್ಪುಸುಲ್ತಾನರ ಉರುಸ್ ಹಬ್ಬದ ಸಂಬಂಧವಾಗಿ ಜನ ಸಂದಣಿ ಸೇರಕೂಡದೆಂದು ಮಂಡ್ಯದ ಜಿಲ್ಲಾ ಮ್ಯಾಜಿಸ್ಟ್ರೇಟರು ನಿಷೇಧಿಸಿರುತ್ತಾರೆ. ಆದರೆ ಮತಸಂಬಂಧವಾದ ಕಾರ್ಯಕ್ರಮಗಳು ಮಾತ್ರ ನಡೆಯುವುವು

ಜನತಾ ಶಿಕ್ಷಣ ಕೇಂದ್ರದ ಪ್ರಾರಂಭ

ನಂಜನಗೂಡು ತಾಲ್ಲೂಕು ಚನ್ನದ ಗುಡಿ ಹುಂಡಿ ಗ್ರಾಮದಲ್ಲಿ ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರು ಜನತಾ ಶಿಕ್ಷಣ ಪ್ರಾರಂಭೋತ್ಸವವನ್ನು ೨೬ನೇ ತಾ, ನೆರವೇರಿಸಿದರು. ಜಿಲ್ಲಾಧಿಕಾರಿಗಳಾದ ಜ॥ ಮಹಮದ್ ಅಹಮದ್‌ರವರು ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಸೋಮವಾರದ ಕೆಲಸದ ಪ್ರಾರಂಭೋತ್ಸವವೂ ನೆರವೇರಿಸಲ್ಪಟ್ಟಿತು

ಕ್ರಮೇಣ ಆಹಾರ ಧಾನ್ಯದ ಹತೋಟಿ ರದ್ದು ಮಾಡಬೇಕು

ರಾಜಕೀಯ ಸಮ್ಮೇಳನದಲ್ಲಿ ನಿರ್ಣಯ

ದಾವಣಗೆರೆ ೨೬

ಸಂಸ್ಥಾನದ ರಾಜಕೀಯ ಸಮ್ಮೇಳನವು ಈ ದಿನ ಇಲ್ಲಿ ಸೇರಿತು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯಾದ ನಂತರ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಕೆ ಟಿ ಜಂಬಣ್ಣನವರು ಭಾಷಣ ಮಾಡಿ, ಅಧ್ಯಕ್ಷರು ಮತ್ತು ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸಿದರು

ಶ್ರೀ ಕೆ.ಹನುಮಂತಯ್ಯನವರು ತಮ್ಮ ಭಾಷಣದಲ್ಲಿ ಬ್ರಿಟಿಷ್ ಲೇಬರ್ ಪಕ್ಷದ ಅಂಗರಚನೆಯಂತೆ ಕಾಂಗ್ರೆಸ್ಸಿನಲ್ಲೂ ತಿದ್ದುಪಡಿ ಮಾಡಬೇಕೆಂದು ಸೂಚಿಸಿದರು. ಇದರಿಂದ ಸಂಸ್ಥೆಯ ಅಧ್ಯಕ್ಷರಿಗೂ ಪ್ರಧಾನಿಯವರಿಗೂ ಘರ್ಷಣೆಗೆ ಅವಕಾಶವಿಲ್ಲದಂತಾಗುವುದು, ಕಾಂಗ್ರೆಸ್ಸಿನ ಅಂಗರಚನೆಯಲ್ಲಿ ಪ್ರಜಾ ಸತ್ತಾತ್ಮಕ ತತ್ವವು ಅಡಕವಾಗಿರುವುದು, ಪ್ರಜಾ ಸತ್ತೆಯ ಘಟನಾವಳಿಯಲ್ಲಿ ಒಬ್ಬ ನಾಯಕನಿರುವುದು ಅವಶ್ಯಕ. ಆದರೆ ಅವರು ಪ್ರಬಲವಾಗಲು ಇಚ್ಛಿಸಿದರೆ ಅದರಿಂದ ಪ್ರಜಾ ಸತ್ತೆಯೇ ಹಾಳಾಗುವುದು–ಎಂದು ಅವರು ಹೇಳಿದರು. ನೆಹರೂ ಟಂಡನ್ ವಿವಾದವನ್ನು ಪ್ರಸ್ತಾಪಿಸುತ್ತಾ, ನೆಹರೂರವರ ಮುಖಂಡತ್ವದ ಬಗ್ಗೆ ಯಾರೂ ಪ್ರಶ್ನಿಸುವುದಿಲ್ಲವೆಂದೂ, ಆದರೆ ಸಂಸ್ಥೆಯನ್ನು ಬಿಟ್ಟು ಹೋದವರು, ಸಂಸ್ಥೆಗಿಂತಲೂ ಮುಖಂಡರು ಹೆಚ್ಚೆಂದು ಹೇಳಿ ಅವರಲ್ಲಿ ಒಡಕನ್ನು ತರಲು ಪ್ರಯತ್ನಿಸಿದರೆಂದೂ ತಿಳಿಸಿದರು. ಇಂತಹ ಪ್ರಸಂಗವು ಒದಗಬಾರದೆಂದು ಅವರು ಅಭಿಪ್ರಾಯ ಪಟ್ಟರು

ಭಾಷಾವಾರು ಪ್ರಾಂತ ರಚನೆ ವಿಷಯವನ್ನು ಪ್ರಸ್ತಾಪಿಸುತ್ತಾ ದಕ್ಷಿಣ ಭಾಗದಲ್ಲಿರುವವರಿಗೆ ಇವುಗಳ ನಿರ್ಮಾಣದ ಬಗ್ಗೆ ಇರುವಷ್ಟು ಉತ್ಸಾಹವು ಕೇಂದ್ರದಲ್ಲಿರುವವರಿಗೆ ಇಲ್ಲವೆಂದೂ, ಅವರನ್ನು ಒಪ್ಪಿಸಬೇಕಾದುದು ನಮ್ಮ ಕರ್ತವ್ಯವೆಂದೂ ಹೇಳಿ, ಮೈಸೂರು ಈ ತತ್ವವನ್ನು ವಿರೋಧಿಸಿಲ್ಲವೆಂದೂ, ಆದರೆ ಕರ್ನಾಟಕ ಪ್ರಾಂತ ರಚನೆಯು ಸುಗಮವಾಗಿ ನಡೆಯಬೇಕಾದುದೇ ಮೈಸೂರಿನವರ ಆಶಯವೆಂದೂ ಹೇಳಿದರು.

ಬೆಳಗ್ಗೆ ಸಮಾರಂಭದ ಅಂಗವಾಗಿ ಶ್ರೀ ಹನುಮಂತಯ್ಯನವರು ರಾಷ್ಟ್ರ ಧ್ವಜಾರೋಹಣವನ್ನು ಮಾಡಿದರು.

ಸಂಸ್ಥಾನದಲ್ಲಿ ಆಹಾರ ಧಾನ್ಯದ ಮೇಲೆ ಹತೋಟಿಯನ್ನು ಕ್ರಮ ಕ್ರಮವಾಗಿ ತೆಗೆಯಬೇಕೆಂದು ಒತ್ತಾಯ ಪಡಿಸುವ ಬಗ್ಗೆ ಸಮ್ಮೇಳನವು ನಿರ್ಣಯವನ್ನು ಬಹುಮತದಿಂದ ಅಂಗೀಕರಿಸಿತು. ಧಾನ್ಯದ ವಸೂಲಿ ಮತ್ತು ಪಡಿತರವನ್ನು ಜಾರಿಗೆ ತರುವ ಬಗ್ಗೆ ಸಂಸ್ಥಾನ ಸರ್ಕಾರದವರಿಗೆ ಸ್ವಾತಂತ್ರ್ಯವಿರಬೇಕೆಂದೂ, ಕಂದಾಯವನ್ನು ಧಾನ್ಯದ ರೂಪದಲ್ಲಿ ವಸೂಲು ಮಾಡಲು ಏರ್ಪಾಡು ಮಾಡಬೇಕೆಂದೂ ಈ ನಿರ್ಣಯದಲ್ಲಿ ಸೂಚಿಸಲಾಗಿದೆ

ರೈಲು ಉರುಳಿ ಇಂಜಿನ್ ಮತ್ತು ೪ ಗಾಡಿಗಳು ನೀರಿನ ಪಾಲು

ಮೊನ್ನೆ ದಿನ ಮಧ್ಯ ರಾತ್ರಿಯಲ್ಲಿ ಗೌಹತಿಗೆ ೩೨೦ ಮೈಲಿ ದೂರದಲ್ಲಿ ಅಸ್ಸಾಂ ರೈಲ್ವೆಯ ನಾಗ್ರಕಟ ಮತ್ತು ಕ್ವಾರ್ಗ್ರಿ ನಿಲ್ದಾಣಗಳ ನಡುವೆ ಅಸ್ಸಾಂ ಎಕ್ಸ್‌ಪ್ರೆಸ್ ರೈಲು ಕಂಬಿ ತಪ್ಪಿ ಇಂಜನ್ನು ಮತ್ತು ಇತರ ನಾಲ್ಕು ಗಾಡಿಗಳು ತಲೆ ಕೆಳಗಾಗಿ ಉರುಳಿ ಅವೆಲ್ಲವೂ ಪ್ರವಾಹದಲ್ಲಿ ಮುಳುಗಿದುವೆಂದು ವರದಿಯಾಗಿದೆ. ಅಪಘಾತದಲ್ಲಿ ಏಳು ಮಂದಿ ಮೃತಪಟ್ಟು, [illegible] ಜನರು ತೀವ್ರ ಗಾಯಗೊಂಡರೆಂದೂ, ನೊಂದವರಿಗೆ ಪರಿಹಾರವನ್ನೊದಗಿಸಲು ಸಿಲಿಗುರಿ ಮತ್ತು ಅಲಿಪುರ ಜಂಕ್ಷನ್‌ಗಳಿಂದ ವಿಶೇಷ ರೈಲುಗಳನ್ನು ಕಳುಹಿಸಲಾಗಿದೆಯೆಂದೂ ಗೊತ್ತಾಗಿದೆ. ಸಮೀಪದಲ್ಲಿರುವ ಟೀ ತೋಟಗಳಲ್ಲಿನ ವೈದ್ಯರು ನೊಂದವರಿಗೆ ಚಿಕಿತ್ಸೆ ನಡೆಸಿದರು

ರೈಲುಗಳ ಘರ್ಷಣೆಯಲ್ಲಿ ೨೦ ಜನರ ಮರಣ

ಪ್ಯಾರಿಸ್ ಮತ್ತು ಸಾರ್ ಬ್ರುಕೆ ನಗರಗಳ ಮಧ್ಯೆ ಓಡಾಡುವ ಎಕ್ಸ್‌ಪ್ರೆಸ್ ಮತ್ತು ಅಂಸ್ಟರ್‌ಡಾಂ ಎಕ್ಸ್‌ಪ್ರೆಸ್ ರೈಲುಗಳಿಗೆ ಮೆಟ್ಸ್ ಜಂಕ್ಷನ್‌ನಲ್ಲಿ ಘರ್ಷಣೆಯಾಗಿ ೨೦ ಜನರು ಮಡಿದರು ೪೦ ಜನರಿಗೆ ಗಾಯವಾಗಿರುತ್ತದೆ

ತಿರುವಾಂಕೂರಿನಲ್ಲಿ ಒಪ್ಪಂದದ ಸೂಚನೆ

ತಿರುವಾಂಕೂರು ಕೊಚ್ಚಿ ಕಾಂಗ್ರೆಸ್ ಬಿಕ್ಕಟ್ಟು ಪರಿಹಾರವಾಗುವ ಬಗ್ಗೆ ಮುಖಂಡರಲ್ಲಿ ಐಕ್ಯತೆಯನ್ನು ಸಾಧಿಸಲು ಸೂಕ್ತ ಮಾರ್ಗವೊಂದು ದೊರೆತಿರುವುದಾಗಿ ಮುಖ್ಯ ಮಂತ್ರಿ ಶ್ರೀ ಸಿ ಕೇಶವನ್‌ರವರು ಹೇಳಿರುತ್ತಾರೆ

ಕೊರಿಯಾ ಯುದ್ಧಕ್ಕೆ ವಿದೇಶಗಳ ಸೈನ್ಯ

ಬೆಲ್ಜಿಯಂ ಹಾಲೆಂಡ್ ಮತ್ತು ಗ್ರೀಸಿನ ಸ್ವಯಂ ಸೇವಕರುಗಳು ಅಮೆರಿಕದ ಸೈನ್ಯ ವಾಹಕ ನೌಕೆಯಲ್ಲಿ ಕೊರಿಯಾಗೆ ಬಂದಿರುತ್ತಾರೆ

ನೇಪಾಳದ ಜೈಲಿನಲ್ಲಿ ಗುಂಡಿನೇಟು

ಪೂರ್ವ ನೇಪಾಳದ ರಾಜಾ ವಿರಜ ಎಂಬಲ್ಲಿನ ಬಂದೀಖಾನೆಯ ಅಧಿಕಾರಿಗಳು ಜೈಲಿನ ನೌಕರರಿಗೆ ನೆನ್ನೆ ಸಂಬಳವನ್ನು ಬಟವಾಡೆ ಮಾಡುತ್ತಿದ್ದಾಗ ಹಲವು ಮಂದಿ ಖೈದಿಗಳು ಗಲಾಟೆ ಮಾಡಿ ಅಧಿಕಾರಿಗಳ ಮೇಲೆ ಕಲ್ಲನ್ನು ಎಸೆದರೆಂದೂ, ಗಲಾಟೆಯನ್ನು ತಹಬಂದಿಗೆ ತರಲು ಗುಂಡುಹಾರಿಸಿದ ಪರಿಣಾಮವಾಗಿ ನಾಲ್ಕು ಮಂದಿ ಖೈದಿಗಳು ಮೃತಪಟ್ಟರೆಂದೂ ವರದಿಯಾಗಿದೆ

ಕೃಷ್ಣಜಯಂತೀ ಮಹೋತ್ಸವ

ರಾಜಧಾನಿಯ ಚೆಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ನೆನ್ನೆಯಿಂದ ಬರುವ ತಿಂಗಳು ೪ರ ವರೆಗೂ ಕೃಷ್ಣಜಯಂತಿ ಉತ್ಸವದ ಅಂಗವಾದ ಸಂಗೀತ, ಹರಿಕಥೆ, ಮುಂತಾದ ಕಾರ್ಯಕ್ರಮಗಳು ನಡೆಯುವುವು ಪ್ರತಿ ಸಂಜೆ ೪ ರಿಂದ ೫ರ ವರೆಗೆ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ರಾಮಾಯಣ ಪುರಾಣವೂ, ಸಂಜೆ ೬|| ರಿಂದ ೭|| ವರೆಗೂ ಮೀಮಾಂಸ ವಿದ್ವಾನ್ ಇ ಎಸ್ ವರದಾಚಾರ್ಯರಿಂದ ತಮಿಳಿನಲ್ಲಿ ಭಾಗವತ ಪುರಾಣವೂ ನಡೆಯುವುವು ಪ್ರತಿ ಸಂಜೆ ೭|| ಯಿಂದ ೯|| ವರೆಗೆ ಸಂಗೀತ, ವೀಣೆ, ಯಕ್ಷಗಾನ ಮತ್ತು ಹರಿಕಥೆಗಳು ಏರ್ಪಾಡಾಗಿವೆ

ಕಾಲರಾದಿಂದ ೧ ವಾರದಲ್ಲಿ ೯೪ ಜನರ ಸಾವು

ಕಳೆದ ೧೮ನೇ ತಾ||ಗೆ ಮುಗಿದ ಒಂದು ವಾರದಲ್ಲಿ ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ೯೪ ಜನರು ಕಾಲರಾ ವ್ಯಾಧಿಗೆ ತುತ್ತಾಗಿರುವರು

ಗುರುದೇವಾ ಹಾಲ್
ಗೌರಿಹಬ್ಬದ ಸಲುವಾಗಿ
ರಿಯಾಯಿತಿ ಬೆಲೆ
ಕ್ರೇಪ್, ಜಾರ್ಜೆಟ್, ಧರ್ಮಾವರಂ, ಆರಣಿ, ಕಂಚಿ ರೇಷ್ಮೆ ಸೀರೆಗಳು
ದೊರೆಯುತ್ತವೆ
ಶಿವರಾಂಪೇಟೆ, ಮೈಸೂರು

ಗುಂಡಿಕ್ಕಿ ದರೋಡೆಕೋರನ ಕೊಲೆ

ಬೊಂಬಾಯಿನ ಅಂಗಡಿಯೊಂದರಲ್ಲಿ ದರೋಡೆ ನಡೆಸಿದನೆಂಬ ಅಪಾದನೆ ಮೇಲೆ ಮೊನ್ನೆ ದಿನ ಪೊಲೀಸ್ ಅಧಿಕಾರಿಗಳು ದರೋಡೆಕೋರನನ್ನು ಬಂಧಿಸಲು ಮೂರು ಅಂತಸ್ತಿನ ಅವನ ಮನೆಗೆ ಹೋದಾಗ ಅವನು ಶಸ್ತ್ರ ಸಜ್ಜಿತನಾಗಿ ಅಧಿಕಾರಿಗಳ ಮೇಲೆ ಬೀಳಲು ಬರಲು ಅವರು ಗುಂಡು ಹಾರಿಸಿದರೆಂದೂ, ಇದರ ಪರಿಣಾಮವಾಗಿ ಅವನು ಮೂರನೇ ಅಂತಸ್ತಿನಿಂದ ಕೆಳಗೆ ಬಿದ್ದು ಮೃತಪಟ್ಟನೆಂದೂ ವರದಿಯಾಗಿದೆ

ರಮಾಬಾಯಿಯವರ ನಿಧನ

ದಿವಂಗತ ಬಾಬು ಸುಭಾನಂದ್‌ರವರ ಪತ್ನಿ ಶ್ರೀಮತಿ ರಮಾಬಾಯಿಯವರು ಕಾಯಿಲೆಯಿಂದ ನರಳುತ್ತಿದ್ದು ಶನಿವಾರ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಮತಿಯವರು ಹಿಂದಿನಿಂದಲೂ ಕಾಂಗ್ರೆಸ್ ಮತ್ತು ಹಿಂದಿ ಭಾಷಾ ಪ್ರೇಮಿಗಳಾಗಿದ್ದುದಲ್ಲದೇ, ಅನೇಕ ದಾನ ಧರ್ಮಗಳನ್ನು ಮಾಡಿರುತ್ತಾರೆ ಅವರ ಆತ್ಮಕ್ಕೆ ಶಾಂತಿಯು ದೊರೆಯಲೆಂದು ನಾವು ಹಾರೈಸುತ್ತೇವೆ

ಚಾಮೂ ದಳದ ಉಪಾಧ್ಯಾಯರ ಸಂಘ

ರಾಜಧಾನಿಯ ಚಾಮೂ ದಳದ ಉಪಾಧ್ಯಾಯರ ಸಂಘದ ಕಾರ್ಯಕಾರಿ ಸಮಿತಿಯು ನಾಳೆ ಸಂಜೆ ೫|| ಘಂಟೆಗೆ ಡಿ ಬನುಮಯ್ಯನವರ ಹೈಸ್ಕೂಲಿನಲ್ಲಿ ಸೇರಿ, ವರ್ಷದ ಕಾರ್ಯಕ್ರಮ, ದಸರಾ ಪ್ರದರ್ಶನದಲ್ಲಿ ಸ್ಕೌಟುಗಳ ಸೇವೆ ಪ್ರಾದೇಶಿಕ ರ್‍ಯಾಲಿ ಮುಂತಾದ ವಿಷಯಗಳನ್ನು ಚರ್ಚಿಸುವುದು.

ರಾಜಕಮಲ್, ಮೈಸೂರು
24-8-51 ರಿಂದ 3ನೇ ವಾರ
ಜಗನ್ಮೋಹಿನಿ

Edited, printed and published by A R Nagarajan, at Sadhvi Press Dr. Subbiah Road, Mysore

ಪ್ರವಾಹಗಳಿಂದ ಹಾನಿ

ಹಿಮಾಲಯದಲ್ಲಿ ಭಾರಿ ಮಳೆಯಾಗುತ್ತಿರುವ ಪರಿಣಾಮವಾಗಿ ಬಿಯಾಸ್ ನದಿಯಲ್ಲಿ ನೀರು ಹೆಚ್ಚಿ ಜಲಂಧರಿನ ಮೂಲಕ ಹೋಗುವ ಭಾರಿ ರಸ್ತೆಗಳಲ್ಲೆಲ್ಲಾ ನೀರು ತುಂಬಿರುತ್ತದೆ. ಇಷ್ಟಾದರೂ ಊರಿನ ಸುತ್ತಮುತ್ತಲ ಪ್ರದೇಶದಲ್ಲಿ ಮಳೆಯಾಗಿಲ್ಲ ಕಪೂರ್ತಲಾ ಬಳಿ ಹರಿಯುವ ನದಿಯು ಅನೇಕ ಹಳ್ಳಿಗಳನ್ನು ನುಗ್ಗಿ ಅವು ಮುಳುಗಿರುತ್ತವೆ.

ಅರಗು ಮತ್ತು ಬಣ್ಣದ ಕಾರ್ಖಾನೆ ವ್ಯವಹಾರ

ಈದಿಗಾ ಬಡಾವಣೆಯಲ್ಲಿರುವ ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯು ಕೆಲವು ದಿನಗಳಿಂದ ಮುಚ್ಚಿರುವುದರ ಸಂಬಂಧವಾಗಿ ಐ ಎನ್ ಟಿ ಯು ಸಿ ಯ ಮೈಸೂರು ಶಾಖೆ ಕಾರ್ಯದರ್ಶಿ ಶ್ರೀ ಎ ರಾಮಣ್ಣನವರು ಹೇಳಿಕೆಯನ್ನಿತ್ತು ಆಡಳಿತ ಮಂಡಲಿಯ ನ್ಯಾಯ ಬಾಹಿರ ವರ್ತನೆಯ ಬಗ್ಗೆ ಪ್ರತಿಪಾದಿಸಿ, ಪುನಃ ಕೆಲಸವು ಆರಂಭವಾಗುವಂತೆ ಸರ್ಕಾರದವರು ಆಜ್ಞೆ ಮಾಡಬೇಕೆಂದು ಕೋರಿರುತ್ತಾರೆ

ವಿವಾಹ ಮಹೋತ್ಸವ

ರಾಜಧಾನಿಯ ವಕೀಲರಾದ ಶ್ರೀ ಎಸ್. ಕೆ ಅನಂತ ಶೆಟ್ಟರು ತಮ್ಮ ಕುಮಾರಿ ಸೌ|| ಭಾರತಾಂಬ ಎಂಬ ಕನ್ಯೆಯನ್ನು ನಂಜನಗೂಡಿನ ಶ್ರೀ ಚಿದಂಬರ ಶೆಟ್ಟರ ಮಗ ಶ್ರೀ ಹೆಚ್ ಸಿ ವೆಂಕಟ ಕೃಷ್ಣ ಶೆಟ್ಟಿಯವರಿಗೆ ಕೊಟ್ಟು ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

|| ಶ್ರೀ ||
ಗಣೇಶಾ ಟಾಕೀಸ್
29-8-51 ರಿಂದ 3 ದಿನಗಳು ಮಾತ್ರ
ಪ್ರತಿದಿನ 3 ಆಟಗಳು
ಮಂಗಯೋರ್ ಕರಸಿ
ಪಿ ಯು ಚಿನ್ನಪ್ಪ ಅಂಜಲೀದೇವಿ, ಕೃಷ್ಣಕುಮಾರಿ ಮತ್ತು ಮಧುರಂ ಅಭಿನಯಿಸಿರುವ ತಮಿಳು ಚಿತ್ರ

ಗೌರಿ ಹಬ್ಬದ ಸ್ಪೆಷಲ್ • 5 ಮತ್ತು 8 ಗಜಗಳಲ್ಲಿ ಸೇಲಂ ಮಧುರೆ ಕೊಯಮುತ್ತೂರು
ನವೀನ ಸರ್ವ ಮಾದರಿ ಸೀರೆಗಳು ಮತ್ತು ಮೈಸೂರು ರೇಷ್ಮೆ ಸೀರೆಗಳು.
ಬೇಕಾದರೆ ಇಂದೇ ಭೇಟಿ ಕೊಡಿರಿ
M. P. ನರಸಿಂಹಯ್ಯ ಜವಳಿ ಅಂಗಡಿ, ದೊಡ್ಡಪೇಟೆ ಮೈಸೂರು

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ.,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ನಾಟಕ ರತ್ನ ಪೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು
ರತ್ನಾವಳಿ ಥಿಯೇಟರಿನಲ್ಲಿ
ಅಮೋಘ ಪ್ರಾರಂಭ ಅಕ್ಕಮಹಾದೇವಿ 22.8.51 ರಿಂದ
ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ
ರಾತ್ರಿ 9-45 ಘಂಟೆಗೆ, ಉಳಿದ ದಿನಗಳಲ್ಲಿ ಮ್ಯಾಟಿನಿ 6-45 ಕ್ಕೆ

ಗೌರಿ ಹಬ್ಬಕ್ಕಾಗಿ ★ ಸಾವಿರಾರು ಮಾದರಿ ರೇಷ್ಮೆ ಸೀರೆಗಳು ಮತ್ತು ನೂಲಿನ ಸೀರೆಗಳು ಬಂದಿವೆ ನೇರವಾಗಿ ಬಂದು ಕೊಳ್ಳಿರಿ
D. L. ನರಸಿಂಹಯ್ಯ & ಬ್ರದರ್ಸ್
ಜವಳಿ ಅಂಗಡಿ ಬೊಂಬಾಯಿ ಆನಂದ ಭವನ ಹೋಟೆಲ್ ಪಕ್ಕ ಮೈಸೂರು

ನೆನಪಿರಲಿ ! ಬೆಲೆ ಸುಲಭ !!
ಗೌರಿ ಹಬ್ಬಕ್ಕಾಗಿ ಬಂದಿರುವ ಹೊಸ ಮಾದರಿ ನೂಲಿನ ಮತ್ತು A-S ಸಿಲ್ಕು ಸೀರೆಗಳು
5, 6, 7, 8, 9, ಗಜಗಳಲ್ಲಿ ದೊರೆಯುತ್ತವೆ
ದೇವಾಂಗ ಜವಳಿ ನಿವಾಸ್
ವಿ ವಿ ಮಾರ್ಕೆಟ್ ರೋಡ್, ಹಳೇ ಅಗ್ರಹಾರ, ಮೈಸೂರು

ರಿಜಿ ನಂ 792 ॥ ಸಂಪುಟ ಮೂರರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಮಂಗಳವಾರ ೨೮-೮-೫೮ [ಸಂಚಿಕೆ ೫೯

ಕಾಂಗ್ರೆಸ್ ಬಿಕ್ಕಟ್ಟಿನ ಪರಿಹಾರದ ಸೂಚನೆ

ಪಾಕಿಸ್ತಾನದ ಆಕ್ರಮಣವನ್ನೆದುರಿಸಲು ಭಾರತದಕ್ರಮ

ರಾಜಕೀಯ ಸಮ್ಮೇಳನದ ಬೆಂಬಲ

ದಾವಣಗೆರೆ ೨೭

ಪಾಕಿಸ್ತಾನವು ಕಾಶ್ಮೀರ ಸಮಸ್ಯೆಯ ಸಂಬಂಧವಾಗಿ ಅನುಸರಿಸುತ್ತಿರುವ ಆಕ್ರಮಣ ನೀತಿಯನ್ನು ಎದುರಿಸಲು ಭಾರತ ಸರ್ಕಾರದವರು ಕೈಗೊಂಡಿರುವ ಎ ಕ್ರಮಗಳಿಗೂ ಬೆಂಬಲ ನೀಡುವ ನಿರ್ಣಯವನ್ನು ನೆನ್ನೆ ಮತ್ತು ಈ ದಿನ ಇಲ್ಲಿ ಸೇರಿದ್ದ ಸಂಸ್ಥಾನದ ರಾಜಕೀಯ ಸಮ್ಮೇಳನವು ಅಂಗೀಕರಿಸಿರುತ್ತದೆ ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ನಿರ್ಣಯವನ್ನು ಮಂಡಿಸಿದ ನಂತರ ಹಲವು ಸದಸ್ಯರು ಮಾತನಾಡಿದರು

ವಿದ್ಯಾಭ್ಯಾಸದಲ್ಲೂ ನ್ಯಾಯಾಂಗ ಪದ್ಧತಿಯಲ್ಲೂ ಭಾರತೀಯ ಸ್ಥಿತಿಗತಿಗಳಿಗನುಸಾರವಾದ ಸುಧಾರಣೆಗಳನ್ನು ತರಬೇಕೆಂದೂ, ವಿವಿಧ ಸಂಸ್ಥಾನಗಳಿಗೆ ಸಮಾನ ಸ್ಥಾನ ಮಾನ ದೊರಕಿಸಬೇಕೆಂದೂ ವಿದೇಶ ವಸಾಹತುಗಳನ್ನು ಭಾರತದಲ್ಲಿ ಐಕ್ಯಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದೂ, ಸರ್ಕಾರದಲ್ಲೂ ಮತ್ತು ಕಾಂಗ್ರೆಸ್ ಸಂಸ್ಥೆಯಲ್ಲೂ ಆಡಳಿತ ವಿಕೇಂದ್ರೀಕರಣ ಮಾಡಬೇಕೆಂದೂ ಕೋರುವ ನಿರ್ಣಯಗಳು ಅಂಗೀಕೃತವಾದುವು

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಮಾತನಾಡಿ ಕಳೆದ ನಾಲ್ಕು ವರ್ಷಗಳಿಂದ ಕಾಂಗ್ರೆಸ್ ಸರ್ಕಾರವು ಸಾಧಿಸಿದ ಪ್ರಗತಿಯನ್ನು ವಿವರಿಸಿ, ಮುಂದಿನ ಮಹಾ ಚುನಾವಣೆಯ ಫಲಿತಾಂಶ ಭಾರತದ ಭವಿಷ್ಯವನ್ನು ನಿರ್ಧರಿಸುವುದೆಂದೂ, ದೇಶದ ಮುಂದಿರುವ ಸಮಸ್ಯೆಗಳನ್ನು ಎದುರಿಸಲು ಕಾಂಗ್ರೆಸ್ಸೊಂದೇ ಸಮರ್ಥವಾದ ಪಕ್ಷವೆಂದೂ ಅವರು ಹೇಳಿದರು

ಅಧ್ಯಕ್ಷರು ಮಾತನಾಡಿ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತರಬೇತು ಹೊಂದಲು ಒಂದು ಶಾಲೆಯನ್ನು ತೆರೆಯುವ ಆವಶ್ಯಕತೆಯನ್ನು ಸೂಚಿಸಿದರು ನಂತರ ಸಮ್ಮೇಳನವು ಮುಕ್ತಾಯವಾಯಿತು.

ಪರ್ಷಿಯಾಕ್ಕೆ ಬ್ರಿಟಿಷ್ ಸೈನ್ಯ

ಪರ್ಷಿಯಾಕ್ಕೆ ಬ್ರಿಟಿಷ್ ಸೈನ್ಯವನ್ನು ಸಾಗಿಸಲು ಖಾಸಗಿ ವಿಮಾನಗಳನ್ನು ಬ್ರಿಟನ್ ಸರ್ಕಾರದವರು ಸಿದ್ಧಗೊಳಿಸಿರುವುದಾಗಿ ಲಂಡನ್ನಿನ ಡೈಲಿ ಗ್ರಾಫಿಕ್ ಪತ್ರಿಕೆಯು ವರದಿ ಮಾಡಿದೆ ಪರ್ಷಿಯಾ ತೈಲ ಬಿಕ್ಕಟ್ಟಿನ ಬಗ್ಗೆ ಪರ್ಷಿಯಾದಲ್ಲಿನ ಅನುಮಾನದ ರಾಯಭಾರಿ ಹೆನ್ರಿ ಗ್ರೇಡಿಯವರು ಮಧ್ಯಸ್ಥಿಕೆ ವಹಿಸಬಹುದೆಂದು ಹೇಳಲಾಗಿದೆ.

ಅಮೆರಿಕದಲ್ಲಿ ವರ್ಷಕ್ಕೆ ೪೫೦೦ ಆಟಂ ಬಾಂಬು ಶೇಖರಣೆ

ಪ್ರತಿ ವರ್ಷವೂ ಅಮೆರಿಕದಲ್ಲಿ ೪೫೦೦ ಆಟಂ ಬಾಂಬುಗಳನ್ನು ಶೇಖರಿಸುತ್ತಿರುವುದಾಗಿ ಅಲ್ಲಿನ ಒಂದು ಮಾಸ ಪತ್ರಿಕೆ ತಿಳಿಸಿರುತ್ತದೆ. ಬರುವ ಎರಡು ಮೂರು ವರ್ಷಗಳಲ್ಲಿ ಇವರ ಸಂಖ್ಯೆ ಇನ್ನಷ್ಟು ತಯಾರಾಗುವುದೆಂದು ಊಹಿಸಲಾಗಿದೆ

ಸೆಷನ್ಸ್ ಕೋರ್ಟಿನಲ್ಲಿ ನಂದಿಬಸಪ್ಪನವರ ಶಿಕ್ಷೆರದ್ದು

ಮೈಸೂರು ೨೭

ಸಹದಾರಿ ಇಲ್ಲದೆ ಛತ್ರವ ವ್ಯವಸ್ಥೆ ಮಾಡಿ, ಸುಳ್ಳು ಹೇಳಿಕೆ ಕೊಟ್ಟರೆಂಬ ಆಪಾದನೆ ಮೇಲೆ ನಗರ ನ್ಯಾಯಾಧಿಪರು ಧರ್ಮರತ್ನಾಕರ ಶ್ರೀ ನಂದಿಬಸಪ್ಪನವರಿಗೆ ವಿಧಿಸಿದ್ದ ೭ ದಿನಗಳ ಸಾದಾ ಸಜಾ ಮತ್ತು ೧೦೦೦ ರೂಗಳ ಜುಲ್ಮಾನೆಯನ್ನು ಸೆಷನ್ಸ್ ನ್ಯಾಯಾಧಿಪತಿಗಳಾದ ಶ್ರೀ ಕೆ ಸಿ ಲಿಂಗಯ್ಯನವರು ರದ್ದು ಮಾಡಿ ಕಳೆದ ಶನಿವಾರ ತೀರ್ಪಿತ್ತರು ಕೆಳಗಿನ ಕೋರ್ಟಿನ ತೀರ್ಪಿನ ಮೇಲೆ ಶ್ರೀ ನಂದಿಬಸಪ್ಪನವರು ಅಪೀಲು ಮಾಡಿದ್ದರು ಆಪಾದಿತರ ಪರವಾಗಿ ಅಡ್ವೊಕೇಟ್ ಶ್ರೀ ಎಸ್ ರಂಗರಾಮಯ್ಯನವರೂ, ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರವರೂ ವಕಾಲತ್ತು ವಹಿಸಿದ್ದರು

ಎಸ್. ಚೆನ್ನಯ್ಯನವರು ವಾಪಸು

ವಿದೇಶ ಪ್ರವಾಸ ಕೈಗೊಂಡಿರುವ ಮೈಸೂರಿನ ಕಾಂಗ್ರೆಸ್ ಮುಖಂಡರಾದ ಶ್ರೀ ಎಸ್ ಚೆನ್ನಯ್ಯನವರು ಈಗ ನಾರ್ವೆಯಲ್ಲಿರುತ್ತಾರೆ ಅವರು ಬರುವ ತಿಂಗಳು ಮೊದಲಲ್ಲೇ ಭಾರತಕ್ಕೆ ಮೈಸೂರಿಗೆ ಹಿಂತಿರುಗುವರೆಂದು ತಿಳಿದು ಬಂದಿದೆ.

ಭಾರತದ ಜನ ಸಂಖ್ಯೆ ೩೬॥ ಆಳ ರಷ್ಟು ಹೆಚ್ಚಿದೆ

ಕಳೆದ ಮಾರ್ಚಿಯಲ್ಲಿ ತೆಗೆದುಕೊಂಡ ಜನಗಣತಿಯ ಲೆಕ್ಕದ ಪ್ರಕಾರ ಭಾರತದಲ್ಲಿ ಜನ ಸಂಖ್ಯೆಯು ೧೦ ವರ್ಷದ ಹಿಂದೆ ಇದ್ದುದಕ್ಕಿಂತ ಈಗ ೩೬॥ ಕೋಟಿಯಷ್ಟು ಹೆಚ್ಚಾಗಿರುವುದಾಗಿ ಗೊತ್ತಾಗಿದೆ ಕಲ್ಕತ್ತಾ, ಬೊಂಬಾಯಿ, ದೆಹಲಿ ಮತ್ತು ಮದ್ರಾಸುಗಳಲ್ಲಿ ಜನ ಸಂಖ್ಯೆಯು ವಿಪರೀತವಾಗಿದೆ ದೆಹಲಿಯಲ್ಲಿ ೧೦॥ ಲಕ್ಷದಷ್ಟು ಹೆಚ್ಚು ಜನರಿರುತ್ತಾರೆ ತಿರುವಾಂಕೂರು ಕೊಚ್ಚಿ, ಬಿಕನೇರ್ ಮತ್ತು ಪೆಪ್ಸು ಸೌರಾಷ್ಟ್ರಗಳಲ್ಲಿ ಮಾತ್ರ ಅದು ಕಡಿಮೆಯಾಗಿದೆ

ಬೆಂಗಳೂರಿನಲ್ಲಿ ಕೃಪಲಾನಿ

ಅಖಿಲ ಭಾರತ ಕಿಸಾನ್ ಮಜದೂರ್ ಪ್ರಜಾಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರು ಬೆಂಗಳೂರಿಗೆ ಆಗಮಿಸಿರುತ್ತಾರೆ

ಕಾಂಗ್ರೆಸ್ ಬಿಕ್ಕಟ್ಟಿನ ಪರಿಹಾರದ ಸೂಚನೆ

ನೆಹರೂ ಟಂಡನ್ ಭಿನ್ನಾಭಿಪ್ರಾಯದಿಂದ ಉಂಟಾಗಿರುವ ಬಿಕ್ಕಟ್ಟು ಪರಿಹಾರವಾಗುವ ಸೂಚನೆಗಳು ಕಂಡು ಬರುತ್ತಿವೆ ಕಾರ್ಯಕಾರಿ ಸಮಿತಿಯನ್ನು ಪೂರ್ಣವಾಗಿ ಪುನರ್ರಚಿಸಲು ಟಂಡನ್ನರು ವಿರೋಧಿಸುವವರಾದರೂ ಬಹುಮತದ ನಿರ್ಣಯವನ್ನು ಒಪ್ಪಲು ಅವರು ಸಿದ್ಧರಿರುವರೆಂದು ಹೇಳಲಾಗಿದೆ ಈ ಮಧ್ಯೆ ನೆಹರೂರವರು ತಮ್ಮ ರಾಜೀನಾಮೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೋರಲಾಗುತ್ತಿದೆ ಪಂತ್ ಮತ್ತು ತಮಿಳುನಾಡು ಕಾಂಗ್ರೆಸ್ಸಿನವರು ವಿವಾದದ ಒಪ್ಪಂದದ ಹೊಣೆ ತರುವ ಪರಿಹಾರಕ್ಕೆ ಬೆಂಬಲ ನೀಡಲು ಸಿದ್ಧರಾಗಿರುತ್ತಾರೆ

ಜಪಾನಿನ ಒಪ್ಪಂದ ಸಮ್ಮೇಳನಕ್ಕೆ ಭಾರತವು ಹೋಗದಿರಲು ಕಾರಣ

ಫಾರ್ಮೋಸಾ ದ್ವೀಪವನ್ನು ಚೀನಾಕ್ಕೆ ಒಪ್ಪಿಸಬೇಕೆಂದೂ ರ್ಯುಕ್ಯು ದ್ವೀಪಗಳನ್ನು ಜಪಾನಿನ ರಾಜ್ಯ ಒಪ್ಪಂದದ ಪರತ್ತಿಗೆ ಸೇರಿಸಬೇಕೆಂದೂ ಮೊದಲಿನಿಂದಲೂ ಭಾರತವು ಕೋರುತ್ತಿರುವುದಾದರೂ ಅದನ್ನು ಕರಡಿನ ಪ್ರತಿಯಲ್ಲಿ ಬಿಟ್ಟುಬಿಡಲಾಗಿರುವುದರಿಂದ ಭಾರತವು ಜಪಾನ್ ಶಾಂತಿ ಒಪ್ಪಂದದ ಸಂಬಂಧವಾಗಿ ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ನೆನ್ನೆ ಪಾರ್ಲಿಮೆಂಟಿನಲ್ಲಿ ಪಂಡಿತ ನೆಹರೂರವರು ತಿಳಿಸಿದಾಗ ಸಭೆ ಅದನ್ನು ಅನುಮೋದಿಸಿತು ಆ ದ್ವೀಪದ ಭವಿಷ್ಯದ ಬಗ್ಗೆ ಸಭ್ಯವಲ್ಲಿ ಒಂದು ಅಂತಿಮ ನಿರ್ಧಾರಕ್ಕೆ ಬರುವುದು ಮಿತ್ರ ರಾಷ್ಟ್ರಗಳಿಗೆ ಸಾಧ್ಯವಿಲ್ಲ ನಂಮ ಅನುಮತಿ ಸರ್ಕಾರವು ಭಾರತಕ್ಕೆ ತಿಳಿಸಿರುತ್ತದೆ

ಪತ್ರಿಕೆಗಳ ಪ್ರದರ್ಶನ

ಬರುವ ಅಕ್ಟೋಬರ್ ೧ರಿಂದ ೧೭ರವರೆಗೆ ನಡೆಯುವ ನಸರಾ ಹಬ್ಬದ ಸಮಯದಲ್ಲಿ ಜನರಲ್ ಸ್ಟೋರಿನಲ್ಲಿ ಭಾರತದ ನಾನಾ ಪತ್ರಿಕೆಗಳನ್ನು ಉಚಿತವಾಗಿ ಪ್ರದರ್ಶಿಸಲು ಅವಕಾಶವನ್ನು ಕಲ್ಪಿಸಲಾಗಿದೆ

ಈ ವರ್ಷ ಭಾರತದಲ್ಲಿ ೬೦ ಕೋಟಿ ಪೌಂಡುಗಳಷ್ಟು ಚಹಾ ಉತ್ಪತ್ತಿಯಾಗಿರುವುದೆಂದು ಗೊತ್ತಾಗಿದೆ

ಒಂದು ತಿಂಗಳ ಶಿಶುವನ್ನು ಹೆಬ್ಬಾವು ನುಂಗಿದ ಪ್ರಸಂಗ

ಕುಂಭಕೋಣದ ದೇವಸ್ಥಾನ ಕೋಪಿನಲ್ಲಿ ವಾಸವಾಗಿರುವ ಕುರುಬರ ಮನೆಯೊಂದಕ್ಕೆ ಕಳೆದ ಬುಧವಾರ ಒಂದು ಹೆಬ್ಬಾವು ನುಗ್ಗಿ, ಅಲ್ಲಿದ್ದ ಒಂದು ತಿಂಗಳ ಶಿಶುವನ್ನು ನುಂಗಿತೆಂದು ವರದಿಯಾಗಿದೆ. ಹೊರಗೆ ಹೋಗಿದ್ದ ತಾಯಿತಂದೆಗಳು ವಾಪಸು ಬಂದು ನೋಡುವಾಗ, ಮಗುವಿನ ಕಾಲುಗಳನ್ನು ಮಾತ್ರ ಆ ಮನುಂಗದೇ ಇದ್ದುದು ಕಂಡುಬಂದಿತು ಹಾವನ್ನು ಹೊಡೆದುಹಾಕಿ ನೋಡಲಾಗಿ ಮಗುವು ಮೃತಪಟ್ಟದ್ದು ಗೊತ್ತಾಯಿತು.

ವಿಮಾನದ ಮೇಲೆ ಮತ್ತೊಂದು ವಿಮಾನ ಕುಳಿತಿತು

ಮಧ್ಯ ಪ್ರದೇಶದ ಹಾರಾಟದ ಕ್ಲಬ್ಬಿಗ ಸೇರಿದ ಎರಡು ವೈಮಾನಿಕ ವಿಮಾನಗಳ ಪೈಕಿ ಒಂದು ನೆನ್ನೆ ಮತ್ತೊಂದರ ಮೇಲೆ ಕುಳಿತುಕೊಂಡು ಅವರ ಮುಖ ಭಾಗದೊಳಗೆ ಸಿಕ್ಕಿಕೊಂಡಿತು ಕೆಳಗಿನ ವಿಮಾನಕ್ಕೆ ತುಂಬಾ ಜಖಂ ಆಗಿದೆ. ಯಾರಿಗೂ ಪ್ರಾಣ ನಷ್ಟವಾಗಿಲ್ಲ

ಐದು ವರ್ಷದ ಬಾಲಕನಿಂದ ವೇದ ಮತ್ತು ಗೀತಾ ಪಠಣ

ಅಲಿಘಡದಲ್ಲಿ ನರೇಶ್ ಕುಮಾರ್ ಎಂಬ ೫ ವರ್ಷದ ಬಾಲಕನು ಗೀತೆ ಮತ್ತು ವೇದವನ್ನು ಸ್ಪಷ್ಟವಾಗಿ ಯಾವ ತಪ್ಪಿಲ್ಲದೆ ಓದುವ ಚಾತುರ್ಯವನ್ನು ವ್ಯಕ್ತಪಡಿಸಿ ಜನರನ್ನು ಬೆರಗುಗೊಳಿಸಿರುತ್ತಾನೆ ಇಂಗ್ಲಿಷ್ ಭಾಷೆಯೂ ಅವನಿಗ ಬರುತ್ತದೆ ಅವರ ಇವುಗಳಲ್ಲಾ ಪುರದ ಜನರನ್ನೂ ತನ್ನ ಹೇಳಲಾರನು ಉತ್ತರ ಪ್ರದೇಶದ ಗೌರ್ನರರು ಅವನ ಚಾತುರ್ಯಕ್ಕೆ ಮೆಚ್ಚಿ ಅವನನ್ನು ಮನಸ್ಪೂರ್ತಿ ರೀತ್ಯಾ ಪರೀಕ್ಷಿಸಿ, ಅವನ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡು ಮಾಡಿರುತ್ತಾರೆ

ಶಾರದಾ ವಿಲಾಸ ಕಾಲೇಜು ಸಂಘದಲ್ಲಿ ಅಕ್ರಮ ಚುನಾವಣೆಯೇ ?

ಶಾರದಾ ವಿಲಾಸ ಕಾಲೇಜಿನ ಸಂಘಕ್ಕೆ ಮೊನ್ನೆ ನಡೆದ ಚುನಾವಣೆಯಲ್ಲಿ ಕಾಲೇಜು ಅಧಿಕಾರಿಗಳು ಓಟು ಕೊಡುವ ಕ್ಷೇತ್ರಗಳಲ್ಲಿ ಸರಿಯಾದ ರೀತಿಯಲ್ಲಿ ವರ್ತಿಸಿಲ್ಲವೆಂದೂ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಒಲವಂತ ಪಡಿಸಿ ಹಲವು ಸ್ಪರ್ಧಿಗಳಿಗೆ ಮಾತ್ರ ಓಟು ಕೊಡುವಂತೆ ಒತ್ತಾಯ ಪಡಿಸಲಾಯಿತೆಂದೂ, ಆದ್ದರಿಂದ ಪುನಃ ಚುನಾವಣೆಯು ನಡೆಯುವಂತೆ ಸೂಕ್ತವಾದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದೂ ೧೦ಂದ ವಿದ್ಯಾರ್ಥಿಗಳು ಕೋರಿ ಪತ್ರ ಬರೆದಿರುತ್ತಾರೆ

ಸಂಗೀತ

ಚೆಲುವಾಂಬಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಈ ಸಂಜೆ ೬॥ ಗಂಟೆಗೆ ವಿದ್ವಾನ್ ಬಿ ಕೆ ಪದ್ಮನಾಭರಾವ್‌ರವರ ಸಂಗೀತವು ಶ್ರೀ ಟಿ ಎಸ್ ತಾತಾಚಾರ್ಯರವರ ಪಿಟೀಲು ಮತ್ತು ಸಂ॥ ಠಿ ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗಗಳೊಡನೆ ನಡೆಯುವುದು.

ವಿಮಾನ ಧಾಳಿ ಶಿಕ್ಷಣಕ್ರಮಕ್ಕೆ ಬಾಂಬು ಹಾಕಲಾಯಿತು

ಲಾಹೋರಿನಲ್ಲಿ ವಿಮಾನ ಧಾಳಿ ಶಿಕ್ಷಣ ಕ್ರಮ, ನಗರದ ಗರಿಷ್ಠ [illegible] ಮುಂಜಾಗ್ರತಾ ಕ್ರಮಗಳನ್ನು ನಡೆಸಲಾಗುತ್ತಿದ್ದ ಪರೀಕ್ಷಾರ್ಥವಾಗಿ [illegible] ನಗರ ಮೇಲೆ ವಿಮಾನದ ಬಾಂಬುಗಳನ್ನು ಹಾಕಿ, ಹಲವರಿಗೆ ಗಾಯವಾದವರಿಂದ ಅಂತವರಿಗೆ ಚಿಕಿತ್ಸೆಯನ್ನು ನಡೆಸಲಾಗಿದೆ

ಜಾತ್ಯಾತೀತ ರಾಷ್ಟ್ರದಲ್ಲಿ ಷಿಯಾಗಳ ಭಕ್ತಿ

ಕಾಶ್ಮೀರದಲ್ಲಿರುವ ಜನರು ಅವರ [illegible] ಷಿಯಾಗಳು ಜಾತ್ಯಾತೀತ ರಾಷ್ಟ್ರ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವುದೆಂದು ಸಾರಬೇಕೆಂದು [illegible] ಷಿಯಾ ಸಂಘದ ಸಮ್ಮೇಳನವು ಲಕ್ನೋದಲ್ಲಿ [illegible] ತೀರ್ಮಾನಿಸಿರುತ್ತದೆ. ಪಂಡಿತ ನೆಹರೂರವರಲ್ಲಿ ಪೂರ್ಣ ವಿಶ್ವಾಸವನ್ನು ಸಮ್ಮೇಳನವು ವ್ಯಕ್ತಪಡಿಸಿರುತ್ತದೆ

ಜಾಡರ್ಾನಿನ ಹೊಸ ದೊರೆ

ಕೊಲೆಯಾದ ಜೋರ್ಡಾನಿನ ದೊರೆ ಅಬ್ದುಲ್ಲಾರವರ ಸ್ಥಾನದಲ್ಲಿ ಅವರ [illegible] ಯ ಮಗ ಅಮೀರ್ ತಲಾಲ್‌ರವರ ಸಿಂಹಾಸನವನ್ನು ಏರುವರೆಂದು [illegible] ಲಾಗಿದೆ.

ಉಪ್ಪಿನಕೋಳಿ ಕೆರೆಯ ಪರಿಶೀಲನೆ

ಯಳಂದೂರು ತಾಲ್ಲೂಕು ಉಪ್ಪಿನಕೋಳಿ ಕೆರೆಯನ್ನು ಪರಿಶೀಲಿಸಲು ಕಳೆದ ವಾರ ಶ್ರೀ [illegible] ಎಕ್ಸಿಕ್ಯೂಟಿವ್ ಎಂಜಿನಿಯರ್, ತಾಲ್ಲೂಕು ಅಸಿಸ್ಟೆಂಟ್ ಎಂಜಿನಿಯರ್ ಮುಂತಾದ ಅಧಿಕಾರಿಗಳೂ, ಸಾರ್ವಜನಿಕ ಮುಖಂಡರಾದ ಶ್ರೀ [illegible] ಗಣ್ಣ ಮತ್ತು ಶ್ರೀ [illegible] ರವರೂ ಅಲ್ಲಿಗೆ ಹೋಗಿದ್ದರು. ಕೆರೆಯ ಏರಿ ಕೆಲಸವು ಈಗ ಪೂರೈಸಿದೆ. ಇದಕ್ಕೆ ಸುಮಾರು [illegible] ಸಾವಿರ ರೂಪಾಯಿಗಳ ವೆಚ್ಚವಾಗುವುದೆಂದು ಅಂದಾಜಾಗಿದೆ

ಹರಿಕಥೆ

ರಾಜಧಾನಿಯ [illegible] ರಸ್ತೆಯ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷ ಪ್ರಯುಕ್ತ ನಾಳೆ ಸಂಜೆ [illegible] ಗಂಟೆಗೆ ಸೌ|| ಗಳಾದ ಸುಭದ್ರಾ ಮತ್ತು ರುಕ್ಮಿಣಿಯವರುಗಳಿಂದ ಧ್ರುವ [illegible] ಹರಿಕಥೆಯು ನಡೆಯುವುದು. ಸರ್ವರಿಗೂ ಆಹ್ವಾನವುಂಟು

ಯುದ್ಧವಾದರೆ ಪಾಕಿಸ್ತಾನವೇ ರಣಕ್ಷೇತ್ರ

ಭಾರತ ಮತ್ತು ಪಾಕಿಸ್ತಾನಗಳಿಗೆ ಯುದ್ಧ ಸಂಭವಿಸಿದರೆ ಭಾರತದ [illegible] ಮೇಲೆ [illegible] ಪಾಕಿಸ್ತಾನದಲ್ಲೇ ನಡೆಯುವುದೆಂದೂ [illegible] ಶ್ರೀ [illegible] ಅವರು [illegible] ಹೆಚ್ಚು [illegible] ಕ್ರಮಗಳನ್ನು ಕೈಗೊಳ್ಳಲಾಗಿದೆಯೆಂದು [illegible] ತಿಳಿಸಿದ್ದಾರೆ

ಸಂಸ್ಥಾನದ ವಯಸ್ಕರ ಶಿಕ್ಷಣ ಸಮ್ಮೇಳನ

[illegible] ನಡೆಯಲಿರುವ [illegible] ವಯಸ್ಕರ [illegible] ಸಮ್ಮೇಳನದ [illegible] ಮೈಸೂರು [illegible] ಸಂಪೂರ್ಣ [illegible] ವಯಸ್ಕರ ಶಿಕ್ಷಣ [illegible] ಕಾರ್ಯಕರ್ತರು [illegible] ಗಾನಗಳು [illegible] ಸಂದರ್ಭದಲ್ಲಿ [illegible] ಗಳನ್ನು [illegible] ಪ್ರದರ್ಶನ [illegible] ಏರ್ಪಡಿಸಲಾಗುವುದು.

ಬೆಟ್ಟದಪುರದ ಹೈಸ್ಕೂಲು ವಿದ್ಯಾರ್ಥಿ ಸಂಘ

ಬೆಟ್ಟದಪುರದ ಹೈಸ್ಕೂಲು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ [illegible] ತಾ ಬಾಪೂಜಿಯವರ ಛಾಯಾಚಿತ್ರದ ಅನಾವರಣ ಮಹೋತ್ಸವವು ನಡೆಯಿತು. [illegible] ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ರಂಗನಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ [illegible] ಯ್ಯನವರು ಬಾಪೂಜಿಯವರ ಜೀವನ ಚರಿತ್ರೆಯನ್ನು ವಿವರಿಸಿದರು. ಜಿಲ್ಲಾ ಬೋರ್ಡ್ ಮೆಂಬರ್ ಜನಾಬ್ ಮಹಮೂದ್ ಅಹಮದ್‌ರವರು ಭಾವಚಿತ್ರವನ್ನು ಅನಾವರಣ ಮಾಡಿದರು

ಪಾಕಿಸ್ತಾನದ ಮೇಲೆ ಆಫ್ಘನ್ ದೊರೆಯ ಟೀಕೆ

ಅಫ್ಘನ್ನರ [illegible] ವರ್ಗದಲ್ಲಿ [illegible] ಪಕ್ತೂನ್ ಜನರನ್ನು [illegible] ಪಾಕಿಸ್ತಾನವು ನಡೆಸುತ್ತಿರುವ [illegible] ಪ್ರಯತ್ನಗಳನ್ನು ಅಫ್ಘಾನಿಸ್ತಾನ ದೊರೆ [illegible] ಖಂಡಿಸುತ್ತಾರೆ [illegible] ಪಕ್ತೂನ್ ಜನರು ಸ್ವಾತಂತ್ರ್ಯ ಪಡೆಯುವರೆಂದು [illegible] ಹೇಳುತ್ತಾರೆ

ಸ್ವಾಮಿ ಸೀತಾರಾಂರೊಡನೆ ೩೦ ಜನರ ಉಪವಾಸ

[illegible] ಪ್ರಾಂತ ರಚನೆ [illegible] ಉಪವಾಸ [illegible] ತ್ತಿರುವ ಸ್ವಾಮಿ ಸೀತಾರಾಂರವರೊಡನೆ [illegible] ತೋರಿಸಲು ದಿನವೂ [illegible] ಉಪವಾಸವನ್ನು ಮಾಡುತ್ತಿದ್ದಾರೆ.

ಯೂರೇಟು ಪಾತ್ರೆಗಳಲ್ಲಿ ಕ್ರಿಮಿಗಳು

[illegible] ಪಾತ್ರೆಗಳಲ್ಲಿ [illegible] ಕ್ರಿಮಿಗಳು [illegible] ಇರುವುದು [illegible] ಕೇಂದ್ರ ಸರ್ಕಾರದ [illegible] ನ್ಯೂಟ್ರೀಷನ್ [illegible] ಈ ಸಂಬಂಧವಾಗಿ ಪರೀಕ್ಷೆಗಳನ್ನು ನಡೆಸಿ [illegible] ಅಂಶವನ್ನು ಕಂಡುಹಿಡಿದಿರುವರು

ಚಂದಾದಾರರಲ್ಲಿ ವಿನಂತಿ

'ಸಾಧ್ವಿ' ಪತ್ರಿಕೆಯ ಪ್ರತಿ ತಿಂಗಳ ಚಂದಾ ಹಣವನ್ನು ಮುಂಗಡವಾಗಿ ಪಾವತಿ ಮಾಡಿ ಚಂದಾದಾರರು ರಸೀತಿಯನ್ನು ಪಡೆದುಕೊಳ್ಳಬೇಕಾಗಿ ವಿನಂತಿ. ರಸೀತಿಯಿಲ್ಲದೆ ಪಾವತಿ ಮಾಡಿದ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲವೆಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಿರುತ್ತೆ

ನ್ಯೂಸ್ ಪೇಪರ್ ಹೌಸ್,
ಮೈಸೂರು,
"ಸಾಧ್ವಿ" ಏಜಂಟರು

ಪಂಡಿತ ಮತ್ತು ಮೌಲ್ವಿ ಪರೀಕ್ಷೆಗೆ ಸ್ವಂತ ವ್ಯಾಸಂಗ

ಇತ್ತೀಚೆಗೆ ಸಂಸ್ಥಾನದಲ್ಲಿ [illegible] ಸ್ಕೂಲುಗಳು ಸ್ಥಾಪಿತವಾಗಿ [illegible] ಅಧ್ಯಾಪಕರುಗಳ ವಿಶೇಷವಾದ [illegible] ಯುರುವುದಾಗಿ ಕೇಳಿಬರುತ್ತಿದೆ. [illegible] ನ್ನು ಹೋಗಲಾಡಿಸಲು ಏರ್ಪಾಡು [illegible] ಡುವುದು ಒಳ್ಳೆಯದು. ಪಂಡಿತ [illegible] ಮೌಲ್ವಿ ಪರೀಕ್ಷೆಗಳನ್ನು ಇಲಾಖೆಯವರು ಎರಡು ವರ್ಷಕ್ಕೊಮ್ಮೆ ನಡೆಸು[illegible] ವುದರಿಂದ ಸ್ವಂತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಬಹಳ ಅನಾನುಕೂಲವಾಗಿರುವುದು

ಹಿಂದೆ ಈ ಪರೀಕ್ಷೆಗೆ ಕುಳಿತುಕೊ[illegible] ವ ಜನರಿಗಿಂತಲೂ ಹತ್ತರಷ್ಟು [illegible] ಈಗ ಬರುತ್ತಿರುವರು. ಆದರೆ [illegible] ಯಾಗುವವರ ಸಂಖ್ಯೆ ಅತಿ ಕಡಿಮೆ [illegible] ಗಿನ ಕ್ರಮದ ಪ್ರಕಾರ ಪರೀಕ್ಷೆಯ [illegible] ದು ಭಾಗದಲ್ಲಿ ಉತ್ತೀರ್ಣರಾಗಿ [illegible] ದು ಭಾಗದಲ್ಲಿ ತೇರ್ಗಡೆಯಾಗದೇ [illegible] ವ ವಿದ್ಯಾರ್ಥಿಗಳು ಮತ್ತೆರಡು [illegible] ಪರೀಕ್ಷೆಗೆ ಕುಳಿತುಕೊಳ್ಳಲು ಕಾಯ[illegible] ಕಾಗುವುದು ಇದು ಸರ್ವಥಾ [illegible] ವಲ್ಲ. ಒಂದೆ ಓದಿದ ಪುಸ್ತಕಗಳನ್ನೇ [illegible] ನ ಓದಿ ಪ್ರತಿವರ್ಷವೂ ಪರೀಕ್ಷೆಗೆ [illegible] ಕುಕೊಳ್ಳುವ ಸೌಲಭ್ಯವನ್ನು [illegible] ಬೇಕಾದುದು ಆವಶ್ಯಕ. ಇದರಿಂದ [illegible] ಧ್ಯಾಪಕರ ಕೊರತೆಯೂ ನಿವಾರಣೆ[illegible] ಗುವುದು. ಈ ಪರೀಕ್ಷೆಗಳಿಗೆ [illegible] ಏರ್ಪಾಟು ಮಾಡಬೇಕಾಗಿಲ್ಲ [illegible] ಧಾನಿಯ ಪ್ರೈಸಿಡೆನ್ಸ್ ಕಾಲೇಜ[illegible] ಮಾರ್ಚ್ ಮತ್ತು ಏಪ್ರಿಲ್ ತಿಂಗಳು[illegible] ನಡೆಯುವ ಪಿ. ಟಿ. ಸಿ. ಮತ್ತು [illegible] ಟಿ ಪರೀಕ್ಷೆಗಳೊಡನೆ ಈ ಪರೀಕ್ಷೆ[illegible] ಯನ್ನೂ ನಡೆಸಿದರೆ ಉಪಕಾರ[illegible] ವುದು.

ಒಬ್ಬ ವಿದ್ಯಾರ್ಥಿ

|| ಶ್ರೀ ||

ಗಣೇಶ ಟಾಕೀಸ್

29-8-51 ರಿಂದ 3 ದಿನಗಳು ಮಾತ್ರ

ಪ್ರತಿದಿನ 3 ಆಟಗಳು

ಮುಂಗಯ್ಯಾರ್ಕರಸಿ

[illegible] ಮತ್ತು [illegible] ಪಾತ್ರ ವಹಿಸಿರುವ ತಮಿಳು ಚಿತ್ರ

ಗೌರಿ ಹಬ್ಬಕ್ಕಾಗಿ.★

ನಾಜೂಕಾದ ಮಾದರಿ ರೇಷ್ಮೆ ಸೀರೆಗಳು ಮತ್ತು ನೂಲಿನ ಸೀರೆಗಳು ಬಂದಿವೆ ನೇರವಾಗಿ ಬಂದು ಕೊಳ್ಳಿರಿ

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ ಬೊಂಬಾಯಿ ಆನಂದ ಭವನ ಹೋಟೆಲ್ ಪಕ್ಕ, ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಅನೋಘ ಪ್ರಾರಂಭ

ಅಕ್ಕ ಮಹಾದೇವಿ

22.8 51 ರಿಂದ

ಪ್ರತಿ ಸೋಮವಾರ ಬುಧವಾರ ಮತ್ತು ಶನಿವಾರಗಳಲ್ಲಿ ರಾತ್ರಿ 9-45 ಘಂಟೆಗೆ, ಬಾಕಿ ದಿನಗಳಲ್ಲಿ ಮ್ಯಾಟಿನಿ 6-15 ಕ್ಕೆ

ಗುರುದೇವಾ ಹಾಲ್

ಗೌರಿಹಬ್ಬದ ಸಲುವಾಗಿ

ರಿಯಾಯಿತಿ ಬೆಲೆ

ಕ್ರೇಪ್, ಜಾರ್ಜೆಟ್, ಧರ್ಮಾವರ, ಕಂಚಿ ರೇಷ್ಮೆ ಸೀರೆಗಳು ದೊರೆಯುತ್ತವೆ

ಶಿವರಾಂಪೇಟೆ, ಮೈಸೂರು

ಒಲಂಪಿಯಾ

[illegible] ರಿಂದ ಅನೋಘ ಪ್ರಾ[illegible]

ಪ್ರತಿದಿನ 3 ಆಟಗಳು

ಕಾರವಾರ ಫಿಲಂಸ್‌ರವರ

✱ ಅಕೇಲಿ

ರಾತ್ರಿ [illegible], ರಾಗಿಣಿ, [illegible] ಕುಮಾರ್, ಬಡ್ರಿ ಮತ್ತು [illegible] ನುಬ್ಬಿನ ಹಾಸ್ಯನಟ ಚಾರ್ಲಿ

SRI GAYATHRI

Daily 3 shows

On 28th and 29th

Warner's

CAGED

On 30th and 31st

Warner's

PERFECT STRANGE[RS]

— Coming :—

TRIPOLI

Edited printed and published by A. [illegible] Nagarajan, at Sadhvi Press, [illegible] Subbiah Road, Mysore

ಕ್ರಮ ಸಂ 792 । ಜುಡೀ ವನಗರು । ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೧) ಬುಧವಾರ ೨೯-೮-೬೧ (ಸಂಚಿಕೆ ೩೦

ಚಿನ್ನದ ಗಣಿಯ ೪,೦೦೦ - ಕಾರ್ಮಿಕರ ವಜಾ -

ಮಂಕು ಬೂದಿ ಕೊಟ್ಟು ಹಣ ಪಡೆದ ಸನ್ಯಾಸಿ

ಮೈಸೂರು ೨೮

ರಾಜಧಾನಿಯ ತಿರುಪ್ಪರು ಪಾದಿ ಅಂಗಡಿಯಲ್ಲಿರುವ ಶ್ರೀ ರಾಜುರವರು ವಾಸವಾಗಿರುವ ಖಿಲ್ಲೆ ಮೊಹಲ್ಲೆಯ ಅವರ ಮನೆಗೆ ನಿನ್ನೆ ದಿನ ಸನ್ಯಾಸಿ ವೇಷಧಾರಿಯೊಬ್ಬನು ಹೋಗಿ ತಾನು ಕಾಶಿಗೆ ಹೋಗಿಬಂದಿರುವುದಾಗಿ ತಿಳಿಸಿ, ವಿಭೂತಿಯನ್ನು ಕೊಟ್ಟನೆಂದೂ, ವಿಭೂತಿಯನ್ನು ಧರಿಸಿಕೊಂಡ ಮನೆಯಾಕೆಗೆ ಮಂಕು ಕವಿದಂತಾಗಲು ಆಕೆಯನ್ನು ಪೆಟ್ಟಿಗೆಯಲ್ಲಿರುವ ದುಡ್ಡು ಕೊಡುವಂತೆ ಕೇಳಿ ಸನ್ಯಾಸಿಯು ತೆಗೆದುಕೊಂಡನೆಂದು ಗೊತ್ತಾಗಿದೆ. ಅಕ್ಕಪಕ್ಕದ ಮನೆಗಳ ಹೆಂಗಸರುಗಳಿಗೂ ವಿಭೂತಿಯನ್ನು ಕೊಟ್ಟು ಅವರಿಂದಲೂ ದುಡ್ಡು ತೆಗೆದುಕೊಂಡನೆಂದೂ, ಅನಂತರ ಒಬ್ಬ ಯುವಕನಿಗೂ ಅದೇ ರೀತಿ ಮಾಡಿದಾಗ ಅವನು ಬೂದಿ ಹಚ್ಚಿಕೊಂಡು ಮಂಕು ಹಿಡಿದಂತಾದ ಕೂಡಲೆ ಮುಖ ತೊಳೆದುಕೊಳ್ಳಲು ಮಂಕು ಹೊರಟುಹೋಯಿತೆಂದೂ, ಇತರರೂ ಅವನ ಕೈ ಮೋಸ ಹೋಗಿ ಹಣ ಕೊಟ್ಟ ಬಗ್ಗೆ ತಿಳಿಸಿದಾಗ, ಅಷ್ಟು ಹೊತ್ತಿಗೆ ಸನ್ಯಾಸಿ ವೇಷಧಾರಿಯು ಪರಾರಿಯಾಗಿದ್ದನೆಂದೂ ತಿಳಿದುಬಂದಿದೆ

ಸಂಗೀತ

ತಬಲಾವಾಂಬಾ ಅಗ್ರಹಾರದ ಎಳಿನಡಿನ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಈ ಸಂಜೆ ೬॥ ಗಂಟೆಗೆ ಬಿ. ಕೇಶವಮೂರ್ತಿಯವರ ಪಿಟೀಲು ಮತ್ತು ಹೆಚ್. ಟಿ ನಾಗಣ್ಣನವರ ಮೃದಂಗದೊಡನೆ ಶ್ರೀ ಪಿ. ಶ್ರೀನಿವಾಸಯ್ಯಂಗಾರ್ಯರ ಸಂಗೀತವೂ, ಸಂಜೆ ೭ಕ್ಕೆ ಶ್ರೀ ಹೆಚ್. ಪಿ. ಕೃಷ್ಣರಾಯರವರ ಪಿಟೀಲು ಮತ್ತು ಶ್ರೀ ಎಸ್ ಎಸ್ ಗಿರಿ ದಾಸರ ಕಂಜರಿ ಸಮೇತ ಶ್ರೀ ಪಿ. ಎಸ್. ರತ್ನಮ್ಮನವರ ಗಾಯನವೂ ನಡೆಯುವುವು

ಟಿಕೆಟ್ ಎಕ್ಸಾಮಿನರಿಗೆ ಸತ್ಕಾರ

ರೈಲ್ವೆ ಟಿಕೆಟ್ ಎಕ್ಸಾಮಿನರ್ ಆದ ಶ್ರೀ ಎಂ ಕೃಷ್ಣಯ್ಯಂಗಾರ್ಯರು ನಿವೃತ್ತರಾದ ಸಂದರ್ಭದಲ್ಲಿ ಭಾನುವಾರ ಅವರ ಗೌರವಾರ್ಥವಾಗಿ ರೈಲ್ವೆ ಗಾರ್ಡುಗಳೂ ಇತರ ಟಿಕೆಟ್ ಎಕ್ಸಾಮಿನರುಗಳೂ ಸೇರಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ಶ್ರೀ ಕೃಷ್ಣಯ್ಯಂಗಾರ್ಯರು ಇಲಾಖೆಯಲ್ಲಿ ೩೦ ವರ್ಷ ಸೇವೆ ಸಲ್ಲಿಸಿದ್ದರು. ಅವರು ಹಿಂದೆ ಸಾಧ್ವಿ ಸಂಪಾದಕೀಯದ ಪತ್ರಿಕೆಗಳ ಪ್ರತಿನಿಧಿಗಳಾಗಿದ್ದರು.

ಕಬ್ ಮಾಸ್ಟರುಗಳ ಸಂಘದ ಸಭೆ

ಮೈಸೂರು ಸಿಟಿ ಕಬ್ ಮಾಸ್ಟರುಗಳ ಸಂಘದ ಸಭೆಯು ನಾಳೆ ಸಂಜೆ ೫॥ ಗಂಟೆಗೆ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುವುದು. ಎಲ್ಲ ಕಬ್ ಮಾಸ್ಟರುಗಳೂ ಸಭೆಗೆ ದಯಮಾಡಿಸಬೇಕೆಂದು ಕೋರಲಾಗಿದೆ.

ರಿಸರ್ವ್ ಬ್ಯಾಂಕ್ ನೌಕರರ ಮುಷ್ಕರದ ತೀರ್ಮಾನ

ರಿಸರ್ವ್ ಬ್ಯಾಂಕಿನ ನೌಕರರುಗಳ ಸೈಕೆ ೨॥ ಸಾವಿರ ರಷ್ಟು ಜನರು ಮುಷ್ಕರ ಹೂಡುವ ಬಗ್ಗೆ ತೆಗೆದುಕೊಳ್ಳಲಾದ ಮತ ಚೀಟಿನಲ್ಲಿ ತಮ್ಮ ಸಮ್ಮತಿಯನ್ನು ಸೂಚಿಸಿರುತ್ತಾರೆ.

ಪ್ರಪಂಚದ ರಾಷ್ಟ್ರಗಳಿಗೆ ವಿಪತ್ತು ಸನ್ನಿಹಿತ

ಸಿಂಹ ರಾಶಿಯಲ್ಲಿ ಪಂಚ ಗ್ರಹಗಳ ಕೂಟದಿಂದ ದುರ್ಯೋಗ

ಹಾಸನೀಯ ಸುಪ್ರಸಿದ್ಧ ಜ್ಯೋತಿಷ್ಯರಾದ ಪಂಡಿತ ಶಂಕರ ಶಾಸ್ತ್ರಿ ಹೊಸರಿತ್ತಿಯವರು ಈ ರೀತಿ ತಿಳಿಸುತ್ತಾರೆ.

ಬರುವ ಗಸ್ಟ್ ೨೦ ರ ಅಮಾವಾಸ್ಯೆ ದಿನ ರವಿ, ಚಂದ್ರ, ಶುಕ್ರ, ಬುಧ ಮತ್ತು ಕೇತು ಗ್ರಹಗಳು ಸಿಂಹ ರಾಶಿಯಲ್ಲಿ ಸೇರಿ, ಪಂಚ ಗ್ರಹ ಯೋಗವು ಏರ್ಪಡುವುದು ತದನಂತರ ಸೂರ್ಯ ಗ್ರಹಣವೂ ಆಗಿ ಇದು ದಕ್ಷಿಣ ಆಫ್ರಿಕ ಮತ್ತು ಹಿಂದೂ ಸಾಗರದಲ್ಲಿ ಕಾಣಿಸುವುದು. ಭಾರತಕ್ಕೆ ಈ ಗ್ರಹಣವು ಕಾಣುವುದಿಲ್ಲ. ಈ ಗ್ರಹಣದ ಪರಿಣಾಮವಾಗಿ ಜಗತ್ತಿನಲ್ಲಿ ಯುದ್ಧವು ಪ್ರಾಪ್ತಿಯಾಗುವುದು. ಗರ್ಭಿಣಿಯರಿಗೆ ಗರ್ಭ ಪಾತ, ರಾಜ ಪ್ರಜೆಗಳಾದ ಮಂತ್ರಿಗಳ ಮರಣ ಮುಂತಾದವು ನಡೆಯುವುವು

ಅಕಾಲ ಅತಿ ವೃಷ್ಟಿ, ಅನಾವೃಷ್ಟಿ, ಭೂಕಂಪಗಳಾಗುವುವು. ಧೂಮಕೇತುವು ಕಾಣಿಸುವುದು. ಪಾಕಿಸ್ತಾನವು ಸ್ಥಾಪಿತವಾದ ವರ್ಷದಲ್ಲಿ ನಡೆದಂತಹ ಮಹಾ ದುರ್ಘಟನೆಗಳಾಗುವುವು. ಕಾಶ್ಮೀರದಲ್ಲಿ ಯುದ್ಧದ ಸಂಭವವಿದೆ. ಭಾರತಕ್ಕೆ ರಷ್ಯಾ ಬೆಂಬಲ ಕೊಡ ಬಹುದು ತನ್ನ ಭಾವನೆಯಿಂದ ಅಮೆರಿಕಾ-ಬ್ರಿಟನ್ನುಗಳು ಕಾಶ್ಮೀರದ ಪ್ರಶ್ನೆಯಲ್ಲಿ ಪ್ರವೇಶಿಸುವುದರಿಂದ ಭಾರತ ಮತ್ತು ಪಾಕಿಸ್ತಾನಗಳ ವೈಮನಸ್ಸು ತೀವ್ರವಾಗುವುದು.

ಕೊರಿಯಾ ಯುದ್ಧವು ಮುಂತಾದ ಯುದ್ಧ ವ್ಯಾಪಿಸುವುದು. ರಷ್ಯ, ಪರ್ಷಿಯ, ಯುಗೊಸ್ಲಾವಿಯಾ, ಅಮೆರಿಕಾ, ಇಂಗ್ಲೆಂಡ್, ಇಟಲಿ, ಜರ್ಮನಿ, ಚೀಣಾ ಈ ದೇಶಗಳ ಮೇಲೆ ಪಂಚಗ್ರಹ ಯೋಗದ ದುಷ್ಪರಿಣಾಮವಾಗಿ ಈ ರಾಷ್ಟ್ರಗಳು ಯುದ್ಧದಲ್ಲಿ ತೊಡಗುವುವು.

ಕಾಶ್ಮೀರದಲ್ಲಿ ಅಸಿರೀಕ್ಷಿತವಾದ ಘಟನೆಗಳು ತಲೆ ಎತ್ತುವುದರಿಂದ ಸಾರ್ವತ್ರಿಕ ಚುನಾವಣೆಗಳನ್ನು ಭಾರತದಲ್ಲಿ ೧ ವರ್ಷ ಮುಂದೆ ಹಾಕಲಾಗುವುದು. ಭಾರತದ ಪ್ರಧಾನ ಮಂತ್ರಿ ಮತ್ತು ಪ್ರಾಂತಗಳ ಮುಖ್ಯಮಂತ್ರಿಗಳು ತಮ್ಮ ಪ್ರಕೃತಿ ಬಗ್ಗೆ ಹೆಚ್ಚು ಎಚ್ಚರಿಕೆ ತೆಗೆದುಕೊಳ್ಳಬೇಕು

ಚಿನ್ನದ ಗಣಿಯ ೪೦೦೦ ಕಾರ್ಮಿಕರ ವಜಾ

ಇತ್ತೀಚೆಗೆ ಕೋಲಾರದ ಚಿನ್ನದ ಗಣಿಗಳಲ್ಲಿ ನಡೆದ ಚಳುವಳಿಗೆ ಸಂಬಂಧವಾಗಿ ಕಾರ್ಮಿಕರಲ್ಲಿ ಅಶಾಂತಿಯುಂಟಾಯಿತೆಂದೂ, ಕಮ್ಯೂನಿಸ್ಟ್ ಪ್ರಧಾನರೆಂದು ಹೇಳಲಾದ ೪೦ ಜನ ಕೆಲಸಗಾರರನ್ನು ವಜಾಗಿರಿ ಮಾಡಲಾಯಿತೆಂದೂ ಗೊತ್ತಾಗಿದೆ ಗಣಿಗಳಿಗೆ ಪ್ರೊಲೀಸು ಐ. ಜಿ. ಶ್ರೀ ನಾಗರಾಜರಾವ್ ಮತ್ತು ಡಿ. ಐ. ಜಿ. ಶ್ರೀ ಬಾಲರೆಡ್ಡಿಯವರು ಭೇಟಿಯಿತ್ತಿದ್ದರು ಸಮೃದ್ಧಿ ಮತ್ತು ಶಾಂತಿಯನ್ನು ಕಾಪಾಡಲು ಜಿಲ್ಲಾಧಿಕಾರಿಗಳು ೨೬ ನೇ ತಾ॥ ನಿಂದ ೯ ತಿಂಗಳವರೆಗೆ ಸಭೆ ಮುಂತಾದವುಗಳನ್ನು ನಡೆಸದಂತೆ ನಿಷೇಧಿಸಿರುತ್ತಾರೆ. ವಜಾಗಿರಿಯಾದ ಸಂದರ್ಭದಲ್ಲಿ ಪ್ರತಿಭಟನೆ ಮುಷ್ಕರ ಮತ್ತು ಪ್ರದರ್ಶನ ನಡೆಸಬೇಕೆಂದು ಇತರ ಮುಖಂಡರು ಪ್ರಯತ್ನಿಸುತ್ತಿರುವುದಾಗಿ ಗೊತ್ತಾಗಿದೆ. ನಾಲ್ಕು ಸಾವಿರ ಕಾರ್ಮಿಕರನ್ನು ೨೦ನೇ ತಾ॥ ವರೆಗಿನ ಸಂಬಳ ಕೊಟ್ಟು ನಿವೃತ್ತಿ ಮಾಡಲಾಗಿದೆ

ಈ ತಿಂಗಳು ೮ ಮತ್ತು ೨೦ನೇ ತಾ॥ಗಳಲ್ಲಿ ಉಂಟಾದ ಬೆಂಕಿಯು ಇನ್ನೂ ಆರದೇ ಉರಿಯುತ್ತಿದೆಯೆಂದು ಹೇಳಲಾಗಿದೆ

ಪೆಟ್ರೋಲ್ ಹಾಕಿ ಮನೆಗಳನ್ನು ಸುಟ್ಟ ಪ್ರಸಂಗ

ಚಿತ್ರದುರ್ಗಕ್ಕೆ ಏಳು ಮೈಲಿ ದೂರ ಇರುವ ಹೊಸ ದ್ಯಾಮುಪ್ಪನ ಹಳ್ಳಿಯಲ್ಲಿ ಕಳೆದ ಶನಿವಾರ ಮನೆಗಳಿಗೆ ಪೆಟ್ರೋಲ್ ಹಾಕಿ ಸುಟ್ಟ ವಿಷಯವು ವರದಿಯಾಗಿದೆ. ತಿಲಕಾ ರಂಗಪ್ಪ ಎಂಬುವನು ಜೀವಂತವಾಗಿ ದಹಿಸಿಹೋಗಿರುವನೆಂದೂ, ಕೆಲವರಿಗೆ ಏಟುಗಳು ಬಿದ್ದಿವೆಯೆಂದೂ ಹೇಳಲಾಗಿದೆ. ಇಬ್ಬರು ಚಿತ್ರದುರ್ಗದ ಆಸ್ಪತ್ರೆಗೆ ಸೇರಿಸಲ್ಪಟ್ಟಿರುತ್ತಾರೆ.

ಸ್ಟಾಲಿನ್ನರಿಗೆ ಬೌದ್ಧ ದೀಕ್ಷೆ ?

ರಷ್ಯದ ಸರ್ವಾಧಿಕಾರಿ ಮಾರ್ಷಲ್ ಸ್ಟಾಲಿನ್ನರು ಬೌದ್ಧ ಮತವನ್ನವಲಂಬಿಸುವ ಸಂಭವವಿರುವುದಾಗಿ ಕೊಲಂಬೋದಲ್ಲಿರುವ ವಿಶ್ವ ಬೌದ್ಧ ಮತಸ್ಥರ ಸಂಘದ ಅಧ್ಯಕ್ಷ ಡಾ॥ ಜಿ ಪಿ ಮಲಲಸೇಕರೆಯವರು ತಿಳಿಸಿರುತ್ತಾರೆ

ಬಟ್ಟೆ ಗಿರಣಿ ಕಾರ್ಮಿಕರಿಗೆ ಕೋಟಿ ರೂಪಾಯಿಗಳಷ್ಟು ಬೋನಸ್

ಬೊಂಬಾಯಿಯ ಬಟ್ಟೆ ಗಿರಣಿಗಳ ಕಾರ್ಮಿಕರ ವರ್ಷದ ವರಮಾನದಲ್ಲಿ ಕೋಟಿ ರೂಗಳಷ್ಟು ಬೋನಸ್ಸನ್ನು ಕಾರ್ಮಿಕರಿಗೆ ಮಾಲೀಕರು ೩ ತಿಂಗಳೊಳಗಾಗಿ ಕೊಡಬೇಕೆಂದು ಬೊಂಬಾಯಿಯ ಕೈಗಾರಿಕಾ ನ್ಯಾಯಾಲಯವು ತೀರ್ಪಿತ್ತಿರುವುದು ಇದರಿಂದ ಅಲ್ಲಿರುವ ೩ ಲಕ್ಷ ಕಾರ್ಮಿಕರಿಗೆ ಒಟ್ಟು ಗಿರೋಟು ೫೦ ಲಕ್ಷ ರೂ ಸಂದಾಯವಾಗುವ ಸೌಲಭ್ಯ ಉಂಟಾಗಿರುವುದು. ನಷ್ಟ ಹೊಂದಿರುವ ಗಿರಣಿಯವರು ಬೋನಸ್ಸನ್ನು ಕೊಡಬೇಕಾಗಿಲ್ಲವೆಂಬ ವಾದವನ್ನು ಎತ್ತಿಹಿಡಿಯಲಾಗಿದೆ.

ಆಡು ಮೇಯಿಸುತ್ತಿದ್ದವನು ಹುಲಿಯ ಬಾಯಿಗೆ ಆಹುತಿ

ಹೆಗ್ಗಡದೇವನಕೋಟೆ ತಾಲ್ಲೂಕು ಕೆಂದಲಿಕೆ ಹೋಬಳಿ ದೇವಲಾಪುರದ ಹರಿಜನನೊಬ್ಬನು ಕೆಲವು ದಿನಗಳ ಹಿಂದೆ ಊರು ಹಮೀನು ಬಳಿ ಆಡುಗಳನ್ನು ಮೇಯಿಸುತ್ತಿದ್ದಾಗ ಭಾರಿ ಹುಲಿಯೊಂದು ಅವನ ಮೇಲೆ ಬಿದ್ದು ಅವನನ್ನು ತಿನ್ನುತ್ತಾ ಪೊದೆಯೊಳಕ್ಕೆ ಎಳೆದುಕೊಂಡು ಹೋಯಿತೆಂದು ವರದಿಯಾಗಿದೆ

ರಾಜಕೋಟೆ ಬಳಿ ೨೦ ಅಂಗಡಿಗಳ ಲೂಟಿ

ರಾಜಕೋಟೆ ಬಳಿ ಇರುವ ಪಲಿಟಾಣ ಎಂಬ ಊರಿನ ೨೦ ಅಂಗಡಿಗಳನ್ನು ನೆನ್ನೆ ೧೦೦ ಜನರ ತಂಡವೊಂದು ಲೂಟಿ ಮಾಡಿತು ಅಲ್ಲಿ ಈಗ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಗಿದೆ

ಶಾರದಾ ವಿಲಾಸ ಕಾಲೇಜ್ ಸಂಘದ ಚುನಾವಣೆ

ರಾಜಧಾನಿಯ ಶಾರದಾವಿಲಾಸ ಕಾಲೇಜಿನ ಸಂಘದ ಚುನಾವಣೆಯು ನಡೆದು ಶ್ರೀ ಎಂ. ಎಸ್. ರಾಮಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ಹೆಚ್ ನರಸಿಂಹ ಮೂರ್ತಿಯವರು ಉಪಾಧ್ಯಕ್ಷರಾಗಿಯೂ ಮತ್ತು ಶ್ರೀ ಕೆ.ಪಿ.ಹನುಮಂತರಾವ್‌ರವರು ಸ್ಟಾ॥ ಕಾರ್ಯದರ್ಶಿಗಳಾಗಿಯೂ ಸರ್ವಾನುಮತದಿಂದ ಚುನಾಯಿತರಾಗಿರುವರು

ಲಾರಿ ಹರಿದು ಇಬ್ಬರಿಗೆ ಗಾಯ

ದೇವರಾಜಾ ಮಾರ್ಕೆಟ್ಟಿನ ಪಶ್ಚಿಮ ಪಾರ್ಶ್ವದ ರಸ್ತೆಯಲ್ಲಿ ಈ ದಿನ ಮಧ್ಯಾಹ್ನ ಒಂದು ಲಾರಿಯು ಕೃಷ್ಣರಾಜೇಂದ್ರ ಆಸ್ಪತ್ರೆಯ ಕಡೆಗೆ ಹೋಗುತ್ತಿದ್ದಾಗ ಅಡ್ಡಲಾಗಿ ಬಂದ ಹಸುವನ್ನು ತಪ್ಪಿಸಲು ಪ್ರಯತ್ನಿಸಿದಾಗ ಲಾರಿಯು ಫುಟ್ ಪಾತಿನ ಮೇಲೆ ಹತ್ತಿ ಅಬ್ದುಲ್ಲಾ ಮತ್ತು ನಿಂಗ ಎಂಬುವರ ಮೇಲೆ ಹರಿಯಿತು ಅಬ್ದುಲ್ಲನ ತೊಡೆಗಳ ಮೇಲೆ ಗಾಯಗಳಾಗಿವೆ. ನಿಂಗಿ ಎಂಬುವಳಿಗೆ ಸ್ವಲ್ಪ ಗಾಯವಾಗಿ ಆಸ್ಪತ್ರೆಯಲ್ಲಿರುತ್ತಾಳೆ ಇಬ್ಬರನ್ನೂ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಗಿದೆ.

ವಿದ್ಯಾರ್ಥಿಗಳ ಸಭೆ

ನಾಳೆ ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜಿನ ಒಳಾಂಗಣದಲ್ಲಿ "ವಿದ್ಯಾರ್ಥಿ ಪ್ರಣಾಳಿಕೆ" ಯನ್ನು ಅಂಗೀಕರಿಸುವ ಸಲುವಾಗಿ ಮಹಾರಾಜಾ ಕಾಲೇಜು ಮತ್ತು ಫಸ್ಟ್ ಗ್ರೇಡ್ ಕಾಲೇಜಿನ ವಿದ್ಯಾರ್ಥಿಗಳ ಸಭೆ ನಡೆಯಲು ಏರ್ಪಾಡಾಗಿದೆ. ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಬೇಕೆಂದು ಕೋರಲಾಗಿದೆ.

ನಂದೀಬಸಪ್ಪನವರ ಶಿಕ್ಷೆಯ ರದ್ದು

ಸೆಷನ್ಸ್ ನ್ಯಾಯಾಧೀಶರ ತೀರ್ಪಿನ ವಿವರಗಳು

ಮೈಸೂರು —

ಇದೇ ತಿಂಗಳ ೩ ರಂದು ಇಲ್ಲಿನ ಸೆಷನ್ಸ್ ನ್ಯಾಯಾಧೀಶರಾದ ಶ್ರೀ [illegible] ಲಿಂಗಯ್ಯ ಗೌಡರು ತೀರ್ಪಿತ್ತು ಮುಳ್ಬಾಗಿಲು ಧರ್ಮರತ್ನಾಕರ ಕೆ ನಂದೀಬಸಪ್ಪನವರಿಗೆ ಕೊಡಲಾಗಿದ್ದ [illegible] ವಾರ ಸಜಾ ಮತ್ತು ೧೦೦೦ ರೂ ಜುಲ್ಮಾನೆಯ ಶಿಕ್ಷೆಯನ್ನು ರದ್ದು ಮಾಡಿದರು ಶ್ರೀ ನಂದೀಬಸಪ್ಪನವರಿಗೆ ಬೆನಿಫಿಟ್ ಆಫ್ ಡೌಟನ್ನು ಕೊಡಲಾಯಿತು [illegible]ರಲ್ಲಿ ರಾಜಧಾನಿಯ ಪೋಲೀಸರು ಶಂಕರಾನಂದ ಎಕ್ಸ್ ಗರಡಿಯನ್ನು ಶೋಧಿಸಿದಾಗ [illegible] [illegible]

[illegible]

[illegible]ಉದಾರರು ಒಂದೆ ಪತ್ರಾಧಿಕಾರಿಗಳ [illegible] ಅಸಿಸ್ಟೆಂಟರ ಮುಂದೆ ಕೊಟ್ಟಿರುವ ಹೇಳಿಕೆಯು ನಗರದ [illegible] ಅಧಿಕಾರಿಗಳು ನಿಜವಾದ ಸಾಕ್ಷ್ಯವನ್ನು ಎಷ್ಟಿದೆಯೆಂಬುವನ್ನು ಪರಿಶೀಲನೆ ಮಾಡದಿರುವಂತೆ ಎಚ್ಚರಿಯನ್ನು [illegible]ವಾಗಿದೆಯೆಂದು ಪ್ರಾಸಿಕ್ಯೂಷನ್ ಪರ ಮಾಡಿದ ವಾದವನ್ನು ನ್ಯಾಯಾಧೀಶರು ಒಪ್ಪದೇ ಶ್ರೀ ನಂದೀಬಸಪ್ಪನವರ ಶಿಕ್ಷೆಯನ್ನು ರದ್ದು ಮಾಡಿರುವರು

ಈ ಮೇಲಿನ ಶಿಕ್ಷೆಯ ದಾಖಲೆಯನ್ನು ಇಟ್ಟದ್ದು ಬಗ್ಗೆ ಹೇಳಿಕೆ ಕೊಡದಿರುವುದಕ್ಕೆ ಮಿಲ್ಲು ಮಾಲೀಕರಾದ ಶ್ರೀ ತಿಬ್ಬಣ್ಣನವರು [illegible] ತಮ್ಮಲ್ಲಿ [illegible] ದಲ್ಲಿ ಸೇರಿತ್ತೆ [illegible] [illegible] ಅಕ್ಕಿಯನ್ನು [illegible] ಕೊಡುವ [illegible] [illegible]ವಾಗಿರುವುದರಿಂದ ಅವರ [illegible]ದಾರರಿಂದ ದಂಡವನ್ನು ವಸೂಲು ಮಾಡಬೇಕೆಂದು ಆಜ್ಞಾಪಿಸಿರುವರು ಶಿಕ್ಷೆಯನ್ನು ಅವರಿಗೆ ವಾಪಸು ಕೊಡಬೇಕೆಂದು ತೀರ್ಪಿತ್ತು ಮಾಡಿರುವರು

ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿರುವ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್

ಸಮಾಲೋಚನೆಗಾಗಿ ಈಗ ಭಾರತಕ್ಕೆ ಬಂದಿರುವರು

SRI GAYATHRI,
Daily 3 shows
On 28th and 29th
Warner's
CAGED
On 30th and 31st
Warner's
PERFECT STRANGER
— Coming —
TRIPOLI

॥ ಶ್ರೀ ॥
ಗಣೇಶಾ ಟಾಕೀಸ್
29-8-51 ರಿಂದ 3 ದಿನಗಳು ಮಾತ್ರ
ಪ್ರತಿದಿನ 3 ಆಟಗಳು
ಮಂಗಯ್ಯರ್ ಕರಸಿ
[illegible]

ಗ[illegible]ದೇವ [illegible]
ಗೌರಿಹಬ್ಬದ ಸಲುವಾಗಿ
ರಿಯಾಯಿತಿ ಬೆಲೆ
ಕ್ರೇಪ್ [illegible], ಧರ್ಮಾವರಂ, ಜರಿ ಕಂಚಿ ರೇಷ್ಮೆ ಸೀರೆಗಳು
ದೊರೆಯುತ್ತವೆ
ಶಿವರಾಂಪೇಟೆ ಮೈಸೂರು

ಗೌಹ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಟ್
ಪೂನಾ, ನಾಗಪೂರ್ ಸೀರೆಗಳಿಗೆ
M. V. ಭೋಜಯ್ಯ ಬಿ.ಎ.
[illegible] ಎದುರು, ಮೈಸೂರು

ಗೌರಿ ಹಬ್ಬಕ್ಕಾಗಿ ನಾವಿರಾರು ಮಾದರಿ ರೇಷ್ಮೆ ಸೀರೆಗಳು ಮತ್ತು ನೂಲಿನ ಸೀರೆಗಳು ಬಂದಿವೆ ಸೀಘ್ರವಾಗಿ ಬಂದು ಕೊಳ್ಳಿರಿ.
D. L. ನರಸಿಂಹಯ್ಯ & ಬ್ರದರ್ಸ್,
ಜವಳಿ ಅಂಗಡಿ ಚಿಂದಾಮು ಆನಂದ ಭವನ ಹೋಟೆಲ್ ಹತ್ತಿರ, ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು
ರತ್ನಾವಳಿ ಥಿಯೇಟರಿನಲ್ಲಿ
ಅಮೋಘ ಪ್ರಾರಂಭ **ಅಕ್ಕಮಹಾದೇವಿ** 22 8 51 ರಿಂದ
ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ
ರಾತ್ರಿ 9 45 ಘಂಟೆಗೆ, ಉಳಿದ ದಿನಗಳಲ್ಲಿ ಮ್ಯಾಟಿನಿ 6 ಕ್ಕೆ

ಒಲಂಪಿಯಾ 30-8-51 ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಕಾರವಾರ ಫಿಲಂಸ್‌ರವರ **ಆ ಕೇ ಲಿ**
[illegible] ಕುಮಾರ್, [illegible] ಮತ್ತು [illegible] ಹಾಸ್ಯ ನಟ [illegible]
ಬೆಳಗಿನ ಪ್ರದರ್ಶನ 31-8-51 ರಿಂದ
[illegible] ಕುಮಾರ್ [illegible] ಪಾತ್ರ ವಹಿಸಿರುವ
[illegible] ಟಾಕೀಸ್‌ರವರ — **ಝೂಲಿ** —

ಗೌರಿ ಹಬ್ಬದ ಸ್ಪೆಷಲ್ • [illegible] ಗಜಗಳಲ್ಲಿ ಸೇಲಂ ಪ ಘುದೆ ದೊರೆಯುತ್ತವೆ
ನೂಲಿನ ನವೀನ ಮಾದರಿ ಸೀರೆಗಳು ಮತ್ತು ಮೈಸೂರು ರೇಷ್ಮೆ ಸೀರೆಗಳು
[illegible] ಒಂದೇ ಬೆಲೆ [illegible]
M. P. ನರಸಿಂಹಯ್ಯ ಜವಳಿ ಅಂಗಡಿ ದೊಡ್ಡಪೇಟೆ ಮೈಸೂರು

Edited, printed and published by A R Nagarajan, at Sadhvi Press D Subbiah Road, Mysore

ಗೌರಿ ಹಬ್ಬಕ್ಕಾಗಿ ಬಂದಿರುವ ಹೊಸ ಮಾದರಿ ನೂಲಿನ ಮತ್ತು A-S ಸಿಲ್ಕು ಸೀರೆಗಳು
5, 6, 7, 8, 9, ಗಜಗಳಲ್ಲಿ ದೊರೆಯುತ್ತವೆ
ದೇವಾಂಗ ಜವಳಿ ನಿವಾಸ್ ವಿ ವಿ ಮಾರ್ಕೆಟ್ ರೋಡ್, ಹಳೇ ಅಗ್ರಹಾರ, ಮೈಸೂರು

ಸಂಪುಟ ೧೦] ಗುರುವಾರ ೩೦-೮-೫೧ [ಸಂಚಿಕೆ ೩೧

ಭಾರತದಲ್ಲಿ ಗೋವಾದ ತಾತ್ಕಾಲಿಕ ಸರ್ಕಾರ

ಭಾರತದಲ್ಲಿ ಗೋವಾದ ತಾತ್ಕಾಲಿಕ ಸರ್ಕಾರ ಸ್ಥಾಪನೆ

ಭಾರತದಲ್ಲಿ ಶೀಘ್ರದಲ್ಲೇ ಪೋರ್ಚು-ಗೀಸರ ವಸಾಹತುವಾದ ಗೋವಾದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸೇರಿ ತಾತ್ಕಾಲಿಕ ಸರ್ಕಾರವನ್ನು ರಚಿಸುವರೆಂದು ಹೇಳಲಾಗಿದೆ. ಭಾರತದೊಡನೆ ಐಕ್ಯವಾಗಬೇಕೆಂದು ಸೂಚಿಸುವ ಪಕ್ಷಗಳು ಸರ್ಕಾರವನ್ನು ರಚಿಸಲಿರುವುವು.

ಬೊಂಬಾಯಿ ಗಿರಣಿ ದರೋಡೆಯಲ್ಲಿ ಒಬ್ಬನ ಮರಣ

ನೆನ್ನೆ ಬೆಳಗ್ಗೆ ೫|| ಗಂಟೆ ಸಮಯದ ಬೊಂಬಾಯಿನ ಸೂರ್ಯೋದಯ ಬಟ್ಟೆ ಗಿರಣಿಯ ಕಛೇರಿಗೆ ೨೦ ಜನ ಶಸ್ತ್ರಸಜ್ಜಿತ ದರೋಡೆಕೋರರು ಲಾರಿಯೊಂದರಲ್ಲಿ ಬಂದು ಬಾಗಿಲು ಕಾಯುತ್ತಿದ್ದ ಗೂರ್ಖಾ ಕಾವಲುಗಾರನನ್ನು ಇರಿದು ಕೊಂದು, ಇತರ ಮೂವರನ್ನು ಹೊಡೆದು ಅವರನ್ನು ಕಟ್ಟಿಹಾಕಿ ಕಛೇರಿಯೊಳಗೆ ನುಗ್ಗಿ ಸಹಸ್ರಾರು ರೂ ಬೆಲೆಯ ನಗದು ಪೆಟ್ಟಿಗೆ ಮತ್ತು ತಾಮ್ರದ ರೋಲುಗಳನ್ನು ಅಪಹರಿಸಿದರೆಂದು ಹೇಳಲಾಗಿದೆ. ಇನ್ನೊಬ್ಬ ಕಾವಲುಗಾರನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ.

ಇಬ್ಬರು ತಿರುವಾಂಕೂರು ಮಂತ್ರಿಗಳ ರಾಜೀನಾಮೆ

ತಿರುವಾಂಕೂರು ಕೊಚ್ಚಿ ಸಂಸ್ಥಾನ ಕಾಂಗ್ರೆಸ್ ಸಂಸ್ಥೆಯಲ್ಲಿ ಶಾಂತಿ ನೆಲೆಗೊಳಿಸಲು, ಅಲ್ಲಿನ ಎ. ಕೆ. ನಾರಾಯಣ ಪಿಳ್ಳೆ ಮತ್ತು ಎ. ಜೆ. ಜಾನ್ ಇಬ್ಬರು ಮಂತ್ರಿಗಳು ರಾಜೀನಾಮೆಯನ್ನು ಸಲ್ಲಿಸಿರುವರೆಂದು ಹೇಳಲಾಗಿದೆ. ಮುಖ್ಯ ಮಂತ್ರಿ ಕೇಶವನ್‌ರವರು ತಮ್ಮ ಮಂತ್ರಿ ಮಂಡಲವನ್ನು ಪುನರ್ರಚಿಸುವರೆಂದೂ ತಿರುವಾಂಕೂರು ಕೊಚ್ಚಿಯ ಇಬ್ಬರು ಸದಸ್ಯರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಲಾಗುವದೆಂದೂ ಹೇಳಲಾಗಿದೆ.

ಕಲ್ಕತ್ತಾದಲ್ಲಿ ಹಸಿದವರ ಪ್ರದರ್ಶನ

ಕಲ್ಕತ್ತದಲ್ಲಿ ಮೊನ್ನೆ ಐನೂರು ಜನ ಹಸಿದ ಪ್ರದರ್ಶನಕಾರರು ಅಲ್ಲಿಗೆ ೧೦ ಮೈಲಿ ದೂರ ಇರುವ ಬಯ ನಗರದಿಂದ ಬಂದು ಪ್ರದರ್ಶನ ನಡೆಸಿದಾಗ ನಗರದ ಪೊಲೀಸರಿಗೂ ಅವರಿಗೂ ಘರ್ಷಣೆಯುಂಟಾಗಿ ಅನೇಕರಿಗೆ ಗಾಯವಾಯಿತು. ಪೊಲೀಸರು ೧೫ ಜನರನ್ನು ಬಂಧಿಸಿ ಉಳಿದವರನ್ನು ಚದುರಿಸಿದರು. ಪ್ರದರ್ಶನದ ಮುಂದಾಳುತ್ವವನ್ನು ವಹಿಸಿದ್ದ ಎಡ ಪಕ್ಷಗಳ ಸಮಾಜದವರು ಊರಿನಲ್ಲಿ ಪಡಿತರ ಪದಾರ್ಥಗಳನ್ನು ಸರಬರಾಜು ಮಾಡಬೇಕೆಂದೂ ಮಣಕ್ಕೆ ೫೦ ರೂ ನಂತೆ ಅಕ್ಕಿಯನ್ನು ಮಾರಲಾಗುತ್ತಿದೆಯೆಂದೂ ಹೇಳಿರುತ್ತಾರೆ.

ಹೈಸ್ಕೂಲ್ ಹೆಡ್ಮಾಸ್ಟರ ಮೇಲೆ ಆಪಾದನೆ

ನಗರ ಪಾಲಿಕೆಯ ಪೌರಸಭಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ದೇವಾನಂದರವರು ೧೧ ಜನ ಸ್ಕೂಲ್ ಫೈನಲ್ ವಿದ್ಯಾರ್ಥಿಗಳ ಪ್ರಶಸ್ತಿ ಪತ್ರಗಳನ್ನು ಬದಲಾವಣೆ ಮಾಡಿರುವುದು ತನಿಖೆಯಿಂದ ಗೊತ್ತಾಗಿ ಅವರ ಮೇಲೆ ಮೊಕದ್ದಮೆ ಹೂಡಲು ಮದ್ರಾಸಿನ ವಿದ್ಯಾಧಿಕಾರಿ ಡೈರೆಕ್ಟರು ಸೂಚಿಸಿರುತ್ತಾರೆ.

ಬಾಬು ರೆಡ್ಡಿಯವರಿಗೆ ರಾಷ್ಟ್ರಾಧ್ಯಕ್ಷರ ಪದಕ

ಬೆಂಗಳೂರು ೨೦

ಮೈಸೂರು ಸಂಸ್ಥಾನದ ಡಿ. ಐ. ಜಿ. ಯವರಾದ ಶ್ರೀ ಎಸ್. ವಿ. ಬಾಬು ರೆಡ್ಡಿಯವರು ಸಲ್ಲಿಸಿದ ಅಮೋಘ ಸೇವೆಗಾಗಿ ರಾಷ್ಟ್ರಾಧ್ಯಕ್ಷರು ಅವರಿಗೆ ಪೊಲಿಸು ಪದಕವನ್ನು ದಯಪಾಲಿಸಿರುತ್ತಾರೆ.

ವಿದ್ಯುಚ್ಛಕ್ತಿ ಕಾರ್ಖಾನೆ ಕಾರ್ಮಿಕರ ಮುಷ್ಕರ

ಇಲ್ಲಿನ ಸರಕಾರಿ ವಿದ್ಯುಚ್ಛಕ್ತಿ ಕಾರ್ಖಾನೆಯ ೮೦ ಕಾರ್ಮಿಕರು ನೆನ್ನೆ ಮಧ್ಯಾಹ್ನದಿಂದ ಮುಷ್ಕರ ಹೂಡಿದ್ದಾರೆ. ನೆನ್ನೆ ಪಣಕಾಸು ಮತ್ತು ಕೈಗಾರಿಕಾ ಮಂತ್ರಿಗಳು, ವಿದ್ಯುಚ್ಛಕ್ತಿ ಡೈರೆಕ್ಟರನ್ನು ಭೇಟಿ ಮಾಡಿದರು. ಸರಕಾರಿ ಕಛೇರಿ ಮತ್ತು ವಿದ್ಯುಚ್ಛಕ್ತಿ ಕಾರ್ಖಾನೆ ಸುತ್ತಲೂ ಬಲವಾದ ಕಾವಲನ್ನು ಹಾಕಲಾಗಿದೆ. ಮುಷ್ಕರದ ಹೇತು ಮುಂದಿನ ದಿನಗಳ ನೋಟೀಸನ್ನು ಕೊಡಲಾಗಿತ್ತೆಂದು ಹೇಳಲಾಗಿದೆ.

ಮಹಾರಾಜರ ಅ|| ಸೆಕ್ರೆಟರಿ

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ಪರ್ಸನಲ್ ಅಸಿಸ್ಟೆಂಟ್ ಶ್ರೀ ಹೆಚ್. ಎಂ. ಶ್ರೀನಿವಾಸಯ್ಯನವರನ್ನು ಶ್ರೀಮನ್ಮಹಾರಾಜರ ಅಸಿಸ್ಟೆಂಟ್ ಸೆಕ್ರೆಟರಿಗಳನ್ನಾಗಿ ಶ್ರೀ ಎಚ್. ಎಸ್. ಮಲ್ಲಣ್ಣನವರ ಅರಸಿನವರ ಸ್ಥಾನದಲ್ಲಿ ನೇಮಿಸಲಾಗಿದೆ.

ಉಪಾಧ್ಯಾಯರ ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘ

ಕಳೆದ ಸೆಪ್ಟೆಂಬರ್‌ನಲ್ಲಿ ಆದ ತೀರ್ಮಾನದಂತೆ ಮೈಸೂರು ವಿಶ್ವವಿದ್ಯಾನಿಲಯದ ಉಪಾಧ್ಯಾಯರ ಕಾಲೇಜಿನ ಬಿ. ಟಿ. ತರಗತಿಯ ಹಳೇ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸಲು ಏರ್ಪಾಡಾಗುತ್ತಿದೆ. ಬಿ. ಟಿ. ತರಗತಿಯು ಪ್ರಾರಂಭವಾಗಿ ಈಗಾಗಲೇ ೨೫ ವರ್ಷಗಳಾಗಿ ಕಾಲೇಜಿನ ರಜತ ಮಹೋತ್ಸವದ ವರ್ಷವು ಈಗ ಒಂದಿದೆ. ಸಂಘವನ್ನು ಸ್ಥಾಪಿಸುವ ಎಲ್ಲಾ ಸೂಕ್ತ ಕಾರ್ಯಕ್ರಮವನ್ನು ಹಾಕಲು ಬರುವ ಸೆಪ್ಟೆಂಬರ್ ೨ನೇ ತಾ|| ಭಾನುವಾರ ಸಂಜೆ ೪ ಗಂಟೆಗೆ ಸದರಿ ಕಾಲೇಜಿನಲ್ಲಿ ಹಳೆಯ ಮತ್ತು ಈಗಿನ ವಿದ್ಯಾರ್ಥಿಗಳ ಸಭೆಯನ್ನು ಕರೆಯಲಾಗಿದೆ. ಕಾಲೇಜಿನ ಮುಖ್ಯೋಪಾಧ್ಯಾಯರಾದ ಶ್ರೀ ಎ. ಸಿ. ದೇವೇಗೌಡರು ಅಧ್ಯಕ್ಷತೆ ವಹಿಸುವರು.

ರೈಲು ಕಂಬಿ ಮೇಲೆ ಪೆಟ್ಟಾವು

ಜಲಂಧರ್ ಬಳಿ ಕಲ್ಕತ್ತಾ ಮೇಲ್ ರೈಲು ಹೋಗುವಂಥ ರಾತ್ರಿ ಬಿಯಾಸ್ ನದಿ ಸೇತುವೆಯನ್ನು ದಾಟುತ್ತಿದ್ದಾಗ ಇಂಜಿನ್ ಡ್ರೈವರನಿಗೆ ಕಂಬಿ ಮೇಲೆ ಇಟ್ಟಿದ್ದ ಭಾರಿ ಪೆಟ್ಟಾವು ಕಂಡು ಅವನು ರೈಲನ್ನು ನಿಲ್ಲಿಸಿ ಉಂಟಾಗಬಹುದಾಗಿದ್ದ ವಿಪರೀತ ಅಪಾಯದಿಂದ ಪಾರುಮಾಡಿದ ಪ್ರಯತ್ನಕ್ಕಾಗಿ ಅವನಿಗೆ ಬಹುಮಾನ ಕೊಡಬೇಕೆಂದು ಸೂಚಿಸಲಾಗಿದೆ. ಇವನ್ನು ಪೊಲೀಸರು ಅಧಿಕಾರಿಗಳು ಶೋಧಿಸುತ್ತಿದ್ದಾರೆ.

ಶನಿ ಮಹಾತ್ಮರ ಪಲ್ಲಕ್ಕಿ ಉತ್ಸವ

ಚಾಮರಾಜನಗರ ೨೦

ಇಲ್ಲಿನ ಆರ್ಯ ವೈಶ್ಯರ ಶ್ರೀಯುತ ಸಂಘದ ಆಶ್ರಯದಲ್ಲಿ ಬರುವ ೧ನೇ ತಾ|| ಶನಿವಾರ ಶ್ರೀ ಶನಿಮಹಾತ್ಮರ ಪಲ್ಲಕ್ಕಿ ಉತ್ಸವ ಪೂಜೆ ಮೊದಲಾದ ಕಾರ್ಯಾದಿಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ನಾಗಸ್ವರ ಮತ್ತು ತಾನ ಸುಂದರಂ ಪಿಳ್ಳೆಯವರ ಶಿಷ್ಯರು ಶ್ರೀ ಕೆ. ಸಿ. ರಾಮಣ್ಣ ಮತ್ತು ಕೆ. ಸಿ. ರಾಜಗೋಪಾಲ್‌ರವರಿಂದ ನಾಗಸ್ವರವೂ ತಿರುಪತಿಯ ಸಿ. ಎಂ. ಮುನಿಸ್ವಾಮಯ್ಯ ಬೆಂಗಳೂರಿನ ವಿ. ನಾರಾಯಣಪ್ಪ ಮತ್ತು ಕೋಯಮುತ್ತೂರಿನ ಎನ್. ಮುನಿರಂಗರವರಿಂದ ಡೋಲೂ ಸೇವೆ ಏರ್ಪಾಟಾಗಿದೆ. ಆಸ್ತಿಕ ಮಹಾಜನರೆಲ್ಲ ಈ ಭಾಗವಹಿಸಬೇಕೆಂದು ಕೋರಿದೆ.

ಅಮಲ್ದಾರರಿಗೆ ಸತ್ಕಾರ

ಇಲ್ಲಿಂದ ಸಾಗರಕ್ಕೆ ವರ್ಗವಾಗಿರುವ ಅಮಲ್ದಾರ್ ಶ್ರೀ ಎಸ್. ಮುರಳೀಂದ್ರಸ್ವಾಮಿಯವರನ್ನು ಬೀಳ್ಕೊಡುವುದಕ್ಕೆ ಬಂದು ಸತ್ಕಾರ ಸಮಾರಂಭವನ್ನು ಜನತೆ ವರ್ತಕರ ಸಂಘದವರು ೨೬ನೇ ತಾರೀಖು ಏರ್ಪಡಿಸಿದ್ದರು. ಸ್ಥಳೀಯ ಅಧಿಕಾರಿಗಳೂ ಖಾಸಗೀ ದೊಡ್ಡ ಮನುಷ್ಯರೂ ಆಗಮಿಸಿದ್ದರು.

೦ ಜಾಮಾನಿನ ದೊರೆ ಇಬ್ಬರು ಬ್ಯಾಂಕರನ್ನು ಕೊಂದ ಸಂಬಂಧವಾಗಿ ೬ ಜನರಿಗೆ ಮರಣದಂಡನೆಯನ್ನು ವಿಧಿಸಲಾಗಿದೆ. ಇತರ ನಾಲ್ಕು ಜನರನ್ನು ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ಜಿಲ್ಲೆಗಳಲ್ಲಿ ಪ್ರಭುಗಳ ಪ್ರವಾಸ

ಮೈಸೂರು ೩೦

ಶ್ರೀಮನ್ಮಹಾರಾಜರವರು ಬರುವ ತಿಂಗಳು ೭ನೇ ತಾ|| ಇಲ್ಲಿಂದ ಹೊರಟು ಐದು ದಿನಗಳವರೆಗೆ ಧಾರವಾಡ, ಬಳ್ಳಾರಿ, ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು. ಧಾರವಾಡದಲ್ಲಿ ೯ನೇ ತಾ|| ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡುವರು. ಅವರು ಆಧ್ಯಾತ್ಮಿಕ ಸಂಪನ್ನರಾದ ಶ್ರೀ ಸಿದ್ಧಾರೂಢರನ್ನು ಭೇಟಿಯಾಗುವರು. ಬೆಳಗಾಂ, ಹುಬ್ಬಳ್ಳಿ, ಬಾಗಲಕೋಟೆ, ಬಾದಾಮಿ ಮತ್ತು ಬಿಜಾಪುರಗಳಲ್ಲಿಯೂ ಪ್ರವಾಸ ಮಾಡುವರು.

ಬಿನ್ನಿ ಮತ್ತು ಅರಸಿನ ಕಾರ್ಖಾನೆ ವ್ಯವಹಾರದ ವಿಚಾರಣೆ

ಐ. ಎನ್. ಟಿ. ಯು. ಸಿ. ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರೂ ಮತ್ತು ಶ್ರೀ ಟಿ. ಎಸ್. ಸುಬ್ಬಣ್ಣನವರೂ ದಾವಣಗೆರೆಯಲ್ಲಿ ಕಾರ್ಮಿಕ ಸಚಿವರನ್ನು ಕಂಡು ಮೈಸೂರು ಬಿನ್ನಿ ಮತ್ತು ಅರಸಿನ ಕಾರ್ಖಾನೆಯಲ್ಲಿ ಲಾಕ್ ಔಟ್ ಮಾಡಿರುವುದು ಕಾನೂನು ಬಾಹಿರವಾಗಿರುವುದೆಂದೂ ಅದರಿಂದ ಕೆಲಸಗಾರರಿಗೆ ಬಹಳ ತೊಂದರೆಯಾಗಿರುವುದೆಂದೂ ತಿಳಿಸಿದರು. ಕಾರ್ಮಿಕ ಸಚಿವರು ಸೆಪ್ಟೆಂಬರ್ ೧ನೇ ತಾ|| ಮೈಸೂರಿಗೆ ಬಂದು ೬ ದಿನ ಇಂದ ಲೇಬರ್ ಆಫೀಸಿನಲ್ಲಿ ಉಭಯ ಪಂಗಡಗಳ ವಾದಗಳನ್ನು ವಿಚಾರಿಸುವುದಾಗಿ ಹೇಳಿರುವರೆಂದು ಗೊತ್ತಾಗಿದೆ.

ಸಂಗೀತ

ಚಲುವಾಂಬಾ ಅಗ್ರಹಾರದ ಬಳಿ ಇರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ನಾಳೆ ಸಂಜೆ ೭|| ಗಂಟೆ ಸಂ|| ರ|| ಟಿ. ಎಂ. ಪುಟ್ಟಸ್ವಾಮಯ್ಯನವರ ವೈಣಿಕಗೋಷ್ಠಿ ನಂತರ ಶ್ರೀ ಲಕ್ಷ್ಮಣ ಶರ್ಮರವರ ಸಂಗೀತವೂ ನಡೆಯುವುದು.

ಜನರನ್ನು ತಿನ್ನುತ್ತಿದ್ದ ಹುಲಿಯ ಶಿಕಾರಿ

ಹೆಗ್ಗಡದೇವನ ಕೋಟೆ ತಾಲ್ಲೂಕು ಬಾಡಗದ ದೊಡ್ಡ ಹಳ್ಳದ ಬಳಿ ಬಟ್ಟೆಬಾದ ಒಂದು ಬಿದಿರು ಮೆಳೆಯಲ್ಲಿ ಅಡಗಿದ್ದ ಭಾರಿ ಹುಲಿಯನ್ನು ಮೈಸೂರು ಜನ್ನಶೆಟ್ಟಿ ಮುಂತಾದವರು ಇತರರ ಸಹಾಯದೊಡನೆ ಕೊಂದರು. ಈ ಹುಲಿ ಅನೇಕ ಜನ ಮತ್ತು ಜಾನುವಾರುಗಳನ್ನು ತಿಂದು ಗ್ರಾಮಗಳಲ್ಲಿ ಭೀತಿ ಉಂಟುಮಾಡಿತ್ತು. ಸತ್ತ ಹುಲಿಯ ಮೆರವಣಿಗೆಯನ್ನು ಬಾಡಗ ಮತ್ತು ಸಂತೆ ಸರಗೂರಿನಲ್ಲಿ ನಡೆಸಲಾಯಿತು.

ಬ್ರಹ್ಮಪುತ್ರಾ ದ್ವೀಪಗಳಿಂದ ಪಾಕಿಸ್ತಾನದ ಸೇನೆ ವಾಪಸು

ಪಾಕಿಸ್ತಾನದ ಸೈನ್ಯವನ್ನು ಬ್ರಹ್ಮಪುತ್ರಾ ನದಿಯ ಚರ್ ದಯಾರಾಮ್ ಮತ್ತು ಚರ್ ಮಹೇಂದ್ರನಾಥ್ ಎಂಬ ಎರಡು ದ್ವೀಪಗಳಿಂದ ವಾಪಸು ಕರೆಸಲಾಗಿದೆ. ಅಸ್ಸಾಂ ಮತ್ತು ಪೂರ್ವ ಬಂಗಾಳ ಸರ್ಕಾರಗಳು ಆ ಪ್ರದೇಶದಲ್ಲಿ ಜಂಟಿ ಸರ್ವೆ ನಡೆಸಲು ಒಪ್ಪಿ ಈಗಾಗಲೇ ಅದು ಪ್ರಾರಂಭವಾಗಿದೆಯೆಂದು ಗೊತ್ತಾಗಿದೆ. ಈ ದ್ವೀಪಗಳು ಯಾರಿಗೆ ಸೇರಿದುವೆಂಬುದನ್ನು ಪರಿಶೀಲಿಸಲಾಗುವುದು.

ಮೂಲ ಶಿಕ್ಷಣವೂ— ಮೈಸೂರು ಸರ್ಕಾರವೂ

ಈಗ ನಡೆಯುತ್ತಿರುವ ಯಾಂತ್ರಿಕವಾದ ಒಣ ಶಿಕ್ಷಣಕ್ರಮ [illegible] ಹಕಾರಿಯಾಗಿಲ್ಲವೆಂದು ಭಾರತಕ್ಕೆ ಸರ್ವಸ್ವೀಕಾರವಾದ ಸಾರ್ವತ್ರಿಕ [illegible] ಯೋಜನೆಯನ್ನು [illegible] ಗಾಂಧೀಜಿಯವರು ಮುಂದಿಟ್ಟರು. [illegible] ಕೇಂದ್ರದವರು [illegible] ಗಳಲ್ಲಿ [illegible] ರೂಪದಲ್ಲಿ ಈ ಶಾಲೆಗಳನ್ನು ನಡೆಸಿ [illegible] ತ್ತಮ ಪ್ರತಿಫಲ ದೊರೆಯುವುದೆಂಬ [illegible] ನುಭವವನ್ನು ಪಡೆದ [illegible] ರು. ಇದನ್ನು ಕಂಡು ನಮ್ಮ ಸರ್ಕಾರದವರೂ ಈ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲು [illegible] ಗಗಳಲ್ಲಿ ಸುಮಾರು [illegible] ಗಳನ್ನು ತೆರೆದರು. [illegible] ದ ತೆರೆದ ಈ ಶಾಲೆಗಳಿಗೆ ಸರ್ಕಾರದವರು ನಾಲ್ಕು ವರ್ಷಗಳಾಗಿದ್ದರೂ [illegible] ಪಥವಾದ ಉಪಕರಣಗಳನ್ನು [illegible] ಕೊಡದೆ ಬಾಯ್ಮಾತಿನ ಪ್ರೋತ್ಸಾಹಿಯವರ ಮಾರ್ಗವನ್ನು ನಾವು ಅನುಸರಿಸಿದೆವೆಂದು ಈ ನವೀನ ಶಿಕ್ಷಣ [illegible] [illegible]

[illegible]

ಕೊಡಗನ್ನು ಮೈಸೂರಿಗೆ ಸೇರಿಸಲು ಸೂಚನೆ

[illegible] ಗುಂಪಿಗೆ ಕೊಡಗನ್ನು ಸೇರಿಸಬಾರದೆಂದೂ [illegible] ಮೈಸೂರಿಗೆ ಸೇರಿಸಬೇಕೆಂದೂ [illegible] ಪಾರ್ಲಿಮೆಂಟಿನಲ್ಲಿ [illegible] ಮುನಿಸ್ವಾಮಿಯವರು ಸಲಹೆ ಮಾಡಿದರು.

ಹಳೇ ವಿದ್ಯಾರ್ಥಿಗಳ ಸಭೆ

[illegible] ಶಾಲೆಯ ಹಳೆಯ ವಿದ್ಯಾರ್ಥಿಗಳ [illegible] ಸಂಘದ [illegible] ಗಂಟೆಗೆ [illegible]

[illegible]

ಅಂಗಾರಕ ಮತ್ತು ಶುಕ್ರ ಗ್ರಹಗಳಲ್ಲಿ ಪ್ರಾಣಿ ಜೀವನ

ಅಂಗಾರಕ ಮತ್ತು ಶುಕ್ರ ಗ್ರಹಗಳಲ್ಲಿ ಪ್ರಾಣಿ ಮತ್ತು ಸಸ್ಯಗಳ ಜೀವನಗಳು ಕಾಣ ಬರುತ್ತಿರುವುದಾಗಿ ರಷ್ಯದ ವೈಜ್ಞಾನಿಕರು ಕಂಡು ಹಿಡಿದಿರುತ್ತಾರೆ.

ಪ್ರಪಂಚದ ಸೈಕಲ್ ಪಂದ್ಯದಲ್ಲಿ ಜಯಶಾಲಿ

ಪ್ರಪಂಚದ ಸೈಕಲ್ ಪಂದ್ಯದಲ್ಲಿ ಬ್ರಿಟಿಷ್ ಪ್ರಸಿದ್ಧ ರೆಗ್ ಹ್ಯಾರಿಸ್ಸನ್ನು ಜಯ ಪಡೆದಿರುತ್ತಾನೆ. ೧೦೦೦ ಮೀಟರ್ ಅಷ್ಟು ದೂರವನ್ನು ಅವನು ೧೧ 1/2 ನಿಮಿಷದಲ್ಲಿ ಸೈಕಲ್ ಹೊಡೆಸಿ ಕ್ರಮಿಸಿದನು.

ವನ ಮಹೋತ್ಸವ

ಮೈಸೂರು ಧರ್ಮ ಪ್ರವರ್ತ ಶ್ರೀ ಯೋಗಾನರಸಿಂಹ ರಂಗಯ್ಯನವರಿಗೆ ಸೇರಿದ ಶೃಂಗಾರ ತೋಟದಲ್ಲಿ [illegible] ತಾ|| ವನ ಮಹೋತ್ಸವವನ್ನು ವಿದ್ಯಾರ್ಥಿಗಳೂ, ಸಾರ್ವಜನಿಕರೂ [illegible] ವರು ಮೋಟಾರು ನಿಲಕರಣಾ ವ್ಯಾಪಾರಿಗಳಾದ ಕ್ಯಾಪ್ಟನ್ ಬ್ರದರ್ಸವರು ಅಧ್ಯಕ್ಷತೆ ವಹಿಸಿದ್ದರು. ಅವರು ತುಳಸೀಗಿಡವೊಂದನ್ನು ನೆಟ್ಟು ಅದಕ್ಕೆ ಹಾಲನ್ನು ಎರೆದರು.

ಮೈಸೂರು ಕ್ರಿಶ್ಚಿಯನ್ನರ ಮನವಿ

ಸಂಗೀರಿಯ ಪಾದ್ರಿ ಜೋಸೆಫ್ ಗ್ರೊಸಾರವರನ್ನು [illegible] ಗ್ರಹ ನರ್ಸ ಕಾರಾಗೃಹ ವಾಸವನ್ನು ವಿಧಿಸುವ ಅನ್ಯಾಯವೆಂದು ಪ್ರತಿಭಟಿ [illegible] ಸರ್ಕಾರದವರು ಈ ಒನ್ನು [illegible] ಪಾದ್ರಿಯವರನ್ನು ಬಿಡುಗಡೆ ಮಾಡಿಸಲು ಪ್ರಯತ್ನಿಸಬೇಕೆಂಬ ಕೋರುವ ನಿರ್ಣಯವನ್ನು ರಾಜಧಾನಿಯ ಕ್ರಿಶ್ಚಿಯನ್ನರು ನಡೆಸಿದ ಸಭೆಯಲ್ಲಿ ಅಂಗೀಕರಿಸಲಾಯಿತು.

ಸಮೃದ್ಧ ಕರ್ನಾಟಕ

ಕರ್ನಾಟಕ ಯುವಕ ಪರಿಷತ್ತಿನ ಕಾರ್ಯದರ್ಶಿಗಳೂ, ಹಾಸನದ ವಕೀಲರೂ ಆದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರಿಂದ ಬರೆಯಲ್ಪಟ್ಟಿರುವ "ಸಮೃದ್ಧ ಕರ್ನಾಟಕ" ಎಂಬ ಪುಸ್ತಕವನ್ನು ಅವರಿಂದ ಸ್ವೀಕರಿಸಿದ್ದೇವೆ. ಲೇಖಕರು ಕರ್ನಾಟಕ ಪ್ರಾಂತ್ಯದ ರಚನೆಗೆ ಇರುವ ಬಾಧಕ ಭಾಧಕಗಳನ್ನು ವಿಮರ್ಶಿಸಿ, ಆರ್ಥಿಕ ಮತ್ತು ಆಹಾರ ಸಮಸ್ಯೆಗಳು ಪರಿಹಾರವಾಗುವುದಕ್ಕೆ ಏಕೀಕರಣ ಸಹಾಯಕವಾಗುತ್ತದೆಂಬ ಅಂಶವನ್ನು ಅಂಕೆ ಅಂಶಗಳ ಮೂಲಕ ತಿಳಿಸಿದ್ದಾರೆ. ಜನತೆ ಏಕೀಕರಣ ಸಾಧನೆಗಾಗಿ ಚಳುವಳಿಯನ್ನು ಆರಂಭಿಸಬೇಕೆಂದೂ ಸೂಚಿಸಿದ್ದಾರೆ.

ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಮೊದಲ ಮಾತು ಬರೆದು ಕೆಲವು ಮಂದಿ ಸ್ವಾರ್ಥಪರರು ಮಾತ್ರ ಏಕೀಕರಣವನ್ನು ವಿರೋಧಿಸುತ್ತಿದ್ದಾರೆಂದು ಹೇಳಿದ್ದಾರೆ. ಏಕೀಕರಣಕ್ಕಾಗಿ ಹಾತೊರೆಯುತ್ತಿರುವ ಜನತೆ ಅಗತ್ಯವಾಗಿ ಓದಬೇಕಾದ ಪುಸ್ತಕವಿದೆಂದು ನಾವು ಹೇಳಬಯಸುತ್ತೇವೆ. ಈ ಪುಸ್ತಕದ ಬೆಲೆ ಕೇವಲ ನಾಲ್ಕು ಆಣೆ.

ಶಿವ ಕಥೆ

ಮಂಡಿ ಮೊಹಲ್ಲಾ ಕಾಳಿದಾಸ ರಸ್ತೆ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಈ ದಿನ ಸಂಜೆ ೭ ಗಂಟೆಗೆ ಶ್ರೀ ಹೆಚ್ ಎಸ್ ಶಿವಲಿಂಗಸ್ವಾಮಿಯವರಿಂದ ಸಿದ್ಧ ಲಿಂಗೇಶ್ವರ ವಿಜಯ ಎಂಬ ಶಿವಕಥೆಯು ನಡೆಯುವುದು. ನೃತ್ಯ ಟೀಚರ್ಸ್ ಕಾಲೇಜು ಪ್ರಿನ್ಸಿಪಾಲರಾದ ಡಾ|| ಎಂ ಸಿದ್ಧಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು.

ರಾಜಕಮಲ್, ಮೈಸೂರು
31-8-51 ರಿಂದ 4ನೇ ವಾರ
ಜಗನ್ಮೋಹಿನಿ

ಗುರುದೇವಾ ಹಾಲ್
ಗೌರಿಹಬ್ಬದ ಸಲುವಾಗಿ
ರಿಯಾಯಿತಿ ಬೆಲೆ
ಕ್ರೇಪ್, ಜಾರ್ಜೆಟ್, ಧರ್ಮಾವರಂ ಅರಣಿ, ಕಂಚಿ ರೇಷ್ಮೆ ಸೀರೆಗಳು
ಮಂಡಿಯ ಹತ್ತಿರ
ಶಿವರಾಂಪೇಟೆ ಮೈಸೂರು

ಚಾಮುಂಡೇಶ್ವರಿ
ಟಾಕೀಸ್
31-8-51ರಿಂದ ಅಮೋಘ 6ನೇ ವಾರ
* ದೇವಕಿ *
ಶನಿವಾರ ಮತ್ತು ಭಾನುವಾರಗಳಲ್ಲಿ
ಬೆಳಗಿನ ಪ್ರದರ್ಶನ
ಸಿಸ್ಟರ್ ಕೆನ್ನಿ

NALINS
Next New Furniture
GRAND AUCTION SALE
On Sunday 2-9-51 at 4 p. m.
V. V. Market Square Mysore

ಗೌರಿ ಹಬ್ಬಕ್ಕಾಗಿ. ಹಾರಾಡುವ ಸೂರತ್ ರೇಷ್ಮೆ ಸೀರೆಗಳು ಮತ್ತು ಸೂರತ ಜರಿಗಳು ಬಂದಿವೆ ನೇರವಾಗಿ ಬಂದು ಕೊಳ್ಳಿರಿ
D.L. ನರಸಿಂಹಯ್ಯ & ಬ್ರದರ್ಸ್,
ಅವಲ ಅಂಗಡಿ ಬೆಂಗಳೂರು ಆನಂದ ಭವನ ಹೋಟೆಲ್ ಪಕ್ಕ ಮೈಸೂರು

ರಣಜಿತ್ * ಟಾಕೀಸ್
ಅಮೋಘ 4ನೆಯ ವಾರ
ಮನಸ್ಸೋಹಕ ನೃತ್ಯ ಮತ್ತು ಇಂಪಾದ ಗಾನಗಳಿಂದ ಪ್ರೇಕ್ಷಕರನ್ನಾಕರ್ಷಿಸುತ್ತಿರುವ ಕ್ರೇಷ್ಠ ಕಲಾಕೃತಿ
ವರ್ಮಾ ಫಿಲಂಸ್ ರವರ ಮಹೋನ್ನತ ಹಿಂದಿ ಚಿತ್ರ
* ಬಾದಲ್
ಭೂಮಿಕೆಯಲ್ಲಿ ಮಧುಬಾಲ ಪ್ರೇಮನಾಥ
ನಿರ್ದೇಶಕ [illegible] ಚಕ್ರವರ್ತಿ ಸಂಗೀತ - ಶಂಕರ್ ಮತ್ತು ಜೈಕಿಷನ್
ASHOK RELEASE

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು
ರತ್ನಾವಳಿ ಥಿಯೇಟರಿನಲ್ಲಿ
ಅಮೋಘ ಪ್ರಾರಂಭ ಅಕ್ಕ ಮಹಾದೇವಿ 22-8-51 ರಿಂದ
ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಲ್ಲಿ
ರಾತ್ರಿ 9-15 ಘಂಟೆಗೆ ಉಳಿದ ದಿನಗಳಲ್ಲಿ ಮ್ಯಾಟಿನಿ 6-45 ಕ್ಕೆ

ಪ್ರಭುದೇವಾ ಟಾಕೀಸ್
ಪ್ರತಿ ದಿನ 3 ಆಟಗಳು
31-8-51 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ರಾಯಲ್ ಟಾಕೀಸಿನವರ ತಮಿಳು ಚಿತ್ರ
* ಚಿಂತಾಮಣಿ *
ಮುಖ್ಯಪಾತ್ರ ತ್ಯಾಗರಾಜ ಭಾಗವತರ್, ಅಶ್ವತ್ಥಮ್ಮ ಮುಂತಾದವರು

Edited printed and published by A. R. Nagarajan at Sadhvi Press. D. Subbiah Road, Mysore.

ಪ್ರಜಾ

ಸಂಪುಟ ೧೦] ಶುಕ್ರವಾರ ೩೧-೮-೫೦ [ಸಂಚಿಕೆ ೩೨

ಮಧ್ಯ ಪ್ರದೇಶದಲ್ಲಿ ಗೋವಧಾ ನಿಷೇಧ

ಮಧ್ಯ ಪ್ರದೇಶದಲ್ಲಿ ಗೋವಧಾ ನಿಷೇಧದ ಶಾಸನ

ಗೋವುಗಳನ್ನು ವಧಿಸಕೂಡದೆಂದು ನಿಷೇಧಿಸುವ ಮಸೂದೆಯನ್ನು ಮಧ್ಯ ಪ್ರದೇಶ ಶಾಸನ ಸಭೆಯು ಅಂಗೀಕರಿಸಿರುತ್ತದೆ. ಈ ಸಂಬಂಧವಾಗಿ ಬಿಹಾರ ಸರ್ಕಾರದವರು ನೇಮಿಸಿದ್ದ ಸಮಿತಿಯೊಂದು ಎಲ್ಲ ಪ್ರಾಣಿಗಳ ವಧೆಯನ್ನೂ ನಿಷೇಧಿಸಬೇಕೆಂದು ಸಲಹೆ ಮಾಡಿದ್ದಿತು.

ಪಶ್ಚಿಮ ಬಂಗಾಳದಲ್ಲಿ ಪಾಕಿಸ್ತಾನ ಗೂಢಚಾರರು

ಪಶ್ಚಿಮ ಬಂಗಾಳದ ಗಡಿ ನಗರವೊಂದರಲ್ಲಿ ಶೋಧನೆ ನಡೆಸಿದಾಗ ಹಲವು ವಿದೇಶೀಯರು ಅಲ್ಲಿ ಗೂಢಚಾರ ಕೆಲಸವನ್ನು ಮಾಡುತ್ತಿರುವುದು ಪತ್ತೆಯಾಗಿರುವುದಲ್ಲದೆ, ಪಶ್ಚಿಮ ಬಂಗಾಳದೊಳಗೆ ಹೊರಗಿನಿಂದ ಶಸ್ತ್ರಾಸ್ತ್ರಗಳನ್ನು ಕಳ್ಳತನದಿಂದ ರವಾನಿಸಲು ಪ್ರಯತ್ನಗಳು ನಡೆಯುತ್ತಿರುವುದು ಕಂಡುಬಂದಿತೆಂದು [illegible]ಜಿಯವರು ಪಾರ್ಲಿಮೆಂಟಿನಲ್ಲಿ ತಿಳಿಸುತ್ತಾ ಭದ್ರತೆಯನ್ನು ಕಾಪಾಡಲು [illegible] ಕ್ರಮಗಳನ್ನೂ ಕೈಗೊಂಡಿರುವುದಾಗಿ ಅವರು ಹೇಳಿರುತ್ತಾರೆ.

ಡಿಸೆಂಬರಿನಲ್ಲಿ ಪ್ರಥಮ ಟೆಲಿವಿಷನ್ ಪ್ರದರ್ಶನ

ಭಾರತದಲ್ಲಿ ಟೆಲಿವಿಷನ್ ಪ್ರದರ್ಶನವನ್ನು ನೋಡುವ ಪ್ರಥಮ ಅವಕಾಶವು ಬರುವ ಡಿಸೆಂಬರಿನಲ್ಲಿ ಆಗುವುದೆಂದೂ, ಕಲ್ಕತ್ತಾ, ದೆಹಲಿ, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ ನಡೆಯುವ ಅಂತರ ರಾಷ್ಟ್ರೀಯ ಚಲನ ಚಿತ್ರಗಳ ಉತ್ಸವದ ಸಮಯದಲ್ಲಿ ಅದನ್ನು ತೋರಿಸಲಾಗುವುದೆಂದೂ ಹೇಳಲಾಗಿದೆ.

ನೆಹರೂರವರಿಗೆ ಬಹಿರಂಗ ಪತ್ರ

ಮೈಸೂರು ಪ್ರಜಾಮಂಡಲದ ಸಂಸ್ಥಾಪಕರಾದ ಶ್ರೀ ವೆಂಕಟಸುಬ್ಬಯ್ಯನವರು ಪ್ರಧಾನಿ ನೆಹರೂರವರಿಗೆ ಬಹಿರಂಗ ಪತ್ರವೊಂದನ್ನು ಬರೆದು, ಈ ವರ್ಷ ನವರಾತ್ರಿ ಕಾಲದಲ್ಲಿ ಶ್ರೀ ಮಹಾರಾಜರವರ ಜಂಬೂಸವಾರಿಯನ್ನು ನೋಡಲು ಬಂದ ಲಕ್ಷಾಂತರ ಜನರು ನಿರಾಶೆ ಹೊಂದಿದಂತೆ ಈ ವರ್ಷವೂ ನಿರಾಶರಾಗದ ಹಾಗೆ ಜಂಬೂಸವಾರಿಯು ಸಕಲ ಮರ್ಯಾದೆಯೊಂದಿಗೆ ನಡೆಯಲು ಎಲ್ಲಾ ಅನುಕೂಲಗಳನ್ನೂ ಒದಗಿಸಿ ಕೊಡಬೇಕೆಂದು ಕೋರಿರುತ್ತಾರೆ.

ಪುರಸಭಾ ಇಂಜನಿಯರರ ವರ್ಗ

ರಾಜಧಾನಿಯ ಪೌರಸಭೆಯಲ್ಲಿ ಇಂಜನಿಯರರಾಗಿರುವ ಶ್ರೀ ವಿ ಕೆ ಮುನಿಸ್ವಾಮಿ[illegible]ರವರನ್ನು ಹೆಗ್ಗಡದೇವನಕೋಟೆ ತಾಲ್ಲೂಕು ಹುಣಸೂರು ಜಲಾಶಯದ ಕೆಲಸಗಳ ಮೇಲ್ವಿಚಾರಣೆಗಾಗಿ ವರ್ಗಾಯಿಸಲಾಗಿದೆ.

ಕ್ರಮ ಬಳ್ಳಾರಿ ಜಾಮೀನಿನ ಪತ್ತೆ

ಡಿಸ್ಟ್ರಿಕ್ಟ್ ಟೆಕ್ಸ್‌ಟೈಲ್ ಇನ್ಸ್‌ಪೆಕ್ಟರ್ ಶ್ರೀ ಸಿ ತಿಮ್ಮಪ್ಪ ರೆಡ್ಡಿಯವರು ನಗರದ ಹಲವು ಜವಳಿ ಅಂಗಡಿಗಳಿಗೆ ಹೋಗಿ ತಪಾಸಣೆ ನಡೆಸಿ, ಕಾನೂನಿಗೆ ವಿರೋಧವಾಗಿ ಬಚ್ಚಿಟ್ಟಿದ್ದ ದಾಸ್ತಾನು ಇದ್ದುದನ್ನು ಪತ್ತೆ ಹಚ್ಚಿ ಮುಂದಿನ ವಿಚಾರಣೆ ನಡೆಸುತ್ತಿರುವರು.

ಬ್ರೆಡ್ಡಿನ ವಿಷದಿಂದ ಮರಣ ಅನೇಕರಿಗೆ ಚಿತ್ತಭ್ರಾಂತಿ

ಫ್ರಾನ್ಸಿನ ಪಾಂಟ್ ಸೇಂಟ್ ಎಸ್ಪ್ರಿಟ್ ಎಂಬ ಹಳ್ಳಿಯಲ್ಲಿ ಬ್ರೆಡ್ಡನ್ನು ತಿಂದವರಲ್ಲಿ ೩ ಜನರು ಮೃತಪಟ್ಟು, ಅನೇಕರು ಆಸ್ಪತ್ರೆಗಳಿಗೆ ದಾಖಲಾಗಿರುತ್ತಾರೆ. ಅವರುಗಳಿಗೆ ಚಿತ್ತಭ್ರಾಂತಿ ಉಂಟಾಗಿ ತಮ್ಮನ್ನು ಕಾಡುಮೃಗಗಳು ಅಟ್ಟಿಕೊಂಡು ಬರುತ್ತಿರುವಂತೆ ಭಯಂಕರ [illegible] ಯಾವ ಹಾವುಗಳು ಕಡಿದಂತೆ ಭಾವಿಸುತ್ತಿರುವರು. ಬ್ರೆಡ್ಡಿನಲ್ಲಿ ಮಿಶ್ರವಾಗಿರುವ ವಿಷದ ದೆಸೆಯಿಂದ ಈ ರೀತಿಯಾಗಿರುವುದೆಂದು ಹೇಳಲಾಗಿದೆ. ಆಸ್ಪತ್ರೆಗಳಲ್ಲಿ ಜನರ ರಕ್ಷಣೆ ಮಾಡಿಕೊಳ್ಳಲು ಚಿಕಿತ್ಸೆ ನೀಡುತ್ತಿದ್ದಾರೆ. ಎಷ್ಟು ಹೆಂಗಸರು ಕಿಟಕಿಯಿಂದ ಹಾರಿ ಸತ್ತಿದ್ದಾರೆ.

ಇದಲ್ಲದೆ ಚೀನಾದ [illegible] ನದಿ ತೀರದ ಹಳ್ಳಿಯಲ್ಲಿ ಆಹಾರದಲ್ಲಿ ವಿಷ ಬೆರೆತು ೨೦ ಜನರು ತೊಂದರೆಗೊಳಗಾಗಿರುವರು. ಒಬ್ಬ ಕಷಾಯವನ್ನು ಕೊಟ್ಟ ಕುಮಾರಿ ಮಾಂಸವನ್ನು ಅವರು ತಿಂದುದರಿಂದ ಹೀಗಾಗಿದೆ. ಮತ್ತು ಮಧ್ಯ ಫ್ರಾನ್ಸಿನ ಸೇಂಟ್ ಗಾಲ್ಮಿಯರ್‌ನಲ್ಲಿಯೂ ಐಸ್ ಕ್ರೀಂನಿಂದ ೧೦೦ ಜನರು ಅಸ್ವಸ್ಥರಾಗಿರುತ್ತಾರೆ. ಅವರ ಜನರ ಸ್ಥಿತಿ ಯಾರೂ ಮರಣ ಹೊಂದಿಲ್ಲವೆಂದು ಹೇಳಲಾಗಿದೆ.

ಹರಿಕಥೆ

ಓರಿಯಂಟಲ್ ಇಂಡಸ್ಟ್ರೀಸಿನ ಮಾಲೀಕರಾದ ಶ್ರೀ ಬಿ ಎಸ್ ಸುಬ್ಬರಾಯರು ಚಾಮುಂಡಿಪುರದಲ್ಲಿರುವ ತಮ್ಮ ಗೃಹದಲ್ಲಿ ಶ್ರಾವಣ ಶುಕ್ರವಾರದ ಪ್ರಯುಕ್ತ ನಾಳೆ ರಾತ್ರಿ ೭|| ಕ್ಕೆ ಹರಿಕಥಾ ವಿದ್ವಾನ್ ಶ್ರೀ ನದೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ ಪದ್ಮಾವತಿ ಪರಿಣಯ ಎಂಬ ಹರಿಕಥೆಯನ್ನು ಏರ್ಪಡಿಸಿರುತ್ತಾರೆ.

ಬ್ರೆಡ್ಡಿನ ಬೆಲೆ ಸಿಗದು

ಆಸ್ಟ್ರೇಲಿಯಾ ಗೋಧಿಯ ಹಿಟ್ಟು ಮತ್ತು ಹೊಟ್ಟು ತೆಗೆಯದ ಹಿಟ್ಟನ್ನು ಬೆರೆಸಿ ಮಾಡುವ ಉತ್ತಮವಾದ ಬ್ರೆಡ್ಡಿನ ಬೆಲೆಯನ್ನು ನಾಳೆಯಿಂದ ೧೬ ಔನ್ಸಿಗೆ ೦-೬-೬ ಆಣೆಯಂತೆ ಗೊತ್ತು ಮಾಡಲಾಗಿದೆ. ಬ್ರೌನ್ ಮತ್ತು ಬಿಳಿಯ ಬ್ರೆಡ್ಡುಗಳಿಗೆ ಇರುವ ಬೆಲೆಯು ಈಗಿರುವ ರೀತಿಯಲ್ಲೇ ಮುಂದುವರಿಯುವುದು.

ವರದಕ್ಷಿಣೆ ನಿರೋಧಕ್ಕಾಗಿ ಮದ್ರಾಸಿನಲ್ಲಿ ಮಸೂದೆ

ಮದ್ರಾಸಿನ ಶಾಸನ ಸಭೆಯಲ್ಲಿ ಶ್ರೀ ಎ ಕಾಳೇಶ್ವರರಾಯರು ಮಸೂದೆಯೊಂದನ್ನು ತಂದು ಆ ಪ್ರಾಂತದ ಎಲ್ಲ ವರ್ಗಗಳ ಜನರಲ್ಲೂ ವರದಕ್ಷಿಣೆಯ ಪದ್ಧತಿಯನ್ನು ನಿರೋಧಿಸಬೇಕೆಂದು ಸೂಚಿಸಿದರು. ವರದಕ್ಷಿಣೆ ಕೊಡುವವರಿಗೂ, ತೆಗೆದುಕೊಳ್ಳುವವರಿಗೂ ಸಜಾ ಕೊಡತಕ್ಕ ಎಂದು ಮಸೂದೆಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ೩೦೦ ರೂ ವರೆಗೆ ಜುಲ್ಮಾನೆಗಳನ್ನು ವಿಧಿಸಬಹುದಾದ ಅಧಿಕಾರ ಕೊಡಲು ಅವಕಾಶ ಇದೆ.

ಕಾಂಗ್ರೆಸ್ ಚುನಾವಣಾ ರೀತಿ ಅವಧಿ ಹೆಚ್ಚಿತು

ಮದ್ರಾಸಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪರ ಚುನಾವಣಾಧಿಕಾರಿಗಳಾಗಿರುವವರು ಪ್ರದೇಶ ಸಮಿತಿಗಳಿಗೆ ಅರ್ಜಿ ಸಲ್ಲಿಸಬೇಕಾಗಿರುವ ಅವಧಿಯನ್ನು ಬರುವ ಸೆಪ್ಟೆಂಬರ್ ೯ ನೇ ತಾರೀಖಿನ ವರೆಗೆ ಹೆಚ್ಚಿಸಲಾಗಿದೆ. ದೆಹಲಿಯಲ್ಲಿ ಎ ಐ ಸಿ ಸಿ ಯ ಸಭೆ [illegible] ನೇ ತಾ ಸೇರುವುದಾದ ಕಾರಣ ಈ ರೀತಿ ಮುಂದುವರಿಸಲಾಗಿದೆ.

ಹಸುವಿನ ಕೆಚ್ಚಲಿನ ಹಾಲು ಹಾವಿನಿಂದ ಸೇವನೆ

ರಾಜಧಾನಿಯ ಪೊಲೀಸು ಲೈನಿನಲ್ಲಿರುವ ಒಬ್ಬ ಕಾನ್‌ಸ್ಟೇಬಲ್ಲನ ಮನೆಯಲ್ಲಿ ಹಸುವಿನ ಕೆಚ್ಚಲಿನಿಂದ ಹಾಲನ್ನು ಒಂದು ನಾಗರಹಾವು ಕುಡಿದ ಮಂಗಳವಾರ ಬೆಳಿಗ್ಗೆ ನಡೆಯುತ್ತಿದ್ದುದು ಮನೆಯವರ ಕಣ್ಣಿಗೆ ಬಿದ್ದ ಪ್ರಸಂಗವು ವರದಿಯಾಗಿದೆ. ಜನರು ಕೂಗಿಕೊಳ್ಳಲಾಗಿ ಹಸುವು ಕಾಲನ್ನು ಝಾಡಿಸಿದಾಗ ಹಾವು ಓಡಿ ಹೋಯಿತೆಂದು ಹೇಳಲಾಗಿದೆ. ಕೆಚ್ಚಲಿನಲ್ಲಿ ಕಡಿದ ಗುರುತು ಇದ್ದುದರಿಂದ ಆ ಪಶುವಿಗೆ ಪಶು ವೈದ್ಯಶಾಲೆಯಲ್ಲಿ ಚಿಕಿತ್ಸೆ ಮಾಡಲಾಯಿತು.

ಚಿನ್ನದ ಗಣಿ ಕಾರ್ಮಿಕ ಮುಖಂಡರ ದಸ್ತಗಿರಿ

ಕೋಲಾರದ ಚಿನ್ನದ ಗಣಿಗಳ ಕಾರ್ಮಿಕರ ಮುಖಂಡರುಗಳಾದ ಕೆ ಎಸ್. ವಾಸನ್, ಎಂ. ವಿ ಗೋವಿಂದನ್, ತಿಮ್ಮಯ್ಯ, ಗಂಭೀರಂ, ಎ ಸಿ ನರಸಿಂಹನ್, ಚಿನ್ನದೊರೈ, ದೊರೆಸ್ವಾಮಿ ಮುಂತಾದವರನ್ನು ದಸ್ತಗಿರಿ ಮಾಡಲಾಗಿದೆ.

ಭಾರತದಲ್ಲಿ ಎಣ್ಣೆ ಪರಿಷ್ಕರಣ ಕಂಪೆನಿಗಳ ಸ್ಥಾಪನೆ

ಬೊಂಬಾಯಿ ಮತ್ತು ಮದ್ರಾಸು ಸಂಸ್ಥಾನಗಳಲ್ಲಿ ಒಂದೊಂದು ಪೆಟ್ರೋಲ್ ಎಣ್ಣೆ ಪರಿಷ್ಕರಣ ಯಂತ್ರವನ್ನು ಸ್ಥಾಪಿಸುವ ಬಗ್ಗೆ ಭಾರತ ಸರ್ಕಾರದವರು ಈ ದೇಶದಲ್ಲಿರುವ ೩ ಎಣ್ಣೆ ಕಂಪೆನಿಗಳಿಗೆ ಸೂಚನೆ ಕಳುಹಿಸಿ, ಅವುಗಳಲ್ಲಿ ೧೦ಲಕ್ಷ ಟನ್ ಎಣ್ಣೆಯನ್ನು ಶುದ್ಧೀಕರಿಸಲು ಕೋರಿರುತ್ತಾರೆ. ೩೦ ವರ್ಷಗಳವರೆಗೆ ಈ ಕಂಪೆನಿಗಳನ್ನು ರಾಷ್ಟ್ರೀಕರಣ ಮಾಡುವುದಿಲ್ಲವೆಂದು ಸರ್ಕಾರದವರು ಭರವಸೆಯನ್ನು ಕೊಟ್ಟಿರುತ್ತಾರೆ. ರಾಷ್ಟ್ರೀಕರಣ ಮಾಡಲು ನಿರ್ಧಾರವಾದ ಮೇಲೆ ಸಾಕಾದಷ್ಟು ಪರಿಹಾರ ದ್ರವ್ಯವನ್ನು ಕೊಡುವುದಾಗಿ ಆಶ್ವಾಸನೆಯು ನೀಡಲಾಗಿದೆ.

ಪೊಲೀಸು ಠಾಣೆ ಮೇಲೆ ಜನರ ಗುಂಪಿನ ಧಾಳಿ

ಕೋಲಾರದ ತಾಲ್ಲೂಕು ಶ್ಯಾಲನೂರಿನಲ್ಲಿ ಸಾರಾಯಿ ಕುಡಿದು ಬೀದಿಯಲ್ಲಿ ಗಲಾಟೆ ಮಾಡುತ್ತಿದ್ದ ಒಬ್ಬನನ್ನು ಪೊಲೀಸು ನೌಕರನೊಬ್ಬನು ಸ್ಟೇಷನ್ನಿಗೆ ಕರೆದುಕೊಂಡು ಹೋಗುತ್ತಿದ್ದಾಗ ಅದೇ ಗ್ರಾಮದ ಇತರ ಸುಮಾರು ೩೦ ಜನರು ಸೇರಿ ಆತನನ್ನು ಬಿಡಿಸಿಕೊಂಡು ಹೋದರೆಂದು ವರದಿಯಾಗಿದೆ. ನಂತರ ಪೊಲೀಸಿನವನನ್ನು ಅವರು ಹುಡುಕಿಕೊಂಡು ಠಾಣೆ ಮೇಲೆ ಧಾಳಿ ನಡೆಸಿದರೂ ಆತ ಒಬ್ಬನ ಮನೆಗೆ ಹೋದರೆಂದೂ, ಆತನು ತಪ್ಪಿಸಿಕೊಂಡು ಕೋಲಾರಕ್ಕೆ ಬಂದು ಈ ವಿಷಯವನ್ನು ತಿಳಿಸಲಾಗಿ, ಸಬ್ ಇನ್ಸ್‌ಪೆಕ್ಟರ್ [illegible]ಯ್ಯನವರು ಸಶಸ್ತ್ರ ಪೊಲೀಸು ದಳದೊಡನೆ ಹೋಗಿ ೩೩ ಮಂದಿಯನ್ನು ದಸ್ತಗಿರಿ ಮಾಡಿದರೆಂದೂ ತಿಳಿದುಬಂದಿದೆ. ಅವರ ಪೈಕಿ ಮಾಜಿ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾದ ವಿ [illegible] ಖಾನ್ ಮತ್ತು ಅವರ ಇಬ್ಬರು ಮಕ್ಕಳೂ ಇರುವರು.

ಕೃತಕ ಮಳೆ ಕರೆಸಲು ಮದ್ರಾಸಿನಲ್ಲಿ ಆಲೋಚನೆ

ಅಮೆರಿಕದಲ್ಲಿ ಕೃತಕ ಮಳೆಯನ್ನು ಕರೆಸುವ ರೀತಿಯಲ್ಲಿ ಮದ್ರಾಸಿನಲ್ಲೂ ಪ್ರಯತ್ನ ನಡೆಸುವ ಬಗ್ಗೆ ಸರ್ಕಾರದವರು ಪರಿಶೀಲನೆ ನಡೆಸುತ್ತಿರುವುದಾಗಿ ಆಹಾರ ಸಚಿವರಾದ ಭಕ್ತವತ್ಸಲಂರವರು ತಿಳಿಸಿರುತ್ತಾರೆ.

ಅವಿಶ್ವಾಸ ನಿರ್ಣಯಕ್ಕೆ ತಿರಸ್ಕಾರ

ಮಧ್ಯ ಪ್ರದೇಶದ ಮುಖ್ಯ ಮಂತ್ರಿ ರವಿಶಂಕರ ಶುಕ್ಲರವರ ಮಂತ್ರಿ ಮಂಡಲದ ಬಗ್ಗೆ ಅವಿಶ್ವಾಸಪ್ರಕಾಶನವನ್ನು ಸೂಚಿಸಿದ್ದ ಅವಿಶ್ವಾಸ ನಿರ್ಣಯವು ನೆನ್ನೆ ೮೩ ಓಟುಗಳಿಂದ ಬಿದ್ದುಹೋಯಿತು.

ಸಂಗೀತ ಕಛೇರಿ

ಚಾಮುಂಡಿ ಕ್ರಾಸ್ ರೋಡಿನಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ನಾಳೆ ಸಂಜೆ ೭|| ಗಂಟೆಗೆ ಶ್ರೀ ಬಿ ಕೇಶವ ಮೂರ್ತಿಯವರ ಪಿಟೀಲು ಮತ್ತು ಶ್ರೀ ಹೆಚ್ ಟಿ. ನಾಗಣ್ಣನವರ ಮೃದಂಗಗಳೊಡನೆ ಶ್ರೀ ಎಸ್ ಸುಬ್ಬಕೃಷ್ಣಯ್ಯನವರ ಸಂಗೀತವು ನಡೆಯುವುದು.

೭೦ ಹಳ್ಳಿಗಳಿಗೆ ಪ್ರವಾಹದ ನೀರು

ಉತ್ತರ ಪ್ರದೇಶ ಸಂಯುಕ್ತ ಪ್ರಾಂತದ ... ನಾಲ್ಲಯಾ ತಪ್ಪಲಿನ ಭಾಗಗಳಲ್ಲಿ ಅತಿ ಯಾಗಿ ಮಳೆ ಬಂದು ಘಾಗ್ರಾ ನದಿಯು ಪ್ರವಾಹವುಂಟಾಗಿ ... ಸಾವಿರ ಕ್ರ... ಚೆಗಳು ನಾಶವಾಗಿರುವ ... ಹಳ್ಳಿಗಳಿಗೆ ನೀರು ನುಗ್ಗಿರುತ್ತದೆ.

ಕೈಗಾರಿಕಾ ನ್ಯಾಯಾಲಯ

ಮೋಟಾರು ಕೆಲಸಗಾರರ ... ರವನ್ನು ವಿಚಾರಣೆ ಮಾಡಲು ಕೈಗಾರಿಕಾ ನ್ಯಾಯಾಲಯವು ಒಂದು ತಿಂಗಳು ... ನೇ ತಾ॥ ಮೈಸೂರಿನಲ್ಲಿ ಮೊದಲನೇ ಅಧಿವೇಶನವನ್ನು ನಡೆಸುವುದು.

ಓಟಿನ ಪೆಟ್ಟಿಗೆಗೆ ಗುಂಡು

ಮಧ್ಯ ಪ್ರಾಂತದ ಒಂದು ನಗರದಲ್ಲಿ ನಡೆಯುತ್ತಿರುವ ಚುನಾವಣೆ ಸಂಬಂಧವಾಗಿ ಇಡಲಾದ ಓಟಿನ ಪೆಟ್ಟಿಗೆಗಳ ಮೇಲೆ ಕಮ್ಯೂನಿಸ್ಟ್ ಘಾತುಕರು ಗುಂಡು ಹಾರಿಸಿರುವರೆಂದು ವರದಿಯಾಗಿದೆ.

ಪ್ರಭಾ

31-8-51 ರಿಂದ 2 ನೇ ವಾರ

ದಿನಕ್ಕೆ 3 ಪ್ರದರ್ಶನಗಳು

- ಶ್ರೀ ರಾಮ್ -

ಪಾತ್ರ: ... ನಂದಾ, ... ಶ್ರೀನಾಥ್

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ

ಪೂನಾ, ನಾಗಪೂರ್ ಸೀರೆಗಳಿಗೆ

M. V. ಭೋಗಯ್ಯ ...

... ಮೈಸೂರು.

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

1-9-51 ನೇ ಶನಿವಾರದಿಂದ * ಶ್ರೀ ಕೃಷ್ಣ ಭಗವಾನ್

... ಬಸವೇಶ್ವರ

NALINS

AUCTIONEERS.

V. V. Market Square

Mysore.

GRAND FURNITURE AUCTION SALE

Rosewood articles such as Sofa Suits, Sofa Chairs, R. W. & T. W. Teapoys, Tables, & Cushion Chairs & Various useful House holds.

ಶ್ರೀ ಗಣೇಶಾ ಟಾಕೀಸ್

1.9.51 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

ದಿಗಂಬರ ಸಾಮಿಯಾರ್

(ತಮಿಳು)

ಪಾತ್ರ: ನಂಬಿಯಾರ್, ಬಾಲಸುಬ್ರಹ್ಮಣ್ಯಂ, ಲಲಿತಾ-ಪದ್ಮಿನಿ

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ - ಅತಿ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ

ತಡವಿಲ್ಲದ ವಿಮಾ ಮೊಬಲಗಿನ ಪಾವತಿ

ಸುಲಭವಾದ ಸಾಲದ ಸೌಕರ್ಯ

ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚಿರುವುದು

ಇವೆಲ್ಲಾ ಬೇಕಾದರೆ

ಮೈಸೂರು ಸರ್ಕಾರದ ವಿಮಾ ಇಲಾಖೆ

ಪ್ರತಿಗಳ ಕಾಪಿ ...

ವಿಮೆ ಮಾಡಿ ... ಇಂದೇ ನಿರ್ಧರಿಸಿರಿ

...

ಗೃಹಕೃತ್ಯದ ನೋಟೀಸ್

ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರದ ಹೋಬಳಿ ಹೆಜ್ಜಿಗೆ ಗ್ರಾಮದಲ್ಲಿರುವ ಛವತಿ ಮರಮ್ಮನ ಖಾತೆಗೆ ಸೇರಿರುವ ಹನ್ನೆರಡು ಕಂಬದ ತೊಟ್ಟಿ ಮನೆ ಮತ್ತು ಹಿತ್ತಲು, ತೆಂಗಿನ ಮರಗಳು ಮತ್ತು ಅದೇ ಗ್ರಾಮದ ಸರ್ವೆ 245 ನೇ ನಂಬರ್ ತರಿ ಗದ್ದೆ ವಿಸ್ತೀರ್ಣ 3 ಎಕ್ರೆ ... ಗುಂಟೆ, ಆಕಾರ ... ಸ್ವತ್ತುಗಳು ಸದರಿ ಮರಮ್ಮನ ಮೈನರ್ ಮಗ ಗುರುಸ್ವಾಮಿಗೂ ಮತ್ತು ಸದರಿ ಮರಮ್ಮನ ಚಿಕ್ಕ ಛವತಿ ಸುಬ್ಬಮ್ಮನ ಮಗಳ ಮಗ ಮೈನರ್ ಶಂಭುಲಿಂಗಯ್ಯನಿಗೂ ಸೇರಿ, ಸದರಿ ಮೈನರುಗಳಿಗೆ ... ರವಾಗಿ ಅವರುಗಳ ಗಾರ್ಡಿಯನ್ ... ನನ್ನ ಸುಪರ್ದು ಮತ್ತು ನನ್ನ ಸ್ವಾಧೀನಾನುಭವದಲ್ಲಿರುತ್ತವೆ. ಮೇಲ್ಕಂಡ ಮೈನರ್ ಗುರುಸ್ವಾಮಿಯ ತಂದೆ ಸಿದ್ದಪ್ಪನು ಬೇರೆ ಲಗ್ನವಾಗಿ, ಬೇರೆ ಇದ್ದುಕೊಂಡು ಸದರಿ ಮೈನರಿನ ಸ್ವತ್ತನ್ನು ಸರಭಾರಿ ಮಾಡಲು ಉದ್ಯುಕ್ತನಾಗಿರುತ್ತಾನೆಂದು ತಿಳಿದುಬರುತ್ತದೆ. ಆದ್ದರಿಂದ ಸರಭಾರಿ ಮಾಡಲು ಮೇಲ್ಕಂಡ ಸಿದ್ದಪ್ಪನಿಗೆ ಯಾವ ಅಧಿಕಾರವೂ ಇರುವುದಿಲ್ಲ. ಹಾಗೆ ಮಾಡಿಸಿಕೊಂಡವರಿಗೆ ಯಾವ ಅಧಿಕಾರವೂ ಊರ್ಜಿತವಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತೇನೆ.

ಮೈನರುಗಳ ಗಾರ್ಡಿಯನ್

ವೆಂಕಟಪ್ಪ, ಕಂಟ್ರಾಕ್ಟರ್.

ಹೆಜ್ಜಿಗೆ

ತಾ॥ 30-8-51

ಗುರುದೇವಾ ಹಾಲ್

ಗೌರಿಹಬ್ಬದ ಸಲುವಾಗಿ

ರಿಯಾಯಿತಿ ಬೆಲೆ

ಕ್ರೇಪ್, ಜಾರ್ಜೆಟ್, ಧರ್ಮಾವರ, ಆರಣಿ, ಕಂಚಿ ರೇಷ್ಮೆ ಸೀರೆಗಳು

ದೊರೆಯುತ್ತವೆ.

ಶಿವರಾಂಪೇಟೆ, ಮೈಸೂರು.

ABIDS OUT-RIGHT AUCTION SALE

ON SUNDAY the 2nd Sept. 1951 at 10 A. M.

Spring Cushioned sofa suits, Child's cot, Chairs, Tables, Sewing Machine, Cameras, Big Iron wheels, Iron Binding Patties, Tabalas, Gramophone Records, Alluminium Record case, Used tyres, Harmonium with box, Photoes, Table Time pieces, Wrist and Pocket watches, and several other useful articles.

Inspection TO MORROW 1 9 1951 Between 3 and 6 P. M.

ಗೌರಿ ಹಬ್ಬದ ಸ್ಪೆಷಲ್ • ... ಗಜಗಳಲ್ಲಿ ಸೀರೆ ... ದೊರೆಯುತ್ತವೆ

... ಸೀರೆಗಳು, ಮತ್ತು ಮೈಸೂರು ರೇಷ್ಮೆ ಸೀರೆಗಳು

ಬೇಕಾದರೆ ಇಂದೇ ಭೇಟಿ ಕೊಡಿರಿ.

M. P. ನರಸಿಂಹಯ್ಯ

ಜವಳಿ ಅಂಗಡಿ, ದೊಡ್ಡಪೇಟೆ ಮೈಸೂರು

ಗೌರಿ ಹಬ್ಬಕ್ಕಾಗಿ, ಸಾವಿರಾರು ಹೊಸರ ರೇಷ್ಮೆ ಸೀರೆಗಳು ಮತ್ತು ನೂಲಿನ ಸೀರೆಗಳು ಬಂದಿವೆ. ಸೇರವಾಗ ಬಂದು ಕೊಳ್ಳಿರಿ.

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ, ದೊಡ್ಡಗಡಿಯಾರ ... ಭವನ ಹೋಟೆಲ್ ಪಕ್ಕ, ಮೈಸೂರು.

ರಣಜಿತ್ ಟಾಕೀಸ್ * ಅಮೋಘವಾದ 4 ನೆಯ ವಾರ

ಮನರಂಜನೆಯ ಸೃಷ್ಟಿ ಮತ್ತು ಇಂಪಾದ ಗಾನಗಳಿಂದ ಪ್ರೇಕ್ಷಕರನ್ನಾಕರ್ಷಿಸುತ್ತಿರುವ ಶ್ರೇಷ್ಠ ಕಲಾಕೃತಿ

ವರ್ಮಾ ಫಿಲಂಸ್‌ರವರ ಮಹೋನ್ನತ ಹಿಂದಿ ಚಿತ್ರ * ಬಾದಲ್

ಭೂಮಿಕೆಯಲ್ಲಿ: ಮಧುಬಾಲ, ಪ್ರೇಮನಾಥ್.

ನಿರ್ದೇಶಕ: ಅಮಿಯಾ ಚಕ್ರವರ್ತಿ :: ಸಂಗೀತ: ಶಂಕರ್‌ಜಯಕಿಶನ್ ...

ASHOK RELEASE

ಪ್ರಭುದೇವಾ ಟಾಕೀಸ್

ಪ್ರತಿ ದಿನ 3 ಆಟಗಳು

31-8-51 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ರಾಯಲ್ ಟಾಕೀಸಿನವರ ತಮಿಳು ಚಿತ್ರ

• ಚಿಂತಾಮಣಿ •

ಮುಖ್ಯಪಾತ್ರ: ತ್ಯಾಗರಾಜ ಭಾಗವತರ್, ಅಶ್ವತ್ಥಮ್ಮ ಮುಂತಾದವರು

Edited, printed and published by A. R. Nagarajan, at Sadhvi Press, D. Subbiah Road, Mysore.

ಪುಸ್ತಕ ಸಂ. 792 WEEKLY EDITION ಇಂದಿನ ಪತ್ರಿಕೆ 6 ಪುಟ

ಸಾಧ್ವಿ

ಸಂಪುಟ ೧೬] ಭಾನುವಾರ ೨-೯-೫೧ [ಸಂಚಿಕೆ ೬

ಮದ್ರಾಸಿನಲ್ಲಿ ಐರೋಪ್ಯ ರೀತಿ ಹೋಟೇಲುಗಳಿಗೆ ಅಕ್ಕಿಯಿಲ್ಲ

ಐರೋಪ್ಯ ಮಾದರಿ ಹೋಟೇಲುಗಳಿಗೆ ಅಕ್ಕಿ ಸರಬರಾಜಿಲ್ಲ

ಮದ್ರಾಸಿನಲ್ಲಿ ಐರೋಪ್ಯ ಮಾದರಿಯ ಹೋಟೇಲುಗಳಿಗೆ ಅಕ್ಕಿಯ ಸರಬರಾಜನ್ನು ಪೂರ್ಣವಾಗಿ ನಿಲ್ಲಿಸಿ ಅದಕ್ಕೆ ಪ್ರತಿಯಾಗಿ ಗೋಧಿ ಮತ್ತು ಗೋಧಿ ಹಿಟ್ಟನ್ನು ಒದಗಿಸಲು ಅಲ್ಲಿನ ಸಿವಿಲ್ ಸಪ್ಲೈ ಇಲಾಖೆಯ ಅಧಿಕಾರಿಗಳು ಏರ್ಪಾಡು ಮಾಡಿರುತ್ತಾರೆ.

ಬೊಂಬಾಯಿಯಲ್ಲಿ ೧೪ ಮಂದಿ ದರೋಡೆಕೋರರ ಬಂಧನ

ಕಳೆದ ಬುಧವಾರ ಬೊಂಬಾಯಿನ ಹತ್ತಿ ಗಿರಣಿಯೊಂದರ ಮೇಲೆ ಧಾಳಿ ನಡೆಸಿ, ಕಾವಲುಗಾರನನ್ನು ಕೊಲೆ ಮಾಡಿ, ಹಲವು ಬೆಲೆ ಬಾಳುವ ವಸ್ತುಗಳನ್ನು ಅಪಹರಿಸಿದ ಸಂಬಂಧದಲ್ಲಿ ಪೋಲೀಸರು ೧೪ ಮಂದಿ ದರೋಡೆಕೋರರನ್ನು ಬಂಧಿಸಿದ್ದಾರೆ. ಅವರಿಂದ ಸುಮಾರು ೪೦ ಸಾವಿರ ರೂ ಬೆಲೆ ಬಾಳುವ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕಲ್ಕತ್ತಾದಲ್ಲಿ ೪೦೦೦೦ ರೂ. ದರೋಡೆ

ಕಲ್ಕತ್ತದ ಬ್ಯಾಂಕೊಂದರಿಂದ ಟ್ಯಾಕ್ಸಿಯಲ್ಲಿ ಹೊರಟ ಕಂಪೆನಿಯ ಕಾರ್ಮಿಕರ ಸಂಬಳಕ್ಕೆಂದು ೪೦ ಸಾವಿರ ರೂ. ಗಳನ್ನು ಕಾರಿನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ನಗರದ ಸಮೀಪದಲ್ಲೇ ಶಸ್ತ್ರಧಾರಿಗಳ ತಂಡವೊಂದು ಕಾರಿಯನ್ನು ತಡೆದು ಹಣವನ್ನು ಅಪಹರಿಸಿಕೊಂಡು ಹೋಗಿದೆಯೆಂದು ವರದಿಯಾಗಿದೆ. ಈ ಸಂಬಂಧದಲ್ಲಿ ೪ ಬಂಧನಗಳಾಗಿವೆ.

ಸರ್ಕಾರದ ನಿರ್ಧಾರವನ್ನು ಬದಲಾಯಿಸುವುದಿಲ್ಲ

ಇರಾನಿಯದ ಪ್ರಧಾನಿ ಡಾ॥ ಮಹಮದ್ ಮುಸದ್ದಿಕ್‌ರವರು ನೆನ್ನೆ ರಾತ್ರಿ ರೇಡಿಯೋ ಭಾಷಣ ಮಾಡುತ್ತಾ ತೈಲದ ಬಗ್ಗೆ ರಾಷ್ಟ್ರೀಕರಣ ಶಾಸನದಲ್ಲಿ ಯಾವ ಬದಲಾವಣೆಯನ್ನೂ ಮಾಡಲಾಗುವುದಿಲ್ಲವೆಂದು ತಿಳಿಸಿದರು. ಆದರೆ ಅಮೇರಿಕದ ಮಧ್ಯಸ್ಥಿಕೆಯೊಡನೆ ಈ ವಿಷಯವಾಗಿ ಬ್ರಿಟನ್ನಿನೊಡನೆ ಸಂಧಾನ ನಡೆಸಲು ಸಿದ್ಧವಾಗಿರುವುದಾಗಿಯೂ ಅವರು ತಿಳಿಸಿದರು.

ವೀಣಾ ವಾದನ

ಸಿಟಿ ಪೇಟೆ ಅಗ್ರಹಾರದ ಬಳಿ ಇರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಈ ರಾತ್ರಿ ೭-೩೦ ಘಂಟೆಗೆ ವಿ॥ ವಿ. ದೊರೆಸ್ವಾಮಿ ಅಯ್ಯಂಗಾರರ ವೀಣಾವಾದನವು ಪಕ್ಕ ವಾದ್ಯಗಳೊಡನೆ ನಡೆಯುತ್ತದೆ.

ನಾಳೆ ರಾತ್ರಿ ೭-೩೦ ಗಂಟೆಗೆ ವಿದ್ವಾನ್ ಕೃಷ್ಣಯ್ಯಂಗಾರ್ರವರಿಂದ "ರುಕ್ಮಿಣೀ ಕಲ್ಯಾಣ" ಎಂಬ ಹರಿಕಥೆ ನಡೆಯುತ್ತದೆ.

ಹಿಂದೀ ತರಗತಿಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ವಿವಿಧ ಪರೀಕ್ಷೆಗಳಿಗೆ ಶಿಕ್ಷಣ ತರಗತಿಗಳನ್ನು ಚಾಮರಾಜ ರಸ್ತೆಯಲ್ಲಿರುವ ಹಿಂದಿ ಪ್ರಚಾರ ಸಭೆಯವರು ಬರುವ ೬ನೇ ತಾರೀಖಿನಿಂದ ಆರಂಭಿಸುತ್ತಾರೆ. ಹೆಚ್ಚಿನ ವಿವರಗಳನ್ನು ಕಾರ್ಯಾಲಯದಲ್ಲಿ ಪಡೆಯಬಹುದು.

ಸುಂಕದ ಬಗ್ಗೆ ಗ್ರಾಮಸ್ಥರಿಗೂ ಪೋಲೀಸರಿಗೂ ಘರ್ಷಣೆ

ಪೋಲೀಸರ ಗುಂಡಿನಿಂದ ೬ ಜನರ ಮರಣ

ಕಡಲೂರು ಜಿಲ್ಲೆಯ ವಿನಾಸಾಂಪುರ ಎಂಬ ಹಳ್ಳಿಯಲ್ಲಿ ಕಳೆದ ಗುರುವಾರ ರಾತ್ರಿ ಸುಂಕದ ಅಧಿಕಾರಿಗಳಿಗೂ, ಗ್ರಾಮಸ್ಥರಿಗೂ ಘರ್ಷಣೆ ನಡೆದು, ಪೋಲೀಸರು ಗುಂಡು ಹಾರಿಸಿದುದರಿಂದ ೬ ಜನರು ಸತ್ತು, ೧೫ ಜನಗಳಿಗೆ ಗಾಯಗಳಾಗಿವೆ. ವಿನಾಸಾಂಪುರದ ಮನೆಯೊಂದರಲ್ಲಿ ಅಕ್ರಮವಾಗಿ ಸಾಮಗ್ರಿಗಳನ್ನು ಹೊಂದಿರುವರೆಂಬ ವರ್ತಮಾನದ ಮೇಲೆ ಸುಂಕದ ಅಧಿಕಾರಿಗಳು ಅಲ್ಲಿಗೆ ಪರಿಶೀಲನೆಗೆ ಹೋಗಲು ಗ್ರಾಮಸ್ಥರು ವಿರೋಧಿಸಿ ತಡೆಯಲವಕಾಶ ಕೊಡದಿದ್ದುದರಿಂದ ಗ್ರಾಮಸ್ಥರಿಗೂ ಅಧಿಕಾರಿಗಳಿಗೂ ಘರ್ಷಣೆಯುಂಟಾಗಿ, ಪರಿಸ್ಥಿತಿ ತೀವ್ರವಾಗಲು ಪೋಲೀಸರು ಗುಂಡು ಹೊಡೆದುದರಿಂದ ೬ ಜನಗಳು ಸತ್ತು, ಅಧಿಕಾರಿಗಳೂ ಸೇರಿ ಒಟ್ಟು ೨೫ ಜನಗಳಿಗೆ ಗಾಯವಾಗಿದೆಯೆಂದು ಗೊತ್ತಾಗಿದೆ. ಘರ್ಷಣೆ ನಡೆದಾಗ ಗ್ರಾಮಸ್ಥರು ಸುಂಕದ ಅಧಿಕಾರಿಯೊಬ್ಬನಿಂದ ಬಂದೂಕವನ್ನು ಕಸಿದುಕೊಂಡು ಅಧಿಕಾರಿಗಳ ಮೇಲೆ ೩ ಬಾರಿ ಗುಂಡು ಹಾರಿಸಿದರೆಂದೂ ತಿಳಿದುಬಂದಿದೆ.

ಟೆಲಿಫೋನ್ ಸ್ವಂತವಾಗಿ ಹೊಂದಲು ಅವಕಾಶ

ಬೆಂಗಳೂರಿನಲ್ಲೂ ಇನ್ನು ಮುಂದೆ ಸಾರ್ವಜನಿಕರಿಗೆ ಟೆಲಿಫೋನ್ ಮಾಲೀಕತ್ವದ ಯೋಜನೆಯನ್ನು ಇದೇ ೧ನೇ ತಾರೀಖಿನಿಂದ ಜಾರಿಗೆ ತರಲು ಅಂಚೆ ಮತ್ತು ತಂತಿ ಇಲಾಖೆಯವರು ನಿರ್ಧರಿಸಿರುವರು. ಟೆಲಿಫೋನನ್ನು ಸ್ವಂತವಾಗಿ ಹೊಂದಲು ಎರಡು ಸಾವಿರ ರೂ. ಬೆಲೆ ಕೊಡಬೇಕಾಗುವುದು. ಸಧ್ಯದಲ್ಲಿ ೭೦೦ ಮಂದಿಗೆ ಈ ಸೌಲಭ್ಯವನ್ನು ಒದಗಿಸಲಾಗುವುದೆಂದು ಗೊತ್ತಾಗಿದೆ.

ಹಾವು ಕಚ್ಚಿ ಮರಣ

ನಂಜನಗೂಡು ೧

ಇಲ್ಲಿನ ಶ್ರೀಕಂಠಪುರಿ ಬಡಾವಣೆಯ ಗಾಣಿಗರ ಬೀದಿಯಲ್ಲಿ ವಾಸಿಸುವ ೮ ವರ್ಷದ ಒಂದು ಹೆಣ್ಣು ಮಗುವು ಮೊನ್ನೆ ದಿನ ಹಾವಿನಿಂದ ಕಡಿಯಲ್ಪಟ್ಟು ಮೃತಪಟ್ಟಿತೆಂದು ತಿಳಿದುಬಂದಿದೆ.

ಗ್ರಹಾಂರಿಂದ ಕಾಶ್ಮೀರಪ್ರಶ್ನೆ ಪರಿಶೀಲನೆ ಮುಕ್ತಾಯ

ಕಾಶ್ಮೀರ ಸಮಸ್ಯಾ ಪರಿಹಾರದ ಬಗ್ಗೆ ಹೊಸದಾಗಿ ಮಧ್ಯಸ್ಥಿಕೆಗಾರರಾಗಿ ನೇಮಿತರಾಗಿದ್ದ ಡಾ॥ ಫ್ರಾಂಕ್ ಗ್ರಹಾಂರವರು ಭಾರತ, ಪಾಕಿಸ್ತಾನಗಳಲ್ಲಿ ತಮ್ಮ ಪರಿಶೀಲನೆ ಮತ್ತು ಸಮಾಲೋಚನೆಗಳನ್ನು ಮುಗಿಸಿರುವರೆಂದೂ, ಸಧ್ಯದಲ್ಲೇ ಅವರು ಯೂರೋಪಿಗೆ ತೆರಳಿ ವಿಶ್ವ ಸಂಸ್ಥೆಗೆ ತಮ್ಮ ವರದಿಯನ್ನು ಒಪ್ಪಿಸುವರೆಂದೂ ವರದಿಯಾಗಿದೆ.

ಕಾಶ್ಮೀರ ರಾಜ್ಯಾಂಗ ಸಭೆಗೆ ಚುನಾವಣೆ

ಕಾಶ್ಮೀರದ ರಾಜ್ಯಾಂಗ ಸಭೆಗೆ ಷೇಕ್ ಮಹಮದ್ ಅಬ್ದುಲ್ಲಾ, ಬಕ್ಷಿ ಗುಲಾಂ ಮಹಮದ್ ಸಯ್ಯದ್ ಮತ್ತು ಪಕ್ಷದ ಪ್ರಮುಖ ಲಾವಾರಿನವರಾದ ಕುರ್ನೋಕ್ ಬಕುಲಾಲರವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಮೇಕೆದಾಟು ವಿದ್ಯುದ್ಯೋಜನೆಯ ಅಸ್ತಿಭಾರ ಮಾತುಕತೆ

ಮೇಕೆದಾಟು ವಿದ್ಯುದ್ಯೋಜನೆಯ ಸಂಬಂಧವಾಗಿ ಮದರಾಸು ಮತ್ತು ಮೈಸೂರು ಸರ್ಕಾರಗಳಿಗೆ ತೃಪ್ತಿಕರವಾಗಿ ಮಾತುಕತೆಗಳು ನಡೆದಿವೆ. ಈ ಕೇಂದ್ರವು ಸ್ಥಾಪನೆಯಾದ ನಂತರ ಅಲ್ಲಿಂದ ಮದರಾಸಿಗೆ ೯ ಸಾವಿರ ಕಿಲೋವಾಟು ಶಕ್ತಿಯನ್ನು ಸರಬರಾಜು ಮಾಡಲಾಗುವುದು. ಒಟ್ಟು ೩೦೦೦೦ ಕಿಲೋವಾಟು ವಿದ್ಯುಚ್ಛಕ್ತಿಯನ್ನು ಅಲ್ಲಿ ಉತ್ಪತ್ತಿ ಮಾಡಲಾಗುವುದೆಂದು ಗೊತ್ತಾಗಿದೆ.

ಭಾಗವತ ಸಪ್ತಾಹ

ಮೈಸೂರು ಕೃಷ್ಣಮೂರ್ತಿಪುರದ ಶ್ರೀ ವ್ಯಾಸರಾಜ ಮಠದಲ್ಲಿ ವೇ॥ ಸೇತುರಾಮಾಚಾರ್ಯರವರಿಂದ ಇಂದಿನಿಂದ ಮೊದಲುಗೊಂಡು ೧೫-೯-೫೧ ನೇ ಶನಿವಾರ ಪೌರ್ಣಮಿವರೆಗೂ ಭಾಗವತ ಪ್ರವಚನವು ಪ್ರತಿ ದಿನ ಬೆಳಗ್ಗೆ ೭ ರಿಂದ ೯ರ ವರೆಗೂ ನಡೆಯುತ್ತದೆ. ೧೫-೯-೫೧ ನೇ ಶನಿವಾರ ಬೆಳಗ್ಗೆ ೮ಘಂಟೆಗೆ ಮಂಗಳವೂ ಮತ್ತು ಉತ್ಸವವೂ ನಡೆಯುವುದು. ಭಕ್ತಾದಿಗಳು ಬಂದು ಕಥಾ ಶ್ರವಣ ಮಾಡಿ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರಲಾಗಿದೆ.

ತಿರುವಾಂಕೂರು-ಕೊಚ್ಚಿ ಬಿಕ್ಕಟ್ಟಿನ ಪರಿಹಾರ

ತಿರುವಾಂಕೂರು-ಕೊಚ್ಚಿ ಮಂತ್ರಿ ಮಂಡಲಕ್ಕೆ ಶ್ರೀಗಳಾದ ಟಿ. ಕೆ. ನಾರಾಯಣ ಪಿಳ್ಳೆ ಮತ್ತು ಎ. ಜೆ. ಜಾನ್‌ರವರು ರಾಜೀನಾಮೆಯಿತ್ತುದರಿಂದ ಕೊಚ್ಚಿಯ ಕಾಂಗ್ರೆಸ್ಸಿನವರು ಚುನಾವಣಾ ಸಮಿತಿಗಳಿಗೆ ಇತ್ತಿದ್ದ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಂಡು ತಿರುವಾಂಕೂರು-ಕೊಚ್ಚಿ ಸರ್ಕಾರಕ್ಕೆ ಬೆಂಬಲ ನೀಡಲು ನಿರ್ಧರಿಸಿರುವರು.

ಜಯಾಂಗರೊಡನೆ ಜಪಾನಿನ ಪ್ರತ್ಯೇಕ ಶಾಂತಿ ಒಪ್ಪಂದ

ಸ್ಯಾನ್‌ಫ್ರಾನ್ಸಿಸ್ಕೋದಿನಲ್ಲಿ ಜಪಾನಿನ ಶಾಂತಿ ಒಪ್ಪಂದವು ಮುಗಿದ ಬಳಿಕ ವಾಷಿಂಗ್ಟನ್ ಜಪಾನು ರಾಷ್ಟ್ರೀಯ ಚೀನದ ನಾಯಕ ಚಿಯಾಂಗರೊಡನೆ ಪ್ರತ್ಯೇಕ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳುವುದೆಂದು ಹೇಳಲಾಗಿದೆ.

ಪಾಕಿಸ್ತಾನದಲ್ಲಿ ಪೆಟ್ರೋಲ್ ಸಂಗ್ರಹ

ಬೇಗನೆ ಒದಗಬಹುದಾದ ತುರ್ತು ಪರಿಸ್ಥಿತಿಗಾಗಿ ವಿಮಾನ ನಡೆಸುವ ಪೆಟ್ರೋಲನ್ನು ಪಾಕಿಸ್ತಾನವು ವಿಶೇಷವಾಗಿ ಸಂಗ್ರಹಿಸುತ್ತಿರುವುದಾಗಿ ವರದಿಯಾಗಿದೆ. ಕೆಲವು ದಿನಗಳ ಹಿಂದೆ ಪೆಟ್ರೋಲ್ ಸಂಗ್ರಹ ಮಾಡುತ್ತಿಲ್ಲವೆಂದು ಪಾಕಿಸ್ತಾನವು ಹೇಳಿತ್ತು.

ಉಪಾರ ದಾನ

ಮೈಸೂರಿನ ದೇವಿರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ವಿಶ್ವೇಶ್ವರ ಸ್ವಾಮಿಗೆ ಬೆಳ್ಳಿ ಕವಚವನ್ನು ಮಾಡಿಸುವ ಸಲುವಾಗಿ ಮಂಗಳೂರು ಶ್ರೀ ಗಣೇಶ ಬೀಡಿ ಕಾರ್ಖಾನೆ ಮಾಲೀಕರಾದ ಶ್ರೀ ಬಿ. ಮಾಧವ ಶೆಣೈರವರು ೧೦೦ ರೂ.ಅನ್ನೂ ಶ್ರೀಗಳಾದ ಪುಟ್ಟಯ್ಯ, ಶ್ರೀನಿವಾಸಯ್ಯಂಗಾರ್, ಆರ್. ರಂಗರಾವ್ ಮತ್ತು ಅಡ್ವೊಕೇಟ್ ಪಿ. ಎಸ್. ಕೃಷ್ಣರಾಯರು ತಲಾ ೫ ರೂ. ಗಳನ್ನೂ ಉದಾರವಾಗಿ ಕೊಟ್ಟಿರುತ್ತಾರೆ.

ರೈತರ ಸಭೆ

ಬನ್ನೂರು ೧

ಟಿ. ನರಸೀಪುರದ ತಾ॥ ಇನಾಂ ಸೀಹಳ್ಳಿಯಲ್ಲಿ ಮೊನ್ನೆ ರೈತರ ಸಭೆಯೊಂದು ನಡೆಯಿತು. ವ್ಯವಸಾಯ ಇಲಾಖಾ ಡೈರೆಕ್ಟರ್ ಶ್ರೀ॥ ಎಂ. ಕೆ. ಅಪ್ಪಾಜಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿಗಳಾದ ಜ॥ ಮಹಮದ್ ಇಸಮ್‌ರವರು ಆರಂಭೋತ್ಸವವನ್ನು ನೆರವೇರಿಸಿದರು. ಬನ್ನೂರು ಹೋಬಳಿ ರೈತರ ಸಂಘದ ಅಧ್ಯಕ್ಷರಾದ ಶ್ರೀ ಸಿ. ಜೆ. ದೇವನಾಥ್‌ರವರು ಸ್ವಾಗತ ಭಾಷಣ ಮಾಡಿ ರೈತರ ಕುಂದು ಕೊರತೆಗಳನ್ನು ವಿವರಿಸಿದರು. ಅಧಿಕ ಆಹಾರ ಬೆಳೆಯ ಯೋಜನೆಯಂತೆ ಕೈಗೊಳ್ಳಲಾಗಿರುವ ಕಾರ್ಯಕ್ರಮಗಳನ್ನು, ರೈತರಿಗೆ ಒದಗಿಸಿರುವ ಸೌಲಭ್ಯಗಳನ್ನೂ, ಅಧ್ಯಕ್ಷರು ವಿವರಿಸಿದರು. ನೀರಾವರಿ ಸೌಲಭ್ಯಗಳ ಆವಶ್ಯಕತೆ ಬಗ್ಗೆ ಅಧಿಕಾರಿಗಳಲ್ಲಿ ವಿಶೇಷ ಮನವಿಯನ್ನು ಮಾಡಲಾಯಿತು.

ಮೇಲ್ಕಂಡ ಅಧಿಕಾರಿಗಳು ತಾಲ್ಲೂಕಿನ ಅನೇಕ ಕಡೆಗಳಿಗೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿದರು.

ವಾರ ಭವಿಷ್ಯ

ತಾ|| ೨-೯-೫೧ರಿಂದ ೮-೯-೫೧ರ ವರೆಗೆ

ಮೇಷ — ಆರೋಗ್ಯದ ಕಡೆ ಎಚ್ಚರಿಕೆಯಿಂದಿರಿ. ಪ್ರವಾಸ ಮಾಡದಿರುವುದು ಉತ್ತಮ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ. ಆರ್ಥಿಕ ಸ್ಥಿತಿ ಉತ್ತಮ. ತಾ|| ೩, ೭ ಖರ್ಚು, ಅಪ್ಪರ ಆಗಮನ

ವೃಷಭ — ಪರೋಪಕಾರ ಜರುಗುವುದು. ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಉತ್ತಮ. ವ್ಯವಹಾರಗಳಲ್ಲಿ ಪ್ರಗತಿ. ಸಾಹಿತಿಗಳಿಗೆ ಪ್ರೋತ್ಸಾಹ. ತಾ|| ೫, ೭ ಆಪ್ತರ ಭೇಟಿ, ಖರ್ಚು

ಮಿಥುನ — ಗೊಂದಲಗಳ ಪರಿಹಾರ. ಚಿಂತಾ ನಾಶ. ಆರೋಗ್ಯ ಉತ್ತಮ. ವ್ಯಾಪಾರ, ಉದ್ಯೋಗಗಳಲ್ಲಿ ಪ್ರಗತಿ. ಆರ್ಥಿಕ ಪರಿಸ್ಥಿತಿ ಉತ್ತಮ. ತಾ|| ... ಗಡಿಬಿಡಿ, ಶುಭ ಕಾರ್ಯಕ್ಕೆ ಖರ್ಚು

ಕರ್ಕ — ಖರ್ಚು ವಿಪರೀತವಾಗುವುದು. ಕೈಗೊಂಡ ಕಾರ್ಯ ಎಷ್ಟು ... ಆರೋಗ್ಯ ಚೆನ್ನಾಗಿರದು. ವ್ಯವಹಾರಗಳಲ್ಲಿ ಅಭಿವೃದ್ಧಿ. ತಾ|| ... ಮನಶ್ಶಾಂತಿ ಕಡಿಮೆ, ನಿದ್ರಾ ನಾಶ

ಸಿಂಹ — ಮನಸ್ಸಿನ ತಳಮಳ ... ಹೆಚ್ಚುವುದು. ಅಪ್ಪರಿಂದ ಸಹಾಯ. ಆರೋಗ್ಯ ಚೆನ್ನಾಗಿರದು. ಅಧಿಕ ಖರ್ಚು. ವ್ಯವಹಾರಗಳಲ್ಲಿ ಅಭಿವೃದ್ಧಿ. ತಾ|| ... ಕಷ್ಟ, ಧನ ನಾಶ

ಕನ್ಯಾ — ಸಮಾಜ ಸೇವೆ ಜರುಗುವುದು. ಆರೋಗ್ಯ ಉತ್ತಮ. ಕೀರ್ತಿ ಪ್ರಸರಿಸುವುದು. ಪ್ರವಾಸ. ವ್ಯವಹಾರಗಳಲ್ಲಿ ಪ್ರಗತಿ. ತಾ|| ... ಉತ್ಸಾಹಕರ ಸುದ್ದಿ, ಕಾರ್ಯಸಿದ್ಧಿ

ತುಲ — ಸಮಾಜದಲ್ಲಿ ಖ್ಯಾತಿ. ಆರೋಗ್ಯ ಉತ್ತಮ. ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು. ಆರ್ಥಿಕ ಪರಿಸ್ಥಿತಿ ಸುಧಾರಣೆ. ಪರೋಪಕಾರ ಕಾರ್ಯಗಳು. ತಾ|| ೩ ... ಆಪ್ತರ ಭೇಟಿ, ಮನರಂಜನೆ.

ವೃಶ್ಚಿಕ — ಕೈಗೊಂಡ ಕಾರ್ಯದ ಸಿದ್ಧಿ. ಆರೋಗ್ಯ ಉತ್ತಮ. ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು. ನಿಶ್ಚಿಂತ

ಧನು — ಕಳವಳಕರ ವಿರೋಧ. ... ಆರೋಗ್ಯ ... ವ್ಯವಹಾರಗಳಲ್ಲಿ ... ಸಂಕಷ್ಟ ... ಪರಿಹಾರ ... ಹೆಚ್ಚುವುದು. ತಾ|| ... ಸಂತೃಪ್ತಿ

ಕುಂಭ — ಉಮರೋಗಿಗಳಿಗೆ ಸರ್ಕಾರ ... ಆರೋಗ್ಯ ಉತ್ತಮ. ಅಪ್ಪರ ಭೇಟಿ. ವ್ಯವಹಾರಗಳಲ್ಲಿ ಪ್ರಗತಿ. ಸಜ್ಜನರ ಸಹವಾಸ. ತಾ|| ... ಶುಭ ಕಾರ್ಯಕ್ಕಾಗಿ ಖರ್ಚು ಸುವಾರ್ತೆ.

ಮೀನ — ಚಿಂತೆಗಳು ಪರಿಹಾರವಾಗುವುವು. ಆರೋಗ್ಯ ಉತ್ತಮ. ವ್ಯಾಪಾರ, ವ್ಯವಹಾರಗಳಲ್ಲಿ ಯಶಸ್ಸು. ಆರ್ಥಿಕ ಸ್ಥಿತಿ ಉತ್ತಮ. ತಾ|| ೫, ೭ ಸತ್ಕಾರ್ಯಕ್ಕಾಗಿ ಖರ್ಚು. ಜಾಗರಣೆ

ಪತ್ರಿಕೆಗಳ ಪ್ರೀಸೆನ್ಸಾರ್‌ಷಿಪ್ ರದ್ದು

ಭಾರತ ಸರ್ಕಾರದ ಗೃಹಸಚಿವ ರಾಜಾಜಿಯವರು ನೆನ್ನೆ ದಿನ ಪಾರ್ಲಿಮೆಂಟಿನಲ್ಲಿ ಪತ್ರಿಕಾ ಶಾಸನಕ್ಕೆ ಸಂಬಂಧಪಟ್ಟ ಮಸೂದೆಯನ್ನು ಮಂಡಿಸಿದರು. ಆಕ್ಷೇಪಕರವಾದ ಮತ್ತು ಉದ್ರೇಕಗೊಳಿಸುವಂತಹ ಲೇಖನಗಳನ್ನು ಈ ಶಾಸನದ ಮೂಲಕ ಪ್ರತಿಬಂಧಿಸಲಾಗುವುದು. ಆದರೆ ಲೇಖನಗಳ ಪ್ರಿಸೆನ್ಸಾರ್ ಷಿಪ್ಪನ್ನು ಯಾವ ಪತ್ರಿಕೆಯ ಮೇಲೂ ವಿಧಿಸಲಾಗುವುದಿಲ್ಲ. ಅನಧಿಕೃತ ಪತ್ರಿಕೆಗಳು ಮತ್ತು ಮುದ್ರಣ ಯಂತ್ರಗಳನ್ನು ಈ ಶಾಸನದ ಪ್ರಕಾರ ವಶಪಡಿಸಿಕೊಳ್ಳಲು ಸರ್ಕಾರಕ್ಕೆ ಅಧಿಕಾರವಿರುವುದು.

ಕಾಲೇಜು ವಿದ್ಯಾರ್ಥಿಗಳಿಗೆ ಉಪನ್ಯಾಸ

... ಮಹಾರಾಜಾ ಕಾಲೇಜಿನ ... ನೇ ಮನೆಯಲ್ಲಿರುವ ... ಮಾನಸಿಕ ... ಎಂದಿನಂತೆ ಈ ವಾರ ... ವಿವಿಧ ಪರೀಕ್ಷೆಗಳಿಗೆ ... ಕಾಲೇಜು ವಿದ್ಯಾರ್ಥಿಗಳಿಗೆ ... ವಿಷಯಗಳನ್ನು ... ಉಪನ್ಯಾಸ ... ಮುಂದಿನ ... ಏರ್ಪಡಿಸುತ್ತಾರೆ

ಕಾಲೇಜು ಚುನಾವಣೆಗಳಲ್ಲಿ ಕೋಮುವಾರ ಭೇದ ಬೇಡ

ಕಾಲೇಜುಗಳ ವಿದ್ಯಾರ್ಥಿಗಳ ಸಭೆಯ ನಿರ್ಣಯ

ಮೈಸೂರು ... ಇಲ್ಲಿನ ಮಹಾರಾಜಾ ಮತ್ತು ಫಸ್ಟ್ ಗ್ರೇಡ್ ಕಾಲೇಜು ವಿದ್ಯಾರ್ಥಿಗಳ ಸಭೆಯು ಕಳೆದ ಗುರುವಾರ ಶ್ರೀಕಂಠಪ್ಪನವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿ ಪ್ರಣಾಳಿಕೆಯನ್ನು ಅಂಗೀಕರಿಸಲು ಸೇರಿತ್ತು.

ನಾಡಗೀತೆ, ಸ್ವಾಗತ, ಪ್ರಣಾಳಿಕೆಯ ಸೂಚಕರ ಮತ್ತು ವಿದ್ಯಾರ್ಥಿ ಮುಖಂಡರ ಭಾಷಣಗಳಾದ ನಂತರ ಹಲವು ಠರಾವುಗಳನ್ನು ಅಂಗೀಕರಿಸಲಾಯಿತು. ಮಾತೃಭಾಷೆಯು ಮತ್ತು ಪ್ರದೇಶ ಭಾಷೆಯಾಗಿ ಕನ್ನಡವನ್ನು ಮಾಡಬೇಕೆಂದು, ಕೂಡಲೇ ಸಾರುವುದು. ವಿಶ್ವವಿದ್ಯಾಲಯವನ್ನು ಪ್ರಜಾ ಪ್ರಾತಿನಿಧ್ಯಕವಾಗಿ ಮಾಡುವುದು. ಪದವೀಧರರು ಒಬ್ಬೊಬ್ಬರೂ ಪದವಿಯನ್ನು ಸ್ವೀಕರಿಸುವ ಮುಂಚೆ ಕನಿಷ್ಠವಾಗಿ ೧೦ ಜನ ವಯಸ್ಕರ ಅಕ್ಷರಜ್ಞಾನ ಪ್ರಸಾರ ಮಾಡುವುದು. ಸಂಘದ ಚುನಾವಣೆಗಳಲ್ಲಿ ಯಾವುದೇ ವಿಧವಾದ ಕೋಮುವಾರು ಭಾವನೆಯನ್ನು ಹೊಂದದಿರುವುದು. ವಿದ್ಯಾರ್ಥಿ ನಿಲಯಗಳ ಹಾರ ಮುಂದಿರದ ವ್ಯವಸ್ಥೆಯನ್ನು ... ಮಾಡುವುದು. ಉಪಾಧ್ಯಾಯರುಗಳಿಗೆ ಹೆಚ್ಚು ಸೌಕರ್ಯಗಳನ್ನು ಕಲ್ಪಿಸುವುದು ಇವೇ ಮುಂತಾದ ನಿರ್ಣಯಗಳಾದುವು.

ಗುರುದೇವ್ ಹಾಲ್

ಗೌರಿಹಬ್ಬದ ಸಲುವಾಗಿ ರಿಯಾಯಿತಿ ಬೆಲೆ

ಕ್ರೇಪ್ ಜಾರ್ಜೆಟ್, ಧರ್ಮಾವರಂ ಜರಿ ಕಂಚಿ ಸ್ಟೈಲ್ ಸೀರೆಗಳು ದೊರೆಯುತ್ತವೆ

ಶಿವರಾಂಪೇಟೆ ಮೈಸೂರು.

ಗೌರಿ ಹಬ್ಬಕ್ಕಾಗಿ,

D. L. ನರಸಿಂಹಯ್ಯ & ಬ್ರದರ್ಸ್,

ಆನೆ ಅಂಗಡಿ ಬೊಂಬಾಯಿ ಆನಂದ ಭವನ್ ಹೋಟೆಲ್ ಪಕ್ಕ ಮೈಸೂರು

ಪವರ್ ಲೂಮ್ ಬಟ್ಟೆ ಬೆಲೆಗಳ ಮೇಲೆ ಹತೋಟಿ

ವಿದ್ಯುಚ್ಛಕ್ತಿ ಮಗ್ಗಗಳಿಂದ ತಯಾರಾಗುವ ಬಟ್ಟೆಗಳ ಮೇಲೆ ಹತೋಟಿ ಹಾಕಲು ಭಾರತ ಸರ್ಕಾರದವರು ಆಲೋಚಿಸುತ್ತಿರುವುದಾಗಿ ಗೊತ್ತಾಗಿದೆ. ಈ ರೀತಿ ಈ ಹತೋಟಿಯನ್ನು ... ಬೇಕೆಂಬ ಬಗ್ಗೆ ಬೊಂಬಾಯಿಯಲ್ಲಿ ... ರಂದು ಸೇರಿದ್ದ ಸಭೆಯ ವಿದ್ಯುತ್ ಮಗ್ಗ ಸಂಘದ ಪ್ರತಿನಿಧಿಗಳೊಡನೆ ಭಾರತ ಸರ್ಕಾರದವರು ಮಾತುಕತೆ ನಡೆಸಿದರೆಂದು ಹೇಳಲಾಗಿದೆ.

ಜಟಕಾ ಗಾಡಿಗಳಿಗೆ ನಂಬರು

ಚಾ ಕ ಚೇ ಕು

ಬೆಂಗಳೂರಿನಲ್ಲಿ ಜಟಕಾ ಗಾಡಿಗಳಿಗೆ ... ಹಾಕಬೇಕೆಂಬ ನಿರ್ಣಯವನ್ನು ಇಲ್ಲಿನ ಪೌರಸಭೆಯು ಅಂಗೀಕರಿಸಿದೆ

ಸರ್ ಸಿ. ವಿ. ರಾಮನ್‌ರವರ

ಅನ್ವೇಷಣೆಯ ಪ್ರಕಾರ ತಯಾರಿಸಿದ

ಹಲ್ಲು ಪುಡಿ

ಪೈರಿಕ್ಸ್

೧ ಹೊಳಪನ್ನು ಕೊಡುವುದು.
೨ ರಕ್ತ ಸ್ರಾವವನ್ನು ನಿಲ್ಲಿಸುತ್ತೆ
೩ ದಂತ ರೋಗಗಳನ್ನು ತಡೆಯುತ್ತೆ

ತಯಾರಕರು:
ದಿ ಪಯೋರಿಯಾ ಕ್ಯೂರ್ ಕ್ಲಿನಿಕ್
... ಬೆಂಗಳೂರು

ಮೈಸೂರು ಏಜೆಂಟರು.
ಎಸ್. ಗೋಪಾಲನ್,
... ಮೈಸೂರು.

Edited, printed & published by A. R. Nagarajan at Sadhvi Press, ... Mysore

ಜರತಾರಿ ಮಾದರಿ ರೇಷ್ಮೆ ಸೀರೆಗಳು ಮತ್ತು ನಾನಾ ಸೀರೆಗಳು ಬಂದಿವೆ ... ಬನ್ನಿ ... ಕೊಳ್ಳಿರಿ

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ

ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ನಾಟಕ ರತ್ನ ಗುಬ್ಬಿ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

1-9-51ನೇ ಶನಿವಾರದಿಂದ * **ಶ್ರೀ ಕೃಷ್ಣ ಭಗವಾನ್**

ರವಿವಾರ ಮತ್ತು ... ಗಳಲ್ಲಿ ... ಕ್ಕೆ ... ಗಳಲ್ಲಿ ... ಕ್ಕೆ

ಮುಂದಿನ ಆಕರ್ಷಣ ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ಗೌರಿ ಹಬ್ಬದ ಸ್ಪೆಷಲ್

ಎಲ್ಲಾ ... ಗಳಲ್ಲಿ ಸೀರೆ ... ದೊರೆಯುವುದು

... ಮೈಸೂರು ರೇಷ್ಮೆ ಸೀರೆಗಳು

ಬೇಕಾದರೆ ಒಂದೇ ಭೇಟಿ ಕೊಡಿರಿ

M. P. ನರಸಿಂಹಯ್ಯ

ಜವಳಿ ಅಂಗಡಿ, ದೊಡ್ಡಪೇಟೆ ಮೈಸೂರು

ಪ್ರಭಾ

7-9-51 ರಿಂದ

... ದಿಗ್ದರ್ಶಕ ... ರವರ ... ನಿರ್ಮಾಪಕ ... ಕೃತಿ

ಕಾಲಿ ಘಟಾ

(ಹಿಂದಿ)

ಕಿಶೋರ್ ಸಾಹು, ... ಬೀನಾ ಮಾಥುರ್, ಇಂದಿರಾ ... ಗೋಪ್, ...

ಕಥೆ, ನಿರ್ದೇಶನ ಮತ್ತು ತಯಾರಿಕೆ ಕಿಶೋರ್ ಸಾಹು

ಸಂಗೀತ - ಶಂಕರ್ ಮತ್ತು ಜೈ ಕಿಷನ್

ರಿಜಿ ನಂ 792 ॥ ಸಂಚೀ ಮಾಸಿಕ ॥ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೩-೯-೫೦ [ಸಂಚಿಕೆ ೬೪

ಕೊರಿಯದಲ್ಲಿ ಭಾರಿ ಜೆಟ್ ವಿಮಾನ ಕಾಳಗ

ಕೊರಿಯಾದಲ್ಲಿ ೮ ಕಮ್ಯೂನಿಸ್ಟ್ ವಿಮಾನಗಳ ನಾಶ

ನಿನ್ನೆ ಕೊರಿಯಾದಲ್ಲಿ ಅತ್ಯಂತ ದೀರ್ಘ ಕಾಲದ ಜೆಟ್ ವಿಮಾನಗಳ ಕಾಳಗವು ನಡೆದು ರಷ್ಯದ ಮಾದರಿಯ ೮ ಕಮ್ಯೂನಿಸ್ಟ್ ವಿಮಾನಗಳು ನಾಶವಾದುವು. ವಿಶ್ವ ಸಂಸ್ಥೆಯ ೬೯ ವಿಮಾನಗಳೂ ಕಮ್ಯೂನಿಸ್ಟರ ೪೦ ವಿಮಾನಗಳೂ ಭಾಗವಹಿಸಿದ್ದುವು. ಭೂಕದನದಲ್ಲಿ ಪರ್ವತ ಪ್ರದೇಶದಲ್ಲಿ ವಿಶ್ವ ಸಂಸ್ಥೆ ಸೈನ್ಯಗಳು ನಿಧಾನವಾಗಿ ಮುಂದುವರಿಯುತ್ತಿವೆ. ಕಮ್ಯೂನಿಸ್ಟರು ನಡೆಸಿದ ಪ್ರತಿ ಧಾಳಿಗಳನ್ನೆಲ್ಲಾ ಎದುರಿಸಲಾಗಿದೆ. ಮಿತ್ರ ಪಕ್ಷದ ನೌಕೆಗಳು ಸೈನ್ಯಗಳ ಮುನ್ನಡೆಗೆ ಸಹಾಯವನ್ನು ಮಾಡಿದುವು.

ಶಾಂತಿ ಸಾಗರದ ರಕ್ಷಣೆಗಾಗಿ ತ್ರಿರಾಷ್ಟ್ರ ಒಪ್ಪಂದ

ನೈಋತ್ಯ ಶಾಂತಿ ಸಾಗರದ ಪ್ರದೇಶಗಳನ್ನು ರಕ್ಷಣೆ ಮಾಡಲು ಮೊನ್ನೆ ಅಮೆರಿಕ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡುಗಳು ಒಪ್ಪಂದಕ್ಕೆ ರುಜು ಹಾಕುವಾಗ ಈ ಶಾಲು ಕೋಪುಗಳನ್ನು ಹಾರಿಸಲಾಯಿತು. ಜಪಾನು ಶಾಂತಿ ಒಪ್ಪಂದದಿಂದ ಆ ರಾಷ್ಟ್ರವು ಪುನಃ ಶಸ್ತ್ರಾಸ್ತ್ರ ಧಾರಣೆ ಮಾಡಿದರೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡುಗಳಲ್ಲಿ ಉಂಟಾಗುವ ಪ್ರಮಾಣ ಭೀತಿಯನ್ನು ಹೋಗಲಾಡಿಸಲು ಮೇಲ್ಕಂಡ ಒಪ್ಪಂದವು ಆಗಿರುತ್ತದೆ.

ಸರ್ಬಿಯಾ ಮಂತ್ರಿ ಮೇಲೆ ಶಾಸನ ಸಭಾಸದನ ಕೈ

ಸರ್ಬಿಯದ ಅಂಚೆ ಮತ್ತು ತಂತಿ ಇಲಾಖೆಯ ಮಂತ್ರಿ ಯೂಸಫ್ ಮೋನಾರ್ ...ಬುವರು ಅಲ್ಲಿನ ಶಾಸನ ಸಭೆಯಲ್ಲಿ ನಿನ್ನೆ ಭಾಷಣ ಮಾಡಿ, ಕಳೆದ ಹಿಂದಿನ ವರ್ಷದಿಂದ ದೇಶದ ನಾನಾ ಭಾಗಗಳಿಗೆ ಟೆಲಿಫೋನ್ ಸೌಲಭ್ಯಗಳನ್ನೇರ್ಪಡಿಸಲು ಸಾಧ್ಯವಿಲ್ಲವೆಂದು ಹೇಳಿ, ಸಭೆಯ ಹೊರಗಡೆ ಬಂದಾಗ ಸಭಾಸದನೊಬ್ಬನಿಗೂ ಅವರಿಗೂ ಮುಷ್ಟಾಮುಷ್ಟಿ ನಡೆದು ಅಂತಿಮವಾಗಿ ಕೊನೆಗೆ ಮಂತ್ರಿಯು ಸಾರ್ವಜನಿಕ ಕೊಠಡಿಯೊಳಗೆ ಆಶ್ರಯ ಪಡೆಯಬೇಕಾಯಿತೆಂದು ವರದಿಯಾಗಿದೆ.

ಬಿನ್ನಿ ಮತ್ತು ಅರಗಿನ ಕಾರ್ಖಾನೆಯ ವ್ಯವಹಾರ

ರಾಜಧಾನಿಯ ಅರಗು ಮತ್ತು ಬಿನ್ನಿ ಕಾರ್ಖಾನೆಯಲ್ಲಿ ಲಾಕ್ ಔಟ್ ಆಗಿರುವ ಬಗ್ಗೆ ಕಾರ್ಮಿಕ ಮಂತ್ರಿಗಳಾದ ಶ್ರೀ ... ಟಿ ಭಾಷ್ಯಂರವರ ಮುಂದೆ ಮೊನ್ನೆ ಅವರ ಕಾರ್ಮಿಕ ಪ್ರತಿನಿಧಿಗಳೂ, ಕಾರ್ಖಾನೆಯ ವ್ಯವಸ್ಥಾಪಕರೂ ಮಾತುಕತೆ ನಡೆಸಿದರು. ಕಾರ್ಖಾನೆಯ ಕೆಲಸವನ್ನು ...ಫಿಸಿ ವಜಾ ಮಾಡಿರುವ ಕೆಲಸಗಾರರನ್ನು ಹಿಂದಕ್ಕೆ ತೆಗೆದುಕೊಂಡು ಕೆಲಸಗಾರರಿಗೆ ಕೊಡಬೇಕಾದ ವೇತನವನ್ನು ... ಮಾಡುವ ಬಗ್ಗೆ ಸಚಿವರು ಹಲವು ಸೂಚನೆಗಳನ್ನು ಮುಂದಿಟ್ಟರು. ಈ ವಿಷಯದಲ್ಲಿ ಕಾರ್ಖಾನೆಯ ಅಧ್ಯಕ್ಷರೊಡನೆ ವಿಚಾರಾಲೋಚನೆ ನಡೆಸಬೇಕೆಂದು ವ್ಯವಸ್ಥಾಪಕರು ಹೇಳಿದುದರಿಂದ ನಾಳೆ ... ಮಾತುಕತೆಗಳನ್ನು ಮುಂದುವರಿಸುವ ರೀತಿ ಗೊತ್ತಾಗಿದೆ.

ಪಾಕಿಸ್ತಾನ್ ಪಿತೂರಿಯಲ್ಲಿ ಫಾತಿಮಾ ಜಿನ್ನಾರ ಕೈವಾಡ?

ಪಾಕಿಸ್ತಾನದ ಸ್ಥಾಪಕರಾದ ಜಿನ್ನಾರವರ ಸಹೋದರಿ ಫಾತಿಮಾ ಜಿನ್ನಾರವರು ಲಿಯಾಕತ್ ಅಲಿಯವರ ಸರ್ಕಾರವನ್ನು ಉರುಳಿಸುವ ಪಿತೂರಿಯಲ್ಲಿ ಕೈವಾಡ ನಡೆಸಿದ್ದರೆಂದು ಈಗ ಗೊತ್ತಾಗಿದೆಯೆಂದೂ, ಅವರ ಚಟುವಟಿಕೆಗಳನ್ನು ಪತ್ತೆ ಹಚ್ಚಲು ಬಲವಾದ ಪೊಲೀಸು ಕಾವಲನ್ನು ಹಾಕಲಾಗಿದೆಯೆಂದೂ ಹೇಳಲಾಗಿದೆ. ಅವರಿಗೆ ಬರುವ ಪತ್ರಗಳು, ಅವರು ಮಾಡುವ ಟೆಲಿಫೋನ್ ಸಂಭಾಷಣೆಗಳ ಮೇಲೆ ಸೆನ್ಸಾರ್‌ಷಿಪ್ ವಿಧಿಸಲಾಗಿದೆ. ಅವರು ಆ ದೇಶದ ಜನಾಬ... ಗಳನ್ನು ಭೇಟಿಯಾಗಕೂಡದೆಂದೂ, ಅವರನ್ನು ಗಡಿನಾಡು ಕಡೆಗೆ ಹೋಗಲೇಕೂಡದೆಂದೂ ಲಿಯಾಕತ್‌ರು ಕಟ್ಟಪ್ಪಣೆಯನ್ನು ಮಾಡಿರುವುದಾಗಿ ಹೇಳಲಾಗಿದೆ. ಪಿತೂರಿ ಸಂಬಂಧ ನೂರಕ್ಕೂ ಮೇಲ್ಪಟ್ಟ ಶೃಯಿಸ ಮೇಜರ್ ಜನರಲ್ ... ಮತ್ತು ಷಾ ನವಾಜ್‌ರವರೊಡನೆ ಅವರ ವ್ಯವಹಾರವನ್ನು ಇಟ್ಟುಕೊಂಡಿದ್ದರೆಂದು ಹೇಳಲಾಗಿದೆ.

ಮಾಜಿ ಮಂತ್ರಿ ವಿಗ್ರಹದ ಮೆರವಣಿಗೆ

ನಾಗಪುರದಲ್ಲಿ ಪ್ರತಿ ವರ್ಷವೂ ನಡೆಯುವ ಒಂದು ಹಬ್ಬದ ಸಂಬಂಧವಾಗಿ ನಿನ್ನೆ ಆದ ಮೆರವಣಿಗೆಯಲ್ಲಿ ಮಧ್ಯ ಪ್ರದೇಶದ ಮಾಜಿ ಮಂತ್ರಿ ಡಿ. ಪಿ. ಮಿಶ್ರಾರವರ ವಿಗ್ರಹವನ್ನು ತೆಗೆದುಕೊಂಡು ಹೋಗಲಾಯಿತು. ಜನರನ್ನು ಪೀಡಿಸುವ "ಅರಿಷ್ಟ ಮತ್ತು ಬಾಧೆಗಳನ್ನು" ಓಡಿಸಲು ಅಲ್ಲಿ ಪ್ರತಿ ವರ್ಷವೂ ಈ ಹಬ್ಬವನ್ನು ಆಚರಿಸಲಾಗುವುದು. ಕೊನೆಗೆ ವಿಗ್ರಹಗಳನ್ನು ಸುಡುವ ಪದ್ಧತಿಯೂ ಇದೆ.

ಮಳೆಗಾಗಿ ಕುಂಭಾಭಿಷೇಕ

ಕೋಲಾರದ ಪ್ರದೇಶಗಳ ಪೈರುಗಳು ಉಳಿಯಲು ಮಳೆಯಾಗಬೇಕೆಂದು ಪ್ರಾರ್ಥಿಸುವ ಸಲುವಾಗಿ ಕಳೆದ ಶನಿವಾರ ಕೋಲಾರದ ಸೋಮೇಶ್ವರ ದೇವಾಲಯದಲ್ಲಿ ಸಹಸ್ರಾರು ಜನರು ಸೇರಿ ವಿಶೇಷ ಕುಂಭಾಭಿಷೇಕ ಮತ್ತು ವರುಣದೇವನಿಗೆ ಪ್ರಾರ್ಥನೆಯನ್ನು ನಡೆಸಿದರು. ಈ ಉತ್ಸವವು ಹನ್ನೆರಡು ದಿನಗಳಿಂದ ಜರುಗಿ ಆ ದಿನ ಮುಕ್ತಾಯವಾಯಿತು.

ಪಶ್ಚಿಮ ರಾಷ್ಟ್ರಗಳು ಮತ್ತು ಕಮ್ಯೂನಿಸ್ಟರಿಗೆ ಘರ್ಷಣೆ ಖಂಡಿತ

ಪಶ್ಚಿಮ ರಾಷ್ಟ್ರಗಳ ಕೂಟಕ್ಕೂ, ಕಮ್ಯೂನಿಸ್ಟ್ ರಾಷ್ಟ್ರಗಳ ಕೂಟಕ್ಕೂ ಘರ್ಷಣೆಯಾಗುವ ಚಿಹ್ನೆಗಳಿದ್ದು ಈಗಾಗಲೇ ಸಿದ್ಧತೆಗಳು ಪ್ರಾರಂಭವಾಗಿವೆಯೆಂದು ಸ್ಟಾಕ್‌ಹೋಮಿನ ... ಜರ್ಮನಿಗೆ ಸಂಬಂಧವಾಗಿ ಸೇರಿರುವ ರಾಜಕೀಯ ವೀಕ್ಷಕರು ಅಭಿಪ್ರಾಯ ಪಟ್ಟಿರುತ್ತಾರೆ.

ಕಾಶ್ಮೀರದ ರಾಜ್ಯಾಂಗ ಸಭೆಗೆ ೪೩ ಜನರ ಅವಿರೋಧ ಆಯ್ಕೆ

ಕಾಶ್ಮೀರದ ರಾಜ್ಯಾಂಗ ಸಭೆಯ ಚುನಾವಣೆಯಲ್ಲಿ ಕಾಶ್ಮೀರದ ಕಣಿವೆ ಮತ್ತು ಲಡಾಕ್ ಪ್ರದೇಶಗಳಿಂದ ಈವರೆಗೆ ೪೩ ಮಂದಿ ರಾಷ್ಟ್ರೀಯ ಸಮ್ಮೇಳನದ ಉಮೇದುವಾರರು ಅವಿರೋಧವಾಗಿ ಆರಿಸಿ ಬಂದಿರುತ್ತಾರೆ. ಸಭೆಯ ಒಟ್ಟು ಸದಸ್ಯರ ಸಂಖ್ಯೆ ೭೫.

ಸಾಮೋಪಾಕರ್ಮ

ಮೈಸೂರು ಚಲುವಾಂಬಾ ಅಗ್ರಹಾರದ ಹಿಂಭಾಗದ ...೦ನೇ ಕೇರಿಯ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ನಾಳೆ ಪ್ರಾತಃಕಾಲ ೧೦ ಘಂಟೆಗೆ ಸಾಮೋಪಾಕರ್ಮವು ಪ್ರಾರಂಭವಾಗುವುದು. ಸಾಮವೇದಿಗಳಾದ ಶ್ರೀವೈಷ್ಣವರೆಲ್ಲರೂ ಸಕಾಲಕ್ಕೆ ಬಂದು ಉಪಾಕರ್ಮವನ್ನು ನೆರವೇರಿಸಿಕೊಳ್ಳಬಹುದಾಗಿ ಕೋರಲಾಗಿದೆ.

ಈ ಬಾರಿ ಹಿಂಗಳು ಪೂರ್ಣ ಪಡಿತರ ಕೊಡಬೇಕೆಂದು ಮನವಿ

ಗೌರಿ ಮತ್ತು ಗಣೇಶನ ಹಬ್ಬಗಳ ಪ್ರಯುಕ್ತ ತಿಂಗಳ ಪೂರ್ಣ ಪಡಿತರವನ್ನು ಒಂದೇ ವಾರಿಗೆ ಈ ಬಾರಿ ಕೊಡಬೇಕೆಂದು ಅಧಿಕಾರಿಗಳನ್ನು ಕೋರುವ ನಿರ್ಣಯವನ್ನು ನಿನ್ನೆ ನಡೆದ ಇಟ್ಟಿಗೆಗೂಡು ಯುವಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಂಗೀಕರಿಸಲಾಯಿತು.

ನಂಜನಗೂಡಿನಲ್ಲಿ ಈಗ್ಗೆ ೧೦ ೧೨ ದಿನಗಳ ಹಿಂದೆ ಸುಮಾರು ೧೬ ವಯಸ್ಸಿನ ಒಬ್ಬ ಯುವತಿಯನ್ನು ಒಂದು ಮೋಟಾರಿಗೆ ಸೇರಿದವರು ಅಪಹರಿಸಿರುವರೆಂದೂ ಇಮವರೆಗೂ ಆಕೆಯು ಪತ್ತೆ ಇಲ್ಲವೆಂದೂ ತಿಳಿದುಬಂದಿದೆ.

ಅಮೆರಿಕದ ದೋಣಿ ಅಪಘಾತದಲ್ಲಿ ೧೮ ಮರಣ

ನ್ಯೂಯಾರ್ಕ್ ಬಳಿ ಒಂದು ಸ್ಥಳದಲ್ಲಿ ಒಂದು ದೋಣಿಯು ಸಮುದ್ರದೊಳಗೆ ಮುಗುಚಿಕೊಂಡು, ಅದರಲ್ಲಿದ್ದ ೫೪ ಜನ ಮೀನು ಹಿಡಿಯುವವರ ಪೈಕಿ ೧೮ ಜನರು ಸತ್ತು, ೧೬ ಜನರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಇನ್ನೂ ೧೯ ಜನರು ಪತ್ತೆಯಾಗಿಲ್ಲ, ಅವರು ಬದುಕಿರುವ ಸಂಭವವಿಲ್ಲವೆಂದು ಊಹಿಸಲಾಗಿದೆ. ದೋಣಿಯು ಮುಗುಚಿಕೊಂಡ ಕೂಡಲೇ, ಪ್ರಾಣವನ್ನು ತಪ್ಪಿಸಿಕೊಳ್ಳಲು ಒಳಗಿದ್ದವರೆಲ್ಲರೂ ಅದರ ಕೋಣೆಯೊಳಗಿಂದ ಏಕ ಕಾಲದಲ್ಲಿ ಹೊರಕ್ಕೆ ಬರಲು ಪ್ರಯತ್ನಿಸಿದುದರಿಂದ ಅನೇಕರಿಗೆ ಸಾವುಂಟಾಯಿತೆಂದು ಹೇಳಲಾಗಿದೆ. ಒಬ್ಬ ಪೊಲೀಸನು ತಿಳಿಸಿದ ಸೂಚನೆಯಿಂದ, ದೋಣಿಯ ಹೊರಗಡೆ ಹೋಗುವ ಪ್ರದೇಶದಲ್ಲಿಯೇ ಅನೇಕರು ಸತ್ತು ಬಿದ್ದಿದ್ದುದು ವ್ಯಕ್ತವಾಗಿದೆ.

ಇಂಡೋನೇಷ್ಯದಲ್ಲಿ ಜ್ವಾಲಾಮುಖಿ

ಇಂಡೋನೇಷ್ಯದ ಸುರಾಬಯ ಎಂಬಲ್ಲಿಗೆ ೬೦ ಮೈಲಿ ದೂರದಲ್ಲಿ ಕೆಲ್ಲಿಯುಟ್ ಜ್ವಾಲಾಮುಖಿಯು ಸಿಡಿತದಿಂದ ಇಬ್ಬರು ಸತ್ತರೆಂದು ವರದಿಯಾಗಿದೆ.

ಗೋಮಟಗಿರಿ ಕ್ಷೇತ್ರಕ್ಕೆ ಹಣಕಾಸಿನ ಮಂತ್ರಿಗಳ ಭೇಟಿ

ಶ್ರೀ ಗೋಮಟಗಿರಿ ಕ್ಷೇತ್ರಕ್ಕೆ ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ನಿನ್ನೆ ಸಲಹಾಸಮಿತಿಯೊಡನೆ ಭೇಟಿಯಿತ್ತು, ಅಲ್ಲಿ ಇದೇ ೧೬ನೇ ೧೭ರಂದು ನಡೆಯಲಿರುವ ಮಸ್ತಕಾಭಿಷೇಕದ ಅಂಗವಾದ ಪೂರ್ವಭಾವಿ ಕೆಲಸಕಾರ್ಯಗಳನ್ನು ಪರಿಶೀಲಿಸಿದರು. ಈ ಸಂಬಂಧವಾಗಿ ಸಲಹೆಗಳನ್ನೂ ಅವರು ನಿತ್ತರು.

ವ್ರತ ನವರತ್ನ ಮಾಲಿಕೆ

ಮೈಸೂರ ಶ್ರೀ ಶಾರದಾವಿಲಾಸ ಪತ್ರಿಕಾಲಯದ ಸಂಪಾದಕರಾಗಿರುವ ಪಂಡಿತ ರತ್ನಂ ವಿದ್ವಾನ್ ಜಿ. ಎನ್. ವೆಂಕಟಸುಬ್ಬಶಾಸ್ತ್ರಿ ಭಾರತೀಯವರ ಸಂಪಾದಕತ್ವದಲ್ಲಿ ಹೊರಡುತ್ತಿರುವ ಆಸ್ತಿಕ ರತ್ನಂ ಗ್ರಂಥಮಾಲೆಯ ಆರನೇ ಕುಸುಮವಾದ ವ್ರತ ನವರತ್ನ ಮಾಲಿಕೆಎಂಬ ಗ್ರಂಥವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ. ಇದರಲ್ಲಿ ವರಸಿದ್ಧಿ ವಿನಾಯಕ ವ್ರತ, ಋಷಿಪಂಚಮಿ ವ್ರತ, ಅನಂತ ಪದ್ಮನಾಭ, ಸತ್ಯನಾರಾಯಣ, ಸೋಮೇಶ್ವರ, ಮಂಗಳಗೌರಿ, ವರಮಹಾಲಕ್ಷ್ಮಿ, ಸ್ವರ್ಣ ಗೌರಿ ಮತ್ತು ಸತ್ಯನಾರಾಯಣ ವ್ರತಗಳ ವಿಧಾನಗಳೂ, ವಿವರಗಳೂ ಕೊಡಲ್ಪಟ್ಟಿವೆ. ಅಲ್ಲದೆ ಪ್ರತಿಯೊಂದು ವ್ರತದ ಅರ್ಥವನ್ನೂ ಸಹ ಬಹಳ ಸರಳವಾದ ರೀತಿಯಲ್ಲಿ ಕೊಡಲಾಗಿದೆ. ಹಬ್ಬಗಳನ್ನು ಆಚರಿಸುವ ಈ ಸಮಯದಲ್ಲಿ ಈ ಗ್ರಂಥದ ಉಪಯೋಗವು ವಿಶೇಷವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಇದರ ಪ್ರಕಟನೆಯಿಂದ ಶ್ರೀ ಭಾರತೀಯವರು ಆಸ್ತಿಕ ಮಹನೀಯರುಗಳಿಗೆ ಮಹೋಪಕಾರವನ್ನೇ ಮಾಡಿರುತ್ತಾರೆ. ಇದರ ಬೆಲೆ ೦-೧೦-೦. ಇದರ ಪ್ರಯೋಜನವನ್ನು ಸನಾತನ ಧರ್ಮಾಭಿಮಾನಿಗಳೆಲ್ಲರೂ ಪಡೆಯಬೇಕೆಂದು ಹಾರೈಸುತ್ತೇವೆ.

ಕೋತಿಯು ಬಾಲವನ್ನು ತರುವವರಿಗೆ ಬಹುಮಾನ

ಸೂರಾಬಿನಲ್ಲಿ ಕೋತಿಗಳ ಹಾವಳಿ ಹೆಚ್ಚಾಗಿ ಪೈರುಗಳೆಲ್ಲಾ ನಾಶವಾಗುತ್ತಿರುವುದರಿಂದ ಅವುಗಳ ಹಾವಳಿಯನ್ನು ತಪ್ಪಿಸುವುದಕ್ಕೋಸ್ಕರ ಅಲ್ಲಿನ ಸರ್ಕಾರದವರು ಪತ್ರಿಕೆಯೊಂದನ್ನು ಹೊರಡಿಸಿ ಕೋತಿಯನ್ನು ಕೊಂದು ಅವರ ಬಾಲವನ್ನು ತಂದು ತೋರಿಸಿದವರಿಗೆ ೨ ರೂ ಬಹುಮಾನ ಕೊಡುವುದಾಗಿ ಸಾರುತ್ತಾರೆ

ಆಂಧ್ರ ದಿನಾಚರಣೆ

ಕೂಡಲೆ ಆಂಧ್ರ ಪ್ರಾಂತವನ್ನು ರಚಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುವುದಕ್ಕೋಸ್ಕರ ಬರುವ ೭ನೇ ತಾ|| ಆಂಧ್ರ ದಿನಾಚರಣೆಯನ್ನು ನಡೆಸಬೇಕೆಂದು ಕಳೆದ ಶುಕ್ರವಾರ ವಿಜಯವಾಡದಲ್ಲಿ ಸೇರಿದ್ದ ಸರ್ವ ಪಕ್ಷಗಳ ಸಭೆಯಲ್ಲಿ ನಿರ್ಣಯ ಮಾಡಲಾಯಿತು. ಈ ಸಂಬಂಧವಾಗಿ ಕೇಂದ್ರದೊಡನೆ ಮಾತುಕತೆ ನಡೆಸಲು ಒಂದು ನಿಯೋಗವನ್ನು ಕಳುಹಿಸಬೇಕೆಂದೂ ತೀರ್ಮಾನಿಸಲಾಯಿತು

ಅಖಿಲ ಭಾರತ ಪ್ರದರ್ಶನಕಾರರ ಸಂಘ

ಬರುವ ದಸರಾ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವ ಪ್ರದರ್ಶಕರು ಮೋಲ್ಸಂಡ ಸಂಘಕ್ಕೆ ೧೫ ದಿನಗಳು ಮುಂಚಿತವಾಗಿ ತಿಳಿಸಿದರೆ ಅವರಿಗೆ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಿಕೊಡುವುದಾಗಿ ಸಂಘದ ಕಾರ್ಯಕಾರಿ ಸಮಿತಿಯವರು ತಿಳಿಸಿರುತ್ತಾರೆ

ಗಣಪತಿ ಪೂಜೆ

ರಮಾವಿಲಾಸ ಅಗ್ರಹಾರದಲ್ಲಿರುವ ಯುವಕರ ಸಂಸ್ಕೃತಿ ಸಂಘದವರು ಗಣಪತಿ ಪೂಜೆಯ ಸಂಬಂಧವಾಗಿ ಮೋಲ್ಸಂಡ ಅಗ್ರಹಾರದ ೧೫೧ನೇ ನಂಬರು ಮನೆಯಲ್ಲಿ ಇದೇ ೫, ೬, ೭, ಮತ್ತು ೮ನೇ ತಾ|| ಗಳಲ್ಲಿ ಕ್ರಮವಾಗಿ ವಿದ್ವಾಂಸರುಗಳಿಂದ ಸಂಗೀತ ಭೂಷಣ ಎಂ.ಎ. ನರಸಿಂಹಾಚಾರ್, ವಿ. ರಾಮರತ್ನಂ, ಪಾಲಘಾಟ್ ಸುಬ್ರಹ್ಮಣ್ಯ ಅಯ್ಯರ್ ಮತ್ತು ಆರ್. ಕೆ. ಶ್ರೀಕಂಠರವರ ಸಂಗೀತವನ್ನು ಏರ್ಪಡಿಸಿರುವರು.

ನಂಜನಗೂಡು ಕರ್ನಾಟಕ ಸಂಘ

ಮೋಲ್ಸಂಡ ಸಂಘದ ಕಾರ್ಯದರ್ಶಿ ಶ್ರೀ ಎಂ ಕೃಷ್ಣಸ್ವಾಮಿಯವರು ಈ ರೀತಿ ಬರೆದಿರುತ್ತಾರೆ:—

ನಂಜನಗೂಡು ಕರ್ನಾಟಕ ಸಂಘವನ್ನು ಪುನರ್ರಚಿಸಿ ದಕ್ಷತೆಯಿಂದ ಕಾರ್ಯಕಲಾಪಗಳನ್ನು ಹೊಸ ಅಧಿಕಾರವರ್ಗದವರು ನಡೆಸುತ್ತಿರುವುದು ಸರ್ವರಿಗೂ ವೇದ್ಯವಾಗಿದೆ ಇದರ ಕೆಲವರು ಈ ಊರಿನಲ್ಲಿ ಎರಡು ಕರ್ನಾಟಕ ಸಂಘಗಳಿವೆಯೆಂದೂ, ಇವೆರಡೂ ಬೇರೆ ಬೇರೆಯಾಗಿವೆಯೆಂದೂ ತಪ್ಪು ಅಭಿಪ್ರಾಯದಿಂದ ಕೂಡಿರುವವರಾಗಿದ್ದಾರೆಂದು ನಮಗೆ ತಿಳಿದುಬಂದಿದೆ ಆದುದರಿಂದ ಸಾರ್ವಜನಿಕರಿಗೆ ಈ ಮೂಲಕ ನಾವು ಪ್ರಾರ್ಥಿಸಿಕೊಳ್ಳುವುದೇನೆಂದರೆ ಈ ಊರಿನಲ್ಲಿರುವುದು ಒಂದೇ ಕರ್ನಾಟಕ ಸಂಘ ಹಿಂದೆ ಇದ್ದ ಸಂಘವನ್ನು ಪುನರ್ರಚಿಸಿದ್ದೇವೆ ಸಂಘದ ಮಾಜಿ ಕಾರ್ಯದರ್ಶಿಗಳಾದ ಶ್ರೀಮಾನ್ ಚಂದ್ರಶೇಖರಯ್ಯನವರು ಈಗಿನ ಸಮಿತಿಯ ಸದಸ್ಯರಾಗಿದ್ದಾರೆ. ಇನ್ನೊಬ್ಬ ಮಾಜಿ ಕಾರ್ಯದರ್ಶಿಗಳಾದ ಶ್ರೀಮಾನ್ ಬಿ. ಎಸ್. ಎಸ್. ಆರಾಧ್ಯರವರು ನಮ್ಮ ಸಂಘಕ್ಕೆ ಸರ್ವ ವಿಧದಲೂ ನೆರವು ನೀಡುತ್ತಿದ್ದಾರೆ ಮಾಜಿ ಅಧ್ಯಕ್ಷರಾದ ಶ್ರೀಮಾನ್ ಸುಬ್ರಹ್ಮಣ್ಯಯ್ಯನವರು ನಮಗೆ ಸಂಘವನ್ನು ಪುನರ್ವ್ಯವಸ್ಥೆಗೊಳಿಸಲು ಲಿಖಿತ ಮೂಲಕ ಅಧಿಕಾರ ಕೊಟ್ಟು ಸಂಚಾಲಕರನ್ನಾಗಿ ಚುನಾಯಿಸಿದ್ದರು ಅಂತಯೇ ನಾವು ಕ್ರಮವಾಗಿ ಸಂಘವನ್ನು ಪುನರ್ವ್ಯವಸ್ಥೆಗೊಳಿಸಿದ್ದೇವೆ ಸಂಬಂಧ ಸರ್ವರಿಗೂ ತಿಳಿದ ವಿಷಯವಾಗಿದೆ.

[ಮಾಜಿ ಅಧ್ಯಕ್ಷರು ಸಂಘದ ಹಳೆಯ ಲೆಕ್ಕಪತ್ರಗಳನ್ನೂ, ಆಸ್ತಿಪಾಸ್ತಿಗಳನ್ನೂ ನೂತನ ಅಧಿಕಾರ ವರ್ಗದವರಿಗೆ ವಹಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ

ಮೇಲೆ ಕಾಣಿಸಿದ ನಿವೇದನವನ್ನು ಹೊಸ ಸಮಿತಿಗೆ ವಹಿಸಿಕೊಟ್ಟಿದೆಯೆಂದೂ, ಮತ್ತಾರೂ ವೈಯಕ್ತಿಕವಾಗಿ ಇದರ ಬಗ್ಗೆ ವ್ಯವಹಾರ ನಡೆಸಕೂಡದೆಂದೂ ಸಂಘದ ಮಾಜಿ ಕಾರ್ಯದರ್ಶಿ, ಶ್ರೀ ಬಿ ಎಸ್ ಎಸ್. ಆರಾಧ್ಯರು ಕೋರಿರುತ್ತಾರೆ]

ಪ್ರಣಯಭಂಗ ಹೊಂದಿದ ಕಪಿಯ ಆತ್ಮಹತ್ಯೆ

ಡಾನಿಷ್ ಮನರಂಜನೆಯ ಸಂಸ್ಥೆಯೊಂದರಲ್ಲಿ ಬೋನಿನಲ್ಲಿ ಕೂಡಲಾಗಿದ್ದ ಒಂದು ಗಂಡು ಕೋತಿಗೆ ಪ್ರಿಯೆಯಾಗಿದ್ದ ಹೆಣ್ಣು ಕೋತಿಯು ಸಾಲೆ ಅನುರಾಗವುಂಟಾದರೂ ಅದು ಗಂಡು ಕೋತಿಯೊಡನೆ ಸೇರದಿದ್ದುದರಿಂದ ಪ್ರಣಯಭಂಗವಾದುದಕ್ಕಾಗಿ ಗಂಡುಕೋತಿಯು ಆತ್ಮಹತ್ಯೆ ಮಾಡಿಕೊಂಡ ಪ್ರಸಂಗವು ವರದಿಯಾಗಿದೆ. ಗಂಡುಕೋತಿಯು ಹೆಣ್ಣನ್ನು ಪ್ರೀತಿಸಿ ಅದರ ಬಳಿಗೆ ಬಂದಂತೆಲ್ಲಾ ಹೆಣ್ಣು ಅದನ್ನು ಉಪೇಕ್ಷಿಸಿ ದೂರ ಸರಿಯುತ್ತಿತ್ತು ಗಂಡು ಕಪಿಯು ಇದಕ್ಕಾಗಿ ಆಹಾರವನ್ನು ತೊರೆದಿತ್ತು. ಒಂದು ದಿನ ಅದು ಬೋನಿನ ಒಂದು ಕಿಂಡಿಗೆ ತನ್ನ ಕತ್ತನ್ನು ತುರುಕಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿತೆಂದು ಹೇಳಲಾಗಿದೆ

ಚಂದಾದಾರರಲ್ಲಿ ವಿನಂತಿ

"ಸಾಧ್ವಿ" ಪತ್ರಿಕೆಯ ಪ್ರತಿ ತಿಂಗಳ ಚಂದಾ ಎಂಟು ಆಣೆಯನ್ನು ಮುಂಗಡವಾಗಿ ಪಾವತಿ ಮಾಡಿ ಚಂದಾದಾರರು ರಸೀತಿಯನ್ನು ಪಡೆದುಕೊಳ್ಳಬೇಕಾಗಿ ವಿನಂತಿ ರಸೀತಿಯಿಲ್ಲದೆ ಪಾವತಿ ಮಾಡಿದ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲವೆಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಿರುತ್ತೇವೆ.

ನ್ಯೂಸ್ ಪೇಪರ್ ಹೌಸ್,
ಮೈಸೂರು
"ಸಾಧ್ವಿ" ಏಜಂಟರು.

ಚೌಕಾಕಾರದ ಕುಂಬಳಕಾಯಿ ಬೆಳೆಯಲು ಪ್ರಯತ್ನ

ಗುಂಡು ಆಕಾರದ ಕುಂಬಳಕಾಯಿಗಳನ್ನು ಪೆಟ್ಟಿಗೆಗಳಲ್ಲಿಟ್ಟು ರವಾನಿಸುವಾಗ ಬಹಳ ಸ್ಥಳವು ಖಾಲಿ ಬಿಡುವುದರಿಂದ ಚೌಕವಾದ ಕುಂಬಳಕಾಯಿಗಳನ್ನು ಬೆಳೆಯಲು ಫ್ರಾನ್ಸಿನ ಕೃಷಿಕನೊಬ್ಬನು ಆಲೋಚಿಸಿರುವುದಾಗಿ ವರದಿಯಾಗಿದೆ. ಕಾಯಿಯು ಎಳೆಯದಾಗಿರುವಾಗಲೇ ಒಂದು ಚೌಕನಾದ ಮರದ ಪೆಟ್ಟಿಗೆಯಲ್ಲಿಟ್ಟು ಘನ ಆಕಾರದ ಕುಂಬಳಕಾಯಿಗಳನ್ನು ಬೆಳೆಯಲು ಅವನು ಪ್ರಯತ್ನಿಸುವುದಾಗಿ ಗೊತ್ತಾಗಿದೆ.

ಲೈಸೆನ್ಸಿಂಗ್ ಅಧಿಕಾರಿಗಳ ಕಛೇರಿ,
ಮೈಸೂರು.

ಪ್ರಕಟಣೆ

A 7 73 51 52, ತಾ|| 28-8 51

೧೯೫೧ ನೇ ಸೆಪ್ಟೆಂಬರ್ ೫ ನೇ ತಾರೀಖು ಬುಧವಾರ ಶ್ರೀ ಗಣೇಶನ ಹಬ್ಬದ ಪ್ರಯುಕ್ತ ಮೈಸೂರು ನಗರದ ಸಬ್ ಗೋಡೌನುಗಳೂ ಸೇರಿ ಎಲ್ಲಾ ರೇಷನ್ ಡಿಪೋಗಳೂ ಮುಚ್ಚಲ್ಪಡುವುವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ

(ರುಜು)
ಎಚ್. ಜಿ. ವಿಜಯರಾಘವ ರಡ್ಡಿ,
ಲೈಸೆನ್ಸಿಂಗ್ ಅಧಿಕಾರಿಗಳು,
ಮೈಸೂರು. ಸಿಟಿ

ಮನೆ ಹರಾಜು

ಮೈಸೂರು ಸಬ್ ಜಡ್ಜರವರ ಕೋರ್ಟಿನ ೧೯೫ ನಂ. [illegible]
[illegible] ವೆಂಕಟೇಶಯ್ಯ [illegible]

ಪ್ರತಿವಾದಿಗಳು. ಚೌಡಮ್ಮ ವಗೈರೆ

ಮೋಲ್ಸಂಡ ನೂಕಪ್ಪನವರು ಅಗ್ರಹಾರದ ಕಾರ್ಟರ್ ಡಿಕ್ರಿ ಅನುಸರಿಸಿ ಕೋರ್ಟಿನ ಆರ್ಡರ್ ಪ್ರಕಾರ ಸೆಡ್ಯೂಲ್ ಸ್ವತ್ತು ನಮ್ಮ ತಾ|| ೨೦ ನೇ ಗಂಡಲ್ಲಿ ಸ್ವಾತ್ತಿನ ಬಳಿಗೆ ೧೧ ಘಂಟೆ ಕಾಲಕ್ಕೆ ಬಹಿರಂಗವಾಗಿ ಒಂದನೇ ಮುನ್ಸೀಫ್‌ರವರ ಕೋರ್ಟಿನ ನಾಜರ್‌ರವರಿಂದ ಹರಾಜು ಮಾಡಲ್ಪಡುತ್ತೆ. ಇಷ್ಟ ಉಳ್ಳವರು ಆ ದಿವಸ ಬಂದು ಬಿಡ್ ಮಾಡಬಹುದು. ಸ್ವತ್ತು ಮೈಸೂರು ಸಿಟಿಯಲ್ಲಿ ಮಾರ್ಕೆಟ್, ಬಸ್ ಸ್ಟ್ಯಾಂಡ್, ಆಸ್ಪತ್ರೆ, ರೈಲ್ವೆ ಸ್ಟೇಷನ್ ಮತ್ತು ವ್ಯಾಪಾರಸ್ಥಳಗಳಿಗೆ ಸಮೀಪದಲ್ಲಿರುತ್ತದೆ ಮನೆಗೆ ನಲ್ಲಿ, ಫ್ಲಷಿಂಗ್ ಸಹಾ ಇರುತ್ತೆ ಮನೆ ಉತ್ತಮ ಸ್ಥಿತಿಯಲ್ಲಿದ್ದು ಮಧ್ಯವಾಗಿದೆ

ಶೆಡ್ಯೂಲು — ಮೈಸೂರು ಸಿಟಿ ಮಂಡಿ ಮೊಹಲ್ಲಾ ಕಾಮಾಟಿಗೇರಿಯಲ್ಲಿ ಯಾಲಕ್ಕಿ ಶ್ಯಾಮರಾಯರವರ ಛತ್ರದ ಪಕ್ಕದ ರೋಡಿನಲ್ಲಿ ಅವಳ್ಳಿ ಸಮೀಪದಲ್ಲಿರುವ ಡೋರ್ ನಂ. ೧೯ ಉಳ್ಳ [illegible] ನಂಗಳೂರು ಹೆಂಚಿನ ಮಹಡಿ ಮನೆ.

ಗೌರಿ ಹಬ್ಬಕ್ಕಾಗಿ ★ ಸಾವಿರಾರು ನೂತನ ರೇಷ್ಮೆ ಸೀರೆಗಳು, ಮತ್ತು ಸೂಳಿನ ಸೀರೆಗಳು ಬಂದಿವೆ ನೇರವಾಗಿ ಬಂದು ಕೊಳ್ಳಿರಿ.

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ ದೊಡ್ಡಾಂಗಡಿ ಆನಂದ ಭವನ ಹೋಟೆಲ್ ಪಕ್ಕ, ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು
ರತ್ನಾವಳಿ ಥಿಯೇಟರಿನಲ್ಲಿ
1-9-51ನೇ ಶನಿವಾರದಿಂದ * ಶ್ರೀ ಕೃಷ್ಣ ಭಗವಾನ್
ಶುಕ್ರವಾರ ಮತ್ತು ಭಾನುವಾರಗಳಲ್ಲಿ 6-45 ಕ್ಕೆ ಉಳಿದ ದಿನಗಳಲ್ಲಿ 9-45 ಕ್ಕೆ
ಮುಂದಿನ ಆಕರ್ಷಣೆ:— ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ಪ್ರಭುದೇವಾ ಟಾಕೀಸ್
5-9-51ನೇ ಬುಧವಾರದಿಂದ :: ಪ್ರತಿ ದಿನ 3 ಆಟಗಳು
ರಾಯಲ್ ಟಾಕೀಸ್ ನವರ ತಮಿಳು ಚಿತ್ರ ★ ಸಾವಿತ್ರಿ ★
ಪಾತ್ರ :- ಎಂ. ಎಸ್. ಸುಬ್ಬಲಕ್ಷ್ಮಿ, ಶಾಂತಾ ಆಪ್ಟೆ, ವೈ. ವಿ. ರಾವ್ ಮುಂತಾದವರು

ರಾಜಕಮಲ್, ಮೈಸೂರು
31-8-51 ರಿಂದ 4ನೇ ವಾರ
ಜಗನ್ಮೋಹಿನಿ

ಗುರುದೇವಾ ಹಾಲ್
ಗೌರಿಹಬ್ಬದ ಸಲುವಾಗಿ
ರಿಯಾಯಿತಿ ಬೆಲೆ
ಕ್ರೇಪ್, ಜಾರ್ಜೆಟ್, ಧರ್ಮಾವರಂ, ಆರಣಿ ಕಂಚಿ ರೇಷ್ಮೆ ಸೀರೆಗಳು ದೊರೆಯುತ್ತವೆ
ಶಿವರಾಂಪೇಟೆ, ಮೈಸೂರು.

[illegible]

Edited, printed and published by A. R. Naga Ram at Sadhvi Press [illegible] Subbiah Road, Mysore

ಫೋನ್ ನಂ 792 ॥ ವಂದೇ ಮಾತರಂ ॥ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೪-೯-೫೧ [ಸಂಚಿಕೆ ೩೫

ಪಾಕ್ ರಾಯಭಾರಿಗೆ ಪರ್ಷಿಯದ ಎಚ್ಚರಿಕೆ

ಪಾಕಿಸ್ತಾನ ರಾಯಭಾರಿಗೆ ಪರ್ಷಿಯದ ಎಚ್ಚರಿಕೆ

ಪರ್ಷಿಯಾದಲ್ಲಿ ಭಾರತದ ವಿರುದ್ಧ ಪ್ರಚಾರವನ್ನು ನಡೆಸಕೂಡದೆಂದ ಪಾಕಿಸ್ತಾನದ ರಾಯಭಾರಿ ಕಛೇರಿಗೆ ಅಲ್ಲಿನ ಸರ್ಕಾರದವರು ಸೂಚಿಸಿರುತ್ತಾರೆ

ದೆಹಲಿ ಬಳಿ ರೈಲು ಅಪಘಾತದಿಂದ ೧೨ ಜನರ ಮರಣ

ದೆಹಲಿ ಬಳಿ ಷಹದಾರಾ ಸ್ಟೇಷನ್ನಿಗೆ ತೆರಳುತ್ತಿದ್ದ ಒಂದು ಎಕ್ಸ್‌ಪ್ರೆಸ್ ರೈಲು ನೆನ್ನೆ ಕಂಬಿ ತಪ್ಪಿ ಉರುಳಿ ೫ ಜನ ಗಂಡಸರೂ, ಮೂವರು ಹೆಂಗಸರೂ, ಇಬ್ಬರು ಮಕ್ಕಳೂ ಮೃತರಾದುದಲ್ಲದೆ ೧೭ ಜನರಿಗೆ ಗಾಯವಾಗಿದೆ. ೫ ಗಾಡಿಗಳೂ ೧ ಎಂಜಿನುಗಳೂ ತಲೆ ಕೆಳಗಾಗಿ ಬಿದ್ದವು. ೫ ಜನರ ಪೆಟ್ಟಿನ ಸ್ಥಿತಿಯು ತೀವ್ರವಾಗಿದೆ ಪೆಟ್ಟಿನ ಕೈಕಾಲುಗಳನ್ನು ಆಸ್ಪತ್ರೆಯಲ್ಲಿ ಕತ್ತರಿಸಲಾಗಿದೆ. ಅಪಘಾತದ ಕಾರಣವು ಇನ್ನೂ ಗೊತ್ತಾಗಿಲ್ಲ.

ಹೆಂಡತಿ ಕೊಂದು ಶವದ ಮೇಲೆ ತಪಸ್ಸು

ಪಶ್ಚಿಮ ಬಂಗಾಳದ ಅಲಿಪುರದ ಬಳಿ ಒಂದು ಹಳ್ಳಿಯ ರುದ್ರ ಭೂಮಿಯಲ್ಲಿ ನಿವಾಸವನ್ನು ಮಾಡಿಕೊಂಡಿದ್ದ ರೇಣುಕ ದೇವ ಎಂಬವನು ತನ್ನ ಹೆಂಡತಿಯನ್ನು ಕೊಂದು ಆಕೆಯ ಶವದ ಮೇಲೆ ಕುಳಿತು ತಪಸ್ಸು ಮಾಡುತ್ತಿದ್ದುದು ಗೊತ್ತಾಗಿ ಅವನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ. ಪ್ರತಿ ನಿತ್ಯವೂ ಆತನ ಹೆಂಡತಿಯು ಅವನಿಗೆ ಪರ ಊರಿನಿಂದ ಅನ್ನವನ್ನು ತರುತ್ತಿದ್ದು, ಒಂದು ದಿನ ಆತನು ಹೆಂಡತಿಯ ಮನೆಗೆ ಹೋಗಿ ಅಕ್ಕಿ ಗಂಟು ತೀರಿಸಿಕೊಂಡು ಹೆಂಡತಿಯೊಡನೆ ತನ್ನ ನಿವಾಸಕ್ಕೆ ಬಂದು ರಾತ್ರಿಯ ಪ್ರಕೃತಿಯ ಕತ್ತನ್ನು ಕುಯ್ದನೆಂದು ಹೇಳಲಾಗಿದೆ. ಬೆಳಗಾಗುತ್ತಲು ಅವನ ೬ ವರ್ಷದ ಮಗನು ತಂದೆಗೆ ಹೂವು ತಂದಾಗ ಅವನ ಕಣ್ಣಿಗೆ ಈ ಘೋರ ದೃಶ್ಯವು ಬಿದ್ದಿತು.

ಬ್ರಿಟಿಷ್ ಅಧಿಕಾರಿಗೆ ಪೋಲೆಂಡಿನಿಂದ ಉಚ್ಚಾಟನೆ

ಪೋಲೆಂಡ್ ದೇಶದಲ್ಲಿರುವ ಬ್ರಿಟಿಷ್ ವ್ಯಾಪಾರಿಯ ಕೈಕೆಳಗಿನ ೩ನೇ ರಾಜತಾಂತ್ರಿಕ ಅಧಿಕಾರಿಯು ಈ ದಿನದೊಳಗೆ ಅಲ್ಲಿಂದ ವಾಪಸು ತೆರಳಬೇಕೆಂದು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ವಿದ್ಯಾಗಣಪತಿ ಮಹೋತ್ಸವ

ರಾಜಧಾನಿಯ ಜಗನ್ಮೋಹನ ಭವನದ ಬಳಿ ಇರುವ ಮಾದರಿ ಶಾಲೆಯಲ್ಲಿ ಸಮಿತಿಯ ವತಿಯಿಂದ ೧೬ನೇ ತಾ॥ ವರೆಗೆ ವಿದ್ಯಾಗಣಪತಿ ಮಹೋತ್ಸವವನ್ನು ಏರ್ಪಡಿಸಲಾಗಿದೆ. ಪ್ರತಿ ದಿನವಲ್ಲೂ ಪ್ರಖ್ಯಾತ ಸೇವಾರ್ಥದಿಂದ ಹರಿಕಥೆ, ಸಂಗೀತ, ಮುಂತಾದುವು ನಡೆಯುವುವು ನಾಳೆ ಮಧ್ಯಾಹ್ನ ೩॥ ಗಂಟೆಗೆ ಹರಿ ಪಿ ಸೋಸಲೆಪುರಂ ಶ್ರೀನಿವಾಸ ರಂಗಾಚಾರ್ಯರಿಂದ ಸ್ಯಮಂತಕೋಪಾಖ್ಯಾನ ಎಂಬ ಹರಿಕಥೆಯು ನಡೆಯುವುದು. ನಾಳಿದ್ದು ಮಧ್ಯಾಹ್ನ ೪॥ ಗಂಟೆಗೆ ವಿದ್ವಾನ್ ಆರ್. ಕೆ. ಶ್ರೀಕಂಠರವರ ಸಂಗೀತವು ನಡೆಯುವುದು.

ವಯಸ್ಕರ ಶಿಕ್ಷಣ ಸಮ್ಮೇಳನ
೩ ದಿನಗಳ ಕಾರ್ಯಕ್ರಮ

ಮೈಸೂರು ೪

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಸಮ್ಮೇಳನವು ಬರುವ ೬ನೇ ತಾ॥ ಬೆಂಗಳೂರು ನಗರದಲ್ಲಿ ಪ್ರದರ್ಶನಾಲಯದಲ್ಲಿ ನಡೆಯುವುದು. ಶ್ರೀಮಾನ್ ... ೭ ನೇ ತಾ॥ ಬೆಳಗ್ಗೆ ೧೦ ಗಂಟೆಗೆ ಮಹೋತ್ಸವವನ್ನು ನೆರವೇರಿಸುವರು ... ದಾಸಪ್ಪನವರು ಅಧ್ಯಕ್ಷತೆ ವಹಿಸುವರು. ಮಧ್ಯಾಹ್ನ ೩ ಗಂಟೆಗೆ ಸಮ್ಮೇಳನದ ಅಧಿವೇಶನ, ೩ ರಿಂದ ರಾತ್ರಿ ೮ ರವರೆಗೆ ವಯಸ್ಕರ ಶಿಕ್ಷಣ ಪ್ರದರ್ಶನ ... ಗಂಟೆಗೆ ಸಭೆ, ಭಾಷಣಗಳು. ಕಾವ್ಯವಾಚನ ... ನ ಪದಗೀತೆ, ಪ್ರಹಸನ, ಸಂಗೀತ ನೃತ್ಯ ಮುಂತಾದವು ನಡೆಯುವುವು. ೭ ಮತ್ತು ೮ ನೇ ತಾ॥ಗಳಲ್ಲೂ ವಿವಿಧ ಕಾರ್ಯಕ್ರಮಗಳಿವೆ.

ಕೋತಿಯೊಂದಕ್ಕೆ ೨ ರೂ.

ತುಮಕೂರಿನಲ್ಲಿ ಕೋತಿಗಳ ನಿವಾಸವು ಹೆಚ್ಚಾಗಿ ಅವುಗಳ ಬಾಧೆ ತಪ್ಪಿಸಲು ಅಲ್ಲಿನ ಪೌರ ಸಭೆಯವರು ಅವನ್ನು ಹಿಡಿದು ಕೊಟ್ಟವರಿಗೆ ಕಪಿಯೊಂದಕ್ಕೆ ೨ ರೂ. ಬಹುಮಾನವನ್ನು ಕೊಡಲು ತೀರ್ಮಾನಿಸಿರುತ್ತಾರೆ. ಅವುಗಳನ್ನು ಸಾಗಿಸುವ ಕಾರ್ಯವು ಪೌರ ಸಭೆಯವರಿಂದಲೇ ಆಗುವುದು

೧೨ ಗಂಟೆ ಕಾಲ ಸತತವಾಗಿ ಸೈಕಲ್ ಸವಾರಿ

ದಾವಣಗೆರೆಯಲ್ಲಿ ಕಳೆದ ಶುಕ್ರವಾರ ಮಹಮುದ್ ಹುಸೇನ್ ಎಂಬ ೧೭ ವರ್ಷದ ಬಾಲಕನು ಎಡೆಬಿಡದೆ ೧೭ ಗಂಟೆ ಕಾಲ ಸೈಕಲ್ ಸವಾರಿ ಮಾಡಿ, ತಾನು ಕಲ್ಪಿಸಿದ್ದ ಉದ್ದೇಶದಲ್ಲಿ ಜಯಶೀಲನಾದನು. ಸೈಕಲ್ ಮೇಲೆಯೇ ಅವನು ಆಹಾರವನ್ನು ಸೇವಿಸುತ್ತಿದ್ದನು

ಸಿ. ಸಂಸ್ಥಾನಗಳಲ್ಲಿ ಪ್ರಜಾಪ್ರಭುತ್ವ

"ಸಿ" ವಿಭಾಗದ ಸಂಸ್ಥಾನಗಳಲ್ಲಿ ಪ್ರಜಾ ಪ್ರಭುತ್ವದ ಆಳ್ವಿಕೆಯನ್ನು ಜಾರಿಗೆ ತರಲು ಪಾರ್ಲಿಮೆಂಟು ನೆನ್ನೆ ಅವಕಾಶ ಕಲ್ಪಿಸಿ ಮಸೂದೆಯನ್ನು ಅಂಗೀಕರಿಸಿತು.

ಪಾಕಿಸ್ತಾನದಲ್ಲಿ ಹಿಂದುಗಳ ಮೇಲೆ "ಯುದ್ಧದ ತೆರಿಗೆ"

ಪಾಕಿಸ್ತಾನದ ಯುದ್ಧ ಸಿದ್ಧತೆಗಾಗಿ ಪೂರ್ವ ಬಂಗಾಳದಲ್ಲಿರುವ ಮುಸ್ಲಿಮೇತರ ಪ್ರಜೆಗಳ ಮೇಲೆ ಅಲ್ಲಿನ ಸರ್ಕಾರದವರು 'ಯುದ್ಧದ ತೆರಿಗೆ'ಯನ್ನು ವಿಧಿಸಿ ಅದರ ವಸೂಲಿಗಾಗಿ ಹೊರಟಿರುತ್ತಾರೆ. ೧೦೦ ರೂ ಹಿಂದಿನ ೧೦ ಸಾವಿರ ರೂಪಾಯಿಗಳವರೆಗೆ ಪ್ರತಿ ಸಂಸಾರದಿಂದಲೂ ತೆರಿಗೆ ವಸೂಲು ಮಾಡಲಾಗುವುದು. ಅಂತಹ ಸಂಸಾರಗಳು ಈ ತೆರಿಗೆಯನ್ನು ಕೊಡಲು ಸಾಧ್ಯವೇ ಇಲ್ಲವೇ ಎಂಬ ವಿವೇಚನೆಯೂ ಇಲ್ಲದೇ ಈ ರೀತಿ ಮಾಡಲಾಗುತ್ತಿದೆ. ಅನೇಕ ಕಡೆಗಳಲ್ಲಿ ಈ ತೆರಿಗೆಯನ್ನು ಬಲಾತ್ಕಾರ ರೀತಿಯಲ್ಲಿ ವಸೂಲಿ ಮಾಡಲಾಗುತ್ತಿದೆ ಇದರಿಂದ ಅಲ್ಲಿರುವ ಅಲ್ಪ ಸಂಖ್ಯಾತರಲ್ಲಿ ತುಂಬಾ ಅಶಾಂತಿಯುಂಟಾಗಿ, ಪೂರ್ವ ಪಾಕಿಸ್ತಾನದಿಂದ ಹಿಂದುಗಳ ನಿರ್ಗಮನವು ಹೆಚ್ಚು ಪ್ರಮಾಣದಲ್ಲಾಗುವುದೆಂದು ಭಾವಿಸಲಾಗಿದೆ

ಯುದ್ಧವಾದರೆ ಪಾಕಿಸ್ತಾನಕ್ಕೆ ಪಠಾಣರ ಬೆಂಬಲವಿಲ್ಲ

ಕಾಶ್ಮೀರದ ಮೇಲೆ ಪಾಕಿಸ್ತಾನವು ಹೂಡುವ ಯಾವುದೇ ಯುದ್ಧದಲ್ಲಾಗಲಿ ಗಡಿನಾಡಿನ ಪಠಾಣರು ಪಾಕಿಸ್ತಾನಕ್ಕೆ ಬೆಂಬಲ ನೀಡುವುದಿಲ್ಲವೆಂದು ಅಖಿಲ ಭಾರತ ಪಖ್ತೂನ್ ಜಿರ್ಗಾ ಅಧ್ಯಕ್ಷರಾದ ಮೌಲಾನಾ ಮಹಮುದ್ ಅಕ್ಬರ್‌ರವರು ತಿಳಿಸಿರುತ್ತಾರೆ ಪಖ್ತೂನಿಸ್ತಾನವನ್ನು ಸ್ಥಾಪಿಸುವ ಸಲುವಾಗಿ ಅಲ್ಲಿನ ಜನರು ಪಾಕಿಸ್ತಾನದ ವಿರುದ್ಧ ಹೋರಾಟ ನಡಸುತ್ತಿರುವರೆಂದು ಅವರು ಹೇಳುತ್ತಾರೆ

ಸೂಚನೆ

ನಾಳೆ ವಿನಾಯಕನ ಚತುರ್ಥಿ ಪ್ರಯುಕ್ತ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ಶಾಸನ ಸಭಾಧಿವೇಶನ

ಮೈಸೂರು ಶಾಸನ ಸಭಾಧಿವೇಶನವು ಬರುವ ತಿಂಗಳು ೮ನೇ ತಾ॥ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಯ ಅಠಾರ ಕಚೇರಿ ಭವನದಲ್ಲಿ ಪ್ರಾರಂಭವಾಗುವುದು

ವಿದ್ಯುಚ್ಛಕ್ತಿ ಕಾರ್ಖಾನೆ ಕೆಲಸಗಾರರಿಗೆ ಎಚ್ಚರಿಕೆ

ಸ್ವಂ.ಸು.ಪ್ರೋ.] ಬೆಂಗಳೂರು ೪

ಮೋಲ್ಡಿಂಗ್ ಕಾರ್ಖಾನೆಯ ಮುಷ್ಕರವು ಒಂದೇ ಸಮನಾಗಿ ಮುಂದುವರಿಯುತ್ತಿದೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರವರು ಕೆಲಸಗಾರರಿಗೆ ಎಚ್ಚರಿಕೆ ಕೊಟ್ಟು, ನಾಳಿದ್ದು ಬೆಳಗ್ಗೆ ೮॥ ಗಂಟೆಯೊಳಗೆ ಕೆಲಸದ ಮೇಲೆ ಹಿಂತಿರುಗದಿದ್ದರೆ ಅವರುಗಳನ್ನು ಕಾರ್ಖಾನೆಯ ನೌಕರರಲ್ಲವೆಂದು ಪರಿಗಣಿಸಲಾಗುವುದೆಂದೂ, ವಜಾ ಮಾಡಲ್ಪಡಲು ಅವರು ಸಿದ್ಧರಾಗುವರೆಂದೂ ತಿಳಿಸಿದ್ದಾರೆ.

○ ಆಸ್ಟ್ರೇಲಿಯದಲ್ಲಿ ವಿದ್ಯುಚ್ಛಕ್ತಿಯ ಹೈ ವೋಲ್ಟೇಜ್ ಟ್ರಾನ್ಸ್‌ಮಿಷನ್ ಪದ್ಧತಿಯಲ್ಲಿ ಶಿಕ್ಷಣ ಪಡೆಯಲು ವಿದ್ಯುತ್ ಇಲಾಖೆಯ ಜನರಲ್ ಸೂಪರಿಂಟೆಂಡೆಂಟ್ ಶ್ರೀ ಹೆಚ್ ವಿ. ನಾರಾಯಣ ರಾಯರನ್ನು ಅಲ್ಲಿಗೆ ಕಳುಹಿಸಲಾಗುವುದು. ಭಾರತೀಯರಿಗೆ ಆಸ್ಟ್ರೇಲಿಯದ ಸರ್ಕಾರದವರು ಕೊಟ್ಟಿರುವ ೫ ವೇತನಗಳ ಪೈಕಿ ಒಂದು ಇವರಿಗೆ ದೊರಕಿರುತ್ತದೆ.

ಯುದ್ಧಾರಂಭವಾಗಬಹುದೆಂದು ಟ್ರೂಮನ್

ಕಮ್ಯೂನಿಸ್ಟರು ಪುನ. ಯುದ್ಧವನ್ನು ಯಾವ ಗಳಿಗೆಯಲ್ಲಾದರೂ ಆರಂಭಿಸಬಹುದೆಂದೂ ಅವರು ಅದಕ್ಕೆ ಸಾಮರ್ಥ್ಯವುಳ್ಳವರಾಗಿರುವರೆಂದೂ, ಅಧ್ಯಕ್ಷ ಟ್ರೂಮನ್‌ರವರು ಹೇಳುವರು ಯೂರೋಪು ಮತ್ತು ಮಧ್ಯಪ್ರಾಚ್ಯಗಳಲ್ಲೂ ಅವರು ಯುದ್ಧವನ್ನಾರಂಭಿಸಬಹುದೆಂದೂ ಅವರು ತಿಳಿಸಿದ್ದಾರೆ.

ನಕ್ಷತ್ರಮಂಡಲಕ್ಕೆ ಪ್ರಯಾಣ

ಇನ್ನು ಕೇವಲ ೧೦ ವರ್ಷಗಳಲ್ಲಿ ಚಂದ್ರನಂತೆಯೇ ಭೂಮಿಯನ್ನು ಸುತ್ತುತ್ತಾ ಆಕಾಶದಲ್ಲಿ ಚಲಿಸುವಂತಹ ವಾಹನ ವಿಶೇಷವೊಂದನ್ನು ವೈಜ್ಞಾನಿಕರು ತಯಾರಿಸುವರು ಭೂಮಿಯಿಂದ ನಕ್ಷತ್ರ ಮಂಡಲಕ್ಕೆ ತೆರಳುವ ಸಾಧನದಲ್ಲಿ ಇದು ಪ್ರಥಮ ಘಟ್ಟವೆಂದು ಹೇಳಲಾಗಿದೆ.

ಕಾಂಗ್ರೆಸ್ಸಿಗೆ ಮುದ್ರಾಸು ಶಾಸನ ಸಭಾ ಮುಸ್ಲಿಂ ಸದಸ್ಯರು

ಮದ್ರಾಸಿನ ಶಾಸನ ಸಭೆಯಲ್ಲಿರುವ ಸಂಯುಕ್ತ ಪ್ರಜಾಪಕ್ಷದ ೯ ಮಂದಿ ಮುಸ್ಲಿಂ ಸದಸ್ಯರು ಮತ್ತು ಅವರ ಮುಖಂಡರಾದ ಅಬ್ದುಲ್ ಹಮೀದ್ ಖಾನರು ಕಾಂಗ್ರೆಸ್ ಪಕ್ಷಕ್ಕೆ ಸೇರಿರುತ್ತಾರೆ.

ಆಯುರ್ವೇದ ಮತ್ತು ಯುನಾನಿ ಕಾಲೇಜು ಸಂಘ

ಇಲ್ಲಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಸಂಘದ ವಾರ್ಷಿಕ ಚುನಾವಣೆಯಲ್ಲಿ ಶ್ರೀ ಪಿ. ಆರ್. ಸೀತಾರಾಂರವರು ಅಧ್ಯಕ್ಷರಾಗಿಯೂ, ಶ್ರೀ ಎಸ್. ಎನ್. ಶೆಟ್ಟಿಯವರು ಕಾರ್ಯದರ್ಶಿಯಾಗಿಯೂ, ಶ್ರೀ ಜೆ. ವಿ. ಕುಲಕರ್ಣಿಯವರು ಆಟಪಾಟಗಳ ಕಾರ್ಯದರ್ಶಿಯಾಗಿಯೂ, ಆರಿಸಲ್ಪಟ್ಟಿರುವರು. ಶ್ರೀಗಳಾದ ಕೆ. ಜಿ ರಾಮರಾವ್, ಹೆಚ್ ಎಸ್. ಸುಬ್ರಹ್ಮಣ್ಯ, ಎಂ. ರಾಮಚಂದ್ರ, ರಾವ್, ಬಿ ಕಿಟ್ಟಣ್ಣಶೆಟ್ಟಿ, ಜಿ. ಅಬ್ದುಲ್ ಮಜೀದ್ ಮತ್ತು ಜನಾಬ್ ರಹೀಮುನ್ನಿಸಾ ಇವರುಗಳು ಸದಸ್ಯರಾಗಿ ಚುನಾಯಿತರಾಗಿರುವರು.

ಅಸ್ಸಾಂ ಭೂಕಂಪದಿಂದ ನದಿಗಳ ಮಾರ್ಗದ ವ್ಯತ್ಯಾಸ

ಕಳೆದ ವರ್ಷ ಅಸ್ಸಾಂನಲ್ಲಿ ಆದ ಭಾರಿ ಭೂಕಂಪದ ಪರಿಣಾಮಗಳು ಇನ್ನೂ ಆ ಪ್ರದೇಶದಲ್ಲಿ ಕಾಣಬರುವುವು. ಬೆಟ್ಟಗುಡ್ಡಗಳಿಂದ ಹರಿಯುವ ದಿಬಾಂಗ್, ಲೋಹಿತ್, ದೇವ್‌ಪಾಣಿ, ಕುಂದಿಲ್, ಸಿಗಾರು ಮುಂತಾದ ನದಿಗಳು ಪ್ರವಹಿಸುವ ಮಾರ್ಗದಲ್ಲಿ ವ್ಯತ್ಯಾಸವಾಗುತ್ತಿರುವುದು ಕಾಣಬಂದಿದೆ. ಭೂಪಾತಗಳು ಆ ಪ್ರದೇಶದಲ್ಲಿ ಯಥೇಚ್ಛವಾಗಿ ಆಗುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಅಖಿಲ ಭಾರತ ಕಲಾವಿದರ ಸಂಘ

ಬರುವ ಮಾರ್ಚಿ ತಿಂಗಳು ದೆಹಲಿಯಲ್ಲಿ ಭಾರತದಲ್ಲಿರುವ ಕಾರ್ಯನಿರತ ಬಣ್ಣದ ಕೆಲಸಗಾರರು ಶಿಲ್ಪಿಗಳು, ಚಿತ್ರಗಳನ್ನು ಬರೆಯುವವರು ಮುಂತಾದ ನಾನಾ ಕಲಾವಿದರ ಕೂಟವು ಸೇರುವುದು. ಕಲಾವಿದರು ತಮ್ಮಲ್ಲಿಯೇ ಒಂದು ಟ್ರೇಡ್ ಯೂನಿಯನ್ ಸಂಘವನ್ನು ಮಾಡಿಕೊಳ್ಳುವ ಉದ್ದೇಶ ಹೊಂದಿರುವುದಾಗಿ ಗೊತ್ತಾಗಿದೆ.

ರೀಟಾ ಹೇವರ್ತಳ ದಾಂಪತ್ಯ ವಿಚ್ಛೇದನ ಅರ್ಜಿ

ಆಗಾಖಾನರ ಮಗ ಅಲಿಖಾನರ ಪತ್ನಿ ರೀಟಾ ಹೇವರ್ತ್ ಎಂಬ ಸಿನಿಮಾ ನಟಿಯು ದಾಂಪತ್ಯ ವಿಚ್ಛೇದನಕ್ಕಾಗಿ ಮೊನ್ನೆ ಅಮೆರಿಕದ ಒಂದು ಕೋರ್ಟಿನಲ್ಲಿ ಅರ್ಜಿಯನ್ನು ಸಲ್ಲಿಸಿದಳು. ಗಂಡನ ಕ್ರೌರ್ಯದಿಂದ ತಾನು ದುಃಖಿಯಾಗಿರುವುದಾಗಿ ಆಕೆಯು ಅರ್ಜಿಯಲ್ಲಿ ತಿಳಿಸಿರುತ್ತಾಳೆ.

೫೦೦ ಜನರಿಂದ ಪ್ರತಿಜ್ಞಾ ಪತ್ರಕ್ಕೆ ರಕ್ತದ ರುಜು

ಗ್ವಾಲಿಯರಿನಲ್ಲಿ ಮೊನ್ನೆ ಹಿಂದೂ ಮಹಾ ಸಭೆಯವರು ಝಾನ್ಸಿ ರಾಣಿ ಸ್ಮಾರಕದ ಬಳಿ ಏರ್ಪಡಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಸಭೆಯಲ್ಲಿ ವಿದೇಶೀಯರ ಆಕ್ರಮಣದಿಂದ ಭಾರತವನ್ನು ರಕ್ಷಿಸುವುದಾಗಿ ೫೦೦ ಜನರು ತಮ್ಮ ರಕ್ತದಿಂದ ಪ್ರತಿಜ್ಞಾ ಪತ್ರಕ್ಕೆ ರುಜು ಮಾಡಿದರು.

ಚರಖಾ ಸಂಘದ ನೂಲುವ ಮತ್ತು ನೆಯ್ಗೆ ವರ್ಗಗಳು

ಕರ್ನಾಟಕ ಚರಖಾ ಸಂಘದ ಶ್ರೀ. ಶಾಂತರ ಜಮುನಲಾಲ್ ಖಾದಿ ವಿದ್ಯಾಲಯದ ನೂಲುವ ಮತ್ತು ನೆಯಿಗೆ ಹೊಸ ವರ್ಗಗಳು ಬರುವ ಅಕ್ಟೋಬರ್ ೨ನೇ ತಾ॥ ಹಳೇ ಹುಬ್ಬಳ್ಳಿಯಲ್ಲಿ ಪ್ರಾರಂಭವಾಗುವುವು. ನೂಲುವ ವರ್ಗದ ಅವಧಿ ೬ ತಿಂಗಳು ಮತ್ತು ನೆಯಿಗೆಯದು ೧೨ ತಿಂಗಳು. ಪ್ರತಿ ವಿದ್ಯಾರ್ಥಿಯ ಊಟ ವಸತಿಗಳಿಗಾಗಿ ೩೫ ರೂ ಗಳ ವೇತನವನ್ನು ಕೊಡಲಾಗುವುದು. ಎರಡು ವರ್ಗಗಳಲ್ಲೂ ೧೫ ಸ್ಥಾನಗಳಂತೆ ಇರುವುವು. ಅಭ್ಯಾಸಕ್ರಮ ಮುಗಿದ ನಂತರ ವಿದ್ಯಾರ್ಥಿಗಳು ಸೇವಾಗ್ರಾಮದ ಪರೀಕ್ಷೆಗಳಿಗೆ ಕುಳಿತುಕೊಳ್ಳಬೇಕಾಗುವುದು. ಯೋಗ್ಯ ಕಂಡ ವಿದ್ಯಾರ್ಥಿಗಳನ್ನು ಸಂಘದ ಹೊಸ ಯೋಜನೆಯ ಕೆಲಸದಲ್ಲಿ ತೊಡಗಿಸಿಕೊಳ್ಳಬಹುದು. ವಿದ್ಯಾಲಯಕ್ಕೆ ಸೇರುವ ಅಭಿಲಾಷೆಯುಳ್ಳವರು ಅರ್ಜಿಗಳನ್ನು ಈ ತಿಂಗಳು ೨೦ನೇ ತಾ॥ ಒಳಗಾಗಿ ಸಂಚಾಲಕ, ಜಮುನಲಾಲ್ ಖಾದಿ ವಿದ್ಯಾಲಯ, ಚರಖಾ ಸಂಘ, ಹಳೇ ಹುಬ್ಬಳ್ಳಿ — ಈ ವಿಳಾಸಕ್ಕೆ ಕಳುಹಿಸಬೇಕೆಂದು ಕೋರಲಾಗಿದೆ.

ಗುಜರಾತ್ ವಿಶ್ವವಿದ್ಯಾಲಯದಲ್ಲಿ ದೇಶ ಭಾಷೆ

ಗುಜರಾತ್ ವಿಶ್ವ ವಿದ್ಯಾಲಯದ ಸೆನೆಟ್ ಸಭೆಯು ಗುಜರಾತಿ ಅಥವಾ ಹಿಂದಿಯಲ್ಲೇ ಪಾಠಕ್ರಮಗಳಾಗಬೇಕೆಂದು ನಿರ್ಧರಿಸಿ, ಐದು ವರ್ಷಗಳೊಳಗೆ ಈ ನಿರ್ಧಾರವನ್ನು ಕಾರ್ಯ ರೂಪದಲ್ಲಿ ತರಬೇಕೆಂದು ಗೊತ್ತು ಮಾಡಿರುತ್ತದೆ.

ಪಾಕಿಸ್ತಾನಕ್ಕೆ ಲಿಯಾಕತಾಲಿ ವಾಪಸು

ಇಂಗ್ಲೆಂಡಿನಿಂದ ವಿಮಾನವಾಗಿ ವಿದೇಶಗಳ ಪ್ರವಾಸ ಕೈಗೊಂಡಿದ್ದ ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಕತಾಲಿಯವರು ಪಾಕಿಸ್ತಾನಕ್ಕೆ ಹಿಂತಿರುಗುತ್ತಾರೆ.

ಎಮ್ಮೆಗಳು ತಪ್ಪಿಸಿಕೊಂಡಿವೆ

ಭಾನುವಾರ ಮಧ್ಯಾಹ್ನ ಬನ್ನಿಮಂಟಪದ ಕಡೆಗೆ ಮೇಯುವುದಕ್ಕೆ ಹೋಗಿದ್ದ ನಾಲ್ಕು ಎಮ್ಮೆಗಳು ತಪ್ಪಿಸಿಕೊಂಡಿವೆ. ಅವರಲ್ಲಿ ಮೂರು ವಿಲಾಯಿತಿ ಎಮ್ಮೆಗಳು ಒಂದು ಮಾತ್ರ ಸ್ಥಳದ ಎಮ್ಮೆ. ಇವನ್ನು ಪತ್ತೆ ಹಚ್ಚಿ ಕೊಟ್ಟವರಿಗೆ ಸೂಕ್ತ ಬಹುಮಾನವನ್ನು ಕೊಡಲಾಗುವುದು.

ಟಿ. ತಿಮ್ಮಪ್ಪರಾಜೆ ಅರಸ್,
೧೧೬೦ ರಜಪುಟ್ ಬ್ಲಾಕ್
ನರಸಿಂಹರಾಜ ಮೊಹಲ್ಲಾ,
ಮೈಸೂರು.

ಭೂಕಂಪದ ಭವಿಷ್ಯ

ನಾಳೆ ದಿನ ತುರ್ಕಿಯಲ್ಲೂ ಒಳಗಾಗಿ ೧೮ನೇ ತಾ॥ ದಕ್ಷಿಣ ಅಮೆರಿಕದಲ್ಲೂ ಭೂಕಂಪಗಳಾಗುವುವೆಂದು ಇಟಲಿಯ ಭೂಕಂಪ ಶಾಸ್ತ್ರದ ಪ್ರವೀಣ ರಾಫಾಯೆಲ್ ಬೆಂಡಿಯಾಂಡಿಯವರು ಹೇಳಿರುತ್ತಾರೆ.

ಪ್ರತಿನಿಧಿ

ಗುರುದೇವಾ ಹಾಲ
ಗೌರಿಹಬ್ಬದ ಸಲುವಾಗಿ
ರಿಯಾಯಿತಿ ಬೆಲೆ
ಕ್ರೇಪ್, ಜಾರ್ಜೆಟ್, ಧರ್ಮಾವರ,
ಬಳಿಗಳು, ಕಂಟಿ ರೇಷ್ಮೆ ಸೀರೆಗಳು
ದೊರೆಯುತ್ತವೆ.
ಶಿವರಾಂಪೇಟೆ ಮೈಸೂರು.

Edited, printed and published by A. R. Nagarajan at Sadhvi Press, D. Subbiah Road, Mysore

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ.,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ಸೀರೆಗಳಿಗೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳಿ ಅಂಗಡಿ
ಜವಳಿ ಅಂಗಡಿ ಬೀದಿ, ಆನಂದ ಭವನ ಹೋಟಲ್ ಹತ್ತಿರ ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪನಿ (ರಿ) ಅವರು
ರತ್ನಾವಳಿ ಥಿಯೇಟರಿನಲ್ಲಿ
1-9-51ನೇ ಶನಿವಾರದಿಂದ * ಶ್ರೀ ಕೃಷ್ಣ ಭಗವಾನ್
ಶುಕ್ರವಾರ ಮತ್ತು ಭಾನುವಾರಗಳಲ್ಲಿ 6-45 ಕ್ಕೆ ಉಳಿದ ದಿನಗಳಲ್ಲಿ 9-45 ಕ್ಕೆ
ಮುಂದಿನ ಆಕರ್ಷಣೆ.- ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ಪ್ರಭುದೇವಾ ಟಾಕೀಸ್
5-9-51ನೇ ಬುಧವಾರದಿಂದ :: ಪ್ರತಿ ದಿನ 3 ಆಟಗಳು
ರಾಯಲ್ ಟಾಕೀಸಿನವರ ತಮಿಳು ಚಿತ್ರ • ಸಾವಿತ್ರಿ •
ಪಾತ್ರ :- ಎಂ. ಎಸ್. ಸುಬ್ಬಲಕ್ಷ್ಮಿ, ಶಾಂತಾ ಆಪ್ಟೆ,
ವೈ. ವಿ. ರಾವ್ ಮುಂತಾದವರು

ಒಲಂಪಿಯಾ 6-9-51 ರಿಂದ ಅನೋಖಿ 2ನೇ ವಾರ
ಪ್ರತಿ ದಿನ 3 ಆಟಗಳು
ಹಾಸ್ಯ ಚಕ್ರವರ್ತಿ ಯಾಕೂಬ್ ಮತ್ತು ರಾಗಿಣಿ ನೀನಾ ಸಂತೋಷ್ ಕುಮಾರ್, ಅಭಿನಯಿಸಿರುವ
ಕಾರ್ದಾರ್ ಫಿಲಂಸ್‌ರವರ * ಅಕೇಲಿ *
ಬೆಳಗಿನ ಪ್ರದರ್ಶನ 6-9-51 ರಿಂದ 4 ದಿನಗಳು
ಶಾಂತಾರಾಂ ಜಯಶ್ರೀ ಪಾತ್ರವಹಿಸಿರುವ • ಡಾ॥ ಕೊಟ್ನಿಸ್

SRI GAYATHRI TALKIES FROM 5-9-51 DAILY 3 SHOWS
ಭಾರತದಲ್ಲೆಲ್ಲಾ ಈ ಚಿತ್ರ ಮಂದಿರದಲ್ಲೇ ಪ್ರಥಮ ಪ್ರದರ್ಶನ !
20TH CENTURY'S MOST POWERFUL PICTURE IN TECHNICOLOUR
HALLS OF MONTEZUMA
WITH:- RICHARD WIDMARK
MORNING SHOWS ON 8th & 9th : FRANCIS

ರೀಜ ನಂ. 792 ೧ ಸಂಚೀ ಮಾರಳು ೧ ಬಿಡಿಕ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧೦] ಗುರುವಾರ ೬-೯-೫೧ [ಸಂಚಿಕೆ ೩೬

ಮೈಸೂರು ಚುನಾವಣೆಗೆ ೩೨೦ ಕಾಂ|| ಅರ್ಜಿಗಳು

ಅಡ್ವೋಕೇಟ್ ಬಾಲರತ್ನಂರ ಮೇಲೆ ಕೊಲೆ ಆಪಾದನೆ

ಜಾಮೀನು ರದ್ದಿಗಾಗಿ ಪೋಲೀಸರ ಅರ್ಜಿ

ಬೆಂಗಳೂರು ೬

ಕಳೆದ ತಿಂಗಳು ೮ ನೇ ತಾ|| ಸಂಜೆ ಒಲ್ಲರ್ ಕೋರ್ಟಿನ ಬಳಿ ದೊಡ್ಡ ಬಳ್ಳಾಪು ರದ ವಕೀಲರಾದ ಶ್ರೀ ರಾಮಕೃಷ್ಣಯ್ಯ ನವರನ್ನು ಹೊಡೆದು ಘಾಸಿ ಪಡಿಸಿದ ಸಂಬಂಧವಾಗಿ ಹನುಮಂತ, ಕಾಳೀನ ತಿ ಗ್ರಹಾರದ ಗೌರಿ ಮತ್ತು ಶ್ರೀ ರಾಮಕೃ ಷ್ಣಯ್ಯನವರ ಮಗ ಅಡ್ವೋಕೇಟ್ ಶ್ರೀ ಪಿ. ಬಾಲರತ್ನಂರವರ ಮೇಲೆ ಇಲ್ಲಿನ ೧ನೇ ನಗರ ನ್ಯಾಯಾಧೀಶರ ಮುಂದೆ ಇಂದು ಆಪಾದನೆಯನ್ನು ಪೋ ಲೀಸರು ಹಾಜರು ಪಡಿಸಿದರು. ೩ನೇ ಆಪಾದಿತ ಬಾಲರತ್ನಂರವರ ಪಕ್ಷ, ಶ್ರೀ ವಿ.ಕೆ. ಕುಮಿತ್ರರೊಡನೆ ಆಳಿಯ ಮಾವ ಅಡ್ವೋಕೇಟ್ ಶ್ರೀ ರಾಮಕೃಷ್ಣಯ್ಯನವ ರು ಹಲವು ಕಾಲದಿಂದ ಅಕ್ರಮ ಸಂಗ ವನ್ನು ಬೆಳೆಸಿದ್ದುದರಿಂದ ತಂದೆಯ ಮೇ ಲೆ ಬಾಲರತ್ನಂರವರಿಗೆ ವೈಮನಸ್ಯವುಂ ಟಾಗಿ, ಅವರ ಪ್ರಾಣವನ್ನು ತೆಗೆಯಲು ಉದ್ದೇಶಿಸಿ, ಮೂರು ತಿಂಗಳಿಂದಲೂ ಹೆ ಬರಲ್ಲಿ ಸಮಾಲೋಚನೆ ನಡೆಸಿದರಂ ತೆ, ಮೊದಲ ಪ್ರಯತ್ನಗಳಲ್ಲಿ ಅವರು ವಿಫಲರಾದುದರಿಂದ, ಕೊನೆಗೆ ಒಂದು ಮತ್ತು ಎರಡನೇ ಆಪಾದಿತರೊಡನೆ ಸಿ ದ್ಧತೆ ನಡೆಸಿ, ಆ ದಿನ ಮೊದಲನೇ ಆ ಪಾದಿತ ಹನುಮಂತನು ಮಚ್ಚುಕತ್ತಿ ಯಿಂದ ರಾಮಕೃಷ್ಣಯ್ಯನವರಿಗೆ ಹೊಡೆ ದುದು ಅವರಿಗೆ ತೀವ್ರ ಗಾಯವಾದುದ ನ್ನು, ಬಲಗೈ ಕತ್ತರಿಸಿ ಹೋಯಿತೆಂದೂ ಬಾಯಿಯ ಮೇಲು ದವಡೆ ಹಲ್ಲುಮುರಿ ದಿತೆಂದೂ ಆಪಾದನಾ ಪಟ್ಟಿಯಲ್ಲಿ ತಿ ಳಿಸಲಾಗಿದೆ.

ಆವರೆಲ್ಲರ ಮೇಲೆ ಕೊಲೆ ಪ್ರಯತ್ನ ದ ಆಪಾದನೆಯನ್ನು ಹೊರಿಸಲಾಗಿದೆ. ಪ್ರಾಸಿಕ್ಯೂಷನ್ ಪರ ೪೭ ಜನ ಸಾಕ್ಷಿ ಗಳಿರುವರು.

ಶ್ರೀ ಬಾಲರತ್ನಂರವರಿಗೆ ಕೊಡಲಾಗಿ ರುವ ಜಾಮೀನನ್ನು ರದ್ದುಗೊಳಿಸಬೇ ಕೆಂದು ಪೋಲೀಸ್ ಇನ್ಸ್‌ಪೆಕ್ಟರ್‌ರವರು ಅ ರ್ಜಿಯನ್ನು ಸಲ್ಲಿಸಿರುತ್ತಾರೆ. ಈ ವಿಷ ಯವೂ, ಕೊಲೆ ಪ್ರಕರಣ ಪರಿಶೀಲ ನೆಗೆ ಬರುವುದು.

ಉತ್ತರ ಕೊರಿಯಾದಲ್ಲಿ ಕಾಕಸಸ್ ಸೈನ್ಯ

ಉತ್ತರ ಕೊರಿಯಾ ರಣರಂಗದ ಒಳ ಗಡೆ, ತೋಪು, ಮತ್ತು ರಕ್ಷ ಸಜ್ಜಿ ತ ಮೋಟಾರುಗಳೊಡನೆ ರಷ್ಯದ ಅನೇಕ ಕಾಕಸಸ್ ಸೈನ್ಯಗಳು ನೆಲೆಸಿರುವುದಾಗಿ ವಿಶ್ವ ಸಂಸ್ಥೆಯ ವೀಕ್ಷಕರಿಗೆ ತಿಳಿದು ಬಂದಿದೆ. ಹೊಸ ಧಾಳಿಗೆ ಕಮ್ಯೂನಿಸ್ಟ ರು ಸಿದ್ಧತೆ ಮಾಡಿಕೊಂಡಿರುವರೆಂದೂ, ಅವರ ಬಳಿ ಸಾವಿರ ವಿಮಾನಗಳವೆಯೆಂ ದೂ ಹೇಳಲಾಗಿದೆ. ಪೂರ್ವ ಜರ್ಮನಿ ಯ ಸೈನಿಕರೂ ಸೇರಿ ರಷ್ಯದ ಬೆಂಬಲಿಗ ಯೂರೋಪು ರಾಷ್ಟ್ರಗಳ ಸೈನಿಕರು ಕೊ ರಿಯಾ ರಂಗಕ್ಕೆ ಬಂದಿರುತ್ತಾರೆ.

ಮಂಗಳೂರಿನಲ್ಲಿ ವಿಮಾನ ನಿಲ್ದಾಣ ವನ್ನು ಕಟ್ಟಲು ೯,೮೩,೦೦೦ ರೂ. ವೆ ಚ್ಚದ ಅಂದಾಜಾಗಿರುವುದಾಗಿ ಗೊತ್ತಾ ಗಿದೆ

ಜಪಾನ್ ಶಾಂತಿ ಸಮ್ಮೇಳನದ ಆರಂಭ

ಮೊನ್ನೆ ರಾತ್ರಿ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋವಿನಲ್ಲಿ ಜಪಾನ್ ಶಾಂತಿ ಒ ಪ್ಪಂದದ ಸಮ್ಮೇಳನವು ಆರಂಭವಾಯಿ ತು. ಅಮೆರಿಕದ ಅಧ್ಯಕ್ಷ ಟ್ರೂಮನ್ನರು ಅದರ ಆರಂಭೋತ್ಸವವನ್ನು ನೆರವೇರಿ ಸಿ, ಈಗಾಗಲೇ ಅನೇಕ ರಾಷ್ಟ್ರಗಳಿಂದ ಒಪ್ಪಲ್ಪಟ್ಟ ಶಾಂತಿ ಕೌಲಿನ ಕರಡು ಜ ಯಾಪಜಯಗಳನ್ನು ಪಡೆದ ರಾಷ್ಟ್ರಗ ಳಿಗೆ ನ್ಯಾಯವಾದುದಾಗಿರುವುದೆಂದೂ, ಮ ತ್ತೊಂದು ಯುದ್ಧದ ಬೀಜಗಳು ಅದರ ಲ್ಲಿಲ್ಲವೆಂದೂ ಹೇಳಿದರು.

ಗೋವಧಾ ವಿರೋಧ ಮುಖಂಡನ ದಸ್ತಗಿರಿ ಕಾಲದಲ್ಲಿ ಗುಂಡು

ಅಹಮದಾಬಾದಿನಲ್ಲಿ ನೆನ್ನೆ ನಂ ಜೆ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಲೆತ್ನಿಸಿದ ಗೋವಧಾ ವಿ ರೋಧದ ಚಳುವಳಿ ಮುಖಂಡ ಆಚಾರ್ಯ ನ ಭಗತ್‌ರವರನ್ನು ದಸ್ತಗಿರಿ ಮಾಡಲು ಪೋಲೀಸರು ಪ್ರಯತ್ನಿಸಿದಾಗ ಸಭೆಯ ಜನರು ಪೋಲೀಸರನ್ನು ಸುತ್ತುಗಟ್ಟಿದು ದರಿಂದ ಅವರು ಲಾಠಿ ಪ್ರಯೋಗ ನಾ ಡಿದರೂ ಪ್ರಯೋಜನವಾಗಲಿಲ್ಲವೆಂದೂ ಅನಂತರ ಪೋಲೀಸರು ಗುಂಡು ಹಾರಿಸಿ ದ ಫಲವಾಗಿ ಇಬ್ಬರು ಸತ್ತು, ನಾಲ್ವರಿಗೆ ಗಾಯಗಳಾದುವೆಂದೂ ತಿಳಿದುಬಂದಿದೆ ಭಗತ್ತರು ದಸ್ತಗಿರಿಯಾಗಲು ಸಿಗದೆ ಬೇ ರೊಂದು ಕಡೆ ಭಾಷಣ ಮಾಡಿ, ಕಸಾ ಯಿ ಖಾನೆಯ ಎದುರಿಗೆ ತಾವು ಆಮರ ಣಾಂತ ಉಪವಾಸ ಮಾಡುವುದಾಗಿ ತಿ ಳಿಸಿದರು. ಆ ಊರಿನ ಸರಹದ್ದಿನಲ್ಲಿ ೫ ಜನಕ್ಕಿಂತಲೂ ಹೆಚ್ಚಿನ ಸಭೆ ಮತ್ತು ಮೆರವಣಿಗೆಗಳನ್ನು ಪ್ರತಿಬಂಧಿಸಲಾ ಗಿದೆ.

ಕಲ್ಕತ್ತಾ ಹೈಕೋರ್ಟ್ ರಿಜಿಸ್ಟ್ರಾರರ ವಜಾ

ಕಲ್ಕತ್ತಾ ಹೈಕೋರ್ಟಿನ ರಿಜಿಸ್ಟ್ರಾ ರರಾದ ಪಿ. ಕೆ. ಬೋಸರ ಮೇಲೆ ತೀವ್ರ ಆಪಾದನೆಗಳು ಬಂದ ಕಾರಣ ಅಲ್ಲಿನ ಶ್ರೇಷ್ಠ ನ್ಯಾಯಾಧೀಶರು ಅವರನ್ನು ಕೆ ಲಸದಿಂದ ವಜಾ ಮಾಡಿರುತ್ತಾರೆ

ನಗರದಲ್ಲಿ ಎರಡು ತಿಂಗಳಿಗೆ ಆಗುವಷ್ಟು ಆಹಾರ

ರೇಷನಿಂಗ್ ಅಧಿಕಾರಿಗಳ ಪತ್ರಿಕಾ ಗೋಷ್ಠಿ

ಮೈಸೂರು ೬

ನಗರದ ಮುಖ್ಯ ರೇಷನಿಂಗ್ ಅಧಿಕಾರಿ ಗಳಾದ ಶ್ರೀ ಎಂ ಎಸ್ ಪ್ಯಾನಿನಾಥ ಮ ತ್ತು ರೇಷನಿಂಗ್ ಅಧಿಕಾರಿ ಶ್ರೀ ವಿಜಯ ರಾಘವಚಿನ್ನಯರವರು ಈ ದಿನ ಪತ್ರಿಕಾ ಪ್ರ ತಿನಿಧಿಗಳ ಪ್ರಥಮ ಗೋಷ್ಠಿಯನ್ನು ಸೇರಿಸಿ ಆಹಾರದ ವಿಷಯವಾಗಿ ವಿವರಿಸಿದರು.

ನಗರದಲ್ಲಿ ಎರಡು ತಿಂಗಳಿಗೆ ಆಗುವ ಷ್ಟು ಆಹಾರ ಧಾನ್ಯ ... ದಾಸ್ತಾನಿರುವುದಾಗಿ ... ಶರಿಸಿದರು.

ಮೊನ್ನೆಯ ವರೆಗೆ ... ಮತ್ತು ... ಅಕ್ಕಿ ... ಗೋಧಿ ... ಪಡಿತರದಲ್ಲಿ ... ನೀಡಲಾಗುತ್ತಿತ್ತು ... ಯನ್ನು ... ಆವರು ತಿಳಿಸಿದರು.

ಹೊಸದಾಗಿ ಬಂದಿರುವ ಕೇಂದ್ರ ಸೈಕೊ ಆಹಾರವು ಉತ್ತಮವಾಗಿರುವುದರಿಂದ ಗೋ ಧಿಯ ಬದಲು ಅದನ್ನು ಸಡೆಯಲು ಅನ ಕಾರ ಕಲ್ಪಿಸುವುದಾಗಿ ಅವರು ತಿಳಿಸಿದ ರು. ಕಳೆದ ಆ ತಿಂಗಳುಗಳಲ್ಲಿ ... ಜನ ರಿಗೆ ... ಕೊಡಲಾಯಿತು, ... ಹೆಚ್ಚು ಕಾರ್ಡುಗಳನ್ನು ಪ ತ್ತೆ ಮಾಡಲಾಯಿತು. ಇದರಿಂದ ಕೇಳಿದ ... ಕಾರ್ಡುಗಳ ಉಳಿತಾಯವಾಗಿದೆ. ... ತಿಂಗಳು ... ಗೋದಾಮುಗಳಲ್ಲಿ ... ಧಾನ್ಯ ವನ್ನು ... ಮಾಡಲಾಗಿದೆ. ... ಹೆಚ್ಚು ... ದಂತೆ ... ಅವರ. ಹೇ ಳಿದರು.

ಕೇಂದ್ರ ಸರ್ಕಾರದ ... ಮೂಲಕ ... ಪತ್ರಿಕಾ ಪ್ರತಿನಿಧಿಗಳಿಗೆ ... ಅಧಿಕಾರಿಗಳು ... ಧಾನ್ಯವನ್ನು ... ಬಳಸಬಹು ದೆಂದು ಅಧಿಕಾರಿಗಳು ... ತಿಂಗ ಳ ... ಅಧಿಕಾರಿ ... ಭಾಗದಲ್ಲಿ ... ಅವರು ತಿಳಿಸಿದರು.

ಆಹಾರ ಧಾನ್ಯದ ಗೋದಾಮಿನಲ್ಲಿ ಕೂಡ.

ಮಹಾ ಚುನಾವಣೆಗೆ ೩೨೦ ಕಾಂ|| ಉಮೇದುವಾರರು

ದಾಸಪ್ಪನವರು ಕೇಂದ್ರ ಪಾರ್ಲಿಮೆಂಟಿಗೆ

ಸ್ವಂ. ಸು. ಪ್ರೋ॥] ಬೆಂಗಳೂರು ೬

ಮೈಸೂರು ಸಂಸ್ಥಾನದಿಂದ ಮಹಾ ಚುನಾವಣೆಗಳಿಗೆ ೬೨೦ ಜನ ಉಮೇದು ವಾರರು ಇಡೀ ಸಂಸ್ಥಾನದಿಂದ ಇದು ವರೆಗೆ ಕಾಂಗ್ರೆಸ್ ಕಛೇರಿಗೆ ಅರ್ಜಿ ಹಾ ಕಿರುತ್ತಾರೆ. ಇವರ ಪೈಕಿ ೩೧ ಜನರು ಕೇಂದ್ರ ಪಾರ್ಲಿಮೆಂಟಿಗೆ ನಿಲ್ಲುವುದಾಗಿ ಸೂಚಿಸಿರುವವರು ಸಚಿವರಾದ ಶ್ರೀ ಎಚ್. ಸಿ. ದಾಸಪ್ಪನವರು ಒಬ್ಬರು ಮಾತ್ರ ಕೇಂದ್ರ ಪಾರ್ಲಿಮೆಂಟಿಗೆ ಉಮೇದುವಾ ರರಾಗಲು ಕೋರಿರುವರು. ಉಳಿದವರೆ ಲ್ಲರೂ ಸಂಸ್ಥಾನದ ಶಾಸನ ಸಭೆಗೆ ನಿಲ್ಲ ಲು ಬಯಸಿರುವರು.

ಶ್ರೀಗಳಾದ ಎಸ್ ರಂಗರಾಮಯ್ಯ, ಜಿ. ಎ. ತಿಮ್ಮಪ್ಪಗೌಡ, ಬಿ. ಎಸ್. ಕೇಶ ವಯ್ಯಂಗಾರ್, ಶಿವಲಿಂಗಪ್ಪ, ಎಸ್. ವಿ. ಕೃಷ್ಣಮೂರ್ತಿ, ಕೆ. ಜಿ. ಒಡೆಯ ರ್, ಜಿ. ಎ. ಆಚಾರ್ಯ, ಎಂ. ಎನ್ ಜೋಗಯ್ಯ ಮುಂತಾದವರು ಕೇಂದ್ರ ಪಾರ್ಲಿಮೆಂಟಿಗೆ ನಿಲ್ಲಲು ಬಯಸಿರುವ ರು.

ಶ್ರೀಗಳಾದ ಕೆ. ಹನುಮಂತಯ್ಯ, ಟಿ. ಸುಬ್ರಹ್ಮಣ್ಯಂ, ಎ. ಜಿ. ರಾಮಚಂದ್ರ ರಾವ್, ಟಿ. ಸಿದ್ದಲಿಂಗಯ್ಯ, ಎಚ್. ಎಂ. ಚನ್ನಬಸಪ್ಪ ಮುಂತಾದವರು ಸಂ ಸ್ಥಾನದ ಸಭೆಗೆ ನಿಂತಿರುವರು.

ಮಹಿಳೆಯರ ಪೈಕಿ ಶ್ರೀಮತಿ ಎಂ. ಆರ್ ಲಕ್ಷ್ಮಮ್ಮನವರು ಮಾತ್ರ ಕೇಂದ್ರ ಸಭೆಗೂ, ಮಿಕ್ಕ ೯ ಜನರು ಸಂಸ್ಥಾನ ದ ಸಭೆಗೂ ನಿಲ್ಲುವರು

ನಿಧನ

ಬೆಂಗಳೂರಿನ ಕಲಾ ಮಂದಿರದ ವ್ಯ ವಸ್ಥಾಪಕರಾದ ಶ್ರೀ ಎ. ಎಸ್ ಸುಬ್ಬ ರಾಯರ ಸಹೋದರಿಯರಾದ, ಆನ್ನೆ ರಾಯಪಟ್ಟಣದ ನಿವೃತ್ತ ಶಾಲಾ ಮು ಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ಭಾ ಗೀರಥಮ್ಮನವರು ನೆನ್ನೆ ದಿನ ಚೆನ್ನರಾ ಯಪಟ್ಟಣದಲ್ಲಿ ನಿಧನರಾದರೆಂದು ತಿಳಿ ಸಲು ತುಂಬಾ ವಿಷಾದಿಸುತ್ತೇವೆ.

ಮಾದರಿ ಶಾಲೆಯಲ್ಲಿ ಸಂಗೀತ

ರಾಜಧಾನಿಯ ಕೃಷ್ಣವಿಲಾಸ ರಸ್ತೆ ಯಲ್ಲಿರುವ ಮಾದರಿ ಶಾಲೆಯಲ್ಲಿ ನಾಳೆ ಸಂಜೆ ೬|| ಗಂಟೆಗೆ ಸಂ|| ವಿ|| ರಾಳ್ಳಪ ಳ್ಳಿ ಅನಂತ ಕೃಷ್ಣ ಶರ್ಮಾರವರ ಸಂಗೀ ತವು ಸೂಕ್ತ ಪಕ್ಕ ವಾದ್ಯಗಳೊಡನೆ ನ ಡೆಯುವುದು.

ವಿದ್ಯಾರ್ಥಿ ಪಾರಿತೋಷಿಕ ಸಭಾ

ಶ್ರೀರಂಗ ಮಹಾರಾಜರವರ ಸಂಸ್ಕೃ ತ ಪಾಠಶಾಲೆಯಲ್ಲಿ ನಾಳೆ ಸಂಜೆ ೫ ಗಂ ಟೆಗೆ ವಿದ್ಯಾರ್ಥಿ ಪಾರಿತೋಷಿಕ ಸಭೆ ಯು ಜರುಗುವುದು. ಶ್ರೀಮನ್ಮಹಾರಾಜರ ಕಾರ್ಯದರ್ಶಿಗಳಾದ ಶ್ರೀ ಎಚ್. ಎಸ್ ನಾಳೇಗಾರ್‌ರವರು ಅಧ್ಯಕ್ಷತೆ ವಹಿಸು ವರು.

ಬರುವ ಭೋಜನ ಯೋಜನೆಗಳು ಮತ್ತು ಆ ಲಕ ಸೂಚನ ವ್ಯಾಖ್ಯಾನಗಳು ... ಮುಂ ದಾದ ಅಂಶಗಳನ್ನು ತಪ್ಪ ನಮನಕ್ಕೆ ತಂದ ರೆ ಕೂಡಲೇ ತಕ್ಕ ಬಂದೋಬಸ್ತು ಮಾಡು ವುದಾಗಿಯೂ ಅಧಿಕಾರಿಗಳು ಭರವಸೆಯಿತ್ತರು

ಗಣಪತಿ ಮಂಗಳಾರತಿ

ಮೈಸೂರು [illegible] ಮೈಸೂರು [illegible] ಕ್ಲಬ್ಬಿನವರು ನೆನ್ನೆ ದಿನ ಗಣಪತಿ ಮಂಗಳಾರತಿಯನ್ನು [illegible] ಪ್ರಸಾದದೊಡನೆ [illegible]

ಸುನ್ನ ಸುಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ

ಶ್ರೀಮನ್ ಮಹಾರಾಜರ ಸಂಸ್ಕೃತ ಪಾಠಶಾಲೆಯ [illegible] ಗಣಪತಿ ಸಭೆಯ [illegible] ಮಂಗಳಾರತಿ [illegible] ಪ್ರಾರಂಭವಾಗಿದೆ ಇದೇ [illegible] ವರೆಗೆ ನಡೆಯಲಿರುವ ಈ ಉತ್ಸವದ [illegible] ಪ್ರತಿ ದಿನ ಸಂಜೆ [illegible] ಹರಿಕಥೆ ಸಂಗೀತ [illegible] ಜರುಗುವುವು

ನೆಲ್‌ಕಮ್ ಲಾಡ್ಜಿನ ರಜತೋತ್ಸವ ಮತ್ತು ಗಣಪತಿ ಮಂಗಳಾರತಿ

ರಾಜಧಾನಿಯ [illegible] ರುವ ವೆಲ್‌ಕಂ ಲಾಡ್ಜ್ [illegible] ಮಾಲೀಕರಾದ ಶ್ರೀ ಕೆ. ಮಂಜು [illegible] ನ್ನೆ ದಿನ ತಮ್ಮ ಹೋಟೆಲಿನ ರಜತೋತ್ಸವವನ್ನು ಆಚರಿಸಿದರು ಈ ಸಂಬಂಧವಾಗಿ ನೆನ್ನೆ [illegible] ಮಂಗಳಾರತಿಯನ್ನು ಏರ್ಪಡಿಸಲಾಗಿತ್ತು ಶ್ರೀ [illegible] ಮತ್ತು ಪಾರ್ಟಿಯವರ ಸಂಗೀತ [illegible] ಸಮಾರಂಭದ ಅಧ್ಯಕ್ಷ [illegible] ಆವರು [illegible] ಒಂದೆ ತಾವು [illegible] ಗ ಇದೇ ಹೋಟೆಲಿನ [illegible] ಪವನನ್ನು ಸ್ಮರಿಸಿಕೊಂಡು ಶ್ರೀ ಮಂಜುನಾಥಯ್ಯನವರು [illegible] ಹೇಳಿ ಅವರ ಸೇವೆಯನ್ನು ಪ್ರಶಂಸಿಸಿದರು ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಸಮಾರಂಭವು ಮುಗಿಯಿತು

ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದಲ್ಲಿ

[illegible] ವಿದ್ಯಾ ಮಂದಿರದವರು ಕೃಷ್ಣಮೂರ್ತಿ ಪುರದಲ್ಲಿರುವ ತಮ್ಮ ಶಾಲೆಯಲ್ಲಿ ಇದೇ [illegible] ತಾರೀಖಿನಿಂದ [illegible] ತಾರೀಖಿನ ವರೆಗೆ ಗಣಪತಿ ಮಂಗಳಾರತಿ ಉತ್ಸವವನ್ನು ಏರ್ಪಡಿಸಿರುವರು ಈ ಸಂಬಂಧವಾಗಿ ಪ್ರತಿ ದಿನ ಸಂಜೆ [illegible] ಘಂಟೆಗೆ ವಿದ್ವಾಂಸರುಗಳಿಂದ ಸಂಗೀತ ಕಛೇರಿಗಳು ಜರುಗುವುವು

ದೇವಾಂಗ ಸಂಘದ ಹಾಸ್ಟಲಿನಲ್ಲಿ

ಮಂಡಿ ಮೊಹಲ್ಲ ಕಾಳಮ್ಮನ ಗುಡಿ ಬೀದಿಯಲ್ಲಿರುವ ದೇವಾಂಗ ಹಾಸ್ಟಲಿನಲ್ಲಿ ನೆನ್ನೆಯಿಂದ ಇದೇ [illegible] ತಾರೀಖಿನವರೆಗೆ ಗಣಪತಿ ಮಂಗಳಾರತಿಯನ್ನು ಏರ್ಪಡಿಸಲಾಗಿದೆ ಈ ಸಂಬಂಧವಾಗಿ ಪ್ರತಿ ದಿನ ಸಂಜೆ [illegible] ರಿಂದ [illegible] ರ ವರೆಗೆ ಶ್ರೀ ಲಿಂಗಾನಂದ ಸ್ವಾಮಿಗಳು ಆಧ್ಯಾತ್ಮಿಕ ವಿಚಾರವಾಗಿ ಉಪನ್ಯಾಸ ಮಾಡುವರು [illegible] ರಿಂದ [illegible] ರ ವರೆಗೆ ಶ್ರೀಗಳು ಮಾಯಣ್ಣ [illegible] ಮತ್ತು ಹಿರಣ್ಣಯ್ಯನವರಿಂದ ರಾಮಾಯಣ ಪುರಾಣವೂ ಜರುಗುವುವು

ಮುಂಗಡವಾಗಿ ಆಹಾರದ ಹಣ ಕೊಡಲು ಪ್ರತಿಭಟನೆ

[illegible] ರಗಳಿಂದ ಆಹಾರವನ್ನು ತರಿಸುವ [illegible] ಯಲ್ಲಿ ಆಯಾ [illegible] ಗಳಿಗೆ ತಲುಪಿಸಲಾಗುವ ಧಾನ್ಯಕ್ಕಾಗಿ ಹಣವನ್ನು ಮುಂಗಡವಾಗಿ ಕೊಡಬೇಕೆಂದು ಭಾರತ ಸರ್ಕಾರ [illegible] ಮದ್ರಾಸ್ [illegible] ಪ್ರತಿಭಟನೆ [illegible] ಭಾರತ ಸರ್ಕಾರದ [illegible] ಕೋಟಿ [illegible] ಕೊಡಬೇಕಾಗುವುದೆಂದು [illegible] ಯೋಜನೆಯನ್ನು [illegible] ಹೇಳಿಯುತ್ತಾರೆ

ಪರ್ಷಿಯಾದ ಲಂಚ ಅಧಿಕಾರಿಗಳ ಮುಷ್ಕರ

[illegible] ಮಂತ್ರಿ [illegible] ಮುಷ್ಕರ [illegible]

ಜನತಾ ಎಕ್ಷಣ ಸಮಿತಿಯ ಸ್ಥಾಪನೆ

[illegible] ಜನತಾ [illegible] ಗೌಡರು [illegible] ಜನರ ಸಹಯೋಗವನ್ನು ರಚಿಸಲಾಯಿತು ಯಜಮಾನ್ ಶ್ರೀ [illegible] ಮಾದೇಗೌಡ ಮತ್ತು ವಯಸ್ಕರ ಶಿಕ್ಷಣ ಸಮಿತಿಯ ತಾಲ್ಲೂಕು ಸಂಚಾರಿ [illegible] ಆರ್ಗನೈಸರ್ [illegible] ಗಳಾಗಿ [illegible] ಇಂಜನಿಯರ ಸಹಾಯದಿಂದ ಗ್ರಾಮದ ನಕಾಶೆಯನ್ನು ಬರೆಯಬೇಕೆಂದೂ ವಸ್ತು ಪುಸ್ತಕ ಭಂಡಾರವನ್ನು ಪ್ರಾರಂಭಿಸಬೇಕೆಂದೂ [illegible] ಮಾಡಲಾಯಿತು

ವಿಮಾನ ಸಮುದ್ರಕ್ಕೆ ಬಿದ್ದರೂ ಜನರ ರಕ್ಷಣೆ

ಒಮ್ಮೆಕಾ ದ್ವೀಪದ [illegible] ರ ಸಮೀಪದಲ್ಲಿ ಒಂದು ಪ್ರಯಾಣಿಕರ ವಿಮಾನವು ನೆನ್ನೆ ಸಮುದ್ರಕ್ಕೆ ಬಿದ್ದಿತು ಆದರೂ ಅದರಲ್ಲಿದ್ದ [illegible] ಜನರನ್ನು ಸಂರಕ್ಷಿಸಲಾಯಿತು [illegible] ಸ್ಥಳದಲ್ಲಿ ಸಮುದ್ರವು [illegible] ವಾಗಿರಲಿಲ್ಲ

ಕೈಗಾರಿಕಾ ವಿವಾದ ಬಗೆಹರಿಸಲು ಖಾಯಂ ಸಮಿತಿ

ಕೈಗಾರಿಕಾ ಮಾಲೀಕರು ಮತ್ತು ಕಾರ್ಮಿಕರುಗಳಿಗೆ [illegible] ವಿವಾದಗಳನ್ನು ಬಗೆಹರಿಸಲು ಖಾಯಂ ಸಮಿತಿಯೊಂದನ್ನು ಏರ್ಪಡಿಸಬೇಕೆಂದು ಭಾರತ ಸರ್ಕಾರದ [illegible] ಜೈ ಪ್ರಕಾಶ ನಾರಾಯಣರವರು ಹೇಳಿರುತ್ತಾರೆ

ಮಕ್ಕಳ ಹಾಡುಗಳು

ರಾಜಧಾನಿಯ ಶ್ರೀ ಎಸ್ ಆರ್ [illegible] ಶ್ರೀನಿವಾಸ ಭಟ್ಟಾಚಾರ್ಯರಿಂದ ಸಂಗ್ರಹಿಸಲ್ಪಟ್ಟು ಪ್ರಕಾಶ ಪಡಿಸಲಾದ ಮಕ್ಕಳ ಹಾಡುಗಳು ಎಂಬ ಚಿಕ್ಕ ಸಂಗೀತ ಗ್ರಂಥದ ಮೂರನೇ ಮುದ್ರಣದ ಪ್ರತಿಯನ್ನು ನಾವು ಅವರಿಂದ ಸ್ವೀಕರಿಸಿರುತ್ತೇವೆ ಅದರ ಬೆಲೆ ಮೂರು [illegible] ದೊರೆಯುವ ಸ್ಥಳ [illegible] ಕಂಪನಿ [illegible] ಮೈಸೂರ ಪುಸ್ತಕವು ಮಹಾಜನರ ಮೆಚ್ಚುಗೆಯನ್ನು ಪಡೆದಿರುವುದಕ್ಕೆ [illegible] ಮುದ್ರಣವೇ ಸಾಕ್ಷಿಯಾಗಿದೆ

ಕೋಟೆಯಲ್ಲಿ ಉತ್ಸವ

ಇದೇ ತಿಂಗಳು [illegible] ಸಂವತ್ಸರ ಭಾದ್ರಪದ [illegible] ಶನಿವಾರ [illegible] ಬಾಸ್ [illegible] ದಿನದ ಪ್ರಯುಕ್ತ [illegible] ಕೋಟೆಯೊಳಗಣ ದೇವರುಗಳ ಉತ್ಸವಗಳು ಸಮಸ್ತ ಮರ್ಯಾದೆಗಳೊಡನೆ ವಿಜೃಂಭಣೆಯಿಂದ ಸಾಯಂಕಾಲ [illegible] ಗಂಟೆಗೆ ಬೆಳೆಯುತ್ತವೆ

For Excellent Durable FURNITURE
[illegible]
NALINS
GRAND AUCTION SALE
On 8-9-51 1-30 P.M.
[illegible] Mysore

ಚಾಮುಂಡೇಶ್ವರಿ ಟಾಕೀಸ್
7-9-51 ರಿಂದ ಆಮೋಘ 7ನೇ ವಾರ
* ದೇವಕಿ *
:- ಬೆಳಗಿನ ಪ್ರದರ್ಶನ :-
ಶನಿವಾರ ಮತ್ತು ಭಾನುವಾರಗಳಲ್ಲಿ
ಕಸ್ತೂರಿ ಕ ಸಿತಾರ

ರಾಜಕಮಲ್ ಮೈಸೂರು
7-9-51 ರಿಂದ 5ನೇ ವಾರ
ಜಗನ್ಮೋಹಿನಿ

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು
ರತ್ನಾವಳಿ ಥಿಯೇಟರಿನಲ್ಲಿ
1-9-51ನೇ ಶನಿವಾರದಿಂದ * ಶ್ರೀ ಕೃಷ್ಣ ಭಗವಾನ್
ಶುಕ್ರವಾರ ಮತ್ತು ಭಾನುವಾರಗಳಲ್ಲಿ [illegible] ಕ್ಕೆ ಉಳಿದ ದಿನಗಳಲ್ಲಿ 9-15 ಕ್ಕೆ
ಮುಂದಿನ ಆಕರ್ಷಣೆ – ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ನಲ್ಲಿ ಹಾಕುವ ಸಂದರ್ಭದಲ್ಲಿ ರಸ್ತೆ ರಿಪೇರಿ ರುಸುಂ ನ್ಯಾಯವಲ್ಲ

ರಾಜಧಾನಿಯ ನಿವಾಸಿಗಳು [illegible] ಮನೆಗಳಿಗೆ ನಲ್ಲಿಗಳನ್ನು ಬಚ್ಚಲು [illegible] ಕ್ಷನ್‌ಗಳನ್ನೂ ಹಾಕಿಸುವ ಪ್ರಸಂಗ [illegible] ವಿಯಾಗಿ ರಸ್ತೆಯನ್ನು ಅಗೆದು [illegible] ಕನೆಕ್ಷನ್ ತೆಗೆದುಕೊಳ್ಳಬೇಕಷ್ಟೆ? [illegible] ಗ್ಗೆ ಪೌರ ಸಭೆಯವರು [illegible] ಚದುರಡಿಗೆ [illegible] ರುಸುಂ ಅನ್ನು ವಸೂಲು ಮಾಡುತ್ತಿದ್ದುದನ್ನು ಈಗ ಎರಡರಷ್ಟು ಮಾಡಿರುವುದಲ್ಲದೆ, ನಲ್ಲಿ ಕನೆಕ್ಷನಿಗೆ [illegible] ಚದುರಡಿ ಒಂದಕ್ಕೆ [illegible] ತೆಯೂ, ಗ್ರಾವಲ್ ರಸ್ತೆ ಚದುರಡಿಗೆ [illegible] ನಾಣ್ಯಗಳೆಯೂ ವಸೂಲು [illegible] ವಾಗುವ ನಿಬಂಧನೆಯನ್ನು ಮಾಡಿರುವುದು ವಿಷಾದಕರವಾದ [illegible] ತಿ ಮೈಸೂರಿಗಿಂತಲೂ ದೊಡ್ಡದಾದ ನಗರಗಳಲ್ಲಿ ಈ ಕೆಲಸಗಳಿಗೆ ನ್ಯಾಯವಾದ ಬೆಲೆಗಳನ್ನು ತೆಗೆದು [illegible] ತ್ತಾರೆ

ನಲ್ಲಿ ಹಾಕಿದ ಮೇಲೆ ಕಂಟ್ರಾಕ್ಟರುಗಳು ಕತ್ತರಿಸಿದ ನೆಲವನ್ನು ಭರ್ತಿ ಮಾಡಿ ಅವನ್ನು ಮಟ್ಟ ಮಾಡಿ ಹೋಗುತ್ತಾರೆ ಪೌರ ಸಭೆಯವರು ಅದರ ಮೇಲೆ ಟಾರು ಹಚ್ಚಲಿಕ್ಕೆ ಟಾರನ್ನು [illegible] ಪುದಕ್ಕಾಗಿ ಇಷ್ಟೊಂದು ರುಸುಂ ತೆಗೆದುಕೊಳ್ಳಬೇಕೆ? [illegible] ವಿಷಯವನ್ನು ಪೌರ ಸಭೆಯವರು ಮನಸ್ಸಿಗೆ ತಂದುಕೊಳ್ಳುವುದು ಅವಶ್ಯ.

ನಲ್ಲಿ ಹಾಕುವ ಬೆಲೆಯು [illegible] ಯಾಗಿರುವುದರಿಂದ ಜನರ ಮೇಲೆ [illegible] ರುಸುಂ ಅನ್ನು ಪೌರ ಸಭೆಗೆ [illegible] ದಾರರು ಕೊಡಬೇಕಾದರೆ ಎಷ್ಟು [illegible] ಪಡೆ ಎಂಬುದನ್ನು ಅವರು ಪರ್ಯಾಲೋಚಿಸಿ, ಹೆಚ್ಚಿಸಿರುವ ರುಸುಂ ಅನ್ನು ರದ್ದು ಮಾಡುವುದು ಯುಕ್ತವಾಗಿದೆ

ಮನೆ ಹರಾಜು

ಮೈಸೂರು ಸಬ್‌ಜಡ್ಜರವರ ಕೋರ್ಟು
O S ನಂ [illegible]
[illegible] ಎಸ್ ವೆಂಕಟೇಶಯ್ಯ
Vs

ಪ್ರತಿವಾದಿಗಳು [illegible] ಮೊಕದ್ದಮೆಯಲ್ಲಿ [illegible] ಆರ್ಡರ್ [illegible] ಡಿಗ್ರಿ ಪ್ರಕಾರ [illegible] 10 ಘಂಟೆ [illegible] ಮೊದಲನೇ ಮಹಡಿಯಿಂದ ಹರಾಜು ಮಾಡಲಾಗುತ್ತದೆ [illegible] ಮೈಸೂರಿನಲ್ಲಿ [illegible] ರಸ್ತೆ [illegible] ಸ್ಟೋರ್ ಮತ್ತು [illegible] ಗಳಿಗೆ ಸಮೀಪದಲ್ಲಿರುತ್ತದೆ [illegible] ದೀಪ, ನಲ್ಲಿ [illegible] ಮನೆ ಉತ್ತಮ ಸ್ಥಿತಿಯಲ್ಲಿದ್ದು [illegible]

ಚಕ್ಕುಬಂದಿ: ಮೈಸೂರು ಸಿಟಿ [illegible] ಮೊಹಲ್ಲಾ [illegible] ಅವರಿಗೆ ಸಮೀಪದಲ್ಲಿರುವ [illegible] ಮನೆ

Edited, printed and published by A R Nagarajan at Sadhvi Press [illegible] Subbiah Road, Mysore

ಪುಟ ಸಂ 792 • ಮಂಗಳೂರು • ಇಂದಿನ ಪತ್ರಿಕೆ ೩ ಆಣೆ

ಸಾಧ್ವಿ

ಸಂಪುಟ ೧೦] ಶುಕ್ರವಾರ ೭-೮-೫೧ [ಸಂಚಿಕೆ ೩೩

ಕಾಂ॥ ಕಾರ್ಯ ಸಮಿತಿಗೆ ಸದಸ್ಯರ ರಾಜೀನಾಮೆ

ಜನ ಜೀವನದ ಉನ್ನತಿಯಲ್ಲಿ ವಯಸ್ಕರ ಶಿಕ್ಷಣದ ಪಾತ್ರ

ವಯಸ್ಕರ ಶಿಕ್ಷಣ ಸಮ್ಮೇಳನದಲ್ಲಿ ಶ್ರೀಮನ್ಮಹಾರಾಜರ ಭಾಷಣ

ಮೈಸೂರು ೭

ಸಂಸ್ಥಾನದ ವಯಸ್ಕರ ಶಿಕ್ಷಣದ ನಾಲ್ಕನೆಯ ಸಮ್ಮೇಳನದ ಆರಂಭೋತ್ಸವವು ವಸ್ತು ಪ್ರದರ್ಶನಾಲಯದ ಕಟ್ಟಡದಲ್ಲಿ ಶ್ರೀಮನ್ಮಹಾರಾಜರವರಿಂದ ಇಂದು ನೆರವೇರಿಸಲ್ಪಟ್ಟಿತು ಮೈಸೂರು ಸರ್ಕಾರದ ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು

ಶ್ರೀ ಬಿ ಎಸ್ ರಾಮಾಚಾರ್ಯರಿಂದ ಪ್ರಾರ್ಥನೆಯಾದ ನಂತರ ಶ್ರೀ ಟಿ ನರಸಿಂಹಯ್ಯಂಗಾರ್ಯರು ಸ್ವಾಗತ ಭಾಷಣ ಮಾಡಿ ವಯಸ್ಕರ ಶಿಕ್ಷಣವು ಯಶಸ್ವಿಯಾಗಲು ಸಾಮೂಹಿಕ ಪ್ರಯತ್ನವು ಅಗತ್ಯವೆಂದು ಹೇಳಿದರು

ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾದ ಶ್ರೀ ಟಿ ಮಾದೇಗೌಡರು ಪ್ರಭುಗಳಿಗೆ ಬಿನ್ನವತ್ತಳೆಯನ್ನು ಶ್ರೀಗಂಧದ ಪೆಟ್ಟಿಗೆಯಲ್ಲಿ ಅರ್ಪಿಸಿದರು ಸಮಿತಿಯು ಜನ್ಮ ತಾಳಿದಂದಿನಿಂದ ಮಾಡಿದ ಕೆಲಸ ಕಾರ್ಯಗಳನ್ನು ಬಿನ್ನವತ್ತಳೆಯಲ್ಲಿ ವಿವರಿಸಲಾಗಿದೆ

ಶ್ರೀಮನ್ಮಹಾರಾಜರು ಭಾಷಣ ಮಾಡಿ ವಯಸ್ಕರ ಶಿಕ್ಷಣ ಸಮಿತಿಯು ಸಾರ್ವಜನಿಕರ ಮತ್ತು ಸರ್ಕಾರದವರ ಸಹಾಯದಿಂದ ಕೆಲಸ ಮಾಡಿ ಭಾರತದಲ್ಲೇ ಆದರ್ಶವಾಗಿರುವುದರ ಬಗ್ಗೆ ತಮ್ಮ ಸಂತೋಷವನ್ನು ಸೂಚಿಸಿದರು

ಅಮೆರಿಕಾ ಮತ್ತು ಇಂಗ್ಲೆಂಡುಗಳಲ್ಲಿ ವಯಸ್ಕರ ಆರ್ಥಿಕ ಸ್ಥಿತಿ ಮತ್ತು ಆರೋಗ್ಯಗಳ ಅಭಿವೃದ್ಧಿಗಾಗಿಯೂ, ಲೋಕ ವ್ಯವಹಾರದ ಬೆಳವಣಿಗೆಗಾಗಿಯೂ ಅಂದವಾದ ಸಣ್ಣ ಕೈಪಿಡಿಗಳನ್ನೂ, ನಕ್ಷೆಗಳನ್ನೂ ಪ್ರಕಟಿಸುವಂತೆ ನಮ್ಮದೇಶದಲ್ಲೂ ಕೇಂದ್ರದ ಪುಸ್ತಕ ಭಂಡಾರಗಳಿಗೆ ಅಂತಹ ಪ್ರಕಟಣೆಗಳನ್ನು ತರಿಸಿ ವಯಸ್ಕರಿಗೆ ಓದಲು ಅನುಕೂಲ ಮಾಡಿಕೊಡಬೇಕೆಂದೂ, ಜನ ಜೀವನಕ್ಕೆ ಸಂಬಂಧಪಟ್ಟ ಪದ್ಧತಿಗಳು ಸಂಪ್ರದಾಯಗಳಲ್ಲಿ ಆಗಬೇಕಾದ ಸುಧಾರಣೆಗಳನ್ನು ತಂದು ಜನ ಜೀವನವನ್ನು ಉತ್ತಮಗೊಳಿಸಬಹುದೆಂದೂ ನುಡಿದರು

ಶ್ರೀ ಹೆಚ್ ಸಿ ದಾಸಪ್ಪನವರು ಮಾತನಾಡುತ್ತಾ ಈಗಿನ ಪ್ರಜಾ ಸರ್ಕಾರದ ಕಾಲದಲ್ಲಿ ವಯಸ್ಕರು ಮತ ದಾನ ಮಾಡಬೇಕಾಗಿರುವುದರಿಂದ ಅವರ ಶಿಕ್ಷಣವು ಅತ್ಯವಶ್ಯಕವಾದುದೆಂದು ನುಡಿದರು ವಿದ್ಯಾಭ್ಯಾಸದಿಂದ ವಯಸ್ಕರಿಗೆ ಜೀವನದ ನಾನಾ ವಿಚಾರಣೆಗಳಲ್ಲಿ ಶಿಕ್ಷಣವು ದೊರೆಯಬೇಕೆಂದು ತಿಳಿಸಿದರು ಪಾಶ್ಚಿಮಾತ್ಯ ದೇಶಗಳಲ್ಲಿ ವಯಸ್ಕರ ವಿದ್ಯಾಭ್ಯಾಸದ ಮುನ್ನಡೆಯನ್ನು ವಿವರಿಸಿ ನಮ್ಮ ದೇಶದ ಪ್ರಗತಿಯ ಬಗ್ಗೆ ವಿದೇಶೀಯರು ಕೊಂಡಾಡಿರುವ ಅಂಶವನ್ನು ಸೂಚಿಸಿದರು ಶಿಕ್ಷಕರು ವಯಸ್ಕರ ಮನಸ್ಸನ್ನು ಚೆನ್ನಾಗಿ ಅರಿತು ಅವರಿಗೆ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂದೂ ಮತ್ತು ಶಿಕ್ಷಕರಲ್ಲಿ ಜನರು ಹೆಚ್ಚಿಗೆ ಆದರ ವಿಶ್ವಾಸಗಳನ್ನು ತೋರಬೇಕೆಂದೂ ತಿಳಿಸಿದರು

ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿದ್ದ ವಯಸ್ಕರ ಶಿಕ್ಷಣ ಪ್ರದರ್ಶನವನ್ನು ಶ್ರೀಮನ್ಮಹಾರಾಜರೂ, ಸಚಿವರೂ ಮತ್ತು ಮುಖ್ಯ ಅತಿಥಿಗಳೂ ವೀಕ್ಷಿಸಿ ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರ ರಾಜೀನಾಮೆ

ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ೧೩ ಜನ ಸದಸ್ಯರು ನಿನ್ನೆ ನಡೆದ ಸಮಿತಿ ಸಭೆಯಲ್ಲಿ ಅಧ್ಯಕ್ಷ ಟಾಂಡನ್‌ರವರಿಗೆ ತಮ್ಮ ರಾಜೀನಾಮೆಗಳನ್ನು ಸಲ್ಲಿಸಿದರು ಪಂ ನೆಹರೂ ಮತ್ತು ಆಜಾದ್‌ರವರ ತಮ್ಮ ರಾಜೀನಾಮೆ ಪತ್ರಗಳನ್ನು ಕೊಟ್ಟಿದ್ದು ಅವುಗಳನ್ನು ಅಧ್ಯಕ್ಷರ ಇನ್ನೂ ಒಪ್ಪಿಲ್ಲ ಈ ಶೀಘ್ರ ಸಾಮೂಹಿಕವಾಗಿ ರಾಜೀನಾಮೆಯು ಕೊಡಲ್ಪಟ್ಟದ್ದರ ಫಲದಿಂದ ಸಮಿತಿಯ ಪುನಸ್ರಚನೆಯ ಅವಶ್ಯಕತೆಯುಂಟಾಗಿ ಪರಿಸ್ಥಿತಿಯು ಗಂಭೀರ ಸ್ವರೂಪ ತಾಳಿದೆ ಇದುವರೆಗೆ ಅಧ್ಯಕ್ಷ ಟಾಂಡನ್‌ರವರು ರಾಜೀನಾಮೆಯ ಸ್ಥಿತಿಯಲ್ಲಿ ಅವರ ರಾಜೀನಾಮೆ ಕೊಡಲು ನಿರ್ಧರಿಸಿದರೆ ಆ ಎ ಐ ಸಿ ಸಿ ಯ ಸಂಪಾದಕ ಕಮಿಟಿ ಅವರನ್ನೇ ಅಧ್ಯಕ್ಷ ಪದವಿಗೆ ಚುನಾಯಿಸಬಹುದೆಂದು ಹೇಳಲಾಗಿದೆ

ಎಂ. ಎಲ್. ಪರೀಕ್ಷೆಯಲ್ಲಿ ಎಲ್ಲರೂ ಫೇಲು

ಮದ್ರಾಸ ವಿಶ್ವವಿದ್ಯಾಲಯದ ಎಂ ಎಲ್ ಪರೀಕ್ಷೆಯ ೧೯೫೧ ನೇ ಸಾಲಿನಲ್ಲಿ ಕುಳಿತ ಎಲ್ಲ ವಿದ್ಯಾರ್ಥಿಗಳೂ ಫೇಲ್ ಆಗಿರುವರೆಂದು ಅಲ್ಲಿನ ರಿಜಿಸ್ಟ್ರಾರರು ತಿಳಿಸಿರುತ್ತಾರೆ

ತಿರುವಾಂಕೂರಿನ ಹೊಸ ಮಂತ್ರಿ ಮಂಡಲ

ತಿರುವಾಂಕೂರು ಕೊಚ್ಚಿ ಸಂಸ್ಥಾನದ ಮುಖ್ಯ ಮಂತ್ರಿ ಸಿ ಕೇಶವನ್‌ರವರ ರಚಿಸಿರುವ ಹೊಸ ಮಂತ್ರಿ ಮಂಡಲದ ಸದಸ್ಯರಾದ ಕೊಚ್ಚಿಯ ಎ ಕೆ ಉಣ್ಣಿಕೃಷ್ಣ ಮೆನನ್ ಮತ್ತು ಎಲ್ ಎಂ ಪೈಲಿ ತಿರುವಾಂಕೂರಿನ ಕೆ ಎಂ ಕೋರಾ ಮತ್ತು ಜಿ ಮಂತ್ರಿಕೋಟನಂ ಎಲ್ಲೆಯವರುಗಳು ನಿನ್ನೆ ಪ್ರಮಾಣವಚನವನ್ನು ಸ್ವೀಕರಿಸಿದರು

ವಾರ್ಷಿಕೋತ್ಸವ

ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯ ವಿದ್ಯಾರ್ಥಿ ಸಂಘದ ೩೦ನೇ ವಾರ್ಷಿಕೋತ್ಸವವು ನಾಳೆ ಸಂಜೆ ೭ ಗಂಟೆಗೆ ಪಾಠಶಾಲೆಯಲ್ಲಿ ನಡೆಯುವುದು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟಿಯವರು ಅಧ್ಯಕ್ಷತೆ ವಹಿಸುವರು

ಮುಂದಿನ ಯುದ್ಧದ ಬಗ್ಗೆ ಟ್ರೂಮನ್ನರ ಎಚ್ಚರಿಕೆ

ಪೂರ್ಣ ಯುದ್ಧವು ಸಂಭವಿಸಿದರೆ ನಾಗರಿಕತೆಯನ್ನೇ ಅಳಿಸಿಬಿಡುವಂತಹ ಶಸ್ತ್ರಾಸ್ತ್ರಗಳು ಇರುವುದಾಗಿ ಅಮೆರಿಕದ ಅಧ್ಯಕ್ಷ ಟ್ರೂಮನ್ನರು ತಿಳಿಸಿರುತ್ತಾರೆ ತೃತೀಯ ಯುದ್ಧವಾದರೆ, ನಾಗರಿಕತೆಯನ್ನು ಹಾಳು ಮಾಡಬಲ್ಲ ಅಸ್ತ್ರಗಳ ಪ್ರಯೋಗದಿಂದ ಆಗುವ ನಾಶ ಮತ್ತು ಪ್ರಾಣ ನಷ್ಟವೆಷ್ಟೆಂಬುವದನ್ನು ಯಾರೂ ಊಹಿಸಲಾರರೆಂದೂ, ಜನರು ಅತ್ಯಂತ ಭೀತರಾಗುವ ಅಣು ಬಾಂಬಿನಂತಹ ಅಸ್ತ್ರಗಳಲ್ಲದೆ ಹಲವು ವಿಲಕ್ಷಣವಾದ ಅಸ್ತ್ರಗಳೂ ಇರುವುವೆಂದೂ, ಜನರು ಅವುಗಳ ಪ್ರಯೋಗವನ್ನು ಮಾಡುವ ಜಗತ್ತು ಉಂಟಾಗದಿರಲೆಂದು ತಿಳಿಸಿರುವರು

ಅಧ್ಯಕ್ಷ ಟ್ರೂಮನ್

ತ್ರಿಪುರಾ ಸಂಸ್ಥಾನದ ಗಡಿಯಲ್ಲಿ ಪಾಕಿಸ್ತಾನದ ಸೈನ್ಯ

ತ್ರಿಪುರ ಸಂಸ್ಥಾನದ ಗಡಿ ಭಾಗದಲ್ಲಿ ಪಾಕಿಸ್ತಾನದ ಅನ್ಸಾರ್ ದಳ ಮತ್ತು ಸೈನ್ಯಗಳು ಕೇಂದ್ರೀಕರಿಸಲ್ಪಟ್ಟಿರುವುದಾಗಿ ಸಂಸ್ಥಾನದ ಶಾಸನ ಮಂತ್ರಿ ಎಸ್ ಜಿ ಐಯ್ಯಂಗಾರ್ಯರು ತಿಳಿಸಿರುತ್ತಾರೆ ಸೈನ್ಯಗಳ ಮೇಲುಸ್ತುವಾರಿಯಲ್ಲಿ ಬ್ರಿಟಿಷ್ ಅಧಿಕಾರಿಗಳು ಇರುವುದಾಗಿ ವರದಿಗಳು ಬಂದಿರುತ್ತವೆ

ಮೈಸೂರು ಸಮಾಜವಾದಿಗಳ ಉಮೇದುವಾರಿಕೆ

ಬೆಂಗಳೂರು ೬

ಜನರನ್ನು ರಾಜಕೀಯ ದೃಷ್ಟಿಯಿಂದ ಸಂಘಟನೆ ಮಾಡಲು ಚುನಾವಣೆಗಳು ಒಂದು ಸದವಕಾಶವನ್ನು ಕಲ್ಪಿಸಿರುವುವೆಂದು ಅಖಿಲ ಭಾರತ ಸಮಾಜವಾದಿ ಪಕ್ಷದ ಮುಖಂಡರಾದ ಅಶೋಕ ಮೆಹ್ತಾರವರು ಪತ್ರಿಕಾ ಸಮ್ಮೇಳನದಲ್ಲಿ ಈ ದಿನ ಹೇಳಿದರು ಭಾರತದಲ್ಲೆಲ್ಲಾ ತಮ್ಮ ಪಕ್ಷದ ಪರವಾಗಿ ೩೫೦೦ ಸ್ಥಾನಗಳಿಗೆ ಸ್ಪರ್ಧಿಸುವುದಾಗಿಯೂ, ಮೈಸೂರು ಸಂಸ್ಥಾನದ ಶಾಸನ ಸಭೆಯ ೯೯ ಸ್ಥಾನಗಳ ಪೈಕಿ ೬೦ ಸ್ಥಾನಗಳಿಗೆ ತಮ್ಮ ಪಕ್ಷದ ಉಮೇದುವಾರರನ್ನು ನಿಲ್ಲಿಸುವುದಲ್ಲದೆ ಕೇಂದ್ರದ ಎಲ್ಲಾ ಸ್ಥಾನಗಳಿಗೂ ಇಲ್ಲಿಂದ ಸ್ಪರ್ಧೆ ಮಾಡಲಾಗುವುದೆಂದೂ ಅವರು ಹೇಳಿದರು ಈ ತಿಂಗಳ ಕೊನೆಯೊಳಗೆ ಪಕ್ಷದವರು ಉಮೇದುವಾರರ ಪಟ್ಟಿಗಳನ್ನು ಪ್ರಕಟಿಸುವರು ಮೈಸೂರಿನಲ್ಲಿ ಕನಿಷ್ಠವಾಗಿ ಕೆ॥ ೨೫ರಷ್ಟು ಸ್ಥಾನಗಳನ್ನು ಗಳಿಸುವ ನಂಬಿಕೆ ಪಕ್ಷದವರಿಗೆ ಇರುತ್ತದೆ

ಮುಷ್ಕರಕಾರರು ಕೆಲಸಕ್ಕೆ ಹಿಂತಿರುಗಲಿಲ್ಲ

ಮುಷ್ಕರವನ್ನು ಮುಕ್ತಾಯ ಮಾಡಿ ಕೆಲಸಕ್ಕೆ ಹಿಂತಿರುಗಬೇಕೆಂದು ಸರ್ಕಾರ ವಿದ್ಯುಚ್ಛಕ್ತಿ ಕಾರ್ಖಾನೆಯ ಕಾರ್ಮಿಕರಿಗೆ ನೆನ್ನೆ ಬೆಳಗ್ಗೆವರೆಗೂ ಕೊಟ್ಟ ಅವಧಿಯು ಮುಗಿದರೂ ಅವರು ಕೆಲಸಕ್ಕೆ ಹಿಂತಿರುಗಲಿಲ್ಲ

ಶಾಂತಿ ಸಮ್ಮೇಳನದಲ್ಲಿ ಚೀಣಕ್ಕೆ ಪ್ರವೇಶವಿಲ್ಲ

ಜಪಾನ್ ಶಾಂತಿ ಸಮ್ಮೇಳನಕ್ಕೆ ಶ್ವರಿತವಾಗಿ ಬರಲು ಕೆಂಪು ಚೀಣಕ್ಕೆ ಆಹ್ವಾನವೀಯಬೇಕೆಂಬು ರಷ್ಯದ ಪ್ರತಿನಿಧಿಯು ಸ್ಯಾನ್‌ಫ್ರಾನ್ಸಿಸ್ಕೊ ಸಮ್ಮೇಳನದಲ್ಲಿ ಮಾಡಿದ ಸೂಚನೆಯನ್ನು ೪೮ ೩ ಓಟುಗಳಿಂದ ತಿರಸ್ಕರಿಸಲಾಯಿತು

ಡಾ॥ ಪಿ. ಸುಬ್ಬರಾಯರ್‌ರವರಿಗೆ ಕೇಂದ್ರ ಮಂತ್ರಿ ಪದವಿ

ಪಾರ್ಲಿಮೆಂಟಿನ ಪ್ರಸ್ತುತ ಅಧಿವೇಶನವು ಮುಗಿದ ನಂತರ ಗೃಹ ಮಂತ್ರಿ ರಾಜಾಜಿಯವರು ಅಧಿಕಾರ ಸ್ಥಾನದಿಂದ ನಿವೃತ್ತರಾಗುವರೆಂದು ತಿಳಿದು ಬಂದಿದೆ ಅವರ ಸ್ಥಾನಕ್ಕೆ ಮದ್ರಾಸಿನ ಮಾಜಿ ಮುಖ್ಯಮಂತ್ರಿ ಡಾ॥ ಪಿ ಸುಬ್ಬರಾಯರ್‌ರವರನ್ನು ನೇಮಿಸಲಾಗುವುದೆಂದು ಹೇಳಲಾಗಿದೆ ಯೋಜನಾ ಸಮಿತಿಯವರ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೆ ತರಲು ಆ ಸಮಿತಿಯ ಉಪಾಧ್ಯಕ್ಷರಾದ ಗುಲ್ಜಾರಿ ಲಾಲ್ ನಂದಾರವರನ್ನು ಕೇಂದ್ರದ ಯೋಜನಾ ಮಂತ್ರಿಯನ್ನಾಗಿ ನೇಮಿಸಬಹುದೆಂದೂ ಗೊತ್ತಾಗಿದೆ

ನಗರದಿಂದ ಕಾಂಗ್ರೆಸ್ ಉಮೇದುವಾರರು

ರಾಜಧಾನಿಯಿಂದ ಶಾಸನ ಸಭೆಯ ಎರಡು ಸ್ಥಾನಗಳಿಗೆ ಶ್ರೀಗಳಾದ ಪಿ ಗೋಪಾಲಕೃಷ್ಣ ಶೆಟ್ಟಿ, ಎಂ ಶಂಕರಯ್ಯ, ಎಸ್ ರಂಗರಾಮಯ್ಯ, ಟಿ ಎಸ್ ರಾಜಗೋಪಾಲಯ್ಯಂಗಾರ್, ಯು ಎಲ್. ರಾಮಚಂದ್ರರಾವ್, ಬಿ ನಾರಾಯಣಸ್ವಾಮಿ ಮತ್ತು ಟಿ ಮರಿಯಪ್ಪನವರು ಉಮೇದುವಾರಿಕೆಗಳನ್ನು ಕಾಂಗ್ರೆಸ್ ಕಛೇರಿಗೆ ಕಳುಹಿಸಿರುತ್ತಾರೆ

ಪರ್ಷಿಯದಿಂದ ಎಣ್ಣೆ ತೆಯಾರಿಕೆ ಪ್ರಾರಂಭ

ಬ್ರಿಟಿಷ್ ಮತ್ತು ೨೦೦ ಭಾರತ ಪಾಕಿಸ್ತಾನಗಳ ಕೆಲಸಗಾರರು ಪರ್ಷಿಯಾ ಎಣ್ಣೆ ಗಣಿಗಳಿಂದ ಕಳೆದ ವಾರ ಹೊರಟ [illegible] ದಿನದಿಂದಲೇ ಅಲ್ಲಿ ಪರ್ಷಿಯನ್ನರು ಎಣ್ಣೆ ತೆಗೆಯುವ ಕೆಲಸವನ್ನು ಆರಂಭಿಸಿರುವುದಾಗಿ ವರದಿಯಾಗಿದೆ. ಎಣ್ಣೆಯನ್ನು ತೆಗೆಯುವುದಲ್ಲದೆ ಬೇರೆ ಯೋಜನೆಗಳನ್ನೂ ಆ ಪ್ರದೇಶದಲ್ಲಿ ಕಾರ್ಯಗತ ಮಾಡಲಾಗುವುದು. ಅಬಡಾನ್ ನಗರದಲ್ಲಿ ವಿಮಾನ ನಿಲ್ದಾಣವನ್ನೂ, ರೈಲು ಮಾರ್ಗವನ್ನೂ ನಿರ್ಮಿಸಲಾಗುವುದು.

ಗ್ರಹಗಳಿಗೆ ಪ್ರಯಾಣ ಮಾಡಬಯಸುವವರ ಸಂಘ

ಚಂದ್ರಲೋಕ ಮತ್ತು ಇತರ ಗ್ರಹಗಳಿಗೆ ವಿಮಾನಗಳಲ್ಲಿ ಹೋಗುವ ಆಸೆಯುಳ್ಳ ವೈಜ್ಞಾನಿಕರು ಒಂದು ಸಂಘವನ್ನು ಸ್ಥಾಪಿಸಿಕೊಂಡಿರುತ್ತಾರೆ. ಅದರ ಹೆಸರು 'ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಆಸ್ಟ್ರೋನಾಟಿಕ್ಸ್' ಎಂದು.

ಗಣಪತಿ ಮಂಗಳಾರತಿ

ನಾಳೆ ಸಂಜೆ ೬-೩೦ಕ್ಕೆ ವಿದ್ಯಾ ಗಣಪತಿ ಪೂಜೆಯ ಅಂಗವಾಗಿ ರಾಜಧಾನಿಯ ಮೂವರಿ ಶಾಲೆಯಲ್ಲಿ ವಿದ್ವಾನ್ [illegible] ಮರತ್ನಂರವರ ಸಂಗೀತವು ನಡೆಯುವುದು.

ಪ್ರಜಾ ಸಂಘದ ಬಹಿರಂಗ ಸಭೆ

ಮೈಸೂರು ಪ್ರಜಾ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ಆರು ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿರುತ್ತಾರೆ. ರಾಜಧಾನಿಯ ಪೌರ ಸಭೆಯಲ್ಲಿ ಕಳೆದ ಒಂದೂವರೆ ವರ್ಷದಿಂದ ನಡೆದ ಕಾರ್ಯಗಳನ್ನು ಸಭೆಯಲ್ಲಿ ವಿವರಿಸಲಾಗುವುದು.

ಬೆಳಿಕೆ ಪದಾರ್ಥಗಳ ಮಾರಾಟಕ್ಕಾಗಿ ದಂಡ

ರಾಜಧಾನಿಯಲ್ಲಿ ಬೆರಕೆ ಹಾಲನ್ನು ಮಾರಿದುದಕ್ಕಾಗಿ [illegible], ದಾಸಪ್ಪ, ಸಣ್ಣೇಗೌಡ ಇವರುಗಳಿಗೆ ತಲಾ ೨೦ ರೂ. ಜುಲ್ಮಾನೆ, [illegible]ಗೆ ೧೫ ರೂ. ಚಿಕ್ಕಮ್ಮ ಮತ್ತು ಮುದುಕುಳ್ಳಯ್ಯನಿಗೆ ತಲಾ ೧೦ ರೂ. ಬೆರಿಕೆ ಬೆಣ್ಣೆಯನ್ನು ಮಾರಿದುದಕ್ಕೆ ವಿ. ಪಿ. ಕೋನೇರಿಯವರಿಗೆ ೧೫ ರೂ. ಗಫೂರ್ ಖಾನರಿಗೆ ೧೫ ರೂ. ಬೆರಿಕೆ ತುಪ್ಪ ಮಾರಿದ ಬಿ. ಮಹದೇವಪ್ಪನವರಿಗೆ ೨೫ ರೂ. ಜುಲ್ಮಾನೆ ವಿಧಿಸಲಾಗಿದೆ.

ಕೊರಿಯಾ ಯುದ್ಧದ ಪರಿಣಾಮವಾಗಿ ಧಾರಣೆ ಹೆಚ್ಚುವುದು

ಕೊರಿಯಾ ಯುದ್ಧದ ಪೂರ್ಣ ಪ್ರಮಾಣದ ಮತ್ತು ಪ್ರಸಂಗದ ನಾನಾ ಕಡೆಗಳಲ್ಲಿ ನಡೆಯುತ್ತಿರುವ ಶಸ್ತ್ರಾಸ್ತ್ರ ತಯಾರಿಕೆ ಇವುಗಳ ಪರಿಣಾಮವಾಗಿ ಶೀಘ್ರವಾದ ಬೆಲೆ ಏರುವಿಕೆಯ ಸಂಭವವಿದೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಟ್ರಿಗ್ವೆಲೀಯವರು ಹೇಳಿರುತ್ತಾರೆ.

ಸಿಂಧ್ ಮುಖ್ಯ ಮಂತ್ರಿಯ ವಜಾ: ಗೌರ್ನರರಿಗೆ ಅರ್ಜಿ

[illegible]

ಸ್ಕೋಕಿಯ ಪದಾರ್ಥಗಳಿಗೆ ವರ್ಷಕ್ಕೆ ೧೭೦ ಕೋಟಿ ರೂ.

[illegible]

ದನ್ನು ಗಂಡಸರ ಮಾಡುವರು.

ವೃತನವರತ್ನ ಮಾಲಿಕೆ

ವಿದ್ವಾನ್ ಭಾರತೀಯವರಿಂದ ವಿರಚಿತವಾದ ಮೇಲ್ಕಂಡ ಗ್ರಂಥವು 'ಸಾಧ್ವಿ' ಕಛೇರಿಯಲ್ಲಿ ದೊರೆಯುತ್ತದೆ.

ಬೆಲೆ ರೂ. [illegible]

For Excellent and Durable
FURNITURE
Don't miss to attend
NALINS
GRAND AUCTION SALE
On [illegible] at [illegible] P. M.
[illegible]

ಹಿಂದಿ ಕಲಿಯದಿದ್ದರೆ ನೌಕರರಿಗೆ ಬಡ್ತಿ ಇಲ್ಲ

ಬೊಂಬಾಯಿ ಸರ್ಕಾರದ ನೌಕರಿಯಲ್ಲಿರುವವರೆಲ್ಲರೂ ಗೊತ್ತಾದ ಒಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದರೆ ಅವರ ಬಡ್ತಿಯನ್ನು ನಿಲ್ಲಿಸಲಾಗುವುದೆಂದು ಅಲ್ಲಿನ ಸರ್ಕಾರದವರು ಸೂಚಿಸಿರುತ್ತಾರೆ. ಈ ಸೂಚನೆಯು ಜವಾನರಿಗೆ ಅನ್ವಯಿಸುವುದಿಲ್ಲ [illegible] ಬೊಳಗೆ ಎಂದಿಯಲ್ಲಿ [illegible] ಪರೀಕ್ಷೆಯನ್ನು ಪಾಸು ಮಾಡಿದವರೆ ಮಾತ್ರ [illegible] ಅರ್ಹರಾಗುವರೆಂದು ತಿಳಿಸಲಾಗಿದೆ.

ನಿವೃತ್ತರಾದ ಉಪಾಧ್ಯಾಯರುಗಳ ನೇಮಕ

ಪ್ರಾಥಮಿಕ ಶಾಲೆಗಳಿಗೆ ಉಪಾಧ್ಯಾಯರುಗಳ ಅಭಾವವಾಗಿರುವುದರಿಂದ ನಿವೃತ್ತರಾದವರನ್ನು ನೇಮಿಸಿಕೊಳ್ಳುವುದೆಂದು ಮದ್ರಾಸಿನ ಜಿಲ್ಲಾ ಬೋರ್ಡು ಮತ್ತು ಪಂಚಾಯತಿಗಳಿಗೆ ಅಲ್ಲಿನ ಸರ್ಕಾರದವರು ಸೂಚನೆಯಿತ್ತಿರುವರು.

ಪಶ್ಚಿಮ ಜರ್ಮನಿಗೆ ಭಾರತದ ಆನೆಗಳು

ಭಾರತದ ನಾಲ್ಕು ಆನೆಗಳು ಪಶ್ಚಿಮ ಜರ್ಮನಿಯ [illegible] ಸಂಸ್ಥೆಗಾಗಿ [illegible] ಇವುಗಳಿಗೆ ಕಲ್ಕತ್ತೆಯ [illegible] ಭಾರತದ ರಾಯಭಾರಿಯು [illegible] ಮತ್ತು [illegible] ಹೆಸರುಗಳನ್ನಿಟ್ಟಿರುವರು.

ಮದ್ರಾಸಿನಲ್ಲಿ ಪತಿತರ ಪದ್ಧತಿ ಕುಸಿದುಬೀಳುವುದು

ಮದ್ರಾಸು ಪ್ರಾಂತದ ಆಹಾರ ಪರಿಸ್ಥಿತಿಯು ತೀವ್ರ ಚಿಂತಾಜನಕವಾಗಿದ್ದು ಕೂಡಲೇ ಕೇಂದ್ರ ಸರ್ಕಾರದವರು ಸರಿಯಾಗಿ ಸಹಾಯ ಮಾಡದಿದ್ದಲ್ಲಿ ಪತಿತರ ಪದ್ಧತಿಯು ಅಲ್ಲಿ ಕುಸಿದು ಬೀಳುವುದೆಂದು ಕೇಂದ್ರಕ್ಕೆ ಮದರಾಸು ಸರ್ಕಾರದವರು ತಂತಿ ಮೂಲಕ ತಿಳಿಸಿರುತ್ತಾರೆ. ಜಿಲ್ಲೆಗಳಲ್ಲಿ ಮೂರು ನಾಲ್ಕು ದಿನಗಳಿಗಾಗುವಷ್ಟು ಆಹಾರವಿರುವುದಾಗಿ ಹೇಳಲಾಗಿದೆ.

Edited, printed and published by A. R. Nagarajan at Sadhvi Press 11 Subbaiah Road, Mysore

ಮಹಿಳೆಯರಿಂದ ಗೋವಧೆ ವಿರುದ್ಧ ಸತ್ಯಾಗ್ರಹ

ಅಹಮದಾಬಾದಿನಲ್ಲಿ ಗೋವಧೆಯನ್ನು ತಡೆಯಲು ಅಲ್ಲಿಯ ಪೌರಸಭೆಯ ಆವರಣದಲ್ಲಿ ೩೦ ಜನ ಸ್ತ್ರೀಯರು ಕೆಲವು ದಿನಗಳ ಹಿಂದೆ ನಡೆಸಿದ ಸತ್ಯಾಗ್ರಹದಿಂದ ಕೋಲಾಹಲವುಂಟಾಗಿದೆ. ಈ ಪ್ರದೇಶಕ್ಕೆ [illegible] ಗ್ರಾಮಗಳಿಂದ ಇತರರು ಭಜನೆ ಮಾಡಿಕೊಂಡು ಬಂದರು. ಆ ಊರಿನ [illegible] ಸತ್ಯಾಗ್ರಹ ಆರಂಭವಾಗಿದೆ.

ನೆಹರೂ ಪಟೌಲಂಕರರಿಗೆ ಸೋಷಿಯಲಿಸ್ಟರ ವಿರೋಧವಿಲ್ಲ

ನೆಹರೂ ಮತ್ತು ಪಾರ್ಲಿಮೆಂಟಿನ ಸ್ಪೀಕರ್ ಮಾವಳಂಕರರು ಭಾಗವಹಿಸುವ ಕ್ಷೇತ್ರಗಳಲ್ಲಿ ಅವರಿಗೆ ಪ್ರತಿಸ್ಪರ್ಧಿಗಳನ್ನು ಸಮಾಜವಾದಿ ಪಕ್ಷದವರು ನಿಲ್ಲಿಸುವುದಿಲ್ಲವೆಂದು ಗೊತ್ತಾಗಿದೆ.

ಬೇರೊಂದು ಕಡೆ ಸಂಧಾನ ನಡೆಯಲು ರಿಜ್ವೇ ಸೂಚನೆ

ಕೇಸಾಂಗ್ ಕ್ಷೇತ್ರದಲ್ಲಿ ಯುದ್ಧವಿರಾಮ ಸಂಧಾನ ನಡೆಸುವುದನ್ನು ಬಿಟ್ಟು ಬೇರೊಂದು ಕಡೆಯಲ್ಲಿ ಅದನ್ನು ಮುಂದುವರಿಸಬೇಕೆಂದು ವಿಶ್ವಸಂಸ್ಥೆಯ ಸೇನಾನಿ ಜ. ರಿಜ್ವೇಯವರು ಕಮ್ಯೂನಿಸ್ಟರಿಗೆ ಸೂಚಿಸಿರುತ್ತಾರೆ.

ಗೋಹತ್ಯದ ಘರ್ಷಣೆಯ ೩೨ ಜನರ ದಸ್ತಗಿರಿ

ಅಸ್ಸಾಮಿನ ತೇಜಪುರದಲ್ಲಿ ಕಳೆದ ವಾರ ಗೋವೊಂದನ್ನು ಕೊಂದ ಸಂಬಂಧವಾಗಿ ಘರ್ಷಣೆಯಾದುದರಿಂದ ೩೨ ಜನರನ್ನು ದಸ್ತಗಿರಿ ಮಾಡಲಾಗಿದೆ.

॥ ಶ್ರೀ ॥
ಗಣೇಶ್ ಪ್ರಾಂ[illegible] ಶೀಟರ್
8-9-51 ರಿಂದ ದಿನವೂ 3 ಪ್ರದರ್ಶನ
ಜ್ಯೂಪಿಟರ್‌ರವರ
* ಮೋಹಿನಿ
(ತಮಿಳು)
ಪಾತ್ರ - ವಿ. ಎನ್. ಜಾನಕಿ, ಲಲಿತ, ಪದ್ಮಿನಿ ಮುಂತಾದವರು

ಮೈಸೂರು ಕ್ರೇಪ್, ಧರ್ಮಾವರ ಕಾಂಚೀಪುರದ ಸೀರೆಗಳಿಗೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳಿ ಅಂಗಡಿ
ಬೊಂಬಾಯಿ ಆನಂದ ಭವನ ಹೋಟೆಲ್ ಪಕ್ಕ, ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಇವರು
ರತ್ನಾವಳಿ ಥಿಯೇಟರಿನಲ್ಲಿ
1-9-51 ನೇ ಶನಿವಾರದಿಂದ
* ಶ್ರೀ ಕೃಷ್ಣ ಭಗವಾನ್
ಶುಕ್ರವಾರ ಮತ್ತು ಭಾನುವಾರಗಳಲ್ಲಿ 6-45 ಕ್ಕೆ ಉಳಿದ ದಿನಗಳಲ್ಲಿ 9-45 ಕ್ಕೆ
ಮುಂದಿನ ಆಕರ್ಷಣೆ - ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

- ಪ್ರಭಾ -
7-9-51 ರಿಂದ
[illegible]
ದಿಗ್ದರ್ಶಕ ಕಿಶೋರ್ ಸಾಹುರವರ
ಭಾವಪೂರ್ಣ ಸಾಮಾಜಿಕ
ಕಲಾಕೃತಿ
ಕಾಲಿಘಟ
(ಹಿಂದಿ)
ಕಿಶೋರ್ ಸಾಹು, ಮೀನಾರಾಯಣ್
ಆಶಾ ಮಾಥುರ್, ಇಂದಿರಾ
ಸಾಂಬಾಲಿ ಉಬ್ಬಾಸ್,
ಗೋಪ್, ಜೀವನ್
ಕಥೆ, ನಿರ್ದೇಶನ ಮತ್ತು ತಯಾರಿಕೆ - ಕಿಶೋರ್ ಸಾಹು
ಸಂಗೀತ - ಶಂಕರ್ ಮತ್ತು ಜೈಕಿಷನ್

ರಿಜಿ ನಂ 792 । ವಂದೇ ಮಾತರಂ । ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೮-೯-೫೧ [ಸಂಚಿಕೆ ೩೩

ಬೊಂಬಾಯಿಯಲ್ಲಿ ಅಧಿಕಾರಿಯ ಕೊಲೆ

ಬೊಂಬಾಯಿ ಅಕಾರ ಕಛೇರಿಯಲ್ಲಿ ಅಧಿಕಾರಿಯ ಕೊಲೆ

ಬೊಂಬಾಯಿನ ಸಿವಿಲ್ ಸೆಕ್ರೆಟೇರಿಯಟ್ ಕಛೇರಿಯಲ್ಲಿ ಉಪ ಕಾರ್ಯದರ್ಶಿಯಾಗಿದ್ದ ಶ್ರೀ ಸಾವಂತ್ ಎಂಬುವರನ್ನು ಅದೇ ಕಛೇರಿಯ ಮಹಮುದ್ ಇಸಾಕ್ ಎಂಬ ಟೈಪಿಸ್ಟನು ನೆನ್ನೆ ಉಪಾಹಾರದ ವೇಳೆಯಲ್ಲಿ ಅಧಿಕಾರಿಯ ಕೊಠಡಿಯಲ್ಲೇ ಇರಿದು ಕೊಂದ ಸುದ್ದಿಯು ವರದಿಯಾಗಿದೆ

ನೆನ್ನೆ ಬೆಳಗ್ಗೆ ಮತ್ತೊಂದು ಕಡೆ ಇ[illegible]ರು ಬ್ರಿಟಿಷರ ಕೊಲೆ ನಡೆದ ಸಂಬಂಧದಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದ ವೇಳೆಯಲ್ಲೇ ಅವರಿಗೆ ಈ ಸುದ್ದಿಯು ಮುಟ್ಟಿ ಸಿವಿಲ್ ಸೆಕ್ರೆಟೇರಿಯಟ್ ಕಛೇರಿಗೆ ಓಡಿ ಬಂದರು ಮಹಮುದ್ ಇಸ್ಸಾಕನು ಸಾವಂತರವರ ಗಂಟಲನ್ನು ಇರಿದುದರಿಂದ ಚೂರಿಯು ಒಂದು ಕಡೆಯಿಂದ ಮತ್ತೊಂದು ಕಡೆಗೆ ತೂರಿಟು ಕೊಂಡು ಅವರ ಮೇಜು ಮತ್ತು ಕಾಗದ ಪತ್ರಗಳ ಕಟ್ಟೆಲ್ಲವೂ ರಕ್ತಮಯವಾಗಿ ದೃಶ್ಯವು ಭೀಕರವಾಗಿತ್ತೆಂದು ಹೇಳಲಾಗಿದೆ

ಮಹಮುದ್ ಇಸ್ಸಾಕನು ಅನಂತರ ಅದೇ ಕಛೇರಿಯ ಸೂಪರಿಂಟೆಂಡೆಂಟರಾದ ಎ ಎಲ್ ಪಾಟೀಲ್ ಎಂಬುವರ[illegible] ಇರಿಯಲು ಪ್ರಯತ್ನಿಸಿ ವಿಫಲನಾದನು ಶ್ರೀ ಪಾಟೀಲರಿಗೆ ಕತ್ತು ಮತ್ತು [illegible] ಮೇಲೆ ಚೂರಿ ಗಾಯವಾಗಿ[illegible] ಸ್ಥಿತಿಯಲ್ಲಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರು ಈ ಗಲಾಟೆಯಲ್ಲಿ ಕಛೇರಿಯ ಹಲವು ಮಂದಿ ಮಹಿಳಾ ನೌಕರರು [illegible] ಬರಿಯಿಂದ ಚೆಲ್ಲಾಪಿಲ್ಲಿಯಾಗಿ ಓಡಲಾರಂಭಿಸಿದರು ಅದೇ ಕಛೇರಿಯ ಪಕ್ಕದ ಕೊಠಡಿಯಲ್ಲಿದ್ದ ಜೋರಾ ಸಿಮ್ಮನ್ಸ್ ಎಂಬ ಒಬ್ಬ ನೌಕರಳು ಘಟನೆ ನಡೆದ ಸ್ಥಳಕ್ಕೆ ಬಂದು ಮಹಮುದ್ ಇಸ್ಸಾಕನನ್ನು ಧೈರ್ಯದಿಂದ ಬಿಗಿಯಾಗಿ ಹಿಡಿದಳು ಅನಂತರ ಇತರ ಗುಮಾಸ್ತರು ಆತನಿಂದ ಉಪಾಯವಾಗಿ ಚೂರಿಯನ್ನು ಕಿತ್ತುಕೊಂಡರು ಇಸ್ಸಾಕನನ್ನು ಪೊಲೀಸರ ವಶಕ್ಕೆ ಒಪ್ಪಿಸಲಾಯಿತು

ರಷ್ಯದ ಉಪ ವಿದೇಶಾಂಗ ಮಂತ್ರಿ ಗ್ರಾಮಿಕೊರವರ ಕೊಲೆ ಸಂಚು

ಸ್ಯಾನ್ ಫ್ರಾನ್ಸಿಸ್ಕೊವಿನಲ್ಲಿ ನಡೆಯುತ್ತಿರುವ ಜಪಾನ್ ಶಾಂತಿ ಸಮ್ಮೇಳನಕ್ಕೆ [illegible]ರುವ ರಷ್ಯದ ಉಪವಿದೇಶಾಂಗ ಮಂತ್ರಿ ಆಂದ್ರಿ ಗ್ರಾಮಿಕೊರವರನ್ನು ನೆ[illegible] ಬೆಳಗ್ಗೆ ಕೊಲೆ ಮಾಡಲು ಸಂಚು ನಡೆದಿತ್ತೆಂದು ವರದಿಯಾಗಿದೆ ಅವರು ತಮ್ಮ ಬಿಡಾರದಿಂದ ಸ್ಯಾನ್ ಫ್ರಾನ್ಸಿಸ್ಕೊವಿಗೆ ಮೋಟಾರಿನಲ್ಲಿ ಹೋಗುವ [illegible]ಯಲ್ಲಿ ಅವರ ಕಾರಿಗೆ ಒಂದು ಬಾಂಬನ್ನು ಎಸೆದು ಕೊಲೆ ನಡೆಸ[illegible] ಸಂಚಿಕೆಯಾಗಿತ್ತೆಂದೂ, ಹಲವು [illegible] ಬಿಳಿಯ ರಷ್ಯನರು ಈ ಕೃತ್ಯದಲ್ಲಿ ತೊಡಗಿದ್ದರೆಂದೂ ಹೇಳಲಾಗಿದೆ ಈ ಸಂಚಿನ ಸುದ್ದಿಯು ಪೊಲೀಸರಿಗೆ ಮೊದಲೇ ತಿಳಿದು ಗ್ರಾಮಿಕೊರವರ ರಕ್ಷಣೆ ಬಗ್ಗೆ ಅವರು ವಿಶೇಷ ವ್ಯವಸ್ಥೆಯನ್ನು ಮಾಡಿದರೆಂದೂ ಗೊತ್ತಾಗಿದೆ.

[illegible] ಮೆಕ್ಸಿಕೋನ ಪಲಿಸ್ ಎಂಬಲ್ಲಿ ಮೊನ್ನೆ ದಿನ ಎರಡು ಅಂತಸ್ತಿನ ಒಂದು ಮನೆಗೆ ಬೆಂಕಿ ಬಿದ್ದು ಒಳಗಿದ್ದ ಏಳು ಜನರೂ ಸುಟ್ಟು ಭಸ್ಮವಾದರೆಂದು ವರದಿಯಾಗಿದೆ ಅವರಲ್ಲಿ [illegible] ಮಂದಿ ಮಕ್ಕಳು

ಸ್ವಾಮಿ ಸೀತಾರಾಂರವರನ್ನು ಉಳಿಸಲು ನೆಹರೂರಿಗೆ ತಂತಿ

ಬೆಂಗಳೂರು [illegible]

ಇಲ್ಲಿನ ಮೇಯರ್ ಶ್ರೀ [illegible]ಶರ್ಮ, ಮಾಜಿ ವಿದ್ಯಾ ಮಂತ್ರಿ ಶ್ರೀ [illegible] ಲಿಂಗಯ್ಯ ಮುಂತಾದ [illegible] ಪ್ರಧಾನಿ ಪಂಡಿತ ನೆಹರೂರವರಿಗೆ ತಂತಿಯೊಂದನ್ನು ಕಳುಹಿ[illegible] ರಚನೆಗಾಗಿ ಉಪವಾಸ [illegible] ಸ್ವಾಮಿ ಸೀತಾರಾಂರವರ [illegible] ಸಬೇಕೆಂತೂ [illegible] ಭಾರತ[illegible] ವಶ್ಯಕತೆಯಾದ ಭಾಷಾವಾರ [illegible] ಗಳ ರಚನೆಗೆ [illegible] ಗೊಳ್ಳಬೇಕೆಂದೂ ಪ್ರಾರ್ಥಿ[illegible]

ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಬಗ್ಗೆ ಕೋರ್ಟಿನಲ್ಲಿ ಅರ್ಜಿ

ಬೆಂಗಳೂರು ಶೇಷಾದ್ರಿಪುರದ ಶ್ರೀ [illegible] ವೀರಗಪ್ಪ ಎಂಬುವರು ಕಳೆದ ಬಾರಿ [illegible] ವಿದ್ಯಾಲಯದ ಬಿ ಎಲ್ ಪರೀಕ್ಷೆ[illegible] ಕುಳಿತು, ಆರು ವಿಷಯಗಳ [illegible] ಉತ್ತಮ ವರ್ಗದಲ್ಲಿ [illegible] ಇನ್ನೊಂದರಲ್ಲಿ ಶೇಕಡ ಕೇವಲ [illegible] ಬರುಗಳು ಮಾತ್ರ ಬಂದ ಬಗ್ಗೆ [illegible] ವಿಷಯದ ಉತ್ತರಗಳನ್ನು ಪುನರ್ ಪರಿಶೀಲಿಸಬೇಕೆಂದು ಸರ್ಕಾರಕ್ಕೆ ಮಾಡಿಕೊಂಡ ಅರ್ಜಿಯು ತಿರಸ್ಕರಿಸಲ್ಪಟ್ಟಿತೆಂದೂ, [illegible]ರಿಂದ ಅವರು ಹೈಕೋರ್ಟಿಗೆ [illegible] ಮ್ಯಾಂಡಮಸ್ ಅರ್ಜಿಯನ್ನು [illegible] ಆ ವಿಷಯದ ತಮ್ಮ ಉತ್ತರದ ಪುನರ್ ಪರಿಶೀಲನೆಗೆ ಆಜ್ಞೆ ಮಾಡಬೇಕೆಂದು ಪ್ರಾರ್ಥಿಸಿರುವರೆಂದೂ ವರದಿಯಾಗಿದೆ ಅರಸಿಯ ವಿಷಯದ ಪ್ರಶ್ನೆಪತ್ರಿಕೆಯ ತಮ್ಮ ಉತ್ತರಕ್ಕೆ ಶೇಕಡ ೬೦ ಅಂಕಗಳನ್ನು ತಾವು ನಿರೀಕ್ಷಿಸಿದ್ದುದಾಗಿಯೂ ಅವರು ತಮ್ಮ ಅರ್ಜಿಯಲ್ಲಿ ಸೂಚಿಸಿರುವರು

ಹೆಂಡತಿಯ ಮೇಲಿನ ಕೋಪದಿಂದ ಮಕ್ಕಳ ಕೊಲೆ

ಹೆಂಡತಿಯ ಮೇಲಿನ ಕೋಪದಿಂದ ತನ್ನ ೬ ಮತ್ತು ೩ ವರ್ಷಗಳ ಎರಡು ಗಂಡು ಮಕ್ಕಳನ್ನು ಭಾವಿಗೆ ತಳ್ಳಿದನೆಂಬ ಆಪಾದನೆಯ ಮೇಲೆ ಮದ್ರಾಸಿನ ಮಾಜಿ ಟ್ರಾಮ್ ಕಂಡಕ್ಟರನೊಬ್ಬನನ್ನು ಬಂಧಿಸಲಾಗಿದೆ ಮಕ್ಕಳ ಶವಗಳು ಮೈಲಾಪುರ ಬಡಾವಣೆಯ ಉಪವನದ ಭಾವಿಯೊಂದರಲ್ಲಿ ಪತ್ತೆಯಾಗಿವೆ

ಕಾಂಗ್ರೆಸ್ ಅಧ್ಯಕ್ಷ

ಪುರುಷೋತ್ತಮ ದಾಸ್ ಟಂಡನ್

ಕಾಂಗ್ರೆಸ್ ಅಧ್ಯಕ್ಷ ಟಂಡನ್ ರಾಜೀನಾಮೆ

ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ಪುರುಷೋತ್ತಮದಾಸ್ ಟಂಡನ್ನರು ನೆನ್ನೆ ದಿನ ದೆಹಲಿಯಲ್ಲಿ ಪತ್ರಿಕಾ ಸಮ್ಮೇಳನವೊಂದನ್ನು ಕರೆದು ತಾವು ರಚಿಸಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒತ್ತಾಯದ ಮೇಲೆ ರಾಜೀನಾಮೆ ಕೊಟ್ಟಿರುವುದರಿಂದ ತಾವೂ ಸಹ ರಾಜೀನಾಮೆ ಕೊಡುವ ಪ್ರಸಂಗವೊದಗಿರುವುದೆಂದು ಹೇಳಿ ಈ ದಿನ ತಮ್ಮ ರಾಜೀನಾಮೆ ಸಲ್ಲಿಸುವುದಾಗಿ ತಿಳಿಸಿದರು ಪ್ರಧಾನಿಯವರ ಸಮ್ಮತಿ ಮತ್ತು ನಂಜೂರಾತಿಯ ಮೇಲೆ ತಾವು ಕಾರ್ಯಕಾರಿ ಸಮಿತಿಯನ್ನು ಪುನರ್ರಚಿಸಲು ಸಿದ್ಧರಿಲ್ಲವೆಂದು ಅವರು ಹೇಳಿದರು. ಆದರೆ ಎ ಐ ಸಿ ಸಿ. ಯು ಸೂಚಿಸಬಹುದಾದ ಇತರ ಸಲಹೆಗಳನ್ನು ತಾವು ಪರಿಶೀಲಿಸುವುದಾಗಿಯೂ, ಕಾಂಗ್ರೆಸ್ ಸಂಸ್ಥೆಯನ್ನು ಬಿಡುವುದಿಲ್ಲವೆಂದೂ, ಶ್ರೀ ಟಂಡನ್ನರು ಸೂಚಿಸಿದರು.

ಪ್ರಭುಗಳ ಪಟ್ಟಾಭಿಷೇಕ ದಿನೋತ್ಸವ

ಮೈಸೂರು ೮

ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದ ೧೧ ನೇ ವಾರ್ಷಿಕೋತ್ಸವವನ್ನು ಅರಮನೆ ಕಛೇರಿಯ ನೌಕರರು ಈ ದಿನ ಬೆಳಗ್ಗೆ ಜಗನ್ಮೋಹನ ಭವನದಲ್ಲಿ ಆಚರಿಸಿದರು. ಹುಜೂರು ಕಾರ್ಯದರ್ಶಿಗಳಾದ ಶ್ರೀ ಎಚ್ ಎಂ ಪಾಳೇಗಾರರು ಅಧ್ಯಕ್ಷತೆ ವಹಿಸಿದ್ದರು

ವಿ॥ ಎಂ ಎಸ್ ಚಂದ್ರಶೇಖರಯ್ಯನವರಿಂದ ಸ್ವಾಗತ ಪದ್ಯಪಠಣವಾದನಂತರ ಅಧ್ಯಕ್ಷರು ಭಾಷಣಮಾಡಿ ಪ್ರಭುಗಳಿಗೆ ಶುಭಾಶಯಗಳನ್ನು ಕೋರಿದರು

ವಿ॥ ಚಂದ್ರಶೇಖರಯ್ಯನವರ ಗಾಯನವೂ, ಮಂಗಳಾರತಿಯೂ ಆದುವು ಈ ದಿನ ಬೆಳಗ್ಗೆ ೭ ಘಂಟೆಗೆ ದೇವಾಲಯಗಳಲ್ಲಿ ವಿಶೇಷ ಸೇವೆಗಳು ಜರುಗಿದುವು. ಬತೇರಿಯಿಂದ ೨೧ ಕುಶಾಲತೋಪುಗಳನ್ನು ಹಾರಿಸಲಾಯಿತು

ಹಿಂದೀ ತರಗತಿಗಳು

ಇದೇ ತಿಂಗಳು ೧೦ನೇ ತಾ॥ ನಿಂದ ಮೈಸೂರು ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಸಾಪ್ತಾಹಿಕ ಕೋರ್ಸ್ [illegible] ಯಲ್ಲಿರುವ ವಿದ್ಯಾಲಯ ಮತ್ತು ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯ ಕೇಂದ್ರಗಳಲ್ಲಿ ೧೯೫೨ನೇ ಫೆಬ್ರವರಿ ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೆ ಶಿಕ್ಷಣವನ್ನು ಕೊಡಲಾಗುವುದು

ಬೆಂಕಿ ಪ್ರಮಾದದಿಂದ ೧ ಕೋಟಿ ಗ್ಯಾಲನ್ ಎಣ್ಣೆ ನಷ್ಟ

ಇಂಗ್ಲೆಂಡಿನ ಏವನ್‌ಮೌತ್ ಎಂಬ ತೀರಪ್ರದೇಶದಲ್ಲಿ ಮೊನ್ನೆ ರಾತ್ರಿ ಆಕಸ್ಮಾತ್ ಸಂಭವಿಸಿದ ಆಸ್ಫೋಟನೆಯ ಪರಿಣಾಮವಾಗಿ ಬೆಂಕಿ ಪ್ರಮಾದವುಂಟಾಗಿ ಅಲ್ಲಿ ಶೇಖರಿಸಲಾಗಿದ್ದ ೧೬ ಎಣ್ಣೆ ಟ್ಯಾಂಕುಗಳು ಹತ್ತಿ ಉರಿದು ಹೋಯಿತೆಂದು ವರದಿಯಾಗಿದೆ. ಬೆಂಕಿ ಜ್ವಾಲೆಯು ನೆನ್ನೆಯೂ ಉರಿಯುತ್ತಿತ್ತೆಂದೂ, ಇದರಿಂದ ಒಟ್ಟು ೧ ಕೋಟಿ [illegible] ಗ್ಯಾಲನ್‌ಗಳಷ್ಟು ಎಣ್ಣೆಯು ನಷ್ಟವಾಗಿರುವುದಾಗಿಯೂ ಗೊತ್ತಾಗಿದೆ

ಹುಲಿಯ ಆಕೃತಿಯ ಶಿಶುವಿನ ಜನನ

ಕಳೆದ ಬುಧವಾರ ದಾವಣಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಒಬ್ಬ ಹೆಂಗಸು ಆಕಾರದಲ್ಲಿಯೂ ಮತ್ತು ಬಣ್ಣದಲ್ಲಿಯೂ ಹುಲಿ ಮರಿಯನ್ನು ಹೋಲುವ ಶಿಶುವೊಂದಕ್ಕೆ ಜನ್ಮವಿತ್ತಳೆಂದು ತಿಳಿದು ಬಂದಿದೆ ಆ ಕೂಸಿಗೆ ಕಣ್ಣುಗಳು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ ಅದು ಹುಟ್ಟಿದ [illegible] ಗಂಟೆಗಳನಂತರ ಮೃತಿ ಹೊಂದಿತು.

ಗಣಪತಿ ಮಂಗಳಾರತಿ

ವಿದ್ಯಾ ಗಣಪತಿಯ ಪೂಜೆಯ ಅಂಗವಾಗಿ ನಾಳೆ ಸಂಜೆ ೪|| ಗಂಟೆಗೆ ಮಾದರಿ ಶಾಲೆಯಲ್ಲಿ ವಿದ್ವಾನ್ ಪಾಲಘಾಟು ಟಿ. ಸಿ. ಸುಬ್ರಹ್ಮಣ್ಯ ಅಯ್ಯರ್‌ರವರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು

ಶ್ರೀ ಎಸ್ ವಿಠಲರಾವ್ ಶೀಘ್ನನವರ ವಿದ್ಯಾರ್ಥಿ ನಿಲಯದಲ್ಲಿ ನಾಳೆ ಸಂಜೆ ೬ ಘಂಟೆಗೆ ವಿದ್ಯಾಗಣಪತಿಯ ಮಹಾ ಮಂಗಳಾರತಿಯು ಜರುಗುವುದು ಈ ಸಂಬಂಧವಾಗಿ ಶ್ರೀಮತಿಯವರಾದ ಇಂದಿರ ಮತ್ತು ಲೀಲಾರವರ ಗಾಯನವನ್ನು ಏರ್ಪಡಿಸಲಾಗಿದೆ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೃಷ್ಣಮೂರ್ತಿ ಪುರಂ ಶಾಖೆಯಲ್ಲಿ ನಾಳೆ ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜು ಪ್ರಿನ್ಸಿಪಾಲರಾದ ಡಾ|| ಎಂ. ವಿ. ಗೋಪಾಲಸ್ವಾಮಿಯವರ ಅಧ್ಯಕ್ಷತೆಯಲ್ಲಿ ಅ|| ವಿ|| ವಿ ದೇಶಿಕಾಚಾರ್ಯರ ವೇಣುಗಾನವು ಏರ್ಪಾಡಾಗಿದೆ

ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಪಂಡಿತರತ್ನಂ ಎಂ. ಎಸ್ ವೆಂಕಟೇಶ ಶಾಸ್ತ್ರಿಗಳವರಿಂದ ಶಾಂತಿ ಸಾಧನೆ ಎಂಬ ವಿಷಯವಾಗಿ ಉಪನ್ಯಾಸವು ನಡೆಯುವುದು

ಹರಿಕಥಾ ವಿದ್ವಾನ್ ಶ್ರೀ ಎಚ್ ಟಿ ಶಾಮಣ್ಣನವರು ಗಣಪತಿ ಮಂಗಳಾರತಿಯ ಸಂಬಂಧವಾಗಿ ನೆನ್ನೆ ದಿನ ಕಾಲೇಜು ರಸ್ತೆಯಲ್ಲಿರುವ ತಮ್ಮ ಮನೆಯಲ್ಲಿ ಬ್ರ|| ಶ್ರೀ|| ವೇಣುಗೋಪಾಲ ದಾಸರಿಂದ ಸ್ಯಮಂತಕೋಪಾಖ್ಯಾನ ಎಂಬ ಹರಿಕಥೆಯನ್ನು ಏರ್ಪಾಡು ಮಾಡಿದ್ದರು ಈ ದಿನ ಸಂಜೆ ೭ ಗಂಟೆಗೆ ವಿ|| ಬಿ ಕೆ ಪದ್ಮನಾಭರಾಯರ ಗಾಯನವು ಸೂಕ್ತ ಪಕ್ಕವಾದ್ಯಗಳೊಡನೆ ಜರುಗುವುದು

ಜಾರ್ಡಾನಿನ ಹೊಸ ದೊರೆ

ಜಾರ್ಡಾನ್ ಪ್ರದೇಶಕ್ಕೆ ಅಮೀರ್ ತಲಾಲ್‌ರವರು ದೊರೆಯೆಂದು ಘೋಷಣೆ ಮಾಡಲಾಗಿದೆ ಅವರು ಕೊಲೆಯಾದ ದೊರೆ ಅಬ್ದುಲ್ಲಾರವರ ಹಿರಿಯ ಮಕ್ಕಳು

ಲಾಹೋರು ಮೇಲೆ ಬಾಂಬು ಹಾಕುವ ಪ್ರಯೋಗ

ಈ ತಿಂಗಳು ೨೦ನೇ ತಾ|| ರಾತ್ರಿ ಲಾಹೋರಿನ ವೃಕ್ಷ ಮನೆಗಳ ಮೇಲೆ ಬಾಂಬುಗಳನ್ನು ಹಾಕಿ ಆ ಮೂಲಕ ವಿಮಾನಧಾಳಿ ಮುಂಜಾಗ್ರತೆ ಕ್ರಮಗಳನ್ನು ನಡೆಸಲಾಗುವುದು. ಅಲ್ಲಿ ಪೂರ್ಣವಾಗಿ ಬ್ಲಾಕ್ ಔಟ್ ಮಾಡಲು ಏರ್ಪಾಡಾಗುವುದೆಂದು ತಿಳಿದುಬಂದಿದೆ

|| ಶ್ರೀ ||

ಗಣೇಶಾ ಟಾಕೀಸ್

8-9-51 ರಿಂದ ದಿನವಹಿ 3 ಪ್ರದರ್ಶನ

ಜ್ಯೂಪಿಟರ್‌ರವರ

* ಮೋಹಿನಿ *

(ತಮಿಳು)

ಪಾತ್ರ - ವಿ ಎನ್ ಜಾನಕಿ, ಲಲಿತ,

ವೈದ್ಯ ಕಾಲೇಜಿಗಾಗಿ ವಿದ್ಯಾರ್ಥಿಗಳಿಂದ ರಕ್ತದಾನ

೩೪ ಸಾವಿರ ರೂ ಗಳ ವೆಚ್ಚದಿಂದ ಮೆಡಿಕಲ್ ಕಾಲೇಜು ಕಟ್ಟಡವನ್ನು ಕಟ್ಟಲು ವಿಶಾರಜ್ಞನ ವೈದ್ಯ ಶಾಲೆಯ ೬೦ ಜನ ವಿದ್ಯಾರ್ಥಿಗಳು ತಿಂಗಳಿಗೊಮ್ಮೆ ಒಂದು ಪಿಂಟ್ (೧|| ಪಾವು) ರಕ್ತವನ್ನು ತಮ್ಮ ಶರೀರದಿಂದ ತೆಗೆದು ದಾನವಾಗಿ ಕೊಡಲು ಒಪ್ಪಿರುತ್ತಾರೆ ಈ ರೀತಿಯಾಗಿ ೩ ವರ್ಷ ಅವರು ರಕ್ತದಾನ ಮಾಡುವರೆಂದು ಹೇಳಲಾಗಿದೆ

ಪಾಕಿಸ್ತಾನದ ಭೂಪಟ ತಯಾರಿಕೆಯ ವೈಶಿಷ್ಟ್ಯ

ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದ ಮುದ್ರಣಾಲಯದಲ್ಲಿ ಪ್ರಕಟವಾಗಿರುವ ಭೂಪಟಗಳಲ್ಲಿ ಪಾಕಿಸ್ತಾನದ ಚಿತ್ರವೂ ಇದ್ದು ಭಾರತಕ್ಕೆ ಸೇರಿರುವ ಹಲವು ಪ್ರದೇಶಗಳನ್ನು ಆ ದೇಶಕ್ಕೆ ಸೇರಿದ ಹಾಗೆ ಮುದ್ರಿಸಲಾಗಿದೆ ಕಾಶ್ಮೀರದ ಕಣಿವೆಯು ಪಾಕಿಸ್ತಾನಕ್ಕೆ ಸೇರಿಸಲ್ಪಟ್ಟಿರುತ್ತದೆ ಈ ವಿಷಯವನ್ನು ಭಾರತ ಸರ್ಕಾರದವರು ಪರಿಶೀಲಿಸುತ್ತಿರುವರು

ನಂಜನಗೂಡು ತಾಲ್ಲೂಕು ಆದಿ ಕರ್ನಾಟಕರ ಸಮ್ಮೇಳನ

ನೀಲ್ಕಂಠ ಸಮ್ಮೇಳನವು ನಾಳಿದ್ದು ಮಧ್ಯಾಹ್ನ ೩ ಗಂಟೆಗೆ ನಂಜನಗೂಡು ಹೋಗಿ ತೋಪಿನಲ್ಲಿರುವ ಸಾ|| ಲಿಂಗಣ್ಣನವರ ಛತ್ರದಲ್ಲಿ ನಡೆಯುವುದು ರಿಪಬ್ಲಿಕ್ ಮಂತ್ರಿ ಶ್ರೀ ಹೆಚ್ ಸಿದ್ಧಯ್ಯನವರು ಅಧ್ಯಕ್ಷತೆ ವಹಿಸುವರು

ಹರಿಕಥೆ

ರಾಜಧಾನಿಯ ಕೊತ್ವಾಲ ರಾಮಯ್ಯನ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಮಧ್ಯಾಹ್ನ ೩ ೩೦ ಗಂಟೆಗೆ ಶ್ರೀ ಎಂ ಎಲ್ ನಾರಾಯಣ ದಾಸ್ ಮತ್ತು ಶ್ರೀ ಆರ್ ಸಿ ಕಾ ಟಿ ಜಿ ದಾಸ್ ಇವರುಗಳಿಂದ ಶ್ರೀ ಕಬೀರ್ ಎಂಬ ಹರಿಕಥೆಯು ನಡೆಯುವುದು ದೊಡ್ಡವರಿಗೆ ಮಾತ್ರ ಆಹ್ವಾನವುಂಟು

ಮೈಸೂರು ಸಿಟಿ

ಕೋ ಆಪರೇಟಿವ್ ಬ್ಯಾಂಕ್

ಡೈರೆಕ್ಟರುಗಳ ಚುನಾವಣೆ

9-9-51 ನೇ ಭಾನುವಾರ

ಮಧ್ಯಾಹ್ನ ೩ ಘಂಟೆಗೆ

ಡಿ. ಬನುಮಯ್ಯನವರ

ಹೈ ಸ್ಕೂಲಿನಲ್ಲಿ

ನಂ. 40.

ಸಿ. ವಿ. ಸುಬ್ರಾಯರ್

ಇವರಿಗೆ ತಮ್ಮ ಓಟನ್ನು

ಕೊಡಬೇಕಾಗಿ ಪ್ರಾರ್ಥನೆ

ಜ್ಯೋತಿಷ್ಯರ ಮಾತು ನಂಬಿ ಯುದ್ಧ ಮಾಡುವುದು ಬೇಡ

ಪಾಕಿಸ್ತಾನದೊಡನೆ ಭಾರತದ ಯುದ್ಧವು ಶೀಘ್ರದಲ್ಲೇ ಆಗುವುದೆಂದು ಹೇಳುವ ಜ್ಯೋತಿಷ್ಯರ ಮಾತುಗಳಿಗೆ ಕಿವಿಗೊಡಕೂಡದೆಂದು ಪ್ರಧಾನಿ ನೆಹರೂರವರು ಮೊನ್ನೆ ದೆಹಲಿಯ ಸಾರ್ವಜನಿಕ ಸಭೆಯಲ್ಲಿ ತಿಳಿಸಿದರು ಬರುವ ೯ನೇ ತಾ|| ಯುದ್ಧವು ಪ್ರಾರಂಭವಾಗುವುದೆಂದು ದೆಹಲಿಯಲ್ಲಿ ಸುದ್ದಿ ಹಬ್ಬಿತ್ತೆಂದೂ, ಯಾರು ಈ ರೀತಿ ಸುಳ್ಳು ವರ್ತಮಾನವನ್ನು ಹುಟ್ಟಿಸಿದರೋ ತಿಳಿಯದೆಂದೂ ಅವರು ಹೇಳಿ, ಭಾರತ ಪಾಕಿಸ್ತಾನಗಳಿಗೆ ಯುದ್ಧವಾಗುವುದಿಲ್ಲವೆಂದು ತಿಳಿಸಿದರು ಸಾಮಾನ್ಯ ಜಗತ್ತಿನಲ್ಲಿ ನಡೆಯುವ ವಿಷಯವು ತಮಗೆ ಹೆಚ್ಚಾಗಿ ತಿಳಿದು ಬರುವುದರಿಂದ ಈ ರೀತಿ ಅಭಿಪ್ರಾಯಕ್ಕೆ ಬಂದಿರುವುದಾಗಿ ಅವರು ಹೇಳಿದರು.

ನಿಲ್ದಾಣಕ್ಕೆ ಬರುವ ಬಸ್ಸುಗಳ ಮೇಲೆ ತೆರಿಗೆ

ಚಿತ್ರದುರ್ಗದಲ್ಲಿ ನಿಲ್ದಾಣಕ್ಕೆ ಬರುವ ಪ್ರತಿಯೊಂದು ಬಸ್ಸಿನ ಮೇಲೂ ದಿನಕ್ಕೆ ೧ ಆಣೆಯಂತೆ ತೆರಿಗೆಯನ್ನು ವಸೂಲು ಮಾಡಿ, ಬಂದ ಹಣವನ್ನು ಬಸ್ ಸ್ಟ್ಯಾಂಡಿನ ಅಭಿವೃದ್ಧಿ ಕಾರ್ಯ ಮತ್ತು ಪ್ರಯಾಣಿಕರ ಸೌಕರ್ಯಗಳಿಗಾಗಿ ಉಪಯೋಗಿಸಬೇಕೆಂದು ಅಲ್ಲಿನ ಪೌರಸಭೆಯವರು ನಿರ್ಧರಿಸಿರುತ್ತಾರೆ ಬಸ್ ನಿಲ್ದಾಣದಲ್ಲಿ ತೆರಿಗೆ ವಿಧಿಸುವುದು ಸಂಸ್ಥಾನದಲ್ಲೆಲ್ಲಾ ಇದೇ ಮೊದಲು

ಕನ್ಯಕಾಪರಮೇಶ್ವರಿ ದೇವಸ್ಥಾನದ ಸಮಿತಿಯ ಸಾಧಾರಣ ಸಭೆ

ಮೇಲ್ಕಂಡ ದೇವಾಲಯದ ಸಮಿತಿಯ ಸಾಧಾರಣ ಸಭೆಯು ನಾಳೆ ಮಧ್ಯಾಹ್ನ ೩ ೩೦ ಗಂಟೆಗೆ ಜರುಗುವುದು ಮೈಸೂರು ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ. ಆರ್ ತಿಮ್ಮರಾಯ ಶೆಟ್ಟರು ಅಧ್ಯಕ್ಷತೆ ವಹಿಸುವರು ಸದಸ್ಯರೆಲ್ಲರೂ ದಯ ಮಾಡಿಸಬೇಕಾಗಿ ಕೋರಲಾಗಿದೆ.

SRI GAYATHRI,

TALKIES

From 9-9-51 Daily 3 Shows

20th Century's

NO WAY OUT

With Richard Widmark

MORNING SHOWS

On Sunday 9th

FRANCIS

From 14-9-51

THREE MUSKETEERS

ಪರ್ಷಿಯಾ ಮೇಲೆ ಬ್ರಿಟನ್ನಿನ ದಿಗ್ಬಂಧನವೇ?

ಪರ್ಷಿಯವನ್ನು ಆರ್ಥಿಕ ರೀತಿಯಲ್ಲಿ ಹಿಂಡಲು ಬ್ರಿಟನ್ನು ಪ್ರಯತ್ನಿಸುತ್ತಿರುವುದಾಗಿ ಅಲ್ಲಿನ ರಾಷ್ಟ್ರೀಯ ಎಣ್ಣೆ ಸಮಿತಿಯ ಕಾರ್ಯದರ್ಶಿ ಹುಸೇನ್ ಮಕ್ಕಿಯವರು ತಿಳಿಸಿ, ಈ ದಿಗ್ಬಂಧನವನ್ನು ಮುರಿಯಲು ಪರ್ಷಿಯನ್ನರು ಸಂಕಲ್ಪಿಸಿರುವುದಾಗಿ ಹೇಳಿರುತ್ತಾರೆ. ಬ್ರಿಟನ್ನಿನೊಡನೆ ಪುನಃ ಸಂಧಾನವನ್ನು ಆರಂಭ ಮಾಡಿದರೆ, ಆ ದೇಶಕ್ಕೆ ಯಾವ ರಿಯಾಯತಿಯನ್ನೂ ತೋರುವುದಿಲ್ಲವೆಂದು ಅವರು ಘೋಷಿಸಿರುತ್ತಾರೆ. ಪರ್ಷಿಯಾ ಎಣ್ಣೆ ಸಂಧಾನವು ಅಸ್ಥಿರವಾಗಿ ಮುರಿದುಹೋಗಿರುವುದಾಗಿ ಬ್ರಿಟಿಷ್ ಸರ್ಕಾರದವರು ಪ್ರಕಟಿಸಿರುತ್ತಾರೆ.

ಈ ಶತಮಾನದಲ್ಲಿ ಅಣು ಯುದ್ಧವಿಲ್ಲ

ಈ ಶತಮಾನದಲ್ಲಿ ಅಣು ಯುದ್ಧ ಸಂಭವಿಸುವುದಿಲ್ಲವೆಂದು ದ್ವಿತೀಯ ಮಹಾ ಯುದ್ಧ ಕಾಲದ ಅಣು ವಿಜ್ಞಾನಿ ಜೇಮ್ಸ್ ಕೊನಾಂಟ್ ಎಂಬುವರು ಹೇಳಿರುತ್ತಾರೆ

ಅಣು ಶಕ್ತಿಯಿಂದ ಚಲಿಸಬಲ್ಲ ವಿಮಾನ

ಅಮೆರಿಕದ ಸರ್ಕಾರದವರು ಅಣು ಶಕ್ತಿಯಿಂದ ಚಲಿಸುವ ವಿಮಾನವನ್ನು ತಯಾರಿಸಲು ಅಲ್ಲಿನ ಕಾರ್ಖಾನೆಯವರಿಗೆ ಆಜ್ಞೆ ಮಾಡಿರುತ್ತಾರೆ

ಯ ಕ್ಷ ಗಾ ನ

ಮೈಸೂರು ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೮ ಘಂಟೆಗೆ ಹನುಮಂತನಹಳ್ಳಿ ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ ಭಕ್ತ ಸುಧನ್ವ ಎಂಬ ಪ್ರಸಂಗವು ಜರುಗುವುದು

ಮನೆ ಕ್ರಯಕ್ಕೆ ಇವೆ

1. ನಂ.2900 ಮತ್ತು 2900 ಹಳ್ಳದಕೇರಿ, ಮೈಸೂರು. ಮೂಲೆ ಮನೆ.

2. ನಂ. 2875. ಹಳ್ಳದಕೇರಿ ಮೈಸೂರು.

3. ನಂ. 32. ಸಬರ್‌ಬನ ಮೈಸೂರು.

4. ನಂ. 863. ಶಾಸ್ತ್ರಿ ರೋಡ್, ಮೈಸೂರು.

5. ನಂ. ೩೬೩೧. ಜಯನಗರ ಮೈಸೂರು.

-: ವಿವರಗಳಿಗೆ :-

ಜಯ ಅಂಡ್ ಕಂಪೆನಿ,

ಹಳೇ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು.

ಟೆಲಿಫೋನ್ ನಂ. ೩೨೦.

Edited, printed and published by A. R. Nagarajan, at Sadhvi Press, D. Subbiah Road, Mysore.

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರಿಂದ

ರತ್ನಾವಳಿ ಥಿಯೇಟರಿನಲ್ಲಿ

1-9-51 ನೇ ಶನಿವಾರದಿಂದ

* ಶ್ರೀ ಕೃಷ್ಣ ಭಗವಾನ್

ಶುಕ್ರವಾರ ಮತ್ತು ಭಾನುವಾರಗಳಲ್ಲಿ 6-45 ಕ್ಕೆ, ಉಳಿದ ದಿನಗಳಲ್ಲಿ 9-45 ಕ್ಕೆ

ಮುಂದಿನ ಆಕರ್ಷಣೆ - ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ಫೋನ್ ನಂ. 792 WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೯-೯-೫೧ [ಸಂಚಿಕೆ ೭

ಕಾಂಗ್ರೆಸ್ ಅಧ್ಯಕ್ಷತೆಗೆ ನೆಹರೂರವರ ಆಯ್ಕೆ

೧೧೦ ನಿಮಿಷಗಳ ಕಾಲ ಚಿರತೆಯೊಡನೆ ಹೋರಾಟ

ಮಯೂರ್‌ಭಂಜಿನ ಡಾ|| ಎಂ. ...ಂಗೂಲಿ ಎಂಬ ಸುಪ್ರಸಿದ್ಧ ಶಿಕಾರಿ...ಯು ಕೆಲವು ದಿವಸಗಳ ಹಿಂದೆ, ಸಮೀ...ದ ...ಟ್ಟದ ತಪ್ಪಲಿನಲ್ಲಿ ಏಳು ಅಡಿ ಉ...ದ ಒಂದು ಭಾರಿ ಚಿರತೆಯೊಡನೆ ಕೈ...ಕಾಳಗ ನಡೆಸಿ ಅದನ್ನು ಕೊಂದ ಸು...ಯು ವರದಿಯಾಗಿದೆ. ಬೆಟ್ಟದ ಬಳಿ... ಗ್ರಾಮಸ್ಥರಿಗೆ ಚಿರತೆಯು, ಹಿಂಸೆ...ಡುತ್ತಿದ್ದುದರಿಂದ ಅವರ ಕೋರಿಕೆ...ಯ ಮೇರೆ ಶ್ರೀ ಗಂಗೂಲಿಯವರು ಬಂ...ಕದೊಡನೆ ಶಿಕಾರಿಗಾಗಿ ಹೊರಟರು. ...ವರು ಬಂದೂಕವನ್ನು ಹಾರಿಸಿದುದು ...ರಿತಪ್ಪಿ ಎಲ್ಲ ಮದ್ದುಗಳೂ ವ್ಯರ್ಥವಾ... ಮುಗಿದುಹೋದುವು. ಚಿರತೆಯು ...ಷಗೊಂಡು ಅವರ ಮೇಲೆ ಬೀಳ... ಅವರು ಅದರೊಡನೆ ಸುಮಾರು ...ರು ನಿಮಿಷ ಕಾಲ ಹೋರಾಡಿ ಕಡೆ ಅದನ್ನು ಕೊಂದುಹಾಕಿದರು.

ಭಾರತದಲ್ಲಿ ಮತ್ತೆ ಬಿರುದುಗಳ ಪದ್ಧತಿ ಜಾರಿ

ಭಾರತದಲ್ಲಿ ಇತ್ತೀಚಿಗೆ ವಿದ್ಯಾಭ್ಯಾಸ ...ತ್ತು ಸಾರ್ವಜನಿಕ ಯೋಜನೆಗಳಿಗೆ ...ದ ಸಂಗ್ರಹಿಸುವುದು ಅಸಾಧ್ಯವಾಗಿರು...ರಿಂದ ಸರ್ಕಾರದವರು ಈ ಕಾರ್ಯ...ಾಗಿ ಧನಿಕ ಖಾಸಗಿ ವ್ಯಕ್ತಿಗಳಿಂದ ...ಣವನ್ನು ಶೇಖರಿಸುವ ಸಲುವಾಗಿ ಇ... ಮುಂದೆ ಬಿರುದುಗಳನ್ನೂ ಮ...ಪದಕಗಳನ್ನೂ ಕೊಡಲು ಆ...ೇಚಿಸಿರುವುದಾಗಿ ವರದಿಯಾಗಿದೆ.

...ಂದುಗಳ ಮೇಲೆ ಜಿಹಾದ್ ಧರ್ಮ ಯುದ್ಧದ ತೆರಿಗೆ

ಪಶ್ಚಿಮ ಪಾಕಿಸ್ತಾನವನ್ನು ಮುಸಲ್ಮಾ... ಸೈನ್ಯಗಳು ರಕ್ಷಿಸುತ್ತಿರುವುವೆಂದೂ, ...ರ್ವ ಪಾಕಿಸ್ತಾನದ ರಕ್ಷಣೆಯ ಜವಾ...ರಿಯು ಪೂರ್ಣವಾಗಿ ತಮ್ಮ ಮೇಲೆ ಬಿದ್ದಿರುವುದೆಂದೂ ಪೂರ್ವ ಬಂ...ದ ಮುಸ್ಲಿಮರು ಭಾವಿಸಿರುವುದಾಗಿ ...ದಿಯಾಗಿದೆ. ಪೂರ್ವ ಬಂಗಾಳದ ರ...ಯ ಯೋಜನೆಗಳನ್ನು ಈಗಾಗಲೇ ...ಸ್ತಾನದ ಸೈನ್ಯಾಧಿಕಾರಿಯು ಸಿದ್ಧ...ಸಿರುವರು, ಅನ್ಸಾರ್ ಸಂಗಡದವ... ತರಬೇತುಮಾಡಿ ಸೈನ್ಯಗಳಿಗೆ ಸೇ...ಕೊಳ್ಳಲಾಗುತ್ತಿದೆ. ರಾತ್ರಿ ೯ ಘಂಟೆ ನಂತರ ಮನೆ ಬಿಟ್ಟು ಹೊರಗೆ ಹೋ...ವರನ್ನು ಪೋಲೀಸರು ಪ್ರಶ್ನಿಸುತ್ತಿರು... ಅನಾಗ್ಯ ಭಾರತಕ್ಕೆ ಹೋಗಿ ಬರು...ಂದುಗಳನ್ನು ಶೋಧಿಸಿ ಚಿತ್ರಹಿಂಸೆ ...ಡಲಾಗುತ್ತಿದೆ. ಹಿಂದುಗಳಿಂದ, ಅವ...ವಮಾನಕ್ಕೆ ಅನುಗುಣವಾಗಿ ಜಿಹಾ... ಧರ್ಮಯುದ್ಧದ ನಿಧಿಯನ್ನು ಬ...ತ್ಕಾರವಾಗಿ ಕೂಡಿಸಲಾಗುತ್ತಿದೆ-...ದಾಗಿ ತಿಳಿದುಬಂದಿದೆ.

...ರಾಷ್ಟ್ರ ಸಮ್ಮೇಳನದಲ್ಲಿ ಕಾಶ್ಮೀರ: ಪ್ರಶ್ನೆ ಪರಿಶೀಲನೆ

...ಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್ ... ರಾಷ್ಟ್ರಗಳ ಸಮ್ಮೇಳನವು ಬರುವ ...ರ ಸೇರಿ ಕಾಶ್ಮೀರ ಮತ್ತು ಇರಾನ್ ಎ...ಗಣಿ ಮೊದಲಾದ ೧೭ ಮುಖ್ಯವಾದ ...ಷಯಗಳನ್ನು ಪರಿಶೀಲಿಸಲಿದೆಯೆಂದು ...ಳತ್ತಾಗಿದೆ

ಸಂಬಳ ಪಾವತಿಯಾಗದೆ ಇಡೀ ಸಂಸಾರದ ಉಪವಾಸ

ಲಾಹೋರಿನ ಕಾರ್ಪೊರೇಷನ್ ವಿದ್ಯಾಧಿಕಾರಿಗಳ ಕಛೇರಿ ನೌಕರರಾದ ಜನಾಬಾ ಉಮತ್-ಉ-ಶಕೂರ್ ಎಂಬ ಅಧ್ಯಾಪಕಿಗೆ ಕಳೆದ ಎರಡು ತಿಂಗಳಿಂದಲೂ ಸಂಬಳವನ್ನು ಕೊಟ್ಟಿಲ್ಲದುದರ ಪರಿಣಾಮವಾಗಿ ಕಳೆದ ಬುಧವಾರದಿಂದ ಆಕೆಯ ಇಡೀ ಸಂಸಾರವೇ ಉಪವಾಸ ಬೀಳಬೇಕಾದ ಪ್ರಸಂಗವು ಒದಗಿರುವುದಾಗಿ ವರದಿಯಾಗಿದೆ. ೮-೧೦ ದಿನಗಳ ಹಿಂದೆ ಉಮತ್-ಉ-ಶಕೂರಳು ಉಪವಾಸ ಕೈಗೊಂಡುದನ್ನು ನೋಡಿ ಸ್ವಲ್ಪ ದಿನಗಳ ನಂತರ ಆಕೆಯ ತಾಯಿಯೂ, ನಾಲ್ಕು ದಿನಗಳು ಕಳೆದ ನಂತರ ಉಳಿದವರೂ ಉಪವಾಸದಲ್ಲಿ ಭಾಗಿಗಳಾದರೆಂದು ಗೊತ್ತಾಗಿದೆ.

ಪ್ಯಾರಿಸ್ಸಿನ ಬ್ಯಾಂಕಿನಲ್ಲಿ ಭಾರಿ ಆಸ್ಫೋಟನೆ

ಪ್ಯಾರಿಸ್ಸಿನ ಪ್ರಮುಖ ಸ್ಥಳದಲ್ಲಿದ್ದ ವರ್ಮ್ಸ್ ಬ್ಯಾಂಕಿನ ಆವರಣದಲ್ಲಿ ಕಳೆದ ಗುರುವಾರ ಒಂದು ಬಾಂಬು ಸಿಡಿದು ಪ್ರವೇಶ ದ್ವಾರದ ಬಾಗಿಲು, ಕಟ್ಟಡದ ತಾರಸಿಗಳು ಮುರಿದು ಚೂರು ಚೂರಾದುವೆಂದೂ, ಬ್ಯಾಂಕಿನ ಸುತ್ತ ೫೦ ಗಜದ ಆವರಣದಲ್ಲಿ ಎಲ್ಲ ಕಿಟಕಿಗಳೂ ಮುರಿದು ಬಿದ್ದುವೆಂದೂ ವರದಿಯಾಗಿದೆ. ಇದರಿಂದ ಕೋಟ್ಯಾಂತರ ಫ್ರಾಂಕುಗಳಷ್ಟು ನಷ್ಟ ಸಂಭವಿಸಿರುವುದಾಗಿ ಹೇಳಲಾಗಿದೆ.

ಜಪಾನ್ ಶಾಂತಿ ಒಪ್ಪಂದಕ್ಕೆ ೪೯ ರಾಷ್ಟ್ರಗಳ ರುಜು

ಜಪಾನ್ ಶಾಂತಿ ಒಪ್ಪಂದಕ್ಕೆ ರಷ್ಯಾ, ಪೋಲೆಂಡ್, ಜೆಕೋಸ್ಲೊವೇಕಿಯಗಳನ್ನು ಬಿಟ್ಟು ಇತರ ರಾಷ್ಟ್ರಗಳೆಲ್ಲಾ ರುಜು ಹಾಕುವುವೆಂದು ಜಪಾನ್ ಶಾಂತಿ ಒಪ್ಪಂದದ ಕಛೇರಿಯಲ್ಲಿ ಪ್ರಕಟಿಸಲಾಗಿದೆ.

ಪ್ರಭುಗಳ ಕರ್ನಾಟಕ ಪ್ರಾಂತ ಪ್ರವಾಸ

ಮೊದಲೇ ಗೊತ್ತಾಗಿದ್ದಂತೆ ಪ್ರಭುಗಳು ಕರ್ನಾಟಕ ಪ್ರಾಂತ ಪ್ರವಾಸ ಕೈಗೊಳ್ಳುವ ಸಲುವಾಗಿ ನೆನ್ನೆ ರಾತ್ರಿ ವಿಶೇಷ ರೈಲಿನಲ್ಲಿ ಪ್ರಯಾಣ ಬೆಳೆಸಿದರು. ಅವರೊಡನೆ ಸಚಿವ ಶ್ರೀ|| ಎಚ್. ಸಿ. ದಾಸಪ್ಪನವರೂ, ಹಲವು ಮಂದಿ ಪತ್ರಿಕಾ ಪ್ರತಿನಿಧಿಗಳೂ ತೆರಳಿದರು.

ಟಾಂಡನ್ನರ ರಾಜೀನಾಮೆಯ ಅಂಗೀಕಾರ

ನೆಹರೂರವರು ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರಾಗಿರುವರು

ಕಾಂಗ್ರೆಸ್ಸಿನಲ್ಲಿ ಐಕ್ಯತೆಯನ್ನು ಸಾಧಿಸುವ ಬಗ್ಗೆ ಕಡೆಯ ಘಳಿಗೆಯವರೆಗೂ ಡಾ|| ಬಿ ಸಿ ರಾಯ್ ಮತ್ತು ಪಂಡಿತ ಪಂತರು ಸಂಧಾನ ನಡೆಸಿ ವಿಫಲರಾದರೆಂದು ವರದಿಯಾಗಿದೆ. ನೆನ್ನೆ ಸಂಜೆ ಅಧ್ಯಕ್ಷ ಟಾಂಡನ್ನರು ಎ ಐ. ಸಿ ಸಿ ಯ ರಹಸ್ಯ ಅಧಿವೇಶನದಲ್ಲಿ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಸಭೆಯು ಸರ್ವಾನುಮತದಿಂದ ಅದನ್ನು ಅಂಗೀಕರಿಸಿತು.

ಕಾಂಗ್ರೆಸ್ಸಿನ ನೂತನ ಅಧ್ಯಕ್ಷ

ಪಂಡಿತ ಜವಹರಲಾಲ್ ನೆಹರೂರವರು

ಅನಂತರ ಪಂಡಿತ ಗೋವಿಂದ ವಲ್ಲಭ ಪಂತರು ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಪಂಡಿತ ನೆಹರೂರವರ ಹೆಸರನ್ನು ಸೂಚಿಸಿ ನಿರ್ಣಯವನ್ನು ಮಂಡಿಸಿದರು. ಅದನ್ನು ಡಾ|| ಬಿ ಸಿ. ರಾಯ್ ಮತ್ತು ಶ್ರೀ ಕೆ. ಕಾಮರಾಜ ನಾದರ್‌ರವರು ಸಮರ್ಥಿಸಿದರು. ಅಧಿಕ ಸಂಖ್ಯೆಯ ಬಹುಮತದಿಂದ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಎ. ಐ. ಸಿ ಸಿ ಸಭೆಯು ಮುಗಿಯುತ್ತಿದ್ದಾಗ ನೂತನ ಅಧ್ಯಕ್ಷ ಪಂಡಿತ ನೆಹರೂರವರು ಮಾತನಾಡಿ ತಾವು ಹಂಗಾಮಿಯಾಗಿ ಅಧ್ಯಕ್ಷ ಪದವಿಯನ್ನು ಸ್ವೀಕರಿಸುವುದಾಗಿಯೂ, ಇನ್ನು ಮೂರುವಾರಗಳಲ್ಲಿ ಕಾಂಗ್ರೆಸ್ಸಿನ ಮಹಾಧಿವೇಶನವನ್ನು ಕರೆಯುವುದಾಗಿಯೂ ತಿಳಿಸಿದರು.

ನೆನ್ನೆ ಸಂಜೆ ಕಾನ್‌ಸ್ಟಿಟ್ಯೂಷನ್ ಕ್ಲಬ್ಬಿನಲ್ಲಿ ಎ. ಐ. ಸಿ. ಸಿ. ರಹಸ್ಯ ಅಧಿವೇಶನವು ಸೇರಿದಾಗ ಸುಮಾರು ೩೦೦ ಮಂದಿ ವಿದ್ಯಾರ್ಥಿಗಳು ಶ್ರೀ ಟಾಂಡನ್ನರು ಬರುವ ವೇಳೆಗೆ ಪ್ರದರ್ಶನ ನಡೆಸಿ "ನೆಹರೂರವರೇ ನಮ್ಮ ನಾಯಕರು" ಎಂದು ಘೋಷಣೆ ಮಾಡಿದರು.

ಕಬ್ಬಿಣದ ಕಾರ್ಖಾನೆ ಕಾರ್ಮಿಕರ ಮುಷ್ಕರವಿಲ್ಲ

ಬರುವ ಗುರುವಾರದಿಂದ ಮುಷ್ಕರ ಹೂಡಬೇಕೆಂದಿದ್ದ ಭದ್ರಾವತಿ ಕಬ್ಬಿಣದ ಕಾರ್ಖಾನೆ ಕೆಲಸಗಾರರು ಮೈಸೂರು ಸರ್ಕಾರದ ಲೇಬರ್ ಕಮೀಷನರವರ ಮಧ್ಯಸ್ಥಿಕೆಯ ಫಲವಾಗಿ ಕಾರ್ಖಾನೆಯ ಆಡಳಿತ ವರ್ಗದವರೊಡನೆ ಒಪ್ಪಂದಕ್ಕೆ ಬಂದು ಮುಷ್ಕರದ ನೋಟೀಸನ್ನು ವಾಪಸು ತೆಗೆದುಕೊಂಡಿರುತ್ತಾರೆ.

ಮೇರಿಯ ಮಾಂಟೆಜ್ಳ ನಿಧನ

ಪ್ಯಾರಿಸ್ಸಿನ ಸುಪ್ರಸಿದ್ಧ ಸಿನಿಮಾ ನಟಿಯಾದ ಮೇರಿಯಾ ಮಾಂಟೆಜ್ಳು ಮೊನ್ನೆ ದಿನ ಸ್ನಾನ ಮಾಡಲು ಹೋಗಿ ಕುದಿಯುವ ನೀರಿನ ತೊಟ್ಟಿಯಲ್ಲಿ ಬಿದ್ದು ಮುಳುಗಿ ಮೃತಪಟ್ಟಳೆಂದು ವರದಿಯಾಗಿದೆ.

ಉದ್ರಿಕ್ತಸ್ಥಿತಿಯಲ್ಲಿದ್ದ ರಾಬರ್ಟ್‌ವಾಕರ್ ಎಂಬ ಹಾಲಿವುಡ್ಡಿನ ಪ್ರಖ್ಯಾತ ನಟನನ್ನು ಸಮಾಧಾನ ಸ್ಥಿತಿಗೆ ತರಲು ಮೊನ್ನೆ ದಿನ ವೈದ್ಯನೊಬ್ಬನು ಇಂಜೆಕ್ಷನ್ ಕೊಡಲು, ಅದು ಫಲಕಾರಿಯಾಗದೆ ವಾಕರನು ಮೃತಪಟ್ಟನೆಂದು ಗೊತ್ತಾಗಿದೆ.

ಡಾ|| ಗ್ರಹಾಂರವರ ಸಂಧಾನ ವಿಫಲವಾಯಿತೇ?

ವಿಶ್ವ ಸಂಸ್ಥೆಯಿಂದ ನೇಮಿಸಲ್ಪಟ್ಟಿದ್ದ ಕಾಶ್ಮೀರ ಸಮಸ್ಯಾ ಮಧ್ಯಸ್ಥಿಕೆಗಾರರಾದ ಡಾ|| ಫ್ರ್ಯಾಂಕ್‌ಗ್ರಹಾಂರವರ ಸಂಧಾನವು ವಿಫಲವಾಗಿರುವುದಾಗಿ ಕರಾಚಿಯ ಪತ್ರಿಕೆಗಳು ಪ್ರಕಟಿಸಿವೆ. ಕಾಶ್ಮೀರ ರಾಜ್ಯಾಂಗ ಸಭಾ ಚುನಾವಣೆಯನ್ನು ಮುಂದೂಡಿಸಲು ಪಂಡಿತ ನೆಹರೂರವರು ಒಪ್ಪದಿದ್ದುದೇ ಸಂಧಾನ ವಿಫಲಕ್ಕೆ ಕಾರಣವೆಂದು ಹೇಳಲಾಗಿದೆ

ಕಾಲ್ನಡಿಗೆಯಲ್ಲಿ ವಿನೋಬಾ ಭಾವೆಯವರ ಪ್ರವಾಸ

ಆಚಾರ್ಯ ವಿನೋಬಾಭಾವೆಯವರು ಉತ್ತರ ಭಾರತದಲ್ಲಿ ಸರ್ವೋದಯ ಸಂದೇಶವನ್ನು ಸಾರುವ ಸಲುವಾಗಿ ಕಾಲುನಡಿಗೆಯ ಪ್ರವಾಸ ಕೈಗೊಳ್ಳಲು ನಿರ್ಧರಿಸಿ ಇದೇ ೧೨ನೇ ತಾರೀಕು ವರ್ಧಾ ಬಳಿಯ ಪೌನಾರ್ ಎಂಬಲ್ಲಿಂದ ಹೊರಡುವರೆಂದು ವರದಿಯಾಗಿದೆ. ದೆಹಲಿಗೆ ಬರಬೇಕೆಂದು ಪಂಡಿತ ನೆಹರೂರವರು ಇವರನ್ನು ಆಹ್ವಾನಿಸಿರುವರೆಂದೂ ಗೊತ್ತಾಗಿದೆ.

ವಾರ ಭವಿಷ್ಯ

ತಾ|| ೯-೯-೫೧ರಿಂದ ೧೫-೯-೫೧ರ ವರೆಗೆ

ಮೇಷ— ಮೋಸ ಹೊಂದುವ ಸಂಭವ, ನೌಕರಿ, ವ್ಯಾಪಾರ ವ್ಯವಹಾರಗಳಲ್ಲಿ ನಿರುತ್ಸಾಹ ಪ್ರವಾಸ ಬೇಡ ಅಪಘಾತ ಭಯ ತಾ|| ೧೦, ೧೪ ಕಾರ್ಯ ಸಾಧನೆ, ಆಪ್ತರ ಭೇಟಿ

ವೃಷಭ— ಸಮಾಜ ಸೇವೆ ಜರುಗುವುದು ಎದುರಾಳಿಗಳಿಗೆ ಸೋಲು ಸಖರ ಪ್ರವಾಸ ಆರೋಗ್ಯ ಉತ್ತಮ ವ್ಯವಹಾರಗಳಲ್ಲಿ ಪ್ರಗತಿ ತಾ|| ೯, ೧೦ ಔತಣ, ಖರ್ಚು

ಮಿಥುನ— ಖರ್ಚು ಅಧಿಕವಾಗುವುದು ಅತಿಥಿಗಳ ಆಗಮನ ಆರೋಗ್ಯ ಉತ್ತಮ, ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು ತಾ|| ೧೧, ೧೨ ಗಡಿಬಿಡಿ, ಹಣಕಾಸಿನ ಮುಗ್ಗಟ್ಟು

ಕರ್ಕ— ಸ್ವಜನರಿಂದ ಹಾನಿ ಸಂಭವ ವ್ಯವಹಾರಗಳಲ್ಲಿ ಚಿಂತಾಜನಕ ಪರಿಸ್ಥಿತಿ ಆರೋಗ್ಯ ಚೆನ್ನಾಗಿರದು ತಾ|| ೧೩, ೧೪ ಕ್ಷೇಮಕಾರಕ ವಾರ್ತೆ, ಖರ್ಚು

ಸಿಂಹ— ಮನಸ್ಸಿನ ತಳಮಳ ಹೆಚ್ಚುವುದು. ಖರ್ಚು ಮೀರಿ ಹೋಗುವುದು ಆರೋಗ್ಯ ಚೆನ್ನಾಗಿರದು ಕಾರ್ಯ ವಿಘ್ನ. ನೌಕರಿಯಲ್ಲಿ ಅಪಮಾನ ತಾ|| ೧೧, ೧೨ ಕಲಹ, ಅಪಘಾತ ಸಂಭವ

ಕನ್ಯಾ— ಕೈಗೊಂಡ ಕಾರ್ಯ ಸಿದ್ಧಿ ಆರೋಗ್ಯ ಉತ್ತಮ ನೌಕರಿಯಲ್ಲಿ ಉನ್ನತಿ ವ್ಯವಹಾರಗಳಲ್ಲಿ ಪ್ರಗತಿ ಪ್ರವಾಸ ಸಂಭವ ತಾ|| ೧೦, ೧೨ ಆಪ್ತರ ಆತಿಥ್ಯ, ಖರ್ಚು

ತುಲ— ಮಾನ ಸನ್ಮಾನ ದೊರೆಯುವುದು ಆರೋಗ್ಯ ಉತ್ತಮ ವ್ಯಾಪಾರ ಉದ್ಯೋಗಗಳಲ್ಲಿ ಯಶಸ್ಸು, ಪರೋಪಕಾರ ಜರುಗುವುದು ತಾ|| ೧೧, ೧೨ ಶುಭ ಕಾರ್ಯಕ್ಕಾಗಿ ಖರ್ಚು

ವೃಶ್ಚಿಕ— ಪರೋಪಕಾರ ಜರುಗುವುದು ಸಮಾಜದಲ್ಲಿ ಹಿರಿಮೆ ಆರೋಗ್ಯ ಉತ್ತಮ ಕೈಗೊಂಡ ಕಾರ್ಯ ಸಿದ್ಧಿ ಸುಖ ಪ್ರವಾಸ ತಾ|| ೧೩, ೧೪ ಧಾರ್ಮಿಕ ಕಾರ್ಯ, ಗೊಂದಲ

ಧನು— ತೊಂದರೆಗಳ ನಿವಾರಣೆ ಆರೋಗ್ಯ ಚೆನ್ನಾಗಿರಲಾರದು ಹಣಕಾಸಿನ ಮುಗ್ಗಟ್ಟು ಹೆಚ್ಚು ಮನಸ್ಸಿನ ತಳಮಳ ತಾ|| ೯, ೧೦ ಅಪಘಾತ ಭಯ ಖರ್ಚು

ಮಕರ— ಸಂಕಟಗಳನ್ನು ಧೈರ್ಯದಿಂದ ಎದುರಿಸಿರಿ ಆಪ್ತರ ವಿಯೋಗ ಮನಸ್ಸಿನ ತಳಮಳ ಮತ್ತು ಖರ್ಚು ಹೆಚ್ಚು ತಾ|| ೧೦, ೧೧ ಅಪಘಾತ ಭಯ, ಮೋಸ ಸಂಭವ

ಕುಂಭ— ಆರೋಗ್ಯ ಉತ್ತಮ ಮನಶ್ಶಾಂತಿ ಹೆಚ್ಚುವುದು ವಿದ್ವಜ್ಜನರ ಭೇಟಿ. ವ್ಯಾಪಾರೋದ್ಯಮಗಳಲ್ಲಿ ಪ್ರಗತಿ ಮಾನ ಸನ್ಮಾನ ತಾ|| ೯, ೧೦ ವಿಶೇಷ ಬುದ್ಧಿ, ಧನ ಲಾಭ

ಮೀನ— ಪರೋಪಕಾರ ಜರುಗುವುದು ಸಾಧು ಸಂತರ ಆತಿಥ್ಯ ಆರೋಗ್ಯ ಉತ್ತಮ ತಾ|| ೧೧, ೧೨ ಸುವಾರ್ತೆ, ಆಪ್ತರ ಭೇಟಿ

ರೈಲ್ವೆ ಪ್ರಯಾಣಿಕಳ ಆಭರಣದ ದರೋಡೆ

ಕೆಲವು ದಿನಗಳ ಕೆಳಗೆ ಔಧ್ ತ್ರಿಪುರ ರೈಲ್ವೆಯಲ್ಲಿ ಗೋರಖ್‌ಪುರದಿಂದ ಇಂಟರ್ ತರಗತಿಯಲ್ಲಿ ಏಕಾಂಗಿಯಾಗಿ ಪ್ರಯಾಣ ಮಾಡುತ್ತಿದ್ದ ಮಹಿಳೆಯ ಮೇಲೆ ಹಲವು ಮಂದಿ ದರೋಡೆಕೋರರು ಕೈ ಮಾಡಿ ನೂರು ಸಾವಿರ ರೂ ಬೆಲೆ ಬಾಳುವ ಆಭರಣಗಳನ್ನು ಅಪಹರಿಸಿಕೊಂಡು ಹೋದರೆಂದು ವರದಿಯಾಗಿದೆ ಓಡುತ್ತಿದ್ದ ರೈಲನ್ನು ಹತ್ತಿ ದರೋಡೆಕೋರರು ಈ ಕೃತ್ಯ ನಡೆಸಿದರೆಂದು ಹೇಳಲಾಗಿದೆ

ವಿರಾಮ ವೇತನ ಹೆಚ್ಚಿಸಲು ಸರ್ಕಾರಕ್ಕೆ ಬೆದರಿಕೆ

ಜೀವನದ ವೆಚ್ಚವು ಹೆಚ್ಚಿರುವ ಈಗಿನ ಪರಿಸ್ಥಿತಿಯಲ್ಲಿ ತಮಗೆ ವಿರಾಮ ವೇತನವನ್ನು ಹೆಚ್ಚಿಸಿ ಕೊಡದಿದ್ದಲ್ಲಿ ತಾವು ನೇರವಾದ ಕಾರ್ಯಾಚರಣೆಯನ್ನು ಆರಂಭಿಸಬೇಕಾಗುವುದೆಂದು ಪೂನದ ನಿವೃತ್ತ ಸರ್ಕಾರಿ ನೌಕರರು ಬೊಂಬಾಯಿ ಸರ್ಕಾರಕ್ಕೆ ಬೆದರಿಕೆಯನ್ನು ಕೊಟ್ಟಿರುವರೆಂದು ಗೊತ್ತಾಗಿದೆ

ಬೊಂಬಾಯಿಯಲ್ಲಿ ಬೆಂಕಿ ಅನಾಹುತ

ಮೊನ್ನೆ ಬೆಳಿಗ್ಗೆ ಬೊಂಬಾಯಿನ ಪೂರ್ವ ಪ್ರದೇಶದ ಒಂದು ಮರ ಮುಟ್ಟುಗಳ ಅಂಗಡಿಗೆ ಅಕಸ್ಮಾತ್ ಬೆಂಕಿ ಬಿದ್ದು ಗರಗಸದ ಯಂತ್ರವೂ ಇತರ ಸಾಮಾನುಗಳೂ ಸುಟ್ಟು ಭಸ್ಮವಾದುವೆಂದೂ, ಇದರಿಂದ ೬೦ ಸಾವಿರ ರೂ ನಷ್ಟ ಸಂಭವಿಸಿರುವುದೆಂದೂ ವರದಿಯಾಗಿದೆ ನೀರಿನ ತೊಂದರೆಯಿಂದ ಬೆಂಕಿಯನ್ನು ಶಮನ ಮಾಡಲು ತಡವಾಯಿತೆಂದು ಹೇಳಲಾಗಿದೆ

ಬೊಂಬಾಯಿ ಜಾಡಮಾಲಿಗಳ ಮುಷ್ಕರ

ಬೊಂಬಾಯಿ ಪೌರಸಭೆಯ ಕಾಮಗಾರರ ಸಂಘದ ೧೪ ಸಾವಿರ ಸದಸ್ಯರು ಬರುವ ೨೫ನೇ ತಾ|| ನಿಂದ ಮುಷ್ಕರ ಹೂಡಬೇಕೆಂದು ತೀರ್ಮಾನಿಸಿರುವರು ಬೊಂಬಾಯಿನ ಕಸ ಗುಡಿಸುವವರ ಸಂಘ ಮತ್ತು ಪೌರಸಭೆ ಜವಾನರ ಸಂಘಗಳು ಇವರ ಮುಷ್ಕರಕ್ಕೆ ಬೆಂಬಲ ಕೊಡುವುದಾಗಿ ತಿಳಿಸಿವೆ ಅಲ್ಲಿನ ೨೫ ಸಾವಿರ ಜಾಡಮಾಲಿಗಳ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದು ಮತ್ತು ಹೆಚ್ಚು ಸಂಬಳಗಳ ಬೇಡಿಕೆಗಳ ಈಡೇರಲೆಂದು ಈ ಮುಷ್ಕರವನ್ನು ಹೂಡಲಾಗುವುದು

ವನಸ್ಪತಿ ತುಪ್ಪವನ್ನು ನಿಷೇಧಿಸಲು ಸರ್ಕಾರ ಸಿದ್ಧವಿಲ್ಲ

ಕಳೆದ ಗುರುವಾರ ಭಾರತ ಪಾರ್ಲಿಮೆಂಟಿನಲ್ಲಿ ವನಸ್ಪತಿ ತಯಾರಿಕೆಯನ್ನು ನಿರೋಧಿಸುವ ಬಗ್ಗೆ ಪಂಡಿತ ಠಾಕೂರ್ ದಾಸ್ ಭಾರ್ಗವರವರು ತಂದ ಮಸೂದೆಯ ವಿಷಯವಾಗಿ ಮಾತನಾಡುತ್ತಾ ವನಸ್ಪತಿ ತಯಾರಿಕೆಯನ್ನು ನಿಷೇಧಿಸಲು ಸರ್ಕಾರದವರು ಸಿದ್ಧರಿಲ್ಲವೆಂದು ಆಹಾರ ಸಚಿವ ಶ್ರೀ ಮುನ್ಷಿಯವರು ತಿಳಿಸಿದರು

ಹರಿಜನ ಮಹಿಳೆಗೆ ಐದು ಮಕ್ಕಳ ಜನನ

ರಾಜಮಹೇಂದ್ರಿಯ ಬಳಿ ಯಡಿತ ಎಂಬ ಹಳ್ಳಿಯ ಹರಿಜನ ಸ್ತ್ರೀಯೊಬ್ಬಳಿಗೆ ಏಕಕಾಲದಲ್ಲಿ ೫ ಮಕ್ಕಳು ಜನಿಸಿದುವೆಂದೂ, ಕೂಡಲೇ ತಾಯಿ ಮತ್ತು ಮೊದಲ ನಾಲ್ಕು ಮಕ್ಕಳು ಸತ್ತು ಹೋಗಿ, ೫ನೆಯ ಗಂಡು ಮಗುವೊಂದು ಮಾತ್ರ ಜೀವಿಸಿರುವುದಾಗಿ ತಿಳಿದುಬಂದಿದೆ

ವಿ ಟಿ ತಿರುನಾರಾಯಣಯ್ಯಂಗಾರ್ಯರಿಗೆ ಪಿತೃವಿಯೋಗ

ವಿಶ್ವವಿದ್ಯಾಲಯದ ಸಂಸ್ಕೃತ ಅಧ್ಯಾಪಕರಾದ ಶ್ರೀ ವಿ ಟಿ ತಿರುನಾರಾಯಣ ಅಯ್ಯಂಗಾರ್ಯರ ತಂದೆಯವರಾದ ಶ್ರೀ ತಿರುವಾಯ್ಮೊಳಿ ತಿರುವೆಂಗಡ ರಾಮಾನುಜಾಚಾರ್ಯಸ್ವಾಮಿಗಳು ತಮ್ಮ ೮೪ನೇ ವಯಸ್ಸಿನಲ್ಲಿ ಕಳೆದ ಮಂಗಳವಾರ ದೇವಾಂಬಾ ಅಗ್ರಹಾರದ ತಮ್ಮ ಮನೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರಿಗೆ ಪತ್ನಿಯೂ, ಇಬ್ಬರು ಪುತ್ರಿಯರೂ ಮತ್ತು ಒಬ್ಬ ಪುತ್ರರೂ ಇರುವರು

KINDLY ELECT
Sri J. NINGE GOWDA
Sr B Sc
AS PRESIDENT
&
Sri H L. JAVARAYEE SETTY
As Managing Committee
Member of the
FIRST GRADE COLLEGE
UNION, MYSORE.

Edited, printed and published by A R Nagarajan, at Sadhvi Press, Subbiah Road, Mysore

ಗಣಪತಿ ಮಂಗಳಾರತಿ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ಮೇಲ್ಕಂಡ ಉತ್ಸವ ಸಂಬಂಧವಾಗಿ ನಾಳೆ ಸಂಜೆ ೫ ಘಂಟೆಗೆ ಸಂಗೀತ ಶಾಸ್ತ್ರ ರತ್ನ ಆಸ್ಥಾನ ವಿದ್ವಾನ್ ಕೆ ವಾಸುದೇವಾಚಾರ್ಯರ ಅಧ್ಯಕ್ಷತೆಯಲ್ಲಿ ಮೈಸೂರು ಸಹೋದರರ ಗಾಯನವು ನಡೆಯುವುದು

ಮಾದರಿ ಶಾಲೆಯಲ್ಲಿ ನಾಳೆ ಸಂಜೆ ೫ ಘಂಟೆಗೆ ವಿ|| ಎ ವಿ ನಾರಾಯಣಪ್ಪನವರ ನಾಗಸ್ವರವು ಏರ್ಪಾಡಾಗಿದೆ

ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಆಸ್ಥಾನ ವಿದ್ವಾನ್ ಟಿ ಪುಟ್ಟಸ್ವಾಮಯ್ಯನವರ ಗಾಯನವು ಜರುಗುವುದು

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ ಈ ಸಂಜೆ ೭ ಗಂಟೆಗೆ ವಿ|| ಸಂಗೀತ ಶಾಸ್ತ್ರ ರತ್ನ ಕೆ ವಾಸುದೇವಾಚಾರ್ಯರ ಅಧ್ಯಕ್ಷತೆಯಲ್ಲಿ ಗಣಪತಿ ಮಹಾ ಮಂಗಳಾರತಿಯು ನಡೆಯುವುದು

ರಮಾವಿಲಾಸ ಅಗ್ರಹಾರದ ಯುವಕರ ಸಾಂಸ್ಕೃತಿಕ ಸಂಘದಾಶ್ರಯದ ಗಣಪತಿ ಮಂಗಳಾರತಿ ಪ್ರಯುಕ್ತ ದಿನ ರಾತ್ರಿ ೮ ೩೦ ಘಂಟೆಗೆ ಶ್ರೀಮತಿ ಗೌರಿ ಕುಪ್ಪುಸ್ವಾಮಿ ಇವರ ಹಾಡುಗಾರಿಕೆಯನ್ನು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಡಿಸಿದೆ ನಾಳೆ ದಿನ ರಾತ್ರಿ ೮ ಗಂಟೆಗೆ ಆ|| ವಿ|| ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು ಆ|| ವಿ|| ಸಂಗೀತ ರತ್ನ ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗದೊಡನೆ ನಡೆಯಲಿದೆ ಸರ್ವರಿಗೂ ಆಹ್ವಾನವುಂಟು ಸ್ತ್ರೀಯರಿಗೆ ಪ್ರತ್ಯೇಕ ಸ್ಥಳವನ್ನೇರ್ಪಡಿಸಿದೆ

ರಾಜಧಾನಿಯ ಚಾಮರಾಜಪುರದಲ್ಲಿರುವ ಅಡ್ವೊಕೇಟ್ ಶ್ರೀ ಕೆ ಪುಟ್ಟರಾಯರ ಮನೆಯಲ್ಲಿ ನಾಳೆ ಸಂಜೆ ಘಂಟೆಗೆ ಗಣಪತಿ ಮಂಗಳಾರತಿಯ ಸಂಬಂಧವಾಗಿ ಆಸ್ಥಾನ ವಿದ್ವಾನ್, ಸಂಗೀತ ರತ್ನ ಟಿ ಚೌಡಯ್ಯ ಮತ್ತು ಪಾರ್ಟಿಯವರ ಸಂಗೀತವನ್ನೇರ್ಪಡಿಸಲಾಗಿದೆ

ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಎಚ್ ಕೆ ಸೀತಾರಾಮಯ್ಯನವರು ನೆನ್ನೆ ಸಂಜೆ ತಮ್ಮ ಮನೆಯಲ್ಲಿ ಗಣಪತಿ ಮಂಗಳಾರತಿಯನ್ನು ಏರ್ಪಡಿಸಿ ಇಷ್ಟ ಮಿತ್ರರನ್ನು ಆಹ್ವಾನಿಸಿ ತಾಂಬೂಲ, ಪ್ರಸಾದದೊಡನೆ ಸತ್ಕರಿಸಿದರು

ಹಿಂದೂ ಕೋಡ್ ಮಸೂದೆ ವಿರುದ್ಧ ಆಮರಣಾಂತ ಉಪವಾಸ

ಮದರಾಸಿನ ಅಖಿಲ ಭಾರತ ಸನಾತನ ಧರ್ಮ ಪ್ರಚಾರಣಾ ಸಂಘದ ಸಂಸ್ಥಾಪಕರಾದ ಸ್ವಾಮಿ ಸತ್ಯಾನಂದ ಸರಸ್ವತಿಯವರು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದ್ ಮತ್ತು ಪ್ರಧಾನಿ ನೆಹರೂರವರಿಗೆ ತಂತಿಯನ್ನು ಕಳುಹಿಸಿ ಹಿಂದೂ ಕೋಡ್ ಮಸೂದೆಯು ಚರ್ಚೆಗೆ ಬಂದಲ್ಲಿ ತಾವು ಆಕ್ಷಣದಿಂದಲೇ ದೆಹಲಿ ಪಾರ್ಲಿಮೆಂಟ್ ಭವನದ ಮುಂದೆ ಆಮರಣಾಂತ ಉಪವಾಸವನ್ನು ಆರಂಭಿಸುವುದಾಗಿ ತಿಳಿಸಿರುವರು

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿವೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ

ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

1-9-51 ನೇ ಶನಿವಾರದಿಂದ * ಶ್ರೀ ಕೃಷ್ಣಭಗವಾನ್

ಶುಕ್ರವಾರ ಮತ್ತು ಭಾನುವಾರಗಳಲ್ಲಿ 6 45ಕ್ಕೆ, ಉಳಿದ ದಿನಗಳಲ್ಲಿ 9 45ಕ್ಕೆ,

ಮುಂದಿನ ಆಕರ್ಷಣೆ - ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ಫೋನ್ ನಂ 792 । ಸಂಪಾದಕರು । ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧೮ ೯ ೩೧ [ಸಂಚಿಕೆ ೩೯

ಬೆಂಗಳೂರಿನಲ್ಲಿ ಕಾಂಗ್ರೆಸ್ಸಿನ ಪರಾಜಯ

ಉಪಚುನಾವಣೆಯಲ್ಲಿ ಶ್ರೀಕಂಠೇಶ್ವರರಿಗೆ ಜಯ

ಸ್ವಂ ಸು ಫೋ[ನ್] [ಬೆಂಗಳೂರು ೧೦ ಬೆಂಗಳೂರು ನಗರ ಕ್ಷೇತ್ರದಿಂದ ಶಾಸನ ಸಭೆಗೆ ನೆನ್ನೆ ನಡೆದ ಉಪಚುನಾವಣೆಯ ಓಟುಗಳ ಎಣಿಕೆಯು ಇಂದು ಬೆ... ನಡೆಯಿತು ಒಟ್ಟು ೩೮೦೨ ಜನ ಓಟು ಮಾಡಿದರು

ಸಮಾಜವಾದಿ ಪಕ್ಷದ ಉಮೇದುವಾರ ಡಾ|| ಶ್ರೀಕಂಠೇಶ್ವರ್‌ರವರು ...೦ ಓಟುಗಳನ್ನು ಪಡೆದು ಜಯಶೀಲರಾದರು ಕಾಂಗ್ರೆಸ್ ಪಕ್ಷದ ಸದಸ್ಯ ರಾದ ಶ್ರೀ ವಿ ಎಸ್ ನಾರಾಯಣರಾವ್‌ರಿಗೆ ೧೫೭೭ ಓಟುಗಳು ಬಂದುವು ... ಓಟುಗಳು ಕುಲಗೆಟ್ಟುಹೋದುವು

ಪಂಡಿತ ನೆಹರೂರವರಲ್ಲಿ ಪೂರ್ಣ ವಿಶ್ವಾಸ

ಮೊನ್ನೆ ದಿನ ಆರಂಭವಾದ ಎ ಐ ... ಸಭೆಯು ನೆನ್ನೆ ಮುಕ್ತಾಯವಾ... ಡಿತ ನೆಹರೂರವರು ಕಾಂಗ್ರೆಸ್ಸಿನ ...ಕರೆಂಬ ಬಗ್ಗೆ ಪೂರ್ಣ ವಿಶ್ವಾಸ ...ಸಿತು ಅನಂತರ ಪಂಡಿತ ನೆಹ ...ರವರು ಭಾಷಣ ಮಾಡಿ ಕಾಂಗ್ರೆಸ್ ...ರ್ಯಕರ್ತರು ಯಾವ ಪರಿಣಾಮಗ ... ಹೆದರದೆ ಕಾಂಗ್ರೆಸ್ಸಿನ ಘನವಾದ ಮತ್ತು ಧ್ಯೇಯಗಳನ್ನು ಶಿಸ್ತಿನ ...ಗಳಂತೆ ಪರಿಪಾಲಿಸಬೇಕೆಂದು ...ರು

...ಬರುವ ಮಹಾಚುನಾವಣೆಗೆ ...ಸಿನ ಪರವಾಗಿ ಉಮೇದುವಾರ ...ರಿಸುವಾಗ ನಿಸ್ಪೃಹರಾದ ಮ... ...ರಾದ ಕಾಂಗ್ರೆಸ್ಸೇತರರೂ ... ಮ ಪರವಾಗಿ ಚುನಾವಣೆಗೆ ನಿಲ್ಲ... ಅವಕಾಶ ಕೊಡಬೇಕೆಂದೂ ಪಂಡಿತ ...ರವರು ತಿಳಿಸಿದರು

ಬರುವ ತಿಂಗಳು ೧೮ ಕ್ಕೆ ಕಾಂಗ್ರೆಸ್ ವಾರ್ಷಿಕಾಧಿವೇಶನ

...ಯ ದಿನ ಎ ಐ ಸಿ ಸಿ ಅಧಿವೇಶನವು ಪಂಡಿತ ನೆಹರೂರವರ ಅಧ್ಯಕ್ಷತೆಯಲ್ಲಿ ಸೇರಿದಾಗ ಶ್ರೀ ಮೋಹನ... ...ಗೌತಂರವರು ಬರುವ ತಿಂಗಳ ...ತಾ| ಕಾಂಗ್ರೆಸ್ಸಿನ ವಾರ್ಷಿಕಾಧಿ...ವನ್ನು ಸೇರಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು ಅದು ಅಂಗೀಕೃತವಾಯಿತು

ರೈಲಿನಲ್ಲಿ ಮಿಲಿಟೆರಿ ಅಧಿಕಾರಿಯ ಕೊಲೆ

...ನ್ನೆ ದಿನ ಬೆಳಗ್ಗೆ ದೆಹಲಿ ಎಕ್ಸ್‌ಪ್ರೆಸ್ ರೈಲು ಗಾಡಿಯು ಮೊರಾ...ವ್ ಸಿಗ್ನಲ್ಲಿನ ಬಳಿಗೆ ಬಂದಾಗ ಅವರ... ತರಗತಿಯ ಗಾಡಿಯೊಂದರಲ್ಲಿ ...ನ್ನತ ಮಿಲಿಟರಿ ಅಧಿಕಾರಿಯು ...ಕೊಲೆ ಮಾಡಲ್ಪಟ್ಟು ಅವರ ಶವವು ರಕ್ತ...ದಲ್ಲಿ ಮುಳುಗಿ ಹೋಗಿದ್ದು ದಾಗಿ ಪತ್ರಿಕಾ ಸಂಸ್ಥೆ ವರದಿಯಾಗಿದೆ

ಆಸ್ತಿಯ ಜಗಳದಲ್ಲಿ ಪ್ರಹತ್ಯೆ ಮತ್ತು ಆತ್ಮಹತ್ಯೆ

...ರಿಯ ಬಳಿ ಸರಿಪಟ್ಟಿ ಎಂಬ ...ಬ್ಬ ಯುವಕನು ತನ್ನ ಸ...ರೊಡನೆ ಆಸ್ತಿಬಗ್ಗೆ ಇದ್ದ ವ್ಯಾಜ್ಯ...ಗಿ ಕಳೆದ ಬುಧವಾರ ಮಾಯಿಲೆ ...ಮಲಗಿದ್ದ ತನ್ನ ೮೧ ವಯಸ್ಸಿನ ...ತ ತಂದೆಯನ್ನು ಇರಿದು ಕೊಂ...ನೂ ಸಹ ಅದೇ ಚೂರಿಯಿಂದ ...ಹತ್ಯೆ ಮಾಡಿಕೊಂಡನೆಂದು ವರದಿಗಿದೆ

ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಮರುಚುನಾವಣೆ

ಡಾ|| ಸೂರ್ಯನಾರಾಯಣರಾಯರ ಸದಸ್ಯತ್ವ ರದ್ದು

ಮೈಸೂರು ೧೦

ಮೈಸೂರು ಸಿಟಿ ಕೋ ಆಪರೇಟಿವ್ ಬ್ಯಾಂಕಿನ ವಾರ್ಷಿಕ ಸಭೆಯು ನೆನ್ನೆ ಸೇರಿ ಡೈರೆಕ್ಟರುಗಳ ಚುನಾವಣೆಯು ನಡೆಯಿತು ಚುನಾವಣೆಯು ಮುಗಿದ ಕೂಡಲೇ ಪೋಲಿಂಗ್ ಅಧಿಕಾರಿಗಳು ಓಟಿನ ಪೆಟ್ಟಿಗೆಯನ್ನು ... ... ಒಡೆಯಲಿಲ್ಲವೆಂದು ಆಕ್ಷೇಪಣೆ ... ದು, ಚರ್ಚೆ ನಡೆದ ನಂತರ ಈ ... ನಿಯಮಾವಳಿಗೆ ವಿರುದ್ಧವೆಂದೂ ... ದುದರಿಂದ ಚುನಾವಣೆಯು ರದ್ದಾಗಿ ಮರುಚುನಾವಣೆಯು ನಡೆಯಬೇಕೆಂದೂ ತೀರ್ಮಾನವಾಯಿತು

ಆಡಳಿತ ಸಮಿತಿಯು ಶ್ರೀ ... ನರಸಿಂಹಯ್ಯನವರನ್ನು ಸದಸ್ಯತ್ವದಿಂದ ತೆಗೆದುಹಾಕಿರುವುದು ನ್ಯಾಯವಲ್ಲವೆಂದು ತೀರ್ಮಾನಿಸಿ ಅವರನ್ನು ಮತ್ತೆ ಸದಸ್ಯರನ್ನಾಗಿ ತೆಗೆದುಕೊಳ್ಳಲಾಯಿತು

ಬ್ಯಾಂಕಿನ ಮಾಜಿ ಕಾರ್ಯದರ್ಶಿಯಾದ ಡಾ|| ಬಿ ಎಸ್ ಸೂರ್ಯನಾರಾಯಣ ರಾಯರು ಸಂಸ್ಥೆಯ ಘನತೆಗೆ ಕುಂದು ಬರುವ ರೀತಿಯಲ್ಲಿ ವರ್ತಿಸಿದರೆಂದೂ ಆದುದರಿಂದ ಅವರನ್ನು ಸದಸ್ಯತ್ವದಿಂದ ತೆಗೆದುಹಾಕಬೇಕೆಂದೂ ಸೂಚನೆಗಳು ಬಂದು ಪರವಾಗಿ ೪೦ ಓಟುಗಳೂ ವಿರೋಧವಾಗಿ ೩೧ ಓಟುಗಳೂ, ಬಂದು ಅವರನ್ನು ಸದಸ್ಯತ್ವದಿಂದ ತೆಗೆದುಹಾಕುವಂತೆ ತೀರ್ಮಾನವಾಯಿತು

ಗೋಮಟಗಿರಿಯಲ್ಲಿ ಮಹಾ ಮಸ್ತಕಾಭಿಷೇಕ

ಮೈಸೂರು ತಾಲ್ಲೂಕು ಇಲವಾಲದ ಬಳಿ ಇರುವ ಗೊಮ್ಮಟಗಿರಿಯಲ್ಲಿ ಶ್ರೀ ಗೋಮಟೇಶ್ವರ ಸ್ವಾಮಿ ಮಹಾ ಮಸ್ತಕಾಭಿಷೇಕವು ನೆನ್ನೆ ವಿಜೃಂಭಣೆಯಿಂದ ಜರುಗಿತು ನಗರದ ಪುರಪ್ರಮುಖರು, ಅಧಿಕಾರಿಗಳೂ, ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಎಚ್ ಎಂ ಚನ್ನಬಸಪ್ಪ ಮತ್ತು ಸಚಿವ ಶ್ರೀ ಎಚ್ ಸಿದ್ದಯ್ಯನವರೂ, ಸಹಸ್ರಾರು ಮಂದಿ ಭಕ್ತಾದಿಗಳೂ ಸಮಾರಂಭದಲ್ಲಿ ಭಾಗ ವಹಿಸಿದ್ದರು ಶ್ರೀಗಳಾದ ಕೆ. ವಿ ಪುಟ್ಟಪ್ಪ ಮತ್ತು ರಾಜರತ್ನಂರವರು ಜೈನ ಧರ್ಮದ ವಿಷಯವಾಗಿ ಉಪನ್ಯಾಸ ಮಾಡಿದರು

ವಯಸ್ಕರ ಶಿಕ್ಷಣ ಸಮ್ಮೇಳನದ ಮುಕ್ತಾಯ

ಮೈಸೂರು ೧೦

ರಾಜಧಾನಿಯ ವಸ್ತು ಪ್ರದರ್ಶನಾಲಯದಲ್ಲಿ ಕಳೆದ ಶುಕ್ರವಾರ ಆರಂಭವಾದ ಸಂಸ್ಥಾನದ ವಯಸ್ಕರ ಶಿಕ್ಷಣ ಸಮ್ಮೇಳನದ ಮುಕ್ತಾಯ ಸಮಾರಂಭವು ನೆನ್ನೆ ಪಧಾನ ಕಾರ್ಯದರ್ಶಿ ಶ್ರೀ ಚನ್ನಿಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.

ಸ್ವಾಗತವಾದನಂತರ ವಿವಿಧ ವಿಭಾಗಗಳ ಅಧ್ಯಕ್ಷರ ವರದಿಗಳೂ ಮತ್ತು ರೆಸಲ್ಯೂಷನುಗಳೂ ಅಂಗೀಕರಿಸಲ್ಪಟ್ಟವು ಸಂಜೆ ಶ್ರೀ ಬಿ ಎಸ್ ರಾಮಾಚಾರ್ಯರಿಂದ ಕಾವ್ಯ ವಾಚನ, ... ವಿನಿಯೋಗ, ಶ್ರೀ ಕೆ ಆರ್ ಲಿಂಗಪ್ಪನವರಿಂದ ಜನ ಪದ ಸಾಹಿತ್ಯ ವಾಚನ ಶ್ರೀ ಕಾಳಿಂಗರಾವ್ ಮತ್ತು ಗೆಳೆಯರಿಂದ ಪ್ರೌಢ ಹಾಡುಗಳು, ಕುಮಾರಿಯರಾದ ಪ್ರಭಾ ಮತ್ತು ಪರಿಯವರ ನೃತ್ಯ, ಕಾಲೇಜು ಕಲಾವಿದರಿಂದ ... ಯುದ್ಧ ನಾಟಕದ ಅಭಿನಯಗಳಾದ ನಂತರ ಅಧ್ಯಕ್ಷರ ಭಾಷಣ ವಂದನಾರ್ಪಣ ಮತ್ತು ರಾಷ್ಟ್ರ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಈ ಕೆಳಗೆ ಕಂಡ ನಿರ್ಣಯಗಳು ಅಂಗೀಕರಿಸಲ್ಪಟ್ಟುವು –

ವಯಸ್ಕರಿಗೆ ಕಡ್ಡಾಯವಾಗಿಯೂ ಮತ್ತು ಒತ್ತಾಯಪೂರ್ವಕವಾಗಿಯೂ ಉಚಿತ ಶಿಕ್ಷಣವನ್ನು ಸಂಸ್ಥಾನಾದ್ಯಂತ ಜಾರಿಗೆ ತರಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವುದು ಗ್ರಾಮಾಭಿವೃದ್ಧಿ ಕಾರ್ಯವನ್ನು ವಯಸ್ಕರ ಶಿಕ್ಷಣ ಸಮಿತಿಗೆ ವಹಿಸುವಂತೆಯೂ, ವಿದ್ಯಾರ್ಥಿಗಳು ಡಿಪ್ಲೊಮಾ ಪಡೆಯುವುದಕ್ಕೆ ಅಥವಾ ಪದವೀಧರರಾಗುವುದಕ್ಕೆ ಮುಂಚೆ ಒಂದು ವರ್ಷಕಾಲ ಸಮಾಜ ಸೇವಾ ಕಾರ್ಯದಲ್ಲಿ ತೊಡಗುವಂತೆ ವಿಧಾಯಕ ಮಾಡಬೇಕೆಂದು ವಿಶ್ವವಿದ್ಯಾಲಯದವರನ್ನು ಕೋರುವುದು

○ ಶಿವಮೊಗ್ಗದ ಟೋಲ್‌ಗೇಟ್ ಬಳಿ ತುಂಗ ಸುರಂಗದಲ್ಲಿ ಕೆಲಸ ಮಾಡುತ್ತಿದ್ದ ಮೂವರು ಕೂಲಿಗಳು ನೆನ್ನೆ ಎಂಟು ಅಡಿ ಎತ್ತರದಿಂದ ಕೆಳಕ್ಕೆ ಬಿದ್ದು ಮೃತಪಟ್ಟು ಮತ್ತೊಬ್ಬನಿಗೆ ತೀವ್ರ ಗಾಯವಾಗಿರುವುದಾಗಿ ಗೊತ್ತಾಗಿದೆ

ಕರ್ನಾಟಕಕ್ಕೂ ಮೈಸೂರಿಗೂ ಮಧುರ ಬಾಂಧವ್ಯ

ಧಾರ್ವಾಡದ ಪ್ರಜೆಗಳಿಗೆ ಪ್ರಭುಗಳ ಭರವಸೆ

ಮೈಸೂರು ೧೦

ಉತ್ತರ ಕರ್ನಾಟಕದಲ್ಲಿ ಪ್ರವಾಸ ಕೈಗೊಳ್ಳುವ ಸಲುವಾಗಿ ಮೊನ್ನೆ ದಿನ ರಾಜಧಾನಿಯಿಂದ ವಿಶೇಷ ರೈಲಿನಲ್ಲಿ ಪ್ರಯಾಣ ಹೊರಟ ಶ್ರೀಮನ್ಮಹಾರಾಜರವರು ನೆನ್ನೆ ಬೆಳಗ್ಗೆ ಸುಮಾರು ೧೦ ಘಂಟೆ ವೇಳೆಗೆ ಧಾರ್ವಾಡವನ್ನು ತಲುಪಿದರು. ಮಾರ್ಗ ಮಧ್ಯದಲ್ಲಿ ಗುಡಗೇರಿ ಎಂಬಲ್ಲೂ ಇತರ ಕಡೆಗಳಲ್ಲೂ ಸರ್ಕಾರಿ ನೌಕರರೂ, ಸಹಸ್ರಾರು ಮಂದಿ ಸಾರ್ವಜನಿಕರೂ ನೆರೆದು ಪ್ರಭುಗಳಿಗೆ ಹಾರವನ್ನರ್ಪಿಸಿ ಆದರ ಪೂರ್ವಕ ಸ್ವಾಗತ ನೀಡಿದರು

ಗುಡಗೇರಿ ಎಂಬಲ್ಲಿಂದ ಪ್ರಭುಗಳು ಮೋಟಾರಿನಲ್ಲಿ ಪ್ರಸಿದ್ಧ ಕವಿ ಪೊನ್ನನ ಜನ್ಮ ಸ್ಥಳವಾದ ಲಕ್ಷ್ಮೇಶ್ವರಕ್ಕೆ ತೆರಳಿ ಸೋಮೇಶ್ವರ ದೇವಾಲಯ ಮತ್ತು ಸಹಸ್ರ ಬಿಂಬಜಿನ ಚೈತ್ಯಾಲಯಗಳಿಗೆ ಭೇಟಿಯಿತ್ತರು ಅಲ್ಲಿ ಪ್ರಭುಗಳು ಅಖಿಲ ಕರ್ನಾಟಕ ಆದಿ ಪಂಪಾ ಪ್ರಸಾದಿ ಗ್ರಂಥದ ಉದ್ಘಾಟನೋತ್ಸವವನ್ನು ನೆರವೇರಿಸಿದರು

ಧಾರ್ವಾಡದ ಜಿಲ್ಲಾ ಬೋರ್ಡು ಮತ್ತು ಪೌರ ಸಭೆಗಳವರು ಪ್ರಭುಗಳಿಗೆ ಒಂದು ಜಂಟಿ ಬಿನ್ನವತ್ತಳೆಯನ್ನರ್ಪಿಸಿ ರು ... ಉತ್ತರವೀಯುತ್ತಾ- ದೇಶದಲ್ಲಿ ಏಕಮತ್ಯವನ್ನು ಸಾಧಿಸುವ ಗುರಿಯಿಂದ ಭಾಷಾವಾರು ಪ್ರಾಂತ್ಯವನ್ನು ರಚಿಸುವ ಬಗ್ಗೆ ಭಾರತ ಸರ್ಕಾರದವರು ಸೂಕ್ತ ನಿರ್ಧಾರಕ್ಕೆ ಬರಲಿರುವರೆಂದೂ, ಉತ್ತರ ಕರ್ನಾಟಕದೊಡನೆ ಮೈಸೂರು ಮಧುರ ಬಾಂಧವ್ಯವನ್ನಿಟ್ಟುಕೊಂಡಿರುದೆಂದೂ ತಿಳಿಸಿದರು ಉತ್ತರ ಕರ್ನಾಟಕಕ್ಕೆ ಮೈಸೂರಿನಿಂದ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವ ಅಂಶವನ್ನು ಪರಿಶೀಲಿಸಲಾಗುವುದೆಂದೂ ಅವರು ಭರವಸೆಯಿತ್ತರು

ಧಾರ್ವಾಡದ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದ ಸಮಾರಂಭದಲ್ಲಿ ನೆನ್ನೆ ಪ್ರಭುಗಳು ಭಾಷಣ ಮಾಡುತ್ತಾ ಸಮಾಜ ಜೀವನದ ಎಲ್ಲ ಪಥದಲ್ಲೂ ಜ್ಞಾನದಾಯಕವಾಗುವ ಮತ್ತು ಆಧುನಿಕ ವಿಜ್ಞಾನ ಯುಗದ ಜೀವನದ ಹೊರೆಯನ್ನು ಹೊರಬಲ್ಲ ರೀತಿಯಲ್ಲಿ ತರುಣರಿಗೆ ಶಿಕ್ಷಣ ಕೊಡುವಂತಾಗಬೇಕೆಂದು ನುಡಿದರು

ವಿದ್ಯಾಗಣಪತಿ ವಿಸರ್ಜನೋತ್ಸವ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದವರು ಶ್ರೀ ವಿದ್ಯಾಗಣಪತಿಯ ಉದ್ಯಾಪನೋತ್ಸವವನ್ನು ಯೋಗಾನರಸಿಂಹ ಬಸ್ ಮಾಲೀಕರಾದ ಶ್ರೀ ಕೆ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು ಮತ್ತು ಶ್ರೀ ಕಾ ನಾ ಕೃಷ್ಣಮೂರ್ತಿಯವರು ಮತ್ತು ಶ್ರೀ ಎನ್ ಆರ್ ಶೆಟ್ಟಿಯವರು ಗಣೇಶನ ಆಸ್ತಿತ್ವ, ಪೂಜೆಯ ಮಹತ್ವದ ವಿಷಯಗಳ ಮೇಲೆ ಮಾತನಾಡಿದರು ಅಧ್ಯಕ್ಷರ ಭಾಷಣದ ನಂತರ ಪ್ರಸಾದ ವಿನಿಯೋಗ ಮತ್ತು ವಂದನಾರ್ಪಣೆಯೊಂದಿಗೆ ಉತ್ಸವವು ಕೊನೆಗಂಡಿತು

ಗಣಪತಿ ಮಂಗಳಾರತಿ

ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಗಣಪತಿ ಮಂಗಳಾರತಿಯ ಸಂಬಂಧವಾಗಿ ನಾಳೆ ಸಂಜೆ ೬ ಘಂಟೆಗೆ ಬ್ರ| ಶ್ರೀ ವಿ| ಸಿ ರಾಮಚಂದ್ರಾಚಾರ್ಯರವರು ಉತ್ಸರ್ಗ ಪರೀಕ್ಷಣ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಮಾದರಿ ಶಾಲೆಯಲ್ಲಿ ಮೇಲ್ಕಂಡ ಉತ್ಸವದ ಸಂಬಂಧವಾಗಿ ನಾಳೆ ಸಂಜೆ ೪ ಆ ಗಂಟೆಗೆ ವಿ|| ಅರಕೆರೆ ನಾರಾಯಣರಾಯರ ಗಾಯನವು ಸೂಕ್ತ ಪಕ್ಕವಾದ್ಯಗಳೊಡನೆ ಜರುಗುವುದು

ಶ್ರೀ ಪಠಲಕ್ಷ್ಮೀ ಸಂಗೀತ ವಿದ್ಯಾಮಂದಿರದವರು ಲಕ್ಷ್ಮೀಪುರದಲ್ಲಿರುವ ತಮ್ಮ ಶಾಖೆಯಲ್ಲಿ ನಾಳೆ ಸಂಜೆ ೫ ಗಂಟೆಗೆ ಗಾನವಿಶಾರದ ತಿಟ್ಟೆ ಕೃಷ್ಣಯ್ಯಂಗಾರ್ಯರ ಸಂಗೀತವನ್ನು ಏರ್ಪಡಿಸಿರುವರು ಪೌರಸಭಾಧ್ಯಕ್ಷರಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು

ಕಾಳೇಜು ರಸ್ತೆಯಲ್ಲಿರುವ ಹರಿಕಥಾ ವಿ|| ಶ್ರೀ ಎಚ್ ಟಿ ನಾಗಣ್ಣನವರು ತಮ್ಮ ಮನೆಯಲ್ಲಿ ಈ ದಿನ ಸಂಜೆ ೬ ಗಂಟೆಗೆ ವಿ|| ವಿ ರಾಮರತ್ನಂರವರ ಸಂಗೀತವನ್ನು ಏರ್ಪಡಿಸಿರುವರು

ದೇವನೂರಿನ ಜಿಲ್ಲಾ ಬೋರ್ಡ್ ಹೈಸ್ಕೂಲ್ ವಿದ್ಯಾರ್ಥಿಸಂಘದ ಆಶ್ರಯದಲ್ಲಿ ಶ್ರೀ ವಿದ್ಯಾಗಣಪತಿ ಮಹಾ ಮಂಗಳಾರತಿಯು ಕಳೆದ ಶನಿವಾರ ಸಂಜೆ ನೆರವೇರಿತು ಶ್ರೀಗಳಾದ ಎಂ ಎಲ್ ನಂಜರಾಜೇ ಅರಸ್ ಡಿ ದೇವರಾಜೇ ಅರಸ್ ಡಿ ಎಂ ಸಿದ್ದಯ್ಯ, ಜಿ ಪಿ ರಾಜರತ್ನಂ ಮುಂತಾದ ಮಹನೀಯರು ದಯಮಾಡಿಸಿದ್ದರು ವೇ| ಬ್ರಂ|| ಶ್ರೀ ತೋಂಟದಾರ್ಯ ಸ್ವಾಮಿಗಳವರು ಅಧ್ಯಕ್ಷತೆಯನ್ನು ವಹಿಸಿದ್ದರು ದೇವತಾಪ್ರಾರ್ಥನೆಯಿಂದ ಸಭೆಯು ಆರಂಭವಾಯಿತು ಹೈಸ್ಕೂಲು ಮುಖ್ಯೋಪಾಧ್ಯಾಯರಾದ ಶ್ರೀ ಎ ಪಿ ಕೃಷ್ಣರಾವ್‌ರವರು ಶ್ರೀ ಜಿ ಪಿ ರಾಜರತ್ನಂರವರ ಗುಣಗಾನ ಮಾಡಿ ಸಂಘದ ಪರವಾಗಿ ಅವರನ್ನು ಸ್ವಾಗತಿಸಿದರು ಶ್ರೀ ಡಿ ಎಂ ಸಿದ್ದಯ್ಯನವರು ಶ್ರೀ ಜಿ ಪಿ ರಾಜರತ್ನಂರವರ ಪರಿಚಯ ಮಾಡಿಕೊಟ್ಟರು

ಶ್ರೀ ರಾಜರತ್ನಂರವರು ಇದು ಮಿತ್ರ ಮಾರ್ಗ ಎಂಬ ವಿಷಯವಾಗಿ ಭಾಷಣ ಮಾಡಿದರು ನಂತರ ಅವರು ರತ್ನನ ಪದಗಳು, ಶಿವನ ಸಂಸಾರ ಎಂಬ ತಮ್ಮ ಕವನ ಸಂಗ್ರಹಗಳಿಂದ ಕಾವ್ಯವಾಚನ ಮಾಡಿದರು ಅಧ್ಯಕ್ಷರಾದ ಶ್ರೀ ಶ್ರೀಗಳವರು ರಾಜರತ್ನಂರವರ ಪಾಂಡಿತ್ಯ ಮತ್ತು ಕವಿತಾ ಸಾಮರ್ಥ್ಯವನ್ನು ಶ್ಲಾಘಿಸಿದರು ಶ್ರೀ ವಿದ್ಯಾಗಣಪತಿಯ ಮಹಾ ಮಂಗಳಾರತಿ, ತಾಂಬೂಲ ವಿನಿಯೋಗ ಮತ್ತು ರಾಷ್ಟ್ರ ಗೀತೆಯೊಡನೆ ಸಭೆಯು ಮುಕ್ತಾಯಗೊಂಡಿತು

ಹರಿಕಥೆ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದಲ್ಲಿ ಈ ದಿನ ರಾತ್ರಿ ೮-೩೦ ಘಂಟೆಗೆ ಶ್ರೀ ಅನಂತ ಪದ್ಮನಾಭರವರಿಂದ " ಪಾದುಕಾ ಪಟ್ಟಾಭಿಷೇಕ ಎಂಬ ಹರಿಕಥೆಯು ನಡೆಯುವುದು

ನೆಹರೂ ಇದ್ದ ಜೈಲು ಕೊಠಡಿ ಈಗ ಶಿಕ್ಷಣ ಶಾಲೆ

ಭಾರತದಲ್ಲಿ ಬ್ರಿಟಿಷರ ಆಡಳಿತವಿದ್ದಾಗ ಸ್ವಾತಂತ್ರ್ಯ ಚಳುವಳಿಯ ಸಂಬಂಧವಾಗಿ ಪಂಡಿತ ನೆಹರೂ ಮತ್ತು ಪಂಡಿತ ಗೋವಿಂದ ವಲ್ಲಭ ಪಂತರನ್ನು ಬಂಧನದಲ್ಲಿಡಲಾಗಿದ್ದ ಡೆಹರಾಡೂನ್ ಜಿಲ್ಲಾ ಜೈಲಿನ ಒಂದು ಕೋಣೆಯಲ್ಲಿ ಈಗ ಖೈದಿಗಳಿಗೆ ರೇಷ್ಮೆ ಕೈಗಾರಿಕೆ ಶಿಕ್ಷಣ ಶಾಲೆಯನ್ನು ಏರ್ಪಡಿಸಲಾಗಿದೆ

ನೀಗ್ರೋ ದಾದಿಗೆ ಎರಡು ಲಕ್ಷ ಡಾಲರ್ ಆಸ್ತಿ

ಉತ್ತರ ಕ್ಯಾಲಿಫೋರ್ನಿಯದ ಧನಿಕ ವಿಧವೆಯೊಬ್ಬಳು ತನ್ನ ನೀಗ್ರೋ ಸೇವಕಿಗೆ ಎರಡು ಲಕ್ಷ ಡಾಲರ್ ಬೆಲೆಯ ಸ್ವತ್ತುಗಳನ್ನು ಬಿಟ್ಟು, ತನ್ನ ಆಸ್ತಿಗೆ ಅವಳನ್ನು ಉತ್ತರಾಧಿಕಾರಿಣಿಯನ್ನಾಗಿ ನೇಮಿಸಿ ಮೃತಪಟ್ಟಿರುವಳೆಂದು ವರದಿಯಾಗಿದೆ

ಯಜುರುಪಾಕರ್ಮ ಮತ್ತು ಸತ್ಯನಾರಾಯಣ ವ್ರತ

ಮೈಸೂರು ರಾಮಾನುಜಾ ರಸ್ತೆಯ ೭ನೇ ನಂಬರಿನ ಮನೆಯಲ್ಲಿರುವ ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ಇದೇ ೧೫ನೇ ತಾ|| ಶನಿವಾರ ಬೆಳಿಗ್ಗೆ ೮ ರಿಂದ ೧೧ ಘಂಟೆಯವರೆಗೆ ಯ ಜು ರು ಪಾಕರ್ಮವೂ ಅನಂತರ ಸತ್ಯನಾರಾಯಣ ವ್ರತವೂ ಜರುಗುವುವು ಮತ್ತು ಬರುವ ತಿಂಗಳು ಶರನ್ನವರಾತ್ರಿ ಸೇವೆಯನ್ನೂ ಏರ್ಪಡಿಸಲಾಗಿದೆ ಭಕ್ತಾದಿಗಳು ಈ ಸಮಾರಂಭಗಳಲ್ಲಿ ಭಾಗವಹಿಸಿ ಸಹಕರಿಸಬೇಕೆಂದು ಕಡೂರು ವೆಂಕಟರಮಣ ಶಾಸ್ತ್ರಿಗಳವರು ಕೋರುತ್ತಾರೆ

ಮ್ಯಾನ್ ಹೋಲುಗಳಲ್ಲಿ ನೋಟಿನ ಕಂತೆ

ಬೊಂಬಾಯಿನ ಕೊಲಾಬ ಬಡಾವಣೆಯ ಅಂಡರ್‌ಗ್ರೌಂಡ್ ಚರಂಡಿಗೆ ಇಳಿಯುವ ಕುಳಿಯಲ್ಲಿ ನೆನ್ನೆ ಕೆಲವು ಹರಿಯಲ್ಪಟ್ಟಿದ್ದ ನೋಟುಗಳು ಸಿಕ್ಕಿದುದರಿಂದ ಪೋಲೀಸರು ಮತ್ತು ಚಾಡಮಾಲಿಗಳು ಎಲ್ಲ ಕುಳಿಗಳನ್ನೂ ಶೋಧಿಸಿ ಇದುವರೆಗೆ ಸುಮಾರು ೧೦ ಸಾವಿರ ರೂ ಗಳ ಕರೆನ್ಸಿ ನೋಟುಗಳನ್ನು ಪತ್ತೆ ಹಚ್ಚಿರುವರೆಂದು ಗೊತ್ತಾಗಿದೆ ಅವುಗಳಲ್ಲಿ ೩೦ ಸಾವಿರ ರೂ ಗಳಷ್ಟು ನೋಟುಗಳು ಹರಿದುಹೋಗಿದ್ದುವು ಅನೇಕವು ಅರ್ಧಂಬರ್ಧ ಸುಡಲ್ಪಟ್ಟಿದ್ದುವು

ದಿನಂಪ್ರತಿ ೬೦ ಸಹಸ್ರ ಜನರ ಜನನ

ಪ್ರಪಂಚದ ಜನ ಸಂಖ್ಯೆಯು ದಿನಂಪ್ರತಿ ೬೦ ಸಹಸ್ರದಂತೆ ಹೆಚ್ಚುತ್ತಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆಯ ವರದಿಯೊಂದು ತಿಳಿಸುತ್ತದೆ

ಹಿಂದೀ ತರಗತಿಗಳು

೧೯೫೨ನೇ ಇಸವಿ ಫೆಬ್ರವರಿ ತಿಂಗಳಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ವಿವಿಧ ಪರೀಕ್ಷೆಗಳಿಗೆ ಕೂಡಲಿಚ್ಛಿಸುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೈಸೂರು ವಾಣಿವಿಲಾಸ ಮೊಹಲ್ಲಾದಲ್ಲಿರುವ ವಿದ್ಯಾಪೀಠದ ಆಶ್ರಯದಲ್ಲಿ ಹಿಂದೀ ತರಗತಿಗಳು ನಡೆಸಲ್ಪಡುವುವು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ತರಗತಿಗಳು ನಡೆಸಲ್ಪಡುವುವು ಹೆಚ್ಚಿನ ವಿವರಗಳನ್ನು ವ್ಯವಸ್ಥಾಪಕರಿಂದ ತಿಳಿಯಬಹುದು

೧೦ ಲಕ್ಷ ರೂ. ಬೆಲೆಯ ಚಿನ್ನದ ಪತ್ತೆ

ಕಳೆದ ಬುಧವಾರ ಹಾಂಗ್‌ಕಾಂಗಿಂದ ಬಂದ ಬ್ರಿಟಿಷ್ ನೌಕೆಯೊಂದನ್ನು ಕಸ್ಟಮ್ಸ್ ದ ಅಧಿಕಾರಿಗಳು ಶೋಧಿಸಿ, ಅಕ್ರಮವಾಗಿ ತರಲಾಗಿದ್ದ ೧೦ ಲಕ್ಷ ಬೆಲೆ ಬಾಳುವ ಚಿನ್ನವನ್ನು ವಶಪಡಿಸಿಕೊಳ್ಳಲಾಯಿತು

ಮನೆ ಹರಾಜು

ಮೈಸೂರು ಸಬ್‌ಜಡ್ಜರವರ ಕೋರ್ಟು

O S ನಂ ೧೧೩/೪೭ ೪೮

ವಾದಿ ಎನ್ ವೆಂಕಟೇಶಯ್ಯ

V/s

ಪ್ರತಿವಾದಿಗಳು ಚೌಡಮ್ಮ ವಗೈರೆ ಮೇಲ್ಕಂಡ ಕೋರ್ಟಿನ ಡಿಕ್ರಿ ಅನುಸಾರ ಕೋರ್ಟ್ ಡಿಗ್ರೀ ಪ್ರಕಾರ ಹರಾಜು ... ಬೆಳಿಗ್ಗೆ ೧೧ ಘಂಟೆ ಬಾಗಾಯಿತು ಬಹಿರಂಗವಾಗಿ ಒಂದನೇ ಮುನ್ಸೀಫ್‌ರವರ ಕೋರ್ಟ್ ನಾಜರ್‌ರವರಿಂದ ಹರಾಜು ಮಾಡಲಾಗುತ್ತೆ ... ಕೊಳ್ಳಲಿಚ್ಛಿಸುವವರು ಆ ದಿವಸ ಬಿಡ್ ಮಾಡಬಹುದು ಸ್ವತ್ತು ಮೈಸೂರು ಸಿಟಿಯಲ್ಲಿ ಮಾರ್ಕೆಟ್ ಬಸ್ ಸ್ಟಾಂಡು, ಆಸ್ಪತ್ರೆ, ರೈಲ್ವೆ ಸ್ಟೇಷನ್ ಮತ್ತು ವ್ಯಾಸ್ಕೂಲುಗಳಿಗೆ ಸಮೀಪವಾಗಿರುತ್ತದೆ ಮನೆ ಉತ್ತಮ ಸ್ಥಿತಿಯಲ್ಲಿದ್ದು ಮಧ್ಯಸ್ಥವಾಗಿದೆ

ಷೆಡ್ಯೂಲು ಮೈಸೂರು ಸಿಟಿ ದೇವರಾಜ ಮೊಹಲ್ಲಾ ... ಛತ್ರದ ಪಕ್ಕದ ರೋಡಿನಲ್ಲಿ ಸಮೀಪದಲ್ಲಿರುವ ಡೋರ್ ನಂಬರ್ ... ಮನೆ

WANTED

Applications are invited for Agents' posts Purnima Pictures Ltd liberal commission basis Apply with Rs 2/ as application fee before 25 9- to

Smt L. G. TAKAT,

3001 Out house H Main Vontikoppal Mysore

ರಾಜಕಮಲ್, ಮೈಸೂರು

7-9-51 ರಿಂದ 3ನೇ ವಾರ

ಜಗನ್ಮೋಹಿನಿ

ಫಸ್ಟ್ ಗ್ರೇಡ್ ಕಾಲೇಜ್

ಯೂನಿಯನ್ ಚುನಾವಣೆ

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಶ್ರೀ ಜಿ. ಸಿಂಗೇಗೌಡರಿಗೆ

ಮತ್ತು

ಆಡಳಿತ ಸಮಿತಿ ಸದಸ್ಯತ್ವಕ್ಕೆ ಸ್ಪರ್ಧಿಸಿರುವ

ಶ್ರೀ ಎಚ್. ಎಲ್. ಚನ್ನರಾಜ

ಅವರಿಗೂ

ಓಟು ಕೊಡಬೇಕಾಗಿ ಪ್ರಾರ್ಥನೆ

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ಲಿ) ಅವರು

ರ ತ್ನಾ ವ ಳಿ ಥಿ ಯೇ ಟ ರಿ ನ ಲ್ಲಿ

1-9-51ನೇ ಶನಿವಾರದಿಂದ

ಶ್ರೀ ಕೃಷ್ಣ ಭಗವಾನ್

ಶುಕ್ರವಾರ ಮತ್ತು ಭಾನುವಾರಗಳಲ್ಲಿ 6 45ಕ್ಕೆ ಉಳಿದ ದಿನ ೯ಲ್ಲಿ 9 45ಕ್ಕೆ

ಮುಂದಿನ ಆಕರ್ಷಣೆ - ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ವಿಶ್ವದ ಅತ್ಯಂತ ಭಾರಿ ವಾಣಿಜ್ಯ ಭವನ

ಚಿಕಾಗೋ ನಗರದಲ್ಲಿರುವ ಈ ವಾಣಿಜ್ಯ ಭವನದಲ್ಲಿ 5 600 ವಿವಿಧ ವ್ಯಾಪಾರ ಸಂಸ್ಥೆಗಳಿವೆ ಈ ಭವನವು 93 ಎಕರೆ ಜಾಗವನ್ನು ಆಕ್ರಮಿಸಿಕೊಂಡಿದೆ ಇದರ ಮುಖಭಾಗದ ಉದ್ದ ೧/೪ ಮೈಲಿ, ಇದರ ವಿವಿಧ ಭಾಗಗಳಲ್ಲಿ ಕೆಲಸ ಮಾಡುವ ನೌಕರರ ಸಂಖ್ಯೆ 25 ಸಾವಿರ ಈ ಭವನದೊಳಗೆ ತನ್ನದೇ ಆದ ಬ್ಯಾಂಕು, ತಂತಿ ಕಛೇರಿ, ಅಂಚೆ ಮತ್ತು ರೈಲ್ವೆ ಟಿಕೆಟ್ ಕಛೇರಿಗಳು ಫಲಾಹಾರ ಮಂದಿರ ಮತ್ತು ಚಿಲ್ಲರೆ ಅಂಗಡಿಗಳು ಇವೆ



Edited, printed published by A R Nagarajan, at Sadhvi Press Subbiah Road, Mysore

ಕೋ ನಂ 792 • ವಂದೇ ಮಾತರಂ • ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೧೧-೯ ೫೦ [ಸಂಚಿಕೆ ೯೦

ಅರಗು ಮತ್ತು ಬಣ್ಣದ ಕಾರ್ಖಾನೆ ಮೇಲೆ ದಾವಾ?

ಶಸ್ತ್ರ ಸಜ್ಜಿತ ಢಕಾಯಿತರಿಂದ ೩ ಲಕ್ಷ ರೂ. ದರೋಡೆ

ಜಿನ್‌ಶೆಡ್‌ಪುರದ ಟಿಸ್ಕೋಟ್ ಕಂಪೆನಿಯ ಕೇಂದ್ರ ಕಛೇರಿಯಿಂದ ನಗರದ ..ಸಿಯ ನೌಕರರ ಸಂಬಳದ ಪಾವತಿಗೆ ಸಶಸ್ತ್ರ ಕಾವಲುಗಾರರೊಡನೆ ..ವ ವಾಹನದಲ್ಲಿ ೩,೧೩,೦೦೦ ರೂ ಗಳನ್ನು ನಿನ್ನೆ ಸಾಗಿಸಿಕೊಂಡು ಹೋಗುತ್ತಾಗ ನಗರ ಶಾಖೆಯ ಮುಂಭಾಗ ..ಜನ ಮುಖ ಮುಚ್ಚಿಕೊಂಡಿದ್ದ ಶಸ್ತ್ರಸಜ್ಜಿತ ದರೋಡೆಕೋರರು ವಾಹನ ಮೇಲೇರಿ, ಗುಂಡು ಹಾರಿಸಿ ಕಾವಲುಗಾರರಿಬ್ಬರನ್ನು ಗಾಯಗೊಳಿಸಿ ಮೋಟರನ್ನು ತಾವೇ ನಡೆಸಿಕೊಂಡು ಪರಾರಿಯಾದರೆಂದು ವರದಿಯಾಗಿದೆ. ಮೋಟರು ನಗರದಿಂದ ಒಂದು ಮೈಲಿ ದೂರ ಪತ್ತೆಯಾಗಿದೆ. ಗಾಯಗೊಂಡವರ ಪೈಕಿ ಒಬ್ಬನು ಆಸ್ಪತ್ರೆಯಲ್ಲಿ ಮೃತಪಟ್ಟನೆಂದು ತಿಳಿದುಬಂದಿದೆ.

ವಿಮಾನವು ಮನೆಯ ಮೇಲೆ ಬಿದ್ದು ೧೩ ಜನರ ಮರಣ

ರಯೋಡಿ ಜನೈರೋ ಬಳಿ ಸಾಂಟೊ..ರಿ ಎಂಬ ನಿಲ್ದಾಣದಿಂದ ನೆನ್ನೆ ..ದ ಬ್ರೆಜಿಲ್ ದೇಶದ ವಿಮಾನವು ..ಟು ಸ್ವಲ್ಪ ದೂರದಲ್ಲೇ ಒಂದು ..ಯ ಮೇಲೆ ಮುರಿದು ಬಿದ್ದಿತು. ಇದರ ಪರಿಣಾಮವಾಗಿ ಮನೆಯ ..ನೂರು ಜನರೂ ಒಂಬತ್ತು ..ಣಿಕರೂ ಮತ್ತು ನಾಲ್ಕು ಮಂದಿ ವಿಮಾನದ ಸಿಬ್ಬಂದಿಯವರೂ ಮೃತರಾಗಿ ..ಜನ ಗಾಯಗೊಂಡರೆಂದೂ ..ವಾಗಿದೆ.

ಸೊಂಬಾಯಲ್ಲಿ ಮತ್ತೊಬ್ಬ ಅಧಿಕಾರಿಯ ಕೊಲೆ

ಸೊಂಬಾಯಿನ ಗ್ಯಾಸ್ ಕಂಪೆನಿಯ ..ಕ ಅಧಿಕಾರಿಗಳಾದ ವಾಸುದೇವ ..ಯಣ ಜೋಷಿಯವರನ್ನು ಅವರ ..ಯ ಬಳಿ ಗ್ಯಾಸ್ ಕಂಪೆನಿಯ ..ನೊಬ್ಬನು ಚೂರಿಯಿಂದ ಇರಿದ..ಅವರು ಆಸ್ಪತ್ರೆಯಲ್ಲಿ ಮೃತಪಟ್ಟರೆಂದೂ ಗೊತ್ತಾಗಿದೆ. ಇರಿದವನನ್ನು ..ಸರ ವಶಕ್ಕೆ ಒಪ್ಪಿಸಲಾಗಿದೆ.

ಪಾದ್ರಿಗಳಿಗೂ ವಿಮಾನಕ್ಕೂ ಘರ್ಷಣೆ

ಕಳೆದ ಶನಿವಾರ ಸಿಕಂದರಾಬಾದಿನ ..ಗಂಪೇಟೆಯಲ್ಲಿ ಒಂದು ವಿಮಾ..ನಿಲ್ದಾಣದ ಬಳಿ ರಣಹದ್ದುಗಳಿಗೆ ..ಯೊಡೆದು ಬಹಳ ಜಖಂ ಆಗಿ ..ತ್ಯಾರವಿಂದ ಕೆಳಗಿಳಿಯಬೇಕಾಯಿತೆಂದು ವರದಿಯಾಗಿದೆ. ವೈಮಾನಿಕನಿಗೆ ತೀವ್ರ ಗಾಯವಾಗಿದೆ.

ಬ್ಯಾಡ್‌ಮಿಂಟನ್ ಟೋರ್ನಮೆಂಟ್

..ಂಡ್ಯ ಜಿಲ್ಲೆಯ ಪಾಂಡವಪುರ (ಫ್ರೆಂಚ್ ರಾಕ್ಸ್)ನಲ್ಲಿ ಬರುವ ತಿಂಗಳು ತಾ॥ ನಿಂದ ಬ್ಯಾಡ್‌ಮಿಂಟನ್ ಟೋರ್ನಮೆಂಟನ್ನು ಏರ್ಪಡಿಸಲಾಗಿದೆ. ..ಸ್ ಡಬ್ಬಲ್ಸ್ ಮತ್ತು ಸಿಂಗಲ್ಸ್ ..ಗಳ ಪದಕದ ಬಹುಮಾನವಿರುವ ..ಇಲ್ಲಿನ ಕ್ರೀಡಾ ಸ್ಪರ್ಧೆಗಳು ..ಮುದಿನ ಪ್ರವೇಶಕ್ಕೆ ಕಡೆಯ ದಿನ ..ಗ ಎಲ್ಲಾ ಬ್ಯಾಡ್‌ಮಿಂಟನ್ ..ನವರೂ ಸಹಕರಿಸಬೇಕೆಂದು ಕಾ..ದರ್ಶಿಗಳಾದ ಶ್ರೀ ಎಸ್ ನಾಗ..ರವರು ಕೋರುತ್ತಾರೆ.

ಅರಗು ಮತ್ತು ಬಣ್ಣದ ಕಾರ್ಖಾನೆ ಮೇಲೆ ದಾವಾ?

ಮೈಸೂರು ೧೧

ಕಳೆದ ೬ನೇ ತಾ॥ ನ್ಯಾಯಾಂಗ ಮಂತ್ರಿಗಳಾದ ಶ್ರೀ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ನಡೆಯಬೇಕಾಗಿದ್ದ ಸಭೆ ನಿಷ್ಫಲವಾಗಲು ಆಡಳಿತ ವರ್ಗದವರ ಹಟಮಾರಿತನವೇ ಕಾರಣವೆಂದೂ ಅವರು ಮಾಡಿರುವ ಒಪ್ಪಂದ ... ಬಾಹಿರವಾಗಿರುವುದರಿಂದ ಅವರ ಮೇಲೆ ಕೋರ್ಟಿನಲ್ಲಿ ದಾವಾ ಹೂಡಬೇಕೆಂದೂ ನೆನ್ನೆ ಸೇರಿದ್ದ ಅರಗು ಮತ್ತು ಬಣ್ಣದ ಕಾರ್ಖಾನೆಯ ಕಾರ್ಮಿಕರ ಸಭೆಯಲ್ಲಿ ತೀರ್ಮಾನಿಸಲಾಯಿತು. ... ಕಾರಣದಿಂದ ಕೆಲಸದಿಂದ ತೆಗೆದು ಹಾಕಿರುವವರನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದೂ ಕಾರ್ಖಾನೆಯನ್ನು ಸರ್ಕಾರವು ವಶಪಡಿಸಿಕೊಳ್ಳಬೇಕೆಂದೂ ಕಾರ್ಮಿಕರ ಸಂಬಳ ಪಾವತಿ ಮಾಡುವಂತೆಯೂ ... ವರ್ಗದವರನ್ನು ಒತ್ತಾಯ ಮಾಡಬೇಕೆಂಬ ನಿರ್ಣಯವನ್ನೂ ಸಭೆ ಮಾಡಲಾಯಿತು.

ವಿವಾಹ ಮಹೋತ್ಸವ

ಹೊಳೇನರಸೀಪುರದ ರೆವಿನ್ಯೂ ಇನ್ಸ್‌ಪೆಕ್ಟರಾದ ಶ್ರೀ ಬಿ ಕೃಷ್ಣನ್ ಐಯ್ಯರ್ ರವರು ತಮ್ಮ ಪುತ್ರಿ ಚಿ॥ ಸೌ॥ ವತ್ಸಲಾಬಾಯಿಯನ್ನು ಕ್ಲೋಸ್‌ಪೇಟೆಯ ಶ್ರೀ ಶ್ರೀನಿವಾಸರಾಯರ ಪುತ್ರರಾದ ಪ್ರಿಎಚ್ ಎನ್ ಗೋಪಾಲರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು.

ಬೆಳಗಾವಿಗೆ ಪ್ರಭುಗಳ ಭೇಟಿ

ಶ್ರೀಮನ್ಮಹಾರಾಜರು ತಮ್ಮ ಉತ್ತರ ಕರ್ನಾಟಕದ ಪ್ರವಾಸದಲ್ಲಿ ನೆನ್ನೆ ದಿನ ಬೆಳಗಾವಿಗೆ ಭೇಟಿ ಕೊಟ್ಟರು. ..ನ ಜಿಲ್ಲಾ ಬೋರ್ಡಿನವರು ಪ್ರಭುಗಳಿಗೆ ವೈಭವ ಪೂರ್ವಕ ಸ್ವಾಗತ ನೀಡಿ ಬಿನ್ನವತ್ತಳೆಯನ್ನ ನೀಡಿದರು.

ಕೊಳೆ ಬಿದ್ದು ಕೂಲಿ ಹೆಂಗಸಿನ ಮರಣ

ಬೆಂಗಳೂರಿನ ಅಲ್ಸೂರ್ ಗೇಟ್ ಪೊಲೀಸ್ ಸ್ಟೇಷನ್ನಿನ ಬಳಿ ಒಬ್ಬ ಕೂಲಿ ಹೆಂಗಸು ಕಟ್ಟಡದ ಕೆಲಸ ಮಾಡುತ್ತಿದ್ದ ವೇಳೆಯಲ್ಲಿ ಮೇಲಿನಿಂದ ಒಂದು ತೊಲೆಯು ಕಳಚಿ ಬಿದ್ದು ಆಕೆಗೆ ತೀವ್ರ ಪೆಟ್ಟಾಯಿತೆಂದೂ, ಮೊನ್ನೆ ಆಕೆಯು ಆಸ್ಪತ್ರೆಯಲ್ಲಿ ಮೃತಪಟ್ಟಳೆಂದೂ ವರದಿಯಾಗಿದೆ.

ಜಿಂಕೆ ಮಗುವನ್ನು ಮೊಸಳೆ ಬಾಯಿಯಿಂದ ಪಾರು ಮಾಡಿತು

ಕೆಲವು ದಿನಗಳ ಹಿಂದೆ ಮದ್ರಾಸು ... ಯ ದಿಂದ ಮೊಸಳೆಯೊಂದು ಕ..ಸ್ಟೇಷನ್ ಒಂದು ಪಕ್ಕದಲ್ಲೇ ಇದ್ದ ಅದಿಕಾರಿಗಳ ಮನೆಯ ಆವರಣಕ್ಕೆ ಹೋಗಿ ಹತ್ತಿರದಲ್ಲಿದ್ದ ಆಗಿದ್ದ ಮೂರು ತಿಂಗಳ ಮಗುವನ್ನು ಎಳೆಯಲು ಪ್ರಯತ್ನಿಸುತ್ತಿದ್ದಾಗ ... ಮನೆಯ ಒಂದು ಜಿಂಕೆಯು ... ಯಾಗಿ ತನ್ನ ತನ್ನ ಕೊಂಬುಗಳನ್ನು ಮೊಸಳೆಯ ... ಮಗು ... ಪ್ರಯತ್ನಿಸಲು ... ಮೊಸಳೆಯು ಹೆದರಿ ಓಡಿಹೋಯಿತು ... ತಪ್ಪಿಸಿಕೊಂಡ ... ವರದಿಯಾಗಿದೆ.

ಕೆಲವು ವರ್ಷಗಳ ಹಿಂದೆ ಮೈಸೂರಿನ ... ಮತ ಪಕ್ಷಿಗಳು ಒಂದೊಂದಾಗಿ ಕಾಣದಾಗುತ್ತಿದ್ದುವೆಂದೂ ಅಧಿಕಾರಿಗಳು ಇದರ ಕಾರಣವನ್ನರಿಯಲು ಪ್ರಯತ್ನಿಸಿದಾಗ ಮೊಸಳೆಯೊಂದು ತನ್ನ ಕೊಳದಿಂದ ಪಕ್ಷಿಗಳ ... ಕೂರಡಿಗೆ ಸುಮಾರು ನೂರು ಗಜಗಳಷ್ಟು ದೂರ ಸುರಂಗ ತೋಡಿಕೊಂಡಿದ್ದು ಪ್ರತಿ ದಿನ ಅಲ್ಲಿಗೆ ಹೋಗಿ ಪಕ್ಷಿಗಳನ್ನು ತಿನ್ನುತ್ತಿದ್ದಿತೆಂದು ತಿಳಿಯಿತು.

ಪಾಲಹಳ್ಳಿ ರೈಲ್ವೆ ನಿಲ್ದಾಣದಲ್ಲಿ ಟಿಕೆಟ್ ಹಂಚಿಕೆಯ ಅವ್ಯವಸ್ಥೆ

ಮೈಸೂರು ಬೆಂಗಳೂರು ರೈಲ್ವೆ ಮಾರ್ಗದಲ್ಲಿರುವ ಪಾಲಹಳ್ಳಿ ನಿಲ್ದಾಣದಲ್ಲಿ ಪ್ರಯಾಣಿಕರೆಲ್ಲರಿಗೂ ಒಟ್ಟು ಮೊತ್ತಕ್ಕೆ ಒಂದು ಟಿಕೆಟ್ಟನ್ನು ಕೊಟ್ಟು ನಂತರ ಅವರು ಇಳಿಯುವ ನಿಲ್ದಾಣದಲ್ಲಿ ಮೊದಲು ಬಂದವರನ್ನು ಮುಂದೆ ಬಿಟ್ಟು ಹಿಂದೆ ನಿಂತಿರುವವರಿಂದ ರೈಲು ಹೊರಡುವ ... ನಿಲ್ದಾಣದ ಟಿಕೆಟ್ ಚಾರ್ಜನ್ನು ವಸೂಲ್ಮಾಡುತ್ತಲಿದ್ದಾರೆಂದೂ, ಸಂಬಂಧಪಟ್ಟ ಅಧಿಕಾರಿಗಳು ಇತ್ತಕಡೆ ಗಮನ ಕೊಟ್ಟು ಈ ಕಿರುಕುಳವನ್ನು ತಪ್ಪಿಸಬೇಕೆಂದೂ ಕೋರಿ ನೊಂದ ಪ್ರಯಾಣಿಕರೊಬ್ಬರು ಪತ್ರ ಬರೆದಿರುತ್ತಾರೆ.

"ವಿಶ್ವ ಭಾರತ" ವಾರ ಪತ್ರಿಕೆ

ತುಮಕೂರಿನ ಶ್ರೀಮಾನ್ ಎಸ್ ಎಂ ಪ್ರಭುಸ್ವಾಮಿಯವರು "ವಿಶ್ವ ಭಾರತ" ವಾರ ಪತ್ರಿಕೆಯ ಸಂಪಾದಕರಾಗಿ ನಿನ್ನೆ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಡಿಕ್ಲೇರ್ ಮಾಡಿಕೊಂಡರು.

ಪೊಲೀಸಿನವನನ್ನು ಕೊಂದು ಖೈದಿಯ ಖುಲಾಸೆ

ರಾಜಕೋಟೆಯ ದ್ವಾರದ ಜೈಲಿನ ಕಾವಲುಗಾರನು ಕಳೆದ ರಾತ್ರಿ ಒಬ್ಬ ಹೆಡ್ ಕಾನ್ಸ್ಟೇಬಲನನ್ನು ಕೊಂದು ಮತ್ತೊಬ್ಬ ಜೈಲು ನೌಕರನನ್ನು ಗಾಯಪಡಿಸಿ ಖೈದಿಯೊಬ್ಬನನ್ನು ಖುಲಾಸೆ ಮಾಡಿದನೆಂದು ವರದಿಯಾಗಿದೆ. ಆನಂತರ ಅವನೂ, ಖೈದಿಯೂ ಶಸ್ತ್ರ ಸಜ್ಜಿತರಾಗಿ ಹೋಗಿ ಇನ್ನೊಂದು ಪೊಲೀಸ್ ಠಾಣೆಯ ಮೇಲೆ ಧಾಳಿ ನಡೆಸಿ ೩೦೦ ಕಾರ್ಟ್ರಿಡ್ಜುಗಳು ಮತ್ತು ೩,೫೦೦ ರೂ ನಗದನ್ನು ಅಪಹರಿಸಿಕೊಂಡು ಹೋದರೆಂದು ಗೊತ್ತಾಗಿದೆ.

ಆಂಧ್ರ ಪ್ರಾಂತ ರಚನೆಗಾಗಿ ಸಾವಿರ ಜನರ ಉಪವಾಸ

ಆಂಧ್ರ ಪ್ರಾಂತ ಪ್ರತಿಜ್ಞೆಯ ದಿನಾಚರಣೆಯ ಸಂಬಂಧವಾಗಿ ಮೊನ್ನೆ ವಿಜಯವಾಡದಲ್ಲಿ ಎಲ್ಲ ಪಂಗಡಗಳ ಸಾವಿರಕ್ಕೂ ಮೀರಿದ ಜನರು ಸಹಾನುಭೂತಿ ಉಪವಾಸವನ್ನು ಆಚರಿಸಿದರು. ಈ ತಿಂಗಳು ೧೫ ರೊಳಗೆ ಭಾರತ ಸರ್ಕಾರದವರು ಆಂಧ್ರ ಪ್ರಾಂತ ರಚನೆಗೆ ಘೋಷಣೆ ಹೊರಡಿಸದಿದ್ದರೆ ಸ್ವಾಮಿ ಸೀತಾರಾಂರವರ ನಾಯಕತ್ವದಲ್ಲಿ ಸತ್ಯಾಗ್ರಹಕ್ಕೆ ... ಸಿದ್ಧರಾಗಬೇಕೆಂಬ ನಿರ್ಣಯವು ... ಸಭೆಯಲ್ಲಿ ಮಾಡಲ್ಪಟ್ಟಿತು.

ವಿದ್ಯುಚ್ಛಕ್ತಿ ಕಾರ್ಖಾನೆ ಮುಷ್ಕರ ನಿಂತಿತು

ಸರ್ಕಾರದವರು ವಿವಾದವನ್ನು ಕೈಗಾರಿಕಾ ವ್ಯವಹಾರಗಳ ನ್ಯಾಯಾಲಯಕ್ಕೆ ಒಪ್ಪಿಸುವುದಾಗಿ ಭರವಸೆ ಕೊಟ್ಟುದರ ಮೇಲೆ, ಕಳೆದ ೧೩ ದಿನಗಳಿಂದಲೂ ನಡೆಯುತ್ತಿದ್ದ ಸರ್ಕಾರಿ ವಿದ್ಯುಚ್ಛಕ್ತಿ ಕಾರ್ಖಾನೆಯ ಕಾರ್ಮಿಕರ ಮುಷ್ಕರವು ಇಂದು ಮುಕ್ತಾಯಗೊಂಡಿತು. ಇಂದಿನಿಂದ ಕಾರ್ಮಿಕರು ಕೆಲಸದ ಮೇಲೆ ಹಾಜರಾದರು.

ಭಾರತ-ಜಪಾನ್ ಯುದ್ಧ ನಿರೋಧ ಒಪ್ಪಂದ

ಭಾರತ-ಜಪಾನ್ ಶಾಂತಿ ಒಪ್ಪಂದ ಸಮ್ಮೇಳನವು ಮುಕ್ತಾಯವಾದೊಡನೆಯೇ ಭಾರತವು ಜಪಾನಿನೊಡನೆ ಯುದ್ಧನಿರೋಧ ಒಪ್ಪಂದವನ್ನು ಮಾಡಿಕೊಳ್ಳಲಿದೆಯೆಂದು ಭಾರತ ಸರ್ಕಾರ ನೆನ್ನೆ ಪ್ರಕಟಿಸಿದ ನಂತರ ಭಾರತ ಮತ್ತು ಜಪಾನುಗಳು ಶಾಂತಿ ಒಪ್ಪಂದಕ್ಕೆ ರುಜು ಮಾಡುವ ಬಗ್ಗೆ ಮಾತುಕತೆ ನಡೆಸಲಾಗುವುದೆಂದೂ ತಿಳಿದುಬಂದಿದೆ.

ವಿಮಾನ ನಿಲ್ದಾಣದಲ್ಲಿ ೧೭೦೦ ರೌಂಡು ಬುಲೆಟ್ ಸಿಡಿತ

ಕ್ಯಾಲಿಫೋರ್ನಿಯದ ಲಾಂಗ್ ಬೀಚ್ ಎಂಬ ವಿಮಾನ ನಿಲ್ದಾಣದಲ್ಲಿ ಮೊನ್ನೆ ದಿನ ಬೆಳಗಿನ ಜಾವ ಜರೂರು ಪರಿಸ್ಥಿತಿಗಾಗಿ ಇಡಲ್ಪಟ್ಟಿದ್ದ ವಿಮಾನದ ವಿದ್ಯುತ್ ಶಕ್ತಿಯಿಂದ ವಿದ್ಯುಚ್ಛಕ್ತಿಯು ಪ್ರವಹಿಸಿ ... ಖರೀದಿಸಲಾಗಿದ್ದ ... ಮಿಷನ್ ಗನ್ನುಗಳಿಗೆ ಉಪಯೋಗಿಸುವ ಬುಲೆಟ್ಟುಗಳು ಹತ್ತಿ ಕೊಂಡು ಸಿಡಿದು ... ಮನೆಗಳು ನೆಲಸಮವಾದುವೆಂದೂ, ಸಾವಿರಾರು ಜನರು ಸಾವು ನೋವಿಗೀಡಾಗಿ ಅನೇಕರು ನಿರ್ಗತಿಕರಾದರೆಂದೂ ವರದಿಯಾಗಿದೆ. ಈ ಘಟನೆಯಲ್ಲಿ ೧೭೦೦ ರೌಂಡುಗಳಷ್ಟು ಮಿಷನ್‌ಗನ್ ಬುಲೆಟ್ಟುಗಳು ಸಿಡಿದುವೆಂದು ಹೇಳಲಾಗಿದೆ.

ಗಣಪತಿ ಮಂಗಳಾರತಿ

ಮೈಸೂರು ಕಾಲೇಜು ರಸ್ತೆಯಲ್ಲಿರುವ ಹರಿಕಥಾ ವಿ. ಶ್ರೀ ಎಚ್. ಟಿ. ಶಾಮಣ್ಣನವರು ತಮ್ಮ ಮನೆಯಲ್ಲಿ ಈ ದಿನ ಸಂಜೆ ೬ ಗಂಟೆಗೆ ಗಣಪತಿ ಮಂಗಳಾರತಿಯ ಸಂಬಂಧವಾಗಿ ವಿಶೇಷ ಸಂಗೀತರತ್ನ ಟಿ. ಚೌಡಯ್ಯನವರ ಪಿಟೀಲು ಕಛೇರಿಯನ್ನು ... ರಂಗನಾಥರವರ ... ಏರ್ಪಡಿಸಿರುವರು.

ಶ್ರೀ ವರಲಕ್ಷ್ಮಿ ಸಂಗೀತ ಸಭಾ ಮಂದಿರದವರು ಕೃಷ್ಣಮೂರ್ತಿ ಪುರದಲ್ಲಿರುವ ತಮ್ಮ ಶಾಖೆಯಲ್ಲಿ ನಾಳೆ ಸಂಜೆ ... ಗಂಟೆಗೆ ಮೊಲ್ಕಂಡ ಉತ್ಸವದ ... ವಿ| ಆರ್. ಶ್ರೀನಿವಾಸಯ್ಯ ... ಗಾಯನವನ್ನು ... ಎಂ. ಎಸ್. ... ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ... ಅಧ್ಯಕ್ಷತೆ ವಹಿಸುವರು.

ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಾಳೆ ಸಂಜೆ ... ಗಂಟೆಗೆ ... ಶ್ರೀನಿವಾಸಯ್ಯ ... ಗಾಯನವು ... ವಾದ್ಯಗಳೊಡನೆ ಜರುಗುವುದು.

... ತರುಣರ ಸಾಂಸ್ಕೃತಿಕ ಸಂಘ ... ಯುವಲ್ಲಿ ಈ ಸಂಜೆ ... ಮತಿ ... ಸನ್ನವರ ... ಸಕ್ಸಫೋನ್ ವಾದ್ಯ ... ಲಾಗಿದೆ.

ಜಪಾನಿನಲ್ಲಿ ಅಮೆರಿಕದ ಸೈನ್ಯವನ್ನಿಡಲು ಅವಕಾಶ

ಸ್ಯಾನ್ ಫ್ರಾನ್ಸಿಸ್ಕೋ ... ಅಮೆರಿಕ ಜಪಾನ್ ... ಒಪ್ಪಂದಕ್ಕೆ ಎರಡೂ ರಾಷ್ಟ್ರಗಳೂ ರುಜು ಹಾಕಿರುವವು. ಜಪಾನಿನಲ್ಲಿ ಅಮೆರಿಕದ ಸೈನ್ಯವನ್ನಿಡಲು ಒಪ್ಪಂದದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

COACHING CLASSES
ACCOUNTS HIGHER EXAMINATION
NOVEMBER 1951
(Daily bet 7 & 8 p m)
Contact :- M R Subbanna
1260, Valmiki Rd, Mysore

Edited, printed and published by A R Nagarajan at Sadhvi Press D Subbiah Road, Mysore

ಚುನಾವಣಾ ಪ್ರಚಾರ ಪ್ರವಾಸ

ಮೈಸೂರು ೧೦

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರೂ, ಚುನಾವಣಾ ಸಮಿತಿಯ ಹಲವು ಸದಸ್ಯರೂ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಕೆಳಗೆ ಕಂಡ ಮೇರೆ ಚುನಾವಣಾ ಪ್ರಚಾರ ಸಭೆಗಳನ್ನು ಏರ್ಪಡಿಸಿರುವರು.

ಇದೇ ... ತಾ| ಬೆಳಿಗ್ಗೆ ೧೧ ಗಂಟೆಗೆ ... ನರಸೀಪುರ, ಮಧ್ಯಾಹ್ನ ... ಗಂಟೆಗೆ ಯಳಂದೂರು, ಸಂಜೆ ... ಗಂಟೆಗೆ ... ಚಾಮರಾಜನಗರ.

... ತಾ| ಬೆಳಿಗ್ಗೆ ... ಗಂಟೆಗೆ ನಂಜನಗೂಡು, ... ಗಂಟೆಗೆ ಬೇಗೂರು, ... ಗುಂಡ್ಲುಪೇಟೆ ... ಹುಣಸೂರು.

... ತಾ| ಬೆಳಿಗ್ಗೆ ... ಗಂಟೆಗೆ ಮೈಸೂರು, ಸಂಜೆ ... ಗಂಟೆಗೆ ಕೃಷ್ಣರಾಜನಗರ.

ಚುನಾವಣೆಗೆ ಕಾಂಗ್ರೆಸ್ ಉಮೇದುವಾರರನ್ನು ಆರಿಸುವ ಬಗ್ಗೆ ಆಯಾ ಸ್ಥಳಗಳವರ ಅಭಿಪ್ರಾಯವನ್ನು ಸಂಗ್ರಹಿಸುವ ಸಲುವಾಗಿ ಈ ಪ್ರವಾಸವನ್ನು ಏರ್ಪಡಿಸಲಾಗಿದೆಯೆಂದೂ, ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ಸಭೆಗಳಲ್ಲಿ ತಪ್ಪದೆ ... ಬೇಕೆಂದೂ, ಮತ್ತು ... ಮತ್ತು ... ಬೇಗೂರಿನಲ್ಲಿ ... ಸೇರಬೇಕೆಂದೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಚ್. ಕೆ. ಕುಮಾರಸ್ವಾಮಿಯವರು ಕೋರುತ್ತಾರೆ.

ನಾರಾಯಣ ನಾಮೋಚ್ಚಾರಣೆಯಿಂದ ಹಾವಿನ ಕಡಿತಕ್ಕೆ ಚಿಕಿತ್ಸೆ

ಕೇಂದ್ರ ಪಾರ್ಲಿಮೆಂಟಿನ ಡೆಪ್ಯುಟಿ ಸ್ಪೀಕರರಾದ ಶ್ರೀ ಅನಂತಶಯನಂ ಅಯ್ಯಂಗಾರ್ಯರು ನಾರಾಯಣ ನಾಮೋಚ್ಚಾರಣೆಯಿಂದ ಹಾವಿನಿಂದ ಕಚ್ಚಲ್ಪಟ್ಟಿದ್ದ ಒಂದು ಹುಡುಗಿಯನ್ನು ಬದುಕಿಸಿದ ಒಂದು ಸುದ್ದಿಯೊಂದು ಹೊರಬಿದ್ದಿದೆ. ನೂರು ವರ್ಷದ ಕೆಳಗೆ ಹಾವಿನಿಂದ ಕಚ್ಚಲ್ಪಟ್ಟ ಹುಡುಗಿ, ಒಂದು ಸಾವಿರ ಬಾರಿ ನಾರಾಯಣೋಚ್ಚಾರಣೆ ಮಾಡಿದುದರಿಂದಲೇ, ಸಾಯುವ ಸ್ಥಿತಿಯಲ್ಲಿದ್ದ ಆಕೆಯು ಬದುಕಿಕೊಂಡಳೆಂದು ಅವರು ತಿಳಿಸಿದುದಾಗಿ ಗೊತ್ತಾಗಿದೆ.

ಯಳಂದೂರು ವಿದ್ಯಾರ್ಥಿ ನಿಧಿ

ಯಳಂದೂರು ೯

ಮೇಲ್ಕಂಡ ನಿಧಿಯ ವಾರ್ಷಿಕ ಸಭೆಯು ಈ ದಿನ ನಡೆಯಿತು. ಅಧ್ಯಕ್ಷರಾದ ಅಮಲ್ದಾರರು ಸ್ಥಳದಲ್ಲಿ ಹಾಜರಿರಲಿಲ್ಲವಾದುದರಿಂದ ನಗರದ ಶ್ರೀ ಎಂ. ಎಸ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕಾರ್ಯಕಲಾಪಗಳು ಜರುಗಿದುವು. ಪ್ರಸಕ್ತ ಸಾಲಿನ ವರದಿಯನ್ನೂ, ಆಯ ವ್ಯಯದ ಪಟ್ಟಿಯನ್ನೂ ಅನುಮೋದಿಸಿ ಬರುವ ಸಾಲಿನ ಅಂದಾಜನ್ನು ಸ್ವೀಕರಿಸಲಾಯಿತು. ಈ ಸಾಲಿನಲ್ಲಿ ೧೧ ಮಂದಿ ವಿದ್ಯಾರ್ಥಿಗಳಿಗೆ ಒಟ್ಟು ೧,೦೦೦ ರೂ ಗಳ ವೇತನ ಮಂಜೂರಾಯಿತು. ನಿಧಿಯ ಶ್ರೇಯೋಭಿವೃದ್ಧಿಯನ್ನು ಕೋರಿ ಬಂದಿದ್ದ ಪತ್ರಗಳನ್ನು ಓದಿ, ಮುಂದೆ ಇದಕ್ಕೆ ವಿಶೇಷ ಹಣವನ್ನು ಶೇಖರಿಸಬೇಕೆಂದು ನಿರ್ಣಯವಾಯಿತು. ಅಧ್ಯಕ್ಷರಿಗೂ ಕಾರ್ಯದರ್ಶಿಗಳಿಗೂ ಮತ್ತು ನಿಧಿ ಸಂಗ್ರಹಣಾಕಾರ್ಯದಲ್ಲಿ ನೆರವು ನೀಡುತ್ತಿರುವ ಎಲ್ಲರಿಗೂ ವಂದನೆಯನ್ನು ಅರ್ಪಿಸಿದನಂತರ ಸಭೆಯು ಮುಕ್ತಾಯವಾಯಿತು.

ಖಾದಿ ಸ್ಪರ್ಧೆಗಳು

ಸಂಸ್ಥಾನದಲ್ಲಿ ಖಾದಿ ಕಾರ್ಯವನ್ನು ನಡೆಸಲು ಚರಖಾ ಪ್ರಚಾರ ಸಂಘದವರು ಬರುವ ತಿಂಗಳು ೨ನೇ ತಾರೀಖಿನಿಂದ ... ನೇ ತಾರೀಖಿನ ವರೆಗೆ ಸಂಸ್ಥಾನಾದ್ಯಂತ ಖಾದಿ ಸ್ಪರ್ಧೆಗಳನ್ನು ಏರ್ಪಡಿಸಲಿದ್ದಾರೆ. ಒಂದೊಂದು ಕೇಂದ್ರದಲ್ಲೂ ಸ್ಪರ್ಧೆಗಳನ್ನು ನಡೆಸಲು ಕನಿಷ್ಠಪಕ್ಷ ೧೦ ಜನರಾದರೂ ಭಾಗವಹಿಸಬೇಕು ಮತ್ತು ನಡೆಸುವವರು ಚಿತ್ರದುರ್ಗದ ಪ್ರಧಾನ ಕೇಂದ್ರದವರ ಅನುಮತಿಯನ್ನು ಪಡೆಯಬೇಕು. ಬಹುಮಾನಗಳನ್ನು ... ನೇ ತಾರೀಖು ಆಯಾ ಸ್ಥಳಗಳಲ್ಲೇ ಹಂಚಲಾಗುವುದು. ಸ್ಪರ್ಧೆಯ ಬಗ್ಗೆ ವಿವರಗಳನ್ನು ಎಲ್ಲಾ ಖಾದಿ ಭಂಡಾರಗಳಲ್ಲಿಯೂ ಪಡೆಯಬಹುದು ಎಂದು ... ಚರಖಾ ಪ್ರಚಾರ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್. ವಾಸುದೇವರಾಯರು ತಿಳಿಸಿರುತ್ತಾರೆ.

NALINS
NEXT GRAND AUCTION SALE
On 16th Sept. 51
at 5 p. m.
NALINS
V V Market Square Mysore

ಮೇಲುಕೋಟೆ ದೇವಸ್ಥಾನದ ಬಗ್ಗೆ ಸತ್ಯಾಗ್ರಹವೇ

ಮೇಲುಕೋಟೆಯ ಶ್ರೀ ಚೆಲುವರಾಯಣ ಸ್ವಾಮಿಯ ದೇವಸ್ಥಾನದ ಆಡಳಿತದ ಅವ್ಯವಸ್ಥೆ ಬಗ್ಗೆ ಅಲ್ಲಿನ ... ಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಬಿ. ವಿ. ಪದ್ಮನಾಭರ್‌ರವರು ಈ ಕೆಳಕಂಡ ಹೇಳಿಕೆಯನ್ನಿತ್ತಿದ್ದಾರೆ:—

ಶ್ರೀ ಶ್ರೀ ಚೆಲುವ ನಾರಾಯಣಸ್ವಾಮಿ ದೇವಸ್ಥಾನದ ಆಡಳಿತವನ್ನು ಸರಿಪಡಿಸುವ ಉದ್ದೇಶದಿಂದ ನಾನು ಮತ್ತು ನನ್ನ ಮಿತ್ರರು ೧೯೪೮ ರಲ್ಲಿ ಸತ್ಯಾಗ್ರಹ ಹೂಡಿ, ಸರ್ಕಾರದವರು ದೇವಸ್ಥಾನದ ಆಡಳಿತಕ್ಕಾಗಿ ಸ್ವತಂತ್ರ ಸಮಿತಿಯನ್ನು ನೇಮಿಸುವ ಭರವಸೆ ಕೊಟ್ಟಮೇಲೆ ಸತ್ಯಾಗ್ರಹವನ್ನು ನಿಲ್ಲಿಸಿದ್ದೆವು. ತಮ್ಮಿಂದ ನೇಮಿಸಲ್ಪಟ್ಟ ಸಮಿತಿಯವರ ಸಲಹೆಗಳನ್ನು ಸರ್ಕಾರದವರು ಕಾರ್ಯಗತ ಮಾಡಿರುವುದಿಲ್ಲ. ಅಲ್ಲದೆ ಚುನಾಯಿತ ಸಮಿತಿ ರಚಿಸಬೇಕೆಂದು ಅವರು ಮಾಡಿರುವ ಸಲಹೆಗೆ ಮಾನ್ಯತೆ ಕೊಡದೆ ... ಇದ್ದ ಧರ್ಮದರ್ಶಿಗಳ ಹೆಸರನ್ನೆ ... ಮೊದಲಿನ ಅವ್ಯವಸ್ಥೆಗಳಿಗೆ ... ಮಾಡಿಕೊಡುವಂತಿದೆ. ಈಗಲೂ ಸರ್ಕಾರದವರು ಹಿಂದಿನ ಧರ್ಮದರ್ಶಿಗಳನ್ನು ತೆಗೆದುಹಾಕಿ ಸ್ವತಂತ್ರ ಸಮಿತಿಯನ್ನು ಚುನಾಯಿಸಿಕೊಳ್ಳಲು ಅವಕಾಶವನ್ನು ಕೊಡಬೇಕು. ಈ ತೆರನಾದ ಸಮಿತಿ ರಚನೆಯಾಗುವವರೆಗೆ ನಿಸ್ಪೃಹರಾದವರನ್ನು ನೇಮಿಸಬೇಕು. ಇಲ್ಲವಾದರೆ ನಾನು ಪುನಃ ಸತ್ಯಾಗ್ರಹವನ್ನು ಹೂಡಲು ಮನಸ್ಸುಮಾಡಿದ್ದೇನೆ.

SRI GAYATHRI
Daily 3 Shows
On 11th & 12th
Warner's
THE GREAT JEWEL ROBBER
Starring David Brian
--Next Change:-
M G. M's
THREE MUSKETEERS
- MORNING SHOWS
On 15th & 16th
R K. O's **SHE**

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು
ರತ್ನಾವಳಿ ಥಿಯೇಟರಿನಲ್ಲಿ
1-9-51ನೇ ಶನಿವಾರದಿಂದ * ಶ್ರೀ ಕೃಷ್ಣಭಗವಾನ್
ಶುಕ್ರವಾರ ಮತ್ತು ಭಾನುವಾರಗಳಲ್ಲಿ 6 45ಕ್ಕೆ ಉಳಿದ ದಿನಗಳಲ್ಲಿ 9 45ಕ್ಕೆ
ಮುಂದಿನ ಆಕರ್ಷಣೆ - ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳೀ ಅಂಗಡಿ
ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ಒಲಂಪಿಯಾ * 13-9-51ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ಕೊಲಂಬಿಯಾದವರ ಅದ್ಭುತ ಆನಂದ ದೃಶ್ಯಗಳಿಂದ ಕೂಡಿದ ಅಪೂರ್ವ ಚಿತ್ರ - ಕಾಂಗೊ ಬಿಲ್
ಬೆಳಗಿನ ಪ್ರದರ್ಶನ :: 12-9-51ರಿಂದ :: 5 ದಿವಸಗಳು ಮಾತ್ರ
ಪಂಚೋಲಿಯವರ — ಷಿರೀನ್ ಫರ್‌ಹಾದ್ —
ಪಾತ್ರ:- ರಾಗಿಣಿ, ಜಯಂತ್.

ಚಾಮುಂಡೇಶ್ವರಿ ಟಾಕೀಸ್
ಈಗ 7ನೇ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದೆ :
ಗಣಪತಿ ಪಿಕ್ಚರ್ಸ್ ರವರ
• ದೇವಕಿ •
ಪಾತ್ರ:- ಪಿ. ಎ. ಜಾನಕಿ, ಮಾಧುರಿ ದೇವಿ, ಲಲಿತ-ಪದ್ಮಿನಿ ಮತ್ತಿತರರು
A. TALLAM RELEASE

ರಿಜಿ ನಂ. 792 । ವಂದೇ ಮಾತರಂ । ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೧೨-೯-೫೧ [ಸಂಚಿಕೆ ೪೧

ಹೊಸ ಸಂಧಾನಕ್ಕೆ ಕಮ್ಯೂನಿಸ್ಟ್ ನಿರಾಕರಣೆ

ಭಾಷಾವಾರು ಪ್ರಾಂತಗಳ ಬಗ್ಗೆ ನೆಹರೂರವರ ಭರವಸೆ

ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಗಳೂ ಮತ್ತು ಮದ್ರಾಸ್ ಸರ್ಕಾರವೂ ಭಾಷಾವಾರು ಪ್ರಾಂತಗಳ ಗಡಿ ನಿರ್ಮಾಣ ಮತ್ತು ಆರ್ಥಿಕ ಸಮಸ್ಯೆಗಳ ಬಗ್ಗೆ ಮಾಹಿತಿ ಕೊಟ್ಟಲ್ಲಿ ಭಾಷಾವಾರು ಪ್ರಾಂತ ರಚನೆಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಪಂಡಿತ ನೆಹರೂರವರು ಮೊನ್ನೆ ಅವರನ್ನು ಭೇಟಿ ಮಾಡಿದ್ದ ಆಂಧ್ರ ಪ್ರದೇಶದ ನಿಯೋಗದ ಸದಸ್ಯರುಗಳಿಗೆ ಭರವಸೆ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಸೂಕ್ತ ಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದೂ, ಉಪವಾಸ ಕೈಗೊಂಡಿರುವ ಸ್ವಾಮಿ ಸೀತಾರಾಮರವರ ಸ್ಥಿತಿ ಶೋಚನೀಯವಾಗಿದೆಯೆಂದೂ ನಿಯೋಗದ ಸದಸ್ಯರುಗಳಾದ ಕಳಾವೆಂಕಟರಾವ್, ಸಂಜೀವರೆಡ್ಡಿ, ಗೋಪಾಲ ರೆಡ್ಡಿ ಮುಂತಾದವರು ಅವರಿಗೆ ತಿಳಿಸಿದರೆಂದು ಗೊತ್ತಾಗಿದೆ.

ಕಪಿಯನ್ನು ಕೊಂದುದಕ್ಕಾಗಿ ಇಡೀ ಗ್ರಾಮಕ್ಕೇ ಕೋತಿಗಳ ಬಹಿಷ್ಕಾರ

Sealed tender will be rec[illegible] d at the office of the Engineer City Impr[illegible] m[illegible] Board Mysore [illegible] on 21-9 [illegible] for the construction of [illegible] in the ground flo[illegible] rooms in the first flo[illegible] [illegible] of Pr[illegible]bhud [illegible] K R Mohalla Mysore the cost of [illegible] estimated Rs [illegible]000 and the earnest deposit required is Rs 1 10 only Detailed estimate and plan may be seen at the office of the Chairman City Improvement Trust Board Mysore, on all working days between 11 a m & 5 p m Further particulars may be [illegible] on the Notice Board

(Sd) P M Govindarajulu Naik

Engineer I C

ಅಬೀದ್‌ರವರ ಆಮೋಘ ಹರಿ [illegible] ಮಾರಾಟವನ್ನು ನೆನಪಿನಲ್ಲಿಡಿ

ಮೈಸೂರು ಗೌರ್ನಮೆಂಟ ಹೌಸಿನಲ್ಲಿ

ನಾಳೆ 17-9-51 :: ಬೆಳಗ್ಗೆ 10 ಕ್ಕೆ ಸರಿಯಾಗಿ

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು

ರತ್ನಾವಳಿ ಥಿಯೇಟರಿನಲ್ಲಿ

1-9-51 ನೇ ಶನಿವಾರದಿಂದ ✱ ಶ್ರೀ ಕೃಷ್ಣ ಭಗವಾನ್

ಶುಕ್ರವಾರ [illegible] ವಾರಗಳಲ್ಲಿ [illegible] ಕ್ಕೆ [illegible] ದಿನಗಳಲ್ಲಿ 9.45 ಕ್ಕೆ

ಮುಂದಿನ ಆಕರ್ಷಣೆ - ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

Edited, printed and published by A R Nagaraj [illegible] at Sadhvi Press [illegible] Subbi[illegible] Road Mysore

ಉಮೇದುವಾರಿಕೆ ಬಗ್ಗೆ ಕಾಂ|| ಅಧ್ಯಕ್ಷರ ಮಾತುಕತೆ

ಮೈಸೂರು ೧೭

ನೆನ್ನೆ ಬೆಳಿಗ್ಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ... ಹನುಮಂತಯ್ಯನವರು ಮೈಸೂರು ... ಲ್ಲೂಕಿನಿಂದ ಉಮೇದುವಾರರನ್ನು ... ಸುವ ಬಗ್ಗೆ ತಾಲ್ಲೂಕು ಕಾಂಗ್ರೆಸ್ ... ರ್ಯಕರ್ತರೊಡನೆ ಸಮಾಲೋಚನೆ ನಡೆಸಿದರು ಸುಮಾರು ೬೮ ಗ್ರಾಮಗ... ವ ಅನೇಕ ಮುಖಂಡರು ಮತ್ತು ... ಚಾಯಿತಿ ಅಧ್ಯಕ್ಷರುಗಳೂ, ಬಂದಿದ್ದ ... ಶ್ರೀಗಳಾದ ಎ ಜಿ ರಾಮಚಂದ್ರರಾ... ಮತ್ತು ಎಸ್ ನಾರಾಯಣರಾಯ ... ಬಂದಿದ್ದರು ಪ್ರಾರಂಭದಲ್ಲಿ ಶ್ರೀ ... ಕೆ. ಕುಮಾರಸ್ವಾಮಿಯವರು ... ಗತ ಭಾಷಣ ಮಾಡಿದರು ಕಾಂ... ಅಧ್ಯಕ್ಷರು ಅನೇಕ ಜನ ಮುಖಂ... ಸಲಹೆಯನ್ನು ಪಡೆದರು

ಮಧ್ಯಾಹ್ನ ೩ ಗಂಟೆಗೆ ಕಾಂಗ್ರೆಸ್ ... ರಿಯಲ್ಲಿ ಅಧ್ಯಕ್ಷರು ನಗರದ ಮು... ಖರುಗಳನ್ನು ಭೇಟಿ ಮಾಡಿದರು ... ನಾವಣೆಗೆ ಸಂಬಂಧಿಸಿದ ಕೆಲವು ವಿ... ಗಳ ಬಗ್ಗೆ ಕಾರ್ಯಕರ್ತರನ್ನುದ್ದೇ... ಭಾಷಣ ಮಾಡಿದರು ಅನಂತರ ಹ... ರು ಮುಖಂಡರ ಸಲಹೆಯನ್ನು ತೆ... ಕೊಂಡರು ಶ್ರೀ ಕೆ ಎಸ್ ಸೂರ್ಯ... ರಾಯಣ ರಾಯರು ವಂದನಾರ್ಪಣೆ... ನ್ನು ಮಾಡಿದರು ಸಂಜೆ ೬ ಗಂಟೆಗೆ ... ಹನುಮಂತಯ್ಯನವರು ಕೃಷ್ಣರಾಜ... ರಕ್ಕೆ ತೆರಳಿದರು

ರಾಷ್ಟ್ರಾಧ್ಯಕ್ಷರಿಗೂ ನೆಹರೂ ರವರಿಗೂ ಹಿಂದೂ ಕೋಡ್ ಬಗ್ಗೆ ಭಿನ್ನಾಭಿಪ್ರಾಯ

...ಷ್ಟ್ರಾಧ್ಯಕ್ಷರಿಗೂ ಪ್ರಧಾನಿ ನೆಹರೂ... ಗೂ ಹಿಂದೂ ಧರ್ಮ ಶಾಸ್ತ್ರದ ಮ... ಸೂದೆಯ ವಿಚಾರದಲ್ಲಿ ಭಿನ್ನಾಭಿಪ್ರಾ... ಯವುಂಟಾಗಿದೆಯೆಂದೂ, ಇದು ದೆಹಲಿ... ವಿಶೇಷ ಕುತೂಹಲವನ್ನುಂಟು... ಮಾಡಿರುವುದಾಗಿಯೂ ಗೊತ್ತಾಗಿದೆ ... ಸೂದೆಗೆ ಅಧ್ಯಕ್ಷರು ವಿರೋಧವಾಗಿರು... ವ ದೂ, ಪ್ರಧಾನಿ ನೆಹರೂರವರು ಅ... ಂಗೀಕೃತವಾಗಬೇಕೆಂದು ಸಂಕಲ್ಪಿ... ಸಿರುವರೆಂದೂ ಹೇಳಲಾಗಿದೆ ರಾಜೇಂ... ದ್ರರುಗಳು ಮತ್ತು ಪ್ರಧಾನಿ ನೆಹರೂರ... ಈ ಸಂಬಂಧವಾಗಿ ಮಾತುಕತೆಗಳ... ನಡೆಸಿದ್ದರೆಂದೂ, ಈಚೆಗೆ ಸದರಿ ... ಮಸೂದೆಯನ್ನು ಪಠ್ಯಕ್ಕೆ ಬಿಟ್ಟುಬಿಡ... ಬೇಕೆಂದು ಅಧ್ಯಕ್ಷರು ನೆಹರೂರವರಿಗೆ ... ಪತ್ರ ಬರೆದು ಸಲಹೆಯಿತ್ತಿರುವುದಾಗಿ ... ತಿಳಿದುಬಂದಿದೆ ಧಾರ್ಮಿಕ ವಿ... ಷಯಗಳಲ್ಲಿ ಇಂತಹ ಮಹತ್ವದ ಮಾ... ರ್ಪಾಟು ಮಾಡಲು ಈಗಿನ ತಾತ್ಕಾಲಿಕ ... ಪಾರ್ಲಿಮೆಂಟು ಕೈಹಾಕುವುದು ಸರಿಯ... ಲ್ಲವೆಂಬುದು ಅಧ್ಯಕ್ಷರ ಅಭಿಪ್ರಾಯ ವಾ... ಗಿ...

೧೦೦ ಜನ ನೀರಿನ ಪಾಲು; ಸಾವಿರ ಮನೆಗಳ ನಾಶ

...ತ್ತರ ಪರ್ಷಿಯದಲ್ಲಿರುವ ಒಂದು ... ಮೊನ್ನೆ ನದಿಯ ಪ್ರವಾಹವು ನು... ಗ್ಗಿ ... ಪರಿಂದ ನೂರು ಜನರು ನೀರಿನಲ್ಲಿ ... ಗಿ ಮೃತಿಯನ್ನೈದಿದರೆಂದೂ, ಸ... ಮನೆಗಳು ನಾಶವಾದುವೆಂದೂ ... ಲಾಗಿದೆ ಅತಿ ವೃಷ್ಟಿಯೇ ಇದಕ್ಕೆ ... ರಣವೆಂದು ವರದಿಯಾಗಿದೆ

ರಿಜಿ ನಂ 792 ॥ ಚಂದಾ ಮುಂಗಡ ॥ ಒಂದಿನ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧೭-೯-೫೨ [ಸಂಚಿಕೆ ೪೩

ಪರ್ಷಿಯಾ ಸರ್ಕಾರವನ್ನು ಉರುಳಿಸಲು ಪಿತೂರಿ?

ಕಾಲೇಜಿನಲ್ಲಿ ತರುಣರೊಡನೆ ಕೂರಲು ಯುವತಿಯ ಹಟ

ಕಲ್ಕತ್ತಾದ ನ್ಯಾಯ ಶಾಸ್ತ್ರದ ಕಾಲೇಜಿನ ತರಗತಿಯು ಮೊನ್ನೆ ಆರಂಭವಾದ ಸಮಯದಲ್ಲಿ ವಿದ್ಯಾರ್ಥಿನಿಯೊಬ್ಬಳು ತರುಣರ ನಡುವೆ ಹೋಗಿ ಕುಳಿತುದನ್ನು ನೋಡಿ, ಉಪಾಧ್ಯಾಯರು ಇತರ ವಿದ್ಯಾರ್ಥಿನಿಯರೊಡನೆ ಕೂರಲು ಹೇಳಿದರೂ ಆಕೆಯು ಕೇಳದೆ ಜಗಿನ್ ರಾಜ್ಯಾಂಗದ ಪ್ರಕಾರ ಮಿಶ್ರ ವಿದ್ಯಾರ್ಥಿಗಳ ಕಾಲೇಜಿನಲ್ಲಿ ಎಲ್ಲ ಬೇಕಾದರೂ ಕೂರಲು ತನಗೆ ಹಕ್ಕಿರುವುದಾಗಿ ವಾದಿಸಿದಳೆಂದೂ, ಉಪಾಧ್ಯಾಯರು ಪಾಠವನ್ನು ಮಾಡದೆ ಅಧಿಕಾರಿಗಳಿಗೆ ದೂರನ್ನು ಕೊಟ್ಟರೆಂದೂ, ವಿದ್ಯಾರ್ಥಿನಿಯು ಬೇರೊಂದು ಕಾಲೇಜಿಗೆ ವರ್ಗಾಯಿಸಿಕೊಳ್ಳಬೇಕೆಂದು ವ್ಯವಸ್ಥಾಪಕರು ಆಕೆಗೆ ತಿಳಿಸಿದರೆಂದೂ ವರದಿಯಾಗಿದೆ

ನಾಲ್ಕು ಮಕ್ಕಳನ್ನು ಹಡೆದ ತಾಯಿ

ಜಬ್ಬಲ್ಪುರದ ಮುಸ್ಲಿಂ ತರುಣಿಯೊಬ್ಬಳು ನೆನ್ನೆ ಅಲ್ಲಿನ ಆಸ್ಪತ್ರೆಯೊಂದರಲ್ಲಿ ೩ ಗಂಡು ಮಕ್ಕಳು ಮತ್ತು ೧ ಹೆಣ್ಣು ಮಗುವನ್ನೂ ಏಕ ಕಾಲದಲ್ಲಿ ಹಡೆದಳೆಂದೂ, ಅವುಗಳೆಲ್ಲವೂ ಆರೋಗ್ಯವಾಗಿರುತ್ತವೆಂದೂ ತಿಳಿದುಬಂದಿದೆ

ಹಿಂದೀ ತರಗತಿಗಳು

ಇದೇ ಮಾಹೆ ೨೦ನೇ ತಾರೀಖಿನಿಂದ ಶ್ರೀ ರಾಮ ಸಹಾಯ ಸಂಘದ ಆಶ್ರಯದಲ್ಲಿ ೧೯೫೩ನೇ ಫೆಬ್ರವರಿಯಲ್ಲಿ ನಡೆಯುವ ಪ್ರಾಥಮಾ, ಮಾಧ್ಯಮಾ ಮತ್ತು ರಾಷ್ಟ್ರ ಭಾಷಾ ಪರೀಕ್ಷೆಗಳಿಗೆ ಪಾಠ ಪ್ರವಚನಗಳು ಪ್ರಾರಂಭವಾಗುವುವು ಸೇರಲು ಇಚ್ಛಿಸುವವರು ಸಂಘದ ಕಾರ್ಯಾಲಯದಲ್ಲಿ ಬಂದು ತಿಳಿಸಬಹುದು

ಮರಕ್ಕೆ ನೇಣು ಹಾಕಿ ಕೊಂಡು ಸತ್ತ ಪ್ರಸಂಗ

ಸ್ವಂ ಸು] ಶ್ರೀರಂಗಪಟ್ಟಣ ೧೫

ಇಲ್ಲಿನ ಶ್ರೀ ರಂಗನಾಥ ಸ್ವಾಮಿ ದೇವಾಲಯದ ಮೈದಾನದಲ್ಲಿರುವ ಆಲದ ಮರಕ್ಕೆ ಮೊನ್ನೆ ರಾತ್ರಿ ವೃದ್ಧನೊಬ್ಬನು ನೇಣು ಹಾಕಿಕೊಂಡು ಸತ್ತುದು ಈ ದಿನ ಪತ್ತೆಯಾಯಿತು ಅತನು ಯಾರೆಂಬುದು ಗೊತ್ತಾಗಿಲ್ಲ ಶರೀರವನ್ನು ವೈದ್ಯ ಪರೀಕ್ಷೆಗೆ ಗುರಿಪಡಿಸಲಾಗಿದೆ

ಪರ್ಷಿಯಾ ಸರ್ಕಾರವನ್ನು ಉರುಳಿಸಲು ಪಿತೂರಿ?

ಪರ್ಷಿಯಾ ಸರ್ಕಾರವನ್ನು ಉರುಳಿಸಲು ಪಿತೂರಿ ನಡೆಯುತ್ತಿದೆಯೆಂಬ ವರದಿಗಳು ಬಂದು ಈ ಬಗ್ಗೆ ತನಿಖೆ ನಡೆಸಲು ಅಲ್ಲಿನ ಪ್ರಧಾನಿ ಡಾ|| ಮುಸಾದಿಕ್ ರವರು ತಮ್ಮ ಸೈನ್ಯಗಳಿಗೆ ಆಜ್ಞೆ ಮಾಡಿರುತ್ತಾರೆ ಸರ್ಕಾರದ ವಿರುದ್ಧ ದಂಗೆ ಏಳುವ ಸಮಾಚಾರವನ್ನು ಪ್ರಧಾನಿಯವರು ಸೈನ್ಯ ಶಾಖಾ ಮಂತ್ರಿ ಮತ್ತು ಸ್ವನ್ಯಾಧಿಕಾರಿಗಳೊಡನೆ ಚರ್ಚಿಸಿದರೆಂದು ಹೇಳಲಾಗಿದೆ ಅಲ್ಲಿನ ಪಾರ್ಲಿಮೆಂಟಿನ ವಿರೋಧ ಗುಂಪಿನವರು ಕಳೆದ ೧೦ ದಿನಗಳಲ್ಲಿ ನೆನ್ನೆ ೬ನೇ ಬಾರಿ ಸಭೆಗೆ ಬಾರದೆ ಇದ್ದುದರಿಂದ ಕೋರಂ ಇಲ್ಲದೆ ಸಭೆಯು ನಡೆಯಲು ಆಗಲಿಲ್ಲ

ಸ್ವಾಮಿ ಸೀತಾರಾಂರ ಸ್ಥಿತಿ ಕಳವಳಕರವಾಗಿದೆ

೨೩ ದಿನಗಳ ಹಿಂದೆ ಉಪವಾಸವನ್ನು ಕೈಗೊಂಡ ಸ್ವಾಮಿ ಸೀತಾರಾಂ, ಅವರ ಹಿಂಬಾಲಕರಾದ ಬಸವಯ್ಯ ಮತ್ತು ಅವರ ಪತ್ನಿ ಮರ್ರೆಂಬಾ ಇವರುಗಳ ಸ್ಥಿತಿಯು ತುಂಬಾ ತೀವ್ರವಾಗಿರುವುದಾಗಿ ಗೊತ್ತಾಗಿದೆ ಬಸವಯ್ಯ ದಂಪತಿಗಳನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ

ಗಂಡಸರಿಗಿಂತಲೂ ಹೆಂಗಸರಲ್ಲೇ ಹೆಚ್ಚು ಆತ್ಮಹತ್ಯೆ

ಬೊಂಬಾಯಿ ಸಂಸ್ಥಾನದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆದ ಆತ್ಮಹತ್ಯೆಗಳ ಪಟ್ಟಿಯನ್ನು ವಿವರಿಸುತ್ತಾ ಅಲ್ಲಿನ ಗೃಹ ಮಂತ್ರಿ ಮೊರಾರ್ಜಿ ದೇಸಾಯಿಯವರು ಗಂಡಸರಿಗಿಂತಲೂ ಹೆಂಗಸರೇ ಹೆಚ್ಚಾಗಿ ಆತ್ಮಹತ್ಯೆ ಮಾಡಿಕೊಂಡಿರುವರೆಂದು ಹೇಳಿರುತ್ತಾರೆ ೩ ವರ್ಷಗಳಲ್ಲಿ ೭೩೧ ಜನ ಗಂಡಸರೂ ೭೬೪ ಜನ ಹೆಂಗಸರೂ ಈ ರೀತಿ ಸತ್ತಿರುವುದಾಗಿ ಅವರ ಸಂಖ್ಯೆಗಳನ್ನು ಕೊಟ್ಟಿರುತ್ತಾರೆ

ಸರ್ ಅರ್ಕಾಟರು ತಿರುವಾಂಕೂರು ವಿಶ್ವವಿದ್ಯಾಲಯದ ಉಪ ಸ್ಥಾನಪತಿ

ಮೈಸೂರಿನ ಹಿಂದಿನ ದಿವಾನರಾದ ಸರ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರರು ತಿರುವಾಂಕೂರು ವಿಶ್ವ ವಿದ್ಯಾಲಯದ ವೈಸ್ ಛಾನ್ಸಲರಾಗಲು ಸಮ್ಮತಿಸಿರುತ್ತಾರೆಂದು ತಿಳಿದುಬಂದಿದೆ

೧೦೦ ವರ್ಷದವರೆಗೂ ದುಡಿಯುವೆನು

ವರ್ಧಂತಿ ಸಮಾರಂಭದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಹೇಳಿಕೆ

ಬೊಂಬಾಯಿ ೧೫

ಸರ್ ಎಂ ವಿಶ್ವೇಶ್ವರಯ್ಯನವರ ೯೨ನೇ ವರ್ಧಂತಿ ಸಮಾರಂಭವನ್ನು ಇಲ್ಲಿನ ಅಖಿಲ ಭಾರತ ತಯಾರಿಕಾಗಾರರ ಸಂಘದವರು ಏರ್ಪಡಿಸಿದ್ದ ಸಮಯದಲ್ಲಿ ಮಾಜಿ ದಿವಾನರೂ ಮತ್ತು ಸಂಘದ ಸಂಸ್ಥಾಪಕರೂ ಆದ ಶ್ರೀ ವಿಶ್ವೇಶ್ವರಯ್ಯನವರು ಮಾತನಾಡಿ ತಾವು ೧೦೦ ವರ್ಷಗಳವರೆಗೆ ಜೀವಿಸಿದ್ದರೆ, ಅಲ್ಲಿಯವರೆಗೂ ದುಡಿಯಬೇಕೆಂದು ನಿರ್ಧರಿಸಿರುವುದಾಗಿ ತಿಳಿಸಿದರು ಪರಸ್ಪರ ಮೇಲೆ ಜನರು ನಿಸ್ಸಹಾಯಕರಾಗುವರೆಂದು ಭಾವಿಸಿರುವುದು ತಪ್ಪೆಂದು ಹಾಲ್ಕೇನ್ ಅವರು ... ಹೇಳಿದ್ದುದನ್ನು ಅವರು ಜ್ಞಾಪಿಸಿಕೊಂಡು ಪ್ರತಿಯೊಬ್ಬ ವ್ಯಕ್ತಿಯೂ ಕಾರ್ಯತತ್ಪರನಾಗಬೇಕೆಂದು ತಿಳಿಸಿದರು

ಅಧಿಕಾರ ಬಿಡಲು ನೆಹರೂರವರ ಇಚ್ಛೆಯೇ?

ಲಕ್ನೋ ನಗರದಲ್ಲಿ ಮೊನ್ನೆ ಭಾಷಣ ಮಾಡುತ್ತಾ ನೆಹರೂರವರು ಚುನಾವಣೆಗಳಾದನಂತರ ತಾವು ಹೊರೆಯಿಂದ ತಪ್ಪಿಸಿಕೊಂಡು ಆಡಳಿತದ ಜವಾಬ್ದಾರಿಯನ್ನು ಹೊರದೆ ಕಾರ್ಯನಿರತರಾಗಬೇಕೆಂದು ಯೋಚಿಸುತ್ತಿರುವುದಾಗಿ ತಿಳಿಸಿದರು ಕಾಂಗ್ರೆಸ್ ಅಧ್ಯಕ್ಷತೆ ಮಾತ್ರವಲ್ಲದೆ ಪ್ರಧಾನಿಯಾಗಿಯೂ ಇರಲು ಬಯಸುವುದಿಲ್ಲವೆಂದು ಅವರು ಹೇಳಿ, ತಮ್ಮ ನಿರ್ಧಾರವು ಮುಂದಿನ ಸನ್ನಿವೇಶಕ್ಕೆ ತಕ್ಕಂತೆ ಆಗುವುದೆಂದು ಹೇಳಿದರು

ಸೇತುವೆ ಕುಸಿದು ೫೦ ಜನ ನೀರಿನ ಪಾಲು

ಲಕ್ನೋವಿಗೆ ೨೦೦ ಮೈಲಿ ಉತ್ತರದಲ್ಲಿರುವ ಕೋಟಾ ದ್ವಾರದ ಬಳಿ ನಾಯಲ್ ಎಂಬ ಝರಿಯಲ್ಲಿ ಮೊನ್ನೆ ಪ್ರವಾಹವು ಬಂದು ೫೦ ಜನರೂ, ೨೨ ವಾಹನಗಳೂ ಕೊಚ್ಚಿಹೋದುದಾಗಿ ವರದಿ ಬಂದಿದೆ ಪ್ರವಾಹವು ಎರಡು ದಡಗಳ ಮೇಲೆ ಹರಿದು ಸರ್‌ಘೂಲಿ ಝೂಲ ಎಂಬ ತೂಗು ಸೇತುವೆಯು ಕೊಚ್ಚಲ್ಪಟ್ಟಿತು ಮೋಟಾರುಗಳನ್ನು ಡ್ರೈವರುಗಳು ಆ ದಿನ ರಾತ್ರಿ ನದಿ ದಡದಲ್ಲಿ ನಿಲ್ಲಿಸಿದ್ದಾಗ ಅಕಸ್ಮಾತ್ ಪ್ರವಾಹವು ಬಂದು ಅನಾಹುತವಾಯಿತು

ಮರದಿಂದ ಬಿದ್ದು ಮರಣ

ನೇರಳೇ ಹಣ್ಣನ್ನು ಕೀಳಲು ತುಮಕೂರಿನ ದೊಡ್ಡ ಹಟ್ಟಿ ತುಳ್ಳ ಹನುಮಯ್ಯ ಎಂಬುವನು ಮೊನ್ನೆ ಮರವನ್ನು ಹತ್ತಿದಾಗ ಕೆಳಗೆ ಬಿದ್ದು, ಆಸ್ಪತ್ರೆಗೆ ಸಾಗಿಸಲ್ಪಟ್ಟನೆಂದೂ, ನಂತರ ಅಲ್ಲಿ ಮರಣ ಹೊಂದಿದನೆಂದೂ ವರದಿಯಾಗಿದೆ

ವಿವಾಹ ಮಹೋತ್ಸವ

ರೈಲ್ವೆ ವರ್ಕ್‌ಷಾಪಿನಲ್ಲಿ ಫೋರ್ಮನ್ ರಾಗಿರುವ ಶ್ರೀ ಎಂ ಆರ್ ಶೇಷಗಿರಿ ರಾಯರು ತಮ್ಮ ಜ್ಯೇಷ್ಠ ಕುಮಾರ ಶ್ರೀ ಎಂ ಎಸ್ ನಾಗರಾಜರಾಯರಿಗೆ ಬೆಂಗಳೂರಿನ ಡಿ ಅಕೌಂಟ್ಸ್ ಸೂಪರಿಂಟೆಂಡೆಂಟ್ ಶ್ರೀ ಎಸ್ ನಾರಾಯಣರಾಯರ ಕುಮಾರಿ ಚಿ|| ಸೌ|| ಶಾಮಲಾಂಬಾರವರನ್ನು ತಂದುಕೊಂಡು ಕಳೆದ ಗುರುವಾರ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಮೈಸೂರು ಸಂಸ್ಥಾನದಲ್ಲಿ ಅಡಿಕೆ ಸಂಶೋಧನಾ ಕೇಂದ್ರ

ಶೀಘ್ರದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಅಡಿಕೆ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸುವ ಆಲೋಚನೆಯು ಭಾರತ ಸರ್ಕಾರಕ್ಕೆ ಇರುತ್ತದೆ. ಅಡಿಕೆ ಬೆಳೆಯ ಸಂಬಂಧವಾಗಿ ಮಂಗಳೂರು ಬೊಂಬಾಯಿಗಳಲ್ಲಿ ಬೇರೆಬೇರೆ ಕೇಂದ್ರಗಳನ್ನು ತೆರೆಯುವ ಆಲೋಚನೆಯೂ ಇರುವುದೆಂದು ಹೇಳಲಾಗಿದೆ.

ಸಂಸ್ಥಾನದಲ್ಲಿ ಜೈಪ್ರಕಾಶ ನಾರಾಯಣರ ಪ್ರವಾಸ

ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಜೈಪ್ರಕಾಶ ನಾರಾಯಣ್‌ರವರು ನಾಲ್ಕು ದಿನಗಳ ಪ್ರವಾಸವನ್ನು ಕೈಗೊಂಡು ಬೆಂಗಳೂರಿಗೆ ಆಗಮಿಸುವರು. ಸಂಸ್ಥಾನದಲ್ಲಿ ಅವರ ಪ್ರವಾಸ ಈ ರೀತಿ ಇದೆ— ತುಮಕೂರು ಜಿಲ್ಲೆ ..., ಹಾಸನ ಜಿಲ್ಲೆ ..., ಶಿವಮೊಗ್ಗ ಜಿಲ್ಲೆ ..., ಚಿತ್ರದುರ್ಗ ... ಅಲ್ಲಿಂದ ಅವರು ... ತಾ|| ... ಮುಂಬಯಿ ಬೊಂಬಾಯಿಗೆ ತೆರಳುವರು. ಅವರಿಗೆ ಸನ್ಮಾನಗಳನ್ನು ಸಮರ್ಪಿಸಲಾಗುವುದು.

ಸ್ಕೌಟ್ ಮಾಸ್ಟರುಗಳ ಶಿಕ್ಷಣ ಶಿಬಿರ

ಮೈಸೂರು ಜಿಲ್ಲಾ ಸ್ಕೌಟ್ ... ಆಶ್ರಯದಲ್ಲಿ ... ಸೆಪ್ಟೆಂಬರ್ ... ತಾರೀಖಿನವರೆಗೆ ಸ್ಕೌಟ್ ಮಾಸ್ಟರುಗಳ ... ಶಿಬಿರವೊಂದನ್ನು ಸಂಘಟನೆಗೊಳಿಸಿ ... ಸಲಾಗಿತ್ತು. ಇದರಲ್ಲಿ ... ಸೇವಕರು ... ಮತ್ತು ... ನಡೆಸುವುದು ಪ್ರಥಮ ಚಿಕಿತ್ಸೆ ಮುಂತಾದ ವಿಷಯಗಳ ಬಗ್ಗೆ ಶಿಕ್ಷಣ ನಡೆಯಿತು. ಜಿಲ್ಲಾ ಸ್ಕೌಟ್ ಕಮೀಷನರ್ ಶ್ರೀ ಕ... ಅವರೂ, ಜಿಲ್ಲಾಧಿಕಾರಿಗಳೂ, ಶ್ರೀ ಡಿ. ರಾಮಯ್ಯನವರೂ ಮತ್ತು ಸ್ಥಳೀಯ ಮುಖಂಡರೂ ಶಿಬಿರಕ್ಕೆ ಭೇಟಿಯಿತ್ತು ಅಲ್ಲಿನ ಕಾರ್ಯಕಲಾಪಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ರೈಲು ಗಾಡಿಯಲ್ಲಿ ಮದ್ರಾಸ್ ವಕೀಲರ ಮರಣ

ತಿರುಪತಿಗೆ ಮೊನ್ನೆ ಮದ್ರಾಸಿನಿಂದ ರೈಲಿನಲ್ಲಿ ಹೊರಟ ಅಡ್ವೊಕೇಟ್ ಟಿ. ಎ. ರಾಜಗೋಪಾಲ್‌ರವರು ದಾರಿಯಲ್ಲೇ ಸತ್ತುಬಿದ್ದಿದ್ದು ಅರಕೋಣಂ ಪೋಲೀಸರ ಗಮನಕ್ಕೆ ಬಂದು ಅವರು ಸಂಬಂಧಪಟ್ಟವರಿಗೆ ಸಮಾಚಾರವಿತ್ತರುವರು. ತನಿಖೆಯು ನಡೆಯುತ್ತಿದೆ.

ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ನೀರಾವರಿ ಸೌಕರ್ಯ

ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಪಿ. ವೆಂಕಟಸುಬ್ಬಯ್ಯನವರು ಈ ರೀತಿ ಬರೆದಿರುತ್ತಾರೆ –

ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಮಳೆಯ ಅಭಾವದಿಂದ ಕೆರೆಗಳಿಗೆ ನೀರು ಬಾರದೆ ತರೀ ಜಮೀನೆಲ್ಲಾ ಬಂಜರು ಬಿದ್ದಿದ್ದು ರಾಗಿ ಫಸಲು ಸಹ ಒಣಗಿ ಕಾಲ ಬೆಳೆಯೂ ಆಗುವ ಹಾಗಿಲ್ಲ. ಆ ಭಾಗದ ಹಳ್ಳಿಗಳು ಅಂದರೆ ... ಹೋಬಳಿಯಲ್ಲಿ ಕೆಲವು ಗ್ರಾಮಗಳವರಂತೂ ದನಗಳಿಗೆ ನೀರು ಕುಡಿಸಲು ಕಾವೇರಿ ನದಿಗೆ ಹೋಗಬೇಕಾಗಿದೆ.

ಈ ಕಷ್ಟದ ಪರಿಹಾರಕ್ಕೆ ಮುಖ್ಯವಾಗಿ ದೊಡ್ಡ ಕಮರವಳ್ಳಿ ಎಂಬ ಗ್ರಾಮದ ... ದಿಂದ ಅಡುಗೂರು ಕೆರೆಯವರೆಗೆ, ಸುಮಾರು ... ಮೈಲಿ ಉದ್ದಕ್ಕೆ ಒಂದು ನಾಲೆಯನ್ನು ತೆಗೆದುದಾದರೆ ಕಾವೇರಿ ಪ್ರವಾಹ ಬಂದ ಕಾಲದಲ್ಲಿ ಸಲೀಸು ಅಡಗೂರು ಕೆರೆಗೆ ನೀರು ಬಂದು ಸುಮಾರು ... ಎಕರೆವರೆಗೂ ತರೀ ಜಮೀನಿನ ಸಾಗುವಳಿಗೆ ಅನುಕೂಲವಾಗುತ್ತದೆ.

ಇಲ್ಲಿಂದ ಮುಂದಕ್ಕೆ ಕಣಗಾಲು ದೊಡ್ಡಕೆರೆಗೂ ನಾಲೆ ತೆಗೆದರೆ ಆ ಕೆರೆಗೂ ಮತ್ತು ಇನ್ನೂ ಅನೇಕ ಕೆರೆಗಳಿಗೂ ನೀರು ಸರಬರಾಜಾಗಿ ಭತ್ತದ ಬೆಳೆಗೆ ಅನುಕೂಲವಾಗುವುದು ಮತ್ತು ಈ ನಾಲೆಯ ಉಭಯ ಪಾರ್ಶ್ವದ ಜಮೀನುಗಳೂ ಸಹ ತರಿ ಸಾಗುವಳಿಗೆ ಅನುಕೂಲವಾಗುತ್ತವೆ. ಸರ್ಕಾರಕ್ಕೆ ಕಂದಾಯದ ರೂಪವಾಗಿ ೧೦ ಸಾವಿರದೂ ವರೆಗೂ ಹಣ ಬರುವುದಲ್ಲದೆ ಸರ್ಕಾರಿ ಬಂಜರು ಜಮೀನಿನ ಮಾರಾಟದಿಂದಲೂ ನಾರಿ ... ಉತ್ಪತ್ತಿ ಬರುತ್ತದೆ. ಈ ವಿಚಾರದಲ್ಲಿ ಜಾಗ್ರತೆ ಮಾಡಲು ಛೀಫ್ ಮತ್ತು ಸೂಪರಿಂಟೆಂಡಿಂಗ್ ಇಂಜನಿಯರುಗಳು ಕೂಡಲೆ ಈ ಯೋಜನೆಯನ್ನು ಮಂಜೂರು ಮಾಡಿಸಿಕೊಡಬೇಕಾಗಿ ಕೋರಲಾಗಿದೆ.

ಈ ಪ್ರಾಂತದಲ್ಲಿರುವ ಹೊನ್ನಾಪುರ ಮತ್ತು ಚಾಮರಾಜಕೋಟೆಗೆ ಮಧ್ಯೆ ಎತ್ತರವಾದ ಪ್ರದೇಶದಲ್ಲಿ ಅಂದರೆ "ಬೆಟ್ಟಬೋರೆ" ಎಂಬ ಸ್ಥಳದಲ್ಲಿ ಒಂದು ಇರ್ರಿಗೇಷನ್ ಪಂಪನ್ನು ಸ್ಥಾಪನೆ ಮಾಡಿದರೆ ಸುಮಾರು ೫೦೦ ಎಕರೆಗಳಷ್ಟು ಖುಷ್ಕಿ ಜಮೀನು ಆಬಾದಾಗಿ ತರಿ ಫಸಲು ತೆಗೆಯಲನುಕೂಲವಾಗುತ್ತದೆ. ಈ ಬಗ್ಗೆ 'ಹೆಚ್ಚು ಆಹಾರ ಬೆಳೆ' ಯೋಜನೆ ಕಮಿಷನರ್‌ರವರು ಯೋಜನೆಯನ್ನು ಮಂಜೂರು ಮಾಡಿಸಿಕೊಡಬೇಕಾಗಿ ಯೂ ಸಹ ಕೋರಲಾಗಿದೆ.

ಪ್ರಜಾ ಸರ್ಕಾರದವರು ಇತ್ತಕಡೆ ತ್ವರಿತ ಗಮನಕೊಟ್ಟು ನೀರಾವರಿ ಸಂಸ್ಥಾಪನೆ ಕೆಲಸವನ್ನು ಶೀಘ್ರದಲ್ಲಿ ಮಾಡಿಸಿಕೊಟ್ಟು ಈ ಪ್ರಾಂತದ ಜನರ ಕಷ್ಟವನ್ನು ನಿವಾರಣೆ ಮಾಡುತ್ತಾರೆಂದು ನಂಬಲಾಗಿದೆ.

ಜಿಲ್ಲಾ ಬೋರ್ಡ್ ಸಭೆ

ಮೈಸೂರು ಜಿಲ್ಲಾ ಬೋರ್ಡಿನ ಮಾಸ್ಯ ಅಧಿವೇಶನವು ಇದೇ ೩೦ನೇ ತಾ|| ಮಧ್ಯಾಹ್ನ ೧ ಗಂಟೆಗೆ ಬೋರ್ಡಿನ ಕಛೇರಿಯಲ್ಲಿ ನಡೆಯಲಿದೆ.

ರಾಜಕಮಲ್, ಮೈಸೂರು
14-9-51 ರಿಂದ 6ನೇ ವಾರ
ಜಗನ್ಮೋಹಿನಿ

Edited, printed and published by A R Nagarajan, at Sadhvi Press D. Subbiah Road, Mysore

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ಶ್ರೇಷ್ಠ ಸೀರೆಗಳಿವೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳೀ ಅಂಗಡಿ
ಬೆಂಗಳೂರು ಆನಂದ ಭವನ ಹೊಟೇಲು ಪಕ್ಕ, ಮೈಸೂರು

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು
ರತ್ನಾವಳಿ ಥಿಯೇಟರಿನಲ್ಲಿ
1-9-51ನೇ ಶನಿವಾರದಿಂದ
* ಶ್ರೀ ಕೃಷ್ಣಭಗವಾನ್
ಶುಕ್ರವಾರ ಮತ್ತು ಭಾನುವಾರಗಳಲ್ಲಿ 6 45ಕ್ಕೆ ಉಳಿದ ದಿನಗಳಲ್ಲಿ 9 45ಕ್ಕೆ
ಮುಂದಿನ ಆಕರ್ಷಣೆ – ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

Office of the President, District Board, Mysore

TENDER NOTIFICATION

1 Sealed tenders will be received at the offic[e] *of the President, District Board, Mysore* at 4 p m on 20-9-1951 for the works noted below:-

2. The works have to be completed by the en[d] of March 1952.

3 Tenders should be given on percentage basi[s] either above or below the sanctioned estimate.

4 Items not provided in the sanctioned estimate will be paid on the approved schedule of rates i[n] force, or data worked out during the execution o[f] the works

5 Each tender must be accompanied by a trea[sury] challan for having credited into the treasur[y] the earnest deposit of the amount noted against eac[h] work

6 Adequate progress should be shown from th[e] very commencement that is, from the date of agree[ment], failing which the earnest money will be forfeit[ed], contract cancelled without further notice and th[e] balance of work will be carried out at his risk.

7 Controlled articles required for the wor[k] will be supplied departmentally and the cost ther[e]of will be adjusted in the bills that come for paym[ent]

8 The successful tenderer will be required t[o] produce an In-come tax clearance or verificati[on] certificate before executing the work.

9 The President reserves the right of acceptin[g] or rejecting the tender without assigning any reason

10 The decision of the District Board in respe[ct] of any dispute regarding rates or other matters ar[is]ing will be final

11 Plans, estimates and other details connecte[d] with the work can be seen in the office on an[y] working day during office hours

R. K. [illegible]
President.

	Estimate	Earnest money rs
1 Constructing a Girls' Middle school at Saligrama, K. R. Nagar taluk.	Rs.20,000	Rs. 5..
2. Converting the existing building at Harave, Hunsur taluk into a dispensary	„ 2,500	„ .
3. Constructing a Veterinary Dispensary at Mirle, K R. Nagar taluk.	„ 7,500	„ 3

ರಿಜಿ ನಂ-೫೫೨ [illegible] ಬಿಡಿ ಪ್ರತಿ 3 ಕಾಸು

ಸಂಪುಟ ೧೧] ಮಂಗಳವಾರ ೧೬-೯-೫೦ [ಸಂಚಿಕೆ ೯೬

೧೮ ಸಹಸ್ರ ಪರ್ಷಿಯಾ ಎಣ್ಣೆ ಕಾರ್ಮಿಕರ ವಜಾ

ವಿವಾಹಕ್ಕೆ ಅಡ್ಡಿಯಾದ್ದರಿಂದ ಪ್ರಣಯಿಗಳಿಂದ ವಿಷ ಪಾನ

ಯುವಕನ ಸಾವು ತರುಣಿಯು ಆಸ್ಪತ್ರೆಯಲ್ಲಿ

ಬೆಂಗಳೂರು, ೧೮

ಇಲ್ಲಿನ ಅಡ್ವೊಕೇಟರಾದ ಶ್ರೀ ಎಸ್. [illegible] ಗೋಪಾಲರಾಯರ ಪುತ್ರ ೨೩ ವರ್ಷದ ಚಂದ್ರಶೇಖರ್ ಎಂಬ ಇಂಟರ್ ತರಗತಿಯ ವಿದ್ಯಾರ್ಥಿಯೂ, ಸಿಂಧ್ ದೇಶದಿಂದ ಬಂದಿರುವ ಶ್ರೀ ಲಾಲ್ವಾನಿಯವರ ಪುತ್ರಿ ೨೦ ವರ್ಷದ ಕುಮಾರಿ [illegible]ನನ್ನೂ ಇವರಿಬ್ಬರಲ್ಲಿ ಉಂಟಾದ ಪ್ರಣಯವು ದುರಂತದಲ್ಲಿ ಮುಕ್ತಾಯವಾದ ವಿಷಯವು ವರದಿಯಾಗಿದೆ. ಯುವಕನು ಪ್ರತ್ಯೇಕ ಕೊಠಡಿಯಲ್ಲಿ ವಾಸಮಾಡಿಕೊಂಡಿದ್ದು, ಅವನ ಬಳಿ ತರುಣಿಯು ಪದೇ ಪದೇ ಬಂದುಹೋಗಿ, ಇಬ್ಬರಲ್ಲೂ ಅನುರಾಗವು ಹುಟ್ಟಿ, ವಿವಾಹವಾಗಲು ಅವರುಗಳು ಪರಸ್ಪರ ಸಮ್ಮತ ಪಟ್ಟರೆಂದೂ ಆದರೆ ಯುವತಿಯ ತಂದೆತಾಯಿಗಳು ಇದಕ್ಕೆ ವಿರೋಧ ಮಾಡಿದರೆಂದೂ, ತತ್ಪರಿಣಾಮವಾಗಿ ಜೀವನದಲ್ಲಿ ಜಿಗುಪ್ಸೆ ಹುಟ್ಟಿ ಅವರುಗಳು ವಿಷಪಾನ ಮಾಡಿದರೆಂದೂ ಹೇಳಲಾಗಿದೆ. ಮೊನ್ನೆ ದಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತರುಣನು ಸತ್ತನು. ಮತ್ತು ತರುಣಿಯು ಪ್ರಜ್ಞಾಹೀನಳಾಗಿ ಆಸ್ಪತ್ರೆಯಲ್ಲಿರುತ್ತಾಳೆಂದು ಗೊತ್ತಾಗಿದೆ

ವಿಮಾನ ಚಾಲಕರಲ್ಲೊಬ್ಬನ ನಿಧನ

[illegible]ನೇ ತಾ॥ ಬೆಳಿಗ್ಗೆ ಆದ ವಿಮಾನ ದುರಂತದ ಸಂಬಂಧವಾಗಿ ಗಾಯ[illegible]ಗೊಂಡ ಸಹಾಯಕ ಚಾಲಕರಾದ ಶ್ರೀ [illegible] ಭಾಸ್ಕರರವರು ನೆನ್ನೆ ಬೆಳಿಗ್ಗೆ [illegible] ಗಂಟೆಗೆ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಅವರಿಗೆ ಇನ್ನೂ [illegible] ವರ್ಷವಾಗಿತ್ತು. ಚಾಲಕ ಶ್ರೀ ಗುಲಾಬಿಯವರ ಸ್ಥಿತಿಯು ಇದ್ದ ಹಾಗೆಯೇ ಇದೆಯೆಂದೂ, ರೇಡಿಯೋ ಅಧಿಕಾರಿ ಸಿ. ಟಿ. [illegible] ಮತ್ತು ಏರ್ ಹೋಸ್ಟೆಸ್ [illegible] ಕಾರ್ಲಿ ಫ್ರೆಂಚ್‌ರವರು ಗುಣ ಹೊಂದುತ್ತಿರುವರೆಂದೂ ಹೇಳಲಾಗಿದೆ. ಪ್ರಯಾಣಿಕರಿಬ್ಬರೂ ಆಸ್ಪತ್ರೆಯಿಂದ ಕಳುಹಿಸಲ್ಪಟ್ಟಿರುತ್ತಾರೆ.

ಮುಖ್ಯಮಂತ್ರಿಗಳಿಗೆ ಅಸ್ವಸ್ಥತೆ

ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಅಸ್ವಸ್ಥರಾಗಿರುವುದರಿಂದ ಅವರಿಗಿದ್ದ ಅರಮನೆ ಮತ್ತು ಸೆಕ್ರೆಟೇರಿಯಟ್ ಖಾತೆಗಳನ್ನು ಶ್ರೀ. ಹೆಚ್. ಸಿ. [illegible]ಸಪ್ಪನವರಿಗೂ, ವರ್ತಮಾನ ಶಾಖೆಯನ್ನು ಶ್ರೀ ಕೆ. ಟಿ. ಭಾಷ್ಯಂರವರಿಗೂ [illegible]ಸಾರ ಮತ್ತು ಸಿವಿಲ್ ಸರಬರಾಜು [illegible]ತೆಗಳನ್ನು ಶ್ರೀ ಟಿ. ಮರಿಯಪ್ಪನವರಿಗೂ, ಪುನರ್ವ್ಯವಸ್ಥೆ ಮತ್ತು ಮಿಲಿಟರಿ ವಿಷಯಗಳನ್ನು ಕ್ರಮವಾಗಿ ಶ್ರೀಗಳಾದ [illegible]. ಚೆನ್ನಿಗರಾಮಯ್ಯ ಮತ್ತು ಹೆಚ್. [illegible]ದ್ದಯ್ಯನವರಿಗೂ ವಹಿಸಲಾಗಿದೆ.

ದಸರಾ ಕಾಲದ ವಿಶೇಷಾಧಿಕಾರಿ

ದಸರಾ ಕಾಲದಲ್ಲಿ ಆಹ್ವಾನಿಸಲ್ಪಡುವ ದೊಡ್ಡಮನುಷ್ಯರ ಸೌಕರ್ಯಗಳ ವಿಚಾರಣೆ ಮತ್ತು ಶಾಸನಸಭೆಯ ಅಧಿವೇಶನದ ವಿ[illegible] ಇವುಗಳಿಗಾಗಿ ಸೆಕ್ರೆಟೇರಿಯಟ್ಟಿನ ಶ್ರೀ ಸಿ. ರಾಮಸ್ವಾಮಿಯವರನ್ನು ವಿಶೇಷಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಸಂಸ್ಥಾನದ ವಿದ್ಯಾಸಂಸ್ಥೆಯ ಸಮ್ಮೇಳನ

ಶ್ರೀಮನ್ಮಹಾರಾಜರಿಂದ ಆರಂಭೋತ್ಸವ

ಮೈಸೂರು ೧೮

ಮೈಸೂರು ಸಂಸ್ಥಾನದ ವಿದ್ಯಾಸಂಸ್ಥೆಯ ೧೮ನೇ ಸಮ್ಮೇಳನವು ಈ ತಿಂಗಳು ೨೨, ೨೩, ಮತ್ತು ೨೪ನೇ ತಾ॥ ಮಂಡ್ಯದ ಶ್ರೀ ರಾಜೇಶ್ವರಿ ಸಿನಿಮಾ ಮಂದಿರದಲ್ಲಿ ನಡೆಯುವುದು. ಶ್ರೀಮನ್ಮಹಾರಾಜರು ೨೨ನೇ ತಾ॥ ಬೆಳಿಗ್ಗೆ ೧೧ ಗಂಟೆಗೆ ಇದರ ಆರಂಭೋತ್ಸವವನ್ನು ನೆರವೇರಿಸುವರು. ಸಂಸ್ಥಾನದ ವಿದ್ಯಾ ಇಲಾಖೆಯ ಡೈರೆಕ್ಟರರಾದ ಶ್ರೀ ಕೆ. ಗುರುದತ್‌ರವರು ಅಧ್ಯಕ್ಷತೆ ವಹಿಸುವರು

ವೀಣಾ ವಾದನ

ಮಂಡಿ ಮೊಹಲ್ಲ ಕಾಳಮ್ಮನ ಗುಡಿ ಬೀದಿಯಲ್ಲಿರುವ ದೇವಾಂಗ ಸಂಘದ ವಿದ್ಯಾರ್ಥಿನಿಲಯದಲ್ಲಿ, ಮಹಾ ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಾಯಂಕಾಲ ೭ ಘಂಟೆಗೆ ಸಂ॥ ವಿ॥ ಡಿ. ವಿ. ರಾಜಂ ಪುರವರ ವೀಣಾ ವಾದನವು ನಡೆಯುವುದು. ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ.

ಚುನಾವಣಾ ವೆಚ್ಚಗಳ ಪರಮಾವಧಿ

ಕೇಂದ್ರ ಪಾರ್ಲಿಮೆಂಟಿಗೆ ಉಮೇದುವಾರರಾಗಿರುವವರು ಏಕ ಸದಸ್ಯ ಕ್ಷೇತ್ರದಲ್ಲಿ ೨೫ ಸಾವಿರ ರೂ. ಗಳಿಗೂ, ೨ ಸದಸ್ಯರಿರುವ ಕ್ಷೇತ್ರಗಳಲ್ಲಿ ೩೫ ಸಾವಿರ ರೂ ಗಳಿಗೂ, ಮಿಾರದಂತೆಯೂ ಮತ್ತು ಪ್ರಾಂತೀಯ ಶಾಸನ ಸಭಾ ಚುನಾವಣೆಗಳಲ್ಲಿ ಸದರಿ ಕ್ಷೇತ್ರಗಳಿಗೆ ೬ ಸಾವಿರ ಮತ್ತು ೧೦,೦೦೦ ರೂ. ಗೆ ಮಿೀರದಂತೆಯೂ ಹಣವನ್ನು ವೆಚ್ಚಮಾಡಬಹುದೆಂದು ನಿರ್ಧಾರಕವಾಗಿದೆ.

ಶೇ॥ ೧೫ರಷ್ಟು ಬಟ್ಟೆ ಬೆಲೆಯಲ್ಲಿ ಇಳಿತಾಯ

ನಯ ಮತ್ತು ಅತ್ಯುತ್ತಮ ಬಟ್ಟೆಗಳ ಬೆಲೆಯನ್ನು ಬರುವ ೧ನೇ ತಾ॥ ನಿಂದ ಶೇ॥ ೧೫ರಷ್ಟು ಇಳಿಸಲಾಗುವುದೆಂದು ತಿಳಿದುಬಂದಿದೆ. ಒರಟು ಮತ್ತು ಮಧ್ಯಮ ವರ್ಗದ ಬಟ್ಟೆಗಳಿಗೆ ಈ ಇಳಿತಾಯವು ಅನ್ವಯಿಸುವುದಿಲ್ಲವೆಂದು ಹೇಳಲಾಗಿದೆ.

ಪಾಕಿಸ್ತಾನಕ್ಕೆ ಬ್ರಿಟನ್ನಿನ ಪಕ್ಷಪಾತ

ಬ್ರಿಟನ್ನು ಪಾಕಿಸ್ತಾನಕ್ಕೆ ಹೇರಳವಾಗಿ ಜೆಟ್ ವಿಮಾನ, ಮದ್ದು ಗುಂಡು ಮತ್ತು ರೇಡಿಯೊ ಉಪಕರಣ ಮುಂತಾದ ಯುದ್ಧ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿರುವುದಕ್ಕಾಗಿ ಬ್ರಿಟಿಷ್ ಸರ್ಕಾರಕ್ಕೆ ಭಾರತವು ಪ್ರತಿಭಟನೆಯನ್ನು ಸೂಚಿಸಿರುತ್ತದೆ ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹದಿರಲು ಬ್ರಿಟನ್ನು "ಕುಂಟು" ನೆಪ ಹೇಳಿ, ಪಾಕಿಸ್ತಾನಕ್ಕೆ ಅವುಗಳನ್ನು ಕಳುಹಿಸುತ್ತಿರುವುದಕ್ಕಾಗಿ ಆಕ್ಷೇಪಿಸಲಾಗಿದೆ.

ನೆಹರೂರವರ ಮುಂದೆ ಸಾಂಬಮೂರ್ತಿ ಸತ್ಯಾಗ್ರಹ

ಬರುವ ತಿಂಗಳು ೨ನೇ ತಾ॥ ನೊಳಗಾಗಿ ಆಂಧ್ರ ಪ್ರಾಂತ ರಚನೆಯ ಬಗ್ಗೆ ಕೇಂದ್ರ ಸರ್ಕಾರದವರು ಸೂಕ್ತ ಕ್ರಮವನ್ನು ಕೈಗೊಳ್ಳದಿದ್ದರೆ ದೆಹಲಿಗೆ ತೆರಳಿ ಪ್ರಧಾನಿ ನೆಹರೂರವರ ಮುಂದೆ ಸತ್ಯಾಗ್ರಹ ಹೂಡುವುದಾಗಿ ಮದ್ರಾಸಿನ ಮಾಜಿ ಶಾಸನ ಸಭಾಧ್ಯಕ್ಷರಾದ ಬುಲುಸು ಸಾಂಬಮೂರ್ತಿಯವರು ತಿಳಿಸಿರುವರು ಅವರು ಭಾಷಣ ಮಾಡಿದ ಬಹಿರಂಗ ಸಭೆಯಲ್ಲಿ ೬೦ ಜನ ಪ್ರಮುಖ ಮುಂದಾಳುಗಳು ಆಂಧ್ರ ಪ್ರಾಂತ ರಚನೆಗಾಗಿ ಸರ್ವ ತ್ಯಾಗ ಮಾಡಲು ಸಿದ್ಧರಿರುವುದಾಗಿ ಪ್ರತಿಜ್ಞೆಯನ್ನು ಸ್ವೀಕರಿಸಿರುತ್ತಾರೆ

ಬ್ರಿಟನ್ನಿನೊಡನೆ ರಾಜಿಯೇ ಇಲ್ಲವೆಂದು ಮುಸಾದಿಕ್

ಪರ್ಷಿಯಾದ ಪ್ರತಿನಿಧಿಗಳು ಮತ್ತು ಪಾರ್ಲಿಮೆಂಟು ಬೆಂಬಲ ನೀಡುವವರಿಗೆ ಎಣ್ಣೆ ವ್ಯಾಜ್ಯದ ಸಂಬಂಧವಾಗಿ ಬ್ರಿಟನ್ನಿನೊಡನೆ ತಾವು ರಾಜಿ ಮಾಡಿಕೊಳ್ಳುವುದಿಲ್ಲವೆಂದು ಅಲ್ಲಿನ ಪ್ರಧಾನಿ ಮೊಸ್ಸಾದಿಕ್‌ರವರು ತಿಳಿಸಿರುತ್ತಾರೆ.

ಮದ್ರಾಸಿನಲ್ಲಿ ಸರ್ವ ಧರ್ಮಗಳ ಪಾರ್ಲಿಮೆಂಟ್

೫೫ ವರ್ಷಗಳಿಗೂ ಹಿಂದೆ ಅಮೇರಿಕದ ಚಿಕಾಗೋ ನಗರದಲ್ಲಿ ನಡೆದ ಸರ್ವ ಧರ್ಮಗಳ ಪಾರ್ಲಿಮೆಂಟ್ ಅಧಿವೇಶನವನ್ನು ಬರುವ ವರ್ಷದ ದ್ವಿತೀಯ ಭಾಗದಲ್ಲಿ ಮದ್ರಾಸು ನಗರದಲ್ಲಿ ಸೇರಿಸಲು ವಿಶ್ವಜ್ಞಾನ ಸಂಘದವರು ನಿರ್ಧರಿಸಿರುತ್ತಾರೆ.

೧೮ ಸಾವಿರ ಪರ್ಷಿಯಾ ಎಣ್ಣೆ ಕಾರ್ಮಿಕರ ವಜಾ

೧೮ ಸಾವಿರ ಪರ್ಷಿಯಾದ ಕಾರ್ಮಿಕರು ಮತ್ತು ೨ ಸಾವಿರ ಗುಮಾಸ್ತರುಗಳನ್ನು ಈ ತಿಂಗಳ ಅಂತ್ಯದಿಂದ ಕೆಲಸಕ್ಕೆ ತೆಗೆದುಕೊಳ್ಳಲು ಅಲ್ಲಿರುವ ಬ್ರಿಟಿಷ್ ಎಣ್ಣೆ ಕಂಪೆನಿಯು ನಿರಾಕರಿಸಿರುತ್ತದೆ. ಪರ್ಷಿಯಾವು ಬ್ರಿಟನ್ನಿಗೆ ಆ ಮೆ ರಿ ಕ ದ ಹ್ಯಾರಿಮನ್ನರ ಮೂಲಕ ಕಳುಹಿಸಿದ್ದ ಅಂತಿಮ ಎಚ್ಚರಿಕೆಯನ್ನು ಅವರು ಬ್ರಿಟಿಷ್ ಸರ್ಕಾರಕ್ಕೆ ರವಾನಿಸಲು ನಿರಾಕರಿಸಿರುವುದರಿಂದ ಪರ್ಷಿಯಾವೇ ನೇರವಾಗಿ ಅದನ್ನು ಕಳುಹುವುದೆಂದು ಹೇಳಲಾಗಿದೆ.

ಸಿನಿಮಾ ಮಂದಿರ ಕುಸಿದು ೫೦ ಜನರ ಮರಣ

ಬ್ರೆಜಿಲ್ ದೇಶದ [illegible] ಎಂಬ ಒಂದು ನಗರದಲ್ಲಿ ಸಿನಿಮಾ ಕಟ್ಟಡವು ಮೊನ್ನೆ ಕುಸಿದುದರ ಪರಿಣಾಮವಾಗಿ ೫೦ ಜನಕ್ಕಿಂತಲೂ ಹೆಚ್ಚಾಗಿ ಮಡಿದರೆಂದು ವರದಿಯಾಗಿದೆ.

ಉಪವಾಸ ನಿಲ್ಲಿಸಲು ನೆಹರೂ ತಂತಿ

ಗುಂಟೂರಿನಲ್ಲಿ ಉಪವಾಸವನ್ನು ಕೈಗೊಂಡಿರುವ ಸ್ವಾಮಿ ಸೀತಾರಾಂರವರು ಉಪವಾಸ ನಿಲ್ಲಿಸುವಂತೆ ಪ್ರೇರೇಪಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರಾದ ನೆಹರೂರವರು ಶಾಸನ ಸಭಾ ಸದಸ್ಯ ಎ. ಕಾಮೇಶ್ವರ ರಾಯರಿಗೆ ತಂತಿಯನ್ನು ಕಳುಹಿಸಿರುತ್ತಾರೆ.

ಹಡಗಿಗೆ ಮೈನು ತಗಲಿ ೬೮ ಜನರು ನೀರಿನ ಪಾಲು

ವಿಯಟ್‌ನಾಮ್ ಯುದ್ಧ ರಂಗಕ್ಕೆ ಅನೇಕ ಸುಸಜ್ಜಿತ ಧಾಳಿ ನಡೆಸಲು ಸೈನಿಕರನ್ನು ಸಾಗಿಸಿಕೊಂಡು ಹೋಗುತ್ತಿದ್ದ ಒಂದು ಫ್ರೆಂಚ್ ನಾವೆಯು ಹೈಫಾಂಗಿಗೆ ೩೦ ಮೈಲಿ ದೂರದಲ್ಲಿ ಶತ್ರುಗಳು ಸಮುದ್ರದಲ್ಲಿ ಹಾಕಿದ್ದ ಮೈನಿಗೆ ತಗುಲಿ ಅಪಘಾತಕ್ಕೀಡಾಯಿತೆಂದೂ ಅದರಲ್ಲಿದ್ದವರ ಪೈಕಿ ೬೮ ಜನ ನಾವಿಕರು ಮತ್ತು ಸೈನಿಕರು ನೀರಿನ ಪಾಲಾದರೆಂದೂ, ೫೭ ಜನರಿಗೆ ತೀವ್ರ ಗಾಯಗಳಾಗಿವೆಯೆಂದೂ ವರದಿಯಾಗಿದೆ.

ಮೋಕ್ಷ ಪಡೆಯಲು ಉಪವಾಸ ಮಾಡಿ ಮರಣ

ಪ್ರಪಂಚದ ವ್ಯವಹಾರಗಳನ್ನು ಕಂಡು ಬೇಸತ್ತು, ಜಮ್ಮುವಿನ ೧೯ ವರ್ಷದ ಸಾಧುವೊಬ್ಬನು ಮೋಕ್ಷಾಪೇಕ್ಷೆಯಾಗಿ ಕಳೆದ ೩ ತಿಂಗಳುಗಳಿಂದ ಉಪವಾಸ ವ್ರತವನ್ನು ಕೈಗೊಂಡು ಕಳೆದ ಶನಿವಾರ ನಿರ್ಯಾಣವನ್ನು ಹೊಂದಿದನು.

೧೫ ಕೋಟಿ ರೂ. ವೆಚ್ಚದಲ್ಲಿ ಕಪಿನೀ ನದಿಗೆ ಅಣೆಕಟ್ಟು

೧೦ದೂವರೆ ಕೋಟಿ ರೂ. ವೆಚ್ಚದಲ್ಲಿ ಕಪಿನಿ ನದಿಗೆ ಅಣೆಕಟ್ಟನ್ನು ಹಾಕಲು ಸರ್ಕಾರದವರು ಆಲೋಚಿಸುತ್ತಿರುವುದಾಗಿಯೂ, ಈ ಅಣೆ ಕಟ್ಟಿನ ಜಲಾಶಯದಿಂದ ವ್ಯವಸಾಯವು ಇನ್ನೂ ಹೆಚ್ಚಾಗಿ ಸಕ್ಕರೆ ಕಾರ್ಖಾನೆಗೆ ಭಾರಿ ಪ್ರಮಾಣದಲ್ಲಿ ಕಬ್ಬನ್ನು ಒದಗಿಸಲು ಸಾಧ್ಯವಾಗುವುದೆಂದೂ ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ ಭಾಷ್ಯಂರವರು ಮೊನ್ನೆ ಮಂಡ್ಯದ ಸಕ್ಕರೆ ಕಂಪೆನಿಯ ೧೮ನೆಯ ವಾರ್ಷಿಕೋತ್ಸವದ ಸಮಯದಲ್ಲಿ ಅಧ್ಯಕ್ಷ ಭಾಷಣ ಮಾಡಿ, ತಿಳಿಸಿದರು.

ಮದ್ರಾಸು ಮುಖ್ಯಮಂತ್ರಿಗೆ ಕೃಪಲಾನಿಯವರ ಸವಾಲ್

ಮದ್ರಾಸು ಮುಖ್ಯ ಮಂತ್ರಿ ಕುಮಾರಸ್ವಾಮಿ ರಾಜಾರವರಿಗೆ ಅಧಿಕಾರ ವಿದ್ಧತೆ ಶಮ್ಮನ್ನು ವಿಚಾರಣೆಗೆ ಗುರಿಪಡಿಸಲೆಂದು ಆಚಾರ್ಯ ಕೃಪಲಾನಿಯವರು ಸವಾಲ್ ಹಾಕಿರುತ್ತಾರೆ ಮುಖ್ಯ ಮಂತ್ರಿಗಳು ಹೇಳಿಕೆಯೊಂದನ್ನಿತ್ತು ಕೃಪಲಾನಿ ಅಥವಾ ಇನ್ನಾವ ಮನುಷ್ಯನೇ ಆಗಲಿ ರಾಜದ್ರೋಹಕರ ಭಾಷಣ ಮಾಡಿದರೆ, ಅವರನ್ನು ವಿಚಾರಿಸಲಾಗುವುದೆಂದು ತಿಳಿಸಿದ್ದುದಕ್ಕೆ ಕೃಪಲಾನಿಯವರು ಮೇಲ್ಕಂಡಂತೆ ಉತ್ತರವಿತ್ತು ರಾಜದ್ರೋಹದ ಅಪಾದನೆಯನ್ನು ತಮ್ಮ ಮೇಲೆ ಹೊರಿಸಲು ಸಕಾದಷ್ಟು ಅವಕಾಶವನ್ನು ತಾವು ಕಲ್ಪಿಸಿರುವುದಾಗಿ ಹೇಳಿರುತ್ತಾರೆ

ಸಿನಿಮಾ ನಟರ ವ್ಯಾಜ್ಯದಿಂದ ಮೂಗು ಮುರಿಯಿತು

ಹಾಲಿವುಡ್ಡಿನ ಫ್ರಾಂಕಾಟ್ ಟೋನ್ ಮತ್ತು ಟಾಂ ನೀಲ್ ಎಂಬ ಇಬ್ಬರು ಸುಪ್ರಸಿದ್ಧ ಸಿನಿಮಾ ನಟರಿಗೆ ಮೊನ್ನೆ ಬರ್ಬರಾ ಪೇಟ್ಟ್ ಎಂಬ ನಟಿ ಮನೆಯ ಹೊರಭಾಗದಲ್ಲಿ ಹೊಡೆದಾಟವಾಗಿ ಫ್ರಾಂಕಾಟ್ ಟೋನರ ಮೂಗು ಮುರಿಯಿತು ಆಕೆಯು ವ್ಯಾಜ್ಯ ಪರಿಸಮಾಪ್ತಿಯಾಗುವವರೆಗೂ ಕಿರಚಿಕೊಳುತ್ತಿದ್ದಳು ಮೂಗಿಗೆ ಶಸ್ತ್ರ ಚಿಕಿತ್ಸೆ ನಡೆಸಲಾಯಿತು ವ್ಯಾಜ್ಯ ಮಾಡಿದುದಕ್ಕಾಗಿ ನಟಿ ಪೇಟನ್ನಳು ನೀಲ್‌ನೊಡನೆ ಮಾಡಿಕೊಳ್ಳಬೇಕಿದ್ದ ವಿವಾಹವೂ ಸಹ ಮುರಿಯಲ್ಪಟ್ಟಿತು

ಜಿಲ್ಲೆಯಲ್ಲಿ ಜನತಾ ಪಕ್ಷದ ಮುಖಂಡರ ಪ್ರವಾಸ

ಮೈಸೂರು ಸಂಸ್ಥಾನದ ಜನತಾ ಪಕ್ಷದ ಅಧ್ಯಕ್ಷ ಶ್ರೀ ಬಿ ಕುಚ್ಚೇಗೌಡ ಮಾಜಿ ಮಂತ್ರಿ ಶ್ರೀ ಎಲ್ ಶಿವಪ್ಪ ಪ್ರಜಾಮತ ಪತ್ರಿಕೆಯ ಸಂಪಾದಕ ಶ್ರೀ ಎಂ ಎಸ್ ಗುರುಪಾದಸ್ವಾಮಿ ಮತ್ತು ಮೈಸೂರಿನ ಶ್ರೀ ಬಿ ಎಂ ರಾಜಶೇಖರ ಮೂರ್ತಿ ಇವರುಗಳು ಟಿ ನರಸೀಪುರ, ಚಾಮರಾಜನಗರ ಯಳಂದೂರು ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಮೊನ್ನೆ ಸಂಚರಿಸಿ ಮಹಾ ಚುನಾವಣೆಯಲ್ಲಿ ತಮ್ಮ ಪಕ್ಷದ ಪರವಾಗಿ ಉಮೇದುವಾರರನ್ನು ಆರಿಸಲು ಸ್ಥಳೀಯ ಮುಖಂಡರುಗಳೊಡನೆ ಸಮಾಲೋಚನೆ ನಡೆಸಿದರು ಸಂಜೆ ಅವರು ಬೆಂಗಳೂರಿಗೆ ವಾಪಸು ತೆರಳಿದರು

ಗಣಪತಿ ಮಂಗಳಾರತಿ

ಮೈಸೂರು ರೈಲ್ವೆ ಪೊಲೀಸ್ ಸಿಬ್ಬಂದಿಯವರು ತಮ್ಮ ಕಛೇರಿಯಲ್ಲಿ ಮೊನ್ನೆ ಸಂಜೆ ಗಣಪತಿ ಮಹಾಮಂಗಳಾರತಿಯನ್ನು ವಿಪುಲ ವಿಜೃಂಭಣೆಯಿಂದ ನಡೆಸಿ, ತಮ್ಮ ಸಹೋದ್ಯೋಗಿಗಳನ್ನೂ ಇಷ್ಟಮಿತ್ರರನ್ನೂ ಆಹ್ವಾನಿಸಿ ಸತ್ಕರಿಸಿದರು

ಚೆನ್ನಯ್ಯನವರ ಆಗಮನ

ಈಗ ವಿದೇಶ ಪ್ರವಾಸ ಕೈಗೊಂಡಿರುವ ಸಾಹುಕಾರ್ ಎಸ್ ಚೆನ್ನಯ್ಯನವರು ಲಂಡನ್ನಿನಿಂದ ಇದೇ ತಿಂಗಳು ೨೦ನೇ ತಾ|| ವಿಮಾನದಲ್ಲಿ ಹೊರಟು ೨೧ನೇ ತಾ|| ಬೊಂಬಾಯನ್ನು ತಲುಪಿ ೨೨ನೇ ತಾ|| ಬೆಂಗಳೂರಿಗೆ ಆಗಮಿಸುವರು

ಸಮಾಜವಾದಿ ಮತ್ತು ಪ್ರಜಾ ಪಕ್ಷಗಳ ಚುನಾವಣಾ ಸಖ್ಯ

ಮಹಾ ಚುನಾವಣೆಗಳಲ್ಲಿ ಸಮಾಜವಾದಿ ಪಕ್ಷ ಮತ್ತು ಕೃಷಕ್ ಮಜದೂರ್ ಪ್ರಜಾ ಪಕ್ಷಗಳು ಏಕಮತ್ಯದಿಂದ ಹೋರಾಡುವ ಬಗ್ಗೆ ಎರಡು ಪಕ್ಷಗಳ ಮುಖಂಡರುಗಳಾದ ಜಯಪ್ರಕಾಶ್ ನಾರಾಯಣ ಮತ್ತು ಆಚಾರ್ಯ ಕೃಪಲಾನಿಯವರುಗಳಿಗೆ ಮಾತುಕತೆಗಳು ನಡೆದಿವೆ ಪ್ರಾಂತಗಳಲ್ಲಿ ತ್ರಿಕೋಣಾಕಾರದ ಹೋರಾಟವನ್ನು ತಪ್ಪಿಸಲು ಈ ರೀತಿಯ ವ್ಯವಸ್ಥೆಯು ಆಗಿದೆ

ಉಪಾಧ್ಯಾಯರೊಬ್ಬರ ಉಪವಾಸ ಮುಕ್ತಾಯ

ಬೊಂಬಾಯಿಯ ಬಿ ಡಿ ಪುಡ್ವಾಲ್ ಎಂಬ ಒಬ್ಬ ಉಪಾಧ್ಯಾಯರು ಕಳೆದ ೪೭ ದಿನಗಳಿಂದಲೂ ಉಪವಾಸವನ್ನು ಕೈಗೊಂಡು ಈಗ ಗೃಹ ಮಂತ್ರಿ ಮೊರಾರ್ಜಿ ದೇಸಾಯರ ಸೂಚನೆಯಂತೆ ಅದನ್ನು ಮುಕ್ತಾಯ ಮಾಡಿರುತ್ತಾರೆ ಅವರನ್ನೂ ಅವರ ಸಹೋದ್ಯೋಗಿಗಳನ್ನೂ ಕೆಲಸಕ್ಕೆ ಪುನ ತೆಗೆದುಕೊಳ್ಳಬೇಕೆಂದು ಅವರು ಬೇಡಿಕೆ ಇಟ್ಟಿದ್ದರು

ಇಂಟರ್ ಸೈನ್ಸ್ ವಿದ್ಯಾರ್ಥಿಗಳಿಗೆ ಪಾಠದ ತರಗತಿಗಳು

ರಾಜಧಾನಿಯ ವಾಣೀವಿಲಾಸ ಮೊಹಲ್ಲೆಯ ಜಯಪ್ರಕಾಶ ಮಂದಿರದಲ್ಲಿ ತಿಲಕ ಸಂಘದವರು ಬರುವ ೨೪ ನೇ ತಾ|| ನಿಂದ ಇಂಟರ್ಮೀಡಿಯಟ್ ಸೈನ್ಸ್ ವಿದ್ಯಾರ್ಥಿಗಳಿಗಾಗಿ ಪಾಠದ ತರಗತಿಗಳನ್ನು ಪ್ರಾರಂಭಿಸುತ್ತಾರೆ ಹೆಚ್ಚು ವಿವರಗಳನ್ನು ಸಂಘದ ಕಛೇರಿಯಲ್ಲಿ ದಿನವು ಬೆಳಿಗ್ಗೆ ೮ ರಿಂದ ೧೦ರ ಒಳಗೆ ತಿಳಿದುಕೊಳ್ಳಬಹುದು

ಭಾರತ ಸೇವಾದಳ

ಭಾರತ ಸೇವಾದಳದ ಕೇಂದ್ರ ಸಮಿತಿ ಸಭೆಯು ಕಳೆದ ೧೬ನೇ ತಾ|| ಬೆಂಗಳೂರಿನಲ್ಲಿರುವ ಸೇವಾದಳದ ಕಾರ್ಯಾಲಯದಲ್ಲಿ ನಡೆದು ವಾರ್ಷಿಕ ಆಯವ್ಯಯ ಮತ್ತು ಸಂಸ್ಥೆಯ ಇತರ ಕಾರ್ಯಕ್ರಮ ಮುಂತಾದುವು ಪರಿಶೀಲಿಸಲ್ಪಟ್ಟುವು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಮಥುರಾದಾಸ್ ಪುರುಷೋತ್ತಮ್‌ರವರು ಸಭೆಗೆ ಬಂದಿದ್ದರು

ಚಿನ್ನದ ಗಣಿ ಕಾರ್ಮಿಕರಿಗೆ ಜಾಮೀನು ತಿರಸ್ಕಾರ

ಕೋಲಾರದ ಚಿನ್ನದ ಗಣಿಗಳಲ್ಲಿ ಒಂದಾದ ನಂದಿ ದುರ್ಗದಲ್ಲಿ ಬೆಂಕಿ ಸಂಬಂಧವಾಗಿ ದಸ್ತಗಿರಿಯಾಗಿರುವ ಕೆ ಬಿ ತಿಮ್ಮಯ್ಯ ಮುಂತಾದ ೭ ಜನರನ್ನು ಜಾಮೀನಿನ ಮೇಲೆ ಬಿಡಬೇಕೆಂದು ಹಾಕಲಾಗಿದ್ದ ಅರ್ಜಿಗಳನ್ನು ಅಲ್ಲಿನ ವಿಶೇಷ ನ್ಯಾಯಾಧೀಶರು ತಿರಸ್ಕರಿಸಿರುತ್ತಾರೆ

ಮಕ್ಕಾ ಯಾತ್ರೆಗೆ ಹೊರಟ ೨೦೦ ಜನರ ಮರಣ

ಮಕ್ಕಾ ನಗರದಲ್ಲಿ ಬಿಸಿಲಿನ ತಾಪವು ಅತ್ಯಂತವಾಗಿದ್ದು ಅಲ್ಲಿ ಈಗಾಗಲೇ ೨೦೦ ಜನ ಯಾತ್ರಾರ್ಥಿಗಳು ಮಡಿದಿರುವುದಾಗಿ ತಿಳಿದುಬಂದಿದೆ ಕಳೆದ ವಾರ ಆ ನಗರದಲ್ಲಿ ವೈವಾರ್ಷಿ ಪೈರಾಂ ಹಬ್ಬವನ್ನು ಆಚರಿಸುವ ಸಂಬಂಧವಾಗಿ ಅನೇಕ ಜನರು ಅಲ್ಲಿಗೆ ಹೋಗಿದ್ದರು ಸತ್ತವರಲ್ಲಿ ನಾನಾ ಮುಸ್ಲಿಂ ದೇಶಗಳಿಗೆ ಸೇರಿದವರು ಇರುವರು

ಇಟ್ಟಿಗೆಗೂಡು ಯುವಕರ ಸಂಘ

ರಾಜಧಾನಿಯ ಇಟ್ಟಿಗೆಗೂಡಿನ ಯುವಕರ ಸಂಘದ ಈ ವರ್ಷದ ಆರಂಭೋತ್ಸವದ ಭಾಷಣವನ್ನು ಪೌರಸಭಾ ಕಮಿಷನರಾದ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರು, ಸಂಘದ ಕಟ್ಟಡದಲ್ಲಿ ಮೊನ್ನೆ ಮಾಡಿದರು ಸ್ವತಂತ್ರ ಭಾರತದಲ್ಲಿ ಯುವಕರ ಜವಾಬ್ದಾರಿಯನ್ನು ಅವರು ವಿವರಿಸಿ ಸಂಘ ಬಲದಿಂದ ಎಲ್ಲವೂ ಸಾಧ್ಯವೆಂದು ತಿಳಿಸಿದರು

ಸುಬ್ಬರಾಯನಕೆರೆ ಹಂತ ಸರಿಯಾಗಿಲ್ಲದೆ ತೊಂದರೆ

ಸುಬ್ಬರಾಯನಕೆರೆಯ ಉತ್ತರ ಭಾಗದಲ್ಲಿ ಜನರು ಹೋಗಿಬರುವುದಕ್ಕಾಗಿ ಕಟ್ಟಲಾಗಿದ್ದ ಕಲ್ಲಿನ ಮೆಟ್ಟಲುಗಳ ಹಂತವು ಮುಚ್ಚಿಹೋಗಿರುವುದರಿಂದ ಓಡಾಡುವ ಜನರಿಗೆ ತುಂಬಾ ತೊಂದರೆಯಾಗಿದೆ ಅಲ್ಲಿ ಜಾರಿಕೆಯಿಂದ ಹೆಂಗಸರು, ಮಕ್ಕಳು ಕತ್ತಲು ವೇಳೆ ಬೀಳುವ ಪ್ರಸಂಗಗಳು ನಡೆದಿವೆ ಇದನ್ನು ಸರಿಪಡಿಸಬೇಕಾದುದು ಸಂಬಂಧಪಟ್ಟವರ ಕೆಲಸ ಅದನ್ನು ಕೂಡಲೇ ಮಾಡಿ, ಜನರಿಗೆ ಸಂಚಾರಾನುಕೂಲವನ್ನು ಕಲ್ಪಿಸುವರೆಂದು ಹಾರೈಸಿ ವಾಚಕರೊಬ್ಬರು ಪತ್ರ ಬರೆದಿದ್ದಾರೆ

ಸತ್ತ ಮಗುವಿನ ಬದಲು ಜೀವಂತ ಶಿಶು ನದಿ ಪಾ

ಅಮೃತಸರದಿಂದ ಲೂಧಿಯಾ ಹೋಗುವ ಒಂದು ಬಸ್ಸಿನಲ್ಲಿ ಪ್ರಯಾ ಮಾಡುತ್ತಿದ್ದವನೊಬ್ಬಾತನು ತನ್ನ ತಿಂಗಳ ಜೀವಂತ ಮಗುವನ್ನು ಬ ಸ್ ನದಿಯ ಸೇತುವೆಯ ಕೆಳಗೆ ಬಿ ಡಿವ ಪ್ರಸಂಗವೊಂದು ವರದಿಯಾ ಆತನೂ, ಅವನ ಪತ್ನಿ ಮತ್ತು ಮ ಪ್ರಯಾಣ ಮಾಡುತ್ತಿದ್ದಾಗ ದಾರಿ ೫ ತಿಂಗಳ ಮಗುವು ಸತ್ತಿತೆಂದೂ ನ್ನು ನದಿಗೆ ಬಿಸಾಡಲು ತಂದೆತಾ ಗಳು ನಿರ್ಧರಿಸಿದರೆಂದೂ, ಸೇತುವೆ ನ್ನು ಮುಟ್ಟಿದ ನಂತರ ಸತ್ತ ಮಗು ಬದಲು ಕೈತಪ್ಪಿನಿಂದ ಜೀವಂತ ಪ ವನ್ನು ತಂದೆಯು ಎಸೆದನೆಂದೂ ಶ ಲಾಗಿದೆ ಮಗುವು ಆ ಸಮಯದಲ್ಲಿ ದ್ರಿಸುತ್ತಿತ್ತು

ಆಟಪಾಟಗಳ ಪೆವಿಲಿಯ ಕಟ್ಟಲು ದಾನ

ಚಿಕ್ಕಮಗಳೂರು

ಇಲ್ಲಿನ ಕಾಫಿ ಪ್ಲಾಂಟರುಗಳಾದ ಎಂ ಎಲ್ ಸುಬ್ಬರಾಯ ಶೆಟ್ಟರು ಮತ್ತು ಸಹೋದರರು ಒಂದು ಆಟಪ ಗಳ ಪೆವಿಲಿಯನ್ನು ನಿರ್ಮಿ ೨೦೦೦ ರೂ ಗಳನ್ನು ಉದಾರವ ಕೊಡಲೊಪ್ಪಿರುತ್ತಾರೆ

ನಿಮ್ನ ವರ್ಗದ ವಿದ್ಯಾರ್ಥಿ ನಿಲ

ಗುಂಡ್ಲುಪೇಟೆಯಲ್ಲಿರುವ ನಿಮ್ನ ವರ್ಗದ ವಿದ್ಯಾರ್ಥಿ ನಿಲಯದ ಪ್ರಾ ಭೋತ್ಸವವನ್ನು ಬರುವ ೨೦ ನೇ ಗುರುವಾರ ಮಧ್ಯಾಹ್ನ ಜಿಲ್ಲಾಧಿಕಾರಿಗಳಾದ ಜ|| ವ ಹಮೀದ್ ಅಹಮದ್ ರು ನೆರವೇರಿಸುವರು

ಸ್ಟೂಡೆಂಟ್ ಅಂಡ್ ದಿ ನೇಷ

ದಿ ಸ್ಟೂಡೆಂಟ್ ಅಂಡ್ ದಿ ನೇ ಎಂಬ ಹೊಸ ಇಂಗ್ಲಿಷ್ ವಾರ ಪ ಯು ಬೆಂಗಳೂರಿನಲ್ಲಿ ಈಗಾಗಲೇ ರಟು ಅದರ ಐದನೇ ಸಂಚಿಕೆಯು ಯೊಂದು ನಮ್ಮ ಕೈಸೇರಿದೆ ವಿದ್ಯಾ ಗಳ ಹಿತ ಚಿಂತನೆ, ರಾಷ್ಟ್ರಕ್ಕೆ ಅವರು ಲ್ಲಿಸಬೇಕಾಗಿರುವ ಸೇವೆ ಮುಂತಾದ ಷಯಗಳಿಗಾಗಿ ಪತ್ರಿಕೆಯು ಮೀಸ ಗಿದೆ ಶ್ರೀ ಸೇತೂರಾವ್ ಶ್ರೀನಿವಾಸ ವರು ಅದರ ಸಂಪಾದಕರು ಬೆಲೆ ೦ ೨

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಮಹಾಜನಗಳ ಕೋರಿಕೆ ಮೇರೆ

19–9–51ನೇ ಬುಧವಾರದಿಂದ **ರಾಜಾ ಗೋಪಿಚಂದ್**

ಶುಕ್ರವಾರ ಮತ್ತು ಭಾನುವಾರಗಳಲ್ಲಿ 6 45ಕ್ಕೆ ಉಳಿದ ದಿನಗಳಲ್ಲಿ 9 45ಕ್ಕೆ

ನಿರೀಕ್ಷಿಸಿ – ಧರ್ಮದಾಸ್ ಬೇಡರ ಕಣ್ಣಪ್ಪ ಮತ್ತು ಬಸವೇಶ್ವರ

ಒಲಂಪಿಯಾ * 20–9–51ರಿಂದ ಅಪೇಕ್ಷ ಪ್ರಾರಂಭ

ಪ್ರತಿದಿನ 3 ಆಟಗಳು

ಜೆಮಿನಿ ದಿವಾನ್ ರವರ * **ಅನ್ಮೋಲ್ ರತನ್** * ಹಿಂದಿ ಚಿತ್ರ

ಪಾತ್ರ – ಮೀನ, ಕರಣದಿವಾನ್, ಗೋಪ್ ನಿರ್ಮಲಾ

ಬೆಳಗಿನ ಪ್ರದರ್ಶನ 21 9.51 ರಿಂದ

ಚಾರ್ಲಿ ಚಾಪ್ಲಿನರ **ಮನೋರಮ**

THIRTHA & COMPAN

Narayana sastry Road

PHONE 537

Clearing and Forwarding

AGENTS

ಲಾರಿ ಮಾರಾಟಕ್ಕಿದೆ

1945ನೇ ಮಾಡಲ್ ಒಳ್ಳೆ ಕಂಡಿಷನ್ನಿನಲ್ಲಿರುವ ಫೋರ್ಡ್ ಲಾರಿ ಮಾರಾಟಕ್ಕಿದೆ

ವಿಳಾಸ.–

ಕೆ. ಅನಂತರಾಂ,

ಕಂಟ್ರಾಕ್ಟರ್, ಚಾಮರಾಜನಗರ

Edited, printed and published by A R Nagarajan, at Sadhvi Press Subbiah Road, Mysore

ರೀ. ನಂ 792 | ಜಂಟೀ ಮಾಲಿಕರು | ಬಿಡಿ ಪ್ರತಿ 3 ಕಾಸು

ಸಂಪುಟ ೧೦] ಬುಧವಾರ ೧೯-೯-೫೧ [ಸಂಚಿಕೆ ೪೯

ಕೊರಿಯಾ ಸಂಧಾನದ - ಪುನರಾರಂಭ -

ಪರ್ಷಿಯದ ಮಾಜಿ ಉಪ ಮುಖ್ಯ ಮಂತ್ರಿಯ ಬಂಧನ

ಪರ್ಷಿಯದ ಸರ್ಕಾರವರ ಪ್ರಭುತ್ವವನ್ನು ಉರುಳಿಸಲು ನಡೆಯಿತೆಂದು ಹೇಳಲಾದ ಪಿತೂರಿಯ ಸಂಬಂಧವಾಗಿ ಅಲ್ಲಿನ ಮಾಜಿ ಉಪ ಮುಖ್ಯ ಮಂತ್ರಿ ಅಲಿ ನೊಬಾರ್ಡಿಯವರನ್ನು ಬಂಧಿಸಲಾಗಿದೆಯೆಂದು ತಿಳಿದುಬಂದಿದೆ. ಕಳೆದ ಮಾರ್ಚಿಯಲ್ಲಿ ಕೊಲೆಯಾದ ಪ್ರಧಾನಿ ಅಲಿ ರಜ್ಮಾರವರ ಹಲವಾರು ಸಂಬಂಧಿಗಳನ್ನು ಬಂಧಿಸಲು ಪರ್ಷಿಯಾ ಸರ್ಕಾರವು ನಿರ್ಧರಿಸಿರುವುದಾಗಿ ಉಪ ಪ್ರಧಾನಿ ಫತೇಮಿಯವರು ತಿಳಿಸಿರುತ್ತಾರೆ

ದೇವರ ಪ್ರತಿಮೆಯ ಚಲನ

ಸೂರತ್ತಿನ ಜೈನ ದೇವಾಲಯವೊಂದರಲ್ಲಿ ತೀರ್ಥಂಕರರೊಬ್ಬರ ಪ್ರತಿಮೆಯು ಮೊನ್ನೆಯಿಂದ ಜೋರಾಗಿ ಅಲ್ಲಾಡುತ್ತಿರುವುದೆಂದೂ ಪೂಜೆಯಲ್ಲಿ ಏನೋ ಲೋಪ ದೋಷಗಳು ನಡೆದು ಈ ಬಗೆಯ ಅಪಶಕುನವಾಗುತ್ತಿರಬೇಕೆಂದು ಜನರು ಹೇಳುತ್ತಿರುವುದಾಗಿಯೂ ವರದಿಯಾಗಿದೆ. ಪ್ರತಿಮೆಯು ೪ ಅಡಿ ಎತ್ತರವಿಂದ ಕೂಡಿ ಎಡೆಳ ತೂಕವುಳ್ಳದ್ದಾಗಿರುವುದು

ವಿಷ ಮಿಶ್ರಿತ ಕಾಫಿ ಸೇವನೆಯಿಂದ ೨ ಮಕ್ಕಳ ಮರಣ

ಮದ್ರಾಸಿನ ವ್ಯಾಸರಪಾಡಿಯಲ್ಲಿ ವಾಸವಾಗಿರುವ ಮೀನಾಂಬಾಳ್ ಎಂಬ ಹೆಂಗಸಿಗೆ ಯಾರೋ ವಿಷ ಮಿಶ್ರಿತ ಕಾಫಿ ಕೊಡಲು ಅದನ್ನು ಆಕೆಯು ಸೇವಿಸಿ, ಉಳಿದುದನ್ನು ತನ್ನ ೬ ಮತ್ತು ೩ ವರ್ಷದ ಎರಡು ಮಕ್ಕಳಿಗೆ ಕುಡಿಸಿದುದರ ಫಲವಾಗಿ ಅವರುಗಳು ಸಂಕಟಕ್ಕೀಡಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟು ಎರಡು ಮಕ್ಕಳೂ ಸತ್ತುಹೋದರೂ, ತಾಯಿಯ ಸ್ಥಿತಿಯು ಚಿಂತಾಜನಕವಾಗಿದೆಯೆಂದೂ ಹೇಳಲಾಗಿದೆ

ಕಾಲೇಜು ಸಂಘದ ಚುನಾವಣೆಯಲ್ಲಿ ಮಹಿಳೆಗೆ ಸೋಲು !

ಮಹಾರಾಜಾ ಕಾಲೇಜು ಸಂಘಕ್ಕೆ ಚುನಾವಣೆಯು ಬಲು ಬಿರುಸಿನಿಂದ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಸಿಲೋನಿನ ಮಹಿಳೆ ಶ್ರೀಮತಿ ಕರುಣಾರತ್ನೆಯವರು ಸ್ಪರ್ಧಿಸಿದ್ದರು. ಅವರಿಗೆ ಜಯವು ದೊರಕಲಿಲ್ಲ. ಸ್ತ್ರೀಯರ ಸಮಾನತ್ವ ಮತ್ತು ವಿಶ್ವ ಬಾಂಧವ್ಯಗಳಿಗೆ ದುಡಿಯುತ್ತಿರುವುದಾಗಿ ಹೇಳುತ್ತಿರುವವರ ಮಾತುಗಳನ್ನು ಶ್ರೀಮತಿಯವರು ಒರೆಗಲ್ಲಿಗೆ ಹಚ್ಚುತ್ತಾರೆ. ಚುನಾವಣೆಯಲ್ಲಿ ಭಾಗವಹಿಸ್ಪ ವಿದ್ಯಾರ್ಥಿಗಳಲ್ಲಿ ಆಕೆಯು ಕೇವಲ ಹೆಂಗಸು ಮತ್ತು ಅನ್ಯ ದೇಶದ ಮಹಿಳೆ ಎಂಬ ಭಾವನೆಯಿರುವುದು ಎದ್ದು ಕಾಣುತ್ತಿತ್ತು. ಇದು ನಿಜವಾಗಿಯೂ ಸಂಕುಚಿತವಾದ ವರ್ತನೆ. ವಿದ್ಯಾರ್ಥಿಗಳಲ್ಲಿ ಇಂತಹ ಮನೋಭಾವನೆ ಇರಕೂಡದು.

ಶ್ರೀಮತಿಯವರು ಸಕಲರಲ್ಲೂ ಒಂದೇ ಸಮನಾದ ಸ್ನೇಹದಿಂದಿರುವರು. ಅವರು ಇಲ್ಲಿಗೆ ಸಂಸ್ಕೃತ ಭಾಷೆಯಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು ಬಂದಿರುತ್ತಾರೆ. ಕೊಲಂಬೋ ಕಾಲೇಜು ಸಂಘದಲ್ಲಿ ಎರಡು ಬಾರಿ ಅಧ್ಯಕ್ಷರಾಗಿಯೂ ಅವರು ಚುನಾಯಿತರಾಗಿದ್ದರು. ನಮ್ಮ ವಿದ್ಯಾರ್ಥಿ ಸಹೋದರರು ವಿಶಾಲ ಮನೋಭಾವನೆಯನ್ನು ಇನ್ನು ಮುಂದಾದರೂ ವ್ಯಕ್ತಪಡಿಸಲಿ — ಒಬ್ಬ ವಿದ್ಯಾರ್ಥಿ

ನಿಲ್ದಾಣದ ಬಳಿ ರೈಲಿನಿಂದ ಬಿದ್ದ ಹುಡುಗಿಯ ರಕ್ಷಣೆ

ಮೈಸೂರಿನಿಂದ ಅರಸೀಕೆರೆಗೆ ಹೋಗಿ ಬರುವ ಮೇಲ್ ಗಾಡಿಯು ಮೊನ್ನೆ ರಾತ್ರಿ ಹಾಸನದ ಪ್ಲಾಟ್‌ಫಾರಂ ಅನ್ನು ಸಮೀಪಿಸುತ್ತಿದ್ದಾಗ ಫಿಸ್ಟ್ ಕ್ಲಾಸಿನ ಒಬ್ಬ ಎಂಟು ವರ್ಷದ ಹುಡುಗಿಯು ಗಾಡಿಯ ಕಿಟಿಕಿಯಿಂದ ಆಕಸ್ಮಾತ್ ಕೆಳಗೆ ಬಿದ್ದು ನಿಲ್ದಾಣ ಮತ್ತು ರೈಲು ಕಂಬಿಗಳ ನಡುವೆ ಇರುವ ಜಾಗದಲ್ಲಿ ಉರುಳಿಕೊಂಡಳೆಂದೂ ಆ ಸ್ಥಳದಲ್ಲಿ ನಿಂತಿದ್ದ ಪೊಲೀಸು ಅಧಿಕಾರಿಯೊಬ್ಬರು ರೈಲು ಹೋಗುತ್ತಿದ್ದುದನ್ನೂ ಸಹ ಲೆಕ್ಕಿಸದೇ ಹುಡುಗಿಯನ್ನು ಎರಡು ಕೈಗಳಿಂದಲೂ ಎತ್ತಿ ಅಪಾಯದಿಂದ ಪಾರು ಮಾಡಿದರೆಂದೂ ತಿಳಿದುಬಂದಿದೆ

ಹಬ್ಬಕ್ಕಾಗಿ ಹೆಚ್ಚು ಸಕ್ಕರೆ

ಬರುವ ದೀಪಾವಳಿಯವರೆಗೆ ಈ ಸಾಲಿನ ಹಬ್ಬಗಳಲ್ಲಿ ಉಪಯೋಗಿಸುವ ಸಲುವಾಗಿ ತಲಾ ಮೂರನೇ ಒಂದು ಪೌಂಡು ಸಕ್ಕರೆಯನ್ನು ಪ್ರತಿಯೊಬ್ಬ ರೇಷನ್ ಕಾರ್ಡುದಾರನೂ ಪಡೆಯಬಹುದೆಂದೂ, ಎಂದಿನಂತೆ ಕೊಳ್ಳುವ ಸಕ್ಕರೆಯೊಡನೆ ಹೆಚ್ಚಿನ ಪ್ರಮಾಣವನ್ನು ಅಕ್ಟೋಬರ್ ತಿಂಗಳು ಆಖೈರಿನೊಳಗೆ ಯಾವಾಗಲಾದರೂ ಕೊಳ್ಳಬಹುದೆಂದೂ ಸರ್ಕಾರಿ ಪ್ರಕಟಣೆಯೊಂದು ತಿಳಿಸಿರುತ್ತದೆ

ಅಂಬಾರಿ ಆನೆಯ ಕಾಲು ಚರಂಡಿಯಲ್ಲಿ ಸಿಕ್ಕಿಕೊಂಡಿತ್ತು

ಅರಮನೆ ಗಜ ಶಾಲೆಯಲ್ಲಿರುವ ಅಂಬಾರಿ ಆನೆಯು ಮೊನ್ನೆ ಒಂದು ಮನೆಯ ಮುಂಭಾಗದಲ್ಲಿ ತಿಂಡಿಯನ್ನು ತೆಗೆದುಕೊಳ್ಳಲು ಮುಂದೆ ಹೋದಾಗ ಚರಂಡಿಯ ಮೇಲೆ ಹಾಸಿದ್ದ ಚಪ್ಪಡಿಯು ಮುರಿದು ಆನೆಯ ಕಾಲು ಅದರೊಳಗೆ ಸಿಕ್ಕಿಕೊಂಡಿತೆಂದೂ ಮಾವುತನು ಬೀಳುವ ಸ್ಥಿತಿಯು ಉಂಟಾಗಿತ್ತೆಂದೂ ಆದರೆ ಆನೆಯು ಕಾಲನ್ನು ಮೇಲಕ್ಕೆ ಬಲವಾಗಿ ಎಳೆದುಕೊಂಡಿತೆಂದೂ ಹೇಳಲಾಗಿದೆ

○ ಮಹಾರಾಜಾ ಕಾಲೇಜಿನ ಸಂಘದ ಚುನಾವಣೆಯು ನಡೆದು ಶ್ರೀ ಕೆ ಪಿ ಶಾಂತಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀ ಟಿ ಪಿ ಶ್ರೀನಿವಾಸ ರಾಯರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರು

ಸಮಾಜವಾದಿಗಳು ಪುನಃ ಕಾಂಗ್ರೆಸ್ಸಿಗೆ ಸೇರುವುದಿಲ್ಲ

ಬೆಂಗಳೂರು ೧೯

ಭಾರತದ ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಜೈಪ್ರಕಾಶ್ ನಾರಾಯಣರವರು ತಮ್ಮ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರೊಡನೆ ನೆನ್ನೆ ಇಲ್ಲಿಗೆ ವಿಮಾನದಲ್ಲಿ ಆಗಮಿಸಿದರು. ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸಿ, ಜಯಪ್ರಕಾಶರು ಮಾತನಾಡಿ, ಬೇರಾವ ಪಕ್ಷದವರು ಕಾಂಗ್ರೆಸ್ಸಿಗೆ ಹಿಂತಿರುಗಿ ಹೋದರೂ, ಸಮಾಜವಾದಿಗಳು ಹೋಗುವುದಿಲ್ಲವೆಂದೂ ತತ್ವಗಳ ಆಧಾರದ ಮೇಲೆಯೇ ತಾವು ಕಾಂಗ್ರೆಸ್ಸಿನಿಂದ ಹಿಂದೆ ಬೇರ್ಪಟ್ಟುದಾಗಿಯೂ ತಿಳಿಸಿ, ಪಂಡಿತ ನೆಹರೂರವರು ಕಾಂಗ್ರೆಸ್ ಅಧ್ಯಕ್ಷರಾದುದರಿಂದ ಕೃಷಕ್ ಪ್ರಜಾ ಪಕ್ಷಕ್ಕೆ ಬೆಂಬಲವು ಕಡಿಮೆಯಾಯಿತೆಂದೂ, ಇದು ಪ್ರಜಾಪ್ರಭುತ್ವದ ಮಾರ್ಗಕ್ಕೆ ಒಳ್ಳೆಯದಲ್ಲವೆಂದೂ ಅವರು ಹೇಳಿದರು. ಮೈಸೂರಿನ ೩೦ ಶಾಸನ ಸಭಾ ಸ್ಥಾನ ಮತ್ತು ಪಾರ್ಲಿಮೆಂಟಿನ ಸ್ಥಾನಗಳಿಗೂ ತಮ್ಮ ಪಕ್ಷದವರು ಸ್ಪರ್ಧಿಸುವುದಾಗಿ ಅವರು ಹೇಳಿದರು

ಡಿಸೆಂಬರ್ ತಿಂಗಳಲ್ಲೇ ಸಂಸ್ಥಾನದಲ್ಲಿ ಚುನಾವಣೆ

ಮೈಸೂರು ಸಂಸ್ಥಾನದಲ್ಲಿ ಡಿಸೆಂಬರ್ ತಿಂಗಳಿನ ಕಡೆಯ ವಾರದಿಂದಲೇ ಚುನಾವಣೆಯನ್ನು ಪ್ರಾರಂಭಿಸಬೇಕೆಂದು ಸರ್ಕಾರದವರು ಆಲೋಚಿಸುತ್ತಿರುವುದಾಗಿ ವರದಿಯಾಗಿದೆ. ಜನವರಿ ೩೦ ರೊಳಗಿನಿಂದ ಅದು ಆರಂಭವಾಗಬೇಕೆಂದು ಮೊದಲು ಯೋಚಿಸಲಾಗಿತ್ತು. ಮೂರು ಪ್ರದೇಶಗಳಾಗಿ ಸಂಸ್ಥಾನವನ್ನು ವಿಂಗಡಿಸಿ ಒಂದರ ನಂತರ ಮತ್ತೊಂದರಲ್ಲಿ ಚುನಾವಣೆಗಳನ್ನು ಏರ್ಪಡಿಸಲಾಗುವುದೆಂದೂ ಸಿಬ್ಬಂದಿಯವರನ್ನು ಅದೇ ರೀತಿ ವರ್ಗಾಯಿಸಲಾಗುವುದೆಂದೂ ಗೊತ್ತಾಗಿದೆ

ಬ್ರಿಟನ್ನಿನಲ್ಲಿ ಮಹಾ ಚುನಾವಣೆ

ಅಕ್ಟೋಬರ್ ೨೫ರಂದು ಬ್ರಿಟನ್ನಿನಲ್ಲಿ ಮಹಾಚುನಾವಣೆಗಳು ನಡೆಯುವುವೆಂದು ಅಲ್ಲಿನ ಸರ್ಕಾರದ ಪರ ಪತ್ರಿಕೆಯಾದ "ಡೈಲಿ ಹೆರಲ್ಡ್" ಪ್ರಕಟಿಸಿರುತ್ತದೆ

ಕೊರಿಯ ಶಾಂತಿ ಸಂಧಾನದ ಪುನರಾರಂಭ

ಕಮ್ಯೂನಿಸ್ಟರು ಮತ್ತು ಮಿತ್ರ ಪಕ್ಷದವರು ಕೊರಿಯಾ ಶಾಂತಿ ಸಂಧಾನಕ್ಕೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲು ಒಪ್ಪಿರುವರೆಂದು ಗೊತ್ತಾಗಿದೆ. ೨೬ ದಿನಗಳ ಹಿಂದೆ ನಿಂತುಹೋಗಿದ್ದ ಮಾತುಕತೆಗಳು ಪಾನ್ ಮನ್ ಜಾನಿನ "ಶಾಂತಿ ಸೇತುವೆ" ಬಳಿ ನಡೆಯುವುವೆಂದೂ, ಈ ದಿನದಿಂದ ಕಮ್ಯೂನಿಸ್ಟರು ಮತ್ತು ವಿಶ್ವ ಸಂಸ್ಥೆಯವರು ಪುನಃ ಸಂಧಾನದಲ್ಲಿ ತೊಡಗುವರೆಂದೂ ತಿಳಿದುಬಂದಿದೆ

ಭಾರತದಲ್ಲಿ ಕೃತಕ ಪೆಟ್ರೋಲ್ ಕಾರ್ಖಾನೆ

ಭಾರತದಲ್ಲಿ ಕೃತಕ ಪೆಟ್ರೋಲ್ ತಯಾರಿಕೆಗಾಗಿ ಒಂದು ಕಾರ್ಖಾನೆಯನ್ನು ಸ್ಥಾಪಿಸುವ ವಿಷಯವು ಭಾರತದ ಯೋಜನಾ ಸಮಿತಿಯವರ ಪರ್ಯಾಲೋಚನೆಯಲ್ಲಿರುವುದಾಗಿ ಗೊತ್ತಾಗಿದೆ

ತಿರುವಾಂಕೂರು ಮಂತ್ರಿ ಮಂಡಲದಲ್ಲಿ ಅವಿಶ್ವಾಸ

ತಿರುವಾಂಕೂರು-ಕೊಚ್ಚಿ ಶಾಸನ ಸಭೆಯಲ್ಲಿ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯಗಳನ್ನು ಮಂಡಿಸಲಾಗಿದೆಯೆಂದು ಗೊತ್ತಾಗಿದೆ

ಅಧ್ಯಕ್ಷರಿಂದಲೇ ಫೋನಿನಲ್ಲಿ ರಾಜಾಜಿಯೊಡನೆ ಭಾಷಣ

ರಾಷ್ಟ್ರಾಧ್ಯಕ್ಷರು ಮಾತನಾಡುವ ರೀತಿಯಲ್ಲೇ ಮೊನ್ನೆ ಒಬ್ಬ ವ್ಯಕ್ತಿಯು ಕೇಂದ್ರ ಗೃಹ ಮಂತ್ರಿ ರಾಜಾಜಿಯವರೊಡನೆ ಟೆಲಿಫೋನಿನಲ್ಲಿ ಮಾತನಾಡಿ ಆಡಳಿತದ ಬಗ್ಗೆ ಹಲವು ಪ್ರಶ್ನೆಗಳನ್ನು ಹಾಕಿದನೆಂದೂ, ರಾಜಾಜಿಯವರಿಗೆ ಅನುಮಾನ ಬಂದು ತಮಗೆ ಪುರುಸತ್ತು ಇಲ್ಲವೆಂದು ತಿಳಿಸಿದರೆಂದೂ, ನಂತರ ರಾಷ್ಟ್ರಾಧ್ಯಕ್ಷರ ಭವನದೊಡನೆ ಸಂಪರ್ಕವನ್ನು ಮಾಡಲಾಗಿ ಅಧ್ಯಕ್ಷರು ಮಾತನಾಡಬಯಸಲಿಲ್ಲವೆಂದೂ ವರದಿಯಾಗಿದೆ

ಶಾಸನ ಸಭಾ ಪತ್ರಿಕಾ ಗ್ಯಾಲರಿ ಸಮಿತಿ

ರಾಜಧಾನಿಯಲ್ಲಿ ಸೇರಲಿರುವ ಶಾಸನ ಸಭೆಯ ಪತ್ರಿಕಾ ಗ್ಯಾಲರಿಯ ಸಮಿತಿಯನ್ನು ಅಧ್ಯಕ್ಷರು ನೇಮಿಸಿರುತ್ತಾರೆ. ಸಭೆಯ ಉಪಾಧ್ಯಕ್ಷ ಶ್ರೀ ಎಚ್ ಎಚ್ ತಿಮ್ಮಾಬೋವಿಯವರು ಸಮಿತಿಯ ಅಧ್ಯಕ್ಷರಾಗಿಯೂ ಶ್ರೀಗಳಾದ ಕೆ ಎಸ್ ರಾಮಸ್ವಾಮಿ, ಎಲ್ ಎಸ್ ವೆಂಕೋಬರಾವ್, ಟಿ ಎಸ್ ರಾಮಚಂದ್ರರಾವ್ ಮತ್ತು ಹೆಚ್ ಕೆ ಕುಮಾರಸ್ವಾಮಿಯವರು ಸದಸ್ಯರಾಗಿಯೂ ಇರುವರು

ಪುನಃ ತಿಂಗಳು ಪೂರ್ತಿ ರೇಷನ್ ಕೊಡಲು ಏರ್ಪಾಡು

ರಾಜಧಾನಿಯ ರೇಷನ್ ಕಾರ್ಡುದಾರರಿಗೆ ಕೊಡಲಾಗುತ್ತಿರುವ ವಾರದ ಪಡಿತರದ ಬದಲು ಹಿಂದೆ ಜಾರಿಯಲ್ಲಿದ್ದ ತಿಂಗಳು ಪೂರ್ತಿಯ ಪಡಿತರವನ್ನು ಕೊಡುವಂತೆ ಆಜ್ಞಾಪಿಸಲಾಗಿದೆ

○ ಕಳೆದ ಗುರುವಾರ ರಾಜಧಾನಿಯ ಭಾವಸಾರ ಕ್ಷತ್ರಿಯ ಸೋಷಿಯಲ್ ಇನ್‌ಸ್ಟಿಟ್ಯೂಟಿನಲ್ಲಿ ಪೌರಸಭಾಧ್ಯಕ್ಷ ಶ್ರೀ ಟಿ ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಗಣಪತಿ ಮಂಗಳಾರತಿ ಮತ್ತು ಉತ್ಸವಗಳು ಜರುಗಿದುವು

ಪಾರ್ಲಿಮೆಂಟಿನ ೧೧ ಸ್ಥಾನಗಳಿಗೆ ೨೬ ಕನ್ನಡಿಗರು

ಪಾರ್ಲಿಮೆಂಟಿಗೆ ಕರ್ನಾಟಕದಿಂದ ಇರುವ ಒಟ್ಟು ೧೧ ಸ್ಥಾನಗಳಿಗೆ ೩ ಜನ ಕಾಂಗ್ರೆಸ್ಸಿನವರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ ಕೇಂದ್ರ ಮಂತ್ರಿಗಳಾದ ಆರ್ ಆರ್ ದಿವಾಕರ್ ಡಿ ಪಿ ಕರ್ಮಾರ್ಕರ್‌ರವರು ಮತ್ತು ಟಿ ಆರ್ ನೆಸ್ವಿ ವಿ ವಿ ಪಾಟೀಲ್, ಎ ಎ ಮುನವಳ್ಳಿ, ಬೊಂಬಾಯಿನ ಜೋಕಿಂ ಆಳ್ವಾ ಸಂಯುಕ್ತ ಕರ್ನಾಟಕ ಪತ್ರಿಕೆ ಸಂಪಾದಕ ಹೆಚ್ ಆರ್ ಮೊಹರೆ, ಕೊಡಗಿನ ಸೋಮಣ್ಣ ಇವರುಗಳು ಅವರ ಪೈಕಿ ಇರುತ್ತಾರೆ

ಸ್ಪರ್ಧೆಗಳಿಂದ ಸರ್ಕಾರಕ್ಕೆ ೩೫ ಲಕ್ಷ ರೂ ವರಮಾನ

೧೯೪೬ ೫೦ ಅವಧಿಯ ೫ ವರ್ಷಗಳಲ್ಲಿ ಚಕ್ರಬಂಧ ಸ್ಪರ್ಧೆಗಳಿಂದ ಬೊಂಬಾಯಿ ಸರ್ಕಾರಕ್ಕೆ ೩೫ ಲಕ್ಷ ರೂ ವರಮಾನವು ಬಂದಿರುವುದಾಗಿ ಅಲ್ಲಿನ ಗೃಹ ಮಂತ್ರಿ ಮೊರಾರ್ಜಿ ದೇಸಾಯಿ ಯವರು ತಿಳಿಸಿರುತ್ತಾರೆ

ಸಿಮೆಂಟ್ ರಿಯಾಯಿತಿ

ಬೆಂಗಳೂರು ನಗರ ಮತ್ತು ಸಿವಿಲ್ ಪ್ರದೇಶಗಳನ್ನುಳಿದು ಸಂಸ್ಥಾನದ ಇತರ ಕಡೆಗಳಲ್ಲಿ ಈ ತಿಂಗಳು ೧೦ರಿಂದ ೬ ತಿಂಗಳ ವರೆಗೆ ೨೦ ಮೂಟೆ ಸಿಮೆಂಟನ್ನು ರಹದಾರಿಯಿಲ್ಲದೆ ಮಾರಾಟ ಮಾಡಬಹುದೆಂದು ಸರ್ಕಾರದವರು ಸೂಚಿಸಿರುತ್ತಾರೆ ಹಿಂದಿನ ಆಜ್ಞೆಯಲ್ಲ ಮೈಸೂರು ನಗರಕ್ಕೆ ಈ ರಿಯಾಯಿತಿಯು ಅನ್ವಯವಾಗಿರಲಿಲ್ಲ

NALINS NEXT

GRAND AUCTION

On 23 9-51 at 5 p m

NALINS,

V V Market Square Mysore

ತಿರುವಾಂಕೂರು ಶಾಸನ ಸಭಾಧ್ಯಕ್ಷರ ರಾಜೀನಾಮೆ

ತಿರುವಾಂಕೂರು ಕೊಚ್ಚಿ ಶಾಸನ ಸಭೆಯ ಈಗಿನ ಅಧಿವೇಶನವು ಮುಗಿದ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ ಸಭಾಧ್ಯಕ್ಷರಾದ ಟಿ ಎಂ ವರ್ಗೀಸ್‌ರವರು ಹೇಳಿರುತ್ತಾರೆ

ಸಿಂಧ್ ಮುಖ್ಯ ಮಂತ್ರಿ ಮೇಲೆ ೬೦ ಆಪಾದನೆಗಳು

ಸಿಂಧ್ ಪ್ರಾಂತದ ಮುಖ್ಯ ಮಂತ್ರಿ ಮಹಮದ್ ಖುರ್ರೋರವರ ಮೇಲೆ ಲಂಚ ಮುಂತಾದ ೬೦ ಆಪಾದನೆಗಳು ಬಂದಿರುತ್ತವೆ ಅಲ್ಲಿನ ಗೌರ್ನರರು ಈ ಸಂಬಂಧವಾಗಿ ಸಾಕ್ಷ್ಯಗಳನ್ನು ತೆಗೆದುಕೊಂಡಿರುತ್ತಾರೆ

ವಾರ್ಷಿಕೋತ್ಸವ

ರಾಜಧಾನಿಯ ಆದಿ ಕರ್ನಾಟಕ ಪುರದ ಯುವಕರ ಸಂಘದ ೨ನೇ ವಾರ್ಷಿಕೋತ್ಸವವು ಕಳೆದ ಭಾನುವಾರ ಶ್ರೀ ಆರ್ ಭರಣಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀಗಳಾದ ಬಿ ಜಿ ದಾಸ್ ಒಳಗಿರಿ ರಂಗಯ್ಯ, ಚಿಕ್ಕಲಿಂಗಯ್ಯ, ಎಂ ರಾಚಯ್ಯ ಮುಂತಾದವರು ಭಾಷಣ ಮಾಡಿ ಆದಿ ಕರ್ನಾಟಕರ ಪುರೋಭಿವೃದ್ಧಿಯು ಬೇಗ ಆಗಬೇಕೆಂಬುವನ್ನು ವಿವರಿಸಿದರು

VANI TUTORIAL COLLEGE

2300 Belvadi House

Near Sri Lakshminarayana

Swamy Temple

Chamundi Extension Mysore

Offers Excellent Coaching

by qualified Efficient & experienced Staff

Courses started

1 Madras Matric

2 Mysore S S L C 1952

March For Boys & Girls)

ಡಾಲರ್ ಸಂಪಾದನೆಗಾಗಿ ಆನೆಗಳ ಖೆಡ್ಡಾ ಏರ್ಪಾಡು

ಆನೆಗಳ ಮಾರಾಟದಿಂದ ಡಾಲರ್ ಹಣವನ್ನು ಸಂಪಾದಿಸಲು ತುಂಬಾ ಸಹಾಯವಾಗಿರುವುದರಿಂದ ಬರುವ ಆರು ತಿಂಗಳಲ್ಲಿ ಅಸ್ಸಾಂ ಕಾಡಾನೆಗಳನ್ನು ಹಿಡಿಯಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ ಅಲ್ಲಿನ ಕಾಡುಗಳಲ್ಲಿ ೩ ಸಾವಿರಕ್ಕೂ ಮೇಲ್ಪಟ್ಟು ಆನೆಗಳಿರುವುದಾಗಿ ತಿಳಿದುಬಂದಿದೆ

LORRY FOR SALE

Ford Lorry available for sale Rs 7,000 Particulars of lorry as under

Horse Power 30, Year of Manufacture 1940, Registered laden Weight 6 tons, Type of Body Closed Body Lorry is in good running Condition

THE COORG & MYSORE COFFEE CO. (1937) Ltd

(Incorporated in Mysore)

CHAMUNDI CURING WORKS

Vanivilas Mohalla P O

MYSORE Dist (S India)

ಹಡಗಿನ ಮೇಲೆ ವಿಮಾನ ಬಿದ್ದು ಇಬ್ಬರ ಮರಣ

ಕೊರಿಯಾ ಸಮುದ್ರದಲ್ಲಿ ಸೂಪರ್ ಜೆಟ್ ವಿಮಾನವೊಂದು ಎಸೆಕ್ಸ್ ನ ಮೇಲೆ ಬೀಳಲು ಬೆಂಕಿಯುಂಟಾಗಿ ಇಬ್ಬರು ಸತ್ತು ೫ ಜನ ಪತ್ತೆಯಿಲ್ಲವಾಗಿದ್ದಾರೆ. ೧೫ ಮಂದಿಗೆ ಗಾಯವಾಗಿದೆ

SRI GAYATHRI,

TALKIES

LAST DAY

THREE MUSKETEERS

From 20 9-51 Daily 3 Shows

M G M's Musical Picture

In Technicolour

NANCY GOES TO RIO

With Jane Powell

— MORNING SHOWS —

On 22nd and 23rd

R K O's Walt Disney's

Snow White & Seven Dwarfs

Edited, printed and published by A R Nagarajan, at Sadhvi Press D Subbiah Road, Mysore

ಪ್ರಭುದೇವಾ ಟಾಕೀಸ್

ಪ್ರತಿ ದಿನ 3 ಆಟಗಳು

21-9-51ನೇ :: ಶುಕ್ರವಾರದಿಂದ

ಅಂಜಲಿ ದೇವಿ,

ನಾಗೇಶ್ವರ ರಾವ್,

ಸೂರ್ಯ ಪ್ರಭಾ,

ರೇಲಂಗಿ,

ಸಿ. ಎಸ್. ಆರ್.

ಮುಂತಾದವರು ಪಾತ್ರ

ವಹಿಸಿರುವ ತಮಿಳು

ಚಿತ್ರ

ಸ್ತ್ರೀ ಸಾಹಸಂ

ಮೈಸೂರು ಕ್ರೇಪ್, ಧರ್ಮಾವರ ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ

ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ನಾಟಕ ರತ್ನ ಗುಬ್ಬಿ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಇವರು

ರತ್ನಾವಳಿ ಥಿಯೇಟರಿನಲ್ಲಿ

ಮಹಾಜನಗಳ ಕೋರಿಕೆ ಮೇರೆ

19-9-51ನೇ ಬುಧವಾರದಿಂದ **ರಾಜಾ ಗೋಪಿಚಂದ್**

ಶುಕ್ರವಾರ ಮತ್ತು ಭಾನುವಾರಗಳಲ್ಲಿ 6 45ಕ್ಕೆ ಉಳಿದ ದಿನಗಳಲ್ಲಿ 9 45ಕ್ಕೆ

ನಿರ್ದೇಶನ - ಧರ್ಮದಾಸ್ ಬೀದರ ಕೃಷ್ಣಪ್ಪ ಮತ್ತು ಬಸವೇಶ್ವರ

ಒಲಂಪಿಯಾ * 20-9-51ರಿಂದ ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಜೆಮಿನಿ ದಿವಾನ್ ರವರ * **ಅನ್ಮೋಲ್ ರತ್ನ** * ಹಿಂದಿ ಚಿತ್ರ

ಪಾತ್ರ - ವಿನಾನ, ಕರಣದಿವಾನ್, ಗೋಪ್, ನಿರ್ಮಲಾ

ಬೆಳಗಿನ ಪ್ರದರ್ಶನ 21 9 51ರಿಂದ

ಬಾಲಿ ಪಾತ್ರವಹಿಸಿರುವ **ಮನೋರಮ**

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ - ತೀರ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ

ತಡವಿಲ್ಲದ ವಿಮಾ ನೊಟಬಗಿನ ಪಾವತಿ

ಸುಲಭವಾದ ಸಾಲದ ಸೌಕರ್ಯ

ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ ಕೊಡುತ್ತಿರುವುದು

ಇದೊಂದೇ ಕಛೇರಿ

ಮೈಸೂರು ಸರ್ಕಾರದ ವಿಮಾ ಇಲಾಖೆ

ಪ್ರಜೆಗಳ ಸಾಹೆಯಲ್ಲಿ

ವಿಮೆ ಮಾಡಲು ಇದನ್ನೇ ಶಿಫಾರಸಿಸಿ

ಪಾಲ ೨ ನಾಡುತ್ತಿದ

ಕೀ ನಂ 792 • ಬಂಡೇ ಹಾಕಲು • ಬಿಡಿ ಪ್ರತಿ 3 ಕಾಸು

ಸಂಪುಟ ೧೧] ಗುರುವಾರ ೨೦-೯-೫೧ [ಸಂಚಿಕೆ ೫೦

ಸ್ವಾಮಿ ಸೀತಾರಾಂರವರ ಉಪವಾಸ ಮುಕ್ತಾಯ

ಅಧ್ಯಕ್ಷರ ಆಜ್ಞೆ ವಿರುದ್ಧ ಪುಟ್ಟರಾಜೆ ಅರಸರ ದಾವಾ

ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿದ್ದು, ರಾಷ್ಟ್ರಾಧ್ಯಕ್ಷರ ಆಜ್ಞೆಯ ಪ್ರಕಾರ ನಿವೃತ್ತರಾದ ಶ್ರೀ ಆರ್ ಪುಟ್ಟರಾಜೆ ಅರಸರು ದೆಹಲಿಯ ಸಬ್ ಕೋರ್ಟಿನಲ್ಲಿ ದಾವೆಯನ್ನು ಹೂಡಿ ತಮ್ಮ ಅಧಿಕಾರಾವಧಿಯು ಮುಕ್ತಾಯವಾಗುವ ಮುನ್ನವೇ ತಮ್ಮನ್ನು ನಿವೃತ್ತಿ ಮಾಡಿದುದು ಸಂವಿಧಾನಕ್ಕೆ ವಿರುದ್ಧವಾದ ನಡವಳಿಕೆಯೆಂದು ಘೋಷಿಸಬೇಕೆಂದು ಪ್ರಾರ್ಥಿಸಿದ್ದಾಗಿ ತಿಳಿದುಬಂದಿದೆ. ಮೊಕದ್ದಮೆಯ ವ್ಯವಹಾರದ ವಿಚಾರಣೆ ನಡೆಸುವ ನ್ಯಾಯಾಧೀಶ ಜ್ವಾಲಾಪ್ರಸಾದ್‌ರವರು ... ಅಂಶಗಳ ಪಟ್ಟಿಯನ್ನು ... ಸಿದರು.

ಸಂವಿಧಾನದ ... ನೇ ವಿಧಿಯ ... ಬಂಧನೆ ಪ್ರಕಾರ, ರಾಷ್ಟ್ರಾಧ್ಯಕ್ಷರು ... ನೇ ಜನವರಿ ... ರಲ್ಲಿ ಹೊರಡಿಸಿದ ಆಜ್ಞೆಯು ಕ್ರಮಬದ್ಧವೇ? ಮೈಸೂರು ಸ್ಥಿತಿಯ ನ್ಯಾಯಾಧೀಶರು ... ಮಂತ್ರಿಗಳ ಸಲಹೆ ಪಡೆದು ... ಈ ಆಜ್ಞೆಯನ್ನು ಮಾಡಿದರು ಎಂದು ಅರಸರು ವಾದಿಸುವುದೇ? ... ಸರ್ಕಾರವು ಎಷ್ಟು ಸಂಬಳ ... ನೌಕರಿಯ ... ಅವರನ್ನು ... ರಕ್ಷಣೆಯನ್ನು ಕೊಡಿಸಬೇಕೆಂದು ... ದಾರರು ಬೇಡಲು ಸಾಧ್ಯವೇ? ... ಅಸ್ತಿಯು ಬಾಧಿತವಾಗಬೇಕೆ? ... ದಾರರು ವಾದ ಮಾಡಿ ತಮ್ಮ ... ಸದಿಂದ ತೆಗೆಯಲು ಹಾಲಿ ... ಮಾತ್ರ ಅಧಿಕಾರವಿರುವುದೇ ... ಪೂರ್ವ-ಭಾವಿ ವಿಚಾರಣೆಯಿಲ್ಲದೇ ... ಮಾಡಿರುವುದು ಸಂವಿಧಾನಕ್ಕೆ ... ವಾಗಿದೆಯೆಂದೂ ತಿಳಿಸಿ, ಅವ ... ನ್ನು ನ್ಯಾಯಾಧೀಶರಾ ... ಭಾವಿಸಿ, ತಮಗೆ ಪೂರ್ತಿ ... ನನ್ನು ಪಾವತಿ ಮಾಡಬೇಕೆಂದು ... ದರು.

... ರಿ ಅಡ್ವೊಕೇಟರ ವಾದಿ ... ... ಆಕ್ಷೇಪಣೆಗಳು ... ... ರೂ, ಅಧ್ಯಕ್ಷರ ಕ್ರಮವನ್ನು ... ರು ಪ್ರಶ್ನಿಸುವಂತಿಲ್ಲವೆಂ ... ರು.

ಪ್ರಕಾಶರಿಗೆ ನಿಧಿ ಸಮರ್ಪಣೆ

... ಜನವಾದಿ ಪಕ್ಷದ ನಾಯಕರಾದ ... ಪ್ರಕಾಶ ನಾರಾಯಣರವರು ... ಗಳೂರಿನ ಚಿಕ್ಕ ಲಾಲ್‌ಬಾಗ್ ... ಷಣ ಮಾಡಿದಾಗ ಅಲ್ಲಿನ ಸ ... ವಿ ಪಕ್ಷದವರು ನಾಯಕರಿಗೆ ... ರ ಗಳ ನಿಧಿಯನ್ನು ಸಮರ್ಪಿ ... ಸಭೆಗ ಬಲ್ಲ ನಡೆದ ... ಜನರ ಅಭಿಮತ ಪೋಗಿರು ... ನ್ನು ಸಿದ್ಧಪಡಿಸಲಾಗಿದೆಯೆಂದು ... ತಮ್ಮ ಭಾಷಣದಲ್ಲಿ ತಿಳಿಸಿ ... ಪಕ್ಷ ... ವ್ಯಕ್ತಿ ... ಜನ ಸಾಮಾನ್ಯರ ಕಷ್ಟ ನಿ ... ಈಗಿನ ಸರ್ಕಾರದಿಂದ ಆಗ ... ವರು ಟೀಕಿಸಿದರು.

ಮುರ್ಗದಲ್ಲಿ ಮುಖ್ಯ ಮಂತ್ರಿ ರೆಡ್ಡಿಯವರ ವಿಶ್ರಾಂತಿ

... ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಆರೋಗ್ಯದ ನಿಮಿತ್ತ ನಂದಿ ... ವಿಶ್ರಾಂತಿಯನ್ನು ಪಡೆಯುವರು ಎಂದು ಹೇಳಲಾಗಿದೆ.

ಭದ್ರಾವತಿಯಲ್ಲಿ ವಿದ್ಯುಚ್ಛಕ್ತಿ ಫರ್ನೆಸುಗಳ ಸ್ಥಾಪನೆ

ಮೈಸೂರು ೧೯

ವಾಣಿಜ್ಯ ಶಾಖೆಯ ಸಚಿವರಾದ ಶ್ರೀ ... ಪ್ಪನವರು ನೆನ್ನೆ ಇಲ್ಲಿನ ರೇಡಿಯೋ ನಿಲಯದಲ್ಲಿ ಭಾಷಣ ಮಾಡಿ, ಭದ್ರಾವತಿಯ ಕಾರ್ಖಾನೆಯಲ್ಲಿ ದಿನಪ್ರತಿಯಲ್ಲ ... ಟನ್ನು ಕಬ್ಬಿಣವನ್ನು ... ಬಾಂಗಿ ಕರಗಿಸಲು ಸಾಧ್ಯವಾಗುವ ... ತು ... ಕಿಲೋವ್ಯಾಟಿನ ... ಚ್ಛಕ್ತಿ ಫರ್ನೆಸುಗಳ ಸ್ಥಾಪನಾ ಕಾರ್ಯ ಪೂರೈಸುತ್ತ ಬಂದಿರುವುದಾಗಿಯೂ ... ರುವ ಜನರಿಗೆ ಬದಲಾಗಿ ... ಕೆಲಸವನ್ನು ... ಹೇಳಿದರು. ... ರುವ ಫರ್ರೋ ಸಿಲಿಕಾನ್ ಫರ್ನೆಸುಗಳ ಶಕ್ತಿಗೆ ನಾಲ್ಕರಷ್ಟಾಗುವ ಫರ್ನೆಸುಗಳನ್ನು ಸ್ಥಾಪಿಸಲಾಗಿದೆ. ಭದ್ರಾವತಿಯ ... ಸ್ಥಾಪನೆಗೆ ೬|| ಕೋಟಿರೂ ವೆಚ್ಚವಾಗುವುದು. ... ಮೈಸೂರು ಸರ್ಕಾರದವರು ಈಗಾಗಲೇ ... ಕೋಟಿ ರೂ ಅನ್ನು ವೆಚ್ಚ ಮಾಡಿದ್ದಾರೆ. ಅಲ್ಲಿ ತಂತಿ ಮತ್ತು ತಂತಿ ಸಾಮಾನುಗಳ ಕಾರ್ಖಾನೆಯನ್ನು ಸ್ಥಾಪಿಸಲು ಏರ್ಪಾಡಾಗಿದೆ. ಸ್ಟೇನ್‌ಲೆಸ್ ಸ್ಟೀಲ್ ಮುಂತಾದವನ್ನು ತಯಾರಿಸಲು ಆಲೋಚಿಸಲಾಗಿದೆ ಎಂದು ಸಚಿವರು ತಮ್ಮ ಭಾಷಣದಲ್ಲಿ ತಿಳಿಸಿದರು.

ಸಂಗೀತ ಕಛೇರಿ

ಮುಂದಿ ಮೊಹಲ್ಲ ಕಾಳಮ್ಮನ ಗುಡಿ ಬೀದಿಯಲ್ಲಿರುವ ದೇವಾಂಗ ಸಂಘದ ವಿದ್ಯಾರ್ಥಿ ನಿಲಯದಲ್ಲಿ ಗಣಪತಿ ಮಹೋತ್ಸವದ ಪ್ರಯುಕ್ತ ಈ ಸಂಜೆ ... ಘಂಟೆಗೆ ಶ್ರೀಮತಿ ಆರ್ ಲಕ್ಷ್ಮಮ್ಮನವರಿಂದಲೂ, ನಾಳೆ ಸಂಜೆ ... ಘಂಟೆಗೆ ೬|| ವಿ ಎಸ್ ಎಂ ಮುದಿಯಪ್ಪನವರಿಂದಲೂ ... ನೇ ತಾ|| ಸಂಜೆ ... ಘಂಟೆಗೆ ಶ್ರೀಮತಿ ಆರ್ ಜಲಜಾಕ್ಷಮ್ಮನವರಿಂದಲೂ ಸಂಗೀತ ಕಛೇರಿಗಳು ನಡೆಯುವುವು.

೧೧೧ ವರ್ಷದ ವೃದ್ಧನ ನಿಧನ

ದಕ್ಷಿಣ ಆಫ್ರಿಕದ ಅತ್ಯಂತ ವೃದ್ಧ ಪ್ರಜೆ ಪೀಟರ್ ಚಾಂಡ್ಲರ್ ಸ್ಪ್ರಿಂಗಲ್‌ರವರು ಜೋಹಾನ್ಸ್‌ಬರ್ಗಿನಲ್ಲಿ ಕಳೆದ ಸೋಮವಾರ ಕಾಲವಾದರು. ಅವರು ಮರಣವನ್ನು ಹೊಂದಿದಾಗ ೧೧೧ ವರ್ಷ ವಯಸ್ಸುಳ್ಳವರಾಗಿದ್ದರು.

ತಪ್ಪಿಸಿಕೊಳ್ಳಲು ದರೋಡೆಕಾರರು ನೋಟು ಚೆಲ್ಲಿದರು

ಆಗ್ರಾ ನಗರದ ಬಟ್ಟೆ ಅಂಗಡಿಯೊಂದಕ್ಕೆ ನೆನ್ನೆ ಹಗಲು ಹೊತ್ತು ೩ ಜನ ದರೋಡೆಕೋರರು ನುಗ್ಗಿ ... ಸಾವಿರ ರೂಗಳನ್ನು ದೋಚಿಕೊಂಡು ... ದು ... ಹೊರಗೆ ಅಪಾರ ಜನರು ನೆರೆದಿದ್ದುದನ್ನು ಕಂಡು ಅವರು ... ಸಾವಿರ ... ಗಳ ... ನೋಟುಗಳನ್ನು ಚೆಲ್ಲಿ, ಜನರು ಅವುಗಳನ್ನು ... ಎತ್ತಿಕೊಳ್ಳುತ್ತಿದ್ದಾಗ ಪರಾರಿಯಾದರೆಂದು ಗೊತ್ತಾಗಿದೆ. ಅಂಗಡಿ ಮಾಲೀಕನನ್ನು ... ತನ್ನ ... ರು ಗಾಯಗೊಳಿಸಿರುವುದಾಗಿ ತಿಳಿದುಬಂದಿದೆ.

ಚುನಾವಣೆ ಉಮೇದುವಾರರಿಗೆ ವಾಕ್ ಪರೀಕ್ಷೆ

... ಚುನಾವಣಾ ಶಾಸನ ಸಭೆಗೆ ದಿಲ್ಲಿ ಗಡಿನ ಎಲ್ಲೆಯಿಂದ ... ಸ್ಥಾನಗಳಿಗೆ ಕಾಂಗ್ರೆಸ್ ಪರ ಸ್ಪರ್ಧಿಸಿರುವವರನ್ನು ದಿಲ್ಲಿನ ಕಾಂಗ್ರೆಸ್ ಸಮಿತಿಯವರು ವಾಕ್ ಪರೀಕ್ಷೆಗೆ ಒಳಪಡಿಸಿದರು. ೭ ... ತೆ ... ಗುಂಪುಗಳ ... ಸಮಿತಿಯವರು ... ಉಮೇದುವಾರರಿಗೆ ... ಪ್ರಶ್ನೆಗಳನ್ನು ಹಾಕಿದರು.

೧ ಮಣ ಅಕ್ಕಿಗೆ ೧೦೦ ರೂ.

ಪಶ್ಚಿಮ ಬಂಗಾಳದ ಉತ್ತರ ಭಾಗದಲ್ಲಿರುವ ಜಲಪೈಗುರಿಯಲ್ಲಿ ಅಕ್ಕಿಯ ಬೆಲೆಯು ಹೆಚ್ಚಿದುದರಿಂದ, ಅದನ್ನು ಪ್ರತಿಭಟಿಸಲು ... ಜನರು ಉಪವಾಸ ಮಾಡುತ್ತಿದ್ದು, ಹತೋಟಿ ದರದಲ್ಲಿ ಅಕ್ಕಿಯನ್ನು ಸರಬರಾಜು ಮಾಡುವುದಾಗಿ ಭರವಸೆಯು ... ಬಂದ ನಂತರ ಉಪವಾಸವನ್ನು ನಿಲ್ಲಿಸಿದರೆಂದೂ ಗೊತ್ತಾಗಿದೆ. ನಗರದಲ್ಲಿ ಅಕ್ಕಿಯು ಮಣ ಒಂದಕ್ಕೆ ೧೦೦ ರೂ ನಂತೆ ಮಾರಲ್ಪಡುತ್ತಿರುವುದು.

ಷಂಟಿಂಗ್ ಇಂಜನ್ನು ಮತ್ತು ಗಾಡಿಗಳು ಕಂಬಿ ತಪ್ಪಿದುವು

ರಾಜಧಾನಿಯಿಂದ ಮದ್ರಾಸಿಗೆ ಹೋಗುವ ಪಟೇಲ್ ಗಾಡಿಗಳನ್ನು ನೆನ್ನೆ ನಿಲ್ದಾಣಕ್ಕೆ ತರುತ್ತಿದ್ದ ಷಂಟಿಂಗ್ ಇಂಜನ್ನು ಮತ್ತು ... ಗಾಡಿಗಳು, ತಪ್ಪು ಪಾಯಿಂಟ್ ಬಿದ್ದುದರಿಂದ ಕಂಬಿ ತಪ್ಪಿದುವೆಂದೂ, ಇದರಿಂದ ರೈಲು ಮದ್ರಾಸಿಗೆ ಹೊರಡುವುದು ಸುಮಾರು ೧|| ಗಂಟೆ ತಡವಾಯಿತೆಂದೂ ಗೊತ್ತಾಗಿದೆ. ಯಾರಿಗೂ ಅಪಾಯವಾಗಲಿಲ್ಲವೆಂದು ತಿಳಿದುಬಂದಿದೆ.

ಸೀತಾರಾಂರವರ ಉಪವಾಸ ಪರಿಸಮಾಪ್ತಿ

ಆಚಾರ್ಯ ವಿನೋಬಾ ಭಾವೆಯವರು ತಂತಿ ಮೂಲಕ ಮಾಡಿದ ಪ್ರಾರ್ಥನೆಯನ್ನು ಮನ್ನಿಸಿ, ಈ ಮಧ್ಯಾಹ್ನದಿಂದ ಸ್ವಾಮಿ ಸೀತಾರಾಂರವರು ತಮ್ಮ ೩೬ ದಿನಗಳ ಉಪವಾಸವನ್ನು ಮುಕ್ತಾಯ ಮಾಡಲು ನಿರ್ಧರಿಸಿರುತ್ತಾರೆ. ಆಂಧ್ರ ಪ್ರಾಂತ ರಚನಾ ಧ್ಯೇಯವು ಉಪವಾಸ ಮುಕ್ತಾಯ ಮಾಡುವುದರಿಂದ ಸಾಧಿಸಲ್ಪಡುವುದೆಂದು ಆಚಾರ್ಯ ವಿನೋಬಾರವರು ಅವರಿಗೆ ತಿಳಿಸಿರುವರು. ಸ್ವಾಮಿ ಸೀತಾರಾಂರವರು ಹೇಳಿಕೆಯೊಂದನ್ನಿತ್ತು ಆಂಧ್ರ ಪ್ರಾಂತವನ್ನು ಬರುವ ೨ನೇ ತಾ|| ನೊಳಗೆ ರಚಿಸಿ, ಮದ್ರಾಸು ನಗರದ ಭವಿಷ್ಯವನ್ನು ಮಹಾ ಚುನಾವಣೆಗಳಾದ ನಂತರ ಮೂರು ವರ್ಷಗಳಲ್ಲಿ ಇತ್ಯರ್ಥಪಡಿಸಲು ಪಂಚಾಯಿತಿಗೆ ಒಪ್ಪಿಸಬಹುದೆಂದು ತಿಳಿಸಿರುತ್ತಾರೆ.

ಮಣಿಲಾಲ್ ಗಾಂಧಿಯವರ ಸತ್ಯಾಗ್ರಹ

ದಕ್ಷಿಣ ಆಫ್ರಿಕಾ ಸರ್ಕಾರದ ಜನಾಂಗಗಳ ಪ್ರತ್ಯೇಕತಾ ಕಾನೂನನ್ನು ವಿರೋಧಿಸಲು ಡರ್ಬಾನಿನಲ್ಲಿರುವ ಮಣಿಲಾಲ್ ಗಾಂಧಿಯವರು ಸರ್ಕಾರಿ ಕಾನೂನನ್ನು ಮುರಿದು ಸೆರೆಮನೆ ಸೇರಲು ನಿರ್ಧರಿಸಿರುತ್ತಾರೆ. ಹಿಂದೆ ಅವರು ಈ ಸಂಬಂಧವಾಗಿ ... ದಿನಗಳ ಉಪವಾಸ ಮಾಡಿದ್ದರು. ತಮ್ಮ ಕಾರ್ಯದಲ್ಲಿ ಐರೋಪ್ಯರೂ, ಇತರರೂ ನೆರವಾಗಲು ಅವರು ಪ್ರಾರ್ಥನೆ ಮಾಡಿರುತ್ತಾರೆ. ಮಣಿಲಾಲರು ಮಹಾತ್ಮಾ ಗಾಂಧೀಜಿಯವರ ದ್ವಿತೀಯ ಪುತ್ರರು.

ಹಿಂದೂ ಕೋಡ್ ಮಸೂದೆ ವಿರುದ್ಧ ಆಮರಣಾಂತ ಉಪವಾಸ

ಅಖಿಲ ಭಾರತ ಸನಾತನ ಧರ್ಮ ಆಚರಣ ಸಂಘದ ಸಂಸ್ಥಾಪಕರಾದ ಸ್ವಾಮಿ ಸತ್ಯಾನಂದ ಸರಸ್ವತಿಯವರು ದೆಹಲಿಯಲ್ಲಿ ಕಳೆದ ಸೋಮವಾರದಿಂದ ಹಿಂದೂ ಕೋಡ್ ಮಸೂದೆಯನ್ನು ಪ್ರತಿಭಟಿಸಿ ಆಮರಣಾಂತ ಉಪವಾಸ ಮುಹೂರ್ತವನ್ನು ಆರಂಭಿಸಿರುವರು. ಮಸೂದೆಯ ಪರಿಶೀಲನೆಯನ್ನು ... ವಕ್ಕೆ ಹಾಕುವ ಪಕ್ಷದಲ್ಲಿ ಉಪವಾಸವನ್ನು ಮುಕ್ತಾಯ ಮಾಡಲು ಸಿದ್ಧರಿರುವುದಾಗಿ ಅವರ ತಿಳಿಸಿರುವರೆಂದೂ ವರದಿಯಾಗಿದೆ.

ಆಂಧ್ರ ಪ್ರಾಂತ ರಚನೆಗಾಗಿ ನೆಹರೂರವರ ಕುತೂಹಲ

ಆಂಧ್ರ ಪ್ರಾಂತ ರಚನೆ ಎಷ್ಟು ಶೀಘ್ರದಲ್ಲಿಯೇ ಸರ್ಕಾರಿ ಪ್ರಕಟಣೆಯೊಂದು ಬರಲಿದೆಯೆಂದೂ, ನೆಹರೂ ಮತ್ತು ರಾಜಾಜಿಯವರುಗಳು ಈ ವಿಷಯವನ್ನು ಆದಷ್ಟು ಜಾಗ್ರತೆಯಾಗಿ ಇತ್ಯರ್ಥಪಡಿಸಲು ಕುತೂಹಲವುಳ್ಳವರಾಗಿರುವರೆಂದೂ ಗೊತ್ತಾಗಿದೆ. ತಮಿಳು ನಾಡು, ಕರ್ನಾಟಕ ಮತ್ತು ಆಂಧ್ರ ಪ್ರಾಂತಗಳು ನಿರ್ಣಯಗಳನ್ನು ಮಾಡಿ ಪ್ರಾಂತ ರಚನೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿರುತ್ತವೆ. ಮದ್ರಾಸು ಸರ್ಕಾರದ ಅಭಿಪ್ರಾಯ ... ಸಲುವಾಗಿ ಈಗ ಕಾಯಲಾಗಿದೆ.

೩ ಜನರ ಉಪವಾಸದ ಮುಕ್ತಾಯ

ಆಂಧ್ರ ಪ್ರಾಂತ ರಚನೆ ಸಂಬಂಧವಾಗಿ ಉಪವಾಸವನ್ನು ಕೈಗೊಂಡಿರುವ ಸ್ವಾಮಿ ಸೀತಾರಾಮ, ಮಗಾಲಂಬಾ ಮತ್ತು ಮಾಸ್ಟೇಟಿ ಎಂಬುವರ ಸ್ಥಿತಿಯು ಕಳವಳಕರವಾಗಿದ್ದುದರಿಂದ ಅವರು ತಮ್ಮ ವ್ರತವನ್ನು ಮುಕ್ತಾಯ ಮಾಡಬೇಕೆಂದು, ಸ್ವಾಮಿ ಸೀತಾರಾಮರವರು, [illegible] ಇತ್ತ ಪ್ರಕಾರ, ಅವರುಗಳು ಉಪವಾಸವನ್ನು ಮುಕ್ತಾಯ ಮಾಡಿದರು ಮಗಾಲಂಬಾರವರು ರಕ್ತವನ್ನು ಕಾರುತ್ತಿದ್ದರೆಂದು ಗೊತ್ತಾಗಿದೆ

ಮದುವೆಯ ಊಟದಿಂದ ೮೯ ಜನರಿಗೆ ಕಾಲರಾ

ಮದ್ರಾಸಿನ ಒಂದು ಮನೆಯ [illegible] ಮನೆಯ ಸಂಬಂಧವಾದ ಭೋಜನ ಕೂಟದಲ್ಲಿ ಊಟ ಮಾಡಿದ [illegible] ಕಾಲರಾ ವ್ಯಾಧಿಗ್ರಸ್ತರಾಗಿ [illegible] ಟರೋಗಿಗಳ ಆಸ್ಪತ್ರೆಗೆ ಸೇರಿಸಲ್ಪಟ್ಟಿರುತ್ತಾರೆ ಒಟ್ಟು [illegible] ಜನರ [illegible] ಗಿರುತ್ತಾರೆಂದು ಗೊತ್ತಾಗಿದೆ

ಎ. ಎಸ್. ಟಿ. ಯು. ಸಿ. ಅಧಿವೇಶನ

ಅಖಿಲ ಭಾರತ [illegible] ಯೂನಿಯನ್ ಕಾಂಗ್ರೆಸ್ಸಿನ [illegible] ರನವು ಎರ್ನಕುಲಂದಲ್ಲಿ [illegible] ೨೦,೨೧ನೇ ತಾ|| ನಡೆಯುವ [illegible] ೨೨ ಮತ್ತು ೨೩ನೇ ತಾ [illegible] ವುದೆಂದು ಗೊತ್ತಾಗಿದೆ [illegible] ಕಾಂಗ್ರೆಸ್ಸಿನ ಜನರಲ್ ಕೌನ್ಸಿಲ್ [illegible] ತಾ|| ನಡೆಯುವುವು.

ಬಾಗ್ದಾದಿಗೆ ಲಿಯಾಖತ್ ಅಲಿ

[illegible] ಬಾಗದಾದ್ ನಗರಕ್ಕೆ ಪೈಸಲಾಬಾದಿನ ಮಾಜಿ ಸ್ರ [illegible] ಲಿಯಾಖತ್ ಅಲಿಯವರು [illegible] ತೆರಳುತ್ತಾರೆ ಅವರು [illegible] ಸಂಪರ್ಕ [illegible] ಹೊಂದಿರುತ್ತಾರೆಂ [illegible] ಗಿದೆ

ಕಾಂಗ್ರೆಸ್ಸಿಗೆ ಬೆಂಬಲ ಕೊಡಲು ಎ ಐ ಟಿ ಯು ಸಿ ನಿರ್ಧಾರ

[illegible]

ವಿದೇಶೀ ಮಹಿಳೆಯರನ್ನು ವಿವಾಹವಾಗಲು ನಿರ್ಬಂಧ

ವಿದೇಶೀ ಮಹಿಳೆಯರನ್ನು ವಿವಾಹವಾಗುವ ಭಾರತದ ನೌಕಾ, ಸೈನ್ಯ ಮತ್ತು ವಿಮಾನ ಬಲಗಳ ಅಧಿಕಾರಿಗಳು ಸರ್ಕಾರದ ಪೂರ್ವಭಾವಿ ಸಮ್ಮತಿಯನ್ನು ಪಡೆಯಬೇಕೆಂದು ವಿಧಾಯಕ ಮಾಡಲಾಗಿದೆ.

ನೀರಿಲ್ಲದೆ ಒಂಟೆ ಪ್ರಯಾಣಿಕರ ಮರಣ

ಪಾಕಿಸ್ತಾನದಿಂದ ಒಂಟೆಗಳ ಮೇಲೆ ಸಾಮಾನುಗಳನ್ನು ಪರ್ಷಿಯಾಕ್ಕೆ ಸಾಗಿಸಿಕೊಂಡು ಹೋಗುತ್ತಿದ್ದ ೧೧೦ ಮಂದಿ ಪಾಕಿಸ್ತಾನಿ ಜನರಿಗೆ ಮಾರ್ಗದಲ್ಲಿ ಕುಡಿಯಲು ನೀರು ಸಿಗದೆ, ಅವರ ಪೈಕಿ ೫೦ ಮಂದಿ ಮೃತಪಟ್ಟರೆಂದು ವರದಿಯಾಗಿದೆ

ಗಣಪತಿ ಉತ್ಸವ

ಚೆಟ್ಟಿಪಟ್ಟರದ ಮೈಸೂರಿನ ಮಂಜುನಾಥ ಯೂನಿಯನ್ನಿನ ಆಶ್ರಯದಲ್ಲಿ ಪ್ರೆಸಿಡೆಂಟ್ ಶ್ರೀ ಬಿ ಪಿ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ೧೫ ನೇ ತಾ|| ಗಣಪತಿ ಮಂಗಳಾರತಿಯು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಊರಿನ ಮುಖ್ಯ ಬೀದಿಗಳಲ್ಲಿ ಉತ್ಸವವನ್ನು ಮಾಡಲಾಯಿತು ಬಾಂಡಿನ ಕ್ಯಾಪ್ಟನ್ ರಜನರು ಬಾಣ ಬಿರುಸುಗಳನ್ನು ಹಚ್ಚಿ ಪ್ರದರ್ಶಿಸಿದರು

ಚಾಮುಂಡೇಶ್ವರಿ ಟಾಕೀಸ್

21-9-51 ರಿಂದ 9ನೇ ವಾರ ಇನ್ನು ಐದು ದಿನಗಳು ಮಾತ್ರವೇ

* ದೇವಕಿ *

26-9-51 ರಿಂದ

ಮೋಹನ ಸುಂದರಂ

Edited, printed and published by A R Nagarajan at Sadhvi Press D Subbiah Road, Mysore

ನಗರಾಭಿವೃದ್ಧಿ ಸಮಿತಿ, ಮೈಸೂರು

ತಾ|| ೧೮-೯-೧೯೫೧

ಮಾದರಿ ಮನೆಯ ಮಾರಾಟ

ಪ್ರಕಟಣೆ

ಮೈಸೂರಿನ ನಜರ್‌ಬಾದ್ ಮೊಹಲ್ಲಾದ ಇಟ್ಟಿಗೆಗೂಡಿನಲ್ಲಿ ಮೃಗಾಲಯದ ಎದುರಿಗಿರುವ ಒಂದು ಮಾದರಿ ಮನೆಯನ್ನು ಕೊಳ್ಳಲು ಇಚ್ಛಿಸುವ ಮನೆಯಿಲ್ಲದ ಇಟ್ಟಿಗೆಗೂಡಿನ ನಿವಾಸಿಗಳಿಂದ ನಿಗದಿಯಾದ ನಮೂನೆಗಳಲ್ಲಿ ಅರ್ಜಿಗಳನ್ನು 25 ರೂ ಗಳ ಡಿಪಾಜಿಟ್ ಸಮೇತ 1951 ನೇ ಅಕ್ಟೋಬರ್ 3ನೇ ತಾ|| ಮಧ್ಯಾಹ್ನ 3 ಗಂಟೆವರೆಗೆ ಸ್ವೀಕರಿಸಲಾಗುವುದೆಂದು ಇಟ್ಟಿಗೆಗೂಡಿನ ನಿವಾಸಿಗಳ ಗಮನಕ್ಕೆ ಈ ಮೂಲಕ ತರಲಾಗಿದೆ. ಮನೆಯು ಲಾಟ್ ಆಗದಿದ್ದರೆ, ಡಿಪಾಜಿಟ್ ಹಣವನ್ನು ವಾಪಸು ಮಾಡಲಾಗುವುದು. ಮನೆಯ ಖರೀದಿ ರೂ 1000/- ಅಲಾಟ್‌ಮೆಂಟ್ ಪತ್ರ ಮುಟ್ಟಿದ ಹದಿನೈದು ದಿನಗಳೊಳಗಾಗಿ ಕೈಕೊಡಲ್ಪಟ್ಟಿರುವವರು ಒಳಕೆಯ 1750 ರೂ ಗಳನ್ನು ಪಾವತಿ ಮಾಡಬೇಕು ಅಥವಾ ಅಲಾಟ್‌ಮೆಂಟ್ ಪತ್ರ ತಲುಪಿದ 15ನೇ ದಿನದಿಂದ ೩½ 6 + 0 ರೂ ಬಡ್ಡಿಯೊಡನೆ ಆರು ಸಮ ಕಂತುಗಳಲ್ಲಿ ಹಣವನ್ನು ಪಾವತಿ ಮಾಡಬೇಕು ಹೀಗೆ ಮಾಡದಿದ್ದರೆ ಡಿಪಾಜಿಟ್ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಖರೀದಿಯಾದ10 ವರ್ಷಗಳವರೆಗೆ ಕೊಳ್ಳುವವರು ಮನೆಯನ್ನು ಪರ್ಗಾಯಿಸಲು ಅಥವಾ ಇನ್ನಾವ ರೀತಿಯಲ್ಲೂ ಪರಭಾರೆ ಮಾಡಲು ಹಕ್ಕುಳ್ಳವರಾಗಿಲ್ಲ ಮತ್ತು ಯಾವ ರೀತಿಯಲ್ಲೂ ಮನೆಯನ್ನು ಹೆಚ್ಚಿಸುವುದಕ್ಕಾಗಲಿ ಬದಲಾವಣೆ ಮಾಡುವುದಕ್ಕಾಗಲಿ ಅವಕಾಶವಿರುವುದಿಲ್ಲ. ಡಿಪಾಜಿಟ್ ಹಣ ಇಲ್ಲದ ಅಥವಾ ಗೊತ್ತಾದ ನಮೂನೆಗಳಲ್ಲಿಲ್ಲದೆ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುವುದಿಲ್ಲ ಹೆಚ್ಚಿನ ವಿವರಗಳನ್ನೂ ಮತ್ತು ಅರ್ಜಿಯ ನಿರ್ದಿಷ್ಟ ನಮೂನೆಗಳನ್ನು ಕೆಲಸದ ಕಾಲದಲ್ಲಿ ಅಧ್ಯಕ್ಷರ ಕಛೇರಿಯಲ್ಲಿ ಪಡೆಯಬಹುದು

(ರುಜು) ಪಿ. ಗೋಪಾಲಕೃಷ್ಣ, ಬಿ
ಅಧ್ಯಕ್ಷ

ತೀರ್ಥವ ತ್ರೆ ಕಾಫಿ

ನಾರಾಯಣ ಶಾಸ್ತ್ರಿ ರಸ್ತೆ
ಫೋನ್ ನಂ 537

ತರಕಾರಿಗಳನ್ನು ರವಾನಿಸುವ ಸಂಸ್ಥೆ

ಗಣೇಶ ಟಾಕೀಸ್

21-9-51 ರಿಂದ [illegible] ದಿನಗಳು ಮಾತ್ರ

ಏಕಾಂಬರನಾಥ್

(ತಮಿಳು)

ಪಾತ್ರ ಕೊತ್ತಮಂಗಲಂ ಶೀನು ಪಂಡರೀಬಾಯಿ ಕುಮಾರಿ ಕಮಲ, ಪುಳಿಮೂತೆ ಮತ್ತು ಸಾರಂಗಪಾಣಿ

26-9-51ರಿಂದ

ಮೋಹನ ಸುಂದರಂ

ರಾಜಕಮಲ್, ಮೈಸೂರು

21-9-51 ರಿಂದ 7ನೇ ವಾರ

ಜಗನ್ಮೋಹಿನಿ

ಪ್ರಭುದೇವಾ ಟಾಕೀಸ್

ಶುಕ್ರವಾರದಿಂದ

21-9-51ನೇ

ಅಂಜಲಿ ದೇವಿ,

ನಾಗೇಶ್ವರ ರಾವ್,

ಸೂರ್ಯ ಪ್ರಭ,

ರೇಲಂಗಿ,

ಸಿ. ಎಸ್. ಆರ್.

ಮುಂತಾದವರು, ಪಾತ್ರ ವಹಿಸಿರುವ ತಮಿಳು



ಸ್ತ್ರೀ ಸಾ ಹ ಸಂ

ಚಿತ್ರ

ನಾಲ್ಕು ವಾರ ಕಾಲ ಎಲ್ಲ ವಿಧವಾದ ಕಂಸೆಷನ್ ಪಾಸುಗಳನ್ನೂ ಮನ್ನಾ ಮಾಡಿರುತ್ತೆ

MODEL LAUNDRY IN THE MODEL CITY

Equipped with Modern Electric Machines TRIPLEX DRY CLEANING PLANT, WASH BOILER, STEAM BOILER, HYDRO EXTRACTOR, PRESSING MACHINES etc, for cleaning and pressing all kinds of clothes within few hours at moderate rates Collection centres in all parts of the city

JOTHI ELECTRIC LAUNDRY,
22, Nazarbad, MYSORE

ನಾಟಕ ರತ್ನ ವೀರಣ್ಣನವರ ಗುಬ್ಬಿ ಕಂಪೆನಿ (ರಿ) ಅವರು

ರತ್ನಾವಳಿ ಥಿಯೇಟರಿನಲ್ಲಿ

ಮಹಾಜನಗಳ ಕೋರಿಕೆ ಮೇರೆ

19-9-51ನೇ ಬುಧವಾರದಿಂದ

ರಾಜಾ ಗೋಪಿಚಂದ್

ಶುಕ್ರವಾರ ಮತ್ತು ಭಾನುವಾರಗಳಲ್ಲಿ 6 45ಕ್ಕೆ ಉಳಿದ ದಿನಗಳಲ್ಲಿ 9 45ಕ್ಕೆ

ಸೀನರಿ - ಧರ್ಮಾಚಾರ್ ಬೀದರ ಕಳ್ಳಪ್ಪ ಮತ್ತು ಬಸವೇಶ್ವರ

ಫೋನ್ ನಂ. 792 । ಭಾರತೀ ಪ್ರಕಾಶನ । ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೮-೯-೫೧ [ಸಂಚಿಕೆ ೫೧

ಬ್ರಹ್ಮಪುತ್ರ ಪ್ರವಾಹದಲ್ಲಿ ೨೫೦ ಗ್ರಾಮಗಳ ನಾಶ

ಸ್ವಾಮಿ ಸೀತಾರಾಂರವರ ಉಪವಾಸ ನಿಂತಿತು

ಆಂಧ್ರ ಪ್ರಾಂತ ರಚನೆಯ ಸಂಬಂಧವಾಗಿ ಕಳೆದ ತಿಂಗಳು ೧೫ನೇ ತಾ॥ ನಿಂದ ತಿರುಪತಿಯ ಶ್ರೀ ವೆಂಕಟೇಶ ದೇವರ ಸನ್ನಿಧಿಯಲ್ಲಿ ಉಪವಾಸವನ್ನು ಕೈಗೊಂಡಿದ್ದ ಸ್ವಾಮಿ ಸೀತಾರಾಂರವರು ನಿನ್ನೆ ಅಪರಾಹ್ನ ೧೨-೩೦ ಗಂಟೆಗೆ ಗುಂಟೂರಿನಲ್ಲಿ ಕಿತ್ತಳೆ ಹಣ್ಣಿನ ರಸವನ್ನು ಕುಡಿದು ಉಪವಾಸವನ್ನು ಮುಕ್ತಾಯಗೊಳಿಸಿದರು. ಸಹಸ್ರಾರು ಜನರು ಈ ದೃಶ್ಯವನ್ನು ನೋಡಲು ಆಗಮಿಸಿದ್ದರು. ಆಚಾರ್ಯ ವಿನೋಬಾರವರ ಸಲಹೆಯ ಪ್ರಕಾರ ಅವರು ತಮ್ಮ ವ್ರತವನ್ನು ನಿಲ್ಲಿಸುತ್ತಾರೆ. ವಿನೋಬಾರವರ ಮತ್ತು ತಮ್ಮ ದೇಹ ಮತ್ತು ಆತ್ಮಗಳು ಒಂದೇ ಎಂದು ಸ್ವಾಮಿ ಸೀತಾರಾಂರವರು ಹೇಳಿರುತ್ತಾರೆ. ಸೀತಾರಾಂರವರು ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತಾ ತಮಗೂ ಮತ್ತು ತಮ್ಮೊಡನೆ ಉಪವಾಸ ಮಾಡಿದ ಜನರಿಗೂ ಪುನರ್ಜನ್ಮ ಬಂದಂತಾಗಿದೆಯೆಂದು ತಿಳಿಸಿ, ಉಪವಾಸವನ್ನು ಸಹಿಸಲು ತಮಗೆ ಶಕ್ತಿಯನ್ನು ದಯಪಾಲಿಸಿದುದಕ್ಕಾಗಿ ತಿರುಪತಿಯ ವೆಂಕಟೇಶ್ವರ ಸ್ವಾಮಿಗೆ ಕೃತಜ್ಞತೆಯನ್ನು ಸೂಚಿಸಿದರು. ತಮ್ಮ ಉಪವಾಸ ಮುಕ್ತಾಯದ ಬಗ್ಗೆ ರಾಷ್ಟ್ರಾಧ್ಯಕ್ಷರಿಗೂ ಮತ್ತು ಪ್ರಧಾನಿಯವರಿಗೂ ತಂತಿ ಕಳುಹಿಸಿ, ಅಕ್ಟೋಬರ್ ೨ ರೊಳಗೆ ಆಂಧ್ರ ಪ್ರಾಂತ ರಚನೆಯಾಗಬೇಕೆಂದು ಕೋರಿರುತ್ತಾರೆ.

ಕಿದ್ವಾಯರು ಮತ್ತೆ ಕಾಂಗ್ರೆಸ್ಸಿಗೆ ಸೇರುವರು

ಕಾಂಗ್ರೆಸ್ ಸಂಸ್ಥೆಯನ್ನು ಬಿಟ್ಟು ಹೊರಬಂದಿದ್ದ ಕೇಂದ್ರ ಸರ್ಕಾರದ ಮಾಜಿ ಪೂರ್ತಾನುಕೂಲ ಸಚಿವ ರಫಿ ಅಹಮದ್ ಕಿದ್ವಾಯ್‌ರವರು ಮತ್ತೆ ಕಾಂಗ್ರೆಸ್ಸಿಗೆ ಸೇರಲು ನಿರ್ಧರಿಸಿರುವರೆಂದೂ, ಅವರು ಸೇರಿದೊಡನೆ ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಲ್ಲಿರುವ ಅವರ ಅನುಯಾಯಿಗಳೂ ಸಹ ಆ ಸಂಸ್ಥೆಗೆ ವಾಪಸು ಬರುವರೆಂದೂ ಗೊತ್ತಾಗಿದೆ.

ವಿಚಾರ ಗೋಷ್ಠಿ

ರಾಜಧಾನಿಯ ಕೃಷ್ಣವಿಲಾಸ ರಸ್ತೆಯಲ್ಲಿರುವ ಮಾಡರ್ನ್ ಶಾಲೆಯಲ್ಲಿ ಮೈಸೂರು ಸಾರ್ವಜನಿಕ ವಿಚಾರ ಸಂಸ್ಥೆಯವರು ನಾಳೆ ಸಂಜೆ ೬ ಗಂಟೆಗೆ "ಪ್ರಾಚೀನ ವಿಶ್ವದ ಘಟನೆಗಳು" ಎಂಬ ವಿಷಯವಾಗಿ ವಿಚಾರ ಗೋಷ್ಠಿಯೊಂದ ನ್ನೇರ್ಪಡಿಸಿರುತ್ತಾರೆ. ಸರ್ವರಿಗೂ ಸ್ವಾಗತ.

ರಾಜಧಾನಿಯಲ್ಲಿ ಫುಟ್‌ಬಾಲ್ ಪೆವಿಲಿಯನ್

ರಾಜಧಾನಿಯ ದೊಡ್ಡ ಕೆರೆ ಮೈದಾನದಲ್ಲಿ ಒಂದು ಫುಟ್ ಬಾಲ್ ಪೆವಿಲಿಯನ್ ಕಟ್ಟಲು ಸಂಸ್ಥಾನದ ಫುಟ್ ಬಾಲ್ ಸಂಘದವರು ಮಾಡಿದ್ದ ಸೂಚನೆಗೆ ಸರ್ಕಾರದವರು ಅಂಗೀಕಾರವನ್ನು ಇತ್ತಿರುವರೆಂದು ಗೊತ್ತಾಗಿದೆ. ಇದನ್ನು ಕಟ್ಟಲು ೩೦ ಸಾವಿರ ರೂಗಳು ಬೇಕಾಗುವುದೆಂದೂ ಹಣ ಒದಗಿಸಿಕೊಳ್ಳಲು ಸರ್ಕಾರದವರು ಸೂಕ್ತ ಏರ್ಪಾಡುಗಳ ನ್ನು ಮಾಡುವರೆಂದೂ ಗೊತ್ತಾಗಿದೆ.

ಮೈಸೂರಿನ ೩೬ ಕೋಟಿ ರೂ. ಯೋಜನೆ

ವಿದ್ಯುಚ್ಛಕ್ತಿ ಮತ್ತು ನೀರಾವರಿ ಕಾರ್ಯಗಳಿಗಾಗಿ ವಿಶೇಷ ವೆಚ್ಚ

ಬೆಂಗಳೂರು ೨೭

ಬರುವ ೫೧-೫೨ ನೇ ವರ್ಷದಿಂದ ಪ್ರಾರಂಭಿಸುವ ಸಂಸ್ಥಾನದ ೬ ವರ್ಷಗಳ ಯೋಜನೆಯ ಸ್ವರೂಪವೇನೆಂಬುದನ್ನು ಮೈಸೂರಿನ ಯೋಜನಾ ಕಮಿಷನರಾದ ಶ್ರೀ ಜೆ ಬಿ ಮಲ್ಲಾರಾಧ್ಯರು ತಿಳಿಸಿರುತ್ತಾರೆ. ಈ ಯೋಜನೆಗೆ ಒಟ್ಟು ೩೬-೬ ಕೋಟಿ ರೂ ಗಳ ವೆಚ್ಚವಾಗುವುದೆಂದು ಅಂದಾಜಾಗಿರುವುದು. ಪ್ರತಿಯೊಂದು ವರ್ಷದಲ್ಲಿಯೂ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಆಯಾ ವರ್ಷದ ಆಯವ್ಯಯ ಪಟ್ಟಿಗಳಲ್ಲಿ ಸೇರಿಸಲಾಗುವುದೆಂದು ಗೊತ್ತಾಗಿದೆ.

೧೨೫ ಲಕ್ಷ ರೂ ವೆಚ್ಚದಿಂದ ಜೋಗಿನಲ್ಲಿ ೧೨೦ ಸಾವಿರ ಕಿಲೋವಾಟ್, ಶಿಂಷದಲ್ಲಿ ೫೦ ಸಾವಿರ ಕಿಲೋವಾಟ್ ನಷ್ಟು ವಿದ್ಯುಚ್ಛಕ್ತಿ ಉತ್ಪನ್ನವೂ, ೭೭೬ ಲಕ್ಷ ರೂ ವೆಚ್ಚದಲ್ಲಿ ಒಟ್ಟು ೬೩೩ ಸಾವಿರ ಎಕರೆ ಜಮೀನುಗಳ ಆಬಾದಿನಿಂದ ವರ್ಷಂಪ್ರತಿ ೭೦ ಸಾವಿರ ಟನ್ ಅಧಿಕ ಆಹಾರ ಬೆಳೆಯೂ ಆಗುವುವೆಂದು ಅಂದಾಜಾಗಿದೆ. ವ್ಯವಸಾಯಕ್ಕಾಗಿ ೪೪೨ ಲಕ್ಷ ರೂ. ಗಳನ್ನು ತೆಗೆದಿಡಲಾಗಿದೆ. ಇತರ ಇಲಾಖೆಗಳ ಅಭಿವೃದ್ಧಿ ಯೋಜನೆಗಳಿಗಾಗಿ ೧೭ ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗುವುದು. ಈ ಯೋಜನೆಗೆ ಹಣ ಒದಗಿಸಲು ಕೇಂದ್ರದವರು ೮ ಕೋಟಿ ರೂ ಸಹಾಯವನ್ನು ಕೊಡುವುದರ ಜೊತೆಗೆ ಸಂಸ್ಥಾನದಲ್ಲಿ ಉಳಿಕೆಯ ಹಣವನ್ನು ಪಡೆಯಲಾಗುವುದು.

ಪೂರ್ವ ಕೊರಿಯಾದಲ್ಲಿ ವಿಶ್ವ ಸಂಸ್ಥೆ ಸೈನ್ಯಗಳ ದಾಳಿ

ವಿಶ್ವಸಂಸ್ಥೆಯ ಸೈನ್ಯಗಳು ಕೊರಿಯ ದ ೩೮ನೇ ಸಮಾನಾಂತರ ರೇಖೆಯ ಉತ್ತರಕ್ಕೆ ಹೋಗಿ ಕಮ್ಯೂನಿಸ್ಟರೊಡನೆ ೯ ಗಂಟೆ ಕಾಲ ಕಾದಾಡಿ ವಾಪಸು ಬಂದಿರುವುದಾಗಿ ಅಮೇರಿಕದ ೮ನೇ ಸೈನ್ಯದ ಕಛೇರಿಯು ತಿಳಿಸುತ್ತದೆ. ಉತ್ತರ ಕೊರಿಯಾ ರೈಲ್ವೆಗಳ ಮೇಲೆ ಬಲವಾದ ದಾಳಿ ಮಾಡಲಾಯಿತು.

೨೫೦ ಅಸ್ಸಾಂ ಹಳ್ಳಿಗಳಿಗೆ ಪ್ರವಾಹದ ನೀರು

ಬ್ರಹ್ಮಪುತ್ರ ಮತ್ತು ಅದರ ಉಪನದಿಗಳ ಪ್ರವಾಹದಿಂದ ೨೦ ಮೈಲಿಯ ವಿಸ್ತಾರದ ಕ್ಷೇತ್ರದಲ್ಲಿರುವ ಸುಮಾರು ೨೫೦ ಹಳ್ಳಿಗಳಲ್ಲಿ ನೀರು ನುಗ್ಗಿರುವುದೆಂದೂ, ದಿಬ್ರುಗಢದ ಉತ್ತರಕ್ಕೆ ಇನ್ನೂ ೪೦ ಹಳ್ಳಿಗಳಿಗೂ ಇದೇ ಗತಿಯಾಗಿರುವುದೆಂದೂ ವರದಿಗಳು ಬಂದಿವೆ. ದೋಣಿಗಳ ಓಡಾಟವು ಪೂರ್ತಿಯಾಗಿ ನಿಂತು ಹೋಗಿ ಜನರಿಗೆ ಮತ್ತು ದನಕರುಗಳಿಗೆ ಆಹಾರವನ್ನು ವಿಮಾನಗಳಿಂದ ಕೆಳಕ್ಕೆ ಹಾಕಲು ಅಧಿಕಾರಿಗಳು ಏರ್ಪಡಿಸಿರುವುದಾಗಿ ಗೊತ್ತಾಗಿದೆ.

ಟೆಹರಾನ್ ಜೈಲಿನ ಖೈದಿಗಳ ದಂಗೆ

ಪರ್ಷಿಯದ ರಾಜಧಾನಿ ಟೆಹರಾನಿನ ಜೈಲನ್ನು ಕ್ರಿಮಿನಾಶಕ ವಸ್ತುವಿನಿಂದ ಶುದ್ಧಿ ಮಾಡುವ ಸಲುವಾಗಿ ಮೊನ್ನೆ ದಿನ ಅಲ್ಲಿದ್ದ ೭೦೦ ಜನ ಬಂದಿಗಳನ್ನು ಬೇರೆ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಅವರುಗಳು ದಂಗೆಯೆದ್ದು ಜೈಲಿನ ನೌಕರರಿಗೂ ಅವರಿಗೂ ಘರ್ಷಣೆ ನಡೆಯಿತು. ಇವರಿಂದ ೧೮ ಮಂದಿ ನೌಕರರಿಗೆ ಗಾಯವಾಯಿತೆಂದೂ, ಎಷ್ಟು ಮಂದಿ ಖೈದಿಗಳಿಗೆ ಗಾಯವಾಗಿದೆಯೆಂಬುದನ್ನಾಗಲೀ, ದಂಗೆಯನ್ನು ಹೇಗೆ ಅಡಗಿಸಲಾಯಿತೆಂಬುದನ್ನಾಗಲೀ ಜೈಲು ಅಧಿಕಾರಿಗಳು ನಿರಾಕರಿಸಿದರೆಂದು ವರದಿಯಾಗಿದೆ.

ಸೂರ್ಯನಾರಾಯಣರಾಯರನ್ನು ವಜಾ ಮಾಡಿದ ನಿರ್ಣಯಕ್ಕೆ ತಡೆ

ಡಾ॥ ಬಿ ಎಸ್ ಸೂರ್ಯನಾರಾಯಣರಾಯರನ್ನು ಸಿಟಿ ಕೊ ಆಪರೇಟಿವ್ ಬ್ಯಾಂಕಿನ ಸದಸ್ಯತನದಿಂದ ಜನರಲ್ ಬಾಡಿಯು ತೆಗೆದು ಹಾಕಿರುವುದು ಸಬ್ ಜುಡಿಸ್ ಆದ್ದರಿಂದ ಕ್ರಮ ಬದ್ಧವಲ್ಲವೆಂದು ಅವರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಕೋರ್ಟಿನಲ್ಲಿ ವ್ಯಾಜ್ಯ ಹೂಡಿರುವುದರಿಂದ, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಮುಂದೆ ತಮ್ಮಿಂದ ಆಜ್ಞೆಯಾಗುವವರೆಗೆ ಜನರಲ್ ಬಾಡಿಯ ಈ ನಿರ್ಣಯವನ್ನು ಜಾರಿಗೆ ಕೊಡಕೂಡದೆಂದು ನೆನ್ನೆ ಬ್ಯಾಂಕಿಗೆ ತಡೆ ಆಜ್ಞೆಯನ್ನು ಕೊಟ್ಟಿರುತ್ತಾರೆ.

ವಿಷಪ್ರಾಶನದ ಮೊಕದ್ದಮೆಯಲ್ಲಿ ರಾಜೂರವರ ವಾದ

ಸ್ವಂ.ಸ.ಪ್ರೋ] ಬೆಂಗಳೂರು ೨೭

ವಿಷಪ್ರಾಶನ ಮೊಕದ್ದಮೆಯಲ್ಲಿ ಮೊನ್ನೆ ಪ್ರಾಸಿಕ್ಯೂಷನ್ ಇನ್ಸ್‌ಪೆಕ್ಟರ್ ಶ್ರೀ ನಾರಸಿಂಹ ಮೂರ್ತಿಯವರು ಅಪಾದಿತರ ಮೇಲೆ ತಪ್ಪುಗಳು ಸಾಬೀತಾಗಿರುವುವೆಂದು ವಾದ ಮಾಡಿದರು. ಮೊದಲನೇ ಅಪಾದಿತರಾದ ಶ್ರೀ ಎಲ್ ಎಸ್. ರಾಜೂರವರೇ ಖುದ್ದಾಗಿ ವಾದ ಮಾಡಿ, ತಮ್ಮ ಮೇಲೆ ಮೊಕದ್ದಮೆಗೆ ಅವಕಾಶವೇ ಇಲ್ಲದಿರುವುದರಿಂದ ಡಿಸ್ಚಾರ್ಜ್ ಮಾಡಬೇಕೆಂದು ತಿಳಿಸಿ, ಅಪ್ರೂವರರ ಸಾಕ್ಷ್ಯಕ್ಕೆ ಇತರ ಸಾಕ್ಷಿಗಳ ಬೆಂಬಲವು ದೊರೆತಿಲ್ಲವೆಂದೂ, ಅಪಾದಿತರ ಮನೆಯನ್ನು ಶೋಧಿಸಿದಾಗ ಅಪಾದನೆಗಳ ಸಂಬಂಧವಾದ ಯಾವ ವಸ್ತುವೂ ದೊರೆಯಲಿಲ್ಲವೆಂದೂ ಹೇಳಿದರು. ಡಾ॥ ಪ್ರಸಾದರಿಗೆ ಕೊಟ್ಟ ಕ್ರಮವು ಸರಿಯಲ್ಲವೆಂದು ತಿಳಿಸಿದರು.

ಈ ದಿನ ತಮ್ಮ ವಾದವನ್ನು ಮುಂದುವರಿಸಿ, ೧೬ ನೇ ತಾ॥ ವಿಷ ಇರುವುದೆಂದು ಹೇಳಲಾದ ಸೀಸೆಯನ್ನು ವಶಪಡಿಸಿಕೊಳ್ಳಲಾಯಿತೆಂದೂ, ಆದರೆ ಅದನ್ನು ಪರೀಕ್ಷೆಗೆ ಕಳುಹಿಸಿದುದು ೨೬ನೇ ತಾ॥ ಎಂದೂ, ಇಷ್ಟು ದಿನಗಳು ಸುಮ್ಮನೆ ಏಕೆ ಪೊಲೀಸರು ಕಾಲಹರಣ ಮಾಡಿದರೋ ತಿಳಿಯದೆಂದೂ ಹೇಳಿ, ಸರ್ಕಾರದ ರಸಾಯನಿಕ ಪರೀಕ್ಷಕರನ್ನು ಬಿಟ್ಟು ಸೆಂಟ್ರಲ್ ಕಾಲೇಜಿನಲ್ಲಿ ಅದನ್ನು ಪರೀಕ್ಷಿಸಿದುದನ್ನು ಪ್ರಶ್ನಿಸಿದರು.

ಸೆಂಟ್ರಲ್ ಕಾಲೇಜು ಮುಖ್ಯಾಧಿಕಾರಿಗಳಾದ ಶ್ರೀ ರಾಮಸ್ವಾಮಯ್ಯಂಗಾರ್ಯರನ್ನು ವಿಚಾರಿಸದೇ ಅವರ ಕೈಕೆಳಗಿರುವವರನ್ನು ವಿಚಾರಿಸಿದುದರ ಅರ್ಥವನ್ನು ಪ್ರಶ್ನಿಸಿ, ಸೇವಕ ಗಂಗನು ಹೇಳಿರುವ ಪ್ರಕಾರ ಸಿಸ್ಟ್ಟಾಳ ಪಾತ್ರೆಯ ಮೇಲೆ ಬಿಲ ಹೆಸ್ರು ಕಟ್ಟಿತ್ತೆಂದೂ, ಆದರೆ ಡಾ॥ ಪುಟ್ಟಯ್ಯನವರು ಹೇಳಿರುವ ಪ್ರಕಾರ ಮರ್‌ಕ್ಯೂರಿಕ್ ಕ್ಲೋರೈಡು ಸೇರಿದರೆ ಬಣ್ಣವಿಲ್ಲದ ದ್ರವವು ಆಗುವುದೆಂದೂ ಗೊತ್ತಾಗುತ್ತದೆ ಎಂದು ಅವರು ಹೇಳಿ, ತಮ್ಮ ಮೇಲೆ ಉದ್ದೇಶಪೂರ್ವಕವಾಗಿ ಈ ಮೊಕದ್ದಮೆಯನ್ನು ಹೂಡಲಾಗಿದೆಯೆಂದು ತಿಳಿಸಿದರು.

ಮಾಲೀಕತ್ವ ಬದಲಾಯಿಸುವ ಹೋಟೇಲುಗಳಿಗೆ ರಹದಾರಿ ರದ್ದು

ಬೆಂಗಳೂರು ನಗರದಲ್ಲಿ ಸಣ್ಣ ಹೋಟೇಲುಗಳು ಇತ್ತೀಚೆಗೆ ಕಟ್ಟಿ, ಅವುಗಳು ಅಭಿವೃದ್ಧಿ ಹೊಂದಿದಂತೆಲ್ಲಾ ಉತ್ತಮವಾದ ಬೇರೆ ಸ್ಥಳಗಳಿಗೆ ವರ್ಗಾಯಿಸಲ್ಪಟ್ಟು ಕಡೆಗೆ ಮಾಲೀಕತ್ವದ ಹಕ್ಕುಗಳನ್ನು ಭಾರಿ ಹೋಟೇಲುಗಳನ್ನಿಟ್ಟಿರುವವರಿಗೆ ಮಾರಾಟ ಮಾಡುವ ಪದ್ಧತಿಯುಂಟಾಗಿ ನಗರದ ರೇಷನ್ ಕಾರ್ಡುದಾರರುಗಳಿಗೆ ಕೊಡಬಹುದಾದ ಸಕ್ಕರೆಯ ಸರಬರಾಜಿಗೆ ಅಡಚಣೆಯಾಗುವುದನ್ನು ತಪ್ಪಿಸಲು ಸರ್ಕಾರದವರು ಇಂತಹ ಹೋಟೇಲುಗಳ ಸ್ಥಳಾಂತರಕ್ಕೆ ಅವಕಾಶವನ್ನು ಕೊಡಕೂಡದೆಂದೂ, ಮಾಲೀಕತ್ವದ ಬದಲಾವಣೆಯನ್ನು ಪ್ರೋತ್ಸಾಹಿಸದೇ, ಅವಶ್ಯಬಿದ್ದರೆ ಅವುಗಳ ರಹದಾರಿಯನ್ನು ರದ್ದು ಮಾಡಬೇಕೆಂದೂ ಸೂಚಿಸಿರುತ್ತಾರೆ.

ಕೆರೆಯ ನೀರಿಗೆ ಗೋವುಗಳ ಕಣ್ಣೀರು

ನೂರಾರು ದನ ಕರುಗಳು ಅರಮನೆ ದೊಡ್ಡಿಗೆ ದಾಖಲು

ನಂಜನಗೂಡಿನ ಪ್ರಮುಖ ವ್ಯಕ್ತಿಗಳಾದ ಶ್ರೀಗಳು ಕೆ ವಿಶ್ವೇಶ್ವರ ಗೌಡ, ಹೆಜ್ಜಿಗೆ ಲಿಂಗಣ್ಣ, ಸಂಪಿಗೆ ನಾರಾಯಣರಾವ್ ಮತ್ತು ಬಸವಯ್ಯನವರುಗಳು ಕೆಳಗೆ ಕಂಡಂತೆ ಒಂದು ಪತ್ರ ಬರೆದಿರುತ್ತಾರೆ

ನಂಜನಗೂಡು ತಾಲ್ಲೂಕು ದೇವರಾಂಬುಧಿ ಕೆರೆ ಅಂಗಳ ಸುಮಾರು ... ಎಕರೆ ವಿಸ್ತಾರವಾಗಿದೆ ಕೆರೆಯ ಅಂಚಿನಲ್ಲಿ ಇಳಿಂಟು ಗ್ರಾಮಗಳಿವೆ ಈ ಗ್ರಾಮಗಳ ದನ ಕರುಗಳು ಯಾವುದಾದರೂ ಕೆರೆ ಅಂಗಳದ ಹುಲ್ಲಿಗೆ ಬಾಯಿ ಹಾಕಿದರೆ ಅರಮನೆ ದೊಡ್ಡಿ ಸೇರಬೇಕಾಗಿದೆ ನೂರಾರು ದನಕರುಗಳೂ ಎಮ್ಮೆಗಳೂ ದೊಡ್ಡಿಗೆ ಸೇರುವುದು ಸಾಮಾನ್ಯ ನೋಟವಾಗಿದೆ ಈ ಅನ್ಯಾಯವು ಯಾರಿಗೂ ಶ್ರೇಯಸ್ಕರವಲ್ಲ, ಅರಮನೆಗೆ ಶ್ರೇಯಸ್ಸು ಕೋರುವವರಾರೂ ಇಂತಹ ಅನ್ಯಾಯ ಮಾಡಬಾರದು

ಕೆರೆಯ ಅಂಗಳ ಯಾರಿಗೆ ಸೇರಿದ್ದು? ಮೊದಲಾದ ಹಕ್ಕು ಬಾಧ್ಯತೆ ವಿಚಾರ ಆಗ ತ್ಯವಿದ್ದಾಗ ವಿವರಿಸುತ್ತೇವೆ ಮೊದಲ ಮನುಷ್ಯತ್ವಕ್ಕೆ ಮೊರೆ ಇಡುತ್ತೇವೆ ಈ ಕೆರೆ ಅಂಗಳದ ಮೇಲಿನ ಆಸರೆ ತಪ್ಪಿದ ಕಾರಣ ದನಕರುಗಳ ಸಂಖ್ಯೆ ಮೂರನೇ ಒಂದು ಭಾಗಕ್ಕೆ ಇಳಿದಿದೆ ಅಳಿದುಳಿದ ಬಡ ಜೀವಜಂತುಗಳು ಸಾವಿರದ ಇನ್ನೂರು ಎಕರೆ ವಿಸ್ತಾರದ ಅಂಗಳದ ಅಂಚಿನಲ್ಲಿ ಸಂಯಮದಿಂದ ನೋಡುತ್ತಾ ನಿಂತಿರಬೇಕು ದನಗಳಿಗೆ ಮೇವು ಹಾಕಲಾರದ ರೈತರು ತಮ್ಮ ದನಗಳನ್ನು ಕೆರೆ ಅಂಗಳದಲ್ಲಿ ಕಾಲಿಡದಂತೆ ಕಾವಲು ಕಾಯಬೇಕು ಈ ಸಂಯಮ ನಿಯಮವೇನಾದರೂ ತಪ್ಪಿ ಒಂದು ಹಸು ಒಂದು ಎಳೆ ಹುಲ್ಲು ಕಚ್ಚಿದರೆ ಅರಮನೆ ಕಾವಲುಗಾರರ ವಶವಾಗಿ ಮೂರು ರೂಪಾಯಿ ದಂಡ ತೆರಬೇಕು

ಅರಮನೆಯ ಇಲಾಖೆಗೆ ಬೇಕಾದ ಹುಲ್ಲನ್ನು ಕೊಡಬಾರದೆಂದು ಯಾರಿಗೂ ಅಧಿಕಾರವಿಲ್ಲವೆಂಬುದನ್ನು ಹೇಳುತ್ತೇವೆ ಕಸ್ತೂರು ಕೆರೆ ಗ್ರಾಮದ ಭಾಗಗಳಲ್ಲಿ ವರ್ಷ ಪ್ರತಿ ಅರಮನೆ ಇಲಾಖೆಗೆ ಸಾಗುತ್ತಿದೆ ಅದರಲ್ಲಿ ಸ್ವಲ್ಪಭಾಗ ಅರಮನೆ ಇಲಾಖೆಗೆ ವಿನಿಯೋಗವಾಗಿ ಉಳಿದಿದ್ದು ಮಾರಾಟವಾಗುತ್ತಿದೆ ಇದರಿಂದ ಅರಮನೆಯ ಇಲಾಖೆಗೆ ಸಹಸ್ರಾರು ರೂಪಾಯಿ ಆದಾಯವಿದೆ ಈ ಆದಾಯವನ್ನು ಬಿಟ್ಟು ಕೊಡಬಾರದು ಸಾಧ್ಯವಾದರೆ ಇನ್ನೂ ಹೆಚ್ಚಿಸಿ ಪ್ರಭುಗಳ ಮೆಚ್ಚುಗೆಗೆ ಪಾತ್ರರಾಗಬೇಕೆಂದು ಇಲಾಖೆ ಅಧಿಕಾರಿಗಳು ಅಭಿಪ್ರಾಯ ಪಟ್ಟಿರಬಹುದು ವಾಸ್ತವಾಂಶ ನಮ್ಮ ಪ್ರಭುಗಳ ಚಿತ್ತಕ್ಕೆ ಬಿದ್ದಿದ್ದ ಪಕ್ಷದಲ್ಲಿ ಈ ಅನ್ಯಾಯವನ್ನು ಖಂಡಿತಾ ಸಹಿಸುವುದಿಲ್ಲ

ಆದ್ದರಿಂದ ಈ ಕೆಳಗೆ ಕಂಡ ಬೇಡಿಕೆಗಳನ್ನು ಇಲಾಖಾ ಮುಖ್ಯಾಧಿಕಾರಿಗಳು ಪ್ರಭುಗಳಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದು ಕೋರುತ್ತೇವೆ ... ಯನ್ನು ... ಮಾಡುತ್ತೇವೆ

... ಕೊಡಲು ಅಪ್ಪಣೆ ಮಾಡಬೇಕು ... ಕೆರೆ ಅಂಗಳ ... ಗ್ರಾಮಗಳ ದನಕರುಗಳು ಮೇಯಲು ಅವಕಾಶ ದಯಪಾಲಿಸಬೇಕು ಅಥವಾ ಅರಮನೆಯ ಇಲಾಖೆಗೆ ಬೇಕಾದಷ್ಟು ಗ್ರಾಸವನ್ನು ತೆಗೆದುಕೊಂಡ ನಂತರ ಉಳಿದಿದ್ದನ್ನು ಗ್ರಾಮಸ್ಥರ ದನಗಳ ಮೇವಿಗಾಗಿ ಬಿಟ್ಟು ಬಿಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಪ್ಪಣೆ ಕೊಡಬೇಕು

ಬ್ರಿಟಿಷ್ ಅರಸರ ಶ್ವಾಸಕೋಶದಲ್ಲಿ ವ್ಯತ್ಯಾಸ

ಬ್ರಿಟಿಷ್ ದೊರೆ ಆರನೇ ಜಾರ್ಜರನ್ನು ಪರೀಕ್ಷಿಸಿದ ೯ ಜನ ವೈದ್ಯರು ಮೊನ್ನೆ ರಾತ್ರಿ ಹೊರಡಿಸಿದ ಪ್ರಕಟಣೆ ಪ್ರಕಾರ, ಅವರ ಶ್ವಾಸಕೋಶ ಸ್ವರೂಪದಲ್ಲಿ ಬದಲಾವಣೆಯಾಗಿರುವುದಾಗಿ ಗೊತ್ತಾಗಿದೆ ಈ ರೀತಿಯ ಬೆಳವಣಿಗೆಯಿಂದ ಅಪಾಯ ಸಂಭವಿಸಲೂ ಬಹುದು ಇಂಥಾ ಪರಿಣಾಮವೇನೂ ಆಗದಿರಬಹುದು ಕ್ಷಯ ಮುಂತಾದ ರೋಗಗಳಿಂದ ಈ ಬೆಳವಣಿಗೆಯಾಗಲು ಸಾಧ್ಯವೆಂದು ಹೇಳಲಾಗಿದೆ

ಚುನಾವಣಾ ಉಮೇದುವಾರಿಕೆಗೆ ನೋಬೆಯ ಅರ್ಜಿ

ಪಶ್ಚಿಮ ಬಂಗಾಳದ ಶಾಸನ ಸಭಾ ಚುನಾವಣೆಗೆ ಕಾಂಗ್ರೆಸ್ ಪರವಾಗಿ ನಿಲ್ಲಲು ಇದುವರೆಗೆ ೭೦೦ ಅರ್ಜಿಗಳು ಬಂದಿವೆಯೆಂದೂ, ಆ ಪೈಕಿ ನೋಬೆಯೊಬ್ಬನ ಅರ್ಜಿಯೂ ಸೇರಿರುವುದಾಗಿಯೂ ಗೊತ್ತಾಗಿದೆ

ವಿಶ್ವವಿದ್ಯಾಲಯದ ಘಟಿಕೋತ್ಸವ

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವವು ನವೆಂಬರ್ ತಿಂಗಳಲ್ಲಿ ನಡೆಯುವುದೆಂದು ತಿಳಿದುಬಂದಿದೆ ಸಪ್ಲಿಮೆಂಟರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರೂ ಸಹ ಪ್ರಶಸ್ತಿ ಪತ್ರಗಳನ್ನು ಪಡೆಯಲು ಅಕ್ಟೋಬರ್ ತಿಂಗಳ ಬದಲು ನವೆಂಬರಿನಲ್ಲಿ ಘಟಿಕೋತ್ಸವವು ನಡೆಯುವುದು

...ಗಿ ನಮ್ರತೆಯಿಂದ ಬೇಡುತ್ತೇವೆ

ನಮ್ಮ ಪ್ರಭುಗಳಿಗೆ ಈ ನಮ್ಮ ಮೊರೆ ಮುಟ್ಟಿದ್ದೇ ಆದರೆ ನಮ್ಮ ಮತ್ತು ಸಹಸ್ರಾರು ಮೂಕ ಪ್ರಾಣಿಗಳ ಮೂಕ ಪ್ರಾರ್ಥನೆ ಈಡೇರುವುದರಲ್ಲಿ ಸಂಶಯವಿಲ್ಲ ಪರಿಸ್ಥಿತಿಯ ಅರಿವಿನ ಹಿಂದೆಯೇ ಪರಿಹಾರವಿದೆಯೆಂದು ನಂಬಿದ್ದೇವೆ

ಆರೋಗ್ಯದ ಬಿಲ್ಲೆಗಳ ಮಾರಾಟದ ಚಳುವಳಿ

೧, ೪ ಮತ್ತು ೧೭ ಆಣೆಗಳ ೩ ವಿಧದ ಆರೋಗ್ಯ ಬಿಲ್ಲೆಗಳನ್ನು ಮುದ್ರಿಸಿ ಭಾರತ ಸರ್ಕಾರದವರು ಗಾಂಧೀಜಿಯವರ ವರ್ಧಂತಿ ದಿನ ಅಂಚೆ ಕಛೇರಿಗಳ ಮೂಲಕ ಮಾರಾಟಕ್ಕೆ ಕೊಡುವರೆಂದು ಹೇಳಲಾಗಿದೆ ಇದರಿಂದ ಬರುವ ಉತ್ಪತ್ತಿಯನ್ನು ಆರೋಗ್ಯದ ಅಭಿವೃದ್ಧಿ ಯೋಜನೆಗಾಗಿ ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ರಾಜರೊಬ್ಬರು ಹಿಂದೂ ಮಹಾ ಸಭೆಗೆ ಸೇರಿದರು

ನವನಗರದ ಜಾಂ ಸಾಹೇಬ... ಇದ್ದಂದಿರಾದ ಮಹಾರಾಜಾ ಪ್ರ... ಸಿಂಹಜಿಯವರು ಹಿಂದೂ ಮಹಾ ಸಭೆಗೆ ಸೇರಿರುವರೆಂದು ವರದಿಯಾಗಿದೆ

ಹಿಂದೀ ತರಗತಿಗಳು

ಮಾನಾಮಾಲಿನಂತೆ ಜಗನ್ಮೋಹನ ಬಂಗಲೆಯ ... ಇರುವ ಮಾದರಿ ಶಾಲೆಯಲ್ಲಿ ಸೇವಾ ಸಂಘದ ಆಶ್ರಯದಲ್ಲಿ ಪ್ರತಿ ಸಂಜೆಯೂ ೬ ೩೦ ಗಂಟೆಯಿಂದ ಪ್ರಾಗ ಮಾ ಮಧ್ಯಮಾ ಮತ್ತು ರಾಷ್ಟ್ರ ಭಾಷಾ ತರಗತಿಗಳು ನಡೆಯುತ್ತಿವೆ ದಸರಾ ರಜಾ ಕಾಲದಲ್ಲಿ ಮಾತ್ರ ಪ್ರಾತಃ ಕಾಲದಲ್ಲಿ ತರಗತಿಗಳು ... ರಿಂದ ನಡೆಯುವಂತೆ ಏರ್ಪಡಿಸಿರುತ್ತೆ ಮಹಿಳೆಯರಿಗೆ ಪ್ರತ್ಯೇಕ ತರಗತಿಗಳು ನಡೆಯಲಿವೆ ಈ ಅವಕಾಶವನ್ನು ... ರು ಉಪಯೋಗಿಸಿಕೊಳ್ಳಬೇಕಾಗಿ ಕೋರಲಾಗಿದೆ

ವಿವಿಧ ವಿನೋದಾವಳಿ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ಬರುವ ...ನೇ ತಾರೀಕು ಭಾನುವಾರ ಸಂಜೆ ೫॥ ಗಂಟೆಗೆ ವಿವಿಧ ವಿನೋದಾವಳಿಯ ಅಂಗವಾಗಿ ಸಂಗೀತ ಕಾವ್ಯವಾಚನ, ಕೊಳಲು, ನಾಟಕ ಮೊದಲಾದ ಕಾರ್ಯಕ್ರಮಗಳು ನಡೆಯುವುವು ಸರ್ವರಿಗೂ ಆಹ್ವಾನವಿದೆ

ರಷ್ಯಕ್ಕೆ ಪರ್ಷಿಯಾ ಎ... ಮಾರಾಟವೇ?

ಪರ್ಷಿಯದಲ್ಲಿ ರಷ್ಯದ ರಾ... ಯಾಗಿರುವ ಇವಾನ್ ಸಾಡ್... ರವರು ಸಧ್ಯದಲ್ಲೇ ಮಾಸ್ಕೋ... ರಷ್ಯಾ ಮತ್ತು ಪರ್ಷಿಯಾಗಳ... ವಾಣಿಜ್ಯ ಒಪ್ಪಂದವೊಂದನ್ನು ಕೊಳ್ಳುವ ಬಗ್ಗೆ ಮಾತುಕತೆ ... ರೆಂದು ಹೇಳಲಾಗಿದೆ ಪರ್ಷಿ... ರಷ್ಯಕ್ಕೆ ಎಣ್ಣೆ ಸರಬರಾಜು ... ಕೆಂದು ಮಾಸ್ಕೋ ಸರ್ಕಾರ... ವುದಾಗಿಯೂ ವರದಿಯಾಗಿದೆ

ಬ್ರಹ್ಮಪುತ್ರಾ ಪ್ರವಾಹ ಅಪಾಯ

ದಿಬ್ರುಗಡದ ಬಳಿ ಬ್ರಹ್ಮಪುತ್ರ... ಯ ಮಟ್ಟವು ಏರಿ, ನಗರದ ... ಭೀತಿಯನ್ನು ತಂದೊಡ್ಡಿರುವ... ವಾಹದಿಂದ ನೀರು ಊರಿನ ... ಗೆ ನುಗ್ಗುತ್ತಿದೆ ಮಳೆ ಮತ್ತು ... ವಿಪರೀತವಾಗಿ ಜನರಿಗೆ ತು... ದರೆಯಾಗಿರುವುದು

ವಿಶ್ವೇಶ್ವರಯ್ಯನವರ ಪಟ

ರಾಜಧಾನಿಯ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್... ಥದ ಆಶ್ರಯದಲ್ಲಿ ಕಳೆದ ರವಿವಾರ ... ಎಂ ವಿಶ್ವೇಶ್ವರಯ್ಯನವರ ... ಟ್ರೈಟ ಪಟವನ್ನು ... ಶ್ರೀ ಟಿ ಎಸ್ ರಾಜಗೋಪಾಲಾಚಾರ್ಯರು ಭಾಷಣ ಮಾಡಿದರು ... ದ ಅಧ್ಯಕ್ಷ ಶ್ರೀ ಹೆಚ್ ... ರವರು ಅಧ್ಯಕ್ಷತೆ ವಹಿ...

ಕನ್ನಡದ ಸಣ್ಣ ಕಥೆಗಾ... ಸಮ್ಮೇಳನ

ಕನ್ನಡ ಭಾಷೆಯಲ್ಲಿ ಸಣ್ಣ... ಳನ್ನು ಬರೆಯುವವರ ಮತ್ತು ಕ... ಕಾರರ ಸಮ್ಮೇಳನವನ್ನು ಬರು... ಬರ್ ತಿಂಗಳಲ್ಲಿ ನಡೆಸಲು ... ರಿನ ಕನ್ನಡ ಗ್ರಂಥಕರ್ತರ ಸಂ... ರ್ಧರಿಸಿ, ಇದಕ್ಕಾಗಿ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರ ಅಧ್ಯಕ್ಷತೆಯ... ಮ ಸ್ವಾಗತ ಸಮಿತಿಯನ್ನು ... ಸಿರುತ್ತದೆ ಶ್ರೀಮನ್ಮಹಾರಾಜ... ಮ್ಮೇಳನಕ್ಕಾಗಿ ೧೦೦೦ ರೂ ... ಬೊಂಬಾಯಿ ಸರ್ಕಾರದವರು ... ರೂ ಗಳನ್ನೂ ಕೊಟ್ಟಿರುತ್ತಾರೆ

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ

ಬೊಂಬಾಯಿ ಆನಂದ ಭವನ್ ಹೋಟೇಲು ಪಕ್ಕ, ಮೈಸೂರು

ಪ್ರಭುದೇವಾ ಟಾಕೀಸ್

ಪ್ರತಿ ದಿನ ೩ ಆಟಗಳು

21-9-51ನೇ :: ಶುಕ್ರವಾರದಿಂದ

ಅಂಜಲಿ ದೇವಿ,

ನಾಗೇಶ್ವರ ರಾವ್,

ಸೂರ್ಯ ಪ್ರಭ,

ರೇಲಂಗಿ,

ಸಿ. ಎಸ್. ಆರ್.

ಮುಂತಾದವರು ಪಾತ್ರ ವಹಿಸಿರುವ ತಮಿಳು



ಸ್ತ್ರೀ ಸಾಹಸಂ

ಚಿತ್ರ

ನಾಲ್ಕು ವಾರ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಪಾಸುಗಳನ್ನೂ ಮನ್ನಾ ಮಾಡಿರುತ್ತೆ

ಗಣೇಶಾ ಟಾಕೀ...

21-9-51ರಿಂದ 5 ದಿನಗಳು

ಏಕಾಂಬವಾಣನ್

(ತಮಿಳು)

ಪಾತ್ರ ಕೊತ್ತಮಂಗಲಂ ... ಪೆರಿಯನಾಯಕಿ ಕುಮಾರಿ ... ಪುಳಿಮೂಟಿ ಮತ್ತು ಸಾರಂಗ...

2... ...-51ರಿಂದ

ಚಾಮುಂಡೇಶ್ವರಿ ಸು... ಗಣೇಶಾ ಟಾಕೀಸಿನ...

ಮೋಹನ ...

Edited, printed ... published by A R ... rajan, at Sadhvi Pre... Subbiah Road, Mys...

ರಿ. ನಂ. 792 । ಬೆಂಗಳೂರು ಮಾತವು । ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೨-೭-೫೧ [ಸಂಚಿಕೆ ೫೨

ಕೊರಿಯಾ ಯುದ್ಧದಲ್ಲಿ ಅತ್ಯುಗ್ರ ಟ್ಯಾಂಕ್ ಕದನ

ಸಂಸ್ಕೃತ ಮತ್ತು ದೇಶೀಯ ಭಾಷೆಗಳಿಗೆ ಉತ್ತೇಜನ ಅವಶ್ಯಕ

ವಿದ್ಯಾ ಸಂಸ್ಥೆಯ ಅಧಿವೇಶನದಲ್ಲಿ ಶ್ರೀಮನ್ಮಹಾರಾಜರ ಭಾಷಣ

ಮೈಸೂರು ಮುಂತ್ಯೆ ೨೨ ಮೈಸೂರು ಸಂಸ್ಥಾನದ ವಿದ್ಯಾ ಸಂಸ್ಥೆಯ ...ನೇ ಅಧಿವೇಶನದ ಆರಂಭೋತ್ಸವನ್ನು ಇಂದು ಬೆಳಿಗ್ಗೆ ಇಲ್ಲಿ ಶ್ರೀಮನ್ಮಹಾರಾಜರು ನೆರವೇರಿಸಿದರು. ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಕೆ. ...ರುವತ್‌ರವರು ಅಧ್ಯಕ್ಷತೆ ವಹಿಸಿದ್ದ ಪ್ರಭುಗಳು ಭಾಷಣ ಮಾಡಿ, ಈ ...ಕೆ ಅಪ್ಪಣೆ ಕೊಡಿಸಿದರು.

ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸ ...ತಿಯು ಕಳೆದ ೫ ವರ್ಷಗಳಿಂದ ...ಪ್ರಗತಿಯನ್ನು ಹೊಂದಿದೆ. ಆದ ಜನಗಳಲ್ಲಿ ವಿದ್ಯಾಭ್ಯಾಸದ ಮಟ್ಟ ...ವಾಗಬೇಕೆಂಬ ಅಭಿಪ್ರಾಯವುಂಟಾ... ವಿದ್ಯಾ ಪ್ರಗತಿಯು ಸಂಸ್ಥೆಗಳನ್ನು ...ಮಾಡುವುದರಿಂದ ಸಾಧ್ಯವಾಗು... ದಿನೇದಿನೇ ಬದಲಾವಣೆ... ಮುತ್ತಿರುವ ಸಮಾಜಕ್ಕೆ ತಕ್ಕಂತೆ ...ಭ್ಯಾಸದ ಪದ್ಧತಿಯಲ್ಲೂ ಮಾ...ವಾಗಬೇಕು.

...ಪಾಧ್ಯಾಯರುಗಳ ಆವಶ್ಯಕತೆಗಳ ...ಪೂರೈಸಲು ಸರ್ಕಾರವು ಇತ್ತೀಚೆಗೆ ...ಸಂಬಳ ಸಾರಿಗೆಗಳನ್ನು ಹೆಚ್ಚಿಸಿದರೂ ...ಅದು ಅವರ ಆವಶ್ಯಕತೆಗಳಿಗನು... ...ವಾಗಿಲ್ಲ. ...ತರಪೇತು ಹೊಂದಿದ ಉಪಾಧ್ಯಾಯ...ರ ಆವಶ್ಯಕತೆ ನಮ್ಮ ದೇಶಕ್ಕೆ ...ಇದೆ. ಇದಕ್ಕಾಗಿ ಉಪಾಧ್ಯಾಯರ ...ಸರಿಯಾದ ತರಪೇತು ಕೊಡುವ ...ದು ಮಾಡುವುದು ಅಗತ್ಯ.

ನಮ್ಮ ನಾಡಿನ ಸಂಸ್ಕೃತಿಯನ್ನು ...ಪಡಿಸಬೇಕು. ಸಂಸ್ಕೃತ ಮತ್ತು ದೇಶೀಯ ಭಾಷೆಗಳಿಗೆ ಉತ್ತೇಜನ ...ಕೊಡುವುದರ ಮೂಲಕ ಸಂಸ್ಕೃತಿಯು ...ಕ ಅವಕಾಶವೊದಗಿಸಬೇಕು. ಅಂ...ರಾಷ್ಟ್ರೀಯ ವ್ಯವಹಾರಗಳ ದೃಷ್ಟಿ...ಯಿಂದ ಮಾತ್ರ ಇಂಗ್ಲಿಷ್ ಭಾಷೆಯನ್ನು ...ಯುವ ಏರ್ಪಾಡಾಗಬೇಕು. ...ರಕ್ಕೆ ಪ್ರಾಮುಖ್ಯತೆಯನ್ನು ಕೊ... ನಾಡಿನ ಸಂಸ್ಕೃತಿಯನ್ನು ಬೆಳೆಸ...ಬೇಕು — ಎಂದು ನಾನು ...ಯ ಪಡುತ್ತೇನೆ.

...ವಿದ್ಯಾಭ್ಯಾಸದ ಪದ್ಧತಿಯಲ್ಲಿ ಸಂ...ಶೋಧನೆ ನಡೆಸಿ, ಅದರಂತೆ ಮಾರ್ಪಾಡುಗಳನ್ನು ಮಾಡಬೇಕು. ನಿಮ್ಮ ಈ ಸಮ್ಮೇಳನವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಅಧ್ಯಕ್ಷರು ಭಾಷಣ ಮಾಡಿ ವರ್ಣ...ಕ್ರಮದಿಂದ ವಿದ್ಯಾಭ್ಯಾಸದ ಪದ್ಧತಿ ... ಸುಧಾರಿಸಬೇಕೆಂದು ತಿಳಿಸಿದರು.

ಪರ್ಷಿಯದಲ್ಲಿ ಬ್ರಿಟಿಷ್ ರಾ...ಯಭಾರಿ ಕಛೇರಿಗಳ ಬಂದು

...ಬ್ರಿಟನ್ನು ಪರ್ಷಿಯದ ಮೇಲೆ ...ಕ ದಿಗ್ಬಂಧನವನ್ನು ವಿಧಿಸಿರುವುದ...ರಿಂದ ಪರ್ಷಿಯದಲ್ಲಿರುವ ಎಲ್ಲ ಬ್ರಿಟಿಷ್ ...ರಾಯಭಾರಿ ಕಛೇರಿಗಳನ್ನೂ ಮು...ಸಬೇಕೆಂದು ಅಲ್ಲಿನ ಪಾರ್ಲಿಮೆಂಟಿನ ...ಷ್ಟ್ರೀಯ ಪಕ್ಷದ ಸದಸ್ಯರು ಸರ್ಕಾರವನ್ನು ಒತ್ತಾಯಪಡಿಸುತ್ತಿರುವುದಾಗಿ ...ತ್ತಾಗಿದೆ.

ಕೊರಿಯದಲ್ಲಿ ವಿಶ್ವಸಂಸ್ಥೆಯ ಟ್ಯಾಂಕು ಪಡೆಗಳ ಧಾಳಿ

ಕೊರಿಯಾ ಯುದ್ಧರಂಗದಲ್ಲಿ ವಿಶ್ವಸಂಸ್ಥೆಯ ಟ್ಯಾಂಕ್ ಪಡೆಗಳು ನಿನ್ನೆ ಸಾಮೂಹಿಕವಾಗಿ ಕಮ್ಯೂನಿಸ್ಟರ ... ಲೆಯ ... ಸ್ಥಿಯಾನ ... ಳಿ ನಡೆಸಿದ ಸಂ...ದು ವರದಿಯಾಗಿದೆ. ಕೊರಿಯಾದಲ್ಲಿ ಇಲ್ಲಿ ಈಗ ಅತ್ಯಂತ ತೀವ್ರವಾದ ... ಸಜ್ಜಿತ ಕದನವಾಗುತ್ತಿರುವ ... ಲಾಗಿದೆ

ವಿಶ್ವ ನ್ಯಾಯಾಧೀಶ ಸ್ಥಾನಕ್ಕೆ ಈಜಿಪ್ಟ್ ಸೂಚಿಸಿರುವ ಭಾರತದ ಪ್ರತಿನಿಧಿ

ಬಿ. ಎನ್. ರಾವ್‌ರವರು

ವಿದ್ಯುಚ್ಛಕ್ತಿ ನ್ಯರ್ವೋಗಳ ಸಂಘದ ವಿಸರ್ಜನೆ

ರಾಜಧಾನಿಯ ಮೇಲ್ಕಂಡ ಸಂಘದ ಸಭೆಯು ಕಳೆದ ಮಂಗಳವಾರ ಸೇರಿ ಸಂಘವನ್ನು ಮುಂದುವರಿಸುವ ಒಗ್ಗೆ ಸದಸ್ಯರು ತಮ್ಮ ಅಸಮ್ಮತಿಯನ್ನು ಸೂಚಿಸಿದುದರಿಂದ ಅದನ್ನು ನಿಸರ್ಜಿಸಲು ತೀರ್ಮಾನಿಸಲಾಯಿತು. ಸದಸ್ಯರಿಂದ ಸಂಘಕ್ಕೆ ವಸೂಲಾಗಿರುವ ಚಂದಾ ಪ್ರೊಬಲಗನ್ನು, ಖರ್ಚು ವಾತಾ, ವಾಪಸು ಕೊಡಲು ವ್ಯವಸ್ಥೆ ಮಾಡಿರುವುದಾಗಿಯೂ, ಖಜಾಂಚಿಯವರಿಂದ ಅದನ್ನು ಪಡೆಯಬಹುದೆಂದೂ ಅಧ್ಯಕ್ಷರು ಸೂಚಿಸಿರುತ್ತಾರೆ.

ಕಮರಿಗೆ ರೈಲು ಬಿದ್ದು ೧೧ ಜನರ ಮರಣ

ಲಿವರ್‌ಪೂಲಿನಿಂದ ಲಂಡನ್ನಿಗೆ ನಿನ್ನೆ ಪ್ರಯಾಣ ಮಾಡುತ್ತಿದ್ದ ಒಂದು ಎಕ್ಸ್‌ಪ್ರೆಸ್ ರೈಲು ಗಾಡಿಯು ಬ್ಲಿಸ್‌ವರ್ತ್ ಎಂಬಲ್ಲಿಗೆ ಹತ್ತಿರದ ಒಂದು ಸುರಂಗ ಮಾರ್ಗವನ್ನು ದಾಟಿ ಸ್ವಲ್ಪ ದೂರ ಹೋಗಲು ತಪ್ಪಿ ತೊಂದರೆಗೀಡಾಗಿ ಕೆಲವು ತಪ್ಪಿ ಪಕ್ಕದಲ್ಲಿದ್ದ ಒಂದು ಕಡಿದಾದ ಕಮರಿಗೆ ಇಂಜನ್ನು ಮತ್ತು ೧೧ ... ಡಿಗಳು ಬಿದ್ದುವೆಂದೂ, ಅದರ ಪರಿಣಾಮವಾಗಿ ೧೧ ಮಂದಿ ಪ್ರಯಾಣಿಕರು ಮೃತಪಟ್ಟು, ೫೦ ಜನರು ಗಾಯಗೊಂಡರೆಂದೂ ವರದಿಯಾಗಿದೆ.

ಕಾಂ॥ ಬಿಕ್ಕಟ್ಟು ನಿವಾರಣೆಗೆ ಆಮರಣಾಂತ ಉಪವಾಸ

ತಿರುವಾಂಕೂರು-ಕೊಚ್ಚಿ ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ಬಿಕ್ಕಟ್ಟಿನ ನಿವಾರಣೆಗಾಗಿ ತಿರುವಾಂಕೂರಿನ ತಮಿಳು ನಾಡು ಕಾಂಗ್ರೆಸ್ ನಾಯಕ ಗಾಂಧಿ ರಾಮ... ಎಂ... ವರು ನಾಳೆಯಿಂದ ನಾಗರಕೋವಿಲಿನಲ್ಲಿ ಆಮರಣಾಂತ ಉಪವಾಸವನ್ನು ಆರಂಭಿಸಲಿರುವರೆಂದು ಗೊತ್ತಾಗಿದೆ.

ಬಿಸಿಲಿನ ತಾಪದಿಂದ ೩ ಸಾವಿರ ಮಕ್ಕಾಯಾತ್ರಿಕರ ಮರಣ

ಮಕ್ಕಾ ನಗರಕ್ಕೆ ಯಾತ್ರಿಗಳಾಗಿ ಹೋದ ೩೦ ಸಾವಿರ ಜನರ ಪೈಕಿ ಮೂರು ಸಾವಿರ ಮಂದಿ ಬಿಸಿಲಿನ ತಾಪವನ್ನು ತಾಳಲಾರದೆ ಮೃತಿಯನ್ನೈದಿದರೆಂದು ವರದಿಯಾಗಿದೆ. ಬಿಸಿಲು ಝಳಕ್ಕೆ ಎಲ್ಲ ಸಾಮಾನುಗಳೂ ಕರಗುತ್ತಿವೆ.

ಹಡಗಿನಲ್ಲಿ ಬೆಂಕಿ

ಬಾರತದ ಸಿಂಧ್ಯ ನೌಕಾ ಸಂಸ್ಥೆಗೆ ಸೇರಿದ ಜಲಮೋತಿ ಎಂಬ ಹಡಗಿಗೆ ಮೊನ್ನೆ ದಿನ ಇಂಗ್ಲಂಡಿನ ಈಶಾನ್ಯ ತೀರದಲ್ಲಿ ಬೆಂಕಿ ತಗುಲಿ ಸ್ವಲ್ಪ ನಷ್ಟ ಸಂಭವಿಸಿತೆಂದು ವರದಿಯಾಗಿದೆ. ಸ್ವಲ್ಪ ಹೊತ್ತಿನಲ್ಲೇ ಬೆಂಕಿಯನ್ನು ಆರಿಸಲಾಯಿತು. ನೌಕೆಯಲ್ಲಿ ಒಂದು ಸಾವಿರ ಬೇಲ್ ಸೆಣಬು ಮತ್ತು ೧೫೦೦ ಬೇಲು ಗೋಣಿ ಚೀಲಗಳನ್ನೂ ಮತ್ತು ಪಶ್ಚಿಮ ಯೂರೋಪ್ಯ ರಾಷ್ಟ್ರಗಳಿಗೆ ರವಾನಿಸಲು ಇತರ ಹಲವು ಸಾಮಾನುಗಳನ್ನೂ ತುಂಬಲಾಗಿತ್ತೆಂದೂ ಹೇಳಲಾಗಿದೆ.

ಕಾಶ್ಮೀರದ ಬಗ್ಗೆ ಪ್ರಹಸನ ಕಾಳಗದಲ್ಲಿ ಬಾಲಕನ ಮರಣ

ಪೂರ್ವ ಪಂಜಾಬಿನ ಹಿಸ್ಸಾರಿನಲ್ಲಿ ದನ ಕಾಯುವ ಹುಡುಗರು ಕೆಲವು ದಿನಗಳ ಹಿಂದೆ ಕಾಶ್ಮೀರದ ಸಂಬಂಧವಾಗಿ ಭಾರತ ಮತ್ತು ಪಾಕಿಸ್ತಾನಗಳ ಘರ್ಷಣೆಯ ಪ್ರಹಸನ ಕಾಳಗ ನಡೆಸಿದರೆಂದೂ, ಅದರಲ್ಲಿ ಒಬ್ಬನು ಮೃತನಾದನೆಂದೂ ವರದಿಯಾಗಿದೆ. ಅವರುಗಳಲ್ಲಿ ಎರಡು ಪಕ್ಷಗಳನ್ನು ಮಾಡಿಕೊಂಡು ಒಂದು ಪಕ್ಷವು ಕಾಶ್ಮೀರವನ್ನು ಹಿಡಿಯಿತೆಂದು ಮತ್ತೊಂದು "ಯುದ್ಧ" ಹೂಡಿದಾಗ ಹೋರಾಟ ನಡೆಸಲು ಲಾಠಿಗಳನ್ನು ಉಪಯೋಗಿಸಲಾಯಿತೆಂದೂ ತಿಳಿದುಬಂದಿದೆ. ಅನೇಕ ಹುಡುಗರನ್ನು ದಸ್ತಗಿರಿ ಮಾಡಲಾಗಿದೆ.

ಇಂಗ್ಲೆಂಡಿನ ಅರಸರಿಗೆ ಶಸ್ತ್ರ ಚಿಕಿತ್ಸೆ

ಶ್ವಾಸಕೋಶದ ವ್ಯಾಧಿಯಿಂದ ನರಳುತ್ತಿರುವ ಬ್ರಿಟನ್ನಿನ ಅರಸರಾದ ಆರನೇ ಜಾರ್ಜರಿಗೆ ಇಂಗ್ಲೆಂಡಿನ ಬಕಿಂಗ್‌ಹ್ಯಾಂ ಅರಮನೆಯಲ್ಲಿ ಶಸ್ತ್ರ ಚಿಕಿತ್ಸೆ ನಡೆಸಲಾಗುವುದೆಂದು ಗೊತ್ತಾಗಿದೆ. ಚಿಕಿತ್ಸೆಯು ಪೂರ್ಣವಾಗುವವರೆಗೆ ಅದರ ವಿಧಾನ ಮತ್ತು ಇತರ ವಿವರಗಳನ್ನು ವೈದ್ಯರು ಬಹಿರಂಗಪಡಿಸುವುದಿಲ್ಲವೆಂದೂ, ಶಸ್ತ್ರ ಚಿಕಿತ್ಸೆ ಪಡೆಯಲು ಅರಸರು ಸಮ್ಮತಿಸಿರುವರೆಂದೂ ಹೇಳಲಾಗಿದೆ. ದೊರೆಗಳ ಶ್ವಾಸಕೋಶದ ಸ್ಥಿತಿಯು ಬಹಳ ಆತಂಕಕ್ಕೆ ಕಾರಣವಾಗಿದೆಯೆಂದು ಹೇಳಲಾಗಿದೆ.

ಮರಣದ ಸೂಚನೆ ಕಂಡು ಸದಸ್ಯತನಕ್ಕೆ ರಾಜೀನಾಮೆ

ಡೆನ್ಮಾರ್ಕಿನ ಒಂದು ನಗರದ ಸಹಕಾರ ಸಂಘದ ಸದಸ್ಯನೊಬ್ಬನು ಮರಣ ಹೊಂದುವ ಸೂಚನೆಯನ್ನು ಮುಂಚಿತವಾಗಿ ಕಂಡು, "ನಾನು ಸತ್ತಿರುವೆನು ಮತ್ತು ಸದಸ್ಯತನಕ್ಕೆ ರಾಜೀನಾಮೆ ಕೊಡಲಿಚ್ಛಿಸುತ್ತೇನೆ" ಎಂದು ಪತ್ರವನ್ನು ಬರೆದು ಕಳುಹಿಸಿದನೆಂದೂ ನಂತರ ಕೆಲವು ಗಂಟೆಗಳಲ್ಲೇ ಅವನು ಮೃತನಾದನೆಂದೂ ವರದಿಯಾಗಿದೆ.

ಮಂತ್ರಿಗಳ ಮೋಟಾರಿಗೆ ಸಿಕ್ಕಿ ಬಾಲಕನ ಮರಣ

ತುಮಕೂರಿನ ಮಾರ್ಕೆಟ್ ಚೌಕದಲ್ಲಿ ನಿನ್ನೆ ಬೆಳಿಗ್ಗೆ ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂರವರ ಮೋಟಾರು ಹೋಗುತ್ತಿದ್ದಾಗ, ೮ ವರ್ಷದ ಸೈಯದ್ ಇಬ್ರಾಹಿಂ ಎಂಬ ಬಾಲಕನ ಮೇಲೆ ಅದು ಹರಿದು ಅವನು ಅರ್ಧ ಗಂಟೆಯ ನಂತರ ಮೃತಪಟ್ಟನೆಂದು ವರದಿಯಾಗಿದೆ. ಪ್ರವಾಸಕ್ಕಾಗಿ ಸಚಿವರು ತುಮಕೂರಿಗೆ ಆಗಮಿಸಿದ್ದರು. ಮಂತ್ರಿಗಳು ಪ್ರವಾಸವನ್ನು ನಿಲ್ಲಿಸಿ ಬೆಂಗಳೂರಿಗೆ ಹಿಂತಿರುಗಿದರು.

ನಂಜನಗೂಡು ವಕೀಲರ ಸನ್ನದು ರದ್ದು

ನಂಜನಗೂಡಿನ ಶ್ರೀ ಸಿದ್ಧನಾಯಕ್ ಎಂಬ ಕಕ್ಷಿಗಾರನಿಗೆ ಬರಬೇಕಾದ ೧೬೦ ರೂಗಳನ್ನು ದುರುಪಯೋಗಪಡಿಸಿಕೊಂಡ ಸಂಬಂಧವಾಗಿ ಹೈಕೋರ್ಟು ಅಲ್ಲಿನ ಶ್ರೀ ಎಸ್. ಕೃಷ್ಣಸ್ವಾಮಿ ಎಂಬ ವಕೀಲರ ಸನ್ನದನ್ನು ಎರಡು ವರ್ಷ ಕಾಲ ರದ್ದುಗೊಳಿಸಿರುತ್ತದೆ.

ಕೆರೆಯ ನೀರಿಗೆ ಗೋವುಗಳ ಕಣ್ಣೀರು

ನೂರಾರು ದನ ಕರುಗಳು ಅರಮನ ದೊಡ್ಡಿಗೆ ದಾಖಲು

ನಂಜನಗೂಡಿನ ಪ್ರಮುಖ ಗಣ್ಯ ವ್ಯಕ್ತಿಗಳಾದ ಶ್ರೀಗಳು ಕೆ ಇಕ್ಲೇಶ್ವರ ಗೌಡ ಹೆಜ್ಜಿಗೆ ಲಿಂಗಣ್ಣ ಸಂಪಿಗೆ ಸಾಹುಕಾರ ಗಂ... ವ ಮತ್ತು ಬಸವಯ್ಯನವರುಗಳು ಕೆಳಗೆ ಕಂಡಂತೆ ಒಂದು ಪತ್ರ ಬರೆದಿರುತ್ತಾರೆ

ನಂಜನಗೂಡು ತಾಲ್ಲೂಕು ಸರಗೂರು ಬ... ಕೆರೆ ಅಂಗಳ ಸುಮಾರು ... ಎಕರೆ ವಿಸ್ತಾರವಾಗಿದೆ ಕೆರೆಯ ಅಂಚಿನಲ್ಲಿ ಎಳೆಂಟು ಗ್ರಾಮಗಳಿವೆ ಈ ಗ್ರಾಮಗಳ ದನ ಕರುಗಳು ಯಾವುದಾದರೂ ಕೆರೆ ಅಂಗಳದ ಹುಲ್ಲಿಗೆ ಬಾಯಿ ಹಾಕಿದರೆ ಅರಮನೆ ದೊಡ್ಡಿ ಸೇರಬೇಕಾಗಿದೆ ನೂರಾರು ದನಕರುಗಳು ಎಷ್ಟೋ ಗಳೂ ದೊಡ್ಡಿಗೆ ಸೇರುವುದು ಸಾಮಾನ್ಯ ನೋಟವಾಗಿದೆ ಈ ಅನ್ಯಾಯವನ್ನು ಯಾರಿಗೂ ಶ್ರೇಯಸ್ಕರವಲ್ಲ ... ರಿಗೆ ಶ್ರೇಯಸ್ಸು ಕೋರುವವರಾದರೂ ... ಅನ್ಯಾಯ ಮಾಡಬಾರದು

ಕೆರೆಯ ಅಂಗಳ ಯಾರಿಗೆ ಸೇರಿದ್ದು? ಮೊದಲಾದ ಹಕ್ಕು ಬಾಧ್ಯತೆ ವಿಚಾರ ಅಗತ್ಯವಿದ್ದಾಗ ವಿವರಿಸುತ್ತೇವೆ ನೋಡಲು ಮನುಷ್ಯತ್ವಕ್ಕೆ ಮೀರಿ ಇದ್ದ ತ್ತೇವೆ ಈ ಕೆರೆ ಅಂಗಳದ ಮೇವಿನ ಆಸರೆ ತಪ್ಪಿದ ಕಾರಣ ದನಕರುಗಳ ಸಂಖ್ಯೆ ಮೂರನೇ ಒಂದು ಭಾಗಕ್ಕೆ ಇಳಿದಿದೆ ಅಳಿದುಳಿದ ಜೀವ ಜಂತುಗಳು ಸಾವಿರದ ಇನ್ನೂರು ಎಕರೆ ವಿಸ್ತಾರದ ಅಂಗಳದ ಅಂಚಿನಲ್ಲಿ ಸಂಯಮದಿಂದ ನೋಡುತ್ತಾ ನಿಂತಿರಬೇಕು ... ಗೋವು ಹಾಕಲಾರದ ರೈತರ ತಮ್ಮ ದನಗಳನ್ನು ಕೆರೆ ಅಂಗಳದಲ್ಲಿ ಕಾಲಿಡ... ಕಾಪಾಡಲು ಕಾಯಬೇಕು ಈ ಸಂಯಮ ನಿಯಮವೇನಾದರೂ ತಪ್ಪಿ ಒಂದು ಹಸು ಒಂದು ಎಳೆ ಹುಲ್ಲು ಕಚ್ಚಿದರೆ ಅರಮನೆ ಕಾವಲುಗಾರನ ವಶವಾಗಿ ಮೂರು ರೂಪಾಯಿ ದಂಡ ತೆರಬೇಕು

ಅರಮನೆಯ ಇಲಾಖೆಗೆ ಬೇಕಾದ ಹುಲ್ಲನ್ನು ಕೊಡಬಾರದೆಂದು ಯಾರೂ ಆಕ್ಷೇಪಿಸುವುದಿಲ್ಲವೆಂಬುದನ್ನು ಹೇಳುತ್ತೇವೆ ನೂರಾರು ಟನ್ ಗೋ ... ಉತ್ಪನ್ನ ಪ್ರತಿ ವರ್ಷ ಅರಮನೆ ಇಲಾಖೆಗೆ ಹೋಗುತ್ತಿದೆ ಅದರಲ್ಲಿ ಸ್ವಲ್ಪ ಭಾಗ ಅರಮನೆ ಇಲಾಖೆಗೆ ವಿನಿಯೋಗವಾಗಿ ಮಿಕ್ಕದ್ದು ಮಾರಾಟವಾಗುತ್ತಿದೆ ಇದರಿಂದ ಅರಮನೆಯ ಇಲಾಖೆಗೆ ಸಹಸ್ರಾರು ರೂಪಾಯಿ ಆದಾಯವಿದೆ ಈ ಆದಾಯವನ್ನು ಬಿಟ್ಟು ಕೊಡಬಾರದು ಸಾಧ್ಯವಾದರೆ ಇನ್ನೂ ಹೆಚ್ಚಿಸಿ ಪ್ರಭುಗಳ ಮೆಚ್ಚಿಗೆಗೆ ಪಾತ್ರರಾಗಬೇಕೆಂದು ಇಲಾಖಾಧಿಕಾರಿಗಳು ಅಭಿಪ್ರಾಯ ಪಟ್ಟಿರಬಹುದು ಪಾಪ್ರಜಾಂತ ನಮ್ಮ ಪ್ರಭುಗಳ ಚಿತ್ತಕ್ಕೆ ಬೇಗ್ಯವಾದರೆ ಈ ಅನ್ಯಾಯವನ್ನು ಖಂಡಿತಾ ಸಹಿಸುವುದಿಲ್ಲ

ಅದ್ದರಿಂದ ಈ ಕೆಳಗೆ ಕಂಡ ಬೇಡಿಕೆಗಳನ್ನು ಇಲಾಖಾ ಮುಖ್ಯಾಧಿಕಾರಿಗಳು ಪ್ರಭುಗಳಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದು ... ರುತ್ತೇವೆ ಇಲ್ಲವೇ ಪ್ರಭುಗಳ ... ಯನ್ನು ಪಡೆದು ... ಅನುಷ್ಠಾನ ... ತುಕ್ಕೆ ...

... ಸಾಹುಕಾರ ... ಆಸುವ ... ಆಧವಾ ... ಕೆರೆ ಅಂಗಳ ... ಈ ಗ್ರಾಮಗಳ ದನಕರುಗಳು ... ಪಡೆಯಲು ಅವಕಾಶ ಮಾಡಿಕೊಡಬೇಕು ... ಅರಮನೆಯ ಇಲಾಖೆಗೆ ಸಾಕಷ್ಟು ಗೋ ಗ್ರಾಸವನ್ನು ಕೇಳುವ ಕೊಂಡ ಸಂತರ ಕಾಳಿ ಬಂಜರನ್ನಾದರೂ ಗ್ರಾಮಸ್ಥರ ಪಾಲಿಗೆ ಹುಲ್ಲುಗಾಗಿ ಬಿಟ್ಟು ಬಿಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಪ್ಪಣೆ ಕೊಡಿಸಬೇಕು

ಬ್ರಿಟಿಷ್ ಅರಸರ ಶ್ವಾಸಕೋಶದಲ್ಲಿ ವ್ಯತ್ಯಾಸ

ಬ್ರಿಟಿಷ್ ದೊರೆ ಆರನೇ ಜಾರ್ಜರನ್ನು ಪರೀಕ್ಷಿಸಿದ ೯ ಜನ ವೈದ್ಯರು ಮೊನ್ನೆ ರಾತ್ರಿ ಹೊರಡಿಸಿದ ಪ್ರಕಟಣೆ ಪ್ರಕಾರ, ಅವರ ಶ್ವಾಸಕೋಶ ಸ್ವರೂಪದಲ್ಲಿ ಬದಲಾವಣೆಯಾಗಿರುವುದಾಗಿ ಗೊತ್ತಾಗಿದೆ ಈ ರೀತಿಯ ಬೆಳವಣಿಗೆಯಿಂದ ಅಪಾಯ ಸಂಭವಿಸಲೂ ಬಹುದು ಅಥವಾ ಪರಿಣಾಮವೇನೂ ಆಗದಿರಬಹುದು ಕ್ಷಯ ಮುಂತಾದ ರೋಗಗಳಿಂದ ಈ ಬೆಳವಣಿಗೆಯಾಗಲು ಸಾಧ್ಯವೆಂದು ಹೇಳಲಾಗಿದೆ

ಚುನಾವಣೆ ಉಮೇದುವಾರಿಕೆಗೆ ನೋಚಿಯ ಅರ್ಜಿ

ಪಶ್ಚಿಮ ಬಂಗಾಳದ ಶಾಸನ ಸಭಾ ಚುನಾವಣೆಗೆ ಕಾಂಗ್ರೆಸ್ ಪರವಾಗಿ ನಿಲ್ಲಲು ಇದುವರೆಗೆ ೭೦೦ ಅರ್ಜಿಗಳು ಬಂದಿವೆಯೆಂದೂ, ಆ ಪೈಕಿ ನೋಚಿಯೊಬ್ಬನ ಅರ್ಜಿಯೂ ಸೇರಿರುವುದಾಗಿಯೂ ಗೊತ್ತಾಗಿದೆ

ವಿಶ್ವವಿದ್ಯಾಲಯದ ಘಟಿಕೋತ್ಸವ

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವವು ನವೆಂಬರ್ ತಿಂಗಳಲ್ಲಿ ನಡೆಯುವುದೆಂದು ತಿಳಿದುಬಂದಿದೆ ಸಪ್ಲಿಮೆಂಟರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರೂ ಸಹ ಪ್ರಶಸ್ತಿ ಪತ್ರಗಳನ್ನು ಪಡೆಯಲು ಅಕ್ಟೋಬರ್ ತಿಂಗಳ ... ದಲು ನವೆಂಬರಿನಲ್ಲಿ ಘಟಿಕೋತ್ಸವವು ನಡೆಯುವುದು

... ಸಾಗಿ ನಿವೃತ್ತಿಯ ಅವ ಬೇಡುತ್ತೇವೆ ನಮ್ಮ ಪ್ರಭುಗಳಿಗೆ ಈ ನಮ್ಮ ಮೊರೆ ಮುಟ್ಟಿದ್ದೇ ಆದರೆ ನಮ್ಮ ಮತ್ತು ನಿಸರ್ಗಾರು ಮೂಕ ಪ್ರಾಣಿಗಳ ಮೂಕ ಗ್ರಾಮಸ್ಥರ ಪ್ರಾರ್ಥನೆ ಈಡೇರುವುದರಲ್ಲಿ ಸಂಶಯವಿಲ್ಲ ಪಂಪನ್ನಿಸುತ್ತಿಯ ... ಪರಿಹಾರವಿದೆಯೆಂದು ನಂಬಿದ್ದೇವೆ

ಆರೋಗ್ಯದ ಬಿಲ್ಲೆಗಳ ಮಾರಾಟದ ಚಳುವಳಿ

೧, ೪ ಮತ್ತು ೧೨ ಆಣೆಗಳ ೩ ವಿಧದ ಆರೋಗ್ಯ ಬಿಲ್ಲೆಗಳನ್ನು ಮುದ್ರಿಸಿ ಭಾರತ ಸರ್ಕಾರದವರು ಗಾಂಧೀಜಯಂತಿಯ ವರ್ಧಂತಿ ದಿನ ಅಂಚೆ ಕಛೇರಿಗಳ ಮೂಲಕ ಮಾರಾಟಕ್ಕೆ ಕೊಡುವರೆಂದು ಹೇಳಲಾಗಿದೆ ಇದರಿಂದ ಬರುವ ಉತ್ಪತ್ತಿಯನ್ನು ಆರೋಗ್ಯದ ಅಭಿವೃದ್ಧಿ ಯೋಜನೆಗಾಗಿ ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ರಾಜರೊಬ್ಬರು ಹಿಂದೂ ಮಹಾ ಸಭೆಗೆ ಸೇರಿದರು

ನವನಗರದ ಜಾಂ ಸಾಹೇಬರ ... ಜ್ಞಾಂದಿರಾದ ಮಹಾರಾಜಾ ಪ್ರತಾಪ ಸಿಂಹಜಿಯವರು ಹಿಂದೂ ಮಹಾ ಸಭೆಗೆ ಸೇರಿರುವರೆಂದು ವರದಿಯಾಗಿದೆ

ಹಿಂದೀ ತರಗತಿಗಳು

ಹಾಮೂಲಿನಂತೆ ಜಗನ್ಮೋಹನ ಬಂಗಲೆಯ ... ಇರುವ ಪಾದರಿ ಶಾಲೆಯಲ್ಲಿ ಸೇವಾ ಸಂಘದ ಆಶ್ರಯದಲ್ಲಿ ಪ್ರತಿ ಸಂಜೆಯ ... ಗಂಟೆಯಿಂದ ಹಿಂದಿ ಸ್ವಾದ ... ವ, ... ಮತ್ತು ರಾಷ್ಟ್ರ ಭಾಷಾ ತರಗತಿಗಳು ನಡೆಯುತ್ತಿವೆ ಪರೀಕ್ಷಾ ಕಾಲದಲ್ಲಿ ಮಾತ್ರ ಪ್ರಾತಃ ಕಾಲದಲ್ಲಿ ತರಗತಿಗಳು ... ರಿಂದ ನಡೆಯುವಂತೆ ಏರ್ಪಡಿಸಿರುತ್ತ ... ಮಹಿಳೆಯರಿಗೆ ಪ್ರತ್ಯೇಕ ತರಗತಿಗಳು ನಡೆಯಲಿವೆ ಈ ಅವಕಾಶವನ್ನು ... ರೂ ಉಪಯೋಗಿಸಿಕೊಳ್ಳಬೇಕಾಗಿ ಕೋರಲಾಗಿದೆ

ವಿವಿಧ ವಿನೋದಾವಳಿ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ಬರುವ ೩೦ನೇ ತಾರೀಕು ಭಾನುವಾರ ಸಂಜೆ ೬½ ಗಂಟೆಗೆ ವಿವಿಧ ವಿನೋದಾವಳಿಯ ಅಂಗವಾಗಿ ಸಂಗೀತ ಕಾವ್ಯವಾಚನ, ಕೊಳಲು, ನಾಟಕ ಮೊದಲಾದ ಕಾರ್ಯಕ್ರಮಗಳು ನಡೆಯುವುವು ಸರ್ವರಿಗೂ ಆಹ್ವಾನವಿದೆ

ರಷ್ಯಕ್ಕೆ ಪರ್ಷಿಯಾ ಎಣ್ಣೆ ಮಾರಾಟವೇ?

ಪರ್ಷಿಯದಲ್ಲಿ ರಷ್ಯದ ರಾಯಭಾರಿಯಾಗಿರುವ ಇವಾನ್ ಸಾದ್ಚಿ... ರವರು ಸಧ್ಯದಲ್ಲೇ ಮಾಸ್ಕೋಗೆ ... ಳಿ ರಷ್ಯಾ ಮತ್ತು ಪರ್ಷಿಯಾಗಳ ... ವೆ ವಾಣಿಜ್ಯ ಒಪ್ಪಂದವೊಂದನ್ನು ... ಕೊಳ್ಳುವ ಬಗ್ಗೆ ಮಾತುಕತೆ ... ರೆಂದು ಹೇಳಲಾಗಿದೆ ಪರ್ಷಿ... ರಷ್ಯಕ್ಕೆ ಎಣ್ಣೆ ಸರಬರಾಜು ... ಕೆಂದು ಮಾಸ್ಕೋ ಸರ್ಕಾರದ್ದು ... ವುದಾಗಿಯೂ ವರದಿಯಾಗಿದೆ

ಬ್ರಹ್ಮಪುತ್ರಾ ಪ್ರವಾಹ ಅಪಾಯ

ಡಿಬ್ರುಗಢದ ಬಳಿ ಬ್ರಹ್ಮಪುತ್ರಾ ... ಯು ಮಟ್ಟವು ಏರಿ, ನಗರದ ... ಭೀತಿಯನ್ನು ತಂದೊಡ್ಡಿರುವುದು ... ವಾಹದಿಂದ ನೀರು ಊರಿನ ... ಗೆ ನುಗ್ಗುತ್ತಿದೆ ಮಳೆ ಮತ್ತು ... ವಿಪರೀತವಾಗಿ ಜನರಿಗೆ ತುಂಬ ... ದಕೆಯಾಗಿರುವುದು

ವಿಶ್ವೇಶ್ವರಯ್ಯನವರ ಸ...

ರಾಜಧಾನಿಯ ನ್ಯಾಷನಲ್ ಟ್ರಸ್ಟ್ ಆಫ್ ಇಂಜನಿಯರ್... ಘದ ಆಶ್ರಯದಲ್ಲಿ ಕಳೆದ ... ಎಂ ವಿಶ್ವೇಶ್ವರಯ್ಯನವರ ... ಟ್ಟಿದ ಹಬ್ಬವನ್ನು ಆಚರಿಸ... ಶ್ರೀ ಟಿ ಎಸ್ ರಾಮನಾ... ಚಾರ್ಯರು ಭಾಷಣ ಮಾಡಿ... ದ ಅಧ್ಯಕ್ಷ ಶ್ರೀ ಹಚ್ ... ರ್ಕರವರು ಅಧ್ಯಕ್ಷತೆ ವಹಿ...

ಕನ್ನಡದ ಸಣ್ಣ ಕಥೆಗಾರರ ಸಮ್ಮೇಳನ

ಕನ್ನಡ ಭಾಷೆಯಲ್ಲಿ ಸಣ್ಣ ಕಥೆಗಳನ್ನು ಬರೆಯುವವರ ಮತ್ತು ಕಥೆಗಾರರ ಸಮ್ಮೇಳನವನ್ನು ಅಕ್ಟೋಬರ್ ತಿಂಗಳಲ್ಲಿ ನಡೆಸಲು ... ರಿನ ಕನ್ನಡ ಗ್ರಂಥಕರ್ತರ ... ರ್ಧರಿಸಿ, ಇದಕ್ಕಾಗಿ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ... ದು ಸ್ವಾಗತ ಸಮಿತಿಯನ್ನು ... ಸಿರುತ್ತದೆ ಶ್ರೀಮನ್ಮಹಾರಾಜ... ಮ್ಮೇಳನಕ್ಕಾಗಿ ೧೦೦೦ ರೂ ... ಬೊಂಬಾಯಿ ಸರ್ಕಾರದವರು ... ರೂ ಗಳನ್ನು ಕೊಟ್ಟಿರುತ್ತಾರೆ

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳು

D. L. ನರಸಿಂಹಯ್ಯ & ಬ್ರದರ್ಸ್

ಜವಳೀ ಅಂಗಡಿ

ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ ಮೈಸೂರು

ಪ್ರಭುದೇವಾ ಟಾಕೀಸ್

ಪ್ರತಿದಿನ ೩ ಆಟಗಳು

21-9-51ನೇ :: ಶುಕ್ರವಾರದಿಂದ

ಅಂಜಲಿ ದೇವಿ,

ನಾಗೇಶ್ವರ ರಾವ್,

ಸಿ. ಎಸ್ಸ್ ಸ್ವಾಮಿ,

ರೇಲಂಗಿ,

ಸಿ ಎಸ್. ಆರ್

ಮುಂತಾದವರು ಪಾತ್ರ

ವಹಿಸಿರುವ ತಮಿಳು

ಚಿತ್ರ

ಸ್ತ್ರೀ ಸಾಹಸಂ

ನಾಲ್ಕು ವಾರ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಪಾಸುಗಳನ್ನೂ ಮನ್ನಾ ಮಾಡಿರುತ್ತೆ

ಗಣೇಶಾ ಟಾಕೀ...

21-9-51ರಿಂದ 5 ದಿನ...

ಏಕಾಂಬವಾಣ...

(ತಮಿಳು)

ಪಾತ್ರ ಕೊತ್ತಮಂಗಲ ... ಪೆರಿಯನಾಯಕಿ ಕುಮಾರಿ ... ಪುಳಿಮೂಟೆ ಮತ್ತು ಸಾರ...

... -51ರಿಂದ

ಚಾಮುಂಡೇಶ್ವರಿ ಸ...

ಗಣೇಶಾ ಟಾಕೀಸಿಗೆ

ಮೋಹನ ...

Edited printed published by A R ... rajan at Sadhvi Pre... Subbiah Road, Mys...

ಕ್ರಮ ಸಂ 792 । ವಂದೇ ಮಾತರಂ । ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೨-೭-೫೦ [ಸಂಚಿಕೆ ೫೨

ಕೊರಿಯಾ ಯುದ್ಧದಲ್ಲಿ ಅತ್ಯುಗ್ರ ಟ್ಯಾಂಕ್ ಕದನ

ಸಂಸ್ಕೃತ ಮತ್ತು ದೇಶೀಯ ಭಾಷೆಗಳಿಗೆ ಉತ್ತೇಜನ ಆವಶ್ಯಕ

ವಿದ್ಯಾ ಸಂಸ್ಥೆಯ ಅಧಿವೇಶನದಲ್ಲಿ ಶ್ರೀಮನ್ಮಹಾರಾಜರ ಭಾಷಣ

ಸು] ಮಂಡ್ಯ ೨೨

ಮೈಸೂರು ಸಂಸ್ಥಾನದ ವಿದ್ಯಾ ಸಂ ಸ್ಥೆಗಳ ಅಧಿವೇಶನದ ಆರಂಭೋ ತ್ಸವನ್ನು ಇಂದು ಬೆಳಗ್ಗೆ ಇಲ್ಲಿ ಶ್ರೀಮ ನ್ಮಹಾರಾಜರು ನೆರವೇರಿಸಿದರು ಜಿಲ್ಲಾಧಿಕಾರಿಗಳಾದ ಶ್ರೀ ಕೆ ...ದತ್ ರವರು ಅಧ್ಯಕ್ಷತೆ ವಹಿಸಿದ್ದ ಪ್ರಭುಗಳು ಭಾಷಣ ಮಾಡಿ ... ಅಪ್ಪಣೆ ಕೊಡಿಸಿದರು

ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸ ...ಯು ಕಳೆದ ೫ ವರ್ಷಗಳಿಂದ ... ಪ್ರಗತಿಯನ್ನು ಹೊಂದಿದೆ ಆದ ಜನಗಳಲ್ಲಿ ವಿದ್ಯಾಭ್ಯಾಸದ ಮಟ್ಟ ...ಾಲದೆಂಬ ಅಭಿಪ್ರಾಯವುಂಟಾ ...ದ್ಯಾ ಪ್ರಗತಿಯು ಸಂಸ್ಥೆಗಳನ್ನು ...ಮಾಡುವುದರಿಂದ ಸಾಧ್ಯವಾಗು ದಿನೇದಿನೇ ಬದಲಾವಣೆ ...ತ್ತಿರುವ ಸಮಾಜಕ್ಕೆ ತಕ್ಕಂತೆ ...ಭ್ಯಾಸದ ಪದ್ಧತಿಯಲ್ಲೂ ಮಾ ...ಡಾಗಬೇಕು

...ಪಾಧ್ಯಾಯರುಗಳ ಆವಶ್ಯಕತೆಗಳ ...ಪಗಿಸಲು ಸರ್ಕಾರವು ಇತ್ತೀಚೆ ... ಸಂಬಳಗಳನ್ನು ಹೆಚ್ಚಿಸಿದರೂ ...ತಮ ಅವರ ಆವಶ್ಯಕತೆಗಳನ್ನು ...ವಾಗಿಲ್ಲ ತರಪೇತು ಹೊಂದಿದ ಉಪಾಧ್ಯಾಯ ... ಆವಶ್ಯಕತೆ ನಮ್ಮ ದೇಶಕ್ಕೆ ... ...ದೆ ಇದಕ್ಕಾಗಿ ಉಪಾಧ್ಯಾಯರ ಸರಿಯಾದ ತರಪೇತು ಕೊಡುವ ...ದು ಮಾಡುವುದು ಅಗತ್ಯ

...ಮ್ಮ ನಾಡಿನ ಸಂಸ್ಕೃತಿಯನ್ನು ... ...ರಕ್ಷಿಸಬೇಕು ಸಂಸ್ಕೃತ ಮ... ...ದೇಶೀಯ ಭಾಷೆಗಳಿಗೆ ಉತ್ತೇಜನ ...ವುದರ ಮೂಲಕ ಸಂಸ್ಕೃತಿಯ ... ಅವಕಾಶವೊದಗಿಸಬೇಕು ಅಂ... ...ರಾಷ್ಟ್ರೀಯ ವ್ಯವಹಾರದ ದೃಷ್ಟಿ ...ನ ಮಾತ್ರ ಇಂಗ್ಲಿಷ್ ಭಾಷೆಯನ್ನು ...ಯುವ ಏರ್ಪಾಡಾಗಬೇಕು ...ಕ್ಕೆ ಪ್ರಾಮುಖ್ಯತೆಯನ್ನು ... ...ನಾಡಿನ ಸಂಸ್ಕೃತಿಯನ್ನು ... ...ಸಬೇಕು — ಎಂದು ನಾನು ... ...ಮಾಡುತ್ತೇನೆ

...ದ್ಯಾಭ್ಯಾಸದ ಪದ್ಧತಿಯಲ್ಲಿ ಸ... ...ನೆ ನಡೆಸಿ, ಅದರಂತೆ ಮಾರ್ಪಾ... ...ಳನ್ನು ಮಾಡಬೇಕು ನಿಮ್ಮ ಈ ಸ... ...ವು ಯಶಸ್ವಿಯಾಗಲೆಂದು ಹಾ... ...ತ್ತೇನೆ

...ಧ್ಯಕ್ಷರು ಭಾಷಣ ಮಾಡಿ ವರ್ಷ... ...ವರದಿಂದ ವಿದ್ಯಾಭ್ಯಾಸದ ಪದ್ಧತಿ ಸುಧಾರಿಸಬೇಕೆಂದು ತಿಳಿಸಿದರು

ಪರ್ಷಿಯದಲ್ಲಿ ಬ್ರಿಟಿಷ್ ರಾ ಯಭಾರಿ ಕಛೇರಿಗಳ ಬಂದು

...ಟನ್ನು ಪರ್ಷಿಯದ ಮೇಲೆ ... ... ದಿಗ್ಬಂಧನವನ್ನು ವಿಧಿಸಿರುವುದ ...ರ ಪರ್ಷಿಯದಲ್ಲಿರುವ ಎಲ್ಲ ಬ್ರಿಟಿಷ್ ...ರಾಯಭಾರಿ ಕಛೇರಿಗಳನ್ನೂ ಮು ...ಬೇಕೆಂದು ಅಲ್ಲಿನ ಪಾರ್ಲಿಮೆಂಟಿನ ...ಯ ಪಕ್ಷದ ಸದಸ್ಯರು ಸರ್ಕಾರ ...ನ್ನು ಒತ್ತಾಯಪಡಿಸುತ್ತಿರುವುದಾಗಿ ...ತ್ತಾಗಿದೆ

ಕೊರಿಯದಲ್ಲಿ ವಿಶ್ವಸಂಸ್ಥೆಯ ಟ್ಯಾಂಕು ಪಡೆಗಳ ಧಾಳಿ

ಕೊರಿಯಾ ಯುದ್ಧರಂಗದಲ್ಲಿ ವಿಶ ಸಂಸ್ಥೆಯ ಟ್ಯಾಂಕ್ ಪಡೆಗಳು ... ದಾಕ್ಷಿಣಾತ್ಯರಿಗೆ ಕಮ್ಯೂನಿಸ್ಟರ ... ...ಯಾಗಿ ಧಾಳಿ ನಡೆ... ...ದು ವರದಿಯಾಗಿದೆ ಕೊರಿಯ... ...ಲ್ಲಿ ಈಗ ಅತ್ಯಂತ ... ... ಪಜ್ಜತ ಕದನವ ... ...ಾಗಿದೆ

ವಿಶ್ವನ್ಯಾಯಾಧೀಶ ಸ್ಥಾನಕ್ಕೆ ಈಜಿಪ್ಟ್ ಸೂಚಿಸಿರುವ ಭಾರತದ ಪ್ರತಿನಿಧಿ

ಬಿ. ಎನ್. ರಾವ್ ರವರು

ವಿದ್ಯುಚ್ಛಕ್ತಿ ವ್ಯತ್ಯರ್ಯಗಳ ಸಂಸದ ವಿಸರ್ಜನೆ

ರಾಜಸ್ಥಾನಿಯ ಮ... ... ಸಂಸ... ಸಭೆಯು ಕಳೆದ ಮಂಗಳವಾರ ... ... ಸಂಭವನ್ನು ಮುಂದುವರಿಸುವ ... ಸದಸ್ಯರು ತಮ್ಮ ಅಸಮ್ಮತಿಯನ್ನು ಸೂ ಚಿಸುವರಿಂದ ಅದನ್ನು ವಿಸರ್ಜಿಸಲು ತೀರ್ಮಾನಿಸಲಾಯಿತು ಸದಸ್ಯರಿಂದ ಸಂಘಕ್ಕೆ ನಷ್ಟವಾಗಿರುವ ಚಂದಾ ... ಬಲಗನ್ನು ... ಹಾಡಾ, ವಾಪಸು ಕೊಡಲು ವ್ಯವಸ್ಥೆ ಮಾಡಿರುವುದಾಗಿ ಯೂ ... ಅದನ್ನು ಪಡೆಯಬಹುದೆಂದೂ ಅಧ್ಯಕ್ಷರು ಸೂಚಿ ಸಿರುತ್ತಾರೆ

ಕಮರಿಗೆ ರೈಲು ಬಿದ್ದು ೧೧ ಜನರ ಮರಣ

ಲಿವರ್ ಪೂಲಿನಿಂದ ಲಂಡನ್ನಿಗೆ ನೆನ್ನೆ ಪ್ರಯಾಣ ಮಾಡುತ್ತಿದ್ದ ಒಂದು ಎಕ್ಸ್ ಪ್ರೆಸ್ ರೈಲು ಗಾಡಿಯು ಬ್ಲಿಸ್ ವರ್ತ್ ...ಲ್ಲಿನ ಉತ್ತರದ ಒಂದು ಸುರಂಗ ಮಾರ್ಗವನ್ನು ದಾಟಿ ಸ್ವಲ್ಪ ದೂರ ಹೋಗಲು ... ...ಕ್ಕಪಕ್ಕದಲ್ಲಿದ್ದ ಒಂದು ಕಡಿದಾ ದ ಕಮರಿಗೆ ... ವ ... ... ಬಿದ್ದು ಹಂದೂ, ಅದರ ಪರಿಣಾ ಮವಾಗಿ ೧೧ ಮಂದಿ ಪ್ರಯಾಣಿಕರು ಮೃತಪಟ್ಟು, ೫೦ ಜನರು ಗಾಯಗೊಂ ಡರೆಂದೂ ವರದಿಯಾಗಿದೆ

ಕಾಂII ಬಿಕ್ಕಟ್ಟು ನಿವಾರಣೆಗೆ ಆಮರಣಾಂತ ಉಪವಾಸ

...ರ ವಾಂಕೂರ ಕೊಚ್ಚಿ ಕಾಂಗ್ರೆಸ್ ...ಲ್ಲಿ ಉಂಟಾಗಿರುವ ಬಿಕ್ಕಟ್ಟಿನ ನಿವಾರ ಣೆಗಾಗಿ ತಿರುವಾಂಕೂರಿನ ... ... ದು... ... ನಾಯಕ ಗಾಂಧಿ ... ... ನಿಂದ ... ... ಮರಣಾಂತ ಉಪ ವಾಸವನ್ನು ಆರಂಭಿಸಲಿರುವರೆಂದು ಗೊ ತ್ತಾಗಿದೆ

ಬಿಸಿಲಿನ ತಾಪದಿಂದ ೩ ಸಾವಿ ರ ಮಕ್ಕಾಯಾತ್ರಿಕರ ಮರಣ

...ವ ಪವಿತ್ರ ನಗರಕ್ಕೆ ಯಾತ್ರಾರ್ಥಿಗಳಾ ...ಗಿ ಹೋದ ೩೦ ಸಾವಿರ ಜನರ ಪೈಕಿ ...ನೂರು ಸಾವಿರ ಮಂದಿ ಬಿಸಿಲಿನ ತಾಪ ವನ್ನು ತಾಳಲಾರದೆ ಮೃತಿಯನ್ನೈದಿದ ರೆಂದು ವರದಿಯಾಗಿದೆ ಬಿಸಿಲು ಝಳ ಕ್ಕೆ ಎಲ್ಲ ಸಾಮಾನುಗಳೂ ಕರಗುತ್ತಿವೆ

ಹಡಗಿನಲ್ಲಿ ಬೆಂಕಿ

...ಾರತದ ಸಿಂಧ್ಯ ನೌಕಾ ಸಂಸ್ಥೆಗೆ ಸೇರಿದ ಜಲಜ್ಯೋತಿ ಎಂಬ ಹಡಗಿಗೆ ನೆನ್ನೆ ದಿನ ಇಂಗ್ಲೆಂಡಿನ ಈಶಾನ್ಯ ತೀ ರದಲ್ಲಿ ಬೆಂಕಿ ತಗುಲಿ ಸ್ವಲ್ಪ ನಷ್ಟ ಸಂಭ ವಿಸಿತೆಂದು ವರದಿಯಾಗಿದೆ ಸ್ವಲ್ಪ ಹೊ ತ್ತಿನಲ್ಲೇ ಬೆಂಕಿಯನ್ನು ಆರಿಸಲಾಯಿ ತು ನೌಕೆಯಲ್ಲಿ ಒಂದು ಸಾವಿರ ಬೇ ಲು ಸಣಬು ಮತ್ತು ೧... ಬೇಲು ಗೋ ಣಿ ಚೀಲಗಳನ್ನೂ ಮತ್ತು ಐರೋಪ್ಯ ರಾಷ್ಟ್ರಗಳಿಗೆ ರವಾನಿಸಲು ಇತರ ಹಲವು ಸಾಮಾನುಗಳನ್ನೂ ತುಂಬಲಾಗಿದ್ದಿತೆಂ ದೂ ಹೇಳಲಾಗಿದೆ

ಕಾಶ್ಮೀರದ ಬಗ್ಗೆ ಪ್ರಹಸನ ಕಾಳಗದಲ್ಲಿ ಬಾಲಕನ ಮರಣ

ಪೂರ್ವ ಪಂಜಾಬಿನ ಹಿಸ್ಸಾರಿನಲ್ಲಿ ದ ನ ಕಾಯುವ ಹುಡುಗರು ಕೆಲವು ದಿನಗ ಳ ಹಿಂದೆ ಕಾಶ್ಮೀರದ ಸಂಬಂಧವಾಗಿ ಭಾರತ ಮತ್ತು ಪಾಕಿಸ್ತಾನಗಳ ಘರ್ಷಣೆ ಯ ಪ್ರಹಸನ ಕಾಳಗ ನಡೆಸಿದರೆಂದೂ, ಅದರಲ್ಲಿ ಒಬ್ಬನು ಮೃತನಾದನೆಂದೂ ವರದಿಯಾಗಿದೆ ಅವರುಗಳಲ್ಲಿ ಎರಡು ಪಕ್ಷಗಳನ್ನು ಮಾಡಿಕೊಂಡು ಒಂದು ಪ ಕ್ಷವು ಕಾಶ್ಮೀರವನ್ನು ಹಿಡಿಯಿತೆಂದು ಮತ್ತೊಂದು "ಯುದ್ಧ" ಹೂಡಿದಾಗ ಹೋರಾಟ ನಡೆಸಲು ಬಾಕುಗಳನ್ನು ಉ ಪಯೋಗಿಸಲಾಯಿತೆಂದೂ ತಿಳಿದುಬಂ ದಿದೆ ಅನೇಕ ಹುಡುಗರನ್ನು ದಸ್ತಗಿರಿ ಮಾಡಲಾಗಿದೆ

ಇಂಗ್ಲೆಂಡಿನ ಅರಸರಿಗೆ ಶಸ್ತ್ರ ಚಿಕಿತ್ಸೆ

ಶ್ವಾಸಕೋಶದ ವ್ಯಾಧಿಯಿಂದ ನರ ಳುತ್ತಿರುವ ಬ್ರಿಟನ್ನಿನ ಅರಸರಾದ ಆರ ನೇ ಜಾರ್ಜರಿಗೆ ಇಂಗ್ಲೆಂಡಿನ ಬಕಿಂಗ್ ಹ್ಯಾಂ ಅರಮನೆಯಲ್ಲಿ ಶಸ್ತ್ರ ಚಿಕಿತ್ಸೆ ನ ಡೆಸಲಾಗುವುದೆಂದು ಗೊತ್ತಾಗಿದೆ ಚಿಕಿ ತ್ಸೆಯು ಪೂರ್ಣವಾಗುವವರೆಗೆ ಅದರ ವಿಧಾನ ಮತ್ತು ಇತರ ವಿವರಗಳನ್ನು ವೈದ್ಯರು ಬಹಿರಂಗಪಡಿಸುವುದಿಲ್ಲವೆಂ ದೂ, ಶಸ್ತ್ರ ಚಿಕಿತ್ಸೆ ಪಡೆಯಲು ಅರಸ ರು ಸಮ್ಮತಿಸಿರುವರೆಂದೂ ಹೇಳಲಾ ಗಿದೆ ಅವರೆಗಳ ಶ್ವಾಸಕೋಶದ ಸ್ಥಿತಿ ಯು ತುಂಬಾ ಆತಂಕಕ್ಕೆ ಕಾರಣವಾ ಗಿದೆಯೆಂದು ಹೇಳಲಾಗಿದೆ

ಮರಣದ ಸೂಚನೆ ಕಂಡು ಸದಸ್ಯತನಕ್ಕೆ ರಾಜೀನಾಮೆ

ಡೆನ್ಮಾರ್ಕಿನ ಒಂದು ನಗರದ ಸಹ ಕಾರ ಸಂಘದ ಸದಸ್ಯನೊಬ್ಬನು ಮರಣ ಹೊಂದುವ ಸೂಚನೆಯನ್ನು ಮುಂಚಿತ ವಾಗಿ ಕಂಡು, "ನಾನು ಸತ್ತಿರುವೆನು ಮತ್ತು ಸದಸ್ಯತನಕ್ಕೆ ರಾಜೀನಾಮೆ ಕೊಡಲಿಚ್ಛಿಸುತ್ತೇನೆ" ಎಂದು ಪತ್ರ ವನ್ನು ಬರೆದು ಕಳುಹಿಸಿದನೆಂದೂ ನಂ ತರ ಕೆಲವು ಗಂಟೆಗಳಲ್ಲೇ ಅವನು ಮೃ ತನಾದನೆಂದೂ ವರದಿಯಾಗಿದೆ

ಮಂತ್ರಿಗಳ ಮೋಟಾರಿಗೆ ಸಿಕ್ಕಿ ಬಾಲಕನ ಮರಣ

ತುಮಕೂರಿನ ಮಾರ್ಕೆಟ್ ಚೌಕ ದಲ್ಲಿ ನೆನ್ನೆ ಬೆಳಗ್ಗೆ ನ್ಯಾಯಾಂಗ ಮಂ ತ್ರಿ ಶ್ರೀ ಕೆ ಟಿ ಭಾಷ್ಯಂರವರ ಮೋಟಾ ರು ಹೋಗುತ್ತಿದ್ದಾಗ, ೮ ವರ್ಷದ ಸೈ ಯದ್ ಇಬ್ರಾಹಿಂ ಎಂಬ ಬಾಲಕನ ಮೇಲೆ ಅದು ಹರಿದು ಅವನು ಅರ್ಧ ಗಂ ಟೆಯ ನಂತರ ಮೃತಪಟ್ಟನೆಂದು ವರದಿ ಯಾಗಿದೆ ಪ್ರವಾಸಕ್ಕಾಗಿ ಸಚಿವರು ತು ಮಕೂರಿಗೆ ತೆರಳಿದ್ದರು ಮಂತ್ರಿಗ ಳು ಪ್ರವಾಸವನ್ನು ನಿಲ್ಲಿಸಿ ಬೆಂಗಳೂರಿಗೆ ಹಿಂತಿರುಗಿದರು

ನಂಜನಗೂಡು ವಕೀಲರ ಹಕ್ಕು ರದ್ದು

ನಂಜನಗೂಡಿನ ಶ್ರೀ ಸಿದ್ದನಾಯಕ್ ಎಂಬ ಕಕ್ಷಿಗಾರನಿಗೆ ಬರಬೇಕಾದ ೧೬೧ ರೂ ಗಳನ್ನು ಮರುಪಾವತಿಯೋಗದಿರು ಕೊಂಡ ಸಂಬಂಧವಾಗಿ ಹೈಕೋರ್ಟು ಅಲ್ಲಿನ ಶ್ರೀ ಎಸ್ ಕೃಷ್ಣಸ್ವಾಮಿ ಎಂ ಬ ವಕೀಲರ ಸನ್ನದನ್ನು ಎರಡು ವರ್ಷ ಕಾಲ ರದ್ದುಗೊಳಿಸಿರುತ್ತದೆ

ಆಯುರ್ವೇದ ಕಾಲೇಜಿನ ದರ್ಜೆ ಹೆಚ್ಚಿಸಲು ಯೋಜನೆ

ಬೆಂಗಳೂರು ೨೦

ಕಳೆದ ವರ್ಷ ನವ ದೆಹಲಿಯಲ್ಲಿ ನಡೆದ ಆರೋಗ್ಯ ಮಂತ್ರಿಗಳ ಸಮ್ಮೇಳನವು ಮಾಡಿದ ನಿರ್ಣಯಗಳನ್ನೂ, ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಕಾರ್ಯಕ್ರಮದ ದರ್ಜೆಯನ್ನು ಹೆಚ್ಚಿಸುವ ಅಂಶವನ್ನೂ ಮತ್ತು ಕ್ಷಯ ರೋಗ ಚಿಕಿತ್ಸೆಗಾಗಿ ಆಯುರ್ವೇದ ಔಷಧಾಲಯವನ್ನು ಪ್ರಾರಂಭಿಸುವ ವಿಷಯವನ್ನೂ ಕಳೆದ [illegible] ತಾ|| ಭಾರತೀಯ ವೈದ್ಯ ಶಾಸ್ತ್ರದ ಕೇಂದ್ರ ಸಮಿತಿಯವರು ದಿವಾನ್ ಮಂತ್ರಿಗಳ ಕಛೇರಿಯಲ್ಲಿ ಸಭೆ ಸೇರಿ ಪರ್ಯಾಲೋಚಿಸಿದರು. ಈ ವಿಷಯಗಳನ್ನು ಪೂರ್ಣವಾಗಿ ವಿಚಾರಿಸಿ ಸಲಹೆಗಳನ್ನು ಕೊಡಲು ಉಪ ಸಮಿತಿಗಳನ್ನು ರಚಿಸಲಾಯಿತು.

ಅಕ್ಟೋಬರ್ ಮತ್ತು ನವೆಂಬರ್ ತಿಂಗಳ ಸಕ್ಕರೆ ಪಡಿತರ

ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳ ಸಕ್ಕರೆಯ ಕೋಟಾವನ್ನು ಕಾರ್ಡುದಾರರು, ಅಕ್ಟೋಬರ್ ತಿಂಗಳಿನ ಒಳಗೇ ಒಂದೇ ಸಲ ಪಡೆಯಬಹುದೆಂದು ಸೂಚಿಸಲಾಗಿದೆ.

ಅಂಚೆ ಕಾರ್ಡು ಕೊಡುವ ಯಂತ್ರದ ಸ್ಥಾಪನೆ

ಭಾರತದ ಪ್ರಮುಖ ನಗರಗಳಲ್ಲಿ ಅಂಚೆ ಕಾರ್ಡುಗಳನ್ನು ಕೊಡುವ ಯಂತ್ರಗಳನ್ನು ಸ್ಥಾಪಿಸಲಾಗುವುದೆಂದು ವರದಿಯಾಗಿದೆ. ನವ ದೆಹಲಿಯಲ್ಲಿ ನಡೆದ ಏಷ್ಯನ ಕ್ರೀಡೆಗಳ ಸಂದರ್ಭದಲ್ಲಿ ಇಂತಹ ಯಂತ್ರವೊಂದನ್ನು ಸ್ಥಾಪಿಸಿ ಅದು ಯಶಸ್ವಿಯಾಗಿ ಕೆಲಸ ಮಾಡಿತೆಂದೂ, ಅದನ್ನು ಯೂರೋಪಿನಲ್ಲಿ ತಯಾರಿಸಲಾಗುವುದೆಂದೂ ವರದಿಯಾಗಿದೆ.

ಕನ್ನಂಬಾಡಿಯ ಹೆಚ್ಚು ನೀರು ಮದ್ರಾಸಿಗೆ ಬೇಕು

ಮದ್ರಾಸು ಪ್ರಾಂತದಲ್ಲಿ ಸಂಬಾರದ ದಿನಸಿಗಳನ್ನು ಬೆಳೆಯಲು ಸಕಾಲದಲ್ಲಿ ನೀರನ್ನು ಒದಗಿಸುವ ಸಲುವಾಗಿ ಕನ್ನಂಬಾಡಿಯಿಂದ ತಾತ್ಕಾಲಿಕವಾಗಿಯಾದರೂ ಹೆಚ್ಚು ನೀರನ್ನು ಬಿಡುವಂತೆ ಮೈಸೂರು ಸರ್ಕಾರವನ್ನು ಪ್ರಾರ್ಥಿಸಬೇಕೆಂದು ಮದ್ರಾಸಿನ ನೀರಾವರಿ ಸಮ್ಮೇಳನವು ಅಲ್ಲಿನ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಂಡಿದೆ.

ಬೇಸಿಗೆ ಕಾರ್ಯಕ್ರಮದ ಮುಕ್ತಾಯ ಸಮಾರಂಭ

ಮೈಸೂರು ಜೈನಯುವಕ ಸಂಘದ ಬೇಸಿಗೆ ಕಾರ್ಯಕ್ರಮದ ಮುಕ್ತಾಯ ಭಾಷಣದ ಸಂಬಂಧವಾಗಿ ವಿ|| ಪಂ|| ಡಿ. ನಾಗರಾಜ ಶಾಸ್ತ್ರಿಯವರನ್ನು ಸನ್ಮಾನಿಸಲು ನಾಳೆ ಸಂಜೆ ೭ ಗಂಟೆಗೆ ಬನುಮಯ್ಯನವರ ಹೈಸ್ಕೂಲು ಪಕ್ಕದಲ್ಲಿರುವ ಶ್ರೀ ಶಾಂತೀಶ್ವರ ದೇವಾಲಯದಲ್ಲಿ ವಿಶೇಷ ಸಭೆಯು ನಡೆಯುವುದು. ಮಹಾರಾಜಾ ಕಾಲೇಜಿನ ಕ|| ಪ್ರೊ|| ಶ್ರೀ ಎಂ. ಯಾಮುನಾಚಾರ್ಯರು ಮುಖ್ಯ ಭಾಷಣ ಮಾಡುವರು. ಸಂಘದ ಅಧ್ಯಕ್ಷ ಶ್ರೀ ಎಂ. ಪಿ. ಎಲ್ ಶಾಸ್ತ್ರಿರವರು ಅಧ್ಯಕ್ಷಸ್ಥಾನವನ್ನು ವಹಿಸುವರು.

ಭಾರತದಲ್ಲಿರುವ ಪಾಕಿಸ್ತಾನ ರಾಯಭಾರಿಯ ವಜಾ

ಭಾರತದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿರುವ ಮಹಮ್ಮದ್ ಇಸ್ಮೈಲ್ ರವರು ಇನ್ನೂ ಭಾರತದ ಪ್ರಜೆಯೇ ಆಗಿರುವುದರಿಂದ ಅವರನ್ನು ಹುದ್ದೆಯಿಂದ ತೆಗೆಯಲು ಪಾಕಿಸ್ತಾನ ಸರ್ಕಾರದವರು ನಿರ್ಧರಿಸಿರುತ್ತಾರೆ. ಅವರ ಸ್ಥಾನಕ್ಕೆ ಬೇರೊಬ್ಬರನ್ನು ಹುಡುಕಲಾಗುತ್ತಿದೆ. ಭಾರತದಲ್ಲಿ ಇಸ್ಮೈಲರಿಗೆ ತುಂಬಾ ಆಸ್ತಿಯಿರುವುದೆಂದು ಹೇಳಲಾಗಿದೆ.

ಯುಗೋಸ್ಲೇವಿಯವು ಯಾವ ಪಕ್ಷಕ್ಕೂ ಸೇರುವುದಿಲ್ಲ

ಯುಗೋಸ್ಲೇವಿಯವು ಯಾವ ಪಕ್ಷಕ್ಕೂ ಸೇರದೆ ಆಗ್ನೇಯ ಯೂರೋಪಿನಲ್ಲಿ ಶಾಂತಿಯನ್ನು ಕಾಪಾಡಲು ಶ್ರಮಿಸುವುದಾಗಿ ಅಲ್ಲಿನ ವಿದೇಶಾಂಗ ಮಂತ್ರಿ ಎಡ್ವರ್ಡ್ ಕಾರ್ಡೆಲ್‌ಜಯವರು ಹೇಳಿರುತ್ತಾರೆ. ಯುಗೋಸ್ಲೇವಿಯ ಮೇಲೆ ಆಕ್ರಮಣ ನಡೆದಾಗ ಇತರ ದೇಶಗಳ ಸಹಾಯವನ್ನು ಅದು ಪಡೆಯುವುದೆಂದು ಅವರು ತಿಳಿಸಿರುತ್ತಾರೆ.

ಶ್ರೇಣಿಕ ಚರಿತ್ರೆ

ಮೈಸೂರು ಜೈನ ಸಾಹಿತ್ಯ ಪ್ರಚಾರ ಸಂಘದ ಕಾರ್ಯದರ್ಶಿಯವರಾದ ವಿ|| ಎಂ. ಸಿ. ಪದ್ಮನಾಭ ಶಾಸ್ತ್ರಿಯವರ ಸಲಹೆಯಂತೆ ನಾಗರಾಜ ಕವಿಯಿಂದ ವಿರಚಿತವಾದ ಶ್ರೇಣಿಕ ಚರಿತ್ರೆ ಮತ್ತು ಸಮಾಧಿ ವಿಧಿ ಸೋಂಪಿ ಕಥೆ ಎಂಬ ಗ್ರಂಥದ ಅನುವಾದವನ್ನು ಮೂಡಬಿದ್ರೆಯ ವೀರವಾಣಿ ಭವನದ ವಿದ್ಯಾ ಭೂಷಣ ಪಂಡಿತ ಲೋಕನಾಥ ಶಾಸ್ತ್ರಿಯವರು ಮಾಡಿ, ಅದನ್ನು ಪುಸ್ತಕ ರೂಪದಲ್ಲಿ ಶ್ರೀ ವಿ. ಕೆ. ವರ್ಧಮಾನಯ್ಯನವರ ಧರ್ಮಪತ್ನಿ ಶ್ರೀ ಪ್ರೇಮಮ್ಮನವರು ಪ್ರಕಾಶಪಡಿಸಿರುತ್ತಾರೆ. ಪ್ರೇಮಮ್ಮನವರ ತಂದೆ ಕಾವೇರಿ ವೆಂಕಟಪ್ಪನವರ ಸ್ಮಾರಕ ಗ್ರಂಥವಾಗಿ ಇದನ್ನು ಪ್ರಕಟಿಸಲಾಗಿದೆ. ಕಥೆಯ ಮುಖ್ಯ ನಾಯಕ ಶ್ರೇಣಿಕ ಮತ್ತು ಆತನ ರಾಣಿ ಚೇಳಿನಿಯವರುಗಳು ಧರ್ಮದಲ್ಲಿ ಹೇಗೆ ಪ್ರವರ್ತಿಸಿದರೆಂಬುವನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಇಂತಹ ಗ್ರಂಥಗಳನ್ನು ಪ್ರಕಟಿಸಿ ಸಮಾಜದ ಬಾಂಧವರಿಗೆ ಉತ್ತಮ ಸಾಹಿತ್ಯವನ್ನು ಒದಗಿಸಲು ಏರ್ಪಡಿಸಿರುವುದು ಅಭಿನಂದನೀಯ. ಬೆಲೆ ೦-೭-೬

THIRTHA & COMPANY,
Narayana Sastry Road,
PHONE 337
Clearing and Forwarding
AGENTS

ANNOUNCEMENT
"NALINS" are glad to announce that they have manufactured Special Furniture Settings for hire to suit the Exhibition stalls at moderate charges. Our customers are requested to pick up their requirements immediately as stocks available are limited
NALINS,
Service Furnishers, V. V. Market Square, Mysore

ರೈಲ್ವೆ ಕಾರ್ಮಿಕರ ಯೋಗಕ್ಷೇಮಕ್ಕಾಗಿ ೮ ಕೋಟಿ ರೂ.

ರೈಲ್ವೆ ಕಾರ್ಮಿಕರ ಕ್ಷೇಮ ಚಿಂತನೆಗಾಗಿ ಕೇಂದ್ರ ಸರ್ಕಾರದವರು ೮-೫೦ ಕೋಟಿ ರೂ. ಗಳನ್ನು ಬರುವ ಸಾಲಿನ ಆಯವ್ಯಯದಲ್ಲಿ ತೆಗೆದಿಡುವರೆಂದು ಹೇಳಲಾಗಿದೆ.

ಕೈಮಗ್ಗದ ಬಟ್ಟೆ ಮೇಲೆ ಹತೋಟಿಯಿಲ್ಲ

ಕೈ ಮಗ್ಗದ ಬಟ್ಟೆ ಮೇಲೆ ಯಾವ ವಿಧವಾದ ಹತೋಟಿಯನ್ನೂ ವಿಧಿಸಲು ಸಾಧ್ಯವಿಲ್ಲವೆಂದು ಮದರಾಸಿನ ಕೈಗಾರಿಕಾ ಸಚಿವರು ತಿಳಿಸಿರುವರು.

ಹೆಬ್ಬಾರು ಶ್ರೀವೈಷ್ಣವರ ಸಭೆ

ಮೈಸೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭೆಯ ಸಾಧಾರಣ ಸಭೆಯು ನಾಳೆ ಮಧ್ಯಾಹ್ನ ೩ ಘಂಟೆಗೆ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ಗೋಪಾಲಕೃಷ್ಣ ಸ್ವಾಮಿ ದೇವಸ್ಥಾನದಲ್ಲಿ ನಡೆಯಲಿದೆ. ಮತ ಬಾಂಧವರೆಲ್ಲರೂ ಭಾಗವಹಿಸಬೇಕಾಗಿ ಕೋರಲಾಗಿದೆ.

ರಾಜಧಾನಿಗೆ ಎಸ್. ಚೆನ್ನಯ್ಯನವರ ಆಗಮನ

ವಿದೇಶ ಪ್ರವಾಸವನ್ನು ಮುಗಿಸಿಕೊಂಡು ಹಿಂದಿರುಗಿದ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚೆನ್ನಯ್ಯನವರು ನಾಳಿದ್ದು ಬೆಳಗ್ಗೆ ಮೇಲ್ ರೈಲಿನಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ಆಗಮಿಸುವರು.

ಸಂಗೀತ

ರಾಜಧಾನಿಯ ನಾಲಾ ಬೀದಿಯ ಶ್ರೀ ದೊಡ್ಡ ರಾಮ ಮಂದಿರದಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಂಜೆ ೭ ಗಂಟೆಗೆ ವಿ|| ಟಿ. ಪುಟ್ಟಸ್ವಾಮಯ್ಯನವರ ಸಂಗೀತ ಕಛೇರಿಯನ್ನು ಏರ್ಪಡಿಸಲಾಗಿದೆ.

SRI GAYATHRI,
TALKIES
From 22-9-51 Daily 3 Shows
Paramount's
Technicolour
COPPER CANYON
Starring:- Ray Milland and Hedy Lamarr
MORNING SHOWS On 23rd
R. K. O's Walt Disney's
Snow White & Seven Dwarfs

ಶಾಸನ ಸಭೆಯಲ್ಲೇ ಗವರ್ನರರಿಗೆ ಬೆದರಿಕೆ

ಉತ್ತರ ಪ್ರದೇಶದ ಒಂದು ಪ್ರಾಂ[illegible] ಗೊಳಿಸಟಿಕೊಳ್ಳುವನ್ನು ಗೌರ್ನರ್ ನೇಮಿಸಿದ ಸಂದರ್ಭದಲ್ಲಿ ಅಲ್ಲಿನ ಶಾಸನ ಸಭೆಯ ವಿರೋಧ ಪಕ್ಷದ ಸದಸ್ಯರು ಸಭೆ ನಡೆಯುತ್ತಿರುವಾಗಲೇ ಪಿಸ್ತೂಲುಗಳನ್ನು ತೋರಿಸಿ ಬೆದರಿಸಿದರೆಂದು ಹೇಳಲಾಗಿದೆ. ಗೌರ್ನರರು ಈ ಬೆದರಿಕೆಗೆ ಅಂಜಿರುತ್ತಾರೆ.

ಬೊಂಬಾಯಿಯ ಬೆಟ್ಟ ಪ್ರದೇಶದಲ್ಲಿ ಗಂಧಕ

ಬೊಂಬಾಯಿ ಸಂಸ್ಥಾನದ ಕಾರವಾರ ಗುಡ್ಡ ಪ್ರದೇಶದಲ್ಲಿ ಗಂಧಕದ ಅದಿರು ದೊರೆತಿರುವುದಾಗಿ ಗೊತ್ತಾಗಿ ಕೋಟಿಗಟ್ಟಲೆ ಟನ್ ಗಂಧಕವು ಅಲ್ಲಿ ದೊರೆಯುವುದಾಗಿ ಭಾವಿಸಲಾಗಿದೆ.

ಪ್ರಜಾಭಿಪ್ರಾಯ

ಶಿವಮೊಗ್ಗ ಮತ್ತು ಚಿಕ್ಕಮಗಳೂರುಗಳಲ್ಲೂ ರಾಜಧಾನಿಯಲ್ಲೂ ಶ್ರೀ ಎಸ್. ರಾಜಗೋಪಾಲಯ್ಯಂಗಾರ್ಯರು ನಡೆಸಿದ ವಿಶ್ವ ವಿದ್ಯಾನಿಲಯದ ಪ್ರಸರೋಪನ್ಯಾಸಗಳ ಮುಖ್ಯಾಂಶಗಳನ್ನು ವಿಶ್ವ ವಿದ್ಯಾಲಯದ ಪ್ರಚಾರ ಮಾಲೆಯ ಅಂಗವಾಗಿ ಪ್ರಜಾಭಿಪ್ರಾಯ ಎಂಬ ಚಿಕ್ಕ ಪುಸ್ತಕದ ರೂಪದಲ್ಲಿ ಪ್ರಕಟಿಸಲಾಗಿದೆ. ಜನಸಾಮಾನ್ಯಕ್ಕೆ ವಿಷಯ ಸ್ಥೂಲ ಪರಿಚಯ ಮಾಡಿಕೊಡುತ್ತದೆ. ಗ್ರಂಥಕರ್ತರ ಅಪೇಕ್ಷೆ. ವೈಸ್ ಚಾನ್ಸಲರ್ ಆಗಿದ್ದ ಶ್ರೀ ಆರ್. ಕಸ್ತೂರಿರಂಗಶೆಟ್ಟಿಯವರು ಮುನ್ನುಡಿಯನ್ನು ಬರೆದಿರುತ್ತಾರೆ. ಸಾರ್ವಜನಿಕ ವ್ಯವಹಾರವನ್ನು ವಿವೇಚನಾಯುತ ರೀತಿಯಲ್ಲಿ ತಿಳಿಯಬಯಸುವವರಿಗೆ ಉಪಯುಕ್ತ ಪುಸ್ತಕವಾಗಿದೆ. ಬೆಲೆ ಸಾಧಾರಣ ಪ್ರತಿಗೆ ೩ ಆಣೆ ಉತ್ತಮ ಪ್ರತಿಗೆ ೪ ಆ.

ಛೇರ್‌ಮನ್,
ಟವನ್ ಹಾಲ್ ಕಮಿಟಿ ಕಛೇರಿಯೀ
ಮೈಸೂರು, ತಾರೀಖು ೧೯-೯-೫೧

ಪ್ರಕಟಣೆ

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದು ಏನೆಂದರೆ:- ಟವನ್ ಹಾಲಿನಲ್ಲಿ ದಸರಾ ಪ್ರಯುಕ್ತ ಅಂದರೆ ತಾರೀಖು ೨-೧೦-೫೧ರಿಂದ ೧೫-೧೦-೫೧ರ ವರೆಗೆ ಪೂರ್ತಿ ವಿಜಯ ದಶಮಿ ವಿನಾ ಬಾಕಿ ಎಲ್ಲಾ ದಿನಗಳೂ ಸೇರಿ, ನಾಟಕಗಳನ್ನು ನಡೆಸಲು ತಾರೀಖು ೨೬-೯-೫೧ನೇ ಬುಧವಾರ ಬೆಳಗ್ಗೆ ೧೧-೩೦ ಘಂಟೆಗೆ ಸದರಿಯಾಗಿ ಟವನ್ ಹಾಲಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಟವನ್ ಹಾಲ್‌ನಲ್ಲಿರುವ 'ನೋಟೀಸ್ ಬೋರ್ಡು' ನೋಡುವುದು.

ಬಿ. ನರಸಿಂಹಯ್ಯಂಗಾರ್,
ಛೇರ್‌ಮನ್.

Edited, printed and published by A R Nagarajan, at Sadhvi Press, D Subbiah Road, Mysore

Regd. No. 792 · WEEKLY EDITION · ಬಿಡಿ ಪ್ರತಿ ೬ ಕಾಸು

ಸಂಪುಟ ೧೬] ಭಾನುವಾರ ೨೮-೯-೫೨ [ಸಂಚಿಕೆ ೯

ಜಪಾನಿನಲ್ಲಿ ವಿಮಾನ ಧಾಳಿ ಎಚ್ಚರಿಕೆ ಕ್ರಮ

ನವರಾತ್ರಿಯ ಕಾರ್ಯಕ್ರಮ

ಮೈಸೂರು ೨೨

ನವರಾತ್ರಿ ಸಂಬಂಧವಾಗಿ ಈ ಕೆಳಗಿನ ಕಾರ್ಯಕ್ರಮಗಳು ಅರಮನೆಯಲ್ಲಿ ನಡೆಯಲೇರ್ಪಾಡಾಗಿದೆ:-

ಅಕ್ಟೋಬರ್ ೨ ನೇ ತಾ॥ ಬೆಳಗ್ಗೆ ... ೩೫ ಗಂಟೆಗೆ ಶ್ರೀಮನ್ ಮಹಾರಾಜರು ... ಸಿಂಹಾಸನಾರೋಹಣವನ್ನು ಮಾಡುವರು. ... ವಿಶೇಷ ತರಗತಿಯ ಸರ್ಕಾರಿ ಅಧಿಕಾರಿಗಳು ಮತ್ತು ಸರ್ದಾರರುಗಳಿಂದ ನಜರ್ ಆಗುವುದು. ಸಂಜೆ ೬ ಗಂಟೆಗೆ ಪಟ್ಟದ ಆನೆ ಮತ್ತು ಕುದುರೆಗಳು ಸೋಮೇಶ್ವರ ದೇವಾಲಯಕ್ಕೆ ಬಿಜಮಾಡು... ೭ ಗಂಟೆಗೆ ದರ್ಬಾರ್, ಸಿವಿಲ್ ಮತ್ತು ಅಧಿಕಾರಿಗಳು ಮತ್ತು ಅರಸರು ... ನಜರ್; ಮಾರನೇ ದಿನ ಸಂಜೆ ... ಗೆ ದರ್ಬಾರಿನಲ್ಲಿ ಮಿಲಿಟರಿ, ಪೊಲೀಸ ಅಧಿಕಾರಿಗಳ ನಜರ್, ೮ ನೇ ... ವರೆಗೂ ಇದೇ ರೀತಿ ಪ್ರತಿ ದಿನವೂ ... ಉಂಟು. ೯ ನೇ ತಾ॥ ಬೆಳಗ್ಗೆ ... ಪಟ್ಟದ ಆನೆ, ಕುದುರೆ ಮತ್ತು ... ಆಯುಧಗಳನ್ನು ಸೋಮೇಶ್ವರ ದೇವಾಲಯಕ್ಕೆ ಕೊಂಡೊಯ್ದು ಅಲ್ಲಿ ಆಯುಧ ... ಪೂಜೆ ನಡೆಯುವುದು. ಸಂಜೆ ೭ ... ದರ್ಬಾರು. ೧೦ ನೇ ತಾ॥ ಬೆಳಗ್ಗೆ ... ೧೦ ಗಂಟೆಗೆ ಬನ್ನಿ ಮಂಟಪಕ್ಕೆ ... ಥ, ಆನೆ ಮತ್ತು ಕುದುರೆಗಳು ಬಿಜಮಾಡುವುವು. ನಂತರ ಚಿಟ್ಟಿಕಾಳಗ. ... ೧-೧೫ ಗಂಟೆಗೆ ಜಂಬೂ ಸವಾರಿ ... ವನಡಿಗೆ.

ಯಕ್ಷಗಾನ

... ಸುಬ್ಬಯ್ಯ ರಸ್ತೆಯಲ್ಲಿರುವ ... ಗಾಂಧಿ ಸೇವಾ ಸಂಘದಲ್ಲಿ ಈ ... ೨॥ ಗಂಟೆಗೆ ಶ್ರೀ ಹನುಮತ್ಸಂಕ ... ಚಾಮುಂಡೇಶ್ವರಿ ಯಕ್ಷಗಾನ ... ಮಂಡಲಿಯವರಿಂದ ಯಕ್ಷಗಾನವು ನಡೆಯುವುದು.

ಸೆಕಂಡರಿ ವಿದ್ಯಾಭ್ಯಾಸಕ್ಕಾಗಿ ೩ ವರ್ಷಗಳ ಅವಧಿ

ಸೆಕಂಡರಿ ಮತ್ತು ಇಂಟರ್‌ಮೀಡಿಯೆಟ್ ತರಗತಿಗಳನ್ನು ಒಟ್ಟಾಗಿ ಸೇರಿಸಿ ... ವರ್ಷಗಳ ಅವಧಿಯ ಪಾಠ ಕ್ರಮ ... ಏರ್ಪಡಿಸುವ ವಿಷಯವು ಮೈಸೂರು ಸರ್ಕಾರದ ಪರಿಶೀಲನೆಯಲ್ಲಿರುವ ... ಶ್ರೀಮನ್ ಮಹಾರಾಜರು ಮಂತ್ರಿ ... ನೆನ್ನೆ ನಡೆದ ವಿದ್ಯಾ ಸಂ ... ಸಮ್ಮೇಳನದಲ್ಲಿ ಹೇಳಿ ... ಸೆಕೆಂಡರಿ ವಿದ್ಯಾಭ್ಯಾಸಕ್ಕಾಗಿ ... ಪರಿಸ್ಥಿತಿಗೆ ಹೊಂದುವಂತೆ ... ಯೋಜನೆ ತಯಾರಿಸಲು ಕೇಂದ್ರ ಸರ್ಕಾರವು ನೇಮಿಸಿರುವ ... ತಜ್ಞರ ... ಶಿಕ್ಷಣದ ಸುಧಾರಣೆಯನ್ನು ... ಕೈಗೊಳ್ಳಬಾರದೆಂದು ... ಹೇಳಿದ್ದಾರೆ.

ಪಶ್ಚಿಮ ಯೂರೋಪು ಸಂಘಟನೆಗೆ ಪ್ರಾತಿನಿಧ್ಯ ...

... ಎಚ್ಚರಿಕೆಯ ಸಂಘಟನೆಯನ್ನು ... ಸರ್ಕಾರವು ನೆನ್ನೆ ಪ್ರಾತಿನಿಧ್ಯ ... ಸಂಘಟನೆಯನ್ನು ... ನ್ನು ನಿರಾಕರಿಸಿ ... ಸುವುದೆಂದು ಅಲ್ಲಿನ ... ಸಿಯು ತಿಳಿಸಿರುತ್ತದೆ.

ಗಡಿನಾಡು ಚುನಾವಣೆಗೆ ಕೆಂಪು ಷರ್ಟಿನವರ ಬಹಿಷ್ಕಾರ

ವಾಯುವ್ಯ ಗಡಿನಾಡು ಪ್ರದೇಶದ ಕೆಂಪು ಷರ್ಟ್ ದಳದವರು (ಖುದಾಯ್ ಖಿದ್ ಮತ್ ಗಾರರು) ತಮ್ಮ ನಾಯಕ ಖಾನ್ ಅಬ್ದುಲ್ ಗಫಾರ್ ಖಾನರನ್ನು ವಿಚಾರಣೆಯೇ ಇಲ್ಲದೆ ಬಂಧನದಲ್ಲಿಟ್ಟಿರುವುದರಿಂದ ಬರುವ ನವೆಂಬರಿನಲ್ಲಿ ಅಲ್ಲಿ ನಡೆಯುವ ಮಹಾ ಚುನಾವಣೆಯನ್ನು ಬಹಿಷ್ಕರಿಸಲು ನಿರ್ಧರಿಸಿರುವರೆಂದು ಗೊತ್ತಾಗಿದೆ.

ನ್ಯಾಯಾಸ್ಥಾನದಲ್ಲಿ ಖೈದಿಯ ಕುಹಕ

ಕುಂಭಕೋಣದ ಗೋವಿಂದಸ್ವಾಮಿ ಎಂಬ ಕೈದಿಯು ಆತನನ್ನು ಕದ್ದ ಮೂರು ತಿಂಗಳು ಕಠಿಣ ಶಿಕ್ಷೆಗೆ ಗುರಿಯಾದನು. ಪೊಲೀಸರು ಅವನನ್ನು ಜೈಲಿಗೆ ಕರೆದುಕೊಂಡು ಕೋರ್ಟಿನ ಹೊರಗಡೆ ಹೋಗುತ್ತಿದ್ದಾಗ ತಾನು ತೊಟ್ಟಿದ್ದ ಒಟ್ಟೆಯನ್ನು ಬಿಚ್ಚಿ, ಬೆತ್ತಲೆ ನಿಂತುಬಿಟ್ಟನೆಂದೂ, ಅನಂತರ ಪೊಲೀಸರು ಬಲಾತ್ಕರಿಸಿದ ಮೇಲೆ ಅವನು ಬಟ್ಟೆಯನ್ನು ಧರಿಸಿ ಮುಂದೆ ನಡೆದನೆಂದೂ ವರದಿಯಾಗಿದೆ.

ಮಣಿಲಾಲ್ ಗಾಂಧಿಗೆ ಎಚ್ಚರಿಕೆ ನೋಟೀಸು

ಡರ್ಬಾನಿನ ರೈಲ್ವೆ ಸ್ಟೇಷನ್ನಿನಲ್ಲಿ ಯುರೋಪ್ಯರಿಗಾಗಿ ಮೀಸಲಾಗಿಟ್ಟಿರುವ ಸ್ಥಾನದಲ್ಲಿ ಕುಳಿತುಕೊಂಡ ಅಪರಾಧಕ್ಕಾಗಿ ಗಾಂಧೀಜಿಯವರ ಎರಡನೇ ಮಗ ಮಣಿಲಾಲರಿಗೆ ಪೊಲೀಸರು ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ. ವರ್ಣ ವಿದ್ವೇಷದ ನೀತಿಯನ್ನು ಅವಲಂಬಿಸಿರುವ ಆಫ್ರಿಕನ್ ಸರ್ಕಾರದ ಕ್ರಮಗಳನ್ನು ಪ್ರತಿಭಟಿಸಲು ಶಾಸನವನ್ನು ಉಲ್ಲಂಘಿಸಲು ಅವರು ತೀರ್ಮಾನಿಸಿ, ಡರ್ಬಾನಿನ ಪೌರ ಸಭಾ ಸಾರ್ವಜನಿಕ ವಾಚನಾಲಯಕ್ಕೆ ಹೋಗಿ ಅಲ್ಲಿ ಪತ್ರಿಕೆಗಳನ್ನು ಓದಿದರೆಂದೂ, ಪೊಲೀಸರು ಅವರ ಹೆಸರು ಮತ್ತು ವಿಳಾಸವನ್ನು ತೆಗೆದುಕೊಂಡಿರುವರೆಂದೂ ತಿಳಿದುಬಂದಿದೆ.

○ ಚುನಾವಣಾ ಪ್ರಚಾರವನ್ನು ಕೈಗೊಳ್ಳುವಾಗ ಪ್ರಯಾಣ ಭತ್ಯವನ್ನು ತೆಗೆದುಕೊಳ್ಳಕೂಡದೆಂದು ಮದ್ರಾಸಿನ ಮಂತ್ರಿಗಳು ನಿರ್ಧರಿಸಿರುತ್ತಾರೆ.

ಜಪಾನ್ ದ್ವೀಪದಲ್ಲಿ ವಿಮಾನ ಧಾಳಿ ಎಚ್ಚರಿಕೆ ಕ್ರಮ

ಜಪಾನಿನಲ್ಲಿ ವಿಮಾನ ಧಾಳಿ ಎಚ್ಚರಿಕೆ ಕ್ರಮವನ್ನು ಕೈಗೊಳ್ಳಲಾಗುವುದೆಂದು ತಿಳಿದುಬಂದಿದೆ. ಆ ದೇಶದ ಉತ್ತರಕ್ಕೆ ೫೦ ಮೈಲಿ ದೂರದಲ್ಲಿರುವ ರಷ್ಯನರ ಸಖಾಲಿನ್ ದ್ವೀಪದಲ್ಲಿ ವಿಮಾನಗಳ ಚಟುವಟಿಕೆಗಳು ಹೆಚ್ಚಿರುವುದರಿಂದ ಮೇಲ್ಕಂಡ ಕ್ರಮವನ್ನು ಕೈಗೊಳ್ಳಲಾಗಿವೆಯೆಂದೂ, ಈ ಕಾರ್ಯದಲ್ಲಿ ಜಪಾನ್ ಸರ್ಕಾರವು ಸಹಾಯವನ್ನು ನೀಡಬೇಕೆಂದು ಅಮೆರಿಕಾ ಅಧಿಕಾರಿಗಳು ಕೋರಿರುವರೆಂದೂ ಹೇಳಲಾಗಿದೆ.

ರಾಜಾಜಿ ಸ್ಥಾನಕ್ಕೆ ಪಂಡಿತ ಪಂತ್

ಕೇಂದ್ರ ಮಂತ್ರಿಮಂಡಲಕ್ಕೆ ರಾಜೀನಾಮೆಯನ್ನಿತ್ತಿರುವ ರಾಜಾಜಿಯವರ ಸ್ಥಾನಕ್ಕೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಗೋವಿಂದ ವಲ್ಲಭ ಪಂತರವರನ್ನು ನೇಮಕ ಮಾಡುವ ಸಂಭವವಿದೆಯೆಂದು ಗೊತ್ತಾಗಿದೆ.- ಕೇಂದ್ರ ಮಂತ್ರಿಮಂಡಲದಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳೂ ಆಗುವುವೆಂದು ಭಾವಿಸಲಾಗಿದೆ.

ತಿರುಚನಾಪಳ್ಳಿ ಕೋಟೆಯಿಂದ ಕೆಳಕ್ಕೆ ಬಿದ್ದು ಮರಣ

ತಿರುಚನಾಪಳ್ಳಿಗೆ ಪ್ರವಾಸಾರ್ಥವಾಗಿ ಹೋಗಿದ್ದ ಒಬ್ಬಾತನು ಕಳೆದ ಗುರುವಾರ ಅಲ್ಲಿನ ತಿಲಾ ಕೋಟೆಯ ಮೇಲೆ ಹತ್ತಿ ಸುತ್ತ ನೋಡುತ್ತಿರುವಲ್ಲಿ ಆಕಸ್ಮಾತ್ ಸುಮಾರು ೩೦೦ ಅಡಿ ಕೆಳಕ್ಕೆ ಬಿದ್ದು ಮೃತಪಟ್ಟನೆಂದು ವರದಿಯಾಗಿದೆ.

ಅಮೆರಿಕದಿಂದ ಭಾರತಕ್ಕೆ ೧೫ ಹಡಗುಗಳು

ಅಮೆರಿಕವು ಯುದ್ಧ ಕಾಲದಲ್ಲಿ ನಿರ್ಮಿಸಿದ ವ್ಯಾಪಾರಿ ಹಡಗುಗಳ ಪೈಕಿ ೧೫ ನ್ನು ಭಾರತವು ೫ ಕೋಟಿ ೫೦ ಲಕ್ಷ ರೂ.ಗಳ ಬೆಲೆ ಕೊಟ್ಟು ಕೊಂಡಿರುವುದಾಗಿ ಗೊತ್ತಾಗಿದೆ.

○ ದಕ್ಷಿಣ ಮಲಬಾರಿನ ಕಲ್ಲಿಕೋಟೆಯ ಜಾಮೋರಿನ್ ರಾಜಾ ವೀರ ರಾಯರ್‌ರವರು ಮೊನ್ನೆ ದಿನ ತಮ್ಮ ೮೫ ನೇ ವಯಸ್ಸಿನಲ್ಲಿ ತಿರುವಾಚಿರಾ ಎಂಬಲ್ಲಿ ಮೃತಪಟ್ಟರೆಂದು ವರದಿಯಾಗಿದೆ.

ಭಾಷಾವಾರು ಪ್ರಾಂತಗಳ ರಚನೆ ಏಕ ಕಾಲದಲ್ಲಿ ಆಗಲಿ

ಎಸ್. ನಿಜಲಿಂಗಪ್ಪನವರ ಹೇಳಿಕೆ

- ಬೆಂಗಳೂರು ೨೨

ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಹೇಳಿಕೆಯೊಂದನ್ನು ಇತ್ತು ಸ್ವಾಮಿ ಸೀತಾರಾಮರವರ ಉಪವಾಸ ಮುಕ್ತಾಯದಿಂದ ಭಾಷಾವಾರು ಪ್ರಾಂತ ನಿರ್ಮಾಣದ ಸಮಸ್ಯೆಯು ಮುಕ್ತಾಯವಾಗಲಿಲ್ಲವೆಂದೂ, ಅದರ ಬದಲು ಈ ಪ್ರಶ್ನೆಗೆ ಹೆಚ್ಚು ಮಹತ್ವವನ್ನು ಅದು ಕೊಟ್ಟಿರುವುದೆಂದೂ ತಿಳಿಸಿರುತ್ತಾರೆ. ಎಲ್ಲ ಭಾಷಾವಾರು ಪ್ರಾಂತಗಳೂ ಏಕ ಕಾಲದಲ್ಲಿ ನಿರ್ಮಾಣವಾಗಬೇಕೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಹೈದರಾಬಾದಿನ ವಿಸರ್ಜನೆಯಾಗಬೇಕಾದುದು ತಮ್ಮ ಅಭಿಮತವೆಂದೂ, ಆದರೆ ಅಲ್ಲಿನ ಪ್ರಜೆಗಳು ಹೈದರಾಬಾದು ಇರಬೇಕೆಂದು ಬಯಸಿದರೆ ಹಾಗೆಯೇ ಆಗಬಹುದೆಂದೂ ಅವರು ಹೇಳಿರುತ್ತಾರೆ.

೧ ಲಕ್ಷ ರೂ. ಆದಾಯ ತೆರಿಗೆ ಕೊಡದೆ ಮೋಸಮಾಡಿದ ಅಪಾದನೆ

ಬೆಂಗಳೂರಿನಲ್ಲಿ ೧೯೩೮ ರಿಂದಲೂ ವರ್ತಕರಾಗಿರುವ ಅಮೆರಿಕದ ಪ್ರಜೆ ಅಲೆಕ್ಸಾಂಡರ್ ಮೊಷಾರ್ಸ್ಕಿಯವರು ೧ ಲಕ್ಷ ರೂ ಆದಾಯ ತೆರಿಗೆಯನ್ನು ಕೊಡದೆ ಸರ್ಕಾರಕ್ಕೆ ಮೋಸ ಮಾಡಿರುವರೆಂಬ ದೂರನ್ನು ಪೊಲೀಸರಿಗೆ ಕೊಡಲಾಗಿ, ಅವರು ಮೊಕದ್ದಮೆಯನ್ನು ರಿಜಿಸ್ಟರ್ ಮಾಡಿಕೊಂಡು ಮುಂದಿನ ತನಿಖೆ ನಡೆಸುತ್ತಿರುವುದಾಗಿ ಹೇಳಲಾಗಿದೆ.

ಕೊಳದಲ್ಲಿ ಸಗಣಿ ಕದಡಿದ ಬಗ್ಗೆ ಹೆಂಗಸಿನ ಕೊಲೆ

ಹೊಳೆನರಸೀಪುರದ ಬಳಿ ಇರುವ ಜೋಡಿ ಮಲ್ಲೇನಹಳ್ಳಿಯ ಎರಡು ಪಕ್ಷಗಳಿಗೆ ವೈಷಮ್ಯವುಂಟಾಗಿ ರೋಷದಿಂದ ಊರಿನ ಎರಡು ಸಿಹಿ ನೀರು ಕೊಳಗಳಿಗೆ ಸಗಣಿಯನ್ನು ಕದಡಲಾಯಿತೆಂದೂ, ಒಂದು ಪಕ್ಷದವರು ಕೊಳವನ್ನು ಶುದ್ಧಪಡಿಸಿ ನೀರನ್ನು ತರಲು ಯತ್ನಿಸಿದಾಗ, ಪುಟ್ಟಮ್ಮ ಎಂಬ ಹೆಂಗಸನ್ನು ಬೈದು, ಆಕೆಯನ್ನು ಕೊಡಲಿ ಮತ್ತು ದೊಣ್ಣೆಗಳಿಂದ ಹೊಡೆಯಲು ಅವಳು ಮೃತಿ ಹೊಂದಿದಳೆಂದು ಹೇಳಲಾಗಿದೆ. ಈ ಸಂಬಂಧವಾಗಿ ಗ್ರಾಮದ ಚೇರ್ಮನ್ ಕಾಳರಾಜ ಅರಸ್, ಮತ್ತು ಇತರ ೭ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. ಲಿಂಗರಾಜ ಅರಸ್ ಎಂಬುವರು ಪೊಲೀಸರಿಗೆ ಸಿಕ್ಕಿಲ್ಲ. ಹೆಂಗಸಿನ ತಲೆ ಮತ್ತು ಭುಜವನ್ನು ಕತ್ತರಿಸಿ ಹಾಕಲಾಗಿತ್ತೆಂದು ಹೇಳಲಾಗಿದೆ.

ಹಿಂದಿ ಸಾಹಿತ್ಯ ಸಮ್ಮೇಳನದ ಕಛೇರಿಗೆ ಬೀಗ ಮುದ್ರೆ

ಅಲಹಾಬಾದಿನಲ್ಲಿರುವ ಹಿಂದಿ ಸಾಹಿತ್ಯ ಸಮ್ಮೇಳನದ ಅಧಿಕಾರ ವರ್ಗದಲ್ಲಿ ವ್ಯಾಜ್ಯ ಹುಟ್ಟಿರುವುದರಿಂದ ಅಲ್ಲಿನ ನಗರ ನ್ಯಾಯಾಧೀಶರು ಸಮ್ಮೇಳನದ ಕಛೇರಿಗೆ ಬೀಗ ಮುದ್ರೆ ಹಾಕಲು ಆಜ್ಞೆ ಮಾಡಿರುತ್ತಾರೆ. ಕೆಲವು ಅತಿ ಮುಖ್ಯ ಕಾಗದ ಪತ್ರಗಳನ್ನು ಒಂದು ಪಕ್ಷದವರು ಹರಿದು ಹಾಕಿದ್ದರೆಂದು ಹೇಳಲಾಗಿದೆ.

ವಾರ ಭವಿಷ್ಯ

ಶ್ರೀ

ತಾ|| ೨೩-[illegible] ರಿಂದ [illegible]ರ ವರೆಗೆ

ಮೇಷ — ಅತ್ಯಾನಂದದಾಯಕ ಘಟನೆಗಳು, ಶರೀರ ಪ್ರಕೃತಿಗೆ ಕ್ಲೇಶ ಮಕ್ಕಳಿಗೂ ಹಾಗೆಯೇ ಉದ್ಯೋಗಾದಿಗಳಲ್ಲಿ ಅಪ್ರಿಯ ಘಟನೆ ತಾ|| [illegible] ಅಪಮಾನ, ವಾಹನ ಭಯ

ವೃಷಭ — ಆರೋಗ್ಯ ನೆಟ್ಟಗೆ ಕಾರ್ಯಸಿದ್ಧಿ ವ್ಯಾಪಾರಾದಿಗಳಲ್ಲಿ ಹಿತಕರ ಪರಿಸ್ಥಿತಿ ಭೇಟಿಗಳಿಗೆ ಒಳ್ಳೆಯ ವಾರ ತಾ|| [illegible] ಅಸ್ವಸ್ಥರ ಸಹವಾಸ ಯಶಸ್ಸು

ಮಿಥುನ — ಮನಸ್ಸಿಗೆ ಸಮಾಧಾನ ಉತ್ಸಾಹ ಆರೋಗ್ಯ ನೆಟ್ಟಗೆ [illegible] ಕಂಡರೆ [illegible] ತಾನಾಗಿಯೇ ಮಾತನಾಡಿಸಲು ಬರುವರು ತಾ|| [illegible] ಶುಭ ವಾರ್ತೆ ಸ್ತ್ರೀಯರಿಂದ ಸಹಾಯ

ಕರ್ಕ — ಜವಾಬ್ದಾರಿ ಹೆಚ್ಚು [illegible] ವರೆಗೆ ತೊಂದರೆಗಳು ದೂರವಾಗುವುವು ಆರೋಗ್ಯದ ಕಡೆ [illegible] ವಿಷಯಗಳ [illegible] ತಾ|| [illegible]

ಸಿಂಹ — [illegible] ಘಟನೆಗಳು ನೌಕರಿಯಲ್ಲಿ ಅಪಮಾನ ಗೃಹ ಸೌಖ್ಯ ಕಡಿಮೆ [illegible] ಪ್ರವಾಸದಲ್ಲಿ ವಿಘ್ನ [illegible] ಕಲಹ [illegible] ಳುವು

ಕನ್ಯಾ — ಸಜ್ಜನರ ಸಹವಾಸ [illegible] ಮುಗ್ಗಟ್ಟು [illegible] ಕ್ಲೇಶ ವ್ಯಾಪಾರಾದಿಗಳಲ್ಲಿ [illegible] ತಾ|| [illegible] ಶುಭ ವಾರ್ತೆ ಮಿತ್ರರ ಉತ್ತೇಜನ

ತುಲಾ — ಸಮಾಜ ಸೇವೆ ಆರೋಗ್ಯ ನೆಟ್ಟಗೆ ಉತ್ಸಾಹಕರವಾದ ವ್ಯಾಪಾರಾದಿಗಳಲ್ಲಿ ಹಿತಕರ ಘಟನೆ [illegible] ಪ್ರವಾಸ ತಾ|| [illegible] ಮಹತ್ವದ ದಿನ, ಧನ ಪ್ರಾಪ್ತಿ

ವೃಶ್ಚಿಕ — ಅನೇಕ ಯೋಜನೆಗಳ ಸಿದ್ಧಿ ಮಾನ ಸನ್ಮಾನ ಆರೋಗ್ಯ ನೆಟ್ಟಗೆ ಉತ್ತಮರ ಸಹವಾಸ ವ್ಯಾಪಾರಾದಿಗಳಲ್ಲಿ ಒಳ್ಳೆಯ ಸ್ಥಿತಿ ತಾ|| [illegible] ಶುಭ ವಾರ್ತೆ, ಅಸ್ವಸ್ಥರ ಸಹವಾಸ

ಧನು — ಆರೋಗ್ಯದಲ್ಲಿ ಸುಧಾರಣೆ ಆಕಸ್ಮಿಕ ಪ್ರವಾಸಾನುಕೂಲ ಧಾರ್ಮಿಕ ಕಾರ್ಯ ವ್ಯಾಪಾರಾದಿಗಳಲ್ಲಿ ಅಂಜಿಕೆ ದೂರವಾಗುವುದು ತಾ|| [illegible] ಪತ್ರ ಮತ್ತು ಭೇಟಿ ಲಭ್ಯದಿಂದ ತೃಪ್ತಿ, [illegible] ಸಹವಾಸ

ಮಕರ — ಮನಸ್ಸಿಗೆ ವಿರುದ್ಧ ಕಾರ್ಯ ಘಟನೆ ಚಿಕ್ಕ ಪುಟ್ಟ ಕಾಯಿಲೆ ಕೋರ್ಟಿಗೆ ಅಲೆಯುವ ಪ್ರಸಂಗ ನೌಕರಿಯಲ್ಲಿ ತೊಂದರೆ ಶತ್ರುಗಳಿಂದ ಕಷ್ಟ ತಾ|| [illegible] ವಿಶೇಷ ಖರ್ಚು, ಸ್ತ್ರೀಯರಿಂದ ಅಪಮಾನ

ಕುಂಭ — ಗಡಿಬಿಡಿಯ ವಾರ ವ್ಯಾಪಾರ, ಉದ್ಯೋಗ ಮತ್ತು ನೌಕರಿಗಳಲ್ಲಿ ಅಲಕ್ಷ್ಯ ಬೇಡ ವಾದ ವಿವಾದಗಳೂ ಬೇಡ ತಾ|| [illegible] ಚಿಂತೆ, ಬೇಸರ

ಮೀನ — ಆರೋಗ್ಯ ನೆಟ್ಟಗೆ ಪರೋಪಕಾರ ಕಾರ್ಯ ಅಸ್ವಸ್ಥರ ಸಹವಾಸ ತಾ|| [illegible] ಲಾಭ, ಮಹತ್ವದ ಪತ್ರ, ಅಲ್ಪ ಪ್ರವಾಸ

ಪಾಟ್ನಾ ಬ್ಯಾಂಕಿನಿಂದ ೧। ಲಕ್ಷ ರೂ. ದರೋಡೆ

ಪಾಟ್ನಾ ನಗರದ ಯುನೈಟೆಡ್ ಕಮರ್ಷಿಯಲ್ ಬ್ಯಾಂಕಿನ ಶಾಖೆಗೆ ಮೊನ್ನೆ ಮಧ್ಯಾಹ್ನ ೧೨ ಜನರು ನುಗ್ಗಿ ರಿವಾಲ್ವರುಗಳನ್ನು ತೋರಿಸುತ್ತ ೧ ಲಕ್ಷ ೩೦ ಸಾವಿರ ರೂಗಳನ್ನು ಅಪಹರಿಸಿಕೊಂಡು ಹೋದರೆಂದೂ, ಅವರ ಪೈಕಿ ಒಬ್ಬನನ್ನು ಹಿಡಿಯಲಾಯಿತೆಂದೂ ವರದಿಯಾಗಿದೆ ಪೋಲೀಸರು ದರೋಡೆಕೋರರ ಪೈಕಿ ಇಬ್ಬರನ್ನು ಒಂದು ಮನೆಯ ಮಹಡಿ ಮೇಲೆ ಬಂಧಿಸಿ, ಅವರ ಬಳಿ ಇದ್ದ ೧ ಲಕ್ಷ ರೂಗಳನ್ನೂ, ಎರಡು ರಿವಾಲ್ವರುಗಳನ್ನೂ ವಶಪಡಿಸಿಕೊಂಡಿರುತ್ತಾರೆ ೩ ಮೈಲಿ ದೂರದ ಹಳ್ಳಿಯಲ್ಲಿ ಮತ್ತೊಬ್ಬನು ಸಿಕ್ಕಿರುತ್ತಾನೆ ಅವರು ಹತ್ತಿ ಹೋಗಿದ್ದ ಟ್ಯಾಕ್ಸಿಯನ್ನು ವಶಪಡಿಸಿಕೊಂಡು, ಡ್ರೈವರನನ್ನು ದಸ್ತಗಿರಿ ಮಾಡಲಾಗಿದೆ

ಇಟಲಿಯಲ್ಲಿ ೧೦ ಲಕ್ಷ ಸರ್ಕಾರಿ ನೌಕರರ ಮುಷ್ಕರ

ಇಟಲಿ ಸರ್ಕಾರದವರು ಕೊಡುತ್ತಿರುವ ಸಂಬಳದ ಬಗ್ಗೆ ಅತೃಪ್ತಿಗೊಂಡ ಸುಮಾರು ಹತ್ತು ಲಕ್ಷ ಮಂದಿ ಸರ್ಕಾರಿ ನೌಕರರು ಕಳೆದ ಗುರುವಾರ ಒಂದು ದಿನದ ಮುಷ್ಕರವನ್ನು ಕೈಗೊಂಡಿದ್ದರೆಂದು ವರದಿಯಾಗಿದೆ

ಬೊಂಬಾಯಿಯ ಮತ್ತೊಂದು ಬ್ಯಾಂಕ್ ದರೋಡೆಯತ್ನ

ಬೊಂಬಾಯಿ ನಗರದ ಉತ್ತರ ಭಾಗದಲ್ಲಿರುವ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗೆ ಮೊನ್ನೆ ಬೆಳಗ್ಗೆ ಇಬ್ಬರು ಹೋಗಿ ನಕಲಿ ರಿವಾಲ್ವರುಗಳನ್ನು ತೋರಿಸಿ, ಗುಮಾಸ್ತನನ್ನು ಬೆದರಿಸಿ, ಹಣವನ್ನು ದೋಚಲು ಪ್ರಯತ್ನಪಟ್ಟಾಗ, ಬ್ಯಾಂಕು ಕಾವಲುಗಾರನು ಹೊರಗಿನಿಂದ ಕೋಣೆಯ ಬಾಗಿಲನ್ನು ಕೂಡಲೇ ಹಾಕಿ ಕೂಗಿಕೊಳ್ಳಲಾಗಿ ಜನರು ಬಂದು ಅವರನ್ನು ಹಿಡಿದರೆಂದೂ, ಗುಮಾಸ್ತನಿಗೆ ಚಾಕುವಿನಿಂದ ಗಾಯಗಳಾಗಿವೆಯೆಂದೂ ವರದಿಯಾಗಿದೆ

ಇಂಡೋ ಚೀಣದ ಮೇಲೆ ಆಕ್ರಮಣಕ್ಕೆ ಚೀಣಾದ ಸಿದ್ಧತೆ

ಇಂಡೋ ಚೀಣದ ಮೇಲೆ ಆಕ್ರಮಣವನ್ನು ನಡೆಸಲು ಚೀಣದ ಎರಡು ಲಕ್ಷ ಸೈನಿಕರು ಸಿದ್ಧರಾಗಿರುವರೆಂದು ಇಂಡೋ ಚೀಣದ ರಾಯಭಾರಿಯೊಬ್ಬರು ಹೇಳಿರುತ್ತಾರೆ

ಡಾನ್ ನದಿ ಪಾತ್ರದ ಬದಲಾವಣೆ

ಸ್ಟಾಲಿನ್‌ಗ್ರಾಡಿನಲ್ಲಿ ಹೊಸದಾದ ವಿದ್ಯುದುತ್ಪಾದನಾ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ ರಷ್ಯದ [illegible] ನದಿ ಪಾತ್ರವನ್ನು ಕಳೆದ ಬುಧವಾರ ಬದಲಾಯಿಸಲಾಯಿತೆಂದು ವರದಿಯಾಗಿದೆ ಕಳೆದ ಮಹಾ ಯುದ್ಧದ ಸಮಯದಲ್ಲಿ ಈ ನದಿ ಬಳಿ ಮಿತ್ರ ಸೈನಿಕರು ರಕ್ಷಣಾ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದ್ದರು

ಫ್ರೆಂಚ್ ಸರ್ಕಾರಕ್ಕೆ ಭಾರಿ ಸೋಲು

ಜೀವನದ ವೆಚ್ಚವನ್ನು ಇಳಿಸುವುದರ ಜೊತೆಗೆ ಸಂಬಳಗಳನ್ನೂ ಕಡಿಮೆ ಮಾಡಬೇಕೆಂದು ಫ್ರಾನ್ಸಿನ ರಾಷ್ಟ್ರೀಯ ಸಭೆಯಲ್ಲಿ ಕಳೆದ ಗುರುವಾರ ಸರ್ಕಾರದವರು ತಂದ ಮಸೂದೆಯು [illegible]೧೦ ಮತ್ತು ೨೦೩ ಓಟುಗಳಿಂದ ಬಿದ್ದುಹೋಗಿ ಸರ್ಕಾರಕ್ಕೆ ಭಾರಿ ಸೋಲುಂಟಾಯಿತು

ಈಜಿಪ್ಟಿಗೆ ರಷ್ಯದ ಎಚ್ಚರಿಕೆ

ಮಧ್ಯ ಪ್ರಾಚ್ಯದ ಸಂಬಂಧವಾಗಿ ಪಶ್ಚಿಮ ರಾಷ್ಟ್ರಗಳೊಡನೆ ಈಜಿಪ್ಟು ಕರಾರನ್ನು ಮಾಡಿಕೊಳ್ಳಕೂಡದೆಂದು ರಷ್ಯವು ಎಚ್ಚರಿಕೆಯನ್ನಿತ್ತಿರುವುದು

ಆಂಧ್ರ ಪ್ರಾಂತ ರಚನೆ ಬಗ್ಗೆ ಕೇಂದ್ರ ಸರ್ಕಾರದ ಘೋಷಣೆ

ಆಂಧ್ರ ಪ್ರಾಂತದ ರಚನೆಯ ಬಗ್ಗೆ ಕೇಂದ್ರ ಸರ್ಕಾರದವರು ತಮ್ಮ ನೀತಿಯನ್ನು ಕುರಿತು ಒಂದು ಘೋಷಣೆಯನ್ನು ಈ ತಿಂಗಳ ಅಂತ್ಯದಲ್ಲಿ ಹೊರಡಿಸಲಿದ್ದಾರೆಂದೂ ಭಾಷಾವಾರು ಪ್ರಾಂತ್ಯ ವಿಚಾರಣಾ ಸಮಿತಿಯವರು ಆಂಧ್ರ ಪ್ರಾಂತ್ಯದಲ್ಲಿ ಮದರಾಸು ನಗರವು ಸೇರಬೇಕಾದುದಿಲ್ಲವೆಂದು ತಿಳಿಸಿರುವುದಾಗಿಯೂ ಗೊತ್ತಾಗಿದೆ

ಪಂದ್ಯದ ಕಾಲದಲ್ಲಿ ನೇಪಾಳ ಮಂತ್ರಿಗಳ ಮುತ್ತಿಗೆ

ನೇಪಾಳದ ರಾಜಧಾನಿ ಖಟ್ಮಂಡುವಿನಲ್ಲಿ ಕಳೆದ ಗುರುವಾರ ನಡೆದ ಫುಟ್‌ಬಾಲ್ ಪಂದ್ಯಗಳಲ್ಲಿ ಭಾಗವಹಿಸಿದ್ದ ಒಂದು ಟೀಮು ಅಕ್ರಮವಾಟವಾಡಿತೆಂದು [illegible] ಮತ್ತೊಂದು "ಕಮ್ಯೂನಿಸ್ಟರ ಪ್ರೇರಣೆ"ಯ ಪ್ರಕಾರ ಗಲಾಟೆ ಮಾಡಲಾಗಿ ಪೋಲೀಸರು ಲಾಠಿ ಪ್ರಯೋಗವನ್ನು ಮಾಡಿದರು ಮಂತ್ರಿಯೊಬ್ಬರ ಕಾರನ್ನು ಜನರು ಮುತ್ತಿದರೆಂದೂ, ಗೃಹ ಮಂತ್ರಿ ಕೊಯಿರಾಲಾರವರ ಮೇಲೆ ಕಲ್ಲನ್ನು ಬೀರಲಾಯಿತೆಂದೂ ಹೇಳಲಾಗಿದೆ ಆದರೆ ಮಂತ್ರಿಗಳಿಗೆ ಪೆಟ್ಟು ತಗುಲಲಿಲ್ಲ

ಚಿತ್ರಕಾರ ಎಂ ಎಚ್ ರಾಮುರವರಿಗೆ ಅಭಿನಂದನೆ

ಬೆಂಗಳೂರಿನಲ್ಲಿ ಅ|| ಭಾ|| ಕಾಂಗ್ರೆಸ್ ಸಮಿತಿ ಅಧಿವೇಶನವು ನಡೆದಾಗ ಸಭಾ ಮಂಟಪದಲ್ಲಿ ರಾಜಧಾನಿಯ ಕಲಾವಿದ ಶ್ರೀ ಎಂ ಎಚ್ ರಾಮುರವರು ಬರೆದ ಗಾಂಧಿಜಿ, ನೆಹರು, ಪಟೇಲರವರ ಚಿತ್ರಗಳು ಪ್ರದರ್ಶಿಸಲ್ಪಟ್ಟು, ಭಾರತದ ನಾನಾ ಮುಖಂಡರಿಂದ ಪ್ರಶಂಸಿಸಲ್ಪಟ್ಟುವೆಂದೂ ಸೂಚಿಸಿ ಮೈಸೂರು ಪ್ರಾಂತ ಕಾಂಗ್ರೆಸ್ ಅಧ್ಯಕ್ಷರು ಕಲಾವಿದರಿಗೆ ಪತ್ರವನ್ನು ಬರೆದಿರುತ್ತಾರೆ

ಫೌಂಟೆನ್ ಪೆನ್ ಸಿಕ್ಕಿದೆ

ರಾಜಧಾನಿಯ ಡಿ ಬನುಮಯ್ಯನವರ ಹೈಸ್ಕೂಲು ಬಳಿ ಒಂದು ಫೌಂಟನ್ ಪೆನ್ನು ಸಿಕ್ಕಿರುತ್ತದೆ ಮಾಲೀಕರು ಸರಿಯಾದ ರುಜುವಾತು ಕೊಟ್ಟು 'ಸಾಧ್ವಿ' ಪತ್ರಿಕಾ ಕಛೇರಿಯಲ್ಲಿ ಪಡೆಯಬಹುದು

○ ಪಾಕಿಸ್ತಾನವು ಪರ್ಷಿಯದಿಂದ [illegible] ಸಾವಿರ ಟನ್ ಎಣ್ಣೆಯನ್ನು ಕೊಳ್ಳಲು ಸಂಧಾನವನ್ನು ನಡೆಸುತ್ತಿರುವುದಾಗಿ ತಿಳಿದುಬಂದಿದೆ

ಮೈಸೂರ ಕ್ರೇಪ್, ಧರ್ಮಾವರ ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ

[illegible] ಹೋಟೇಲು ರಸ್ತೆ, ಮೈಸೂರು

'NALINS' NEW FURNITURE SETTINGS ON HIRE APPLY SHARP

NALINS,

Service Furnishers V V Market Square Mysore

* ಪ್ರಭಾ *

21-9-51 ರಿಂದ

ಅಮೋಘವಾದ 3 ನೆಯ ವಾರ

ಕಾಲಿ ಘಟ

(ಹಿಂದಿ)

ಪಾತ್ರ ಕಿಶೋರ್ ಸಾಹು, ಬಿನಾ ರಾಯ್, ಆಶಾ ಮಾಥುರ್

ಕಥೆ, ನಿರ್ದೇಶನ ಮತ್ತು ತಯಾರಿಕೆ

ಕಿಶೋರ್ ಸಾಹು



Edited printed and published by A R Nagarajan, at Sadhvi Press D Subbiah Road, Mysore

ರೀ ನಂ 792 ॥ ಸಂಚೀ ಜೂಲಂ ॥ ಇಂದಿನ ಪತ್ರಿಕೆ 3 ಕಾಸು.

ಸಾಧ್ವಿ

ಸಂಪುಟ ೧೦] ಸೋಮವಾರ ೨೪-೯-೫೧ [ಸಂಚಿಕೆ ೫೩

ಬ್ಯಾಂಕ್ ನೌಕರರ ಮುಷ್ಕರವೂ ಸಧ್ಯಕ್ಕಿಲ್ಲ

ಬ್ಯಾಂಕ್ ನೌಕರರ ಮುಷ್ಕರ ಸಧ್ಯಕ್ಕಿಲ್ಲ

ತಮ್ಮ ಸಂಬಳ ಸಾರಿಗೆ ಮತ್ತು ಭತ್ಯಗಳನ್ನು ಹೆಚ್ಚಿಸಬೇಕೆಂದೂ, ಇಲ್ಲವಾದರೆ ಆಕ್ಟೋಬರ್ ೧ರಿಂದ ಮುಷ್ಕರ ಹೂಡುವುದಾಗಿಯೂ ಕೆಲವು ದಿನಗಳ ಹಿಂದೆ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಸಭೆಯಲ್ಲಿ ತೀರ್ಮಾನಿಸಿದ್ದಂತೆ ಮುಷ್ಕರವನ್ನು ಸಧ್ಯಕ್ಕೆ ಹೂಡಬಾರದೆಂದು ನೆನ್ನೆ ಜಯಪುರದಲ್ಲಿ ಸೇರಿದ್ದ ವಿಶೇಷ ಸಭೆಯಲ್ಲಿ ತೀರ್ಮಾನಿಸಲಾಯಿತು. ಕೇಂದ್ರ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಮಾಡಲು ಒಂದು ಸಮಿತಿಯನ್ನು ರಚಿಸಲಾಗಿದೆ ಈ ಸಮಿತಿಯ ಸಲಹೆಗಳಿಗೆ ಮನ್ನಣೆ ಕೊಡದಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಲು ಸಹಾ ಅದಕ್ಕೆ ಅಧಿಕಾರ ಕೊಡಲಾಗಿದೆ

ಇಂದು ಕೊರಿಯಾ ಸೀಸ್ ಫೈರ್ ಸಂಧಾನ ಮತ್ತೆ ಆರಂಭ

ಕಳೆದ ಒಂದು ತಿಂಗಳಿನಿಂದ ನಿಂತುಹೋಗಿದ್ದ ಕೇಸಾಂಗ್ ಸಂಧಾನವನ್ನು ಪುನರಾರಂಭಿಸಬೇಕೆಂದು ಕೊರಿಯಾದ ಕಮ್ಯೂನಿಸ್ಟರು ಜ॥ ರಿಜ್‌ವೇರವರಿಗೆ ಮಾಡಿದ್ದ ಸೂಚನೆಯನ್ನು ಅಂಗೀಕರಿಸಿ ಈ ದಿನ ತಮ್ಮ ಪರವಾಗಿ ಪ್ರತಿನಿಧಿಗಳನ್ನು ಕೇಸಾಂಗಿಗೆ ಕಳುಹಿಸುವುದಾಗಿ ಉತ್ತರವಿತ್ತಿರುವರು ಇಂದು ಕೊರಿಯಾ ಸೀಸ್ ಫೈರ್ ಸಂಧಾನವು ಮತ್ತೆ ಆರಂಭವಾಗಲಿದೆ

ಕಲ್ಕತ್ತದಲ್ಲಿ ಅಕ್ರಮ ಟೆಲಿಫೋನುಗಳ ವಶ

ಕಳೆದ ಶುಕ್ರವಾರ ಕಲ್ಕತ್ತದ ಪೋಲೀಸರು ಅಲ್ಲಿನ ಆರಳೀ ರಸ್ತೆಯಲ್ಲಿನ ಸಟ್ಟಾ ವ್ಯಾಪಾರ ಕೇಂದ್ರದಲ್ಲಿ ತೀವ್ರವಾಗಿ ಶೋಧನೆ ನಡೆಸಿ ಕೆಲವರು ಅಕ್ರಮವಾಗಿ ಇಟ್ಟುಕೊಂಡಿದ್ದ ಅನೇಕ ಟೆಲಿಫೋನ್ ಉಪಕರಣಗಳನ್ನು ವಶಪಡಿಸಿಕೊಂಡರು

ಗ್ರ್ಯಾಜುಯೇಟ್ಸ್ ಕೋಆಪರೇಟಿವ್ ಸೊಸೈಟಿಯ ಹೊಸ ಆಡಳಿತ ವರ್ಗ

ರಾಜಧಾನಿಯ ಗ್ರ್ಯಾಜುಯೇಟ್ಸ್ ಕೋಆಪರೇಟಿವ್ ಸೊಸೈಟಿಯ ವಾರ್ಷಿಕ ಸಭೆಯು ನೆನ್ನೆ ನಡೆದು ಶ್ರೀಗಳಾದ ಎಂ ನಾರಾಯಣಯ್ಯಂಗಾರ್ಯರು ಅಧ್ಯಕ್ಷರಾಗಿಯೂ, ಎಂ ಎ ದೊರೆಸ್ವಾಮಿ ಐಯ್ಯಂಗಾರ್ಯರು ಉಪಾಧ್ಯಕ್ಷರಾಗಿಯೂ, ಟಿ ಎಸ್ ರಾಮರಾವ್ ಮತ್ತು ಭೀಮಸೇನರಾವ್‌ರವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು

ಅರ್ಧದಷ್ಟು ಮಾತ್ರ ರಾಗಿ ಬೆಳೆ

ಬರುವ ಸಾಲಿನಲ್ಲಿ ಸಂಸ್ಥಾನದಲ್ಲಿ ಅರ್ಧದಷ್ಟು ಮಾತ್ರ ರಾಗಿ ಬೆಳೆಯಾಗುವುದೆಂದೂ, ಮಳೆಯಿಲ್ಲದೆ ರಾಗಿ ಪೈರು ಉರುಳಿಹೋಗಿರುವುದಾಗಿಯೂ ಸಂಸ್ಥಾನದ ಆಹಾರೋತ್ಪತ್ತಿ ಕಮೀಷನರರು ತಿಳಿಸುತ್ತಾರೆ

ಎಸ್. ಚನ್ನಯ್ಯನವರ ಆಗಮನ

ವಿದೇಶ ಪ್ರವಾಸ ಕೈಗೊಂಡಿದ್ದ ಶ್ರೀ ಎಸ್ ಚನ್ನಯ್ಯನವರು ಈ ದಿನ ಮಧ್ಯಾಹ್ನ ೧೨ ೪೫ ಗಂಟೆಯ ಮೇಲ್ ರೈಲಿನಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ಆಗಮಿಸಿದರು ಶ್ರೀಯುತರನ್ನು ನಗರದ ಕಾಂಗ್ರೆಸ್ ಮುಖಂಡರುಗಳೂ ಮತ್ತು ಗಣ್ಯ ಮಹನೀಯರುಗಳೂ ಸ್ಟೇಷನ್ನಿನಲ್ಲಿ ಸ್ವಾಗತಿಸಿದರು

ಫಾತಿಮಾ ಜಿನ್ನಾ ಭಾರತಕ್ಕೆ ಬಂದು ನೆಲೆಸುವರೇ ?

ದಿವಂಗತ ಮಹಮದಾಲಿ ಜಿನ್ನಾರವರ ಸಹೋದರಿ ಮಿಸ್ ಫಾತಿಮಾ ಜಿನ್ನಾರವರು ಪಾಕಿಸ್ತಾನದ ಗವರ್ನರ್ ಜನರಲ್ಲರಿಗೆ ಒಂದು ಪತ್ರವನ್ನು ಬರೆದು ಪಾಕಿಸ್ತಾನ ಸರ್ಕಾರದವರು ತನ್ನ ಮೇಲೆ ಪಕ್ಷಪಾತದ ನಿರ್ಬಂಧಗಳನ್ನು ವಿಧಿಸಿ ಬಹಳ ಕಿರುಕುಳವನ್ನು ಕೊಡುತ್ತಿರುವರೆಂದೂ, ಆದುದರಿಂದ ತಾವು ಪಾಕಿಸ್ತಾನವನ್ನು ಬಿಟ್ಟು ಹೊರಡಲು ನಿರ್ಧರಿಸಿರುವುದಾಗಿಯೂ ತಿಳಿಸಿರುವರೆಂದು ಗೊತ್ತಾಗಿದೆ ಅಲ್ಲಿಂದ ಇವರು ಬೊಂಬಾಯಿಗೆ ಬಂದು ನೆಲೆಸಲು ನಿರ್ಧರಿಸಿರುವುದಾಗಿಯೂ ಹೇಳಲಾಗಿದೆ

ಹಿಂದೂ ಕೋಡ್ ಬೆಂಬಲಿಗರಿಗೇ ಮಹಿಳೆಯರ ಓಟು

ಕಳೆದ ಗುರುವಾರ ದೆಹಲಿಯಲ್ಲಿ ಮಹಿಳೆಯರ ಸಾರ್ವಜನಿಕ ಸಭೆಯು ಸೇರಿದ್ದಿತು ಹಿಂದೂ ಕೋಡ್ ಮಸೂದೆಯಂತಹ ಪ್ರಗತಿಯುತ ಮಸೂದೆಗಳಿಗೆ ಬೆಂಬಲ ಕೊಡುವ ಉಮೇದುವಾರರಿಗೇ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆಯರು ಓಟು ಕೊಡಬೇಕೆಂಬ ನಿರ್ಣಯವು ಸಭೆಯಲ್ಲಿ ಅಂಗೀಕೃತವಾಯಿತು

ಹೊಳೇನರಸೀಪುರದಲ್ಲಿ ಹೊಡೆದಾಟ

ಹೊಳೇನರಸೀಪುರದ ದೊಡ್ಡ ಗರಡಿ ಕಡೆಗೆ ತಿರುಗುವ ರಸ್ತೆಯಲ್ಲಿ ಕಳೆದ ಶುಕ್ರವಾರ ಮಧ್ಯಾಹ್ನ ಎರಡು ಪಕ್ಷಗಳಿಗೆ ಏಕಾಏಕಿ ದೊಣ್ಣೆ, ಕಠಾರಿ ಮತ್ತು ಕತ್ತಿಗಳ ಹೊಡೆದಾಟವು ನಡೆದು ರಕ್ತವು ಹರಿಯಿತೆಂದೂ, ಈ ದೃಶ್ಯವಾದ ತಕ್ಷಣವೇ ಅಂಗಡಿಗಳ ಬಾಗಿಲುಗಳನ್ನು ಹಾಕಲಾಯಿತೆಂದೂ, ಘರ್ಷಣೆಗೆ ಕಾರಣವು ತಿಳಿದುಬಂದಿಲ್ಲವೆಂದೂ ಹೇಳಲಾಗಿದೆ ಪೋಲೀಸರು ತಕ್ಕ ಎಚ್ಚರಿಕೆ ಕ್ರಮಗಳನ್ನು ಕೈಗೊಂಡಿರುವುದಾಗಿ ಗೊತ್ತಾಗಿದೆ

ಆಂಗ್ಲೋ ಇರಾನಿಯನ್ ಎಣ್ಣೆ ಸಂಸ್ಥೆ ವಾಹನಗಳ ವಶ

ಪರ್ಷಿಯದ ಆಂಗ್ಲೋ-ಇರಾನಿಯನ್ ಎಣ್ಣೆ ಕಂಪೆನಿಗೆ ಸೇರಿದ ವಿವಿಧ ತರಹದ ೬೫೦ ವಾಹನಗಳನ್ನು ನೆನ್ನೆ ಪರ್ಷಿಯ ಸರ್ಕಾರವು ವಶಪಡಿಸಿಕೊಂಡಿತೆಂದು ವರದಿಯಾಗಿದೆ

ಭಾರತಕ್ಕೆ ಅಮೆರಿಕಾ ಗೋಧಿ ಸರಬರಾಜು ನಿಲ್ಲುವುದೇ ?

ಜಪಾನ್ ಶಾಂತಿ ಕೌಲಿಗೆ ಭಾರತ ಸಹಿ ಹಾಕದಿರುವ ಬಗ್ಗೆ ಅಮೆರಿಕದ ಕಾಂಗ್ರೆಸ್ಸಿನ ಹಲವು ಸದಸ್ಯರು ಅತೃಪ್ತಿಗೊಂಡು ಅಮೆರಿಕವು ಕೂಡಲೇ ಭಾರತಕ್ಕೆ ಗೋಧಿ ಸರಬರಾಜನ್ನು ನಿಲ್ಲಿಸಬೇಕೆಂದು ಅಲ್ಲಿನ ಸಂಸ್ಥಾನ ಇಲಾಖೆಯನ್ನು ಒತ್ತಾಯಪಡಿಸುತ್ತಿರುವರೆಂದು ಹೇಳಲಾಗಿದೆ ಈ ವಿಷಯವನ್ನು ಅಲ್ಲಿನ ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ, ಸಧ್ಯದಲ್ಲೇ ಈ ಬಗ್ಗೆ ಒಂದು ಘೋಷಣೆಯು ಹೊರಬೀಳಲಿದೆಯೆಂದೂ ಗೊತ್ತಾಗಿದೆ

ಬ್ಯಾಂಕ್ ಪ್ರಕರಣದಲ್ಲಿ ಮತ್ತೆ ೨॥ ಲಕ್ಷರೂ. ಪತ್ತೆ ?

ಬೊಂಬಾಯಿ ನಗರದ ಒಬ್ಬನು ಮೊನ್ನೆ ಅಲ್ಲಿನ ಸಿ ಐ ಡಿ ಸೂಪರಿಂಟೆಂಡೆಂಟರ ಕಛೇರಿ ಬಳಿ ಹೋಗಿ ತಾನು ಅವರನ್ನು ಕಂಡು ಅವರಿಗೆ ೨ ಲಕ್ಷದ ೪೫ ಸಹಸ್ರ ರೂ ಗಳನ್ನು ಕೊಡಬೇಕೆಂದು ಬಾಗಿಲಿನ ಬಳಿ ಕಾವಲಿದ್ದ ಕಾನ್‌ಸ್ಟೇಬಲ್ಲನಿಗೆ ತಿಳಿಸಿದನು ಅವನು ಒಳಗೆ ಹೋಗಿ ಅಧಿಕಾರಿಗಳಿಗೆ ಈ ಸಂಗತಿಯನ್ನು ತಿಳಿಸಿ ಮತ್ತೆ ಬಂದು ನೋಡುವಲ್ಲಿ ಆಗಂತುಕನು ಅಲ್ಲಿಂದ ಪರಾರಿಯಾಗಿದ್ದನು, ಆದರೆ ಅವನು ತಂದಿದ್ದ ನೋಟುಗಳನ್ನು ಆ ಸ್ಥಳದಲ್ಲೇ ಬಿಟ್ಟು ಹೋಗಿದ್ದನೆಂದೂ ವರದಿಯಾಗಿದೆ ಈ ನೋಟುಗಳು ಇತ್ತೀಚೆಗೆ ನಡೆದ ಬ್ಯಾಂಕ್ ದರೋಡೆ ಸಂಬಂಧದಲ್ಲಿ ಕಳುವಾಗಿದ್ದುವೆಂದು ಹೇಳಲಾಗಿದೆ

ಹೋಟೇಲು ಖಜಾಂಚಿಗೆ ಚೂರಿ ಇರಿತ

ಬೊಂಬಾಯಿನ ಏರ್ ಲೈನ್ಸ್ ಹೋಟೇಲಿಗೆ ಮೊನ್ನೆ ಬೆಳಗಿನ ಜಾವ ಮೂರು ಜನ ಪಠಾಣರು ನುಗ್ಗಿ ಕಬ್ಬಿಣದ ಪೆಟ್ಟಿಗೆ ಒಡೆಯಲು ತೊಡಗಿದ್ದರೆಂದೂ, ಅಷ್ಟರಲ್ಲೇ ಎಚ್ಚರಗೊಂಡ ಖಜಾಂಚಿ ಅವರನ್ನು ತಡೆಯಲು ಹೋದನೆಂದೂ, ಒಬ್ಬ ಪಠಾಣನು ಅವರನ್ನು ಇರಿದು ಗಾಯಗೊಳಿಸಲು ಅವರು ಕೂಗಿಕೊಳ್ಳಲಾಗಿ ದರೋಡೆಕೋರರು ಓಡಿ ಹೋದರೆಂದೂ ಗೊತ್ತಾಗಿದೆ ಖಜಾಂಚಿಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ

ಮೂರು ತಲೆ ಕರುವಿನ ಜನನ

ಸೂರತ್ತಿನ ಬಳಿ ಆಲೂರ ಎಂಬ ಹಳ್ಳಿಯಲ್ಲಿ ಈಗ್ಗೆ ಒಂದು ತಿಂಗಳ ಕೆಳಗೆ ಒಂದು ಹಸುವು ಮೂರು ತಲೆ ಮತ್ತು ಮೂರು ಕಣ್ಣುಗಳಿಂದ ಕೂಡಿದ ಕರುವನ್ನು ಹಾಕಿರುವುದೆಂದೂ, ಕರುವು ಇನ್ನೂ ಜೀವಂತವಾಗಿರುವುದೆಂದೂ ವರದಿಯಾಗಿದೆ ಅದು ತನ್ನ ಮಧ್ಯದ ತಲೆಯಲ್ಲಿರುವ ಬಾಯಿನ ಮೂಲಕ ಆಹಾರವನ್ನು ಸೇವಿಸುವುದೆಂದು ಹೇಳಲಾಗಿದೆ ಈ ಸೃಷ್ಟಿ ವೈಚಿತ್ರ್ಯವನ್ನು ನೋಡಲು ಸ್ಥಳ ಪರಸ್ಥಳಗಳಿಂದ ಸಾವಿರಾರು ಮಂದಿ ಬಂದುಹೋಗುತ್ತಿರುವರೆಂದು ಹೇಳಲಾಗಿದೆ

ಬ್ರಿಟನ್ನಿನ ರಾಜರಿಗೆ ಶಸ್ತ್ರಚಿಕಿತ್ಸೆ ನಡೆಯಿತು

ಬ್ರಿಟನ್ನಿನ ಅರಸರಾದ ಆರನೇ ಜಾರ್ಜರಿಗೆ ನೆನ್ನೆ ದಿನ ಶ್ವಾಸಕೋಶದ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ ಜರುಗಿತೆಂದೂ, ಅವರ ಶ್ವಾಸಕೋಶದ ರಚನೆಯಲ್ಲಿ ಆಗಿದ್ದ ಬದಲಾವಣೆಯನ್ನು ಸರಿಪಡಿಸಲಾಗಿದೆಯೆಂದೂ, ಸಧ್ಯದಲ್ಲಿ ಅವರ ದೇಹಸ್ಥಿತಿಯ ಬಗ್ಗೆ ಕಳವಳಕ್ಕವಕಾಶವಿಲ್ಲವೆಂದೂ ಶಸ್ತ್ರ ಚಿಕಿತ್ಸೆಯಲ್ಲಿ ಭಾಗವಹಿಸಿದ್ದ ಎಂಟು ಮಂದಿ ವೈದ್ಯರು ಪ್ರಕಟನೆ ಹೊರಡಿಸಿರುವರು

ಪಾಕಿಸ್ತಾನದ ವೈಮಾನಿಕನ ಬಂಧನ

ಪಾಕಿಸ್ತಾನದ ಒಬ್ಬ ವೈಮಾನಿಕನು ಮೊನ್ನೆ ಅಕ್ರಮವಾಗಿ ಒಂದು ಮಾತ್ ವಿಮಾನವನ್ನು ನಡೆಸಿಕೊಂಡು ಭಾರತದ ಗಡಿಯೊಳಗೆ ಐವತ್ತು ಮೈಲಿ ದೂರ ಬಂದು ಅಹಮದಾಬಾದಿನ ಬಳಿ ಇಳಿದನೆಂದೂ, ಅಲ್ಲಿನ ಪೋಲೀಸರು ಅವನನ್ನು ಬಂಧಿಸಿದರೆಂದೂ ವರದಿಯಾಗಿದೆ

ಅಂಚೆಕಛೇರಿಯಿಂದ ಹಣದ ಚೀಲದ ಅಪಹಾರ ಯತ್ನ

ಭಾರತ ಸೈನ್ಯದ ವೈದ್ಯ ಶಾಖೆಯಿಂದ ವಿಸರ್ಜಿಸಲ್ಪಟ್ಟ ರಾಮದಾಸ್ ಮತ್ತು ಪೆರುಮಾಳ್ ಎಂಬುವರು ಕಳೆದ ಶನಿವಾರ ಹೈದರಾಬಾದಿನ ಒಂದು ಅಂಚೆ ಕಛೇರಿಗೆ ಹೋಗಿ, ಸ್ಟ್ಯಾಂಪು ಕೊಳ್ಳುವವರಂತೆ ನಟಿಸಿ, ಅವರ ಪೈಕಿ ಒಬ್ಬನು ಅಲ್ಲಿನ ಗುಮಾಸ್ತನೊಡನೆ ಮಾತನಾಡುತ್ತಾ ನಿಂತಿರುವಲ್ಲಿ ಮತ್ತೊಬ್ಬನು ಅಲ್ಲಿನ ಕಿಟಕಿಯಲ್ಲಿಟ್ಟಿದ್ದ ಹಣದ ಚೀಲವನ್ನು ಅಪಹರಿಸಿಕೊಂಡು ರಿಕ್ಷಾದಲ್ಲಿ ಕುಳಿತು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದನೆಂದೂ, ಅಷ್ಟರಲ್ಲೇ ಪೋಲೀಸರು ಬಂದು ಅವರಿಬ್ಬರನ್ನೂ ಬಂಧಿಸಿದರೆಂದೂ ವರದಿಯಾಗಿದೆ ಆ ಚೀಲದಲ್ಲಿ ೨೫ ಸಾವಿರ ರೂ ಗಳಿದ್ದುವೆಂದು ಹೇಳಲಾಗಿದೆ

ಗಣಪತಿ ಉತ್ಸವ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯ ದೇವಾಂಗ ಸಂಘದ ಕಾಸ್ಮೆಲಿನಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ ಈ ರಾತ್ರಿ ೮ ಗಂಟೆಗೆ ವಿ॥ ಪುಟ್ಟಸ್ವಾಮಯ್ಯನವರು ಮತ್ತು ಪಾರ್ಟಿಯವರಿಂದ ನಾಗಸ್ವರ ನಡೆಯಲೇರ್ಪಾಡಾಗಿದೆ ನಾಳೆ ಸಂಜೆ ೭ ಗಂಟೆಗೆ ಮಹಾ ಗಣಪತಿ ಉತ್ಸವವು ಪ್ರಮುಖ ರಸ್ತೆಗಳ ಮೂಲಕ ಕೃಷ್ಣಣ್ಣನವರ ಕೊಳಕ್ಕೆ ಹೋಗಿ ಅಲ್ಲಿ ಗಣಪತಿಯನ್ನು ಬಿಡಲಾಗುವುದು.

ಪೂರ್ವ ಪಾಕಿಸ್ತಾನದಲ್ಲಿ ಆರ್ಡಿನೆನ್ಸ್ ಜಾರಿ

ಪೂರ್ವ ಪಾಕಿಸ್ತಾನದ ಸರ್ಕಾರವು ವಿಶೇಷಾಜ್ಞೆಯೊಂದನ್ನು ಹೊರಡಿಸಿ ಸಾರ್ವಜನಿಕ ಸಮೃದ್ಧಿ ಮತ್ತು ಶಿಸ್ತು ಕಾಪಾಡುವ ಸಲುವಾಗಿ ಅಕ್ರಮವಾಗಿ ಶಸ್ತ್ರಾಸ್ತ್ರಗಳ ಹೊಂದುವಿಕೆ, ಮತ್ತು ಉಪಯೋಗ, ಕೋಮುವಾರು ಸೌಹಾರ್ದಕ್ಕೆ ಧಕ್ಕೆ ತರುವ ಕಾರ್ಯಚಟುವಟಿಕೆ ಮತ್ತು ಅವಶ್ಯಕ ವಸ್ತುಗಳ ಸರಬರಾಜಿಗೆ ಅಡ್ಡಿ ಇವೇ ಮುಂತಾದುವುಗಳನ್ನು ಪ್ರತಿಬಂಧಿಸಿರುತ್ತಾರೆ. ಪತ್ರಿಕೆಗಳ ಮೇಲೆ ಸೆನ್ಸಾರ್‌ಶಿಪ್ ಹಾಕಲು ಅವಕಾಶವನ್ನು ಕಲ್ಪಿಸಲಾಗಿದೆ. ಪೋಲೀಸು ದಫೇದಾರನ ದರ್ಜೆಯವನೂ ಮೇಲಿನ ಅಧಿಕಾರಿಗಳು ಅಪರಾಧ ಮಾಡುವವರನ್ನು ತಡೆಗಟ್ಟಲು ಎಲ್ಲ ಕ್ರಮಗಳನ್ನೂ ಜೀವವನ್ನು ತೆಗೆಯುವುದೂ ಸಹ ಕೈಗೊಳ್ಳಬಹುದೆಂದು ಆಜ್ಞೆಯು ಸೂಚಿಸುತ್ತದೆ.

ಮತ್ಸರಕ್ಕಾಗಿ ದ್ರಾವಕ ಚೆಲ್ಲಿದ ಪ್ರಸಂಗ

ಲಾಹೋರಿನ ನ್ಯಾಯಾಧೀಶರ ಮಗ ಮುನೀರ್ ಅಹಮದ್ ಎಂಬುವನು ಚೆನ್ನಾಗಿ ವ್ಯಾಸಂಗ ಮಾಡಿ ಅಮೆರಿಕಾಕ್ಕೆ ಉನ್ನತ ಶಿಕ್ಷಣಕ್ಕಾಗಿ ಹೊರಡಲಿದ್ದ ಹಿಂದಿನ ದಿನ ಅತನ ಪ್ರತಿಭೆಯನ್ನು ಕಂಡು ಹೊಟ್ಟೆಕಿಚ್ಚು ಪಟ್ಟ ಮತ್ತೊಬ್ಬನು ಮುನೀರನ ಮುಖದ ಮೇಲೆ ದ್ರಾವಕವನ್ನು ಚೆಲ್ಲಿದನೆಂದೂ ಇದರಿಂದ ಅವನ ಮುಖದ ಒಂದು ಭಾಗವು ಸುಟ್ಟು ಕಣ್ಣು [illegible]ನಾಗಿ ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ತಿಳಿಸಲಾಗಿದೆ.

ಗಣೇಶೋತ್ಸವದ ಸಂದರ್ಭದಲ್ಲಿ ಹೊಡೆದಾಟ

ಕಟಕ್ಕಿನಲ್ಲಿ ಮೊನ್ನೆ ಗಣೇಶನನ್ನು ವಿಸರ್ಜಿಸುವ ಸಂಬಂಧವಾಗಿ ನಡೆದ ಉತ್ಸವವು ಹೊರಟಾಗ ಎರಡು ಪಂಗಡಗಳವರಿಗೆ ಹೊಡೆದಾಟವಾಗಿ ಇಬ್ಬರು ಪೋಲೀಸರೂ ಸೇರಿ ೧೯ ಜನರು ಗಾಯಗೊಂಡರೆಂದೂ, ಇಬ್ಬರ ಸ್ಥಿತಿ ಕಳವಳಕರವಾಗಿದೆಯೆಂದೂ ವರದಿಯಾಗಿದೆ. ಈ ಸಂಬಂಧವಾಗಿ ೧೦ ಮಂದಿಯನ್ನು ಬಂಧಿಸಲಾಗಿದೆ.

ಹಬ್ಬಗಳಲ್ಲಿ ಜೂಜಾಟಕ್ಕೆ ನಿಷೇಧ

ನವರಾತ್ರಿ ಮತ್ತು ದೀಪಾವಳಿ ಹಬ್ಬಗಳಲ್ಲಿ ಜೂಜಾಟವನ್ನು ನಿಷೇಧಿಸಿ ನೇಪಾಳ ಸರ್ಕಾರದವರು ಆಜ್ಞೆ ಹೊರಡಿಸಿರುವರು.

ಮುದ್ರಣಾಲಯ ಕಾರ್ಮಿಕರ ಸಂಘ

ರಾಜಧಾನಿಯಲ್ಲಿರುವ ಮೇಲ್ಕಂಡ ಸಂಘದ ಕಾರ್ಯಕಾರಿ ಸಮಿತಿ ಸಭೆಯು ೨ನೇ ತಾ॥ ಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಪೀಸ್ ವರ್ಕ್ ಕೆಲಸಗಳಿಗಾಗಿ ನೇಮಿಸಿ ವಾರಕ್ಕೊಮ್ಮೆ ಸಂಬಳ ಕೊಡುವುದಾಗಿ ಮಾಲೀಕರು ಹೇಳುತ್ತಿರುವುದನ್ನು ಕುರಿತು ವಿಷಾದವನ್ನು ವ್ಯಕ್ತಪಡಿಸಲಾಯಿತು. ಮಾಲೀಕರು ಕಾರ್ಮಿಕರಿಗೆ ತೊಂದರೆ ಕೊಡುವುದನ್ನು ನಿಲ್ಲಿಸಬೇಕೆಂದು ಮನವಿ ಮಾಡಿಕೊಳ್ಳಲಾಯಿತು.

ಗಾಂಧೀಜಿ ಜೀವನದ ಘಟನೆ ಚಿತ್ರಗಳ ಅಂಚೆ ಕಾರ್ಡು

ಗಾಂಧಿ ಜಯಂತಿಯ ಸಂಬಂಧವಾಗಿ ಬರುವ ತಿಂಗಳು ೨ನೇ ತಾರೀಕಿನಿಂದ ಅಂಚೆ ಕಛೇರಿಯಲ್ಲಿ ಮಹಾತ್ಮ ಗಾಂಧಿಯವರ ಜೀವನದ ಘಟನೆಗಳಿಗೆ ಸಂಬಂಧಿಸಿದ ಚಿತ್ರಗಳಿಂದ ಕೂಡಿದ, ಹಿಂದಿ ಭಾಷೆಯ ಅಂಚೆ ಕಾರ್ಡುಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಿರುವುದಾಗಿ ಗೊತ್ತಾಗಿದೆ.

ಬಿತ್ತನೆ ಬೀಜ ತಯಾರಿಸಲು ರೈತರಿಗೆ ಸಾಲ

ಉತ್ತಮವಾದ ಬಿತ್ತನೆ ಬೀಜಗಳನ್ನು ತಯಾರಿಸಲು ಮದರಾಸ್ ಸರ್ಕಾರದವರು ರೈತರಿಗೆ ಒಟ್ಟು [illegible] ಲಕ್ಷ ರೂ ಸಾಲವನ್ನು ಮಂಜೂರು ಮಾಡಿರುವರು.

ಬಹಿರಂಗ ಸಭೆ

ಮೈಸೂರು ಜಿಲ್ಲೆಯ ಭಾರತೀಯ ಜನಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ. ನಿವೃತ್ತ ಶ್ರೇಷ್ಠ ನ್ಯಾಯಾಧೀಶರೂ ಮತ್ತು ಜನಸಂಘದ ಅಧ್ಯಕ್ಷರೂ ಆದ ಶ್ರೀ ಜಿ ಪರಮಶಿವಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀ ಜೆ ಕೆ ಸೌಮಿತ್ರಿ [illegible]ರವರು ‘ಜನಸಂಘ ನೂತನ ರಾಜಕೀಯ ಸಂಘಟನೆ’ ಎಂಬ ವಿಷಯವಾಗಿ ಭಾಷಣ ಮಾಡುವರು.

ನಗರಾಭಿವೃದ್ಧಿ ಸಮಿತಿ, ಮೈಸೂರು.

ಅತ್ಯುತ್ತಮವಾದ ಬಂಗಲೆ ನಿವೇಶನಗಳ

ಹರಾಜು ಜಾಹಿರಾತು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಅರಮನೆಯ ಪೂರ್ವ ದಿಕ್ಕಿನ (ಜಯ ಮಾರ್ತಾಂಡ) ಗೇಟಿನ ಪೂರ್ವಕ್ಕೆ ಇಟ್ಟಿಗೆಗೂಡಿಗೆ ಪಶ್ಚಿಮದಲ್ಲಿರುವ, ಎಲ್ಲಾ ಆಧುನಿಕ ಸೌಕರ್ಯಗಳನ್ನೂ ಉಳ್ಳ ಅತ್ಯುತ್ತಮವಾದ 8 ಬಂಗಲೆ ನಿವೇಶನಗಳೂ ಜ್ಯೂ ಗಾರ್ಡನ್ ಮುಂಭಾಗದ ರಸ್ತೆಯಲ್ಲಿರುವ ೯ ನಿವೇಶನಗಳೂ ತಾ॥ 5-10-51 ನೇ ಶುಕ್ರವಾರ ದಿವಿ 9 ಘಂಟೆ ಲಾಗಾಯ್ತು ಮತ್ತು ಪಡುವಾರಹಳ್ಳಿ, ಬಳಿ ಇಲವಾಲದ ಮತ್ತು ಟೆಂಪಲ್ ರಸ್ತೆಯಲ್ಲಿರುವ ಅತ್ಯುತ್ತಮವಾದ 13 ನಿವೇಶನಗಳೂ ತಾ॥ 6-10-51 ನೇ ಶನಿವಾರ ದಿನ 9 ಘಂಟೆ ಲಾಗಾಯ್ತು ನಿವೇಶನಗಳ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ. ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(ರುಜು) ಟಿ ಗೋಪಾಲಕೃಷ್ಣ ಶೆಟ್ಟಿ,

ಅಧ್ಯಕ್ಷರು

ಕೊಲೆ ಅಪಾದಿತರಾಗಿದ್ದ ಪರಚುರೆ ಚುನಾವಣೆಗೆ

ಗಾಂಧಿ ಕೊಲೆ ಸಂಬಂಧವಾಗಿ ಅಪಾದನೆಗೊಳಗಾಗಿದ್ದ ಡಾ॥ ಪರಚುರೆಯವರು ಮಧ್ಯ ಭಾರತದ ಶಾಸನ ಸಭೆಯ ಚುನಾವಣೆಯಲ್ಲಿ ಹಿಂದೂ ಮಹಾಸಭಾ ಪರವಾಗಿ ಉಮೇದುವಾರರಾಗುವರೆಂದು ತಿಳಿದುಬಂದಿದೆ.

ಕಮ್ಯೂನಿಸ್ಟರ ಪಕ್ಷ ತುಳಿಯಲು ಜನಮತಗಣನೆ

ಆಸ್ಟ್ರೇಲಿಯದಲ್ಲಿರುವ ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಲು ಈಗಾಗಲೇ ಜನಮತ ಗಣನೆಯನ್ನು ತೆಗೆದುಕೊಳ್ಳಲಾಗಿದೆ. ಓಟುಗಳ ಎಣಿಕೆಯು ಪ್ರಾರಂಭವಾಗಿರುವುದು.

ಕಲಾಕ್ಷೇತ್ರ

ರಾಜಧಾನಿಯ ಕಲಾಕ್ಷೇತ್ರ ಕನ್ನಡ ಕೈಬರಹದ ಮಾಸ ಪತ್ರಿಕೆಯ ಸೆಪ್ಟೆಂಬರ್ ತಿಂಗಳಿನ ಸಂಚಿಕೆಯು ಹೊರಬಿದ್ದಿದೆ. ಇದರಲ್ಲಿ ಎಂದಿನಂತೆ ನಾನಾ ಉಪಯುಕ್ತ ಲೇಖನಗಳೂ ಚಿತ್ರಗಳೂ ಇವೆ.

ಸಾಧುಗಳ ಸೇವೆ

ರಾಜಧಾನಿಯ ಧರ್ಮಪ್ರವರ್ತಕ ಹೊಂಬಾಳೆ ರಂಗಯ್ಯನವರು ಕಳೆದ ಶುಕ್ರವಾರ ಸಾಧು ಮತ್ತು ಸನ್ಯಾಸಿಯರನ್ನು ತಮ್ಮ ಚಿತ್ತರಂಜನ ಮಹಲಿಗೆ ಬರಮಾಡಿಕೊಂಡು ಅವರ ಸೇವೆ ನಡೆಸಿದರು. ಇದರ ಬಗ್ಗೆ ತೃಪ್ತಿ ಹೊಂದಿದ ಸಾಧುಗಳು ಶ್ರೀ ರಂಗಯ್ಯನವರಿಗೆ ಶ್ರೇಯಸ್ಸನ್ನು ಕೋರಿದರು.

ತೀರ್ಥ ಮತ್ತು ಕಂಪೆನಿ

ನಾರಾಯಣ ಶಾಸ್ತ್ರಿ ರಸ್ತೆ,

ಫೋನ್ ನಂ 537

ಸರಕುಗಳನ್ನು ರವಾನಿಸುವ ಸಂಸ್ಥೆ

ಸೈಕಲ್ ಅದಲುಬದಲಾಗಿದೆ

ರಾಜಧಾನಿಯ ಹಳೇ ಅಗ್ರಹಾರದ ಮಾಧವಾಚಾರ್ ರಸ್ತೆಯಲ್ಲಿರುವ ದಲ್ಲಾಳಿ ಶಾಮಯ್ಯನವರ ಅಕ್ಕಿ ಅಂಗಡಿ ಬಳಿ ಕಳೆದ ಶನಿವಾರ ರಾತ್ರಿ 8-30 ಗಂಟೆ ಸಮಯದಲ್ಲಿ [illegible] ಕೊಟ್ಟಿರುವ ಸೈಕಲ್ಲುಗಳು ಅದಲುಬದಲಾಗಿದೆ.

ದಲ್ಲಾಳಿ ಶಾಮಯ್ಯನವರ ವಶದಲ್ಲಿರುವುದು ಫಿಲಿಪ್ಸ್ ಫ್ರೇಮ್ ನಂ ಎ 30325 625 ಮುನಿಸಿಪಲ್ ನಂ 3926-51-52 ಹ್ಯಾಂಡಲ್ ಮೇಲೆ ಎಂ ಎನ್ ಬಸವರಾಜು ಎಂಬ ಹೆಸರಿದೆ. ಗೇರ್ ಕೇಸಿದೆ. ಶಾಮಯ್ಯನವರಿಗೆ ಸೇರಿದ್ದು ಹರ್ಕ್ಯುಲಸ್ ಫ್ರೇಮ್ ನಂ 6890 ಮುನಿಸಿಪಲ್ ನಂ 1909 51-52 ಹ್ಯಾಂಡಲ್ ಮೇಲೆ ದಲ್ಲಾಳಿ ಶಾಮಯ್ಯ ಎಂಬ ಹೆಸರಿದೆ.

ಬದಲಾಯಿಸಿಕೊಂಡಿರುವವರು ಸೈಕಲ್ಲನ್ನು ಶಾಮಯ್ಯನವರಿಗೆ ತಲುಪಿಸಿ ತಮ್ಮ ಸೈಕಲ್ ಪಡೆಯಬೇಕೆಂದು ಕೋರಲಾಗಿದೆ.

ವಿವಾಹ ವಿಚ್ಛೇದನ ಶಾಸನ ವಿಹಿತವಲ್ಲ

ಕೇಂದ್ರ ಪಾರ್ಲಿಮೆಂಟಿನಲ್ಲಿ ಮಂಜೂರಾದ ವಿವಾಹ ವಿಚ್ಛೇದನ ಕಾನೂನನ್ನು ಕುರಿತು ರಾಜಧಾನಿಯ ನಿಯೊ ಫಾರ್ಮೆಸಿಯ ಡಾ॥ ಎ ಎಸ್ ಸುಬ್ರಹ್ಮಣ್ಯ ಶಾಸ್ತ್ರಿಯವರು ಈ ರೀತಿ ಬರೆಯುತ್ತಾರೆ:—

ಸಮಾಜದಲ್ಲಿರುವ ಹೊಲಸು ಪದ್ಧತಿಗಳನ್ನು ತೆಗೆಯುವುದು ಅಗತ್ಯ ಮತ್ತು ಸಹಜ. ವ್ಯಭಿಚಾರ ನಿರೋಧ ಮತ್ತು ಏಕಪತ್ನೀತ್ವಗಳ ಬಗ್ಗೆ ಕಾನೂನು ಮಾಡುವುದು ಸರಿ. ಆದರೆ ವಿವಾಹ ವಿಚ್ಛೇದನಕ್ಕೆ ಎಡೆಗೊಡುವ ಕಾನೂನು ಸಮಾಜದ ಹಿತ ದೃಷ್ಟಿಯಿಂದ ಸರಿಯೇ? ಎಂಬುದು ವಿಮರ್ಶೆಯಾಗಬೇಕಾಗಿದೆ. ಈ ಕಾನೂನಿನಿಂದ ಸಮಾಜದಲ್ಲಿ ಅನೀತಿಯು ಹೋಗುವುದರ ಬದಲು ವಿಷಯ ಲಂಪಟತನಕ್ಕೆ ಬೆಂಬಲವಾಗುವುದು. ಅಲ್ಲದೇ ಮೊದಲನೇ ಎರಡು ಕಾನೂನುಗಳ ಘನೋದ್ದೇಶವು ಈ ಕಾನೂನಿನಿಂದ ಕುಂಠಿತವಾಗುವುದರಲ್ಲಿ ಸಂಶಯವಿಲ್ಲ. ಇದನ್ನು ಜಾರಿಗೆ ತರಲು ಕೆಲವರು ಒಂದು ವಿಚಿತ್ರ ವಾದವನ್ನು ಹೂಡಿದ್ದಾರೆ. ಇದು ಪರಕೀಯರು ತಮ್ಮ ಸಮಾಜದ ರೀತಿಯನ್ನು ಸಮರ್ಥಿಸಲು ಹೂಡಿರುವ ವಾದ ಎಂಬುದು ಜನರಿಗೆ ತಿಳಿಯದಿಲ್ಲ. ಅದೇನೆಂದರೆ ಹಿಂದೂ ಸಮಾಜದಲ್ಲಿ ಸ್ತ್ರೀಯರು ಗುಲಾಮರು ಆಗಿರುವರೆಂಬುದೇ ಆಗಿದೆ. ಇದನ್ನು ಹಲವು ಭಾರತೀಯರೂ ನಿಜವೆಂದು ನಂಬಿರುತ್ತಾರೆ. ಅದಕ್ಕಾಗಿ ಈ ವಿಷಯದ ವಿಮರ್ಶೆ ಅಗತ್ಯವೆನಿಸಿದೆ.

ಒಬ್ಬ ಸ್ತ್ರೀಯು ಒಬ್ಬ ಪುರುಷನನ್ನು ತನ್ನ ಯಜಮಾನನನ್ನಾಗಿ ಆರಿಸಿಕೊಂಡ ಮೇಲೆ ಅವಳು ಆತನ ವಿವೇಚನೆಗೆ ಒಳಪಡಬೇಕಾದುದು ಕುಟುಂಬದ ರಕ್ಷಣೆಗಾಗಿ ವಿಹಿತವಾಗಿರುವುದು. ಸರ್ಕಾರದ ಶಿಸ್ತಿನಂತೆ ಇದು ಕುಟುಂಬದ ಶಿಸ್ತು. ಇದನ್ನು ಗುಲಾಮಗಿರಿ ಎಂದು ನಾಮಕರಣ ಮಾಡುವುದು ವಿವೇಕರಹಿತವಾದ ವಾದ. ಹೀಗೆನ್ನುವವರಿಗೆ ಶಿಸ್ತಿನ ಬೆಲೆ ಏನೆಂಬುದು ಅರ್ಥವಾಗುತ್ತಿಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣವೇ ನಿಜವಾದ ಗುಲಾಮಗಿರಿ. ಸಮಾಜಕ್ಕೆ ದ್ರೋಹವೆಸಗುವ ಈ ವಿವಾಹವಿಚ್ಛೇದನದ ಕಾನೂನಿಗೆ ಒಳಪಡುವುದೇ ಗುಲಾಮಗಿರಿಯೆನಿಸುವುದು. ಇಂತಹ ಗುಲಾಮಗಿರಿಗೆ ತಲೆ ಬಾಗುವವರು ಮಹಾತ್ಮರೊಬ್ಬರ ಹೇಳಿಕೆ ಪ್ರಕಾರ ಶಕ್ತಿ ಹೊತ್ತ ರೀತಿಯಲ್ಲಿ ವರ್ತಿಸುತ್ತಾರೆ. ಇಂತಹ ವಿವೇಚನಾರಹಿತ ಕಾನೂನಿಗೆ ತಲೆ ಬಾಗುವ ಗುಲಾಮಗಿರಿಯಿಂದ ಸಮಸ್ತರನ್ನೂ ತಪ್ಪಿಸಬೇಕಾದುದು ಪ್ರತಿ ಭಾರತೀಯನ ಕರ್ತವ್ಯ.

ರಾಜಕಮಲ್, ಮೈಸೂರು

21-9-51 ರಿಂದ 7ನೇ ವಾರ

ಜಗನ್ಮೋಹಿನಿ

'NALINS' Durable Furniture Settings

For Exhibition Stalls, On Hire

NALINS,

Service Furnishers, V V Market Square, Mysore.

Edited printed and published by A R Nagarajan at Sadhvi Press, D. Subbiah Road, Mysore

ಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೨೫-೯-೫೧ [ಸಂಚಿಕೆ ೩೪

- ಬೆಂಗಳೂರಿನ ಬಳಿ - ನಟನಾ ಚುನಾವಣೆ

ಹಿಂದೂ ಕೋಡ್ ಮಸೂದೆ ಮುನ್ನು ಕೈಬಿಡಲಾಗುವುದು

ರತ ಸರ್ಕಾರದವರು ಪಾರ್ಲಿಮೆಂಟಿನ್ನ ತಂದಿರುವ ಹಿಂದೂ ಕೋಡ್ ಮಸೂದೆಯನ್ನು ಸದ್ಯಕ್ಕೆ ಕೈಬಿಡುವ ಯೋಚನೆ ಮಾಡಲಾಗಿದೆಯೆಂದು ಅನಧಿಕೃತವಾಗಿ ತಿಳಿದುಬಂದಿದೆ. ಕೆಲಸ ಕಾರ್ಯಗಳ ಒತ್ತಡದಿಂದ ಅಧಿವೇಶನವು ಮುಗಿಯುವರೊಳಗಾಗಿ ಚರ್ಚೆಯು ಪೂರೈಸದು. ವಿವಾಹ ಮತ್ತು ವಿವಾಹ ವಿಚ್ಛೇದನ ಶಾಸನಗಳ ಮಸೂದೆಗಳನ್ನು ಜಾರಿಗೆ ತರುವುದೂ ಶಕ್ಯವಿಲ್ಲವೆಂದು ಹೇಳಲಾಗಿದೆ.

ಪಾರ್ಲಿಮೆಂಟಿನಿಂದ ಮುದ್ಗಲ್‌ರಿಗೆ ಉಚ್ಚಾಟನೆ

ಪಾರ್ಲಿಮೆಂಟಿನಲ್ಲಿ ಸದಸ್ಯರಾಗಿರುವ ...ಯಿಯ ಹೆಚ್. ಜಿ. ಮುದ್ಗಲ್ ಸದಸ್ಯತನದ ಗೌರವ ಮತ್ತು ಮರ್ಯಾದೆಗಳಿಗೆ ಚ್ಯುತಿ ತರುವ ರೀತಿಯಲ್ಲಿ ವರ್ತಿಸಿರುವರೆಂದು ಪಾರ್ಲಿಮೆಂಟಿನ ಸಮಿತಿಯು ಮಾಡಿದ ವರದಿಯ ಆಧಾರದ ಮೇಲೆ ಅವರನ್ನು ಸದಸ್ಯತನದಿಂದ ತೆಗೆಯಬೇಕೆನ್ನುವ ಪಾರ್ಲಿಮೆಂಟಿನಲಿ ಪ್ರಧಾನಿಯವರು ಸೂಚನೆಯೊಂದನ್ನು ... ಶ್ರೀ ಮುದ್ಗಲ್‌ರವರು ತಮ್ಮ ಮೇಲಿನ ಆರೋಪಣೆಯು ನಿರಾಧಾರವೆಂದು ತಿಳಿಸಿ ಸದಸ್ಯತನಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವರು.

ಆಸ್ತಿಯನ್ನು ಕದ್ದ ಪೋಲೀಸರ ಸಜಾ

ಕೋರ್ಟಿನ ಸ್ವೈಲೆ ಪೋಲಿಸು ಇ... ಕಾನ್ಸ್‌ಟೇಬಲ್‌ಗಳು ಕಳ... ಒಂದೆ ನ್ಯಾಯಾಲಯದಲ್ಲಿ ... ಆಸ್ತಿಯನ್ನು ಕಳುವು ಮಾಡಿದ ಕಾರಣಕ್ಕಾಗಿ ಅವರುಗಳನ್ನು ಕೆ... ತೆಗೆದು ಹಾಕಲಾಗಿದೆ. ಮತ್ತು ಅವರನ್ನು ಒಂದೆಯೇ ಸಜಾ ವಿಧಿಸಲಾಯಿತು.

... ಸಂಧಾನ ಬೇರೆ ಕಡೆ ನಡೆಯಲಿ

...ಯಾ ಸೀಸ್ ಫೈರ್ ಸಂಧಾನ ...ಸಂಗನಲ್ಲಿ ನಡೆಯುವುದಕ್ಕೆ ಬದಲಿ ಯಾವುದಾದರೂ ಸ್ಥಳವಲ್ಲಿ ಸಂತೆ ಏರ್ಪಡಿಸುವುದು ಸೂಕ್ತವೆಂದು ಜನರಲ್ ರಿಜ್‌ವೇ ಕಮ್ಯೂನಿಸ್ಟರಿಗೆ ಸಲಹೆ ಮಾಡಿರುವುದು ಗೊತ್ತಾಗಿದೆ.

...ನೇ ತಾ|| ನೊಳಗೆ ಪ್ರಾಂತದ ಘೋಷಣೆ

...ನ ೧೦ ನೇ ತಾ|| ವಿಜಯದಶಮಿಯೊಳಗಾಗಿ ಆಂಧ್ರ ಪ್ರಾಂತ ರಚನೆಯ ಬಗ್ಗೆ ಪ್ರಧಾನಿ ನೆಹರೂರವರು ... ನೀತಿಯನ್ನು ತಿಳಿಸುವ ಘೋಷಣೆ ಮಾಡಲಿರುವರೆಂದು ಮಾಜಿ ... ಕಾಂಗ್ರೆಸ್ ಕಾರ್ಯದರ್ಶಿ ... ಕಳಾರಾಯರು ಹೇಳಿರುತ್ತಾರೆ.

ಎಮ್. ಚಿನ್ನಪ್ಪನವರ ನಿಧನ

ಪ್ರಸಿದ್ಧ ತಮಿಳ ಚಿತ್ರ ನಟರಾದ ... ಚಿನ್ನಪ್ಪನವರು ಮೊನ್ನೆ ... ಪುದುಕೋಟೆಯಲ್ಲಿ ಮೃತಪಟ್ಟಿರುವರೆಂದು ವರದಿಯಾಗಿದೆ.

ಆರ್ಕಾಟರು ಸಂಸ್ಥಾನದಿಂದ ಪಾರ್ಲಿಮೆಂಟಿಗೆ ನಿಲ್ಲುವರೇ ?

ಮೈಸೂರು ೨೫

ಮೈಸೂರಿನ ಮಾಜಿ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರವರು ಹಾಸನ ಜಿಲ್ಲೆ ಮೈಸೂರು ಪಾರ್ಲಿಮೆಂಟಿಗೆ ... ಅಭ್ಯರ್ಥಿಯಾಗಿ ನಿಲ್ಲಲಿರುವರೆಂಬ ಹೇಳಿಕೆ ... ಹಾಸನದಲ್ಲಿ ... ಮಾಡುತ್ತಾ ಮೈಸೂರಿನ ... ಇಚ್ಛೆಪಟ್ಟರೆ ತಾವು ಪುನಃ ಸಂಸ್ಥಾನಕ್ಕೆ ... ಸೇವೆ ... ಆರ್ಕಾಟರು ತಿಳಿಸಿದರು ... ತಾವು ಪ್ರತ್ಯಕ್ಷ ರಾಜಕೀಯ ... ತರುಗಿರುವುದರಿಂದ ಯಾವ ... ದಿವಾನ್‌ಗಿರಿಯಿಂದ ನಿವೃತ್ತರಾದ ಮೇಲೂ ... ಮೈಸೂರು ತಮ್ಮ ಹೃದಯಕ್ಕೆ ಸಮೀಪವಾಗಿರುವುದೆಂದೂ ಸೇ... ಅವರು.

ಗಣಪತಿ ಮಂಗಳಾರತಿ

ರಾಜಧಾನಿಯ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಶ್ರೀ ನಾರಾಯಣ ಪ್ರಾರ್ಥನಾ ಹೋಟೆಲಿನಲ್ಲಿ ಈ ಸಂಜೆ ಗಣಪತಿ ಮಂಗಳಾರತಿ ಪ್ರಯುಕ್ತ ಸಂಗೀತ ವಿದ್ವಾನ್ ಪಾಲಘಾಟ್ ಸುಬ್ರಹ್ಮಣ್ಯ ಅಯ್ಯರ್ ಮತ್ತು ಪಾರ್ಟಿಯವರಿಂದ ಸಂಗೀತವು ನಡೆಯುವುದು.

ಅಂಬಾ ಪೂಜೆ

ರಾಜಧಾನಿಯ ಕೃಷ್ಣರಾಜ ಪೇಟೆಯಲ್ಲಿ ಗಂಗಾ ಮಠದ ಬೀದಿಯಲ್ಲಿರುವ ಕಾಳಪ್ಪನವರ ಗರಡಿಯಲ್ಲಿ ಈ ರಾತ್ರಿ ೯ ಘಂಟೆಗೆ ಶ್ರೀ ಅಂಬಾ ಪೂಜೆಯು ನಡೆಯುವುದು.

ಬೊಂಬಾಯಿ ವರ್ತಕರ ಮೇಲೆ ಲಾಠಿ ಪ್ರಹಾರ

ಬೀದಿಗಳಲ್ಲಿ ಅಕ್ರಮವಾಗಿ ವ್ಯಾಪಾರ ಮಾಡುವ ಸಂಬಂಧದಲ್ಲಿ ಬೊಂಬಾಯಿಯ ನೂರು ಸಂಘದ ೧೦ ಮಂದಿ ಸದಸ್ಯರನ್ನು ನೆನ್ನೆ ದಸ್ತಗಿರಿ ಮಾಡಿದುದನ್ನು ... ಸಾವಿರ ವ್ಯಾಪಾರಿಗಳು ಸೇರಿ ಪ್ರತಿಭಟಿಸಿದರೆಂದೂ ಪೋಲೀಸರು ಲಾಠಿ ಪ್ರಹಾರ ಮಾಡಿ ಅವರನ್ನು ಚದುರಿಸಿದರೆಂದೂ ಹೇಳಲಾಗಿದೆ. ಈಗ ನೂರು ಮಾರ್ಕೆಟ್ಟನ್ನು ಮುಚ್ಚಲಾಗಿದೆ.

ಕಮ್ಯೂನಿಸ್ಟ್ ಪಕ್ಷದ ಬಹಿಷ್ಕಾರ ಕೂಡದೆಂದು ಬಹುಮತ

ಆಸ್ಟ್ರೇಲಿಯಾ ಸರ್ಕಾರದವರು ಅಲ್ಲಿನ ಕಮ್ಯೂನಿಸ್ಟ್ ಪಕ್ಷವನ್ನು ನ್ಯಾಯಬಾಹಿರವೆಂದು ಘೋಷಿಸುವ ಬಗ್ಗೆ ಜನರಲ್ಲಿ ಅಭಿಪ್ರಾಯ ಕೋರಿದ್ದು ... ಮೊನ್ನೆ ನಡೆದ ... ಜನಮತ ಗಣನೆಯ ... ರೆಫರೆಂಡಮ್ ... ಬಹುಮತ ದೊರಕಿದೆ. ... ಸರ್ಕಾರಕ್ಕೆ ... ಸೋಲೆಂದು ಭಾವಿಸಲಾಗಿದೆ.

ಪರ್ಷಿಯಾದಿಂದ ಬ್ರಿಟಿಷ್ ಪ್ರವೀಣರಿಗೆ ಉಚ್ಚಾಟನೆ

ಪರ್ಷಿಯಾದಲ್ಲಿರುವ ಎಲ್ಲ ಬ್ರಿಟಿಷ್ ತಾಂತ್ರಿಕ ಪ್ರವೀಣರನ್ನೂ ಇನ್ನು ಒಂದು ವಾರದೊಳಗೆ ಅಲ್ಲಿಂದ ಹೊರಡಬೇಕೆಂದು ಆಜ್ಞಾಪಿಸಲಾಗಿದೆಯೆಂದು ತಿಳಿದುಬಂದಿದೆ. ಬ್ರಿಟನ್ನಿನೊಡನೆ ಎಣ್ಣೆ ಗಣಿ ಸಂಧಾನವು ವಿಫಲವಾದುದಾಗಿ ಪರ್ಷಿಯಾದ ಪ್ರಧಾನಿ ಡಾ|| ಮುಸಾದಿಕ್‌ರವರು ಘೋಷಿಸಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆಯೆಂದು ಗೊತ್ತಾಗಿದೆ.

ಜಾರ್ಜ್ ಮತ್ತಾಯ್ ಮತ್ತು ಸರ್ ಸಿ. ಪಿ. ಯವರ ಸ್ಪರ್ಧೆ

ಕೇಂದ್ರ ಸರ್ಕಾರದ ಮಾಜಿ ಸಚಿವರಾದ ಡಾ|| ಜಾನ್ ಮತ್ತಾಯ್‌ರವರು ಬರುವ ಮಹಾ ಚುನಾವಣೆಯಲ್ಲಿ ತಿರುವಾಂಕೂರಿನ ಕೊಟ್ಟಾಯಂ ಕ್ಷೇತ್ರದಿಂದ ಸಮಾಜವಾದಿಗಳ ಬೆಂಬಲ ಪಡೆದು ಸ್ವತಂತ್ರ ಉಮೇದವಾರರಾಗಿ ನಿಲ್ಲುವರೆಂದು ಗೊತ್ತಾಗಿದೆ. ತಿರುವಾಂಕೂರಿನ ಮಾಜಿ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ನೀಲಗಿರಿ ಜಿಲ್ಲೆಯಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸುವರೆಂದು ಹೇಳಲಾಗಿದೆ.

ಕಲಾ ವೆಂಕಟರಾಯರಿಂದ ಮಂತ್ರಿ ಪದವಿ ಸ್ವೀಕಾರ

ನಾಳೆ ಅಥವಾ ನಾಳಿದ್ದು ಕಲಾ ವೆಂಕಟರಾಯರು ಮದ್ರಾಸಿನ ಆರೋಗ್ಯ ಮಂತ್ರಿಗಳಾಗಿ ಪ್ರಮಾಣ ವಚನವನ್ನು ಸ್ವೀಕರಿಸಬಹುದೆಂದು ಮುಖ್ಯ ಮಂತ್ರಿ ಕುಮಾರಸ್ವಾಮಿ ರಾಜಾರವರು ಹೇಳಿರುತ್ತಾರೆ.

ಕಾಂಗ್ರೆಸ್ ಮತ್ತು ಚುನಾವಣಾ ಸಮಿತಿ ಅಧ್ಯಕ್ಷರ ಸಭೆ

ಕೆ. ಹನುಮಂತಯ್ಯನವರ ವಿವರಣೆ

(ಸ್ವಂ ಸು ಪೋರ್ಟ್) ಬೆಂಗಳೂರು ೨೫

ಕಾಂಗ್ರೆಸ್ ಅಧ್ಯಕ್ಷರಾಗಿರುವ ಪ್ರಧಾನಿ ನೆಹರೂರವರು ಬರುವ ತಿಂಗಳು ೫ ನೇ ತಾ|| ಎಲ್ಲ ಪ್ರದೇಶ ಕಾಂಗ್ರೆಸ್ ಮತ್ತು ಚುನಾವಣಾ ಸಮಿತಿ ಅಧ್ಯಕ್ಷರುಗಳ ಸಮ್ಮೇಳನವನ್ನು ದೆಹಲಿಯಲ್ಲಿ ಕರೆಯುವುದಾಗಿ ಶ್ರೀ ಕೆ. ಹನುಮಂತಯ್ಯನವರು ಇಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಚುನಾವಣೆಯಲ್ಲಿ ಕಾಂಗ್ರೆಸ್ ಪರ ಉಮೇದುವಾರರನ್ನು ನಿಲ್ಲಿಸುವ ಸಂಬಂಧವಾಗಿ ಚುನಾವಣಾ ಸಮಿತಿಯು ಕೈಗೊಂಡ ಪ್ರವಾಸದ ಅನುಭವವನ್ನು ಅವರು ತಿಳಿಸಿ, ಕಾಂಗ್ರೆಸ್ಸಿನ ಬಗ್ಗೆ ಜನರಿಗೆ ಹೆಚ್ಚು ಉತ್ಸಾಹವಿರುವುದೆಂದೂ ಅವರು ಹೇಳಿದರು. ಈಗಿನ ಶಾಸನಸಭೆಯಲ್ಲಿರುವ ಬಹುಮತಕ್ಕಿಂತಲೂ ಹೆಚ್ಚು ಸ್ಥಾನಗಳು ದೊರೆಯುವ ಆಶೆಯನ್ನು ವ್ಯಕ್ತಪಡಿಸಿದರು. ನಾಳೆಯಿಂದ ಚುನಾವಣಾ ಸಮಿತಿಯು ಉಮೇದುವಾರಿಕೆ ಪರಿಶೀಲನೆಗೆ ಕುಳಿತುಕೊಳ್ಳುವುದೆಂದೂ ... ಅರ್ಜಿಗಳ ಪೈಕಿ ... ಹಿಮ್ಮೆ ... ದಿಂದಲೇ ... ಸ್ತ್ರೀಯರಿಂದಲೇ ಬಂದಿರುವುದಾಗಿ ಹೇಳಿದರು.

ತಿಪ್ಪಗೊಂಡನ ಹಳ್ಳಿಯಲ್ಲಿ ನಟನಾ ಚುನಾವಣೆ

ಮುಂದೆ ನಡೆಯಲಿರುವ ಮಹಾ ಚುನಾವಣೆ ಸಂಬಂಧವಾಗಿ ಜನರಿಗೆ ಸಾಕಷ್ಟು ತಿಳುವಳಿಕೆಯನ್ನು ಕೊಡುವ ಬಗ್ಗೆ ಬರುವ ರವಿವಾರ ತಿಪ್ಪಗೊಂಡನ ಹಳ್ಳಿಯಲ್ಲಿ ಒಂದು ನಟನಾ ಚುನಾವಣೆಯನ್ನು ನಡೆಸಲಾಗುವುದು.

ಕೆ. ಸಿ. ರೆಡ್ಡಿಯವರ ವಾಪಸು

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಸಂದೀಪುದುರ್ಗದಿಂದ ನೆನ್ನೆ ವಾಪಸು ಬಂದರು. ಅವರು ಗುಣ ಹೊಂದಿರುತ್ತಾರೆ. ಇನ್ನೇ ಕೆಲ್ಪದಿನ ಹೊತ್ತಿಗೆ ಅವರು ಅಧಿಕಾರ ಸೂತ್ರವನ್ನು ವಹಿಸಿಕೊಳ್ಳುವರೆಂದು ತಿಳಿದುಬಂದಿದೆ.

ರಾಜು ನೋಕದ್ದಮೆ ನಾಳೆಗೆ

ವಿಷ ಪ್ರಾಶನ ಪ್ರಯತ್ನದ ಆಪಾದನೆಗೆ ಗುರಿಯಾಗಿರುವ ಎಲ್. ಎಸ್. ರಾಜೂರವರ ಮೇಲೆ ಹೂಡಲಾಗಿರುವ ಮೊಕದ್ದಮೆಯು ಈ ದಿನ ವಿಚಾರಣೆಗೆ ಬಂದು ಅರ್ಡರ್ ಮುಂದೂಡಲ್ಪಟ್ಟಿದ್ದುದರಿಂದ ನಾಳೆಗೆ ಮುಂದುವರಿದಿದೆ.

ಆಯುರ್ವೇದ ಮತ್ತು ಯುನಾನಿ ಪದವಿ ತರಗತಿ

ಬರುವ ವರ್ಷದಿಂದ ಆರಂಭ

ಮೈಸೂರು ೨೫

ಇಲ್ಲಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಮಹೋತ್ಸವವನ್ನು ಕಳೆದ ರವಿವಾರ ಕೇಂದ್ರ ಆಹಾರ ಸಂಶೋಧನಾ ಶಾಖೆಯ ಡೈರೆಕ್ಟರಾದ ಡಾ|| ವಿ. ಸುಬ್ರಹ್ಮಣ್ಯಂರವರು ನೆರವೇರಿಸಿದರು. ಕಾಲೇಜು ಪ್ರಿನ್ಸಿಪಾಲರಾದ ಡಾ|| ದ್ವಾರಕಾನಾಥರವರು ಅಧ್ಯಕ್ಷತೆ ವಹಿಸಿದ್ದರು. ಬರುವ ವರ್ಷದಿಂದ ಮೇಲ್ಕಂಡ ಕಾಲೇಜನ್ನು ವಿಶ್ವ ವಿದ್ಯಾಲಯದಲ್ಲಿ ಐಕ್ಯಗೊಳಿಸುವ ಅಂಶವು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ತಿಳಿಸಿದರು.

ಬ್ಯಾಂಕ್ ವಿವಾದ ಪರಿಹಾರ ಸಮಿತಿಗೆ ರಾಜೀನಾಮೆ

ಬ್ಯಾಂಕ್ ನೌಕರರ ವಿವಾದ [illegible] ವಿಚಾರಣೆ ನಡೆಸಲು ಸರ್ಕಾರದವರ [illegible] ನೇಮಿಸಿದ್ದ ವಿಶೇಷ ಕೈಗಾರಿಕಾ ನ್ಯಾಯಾಲಯದ ಅಧ್ಯಕ್ಷ ಶ್ರೀ ಪೆ. ಎ. ದಿವ [illegible] ಯಾ, ಸದಸ್ಯರಾದ ಜನಾಬ್ [illegible] ಮೋಕ್ರಿಯವರೂ ಸರಿ ಸಹಿ [illegible] ರಾಜೀನಾಮೆ ಕೊಟ್ಟಿರುವರೆಂದು ಇನ್ನೊಬ್ಬ ಸದಸ್ಯರಾದ ಬಿ [illegible] ಗಂಗೂಲಿಯವರು ಸದ್ಯದಲ್ಲಿಯೇ ರಾಜೀನಾಮೆ ಕೊಡುವರೆಂದೂ ಹೇಳಲಾಗಿದೆ. ಬ್ಯಾಂಕುಗಳ [illegible] ನೇರು ನಡೆದ ಮೇಲ್ಕಂಡ ಸದಸ್ಯರಿಂದ ಕೂಡಿದ ನ್ಯಾಯಾಲಯ [illegible] ಕಾರ್ಯಕರು ಆಕ್ಷೇಪಿ [illegible] ಹೈಕೋರ್ಟಿನವರು [illegible] ಸದರಿ ನ್ಯಾಯಾಲಯವನ್ನು [illegible] ವ ಬಗ್ಗೆ [illegible] ಮತ್ತು ಭಾರತ [illegible] ದ್ದಾರೆಕ್ಟ್ [illegible] ಟ್ಟದ್ದರಿಂದ [illegible] ರಾಜೀನಾಮೆಯಿತ್ತರೆಂದ [illegible]

ಭಾರತಕ್ಕೆ ಸಿಂಹಳದ ಪ್ರತಿಭಟನೆ

ಈ ವರ್ಷ [illegible] ದಿನಗ [illegible] ಸಿಂಹಳ ದ್ವೀಪನ್ನು [illegible] ರತದಿಂದ [illegible] ಯನ್ನು ರಕ್ಷಣೆ ಮಾಡುವುದಕ್ಕೆ ಭಾರತ ಸರ್ಕಾರದವರು [illegible] ಕ್ಕಾಗಿ ಸಿಂಹಳದ ಸರ್ಕಾರವು ಪ್ರತಿಭಟನೆಯನ್ನು ಸೂಚಿಸಿರುತ್ತದೆ

ಬೆನಿಫಿಟ್ ನಾಟಕ

ಮೈಸೂರು ಸಹಕಾರ ಸಂಘಗಳ [illegible] ಕರರ ಸಂಘದ ಸಹಾಯಾರ್ಥವಾಗಿ ಈ ರಾತ್ರಿ [illegible] ಗಂಟೆಗೆ [illegible] ಕನ್ನಡ ನಾಟಕ ಸಂಘದವರಿಂದ [illegible] ಚಂಚಲ [illegible] ನಾಟಕವು ಏರ್ಪಾಡಾಗಿರುತ್ತದೆ. ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರರಾದ ಶ್ರೀ ಕೆ ಆರ್ ಮರುದೇವೇಗೌಡರು ಅಧ್ಯಕ್ಷತೆ ವಹಿಸುವರು. ಸಾರ್ವಜನಿಕರು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಮಹಿಳಾ ಸದನದ ವಾರ್ಷಿಕೋತ್ಸವ

ರಾಜಧಾನಿಯ ದೇವರಾಜ ಮೊಹಲ್ಲೆಯಲ್ಲಿರುವ ಮಹಿಳಾ ಸದನದ ಹದಿನಾರನೇ ವಾರ್ಷಿಕೋತ್ಸವವು ಕಳೆದ ಶನಿವಾರ ಶ್ರೀಮತಿ ಎ ಟಿ [illegible] ನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರ್ಥನೆ ಮತ್ತು ಸಂಗೀತಗಳಾದ ನಂತರ ಕಾರ್ಯದರ್ಶಿಗಳು ವರದಿಯನ್ನೊಪ್ಪಿಸಿದರು. ಬಹುಮಾನ ವಿನಿಯೋಗ ಮತ್ತು ಅಧ್ಯಕ್ಷರ ಭಾಷಣಗಳಾದ ನಂತರ [illegible] ಮತ್ತು ಕನ್ನಡ ನಾಟಕಗಳು ಅಭಿನಯಿಸಲ್ಪಟ್ಟವು

ಪಬ್ಲಿಕ್ ಲೈಬ್ರೆರಿ ಗೌರವ ಕಾರ್ಯದರ್ಶಿಯ ಚುನಾವಣೆ

ಕಳೆದ ಶುಕ್ರವಾರ ಮೈಸೂರು ಪಬ್ಲಿಕ್ ಲೈಬ್ರೆರಿಯ ಆಡಳಿತ ಸಮಿತಿ ಸಭೆಯು ಸೇರಿ ಮಾಜಿ ಪತ್ರಿಕೋದ್ಯೋಗಿಗಳೂ ಮತ್ತು ಲಿವರ್ [illegible] ಸ್ಪೆಷಲಿಸ್ಟರೂ ಆದ ಶ್ರೀ ಎಸ್ ರಾಮಣ್ಣನವರನ್ನು ಲೈಬ್ರೆರಿಯ ಗೌರವ ಕಾರ್ಯದರ್ಶಿಯನ್ನಾಗಿ ಚುನಾಯಿಸಲಾಯಿತು,

ಧರ್ಮಸ್ಥಳದಲ್ಲಿ ಡಾ॥ ಎಂ. ಸಿ ಮೋದಿ

[illegible] ಟಕದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ॥ ಎಂ ಸಿ ಮೋದಿಯವರು [illegible] ರುವ ತಿಂಗಳು ೧೫ನೇ ತಾರೀಕಿನಿಂದ [illegible] ರವರೆಗೆ ದಕ್ಷಿಣ ಕನ್ನಡದ ಧರ್ಮಸ್ಥಳದಲ್ಲಿ ನೇತ್ರ ಚಿಕಿತ್ಸಾ ಶಿಬಿರವನ್ನು [illegible] ನಡೆಸುವರು. ಅಲ್ಲಿನ ಶ್ರೀ ಮಂಜಯ್ಯ ಹೆಗ್ಗಡೆಯವರು ಈ ಬಗ್ಗೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಿರುವರು. ರೋಗಿಗಳಿಗೆ [illegible] ವಸತಿ ವ್ಯವಸ್ಥೆಯನ್ನು ಶ್ರೀ ಹೆಗ್ಗಡೆಯವರು ಮಾಡಲಿರುವರೆಂದೂ [illegible] ಬಡ ರೋಗಿಗಳಿಗೆ ಧರ್ಮಸ್ಥಳಕ್ಕೆ ಹೋಗಿ ಬರುವ ಪ್ರಯಾಣದ ವೆಚ್ಚವನ್ನು ಶ್ರೀಯುತರು ಕೊಡುವರೆಂದೂ ಹೇಳಲಾಗಿದೆ. [illegible] ರೋಗಿಗಳು ತಮ್ಮ [illegible] ಉಪಯೋಗಕ್ಕೆ ಬೇಕಾಗುವ [illegible] ತಪ್ಪಿ, ಹಾಗೆ [illegible] ಸಲಕರಣೆಗಳನ್ನು ತಾವೇ ತರುವುದು ಉತ್ತಮವೆಂದು ಸೂಚಿಸಲಾಗಿದೆ. ಪ್ರಯಾಣದ ವೆಚ್ಚವನ್ನು ಕೊಡಲಾರದ ರೋಗಿಗಳು ತಮ್ಮ [illegible] ಬಗ್ಗೆ [illegible] ಅಥವಾ [illegible] ಶಿಫಾರಸು ಪತ್ರವನ್ನು ಹಾಜರ ಪಡಿಸಬೇಕೆಂದು ತಿಳಿಸಲಾಗಿದೆ

ಹೊಟೇಲ್ ಕೆಲಸಗಾರರ ಸಭೆ

ರಾಜಧಾನಿಯ ಹೊಟೆಲ್ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಈ ರಾತ್ರಿ [illegible] ಹೋಟೆಲ್ [illegible] ವರಣದಲ್ಲಿ ಶ್ರೀ ಕೆ ಎಸ್ [illegible] ಅಧ್ಯಕ್ಷತೆಯಲ್ಲಿ ಜರುಗುವುದು. [illegible] ಹೋಟೇಲು ಕೆಲಸಗಾರರೂ ಇತರ [illegible] ಭಾಗವಹಿಸಿ ಸಹಕರಿಸಬೇಕಾಗಿ ಕೋರಲಾಗಿದೆ

ವ್ರತ ನವರತ್ನ ಮಾಲಿಕೆ

[illegible] ಭಾರತಿಯವರಿಂದ ರಚಿಸಲ್ಪಟ್ಟಿರುವ ಮೇಲ್ಕಂಡ ಪುಸ್ತಕವು [illegible] ಕಛೇರಿಯಲ್ಲಿ ದೊರೆಯುತ್ತದೆ. ಬೆಲೆ ರೂ ೦-೦ ೦

ವಿದ್ಯಾಭ್ಯಾಸ ಮುಂದುವರಿಸಲು ಪೋರ್ಟರನಿಗೆ ಸಾಲ

ದೆಹಲಿಯ ಶ್ರೀ ಪಾಂಡೆ ಎಂಬ [illegible] ಬ್ಯಾತನು ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾಗಿ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೆ ಅಲ್ಲೀ ರೈಲ್ವೆ ಪೋರ್ಟರನ ಕೆಲಸಕ್ಕೆ ಸೇರಿದ್ದನು. ಅವನ ವಿದ್ಯಾಭ್ಯಾಸವನ್ನು ಮುಂದುವರಿಸುವ ಸಲುವಾಗಿ ಉತ್ತರ ಪ್ರದೇಶ ಸರ್ಕಾರದವರು ಈಗ ಅವನಿಗೆ ೨॥ ಸಾವಿರ ರೂ ಸಾಲವಾಗಿ ಕೊಟ್ಟಿರುವುರೆಂದು ವರದಿಯಾಗಿದೆ

ವಿವಿಧ ವಿನೋದಾವಳಿ

ನಂಜನಗೂಡು [illegible]

ಇಲ್ಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನೆನ್ನೆ ಬಾಲಕರ ಮಾಧ್ಯಮಿಕ ಶಾಲೆಯಲ್ಲಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿತ್ತು. ಶ್ರೀ ಎಸ್ ಎಗ್ ವೆಂಕಟಾಚಾರ್ಯರು ಅಧ್ಯಕ್ಷತೆವಹಿಸಿದ್ದರು. ಸಮಾಜದ ಬಾಲಕಿಯರಿಂದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆಯೊಡನೆ ಕಾರ್ಯಕ್ರಮವು ಆರಂಭವಾಯಿತು. ಅನಂತರ ಬಾಲಕ ಬಾಲಕಿಯರಿಂದ ವಿವಿಧ ವೇಷಗಳ ಪ್ರದರ್ಶನ, ಕಾವ್ಯವಾಚನ ಮತ್ತು ಸಂಗೀತಗಳಾದುವು. ಶ್ರೀಮತಿ ನಾಗಮ್ಮನವರ ಹೋಂ ನರ್ಸರಿ ಸ್ಕೂಲಿನ ಮಕ್ಕಳಿಂದ ಗೀತೆಗಳು ಮತ್ತು ವಿವಿಧ ವೇಷ ಪ್ರದರ್ಶನಗಳು ನಡೆದುವು. ಕಂಠಪಾಠಗಳು, ಹಿಂದೀ ಭಾಷಣ, ಧರ್ಮರಾಯ ಮತ್ತು ಅಭಿಮನ್ಯು ಎಂಬ ಏಕಾಂಕ ನಾಟಕದ ಪ್ರದರ್ಶನವಾದ ನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

"NALINS FURNITURE

For Quality and Durability

Available on hire

NALINS,

Furnishers,

V Market Square Mysore

ಗಣೇಶಾ ಮತ್ತು ಚಾಮುಂಡೇಶ್ವರಿ

ಟಾಕೀಸುಗಳಲ್ಲಿ

26-9-51 ರಿಂದ ಅಮೋಘ ಪ್ರದರ್ಶನಾರಂಭ

ಸುಕುಮಾರ್ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ

* ಮೋಹನ ಸುಂದರಂ *

ಪ್ರತಿ ದಿನ ಮೂರು ಪ್ರದರ್ಶನಗಳು

ತಾರಾಗಣ ಟಿ ಆರ್ ಮಹಾಲಿಂಗಂ ಪಿ ಆರ್ ನಾಥುಲ

ಸಾರಂಗಪಾಣಿ ಎಸ್ ವರಲಕ್ಷ್ಮಿ [illegible] ಕುಮಾರಿ ಕಮಲ

ಮೊದಲಿನ [illegible] ಎಲ್ಲ ವಿಧವಾದ [illegible]

[illegible]

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ

ಬೊಂಬಾಯಿ ಆನಂದ ಭವನ ಪ. ಬೀಲು ಪಕ್ಕ, ಮೈಸೂರು

Edited, printed and published by A R Nagaraja at Sadhvi Press D Subbiah Road Mysore

ದೇವಸ್ಥಾನಕ್ಕಾಗಿ ಅಕ್ರಮ ಚಂದಾ ವಸೂಲಿಯೇ !

ಸ್ವಂ ವ] ಶ್ರೀರಂಗಪಟ್ಟಣ

ಇಲ್ಲಿನ ಸ್ನಾನ ಘಟ್ಟದಲ್ಲಿ [illegible] ಲಾಗಿರುವ ಶ್ರೀ ಕಾವೇರಿ ವೆಂಕಟರಮಣ ಸ್ವಾಮಿಯವರ ದೇವಾಲಯದ [illegible] ನ್ನು ಹೇಳಿ ಹಲವರು ಅಕ್ರಮವಾಗಿ [illegible] ವಸೂಲು ಮಾಡುತ್ತಿರುವರೆಂದು ದೇವಸ್ಥಾನದ ಸೀಲಿನಿಂದ ಕೂಡಿದ [illegible] ಮವಾದ ರಶೀತಿಯನ್ನು ಪಡೆಯದೆ [illegible] ರೂ ಹಣವನ್ನು ಕೊಡಬಾರದೆಂದೂ ಬಿ ನಾರಾಯಣರಾಯರು ಈ ಮೂಲಕ ಕೋರಿರುತ್ತಾರೆ

ಕಳೆದ ಒಂದು ವಾರದಿಂದ ಇಲ್ಲಿ ಸಮೃದ್ಧಿಯಾಗಿ ಮಳೆ ಬಂದು ಭತ್ತ [illegible] ಲಾದ ಪೈರುಗಳು ಉತ್ತಮಗೊಂಡಿರುವಲ್ಲದೆ ಜಾನುವಾರುಗಳಿಗೆ ಮೇವಿಗೂ ಅನುಕೂಲವಾಗಿರುತ್ತೆ

ಬೆಳಗುಳ ಗ್ರಾಮದಲ್ಲಿ ಕಾಲರಾ ಹಾವಳಿ

ಶ್ರೀರಂಗಪಟ್ಟಣದ ತಾಲ್ಲೂಕು ಬೆಳಗುಳದಲ್ಲಿ ಈಗ ಒಂದು ತಿಂಗಳಿನಿಂದ [illegible] ಕಾಲರಾ ರೋಗವು ತಲೆದೋರಿ, [illegible] ೧೫ ದಿನಗಳಲ್ಲಿ ೧೫ ೨೦ ಜನರು [illegible] ತುತ್ತಾಗಿರುತ್ತಾರೆ. ಈ ವಿಚಾರವನ್ನು ಸರ್ಕಾರದವರಲ್ಲಿ ತಿಳಿಸಿದರೂ ಅವರೇನೂ ಯಾವ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಕೂಡಲೇ ಸಂಬಂಧ ಪಟ್ಟವರು ಈ ಕಡೆ ಗಮನ ಕೊಟ್ಟು ತಕ್ಕ ಕ್ರಮ ಕೈಗೊಳ್ಳಬೇಕೆಂದು ಕೋರಿ ಗ್ರಾಮಸ್ಥರೊಬ್ಬರು ಪತ್ರ ಬರೆದಿದ್ದಾರೆ

ನವರಾತ್ರಿ ಕಾಲದಲ್ಲಿ ಭಾರತ, [illegible] ರೋಪು, ಅಮೆರಿಕಾ ಪತ್ರಿಕೆಗಳನ್ನು ಕಮಿಷನ್ ಮೇಲೆ ಮಾರಲು ಒಂದು ನೂರು ಮಂದಿ ಬೇಕಾಗಿರುತ್ತಾರೆ

ನ್ಯೂಸ್ ಪೇಪರ್ ಹೌಸ್,

ಜಯನಗರ, ಮೈಸೂರು

ಮೈಸೂರು ಡಿವಿಜನ್ ಕೋ-ಆಪರೇಟಿವ್ ಸೊಸೈಟಿ ಅಸಿಸ್ಟೆಂಟ್ ರಿಜಿಸ್ಟ್ರಾರರ ಕೋರ್ಟಿನಲ್ಲಿ

– ವಾದಿ –

ಶ್ರೀ ಜಯಚಾಮರಾಜೇಂದ್ರ ಕೋಆಪರೇಟಿವ್ ಸೊಸೈಟಿ

– ಪ್ರತಿವಾದಿ –

ಪುಟ್ಟಮಾದಯ್ಯ, ಪ್ರಿಂಟರ್, [illegible] ಪ್ರೆಸ್, [illegible] ಸುಣ್ಣದ ಕೇರಿ, ಕೃಷ್ಣರಾಜ ಮೊಹಲ್ಲಾ, ಮೈಸೂರು ಮತ್ತು ವಾರಸುದಾರರು ಅನೇಕ [illegible] ಹೆಸರು ಗೊತ್ತಿಲ್ಲ

ಮೇಲ್ಕಂಡ ವ್ಯಾಜ್ಯವು 29 9-51ನೇ ಶನಿವಾರ ಬೆಳಗ್ಗೆ 9 ಗಂಟೆಗೆ ವಿಚಾರಣೆಗೆ ಬರುವುದರಿಂದ ಮೇಲ್ಕಂಡ ಪ್ರತಿವಾದಿಯ ವಾರಸುದಾರರು ಆ ದಿನ ರೂಬುರೂಬು ಕೋರ್ಟಿಗೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಏಕಪಕ್ಷ (Ex party) ತೀರ್ಮಾನವಾಗುತ್ತ [illegible] ವುದು

ಕೋರ್ಟಿನ ಅಪ್ಪಣೆ ಮೇರಗೆ

ಕೆ. ವಿ ವೆಂಕಟಸುಬ್ಬಯ್ಯ,

ಗೌರವ ಕಾರ್ಯದರ್ಶಿ

ಮೈಸೂರು

23-9-51

ಸಾಧ್ವಿ

ಸಂಪುಟ ೧೦] ಬುಧವಾರ ೨೬-೯-೫೧ [ಸಂಚಿಕೆ ೫೫

ಯೂಗೊಸ್ಲೇವಿಯಾ ಮೇಲೆ ರಷ್ಯದ ಧಾಳಿ ?

ಕೇಸಾಂಗ್ ಸಂಧಾನ ಹಠಾತ್ತನೆ ನಿಂತಿತು

ಕೊರಿಯಾ ಸೀಸ್ ಫೈರ್ ಸಂಬಂಧವಾಗಿ ಕೇಸಾಂಗಿನಲ್ಲಿ ಪುನರಾರಂಭವಾದ ಸಂಧಾನದ ಮಾತುಕತೆಗಳು ನೆನ್ನೆ ೬೦ ನಿಮಿಷಗಳ ನಂತರ ಹಠಾತ್ತನೆ ಮುಕ್ತಾಯಗೊಂಡುವೆಂದು ವರದಿಯಾಗಿದೆ ಮಿತ್ರ ಪಕ್ಷದ ಅಧಿಕಾರಿ ಕ॥ ಅಂಡ್ರ್ಯೂ ಕಿನ್ನಿಯವರು ಕಮ್ಯೂನಿಸ್ಟ್ ಪ್ರತಿನಿಧಿಯನ್ನು ಕುರಿತು ಸಂಧಾನಕ್ಕೆ ಸಮಯ ಸನ್ನಿವೇಶಗಳ ಬಗ್ಗೆ ಪ್ರಶ್ನಿಸಲಾಗಿ ಅವರು ಉತ್ತರವನ್ನೇ ಕೊಡದೆ ಕೋಪಗೊಂಡು, ಮಾತುಕತೆ ನಡೆಯುತ್ತಿದ್ದ ಕೊಠಡಿಯಿಂದ ಹೊರಕ್ಕೆ ಹೊರಟು ಹೋದರೆಂದು ವರದಿಯಾಗಿದೆ ಜನರಲ್ ರಿಜ್‌ವೇರವರು ತಮ್ಮ ಪ್ರತಿನಿಧಿಗೆ ಆಜ್ಞೆಯೊಂದನ್ನು ಕಳುಹಿಸಿ ಈ ದಿನ ಮತ್ತೆ ಮಾತುಕತೆಗಳನ್ನು ಮುಂದುವರಿಸಲು ಕಮ್ಯೂನಿಸ್ಟರಿಗೆ ಸೂಚನೆಯೀಯಬೇಕೆಂದು ತಿಳಿಸಿರುವರು

ಮೆಕ್ಸಿಕೊ ಚುನಾವಣೆ ಘರ್ಷಣೆಯಲ್ಲಿ ೭ ಮರಣ

ಮೆಕ್ಸಿಕೊ ದೇಶದ ಒಂದು ಊರಿನ ಅಧ್ಯಕ್ಷರ ಚುನಾವಣೆ ಸಂಬಂಧವಾಗಿ ಪೋಲೀಸಿಯು ನಡೆಸಿದ ಅಗ್ನಿನ ಮೇಯರ ಸೇರಿ ೭ ಮಂದಿ ಗುಂಡೇಟಿಗೆ ಸಿಕ್ಕಿ ಸತ್ತರೆಂದೂ, ಅನೇಕರಿಗೆ ಗಾಯವಾಗಿರುವುದೆಂದೂ ತಿಳಿದುಬಂದಿದೆ

ಪಾರ್ಲಿಮೆಂಟಿಗೆ ಮದ್ರಾಸಿನಿಂದ ಆರ್ಕಾಟರು

ಮದ್ರಾಸು ನಗರದಿಂದ ಪಾರ್ಲಿಮೆಂಟ್ ಸಭೆಗೆ ಸರ್ ಆರ್ಕಾಟ್ ರಾಮಸ್ವಾಮಿ ಮುದಲಿಯಾರರು ನಿಲ್ಲುವರೆಂದು ವರದಿಯಾಗಿದೆ

ಸಾರ್ವತ್ರಿಕ ಚುನಾವಣೆಗೆ ೧೦ ಕೋಟಿ ರೂ. ವೆಚ್ಚ

ಏರುವ ಸಾರ್ವತ್ರಿಕ ಚುನಾವಣೆಗಳ ಸಂಬಂಧವಾಗಿ ಒಟ್ಟು ೧೦ ಕೋಟಿ ರೂ ಗಳ ವೆಚ್ಚವಾಗುವುದೆಂದ ಕೇಂದ್ರದ ಚುನಾವಣಾಧಿಕಾರಿಗಳು ಅಂದಾಜು ಮಾಡಿದ್ದಾರೆ

ಅಸ್ಸಾಮಿನಲ್ಲಿ ೫೩ ಪಾಕ್ ಗೂಢಚಾರರ ದಸ್ತಗಿರಿ

ಅಸ್ಸಾಮಿನ ವಿವಿಧ ಜಿಲ್ಲೆಗಳ ಪ್ರದೇಶಗಳಲ್ಲಿ ನೆಲೆಸಿ, ಕಾರ್ಯಾಚರಣೆಯ ನಿರತರಾಗಿದ್ದ ಪಾಕಿಸ್ತಾನದ ೫೩ ಜನ ಗೂಢಚಾರರ ಮುಖಂಡರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ ಇವರ ಪೈಕಿ ಹಲವು ಮಹಿಳೆಯರೂ ಇರುವರು ಹೇಳಲಾಗಿದೆ ಅವರ ಬಳಿ ಇದ್ದ ದಸ್ತಾವೇಜು ಪತ್ರ ಮತ್ತು ಬಾಕುಗಳನ್ನು ವಶಪಡಿಸಿಕೊಳ್ಳಲಾಗಿದೆ

ರಾಜು ಮತ್ತಿತರರ ಮೇಲೆ ಚಾರ್ಜು ಹೊರಿಸಲಾಯಿತು

[ನಮ್ಮ ಪ್ರತಿನಿಧಿ] ಬೆಂಗಳೂರು ೨೫ ಈ ದಿನ ದಂಡಿನ ನ್ಯಾಯಾಧೀಶರು ಪ್ರಿ ಎಲ್ ಎಸ್ ರಾಜು, ಜಯರಾಂ ಮತ್ತು ವಾಸಪ್ಪನಾಯ್ಡುರವರ ಮೇಲೆ [illegible] ಗಳು, ಗಳ ಮತ್ತು [illegible] (ಕೊಲೆ ಪ್ರಯತ್ನ) ಸೆಕ್ಷನ್ ಪ್ರಕಾರ ಅಪಾದನೆಗಳನ್ನು ಹೊರಿಸಿದರು ಗಳು ಮತ್ತು ೩೦೭ನೇ ಕಲಮಿನ ಪ್ರಕಾರ ಆಗ್ನೆಸ್ಸರ ಮೇಲೂ ಚಾರ್ಜಾಯಿತು

ಶೃಂಗೇರಿ ಜಹಗೀರು ಇನಾಂ ಮಸೂದೆಗೆ ಒಳಪಡದಿರಲಿ

ಮೈಸೂರು ಮಹಾರಾಜರಿಗೆ ಬೊಂಬಾಯಿ ಸಮಿತಿಯವರ ಪ್ರಾರ್ಥನೆ

ಮೈಸೂರು ಶಾಸನ ಸಭೆಯ ಮುಂದೆ ಬಂದಿರುವ ಇನಾಂ, ಜೋಡಿ ಮುಂತಾದುವನ್ನು ರದ್ದು ಪಡಿಸುವ ಮಸೂದೆಯು ಶೃಂಗೇರಿಯ ಜಹಗೀರಿಗ ಅನ್ವಯಿಸಕೂಡದೆಂದು ಬೊಂಬಾಯಿಯ ಶೃಂಗೇರಿ ರಕ್ಷಣಾ ಸಮಿತಿಯವರು ಮೈಸೂರಿನ ಶ್ರೀಮನ್ ಮಹಾರಾಜರನ್ನು ಪ್ರಾರ್ಥಿಸಿರುತ್ತಾರೆ ಈ ಸಂಬಂಧವಾಗಿ ಅವರು ಮನವಿಯೊಂದನ್ನು ಸಲ್ಲಿಸಿ, ಜಹಗೀರಿಯು ಎಂದಿನಂತೆ ನಡೆಯದೆ ಹೋದ ಪಕ್ಷದಲ್ಲಿ ಇದರಿಂದ ಅಡಚಣೆಯುಂಟಾಗಿ ಮಠದ ಕೀರ್ತಿಗೆ ಮತ್ತು ಉಪಯುಕ್ತತೆಗೆ ಧಕ್ಕೆ ಬಂದಂತಾಗವುದಲ್ಲದೆ, ಭಾರತೀಯರ ಧಾರ್ಮಿಕ ಮನೋವೃತ್ತಿಗೆ ಇದರಿಂದ ನೋವುಂಟಾಗುವುದೆಂದೂ ತಿಳಿಸಿರುತ್ತಾರೆ ಆರು ಶತಮಾನಗಳ ಹಿಂದೆ ವಿದ್ಯಾರಣ್ಯರು ವಿಜಯನಗರದ ಸಾಮ್ರಾಜ್ಯದ ಕಾಲದಲ್ಲಿ ಸ್ಥಾಪಿಸಿದ ಈ ಸಂಸ್ಥೆಯನ್ನು ಮುಸ್ಲಿಂ ಮತ್ತು ಹಿಂದೂ ಅರಸರೂ ಮಹಾರಾಷ್ಟ್ರ ಪೇಶ್ವೆಗಳೂ ಪೋಷಿಸಿದರೆಂದೂ ಇನಾಂ ಮಸೂದೆಯ ಮೂಲ ಉದ್ದೇಶವು ಅಲ್ಲಿ ಜಾರಿಯಲ್ಲಿಯೇ ಇದ್ದು ರೈತರುಗಳೇ ಖಾತೆದಾರರಾಗಿರುವರೆಂದೂ ಮನವಿಯು ತಿಳಿಸಿರುತ್ತದೆ

ಅಬಡಾನಿನ ಬ್ರಿಟಿಷ್ ಪ್ರವೀಣರ ಉಚ್ಚಾಟನೆ

ಅಬಡಾನ್ ಎಣ್ಣೆ ಸಂಶೋಧನಾಲಯದಲ್ಲಿರುವ ೩೫೦ ಮಂದಿ ಬ್ರಿಟಿಷ್ ಕೆಲಸಗಾರರನ್ನು ಎಂಟು ದಿನಗಳೊಳಗಾಗಿ ಅಲ್ಲಿಂದ ಹೊರದೂಡುವುದಾಗಿ ಪರ್ಷಿಯದ ಪ್ರಧಾನಿ ಡಾ॥ ಮುಸಾದಿಕ್‌ರವರು ತಿಳಿಸಿರುತ್ತಾರೆ

ಟೇಬಲ್ ಟೆನ್ನಿಸ್ ಪಂದ್ಯ

ಮೈಸೂರು ಯೂತ್ಸ್ ಟೇಬಲ್ ಟೆನ್ನಿಸ್ ಸಂಘದವರು ನೆನ್ನೆ ಬಳಗೊಳದಲ್ಲಿನ ಎಂ ಸಿ ಎಫ್. ಕೆಲಸಗಾರರ ಕ್ಲಬ್‌ನವರೊಡನೆ ಟೇಬಲ್ ಟೆನ್ನಿಸ್ ಪಂದ್ಯವಾಡಿ ೫ ಆಟಗಳಿಂದ ಜಯಪಡೆದರು

ಜೂಜಿನ ತೆರಿಗೆಯಲ್ಲಿ ಇಳಿತಾಯ

ಮೈಸೂರು ೨೫ ಈ ದಿನದಿಂದ ಪ್ರಾರಂಭಿಸಿದ ಕುದುರೆ ಪಂದ್ಯದಲ್ಲಿ ಜೂಜು ತೆರಿಗೆಯನ್ನು ೧೦ನೇ ಗಳರಷ್ಟು ವಿಧಿಸುವುದರ ಬದಲು ಗಳ ಯಂತೆ ವಿಧಿಸಲು ಸರ್ಕಾರದವರು ನಿರ್ಧರಿಸಿರುವುದಾಗಿ ಗೊತ್ತಾಗಿದೆ

ಭಾರತೀಯ ಜನ ಸಂಘದ ಅಧಿವೇಶನ

ರಾಜಧಾನಿಯ ಸಹಕಾರ ಭವನದಲ್ಲಿ ನೆನ್ನೆ ಸಂಜೆ ಭಾರತೀಯ ಜನಸಂಘದ ಅಧಿವೇಶನವು ಡಾ॥ ಬಿ॥ ಎಂ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಜಿಲ್ಲೆಯಿಂದ ೫೦ ಜನ ಪ್ರತಿನಿಧಿಗಳು ಆಗಮಿಸಿದ್ದರು. ಕರ್ನಾಟಕ ಸಭೆಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘದ ಧ್ಯೇಯ ಧೋರಣೆಗಳನ್ನು ವಿವರಿಸಿದರು, ಮೈಸೂರು ಜಿಲ್ಲೆಯ ಸಮಿತಿಯೊಂದನ್ನು ರಚಿಸಲಾಯಿತು ಅದಕ್ಕೆ ಶ್ರೀ ಟಿ ಶ್ರೀನಿವಾಸಯ್ಯಂಗಾರ್ಯರನ್ನು ಅಧ್ಯಕ್ಷರಾಗಿಯೂ, ಶ್ರೀಗಳಾದ ರಾಜಗೋಪಾಲ್ ಮತ್ತು ಪಂಚಾಕ್ಷರಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು ಅಡ್ವೊಕೇಟ್ ಶ್ರೀ ಎ ವೆಂಕಟೇಶಯ್ಯನವರು ಭಾಷಣ ಮಾಡಿ, ಇಂತಹ ಸಂದಿಗ್ಧ ಸಮಯದಲ್ಲಿ ಈ ಸಂಸ್ಥೆಯು ಸ್ಥಾಪಿತವಾದುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು

ಕಾಂಗ್ರೆಸ್ಸನ್ನು ಮತ್ತೆ ಸೇರಲು ಕಿದ್ವಾಯಿಯವರ ನಿರ್ಧಾರ

ಕಾಂಗ್ರೆಸ್ಸಿಗೆ ರಾಜೀನಾಮೆಯನ್ನಿತ್ತ ರಫಿ ಅಹಮದ್ ಕಿದ್ವಾಯಿಯವರು ನೆನ್ನೆ ಒಂದು ಪತ್ರಿಕಾ ಸಮ್ಮೇಳನವನ್ನು ಕರೆದು ಕಾಂಗ್ರೆಸ್ಸಿನ ಆಡಳಿತ ವರ್ಗದಲ್ಲಿ ಬದಲಾವಣೆಯಾಗಿರುವುದರಿಂದ ಆ ಸಂಸ್ಥೆಯಲ್ಲಿನ ಅನೀತಿ ಮತ್ತು ಅಕ್ರಮ ನಡವಳಿಕೆಗಳು ಬಹುಮಟ್ಟಿಗೆ ನಿವಾರಣೆಯಾಗುವ ಭರವಸೆಯಿದೆಯೆಂದೂ, ಇದರ ಪರಿಣಾಮವಾಗಿ ತಾವು ಮತ್ತೆ ಕಾಂಗ್ರೆಸ್ಸನ್ನು ಸೇರಲು ಆಲೋಚಿಸಿರುವುದಾಗಿಯೂ ತಿಳಿಸಿದರು ಕಿದ್ವಾಯಿಯವರು ಸಂಸ್ಥೆಗೆ ಸೇರಿದೊಡನೆ ಉತ್ತರ ಪ್ರದೇಶದ ಕಿಸಾನ್ ಮಜ್ದೂರ್ ಪಕ್ಷದ ಸಾವಿರಾರು ಜನರು ಸಾಮೂಹಿಕವಾಗಿ ಅವರನ್ನು ಹಿಂಬಾಲಿಸುವ ನಿರೀಕ್ಷೆಯಿದೆಯೆಂದು ಹೇಳಲಾಗುತ್ತಿದೆ.

ಯೂಗೊಸ್ಲಾವಿಯಾ ಮೇಲೆ ರಷ್ಯಾ ವಿಮಾನ ಧಾಳಿಯೇ !

ರಷ್ಯವು ಯೂಗೊಸ್ಲೇವಿಯಾ ಮೇಲೆ ವಿಮಾನ ಧಾಳಿ ನಡೆಸಲು ಸಜ್ಜು ಮಾಡಿಕೊಂಡಿರುವುದಾಗಿ ಯುಗೊಸ್ಲೇವಿಯದ ಮುಖ್ಯ ಮಂತ್ರಿ ಮಾರ್ಷಲ್ ಟಿಟೋರವರು ಆಪಾದಿಸಿರುತ್ತಾರೆ ರಷ್ಯವು ತನ್ನ ವಿಮಾನಗಳನ್ನು ಹಿಂಬಾಲಕ ರಾಷ್ಟ್ರಗಳಲ್ಲಿಟ್ಟು, ಅವುಗಳಿಗೆ ಯೂಗೊಸ್ಲೇವಿಯಾ ಬಗ್ಗೆ ಮತ್ತು ಪಕ್ಷಗಳನ್ನು ಧಾಳಿ ಸಿದ್ಧಪಡಿಸಿಕೊಂಡಿರುವುದಾಗಿ ಅವರು ತಿಳಿಸಿರುತ್ತಾರೆ.

ಬ್ರಿಟಿಷ್ ರಾಜರ ಸ್ಥಿತಿ ಕಾತುರದಿಂದ ದೂರವಾಗಿಲ್ಲ

ಶಸ್ತ್ರ ಚಿಕಿತ್ಸೆ ಪಡೆದ ಬ್ರಿಟಿಷ್ ಅರಸರ ಶಕ್ತಿಯು ಕ್ರಮೇಣ ಹೆಚ್ಚುತ್ತಿದೆಯೆಂದೂ, ಆದರೂ ಅವರ ಆರೋಗ್ಯದ ಬಗ್ಗೆ ಕಾತುರ ಪರಿಸ್ಥಿತಿಯು ನಿವಾರಣೆಯಾಗಿಲ್ಲವೆಂದೂ ಹೇಳಲಾಗಿದೆ.

ವರುಣನ ಪ್ರಸನ್ನತೆಗಾಗಿ ಅಮರಣಾಂತ ಉಪವಾಸ

ಇಂದೂರಿನ ಬಳಿ ಬರ್‌ಹಾ ನಗರವೆಂಬ ಗ್ರಾಮದಲ್ಲಿ ಬಹಳ ದಿನಗಳಿಂದಲೂ ಮಳೆಯಿಲ್ಲದೆ ಬೆಳೆಯು ನಾಶವಾಗುತ್ತಿರುವುದರಿಂದ ಶ್ರೀ ಹರಿ ನಾರಾಯಣ್ ಎಂಬುವರು ವರುಣ ದೇವರ ಪ್ರಸನ್ನತೆಗಾಗಿ ಕಳೆದ ೧೬ನೇ ತಾರೀಖಿನಿಂದ ಅಲ್ಲಿನ ರೈಲ್ವೆ ನಿಲ್ದಾಣದ ಎದುರಿನ ದೇವಾಲಯದಲ್ಲಿ ಅಮರಣಾಂತ ಉಪವಾಸವನ್ನು ಕೈಗೊಂಡಿರುವರು

ಬೊಂಬಾಯಿಯಲ್ಲಿ ಅತ್ಯುಗ್ರ ಕ್ಷಾಮವೇ ?

ಬೊಂಬಾಯಿ ಪ್ರಾಂತದಲ್ಲಿ ಆಹಾರದ ಪರಿಸ್ಥಿತಿಯು ಉತ್ಕಟವಾಗಿರುವುದೆಂದೂ, ಅಲ್ಲಿ ತಲೆದೋರಬಹುದಾದ ಅತ್ಯಂತ ಭಾರಿ ಕ್ಷಾಮದ ಪರಿಸ್ಥಿತಿಯನ್ನೆದುರಿಸಲು ಸರ್ಕಾರದವರು ಎಲ್ಲ ಮುಂಜಾಗ್ರತೆ ಕ್ರಮಗಳನ್ನೂ ಕೈಗೊಳ್ಳುತ್ತಿರುವರೆಂದೂ ವರದಿಯಾಗಿದೆ

ಸಿಂಹದೊಡನೆ ಕಾದಾಡಿದ ಹುಲಿಯ ಮರಣ

ಮದ್ರಾಸಿನ ಮೃಗಾಲಯದಲ್ಲಿ ಕಳೆದ ೧೯ನೇ ತಾ॥ ವಿಕ್ರಮ್ ಎಂಬ ಹುಲಿ ಗೂ ಲಿಯೋ ಎಂಬ ಸಿಂಹಕ್ಕೂ ಕಾಳಗವಾಗಿ ಸಿಂಹವು ಹುಲಿಯನ್ನು ಬಲವಾಗಿ ಘಾಸಿಗೊಳಿಸಿದುದರ ಪರಿಣಾಮವಾಗಿ ಮೊನ್ನೆ ರಾತ್ರಿ ಹುಲಿಯು ಸತ್ತಿತು ಅದರ ತೊಡೆಯ ಮೂಳೆಯು ಮುರಿದು ಹೋಗಿತ್ತೆಂದು ಹೇಳಲಾಗಿದೆ. ಹುಲಿಯ ಪಂಜರವನ್ನು ಶುದ್ಧ ಮಾಡುವ ಸಲುವಾಗಿ ಅದನ್ನು ಸಿಂಹವಿದ್ದ ಬೇರೊಂದು ಪಂಜರಕ್ಕೆ ರವಾನಿಸಿದಾಗ, ಅಲ್ಲಿ ಅವೆರಡಕ್ಕೂ ಕಾಳಗವಾಯಿತೆಂದು ಹೇಳಲಾಗಿದೆ

ರೈಲಿಗೆ ಸಿಕ್ಕಿ ವೃದ್ಧೆಯ ಮರಣ

ಚಾಮರಾಜನಗರಕ್ಕೆ ರಾಜಧಾನಿಯಿಂದ ಹೊರಡುವ ರೈಲು ನೆನ್ನೆ ಬೆಳಗ್ಗೆ ನಂಜನಗೂಡು ನಿಲ್ದಾಣವನ್ನು ಬಿಟ್ಟು ಮುಂದೆ ಹೋಗುತ್ತಿದ್ದಾಗ ಮಿಡಲ್ ಸ್ಕೂಲಿನ ಲೆವೆಲ್ ಕ್ರಾಸಿಂಗ್ ಬಳಿ ಒಬ್ಬ ಮುಸ್ಲಿಂ ಮುದುಕಿಯು ಸಿಕ್ಕಿ ಮೃತಪಟ್ಟಳೆಂದು ವರದಿಯಾಗಿದೆ.

ಅಂತರ ರಾಷ್ಟ್ರೀಯ ಚಲನ ಚಿತ್ರ ಉತ್ಸವ

ಬರುವ ಡಿಸೆಂಬರ್ ೭ನೇ ತಾರೀಖಿನಿಂದ ಜನವರಿ ೧೧ನೇ ತಾರೀಖಿನವರೆಗೆ ಬೊಂಬಾಯಿ, ಮದ್ರಾಸು ಕಲ್ಕತ್ತಾ, ಮತ್ತು ದೆಹಲಿಗಳಲ್ಲಿ ಅಂತರ ರಾಷ್ಟ್ರೀಯ ಚಲನ ಚಿತ್ರಗಳ ಉತ್ಸವ ನಡೆಯಲು ಸಿದ್ಧತೆಗಳನ್ನು ಮಾಡಲಾಗುತ್ತಿದೆ ವಿಶ್ವದ ನಾನಾ ಭಾಗಗಳಿಂದ ಚಲನ ಚಿತ್ರಗಳನ್ನು ಆಹ್ವಾನಿಸಲಾಗಿದೆ ಭಾರತೀಯ ಮತ್ತು ಅಂತರ ರಾಷ್ಟ್ರೀಯ ಚಲನ ಚಿತ್ರಗಳಲ್ಲಿ ಸುಮಾರು ಅರವತ್ತನ್ನು ಆರಿಸಿ ಅವುಗಳಲ್ಲಿ ಅತ್ಯುತ್ತಮವಾದ ಒಂದು ಭಾರತೀಯ ಚಿತ್ರ ಮತ್ತು ಒಂದು ಪಾಶ್ಚಿಮಾತ್ಯ ಚಿತ್ರಗಳಿಗೆ ಬಹುಮಾನವನ್ನು ಕೊಡಲಾಗುವುದೆಂದು ಗೊತ್ತಾಗಿದೆ

ಚುನಾವಣಾ ಬೂತುಗಳ ವಿಸ್ತಾರದ ಬಗ್ಗೆ ಸಾರ್ವಜನಿಕರಿಗೆ ಸೂಚನೆ

ಸಂಸ್ಥಾನದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಗಳ ಸಂಬಂಧವಾಗಿ ಓಟು ಕೊಡುವ ಕ್ಷೇತ್ರಗಳ ಪಟ್ಟಿಯು ಮುದ್ರಣವಾಗುತ್ತಿರುವುದಾಗಿಯೂ, ಬಂದೊಡನೆಯೇ ಅವುಗಳ ಪ್ರತಿಗಳನ್ನು ರಾಜಕೀಯ ಪಕ್ಷಗಳಿಗೆ ಕಳುಹಿಸಲಾಗುವುದೆಂದೂ ಕ್ಷೇತ್ರಗಳ ನಿರ್ಮಾಣದ ಬಗ್ಗೆ ಸಾರ್ವಜನಿಕರು, ೧೫ ದಿನಗಳೊಳಗೆ ತಮ್ಮ ಸಲಹೆ ಅಥವಾ ಟೀಕೆಗಳನ್ನು ಕಳುಹಿಸಬಹುದೆಂದೂ, ಅನಂತರ ಬರುವ ಟೀಕೆಗಳಿಗೆ ಗಮನವೀಯಲಾಗುವುದಿಲ್ಲವೆಂದೂ ಸರ್ಕಾರಿ ಪತ್ರಿಕಾ ಪ್ರಕಟಣೆಯೊಂದು ತಿಳಿಸಿರುತ್ತದೆ ಮೈಸೂರು ಮತ್ತು ಬೆಂಗಳೂರುಗಳ ಕಮಿಷನರುಗಳು ಆಯಾ ನಗರದ ಮೊಹಲ್ಲೆಗಳಲ್ಲಿ ಅವುಗಳನ್ನು ಪ್ರಕಟಿಸುವರು ಇತರ ಕಡೆ ಜಿಲ್ಲಾಧಿಕಾರಿಗಳು, ಸಬ್ ಡಿವಿಜನ್ ಅಧಿಕಾರಿಗಳು, ಅಮಲ್ದಾರ್ ಮತ್ತು ಹೋಬಳಿ ಮತ್ತು ರೆವಿನ್ಯೂ ಸರ್ಕಲ್ ಅಧಿಕಾರಿಗಳ ಕಛೇರಿಗಳಲ್ಲಿ ಪ್ರತಿ ಕ್ಷೇತ್ರದ ಪಟ್ಟಿಯ ಪ್ರಕಟವಾಗುವುದು

ಮೈಸೂರು ಚರಖಾ ಪ್ರಚಾರ ಸಂಘದ ವಾರ್ಷಿಕ ಸಭೆ

ಮೇದರಕೇರಿ ಪುರದಲ್ಲಿ ಮೈಸೂರು ಚರಖಾ ಪ್ರಚಾರ ಸಂಘದ ಸಂವತ್ಸರ ವಾರ್ಷಿಕ ಸಭೆಯು ಬರುವ ತಿಂಗಳು ೫ನೇ ತಾ|| ನಡೆದು, ಸಂಘದ ಸಂಸ್ಥೆಗಳಾದ ಕತಾಯಿ ಮಂಡಲಿಗಳು, ಸಹಕಾರ ಸಂಘಗಳು ಮತ್ತು ಖಾದಿ ಪ್ರಚಾರ ಕಾರ್ಯಗಳಿಂದ ೭ ಜನ ಪ್ರತಿನಿಧಿಗಳನ್ನು ಸಂಘಕ್ಕೆ ಚುನಾಯಿಸಲಾಗುವುದು

ಪೂರ್ವ ಬಂಗಾಳಾ ಮುಸ್ಲಿಂ ಬಾಲಕರಿಗೆ ಅರಬ್ಬೀ ಶಿಕ್ಷಣ

ಪೂರ್ವ ಬಂಗಾಳದ ಮುಸ್ಲಿಂ ಬಾಲಕ ಬಾಲಕಿಯರು ಈಗ ಇರುವ ಬಂಗಾಳಿಯ ಬದಲು ಅರಬ್ಬಿ ಲಿಪಿಯಲ್ಲಿ ಶಿಕ್ಷಣ ಪಡೆಯಬೇಕೆಂದು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಹಿಂದೀ ಪ್ರಚಾರ ಭಾಷಣ

ಮದ್ರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಇಲ್ಲಿನ ಮಹಾರಾಜಾ ಕಾಲೇಜಿನಲ್ಲಿ ಹಿಂದೀ ಅಧ್ಯಾಪಕರಾಗಿರುವ ಶ್ರೀ ಎಂ ರಾಜಶೇಖರಯ್ಯನವರಿಗೆ ಇತ್ತಿರುವ ಆಹ್ವಾನದ ಪ್ರಕಾರ ಕ್ರಿಯ ೩ರ ಮದ್ರಾಸು ವಿಜಯವಾಡ ಪಾಮುರು ಮತ್ತು ತಿರುಚನಾಪಳ್ಳಿಗಳಲ್ಲಿ ಪ್ರಚಾರಕ ಮತ್ತು ವಿಶಾರದ ಹಿಂದೀ ವಿದ್ಯಾಲಯಗಳಲ್ಲಿ ಪ್ರಾಚೀನ ಕವಿಗಳಾದ ಕಬೀರ್ ಸೂರ್ ಮತ್ತು ತುಳಸೀದಾಸರು ಮತ್ತು ಆಧುನಿಕ ಕವಿಗಳ ಮೈಥಿಲಿ ಶರಣಗುಪ್ತ ಪ್ರಸಾದ್, ಪಂತ್, ಮಹಾದೇವಿ ಮುಂತಾದವರನ್ನು ಕುರಿತು ಬರುವ ತಿಂಗಳು ೨ನೇ ತಾರೀಖಿನಿಂದ ೧೫ನೇ ತಾರೀಖಿನವರೆಗೆ ಭಾಷಣ ಮಾಡಲು ಈ ತಿಂಗಳು ೩೦ ನೇ ತಾ ಮದ್ರಾಸಿಗೆ ಪ್ರಯಾಣ ಬೆಳೆಸುವರು

ವಿದ್ಯಾಗಣಪತಿ ಮಂಗಳಾರತಿ

ರಾಜಧಾನಿಯ ಖ್ಯಾತನಾಮ ಚನ್ನಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಈ ಸಂಜೆ ೬|| ಗಂಟೆಗೆ ಶ್ರೀ ವಿದ್ಯಾಗಣಪತಿಯ ಮಂಗಳಾರತಿಯು ಟೀಚರ್ಸ್ ಕಾಲೇಜಿನ ಅಧ್ಯಾಪಕರಾದ ಶ್ರೀ ಎಂ ಎಸ್ ವೀರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು ಕಾಲೇಜು ತತ್ವ ಶಾಸ್ತ್ರದ ಎ|| ಪ್ರೊ|| ಶ್ರೀ ಎಂ ಯಾಮುನಾಚಾರ್ಯರು ಭಾಷಣ ಮಾಡುವರು ನಾಳೆ ಸಂಜೆ ೬|| ಗಂಟೆಗೆ ಓರಿಯಂಟಲ್ ಲೈಬ್ರರಿಯ ಕ್ಯೂರೇಟರ್ ಶ್ರೀ ದೇವೀರಪ್ಪನವರ ಅಧ್ಯಕ್ಷತೆಯಲ್ಲಿ ೮|| ವಿ|| ವಿ ದೇವೇಂದ್ರಪ್ಪನವರ ವೀಣಾವಾದನವು ಪಕ್ಕ ವಾದ್ಯಗಳೊಡನೆ ನಡೆಯುವುವು ಸಕಲರಿಗೂ ಆಹ್ವಾನವಿದೆ

ಲಕ್ಷ್ಮೀಪುರದಲ್ಲಿರುವ ಶ್ರೀ ಭಗಿನಿ ಸೇವಾ ಸಮಾಜದಲ್ಲಿ ಶ್ರೀ ಗಣೇಶೋತ್ಸವವು ನಾಳೆ ಮತ್ತು ನಾಳಿದ್ದು ಸಂಜೆ ೫|| ಘಂಟೆಗೆ ನಡೆಯುವುವು ನಾಳೆ ದಿನ ಶ್ರೀ ... ಸಂಕಲ್ಪೀರಯ್ಯನವರಿಂದ ಉಪನ್ಯಾಸವೂ, ನಾಳಿದ್ದು ೬|| ಕ್ಕೆ ಶ್ರೀ ಆರ್ ಎಸ್ ಕೇಶವ ಮೂರ್ತಿಯವರಿಂದ ವೀಣೆಯೂ ನಡೆಯುವುವು

ಮದ್ರಾಸಿನ ಎಲ್ಲ ಸ್ಥಾನಕ್ಕೂ ಜಸ್ಟಿಸ್ ಪಕ್ಷದ ಸ್ಪರ್ಧೆ

ಮದ್ರಾಸ್ ಶಾಸನ ಸಭೆ ಮತ್ತು ಪಾರ್ಲಿಮೆಂಟಿನ ಕೆಳ ಸಭೆಯ ಎಲ್ಲ ಸ್ಥಾನಗಳಿಗೂ ಮಹಾಚುನಾವಣೆಯಲ್ಲಿ ಸ್ಪರ್ಧಿಸಲು ಅಲ್ಲಿನ ಜಸ್ಟಿಸ್ ಪಕ್ಷ ನಿರ್ಧರಿಸಿರುತ್ತದೆ

ಗೂಡ್ಸ್ ರೈಲು ವ್ಯಾಗನ್ ಉರುಳಿತು

ನೆನ್ನೆ ದಿನ ರಾಜಧಾನಿಯಿಂದ ಬೆಂಗಳೂರಿಗೆ ಹೊರಟ ಗೂಡ್ಸ್ ರೈಲು ಪಾಂಡವಪುರ ಮತ್ತು ಬ್ಯಾಡರಹಳ್ಳಿಯ ನಡುವೆ ಹೋಗುತ್ತಿದ್ದಾಗ ಒಂದು ವ್ಯಾಗನ್ನು ಕಂಬಿ ತಪ್ಪಿ ಉರುಳಿದುದರಿಂದ ರೈಲು ಸಂಚಾರಕ್ಕೆ ಅಡಚಣೆಯಾಯಿತು ಬೆಂಗಳೂರಿನ ಪಟಲ್ ಮತ್ತು ಮೈಸೂರಿನ ಮೇಲ್ ಗಾಡಿಗಳ ಓಡಾಟವು ನಿಧಾನವಾಯಿತು ರಾತ್ರಿ ೧೦|| ಗಂಟೆ ಹೊತ್ತಿಗೆ ರೈಲು ಮಾರ್ಗವು ಸಂಚಾರಕ್ಕೆ ಅನುಕೂಲ ಪಡಿಸಲ್ಪಟ್ಟಿತು

ಜಾನುವಾರುಗಳಿಗೆ ಗಂಟಲು ಬೇನೆ

ಮೈಸೂರು ನಗರದಲ್ಲಿ ಈಗ್ಗೆ ೭-೮ ದಿವಸಗಳಿಂದ ಈಚೆ ಜಾನುವಾರುಗಳಿಗೆ ಗಂಟಲು ರೋಗವು ಪ್ರಾರಂಭವಾಗಿ ಸುಮಾರು ... ರಾಸುಗಳು ಬಹಳ ಜಾಗ್ರತೆಯಾಗಿ ಸತ್ತಿರುತ್ತವೆ ಈ ರೋಗ ಬಹಳ ತೀವ್ರವಾಗಿ, ತಗಲಿದ ಅರ್ಧ ಗಂಟೆಯಿಂದ ೭ ಗಂಟೆಯೊಳಗಾಗಿ ದನಗಳು ಮೃತಪಡುತ್ತವೆ ಆದ್ದರಿಂದ ದನಕರುಗಳನ್ನು ಇಟ್ಟುಕೊಂಡಿರುವವರೆಲ್ಲರೂ, ಆದಷ್ಟು ಬೇಗನೆ ಪಶುವೈದ್ಯ ಇಲಾಖೆಯವರೊಡನೆ ಸಹಕರಿಸಿ ರಾಸುಗಳಿಗೆ ಇನಾಕ್ಯುಲೇಷನ್ ಮಾಡಿಸಿದಲ್ಲಿ ರೋಗ ಹರಡಲು ಅವಕಾಶವಿರುವುದಿಲ್ಲ ಈಗಾಗಲೇ ಪಶುವೈದ್ಯ ಇಲಾಖೆಯವರು ಮುತುವರ್ಜಿ ವಹಿಸಿ, ದನಕರುಗಳಿಗೆ ರೋಗ ತಗಲದಂತೆ ಇನಾಕ್ಯುಲೇಷನ್ ಮಾಡುತ್ತಿರುತ್ತಾರೆ ರೋಗಕ್ಕೆ ಹೆಚ್ಚು ರಾಸುಗಳು ತುತ್ತಾಗದಂತೆ ಜನರು ಮುಂಜಾಗ್ರತೆಯಿಂದ ಜಾನುವಾರುಗಳನ್ನು ಕಾಪಾಡಿಕೊಳ್ಳಬೇಕೆಂದು ಕೋರಿ, ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ ಜಿ ಜನಾರ್ಧನ ನಾಯ್ಡುರವರು ತಿಳಿಸಿರುತ್ತಾರೆ

THIRTHA & COMPANY,
Narayana Sastry Road
PHONE 537
Clearing & Forwarding
AGENTS

ಕಾಂಗ್ರೆಸ್ ಚುನಾವಣಾ ಸಮಿತಿಯವರಿಗೆ ಸಲಹೆ

ಮೈಸೂರು ಪುರಸಭೆಯ ಮಾಜಿ ಉಪಾಧ್ಯಕ್ಷರಾದ ಶ್ರೀ ಕೆ ಧನಕೋಟಿ ಶೆಟ್ಟರು ಒಂದು ಪತ್ರವನ್ನು ಬರೆದು ಈ ರೀತಿ ತಿಳಿಸಿರುತ್ತಾರೆ

ಹಾಲಿ ಚುನಾವಣೆಗಳು ಸಮೀಪಿಸುತ್ತಿರುವುದು ಸಂಯುಕ್ತ ಶಾಸನ ಸಭೆಗೆ ಅನೇಕ ಮಹನೀಯರು ಉಮೇದುವಾರರಾಗಬಹುದು ಕಾಂಗ್ರೆಸ್ಸಿನ ಉಮೇದುವಾರರ ಪಟ್ಟಿ ಸರಿಯಾದವರನ್ನು ನಿಷ್ಪಕ್ಷಪಾತ ಮಾಡಿ ಆರಿಸುವ ಜವಾಬ್ದಾರಿಯು ಪಾರ್ಲಿಮೆಂಟರಿ ಸಮಿತಿಯವರಿಗೆ ಸೇರಿರುತ್ತದೆ ಈಗ ಚುನಾಯಿತರಾಗಿರುವ ಸದಸ್ಯರುಗಳು ಅಸೆಂಬ್ಲಿಯಲ್ಲಿ ... ದಾ ಶಕ್ತಿ ಸೇವೆ ಸಲ್ಲಿಸಿರುವರು ಕಾಂಗ್ರೆಸ್ ಚಟುವಟಿಕೆಗಳಲ್ಲಿ ಅನೇಕ ವರ್ಷಗಳಿಂದ ಭಾಗವಹಿಸಿ ತನು, ಮನ, ಧನವನ್ನು ಅರ್ಪಿಸಿ ಇನ್ನೂ ಹೆಚ್ಚಾಗಿ ದೇಶಸೇವೆ ಮಾಡಲು ಅರ್ಹರಾಗಿರುವವರು ಅನೇಕರಿರುತ್ತಾರೆ ಇದುವರೆಗೆ ಅವಕಾಶ ಸಿಕ್ಕದೆ ಇರುವಂತಹ ಮಹನೀಯರನ್ನು ಹುಡುಕಿ ಅವರನ್ನು ಶಾಸನ ಸಭೆಗೆ ನಿಲ್ಲಿಸಬೇಕು ಹೀಗೆ ಮಾಡಿದರೆ ಕಾಂಗ್ರೆಸ್ಸಿನಲ್ಲಿ ನಂಬಿಕೆ ಮತ್ತು ಗೌರವವು ಜನರಲ್ಲಿ ಮೂಡುವುದರಿಂದ ಪಾರ್ಲಿಮೆಂಟರಿ ಸಮಿತಿಯವರು ಅಂತಹವರನ್ನು ಆರಿಸುತ್ತಾರೆಂದು ನಂಬಿರುತ್ತೇನೆ ಇದರಿಂದ ಹಾಲಿ ಕಾಂಗ್ರೆಸ್ಸಿಗೆ ಉಂಟಾಗಿರುವ ಆಕ್ಷೇಪಣೆಗಳೆಲ್ಲಾ ಮಾಯವಾಗುವುವು ಈ ವಿಚಾರದಲ್ಲಿ ಆತುರ ಪಡದೆ ಯಾವ ವಿಧವಾದ ಪಕ್ಷಪಾತಕ್ಕೂ ಎಡೆಗೊಡದೆ ದೀರ್ಘ ಆಲೋಚನೆಯಿಂದ ಇತ್ಯರ್ಥ ಮಾಡಬೇಕೆಂದು ಹೃತ್ಪೂರ್ವಕವಾಗಿ ಸೂಚಿಸುತ್ತೇನೆ

SRI GAYATHRI,
TALKIES
Daily 4 Shows
To-day only
Warner's
INSPECTOR GENERAL
With Danny Kaye
In Technicolor)
On 27th inst
CRY WOLF
With Errol Flynn
From 28 9 51
M G M's
DUCHESS OF IDAHO
(In Technicolor)
With Esther Williams

ಗಣೇಶಾ ಮತ್ತು ಚಾಮುಂಡೇಶ್ವರಿ
ಟಾಕೀಸುಗಳಲ್ಲಿ
26-9-51 ರಿಂದ ಅಮೋಘ ಪ್ರದರ್ಶನಾರಂಭ
ಸುಕುಮಾರ್ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ
*** ಮೋಹನ ಸುಂದರಂ ***
ಪ್ರತಿ ದಿನ ಮೂರು ಪ್ರದರ್ಶನಗಳು
ತಾರಾಗಣ ಟಿ ಆರ್ ಮಹಾಲಿಂಗಂ ಟಿ ಆರ್ ರಾಮಚಂದ್ರನ್
ಸಾರಂಗಪಾಣಿ ಎಸ್ ವರಲಕ್ಷ್ಮಿ ಸುಶೀಲ ಮತ್ತು ಕುಮಾರಿ ಕಮಲ
ಮೊದಲಿನ ೩ ವಾರ ಕಾಲ ಎಲ್ಲ ವಿಭವಾದ ರಿಯಾಯಿತಿಗಳನ್ನು ರದ್ದು ಮಾಡಲಾಗಿದೆ

ಒಲಂಪಿಯಾ
27-9-51 ರಿಂದ
ಅಮೋಘವಾದ 3 ನೆಯ ವಾರ
ಅನ್‌ಮೋಲ್ ರತನ್
ಮುಂದಿನ ಬದಲಾವಣೆ
*** ಮಲ್ ಹಾರ್ ***
ಪ್ರಖ್ಯಾತ ಹಿನ್ನೆಲೆ ಸಂಗೀತಗಾರರಾದ ಶ್ರೀ ಮುಕೇಶ್‌ರವರಿಂದ
ತಯಾರಿಸಲ್ಪಟ್ಟ ಶ್ರೇಷ್ಠ ದರ್ಜೆಯ
ಸಂಗೀತಮಯ ಚಿತ್ರ

Edited, printed and published by A R Nagarajan, at Sadhvi Press 13 Subbiah Road, Mysore

ನೋಂ ಸಂ 792 | ವಂದೇ ಮಾತರಂ | ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೨೭-೯-೫೧ [ಸಂಚಿಕೆ ೫೬

ಆಂಧ್ರ ಪ್ರಾಂತ ರಚನೆಗೆ ಕರ್ನಾಟಕದ ಒಪ್ಪಿಗೆ

ಆಂಧ್ರ ಪ್ರಾಂತ ರಚನೆಗೆ ಕರ್ನಾಟಕದವರ ಷರತ್ತು

ಕರ್ನಾಟಕ ಪ್ರಾಂತ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಗುಡ್ಲೆಪ್ಪ ಹಳ್ಳಿ ಕೇರಿಯವರು ಪಂಡಿತ ನೆಹರೂ ಮತ್ತು ರಾಷ್ಟ್ರಾಜಿಯವರಿಗೆ ತಂತಿಯನ್ನು ಕಳುಹಿಸಿ, ಎಲ್ಲ ಭಾಷಾವಾರ ಪ್ರಾಂತ್ಯಗಳನ್ನೂ ಏತನೆಯೇ ಏಕ ಕಾಲದಲ್ಲಿ ರಚಿಸಬೇಕೆಂದು ಒತ್ತಾಯಪಡಿಸಿರುವರು ಆಂಧ್ರ ಪ್ರಾಂತ್ಯವನ್ನು ಮೊದಲು ರಚಿಸಲು ಕರ್ನಾಟಕದವರ ಆಕ್ಷೇಪಣೆಯೇನೂ ಇಲ್ಲವೆಂದೂ, ಆದರೆ ಬಳ್ಳಾರಿ ಜಿಲ್ಲೆ ಮತ್ತು ವ ಡಕಸಿರ ಪ್ರದೇಶಗಳ ಬಗ್ಗೆ ವಿವಾದವುಂಟಾಗಿರುವುದರಿಂದ ಅವುಗಳನ್ನು ಆಂಧ್ರ ಪ್ರಾಂತಕ್ಕೆ ಸೇರಿಸಕೂಡದೆಂದೂ ತಂತಿಯಲ್ಲಿ ಸೂಚಿಸಲಾಗಿದೆ

ಆಂಧ್ರದ ಗಡಿ ನಿರ್ದೇಶನ ಸಮಿತಿಯವರು ಕರ್ನಾಟಕದ ಗಡಿಯನ್ನೂ ಗೊತ್ತು ಮಾಡಬೇಕೆಂದೂ, ಮತ್ತು ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳನ್ನು ಖಂಡಿತವಾಗಿ ಆಂಧ್ರಕ್ಕೆ ಸೇರಿಸಕೂಡದೆಂದೂ ಒತ್ತಾಯ ಮಾಡಲಾಗಿದೆ ತುಂಗಭದ್ರ ಅಣೆಕಟ್ಟಿನ ಆಡಳಿತ ಮತ್ತು ಮೇಲ್ತನಿಗಾಗಿ ತಕ್ಕ ವ್ಯವಸ್ಥೆ ಮಾಡಬೇಕೆಂದೂ ಕೋರಲಾಗಿದೆ

ಮುದ್ಗಲ್ ಪದಚ್ಯುತಿಗೆ ಪಾರ್ಲಿಮೆಂಟಿನ ಒಪ್ಪಿಗೆ

ನೆನ್ನೆ ಪಾರ್ಲಿಮೆಂಟ್ ಸಭೆಯು ಸಭಾ ಸದಸ್ಯ ಹೆಚ್ ಜಿ ಮುದ್ಗಲ್‌ರವರ ಸದಸ್ಯತ್ವ ಪದಚ್ಯುತಿ ಮಾಡಲು ತಕ್ಕ ಕಾರಣವಿರುವುದಾಗಿ ಸೂಚಿಸಿತು ಅವರು ರಾಜೀನಾಮೆಯನ್ನು ಸಲ್ಲಿಸಿರುವುದನ್ನು ಆ ಸಭೆಯು ಆಕ್ಷೇಪಿಸಿ ಅದರಿಂದ ಅವರ ಅಪರಾಧವು ಮತ್ತಷ್ಟು ಹೆಚ್ಚಿರುವುದಾಗಿ ಅಭಿಪ್ರಾಯ ಪಟ್ಟಿತು ಪಾರ್ಲಿಮೆಂಟ್ ಸಭೆಯು ಪ್ರೇಕ್ಷಕರ ಪಾಸನ್ನೂ ಅವರಿಗೆ ಕೊಡದೆ ನಿರಾಕರಿಸಲಾಯಿತೆಂದೂ ಗೊತ್ತಾಗಿದೆ

ಆಟದ ನೆಪದಲ್ಲಿ ಸ್ತ್ರೀಯಿಂದ ಗಂಡನ ಕೊಲೆ

ಸಿಕಂದರಾಬಾದಿನ ಸುಲ್ತಾನ ಎಂಬ ೨೦ ವರ್ಷದ ಮಹಿಳೆಯು ತನ್ನ ಗಂಡನಾದ ಜಾಫರನೊಡನೆ ಸರಸವಾಡುತ್ತಾ ಅವನ ಕೈಗಳನ್ನು ಹಿಂದಕ್ಕೆ ಸೇರಿಸಿ ಕಟ್ಟಿ ಹಾಕಿ, ಕ್ಷೌರದ ಕತ್ತಿಯಿಂದ ಅವನ ಕುತ್ತಿಗೆಯನ್ನು ಕತ್ತರಿಸಿ ಕೊಂದ ಆಪಾದನೆಗಾಗಿ ಅವಳ ಮೇಲೆ ಮೊಕದ್ದಮೆ ಹೂಡಲಾಗಿದೆ

ದಸರಾದ ನಂತರ ರಾಜಾಜಿ ಅಧಿಕಾರದಿಂದ ಹೊರಕ್ಕೆ

ದಸರಾ ಹಬ್ಬದ ನಂತರ ರಾಜಾಜಿಯವರು ಭಾರತದ ಮಂತ್ರಿ ಮಂಡಲದಿಂದ ಹೊರಬರುವರೆಂದು ಹೇಳಲಾಗಿದೆ ಚುನಾವಣೆಗಳಿಗಿಂತ ಮುಂಚಿತವಾಗಿ ಕೇಂದ್ರದ ಮಂತ್ರಿ ಸಂಪುಟದಲ್ಲಿ ಪುನಃ ಬದಲಾವಣೆಯಾಗುವುದೆಂದು ಹೇಳಲಾಗಿದೆ

ಕೊಲ್ಹಾಪುರದ ರೈಲ್ವೆ ನಿಲ್ದಾಣದಲ್ಲಿ ಜೇಬುಗಳ್ಳರನ್ನು ಮೊನ್ನೆ ಹಿಡಿಯಲೆತ್ನಿಸಿದಾಗ, ಅವರು ಕಲ್ಲೆಸೆಯಲಾಗಿ ಪೋಲೀಸರು ಗುಂಡು ಹಾರಿಸಿದರೆಂದೂ, ಪರಿಣಾಮವಾಗಿ ಒಬ್ಬ ಹೆಂಗಸು ಒಬ್ಬ ಹುಡುಗ ಸತ್ತರೆಂದೂ ವರದಿಯಾಗಿದೆ

ರೇಸ್ ಕೋರ್ಸಿನಲ್ಲಿ ಜೇಬು ಕಳ್ಳನ ಬಂಧನ

ಮೈಸೂರು ೨೬

ನೆನ್ನೆ ದಿನ ರೇಸ್ ಕೋರ್ಸಿನಲ್ಲಿ ೧೩೦ ರೂ ಅನ್ನು ಕಳುವು ಮಾಡಿದ ಮಹಮದ್ ಯೂಸುಫ್ ಎಂಬಾತನನ್ನು ನಗರದ ಕ್ರೈಂಬ್ರಾಂಚ್ ಪೋಲಿಸರು ಬಂಧಿಸಿ, ಈ ದಿನ ಚಾರ್ಜುಷೀಟು ಹಾಕಿದರು

ಕಳ್ಳತನಕ್ಕಾಗಿ ಸಜಾ

ನಜರ್‌ಬಾದಿನ ನೀಲಾಂಬಾ ಪಾಲನ ಕೇಂದ್ರ ಮತ್ತು ಉರ್ದು ಪ್ರೈಮರಿ ಬಾಲಿಕಾ ಪಾಠಶಾಲೆಗಳಲ್ಲಿ ಕಳುವು ಮಾಡಿದ ನಾರಾಯಣ ಎಂಬುವನಿಗೆ ಎರಡು ಆಪರಾಧಗಳಿಗೂ ತಲಾ ಒಂದು ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಲಾಗಿದೆ

ಹೆಂಗಸು ನೇಣು ಹಾಕಿಕೊಂಡು ಸತ್ತ ಪ್ರಸಂಗ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿ ಶ್ರೀಮತಿ ನಿರ್ಮಲಮ್ಮ ಎಂಬ ೨೫ ವರ್ಷದ ಮಹಿಳೆಯು ಮೊನ್ನೆ ನೇಣು ಹಾಕಿಕೊಂಡು ಸತ್ತಿರುವುದಾಗಿ ಗೊತ್ತಾಗಿದೆ ಕೆಲವು ದಿನಗಳ ಹಿಂದೆ ಕ್ರಾಫರ್ಡ ಭವನದಲ್ಲಿ ನಡೆದ ಶ್ರೀಮತಿ ಸುಬ್ಬಲಕ್ಷ್ಮಿಯವರ ಸಂಗೀತ ಕೇಳಲು ಆಕೆಯು ಕ್ರಾಫರ್ಡ್ ಭವನಕ್ಕೆ ಹೋಗಿದ್ದಾಗ ಅವಳ ಗಂಡ ರೈಲ್ವೆಯಲ್ಲಿ ನೌಕರರಾಗಿದ್ದ ಶ್ರೀ ವೀರ ಸಂಗಯ್ಯನವರು ಆತ್ಮಹತ್ಯೆ ಮಾಡಿ ಕೊಂಡಿದ್ದರೆಂದೂ, ಅದರ ಮೇಲಿನ ಜಿಗುಪ್ಸೆಯಿಂದ ಶ್ರೀಮತಿಯವರು ಪ್ರಾಣವನ್ನು ತ್ಯಜಿಸಿದರೆಂದು ಹೇಳಲಾಗಿದೆ ನೆನ್ನೆ ಪೋಲೀಸರು ಮಹಜರು ಕ್ರಮವನ್ನು ನಡೆಸಿದರು

ಗಣಪತಿ ಪೂಜೆ

ನಂಜನಗೂಡಿನ ಜ್ಯೂಬಿಲೀ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಗಣಪತಿ ಪೂಜೆಯ ಅಂಗವಾಗಿ ವಿ|| ಟಿ ಪುಟ್ಟಸ್ವಾಮಯ್ಯನವರ ಹಾಡುಗಾರಿಕೆಯೂ, ವಿ|| ಮಹದೇವಸ್ವಾಮಿಯವರ ಪಿಟೀಲೂ ಮತ್ತು ಆಸ್ಥಾನ ವಿದ್ವಾನ್, ಸಂಗೀತರತ್ನ ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗವೂ ಏರ್ಪಾಡಾಗಿರುತ್ತದೆ ಸರ್ವರೂ ದಯಮಾಡಿ ಸಬೇಕಾಗಿ ಕೋರಿದೆ

ವಿಷಪ್ರಾಶನ ಮೊಕದ್ದಮೆ

ಅಪಾದಿತರು ಸೆಷನ್ಸಿಗೆ ಗುರಿ

ಬೆಂಗಳೂರು ೨೬

ಶ್ರೇಷ್ಠ ನ್ಯಾಯಾಧೀಶ ಶ್ರೀ ಸಿ ಮೇದಪ್ಪನವರಿಗೆ ವಿಷಪ್ರಾಶನ ಪ್ರಯತ್ನದ ಸಂಬಂಧವಾಗಿ ಹೂಡಿರುವ ಮೊಕದ್ದಮೆಯನ್ನು ನೆನ್ನೆ ಸಿವಿಲ್ ಪ್ರದೇಶದ ನ್ಯಾಯಾಧೀಶರಾದ ಶ್ರೀ ವಿ ಜಿ ಕೋಣಸ್ಯಾಂರವರು ಅಪಾದಿತರಾದ ಶ್ರೀಗಳು ರಾಜು, ಜಯರಾಂ ಮತ್ತು ದಾಸಪ್ಪನಾಯ್ಡು ಇವರುಗಳು ಅಕ್ರಮ ಕೂಟವ ಸದಸ್ಯರಾಗಿದ್ದು, ವಿಷಪ್ರಾಶನದ ಪ್ರಯತ್ನಕ್ಕೆ ಸಹಾಯಕರಾಗಿದ್ದರೂ, ಶ್ರೀ ಮೇದಪ್ಪನವರಿಗಾಗಿ ತಯಾರಾಗುತ್ತಿದ್ದ ಚಹಾವಿಗೆ ವಿಷವನ್ನು ಹಾಕಿ, ಕೊಲೆಗೆ ಯತ್ನಿಸಿದ ಕಾರಣಕ್ಕಾಗಿಯೂ ಚಾರ್ಜುಗಳನ್ನು ಹೊರಿಸಿದರು ಪ್ರತಿಯೊಂದು ಆಪಾದನೆಯನ್ನೂ ಅಪಾದಿತರಿಗೆ ನ್ಯಾಯಾಧೀಶರು ವಿವರಿಸಿ, ಅವರನ್ನು ಸೆಷನ್ಸಿಗೆ ಒಪ್ಪಿಸಿರುವುದಾಗಿ ತಿಳಿಸಿದರು

ಅಪಾದಿತರು, ಅನಂತರ ತಮ್ಮ ಪರ ಡಿಫೆನ್ಸ್ ಸಾಕ್ಷಿಗಳ ಪಟ್ಟಿಗಳನ್ನು ಕೊಟ್ಟರು, ಎರಡನೇ ಅಪಾದಿತರ ಪರ ಸಾಕ್ಷಿಗಳ ಪೈಕಿ, ಶ್ರೀಮತಿ ಸಿ ಮೇದಪ್ಪ ಶ್ರೀಗಳಾದ ಆರ್ ಪುಟ್ಟರಾಜೆ ಅರಸ್, ಜಿ ಪದ್ಮನಾಭಯ್ಯ, ಮದ್ರಾಸಿನ ವಕೀಲ ಪಾಂಡುರಂಗರಾವ್, ಚಿತ್ತೂರಿನ ಶ್ರೀ ಎಂ ಅನಂತಶಯನಂ ಅಯ್ಯಂಗಾರ್, ಕೆ ಸಿ ರೆಡ್ಡಿ, ಭಾಷ್ಯಂ, ಮರಿಯಪ್ಪ, ಜಿ ಎ ನಾಗರಾಜರಾವ್, ವಿ ಪಿ ಮೆರ್ಗ, ಕಾಯಿನಾಥ, ಡೈಲಿ ನ್ಯೂಸ್, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಸಂಪಾದಕರು, ಇರುವರು ೩ನೇ ಅಪಾದಿತರ ಪರ ಸಾಕ್ಷಿಗಳ ಪಟ್ಟಿಯಲ್ಲಿ ರಾಷ್ಟ್ರಾಧ್ಯಕ್ಷ ಡಾ|| ಪ್ರಸಾದ್, ಪ್ರಧಾನಿ ನೆಹರೂ, ಶ್ರೀ ಎ ವಿ ಬಾಬುರೆಡ್ಡಿ, ಜ|| ಬಿ ವಾಸುದೇವ ಮೂರ್ತಿ ಜ|| ಆರ್ ವೆಂಕಟರಾಮಯ್ಯ, ಜ|| ಟಿ ಎ ಮಲ್ಲಪ್ಪ, ಜ|| ಎ ಬಾಲಕೃಷ್ಣಯ್ಯ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಮುಂತಾದವರು ಇರುವರು

ಜಯರಾಂರವರು ೩೦ ಜನರ ಪಟ್ಟಿಯನ್ನು ಕೊಟ್ಟಿರುತ್ತಾರೆ ಆಗ್ನೆಸ್ ತನ್ನ ಪಟ್ಟಿಯನ್ನು ಕೊಡಲಿಲ್ಲ

ಟೆಹರಾನಿನ ಪರಿಸ್ಥಿತಿಯನ್ನು ಎದುರಿಸಲು ಸೈನ್ಯಗಳ ಸಜ್ಜು

ಅಬಡಾನಿನಲ್ಲಿರುವ ೩೦೦ ಬ್ರಿಟಿಷ್ ಪ್ರವೀಣರನ್ನು ಹೊರದೂಡಲು ಮುಸಾದಿಕ್ ಸರ್ಕಾರದವರು ನಿರ್ಧರಿಸಿರುವ ಬಗ್ಗೆ ಬ್ರಿಟನ್ನು ಪರ್ಷಿಯಕ್ಕೆ ಬಲವಾದ ಪ್ರತಿಭಟನೆಯನ್ನು ಕಳುಹಿಸಿ ಇಂತಹ ಉಗ್ರ ಕ್ರಮದಿಂದ ಎರಡು ರಾಜ್ಯಗಳ ಬಾಂಧವ್ಯಕ್ಕೆ ಧಕ್ಕೆ ಬರುವುದೆಂದು ತಿಳಿಸಿರುತ್ತದೆ ಈ ಬಿಕ್ಕಟ್ಟಿನಿಂದ ಉಂಟಾಗಬಹುದಾದ ಪರಿಸ್ಥಿತಿಯನ್ನು ಎದುರಿಸಲು ಟೆಹರಾನಿನ ದಕ್ಷಿಣ ಭಾಗದ ಎಣ್ಣೆ ಗಣಿಗಳಲ್ಲಿ ಸೈನ್ಯಗಳು ಸಿದ್ಧವಾಗಿರುವಂತೆ ಪರ್ಷಿಯಾ ಸರ್ಕಾರವು ಆಜ್ಞೆ ಮಾಡಿರುವುದೆಂದೂ ಗೊತ್ತಾಗಿದೆ

ಭಾರಿ ರೈಲ್ವೆ ಅನಾಹುತ

ಮೊನ್ನೆ ಮಧ್ಯ ರಾತ್ರಿ ವಿಯನ್ನಾ ಮತ್ತು ರೋಮ್ ನಗರಗಳ ನಡುವೆ ಓಡಾಡುವ ಒಂದು ಎಕ್ಸ್‌ಪ್ರೆಸ್ ರೈಲು ಲಾಂಜರ್‌ವಾಂಡ್ ಎಂಬ ನಿಲ್ದಾಣದಲ್ಲಿ ನಿಂತಿದ್ದ ಒಂದು ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ೧೯ ಮಂದಿ ಮಡಿದರು, ೩೦ ಜನರು ಗಾಯಗೊಂಡರೆಂದು ವರದಿಯಾಗಿದೆ ಡಿಕ್ಕಿ ಹೊಡೆದ ರಭಸಕ್ಕೆ ಗೂಡ್ಸ್ ರೈಲಿನ ಇಂಜನ್ನು ಚೂರು ಚೂರಾಗಿ ೧೦೦ ಗಜಗಳ ದೂರ ಹಾರಿ ಬಿದ್ದಿತೆಂದೂ, ಎಕ್ಸ್‌ಪ್ರೆಸ್ ರೈಲಿನ ಪ್ರೈವರನ ಗಾಡಿಯು ಮೇಲಕ್ಕೆ ಚಿಮ್ಮಿ ಮತ್ತೊಂದು ಗಾಡಿಯ ಮೇಲೆ ಕುಳಿತಿತೆಂದೂ, ಇತರ ಎಲ್ಲ ಗಾಡಿಗಳೂ ಜಜ್ಜಿ ಹೋದುವೆಂದೂ ವರದಿಯಾಗಿದೆ

ಹಿಂದೂ ಕೋಡ್ ಮಸೂದೆ ಚರ್ಚೆ ಮುಂದೆಹೋಯಿತು

ನೆನ್ನೆ ಪಾರ್ಲಿಮೆಂಟಿನಲ್ಲಿ ಪ್ರಧಾನಿ ನೆಹರೂರವರು ಮಾತನಾಡಿ, ಕಳೆದ ೧೦ ದಿನಗಳಿಂದ ನಡೆದ ಸಭೆಯಲ್ಲಿ ಹಿಂದೂ ಕೋಡ್ ಮಸೂದೆಯ ವಿವಾಹ ಮತ್ತು ವಿಚ್ಛೇದನಕ್ಕೆ ಸಂಬಂಧಪಟ್ಟ ಎರಡು ಅಂಶಗಳು ಮಾತ್ರ ಚರ್ಚಿಸಲ್ಪಟ್ಟು ಸಭಾ ಕಾರ್ಯವು ನಿಧಾನವಾಗುತ್ತಿರುವುದೆಂದು ಹೇಳಿ, ಈ ಕಾರಣಕ್ಕಾಗಿ ಸದರಿ ಮಸೂದೆಯನ್ನು ಈಗಿನ ಅಧಿವೇಶನದಲ್ಲಿ ಮುಂದುವರಿಸಲಾಗುವುದಿಲ್ಲವೆಂದು ತಿಳಿಸಿದರು

ಹಿಂದೂ ಕೋಡು ವಿರುದ್ಧದ ಉಪವಾಸ ನಿಂತಿತು

ಹಿಂದೂ ಕೋಡ್ ಮಸೂದೆಯನ್ನು ಪ್ರತಿಭಟಿಸಿ ದೆಹಲಿಯ ಪಾರ್ಲಿಮೆಂಟ್ ಭವನದ ಮುಂಭಾಗದಲ್ಲಿ ಕಳೆದ ಹತ್ತು ದಿನಗಳಿಂದ ಉಪವಾಸ ಮಾಡುತ್ತಿದ್ದ ದಕ್ಷಿಣ ಭಾರತದ ಸ್ವಾಮಿ ಸತ್ಯಾನಂದ ಸರಸ್ವತಿಯವರು ನೆನ್ನೆ ಉಪವಾಸವನ್ನು ಮುಕ್ತಾಯಗೊಳಿಸಿದರೆಂದು ತಿಳಿದುಬಂದಿದೆ

ಅಂಬೇಡ್ಕರರ ರಾಜೀನಾಮೆ

ಭಾರತ ಸರ್ಕಾರದ ನ್ಯಾಯಾಂಗ ಮಂತ್ರಿ ಡಾ|| ಅಂಬೇಡ್ಕರರು ತಮ್ಮ ಹುದ್ದೆಗೆ ರಾಜೀನಾಮೆಯನ್ನಿತ್ತಿರುವರು ಅವರು ನೆಹರೂರವರಿಗೆ ಪತ್ರವೊಂದನ್ನು ಬರೆದು ಹಿಂದೂ ಕೋಡು ಮಸೂದೆಯನ್ನು ಕೈಬಿಟ್ಟುದಕ್ಕಾಗಿ ವ್ಯಥೆಯನ್ನು ಸೂಚಿಸಿರುತ್ತಾರೆ

ಕಾಂಗ್ರೆಸ್ಸಿಗೆ ಹಿಂತಿರುಗಲು ಕೃಪಲಾನಿ ನಿರಾಕರಣೆ

ಕಾಂಗ್ರೆಸ್ ಸಂಸ್ಥೆಗೆ ಹಿಂತಿರುಗಿ, ದೇಶದಲ್ಲಿ ಪುನಃ ತಲೆ ಎತ್ತುತ್ತಿರುವ ಕೋಮುವಾರು ವ್ಯಾಧಿಯನ್ನು ತೊಡೆದುಹಾಕಲು ಸಹಾಯಕರಾಗಬೇಕೆಂದು ಪಂಡಿತ ನೆಹರೂರವರು ಕೃಪಲಾನಿಯವರಿಗೆ ಬರೆದ ಪತ್ರಕ್ಕೆ ಉತ್ತರವಾಗಿ ಕೃಪಲಾನಿಯವರು ಹಿಂತಿರುಗಿ ಬರುವುದು ಒಳ್ಳೆಯದಲ್ಲವೆಂದೂ, ಕೋಮುವಾರು ವ್ಯಾಧಿಯನ್ನು ಹೋಗಲಾಡಿಸಲು ತಾವು ಹಾಗೆಯೇ ಶ್ರಮಿಸಲು ಸಿದ್ಧವಾಗಿರುವುದಾಗಿಯೂ ತಿಳಿಸಿರುವರೆಂದು ಗೊತ್ತಾಗಿದೆ

ಪೂನಾದಲ್ಲಿ ಸೈಕಲ್ ಪಂದ್ಯ

ಏಷ್ಯಾದಲ್ಲಿ ಪ್ರಥಮತಃ ಅತ್ಯಂತ ಉದ್ದವಾದ ಮಾರ್ಗದ ಸೈಕಲ್ ಪಂದ್ಯವನ್ನು ಬರುವ ಜನವರಿ ೨ನೇ ವಾರದಲ್ಲಿ ಏರ್ಪಡಿಸಲಾಗುವುದೆಂದು ಗೊತ್ತಾಗಿದೆ ಪೂನಾದಿಂದ ಪಂದ್ಯವು ಪ್ರಾರಂಭವಾಗಿ ಮಹಾರಾಷ್ಟ್ರದ ಭಾಗಗಳಲ್ಲಿ ೧೭೫೦ ಮೈಲಿ ದೂರ ಸಂಚರಿಸಿ ಪುನಃ ಅದೇ ನಗರದಲ್ಲಿ ಕೊನೆಗೊಳ್ಳುವುದು ಸಂಘ್ಯಾನಕ್ಕೆ ಅಕ್ಟೋಬರ್ ತಿಂಗಳಿಗೆ ಧಾನ್ಯ

ಬರುವ ತಿಂಗಳಿಗಾಗಿ ಸಂಸ್ಥಾನಕ್ಕೆ ೬೦೦೦ ಟನ್ ಗೋಧಿ, ೫ ಸಾವಿರ ಟನ್ ಮಿಲೊವನ್ನು ಕೊಡಲು ಕೇಂದ್ರ ಸರ್ಕಾರದವರು ನಿರ್ಧರಿಸಿರುತ್ತಾರೆ.

ಮೀಸೆ ತೆಗೆಯಲೊಪ್ಪಿದ್ದಕ್ಕೆ ೧೦ ಸಾವಿರ ಡಾಲರ್

ಹಾಲಿವುಡ್ಡಿನ ಒಂದು ಚಿತ್ರದ ತಯಾರಿಕೆಯಲ್ಲಿ ಅಡಾಲ್ಫ್ ಮೆಂಜೊ ಎಂಬುವನು ಪಾತ್ರ ವಹಿಸುವ ಸಲುವಾಗಿ ಅವನ ಮೀಸೆಯನ್ನು ಬೋಳಿಸಬೇಕಾದ ಪ್ರಸಂಗವೊದಗಿ, ಅಂದವಾಗಿ ಬೆಳಸಿದ್ದ ಮೀಸೆಯನ್ನು ತೆಗೆಯಲು ಅವನು ಇಷ್ಟಪಡದಿರಲು ಚಿತ್ರ ತಯಾರಕರು ಅವನಿಗೆ ಹತ್ತು ಸಾವಿರ ಡಾಲರನ್ನು ಕೊಡಲೊಪ್ಪಿದರೆಂದು ಗೊತ್ತಾಗಿದೆ. ಬೋಳಿಸಿದ ಮೀಸೆಯು ಪುನಃ ಬೆಳೆಯುವವರೆಗೆ ಅವನಿಗೆ ಕೃತಕ ಮೀಸೆಗಳನ್ನು ಜೋಡಿಸಲು ಒಬ್ಬನನ್ನು ನೇಮಿಸಿ ಅವನ ಸಂಬಳವನ್ನು ಕೊಡಲು ಏರ್ಪಾಡು ಮಾಡಿದ ನಂತರ ನಟನು ಮೀಸೆಯನ್ನು ತೆಗೆಸಿದನೆಂದು ಹೇಳಲಾಗಿದೆ.

ಸರ್ಕಾರಿ ಮುದ್ರಣಾಲಯದ ಶಾಖೆಯ ನೌಕರರ ಸಂಘ

ರಾಜಧಾನಿಯಲ್ಲಿರುವ ಸರ್ಕಾರಿ ಮುದ್ರಣಾಲಯದ ಶಾಖೆಯ ನೌಕರರ ಸಂಘದ ಸಭೆಯು ನಡೆದು ಶ್ರೀ ಕೆ. ಪಿ. ಭೋಗನಾರ್ಥರವರು ಅಧ್ಯಕ್ಷರು, ಶ್ರೀ ಎಸ್ ಮಂಚಯ್ಯ ಉಪಾಧ್ಯಕ್ಷರು, ಶ್ರೀ ಗೋಪಾಳರಾಜು ಕಾರ್ಯದರ್ಶಿ, ಶ್ರೀ ಎ. ಚೆಂಗಾಶೆಟ್ಟಿ ಸಹಾಯಕ ಕಾರ್ಯದರ್ಶಿ ಮತ್ತು ಶ್ರೀ ಎಸ್. ಚಂದ್ರಶೇಖರಯ್ಯನವರು ಖಜಾಂಚಿಯಾಗಿ ಆರಿಸಲ್ಪಟ್ಟಿರುತ್ತಾರೆ.

ಪ್ರಾಂ॥ ಉಮೇದುವಾರಿಕೆ: ಅಪೀಲಿಗೆ ಕಡೇ ದಿನ

ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಉಮೇದುವಾರರಾಗಲು ಇಚ್ಛಿಸುವವರು ಪ್ರಾಂತ ಸಮಿತಿಗಳ ಶಿಫಾರಸಿನ ಮೇಲೆ ಅಪೀಲುಗಳನ್ನು ಬರುವ ತಿಂಗಳು ೧ರೊಳಗೆ ಸಲ್ಲಿಸಬೇಕೆಂದೂ, ಅವುಗಳ ಪ್ರತಿಗಳನ್ನು ಪ್ರದೇಶ ಸಮಿತಿಗಳಿಗೆ ಕಳುಹಿಸಬಹುದೆಂದೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಕಿದ್ವಾಯಿ ವಿರುದ್ಧ ಮಿಶ್ರಾ ಸ್ಪರ್ಧೆ

ರಫಿ ಅಹಮದ್ ಕಿದ್ವಾಯಿ ... ಧವಾಗಿ ಲಖ್ನೋವಿನಿಂದ ಪಾರ್ಲಿ... ಸ್ಪರ್ಧಿಸಲು ಮಧ್ಯಪ್ರದೇಶ... ಮಂತ್ರಿ ಡಿ. ಪಿ. ಮಿಶ್ರಾರವರು ... ಸಿರುತ್ತಾರೆ.

ರಾಜಕಮಲ್, ಮೈಸೂರು
21-9-51 ರಿಂದ 7ನೇ ವಾರ
ಜಗನ್ಮೋಹಿನಿ

* ಪ್ರಭಾ
28-9-51 ರಿಂದ ಅಮೋಘ
ಕಾಲಿ ...
(ಹಿಂದಿ)
ಪಾತ್ರ:- ಕಿಶೋರ್ ಸಾಹು ... ರಾಯ್, ಆಶಾ ಮಾ... ರಕ್ಷೆ, ನಿರ್ದೇಶನ ಮತ್ತು ... ಕಿಶೋರ್ ಸಾಹು

ಮೈಸೂರು: ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿವೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳೀ ಅಂಗಡಿ
ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ಚಾಮುಂಡೇಶ್ವರಿ ಮತ್ತು ಗಣೇಶಾ
ಟಾಕೀಸುಗಳಲ್ಲಿ
26-9-51 ರಿಂದ ಯಶಸ್ವಿಯಾಗಿ ಪ್ರದರ್ಶಿಸಲ್ಪಡುತ್ತಿದೆ.
- ಮೋಹನ ಸುಂದರಂ -

ಒಲಿಂಪಿಯಾ 27-9-51 ರಿಂದ
ಅಮೋಘವಾದ 2 ನೆಯ ವಾರ
ಇನ್ಸ್‌ಪೆಕ್ಟರ್ ... ಕ್ರಿಸ್

ಮುಂದಿನ ಬದಲಾವಣೆ * ಮಲ್ ಹಾರ್ *
ಪ್ರಖ್ಯಾತ ಹಿನ್ನೆಲೆ ಸಂಗೀತಗಾರರಾದ ಶ್ರೀ ಮುಖೇಶ್‌ರವರಿಂದ
ತಯಾರಿಸಲ್ಪಟ್ಟ ಶ್ರೇಷ್ಠ ದರ್ಜೆಯ
ಸಂಗೀತಮಯ ಚಿತ್ರ

ಪ್ರಭುದೇವಾ ಟಾಕೀಸ್
ಪ್ರತಿ ದಿನ 3 ಆಟಗಳು
28-9-51 ರಿಂದ :: ಅಮೋಘ 2ನೇ ವಾರ
* ಸ್ತ್ರೀ ಸಾಹಸಂ *
ಅಂಜಲಿ ದೇವಿ, ನಾಗೇಶ್ವರ ರಾವ್, ಸೂರ್ಯ ಪ್ರಭಾ, ರೇಲಂಗಿ, ಸಿ. ಎಸ್. ಆರ್. ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ
ನಾಲ್ಕು ವಾರ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಪಾಸುಗಳನ್ನೂ ಮನ್ನಾ ಮಾಡಿರುತ್ತೆ.

For all your requirements in
Furniture During Dasara
For Your Stalls Contact
NALINS,
Service Furnishers, V. V. Market Square, My...

MODEL LAUNDRY IN THE MODEL C...
Equipped with Modern Electric Machi...
TRIPLEX DRY CLEANING PLANT, WA...
BOILER, STEAM BOILER, HYDRO-EXTR...
CTOR, PRESSING MACHINES etc, for clea...
ing and pressing all kinds of clothes within ...
hours at moderate rates. Collection centres ...
all parts of the city.
JOTHI ELECTRIC LAUNDRY,
22, Nazarbad, MYSORE.

ಮೈಸೂರು ದಸರಾ ವಸ್ತುಪ್ರದರ್ಶನ -

(ತಾರೀಖು 2-10-1951 ರಿಂದ 17-10-1951ರ ವರೆಗೆ)

ಈ ವರ್ಷದ ದಸರಾ ವಸ್ತು ಪ್ರದರ್ಶನದ ಮಹಿಳಾ ಶಾಖೆಯದಲ್ಲಿ ಈ ಕೆಳಗೆ ಕಂಡ ಸ್ಪರ್ಧೆಗಳನ್ನು ಸ್ತ್ರೀಯರಿಗಾಗಿ ಏರ್ಪಡಿಸಲಾ...

1. ರೇಷನಿಗೆ ಒಳಪಡದ ಪದಾರ್ಥಗಳನ್ನು ಸಾಮಾನ್ಯ ಜನರ ಸ್ಥಿತಿಗೆ ಹೊಂದುಕೊಳ್ಳುವಂತಿರುವ ಆರೋಗ್ಯಕರವಾದ ಅಡಿಗೆ ಮಾಡುವ...
2. ರಂಗವಲ್ಲಿ ಸ್ಪರ್ಧೆ :— (1) ಹಿಟ್ಟಿನ ರಂಗವಲ್ಲಿ. (2) ...ದ ರಂಗವಲ್ಲಿ. (3) ಬಣ್ಣದ ರಂಗವಲ್ಲಿ.
3. ಜಡೆ ಮತ್ತು ತುರುಬು ಶೃಂಗಾರದ ಸ್ಪರ್ಧೆ:- (1) ಹೂವು... (2) ಹೂವು ಇಲ್ಲದೆ.

ಜನರಲ್ಲಿ ಕಲಾಭಿರುಚಿಯನ್ನು ವೃದ್ಧಿಗೊಳಿಸಲು ಏರ್ಪಡಿಸಿರುವ ಸ್ಪರ್ಧೆಯಲ್ಲಿ ಮಹಿಳೆಯರು ಆಸಕ್ತಿ ವಹಿಸಬೇಕಾಗಿ ವಿನಂತಿ.

ಸ್ಪರ್ಧೆಗೆ ಸೇರಲಪೇಕ್ಷಿಸುವವರು ತಾರೀಖು 30-9-1951ರ ... ತಮ್ಮ ಸಂಪೂರ್ಣ ವಿಳಾಸದೊಡನೆ ಈ ಕೆಳಗೆ ಕಂಡ ವಿಳಾಸಕ್ಕೆ ... ಮೂಲಕ ತಿಳಿಸಬೇಕಾಗಿ ಕೋರಿದೆ. ಈ ಸ್ಪರ್ಧೆಗಳ ತಾರೀಖನ್ನು ತಿಳಿಸಲಾಗುತ್ತೆ.

ಮೇಲ್ಕಂಡ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಸೂಕ್ತವಾದ ಬಹುಮಾನಗಳನ್ನು ಕೊಡಲಾಗುವುದು.

- ಕಾರ್ಯದರ್ಶಿ,
ಮೈಸೂರು ದಸರಾ ವಸ್ತು ಪ್ರದರ್ಶನ
ಮೈಸೂರು.

Edited, printed and published by A R ... rajan, at Sadhvi Press. D. Subbiah Road, Mys...

ಪುಸ್ತಕ ಸಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೦-೯-೫೦ [ಸಂಚಿಕೆ ೫೬

ಪಂಜಾಬು ಕಾಂಗ್ರೆಸ್ - ಬಿಕ್ಕಟ್ಟಿನ ಪರಿಹಾರ -

ಶಾಸನ ಸಭಾಧಿವೇಶನ

೬ ದಿನಗಳವರೆಗೆ ರಾಜಧಾನಿಯಲ್ಲಿ, ಅನಂತರ ಬೆಂಗಳೂರಿನಲ್ಲಿ

ಮೈಸೂರು ೨೮

ಮೈಸೂರು ಶಾಸನ ಸಭೆಯ ಅಧಿವೇಶನವು ಬರುವ ತಿಂಗಳು ೮, ೧೧ ಮತ್ತು ... ತಾ॥ಗಳಲ್ಲಿ ರಾಜಧಾನಿಯಲ್ಲಿ ನ... ಅನಂತರ ಅಕ್ಟೋಬರ್ ೨೪ರಿಂದ ನವಂಬರ್ ೬ರ ವರೆಗೆ ಬೆಂಗಳೂರಿನಲ್ಲಿ ನ...ವುದೆಂದು ಗೊತ್ತಾಗಿದೆ.

ಅಕ್ಕಿ ಗಿರಣಿಯಲ್ಲಿ ೧೧ ಪಲ್ಲಾ ಅಕ್ಕಿಯ ಕಳ್ಳತನವೇ ?

ಮುಂಡಿ ಪೋಲೀಸು ಸ್ಟೇಷನ್ನಿಗೆ ಸೇರಿ... -ಜೇದಾರರೊಬ್ಬರು ೧೯ ನೇ ತಾ॥ ... ತ್ರಿ ಗಸ್ತು ಹೋಗುತ್ತಿದ್ದಾಗ ರಸ್ತೆಯ ... ತ ಕೊರೆ ಅಕ್ಕಿ ಚೀಲಗಳು ಅವರ ...ಗೆ ಬಿದ್ದು ಅನಂತರ ಸಬ್ ಇನ್ಸ್ಪೆಕ್ಟರು ಅವನ್ನು ಆ ರಾತ್ರಿಯೇ ವಶಪಡಿಸಿಕೊಂಡರೆಂದೂ, ೨೦ನೇ ತಾ॥ ರೇ... ಅಧಿಕಾರಿಗಳಿಂದ ಪೋಲೀಸರಿಗೆ ... ಪಕ ಅಕ್ಕಿ ಗಿರಣಿಯಲ್ಲಿ ೯೦ ಸೇರಿ... ಮೂಟೆಗಳು ಪತ್ತೆಯಿಲ್ಲವೆಂದು ... ರು ಬಂದಿತ್ತೆಂದೂ, ತನಿಖೆ ನಡೆಸ... ಗಿರಣಿಯ ಬೀಗ ಮುದ್ರೆ ಸರಿಯಾ... ನೂ, ಮೇಲ್ಭಾಗದಲ್ಲಿ ೩ ಹೆಂಚು ... ತೆಗೆಯಲ್ಪಟ್ಟಿದ್ದುವೆಂದೂ ವರದಿ ... ದೆ ಪತ್ತೆ ತರವೂದು ನಡೆಯು...

ಲೇವಾ ಕಾರ್ಖಾನೆದಾರರ ಸಂಘದ ಸಭೆ

...ಜಧಾನಿಯ ಲೇವಾ ಕಾರ್ಖಾನೆ ... ಲೀಪವರು ನಾಳೆ ಸಂಜೆ ೫ ಗಂ... ಸಹಕಾರ ಭವನದಲ್ಲಿ ಸಭೆಯನ್ನು ... ಸಿರುವರು ಲೇವಾ ಕುಂಟು ತೊ... ಬಗ್ಗೆ ಕಾರ್ಖಾನೆದಾರರು ಅಲ್ಲಿಗೆ ... ಸಲಹೆ ನೀಡಬೇಕೆಂದು ಕೋರ... ದೆ

ರಾಷ್ಟ್ರ ಸರ್ಕಾರದ ಹುದ್ದೆಗೆ ವಿ. ವೇದವ್ಯಾಸಾಚಾರ್

ರಾಷ್ಟ್ರ ಸರ್ಕಾರದ ಗೃಹ ಇಲಾಖೆ ... ಕಾರ್ಯದರ್ಶಿಯಾಗಿ ಮೈಸೂರು ... ನದ ನಿವೃತ್ತ ರೆವಿನ್ಯೂ ಕಮಿಷ... ಶ್ರೀ ವಿ ವೇದವ್ಯಾಸಾಚಾರ್ಯರ ... ನೇಮಿಸಲಾಗಿದೆ. ಅವರು ತಮ್ಮ ... ರವನ್ನು ಸ್ವೀಕರಿಸಲು ರಾಜ... ನಗ ಪ್ರಯಾಣ ಮಾಡಿರುತ್ತಾರೆ.

...ಟ್ಟೆ ಭತ್ಯ ಹೆಚ್ಚುವುದೇ ?

ಮೈಸೂರಿನ ಸಾಗಿಜೆಟೆಡ್ ನೌಕರ... ಟ್ಟೆ ಭತ್ಯವನ್ನು ಹೆಚ್ಚಿಸುವ ವಿಷ... ಸರ್ಕಾರದ ಪರ್ಯಾಲೋಚನೆಯ... ದೆಂದು ಗೊತ್ತಾಗಿದೆ ಈ ಪೆಟ್ಟಿ... ವನ್ನು ಸರ್ಕಾರವು ಯಾವ ರೀ... ರಬೇಕೆಂಬುದರ ಪರಿಶೀಲನೆಯಾ... ವುದಾಗಿ ಹೇಳಲಾಗಿದೆ.

ಕಾಳಸಂತೆಕೋರರಿಗೆ ಕಾಂ॥ ಉಮೇದುವಾರಿಕೆ ಕೊಡದು

...ಳಸಂತೆಯಂತಹ ಸಮಾಜ ಘಾತ... ವ್ಯಾಸವಿದ್ದವರು, ಕೋಮುವಾರು ... ಸಂಬಂಧವಿಟ್ಟುಕೊಂಡಿರುವವರು ... ಕಾಂಗ್ರೆಸ್ಸಿನ ಪರ ಉಮೇದು... ಗಿ ಆರಿಸಕೂಡದೆಂದು ಕಾಂಗ್ರೆಸ್ ಅಧ್ಯಕ್ಷ ನೆಹರೂರವರು ತಿಳಿಸಿ, ಪಾ... ಲಿಮೆಂಟ್ ಮತ್ತು ಶಾಸನ ಸಭೆಗಳಿಗೆ ... ಬವುಳ್ಳವರನ್ನು ಆರಿಸಬೇಕೆಂದು ... ರುತ್ತಾರೆ

ಅಬಡಾನಿನಲ್ಲಿ ಎಣ್ಣೆ ಪ್ರವೀಣರಿಗೆ ಬ್ರಿಟಿಷ್ ಸೈನ್ಯದ ನೆರವು

ಪರ್ಷಿಯದಲ್ಲಿರುವ ಬ್ರಿಟಿಷ್ ಎಣ್ಣೆ ಪ್ರವೀಣರನ್ನು ಹೊರದೂಡಿಸುವ ಆಜ್ಞೆ ಹೊರಡಿಸಿರುವ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಅಮೆರಿಕವು ಪರ್ಷಿಯಕ್ಕೆ ಮನವಿ ಮಾಡಿಕೊಂಡಿರುವುದಾಗಿಯೂ, ಎಣ್ಣೆ ಬಿಕ್ಕಟ್ಟಿನ ನಿವಾರಣೆಗೆ ಅಮೆರಿಕವು ಎಲ್ಲ ವಿಧವಾದ ಸಹಾಯವನ್ನು ನೀಡಲು ಸಿದ್ಧವಿರುವುದಾಗಿಯೂ, ಅಮೆರಿಕದ ಸಂಸ್ಥಾನ ಖಾತೆಯು ಬ್ರಿಟನ್ ಮತ್ತು ಪರ್ಷಿಯಗಳಿಗೆ ತಿಳಿಸಿರುವುದಾಗಿಯೂ ಗೊತ್ತಾಗಿದೆ ಆದರೆ ತನ್ನ ಕಡೆಯ ಎಣ್ಣೆ ಪ್ರವೀಣರ ರಕ್ಷಣೆಗಾಗಿ ನೆರವು ನೀಡಲು ಸೈನ್ಯಗಳನ್ನು ಕಳುಹಿಸುವುದು, ಇತ್ತೀಚೆಗೆ ಪರ್ಷಿಯದ ಪ್ರಸ್ತಾಪಿತ ಸೂಚನೆಗೆ ಬಲಿಬಾಗಿ ತನ್ನ ಪ್ರವೀಣರನ್ನು ವಾಪಸು ಕರೆಸಿಕೊಳ್ಳುವುದು- ಈ ಎರಡು ಅಂಶಗಳನ್ನೂ ಬ್ರಿಟಿಷ್ ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ ಹೇಳಲಾಗಿದೆ

ಅಬಡಾನ್ ತೈಲ ಕೇಂದ್ರ ಪರ್ಷಿಯದ ಸ್ವಾಧೀನವಶ

ಅಬಡಾನಿನ ಆಂಗ್ಲೋ-ಇರಾನಿಯನ್ ಎಣ್ಣೆ ಸಂಶೋಧನಾ ಕೇಂದ್ರವನ್ನು ನೆನ್ನೆ ಪರ್ಷಿಯಾದ ಸರ್ಕಾರದವರು ಪೂರ್ಣವಾಗಿ ವಶಪಡಿಸಿಕೊಂಡು, ಅದರ ರಕ್ಷಣೆಗಾಗಿ ಸುತ್ತಲೂ ಸಿಪಾಯಿಗಳನ್ನು ನೇಮಿಸಿದರೆಂದು ವರದಿಯಾಗಿದೆ. ಹತ್ತು ಮಂದಿ ಬ್ರಿಟಿಷ್ ಮೂಸರಿ ಟೆಂಡೆಂಟರನ್ನು ಮಾತ್ರ ಗಣಿಯೊಳಕ್ಕೆ ಬಿಟ್ಟು, ಉಳಿದವರನ್ನು ಹೊರಗೇ ತಡೆಯಲಾಯಿತು.

ಪ್ರವಾಹದಲ್ಲಿ ಕಾರ್ಖಾನೆ ಕೊಚ್ಚಿಹೋಯಿತು

ಬಸಪ್ಪನಿನ ಬಳಿ ಒಂದು ಕಡೆ ಪ್ರವಾಹದಲ್ಲಿ ಸಾಗುವಾಗ ಕಾರ್ಖಾನೆಯೊಂದು ಕೊಚ್ಚಿಹೋಗಿರುವುದಾಗಿಯೂ, ಅಲ್ಲಿ ಕೆಲಸಕ್ಕಿದ್ದವರ ೩ ಸಾವಿರ ಅವಲಂಬಿಗಳನ್ನು ಸುರಕ್ಷಿತ ಪ್ರದೇಶಗಳಿಗೆ ಕಳುಹಿಸಲಾಯಿತೆಂದೂ ವರದಿಯಾಗಿದೆ. ಕಾರ್ಖಾನೆಯ ಒಂದವಾಳದಲ್ಲಿ ಸರ್ಕಾರ ಅಧಿಕವಾಗಿ ಹಣವನ್ನು ಹಾಕಿರುವುದು

ನಿರುದ್ಯೋಗ ನಿವಾರಣಾ ಸಲಹಾ ಸಮಿತಿಯ ನೇಮಕ

ಸ್ವಂ ಸು] ಬೆಂಗಳೂರು ೨೮

ಸಂಸ್ಥಾನದಲ್ಲಿ ನಿರುದ್ಯೋಗವನ್ನು ನಿವಾರಿಸುವ ಸಲುವಾಗಿ ಸರ್ಕಾರದವರು ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಕೈಗಾರಿಕೆ, ಕಾರ್ಮಿಕ ಮತ್ತು ಇತರ ಪ್ರತಿನಿಧಿಗಳು ಇರುವ ಒಂದು ಸಲಹಾ ಸಮಿತಿಯನ್ನು ರಚಿಸಿರುವರು. ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿಗಳು ಅದರ ಉಪಾಧ್ಯಕ್ಷರಾಗಿರುವರು ...ಪಿಸ್ಟರ್ ಜನೆ ಸರ್ಕಾರಿ ಮತ್ತು ಖಾಸಗೀ ಸವಸ್ಕರ ಪೈಕಿ ಹಿಂದೂಸ್ಥಾನ ವಿಮಾನ ಕಾರ್ಖಾನೆಯ ಜನರಲ್ ಮ್ಯಾನೇಜರ್ ಸೇನಗುಪ್ತ, ಬಿನ್ನಿ ಕಂಪೆನಿಯ ನಿಸ್ಸೆತ್ ಮುಂತಾದ ೫ ಜನರು ಕೈಗಾರಿಕೆ ಪರವಾಗಿಯೂ, ಐ ಎನ್.ಟಿ ಯು.ಸಿ. ಯ ಕಾರ್ಯದರ್ಶಿ, ಕೇಶವ ಕುಲಕರ್ಣಿ, ಎನ್ ಕೇಶವಯ್ಯಂಗಾರ್, ಕೆ ಎಸ್ ಕುಮಾರ್, ಕೆ. ಪುಟ್ಟಸ್ವಾಮಿ ಮತ್ತು ಕಮಲಾದೇವಿಯವರು ಕಾರ್ಮಿಕರ ಪರವಾಗಿಯೂ, ಶ್ರೀಗಳು ಎಂ. ಸಿ. ವೆಂಕಟೇಶ್ ಮತ್ತು ಕೆ. ಆರ್ ಮಾಧವರಾಯರು ಶಾಸನ ಸಭೆಯ ಪರವಾಗಿಯೂ, ಶ್ರೀಮತಿ ಎ ಎಸ್. ಆರ್ ಚಾರಿಯವರು ಸ್ತ್ರೀಯರ ಪರವಾಗಿಯೂ ಸದಸ್ಯರಾಗಿರುವರು. ಮೈಸೂರು ಮತ್ತು ಬೆಂಗಳೂರು ಕಮಿಷನರುಗಳು ಸ್ಥಳೀಯ ಸಂಸ್ಥೆಗಳ ಪರ ಸದಸ್ಯರಾಗಿರುತ್ತಾರೆ

ಮಣಿಲಾಲ್ ಗಾಂಧಿ ದಂಪತಿಗಳ ಸತ್ಯಾಗ್ರಹ

ನೆನ್ನೆ ಡರ್ಬಾನಿನಲ್ಲಿ ಮಣಿಲಾಲ್ ಗಾಂಧಿಯವರ ಎನರ ಪತ್ನಿ ಸಮೇತರಾಗಿ ಪುನಃ ವರ್ಣವಿಭೇದ ಕಾನೂನನ್ನು ಉಲ್ಲಂಘಿಸಿ "ಐರೋಪ್ಯರಿಗೆ ಮಾತ್ರ" ಎಂಬ ಬೋರ್ಡುಗಳಿದ್ದ ಸ್ಥಳದಲ್ಲಿ ಕುಳಿತುಕೊಂಡರೆಂದೂ, ಪೋಲೀಸರು ಅವರ ಹೆಸರುಗಳನ್ನು ಮಾತ್ರ ಬರೆದುಕೊಂಡರೆಂದೂ ಆದರೆ ಅವರನ್ನು ದಸ್ತಗಿರಿ ಮಾಡಿಲ್ಲವೆಂದೂ ಹೇಳಲಾಗಿದೆ.

ಕೈ ಕೋಲಾರದ ಚಿನ್ನದ ಗಣಿಗಳಲ್ಲಿ ಪೋಲೀಸು ಶಾಸನದನ್ವಯ ಮತ್ತು ಆಸೇ ನಿಬಂಧನೆಗಳ ಪ್ರಕಾರ ಸಭೆ, ಮೆರವಣಿಗೆ ಮುಂತಾದವುಗಳ ಮೇಲೆ ಹಾಕಲಾಗಿದ್ದ ನಿರ್ಬಂಧದ ಅವಧಿಯನ್ನು ಮೊನ್ನೆಯಿಂದ ಮುಂ. ೩೦ ಗಳ ಕಾಲ ಹೆಚ್ಚಿಸಲಾಗಿದೆ

ಪಂಜಾಬು ಕಾಂ॥ ಮುಖಂಡರ ಭಿನ್ನತೆಯ ಪರಿಹಾರ

ಕಾಂಗ್ರೆಸ್ ಹೈ ಕಮ್ಯಾಂಡಿನ ಪ್ರಧಾನಿ ನೆಹರೂ ಮತ್ತು ಪಂಜಾಬಿನ ಮಾಜಿ ಮುಖ್ಯ ಮಂತ್ರಿ ಗೋಪಿಚಂದ್ ಭಾರ್ಗ ರವರಿಗೆ ಒಂದು ಕಡೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಲಾಲ್ ಬಹದ್ದೂರ್ ಶಾಸ್ತ್ರಿ, ಮತ್ತು ಗುಲ್ಜಾರಿಲಾಲ್ ನಂದಾ ಮತ್ತು ಪಂಜಾಬಿನ ವಿರೋಧ ಪಂಗಡದ ಮುಖಂಡರುಗಳಾದ ಭೀಮಸೇನ ಸಚರ್, ಗುರ್‌ಮುಖ್ ಸಿಂಗ್‌ರವರುಗಳಿಗೆ ಮತ್ತೊಂದು ಕಡೆ,ಆದ ಮಾತುಕತೆಗಳ ಪರಿಣಾಮವಾಗಿ ಪಂಜಾಬು ಕಾಂಗ್ರೆಸ್ಸಿನ ಬಿಕ್ಕಟ್ಟು ಪರಿಹಾರವಾಗಿರುತ್ತದೆ. ಎರಡು ಗುಂಪುಗಳಿಗೂ ಒಪ್ಪಿಗೆಯಾಗುವ ಒಂದು ಹೊಸ ಸೂತ್ರವನ್ನು ಸಿದ್ಧಗೊಳಿಸಲಾಗಿದೆ ಅಲ್ಲದೆ ಪೂರ್ವ ಪಂಜಾಬು ಸಂಸ್ಥಾನ ಮತ್ತು ಮಹಾಕೋಸಲ ಪ್ರಾಂತಗಳಲ್ಲೂ ಸಹ ಕಾಂಗ್ರೆಸ್ಸಿನಲ್ಲಿ ಐಕ್ಯತೆ ಬಗ್ಗೆ ಒಪ್ಪಂದಗಳಾಗಿವೆಯೆಂದು ಗೊತ್ತಾಗಿದೆ.

ದೇವರೆಂದು ಹೇಳಿಕೊಂಡ ಸಾಧು ಮತ್ತು ಪೋಲೀಸರಿಗೆ ಘರ್ಷಣೆ

ಮಣಿಪುರದ ಸಾಧುವೊಬ್ಬನು ಅಲ್ಲಿನ ಲಕ್ತಾ ಸರೋವರದ ಮಧ್ಯೆ ಇರುವ ಒಂದು ದ್ವೀಪದ ದೇವಸ್ಥಾನದಲ್ಲಿ ನೆಲೆಸಿ ತಾನೇ ದೇವರೆಂದು ಹೇಳಿಕೊಂಡು ೪೦ ಜನ ಶಿಷ್ಯರೊಡನೆ ಸುತ್ತಮುತ್ತಲ ಜನರನ್ನು ಹಿಂಸಿಸುವುದು, ಅವರ ಮನೆಗಳನ್ನು ಸುಡುವುದು ಮುಂತಾದ ಮತ್ಯಕೃತ್ಯಗಳಲ್ಲಿ ನಿರತನಾಗಿದ್ದನೆಂದೂ, ಅವರ ಉಪಟಲ ತಡೆಯಲು ಪೋಲೀಸರು ಮತ್ತು ಮಣಿಪುರದ ಸೈನಿಕರು ಹೋದಾಗ ಎರಡು ಪಕ್ಷಗಳಿಗೂ ಘರ್ಷಣೆಯಾಗಿ ೩ ಜನರು ಸತ್ತು ಹಲವರಿಗೆ ಗಾಯವಾಯಿತೆಂದೂ ವರದಿಯಾಗಿದೆ. ಸಾಧು ಮತ್ತು ಅವನ ಅನುಯಾಯಿಗಳನ್ನು ಬಂಧಿಸಲಾಗಿದೆ. ಸಾಧುವು "ಕಮ್ಯೂನಿಸ್ಟ್" ಎಂದು ಹೇಳಲಾಗಿದೆ.

ಬ್ರಿಟಿಷ್ ರಾಜರಿಂದ ಆಡಳಿತ ಮಂಡಲಿ ನೇಮಕ

ಕಳವಳಕರ ಸ್ಥಿತಿಯಲ್ಲಿರುವ ಬ್ರಿಟಿಷ್ ದೊರೆ ಜಾರ್ಜರು ತಾತ್ಕಾಲಿಕವಾಗಿ ತಮ್ಮ ಪರ ಸರ್ಕಾರಿ ಕೆಲಸವನ್ನು ನೋಡಿಕೊಳ್ಳಲು, ರಾಣಿ ಎಲಿಜಬೆತ್, ಉತ್ತರಾಧಿಕಾರಿಣಿ ಎಲಿಜಬೆತ್, ರಾಜಕುಮಾರಿ ಮಾರ್ಗರೆಟ್, ಗ್ಲಾಸೆಸ್ಟರ್ ಡ್ಯೂಕ್ ಮತ್ತು ಪ್ರಿನ್ಸೆಸ್ ರಾಯಲ್ ಇವರುಗಳುಳ್ಳ ಒಂದು ಮಂತ್ರಾಲೋಚನಾ ಮಂಡಲಿಯನ್ನು ನೇಮಿಸಿರುತ್ತಾರೆ.ಇವರೆಲ್ಲರೂ ರಾಜಬಂಧುಗಳೇ ಆಗಿರುತ್ತಾರೆ.

ಸ್ವಾಮಿ ಸೀತಾರಾಮರವರಿಂದ ಪುನಃ ಉಪವಾಸವೇ ?

ಬರುವ ತಿಂಗಳು ೨ ನೇ ತಾ॥ ನೊಳಗೆ ಆಂಧ್ರ ಪ್ರಾಂತವಾಗದಿದ್ದರೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ಆಚಾರ್ಯ ವಿನೋಬಾ ಭಾವೆಯವರಿಗೆ ಸ್ವಾಮಿ ಸೀತಾರಾಂರವರು ತಿಳಿಸಿರುವರೆಂದೂ, ಇನ್ನೊಂದು ಉಪವಾಸವನ್ನು ಅವರು ಆರಂಭಿಸಬಹುದೆಂದೂ ಹೇಳಲಾಗಿದೆ.

ಪಾಕಿಸ್ತಾನದ ನಿರ್ಮೂಲಕ್ಕೆ ಭಾರತದಲ್ಲಿ ಪ್ರಚಾರವೇ?

ಪಾಕಿಸ್ತಾನ ಸರ್ಕಾರದವರು ಮೊನ್ನೆ ಒಂದು ಶ್ವೇತಪತ್ರವನ್ನು ಹೊರಡಿಸಿ ಭಾರತದ ವಿಭಜನೆಯ ವಿರುದ್ಧವಾಗಿಯೂ ಮತ್ತು ಪಾಕಿಸ್ತಾನವನ್ನು ನಿರ್ಮೂಲಗೊಳಿಸುವ ಬಗ್ಗೆಯೂ ಭಾರತದಲ್ಲಿ ಸತತವಾದ ಚಳುವಳಿಯು ನಡೆಯುತ್ತಿದೆಯೆಂದು ಆಪಾದಿಸಿರುವರು ಭಾರತದ ಹಿಂದೂ ಮಹಾ ಸಭೆ, ಫಾರ್ವರ್ಡ್ ಬ್ಲಾಕ್, ಪ್ರಜಾಪಕ್ಷ ಮೊದಲಾದ ರಾಜಕೀಯ ಪಕ್ಷಗಳೂ ಮತ್ತು ಮಾಜಿ ಕಾಂಗ್ರೆಸ್ ಅಧ್ಯಕ್ಷ ಟಂಡನ್ನರೂ ವಿಭಜನೆಯನ್ನು ಟೀಕಿಸಿ, ಅಖಂಡ ಭಾರತದ ಸ್ಥಾಪನೆ ಬಗ್ಗೆ ನಿರ್ಣಯ ಮಾಡಿರುವರೆಂದೂ ಶ್ವೇತಪತ್ರದಲ್ಲಿ ನಮೂದಿಸಲಾಗಿದೆ

ಪ್ರಪಂಚ ಸರ್ಕಾರ ಸ್ಥಾಪನೆಗಾಗಿ ಲಂಡನ್ನಿನಲ್ಲಿ ಸಭೆ

ಪ್ರಪಂಚಕ್ಕೆಲ್ಲಾ ಒಂದೇ ಸರ್ಕಾರವನ್ನು ಸ್ಥಾಪಿಸುವ ಸಂಬಂಧವಾಗಿ ಸಮಾಲೋಚನೆ ನಡೆಸಲು ಲಂಡನ್ನಿನಲ್ಲಿ ಮೊನ್ನೆ ೨೦ ರಾಷ್ಟ್ರಗಳ ೩೦೦ ಮಂದಿ ರಾಜಕಾರಣಿಗಳು ಸಭೆ ನಡೆಸಿದರು ಪ್ರಪಂಚದ ಆಹಾರ ಸಂಸ್ಥೆಯ ಮಾಜಿ ಡೈರೆಕ್ಟರ್ ಲಾರ್ಡ್ ಬಾಯ್ಡ್ ಆರ್‌ರವರು ಅಧ್ಯಕ್ಷತೆ ವಹಿಸಿದ್ದರು ಅವರುಗಳು ಒಂದು ಘೋಷಣೆಯನ್ನು ಹೊರಡಿಸಿ ಅದನ್ನು ಸಕಲ ರಾಷ್ಟ್ರಗಳ ಅಂಗೀಕಾರಕ್ಕೆ ಕಳುಹುವರೆಂದು ಹೇಳಲಾಗಿದೆ

ಇಂಜನ್ ಕಂಬಿ ತಪ್ಪಿದಾಗ ಅಪಘಾತ ತಪ್ಪಿಸಲು ವ್ಯವಸ್ಥೆ

ರೈಲು ಇಂಜನ್ನಿನ ಗಾಲಿಗಳು ಕಂಬಿ ತಪ್ಪಿದಾಗ ತಕ್ಷಣವೇ ಬ್ರೇಕ್ ಹಾಕಿ ರೈಲನ್ನು ನಿಲ್ಲಿಸುವ ಯಂತ್ರವೊಂದನ್ನು ತಿರುಚನಾಪಳ್ಳಿಯ ಬಳಿ ಇರುವ ವರ್ಕ್ ಷಾಪಿನಲ್ಲಿ ಕಂಡುಹಿಡಿಯಲಾಗಿದೆಯೆಂದೂ, ಇದು ತಾನಾಗಿಯೇ ಬ್ರೇಕ್ ಹಾಕುವುದೆಂದೂ ರೈಲ್ವೆ ಮಂತ್ರಿ ಶ್ರೀ ಸಂತಾನಂರವರು ತಿಳಿಸಿರುತ್ತಾರೆ

ಕಾಡಾನೆಗೆ ಸಿಕ್ಕಿ ಪತ್ರಿಕಾ ಫೋಟೋಗ್ರಾಫರನ ಮರಣ

ಸಿಂಹಳದ ರಾಜಧಾನಿ ಕೊಲಂಬೊ ಬಳಿ ಒಂದು ಕಾಡಿನಲ್ಲಿ ಆನೆಗಳ ಜೀವನವನ್ನು ತೋರಿಸುವ ಅಪೂರ್ವ ಚಿತ್ರಗಳನ್ನು ತೆಗೆಯಲು ಹಲವರೊಡನೆ ಹೋಗಿದ್ದ ಪತ್ರಿಕಾ ಫೋಟೋಗ್ರಾಫರ್ ಎರಿಕ್ ಸ್ವಾರ್ಟ್ಜನನ್ನು ಒಂದು ಕಾಡಾನೆಯು ತುಳಿದು ಕೊಂದುದಾಗಿ ವರದಿಯಾಗಿದೆ

ಅಖಿಲ ಮೈಸೂರು ಗೃಹ ಸಹಕಾರ ಸಂಘಗಳ ಸಮ್ಮೇಳನ

ದಾವಣಗೆರೆಯ ಶ್ರೀ ರಾಜನಹಳ್ಳಿ ಹನುಮಂತಪ್ಪನವರ ಛತ್ರದಲ್ಲಿ ಮೈಸೂರು ಸಂಸ್ಥಾನದ ಗೃಹ ಸಹಕಾರ ಸಂಘಗಳ ದ್ವಿತೀಯ ಸಮ್ಮೇಳನವು ನಾಳೆ ಬೆಳಗ್ಗೆ ೧೧ ಘಂಟೆಗೆ ಸೇರುವುದು ಗೃಹ ಸಚಿವ ಶ್ರೀ ಟಿ ಮರಿಯಪ್ಪನವರು ಅದರ ಪ್ರಾರಂಭೋತ್ಸವವನ್ನು ನೆರವೇರಿಸುವರು ಮೈಸೂರು ನಗರ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು

ಗಾಂಧಿಜಿ ಮೇಲೆ ಚರ್ಚಿಲ್ಲರ ಆರೋಪಣೆ

ಬ್ರಿಟನ್ನಿನ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್‌ರು ತಮ್ಮ ಯುದ್ಧ ಕಾಲದ ನೆನಪಿನ ಗ್ರಂಥವನ್ನು ಬರೆದು ಅದರಲ್ಲಿ ಒಂದೆಡೆ ೧೯೪೩ರಲ್ಲಿ ಗಾಂಧಿಜಿಯವರು ಆಗಾಖಾನ್ ಅರಮನೆ ಸೆರೆಮನೆಯಲ್ಲಿದ್ದಾಗ ೨೧ ದಿನಗಳ ಉಪವಾಸ ಮಾಡುವ ಸಮಯದಲ್ಲಿ ಗ್ಲೂಕೋಸನ್ನು ಸೇವಿಸುತ್ತಿದ್ದರೆಂದು ಆಪಾದಿಸುತ್ತಾರೆ ಇದಕ್ಕೆ ಉತ್ತರವಾಗಿ ಗಾಂಧಿಜಿಯವರ ವೈದ್ಯರಾದ ಡಾ॥ ಬಿ ಸಿ ರಾಯ್ ಮುಂತಾದವರು ಹೇಳಿಕೆಯೊಂದನ್ನು ಹೊರಡಿಸಿ ಚರ್ಚಿಲರ ಆರೋಪಣೆಗಳನ್ನು ನಿರಾಕರಿಸಿರುತ್ತಾರೆ

ನೌಕರರಿಂದ ಚಂದಾ ವಸೂಲಿ ಬಗ್ಗೆ ನಿರ್ಬಂಧ

ಸಾರ್ವಜನಿಕ ಕೆಲಸಗಳಿಗಾಗಿ ನಿಧಿ ಸಂಗ್ರಹಿಸುವ ಕಾರ್ಯದಲ್ಲಿ ಸರ್ಕಾರಿ ನೌಕರರು ಭಾಗವಹಿಸಕೂಡದೆಂದು ಕೇಂದ್ರ ಸರ್ಕಾರದವರು ನಿರ್ಬಂಧಿಸಿರುತ್ತಾರೆ ಭಾರತ ಕ್ರಮದಿಂದ ಸಾರ್ವಜನಿಕ ರಕ್ಷಣಾ ನಿಧಿ ಸಂಗ್ರಹಕ್ಕೆ ಮಾತ್ರ ಅನುಮತಿ ಕೊಡಲಾಗಿದೆ ... ನೌಕರರು ಚಂದಾ ಕೊಡುವ ... ಯಾವ ಅಡ್ಡಿಯೂ ಇರುವುದಿಲ್ಲ

ಅಡಿಗೆ ಕೆಲಸಗಳಿಗೆ ಸೂರ್ಯ ಕಿರಣದ ಉಪಯೋಗ

ಆಹಾರವನ್ನು ಬೇಯಿಸುವುದು, ಹಣ್ಣುಗಳನ್ನು ಒಣಗಿಸುವುದು ಇತ್ಯಾದಿ ಮುಂತಾದ ಕಾರ್ಯಗಳ ಸಾಧ್ಯಾಸಾಧ್ಯತೆ, ಕಟ್ಟಡಗಳ ತಕ್ಕಷ್ಟು ಶಾಖ ಒದಗಿಸುವುದು, ಪದಾರ್ಥಗಳನ್ನು ತಣ್ಣಗೆ ಇಡುವುದು ಮತ್ತು ವಿದ್ಯುಚ್ಛಕ್ತಿ ಇವೇ ಮುಂತಾದವುಗಳಿಗಾಗಿ ಸೂರ್ಯ ಕಿರಣದ ಶಕ್ತಿಯನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ದೆಹಲಿಯ ರಾಷ್ಟ್ರೀಯ ಫಿಸಿಕಲ್ ಪ್ರಯೋಗ ಶಾಲೆಯಲ್ಲಿ ಪ್ರಯತ್ನಗಳು ನಡೆಯುತ್ತಿವೆ

ಸಂಗೀತ

ಬಿಡಾರದ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ಪ್ರದೋಷದ ಪ್ರಯುಕ್ತ ವಿ॥ ದೇಶಿಕಾಚಾರ್ಯರ ಶಿಷ್ಯೆಯವರು ಶ್ರೀಮತಿಗಳಾದ ಚೌಡಮ್ಮ, ಜಯಮ್ಮನವರ ಸಂಗೀತವು ಸೂಕ್ತ ಪಕ್ಕ ವಾದ್ಯಗಳೊಡನೆ ನಡೆಯುವುದು.

ದೇವಾಲಯದಲ್ಲಿ ಯುವತಿಯ ಕೊಲೆ

ಕೊಲ್ಲಾಪುರದ ಬಳಿ ಕಾಳೆ ಎಂಬ ಹಳ್ಳಿಯ ವಿಠೋಬ ದೇವಸ್ಥಾನದ ಅರ್ಚಕನು ಒಬ್ಬ ತರುಣಿಯೊಡನೆ ಅಕ್ರಮ ಸಂಪರ್ಕವನ್ನು ಹೊಂದಿರುವನೆಂದು ಹರಡಿದ ಸುದ್ದಿಯಿಂದ ಖಿನ್ನ ಮನಸ್ಕರಾದ ಆ ಅರ್ಚಕನೂ ಮತ್ತು ತರುಣಿಯೂ ಪ್ರಾಣ ತ್ಯಾಗ ಮಾಡಲು ನಿರ್ಧರಿಸಿ ಕಳೆದ ಫೆಬ್ರವರಿ ೧೧ನೇ ತಾರೀಖು ರಾತ್ರಿ ದೇವಾಲಯದಲ್ಲಿ ಇಬ್ಬರೂ ಸೇರಿ, ಅರ್ಚಕನು ಕುಡುಗೋಲಿನಿಂದ ತರುಣಿಯನ್ನು ಹೊಡೆದು ಸಾಯಿಸಿದನು ಅನಂತರ ತಾನೂ ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಿಸಿ ವಿಫಲನಾದನು. ಅವನು ಕೊಲ್ಲಾಪುರದ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದನು ಈ ಶಿಕ್ಷೆಯ ಮೇಲೆ ಅರ್ಚಕನು ಬೊಂಬಾಯಿ ಹೈಕೋರ್ಟಿನಲ್ಲಿ ಅಪೀಲು ಸಲ್ಲಿಸಲಾಗಿ ಅವನ ಶಿಕ್ಷೆಯನ್ನು ೩ ವರ್ಷ ಸಜಾಗೆ ಇಳಿಸಲು ಸಲಹೆ ಮಾಡಲಾಯಿತು

ಸುಧಾ

ಮಹಾರಾಜಾ ಕಾಲೇಜಿನ ಸೀನಿಯರ್ ಬಿ ಎ ವಿದ್ಯಾರ್ಥಿ ಕೋಪೂರು ಸುಬ್ರಹ್ಮಣ್ಯಂರವರ ಸಂಪಾದಕತ್ವದಲ್ಲಿ ಈ ತಿಂಗಳಿನಿಂದ ಕನ್ನಡ ಮತ್ತು ಇಂಗ್ಲಿಷ್ ಸಚಿತ್ರ ದ್ವೈ ಭಾಷಾ ಮಾಸ ಪತ್ರಿಕೆಯ ಪ್ರಕಟಣೆಯು ಪ್ರಾರಂಭವಾಗಿರುತ್ತದೆ ಸಂಚಿಕೆಯಲ್ಲಿ ಗಾಂಧಿ, ನೆಹರೂ, ಜೆ ಬಿ ಸಾ, ಸಿ ವಿ ರಾಮನ್, ಜೆ ಸಿ ಬೋಸ್ ಮುಂತಾದ ಮಹನೀಯರ ಭಾವಚಿತ್ರಗಳೂ, ಅನೇಕ ವಿಚಾರಪೂರಿತ ಲೇಖನಗಳೂ ಇವೆ ಸೀನಿಯರ್ ಬಿ ಎ ವಿದ್ಯಾರ್ಥಿ ಶ್ರೀ ಆರ್ ಶ್ರೀಕಂಠರವರು ಇದರ ಉಪ ಸಂಪಾದಕರಾಗಿರುತ್ತಾರೆ ಭಾವಚಿತ್ರಗಳನ್ನು ಶ್ರೀ ಸಿ ಎ ವಾಸುದೇವರಾಯರು ಬರೆದಿರುತ್ತಾರೆ ಇದನ್ನು ವಿಶ್ವ ವಿದ್ಯಾಲಯದ ಪುಸ್ತಕ ಭಂಡಾರದಲ್ಲಿ ಇಡಲಾಗಿದೆ

ಕೋಲಾರ ಜಿಲ್ಲೆಯ ಇನಾಂಪಳ್ಳಿ ಗ್ರಾಮದ ಎಲ್ಲಾ ಸಂಸಾರಗಳಿಗೂ ಕಾಲರಾ ವ್ಯಾಧಿಯು ತಗುಲಿರುವುದಾಗಿ ಗೊತ್ತಾಗಿದೆ

ಶ್ರೀಧರ್ ಮೋಟಾರ್ ಕಂಪೆನಿ
ನಾರಾಯಣ ಶಾಸ್ತ್ರಿ ರಸ್ತೆ,
ಫೋನ್ ನಂ 537
ಸರಕುಗಳನ್ನು ರವಾನಿಸುವ ಸಂಸ್ಥೆ

ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನ ನಡೆಸಲು ಮನವಿ

ಸರ್ ಎಂ ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಸಿದ್ಧಗೊಳಿಸಲ್ಪಟ್ಟ ದೇಶಾಭ್ಯುದಯ ಯೋಜನೆಗಳ ಸ್ಪಷ್ಟ ಒಂದಾದ ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳು ದೇಶದ ಕೈಗಾರಿಕಾ ಸಾಧನೆಗಾಗಿ ಏರ್ಪಟ್ಟು ಅನೇಕ ವರ್ಷಗಳಿಂದ ನಡೆಯುತ್ತಿದ್ದುವು. ಅವನ್ನು ಪ್ರಜಾ ಸರ್ಕಾರದವರು ಸಕಾರಣವಿಲ್ಲದೆ ೩ ವರ್ಷಗಳಿಂದ ನಿಲ್ಲಿಸಿರುವುದು ನ್ಯಾಯವಾದುದಲ್ಲವೆಂದೂ ನಾನು ಮತ್ತು ಇನ್ನೂ ಅನೇಕರು ಆಗಿನಿಂದಲೂ ಪ್ರತಿಭಟಿಸುತ್ತಾ ಇರುವುದಲ್ಲದೆ, ಎಂದಿನಂತೆ ಅವುಗಳನ್ನು ನಡೆಸಲು ಕೂಡಲೇ ಆಜ್ಞೆಯಾಗಬೇಕೆಂದು ಮೈಸೂರು ಜಿಲ್ಲಾ ಬೋರ್ಡಿನಲ್ಲಿ ನಿರ್ಣಯವಾಗಿದ್ದರೂ, ಅದು ಏಕಮತದಿಂದ ಅಂಗೀಕಾರವಾಗಿ ಸರ್ಕಾರಕ್ಕೆ ಶಿಫಾರಸು ಆಗಿದ್ದಾಗ್ಯೂ ಇದುವರೆಗೂ ಆಜ್ಞೆಯಾಗದೆ ಸಾವಕಾಶವಾಗಿರುವುದು ಬಹಳ ಅಸಮಾಧಾನಕ್ಕೂ ಆಶ್ಚರ್ಯಕ್ಕೂ ಕಾರಣವಾಗಿದೆ. ಸಂಬಂಧಪಟ್ಟ ಸಚಿವರು ಕೂಡಲೇ ಇದನ್ನು ಬಗೆಹರಿಸಿ ಬರುವ ನವೆಂಬರ್ ತಿಂಗಳೊಳಗಾದರೂ ಅವು ನಡೆಯುವಂತೆ ಏರ್ಪಾಡು ಮಾಡಬೇಕು ಎಂದು ಮೈಸೂರು ಜಿಲ್ಲಾ ಬೋರ್ಡಿನ ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಸೂಚಿಸಿರುತ್ತಾರೆ

ಗಣೇಶನ ಮಂಗಳಾರತಿ

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಸೊಸೈಟಿಯಲ್ಲಿ ಕಳೆದ ಮಂಗಳವಾರ ಗಣೇಶನ ಮಂಗಳಾರತಿಯು ನಡೆಯಿತು ಮೈಸೂರು ಸಹೋದರರಿಂದ ಸಂಗೀತವು ಏರ್ಪಾಡಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಗಣಪತಿ ಪೂಜೆಯ ಮಹತ್ವವನ್ನು ಕುರಿತು ಭಾಷಣ ಮಾಡಿದರು ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದ ನಂತರ ಸಮಾರಂಭವು ಮುಕ್ತಾಯವಾಯಿತು.

೧೦ ಲಕ್ಷ ರೂ ವೆಚ್ಚದಲ್ಲಿ ಅವಿವಾಹಿತ ಸ್ತ್ರೀ ನೌಕರರುಗಳಿಗಾಗಿ ೫೦ ಜನ ವಾಸಮಾಡಬಲ್ಲ ಒಂದು ಹಾಸ್ಟಲ್ ಕಟ್ಟಲು ಮದ್ರಾಸು ಸರ್ಕಾರದವರು ಹಣ ಮಂಜೂರು ಮಾಡಿರುತ್ತಾರೆ

SRI GAYATHRI
TALKIES
From 28-9-51 Daily 3 Shows
DUCHESS OF IDAHO
(In Technicolor)
With Esther Williams
Van Johnson

MORNING SHOW
On 29th & 30th
Letter From an Unknown Woman

ಮೈಸೂರು ಸಿಟಿ ಮುನಿಸಿಪಲ್ ಕಮಿಷನರವರ ಕಛೇರಿ

ಪ್ರಜೆಗಳ ಪ್ರಾತಿನಿಧ್ಯದ (ಚುನಾವಣೆದಾರರುಗಳ ಪಟ್ಟಿಯ ತಯಾರಿಕೆಯ) ೧೯೫೦ನೇ ಇಸವಿ ೧೯ನೇ ನಿಬಂಧನೆ ಮೇರೆಗೆ

ನೋಟಿಫಿಕೇಷನ್

ಮೈಸೂರು ನಗರ ಪ್ರದೇಶ ಚುನಾವಣೆ ಸ್ಥಾನ ಸಂಬಂಧದ ಚುನಾವಣೆದಾರರ ಪಟ್ಟಿ --

ಮೇಲ್ಕಂಡ ಚುನಾವಣೆದಾರರುಗಳ ಪಟ್ಟಿಯನ್ನು ಈ ದಿವಸ ಸಾರ್ವಜನಿಕರ ತಿಳುವಳಿಕೆ ಬಗ್ಗೆ ಆಕ್ಷೇಪಣೆಗಾಗಿ ಪ್ರಚುರಪಡಿಸಿರುತ್ತೆ.

(ರುಜು) ಎಂ. ಎಸ್. ಸ್ವಾಮಿನಾಥನ್,
ಮುನಿಸಿಪಲ್ ಕಮೀಷನರ್ ಮತ್ತು
ಎಲೆಕ್ಟೋರಲ್ ರಿಜಿಸ್ಟ್ರೇಷನ್ ಆಫೀಸರ್

ಮೈಸೂರು ಸಿಟಿ
28 9 51

Edited, printed and published by A R Nagarajan, at Sadhvi Press Subbiah Road, Mysore

ಫೋನ್ ನಂ. 792 ಶ್ರೀ ಸಂಪಾದಕರು ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೯-೯-೫೦ [ಸಂಚಿಕೆ ೩೪

ಆರ್ಜಂಟೈನಾ ದೇಶದಲ್ಲಿ ವೈಮಾನಿಕರ ದಂಗೆ

ದಸರಾಕ್ಕೆ ಬರುವವರಿಗೆ ಪಡಿತರವಿಲ್ಲ

ಮೈಸೂರು ೨೯

ಮೈಸೂರು ಸರ್ಕಾರದವರು ಪ್ರಕಟ ...ನೆಯಂವನ್ನು ಹೊರಡಿಸಿ, ೨ನೇ ತಾ|| ...ರಿಂದ ಪ್ರಾರಂಭವಾಗುವ ದಸರಾ ಹಬ್ಬ ...ತ್ತ ಪ್ರದರ್ಶನಗಳನ್ನು ನೋಡಲು ...ರುವ ಪ್ರೇಕ್ಷಕರಿಗೆ ಆಹಾರ ಧಾನ್ಯ ...ಗೂ ಸಕ್ಕರೆಯನ್ನು ಒದಗಿಸಲು ಸಾಧ್ಯ ...ನೆಂದು ತಿಳಿಸಿರುತ್ತಾರೆ. ಕಳೆದ ಎರ... ತಿಂಗಳಿಂದ ಮಳೆಯಾಗದೆ, ದೇಶದ ... ಆಹಾರದ ಪರಿಸ್ಥಿತಿ ಉತ್ಕಟವಾಗಿ ...ವುದರಿಂದ ಸಾಮಾನ್ಯವಾಗಿ ಕೊಡುವ ...ತರವನ್ನೇ ಕೊಡಲು ತೊಂದರೆಯಿ...ದೆಂದೂ, ಆದ್ದರಿಂದ ದಸರಾ ಪ್ರೇ...ರು ತಮ್ಮ ಪಡಿತರವನ್ನು ತಾವೇ ... ಕೊಳ್ಳಬೇಕೆಂದೂ ಸೂಚಿಸಲಾಗಿದೆ

ಗೋಧಿ ಪಡಿತರ

...ಳೆಯವರಿಗೆ ಈ ತಿಂಗಳಿನ ಗೋ... ಪಡಿತರವು ಇರವವರು ಅದನ್ನು ಪೂರ್ಣಯಾಗಿ ಕೊಳ್ಳಲು ಸಾಧ್ಯವಿಲ್ಲ... ಬರುವ ೧ನೇ ತಾ|| ಅಥವಾ ... ತಾ|| ಗಳಲ್ಲಿ ನಗರದ ರೇಷನಿಂಗ್ ...ರಿಗಳಿಂದ ವಿಶೇಷ ಕೂಪನ್ನುಗಳ... ಪಡೆದು ತೆಗೆದುಕೊಳ್ಳಬಹುದೆಂದು ... ಧಾನಿಯ ಆಹಾರ ಸಲಹಾ ಸಮಿ... ಸದಸ್ಯರಾದ ಶ್ರೀ ಎಂ ಪಿ ನರಸಿಂಹ... ...ಯವರು ತಿಳಿಸಿರುತ್ತಾರೆ. ಗೋಧಿಯು ... ಜೋಳವನ್ನು ಪಡೆಯಬಹುದೆಂ... ಸೂಚಿಸಲಾಗಿದೆ

ಹ ರಿ ಕ ಥೆ

...ಂಡಿ ಪೂಹಲ್ಲಾ ಕಾಳಮ್ಮನ ಗುಡಿ ...ಯಲ್ಲಿರುವ ಶ್ರೀ ಚೌಡೇಶ್ವರಿ ದೇ...ಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ ... ಸಂಜೆ ೭ ಘಂಟೆಗೆ ಶ್ರೀ ಮುಳಬಾ... ನಾರಾಯಣದಾಸರಿಂದ ಕೃಷ್ಣ ಗಾ... ಎಂಬ ಹರಿಕಥೆಯನ್ನು ಏರ್ಪಡಿಸ... ದೆ ಅಮ್ಮನವರಿಗೆ ಕೃಷ್ಣದೇವರ ...ಕಾರ ಮಾಡಲಾಗುವುದು.

...ಕ್ ಔಟ್ ಬಗ್ಗೆ ಪ್ರಭುಗಳಲ್ಲಿ ನಿಯೋಗ

...ಜಧಾನಿಯಲ್ಲಿರುವ ಆರಗು ಮ... ಬಣ್ಣದ ಕಾರ್ಖಾನೆಯು ಕಳೆದ ...ಳು ಗಳಿಂದ ಮುಚ್ಚಲ್ಪಟ್ಟಿರುವುದ... ಕಾರ್ಮಿಕರಿಗೆ ಉಂಟಾಗಿರುವ ತೊಂ...ಗಳನ್ನು ನಿವೇದಿಸಿಕೊಳ್ಳಲು ಶ್ರೀಮ...ರಾಜರಲ್ಲಿ ನಿಯೋಗ ಹೋಗಬೇ... ಕಾರ್ಮಿಕರು ನಿರ್ಧರಿಸಿರುತ್ತಾರೆ ...ಗಿ ಮೆರವಣಿಗೆಯನ್ನು ತೆಗೆದು...ಯು ಹೋಗಲು ಏರ್ಪಾಡಾಗಿದೆ. ...ತಿಯಲ್ಲಿ ಆಹವಾಲು ಹೇಳಿಕೊಳ್ಳ... ಅವಕಾಶ ಮಾಡದೆ ಸರ್ಕಾರದವ...ರವೇ ಈ ವಿಷಯವನ್ನು ಬಗೆ ಹ...ರಿಸಬೇಕೆಂದು ಐ.ಎನ್.ಟಿ.ಯು.ಸಿ. ಯ... ...ದರ್ಶಿ ಶ್ರೀ ಎ. ರಾಮಣ್ಣನವರು ...ಸಿರುತ್ತಾರೆ.

ಭಾರತೀಯ ಚಿತ್ರ ಕಲೆ ಬಗ್ಗೆ ಉಪನ್ಯಾಸ

...ಜನಗೂಡಿನ ಭಾರತೀ ಮಂದಿರ ...ಪ್ರಯದಲ್ಲಿ ನಾಳೆ ಸಂಜೆ ೫ ಘಂಟೆ... ...ನಿನ ಬಾಲಕರ ಮಾಧ್ಯಮಿಕ ಶಾಲೆ... ಬೆಂಗಳೂರಿನ ಕಲಾ ಮಂದಿರದ ... ಎನ್. ಸುಬ್ಬರಾಯರು ಭಾರತೀ... ಚಿತ್ರ ಕಲೆ ಎಂಬ ವಿಷಯವಾಗಿ ಉ...ಪನ್ಯಾಸ ಮಾಡುವರು

ಆರ್ಜಂಟೈನಾದಲ್ಲಿ ಗಂಡಾಂತರ ಪರಿಸ್ಥಿತಿ

ಆರ್ಜಂಟೈನಾದ ಅಧ್ಯಕ್ಷ ಪೆರೋನರವರು ನೆನ್ನೆ ಒಂದು ಘೋಷಣೆ ಹೊರಡಿಸಿ ಆ ದೇಶವು ಗಂಡಾಂತರಕ್ಕೊಳಗಾಗಿರುವ ದೆಂದೂ, ಅಲ್ಲಿನ ಸರ್ಕಾರವನ್ನು ಉರುಳಿಸಲು ನಡೆದಿದ್ದ ಭಾರಿ ಪಿತೂರಿಯೊಂದನ್ನು ವಿಫಲಗೊಳಿಸಲಾಗಿದೆಯೆಂದೂ ತಿಳಿಸಿರುವರು ಪ್ರಭುತ್ವವನ್ನು ಕಾಯಲು ಕಾರ್ಮಿಕರೂ ವಿಮಾನ ದಳದವರೂ ರಕ್ಷಣಾ ಕಾರ್ಯದಲ್ಲಿ ನಿರತರಾಗಿರುತ್ತಾರೆ ತಮ್ಮನ್ನು ಕೊಲೆ ಮಾಡಲು ಪ್ರಯತ್ನ ನಡೆದಿತ್ತೆಂದು ಅಧ್ಯಕ್ಷ ಪೆರೋನರವರು ಕಾರ್ಮಿಕರನ್ನುದ್ದೇಶಿಸಿ ಹೇಳಿರು ದಂಗೆಯಲ್ಲಿ ಪಾಲ್ಗೊಂಡಿದ್ದ ವಿಮಾನ ನೆಲೆಯ ಸೈನಿಕರು ಸೆರೆ ಸಿಕ್ಕಿದ್ದಾರೆಂದೂ, ಸರ್ಕಾರೀ ಸೈನಿಕ ಪಡೆಗಳು ಬಾಂಬು ಧಾಳಿ ಮಾಡಿದುದರಿಂದ ದಂಗೆಕೋರರು ಶರಣಾಗತರಾದರೆಂದೂ ವರದಿಯಾಗಿದೆ

ಸೂ ಚ ನೆ

ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ. — ವ್ಯವಸ್ಥಾಪಕ

ವಿಮಾನದ ಸಿಡಿತದಿಂದ ೧೪ ಜನರ ಮರಣ

ಅಮೆರಿಕದ ವಿಮಾನ ಶಾಖೆಗೆ ಸೇರಿದ ಒಂದು ವಿಮಾನವು ಮೊನ್ನೆ ದಿನ ರಾತ್ರಿ ಟೋಕಿಯೋವಿಗೆ ೩೦ ಮೈಲಿ ಪಶ್ಚಿಮದಲ್ಲಿ ಆಸ್ಫೋಟಿಸಿ ಒಂದು ಬೆಟ್ಟಕ್ಕೆ ಡಿಕ್ಕಿ ಹೊಡೆಯಿತೆಂದೂ, ಅದರೊಳಗಿದ್ದ ೧೪ ಜನರು ಸುಟ್ಟು ಹೋದರೆಂದೂ ವರದಿಯಾಗಿದೆ

ವಾ ರ್ಷಿ ಕೋ ತ್ಸ ವ

ರಾಜಧಾನಿಯ ಹಳೇ ಬಂಡೀಕೇರಿಯ ೨೪೮ನೇ ನಂ. ಮನೆಯಲ್ಲಿ ವಾಣೀ ವಿದ್ಯಾಲಯದ ಪ್ರಥಮ ವಾರ್ಷಿಕೋತ್ಸವವು ನಾಳಿದ್ದು ಸಂಜೆ ೪ ಘಂಟೆಗೆ ನೆರವೇರುವುದು ವಿದ್ವಾನ್ ಕೆ ಎಸ್ ವರದಾಚಾರ್ಯರು ಅಧ್ಯಕ್ಷತೆ ವಹಿಸುವರು

ಕೀ ರ್ತ ನೆ

ರಾಜಧಾನಿಯ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಯರ ಮಠದಲ್ಲಿ ಈ ಸಂಜೆ ೬-೩೦ ಘಂಟೆಗೆ ಶ್ರೀ ಹರಿನಾರಾಯಣ ದಾಸರಿಂದ ಪಾರ್ಥ ಸಾರಥಿ ಎಂಬ ಕೀರ್ತನೆಯು ನಡೆಯುವುದು.

ಕೇಂದ್ರದಲ್ಲಿ ಎರಡು ಸಚಿವ ಸ್ಥಾನಗಳು ಖಾಲಿ

ಕೇಂದ್ರ ಸರ್ಕಾರದ ಗೃಹಸಚಿವ ಸಿ. ರಾಜಗೋಪಾಲಾಚಾರಿಯವರು ಪಾರ್ಲಿಮೆಂಟಿನ ಈ ಅಧಿವೇಶನವು ಮುಗಿದ ನಂತರ ಅಕ್ಟೋಬರ್ ಅಂತ್ಯದ ವೇಳೆಗೆ ನಿವೃತ್ತರಾಗುವರೆಂದು ಹೇಳಲಾಗಿದೆ ನ್ಯಾಯಾಂಗ ಸಚಿವ ಡಾ|| ಬಿ ಆರ್ ಅಂಬೇಡ್ಕರರೂ ಅನಾರೋಗ್ಯದ ನಿಮಿತ್ತ ತಮ್ಮನ್ನು ಅಧಿಕಾರದಿಂದ ನಿವೃತ್ತಿ ಮಾಡಬೇಕೆಂದು ನೆಹರೂರವರನ್ನು ಕೋರಿರುವರೆಂದು ಗೊತ್ತಾಗಿದೆ

ಈ ರಾಜೀನಾಮೆಗಳಿಂದ ಖಾಲಿಯಾಗುವ ಸ್ಥಾನಗಳನ್ನು ಭರ್ತಿ ಮಾಡಲಾಗುವುದಿಲ್ಲವೆಂದೂ, ನ್ಯಾಯಾಂಗ ಖಾತೆಯನ್ನು ಆಹಾರ ಸಚಿವ ಶ್ರೀ ಮುನ್ಷಿಯವರಿಗೂ ಮತ್ತು ಗೃಹಖಾತೆಯನ್ನು ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರಿಗೂ ವಹಿಸಲಾಗುವುದೆಂದು ಊಹಿಸಲಾಗಿದೆ ಡಾ|| ಬಿ ಆರ್ ಅಂಬೇಡ್ಕರರು ಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸುವರೆಂದು ಗೊತ್ತಾಗಿದೆ

ಇರಾಕ್ ಎಣ್ಣೆ ವ್ಯವಹಾರ ವಿಶ್ವಸಂಸ್ಥೆಗೆ

ಬ್ರಿಟಿಷ್ ಮಂತ್ರಿ ಮಂಡಲದ ಸಭೆಯು ಸೇರಿ, ಪರ್ಷಿಯದ ತೈಲ ವಿವಾದವನ್ನು ಪರಿಶೀಲಿಸುವ ಬಗ್ಗೆ ವಿಶ್ವಸಂಸ್ಥೆಯ ಜರೂರು ಸಭೆಯನ್ನು ಕರೆಯಬೇಕೆಂಬ ಅಂಶವು ಪರಿಶೀಲಿಸಲ್ಪಟ್ಟಿತು ಈ ಪ್ರಯತ್ನದಲ್ಲಿ ಬ್ರಿಟನ್ನು ಅಮೆರಿಕದ ನೆರವನ್ನು ಹೊಂದಲು ಪ್ರಯತ್ನಿಸುತ್ತಿದೆಯೆಂದು ಹೇಳಲಾಗಿದೆ

ಲಾರಿ ಮತ್ತು ವ್ಯಾನುಗಳಿಗೆ ಡಿಕ್ಕಿ

ಮೈಸೂರು ಕೋರ್ಟುಗಳ ಮುಂಭಾಗದ ಕಾಂಪೌಂಡ್ ಹತ್ತಿರ ಈ ಮಧ್ಯಾಹ್ನ ಕೋರ್ಟಿನ ಆವರಣದಿಂದ ಹೊರಕ್ಕೆ ಹೋಗುತ್ತಿದ್ದ ಎಂ.ವೈ ೩೩೦೦ ಜಿಪ್. ಎಂಬ ಟ್ರಾಕ್ಸಿಗೂ, ಕಾಲೇಜು ರಸ್ತೆ ಕಡೆಯಿಂದ ಬರುತ್ತಿದ್ದ ಎಂ ವೈ ೧೧೦೭೫ ಎಕ್ಸ್ ಎಂಬ ವ್ಯಾನಿಗೂ ಡಿಕ್ಕಿಯಾಗಿ, ಎರಡು ಗಾಡಿಗಳ ಮಡ್ ಗಾರ್ಡುಗಳಿಗೂ ಮುಂಭಾಗದ ಚಕ್ರಗಳಿಗೂ ಪೆಟ್ಟು ಬಿದ್ದಿದೆ ಯಾರಿಗೂ ಗಾಯವಾಗಲಿಲ್ಲ.

ಬಾಲರತ್ನಂರವರ ಜಾಮೀನು ವಜಾ

ಜೈಲಿಗೆ ಅಪಾದಿತರ ರವಾನೆ

ಸ್ವಂ ಸು ಪ್ರೋ] ಬೆಂಗಳೂರು ೨೯

ದೊಡ್ಡಬಳ್ಳಾಪುರದ ವಕೀಲ ಶ್ರೀ ರಾಮಕೃಷ್ಣಯ್ಯನವರ ಕೊಲೆ ಪ್ರಯತ್ನದ ಆಪಾದನೆಗೆ ಗುರಿಯಾಗಿರುವ ಶ್ರೀ ವಿ. ಬಾಲರತ್ನಂರವರ ಜಾಮೀನನ್ನು ಈ ದಿನ ಇಲ್ಲಿನ ನಗರದ ನ್ಯಾಯಾಧೀಶರು ರದ್ದುಗೊಳಿಸಿದರು. ಅಪಾದಿತರನ್ನು ಜೈಲಿಗೆ ಕರೆದುಕೊಂಡು ಹೋಗಲಾಯಿತು. ಪ್ರಾಸಿಕ್ಯೂಷನ್ ಪರ ನಡೆದ ವಾದದ ಮಹತ್ವವನ್ನು ನ್ಯಾಯಾಧೀಶರು ಅರಿತು ಅಪಾದಿತರೂ ಮತ್ತು ಅವರ ತಂದೆಯವರೂ ಹಣದಿಂದಲೂ ಮತ್ತು ಸಾಕ್ಷಿಗಳ ಮೇಲೆ ಪ್ರಭಾವ ಬೀರಬಲ್ಲರೆಂದೂ ತಿಳಿ, ಮೊಕದ್ದಮೆ ವಿಚಾರಣೆ ಮುಗಿಯುವ ಸಮಯದಲ್ಲಿ ಅಪಾದಿತರು ಓಡಿಹೋಗುವ ಸಂಭವವಿರುವುದೆಂಬುದನ್ನು ಮನಗಂಡರು

೭ ಅಡಿಯ ಮಹಿಳೆಗೆ ೩॥ ಅಡಿ ಎತ್ತರದ ಗಂಡ

ಪೂರ್ವ ಬಂಗಾಳದ ಹಾಯರ್‌ಗಾಚಾ ಎಂಬ ಹಳ್ಳಿಯಲ್ಲಿ ವಿಪರೀತ ಕ್ಷಾಮ ತಲೆದೋರಿ, ಗ್ರಾಮದ ದಂಪತಿಗಳಿಬ್ಬರು ಖುಲ್ನಾ ನಗರಕ್ಕೆ ಬಂದು ಭಿಕ್ಷೆ ಬೇಡುತ್ತಿರುವರೆಂದು ಹೇಳಲಾಗಿದೆ ಆ ಪರ ವ್ಯಕ್ತಿ ೩೦ ವರ್ಷದ ಹೆಂಡತಿಯು ಏಳು ಅಡಿ ಎತ್ತರವಿರುವಳೆಂದೂ, ಆದರೆ ಗಂಡನು ವಯಸ್ಸಿನಲ್ಲಿ ಅವಳಿಗಿಂತ ದೊಡ್ಡವನಾದರೂ ಕೇವಲ ಎರಡೂವರೆ ಅಡಿ ಎತ್ತರವಿರುವನೆಂದೂ ಹೇಳಲಾಗಿದೆ. ಈ ವೈಚಿತ್ರ್ಯವನ್ನು ಕಂಡ ಜನರು ಅವರಿಗೆ ತೃಪ್ತಿಕರವಾದ ರೀತಿಯಲ್ಲಿ ಭಿಕ್ಷೆ ನೀಡುತ್ತಿರುವರೆಂದು ವರದಿಯಾಗಿದೆ

ವಸ್ತು ಪ್ರದರ್ಶನದಲ್ಲಿ ನೀರಾ ತಯಾರಿಕೆ ಪ್ರದರ್ಶನ

ಸಿಹಿ ಹೆಂಡವಾದ ನೀರಾ ತಯಾರಿಸುವ ವಿಧಾನವನ್ನು ದಸರಾ ವಸ್ತು ಪ್ರದರ್ಶನದಲ್ಲಿ ತೋರಿಸಲಾಗುವುದೆಂದು ತಿಳಿದುಬಂದಿದೆ ಅಲ್ಲದೆ ತಾಳೆ ಬೆಲ್ಲದ ತಯಾರಿಕೆಯ ಪ್ರದರ್ಶನವೂ ಆಗುವುದು. ಸರ್ಕಾರದ ಸಿರಾಮಿಕ್ ಪ್ರವೀಣರಾದ ಶ್ರೀ ಹರಿಹರರವರು ಕಂಡುಹಿಡಿದಿರುವ ಹೆಚ್ಚು ಖರ್ಚಿಲ್ಲದ ವಿದ್ಯುಚ್ಛಕ್ತಿಯ ಒಲೆಯನ್ನೂ ಪ್ರದರ್ಶಿಸಲಾಗುವುದೆಂದು ಹೇಳಲಾಗಿದೆ

ಜಿಲ್ಲಾ ಬೋರ್ಡು ಸಭೆ

ಈ ವರ್ಷದಲ್ಲಿ ೩ ಜಿಲ್ಲಾ ಬೋರ್ಡು ಸ್ಕೂಲುಗಳನ್ನು ಸ್ಥಾಪಿಸಲಾಗಿದೆಯೆಂದೂ, ಸಾರ್ವಜನಿಕ ಕಾರ್ಯಗಳಿಗಾಗಿ ಉದಾರ ಸಹಾಯ ಮಾಡಿದವರನ್ನು ಗೌರವಿಸಲು ದಸರಾ ಹಬ್ಬಗಳು ಕಳೆದ ನಂತರ ದಾನಿಗಳ ದಿನಾಚರಣೆ ನಡೆಸಲು ಸರ್ಕಾರದವರು ಒಪ್ಪಿರುವರೆಂದೂ, ಈ ದಿನ ಜಿಲ್ಲಾ ಬೋರ್ಡು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು

ಉ ಪ ನ್ಯಾ ಸ

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪದವೀಧರರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೪ ಗಂಟೆಗೆ ಡಾ|| ಹೆಚ್. ಸಿ. ಚಲುವಯ್ಯನವರು ತಮ್ಮ ಇತ್ತೀಚಿನ ವೈದ್ಯಕೀಯ ಪ್ರವಾಸದ ವಿಷಯವಾಗಿ ಕಾಲೇಜು ಹಾಲಿನಲ್ಲಿ ಭಾಷಣ ಮಾಡುವರು ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಖಾಸಿಂ ರಜ್ವಿ ಬಿಡುಗಡೆಗೆ ಕರಾಚಿಯಲ್ಲಿ ನಿರ್ಣಯ

ಕರಾಚಿಯಲ್ಲಿ ಕೆಲವು ದಿನಗಳ ಹಿಂದೆ ರಜಕಾರರ ಸಭೆಯೊಂದು ನಡೆದು ಹೈದರಾಬಾದಿನ ಮಾಜಿ ರಜಕಾರ್ ನಾಯಕ ಖಾಸಿಂ ರಜ್ವಿಯ ಬಂಧನಕ್ಕೆ ಪ್ರತಿಭಟನೆಯನ್ನು ಸೂಚಿಸಲಾಯಿತಲ್ಲದೆ, ಅವನನ್ನು ಬಿಡುಗಡೆ ಮಾಡಬೇಕೆಂದು ನಿರ್ಣಯ ಮಾಡಲಾಯಿತು.

ಆರ್.ಎಸ್.ಎಸ್. ಮೇಲಿನ ನಿರ್ಬಂಧದ ರದ್ದು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲೆ ಹಾಕಲಾಗಿದ್ದ ನಿರ್ಬಂಧವನ್ನು ಬೊಂಬಾಯಿ ಸರ್ಕಾರದವರು ರದ್ದುಗೊಳಿಸಿರುತ್ತಾರೆ. ಸರ್ಕಾರಿ ಮತ್ತು ಸರ್ಕಾರದ ಸಹಾಯ ಪಡೆಯುತ್ತಿರುವ ಸಂಸ್ಥೆಗಳ ನೌಕರಿಗಳಿಗೆ ಆರ್. ಎಸ್. ಎಸ್ ಸಂಸ್ಥೆಯವರು ಸೇರಲು ಅವಕಾಶವನ್ನು ಕಲ್ಪಿಸಲಾಗಿದೆ.

ಕೊಳದ ನೀರು ಕುಡಿದು ಎಮ್ಮೆಗಳ ಸಾವು

ಅರಣಿ ಬಳಿ ಒಂದು ಹಳ್ಳಿಯ ಕೊಳದಲ್ಲಿ ನೀರನ್ನು ಕುಡಿದು ಹತ್ತು ಎಮ್ಮೆಗಳು ಸತ್ತುವೆಂದು ಹೇಳಲಾಗಿದೆ. ನೀರು ಕುಡಿಯುವ ಮುಂಚೆ ಅವು ಜೋಳವನ್ನು ತಿಂದಿದ್ದುವೆಂದು ಹೇಳಲಾಗಿದೆ.

ಹಿಂದೀ ತರಗತಿಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಗುಂಡ್ಲುಪೇಟೆ ಕೇಂದ್ರದಲ್ಲಿ ೧೯೫೨ನೇ ಫೆಬ್ರುವರಿ ತಿಂಗಳು ನಡೆಸುವ ಹಿಂದೀ ಪರೀಕ್ಷೆಗಳಿಗೆ ಸಂಬಂಧಿಸಿದ ತರಗತಿಗಳ ಪಾಠ ಕ್ರಮವು ಅಲ್ಲಿನ ಶ್ರೀ ವಿಜಯ ಗುರುಕುಲದಲ್ಲಿ ಬರುವ ೨ನೇ ತಾರೀಖಿನಿಂದ ಪ್ರಾರಂಭವಾಗುವುದು. ಸೇರಲಿಚ್ಛಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ವ್ಯವಸ್ಥಾಪಕರಿಗೆ ತಿಳಿಸಬಹುದೆಂದು ಕೋರಲಾಗಿದೆ.

ಮದ್ರಾಸ್ ಬಳಿ ಸೈಕಲ್ ಕಾರ್ಖಾನೆಯ ಆರಂಭ

ಭಾರತದಲ್ಲೆಲ್ಲಾ ಅತ್ಯಂತ ದೊಡ್ಡದಾದ ಸೈಕಲ್ ಕಾರ್ಖಾನೆಯನ್ನು ಮದ್ರಾಸಿನ ಬಳಿ ಅಂಬತ್ತೂರಿನಲ್ಲಿ ಈಚೆಗೆ ಆರಂಭಿಸಲಾಯಿತು. ಅಲ್ಲಿನ ಗೌರ್ನರರಾದ ಭಾವನಗರದ ಮಹಾರಾಜರು ಇದರ ಆರಂಭೋತ್ಸವವನ್ನು ನೆರವೇರಿಸಿದರು. ಪ್ರತಿ ವರ್ಷಕ್ಕೆ ೩ ಲಕ್ಷ ಸೈಕಲ್ಲುಗಳನ್ನು ತಯಾರಿಸಲು ಏರ್ಪಾಡಾಗಿದೆ.

ವಸ್ತು ಪ್ರದರ್ಶನದ ಕಲಾ ವಿಭಾಗಗಳಲ್ಲಿ ಸ್ಪರ್ಧೆ

ಬರುವ ತಿಂಗಳು ೩ರಿಂದ ಪ್ರಾರಂಭವಾಗುವ ದಸರಾ ವಸ್ತು ಪ್ರದರ್ಶನದಲ್ಲಿ ಸಂಗೀತ, ದೇವರ ನಾಮ, ಭಾರತ ನಾಚನ, ನೃತ್ಯ, ಭರತ ನಾಟ್ಯ, ಆಧುನಿಕ ಗೀತ (ಸಿನಿಮಾ ಹಾಡು), ವಿವಿಧ ವೇಷ ಮುಂತಾದ ಸ್ಪರ್ಧೆಗಳಿಗೆ ಸೇರಲಿಚ್ಛಿಸುವ ಕಲಾಭಿಮಾನಿಗಳು ಈ ತಿಂಗಳು ೩೦ನೇ ತಾ|| ಭಾನುವಾರದೊಳಗೆ ತಮ್ಮ ಅರ್ಜಿಗಳನ್ನು ಕಳುಹಿಸಬೇಕೆಂದು ಪ್ರದರ್ಶನ ಸಮಿತಿಯ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

* ಪ್ರಭಾ *
28-9-51 ರಿಂದ ಅಮೋಘ 4ನೇ ವಾರ
ಪ್ರತಿ ದಿನ 3 ಆಟಗಳು
ಕಾಲಿ ಘಟ
(ಹಿಂದಿ)
ಪಾತ್ರ: ಕಿಶೋರ್ ಸಾಹು, ಬಿನಾ ರಾಯ್, ಆಶಾ ಮಾಥುರ್
ಕಥೆ, ನಿರ್ದೇಶನ ಮತ್ತು ತಯಾರಿಕೆ - ಕಿಶೋರ್ ಸಾಹು

Edited printed and published by A R Nagarajan, at Sadhvi Press, D. Subbiah Road, Mysore

ಧರ್ಮದಾಸ್

ನಾಟಕ ರತ್ನ ಜಿ. ಎಚ್. ವೀರಣ್ಣನವರ ಗುಬ್ಬಿ ಶ್ರೀ ಚನ್ನ ಬಸವೇಶ್ವರ ಕೃಪಾಪೋಷಿತ ನಾಟಕಮಂಡಲಿಯವರು ಕಳೆದ ಬುಧವಾರದಿಂದ ರಾಜಧಾನಿಯ ರತ್ನಾವಳಿ ಥಿಯೇಟರಿನಲ್ಲಿ ಮೇಲ್ಕಂಡ ನಾಟಕವನ್ನು ಅಭಿನಯಿಸುತ್ತಿರುವರು. ಧನ ಪಿಶಾಚ ಹಿಡಿದ ಮಾನವನು ಎಂತಹ ನೀಚ ಕೃತ್ಯವನ್ನಾದರೂ ಮಾಡಲು ಹಿಂಜರಿಯುವುದಿಲ್ಲ. ಧನಿಕನೂ ಕೃಪಣನೂ ಆದ ಧರ್ಮದಾಸನ ಹಣದ ಆಸೆಯ ಪರಿಣಾಮವಾಗಿ ಅವನ ಮಗ ವಿಜಯನು ಮನೆ ಬಿಟ್ಟು ಹೊರಡುವನು. ಕಡೆಗೆ ವಿಜಯನು ಅವನ ಹೆಂಡತಿ, ಮಾವ ಮತ್ತು ಸಹೋದರಿಯರಿಂದಲೂ, ಇವರ ಧನ ಮದದಿಂದ ವಂಚಿಸಲ್ಪಡುವನು. ಸತ್ಯ, ಧರ್ಮ, ನೀತಿ, ನಿಷ್ಠೆಗಳೇ ಅಂತ್ಯದಲ್ಲಿ ಅವನನ್ನು ಕಾಪಾಡಿ ಮೇಲ್ಕಂಡ ಅವನ ನೆಂಟರಿಷ್ಟರಿಗೂ ಜ್ಞಾನೋದಯವನ್ನುಂಟು ಮಾಡುವುವು. ಇದೇ ಕಥೆಯ ಸಾರ.

ಸಮಾಜ ಸುಧಾರಣೆಯು ಇಂತಹ ನಾಟಕಗಳಿಂದ ಬಹು ಮಟ್ಟಿಗೆ ಸಾಧಿಸಲ್ಪಡುವುದು. ಈ ನಾಟಕವನ್ನು ಎಲ್ಲರೂ ಅಗತ್ಯವಾಗಿ ನೋಡಬೇಕಾದುದು.

ಚಾಮರಾಜನಗರದ ಚಂದಾದಾರರಲ್ಲಿ ವಿನಂತಿ

ಚಾಮರಾಜನಗರದ ಸಾಧ್ವಿ ಪತ್ರಿಕಾ ಚಂದಾದಾರರು ಬಾಕಿ ಇರುವ ಚಂದಾ ಹಣವನ್ನು ಕೂಡಲೇ ಪಾವತಿ ಮಾಡಬೇಕೆಂದೂ ಮತ್ತು ಇನ್ನು ಮುಂದೆ ಪ್ರತಿ ತಿಂಗಳ ಚಂದಾವನ್ನು ಮುಂಗಡವಾಗಿ ಕೊಟ್ಟು ಸಹಕರಿಸಬೇಕೆಂದೂ ಕೋರಲಾಗಿದೆ.

ಆರ್. ಮನ್ನಾರು ಕೃಷ್ಣಯ್ಯ,
"ಸಾಧ್ವಿ" ಏಜೆಂಟ್.

ಪತ್ರಿಕಾ ಮಸೂದೆಯಲ್ಲಿ ಬದಲಾವಣೆ

ಪತ್ರಿಕಾ ಮಸೂದೆಯಲ್ಲಿ ಹಲವು ಬದಲಾವಣೆಗಳನ್ನು ಪಾರ್ಲಿಮೆಂಟಿನ ಆಯ್ಕೆ ಸಮಿತಿಯು ಸೂಚಿಸಿರುತ್ತದೆ. "ಆಕ್ಷೇಪಕರವಾದ ವಿಷಯ" ಎಂಬ ನಿಬಂಧನೆಗೆ ಹಲವು ಸಲಹೆಯ ಟೀಕೆಗಳು ಒಳಗಾಗುವುದಿಲ್ಲವೆಂದು ಅದು ಅಭಿಪ್ರಾಯಪಟ್ಟಿದೆ. ಸೆಷನ್ಸ್ ನ್ಯಾಯಾಧೀಶರು ಠೇವಣಿ ಕೇಳುವ ಬದಲು ಹಲವು ಯುಕ್ತ ಸಂದರ್ಭಗಳಲ್ಲಿ ಎಚ್ಚರಿಕೆಯನ್ನು ಕೊಡಬಹುದೆಂದು ಸೂಚಿಸಲಾಗಿದೆ. ಏಕಪಕ್ಷ ತೀರ್ಮಾನವನ್ನು ಪುನರ್ವಿಮರ್ಶಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಹೈಕೋರ್ಟಿಗೂ ಅಪೀಲು ಮಾಡಬಹುದಾಗಿದೆ. ಠೇವಣಿಯನ್ನು ವಾಪಸು ಕೊಡಲೂ ಸಹ ಹೊಸ ನಿಬಂಧನೆಯನ್ನು ಸೇರಿಸಲಾಗಿದೆ.

ಮೈಸೂರು ಸಿಟಿ ರೇಷನಿಂಗ್ ಅಧಿಕಾರಿಗಳ ಕಛೇರಿ
ಪ್ರಕಟಣೆ

ಮಹಾತ್ಮ ಗಾಂಧಿಯವರ ವರ್ಧಂತಿ ಮತ್ತು ದಸರಾ ಆರಂಭೋತ್ಸವದ ಪ್ರಯುಕ್ತ ೧೯೫೧ನೇ ಅಕ್ಟೋಬರ್ ೨ನೇ ತಾರೀಖು ಮಂಗಳವಾರ ನಗರದ ಎಲ್ಲಾ ರೇಷನ್ ಡಿಪೋಗಳೂ ಮತ್ತು ಸರ್ಕಾರಿ ಗೋಡೌನುಗಳೂ ಮುಚ್ಚಲ್ಪಡುವುವೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಎಚ್. ಜಿ. ವಿ. ಶೆಟ್ಟಿ,
ರೇಷನಿಂಗ್ ಆಫೀಸರು,
ಮೈಸೂರು ಸಿಟಿ.

FURNITURE ON HIRE
NALINS,
Service Furnishers, V. V. Market Square, Mysore.

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿವೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳೀ ಅಂಗಡಿ
ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ಭದ್ರತೆ ಮತ್ತು ಸೇವೆ
ಪೂರ್ಣ ಭದ್ರತೆ - ತೀರ ಕಡಿಮೆ ವೆಚ್ಚ
ಅತ್ಯನುಕೂಲವಾದ ಪ್ರೀಮಿಯಂ ದರ
ಕಡಿವಿಲ್ಲದ ವಿಮಾ ಮೊಬಲಗಿನ ಪಾವತಿ
ಸುಲಭವಾದ ಸಾಲದ ಸೌಕರ್ಯ
ಇದೇ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚುವುದು
ಇವೆಲ್ಲಾ ಬೇಕಾದರೆ
ಮೈಸೂರು ಸರ್ಕಾರದ
ವಿಮಾ ಇಲಾಖೆ
ಪ್ರಜೆಗಳ ಸೇವೆಯಲ್ಲಿ
ವಿಮೆ ಮಾಡಲು ಇಂದೇ ನಿರ್ಧರಿಸಿರಿ
ಸಾ|| ಎ. ಸ. ಜೀ. ದಿ

ಮೈಸೂರು ಸಿಟಿ ಮುನಿಸಿಪಲ್ ಕಮೀಷನರವರ ಆಫೀಸಿನಿಂದ
ನೋಟಿಫಿಕೇಷನ್

ತಾರೀಖು 27-9-51 R. A. P. R. 366/51-52 ನೇ ನಂಬರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವವು 14-10-51 ರಲ್ಲೂ ನಡೆಯುವುದರಿಂದ ಆ ಕಾಲದಲ್ಲಿ ಬೆಟ್ಟದ ತಪ್ಪಲಿನಲ್ಲಿ ಅಂಗಡಿಯಿಡುವ ಜನರಿಂದ ವಿಧಾಯಕವಾಗಿರುವ ದರದಂತೆ ಫೀ ವಸೂಲು ಮಾಡುವ ಹಕ್ಕನ್ನು 3-10-51 ರಲ್ಲೂ ಮಧ್ಯಾಹ್ನ 4 ಘಂಟೆಗೆ ಮುನಿಸಿಪಲ್ ಆಫೀಸು ಬಳಿಯೂ ಮತ್ತು ಶ್ರೀಮನ್ ಮಹಾರಾಜರವರ ಜಂಬೂ ಸವಾರಿಯ ಮೆರವಣಿಗೆಯನ್ನು ನೋಡಲು ದೇವರಾಜ ಮಾರ್ಕೆಟ್ ಮಹಡಿ ಮೇಲಕ್ಕೆ ಹೆಂಗಸರನ್ನೂ ಮತ್ತು 10 ವರ್ಷಕ್ಕೆ ಒಳಪಟ್ಟಿರುವ ಹುಡುಗರನ್ನೂ ಬಿಡಲು ವಿಧಾಯಕವಾಗಿರುವ ದರದಂತೆ ಫೀ ವಸೂಲು ಮಾಡುವ ಹಕ್ಕನ್ನು ದೇವರಾಜ ಮಾರ್ಕೆಟ್ ಆಫೀಸಿನಲ್ಲಿ 4-10-51 ರಲ್ಲೂ ಬೆಳಿಗ್ಗೆ 10 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಬಾಬನ್ನು ಪಡೆಯಲು ಇಷ್ಟ ಉಳ್ಳವರು ಖುದ್ದಾಗಿ ಸಕಾಲಕ್ಕೆ ಹಾಜರಾಗಿ ಬಾಬು ಪಡೆಯಬಹುದು.

ಹೆಚ್ಚಿಗೆ ಅಂಶ ತಿಳಿಯಲಪೇಕ್ಷಿಸುವವರು ರಜಾವಲ್ಲದ ದಿವಸಗಳಲ್ಲಿ ಬೆಳಿಗ್ಗೆ 11 ಘಂಟೆ ಲಾಗಾಯ್ತು ಸಾಯಂಕಾಲ 5 ಘಂಟೆಯ ವರೆಗೆ ಮುನಿಸಿಪಲ್ ರೆವಿನ್ಯೂ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

(ರುಜು) ಎಂ. ಎಸ್. ಸ್ವಾಮಿನಾಥನ್,
ಮುನಿಸಿಪಲ್ ಕಮೀಷನರು,
ಸಿಟಿ ಮುನಿಸಿಪಲ್ ಆಫೀಸು, ಮೈಸೂರು.

ಪೋನ್ ನಂ. 792 | ವಂದೇ ಮಾತರಂ | ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦) ಸೋಮವಾರ ೯-೧೦-೫೧ [ಸಂಚಿಕೆ ೫೯

ಪರ್ಷಿಯಾ ತೀರದ ಸುತ್ತ ಬ್ರಿ॥ ನೌಕಾ ದಿಗ್ಬಂಧನ!

ಗಾಂಧೀ ಜಯಂತಿ

ಮೈಸೂರು ೧

ಗಾಂಧಿ ಜಯಂತಿ ಪ್ರಯುಕ್ತ ನಾಳೆ ಬೆಳಿಗ್ಗೆ ೯ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಧ್ವಜವಂದನೆ ಮತ್ತು ಸಾಯಂಕಾಲ ೬ ಘಂಟೆಗೆ ಟೌನ್ ಹಾಲ್ ಒಳಗಡೆ ಬಹಿರಂಗ ಸಭೆಯನ್ನು ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ಏರ್ಪಡಿಸಲಾಗಿದೆ. ಸಾರ್ವಜನಿಕರು ಸಹಕರಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಕಾಂಗ್ರೆಸ್ ಸಮಿತಿಯ ಕಾರ್ಯಕ್ರಮಗಳೊಡನೆ ಸರ್ವೋದಯ ಸಮಾಜದವರು ಇಟ್ಟುಕೊಂಡಿರುವ ಕಾರ್ಯಕ್ರಮದ ಪ್ರಕಾರ ಬೆಳಿಗ್ಗೆ ೬ರಿಂದ ಸಂಜೆ ೬ರ ವರೆಗ ಟೌನ್ ಹಾಲ್ ಒಳಗಡೆ ಅಖಂಡ ಸೂತ್ರಯಜ್ಞ; ಸಂಜೆ ೪॥ ಯಿಂದ ನೂಲುವ ಸ್ಪರ್ಧೆ; ೫-೩೦ ರಿಂದ ೬ ಸಾಮೂಹಿಕ ನೂಲುವದು, ೭ಕ್ಕೆ ಪ್ರಾರ್ಥನಾ ಸಭೆಗಳು ನಡೆಯುವುವು. ಸೂತ್ರಯಜ್ಞ ಮತ್ತು ನೂಲುವ ಸ್ಪರ್ಧೆಗಳಿಗೆ ಸೇರಬಿಚ್ಛಿಸುವವರು ತಮ್ಮ ಹೆಸರುಗಳನ್ನು ಖದ್ದರ್ ಪರಸ್ಪರ ಸಹಾಯ ಸಂಘದವರು, ಚೇತನಾ ಪುಸ್ತಕಾಲಯದವರು ಅಥವಾ ನಾಳೆ ಮಧ್ಯಾಹ್ನ ೩ ರಿಂದ ೪ರ ರೊಳಗೆ ಪುರ ಭವನದಲ್ಲಿರುವ ಕಾರ್ಯಕರ್ತರು ಇವರುಗಳ ಪೈಕಿ ಒಬ್ಬರಿಗೆ ಕೊಡಬಹುದು.

ಮೈಸೂರು ಲೆಕ್ಕ ತನಿಖೆ ಅಧಿಕಾರಿಗಳು ಇತರ ಸಂಸ್ಥಾನಕ್ಕೆ

ಮೈಸೂರು ಲೆಕ್ಕ ತನಿಖೆ ಇಲಾಖೆಯ ಗೆಜೆಟೆಡ್ ನೌಕರರಾಗಿರುವ ೪೦ ಅಧಿಕಾರಿಗಳ ಪೈಕಿ ಹಲವರನ್ನು ಇತರ ಸಂಸ್ಥಾನಗಳಿಗೆ ವರ್ಗಾಯಿಸಲು, ಅವರ ಪೈಕಿ ಕೆಲವರನ್ನು ಆರಿಸುವ ಸಲುವಾಗಿ ನಾಳೆ ಬೆಂಗಳೂರಿಗೆ ಕೇಂದ್ರ ಪ್ರತಿನಿಧಿ ಅಯ್ಯರ್ ಸ ಮಿ ತಿ ಯು ಬರುವುದೆಂದು ತಿಳಿದುಬಂದಿದೆ. ಕೇಂದ್ರಕ್ಕೂ ಇವರನ್ನು ತೆಗೆದುಕೊಳ್ಳಲಾಗುವುದೆಂದು ಹೇಳಲಾಗಿದೆ.

ಕವಿತಾ ಸಮಾಜ

ರಾಜಧಾನಿಯ ಸವಿತಾ ಸಮಾಜದ ಸರ್ವ ಸದಸ್ಯರ ಸಭೆಯು ಕಳೆದ ಮಂಗಳವಾರ ನಡೆದ ಪ್ರಸಕ್ತ ಸಾಲಿಗೆ ಶ್ರೀ ಎಂ. ವೆಂಕಟರಾಮಯ್ಯನವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎಂ. ಎ. ಶಿವಮ್ಮ ಮತ್ತು ವಿ. ರಾಜಪ್ಪನವರು ಉಪಾಧ್ಯಕ್ಷರುಗಳಾಗಿಯೂ, ಶ್ರೀ ಎಸ್. ಸಿ. ದೇವರಯ್ಯನವರು ಮತ್ತು ಶ್ರೀ ಜ. ವಿ. ರಾಮಯ್ಯನವರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಂ. ವಿ. ಮುನಿಸ್ವಾಮಿಯವರು ಖಜಾಂಚಿಯಾಗಿಯೂ ಚುನಾಯಿತರಾಗಿರುವರು.

ಕಪಿಲಾ ಬಟ್ಟೆ ಗಿರಣಿ ಕಾರ್ಮಿಕರ ಸಂಘ

ನಂಜನಗೂಡಿನಲ್ಲಿರುವ ಕಪಿಲಾ ಬಟ್ಟೆ ಗಿರಣಿಯ ಕಾರ್ಮಿಕರ ಸಭೆಯು ಶ್ರೀ ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಟಿ. ಎಸ್. ಸುಬ್ಬಣ್ಣ ಮತ್ತು ಶ್ರೀ ಎಸ್. ಸುಬ್ಬರಾಯರವರು ಭಾಷಣ ಮಾಡಿದರು. ನಂತರ ನಡೆದ ಚುನಾವಣೆ ನಡೆದು ಶ್ರೀಗಳಾದ ಎ. ರಾಮಣ್ಣ ಅಧ್ಯಕ್ಷ, ಕೆ. ಎಸ್. ಗೋಪಾಲ ರಾವ್ ಉಪಾಧ್ಯಕ್ಷ ಮತ್ತು ಎಸ್. ಸುಬ್ಬಣ್ಣ ಕಾರ್ಯದರ್ಶಿ, ಎಲ್. ಖಜಾಂಚಿಗಳಾಗಿ ಆರಿಸಲ್ಪಟ್ಟರು.

ಬಟ್ಟೆ ವರ್ತಕರ ರಹದಾರಿಯ ತಾತ್ಕಾಲಿಕ ರದ್ದು

ಮೈಸೂರು ೧

ರಾಜಧಾನಿಯ ರತನ್‌ಚಂದ್ ಚಂದರ್‌ಮಲ್ ಎಂಬ ಬಟ್ಟೆ ವ್ಯಾಪಾರಿಗಳು ಚಿಲ್ಲರೆ ವರ್ತಕರಿಗೆ ಸರಿಯಾಗಿ ಮತ್ತು ಕ್ರಮವರಿತು ಬಟ್ಟೆಯನ್ನು ಹಂಚುತ್ತಿರಲಿಲ್ಲವೆಂಬ ಕಾರಣಕ್ಕಾಗಿಯೂ ಮತ್ತು ಸಯ್ಯಾಜಿರಾವ್ ರಸ್ತೆಯ ಚಿಲ್ಲರೆ ಬಟ್ಟೆ ವ್ಯಾಪಾರಿಗಳಾದ ಕೊಲಂಬೊ ಫ್ಯಾನ್ಸಿ ಸ್ಟೋರ್ಸಿನವರು ಅಕ್ರಮವಾಗಿ ಹೆಚ್ಚಿಗೆ ಬಟ್ಟೆ ಹೊಂದಿದ್ದುದಕ್ಕಾಗಿಯೂ ಸವರಿಯವರ ರಹದಾರಿಗಳನ್ನು ಮೊನ್ನೆಯಿಂದ ಒಂದು ತಿಂಗಳ ಕಾಲ ಸಸ್ಪೆಂಡು ಮಾಡಲಾಗಿದೆ.

ಡಿಪೋ ರಹದಾರಿ ರದ್ದು

ಚಾಮರಾಜ ಮೊಹಲ್ಲಾ, ಸರಸ್ವತೀಪುರದಲ್ಲಿರುವ ೩ನೇ ನಂಬರು ಪಡಿತರ ಡಿಪೋವಿನ ಮಾಲೀಕ ಶ್ರೀ ಎಚ್.ಜಿ.ಕೆಂಪೇಗೌಡರಿಗೆ ರಹದಾರಿಯನ್ನು ರದ್ದುಗೊಳಿಸಲಾಗಿದೆ. ಸಕ್ಕರೆಯಲ್ಲಿ ೧ ಮೂಟೆ ೬೦ ಪೌಂಡಿನಷ್ಟು ಕಡಿಮೆ ಬಂದುದೇ ಇದಕ್ಕೆ ಕಾರಣ. ರೇಷನಿಂಗ್ ಅಧಿಕಾರಿಗಳು ಡಿಪೋವಿಗೆ ಅನಿರೀಕ್ಷಿತ ಭೇಟಿಯಿತ್ತಿದ್ದರು.

ಸೂಚನೆ

ಮಹಾತ್ಮ ಗಾಂಧಿ ಜಯಂತಿ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ. —ವ್ಯವಸ್ಥಾಪಕ

ನಟನಾ ಚುನಾವಣೆ

ಬೆಂಗಳೂರು ೧

ಮೊನ್ನೆ ತಿಪ್ಪಗೊಂಡನ ಹಳ್ಳಿಯಲ್ಲಿ ಸಂಸ್ಥಾನದ ಚುನಾವಣಾಧಿಕಾರಿಗಳು ನಟನಾ ಚುನಾವಣೆಯೊಂದನ್ನು ಏರ್ಪಡಿಸಿದ್ದರು. ಮುಖ್ಯಮಂತ್ರಿ, ನ್ಯಾಯಾಂಗ ಮಂತ್ರಿ, ನಾನಾ ಜಿಲ್ಲಾಧಿಕಾರಿಗಳು ಪಕ್ಷಗಳ ಮುಖಂಡರು ಮುಂತಾದವರು ಅದನ್ನು ಪರಿಶೀಲಿಸಲು ಹೋಗಿದ್ದರು. ಹಳ್ಳಿಯ ಸುತ್ತುಮುತ್ತಲೂ ಇರುವ ೧೧೩೭ ಜನ ಮತದಾರರ ಪೈಕಿ ೩೦೦ ಜನರು ಓಟು ಮಾಡಿದರು. ಜನರಿಗೆ ಚಿಹ್ನೆಗಳ ಬಗ್ಗೆ ಸಾಕಾದಷ್ಟು ಅರಿವು ಆಗಿರಲಿಲ್ಲವೆಂದು ಹೇಳಲಾಗಿದೆ. ಇತರ ಜಿಲ್ಲೆಗಳಲ್ಲೂ ಸಹ ಬರುವ ತಿಂಗಳು ಚುನಾವಣೆಗಳು ...

ಗೋರಿಬಿದನೂರು ಹಳ್ಳಿಯಲ್ಲಿ ಗುಂಡಿನೇಟು

ಬೆಂಗಳೂರು ೧

ಗೋರಿಬಿದನೂರು ತಾಲ್ಲೂಕು, ಕಂಟ್ರಾಕ್ಟರಹಳ್ಳಿಯ ಈಚಲು ವನದಲ್ಲಿ ವನಗಳನ್ನು ನೋಯಿಸುತ್ತಿದ್ದ ಬಲಿಗೈ ಜಾತಿಯ ಆದಿಮೂರ್ತಿ ಎಂಬುವನ ಮೇಲೆ ಇಲ್ಲಿನ ಕಂಟ್ರಾಕ್ಟರರೊಬ್ಬರ ಗುಮಾಸ್ತನು ಗುಂಡು ಹಾರಿಸಿದ ಪರಿಣಾಮವಾಗಿ ಅವನಿಗೆ ಗಾಯವಾಗಿ ಈಗ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ, ಅವನ ಶರೀರದಿಂದ ೪೧ ಪೈಕಿ ೩ ರವೆ ಗುಂಡುಗಳನ್ನು ತೆಗೆಯಲಾಯಿತೆಂದೂ ಹೇಳಲಾಗಿದೆ.ಅವನ ಸ್ಥಿತಿಯು ತೀವ್ರವಾಗಿರುವುದಾಗಿ ಗೊತ್ತಾಗಿದೆ. ವನದೊಳಗೆ ಕಳ್ಳರು ನುಗ್ಗಿದರೆಂದು ಸುದ್ದಿ ಕೇಳಿ, ಗುಮಾಸ್ತನು ಗುಂಡು ಹಾರಿಸಿದನೆಂದು ವರದಿಯಾಗಿದೆ.

ವಕೀಲರೊಬ್ಬರ ಮೇಲೆ ಮಾನಭಂಗ ಪ್ರಯತ್ನದ ಅಪಾದನೆ

ಬೆಂಗಳೂರಿನ ವಕೀಲರಾದ ಶ್ರೀ ಎಸ್. ಕೃಷ್ಣಪ್ಪನವರ ಬಳಿ ಬಂದಿದ್ದ ಒಬ್ಬ ಕಕ್ಷಿಗಾರನ, ೩೦ ವರ್ಷ ವಯಸ್ಸಿನ ಕೃಷ್ಣವೇಣಿ ಎಂಬ ಚಿನ್ನದ ಗಣಿ ಪ್ರದೇಶದ ಮಹಿಳೆಯ ಮೇಲೆ ವಕೀಲರು ಕಳೆದ ೧೧ನೇ ತಾ॥ ರಾತ್ರಿ ಅತ್ಯಾಚಾರ ನಡೆಸಲು ಪ್ರಯತ್ನ ಮಾಡಿದರೆಂದು ಪೋಲೀಸರಿಗೆ ದೂರು ಕೊಡಲಾಗಿದೆ.

ಗೀಕ ಹಳ್ಳಿಯಲ್ಲಿ ಹೆಂಡತಿ ಕೊಲೆ; ಗಂಡನ ಆತ್ಮಹತ್ಯ

ನಂಜನಗೂಡು ೧

ಈ ತಾಲ್ಲೂಕು ಗೀಕಹಳ್ಳಿಯ ಮಾದ ಎಂಬುವನು ತನ್ನ ಹೆಂಡತಿ ೧೭ ವರ್ಷದ ರಂಗಮ್ಮನ ನಡತೆ ಬಗ್ಗೆ ಅನುಮಾನ ಪಟ್ಟು ನೆನ್ನೆ ನಡುರಾತ್ರಿಯಲ್ಲಿ ಮಚ್ಚಿನಿಂದ ಅವಳನ್ನು ಹೊಡೆದನೆಂದೂ, ಬಿಡಿಸಲು ಬಂದ ಮತ್ತೊಬ್ಬ ಹೆಂಗಸು ಹೊಂಬಾಳಮ್ಮನಿಗೂ ತಿವನು ಹೊಡೆಯಲು ಅವಳ ಕರುಳು ಈಚೆಗೆ ಬಂದಿತೆಂದೂ, ಅನಂತರ ಮನೆಗೆ ಹೋಗಿ ತಾನೂ ಇರಿದುಕೊಂಡು ಮೃತ ಪಟ್ಟನೆಂದೂ ವರದಿಯಾಗಿದೆ. ಗಾಯಗೊಂಡ ಹೊಂಬಾಳಮ್ಮನನ್ನು ಇಲ್ಲಿನ ಆಸ್ಪತ್ರೆಗೆ ಸಾಗಿಸಲಾಗಿದೆ. ಪೋಲೀಸರು ಸ್ಥಳಕ್ಕೆ ಹೋಗಿ ಮಹಜರು ...

ದಸರಾ ಹಬ್ಬಕ್ಕೆ ವಿಶೇಷ ಅತಿಥಿಗಳು

ಮೈಸೂರು ೧

ಈ ಸಾರಿಯ ದಸರಾ ಮಹೋತ್ಸವಕ್ಕೆ ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖಾ ಸಚಿವರಾದ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಸಿ.ಡಿ ದೇಶಮುಖ್, ಮದ್ರಾಸಿನ ಗೌರ್ನರರಾದ ಭಾವನಗರದ ಮಹಾರಾಜರು, ಭಾರತ ಸೇನಾನಿ ಜ॥ ಕಾರಿಯಪ್ಪ, ಅಕೌಂಟೆಂಟ್ ಜನರಲ್ ಶ್ರೀ ವಿ. ನರಹರಿರಾವ್ ಮತ್ತು ಉತ್ತರ ಕರ್ನಾಟಕ ಕೊಯಮುತ್ತೂರುಗಳ ಮುಖಂಡರುಗಳನ್ನೂ ವಿಶೇಷ ಅತಿಥಿಗಳನ್ನಾಗಿ ಆಹ್ವಾನಿಸಲಾಗಿದೆ.

ಪರ್ಷಿಯದ ದಿಗ್ಬಂಧನಕ್ಕೆ ಬ್ರಿಟಿಷ್ ನೌಕೆಗಳ ಸಜ್ಜು

ಪರ್ಷಿಯದ ಬಾರಿಯಲ್ಲಿರುವ ಬ್ರಿಟಿಷ್ ನೌಕೆಗಳು ಆಜ್ಞೆಯಾದ ಕೂಡಲೇ ಪರ್ಷಿಯಾ ತೀರದ ಸುತ್ತ ದಿಗ್ಬಂಧನವನ್ನು ಹಾಕಲು ಸಿದ್ಧವಾಗಿರಬೇಕೆಂದು ಸೂಚಿಸಲಾಗಿದೆ ಎಣ್ಣೆ ಪಟ್ಟಣದ ಸಲುವಾಗಿ ಇನ್ನು ಎರಡು ಯುದ್ಧೋಪಯುಕ್ತ ವಿಮಾನಗಳುಗಳನ್ನು ಇಳಿಸಲಾಗಿದೆ.

ಮದ್ರಾಸು ಸರ್ಕಾರಿ ನೌಕರಿಗೆ ಹೊಸ ನಿಬಂಧನೆ

ಸುಪ್ರೀಂ ಕೋರ್ಟಿನವರು ಕೋಮುವಾರು ಆಜ್ಞೆ ಸಂಬಂಧವಾಗಿ ಇತ್ತೀರ್ಪಿನ ಪರಿಣಾಮವಾಗಿ ಮದ್ರಾಸು ಸರ್ಕಾರದವರು, ಸರ್ಕಾರಿ ನೌಕರಿಗಳಿಗೆ ಜನರನ್ನು ತೆಗೆದು ಕೊಳ್ಳುವ ಬಗ್ಗೆ ಇದ್ದ ಆಜ್ಞೆಯ ಬದಲು ಹೊಸ ನಿಬಂಧನೆಯನ್ನು ಮಾಡಿರುತ್ತಾರೆ.ಅದರ ಪ್ರಕಾರ ಪ್ರತಿ ೨೦ ಸ್ಥಾನಗಳ ಪೈಕಿ ೩ಕ್ಕೆ ನಿಮ್ನ ವರ್ಗ ಮತ್ತು ಗುಡ್ಡಗಾಡು ಜನರಿಂದಲೂ, ಹಕ್ಕೆ ಹಿಂದುಳಿದ ಸಂಗಡಗಳವರಿಂದಲೂ ಮತ್ತು ಉಳಿದ ೧೪ ಸ್ಥಾನಗಳಿಗೆ ಸ್ಪರ್ಧೆಯ ಮೂಲಕವೂ ನೌಕರರನ್ನು ತೆಗೆದುಕೊಳ್ಳಲಾಗುವುದು.

ಮದ್ರಾಸಿನ ೪ ನಗರಗಳಲ್ಲಿ ಅಕ್ಕಿ ಗೋಧಿ ಬೆಲೆ ಇಳಿತಾಯ

ಮದ್ರಾಸ್, ಮಧುರಾ, ವಿರುದುನಗರ ಮತ್ತು ಕೊಯಮುತ್ತೂರು ನಗರಗಳಲ್ಲಿ ಅಕ್ಕಿ ಮತ್ತು ಗೋಧಿಗೆ ಆಗಸ್ಟ್ ೧೫ನೇ ತಾ॥ಗೆ ಮುಂಚೆ ಇದ್ದ ಬೆಲೆಯನ್ನು ತೆಗೆದುಕೊಳ್ಳಬೇಕೆಂದು ಮದ್ರಾಸು ಸರ್ಕಾರದವರು ನಿರ್ಧರಿಸಿರುತ್ತಾರೆ. ಇದರ ಪ್ರಕಾರ ಮದ್ರಾಸಿನ ಅಂಗಡಿಗೆ ಇರುವ ಬೆಲೆ ಅಕ್ಕಿಗೆ ೦-೧೧-೫ ಪೈ ಇದ್ದುದು ೦-೧೧-೬ ಕಾಸು ಗೋಧಿಗೆ ೦-೧೨-೧೦ ರಿಂದ ೦-೯-೨ ಪೈ ಆಗುವುವು.

ಬಾಲರತ್ನಂರವರಿಗೆ ಪುನಃ ಜಾಮೀನು

ಶ್ರೀ ವಿ ಬಾಲರತ್ನಂರವರ ಜಾಮೀನನ್ನು ರದ್ದು ಗೊಳಿಸಿದ ಸಂದರ್ಭದಲ್ಲಿ ಅವರು ಸೆಷನ್ಸ್ ನ್ಯಾಯಾಧೀಶರಲ್ಲಿ ಅಪೀಲು ಮಾಡಲಾಗಿ, ಕೆಳ ಕೋರ್ಟಿನ ಆಜ್ಞೆಯನ್ನು ವಜಾ ಮಾಡಲಾಯಿತು. ಶ್ರೀ ಬಾಲರತ್ನಂರವರನ್ನು ಮೊನ್ನೆ ಸಂಜೆಯೇ ಮತ್ತೆ ತಾತ್ಕಾಲಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

ಆಯುರ್ವೇದವು ನಿರುಪಯೋಗವೇ?

ರಾಜಧಾನಿಯ ಆಯುರ್ವೇದ ಪಂಡಿತರಾದ ಶ್ರೀ ಕೆ ಪಿ ಪುರಾಣಿಕರು ಈ ರೀತಿ ಪತ್ರ ಬರೆದು ತಿಳಿಸಿರುತ್ತಾರೆ –

ಕೆಲವು ದಿನಗಳ ಹಿಂದೆ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ಮಾಡಿದ ಕೇಂದ್ರ ಆಹಾರ ಸಂಶೋಧನಾ ಡೈರೆಕ್ಟರ್ ಡಾ|| ವಿ ಸುಬ್ರಹ್ಮಣ್ಯಂರವರು "ಆಯುರ್ವೇದ ಮತ್ತು ಯುನಾನಿ" ಎಂಬ ಬೇರೆ ಬೇರೆ ಪದ್ಧತಿಗಳು ಬೇಡವೆಂದೂ, ಹಳೆಯ ಕಾಲದ ಆಯುರ್ವೇದವು ಈಗ ಉಪಯೋಗವಿಲ್ಲವೆಂದೂ, ಶ್ಲೋಕಗಳ ಬಾಯಿಪಾಠವು ನಿರರ್ಥಕವೆಂದೂ, ತಿಳಿಸಿರುವುದಲ್ಲದೆ ಆಧುನಿಕ ವಿಜ್ಞಾನದ ಆಲೋಪತಿಯು ಕಾಲೇಜಿನಲ್ಲಿಯೇ ಇವುಗಳನ್ನು ಸೇರಿಸಬೇಕೆಂದು ಸಲಹೆ ಮಾಡಿರುತ್ತಾರೆ ಅವರು ಎರಡು ಪದ್ಧತಿಗಳ ಕಾಲೇಜುಗಳು ಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ ನಮ್ಮ ದೇಶದ ಶೇಕಡಾ ೮೦ರಷ್ಟು ಜನರು ಆಯುರ್ವೇದ ವಿಧಾನದಲ್ಲಿ ರೋಗನಿವಾರಣೆ ಮಾಡಿಕೊಳ್ಳುತ್ತಿರುವುದಾಗಿ ಭಾರತ ಸರ್ಕಾರದವರೇ ಹೇಳಿರುವಾಗ ಅದರ ಉಪಯುಕ್ತತೆ ಕುರಿತು ಹೆಚ್ಚಿನ ಸಮರ್ಥನೆ ಬೇಕಿಲ್ಲ ಆಯುರ್ವೇದ ಕಾಲೇಜಿನಲ್ಲಿ ಭಾಷಣ ಮಾಡಲು ಅದಕ್ಕೆ ಸಂಬಂಧವಿಲ್ಲದವರನ್ನು ಆಹ್ವಾನಿಸುವುದು ಅಕ್ಷೇಪಣೀಯವಷ್ಟೆ ಭಾಷಣಕಾರರು ಪ್ರಸ್ತುತ ಸಂದರ್ಭದ ಔಚಿತ್ಯವನ್ನು ಅರಿತು ಮಾತನಾಡುವುದು ಲೌಕಿಕ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕರ ಮಾತುಗಳನ್ನು ಭಾಷಣಕಾರರು ಹೇಳಬೇಕಾಗಿತ್ತು. ಅಂತಹ ಶಿಷ್ಟ ಸಂಪ್ರದಾಯವನ್ನು ಡಾ|| ಸುಬ್ರಹ್ಮಣ್ಯಂರವರು ಬಿಟ್ಟಿರುತ್ತಾರೆ

ಶರನ್ನವರಾತ್ರಿ ಮಹೋತ್ಸವ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಶ್ರೀಮತ್ಕನ್ನಿಕಾ ಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ ನಾಳೆಯಿಂದ ಇದೇ ೧೦ನೆ ತಾರೀಖಿನ ವರೆಗೆ ವಿಶೇಷ ಪೂಜಾದಿಗಳನ್ನು ಏರ್ಪಡಿಸಲಾಗಿದೆ ಪ್ರತಿ ದಿನ ಬೆಳಗ್ಗೆ ೧೦ ರಿಂದ ೧೨ರ ವರೆಗೆ ಅಭಿಷೇಕ, ನವಗ್ರಹ ಪೂಜೆ, ಕುಂಕುಮಾರ್ಚನೆ ಮತ್ತು ರಾತ್ರಿ ೧೦ ರಿಂದ ೧೧ ಘಂಟೆವರೆಗೆ ಮಹಾ ಮಂಗಳಾರತಿ, ರಾಜಾಶೀರ್ವಾದ ಮೊದಲಾದ ಕಾರ್ಯಕ್ರಮಗಳು ಜರುಗುವುವು.

ಜಾಕಿಯು ಜೂಜು ಬಿಡುವವನನ್ನು ಹೊಡೆದ ಪ್ರಸಂಗ

ಕಳೆದ ೨೩ನೇ ತಾರೀಕು ಕರಾಚಿಯಲ್ಲಿ ನಡೆದ ಕುದುರೆ ಪಂದ್ಯದಲ್ಲಿ ಆಸ್ಟ್ರೇಲಿಯದ ಜೆ ರಸ್ಸೆಲ್ ಎಂಬ ಜಾಕಿಯು ಜೂಜು ಬಿಡುವ ಜಾಕಿ ಕ್ಲಬ್ ಸ್ಟಾರ್ಟರ್)ವರಾದ ಫಸಲ್ ಖಾನ್ ಎಂಬುವಗನ್ನು ಹೊಡೆದುದರಿಂದ ಪಾಕಿಸ್ತಾನದ ಜಾಕಿ ಕ್ಲಬ್ಬಿನವರು ರಸ್ಸೆಲ್ಲನನ್ನು ಬರುವ ನವೆಂಬರ್ ಅಂತ್ಯದ ವರೆಗೆ ಸಸ್ಪೆಂಡ್ ಮಾಡಿ, ೫೦೦ ರೂ ಜುಲ್ಮಾನೆ ವಿಧಿಸಿರುವರು

ಶಾಂತಿ ಜಪ

ರಾಜಧಾನಿಯ ಕೃಷ್ಣಮೂರ್ತಿಪುರಂ ೧೯೩೦–೧ ನೇ ನಂಬರು ಮನೆಯ ದೈವಿ ಆಶ್ರಮದಲ್ಲಿ ಶಾಂತಿ ಜಪವನ್ನು ನಾಳೆಯಿಂದ ೧೦ರ ವರೆಗೆ ನಡಸಲು ಏರ್ಪಾಡಾಗಿದೆ ಅಲ್ಲದೆ ಅಲ್ಲಿಯೇ ಇರುವ ನೇತ್ರ ಚಿಕಿತ್ಸಾಲಯದಲ್ಲಿ ಉಚಿತ ಚಿಕಿತ್ಸೆಯನ್ನು ಪಡೆಯಬಹುದೆಂದು ಆಶ್ರಮದ ವ್ಯವಸ್ಥಾಪಕರು ತಿಳಿಸಿರುತ್ತಾರೆ

ನಿಧನ

ಶ್ರೀರಂಗಪಟ್ಟಣದ ಜೋಡಿದಾರರಾದ ಶ್ರೀ ಹೊಸದುರ್ಗಂ ರಾಮಸ್ವಾಮಿ ಅಯ್ಯಂಗಾರ್ಯರು ತಮ್ಮ ೫೬ನೇ ವಯಸ್ಸಿನಲ್ಲಿ ರಮಾವಿಲಾಸ ಅಗ್ರಹಾರದಲ್ಲಿರುವ ತಮ್ಮ ಮನೆಯಲ್ಲಿ ಕಳೆದ ಬುಧವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಶ್ರೀಯುತರು ಗಣ್ಯರೂ, ಸುಪ್ರಸಿದ್ಧ ಜ್ಯೋತಿಷ್ಯರೂ, ಪರೋಪಕಾರಿಗಳೂ ಆಗಿದ್ದರು ಅವರಿಗೆ ೬ ಜನ ಗಂಡು ಮತ್ತು ೩ ಮಂದಿ ಹೆಣ್ಣುಮಕ್ಕಳಿರುವರು. ದಿವಂಗತರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಬೇಕೆಂದು ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ

ಚೀನಾ ಜನತಾ ಪ್ರಜಾತಂತ್ರದ ವಾರ್ಷಿಕೋತ್ಸವ

ಮೈಸೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಈ ದಿನ ಸಂಜೆ ೬ ಗಂಟೆಗೆ ರಾಜಧಾನಿಯ ಕಾಂತರಾಜ ಪಾರ್ಕಿನಲ್ಲಿ ಮೇಲ್ಕಂಡ ಉತ್ಸವವನ್ನು ಆಚರಿಸಲಾಗುವುದು ಕಾಮ್‌ರೇಡ್ ಬೆಳ್ಳಿಯಪ್ಪ, ಕುಂಜಾಲಿ, ದಾವೂದ್ ಷರೀಫ್ ಮೊದಲಾದವರು ಭಾಷಣ ಮಾಡುವರು.

ವಿವಾಹದ ಸುವರ್ಣೋತ್ಸವ

ಭಾರತದ ಮಾಜಿ ಸ್ಟೇಟ್ ಸೆಕ್ರೆಟರಿಗಳಾಗಿದ್ದ ಲಾರ್ಡ್ ಪೆಥಿಕ್ ಲಾರೆನ್ಸ್ ಮತ್ತು ಅವರ ಪತ್ನಿಯವರು ತಮ್ಮ ವಿವಾಹದ ಸುವರ್ಣೋತ್ಸವವನ್ನು ಲಂಡನ್ನಿನಲ್ಲಿ ನಾಳೆ ನೆರವೇರಿಸಿಕೊಳ್ಳುವರು.

ನವರಾತ್ರಿ ಸೇವಾ

ರಾಜಧಾನಿಯ ರಾಮಾನುಜಾ ರಸ್ತೆಯ ೬೫ನೇ ನಂಬರಿನ ಮನೆಯಲ್ಲಿ ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ನವರಾತ್ರಿ ಪ್ರಯುಕ್ತ ಜಗತ್ಕಲ್ಯಾಣಾರ್ಥವಾಗಿ ಸಂಕಲ್ಪ ಸೇವೆಗಳನ್ನು ಏರ್ಪಡಿಸಲಾಗಿದೆ. ಉಭಯರುಗಳು ಈ ಕಾರ್ಯಕ್ಕೆ ಸಹಾಯ ಮಾಡಿ ಭಾಗಿಗಳಾಗಬೇಕೆಂದು ಕಡೂರು ವೆಂಕಟರಮಣ ಶಾಸ್ತ್ರಿಗಳು ಕೋರಿರುತ್ತಾರೆ

ಗಣಪತಿ ಮಹಾ ಮಂಗಳಾರತಿ

ರಾಜಧಾನಿಯ ಸಿ ಪಿ. ಸಿ. ಮೋಟಾರ್ ಸರ್ವಿಸ್ಸಿನವರು ಕಳೆದ ಶುಕ್ರವಾರ ನಜರಬಾದಿನಲ್ಲಿರುವ ತಮ್ಮ ಮೋಟಾರು ವರ್ಕ್‌ಷಾಪಿನ ಆವರಣದಲ್ಲಿ ಶ್ರೀ ಗಣಪತಿ ಮಹಾ ಮಂಗಳಾರತಿಯನ್ನು ನೆರವೇರಿಸಿದರು ಈ ಸಂಬಂಧವಾಗಿ ಶ್ರೀ ಸಾಯಿನಾಥ ಮಧುರಗಾನ ಕಲಾ ಮಂಡಲಿಯವರ ವಾದ್ಯ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು ಮಂಗಳಾರತಿ, ಪ್ರಸಾದ ವಿನಿಯೋಗದೊಡನೆ ನವಾರಂಭವು ಮುಕ್ತಾಯವಾಯಿತು

ಪ್ರಥಮ ದರ್ಜೆ ಕಾಲೇಜು ಪ್ರಕೃತಿ ವಿಜ್ಞಾನ ಸಂಘಕ್ಕೆ ಚುನಾವಣೆ

ರಾಜಧಾನಿಯ ಪ್ರಥಮ ದರ್ಜೆ ಕಾಲೇಜಿನ ಪ್ರಕೃತಿ ವಿಜ್ಞಾನ ಸಂಘಕ್ಕೆ ಕಳೆದ ಶುಕ್ರವಾರ ಚುನಾವಣೆಯು ನಡೆದು ಶ್ರೀ ಬಿ. ಜಿ ಚಿದಂಬರ ಗೌಡರು ಉಪಾಧ್ಯಕ್ಷರಾಗಿಯೂ ಮತ್ತು ಶ್ರೀ ಜಿ ಉಗ್ರಪ್ಪನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

SRI GAYATHRI,
TALKIES
From 1-10-51 · Daily 3 Shows
M.G.M.'s
BORDER INCIDENT
- With -
Richard Montalvan,
George Murphy.

ಸುಪ್ರಭಾತ

ಈ ತಿಂಗಳು ಮೇಲ್ಕಂಡ ಶ್ರೈ... ದ ಮಾಸ ಪತ್ರಿಕೆಯ ಏಳನೇ ಸಂಚಿಕೆ... ಈಗತಾನೆ ಹೊರಬಿದ್ದಿದೆ. ಶ್ರೀ... ಶ್ರೀ ರಂಗರವರು ಇದರ ಸಂಪಾದ... ನಿದ್ದಾರೆ. ಈ 'ಬಾರ್'ಷಿಕ ವಿಶಾಲ... ಭಾಗವನ್ನು ಶ್ರೀ ಗೋ. ಕೃ. ರವ... ವಹಿಸಿಕೊಂಡಿರುತ್ತಾರೆ. ಶ್ರೀ ಅ... ರ ಚಿತ್ರಗಳೂ ಮತ್ತು 'ದಿವ್ಯ' ಎಂ... ರಹವೂ ಇವೆ. ಅಲ್ಲದೆ ಒಂದೆರಡು ... ಗಳೂ, ಕಥೆ ಮತ್ತು ಇತರ ವಿಷ... ಳೂ ಸಹ ಇವೆ. ಶ್ರೀ ಪಿ. ಆರ್ ... ಸ್ವಾಮಿಯವರ ಸುಂದರ ಚಿತ್ರಗಳ... ದವಾದ ಮುಖ ಪುಟವೂ ಸಂಚಿಕೆಗೆ ... ಕೊಟ್ಟಿವೆ. ಈ ಸಂಚಿಕೆಯನ್ನು ... ವರ್ಸಿಟಿ ಲೈಬ್ರರಿಯಲ್ಲಿಡಲಾಗಿದೆ ಮಾಸಿಗರು ಇದರ ಸದುಪಯೋಗವ... ಮಾಡಿಕೊಳ್ಳಬೇಕೆಂದೂ, ದೀ... ಸಂಚಿಕೆಗೆ ತಮ್ಮ ಲೇಖನಗಳನ್ನು ... ತಾರೀಖಿನ ಒಳಗೆ ಕೊಟ್ಟು ಸಹ... ಬೇಕೆಂದೂ ಕೋರಲಾಗಿದೆ.

ತೀರ್ಥ ಮತ್ತು ಕಂಪೆ...
ನಾರಾಯಣ ಶಾಸ್ತ್ರಿ ರಸ್ತೆ,
ಫೋನ್ ನಂ. 537
ಸರಕುಗಳನ್ನು ರವಾನಿಸುವ ಸ...

ಚಾಮರಾಜನಗರದ ಚಂದಾದಾರರಲ್ಲಿ ವಿನಂತಿ

ಚಾಮರಾಜನಗರದ ಸಾಧ್ವಿ... ಕಾ ಚಂದಾದಾರರು ಬಾಕಿ ಇರುವ... ದಾ ಹಣವನ್ನು ಕೂಡಲೇ ಪಾವತಿ... ಡಬೇಕೆಂದೂ ಮತ್ತು ಇನ್ನು ಮ... ಪ್ರತಿ ತಿಂಗಳ ಚಂದಾವನ್ನು ಮು... ವಾಗಿ ಕೊಟ್ಟು ಸಹಕರಿಸಬೇ... ಕೋರಲಾಗಿದೆ

ಆರ್. ಮುತ್ತುರು ಕೃಷ್ಣ... "ಸಾಧ್ವಿ" ಏಜೆಂ...

Edited, printed and published by A R. N... rajan, at Sadhvi Press, Subbiah Road, Myso...

ರಾಜಕಮಲ್, ಮೈಸೂರು
21–9–51 ರಿಂದ 7ನೇ ವಾರ
ಜಗನ್ಮೋಹಿನಿ

ಒಲಂಪಿಯಾ
4-10-51 ರಿಂದ ಅನೇಕ ಪ್ರಾ...
(ಮಹೋನ್ನತ ಚಿತ್ರ ಪ್ರದರ್ಶನದ ತೌರುಮನೆ)
ಅತ್ಯದ್ಭುತ ಸಂಗೀತದಿಂದ ಕೂಡಿದ
ಹಾರ್ಲಿಂಗ್ ಫಿಲಂಸ್‌ರವರ
ಮಲ್ಹಾರ್
ಪಾತ್ರ :- ಅರ್ಜುನ್ ಹಮ್ಮಿ, ಮೋತಿಸಾಗರ್ ಮತ್ತು ಕನ್ಯಾಲಾಲ್
ಭಾರತದ ಹಿನ್ನೆಲೆ ಸಂಗೀತದಲ್ಲಿ ಶ್ರೇಷ್ಠತಮ ಸ್ಥಾನ ಗಳಿಸಿರುವ
ಮುಖೇಶ್‌ರವರ ತಯಾರಿಕೆ :: ದಿಗ್ದರ್ಶನ : ಹರೀಶ್
ತನ್ನ ಒಡಹುಟ್ಟಿದ ಸಹೋದರಿಯೊಡನೆ ವ್ಯವಹರಿಸುವಾಗ ಹಿರಿಯ ತಾನ್... ಎಷ್ಟು ತೀಳು ಮಟ್ಟಕ್ಕೆ ತಾನೆ ಇಳಿಯಬಹುದು? ಗಂಡನೋರ್ವನು ತನ್ನ... ಯು ಮುತ್ತೊಬ್ಬನನ್ನು ಪ್ರೀತಿಸುತ್ತಿರುವಾಗ ಅವಳೊಡನೆ ಹೇಗೆ ತಾನೆ ತಾಳ್ಮೆ... ಬಾಳಿಯಾನು? ಇವೇ ಮುಂತಾದ ಅಂಶಗಳನ್ನೊಳಗೊಂಡ ಕಥಾ ಭಾಗ... ನೈಜ ಧ್ಯೇಯದಿಂದ ವ್ಯಾಪ್ತ ಥರಿತವಾದ ಕ್ರಾಂತಿಯಿಂದೊಡಗೂಡಿ ... ಸ್ವಂಟು ಮಾಡಿರುವ ಚಿತ್ರ.
ಬೆಳಗಿನ ಪ್ರದರ್ಶನ :: 4-10-51 ರಿಂದ :: ಪ್ರತಿ ದಿನ 10...
ರಾಜಕಪೂರ್, ನರ್ಗೀಸ್, ದಿಲೀಪ್ ಕುಮಾರ್ ಪಾತ್ರವಹಿಸಿರುವ
ಮೆಹಬೂಬ್‌ರವರ "ಅಂದಾಜ್"

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿವೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳೀ ಅಂಗಡಿ
ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

Equip Your Stalls with NALIN'S FURNITURE
NALINS,
Service Furnishers, V. V. Market Square, Mysore.

ಫೋನ್ ನಂ 792 | ಸಾಧ್ವೀ ಮುದ್ರಣ | ಪ್ರತಿದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೩-೧೦-೫೧ [ಸಂಚಿಕೆ ೩೦

ಸಂಸ್ಥಾನದ ರೈತರಿಗೆ ೧೦ ಲಕ್ಷ ರೂ. ಪರಿಹಾರ

ದಸರಾ ಮಹೋತ್ಸವದ ಪ್ರಾರಂಭ

ಅರಮನೆಯಲ್ಲಿ ಬೆಳಗ್ಗೆ ಮತ್ತು ಸಂಜೆ ಪ್ರಭುಗಳ ದರ್ಬಾರು

ಮೈಸೂರು ೩

ಮೊದಲೇ ತಿಳಿಸಲಾಗಿದ್ದಂತೆ ನವರಾತ್ರಿ ಸಂಬಂಧದ ದರ್ಬಾರು ಕಾರ್ಯಕ್ರಮಗಳು ಇಂದು ಅರಮನೆಯಲ್ಲಿ ಆರಂಭವಾದುವು. ಶ್ರೀಮನ್ಮಹಾರಾಜರವರು ನೆನ್ನೆ ಬೆಳಗ್ಗೆ ೧೧ ಗಂಟೆಗೆ ಸರಿಯಾಗಿ ಸಿಂಹಾಸನಕ್ಕೆ ಪೂಜೆ ಮಂಗಳಾರತಿಗಳನ್ನು ಮಾಡಿ ಆರೋಹಣ ಮಾಡಿದರು. ಅರಮನೆ ಬತೇರಿಯಿಂದ ಕುಶಾಲ ತೋಪುಗಳನ್ನು ಹಾರಿಸಲಾಯಿತು. ಅನಂತರ ಸರದಾರರುಗಳು, ಪ್ರಮುಖ ರಾಜಮನೆತನದವರು ಸರ್ಕಾರದ ಉನ್ನತಾಧಿಕಾರಿಗಳು, ಪ್ರಭುಗಳವರಿಗೆ ನಜರನ್ನು ಒಪ್ಪಿಸಿದರು. ಸಂಜೆಯೂ ಸಹ ಪದ್ಧತಿ ಪ್ರಕಾರ ದರ್ಬಾರು ವೈಭವದಿಂದ ಜರುಗಿತು. ಅರಮನೆಯಲ್ಲಿ ದೀಪೋತ್ಸವವು ಆಯಿತು. ದರ್ಬಾರಿನಲ್ಲಿ ಬಿಹಾರ್, ಹೈದರಾಬಾದ್, ಮೈಸೂರು ಮುಂತಾದ ಭಾರತ ಸೈನ್ಯದ ದಳಗಳು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಕವಾಯತು ಮಾಡಿದುವು. ಸಂಜೆಯ ದರ್ಬಾರಿನಲ್ಲಿ ಆನೆ, ಕುದುರೆ ಮುಂತಾದುವುಗಳ ಮೆರವಣಿಗೆ ನಡೆಯಿತು. ಸಹಸ್ರಾರು ಜನರು ಕೋಟೆಯೊಳಗೆ ನೆರೆದಿದ್ದರು.

ಪ್ರದರ್ಶನದಲ್ಲಿ ಬಹುಮಾನ

ದಸರಾ ಲಲಿತ ಕಲಾ ಪ್ರದರ್ಶನದಲ್ಲಿ ಮೈಸೂರಿನ ಶ್ರೀ ಹೆಚ್. ವೆಂಕಟಪ್ಪನವರ ದಂತದ ರಾಧಾ ಕೃಷ್ಣ ವಿಗ್ರಹಕ್ಕೆ ಮಹಾರಾಜರ ಬೆಳ್ಳಿ ಬಟ್ಟಲಿನ ಬಹುಮಾನವು ದೊರೆತಿರುತ್ತದೆ. ಕಳೆದ ೨೦ ವರ್ಷಗಳಿಂದ ಮೈಸೂರಿನವರಿಗೆ ಈ ಬಹುಮಾನವು ದೊರೆತಿರುವುದು ಎರಡನೆ ಸಲ. ವಸ್ತುಪ್ರದರ್ಶನ ಸಮಿತಿಯ ಬೆಳ್ಳಿಯ ಬಟ್ಟಲಿನ ಬಹುಮಾನವು ಮೈಸೂರಿನ ಶ್ರೀ ಎಸ್. ಆರ್. ಐಯ್ಯಂಗಾರರ ಚಿತ್ರಕ್ಕೆ ದೊರೆತಿರುತ್ತದೆ.

ನಗರದ ಹಿಟ್ಟಿನ ಗಿರಣಿ ಮಾಲೀಕರ ಸಂಘ

ಜಿಲ್ಲೆಯ ಹಿಟ್ಟಿನ ಗಿರಣಿ ಮಾಲೀಕರ ಸಂಘದ ಕಾರ್ಯನಿರ್ವಾಹಕ ಸಮಿತಿ ಸಭೆಯು ಕಳೆದ ೩೦ ನೇ ತಾ|| ಶ್ರೀ ಜನಾರ್ದನ ಸಾಮ್ಯುರವರ ಅಂಗಡಿಯಲ್ಲಿ ನಡೆದು, ಸಂಘವನ್ನು ರಿಜಿಸ್ಟರ್ ಮಾಡುವ ಬಗ್ಗೆ ಕೂಡಲೇ ಕ್ರಮಗಳನ್ನು ಕೈಗೊಳ್ಳುವಂತೆಯೂ, ಸಮಿತಿಗೆ ಇನ್ನೂ ಜನ ಸದಸ್ಯರನ್ನು ತೆಗೆದುಕೊಳ್ಳುವಂತೆಯೂ ನಿರ್ಣಯಗಳನ್ನು ಮಾಡಲಾಯಿತು.

ಗುಂಡು ಇದ್ದ ಬಂದೂಕ ಹಾರಿ ಬಾಲಕಿಯ ಮರಣ

ಮಂಡ್ಯ ೩

ನಾಟಕವಾಡಲು ಇಲ್ಲಿಗೆ ಬಂದಿರುವ ಸತ್ಯ ಸಾಮ್ರಾಜ್ಯ ನಾಟಕ ಮಂಡಲಿ ಮಾಲೀಕರಾದ ಶ್ರೀ ಸುಬ್ಬಯ್ಯ ನಾಯಡುರವರು ಇಳಿದುಕೊಂಡಿರುವ ನಿವಾಸದಲ್ಲಿ ಮೊನ್ನೆ ಗುಂಡು ಹಾಕಲ್ಪಟ್ಟಿದ್ದ ಬಂದೂಕವನ್ನು ಒಬ್ಬ ಹುಡುಗನು ಹಾರಿಸಿದುದರ ಪರಿಣಾಮವಾಗಿ ೧೪ ವರ್ಷದ ಹುಡುಗಿಯೊಬ್ಬಳು ಮೃತಳಾದ ಳೆಂದು ತಿಳಿದುಬಂದಿದೆ. ಬಾಲಕಿಯು ಕಂಪೆನಿಯ ನಟಿ ಶ್ರೀಮತಿ ಲಕ್ಷ್ಮಿಬಾಯಿಯವರ ಸಾಕು ಪುತ್ರಿಯೆಂದು ಹೇಳಲಾಗಿದೆ. ಪೊಲೀಸರು ತನಿಖೆ ನಡೆಸಿದರು.

ಮೈಸೂರಿನಲ್ಲಿ ಕರ್ನಾಟಕದ ಐಕ್ಯತೆ

ಕರ್ನಾಟಕ ಪ್ರಾಂತ ಕಾಂಗ್ರೆಸ್ಸಿನ ನಿರ್ಣಯ

ಮೈಸೂರಿನ ರಾಜಪ್ರಮುಖರ ನೇತೃತ್ವವಿರುವ ಮತ್ತು ಬೆಂಗಳೂರು ರಾಜಧಾನಿಯಾಗಿಯುಳ್ಳ ಕರ್ನಾಟಕ ಪ್ರಾಂತವನ್ನು ರಚಿಸುವ ಸಲುವಾಗಿ ಕರ್ನಾಟಕದ ಇತರ ಭಾಗಗಳನ್ನು ಮೈಸೂರಿನಲ್ಲಿ ಐಕ್ಯಗೊಳಿಸಿ ಕರ್ನಾಟಕ ಪ್ರಾಂತವನ್ನು ರಚಿಸಲು ಈಗಲೂ ಕಷ್ಟದ ಕೆಲಸವಲ್ಲವೆಂಬ ಅಭಿಪ್ರಾಯವನ್ನು ಹೊರಗೆಡಹುವ ನಿರ್ಣಯವನ್ನು ಕಳೆದ ಭಾನುವಾರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಮಾಡಿ, ಆಂಧ್ರ ಪ್ರಾಂತದ ಜೊತೆಯಲ್ಲೇ ಕರ್ನಾಟಕವನ್ನೂ ರಚಿಸಬೇಕೆಂದೂ ಆದಾಗದಿದ್ದರೆ ಪ್ರಜಾವರ್ಗದಲ್ಲಿ ಹೆಚ್ಚು ನಿರಾಶೆ ಮತ್ತು ತೀವ್ರ ಪರಿಣಾಮಗಳುಂಟಾಗುವುವೆಂದೂ ಠರಾವು ಮಾಡಿರುತ್ತದೆ. ಬಳ್ಳಾರಿಯ ಜಿಲ್ಲೆಯ ಅಸ್ತಿತ್ವವನ್ನು ತೊಡೆಯಬಾರದೆಂದೂ, ಬಳ್ಳಾರಿಯ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳು ಮತ್ತು ಅನಂತಪುರದ ಮಡಕಶಿರವನ್ನು ಹಂಗಾಮಿಯಾಗಿಯಾದರೂ ಆಂಧ್ರ ಪ್ರಾಂತದಲ್ಲಿ ಸೇರಿಸಕೂಡದೆಂದೂ ನಿರ್ಣಯವಾಗಿರುತ್ತದೆ.

ಪ್ರಜಾ ಸಂಘಕ್ಕೆ ಟಿ. ನಾರಾಯಣರ ರಾಜೀನಾಮೆ

ಮೈಸೂರು ಪ್ರಜಾ ಸಂಘದ ಸದಸ್ಯತನಕ್ಕೆ ಮೈಸೂರು ಪತ್ರಿಕಾ ಸಂಪಾದಕರಾದ ಶ್ರೀ ಟಿ. ನಾರಾಯಣರವರು ರಾಜೀನಾಮೆಯನ್ನಿತ್ತಿರುವರು. ಬರಲಿರುವ ಮಹಾ ಚುನಾವಣೆಯಲ್ಲಿ ಪ್ರಜಾ ಸಂಘವು ಕಾಂಗ್ರೆಸ್ ವಿರುದ್ಧವಾಗಿ ಇತರ ರಾಜಕೀಯ ಸಂಸ್ಥೆಗಳೊಡನೆ ಸಹಕರಿಸಲು ತೀರ್ಮಾನಿಸಿದೆಯೆಂದು ಗೊತ್ತಾಗಿದೆ.

ಬಹಿರಂಗ ಸಭೆ

ಭಾರತೀಯ ಜನಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ. ಕರ್ನಾಟಕ ಪ್ರಾಂತ್ಯ ಜನಸಂಘದ ಅಧ್ಯಕ್ಷರಾದ ಶ್ರೀ ಜಿ. ಪರಮಶಿವಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀ ಸೌಮಿತ್ರಿ ಶರ್ಮರವರು ಭಾಷಣ ಮಾಡುವರು.

ವ್ಯವಸಾಯ ಕಾರ್ಮಿಕರ ಪರಿಹಾರಕ್ಕೆ ೧೦ ಲಕ್ಷ ರೂ.

ಸ್ವಂ ಸು. ಫೋ.] ಬೆಂಗಳೂರು ೩

ಕಳೆದ ಎರಡು ತಿಂಗಳಿಂದ ಸಂಸ್ಥಾನದಲ್ಲಿ ಮಳೆ ಬಾರದೆ ಬಿತ್ತಿ ಬೆಳೆಯು ನಷ್ಟವಾಗಿ ತೊಂದರೆಗೀಡಾಗಿರುವ ವ್ಯವಸಾಯ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿ ಪರಿಹಾರ ಕಲ್ಪಿಸುವ ಸಲುವಾಗಿ ೧೦ ಲಕ್ಷ ರೂ ಗಳನ್ನು ಸರ್ಕಾರದವರು ಮಂಜೂರು ಮಾಡಿರುವರು. ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳು ಮತ್ತು ಸಂಸ್ಥಾನದ ಎಲ್ಲ ಕಡೆಗಳಲ್ಲೂ ಮಳೆ ಅಭಾವದ ಪರಿಣಾಮವು ಬಹಳ ತೀವ್ರವಾಗಿರುವುದಾಗಿ ತಿಳಿಸಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ವಿವರವಾದ ವರದಿಗಳನ್ನು ಕಳುಹಿಸಿ, ಸಂಸ್ಥಾನಕ್ಕೆ ಸಾಕಾಗುವಷ್ಟು ಆಹಾರ ಧಾನ್ಯವನ್ನು ಒದಗಿಸಬೇಕೆಂದು ಸರ್ಕಾರದವರು ಪ್ರಾರ್ಥಿಸಿರುತ್ತಾರೆ.

ಮುಖ್ಯ ಮಂತ್ರಿಗಳ ಕಾರಿಗೆ ಢಿಕ್ಕಿ

ಮೊನ್ನೆ ಅರಸೀಕೆರೆ ಬಳಿ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಹೋಗುತ್ತಿದ್ದಾಗ ಅವರ ಕಾರಿಗೆ ಮತ್ತೊಂದು ಲ್ಯಾರಿಯು ಢಿಕ್ಕಿ ಹೊಡೆದುದರಿಂದ ಎರಡು ವಾಹನಗಳಿಗೂ ಜಖಂ ಆಗಿದೆ. ಶ್ರೀ ರೆಡ್ಡಿಯವರಿಗೆ ಗಾಯವಾಗಲಿಲ್ಲ.

ಸುಪ್ರೀಂ ಕೋರ್ಟಿನಲ್ಲಿ ರಾಜು ಜಾಮೀನು ಅರ್ಜಿ ತಿರಸ್ಕಾರ

ಸುಪ್ರೀಂ ಕೋರ್ಟಿಗೆ ಶ್ರೀ ಎಲ್. ಎಸ್. ರಾಜುರವರು ಹಿಂದೆಯೇ ಹಾಕಿದ್ದ ಜಾಮೀನು ಅರ್ಜಿಯನ್ನು ಅಲ್ಲಿನ ಡಿವಿಜನ್ ಬೆಂಚಿನವರು ವಜಾ ಮಾಡಿರುವುದಾಗಿ ತಿಳಿದುಬಂದಿದೆ.

ಸೌಗಾರ್ ವಿಶ್ವ ವಿದ್ಯಾಲಯ ತಾತ್ಕಾಲಿಕವಾಗಿ ಬಂದು

ವಿದ್ಯಾರ್ಥಿ ಶುಲ್ಕವನ್ನು ಕಡಿಮೆ ಮಾಡಬೇಕೆಂದೂ, ವಿಶ್ವವಿದ್ಯಾಲಯದ ಪ್ರಾಕ್ಟರರಾದ ರಾಜನಾಥಪಾಂಡೆಯವರನ್ನು ವಜಾ ಮಾಡಬೇಕೆಂದೂ ಬೇಡಿಕೆ ಹಾಕಿ ಸಾವಿರ ವಿದ್ಯಾರ್ಥಿಗಳು ಮುಷ್ಕರ ಹೂಡಿರುವುದರಿಂದ ಮಧ್ಯ ಪ್ರದೇಶದ ಸೌಗಾರ್ ವಿಶ್ವವಿದ್ಯಾಲಯವನ್ನು ಒಂದು ತಿಂಗಳು ಕಾಲ ಮುಚ್ಚಲು ನಿರ್ಧರಿಸಲಾಗಿದೆ.

ಮಹಾತ್ಮಾ ಗಾಂಧಿಯವರ ಜಯಂತಿ ಉತ್ಸವ

ನಗರದ ವಿವಿಧ ಕಡೆಗಳಲ್ಲಿ ಆಚರಣೆ

ಮೈಸೂರು ೩

ಮಹಾತ್ಮ ಗಾಂಧಿಯವರ ಜಯಂತಿ ಮಹೋತ್ಸವವು ನೆನ್ನೆ ನಗರದ ನಾನಾ ಕಡೆಗಳಲ್ಲಿ ಆಚರಿಸಲ್ಪಟ್ಟಿತು.

ನಗರ ಕಾಂಗ್ರೆಸ್ ಮತ್ತು ಸರ್ವೋದಯ ಸಮಾಜದವರು ಟೌನ್‌ಹಾಲಿನಲ್ಲಿ ಏರ್ಪಡಿಸಿದ್ದ ಸೂತ್ರ ಯಜ್ಞವು ಬೆಳಗ್ಗೆ ೬ ಗಂಟೆಗೆ ಪ್ರಾರಂಭವಾಯಿತು. ೯ ಗಂಟೆಗೆ ಅಲ್ಲಿನ ಮೈದಾನದಲ್ಲಿ ಧ್ವಜಾರೋಹಣವನ್ನು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರು ನೆರವೇರಿಸಿದರು. ಸಂಜೆ ನೂಲುವ ಸ್ಪರ್ಧೆ, ಸಾಮೂಹಿಕ ನೂಲುವಿಕೆ, ಮತ್ತು ಪ್ರಾರ್ಥನೆಗಳಾದವು. ೬ ಗಂಟೆಗೆ ನಗರ ಭವನದಲ್ಲಿ ಶ್ರೀ ಕೆ. ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯವು ಬಂದ ನಂತರ ಅನೇಕ ಜನೋಪಯುಕ್ತ ಕಾರ್ಯಗಳು ಕೈಗೊಳ್ಳುವುವೆಂಬ ನಿರೀಕ್ಷೆಯು ಸಫಲವಾಗಲಿಲ್ಲ ವೆಂದೂ, ಅದರ ಬದಲು ಅನೇಕ ಕಷ್ಟಗಳನ್ನು ಜನರು ಮತ್ತು ಸರ್ಕಾರಗಳು ಎದುರಿಸಬೇಕಾಯಿತೆಂದೂ ತಿಳಿಸಿ, ಆ ದಿನದ ಮಹತ್ವ ಮತ್ತು ಗಾಂಧೀಜಿಯವರ ಸಂದೇಶ ತತ್ವಗಳನ್ನು ವಿವರಿಸಿದರು. ಗೃಹ ಸಚಿವ ಶ್ರೀ ಹೆಚ್. ಸಿದ್ಧಯ್ಯನವರು ಗಾಂಧೀಜಿಯವರ ಆದೇಶಗಳನ್ನು ಪಾಲಿಸಬೇಕೆಂದು ಪ್ರಾರ್ಥಿಸಿದರು. ನಂತರ ನೂಲುವ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಹುಡುಗಿಯರಿಗೆ ಬಹುಮಾನ ಕೊಡಲಾಯಿತು. ಪೌರ ಸಭಾಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರರ ಭಾಷಣ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಶ್ರೀ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಉತ್ಸವವನ್ನು ನೆರವೇರಿಸಿದರು. ದೇವರಾಜ ಮೊಹಲ್ಲಾ ಕಾಂಗ್ರೆಸ್ ಸಂಘದಲ್ಲಿ ವರ್ತಮಾನ ಪತ್ರಿಕೆ ಸಂಪಾದಕ ಶ್ರೀ ಎಂ. ಎನ್. ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಜಯಂತ್ಯುತ್ಸವವು ನೆರವೇರಿತು. ಜಿಲ್ಲಾ ಬೋರ್ಡು ಕಾರ್ಮಿಕರ ಸಂಘದಲ್ಲೂ ಉತ್ಸವವು ನಡೆಯಿತು.

ದೆಹಲಿಯಲ್ಲಿ ಗಾಂಧಿ ಜಯಂತ್ಯುತ್ಸವ

ಮಹಾತ್ಮ ಗಾಂಧಿಯವರ ೮೩ನೇ ಜನ್ಮ ದಿನೋತ್ಸವವು ನೆನ್ನೆ ದೆಹಲಿ ಮತ್ತು ಇತರ ಕಡೆಗಳಲ್ಲಿ ವೈಭವದಿಂದ ನೆರವೇರಿತು. ದೆಹಲಿಯಲ್ಲಿ ಪ್ರಧಾನಿ ನೆಹರೂ ಮತ್ತು ಇತರ ಸಚಿವರು ಬೆಳಗ್ಗೆ ೮ ಗಂಟೆ ಹೊತ್ತಿಗೆ ರಾಜಘಾಟಿಗೆ ತೆರಳಿ ಗಾಂಧೀಜಿಯ ಸಮಾಧಿಗೆ ಪುಷ್ಪ ಮಾಲಿಕೆಯನ್ನು ಸಮರ್ಪಿಸಿದರು. ಸಮಾಧಿಯ ಮೇಲೆ ಹೂವುಗಳಿಂದ "ಹೇ ರಾಮ್" ಮತ್ತು "ಶ್ರೀ ಗಣೇಶ" ಎಂಬ ಪದಗಳನ್ನು ಬರೆಯಲಾಗಿತ್ತು. ಸಾಮೂಹಿಕ ಪ್ರಾರ್ಥನೆ ಮತ್ತು ಸೂತ್ರ ಯಜ್ಞಗಳು ನಡೆದುವು. ನೆನ್ನೆ ಸಂಜೆ ದೆಹಲಿ ಕಾಂಗ್ರೆಸ್ಸಿನವರು ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಪಂಡಿತ ನೆಹರೂರವರು ಭಾಷಣ ಮಾಡಿ ಕೋಮುವಾರು ಭಾವನೆಯು ಸಮಾಜಕ್ಕೆ ಕಂಟಕ ಪ್ರಾಯವಾದುದೆಂದೂ, ಅದರ ಪ್ರತಿಪಾದಕರು ಸರ್ವಾಧಿಕಾರ ಮನೋಭಾವವುಳ್ಳವರೆಂದೂ ಹೇಳಿ ಕೋಮುವಾರು ಭಾವನೆಗಳ ನಿರ್ಮೂಲಕ್ಕೆ ತಾವೂ ಮತ್ತು ತಮ್ಮ ಸರ್ಕಾರದವರೂ ಸರ್ವ ವಿಧದಲ್ಲೂ ಯತ್ನಿಸುವುದಾಗಿ ಹೇಳಿದರು.

ವಸ್ತು ಪ್ರದರ್ಶನದ ಆರಂಭೋತ್ಸವ

ಮೈಸೂರು ೩

ದಸರಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆನ್ನೆ ಸಂಜೆ ಹಣಕಾಸು ಮತ್ತು ಕೈಗಾರಿಕೆ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರ ನೆರವೇರಿಸಿದರು.

ಪ್ರದರ್ಶನ ಸಮಿತಿ ಅಧ್ಯಕ್ಷರಾದ ಶ್ರೀ ಚನ್ನಿಗರಾಮಯ್ಯನವರು ಸ್ವಾಗತ ಭಾಷಣ ಮಾಡಿ ಈ ಸಾರಿ ನಗರದ ಜನರಿಗೆ ಹಾಗೂ ಸರ್ಕಾರದ ವಿಶೇಷವಾಗಿ ... ಸಚಿವರ ಕೃತಜ್ಞತೆಯನ್ನು ಸಲ್ಲಿಸಿದರು.

ಕೈಗಾರಿಕೆ ಸಚಿವರ ... ತರ ಪ್ರಾರಂಭೋತ್ಸವವನ್ನು ನೆರವೇರಿಸಿ ... ಕಾರ್ಯಕ್ರಮ ... ಪ್ರದರ್ಶನ ಮತ್ತು ... ಸಿದರು ಗಾಂಧೀಜಿಯವರ ಜನ್ಮ ದಿನವಾಗಿದ್ದುದರಿಂದ, ಅಂದು ಪ್ರತಿಯೊಬ್ಬ ನಾಗರಿಕನೂ ಗಾಂಧೀಜಿಯ ಮಹಾತ್ಮ್ಯವನ್ನು ... ಪ್ರಯತ್ನ ... ಭಾರತದಲ್ಲಿ ನಿಜವಾದ ... ರಾಜ್ಯವನ್ನು ಸ್ಥಾಪಿಸಲು ... ಬೇಕೆಂದು ಹೇಳಿದರು.

... ಸಚಿವರುಗಳು ... ಗಳ ಮುತ್ತಲೂ ... ದರು.

ಕಾರ್ಮಿಕರಿಗೆ ವಸತಿ ಸೌಕರ್ಯಕ್ಕಾಗಿ ಕೇಂದ್ರದ ಸಹಾಯದ ವಿನಿಯೋಗ

ಕಾರ್ಮಿಕರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಲು ಸಂಸ್ಥಾನದ ಸರ್ಕಾರಕ್ಕೆ ಕೇಂದ್ರದವರು ಕೊಡಲೊಪ್ಪಿರುವ ... ಲಕ್ಷ ರೂ ಗಳ ಪೈಕಿ ೧೦ ಲಕ್ಷ ರೂ ಗಳನ್ನು ನಗರಾಭಿವೃದ್ಧಿ ಸಮಿತಿಗೆ ಕೊಟ್ಟು ಅವರಿಂದ ಮೋಟಾರು ಕಾರ್ಮಿಕರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಲು ಸಹಾಯ ಮಾಡಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯವು ಕಳೆದ ಮಂಗಳವಾರ ನಡೆದ ಜಿಲ್ಲಾ ಮೋಟಾರು ಕಾರ್ಮಿಕ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಅಂಗೀಕೃತವಾಯಿತು ಅಡ್ವೋಕೇಟ್ ಶ್ರೀ ಸಿ ಜ ದೇವನಾರಾಯಣವರು ಅಧ್ಯಕ್ಷತೆ ವಹಿಸಿದ್ದರು

ಅರಗು ಮತ್ತು ಬಣ್ಣದ ಕಾರ್ಮಿಕರ ಮೆರವಣಿಗೆ

ಮುಖಂಡರ ದಸ್ತಗಿರಿ ಮತ್ತು ಬಿಡುಗಡೆ

ಮೈಸೂರು ೩

ಸರ್ಕಾರಿ ಅರಗು ಮತ್ತು ಬಣ್ಣದ ಕಾರ್ಖಾನೆಯ ಕಳೆದ ಆಗಸ್ಟ್ ... ರಿಂದ ಮುಷ್ಕರ ಹೂಡಿದ ಕಾರ್ಮಿಕರಿಗೆ ... ಶ್ರೀಮನ್ ಮಹಾರಾಜರಲ್ಲಿ ... ಗಳಲ್ಲಿ ಮರವಣಿಗೆ ಹೊರಟಿದ್ದ ... ಶ್ರೀ ... ಸೆರೆಯಾದರು ... ಜನತಾ ಪಕ್ಷದ ... ದರು

ಬಾಲ ಸೇವಾನಿರತರ ಸಮ್ಮೇಳನ

ಮೈಸೂರು ... ಸೇವಾ ಸಮಿತಿಯ ವಾರ್ಷಿಕೋತ್ಸವದ ಸಲುವಾಗಿ ಇದೆ ... ಮತ್ತು ... ಸೇವಾನಿರತರ ಸಮ್ಮೇಳನವನ್ನು ನಡೆಸಲು ಏರ್ಪಾಟು ಮಾಡಲಾಗಿದೆ ... ಕಾರ್ಯದಲ್ಲಿ ತೊಡಗಿರುವವರು ನಡೆಸಿರುವ ಕಾರ್ಯಗಳನ್ನು ಸಮನ್ವಯಗೊಳಿಸಲು ... ವಿಚಾರ ... ಮತ್ತು ... ಕಾರ್ಯಕ್ರಮಗಳನ್ನು ಕುರಿತು ... ಇದೆ ... ತಾರೀಖಿನೊಳಗೆ ಮೈಸೂರು ಜಯ ನಗರದ ವನಿತಾ ಸದನದಲ್ಲಿರುವ ಮಕ್ಕಳ ಪುಸ್ತಕದ ಸಮಿತಿಗೆ ತಮ್ಮ ಹೆಸರು, ತಾವು ಯಾವ ವಿಷಯದ ಚರ್ಚೆಯಲ್ಲಿ ಭಾಗವಹಿಸಲು ಅಪೇಕ್ಷಿಸುವರೆಂಬ ಬಗ್ಗೆ ವಿವರ, ಇವುಗಳನ್ನು ಕಳುಹಿಸಬೇಕಾಗಿದೆ

ವಸ್ತು ಪ್ರದರ್ಶನದಲ್ಲಿ ಪುಸ್ತಕಾಲಯಗಳೇಕಿಲ್ಲ?

ರಾಜಧಾನಿಯ ಪ್ರಕಾಶಕರೂ ಮತ್ತು ಪುಸ್ತಕದ ವ್ಯಾಪಾರಿಗಳೂ ಆದ ಶ್ರೀ ನಾರಾಯಣಸ್ವಾಮಿಯವರು ಕೆಳಗೆ ಕಂಡಂತೆ ಒಂದು ಪತ್ರ ಬರೆದಿರುತ್ತಾರೆ

ಈ ಸಾರಿ ದಸರಾ ವಸ್ತು ಪ್ರದರ್ಶನದಲ್ಲಿ ಪುಸ್ತಕಾಲಯಗಳಿಗೆ ಯೋಗ್ಯ ಸ್ಥಳ ದೊರೆಯದಿರುವುದು ಶೋಚನೀಯ ಮೈಸೂರಿನ ಗಣ್ಯ ಪ್ರಕಟನಾಲಯಗಳಾದ ಉಷಾ ಸಾಹಿತ್ಯಮಾಲೆ, ಹಂಸ ಲಿಮಿಟೆಡ್, ವಿದ್ಯಾನಿಧಿ ಬುಕ್ ಡಿಪ್ಪೋ, ಚೇತನ ಹಾಗೂ ನ್ಯೂಸ್ ಪೇಪರ್ ಹೌಸ್ ಇವರುಗಳು ಸಾಮೂಹಿಕವ ಪ್ರದರ್ಶನ ಸಮಿತಿ ಸದಸ್ಯರನ್ನು ಭೇಟಿ ಮಾಡಿ ಪುಸ್ತಕ ಪ್ರಪಂಚವನ್ನು ಸೂಕ್ತರೀತಿಯಲ್ಲಿ ಜನಸಾಮಾನ್ಯಕ್ಕೆ ಪರಿಚಯ ಮಾಡಿಕೊಡುವ ಹಾಗೂ ಇತರ ದೇಶಗಳಲ್ಲಿನ ಪ್ರಕಟನಾ ಪ್ರಗತಿಯನ್ನು ಪ್ರದರ್ಶಿಸುವಂತಹ ಉತ್ತಮ ಗ್ರಂಥಗಳನ್ನು ಶೇಖರಿಸಿ ಸಾರ್ವಜನಿಕರ ಮುಂದಿಡಲು ಪ್ರಯತ್ನಿಸಿದರೂ ಅವರಿಗೆ ಪ್ರದರ್ಶನಾಲಯದಲ್ಲಿ ಸೂಕ್ತ ಸ್ಥಳವು ದೊರೆಯಲಿಲ್ಲ. ಜನರ ಜ್ಞಾನಾರ್ಜನೆಗೆ ಸಾಧಕವಾದ ಸಾಹಿತ್ಯ ಪ್ರಚಾರಕ್ಕೆ ಹೆಚ್ಚು ಲಕ್ಷ್ಯ ಕೊಟ್ಟು ಎಲ್ಲ ಪ್ರದರ್ಶನದಲ್ಲೂ ಒಂದು ಪ್ರತ್ಯೇಕವಾದ ಯೋಗ್ಯ ರೀತಿಯ ಬುಕ್ ಕಾರ್ನರ್ ಏರ್ಪಡಿಸುವಂತೆ ಪ್ರದರ್ಶನದ ಅಧಿಕಾರಿ ವರ್ಗದವರನ್ನು ಒತ್ತಾಯ ಪಡಿಸುವಂತಾಗಲೆಂದು ಆಶಿಸುತ್ತೇನೆ

ಪರ್ಷಿಯದಿಂದ ಬ್ರಿಟಿಷರು ಅಧಿಕೃತವಾಗಿ ವಾಪಸು

ಪರ್ಷಿಯದಲ್ಲಿ ಉಳಿದಿದ್ದ ೩೦೦ ಮಂದಿ ಬ್ರಿಟಿಷ್ ಎಣ್ಣೆ ಪ್ರವೀಣರು ಅಧಿಕೃತವಾಗಿ ಆ ದೇಶವನ್ನು ಬಿಡುವಂತೆ ಬ್ರಿಟಿಷ್ ಸರ್ಕಾರವು ಸೂಚಿಸಿರುತ್ತದೆ. ಅವರು ಇರಾಕಿಯಾ ಬಾರಿಯಲ್ಲಿರುವ ಯುದ್ಧ ನೌಕೆಗಳಲ್ಲಿ ವಾಪಸು ಸ್ವದೇಶಕ್ಕೆ ಈ ದಿ. ತೆರಳುವರು

ಬಪ್ಪೆ ಸಿಕ್ಕಿರುತ್ತೆ

ಈ ದಿನ ಬೆಳಗ್ಗೆ ಮೈಸೂರ ನೂರಡಿ ರಸ್ತೆಯಲ್ಲಿ ಯಾರೋ ಕಳೆದುಕೊಂಡ ಕೆಲವು ಹೊಸ ಬಟ್ಟೆ ಪೀಸುಗಳು ಸಿಕ್ಕಿವೆ ಸಂಬಂಧಪಟ್ಟವರು ಸರಿಯಾದ ರುಜುವಾತು ಕೊಟ್ಟು ಈ ಪ್ರಕಟನೆ ವೆಚ್ಚವನ್ನು ಪಾವತಿ ಮಾಡಿ ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ಪಡೆಯಬಹುದೆಂದು ಸೂಚಿಸಲಾಗಿದೆ

ಕಿಕ್ಕೇರಿಯಲ್ಲಿ "ಸಾಧ್ವಿ" ಏಜೆಂಟರು

ಕಿಕ್ಕೇರಿಯಲ್ಲಿ ಶ್ರೀ ಕೆ ವಿ ಹನುಮಂತ ಶೆಟ್ಟಿಯವರನ್ನು ನಮ್ಮ ಏಜೆಂಟರನ್ನಾಗಿ ನೇಮಿಸಲಾಗಿದೆ ಚಂದಾದಾರರಾಗಲಿಚ್ಛಿಸುವವರು ತಮ್ಮ ಮೊಬಲಗನ್ನು ಮುಂಗಡವಾಗಿ ಅವರಿಗೆ ಕೊಟ್ಟು ರಶೀತಿಪಡೆಯಬಹುದು —ವ್ಯವಸ್ಥಾಪಕ

ಅಬೇದ್‌ರವರ ಅಮೋಘ

ಹರಾಜು ಮಾರಾಟ

7 10 1951ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ

ಶ್ರೀ ಎಂ ಆರ್ ರಾಮುಸ್ವಾಮಿ ಮತ್ತಿತರರ ಸೂಚನೆ ಮೇರೆ

ಕೆಳಗೆ ಕಂಡ ಪದಾರ್ಥಗಳ ಹರಾಜು ಮಾರಾಟವನ್ನು ಏರ್ಪಡಿಸಲಾಗಿದೆ ಫರ್ನಿಚರುಗಳು ಮತ್ತು ಗೃಹೋಪಯುಕ್ತ ಸಲಕರಣೆಗಳು 6½x2x12 ಅಡಿ ಒಂದೇ ಮರದ ಬಾಗಿಲುಳ್ಳ ಅಲ್ಮೈರಾ, ಕಿಲ್ಪುಗಳಿರುವ ತೇಗದ ಮರದ ಅಲ್ಮೈರಾಗಳು, ಕೌಂಟರು ಟೇಬಲ್ಲುಗಳು ಕುರ್ಚಿಗಳು, ಈಜಿ ಚೇರುಗಳು ಟೀಪಾಯಿಗಳು ಫಿಲಿಪ್ಸ್ ಸೈಕಲ್ ಡ್ಯಾಂಡ್ ... ಸೋಫಾ ... ಚಿತ್ರದ ಟೀಪಾಯಿ ಟೆನ್ನಿಸ್ ರ್‍ಯಾಕೆಟ್, ಗ್ರಾಮಫೋನ್ ... ಪುಸ್ತಕಗಳು ... ದೀಪಗಳು ... ಸೈಕಲ್ ಸೀಟುಗಳು ... ಸಾಮಾನುಗಳು ಅಲಂಕಾರದ ಸಾಮಾನುಗಳು ಫೋಟೋಗಳು ... ಇಂಗ್ಲಿಷ್ ಸಿಗಾರ್ ಲೈಟರುಗಳು ... ಮತ್ತು ಪಾತ್ರೆ ಬಾಳುಗಳು ಮತ್ತು ಒಂದು ಎಮ್ಮೆ ಸಹ

ಪದಾರ್ಥಗಳನ್ನು ಇದೇ 6ನೇ ತಾರೀಖು ಶನಿವಾರ ಅವಲೋಕಿಸಬಹುದು

ಮೈಸೂರ ಕ್ರೇಪ್ ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳಿ ಅಂಗಡಿ

ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ಒಲಿಂಪಿಯಾ * 4-10-51 ರಿಂದ ಅಮೋಘ ಪ್ರಾರಂಭ

ಮಹೋನ್ನತ ಚಿತ್ರ ಪ್ರದರ್ಶನ ಮಂದಿರ (ದಿನವಹಿ 4 ಆಟಗಳು)

ಅತ್ಯದ್ಭುತ ಸಂಗೀತದಿಂದ ಕೂಡಿದ ಡಾರ್ಲಿಂಗ್ ಫಿಲಂಸ್ ರವರ

* ಮಲ್ಹಾರ್ *

ಪಾತ್ರ ವಹಿಸಿರುವ ಅರ್ಜುನ್ ಮೋತಿ ಸಾಗರ್ ಮತ್ತು ಕನ್ನಯ್ಯಾಲಾಲ್

ಭಾರತದ ಪಿನ್ನೆಲೆ ಸಂಗೀತದಲ್ಲಿ ಶ್ರೇಷ್ಠತಮ ಸ್ಥಾನ ಗಳಿಸಿರುವ ಮುಖೇಶ್‌ರವರ ತಯಾರಿಕೆ

ದಿಗ್ದರ್ಶನ:- ಹರೀಶ್

ಬೆಳಗಿನ ಪ್ರದರ್ಶನ 4 10 51 ರಿಂದ ಪ್ರತಿ ದಿನ 10 30ಕ್ಕೆ

ರಾಜಕಪೂರ್, ನರ್ಗೀಸ್, ದಿಲೀಪ್ ಕುಮಾರ್ ಪಾತ್ರವಹಿಸಿರುವ

ಮೆಹಬೂಬ್‌ರವರ "ಅಂದಾಜ್"

ಪ್ರಭಾ * 28-9-51 ರಿಂದ ಅಮೋಘ 4ನೇ ವಾರ ಪ್ರತಿ ದಿನ 3 ಆಟಗಳು

ಕಿಶೋರ್ ಸಾಹು, ವೀನಾ ರಾಯ್ ಆಶಾ ಮಾಥುರ್ ಪಾತ್ರ ವಹಿಸಿರುವ ಹಿಂದಿ ಚಿತ್ರ

- ಕಾಲಿ ಘಟ -

ಕಥೆ ನಿರ್ದೇಶನ ಮತ್ತು ತಯಾರಿಕೆ ಕಿಶೋರ್ ಸಾಹು

ಬೆಳಗಿನ ಪ್ರದರ್ಶನ 5-10-51 ರಿಂದ ದಿನವಹಿ 10 30ಕ್ಕೆ

ಸಿಲ್ವರ್ ಫಿಲಂಸ್ ರವರ ಹಿಂದಿ ಚಿತ್ರ - ದೇವರ್ -

ಪಾತ್ರ ಯಾಕೂಬ್, ಮುಷ್ತಾಕ್ (ಜೂನಿಯರ್) ಮುಸ್ತಾರ್, ಕುಮಾರ್

ಚಾಮುಂಡೇಶ್ವರಿ ಮತ್ತು ಗಣೇಶಾ ಟಾಕೀಸುಗಳಲ್ಲಿ

2-10-51 ರಿಂದ ಯಶಸ್ವಿಯಾದ 2ನೇ ವಾರ

- ಮೋಹನ ಸುಂದರಂ -

Edited printed andpublished by A R Nagarajan, at Sadhvi Press D Subbiah Road, Mysore

ಫೋನ್ ನಂ 792 | ವಂದೇ ಮಾತರಂ | ಇಂದಿನ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೪-೧೦-೫೧ [ಸಂಚಿಕೆ ೬೧

ಚತುರ್ರಾಷ್ಟ್ರ ಪ್ರಧಾನರ ಭೇಟಿಗೆ ಸ್ಟಾಲಿನ್ ಯತ್ನ

ಅರಗು, ಬಣ್ಣದ ಕಾರ್ಖಾನೆ ವ್ಯವಹಾರ ಹೈ ಕೋರ್ಟಿಗೆ

ಮೈಸೂರು ೪

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯಲ್ಲಿ ಲಾಕ್‌ಔಟ್ ವ್ಯವಹಾರದ ಪರಿಶೀಲನೆಯನ್ನು ಹೈಕೋರ್ಟಿನ ನ್ಯಾಯಾಲಯಕ್ಕೆ ಸರ್ಕಾರದವರು ಒಪ್ಪಿಸುವುದಾಗಿ ಗೊತ್ತಾಗಿದೆ

ರಾಮಾಯಣ ಪುರಾಣ

... ಮೊಹಲ್ಲಾ ಕಾಳಮ್ಮನಗುಡಿ ... ರಾಮಲಿಂಗೇಶ್ವರ ಚೌಡೇಶ್ವರಿ ಅಮ್ಮನವರ ದೇವಾಲಯದಲ್ಲಿ ಪ್ರತಿ ... ಸಂಜೆ ೫ ಗಂಟೆಯಿಂದ ... ಶ್ರೀಗಳು ಮಾಯಿಗಗೌಡ ಮತ್ತು ... ಯ್ಯನವರಿಂದ ರಾಮಾಯಣ ಪು... ಮತ್ತು ಅನುವಾದಗಳು ನಡೆಯು... ನವರಾತ್ರಿ ಪ್ರಯುಕ್ತ ಅಮ್ಮನ... ೧೧ನೇ ತಾ|| ವರೆಗೆ ಎಲ್ಲಾ ದಿನಗ... ವಿವಿಧಾಲಂಕಾರಗಳನ್ನು ಮಾಡ... ವುದು

...ರಮನೆಗೆ ಹೊಸ ರಕ್ಷಣಾ ಸಿಬ್ಬಂದಿ

... ತಿಂಗಳು ೧೧ನೇ ತಾ||ನಿಂದ ಅರ... ಮತ್ತು ಅದಕ್ಕೆ ಸಂಬಂಧಪಟ್ಟ ... ಕಟ್ಟಡಗಳಲ್ಲಿ ಆರ್. ಎಂ. ಪ್ಯಾ ರಿಸರ್... ನವರನ್ನು ಕಾವಲಿಗಾಗಿ ನಿಯಮಿಸಲಾಗ... ಯವರೆಗೆ ಅರಮನೆಗೆ ಸೇರಿದ್ದ ... ಮುಂತಾದ ದಳದವರೇ ಕಾವಲು ... ತ್ತಿದ್ದರು

ಮೈಸೂರು ರೇಸು

... ನಡೆದ ಮೈಸೂರು ರೇಸಿನಲ್ಲಿ ... ಸಂದಣಿ ಕಳೆದೆರಡು ದಿನಗಳಿಗಿಂತ ... ವಾಗಿದ್ದಿತು ಅಪ್‌ಸೆಟ್ ಎಂ... ೧೧೫ ರೂ ೧೧... ೦ ಡಿವಿಡೆಂಡ್ ... ತು ಅಲ್ಲದೆ ಟ್ರೆಬಲ್ ಇವೆಂಟ್ ... ಒಂದು ಟಿಕೆಟ್ಟಿಗೆ ೫೦೦೧ ರೂ ... ಕೊಟ್ಟಿದೆ

ಸಿಂಹಳದ ವ್ಯಾಪಾರ ಅಲ್ಲಿನವರಿಗೇ ಮೀಸಲು

... ಹಳದಲ್ಲಿ ವಿದೇಶೀ ಮಾಲೀಕತ್ವದ ... ದ ಎಲ್ಲ ವ್ಯಾಪಾರ, ವಾಣಿಜ್ಯ ಮ... ಕೈಗಾರಿಕಾ ಸಂಸ್ಥೆಗಳನ್ನೂ ಸಿಂಹ... ನಾಗರಿಕರ ವಶಕ್ಕೆ ವರ್ಗಾಯಿಸುವು... ಅಲ್ಲಿನ ವಾಣಿಜ್ಯ ಸಚಿವ ಎಚ್... ಅಮರಸೂರಿಯರವರು ಪ್ರತಿ... ಮಾಡಿರುವರೆಂದು ಗೊತ್ತಾಗಿದೆ ... ಯತ್ನವು ವಿಫಲವಾದಲ್ಲಿ ಸಚಿವ... ನೆ ರಾಜೀನಾಮೆ ಕೊಡುವುದಾಗಿ ... ಅವರು ತಿಳಿಸಿರುವರು

ಎಟ್ಟೆಗೆ ಹೇಸಿಗೆ ಬಳಿದು ಹಣದ ಅಪಹರಣ

... ದ ಶನಿವಾರ ನೆಲ್ಲೂರಿನ ಇಂಪೀರಿ... ಬ್ಯಾಂಕಿಗೆ ಹಣ ಕಟ್ಟಲು ಹೋ... ಗುತ್ತಾಗುವಾಪಿ ವರ್ತಕನು ಬ್ಯಾಂಕಿ ... ವರಣದಲ್ಲಿ ಏಳು ಸಾವಿರ ರೂ ಗಳ ... ಕಳೆದುಕೊಂಡ ಪ್ರಸಂಗವು ವರದಿ... ಗಿದೆ ಬ್ಯಾಂಕಿಗೆ ಹೋದ ಕೂಡಲೇ ... ನ ಬಟ್ಟೆಗೆ ಯಾರೋ ಅಮೇಧ್ಯ ಬ... ದ್ದುದು ಗೋಚರವಾಗಿ ವರ್ತಕನು ... ಬಳಿಗೆ ಹೋಗಿ ಹಣದ ಚೀಲವ... ಪಕ್ಕದಲ್ಲೇ ಇಟ್ಟು ಬಟ್ಟೆಯನ್ನು ... ಕಯುತ್ತಿದ್ದಾಗ ಬೇರೊಬ್ಬನು ಹಣ... ಚೀಲವನ್ನು ಎತ್ತಿಕೊಂಡು ಪರಾರಿ... ದನೆಂದು ವರದಿಯಾಗಿದೆ

ಬಾಲರತ್ನಂರವರ ಜಾಮೀನು ಪುನಃ ತಿರಸ್ಕಾರ

ಹೈ ಕೋರ್ಟಿನಲ್ಲಿ ಮತ್ತೆ ತಾತ್ಕಾಲಿಕ ಬಿಡುಗಡೆಗೆ ಆಜ್ಞೆ

ಬೆಂಗಳೂರು ೪

ತಾತ್ಕಾಲಿಕ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಅಡ್ವೋಕೇಟ್ ಶ್ರೀ ಪಿ ಬಾಲರತ್ನಂರವರ ಅರ್ಜಿಯನ್ನು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ ಎಲ್ ಪದ್ಮನಾಭಯ್ಯನವರು ವಜಾ ಮಾಡಿದರು

ಸೆಷನ್ಸ್ ನ್ಯಾಯಾಧೀಶರ ಆಜ್ಞೆಯ ಮೇಲೆ ಹೈ ಕೋರ್ಟಿಗೆ ಶ್ರೀ ಬಾಲರತ್ನಂರವರು ಅಪೀಲು ಮಾಡಲಾಗಿ ಅವರಿಗೆ ಮತ್ತೆ ತಾತ್ಕಾಲಿಕ ಜಾಮೀನು ದೊರೆತಿರುವುದು

ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷರ ರಾಜೀನಾಮೆ

ಡಾ|| ವಿ ಎಸ್ ನಾರಾಯಣ ರಾಯರ ... ನವರನ್ನು ಸದಸ್ಯತನದಿಂದ ವಜಾ ಮಾಡಿದ ಸಂದರ್ಭದಲ್ಲಿ ಅ|| ರಿಜಿಸ್ಟ್ರಾರರು ಇತ್ತ ಕಡ ಆಜ್ಞೆಯನ್ನು ಪ್ರತಿಭಟಿಸಿ, ನಗರದ ಕೋ ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಡಬ್ಲ್ಯೂ ಹೆಚ್ ಧಿಯೋಬಾಲ್ಡರು ತಮ್ಮ ಅಧಿಕಾರ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವುದಾಗಿ ತಿಳಿದುಬಂದಿದೆ

ಮೈಸೂರು ರೈಲ್ವೆ ನೌಕರರ ಸಂಘ

ಮೈಸೂರು ಸಂಸ್ಥಾನದ ರೈಲ್ವೆ ನೌಕರರ ಸಂಘದ ಕಾರ್ಯಕಾರಿ ಸಮಿತಿಯವರು ಬೆಂಗಳೂರಿನ ಶ್ರೀ ಜಿ ಎ ರಾಮಸ್ವಾಮಿ ಅಯ್ಯರವರನ್ನು ಗೌರವಾರ್ಥ ಸಂಘದ ವಕೀಲರನ್ನಾಗಿ ನೇಮಿಸಿಕೊಂಡಿರುತ್ತಾರೆ

ಗಾಂಧೀ ಜಯಂತಿ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫|| ಗಂಟೆಗೆ ಗಾಂಧಿಜಿಯವರ ೮೩ನೇ ಜನ್ಮ ದಿನಾಚರಣೆಯನ್ನು ಏರ್ಪಡಿಸಲಾಗಿದೆ ಮೈಸೂರು ಮಹಾರಾಜಾ ಕಾಲೇಜಿನ ರಾಜಕೀಯ ಶಾಸ್ತ್ರದ ಉಪ ಪ್ರಾಧ್ಯಾಪಕರಾದ ಶ್ರೀ ಎಂ ವಿ ಕೃಷ್ಣರಾಯರು "ಗಾಂಧಿ ಮತ್ತು ರಾಮರಾಜ್ಯ", ತತ್ವಶಾಸ್ತ್ರದ ಉಪ ಪ್ರಾಧ್ಯಾಪಕರಾದ ಶ್ರೀ ಮಾ ಯಾಮುನಾಚಾರ್ಯರು "ಗಾಂಧಿ ಮತ್ತು ಗೀತೆ" ಎಂಬ ವಿಷಯಗಳ ಮೇಲೆ ಉಪನ್ಯಾಸ ಮಾಡುವರು

ಆಂಧ್ರ ಪ್ರಾಂತ ರಚನೆ ಖಂಡಿತವೆಂದು ನೆಹರೂ

ಪಂಡಿತ ನೆಹರೂರವರು ಸ್ವಾಮಿ ಸೀತಾರಾಂರವರಿಗೆ ಕಳೆದ ಶನಿವಾರ ಒಂದು ಪತ್ರವನ್ನು ಬರೆದು ಆಂಧ್ರ ಪ್ರಾಂತರಚನೆಯಾಗುವುದೆಂದು ಭರವಸೆ ಕೊಡಲು ಮುಂದೆ ಬರುವುದಾಗಿ ಗೊತ್ತಾಗಿದೆ ಮದ್ರಾಸು ನಗರದ ಭವಿಷ್ಯ ವಾಯ... ಜನರ ಪ್ರತಿಕಟನೆ ... ಪ್ಪ ಮುಖಂಡರಲ್ಲೇ ಭಿನ್ನಾಭಿಪ್ರಾಯವಿರುವ ಪ್ರಾಂತದ ರಚನೆಗೆ ಅಡ್ಡಿಗಳಾಗಿರುವವೆಂದು ಅವರು ತಿಳಿಸಿ, ವಿಭಜನೆ ಕಷ್ಟ ಎಂದು ... ಮಾಡುವುದು ಎಷ್ಟು ಯಾತನಾಕಾರ್ಯವಾಗುವುದೋ ಅದಕ್ಕೆ ಮಿಗಿಲಾಗಿ ಒಂದು ಸಂಸ್ಥಾನವನ್ನು ಸಿಂಗಡಿಸುವುದರಿಂದ ಆಗುವವೆಂದು ಹೇಳಿರುತ್ತಾರೆ ಚುನಾವಣಾ ಕಾಲದಲ್ಲಿ ಆಂಧ್ರ ಪ್ರಾಂತರಚನೆಗೆ ಆವಶ್ಯಕವಾದ ಕಾರ್ಯಗಳನ್ನು ತೆಗೆದುಕೊಳ್ಳುವುದು ಕಷ್ಟಕರವೆಂದೂ ಅವರೆ ಎಲ್ಲ ಅಡಚಣೆಗಳೂ ಹೋದರೆ, ವಿಶಾಲವಾದ ತಕ್ಷದ ... ಸರ್ಕಾರ ಘೋಷಣೆ ಮಾಡುವುದು ಸಾಧ್ಯವೆಂದೂ ಅವರು ಹೇಳಿರುತ್ತಾರೆ ಸೌಹಾರ್ದ ಮತ್ತು ಸ್ನೇಹಪೂರಿತ ಭಾವಗಳಿಂದ ಇದನ್ನು ಗಳಿಸಿಕೊಳ್ಳಬಹುದೆಂದು ಅವರು ಸೂಚಿಸಿರುತ್ತಾರೆ ಸ್ವಾಮಿಜಿಯವರು ಈ ಬಗ್ಗೆ ವಿನೋಬಾ ಭಾವೆಯವರಲ್ಲಿ ವ್ಯವಹರಿಸುವರೆಂದು ವ್ಯಕ್ತವಾಗಿದೆ

ಪತ್ರಿಕಾ ಹತೋಟಿ ಮಸೂದೆಗೆ ಅಂಗೀಕಾರ

ಭಾರತದ ಪಾರ್ಲಿಮೆಂಟಿನಲ್ಲಿ ಗೃಹ ಸಚಿವ ರಾಜಾಜಿಯವರು ಮಂಡಿಸಿದ ಪತ್ರಿಕಾ ಹತೋಟಿ ಮಸೂದೆಗೆ ನೆನ್ನೆ ಸಭೆಯು ಸಾಮಾನ್ಯ ಒಪ್ಪಿಗೆಯನ್ನಿತ್ತಿತು ರಾಜಾಜಿಯವರು ಮಾತನಾಡಿ, ಪತ್ರಿಕಾ ಸ್ವಾತಂತ್ರ್ಯವನ್ನು ಪೂರ್ಣವಾಗಿ ಮೊಟಕು ಮಾಡುವುದು ಮಸೂದೆಯ ಉದ್ದೇಶವಲ್ಲವೆಂದೂ, ಪತ್ರಿಕಾಲಯ ಮತ್ತು ಮುದ್ರಣ ಯಂತ್ರಗಳನ್ನು ವಿನಾಶ ಕೃತ್ಯಗಳಿಗಾಗಿ ಉಪಯೋಗಿಸುವುದರ ತಡೆ, ಕೋಮುವಾರು ದ್ವೇಷ ನ್ಯಾಯ ನಿರ್ಮೂಲ, ಕಮ್ಯೂನಿಸ್ಟರ ಚಟುವಟಿಕೆಗೆ ನಿರ್ಬಂಧ ಮತ್ತು ಇತರ ಅಂತಹ ತೊಡಕುಗಳ ನಿವಾರಣೆ ಇವು

ಚತುರ್ರಾಷ್ಟ್ರಗಳ ಸಭೆಗಾಗಿ ಸ್ಟಾಲಿನ್ನರ ಪ್ರಯತ್ನ ?

ಅಮೆರಿಕದ ಟ್ರೂಮನ್, ಬ್ರಿಟನ್, ಫ್ರಾನ್ಸ್ ಪ್ರಧಾನಿಗಳು ಮತ್ತು ರಷ್ಯದ ಸ್ಟಾಲಿನ್ ಇವರುಗಳ ಭೇಟಿಗಾಗಿ ಸ್ಟಾಲಿನ್ನರೇ ಪ್ರಯತ್ನ ನಡೆಸುವರೆಂದೂ, ರಷ್ಯವು ಚತುರ್ರಾಷ್ಟ್ರಗಳ ಸಂಭಾಷಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವುದೆಂದೂ ಯೂರೋಪಿನ ರಾಜತಾಂತ್ರಿಕ ವೃತ್ತಗಳಿಂದ ವರದಿಗಳು ಬಂದಿವೆ

ಯುದ್ಧ ತಡೆಗಟ್ಟಲು ವಿಶ್ವ ಮಿಲಿಟರಿ ತಜ್ಞರ ಸಮಿತಿ

ಆಕ್ರಮಣಕ್ಕೆ ಒಳಗಾಗುವ ರಾಷ್ಟ್ರಗಳನ್ನು ಧಾಳಿಯಿಂದ ರಕ್ಷಿಸುವ ಸಲುವಾಗಿ ಹಲವು ಸಂಸ್ಥಾನಗಳ ಮಿಲಿಟರಿ ಅಧಿಕಾರಿಗಳಿಂದ ಕೂಡಿದ ಒಂದು ಸಮಿತಿಯನ್ನು ರಚಿಸಬೇಕೆಂದು ವಿಶ್ವ ಸಂಸ್ಥೆಗೆ ಅದರ ಒಂದು ಉಪ ಸಮಿತಿಯು ಸಲಹೆ ಮಾಡಿದೆ ಮಿಲಿಟರಿ ಕಾರ್ಯಾಚರಣೆಯನ್ನು ನಡೆಸುವ ಎಲ್ಲ ಮೇಲ್ಮಟ್ಟದ ಅಧಿಕಾರಿಗಳು ಸೂಚನೆಗಳನ್ನೀಯತಕ್ಕದ್ದೆಂದು ಉಪ ಸಮಿತಿಯವರು ಅಭಿಪ್ರಾಯ ಪಟ್ಟಿರುವರು

ಬರುವ ವರ್ಷ ಅಕ್ಕಿ ಸರಬರಾಜಿನ ಪೂರ್ಣತೆ

ಸಿಂಗಪುರದಲ್ಲಿ ನಡೆಯುತ್ತಿರುವ ಅಕ್ಕಿ ಸಲಹಾ ಸಮಿತಿಯ ಸಮ್ಮೇಳನದ ೫೦ ದೇಶಗಳ ಪ್ರವೀಣರು ಬರುವ ವರ್ಷವೆಲ್ಲ ಅಕ್ಕಿಯನ್ನು ರಫ್ತು ಮಾಡುವ ಎಲ್ಲ ರಾಷ್ಟ್ರಗಳಿಗೂ ಸಾಕಾಗುವಷ್ಟು ಬೆಳೆಯು ಬರುವುದಾಗಿಯೂ, ಆದರೂ ಅದರ ಬೆಲೆ ಬಗ್ಗೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯವೆಂದೂ ಅಭಿಪ್ರಾಯ ಪಟ್ಟಿರುವರು

ನೇಪಾಳದ ಆಡಳಿತದ ಬಗ್ಗೆ ಸಲಹಾ ಸಮಿತಿ ನೇಮಕ

ನೇಪಾಳ ಸರ್ಕಾರದ ಆಡಳಿತದ ಬಗ್ಗೆ ಅಲ್ಲಿನ ಅರಸರಿಗೂ ಮತ್ತು ಸಚಿವರುಗಳಿಗೂ ಸೂಕ್ತ ಸಲಹೆ ನೀಡಲು ೩೫ ಮಂದಿ ಸದಸ್ಯರಿಂದ ಕೂಡಿದ ಒಂದು ಸಲಹಾ ಸಮಿತಿಯನ್ನು ನೇಮಿಸಿ ನೆನ್ನೆ ರಾಜ ಘೋಷಣೆ ಹೊರಡಿಸಲಾಯಿತು ಆ ಸಮಿತಿಯಲ್ಲಿ ನೇಪಾಳದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಂ ಪಿ ಕೊಯಿರಾಲಾ ಮತ್ತು ಹಲವು ಮಂತ್ರಿಗಳೂ, ಇತರ ಮುಖಂಡರೂ ಇರುವರೆಂದು ಹೇಳಲಾಗಿದೆ

ರಾಜಪ್ರಮುಖರಿಂದ ಶೃಂಗೇರಿ ರಕ್ಷಣಾ ಸಮಿತಿ ನಿಯೋಗ

ಮೈಸೂರಿನ ರಾಜಪ್ರಮುಖರು, ಮುಖ್ಯ ಮಂತ್ರಿ ಮತ್ತು ಇತರ ಸಚಿವರುಗಳಲ್ಲಿ ಬೊಂಬಾಯಿಯ ಶೃಂಗೇರಿ ರಕ್ಷಣಾ ಸಮಿತಿಯವರು ನಿಯೋಗ ಹೋಗಲು ನಿರ್ಧರಿಸಿರುತ್ತಾರೆ ಇನಾಂ ಮಸೂದೆಯನ್ನು ಆ ಮಠಕ್ಕೆ ಅನ್ವಯಿಸಬಾರದೆಂದು ಅವರು ಪ್ರಾರ್ಥಿಸುವರು

ಗಳೆನ್ನೋಸ್ವರ ಈ ಮಸೂದೆಯು ಅಗತ್ಯವೆಂದೂ ಹೇಳಿದರು ಡಾ|| ಶ್ಯಾಮಪ್ರಸಾದ್ ಮುಖರ್ಜಿ ಮತ್ತು ಪಂಡಿತ ಹೃದಯನಾಥ್ ಕುಂಜ್ರುರವರು ತೀವ್ರವಾಗಿ ವಿರೋಧಿಸಿದರು

ಸ್ಟೆನೊಗ್ರಾಫರುಗಳ ಅವಶ್ಯಕತೆ

ಗೃಹ ಸಚಿವ ಟಿ. ಮರಿಯಪ್ಪನವರ ಭಾಷಣ

ಬೆಂಗಳೂರು ೩

ಮೊನ್ನೆ ಇಲ್ಲಿನ ಶೀಘ್ರ ಲಿಪಿ ಬರಹಗಾರರ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿ ಭಾಷಣ ಮಾಡುತ್ತಾ, ಗೃಹ ಸಚಿವ ಶ್ರೀ ಟಿ ಮರಿಯಪ್ಪನವರು ಪ್ರಜಾ ಸತ್ತಾತ್ಮಕ ರಾಜ್ಯ ಭಾರದಲ್ಲಿ ಷಾರ್ಟ್ ಹ್ಯಾಂಡ್ ಬರಹಗಾರರ ಅವಶ್ಯಕತೆಯನ್ನು ಒತ್ತಿ ಹೇಳಿದರು ಶಾಸನ ಸಭೆ ಮತ್ತು ಸಮಿತಿಗಳಲ್ಲಿ ಸದಸ್ಯರ ಭಾಷಣಗಳನ್ನು ವರದಿ ಮಾಡಿ ಅವರಿಗೆ ಬರಹಗಾರರು ತುಂಬಾ ಉಪಕಾರ ಮಾಡಿರುವರೆಂದೂ, ಸಂಸ್ಥಾನದಲ್ಲಿ ಅನೇಕರು ಈ ಕೆಲಸದಲ್ಲಿ ಪ್ರವೀಣರಾಗಿರುವರೆಂದೂ ತಿಳಿಸಿದರು ಹೇಳಿದರು ಕನ್ನಡದಲ್ಲಿ ಶೀಘ್ರ ಲಿಪಿಯನ್ನು ಜಾರಿಗೆ ತರುವ ಬಗ್ಗೆ ಇರುವ ನಿರುತ್ಸಾಹಕ್ಕಾಗಿ ಸಚಿವರು ವ್ಯಸನವನ್ನು ಸೂಚಿಸಿದರು ಕನ್ನಡ ಟೈಪ್ ರೈಟರ್ ಸಮಿತಿಯ ಕಾರ್ಯವನ್ನು ಹೊಗಳಿದರು

ನಂತರ ಮಂತ್ರಿಗಳು ಸಂಘದ ಸಂಸ್ಥಾಪಕ ಸದಸ್ಯರಾದ ಶ್ರೀ ಡಿ ಕೆ ರಾಮಚಂದ್ರಯ್ಯನವರ ಭಾವಚಿತ್ರವನ್ನು ಅನಾವರಣ ಮಾಡಿದರು

SRI GAYATHRI,

TALKIES

From 5 10 51 Daily 3 Shows

A Drama of real life

From the Readers Digest

LOST BOUNDARIES

Universal's Picture

MORNING SHOWS

On 6th & 7th

M G M's

THE PIRATE

(In Technicolor)

With Gene Kelly & Judy Garland

ಬ್ರಿಟಿಷ್ ಮತ್ತು ಇಟಲಿ ನೌಕೆಗಳಿಗೆ ಡಿಕ್ಕಿ

ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ಮೊನ್ನೆ ದಿನ ಒಂದು ಬ್ರಿಟಿಷ್ ನೌಕೆಗೂ ಮತ್ತೊಂದು ಇಟಲಿ ನೌಕೆಗೂ ಡಿಕ್ಕಿಯಾಗಿ ಬ್ರಿಟಿಷ್ ನೌಕೆಯ ಒಬ್ಬ ಕೆಲಸಗಾರನು ಮೃತಪಟ್ಟನು. ಮತ್ತೊಬ್ಬನು ಗಾಯಹೊಂದನೆಂದು ವರದಿಯಾಗಿದೆ ಹಡಗಿನ ಇತರ ಐದು ಮಂದಿ ಕೆಲಸಗಾರರು ಪತ್ತೆಯಿಲ್ಲವೆಂದು ಹೇಳಲಾಗಿದೆ

ಅಖಿಲ ಭಾರತ ಸ್ತ್ರೀಯರ ಆಹಾರ ಸಮಿತಿ

ಮೇಲ್ಕಂಡ ಸಮಿತಿಯ ಮೈಸೂರು ರಾಜಿಸುವ ಸಮ್ಮೇಳನದಲ್ಲಿ ರೇಷನ್ ಅಕ್ಕಿಯ ಆಹಾರ ಪದಾರ್ಥಗಳ ತಯಾರಿಕೆಯನ್ನು ಪ್ರದರ್ಶಿಸುತ್ತಿದ್ದಾರೆ ಮರಗೆಣಸಿನ ಕೃತಕ ಅಕ್ಕಿಯಿಂದಲೂ ಮತ್ತು ಇತ್ಯಾದಿಯಿಂದಲೂ ರುಚಿಕರವಾದ ತಿಂದಿಗಳನ್ನು ತಯಾರಿಸಿ ನೆನ್ನೆ ಪತ್ರಿಕೋದ್ಯೋಗಿಗಳಿಗೆ ವಿಧಾನವನ್ನು ತೋರಿಸಿ ಅನ್ನ ತರ ಆಹಾರ ... ಗಳಿಂದ ಸತ್ಕರಿಸಿದರು.

ಗುಂಡ್ಲುಪೇಟೆ ಚಂದಾದಾರರಲ್ಲಿ ವಿನಂತಿ

ಗುಂಡ್ಲುಪೇಟೆಯ ಸಾಧ್ವಿ ಪತ್ರಿಕಾ ಚಂದಾದಾರರು ಬಾಕಿ ಇರುವ ಚಂದಾ ಹಣವನ್ನು ಕೂಡಲೇ ಅಲ್ಲಿರುವ ನಮ್ಮ ಏಜೆಂಟರಿಗೆ ಪಾವತಿ ಮಾಡುವುದಲ್ಲದೆ, ಇನ್ನು ಮುಂದೆ ಪ್ರತಿ ತಿಂಗಳ ಚಂದಾ ಹಣವನ್ನು ಮುಂಗಡವಾಗಿ ಕೊಟ್ಟು ಸಹಕರಿಸಬೇಕೆಂದು ಕೋರಲಾಗಿದೆ

ವ್ಯವಸ್ಥಾಪಕ, ಸಾಧ್ವಿ

ಮನೆ ಮಾರಾಟಕ್ಕಿದೆ

ಡೋರ್ ನಂ 2900 ಮತ್ತು 2900 1 ಹಳ್ಳದ ಕೇರಿ, ಮೈಸೂರು. ವಿಶಾಲವಾದ ಮಹಡಿ ಮನೆ

ವಿವರಗಳಿಗೆ

ಜಯ ಅಂಡ್ ಕಂಪೆನಿ,

ಮೈಸೂರು ಬ್ಯಾಂಕ್ ಕಟ್ಟಡ,

ಸಯ್ಯಾಜಿರಾವ್ ರಸ್ತೆ, ಮೈಸೂರು

ಟೆಲಿಫೋನ್ 520

ತೆರಿಗೆ ಕೊಡದ ಮರಮಾನ ತಿಳಿಸಲು ಹೆಚ್ಚು ಅವಧಿ

ಆದಾಯ ತೆರಿಗೆಯನ್ನು ಕೊಡದ ತಪ್ಪಿಸಿಕೊಂಡಿರುವವರು ವರಮಾನದ ವಿವರಗಳನ್ನು ಕೊಡಲು ಇದೇ ತಿಂಗಳು ೩ ನೇ ತಾರೀಕಿನ ವರೆಗೆ ಕಾಲಾವಕಾಶವನ್ನು ಹೆಚ್ಚಿಸಲಾಗಿದೆ ಮೊನ್ನೆಯ ವರೆಗೆ ತೆರಿಗೆಯನ್ನು ಕೊಡದವರಿಂದ ೧೮॥ ಕೋಟಿ ರೂ ಹಣದ ಬಗ್ಗೆ ವಿವರಗಳು ತಿಳಿದು ಬಂದಿರುವುದಾಗಿ ಗೊತ್ತಾಗಿದೆ

ಕುಸ್ತಿ ಪಂದ್ಯದಲ್ಲಿ ಸ್ತ್ರೀಯರ ಪಾತ್ರ

ಸಿಮ್ಲಾದಲ್ಲಿ ಇದೇ ೬, ೭ನೇ ತಾ॥ ಗಳಲ್ಲಿ ನಡೆಯುವ ಕುಸ್ತಿ ಆಟದ ಸಮಾರಂಭದಲ್ಲಿ ಮಹಿಳೆಯರಿಬ್ಬರ ಪಂದ್ಯವೂ ನಡೆಯುವುದು ಪಂಜಾಬು, ಹಿಮಾಚಲ ಪ್ರದೇಶ ಮತ್ತು ಪೂರ್ವ ಪಂಜಾಬು ಸಂಸ್ಥಾನಗಳ ಪಂದ್ಯಗಾರರು ಅದರಲ್ಲಿ ಭಾಗವಹಿಸುವರು

ರಾಜಕಮಲ್, ಮೈಸೂರು

5-10 51 ರಿಂದ

ಅಮೋಘ 9ನೇ ವಾರ

ಜಗನ್ಮೋಹಿನಿ

(ಕನ್ನಡ)

-:ಬೆಳಗಿನ ಪ್ರದರ್ಶನಗಳು:-

ದಸರಾ ಪ್ರಯುಕ್ತ

5 10 51ರಿಂದ 4 ದಿನಗಳು ಮಾತ್ರ

ರಣಜಿತ್‌ರವರ

ಹಿಂದಿ ಚಿತ್ರ - ಬೇಲಾ

ಭೂಮಿಕೆ - ಪೃಥ್ವಿರಾಜ್, ನಿಗಾರ್

THIRTHA & COMPANY,

Narayana sastry Road

PHONE 537

Clearing & Forwarding AGENTS

ದಿ ಲ್ಯಾಂಡ್ ಅಂಡ್ ದಿ ಪೀಪಲ್

ಮದ್ರಾಸಿನಲ್ಲಿರುವ **ಅಮೆರಿಕಾ ಸಂಯುಕ್ತ ಸಂಸ್ಥಾನಗಳ ವರ್ತಮಾನ ಶಾಖೆಯವರು** ಕಳುಹಿಸಿರುವ **ಮೇಲ್ಕಂಡ ಶೀರ್ಷಿಕೆಯ ಅಂಕಿತವಾದ ಸಚಿತ್ರ ಪತ್ರಿಕೆಯ** ಎರಡು ಪ್ರತಿಗಳನ್ನು **ಸ್ವೀಕರಿಸಿರುತ್ತೇವೆ.** ಪತ್ರಿಕೆಯನ್ನು ಅಂದವಾಗಿ ಮುದ್ರಿಸಲಾಗಿದೆ ಅಮೆರಿಕದ ನಾನಾ **ಕಡೆಗಳಲ್ಲಿರುವ** ವ್ಯವಸಾಯ, ಕೈಗಾರಿಕೆಗಳನ್ನೊಳಗೊಂಡ ಸಚಿತ್ರ ವರದಿಗಳು **ಅದರಲ್ಲಿ ಅಡಕ**ವಾಗಿವೆ ಅಲ್ಲಿನ ಜನ **ಜೀವನದ ಸರಳತೆ**ಯನ್ನು ಪತ್ರಿಕೆಯು ಎತ್ತಿ **ತೋರಿಸಿದೆ.** ಇದರ ಬೆಲೆ ಎಂಟಾಣೆ

ಬರುವ ೯ನೇ **ತಾರೀಖಿನಿಂದ ರಾಜ**ಧಾನಿಯಲ್ಲಿ **ಪ್ರಾರಂಭವಾಗಿ ಅನಂತರ** ಬೆಂಗಳೂರಿನಲ್ಲಿ ಸೇರುವ **ಶಾಸನ ಸಭೆ**ಯಲ್ಲಿ ಈ **ಸಾರಿ ೧೩ ಮಸೂದೆಗಳೂ** ೨೭ ನಿರ್ಣಯಗಳೂ ೩೦೮ **ಪ್ರಶ್ನೆಗಳು** ಪರಿಶೀಲನೆಗೆ **ಬರುವುವು.**

ಹರಾಜು

ಈ ಕೆಳಗೆ ನಮೂದಿಸಿರುವ **ಅತ್ಯುತ್ತ**ಮವಾದ ನಿವೇಶನಗಳು ಹರಾಜು ಮಾಡಲ್ಪಡುತ್ತವೆ ಹೆಚ್ಚಿಗೆ **ವಿವರಗಳನ್ನು** ಆಫೀಸಿನಲ್ಲಿ ತಿಳಿದುಕೊಳ್ಳಬಹುದು

1) ಇಟ್ಟಿಗೆಗೂಡು **ಜೂ ಗಾರ್ಡನ್** ಮುಂಭಾಗದ ರಸ್ತೆ ಮತ್ತು ಅರಮನೆಯ ಮುಂಭಾಗದ ಜಯಮಾರ್ತಾಂಡ ಗೇಟಿನ ಪೂರ್ವ ದಿಕ್ಕಿನಲ್ಲಿ

13 ಸೈಟುಗಳು 5-10-51ನೇ ಬೆಳಿಗ್ಗೆ 9 ಗಂಟೆ ಹರಾಜಾಯ್ತು

2) ಜಯಲಕ್ಷ್ಮೀಪುರಂ ಬಡಾವಣೆಯಲ್ಲಿ ಟೆಂಪಲ್ ರಸ್ತೆ ಮತ್ತು ಇಲವಾಲ ರಸ್ತೆಯಲ್ಲಿ

13 ಸೈಟುಗಳು 6 10-51ನೇ ಬೆಳಿಗ್ಗೆ 9 ಗಂಟೆ ಹರಾಜಾಯ್ತು

(ರುಜು) **ಪಿ. ಗೋಪಾಲಕೃಷ್ಣ ಶೆಟ್ಟಿ,**

ಅಧ್ಯಕ್ಷರು,

ನಗರಾಭಿವೃದ್ಧಿ ಸಮಿತಿ,

ಮೈಸೂರು.

ಒಲಂಪಿಯಾ *

ಮಹೋನ್ನತ ಚಿತ್ರ ಪ್ರದರ್ಶನ ಮಂದಿರ

4-10-51 ರಿಂದ

ಅಮೋಘ ಪ್ರಾರಂಭ

(ದಿನವೂ 3 ಆಟಗಳು)

ಅತ್ಯುತ್ತಮ ಸಂಗೀತದಿಂದ ಕೂಡಿದ

ದಾರ್ಲಿಂಗ್ ಫಿಲಂಸ್ ರವರ

* ಮಲ್ಹಾರ್ *

ಪಾತ್ರ ವರ್ಗ: ಅರ್ಜುನ್,

ಮೋತಿ ಸಾಗರ್ ಮತ್ತು ಕನ್ನಾಲಾಲ್

ಭಾರತದ ಹಿನ್ನೆಲೆ ಸಂಗೀತದಲ್ಲಿ ಶ್ರೇಷ್ಠತಮ ಸ್ಥಾನ

ಗಳಿಸಿರುವ ಮುಖೇಶ್‌ರವರ ತಯಾರಿಕೆ

ದಿಗ್ದರ್ಶನ:- ಹರೀಶ್

ಬೆಳಗಿನ ಪ್ರದರ್ಶನ 4 10 51 ರಿಂದ ಪ್ರತಿ ದಿನ 10 30ಕ್ಕೆ

ರಾಜಕಪೂರ್, ನರ್ಗೀಸ್, ದಿಲೀಪ್ ಕುಮಾರ್ ಪಾತ್ರವಹಿಸಿರುವ

ಮೆಹಬೂಬ್‌ರವರ " ಅಂದಾಜ್ "

ಪ್ರಭುದೇವಾ ಟಾಕೀಸ್

ಪ್ರತಿ ದಿನ 3 ಆಟಗಳು

5-10-51 ರಿಂದ :: ಅಮೋಘ 3ನೇ ವಾರ

• ಸ್ತ್ರೀ ಸಾಹಸಂ •

ಅಂಜಲಿ ದೇವಿ, ನಾಗೇಶ್ವರ ರಾವ್, ಸೂರ್ಯ ಪ್ರಭಾ, ಲೀಲಾ, ಸಿ. ಎಸ್. ಆರ್. ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ

MODEL LAUNDRY IN THE MODEL CITY

Equipped with Modern Electric Machines TRIPLEX DRY CLEANING PLANT, WASH BOILER, STEAM BOILER, HYDRO-EXTRACTOR, PRESSING MACHINES etc, for cleaning and pressing all kinds of clothes within few hours at moderate rates Collection centres in all parts of the city

JOTHI ELECTRIC LAUNDRY,

22, Nazarbad, MYSORE

Edited, printed and published by A R Nagarajan, at Sadhvi Press D Subbiah Road, Mysore

ರೀ. ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೫-೧೧-೫೧ [ಸಂಚಿಕೆ ೬೨

ಶತದ್ರು ನದಿ ತಿರುವಲು ಪಾಕಿಸ್ತಾನದ ಪ್ರಯತ್ನ?

ಭಾರತಕ್ಕೆ ಶತದ್ರು ನದಿ ನೀರು ಬರದಂತೆ ಪಾಕಿಸ್ತಾನದ ತಡೆ

ಪೂರ್ವ ಪಂಜಾಬಿನ ಜಮೀನುಗಳಿಗೆ ಸರಬರಾಜಾಗುತ್ತಿರುವ ಶತದ್ರು ನದಿಯ ನೀರನ್ನು ಪಶ್ಚಿಮ ಪಂಜಾಬಿನ ಫಿರೋಜ್‌ಪುರದ ಬಳಿ ಬೇರೆ ಕಡೆಗೆ ತಿರುಗಿಸಿ ಪೂರ್ವ ಪಂಜಾಬಿಗೆ ನೀರಿನ ಸರಬರಾಜನ್ನು ಪೂರ್ಣವಾಗಿ ನಿಲ್ಲಿಸಲು ಪಾಕಿಸ್ತಾನ ಸರ್ಕಾರದವರು ಪ್ರಯತ್ನಿಸುತ್ತಿರುವರೆಂದು ವರದಿಯಾಗಿದೆ. ಈ ಬಗ್ಗೆ ಮುನ್ನೆಚ್ಚರಿಕೆ ಕ್ರಮವಾಗಿ ಭಾರತ ಸರ್ಕಾರದವರು ಪೂರ್ವ ಪಂಜಾಬಿನಲ್ಲಿ ಒಂದು ಅಣೆಕಟ್ಟನ್ನು ನಿರ್ಮಿಸುವ ಕಾರ್ಯವನ್ನು ಕೈಗೊಂಡಿರುವರೆಂದು ಹೇಳಲಾಗಿದೆ.

ಚಿತ್ರಾಲ್ ಸಂಸ್ಥಾನದ ಮೇಲೆ ಪಾಕಿಸ್ತಾನದ ದಬ್ಬಾಳಿಕೆ

ಭಾರತ ಮತ್ತು ಪಾಕಿಸ್ತಾನಗಳ ಅಂತ ಉತ್ತರ ಗಡಿಯಲ್ಲಿರುವ ಚಿತ್ರಾಲ್ ಸಂಸ್ಥಾನದ ಮೇಲೆ ಪಾಕಿಸ್ತಾನವು ದಬ್ಬಾಳಿಕೆಯನ್ನು ನಡೆಸಿರುವುದೆಂದೂ ಕಾಶ್ಮೀರದ ವಿಷಯವನ್ನು ಚರ್ಚಿಸುವುದಾಗಿ ಪಾಕಿಸ್ತಾನ ಸರ್ಕಾರದವರು ಹೇ... ...ಪ್ಷಿನ ನವಾಬರನ್ನು ಕರಾಚಿಗೆ ಕರೆ...ಕೊಂಡು ಬಂಧನದಲ್ಲಿರಿಸಿರುವರೆಂದೂ ಅಂದಿನಿಂದ ಅಸಮಾಧಾನಗೊಂಡ ಚಿತ್ರಾಲ್ ಜನರು ಸ್ವಾತಂತ್ರ್ಯ ಚಳುವಳಿಯನ್ನು ಪ್ರಾರಂಭಿಸಿ ಇನ್ನೂ ಚಿಕ್ಕ ವಯಸ್ಸಿನ ನವಾಬರ ಕುಮಾರರನ್ನು ಸ್ವಸ್ಥಾನಕ್ಕೆ ಸಾಗಿಸಿರುವರೆಂದು ಹೇಳಲಾಗಿದೆ.

ನೆಹರೂ ವಿರುದ್ಧ ತಪ್ಪೆಯವರ ಸ್ಪರ್ಧೆ

ಪ್ರಧಾನಿ ನೆಹರೂರವರು ಚುನಾವಣೆ ನಿಲ್ಲುವ ಕ್ಷೇತ್ರದಿಂದ ಅವರ ವಿರೋಧವಾಗಿ ಭಾರತದ ರಾಷ್ಟ್ರೀಯ ಪ್ರಜಾ ಪಕ್ಷದ ಎಲ್ ಜಿ ತಪ್ಪೆಯವರು ಸ್ಪರ್ಧಿಸುವರೆಂದು ಹೇಳಲಾಗಿದೆ. ಅ|

ರಾಮರಾಜ್ಯ ಪರಿಷತ್ತಿನವರೂ ಸಹ ನೆಹರೂರ ಮೇಲೆ ಪ್ರತಿಸ್ಪರ್ಧಿ ನಡೆಸಲು ತೀರ್ಮಾನಿಸಿರುವರು.

ರಾಜಸ್ತಾನದಲ್ಲಿ ವಿಷ ಸರ್ಪಗಳ ಹಾವಳಿ

ರಾಜಸ್ತಾನದ ಎಮೊರ್ ಮತ್ತು ...ಚಾರ್ ಎಂಬ ಎರಡು ಪರಗಣಗಳ ನರುವಾತ್ರಿಯನ್ನು ಕಷ್ಟದಿಂದ ಕಳೆಯುವಂತಾಗಿರುವುದೆಂದೂ, ದಾರ್ ಮರುಭೂಮಿಯಲ್ಲಿರುವ "ಬೀನಾ ಸರ್ಪ" ಎಂಬ ವಿಷದ ಹಾವುಗಳು ಜನರು ನಿದ್ರಿಸುವಾಗ ಅವರ ಮೂಗಿನ ಬಳಿ ವಿಷವನ್ನು ಬಿಡುವುದೆಂದೂ, ಇದರಿಂದ ಈಗಾಗಲೇ ಅನೇಕರು ಮರಣ ಹೊಂದಿರುವರೆಂದೂ ತಿಳಿದುಬಂದಿದೆ.

ಬ್ರಿಟಿಷ್ ಪಾರ್ಲಿಮೆಂಟಿನ ಪರಿಸಮಾಪ್ತಿ

ಇದೇ ೨೫ನೆ ತಾರೀಖು ಬ್ರಿಟನ್ನಿನಲ್ಲಿ ಸಾರ್ವತ್ರಿಕ ಚುನಾವಣೆಯು ನಡೆಯುವರ ಸಂಕೇತವಾಗಿ ಅರಸರಾದ ಆರನೆ ಜಾರ್ಜರು ನೆನ್ನೆ ಈಗಿನ ಪಾರ್ಲಿಮೆಂಟಿನ ಸಾಂಪ್ರದಾಯಿಕ ಪರಿಸಮಾಪ್ತಿ ಘೋಷಣೆಯನ್ನು ಹೊರಡಿಸಿದರು. ...ವರ ಭಾಷಣವನ್ನು ಪಾರ್ಲಿಮೆಂಟಿನಲ್ಲಿ ಓದಲಾಯಿತು.

ಇಂಡೋ ಚೀಣದಲ್ಲಿ ವೀಟ್ ಮಿನ್ನರ ಪ್ರಚಂಡ ಧಾಳಿ

ಇಂಡೋ ಚೀಣದಲ್ಲಿ ವೀಟ್ ಮಿನ್ಹ್‌ಗೆ ಸೇರಿದ ೮ ಸಾವಿರ ಸೈನಿಕರ ಧಾಳಿಯನ್ನಾರಂಭಿಸಿರುವುದರಿಂದ ಫ್ರೆಂಚರು ...ಲ್ಲ ಎರಡು ಸ್ಥಳಗಳನ್ನು ಬಿಟ್ಟುಕೊಡಬೇಕಾಯಿತು. ಹಾಂಕಾಂಗ್ ನಗರವಿನ್ನೂ ಫ್ರೆಂಚರ ವಶದಲ್ಲಿ ... ದಾಗಿ ಗೊತ್ತಾಗಿದೆ.

ಕಾಂಗ್ರೆಸ್ಸಿಗೆ ಸೇರಲು ಕಿದ್ವಾಯಿಯವರ ನಿರ್ಧಾರ

ಕಾಂಗ್ರೆಸ್ ಸಂಸ್ಥೆಗೆ ಪುನಃ ಸೇರಲು ರಫಿ ಅಹಮದ್ ಕಿದ್ವಾಯಿಯವರು ನಿರ್ಧರಿಸಿ, ತಾವು ಸದಸ್ಯರಾಗಿದ್ದ ಬಾರಾಬಂಕಿ ಜಿಲ್ಲಾ ಸಮಿತಿಗೆ ತಾವು ಹಿಂದೆ ಇತ್ತ ರಾಜೀನಾಮೆಯನ್ನು ವಾಪಸು ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಮೈಸೂರು ಪ್ರಾಂತದ ಭಾರತ ಚೀಣ ಸ್ನೇಹ ಸಂಘ

ಮೈಸೂರು ಪ್ರಾಂತದ ಸಂಘವನ್ನು ಮೊನ್ನೆ "ಸಾಧ್ವಿ" ಪತ್ರಿಕಾ ಕಛೇರಿಯ ಮಹಡಿ ಮೇಲೆ ಸೇರಿದ್ದ ಸಭೆಯಲ್ಲಿ ಸ್ಥಾಪಿಸಲಾಯಿತು. ಶ್ರೀ ತಗಡೂರು ರಾಮಚಂದ್ರ ರಾಯರು ಅಧ್ಯಕ್ಷರಾಗಿಯೂ, ಶ್ರೀ ಡಿ ಆರ್ ಕೃಷ್ಣಮೂರ್ತಿಯವರು ಕಾರ್ಯದರ್ಶಿಗಳಾಗಿಯೂ ಉಳ್ಳ ಒಂದು ಸಿದ್ಧತಾ ಸಮಿತಿಯು ರಚಿಸಲ್ಪಟ್ಟಿತು.

ಶ್ರೀಗಳಾದ ರಾಮಚಂದ್ರರಾಯರು ಮತ್ತು ಕೃಷ್ಣಮೂರ್ತಿಗಳವರು ಚೀಣದಲ್ಲಿ ನಡೆದಿರುವ ಭೂ ಸುಧಾರಣೆ ಮತ್ತು ಗ್ರಾಮ ಸುಧಾರಣೆಗಳನ್ನು ವಿವರಿಸಿದರು. ನಂತರ ಈ ಕೆಳಕಂಡ ನಿರ್ಣಯಗಳನ್ನು ಮಾಡಲಾಯಿತು. ಚೀಣದಲ್ಲಿ ನಡೆದಿರುವ ಸುಧಾರಣೆಗಳನ್ನು ಪ್ರಚಾರ ಮಾಡಲು ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸುವುದು, ಭಾರತದ ಇತರ ಕಡೆಗಳಲ್ಲಿರುವ ಈ ಸಂಘಗಳೊಡನೆ ಪತ್ರ ವ್ಯವಹಾರ ನಡೆಸಿ, ಹೊಸ ವಿದ್ಯಮಾನಗಳನ್ನು ತಿಳಿದುಕೊಳ್ಳುವುದು.

● ಅಂಬಾ ಪೂಜೆ

ರಾಜಧಾನಿಯ ಚಾಮುಂಡಿಪುರದ ಹೊಸ ಬಂಡಿಕೇರಿಯಲ್ಲಿರುವ ಪತ್ರಾಜನರ ಗರಡಿಯಲ್ಲಿ ಈ ರಾತ್ರಿ ಅಂಬಾ ಪೂಜೆಯನ್ನು ನೆರವೇರಿಸಲಾಗುವುದು. ನಗರ ಕಾಂಗ್ರೆಸ್ ಅಧ್ಯಕ್ಷ, ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು.

ವರದಕ್ಷಿಣೆ ರದ್ದಿಗಾಗಿ ಶಾಸನ ಸಭೆಯಲ್ಲಿ ನಿರ್ಣಯ

ಮೈಸೂರು ೩

...ನೇ ತಾ॥ ಪ್ರಾರಂಭವಾಗುವ ಶಾಸನ ಸಭೆಯಲ್ಲಿ ಈ ಸಾರಿ ಬರುವ ನಿರ್ಣಯಗಳ ಪೈಕಿ ವರದಕ್ಷಿಣೆಯನ್ನು ತೊಡೆದು ಹಾಕುವುದೂ ಒಂದಾಗಿದೆ. ಮೈಸೂರ ವಿಶ್ವ ವಿದ್ಯಾಲಯದ ಎಲ್ಲ ತರಗತಿಯವರಿಗೂ ಮಿಲಿಟರಿ ಶಿಕ್ಷಣ ಕೊಡುವುದು. ...ವರಲ್ಲಿ ಸೇರಿದೆ. ಜನಾಂಗದ ...ಡನ ಮೈಸೂರ ಸಂಸ್ಥಾನದ ಪ್ರಜ್ಞೆ... ಸಂಘದವರ ನಾಥಕ ಬಾಧೆಗಳನ್ನು ಕುರಿತು ತನಿಖೆ ನಡೆಸಲು ಒಂದು ಸಮಿತಿಯ ರಚನೆಯಾಗಿ ಜ॥ ಮಹಮದ್ ಇಮಾಂರವರು ಸೂಚನೆ ಕಳುಹಿಸಿರುವರು. ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಷಾಮವಿರುವುದೆಂದು ಘೋಷಿಸಬೇಕೆಂದು ಶ್ರೀ ...ಮಪ್ಪ ನಾಯಕರು ಕೋರಿರುತ್ತಾರೆ. ರೈತರುಗಳಿಂದ ಕಡ್ಡಾಯವಾಗಿ ಧಾನ್ಯ ವಸೂಲು ಮಾಡುವುದನ್ನು ಕೂಡಲೇ ರದ್ದುಗೊಳಿಸುವ ಬಗ್ಗೆ ಬಂದಿರುವ ನಿರ್ಣಯಕ್ಕೆ ಪ್ರಥಮ ಸ್ಥಾನವು ದೊರೆತಿದೆ.

ಕುದುರೆ ಜೂಜು ಸ್ಥಳಗಳ ರಹದಾರಿ ಮಸೂದೆ

ಸರ್ಕಾರದವರು ಮಂಡಿಸಲಿರುವ ಮಸೂದೆಗಳ ಪೈಕಿ ಸಂಸ್ಥಾನದಲ್ಲಿ ಕುದುರೆ ಜೂಜು ಸ್ಥಳಗಳಿಗೆ ರಹದಾರಿ ಪಡೆಯಬೇಕೆಂದೂ, ಈ ಬಗ್ಗೆ ಸೂಕ್ತ ಪಠ್ಟೋಟಿಯನ್ನು ಇಟ್ಟುಕೊಳ್ಳಬೇಕೆಂದೂ ಗೊತ್ತುಪಡಿಸುವ ಮಸೂದೆಯೂ ಒಂದಾಗಿದೆ. ಬೊಂಬಾಯಿಯ ಶಾಸನದ ಆಧಾರದ ಮೇಲೆ ಈ ಮಸೂದೆಯನ್ನು ತರಲಾಗಿದೆ.

ಕಾರಿನಲ್ಲೇ ಶಿಶುವಿನ ಜನನ

ಬೆಂಗಳೂರು ದಂಡಿನ ಚಾರ್ಲ್ಸ್ ಟೌನಿನ ಒಬ್ಬ ಗರ್ಭಿಣಿ ಮಹಿಳೆಯು ಮೊನ್ನೆ ಮೋಟಾರಿನಲ್ಲೇ ಮಗುವನ್ನು ಪ್ರಸವಿಸಿದ ಸುದ್ದಿಯು ವರದಿಯಾಗಿದೆ. ಆ ದಿನ ಮಧ್ಯ ರಾತ್ರಿ ಆಕೆಗೆ ಪ್ರಸವ ವೇದನೆಯುಂಟಾಗಿ ವೈದ್ಯರಿಗೆ ಹೇಳಿ ಕಳುಹಿಸಲು ಅವರು ಬಂದು ಆಕೆಯನ್ನು ತಮ್ಮ ವೈದ್ಯಶಾಲೆಗೆ ಕರೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲೇ ಗಂಡು ಮಗುವು ಜನಿಸಿತೆಂದೂ, ತಾಯಿ ಮಕ್ಕಳಿಬ್ಬರೂ ಸೌಖ್ಯದಿಂದಿರುವರೆಂದೂ ಗೊತ್ತಾಗಿದೆ.

ಕಾಂಗ್ರೆಸ್ ಉಮೇದುವಾರರ ಪಟ್ಟಿ ಕೇಂದ್ರ ಸಮಿತಿಗೆ

ಮೈಸೂರು ೫

ಕಾಂಗ್ರೆಸ್ಸಿನ ಪರವಾಗಿ ಮಹಾ ಚುನಾವಣೆಗಳಲ್ಲಿ ಸ್ಪರ್ಧಿಸಲಿರುವ ಸಂಸ್ಥಾನದ ಉಮೇದುವಾರರ ಹಂಗಾಮಿ ಪಟ್ಟಿಯೊಂದನ್ನು ತಯಾರಿಸಲಾಗಿದೆಯೆಂದೂ, ಆಕ್ಷೇಪಣೆ ...ಯು ನಡೆದ ನಂತರ ಪಟ್ಟಿಯನ್ನು ಕೇಂದ್ರ ಚುನಾವಣಾ ಸಮಿತಿಗೆ ಕಳುಹಿಸಲಾಗುವುದೆಂದೂ ಗೊತ್ತಾಗಿದೆ. ಆರಿಸಲ್ಪಟ್ಟ ಉಮೇದುವಾರರಿಗೆ ಆ ಬಗ್ಗೆ ತಿಳಿವಳಿಕೆ ಕೊಡಲಾಗುವುದು. ಹಲವು ಸ್ಥಾನಗಳಿಗೆ ಕಾಂಗ್ರೆಸ್ಸೇತರರನ್ನೂ ತೆಗೆದುಕೊಳ್ಳುವ ಉದ್ದೇಶದಿಂದ ಅವುಗಳನ್ನು ಖಾಲಿ ಬಿಟ್ಟುಕೊಂಡಿರುವುದಾಗಿ ಹೇಳಲಾಗಿದೆ.

ಆಹಾರ ಸಾಗಾಣಿಕೆ ಪರ್ಮಿಟು ಸಡಿಲವಾಯಿತು

ಮಳೆಯ ಅಭಾವದ ಪ್ರಯುಕ್ತ ಸಂಸ್ಥಾನದ ನಾನಾ ಕಡೆ ಬೆಳೆ ಹಾಳಾಗಿ ಜನತೆ ಕಷ್ಟಕ್ಕೆ ಸಿಕ್ಕುವುದರಿಂದ ಪರಿಹಾರ ಮಾರ್ಗವಾಗಿ ಧಾನ್ಯದ ಸಾಗಾಣಿಕೆ ಪರ್ಮಿಟನ್ನು ಸಡಿಲಿಸಿ ಅಂತರ ಜಿಲ್ಲಾ ಸಾಗಾಣಿಕೆಗೂ ಅವಕಾಶವೀಯಲಾಗಿದೆಯೆಂದು ಸರ್ಕಾರಿ ಪ್ರಕಟಣೆಯೊಂದು ತಿಳಿಸಿರುತ್ತದೆ.

ಬಟ್ಟೆ ವರ್ತಕರ ಮೇಲೆ ಕ್ರಮ

ಪಟ್ಟನಾಪಟ್ಟಣದ ಶ್ರೀ ವೆಂಕಟರಮಣ ಶೆಟ್ಟಿ ಎಂಬುವರು ಪಿರಿಯಾಪಟ್ಟಣದ ಅತ್ತಿಗೋಡು ಸಂತೆಯಲ್ಲಿ ಹೆಚ್ಚು ಬೆಲೆಗೆ ಬಟ್ಟೆಯನ್ನು ಮಾರಿದುದಕ್ಕಾಗಿ ೫೦ ರೂ ಜುಲ್ಮಾನೆಯನ್ನು ವಿಧಿಸಲಾಗಿದೆ. ಅಕ್ರಮವಾಗಿ ಬಟ್ಟೆ ವ್ಯಾಪಾರ ಮಾಡುತ್ತಿದ್ದುದಕ್ಕಾಗಿ ಹುಣಸೂರಿನ ಶ್ರೀ ಹೆಚ್ ಎಸ್ ನಾರಾಯಣ ಶೆಟ್ಟಿ, ಶ್ರೀ ಹೆಚ್ ವಿ ಸಂಜೀವ ಶೆಟ್ಟಿ ಎಂಬುವರ ರಹದಾರಿಗಳನ್ನು ವಜಾ ಮಾಡಲಾಗಿದೆ. ಕೃಷ್ಣರಾಜನಗರದ ನೀಲಕಂಠಯ್ಯನವರ ರಹದಾರಿಯು ೨ ತಿಂಗಳ ಕಾಲ ರದ್ದಾಗಿದೆ.

ಕೃತಕ ವಿಧಾನದಿಂದ ೧೪೩ ಕರುಗಳ ಜನನ

ಕಳೆದ ಆಗಸ್ಟ್ ೧೫ನೆ ತಾ॥ ಗೆ ಮುಗಿದ ಒಂದು ವರ್ಷದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿರುವ ಕೃತಕ ಗರ್ಭಾದಾನ ಕೇಂದ್ರಗಳಲ್ಲಿ ಈ ವಿಧಾನದಿಂದ ೧೪೩ ಕರುಗಳು ಜನಿಸಿದುವೆಂದು ತಿಳಿಸಲಾಗಿದೆ.

ಕಿರಾತಾರ್ಜುನ, ಕೃಷ್ಣಾರ್ಜುನರ ಕಾಳಗದ ಯಕ್ಷಗಾನ ಪ್ರಸಂಗ

ಶ್ರೀ ಕೂಡ್ಲು ಗೋಪಾಲ ಕೃಷ್ಣ ಯಕ್ಷಗಾನ ದಶಾವತಾರ ನಾಟಕ ಕಂಪೆನಿಯವರು ನೆನ್ನೆ ದಿನ ರಾಜಧಾನಿಯ ಕೃಷ್ಣಾ ಸಿನಿಮಾ ಥಿಯೇಟರಿನಲ್ಲಿ ಪೌರಸಭಾಧ್ಯಕ್ಷ, ಶ್ರೀ ಟಿ ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಯಕ್ಷಗಾನ ಪ್ರಸಂಗವನ್ನು ಅಭಿನಯಿಸಿದರು. ಅಧ್ಯಕ್ಷರು ಪ್ರಸಂಗದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಇಂತಹ ಕಲೆಗಳ ಪುನರುದ್ಧಾರವು ಅಗತ್ಯವೆಂದು ಹೇಳಿದರು.

○ ಅಮೆರಿಕದ ರಹಸ್ಯ ಸುದ್ದಿಗಳ ಪೈಕಿ ಶೇಕಡ ೯೫ ರಷ್ಟು ಪತ್ರಿಕೆಗಳ ಮುಖಾಂತರ ಶತ್ರುಗಳಿಗೆ ತಿಳಿಯುತ್ತಿರುವುದಾಗಿ ಅಧ್ಯಕ್ಷ ಟ್ರೂಮನ್ನರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ರಾಜಪ್ರಮುಖರ ನಿವಾಸಕ್ಕೆ ಹೊಸ ಹೆಸರು

ದೆಹಲಿಯ ಸರ್ಕಾರಿ ಭವನವನ್ನು ರಾಷ್ಟ್ರಪತಿ ಭವನವೆಂದು ಕರೆದಂತೆಯೇ, ಸಂಸ್ಥಾನಗಳ ಗವರ್ನರ್ ಮತ್ತು ರಾಜಪ್ರಮುಖರ ಭವನಗಳನ್ನು ರಾಜಭರ್ವ ಎಂದು ಕರೆಯುವ ಬಗ್ಗೆ ಗವರ್ನರ್ ಮತ್ತು ರಾಜಪ್ರಮುಖರುಗಳ ಅಭಿಪ್ರಾಯವನ್ನು ಕೇಂದ್ರ ಸರ್ಕಾರದವರು ಕೇಳಿರುತ್ತಾರೆ

ಬಡವರಿಗಾಗಿ ೫ ಕೋಟಿ ಎಕರೆ ಭೂಮಿ ಸಂಗ್ರಹಣೆ

ಜಮೀನಿಲ್ಲದ ಸಾಗುವಳಿದಾರರಿಗೆ ಭೂಮಿಯನ್ನು ದಾನವಾಗಿ ಕೊಡುವ ಸಲುವಾಗಿ ಜಮೀನು ಸಂಗ್ರಹಣಾ ಕಾರ್ಯದಲ್ಲಿ ನಿರತರಾಗಿರುವ ಆಚಾರ್ಯ ವಿನೋಬಾ ಭಾವೆಯವರು ಹೇಳುವುದನ್ನು ಕೇಳಿದರೆ ರಷ್ಯದಲ್ಲಿ ರಕ್ತ ಕ್ರಾಂತಿಯು ನಡೆಯಿತು ಆದರೆ ಭಾರತದಲ್ಲಿ ಶಾಂತಿಯುತವಾದ ಕ್ರಾಂತಿಯು ನಡೆಯುವುದೆಂದೂ ತಿಳಿಸಿ ಐದು ಕೋಟಿ ಎಕರೆ ಜಮೀನು ಬಡವರಿಗಾಗಿ ದಾನ ಮಾಡಲು ಸಂಗ್ರಹಿಸಲ್ಪಡಬೇಕೆಂದು ಪ್ರಾರ್ಥಿಸಿರುತ್ತಾರೆ

ಚುನಾವಣೆಗಾಗಿ ಕಮ್ಯೂನಿಸ್ಟರ ಬಿಡುಗಡೆ

ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಡುವ ಸಲುವಾಗಿ ಮದ್ರಾಸಿನಲ್ಲಿ ಸ್ಥಾನಬದ್ಧರಾಗಿರುವ ಕಮ್ಯೂನಿಸ್ಟರನ್ನು ೪ ತಿಂಗಳುಗಳ ಪೆರೋಲ್ ಮೇಲೆ ಬಿಡುಗಡೆ ಮಾಡಲು ಯೋಚಿಸುತ್ತಿರುವರು

೧೫೦ ಮೈಲಿ ಉದ್ದದ ಕಾಡ್ಗಿಚ್ಚು

ಆಸ್ಟ್ರೇಲಿಯದ ದಕ್ಷಿಣ ಕ್ವೀನ್ಸ್‌ಲ್ಯಾಂಡಿನಲ್ಲಿ ಕಳೆದ ಮಂಗಳವಾರ ರಾತ್ರಿ ಭಾರಿ ಕಾಡ್ಗಿಚ್ಚು ಸಂಭವಿಸಿ ೧೫೦ ಮೈಲಿ ಉದ್ದದವರೆಗೆ ಪ್ರಸರಿಸಿತೆಂದು ವರದಿಯಾಗಿದೆ

ವಾಣೀ ವಿದ್ಯಾಲಯ

ಕಳೆದ ಸೋಮವಾರ ಮೇಲ್ಕಂಡ ವಿದ್ಯಾಲಯದ ವಾರ್ಷಿಕೋತ್ಸವವು ವಿದ್ವಾನ್ ಕೆ. ಎಸ್ ವರದಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು ವಿದ್ಯಾಲಯದ ಉದ್ದೇಶವು ಕೇವಲ ವಿದ್ಯಾಪ್ರಚಾರವೇ ಅಲ್ಲದೆ ಆಧ್ಯಾತ್ಮಿಕ ತತ್ವ ಬೋಧನೆಯೂ ಆಗಿರುವುದು ಸಂತೋಷಕರವಾದ ವಿಷಯವೆಂದು ಅಧ್ಯಕ್ಷರು ತಿಳಿಸಿದರು ಮಾಸ್ಟರ್ ಸಿ ಕೃಷ್ಣಮೂರ್ತಿಯವರಿಂದ ವೀಣಾ ವಾದನವಾಯಿತು ಬಹುಮಾನ ವಿನಿಯೋಗದ ನಂತರ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ವಾರ್ಷಿಕ ಸಭೆ

ಅಖಿಲ ಮೈಸೂರು ಶಾತ್ತ್ವದ ಶ್ರೀ ವೈಷ್ಣವ ಸಂಘದ ೧೩ ನೇ ವಾರ್ಷಿಕ ಸಭೆ ಮತ್ತು ಉತ್ಸವಗಳನ್ನು ಇದೇ ೭ನೇ ತಾರೀಕು ಮಧ್ಯಾಹ್ನ ೨ ಗಂಟೆಗೆ ಮೈಸೂರು ಕಾಳಮ್ಮನ ಗುಡಿ ಬೀದಿಯಲ್ಲಿರುವ ದೇವಾಂಗ ಸಂಘದ ವಿದ್ಯಾರ್ಥಿ ನಿಲಯದ ಭವನದಲ್ಲಿ ನಡೆಸಲಾಗುವುದು. ಶ್ರೀ ಸಿ ಎಸ್ ಪದ್ಮನಾಭಯ್ಯನವರು ಅಧ್ಯಕ್ಷತೆ ವಹಿಸುವರು

ರೈಲು ದರೋಡೆಕೋರನು ಸ್ವತಃ ಪೊಲೀಸರ ವಶ

ಈಗ್ಯೆ ಒಂದೂವರೆ ವರ್ಷದ ಹಿಳಗೆ ಜಸಿಡೀ ಎಂಬಲ್ಲಿ ನಡೆದ ಪಂಜಾಬ್ ಮೇಲ್ ರೈಲ್ವೆ ದುರಂತದಲ್ಲಿ ೮೧ ಮಂದಿ ಮಡಿದು, ೧೨೦ ಜನರು ಗಾಯಗೊಂಡ ಘಟನೆಯಲ್ಲಿ ಭಾಗವಹಿಸಿದ್ದ ಭುವನ ಮೋಹನ ದಾಸ್ ಎಂಬಾತನು ಮೊನ್ನೆ ಸ್ವತಹ ಪೊಲೀಸರ ವಶವಾಗಿ ಮೇಲ್ಕಂಡ ಘಟನೆಗೆ ತಾನೇ ಕಾರಣನೆಂದೂ ಆಗ ಲೂಟಿಯಾದ ಚಿನ್ನಿವಾಸ್ತಿಗಳ ಪೈಕಿ ತನ್ನಲ್ಲಿ ಸ್ವಲ್ಪ ಭಾಗವು ಇರುವುದಾಗಿಯೂ ತಿಳಿಸಿದನು ಪೊಲೀಸರು ಅವನನ್ನು ವಶಕ್ಕೆ ತಗೆದುಕೊಂಡು ಮುಂದಿನ ತನಿಖೆ ನಡೆಸುತ್ತಿರುವರು.

ಫ್ರೆಂಚ್ ಭಾರತದಲ್ಲಿ ಅಡಿಕೆ ಆಮದಿಗೆ ಪ್ರತಿಬಂಧಕ

ಫ್ರೆಂಚ್ ಭಾರತಕ್ಕೆ ಅಡಿಕೆಯನ್ನು ಆಮದು ಮಾಡ ಕೂಡದೆಂದು ಅಲ್ಲಿನ ಸರ್ಕಾರದವರು ನಿಷೇಧಾಜ್ಞೆಯನ್ನು ಹೊರಡಿಸಿರುವರು

ಭಾರತ ಮತ್ತು ಆಸ್ಟ್ರೇಲಿಯಾಗಳ ವ್ಯಾಪಾರ ಒಪ್ಪಂದ

ಕಳೆದ ಜುಲೈನಿಂದ ಬರುವ ಜೂನ್ ಅಂತ್ಯದವರೆಗಿನ ಭಾರತ-ಆಸ್ಟ್ರೇಲಿಯಾಗಳ ವ್ಯಾಪಾರ ಒಪ್ಪಂದವಾಗಿರುವುದಾಗಿ ಭಾರತ ಸರ್ಕಾರವು ಪ್ರಕಟಿಸಿದೆ ಅದರ ಪ್ರಕಾರ ಆಸ್ಟ್ರೇಲಿಯವು ಭಾರತಕ್ಕೆ ಗೋಧಿ, ಸೀಸ, ಸತು ಮೊದಲಾದ ಪದಾರ್ಥಗಳನ್ನು ಸರಬರಾಜು ಮಾಡಿ, ಹತ್ತಿ, ನೂಲು, ಒಪ್ಪೆ, ಸಣಬು ಮೊದಲಾದುವನ್ನು ಪಡೆಯಲಿದೆ

ಗಾಂಧೀ ಜಯಂತಿ

ಮೈಸೂರು ಅನಾಥಾಲಯದ ಸಾಹಿತ್ಯ ಸಂಘದಲ್ಲಿ ಕಳೆದ ಮಂಗಳವಾರ ಆಲಯದ ವಾರ್ಡನ್ ಶ್ರೀ ಕೆ ಎನ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಗಾಂಧೀ ಜಯಂತಿಯನ್ನು ನೆರವೇರಿಸಲಾಯಿತು ಪ್ರಾರ್ಥನೆ ಸ್ವಾಗತ ಭಾಷಣಗಳಾದ ನಂತರ, ಶ್ರೀಗಳಾದ ಎ ವಿ ವೆಂಕಟಸುಬ್ಬಯ್ಯ, ಹಿ ಎಸ್ ವೆಂಕಟಸುಬ್ಬಯ್ಯ, ಸಿ ಕೆ ಬಿಂದೂರಾವ್ ಇವರುಗಳು ಭಾಷಣ ಮಾಡಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ನ್ಯೂಯಾರ್ಕಿಗೆ ಪರ್ಷಿಯದ ಪ್ರಧಾನಿಯ ಪ್ರಯಾಣ

ಅಬಡಾನಿನಿಂದ ಎಲ್ಲ ಬ್ರಿಟಿಷ್ ಎಣ್ಣೆ ಪ್ರವೀಣರೂ ನೆನ್ನೆ ಮಾರಿಷಸ್ ಎಂಬ ಬ್ರಿಟಿಷ್ ನೌಕೆಯಲ್ಲಿ ಬಾಸ್ರಾವಿಗೆ ತೆರಳಿದರೆಂದು ವರದಿಯಾಗಿದೆ ವಿಶ್ವ ಸಂಸ್ಥೆಯಲ್ಲಿ ಚರ್ಚಿಸಲ್ಪಡುವ ಇರಾನ್ ಎಣ್ಣೆಗಣಿ ವ್ಯವಹಾರದಲ್ಲಿ ಪರ್ಷಿಯದ ಪರ ವಿವರಣೆಯನ್ನೀಯಲು ಪ್ರಧಾನಿ ಡಾ|| ಮುಸ್ಸಾದಿಕ್ಕರು ಬರುವ ಭಾನುವಾರ ನ್ಯೂಯಾರ್ಕಿಗೆ ತೆರಳುವರೆಂದು ಗೊತ್ತಾಗಿದೆ

ದಸರಾ ಚಿತ್ರ ಕಲಾ ಪ್ರದರ್ಶನ

ಈ ಸಾರಿಯ ಚಿತ್ರ ಕಲಾ ಪ್ರದರ್ಶನವು ಜರುಗುವ ಚಿಹ್ನೆಗಳು ತೋರದೆ ಕಂಡು ಬಂದಿರಲಿಲ್ಲ ನಿಸ್ತು ಪ್ರದರ್ಶನದ ಚಿತ್ರ ಕಲಾ ಉಪ ಸಮಿತಿಯು ಪ್ರದರ್ಶನಕ್ಕೆ ೩ ತಿಂಗಳು ಮುಂಚೆ ರಚಿತವಾಗಬೇಕಾಗಿದ್ದಿತು ಅಲ್ಲದೆ ಸಮಿತಿಯಲ್ಲಿ ನುರಿತ ಕಲಾವಿದರು ಇರಬೇಕಾದುದು ಸ್ವಾಭಾವಿಕ ಮೇಲ್ಕಂಡ ಎರಡು ತತ್ವಗಳೂ ಈ ಸಲ ಅನುಸರಿಸಲ್ಪಡಲಿಲ್ಲವೆಂದು ಗೊತ್ತಾಗುತ್ತದೆ ಶ್ರೀಗಳಾದ ರುದ್ರಾಣಿ ಚನ್ನಬಸಪ್ಪ, ಹೆಚ್ ಎಸ್ ಇನಾಂತಿ, ಮತ್ತು ಎಂ ವೀರಪ್ಪನವರು ಇವರ ವಿಶೇಷ ಪ್ರಯತ್ನ ಮತ್ತು ಈ ವಿಭಾಗದ ಉಪ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ ಗುರುದತ್‌ರವರ ಪೂರ್ಣ ನೆರವಿನಿಂದ ಕಲಾ ಪ್ರದರ್ಶನವು ಈ ಸಾರಿ ವಿಫಲವಾಗಲು ಅವಕಾಶವಾಯಿತೆಂದು ಗೊತ್ತಾಗಿದೆ ಇದರ ಬಗ್ಗೆ ನಿಖರವಾದ ವಿಷಯಗಳನ್ನು ಸಂಬಂಧಪಟ್ಟವರು ಹೇಳಿಕೆ ಮೂಲಕ ತಿಳಿಸಬೇಕಾದುದು ಉಚಿತ

—ಕಲಾಭಿಮಾನಿ

○ ಮದ್ರಾಸಿಗೆ ಆಗಮಿಸಿರುವ ಸಾಂಕೇಲ್ಡ್ ಹಡಗು ಮೈಸೂರು ಸಂಸ್ಥಾನಕ್ಕಾಗಿ ೩ ಸಾವಿರ ಟನ್ ಚೀನಾ ಮಿಲೋವನ್ನು ತಂದಿರುವುದು

ಆದರ್ಶ ಕನ್ನಡ ನಾಟಕ ಸಂಘ, ಮೈಸೂರು.

5-10-51 ನೇ ಶುಕ್ರವಾರದಿಂದ ಪ್ರತಿ ದಿನ ರಾತ್ರಿ 10 ಘಂಟೆಗೆ

ದಾನ ಶೂರ ಕರ್ಣ

ಎಂಬ ನಾಟಕವನ್ನು

ಟೌನ್‌ಹಾಲಿನಲ್ಲಿ ಅಭಿನಯಿಸುವರು

ಗಾನ ಕಲಾ ವಿಶಾರದ ಕೊಟ್ಟೂರಪ್ಪನವರು ಕರ್ಣನ ಪಾತ್ರವನ್ನು ವಹಿಸುವರು

ಮೈಸೂರು ಸರ್ಕಾರದ ಆಡಳಿತದ ವರದಿ

ಕಳೆದ ವರ್ಷ ಮಾರ್ಚಿ ಖಿಗಿಳ್ಳ ರಾಧರ ತಿಂಗಳಿನ ಆಡಳಿತ ವರದಿಯನ್ನು ಮೈಸೂರು ಸರ್ಕಾರದವರು ಪುಸ್ತಕ ರೂಪದಲ್ಲಿ ಪ್ರಕಟಿಸಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಿರುವರು ಅದರಲ್ಲಿ ಸರ್ಕಾರದ ನಾನಾ ಇಲಾಖೆ ಕಾರ್ಯಗಳನ್ನು ವಿವರಿಸಲಾಗಿ ಸರ್ವತೋಮುಖ ಪ್ರಗತಿಯನ್ನು ಸಂಕ್ಷೇಪವಾಗಿ ಅದು ತಿಳಿಸಿರುವುದು ನ್ಯೂ, ಸೂರಾಟ ತೆರಿಗೆ, ಹಣದ ರ, ಆಹಾರದ ಉತ್ಪತ್ತಿ ಇವುಗಳ ವಿಮರ್ಶೆಗಳು ಇವೆ.

ಎ. ಎನ್. ಸುಬ್ಬರಾಯರ ಉಪನ್ಯಾಸ

ನಂಜನಗೂಡಿನ ಭಾರತೀ ಮಂದಿರದಲ್ಲಿ ಬೆಂಗಳೂರು ಕಲಾ ಮಂದಿರದ ಎ. ಎನ್ ಸುಬ್ಬರಾಯರು ಭಾರತದ ಚಿತ್ರ ಕಲೆಯ ಸಂಬಂಧವಾಗಿ ೨೯ನೇ ತಾ|| ಉಪನ್ಯಾಸ ಮಾಡಿ ಮಂದಿರದ ಸದಸ್ಯರಾದ ಶ್ರೀ ಎನ್ ಲಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸಿದ್ದರು. ಭಾಷಣಕಾರರು ಭಾರತೀಯ ಕಲೆಗಳಿಗೆ ಅವನತಿ ಬಂದಿರುವ ಈ ಸಮಯದಲ್ಲಿ ಭಾರತೀ ಮಂದಿರದಂತಹ ಸಂಸ್ಥೆಗಳ ಮಹತ್ವವನ್ನು ವಿವರಿಸಿ ಪ್ರಾಚೀನ ಕಲೆಗಳಿಗೆ ಆಧಾರ ಸ್ತಂಭವಾದ ಈ ದೇಶದಲ್ಲಿ ಈಗ ಕಲೆಯು ಹೀನದಶೆಗೆ ಬಂದಿರುವುದಕ್ಕಾಗಿ ಅವರು ವ್ಯಸನಪಟ್ಟರು

ನಗರಾಭಿವೃದ್ಧಿ ಸಮಿತಿ ಮೈಸೂರು

ಪ್ರಕಟಣೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ಮೈಸೂರು ಸಿಟಿ ಲಷ್ಕರ್ ಮೊಹಲ್ಲಾ ಜಲಪುರಿಯಲ್ಲಿ ಪೆಂಚಿನ ಕಾರ್ಖಾನೆ ಪೂರ್ವ ದಿಕ್ಕಿನಲ್ಲಿ ಕಟ್ಟಿರುವ 24 ಪರಿವಾರದ ಮನೆಗಳು ಮತ್ತು ಮುಂಡಿ ಮೊಹಲ್ಲಾ ಕಲಾಸ್ ಗೇರಿಯಲ್ಲಿ ಕಟ್ಟಿರುವ 8 ಪರಿವಾರದ ಮನೆಗಳ ವಿಲೆ ಬಗ್ಗೆ ಮೈಸೂರಿನಲ್ಲಿ ಮನೆ ಅಥವಾ ಸೈಟುಗಳಿಲ್ಲದ ವರ್ಗದವರಿಂದ (Depressed cl... ಅರ್ಜಿಗಳನ್ನು ತಾರೀಖು 6-10-51 ರಿಂದ 20-10-51 ರವರೆಗೆ ಸ್ವೀಕರಿಸಲಾಗುತ್ತೆ ಪ್ರತಿ ಮನೆ 2100-0-0 ರೂಪಾಯಿಗಳು ಆಫೀಸಿನಲ್ಲಿ ದೊರೆಯುವ ಅರ್ಜಿ ನಮೂನೆಯಲ್ಲಿ 100/- ರೂಪಾಯಿ ಠೇವಣಿ ಪಾವತಿ ಮಾಡಿ ಅರ್ಜಿ ಹಾಕಿಕೊಳ್ಳಬೇಕು ಮನೆ ಕೊಟ್ಟ ಬಗ್ಗೆ ಆರ್ಡರ್ ಕೊಟ್ಟ ನಂತರ 1 ತಿಂಗಳಲ್ಲಿ ಠೇವಣಿ ಕಳೆದು ಬಾಕಿ ಉಳಿಕೆ ಪೂರಾ ಹಣವನ್ನು ಪಾವತಿ ಮಾಡಿ ಮನೆ ಸ್ವಾಧೀನಪಡಿಸಿಕೊಳ್ಳತಕ್ಕದ್ದು ತಪ್ಪಿದಲ್ಲಿ ಠೇವಣಿ ಹಣವು ಮುಟ್ಟುಗೋಲು ಹಾಕಲಾಗುತ್ತೆ ಮನೆ ಸಿಕ್ಕದಿದ್ದವರ ಠೇವಣಿ ಹಣವನ್ನು ವಾಪಸು ಮಾಡಲಾಗುತ್ತೆ

(ರುಜು) ಹಿ. ಗೋಪಾಲಕೃಷ್ಣ ಶೆಟ್ಟಿ
ಅಧ್ಯಕ್ಷರು

ಗೌಟ್ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ

ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶ್ರೀ ಬಿ ಎ

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಮೈಸೂರು, ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ ಶ್ರೀ & ಬ್ರದರ್ಸ್,

ಜವಳಿ ಅಂಗಡಿ

ಬೊಂಬಾಯಿ ಆನಂದ ಭವನ ಹೋಟೆಲು ಪಕ್ಕ, ಮೈಸೂರು

Edited, printed and published by A R. Nagarajan, at Sadhvi Press. D Subbiah Road, Mysore

ರೀ೯ ನಂ 792 (ಶಂಡೇ ಮಾತರಂ) ಪ್ರತಿದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೬-೧೦-೫೧ [ಸಂಚಿಕೆ ೬೩

ವಿಶ್ವಸಂಸ್ಥೆ ಹುದ್ದೆಗೆ ಮಿರ್ಜಾರ ರಾಜೀನಾಮೆ

ದಿ|| ಬ|| ಕೆ. ರಾಮಸ್ವಾಮಿಯವರ ನಿಧನ

ಮೈಸೂರು ೬

ಬೊಂಬಾಯಿ ಕಾರ್ಪೊರೇಷನ್ನಿನ ನಿವೃತ್ತ ಇಂಜನಿಯರೂ ಮತ್ತು ಮೈಸೂರು ಸಂಸ್ಥಾನದ ಹಲವಾರು ಸಂಸ್ಥೆಗಳ ಡೈರೆಕ್ಟರರೂ ಆದ ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿಯವರು ನೆನ್ನೆ ರಾತ್ರಿ ... ತಮ್ಮ ೬೫ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ ಅವರು ಬಹಳ ದಿನ ...ದಲೂ ಹಾಸಿಗೆ ಹಿಡಿದಿದ್ದರು ದಿವಂಗತರು ಬೊಂಬಾಯಿಯಲ್ಲಿ ಅನೇಕ ವರ್ಷಗಳಿದ್ದು ಅಲ್ಲಿನ ಮೈಸೂರು ಸಂಘದ ಅಧ್ಯಕ್ಷರಾಗಿದ್ದರು. ನಿವೃತ್ತರಾದ ನಂತರ ಅವರು ರಾಜಧಾನಿಗೆ ಬಂದು ಇಲ್ಲಿ ... ತಮ್ಮ ಸ್ವಂತ ನಿವಾಸದಲ್ಲಿ ನೆಲೆಸಿ ... ಮೈಸೂರು ಸಕ್ಕರೆ ಕಂಪೆನಿ, ಕೃಷ್ಣರಾಜೇಂದ್ರ ಗಿರಣಿ ಮುಂತಾದ ನಾ... ಸಂಸ್ಥೆಗಳಲ್ಲಿ ಅವರು ಡೈರೆಕ್ಟರರಾಗಿ ... ಅವರ ಸ್ವಂತ ಸ್ಥಳವಾದ ಹೊ... ನರಸೀಪುರದಲ್ಲಿ ಒಂದು ಆಸ್ಪತ್ರೆಯ... ಕಟ್ಟಿಸಿರುತ್ತಾರೆ. ಅವರು ವಾತ್ಸ... ...ಗಿದ್ದರು.

...ಯವತರ ನಿಧನದ ವಾರ್ತೆಯನ್ನು ... ಸಂತಾಪವನ್ನು ಸೂಚಿಸಲು ... ...ಸಕ್ಕೆ ಈ ದಿನ ಮಂತ್ರಿಗಳೆಲ್ಲರೂ ... ಸ್ವರು ಕೃಷ್ಣರಾಜೇಂದ್ರ ಗಿರಣಿ ... ಅಧ್ಯಕ್ಷರಾದ ಶ್ರೀ ಹೆಚ್ ಸಂಜೀ... ...ನವರೂ, ಅರಮನೆ ಇಲಾಖೆಯ ... ಡಿ ರಾಮಯ್ಯನವರೂ ಅಲ್ಲಿಗೆ ...ಗಿದ್ದರು

... ಮಧ್ಯಾಹ್ನ ಅವರ ಅಂತ್ಯ ಸಂ... ...ವು ನೆರವೇರಿತು ಶ್ರೀಯುತರ ... ...ಮು ಕೆಲವು ತಿಂಗಳ ಹಿಂದೆ ಕಾಲ... ...ದ್ದರು ದಿವಂಗತರ ಆತ್ಮಕ್ಕೆ ಶಾಂ... ...ನ್ನು ಕರುಣಿಸಲೆಂದೂ, ಅವರ ಬಂ... ...ಗದವರಿಗೆ ಉಂಟಾಗಿರುವ ಶೋ... ...ತಡೆಯಲು ಶಕ್ತಿ ಯುಂಟಾಗ... ...ನಾವು ಭಗವಂತನನ್ನು ಪ್ರಾರ್ಥಿ... ...ವೆ

ಕಾಂಗ್ರೆಸ್ಸಿಗೆ ಬಿ. ಎಲ್. ಗುಪ್ತರ ರಾಜೀನಾಮೆ

...ಸೂರು ಶಾಸನ ಸಭೆಯ ಕಾಂಗ್ರೆ... ...ದ ಉಪನಾಯಕರೂ ಪ್ರಜಾ... ...ಭೆಯ ಮಾಜಿ ಸದಸ್ಯರೂ ಆ... ಬಿ ಎಲ್ ಗುಪ್ತರವರು ಕಾಂಗ್ರೆ... ಸದಸ್ಯತನಕ್ಕೆ ರಾಜೀನಾಮೆಯ... ...ಸಲ್ಲಿಸಿರುವುದಾಗಿ ತಿಳಿದುಬಂದಿದೆ

...ಪ್ರೆಸ್ ಉಮೇದುವಾರರ ಪಟ್ಟಿ ಪ್ರಕಟಣೆ

ಮೈಸೂರು ಪ್ರದೇಶ ಕಾಂಗ್ರೆಸ್ ಚು... ...ಣಾ ಸಮಿತಿಯವರು ತಮ್ಮ ಪ್ರಾ... ...ಶಿಫಾರಸುಗಳನ್ನು ಬರುವ ... ...ಕಟಿಸುವುದಾಗಿಯೂ, ಆ ಪಿ... ...ದನಾ ಆಕ್ಷೇಪಣೆ ಮಾಡುವ ಅರ್ಜಿ... ...ಪ್ರಕಟಣೆಯಾದ ಒಂದು ವಾರ... ಕೇಂದ್ರ ಸಮಿತಿಗೆ ಬರೆದು... ...ಹುದೆಂದೂ ಪ್ರಧಾನ ಕಾರ್ಯದ... ...ಶ್ರೀ ಎ ಜಿ ರಾಮಚಂದ್ರರಾಯ... ಪ್ರಕಟಣೆ ಹೊರಡಿಸಿರುತ್ತಾರೆ

...ದ್ದಿ ನಿಂದ ೧೮ ನೇ ತಾ|| ಪ್ರೂ... ...ಸರಾಕ್ಯಾಗಿ ನಗರದ ನ್ಯಾಯಾಲ... ...ರಜಾ ಕೊಡಲಾಗಿದೆ

ವಿಶ್ವ ಸಂಸ್ಥೆ ಹುದ್ದೆಗೆ ಮಿರ್ಜಾರವರ ರಾಜೀನಾಮೆ

ವಿಶ್ವ ಸಂಸ್ಥೆಯ ಪರವಾಗಿ ಇಂಡೋನೇಷ್ಯದಲ್ಲಿ ಪ್ರತಿನಿಧಿಯಾಗಿರುವ ಸರ್ ಮಿರ್ಜಾ ಇಸ್ಮಾಯಿಲರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸುವುದಾಗಿಯೂ ಮುಂದಿನ ತಿಂಗಳು ಭಾರತಕ್ಕೆ ವಾಪಸು ಬರುವುದಾಗಿಯೂ ತಿಳಿದು ಬಂದಿದೆ ವಿಶ್ವ ಸಂಸ್ಥೆಯ ಮತ್ತೊಬ್ಬ ಅಧಿಕಾರಿ, ಕೆನಡಾದ ಡಾ ಕೀಲೆ... ...ರವರ ಗೌರವಾರ್ಥವಾಗಿ ಮಿ... ...ವರು ಏರ್ಪಡಿಸಿದ್ದ ಸತ್ಕಾರದಲ್ಲಿ, ಮು... ...ಖ್ಯ ಅತಿಥಿಗಳು, ಜರ್ಮನಿಯ ಹಿಟ್ಲರ್ ಕಾಲದ ಹಣಕಾಸಿನ ಮಂತ್ರಿ ಡಾ|| ... ...ರವರಿಗೆ ಹಸ್ತಲಾಘವವನ್ನೀಯಲು ನಿರಾಕರಿಸಿ ಅವರನ್ನು 'ತಮ್ಮ ಹೀನ ... ...ಣ್ಣ ಬದಲಾವಣೆ ಮಾಡುವವ' ನೆಂದ ... ನಿಂದಿಸಿದುದಕ್ಕಾಗಿ ಮಿರ್ಜಾರವರು ಮನ ನೊಂದು ರಾಜೀನಾಮೆಯನ್ನು ಸಲ್ಲಿಸಲು ನಿರ್ಧರಿಸಿರುತ್ತಾರೆ

ಲಂಡನ್ನಿನಲ್ಲಿ ಗಾಂಧಿ ಸ್ಮಾರಕ ವಿಶ್ವ ವಿದ್ಯಾಲಯ

ಜಗತ್ತಿನ ಶಾಂತಿ ಸ್ಥಾಪನೆಗಾಗಿ ಗಾಂಧೀಜಿಯವರ ಚಿರ ಸ್ಮಾರಕವೊಂದು ಲಂಡನ್ನಿನಲ್ಲಿ ಆಗಬೇಕೆಂದೂ, ಅದಕ್ಕಾಗಿ ಶಾಂತಿ ವಿಶ್ವ ವಿದ್ಯಾಲಯವೊಂದನ್ನು ಸ್ಥಾಪಿಸಲಾಗುವುದೆಂದೂ ೩ನೇ ತಾ|| ಅಲ್ಲಿ ನಡೆದ ಗಾಂಧೀ ಜಯಂತಿ ಸಮಾರಂಭದಲ್ಲಿ ಭಾರತದ ಹೈ ಕಮಿಷನರ್ ವಿ ಕೆ ಕೃಷ್ಣ ಮೆನನ್‌ರವರು ತಿಳಿಸಿರುತ್ತಾರೆ

ಚೆಂಡು ತಗುಲಿ ವಿಮಾನ ಕೆಳಗೆ ಇಳಿಯಬೇಕಾಯಿತು

ಸಿ. ಎಸ್. ಆರ್ ಮುಂತಾದವರು ಪಾತ್ರವಹಿಸಿರುವ ತಮಿಳ...

12-10-51 ರಿಂದ :: ಅಮೋಘ ಪ್ರಾರಂಭ
ಗಣೇಶಾ ಮತ್ತು ಚಾಮುಂಡೇಶ್ವರಿ
ಟಾಕೀಸುಗಳಲ್ಲಿ
ಶುಭ ಸಂಪತ್ ಚಿತ್ರ ಪರ್‌ರವರ ಪೌರಾಣಿಕ ಕನ್ನಡ ಚಿತ್ರ - ತಿಲೋತ್ತಮೆ -
ಪ್ರತಿ ದಿನ 3 ಆಟಗಳು
ಪಾತ್ರ - ಜಯಶ್ರೀ ಎಸ್ ಎ ದೇವಿ, ರಂಭಾಬಾಯಿ, ಸುಬ್ಬಯ್ಯ, ಜಿ ಆರ್ ಸ್ಯಾಂಡೊ ಕಲಾ ವಿಶಾರದ ಕೊಟ್ಟೂರಪ್ಪ, ಎಂ ಎಸ್ ಪಂಡಿತ್

ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸು

ಮೈಸೂರು, ತಾರೀಖು 1-10-1951

ನೋಟೀಸ್ ಕೇರ್ಷ

ಮೈಸೂರು ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಗೆ ಜನವರಿ ೧ ರಿಂದ ಬರಾಯ್ತು 31ನೇ ಡಿಸೆಂಬರ್ ಪೂರ್ತಾ ಆಗುವ ವರ್ಷಕ್ಕೆ ಬೇಕಾಗುವ ಈ ಕೆಳಗೆ ನಮೂದಿಸಿರತಕ್ಕ ಐಟಂಗಳ ಸರಬರಾಜಿಗೆ ಮೈಸೂರು ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸಿನಲ್ಲಿ ನವೆಂಬರು ಮಾಹೆ 6ನೇ ತಾರೀಖು ಮಂಗಳವಾರ ಕೆಳಕಂಡ ಕಾಲಗಳಲ್ಲಿ ಮೊಹರಾದ ಫುಲಸ್ಕೇಪು ಸೈಜಿನ ನಾಲ್ಕು ಪ್ರತಿಗಳಲ್ಲಿ ಟೆಂಡರುಗಳನ್ನು ತೆಗೆದುಕೊಳ್ಳುತ್ತಾರೆ

1	ರೊಟ್ಟಿ	ಬಿಸಿ	9 30
2	ಪ್ಯಾಶ್ಚುರೈಸ್ಡ್ ಹಾಲು	ಬಿಸಿ	10 30
3	ಆಹಾರ ಸಾಗ್ರಿ ವಸ್ತೈತಿ	ಬಿಸಿ	11 30

ಹೆಚ್ಚಿನ ವಿವರಗಳನ್ನು ಮೈಸೂರು ಸ್ಯಾನಿಟೋರಿಯಂ ಸೆಕ್ರೆಟರಿ ಆಫೀಸಿನಲ್ಲಿ ಪಡೆಯಬಹುದು

(ರುಜು) ಎಚ್. ಕೃಷ್ಣಮೂರ್ತಿ,
ಸೆಕ್ರೆಟರಿ,
ಪಿ ಕೆ ಸ್ಯಾನಿಟೋರಿಯಂ ಆಫೀಸು

CITY MUNICIPAL OFFICE
Mysore, Dated 5-10-1951

NOTIFICATION

Notice is hereby given to the inhabitants of the Municipality of Mysore that the Municipal Council desire to amend the bye-law relating to grading of Hen eggs framed under section 51 (1) (A) of the Mysore City Municipalities Act 1933 so as to make it applicable to Duck eggs also by deleting the word "Hen" in title of the Bye law now sanctioned in G O No L 1882-4 Ml 67 46 3 dated 2 8 1947 as amended in Government order No L 13652 4/Ml 87 46 19 dated 23-5-1949

Any inhabitant of the Municipality objecting to the proposed amendment may within one month from the date of this Notification send his objections in writing to the Municipal Council

(Sd) M S. SWAMINATHAN,
Municipal Commissioner

Edited, Printed and Published by A R Nagarajan, at Sadhvi Press D Subbiah Road, Mysore

ಫೋನ್ ನಂ 792 ।ಸಂಪಾದಕರು। ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೧೩-೧೦-೫೧ [ಸಂಚಿಕೆ ೬೬

ಬ್ರಿಟನ್ ಮೇಲೆ ಯುದ್ಧ ಸಾರಲು ಈಜಿಪ್ಟಿಗೆ ಕರೆ

ಮದ್ರಾಸಿನಲ್ಲಿ ಕೃತಕ ಮಳೆಯ ಪ್ರಯೋಗ

...ರುವ ೧೫ ನೇ ತಾ॥ ನೊಳಗೆ ಮ...ದ್ರಾಸು ಪ್ರಾಂತದಲ್ಲಿ ಮಳೆಯಾಗದಿದ್ದರೆ ...ಕೆರೆಗಳೆಲ್ಲವೂ ಒಣಗಿಹೋಗಿ, ಮುಂದಿ...ನ ಅತ್ಯಂತ ಕಠಿಣ ಆಹಾರ ಪರಿಸ್ಥಿ...ತಿಯನ್ನು ಅಲ್ಲಿನ ಜನರು ಎದುರಿಸಬೇ...ಕಾಗುವುದೆಂದು ತಿಳಿದುಬಂದಿದೆ. ಆದ...ದರಿಂದ ಕೃತಕ ವಿಧಾನದಿಂದ ಮಳೆ ಕರೆ...ಯಲು ಈಗ ಪ್ರಯತ್ನಗಳಾಗುತ್ತಿವೆ. ವಾ...ತಾವರಣ ಕಂಡುಹಿಡಿಯುವ ಅಧಿಕಾರಿ...ಗಳ ...ಳಿಕೆಯ ಪ್ರಕಾರ ಹಲವು ವಿಧ...ದ ...ಮೋಡಗಳು ಇದ್ದರೆ ಮಾತ್ರ, ಮ...ಳೆ ...ರಿಸುವುದು ಸಾಧ್ಯವೆಂದು ಗೊತ್ತಾ...ಗಿದೆ

ಪೆಟ್ರೋಲ್ ಗಡಂಗ್ ಬೆಂಕಿಯಿಂದ ೧೯ ಜನರ ಮರಣ

...ಕಲ್ಕತ್ತದ ಒಂದು ಮನೆಯಲ್ಲಿ ಕಳೆದ ...ತಾ॥ ಕಳ್ಳ ಪೆಟ್ರೋಲ್ ಗಡಂ...ಗಿಗೆ ಬೆಂಕಿ ಬಿದ್ದುದರಿಂದ ಮಹಡಿ ಮೇ...ಲಿದ್ದ ೧೯ ಜನರೂ, ೩೦ ದಿ...ನಗಳ ಒಂದು ಶಿಶುವೂ ಸತ್ತಿರುವರು. ಈ ...ಸಂಬಂಧವಾಗಿ ಇಬ್ಬರನ್ನು ಪೊಲೀಸರು ...ಬಂಧನ ಮಾಡಿರುತ್ತಾರೆ. ಪೆಟ್ರೋಲ...ನ್ನು ಡಬ್ಬಿಯಿಂದ ಮತ್ತೊಂದ...ಕ್ಕೆ ಸುರಿಯುತ್ತಿದ್ದಾಗ ಬೆಂಕಿ ತಗುಲಿತೆಂದು ಹೇಳಲಾಗಿದೆ

ವರ್ಷಗಳಲ್ಲಿ ಜಲಜನಕ ಬಾಂಬು ತಯಾರಿಕೆ

...ಜಪಾನಿನ ಹಿರೋಷಿಮಾ ಮತ್ತು ನಾ...ಗಸಾಕಿ ನಗರಗಳ ಮೇಲೆ ೬ ವರ್ಷಗಳ ...ಹಿಂದೆ ಹಾಕಲಾದ ಅಣು ಬಾಂಬುಗಳಿಗೆ ...ಸಾವಿರಪಟ್ಟು ಪ್ರಬಲವಾದಂತಹ ...ಜಲಜನಕ ಬಾಂಬನ್ನು ೫ ...ವರ್ಷಗಳಲ್ಲಿ ಅಮೆರಿಕವು ತ...ಯಾರಿಸುವುದೆಂದು ಪರಮಾಣು ವಿಜ್ಞಾ...ನಿ ...ಪ್ರಖ್ಯಾತರಾದ ವಿಲಿಯಂ ಲಾರೆನ್ಸ್ ...ರವರು ತಿಳಿಸಿರುತ್ತಾರೆ

ಪಾರ್ಲಿಮೆಂಟು ಕ್ಷೇತ್ರಗಳ ಚುನಾವಣಾಧಿಕಾರಿಗಳು

ಭಾರತದ ಪಾರ್ಲಿಮೆಂಟಿಗೆ ಮೈಸೂ...ರಿನಿಂದ ಆರಿಸಲಾಗುವ ೧೧ ...ಸಭ್ಯರ ಆಯ್ಕೆಯ ಸಂಬಂಧವಾಗಿ ...ಕೋಲಾರ, ತುಮಕೂರು, ಮಂಡ್ಯ, ...ಹಾಸನ, ಶಿವಮೊಗ್ಗ ಮತ್ತು ಚಿತ್ರದು...ರ್ಗ ಜಿಲ್ಲೆಗಳಲ್ಲಿ ಆಯಾ ಜಿಲ್ಲಾಧಿಕಾರಿ...ಗಳನ್ನು, ಬೆಂಗಳೂರು ಉತ್ತರದಭಾಗ...ಕ್ಕೆ ಪೌರ ಸಭಾ ಕಮಿಷನರ್, ...ಭಾಗಕ್ಕೆ ಜಿಲ್ಲಾಧಿಕಾರಿಗಳು ಮ...ತ್ತು ಹಾಸನ ಚಿಕ್ಕಮಗಳೂರು ಕ್ಷೇತ್ರಕ್ಕೆ ...ಹಾಸನ ಜಿಲ್ಲಾಧಿಕಾರಿಗಳನ್ನೂ ಚುನಾ...ವಣಾ ಕಮಿಷನರುಗಳನ್ನಾಗಿ ನೇಮಿ...ಸಲಾಗಿದೆ

ವಿವಾಹ ಮಹೋತ್ಸವ

ಹಾಸನ ಜಿಲ್ಲೆ ಪೊನ್ನಾತಪುರದ ಶ್ಯಾ...ನುಭೋಗರಾದ ಶ್ರೀ ಬಿ ಎಸ್ ಸುಬ್ರ...ಹ್ಮಣ್ಯಯ್ಯನವರ ಕುಮಾರಿ ಚಿ॥ ಸೌ॥ ...ಸಾವಿತ್ರಮ್ಮನನ್ನು ತುರುವೇಕೆರೆ ತಾ...ಲ್ಲೂಕು ...ಗಿಗೆ ಗ್ರಾಮದ ಶ್ರೀ ಎಸ್ ...ವೆಂಕಟರಮಣಯ್ಯನವರ ಮಗ ಚಿ॥ ರಾ॥ ...ರಂಗಸ್ವಾಮಿಯವರಿಗೆ ಕೊಟ್ಟು ನೆನ್ನೆ ...ಪೊನ್ನಾತಪುರದಲ್ಲಿ ವಿವಾಹ ಮಹೋ...ತ್ಸವವು ಜರುಗಿತು

ಮಹಾಚುನಾವಣೆ ಸಂಬಂಧವಾಗಿ ಸರ್ಕಾರದ ಏರ್ಪಾಡು

ಶಾಸನ ಸಭೆಯಲ್ಲಿ ನ್ಯಾಯಾಂಗ ಸಚಿವ ಭಾಷ್ಯಂರವರ ಹೇಳಿಕೆ

ಮೈಸೂರು ೧೩

ಇಂದು ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಸಂಸ್ಥಾನದ ಕೆಲವು ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೌಲಭ್ಯವಿಲ್ಲದಿರುವುದರ ಬಗ್ಗೆ ಸರ್ಕಾರದವರು ಕೈಗೊಂಡಿರುವ ... ಕ್ರಮ...ವನ್ನು ವಿವರಿಸುತ್ತಾ ... ಸಚಿವ ಶ್ರೀ ... ಯ್ಯನವರು ವಿವರಿಸುತ್ತಾ ಅನೇಕ ... ಗಳಲ್ಲಿ ಒಬ್ಬ ವೈದ್ಯ... ಎರಡು ... ಆಸ್ಪತ್ರೆಗಳನ್ನು ನೋಡಿಕೊಳ್ಳಲು ಏರ್ಪಾಡು ಮಾಡಲಾಗಿದೆಯೆಂದ... ಮಲೆನಾಡು ಜಿಲ್ಲೆಗಳಲ್ಲಿರುವ ... ಆಸ್ಪತ್ರೆ ವ್ಯವಸ್ಥೆಯನ್ನು ... ಜಿಲ್ಲೆಗಳಲ್ಲಿ ಜಾರಿಗೆ ತರಲು ಸರ್ಕಾರ... ಆಲೋಚಿಸುತ್ತಿರುವರೆಂದೂ ತಿಳಿಸಿದರು

ಕಳೆದ ಭಾನುವಾರ ಬೆಂಗಳೂರು ... ರಸ್ತೆಯಲ್ಲಿ ನಡೆದ ವಿದ್ಯುಚ್ಛಕ್ತಿ ... ವಂತದ ಬಗ್ಗೆ ಬಂದ ಅಲ್ಪ ಕಾಲಾವಧಿ ಪ್ರಶ್ನೆಯೊಂದಕ್ಕೆ ಶ್ರೀ ಕೆ ಟಿ ಭಾಷ್ಯಂರವರ ಉತ್ತರವಿತ್ತು ... ಇಂತಹ ಅನಾಹುತಗಳಾಗದಂತೆ ನೋಡಿಕೊಳ್ಳಲಾಗುವುದೆಂದೂ ಬೆಂಗಳೂರಿನಲ್ಲಿ ಭೂಮಿಯೊಳಗೇ ವೈರುಗಳ... ವಿದ್ಯುಚ್ಛಕ್ತಿ ... ಗಳನ್ನು ತೆಗೆದುಕೊಂಡು ಹೋಗುವ ವ್ಯವಸ್ಥೆಗೆ ೧೮ ಲಕ್ಷ ರೂ ... ಬೇಕಾಗುವುದರಿಂದ ಆ ಯೋಜನೆಯನ್ನು ಕೈಗೊಳ್ಳಲಾಗಿಲ್ಲವೆಂದೂ ತಿಳಿಸಿದರು

ಅನಾವೃಷ್ಟಿಯಿಂದ ನೊಂದ ರೈತರಿಗೆ ಪರಿಹಾರ ಕೊಡುವ ಬಗ್ಗೆ ... ಪ್ರಶ್ನೆಯೊಂದಕ್ಕೆ ಶ್ರೀ ಕೆ ಸಿ ರೆಡ್ಡಿಯವರು ಉತ್ತರವಿತ್ತು, ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಹಲವು ಸ್ಥಳಗಳಲ್ಲಿ ಮಾತ್ರ ಈ ರೀತಿ ಸಂಭವಿಸಿದೆಯೆಂದೂ ಅದರಿಂದ ನೊಂದವರಿಗೆ ಸರ್ಕಾರವು ಸಾಧ್ಯವಾದಷ್ಟು ಸಹಾಯ ... ಏರ್ಪಾಡು ಮಾಡಿದೆಯೆಂದೂ ತಿಳಿಸಿದರು

ಉಪಾಹಾರಾನಂತರ ಮುಂದುವರಿದ ಸಭೆಯಲ್ಲಿ ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂರವರು ಚುನಾವಣೆ ಬಗ್ಗೆ ಈ ರೀತಿ ಒಂದು ಹೇಳಿಕೆಯಿತ್ತರು ಶಾಸನ ಸಭೆಗೆ ಸಂಸ್ಥಾನದಲ್ಲಿ ೬೧ ಏಕ ಸದಸ್ಯ ಕ್ಷೇತ್ರಗಳೂ ೧೯ ದ್ವಿ ಸದಸ್ಯರುಳ್ಳ ಕ್ಷೇತ್ರಗಳೂ ಇವೆ. ಚುನಾವಣೆ ನಡೆಸಲು ಒಟ್ಟು ... ಸಾವಿರ ಪೆಟ್ಟಿಗೆಗಳನ್ನು ತರಿಸಲಾಗಿದೆ ಮತ್ತು ... ಕೋಟಿ ೩೦ ಲಕ್ಷ ಓಟರು ಚೀಟಿಗಳನ್ನು ಇಟ್ಟುಕೊಳ್ಳಲಾಗಿದೆ. ಒಟ್ಟು ... ಜಿಲ್ಲೆಗಳಲ್ಲಿ ಕೇಂದ್ರ ಚುನಾವಣಾ ಸಮಿತಿಯು ಆಗ...

ಇಂಗ್ಲೆಂಡ್ ಮೇಲೆ ಯುದ್ಧ ಘೋಷಣೆಗೆ ಈಜಿಪ್ಟ್ ಕರೆ

ಬ್ರಿಟನ್ನಿನೊಡನೆ ಯುದ್ಧ ಪರಿಸ್ಥಿತಿಯುಂಟಾಗಿರುವುದೆಂದು ಈಜಿಪ್ಟ್ ಸರ್ಕಾರವು ಘೋಷಿಸಬೇಕೆಂದು, ಆ ದೇಶದ ಮುಸ್ಲಿಮರ ತೀವ್ರವಾದಿ ಸಂಘದವರು ಸೂಚಿಸಿರುತ್ತಾರೆ. ಸೂಯೆಜ್ ಕಾಲುವೆಯಲ್ಲಿರುವ ಬ್ರಿಟಿಷ್ ಸೈನ್ಯಗಳನ್ನು ಶತ್ರು ಸೈನ್ಯವೆಂದು ಪರಿಗಣಿಸಬೇಕೆಂದು ಆ ಸಂಘದವರು ತಿಳಿಸಿರುತ್ತಾರೆ

ಲಾರ್ಡ್ ಮೌಂಟ್ ಬ್ಯಾಟನ್ನರಿಗೆ ಹೊಸ ಹುದ್ದೆ

ಭಾರತದ ಮಾಜಿ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರನ್ನು ಮೆಡಿಟರೇನಿಯನ್ ಸಮುದ್ರ ಕ್ಷೇತ್ರದಲ್ಲಿ ಬ್ರಿಟಿಷ್ ಶ್ರೇಷ್ಠ ನ್ಯಾಯಾಧಿಕಾರಿಯನ್ನಾಗಿ ನೇಮಿಸಲಾಗಿದೆ

ನೆಹರೂ ವಿರುದ್ಧವಾಗಿ ವಿ. ಡಿ. ಸಾವರ್ಕರ್ ಸ್ಪರ್ಧೆ

ನೆಹರೂರವರ ವಿರುದ್ಧವಾಗಿ ಹಿಂದೂ ಮಹಾ ಸಭೆಯ ಕಡೆಯಿಂದ ವಿ ಡಿ ಸಾವರ್ಕರರನ್ನು ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲಿಸಲಾಗುವುದೆಂದು ತಿಳಿದುಬಂದಿದೆ

ಸೂಚನೆ

ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವದ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ — ವ್ಯವಸ್ಥಾಪಕ

...ಲೇ ೧೯ ಚಿನ್ಹೆಗಳನ್ನು ಆಯಾಯಾ ಪಕ್ಷಗಳಿಗೆ ಕೊಟ್ಟಿದೆ, ಇನ್ನು ಉಳಿದ ೧೧ ಚಿಹ್ನೆಗಳ ಪೈಕಿ ಮೈಸೂರು ಸರ್ಕಾರವು ಜನತಾ ಪಾರ್ಟಿಗೆ ತಕ್ಕಡಿಯನ್ನು ಚಿಹ್ನೆಯನ್ನಾಗಿ ಕೊಟ್ಟಿದೆ. ಸರ್ಕಾರದವರು ಸಂಸ್ಥಾನಾದ್ಯಂತ ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಅಥವಾ ಎರಡು ಅಣಕು ಚುನಾವಣೆಗಳನ್ನು ಪ್ರಾಯೋಗಿಕವಾಗಿ ನಡೆಸುವರು. ಇದರಲ್ಲಿ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗುವುದು. ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೂ ತಕ್ಕ ಸಿಬ್ಬಂದಿಯನ್ನು ನೇಮಿಸಲಾಗುವುದು. ಚುನಾವಣೆಯ ನಡೆ ಮಟ್ಟಿಗೆ ಸರ್ಕಾರವೂ ಎಲ್ಲ ಪಕ್ಷಗಳನ್ನೂ ಒಂದೇ ರೀತಿಯಲ್ಲಿ ಕಾಣಲಾಗುವುದು.

ಗಾಯತ್ರಿ ದೇವಿಯವರ ೬ ನೇ ವರ್ಧಂತಿ

ಮೈಸೂರು ೧೩

ಶ್ರೀಮನ್ಮಹಾರಾಜರವರ ಪುತ್ರಿ ರಾಜಕುಮಾರಿ ಗಾಯತ್ರಿ ದೇವಿಯವರಿಗೆ ನಾಳೆ ದಿನಕ್ಕೆ ಐದನೇ ವರ್ಷ ತುಂಬುವುದು. ದೇವರ ದರ್ಶನಕ್ಕಾಗಿ ಅವರು ಕೋಟೆಯೊಳಗಿನ ಎಲ್ಲಾ ದೇವಾಲಯಗಳಿಗೂ ನಾಳೆ ಸಂಜೆ ೬ ರಿಂದ ೭॥ ಗಂಟೆಯೊಳಗೆ ಸಕಲ ಮರ್ಯಾದೆಗಳೊಡನೆ ಹೋಗಿ ಅಲ್ಲಿ ದೇವರ ದರ್ಶನವನ್ನು ಪಡೆಯುವರು. ಸಕಲರೂ ಕೋಟೆಯೊಳಗೆ ಬರಲು ಅವಕಾಶವಿದೆ

ಹರಿಕಥೆ

ರಾಮಾನುಜ ರಸ್ತೆಯಲ್ಲಿರುವ "ಸಾಧ್ವಿ" ಪತ್ರಿಕೆ ಕಛೇರಿಯಲ್ಲಿ ನಾಳೆ ರಾತ್ರಿ ೯ ಗಂಟೆಗೆ ಹುಣ್ಣಿಮೆ ಪ್ರಯುಕ್ತ ವೇ॥ಬ್ರಂ॥ ನದೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ ಸೀತಾ ತುಳಸೀ ಪೂಜೆ ಎಂಬ ಹರಿಕಥೆಯು ನಡೆಯುವುದು ಸರ್ವರಿಗೂ ಸ್ವಾಗತವಿದೆ

ದೇವರಾಜ ಮೊಹಲ್ಲಾ ಆನೆ ಸಾರೋಟು ಬೀದಿಯಲ್ಲಿರುವ ಭಜನೆ ವೆಂಕಟಪ್ಪನವರ ಹತ್ತಿರ ಜನಗಳ ರಾಮ ಮಂದಿರದಲ್ಲಿ ನಾಳೆ ರಾತ್ರಿ ೯ ಘಂಟೆಗೆ ಶ್ರೀ ಆರ್ ನಾರಾಯಣ ಸ್ವಾಮಿಯವರಿಂದ ಮಹಾತ್ಮ ಕಬೀರ್ ಎಂಬ ಹರಿಕಥೆಯು ನಡೆಯುವುದು

೨೧ ನೇ ತಾ॥ ಪ್ರಜಾ ಪಕ್ಷದ ಕೂಟ

ಈ ತಿಂಗಳು ೨೧ ನೇ ತಾ॥ ಇಲ್ಲಿ ಸಂಸ್ಥಾನದ ಕೃಷಕ್ ಪ್ರಜಾ ಪಕ್ಷದ ಕೂಟವು ಸೇರುವುದು. ಪಕ್ಷ ಸ್ಥಾಪಕರಾದ ಆಚಾರ್ಯ ಕೃಪಲಾನಿಯವರು ಅದರ ಅಧ್ಯಕ್ಷತೆ ವಹಿಸಬೇಕೆಂದು ಕೋರಲಾಗಿದೆ

ರಷ್ಯದೊಡನೆ ಈಜಿಪ್ಟಿನ ಆಕ್ರಮಣ ನಿರೋಧ ಒಪ್ಪಂದ

ರಷ್ಯದೊಡನೆ ಆಕ್ರಮಣ ನಿರೋಧ ಒಪ್ಪಂದವನ್ನು ಮಾಡಿಕೊಳ್ಳುವ ಬಗ್ಗೆ ಈಜಿಪ್ಟ್ ತೀವ್ರವಾಗಿ ಪರಿಶೀಲಿಸುತ್ತಿದೆಯೆಂದು ಆ ದೇಶದ ವಿದೇಶಾಂಗ ಮಂತ್ರಿಯು ಹೇಳಿರುವುದಾಗಿ ಗೊತ್ತಾಗಿದೆ

ಬ್ರಿಟಿಷರೊಡನೆ ಸಹಕರಿಸುವುದು ಈಜಿಪ್ಟಿನ ದೇಶದ್ರೋಹ

ಸೂಯೆಜ್ ಕಾಲುವೆ ಪ್ರದೇಶದಲ್ಲಿರುವ ಬ್ರಿಟಿಷ್ ಸೈನ್ಯಗಳೊಡನೆ ಸಹಕರಿಸುವ ಈಜಿಪ್ಟ್ ಪ್ರಜೆಗಳನ್ನು ದೇಶದ್ರೋಹಿಗಳೆಂದು ಅಲ್ಲಿನ ಸರ್ಕಾರವು ಪರಿಗಣಿಸಲು ಯೋಚಿಸುತ್ತಿದೆಯೆಂದು ಅಲ್ಲಿನ ಸರ್ಕಾರೀ ಪಕ್ಷದ ಪತ್ರಿಕೆ ಅಲ್‌ಮಿಸ್ರಿ ಎಂಬುದು ತಿಳಿಸಿರುತ್ತದೆ. ಅಂತಹ ಪ್ರಿಟಿಷರಿಗೆ ಈಜಿಪ್ಟಿನ ನಾಗರಿಕ ಹಕ್ಕನ್ನು ಕಳೆದುಕೊಳ್ಳುವರೆಂದು ತಿಳಿಸಲಾಗಿದೆ

ವಿದ್ಯುಚ್ಛಕ್ತಿಯಿಂದ ದಹನ ಕ್ರಿಯೆ

ಬೆಂಗಳೂರು ಪೌರಸಭೆಯಿಂದ ನಿರ್ಣಯದ ತಿರಸ್ಕಾರ

ಬೆಂಗಳೂರು ೧೩

ಒಂದು ಲಕ್ಷ ಹದಿನಾರು ಸಾವಿರ ರೂ ವೆಚ್ಚದಲ್ಲಿ ವಿದ್ಯುಚ್ಛಕ್ತಿಯಿಂದ ಶವದ ದಹನ ಕ್ರಿಯಾ ಯಂತ್ರವನ್ನು ಸ್ಥಾಪಿಸುವ ಬಗ್ಗೆ ಇಲ್ಲಿನ ಪೌರಸಭೆಯು ಹಿಂದೆ ಮಾಡಿದ್ದ ನಿರ್ಣಯವನ್ನು ಹಣಕಾಸಿನ ಕಾರಣಗಳಿಗಾಗಿ ಆ ಸಭೆಯು ತಿರಸ್ಕರಿಸಿರುತ್ತದೆ

ಚಿನ್ನದ ಗಣಿ ಅನಾಹುತದಲ್ಲಿ ಏವರ ಮರಣ

ಮೊನ್ನೆ ಉರಿಗಾಂ ಚಿನ್ನದ ಗಣಿಯಲ್ಲಿ ಬಂಡೆಯು ಸಿಡಿದು ಅನಾಹುತಕ್ಕೆ ಕಾರಣವಾಯಿತು. ೫ ಜನರು ಇದರಿಂದ ಮಡಿದಿರುವುದಾಗಿ ಗೊತ್ತಾಗಿದೆ. ಗಾಯಗೊಂಡ ಇತರರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಲಾಗಿದೆ.

ಭಾರತೀಯ ಜನ ಸಂಘ

ರಾಜಧಾನಿಯಲ್ಲಿರುವ ಭಾರತೀಯ ಜನಸಂಘದ ಶಾಖೆಗೆ ಈಗಾಗಲೇ ಸದಸ್ಯರನ್ನು ಕೂಡಿಸುವ ಕಾರ್ಯಕ್ರಮವು ಪ್ರಾರಂಭವಾಗಿ, ಯಶಸ್ವಿಯಾಗಿ ಕೆಲಸವು ನಡೆದಿದೆ. ನೂರಾರು ಸ್ವಯಂ ಸೇವಕರು ವಿವಿಧ ವಿಭಾಗಗಳಲ್ಲಿ ಸದಸ್ಯರನ್ನು ಭರದಿಂದ ಕೂಡಿಸುತ್ತಿರುವರು. ಮಹಾಜನರು ಹೆಚ್ಚು ಹೆಚ್ಚಾಗಿ ಸೇರಿ ಅದರ ಮೇಲೆ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಬೇಕು—ಎಂದು ಮೇಲ್ಕಂಡ ಸಂಘದ ಕಾರ್ಯದರ್ಶಿಯವರು ಕೋರಿರುತ್ತಾರೆ.

ಉಪನ್ಯಾಸ

ರಾಜಧಾನಿಯ ವಾಣೀವಿಲಾಸ ಪುರದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೬ ಗಂಟೆಗೆ ಸ್ವಾಮಿ ಸೋಮನಾಥಾನಂದಜಿಯವರು "ರಾಜಯೋಗ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ತೀರ್ಥ ಮತ್ತು ಕಂಪೆನಿ

ನಾರಾಯಣ ಶಾಸ್ತ್ರಿ ರಸ್ತೆ,

ಫೋನ್ ನಂ 537

ಕರಕುಗಳನ್ನು ರಿಪಾರಿಸುವ ಸಂಸ್ಥೆ

ತಿಕ್ಕೇರಿ ವರ್ತಮಾನ

ಗ್ರಾಮಕ್ಕೆ ಅಮಲ್ದಾರರ ಭೇಟಿ

ಸ್ವಂ.ಸು] ತಿಕ್ಕೇರಿ ೧೦

ಕೃಷ್ಣರಾಜಪೇಟೆ ತಾಲ್ಲೂಕಿಗೆ ನೂತನವಾಗಿ ವರ್ಗವಾಗಿ ಬಂದಿರುವ ಅಮಲ್ದಾರ್ ಶ್ರೀ ಎಚ್. ಪಿ ಪುಟ್ಟಸ್ವಾಮಪ್ಪನವರು ಈ ದಿನ ಇಲ್ಲಿಗೆ ಭೇಟಿಯಿತ್ತಿದ್ದರು ನಮ್ಮ ಪ್ರತಿನಿಧಿಗಳಾದ ಶ್ರೀ ಕೆ. ವಿ ಹನುಮಂತ ಶೆಟ್ಟರು ಅವರನ್ನು ಕಂಡು ಸ್ಥಳದ ವಿದ್ಯಮಾನಗಳನ್ನು ವಿವರಿಸಿದರು. ಇಲ್ಲಿನ ದೇವಾಲಯಗಳು ಮತ್ತು ಧರ್ಮಛತ್ರಗಳಿಗೆ ಅಮಲ್ದಾರರು ಭೇಟಿಯಿತ್ತು ಪರಿಶೀಲನೆ ನಡೆಸಿದರು. ದೊಡ್ಡಿ ಮತ್ತು ಮಾಂಸದ ಅಂಗಡಿಗಳನ್ನು ಕಟ್ಟಿಸುವ ವಿಷಯವನ್ನು ಪ್ರಸ್ತಾಪಿಸಿದರು. ಶ್ರೀ ಮೋತಿ ವೆಂಕಟಶೆಟ್ಟರ ಮಕ್ಕಳಾದ ಶ್ರೀ ನಾರಾಯಣ ಶೆಟ್ಟರು ಪಶುವೈದ್ಯಶಾಲಾ ಕಟ್ಟಡವನ್ನು ಕಟ್ಟಿಸಿಕೊಡಲು ಒಪ್ಪಿರುವ ಬಗ್ಗೆ ಅಮಲ್ದಾರರು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಶ್ರೀ ಜಗದಾಂಬಾ ಶಿಶುವಿಹಾರ

ನವರಾತ್ರಿಗಾಗಿ ಈಗ್ಗೆ ೧೫ ದಿನಗಳಿಂದ ಮುಚ್ಚಲಾಗಿದ್ದ ಮೇಲ್ಕಂಡ ಶಿಶುವಿಹಾರವನ್ನು ಮತ್ತೆ ಕಳೆದ ಗುರುವಾರದಿಂದ ತೆರೆಯಲಾಗಿದೆ. ಮಾತಾ ಪಿತೃಗಳು ಎಂದಿನಂತೆ ತಮ್ಮ ಮಕ್ಕಳನ್ನು ಕಳುಹಿಸಬೇಕಾಗಿ ಕೋರಲಾಗಿದೆ

ಡಿ. ಕೃಷ್ಣಮೂರ್ತಿ,
ವ್ಯವಸ್ಥಾಪಕ

ಗ್ರಾಮ ಸೇವಕಿ

ಕಸ್ತೂರಿ ಬಾ ರಾಷ್ಟ್ರೀಯ ಟ್ರಸ್ಟಿನ ಮೈಸೂರು ಸಂಸ್ಥಾನದ ಪ್ರತಿನಿಧಿಯಾಗಿರುವ ಶ್ರೀಮತಿ ಯಶೋಧರಾ ದಾಸಪ್ಪನವರು ಹೊರಡಿಸುತ್ತಿರುವ "ಗ್ರಾಮ ಸೇವಕಿ" ಎಂಬ ಪಾಕ್ಷಿಕ ಪತ್ರಿಕೆಯ ದ್ವಿತೀಯ ವರ್ಷದ ಚರಖಾ ಜಯಂತಿಯ ವಿಶೇಷ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಹಳ್ಳಿಗಾಡಿನ ಹೆಂಗಸರು ಮತ್ತು ಮಕ್ಕಳ ಏಳಿಗೆಗಾಗಿ ಪತ್ರಿಕೆಯು ಮೀಸಲಾಗಿದೆ. ಚರಖಾ ಜಯಂತಿ ಮಹತ್ವ, ಖಾನಾವಳಿ ಬಗ್ಗೆ ವ್ಯಾವಹಾರಿಕ ಧರ್ಮಶಾಸ್ತ್ರ, ಮದ್ಯಪಾನ ನಿರೋಧ ಮತ್ತು ನಮ್ಮ ಸಂಸ್ಕಾರಗಳು ಇವೇ ಮುಂತಾದ ವಿಷಯಗಳ ಮೇಲೆ ಆಚಾರ್ಯ ಕಾಲೇಲ್ಕರ್ ಮುಂತಾದವರ ಲೇಖನಗಳು ಬರೆಯಲ್ಪಟ್ಟಿವೆ. ಅಲ್ಲದೆ ಕಸ್ತೂರಿ ಬಾ ಶಿಕ್ಷಣ ಶಿಬಿರದ ನಡೆಯುವ ಕೆಲಸಗಳ ಚಿತ್ರಗಳೂ ಇವೆ. ಸಕಲರೂ, ಮುಖ್ಯವಾಗಿ ರಚನಾತ್ಮಕ ಕಾರ್ಯದಲ್ಲಿ ಪ್ರವೃತ್ತಿ ಇರುವವರೂ ಇದನ್ನು ಅವಶ್ಯವಾಗಿ ಪ್ರೋತ್ಸಾಹಿಸಬೇಕಾಗಿದೆ. ವಾರ್ಷಿಕ ಚಂದಾ. ರೂ. -೮-೦ ಕಳೆದ ಮಂಗಳವಾರ ತಿಕ್ಕೇರಿಯ [illegible] ಲೀಸ್ ಠಾಣೆ ಮತ್ತು ಎಲೆಕ್ಟ್ರಿಕ್, ಕಾರ್ಖಾನೆಗಳಲ್ಲಿ ಆಯುಧ ಪೂಜೆಯನ್ನು ವೈಭವದಿಂದ ಆಚರಿಸಲಾಯಿತು.

ನಾಟಕರತ್ನ ಜಿ ಎಚ್. ವೀರಣ್ಣನವರ

ಗುಬ್ಬಿ ಕಂಪೆನಿ (ರಿ),

ಮೈಸೂರು ಶಿವರಾಂ ಪೇಟೆಯ

ರತ್ನಾವಳಿ ಥಿಯೇಟರಿನಲ್ಲಿ

8-10-51 ನೇ ಸೋಮವಾರದಿಂದ

ಪ್ರತಿದಿನ ರಾತ್ರಿ 10 ಕ್ಕೆ

ಕುರುಕ್ಷೇತ್ರ

ಶ್ರೀಕೃಷ್ಣ – ಕೃಷ್ಣಭಗವಾನ್, ಭೀಮ – ಕಣ್ಣಪ್ಪ, ಬಸವೇಶ್ವರ

SRI GAYATHRI TALKIES

Only Today

TARZAN'S PERIL

From To-morrow : For 3 days

Paramounts'

THE GREAT MISSOURI RAID

(In Technicolor)

When America's Most Desperate Outlaw Joined Forces!

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿವೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ

ಬೊಂಬಾಯಿ ಆನಂದ ಭವನ ಹೋಟೇಲು ಹತ್ತಿರ, ಮೈಸೂರು

ಒಲಂಪಿಯಾ 11-10-51 ರಿಂದ ಜಯಭೇರಿಯ 2ನೇ ವಾರ ಪ್ರತಿ ದಿನ 3 ಆಟಗಳು

ರೆಹಮಾನ್, ಅರ್ಜುನ್, ಮೋತಿ ಸಾಗರ್ ಕನ್ನಯ್ಯಲಾಲ್ ಪಾತ್ರವಹಿಸಿರುವ **- ಮಲ್ಹಾರ್ -**

ಸೂಚನೆ – ಹೊತ್ತು ಮೀರಿ ಬಂದು ಚಿತ್ರ ನಿರ್ದೇಶನ ಮತ್ತು ಪಾತ್ರಧಾರರ ಹೆಸರುಗಳನ್ನು ತೋರಿಸುವಾಗ ಶ್ರೀಮತಿ ಲತಾ ಮಂಗೇಶ್ಕರ್ ಹಾಡಿರುವ ಮೋಹಕ ಮಲ್ಹಾರ ರಾಗದ ಹಾಡನ್ನು ಕೇಳುವ ಸುಯೋಗವನ್ನು ಕಳೆದುಕೊಳ್ಳಬೇಡಿ

11-10-51 ರಿಂದ :: ಪ್ರತಿ ದಿನ ಬೆಳಿಗ್ಗೆ 10-30 ಕ್ಕೆ

ನರ್ಗೀಸ್, ದಿಲೀಪ್‌ಕುಮಾರ್ ಮತ್ತು ರಾಜ್‌ಕಪೂರ್ ಪಾತ್ರವಹಿಸಿರುವ **- ಅಂದಾಜ್ -**

ಗೌಳಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಬಿ ಎ.,

ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು

Edited, Printed and Published by A. R. Nagarajan, at Sadhvi Press. D.Subbiah Road, Mysore

ಕುರ್ಚಿ ಬಟ್ಟೆ, ಛತ್ರಿ ಬಟ್ಟೆ, ಹಾಸಿಗೆ ಬಟ್ಟೆ, ಸೋಫಾ ಬಟ್ಟೆಗಳಿಗೂ

[illegible]

12-10-51 ರಿಂದ : ಅಮೋಘ ಆರಂಭ

ಶ್ರೀ ಗಣೇಶಾ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ

ಸುಬ್ಬು ಸಂಪತ್ ಚಿತ್ರ ಪರ್ವತ್‌ರವರ ಪೌರಾಣಿಕ ಕನ್ನಡ ಚಿತ್ರ

• ತಿಲೋತ್ತಮೆ •

—: ಪ್ರಧಾನ ಭೂಮಿಕೆ :—

ಜಯಶ್ರೀ, ಎಸ್. ಎಸ್. ದೇವಿ, ರಾಧಾಬಾಯಿ, ಸುಬ್ಬಯ್ಯ, ಜಿ. ಆರ್. ಸ್ಯಾಂಡೋ,

ಎಂ. ಎಸ್. ಪಂಡಿತ್, ಕಲಾ ವಿಶಾರದ ಕೊಟ್ರೇಶಪ್ಪ

ರಿಜಿ ನಂ. 792 ಸಮಾಜ ಭೂಷಣ ಪತ್ರಿಕೆ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧೫-೧೦-೫೧ [ಸಂಚಿಕೆ ೬೮

ಚುನಾವಣೆಗೆ ಕಾಂಗ್ರೆಸ್ ಉಮೇದುವಾರರ ಪಟ್ಟಿ

ಮೈಸೂರು ಸಂಸ್ಥಾನದಲ್ಲಿ ಚುನಾವಣೆಯ ದಿನಗಳು

ಜನವರಿ ೨ ರಿಂದ ೨೪ರ ವರೆಗೆ

ಮೈಸೂರು ೧೪

ಮೈಸೂರು ಸಂಸ್ಥಾನದಲ್ಲಿ ಬರುವ ಜನವರಿ ೨ರಿಂದ ೨೪ ನೇ ತಾ॥ ವರೆಗೆ ಸಾರ್ವತ್ರಿಕ ಚುನಾವಣೆಗಳು ನಡೆಯು ವುವೆಂದು ಸರ್ಕಾರದವರು ಪ್ರಕಟಿಸಿರು ತ್ತಾರೆ. ಒಂಬತ್ತು ಜಿಲ್ಲೆಗಳಲ್ಲೂ ಚು ನಾವಣೆಗಳು ಹೀಗೆ ಇವೆ:-

ಕೋಲಾರ ೨ನೇ ತಾ॥ ನಿಂದ ೨೧; ತುಮಕೂರು ೪ ರಿಂದ ೨೧; ಬೆಂಗಳೂ ರು ಉತ್ತರಭಾಗ ೨ ರಿಂದ ೧೬, ಮಂಡ್ಯ ಜಿಲ್ಲೆ ೨ ರಿಂದ ೨೧, ಮೈಸೂರು ಜಿಲ್ಲೆ ೨ ರಿಂದ ೧೯, ಹಾಸನ ಚಿಕ್ಕಮಗಳೂರು ಜಿಲ್ಲೆಗಳು ೪ ರಿಂದ ೨೨; ಶಿವಮೊಗ್ಗ ... ೨೩, ಮತ್ತು ಚಿತ್ರದುರ್ಗ ೮ ರಿಂದ ೨೪

ಬೆಂಗಳೂರು, ಮೈಸೂರು, ಕೋಲಾರ ಚಿನ್ನದ ಗಣಿಗಳ ಕ್ಷೇತ್ರಗಳಲ್ಲಿ ... ತಾ॥ ಚುನಾವಣೆಗಳಾಗುವುವು

... ತಿಂಗಳು ಮಧ್ಯ ಭಾಗದಲ್ಲಿ ... ದ ಚುನಾವಣಾ ಕಮೀಷನರ್ ... ಸುಕುಮಾರ ಸೇನರವರು ಸಂ ಸ್ಥಾನಕ್ಕೆ ಆಗಮಿಸುವರು. ಸಂಸ್ಥಾನದ ... ಕಡೆಗಳಲ್ಲಿ ನಡೆದ ನಟನಾ ಚು ... ಗಳಲ್ಲಿ ಕಂಡುಬಂದ ಲೋಪದೋ ಷಗಳನ್ನು ಕುರಿತು ಇಲ್ಲಿನ ಅಧಿಕಾ ... ತವರೊಡನೆ ಚರ್ಚಿಸುವರೆಂದು ... ಗಿದೆ.

ಚಿನ್ನದ ಗಣಿ ಅನಾಹುತದಲ್ಲಿ ೮ ಜನರ ಮರಣ

... ಚಿನ್ನದ ಗಣಿಯಲ್ಲಿ ಇತ್ತೀ ... ಂಡೆಯು ಸಿಡಿಸುವರ ಪರಿಣಾಮ ... ೮ ಜನರು ಸತ್ತು ೪೮ ... ಗಾಯವಾಗಿರುವುದಾಗಿಯೂ, ... ಸ್ಥಳದಲ್ಲಿ ಕೆಲಸವನ್ನು ... ಮಿಯಾಗಿ ನಿಲ್ಲಿಸಲಾಗಿದೆಯೆಂ ದೂ ತಿಳಿದುಬಂದಿದೆ.

ಸಮುದ್ರ ಪ್ರಾಣಿಯಿಂದ ಮೈಸೂರಿನವರ ಪಾರು

ಬೊಂಬಾಯಿ ನೌಕಾ ನಿಲ್ದಾಣದ ... ಜನ್ಸಿಯದಾಗಿರುವ ೨೫ ವರ್ಷದ ... ರಿನ ಶ್ರೀ ಎಂ. ಆರ್. ಎ. ಅ ... ಚಾರ್ಯರು ಕೆಲವು ದಿನಗಳ ಕೆಳಗೆ ... ದ್ರದಲ್ಲಿ ಈಜಲು ಹೋದಾಗ ಸ್ವ ... ದಲ್ಲಿ ಅವರನ್ನು ಆಕ್ಟೋಪಸ್ ... ಪ್ರಾಣಿಯೊಂದು ಹಿಡಿದು ಸಮು ... ಳಕ್ಕೆ ಎಳೆದೊಯ್ಯಲು ಪ್ರಯತ್ನಿ ... , ಅವರು ಸಾಹಸಮಾಡಿ, ಪ್ರಾ ... ನ್ನು ಒದೆದು, ಅದರ ಹಿಡಿತದಿಂದ ... ಕೊಂಡು ಬಂದರೆಂಬೂ ವರದಿ ... ಆ ಪ್ರಾಣಿಯು ಕೊಂಡಿಯಿಂ ... ಗಾಯಗಳನ್ನು ವಾಸಿಮಾಡಿ ... ಲು ಅವರು ಎರಡು ದಿನಗಳ ... ಜನ ಗಿಡ್ಡೆಯನ್ನು ಮೈಸುತ್ತಲೂ ... ಕೊಳ್ಳಬೇಕಾಯಿತು.

ವಿದ್ಯುಚ್ಛಕ್ತಿ ಮೋತಾದಿಂದ ... ರೈಲುಗಳ ಓಡಾಟವಿಲ್ಲ

... ಬಾಯಿಯಲ್ಲಿ ವಿದ್ಯುಚ್ಛಕ್ತಿಯ ... ಪಯೋಗವನ್ನು ೯ನೇ ತಾ॥ ಗಂಡಷ್ಟು ಕಡಿ ... ಮಾಡಿರುವುದರಿಂದ ಜಿ.ಐ.ಪಿ.,ಬಿ. ... ರೈಲ್ವೆಯವರು ಒಟ್ಟು ೧೧೧ ... ರೈಲುಗಳ ಓಡಾಟವನ್ನು ನಿಲ್ಲಿಸಿರು ತ್ತಾರೆ.

ಈಜಿಪ್ಟಿಗೆ ಸುಡಾನ್ ಗೌರ್ನರ್ ಜನರಲ್ಲರ ಎಚ್ಚರಿಕೆ

ಸುಡಾನ್ ಆಡಳಿತದ ಸಂಬಂಧವಾಗಿ ಹೊರಗಿನವರು ಪ್ರವೇಶಿಸಲು ಪ್ರಯತ್ನಿ ಸಿದರೆ ಅದನ್ನು ಪ್ರತಿಭಟಿಸಲು ಸರ್ವ ಶಕ್ತಿಯನ್ನೂ ಉಪಯೋಗಿಸಲಾಗುವು ದೆಂದೂ, ೧೮೯೯ರ ಒಪ್ಪಂದವನ್ನು ಈಜಿ ಪ್ಟು ರದ್ದುಪಡಿಸಿರುವುದಕ್ಕೆ ತಾವು ಮನ್ನ ಣೆ ಕೊಡುವುದಿಲ್ಲವೆಂದೂ ಸುಡಾನಿನ ಗ ವರ್ನರ್ ಜನರಲ್ ರಾಬರ್ಟ್ ಹೌ ರವ ರು ಎಚ್ಚರಿಸಿರುತ್ತಾರೆ. ಸೂಯೆಜ್ ಕಾ ಲುವೆಗೆ ಬ್ರಿಟಿಷ್ ಪ್ಯಾರಾಟ್ರೂಪ್ ಸೇನ ಗಳು ಹೋಗಲು ಉದ್ಯುಕ್ತವಾಗಿವೆ

ಮಹಿಳೆಯ ಹೊಟ್ಟೆಯಲ್ಲಿ ಬೇವಿನ ಗಿಡ

ಕಲ್ಕತ್ತದ ೪೫ ವರ್ಷ ವಯಸ್ಸಿನ ಮ ಹಿಳೆಯೊಬ್ಬಳ ಉದರ ಬಾಧೆಯನ್ನು ತ ಪ್ಪಿಸಲು ವೈದ್ಯರು ಶಸ್ತ್ರ ಚಿಕಿತ್ಸೆ ನಡೆಸ ಲಾಗಿ, ೩ರು ಅಂಗುಲ ಎತ್ತರದ ಬೇವಿನ ಗಿಡವು ಅದರಲ್ಲಿದ್ದುದು ಪತ್ತೆಯಾಯಿತೆಂ ದು ವರದಿಯಾಗಿದೆ. ಆಕೆಯ ಸ್ಥಿತಿಯು ಈಗ ತೃಪ್ತಿಕರವಾಗಿದೆ

ಮಂತ್ರಿಗಳಲ್ಲಿ ಕಾರ್ಮಿಕ ಪ್ರಮುಖರ ನಿಯೋಗ

ಮೈಸೂರು ಸಂಸ್ಥಾನದ ಎ ಐ ಟಿ ಯು ಸಿ. ಶಾಖೆಯ ಅಧ್ಯಕ್ಷ ಶ್ರೀ ಎನ್ ಕೇಶವಯ್ಯಂಗಾರ್ ಮತ್ತು ಸದಸ್ಯರಾಗ ಳಾದ ಕೇಶವ ಕುಲಕರ್ಣಿ, ಎ. ರಾಮ ಣ್ಣ, ಜಿ. ಲಿಂಗಯ್ಯ ಮುಂತಾದವರು ಕ ಳೆದ ಶುಕ್ರವಾರ ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರಲ್ಲಿ ನಿಯೋಗ ಹೋಗಿ ಎಲ್ಲ ಕಾರ್ಮಿಕರುಗಳಿಗೂ ಕನಿಷ್ಠಸಂಬಳದ ನಿಗದಿ, ಸರ್ಕಾರಿ ಕಾರ್ಖಾನೆ ಕಾರ್ಮಿಕರು ಗಳಿಗೆ ಹೆಚ್ಚು ತುಟ್ಟಿ ಭತ್ಯ, ಕೆಲಸಗಾರ ರಿಗೆ ಹೆಚ್ಚು ಸವಲತ್ತು, ಮನೆ ಬಾಡಿಗೆ ಇ ವುಗಳ ವಿಷಯವಾಗಿ ಚರ್ಚೆ ನಡೆಸಿದ ರು. ಸರ್ಕಾರೀ ನೌಕರರ ತುಟ್ಟಿ ಭತ್ಯವ ನ್ನು ಹೆಚ್ಚಿಸುವ ವಿಷಯವು ಸರ್ಕಾರದ ಗಮನದಲ್ಲಿರುವ ಸಂದರ್ಭದಲ್ಲೇ ಸ ರ್ಕಾರೀ ಕಾರ್ಖಾನೆಗಳ ಕಾರ್ಮಿಕರಿಗೂ ಅ ದನ್ನು ಕೊಡುವ ವಿಷಯವನ್ನು ಪರಿಶೀ ಲಿಸಲಾಗುವುದೆಂದು ಮುಖ್ಯ ಮಂತ್ರಿಗ ಳು ಭರವಸೆಯಿತ್ತರು. ಹೌಸಿಂಗ್ ಕಾ ರ್ಪೋರೇಷನ್ನು ಈ ತಿಂಗಳೊಳಗೆ ರ ಚಿಸಲಾಗುವುದೆಂದೂ ಅವರು ತಿಳಿಸಿದರು

ವ್ಯಾಗನ್ ಧಾನ್ಯಗಳ್ಳರ ಮೇಲೆ ಪೋಲೀಸರ ಗುಂಡು

ಬೊಂಬಾಯಿ ಬಳಿ ಕುರ್ಲಾ ರೈಲ್ವೆ ನಿ ಲ್ದಾಣದಲ್ಲಿ ಗೂಡ್ಸ್ ಗಾಡಿಗಳಿಗೆ ಭರ್ತಿ ಮಾಡಲಾಗಿದ್ದ ಧಾನ್ಯವನ್ನು ಮೊನ್ನೆ ಹ ತ್ತು ಜನ ಕಳ್ಳರು ಕದಿಯುವ ಪ್ರಯತ್ನ ದಲ್ಲಿದ್ದಾಗ ಪೋಲೀಸರು ಅವರ ಮೇಲೆ ಗುಂಡು ಹಾರಿಸಲಾಗಿ ಒಬ್ಬನಿಗೆ ಏಟು ಬಿತ್ತೆಂದೂ, ಇಬ್ಬರನ್ನು ವಸ್ತಗಿರಿ ಮಾ ಡಲಾಯಿತೆಂದೂ, ಇತರರು ಪಲಾಯನ ಮಾಡಿದರೆಂದೂ ತಿಳಿದುಬಂದಿದೆ. ಗುಂಡಿನ ಏಟು ಬಿದ್ದವನನ್ನು ಆಸ್ಪತ್ರೆಗೆ ಕಳುಹಿಸ ಲಾಗಿದೆ.

ಗದಗಿನಲ್ಲಿ ೧೨೦ ಅಂಗಡಿ ಗಳು ಬೆಂಕಿಯ ಪಾಲು

ಗದಗಿನ ಧಾನ್ಯದ ಪೇಟೆಯಲ್ಲಿ ೧೬ ನೇ ತಾ॥ ರಾತ್ರಿ ಭಾರಿ ಬೆಂಕಿಯುಂಟಾ ಗಿ, ೧೨೦ ಅಂಗಡಿಗಳು ಸುಟ್ಟುಹೋದು ವೆಂದೂ, ಒಬ್ಬ ಹುಡುಗನು ಮೃತನಾದ ನೆಂದೂ ವರದಿಯಾಗಿದೆ. ಹತ್ತು ಲಕ್ಷ ರೂ ಗಳ ನಷ್ಟವಾಗಿರುವುದೆಂದು ತಿಳಿ ದುಬಂದಿದೆ.

ವಸ್ತು ಪ್ರದರ್ಶನದ ಅವಧಿ ಹೆಚ್ಚಿತು

ಮೈಸೂರು ದಸರಾ ವಸ್ತು ಪ್ರದರ್ಶ ನದ ಅವಧಿಯನ್ನು ಇದೇ ೧೬ ನೇ ತಾ ರೀಕಿನಿಂದ ೨೨ ನೇ ತಾರೀಕಿನವರೆಗೆ ಹೆ ಚ್ಚಿಸಿರುವುದಾಗಿ ತಿಳಿದುಬಂದಿದೆ

ಗಾಂಧೀ ಜಯಂತಿ

ರಾಜಧಾನಿಯ ದಿವಾನರ ರಸ್ತೆಯ ಲ್ಲಿರುವ ಮಹಿಳಾ ಸದನದಲ್ಲಿ ಶುಕ್ರವಾರ ಗಾಂಧೀ ಜಯಂತಿಯನ್ನು ನೆರವೇರಿಸ ಲಾಯಿತು ಸೂತ್ರ ಯಜ್ಞ, ಸಾಮೂ ಹಿಕ ಪ್ರಾರ್ಥನೆಗಳಾದ ನಂತರ ಶ್ರೀ ಕೆ ಎಸ್ ನಾರಾಯಣಸ್ವಾಮಿಯವರು ಭಾ ಷಣ ಮಾಡಿ, ಗಾಂಧೀಜಿಯವರ ಧ್ಯೇ ಯಗಳನ್ನು ವಿವರಿಸಿ, ಸ್ವಾವಲಂಬನೆ, ಗೃಹ ಕೈಗಾರಿಕೆ ಇವುಗಳನ್ನು ಸ್ತ್ರೀಯ ರು ನಡೆಸಿಕೊಂಡು ಬರಲು ಅವರಲ್ಲಿ ಆ ಸಕ್ತಿ ಮತ್ತು ಶ್ರದ್ಧೆ ಇರಬೇಕೆಂದು ಗಾಂ ಧೀಜಿಯವರು ಒತ್ತಾಯ ಪಡಿಸುತ್ತಿದ್ದ ರೆಂದು ತಿಳಿಸಿದರು.

ರಾಜ್ಯಶಾಸ್ತ್ರ ಅ॥ ಪ್ರೊ॥ ರಾದ ಶ್ರೀ ಎಂ. ವಿ ಕೃಷ್ಣರಾಯರನ್ನು ಚರಿತ್ರೆ ಇಲಾಖೆಯ ಹಂಗಾಮಿ ಪ್ರೊಫೆಸರನ್ನಾ ಗಿ ನೇಮಿಸಲಾಗಿದೆಯೆಂದು ತಿಳಿದು ಬಂದಿದೆ.

ಮಹಾ ಚುನಾವಣೆಗೆ ಕಾಂ॥ ಉಮೇದುವಾರರು

ಸರ್ವಾನುಮತದಿಂದ ಎಲ್ಲರ ಆಯ್ಕೆ

ಸ್ವಂ ಸು.ಪ್ರೋ॥] ಬೆಂಗಳೂರು ೧೫

ಮೈಸೂರು ಪ್ರದೇಶ ಕಾಂಗ್ರೆಸ್ ಮ ತ್ತು ಚುನಾವಣಾ ಸಮಿತಿಗಳ ಅಧ್ಯಕ್ಷ ರಾದ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ರಾತ್ರಿ ಮಹಾ ಚುನಾವಣೆಗೆ ಸಂ ಸ್ಥಾನದ ಕಾಂಗ್ರೆಸ್ಸಿನ ಪರವಾಗಿ ಒಮ್ಮ ತದಿಂದ ಆರಿಸಲ್ಪಟ್ಟಿರುವ ಉಮೇದುವಾ ರರುಗಳ ಹೆಸರುಗಳ ಪಟ್ಟಿಯನ್ನು ಬಹಿ ರಂಗ ಪಡಿಸಿದರು. ಇದುವರೆಗೆ ೭೦ ಮಂದಿಯನ್ನು ಸಂಸ್ಥಾನದ ಶಾಸನ ಸಭೆಗೂ, ಮೂವರನ್ನು ಕೇಂದ್ರ ಪ್ರಜಾ ಸಭೆಗೂ ಆರಿಸಲಾಗಿದೆ. ಸಂಸ್ಥಾನದ ಶಾಸನ ಸಭೆಗೆ ಆರಿಸಲ್ಪಟ್ಟಿರುವವರಲ್ಲಿ ಈ ಕೆಳಗೆ ಕಂಡವರು ಸೇರಿರುತ್ತಾರೆ:-

ರಾಮನಗರಂ ಕ್ಷೇತ್ರದಿಂದ ಶ್ರೀಗಳು ಕೆ ಹನುಮಂತಯ್ಯ, ಚನ್ನಪಟ್ಟಣದ ತಾ॥ ವಿ. ವೆಂಕಟಪ್ಪ, ಸೊರಬ-ಶಿಕಾರಿ ಪುರ ತಾ॥ ನಿಂದ ಎಚ್ ಸಿದ್ದಯ್ಯ, ಮತ್ತು ಕೊರಟಗೆರೆ ರಿಸರ್ವ್ ಕ್ಷೇತ್ರ ದಿಂದ ಶ್ರೀ ಆರ್. ಚನ್ನಿಗರಾಮಯ್ಯ, ತುರುವೇಕೆರೆ ಟಿ. ಸುಬ್ರಹ್ಮಣ್ಯ, ದೊ ಡ್ಡಬಳ್ಳಾಪುರದ ತಾ॥, ಟಿ ಸಿದ್ದಲಿಂಗ ಯ್ಯ, ಹೊಳೇನರಸೀಪುರ ಎ. ಜಿ. ರಾ ಮಚಂದ್ರರಾವ್.

ಕೇಂದ್ರ ಸಭೆಗೆ ಚಿತ್ರದುರ್ಗ ಜಿಲ್ಲೆ ಯಿಂದ ಶ್ರೀ ಎಸ್ ನಿಜಲಿಂಗಪ್ಪನವ ರೂ, ಹಾಸನ ಚಿಕ್ಕಮಗಳೂರು ಕ್ಷೇತ್ರ ದಿಂದ ಶ್ರೀ ಎಚ್ ಸಿದ್ದನಂಜಪ್ಪನವ ರೂ ಮತ್ತು ಮೈಸೂರು ಜಿಲ್ಲೆಯಿಂದ ಶ್ರೀ ಎಚ್. ಸಿ ದಾಸಪ್ಪನವರೂ ಆರಿ ಸಲ್ಪಟ್ಟಿರುವರು

ಮೈಸೂರಿನ ಶಾಸನ ಸಭೆಗೆ ಮೈಸೂ ರು ಜಿಲ್ಲೆಯಿಂದ ಕೆಳಗೆ ಕಂಡ ಮಹನೀ ಯರನ್ನು ಆರಿಸಲಾಗಿದೆ:-

ಮೈಸೂರು ತಾಲ್ಲೂಕು ಕ್ಷೇತ್ರ-ಶ್ರೀ ಶಿವನಂಜೇಗೌಡ, ನಂಜನಗೂಡು (ಸಾರ್ವಜನಿಕ ಕ್ಷೇತ್ರ) ಶ್ರೀ ಡಿ ಎಂ. ಸಿದ್ದಯ್ಯ, ನಂಜನಗೂಡು ರಿಜರ್ವ್ ಕ್ಷೇತ್ರ-ಶ್ರೀ ಎಂ. ಮಾದಯ್ಯ; ಟಿ ನರ ಸೀಪುರ-ಶ್ರೀ ಟಿ. ಪಿ. ಬೋರಯ್ಯ; ಯಳಂದೂರು ರಿಜರ್ವ್ ಕ್ಷೇತ್ರ-ಶ್ರೀ ಸಿ ಎಚ್. ಬಸವಯ್ಯ. ಚಾಮರಾಜನಗರ-ಶ್ರೀ ಎಸ್ ಪುಟ್ಟನಂಜಪ್ಪ, ಗುಂಡ್ಲು ಪೇಟೆ-ಹೆಗ್ಗಡದೇವನ ಕೋಟೆ ರಿಸರ್ವ್ ಕ್ಷೇತ್ರ ಶ್ರೀ ಪಿ. ವೆಂಕಟರಮಣ, ಪಿರಿ ಯಾಪಟ್ಟಣ-ಶ್ರೀ ಎಚ್. ಎಂ. ಚನ್ನ ಬಸಪ್ಪ

ಸಚಿವರುಗಳಾದ ಶ್ರೀಗಳು ಕೆ. ಸಿ. ರೆಡ್ಡಿ, ಕೆ. ಟಿ. ಭಾಷ್ಯಂ ಮತ್ತು ಟಿ. ಮರಿ ಯಪ್ಪನವರ ಉಮೇದುವಾರಿಕೆಯ ನ್ನು ಅಮಾನತ್ತಿನಲ್ಲಿಡಲಾಗಿದೆ. ದಾ ವಣಗೆರೆಯಿಂದ ಶ್ರೀಮತಿ ಬಳ್ಳಾರಿ ಸಿ ದ್ದಮ್ಮನವರೂ, ಚಿಕ್ಕಮಗಳೂರಿನಿಂದ ಶ್ರೀಮತಿ ಬಿ. ಎಲ್. ಸುಬ್ಬಮ್ಮನವ ರೂ ಆರಿಸಲ್ಪಟ್ಟಿರುತ್ತಾರೆ. ಮೈಸೂರು ಬೆಂಗಳೂರು ನಗರ ಕ್ಷೇತ್ರಗಳ ಉಮೇ ದುವಾರರ ಪಟ್ಟಿಯು ಇನ್ನೂ ಬಂದಿಲ್ಲ.

ಶ್ರೀ ಹನುಮಂತಯ್ಯನವರು ಹೇಳಿಕೆ ಯೊಂದನ್ನು ಕೊಟ್ಟು, ಉಳಿದ ಕ್ಷೇತ್ರ ಗಳ ಪಟ್ಟಿಯನ್ನು ಆದಷ್ಟು ಶೀಘ್ರವಾಗಿ ಪ್ರಕಟಿಸಲಾಗುವುದೆಂದು ತಿಳಿಸಿರು ತ್ತಾರೆ.

ಬೊಂಬಾಯಿ ಗಿರಣಿಗಳು ತಾತ್ಕಾಲಿಕವಾಗಿ ಬಂದ್

ಬೊಂಬಾಯಿಯಲ್ಲಿ ವಿದ್ಯುಚ್ಛಕ್ತಿಯ ಅಭಾವವು ಸಂಭವಿಸಿರುವುದರಿಂದ ಅಲ್ಲಿನ ಗಿರಣಿಗಳಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಖೋತಾ ಹಾಕುವ ಬಗ್ಗೆ ಕೈಗಾರಿಕಾ ನಿರತರಿಗೂ ಮತ್ತು ಸರ್ಕಾರದವರಿಗೂ ಮಾತುಕತೆಗಳು ನಡೆಯುತ್ತಿವೆ ಸರ್ಕಾರದವರು ಈ ಬಗ್ಗೆ ಇತ್ತಿರುವ ಸಲಹೆಗಳಲ್ಲಿ ಗಿರಣಿಗಳ ಕೆಲಸದ ವೇಳೆಯನ್ನು ಕಡಿಮೆ ಮಾಡುವುದು ಬರುವ ವರ್ಷದಲ್ಲಿ ಕೆಲವು ವಾರಗಳ ಕಾಲ ಗಿರಣಿಗಳನ್ನು ಬಂದು ಮಾಡುವುದು ಮತ್ತು ಆ ಕಾಲದಲ್ಲಿ ಕಾರ್ಮಿಕರಿಗೆ ತಕ್ಕಮಟ್ಟಿನ ಪರಿಹಾರ ಭತ್ಯವನ್ನು ಕೊಡುವುದು– ಈ ಅಂಶಗಳು ಅಡಕವಾಗಿರುವುವೆಂದು ಗೊತ್ತಾಗಿದೆ ಕೈಗಾರಿಕಾಕಾರರು ಗಿರಣಿಯ ಕೆಲಸದ ಅವಧಿಯನ್ನು ಇಳಿಸಲು ಒಪ್ಪಿದರೂ, ಅವುಗಳನ್ನು ಬಂದು ಮಾಡಲು ಎಂದಿಗೂ ಒಪ್ಪುವುದಿಲ್ಲವೆಂದು ಹೇಳಲಾಗಿದೆ

ಜಪಾನ್ ದ್ವೀಪದಲ್ಲಿ ರಷ್ಯಾ ಸೈನ್ಯಗಳ ಕವಾಯಿತು

ಜಪಾನಿನ ಅತ್ಯಂತ ಉತ್ತರ ದಿಕ್ಕಿನ ದ್ವೀಪವಾದ ಹೊಕೈಡೋವಿನಲ್ಲಿ ರಷ್ಯ ಸೈನ್ಯಗಳು ಕವಾಯಿತು ನಡೆಸುತ್ತಿರುವುದಾಗಿ ಗೊತ್ತಾಗಿದೆ

ಪರ್ಷಿಯದೊಡನೆ ಸಂಧಾನಕ್ಕೆ ಬ್ರಿಟಿಷ್ ಪ್ರಯತ್ನ

ಬ್ರಿಟನ್ನು ಭದ್ರತಾ ಸಮಿತಿಗೆ ನಿರ್ಣಯವೊಂದನ್ನು ಕಳುಹಿಸಿ, ಆಬಡಾನ್ ಎಣ್ಣೆ ವಿವಾದವನ್ನು ಬ್ರಿಟನ್ನಿನೊಡನೆ ಪುನಃ ಆರಂಭಿಸಬೇಕೆಂದು ಪರ್ಷಿಯಕ್ಕೆ ಆ ಸಮಿತಿಯು ಸೂಚಿಸಬೇಕೆಂದು ಕೋರಿರುತ್ತದೆ ಈ ನಿರ್ಣಯಕ್ಕೆ 7 ರಾಷ್ಟ್ರಗಳು ಬೆಂಬಲ ನೀಡಿವೆ ನಿರ್ಣಯದ ಅಂಗೀಕಾರಕ್ಕೆ ಇನ್ನೊಂದು ರಾಷ್ಟ್ರದ ಓಟು ಬೇಕಾಗಿದೆ ಪರ್ಷಿಯವು ಈ ಸೂಚನೆಯನ್ನು ನಿರಾಕರಿಸಿರುತ್ತದೆ

ಬಟ್ಟೆ ವರ್ತಕರ ಮೇಲೆ ಕ್ರಮ

ಕಾನೂನಿಗೆ ವಿರುದ್ಧವಾಗಿಯೂ ಮತ್ತು ಅಕ್ರಮವಾಗಿಯೂ ಬಟ್ಟೆ ವ್ಯಾಪಾರ ನಡೆಸಿದ ಕೆಳಗೆ ಕಂಡ ವರ್ತಕರ ರಹದಾರಿಗಳನ್ನು ಒಂದು ತಿಂಗಳ ಕಾಲ ಸಸ್ಪೆಂಡ್ ಮಾಡಲಾಗಿದೆ.–ಎಂ ಕೆ ಸ್ಟೋರ್ಸ್, ಬಿ ನಂಜಪ್ಪರಾವ್, ಶಿವರಾಂಪೇಟೆ, ಮೈಸೂರು ಮತ್ತು ಹರಿವಿಲಾಸ, ಚಾಮರಾಜನಗರ.

ಜೈಹಿಂದ್ ಪಬ್ಲಿಕೇಷನ್ಸ್

ಬೆಂಗಳೂರಿನ ಶ್ರೀ ಜಿ ಆರ್ ಸ್ವಾಮಿಯವರ ಸಂಪಾದಕತ್ವದಲ್ಲಿ ಹೊರಟಿರುವ ಜೈಹಿಂದ್ ಪಬ್ಲಿಕೇಷನ್ಸ್ ತ್ರೈಮಾಸಿಕ ಆಂಗ್ಲ ಪತ್ರಿಕೆಯ ದಸರಾ ವಿಶೇಷ ಸಂಚಿಕೆಯ ಪ್ರತಿಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ ಪತ್ರಿಕೆಯು ಈಗತಾನೇ ಹೊರಟಿದೆ ಮೈಸೂರಿನ ರಾಜಕೀಯ ಹೋರಾಟದ ಸಂಬಂಧವಾಗಿ ಡಾ|| ಪಟ್ಟಾಭಿಯವರ ಲೇಖನವೂ, ಆಹಾರ ಮತ್ತು ಸ್ತ್ರೀಯರ ವಿಷಯವಾಗಿ ಶ್ರೀಮತಿ ಲೀಲಾವತಿ ಮುನ್ಶಿಯವರ ಲೇಖನವೂ, ಮೈಸೂರಿನ ಮಂತ್ರಿಗಳಿಂದ ವಿವಿಧ ವಿಷಯಗಳ ಬಗ್ಗೆ ಲೇಖನಗಳೂ ಪ್ರಕಟವಾಗಿವೆ ರಾಷ್ಟ್ರ ಮುಖಂಡರ ಚಿತ್ರ, ಛಾಯಾ, ಬೆಂಗಳೂರು

ಅಂಚೆ ಇಲಾಖೆಯ ಶತಮಾನೋತ್ಸವ

ಬರುವ 1954ನೇ ಇಸವಿಯಲ್ಲಿ ಭಾರತದ ಅಂಚೆ ಇಲಾಖೆಯ ಶತಮಾನೋತ್ಸವವು ನೆರವೇರಿಸಲ್ಪಡುವುದು ಸ್ಟಾಂಪುಗಳ ಶತಮಾನೋತ್ಸವವೂ ಆಗಲಿರುವುದು

ಎ ಐ ಸಿ ಸಿ ಅಧಿವೇಶನದ ಕಾಲದ ದೃಶ್ಯಗಳೂ ಕೊಡಲ್ಪಟ್ಟಿವೆ ರಾಷ್ಟ್ರವನ್ನು ರಚಿಸುವ ಕಾರ್ಯದಲ್ಲಿ ಪತ್ರಿಕೆಯು ನೆರವು ನೀಡಲು ಸಿದ್ಧವಾಗಿದೆ ಅದರ ಸದಾಶಯವು ಈಡೇರಲೆಂದು ನಾವು ಹಾರೈಸಿ ಮೈಸೂರಿನ ನಾಗರೀಕರು ಇದನ್ನು ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ ಬೆಲೆ ಪ್ರತಿಗೆ 0–8–0

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್

ಜವಳೀ ಅಂಗಡಿ

ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ
ಸೆಕ್ರೆಟರಿಯವರ ಆಫೀಸು
ಮೈಸೂರು, ತಾರೀಖು 1-10-1951

ನೋಟಿಫಿಕೇಷನ್

ಮೈಸೂರು ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂಗೆ 1952 ಜನವರಿ ಒಂದರ ಲಾಗಾಯ್ತು 31ನೇ ಡಿಸೆಂಬರ್ ಪೂರ್ತಾ ಆಗುವ ಒಂದು ವರ್ಷಕ್ಕೆ ಬೇಕಾಗುವ ಈ ಕೆಳಗೆ ನಮೂದಿಸಿರತಕ್ಕ ಐಟಂಗಳ ಸರಬರಾಜಿಗೆ ಮೈಸೂರು ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರು ತಮ್ಮ ಆಫೀಸಿನಲ್ಲಿ ನವೆಂಬರು ಮಾಹೆ 6ನೇ ತಾರೀಖು ಮಂಗಳವಾರ ಕೆಳಗೆ ಕಂಡ ಕಾಲಗಳಲ್ಲಿ ಮೊಹರಾದ ಭುಲಸ್ಕೇಪು ಸೈಜಿನ ನಾಲ್ಕು ಪ್ರತಿಗಳುಳ್ಳ ಟೆಂಡರುಗಳನ್ನು ತೆಗೆದುಕೊಳ್ಳುತ್ತಾರೆ

1 ರೊಟ್ಟಿ	—	ಬೆಳಿಗ್ಗೆ	9 30
2 ಪ್ಯಾಸ್ಚುರೈಸ್ಡ್ ಹಾಲು	—	ಬೆಳಿಗ್ಗೆ	10-30
3 ಆಹಾರ ಸಾಮಗ್ರಿ ವಗೈರೆ	—	ಬೆಳಿಗ್ಗೆ	11 30

ಹೆಚ್ಚಿನ ವಿವರಗಳನ್ನು ಮೈಸೂರು ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸಿನಲ್ಲಿ ಪಡೆಯಬಹುದು

(ರುಜು) ಎಂ. ಕೃಷ್ಣ ಮೂರ್ತಿ,
ಸೆಕ್ರೆಟರಿ,
ಪಿ. ಕೆ. ಸ್ಯಾನಿಟೋರಿಯಂ ಆಫೀಸು

ನಾಟಕರತ್ನ ಜಿ ಎಚ್ ವೀರಣ್ಣನವರ

ಗುಬ್ಬಿ ಕಂಪೆನಿ (ರಿ),

ಮೈಸೂರು ಶಿವರಾಂ ಪೇಟೆಯ
ರತ್ನಾವಳಿ ಥಿಯೇಟರಿನಲ್ಲಿ
8 10 51 ನೇ ಸೋಮವಾರದಿಂದ
ಪ್ರತಿದಿನ ರಾತ್ರಿ 10 ಕ್ಕೆ

ಕುರುಕ್ಷೇತ್ರ

ಸಂಗೀತ – ಕೃಷ್ಣಭಗವಾನ್, ದೇವದರ ಕಣ್ಣಪ್ಪ, ಬಸವೇಶ್ವರ

THIRTHA & COMPANY,

Narayana sastry Road
PHONE 537
Clearing & Forwarding
AGENTS

ರಾಜಕಮಲ್, ಮೈಸೂರು
ಕಡೇ 4 ದಿನಗಳು

ಜಗನ್ಮೋಹಿನಿ

19-10-51 ರಿಂದ ಅಮೋಘ ಪ್ರಾರಂಭ

ಪಿಚ್ಚೆಕ್ಕಾರಿ (ಭಿಕ್ಷುಕಿ)

ತಮಿಳು

ಗೌ|| ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಬಿ. ಎ.

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

Edited, Printed and Published by A R Nagarajan, at Sadhvi Press D Subbiah Road, Mysore

12-10-51 ರಿಂದ : ಅಮೋಘ ಆರಂಭ

ಶ್ರೀ ಗಣೇಶಾ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ

ಸುಖ ಸಂಪತ್ ಚಿತ್ರ ಪಿಕ್ಚರವರ ಪೌರಾಣಿಕ ಕನ್ನಡ ಚಿತ್ರ

• ತಿಲೋತ್ತಮೆ •

—: ಪ್ರಧಾನ ಭೂಮಿಕೆ :—

ಜಯಶ್ರೀ, ಎಸ್. ಎಂ. ದೇವಿ, ರಾಧಾಬಾಯಿ, ಸುಬ್ಬಯ್ಯ, ಜಿ. ಆರ್. ಸ್ಯಾಂಡೋ,
ಎಂ. ಎಸ್. ಪಂಡಿತ್, ಕಲಾ ವಿಶಾರದ ಕೊಟ್ಟೂರಪ್ಪ

ಶ್ರೀ ಸಂ 792 । ಮಂಗಳ ಸೂಚಕ । ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೧೬-೧೦-೫೧ [ಸಂಚಿಕೆ ೬೯

ಉತ್ತರ ಕೊರಿಯಾ ನಗರಗಳಲ್ಲಿ ಭಾರಿ ದಂಗೆ

ಬೊಂಬಾಯಿನ ಮೈಸೂರು ಸಂಘದ ರಜತೋತ್ಸವ

ಶ್ರೀಮನ್ಮಹಾರಾಜರ ಅಧ್ಯಕ್ಷತೆಯಲ್ಲಿ

ಮೈಸೂರು ೧೬

ಬೊಂಬಾಯಿನಲ್ಲಿರುವ ಮೈಸೂರು ಸಂಘದ ರಜತೋತ್ಸವದ ಅಧ್ಯಕ್ಷತೆಯನ್ನು ವಹಿಸಲು ಶ್ರೀಮನ್ಮಹಾರಾಜರವರು ಒಪ್ಪಿರುವುದಾಗಿ ತಿಳಿದುಬಂದಿದೆ. ಸಂಘದ ಅಧ್ಯಕ್ಷರಾದ ಶ್ರೀ ಜೆ ಎಸ್ ಐಯ್ಯರ್‌ರವರು ಅವರಿಗೆ ಆಹ್ವಾನವನ್ನಿತ್ತರು. ಉತ್ಸವವು ಬರುವ ಜನವರಿಯಲ್ಲಿ ನಡೆಯುವುದು

ಕಂಟ್ರಾಕ್ಟರುಗಳ ಸಮ್ಮೇಳನ

೬ ಮೈ॥ ಸರ್ಕಾರಿ ಮರಾಮತ್ತು ಇಲಾಖೆಯ ಕಂಟ್ರಾಕ್ಟರುಗಳ ಸಮ್ಮೇಳನವು ಮೊನ್ನೆ ಕ್ರಾಫರ್ಡ್ ಭವನದಲ್ಲಿ ನಡೆಯಿತು. ಗೃಹ ಮಂತ್ರಿಗಳಾದ ಶ್ರೀ ಟಿ ಮರಿಯಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮಂತ್ರಿಗಳಿಗೆ ಸಮ್ಮೇಳನದ ಪರವಾಗಿ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು

ಅ॥ ಭಾ॥ ವಸ್ತುಪ್ರದರ್ಶನಕಾರರ ಸಮಿತಿ

ರಾಜಧಾನಿಯಲ್ಲಿರುವ ಅಖಿಲ ಭಾರತ ವಸ್ತು ಪ್ರದರ್ಶನಕಾರರ ಸಮಿತಿಯ ಸಾಮಾನ್ಯ ಸಭೆಯು ಕಳೆದ ೯ ನೇ ತಾ॥ ನಡೆದು ಪ್ರಸಕ್ತ ಸಾಲಿಗೆ ಶ್ರೀ ಯು ಎಸ್ ರಾಮಚಂದ್ರರಾವ್‌ರವರು ಅಧ್ಯಕ್ಷರಾಗಿಯೂ, ಶ್ರೀ ಎಂ ಸಿ ಮಹದೇವಸ್ವಾಮಿಯವರು ಉಪಾಧ್ಯಕ್ಷರಾಗಿಯೂ ಶ್ರೀ ಸಿ ಎ ರಾಮರವರು ಗೌ॥ ಕಾರ್ಯದರ್ಶಿಯಾಗಿಯೂ, ಆರಿಸಲ್ಪಟ್ಟು ಉತ್ತರೆ ಮೈಸೂರಿನ ಶ್ರೀಗಳಾದ ಎಸ್ ಆರ್ ಕೃಷ್ಣಮೂರ್ತಿ, ಎಸ್ ಎಸ್ ಅನಂತರಾವ್, ಕೆ ಎಸ್ ಗುರುಮೂರ್ತಿ ಎಸ್ ಆರ್ ಶ್ರೀನಿವಾಸ್, ಬಿ ಎಸ್ ಸುಬ್ಬರಾವ್, ಎ ಎಸ್ ಸೂರ್ಯನಾರಾಯಣರಾವ್, ಬಿ ಎಸ್ ರುದ್ರಪ್ಪ ಮತ್ತು ಬೆಂಗಳೂರಿನ ಎ ಎಸ್ ಚಂದ್ರಶೇಖರ್‌ರವರುಗಳು ಸದಸ್ಯರಾಗಿದ್ದರು

ವೆಂಕಟರಾಮಶಾಸ್ತ್ರೀ ಅವಧಾನಿಯವರಿಗೆ ಪತ್ನೀ ವಿಯೋಗ

ಮೈಸೂರು ಆಸ್ಥಾನ ವಿದ್ವಾನ್, ವೇದರತ್ನ ಕಟ್ಟೆಮಳಲವಾಡಿ ವೆಂಕಟರಾಮಾವಧಾನಿಗಳವರ ಧರ್ಮಪತ್ನಿ ಶ್ರೀಮತಿ ಶೇಷಮ್ಮನವರು ನೆನ್ನೆ ರಾತ್ರಿ ೧೧ ಘಂಟೆ ಸಮಯದಲ್ಲಿ, ತಮ್ಮ ೭೯ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಐದು ಜನ ಗಂಡು ಮಕ್ಕಳೂ ಮತ್ತು ನಾಲ್ಕು ಜನ ಹೆಣ್ಣು ಮಕ್ಕಳೂ ಇರುವರು. ಬಂಧುಗಳಿಗೆ ನಮ್ಮ ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ

ಹರಿಕಥೆ

ರಾಜಧಾನಿಯ ದೊಡ್ಡಪೇಟೆ ಶ್ರೀ ಕನ್ನಿಕಾ ಪರಮೇಶ್ವರಿ ಅಮ್ಮನವರ ದೇವಾಲಯದಲ್ಲಿ ೧೦ ನೇ ತಾ॥ ನಿಂದ ಪ್ರತಿ ದಿನ ೬॥ ಗಂಟೆಯಿಂದ ಶ್ರೀ ಹೆಚ್ ಟಿ ರಾಮಣ್ಣನವರು ಮಹಾಭಾರತವನ್ನು ಹರಿಕಥಾ ರೂಪದಲ್ಲಿ ಹೇಳುತ್ತಾರೆ. ಆಸ್ತಿಕ ಮಹನೀಯರು ಕಥಾ ಶ್ರವಣಕ್ಕಾಗಿ ದಯಮಾಡಿಸಬೇಕೆಂದು ಕೋರಲಾಗಿದೆ

ಘಟಿಕೋತ್ಸವದಲ್ಲಿ ಇವರ್ ಜೆಂಕಿನ್ಸರ ಭಾಷಣ

ಮೈಸೂರು ೧೬

ಬರುವ ಡಿಸೆಂಬರ್ ತಿಂಗಳಿನಲ್ಲಿ ನಡೆಯಲಿರುವ ಮೈಸೂರು ವಿಶ್ವ ವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಸಿಂಹಳ ದ್ವೀಪದ ವಿಶ್ವ ವಿದ್ಯಾಲಯದ ವೈಸ್ ಛಾನ್ಸಲರಾದ ಸರ್ ಇವರ್ ಜೆಂಕಿನ್ಸ್‌ರವರು ಪದವೀಧರರನ್ನುದ್ದೇಶಿಸಿ ಭಾಷಣ ಮಾಡುವರೆಂದು ತಿಳಿದುಬಂದಿದೆ

ಉಚ್ಚ ಶಿಕ್ಷಣಕ್ಕಾಗಿ ಹಾಲಪ್ಪನವರ ವಿದೇಶ ಪ್ರಯಾಣ

ಮೈಸೂರು ಮಹಾರಾಜಾ ಕಾಲೇಜಿನ ಅಧ್ಯಾಪಕರಾಗಿರುವ ಶ್ರೀ ಗ ಸ ಹಾಲಪ್ಪನವರು ಉಚ್ಚ ಶಿಕ್ಷಣ ಪಡೆಯಲು ಸಧ್ಯದಲ್ಲೇ ಸರ್ಕಾರದ ವೇತನ ಪಡೆದು ವಿದೇಶಕ್ಕೆ ತೆರಳುವರೆಂದು ಹೇಳಲಾಗಿದೆ

ಜಪಾನಿನಲ್ಲಿ ಬಿರುಗಾಳಿಯ ಹಾವಳಿ

ಜಪಾನಿನ ದಕ್ಷಿಣ ಭಾಗದ ದ್ವೀಪವಾದ ಕಿಯುಷುವಿನಲ್ಲಿ ಮೊನ್ನೆ ಚಂಡಮಾರುತದ ದೆಸೆಯಿಂದ ೩೬ ಸಾವಿರ ಸಂಸಾರಗಳು ನಿರ್ಗತಿಕರಾದರೆಂದು ತಿಳಿದುಬಂದಿದೆ ೧೯ ಜನರು ಮಡಿದಿರುವುದಾಗಿ ಗೊತ್ತಾಗಿದೆ. ಗಾಳಿಯಿಂದ ಪ್ರವಾಹವು ಉಕ್ಕೇರಿ ೭ ಸೇತುವೆಗಳು ನಾಶವಾದುವು

ಸುಡಾನ್ ಬಗ್ಗೆ ಘೋಷಣೆಗೆ ಈಜಿಪ್ಟ್ ಪಾರ್ಲಿಮೆಂಟಿನ ಸಮ್ಮತಿ

ಈಜಿಪ್ಟು ಬ್ರಿಟನ್ನಿನೊಡನೆ ೧೯೩೬ರಲ್ಲಿ ಮಾಡಿಕೊಂಡಿದ್ದ ಒಪ್ಪಂದವನ್ನು ರದ್ದುಪಡಿಸಿ, ಸುಡಾನ್ ದೇಶಕ್ಕೂ ಈಜಿಪ್ಟಿನ ದೊರೆ ಫರೂಕರೇ ಅರಸರೆಂಬುದಾಗಿ ಈಜಿಪ್ಟಿನ ಸರ್ಕಾರದವರು ಹೊರಡಿಸಿದ್ದ ಘೋಷಣೆಗೆ ಅಲ್ಲಿನ ಪ್ರತಿನಿಧಿ ಮತ್ತು ಸೆನೆಟ್ ಸಭೆಗಳು ಒಪ್ಪಿಗೆಯಿತ್ತಿರುತ್ತವೆ. ಆ ದೇಶದ ವಿದೇಶಾಂಗ ಮಂತ್ರಿಯು ಸೂಯೆಜ್ ಪ್ರದೇಶದ ರಕ್ಷಣೆ ಬಗ್ಗೆ ಬ್ರಿಟನ್, ಅಮೆರಿಕ, ಫ್ರಾನ್ಸ್ ಮತ್ತು ತುರ್ಕಿಗಳು ಮಾಡಿದ ಹೊಸ ಸಲಹೆಯನ್ನು ತಾವು ತಿರಸ್ಕರಿಸಿರುವುದಾಗಿ ಹೇಳಿರುತ್ತಾರೆ

ಪ್ಯೊಂಗ್‌ಯಾಂಗಿನಲ್ಲಿ ಭಾರಿ ದಂಗೆ

ಉತ್ತರ ಕೊರಿಯದ ರಾಜಧಾನಿ ಪ್ಯೊಂಗ್ಯಾಂಗ್ ಮತ್ತು ಇತರ ಪಟ್ಟಣಗಳಲ್ಲಿ ಕಮ್ಯೂನಿಸ್ಟ್ ಸರ್ಕಾರದ ವಿರೋಧವಾಗಿ ಭಾರಿ ದೊಂಬಿಗಳೆದ್ದಿರುವುದಾಗಿ ಅಮೆರಿಕಾ ಸೈನ್ಯ ಕಛೇರಿಗೆ ವರದಿಗಳು ಬಂದಿರುತ್ತವೆ

ಚತುರ್ರಾಷ್ಟ್ರ ಸಲಹೆಗೆ ಈಜಿಪ್ಟಿನ ತಿರಸ್ಕಾರ

ಸೂಯೆಜ್ ಕಾಲುವೆಯಿಂದ ತಮ್ಮ ಸೈನ್ಯವನ್ನು ವಾಪಸು ಕರೆಸುವ ತತ್ವವನ್ನು ಬ್ರಿಟಿಷ್ ಸರ್ಕಾರದವರು ಅಂಗೀಕರಿಸಿ ಅಲ್ಲಿ ಈಜಿಪ್ಟ್ ಸೈನ್ಯದ ರಕ್ಷಣಾ ವ್ಯವಸ್ಥೆಗೆ ಒಪ್ಪಿರುವುದಾಗಿಯೂ, ಹೀಗಾಗಬೇಕಾದರೆ ಬ್ರಿಟನ್, ಅಮೆರಿಕಾ ಫ್ರಾನ್ಸ್, ತುರ್ಕಿ ಈ ರಾಷ್ಟ್ರಗಳೊಡನೆ ಮಧ್ಯ ಪೂರ್ವದ ಸಂಯುಕ್ತ ರಕ್ಷಣಾ ವ್ಯವಸ್ಥೆಗೆ ಒಡಂಬಡಿಕೆಯನ್ನು ಈಜಿಪ್ಟು ಸೂಚಿಸಬೇಕೆಂದೂ ಅವರು ಕೋರಿದ್ದರು. ಈ ವಿಷಯವನ್ನೊಳಗೊಂಡ ಸೂಚನಾ ಪತ್ರವನ್ನು ಮೊನ್ನೆ ಈಜಿಪ್ಟ್ ವಿದೇಶಾಂಗ ಮಂತ್ರಿಗೆ ನಾಲ್ಕು ರಾಷ್ಟ್ರಗಳ ರಾಯಭಾರಿಗಳು ತಲುಪಿಸಿರುತ್ತಾರೆ. ಈ ಸಲಹೆಯನ್ನು ಈಜಿಪ್ಟ್ ಸರ್ಕಾರವು ನಿರಾಕರಿಸಿದೆಯೆಂದು ಗೊತ್ತಾಗಿದೆ

ಗುಪ್ತ ಧನದ ಬಗ್ಗೆ ವರ್ತಕರಿಗೆ ಕೇಂದ್ರ ಮಂತ್ರಿ ಸೂಚನೆ

ವರಮಾನ ತೆರಿಗೆಯನ್ನು ತೊಡೆದು, ಆದಾಯಗಳನ್ನು ಗುಪ್ತವಾಗಿಟ್ಟುಕೊಂಡಿರುವ ವರ್ತಕರುಗಳು ತಮ್ಮ ನಿಧಿಯೆಷ್ಟಿದೆಯೆಂಬುದನ್ನು ಈ ತಿಂಗಳು ೩೧ನೇ ತಾ॥ ನೊಳಗೆ ತಿಳಿಸದಿದ್ದರೆ ಅಂತಹವರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದೆಂದು ಕೇಂದ್ರ ಸರ್ಕಾರದ ಹಣ ಕಾಸಿನ ಉಪ ಮಂತ್ರಿ ಮಹಾವೀರ ತ್ಯಾಗಿಯವರು ತಿಳಿಸಿರುತ್ತಾರೆ

೧೪॥ ಲಕ್ಷ ರೂ ಬೆಲೆಯ ವಜ್ರ

೧ ಲಕ್ಷದಿಂದ ಹಿಡಿದು ೧॥ ಲಕ್ಷ ಪೌಂಡು ಬೆಲೆಯಾಗುವ ಭಾರಿ ವಜ್ರವೊಂದು ದಕ್ಷಿಣ ಆಫ್ರಿಕದ ಗಣಿಯೊಂದರಲ್ಲಿ ದೊರೆತಿದೆ. ಇದು ೫೩॥ ಕ್ಯಾರೆಟ್ ಉಳ್ಳದ್ದಾಗಿದೆ

ಶೃಂಗೇರಿ ಮಠಗಳಿಗೆ ಇನಾಂ ಮಸೂದೆ ವಿನಾಯಿತಿ

ರಾಜಪ್ರಮುಖರನ್ನು ಕಂಡ ಬೊಂಬಾಯಿ ಸಮಿತಿಯವರ ನಿಯೋಗ

ಮೈಸೂರು ೧೬

ಬೊಂಬಾಯಿಯ ಶೃಂಗೇರಿ ರಕ್ಷಣಾ ಸಮಿತಿಯ ಸದಸ್ಯರುಗಳಾದ ಶ್ರೀಗಳು ಎಸ್ ಎಸ್ ಗುಪ್ತ, ಟಿ. ಎ. ಐಯ್ಯರ್, ವೆಂಕಟೇಶ ಮೂರ್ತಿಯವರು ಈ ದಿನ ಅರಮನೆಯಲ್ಲಿ ಶ್ರೀಮನ್ ಮಹಾರಾಜರನ್ನು ಭೇಟಿ ಮಾಡಿ, ಅವರಿಗೆ ಮನವಿಯೊಂದನ್ನು ಸಲ್ಲಿಸಿ, ಮೈಸೂರು ಸರ್ಕಾರದವರು ತಂದಿರುವ ಇನಾಂ ಮತ್ತು ಜೋಡಿ ರದ್ದಿನ ಮಸೂದೆಯ ನಿಬಂಧನೆಗಳನ್ನು ಪುರಾತನವಾದ ಶೃಂಗೇರಿಯ ಮಠಗಳಿಗೆ ಅನ್ವಯಿಸಕೂಡದೆಂದು ಕೋರಿದರು. ಶ್ರೀಮನ್ ಮಹಾರಾಜರು ಸಾವಧಾನ ಚಿತ್ತದಿಂದ ಅವರುಗಳ ಅರಿಕೆಯನ್ನು ಕೇಳಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರದವರಿಗೆ ತಿಳಿಸುವುದಾಗಿ ಹೇಳಿದರು. ಸಮಿತಿಯವರು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ರೆವಿನ್ಯೂ ಸಚಿವ ಶ್ರೀ ಹೆಚ್ ಸಿದ್ದಯ್ಯನವರನ್ನೂ ಭೇಟಿ ಮಾಡಿದ್ದರು

ಚುನಾವಣೆ ಸಂಬಂಧವಾಗಿ ಮುಸ್ಲಿಮರ ಸಮ್ಮೇಳನ

ಬರುವ ಸಾರ್ವತ್ರಿಕ ಚುನಾವಣೆಗಳ ಸಂಬಧವಾಗಿ ಮುಸಲ್ಮಾನರು ಹೇಗೆ ವರ್ತಿಸಬೇಕೆಂಬುದನ್ನು ನಿರ್ಧರಿಸುವ ಸಲುವಾಗಿ ಬೆಂಗಳೂರಿನಲ್ಲಿ ಈ ತಿಂಗಳು ೨೧ನೇ ತಾ॥ ಸಂಸ್ಥಾನದ ಮುಸ್ಲಿಂ ಪ್ರತಿನಿಧಿಗಳ ಸಮ್ಮೇಳನವನ್ನು ಮಾಜಿ ಮಂತ್ರಿಗಳಾದ ಜ॥ ಮಹಮೂದ್ ಷರೀಫ್‌ರವರು ಕರೆದಿರುತ್ತಾರೆ. ಜನಾಬ್ ಷರೀಫರು ಈ ಬಗ್ಗೆ ಮುಖ್ಯ ಮಂತ್ರಿ ಕೆ ಸಿ ರೆಡ್ಡಿ ಮತ್ತು ಇತರ ಕಾಂಗ್ರೆಸ್ ಮುಖಂಡರೊಡನೆ ಸಮಾಲೋಚನೆ ನಡೆಸಿರುತ್ತಾರೆ

ಬೆಂಗಳೂರು - ಮಂಗಳೂರು ರೈಲು ಬಗ್ಗೆ ನಿಯೋಗ

ಮಲೆನಾಡು ಅಭಿವೃದ್ಧಿ ಸಮಿತಿಯವರ ಶಿಫಾರಸು ಪ್ರಕಾರ ಕಾರವಾರ ಮತ್ತು ಮಂಗಳೂರುಗಳಿಗೆ ಪೂನಾ ಬೆಂಗಳೂರು ರೈಲು ಮಾರ್ಗವನ್ನು ಮುಂದುವರಿಸುವ ಬಗ್ಗೆ ಕರ್ನಾಟಕ ಪ್ರಾಂತ ಕಾಂಗ್ರೆಸ್ಸಿನ ಒಂದು ನಿಯೋಗವು ದೆಹಲಿಯಲ್ಲಿರುವ ಯೋಜನಾ ಸಮಿತಿಯವರ ಬಳಿ ಹೋಗುವುದಾಗಿ ಗೊತ್ತಾಗಿದೆ. ಶಿವಮೊಗ್ಗ ರೈಲು ಮಾರ್ಗವನ್ನು ಭಟ್ಕಳ್‌ವರೆಗೆ ಹೆಚ್ಚಿಸಲೂ, ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣವನ್ನು ಕಟ್ಟಲೂ ನಿಯೋಗದವರು ಪ್ರಾರ್ಥಿಸುವರೆಂದು ಹೇಳಲಾಗಿದೆ

ಮುದ್ರಣದ ನಿರ್ಬಂಧದ ಮಸೂದೆ ಪರಿಶೀಲನೆಯಿಲ್ಲ

ಮುದ್ರಣ ಮುಂತಾದುವನ್ನು ನಿರ್ಬಂಧಪಡಿಸಲು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದ್ದ ಅವಶ್ಯ ಕರ್ತವ್ಯಗಳ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಲು ಸರ್ಕಾರದವರು ಇಚ್ಛಿಸಲಿಲ್ಲವೆಂದು ಸಂಸ್ಥಾನ ಶಾಸನ ಮಂತ್ರಿ ಶ್ರೀ ಎನ್ ಜಿ. ಅಯ್ಯಂಗಾರ್‍ರು ತಿಳಿಸಿರುತ್ತಾರೆ. ಬರುವ ಮಾರ್ಚಿಯೊಳಗೆ ಶೈತ್ಯ ಧಿಹರೇ ಷನ್ನಿನವರು ಮುದ್ರಣ ಹೊರಡಲಾರರೆಂದು ಅವರು ಭಾವಿಸಿರುತ್ತಾರೆ

ಚುನಾವಣೆ ಪ್ರಚಾರ ಕಾಲದಲ್ಲಿ ಸಚಿವರಿಗೆ ಭತ್ಯವಿಲ್ಲ

ಚುನಾವಣೆ ಪ್ರಚಾರಕ್ಕೆ ಹೊರಟಾಗ ಮಂತ್ರಿಗಳು ಪ್ರಯಾಣ ಅಥವಾ ದಿನ ಭತ್ಯಗಳನ್ನು ಪಡೆಯಕೂಡದೆಂದೂ, ಸಾರ್ವಜನಿಕ ಸಭೆಗಳನ್ನು ಖಾಸಗಿಯಾಗಿ ಏರ್ಪಡಿಸಬೇಕೆಂದೂ, ಸರ್ಕಾರಿ ಕೆಲಸಗಳಿಗೂ ಚುನಾವಣೆ ಪ್ರಚಾರಕ್ಕೂ ಗಂಟು ಹಾಕಕೂಡದೆಂದೂ ಪ್ರಧಾನಿ ನೆಹರೂರವರು ಎಲ್ಲ ಸಂಸ್ಥಾನಗಳ ಮುಖ್ಯ ಮಂತ್ರಿಗಳಿಗೂ ಸೂಚನೆಯನ್ನಿತ್ತಿರುವರು.

ಪಶ್ಚಿಮ ಬಂಗಾಳ ಗಡಿ ಬಳಿ ವಿಮಾನ ಧ್ವಂಸಕ ಫಿರಂಗಿ

ಪಶ್ಚಿಮ ಬಂಗಾಳ ಗಡಿ ಬಳಿ ಭಾರಿ ವಿಮಾನ ಧ್ವಂಸಕ ಫಿರಂಗಿಗಳನ್ನು ಸ್ಥಾಪಿಸಲು ಭಾರತ ಸರ್ಕಾರದವರು ಓರಾಪುರ ಎಂಬಲ್ಲಿನ ಒಂದು ಪ್ರದೇಶವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲಿರುವರು.

ರಸ್ತೆಯಲ್ಲಿ ಗಲೀಜು

ರಾಜಧಾನಿಯ ಕೊತ್ವಾಲರಾಮಯ್ಯನವರ ಬೀದಿಯ ೧೯೮ ನೇ ಮನೆಯ ಹಿಂಭಾಗದ ಕಕ್ಕಸು ಗುಂಡಿಯಲ್ಲಿ ಬಹು ದಿನಗಳಿಂದಲೂ ಕಸವು ಕಟ್ಟಿಕೊಂಡು ರಸ್ತೆಯೆಲ್ಲಾ ಗಲೀಜಾಗಿರುವುದೆಂದೂ, ಇದನ್ನು ಕೂಡಲೇ ಪೌರ ಸಭೆಯವರು ಗಮನಿಸಿ ಬಚ್ಚಲನ್ನು ದುರಸ್ತು ಮಾಡಿಸಿ, ಜನರ ಆರೋಗ್ಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನೋಡಿಕೊಳ್ಳಬೇಕೆಂದೂ ಅಲ್ಲಿನ ನಿವಾಸಿ ಶ್ರೀ ಕೆ. ಎಸ್. ಕಾಮತ್‌ರವರು ಪತ್ರ ಬರೆದಿರುತ್ತಾರೆ.

ಬೊಂಬಾಯಿ ಗೃಹ ಸಚಿವರಿಂದ ಹಣ ದುರುಪಯೋಗ?

ಬೊಂಬಾಯಿನ ಗೃಹ ಸಚಿವ ಶ್ರೀ ಮೊರಾರ್ಜಿ ದೇಸಾಯಿಯವರು ಅಲ್ಲಿನ ಕಾಂಗ್ರೆಸ್ಸಿನ ಖಜಾಂಚಿಗಳಾಗಿದ್ದು ಹಣದ ದುರುಪಯೋಗಪಡಿಸಿಕೊಂಡಿರುವರೆಂದು ಆಪಾದಿಸಿ ಶ್ರೀ ರಾಮನಿಕ್ ಲಾಲ್ ಛೋಟಲಾಲ್ ಕೆಷಾನಿ ಎಂಬುವರು ಅಲ್ಲಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಿಗೆ ಒಂದು ಅರ್ಜಿಯನ್ನು ಸಲ್ಲಿಸಿರುವರು. ಶ್ರೀ ದೇಸಾಯಿಯವರ ಬಂಧನಕ್ಕಾಗಿ ತಂತಿ ಮೂಲಕ ವಾರಂಟು ಕಳುಹಿಸಬೇಕೆಂದು ಶ್ರೀ ರಾಮನಿಕ್‌ಲಾಲ್‌ರವರು ಪ್ರಾರ್ಥಿಸಿರುವರು.

ಬ್ಯಾಂಕಿನ ವಾರ್ಷಿಕ ಸಭೆಗೆ ತಡೆ

ಕೆಲವು ದಿನಗಳ ಹಿಂದೆ ನಡೆದ ರಾಜಧಾನಿಯ ಸಿಟಿ ಕೋ - ಆಪರೇಟಿವ್ ಬ್ಯಾಂಕ್ ಡೈರೆಕ್ಟರುಗಳ ಚುನಾವಣೆಯು ಕ್ರಮಬದ್ಧವಲ್ಲವೆಂದು ತಿಳಿಸಿ ಮತ್ತೆ ಪುನಃ ಚುನಾವಣೆ ನಡೆಯಲು ಆಜ್ಞೆ ಮಾಡಲಾಗಿತ್ತಷ್ಟೆ. ಆದರೆ ಮೊದಲನೇ ಚುನಾವಣೆಯು ಸರಿಯಾಗಿರುವುದೆಂದೂ, ಹೊಸ ಚುನಾವಣೆಯು ಅಗತ್ಯವಿಲ್ಲವೆಂದೂ ತಿಳಿಸಿ ಹಲವರು ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರರ ಕೋರ್ಟಿನಲ್ಲಿ ಅಪೀಲು ಹೂಡಿರುವರಲ್ಲದೆ, ಸಹಕಾರ ಸಚಿವರಿಗೂ ಒಂದು ಮನವಿಯನ್ನು ಸಲ್ಲಿಸಿ ಮತ್ತೆ ವಾರ್ಷಿಕ ಸಭೆಯು ನಡೆಯದಂತೆ ತಡೆಯಬೇಕೆಂದೂ ಕೋರಿರುವರು.

ಕಾಂಪೋಸ್ಟ್ ದಿನಾಚರಣೆ

ಕಿಕ್ಕೇರಿ ೧೦

ಈ ಹೋಬಳಿ ಮಾದಾಪುರದ ಗ್ರಾಮದಲ್ಲಿ ಶ್ರೀ ಎಂ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲೂ, ಗೋಂದಿಹಳ್ಳಿ ಗ್ರಾಮದಲ್ಲಿ ಶ್ರೀ ಎಂ. ಕೆ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲೂ ಮಹಾತ್ಮಾ ಗಾಂಧಿ ಜಯಂತಿಯ ಸಂಬಂಧವಾಗಿ ಕಾಂಪೋಸ್ಟ್ ದಿನಾಚರಣೆಯನ್ನು ನೆರವೇರಿಸಲಾಯಿತು. ಅನೇಕ ರೈತರು ಸೇರಿದ್ದರು. ವ್ಯವಸಾಯದ ಇಲಾಖೆಯ ಶ್ರೀ ಕೆ. ಆರ್. ವೆಂಕಟರಾಮಶೆಟ್ಟರು ಕಾಂಪೋಸ್ಟ್ ಗೊಬ್ಬರದ ತಯಾರಿಕೆ ವಿಷಯದಲ್ಲಿ ಸೂಕ್ತ ತಿಳಿವಳಿಕೆಯನ್ನಿತ್ತರು. ಗಾಂಧಿಜಿಯವರ ಜೀವನದ ಬಗ್ಗೆ ಭಾಷಣಗಳಾದವು.

ಭತ್ತ ಒಣಗುತ್ತಿದೆ

ಈ ಹೋಬಳಿ ಗೋಡೆ ಹೊಸಹಳ್ಳಿ, ಮಾದಾಪುರ, ಚಿಣ್ಣೇನಹಳ್ಳಿ ಮುಂತಾದ ಕಡೆಗಳಿಗೆ ಆಸರೆಯಾಗಿದ್ದ ನಾಲೆಯು ೮-೧೦ ದಿನಗಳ ಕೆಳಗೆ ಒಡೆದುಹೋಗಿ ಭತ್ತದ ಫಸಲಿಗೆ ನೀರಿಲ್ಲದೆ ಪೈರು ಒಣಗಿ ಹೋಗುತ್ತಿದೆ.

ರಾಜಾಂಬಾಳ್

ಕೆಲವು ದಿನಗಳಿಂದ ಹಲವು ಕಾರಣಗಳಿಗಾಗಿ ನಿಂತುಹೋಗಿದ್ದ ರಾಜಧಾನಿಯ ಲಕ್ಷ್ಮೀ ಥಿಯೇಟರಿನ ಪುನರಾರಂಭವು ಕಳೆದ ವಿಜಯ ದಶಮಿ ಶುಭ ದಿನ ಹೊಸ ಆಡಳಿತ ವರ್ಗದವರಿಂದ ವ್ಯವಸ್ಥೆಯಾಗಿದೆ. ಅಲ್ಲಿ ಈಗ ಪ್ರದರ್ಶಿಸಲ್ಪಡುತ್ತಿರುವ ರಾಜಾಂಬಾಳ್ ಎಂಬ ತಮಿಳು ಸಾಮಾಜಿಕ ಚಿತ್ರವು ಅಸಾಧ್ಯವಾದ ಜನ ಸಂದಣಿಯನ್ನು ಆಕರ್ಷಿಸುತ್ತಿದೆ. ಮದಾಂಧರಾದ ಜನರು ಅಧಿಕಾರ ವಶದಿಂದ, ಧನ ಪಿಶಾಚ ಹಿಡಿದು ಸಮಾಜದಲ್ಲಿ ಎಂತಹ ಅನೀತಿಯ ಕೃತ್ಯಗಳಲ್ಲಿ ತೊಡಗುವರೆಂಬ ದನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ.

ಸುಪ್ರಸಿದ್ಧ
ಮಲೆಯಾಳ ಜ್ಯೋತಿಷ್ಕರು
ಕೆ. ಕುಮಾರಸ್ವಾಮಿ
ರೂಂ. ನಂ. ೧೧. ನಂಜರಾಜ ಬಹದ್ದೂರ್ ಛತ್ರ, ಮೈಸೂರು.
ಇವರು ಕರಾರುವಾಕ್ಕಾಗಿಯೂ, ಶಾಸ್ತ್ರೀಯವಾಗಿಯೂ, ಭೂತ, ಭವಿಷ್ಯದ್ವರ್ತಮಾನಗಳನ್ನು ಹೇಳುತ್ತಾರೆ. ಇದೇ ಏಜೆಂ

ಗೌ|| ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ.,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ಈಗ ಯಶಸ್ವಿಯಾಗಿ ನಡೆಯುತ್ತಿದೆ !
ದಿನವಹಿ 3 ಪ್ರದರ್ಶನಗಳು
ಗಣೇಶಾ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ
ಸುಖ ಸಂಪತ್ ಚಿತ್ರ ಪಟದವರ ಸುಂದರ ಪೌರಾಣಿಕ ಕನ್ನಡ ಚಿತ್ರ
- ತಿಲೋತ್ತಮೆ -
ಭೂಮಿಕೆ:-ಜಯಶ್ರೀ, ಜಿ. ಆರ್. ಸ್ಯಾಂಡೊ, ಕಲಾ ವಿಶಾರದ ಕೊಟ್ಟೂರಪ್ಪ.
[Sukh Sampath Chitrapat Release]

ಅಮೋಘ ಪ್ರಾರಂಭ : 19-10-51 ರಿಂದ
ಪ್ರತಿ ದಿನ ಮೂರು ಪ್ರದರ್ಶನಗಳು
ಪ್ರಭಾ ಪಿಕ್ಚರ್ ಹೌಸ್
ಫೇಮಸ್ ಪಿಕ್ಚರ್ಸ್‌ರವರ ಪೌರಾಣಿಕ ಹಿಂದಿ ಚಿತ್ರ
* ಮುರಳೀ ವಾಲಾ *
ಪಾತ್ರ:- ವಿಜಯಲಕ್ಷ್ಮಿ, ಶಶಿಕಪೂರ್, ದುರ್ಗಾ ಖೋಟೆ
ಬೆಳಗಿನ ಪ್ರದರ್ಶನ : 19-10-51 ರಿಂದ : 3 ದಿನಗಳು ಮಾತ್ರ
ರಿಪಬ್ಲಿಕ್‌ರವರ ಕ್ರಿಂಸನ್ ಘೋಸ್ಟ್

ವಿಶೇಷ ಪ್ರದರ್ಶನ
ಉಚಿತ ಬಹುಮಾನ !! :: ಉಚಿತ ಬಹುಮಾನ !!
17 ನೇ ತಾರೀಖು ಘೋಷಿತ ಬಹುಮಾನ !
ಮೈಸೂರು ಸಿಲ್ಕ್ ಹೌಸ್ ನ್ಯೂ ಡೆಲ್ಲಿಯವರಿತ್ತಿರುವ
ಒಂದು ಮೈಸೂರು ಗೌರ್ನಮೆಂಟ್ ವೀವಿಂಗ್ ಫ್ಯಾಕ್ಟರಿಯ
ಸಿಲ್ಕ್ ಸೀರೆ ಮತ್ತು ಇತರ 2 ಬಹುಮಾನಗಳು
ಮಾತನಾಡುವ ಗೊಂಬೆ—ಮ್ಯಾಜಿಕ್—ಷಾಡೋ ಪಿಕ್ಚರ್
ಬಹುಮಾನವನ್ನು 17 ನೇ ತಾರೀಖು ಬುಧವಾರ ರಾತ್ರಿ 9-30ಕ್ಕೆ ಜೀವಣ್ಣರಾಯನ ಕಟ್ಟೆ ಚೆರೋಸ್ಟೇ ಬಳಿ ಸಾರ್ವಜನಿಕರ ಎದುರಿಗೆ ಪ್ರೈಜ್ ತೆಗೆಯಲ್ಪಡುತ್ತೆ. ಸೀರೆಯ ಬಹುಮಾನ ಪಡೆದವರು ತಮಗೆ ಬೇಕಾದ ಯಾವ ತರಹದ ಸೀರೆಯನ್ನಾದರೂ ಆರಿಸಬಹುದು.
ಪ್ರತಿಯೊಂದು ಪ್ರದರ್ಶನಕ್ಕೆ 0—2—0
ಕೋ-ಆಪರೇಟಿವ್ ಅಮ್ಯೂಜ್‌ಮೆಂಟ್
ಆರ್ಗನೈಜೇಷನ್‌ರವರ ಸ್ಪೆಷಲ್ ಪ್ರದರ್ಶನ

ಹಿಂದೂ ಬ್ಯಾಂಕ್ ಕರೂರು ಲಿಮಿಟೆಡ್.

ನೋಟೀಸು

ಮೈಸೂರು ಸಂಸ್ಥಾನದಲ್ಲಿರುವ ಈ ಬ್ಯಾಂಕಿನ ಮೂರು ಶಾಖೆಗಳನ್ನೂ ವಿಶೇಷ ಕಾರಣಗಳಿಗಾಗಿ ಮುಚ್ಚಲು ಬ್ಯಾಂಕಿನ ಡೈರೆಕ್ಟರುಗಳ ಬೋರ್ಡಿನವರ ನಿರ್ಧರಿಸಿರುವರು. ಅದರಂತೆಯೇ ಬೆಂಗಳೂರು ಮತ್ತು ಮಂಡ್ಯದ ಶಾಖೆಗಳನ್ನು ಈಗಾಗಲೇ ಮುಚ್ಚಲಾಗಿದೆ. ಮೈಸೂರಿನ ಶಾಖೆಯನ್ನು ೩೦-೧೧-೫೧ರಂದು ಮುಚ್ಚಲಾಗುವುದು.

ಅಂಚೆ ಮೂಲಕ ವೈಯಕ್ತಿಕವಾಗಿ ನೋಟೀಸುಗಳನ್ನು ಕೊಟ್ಟಿದ್ದಾಗ್ಯೂ ಬೆಂಗಳೂರು ಮತ್ತು ಮಂಡ್ಯ ಶಾಖೆಗಳಿಗೆ ಸಂಬಂಧಪಟ್ಟ ಆಭರಣಗಳ ಸಾಲದ ಅನೇಕ ಐಟಂಗಳು ಇನ್ನೂ ಉಳಿದಿರುತ್ತವೆ. ಆಯಾ ಗಿರವಿದಾರರು ತಮ್ಮ ಸಾಲಗಳನ್ನು ಶ್ರೀರಾಂಪೇಟೆಯಲ್ಲಿರುವ ಮೈಸೂರು ಶಾಖೆಯಲ್ಲಿ ವಾಪಸು ಕೊಡಲು ೩೦-೧೦-೫೧ನೇ ದಿನವೇ ಕಡೆಯ ತಾರೀಖೆಂದು ಅವರುಗಳಿಗೆ ಈ ಮೂಲಕ ತಿಳಿಯ ಪಡಿಸಲಾಗಿದೆ. ಆ ತಾರೀಖಿನ ನಂತರ ಇನ್ನೂ ಫೈಸಲಾಗದೆ ಉಳಿಯುವ ಎಲ್ಲ ಐಟಂಗಳನ್ನು ಮೈಸೂರು ಶಾಖೆಯ ಕಟ್ಟಡದಲ್ಲಿ ೯-೧೧-೫೧ ನೇ ಭಾನುವಾರ ಬೆಳಗ್ಗೆ ೯ ಗಂಟೆಗೆ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಯಾವುದೇ ಐಟಮ್ಮು ಬಿಟ್ಟುದಾರರಿಲ್ಲದೆ ಹಾಗೇ ಉಳಿದರೆ, ಅದನ್ನು ಖಾಸಗಿಯಾಗಿ ಮಾರಾಟ ಮಾಡಲಾಗುವುದು.

ಮೈಸೂರು ಶಾಖೆಯ ಸಾಲಗಾರರು ತಮ್ಮ ಸಾಲಗಳನ್ನು ೩೦-೧೧-೫೧ಕ್ಕೆ ಮುಂಚೆ ಫೈಸಲ್ ಮಾಡಬೇಕೆಂದು ಪ್ರಾರ್ಥಿಸಲಾಗಿದೆ. ... ತಾರೀಖಿನ ನಂತರ ಅವರು ಉತ್ತರ ಆರ್ಕಾಟ್ ಜಿಲ್ಲೆಯ ತಿರುಪತ್ತೂರ್ ಶಾಖೆಯಲ್ಲಿ ತಮ್ಮ ಸಾಲಗಳನ್ನು ಲಾಗೋಡಿನಿಂದ ಫೈಸಲ್ ಮಾಡಬೇಕಾಗುವುದು.

ಮೈಸೂರು. 5-10-51.

ಕೆ. ವಿ. ರಾಮಕೃಷ್ಣರಾವ್
ಆಕ್ಟಿಂಗ್ ಏಜೆಂಟ್.

Edited, Printed and Published by A. R. Nagarajan, at Sadhvi Press. D.Subbiah Road, Mysore.

ರಿಜಿ ನಂ. 792 ॥ ಶುಭಂ ಭೂಯಾತ್ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೧೭-೧೦-೫೧ [ಸಂಚಿಕೆ ೬೦

ಪಾಕಿಸ್ತಾನದ ಪ್ರಧಾನಿ ಲಿಯಾಖತ್ತರ ಕೊಲೆ

ಲಾಹೋರು ಮತ್ತು ಢಕ್ಕಾಗಳಿಗೆ ಭಾರತ ಸೈನ್ಯನುಗ್ಗಲಿ

ಪಾಕಿಸ್ತಾನದ ವಿಷಯವಾಗಿ ಭಾರತವು ಅನುಸರಿಸುತ್ತಿರುವ ನೀತಿಯು ಸರಿಯಿಲ್ಲವೆಂದೂ, ಆ ದೇಶದಲ್ಲಿರುವ ಹಿಂದುಗಳ ಸಂರಕ್ಷಣೆಯನ್ನು ಪಾಕಿಸ್ತಾನವು ಮಾಡಲಾಗದಿದ್ದರೆ ಲಾಹೋರು ಮತ್ತು ಢಕ್ಕಾಗಳಿಗೆ ಭಾರತದ ಸೈನ್ಯಗಳನ್ನು ನುಗ್ಗಿಸಬೇಕೆಂದೂ ಪಾರ್ಲಿಮೆಂಟಿನ ಸದಸ್ಯರಾದ ಶ್ಯಾಮಪ್ರಸಾದ್ ಮುಖರ್ಜಿಯವರು ತಿಳಿಸಿರುತ್ತಾರೆ. ಅದು ಸಾಧ್ಯವಿಲ್ಲದಿದ್ದರೆ ಹಿಂದುಗಳ ಸಂರಕ್ಷಣೆಗಾಗಿ ಪೂರ್ವ ಪಾಕಿಸ್ತಾನದ ಮೂರನೇ ಒಂದು ಭಾಗವನ್ನು ಪಾಕಿಸ್ತಾನವು ಬಿಟ್ಟುಕೊಡುವಂತೆ ಭಾರತವು ಒತ್ತಾಯ ಪಡಿಸಬೇಕೆಂದು ಅವರು ಸೂಚಿಸಿರುತ್ತಾರೆ.

ಅಸ್ಸಾಂ ಮಂತ್ರಿಗಳಿಂದ ೩ ದಿನಗಳ ಉಪವಾಸ

ಅಸ್ಸಾಂ ಪ್ರಾಂತದಲ್ಲಿ ಭೂಕಂಪ, ಪ್ರವಾಹ ಮುಂತಾದ ನೈಸರ್ಗಿಕ ಅನಾಹುತಗಳಿಂದ ಪೈರುಗಳು ನಾಶವಾಗಿ ಜನರ ಆರ್ಥಿಕ ದುಸ್ಥಿತಿಯುಂಟಾಗಿರುವುದನ್ನು ಕಂಡು ಮನನೊಂದು ಬರುವ ತಿಂಗಳ ೧ನೇ ತಾ॥ನಿಂದ ೩ ದಿನಗಳ ಉಪವಾಸವನ್ನು ಮಾಡಲು ಅಲ್ಲಿನ ಮಂತ್ರಿ [illegible] ರಾಯ್‌ರವರು ನಿಶ್ಚಯಿಸಿರುತ್ತಾರೆ. ಅವರು ನೀರನ್ನು ಕೂಡ ಸೇವಿಸುವುದಿಲ್ಲವೆಂದು ಹೇಳಲಾಗಿದೆ. ಅವರು ಉಪವಾಸ ಕಾಲದಲ್ಲಿ ಹಗಲೂ ರಾತ್ರಿ ದೇವರನ್ನು ಕುರಿತು ಪ್ರಾರ್ಥನೆ ಮಾಡುವರು.

ಬೆಂಕಿಯಿಂದ ಟೆಲಿಫೋನ್ ಎಕ್ಸ್‌ಚೇಂಜಿನ ಭಸ್ಮ

[illegible]ವನಗರದಲ್ಲಿ ಪೆಟ್ರೋಲನ್ನು ಶೇಖರಿಸಿಟ್ಟಿದ್ದ ಒಂದು ಸ್ಥಳದಲ್ಲಿ ಕಳೆದ ಶನಿವಾರ ಬೆಂಕಿ ಯುಂಟಾಗಿ ಸಮೀಪದಲ್ಲಿ ಇದ್ದ ಟೆಲಿಫೋನ್ ಎಕ್ಸ್‌ಚೇಂಜ್ ಕಛೇರಿಗೂ ಬೆಂಕಿಯು ಹರಡಿ ಅದು ಪೂರ್ಣವಾಗಿ ನಾಶವಾಯಿತೆಂದು ವರದಿಯಾಗಿದೆ. ಸುಮಾರು ಮೂರು ಲಕ್ಷ ರೂ. ನಷ್ಟ ಸಂಭವಿಸಿರುವುದಾಗಿ ಅಂದಾಜಾಗಿದೆ.

ಶುದ್ಧಿ ಮತ್ತು ಸಂಘಟನೆ ಬಗ್ಗೆ ಭಾಷಣ

ರಾಜಧಾನಿಯ ೧ನೇ ಈದಿಗಾದಲ್ಲಿ ಶ್ರೀ ಗಂಗಾ ಪರಮೇಶ್ವರಿ ಯುವಕ ಸಂಘದ ಆಶ್ರಯದಲ್ಲಿ ಈ ರಾತ್ರಿ [illegible] ಸ್ವಾಮಿ ಶ್ರದ್ಧಾನಂದರ ಅನುಯಾಯಿಗಳೂ, ಹಿಂದೂ ಮಿರ್ಷ ಸಂಸ್ಥಾಪಕರೂ ಮತ್ತು ಸಂಚಾಲಕರೂ ಆದ ಪಂಡಿತ ಗೋಪಾಲರಾವ್ ಬಾದಾಮಿಯವರು ಚಿತ್ರ ಪಟ ಪ್ರದರ್ಶನದ ಮೂಲಕ ಶುದ್ಧಿ ಮತ್ತು ಸಂಘಟನೆ ಎಂಬ ವಿಷಯವಾಗಿ ಭಾಷಣ ಮಾಡುವರು. ಎಲ್ಲರಿಗೂ ಆಹ್ವಾನವಿದೆ.

ನಜರಬಾದಿನಲ್ಲಿರುವ ಸರ್ಕಾರಿ ನಿಮ್ನ ವರ್ಗದವರ ವಿದ್ಯಾರ್ಥಿನಿಲಯದಲ್ಲಿ ಹರಿಜನರ ಏಳಿಗೆ ವಿಷಯವಾಗಿ ಶ್ರೀ ಎಸ್. ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ಈ ಸಂಜೆ ೬॥ ಗಂಟೆಗೂ, ದೊಡ್ಡಪೇಟೆ ತುಂಗಾ ಆದಪ್ಪ ಶ್ರೇಷ್ಠಿಯವರ ಛತ್ರದಲ್ಲಿ ಹಿಂದೂ ಧರ್ಮದ ವಿಷಯದಲ್ಲಿ ನಾಳೆ ಸಂಜೆ ೬॥ ಗಂಟೆಗೂ ಶ್ರೀ [illegible]ಸ್ವಾಮಿಯವರು ಭಾಷಣ ಮಾಡುವರು.

ಪಾಕಿಸ್ತಾನ್ ಪ್ರಧಾನಿ ಲಿಯಾಖತ್ ಅಲಿಯ ಕೊಲೆ

ಹಂತಕನನ್ನು ಸ್ಥಳದಲ್ಲೇ ಜನರು ಕೊಂದರು

ಪಾಕಿಸ್ತಾನದ ಪ್ರಧಾನಿಯಾಗಿದ್ದ ಲಿಯಾಖತ್ ಅಲಿಖಾನರು ನೆನ್ನೆ ರಾವಲ್ಪಿಂಡಿಯಲ್ಲಿ ಮುಸ್ಲಿಂ ಲೀಗ್ ಸಂಸ್ಥೆಯ ಆಶ್ರಯದಲ್ಲಿ ಭಾಷಣ ಮಾಡುತ್ತಿದ್ದಾಗ ಸೈಯದ್ ಅಕ್ಬರ್ ಎಂಬುವನು ಅವರ ಮೇಲೆ ಎರಡು ಸಾರಿ ಗುಂಡನ್ನು ಹಾರಿಸಿದನೆಂದೂ, ಕೂಡಲೇ ಪ್ರಧಾನಿಯವರನ್ನು ಆಸ್ಪತ್ರೆಗೆ ಸೇರಿಸಲಾಯಿತಾದರೂ, ಅವರು ಮೃತಿಯನ್ನೈದಿದರೆಂದೂ ವರದಿಯಾಗಿದೆ.

ಹಂತಕನನ್ನು ಸಭೆಯಲ್ಲಿ ನೆರೆದಿದ್ದ ಜನರು ಹೊಡೆದು ಕೊಂದರೆಂದು ಹೇಳಲಾಗಿದೆ. ಲಿಯಾಖತ್ತರ ಶವವನ್ನು ಕರಾಚಿಗೆ ಒಯ್ಯಲಾಗಿದೆ. ಅವರ ಪತ್ನಿಯು ವಿದೇಶದಿಂದ ಹಿಂತಿರುಗಿರುತ್ತಾರೆ.

ಈ ಸುದ್ದಿಯು ಮುಟ್ಟಿದ ಕೂಡಲೇ ಭಾರತದ ರಾಷ್ಟ್ರಾಧ್ಯಕ್ಷ, ರಾಜೇಂದ್ರಪ್ರಸಾದರು ಬೇಗಂ ಲಿಯಾಖತ್ ಅಲಿಖಾನರಿಗೆ ಸಂತಾಪ ಸೂಚಕ ತಂತಿಯನ್ನು ಕಳುಹಿಸಿದರು. ಪ್ರಧಾನಿ ನೆಹರೂರವರೂ ತಂತಿಯನ್ನು ಕಳುಹಿಸಿರುತ್ತಾರೆ. ಈ ದಿನ ಸಂಜೆ ದೆಹಲಿಯಲ್ಲಿ ರಾಜಾಜಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೊಂದು ನಡೆಯುವುದು. ನೆಹರು, ಪ್ರಸಾದ್ ಮತ್ತು ಆಜಾದರವರು ಭಾಷಣ ಮಾಡುವರು. ಭಾರತದ ಸರ್ಕಾರೀ ಕಛೇರಿಗಳಿಗೆ ಇಂದು ಅರ್ಧ ದಿನದ ರಜವನ್ನು ಕೊಡಲಾಗಿದೆ.

ಲಿಯಾಖತ್ ಅಲಿಖಾನರನ್ನು ಹೊಡೆದವನು ಹಜಾರಾ ಎಂಬಲ್ಲಿಂದ ಬಂದಿದ್ದ ಖಾಕ್ಸಾರ್ ಗುಂಪಿನ ಸದಸ್ಯನೆಂದು ಹೇಳಲಾಗಿದೆ. ಅವನು ಅವರ ಎದೆಗೆ ಗುಂಡು ಹೊಡೆದನು. ಕೊಲೆಪಾತಕನನ್ನು ಛಿದ್ರ ಛಿದ್ರವಾಗಿ ಕೊಲ್ಲಲಾಯಿತು.

ಭಾಷಣ ಮಾಡಲು ಅವರು ಸಭೆಗೆ ಬಂದಾಗ ೨೦ ಸಾವಿರ ಜನರು ಘೋಷಣೆ ಮಾಡಿ ಹರ್ಷಧ್ವನಿಗೈದರು. [illegible] ಮೇಲೆ ಅವರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಲಾಯಿತು. ಅವರು ಎದ್ದು ನಿಂತು ಹಲವು ಮಾತುಗಳನ್ನಾಡುವಷ್ಟರಲ್ಲಿಯೇ ಗುಂಡುಗಳು ಹಾರಿದುವು.

ಕೊಲೆಯಾದ ಪಾಕಿಸ್ತಾನದ ಪ್ರಧಾನಿ

ಲಿಯಾಖತ್ ಅಲಿ ಖಾನರವರು

ಮೃತರ ಗೌರವಾರ್ಥವಾಗಿ ಪಾಕಿಸ್ತಾನದ ಕಛೇರಿಗಳನ್ನು ಎರಡು ದಿನಗಳ ಕಾಲ ಮುಚ್ಚಲಾಗುವುದು. ಆ ದೇಶದಲ್ಲೆಲ್ಲಾ ೪೦ ದಿವಸ ಶೋಕ ವಿನಾಚರಣೆಯನ್ನು ನಡೆಸುವಂತೆ ಆಜ್ಞೆಯಾಗಿದೆ.

ಈ ಮಧ್ಯಾಹ್ನ ಜಿನ್ನಾರವರ ಸಮಾಧಿ ಬಳಿ ಅವರ ಅಂತ್ಯ ಸಂಸ್ಕಾರವನ್ನು ಸಮಸ್ತ ಮರ್ಯಾದೆಗಳೊಡನೆ ನಡೆಸಲು ಏರ್ಪಾಡಾಗಿರುತ್ತದೆ.

ಪಾಕಿಸ್ತಾನದ ಗೌರ್ನರ್ ಜನರಲ್ ಆದ ಖ್ವಾಜಾ ನಾಜಿಮುದ್ದೀನರು ಅಲ್ಲಿನ ಪ್ರಧಾನಿಯ ಹುದ್ದೆಯನ್ನು ವಹಿಸಿಕೊಳ್ಳುವರೆಂದು ತಿಳಿದುಬಂದಿದೆ.

ಸಂಸ್ಥಾನದಲ್ಲಿ ಈ ಮಧ್ಯಾಹ್ನ ರಜ

ಲಿಯಾಖತ್ ಅಲಿಖಾನರ ಗೌರವಾರ್ಥವಾಗಿ ಈ ಮಧ್ಯಾಹ್ನ ೨-೩೦ ಗಂಟೆಯಿಂದ ಎಲ್ಲಾ ಶಾಲಾ ಕಾಲೇಜು ಮತ್ತು ಕಛೇರಿಗಳಿಗೂ ರಜಾ ಕೊಡುವಂತೆ ಮೈಸೂರು ಸರ್ಕಾರದ ಆಜ್ಞೆಯಾಗಿದೆ.

ಸಬ್‌ಇನ್ಸ್‌ಪೆಕ್ಟರರ ಮೇಲೆ ಕಾನ್‌ಸ್ಟೇಬಲ್ಲುಗಳ ಧಾಳಿ

ಗುಂಟೂರು ತಾಲ್ಲೂಕು ಪೋಲೀಸ್ ಸಬ್‌ಇನ್ಸ್‌ಪೆಕ್ಟರರು ಪಾನ ನಿರೋಧದ ಸಂಬಂಧವಾಗಿ ಪಡೆದ ಮಾಮೂಲ್ ಹಣದಲ್ಲಿ ತಮಗೆ ಭಾಗಕೊಡಲಿಲ್ಲವೆಂಬ ಕಾರಣಕ್ಕಾಗಿ ಶುಕ್ರವಾರ ಅಲ್ಲಿನ ಜೈಲು ಕಾವಲುಗಾರಿಕೆ ಕೆಲಸದಲ್ಲಿದ್ದ ಹಲವುಮಂದಿ ಕಾನ್‌ಸ್ಟೇಬಲ್ಲುಗಳು ಇನ್ಸ್‌ಪೆಕ್ಟರರ ಕೊಠಡಿಗೆ ಹೋಗಿ, ದೀಪವನ್ನು ಆರಿಸಿ ಅವರನ್ನು ಬಹಳವಾಗಿ ಹೊಡೆದರೆಂದು ವರದಿಯಾಗಿದೆ. ಮತ್ತು ಈ ಘಟನೆಯನ್ನು ಮೇಲಧಿಕಾರಿಗಳಿಗೆ ತಿಳಿಸಬಾರದೆಂದು ಇನ್ಸ್‌ಪೆಕ್ಟರರನ್ನು ಹೆದರಿಸಿ ಅವರಿಂದ ಭರವಸೆಪಡೆದನಂತರ ಅವರನ್ನು ಸುಮ್ಮನೆಬಿಟ್ಟರೆಂದು ಗೊತ್ತಾಗಿದೆ. ಆದರೆ ಇನ್ಸ್‌ಪೆಕ್ಟರರು ಮೇಲಧಿಕಾರಿಗಳಿಗೆ ದೂರುಕೊಟ್ಟನಂತರ ಅವರುಗಳು ಬಂದು ೧೭ ಮಂದಿ ಕಾನ್‌ಸ್ಟೇಬಲ್ಲುಗಳನ್ನು ಸಸ್ಪೆಂಡ್‌ಮಾಡಿ ಮುಂದಿನ ತನಿಖೆ ನಡೆಸುತ್ತಿರುವರೆಂದು ಗೊತ್ತಾಗಿದೆ.

ಈಜಿಪ್ಟ್ ಗಲಭೆಗಾರರಿಗೆ ಬ್ರಿಟಿಷ್ ಸೈನ್ಯದ ಗುಂಡು

ಸೂಯೆಜ್ ಪ್ರದೇಶದಲ್ಲಿರುವ ಒಂದು ಬ್ರಿಟಿಷ್ ಮಿಲಿಟರಿ ಫಲಾಹಾರ ಮಂದಿರಕ್ಕೆ ನೆನ್ನೆ ನುಗ್ಗಿ ಅದನ್ನು ಲೂಟಿ ಮಾಡಿದ ನಂತರ ಬೆಂಕಿಯನ್ನು ಹಚ್ಚಿದ ಈಜಿಪ್ಟ್ ಪ್ರಜೆಗಳ ಮೇಲೆ ಬ್ರಿಟಿಷ್ ಸೈನ್ಯಗಳು ಗುಂಡು ಹಾರಿಸಿದುವೆಂದು ವರದಿಯಾಗಿದೆ. ಸೂಯೆಜ್ ಪ್ರದೇಶಕ್ಕೆ ಹೆಚ್ಚು ಸೈನ್ಯವನ್ನು ಬ್ರಿಟನ್ನು ಕಳುಹಿಸಲಿದೆ. ಅಲ್ಲದೆ ಈಜಿಪ್ಟಿನಲ್ಲಿರುವ ಬ್ರಿಟಿಷ್ ಸೈನ್ಯಗಳು ಆತ್ಮರಕ್ಷಣೆಗೆ ಸಿದ್ಧವಾಗಿರಬೇಕೆಂದು ಸೂಚಿಸಲಾಗಿದೆ.

ಭಾರತೀಯ ಜನ ಸಂಘದ ಶಾಖೆ

ರಾಜಧಾನಿಯ ಸಹಕಾರ ಭವನದಲ್ಲಿ ನೆನ್ನೆ ಸಂಜೆ ನಿವೃತ್ತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಜಿ. ಪರಮಶಿವಯ್ಯನವರ ಅಧ್ಯಕ್ಷತೆಯಲ್ಲಿ ಭಾರತೀಯ ಜನ ಸಂಘದ ಮೈಸೂರು ಶಾಖೆಯನ್ನು ಸ್ಥಾಪಿಸಲಾಯಿತು. ಇದಕ್ಕೆ ಡಾ॥ ಬಿ॥ ಎಂ. ರಾಮಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ಕೆ. ಆರ್. ರಾಮಸ್ವಾಮಿ ಮತ್ತು ಶ್ರೀ ಮರಿಯಪ್ಪನವರುಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಟಿ. ನಾರಾಯಣ, ಚಂದ್ರಶೇಖರ ಜೋಯಿಸ್, ನರಸಿಂಹಯ್ಯ, ಎಂ. ಎಸ್. ವೆಂಕಟಪ್ಪ, ಕೇಶೋಜಿರಾವ್, ವಿ. ಆರ್. ನಾಗರಾಜರಾವ್ ಮುಂತಾದವರನ್ನು ಸಮಿತಿಯ ಸದಸ್ಯರುಗಳನ್ನಾಗಿ ತೆಗೆದುಕೊಳ್ಳಲಾಯಿತು.

ತೃತೀಯ ಯುದ್ಧ ಅತ್ಯಂತ ಭಯಂಕರ

ಮತ್ತೊಂದು ಯುದ್ಧವಾದರೆ ಅದು ಅತ್ಯಂತ ಭಯಂಕರವಾಗುವುದೆಂದು ಬ್ರಿಟನ್ನಿನ ರಕ್ಷಣಾ ಮಂತ್ರಿ ಇಮ್ಯಾನ್ಯುಯಲ್ ಷಿನ್ವೆಲ್‌ರವರು ತಿಳಿಸಿರುತ್ತಾರೆ. ಗುಪ್ತಾಸ್ತ್ರಗಳ ಬಗ್ಗೆ ತಮಗೆ ಅನೇಕ ವಿಷಯಗಳು ತಿಳಿದಿರುವುದೆಂದೂ, ಮತ್ತೊಂದು ಯುದ್ಧವು ಸಂಭವಿಸಿದರೆ, ಹಿಂದಿನದು ಅದರ ಮುಂದೆ ಕೇವಲ ಮಕ್ಕಳಾಟಿಕೆಯಂತಾಗುವುದೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ.

ಕ್ರಿಸ್ತರ ಜಗದ್ಗುರುಗಳಿಗೆ ಘಾತಿಮಾ ದೃಶ್ಯ

ಕಳೆದ ವರ್ಷ ಅಕ್ಟೋಬರ್ ೩೦,೩೧ ಮತ್ತು ನವೆಂಬರ್ ೧ನೇ ತಾರೀಕುಗಳ ಲ್ಲಿ ಸೂರ್ಯನು ಕ್ರಿಸ್ತ ಗುರುಗಳ ನಿವಾಸದ ಉದ್ಯಾನವನದೊಳಗೆ ಇದ್ದು ಒಂದು ದಿವಾಗೂ ಆ ಸಮಯದಲ್ಲಿ ಅಲ್ಲಿ ಓಡಾಡುತ್ತಿದ್ದ ಗುರುಗಳ ಕಣ್ಣಿಗೆ ಘಾತಿಮಾ ದೇವಿಯ ದೃಶ್ಯ ಬಿದ್ದಿತೆಂದೂ ಅವರ ಕೈಕೆಳಗಿನ ಅಧಿಕಾರಿಯೊಬ್ಬರು ಈಗ ತಿಳಿಸಿರುತ್ತಾರೆ ಎಂದೆ ……ರಲ್ಲಿ ಈ ದೃಶ್ಯವು ಕಣ್ಣಿಗೆ ಬಿದ್ದಿತೆಂದು ಹೇಳಲಾಗಿದೆ

ಶೃಂಗೇರಿಗೆ ನಿಸಾಯಿತಿ ಕೊಡಬೇಕೆಂದು ನಿರ್ಣಯ

ಕಳೆದ ……ವಾರ ……ಸಿದ ಅಂ……ತ್ರಾಸಿಸ್ಟ ……ಭಾರತ …… ಸೇವಾ ಸಂಘದ ಸಭೆಯು ……ರಿಗೆ …… ಕಾನೂನನ್ನು ಅನ್ವಯಿಸದಂತೆ ……ತಿ ಕೊಡಬೇಕೆಂದು ಮೈಸೂರು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಿತು.

SRI GAYATHRI,
TALKIES
From 18-10-51 for 3 Days
Daily 3 Shows
Paramount's
FRENCHIE
In Technicolour
Stars Joel McCrea, Shelly Winters
MORNING SHOWS
On 20th and 21st
M. G. M's
FIESTA
In Technicolour

ಕೃಷ್ಣಮೆನನ್ನರ ರಾಜೀನಾಮೆ

ಅನಾರೋಗ್ಯದ ನಿಮಿತ್ತ ಬ್ರಿಟನ್ನಿನಲ್ಲಿ ಭಾರತದ ಪರ ಹೈ ಕಮಿಷನರ್ ಆಗಿರುವ ವಿ ಕೆ ಕೃಷ್ಣಮೆನನ್‌ರವರು ತಮ್ಮ ಹುದ್ದೆಗೆ ರಾಜೀನಾಮೆ ಕೊಡಲಿರುವರೆಂದು ತಿಳಿದುಬಂದಿದೆ. ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿರುವ ವಿಜಯ ಲಕ್ಷ್ಮಿಪಂಡಿತರು ರಾಜೀನಾಮೆ ಇತ್ತು, ಭಾರತದ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಸ್ಪರ್ಧಿಸುವರೆಂದು ಹೇಳಲಾಗಿದೆ ರಫಿ ಅಹಮದ್ ಕಿದ್ವಾಯಿರವರು ಕೇಂದ್ರ ಮಂತ್ರಿಗಳಾಗಿ ಪುನಃ ನೇಮಕವಾಗುವ ಸಂಭವವಿದೆ

ಮಧ್ಯ ಅಮೆರಿಕಾ ರಾಷ್ಟ್ರಗಳ ಒಕ್ಕೂಟ

ಮಧ್ಯ ಅಮೆರಿಕದಲ್ಲಿರುವ ಐದು ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳು ಕಳೆದ ಭಾನುವಾರ ……ಸಭೆ ……ತಮ್ಮ ರಾಷ್ಟ್ರಗಳ ಒಕ್ಕೂಟದ ರಚನಾ ……ಧನೆಗೆ ಒಪ್ಪಿಗೆಯನ್ನು ಸೂಚಿಸಿದರು

THIRTHA & COMPANY,
Narayana Sastry Road,
PHONE . 537
Clearing & Forwarding
AGENTS

ಸುಪ್ರಸಿದ್ಧ
ಮಲೆಯಾಳ ಜ್ಯೋತಿಷ್ಯರು
ಕೆ. ಕುಮಾರಸ್ವಾಮಿ
……ಸಂ …… ಗಂಜದಾಬ ಬಳಿ ……ಪೇಟೆ ಮೈಸೂರು.
ಇವರು ಕರಾರುವಾಕ್ಕಾಗಿಯೂ, ಶಾಸ್ತ್ರೀಯವಾಗಿಯೂ ಭೂತ ಭವಿಷ್ಯದ್ವರ್ತಮಾನಗಳನ್ನು ಹೇಳುತ್ತಾರೆ ಒಂದೇ ವಿಚಾರಿ……

ಕರ್ನಾಟಕದ ಉಮೇದು ವಾರರ ಆಯ್ಕೆ ಬಗ್ಗೆ ಅತೃಪ್ತಿ

ಕರ್ನಾಟಕ ಪ್ರಾಂತ್ಯದಿಂದ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರರನ್ನು ಆರಿಸಿರುವ ಬಗ್ಗೆ ಅಲ್ಲಿನ ಜನರಿಗೆ ಬಹಳ ಅಸಮಾಧಾನವುಂಟಾಗಿರುವುದೆಂದೂ, ಈಗ ಕೇಂದ್ರ ಚುನಾವಣಾ ಸಮಿತಿಗೆ ಸಲ್ಲಿಸಲಾಗಿರುವ ಕರ್ನಾಟಕದ ಉಮೇದುವಾರರ ಪಟ್ಟಿಯಲ್ಲಿ, ಅರ್ಹತೆ ಪಡೆದ ಅನೇಕರ ಹೆಸರುಗಳನ್ನು ಬಿಟ್ಟು ಬಿಡಲಾಗಿದೆಯೆಂದೂ ಕೇಂದ್ರ ಸಮಿತಿಗೆ ದೂರು ಹೋಗಿರುವುದಾಗಿ ಗೊತ್ತಾಗಿದೆ. ಈ ಕಾರಣದಿಂದ ಕೇಂದ್ರ ಸಮಿತಿಯವರು ಕರ್ನಾಟಕದ ಉಮೇದುವಾರಿಕೆ ಪಟ್ಟಿಯನ್ನು ಪರಿಶೀಲಿಸುವಾಗ ಕರ್ನಾಟಕ ಪ್ರದೇಶ ಚುನಾವಣಾ ಸಮಿತಿಯವರೂ ಇರಬೇಕೆಂದು ಕರೆ ಕಳುಹಿಸಿರುವುದಾಗಿ ತಿಳಿದುಬಂದಿದೆ.

ಮಂಚೂರಿಯಾ ಮೇಲೆ ಅಣು ಬಾಂಬು ಹಾಕಬೇಕು

ಕೊರಿಯಾದಲ್ಲಿ ಕಮ್ಯೂನಿಸ್ಟರು ಯುದ್ಧ ಮುಕ್ತಾಯದ ಒಡಂಬಡಿಕೆಗೆ ಬರದಿದ್ದರೆ ಮಂಚೂರಿಯಾ ದೇಶದ ಮೇಲೆ ಅಣು ಬಾಂಬುಗಳನ್ನು ಹಾಕಬೇಕೆಂದು ನ್ಯೂಯಾರ್ಕಿನ ಗೌರ್ನರ್ ಥಾಮಸ್ ಡ್ಯೂಯಿಯವರು ಸೂಚಿಸಿರುತ್ತಾರೆ.

ನಾಟಕರತ್ನ ಜಿ ಎಚ್. ವೀರಣ್ಣನವರ
ಗುಬ್ಬಿ ಕಂಪೆನಿ (ರಿ),
ಮೈಸೂರು ಶಿವರಾಂ ಪೇಟೆಯ
ರತ್ನಾವಳಿ ಥಿಯೇಟರಿನಲ್ಲಿ
8-10-51 ನೇ ಸೋಮವಾರದಿಂದ
ಪ್ರತಿದಿನ ರಾತ್ರಿ 10 ಕ್ಕೆ
ಕುರುಕ್ಷೇತ್ರ
ವಿಶೇಷತೆ:- ಕೃಷ್ಣಭಗವಾನ್, ದೇವರ ಕಣ್ಣಪ್ಪ, ಬಸವೇಶ್ವರ

ದಸರಾ ವಸ್ತು ಪ್ರದರ್ಶನದ ಕೈಪಿಡಿ

ಈ ವರ್ಷದ ದಸರಾ ವಸ್ತು ಪ್ರದರ್ಶನದ ಕೈಪಿಡಿಯು ಆಂಗ್ಲ ಮತ್ತು ಕನ್ನಡ ಭಾಷೆಯ ಎರಡು ಪ್ರತಿಗಳನ್ನು ಸರ್ಕಾರದ ಪ್ರಕಟಣಾಧಿಕಾರಿಗಳು ನಮಗೆ ಕಳುಹಿಸಿರುತ್ತಾರೆ. ಅವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ಕೈಪಿಡಿಯಲ್ಲಿ ಮಂತ್ರಿಗಳಾದ ಶ್ರೀ ಆರ್. ಆರ್. [illegible]ವಾಕರ್, ಶ್ರೀ ಕೆ.ಸಿ. ರೆಡ್ಡಿ, ಶ್ರೀ ಕೆ. [illegible] ಭಾಷ್ಯಂರವರುಗಳೂ, ಶ್ರೀಮತಿ ಯಶೋಧರಾ ದಾಸಪ್ಪ, ಶ್ರೀ ಇ. ವಿ ಗಣೇಶ ಅಯ್ಯರ್, ಶ್ರೀ ಎಂ. ಎ. ಮುತ್ತಣ್ಣ, ಶ್ರೀ ಎಂ. ಆರ್. ಕೃಷ್ಣಮೂರ್ತಿ, [illegible] ಎಂ. ಶಿವರಾಂ, ಶ್ರೀ ಸಿ ನರಸಿಂಹಮೂರ್ತಿ ಮುಂತಾದವರುಗಳಿಂದ ಲೇಖನಗಳು ವಿವಿಧ ವಿಷಯಗಳ ಮೇಲೆ ಬರೆಯಲ್ಪಟ್ಟಿವೆ. ರಾಷ್ಟ್ರಾಧ್ಯಕ್ಷರು, ಪಂಡಿತ [illegible]ಹರೂ, ಶ್ರೀಮನ್ ಮಹಾರಾಜರು, [illegible] ಕೆ. ಸಿ. ರೆಡ್ಡಿ, ಶ್ರೀ ಆರ್. ಚೆನ್ನಿಗರಾಮಯ್ಯ ಮುಂತಾದವರ ಚಿತ್ರಗಳೂ, [illegible]ಸ್ಥಾನದ ಅಭಿವೃದ್ಧಿ ಸೂಚಕನಾದ [illegible]ರ ಸಾಮೂಹಿಕ ಚಿತ್ರಗಳೂ ಪ್ರಕಟವಾಗಿವೆ.

ಶ್ರೀ ಜಗದಾಂಬಾ ಶಿಶುವಿಹಾರ

ನವರಾತ್ರಿಗಾಗಿ ಈಗ್ಯೆ [illegible]ಳಿಂದ ಮುಚ್ಚಲಾಗಿದ್ದ ಮೇಲ್ಕಂಡ ಶಿಶುವಿಹಾರವನ್ನು ಮತ್ತೆ ಕಳೆದ [illegible]ವಾರದಿಂದ ತೆರೆಯಲಾಗಿದೆ. ಮಾತಾಪಿತೃಗಳು ಎಂದಿನಂತೆ ತಮ್ಮ ಮಕ್ಕಳನ್ನು ಕಳುಹಿಸಬೇಕಾಗಿ ಕೋರಲಾಗಿದೆ.

Edited, Printed [illegible]
Published by A. R. Nag-
rajan, at Sadhvi Press [illegible]
Subbiah Road, Mysore.

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿವೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳೀ ಅಂಗಡಿ
ಬೊಂಬಾಯಿ ಆನಂದ ಭವನ ಹೋಟೆಲು ಪಕ್ಕ, ಮೈಸೂರು

ANNOUNCEMENT
With Pleasure We Announce to Our
PATRONS, CLIENTS & WELL-WISHERS
That we have been appointed
Authorised Dealers for
MURPHY RADIOS
For Mysore, Nanjangud, Mandya and Coorg
And we offer them our best attention in this line.
For particulars please write to or call at :-
Messrs. A B I D & Co.,
' MURPHY SALES & SERVICE ',
Statue Square, MYSORE

ಗೌ॥ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ನಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ.,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ಒಲಂಪಿಯಾ
ಪ್ರತಿ ದಿನ 3 ಆಟಗಳು
18-10-51 ರಿಂದ ಜಯಪ್ರದವಾದ ಮೂರನೇ ವಾರ
ಮಲ್ಹಾರ್
[ಇದರ ಜೊತೆಗೆ ಸ್ಕ್ರೀನ್ ನ್ಯೂಸ್ (ಚಿತ್ರ ಜಗದ ಸುದ್ದಿ) ಎಂಬ ವಾಕ್ಯಮುಂಗಿ ಚಿತ್ರವನ್ನು ಪ್ರದರ್ಶಿಸಲಾಗುತ್ತದೆ]
ಇದರಲ್ಲಿ ಚಿತ್ರ ತಯಾರಕರೂ ಮತ್ತು ಶ್ರೇಷ್ಠ ನಟರೂ ಆದ ಅಶೋಕ್ ಕುಮಾರರವರು ತಮ್ಮ ಪತ್ನಿ ಮತ್ತು ಮಕ್ಕಳೊಡನೆ ವಿಹರಿಸುವರು.
ಹಾಲಿವುಡ್ ಚಿತ್ರದ ನಿರ್ದೇಶಕ ಶ್ರೀ ಕೇದಾರ್ ಶರ್ಮರವರನ್ನು ತಮ್ಮ ಅವಿ ಕೆಲಸ ಕಾರ್ಯಗಳೊಡನೆ ನೋಡಲು ನೀವು ಆತುರರಾಗುವಿರಿ.
ಅಲ್ಲದೆ ನಿಮ್ಮ ಮೆಚ್ಚಿನ ಸಂಗೀತಗಾಯಕರಾದ ಮಹಮದ್ ರಫೀ ಮತ್ತು ಲತಾ ಮಂಗೇಶ್ಕರ್ ಇವರುಗಳನ್ನು ನಿರ್ದೇಶಿಸುವ ಸುಪ್ರಸಿದ್ಧ ಸಂಗೀತ ನಿರ್ದೇಶಕರಾದ ರಾಮಚಂದ್ರರವರನ್ನು ಕಾಣಬಹುದು.
ಅಲ್ಲದೆ ನಿಮ್ಮ ಮೆಚ್ಚಿನ ಪ್ರೇಂನಾಥ್, ಸುರೈಯ್ಯ, ಕಾಮಿನಿ ಕೌಶಲ್, ಗೋಪ್, ಶೇಖರ್, ರೆಹನಾ, ಸೋಹರ್ ಮತ್ತು ಮಧುಬಾಲ ಇವರುಗಳನ್ನು ನೋಡಿ ತಪ್ಪಬೇಡಿರಿ.
ಬೆಳಗಿನ ಪ್ರದರ್ಶನ - 18-10-51 ರಿಂದ - 4 ದಿನಗಳು ಮ[illegible]
ಶ್ಯಾಂ, ನಾಸೀರ ಪಾತ್ರವಹಿಸಿರುವ ಚಾಂದನೀ ರಾತ್

- ಮಲೇರಿಯಾಹಾರಿ ಸೊಳ್ಳೆ ಪರದೆಗಳಿಗೆ ಬಾಹುಸಾರ್
ಮಕ್ಕಳ ತೊಟ್ಟಿಲಿಗೆ,ಮಂಚಕ್ಕೆ,ಸಿಂಗಲ್,ಡಬ್ಬಲ್ ಹಾಸಿಗೆಗಳಿಗೆ,ಬಡಬಗ್ಗರಿಗೂ ಸಹ ಅನುಕೂಲವಾದ ಬೆಲೆ.ಬಾಹುಸಾರ್ ಕಂಪೆನಿ,ಬ್ಯಾಂಕ್ ರೋಡ್,ಮೈಸೂ[illegible]

ರಿ. ನಂ. 792 ।ವಂದೇ ಮಾತರಂ। ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೧೮-೧೦-೫೧ [ಸಂಚಿಕೆ ೭೧

ಈಜಿಪ್ಟಿನಲ್ಲಿ ಜರೂರು ಪರಿಸ್ಥಿತಿಯ ಘೋಷಣೆ

ಕಾಂಗ್ರೆಸ್ ಅಧಿವೇಶನದ ಚಪ್ಪರಕ್ಕೆ ಬೆಂಕಿ

...ನವದೆಹಲಿ ...೭, ಅಖಿಲ ಭಾರತ ...ಗ್ರೆಸ್ಸಿನ ವಿಶೇಷಾಧಿವೇಶನಕ್ಕಾಗಿ ನಿ...ಸಲಾಗಿದ್ದ ಸತ್ಯವತಿ ನಗರದಲ್ಲಿ ವಿ...ಪಾಲಂಕಾರವು ಮುಗಿದು ನೆನ್ನೆ ...ಸ್ತರ್ಣವಾಗಿ ದೀಪಗಳನ್ನು ಹತ್ತಿಸಿ ...ಷಾರ್ಟ್ ಸರ್ಕ್ಯೂಟಿನಿಂದ ವಿದ್ಯು...ಯು ಚಪ್ಪರಕ್ಕೆ ಪ್ರವಹಿಸಿ ಅದರ ...ಾಗವು ಬೆಂಕಿಗೆ ಆಹುತಿಯಾಯಿ... ಸಾವಿರ ಜನರು ಕುಳಿತುಕೊ...ಷ್ಟು ವಿಶಾಲವಾಗಿದ್ದ ಚಪ್ಪರ ...ಗಳಲ್ಲಿ ಭಸ್ಮವಾಯಿತು ಅಗ್ನಿ ಶಾ...ಂತ್ರ ಬರುವಷ್ಟರಲ್ಲೇ ಚಪ್ಪರವು ...ವಾಗಿ ಸುಟ್ಟು ಹೋಗಿತ್ತು. ಬೆಂ...ಆರಿಸಲು ಹೋರಾಡಿದ ೭ ಜ...ಂಸೇವಕರುಗಳಿಗೆ ಗಾಯಗಳಾ...ಬೆಂಕಿ ಆರಿಸುವುದರಲ್ಲಿ ತೊಡಗಿ...ಡಿತ ನೆಹರೂರವರನ್ನು ಸ್ವಯಂ...ಬಲಾತ್ಕಾರವಾಗಿ ಹೊರಗೆ ಕ...ು ಅವರ ಪುತ್ರಿ ಇಂದಿರಾ ಗಾಂ...ಿಗೆ ಸ್ವಲ್ಪ ಗಾಯವಾಗಿದೆಯೆಂ...ಳಲಾಗಿದೆ. ೨ ಲಕ್ಷ ರೂ. ಗಳ ...ನಷ್ಟವುಂಟಾಗಿದೆಯೆಂದು ಅಂದಾ...

...ಪಾರ್ಸಲ್ ತೆಗೆಯುವಾಗ ಸಿಡಿತ

...ನ ಎಗ್ಮೋರ್ ರೈಲ್ವೆ ಸ್ಟೇ...ನೆನ್ನೆ ಬಾಣಬಿರುಸುಗಳ ಪಾರ್ಸಲನ್ನು ತೆಗೆಯುವಾಗ ...ವಾಗಿ ೯ ಜನ ಪೋರ್ಟರುಗಳ... ...ವಾಯಿತು

...ಜಶಾಹಿಯಲ್ಲಿ ಉಪ್ಪಿಗೆ ತೀವ್ರ ಅಭಾವ

...ಬಂಗಾಳದ ರಾಜಶಾಹಿ ನಗ...ಪ್ಪೇ ಸಿಗುತ್ತಿಲ್ಲವೆಂದು ತಿಳಿದು...

...ಪ್ರಧಾನಿಯ ಕೊಲೆ ಸಂಬಂಧದಲ್ಲಿ ೩ ಬಂಧನ

...ಸ್ತಾನದ ಪ್ರಧಾನಿ ಲಿಯಾಖತ್ತ... ಸಂಬಂಧವಾಗಿ ಮೂವರನ್ನು ...ಾಗಿದೆ

...ಜಾ ನಾಜಿಮುದ್ದೀನ್ ಪಾಕಿಸ್ತಾನ್ ಪ್ರಧಾನಿ

...ಸ್ತಾನದ ಗವರ್ನರ್ ಜನರಲ್ಲ... ಖ್ವಾಜಾ ನಾಜಿಮುದ್ದೀನರೇ ...ಧಾನಿಯ ಅಧಿಕಾರವನ್ನು ವ...ಡಿರುವರು.

...ಂಡ ಮಾರುತದಿಂದ ...೮ ಮಂದಿ ಮರಣ

...ಭಾನುವಾರ ಜಪಾನಿನಲ್ಲಿ ವಿ...ವಳಿ ನಡೆಸಿದ ಚಂಡಮಾರುತ...ವಾಗಿ ೪೪೮ ಮಂದಿ ಸತ್ತರು ...ಮಂದಿ ಗಾಯಗೊಂಡರು. ...ಂದಿ ಪತ್ತೆಯಿಲ್ಲ. ೧೪೪,೦೦೦ ...ಳೆಯುದ್ದ ಜಮೀನು ಪ್ರವಾಹ...ಯಿತು. ೧೬೭೪೪ ಮನೆಗಳು ...ಮವು. ೮೫,೦೦೦ ಮನೆಗಳಿಗೆ ...ಗಿದೆ. ೧೧೩ ದೋಣಿಗಳು ...ಹೋದುವು. ೮೦೦೦ ನೌಕೆಗ...ಯಿತು. ಒಟ್ಟು ೧೦೦೦ ...ಯಗಳಷ್ಟು ನಷ್ಟವಾಗಿದೆ.

ಶೃಂಗೇರಿ ಜಹಗೀರಿ ಬಗ್ಗೆ ಶ್ರೀಮನ್ಮಹಾರಾಜರ ಭರವಸೆ

ಮೈಸೂರು ೧೮

ಶ್ರೀಮನ್ ಮಹಾರಾಜರನ್ನು ಬೊಂಬಾಯಿಯ ಶೃಂಗೇರಿ ರಕ್ಷಣಾ ಸಮಿತಿಯವರು ನೆನ್ನೆ ಭೇಟಿ ಮಾಡಿದಾಗ ಪ್ರಭುಗಳು ಶೃಂಗೇರಿ ಜಹಗೀರಿಯ ಭವಿಷ್ಯದ ಬಗ್ಗೆ ವಿಶೇಷ ಆಸಕ್ತಿಯನ್ನು ವ್ಯಕ್ತಪಡಿಸಿದರೆಂದು ಗೊತ್ತಾಗಿದೆ ನಿಯೋಗದವರ ಸಲಹೆಯುಗಳನ್ನು ಕುರಿತು ಸರ್ಕಾರದವರು ತಮ್ಮ ಕೈಲಾದುದೆಲ್ಲವನ್ನೂ ಮಾಡುವುದಾಗಿ ಶ್ರೀಮನ್ ಮಹಾರಾಜರು ಭರವಸೆಯಿತ್ತರೆಂದು ತಿಳಿದು ಬಂದಿದೆ

ಶೃಂಗೇರಿ ರಕ್ಷಣಾ ಸಮಿತಿಯವರು ಈ ವಿಷಯವನ್ನು ಕುರಿತು ಮಂತ್ರಿಗಳು ಮತ್ತು ಶಾಸನ ಸಭಾ ಸದಸ್ಯರುಗಳೊಡನೆ ಚರ್ಚಿಸಿದರು. ಶ್ರೀಮನ್ ಮಹಾರಾಜರೇ ಆದಿಯಾಗಿ ಸಕಲರೂ ಈ ಸಂಬಂಧವಾಗಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿರುವರೆಂದು ಸಮಿತಿಯವರು ತಿಳಿಸಿರುತ್ತಾರೆ ಅವರು ಹೇಳಿಕೆಯೊಂದನ್ನು ಇತ್ತು ಶೃಂಗೇರಿ ಮಠದ ಹಿರಿಮೆಯನ್ನು ಮೆಚ್ಚಿ, ಪ್ರಾಚೀನವಾದ ಈ ಅಖಿಲ ಭಾರತ ಸಂಸ್ಥೆಗೆ ಹಿಂದಿನ ಕಾಲದ ರಾಜ ಮಹಾರಾಜರುಗಳೂ, ನವಾಬರೂ, ಬ್ರಿಟಿಷರೂ ಮನ್ನಣೆಯಿತ್ತಿದ್ದರೆಂದು ಹೇಳಿರುವರು. ಮಠದ ಪ್ರಾಚೀನ ವೈಭವವನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕಡಿಮೆ ಮಾಡುವ ಯಾವ ಕಾರ್ಯವೂ ಸಹ ದೇಶಾದ್ಯಂತ ಪ್ರತಿಭಟನೆಗೆ ಅವಕಾಶವೀಯುವುದೆಂದು ಅವರು ಹೇಳಿ ಮೈಸೂರು ಸಂಸ್ಥಾನದ ಮುಖಂಡರು ಶೃಂಗೇರಿಯ ಇನಾಂ ಮಸೂದೆಯ ನಿಬಂಧನೆಗೆ ಒಳಗಾಗದಂತೆ ಮಾಡಲು ಕೈಗೊಂಡಿರುವ ಕಾರ್ಯಗಳಿಗಾಗಿ ಸಂತೋಷವನ್ನು ವ್ಯಕ್ತಪಡಿಸಿರುತ್ತಾರೆ.

ಸಂತಾಪ ಸೂಚನೆ

ಪಾಕಿಸ್ತಾನದ ಪ್ರಧಾನಿ ಲಿಯಾಖತ್ತರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲು ರಾಜಧಾನಿಯ ಮಹಾರಾಜಾ ಕಾಲೇಜು, ಫಸ್ಟ್ ಗ್ರೇಡ್ ಕಾಲೇಜು ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ವಿದ್ಯಾರ್ಥಿಗಳು ನೆನ್ನೆ ಸಭೆ ಸೇರಿದ್ದರು. ಈ ಬಗ್ಗೆ ನ್ಯಾಷನಲ್ ಶಾಲಾ ವಿದ್ಯಾರ್ಥಿಗಳ ಸಭೆಯಲ್ಲಿ ಆದ ನಿರ್ಣಯವನ್ನು ಬೇಗಂ ಲಿಯಾಖತ್ತರಿಗೆ ತಂತಿ ಮೂಲಕ ತಿಳಿಸಲಾಗಿದೆ.

ಆಂಧ್ರ ಪ್ರಾಂತಕ್ಕಾಗಿ ಸತ್ಯಾಗ್ರಹ

ಆಂಧ್ರ ಪ್ರಾಂತ ರಚನೆಗೆ ಕ್ರಮ ಕೈಗೊಳ್ಳದಿದ್ದಲ್ಲಿ ನವೆಂಬರ್ ೧೧ರಿಂದ ಸತ್ಯಾಗ್ರಹ ಹೂಡಲು ನಿರ್ಧರಿಸಿರುವುದಾಗಿ ಸ್ವಾಮಿ ಸೀತಾರಾಂರವರ ಅನುಯಾಯಿ ಗೋಪಾಲರಾವ್‌ರವರು ತಿಳಿಸಿದ್ದಾರೆ. ಧಾನ್ಯ ಸಂಗ್ರಹಣೆಗೆ ತಡೆಯನ್ನುಂಟುಮಾಡಲಾಗುವುದಲ್ಲದೆ ಕ್ಷಾಮಪೀಡಿತ ಪ್ರದೇಶವಾದ ರಾಯಲಸೀಮೆಗೆ ಧಾನ್ಯ ರವಾನೆಯ ಕಾರ್ಯಕ್ರಮಗಳನ್ನು ಕೈಗೊಳ್ಳುವ ವಿಧಾನಗಳಲ್ಲಿ ಸತ್ಯಾಗ್ರಹವನ್ನು ನಡೆಸಲಾಗುವುದೆಂದೂ, ಮೂರು ತಿಂಗಳೊಳಗೆ ಆಂಧ್ರ ಪ್ರಾಂತ ನಿರ್ಮಾಣವಾಗುವಂತೆ ಮಾಡಬಾಗುವುದೆಂದೂ ಅವರು ತಿಳಿಸಿರುವರು

ರೈಲು ಹರಿದು ೮ ಜನರ ಮರಣ

ಬೊಂಬಾಯಿಯ ಕೆಳ ಪರೇಲ್ ಎಂಬಲ್ಲಿ ನೆನ್ನೆ ರಾತ್ರಿ ರೈಲು ಹರಿದು ೫ ಜನ ಸ್ತ್ರೀಯರೂ, ೩ ಮಂದಿ ಗಂಡಸರೂ ಮೃತರಾದರೆಂದೂ, ಇತರ ಐದು ಜನರಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಮೈಸೂರು ಜಿಲ್ಲೆಯಲ್ಲಿ ಮಹಾ ಚುನಾವಣೆ

ಈ ಕೆಳಗೆ ಕಂಡಂತೆ ಮಹಾ ಚುನಾವಣೆಗಳು ಮೈಸೂರು ಜಿಲ್ಲೆಯಲ್ಲಿ ನಡೆಯಲು ಏರ್ಪಾಡಾಗಿದೆ:—

ಮೈಸೂರು ಸಿಟಿ ಉತ್ತರ ಜನವರಿ ೨, ಮೈಸೂರು ಸಿಟಿ ದಕ್ಷಿಣ ೩, ಯಳಂದೂರು ೪, ಟಿ. ನರಸೀಪುರ-ಚಾಮರಾಜನಗರ ೭, ನಂಜನಗೂಡು ೮, ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ ೧೦, ಹುಣಸೂರು ಮೈಸೂರು ತಾಲ್ಲೂಕು ೧೨, ಪಿರಿಯಾಪಟ್ಟಣ-ಕೃಷ್ಣರಾಜನಗರ ೧೫, ಅರಕಲಗೂಡು-ಹೊಳೇನರಸೀಪುರ ೧೭ ಮತ್ತು ನಾಗಮಂಗಲ-ಕೃಷ್ಣರಾಜಪೇಟೆ ೧೯

ನಾಳೆ ಮಧ್ಯಾಹ್ನ ಮಹಿಳೆಯರಿಗೆ ಮಾತ್ರ ಪ್ರದರ್ಶನದಲ್ಲಿ ಪ್ರವೇಶ

ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಮಧ್ಯಾಹ್ನ ಮಹಿಳೆಯರಿಗೆ ಮಾತ್ರ ಪ್ರವೇಶದ ಅವಕಾಶ ಕಲ್ಪಿಸಲಾಗಿದೆಯೆಂದು ಕಾರ್ಯದರ್ಶಿಯವರು ತಿಳಿಸಿರುವರು.

ಈಜಿಪ್ಟಿನಲ್ಲಿ ವಿಶೇಷ ಪರಿಸ್ಥಿತಿ

ಸೂಯೆಜ್ ಕಾಲುವೆ ಪ್ರದೇಶಕ್ಕೆ ಬ್ರಿಟಿಷ್ ಪ್ಯಾರಾಚೂಟ್ ಸೈನ್ಯಗಳು ಹೋಗುತ್ತಿರುವುದಾಗಿ ವರದಿಗಳು ಬಂದಿವೆ. ಈಜಿಪ್ಟ್ ಸರ್ಕಾರದವರು ತನ್ನ ದೇಶದಲ್ಲೆಲ್ಲಾ ಜರೂರು ಪರಿಸ್ಥಿತಿಯುಂಟಾಗಿರುತ್ತದೆಂದು ಘೋಷಿಸಿರುತ್ತಾರೆ. ಆ ದೇಶದಲ್ಲಿ ಹೊಸ ಘಟನೆಗಳೇನೂ ನಡೆದಿಲ್ಲ. ಸೂಯೆಜ್ ಕಾಲುವೆ ಪ್ರದೇಶಕ್ಕೆ ನೀರು ಬಿಡದಿರಲು ಈಜಿಪ್ಟ್ ಜನರು ಪ್ರಯತ್ನಿಸಿದರೆ ಅದನ್ನು ತಡೆಯಲು ಬ್ರಿಟಿಷ್ ಸೈನ್ಯಗಳು ಸಿದ್ಧವಾಗಿವೆ. ಈಜಿಪ್ಟಿನಲ್ಲಿರುವ ಬ್ರಿಟಿಷ್ ಪ್ರಜೆಗಳ ಸಂರಕ್ಷಣೆಯನ್ನು ಮಾಡಲು ಅಲ್ಲಿನ ಸರ್ಕಾರವು ಅಸಮರ್ಥವಾದರೆ, ಅವರಿಗಾಗಿ ಬ್ರಿಟಿಷ್ ಸರ್ಕಾರವೇ ಆ ಕೆಲಸ ಮಾಡಬೇಕಾಗುವುದೆಂದೂ, ಸೂಯೆಜ್ ಪ್ರದೇಶದಲ್ಲಿ ಬ್ರಿಟಿಷ್ ಸೈನ್ಯಗಳು ಇರುವುವೆಂದೂ ಬ್ರಿಟಿಷ್ ವಿದೇಶಾಂಗ ಮಂತ್ರಿಗಳು ತಿಳಿಸಿರುತ್ತಾರೆ.

ಪಾಕಿಸ್ತಾನದ ಹೊಸ ಗೌರ್ನರ್ ಜನರಲ್

ಖ್ವಾಜಾ ನಾಜೀಮುದ್ದೀನರು ಪ್ರಧಾನಿಯವರ ಹುದ್ದೆಯನ್ನು ವಹಿಸಿಕೊಂಡು ಗವರ್ನರ್ ಜನರಲ್ ಸ್ಥಾನಕ್ಕೆ ಇತ್ತ ರಾಜೀನಾಮೆಯನ್ನು ಜಾರ್ಜ್ ದೊರೆಗಳು ಅಂಗೀಕರಿಸಿ, ಅವರ ಸ್ಥಾನದಲ್ಲಿ ಅಲ್ಲಿನ ಹಣ ಕಾಸಿನ ಮಂತ್ರಿ ಗುಲಾಂ ಮಹಮುದ್‌ರವರನ್ನು ನೇಮಿಸಿರುತ್ತಾರೆ.

ಲಿಯಾಖತ್ತರ ಕಟ್ಟ ಕಡೆಯ ಮಾತು

ಗುಂಡಿಗೆ ತುತ್ತಾದ ಪಾಕಿಸ್ತಾನದ ಪ್ರಧಾನಿ ಲಿಯಾಖತ್ತರು ಕಟ್ಟ ಕಡೆಯದಾಗಿ " ಲಾ ಇಲಾಹ್ ಇಲ್ಲಲ್ಲಾಹ್ ಮಹಮದ್ ರಸೂಲ್ ಅಲ್ಲಾ " ಎಂದು ಉಚ್ಚರಿಸಿ ನಂತರ ಮೃತರಾದರೆಂದು ಹೇಳಲಾಗಿದೆ. ಆ ಪದಗಳ ಅರ್ಥ ಹೀಗಿದೆ:— " ಅಲ್ಲಾನಿಗಿಂತ ಬೇರೊಬ್ಬ ದೇವರಿಲ್ಲ ಮತ್ತು ಮಹಮದ್ ಪೈಗಂಬರ್ ದೇವರ ಪ್ರವಾದಿ."

ಲಿಯಾಖತ್ತರ ಕೊಲೆಗಾರ ಆಫ್ಘಾನಿಸ್ತಾನದ ಪ್ರಜೆ

ಪಾಕಿಸ್ತಾನದ ಪ್ರಧಾನಿ ಲಿಯಾಖತ್ತರನ್ನು ಮೊನ್ನೆ ಕೊಂದ ಸೈಯದ್ ಅಕ್ಬರನು ಆಫ್ಘಾನಿಸ್ತಾನದ ಖೋಸ್ಟ್ ಪ್ರದೇಶದ ನಿವಾಸಿಯೆಂದೂ, ಹಲವು ವರ್ಷಗಳಿಂದ ಗಡಿನಾಡಿನ ಹಜಾರಾ ಜಿಲ್ಲೆಯಲ್ಲಿ ಅವನು ವಾಸವಾಗಿದ್ದನೆಂದೂ ಹೇಳಲಾಗಿದೆ. ಅವನನ್ನು ಶೋಧಿಸಿದಾಗ ೨೦೪೦ ರೂ. ಗಳ ನೋಟುಗಳೂ ಅವನ ಅಬೋಟಾಬಾದ್ ನಿವಾಸದಲ್ಲಿ ೧೨,೦೦೦ ರೂ. ನೋಟೂ ದೊರೆತುವೆಂದೂ, ಕೊಲೆಗಾಗಿ ಅವನನ್ನು ದುಡ್ಡು ಕೊಟ್ಟು ಪ್ರೇರೇಪಿಸಲಾಗಿತ್ತೆಂದೂ ವರದಿಯಾಗಿದೆ. ರಾವಲ್ಪಿಂಡಿಯಲ್ಲಿ ಅವನು ಇಳಿದುಕೊಂಡಿದ್ದ ಹೋಟೇಲಿನ ಮಾಲೀಕರು ಮತ್ತಿಬ್ಬರನ್ನು ದಸ್ತಗಿರಿ ಮಾಡಲಾಗಿದೆ ಅವರನ್ನು ಪೊಲೀಸರು ಪ್ರಶ್ನಿಸಲಾಗಿ ಕೊಲೆಗಾರನು ಹೋಟೇಲಿನಲ್ಲಿ ಇಳಿದುಕೊಂಡಾಗ ತಾನು ಸಿ.ಐ.ಡಿ. ಕೆಲಸದ ಮೇಲೆ ಆ ನಗರಕ್ಕೆ ಬಂದಿರುವುದಾಗಿ ಹೋಟೇಲು ಪುಸ್ತಕದಲ್ಲಿ ಬರೆದಿದ್ದನೆಂದು ಅವರುಗಳು ತಿಳಿಸಿರುತ್ತಾರೆ.

ಪೊಲೀಸು ಅಧಿಕಾರಿಗಳ ಮೇಲೆ ವರ್ತಕನ ಕೈ

ಚಿಕ್ಕಮಗಳೂರು ೧೬

ಇಲ್ಲಿನ ಕುಂಜಿ ಅಹಮದ್ ಎಂಬ ಮಲಬಾರಿನ ವ್ಯಾಪಾರಿಯೊಬ್ಬನನ್ನು ದಸ್ತಗಿರಿ ಮಾಡಲು ಹೋದಾಗ ಸಬ್ ಇನ್ಸ್‌ಪೆಕ್ಟರ್ ಅಬ್ದುಲ್ ರಜಾಕ್, ಕಾನ್ಸ್ಟೇಬಲ್ ನಂಜಪ್ಪ ಮತ್ತು ಇನ್ನಿಬ್ಬರು ಪೊಲೀಸರಿಗೆ ವರ್ತಕನು ಹೊಡೆದನೆಂದೂ, ನಂಜಪ್ಪನ ತಲೆಗೆ ಏಟು ಬಿದ್ದಿತೆಂದೂ ಹೇಳಲಾಗಿದೆ. ವರ್ತಕನನ್ನು ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ನಂಜಪ್ಪನನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಸು ಪ್ರ ಸಿ ದ್ಧ

ಮಳೆಯಾಳ ಜ್ಯೋತಿಷ್ಕರು

ಕೆ. ಕುಮಾರಸ್ವಾಮಿ

ಡೋ ನಂ ೧೭ ಸಂಜವಾಡ ಬಹದ್ದೂರು ಛತ್ರ ಮೈಸೂರು

ಇವರು ಕರಾರುವಾಕ್ಕಾಗಿಯೂ ಶಾಸ್ತ್ರೀಯವಾಗಿಯೂ, ಭೂತ ಭವಿಷ್ಯದ್ವರ್ತಮಾನಗಳನ್ನು ಹೇಳುತ್ತಾರೆ ಇಂದೇ ವಿಚಾರಿಸಿ

Edited, Printed and Published by A R Nagarajan, at Sadhvi Press D Subbiah Road, Mysore.

ಕಾಶ್ಮೀರದ ಬಗ್ಗೆ ಒಪ್ಪಂದ ಸಾಧ್ಯವೆಂದು ಗ್ರಹಾಂ

ಕಾಶ್ಮೀರದ ವಿಷಯವಾಗಿ ವಿಶ್ವ ಸಂಸ್ಥೆಯ ಮಧ್ಯಸ್ಥಿಕೆಗಾರರಾದ ಡಾ॥ ಫ್ರಾಂಕ್ ಗ್ರಹಾಂರವರು ಸಲ್ಲಿಸಿರುವ ವರದಿಯಲ್ಲಿ ಭಾರತ ಮತ್ತು ಪಾಕಿಸ್ತಾನಗಳಿಗೆ ಒಪ್ಪಂದವಾಗಲು ಇನ್ನೂ ಅವಕಾಶವಿರುವುದಾಗಿ ಸೂಚಿಸಿರುತ್ತಾರೆ. ಯುದ್ಧರೀತಿಯ ಘೋಷಣೆಗಳನ್ನು ಎರಡು ರಾಷ್ಟ್ರಗಳೂ ಮಾಡದೆ ಪರಸ್ಪರ ಸಂಬಂಧವನ್ನು ಉತ್ತಮಗೊಳಿಸಿಕೊಳ್ಳುವಂತೆ ಭದ್ರತಾ ಸಮಿತಿಯು ಆ ಎರಡು ರಾಜ್ಯಗಳಿಗೆ ಸೂಚಿಸಬೇಕೆಂದು ಅವರ ಶಿಫಾರಸು ಮಾಡಿರುತ್ತಾರೆ.

ನಾಟಕರತ್ನ ಜಿ ಎಚ್ ವೀರಣ್ಣನವರ

ಗುಬ್ಬಿ ಕಂಪೆನಿ (ರಿ),

ಮೈಸೂರು ಶಿವರಾಂ ಪೇಟೆಯ

ರತ್ನಾವಳಿ ಥಿಯೇಟರಿನಲ್ಲಿ

8 10 51 ನೇ ಸೋಮವಾರದಿಂದ

ಪ್ರತಿ ದಿನ ರಾತ್ರಿ 10 ಕ್ಕೆ

ಕುರುಕ್ಷೇತ್ರ

ಪರೀಕ್ಷಿಸಿ – ಕೃಷ್ಣಭಗವಾನ್, ಬೇಡರ ಕಣ್ಣಪ್ಪ, ಬಸವೇಶ್ವರ

WANTED

An experienced graduate qualified to teach English for High School Classes. Apply before 23rd October 1951, with copies of testimonials and full details regarding age, qualifications, previous experience and the minimum salary expected Persons already in service must apply through their employers.

(Sd) P. Gopala Krishna Setty,
Hon. Secretary
Sarada Vilas Educational Institutions, Mysore.

ಆಪೇರಾ ಟಾಕೀಸ್

ಬೆಳಗಿನ ಪ್ರದರ್ಶನ

19-10-51 ರಿಂದ

- ಸಿಂಗಾರ್ -

ಪಾತ್ರ.– ಸುರೈಯ್ಯ, ಜಯರಾಜ್, ಮಗಾರ್ ಜೋಟಿ

ರಾಜಕಮಲ್, ಮೈಸೂರು

19-10-51 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

- ಪಿಚ್ಚೈಕ್ಕಾರಿ - (ಭಿಕ್ಷುಕಿ) ತಮಿಳು

ಅಥವಾ ಜೀವಿತ ನೌಕ

ತಾರಾಗಣ . ಬಿ ಎಸ್. ಸರೋಜ, ಸಿ. ಆರ್. ರಾಜಕುಮಾರಿ, ತಿರುಪ್ಪತು

ಬೆಳಗಿನ ಪ್ರದರ್ಶನ 19-10 51 ರಿಂದ . ೩ ದಿನಗಳು ಮಾತ್ರ

ಸ್ವರ್ಣಲತಾ, ಸ್ನೇಹಪ್ರಭಾ, ಪಹರಿ ಸನ್ಯಾಲ್ ಮುಬಾರಕ್ ಪಾತ್ರ ವಹಿಸಿರುವ ಹಿಂದಿ ಚಿತ್ರ ಪ್ರೀತ್

ಅಮೋಘ ಪ್ರಾರಂಭ : 19-10-51 ರಿಂದ

ಪ್ರತಿ ದಿನ ಮೂರು ಪ್ರದರ್ಶನಗಳು

ಪ್ರಭಾ ಪಿಕ್ಚರ್ ಹೌಸ್

ಫೇಮಸ್ ಪಿಕ್ಚರ್ಸ್‌ರವರ ಪೌರಾಣಿಕ ಹಿಂದಿ ಚಿತ್ರ

* ಮುರಳೀ ವಾಲಾ *

ಪಾತ್ರ.– ವಿಜಯಲಕ್ಷ್ಮಿ, ತಿಲಕಪೂರ್, ಮಗಾರ್ ಜೋಟಿ

ಬೆಳಗಿನ ಪ್ರದರ್ಶನ 19-10-51 ರಿಂದ 4 ದಿನಗಳು ಮಾತ್ರ

ರಂಜಿತ್‌ರವರ ಕ್ರಿಂಸನ್ ಘೋಸ್ಟ್

ಒಲಂಪಿಯಾ *

ಪ್ರತಿ ದಿನ ೩ ಆಟಗಳು

18-10 51 ರಿಂದ ಜಯಪ್ರದವಾದ ಮೂರನೇ ವಾರ

* ಮಲ್ಹಾರ್ - *

[ಇದರ ಜೊತೆಗೆ ಸ್ಕ್ರೀನ್ ನ್ಯೂಸ್ (ಚಿತ್ರ ಜಗದ ಸುದ್ದಿ) ಎಂಬ ವಾಕ್ಚಿತ್ರ ಚಿತ್ರವನ್ನು ಪ್ರದರ್ಶಿಸಲಾಗುತ್ತದೆ]

ಇದರಲ್ಲಿ ಚಿತ್ರ ತಯಾರಕರೂ ಮತ್ತು ಪ್ರೇಕ್ಷ ನಟರೂ ಆದ ಅಶೋಕ್ ಕುಮಾರರವರು ತಮ್ಮ ಪತ್ನಿ ಮತ್ತು ಮಕ್ಕಳೊಡನೆ ವಿಹರಿಸುವರು

ಜೋಗಿಯಾನ್ ಚಿತ್ರದ ನಿರ್ದೇಶಕ ಶ್ರೀ ಕೇದಾರ್ ಶರ್ಮರವರನ್ನು ತಮ್ಮ ... ಕೆಲಸ ಕಾರ್ಯಗಳೊಡನೆ ನೋಡಲು ನೀವು ಶಕ್ತರಾಗುವಿರಿ

ಅಲ್ಲದೆ ನಿಮ್ಮ ಮೆಚ್ಚಿನ ಸಂಗೀತಗಾರರಾದ ಮಹಮದ್ ರಫೀಕ್ ಮತ್ತು ಲತಾ ಮಂಗೇಶ್ಕರ್ ಇವರುಗಳನ್ನು ನಿರ್ದೇಶಿಸುವ ಸುಪ್ರಸಿದ್ಧ ಸಂಗೀತ ನಿರ್ದೇಶಕರಾದ ಶ್ರೀ ರಾಮಚಂದ್ರರವರನ್ನು ಕಾಣಬಹುದು

ಅಲ್ಲದೆ ನಿಮ್ಮ ನೆಚ್ಚಿನ ಪ್ರೇಂನಾಥ್, ಸುರೈಯ್ಯ, ಕಾಮಿನಿ ಕೌಶಲ್, ಗೋಪ್, ದೀಕ್ಷಿತ್, ರೆಹನಾ, ನೋಹರ್ ಮತ್ತು ಮಧುಬಾಲ ಇವರುಗಳನ್ನು ನೋಡಲು ತಪ್ಪಬೇಡಿರಿ.

ಬೆಳಗಿನ ಪ್ರದರ್ಶನ 18-10-51 ರಿಂದ ೪ ದಿನಗಳು ಮಾ

ಶ್ಯಾಂ, ನಾಸೀಂ ಪಾತ್ರವಹಿಸಿರುವ ಚಾಂದನೀ ರಾತ್

ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸು

ಮೈಸೂರು, ತಾರೀಖು 1-10-1951

ನೋಟಿಫಿಕೇಷನ್

ಮೈಸೂರು ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂಗೆ 1952 ಜನವರಿ ಒಂದರ ಲಾಗಾಯ್ತು 31ನೇ ಡಿಸೆಂಬರ್ ಪರ್ಯಂತರ ಆಗುವ ಒಂದು ವರ್ಷಕ್ಕೆ ಬೇಕಾಗುವ ಈ ಕೆಳಗೆ ನಮೂದಿಸಿರತಕ್ಕ ಐಟಂಗಳ ಸರಬರಾಜು ಬಗ್ಗೆ ಮೈಸೂರು ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರು ತಮ್ಮ ಆಫೀಸಿನಲ್ಲಿ ನವೆಂಬರು ಮಾಹೆ 6ನೇ ತಾರೀಖು ಮಂಗಳವಾರ ಕೆಳಗೆ ಕಂಡ ಕಾಲಗಳಲ್ಲಿ ಮೊಹರಾದ ಫುಲಸ್ಕೇಪು ಸೈಜಿನ ನಾಲ್ಕು ಪ್ರತಿಗಳುಳ್ಳ ಟೆಂಡರುಗಳನ್ನು ತೆಗೆದುಕೊಳ್ಳುತ್ತಾರೆ.

1 ರೊಟ್ಟಿ	--	ದಿವ	9-30
2 ಪ್ಯಾಸ್ಚುರೈಸ್ಡ್ ಹಾಲು	—	ದಿವ	10-30
3 ಆಹಾರ ಸಾಮಗ್ರಿ ವಗೈರೆ	—	ದಿವ	11 30

ಹೆಚ್ಚಿನ ವಿವರಗಳನ್ನು ಮೈಸೂರು ಸ್ಯಾನಿಟೋರಿಯಂ ಸೆಕ್ರೆಟರಿಯವರ ಆಫೀಸಿನಲ್ಲಿ ಪಡೆಯಬಹುದು.

(ರುಜು) ಎನ್. ಕೃಷ್ಣಮೂರ್ತಿ,
ಸೆಕ್ರೆಟರಿ,
ಪಿ. ಕೆ. ಸ್ಯಾನಿಟೋರಿಯಂ ಆಫೀಸು

ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್

ವಾಣಿವಿಲಾಸ ಮಾರ್ಕೆಟ್, ಮೈಸೂರು.

ಪ್ರಕಟಣೆ

ಮೇಲ್ಕಂಡ ಸೊಸೈಟಿಯ 32ನೇ ವಾರ್ಷಿಕ ಮಹಾ ಸಭೆಯು

ಇದೇ 21—10—51ನೇ ಭಾನುವಾರ

ರಾವ್ ಬಹದ್ದೂರ್, ಧರ್ಮ ಪ್ರಕಾಶ

ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ, ಬೆಳಗ್ಗೆ 8.30 ಘಂಟೆಯಿಂದ ಕಾರ್ಯಕ್ರಮದ ಪ್ರಾರಂಭವೂ,

ಮಧ್ಯಾಹ್ನ 3 ಘಂಟೆಯಿಂದ 7 ಘಂಟೆಯವರೆಗೆ

ಡೈರೆಕ್ಟರುಗಳ ಚುನಾವಣೆಯೂ ನಡೆಯುತ್ತವೆ

ರಿಪೋರ್ಟ್ ಕಾಪಿಗಳನ್ನು ಪೋಸ್ಟ್ ಮೂಲಕ ಎಲ್ಲಾ ಮೆಂಬರುಗಳಿಗೆ ಕಳುಹಿಸಿರುತ್ತೆ. ರಿಪೋರ್ಟು ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನವೆಂದು ತಿಳಿದು ಎಲ್ಲಾ ಮೆಂಬರುಗಳೂ ಮೇಲೆ ಸೂಚಿಸಿರುವ ವೇಳೆಗಳಿಗೆ ದಯಮಾಡಿಸಬೇಕಾಗಿ ಈ ಮೂಲಕ ಕೋರಿದೆ

ಕಾರ್ಯನಿರ್ವಾಹಕ ಮಂಡಲಿಯ ಪರವಾಗಿ

ಮೈಸೂರು
ತಾ॥ 17-10-51

ಬಿ. ಆರ್. ನಾಯ್ಡು,
ಎಂ. ಎನ್. ರಾಮಸ್ವಾಮಿ ಬಿ. ಎ.
ಗೌ॥ ಕಾರ್ಯದರ್ಶಿಗಳು.

ಗೌ॥ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯಶೆಟ್ಟಿ ಬಿ ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿಜಿ ನಂ. 792 । ವಂದೇ ಮಾತರಂ । ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೧೯-೧೦-೫೧ [ಸಂಚಿಕೆ ೬೨

ಈಜಿಪ್ಟ್ ಮತ್ತು ಬ್ರಿಟಿಷ್ ಸೈನ್ಯಗಳಿಗೆ ಘರ್ಷಣೆ

ಬ್ಯಾಂಕ್ ಚುನಾವಣೆ ನಡೆಸದಂತೆ ತಡೆ ಆಜ್ಞೆ

ಮೈಸೂರು ೧೯

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಸಮಿತಿಗೆ ...ನಡೆಯಬೇಕಾದ ಚುನಾವಣೆ ನಡೆಸಕೂಡದೆಂದು ಸಹಕಾರ ...ಳ ಅಸಿಸ್ಟೆಂಟ್ ರಿಜಿಸ್ಟ್ರಾರರಾದ ...ರುದ್ರಪ್ಪನವರು ನೆನ್ನೆ ಆಜ್ಞೆ ...ರು. ಡಾ|| ಬಿ. ಎಸ್ ಸೂರ್ಯ...ನಾರಾಯಣರನ್ನು ಸಂಘದ ಸದ...ದ ಬ್ಯಾಂಕಿನ ಸಾಧಾರಣ ಸಭೆ ...ಸುಮತ ನಿರ್ಣಯದ ಮೇಲೆ ...ವಾಕಿದ ಸಂಬಂಧವಾಗಿ ಶ್ರೀ ರಾ...ತ|| ರಿಜಿಸ್ಟ್ರಾರರಲ್ಲಿ ಅಪೀಲು ...ರು. ಈ ಬಗ್ಗೆ ಅವರು ಆಜ್ಞೆ ...ತ್ತು ಅಪೀಲನ್ನು ಪರಿಶೀಲಿಸುವ ...ನಿರ್ಣಯವನ್ನು ಜಾರಿಯನ್ನು ...ಬೇಕೆಂದು ಆಜ್ಞೆ ಮಾಡಿದ್ದರು ...ನವರು ಈಗ ಡೈರೆಕ್ಟರುಗಳ ಸ...ಹೊಸ ಚುನಾವಣೆಯನ್ನು ...ದ್ದರು.

...ರಸ್ತೆಗಳಿಗೆ ಟಾರ್ ಹಾಕಲು ೫ ಲಕ್ಷ ರೂ. ಸಾಲ

...ಧಾನಿಯ ವಿವಿಧ ರಸ್ತೆಗಳಿಗೆ ...ಹಾಕುವ ಸಂಬಂಧವಾಗಿ ನೆಚ್ಚ ...ಸುಮಾರು ೫ ಲಕ್ಷ ರೂ ...ಸೂರು ಬ್ಯಾಂಕಿನಿಂದ ಓವರ್ ...ಆಗಿ ಪಡೆಯಲು ಸರ್ಕಾರದ ...ರದ ಪೌರಸಭೆಯವರಿಗೆ ಅನು...ಕೊಟ್ಟಿರುತ್ತಾರೆ ಕೆಲ್ಲ ಹೊಸ ...ರುವ ವೀಳೆಯದೆಲೆ ತೋಟಗಳ ...ವಹಿಸಿಕೊಳ್ಳಲು ಮೈಸೂರಿನ ...ಯವರು ಮಾಡಿರುವ ಏರ್ಪಾ...ಡನ್ನು ಸರ್ಕಾರದವರು ಒಪ್ಪಿಗೆಯನ್ನು ...ತ್ತಾರೆ.

ಹೈದರಾಬಾದಿಗೆ ಶ್ರೀ ಮುನ್ಶಿ ಮಹಾರಾಜರ ಭೇಟಿ

...ರಾಬಾದು ಸಂಸ್ಥಾನಕ್ಕೆ ಭೇಟಿ ...ಕೆಂದು ಅಲ್ಲಿನ ಸರ್ಕಾರದವರು ...ಹ್ವಾನವನ್ನು ಶ್ರೀ ಮುನ್ಶಿಯವರು ...ಅಂಗೀಕರಿಸಿರುತ್ತಾರೆ ಭೇಟಿ ...ವು ಇನ್ನೂ ಗೊತ್ತಾಗಿಲ್ಲ

...ಮತ್ತು ಉಕ್ಕಿನ ಕಾರ್ಖಾನೆ ...ಕೆಲಸಗಾರರಿಗೆ ಬೋನಸ್ಸು

...ವತಿಯ ಕಬ್ಬಿಣ ಮತ್ತು ಉ...ರ್ಖಾನೆಯ ಕಾರ್ಮಿಕರಿಗೆ ಎರ...ಳ ಸಂಬಳದ ಬೋನಸ್ಸನ್ನು ...ರೆಂದು ಸರ್ಕಾರದವರು ಮಾಡಿ ...ಪ್ರಕಾರ ಸುಮಾರು ೬ ಸಾ...ರಿಗೆ ಇದನ್ನು ಹಂಚಲಾಗು...

...ಸೂರು ಬಳಿ ಸಿಡಿಲು ಅನಾಹುತ

...ಸೂರು ತಾಲ್ಲೂಕು ಬೋಳನ...ಹಳ್ಳಿಗೆ ೧ ಮೈಲಿ ದೂರ ಇರು...ಅರಳೀ ಮರಕ್ಕೂ, ಮರದ ...ಕಟ್ಟಿದ್ದ ಮೇಕೆಗಳಿಗೂ ಕಳೆದ ೧೨ ...ಸಿಡಿಲು ಹೊಡೆದುದರಿಂದ ೩೩ ...ಸತ್ತಿರುತ್ತವೆ. ಮೇಕೆಗಳನ್ನು ...ಕಾಯುತ್ತಿದ್ದ ಇಬ್ಬರು ಬಾಲಕರಿಗೂ ...ಗಾಯವಾಗಿ ಒಬ್ಬನನ್ನು ಮೈಸೂರಿನ ...ಕೃಷ್ಣರಾಜೇಂದ್ರ ಆಸ್ಪತ್ರೆಗೂ ಮತ್ತೊಬ್ಬನನ್ನು ವಿಳಕೇರಿ ಆಸ್ಪತ್ರೆಗೂ ಸಾಗಿಸ...ಗಿದೆ

ಕಾಂಗ್ರೆಸ್ ಸಂಸ್ಥೆಯ ಪುನರ್ವ್ಯವಸ್ಥೆ

ಮಹಾಧಿವೇಶನದಲ್ಲಿ ಅಧ್ಯಕ್ಷ ನೆಹರೂರವರ ಸೂಚನೆ

ಕಾಂಗ್ರೆಸ್ಸಿನ ವಿಶೇಷ ಅಧಿವೇಶನವು ನೆನ್ನೆ ದಿಹಲಿಯಲ್ಲಿ ಸೇರಿತು. ಪಂಡಿತ ನೆಹರೂರವರು ಅಧ್ಯಕ್ಷತೆ ವಹಿಸಿದ್ದರು. ನೆನ್ನೆ ಬೆಳಗ್ಗೆ ಅಧ್ಯಕ್ಷರು ಕಾಂಗ್ರೆಸ್ಸಿನ ಧ್ವಜವನ್ನು ಹಾರಿಸಿದರು.

ಅಧಿವೇಶನದಲ್ಲಿ ಅಧ್ಯಕ್ಷ ಭಾಷಣ ಮಾಡಿ ಕಾಂಗ್ರೆಸ್ಸಿನವರು ಸಂಕುಚಿತ ಮ...ಭಾವಗಳನ್ನು ತೊರೆಯಬೇಕೆಂದು ನೆಹರೂರವರು ಸೂಚಿಸಿದರು. ಕಾಂಗ್ರೆಸ್ಸು ತನ್ನ ಹಿಂದಿನ ಘನತೆಯನ್ನು ಹೊಂದುವ ತೆ ನವಾನಲು ಶ್ರಮಿಸಬೇಕೆಂದು ತಿಳಿಸಿದರು. ಕಾಂಗ್ರೆಸ್ಸು ಕೇವಲ ಒಂದು ರಾಜಕೀಯ ಪಕ್ಷವಲ್ಲ ಎಂದೂ ಲೋಕಸೇವಾ ಸಂಘ ಎಂದೂ ಆ ಸಂಸ್ಥೆಗೆ ವಿಶ್ವಾಸವನ್ನು ತೋರಿಸುತ್ತಿರುವವರೆಂದೂ ಅದರಿಂದ ಕಾಂಗ್ರೆಸ್ಸಿನವರು ಆ ಭಾವನೆಯನ್ನೇ ಬೆಳಸಿಕೊಂಡು ಬರಬೇಕೆಂದೂ ಅವರು ಅಭಿಪ್ರಾಯಪಟ್ಟರು.

ಸಾರ್ವತ್ರಿಕ ಚುನಾವಣೆಗಳ ಪ್ರಾಮುಖ್ಯತೆಯನ್ನು ಅವರು ವಿವರಿಸಿ, ದಾಸ್ಯದ ಭಯ ಸರ್ಕಾರವನ್ನು ಅದು ರೂಪಿಸಬಲ್ಲದೆಂಬ ಒಂದೇ ದೃಷ್ಟಿಯಿಂದ ಅದನ್ನು ಪರಿಗಣಿಸಿ, ಮೂಲಭೂತ ವಿಷಯಗಳನ್ನು ಮರೆಯುವುದು ಸರಿಯಲ್ಲವೆಂದು ಹೇಳಿದರು. ಪ್ರಾಂತೀಯ ಭಾವನೆಯನ್ನು ಹೆಚ್ಚಿಸುವುದು ಒಳ್ಳೆಯದಲ್ಲವೆಂದು ಅವರು ಅಭಿಪ್ರಾಯಪಟ್ಟು ಗಾಂಧಿಜಿಯವರ ತತ್ವಗಳನ್ನು ರಾಷ್ಟ್ರವು ಸದಾ ನೆನಪಿನಲ್ಲಿಡಬೇಕೆಂದು ಸೂಚಿಸಿದರು. ಇಂದಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಕಾಂಗ್ರೆಸ್ ರೀತಿ ನೀತಿಗಳನ್ನೂ ಸಂಸ್ಥೆಯನ್ನೂ ಪುನರ್ವ್ಯವಸ್ಥೆಗೊಳಿಸಬೇಕೆಂದು ಹೇಳಿದರು.

ಅಧಿವೇಶನದಲ್ಲಿ ನೆರೆದಿದ್ದ ... ಸಾವಿರ ಪ್ರತಿನಿಧಿಗಳೂ ಮತ್ತು ... ಸಾವಿರ ಪ್ರೇಕ್ಷಕರೂ ಸಹಾ ಏಕ ಕಂಠದಿಂದ ನೆಹರೂರವರ ಭಾಷಣವನ್ನು ಸ್ವಾಗತಿಸಿದರು. ರಾಜಾಜಿಯವರು ಮಂಡಿಸಿದ ವಿದೇಶಾಂಗ ನೀತಿಯ ನಿರ್ಣಯವೂ ಸಹಾ ಏಕಾಭಿಪ್ರಾಯದಿಂದ ಅಂಗೀಕೃತವಾಯಿತು.

ಆಚಾರ್ಯ ಕೃಪಲಾನಿಯವರು ವಿಶೇಷ ಆಹ್ವಾನಿತರಾಗಿ ವೇದಿಕೆಯ ಮೇಲೆ ಕುಳಿತಿದ್ದರು

೦ಮಲಬಾರ್, ಮಂಗಳೂರು ಮತ್ತು ನೀಲಗಿರಿ ಜಿಲ್ಲೆಗಳಲ್ಲಿ ಅಕ್ಕಿ ಪಡಿತರವನ್ನು ನಾಳಿದ್ದಿನಿಂದ ೬ ಔನ್ಸಿನಿಂದ ೫ಕ್ಕೆ ಇಳಿಸಲಾಗುವುದು. ಇದರೊಟ್ಟಿಗೆ ೧೨ ಔನ್ಸಿನ ಪಡಿತರವು ಮಾತ್ರ ಇದ್ದೇ ಇರುವುದು.

ಸೀಮೆಯೆಣ್ಣೆ ಪರ್ಮಿಟ್ ರದ್ದು

ಬೆಂಗಳೂರು ೧೯

ಸೀಮೆಯೆಣ್ಣೆಯ ಸರಬರಾಜು ಸುಗಮವಾಗಿಯೂ ಧಾರಾಳವಾಗಿಯೂ ಆಗುತ್ತಿರುವುದರಿಂದ ಮೈಸೂರು ಸರ್ಕಾರದವರು ಅದರ ಮೇಲಿನ ಪರ್ಮಿಟ್ ಪದ್ಧತಿಯನ್ನು ರದ್ದುಪಡಿಸುತ್ತಾರೆ ಸೀಮೆಯೆಣ್ಣೆಯ ಒಳ, ಹೊರಾಟ ಮುಂತಾದವುಗಳ ಮೇಲೆ ಎಲ್ಲ ನಿರ್ಬಂಧಗಳೂ ಹೋಗಿ ಯಾರು ಬೇಕಾದರೂ ಅದನ್ನು ವ್ಯಾಪಾರ ಮಾಡಲು ಪರ್ಮಿಟ್ಟಿಲ್ಲದೆ ಹಿಂದಿನಂತೆ ಅವಕಾಶವಾಗಿದೆ

ಬ್ರಿಟಿಷ್ ಸೈನಿಕರ ದಸ್ತಗಿರಿಗೆ ಈಜಿಪ್ಟ್ ಸರ್ಕಾರದ ಆಜ್ಞೆ

ಸೂಯೆಜ್ ಕಾಲುವೆ ಪ್ರದೇಶದ ಹೊರಗಡೆ ಇರುವ ಎಲ್ಲ ಬ್ರಿಟಿಷ್ ಸೈನಿಕರನ್ನೂ ದಸ್ತಗಿರಿ ಮಾಡಬೇಕೆಂದು ಈಜಿಪ್ಟ್ ಸರ್ಕಾರವು ತನ್ನ ಪೋಲೀಸು ಸಿಬ್ಬಂದಿಗೆ ಆಜ್ಞಾಪಿಸಿರುತ್ತದೆ. ಬ್ರಿಟನ್ನಿನ ಮೇಲೆ ಈಜಿಪ್ಟು ಯುದ್ಧ ಘೋಷಿಸಬೇಕೆಂದು ಫಾದ್ ವಿಶ್ವವಿದ್ಯಾನಿಲಯದ ೧೦ ಸಾವಿರ ವಿದ್ಯಾರ್ಥಿಗಳು ಬೇಡಿಕೆಯನ್ನಿಟ್ಟಿರುತ್ತಾರೆ. ನೊನ್ನೆ ಸೂಯೆಜ್ ಪ್ರದೇಶದ ಹೊಸೇಲಿನಲ್ಲಿ ನಡೆದ ಘರ್ಷಣೆಯ ನಂತರ ಬ್ರಿಟಿಷ್ ಸೈನ್ಯಗಳು ಆ ನಗರವನ್ನು ಪರಿತ್ಯಜಿಸಿವೆ

ದೇಹ ಸ್ಪರ್ಧೆಗಾಗಿ ಬಹುಮಾನ

ದಸರಾ ವಸ್ತು ಪ್ರದರ್ಶನದ ಸಮಯದಲ್ಲಿ ನಡೆಯುವ ಪ್ಲಾಸ್ಟಿಕ್ ಡ್ರೈವ್ ಪಂದ್ಯಗಳಲ್ಲಿ ಜಯಶೀಲರಾಗುವವರಿಗೆ ಒಂದು ಬೆಳ್ಳಿಯ ರೋಲಿಂಗ್ ಬಟ್ಟಲನ್ನು ರಾಜಧಾನಿಯ ಕೆ ವಿ ಮೋಟಾರು ಸರ್ವಿಸ್ಸಿನ ಮಾಲೀಕರಾದ ಮೆ|| ಕೆ. ವಿ. ಮುನಿಸ್ವಾಮಿ ಶೆಟ್ಟಿ ಮತ್ತು ಸನ್ಸ್ ರವರು ಕೊಟ್ಟಿರುತ್ತಾರೆ

ಮೈಸೂರು ಪ್ರದೇಶದ ಪ್ರಜಾ ಪಕ್ಷದ ಸಮ್ಮೇಳನ

ಮೈಸೂರು ಪ್ರದೇಶದ ಕಿಸಾನ್ ಮಜದೂರ್ ಪ್ರಜಾ ಪಕ್ಷದ ಸಮ್ಮೇಳನವು ಈ ತಿಂಗಳು ೨೭ನೇ ತಾ|| ಬೆಂಗಳೂರಿನಲ್ಲಿ ನಡೆಯುವುದು ಆಚಾರ್ಯ ಕೃಪಲಾನಿಯವರು ಇದರಲ್ಲಿ ಭಾಗವಹಿಸುವರು. ಅವರು ೨೫ನೇ ತಾ|| ಬೆಂಗಳೂರಿಗೆ ಬರುವರು. ೪ ದಿವಸಗಳ ಕಾಲ ಸಂಸ್ಥಾನದಲ್ಲಿ ಸಂಚಾರ ಮಾಡುವರು.

ಬ್ರಿಟಿಷ್ ಸೈನ್ಯಗಳ ಮೇಲೆ ಈಜಿಪ್ಟ್ ಯೋಧರ ಗುಂಡು

ಈಜಿಪ್ಟಿಗೂ, ಹತ್ತಿರದ ಪೂರ್ವ ನಾಡುಗಳಿಗೂ ಸಂಬಂಧವನ್ನು ಕಲ್ಪಿಸುವ ರಸ್ತೆ ಮತ್ತು ರೈಲು ಮಾರ್ಗಗಳ ಏಕಮಾತ್ರ ಸೇತುವೆಯನ್ನು ನೆನ್ನೆ ಬ್ರಿಟಿಷ್ ಸೈನ್ಯಗಳು ವಶಪಡಿಸಿಕೊಂಡುವು ಇದಕ್ಕೆ ಮುಂಚೆ ಈಜಿಪ್ಟ್ ಸೈನಿಕರು ಬ್ರಿಟಿಷ್ ಸೈನ್ಯಗಳ ಮೇಲೆ ಪೂರ್ವಭಾವಿ ಎಚ್ಚರಿಕೆಯನ್ನೂ ಸಹ ಕೊಡದೆ ಗುಂಡು ಹಾರಿಸಿದರು. ಉಭಯರಿಗೂ ಘರ್ಷಣೆಯಾಗಿ ಕೊನೆಗೆ ಸೇತುವೆಯನ್ನು ಬ್ರಿಟಿಷರು ಆಕ್ರಮಿಸಿದರು. ಈ ಘರ್ಷಣೆಯಲ್ಲಿ ಇಬ್ಬರು ಈಜಿಪ್ಟಿನವರು ಮಡಿದು, ೫ ಜನರಿಗೆ ಗಾಯಗಳಾದುವು. ಬ್ರಿಟಿಷರ ಕಡೆ ಏನೂ ಆಗಲಿಲ್ಲ ಈ ಸುದ್ದಿಯ ಮೇಲೆ ಕೆಲವು ಕಾಲ ತಡೆ ಹಾಕಲಾಗಿತ್ತು.

ಸಗಣಿಯ ಹವೆಯಿಂದ ಬೆಳಕು ಮತ್ತು ಶಾಖ

ದನಗಳ ಸಗಣಿ ಮತ್ತು ಮನುಷ್ಯರ ಹೇಸಿಗೆ ಇವುಗಳಿಂದ ಒಂದು ಬಗೆಯ ಗ್ಯಾಸನ್ನು ಉತ್ಪನ್ನ ಮಾಡಿ ಅದರಿಂದ ಬೀದಿಯ ದೀಪಗಳು ಮತ್ತು ಅಡಿಗೆ ಮಾಡುವ ಪ್ರಯೋಗವು ಹೈದರಾಬಾದಿನಲ್ಲಿ ನಡೆದಿದೆ ಅಲ್ಲಿನ ಒಂದು ಹಳ್ಳಿಯಲ್ಲಿ ೨೦ ದೀಪಗಳಿಗಾಗುವಷ್ಟು ಗ್ಯಾಸನ್ನು ತಯಾರಿಸುವ ಯಂತ್ರವನ್ನು ಸ್ಥಾಪಿಸಿ, ಬರುವ ದೀಪಾವಳಿಯಿಂದ ಬೆಳಕುಂಟು ಮಾಡಲು ವ್ಯವಸ್ಥೆಯಾಗಿದೆ

ಪಶ್ಚಿಮ ಬಂಗಾಳದಲ್ಲಿ ಹಸಿವಿನಿಂದ ೬ ಮರಣ

ಪಶ್ಚಿಮ ಬಂಗಾಳದ ಸುಂದರ ವನಗಳಲ್ಲಿ ೬ ಜನರು ಹಸಿವಿನ ಬಾಧೆಯನ್ನು ತಡೆಯಲಾರದೆ ಮೃತಪಟ್ಟಿರುವರೆಂದು ಅಲ್ಲಿನ ಪ್ರಜಾ ಪಕ್ಷದ ಮುಖಂಡರಾದ ಡಾ|| ಸುರೇಶ್ ಬ್ಯಾನರ್ಜಿಯವರು ತಿಳಿಸಿರುತ್ತಾರೆ

ಆಂಧ್ರ ಪ್ರಾಂತಕ್ಕಾಗಿ ಸತ್ಯಾಗ್ರಹದ ಪಂಜು

ವಿಶಾಖಪಟ್ಟಣದ ವರಾಹ ನರಸಿಂಹಸ್ವಾಮಿ ದೇವಾಲಯದಲ್ಲಿ ನೊನ್ನೆ ಸ್ವಾಮಿ ಸೀತಾರಾಂರವರು ಆಂಧ್ರ ಪ್ರಾಂತದ ಬಗ್ಗೆ ಮೊದಲಾಗುವ ಸತ್ಯಾಗ್ರಹದ ಪಂಜನ್ನು ಹತ್ತಿಸಿದರು. ಈ ಪಂಜು ಸರ್ವೋದಯದ ಮಾದರಿಯ ಕ್ರಾಂತಿಯನ್ನು ಸೂಚಿಸುವುದೆಂದು ಸ್ವಾಮಿಜಿಯವರು ಅಭಿಪ್ರಾಯಪಟ್ಟಿರುವರು. ಆಂಧ್ರದ ೧೧ ಜಿಲ್ಲೆಗಳ ಮುಖ್ಯ ನಗರಗಳಿಗೂ ಮತ್ತು ಹಳ್ಳಿಗಳಿಗೂ ಈ ರೀತಿಯ ಪಂಜುಗಳನ್ನು ಕೊಂಡೊಯ್ಯಲಾಗುವುದೆಂದು ಹೇಳಲಾಗಿದೆ.

ಎಂ. ಶಂಕರಯ್ಯನವರ ಉಮೇದುವಾರಿಕೆ

ಪಾರ್ಲಿಮೆಂಟಿನಲ್ಲಿ ಈಗ ಸದಸ್ಯರಾಗಿರುವ ಮೈಸೂರಿನ ಶ್ರೀ ಎಂ. ಶಂಕರಯ್ಯನವರನ್ನು ಪಾರ್ಲಿಮೆಂಟ್ ಅಥವಾ ಸ್ಥಳೀಯ ಶಾಸನ ಸಭೆಗೆ ನಿಲ್ಲಿಸದಿದ್ದರೆ, ಮಂಡಿ ಮತ್ತು ಲಷ್ಕರ್ ನಿವಾಸಿಗಳಿಗೆ ತುಂಬಾ ವ್ಯಾಕುಲವಾಗುವುದೆಂದು, ಅಲ್ಲಿನವರು ಭಾರತದ ಕಾಂಗ್ರೆಸ್ ಅಧ್ಯಕ್ಷರಿಗೂ, ಮೈಸೂರು ಕಾಂಗ್ರೆಸ್ಸಿನ ಚುನಾವಣಾ ಸಮಿತಿಯವರಿಗೂ ತಂತಿಯನ್ನು ಕಳುಹಿಸಿರುತ್ತಾರ.

ನೆಹರೂ ವಿರುದ್ಧವಾಗಿ ಸಾವರ್ಕರ್ ಸ್ಪರ್ಧೆ ಇಲ್ಲ

ನೆಹರೂರವರ ವಿರುದ್ಧವಾಗಿ ಹಿಂದೂ ಮಹಾ ಸಭೆಯ ಪರ ವೀ. ಡಿ. ಸಾವರ್ಕರರು ಚುನಾವಣೆಯಲ್ಲಿ ಸ್ಪರ್ಧಿಸುವರೆಂದು ಬಂದಿದ್ದ ಸುದ್ದಿಯನ್ನು ಮಹಾ ಸಭೆಯ ಅಧ್ಯಕ್ಷರಾದ ಎನ್. ಬಿ. ಖರೆಯವರು ನಿರಾಕರಿಸಿರುತ್ತಾರೆ.

ಪಾಕ್ ಮಂತ್ರಿಮಂಡಲಕ್ಕೆ ಅಬ್ದುರ್ ರಬ್ ನಿಷ್ತಾರ್

ಪಶ್ಚಿಮ ಪಂಜಾಬಿನ ಗವರ್ನರ್ ಆಗಿರುವ ಸರ್ದಾರ್ ಅಬ್ದುರ್ ರಬ್ ನಿಷ್ತಾರ್‌ರವರು ಪಾಕಿಸ್ತಾನದ ಮಂತ್ರಿಮಂಡಲದ ಸದಸ್ಯರಾಗುವರೆಂದು ತಿಳಿದುಬಂದಿದೆ.

ಶ್ರೀಘ್ರ ಮತ್ತು ಕಾಪಿ
ನಾರಾಯಣ ಶಾಸ್ತ್ರಿ ರಸ್ತೆ.
ಫೋನ್ ನಂ. 537
ಸರಕುಗಳನ್ನು ರವಾನಿಸುವ ಸಂಸ್ಥೆ

ಸುಪ್ರಸಿದ್ಧ
ಮಾಲೆಯೂಳ ಜ್ಯೋತಿಷ್ಕರು
ಕೆ. ಕುಮಾರಸ್ವಾಮಿ
ರೂಂ. ನಂ ... ಭಕ್ತ ಸ್ವೀಸರ್
ಇವರು ... ಭವಿಷ್ಯ ... ಸನಗಳನ್ನು ಹೇಳುತ್ತಾರೆ ...

ರಜ್ವಿಯ ಬಿಡುಗಡೆ ಅಜ್ಞಾ ಪಾ ಯ ಂ

ಸೋಬುಲ್ಲಾ ಕೊಲೆ ಮೊಕದ್ದಮೆಯ ಸಂಬಂಧವಾಗಿ ಆಪಾದಿತರಾಗಿದ್ದ ಖಾಸಿಂ ರಜ್ವಿಯವರನ್ನು ಖುಲಾಸೆ ಮಾಡುವಂತೆ ಹೈದರಾಬಾದು ಹೈ ಕೋರ್ಟಿನವರು ಇತ್ತ ಆಜ್ಞೆಯ ವಿರುದ್ಧವಾಗಿ ಆ ಸ್ಟೇಟ್ ಸರ್ಕಾರವು ಹೂಡಿದ ಅಪೀಲನ್ನು ಸುಪ್ರೀಂ ಕೋರ್ಟು ತಿರಸ್ಕರಿಸಿತು

ಮಂಡ್ಯ ಜಿಲ್ಲೆಗೆ ಪ್ರಭುಗಳ ಭೇಟಿ

ಈ ತಿಂಗಳು ೨೭ ಮತ್ತು ೨೮ ನೇ ತಾ. ಮಂಡ್ಯ ಜಿಲ್ಲೆಯಲ್ಲಿ ಶ್ರೀಮನ್ಮಹಾರಾಜರು ಪ್ರವಾಸವನ್ನು ಕೈಗೊಳ್ಳುವರೆಂದು ತಿಳಿದುಬಂದಿದೆ.

ಎಲ್. ಎಸ್. ವಿದ್ಯಾರ್ಥಿಗಳಿಗೆ
ಸುಸಮಯ

ಸ್ತ್ರೀ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ
ಚಾಮುಂಡೇಶ್ವರಿ ಕೋಚಿಂಗ್ ತರಗತಿ
1911 ಕೃಷ್ಣರಾಜ ರಾಮಯ್ಯನ ಬೀದಿ, ... ಉತ್ತರ ಭಾಗ, ಮೈಸೂರು
25 10 51 ರಿಂದ ಪ್ರಾರಂಭಿಸಲಾಗುತ್ತಿದೆ. ... ವಿದ್ಯಾರ್ಥಿಗಳಿಗೆ ... ಮಾತ್ರ
ಎಸ್. ನಾಗರಾಜ್,
ವ್ಯವಸ್ಥಾಪಕ.

Edited, Printed and Published by A. R. Nagarajan at Sadhvi Press D Subbiah Road, Mysore.

ಪಾಕಿಸ್ತಾನ್ ಸೈನ್ಯದ ವಾಪಸಿಗೆ ಭಾರತದ ಒತ್ತಾಯ

ಆಜಾದ್ ಕಾಶ್ಮೀರದಲ್ಲಿರುವ ಪಾಕಿಸ್ತಾನದ ಸೈನ್ಯಗಳೆಲ್ಲವೂ ವಾಪಸು ಹೋದ ನಂತರ, ಕಾಶ್ಮೀರದ ಗಡಿಯಲ್ಲಿಟ್ಟಿರುವ ತನ್ನ ಸೈನ್ಯಗಳ ಪೈಕಿ ಬಹು ಭಾಗವನ್ನು ಹಿಂದಕ್ಕೆ ಕರೆಸಿಕೊಳ್ಳುವುದಾಗಿ ಭಾರತವು ತಿಳಿಸಿರುವುದೆಂದು ವಿಶ್ವಸಂಸ್ಥೆಯ ಕಾಶ್ಮೀರದ ಮಧ್ಯಸ್ಥಿಕೆಗಾರರಾದ ಗ್ರಹಾಂರವರು ವರದಿ ಮಾಡಿರುತ್ತಾರೆ.

SHARADA VILASA HIGH SCHOOL, MYSORE.
WANTED

An experienced graduate qualified to teach English for High School Classes Apply before 23rd October 1951, with copies of testimonials and full details regarding age, qualifications, previous experience and the minimum salary expected. Persons *already in service must* apply through their employers

(Sd) P. Gopala Krishna Setty,
Hon Secretary
Sarada Vilas Educational Institutions Mysore.

ದೇವರ ಪ್ರಾರ್ಥನೆಯ ... ಮ ಳೆ

ಬೊಂಬಾಯಿ ಪ್ರಾಂತದ ಖಾ... ಲ್ಲೆಯಲ್ಲಿ ಪೈರುಗಳು ... ನರಿಗೆ ... ಇದ್ದುದರಿಂದ ಅಲ್ಲಿನ ... ರಲ್ಲಿ ಪ್ರಾರ್ಥನೆಯನ್ನು ... ಅ ಲ್ಲಿ ... ಮಳೆಯು ಬಂದಿತೆಂದು ತಿಳಿ...

ರಣಜಿತ್ ...
—: ಚಿತ್ರಗಳ ಪ್ರದರ್ಶನ :
18-10-51 ರಿಂದ
(ಮೂರು ದಿನಗಳು ಮಾತ್ರ
ಆ. ಧಿ. ರಾ...
ಪಾತ್ರ: ... ಅಶೋಕ್ ...
...
SRI GAYATHI...
—: Morning Shows:
On Saturday & Sund...
FIEST...
(In Technicolor)
From 21st: Daily 3 S...
THE FLAME AN...
THE ARROW

ಪ್ರಭು ದೇವಾ ಟಾಕೀಸ್
ಪ್ರತಿ ದಿನ 3 ಆಟಗಳು
19-10-51 ನೇ : ಶುಕ್ರವಾರದಿಂದ : 5ನೇ ವ...
ಸ್ತ್ರೀ ಸಾಹಸಂ
ಅಂಜಲಿ ದೇವಿ, ನಾಗೇಶ್ವರ ರಾವ್, ಸೂರ್ಯ ಪ್ರಭಾ, ಶಿವರಾ...
ಸಿ. ಎಸ್. ಆರ್. ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ

ಮೈಸೂರು ಕ್ರೇಪ್, ಧರ್ಮಾವರ ಕಾಂಚೀಪುರದ ರೇಷ್ಮೆ ಸೀರೆಗಳಿವೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳಿ ಅಂಗಡಿ
ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ರಾಜಕಮಲ್, ಮೈಸೂರು
19-10-51 ರಿಂದ
ಆಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು

ಪಿಚ್ಚೈಕಾರಿ
(ಭಿಕ್ಷುಕಿ) (ತಮಿಳು)
ಅಥವಾ
ಜೀವಿತ ನೌಕ
ತಾರಾಗಣ:-
ಬಿ. ಎಸ್. ಸರೋಜ,
ಸಿ. ಆರ್. ರಾಜಕುಮಾರಿ,
ತಿಕ್ಕುರುಸಿ.

ಬೆಳಗಿನ ಪ್ರದರ್ಶನ 19-10-51 ರಿಂದ 3 ದಿನಗಳು ಮಾತ್ರ
ಸ್ವರ್ಣಲತಾ, ಸ್ನೇಹಪ್ರಭಾ, ಪಪಾ ಕಶ್ಯಪ್, ಮುಂತಾದವರು
ಪಾತ್ರ ವಹಿಸಿರುವ ಹಿಂದಿ ಚಿತ್ರ ಸ್ತ್ರೀ ...

ಕೃಷ್ಣರಾಜೇಂದ್ರ ಆಸ್ಪತ್ರೆ ಸೆಕ್ರೆಟರಿಯವರ ಆಫೀಸು, ಮೈಸೂ...

ಟೆಂಡರ್ ನೋಟೀಸ್

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ಚಲುವಾಂಬಾ ಆಸ್ಪತ್ರೆಗೆ ೧೯೫೧-೫೨ನೇ ಸಾಲಿಗೆ ರೋಗಿಗಳಿಗೆ ಬೇಕಾದ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಸಪ್ಲೈ ಮಾಡುವವರು ಮೂರು ಪ್ರತಿಗಳಲ್ಲಿ ... ಸ್ಟಾಂಪ್ ಸ್ಲಿಪ್ ಮೊಹರಿನ ಪ್ರತ್ಯೇಕ ಟೆಂಡರುಗಳನ್ನು ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ ೧೯೫೧ನೇ ಇಸ್ವಿ ನವೆಂಬರ್ ೬ನೇ ತಾರೀಖು (6-11-51) ಮಂಗಳವಾರ ತೆಗೆದುಕೊಳ್ಳುತ್ತಾರೆ.

ಹೆಚ್ಚಿಗೆ ವಿವರಗಳಿಗೆ ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀ... ತಸ್ಸೀಲ್ ನೋಟಿಫಿಕೇಷನ್ ಮತ್ತು ಇತರ ವಿವರಗಳನ್ನು ಪಡೆಯಬಹುದು

೧. ಆಹಾರ ಸಾಮಾನುಗಳು	—	೧೨ ಘಂಟೆಗೆ
೨. ಆಸ್ಪತ್ರೆ ಸಾಮಾನುಗಳು	—	೧೨ ಘಂಟೆಗೆ
೩. ಸ್ವದೇಶೀಯ ಔಷಧಿಗಳು	—	೧೨ ಘಂಟೆಗೆ
೪. ಬೆಳೆಯ ಬ್ರೆಡ್ಡು	—	೧೧ ಘಂಟೆಗೆ
೫. ಅಪ್ಪಟ ಹಸುವಿನ ಹಾಲು	—	೧೧ ಘಂಟೆಗೆ
೬. ಬಟ್ಟೆ ಮತ್ತು ಹಾಸಿಗೆ ವಸ್ತ್ರ ಸಾಮಾನು (ಕೃಷ್ಣರಾಜೇಂದ್ರ ಆಸ್ಪತ್ರೆಗೆ ಮಾತ್ರ)		೧೦ ಘಂಟೆಗೆ

(ಸಹಿ) ಎಂ. ಆರ್. ಶಿವಲಿಂಗ...
ಸೆಕ್ರೆಟರಿ.

ಗೌ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ., ಇಂಡಿಯ... ಎದುರು, ಮೈ...

ಪೋ ನಂ 792 ವಂದೇ ಮಾತರಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೦-೧೦-೫೧ [ಸಂಚಿಕೆ ೭೩

ಅ॥ ಭಾ॥ ಸಂಸ್ಥಾನ ಪ್ರಜಾ ಸಮ್ಮೇಳನದ ವಿಸರ್ಜನೆ

ಪ್ರಜಾ ಸಂಘದ ಪರವಾಗಿ ಉಮೇದುವಾರಿಕೆ

ಮೈಸೂರು ೨೦

ಜಿಲ್ಲೆಯ ಪ್ರಜಾ ಸಂಘದವರು ಮೊನ್ನೆ ಸೇರಿ ತಮ್ಮ ಪಕ್ಷವು ಇತರ ಯಾವ ಪಕ್ಷದೊಡನೆಯೂ ಸಂಸ್ಥೆಗಳೊಡನೆ ಸೇರಕೂಡದು ನಿರ್ಣಯ ಮಾಡಿದರು. ಮೈ... ಪತ್ರಿಕೆಯ ಸಂಪಾದಕ, ಶ್ರೀ ಟಿ ...ಯಣರು ಇತ್ತ ರಾಜೀನಾಮೆಯ ... ಪಸು ಪಡೆಯಬೇಕೆಂದು ಕೋ... ಯಿತು ಸಂಘದ ಪರವಾಗಿ ಪಾರ್ಲಿ... ಮತ್ತು ಮೈಸೂರು ಶಾಸನ ಸ...ಗೆ ಸ್ಪರ್ಧಿಸಲು ಸದಸ್ಯರು ತಮ್ಮ ...ಮೇದುವಾರಿಕೆ ಅರ್ಜಿಗಳನ್ನು ಇದೇ ... ತಾ॥ನೊಳಗೆ ಸಂಘದ ಕಾರ್ಯಾ...ಗೆ ಕಳುಹಿಸಬೇಕೆಂದು ಕೋ... ನಿರ್ಣಯವನ್ನು ಮಾಡಲಾಯಿತು

ಹುಣಸೂರಿನಲ್ಲಿ ಜನ ಸಂಘದ ಶಾಖೆ

...ದ ಭಾನುವಾರ ಹುಣಸೂರಿನಲ್ಲಿ ...ಯ ಜನಸಂಘದ ಶಾಖೆಯೊಂದ... ಪಿಸಲಾಯಿತು. ಸಂಘದ ಸಂ... ದ ಶ್ರೀ ವೆಂಕಟಾದ್ರಿಯವರು ... ಪಕ್ಷದ ಧ್ಯೇಯ ಧೋರಣೆಗಳ ನ ವಿವರಿಸಿದರು ಶ್ರೀಗಳಾದ ಗುಂ...ನ್ ಮತ್ತು ಎ. ನಾರಾಯಣರಾ... ಗಳು ಶಾಖೆಯ ಕಾರ್ಯದರ್ಶಿಗ... ರಿಸಲ್ಪಟ್ಟರು ಶ್ರೀಗಳಾದ ... ಮುದಲಿಯಾರ್, ... ರಾವ್, ಸೋಮಪ್ಪ ಮುಂತಾ... ಸದಸ್ಯರಾಗಿರುವರು

ದೇವಸ್ಥಾನದಲ್ಲಿ ಅಕ್ರಮ ನಡವಳಿಕೆಯೇ?

...ಗಾಣಿಯ ಮುಂದಿ ಮೊಹಲ್ಲಾ ... ಪಾರ್ಕಿನ ಪಕ್ಕದಲ್ಲಿರುವ ಶ್ರೀ ... ನಸ್ವಾಮಿಯವರ ಗುಡಿಯಲ್ಲಿ ಅಕ್ರಮ ನಡೆಯುತ್ತಿರುವುದನ್ನು ಪರಿಶೋಧಿಸಲೂ ... ಈ ಬಗ್ಗೆ ಸೂಕ್ತ ಕಾರ್ಯಕ್ರಮದ ... ಗೊಳಲೂ ನಾಳೆ ಬೆಳಿಗ್ಗೆ ... ಅಲ್ಲಿ ಸಭೆಯೊಂದು ನಡೆಯುವುದು ... ರ ಸಭಾ ಸದಸ್ಯರಾದ ಶ್ರೀ ಕೆ. ...ಸ್ವಾಮಿಯವರು ಅಧ್ಯಕ್ಷತೆ ವಹಿಸು... ಮುಂದಿ ಮೊಹಲ್ಲಾ ನಿವಾಸಿಗಳು ಬರಬೇಕೆಂದು ಕೋರಲಾಗಿದೆ.

ರಾಜಧಾನಿಯಲ್ಲಿ ಭಾರಿ ಮಳೆ

...ನ ರಾಜಧಾನಿಯಲ್ಲಿ ಭಾರಿ ಮಳೆ ...ಯಿತು ಬೆಳಗಿನ ಝಾವ ಸುಮಾರು ... ಗಂಟೆಯಿಂದ ಮಧ್ಯಾಹ್ನ ... ವರೆಗೆ ಬಿದ್ದಿತು. ಬೆಳಿಗ್ಗೆ ೮ ... ಘಂಟೆಗೆ ೨॥ ಅಂಗುಲದಷ್ಟು ...

ಉಪನ್ಯಾಸ

...ವಿಲಾಸ ಮೊಹಲ್ಲದಲ್ಲಿರುವ ಶ್ರೀ ...ಸ್ವಾಮಿಯವರ ಮಂದಿರದಲ್ಲಿ ನಾಳೆ ಸಂಜೆ ೬ ... ಸ್ವಾಮಿ ಸೋಮನಾಥಾನಂದ ... 'ರಾಜ ಯೋಗ' ಎಂಬ ...ವಾಗಿ ಉಪನ್ಯಾಸ ಮಾಡುವರು

...ಪ್ರ ಪ್ರದರ್ಶನದಲ್ಲಿ ಬಹುಮಾನ ವಿನಿಯೋಗ

...ಸಾ ವಸ್ತು ಪ್ರದರ್ಶನದಲ್ಲಿ ಬಹು... ವಿನಿಯೋಗ ಸಮಾರಂಭವು ನಾ... ಸಂಜೆ ೪ ಘಂಟೆಗೆ ನಡೆಯುವುದು ...ಗೃಹ ಮಂತ್ರಿ ಶ್ರೀ ಟಿ ಮರಿಯಪ್ಪನ... ಬಹುಮಾನಗಳನ್ನು ಹಂಚುವರು.

ಸಂಸ್ಥಾನ ಪ್ರಜಾ ಸಮ್ಮೇಳನದ ವಿಸರ್ಜನೆ

ಡಿ. ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ... ಸಮ್ಮೇಳನದ ಸಾಧಾರಣ ಸಭೆಯು ನಡೆದು ... ನಡೆಯುತ್ತಿದ್ದ ಸಮ್ಮೇಳನವನ್ನು ... ಸಲು ತೀರ್ಮಾನ ಮಾಡ... ಸಂಸ್ಥೆಯ ... ಸಮಾರಂಭವನ್ನು ... ಪಂಡಿತ ನೆಹರೂರವರಿಗೆ ... ರ್ಣಯಮಾಡಾಯಿತು

ಕಾಶ್ಮೀರದಿಂದ ಉಭಯ ಸೈನ್ಯಗಳ ವಾಪಸಿಗೆ ಸಲಹೆ

ಕಾಶ್ಮೀರದ ... ಮತ್ತು ಪಾಕಿಸ್ತಾನಗಳ ... ವ ಬಿಕ್ಕಟ್ಟು ಪರಿಹರಿಸಲು ... ಎರಡೂ ದೇಶಗಳ ಸೈನ್ಯಗಳೂ ... ವಾಗಬೇಕೆಂದು ಎಡ್ವರ್ಡ್ ... ಸ್ತಕರ್ತರಾದ ಡಾ| ಫ್ರಾಂಕ್ ಗ್ರಹಾಂ ರವರು ... ತಿರುತ್ತಾರೆ

ಕಾಶ್ಮೀರದ ರಾಜ್ಯಾಂಗ ಸಭೆ

ಈ ತಿಂಗಳು ೩೧ ನೇ ತಾ॥ ಕಾಶ್ಮೀರದ ರಾಜ್ಯಾಂಗ ಸಭೆಯು ... ನಗರದಲ್ಲಿ ಸೇರುವುದು. ಸಭೆಯು ... ಳಿಗೂ ಅಲ್ಲಿನ ರಾಷ್ಟ್ರೀಯ ಸಮ್ಮೇಳನದ ಪ್ರತಿನಿಧಿಗಳೇ ಚುನಾಯಿಸಲ್ಪಟ್ಟಿರುತ್ತಾರೆ ... ಜ್ಯಾಂಗ ಸಭೆಯು ಒಂದು ವಾರ ಕಾಲ ನಡೆದು ಅನಂತರ ಜಮ್ಮು ನಗರದಲ್ಲಿ ... ಯ ಮಾರ್ಚ್ ತಿಂಗಳಲ್ಲಿ ಪುನಃ ಸೇರುವುದೆಂದು ತಿಳಿದುಬಂದಿದೆ.

ಬಾಲರತ್ನಂ ಜಾಮೀನು ತಿರಸ್ಕಾರ

ದೊಡ್ಡಬಳ್ಳಾಪುರದ ಶ್ರೀ ರಾಮ... ಸ್ವಾಮಯ್ಯನವರ ಕೊಲೆ ಪ್ರಯತ್ನದ ಸಂಬಂಧವಾಗಿ ವಿಚಾರಣೆಗೆ ಗುರಿಯಾಗಿರುವ ಬೆಂಗಳೂರು ವಕೀಲರಾದ ಶ್ರೀ ವಿ ಬಾಲರತ್ನಂರವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದ ಆಜ್ಞೆಯನ್ನು ರದ್ದುಗೊಳಿಸುವ ಬಗ್ಗೆ ಸ್ಥಿರ ... ಕೋರ್ಟಿಗೆ ... ಮಾಡಲಾಗಿದ್ದ ಅರ್ಜಿಯನ್ನು ನೆನ್ನೆ ನ್ಯಾಯಮೂರ್ತಿ ರಾದ ಶ್ರೀ ಬಿ ವಾಸುದೇವ ಮೂರ್ತಿ ಯವರು ತಿರಸ್ಕರಿಸಿದರು ಅವರನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಿರುವುದು ಈಗ ರದ್ದಾಗಿದೆ

ರಾಜಧಾನಿಗೆ ಕೃಪಲಾನಿ ಭೇಟಿ

ಮೈಸೂರು ೨೦

... ಪ್ರಜಾ ಪಾರ್ಟಿಯ ... ಕೃಪಲಾನಿಯವರು ... ನಗರಕ್ಕೆ ಬರುವರು ... ಮಾಡುವರು.

ಕಾಜಿಪೇಟನಲ್ಲಿ ಬ್ರಿಟಿಷ್ ವಿರುದ್ಧ ಸತ್ಯಾಗ್ರಹದ ಆರಂಭ

... ಸಿರಿಯ ಭಾಗದ ಕಾಜಿಪ್ಪ... ನ ಸತ್ಯಾಗ್ರಹವನ್ನು ... ಬ್ರಿಟಿಷ್ ... ವಸ್ತುಗಳನ್ನು ಹಾಕಲಾಗಿ ... ಸೂಯೆಜ್ ನಗರ ... ಬ್ರಿಟಿಷ್ ವಸ್ತುಗಳ ... ಪತ್ರಿಕೆಗಳನ್ನು ... ಲಾಗಿದೆ

ಪಂಡಿತ ನೆಹರೂರವರಿಗೆ ಪೂರ್ಣ ಬೆಂಬಲ

ಕಾಂ॥ ಅಧಿವೇಶನದ ಒಮ್ಮತದ ನಿರ್ಣಯ

ಪಟ್ಟಣತಿ ನಗರದಲ್ಲಿ ನೆನ್ನೆ ನಡೆದ ...ಗ್ರೆಸ್ ಅಧಿವೇಶನದಲ್ಲಿ ಕೋಮುವಾದ ಮತ್ತು ಇತರ ... ವರ್ತಕನ ಮನೋಭಾವನೆಗಳನ್ನು ಖಂಡಿಸುವ ಮತ್ತು ... ಕಾರ್ಯಕ್ರಮಗಳ ... ಬೆಂಬಲಿಸುವ ನೀತಿಯ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು. ಕಾಂಗ್ರೆಸ್ಸಿನ ನೇತೃತ್ವದಲ್ಲಿ ... ಪಂಡಿತ ನೆಹರೂರವರಿಗೆ ದೊರಕಿತು ... ನೀತಿ ಮತ್ತು ಕಾಂಗ್ರೆಸ್ ... ಅಂಗೀಕರಿಸಲ್ಪಟ್ಟವು

ಹಾಲಿಗೆ ನೀರು ಬೆರೆಸಿದ್ದಕ್ಕೆ ಸಾವಿರ ರೂ. ದಂಡ

ಹಾಲಿಗೆ ನೀರನ್ನು ಸೇರಿಸಿ ಮಾರಿದ ... ಹಾಲು ಮಾರುವವನಿಗೆ ಅಲ್ಲಿನ ಪೌರ ನ್ಯಾಯಾಧಿಕಾರಿ ಒಂದು ಸಾವಿರ ರೂ ದಂಡವನ್ನು ವಿಧಿಸಿರುತ್ತಾರೆ

ಲಿಯಾಖತಾಲಿ ನಿಧನಕ್ಕೆ ಪುರ ಸಭೆಯ ಸಂತಾಪ

ಮೈಸೂರು ೨೦

ನೆನ್ನೆ ಸೇರಿದ್ದ ಪುರ ಸಭೆಯ ವಿಶೇಷ ಅಧಿವೇಶನದಲ್ಲಿ ಪಾಕಿಸ್ತಾನ ಪ್ರಧಾನಿ ಲಿಯಾಖತ್ ಅಲಿಖಾನರ ನಿಧನದ ಬಗ್ಗೆ ಸಂತಾಪ ಸೂಚಿಸಲು ೩ ನಿಮಿಷ ಕಾಲ ಮೌನವನ್ನು ಆಚರಿಸಲಾಯಿತು.

ಜಾರಿ ಬಿದ್ದಿರುವ ಮಹಾರಾಜರ ಸ್ವಂತ ಪಟಾಲ ದಳದ ವಸತಿ ಗೃಹಗಳನ್ನು ಸರ್ಕಾರದಿಂದ ಕೊಳ್ಳುವ ಬಗ್ಗೆ ಪರಿಶೀಲಿಸಲು ನೇಮಿಸಲಾಗಿದ್ದ ಉಪ ಸಮಿತಿಯ ವರದಿಯನ್ನು ಶ್ರೀ ಪಿ. ಸೀತಾರಾಮಯ್ಯನವರ ಸಭೆಯ ಮುಂದೆ ಮಂಡಿಸುತ್ತಾ ಸುಮಾರು ೬೦೦ ವಾಸಕ್ಕೆ ಯೋಗ್ಯವಾದ ಮನೆಗಳವೆಯೆಂದೂ ಪೌರ ಸಭೆಯು ಅವನ್ನು ಕೊಳ್ಳಲು ಪ್ರಯತ್ನ ಮಾಡಬೇಕಾಗಿದೆಯೆಂದೂ ತಿಳಿಸಿದರು. ನಂತರ ಈ ಕಟ್ಟಡಗಳನ್ನು ಬಡವರಿಗೆ ಬಾಡಿಗೆ ಕೊಡುವಂತೆಯೂ ಮತ್ತು ಮೊತ್ತವನ್ನು ೨೦ ವರ್ಷಗಳ ಕಾಲದಲ್ಲಿ ಕಂತುಗಳ ಮೂಲಕ ತೀರಿಸಲು ಪುರ ಸಭೆಗೆ ಅನುಮತಿಯಾಗಬೇಕೆಂದೂ ಸರ್ಕಾರವನ್ನು ಪ್ರಾರ್ಥಿಸಬೇಕೆಂಬ ನಿರ್ಣಯವನ್ನು ಶ್ರೀ ಪಿ ಸೀತಾರಾಮಯ್ಯನವರು ತಂದರು. ಶ್ರೀ ಎ ಕೃಷ್ಣಮೂರ್ತಿ ರಾಯರು ಅದನ್ನು ಅನುಮೋದಿಸಿದರು. ಸದಸ್ಯರು ಕೇಳಿದ ವಿಚಾರಗಳ ಬಗ್ಗೆ ಅಧ್ಯಕ್ಷರು ಸೂಕ್ತ ವಿವರಣೆಯಿತ್ತ ನಂತರ ನಿರ್ಣಯವು ಬಹುಮತದಿಂದ ಅಂಗೀಕೃತವಾಯಿತು

ಮೈಸೂರು ಬ್ಯಾಂಕಿನಿಂದ ಶೇ ೪ ರ ಬಡ್ಡಿ ದರದಲ್ಲಿ ೫ ಲಕ್ಷ ರೂ. ಓವರ್ ಡ್ರಾಫ್ಟ್ ಸಾಲ ಪಡೆಯಲು ಸರ್ಕಾರದ ಒಪ್ಪಿಗೆ ದೊರೆತಿದೆಯೆಂದು ಅಧ್ಯಕ್ಷರು ತಿಳಿಸಿದನಂತರ ಸರ್ಕಾರವು ಆ ಹಣವನ್ನು ಬೇಗನೆ ಕೊಡಬೇಕೆಂಬ ನಿರ್ಣಯ ದೊಡನೆ ಸೂಚನೆಯು ಸರ್ವಾನುಮತ ದಿಂದ ಅಂಗೀಕೃತವಾಯಿತು.

ಕರ್ಮರ್ಕರರಿಗೆ ಸ್ಥಾನ

ಕೇಂದ್ರದ ಸೈನಿಕ ಉಪ ಮಂತ್ರಿ ಡಿ. ಪಿ. ಕರ್ಮರ್ಕರರಿಗೆ ಕಾಂಗ್ರೆಸ್ಸಿನ ಉಮೇದುವಾರಿಕೆಯನ್ನು ಕೊಡಲಾಗುವುದು ಪಾರ್ಲಿಮೆಂಟ್ ನೇಲಿನ ಸಭೆಗೆ ಅರ್ ಅರ್ ದಿವಾಕರರನ್ನು ತೆಗೆದುಕೊಳ್ಳಲಾಗುವುದು.

ರಾಷ್ಟ್ರೀಯ ಚೀನಾ ಪ್ರಧಾನಿಯ ರಾಜೀನಾಮೆ

ಫಾರ್ಮೋಸಾ ದ್ವೀಪದಲ್ಲಿರುವ ರಾಷ್ಟ್ರೀಯ ಚೀಣದ ಪ್ರಧಾನಿ ಜ॥ ಚೆಂಗ್ ಚೆಂಗ್‌ರವರು ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ. ಅವರ ಸ್ಥಾನಕ್ಕೆ ಮತ್ತೊಬ್ಬರನ್ನು ಚಿಯಾಂಗರು ಆರಿಸಿರುವರು

ಇತಿಹಾಸ ಪೂರ್ವದ ಬೃಹತ್ಪ್ರಾಣಿಯ ಅಸ್ಥಿ

ತಿರುಚಿನಾಪಳ್ಳಿ ಜಿಲ್ಲೆಯ ಅರಿಯಲೂರ್ ತಾಲ್ಲೂಕಿನಲ್ಲಿ ಕಲ್ಲುಮೇಡು ಎಂಬಲ್ಲಿ ಭೂಮಿಯೊಳಗೆ ೬ ಕೋಟಿ ವರ್ಷಗಳ ಹಿಂದೆ ಜೀವಿಸಿದ ಇತಿಹಾಸಪೂರ್ವದ ಡಿನೋಸರ್ ಎಂಬ ಪ್ರಾಣಿಯ ಅಸ್ಥಿಗಳು ದೊರೆತಿವೆ. ಇದೇ ಪ್ರದೇಶದಲ್ಲಿ ಸಮುದ್ರ ಪ್ರಾಣಿಗಳ ಅಸ್ಥಿಗಳೂ ಸಿಕ್ಕಿವೆ.

ಬ್ರಿಟಿಷ್ ಚುನಾವಣೆಗೆ ೧೪೦೦ ಉಮೇದುವಾರರು

ಮುನೇ ತಾ॥ ಬ್ರಿಟನ್ನಿನಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯ ... ಸ್ಥಾನಗಳ ಪರವಾಗಿ ... ಮುವಾರರು ನಿಂತಿರುತ್ತಾರೆ ... ನಾವಣೆಗಳಲ್ಲಿ ನಿಂತ ... ಸಾರಿ ... ಜನರು ... ರುವರು ... ಪಕ್ಷಗಳು ... ಗಳಿಗೆ ...

ಸುಳುವಾರ ...

... ರತವು ... ರಾವ ... ಷ್ಟೆ ಕೊಡಗಿ ... ಅವರು ನಾಳೆ ... ಗುತ್ತಲು ... ರುವ ನಟನಾ ... ಹಿಸುವರು ... ರಿಗೆ ನಡೆದಿದ್ದ ... ಲ್ಲಿ ಕಂಡ ... ಗಳ ಬಗ್ಗೆ ಅನರ್ಗಳ ... ಗಳು ಚರ್ಚಿಸುವರು

ಸುಪ್ರಸಿದ್ಧ ಮಲಯಾಳ ಜ್ಯೋತಿಷ್ಯರು ಕೆ. ಕುಮಾರಸ್ವಾಮಿ

... ಚಿತ್ರ ಮೈಸೂರು

ಇವರು ... ಯಾವಾಗಲೂ ... ರಗಳನ್ನು ...

ವಿಮಾನಾಪಘಾತದಲ್ಲಿ ೩೩ ಜನರ ಮರಣ

... ಕೂಲಂ ... ಯುವದರುವ ... ಜನರು ಮಡಿದಿರುತ್ತಾರೆ

ಮೈಸೂರು ಜಿಲ್ಲಾ ಸೋಷಲಿಸ್ಟ್ ಪಕ್ಷ

... ಸಲಿಸ್ಟ್ ... ಪಕ್ಷದ ಸಭೆಗೆ ...

ಎಲ್ ಎಸ್ ವಿದ್ಯಾರ್ಥಿಗಳಿಗೆ ಸುಸಮಯ

... ಚಾಮುಂಡೇಶ್ವರಿ ಕೋಚಿಂಗ್ ತರಗತಿ

19 ...

ಎಸ್ ನಾಗರಾ ...

Edited, Printed and Published by V R Nagarajan at Sadhvi Press, D Subbaiah Road, Mysore

ಉಪನ್ಯಾಸ

... ಸಂಘದ ಆಶ್ರಯದಲ್ಲಿ ... ಗಂಟೆಗೆ ... ಶ್ರೀ ... ಸ್ತ್ರೀಯರ ... ಉಪನ್ಯಾಸ ಮಾಡುವರು

ಭಾರತೀಯ ... ಸಂಗೀತ ...

ರಂಗ ...

ದಿನ ಪ್ರದರ್ಶನ

ಆಫ್ ... ರ್

ಬೆಳಗಿನ ಪ್ರದರ್ಶನ

19 10–51 ರಿಂದ

ಸಿಂಗಾರ್

ಪಾತ್ರ — ... ಜಯರಾಜ್

ದೀಪಾವಳಿ ಟೇಬಲ್ ಟೆನ್ನಿಸ್ ಟೋರ್ನಮೆಂಟು

ಮೈಸೂರು ಯುವಕರ ಟೇಬಲ್ ಟೆನ್ನಿಸ್ ಸಂಘದ ಆಶ್ರಯದಲ್ಲಿ ... ಪಂದ್ಯಗಳು ಮಹಾರಾಜಾ ... ಸಂಘದಲ್ಲಿ ನಡೆಯುವುವು ... ಭಾಗವಹಿಸುವವರು ಸಿಂಗಲ್ ... ಒಂದು ರೂ ... ಗಳನ್ನು ಕೊಡಬೇಕು ... ವಿವರಗಳನ್ನು ... ನಡೆಯುವುವು ... ಪಂದ್ಯಗಳಿಗೆ ... ಅವಕಾಶವಿದೆ ... ಅಧ್ಯಕ್ಷರಾಗಿರುತ್ತಾರೆ

ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆ

ಮೈಸೂರು ವಿಶ್ವವಿದ್ಯಾಲಯ ... ಅಕ್ಟೋಬರ್ 1951 ... ಪರೀಕ್ಷೆಗೆ ... ಸಂಸ್ಥೆಗಳ ಮುಖ್ಯಾಧಿಕಾರಿಗಳು ...

ಫೀಜು ... ಮೈಸೂರು ವಿಶ್ವವಿದ್ಯಾಲಯ ... ನವೆಂಬರ್ ...

... ನವೆಂಬರ್ 8 ... ಅರ್ಜಿಗಳನ್ನು ...

ಅರ್ಜಿ ... ವಿದ್ಯಾ ಸಂಸ್ಥೆಯ ಮುಖ್ಯಾಧಿಕಾರಿ ... ಕಳುಹಿಸಬೇಕು

(ರುಜು) ಸಿ ರಂಗಾಚಾರ್
ರಿಜಿಸ್ಟ್ರಾರ್

ರಾಜಕಮಲ್ ಟಾಕೀಸ್ ಮೈಸೂರು

19 10–51 ರಿಂದ ... ಪ್ರಾರಂಭ ಪ್ರತಿ ದಿನ 3 ಆಟಗಳು

ಪಿಚ್ಚೆಕಾರಿ

(...) ...

ಜೀವನ್ ...

ತಾರಾಗಣ ... ಸರೋಜ ... ರಾಜಕುಮಾರಿ ... ಪಿಕ್ಕುರುಸಿ

ಬೆಳಗಿನ ಪ್ರದರ್ಶನ 19 10 51 ರಿಂದ 3 ದಿನಗಳು ಮಾತ್ರ

ಸ್ವರ್ಣಲತಾ, ... ಪಾತ್ರ ವಹಿಸಿರುವ ಹಿಂದಿ ಚಿತ್ರ ಪ್ರೀತ್

ಕೃಷ್ಣರಾಜೇಂದ್ರ ಆಸ್ಪತ್ರೆ ಸೆಕ್ರೆಟರಿಯವರ ಆಫೀಸು, ಮೈಸೂರು

ಟೆಂಡರ್ ನೋಟೀಸ್

... ಬೇಕಾದ ಈ ಕೆಳಗೆ ನಮೂದಿಸಿರುವ ... ಸರಬರಾಜು ಮಾಡತಕ್ಕವರು ಮೊಹರು ಮಾಡಿದ ... ನವೆಂಬರ್ ... ಆರು (6 11 51) ಮಂಗಳವಾರ ... ತೆಗೆದುಕೊಳ್ಳುತ್ತಾರೆ

... ಸೆಕ್ರೆಟರಿಯವರ ... ಇತರ ವಿವರಗಳನ್ನು ಪಡೆಯಬಹುದು

...	೧೨ ಘಂಟೆ
... ಆಸ್ಪತ್ರೆ ...	೧೨ ಘಂಟೆ
... ಪದಾರ್ಥಗಳು	೧೨ ಘಂಟೆ
ಬಳಿಯ ...	೧೧ ಘಂಟೆ
... ಹಸುವಿನ ಹಾಲು	೧೧ ಘಂಟೆ
... ಬಟ್ಟೆ ಮತ್ತು ಹಾಗೆ ವಗೈರೆ ಸಾಮಾನು (ಕೃಷ್ಣರಾಜೇಂದ್ರ ಆಸ್ಪತ್ರೆಗೆ ಮಾತ್ರ)	೧೧ ಘಂಟೆ

(ಸಹಿ) ಎಂ. ಆರ್ ನರಸಿಂಗ್
ಸೆಕ್ರೆಟರಿ

ಗಾ॥ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ... ನಾಗಪುರ್ ಸೀರೆಗಳಿಗೆ M. V. ಭೋಜಯ್ಯ ... ಇಂಡಿಯಾ ... ಎದುರು, ಮೈಸೂರು

ರಿ॥ ನಂ 792 WFEKLY EDITION ಸಾಧ್ವಿ ದಿನ ಪತ್ರಿಕೆಯ ವಾರ

ಸಾಧ್ವಿ

ಸಂಪುಟ ೧೬] ಭಾನುವಾರ ೨೧-೧೦ ೫೧ [ಸಂಚಿಕೆ೧೧

ಬ್ರಿಟಿಷ್ ಸೈನ್ಯನೆಲೆ ಬಳಿ ಈಜಿಪ್ಟ್ ಸೈನ್ಯಶೇಖರಣೆ

ಕಾಂಗ್ರೆಸ್ ಉಮೇದುವಾರರ ಎರಡನೇ ಪಟ್ಟಿ

ಬೆಂಗಳೂರು ೨೧

ಮೈಸೂರು ಶಾಸನ ಸಭೆಗೆ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರರ ಪಟ್ಟಿಯನ್ನು ಸಿದ್ಧಗೊಳಿಸಲಾಗಿದೆ ಇದರ ಪ್ರಕಾರ ಬೆಂಗಳೂರು ಗಾಂಧಿ ನಗರದಿಂದ ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂ ರವರನ್ನೂ, ಚಾಮರಾಜಪೇಟೆಯಿಂದ ವೈ ಆರ್ ಅನಂತ ರಾಮಯ್ಯರವರನ್ನೂ, ಬಸವನಗುಡಿಯಿಂದ ಎಲ್ ಎಸ್ ವೆಂಕಾಜಿ ರಾಯರನ್ನೂ ಆರಿಸಲಾಗಿದೆ ಮಲ್ಲೇಶ್ವರ ಕ್ಷೇತ್ರದಿಂದೊಬ್ಬ ಕಾರ್ಮಿಕ ಉಮೇದುವಾರರನ್ನೂ, ಅಲಸೂರಿನಿಂದ ಒಬ್ಬ ಮುಸ್ಲಿಂ ಉಮೇದುವಾರರನ್ನೂ ನಿಲ್ಲಿಸಲಾಗುವುದು ಕಬ್ಬನ್ ಪೇಟೆಯ ಕ್ಷೇತ್ರಕ್ಕೆ ಇನ್ನೂ ಆರಿಸಬೇಕಾಗಿದೆ ಚಿತ್ರದುರ್ಗದಿಂದ ಶ್ರೀ ಎಸ್ ರಂಗರಾಯರನ್ನು ನಿಲ್ಲಿಸಲಾಗುವುದು ಬೇಲೂರು-ಆಲೂರು-ಸಕಲೇಶಪುರ ಕ್ಷೇತ್ರದಿಂದ ಶ್ರೀ ಬಿ ಎಸ್ ಬೋರಣ್ಣ ಗೌಡರು ಕಾಂಗ್ರೆಸ್ ಪರವಾಗಿ ಸ್ಪರ್ಧಿಸುವರು

ಎಸ್ ಪಾನವಾಡಿ ಗುಮಾಸ್ತನ ಆತ್ಮಹತ್ಯೆ

ಬೆಂಗಳೂರು ಚೀಫ್ ಇಂಜನಿಯರರ ಕಚೇರಿಯಲ್ಲಿ ಗುಮಾಸ್ತೆಯಾಗಿದ್ದ ಶ್ರೀ ... ಶ್ರೀನಿವಾಸ ಪ್ರಸಾದ್ ಎಂಬ ... ವರ್ಷದ ಯುವಕನು ಶುಕ್ರವಾರ ಮಧ್ಯಾಹ್ನ ಕಛೇರಿಯನ್ನು ಬಿಟ್ಟು ಮೈಲು ತುತ್ತನ್ನು ಸೇವಿಸಿ ದಾರಿಯಲ್ಲೇ ಪ್ರಜ್ಞೆ ತಪ್ಪಿ ಬಿದ್ದಿದ್ದನೆಂದೂ ಅವನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಮೃತಿ ಹೊಂದಿದನೆಂದೂ ವರದಿಯಾಗಿದೆ

ನಿಂಬೆಕಾಯಿ ಬಳ್ಳಿ ಮೂದರಿಯ ವಿದ್ಯುತ್ ಬೆಳಕು

ಬೆಂಗಳೂರಿನ ತಾತಾ ವಿಜ್ಞಾನ ಶಾಲೆಯಲ್ಲಿ ಕಳೆದ ಸೋಮವಾರ ಹೈವೋಲ್ಟೇಜ್ ವಿದ್ಯುಚ್ಛಕ್ತಿಯ ಪರೀಕ್ಷೆಯನ್ನು ... ಪ್ರಮುಖರ ಎದುರಿನಲ್ಲಿ ನಡೆಸಲಾಯಿತು ೩೦ ಲಕ್ಷ ವೋಲ್ಟೇಜ್ ಇರುವ ವಿದ್ಯುಚ್ಛಕ್ತಿಯು ಕೋಲ್ಮಿಂಚಿನಂತೆ ನೆರದಿದ್ದವರ ಸಮೂಹದಲ್ಲೇ ಅತಿ ಪ್ರಮಾಣವಾಗಿ ಬೆಳಕು ಬೀರಿದುದನ್ನು ಕಂಡು ಜನರು ಬೆರಗಾದರು ಇಂತಹ ಪರೀಕ್ಷೆಯು ನಡೆದಿರುವುದು ಭಾರತದಲ್ಲೆಲ್ಲಾ ಇದೇ ಮೊದಲು ನಗರಗಳಲ್ಲಿ ಭಾರಿ ವೋಲ್ಟಿನ ವಿದ್ಯುಚ್ಛಕ್ತಿ ತಂತಿಗಳ ಮೂಲಕ ಪ್ರವಹಿಸುವಂತೆ ಮಾಡುವ ಪೂರ್ವಭಾವಿಯಾಗಿ ವಿಜ್ಞಾನ ಮಂದಿರದಲ್ಲಿ ಅದನ್ನು ಶಕ್ತ ಪರೀಕ್ಷೆಗೆ ಒಳಪಡಿಸಲು ಅವಕಾಶವನ್ನು ಮಾಡಲಾಗಿದೆ

ಕಳ್ಳ ಭಟ್ಟಿ ಸಾರಾಯಿಗೆ ಹಾವಿನ ರಕ್ಷಣೆ !

ದೊಡ್ಡಬಾಗಿಲು ತಾಲ್ಲೂಕು ಪ್ರೊಹಿಬಿಷನ್ ಇನ್‌ಸ್ಪೆಕ್ಟರ್ ಶ್ರೀ ಗಿರಿರಾಜುರವರು ಹಿಂದಿನ ಸೋಮವಾರ ಕಳೆದ ೧೬ ನೇ ತಾ॥ ... ನಾಯಕನ ಹಳ್ಳಿಯಲ್ಲಿ ಕಳ್ಳ ಭಟ್ಟಿ ಸಾರಾಯಿಯನ್ನು ತಯಾರಿಸುತ್ತಿದ್ದ ಜನರ ದಸ್ತಗಿರಿ ಮಾಡಲು ಹೋದಾಗ ಒಂದು ಮನೆಯಲ್ಲಿ ಸಾರಾಯಿ ಸೀಸೆಗಳ ಸುತ್ತಲೂ ಸುತ್ತಿಕೊಂಡು ಮಲಗಿದ್ದ ಹಾವನ್ನು ಕಂಡು ಬೆರಗಾದರು ಅನಂತರ ಅದನ್ನು ಕೊಲ್ಲಲಾಯಿತು,

ದಾರಾಷಾರವರ ಮನೆಯಲ್ಲಿ ಆಭರಣಗಳ ಕಳುವು

ಮೈಸೂರು ೨೧

ಶ್ರೀಮನ್ ಮಹಾರಾಜರವರ ಆಪ್ತ ಕಾರ್ಯದರ್ಶಿಯವರಾದ ಶ್ರೀ ಸಫಿ ದಾರಾ ಷಾರವರ ಮನೆಗೆ ಕಳೆದ ೬ನೇ ತಾ॥ ಅತಿಥಿಗಳಾಗಿ ಆಗಮಿಸಿದ್ದ ಮಹಿಳೆಯೊಬ್ಬರ ಕತ್ತಿನ ಹಾರ ಉಂಗುರ ಮತ್ತು ಲೊಲಾಕ್ ಮುಂತಾದ ಸುಮಾರು ... ರೂ ಬೆಲೆ ಬಾಳುವ ಆಭರಣಗಳು ಕಳುವಾಗಿದ್ದು ಈಗ ಹಾರವು ಪತ್ತೆಯಾಗಿರುತ್ತದೆ ಆ ದಿನ ಅವರ ಮನೆಯ ... ಹೆಂಚನ್ನು ತೆಗೆದು ಈ ವಸ್ತುಗಳನ್ನು ... ದಿಯಲಾಗಿತ್ತೆಂದು ಹೇಳಲಾಗಿದೆ ಈ ಸಂಬಂಧವಾಗಿ ಪೋಲೀಸರು ಬೆಂಗಳೂರಿನಲ್ಲಿ ಮಾಜಿ ಸಿಪಾಯಿ ರಾಮಪ್ಪ ಎಂಬ ದಾವಣಗೆರೆಯ ನಿವಾಸಿಯನ್ನು ದಸ್ತಗಿರಿ ಮಾಡಿ ಇಲ್ಲಿಗೆ ತಂದಿರುತ್ತಾರೆ

ಕಂಟ್ರಾಕ್ಟರುಗಳಿಗೆ ಗೃಹಮಂತ್ರಿಗಳ ಭರವಸೆ

ಸಂಸ್ಥಾನದ ಮರಾಮತ್ತು ಇಲಾಖೆಯ ಕಂಟ್ರಾಕ್ಟರುಗಳ ಸಮ್ಮೇಳನವು ಕಳೆದ ೬ ಮತ್ತು ೧೮ ನೇ ತಾ॥ ನಡೆದು ಬಹಿರಂಗ ಅಧಿವೇಶನದಲ್ಲಿ ಅಧ್ಯಕ್ಷತೆ ವಹಿಸಿದ್ದ ಗೃಹ ಮಂತ್ರಿ ಶ್ರೀ ಟಿ ಮರಿಯಪ್ಪನವರು ಸರ್ಕಾರದ ನಾನಾ ಎಕ್ಸಿಕ್ಯೂಟಿವ್ ಇಂಜನಿಯರ್‌ಗಳು ಮತ್ತು ಸಮ್ಮೇಳನದ ಪ್ರತಿನಿಧಿಗಳನ್ನು ಬರಮಾಡಿಕೊಂಡು ಕಂಟ್ರಾಕ್ಟರುಗಳಿಗೆ ಸಲ್ಲಬೇಕಾಗಿರುವ ಬಿಲ್ಲುಗಳ ಹಣವನ್ನು ಕೂಡಲೇ ಕೊಡಬೇಕೆಂದು ಇಂಜನಿಯರುಗಳಿಗೆ ತಿಳಿಸಿ, ಕಂಟ್ರಾಕ್ಟರುಗಳಿಗೆ ಈ ಬಗ್ಗೆ ಭರವಸೆಯನ್ನಿತ್ತಿರುತ್ತಾರೆ ಸಾವತಿಯಾಗದೆ ಉಳಿಯುವ ಬಿಲ್ಲುಗಳ ವಿಷಯವನ್ನು ಸಮ್ಮೇಳನದ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದೂ ಗೃಹ ಮಂತ್ರಿಗಳು ಸೂಚಿಸಿರುತ್ತಾರೆ

ಒಟ್ಟು ೫। ಅಂಗುಲ ಮಳೆ

ನೆನ್ನೆ ಬೆಳಗಿನ ಝಾವ ಆರಂಭವಾಗಿ ಮಳೆಯು ನೆನ್ನೆ ಮಧ್ಯಾಹ್ನ ೧೨-೩೦ ಘಂಟೆಯ ವರೆಗೂ ಒಂದೇ ಸಮನಾಗಿ ಬಂದಿತು. ನೆನ್ನೆ ಸಂಜೆಯೂ ಸ್ವಲ್ಪ ಮಳೆ ಆಯಿತು ಒಟ್ಟು ೫। ಅಂಗುಲ ಮಳೆಯಾಗಿರುತ್ತದೆ ಇದರ ಪರಿಣಾಮವಾಗಿ ಡಿ ಬನುಮಯ್ಯನವರ ಹೈಸ್ಕೂಲು ಹಿಂಭಾಗದ ಕಾಂಪೌಂಡು ಕುಸಿದು ಹೋಗಿದೆ ಇತರ ಹಲವು ಕಡೆಗಳಲ್ಲೂ ಇದೇ ರೀತಿಯಾಗಿರುವುದಾಗಿ ಗೊತ್ತಾಗಿದೆ

ಬ್ರಿಟನ್ನಿಗೆ ಈಜಿಪ್ಟಿನ ಪ್ರತಿಭಟನೆ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಬ್ರಿಟನ್ನು "ಆಕ್ರಮಣ' ನಡೆಸಿತೆಂದು ಆಪಾದಿಸಿ ಈಜಿಪ್ಟು ಮೊನ್ನೆ ಕೈರೋವಿನಲ್ಲಿರುವ ಬ್ರಿಟಿಷ್ ರಾಯಭಾರಿಗೆ ಪ್ರತಿಭಟನೆ ಸೂಚಿಸಿತು ತನಗಾದ ನಷ್ಟಕ್ಕಾಗಿ ಪರಿಹಾರ ಕೊಡಬೇಕೆಂದು ಬ್ರಿಟನ್ನು ಈಜಿಪ್ಟಿಗೆ ತಿಳಿಸಿರುವುದು ಸೂಯೆಜ್ ಪ್ರದೇಶದಲ್ಲಿ ಬ್ರಿಟನ್ನಿನ ೬೬॥ ಲಕ್ಷ ರೂ ನಷ್ಟ ಬೆಲೆಯ ಆಸ್ತಿಗಳ ನಷ್ಟವಾಗಿವೆಯೆಂದು ಹೇಳಲಾಗಿದೆ ಸುಡಾನಿನಲ್ಲಿರುವ ಈಜಿಪ್ಟ್ ಸೈನ್ಯಗಳ ಮುಖ್ಯಾಧಿಕಾರಿಯು ಅಲ್ಲಿಗೆ ಬರಕೂಡದೆಂದು ಅಲ್ಲಿನ ಬ್ರಿಟಿಷ್ ಗೌ॥ ಜನರಲ್ಲರು ಆಜ್ಞೆ ಮಾಡಿರುತ್ತಾರೆ

ಜೈಲಿಗೆ ಬಾಲರಕ್ಷಂ ರವಾನೆ

ಹಂಗಾಮಿ ಜಾಮೀನು ರದ್ದಾದುದರಿಂದ ಅಡ್ವೊಕೇಟ್ ಶ್ರೀ ವಿ ಬಾಲರಕ್ಷಂರವರನ್ನು ನೆನ್ನೆ ಬೆಂಗಳೂರು ಸಂಟ್ರಲ್ ಜೈಲಿಗೆ ಕಳುಹಿಸಲಾಯಿತು ಅವರ ಮೇಲಿನ ಕೊಲೆ ಪ್ರಯತ್ನದ ಮೊಕದ್ದಮೆಯು ನಾಳಿದ್ದಿನಿಂದ ಪ್ರಾರಂಭವಾಗುವುದು

ಮಗು ಸತ್ತು ಹಿಪ್ಪುಚಿ ಕೊಂದುದಕ್ಕೆ ತಾಯಿಗೆ ಶಿಕ್ಷೆ

ಪಿರಿಯಾಪಟ್ಟಣದ ತಾಲ್ಲೂಕು ಕುತಗೂಡು ಗ್ರಾಮದ ಬಸವಿ ಎಂಬ ಆದಿ ಕರ್ನಾಟಕ ವಿಧವೆಯು ಹೆಣ್ಣು ಶಿಶುವನ್ನು ಹೆತ್ತು, ಅದರ ಕತ್ತು ಹಿಪ್ಪುಚಿ ಕೊಂದುಹಾಕಿದ ಆಪಾದನೆಯ ಮೇಲೆ ಆವಳನ್ನು ಸೆಷನ್ಸ್ ವಿಚಾರಣೆಗೆ ಗುರಿ ಪಡಿಸಲಾಗಿ, ಅಪರಾಧವು ಸ್ಥಿರ ಪಟ್ಟುದರಿಂದ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ ಸಿ ಲಿಂಗಯ್ಯಗೌಡರು ನೆನ್ನೆ ಆಕೆಗೆ ೯ ತಿಂಗಳು ಕಠಿಣ ಸಜವನ್ನು ವಿಧಿಸಿದರು

ಹರಿಕಥೆ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಪತ್ರಿಕೆ ಕಛೇರಿಯಲ್ಲಿ ಈ ರಾತ್ರಿ ೯ ಘಂಟೆಗೆ ಬ್ರಂ॥ ಶ್ರೀ॥ ವಿ ನಾರಾಯಣ ಶಾಸ್ತ್ರಿ, ಗಮಕಿಯವರಿಂದ "ಭಗವಾನ್ ಸೂರ್ಯನಾರಾಯಣ '' ಎಂಬ ಹರಿಕಥೆಯು ನಡೆಯುವುದು ಸರ್ವರಿಗೂ ಸ್ವಾಗತವಿದೆ

ಬ್ರಿಟಿಷ್ ನೆಲೆಗಳ ಬಳಿ ಈಜಿಪ್ಟ್ ಸೈನ್ಯ ಶೇಖರಣೆ

ಸೂಯೆಜ್ ಪ್ರದೇಶದಲ್ಲಿರುವ ಬ್ರಿಟಿಷ್ ನೆಲೆಗಳ ಬಳಿ ಈಜಿಪ್ಟ್ ಸೈನ್ಯಗಳು ಶೇಖರಣೆಯಾಗಿ ವಿಮಾನಗಳನ್ನು ಬ್ರಿಟಿಷರ ಕಡೆಗೆ ತಿರುಗಿಸಲಾಗುತ್ತಿದೆಯೆಂದು ಬ್ರಿಟಿಷ್ ಯುದ್ಧ ಕಛೇರಿಯು ಪ್ರಕಟಿಸಿರುತ್ತದೆ ೧೬ ಟ್ಯಾಂಕುಗಳೂ, ೧೫ ಶಸ್ತ್ರ ಸಜ್ಜಿತ ಮೋಟಾರು ಕಾರುಗಳೂ ಕೈರೊ ಸೂಯೆಜ್ ಪ್ರದೇಶಗಳ ಮಧ್ಯೆ ಮೊನ್ನೆ ಇದ್ದು ಅನಂತರ ಪಶ್ಚಿಮಾಭಿಮುಖವಾಗಿ ಚಲಿಸುತ್ತಿದ್ದುದು ವಿಮಾನ ಪರಿಶೀಲನೆಯಿಂದ ಗೊತ್ತಾಗಿದೆ

ಪಾನ ನಿರೋಧದ ವಿರೋಧಕ್ಕಾಗಿ ಒಂದು ಪಕ್ಷ

ಬಡಜನರ ರಕ್ಷಣಾ ಪಕ್ಷವೆಂಬ ಹೊಸ ಸಂಸ್ಥೆಯೊಂದನ್ನು ವೆಲ್ಲೂರು ಬಳಿ ಇರುವ ವೇಲಪ್ಪಾಡಿಯಲ್ಲಿ ಕಳೆದ ೧೬ ನೇ ತಾ॥ ಸ್ಥಾಪಿಸಲಾಯಿತು ಈ ಪಕ್ಷವು ಧ್ವಜ ವೊಂದನ್ನು ಏರ್ಪಡಿಸಿಕೊಂಡಿದೆ ಅದು ಬಿಳಿಯ ಬಣ್ಣವುಳ್ಳದ್ದಾಗಿರುವುದು ಒಳಗೆ ತೆಂಗಿನ ಮರ ಮತ್ತು ಪೂರ್ಣ ಚಂದ್ರ ಈ ಗುರುತುಗಳಿವೆ ಈ ಪಕ್ಷದ ಅಧ್ಯಕ್ಷರು ಹೇಳಿಕೆಯೊಂದನ್ನಿತ್ತು ಪಾನನಿರೋಧ ಕ್ರಮದಿಂದ ಈಡಿಗರಿಗೆ ತುಂಬಾ ತೊಂದರೆಯಾಗಿರುವುದೆಂದೂ, ಆ ಕಾರ್ಯ ಕ್ರಮವನ್ನು ರದ್ದುಗೊಳಿಸಬೇಕೆಂದೂ ಸೂಚಿಸಿರುತ್ತಾರೆ

ಎರಡು ತಲೆಗಳ ಶಿಶು

ಕೊಳ್ಳೇಗಾಲಕ್ಕೆ ೩ ಮೈಲಿ ದೂರ ಇರುವ ಹೊಂಡರಬಾಳಿನ ನಿವಾಸಿ ಜಿಬನ್ ಬಿ ಎಂಬ ಮುಸ್ಲಿಂ ಸ್ತ್ರೀಯಳಿಗೆ ಕಳೆದ ಬುಧವಾರ ಆಸ್ಪತ್ರೆಯಲ್ಲಿ ಎರಡು ತಲೆಯುಳ್ಳ ಒಂದು ಗಂಡು ಶಿಶುವು ಹುಟ್ಟಿತ್ತು ಅದು ಕೂಡಲೇ ಸತ್ತು ಹೋಯಿತು. ಈ ವಿಚಿತ್ರವನ್ನು ನೋಡಲು ಅನೇಕರು ಆಸ್ಪತ್ರೆಗೆ ಬಂದು ಹೋಗುತ್ತಿರುತ್ತಾರೆ

ಲಿಯಾಖತ್ ಅಲಿ ಕೊಲೆ ಬಗ್ಗೆ ದಸ್ತಗಿರಿಗಳು

ಲಿಯಾಖತ್ ಅಲಿ ಖಾನ್ ಕೊಲೆಗೆ ಸಂಬಂಧ ಪಟ್ಟವರೆಂದು ಸಂದೇಹದ ಮೇಲೆ ಪೋಲೀಸರು ಕೊಲೆಗಾರನ ಸಹೋದರ ಜಮಾಲ್, ರಾವಲ್ಪಿಂಡಿ ಹೋಟೇಲು ಮಾಲಿಕ ಮತ್ತು ಇತರರನ್ನು ದಸ್ತಗಿರಿಮಾಡಿರುತ್ತಾರೆ ಕೊಲೆಗಾರ ಸೈಯದ್ ಅಕ್ಬರನು ಅಬೋಟಾಬಾದಿನಲ್ಲಿ ಇತ್ತೀಚೆಗೆ ಪಿಸ್ತೂಲ್ ಹಾರಿಸುವುದನ್ನು ಅಭ್ಯಾಸಮಾಡುತ್ತಿದ್ದನೆ ಮೊದಲು ಅವನು ರಾವಲ್ಪಿಂಡಿಗೆ ಹೊರಟಾಗ ಪೆಷಾವರ್ ಪೋಲೀಸರು ಅಲ್ಲಿನ ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆ ಇತ್ತಿದ್ದರೆಂದೂ ಹೇಳಲಾಗಿದೆ

ವೇದಾಂತ ಪ್ರವಚನ

ರಾಜಧಾನಿಯ ಸಂಸ್ಕೃತ ಮಹಾ ಪಾಠಶಾಲೆಯ ಚೌಕದಲ್ಲಿರುವ ರಾ॥ ಬ॥ ಎಂ ರಾಮಸ್ವಾಮಿಯವರ ಮನೆಯಲ್ಲಿ ಈ ದಿನದಿಂದ ಪ್ರತಿ ಸಂಜೆ ೬ ರಿಂದ ೮ ಘಂಟೆ ವರೆಗೆ ಆತ್ಮ ವಿಚಾರ ಮಂದಿರದ ಅಧ್ಯಕ್ಷರಾದ ಶ್ರೀ ಎಂ ಎಚ್ ನಾಗಣ್ಣನವರು ವೇದಾಂತ ಪ್ರವಚನವನ್ನು ಮಾಡುವರು ಸನಾತನ ಧರ್ಮದಲ್ಲಿ ಆಸಕ್ತಿ ಇರುವವರು ಸಕಾಲಕ್ಕೆ ಆಗಮಿಸಬೇಕೆಂದು ಕೋರಲ್ಪಟ್ಟಿರುತ್ತಾರೆ

ವಾರ ಭವಿಷ್ಯ

ತಾ॥ ೨೧-೧೦-೫೧ರಿಂದ ೨೭-೧೦-೫೧ರ ವರೆಗೆ

ಮೇಷ— ಆರೋಗ್ಯ ಉತ್ತಮ ಬೇಕಾದವರ ಸಹವಾಸ, ಧನವ್ಯಯ, ಹೊಸ ತೊಂದರೆಗಳು ಯಾವುವೂ ಇಲ್ಲ ತಾ॥ ೨೩, ೨೪ ಸಂತತಿಗೆ ಕ್ಲೇಶ ಖರ್ಚು

ವೃಷಭ—ನಿರ್ಧಾರಗಳು ಕಾರ್ಯಗತವಾಗದೆ ಬೇಸರ, ಆರೋಗ್ಯ ನೆಟ್ಟಗಿರದು, ಕುಟುಂಬದಲ್ಲಿ ಕಲಹ, ಪ್ರಾಣಿಗಳಿಂದ ಹಾನಿ ತಾ॥ ೨೫ ೨೬ ವಾಹನ ಭಯ ಪ್ರಿಯ ಜನವಿಯೋಗ

ಮಿಥುನ—ಗೃಹಮಾನ ಚೆನ್ನಾಗಿದೆ ಕೈಕೊಂಡ ಕಾರ್ಯಗಳ ಜಯ, ನೌಕರಿಯಲ್ಲಿ ಬಡ್ತಿ, ವ್ಯಾಪಾರದಲ್ಲಿ ಲಾಭ ತಾ॥ ೨೦, ೨೪ ಮಹತ್ವದ ಪತ್ರಾಗಮನ ಮೃಷ್ಟಾನ್ನ ಲಾಭ

ಕರ್ಕ—ಹಣಕಾಸಿನ ಕಡೆ ಗಮನ ಕೊಡಿ, ಕಳುವಿನ ಸಂಭವ, ಆರೋಗ್ಯ ನೆಟ್ಟಗೆ ಕೋರ್ಟು ಕಛೇರಿ ಕಾರ್ಯಗಳಲ್ಲಿ ಜಯ ತಾ॥ ೨೫ ೨೬ ಮೃಷ್ಟಾನ್ನ ಲಾಭ, ಮಿತ್ರರ ಸಹವಾಸ

ಸಿಂಹ—ಉದ್ರೇಕ ವಾತಾವರಣ ನೌಕರಿಯಲ್ಲಿ ಮೇಲ್ಪಟ್ಟವರ ದರ್ಪ ಪತ್ನಿಯೊಡನೆ ಕಲಹ, ವಾಹನಾಪಘಾತ ತಾ॥ ೨೩ ೨೪ ನಿದ್ರಾನಾಶ ತಳಮಳ

ಕನ್ಯಾ— ಮನಸ್ಸಿಗೆ ವೃಥೆ ಕ್ಲೇಶಕರ ವಾರ, ಧನನಾಶ, ಮಾನಹಾನಿ, ವ್ಯಾಪಾರಾದಿಗಳಲ್ಲಿ ಶತ್ರುತ್ವ ಪ್ರವಾಸ ಬೇಡ, ತಾ॥ ೨೫ ೨೬ ಅಪಘಾತ ಭಯ ಅಪ್ರಿಯ ವಾರ್ತೆ

ತುಲಾ—ಆಕ್ಷೇಪಣೀಯ ಪರಿಸ್ಥಿತಿ, ಆರೋಗ್ಯ ನೆಟ್ಟಗೆ, ಆಕಸ್ಮಿಕ ಪ್ರವಾಸ, ಹಣಕಾಸಿನ ಸ್ಥಿತಿ ಸಮರ್ಪಕ ತಾ॥ ೨೫, ೨೬ ಶುಭವಾರ್ತೆ ಧನಾದಾಯ

ವೃಶ್ಚಿಕ — ಎದುರಾಳಿಗೆ ಮುಖಭಂಗ, ಆರೋಗ್ಯ ಉತ್ತಮ, ಮನಸ್ಸಿನಲ್ಲಿ ಉತ್ಸಾಹ, ವ್ಯಾಪಾರಾದಿಗಳಲ್ಲಿ ಹಿತ ಘಟನೆ ತಾ॥ ೨೩, ೨೪ ಸತ್ಸಹವಾಸ

ಧನು—ಆರೋಗ್ಯ ಉತ್ತಮ ಎದುರಾಳಿಗಳ ಸೋಲು, ನೌಕರಿಯಲ್ಲಿ ಬಡ್ತಿ ತಾ॥ ೨೩, ೨೭ ಶ್ರಮ ಖರ್ಚು

ಮಕರ—ಆರೋಗ್ಯದ ಕಡೆ ಲಕ್ಷ್ಯವಿರಲಿ ದೂರ ಪ್ರವಾಸ ಬೇಡ ತಾ॥ ೨೫, ೨೬ ವ್ಯರ್ಥ ವಿವಾದ, ಖರ್ಚು

ಕುಂಭ ಆರೋಗ್ಯ ನೆಟ್ಟಗೆ ಮೇಲಧಿಕಾರಿಗಳ ಕಿರುಕುಳ, ಪ್ರವಾಸ ಬೇಡ ಪತ್ನಿ ಆರೋಗ್ಯ ನೆಟ್ಟಗಿರದು ತಾ॥ ೨೩, ೨೪ ಗುಪ್ತ ಚಿಂತೆ, ಉದಾಸೀನ

ಮೀನ—ಎದುರಾಳಿಗಳ ಸೋಲು, ವ್ಯಾಪಾರಾದಿಗಳಲ್ಲಿ ಹಿತ ಘಟನೆ, ಸತ್ಸಹವಾಸ ಮಹತ್ವದ ಪತ್ರಾಗಮನ ತಾ॥ ೨೫ ೨೬ ಮನೋರಂಜನೆಗೆ ಖರ್ಚು, ಆನಂದ

ಸುಪ್ರಸಿದ್ಧ

ಮಲೆಯಾಳ ಜ್ಯೋತಿಷ್ಯರು

ಕೆ. ಕುಮಾರಸ್ವಾಮಿ

ರೂ ನಂ ೧೦ ನಂಜರಾಜ ಬಹದ್ದೂರು ಛತ್ರ ಮೈಸೂರು

ಇವರು ಕರಾರುವಾಕ್ಕಾಗಿಯೂ ಶಾಸ್ತ್ರೀಯವಾಗಿಯೂ ಭೂತ ಭವಿಷ್ಯದ್ವರ್ತಮಾನಗಳನ್ನು ಹೇಳುತ್ತಾರೆ ಇಂದೇ ವಿಚಾರಿಸಿ

ಸತ್ಯಾರ್ಥಿ

ಪೊನ್ನಂಪೇಟೆಯಲ್ಲಿ ಪ್ರಕಟವಾಗುವ ಸತ್ಯಾರ್ಥಿ ಮಾಸ ಪತ್ರಿಕೆಯ ಪ್ರತಿಯೊಂದು ನಮ್ಮ ಕೈಸೇರಿದೆ ಅದನ್ನು ಆದರಿಂದ ಸ್ವೀಕರಿಸಿದ್ದೇವೆ ಅದು ಪ್ರಗತಿಶೀಲಸಾಹಿತಿಗಳ ಲೇಖನಗಳನ್ನೊಳಗೊಂಡು ಜನಾದರಣೀಯವಾಗಿದೆ ಶ್ರೀ ಎಂ ಬಿ ಮುತ್ತಣ್ಣನವರು ಇದರ ಸಂಪಾದಕರು ಇದರ ಬೆಲೆ ೦ ೪ ೦

ಸರ್ ಸಿ. ವಿ. ರಾಮನ್‌ರವರು

ನಿತ್ಯವೂ ಉಪಯೋಗಿಸುವ ಮತ್ತು ಶಿಫಾರಸ್ ಮಾಡಿರುವ

ಹಲ್ಲುಪುಡಿ

ಪೈರೆಕ್ಸ್

§ ನೋವನ್ನು ಹೋಗಲಾಡಿಸುತ್ತದೆ
§ ರಕ್ತ ಸ್ರಾವವನ್ನು ನಿಲ್ಲಿಸುತ್ತದೆ
§ ದಂತ ರೋಗಗಳನ್ನು ತಡೆಗಟ್ಟುತ್ತದೆ

- ತಯಾರಕರು -

ದಿ ಪಯೋರಿಯಾ-ಕ್ಯೂರ್ ಕ್ಲಿನಿಕ್

ಕೋಟೆ — ಬೆಂಗಳೂರು ೭

ಮೈಸೂರಿನ ಏಜೆಂಟರು

ಎಸ್. ಗೋಪಾಲನ್,

ಈವನಿಂಗ್ ಬಜಾರ್ ಇಲವಾಲ ರಸ್ತೆ, ಮೈಸೂರು.

ಮೈಸೂರು ದಸರಾ ವಸ್ತು ಪ್ರದರ್ಶನದ 'ಎ" ಬ್ಲಾಕ್ 24ನೇ ನಂಬರಿನ ನಮ್ಮ ಸ್ಟಾಲಿಗೆ ಭೇಟಿ ಕೊಡಿರಿ

ಹಿಂದೂ ಬ್ಯಾಂಕ್ ಕರೂರು ಲಿಮಿಟೆಡ್.

ನೋಟೀಸು

ಮೈಸೂರು ಸಂಸ್ಥಾನದಲ್ಲಿರುವ ಈ ಬ್ಯಾಂಕಿನ ಮೂರು ಶಾಖೆಗಳನ್ನೂ ವಿಶೇಷ ಕಾರಣಗಳಿಗಾಗಿ ಮುಚ್ಚಲು ಬ್ಯಾಂಕಿನ ಡೈರೆಕ್ಟರುಗಳ ಬೋರ್ಡಿನವರು ನಿರ್ಧರಿಸಿರುವರು ಅದರಂತೆಯೇ ಬೆಂಗಳೂರು ಮತ್ತು ಮಂಡ್ಯದ ಶಾಖೆಗಳನ್ನು ಈಗಾಗಲೇ ಮುಚ್ಚಲಾಗಿದೆ ಮೈಸೂರಿನ ಶಾಖೆಯನ್ನು ೩೦-೧೧-೫೧ರಂದು ಮುಚ್ಚಲಾಗುವುದು

ಅಂಚೆ ಮೂಲಕ ವೈಯಕ್ತಿಕವಾಗಿ ನೋಟೀಸುಗಳನ್ನು ಕೊಟ್ಟಿದ್ದಾಗ್ಯೂ, ಬೆಂಗಳೂರು ಮತ್ತು ಮಂಡ್ಯ ಶಾಖೆಗಳಿಗೆ ಸಂಬಂಧಪಟ್ಟ ಆಭರಣಗಳ ಸಾಲದ ಅನೇಕ ಐಟಂಗಳು ಇನ್ನೂ ಉಳಿದಿರುತ್ತವೆ ಆಯಾ ಗಿರವಿದಾರರು ತಮ್ಮ ಸಾಲಗಳನ್ನು ಶ್ರೀರಾಂಪೇಟೆಯಲ್ಲಿರುವ ಮೈಸೂರು ಶಾಖೆಯಲ್ಲಿ ವಾಪಸು ಕೊಡಲು ೩೦-೧೦-೫೧ನೇ ದಿನವೇ ಕಡೆಯ ತಾರೀಖೆಂದು ಅವರುಗಳಿಗೆ ಈ ಮೂಲಕ ತಿಳಿಯ ಪಡಿಸಲಾಗಿದೆ ಆ ತಾರೀಖಿನ ನಂತರ ಇನ್ನೂ ಫೈಸಲಾಗದೆ ಉಳಿಯುವ ಎಲ್ಲ ಐಟಂಗಳನ್ನು ಮೈಸೂರು ಶಾಖೆಯ ಕಟ್ಟಡದಲ್ಲಿ ೪ ೧೧ ೫೧ ನೇ ಭಾನುವಾರ ಬೆಳಗ್ಗೆ ೯ ಗಂಟೆಗೆ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು ಯಾವುದೇ ಐಟಮ್ಮು ಬಿಟ್ಟುದಾರರಿಲ್ಲದೆ ಹಾಗೇ ಉಳಿದರೆ, ಅದನ್ನು ಖಾಸಗಿಯಾಗಿ ಮಾರಾಟ ಮಾಡಲಾಗುವುದು

ಮೈಸೂರು ಶಾಖೆಯ ಸಾಲಗಾರರು ತಮ್ಮ ಸಾಲಗಳನ್ನು ೩೦ ೧೧ ೫೧ಕ್ಕೆ ಮುಂಚೆ ಫೈಸಲ್ ಮಾಡಬೇಕೆಂದು ಪ್ರಾರ್ಥಿಸಲಾಗಿದೆ ಆ ತಾರೀಖಿನ ನಂತರ ಅವರು ಉತ್ತರ ಆರ್ಕಾಟ್ ಜಿಲ್ಲೆಯ ತಿರುಪತ್ತೂರ್ ಶಾಖೆಯಲ್ಲಿ ತಮ್ಮ ಸ್ವಂತ ಲಾಗೋಟಿನಿಂದ ಫೈಸಲ್ ಮಾಡಬೇಕಾಗುವುದು

ಮೈಸೂರು
5-10-51

ಕೆ. ವಿ. ರಾಮಕೃಷ್ಣರಾವ್,
ಆಕ್ಟಿಂಗ್ ಏಜೆಂಟ್

ಆನೆಗೆ ಸೈಕಲ್ ...

ಬ್ರಿಟಿಷ್ ಪೂರ್ವ ಆಫ್ರಿ... ವಿಕ್ಟೋರಿಯಾ ಸರೋವರ... ಮೇಲೆ ಕಟ್ಟಲಾಗಿರುವ ಹೊ... ಲ್ಲಿ ಒಬ್ಬ ಸೈಕಲ್ ಸವಾರ... ಯಾಗಿ ಹೋಗುತ್ತಿದ್ದಾಗ ... ಬರುತ್ತಿದ್ದ ಒಂದು ಆನೆಗೆ ... ಹೊಡೆಯಿತೆಂದೂ, ಅದರ ... ವಾರನು ಪಕ್ಕದ ಬೇಲಿ ಮೇ... ದ್ದನೆಂದ ಹೇಳಲಾಗಿದೆ ಆನೆ... ಬಂದು ಸೈಕಲನ್ನು ಸೊಂಡಿ... ತ್ತಿ ಅವನ ಮೇಲೆ ಒಗೆದು ... ಗೊರಟುಹೋಯಿತೆಂದು ಹೇ...

ಪ್ರಸಿದ್ಧ ಪತ್ರಿಕೆ...

ಮೈಸೂರು ತಾಲ್ಲೂಕು ಕಸ... ಬಳಿ ಮಂಡಕಹಳ್ಳಿ ದಾಖ... ಹಳ್ಳಿ ಗ್ರಾಮದಲ್ಲಿರುವ ಪುಟ್ಟ... ನ ಹೆಂಡತಿ ಪುಟ್ಟೀರಮ್ಮನು ... ತಿಳಿಯಪಡಿಸುವುದೇನೆಂದರೆ...

ನನ್ನ ಗಂಡ ಪುಟ್ಟನಂಜಪ್ಪ... ಸೂರು ಸಿಟಿ ನರಸಿಂಹರಾಜ ... ಕೆಸರೆ ಬ್ಲಾಕಿನಲ್ಲಿರುವ ನಂಬ... ಮನೆ ಮತ್ತು ಖಾಲಿ ಜಾಗವನ್ನು ... ಮಾಡಲು ಪ್ರಯತ್ನ ಪಟ್ಟಿರು... ಮಗೆ ಇದು ವಿನಹ ಇನ್ಯಾವ ... ಗಲಿ, ಮನೆಯಾಗಲಿ ಇರುವುದಿ... ಲ್ಲಂಥ ಪುಟ್ಟನಂಜಪ್ಪನವರು ... ರ ಸಹವಾಸಕ್ಕೆ ಬಿದ್ದು ಜೂಜ... ಆಡಿ ಸದರಿ ಮನೆ, ಜಾಗ ಸಹ... ಪ್ರಯತ್ನಪಟ್ಟಿರುತ್ತಾರೆ ಸದ... ಜಾಗದ ಮೇಲೆ ನನ್ನ ಸಂಸಾ... ಕ್ಕೆ ಬಾಧ್ಯತೆ ಇರುತ್ತೆ ಹಾಗೇ... ಖರೀದಿಗೆ ತೆಗೆದುಕೊಂಡವ... ಸ್ವಾಧೀನಕ್ಕೆ ದೊರಿಯಲಾರದು ... ನನ್ನ ಖರ್ಚು ನಷ್ಟಗಳಿಗೂ ... ವಾಬ್ದಾರರಾಗಬೇಕಾಗುತ್ತೆ ... ನೆ ಮತ್ತು ನಿವೇಶನಕ್ಕೆ ಚಾಕ...

ಪೂರ್ವಕ್ಕೆ ಘಟ್ಟುರೋಡು... ಕ್ಕೆ ದೊಡ್ಡರಸ್ತೆ, ದಕ್ಷಿಣಕ್ಕೆ, ... ಸಿದ್ದಲಿಂಗಯ್ಯನವರ ಮನೆ, ... ದೊಡ್ಡಮಾದಯ್ಯನ ಮನೆ ... ರುವ ಪೂರ್ವ ಪಶ್ಚಿಮ ಅಡಿ ... ರು, ದಕ್ಷಿಣೋತ್ತರ ಅಡಿ ನಲವ... ರಲ್ಲಿರುವ ಮಂಗಳೂರು ಹೆಂಚಿ... ಮತ್ತು ಖಾಲಿ ಜಾಗ ಸಹಾ...

O ಪುಟ್ಟೀರಮ್ಮನ ಎಡಗೈ ... ಗುರುತು.

ತಾ॥ 20 10-5...

CENTRAL FOOD TECHNOLOGICAL RESEARCH INSTITUTE, MYSORE

WANTED

An influential person of good standing as Commission Agent or Wholesale Distributor in Mysore City for food products developed in the institute on reasonable terms Particulars can be had from the Administrative Officer Last date for receiving applications, 10th November, 1951

THIRTHA & COMPANY,
Narayana Sastry Road,
PHONE 537
Clearing & Forwarding AGENTS

Edited, Printed ... Published by A R ... rajan, at Sadhvi Press, Subbiah Road, Mys...

ಗೌ॥ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ M. V. ಭೋಜಯ್ಯಶ್ರೀ ಬಿ ಎ, ಇಂಡಿಯ... ಎದುರು, ಮೈ...

ಕುರ್ಚಿ ಬಟ್ಟೆ, ಛತ್ರಿ ಬಟ್ಟೆ, ಹಾಸಿಗೆ ಬಟ್ಟೆ, ಸೋಫಾ ಬಟ್ಟೆಗಳಿಗು...

ಕ್ಯಾಂಡ್ ಕ್ಲಾತ್ ಕ್ಯಾನ್ವಾಸ್, ಸಿಂಗಲ್, ಡಬ್ಬಲ್ ಸೊಳ್ಳೆ ಪರದೆ, ಮುಚ್ಚಳ ತೊಟ್ಟಿಲಿಗೆ ಹಾಸುವ ರಬ್ಬರ್ ಶೀಟು ಇವುಗಳಿಗೂ ಬಾಬುಸಾಬ್ ಅಂಡ್ ಸನ್ಸ್ ಕ್ಯಾಂಡ್ ರಸ್ತೆ, ಮೈ...

ಫೋನ್ ನಂ 792 । ಬಿಡಿ ಪ್ರತಿ ೧ ಆಣೆ । ಇಂದಿನ ಪತ್ರಿಕೆ ೩ ಪುಟ

ಸಾಧ್ವಿ

ಸಂಪುಟ ೧೦] ಸೋಮವಾರ ೨೨-೧೦-೫೧ [ಸಂಚಿಕೆ ೭೪

ಇಟಲಿಯಲ್ಲಿ ಅತಿವೃಷ್ಟಿ; ೫ ಲಕ್ಷ ಜನರಿಗೆ ನಷ್ಟ

ಇಟಲಿಯಲ್ಲಿ ಬಿರುಗಾಳಿ ಯಿಂದ ೧೦೦ ಮರಣ

...ಮಧ್ಯ ಮೆಡಿಟರೇನಿಯನ್ ಪ್ರದೇಶಗ...ಳಲ್ಲಿ ಕಳೆದ ೪-೫ ದಿನಗಳಿಂದ ಎಂದೂ ...ಇದ್ದ ಭಾರಿ ಬಿರುಗಾಳಿಯು ಒಂದೇ ಸ...ಮನೆ ಬೀಸಿ ಸುಮಾರು ೧೦೦ ಮಂದಿ ಸ...ತ್ತಿದ್ದರೆಂದು ಗೊತ್ತಾಗಿದೆ ಬಿರುಗಾಳಿ...ಯೊಡನೆ ೫ ದಿನಗಳ ಕಾಲ ಎಡೆ ಬಿಡದೆ ...ದ ಮಳೆ, ಪ್ರವಾಹಗಳ ಪರಿಣಾಮ... ಸಾವಿರಾರು ಹಳ್ಳಿಗಳು ಮತ್ತು ಪ...ಟ್ಟಣಗಳು ನಾಶವಾದುವೆಂದೂ, ೫ ಲಕ್ಷ ...ಜನರು ಮನೆ ಮಠಗಳನ್ನು ಕಳೆದುಕೊಂ...ಡಿದ್ದಾರೆಂದೂ ತಿಳಿದುಬಂದಿದೆ. ನೆನ್ನೆ ಮಳೆ ...ಬಿರು ಗಾಳಿ ಮತ್ತು ಪ್ರವಾಹಗಳು ಕ...ಡಿಮೆಯಾಗತೊಡಗಿದುವು ಇದರಿಂದುಂ...ಟಾಗಿರುವ ನಷ್ಟವನ್ನು ಅಂದಾಜು ಮಾ...ಡಲು ಕೆಲವು ತಿಂಗಳ ಕಾಲ ಹಿಡಿಯುವು...ದೆಂದು ಹೇಳಲಾಗಿದೆ

ಇಟಲಿಯ ಅಧ್ಯಕ್ಷರೂ ಮತ್ತು ಸಚಿವ...ರೂ ಅನಾಹುತಕ್ಕೀಡಾದ ಪ್ರದೇಶ...ಗಳ ಸಂಚರಿಸಿ ನಿರಾಶ್ರಿತರಿಗೆ ಆಹಾರ, ...ಬಟ್ಟೆಗಳನ್ನು ಹಂಚಿದರು ಮನೆಗಳು ...ರು ಮತ್ತು ಪ್ರವಾಹದಲ್ಲಿ ಮುಳುಗಿ ... ಇಟಲಿಯಲ್ಲಿ ಸುಮಾರು ೭೦ ...ಮಂದಿಯೂ, ಸಿಸಲಿ ಮತ್ತು ಸಾರ್ಡಿನಿ...ಯಾ ದ್ವೀಪಗಳಲ್ಲಿ ಕಡೆ ಪಕ್ಷ ೩೦ ಮಂದಿಯೂ ...ಸತ್ತಿರುವರೆಂದು ಹೇಳಲಾಗಿದೆ

ನೆಹರೂ ವಿರುದ್ಧವಾಗಿ ತಟ್ಟೆಯವರ ಸ್ಪರ್ಧೆ

...ಕಿಸ್ತಾನದ ವಿರುದ್ಧ ಚಳುವಳಿಯ ...ನಾಯಕ ಶ್ರೀ ಎಲ್ ಜಿ ತಟ್ಟೆಯವ...ರು ಅಲಹಾಬಾದು ಜಿಲ್ಲೆಯಿಂದ ಪಂಡಿ...ತ ನೆಹರೂರವರಿಗೆ ವಿರೋಧವಾಗಿ ಮ...ಹಾ ಚುನಾವಣೆಯಲ್ಲಿ ಸ್ಪರ್ಧಿಸಲಿರುವ...ರೆಂದು ಗೊತ್ತಾಗಿದೆ

...ನ ಮಾರಡ ಕಾಳಮ್ಮನ ಗುಡಿ ವ್ಯವಹಾರ

ಜಧಾನಿಯ ಮಂಡಿ ಮೊಹಲ್ಲಾ...ದ ಬೀವಿನಮರದ ಕಾಳಮ್ಮನ ...ಸ್ಥಾನದ ಆವರಣದ ಒಂದು ಭಾಗ...ವನ್ನು ಒಬ್ಬ ಮುಸಲ್ಮಾನರಿಗೆ ಭೋಗ್ಯ...ಕ್ಕೆ ಕೊಟ್ಟಿರುವ ಸಂಬಂಧವಾಗಿ ಅಲ್ಲಿನ ನಿ...ವಾಸಿಗಳಿಗೆ ಉಂಟಾಗಿರುವ ಅಸಮಾಧಾ...ನವನ್ನು ಪರಿಶೀಲಿಸಲು ನೆನ್ನೆ ಶ್ರೀ ಕೆ ...ಎಸ್ ಸೂರ್ಯನಾರಾಯಣರಾಯರ ಅ...ಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿದ್ದಿತು ...ಮುಸಲ್ಮಾನರೂ ಸಹ ಸಭೆಗೆ ಆಗಮಿ...ಸಿದ್ದರು ಈ ವಿಷಯವನ್ನು ಸೌಹಾರ್ದ...ಪೂರ್ವಕವಾಗಿ ಇತ್ಯರ್ಥ ಪಡಿಸುವ ಸಲು...ವಾಗಿ ಒಂದು ಸಮಿತಿಯನ್ನು ರಚಿಸಲಾ...ಯಿತು ... ವ್ಯವಹಾರವನ್ನು ನಗರ ಸಭಾ ...ಉಪಾಧ್ಯಕ್ಷ ಶ್ರೀ ಎಸ್ ಚನ್ನಯ್ಯ...ನವರ ತೀರ್ಮಾನಕ್ಕೆ ಒಪ್ಪಿಸಿ ಅದಕ್ಕೆ ...ಬದ್ಧರಾಗಲು ಸಮ್ಮತಿಸಿದರು

ಮಹಾರಾಜಾ ಕಾಲೇಜು ಸಂಘದ ಆರಂಭ ಭಾಷಣ

...ಚಾರ್ಯ ಕೃಪಲಾನಿಯವರು ನಾಳೆ ...ಸಂಜೆ ೧.೩೦ ಘಂಟೆಗೆ ಮಹಾರಾಜಾ ...ಕಾಲೇಜಿನ ಒಳ ಅಂಗಳದಲ್ಲಿ ಸದರಿ ಕಾ...ಲೇಜಿನ ಸಂಘದ ಆರಂಭ ಭಾಷಣವನ್ನು ...ಮಾಡುವರು ಸಂಘದ ಅಧ್ಯಕ್ಷರಾದ ಶ್ರೀ ...ಶಾಂತಮೂರ್ತಿಯವರು ಅಗ್ರಾ...ಸನ ವಹಿಸುವರು

ಕೆ. ಸಿ. ರೆಡ್ಡಿಯವರು ಬಂಗಾರಪೇಟೆಯಿಂದ ಉಮೇದುವಾರರು

ಬೆಂಗಳೂರು ೨೨

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಬಂಗಾರಪೇಟೆ ಕ್ಷೇತ್ರದಿಂದ ಶಾಸನ ಸಭೆಗೆ ಉಮೇದುವಾರರಾಗಿ ನಿಲ್ಲುವರೆಂದೂ, ಅವರ ವಿರುದ್ಧವಾಗಿ ಆಗ ಲಕೋಟೆದ ಮಾಜೀ ಡಾಕ್ಟರಾದ ಶ್ರೀ ಟಿ ಜಿ ಶ್ರೀನಿವಾಸುಲುರವರು ಸ್ವತಂತ್ರ ಉಮೇದುವಾರರಾಗಿರುವರೆಂದೂ ಗೊತ್ತಾಗಿದೆ

ಮಣಿಲಾಲ್ ಗಾಂಧಿಯವರಿಂದ ಮತ್ತೆ ಶಾಸನ ಭಂಗ

ದಕ್ಷಿಣ ಆಫ್ರಿಕದ ಡರ್ಬಾನಿನಲ್ಲಿ ಶ್ರೀ ಮಣಿಲಾಲ್ ಗಾಂಧಿಯವರು ಕಳೆದ ಶುಕ್ರವಾರ ಬಿಳಿಯರಿಗಾಗಿಯೇ ಮೀಸಲಾಗಿಟ್ಟಿದ್ದ ಒಂದು ಪುಸ್ತಕ ಭಂಡಾರಕ್ಕೆ ತಮ್ಮ ಪುತ್ರಿ ಸಮೇತ ಹೋಗಿ ಸ್ವಲ್ಪ ಹೊತ್ತು ಪತ್ರಿಕೆಗಳನ್ನು ಓದಿ ಅಲ್ಲಿನ ಸರ್ಕಾರದ ವರ್ಣವಿಭೇದ ಶಾಸನವನ್ನು ಮತ್ತೆ ಉಲ್ಲಂಘಿಸಿದರು

ರೈಲ್ವೆ ನೌಕರರ ಸಂಘದ ವಾರ್ಷಿಕ ಸಭೆ

ಮೈಸೂರು ಸಂಸ್ಥಾನದ ರೈಲ್ವೆ ಕೆಲಸಗಾರರ ಸಂಘದ ವಾರ್ಷಿಕ ಸಭೆಯು ಮೊನ್ನೆ ಶ್ರೀ ಜಿ ವಿ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿತ್ತು, ೧೯೨೬ರ ಟ್ರೇಡ್ ಯೂನಿಯನ್ ಕಾನೂನನ್ನು ಸಂಸ್ಥಾನಕ್ಕೂ ಅನ್ವಯಿಸಿರುವುದರ ಮೇರೆ ಸಂಘದ ಅಂಗರಚನೆಯ ನಿಯಮಾವಳಿಯಲ್ಲಿ ಹಲವು ತಿದ್ದುಪಡಿಗಳನ್ನು ಮಾಡಲಾಯಿತು ಅನಂತರ ಈ ಕೆಳಗೆ ಕಂಡಂತೆ ಆಡಳಿತ ವರ್ಗದವರ ಚುನಾವಣೆ ನಡೆಯಿತು -

ಶ್ರೀ ಎಚ್ ಡಿ ರಾವ್ ಅಧ್ಯಕ್ಷರು ಜನಾಬ್ ಎಂ ರಜಾಬ್ ಅಲಿ, ಶ್ರೀಗಳಾದ ಡಿ ಎ ರಾಬರ್ಟ್ಸ್, ರಾಜು ಮೊದಲಿಯಾರ್ ರವರು ಉಪಾಧ್ಯಕ್ಷರು ಶ್ರೀ ಕೆ ಎನ್ ಎಸ್ ಮೂರ್ತಿ ಜನರಲ್ ಕಾರ್ಯದರ್ಶಿ, ಶ್ರೀ ಆರ್ ಕೆ ಚತುರ್ವೇದಿ ಕಾರ್ಯದರ್ಶಿ ಮತ್ತು ಜನಾಬ್ ಫಜಲುಲ್ಲಾ ಖಜಾಂಚಿ ಇತರ ೧೦ ಮಂದಿಯನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಚುನಾಯಿಸಲಾಯಿತು

ಸುಡಾನಿನಿಂದ ಈಜಿಪ್ಟ್ ಅಧಿಕಾರಿಗಳ ಗಡೀಪಾರು

ಸುಡಾನಿನಲ್ಲಿದ್ದ ಈಜಿಪ್ಟಿನ ಉನ್ನತಾಧಿಕಾರಿಗಳು ಮೂವರು ಕೈರೋವಿನಿಂದ ಸುಡಾನಿಗೆ ಹಿಂದಿರುಗಕೂಡದೆಂದು ಸುಡಾನ್ ಗೌರ್ನರ್ ಜನರಲ್ಲರು ಆಜ್ಞಾಪಿಸಿದ್ದರು ಅದರ ಪ್ರಕಾರ ಮೊನ್ನೆ ಭಾನುವಾರ ರಾತ್ರಿ ಸುಡಾನಿಗೆ ವಿಮಾನದಲ್ಲಿ ಬಂದ ಈಜಿಪ್ಟಿನ ವಿದ್ಯಾಧಿಕಾರಿಯೊಬ್ಬರನ್ನು ಅದೇ ವಿಮಾನದಲ್ಲಿಯೇ ಹಿಂದಕ್ಕೆ ಕಳುಹಿಸಲಾಯಿತು ಸಾರ್ವಜನಿಕ ಹಿತದೃಷ್ಟಿಯಿಂದ ಅವರ ಮೇಲೆ ಈ ಕ್ರಮವನ್ನು ಕೈಗೊಳ್ಳಲಾಗಿದೆಯೆಂದು ತಿಳಿಸಲಾಗಿದೆ

ಲಿಯಾಖತ್ತರ ಪತ್ನಿಗೆ ೨,೦೦೦ ರೂ. ಮಾಸಾಶನ

ಪಾಕಿಸ್ತಾನದ ಮಾಜಿ ಪ್ರಧಾನಿ ಲಿಯಾಖತ್ತರ ಪತ್ನಿ ಬೇಗಂ ಲಿಯಾಖತ್ತರಿಗೆ ಅವರು ಜೀವಿಸಿರುವ ಪರ್ಯಂತ ಮಾಸಿಯಾನ ಎರಡು ಸಾವಿರ ರೂ ಮಾಸಾಶನವನ್ನೂ ಮತ್ತು ವಾಸಕ್ಕೆ ಒಂದು ಬಂಗಲೆಯನ್ನೂ ಕೊಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುವುದಾಗಿ ಗೊತ್ತಾಗಿದೆ ಲಿಯಾಖತ್ತರ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕೂ ಸಹ ಸರ್ಕಾರವು ಸೂಕ್ತ ವ್ಯವಸ್ಥೆ ಮಾಡಲಿದೆ

ಶ್ರೀ ಕೃಷ್ಣರಾಜೇಂದ್ರ ಕೋ ಆಪರೇಟಿವ್ ಸೊಸೈಟಿ ಡೈರೆಕ್ಟರುಗಳು

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಕೋ ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳ ಚುನಾವಣೆಯು ನೆನ್ನೆ ನಡೆದು ಈ ಕೆಳಗೆ ಕಂಡವರು ಆರಿಸಿ ಬಂದಿದ್ದಾರೆ -

ಶ್ರೀಗಳಾದ ಬಿ ಆರ್ ನಾಯ್ಡು, ಟಿ ಎನ್ ಸುಬ್ಬರಾವ್, ಕೆ ಕರಿಯಣ್ಣ, ಕೆ ಆರ್ ವೀರಭದ್ರಪ್ಪ ಎಂ ಎನ್ ರಾಮಸ್ವಾಮಿ, ಎ ವಿ ಕೃಷ್ಣಮೂರ್ತಿ, ಬಿ ಎಂ ಚಂದ್ರಶೇಖರಯ್ಯ (ಬಸ್ಸ), ಎಂ ಎನ್ ದೊರೆಸ್ವಾಮಿ, ಎನ್ ವೆಂಕಟನಾರಾಯಣಶಾಸ್ತ್ರಿ ಎ ವಿ ಶ್ರೀನಿವಾಸಮೂರ್ತಿ, ಎಂ ಸಿ ಮಹದೇವಪ್ಪ, ಎಂ ಮಾದರಾಜೇ ಅರಸ್, ಎಂ ಎಸ್ ರಾಮಲಿಂಗು, ಎಂ ಗಂಗಾಧರ ಶಾಸ್ತ್ರಿ ಮತ್ತು ಎಂ ಎನ್ ಪದ್ಮನಾಭ

ಲಿಯಾಖತ್ ಕೊಲೆ ಸಂಬಂಧದಲ್ಲಿ ಬಾಲಕನ ಬಂಧನ

ಕಳೆದ ಶುಕ್ರವಾರ ರಾವಲ್ಪಿಂಡಿಯ ಪೋಲೀಸರು ದಿಲಾವರ್ ಖಾನ್ ಎಂಬ ಹತ್ತು ವರ್ಷದ ಹುಡುಗನೊಬ್ಬನನ್ನು ಬಂಧಿಸಿರುವರು ಲಿಯಾಖತ್ ಅಲಿ ಖಾನ್ ಕೊಲೆ ಸಂಬಂಧದ ಪಿತೂರಿಯ ಪೂರ್ಣ ವಿವರಗಳು ಅವನಿಂದ ಬಯಲಾಗಬಹುದೆಂದು ಭಾವಿಸಲಾಗಿದೆ ಹುಡುಗನು ಬಹಳ ಚಾಲೂಕಾಗಿರುವನೆಂದೂ, ಅನೇಕ ಮಹತ್ತರ ವಿಷಯಗಳನ್ನು ಅವನಿಂದ ತಿಳಿಯಬಹುದೆಂದೂ ಹೇಳಲಾಗಿದೆ

ಹೊಸ ೨ ಮತ್ತು ೫ ರೂ. ನೋಟುಗಳು

ಇನ್ನು ಮುಂದೆ ಎರಡು ರೂ ಮತ್ತು ಐದು ರೂ ನೋಟುಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ ಹೊಸದಾಗಿ ಚಲಾವಣೆಗೆ ತರಲಾಗುವುದೆಂದು ರಿಜರ್ವ್ ಬ್ಯಾಂಕಿನ ಪ್ರಕಟಣೆಯೊಂದು ತಿಳಿಸುತ್ತದೆ ನೋಟುಗಳ ಬೆಲೆಯ ಸಂಖ್ಯೆಯನ್ನು ಇಂಗ್ಲಿಷಿನಲ್ಲಿ ಪ್ರಾಮುಖ್ಯವಾಗಿ ಕಾಣುವ ರೀತಿಯಲ್ಲಿ ಹಾಕುತ್ತಿರುವಂತೆಯೇ ಹಿಂದಿಯಲ್ಲೂ ಹಾಕಲಾಗುವುದು ಎರಡು ರೂ ನೋಟಿನ ಬಣ್ಣದಲ್ಲೂ ಅಲ್ಪ ಸ್ವಲ್ಪ ಬದಲಾವಣೆಯಾಗುವುದು ಐದು ರೂ ನೋಟಿನಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗಲಾರದು

ರೈಲು ಕಂಬಿ ಮೇಲೆ ಮಲಗಿ ಆತ್ಮಹತ್ಯೆ

ಅರಸೀಕೆರೆ ... ಸಿಪಾಯಿ ಸೂರ್ಯನಾರಾಯಣ ಜೋಯಿಸ್ ಎಂಬುವರು ಮೊನ್ನೆ ದಿನ ಅರಸೀಕೆರೆ ರೈಲ್ವೆ ಸ್ಟೇಷನ್ನಿನಲ್ಲಿ ಕಂಬಿ ಮೇಲೆ ಮಲಗಿ, ಎಂಜಿನ್ನಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ವರದಿಯಾಗಿದೆ

ಟೌನ್ ಹಾಲಿನಲ್ಲಿ ಕೃಪಲಾನಿಯವರ ಭಾಷಣ

ಆಚಾರ್ಯ ಕೃಪಲಾನಿಯವರು ನಾಳೆ ಸಂಜೆ ೬ ಘಂಟೆಗೆ ಮೈಸೂರು ಟೌನ್ ಹಾಲಿನಲ್ಲಿ ಸಂಸ್ಥಾನದ ಕಿಸಾನ್ ಮಜದೂರ್ ಪ್ರಜಾ ಪಕ್ಷದ ಆಶ್ರಯದಲ್ಲಿ ಭಾಷಣ ಮಾಡುವರು ಸ್ತ್ರೀಯರಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಲಾಗಿದೆ ನಾಳೆ ಬೆಳಗ್ಗೆ ೧೦ ಘಂಟೆಗೆ ಕೃಪಲಾನಿಯವರನ್ನು ಶ್ರೀರಂಗಪಟ್ಟಣದ ಬಳಿ ಸ್ವಾಗತಿಸಲು ಏರ್ಪಾಡುಗಳಾಗಿವೆ ಪಕ್ಷದ ಸದಸ್ಯರು ದಯಮಾಡಿಸಬೇಕೆಂದು ಕೋರಲಾಗಿದೆ

ಮಾನಭಂಗದ ಆಪಾದನೆಗಾಗಿ ವಕೀಲರಿಗೆ ಸಜಾ

ಸ್ವಂ ಸು ಪ್ರೋ] ಬೆಂಗಳೂರು ೨೨

ಶೇಷಾದ್ರಿಪುರದ ವಕೀಲರಾದ ಶ್ರೀ ಎಸ್ ಕೃಷ್ಣಪ್ಪ ಎಂಬುವರು ಅದೇ ಶೇಷಾದ್ರಿಪುರದ ನಿವಾಸಿ ವೆಂಕಟಮ್ಮ ಎಂಬಾಕೆಗೆ ಮಾನ ಭಂಗ ಮಾಡಿದರೆಂದು ಹೂಡಿದ್ದ ಮೊಕದ್ದಮೆಯಲ್ಲಿ ಅಡಿಷನಲ್ ಪ್ರಥಮ ನಗರ ನ್ಯಾಯಾಧೀಶರು ಈ ದಿನ ತೀರ್ಪಿತ್ತು, ಸದರಿ ಕೃಷ್ಣಪ್ಪನವರಿಗೆ ಐ ಪಿ ಸಿ ೩೫೪ ರ ಪ್ರಕಾರ ೩ ತಿಂಗಳು ಕಠಿಣ ಸಜಾ ಮತ್ತು ೧೦೦೦ ರೂ ಜುಲ್ಮಾನೆ, ತಪ್ಪಿದರೆ ೬ ವಾರ ಸಜಾ ಮತ್ತು ಇನ್ನೊಂದು ಆಪಾದನೆ ಮೇರೆ ೩ ತಿಂಗಳು ಕಠಿಣ ಸಜಾ ವಿಧಿಸಿದ್ದಾರೆ

ಅನಕ್ಷರಸ್ಥರ ಸೋಲಿ ತೆರಿಗೆ

ಅನಕ್ಷರಸ್ಥರ ಸೋಲಿ ತೆರಿಗೆ ಹಾಕುವುದು ಮತ್ತು ಅವರನ್ನು ತಿಪ್ಪೆಗೆ ಗುರಿ ಮಾಡುವುದು – ಈ ಎರಡು ಸಲಹೆಗಳನ್ನು ಭಾರತದ ವಯಸ್ಕರ ಸಂಘದ ಆಶ್ರಯದಲ್ಲಿ ಇಂದೂರಿನಲ್ಲಿ ನಡೆದ ಸಭೆಯೊಂದರಲ್ಲಿ ಬಿ ಎಂ ಕಪಾಡಿಯಾ ಎಂಬುವರು ಭಾಷಣ ಮಾಡುವಾಗ ಕೊಟ್ಟರೆಂದು ವರದಿಯಾಗಿದೆ

ರಜ್ಮಿಯ ವಾಹನಗಳು ನಾಪಸು

ಸೈಯದ್ ಖಾಸಿಂ ರಜ್ವಿಯ ವರಿಗೆ ಸೇರಿದ ಒಂದು ನೆಪೋಲಿಯನ್ ಕಾರ ಮತ್ತು ಒಂದು ಮೋಟರು ಸೈಕಲ್ಲನ್ನು ಅವರಿಗೆ ವಾಪಸು ಕೊಡಲಾಗಿದೆ

ಗಾಂಧಿ ನೆಹರೂ ಛಾಯಾಚಿತ್ರಗಳ ಅನಾವರಣೋತ್ಸವ

ಕಳೆದ ಶುಕ್ರವಾರ ಸಂಜೆ ಎಷ್ಟನ ರ ಪೈ ಸ್ಕೂಲು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಮಹಾತ್ಮ ಗಾಂಧಿ ಮತ್ತು ಜವಹರ ಲಾಲ್‌ರವರ ಛಾಯಾಚಿತ್ರಗಳ ಅನಾವರಣ ಮಹೋತ್ಸವವು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ಯಾಮುನಾಚಾರ್ಯರಿಂದ ನೆರವೇರಿತು ಅಧ್ಯಕ್ಷತೆ ವಹಿಸಿದ್ದ, ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸುಬ್ಬರಾಮಾಚಾರ್ಯರವರಿಂದ ಆರಂಭ ಭಾಷಣವಾದ ಬಳಿಕ ಮಾನ್ಯ ಉಪನ್ಯಾಸಕರ ಗಾಂಧೀಜಿಯವರ ಜೀವನದ ಧ್ಯೇಯಗಳನ್ನು ವಿವರಿಸಿದರು ಗಾಂಧೀಜಿ ಮತ್ತು ಜವಹರ ಲಾಲ್‌ರವರ ಗುರು ಶಿಷ್ಯ ಸಂಬಂಧವನ್ನು ತಿಳಿದಿದ್ದರು ಗಾಂಧೀಜಿಯವರ ಜೀವನವು ಸೌಜನ್ಯಮಯವಾಗಿತ್ತು – ಎಂದು ಅವರು ನುಡಿದರು

ಗುರು ಗ್ರಹದ ಮತ್ತೊಂದು ಉಪ ಗ್ರಹ

ಗುರು ಗ್ರಹಕ್ಕೆ ಇರುವುದೆಂದು ಹೇಳಲಾದ ೧೧ ಉಪ ಗ್ರಹಗಳಲ್ಲದೆ ಮತ್ತೊಂದು ಉಪ ಗ್ರಹವೂ ಇರುವುದೆಂದು ಕ್ಯಾಲಿಫೋರ್ನಿಯದ ವೈಜ್ಞಾನಿಕ ಡಾ|| ಸೇಠ್ ನಿಕಲ್ಸನ್‌ರವರು ಹೇಳಿರುತ್ತಾರೆ ಇದೇ ವೈಜ್ಞಾನಿಕರು ೧೯೩೮ ಮತ್ತು ೧೯೧೪ ರಲ್ಲಿ ಎರಡು ಉಪ ಗ್ರಹಗಳನ್ನು ಕಂಡು ಹಿಡಿದಿದ್ದರು

ಪ್ರವರ್ತನಕಾರರ ಸತ್ಕಾರ ಕೂಟ

ಈ ಬೆಳಿಗ್ಗೆ ಅಖಿಲ ಭಾರತ ಪ್ರವರ್ತನಕಾರರ ಸಂಘದವರು ನಮ್ಮ ಪ್ರವರ್ತನ ಸಚಿವರ ಗೌರವಾರ್ಥವಾಗಿ ವಿದ್ಯಾ ಮಂತ್ರಿ ಶ್ರೀ ಆರ್ ಚನ್ನಿಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು ಸಂಘದ ಪರವಾಗಿ ಶ್ರೀ ಯು ಎಲ್ ರಾಮಚಂದ್ರರಾಯರು ಭಾಷಣ ಮಾಡಿ ಪ್ರವರ್ತನಕಾರರ ಕುಂದುಕೊರತೆಗಳನ್ನು ನಿವೇದಿಸಿಕೊಂಡರು ಶ್ರೀ ಆರ್ ಚನ್ನಿಗರಾಮಯ್ಯನವರು ಮಾತನಾಡಿ ಸೂಕ್ತ ಪರಿಹಾರಯನ್ನಿತ್ತರು ಶ್ರೀ ಎಂ ಸಿ ಮಹದೇವಸ್ವಾಮಿಯವರು ವಂದನೆಯನ್ನು ಸಲ್ಲಿಸಿದರು

ಸು ಪ್ರ ಸಿ ದ್ಧ

ಸಾಲೆಯಾಳ ಜ್ಯೋತಿಷ್ಯರು

ಕೆ. ಕುಮಾರಸ್ವಾಮಿ

ನಂ ೧೦ ೧೨ ರಾಜರಾಜ ಬೀದಿ ಛತ್ರ ಮೈಸೂರು.

ಇವರು ಕರಾರೆ ವಾಕ್ಯಗಿಯೂ ಶಾಸ್ತ್ರೀಯವಾಗಿಯೂ ಜಾತಕ ಭವಿಷ್ಯಗಳನ್ನು ಹೇಳುತ್ತಾರೆ ಬಂದೇ ನೋಡಿ

ಜರ್ಮನಿಯೊಡನೆ ಅಮೆರಿಕದ ಯುದ್ಧ ಪರಿಸ್ಥಿತಿ ರದ್ದು

ಅಮೆರಿಕಾ ಮತ್ತು ಜರ್ಮನಿಗಳ ಮಧ್ಯ ಯುದ್ಧ ಪರಿಸ್ಥಿತಿಯನ್ನು ಕೊನೆಗಾಣಿಸಿರುವ ಬಗ್ಗೆ ಎಂದು ಘೋಷಣೆಗೆ ಅಧ್ಯಕ್ಷ ಟ್ರೂಮನ್ನರು ರುಜು ಹಾಕಿರುತ್ತಾರೆ

ಚೆಟ್ಟಿದಪುರದ ಹಾಸ್ಟಲ್ ವಿದ್ಯಾರ್ಥಿಗಳ ತೊಂದರೆ

ನವರಾತ್ರಿ ರಜವು ಕಳೆದು ೮ ೧೦ ದಿನಗಳಾಗಿದ್ದರೂ, ಮೇಲ್ಕಂಡ ವಿದ್ಯಾರ್ಥಿ ನಿಲಯದಲ್ಲಿರುವವರ ಊಟದ ವ್ಯವಸ್ಥೆಯನ್ನು ಇನ್ನೂ ಮಾಡಿಲ್ಲವೆಂದೂ, ಇದರಿಂದ ವ್ಯಾಸಂಗಕ್ಕೆ ತೊಂದರೆಯಾಗಿರುವುದೆಂದೂ, ನೊಂದ ಹಲವು ವಿದ್ಯಾರ್ಥಿಗಳು ಪತ್ರ ಬರೆದು, ನಿಲಯದ ಆಡಳಿತ ವರ್ಗದವರು ಈ ಕೊರತೆಯನ್ನು ಕೂಡಲೇ ನಿವಾರಿಸಬೇಕೆಂದು ಕೋರಿರುತ್ತಾರೆ

AMERICAN GUERILLA IN THE PHILIPPINES

With Tyrone Power & Micheline Prelle

From 21 10 51

Daily 3 Shows

At

SRI GAYATHRI,

ಹೈದರಾಬಾದಿನಲ್ಲಿ ಲೂಟಿ ಕೃತ್ಯಗಳು

ಹೈದರಾಬಾದಿನ ತೆಲಂಗಾಣ ಪ್ರದೇಶದಲ್ಲಿ ಪುನಃ ಲೂಟಿ ಮತ್ತು ದರೋಡೆಗಳು ನಡೆದಿರುವುದಾಗಿ, ಪೋಲೀಸಿನವರು ತಿಳಿಸಿರುತ್ತಾರೆ ಕರ ಕೊಲೆಯಾಗಿದೆಯೆಂದೂ ಗಿದೆ

ಹಳ್ಳಿಯ ಹೆಸರಿನ ಬದಲು

ನೆಲಮಂಗಲ ತಾಲ್ಲೂಕಿನ ಪುರದ ಹೆಸರನ್ನು ತೆಗೆದು ಅವಕೇಶ್ವರಪುರ ಎಂಬ ಹೆಸರು ಕೊಡ

ಎಲ್. ಎಸ್. ವಿದ್ಯಾರ್ಥಿಗಳ ಸುಸಮಯ

ಪಟ್ಟಣ ಮಧ್ಯದಲ್ಲಿ ಶಿಕ್ಷಣ ಕೊಡಲು

ಚಾಮುಂಡೇಶ್ವರಿ ಕೋಚಿಂಗ್ ತರಗತಿ

1951 ಕೊತ್ವಾಲ ರಾಮಯ್ಯನವರ ರತ್ನಾವಳಿ ಥಿಯೇಟರಿನ ಉತ್ತರಕ್ಕೆ ಮೈಸೂರು

25 10-51 ರಿಂದ ಪ್ರಾರಂಭಿಸಲಾ ಪ್ರತಿ ವಿದ್ಯಾರ್ಥಿಗಳಿಗೆ 2 ರೂ ಮಾ

ಎಸ್. ನಾಗರಾಜ ವ್ಯವಸ್ಥಾಪಕ

Edited, Printed and Published by A. R. Nagarajan, at Sadhvi Press D Subbiah Road, Mysore

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ

ಬೋರ್ಡಿಂಗ ಆನಂದ ಭವನ ಹೋಟೆಲು ಪಕ್ಕ, ಮೈಸೂರು.

ರಾಜಕಮಲ್, ಮೈಸೂರು

19-10-51 ರಿಂದ ಪ್ರಾರಂಭ ಪ್ರತಿ ದಿನ 3 ಆಟಗಳು

ಪಿಚ್ಚೈಕಾರಿ

(ಭಿಕ್ಷುಕಿ) (ತಮಿಳು)

ಅಥವಾ

ಜೀವಿತ ನೌಕ

ತಾರಾಗಣ :

ಬಿ. ಎಸ್ ಸರೋಜ,

ಟಿ ಆರ್ ರಾಜಕುಮಾರಿ

ಶಿಕ್ಯುರುಸಿ.

ಶ್ರೀ ಲಕ್ಷ್ಮಿ ಥಿಯೇಟರ್

ಮೈಸೂರು

24-10-51 ರಿಂದ ಅಪೋಳು 3ನೇ ವಾರ ದಿನವಹಿ 3 ಆಟಗಳು

ಕಿಕ್ಕಿರಿದ ಜನ ಸಂದಣಿಗೆ ಪ್ರದರ್ಶಿಸಲ್ಪಡುತ್ತಿರುವ

ಅರುಣಾರವರ ಪ್ರಸಿದ್ಧ ಚಿತ್ರಚಾರಿ ಕಥೆ

*** ರಾಜಾಂಬಾಳ್ ***

(ತಮಿಳು)

ಪಾತ್ರ – ಮಾಧುರಿ ದೇವಿ, ಪಿ ಕೆ ಸರಸ್ವತಿ, ಸಾರಂಗಪಾಣಿ

ಕೃಷ್ಣರಾಜೇಂದ್ರ ಆಸ್ಪತ್ರೆ ಸೆಕ್ರೆಟರಿಯವರ ಆಫೀಸು, ಮೈಸೂರು

ಟೆಂಡರ್ ನೋಟೀಸ್

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ಚಲುವಾಂಬಾ ಆಸ್ಪತ್ರೆಗಳಿಗೆ ೧೯೫೧–೧೯೫೨ನೇ ಸಾಲಿಗೆ ರೋಗಿಗಳಿಗೆ ಬೇಕಾದ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಸಪ್ಲೈ ಮಾಡುವವರು ಮೂರು ಪ್ರತಿಗಳುಳ್ಳ ಫುಲ್ ಸ್ಕೇಪ್ ಸೈಜ್ ಕಾಗದದ ಪ್ರತ್ಯೇಕ ಟೆಂಡರುಗಳನ್ನು ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ ೧೯೫೧ನೇ ಇಸ್ವಿ ಮಾಹೆ ನವಂಬರ್ ತಾರೀಖು ಆರು (6 11-51) ಮಂಗಳವಾರ ತೆಗೆದುಕೊಳ್ಳುತ್ತಾರೆ.

ಹೆಚ್ಚಿಗೆ ವಿವರಗಳಿಗೆ ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ ತಪ್ಸೀಲ್ ಸ್ಪೆಸಿಫಿಕೇಷನ್ ಮತ್ತು ಇತರ ವಿವರಗಳನ್ನು ಪಡೆಯಬಹುದು.

೧	ಆಹಾರ ಸಾಮಾನುಗಳು		೧೨ ಘಂಟೆಗೆ
೨	ಆಸ್ಪತ್ರೆ ಸಾಮಾನುಗಳು		೧೨ ಘಂಟೆಗೆ
೩	ಸ್ವದೇಶೀಯ ಔಷಧಿಗಳು		೧೨ ಘಂಟೆಗೆ
೪	ಬಿಳಿಯ ಬ್ರೆಡ್ಡು	—	೧೧ ಘಂಟೆಗೆ
೫	ಅಪ್ಪಟ ಹಸುವಿನ ಹಾಲು	—	೧೧ ಘಂಟೆಗೆ
೬	ಬಟ್ಟೆ ಮತ್ತು ಹಾಸಿಗೆ ವಗೈರೆ ಸಾಮಾನು (ಕೃಷ್ಣರಾಜೇಂದ್ರ ಆಸ್ಪತ್ರೆಗೆ ಮಾತ್ರ)		೧೦ ಘಂಟೆಗೆ

(ಸಹಿ) ಎಂ. ಆರ್. ನರಸಿಂಗರಾವ್,
ಸೆಕ್ರೆಟರಿ.

ಗ್ಯಾರಂಟಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಬಿ. ಎ., ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ರೋಃ ನಂ 792 । ವಂದೇ ಮಾತರಂ । ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೨೩-೧೦-೫೧ [ಸಂಚಿಕೆ ೭೪

ಸೂಯೆಜ್ ಹತೋಟಿ ಬ್ರಿಟಿಷರ ವಶಕ್ಕೆ ಬಂತು

...ವರೊ ಸಹಕಾರಕ್ಕಾಗಿ ...ಜಿಮುದ್ದೀನ್ ಮನವಿ

...ಬಿಖ್ ಅಲಿ ಕೊಲೆಯ ಸಂಬಂ... ಕರಾಚಿಯಲ್ಲಿ ಮೊನ್ನೆ ನಡೆದ ...ಯಲ್ಲಿ ಪಾಕಿಸ್ತಾನದ ಹೊಸ ... ಖ್ವಾಜಾ ನಾಜಿಮುದ್ದೀನರ ...ಷಣ ಮಾಡಿ, ಭಾರತ ಮತ್ತು ...ಗಳ ನಡುವೆ ಇರುವ ಭಿನ್ನ ... ಶಾಂತಿಯುತವಾಗಿ ಪರಿಹರಿ... ಸರ್ಕಾರದವರು ತಮ್ಮೊಡನೆ ಸಹಕ... ಸ ಮಾಡಬೇಕೆಂದು ಪ್ರಾರ್ಥಿಸಿ... ...ಕ್ಷೀರದ ಪ್ರಶ್ನೆಯೂ ಸೇರಿ ...ಭಿಪ್ರಾಯಗಳನ್ನೂ ಶಾಂತ ...ಮಾನ ಮಾಡಬಹುದೆಂದು ...ಹೇಳಿದರು. ಲಿಯಾಖತ್ತರ ಮ... ...ಸರಕಾರದವರು ವ್ಯಕ್ತಪಡಿಸಿ... ...ನ್ಯಾಯದ ಕೃತಿಯೊಂದು ಸಹ... ತಾವು ಪುಷ್ಟೀಕರಿಸುವುದಾಗಿ ...ದ್ದೀನರು ತಿಳಿಸಿದರು

ಕೊರಿಯಾ ಸಂಧಾನದ ಪುನರಾರಂಭ

...ತಿಂಗಳುಗಳ ಹಿಂದೆ ನಿಂತು ...ಕೊರಿಯಾ ಸಂಧಾನವು ...ದಿನಗಳಲ್ಲಿ ಪುನಃ ಆರಂಭವಾ... ...ಮ. ವಿಶ್ವಸಂಸ್ಥೆಯ ಅಧಿಕ... ...ಸಿದ್ದಾರೆ. ಮೊನ್ನೆ ... ವಿಶ್ವಸಂಸ್ಥೆ ಮತ್ತು ...ಪ್ರತಿನಿಧಿಗಳು ... ಪಕ್ಷಿ ... ...ಗಳನ್ನು ಕೊಂಡರೆಂದು ಗೊತ್ತಾಗಿದೆ

...ದಲ್ಲಿ ೩೨೦ ಮಂದಿ ...ವರ್ಷಕ್ಕೆ ಮೀರಿದವರು

...ಬಲ್ಗೇರಿಯ ಪರ್ವತ ಪ್ರದೇ... ...ವರ್ಷ ವಯಸ್ಸಿಗೂ ಮೇ... ...೩೨೦ ಜನರಿರುವರೆಂದು ... ...ದೆ. ಅವರ ಪೈಕಿ ಯೆನೋಲ್ ...ಷೇವ್ ಎಂಬ ರೈತನಿಗೆ ೧೫೦ ...ಮಸ್ಸಂದೂ, ೧೫೦ ವರ್ಷಕ್ಕೆ ...ವರು ಬಹು ಮಂದಿ ಇರುವ... ...ಹೇಳಲಾಗಿದೆ

...ಎಲ್. ರಾಮಚಂದ್ರ ...ಯರ ಉಮೇದುವಾರಿಕೆ

...ರು ನಗರದ ಉತ್ತರ ಕ್ಷೇತ್ರ... ...ಯು ಎಲ್ ರಾಮಚಂದ್ರ... ...ನ್ನು ಶಾಸನ ಸಭೆಗೆ ಉಮೇದ... ...ಗಿ ನಿಲ್ಲಿಸಬೇಕೆಂದು ಸಯ್ಯಾ... ...ರಸ್ತೆಯಲ್ಲಿರುವ ಮೈಸೂರು ...ಗಡಿಯ ಮಾಲೀಕರಾದ ಶ್ರೀ ...ಯರು ದೆಹಲಿಯಲ್ಲಿರುವ ಸ್ವ... ...ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ... ...ತಯ್ಯನವರಿಗೆ ತಂತಿ ಕಳುಹಿ... ...ದು ಗೊತ್ತಾಗಿದೆ

...ಕೃಷ್ಣನವರಿಗೆ ಜಾಮೀನು

...ನ ಮಾನಭಂಗ ಯತ್ನದ ಸಂ... ...ಗಿ ಶಿಕ್ಷೆಗೆ ಗುರಿಯಾದ ಬೆಂಗ... ...ವಕೀಲರಾದ ಶ್ರೀ ಎಸ್. ಕೃ... ...ನರನ್ನು ೩೦೦೦ ರೂಗಳ ಸ್ವಂ... ...ತ್ಯಳಿಕೆ ಮತ್ತು ಅದೇ ಮೊತ್ತದ ...ಜಾಮೀನಿನ ಮೇಲೆ ಬಿಡಲಾಗಿ... ...ರು ಸೆಷನ್ಸ್ ಕೋರ್ಟಿನಲ್ಲಿ ಶಿಕ್ಷೆ... ...ದ್ಧವಾಗಿ ಅಪೀಲನ್ನು ಹೂಡಲಿ...

ದೇಶದ ಪುನರ್ರಚನೆಯಲ್ಲಿ ವಸ್ತು ಪ್ರದರ್ಶನದ ಪಾತ್ರ

ಬಹುಮಾನ ವಿನಿಯೋಗದಲ್ಲಿ ಟಿ. ಮರಿಯಪ್ಪನವರ ಭಾಷಣ

ಮೈಸೂರು ೨೨

ವಸ್ತು ಪ್ರದರ್ಶನದ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ನೆನ್ನೆ ದಿನ ಸಂಜೆ ... ವಣ್ಣಾರಾಯರ ... ಮುಂದಿರದಲ್ಲಿ ಗೃಹ ಮಂತ್ರಿಗಳಾದ ... ಟಿ ಮರಿಯಪ್ಪನವರು ... ಬಹುಮಾನಗಳನ್ನು ಹಂಚಿದರು.

ಪ್ರಾರ್ಥನೆಯಾದ ನಂತರ ವಸ್ತು ಪ್ರದರ್ಶನ ಸಮಿತಿಯ ... ಮಂತ್ರಿಗಳೂ ... ಶ್ರೀ ... ವರದಿಯನ್ನು ... ಮಾಡಿ, ವಸ್ತು ಪ್ರದರ್ಶನವನ್ನು ನಡೆಸಲು ಸಹಕಾರ ನೀಡಿದವರಿಗೆಲ್ಲಾ ವಂದಿಸಿದರು. ಸಮಿತಿಯ ... ಗಳಾದ ಶ್ರೀ ನಿಜಯುಂಡರವರು ವರದಿಯನ್ನು ಓದಿ ಈ ಸಲ ಟಿಕೆಟ್ ... ಟಿನಿಂದ ... ರೂಗಳು ಮತ್ತು ಬಾಡಿಗೆಯಿಂದ ... ರೂಗಳು ಬಂದಿವೆಯೆಂದೂ, ವಸ್ತು ಪ್ರದರ್ಶನವನ್ನು ಇನ್ನೂ ವಿಸ್ತರಿಸಲು ಸಮಿತಿಯು ಯೋಚಿಸುತ್ತಿದೆಯೆಂದೂ ನುಡಿದರು

ಅನಂತರ ಶ್ರೀ ಟಿ ಮರಿಯಪ್ಪನವರು ಬಹುಮಾನಗಳನ್ನು ಹಂಚಿ, ಭಾಷಣ ಮಾಡಿ ಈ ರೀತಿ ನುಡಿದರು.–

ವಸ್ತು ಪ್ರದರ್ಶನವು ಮೈಸೂರಿನಲ್ಲಿ ಬಹಳ ದಿನಗಳಿಂದಲೂ ... ಒಂದು ಸತ್ಸಂಪ್ರದಾಯವಾಗಿದೆ ... ದೆ ಇದು ನಮ್ಮ ಪ್ರಗತಿ ಮತ್ತು ಜೀವನದ ವೈವಿಧ್ಯತೆಗಳನ್ನು ತೋರಿಸುವುದು ಜನರು ವಸ್ತು ಪ್ರದರ್ಶನವನ್ನು ನೋಡಿ ತಮ್ಮ ಪರಿಸ್ಥಿತಿಯನ್ನು ಅರಿತು, ಇನ್ನೂ ಪ್ರಗತಿಪಥದಲ್ಲಿ ಮುಂದುವರಿಯಬೇಕು ಇದ್ದರಿಂದ ರಾಷ್ಟ್ರದ ಪುನರ್ರಚನಾ ಕಾರ್ಯದಲ್ಲಿ ವಸ್ತು ಪ್ರದರ್ಶನವೂ ತನ್ನ ಪಾತ್ರವನ್ನು ನಿರ್ವಹಿಸಿದಂತಾಗುವುದು

ವಂದನಾರ್ಪಣೆಯಾದ ನಂತರ ರಾಷ್ಟ್ರಗೀತೆಯೊಡನೆ ಸಭೆ ಮುಗಿಯಿತು

೧೪ ದಿವಸ್ತ್ರದಲ್ಲಿ ೩ ದಿನಗಳ ಹಿಂದೆ ಬೆಳಿಗ್ಗೆ ೧೧ ರಿಂದ ಮಧ್ಯಾಹ್ನ ೩ ಗಂಟೆಯವರೆಗೆ ರಾತ್ರಿಯಲ್ಲಿ ಪ್ರಕಾಶಮಾನವಾಗಿರುವಷ್ಟೇ ಹೊಳಪಿನಿಂದ ಕೂಡಿದ ... ಕಾಣಿಸಿಕೊಂಡಿತು.

ಆಚಾರ್ಯ ಕೃಪಲಾನಿಯವರ ಆಗಮನ

ಮೈಸೂರು ೨೨

ಈ ದಿನ ಬೆಳಗ್ಗೆ ೧೧-೩೦ ಗಂಟೆಗೆ ಆಚಾರ್ಯ ಕೃಪಲಾನಿಯವರು ಬೆಂಗಳೂರಿನಿಂದ ಮೋಟಾರಿನಲ್ಲಿ ರಾಜಧಾನಿಗೆ ಆಗಮಿಸಿದರು ... ಎಲ್ ಪ್ರಜಾ ಪಕ್ಷದವರು, ಶ್ರೀ ... ಮುಂತಾದವರು ಅವರನ್ನು ಸ್ವಾಗತಿಸಿದರು ಅವರು ... ಶ್ರೀ ... ನವರ ... ವಸತಿಯಲ್ಲಿ ತಂಗಿದ್ದಾರೆ

ಆಚಾರ್ಯರು ಈ ಸಂಜೆ ... ಕಾಲೇಜ ವಿದ್ಯಾರ್ಥಿಗಳ ... ಭಾಷಣ ಮಾಡಿದರು. ... ದೃಷ್ಟಿಯುಳ್ಳ ... ನವಯುವ ರಾಜಕೀಯವು ... ಹೇಳಿದರು. ಸರ್ಕಾರ ಹಿತದೃಷ್ಟಿಯಿಂದ ರಾಜಕೀಯ ಸಂಗಡಗಳು ಕೆಲಸಮಾಡಬೇಕೆಂದು ತಿಳಿಸಿದರು ... ನಾಮ ಪರಿಚಿತವಾದ ... ಆವರ್ಣ ... ರಾಜಕೀಯ ಕ್ಷೇತ್ರದಲ್ಲಿ ... ವರ್ತನೆಯನ್ನು ಹೇಳಿದರೆ ಕಾಂಗ್ರೆಸ್ಸನ್ನು ಬಿಡುವುದು, ಬಿಟ್ಟು ಪ್ರಜಾ ಪಕ್ಷಕ್ಕೆ ಸೇರಿ, ಅದನ್ನೂ ತ್ಯಜಿಸಿ ಈಗ ಪುನಃ ಕಾಂಗ್ರೆಸ್ಸನ್ನು ಸೇರಿರುವುದರಿಂದ, ಅನುಭವಸ್ಥರಾದ ವಿದ್ಯಾರ್ಥಿಗಳು ರಾಜಕೀಯ ಗೊಂದಲದಲ್ಲಿ ತಲೆ ಕೆಡಿಸಿಕೊಳ್ಳಬಾರದೆಂದು ತಿಳಿಸಿದರು.

ರಾಜಧಾನಿಗೆ ಗೋಳ್ವಾಲ್ಕರರ ಆಗಮನ

ಬರುವ ೧ನೇ ತಾ॥ ರಾಜಧಾನಿಗೆ ಭಾರತ ರಾಷ್ಟ್ರೀಯ ಸೇವಾ ಸಂಘದ ಸಂಸ್ಥಾಪಕರಾದ ಶ್ರೀ ಎಂ ಎಸ್ ಗೋಳ್ವಾಲ್ಕರ್‌ರವರು ಆಗಮಿಸುವರು ಆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಅವರು ಭಾಷಣ ಮಾಡುವರೆಂದು ಗೊತ್ತಾಗಿದೆ

ರಷ್ಯದಲ್ಲಿ ೩ನೇ ಅಣು ಬಾಂಬಿನ ಸ್ಫೋಟನೆ

ರಷ್ಯದಲ್ಲಿ ಮೂರನೇ ಅಣು ಬಾಂಬಿನ ಆಸ್ಫೋಟನೆಯು ನಡೆಯಿತೆಂದು ಅಮೆರಿಕದ ಅಧ್ಯಕ್ಷ ಟ್ರೂಮನ್ನರ ನಿವಾಸದಿಂದ ಹೊರಟ ಪ್ರಕಟಣೆಯು ತಿಳಿಸಿರುತ್ತದೆ

ಸೂಯೆಜ್ ಕಾಲುವೆ ಹತೋಟಿಯು ಬ್ರಿಟಿಷರ ವಶ

ಬ್ರಿಟಿಷರ ನೌಕಾ ಪಡೆಯು ಸೂಯೆಜ್ ರೇವಿನ ಹತೋಟಿಯನ್ನು ತನ್ನ ವಶಕ್ಕೆ ತೆಗೆದುಕೊಂಡಿರುವುದಾಗಿಯೂ, ಅಲ್ಲಿನ ಈಜಿಪ್ಟ್ ಸಿವಿಲ್ ಅಧಿಕಾರಿಗಳು ಅಲ್ಲಿಂದ ಕಾಲ್ತೆಗೆದುದರಿಂದ ಹಡಗುಗಳ ಓಡಾಟವನ್ನು ಆ ಪಡೆಯೇ ನೋಡಿಕೊಳ್ಳುತ್ತಿದೆಯೆಂದೂ ಒಬ್ಬ ಬ್ರಿಟಿಷ್ ಮಿಲಿಟರಿ ಅಧಿಕಾರಿಗಳು ತಿಳಿಸುತ್ತಾರೆ. ಈ ಪ್ರದೇಶಕ್ಕೆ ಇಂಗ್ಲೆಂಡಿನಿಂದ ನೇರವಾಗಿಯೂ, ಸೈಪ್ರಸ್ ದ್ವೀಪದಿಂದಲೂ ಹೆಚ್ಚು ಬ್ರಿಟಿಷ್ ಸೈನ್ಯಗಳು ಬರುತ್ತಿವೆ ಬ್ರಿಟನ್ ಮತ್ತು ಈಜಿಪ್ಟ್ ದೇಶಗಳ ಸಂಯುಕ್ತ ಆಳ್ವಿಕೆಗೆ ಒಳಪಟ್ಟಿರುವ ಸುಡಾನಿನ ಗೌರ್ನರ್ ಜನರಲ್ಲರನ್ನು ವಜಾ ಮಾಡಲು ಈಜಿಪ್ಟ್ ನಿರ್ಧರಿಸಿರುತ್ತದೆ. ಈಜಿಪ್ಟಿನಲ್ಲಿರುವ ಸೂಡಾನ್ ಏಜೆನ್ಸಿಯನ್ನು ಬಂದು ಮಾಡಲಾಗಿದೆ

ಈಜಿಪ್ಟಿನಲ್ಲಿ ಶಾಂತ ಪರಿಸ್ಥಿತಿ

ಈಜಿಪ್ಟಿನ ಒಳ ಆಡಳಿತದ ಉಪಕಾರ್ಯದರ್ಶಿ ಬಡಾವಿ ಖಲೀಫಾ ಪಾಷಾರವರು ಮೊನ್ನೆ ರಾತ್ರಿ ಪತ್ರಿಕಾ ಸಮ್ಮೇಳನವನ್ನು ಕರೆದು ಸೂಯೆಜ್, ಕಾಲುವೆ ಪ್ರದೇಶದಲ್ಲಿ ಪರಿಸ್ಥಿತಿಯು ಈಗ ಶಾಂತಯುತವಾಗಿದೆಯೆಂದು ತಿಳಿಸಿದರು ಇತ್ತೀಚೆಗೆ ನಡೆದ ಘರ್ಷಣೆಯಲ್ಲಿ ಈಜಿಪ್ಟ್ ಕಡೆಯ ಒಬ್ಬ ಕಾವಲುಗಾರನು ಬ್ರಿಟಿಷ್ ಸೈನಿಕರ ಗುಂಡಿಗೆ ತುತ್ತಾದನೆಂದೂ ಮತ್ತು ಹಲವು ರೈಲುಗಳ ಸಿಗ್ನಲ್ ಪೆಟ್ಟಿಗೆಗಳ ಸಾಮಾನುಗಳನ್ನು ನಾಶಪಡಿಸಲಾಗಿತ್ತೆಂದೂ ಸಚಿವರು ತಿಳಿಸಿದರು ಆದರೆ ಕೈರೊ ಮತ್ತು ಸೂಯೆಜ್‌ಗಳ ನಡುವೆ ರೈಲು ಸಂಚಾರವು ಕ್ರಮವಾಗಿ ನಡೆಯುತ್ತಿದೆಯೆಂದು ಅವರು ಹೇಳಿದರು

ಮಿರ್ಜಾನ್ ಇಸ್ಮೇಲರಿಗೆ ಅನಾರೋಗ್ಯ

ಬೆಂಗಳೂರು ೨೨

ಇಂಡೋನೇಷ್ಯದಲ್ಲಿ ವಿಶ್ವ ಸಂಸ್ಥೆಯ ವಿಶೇಷ ಪ್ರತಿನಿಧಿಯಾಗಿರುವ ಸರ್ ಮಿರ್ಜಾ ಇಸ್ಮಾಯಿಲರು ಅನಾರೋಗ್ಯದ ನಿಮಿತ್ತ ಅಲ್ಲಿನ ರಾಜಧಾನಿ ಜಕಾರ್ತಾದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದು ಅವರ ಪತ್ನಿಗೆ ತಂತಿ ಸುದ್ದಿ ಬಂದಿರುತ್ತದೆ

ನಾಡ ಹಬ್ಬ

ನಂಜನಗೂಡು ೨೨

ದೀಪಾವಳಿ ಹಬ್ಬದ ಸಂದರ್ಭದಲ್ಲಿ ೨ನೇ ೨೯, ೩೦ ಮತ್ತು ೩೧ನೇ ತಾರೀಖುಗಳಲ್ಲಿ ಇಲ್ಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಡಹಬ್ಬವನ್ನು ಆಚರಿಸಲಾಗುವುದು. ಕರ್ನಾಟಕದ ಪ್ರಮುಖ ಕವಿಗಳು ಮತ್ತು ಸಾಹಿತಿಗಳನ್ನು ಸಮಾರಂಭಕ್ಕೆ ಆಹ್ವಾನಿಸಲಾಗಿದೆ. ಇದರ ಅಂಗವಾಗಿ ಸಂಘಕ್ಕೆ ಪ್ರಾಥಮಿಕ ಸದಸ್ಯರನ್ನು ಕೂಡಿಸುವ ಕಾರ್ಯವು ಆರಂಭವಾಗಿದೆ ಸದಸ್ಯತ್ವದ ವಾರ್ಷಿಕ ಚಂದಾ ನಾಲ್ಕು ಆಣೆಯನ್ನು ಪಾವತಿ ಮಾಡಿ ಎಲ್ಲರೂ ಸೇರಬೇಕೆಂದು ಕೋರಲಾಗಿದೆ. ಹಬ್ಬದ ಸಂಬಂಧದಲ್ಲಿ ಕಾವ್ಯ ವಾಚನ, ಪ್ರಬಂಧ, ಚರ್ಚೆ, ಕಂಠಪಾಠ, ಆಶು ಭಾಷಣ, ರಂಗವಲ್ಲಿ ಇಡುವುದು, ಕರ್ನಾಟಕ ಸಂಗೀತ ಇತ್ಯಾದಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಕಾಂಗ್ರೆಸ್ಸಿನ ಚುನಾವಣಾ ನಿಧಿಗೆ ೩ ಕೋಟಿ ರೂ. ಗಳು

ಕಾಂಗ್ರೆಸ್ಸಿನ ಚುನಾವಣಾ ನಿಧಿಯನ್ನು ಶೇಖರಿಸಲು ೧, ೫ ಮತ್ತು ೧೦ ರೂ ಗಳ ೩ ಕೋಟಿ ರೂ ವಿನಷ್ಟಾಗುವ ನೋಟುಗಳನ್ನು ಕಾಂಗ್ರೆಸ್ಸಿನವರು ಮುದ್ರಿಸಿ ಮಾರಾಟಕ್ಕಾಗಿ ಕೊಡುವರೆಂದು ತಿಳಿದುಬಂದಿದೆ ಈ ವ್ಯಾಪಾರದಿಂದ ಬರುವ ಹಣದ ಪೈಕಿ ಕೇಂದ್ರ ಮತ್ತು ಪ್ರಾಂತ ಸಮಿತಿಗಳು ಶೇಕಡ ೧೫ ರಂತೆ ತೆಗೆದುಕೊಂಡು, ಉಳಿದುದನ್ನು ಚುನಾವಣಾ ಪ್ರಚಾರಕ್ಕಾಗಿ ಉಪಯೋಗಿಸಲಾಗುವುದೆಂದು ಗೊತ್ತಾಗಿದೆ ನವೆಂಬರ್ ಮಧ್ಯಭಾಗದಲ್ಲಿ ಪಂಡಿತ ನೆಹರೂರವರು ೩ ತಿಂಗಳ ಕಾಲ ಚುನಾವಣಾ ಪ್ರಚಾರವನ್ನು ಕೈಗೊಳ್ಳುವರು

ಅಮೇರಿಕದ ಹೊಸ ವಿಮಾನ

ಯುದ್ಧ ಕ್ಷೇತ್ರಗಳಿಗೆ ಯಾವಾಗ ಬೇಕಾದರೂ ಎಲ್ಲಿ ಗಾದರೂ ಹೋಗ... ಹೊಸ ಮಾದರಿಯ ವಿಮಾನಗಳು ಅಮೇರಿಕದಲ್ಲಿ ತಯಾರಿಸಲ್ಪಟ್ಟಿರುತ್ತ... ಇವುಗಳ ಮೂಲಕ ಸೈನಿಕರನ್ನೂ ಸಾಮಗ್ರಿಗಳನ್ನೂ ಶೀಘ್ರವಾಗಿ ರವಾನಿಸಬಹುದು

ಬಿರುಗಾಳಿಯಿಂದ ಅಕ್ಕಿಯ ನಾಶ

ಕಳೆದ ೧೮ ನೇ ತಾರೀಕು ಜಪಾನಿನ ಕಿಯುಸು ಎಂಬಲ್ಲಿ ಬೀಸಿದ ಭಾರಿ ಬಿರುಗಾಳಿಯ ಪರಿಣಾಮವಾಗಿ ... ಬುಸೆಲ್ಲುಗಳಷ್ಟು ಭತ್ತದ ಬೆಳೆಯು ನಷ್ಟವಾಗಿರುವುದಾಗಿ ವರದಿಯಾಗಿದೆ

ಚಾಮರಾಜನಗರದ ಏಜೆಂಟರು

"ಸಾಧ್ವಿ ಪತ್ರಿಕೆಗೆ ಇಂದಿನಿಂದ ಶ್ರೀ ಸಿ ಗೋಪಾಲರಾಯರನ್ನು ಚಾಮರಾಜನಗರದ ಏಜೆಂಟರನ್ನಾಗಿ ನೇಮಿಸಲಾಗಿದೆ ವಾಚಕರು ಅವರೊಡನೆ ಸಹಕರಿಸಿ ಚಂದಾ ವೊಬಲಗನ್ನು ಮುಂಗಡವಾಗಿ ಪಾವತಿ ಮಾಡಿ, ಅವರಿಂದ ಪತ್ರಿಕೆಯನ್ನು ಪಡೆಯಬೇಕಾಗಿ ವಿನಂತಿ

—ವ್ಯವಸ್ಥಾಪಕ

ಬರ್ಮಾದಲ್ಲಿರುವ ವಿಯಟ್ಮಿನ್ ರಾಯಭಾರಿಗೆ ಗಡೀಪಾರು

ರಂಗೂನಿನಲ್ಲಿರುವ ವಿಯಟ್‌ಮಿನ್ ರಾಯಭಾರಿ ಮತ್ತು ಅವರ ಸಿಬ್ಬಂದಿಯವರಿಂದ ಬರ್ಮಾ ಸರ್ಕಾರದ ವಿರೋಧಿಗಳಿಗೆ ಬೆಂಬಲ ದೊರೆಯುತ್ತಿತ್ತೆಂದು ಅಪಾದಿಸಿ ಅವರುಗಳು ಆದಷ್ಟು ಬೇಗನೆ ಬರ್ಮಾದಿಂದ ಹೊರಕ್ಕೆ ಹೋಗಬೇಕೆಂದು ಬರ್ಮಾ ಸರ್ಕಾರವು ತಿಳಿಸಿರುವುದಾಗಿ ಗೊತ್ತಾಗಿದೆ ೨ ನೇ ರಿ ಮೊನ್ನೆ ಬೆಳಿಗ್ಗೆ ಆರು ಮಂದಿ ವಿಯಟ್‌ಮಿನ್ ಅಧಿಕಾರಿಗಳು ಸ್ವದೇಶಕ್ಕೆ ತೆರಳಿದರು ಆದರೆ ಅಲ್ಲಿನ ರಾಯಭಾರಿಗಳು ಸ್ವಲ್ಪ ಕಾಲಾವಕಾಶ ಕೇಳಿರುವುದಾಗಿ ಹೇಳಲಾಗಿದೆ

ಮೈ॥ ಜಿಲ್ಲಾ ಸಹಕಾರ ಪ್ರಚಾರ ಸಂಘ

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘಕ್ಕೆ ಜಿಲ್ಲೆಯ ಎಲ್ಲ ಸಹಕಾರಿಗಳೂ ಮತ್ತು ಸಂಘಗಳೂ ಸದಸ್ಯರಾಗಬೇಕೆಂದು ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀಗಳು ಪಿ ಗೋಪಾಲಕೃಷ್ಣ ಶೆಟ್ಟಿ ಮತ್ತು ಎಂ ಎಸ್ ರಾಮಸ್ವಾಮಿಯವರು ಕೋರಿರುತ್ತಾರೆ ಅಸಿಸ್ಟೆಂಟ್ ರಿಜಿಸ್ಟ್ರಾರರೂ ಸಹ ಈ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿರುತ್ತಾರೆ ಸಹಕಾರಿಗಳಿಗೆ ೧ ರೂ ಮತ್ತು ಸಂಘಗಳಿಗೆ ೫ ರೂ ನಂತೆ ವಾರ್ಷಿಕ ಚಂದಾವನ್ನು ಕೊಡಬೇಕೆಂದು ತಿಳಿಸಲಾಗಿದೆ

ಚಿತ್ರಗುಪ್ತ

ರಾಷ್ಟ್ರೀಯ ವಾರಪತ್ರಿಕೆ

ದೀಪಾವಳಿ ವಿಶೇಷ ಸಂಚಿಕೆ

ಮುಂದಿನ ಗುರುವಾರವೇ ನಿಮ್ಮ ಕೈಗೆ ಬರಲಿದೆ ... ದವಾದ ಮುದ್ರಣ ಹೊಸ ಆಕಾರ ಬೆಲೆಯುಳ್ಳ ಲೇಖನಗಳ ತಂಡ 24 ಪುಟಗಳುಳ್ಳ ಇಂತಹ ಪತ್ರಿಕೆ ಕೇವಲ ಎರಡಾಣೆ ಎಲ್ಲಾ ಮಾರಾಟದ ಹುಡುಗರಲ್ಲಿ ದೊರಕಲಿದೆ ಎಂದೇ ನಿಮ್ಮ ಪ್ರತಿಗಳನ್ನು ಕಾದಿರಿಸಿ ಮಾರಾಟಗಾರರು ಮುಂಗಡವಾಗಿಯೇ ಹಣ ಕೊಟ್ಟು ಪ್ರತಿಗಳನ್ನು ನೀಲಕ ಚಾಗಿರಿಸುವುದು ಉಚಿತ

ಶ್ರೀ ನರಸಿಂಹಸ್ವಾಮಿ ಏಜೆನ್ಸೀಸ್

५५४ ಸಾಹಿತ್ಯ ಪ್ರಸಾರ ಮಂದಿರ

ನಜರ್ ಬಾದ್ ಮೈಸೂರು

ರಸ್ತೆ ರಿಪೇರಿ ಮತ್ತು ಸೇತುವೆ ಅಗತ್ಯ

ಸ್ವ ಸು] ಶಿಕ್ಕೇರಿ ೨೦

ಇಲ್ಲಿಗೆ ಎಂಟು ಮೈಲಿ ದೂರದಲ್ಲಿರುವ ಚರಿತ್ರಾರ್ಹವಾದ ಶ್ರವಣಬೆಳಗುಳಕ್ಕೆ ಹೋಗಲು ಸರಿಯಾದ ರಸ್ತೆಯಿಲ್ಲದೆ ಯಾತ್ರಿಕರಿಗೆ ತುಂಬಾ ತೊಂದರೆಯಾಗಿದೆ ಅಲ್ಲದೆ ಮಂದಗೆರೆ ಸ್ಟೇಷನ್ನಿನಿಂದ ಶ್ರವಣಬೆಳಗೊಳಕ್ಕೆ ಹೋಗುವ ದಾರಿಯಲ್ಲಿ ಹೇಮಾವತಿ ನದಿಗೆ ಸೇತುವೆ ಕಟ್ಟುವಂತೆ ಇಲ್ಲಿನ ಸುತ್ತಮುತ್ತಲ ನಿವಾಸಿಗಳು ಅನೇಕ ವರ್ಷಗಳಿಂದ ಬೇಡುತ್ತಿದ್ದರೂ ಈ ಕೆಲಸವು ಆಗಿರುವುದಿಲ್ಲ ಈಗಲೂ ಸರ್ಕಾರದವರು ಇದಕ್ಕೆ ಗಮನ ಕೊಟ್ಟು ರಸ್ತೆ ಮತ್ತು ಸೇತುವೆಗಳನ್ನು ಮಾಡಿಸಬೇಕೆಂದು ಕೋರಲಾಗಿದೆ

ಮತ್ತೊಂದು ರಾಜಕೀಯಪಕ್ಷದ ಸ್ಥಾಪನೆ

ಭಾರತದ ನಾನಾ ಭಾಗಗಳ ಪ್ರಮುಖರು ಮೊನ್ನೆ ದೆಹಲಿಯಲ್ಲಿ ಸಭೆ ಸೇರಿ ಭಾರತೀಯ ಜನ ಸಂಘ ಎಂಬ ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು ೪೦೦ ಜನ ಪ್ರತಿನಿಧಿಗಳು ಸಭೆಗೆ ಆಗಮಿಸಿದ್ದರು ಡಾ ಶ್ಯಾಮಪ್ರಸಾದ್ ಮುಖರ್ಜಿಯವರನ್ನು ಈ ಹೊಸ ಪಕ್ಷದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು ರಾಷ್ಟ್ರದ ವಿಭಜನೆಯನ್ನು ಎಲ್ಲಾ ನ್ಯಾಯಬದ್ಧ ಮಾರ್ಗಗಳಿಂದ ರದ್ದುಗೊಳಿಸುವುದೇ ಪಕ್ಷದ ಗುರಿಯೆಂದು ಅಧ್ಯಕ್ಷರು ಹೇಳಿರುತ್ತಾರೆ

ಎಲ್ ಎಸ್. ವಿದ್ಯಾರ್ಥಿಗಳಿಗೆ ಸುಸಮಯ

ಹಿಟ್ಟಿನ ಮಟ್ಟಿನಲ್ಲಿ ಶಿಕ್ಷಣ ಕೊಡಲಾಗುತ್ತ ಪ್ರತಿ ವಿದ್ಯಾರ್ಥಿಗಳಿಗೆ 2 ರೂ ಮಾತ್ರ

ಚೌಡೇಶ್ವರಿ ಕೋಚಿಂಗ್ ತರಗತಿ

1951 ಕೊತ್ವಾಲ ರಾಮಯ್ಯನ ಬೀದಿ ರತ್ನಾವಳಿ ಥಿಯೇಟರಿನ ಉತ್ತರದ ಭಾಗ ಮೈಸೂರು

25 10 51 ರಿಂದ ಪ್ರಾರಂಭಿಸಲಾಗುತ್ತ

ಎಸ್. ನಾಗರಾಜ್, ವ್ಯವಸ್ಥಾಪಕ

ಭಾರತದ ನೌಕೆ ಹೂತುಕೊಂಡಿತು

ಕಲ್ಕತ್ತಾದಿಂದ ಕಲ್ಲಿದ್ದಲನ್ನು ತುಂಬಿಕೊಂಡು ಬರ್ಮಾ ಕಡೆಗೆ ಹೋಗುತ್ತಿದ್ದಾಗ ರಂಗೂನಿನ ಬಳಿ ಇರವಾಡಿ ನದಿಯಲ್ಲಿ ಭಾರತದ ನೌಕೆಯಾದ ಜ... ಉಷಾವು ಕಳೆದ ಶುಕ್ರವಾರ ನೀರಿನಲ್ಲಿ ಹೂತುಕೊಂಡಿತೆಂದೂ, ಅದನ್ನು ವಿಲಕ್ಕೆತ್ತಲು ಪ್ರಯತ್ನಗಳು ನಡೆಯುತ್ತಿವೆಯೆಂದೂ ವರದಿಯಾಗಿದೆ.

ರೈಲ್ವೆ ಲೆವೆಲ್ ಕ್ರಾಸಿಂಗುಗಳ ರದ್ದು

ಮೈಸೂರು ರೈಲ್ವೆಗಳ ಎಲ್ಲ ಲೆವೆಲ್ ಕ್ರಾಸಿಂಗುಗಳನ್ನೂ ಇನ್ನು ಮುಂದೆ ತೆಗೆದುಹಾಕಿ ಅವಕ್ಕೆ ಪ್ರತಿಯಾಗಿ ಆ ಸ್ಥಳಗಳಲ್ಲಿ ಓವರ್ ಬ್ರಿಡ್ಜುಗಳನ್ನಾಗಲೀ ಅಂಡರ್ ಬ್ರಿಡ್ಜುಗಳನ್ನಾಗಲೀ ಕಟ್ಟುವ ವ್ಯವಸ್ಥೆ ಮಾಡಲಾಗುವುದು

ಚಾಮುಂಡೇಶ್ವರಿ ಅಮ್ಮನವರ ತೆಪ್ಪೋತ್ಸವ

ನಂಜನಗೂಡಿನಲ್ಲಿ ಮಾಮೂಲಿ ಮೇರೆ ಕಳೆದ ಮಂಗಳವಾರ ಶ್ರೀ ಚಾಮುಂಡೇಶ್ವರಿ ಅಮ್ಮನವರ ೧೦ ನೆ ವರ್ಷದ ತೆಪ್ಪೋತ್ಸವವು ಸಾಂಗವಾಗಿ ಜರುಗಿತು ಊರಿನ ಸುತ್ತ ಅಮ್ಮನವರಿಗೆ ಹೂವಿನ ಪಲ್ಲಕ್ಕಿ ಉತ್ಸವವೂ ನಡೆಯಿತು ಅನೇಕ ಮಂದಿ ಭಕ್ತಾದಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು

ತೀರ್ಥ ಮತ್ತು ಕಂಪೆನಿ

ನಾರಾಯಣ ಶಾಸ್ತ್ರಿ ರಸ್ತೆ,

ಫೋನ್ ನಂ 537

ಸರಕುಗಳನ್ನು ರವಾನಿಸುವ ಸಂಸ್ಥೆ

SRI GAYATHRI, TALKIES

On 24th & 25th

M G M s

DEVIL'S DOORWAY

With

Robert Taylor

Published by A R Nagarajan, at Sadhvi Press D Subbiah Road, Mysore Edited, Printed and

ಪ್ರಭಾ ಪಿಕ್ಚರ್ ಹೌಸ್

26—10—51 ರಿಂದ

ಪ್ರತಿ ದಿನ ಮೂರು ಆಟಗಳು

ನಿರ್ದೇಶಕ ಕೇದಾರ್ ಶರ್ಮರವರ

ಜನಪ್ರಿಯ ಹಿಂದಿ ಚಿತ್ರ

ಬಾವ್ರೆನೈನ್

BAWRENAIN

ರಾಜ್ ಕಪೂರ್, ಗೀತಾಬಾಲಿ, ವಿಜಯಲಕ್ಷ್ಮಿ ಮತ್ತು ಇತರರು

ಬೆಳಗಿನ ಪ್ರದರ್ಶನ 26 10-51 ರಿಂದ 4 ದಿನಗಳು ಮಾತ್ರ

ಹಾಂಟೆಡ್ ಹಾರ್ ಬರ್

ಶ್ರೀ ಗಣೇಶಾ ಟಾಕೀಸ್

ಮೈಸೂರು

24-10-51 ರಿಂದ ಆಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ನಗರದಲ್ಲಿ ಇದುವರೆಗೆ ಪ್ರದರ್ಶಿಸಲ್ಪಟ್ಟ ಜನಾದರಣೆಯಾದ ಕನ್ನಡ ಚಲನ ಚಿತ್ರ ಮಹಾತ್ಮಾ ಪಿಕ್ಚರ್ಸ್‌ರವರ ಅಪೂರ್ವ ಕನ್ನಡ ಕಲಾಕೃತಿ ಪುನಃ ಪ್ರದರ್ಶಿಸಲ್ಪಡುತ್ತದೆ

* ಜಗನ್ಮೋಹಿನೀ *

ಪ್ರಧಾನ ಭೂಮಿಕೆಯಲ್ಲಿ ಪ್ರತಿಮಾದೇವಿ ಹರಿಣಿ ಶ್ರೀನಿವಾಸರಾವ್, ಮಹಾಬಲರಾವ್ ಮುಂತಾದ ಕನ್ನಡ ಚಿತ್ರ ಪ್ರದರ್ಶನದ ಪ್ರಖ್ಯಾತ ನಟೀ-ನಟ ವರ್ಗ

Shanti Release

ಗೌಡ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶೆಟ್ಟಿ ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ 792 [illegible] ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೨೪ ೧೦-೫೧ [ಸಂಚಿಕೆ ೬೩

ಫಾರ್ಮೋಸಾ ದ್ವೀಪದಲ್ಲಿ ೧೩೪ ಸಲ ಭೂಕಂಪ

[illegible]ಗೆ ಓಟು ಕೊಡುವುದು ರಾಷ್ಟ್ರದ ನಾಶಕ್ಕೆ ಕಾರಣ

ಸಾರ್ವಜನಿಕ ಸಭೆಯಲ್ಲಿ ಕೃಪಲಾನಿಯವರ ಭಾಷಣ

ಮೈಸೂರು ೨೪

[illegible]ಾಂಗ್ರೆಸ್ ಸರ್ಕಾರವು ಅನ್ನ ಬಟ್ಟೆಗಳನ್ನು ಕೊಡುವುದೆಂಬ ಭರವಸೆಯಿದ್ದ [illegible] ಪಾತ್ರ ಅದಕ್ಕೆ ಓಟು ಕೊಡಿ ಆದರೆ [illegible] ಗ್ರೆಸ್ಸಿಗೆ ಓಟು ಕೊಡುವುದು ರಾಷ್ಟ್ರ [illegible] ನಾಶಕ್ಕೆ ಕಾರಣ ಎಂಬುದಾಗಿ ಆ[illegible] ಕೃಪಲಾನಿಯವರು ನೆನ್ನೆ ಟೌನ್ ಹಾಲಿನಲ್ಲಿ ಸಾರ್ವಜನಿಕ ಸಭೆಯ[illegible] ಉದ್ದೇಶಿಸಿ ಮಾತನಾಡುತ್ತಾ ತಿಳಿ[illegible]ಸು ಅವರು ತಮ್ಮ ಭಾಷಣದಲ್ಲಿ ಈ[illegible] ನುಡಿದರು —

[illegible]ದೇಶೀಯರು ಬಂದಾಗ ನಮ್ಮ ದೇ[illegible] ಎಕೆಳ ಸಂಪತ್ತಿನಿಂದ ಕೂಡಿದ್ದಿತು [illegible] ಆರ್ಥಿಕವಾಗಿಯೂ, ಸಾಂಸ್ಕೃತಿಕ[illegible]ಯೂ ಪ್ರಪಂಚಕ್ಕೆ ಮಿಗಿಲೆನಿಸಿದ್ದ [illegible] ರಾಷ್ಟ್ರವು ಬ್ರಿಟಿಷರ ೧|| ಶತಮಾ[illegible] ಆಳ್ವಿಕೆಯಲ್ಲಿ ಬಹಳ ಹೀನ ಸ್ಥಿತಿ[illegible]ತು ದೇಶದ ದಾರಿದ್ರ್ಯ, ಅಜ್ಞಾ[illegible] ಗಾಂಧೀಜಿಯವರನ್ನು ರಾಜಕೀ[illegible] ಕಾಲಿಡಲು ಪ್ರೇರೇಪಿಸಿದುವು [illegible] ವಿದೇಶೀಯರನ್ನು ಓಡಿಸಿದು[illegible]ಯಿತು

[illegible]ತಂತ್ರ್ಯ ಬಂದರೆ ದೇಶದಲ್ಲಿ ಹಾ[illegible]ನುತುಪ್ಪಗಳ ಹೊಳೆಯನ್ನೇ ಹ[illegible]ದವಾಗಿ ಕಾಂಗ್ರೆಸ್ಸು ಭರವಸ ಕೊ[illegible]ತು ಆದರೆ ಈಗ ಸರಿಯಾಗಿ [illegible] ಮತ್ತು ಊಟ ಕೂಡ [illegible] ಅಭಾವಕ್ಕೆ ದೇಶದಲ್ಲಿ ಬೆಳೆಯು[illegible]ವುದೇ ಕಾರಣವೆಂದು ಹೇಳಲಾ[illegible] ದರೆ ಈಗಿನ ಸಂತೆಯವರೆಗೆ ಆಸ್ಟ್ರೇ[illegible]ರವಾಗಿ ಧಾನ್ಯ ಎಲ್ಲಿಂದ ಬಂದಿದೆ? [illegible]ದ ಜೊತೆಗೆ ಕಲ್ಲುಗಳನ್ನೂ ಬೆಳೆ[illegible]ಗಿದೆಯೇನು ? ಇದು ಹೇಗೆ ಬಂ[illegible]ಕಾರದ ವಿಷಯದಲ್ಲಿ ಕೈ ಹಾಕಿ[illegible] ಸರ್ಕಾರದಿಂದ ತಾನೆ? ಇಂಗ್ಲಿಷರು [illegible]ರ ಸಮಸ್ಯೆಗೆ ಕೈ ಹಾಕಲೇ ಇಲ್ಲ [illegible]ಷ್ಟಿಯ ಅಭಾವವು ಆಹಾರಕ್ಕಿಂತ [illegible]ಚೆಚ್ಚಾಗಿದೆ ಹಾಗೆಯೇ ವಸತಿ ಸ[illegible]ಯೂ ಬಹಳ ದೊಡ್ಡದಾಗಿದೆ ಸ್ವ[illegible]ತ್ರ್ಯಕ್ಕೆ ಮುಂಚೆ ಕೆಲವು ಕಡೆಗಳಲ್ಲಿ ಕ[illegible]ಯದ ಪ್ರಾಥಮಿಕ ವಿದ್ಯಾಭ್ಯಾಸವಿ[illegible] ಈಗ ಅದಕ್ಕೂ ಬುಲ್ಕ ಕೆರಬೇಕಾ[illegible]ಂಡಳಿತನದಲ್ಲಿ ಲಂಚ ರುಷುವತ್ತುಗ[illegible] ತಾಂಡವವಾಡುತ್ತಿವೆ ಇವೆಲ್ಲವನ್ನೂ [illegible] ಜನತೆಯು ವಿದೇಶೀ ರಾಜ್ಯಭಾ[illegible] ಒಳ್ಳೆಯದೆನ್ನುತ್ತಿವೆ ನಾಯಕರು [illegible] ಈ ಕಷ್ಟಗಳಿಗೆ ಜನತೆಯಲ್ಲಿ ಉನ್ನ[illegible]ತಿಯಿಲ್ಲದಿರುವುದೇ ಕಾರಣವೆನ್ನು[illegible] ಹೀಗೆ ಬೇರೆ ದೇಶಗಳಲ್ಲಿ ಹೇಳಿ[illegible] ಅವರು ಪದಚ್ಯುತರಾಗುತ್ತಿದ್ದರು [illegible]ರದೇ ರೀತಿ ಮುಂದುವರಿದರೆ ಬೇರ[illegible] ಕ್ರಾಂತಿಗೆ ಕಾರಣವಾಗುವುದು [illegible]ಬಿತಯುವರು ನಮ್ಮನ್ನು ಮನುಜರ[illegible] ಮಾಡಿದರೆ ಕಾಂಗ್ರೆಸ್ಸಿನವರು ಮ[illegible]ರನ್ನು ಮಣ್ಣಾಗಿ ಮಾಡುತ್ತಿದ್ದಾರೆ. ಜನರು ತಮ್ಮ ಸ್ವತಂತ್ರದ ದೇಶವನ್ನು [illegible]ತುವರ್ಜಿಯಿಂದ ನೋಡಿಕೊಳ್ಳದಿದ್ದ[illegible]ದು ಅವರ ತಪ್ಪು ಇವೆಲ್ಲವನ್ನೂ ಸ[illegible] ಸಡಿಸಲು ನನಗೆ ಸಾಧ್ಯವೇ ? ಎಂದು [illegible]ಗಳು ಹಾಕಲ್ಪಡುತ್ತಿವೆ ಕೊಡುವ [illegible]ಯಲ್ಲಿ ಕಲ್ಲಿಲ್ಲದ ಹಾಗೆ ನಾನು ಮಾ

ಗಾಯಕವಾಡರ ಆಸ್ತಿ ಬಗ್ಗೆ ಟ್ರಸ್ಟ್

ಹೈದರಾಬಾದಿನ ನಿಜಾಮರ ಅರಮನೆಗೆ ಸಂಬಂಧಪಟ್ಟವರಿಗಾಗಿ ಏರ್ಪಡಿಸಲಾದ ಟ್ರಸ್ಟಿನಂತೆಯೇ ಬರೋಡಾ ಮಹಾರಾಜರ ಮನೆತನದವರಿಗೂ ಒಂದು ಟ್ರಸ್ಟನ್ನು ಮಾಡಲು ಭಾರತ ಸರ್ಕಾರದವರು ನಿಶ್ಚಯಿಸಿರುತ್ತಾರೆ ಮಹಾರಾಜರ ಒಟ್ಟು ಆಸ್ತಿ ೩೦ ಕೋಟಿ ರೂ ಆಗುವುದು ಪದಚ್ಯುತ ಮತ್ತು ಈಗಿನ ಮಹಾರಾಜರುಗಳೂ ಮತ್ತು ಹಿರಿಯ ಮತ್ತು ಕಿರಿಯ ಮಹಾರಾಣಿಯವರುಗಳೂ ಸೇರಿ, ಒಟ್ಟು ೧೩ ಮಂದಿ ಅರಸು ಮನೆತನದವರಿಗೆ ಈ ನಿಧಿಯ ಸೌಲಭ್ಯವನ್ನು ಏರ್ಪಡಿಸಲಾಗುವುದು ಪದಚ್ಯುತ ರಾಜರು ಜೂನಿಯರ್ ರಾಣಿ [illegible] ದೇವಿಯವರನ್ನು ವಿವಾಹವಾದ ತರುಣದಲ್ಲಿ ಅವರು ೬ ಕೋಟಿ ರೂ ಬಲೆಯ ಆಭರಣ ಮತ್ತು ಸೆಕ್ಯೂರಿಟಿಗಳನ್ನು ದ್ವಿತೀಯ ಪತ್ನಿಯವರ ಹೆಸರಿಗೆ ವರ್ಗಾಯಿಸಿದ್ದರೆಂದೂ, ಈ ಆಸ್ತಿಯನ್ನು ವಿದೇಶಕ್ಕೆ ಕಳುಹಲಾಗಿದೆಯೆಂದೂ ಹೇಳಲಾಗಿದೆ ಈ ಆಸ್ತಿಯನ್ನು ವಾಪಸು ತರಿಸುವವರೆಗೆ ಸೀತಾದೇವಿಯವರಿಗೆ ಟ್ರಸ್ಟಿನ ಸೌಲಭ್ಯವನ್ನು ಕೊಡಲು ನಿರಾಕರಿಸಲಾಗಿದೆ ಇದಕ್ಕಾಗಿ ಗಾಯಕವಾಡರೇ ಈಗ ತಮ್ಮ ಎರಡನೇ ಹೆಂಡತಿಯನ್ನು ಒಪ್ಪಿಸಿ, ಆಭರಣ ಮತ್ತು ಸೆಕ್ಯೂರಿಟಿಗಳನ್ನು ವಾಪಸು ತರುವಂತೆ ಪ್ರೇರೇಪಿಸಲು ವಿದೇಶಕ್ಕೆ ಪ್ರಯಾಣ ಮಾಡಿರುತ್ತಾರೆ

ಡಬಲ್ಲೆ, ಕಾಳ ಸಂತೆಕೋರರನ್ನು ಉಗ್ರವಾದ ಶಿಕ್ಷೆಗೆ ಗುರಿಪಡಿಸಬಲ್ಲೆ ಪ್ರಜಾ ಪ್ರಭುತ್ವದ ಪದ್ಧತಿಯಲ್ಲಿ ಪ್ರಜೆಗಳು ದೇಶದ ಯಜಮಾನರು ತನ್ನ ಸೇವಕನು ಸರಿಯಾಗಿ ಕೆಲಸ ಮಾಡದಿದ್ದರೆ ಅವನನ್ನು ತೆಗೆದು ಬೇರೊಬ್ಬನನ್ನು ನೇಮಿಸಿ ಅವನೂ ಸರಿಯಾಗಿಲ್ಲದಿದ್ದರೆ ಮತ್ತೊಬ್ಬನನ್ನು ಹೇಗೆ ಯಜಮಾನನು ಸೇರಿಸಿಕೊಳ್ಳುವನೋ ಹಾಗೆಯೇ ದೇಶವೂ ಸಹ ತನ್ನ ಸರ್ಕಾರವನ್ನು ನೇಮಿಸಿಕೊಳ್ಳಬೇಕು

[illegible]ರಮಾವಿಲಾಸ ಅಗ್ರಹಾರದಲ್ಲಿರುವ ಯುವಕರ ಸಾಂಸ್ಕೃತಿಕ ಸಂಘಕ್ಕೆ ದಸರಾ ವಸ್ತುಪ್ರದರ್ಶನ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ದೊರಕಿದೆ

ಲಿಯಾಖತ್ ಅಲಿಯ ಬಗ್ಗೆ ಶಾಸನ ಸಭೆಯಲ್ಲಿ ಸಂತಾಪ

ಸ್ವಂ ಸು ಫೋ[illegible]] ಬೆಂಗಳೂರು ೨೪

ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಅಲಿ ಖಾನರ ನಿಧನದ ಬಗ್ಗೆ ಈ ದಿನ ಶಾಸನ ಸಭೆಯಲ್ಲಿ ಶ್ರೀ ಕೆ ಸಿ ರೆಡ್ಡಿಯವರು ತಂದ ಸಂತಾಪ ಸೂಚನಾ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

ಪ್ರನಾಣ ವಚನವನ್ನು ಸ್ವೀಕರಿಸದೇ ಮೈಸೂರಿನ ಅಧಿವೇಶನದಲ್ಲಿ ಭಾಗವಹಿಸಿದ ಬಗ್ಗೆ ಡಾ|| ಕೆ ಆರ್ ಶ್ರೀಕಂಠಯ್ಯನವರು ಒಂದು ಹೇಳಿಕೆಯನ್ನಿತ್ತು ಆಗ ನಡೆದ ತಪ್ಪು ಮಾಡಿದ ಕಾರ್ಯವನ್ನು ಸಭೆಯು ಮನ್ನಿಸಬೇಕೆಂದು ಕೋರಿದರು ಮತ್ತು ತಮ್ಮ ವರ್ತನೆಯಿಂದ ಸಭೆಯ ಘನತೆಗ ಯಾವ ವಿಧದಲ್ಲೂ ಕುಂದುಂಟಾಗಿಲ್ಲವೆಂದೂ ಹೇಳಿದರು

ಅಧಿಕಾರ ವಿಕೇಂದ್ರೀಕರಣ ಪ್ರಯತ್ನದಲ್ಲಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ವಹಿಸಿರುವುದರಿಂದ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿರುವುವೆಂದು ಶ್ರೀ ಕೆ ಸಿ ರೆಡ್ಡಿಯವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು

ಪಡಿತರವು ಜಾರಿಯಲ್ಲಿರುವ ಪ್ರದೇಶಗಳಲ್ಲಿ ೯೭೫ ಹೋಟೇಲುಗಳಿರುವುದಾಗಿಯೂ, ಮನೆಯಲ್ಲೂ ಊಟ ಮಾಡಿ, ಹೋಟೇಲಿಗೂ ಹೋಗುವವರ ಸಂಖ್ಯೆ ಎಷ್ಟೆಂಬುದನ್ನು ತಿಳಿಯಲು ಸಾಧ್ಯವಾಗಿಲ್ಲವೆಂದೂ ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು

ವಿದ್ಯುಚ್ಛಕ್ತಿಯ ಅನಿವಾರ್ಯಗಳು ಹವಾಗುಣದಿಂದ ಉಂಟಾಗುತ್ತಿರುವುದಾಗಿಯೂ ಅವುಗಳನ್ನು ನಿವಾರಿಸಲು ಭೂಮಿಯೊಳಗೆ ಕೇಬಲ್ಲುಗಳನ್ನು ಹಾಕಲು ೯೦ ಲಕ್ಷ ರೂ ವಿನ ಯೋಜನೆಯನ್ನು ಮಾಡಿರುವುದಾಗಿಯೂ ಶ್ರೀ ಭಾಷ್ಯಂರವರು ಇನ್ನೊಂದು ಪ್ರಶ್ನೆಗೆ ಉತ್ತರ ಇತ್ತರು

ಸರ್ ಮಿರ್ಜಾರವರ ದೇಹಸ್ಥಿತಿ

ಜ ಕಾ ತಾ [illegible] ಆಸ್ಪತ್ರೆಯಲ್ಲಿರುವ ಸರ್ ಮಿರ್ಜಾ ಇಸ್ಮೈಲರ ಸ್ಥಿತಿಯು ಅಪಾಯಕರವಾಗಬಹುದಾಗಿರುವುದರಿಂದ ಯಾರೂ ಅವರನ್ನು ನೋಡಲು ವೈದ್ಯರು ಅವಕಾಶವಿತ್ತಿಲ್ಲವೆಂದುಗೊತ್ತಾಗಿದೆ

೨೮ ಗಂಟೆಗಳಲ್ಲಿ ೧೩೪ ಸಾರಿ ಭೂಕಂಪ

ಫಾರ್ಮೋಸಾ ದ್ವೀಪದಲ್ಲಿ ನೆನ್ನೆಯವರೆಗೆ ೨೮ ಗಂಟೆಗಳಲ್ಲಿ ೪೩ ಸಲ ಬಲವಾಗಿಯೂ ೯೧ ಸಲ ಸಾಮಾನ್ಯ ರೀತಿಯಲ್ಲಿ ಭೂಕಂಪಗಳಾದ ಪರಿಣಾಮವಾಗಿ ಅಲ್ಲಿ ಅನೇಕರು ನಿರ್ಗತಿಕರಾಗಿರುತ್ತಾರೆ ೧೫೦ ಜನರಿಗೆ ಪೆಟ್ಟು ನೋವುಗಳಾಗಿವೆ ಒಂದು ನಗರದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗದ ಮನೆಗಳು ಉರುಳಿವೆ ೮೦ ಜನರು ಅಲ್ಲಿ ಮಡಿದರು ೧|| ಲಕ್ಷ ಪ್ರಜೆಗಳು ನಗರಗಳನ್ನು ಬಿಟ್ಟು ಓಡಿರುತ್ತಾರೆ

ಸ್ತ್ರೀ ಬಲಿ ಪ್ರಯತ್ನಕ್ಕಾಗಿ ಸಾಧುಗಳಿಬ್ಬರ ದಸ್ತಗಿರಿ

ಕಣ್ಣಿಗೆ ಕಾಣದಿರುವ ಕೊಪ್ಪರಿಗೆ ಹಣವನ್ನು ಕಾಯುತ್ತಿರುವ ದೇವತೆಯನ್ನು ತೃಪ್ತಿ ಪಡಿಸಲು ಒಬ್ಬ ಮಹಿಳೆಗೆ ಔಷಧಿ ಕೊಟ್ಟು, ಅವಳನ್ನು ಬಲಿ ಕೊಡುವ ಪ್ರಯತ್ನದಲ್ಲಿದ್ದ ಇಬ್ಬರು ಸನ್ಯಾಸಿಗಳನ್ನು ಪ್ರೊದ್ದತ್ತೂರಿನ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ

ರಾಜಾಜಿಯವರ ಸ್ಥಾನಕ್ಕೆ ಡಾ|| ಖಟ್ಜು

ಕೇಂದ್ರ ಗೃಹ ಮಂತ್ರಿ ರಾಜಾಜಿಯವರು ಈ ತಿಂಗಳು ೩೧ನೇ ತಾ|| ತಮ್ಮ ಪದವಿಗೆ ರಾಜೀನಾಮೆ ಸಲ್ಲಿಸುವುದರಿಂದ ಅವರ ಸ್ಥಾನಕ್ಕೆ ಪಶ್ಚಿಮ ಬಂಗಾಳದ ಗವರ್ನರ್ ಡಾ|| ಕೈಲಾಸನಾಥ ಖಟ್ಜುರವರು ಬರುವರೆಂದು ಹೇಳಲಾಗಿದೆ

ಕಾರು ಮತ್ತು ಗಾಡಿ ಡಿಕ್ಕಿಯಿಂದ ವೃದ್ಧಳ ಮರಣ

[illegible] ಸ.] ಬಸವನಗುಡಿ ೨೪

ಕೆಲವು ದಿನಗಳ ಹಿಂದೆ ಚಾಮರಾಜನಗರದ ಒಬ್ಬ ತರುಣನು ಮೋಟಾರನ್ನು ಬಿಟ್ಟುಕೊಂಡು ಬರುತ್ತಿದ್ದಾಗ ಇಲ್ಲಿನ ರೈಲ್ವೆ ಸ್ಟೇಷನ್ ಪಕ್ಕದಲ್ಲಿ, ಇದೇ ಊರಿನ ನಿವಾಸಿ ಶ್ರೀ ಚನ್ನಬಸಪ್ಪನವರ ಮಗ ಶ್ರೀ ಶಿವಲಿಂಗಪ್ಪ ಎಂಬುವರು ಗಾಡಿಯನ್ನು ಹೊಡೆದುಕೊಂಡು ಎದುರಾಗಿ ಬಂದರೆಂದೂ, ಆಗ ಸಂಜೆಯಾಗಿದ್ದುದರಿಂದ ದೀಪವಿಲ್ಲದ ಕಾರು ಗಾಡಿಗೆ ಡಿಕ್ಕಿ ಹೊಡೆಯಲಾಗಿ [illegible] ಪಕ್ಕದಲ್ಲಿ ಬರುತ್ತಿದ್ದ ಒಬ್ಬ ಹೆಂಗಸು ಬಿದ್ದು ಮೃತಪಟ್ಟಳೆಂದೂ ತಿಳಿದುಬಂದಿದೆ

ಕೋಳಿಗೆ ಮರಿಯ ಜನನ

ನಂಜನಗೂಡು ತಾಲ್ಲೂಕು ನಗರ್ಲೆಯ ಮಹಮದ್ ಅವಿಸಾರ್ ಸಾಹೇಬರ ಮನೆಯಲ್ಲಿ ಒಂದು ಕೋಳಿಯು ಕೆಲವು ದಿನಗಳ ಕೆಳಗೆ ಮೊಟ್ಟೆಗಳನ್ನು ಇಡುವ ಸಮಯದಲ್ಲೇ ಮರಿಯೊಂದನ್ನೂ ಹಾಕಿತು ಇದನ್ನು ನೋಡಲು ಹಲವರು ಅದರ ಬಳಿ ಹೋದಾಗ ಕೋಳಿಯು ಮರಿಯನ್ನು ನುಂಗಿಬಿಟ್ಟಿತು.

ಕಾಲಕ್ಷೇಪ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಕೃಷ್ಣಮೂರ್ತಿಪುರ ಶಾಖೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಗೊರೂರಿನ ಶ್ರೀ ಬಿ ವಿ ಸುಂದರರಾಜಯ್ಯಂಗಾರ್ಯರು " ಭಾರತದ ಪುಣ್ಯ ಕ್ಷೇತ್ರಗಳ ಮಹಿಮೆ " ಎಂಬ ವಿಷಯವಾಗಿ ಕನ್ನಡ, ಹಿಂದಿ, ಗುಜರಾತಿ, ಮರಾಠಿ, ಸಂಗೀತ ಮತ್ತು ಭಾಷಣ ರೂಪವಾದ ಕಾಲಕ್ಷೇಪವನ್ನು ನಡೆಸುವರು.

ವಿದ್ಯಾರ್ಥಿಗಳು ಎಂದಿಗೂ ಮುಷ್ಕರ ಹೂಡಬಾರದು

ಆಚಾರ್ಯ ಕೃಪಲಾನಿಯವರ ಹಿತೋಕ್ತಿ

ಮೈಸೂರು ೯

ಮಹಾರಾಜಾ ಕಾಲೇಜು ಸಂಘದ ಉದ್ಘಾಟನೋತ್ಸವವನ್ನು ನಿನ್ನೆ ನೆರವೇರಿಸಿ, ಮಹಾತ್ಮಾ ಗಾಂಧಿಯವರ ಭಾವಚಿತ್ರವನ್ನು ಅನಾವರಣ ಮಾಡಿ ಆಚಾರ್ಯ ಕೃಪಲಾನಿಯವರು ಈ ರೀತಿ ನುಡಿದರು

ವಿದ್ಯಾರ್ಥಿಗಳು ಎಂದೆಂದಿಗೂ ಮುಷ್ಕರಗಳನ್ನು ಹೂಡಬಾರದು. ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ವಿಶ್ವ ವಿದ್ಯಾನಿಲಯಗಳು ಸ್ಥಾಪಿತವಾಗಿ ನೂರಾರು ವರ್ಷಗಳಾದರೂ ಅಲ್ಲಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದ ಪ್ರಸಂಗವೇ ಇಲ್ಲ. ಮುಷ್ಕರವು ಒಂದು ಆರ್ಥಿಕ ಅಸ್ತ್ರ. ಕೂಲಿಗಾಗಿ ಗುಂಡಿಯೂಡುವವರು ಬಂಡವಾಳಗಾರರ ಮೇಲೆ ಅದನ್ನು ಪ್ರಯೋಗಿಸುವರು. ಆದರೆ ರಾಷ್ಟ್ರದ ಹಣದ ನೆಳ್ಳದಿಂದ ವಿದ್ಯಾರ್ಜನೆ ಮಾಡುವ ವಿದ್ಯಾರ್ಥಿಗಳು ತಮ್ಮ ಹಿತೈಷಿಗಳಾದ ಉಪಾಧ್ಯಾಯರುಗಳಿಗೆ ವಿರುದ್ಧವಾಗಿ ಮುಷ್ಕರ ಹೂಡುವುದು ಕೇವಲ ಅನುಚಿತ

ದೇಶಕ್ಕೆಲ್ಲಾ ಒಂದೇ ರಾಷ್ಟ್ರಗೀತೆ ಇರಬೇಕೆಂದು ಹೇಳಿದ ಅವರು ಇಲ್ಲಿ ಹಾಡುವ ಪ್ರಾಂತೀಯ ಗೀತೆಯನ್ನು ರಾಷ್ಟ್ರಗೀತೆಯಂತೆ ಹಾಡಲು ತೊಡಗಿರುವುದು ಬಹಳ ಹಾನಿಕರ. ದೇಶದಲ್ಲಿ ಈ ಬಗೆಯ ಭಿನ್ನತೆಗಳಿಂದ ಹಿಂದೆ ಸಾಕಾದಷ್ಟು ಅನರ್ಥ ಪರಂಪರೆಗಳು ಸಂಭವಿಸಿವೆ. ಮುಂದಾದರೂ ಇದು ತಪ್ಪಬೇಕು.

ವಿದ್ಯಾರ್ಥಿ ಸಂಘಗಳು ಉಪಾಹಾರ ಕೂಟ ಮತ್ತು ಫೋಟೋ ತೆಗೆಯುವುದೇ ಮುಂತಾದ ಪ್ರಸಂಗಗಳಿಂದ ಹಲಕೆಲವು ಪ್ರಭಾವಶಾಲಿಗಳ ಪ್ರಶಸ್ತಿಗೆ ಮಾತ್ರ ಎಡೆಕೊಡುವ ಉಪಕರಣಗಳಾಗಬಾರದು. ಪ್ರಭುತ್ವ ವರ್ಗಗಳನ್ನು ನಿರ್ಮೂಲ ಮಾಡಿ ಪ್ರಜಾ ಪ್ರಭುತ್ವವನ್ನು ಸ್ಥಾಪಿಸಿರುವ ಈ ಕಾಲದಲ್ಲಿ ಅವುಗಳಿಗೆ ಸ್ಥಾನವಿಲ್ಲ.

ಸುಪ್ರಸಿದ್ಧ ಕರ್ನಾಟಕ ಸಂಗೀತದ ತೌರುಮನೆಯಾದ ಮೈಸೂರಿನಲ್ಲಿ ಕರ್ನಾ...

○ ನವೆಂಬರ್ ೧೧ ರೊಳಗೆ ಆಂಧ್ರ ಪ್ರಾಂತ ನಿರ್ಮಾಣದ ಬಗ್ಗೆ ಯಾವ ಮುನ್ನೂ ನಡೆಯದಿದ್ದರೆ ಸ್ವಾಮಿ ಸೀತಾರಾಂರವರು ಸತ್ಯಾಗ್ರಹವನ್ನು ಆರಂಭಿಸಲು ಒಪ್ಪಿರುತ್ತಾರೆ.

ಕಲಕೋಲದಾದ ಸಿನಿಮಾ ಪ್ರದರ್ಶನಗಳ ... ಗಳಿಗೆ ಅವಕಾಶ ಕೊಟ್ಟಿರುವುದು ಆಶ್ಚರ್ಯಕರವಾಗಿದೆ.

ವಿದ್ಯಾರ್ಥಿಗಳು ಮಹಾತ್ಮರ ಆದರ್ಶವನ್ನು ಅನುಸರಿಸಿ ತಮ್ಮ ಜೀವನದಲ್ಲಿ ಸರಳತೆ, ನಿಷ್ಕಲಂಕ, ಸರಳತೆ ಮತ್ತು ಒಳ್ಳೆಯ ನಡತೆಯನ್ನು ಬೆಳೆಸಿಕೊಳ್ಳಬೇಕು.

— ಶ್ರೀ ಕೆ ಸಿ ಶಾಂತವೀರಾಚಾರ್ಯರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಎಂ. ವಿ. ಕೃಷ್ಣರಾಯರು ಮಹಾತ್ಮರ ಭಾವಚಿತ್ರವನ್ನು ಸಂಘಕ್ಕೆ ಅರ್ಪಿಸಿದ್ದರು.

ಮೈಸೂರು ವಿಶ್ವ ವಿದ್ಯಾಲಯ

ಪ್ರಕಟಣೆ

ಮೈಸೂರು ವಿಶ್ವ ವಿದ್ಯಾಲಯದ ವಾರ್ಷಿಕ ಘಟಿಕೋತ್ಸವವು 1951 ನೇ ಡಿಸೆಂಬರ್ ೪ನೆಯ ತಾರೀಖು ಶನಿವಾರ ನಡೆಯುವುದೆಂದು ಈ ಮೂಲಕ ಪ್ರಚುರಪಡಿಸಲಾಗಿದೆ.

ಡಿಗ್ರಿ ಪರೀಕ್ಷೆಗೆ ತಾವು ಹಿಂದೆ ಓದಿದ ವಿದ್ಯಾ ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ವಿದ್ಯಾರ್ಥಿಗಳು ಘಟಿಕೋತ್ಸವದ ಪ್ರವೇಶಕ್ಕೆ (ಖುದ್ದಾಗಿಯೂ ಮತ್ತು ಗೈರು ಹಾಜರಿಯಲ್ಲೂ) ಅರ್ಜಿ ನಮೂನೆಗಳನ್ನು ಪಡೆಯಬಹುದು

ಘಟಿಕೋತ್ಸವಕ್ಕೆ ಪ್ರವೇಶದ ಅರ್ಜಿಗಳು ಮೈಸೂರು ವಿಶ್ವ ವಿದ್ಯಾಲಯದ ರಿಜಿಸ್ಟ್ರಾರಿಗೆ 1951 ನೇ ನವೆಂಬರ್ 8ನೇ ತಾರೀಖು ಗುರುವಾರ ಅಥವಾ ಅದಕ್ಕೆ ಮುಂಚೆ ತಲುಪಬೇಕು.

1951 ನೇ ನವೆಂಬರ್ 8ನೇ ತಾರೀಖಿನ ನಂತರ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುವುದಿಲ್ಲ

ಅರ್ಜಿ ನಮೂನೆಗಳನ್ನು ಟಪಾಲು ಮೂಲಕ ಕಳುಹಿಸಬೇಕೆಂದು ಅಪೇಕ್ಷಿಸುವವರು ಅದಕ್ಕಾಗಿ ಎರಡು ಆಣೆಯ ಅಂಚೆ ಸ್ಟಾಂಪನ್ನಾಗಲೀ ಅಥವಾ ತಮ್ಮ ವಿಳಾಸವನ್ನು ಬರೆದ ಅಂಚೆ ಲಕೋಟೆಯನ್ನಾಗಲೀ ತಾವು ಓದಿದ ವಿದ್ಯಾ ಸಂಸ್ಥೆಯ ಮುಖ್ಯಾಧಿಕಾರಿಗಳಿಗೆ ಕಳುಹಿಸಬೇಕು

(ರುಜು) ಸಿ. ರಂಗಾಚಾರ್,
ರಿಜಿಸ್ಟ್ರಾರ್.

ತಿಳುವಳಿಕೆ ನೋಟೀಸು

ಇದರಿಂದ ಸಮಸ್ತ ಜನಗಳಿಗೆ ತಿಳಿಸುವುದೇನೆಂದರೆ:-

ನನ್ನ ಅಣ್ಣ ಸಿದ್ದಯ್ಯ ಮತ್ತು ನನ್ನ ತಾಯಿ,ಚಿಕ್ಕಮ್ಮ ಇಬ್ಬರುಗಳೂ ಸಹ್ಯಾಲಿನಲ್ಲಿನ ಸಿಕ್ತಾರ್ಜಿತವಾದ ಸ್ವೊತ್ತನ್ನು ಸಕಾರಣವಿಲ್ಲದೆ ಪರಭಾರೆ ಮಾಡುವ ತರಮೂದಿನಲ್ಲಿರುತ್ತಾರೆಂದು ತಿಳಿದುಬಂದಿದೆ. ಯಾರಾದರೂ ಡಿಟೋ ಸ್ವೊತ್ತನ್ನು ಹೊಂದಿದಲ್ಲಿ ಅದು ಊರ್ಜಿತವಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತದೆ.

ಷೆಡ್ಯೂಲು

ಮೈಸೂರು ಸಿಟಿ ಲಷ್ಕರ್ ಮೊಹಲ್ಲಾ ಚಮೂಲ್ ಮರದ ಬೀದಿಯಲ್ಲಿ ವಿಠೋಬಾ ದೇವಸ್ಥಾನದ ಮುಂಭಾಗದಲ್ಲಿ ಪೂ|| ಕ್ಕೆ ಗಲ್ಲಿ, ಪ|| ಕ್ಕೆ, ಗಲ್ಲಿ ಮತ್ತು ವೆಂಕಟರಮಣಯ್ಯನ ಮನೆ, ದ|| ಕ್ಕೆ ರಸ್ತೆ, ಉ|| ಕ್ಕೆ ನೌಡಯ್ಯನ ಮನೆ, ಈ ಮಧ್ಯೆ ಇರುವ ಡೋರ್ ನಂ 1895 ಉಳ್ಳ ಮನೆ.

— ಭೈರಪ್ಪ ಉ|| ಮರಿಯಪ್ಪ.
ಎಸ್. ಕೆ. ಲಕ್ಷ್ಮೀನರಸಿಂಹಯ್ಯ,
ಬಿ. ಎ., ಬಿ ಎಲ್.
ಭೈರಪ್ಪ ಉ|| ಮರಿಯಪ್ಪನ ಪರ ಲಾಯರ್.

ಮನೆ ಮಾರಾಟಕ್ಕಿದೆ

೧ ಡೋರ್ ನಂ. ೫೯೦೦, ೫೯೦೦/... ಹಳ್ಳದಕೇರಿ, ಮೈಸೂರು, ವಿಶಾಲವಾದ ಮಹಡಿ ಮನೆ

೨. ಮಾಡಲ್ ಹೌಸ್ ನಂ ... ರಾಮಾನುಜ ರಸ್ತೆ, ಮೈಸೂರು, ರೂ ೫,೦೦೦

೩. ಮಾಡಲ್ ಹೌಸ್ ನಂ ... ಕೃಷ್ಣರಾಜವನಂ, ಮೈಸೂರು, ರೂ ೪೫೦೦

೪. ಭಾರಿ ಹೊಸ ಬಂಗ್ಲೆ, ಎರಡನೆ ಬ್ಲಾಕು, ಎರಡನೇ ಮೇನ್ ರೋಡ, ವಾಣೀವಿಲಾಸ ಮೊಹಲ್ಲಾ, ಮೈಸೂರು

೫. ಡೋರ್ ನಂ. ೩೬೬೬, ಪಡುವಾರಹಳ್ಳಿ, ಮೈಸೂರು

೬. ಡೋರ್ ನಂ ೨೪೦೭, ವಾಣೀವಿಲಾಸ ಮೊಹಲ್ಲಾ, ಮೈಸೂರು

೭. ಡೋರ್ ನಂ. ೨೪೩೧, ಜಯನಗರ, ಮೈಸೂರು.

—: ವಿವರಗಳಿಗೆ :—

ಜಯ ಅಂಡ್ ಕಂಪೆನಿ
ಹಳೇ ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್
ಸಯ್ಯಾಜಿರಾವ್ ರಸ್ತೆ, ಮೈಸೂರು

SRI GAYATHRI,
TALKIES
From 24-10-51 Daily 3 Shows
M. G. M's
DEVIL'S DOORWAY
With—Robert Taylor
From 26-10-1951
Warner's Long Awaited Picture
THE FLAME & THE ARROW
(In Technicolour)
With—Burt Lancaster and Virginia Mayo
— MORNING SHOWS
On 27th & 28th
M. G. M's
THIS TIME FOR KEEPS
(In Technicolour)
With—Esther Williams

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿವೆ
D. L. ನರಸಿಂಹಯ್ಯ & ಬ್ರದರ್ಸ್,
ಜವಳೀ ಅಂಗಡಿ
ಬೊಂಬಾಯಿ ಆನಂದ ಭವನ ಹೋಟೇಲು ಪಕ್ಕ, ಮೈಸೂರು

ಶ್ರೀ ಗಣೇಶಾ ಟಾಕೀಸ್
ಮೈಸೂರು
24-10-51 ರಿಂದ . ಅಮೋಘ ಪ್ರಾರಂಭ · ಪ್ರತಿ ದಿನ 3 ಆಟಗಳು
ನಗರದಲ್ಲಿ ಇದುವರೆಗೆ ಪ್ರದರ್ಶಿಸಲ್ಪಟ್ಟು ಜನಾದರಣೀಯವಾದ ಕನ್ನಡ ಚಲನಚಿತ್ರ-ಮಹಾತ್ಮಾ ಪಿಕ್ಚರ್ಸ್‌ರವರ ಅಮೋಘ ಕನ್ನಡ ಕಲಾಕೃತಿ
ಪುನಃ ಪ್ರದರ್ಶಿಸಲ್ಪಡುತ್ತದೆ
*** ಜಗನ್ಮೋಹಿನೀ ***
ಪ್ರಧಾನ ಭೂಮಿಕೆಯಲ್ಲಿ ಪ್ರತಿಮಾದೇವಿ, ಹರಿಣಿ, ಶ್ರೀನಿವಾಸರಾವ್, ಮಹಾಬಲರಾವ್ ಮುಂತಾದ ಕನ್ನಡ ಚಿತ್ರ ಪ್ರಪಂಚದ ಪ್ರಖ್ಯಾತ ನಟೀ ನಟವರ್ಗ
[Shanta Release

ಒಲಂಪಿಯಾ * 25—10—51 ರಿಂದ ಯಶಸ್ವಿಯಾದ ೩ ನೇ ವಾರ
ಪ್ರತಿ ದಿನ ಮೂರು ಆಟಗಳು
ಶಮ್ಮಿ, ಅರ್ಜುನ್ ಮತ್ತು ಕನ್ಹೈಲಾಲ್ ಪಾತ್ರವಹಿಸಿರುವ ಮಹೇಶ್‌ರವರ * **ಮಲ್ಹಾರ್** *
ಇದರ ಜೊತೆಯಲ್ಲಿ ಸ್ಕ್ರೀನ್ ನ್ಯೂಸ್ ಎಂಬ ಚಿತ್ರ ಜಗದ ಸುದ್ದಿಯನ್ನು ಸಹ ಪ್ರದರ್ಶಿಸಲಾಗುತ್ತದೆ.
ಇದರಲ್ಲಿ ಕಾಮಿನಿ ಕೌಶಲ್, ಸುರೈಯ್ಯಾ, ಮಧುಬಾಲಾ, ಪ್ರೇಮನಾಥ್, ಶೇಖರ್ ಗೋಪ್, ರೆಹನಾ, ಮೋಹನಾ ಮತ್ತು ಲತಾ ಮಂಗೇಶ್ಕರ್, ಮಹಮದ್ ರಫೀಕ್ ಇವರುಗಳನ್ನು ನೋಡಲು ತಪ್ಪಬೇಡಿರಿ.
ಬೆಳಗಿನ ಪ್ರದರ್ಶನ. 26-10-51 ರಿಂದ ದೀಪಾವಳೀ ಹಬ್ಬದ ಪ್ರಯುಕ್ತ 5 ದಿನ ಮಾತ್ರ
ನ್ಯೂಥಿಯೇಟರ್ಸ್‌ರವರ ಅತ್ಯುತ್ತಮ ಚಿತ್ರ — ಸೌಗಂಧ್ —
ಪಾತ್ರ:-ಭಾರತಿ, ಅಶಿತ್ ಬರನ್

Edited, Printed and Published by A. R. Nagarajan, at *Sadhvi Press D. Subbiah Road, Mysore.*

ಗೌಡಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ **M. V. ಭೋಜಯ್ಯ ಶ್ರೀ** ಬಿ. ಎ., ಇಂಡಿಯನ್ ಬ್ಯಾಂಕ ಎದುರು, ಮೈಸೂರು

- ಮಲೇರಿಯಾಹಾರಿ ಸೊಳ್ಳೆ ಪರದೆಗಳಿಗೆ ಬಾಹುಸಾರ್ -
ಮಕ್ಕಳ ತೊಟ್ಟಿಲಿಗೆ ಮಂಚಕ್ಕೆ,ಸಿಂಗಲ್,ಡಬ್ಬಲ್ ಹಾಸಿಗೆಗಳಿಗೆ.ಬಡಬಗ್ಗರಿಗೂ ಸಹ ಅನುಕೂಲವಾದ ಬೆಲೆ.ಬಾಹುಸಾರ್ ಕಂಪೆನಿ,ಬ್ಯಾಂಕ್ ರೋಡ್,ಮೈಸೂರು

ರಿಜಿ ನಂ. 792 । ವಂದೇ ಮಾತರಂ । ಪ್ರತಿದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೨೫-೧೦-೫೧ [ಸಂಚಿಕೆ ೬೬

ಬ್ರಿಟಿಷರ ವಿರುದ್ಧವಾಗಿ ಈಜಿಪ್ಟಿನಲ್ಲೆಲ್ಲಾ ಗಲಭೆ

ರಷ್ಯದ ಶಸ್ತ್ರಾಸ್ತ್ರಕ್ಕಾಗಿ ಈಜಿಪ್ಟ್ ಜನರ ಕೋರಿಕೆ

ಕೈರೋವಿನಲ್ಲಿರುವ ರಷ್ಯದ ರಾಯಭಾರ ಕಛೇರಿ ಮುಂದೆ ನೆನ್ನೆ ಈಜಿಪ್ಟ್ ಜನರು ಪ್ರದರ್ಶನ ನಡೆಸಿ, ಈಜಿಪ್ಟಿಗೆ ರಷ್ಯ ಶಸ್ತ್ರಾಸ್ತ್ರ ಸಹಾಯ ನೀಡಬೇಕೆಂದು ಕೋರಿದರು. ಬ್ರಿಟನ್ ವಿರುದ್ಧ ಹೋರಾಟ ನಡೆಸಲು ರಷ್ಯ ಮತ್ತು ಇತರ ರಿಪಬ್ಲಿಕ್ ರಾಷ್ಟ್ರಗಳ ಸಹಾಯ ಬೇಕೆಂದೂ, ಈಜಿಪ್ಟಿನಲ್ಲಿರುವ ಬ್ರಿಟಿಷ್ ಕಂಪೆನಿಗಳನ್ನೂ, ಸೂಯೆಜ್ ಕಂಪೆನಿಯನ್ನೂ ಈಜಿಪ್ಟ್ ಸರ್ಕಾರವು ರಾಷ್ಟ್ರೀಕರಣ ಮಾಡಬೇಕೆಂದೂ ಪ್ರದರ್ಶನಕಾರರು ಈಜಿಪ್ಟ್ ಸರ್ಕಾರಕ್ಕೆ ಒತ್ತಾಯಪಡಿಸಿದರು.

ಅಮೆರಿಕದಲ್ಲಿ ಗಾಂಧೀಜಿ ಜೀವನದ ಚಲನ ಚಿತ್ರ

ಮಹಾತ್ಮ ಗಾಂಧಿಯವರ ಜೀವನವನ್ನು ಚಿತ್ರಿಸುವ ಚಲನ ಚಿತ್ರವೊಂದನ್ನು ತಯಾರಿಸಲು ಅಮೆರಿಕದಲ್ಲಿ ಪ್ರಯತ್ನ ನಡೆದಿದೆ. ಚಿತ್ರದ ಕಥೆಯನ್ನು ಬರೆಯುವ [illegible]ರಾಹರ್ಷಾನ್ ಎಂಬುವರು ದೆಹಲಿಗೆ ಬರುತ್ತಾರೆ. ಅವರಿಗೆ ದೇವದಾಸ್ ಗಾಂಧಿ ಮತ್ತು ಗಾಂಧಿಜಿಯವರ ಆಪ್ತ ಕಾರ್ಯದರ್ಶಿಗಳಾಗಿದ್ದ ಪ್ಯಾರೀಲಾಲರು ಸಹಾಯ ಮಾಡುತ್ತಿರುವರು. ಅಮೆರಿಕದ ಪ್ರಸಿದ್ಧ ಚಿತ್ರ ತಯಾರಕರಾದ ಗ್ಯಾಬ್ರಿಯಲ್ ಪ್ಯಾಸ್ಕಲ್‌ರವರು ಸದ್ಯ ಭಾರತಕ್ಕೆ ಬಂದು ಚಿತ್ರ ತಯಾರಿಕೆ ಆರಂಭಿಸುವರು.

[illegible]ಾಸಿಗಳುಳ್ಳ ಹೆಂಗಸು

[illegible] ಕುಲ ಗಡ್ಡ ಮತ್ತು ಜನನಾಂಗಿ[illegible]ಯುಳ್ಳ ೨೭ ವರ್ಷದ ವಲ್ಲಿ[illegible] ವೆಲ್ಲಿಯ ಹೆಂಗಸು ಈಗ ಮದ್ರಾಸ್ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿರುವಳು. ಹಲವು ವರ್ಷಗಳಿಂದ ಅವಳಲ್ಲಿ ಗಂಡಸಿನ ಲಕ್ಷಣಗಳು ಕಂಡುಬಂದವು. ಅವಳ ಎಕ್ಸ್‌ರೇ ಚಿತ್ರ ತೆಗೆಯಲಾಗಿದೆ. ಅಲ್ಲದೆ ಶಸ್ತ್ರಚಿಕಿತ್ಸೆ ನಡೆಸಿ, ಒಂದು ಗ್ರಂಥಿಯನ್ನು ತೆಗೆಯಲಾಗಿದೆ. ಚಿಕಿತ್ಸೆಯ ನಂತರ ಯಾವುದಾದರೂ ಬದಲಾವಣೆ ಆಗುವುದೇ ಎಂಬುದನ್ನು ಪರೀಕ್ಷಿಸಲು ಆಸ್ಪತ್ರೆಯಲ್ಲೇ ಅವಳನ್ನು ಇಟ್ಟುಕೊಳ್ಳಲಾಗಿದೆ.

ಮೈಸೂರು-ಬೆಂಗಳೂರುಗಳಲ್ಲಿ ರೈಲ್ವೆ ಕೂಲಿ ದರ

ಮೈಸೂರು, ಬೆಂಗಳೂರು ಮುಂತಾದ ರೈಲ್ವೆ ನಿಲ್ದಾಣಗಳಲ್ಲಿ ಒಂದು ತಲೆ ಹೊರೆಗೆ ನಾಲ್ಕಾಣೆಯಂತೆ, ಇತರ ಕಡೆಗಳಲ್ಲಿ ಎರಡಾಣೆ ಕೂಲಿಯ ದರವನ್ನು ವಿಧಿಸಲಾಗುವುದೆಂದು ಗೊತ್ತಾಗಿದೆ. ನಿಲ್ದಾಣಗಳ ಇಂಗ್ಲಿಷ್, ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಹೆಸರುಗಳನ್ನು ಬರೆಯಲಾಗುವುದು. ಸ್ತ್ರೀಯರ ಮತ್ತು ಮೇಲ್ದರ್ಜೆ ಗಾಡಿಗಳಲ್ಲಿ ಹೆಚ್ಚಿನ ಭದ್ರತೆ [illegible] ಸೌಲಭ್ಯಗಳನ್ನು ಏರ್ಪಡಿಸಲಾಗುವುದು.

[illegible] ಸಂಸ್ಥೆಗಳಿಗೆ ೧ನೇ ತಾ|| ರಜ

[illegible] ಪ್ರಾರಂಭಿಕ ವಿದ್ಯಾಭ್ಯಾಸ ದಿನಾಚರಣೆ ಪ್ರಯುಕ್ತ ನವೆಂಬರ್ ೧ನೇ [illegible] ಸಂಸ್ಥಾನದ ಎಲ್ಲ ವಿದ್ಯಾ ಸಂಸ್ಥೆಗಳಿಗೆ ರಜ ಕೊಡಲಾಗಿದೆ.

ಈಜಿಪ್ಟಿನವರ ಮೇಲೆ ಬ್ರಿಟಿಷರ ಗುಂಡು

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಬ್ರಿಟಿಷರ ನೆಲೆ ಕಡೆಗೆ ಬರುತ್ತಿದ್ದ ಈಜಿಪ್ಟಿನವರು ಮುಂದೆ ಬರದೆ ಅಲ್ಲಿಯೇ ನಿಲ್ಲಬೇಕೆಂದು ಸೂಚನೆಯನ್ನಿತ್ತರೂ ಸಹ ಅವರು ಕೇಳದೆ ಹತ್ತಿರ ಬಂದುದರಿಂದಾಗಿ ಬ್ರಿಟಿಷರ ಕಾವಲುಗಾರ ಪಡೆಯವರು ಗುಂಡು ಹಾರಿಸಲಾಗಿ ಇಬ್ಬರಿಗೆ ಗಾಯಗಳಾಗಿವೆ

ಈಜಿಪ್ಟಿನ ಪಶ್ಚಿಮ ಗಡಿ ಕಡೆ ಬ್ರಿಟಿಷ್ ಟ್ಯಾಂಕ್‌ಗಳು

ಲಿಬಿಯಾ ಕಡೆಯಿಂದ ಈಜಿಪ್ಟಿನ ಪಶ್ಚಿಮ ಗಡಿ ಕಡೆಗೆ ಬ್ರಿಟಿಷ್ ಟ್ಯಾಂಕುಗಳು ಬಂದಿವೆಯೆಂದು ಈಜಿಪ್ಟಿನ ಒಳಾಡಳಿತ ಮಂತ್ರಿ ಸೆರಾಗ್ ಪಾಷಾರವರು ತಿಳಿಸಿರುತ್ತಾರೆ. ದಕ್ಷಿಣ ಲಿಬಿಯಾ ಕಡೆಗೆ ಅವು ಹೋಗುತ್ತಿರುವುದಾಗಿ ಬ್ರಿಟಿಷ್ ಕಮ್ಯಾಂಡರರು ತಿಳಿಸಿದರೆಂದು ಹೇಳಲಾಗಿದೆ

೧ ವಾರದ ಹೆಚ್ಚಿನ ಸಕ್ಕರೆ

ಹಬ್ಬಕ್ಕಾಗಿ ಹೆಚ್ಚಿನ ಸಕ್ಕರೆಯನ್ನು ಕೊಡುವುದರ ಜೊತೆಗೆ ಪ್ರತಿ ರೇಷನ್ ಕಾರ್ಡಿಗೂ ಈ ತಿಂಗಳಿನಲ್ಲಿ ಇನ್ನೊಂದು ವಾರದ ಸಕ್ಕರೆಯನ್ನು ಹೆಚ್ಚಾಗಿ ಕೊಡಲು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಹೋಟೇಲುಗಳಿಗೆ ಇದನ್ನು ಕೊಡಲಾಗುವುದಿಲ್ಲ.

ರಾಜಕೀಯದಲ್ಲಿ ಮೈಸೂರು ಮುಸ್ಲಿಮರ ಪಾತ್ರ

ಮೊನ್ನೆ ಬೆಂಗಳೂರಿನಲ್ಲಿ ಸಂಸ್ಥಾನದ ಮುಸ್ಲಿಂ ಪ್ರತಿನಿಧಿಗಳ ಕೂಟವು ಜ|| ಮಹಮದ್ ಹರೀಫರ ಅಧ್ಯಕ್ಷತೆಯಲ್ಲಿ ಸೇರಿತ್ತು. ಮುಸಲ್ಮಾನರ ಹಿತ ರಕ್ಷಣೆ ಮಾಡುವ ಪಕ್ಷದೊಡನೆ ಸಹಕರಿಸಬೇಕೆಂದು ಸಭೆಯು ನಿರ್ಣಯ ಮಾಡಿತು.

ಹ ರಿ ಕ ಥೆ

ಶ್ರೀರಂಗಪಟ್ಟಣದ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ತುಲಾ ಮಾಸದ ಪ್ರಯುಕ್ತ ಈ ತಿಂಗಳು ೧೮ರಿಂದ ಪ್ರತಿ ದಿನ ಸಂಜೆ ೭ ಗಂಟೆಗೆ ಶ್ರೀಮತಿಗಳಾದ ಸುಭದ್ರಾ ಸಿಸ್ಟರ್ಸ್‌ರವರುಗಳಿಂದ ಹರಿಕಥೆಯನ್ನು ಶ್ರೀ ಲಕ್ಷ್ಮೀನರಸಿಂಹ ಶಶಿಕಲಾ ಸಂಗೀತ ನಾಟಕಶಾಲೆಯವರು ಏರ್ಪಡಿಸಿರುತ್ತಾರೆ.

ಕಾಂ|| ಉಮೇದುವಾರರ ಮೂರನೇ ಪಟ್ಟಿ

ಮೈಸೂರಿನ ಎರಡು ಸ್ಥಾನಗಳಿಗೆ ಒಬ್ಬ ಮಹಿಳೆ

ಬೆಂಗಳೂರು ೨೪

ಮೈಸೂರು ಶಾಸನ ಸಭೆ ಮತ್ತು ಪಾರ್ಲಿಮೆಂಟಿಗೆ ಕಾಂಗ್ರೆಸ್ಸಿನ ಪರವಾಗಿ ನಿಲ್ಲಿಸಲು ಮತ್ತೊಂದು ಪಟ್ಟಿಯು ಪ್ರಕಟವಾಗಿರುತ್ತದೆ. ಅದರ ಪ್ರಕಾರ ಮೈಸೂರು ನಗರದ ಉತ್ತರ ಭಾಗಕ್ಕೆ ಶ್ರೀ ಟಿ. ಮರಿಯಪ್ಪನವರು ಮತ್ತು ದಕ್ಷಿಣ ಭಾಗಕ್ಕೆ ಶ್ರೀಮತಿ ಸುನಂದಮ್ಮನವರು ಶಾಸನ ಸಭೆಗೆ ಆರಿಸಲ್ಪಟ್ಟಿರುತ್ತಾರೆ. ಯಳಂದೂರು, ಶ್ರೀ ಶಿವಾನಂದ ಸರ್ಮ, ಗುಂಡ್ಲುಪೇಟೆ-ಹೆಗ್ಗಡದೇವನ ಕೋಟೆ ಶ್ರೀ ಡಿ. ಏವಪ್ಪ, ಕಾನಕಾನಹಳ್ಳಿ, ಎಸ್. ಕರಿಯಪ್ಪ, ಕಬ್ಬನಪೇಟೆ ಶ್ರೀಮತಿ ತ್ರಿಪುರ ಸುಂದರಮ್ಮ, ಗೌರಿಬಿದನೂರು ಶ್ರೀ ಎ. ಸಿ. ನಾಗಯ್ಯರೆಡ್ಡಿ, ಕಡೂರು ಶ್ರೀ ವೈ. ಎಂ. ಚಂದ್ರಶೇಖರಯ್ಯ, ಭದ್ರಾವತಿ ಡಿ. ಸೀತಾರಾಮರಾವ್, ಮತ್ತು ಮೊಳಕಾಲ್ಮೂರು ಎ. ಭೀಮಪ್ಪ ನಾಯಕ್. ಮೈಸೂರು ಜಿಲ್ಲೆಯಿಂದ ಪಾರ್ಲಿಮೆಂಟಿಗೆ ರಿಸರ್ವ್ ಸ್ಥಾನಕ್ಕೆ ಶ್ರೀ ರಾಚಯ್ಯ, ಕೋಲಾರದ ರಿಸರ್ವ್ ಕ್ಷೇತ್ರದಿಂದ ಶ್ರೀ ದೊಡ್ಡ ತಿಮ್ಮಯ್ಯ, ತುಮಕೂರು, ಶಿವಮೊಗ್ಗ, ಬೆಂಗಳೂರು ನಗರ ಮತ್ತು ಜಿಲ್ಲೆ ಇವುಗಳಿಂದ ಪಾರ್ಲಿಮೆಂಟಿನ ಸಾಮಾನ್ಯ ಕ್ಷೇತ್ರಗಳಿಗೆ ಶ್ರೀ ಎಂ. ವಿ. ರಾಮರಾವ್, ಶ್ರೀ ಕೆ. ಜಿ. ವಡೆಯರ್, ಶ್ರೀ ಬಿ. ಎಂ. ಶ್ರೀನಿವಾಸಯ್ಯ ಮತ್ತು ಟಿ. ಮಾದಯ್ಯಗೌಡ ಈ ರೀತಿ ಪಟ್ಟಿಯು ತಯಾರಿಸಲ್ಪಟ್ಟಿರುತ್ತದೆ. ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಿಂದ ಇನ್ನೂ ಆಯ್ಕೆಯಾಗಿಲ್ಲ

ಸಂಸ್ಥಾನದಲ್ಲಿ ಪುನಃ ಪೋಲೊ ಪಂದ್ಯ

ಮೈಸೂರು ಸಂಸ್ಥಾನದಲ್ಲಿ ೧೦ ವರ್ಷಗಳಿಂದ ನಿಂತುಹೋಗಿದ್ದ ಪೋಲೋ ಪಂದ್ಯಗಳು ಪುನಃ ಆರಂಭವಾಗುವುವು. ಬರುವ ಭಾನುವಾರ ಬೆಂಗಳೂರಿನಲ್ಲಿ ಮೈಸೂರು ಲ್ಯಾನ್ಸರ್ಸ್‌ನ ಕ್ಯಾ|| ಎ. ಎ. ಬಿಜಲಿಯವರೂ, ಬೆಂಗಳೂರು ಸಬ್ ಏರಿಯಾ ಸೈನ್ಯಾಧಿಪತಿ ಬ್ರಿ|| ಹಬೀಬುಲ್ಲಾರವರೂ ಆಡುವರು. ಶ್ರೀಮನ್ಮಹಾರಾಜರು ಅಧ್ಯಕ್ಷತೆ ವಹಿಸುವರು.

ನಾನ್ ಗೆಜೆಟೆಡ್ ನೌಕರರಿಗೆ ಹೆಚ್ಚು ತುಟ್ಟಿ ಭತ್ಯ

೫ ರೂ. ನಂತೆ ಕೊಡಲು ಸರ್ಕಾರದವರ ಆಲೋಚನೆ

ಸ್ವಂ. ಮು. ಪ್ರೋ] ಬೆಂಗಳೂರು ೨೪

ಸರ್ಕಾರದ ನಾನ್‌ಗೆಜೆಟೆಡ್ ನೌಕರರುಗಳಿಗೆ ಸಾಮಾನ್ಯವಾಗಿ ತಲಾ ೫ ರೂ. ನಂತೆ ಹೆಚ್ಚು ತುಟ್ಟಿಭತ್ಯವನ್ನು ಕೊಡುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು, ಈ ದಿನ ಶಾಸನ ಸಭೆಯಲ್ಲಿ ಹಣಕಾಸಿನ ಮಂತ್ರಿ ಶ್ರೀ ಹೆಚ್. ಸಿ. ದಾಸಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು ತಿಳಿಸಿದರು.

ಕೋಲಾರದ ಚಿನ್ನದ ಗಣಿಗಳ ಆಡಳಿತ ವರ್ಗ ಮತ್ತು ಮೈಸೂರು ಸರ್ಕಾರಕ್ಕೆ ಆಗಿರುವ ಒಪ್ಪಂದದ ಅವಧಿಯು ೧೯೫೬ನೇ ಇಸವಿ ಮಾರ್ಚಿ ೩೧ನೇ ತಾ|| ಹೊತ್ತಿಗೆ ಮುಗಿಯುವುದೆಂದು ಮತ್ತೊಂದು ಪ್ರಶ್ನೆಗೆ ಉತ್ತರವೀಯಲಾಯಿತು

ವಿಶ್ವ ವಿದ್ಯಾಲಯದ ಕೌನ್ಸಿಲ್‌ನವರ ಶಿಫಾರಸಿನಂತೆ ಹೊರಡಿಸಲಾದ ಪಬ್ಲಿಕ್ ಆರ್ಡಿನೆನ್ಸಿನ ಪ್ರಕಾರ ೩೬೧ ಮಂದಿ ಫೇಲಾದ ವಿದ್ಯಾರ್ಥಿಗಳು ಪಾಸಾದರೆಂದೂ, ಟೆಕ್ನಿಕಲ್ ಮುಂತಾದ ಶಾಲೆಗಳ ಆಡಳಿತ ಸಮಿತಿಯವರು ತಮ್ಮ ವಿದ್ಯಾರ್ಥಿಗಳ ಬಗ್ಗೆ ಇದೇ ರಿಯಾಯಿತಿಯನ್ನು ಕೊಡಬೇಕೆಂದು ಪ್ರಾರ್ಥಿಸಿರಲಿಲ್ಲವೆಂದೂ ವಿದ್ಯಾ ಮಂತ್ರಿ ಶ್ರೀ ಆರ್. ಚನ್ನಿಗರಾಮಯ್ಯನವರು ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು.

ಹೈ ಕೋರ್ಟಿನ ಶಾಸನಕ್ಕೆ ತಿದ್ದುಪಡಿ

ಮೈಸೂರು ಸಂಸ್ಥಾನದ ಹೈ ಕೋರ್ಟಿನ ಶಾಸನಕ್ಕೆ ತಿದ್ದುಪಡಿಯನ್ನು ಈ ಸಾರಿ ನಡೆಯುವ ಶಾಸನ ಸಭಾಧಿವೇಶನದಲ್ಲಿ ಮಂಡಿಸಲಾಗುವುದು. ೩ ಸಾವಿರ ರೂಗಳ ಸಿವಿಲ್ ವ್ಯಾಜ್ಯಗಳನ್ನು ಹೈಕೋರ್ಟಿನ ಒಬ್ಬರೇ ನ್ಯಾಯಾಧೀಶರು ಇತ್ಯರ್ಥಪಡಿಸಲು ಮಸೂದೆಯು ಅವಕಾಶ ಮಾಡಿಕೊಡುವುದು.

ಈಜಿಪ್ಟ್ ದೇಶದಲ್ಲೆಲ್ಲಾ ಗಲಭೆ

ಬ್ರಿಟಿಷರ ವಿರೋಧವಾಗಿ ಈಜಿಪ್ಟಿನಲ್ಲೆಲ್ಲಾ ಹಿಂಸಾಯುತವಾದ ಗಲಭೆಗಳಾಗಿವೆಯೆಂದೂ, ಶಸ್ತ್ರಸಜ್ಜಿತ ಪೋಲೀಸರೊಡನೆ ಪ್ರದರ್ಶನಕಾರರು ನಡೆಸಿದ ಘರ್ಷಣೆಯಲ್ಲಿ ಒಬ್ಬನು ಸತ್ತು ೪೦ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ. ಅಲೆಗ್ಸಾಂಡ್ರಿಯಾದಲ್ಲಿ ಪೋಲೀಸರು ಜನರ ಮೇಲೆ ಗುಂಡು ಹಾರಿಸಿರುತ್ತಾರೆ.

ಎಲ್ಲಾ ರೋಗಗಳಿಗೂ ಸಿದ್ಧೌಷಧವಾದ ನೀರನ್ನುಳ್ಳ ಬಾವಿ

ಮಲಬಾರಿನಲ್ಲಿ ವಳ್ಳಿಕುನ್ನು ಎಂಬ ರೈಲ್ವೆ ಸ್ಟೇಷನ್ ಬಳಿ ಇರುವ ನಂಬೂದರಿಯೊಬ್ಬರ ಮನೆಯ ಬಾವಿ ನೀರಿನ ಉಪಯೋಗದಿಂದ ಹುಟ್ಟುಕುರುಡು, ಕುಷ್ಠರೋಗ ಇವೇ ಮುಂತಾದ ಎಲ್ಲಾ ವ್ಯಾಧಿಗಳೂ ಪೂರ್ಣವಾಗಿ ಗುಣವಾಗುತ್ತಿರುವುವೆಂದೂ, ಈ ವೈಚಿತ್ರ್ಯವನ್ನು ನೋಡಲು ಅಲ್ಲಿಗೆ ಎಲ್ಲಾ ರೈಲುಗಳಲ್ಲೂ ಜನರು ಕಿಕ್ಕಿರಿದು ಬರುತ್ತಿರುವರೆಂದೂ ವರದಿಯಾಗಿದೆ.

ಲಿಯಾಖತ್ ಕೊಲೆ ಬಗ್ಗೆ ನೂರು ಜನರ ತನಿಖೆ

ಲಿಯಾಖತ್ ಅಲಿಯವರು ಭಾಷಣ ಮಾಡುತ್ತಿದ್ದಾಗ ಅವರ ಮುಂದೆ ಸುಮಾರು ೨೫ ಅಡಿ ದೂರದಲ್ಲಿ ಕೊಲೆಗಾರನು ಕುಳಿತಿದ್ದು ಅಲ್ಲಿಂದಲೇ ಗುಂಡು ಹಾರಿಸಿದನೆಂದೂ ಅವನ ಕೈ ಮೇಲೆ ೨೬ ಗಾಯಗಳಾಗಿದ್ದುವೆಂದೂ ಹೇಳಲಾಗಿದೆ. ೧೦೦ ಜನರನ್ನು ಪೊಲೀಸರು ಈ ಸಂಬಂಧವಾಗಿ ತನಿಖೆಗೆ ಒಳಪಡಿಸಿರುತ್ತಾರೆ

ಧನ್ವಂತರಿ ಜಯಂತಿ

ಶ್ರೀಮನ್ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಆಯುರ್ವೇದ ವೈದ್ಯ ಸಂಘದ ಆಶ್ರಯದಲ್ಲಿ ೩೦ ನೇ ತಾ|| ಸಂಜೆ ೬|| ಗಂಟೆಗೆ ಶ್ರೀ ಧನ್ವಂತರಿ ಜಯಂತ್ಯುತ್ಸವವು ನಡೆಯುವುದು ಮಹಾಪಾಠಶಾಲೆಯ ಸಹಾಯೋಪಾಧ್ಯಾಯರಾದ ವಿ|| ಶ್ರೀ ರಾಮಚಂದ್ರ ಸೋಮಯಾಜಿಗಳು ಉಪನ್ಯಾಸ ಮಾಡುವರು

ಸುಪ್ರಸಿದ್ಧ
ಮಲೆಯಾಳ ಜ್ಯೋತಿಷ್ಕರು
ಕೆ. ಕುಮಾರಸ್ವಾಮಿ
ರೂಂ ನಂ ೧೦ ರಾಜಬೀದಿ ಬಜಾರ್... ಛತ್ರ, ಮೈಸೂರು
ಇವರು ಕರಾರುವಾಕ್ಕಾಗಿಯೂ ಶಾಸ್ತ್ರೀಯವಾಗಿಯೂ, ಭೂತ, ಭವಿಷ್ಯದ್ವರ್ತಮಾನಗಳನ್ನು ಹೇಳುತ್ತಾರೆ ಒಂದೇ ಸಿ...

ಸುಡಾನ್ ಗೌರ್ನರ್ ಜನರಲ್ಲರ ದಸ್ತಗಿರಿಗೆ ವಿಫಲ ಸೂಚನೆ

ಸುಡಾನಿನಲ್ಲಿರುವ ಈಜಿಪ್ಟ್ ಸೈನ್ಯಗಳು ಕೂಡಲೇ ಅಲ್ಲಿನ ಬ್ರಿಟಿಷ್ ಗೌರ್ನರ್ ಜನರಲ್ ರಾಬರ್ಟ್ಸ್ ಹೌಡವರನ್ನು ದಸ್ತಗಿರಿ ಮಾಡಬೇಕೆಂದು ಕೈರೊಸ್ ಕೊಡಲ್ಪಟ್ಟು, ಈ ಸುದ್ದಿಯು ಬ್ರಿಟಿಷರಿಗೆ ಆಕಸ್ಮಾತ್ತಾಗಿ ಸಿಕ್ಕಿದುದರಿಂದ ಬ್ರಿಟಿಷ್ ಸೈನ್ಯಗಳು ಸಜ್ಜಾಗಿ ನಿಂತು ಈಗ ಗೌರ್ನರ್ ಜನರಲ್ಲರ ಅರಮನೆಯನ್ನು ಕಾಯುತ್ತಿವೆ ಈಜಿಪ್ಟು ಸೂಯೆಜ್ ವ್ಯಾಜ್ಯವನ್ನು ವಿಶ್ವ ಸಂಸ್ಥೆಗೆ ತೆಗೆದುಕೊಂಡು ಹೋಗಬಹುದೆಂದು ಹೇಳಲಾಗಿದೆ ಸೂಯೆಜ್ ರೈಲ್ವೆ ನಿಲ್ದಾಣವು ಬ್ರಿಟಿಷರ ಕೈವಶವಾಗಿದೆ ಅಲ್ಲಿ ಪ್ರಯಾಣವು ನಿಂತಿದೆ. ಕೈರೋ ವಿದ್ಯಾರ್ಥಿಗಳ ಮೇಲೆ ಮೊನ್ನೆ ಟಿಯರ್ ಗ್ಯಾಸ್ ಪ್ರಯೋಗವಾಯಿತು

ನಾಗಮಂಗಲ ತಾ|| ಹಳ್ಳಿ ಹೆಸರಿನ ಬದಲಾವಣೆ

ನಾಗಮಂಗಲ ತಾಲ್ಲೂಕಿನ ಬೊಮ್ಮಿಹಳ್ಳಿಯ ಹೆಸರನ್ನು ಬ್ರಹ್ಮದೇವರಹಳ್ಳಿಯೆಂದು ಬದಲಾಯಿಸಲಾಗಿದೆ

THIRTHA & COMPANY,
Narayana Sastry Road,
PHONE 537
Clearing & Forwarding
AGENTS

ಕಾಂಗ್ರೆಸ್ ಚುನಾವಣೆ ಪ್ರಚಾರಕ್ಕಾಗಿ ವಿಮಾನಗಳು

ಭಾರತದ ಚರಿತ್ರೆಯಲ್ಲಿ ಇದೇ ಮೊದಲಾಗಿ ಮಹಾ ಚುನಾವಣೆಗಳ ಸಂಬಂಧದಲ್ಲಿ ವಿಮಾನಗಳ ಮೂಲಕ ಪ್ರಚಾರ ನಡೆಸಲು ಏರ್ಪಾಡಾಗಲಿದೆ ಪಶ್ಚಿಮ ಬಂಗಾಳದ ಕಾಂಗ್ರೆಸ್ಸಿನವರು ಎರಡು ವಿಮಾನಗಳನ್ನು ೩ ತಿಂಗಳ ಕಾಲ ಅದಕ್ಕಾಗಿ ಉಪಯೋಗಿಸಿಕೊಳ್ಳಲು ಪ್ರಯತ್ನಗಳಾಗುತ್ತಿವೆ. ಮುಖಂಡರುಗಳ ಪ್ರವಾಸಕ್ಕಾಗಿಯೂ ಹಸ್ತಪತ್ರಿಕೆಗಳನ್ನು ಚೆಲ್ಲುವುದಕ್ಕಾಗಿಯೂ ಈ ವಾಹನಗಳ ಸಹಾಯವನ್ನು ಪಡೆಯಲಾಗುವುದು

ರಾಜಕಮಲ್, ಮೈಸೂರು
26-10-51 ರಿಂದ ಅಮೋಘ 2ನೇ ವಾರ
ಪಿಚ್ಚೈಕಾರಿ
(ಭಿಕ್ಷುಕಿ) (ತಮಿಳು)
ಜೀವಿತ ನೌಕ
ತಾರಾಗಣ:- ಬಿ ಎಸ್ ಸರೋಜ, ಟಿ ಆರ್ ರಾಜಕುಮಾರಿ, ತಿಕ್ಕುರುಸಿ.
: ಬೆಳಗಿನ ಪ್ರದರ್ಶನ :—
26-10-51 ರಿಂದ ೩ ದಿನ ಮಾತ್ರ
ಡಾಕ್ ಬಂಗಲೋ
(ಹಿಂದಿ)
ಭೂಮಿಕೆ: ಸುರಯ್ಯ, ನಾಸ್ತಿ, ಗೋಪ್

ಹೊರಟಾತಿ... ಆದಿಕರ್ನಾಟಕ ಸ್ಕೂಲು

ಅ|-೧೦-೧೯೫೧ ರಲ್ಲಿ, ಮೇಲ್ಕಂಡ ಶಾಲೆಯ ಪ್ರಾರಂಭೋತ್ಸವವು, ನಗರೂರು ತಾ|| ಗ್ರಾಮಾಭಿವೃದ್ಧಿ ಸ... ಅಧ್ಯಕ್ಷರಾದ ಶ್ರೀ ಕೆ ವಿಶ್ವೇಶ್ವರನ್... ರಿಂದ ನೆರವೇರಿಸಲ್ಪಟ್ಟಿತು.

ಮನೆ ಮಾರಾಟಕ್ಕೆ
೧ ಡೋರ್ ನಂ ೫೯೦೦, ... ಹಳ್ಳದಕೇರಿ, ಮೈಸೂರು, ವಿಶಾಲ ಮಹಡಿ ಮನೆ
೨ ಮಾಡಲ್ ಹೌಸ್ ನಂ ... ರಾಮಾನುಜ ರಸ್ತೆ, ಮೈಸೂರು, ೫,೦೦೦
೩. ಮಾಡಲ್ ಹೌಸ್ ನಂ ... ಕೃಷ್ಣರಾಜವನಂ, ಮೈಸೂರು, ೮೫೦೦
೪ ಭಾರಿ ಹೊಸ ಬಂಗ್ಲೆ, ... ಬ್ಲಾಕು, ಎರಡನೇ ಮೇನ್ ರೋ... ವಾಣೀವಿಲಾಸ ಮೊಹಲ್ಲಾ, ಮೈಸೂ...
೫. ಡೋರ್ ನಂ ... ರಹಳ್ಳಿ, ಮೈಸೂರು
೬ ಡೋರ್ ನಂ ... ವಿಲಾಸ ಮೊಹಲ್ಲಾ, ಮೈಸೂರು
೭. ಡೋರ್ ನಂ ... ನಗರ, ಮೈಸೂರು
—: ವಿವರಗಳಿಗೆ :—
ಪಯನಿಯರ್ ಕಂಪೆನಿ
ಹಳೇ ಮೈಸೂರು ಬ್ಯಾಂಕ್ ಬಳಿ, ಸಯ್ಯಾಜಿರಾವ್ ರಸ್ತೆ, ಮೈಸೂರು

ಪ್ರಭಾ ಪಿಕ್ಚರ್ ಹೌಸ್
26—10—51 ರಿಂದ ಪ್ರತಿ ದಿನ ಮೂರು ಆಟಗಳು
ದಿಗ್ದರ್ಶಕ – ಕೇದಾರ್ ಶರ್ಮರವರ ಅಮೋಘ ಹಿಂದಿ ಚಿತ್ರ
ಬಾವ್ರೆನೈನ್ - BAWRENAIN
ಪಾತ್ರ ರಾಜ್ ಕಪೂರ್ ಗೀತಾಬಾಲಿ, ವಿಜಯಲಕ್ಷ್ಮಿ ಮತ್ತು ಕಕ್ಕೂ
ಬೆಳಗಿನ ಪ್ರದರ್ಶನ 26-10-51 ರಿಂದ 4 ದಿನಗಳು ಮಾತ್ರ
- ಹಾಂಟೆಡ್ ಹಾರ್ಬರ್ -

ಒಲಂಪಿಯಾ * 25—10—51 ರಿಂದ ಯಶಸ್ವಿಯಾದ 4 ನೇ ವಾರ
ಪ್ರತಿ ದಿನ ಮೂರು ಆಟಗಳು
ಶಮ್ಮಿ, ಅರ್ಜುನ್ ಮತ್ತು ಕನ್ಹಯ್ಯಲಾಲ್ ಪಾತ್ರವಹಿಸಿರುವ * ಮಲ್ಹಾರ್ * ಮುಕೇಶ್ ರವರ
ಇದರ ಜೊತೆಯಲ್ಲಿ ಸ್ಕ್ರೀನ್ ನ್ಯೂಸ್ ಎಂಬ ಚಿತ್ರ ಪಟದ ಸುದ್ದಿಯನ್ನು ತಹಾ ಪ್ರದರ್ಶಿಸಲಾಗುತ್ತದೆ
ಇದರಲ್ಲಿ ಕಾಮಿನಿ ಕೌಶಲ್ ಸುರೈಯ್ಯಾ, ಮಧುಬಾಲಾ, ಪ್ರೇಮನಾಥ್, ಶೇಖರ್, ಗೋಪ್, ರೆಹನಾ, ಮೋಹನಾ ಮತ್ತು ಲತಾ ಮಂಗೇಶ್ಕರ್ ಮುಂತಾದವರ ದರ್ಶನ ಇವರುಗಳನ್ನು ನೋಡಲು ತಪ್ಪಬೇಡಿರಿ.
ಬೆಳಗಿನ ಪ್ರದರ್ಶನ 26-10-51 ರಿಂದ ದೀಪಾವಳಿ ಹಬ್ಬದ ಪ್ರಯುಕ್ತ 5 ದಿನ ಮಾತ್ರ ನ್ಯೂಥಿಯೇಟರ್ಸ್‌ರವರ ಅತ್ಯುತ್ತಮ ಚಿತ್ರ — ಸೌಗಂಧ್ —
ಪಾತ್ರ:- ಭಾರತಿ, ಅಜಿತ್ ಜರನ್

Edited, Printed and Published by A. R. Nagarajan, at Sadhvi Press D Subbiah Road, Mysore.

ಪ್ರಭುದೇವಾ ಟಾಕೀಸ್
ಪ್ರತಿ ದಿನ ೩ ಆಟಗಳು
26-10-51 ನೇ ಶುಕ್ರವಾರದಿಂದ ಅಮೋಘ 6ನೇ ವಾರ * ಸ್ತ್ರೀ ಸಾಹಸ
ದೀಪಾವಳಿ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ * ಮಾಯಪಿಲ್ಲ * 29-10-51 ಸೋಮವಾರದಿಂದ

ಮೈಸೂರು ಸಿಟಿ ಮುನಿಸಿಪಲ್ ಕಮೀಷನರ್ ಮತ್ತು ಎಲೆಕ್ಟೋರಲ್ ರಿಜಿಸ್ಟ್ರೇಷನ್ ಆಫೀಸರವರ ಆಫೀಸಿನಿಂದ

ನಂಬರು - 25 (B) ನಿಬಂಧನೆ ನೋಟೀಸ್

ನೋಟಿಫಿಕೇಷನ್

ನಂಬರು- RL 31/50 ತಾ|| 22-10-51

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ.- ಇಂಡಿಯಾ ಪಾರ್ಲಿಮೆಂಟು ಸಭೆಗೂ ಮತ್ತು ಮೈಸೂರು ಸಂಸ್ಥಾನದ ಲೆಜಿಸ್ಲೆಟಿವ್ ಅಸೆಂಬ್ಲಿಗೂ ಮೈಸೂರು ನಗರ ಪ್ರದೇಶದಿಂದ ಸದಸ್ಯರನ್ನು ಚುನಾಯಿಸುವ ಬಗ್ಗೆ ತಯಾರಿಸಿರತಕ್ಕ ಮೈಸೂರು ನಗರದಲ್ಲಿರುವ ಚುನಾವಣಾ ವಾರ್ಡುಗಳ ಪಟ್ಟಿಯಲ್ಲಿ ಹಸ್ತದೋಷದಿಂದಾಗಲೀ (ಕೈ ತಪ್ಪಿನಿಂದ) ಅಥವಾ ಮುದ್ರಣದಲ್ಲಾಗಲೀ ಚುನಾವಣೆದಾರರುಗಳ ಹೆಸರುಗಳು ತಪ್ಪಾಗಿದ್ದಲ್ಲಿ ಸದರಿ ದೋಷಗಳನ್ನು ಕ್ರಮ ಪಡಿಸತಕ್ಕ ಬಗ್ಗೆ ಸಂಬಂಧ ಪಟ್ಟ ಮತದಾರರುಗಳಿಂದ ಬರುವ ಅರ್ಜಿಗಳನ್ನು 1951ನೇ ಅಕ್ಟೋಬರ್ ಮಾಹೆ ತಾರೀಖು 31 ಬುಧವಾರದ ವರೆಗೆ ಮಾತ್ರ ಅಂಗೀಕರಿಸಲಾಗುತ್ತೆ. ಅನಂತರ ಬರುವ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ.

(ರುಜು) ಎಸ್. ಶೇಷಗಿರಿರಾವ್,
ಮುನಿಸಿಪಲ್ ಕಮಿಷನರ್ ಮತ್ತು ಎಲೆಕ್ಟೋರಲ್ ರಿಜಿಸ್ಟ್ರೇಷನ್ ಆಫೀಸರ್, ಮೈಸೂರು ಸಿಟಿ ಏರಿಯಾ

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಶೆಟ್ಟಿ ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿಜಿ ನಂ. 792 ॥ ಸಾಧ್ವಿ ಪತ್ರಿಕೆ ॥ ಬೆಲೆ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೬-೧೦-೫೧ [ಸಂಚಿಕೆ ೭೮

ಸುಯೆಜ್ ಪ್ರದೇಶದಲ್ಲಿ ವಿಷಮ ಪರಿಸ್ಥಿತಿ

ರಷ್ಯದಲ್ಲಿ ಎನ್. ಎಸ್. ಕೃಷ್ಣರವರ ಸತ್ಕಾರ್ಯ

ಗಾಂಧಿ ತತ್ವದ ಮಹಿಮೆಯನ್ನು ಹ... ರಷ್ಯದ ರಾಜಧಾನಿ ಮಾಸ್ಕೋವಿ... ಸುಪ್ರಸಿದ್ಧ ನಟ ಎನ್. ಎಸ್. ಕೃಷ್ಣರವರು ಸತ್ಕಾರ್ಯವನ್ನು ಆಚರಿಸಿ... ನ್ನು ಅವರು ತಿಳಿಸಿದ್ದಾರೆ. ಕೆಲ... ದಿನಗಳ ಹಿಂದೆ ನಡೆದ ಸತ್ಕಾರ ಕೂ... ದಲ್ಲಿ ಕೃಷ್ಣರವರು ಭಾಷಣ ಮಾಡಿ, ಗಾಂಧೀ ತತ್ವ ಮತ್ತು ಕಮ್ಯೂನಿಸ್ಟ್ ತತ್ವಗಳು ಒಂದೇ ಗುರಿಯನ್ನು ಹೊಂದಿ... ವೆಯೆಂದೂ, ಆದರೆ ಅವುಗಳ ಮಾರ್ಗದಲ್ಲಿ ಮಾತ್ರ ವ್ಯತ್ಯಾಸವಿದೆಯೆಂದೂ, ಕಮ್ಯೂನಿಸ್ಟ್ ತತ್ವವು ವಿಮಾನದ ವೇಗದ... ಇದರೆ ಗಾಂಧಿಜಿಯವರದು ಎತ್ತಿನ ಗಾಡಿಯ ಮೇಲೆ ಹೋಗುವುದೆಂದೂ ತಿ... ಈ ಭಾಷಣವನ್ನು ರಷ್ಯದ ಭಾಷೆಗೆ ತರ್ಜುಮೆ ಮಾಡಲು ಅಲ್ಲಿನ ಮನುಷ್ಯನು ಒಪ್ಪದೆ ಗಾಂಧೀ ತತ್ವವು ಕಮ್ಯೂನಿಸ್ಟರ ತತ್ವಕ್ಕಿಂತ ದೊಡ್ಡ ತತ್ವವೆಂದು ಹೇಳಿದನೆಂದೂ, ಈ ಬಗ್ಗೆ ... ದಿನಗಳಾಗಿ ಕಡೆಗೆ ಕೃಷ್ಣರವರು ... ಊಟವನ್ನು ಮಾಡಲಿಲ್ಲವೆಂ... ನಂತರ ರಷ್ಯದವನು ಬಂದು ಕ್ಷ... ಕೇಳಿದನೆಂದೂ ಗೊತ್ತಾಗಿದೆ.

ಊಟ ಮಾಡಿದ ನಂತರ ...೦ ಜನರಿಗೆ ಹುಚ್ಚು

...ಜಫರ್‌ಪುರದ ಒಂದು ಹಳ್ಳಿಯ ... ಮವನು ಮಾರಿದ ಹಿಟ್ಟನ್ನು ಬಳ... ಮಾಡಿದ ೩೦ ಜನ ಗಂಡಸರು ... ಯರು ಮಕ್ಕಳು ಮೂರು ದಿನಗಳ ... ಹುಚ್ಚರಂತೆ ಆದ ಪ್ರಸಂಗವು ವ... ಆಗಿದೆ. ಹಲವರು ತಮ್ಮ ವಸ್ತ್ರಗಳನ್ನು ಕಳೆದು ನಗ್ನರಾಗಿ ಓಡಾಡಿದರಂ... ಇತರರು ಭೂಮಿಯ ಮಣ್ಣು ಒ... ಚಿಯಾಗಿರುವುದೆಂದು ಹೇಳುತ್ತಾ ... ತಿಂದರೆಂದೂ ವರದಿಯಾಗಿದೆ ... ಆಗಿ ವೈದ್ಯರು ಬರುವ ಹೊತ್ತಿಗೆ ... ಗಳಿಗೆ ನಿದ್ರೆ ಬಂತು. ಬುದ್ಧಿ ಭ್ರಮೆ ... ಮೆಯಾಗಿತ್ತೆಂದು ಹೇಳಲಾಗಿದೆ ... ಪರೀಕ್ಷೆಗೆ ಒಳಪಡಿಸಲಾಗಿದೆ.

ಹಳದಿ ಬಣ್ಣದ ಮಳೆ

...ಇಂಗ್ಲೆಂಡ್ ದ್ವೀಪದ ದಕ್ಷಿಣದಲ್ಲಿ ... ಸ್ಟರ್ ಕಾರ್ಗಿಲ್ ಎಂಬ ನಗರ... ತೆ ಹಳದಿ ಬಣ್ಣದ ಮಳೆಯಾಗಿ ... ಎಲ್ಲಾ ಆಶ್ಚರ್ಯವುಂಟಾಯಿತು. ... ಬೆಳಗ್ಗೆ ನೋಡುವಲ್ಲಿ ರಸ್ತೆ ... ಉಪವನಗಳಲ್ಲಿ ಹಳದಿ ಪುಡಿ ಕ... ಬಿದ್ದಿದ್ದವು. ಆಕಾಶದಲ್ಲಿ ಯಾ... ವುದೋ ವಸ್ತುವು ಸೇರಿದ್ದು ಮಳೆ ಬಂ... ದಾಗ ಅದು ಈ ರೀತಿಯಾಗಿ ಬಿದ್ದಿರಬೇ... ಕೆಂದು ಊಹಿಸಲಾಗಿದೆ.

ಸೂಯೆಜ್ ಪ್ರದೇಶ ಬಿಡುವುದಿಲ್ಲವೆಂದು ಬ್ರಿಟಿಷ್ ಮಂತ್ರಿ

ಸೂಯೆಜ್ ಪ್ರದೇಶದಲ್ಲಿ ಬ್ರಿಟಿಷರು ... ವಹಿಸುವ ಹಕ್ಕು ಬಾಧ್ಯತೆಗಳನ್ನು ಏ... ನೇ ರೀತಿಯಲ್ಲೂ ಬಿಟ್ಟುಕೊಡುವುದಿಲ್ಲವೆಂದು ಬ್ರಿಟನ್ನಿನ ವಿದೇಶಾಂಗ ಮಂತ್ರಿ ಹರ್ಬರ್ಟ್ ಮಾರಿಸನ್‌ರವರು ತಿಳಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿರುವ ಬ್ರಿಟಿಷ್ ಸೈನ್ಯ... ಕ್ಕೆ ಶ್ರೇಷ್ಠ ಸೇನಾನಿಯೊಬ್ಬರನ್ನು ನೇಮಿಸಬೇಕೆಂದು ಅವರು ಒತ್ತಾಯಪಡಿಸಿದ್ದಾರೆ.

ಪ್ರಾಣಿ ಸಂಗ್ರಹಾಲಯದ ಮೇಲೆ ವೈಮಾನಿಕರ ಧಾಳಿ

ರಂಗೂನಿನ ಪ್ರಾಣಿ ಸಂಗ್ರಹಾಲಯಕ್ಕೆ ಕೆಲವು ದಿನಗಳ ಹಿಂದೆ ಬರ್ಮಾದ ವಿಮಾನ ಪಡೆಯ ನಾಲ್ಕು ಮಂದಿ ಚಾಲಕರು ಹೋಗಿ ಅಲ್ಲಿನ ಕೆಲವು ಪ್ರಾಣಿಗಳನ್ನು ಹಿಂಸಿಸಿದುದರಿಂದ ಪ್ರಾಣಿ ಸಂಗ್ರಹಾಲಯದ ಸಿಬ್ಬಂದಿಯವರು ಅವರನ್ನು ಬಲೋದ್ಯಾನದಿಯಿಂದ ಹೊರಕ್ಕೆ ಕಳುಹಿಸಿದ್ದರ ಮೇಲೆ ಸೇಡು ತೀರಿಸಿಕೊಳ್ಳುವ ಹಲುವಾಗಿ ಕಳೆದ ಸೋಮವಾರ ರಾತ್ರಿ ೨೦೦ ಮಂದಿ ವಿಮಾನ ಪಡೆಯವರು ಮಿಲಿಟರಿ ಟ್ರಕ್ಕುಗಳಲ್ಲಿ ಬಂದು, ಪ್ರಾಣಿ ಸಂಗ್ರಹಾಲಯದ ಟೆಲಿಫೋನ್ ಸಂಬಂಧವನ್ನು ಕಡಿದು, ಒಳಕ್ಕೆ ನುಗ್ಗಿ, ಹಾಕಿ ಬ್ಯಾಟುಗಳು ಮತ್ತು ರಿವಾಲ್ವರುಗಳ ಮೊನೆಯಿಂದ ಅಲ್ಲಿನ ಸಿಬ್ಬಂದಿಯವರ ಮೇಲೆ ಮನಸ್ಸೀ ಧಾಳಿ ನಡೆಸಿದರು. ಇದರಿಂದ ೨೪ ಮಂದಿಗೆ ಗಾಯಗಳಾಗಿ, ಹಲವರಿಗೆ ತಲೆಯ ಎಲುಬು ಮತ್ತು ಮೂಳೆಗಳು ಮುರಿದುವೆಂದು ವರದಿಯಾಗಿದೆ. ಈ ಧಾಳಿಯಲ್ಲಿ ಪ್ರಾಣಿ ಸಂಗ್ರಹಾಲಯದ ಅನೇಕ ಆಸನಗಳ ಗುಡಿಸಲುಗಳು ನಾಶವಾದುವು. ಅಲ್ಲಿಗೆ ಬಂದಿದ್ದ ಹಲವು ಪ್ರೇಕ್ಷಕರಿಗೂ ಗಾಯಗಳಾಗಿವೆ. ಕಡೆಗೆ ಬರ್ಮಾದ ವಿಮಾನ ಪಡೆಯ ಶ್ರೇಷ್ಠ ಅಧಿಕಾರಿಯು ಬಂದು ವಿಮಾನ ಚಾಲಕರೆಲ್ಲರೂ ಬ್ಯಾರಕ್ಕುಗಳಿಗೆ ಹಿಂದಿರುಗಬೇಕೆಂದು ಆಜ್ಞೆ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಮೇಲ್ಕಂಡ ೪೦೦ ಮಂದಿ ಚಾಲಕರನ್ನೂ ಬಂಧಿಸಲಾಗಿದೆ.

ಜಿನ್ನಾರವರ ತಂಗಿಗೆ ಮುಸ್ಲಿಂ ಲೀಗ್ ಅಧ್ಯಕ್ಷ ಸ್ಥಾನ

ಪಾಕಿಸ್ತಾನದ ಪ್ರಧಾನಿಗಳು ಮಿಸ್ ಫಾತಿಮಾ ಜಿನ್ನಾರವರನ್ನು ಎರಡು ಸಾರಿ ಬರಮಾಡಿಕೊಂಡು ಮಾತುಕತೆ ನಡೆಸಿದರೆಂದೂ, ಅವರಿಗೆ ಅಲ್ಲಿನ ಮುಸ್ಲಿಂ ಲೀಗಿನ ಅಧ್ಯಕ್ಷ ಪದವಿಯನ್ನು ಕೊಡಬಹುದೆಂದೂ ಹೇಳಲಾಗಿದೆ.

ಬಲಿ ಪಾಡ್ಯಮಿಗೆ ರಜಾ

ಬಲಿಪಾಡ್ಯಮಿ ಪ್ರಯುಕ್ತ ಈ ತಿಂಗಳು ೩೧ನೇ ತಾ॥ ಬುಧವಾರ ಸಾರ್ವಜನಿಕ ರಜವಿರುವುದೆಂದು ಸರ್ಕಾರದವರು ಲಕ್ಷ್ಯ ಮಾಡಿರುತ್ತಾರೆ. ಬ್ಯಾಂಕುಗಳಿಗೂ ಇದು ಅನ್ವಯಿಸುತ್ತದೆ.

ಕಾಂಗ್ರೆಸ್ ಉಮೇದುವಾರರ ನಾಲ್ಕನೇ ಪಟ್ಟಿ

ಸ್ವಂ ಪು ಪೋ] ಬೆಂಗಳೂರು ೨೬

ಕಾಂಗ್ರೆಸ್ಸಿನ ಪರವಾಗಿ ಮಂಡ್ಯದ ಜಿಲ್ಲೆಯಿಂದ ಪಾರ್ಲಿಮೆಂಟಿಗೆ ಶ್ರೀ ಎಂ. ಕೆ. ಶಿವಲಿಂಗಪ್ಪನವರನ್ನು ಚುನಾವಣಾ ಸಮಿತಿಯವರು ಆರಿಸಿರುತ್ತಾರೆ. ಕೋಲಾರದ ಜಿಲ್ಲೆಯಿಂದ ಒಂದು ಸ್ಥಾನಕ್ಕೆ ಇನ್ನೂ ಆರಿಸಿಲ್ಲ. ಶಾಸನ ಸಭೆಗೆ ಹುಣಸೂರಿನಿಂದ ಶ್ರೀ ಡಿ. ದೇವರಾಜೆ ಅರಸ್, ಕೃಷ್ಣರಾಜನಗರ, ಎಂ. ಎಲ್. ಸಂಜರಾಜೆ ಅರಸ್, ತುಮಕೂರು ಶ್ರೀ ಎಂ. ಎಲ್. ನರಸಿಂಹಯ್ಯ, ಪಾವಗಡ ಶ್ರೀ ವಾಲಿ ಮರಿಯಪ್ಪ, ಕೊರಟಗೆರೆ ಮುದ್ದುರಾಮಯ್ಯ, ಕೆ. ಜಿ. ಎಫ್. ಶ್ರೀ ಮುನಿಸ್ವಾಮಿ ಇವರುಗಳನ್ನು ಆರಿಸಲಾಗಿದೆ. ಇನ್ನು ನಾಲ್ಕು ಸ್ಥಾನಗಳನ್ನು ಮಾತ್ರ ಭರ್ತಿ ಮಾಡಬೇಕಾಗಿದೆ.

ಲಕ್ಷ್ಮೀದೇವಿ ರಾಮಣ್ಣನವರು ಕಾಂಗ್ರೆಸ್ ಉಮೇದುವಾರರು

ಆನೇಕಲ್-ಹೊಸಕೋಟೆ ಕ್ಷೇತ್ರದಿಂದ ಶಾಸನಸಭೆಗೆ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರನ್ನು ಕಾಂಗ್ರೆಸ್ ಪರವಾಗಿ ಉಮೇದುವಾರರನ್ನಾಗಿ ಆರಿಸಲಾಗಿದೆ. ಅಲ್ಲಿನ ರಿಸರ್ವ್ ಕ್ಷೇತ್ರಕ್ಕೆ ಶ್ರೀ ಪುಟ್ಟಪ್ಪ. ಬೆಂಗಳೂರು ಉತ್ತರ ಭಾಗದ ರಿಸರ್ವ್ ಸ್ಥಾನಕ್ಕೆ ಶ್ರೀ ಆರ್. ಮುನಿಸ್ವಾಮಯ್ಯನವರುಗಳು ಕಾಂಗ್ರೆಸ್ ಉಮೇದುವಾರರಾಗಿರುತ್ತಾರೆ.

ಉಪ್ಪಿನ ಮೇಲೆ ಸೆಸ್

ಉಪ್ಪಿನ ಮೇಲೆ ಸೆಸ್ ಅನ್ನು ಹಾಕಲು ಕೇಂದ್ರ ಸರ್ಕಾರದವರು ಸಧ್ಯದಲ್ಲಿ ಒಂದು ಶಾಸನವನ್ನು ತರಲಿರುವರು. ಉಪ್ಪಿನ ಸುಂಕವನ್ನು ಹಾಕುವಾಗಲೂ ಅದು ಸೇರುತ್ತಿತ್ತೆಂದು ಹೇಳಲಾಗಿದೆ. ಸೆಸ್ ನಿಧಿಯನ್ನು ಯಾವ ರೀತಿ ಉಪಯೋಗಿಸಬೇಕೆಂಬುದನ್ನು ಕುರಿತು ಸಲಹೆ ಕೊಡಲು ಒಂದು ಸಮಿತಿಯನ್ನು ರಚಿಸಲಾಗುವುದೆಂದು ಗೊತ್ತಾಗಿದೆ.

ನಾಡ ಹಬ್ಬದ ಕಾರ್ಯಕ್ರಮ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಬೆಳಗ್ಗೆ ೧೦-೩೦ಕ್ಕೆ ಅಲ್ಲಿನ ಹೈಸ್ಕೂಲು ಮತ್ತು ಬಾಲಿಕಾ ಶಾಲೆಗಳಲ್ಲಿ ಚರ್ಚಾಕೂಟ ಮತ್ತು ಕಾವ್ಯ ವಾಚನಗಳನ್ನು ನಾಡಹಬ್ಬದ ಅಂಗವಾಗಿ ಏರ್ಪಡಿಸಲಾಗಿದೆ.

ತುಮಕೂರಿನಲ್ಲಿ ಫರ್ಟಿಲೈಸರ್ ಕಾರ್ಖಾನೆ

ಶಾಸನ ಸಭೆಯಲ್ಲಿ ಸೂಚನೆ

ಸ್ವಂ.ಪು.ಪೋ.] ಬೆಂಗಳೂರು ೨೬

ತುಮಕೂರು ಜಿಲ್ಲೆಯಲ್ಲಿ ೧೦ ಸಾವಿರ ರೂ. ವೆಚ್ಚದಿಂದ ಫರ್ಟಿಲೈಸರ್ ಕಾರ್ಖಾನೆಯೊಂದನ್ನು ತೆರೆಯಲಾಗುವುದೆಂದೂ, ಸೈಕಲ್ ಕಾರ್ಖಾನೆಯನ್ನು ಈಗಲೇ ಅಲ್ಲಿ ಸ್ಥಾಪಿಸಲಾಗುವುದಿಲ್ಲವೆಂದೂ ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವೀಯಲಾಯಿತು.

ಹೊನ್ನೆ ಮರಡು ಮತ್ತು ತಿಂಹಾ ವಿದ್ಯುದ್ಯೋಜನೆಗಳು ಇನ್ನೂ ಪೂರೈಸಿಲ್ಲವೆಂದೂ, ಅದಾದ ನಂತರ ಕಡಲೇ ತಿಂಹಾ ಯೋಜನೆಯನ್ನು ಕಾರ್ಯಗತ ಮಾಡಲಾಗುವುದೆಂದೂ, ಮತ್ತೊಂದನ್ನು ಹಣದ ಅಭಾವವಿರುವುದರಿಂದ ಈಗ ಕೈಗೊಳ್ಳುವುದಿಲ್ಲವೆಂದೂ ತಿಳಿಸಲಾಯಿತು. ಬೆಳೆಗಳ ಇನ್ಷೂರೆನ್ಸ್ ಯೋಜನೆಯನ್ನು ಜಾರಿಗೆ ತರಲಾಗುವುದಿಲ್ಲವೆಂದು ಹೇಳಲಾಯಿತು.

ಈಜಿಪ್ಟಿನಲ್ಲಿ ವಿಷಮ ಪರಿಸ್ಥಿತಿ

ಈಜಿಪ್ಟಿನಲ್ಲಿ ಪರಿಸ್ಥಿತಿಯು ತೀವ್ರವಾಗಿಯೂ ವಿಷಮಿಸುತ್ತಲೂ ಇರುವುದಾಗಿ ಸೂಯೆಜ್ ಕಾಲುವೆಯಲ್ಲಿರುವ ಬ್ರಿಟಿಷ್ ಸೈನ್ಯಗಳ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಪಾಯಕರವಾದ ಸನ್ನಿವೇಶವು ಯಾವಾಗ ಉಂಟಾಗಬಹುದೆಂಬುದನ್ನು ತಿಳಿಸಲು ಅವರು ನಿರಾಕರಿಸಿದರೂ ಸಹ, ಬದಲಾಯಿಸುತ್ತಿರುವ ಸ್ಥಿತಿಯನ್ನು ಎದುರಿಸಲು ಬ್ರಿಟಿಷರು ಸಿದ್ಧರಾಗಿರುವರೆಂದು ತಿಳಿಸಿರುವರು. ಅಲ್ಲಿದ್ದ ೭೦ ಸಾವಿರ ಈಜಿಪ್ಟ್ ಕಾರ್ಮಿಕರ ಪೈಕಿ ಈಗಾಗಲೇ ಅರ್ಧಭಾಗದಷ್ಟು ಜನರು ಬ್ರಿಟಿಷರೊಡನೆ ಅಸಹಕಾರವನ್ನು ಹೂಡಿ, ವಾಪಸು ತೆರಳಿದ್ದಾರೆ. ಉಳಿದವರೂ ಹೋಗುತ್ತಿರುವರು. ಕಾಲುವೆ ಪ್ರದೇಶದಲ್ಲಿ ಹಂಚಲಾಗುತ್ತಿದ್ದ ಈಜಿಪ್ಟ್ ಗೆಜೆಟ್ ಪತ್ರಿಕೆಯನ್ನು ಪ್ರತಿಬಂಧಿಸಲಾಗಿದೆ. ನೆನ್ನೆ ಆ ಪ್ರದೇಶದಲ್ಲಿ ಯಾವ ಘಟನೆಯೂ ಆಗಿಲ್ಲ. ಪರಿಸ್ಥಿತಿಯು ತಮ್ಮ ಹತೋಟಿಯಲ್ಲಿರುವುದಾಗಿ ಈಜಿಪ್ಟ್ ಒಳಾಡಳಿತ ಮಂತ್ರಿಯು ತಿಳಿಸಿದ್ದಾರೆ.

ಗಾಂಧಿಜಿ ಸ್ಮಾರಕಕ್ಕೆ ಕಾರ್ಮಿಕರಿಂದ ೧೪ ಲಕ್ಷ ರೂ.

ಗುಜರಾತಿನ ಕಾರ್ಮಿಕರು ಮಹಾತ್ಮ ಗಾಂಧಿಜಿಯವರ ಸ್ಮಾರಕಕ್ಕಾಗಿ ೧೪ ಲಕ್ಷ ರೂ.ಗಳ ನಿಧಿಯನ್ನು ಕೂಡಿಸಿದ್ದಾರೆ. ಮಹಾತ್ಮರು ಕಾರ್ಮಿಕ ಚಳುವಳಿ ಸಂಬಂಧವಾಗಿ ಬರೆದಿರುವ ಲೇಖನಗಳನ್ನೆಲ್ಲಾ ಈ ನಿಧಿಯಿಂದ ಪ್ರಕಟಿಸಲಾಗುವುದು.

ಗೋಡೆ ಬಿದ್ದು ಹೆಂಗಸು ಮತ್ತು ಮಗುವಿಗೆ ಗಾಯ

ರಾಜಧಾನಿಯ ಎಲ್ಗಿನ್ ಫೌಂಟನ್ ಬಳಿ ಇರುವ ಹೊಸ ಸ್ಮಾರಕ ಚೌಕದ ಹತ್ತಿರ ಒಡೆಯಲಾಗುತ್ತಿರುವ ಲ್ಯಾನ್ಸ್‌ಡೌನ್ ಬಜಾರಿನ ಗೋಡೆಯು ಈ ಬೆಳಗ್ಗೆ ಮುರಿದು ಬಿದ್ದು ಕೂಲಿಯ ಒಬ್ಬ ಹೆಂಗಸು ಮತ್ತು ಒಂದು ಮಗುವಿಗೆ ಸ್ವಲ್ಪ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಮೈಸೂರು ಸಾಬುವಿನ ಹೊಸ ಚಲನಚಿತ್ರ

ಹೊಸ ಚಲನಚಿತ್ರವೊಂದರಲ್ಲಿ ಪಾತ್ರವಹಿಸಲು ನ್ಯೂಯಾರ್ಕಿನಿಂದ ಮೊನ್ನೆ ಮೈಸೂರಿನ ಸಾಬುವು ಇಟಲಿಯ ರಾಜಧಾನಿ ರೋಮ್ ನಗರಕ್ಕೆ ತೆರಳಿದನು ಹೊಸ ಚಿತ್ರವಾವುದು, ಯಾರು ಅದನ್ನು ತಯಾರಿಸುವವರು ಮತ್ತು ಅವನ ಪಾತ್ರವೇನು ಎಂಬುದು ಅವನಿಗೆ ಇನ್ನೂ ತಿಳಿದಿಲ್ಲ. ಈ ಚಿತ್ರದ ತಯಾರಿಯು ಅವನಿಗೆ ಒಪ್ಪಿಗೆಯಾಗದಿದ್ದರೆ ಪಾಕಿಸ್ತಾನಕ್ಕೆ ತೆರಳಿ ಅಲ್ಲಿ ತನ್ನದೇ ಆದ ಕಂಪೆನಿಯ ಸಹಾಯದಿಂದ ಬೇರೊಂದು ಚಿತ್ರವನ್ನು ತಯಾರಿಸಲು ಅವನು ಅಪೇಕ್ಷೆ ಹೊಂದಿರುವನು

೫ ಸಾವಿರ ನೇತ್ರ ರೋಗಿಗಳಿಗೆ ಡಾ॥ ಎಂ. ಸಿ. ಮೋದಿಯವರಿಂದ ಚಿಕಿತ್ಸೆ

ಧರ್ಮಸ್ಥಳಕ್ಕೆ ತೆರಳಿದ್ದ ಡಾ॥ ಎಂ. ಸಿ ಮೋದಿಯವರು ಅಲ್ಲಿ ಉಚಿತವಾಗಿ ಸುಮಾರು ೫ ಸಾವಿರ ರೋಗಿಗಳಿಗೆ ಚಿಕಿತ್ಸೆ ಮುಂತಾದುವನ್ನು ನಡೆಸಿದರು

ಸುಪ್ರಸಿದ್ಧ

ಮಲೆಯಾಳ ಜ್ಯೋತಿಷ್ಕರು ಕೆ. ಕುಮಾರಸ್ವಾಮಿ

ರೂಂ ನಂ ೧೨ ನಂಜರಾಜ ಬಹದ್ದೂರು ಛತ್ರ, ಮೈಸೂರು

ಇವರು ಕೇರಳದವರಾಗಿದ್ದೂ ಶಾಸ್ತ್ರ ಜ್ಞರಾಗಿದ್ದು ಭೂತ, ಭವಿಷ್ಯದ್ ವರ್ತಮಾನಗಳನ್ನು ಹೇಳುತ್ತಾರೆ ಒಂದೇ ವಿಚಾರಿಸಿ

ಗೋಳ್ವಾಲ್ಕರರ ಭಾಷಣ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಚಾಲಕರಾದ ಶ್ರೀ ಎಂ. ಎಸ್. ಗೋಳ್ವಾಲ್ಕರ್‌ರವರು ೧ ನೇ ತಾ॥ ನಾಗಪುರದಿಂದ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸಿ, ಅಲ್ಲಿಂದ ರಾಜಧಾನಿಗೆ ನೇರವಾಗಿ ಬರುವರು ೮ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಅವರು ಭಾಷಣ ಮಾಡುವರು. ಅನೇಕ "ಕರ್ನಾಟಕ ಪ್ರಾಂತ ಬೈಠಕ್" ನ್ನು ನೆರವೇರಿಸಲು ದಾವಣಗೆರೆಗೆ ಪ್ರಯಾಣ ಬೆಳೆಸುವರು.

ಅಪೇರಾ ಟಾಕೀಸ್

ಬೆಳಗಿನ ಪ್ರದರ್ಶನ

ತಾ॥ 26-10-51ರಿಂದ

ಜಹಗೀರ್‌ದಾರ್

ಪಾತ್ರ:- ಮೋತಿಲಾಲ್, ಯಾಕೂಬ್, ಮಾಯಾ ಬ್ಯಾನರ್ಜಿ

[M.M.S

ರಣಜಿತ್ ಟಾಕೀಸ್

ಬೆಳಗಿನ ಪ್ರದರ್ಶನ

ತಾ॥ 26-10-51ರಿಂದ

ದಿಲ್-ಕಿ-ದುನಿಯಾ

ಪಾತ್ರ:- ಮುನವರ್ ಸುಲ್ತಾನಾ, ಗೀತಾಬಾಲಿ, ಮುಜಹರ್ ಖಾನ್

[M.M.S

ರೇಷನಿಂಗ್ ಆಫೀಸರವರ ಕಛೇರಿ, ಮೈಸೂರು ಸಿಟಿ.

ಪ್ರಕಟಣೆ

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ನಗರದ ಎಲ್ಲಾ ರೇಷನ್ ಡಿಪೋಗಳೂ ಮತ್ತು ಸಬ್ ಗೋಡೌನ್‌ಗಳೂ ಇದೇ ತಿಂಗಳು 28 ನೇ ತಾರೀಖು ಭಾನುವಾರ ಪೂರ್ತಾ ತೆರೆದಿರುತ್ತವೆ 29 ಮತ್ತು 31ನೇ ತಾರೀಖು ದೀಪಾವಳಿ ಹಬ್ಬಕ್ಕಾಗಿಯೂ ಮತ್ತು ಮಾಹೆಯಾನಾ ಆಹಾರ ಧಾನ್ಯದ ಜಡತಿಗಾಗಿಯೂ ಅವು ಮುಚ್ಚಲ್ಪಡುತ್ತವೆ.

(ರುಜು) ಹೆಚ್. ಜಿ. ವಿಜಯರಾಘವರೆಡ್ಡಿ, ರೇಷನಿಂಗ್ ಆಫೀಸರ್, ಮೈಸೂರು

SRI GAYATHRI TALKIES

From 26 10 51 Daily 3 Shows

Warner's Long Awaited Picture

THE FLAME OF THE ARROW

(In Technicolour)

With -Burt Lancaster & Virginia Mayo

- Morning Shows -

On 27th and 28th

M. G. M's

THIS TIME FOR KEEPS

[Technicolour]

With - ESTHER WILLIAMS

ದೀಪಾವಳಿ ಹಬ್ಬಕ್ಕೆ ಮಾತ್ರ ಬೆಲೆ ಕಡಿಮೆ ಮಾಡಿರುತ್ತೆ

ಯಾವಾಗಲೂ ಹಸನಾದ ಬೆಣ್ಣೆ ಮತ್ತು ತುಪ್ಪವನ್ನು ಉಪಯೋಗಿಸಿರಿ

ಬೆಣ್ಣೆ ವೀಸೆ 1ಕ್ಕೆ 6 4-0

ದಯವಿಟ್ಟು ಇಂದೇ ಭೇಟಿ ಕೊಡಿ

ಎಂ. ಎಸ್. ನಾಗಣ್ಣ ಅಂಡ್ ಸನ್ಸ್

100 ಅಡಿ ರಸ್ತೆ ಮೈಸೂರು

ಹಿಂದೂ ಬ್ಯಾಂಕ್ ಕರೂರು ಲಿಮಿಟೆಡ್.

ನೋಟೀಸು

ಮೈಸೂರು ಸಂಸ್ಥಾನದಲ್ಲಿರುವ ಈ ಬ್ಯಾಂಕಿನ ಮೂರು ಶಾಖೆಗಳನ್ನೂ ವಿಶೇಷ ಕಾರಣಗಳಿಗಾಗಿ ಮುಚ್ಚಲು ಬ್ಯಾಂಕಿನ ಡೈರೆಕ್ಟರುಗಳ ಬೋರ್ಡಿನವರು ನಿರ್ಧರಿಸಿರುವರು ಅದರಂತೆಯೇ ಬೆಂಗಳೂರು ಮತ್ತು ಮಂಡ್ಯದ ಶಾಖೆಗಳನ್ನು ಈಗಾಗಲೇ ಮುಚ್ಚಲಾಗಿದೆ ಮೈಸೂರಿನ ಶಾಖೆಯನ್ನು ೩೦-೧೧-೫೧ ರಂದು ಮುಚ್ಚಲಾಗುವುದು

ಅಂಚೆ ಮೂಲಕ ವೈಯಕ್ತಿಕವಾಗಿ ನೋಟೀಸುಗಳನ್ನು ಕೊಟ್ಟಿದ್ದಾಗ್ಯೂ, ಬೆಂಗಳೂರು ಮತ್ತು ಮಂಡ್ಯ ಶಾಖೆಗಳಿಗೆ ಸಂಬಂಧಪಟ್ಟ ಅಡಮಾನಗಳ ಸಾಲದ ಅನೇಕ ಐಟಂಗಳು ಇನ್ನೂ ಉಳಿದಿರುತ್ತವೆ ಆಯಾ ಗಿರವಿದಾರರು ತಮ್ಮ ಸಾಲಗಳನ್ನು ಶ್ರೀರಾಂಪೇಟೆಯಲ್ಲಿರುವ ಮೈಸೂರು ಶಾಖೆಯಲ್ಲಿ ವಾಪಸು ಕೊಡಲು ೩೦-೧೦-೫೧ನೇ ದಿನವೇ ಕಡೆಯ ತಾರೀಖೆಂದು ಅವರುಗಳಿಗೆ ಈ ಮೂಲಕ ತಿಳಿಯ ಪಡಿಸಲಾಗಿದೆ. ಆ ತಾರೀಖಿನ ನಂತರ ಇನ್ನೂ ಫೈಸಲಾಗದೆ ಉಳಿಯುವ ಎಲ್ಲ ಐಟಂಗಳನ್ನು ಮೈಸೂರು ಶಾಖೆಯ ಕಟ್ಟಡದಲ್ಲಿ ೪-೧೧-೫೧ ನೇ ಭಾನುವಾರ ಬೆಳಗ್ಗೆ ೯ ಗಂಟೆಗೆ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು ಯಾವುದೇ ಐಟಮ್ಮು ಬಿಟ್ಟುದಾರರಿಲ್ಲದೆ ಹಾಗೇ ಉಳಿದರೆ, ಅದನ್ನು ಖಾಸಗಿಯಾಗಿ ಮಾರಾಟ ಮಾಡಲಾಗುವುದು

ಮೈಸೂರು ಶಾಖೆಯ ಸಾಲಗಾರರು ತಮ್ಮ ಸಾಲಗಳನ್ನು ೩೦-೧೧-೫೧ಕ್ಕೆ ಮುಂಚೆ ಫೈಸಲ್ ಮಾಡಬೇಕೆಂದು ಪ್ರಾರ್ಥಿಸಲಾಗಿದೆ. ಆ ತಾರೀಖಿನ ನಂತರ ಅವರು ಉತ್ತರ ಆರ್ಕಾಟ್ ಜಿಲ್ಲೆಯ ತಿರುಪತ್ತೂರ್ ಶಾಖೆಯಲ್ಲಿ ತಮ್ಮ ಸ್ವಂತ ಖರ್ಚಿನಿಂದ ಫೈಸಲ್ ಮಾಡಬೇಕಾಗುವುದು

ಮೈಸೂರು. 5-10-51. — ಕೆ. ವಿ. ರಾಮಕೃಷ್ಣರಾವ್, ಆಕ್ಟಿಂಗ್ ಏಜೆಂಟ್

ಮೈಸೂರು ಕ್ರೇಪ್, ಧರ್ಮಾವರ, ಕಾಂಚೀಪುರದ ರೇಷ್ಮೆ ಸೀರೆಗಳಿಗೆ

D. L. ನರಸಿಂಹಯ್ಯ & ಬ್ರದರ್ಸ್,

ಜವಳೀ ಅಂಗಡಿ

ಚಿಂದಾಂಬು ಆನಂದ ಭವನ ಹೋಟೆಲು ಹತ್ತಿರ, ಮೈಸೂರು

ಒಲಿಂಪಿಯಾ

25—10—51 ರಿಂದ ಯಶಸ್ವಿಯಾದ 4 ನೇ ವಾರ

ಪ್ರತಿ ದಿನ ಮೂರು ಆಟಗಳು

ಶಮ್ಮಿ, ಅರ್ಜುನ್ ಮತ್ತು ಕನ್ಹೈಯಾಲಾಲ್ ಪಾತ್ರವಹಿಸಿರುವ ಮುಖೇಶ್‌ರವರ

ಮಲ್ಹಾರ್

ಇದರ ಜೊತೆಯಲ್ಲಿ ಸ್ಪೆಷಲ್ ನ್ಯೂಸ್ ಎಂಬ ಚಿತ್ರ ಜಗದ ಸುದ್ದಿಯನ್ನು ಸಹ ಪ್ರದರ್ಶಿಸಲಾಗುತ್ತದೆ

ಇದರಲ್ಲಿ ಕಾಮಿನಿ ಕೌಶಲ್, ಸುರೈಯ್ಯಾ, ಮಧುಬಾಲಾ, ಪ್ರೇಮನಾಥ್, ದಿಲೀಪ್ ಕುಮಾರ್, ರೆಹಾನಾ, ಮೋಹನಾ ಮತ್ತು ಲತಾ ಮಂಗೇಶ್ಕರ್, ಮುನವ್ವರ್ ಇವರುಗಳನ್ನು ನೋಡಲು ತಪ್ಪದೆ ಬನ್ನಿರಿ.

ಬೆಳಗಿನ ಪ್ರದರ್ಶನ: 26-10-51 ರಿಂದ ದೀಪಾವಳಿ ಹಬ್ಬದ ಪ್ರಯುಕ್ತ 5 ದಿನ ಮಾತ್ರ ನ್ಯೂಥಿಯೇಟರ್ಸ್‌ರವರ ಅತ್ಯುತ್ತಮ ಚಿತ್ರ — ಸೌಗಂಧ್ —

ಪಾತ್ರ:- ಭಾರತಿ, ಅಶಿತ್ ಬರನ್

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು

ದೀಪಾವಳಿ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ

29-10-51 ನೇ ಸೋಮವಾರದಿಂದ ಪ್ರಾರಂಭ

ಮಾಯ ಪಿಲ್ಲ

ರಘುರಾಮಯ್ಯ, ಕಾಂಚನ, ಕುಮಾರಿ, ಶಿವರಾವ್, ಜೂನಿಯರ್ ಲಕ್ಷ್ಮೀರಾಜ್ಯಂ ಪಾತ್ರವಹಿಸಿರುವ ಉನ್ನತ ತೆಲುಗು ಚಿತ್ರ

ಚಾಮುಂಡೇಶ್ವರಿ ಟಾಕೀಸ್

27-10-51ನೇ :: ಶನಿವಾರದಿಂದ :: ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಮೋಹನ ಪ್ರೊಡಕ್ಷನ್‌ರವರ ಅತ್ಯುತ್ತಮ ಸಾಹಸಮಯ ಹಿಂದಿ ಚಿತ್ರ

ರಾಜಮುಕುಟ್

ಮುಖ್ಯ ಪಾತ್ರ :- ಲೀಲಾ, ಶಮ್ಮಿ, ಪೃಥ್ವೀರಾಜ್ ಕಪೂರ್, ಚಂದ್ರಮೋಹನ್

Edited, Printed and Published by A. R. Nagarajan, at Sadhvi Press D. Subbiah Road, Mysore.

ಗೌರಿ ಕ್ರೇಪ್ ಸಿಲ್ಕ್, ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶೆಟ್ಟಿ

ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಸಾಧ್ವಿ

ಸಂಪುಟ ೧೦] ಶನಿವಾರ ೨೭-೧೦-೫೧ [ಸಂಚಿಕೆ ೭೯

ಬ್ರಿಟಿಷ್ ಚುನಾವಣೆಯಲ್ಲಿ ಚರ್ಚಿಲ್ ಪಕ್ಷದ ಜಯ

ಬ್ರಿಟಿಷ್ ಚುನಾವಣೆ ಓಟುಗಳ ವಿವರ

...ಟನ್ನಿನ ಚುನಾವಣೆಯಲ್ಲಿ ಆಡಳಿತ ವಹಿಸಿಕೊಂಡಿದ್ದ ಕಾರ್ಮಿಕ ಪಕ್ಷವನ್ನು ಏಳು ಎಂಟು ಬಹುಮತ ಕಳೆದುಕೊಂಡು, ವಿರೋಧ ಸಂ... ಟೋರಿ ಪಕ್ಷವು ಜಯ ಪಡೆ...ದೆ ಪಾರ್ಲಿಮೆಂಟಿನ ಒಟ್ಟು ...ನಗಳ ಪೈಕಿ ಟೋರಿಗಳು ...ನಗಳನ್ನೂ, ಕಾರ್ಮಿಕರು ...ನಗಳನ್ನೂ ಪಡೆದಿರುವರು. ...ಗಳಿಗೆ ಕೇವಲ ೫ ಸ್ಥಾನಗಳೂ, ...ಗೆ ೩ ಸ್ಥಾನಗಳೂ ಬಂದಿವೆ. ...ಕಾರದಲ್ಲಿದ್ದ ಒಬ್ಬ ಉಪಸಚಿವರ... ಮಂತ್ರಿಗಳೂ ಉಪ...ಗಳೂ ಜಯಶೀಲರಾಗಿರುತ್ತಾರೆ ...ಪಕ್ಷದ ನಾಯಕ ಚರ್ಚಿಲ್ಲರು ಪ್ರತಿಸ್ಪರ್ಧಿಗಿಂತಲೂ ೧೭ ಸಾವಿ... ಓಟುಗಳನ್ನು ಗಳಿಸಿ ವಿಜಯ... ಗಳಿಸಿರುತ್ತಾರೆ ಅಟ್ಲಿಯವರು ಪ್ರತಿಸ್ಪರ್ಧಿಗಿಂತಲೂ ೧೧ ಸಾವಿ... ಓಟುಗಳನ್ನು ಗಳಿಸಿರುವರು ...ಪಕ್ಷದಲ್ಲಿರುವ ತೀವ್ರವಾದಿ ...ನ್ಯೂರಿನ್ ಬಿವಾನ್ ಮುಂತಾ... ಅತ್ಯಂತ ಹೆಚ್ಚಿನ ಬಹುಮತವು... ಪುದು ಬ್ರಿಟನ್ನಿನ ಒಟ್ಟು ...ಓಟುಗಳಲ್ಲಿ ಬಹು ಭಾಗದ... ವನ್ನು ಕೊಟ್ಟಿರುತ್ತಾರೆ

ನಿಲ್ಲಿಸಿ ಪ್ರಯಾಣಿಕರ ಸುಲಿಗೆ

...ನ ಒಳಿ ಒಂದು ಹಳ್ಳಿಯ... ಹೋಗುತ್ತಿದ್ದ ... ಬಸ್ಸು ...ನ್ನೆ ಸಂಜೆ ಚಾಕು ಮತ್ತು... ವನ್ನು ಹಿಡಿದ ... ಜನರು ತಡ...ದ್ದ ಪ್ರಯಾಣಿಕರನ್ನು ಬೆದರಿ... ಇದ್ದ ಹಣ ಮತ್ತು ಇತ...ಯ ಸಾಮಾನುಗಳನ್ನು ದೋಚಿಕೊಂಡು ಹೋಗಿರು...ಗಿದೆ.

...ನಿ ಬಾ ಶಿಬಿರಕ್ಕೆ ದಿವೇಜರ್ ಮಹಾರಾಣಿಯವರ ಭೇಟಿ

...ಕೆರೆಯಲ್ಲಿರುವ ಕಸ್ತೂರಿ ಬಾ ...ಕ್ಕೆ ದಿವೇಜರ್ ಮಹಾ...ರು ಬುಧವಾರ ಭೇಟಿಯಿತ್ತಿ... ರಿಗೆ ಶಿಬಿರದ ವ್ಯವಸ್ಥಾಪಕ... ಯವರೋರ್ವರಾ ಹಾಸಪ್ಪ... ವಿಷಯಗಳನ್ನೂ ವಿವರಿಸಿ...

...ನ ಹಬ್ಬದ ಕಾರ್ಯಕ್ರಮ

...ನಾಡಿನ ಕರ್ನಾಟಕ ಸಂಘ... ಹಬ್ಬದ ಅಂಗವಾಗಿ ನಾಳೆ ...೦ ಗಂಟೆಗೆ ಚಿಕ್ಕಿನ ಮಹಿಳಾ ...ಜದಲ್ಲಿ ಸಂಗೀತ ಸ್ಪರ್ಧೆ ಸಂಜೆ ೫ ಗಂಟೆಕ್ಕೆ ಬಾಲಕರ ...ಶಾಲೆಯ ಆವರಣದಲ್ಲಿ ಚ...ರು ಭಾಷಣವನ್ನೂ ಏರ್ಪಡಿ... ಸಾಲದಲ್ಲು ಬೆಳಿಗ್ಗೆ ೧೧ಗೆ ಪೈ... ರಂಗವಲ್ಲಿ ಸ್ಪರ್ಧೆ, ಸಂಜೆ ೫... ಶ್ರೀ ವಿ ಎಲ್ ನರಸಿಂಹಾಚಾ... ತೆಯಲ್ಲಿ ಶ್ರೀ ಬಿ ಶಿವಮೂ... ...ರಿಂದ ಕರ್ನಾಟಕದ ಸಂ... ...ತ್ತು ಸಾಹಿತ್ಯ ಎಂಬ ವಿಷಯ... ...ಪನ್ಯಾಸ ಇವುಗಳನ್ನು ಏರ್ಪ... ...ದೆ

ಮೈಸೂರಿನ ಹಿರಿಯ ಶಾಸನ ಸಭೆ

ಚುನಾವಣಾ ಕ್ಷೇತ್ರಗಳ ವಿಂಗಡಣೆ

ಬೆಂಗಳೂರು ೨೬

ಮೈಸೂರಿನ ಹಿರಿಯ ಶಾಸನ ಸಭೆ (ಕೌನ್ಸಿಲ್) ಚುನಾವಣಾ ಕ್ಷೇತ್ರಗಳ ವಿಂಗಡಣೆಯನ್ನು ಸೂಚಿಸುವ ರಾಜ್ಯಪತ್ರದ ಆಜ್ಞೆಯೊಂದು ಹೊರಬಿದ್ದಿರುತ್ತದೆ. ಅದರ ಪ್ರಕಾರ ಈ ಸಭೆಯ ಒಟ್ಟು ೬೦ ಸ್ಥಾನಗಳ ಪೈಕಿ ಪದವೀಧರರ ಮತ್ತು ಉಪಾಧ್ಯಾಯರುಗಳ ಕ್ಷೇತ್ರಗಳಿಂದ, ತಲಾ ಮೂರು ಸ್ಥಾನಗಳಿಗೆ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಂದ ಚುನಾವಣೆಗಳು ನಡೆಯಬೇಕಾಗುವುದು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳನ್ನು ಈ ರೀತಿ ಗೊತ್ತುಪಡಿಸಲಾಗಿದೆ.–

ಚಿನ್ನದ ಗಣಿ ಸೇರಿದ ಕೋಲಾರ ಜಿಲ್ಲೆ ೨ ಸ್ಥಾನ, ತುಮಕೂರು, ಮಂಡ್ಯ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಇವುಗಳಿಗೆ ಒಂದೊಂದು, ಬೆಂಗಳೂರು ನಗರ ಮತ್ತು ಜಿಲ್ಲೆ ೨, ಮೈಸೂರು ನಗರ ಮತ್ತು ಜಿಲ್ಲೆ ೨, ದಾವಣಗೆರೆ ನಗರ ಮತ್ತು ಚಿತ್ರದುರ್ಗ ಜಿಲ್ಲೆ ೨

೨ ವರ್ಷಗಳಿಂದ ೪೩೦ ಬಸ್ ರಹದಾರಿಗಳು

ಸಂಸ್ಥಾನದಲ್ಲಿ ಕಳೆದ ೨ ವರ್ಷಗಳಲ್ಲಿ ಒಟ್ಟು ೪೩೦ ಬಸ್ಸುಗಳ ರಹದಾರಿಗಳನ್ನು ಕೊಡಲಾಯಿತೆಂದು ಶಾಸನ ಸಭೆಯಲ್ಲಿ ನೆನ್ನೆ ತಿಳಿಸಲಾಯಿತು ಸರ್ಕಾರಿ ಬಸ್ ಸಂಚಾರ ವ್ಯವಸ್ಥೆಯಿಂದ ಸ್ವಲ್ಪ ನಷ್ಟವಾಗುತ್ತಿರುವುದೆಂದೂ, ಅದನ್ನು ಸರಿಪಡಿಸಿ ಲಾಭಕರವಾದ ರೀತಿಯಲ್ಲಿ ಮುಂದುವರಿಸುವ ವ್ಯವಸ್ಥೆಯಾಗಿರುವುದೆಂದೂ ಶ್ರೀ ಟಿ ಮರಿಯಪ್ಪನವರು ಹೇಳಿರುತ್ತಾರೆ

"ಧನ್ವಂತರಿ ಮತ್ತು ಹೇಕ್ ಅಬು ಅಲಿಸೀನಾ" ದಿನಾಚರಣೆ

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ ಸಂಘದ ಮೈಸೂರು-ಮಂಡ್ಯ ಶಾಖೆಯ ವಾರ್ಷಿಕ ಸಭೆಯು ಸದರಿ ಕಾಲೇಜಿನಲ್ಲಿ ನಾಳೆ ಮಧ್ಯಾಹ್ನ ೩ ಘಂಟೆಗೆ ನಡೆಯುವುದು ಅದೇ ಸಂಜೆ ಆರು ಘಂಟೆಗೆ ಶ್ರೀ ಧನ್ವಂತರೀ ಮತ್ತು ಹೇಕ್ ಅಬು ಅಲಿಸೀನಾ ದಿನಾಚರಣೆಯೂ ನೆರವೇರಿಸಲ್ಪಡುವುದು.

ಶೃಂಗೇರಿ ಮಠಕ್ಕೆ ಇನಾಂ ಮಸೂದೆಯಿಂದ ವಿನಾಯಿತಿ

ಶಾಸನ ಸಭಾ ಚುನಾಯಿತ ಸಮಿತಿಯವರ ಶಿಫಾರಸು

ಸ್ವಂ ವು ಫೋ] ಬೆಂಗಳೂರು ೨೬

ಇನಾಂ ಮತ್ತು ಜೋಡಿ ಮಸೂದೆಯ ಪರಿಶೀಲನೆ ಬಗ್ಗೆ ಶಾಸನ ಸಭೆಯು ನೇಮಿಸಿದ್ದ ಚುನಾಯಿತ ಸಮಿತಿಯು ಶೃಂಗೇರಿ ಜಹಗೀರಿಯ ಮಠದ ಗ್ರಾಮಗಳನ್ನು ಮಠದವರ ಆಡಳಿತಕ್ಕೆ ಬಿಟ್ಟು ಅವುಗಳಿಗೆ ಇನಾಂ ರದ್ದು ಶಾಸನದ ನಿಬಂಧನೆಯನ್ನು ಅನ್ವಯಿಸದಂತೆಯೂ, ಉಳಿದ ಹಳ್ಳಿಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಬೇಕೆಂದೂ ಶಿಫಾರಸು ಮಾಡಿರುವುದಾಗಿ ಗೊತ್ತಾಗಿದೆ

ಟ್ರಸ್ಟ್‌ಬೋರ್ಡ್ ಅಧ್ಯಕ್ಷರು

ಇಲ್ಲಿನ ಟ್ರಸ್ಟ್ ಬೋರ್ಡು ಅಧ್ಯಕ್ಷರಾಗಿರುವ ಶ್ರೀ ಸಿ ಎಲ್ ನರಸಿಂಗರಾಯರೇ ಹೊಸ ಅಧ್ಯಕ್ಷರಾಗುವವರೆಗೆ ಮುಂದುವರಿಯಬಹುದೆಂದು ಸರ್ಕಾರದವರು ಆಜ್ಞಾಪಿಸಿರುತ್ತಾರೆ

ಚರ್ಚಿಲ್ಲರು ಬ್ರಿಟನ್ನಿನ ಹೊಸ ಪ್ರಧಾನಿ

ಬ್ರಿಟನ್ನಿನಲ್ಲಿ ಮಹಾ ಚುನಾವಣೆಗಳು ಮೊನ್ನೆ ನಡೆದು ಅವರ ಫಲಿತಾಂಶವಾಗಿ ಕನ್ಸರ್ವೇಟಿವ್ ಪಕ್ಷಕ್ಕೆ ಕಾರ್ಮಿಕರ ಪಕ್ಷಕ್ಕಿಂತಲೂ ೨೬ ಸ್ಥಾನಗಳು ಹೆಚ್ಚಾಗಿ ಬಂದುದರಿಂದ ಆ ಪಕ್ಷದ ಮುಖಂಡರಾದ ವಿನ್ಸ್ಟನ್ ಚರ್ಚಿಲ್ಲರು ಈಗ ಪ್ರಧಾನಿಯವರಾಗಿರುತ್ತಾರೆ ಚುನಾವಣಾ ಫಲಿತಾಂಶವು ಗೊತ್ತಾದ ಕೂಡಲೆ ಕಾರ್ಮಿಕ ಪಕ್ಷದ ಮುಖಂಡರಾದ ಕ್ಲೆಮೆಂಟ್ ಅಟ್ಲಿಯವರು ತಮ್ಮ ಮಂತ್ರಿ ಮಂಡಲದ ರಾಜೀನಾಮೆಯನ್ನು ಸಲ್ಲಿಸಿದರು ನಂತರ ವಿರೋಧ ಪಕ್ಷದ ನಾಯಕರು ಮಂತ್ರಿ ಮಂಡಲವನ್ನು ರಚಿಸಲು ಬ್ರಿಟಿಷ್ ರಾಜರಿಂದ ಆಹ್ವಾನಿಸಲ್ಪಟ್ಟರು ಕಳೆದ ಮಹಾ ಯುದ್ಧದ ನಂತರ ಆದ ಚುನಾವಣೆಯಲ್ಲಿ ಚರ್ಚಿಲ್ಲರ ಪಕ್ಷವು ಸೋತು ಕಾರ್ಮಿಕ ಪಕ್ಷವು ಆಗಿನಿಂದ ಅಧಿಕಾರದಲ್ಲಿತ್ತು

೦ಮದ್ರಾಸಿನ ಸೆಕೆಂಡರಿ ಶಾಲೆಗಳ ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸುವ ಬಗ್ಗೆ ಸಧ್ಯದಲ್ಲೇ ಅಲ್ಲಿನ ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಲಿರುವರು

ಕೈಗಾರಿಕೋದ್ಯಮಕ್ಕೆ ಸರ್ಕಾರದ ದ್ರವ್ಯ ಸಹಾಯ

ಶಾಸನ ಸಭೆಯ ಪ್ರಶ್ನೋತ್ತರಕಾಲದಲ್ಲಿ ಮಂತ್ರಿಗಳ ಹೇಳಿಕೆ

ಸ್ವಂ.ವ ಫೋ] ಬೆಂಗಳೂರು ೨೬

ಮಲೆನಾಡು ಅಭಿವೃದ್ಧಿ ಯೋಜನೆಯ ಸಮಿತಿಯನ್ನು ಕೇಂದ್ರ ಸರ್ಕಾರದವರು ವಿಸರ್ಜಿಸಿ, ಅವರು ಕಳುಹಿಸಿರುವ ಹಂಗಾಮಿ ವರದಿಯನ್ನು ಭಾರತ ಸರ್ಕಾರದವರು ರಹಸ್ಯವಾಗಿ ಇಟ್ಟಿರುವರೆಂದು ಈ ದಿನ ಶಾಸನ ಸಭೆಯಲ್ಲಿ ಶ್ರೀ ಎಲ್ ಸಿದ್ದಪ್ಪನವರ ಪ್ರಶ್ನೆಗೆ ಉತ್ತರ ನೀಡಲಾಯಿತು ಇಲ್ಲಿನ ಸರ್ಕಾರದವರು ತಯಾರಿಸಿರುವ ೫ ವರ್ಷದ ಯೋಜನೆಯಲ್ಲಿ ಮಲೆನಾಡಿನ ಅಭಿವೃದ್ಧಿ ಕಾರ್ಯವನ್ನು ಸೇರಿಸಿರುವುದಾಗಿಯೂ ತಿಳಿಸಲಾಯಿತು

ಸಂಸ್ಥಾನದಲ್ಲಿ ೧೯೪೭ ರಿಂದ ಈಚೆಗೆ ೨೩ ಕೈಗಾರಿಕೆಗಳಿಗೆ ಸರ್ಕಾರದವರು ಹಣದ ಒತ್ತಾಸೆಯನ್ನು ನೀಡಿರುವುದಾಗಿಯೂ ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸ ಕಲ್ಪಿಸಲು ಈ ಸಂಬಂಧವಾಗಿ ೧,೩೩,೦೧೧ ರೂ ಗಳನ್ನು ಸಾಲವಾಗಿಯೂ ೬೫,೫೦೦ರೂ ಗಳನ್ನು ಸಹಾಯ ರೂಪವಾಗಿಯೂ ಕೊಡಲಾಗಿದೆಯೆಂದು ಶ್ರೀ ಹೆಚ್ ಸಿ ದಾಸಪ್ಪನವರು ಜ|| ಅಬ್ದುಲ್ ರಹಮಾನರಿಗೆ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು.

ಸಹಕಾರಿ ಕೈಗಾರಿಕೋದ್ಯಮಗಳ ಸಂಬಂಧವಾಗಿ ಒಂದು ಸಮಿತಿಯನ್ನು ರಚಿಸುವ ಬಗ್ಗೆ ಶಾಸನ ಸಭೆಯಲ್ಲಿ ಸೂಚನೆಯೊಂದನ್ನು ಮಂಡಿಸಲಾಗುವುದೆಂದು ಕೈಗಾರಿಕಾ ಮಂತ್ರಿಗಳು ತಿಳಿಸಿ, ಬಾಸಗೀ ಉದ್ಯಮಿಗಳಿಗೆ ೧೯೪೮ ರಿಂದ ಈಚೆಗೆ ೬೫,೬೨,೧೧೦ ರೂ ಗಳನ್ನು ಸಾಲ ಕೊಟ್ಟಿರುವುದಾಗಿ ಹೇಳಿದರು

ನಂತರ ಕುಮಾರಿ ಜೋಡಿನ ಮಸೂದೆಯನ್ನು ಮಂಡಿಸಲಾಯಿತು ಶ್ರೀ ಕೆ ಟಿ ಭಾಷ್ಯಂರವರು ಅದನ್ನು ಮಂಡಿಸಿ ಅದರ ಮೂಲ ಉದ್ದೇಶವನ್ನು ವಿವರಿಸಿದರು

ಶಾಸನ ಸಭೆಯು ಈ ದಿನ ಬೆಳಿಗ್ಗೆಯಿಂದ ಮಧ್ಯಾಹ್ನ ೧೨ ಘಂಟೆ ವರೆಗೆ ಸೇರಿತ್ತು ಬರುವ ಗುರುವಾರ ಪುನಃ ಸೇರುವುದು

ಶಾಸನ ಸಭೆಯು ನೆನ್ನೆ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ಮಸೂದೆಯನ್ನು ಅಂಗೀಕರಿಸಿತು ಇದಲ್ಲದೆ ಸಿವಿಲ್ ಪ್ರೊ|| ಕೋಡು ತಿದ್ದುಪಡಿ, ವ್ಯವಸಾಯಕ್ಕೆ ಸಂಬಂಧಿಸಿದಂತೆ ಪಶು ಪರೀಕ್ಷಣೆ ಮಸೂದೆ, ಮತ್ತು ಹೈಕೋರ್ಟು ತಿದ್ದುಪಡಿ ಮಸೂದೆಗಳೂ ಅಂಗೀಕೃತವಾದುವು.

ಸಮಾಜವಾದಿ ಪಕ್ಷದ ಸದಸ್ಯರಾದ ಡಾ|| ಕೆ ಆರ್ ಶ್ರೀಕಂಠೇಶ್ವರ್‌ರವರು ಪ್ರಮಾಣ ವಚನ ತೆಗೆದುಕೊಳ್ಳದೆ ಶಾಸನ ಸಭಾದಿವೇಶನದಲ್ಲಿ ಭಾಗ ವಹಿಸಿದ್ದ ಸಂಬಂಧವಾಗಿ ಅವರು ದಂಡ ವನ್ನು ಕೊಡಬೇಕಾಗಿಲ್ಲವೆಂದು ಬರುವ ಶಾಸನ ಸಭಾ ನಾಯಕರಾದ ಶ್ರೀ ಕೆ. ಸಿ ರೆಡ್ಡಿಯವರು ಸೂಚನೆಯೊಂದನ್ನು ಮಂಡಿಸುವರು

ಮಳೆಯ ಅಭಾವದಿಂದ ರಾಗಿ ಮುಂತಾದ ಬೆಳೆಗಳು ಆಗಿಲ್ಲದ ಕಡೆಗಳಲ್ಲಿ ಧಾನ್ಯ ಸಂಗ್ರಹಣಾ ಕಾರ್ಯವನ್ನು ನಡೆಸಕೂಡದೆಂದು ಸರ್ಕಾರದವರು ಡಿಲ್ಲಾಧಿಕಾರಿಗಳಿಗೆ ಸೂಚನೆಯಿತ್ತಿರುವರು.

ಚುನಾವಣೆಗೆ ಸ್ಥಾನಬದ್ಧ ಸಂಪಾದಕರು

ದಾವಣಗೆರೆಯ ನೇತಾಜಿ ದಿನಪತ್ರಿಕೆಯ ಸಂಪಾದಕರೂ ಮತ್ತು ಸಾರ್ವಜನಿಕ ಕಾರ್ಯಕರ್ತರೂ ಆದ ಶ್ರೀ ಇಟಗಿ ವೇದಮೂರ್ತಿಯವರು ಆ ಊರಿನಿಂದ ಮೈಸೂರು ಶಾಸನ ಸಭೆಗೆ ಉಮೇದುವಾರರಾಗುವರು. ಅವರು ಕಳೆದ ೧೦ ತಿಂಗಳಿಂದಲೂ ಸ್ಥಾನಬದ್ಧರಾಗಿ ಪೈಲಿನಲ್ಲಿರುವರು. ಸರ್ಕಾರದವರಿಗೆ ಅವರು ಅರ್ಜಿ ಸಲ್ಲಿಸಿ ಚುನಾವಣೆ ಮುಗಿಯುವವರೆಗಾದರೂ ತಮ್ಮನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆಂದು ತಿಳಿದುಬಂದಿದೆ.

ಭಾವಸಾರ ಕ್ಷತ್ರಿಯರ ಸೋಷಿಯಲ್ ಇನ್ಸ್ಟಿಟ್ಯೂಟ್

ರಾಜಧಾನಿಯ ಭಾವಸಾರ ಕ್ಷತ್ರಿಯ ಸೋಷಿಯಲ್ ಇನ್ಸ್ಟಿಟ್ಯೂಟಿಗೆ ಶ್ರೀ ಕೆ. ಎಸ್. ಈಶ್ವರರಾಯರು ೧೦೦೧ ರೂ., ಶ್ರೀ ಸಿ. ಜಯರಾವ್ ಮತ್ತು ಶ್ರೀ ಆರ್. ಸಿ. ರಾಜಗೋಪಾಲರಾಯರು ತಲಾ ೫೦೦, ರೂ. ಎಂ. ನಾಗಗಿರಿರಾಯರು ... ರೂ. ಎನ್. ... ರಾಯರು ೨೦೦, ಸರೋಜಿ ... ರಾಯರು ... ಮತ್ತು ಇತರರು ... ಗಳನ್ನೂ ಉದಾರವಾಗಿ ಕೊಟ್ಟಿರುವುದರಿಂದ ಅವರಿಗೆ ಸಂಘದವರು ಕೃತಜ್ಞತೆಗಳನ್ನು ಸೂಚಿಸಿರುತ್ತಾರೆ.

ದೊರೆಸ್ವಾಮಿ ಶಾಸ್ತ್ರಿಯವರಿಗೆ ಶೃಂಗೇರಿ ಮಠದ ಗೌರವ

ಮದ್ರಾಸ್ ಕಾಲೇಜಿನ ನಿವೃತ್ತ ಉಪಾಧ್ಯಾಯರೂ ಮತ್ತು ಸುಪ್ರಸಿದ್ಧ ಭಾಷಣಕಾರರೂ ಆದ ವಿದ್ಯಾ ಭೂಷಣ ಶ್ರೀ ಎಸ್. ಆರ್. ದೊರೆಸ್ವಾಮಿ ಶಾಸ್ತ್ರಿಯವರು ಕಳೆದ ಸೋಮವಾರ ಶೃಂಗೇರಿಗೆ ತೆರಳಿ, ಅಲ್ಲಿ ಹಿರಿಯ ಮತ್ತು ಕಿರಿಯ ಸ್ವಾಮಿಗಳ ಸಂದರ್ಶನವನ್ನು ಪಡೆದರು. ಶ್ರೀಯುತರು ಇಬ್ಬರು ಗುರುಗಳ ಸಮ್ಮುಖದಲ್ಲಿ ಒಂದೊಂದು ದಿನ ಸಂಸ್ಕೃತ ಭಾಷೆಯಲ್ಲಿ ಉಪನ್ಯಾಸಗಳನ್ನು ಮಾಡಿದರು. ಅವರ ಪ್ರತಿಭೆಯನ್ನು ಮೆಚ್ಚಿ ಗುರುಗಳು ಅವರಿಗೆ ೩೫೦ ರೂ. ಬೆಲೆಯ ಜರತಾರಿ ರೇಷ್ಮೆ ಶಾಲನ್ನೂ, ಒಂದು ನೂರು ರೂ. ಸಂಭಾವನೆಯನ್ನೂ ದಯಪಾಲಿಸಿದರು. ಅಲ್ಲದೆ ಶೃಂಗೇರಿ ಸಂಸ್ಥಾನದ ವಿದ್ವಾಂಸರನ್ನಾಗಿ ಗುರುಗಳು ಅವರನ್ನು ಅಂಗೀಕರಿಸಿದರು. ಮಠದ ಸಂದೇಶವನ್ನು ಮಹಾಜನರಿಗೆ ವಿವರಿಸುವಂತೆ ಅವರಿಗೆ ಗುರುಗಳು ಆಜ್ಞಾಪಿಸಿರುವರು.

ಪ್ರದೋಷ ಸಂಗೀತ

ನಾ. ವಿ|| ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾ ರಾಮ ಮಂದಿರದಲ್ಲಿ ನಾಳೆ ಸಂಜೆ ೭ ಘಂಟೆಗೆ ಪ್ರದೋಷ ಪ್ರಯುಕ್ತ ವಿ|| ಸಿ. ಆರ್. ಲಕ್ಷ್ಮೀನಾರಾಯಣರಾಯರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು.

ಪಶ್ಚಿಮ ಬಂಗಾಳಕ್ಕೆ ಹೊಸ ಗೌರ್ನರ್

ಭಾರತ ರಾಜ್ಯಾಂಗ ಸಭೆಯ ಉಪಾಧ್ಯಕ್ಷರಾಗಿದ್ದ ಹೆಚ್. ಸಿ. ಮುಖರ್ಜಿಯವರನ್ನು ಡಾ|| ಕೆ. ಎನ್. ಕಟ್ಜುರವರ ಸ್ಥಾನದಲ್ಲಿ ಪಶ್ಚಿಮ ಬಂಗಾಳದ ಗೌರ್ನರ್ ಆಗಿ ನೇಮಿಸಲಾಗಿದೆ. ಕಟ್ಜುರವರು ಕೇಂದ್ರ ಗೃಹ ಮತ್ತು ನ್ಯಾಯಾಂಗ ಮಂತ್ರಿಗಳಾಗಿ ತೆಗೆದುಕೊಳ್ಳಲ್ಪಟ್ಟಿರುತ್ತಾರೆ.

ಕಾನೂನು ವಿರುದ್ಧವಾದ ಹೊಸ ಹೋಟೇಲುಗಳು

ಹೊಸದಾಗಿ ಹೋಟೇಲುಗಳನ್ನು ನಡೆಸಲು ಲೈಸೆನ್ಸು ಕೊಡಕೂಡದೆಂದೂ, ಒಬ್ಬ ಮಾಲೀಕರು ಮತ್ತೊಬ್ಬರಿಗೆ ಹೋಟೇಲನ್ನು ವರ್ಗಾವಣೆ ಮಾಡಲು ಅವಕಾಶವೀಯಕೂಡದೆಂದೂ ಮತ್ತು ಹೊಸ ಬೋರ್ಡಿಂಗ್ ಹೋಟೇಲುಗಳು ಆರಂಭವಾಗುವುದಕ್ಕೆ ಅನುಮತಿ ಪಡೆಯಬೇಕೆಂದೂ ಸರ್ಕಾರದವರು ಈ ಹಿಂದೆಯೇ ಸೂಚನೆಯಿತ್ತಿದ್ದರೂ ಸಹ, ಇಂತಹ ನಾಲ್ಕಾರು ಹೋಟೇಲುಗಳು ಶ್ರೀರಂಗಪಟ್ಟಣದಲ್ಲಿರುವುದಾಗಿಯೂ, ಇಂತಹದೊಂದು ಹೋಟೇಲನ್ನು ಈ ವಾರದಲ್ಲಿ ಪ್ರಾರಂಭ ಮಾಡಿದಾಗ ಪೌರ ಸಭಾಧ್ಯಕ್ಷರೇ ಮುಂತಾದ ಅಧಿಕಾರಿಗಳು ಹಾಜರಿದ್ದರೆಂದೂ ಅಲ್ಲಿನ ನಿವಾಸಿಗಳೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ.

೧೧ ಲಕ್ಷ ಅಮೇರಿಕಾ ನೌಕರರಿಗೆ ಶೇ.೧೦ ಹೆಚ್ಚು ಸಂಬಳ

ಅಮೇರಿಕದ ಅಧ್ಯಕ್ಷ ಟ್ರೂಮನ್ನರು ಮೊನ್ನೆ ಸರ್ಕಾರಿ ನೌಕರರ ಸಂಬಳವನ್ನು ಶೇ|| ೧೦ರಷ್ಟು ಹೆಚ್ಚಿಸುವ ಶಾಸನಕ್ಕೆ ಸಮ್ಮತಿಯನ್ನು ಕೊಟ್ಟಿರುತ್ತಾರೆ. ಇದರಿಂದ ೧೧ ಲಕ್ಷ ನೌಕರರಿಗೆ ೮ ಕೋಟಿ ಡಾಲರ್ ಹಣ ಹೆಚ್ಚಾಗಿ ಉಪಯೋಗವಾಗುವುದು.

ಎಂ. ಜಿ. ಎಸ್. ಫುಟ್‌ಬಾಲ್ ಸೆಮಿ ಫೈನಲ್ಸ್ ಪಂದ್ಯ

ಮೊನ್ನೆ ಸಂಜೆ ನಡೆದ ಎಂ. ಜಿ. ಎಸ್. ಷೌತ್ ಜೋನ್ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರಿನ ಫಸ್ಟ್ ಗ್ರೇಡ್ ಕಾಲೇಜಿನವರು ಟೀಚರ್ಸ್ ಕಾಲೇಜಿನವರನ್ನು ೬-೦ ಗೋಲುಗಳಿಂದ ಸೋಲಿಸಿದರು.

ಶ್ರೀಧರ್ ಮತ್ತು ಕಂಪೆನಿ
ನಾರಾಯಣ ಶಾಸ್ತ್ರಿ ರಸ್ತೆ,
ಫೋನ್ ನಂ. 537
ಸರಕುಗಳನ್ನು ರವಾನಿಸುವ ಸಂಸ್ಥೆ

SRI GAYATHRI
TALKIES
From 26-10-51 Daily 3 Shows
Warner's Long Awaited Picture
THE FLAME & THE ARROW
(In Technicolour)
With Burt Lancaster & Virginia Mayo
— Morning Shows :
On 27th and 28th
M. G. M's
THIS TIME FOR KEEPS
Technicolour]
With - ESTHER WILLIAMS

ರಣಜಿತ್ ಟಾಕೀಸ್
ಬೆಳಗಿನ ಪ್ರದರ್ಶನ
ತಾ|| 26-10-51ರಂದ
ದಿಲ್-ಕಿ-ದುನಿಯಾ
ಪಾತ್ರ: ಮುನವರ್ ಸುಲ್ತಾನಾ, ಗೀತಾಬಾಲಿ, ಮುಜಹರ್ ಖಾನ್
[M.M.S.

ಸುಪ್ರಸಿದ್ಧ
ಮಲೆಯಾಳ ಜ್ಯೋತಿಷ್ಯರು
ಕೆ. ಕುಮಾರಸ್ವಾಮಿ
ನಂ. ೨೦, ೧೧, ಸಂಜರಾಜ ಬಹದ್ದೂರು ರಸ್ತೆ ಮೈಸೂರು
ಇವರು ಕೇರಳದವರಾಗಿಯೂ ಶಾಸ್ತ್ರೀಯವಾಗಿಯೂ, ಭೂತ, ಭವಿಷ್ಯದ್ವರ್ತಮಾನಗಳನ್ನು ಹೇಳುತ್ತಾರೆ. ಒಂದೇ ವಿಚಾರಿಸಿ

ಅಸೋಕಾ ಟಾಕೀಸ್
ಬೆಳಗಿನ ಪ್ರದರ್ಶನ
ತಾ|| 26-10-51ರಂದ
ಜಹಗಿರ್‌ದಾರ್
ಪಾತ್ರ:- ಮೋತಿಲಾಲ್, ಯಾಕೂಬ್, ಮಾಯಾ ಬ್ಯಾನರ್ಜಿ
[M.M.S

ದೀಪಾವಳಿ ಹಬ್ಬಕ್ಕೆ ಮಾತ್ರ ಬೆಲೆ ಕಡಿಮೆ ಮಾಡಿರುತ್ತೆ
ಯಾವಾಗಲೂ ಹಸನಾದ ಬೆಣ್ಣೆ ಮತ್ತು ತುಪ್ಪವನ್ನು ಉಪಯೋಗಿಸಿರಿ
ಬೆಣ್ಣೆ ವೀಸೆ 1ಕ್ಕೆ 6-4-0
ದಯವಿಟ್ಟು ಒಂದೇ ಭೇಟಿ ಕೊಡಿ
ಎಂ. ಎಸ್. ನಾಗಣ್ಣ ಅಂಡ್ ಸನ್ಸ್
100 ಅಡಿ ರಸ್ತೆ :: ಮೈಸೂರು.

ಚಾಮುಂಡೇಶ್ವರಿ ಟಾಕೀಸ್
27-10-51ನೇ :: ಶನಿವಾರದಿಂದ :: ಆರೋಪ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು
ಜೋಹರ್ ಪ್ರೊಡಕ್ಷನ್ಸ್‌ರವರ ಅತ್ಯಂತ ಸಾಹಸಮಯ ಹಿಂದಿ ಚಿತ್ರ
ರಾಜ ಮುಕುಟ್
ಮುಖ್ಯ ಪಾತ್ರ: ಸೀನಾ, ಪದ್ಮಿನಿ, ಪ್ರೇಮ್ ಅದೀಬ್, ಬೇಬಿ ತಬಸುಂ
ಬೆಳಗಿನ ಪ್ರದರ್ಶನ : 28-10-51 ರಂದ
ಬಾಂಬೆ ಟಾಕೀಸ್‌ನವರ — ಝೂಲಾ —

ಪ್ರಭುದೇವಾ ಟಾಕೀಸ್
ಪ್ರತಿ ದಿನ ಮೂರು ಪ್ರದರ್ಶನಗಳು
ದೀಪಾವಳಿ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ
29-10-51 ನೇ ಸೋಮವಾರದಿಂದ ಪ್ರಾರಂಭ

ಮಾಯಾ ಪಿಲ್ಲ
ರಘುರಾಮಯ್ಯ, ಕಾಂಚನ, ಸುಮಾರಿ, ಶಿವರಾವ್,
ಜೂನಿಯರ್ ಲಕ್ಷ್ಮೀರಾಜ್ಯಂ ಪಾತ್ರವಹಿಸಿರುವ ಉನ್ನತ ತೆಲುಗು ಚಿತ್ರ
ಎರಡು ವಾರಗಳ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು
ಫ್ರೀ ಪಾಸುಗಳನ್ನು ಮನ್ನಾ ಮಾಡಿರುತ್ತದೆ.

Edited, Printed and Published by A. R. Nagarajan, at Sadhvi Press D Subbiah Road, Mysore.

ಗೌಣಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ನಿ ಪೂನಾ, ನಾಗಪುರ್ ಸೀರೆಗಳಿಗೆ M. V. ಭೋಜಯ್ಯ ಶ್ರೀ ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಪೋಸ್ಟ್ ನಂ. 792 WEEKLY EDITION ಒಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೨೮-೧೦-೪೧ [ಸಂಚಿಕೆ ೧೨

ವಿನ್ಸ್‌ಟನ್ ಚರ್ಚಿಲ್ಲರ - ಮಂತ್ರಿ ಮಂಡಲ -

ಹೊಸ ಬ್ರಿಟಿಷ್ ಮಂತ್ರಿ ಮಂಡಲ

ಚರ್ಚಿಲ್ಲರು ತಮ್ಮ ಮಂತ್ರಿ ಮಂಡಲವನ್ನು ಈ ರೀತಿ ರಚಿಸಿರುತ್ತಾರೆ:—

ಚರ್ಚಿಲ್ಲರು ಪ್ರಧಾನ ಮತ್ತು ರಕ್ಷಣಾ ಮಂತ್ರಿ, ಉಪ ಪ್ರಧಾನಿ ಮತ್ತು ವಿದೇಶಾಂಗ ಮಂತ್ರಿ ಸ್ಥಾನಕ್ಕೆ ಈಡರ್, ಹಣಕಾಸಿನ ಮಂತ್ರಿ ಆರ್. ಎ. ಬಟ್ಲರ್, ಕಾಮನ್‌ವೆಲ್ತ್ ರಾಜ್ಯಗಳ ಮಂತ್ರಿ ಹೇಸ್ಟಿಂಗ್ಸ್ ಇಸ್ಮೆ, ವಸಾಹತು ಮಂತ್ರಿ ಲಿಟಲ್ಟನ್, ವ್ಯವಸಾಯ ಮತ್ತು ಆಹಾರ ಮಂತ್ರಿ ವುಲ್ಟನ್, ಕಾರ್ಮಿಕ ಮಂತ್ರಿ ವಾಲ್ಟರ್ ಮಾಂಕ್ಟನ್, ಲಾರ್ಡ್ ಪ್ರಿವಿ ಸೀಲ್, ಸ್ಯಾಲಿಸ್ ಬರಿ. ಮಾಂಕ್ಟನ್, ಹೈದರಾಬಾದು ನಿಜಾಮರ ಸಲಹೆಗಾರರಾಗಿ ೧೯೪೮ ರಲ್ಲಿ ಭಾರತ ಸರ್ಕಾರದೊಡನೆ ವ್ಯವಹರಿಸುತ್ತಿದ್ದರು. ಇಸ್ಮೆಯವರು ಹಿಂದೆ ವೈಸರಾಯ್ ಮೌಂಟ್ ಬ್ಯಾಟನ್ನರಿಗೆ ಸಲಹೆಗಾರರಾಗಿದ್ದರು.

ಮಂತ್ರಿ ಮಂಡಲದ ಘೋಷಣೆಯಾದ ಕೂಡಲೆಯೇ ಮಂತ್ರಿಗಳು ತಮ್ಮ ತಮ್ಮ ಕಛೇರಿಗಳ ಮೇಲೆ ಹಾಜರಾದರು.

ಟೆಲಿವಿಷನ್ ಚಿತ್ರದಲ್ಲಿ ಮೈಸೂರು ಆನೆ ಪಾತ್ರ

ಹಾಲಿವುಡ್ಡಿನ ಟೆಲಿವಿಷನ್ ಚಲನ ಚಿತ್ರ ನಿರ್ಮಾಪಕರಾದ ಫ್ರಾಂಕ್ ಫೆರ್ರಿನ್ ಅವರು ಅಮೆರಿಕಾಕ್ಕೆ ೩ ತಿಂಗಳಿನ ಮೈಸೂರು ಆನೆ ಮರಿಯನ್ನು ಕೊಂಡು ಹೋಗಿದ್ದಾರೆ. ಅದನ್ನು ಈಗ ಬೊಂಬಾಯಿಯಿಂದ ಕಲ್ಕತ್ತಕ್ಕೆ ಸಾಗಿಸಲಾಗಿದೆ. ಅವರು ಈ ದೇಶದ ಕಾಡು ಪ್ರಾಣಿಗಳ ಜೀವನದ ೫೦ ಸಾವಿರ ಅಡಿ ಚಿತ್ರವನ್ನು ತೆಗೆದುಕೊಂಡಿರುವರು.

ಪ್ರಜಾ ಸಂಘದ ಕಾರ್ಯಕರ್ತರೊಡನೆ ಕೃಪಲಾನಿಯವರ ಮಾತುಕತೆ

ಕಿಸಾನ್ ಮಜದೂರ್ ಪ್ರಜಾ ಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರು ನಾಪಸು ತೆರಳುವ ಮುಂಚೆ ಇಲ್ಲಿಯ ಪ್ರಜಾ ಪಕ್ಷದ ಕಾರ್ಯಕರ್ತರುಗಳಾದ ಶ್ರೀಮಾನ್ ಕೆ. ಅನಂತ ಶೆಟ್ಟರು, ಎಲ್. ಎಸ್. ನಾರಾಯಣಸ್ವಾಮಿ ಮುಂತಾದವರೊಡನೆ ಕಲೆತು ಮಾತನಾಡಿದರು. ಪಕ್ಷದ ಕಾರ್ಯಗಳನ್ನು ಜಾಗ್ರತೆಯಾಗಿ ನಡೆಸಬೇಕೆಂದು ಅವರು ಕಾರ್ಯಕರ್ತರಿಗೆ ಸೂಚಿಸುದುದಲ್ಲದೆ, ಚುನಾವಣೆಗೆ ಉಮೇದುವಾರರನ್ನು ಆರಿಸಲು ಸಮಿತಿಗೆ ಅರ್ಜಿಗಳನ್ನು ಕಳುಹಿಸಲು ಬಹು ಎಚ್ಚರಿಕೆಯಿಂದ ವರ್ತಿಸಬೇಕೆಂದು ತಿಳಿಸಿದರು.

ಶಿಕ್ಷಣ ಸಂಸ್ಥೆಯ ನಿಜಾಚರಣೆ

ರಾಜಧಾನಿಯ ಮಹಾರಾಜಾ ಹೈಸ್ಕೂಲ್ ಸಂಘದವಲ್ಲಿ ಕಳೆದ ಗುರುವಾರ ಸಂಸ್ಥೆಯ ಆರನೇ ವಾರ್ಷಿಕ ದಿನಾಚರಣೆಯು ನಡೆಯಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಲ್. ಶಿವಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಿಂದ ಎಂದಿದ್ದ ಹಿಂದೀ ಗೀತವನ್ನು ಶ್ರೀ ಚಿಕ್ಕನರಸಿಂಹಯ್ಯನವರು ಹಾಡಿದರು. ಮರಿಮಲ್ಲಪ್ಪ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಎ. ಶಿವಯ್ಯಂಗಾರ್ಯರು ಸಂಸ್ಥೆಯ ಉದ್ದೇಶವನ್ನು ವಿವರಿಸಿದರು. ವಂದನಾರ್ಪಣೆ, ಮಂಗಳಗೀತೆಗಳೊಡನೆ ಸಭೆಯು ಮುಕ್ತಾಯವಾಯಿತು.

ಕ್ಷಾಮದ ಬಾಧೆಯಿಂದ ಮಕ್ಕಳನ್ನು ನದಿಗೆ ಎಸೆದ ಪ್ರಸಂಗ

ಪೂರ್ವ ಪಾಕಿಸ್ತಾನದ ಖುಲ್ನಾ ಜಿಲ್ಲೆಯ ೩೫೦ ಚದುರ ಮೈಲಿಗಳ ಪ್ರದೇಶದಲ್ಲಿ ತಲೆದೋರಿರುವ ಭೀಕರ ಕ್ಷಾಮದ ಪರಿಸ್ಥಿತಿಯಿಂದ ಆ ಜನ ಪ್ರಜೆಗಳಿಗೆ ತೊಂದರೆಯುಂಟಾಗಿರುವುದೆಂದೂ, ಕಳೆದ ಎರಡು ವರ್ಷಗಳಲ್ಲಿ ಒಂದು ಸಾರಿ ಉಪ್ಪು ನೀರು ತುಂಬಿ ಗದ್ದೆಗಳು ಹಾಳಾದುದಲ್ಲದೆ ಎರಡನೇ ಬಾರಿ ಮಳೆ ಬರದೆ ಇರುವುದೇ ಈ ಬರಕ್ಕೆ ಕಾರಣವೆಂದೂ ಅಲ್ಲಿನ ಶಾಸನ ಸಭಾ ಸದಸ್ಯರುಗಳಾದ ಗೋವಿಂದ ಲಾಲ್ ಬ್ಯಾನರ್ಜಿ ಮತ್ತು ಅಬ್ದುಸ್ ಸಬೂರ್ ಖಾನರವರುಗಳು ಹೇಳಿಕೆಯೊಂದರಲ್ಲಿ ತಿಳಿಸಿರುತ್ತಾರೆ. ಹಲವು ಜನರು ಸಾವಿಗೆ ತುತ್ತಾಗುತ್ತಿರುವರಲ್ಲದೆ, ಅನೇಕರು ಉತ್ತರ ದಿಕ್ಕಿಗೆ ವಲಸೆ ಹೋಗುತ್ತಿರುವರೆಂದೂ ಹೇಳಲಾಗಿದೆ. ಹೊರಕ್ಕೆ ಹೋಗುವವರು ತಮ್ಮ ಪ್ರಯಾಣದ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಮಕ್ಕಳನ್ನು ನದಿಗಳಿಗೆ ಎಸೆದ ಪ್ರಕರಣಗಳು ವರದಿಯಾಗಿವೆ. ೧೯೪೩ ರಲ್ಲಿ ಆದ ಕ್ಷಾಮಕ್ಕಿಂತಲೂ ಈಗಿನದು ಭೀಕರವಾಗಿದೆಯೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಪ್ರಜಾ ಸಂಘದ ಪರವಾಗಿ ಉಮೇದುವಾರಿಕೆ

ಉಮೇದುವಾರಿಕೆ ಅರ್ಜಿಗಳನ್ನು ತೆಗೆದುಕೊಳ್ಳಲು ಮತ್ತು ಅವುಗಳನ್ನು ಪರಿಶೀಲಿಸಲು ಇರುವ ಅವಧಿಯನ್ನು ಬರುವ ತಿಂಗಳು ೩ನೇ ತಾ|| ನ ವರೆಗೆ ಹೆಚ್ಚಿಸಲಾಗಿದೆಯೆಂದು ರಾಜಧಾನಿಯ ಪ್ರಜಾ ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ವಿ ವಾ ಹ ಮ ಹೋ ತ್ಸ ವ

ನಂಜನಗೂಡಿನಲ್ಲಿರುವ ಹಾಯೂರು ಶ್ರೀ ಅನಂತಯ್ಯನವರ ಎರಡನೇ ಮಕ್ಕಳು ಚಿ|| ಎ. ಕೃಷ್ಣೇಗೌಡರಿಗೆ ವೇ|| ಬ್ರಂ|| ಶ್ರೀ ಶ್ರೀಕಂಠ ಶಾಸ್ತ್ರಿಗಳ ಮೊಮ್ಮಕ್ಕಳು ಶ್ರೀ ಎಸ್. ಎಲ್. ಅನಂತನಾರಾಯಣರವರ ಕುಮಾರಿ ಚಿ|| ಸೌ|| ಜಯಲಕ್ಷ್ಮಿಯನ್ನು ಕೊಟ್ಟು ಗುರುವಾರ ವಿವಾಹವು ನೆರವೇರಿಸಲ್ಪಟ್ಟಿತು.

ಕೇಂದ್ರ ಮಂತ್ರಿ ಮಂಡಲದಿಂದ ನಿವೃತ್ತರಾಗಲಿರುವ

ಶ್ರೀ ಸಿ. ರಾಜಗೋಪಾಲಾಚಾರಿ

ಹೈದರಾಬಾದು ಮನೆಯಲ್ಲಿ ಭೂತ ಚೇಷ್ಟೆ?

ಹೈದರಾಬಾದಿನ ಒಂದು ಮನೆಯಲ್ಲಿ ಕೆಲವು ದಿನಗಳಿಂದಲೂ ವಿವಿಧ ಆಕಾರದ ಕಲ್ಲುಗಳು ಬೀಳುತ್ತಿದ್ದುವೆಂದೂ, ಕೆಲವು ವೇಳೆ ಬೆಂಕಿಯ ಕೊಳ್ಳಿಗಳೂ ಕೊಳೆತ ಮೊಟ್ಟೆ ಮತ್ತು ಸೀಸೆಗಳೂ ಬೀಳುತ್ತಿದ್ದುವೆಂದೂ ವರದಿಯಾಗಿದೆ. ಇದನ್ನು ನೋಡಲು ಅಲ್ಲಿನ ನಾಲ್ಕು ಜನ ಮಂತ್ರಿಗಳು ಅಲ್ಲಿಗೆ ಹೋಗಿದ್ದರು. ಇಷ್ಟಾದರೂ ಮನೆಯವರೊಬ್ಬರಿಗೂ ಗಾಯವಾಗಿಲ್ಲ. ಮೌಲ್ವಿಯೊಬ್ಬನು ಬಂದು ಮಂತ್ರ ಹೇಳಿದ ಮೇಲೆ ಅದು ನಿಂತಿತೆಂದು ಹೇಳಲಾಗಿದೆ. ಅದು ಭೂತ ಚೇಷ್ಟೆಯಿರಬಹುದೆಂದು ಊಹಿಸಲಾಗಿದೆ.

ಮೈಸೂರು ರೇಡಿಯೋ ವಿಶೇಷ ಕಾರ್ಯಕ್ರಮ

ಮೈಸೂರಿನ ರೇಡಿಯೋವಿನಲ್ಲಿ ನಾಳೆ ರಾತ್ರಿ ೮ ಘಂಟೆಗೆ ವಿದ್ವಾಂಸರುಗಳಾದ ಶ್ರೀ ವಿ. ದೊರೆಸ್ವಾಮಿ ಅಯ್ಯಂಗಾರ್ ಮತ್ತು ಆರ್. ಎನ್. ದೊರೆಸ್ವಾಮಿಯವರುಗಳ ವೀಣಾ ವಾದನವು ನಡೆಯುವುದು.

ಅ|| ಭಾ|| ಟ್ರೈನಿಂಗ್ ಕಾಲೇಜುಗಳ ಸಮ್ಮೇಳನ

ಮೈಸೂರು ೩೦

ಮೈಸೂರು ವಿಶ್ವ ವಿದ್ಯಾಲಯದ ಆಶ್ರಯದಲ್ಲಿ ಬರುವ ೯. ೧೦. ೧೧ ಮತ್ತು ೧೨ ನೇ ತಾ|| ದ್ವಿತೀಯ ಅಖಿಲ ಭಾರತ ಟ್ರೈನಿಂಗ್ ಕಾಲೇಜುಗಳ ಸಮ್ಮೇಳನವು ರಾಜಧಾನಿಯಲ್ಲಿ ನಡೆಯುವುದು. ಬರೋಡ ವಿಶ್ವ ವಿದ್ಯಾಲಯದ ವೈಸ್ ಚಾನ್ಸಲರೂ ಮತ್ತು ಟ್ರೈನಿಂಗ್ ಕಾಲೇಜುಗಳ ಸಂಘದ ಅಧ್ಯಕ್ಷರೂ ಆದ ಶ್ರೀಮತಿ ಹಂಸಾ ಮೆಹತಾರವರು ಅಧ್ಯಕ್ಷತೆ ವಹಿಸುವರು. ಭಾರತದಲ್ಲಿರುವ ಪ್ರತಿಯೊಂದು ಟ್ರೈನಿಂಗ್ ಕಾಲೇಜು ಇಬ್ಬರು ಪ್ರತಿನಿಧಿಗಳನ್ನು ಕಳುಹಬಹುದು. ಬಿ. ಟಿ. ತರಗತಿಯವರಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಸಮ್ಮೇಳನವು ಚರ್ಚಿಸುವುದು

ಹರಿಕಥೆ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೮-೩೦ ಗಂಟೆಗೆ ನಂಜನಗೂಡಿನ ಬ್ರಂ|| ಶ್ರೀ ಶ್ರೀನಿವಾಸದಾಸರಿಂದ "ಭಕ್ತ ಕನಕದಾಸ" ಎಂಬ ಹರಿಕಥೆಯು ನಡೆಯುವುದು.

ಕವಾಡಿ ನಾಟ್ಯ

ನಾಗವಿಹಾರದ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷ ಪ್ರಯುಕ್ತ ಈ ರಾತ್ರಿ ೮-೩೦ ಗಂಟೆಗೆ ಸೂಲೂರು ವಿದ್ವಾನ್ ವೆಂಕಟರಮಣರಾವರವರಿಂದ ಕವಾಡಿ ನಾಟ್ಯವನ್ನು ನಡೆಯುತ್ತದೆ ಎಲ್ಲರಿಗೂ ಆಹ್ವಾನವುಂಟು.

ಕೃಷ್ಣರಾಜೇಂದ್ರ ಕೋಆಪರೇಟಿವ್ ಸೊಸೈಟಿ

ರಾಜಧಾನಿಯ ಕೃಷ್ಣರಾಜೇಂದ್ರ ಕೋಆಪರೇಟಿವ್ ಸೊಸೈಟಿಯ ಪ್ರಸಕ್ತ ಸಾಲಿನ ಅಧಿಕಾರ ವರ್ಗಕ್ಕೆ ಚುನಾವಣೆ ನಡೆದು ಶ್ರೀ ಎ. ವೆಂಕಟನಾರಾಯಣ ಶಾಸ್ತ್ರಿಗಳು ಅಧ್ಯಕ್ಷರಾಗಿಯೂ, ಶ್ರೀ ಬಿ. ಎಂ. ಚಂದ್ರಶೇಖರಯ್ಯನವರು (ಬಕ್ಷಿ) ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಬಿ. ಆರ್. ನಾಯ್ಡು ಮತ್ತು ಎಂ. ಎನ್. ರಾಮಸ್ವಾಮಿಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುತ್ತಾರೆ.

"ಸಂಗೀತ" ವಾರ ಪತ್ರಿಕೆ

ರಾಜಧಾನಿಯ ಸಂಗೀತ ವಿದ್ವಾಂಸರಾದ ಶ್ರೀ ಎಸ್. ಕೃಷ್ಣಯ್ಯಂಗಾರ್ಯರು "ಸಂಗೀತ" ಎಂಬ ಕನ್ನಡ ವಾರ ಪತ್ರಿಕೆಯನ್ನು ಹೊರಡಿಸಿರುತ್ತಾರೆ. ಅದರ ಒಂದು ಪ್ರತಿಯನ್ನು ನಾವು ಅವರಿಂದ ಸ್ವೀಕರಿಸಿರುತ್ತೇವೆ. ಸಂಗೀತವು ಅಪೌರುಷೇಯವೆಂದು ಪತ್ರಿಕೆಯು ಹೇಳುವುದು. ಸಂಗೀತದಲ್ಲಿ ಸೇರಿರುವ ಕಲೆಗಳಾವುವು, ಗಾಯಕನ ಗುಣಗಳು, ಅವನ ದ್ರವ್ಯಾರ್ಜನೆ, ಮತ್ತು ಸಂಗೀತದ ಗುರಿ ಈ ವಿಷಯಗಳ ಬಗ್ಗೆ ಹಲವು ಲೇಖನಗಳಿವೆ. ಅನೇಕರಿಗೆ ಸಂಗೀತದ ಲಕ್ಷಣಗಳು ತಿಳಿಯದೆ ಇರುವುದರಿಂದ ಕನ್ನಡ ಭಾಷೆಯಲ್ಲಿ ಸಂಗೀತ ಲಕ್ಷಣ ಶಾಸ್ತ್ರವನ್ನು ತಿಳಿಸಲು ಈ ಪತ್ರಿಕೆಯು ಹೊರಟಿರುತ್ತದೆ. ಪತ್ರಿಕೆಯು ಸಂಗೀತಗಾರರು ಮತ್ತು ಸಂಗೀತ ಪ್ರಿಯರುಗಳಿಂದ ಪ್ರೋತ್ಸಾಹಿಸಲ್ಪಡತಕ್ಕದ್ದಾಗಿದೆ. ವಾರ್ಷಿಕ ಚಂದಾ ೩ರೂ. ಬಿಡಿ ಪ್ರತಿ ೦-೧-೦.

ವಾರ ಭವಿಷ್ಯ

ತಾ|| ೨೮-೧೦-೫೧ರಿಂದ ೪-೧೧-೫೧ರ ವರೆಗೆ

ಮೇಷ ಆರೋಗ್ಯ ಉತ್ತಮ ಮನಸ್ಸಿಗೆ ಒಡಿಸದ ಘಟನೆ ಮಕ್ಕಳ ಕಲಹ ವ್ಯಾಪಾರಾದಿ ಸ್ಥಿತಿ ನೆಟ್ಟಗೆ ಹಣಕಾಸಿನ ಸ್ಥಿತಿ ಸಮಾಧಾನಕರ ತಾ|| ೨೮ ೨೯ ಅಧಿಕ ಖರ್ಚು, ಆಪ್ತರ ಆಗಮನ

ವೃಷಭ—ಗೊಂದಲದ ಪ್ರಸಂಗ ಮನೆಯಲ್ಲಿ ಅನಾರೋಗ್ಯ ವ್ಯಾಪಾರಾದಿಗಳಲ್ಲಿ ಆಸಕ್ತಿ ಇರದು ಆಸ್ತಿ ತಕರಾರು ಬಗೆಹರಿಯದು ಆರೋಗ್ಯ ಕೆಡಬಹುದು ತಾ|| ೨೯ ೩೦ ೩೧ ವಾಹನಭಯ, ಸಹಕಾರಿಗಳ ಅಸಹಕಾರ

ಮಿಥುನ—ಮಹತ್ವದ ಘಟನೆ ಆರೋಗ್ಯ ಉತ್ತಮ ಹಣದ ಲಾಭ. ಮಾನ ಸನ್ಮಾನ ಕೋರ್ಟು ಕಾರ್ಯದಲ್ಲಿ ಜಯ ತಾ|| ೨೮ ೨೯ ಮನರಂಜನೆ, ಊಟಗಳಿಗಾಗಿ ಖರ್ಚು

ಕರ್ಕ—ವಿದ್ವಾಂಸರ ಆಗಮನ ಕಣ್ಣುಗಳ ನೋವು ಕಡಿಮೆ ಸಾಂಪತ್ತಿಕ ಸ್ಥಿತಿಯ ಸುಧಾರಣೆ ಖರ್ಚು ಅಧಿಕ ಧಾರ್ಮಿಕ ಕಾರ್ಯ. ತಾ|| ೩೦ ೩೧ ಬೆಲೆಯುಳ್ಳ ವಸ್ತುವಿನ ಕಳವು.

ಸಿಂಹ— ಸಾಸಾಬಗೆಯ ಅಡಚಣೆಗಳು ಎದುರಾಳಿಗಳ ಬಲ ಹೆಚ್ಚುವುದು ಆದರೆ ಅಂತ್ಯ ಜಯ ನಿಮ್ಮದು ನಿದ್ರೆ ಇಲ್ಲ. ಅಂಗಾಂಗಗಳಲ್ಲಿ ಉಷ್ಣ ತಾ|| ೩೦ ೩೧ ಮಹತ್ವದ ಪತ್ರದ ಆಗಮನ ಮಿತ್ರ ಭೇಟಿ

ಕನ್ಯಾ—ಅಪ್ರಿಯ ಘಟನೆ ಮನಸ್ಥೈರ್ಯ ಕುಗ್ಗುವುದು ವ್ಯಾಪಾರಾದಿಗಳಲ್ಲಿ ಮಾಸ ಹಾನಿ ಎತ್ತರದಿಂದ ಬೀಳುವ ಸಂಭವ ವಿಶ್ವಾಸ ಘಾತಕಿಗಳಿಂದ ಹಾನಿ ತಾ|| ೩೦ ೩೧ ಕೊಂಚ ಚಿಂತಾ ನಾಶ, ಧನ ಲಾಭ.

ತುಲಾ— ಮಹತ್ವ ಕಾರ್ಯದಲ್ಲಿ ಯಶ ಆರೋಗ್ಯ ಉತ್ತಮ ಮಿತ್ರರ ಭೇಟಿ. ನಿರ್ವಿಘ್ನ ಪ್ರವಾಸ ನೌಕರಿಯಲ್ಲಿ ಪ್ರಶಸ್ತಿ. ಹಣ ಲಾಭ. ತಾ|| ೧ ೨ ಶುಭವಾರ್ತೆ, ಮೃಷ್ಟಾನ್ನ ಲಾಭ

ವೃಶ್ಚಿಕ- ಹಳೆಯ ಯೋಜನೆ ಕಾರ್ಯಗತ ಆರೋಗ್ಯ ಉತ್ತಮ ನೂತನ ಪರಿಚಯ ಗೃಹ ಸೌಖ್ಯ ಉತ್ತಮ. ಪರೀಕ್ಷೆಯಲ್ಲಿ ಯಶ ತಾ|| ೩೦ ೩೧ ವಿಶೇಷ ಖರ್ಚು ಗೊಂದಲ

ಧನು—ಆರೋಗ್ಯ ಉತ್ತಮ ಯೋಜನೆಗಳ ಸಿದ್ಧಿ ವಿದ್ಯಾ ಪ್ರಗತಿ ವ್ಯಾಪಾರಾದಿಗಳಲ್ಲಿ ಅನುಕೂಲ. ಉತ್ಸಾಹದಾಯಕವಾದ ವಾರ ಮಕ್ಕಳ ಭೇಟಿ. ತಾ|| ೧. ೨ ಗೊಂದಲ, ಮನಸ್ಸಿಗೆ ಚಿಂತೆ

ಮಕರ—ಮಾನಸಿಕ ತ್ರಾಸ ಆರೋಗ್ಯ ನೆಟ್ಟಗಿರದು ನಿರುತ್ಸಾಹ. ವ್ಯಾಪಾರಾದಿಗಳಲ್ಲಿ ಕೈಕೆಳಗಿರುವವರ ಅವಿಧೇಯತೆ. ಪ್ರವಾಸದಲ್ಲಿ ವಿಘ್ನ. ತಾ|| ೧. ೨ ಚಿಂತಾನಾಶ. ಆಶಾದಾಯಕ ಪತ್ರ.

ಕುಂಭ – ವಿಶೇಷ ಖರ್ಚು. ಆಕಸ್ಮಿಕ ಹಣದ ಮುಗ್ಗಟ್ಟು ವ್ಯಾಪಾರಾದಿಗಳಲ್ಲಿ ಅಪಮಾನ ಮನಸ್ಸಿಗೆ ಬೇಸರ ತಾ|| ೨೮ ೨೯ ಸುಳ್ಳು ಆರೋಪಣೆ, ಗುಪ್ತ ಚಿಂತೆ

ಮೀನ—ಕರ್ತೃತ್ವ ಶಕ್ತಿಯ ಘಟನೆಗಳು ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಹಿತ ಘಟನೆ. ಕೌಟುಂಬಿಕ ಸೌಖ್ಯ ಪ್ರವಾಸ ಯೋಗ ತಾ|| ೨೮. ೧ ಮಹತ್ವ ಕಾರ್ಯಕ್ಕೆ ಶುಭ, ಅಧಿಕ ಲಾಭ.

ಪಟಾಕಿ ಬೆಂಕಿಯಿಂದ ಬಾಲಕಿಯ ಮರಣ

ಬೆಂಗಳೂರಿನ ಅಕ್ಕಿ ಪೇಟೆಯಲ್ಲಿ ಪಟಾಕಿಯನ್ನು ಮಾರುತ್ತಿದ್ದ ಶ್ರೀ ಕೃಷ್ಣಪ್ಪ ಎಂಬುವರ ಅಂಗಡಿ ಮುಂದೆ ಒಬ್ಬಾತನು ೨೫ನೇ ತಾ|| ಮಧ್ಯಾಹ್ನ ಏರೋಪ್ಲೇನ್ ಅನ್ನು ಹಚ್ಚಿದಾಗ ಅದು ಹತ್ತಿ ಕೊಳ್ಳದಿದ್ದುದರಿಂದ ಆತನಿಗೆ ಸಿಟ್ಟು ಬಂದು ಅದನ್ನು ಕಾಲಿನಿಂದ ಒದೆಯಲು ಅದು ಸಿಡಿದು ಅಂಗಡಿಗೆ ಹಾರಿದುದರಿಂದ ಅಲ್ಲಿದ್ದ ಪದಾರ್ಥಗಳು ಹತ್ತಿಕೊಂಡವೆಂದೂ, ಇದರ ಪರಿಣಾಮವಾಗಿ ಮಾಲೀಕ ಕೃಷ್ಣಪ್ಪ ಮತ್ತು ಅವರ ೩ ವರ್ಷದ ಹೆಣ್ಣು ಮಗಳು ಹೇಮಾವತಿ, ಮತ್ತು ಇನ್ನಿಬ್ಬರಿಗೆ ಗಾಯವಾಯಿತೆಂದೂ, ಹೆಣ್ಣು ಮಗುವು ಆಸ್ಪತ್ರೆಗೆ ಒಯ್ದ ನಂತರ ಮೃತಪಟ್ಟಿತೆಂದೂ ಹೇಳಲಾಗಿದೆ ಬೆಂಕಿಯನ್ನು ಅನಂತರ ಆರಿಸಲಾಯಿತು.

ಮೈಸೂರು ಮಹಾಜನ ಪ್ರೌಢಶಾಲೆ

ಪ್ರತಿ ವರ್ಷದಂತೆ ಈ ವರ್ಷವೂ ಸಹ ಮಹಾಜನ ಶಾಲೆಯ ಉಪಾಧ್ಯಾಯರೂ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರೂ ತಾ|| ೨೯, ೩೦, ೩೧ರಲ್ಲಿ ದೀಪಾವಳಿ ನಿಧಿಯ ಸಂಗ್ರಹಕ್ಕೋಸ್ಕರ ಸಾರ್ವಜನಿಕರ ನೆರವಿಗಾಗಿ ಬರುವರು. ಮಹಾಜನರು ಎಂದಿನಂತೆ ಉದಾರವಾಗಿ ಸಹಕರಿಸಿ ಶಾಲೆಯ ಪುರೋಭಿವೃದ್ಧಿಗೆ ನೆರವಾಗಬೇಕೆಂದು ಶಾಲೆಯ ಅಧ್ಯಕ್ಷರಾದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಪ್ರಾರ್ಥಿಸಿರುತ್ತಾರೆ.

ಅಕ್ರಮವಾಗಿ ಅಕ್ಕಿ ಸಾಗಿಸುತ್ತಿದ್ದ ಕಾರು ಮಗುಚಿತು

ಮೈಸೂರು ಕಡೆಯಿಂದ ಬೆಂಗಳೂರಿಗೆ ೨೩ನೇ ತಾ|| ರಾತ್ರಿ ೭ ಪಲ್ಲ ಅಕ್ಕಿಯನ್ನು ಕೆಲವರು ಅಕ್ರಮವಾಗಿ ಸಾಗಿಸುತ್ತಿದ್ದ ಮೋಟಾರನ್ನು ಕೆಂಗಲ್ ಹನುಮಂತರಾಯನ ಗುಡಿ ಬಳಿ ಇರುವ ಲೆವೆಲ್ ಕ್ರಾಸಿಂಗ್ ಹತ್ತಿರ ಚನ್ನಪಟ್ಟಣದ ಪೋಲೀಸರು ತಡೆಯಲೆತ್ನಿಸಿದಾಗ, ಮೋಟಾರು ಜೋರಾಗಿ ಬಂದು ಅವರಿಂದ ತಪ್ಪಿಸಿಕೊಳ್ಳಲೆತ್ನಿಸಿ ಪಕ್ಕದ ಕೊರಕಲಲ್ಲಿ ಅನಾಮತ್ತು ಮಗುಚಿಕೊಂಡಿತೆಂದು ಹೇಳಲಾಗಿದೆ. ಯಾರಿಗೂ ಅಪಾಯವಾಗಲಿಲ್ಲ. ರಾಮನಗರದ ನ್ಯಾಯಾಧೀಶರ ಮುಂದೆ ಈ ಬಗ್ಗೆ ಮೊಕದ್ದಮೆ ಹೂಡಲಾಗಿದೆ ಕಾರು ಬೆಂಗಳೂರಿನ ಅಬ್ದುಲ್ ರಹಿಮಾನ್ ಎಂಬುವರದೆಂದು ತಿಳಿದುಬಂದಿದೆ

ಮೈಸೂರಿನಲ್ಲಿ ಬಟ್ಟೆ ಅಭಾವದ ಶಕ್ತಿ

ಮೈಸೂರು, ತಿರುವಾಂಕೂರು-ಕೊಚ್ಚಿ ಮತ್ತು ಕೊಡಗುಗಳಿಗೆ ಸಂಬಂಧಪಟ್ಟಂತೆ ೧೦೮ ಪ್ರಕರಣಗಳಲ್ಲಿ ಒಟ್ಟು ೬೩.೯ ಲಕ್ಷ ರೂ ನಷ್ಟು ಬಟ್ಟೆ ಆದಾಯವು ಹೊರಕ್ಕೆ ಬಂದಿರುವುದಾಗಿ ಗೊತ್ತಾಗಿದೆ. ಮೈಸೂರಿನಲ್ಲಿ ೮ ಲಕ್ಷ ರೂ. ಹೊರಕ್ಕೆ ಬಂದಿರುವುದು ಇಡೀ ದೇಶದಲ್ಲಿ ಈ ರೀತಿ ಒಟ್ಟು ೪೧ ಕೋಟಿ ರೂ ಗಳು ಬಯಲಿಗೆ ಬಂದಿವೆ

ಮಕ್ಕಳ ದಿನಾಚರಣೆ

ಕಳೆದ ಎರಡು ವರ್ಷಗಳಲ್ಲಿ ನಡೆಸಿದಂತೆ ಈ ವರ್ಷವೂ ಸಹ ಬರುವ ತಿಂಗಳು ೫ನೇ ತಾ|| ಸಂಸ್ಥಾನಾದ್ಯಂತ ಮಕ್ಕಳ ದಿನಾಚರಣೆಯನ್ನು ನಡೆಸಬೇಕೆಂದು ಸರ್ಕಾರದವರು ಸೂಚಿಸಿರುತ್ತಾರೆ. ಇದಕ್ಕಾಗಿ ವಿದ್ಯಾ ಇಲಾಖೆಯ ಡೈರೆಕ್ಟರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಮೈಸೂರು ಮತ್ತು ಬೆಂಗಳೂರು ಪೌರಸಭಾಧ್ಯಕ್ಷರುಗಳಿಗೂ ಈ ಬಗ್ಗೆ ಸೂಚನೆಯನ್ನೀಯಲಾಗಿದೆ

ಮೈಸೂರಿನಲ್ಲಿ ಅಧಿಕ ಆಹಾರೋತ್ಪತ್ತಿ ಚಳುವಳಿ

೧೯೪೯-೫೦ ಮತ್ತು ೫೦-೫೧ನೇ ಸಾಲುಗಳಲ್ಲಿ ಮೈಸೂರು ಸರ್ಕಾರದವರು ಅಧಿಕ ಆಹಾರೋತ್ಪತ್ತಿಯ ಸಂಬಂಧವಾಗಿ ಕೈಗೊಂಡಿರುವ ಕಾರ್ಯಕ್ರಮಗಳ ವಿವರವನ್ನು ಒಂದು ಚಿಕ್ಕ ಪುಸ್ತಕ ರೂಪದಲ್ಲಿ ಪ್ರಕಟಿಸಿರುತ್ತಾರೆ. ನಾಲೆಗಳು, ಕೆರೆಗಳು, ಸರಬರಾಜು ಮತ್ತು ಇತರ ಯೋಜನೆಗಳ ಅಂಗವಾಗಿ ನಡೆದ ಕೆಲಸಗಳನ್ನು ಅದರಲ್ಲಿ ವಿವರಿಸಲಾಗಿದೆ. ೨೭ ಕಾಂಗಾರಿಗಳಲ್ಲಿ ೮೭ ಮುಕ್ತಾಯವಾಗಿವೆ. ಇವುಗಳಿಗಾಗಿ ೧೨|| ಲಕ್ಷ ರೂ. ವೆಚ್ಚವಾಗಿದೆ ವಿಶ್ವೇಶ್ವರಯ್ಯ ನಾಲೆ, ಪುಳ್ಳಕೆರೆ ಕಣಿವೆ, ವಾಣಿ ವಿಲಾಸ ಸಾಗರ ಮುಂತಾದ ಕಡೆ ಕೆಲಸಗಳು ನಡೆದಿವೆ ಗೊಬ್ಬರಗೋಡಿನ ವಿನಿಮಯ, ಕಾಂಪೋಸ್ಟ್ ಗೊಬ್ಬರ ತಯಾರಿ, ಟ್ರ್ಯಾಕ್ಟರ್ ಮತ್ತು ಬುಲ್ ಡೋಜರುಗಳ ಸಹಾಯ ಇವುಗಳನ್ನು ವಿವರಿಸಲಾಗಿದೆ ೧,೬೫ ಸಾವಿರ ಎಕರೆ ಜಮೀನನ್ನು ಹೊಸದಾಗಿ ಸಾಗುವಳಿಗೆ ಕೊಡಲಾಗಿದೆ ಇದರಿಂದ ೧೨,೮೮೩ ಟನ್ ಧಾನ್ಯ ಹೆಚ್ಚಾಗಿ ಬಂದಿರುತ್ತದೆ ತಕಾವಿ ಮತ್ತು ಬಹುಮಾನ ಅಭಿವೃದ್ಧಿ ಸಾಲಗಳಿಗಾಗಿ ಕ್ರಮವಾಗಿ ೪|| ಲಕ್ಷ ಮತ್ತು ೨|| ಲಕ್ಷ ರೂಗಳನ್ನು ಕೊಡಲಾಗಿದೆ. ಅಧಿಕಾಹಾರ ಬೆಳೆಯ ಯೋಜನೆಯಿಂದ ೪೯-೫೦ರಲ್ಲಿ ೨೩,೪೪೦ ಟನ್ ಧಾನ್ಯವು ಆಗಿರುತ್ತದೆ. ಈ ಸಾಲಿನಲ್ಲಿ ೬೯,೮೭೮ ಟನ್ ಆಗುವದು ನಿರೀಕ್ಷೆ ಇದೆ

ಅರವಟ್ಟಿಗೆಕೊಪ್ಪಲಿನಲ್ಲಿ ಮಹದೇಶ್ವರ ಸ್ವಾಮಿ ಜಾತ್ರೆ

ಟಿ. ನರಸೀಪುರದ ತಾಲ್ಲೂಕು ಬನ್ನೂರು ಹೋಬಳಿ ಕೊಡಗಹಳ್ಳಿ ಗ್ರಾಮಕ್ಕೆ ಸೇರಿದ ಅರವಟ್ಟಿಗೆಕೊಪ್ಪಲು ಶ್ರೀ ಮಹದೇಶ್ವರ ಸ್ವಾಮಿಯ ಕಾರ್ತೀಕ ಮಾಸದ ಜಾತ್ರೆಯ ಅಂಗವಾಗಿ ನಾಳೆಯಿಂದ ೨ ನೇ ತಾ|| ನ ವರೆಗೆ ವಿವಿಧೋತ್ಸವಗಳೂ, ರಥೋತ್ಸವವೂ ನಡೆಯುವುವು

Special Reduction For Deepavali Only
USE ALWAYS PURE BUTTER & GHEE
Butter, Per Viss : 6-4-0
—: Please Visit :—
M. N. NAGANNA & SONS,
100 Ft. Road, .. Mysore.



ಮಲೇರಿಯಾ ಗೆಡ್ಡೆಗಳಿಗೆ

40 ವರ್ಷಗಳಿಂದ ಪ್ರಖ್ಯಾತವಾಗಿರುವ ಮೈಸೂರು ಎಸ್ ಎನ್. ಪಂಡಿತ್ ಅಂಡ್ ಸನ್ಸ್‌ರವರ ಪಂಚಾಮೃತ, ಸ್ಪೆಷಲ್ ವಾಸಾವ ಲೇಹ್ಯ ಭುಂಗಧರಾಜ ತೈಲ-ಇವುಗಳನ್ನು ಉಪಯೋಗಿಸಿರಿ

ಚಂದಾದಾರರಲ್ಲಿ ವಿನಂತಿ

ಮೈಸೂರು ಮತ್ತು ಇತರ ಕಡೆಗಳಲ್ಲಿರುವ ನಮ್ಮ ಚಂದಾದಾರರು ಮಾಮೂಲಿ ಯಾನಾ ಚಂದಾ ಮೊಬಲಗು ಎಂಟಿಯನ್ನು ನಮ್ಮ ಏಜೆಂಟರಿಗೆ ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ವಿನಂತಿ.

—ವ್ಯವಸ್ಥಾಪಕ, ಸಾಧ್ವಿ

Edited, Printed and Published by A. R. Nagarajan, at Sadhvi Press D Subbiah Road, Mysore.

ಗೌಡ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ M. V. ಭೋಜಯ್ಯ ಶ್ರೀ ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಕುರ್ಚಿ ಬಟ್ಟೆ, ಛತ್ರಿ ಬಟ್ಟೆ, ಹಾಸಿಗೆ ಬಟ್ಟೆ, ಸೋಫಾ ಬಟ್ಟೆಗಳಿಗೂ

ಕ್ಯಾಂಪ್ ಕಾಟ್ ಕ್ಯಾನವಾಸ್, ಸಿಂಗಲ್, ಡಬ್ಬಲ್ ಸೊಳ್ಳೆ ಪರದೆ, ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಶೀಟು ಇವುಗಳಿಗೂ-ದಾಸುಸಾರ್ ಕಂಪನಿ, ಬ್ಯಾಂಕ್ ರಸ್ತೆ, ಮೈಸೂರು

ಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೮] ಸೋಮವಾರ ೨೯-೧೦-೫೧ [ಸಂಚಿಕೆ ೮೦

ಚಲನ ಚಿತ್ರದಲ್ಲಿ ಮೈಸೂರು ರಾಜರು

ಅಮೆರಿಕದ ಚಲನ ಚಿತ್ರದಲ್ಲಿ ಪ್ರಭುಗಳ ಪಾತ್ರ

ಮೈಸೂರು ೨೮

ಇತ್ತೀಚೆಗೆ ಅಮೆರಿಕದ ಒಂದು ಚಲನ ಚಿತ್ರ ಸಂಸ್ಥೆಯವರು ತಯಾರಿಸಿದ "ಗಂಗಾ ರಾಂ" ಎಂಬ ವರ್ಣದ ಚಲನ ಚಿತ್ರದ ಹಲವು ದೃಶ್ಯಗಳಲ್ಲಿ ಮೈಸೂರಿನ ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರವರ ಪಾತ್ರವೂ ಇರುವುದೆಂದೂ ಭಾರತದ ನರೇಂದ್ರರ ಪಾತ್ರವನ್ನೊಳಗೊಂಡಿರುವುದು ಇದೇ ಮೊದಲನೆಯ ಚಿತ್ರವೆಂದೂ ಹೇಳಲಾಗಿದೆ. ಮೈಸೂರು ಅರಮನೆಗೆ ಸಂಬಂಧಪಟ್ಟ ಹಲವು ದೃಶ್ಯಗಳೂ ಚಿತ್ರದಲ್ಲಿ ಸೇರಿವೆ.

ಐ. ಎನ್. ಟಿ. ಯು. ಸಿ. ಜನರಲ್ ಕೌನ್ಸಿಲ್ಲಿಗೆ ಮೈಸೂರಿನ ಸದಸ್ಯರು

ಕೆಲವು ದಿನಗಳ ಹಿಂದೆ ಅಹಮದಾಬಾದಿನಲ್ಲಿ ಐ ಎನ್ ಟಿ ಯು ಸಿ. ಜನರಲ್ ಕೌನ್ಸಿಲ್ಲಿಗೆ ನಡೆದ ಚುನಾವಣೆಯಲ್ಲಿ ಮೈಸೂರಿನ ಶ್ರೀಗಳಾದ ಎ ರಾಮಣ್ಣ, ಡಿ ವೆಂಕಟೇಶ ಮತ್ತು ಎಲ್. ರಾಮಯ್ಯನವರುಗಳನ್ನು ಚುನಾಯಿಸಲಾಗಿದೆ. ಪ್ರಾಂತೀಯ ಸಮಿತಿಯ ಕಾರ್ಯದರ್ಶಿಗಳಾಗಿರುವ ಶ್ರೀ ಕೇಶವಕುಲಕರ್ಣಿಯವರನ್ನು ಕಾರ್ಯಕಾರೀ ಸಮಿತಿಗೆ ಚುನಾಯಿಸಲಾಗಿದೆ.

ಕರ್ನಾಟಕದ ಕಾಂಗ್ರೆಸ್ ಉಮೇದುವಾರರ ಪಟ್ಟಿಯ ಪುನರ್ವಿಮರ್ಶೆ

ಕರ್ನಾಟಕ ಪ್ರಾಂತ್ಯದಿಂದ ಮಹಾಚುನಾವಣೆಗೆ ಕಾಂಗ್ರೆಸ್ ಪರವಾಗಿ ಉಮೇದುವಾರರನ್ನು ಆರಿಸುವ ಬಗ್ಗೆ ಅಖಿಲ ಚುನಾವಣಾ ಸಮಿತಿಯು ಕೇವಲ ವಾದ ಮೇರೆ ಮತ್ತು ಪಾರ್ಟಿ ಪಕ್ಷಪಾತದಿಂದ ವರ್ತಿಸಿದೆಯೆಂದು ಸೂಚಿಸಿ ಕೇಂದ್ರ ಚುನಾವಣಾ ಸಮಿತಿಯವರು ಶ್ರೀ ಎಸ್ ನಿಜಲಿಂಗಪ್ಪನವರಿಗೆ ಕರ್ನಾಟಕದ ಉಮೇದುವಾರರ ಪಟ್ಟಿಯನ್ನು ಪುನರ್ವಿಮರ್ಶಿಸಬೇಕೆಂದು ತಿಳಿಸಿರುವುದಾಗಿ ಗೊತ್ತಾಗಿದೆ.

ಹರಿಕಥೆ

ಮೈಸೂರು ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೮॥ ಗಂಟೆಗೆ ಶ್ರೀ ಸಿ ಎಸ್ ಎಂ. ದಾಸ್‌ರವರಿಂದ 'ಭಕ್ತ ಸುಧಾಮ" ಎಂಬ ಹರಿಕಥೆ ನಡೆಯುವುದು.

○ ಅಮೆರಿಕಾ ವಿಮಾನ ದಳದ ಬಾಂಬರ್ ವಿಮಾನವೊಂದು ಅಕಸ್ಮಾತ್ತಾಗಿ ಕಿಂಗ್ಸ್‌ಪ್ಸ್ ನಗರದ ಬಳಿ ನದಿಯೊಂದರಲ್ಲಿ ಬಿದ್ದುದರಿಂದ ೪ ಮಂದಿ ನೀರಿನ ಪಾಲಾದರೆಂದು ತಿಳಿದುಬಂದಿದೆ.

ಚರ್ಚಿಲ್, ಟ್ರೂಮನ್ ಸ್ಟಾಲಿನ್ ಭೇಟಿ

ಬ್ರಿಟನ್ನಿನ ನೂತನ ಪ್ರಧಾನಿ ಚರ್ಚಿಲ್ ಹೊಸ ಸರ್ಕಾರವನ್ನು ರಚಿಸಿದ ನಂತರ ಪರ್ಷಿಯ ಮತ್ತು ಈಜಿಪ್ಟ್ ಸೇರಿದ ಮಧ್ಯಪ್ರಾಚ್ಯ ರಾಷ್ಟ್ರಗಳ ಸಮಸ್ಯೆಯ ಪರಿಹಾರದ ಬಗ್ಗೆ ತಮ್ಮ ಮಂತ್ರಿ ಮಂಡಲದವರೊಡನೆ ಪರಿಶೀಲನೆ ನಡೆಸುವರೆಂದು ಹೇಳಲಾಗಿದೆ. ಬ್ರಿಟನ್ ಮತ್ತು ಅಮೆರಿಕೆಗಳಿಗೆ ಸಂಬಂಧಪಟ್ಟ ವಿಷಯವಾಗಿ ಅವರು ಸಧ್ಯದಲ್ಲೇ ಟ್ರೂಮನ್ನರನ್ನು ಭೇಟಿ ಮಾಡಲು ಆಶಿಸಿರುವರೆಂದೂ, ಅಂತರ ರಾಷ್ಟ್ರೀಯ ಬಿಕ್ಕಟ್ಟಿನ ಪರಿಹಾರಕ್ಕಾಗಿಯೂ ಮತ್ತು ಶಾಂತಿ ಸ್ಥಾಪನಾ ಕಾರ್ಯವನ್ನು ಕೈಗೊಳಿಸುವ ಸಲುವಾಗಿಯೂ ತ್ರಿರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನ ಕರೆಯಲು ಚರ್ಚಿಲ್ಲರು ಪ್ರಯತ್ನಿಸುವರೆಂದೂ ಹೇಳಲಾಗಿದೆ.

ಶಸ್ತ್ರಾಸ್ತ್ರಗಳ ಸಂಭಾಷಣೆಗೆ ರಷ್ಯದ ಕರೆ

ಈ ವಾರದಲ್ಲೇ ಬ್ರಿಟನ್, ಫ್ರಾನ್ಸ್, ರಷ್ಯ ಮತ್ತು ಅಮೆರಿಕಾ ವಿದೇಶ ಮಂತ್ರಿಗಳ ಸಭೆಯನ್ನು ಕರೆಯಬೇಕೆಂದು ತಿಳಿದುಬಂದಿದೆ. ಚರ್ಚಿಲ್ಲರು ಬ್ರಿಟಿಷ್ ಪ್ರಧಾನಿಯಾಗಿರುವುದರಿಂದ ರಷ್ಯ ಈ ಸಭೆ ಸೇರಿಸಲು ಕಾತರವಾಗಿದೆಯೆಂದು ಗೊತ್ತಾಗಿದೆ.

ಬ್ರಿಟಿಷ್ ಪ್ರವೀಣರಿಗೆ ಈಜಿಪ್ಟಿನ ಬಹಿಷ್ಕಾರ

ಅಂತರ ರಾಷ್ಟ್ರೀಯ ಬಿಕ್ಕಟ್ಟುಗಳ ಪರಿಣಾಮವಾಗಿ ಈ ಸಮಯದಲ್ಲಿ ಬ್ರಿಟಿಷ್ ಜನರು ಹಾಕುವ ಅರ್ಜಿಗಳನ್ನು ಈಜಿಪ್ಟಿನ ಸರಕಾರ ತಿರಸ್ಕರಿಸುತ್ತಿದೆ. ಈಜಿಪ್ಟಿನ ಕೆಲಸಗಳಲ್ಲಿ ಬ್ರಿಟಿಷ್ ಪ್ರವೀಣರನ್ನು ಸೇರಿಸಿಕೊಳ್ಳಬಾರದೆಂದು ಅಲ್ಲಿನ ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ. ಸರ್ಕಾರೀ ಕೆಲಸಗಳಿಗೆ ಬ್ರಿಟಿಷ್ ಪ್ರವೀಣರನ್ನು ಸೇರಿಸಿಕೊಳ್ಳಬಾರದೆಂದು ನಿರ್ಧರಿಸಲಾಗಿದೆ.

ಬಾಂಬು ಆಸ್ಫೋಟಿಸಿ ೧೪ ಜನ ಇಂಜನಿಯರರ ಮರಣ

ಕೊರಿಯಾದಲ್ಲಿ ಸೀಜ್ ಫೈರ್ ತಾಟಸ್ಥ್ಯ ಕ್ಷೇತ್ರವನ್ನು ಸೂಚಿಸುವ ಒಂದು ಸಣ್ಣ ಬಾಂಬು ನೆನ್ನೆ ದಿನ ಮೊದಲ ನಿಶ್ಚಿತ ಕೇಂದ್ರವಾದ ಪಾನ್ಮುನ್‌ಜಾನ್ ಬಳಿ ಆಸ್ಫೋಟಿಸಿದುದರಿಂದ ಬೆಂಕಿ ತಗುಲಿ ೧೪ ಮಂದಿ ವಿಶ್ವ ಸಂಸ್ಥೆ ಸೈನ್ಯದವರು ಬಿಂದು ಮೃತರಾದರು. ತೀವ್ರವಾಗಿ ಗಾಯಗೊಂಡ ಹಲವರನ್ನು ವಿಮಾನದಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ರೈಲು ಪ್ರಯಾಣಿಕರಿಗೆ ಗುಂಡು ತಗುಲಿ ಮರಣ

ಚೀನಿಯರಿಗೆ ಸೇರಿದ ಸೈನ್ಯವೊಂದು ರೈಲ್ವೆ ಬಂಡಿಗಳ ಮೇಲೆ ದಾಳಿ ನಡೆಸಿ ರೈಲ್ವೆ ಗಾಡಿಯನ್ನು ಕರೆದೊಯ್ಯುತ್ತಿದ್ದ ಪೋಲೀಸರ ಹತ್ತಿರ ಇದ್ದ ತುಪಾಕಿ ಅಕಸ್ಮಾತ್ತು ಹಾರಿದುದರಿಂದ ಇಬ್ಬರು ಪ್ರಯಾಣಿಕರು ಮೃತಪಟ್ಟರೆಂದು ವರದಿಯಾಗಿದೆ. ಇತರರಿಗೆ ಗಾಯಗಳಾಗಿದ್ದು ಅವರ ಸ್ಥಿತಿ ತೀವ್ರವಾಗಿದೆ.

ಜಹಗೀರುದಾರರಿಗೆ ೧॥ ಕೋಟಿ ರೂ. ಪರಿಹಾರ

ಸಂಸ್ಥಾನದಲ್ಲಿ ಜಹಗೀರಿ ಮತ್ತು ಇನಾಂಗಳನ್ನು ರದ್ದು ಮಾಡುವ ಸಂಬಂಧದಲ್ಲಿ ಸುಮಾರು ೨,೧೦೦ ಇನಾಂ ಗ್ರಾಮಗಳು ಸರ್ಕಾರಕ್ಕೆ ಸೇರುವುವೆಂದೂ ಇವುಗಳ ಮಾಲೀಕರಿಗೆ ಒಂದೂ ಮುಕ್ಕಾಲು ಕೋಟಿ ರೂ. ಪರಿಹಾರ ಕೊಡಬೇಕಾಗುವುದೆಂದೂ ತಿಳಿದುಬಂದಿದೆ. ಶೃಂಗೇರಿ ಜಹಗೀರಿಯು ಅಡಳಿತಕ್ಕೆ ಸೇರಿದ್ದ, ಜಹಗೀರಿಯ ಒಳಗಿನ ೭೪ ಗ್ರಾಮಗಳು ಮತ್ತು ಸುಮಾರು ಒಂದು ಲಕ್ಷ ರೂ ವರಮಾನ ಬರುವ ಅರಣ್ಯವು ಮಠದ ಅಧೀನದಲ್ಲೇ ಇರುವುವು ಮತ್ತು ಮಠಕ್ಕೆ ಇದುವರೆಗೆ ಇದ್ದ ಹಕ್ಕು ಬಾಧ್ಯತೆಗಳು ಮುಂದೆಯೂ ಇರುವುವು.

ಲಿಯಾಖತರ ಸ್ಮಾರಕಕ್ಕಾಗಿ ಅಮೃತ ಶಿಲೆ ಪ್ರತಿಮೆ

ಪಾಕಿಸ್ತಾನದ ಮಾಜಿ ಪ್ರಧಾನಿ ಲಿಯಾಖತ್ ಆಲಿಖಾನರು ಕೊಲೆಮಾಡಲ್ಪಟ್ಟ ಸ್ಥಳದಲ್ಲೇ ೧೫ ಅಡಿ ಎತ್ತರದ ಅಮೃತ ಶಿಲೆಯ ಸ್ಮಾರಕವೊಂದನ್ನು ನಿರ್ಮಿಸಲು ರಾವಲ್ಪಿಂಡಿ ಮುಸ್ಲಿಂ ಲೀಗಿನವರು ನಿರ್ಧರಿಸಿ ಇದಕ್ಕಾಗಿ ೩ ಲಕ್ಷ ರೂಗಳ ನಿಧಿಯೊಂದನ್ನು ಸಂಗ್ರಹಿಸಲಿರುವರೆಂದು ಗೊತ್ತಾಗಿದೆ.

ಹಳೆಯ ವೈರಕ್ಕಾಗಿ ಇಡೀ ಸಂಸಾರದ ಕೊಲೆ

ಪಂಜಾಬಿನ ಲಯಾಲ್‌ಪುರ ಜಿಲ್ಲೆಯ ಸಕಿ ಎಂಬ ಹಳ್ಳಿಯಲ್ಲಿ ಎರಡು ಕುಟುಂಬಗಳಿಗೆ ಇದ್ದ ಹಳೆಯ ವೈರಕ್ಕಾಗಿ ಒಂದು ಸಂಸಾರದವರು ಮತ್ತೊಂದರ ಮನೆಗೆ ನುಗ್ಗಿ ಅಲ್ಲಿದ್ದ ಐದು ಜನ ಗಂಡಸರು, ಐದು ಜನ ಹೆಂಗಸರು ಮತ್ತು ನಾಲ್ಕು ಮಕ್ಕಳು- ಎಲ್ಲರನ್ನೂ ಕೊಂದು ಹಾಕಿರುವುದಾಗಿ ವರದಿಯಾಗಿದೆ.

ಸ್ವದೇಶಿ ಕಾಯಿ ಕೊಳ್ಳಬೇಕೆಂದು ಸತ್ಯಾಗ್ರಹ

ಕಛೇರಿಗಳ ಉಪಯೋಗಕ್ಕಾಗಿ ವಿದೇಶಿ ಕಾಯಿಯನ್ನು ತರಿಸಿಕೊಳ್ಳಬೇಕೆಂಬ ಮದ್ರಾಸು ಸರ್ಕಾರದ ತೀರ್ಮಾನವನ್ನು ಪ್ರತಿಭಟಿಸಲು ಮದ್ರಾಸಿನ ಕಾಯಿ ತಯಾರಕರೊಬ್ಬರು ನವೆಂಬರ್ ೭ ರಿಂದ ಅಕೌಂಟೆಂಟ್ ಕಛೇರಿಯ ಮುಂದೆ ಸತ್ಯಾಗ್ರಹವನ್ನು ಹೂಡಲಿದ್ದಾರೆ.

ದೇವರೆಂದು ಹೇಳಿಕೊಳ್ಳುತ್ತಿದ್ದ ಸಾಧುವಿಗೆ ೭ ವರ್ಷ ಸಜಾ

ಬಂಗಾಳದ ಲೇಕ್‌ಸಿಟಿ ಸರೋವರದ ಒಂದು ದ್ವೀಪದಲ್ಲಿ ವಾಸಿಸುತ್ತಿದ್ದ ಸಾಧುವೊಬ್ಬನು ತಾನೇ ದೇವರೆಂದು ಹೇಳಿಕೊಳ್ಳುತ್ತಿದ್ದನು. ಅವನನ್ನು ಸುಮಾರು ೧೩ ಮಂದಿ ಭಕ್ತರು ಪೂಜಿಸುತ್ತಿದ್ದರು. ಈಗ ೧೦ ದಿನಗಳ ಹಿಂದೆ ಪೋಲೀಸ್ ತಂಡವೊಂದು ಅವನನ್ನು ಪ್ರಶ್ನಿಸಲು ಹೋದಾಗ ಅವನು ತನ್ನ ಹಿಂಬಾಲಕರ ಸಹಾಯದಿಂದ ೩ ಜನ ಪೋಲೀಸರನ್ನು ಕೊಂದನು. ಇದಕ್ಕಾಗಿ ಅವನಿಗೆ ೭ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ.

○ ದಕ್ಷಿಣ ಅಮೆರಿಕದ ಕೊಲಂಬಿಯ ರಾಜ್ಯದಲ್ಲಿ ಒಂದು ಕಡೆ ೫೦ ಜನರು ಕುಳಿತಿದ್ದ ಬಸ್ಸು ಮಗುಚಿ ಕೊಂಡ ಪರಿಣಾಮವಾಗಿ ೧೩ ಜನ ಸತ್ತು ೩೦ ಜನರಿಗೆ ಗಾಯವಾಗಿರುವುದು. ೫ ಜನರ ಪರಿಸ್ಥಿತಿ ತುಂಬಾ ವಿಷಮಿಸಿದೆ.

ಸಿ. ರಾಜಗೋಪಾಲಾಚಾರಿಯವರು



ಗವರ್ನರ್ ಜನರಲ್ಲರಾಗಿದ್ದಾಗ ಪ್ರಭುತ್ವ ಭವನದಲ್ಲಿ ಭೂಮಿ ಉಳುತ್ತಿದ್ದ ದೃಶ್ಯ

ನೆಹರೂ ವಿರುದ್ಧ ಚೋಸರ ಅನುಯಾಯಿಯು ಸ್ಪರ್ಧೆ

[illegible] ಪಂಡಿತ ನೆಹರೂರವರ [illegible] ಸುಭಾಷ್ ಚಂದ್ರ [illegible] ಲಿಗರಾದ ಕೃಷ್ಣ [illegible] ಸ್ಪರ್ಧಿಸಲು [illegible] ಗೆ [illegible] ನೆಹರೂ ಸರ್ಕಾರ [illegible] ತಂತ್ರ್ಯ [illegible] "ಸತ್ಯಾಗ್ರಹ" ಪಾಕ್ಷಿಕ ಸಂಬಿಕೆ

[illegible] ಪತ್ರಿಕಾ [illegible] ಇವರ [illegible] ಎರಡು [illegible]

ರಾಜಧಾನಿಯಲ್ಲಿ ಕೈಗಾರಿಕಾ ಉಪನಗರ

[illegible]

[illegible]

ರಾಜಕಮಲ್, ಮೈಸೂರು

[illegible]

ಪಿಚ್ಚೆಕಾರಿ ಚಿತ್ರ

ದೆಹಲಿಗೆ ಪುನಃ ಕಾಂಗ್ರೆಸ್ ಚುನಾವಣಾಸಮಿತಿಯವರು

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ [illegible] ರೆಡ್ಡಿಯವರನ್ನು ಪಾರ್ಲಿಮೆಂಟ್ ಸಭೆಗೆ ಉಮೇದುವಾರರಾಗಿ ಆರಿಸಬೇ[ಕೆಂದು] ಮೈಸೂರಿನ ಕಾಂಗ್ರೆಸ್ ಚುನಾವಣಾ ಸಮಿತಿಯವರು ಶಿಫಾರಸು ಮಾಡಿರುತ್ತಾರೆಂದು ಗೊತ್ತಾಗಿದೆ ಅಪೀಲು[ಗ]ಳನ್ನು ಇತ್ಯರ್ಥ ಪಡಿಸಲು ಕೇಂದ್ರ ಸಮಿತಿಯವರ ಸಹಾಯಕ್ಕಾಗಿ ಈ ಸಮಿತಿಯವರು ಗನೇ ತಾ। ದೆಹಲಿಗೆ ತೆರಳುವರೆಂದು ಹೇಳಲಾಗಿದೆ

ಒಂದು ಎಕರೆ ಭೂಮಿಯಲ್ಲಿ ೭೨೬ ಮಣ ಆಲೂಗೆಡ್ಡೆ

ಉತ್ತರ ಪ್ರದೇಶದಲ್ಲಿ ಮಾಧವ ಕೃಪಾಲ್ ಎಂಬವರು ತಮಗೆ ಸೇ[ರಿ]ದ [illegible] ಎಕರೆ ಜಮೀನಿನಲ್ಲಿ ಎಕರೆ ಒಂದಕ್ಕೆ [illegible] ಮಣದಂತೆ ಆಲೂಗೆಡ್ಡೆಯನ್ನು ಬೆಳೆದು ರಿಕಾರ್ಡನ್ನು ಸ್ಥಾಪಿಸಿರುತ್ತಾರೆ ಅವರಿಗೆ ಜ ಸಾವಿರ ರೂ ಬಹುಮಾನವು ದೊರೆತಿದೆ

ಉಪನ್ಯಾಸ

ನಂಜನಗೂಡು ಭಾರತೀ ಮಂದಿರದವರು ಈ ವಾರದ ಬಾಲಿಕರ ಮಾಧ್ಯಮಿಕ [ಶಾಲೆ]ಯಲ್ಲಿ ಮಧ್ಯ ಪ್ರದೇಶದ ಸಾಗರ್ ವಿಶ್ವ ವಿದ್ಯಾಲಯದ ಶ್ರೀ ಎಸ್ ವಿ [illegible]ರವರಿಂದ ಉಪನಿಷದ್ವಸ್ತು ಮತ್ತು ಭೌತಿಕ ವಿಜ್ಞಾನ ಎಂಬ ವಿಷಯವಾಗಿ ಬರುವ ಗನೇ ತಾ। ಸಂಜೆ ೫ ಗಂಟೆಗೆ ಉಪನ್ಯಾಸವನ್ನೇರ್ಪಡಿಸಿರುತ್ತಾರೆ

THIRTHA & COMPANY,

Narayana Sastry Road

PHONE 537

Clearing & Forwarding AGENTS

ಚರ್ಚಿಲ್ ಹೆಸರಿನ ರಸ್ತೆ ಬೋರ್ಡು ಕೀಳಲಾಯಿತು

ಪರ್ಷಿಯದ ರಾಜಧಾನಿ ಟೆಹರಾನಿನಲ್ಲಿ ಒಂದು ಕಡೆ ಚರ್ಚಿಲ್ಲರ ಹೆಸರಿನ ರಸ್ತೆಯ ಬೋರ್ಡನ್ನು ಜನರು ಕಿತ್ತು ಹಾಕಿ ಈಗ ಅಲ್ಲಿ "ಮುಸಾದಿಕ್ ರಸ್ತೆ ಎಂದು ಹೊಸ ಬೋರ್ಡನ್ನು ನೆಟ್ಟಿರುತ್ತಾರೆ

ಲೌಡ್‌ಸ್ಪೀಕರ್ ಕಾಟ ತಪ್ಪಿಸಲು ಕ್ರಮ

ಲೌಡ್ ಸ್ಪೀಕರುಗಳನ್ನು ಸಿಕ್ಕಿದಹಾಗೆ ಉಪಯೋಗಿಸುವುದರಿಂದ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ನಿವಾರಿಸಲು ಮದ್ರಾಸು ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿ, ಜನರಿಗೆ ತೊಂದರೆ ಕೊಡುವ ರೀತಿಯಲ್ಲಿ ವರ್ತಿಸುವವರನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ತಿಳಿಸಿರುತ್ತಾರೆ

ರೀಹಬಿಲಿಟೇಷನ್ ಅಧಿಕಾರಿಗಳ ಕಛೇರಿ ಮೈಸೂರು ಸಿಟಿ

ಮಾರಾಟದ ಪ್ರಕಟಣೆ

ನಂ AI 83/51 -52 ತಾ 16 10 51

ಇಲಾಖೆಯ ಎ ಮೈ 9504 ಬೆಡ್‌ಫೋರ್ಡ್ ನಂಬರಿನ ಲಾರಿಯ ಹರಾಜು ಮಾರಾಟ

ಮೈಸೂರು ಗಾಂಧಿ ಚೌಕದಲ್ಲಿರುವ ರೀಹಬಿಲಿಟೇಷನ್ ಕಛೇರಿಯ ಕಟ್ಟಡದಲ್ಲಿ ದಟ್ಟಿರುವ ಎಂ ಮೈ 9504 ಬೆಡ್‌ಫೋರ್ಡ್ ಲಾರಿಯನ್ನು ರೀಹಬಿಲಿಟೇಷನ್ ಕಛೇರಿಯಲ್ಲಿ 1951 ನೇ ನವೆಂಬರ್ ೧ನೇ ತಾ। ಬೆಳಿಗ್ಗೆ 11 ಗಂಟೆಗೆ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ ಮಾರಾಟದ ಷರತ್ತು ಮತ್ತು ನಿಯಮಗಳನ್ನು ಮೈಸೂರು ರೀಹಬಿಲಿಟೇಷನ್ ಕಛೇರಿಯಲ್ಲಿ ಕೆಲಸದ ದಿನಗಳಲ್ಲಿ ಯಾವಾಗಲಾದರೂ ಬೆಳಿಗ್ಗೆ 11 ರಿಂದ ಸಂಜೆ ೫ ಘಂಟೆವರೆಗೆ ನೋಡಬಹುದು

(ರುಜು) ಎಚ್ ಜಿ ವಿ. ರೆಡ್ಡಿ,
ರೀಹಬಿಲಿಟೇಷನ್ ಅಧಿಕಾರಿ
ಮೈಸೂರು ನಗರ

Edited, Printed and Published by A R Nagarajan, at Sadhvi Press D Subbiah Road Mysore

ಬರುವ ಏಪ್ರಿಲ್ಲಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಬರುವ ಏಪ್ರಿಲ್ ತಿಂಗಳ ಕಡೆಯ ವಾರದಲ್ಲಿ ೩೫ನೇ ಕನ್ನಡ ಸಾಹಿತ್ಯ ಸಮ್ಮೇಳನವು ಹೊಯ್ಸಳ ಕರ್ನಾಟಕದ ರಾಜ್ಯವಾಗಿದ್ದ ಬೇಲೂರಿನಲ್ಲಿ ಸೇರು[ವು]ದು ಸಮ್ಮೇಳನದ ಸ್ವಾಗತ ಸಮಿತಿ ರಚನೆ ಮುಂತಾದ ಕೆಲಸಗಳು ಅಲ್ಲಿ ಈಗಾಗಲೇ ಪ್ರಾರಂಭವಾಗಿವೆ

ಚಂದಾದಾರರಲ್ಲಿ ವಿನಂತಿ

ಮೈಸೂರು ಮತ್ತು ಇತರ ಕಡೆಗಳಲ್ಲಿರುವ ನಮ್ಮ ಚಂದಾದಾರರು ಮಾಸಿಕ ಯಾನಾ ಚಂದಾ ಹೊಬಲಗು ಎಂಟ್ಟು ಆಣೆಯನ್ನು ನಮ್ಮ ಏಜೆಂಟರಿಗೆ ಮುಂ[ಗ]ಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ವಿನಂತಿ

—ವ್ಯವಸ್ಥಾಪಕ, ಸಾಧ್ವಿ

ಮೈಸೂರು ವಿಶ್ವ ವಿದ್ಯಾಲಯ ಪ್ರಕಟಣೆ

ಮೈಸೂರು ವಿಶ್ವ ವಿದ್ಯಾಲಯದ ವಾರ್ಷಿಕ ಘಟಿಕೋತ್ಸವವು 1951 ನೇ ಡಿಸೆಂಬರ್ [illegible]ನೇ ತಾರೀಖು ಶನಿವಾರ ನಡೆಯುವುದೆಂದು ಈ ಮೂಲಕ ಪ್ರಚುರಪಡಿಸಲಾಗಿದೆ

ಡಿಗ್ರಿ ಪರೀಕ್ಷೆಗೆ ತಾವು ಹಿಂದೆ ಓದಿದ ಕಾಲೇಜುಗಳ ಮುಖ್ಯಾಧಿಕಾರಿಗಳಿಂದ ವಿದ್ಯಾರ್ಥಿಗಳು ಘಟಿಕೋತ್ಸವದ ಪ್ರವೇಶ (ಖುದ್ದಾಗಿಯೂ ಮತ್ತು ಗೈರು ಹಾಜರಿಯಲ್ಲಿ) ಅರ್ಜಿ ನಮೂನೆಗಳನ್ನು ಪಡೆಯಬಹುದು

ಘಟಿಕೋತ್ಸವಕ್ಕೆ ಪ್ರವೇಶದ ಅರ್ಜಿಗಳು ಮೈಸೂರು ವಿಶ್ವ ವಿದ್ಯಾಲಯದ ರಿಜಿಸ್ಟ್ರಾರಿಗೆ 1951 ನೇ ನವೆಂಬರ್ 8 ನೇ ತಾರೀಖು ಗುರುವಾರ ಅಥವಾ ಅದಕ್ಕೆ ಮುಂಚೆ ತಲುಪಬೇಕು

1951 ನೇ ನವೆಂಬರ್ 8 ನೇ ತಾರೀಖು ನಂತರ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುವುದಿಲ್ಲ

ಅರ್ಜಿ ನಮೂನೆಗಳನ್ನು ಟಪಾಲು ಮೂಲಕ ಕಳುಹಿಸಬೇಕೆಂದು ಅಪೇಕ್ಷಿಸುವವರು ಅದಕ್ಕಾಗಿ ಎರಡು ಆಣೆಯ ಅಂಚೆ ಸ್ಟಾಂಪನ್ನಾಗಲೀ ಅಥವಾ ತಮ್ಮ ವಿಳಾಸವನ್ನು ಬರೆದ ಅಂಚೆ ಲಕೋಟೆಯನ್ನಾಗಲಿ ತಾವು ಓದಿದ ವಿದ್ಯಾ ಸಂಸ್ಥೆಯ ಮುಖ್ಯಾಧಿಕಾರಿಗಳಿಗೆ ಕಳುಹಿಸಬೇಕು

(ರುಜು) ಸಿ. ರಂಗಾಚಾರ್,
ರಿಜಿಸ್ಟ್ರಾರ್

ಪ್ರಭುದೇವಾ ಟಾಕೀಸ್
ಪ್ರತಿ ದಿನ ೩ ದ ಪ್ರದರ್ಶನಗಳು
ದೀಪಾವಳಿ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ
29-10-51 ನೇ ಸೋಮವಾರದಿಂದ ಪ್ರಾರಂಭ

ಮಾಯಾ ಪಿಲ್ಲಿ

ರಘುರಾಮಯ್ಯ ಕಾಂಚನ ಕುಮಾರಿ, ಶಿವರಾವ್,
ಋಷ್ಯೇಂದ್ರಮಣಿ ಲಕ್ಷ್ಮೀರಾಜ್ಯಂ ಪಾತ್ರವಹಿಸಿರುವ ಉನ್ನತ ತೆಲುಗು ಚಿತ್ರ
ಎರಡು ವಾರಗಳ ಕಾಲ ಎಲ್ಲಾ ಸಿಥಿಯೇಟರುಗಳಲ್ಲಿ ಯಶಸ್ವಿಯಾಗಿ ಓಡುತ್ತಿದೆ ಮತ್ತು
ಶ್ರೀ ಪಾಸುಗಳನ್ನು ಮುಕ್ತಾ ಮಾಡಿರುತ್ತದೆ

ಅಬೀದ್ ಕಂಪನಿಯವರ
ಭಾರಿ ಹರಾಜು ಮಾರಾಟ
ಪ್ರತಿ ಭಾನುವಾರ [illegible] ಘಂಟೆಗೆ
ಮುಂದಿನ ದಿನಾಂಕ
1951 ನೇ ನವೆಂಬರ್ 4 ನೇ ತಾರೀಕು ಭಾನುವಾರ

ದೀಪಾವಳಿ ಹಬ್ಬಕ್ಕೆ ಮಾತ್ರ ಬೆಲೆ ಕಡಿಮೆ ಮಾಡಿರುತ್ತೆ
ಯಾವಾಗಲೂ ಹಸನಾದ ಬೆಣ್ಣೆ ಮತ್ತು ತುಪ್ಪವನ್ನು ಉಪಯೋಗಿಸಿ
ಬೆಣ್ಣೆ ಸೀರ್ 1 ಕ್ಕೆ 5-14-0
ದಯವಿಟ್ಟು ಇಂದೇ ಭೇಟಿ ಕೊಡಿ
ಎಂ. ಎಸ್. ನಾಗಣ್ಣ ಅಂಡ್ ಸನ್ಸ್
100 ಆಡಿ ರಸ್ತೆ ಮೈಸೂರು

ಗೌ। ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ನಿ ಪೂನಾ ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಅಂಡ್ ಸನ್ಸ್
ಬಿ. ಎ. ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ಶ್ರೀಗಂಧ 792 । ವಂದೇ ಮಾತರಂ । ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೩೦-೧೦-೫೬ [ಸಂಚಿಕೆ ೮೧

ಇಂಡೋನೇಷ್ಯ ಅಧ್ಯಕ್ಷರ ಕೊಲೆಗೆ ಪಿತೂರಿ

ಸೈಪ್ರೋವಿನಲ್ಲಿ ಜರೂರು ಪರಿಸ್ಥಿತಿಯ ಘೋಷಣೆ

ಯುದ್ಧೋತ್ಸಾಹಿ ಚರ್ಚಿಲರು ಮ ತ್ತೆ ಬ್ರಿಟನ್ನಿನ ಪ್ರಧಾನಿಯಾಗಿ ಚುನಾ ಯಿತರಾಗಿ ಬಂದುದರಿಂದ ಅವರು ಈಜಿ ಪ್ಟನ್ನು ಎದುರಿಸಲು ಶಸ್ತ್ರಾಸ್ತ್ರ ಪ್ರಯೋ ಗ ಮಾಡಬಹುದೆಂದು ಅಲ್ಲಿನ ಪತ್ರಿಕೆ ಗಳು ಬರೆದಿವೆ. ಅಮೆರಿಕನ್ನರ ಮತ್ತು ಬ್ರಿಟಿಷರ ವಿರುದ್ಧವಾಗಿ ಸೈಪ್ರೋವಿನಲ್ಲಿ ವಿದ್ಯಾರ್ಥಿಗಳು ಘೋಷಣಾ ಪ್ರದರ್ಶನ ವನ್ನು ನಡೆಸಬಹುದೆಂದು ...ಬಂದಿಗೊಂ ತ ಅಲ್ಲಿನ ಮೇಲ್ಮಂಡ ರಾಷ್ಟ್ರಗಳ ರಾ ... ಕಚೇರಿಗೆ ರಕ್ಷಣಾ ಪಡೆಯನ್ನು ... ಹಿಸಲಾಗಿದೆ. ಈಜಿಪ್ಟ್ ರಾಜಧಾನಿ ... ಸೈಪ್ರೋವಿನಲ್ಲಿ ಜರೂರು ಪರಿಸ್ಥಿತಿಯ ... ಘೋಷಿಸಲಾಗಿದೆ.

ಹಾರುತ್ತಿದ್ದ ವಿಮಾನದಲ್ಲಿ ಕಪಿಗಳ ಹಾವಳಿ

...ಮಗ್ರಿವಾಹಕ ಬ್ರಿಟಿಷ್ ವಿಮಾನ ... ಮ ೨೬ನೇ ತಾ|| ಕಲ್ಕತ್ತಾದಿಂದ ... ಗೆ ಹೋಗುತ್ತಿದ್ದಾಗ, ಅಮೆರಿಕ ... ಒಯ್ಯಲ್ಪಡುತ್ತಿದ್ದ ನೂರು ಕೊ ... ನ್ನು ಕೂಡಿದ್ದ ಒಂದು ಬೋನಿನಿಂ ... ಲವು ಕಪಿಗಳು ತಪ್ಪಿಸಿಕೊಂಡು ... ಕ್ಕೆ ಬಂದು ವಿಮಾನವಲ್ಲೆಲ್ಲಾ ... ತೊಡಗಿದುವೆಂದೂ ಅವನ್ನು ... ಸಲು ತಡಲೇಕಾಯಿತು ... ತಿಂದಿಗಳ ... ತೋರಿಸ ... ಕೆಲವು ಕಪಿಗಳ ... ಎಸೆದ ... ಕಾಯಿತೆಂದೂ ವರದಿಯಾ ... ವಿಮಾನವಲ್ಲಿ ಪ್ರಯಾಣ ... ತ್ತಿದ್ದ ಒಂದು ಹುಲಿಯೂ ಬೋ ... ತಪ್ಪಿಸಿಕೊಂಡಿದ್ದರೆ ಪ್ರವಾಹ ... ತ್ತೆಂದು ವೈಮಾನಿಕನು ... ನೆ.

ಹೈದರಾಬಾದು ಸೆರೆಮನೆ ಮೇಲೆ ಕಮ್ಯೂನಿಸ್ಟರ ಧಾಳಿ

...ಳೆದ ಗುರುವಾರ ರಾತ್ರಿ, ಹೈದರಾಬಾ ... ನಲಗೊಂಡ ಜಿಲ್ಲೆಯ ಹ್ಯೂಬರ್ ... ನ ಜೈಲಿನ ಮೇಲೆ ಪೋಲೀಸರನ್ನು ... ಯಲ್ಲಿ ಶಸ್ತ್ರಧಾರಿಗಳಾದ ಕಮ್ಯೂನಿ ... ಧಾಳಿ ನಡೆಸಿದರು. ಇದರಿಂದ ನಾ ... ಜನ ಬಂದಿಗಳು ಗಾಯಗೊಂಡರು ... ಒಬ್ಬನಿಗೆ ತೀವ್ರ ಗಾಯಗಳಾ ... ಗಿ.

ಉಪನ್ಯಾಸ ಹರಿಕಥೆ ಪುರಾಣ

ಮೈಸೂರು ಮಂಡಿ ಮೊಹಲ್ಲಾ ಕಾಳ ... ಗುಡಿ ಬೀದಿ ಶ್ರೀ ಚೌಡೇಶ್ವರೀ ... ಲಿಂಗೇಶ್ವರ ಸ್ವಾಮಿ ದೇವಸ್ಥಾನ ... ದೇವಾಂಗ ಸಂಘದ ಆಶ್ರಯದಲ್ಲಿ ... ನಿತ್ಯ ಮಧ್ಯಾಹ್ನ ೪ ಗಂಟೆಯಿಂದ ... ಗಂಟೆಯವರೆಗೆ ವೇ|| ಬ್ರಂ|| ಶ್ರೀ ... ನಂದ ಸ್ವಾಮಿಗಳವರಿಂದ ಅಧ್ಯಾ ... ವಿಚಾರವಾಗಿ ಉಪನ್ಯಾಸವೂ ... ಯಿಂದ ೭ ಗಂಟೆಯವರೆಗೆ ವಾ|| ... ಪಾಯಗೌಡರು, ಹಿರಣ್ಣಯ್ಯನವ ... ಗಿಂದ ರಾಮಾಯಣ ಪುರಾಣವೂ, ... ಸಂಜೆ ೯ ಗಂಟೆಗೆ ಅನಕೂಪಾಕ್ಯ ... ಕ್ಷ ಮ|| ರಾ|| ಪಾಲಹಳ್ಳಿ ಗುಂಡೂ ... ಯಿಂದ ಅಸ್ತಿಕ ಚರಿತ್ರೆ ಎಂಬ ಹರಿ ... ಥೆಯೂ, ಅಮ್ಮನವರಿಗೆ ಲಕ್ಷ್ಮೀ ತಿಲಂ ... ರವೂ ನಡೆಯುವುವು.

ಕಾಂಗ್ರೆಸ್ ಉಮೇದುವಾರಿಕೆಗೆ ೩೫ ಸಾವಿರ ಅರ್ಜಿಗಳು

ಭಾರತದಾದ್ಯಂತ ಲೋಕಸಭೆ ಮ ತ್ತು ಪ್ರಾಂತೀಯ ಶಾಸನ ಸಭೆಗಳಿಗೆ ಇ ರುವ ೪ ಸಾವಿರ ಸ್ಥಾನಗಳಿಗೆ ೩೫ ಸಾವಿ ರ ಅರ್ಜಿಗಳು ಬಂದಿವೆಯೆಂದೂ ಇವರ ... ಕೆ ತೀರ್ಮಾನ ಮಾಡುವುದು ... ಪ್ರ ಚುನಾವಣಾ ಸಮಿತಿ ... ದ ಕೆಲಸವಾಗಿದೆ ... ಮವಾರ ... ಗ್ರೆಸ್ ... ತ್ತು ಪ್ರತ್ಯಾಹ್ವಾನವನ್ನು ... ಗಿ ಅಭ್ಯರ್ಥಿಗಳ ... ವ್ಯಾಗಳನ್ನು ಪರಿಶೀಲಿಸಿ ... ಯಂ ಅವನ್ನು ರಿಕಾರ್ಡ ... ಗುವುದೆಂದ ... ತ್ತಾಗಿದೆ ... ಳವಾ ತಮ್ಮ ಮಿತ್ರರ ಉಮೇದುವಾರಿಕೆಯನ್ನು ಪುಷ್ಟೀಕರಿಸುವ ಜನರ ... ದಿಂದ ದೆಹಲಿಯ ಎ.ಐ.ಸಿ.ಸಿ. ಕಛೇರಿ ಯ ಆವರಣವು ಸದಾ ಕಿಕ್ಕಿರಿದು ತುಂಬಿರುವುದಾಗಿ ವರದಿಯಾಗಿದೆ.

ಸೂಚನೆ

ದೀಪಾವಳಿ ಹಬ್ಬದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ. — ವ್ಯವಸ್ಥಾಪಕ

ಹಿಂದೀ ತರಗತಿಗಳು

ರಾಷ್ಟ್ರದ ಭಬ್ಬವಾಗ ಮತ್ತು ಆಗಸ್ ಪರೀಕ್ಷೆಗಳಿಗೆ ಕೂಳಿತುಕೊಳ್ಳುವ ವಿದ್ಯಾ ರ್ಥಿ ಮತ್ತು ವಿದ್ಯಾರ್ಥಿನಿಯರುಗಳ ... ಲುವಾಗಿ ಸೋನಾರ್ ಬೀದಿಯ ನಂ ... ೫ನೇ ಮನೆಯಲ್ಲಿರುವ ಹಿಂದೀ ಪಾಠ ಶಾಲೆಯಲ್ಲಿ ಹಿಂದೀ ವರ್ಗಗಳು ನವೆಂ ಬರ್ ಮೊದಲನೆಯ ವಾರದಲ್ಲಿ ಪ್ರಾರಂ ಭವಾಗುವುವು. ನವರೀ ಪರೀಕ್ಷೆಗಳಿಗೆ ಕುಳಿತುಕೊಳ್ಳುವವರು ಈ ಸುಸಮಯ ವನ್ನು ಉಪಯೋಗಿಸಿಕೊಳ್ಳಬಹುದೆಂ ದೂ, ಹೆಚ್ಚಿನ ವಿಷಯಗಳನ್ನು ಪಾಠ ಶಾಲೆಯಲ್ಲಿ ತಿಳಿಯಬಹುದೆಂದೂ ಸ ಚಾಲಕರು ತಿಳಿಸುತ್ತಾರೆ.

ಸಾಯಿ ಬಿಸಿನೆಸ್ ಸಂಸ್ಥೆ

ರಾಜಧಾನಿಯ ನಜರಬಾದಿನ ಶ್ರೀ ಸಾಯಿ ಬಿಸಿನೆಸ್ ಮಾಲೀಕರಾದ ಶ್ರೀ ವಿ. ಲಕ್ಷ್ಮೀಪತಿಯವರು ದೀಪಾವಳಿ ಸು ಭಾಶಯಗಳೊಡನೆ ಕಳುಹಿಸಿರುವ ಮೈ ಸೂರು ಗಂಧದ ಪೂಜಾ ಧೂಪವನ್ನು ಅವರದಿಂದ ಸ್ವೀಕರಿಸಿರುತ್ತೇವೆ.

ಬ್ರಿಟಿಷರ ಗುಂಡಿನಿಂದ ಈಜಿಪ್ಟ್ ಮಹಿಳೆ ಮರಣ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಮೊನ್ನೆ ರಾತ್ರಿ ಒಂದು ಕಡೆ ಮಿಲಿಟರಿ ಯವರು ನಿರ್ಮಿಸಿದ್ದ ಅಡ್ಡಗಟ್ಟೆಯ ಮೂಲಕ ಓಡಿಹೋಗಲೆತ್ನಿಸಿದ ಐಮಿಲಿ ಕದ ಮೋಟಾರಿನಿಂದರ ಮೇಲೆ ಬ್ರಿಟಿಷ್ ... ಒಂದು ಹಾರಿಸಲಾಗಿ ಅದರ ... ಪ್ರಯಾಣಿಕಳು ... ಹಾರಿಸ ಡ್ರೈವರನ್ನಿ ... ಗಾಯತೆಂದೂ ಗೊತ್ತಾಗಿದೆ. ... ಬ್ರಿಟಿಷರ ... ಸರಕಾರ ... ಸರಿ ... ಈಜಿಪ್ಟು ಸೇಕ್ಕ್ರ ... ರುವುದಾಗಿ ಗೊತ್ತಾಗಿದೆ. ಮತ್ತೊಂದು ... ಎಸ್ಪ್ರಂಡರಿಂದ ಇಳಿಯುತ್ತಿದ್ದ ... ದ ಮತ್ತೊಬ್ಬ ಮಹಿಳೆಯು ... ಗುಂಡಿನೇಟು ತಗುಲಿರುವುದಾಗಿ ಗೊ ತ್ತಾಗಿದೆ. ಅವಳಿಗೆ ಸಹಾಯ ಮಾಡಲು ... ದವನಿಗೂ ಗುಂಡಿನೇಟು ತಗುಲಿ ತಂದು ಹೇಳಲಾಗಿದೆ.

ಕೊರಿಯಾ ಸಂಧಾನದಲ್ಲಿ ಮತ್ತೆ ಬಿಕ್ಕಟ್ಟಿನ ಸಂಭವ

ಕೊರಿಯಾ ರಣಕ್ಷೇತ್ರದಲ್ಲಿ ಯುದ್ಧ ನಿಲ್ಲಿಸುವ ಪ್ರದೇಶವನ್ನು ಗೊತ್ತುಮಾ ಡುವ ಸಂಬಂಧವಾಗಿ ಕಮ್ಯೂನಿಸ್ಟ್-ವಿ ಶ್ವ ಸಂಸ್ಥೆ ಪಕ್ಷಗಳು ಒಪ್ಪಂದಕ್ಕೆ ಬರದೆ ಇರುವುದರಿಂದ ಮಾತ ಕತೆಗಳಲ್ಲಿ ಹೊಸ ಬಿಕ್ಕಟ್ಟಿನ ಸ್ಥಿತಿಯುಂಟಾಗಿದೆ. ವಿಶ್ವ ಸಂಸ್ಥೆ ಪಡೆಗಳು ೧೫ ಮೈಲಿ ದೂರ ಯುದ್ಧ ಕ್ಷೇತ್ರದಿಂದ ಹಿಂದಕ್ಕೆ ಹೋಗಬೇ ಕೆಂದು ತಾವು ಹಾಕಿರುವ ಷರತ್ತನ್ನು ಕಮ್ಯೂನಿಸ್ಟರು ಬದಲಿಸದೇ ಇರುವುದೇ ಈ ಬಿಕ್ಕಟ್ಟಿಗೆ ಕಾರಣವೆಂದು ಹೇಳಲಾ ಗಿದೆ.

ಇಮಾಂರವರು ಮುರಿಯುತ್ತಿನವರಿಗೆ ಪ್ರತಿ ಸ್ಪರ್ಧಿಗಳೇ ?

ಮೈಸೂರು ನಗರದ ಉತ್ತರ ಕ್ಷೇತ್ರ ದಿಂದ ಶಾಸನ ಸಭೆಗೆ ಮಾಜಿ ಮಂತ್ರಿ ಜ|| ಮಹಮದ್ ಇಮಾಂರವರೂ, ಜಿಲ್ಲೆ ಯಿಂದ ಪಾರ್ಲಿಮೆಂಟಿಗೆ ನಿವೃತ್ತ ಶ್ರೇ ಷ್ಠ ನ್ಯಾಯಾಧೀಶರಾದ ಶ್ರೀ ಜಿ. ಪರಮ ಶಿವಯ್ಯನವರೂ ನಿಲ್ಲುವರೆಂದು ವದಂತಿ ಇದೆ.

ಇಂಡೋನೇಷ್ಯದ ಅಧ್ಯಕ್ಷರ ಕೊಲೆಗೆ ಪಿತೂರಿ

ಇಂಡೋನೇಷ್ಯದ ಅಧ್ಯಕ್ಷರಾದ ಡಾ|| ಅಬ್ದುಲ್ ಕರ್ನ ಸುಕರ್ನೋರನ್ನು ಕೊಲೆ ಮಾಡಿ ಆ ದೇಶದ ಸರ್ಕಾರವನ್ನು ಉರುಳಿಸಲು ಪಿತೂರಿಯೊಂದು ನಡೆದು ದಾಗಿ ಅಲ್ಲಿನ ಪ್ರಧಾನ ಮಂತ್ರಿ ಡಾ|| ಸುಗಿರ್ಮಾನವರು ಹೇಳಿರುತ್ತಾರೆ. ಪಿತೂ ರಿಗಾರರು ವಿದೇಶೀಯರ ಬೆಂಬಲವನ್ನು ಪಡೆದಿದ್ದುದಾಗಿಯೂ ಹೇಳಲಾಗಿದೆ. ೧೫ ಸಾವಿರ ಜನರನ್ನು ಈ ಸಂಬಂಧ ವಾಗಿ ದಸ್ತಗಿರಿ ಮಾಡಲಾಗಿದೆ. ಅಧ್ಯಕ್ಷ ರಲ್ಲದೆ ಉಪಾಧ್ಯಕ್ಷ ಡಾ|| ಹಟ್ಟ ಮತ್ತು ಇತರ ಅಧಿಕಾರಿಗಳನ್ನೂ ಸಹ ಕೊಲೆ ಮಾಡಲು ಹಂಚಿಕೆಯಾಗಿತ್ತೆಂದೂ, ಎರ ಡು ವರ್ಷಗಳ ಕೆಳಗೆ ಸ್ಥಾಪಿಸಲಾದ ರಿಪಬ್ಲಿಕ್ಕನ್ನು ಉರುಳಿಸಿ ಹೊಸ ರಾಜ್ಯ ವನ್ನು ಕಟ್ಟಬೇಕೆಂದು ಯೋಚಿಸಲಾಗಿ ತ್ತೆಂದೂ ಪ್ರಧಾನಿಯವರು ಹೇಳಿರು ತ್ತಾರೆ.

ಪಾಕಿಸ್ತಾನದ ತೀರ್ಪುಗಳಿಗೆ ಭಾರತದಲ್ಲಿ ಮಾನ್ಯತೆ ಇಲ್ಲ

ಪಾಕಿಸ್ತಾನದ ನ್ಯಾಯಾಲಯಗಳು ನೀಡಿರುವ ತೀರ್ಮಾನಗಳು ಮತ್ತು ಡಿಕ್ರಿಗಳು ಭಾರತದಲ್ಲಿ ಜಾರಿಗೆ ಬರಲು ಅನರ್ಹವೆಂಬುದನ್ನು ಸೂಚಿಸುವ ವಿಶೇಷಾಜ್ಞೆಯೊಂದನ್ನು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಹೊರಡಿಸಿರು ತ್ತಾರೆ. ವಿಭಜನೆಗೆ ಪೂರ್ವದಲ್ಲಿದ್ದ ನ್ಯಾ ಯಾಲಯಗಳಿಗೆ ಈ ಆಜ್ಞೆಯು ಅನ್ವಯಿ ಸುವುದು.

ಪರ್ಷಿಯಾ, ಬ್ರಿಟನ್‌ಗಳಿಗೆ ಅಮೆರಿಕಾ ಕರೆ

ಪಶ್ಚಿಮ ರಾಷ್ಟ್ರಗಳಿಗೆ ಪರ್ಷಿಯದಿಂದ ೩೦ ಲಕ್ಷ ಟನ್ ಎಣ್ಣೆಯನ್ನು ಸಾಗಿಸಲು ಏರ್ಪಾಡು ಮಾಡಿಕೊಡುವ ಒಪ್ಪಂದಕ್ಕೆ ಬ್ರಿಟನ್ ಮತ್ತು ಪರ್ಷಿಯಗಳು ಸಮ್ಮತಿ ಸಬೇಕೆಂದು ಅಮೆರಿಕವು ಆ ಎರಡು ರಾ ಷ್ಟ್ರಗಳಿಗೂ ಸೂಚಿಸಿರುತ್ತದೆ.

ನಿಧನ

ಅಖಿಲ ಭಾರತ ಕಾಮರ್ಸ್ ಸೀನಿ ಯರ್ ಡಿಪ್ಲಮಾ ಪರೀಕ್ಷೆಯಲ್ಲಿ ಇಡೀ ದೇಶಕ್ಕೆ ಪ್ರಥಮ ಸ್ಥಾನವನ್ನು ಗಳಿಸಿ, ಭಾರತದ ರಿಸರ್ವ್ ಬ್ಯಾಂಕಿನ ವ್ಯಾ ಸು ಶಾಖೆಯಲ್ಲಿ ಉಚ್ಚ ಶಿಕ್ಷಣ ಪಡೆಯು ತ್ತಿದ್ದ ಮೈಸೂರಿನ ಶ್ರೀ ಜಿ. ವಿ. ಪದ್ಮ ನಾಭರವರು ಕಳೆದ ೨೬ನೇ ತಾ|| ರಾ ತ್ರಿ ಮದ್ರಾಸಿನಲ್ಲಿ ನಿಧನರಾದರೆಂದು ತಿ ಳಿಸಲು ವಿಷಾದಿಸುತ್ತೇವೆ.

ಗಣಪತಿ ಮಂಗಳಾರತಿ

ರಾಜಧಾನಿಯ ಜಿಲ್ಲಾ ಮೋಟಾರು ಕಾರ್ಮಿಕರ ಸಂಘದ ಕಾರ್ಯಾಲಯದಲ್ಲಿ ಗಣಪತಿಯ ಮಂಗಳಾರತಿಯು ನಾಳೆ ದ್ದು ಸಂಜೆ ೭ ಗಂಟೆಗೆ ನಡೆಯುವುದು. ಸಿ.ಪಿ.ಸಿ. ಮೋಟಾರು ಸರ್ವಿಸ್ಸಿನ ಮಾಲೀಕರಾದ ಶ್ರೀ ಜಾನಕೀರಾಂ ಶೆ ಟ್ಟಿಯವರು ಅಧ್ಯಕ್ಷತೆ ವಹಿಸುವರು.

ಕೆ. ಸಿ. ರೆಡ್ಡಿಯವರನ್ನು ನಿಲ್ಲಿಸಲು ಬಂಗಾರಪೇಟೆ ಕಾಂ|| ನಿರ್ಣಯ

ಬಂಗಾರಪೇಟೆ ತಾಲ್ಲೂಕು ಕಾಂಗ್ರೆ ಸ್ ಸಮಿತಿಯವರು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ತಾಲ್ಲೂಕಿ ನಿಂದ ಶಾಸನ ಸಭೆಗೆ ಉಮೇದುವಾರರ ನ್ನಾಗಿ ನಿಲ್ಲಿಸಲು ತೀರ್ಮಾನಿಸಿರುತ್ತಾರೆ.

ಬೊಂಬಾಯಿ ಬ್ಯಾಂಕು ನೌಕರರ ಮುಷ್ಕರ

ಬೊಂಬಾಯಿಯ ಬ್ಯಾಂಕುಗಳ ನೌಕರರ ಸಂಘದ ಸಮಿತಿ ಸಭೆಯು ಮೊನ್ನೆ ನಡೆದು ಬ್ಯಾಂಕುಗಳ ಕೆಲಸದ ಕಾಲವನ್ನು ಹೆಚ್ಚಿಸುವ ಬಗ್ಗೆ ಕೈಗೊಳ್ಳಲಾಗುತ್ತಿರುವ ಕ್ರಮವನ್ನು ಪ್ರತಿಭಟಿಸಲು ಮುಷ್ಕರ ಹೂಡುವುದಕ್ಕೆ ನೌಕರರು ಸಿದ್ಧರಾಗಬೇಕೆಂದು ಸೂಚಿಸಿರುತ್ತದೆ.

ದೀಪಾವಳಿ ಶುಭಾಶಯಗಳು

ದೀಪಾವಳಿ ಹಬ್ಬದ ಶುಭಾಶಯಗಳನ್ನು ಕೋರಿ ನಮಗೆ ರಾಜಧಾನಿಯ ಒಲಂಪಿಯಾ ಟಾಕೀಸ್, ದೇವರಾಜ ಮಾರ್ಕೆಟ್ಟಿನ ಶ್ರೀ ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್, ಮಾಣಿಕ್ ಚಂದ್ ಪೃಥ್ವಿರಾಜ್ ಅಂಡ್ ಸನ್ಸ್, ಕ್ಷೇತ್ರದ ಶ್ರೀಗಳು ಪಿ ಆರ್ ತಿಪ್ಪೇಸ್ವಾಮಿ ಮತ್ತು ಹೆಚ್ ಆರ್ ರಾಮದಾಸ್, ಪಾಣೀ ವಿದ್ಯಾಲಯ ಸಂ|| ಪಿ. ಎಂ ಆರ್ ರಾಮಕೃಷ್ಣ ಭಾಗವತರ್ ಮತ್ತು ನಂಜನಗೂಡಿನ ಸದ್ವೈದ್ಯ ಶಾಲೆಯ ಬಿ ವಿ ಪಂಡಿತಾರವರುಗಳು ಕಳುಹಿಸಿರುವ ಸಂದೇಶಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ.

ಪ್ರಜಾಸಂಘದಲ್ಲಿ ಸರ್ವಾಧಿಕಾರತ್ವ?

ರಾಜಧಾನಿಯ ಎಂಪೈರ್ ಮೋಟಾರು ಸರ್ವೀಸ್ಸಿನ ಮಾಲೀಕರಾದ ಶ್ರೀ ಎಂ ಎಸ್ ಪುಟ್ಟಲಿಂಗಪ್ಪನವರು ಒಂದು ಪತ್ರವನ್ನು ಬರೆದು ತಾವು ... ರಲ್ಲಿ ಪೌರ ಸಭೆಗೆ ಸಂಘದ ಪರವಾಗಿ ಉಮೇದುವಾರರಾಗಲು ಅರ್ಜಿಯನ್ನು ಹಾಕಿದ್ದುದಾಗಿಯೂ ಸಂಘದ ಸದಸ್ಯರಾಗಿದ್ದರೂ ಸದ ಸಭೆಗಳಿಗೆ ಬರಲು ತನಗೆ ಆಹ್ವಾನವನ್ನು ಕಳುಹಿಸುತ್ತಿಲ್ಲವೆಂದೂ, ಈಚೆಗೆ ಸಂಘದಲ್ಲಿ ಅನೇಕ ನ್ಯೂನತೆಗಳು ಕಂಡುಬಂದು, ಸರ್ವಾಧಿಕಾರತ್ವದ ಮನೋಭಾವವು ಉಂಟಾಗಿರುವುದು ಶೋಚನೀಯವೆಂದೂ ತಿಳಿಸಿರುತ್ತಾರೆ.

ಉಪ್ಪಿನ ಅಭಾವಕ್ಕಾಗಿ ವಿದ್ಯಾರ್ಥಿಗಳ ಪ್ರತಿಭಟನೆ

ಇತ್ತೀಚೆಗೆ ಢಾಕಾ ರಾಜಧಾನಿ ಮುಂತಾದ ಕಡೆಗಳಲ್ಲಿ ಉಪ್ಪಿನ ಅಭಾವ ಏರ್ಪಟ್ಟುದನ್ನು ಪ್ರತಿಭಟಿಸಲು ಮೊನ್ನೆ ಢಾಕಾ ನಗರದಲ್ಲಿ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ಮೆರವಣಿಗೆ ಹೊರಟು ಪ್ರತಿಭಟನೆ ಸೂಚಿಸಿದರು.

ಕರ್ಣಾಟಕ ಜನಪದ ಕಲಾ ಸಂಘ

ಮೇಲ್ಕಂಡ ಸಂಘದ ಕಾರ್ಯಕಾರಿ ಸಮಿತಿಯ ಸಭೆ ಮೊನ್ನೆ ಸಂಜೆ ಸತ್ಯಾಗ್ರಹ ದಿನ ಪತ್ರಿಕಾ ಕಛೇರಿಯಲ್ಲಿ ಮೈಸೂರು ಪ್ರಜಾ ಪತ್ರಿಕೆಯ ಸಂಪಾದಕರಾದ ಶ್ರೀ ಕೆ ಎಂ ಆರ್ ವಿ ಶಾಸ್ತ್ರಿ ಬಿಕ್ಕನೂರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ಎಲ್ಲರನ್ನೂ ಸ್ವಾಗತಿಸಿ ಸಂಘದ ಉದ್ದೇಶವನ್ನು ವಿವರಿಸಿದರು. ಶ್ರೀಗಳಾದ ವೆಂಕಟಸುಬ್ಬ ಶರ್ಮ, ಎನ್ ರೇವಣ್ಣ, ಟಿ ಎಸ್ ಸತ್ಯಾರವರು ಜನಪದ ಸಾಹಿತ್ಯ ಮತ್ತು ಕಲೆಯ ಪುನರುಜ್ಜೀವನದ ಬಗ್ಗೆ ಭಾಷಣ ಮಾಡಿದರು. ಸಂಘದ ಅಧಿಕಾರಿ ವರ್ಗದ ಆಯ್ಕೆ ನಡೆದು ಶ್ರೀ ಪಿ ಎಸ್ ಕೃಷ್ಣಮೂರ್ತಿಯವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಹಿರೇಮಠ್‌ರವರನ್ನು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಮತಿಘಟ್ಟ ಕೃಷ್ಣಮೂರ್ತಿ, ರೇವಣ್ಣನವರನ್ನು ಕಾರ್ಯದರ್ಶಿಗಳನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು. ಅಧ್ಯಕ್ಷರ ಭಾಷಣ ಮತ್ತು ವಂದನಾರ್ಪಣೆಯ ನಂತರ ಸಭೆಯು ಮುಕ್ತಾಯವಾಯಿತು.

ಹರಿಕಥೆ

ರಾಜಧಾನಿಯ ಚಾಮುಂಡೇಶ್ವರ ಬಡಾವಣೆಯಲ್ಲಿರುವ ಕರ್ಣನ ಮನೆಯ ಬಳಿ ನಾಳೆಯಿಂದ ಪ್ರತಿ ಸಂಜೆ 7 ಗಂಟೆಯಿಂದ ಏಳ ವರೆಗೆ ವೇ|| ಬ್ರ|| ಟಿ ವಿ ಗುರುರಾಜದಾಸರಿಂದ ಮಹಾಭಾರತವು ಹರಿಕಥಾ ರೂಪವಾಗಿ ನಡೆಯುವುದು. ಸರ್ವರಿಗೂ ಆಹ್ವಾನವಿದೆ.

ಈಜಿಪ್ಟ್ ತರುಣರು ಒತ್ತಾಯವಾಗಿ ಮಿಲಿಟರಿಗೆ

೧೮ ರಿಂದ ೨೧ ವರ್ಷ ವಯಸ್ಸುಳ್ಳ ಈಜಿಪ್ಟ್ ತರುಣರನ್ನು ಒತ್ತಾಯವಾಗಿ ಮಿಲಿಟರಿಗೆ ಸೇರಿಸುವ ಕಾನೂನಿಗೆ ಒಪ್ಪಿಗೆ ದೊರೆತಿರುವುದು.

ಜಿಲ್ಲಾ ಕಾಂಗ್ರೆಸ್ ಸಮಿತಿಯವರ ಜರೂರು ಸಭೆ

ಬರಲಿರುವ ಮಹಾ ಚುನಾವಣೆ ಮತ್ತು ಕಾಂಗ್ರೆಸ್ ಉಮೇದುವಾರರ ಆಯ್ಕೆ ವಿಚಾರವನ್ನು ಪರಿಶೀಲಿಸಲು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಜರೂರು ಸಭೆಯು ನವೆಂಬರ್ ತಾ|| ಶುಕ್ರವಾರ ಮಧ್ಯಾಹ್ನ ೩ ಗಂಟೆಗೆ ನಂಜನಗೂಡಿನಲ್ಲಿರುವ ತಾಲ್ಲೂಕು ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ನಡೆಯುವುದು. ಸದಸ್ಯರೆಲ್ಲರೂ ತಪ್ಪದೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ಕೋರಿರುತ್ತಾರೆ.

ಚಂದಾದಾರರಲ್ಲಿ ವಿನಂತಿ

ಮೈಸೂರು ಮತ್ತು ಇತರ ಕಡೆಗಳಲ್ಲಿರುವ ನಮ್ಮ ಚಂದಾದಾರರು ದಯಮಾಡಿ ಚಂದಾ ಬಾಬ್ತು ಹಣವನ್ನು ನಮ್ಮ ಏಜೆಂಟರಿಗೆ ಮುಂಗಡವಾಗಿ ಪಾವತಿ ಮಾಡಿ ರಸೀತಿ ಪಡೆಯಬೇಕಾಗಿ ವಿನಂತಿ.

ವ್ಯವಸ್ಥಾಪಕ, ಸಾಧ್ವಿ.

Edited, Printed and Published by A R Nagarajan at Sadhvi Press D Subbiah Road Mysore

ಮದರಾಸು ಶಾಸನ ಸಭೆಯ ವಿಸರ್ಜನೆ

೧೯೪೬ ನೇ ಇಸವಿ ಮೇ ತಿಂಗಳಲ್ಲಿ ರಚಿತವಾದ ಮದರಾಸು ಶಾಸನ ಸಭೆಯು ಕಳೆದ ಶನಿವಾರ ರಾತ್ರಿ ವಿಸರ್ಜಿಸಲ್ಪಟ್ಟಿತು. ಈ ಐದೂವರೆ ವರ್ಷಗಳ ಅವಧಿಯಲ್ಲಿ ಸಭೆಯು ೧೫೭ ಮಸೂದೆಗಳನ್ನು ಪಾಸಾಗಿ ಮಾಡಿ ಪ್ರಾಂತ್ಯದ ಅಭಿವೃದ್ಧಿಗಾಗಿ ೧೯೭ ಕೋಟಿ ರೂ. ಪಂಚವಾರ್ಷಿಕ ಯೋಜನೆಯನ್ನು ತಯಾರಿಸುತ್ತಿದ್ದು ಯಾವ ತೀರ್ಮಾನವನ್ನೂ ಕೈಗೊಳ್ಳದೆ ಸಭೆಯು ಮುಕ್ತಾಯವಾಯಿತು.

ರೇಷನಿಂಗ್ ಅಧಿಕಾರಿಗಳ ಕಛೇರಿ ಮೈಸೂರು ಸಿಟಿ

ಮಾರಾಟದ ಪ್ರಕಟಣೆ

ನಂ A1 8551 53 ತಾ|| 16 10 51

ಇಲಾಖೆಯ ಎಂ ವೈ 9304 ನೇ ನಂಬರಿನ ಲಾರಿಯು ಹರಾಜು ಮಾಡಲಾಗುವುದು.

ಮೈಸೂರು ಗಾಂಧಿ ಚೌಕದಲ್ಲಿರುವ ಪಬ್ಲಿಕ್ ಆಫೀಸಿನ ಕಛೇರಿಯ ಕಟ್ಟಡದಲ್ಲಿ ಬಿಟ್ಟಿರುವ ಎಂ ವೈ 9304 ನೇ ಸರ್ಕಾರಿ ಲಾರಿಯನ್ನು ರೇಷನಿಂಗ್ ಕಛೇರಿಯಲ್ಲಿ 1951 ನೇ ನವೆಂಬರ್ ೧ನೇ ತಾ|| ಬೆಳಿಗ್ಗೆ 11 ಗಂಟೆಗೆ ಬಹಿರಂಗ ಹರಾಜು ಮೂಲಕ ವಿಕ್ರಯ ಮಾಡಲಾಗುವುದೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಮಾರಾಟದ ಷರತ್ತು ಮತ್ತು ನಿಯಮಗಳನ್ನು ಮೈಸೂರು ರೇಷನಿಂಗ್ ಕಛೇರಿಯಲ್ಲಿ ಕೆಲಸದ ದಿನಗಳಲ್ಲಿ ಯಾವಾಗಲಾದರೂ ಬೆಳಿಗ್ಗೆ 11 ರಿಂದ ಸಂಜೆ 5 ಘಂಟೆವರೆಗೆ ನೋಡಬಹುದು.

(ರುಜು) ಎಚ್. ಜಿ. ವಿ. ರೆಡ್ಡಿ

ರೇಷನಿಂಗ್ ಅಧಿಕಾರಿ ಮೈಸೂರು ನಗರ

ದೀಪಾವಳಿ

ಭಾರತ ಭೂಮಿಯ ಮಹಾ ದಾನಿ ಬಲಿಚಕ್ರವರ್ತಿಯ ತ್ಯಾಗದಿಂದ ಜನತೆಯು ಸ್ವಾತಂತ್ರ್ಯ ಪಡೆದ ದಿನ!

ಸ್ವಾತಂತ್ರ್ಯ ಸಮಾರಂಭದಲ್ಲಿ ದೇವದುಂದುಭಿಗಳು ಮೊಳಗಿದ ಸುದಿನ!

ನಲವತ್ತು ಕೋಟಿ ನಾಡಿನ ಜನತೆಯು ಸಂತೋಷದಿಂದ ಆಚರಿಸಿ ನಲಿಯುವ ಮಹಾ ಸುದಿನ!

ನಾಡಿನ ನಂದಾ ದೀವಿಗೆಯು ಆಚಂದ್ರಾರ್ಕವಾಗಿ ಮಾನವನ ಕೋಟಿಯ ಸ್ಮೃತಿ ಪಥದಲ್ಲಿರುವ ದೀಪಾವಳಿಯ ವೈಭವೋತ್ಸವ ಸಮಾರಂಭದಲ್ಲಿ ನಮ್ಮ ಪ್ರತಿ ಬಾಂಧವರು, ಗಿರಾಕಿಗಳು ಮತ್ತು ಬಂಧು ಮಿತ್ರರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವೆವು

ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್,

ದೇವರಾಜ ಮಾರ್ಕೆಟ್, ಮೈಸೂರು

ಶ್ರೀ ಬೀದ್ ... ನಗ

ಭಾರಿ ಹರಾಜು ಮಾರಾಟ

4 11-51 ರನುಸಾರ ಬೆಳಿಗ್ಗೆ 10 ಗಂಟೆಗೆ ನೊ ರೂಮ್ ಬಳಿ

ಹಸ್‌ಲರ್ ಸಾಮಾನುಗಳಿಂದ ಕೂಡಿದ ಜೋಡೆತ್ತಿನ ಗಾಡಿ, ರೆಫ್ರಿಜರೇಟರುಗಳ ಫಿಲಿಪ್ಸ್ ರೇಡಿಯೋ, ಕೈ ಹೊಲಿಗೆಯ ಯಂತ್ರ, ಹಾರ್ಮೋನಿಯಂ ಬೈಸಿಕಲ್‌ಗಳು ಮನೆಗಳಿಗೆ ಬೇಕಾಗುವ ಎಲೆಕ್ಟ್ರಿಕ್ ಸಾಮಾನುಗಳು, ಅಲ್ಮೈರಾಗಳು, ಮೇಜುಗಳು ಕುರ್ಚಿಗಳು ಮುಂತಾದ ಗೃಹೋಪಯುಕ್ತ ಸಾಮಾನುಗಳು ಮತ್ತು ಫರ್ನಿಚರುಗಳು

ಚಾಮುಂಡೇಶ್ವರಿ ಟಾಕೀಸ್

31-10-51 ರಿಂದ .. ಪ್ರತಿ ದಿನ 3 ಪ್ರದರ್ಶನಗಳು

ಮುರುಗರರವರ ತಮಿಳು ಚಿತ್ರ

ರತ್ನ ಕುಮಾರ್

ಮುಖ್ಯ ಭೂಮಿಕೆಯಲ್ಲಿ ಯು ಚಿನ್ನಪ್ಪ ಭಾನುಮತಿ ಪಿ ಬಾಲಸುಬ್ರಹ್ಮಣ್ಯಂ ಕೆ ಮಾಲತಿ ಎನ್ ಎಸ್ ಕೃಷ್ಣನ್ ಟಿ ಎ ಮಧುರಂ.

ಗೌಸ್ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶೆಟ್ಟಿ ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಮಲೇರಿಯಾ ಹಾರಿ ಸೊಳ್ಳೆ ಪರದೆಗಳಿಗೆ ಬಾಹುಸಾರ್

ಮಕ್ಕಳ ತೊಟ್ಟಿಲಿಗೆ, ಮಂಚಕ್ಕೆ, ಸಿಂಗಲ್ ಡಬ್ಬಲ್ ಹಾಸಿಗೆಗಳಿಗೆ ಬಡಬಗ್ಗರಿಗೂ ಸಹ ಅನುಕೂಲವಾದ ಬೆಲೆ ಬಾಹುಸಾರ್ ಕಂಪೆನಿ, ಬ್ಯಾಂಕ್ ರೋಡ್, ಮೈಸೂರು

ಫೋನ್ ನಂ 792 (ಸಂಜೆ ದೈನಿಕ) ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೧-೧೧-೫೧ [ಸಂಚಿಕೆ ೮೨

ಅರಬ್ ರಾಷ್ಟ್ರಗಳಿಗೆ ರಷ್ಯದ ಎಚ್ಚರಿಕೆ

...ರ ಸಭೆಯ ಡೈರಿ ಫಾರಂ

ಮೈಸೂರು ೧

ನಗರದ ಪೌರ ಸಭೆಯು ಸಾಮಾನ್ಯ ...ಭೆಯು ಮೊನ್ನೆ ಶ್ರೀ ಟಿ ನರಸಿಂಹ ...ಯ್ಯಂಗಾರ್‌ರ ಅಧ್ಯಕ್ಷತೆಯಲ್ಲಿ ನಡೆಯಿ ...ತು ನಗರ ನಿವಾಸಿಗಳಿಗೆ ಉತ್ತಮ ಹಾ...ಲನ್ನು ಒದಗಿಸುವ ಸಲುವಾಗಿ ಪೌರ ಸ...ಭೆಯವರು ಒಂದು ಡೈರಿ ಫಾರಂ ಅನ್ನು ...ತೆರೆಯಬೇಕೆಂದು ಶ್ರೀ ಬಿ. ಜಿ. ದಾಸ್ ...ರವರ ನಿರ್ಣಯವೊಂದನ್ನು ಸೂಚಿಸಿದ ... ಶ್ರೀ ಎಸ್. ಲಿಂಗಣ್ಣನವರು ಈ ವಿ...ಷಯವನ್ನು ವಿಮರ್ಶೆ ಮಾಡಲು ನಾಲ್ಕು ...ಜನರ ಸಮಿತಿಯೊಂದನ್ನು ರಚಿಸಬೇಕೆಂ...ದು ಸೂಚಿಸಿದರು ಅದೇ ರೀತಿ ಶ್ರೀಗ... ಟಿ ನರಸಿಂಹಯ್ಯಂಗಾರ್, ಪಿ ... ಷ್ಣಸ್ವಾಮಿ, ಪಿ ಸೀತಾರಾಮ ... ಮತ್ತು ಆರೋಗ್ಯಾಧಿಕಾರಿಗಳಾದ ... ಸ್ ಶೇಷಗಿರಿ ರಾಯರುಳ್ಳ ಒಂ... ಸಮಿತಿಯನ್ನು ರಚಿಸಲಾಯಿತು

...ವಿದ್ಯಾ ಗಣಪತಿ ಪ್ರತಿಷ್ಠಾ ಸ್ಮಾರಕೋತ್ಸವ

...ಧಾನಿಯ ಶ್ರೀರ್ಮ ಮಹಾರಾಜಾ ...ಸಂಸ್ಕೃತ ಮಹಾಪಾಠಶಾಲೆಯಲ್ಲಿ ... ವಿದ್ಯಾ ಗಣಪತಿಯು ೭ನೇ ವರ್ಷ ...ಪ್ರತಿಷ್ಠಾಪನಾ ಸ್ಮಾರಕೋತ್ಸವವು ... ಮತ್ತು ಇಂದು ನೆರವೇರಿಸಲ್ಪಟ್ಟಿ...ತು ... ಳಿಯೂ ಸಹ ಬೆಳಗ್ಗೆ ೭ ಘಂಟೆ ... ...ನಾದಿಗಳು ಮತ್ತು ಸಂಜೆ ... ವಿ|| ಬಿ ಕೇಶವಮೂರ್ತಿಯ... ...ಣೆಲು ಮತ್ತು ವಿದ್ವಾನ್ ಗೋಪಾ...ಲರ ಮೃದಂಗಗಳೊಡನೆ ವಿ|| ವಿ|| ... ...ರ್ತಿ ವೆಂಕಟನಾರಾಯಣರವ... ...ತವು ನಡೆಯುವುವು

...ವಾಲ್ಕರ್‌ರವರ ಸನ್ಮಾನಕ್ಕಾಗಿ ಬಹಿರಂಗ ಸಮಾರಂಭ

...ರಾಷ್ಟ್ರೀಯ ಸ್ವಯಂ ಸೇವಕ ಸಂಘ... ...ಸಂಘ ಚಾಲಕರಾದ ಶ್ರೀ ಎಂ ... ಗೋಲ್ವಾಲ್‌ಕರ್‌ರವರ ಗೌರವಾ... ...ರ್ಥ ರಾಜಧಾನಿಯ ರಾಷ್ಟ್ರೀಯ ... ಸೇವಕ ಸಂಘದವರು ಈ ಸಂ... ...ಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದ ...ಲ್ಲಿ ಬಹಿರಂಗ ಸಮಾರಂಭವೊಂದನ್ನು ...ಏರ್ಪಡಿಸಿರುವರು

...ಸಂಸ್ಥಾನದ ಜನತಾ ಪಾರ್ಟಿ

...ಪ್ರಜಾ ಸಂಘಟಿತ ಪಾರ್ಟಿಯ ಆಶ್ರಯದ... ... ೧೧ ನೇ ಭಾನುವಾರ ...ಮಧ್ಯಾಹ್ನ ಎರಡು ಘಂಟೆಗೆ ಮೈಸೂರು ... ಪಾರ್ಟಿ ಆಫೀಸಿನಲ್ಲಿ ತಿರುಮ...ಕೂಡಲು ನರಸೀಪುರ, ಯಳಂದೂರು ಮ...ತ್ತು ... ಮರಾಜನಗರ ತಾಲ್ಲೂಕುಗಳಿಂ... ...ದ ಸಂಸ್ಥಾನದ ಮಹಾ ಚುನಾವಣೆಗೆ ... ಪಾರ್ಟಿಯ ಉಮೇದುವಾರರ... ...ನ್ನು ಚುನಾಯಿಸುವ ಸಂಬಂಧವಾಗಿ ... ಸಭೆ ಏರ್ಪಡಿಸಲಾಗಿದೆ

ಫಸ್ಟ್ ಗ್ರೇಡ್ ಕಾಲೇಜು ಸಂಘದ ಪ್ರಾರಂಭ ಭಾಷಣ

...ರಾಜಧಾನಿಯ ಫಸ್ಟ್ ಗ್ರೇಡ್ ಕಾಲೇ...ಜಿನ ... ಸಂಘದ ಪ್ರಾರಂಭ ಭಾಷಣವನ್ನು ... ಸಂಜೆ ೫-೩೦ ಗಂಟೆಗೆ ಕಾಲೇಜಿ...ನ ...ಭವನದಲ್ಲಿ ಅಮೆರಿಕದ ಮಿಸ್ಸೌರಿ ... ವಿಶ್ವವಿದ್ಯಾಲಯದ ಸಮಾಜ ಶಾಸ್ತ್ರದ ... ಪ್ರೊಫೆಸರಾದ ಡಾ|| ಓ ನೋಯಲ್ ೧... ...ರವರು ಮಾಡುವರು "ಬಿಕ್ಕಟ್ಟುಗ...ಳ ಕಾಲದಲ್ಲಿ ವಿಶ್ವ ವಿದ್ಯಾಲಯ" ಎಂ...ಬ ವಿಷಯವಾಗಿ ಅವರು ಭಾಷಣ ಮಾ...ಡುವರು

ಸಿರಿಯಾ, ಇರಾಕ್, ಲೆಬನಾನ್‌ಗಳಿಗೆ ರಷ್ಯದ ಎಚ್ಚರಿಕೆ

ಮಧ್ಯ ಪೂರ್ವದ ರಕ್ಷಣಾ ವ್ಯವಸ್ಥೆಗೆ ಅರಬ್ ರಾಜ್ಯಗಳು ಸೇರುವುದು ತನ್ನ ಮೇಲೆ ಹಗೆತನಕ್ಕಾಗಿ ನಡೆಸಿದ ಕಾರ್ಯವೆಂದು ರಷ್ಯವು ಅರಬ್ ಸರ್ಕಾರಗಳಿಗೆ ತಿಳಿಸಿರುವುದೆಂದು ಗೊತ್ತಾಗಿದೆ ಸಿರಿಯಾ, ಲೆಬನಾನ್, ಮತ್ತು ಇರಾಕ್ ದೇಶಗಳು ಯಾವ ರೀತಿ ವರ್ತಿಸುವುವೆಂದು ಅಲ್ಲಿರುವ ರಷ್ಯದ ರಾಯಭಾರ ಕಛೇರಿಗಳು ಕಾಯ್ದು ನೋಡುತ್ತಿರುವುವೆಂದು ಹೇಳಲಾಗಿದೆ ರಷ್ಯದ ಕಡೆಯಿಂದ ಆಕ್ರಮಣದ ಭೀತಿಯು ಹೆಚ್ಚಾಗಿರುವುದಾಗಿ ಭಾವಿಸಿ, ಇಂಗ್ಲೆಂಡ ಅರಬ್ ರಾಜ್ಯಗಳು ಬ್ರಿಟನ್, ಫ್ರಾನ್ಸ್, ತುರ್ಕಿ ಮತ್ತು ಅಮೆರಿಕಗಳು ಏರ್ಪಡಿಸಿರುವ ರಕ್ಷಣಾ ವ್ಯವಸ್ಥೆಗೆ ಸೇರಬು ಇಚ್ಛೆ ಹೊಂದಿರುವುದಾಗಿ ಹೇಳಲಾಗಿದೆ

ತಮಿಳು ಚಿತ್ರದಲ್ಲಿ ಜಾನಿ ವೀಸ್‌ಮುಲ್ಲರ್‌ರ ಪಾತ್ರ

ಸೇಲಮ್ಮಿನ ಮಾಡರ್ನ ಥಿಯೇಟರಿನವರೂ ಮತ್ತು ಹಾಲಿವುಡ್ಡಿನವರೂ ಸೇರಿ ಭಾರತದಲ್ಲಿ ತಯಾರಿಸುತ್ತಿರುವ ಅರಣ್ಯ ಚಿತ್ರವೊಂದರಲ್ಲಿ ಸುಪ್ರಸಿದ್ಧ ಪಾಶ್ಚಾತ್ಯ ನಟ ಜಾನಿ ವೀಸ್‌ಮುಲ್ಲರನು ಪಾತ್ರವಹಿಸುವನು ಮಾಡರ್ನ ಥಿಯೇಟರಿನವರು ತಯಾರಿಸಲಿರುವ ಒಂದು ತಮಿಳು ಚಿತ್ರದಲ್ಲೂ ಆತನು ಪಾತ್ರವಹಿಸುವನೆಂದು ಹೇಳಲಾಗಿದೆ

ಅಶೋಕ ಚಕ್ರ ಸಂಘ

ಈ ದಿನ ಸಂಜೆ ೬ ಗಂಟೆಗೆ ೧ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ಅಶೋಕ ಚಕ್ರ ಸಂಘದವರು ಮೈಸೂರಿನ ಕರ್ನಾಟಕ ಥಿಯಸಾಫಿಕಲ್ ಸಂಘದ ಅಡಿಷನಲ್ ಲಾಡ್ಜ್ ಆರ್ಗನೈಸರಾದ ಶ್ರೀ ಎಸ್ ಕೃಷ್ಣಮೂರ್ತಿಯವರಿಂದ " ಬಸವಣ್ಣನವರ ಧರ್ಮ ವಚನಗಳು " ಎಂಬ ವಿಷಯವಾಗಿ ಉಪನ್ಯಾಸವನ್ನು ಏರ್ಪಡಿಸಿರುವರು ಸರ್ವರಿಗೂ ಸ್ವಾಗತವಿದೆ

◯ ಕಡಿಮೆ ಬೆಲೆಯ ೧ ಲಕ್ಷ ಟನ್ ಅಕ್ಕಿಯನ್ನು ಒದಗಿಸಿ ಭಾರತಕ್ಕೆ ಸಹಾಯ ಮಾಡಲು ಇಟಲಿ ಸರ್ಕಾರವು ಇಚ್ಛೆ ಪಟ್ಟಿರುವುದೆಂದು ಮದ್ರಾಸಿನ ಆಹಾರ ಸಚಿವರು ತಿಳಿಸಿರುತ್ತಾರೆ

ಪ್ರೌತ್ಸ ಟಂಗರಿಗೆ ಸಂಬಳವಿಲ್ಲ

ಚೀಣದ ಅಧ್ಯಕ್ಷರಾದ ಪ್ರೌತ್ಸಟೀಂಗರು ಸಂಬಳವನ್ನು ತೆಗೆದುಕೊಳ್ಳದೆ ಊಟ ಮಾತ್ರ ಭತ್ಯವಾಗಿ ತೆಗೆದುಕೊಳ್ಳುತ್ತಿರುವರೆಂದೂ ಅಲ್ಲಿನ ಅಧಿಕಾರಿಗಳು ಸಂಬಳವನ್ನು ಪಡೆಯದೆ, ಆಹಾರ ಮತ್ತು ಸ್ವಲ್ಪ ಪ್ರಮಾಣದ ಭತ್ಯವನ್ನು ಮಾತ್ರ ಸ್ವೀಕರಿಸಿ, ಸಂಯಮ ಜೀವನವನ್ನು ನಡೆಸುತ್ತಿರುವರೆಂದೂ, ಪ್ರಧಾನಿ ನೆಹರೂರವರ ಸಂಬಂಧಿಕರಾದ ಪ ಸಿ ಹಠೀ ಸಿಂಗರು ಪಾಂಗ್ಸ್ಟೈನಿಂದ ಬರೆದ ಪತ್ರವೊಂದರಲ್ಲಿ ತಿಳಿಸಿರುತ್ತಾರೆ ಚೀಣ ಹಿಂದಿಗಿಂತಲೂ ಈಗ ಉತ್ತಮ ಸ್ಥಿತಿಯಲ್ಲಿರುವುದೆಂದೂ ಆದರೆ ಮುಂದೆಯೂ ಕಷ್ಟದ ದಿನಗಳನ್ನು ಎದುರಿಸಬೇಕಾಗಿರುವುದೆಂದು ಅಲ್ಲಿನ ಜನರು ಭಾವಿಸಿರುವರೆಂದೂ ಅವರು ಹೇಳಿರುತ್ತಾರೆ

ಫುಟ್‌ಬಾಲ್ ಪೆವಿಲಿಯನ್ನಿಗೆ ಶ್ರೀಮನ್ಮಹಾರಾಜರ ಹೆಸರು

ರಾಜಧಾನಿಯ ದೊಡ್ಡ ಕೆರೆಯಲ್ಲಿರುವ ಮೈಸೂರು ಫುಟ್‌ಬಾಲ್ ಸಂಘದ ಆಟದ ಪೆವಿಲಿಯನ್ನಿಗೆ ಶ್ರೀಮನ್ಮಹಾರಾಜರ ಹೆಸರನ್ನಿಡಲಾಗುವುದೆಂದು ಗೊತ್ತಾಗಿದೆ

ಧನಲಕ್ಷ್ಮಿ ಪೂಜೆ

ರಾಜಧಾನಿಯ ಚಿಕ್ಕಪೇಟೆ ರಸ್ತೆಯಲ್ಲಿರುವ ಬ್ಯಾಂಕರುಗಳಾದ ಮೆ|| ಷಾ ಮಾಣಿಕ್ ಚಂದ್ ಪುಖರಾಜ್ ಕಂಪ ಸನ್ಸ್‌ರವರೂ, ಸಯ್ಯಾಜಿರಾವ್ ರಸ್ತೆಯಲ್ಲಿರುವ ಬಟ್ಟೆ ವ್ಯಾಪಾರಿಗಳೂ, ಬಟ್ಟೆ ಹೊಲಿಯುವವರೂ ಆದ ಶ್ರೀ ಎಂ ಎಲ್ ಶ್ರೀನಿವಾಸರಾಯರೂ, ದೇವರಾಜ ಮಾರ್ಕೆಟ್ಟಿನ ಶ್ರೀ ಜಯಲಕ್ಷ್ಮಿ ಬ್ಯಾಂಗಲ್ ಸ್ಟೋರ್ಸಿನವರೂ ಮೊನ್ನೆ ಧನಲಕ್ಷ್ಮಿ ಪೂಜೆಯನ್ನು ನೆರವೇರಿಸಿ ಅನೇಕ ಅತಿಥಿಗಳನ್ನು ಆಹ್ವಾನಿಸಿ ಸತ್ಕರಿಸಿದರು

ನಾಯಿ ಕೆಮ್ಮಿಗೆ ಹುಣಹುಲ್ಲಿನ ಕಷಾಯ

ಮನೆಯಲ್ಲಿರುವ ಅತ್ಯಂತ ಸಣ್ಣದಾದ ಬಣವೆಯಿಂದ ೬ ಹಿಡಿ ಹುಲ್ಲನ್ನು ತೆಗೆದು ಅವನ್ನು ನೀರಿನಲ್ಲಿ ೩|| ಗಂಟೆ ಕಾಲ ಕುದಿಸಿ, ಅದರ ಕಷಾಯವನ್ನು ಮಕ್ಕಳಿಗೆ ದಿನಕ್ಕೆ ಒಂದು ಬಟ್ಟಲಿನಂತೆ ಮೂರು ದಿನ ಕುಡಿಸಿದರೆ ನಾಯಿ ಕೆಮ್ಮು ಗುಣವಾಗುವುದೆಂದು ಗಿಪ್ಸಿ ಜನಾಂಗದ ಒಬ್ಬ ಸ್ತ್ರೀಯು ತಿಳಿಸಿರುತ್ತಾಳೆ

ರೈಲ್ವೆ ಅಧಿಕಾರಿಗಳ ರಿವರ್ಟ್‌ನ ಪ್ರಶ್ನೆ

ಪುನಃ ಪರಿಶೀಲನೆಗೆ ಅವಕಾಶವಿಲ್ಲವೆಂದು ಕೇಂದ್ರದ ಪತ್ರ

ಸ್ವಂ ಸು. ಪ್ರೋ] ಬೆಂಗಳೂರು ೧

ಶಾಸನ ಸಭೆಯು ಈ ದಿನ ನಡೆದಾಗ ಶ್ರೀ ಗಾಂಜಿ ವೀರಪ್ಪನವರು ಅಲ್ಪ ಕಾಲಾವಧಿ ಪ್ರಶ್ನೆಯೊಂದನ್ನು ಹಾಕಿ, ಮೈಸೂರು ರೈಲ್ವೆಯು ಕೇಂದ್ರದಲ್ಲಿ ಐಕ್ಯವಾದ ನಂತರ ಇಲ್ಲಿನ ಹಲವು ಅಧಿಕಾರಿಗಳನ್ನು ಗೆಜೆಟೆಡ್ ದರ್ಜೆಯಿಂದ ಇಳಿಸಿರುವ ವಿಷಯವನ್ನು ಪ್ರಸ್ತಾಪಿಸಿದರು ಕಾರ್ಮಿಕ ಶಾಖೆಯ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರು ಉತ್ತರವಿತ್ತು, ಈಚೆಗೆ ಕೇಂದ್ರ ಸರ್ಕಾರದ ಸಂಚಾರ ಇಲಾಖೆಯಿಂದ ಬಂದ ಪತ್ರದಲ್ಲಿ ರಿವರ್ಟ್ ಆದ ನೌಕರರನ್ನು ಪುನಃ ಗೆಜೆಟೆಡ್ ದರ್ಜೆಗೆ ಏರಿಸುವ ಅವಶ್ಯಕತೆ ಇಲ್ಲವೆಂದು ತಿಳಿಸಲಾಗಿದೆಯೆಂದೂ, ಈ ವಿಷಯದಲ್ಲಿ ಮೈಸೂರು ಸರ್ಕಾರದವರು ತಮ್ಮ ಕೈಲಾದ ಪ್ರಯತ್ನವನ್ನು ಮಾಡಿ ನೊಂದ ಅಧಿಕಾರಿಗಳಿಗೆ ತಕ್ಕ ಸಂತೃಪ್ತಿಯುಂಟಾಗುವಂತೆ ಮಾಡುವುದಾಗಿಯೂ ಹೇಳಿದರು. ರಿವರ್ಟ್ ಆದ ಅಧಿಕಾರಿಗಳ ಸಂಬಳ ಸಾರಿಗೆಯನ್ನು ಕಡಿಮೆ ಮಾಡಿಲ್ಲವೆಂದು ಕೇಂದ್ರದವರು ಹೇಳಿದ್ದರೂ ಸಹ, ಅದೇ ಪ್ರಾಮುಖ್ಯವಾದ ವಿಷಯವಲ್ಲವೆಂದೂ ಅಧಿಕಾರಿಗಳ ದರ್ಜೆಯೂ ಅತಿ ಮುಖ್ಯವಾದ ವಿಷಯವೆಂದೂ ಮೈಸೂರು ಸರ್ಕಾರದ ಅಭಿಪ್ರಾಯ ಪಟ್ಟಿರುವುದಾಗಿ ಅವರು ತಿಳಿಸಿದರು

◯ ಈ ನಗರದಲ್ಲಿ ಸ್ವಿಸ್ ಗಡಿಯಾರಗಳನ್ನು ತಯಾರಿಸಲು ಒಂದು ಕಾರ್ಖಾನೆಯನ್ನು ಸ್ಥಾಪಿಸುವ ವಿಷಯವಾಗಿ ಕೋಲಾರದ ಚಿನ್ನದ ಗಣಿಗಳ ಅಧ್ಯಕ್ಷ ಶ್ರೀ ಎ ಎ ಶ್ರೀನಿವಾಸರವರು ಫ್ರೆಂಚ್ ಮತ್ತು ಸ್ವಿಸ್ ತಯಾರಕರೊಡನೆ ಮಾತುಕತೆ ನಡೆಸಿರುವುವಾಗಿ ಗೊತ್ತಾಗಿದೆ

ಸೂಯೆಜ್ ಕಂಪೆನಿಗೆ ಈಜಿಪ್ಟ್ ಕಾರ್ಮಿಕರ ಎಚ್ಚರಿಕೆ

ಸೂಯೆಜ್ ಕಾಲುವೆ ಪ್ರದೇಶದಲ್ಲಿರುವ ಬ್ರಿಟಿಷ್ ಸೈನ್ಯಗಳಿಗೆ ಸಹಾಯ ನೀಡಲು ಬರುವ ಯುದ್ಧದ ಮತ್ತು ಇತರ ಹಡಗುಗಳಿಗೆ ನೆರವು ಕೊಡುವುದಿಲ್ಲವೆಂದು ಈಜಿಪ್ಟ್ ಬಂದರು ಕಾರ್ಮಿಕರು ಸೂಯೆಜ್ ಕಂಪನಿಗೆ ಅಂತ್ಯ ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ

ವಿವಾಹ ಮಹೋತ್ಸವ

ಟಿ. ನರಸೀಪುರದ ಪೌರಸಭಾ ಸದಸ್ಯರೂ, ಭಗವಾನ್ ಟಾಕೀಸಿನ ಪಾಲುದಾರರೂ ಆದ ಶ್ರೀ ಜಿ ಎ ಗೋಪಾಲ ಕೃಷ್ಣ ಶೆಟ್ಟಿಯವರು ತಮ್ಮ ಮೊಮ್ಮಗಳು ಚಿ|| ಸೌ|| ಸರೋಜಮ್ಮನನ್ನು ಚಿಕ್ಕಮಗಳೂರಿನ ಶ್ರೀ ಕೃಷ್ಣಾ ಜ್ಯುಯಲರಿ ಮತ್ತು ಬಟ್ಟೆ ವ್ಯಾಪಾರಿಗಳಾದ ಶ್ರೀ ಎಂ ಎಲ್ ಸಿದ್ದಪ್ಪ ಶೆಟ್ಟಿಯವರ ಮಗ ಚಿ|| ಶಾಂತಕುಮಾರ್‌ರವರಿಗೆ ಕೊಟ್ಟು, ಕಳೆದ ಗುರುವಾರ ವಿವಾಹವನ್ನು ಟಿ ನರಸೀಪುರದಲ್ಲಿ ನೆರವೇರಿಸಿದರು

ಬ್ರಿಟಿಷರ ವಿರುದ್ಧ ಈಜಿಪ್ಟಿನಲ್ಲಿ ಗಾಂಧಿ ತತ್ವದ ಆಚರಣೆ

ಬ್ರಿಟಿಷರ ಆಕ್ರಮಣವನ್ನು ಎದುರಿಸಲು ಗಾಂಧೀಜಿಯವರ ಮಾರ್ಗ-ವಾದ ಸತ್ಯಾಗ್ರಹವನ್ನು ಈಜಿಪ್ಟ್ ಕೈಗೊಳ್ಳುವುದೆಂದೂ, ಅಲ್ಲಿನ ಜನರು ಬಲಪ್ರಯೋಗ ಮಾಡುವುದಿಲ್ಲವೆಂದೂ ಪಾಕಿಸ್ತಾನದಲ್ಲಿ ಈಜಿಪ್ಟಿನ ರಾಯಭಾರಿಯಾಗಿರುವ ಅಬ್ದುಲ್ ಅಜಾಂ ಬೇಯವರು ತಿಳಿಸಿರುತ್ತಾರೆ ವಿಶ್ವ ಸಂಸ್ಥೆಯು ದಿನಾಚರಣೆಯನ್ನು ನಡೆಸುವ ಸಮಯದಲ್ಲೇ ಬ್ರಿಟಿಷರು ಅನೇಕ ಆಕ್ರಮಣ ಕೃತ್ಯಗಳನ್ನು ನಡೆಸಿರುವುದಾಗಿಯೂ ಅವರು ಹೇಳ ಸಾಮ್ರಾಜ್ಯಶಾಹಿ ತತ್ವವನ್ನು ಪುಷ್ಟಿಗೊಳಿಸುವ ಹಲವು ಸರ್ಕಾರಗಳ ನೀತಿಯನ್ನು ಖಂಡಿಸಿರುತ್ತಾರೆ

ಮಿಡಲ್ ಸ್ಕೂಲ್ ಪರೀಕ್ಷಾ ಕೇಂದ್ರ ಅಗತ್ಯ

ಸ್ವಂ ಸು] ಕಿಕ್ಕೇರಿ —

ಕೃಷ್ಣರಾಜಪೇಟೆ ತಾಲ್ಲೂಕಿಗೆಲ್ಲಾ ಆ ಊರಿನಲ್ಲಿ ಮಾತ್ರ ಒಂದು ಮಿಡಲ್ ಸ್ಕೂಲ್ ಪರೀಕ್ಷಾ ಕೇಂದ್ರವಿರುತ್ತದೆ ಇಲ್ಲಿ ಪ್ರತಿ ವರ್ಷವು ಬಾಲಕರ ಸಂಖ್ಯೆ ಹೆಚ್ಚುತ್ತಿರುವುದು ಹೊಸದಾಗಿ ಇಲ್ಲಿ ತೆರೆಯಲಾಗಿರುವ ಹೈಸ್ಕೂಲು ರಿ ತುಂಬಾ ದೂರವಿರುವುದು ಎಡೆ ಸಂಭಾವವೂ ಹೆಚ್ಚಾಗಿರುವುದ ಸರ್ಕಾರದವರು ಕಿಕ್ಕೇರಿಯಲ್ಲಿ ಮಿಡಲ್ ಸ್ಕೂಲು ಪರೀಕ್ಷಾ ಕೇಂದ್ರವನ್ನು ಸ್ಥಾಪಿಸುವುದು ಅಗತ್ಯ

ಕೃಷ್ಣರಾಜಪೇಟೆ ಅಂಚೆ ಕಾಗದಗಳು ಬಂದು ಒಂದು ದಿನದ ನಂತರ ಕಿಕ್ಕೇರಿಗೆ ಬರುತ್ತಿದ್ದುದು ನಿಂತು ಅದೇ ದಿನವೇ ಬರುವ ವ್ಯವಸ್ಥೆಯಾಗಿರುತ್ತದೆ

ವ್ರಣ ರೋಗ ಚಿಕಿತ್ಸೆಗೆ ಇಲಿಗಳ ಹಾಲು

ನ್ಯೂಯಾರ್ಕಿನ ಆಸ್ಪತ್ರೆಯೊಂದರಲ್ಲಿ ಇಲಿಗಳ ಹಾಲನ್ನು ಕರೆಯುವ ಕೇಂದ್ರವಿದೆ ವಿಜ್ಞಾನಿಗಳೇ ಅದನ್ನು ಕರೆಯುವರು ವರ್ಷಕ್ಕೆ ಎರಡು ಕ್ವಾರ್ಟ್‌ನಷ್ಟು ಹಾಲು ದೊರೆಯುವುದೆಂದು ಹೇಳಲಾಗಿದೆ ಈ ಹಾಲಿನಿಂದ ವ್ರಣ ರೋಗವನ್ನು ಗುಣಪಡಿಸಬಹುದೆಂದು ಗೊತ್ತಾಗಿದೆ

ಗಾಂಧೀಜಿ ಜಯಂತ್ಯುತ್ಸವ

ಮಹಾತ್ಮ ಗಾಂಧಿಯವರ ೮೩ನೇ ಜಯಂತ್ಯುತ್ಸವವು ಮೊನ್ನೆ ಇಲ್ಲಿನ ಪ್ರಧಮ ... ಸಂಘದಲ್ಲಿ ನೆರವೇರಿಸಲ್ಪಟ್ಟಿತು ... ಶ್ರೀ ಎಂ ಎ ಗುರುಬಸಪ್ಪ ಶೆಟ್ಟಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಗಾಂಧೀಜಿಯವರ ಭಾವ ಚಿತ್ರವನ್ನು ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರವರು ಅನಾವರಣಗೊಳಿಸಿದರು ಸ್ವತಂತ್ರ ಭಾರತ ಮತ್ತು ಗಾಂಧೀಜಿ ವಿಷಯವಾಗಿ ಶ್ರೀ ತರಾ ಸು ... ರಾಯರೂ ಮತ್ತು ಗಾಂಧೀವಾದ ಮತ್ತು ಇತರ ವಾದಗಳು ಎಂಬ ವಿಷಯದ ಮೇಲೆ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರವರೂ ಉಪನ್ಯಾಸಗಳನ್ನು ಮಾಡಿದರು ಶ್ರೀ ಪಿ ಕಾಳಿಂಗರಾವ್ ರವರ ಗೀತೆಗಳನ್ನು ಹಾಡಿ ದರು ವಂದನಾರ್ಪಣೆ ಮತ್ತು ಮಂಗಳಾರತಿಯೊಡನೆ ಸಮಾರಂಭವು ಮುಕ್ತಾಯವಾಯಿತು

THIRTHA & COMPANY,
Narayana Sastry Road
PHONE 537
... AGENTS

ಸು ಪ್ರ ಭಾ ತ

ರಾಜಧಾನಿಯ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ "ಸುಪ್ರಭಾತ" ಸಂಚಿಕೆಯ ದೀಪಾವಳಿ ವಿಶೇಷಾಂಕವು ಈಗ ತಾನೆ ಹೊರಬಿದ್ದಿದೆ ಇದು ಪತ್ರಿಕೆಯ ಪ್ರಥಮ ಸಂಪುಟದ ೪ನೆ ಸಂಚಿಕೆ ಪತ್ರಿಕೆಯು ಶ್ರೀ ಶಿರು ಶ್ರೀರಂಗರವರ ಸಂಪಾದಕತ್ವದಲ್ಲಿ ಶ್ರೀ ತ ಸು ಶಾಮರಾಯರ ಮುನ್ನುಡಿಯೊಡನೆ ಹೊರಬಿದ್ದಿದೆ ಶ್ರೀ 'ಸಾಹಿತ್ಯ ಭೀಷ್ಮ' ಮತ್ತಿತರರ ಶುಭ ಹಾರೈಕೆಗಳಿವೆ ಸಂಪಾದಕ ಮಂಡಲಿಯಲ್ಲಿ ಶ್ರೀ ಗೋಪಾಲಕೃಷ್ಣ, ಅನಿಲ್, ಬಿ ಎಸ್ ನಟರಾಜನ್ ಮತ್ತು ಬಿ ಆರ್ ಶಿವರಾಮು ... ಇವರು ಇದ್ದಾರೆ ಪ್ರಕೃತ ಸಂಚಿಕೆಯು ಹೆಸರಾಂತ ಬರಹಗಾರರ ಕತೆ ಕವನ, ಹರಟೆ ಮತ್ತು ಇತರ ಲೇಖನಗಳಿಂದ ಕೂಡಿದೆ ಸಂಚಿಕೆಗೆ ಶ್ರೀ ಪಿ ಆರ್ ತಿಪ್ಪೇಸ್ವಾಮಿಯವರ ಸುಂದರ ಮುಖ ಚಿತ್ರವು ಕಳೆ ಕೊಟ್ಟಿದೆ ಈ ಸಂಚಿಕೆಯನ್ನು ಯೂನಿವರ್ಸಿಟಿ ಲೈಬ್ರರಿ ವಾಚನಾಲಯದಲ್ಲಿ ಇಡಲಾಗಿದೆ

ಆಹಾರದ ಸರಬರಾಜು ಸರಿಯಾಗಿಲ್ಲ

ಸ್ವಂ ಸು] ಕೃಷ್ಣರಾಜಪೇಟೆ

ಊರಿಗೆ ಸುಮಾರು ಒಂದು ವಾರದ ಆಹಾರ ಪದಾರ್ಥಗಳ ಪಡಿತರ ಸರಿಯಾಗಿ ಆಗದೆ ಜನಗಳಿಗೆ ತುಂಬಾ ಕಷ್ಟವಾಗಿದೆ ಎರಡು ಮೂರು ದಿನ ಉಪವಾಸವನ್ನು ಕೂಡ ಜನರು ಪಡುತ್ತಾರೆ ಈ ನ್ಯೂನತೆಯನ್ನು ಸರ್ಕಾರದವರು ಕೂಡಲೇ ಸರಿಪಡಿಸುವರೆಂದು ನಂಬಲಾಗಿದೆ

For Pure & Fresh
ASHOKA Coffee
City Distributors
ASHOKA TRADERS
Bidar Krishnappa Street
MYSORE

ಮುಖ್ಯ ಪ್ರಕಟಣೆ
ಸಾರ್ವಜನಿಕರಿಂದ ಆದರಣೀಯ ... ಮೂಡದ ಬಡ ಪ್ರಜಾ ವರ್ಗದವರು ಬಳಸುವ ಹಿತ್ತಾಳೆಯಾಗಿ ಸಾವ
ಪೈರೆಕ್ಸ್
ಹಲ್ಲು ಪುಡಿಯ
ದರವನ್ನು ಎಲ್ಲರ ಉಪಯೋಗಕ್ಕೆ ... ಪ್ಯಾಕೆಟ್ಟಿಗೆ ೩ ಆಣೆ ದಿಂದ ೨ ಆಣೆ ... ನಿರ್ಧರಿಸಿರುತ್ತೇವೆ ಮತ್ತು ಈ ದರವು 1951 ನೇ ನವೆಂಬರ್ 1 ರಿಂದ ಜಾರಿಗೆ ಬರುವುದು
ಗುಣದಲ್ಲಿ ವ್ಯತ್ಯಾಸವಿಲ್ಲ
ಸೂಚನೆ — ಸರ್ ಸಿ ವಿ ರಾಮನ್ ... ಈ ಹಲ್ಲು ಪುಡಿಯನ್ನು ಉಪಯೋಗಿಸುತ್ತಿದ್ದಾರೆ ಮತ್ತು ಇತರರಿಗೂ ಶಿಫಾರಸು ಮಾಡುತ್ತಾರೆ ಪ್ಯಾಕೆಟ್ಟನ್ನು ಕೊಳ್ಳುವಾಗ ಅದರ ಮೇಲೆ ಅವರು ಕೊಟ್ಟ ಪ್ರಶಸ್ತಿ ಪತ್ರವನ್ನು ದಯವಿಟ್ಟು ನೋಡಿ
ದಿ ಪಯೋರಿಯಾ ಕ್ಯೂರ್ ... ಕೋಟೆ - ಬೆಂಗಳೂರು
ಪ್ರತಿನಿಧಿಗಳಿಲ್ಲದಿರುವ ಕಡೆ ಏಜೆಂಟರು ಬೇಕಾಗಿದೆ

ರಾಜಕಮಲ್, ಮೈಸೂರು
2 11 51 ರಿಂದ ಅಮೋಘ 3 ನೇ ವಾರ
ಚಿತ್ರ ಪಿಕಾರಿ
— ಬೆಳಗಿನ ಪ್ರದರ್ಶನಗಳು —
2-11-51 ರಿಂದ 4 ದಿನಗಳು ಮಾತ್ರ
- ಮೇರೆ ಲಾಲ್ - (ಹಿಂದಿ)
ಪಾತ್ರ ಹಂಸ ವಾಡ್ಕರ್ ಪ್ರತಿಮಾ ದೇವಿ

SRI GAYATHRI,
LAST DAY
THE FLAME AND THE ARROW
On 2 11 51 One Day Only
Universal's
DEPORTED
From 3-11-51
R K Os
TREASURE ISLAND

ಪ್ರಭಾ ಪಿಕ್ಚರ್ ಹೌಸ್
2—11—51 ರಿಂದ ಅಮೋಘವಾದ 2 ನೇ ವಾರ
ಸುಪ್ರಸಿದ್ಧ ಜನ್ನೆಲೆ ಸಂಗೀತಗಾರರಾದ ಮುಖೇಶ್‌ರವರ ಗಾನ ಮಾಧುರ್ಯ ಮತ್ತು ಗೀತಾಬಾಲಿಯ ಅಮೋಘ ನರ್ತನ ವೈಖರಿಯಿಂದ ಕೂಡಿದ
ಬಾವ್ರೆನೈನ್ BAWRENAIN (ಹಿಂದಿ)
ಪಾತ್ರ ರಾಜ್ ಕಪೂರ್ ಗೀತಾಬಾಲಿ, ವಿಜಯಲಕ್ಷ್ಮಿ ಮತ್ತು ಕಕ್ಕೂ
ಬೆಳಗಿನ ಪ್ರದರ್ಶನ 2 11-51 ರಿಂದ 4 ದಿನಗಳು ಮಾತ್ರ
ಬಾಂಬೆ ಟಾಕೀಸ್ ರವರ ಮಿಲನ್ *
ಪಾತ್ರ — ದಿಲೀಪ್ ಕುಮಾರ್, ರಂಜನಾ

ಶ್ರೀ ಲಕ್ಷ್ಮೀ ಥಿಯೇಟರ್
ಅಮೋಘ 4 ನೇ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದೆ
ಕಿಕ್ಕಿರಿದ ಜನ ವೃಂದವನ್ನು ನಕ್ಕುನಗಿಸುತ್ತಿರುವ
ಅರುಣಾರವರ ಪ್ರಸಿದ್ಧ ಹಾಸ್ಯಭರಿತ ಕಥೆ * ರಾಜಾಂಬಾಳ್ *
ಪಾತ್ರ — ಮಾಧುರಿ ದೇವಿ, ಪಿ ಕೆ ಸರಸ್ವತಿ, ಸಾರಂಗಪಾಣಿ
ಬರುತ್ತದೆ — ಮಂತ್ರ ದಂಡಂ — (ತೆಲುಗು)

ಒಲಂಪಿಯಾ * 1-11-51 ರಿಂದ ಅಮೋಘ ಪ್ರಾರಂಭ
ಪರಿಸ್ಥಾರ್ ಪಿಕ್ಚರ್ಸ್ ರವರ
* ಬೀವಿ ಅಥವಾ ಪತ್ನಿ
ಪಾತ್ರ — ಮನ್ಮೋಹನ್ ಕೃಷ್ಣ, ಪ್ರಾಣ್, ವೀಣಾ, ಅಲ್ ನಸೀರ್ ಮತ್ತು ಮಾಧುರಿ
ಪ್ರತಿಯೊಬ್ಬರೂ ಸಂಸಾರ ಸಮೇತ ನೋಡಬೇಕಾದ ಉತ್ಕೃಷ್ಟ ಸಾಮಾಜಿಕ ಚಿತ್ರ
ಬೆಳಗಿನ ಪ್ರದರ್ಶನ 1-11-51 ರಿಂದ 4 ದಿನಗಳು
ದಿಲೀಪ್ ಕುಮಾರ್ ಕಾಮಿನಿ ಕೌಶಲ್ ಪಾತ್ರವಹಿಸಿರುವ ಆರ್ಜೂ

Edited, Printed and Published by A R Nagarajan, at Sadhvi Press D Subbiah Road, Mysore

ಗೌಡ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಶ್ರೇಷ್ಠಿ ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

792 • ಬೆಂಗಳೂರು • ಅಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಶುಕ್ರವಾರ ೨-೧೧-೫೧ [ಸಂಚಿಕೆ ೮೩

ಭದ್ರಾವತಿ ಕಾರ್ಖಾನೆಗೆ ಕೇಂದ್ರದ ಧನ ಸಹಾಯ

ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಪಣ ತೊಡಬೇಕು

ಬಹಿರಂಗ ಸಭೆಯಲ್ಲಿ ಶ್ರೀ ಗೋಲ್ವಾಲ್ಕರರ ಭಾಷಣ

ಮೈಸೂರು ೨

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘ ಚಾಲಕರಾದ ಶ್ರೀ ಎಂ. ಗೋಲ್ವಾಲ್ಕರ್‌ರವರು ನೆನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಭಾಷಣ ಮಾಡಿ ಹಿಂದೂ ರಾಷ್ಟ್ರದ ಸ್ಥಾಪನೆಗೆ ಭಾರತೀಯರೆಲ್ಲರೂ ಪಣ ತೊಡಬೇಕೆಂದು ಹೇಳಿದರು. ಅವರ ಭಾಷಣದ ಸಾರಾಂಶವಿದು —

ಆತ್ಮ ವಿಶ್ವಾಸ ಶೂನ್ಯತೆಯೇ ಇಂದಿನ ಅನರ್ಥಗಳಿಗೂ ಕಾರಣ. ನಮ್ಮ ಸಂಸ್ಕೃತಿ ಮತ್ತು ಪದ್ಧತಿಗಳಲ್ಲಿ ಪೂರ್ಣ ವಿಶ್ವಾಸವನ್ನು ಹೊಂದುವುದರಿಂದಲೇ ನಮ್ಮ ಪುನರುದ್ಧಾರವಾಗಬೇಕಾಗಿದೆ. ಧರ್ಮವೇ ನಮ್ಮ ಸಂಸ್ಕೃತಿಯ ತಳಹದಿಯಾಗಿದ್ದಿತು. ಈಗ ಅದು ತಪ್ಪಿ ನಮ್ಮ ದೇಶವು ನಿರಾಧಾರವಾದಂತಾಗಿದೆ. ಕೋಮುವಾರು ಭಾವನೆಯನ್ನು ಬೆಳೆಸುವ ನೆಪದಿಂದ ಧರ್ಮವನ್ನೇ ಕೈ ಬಿಡಲಾಗಿದೆ.

ನಮ್ಮ ಮಾತೃ ಭೂಮಿಯು ಇಬ್ಭಾಗವಾಗಿ ವಿಭಾಗಿಸಲ್ಪಟ್ಟಿದೆ. ದೇಶಮಾತೆಯು ಈ ರೀತಿ ಮಂಡಿಸಲ್ಪಟ್ಟಿರುವುದರಿಂದ ಯಾವ ಸತ್ಪ್ರಜೆಯೂ ಸಹಿಸಲಾರ. ಸ್ವತಂತ್ರರಾಗಿ ಪರಕೀಯರು ತಮ್ಮ ತಮ್ಮ ಧರ್ಮಗಳ ಮಾರ್ಗದಲ್ಲಿಯೇ ರಾಷ್ಟ್ರಗಳನ್ನು ಕಟ್ಟುತ್ತಿದ್ದಾರೆ. ಸರ್ವ ವಿಧದಲ್ಲಿಯೂ ಕ್ಷೀಣಿಸುತ್ತಿದ್ದೇವೆ. ಅನ್ನ ಬಟ್ಟೆಗಳಿಗಾಗಿ ಪರಕೀಯರಲ್ಲಿ ಭಿಕ್ಷಾ ಪಾತ್ರೆ ಹಿಡಿದು ಬೇಡಲು ಹೋಗುತ್ತಿದ್ದೇವೆ. ಇದರಿಂದ ಪ್ರಪಂಚದ ರಾಷ್ಟ್ರಗಳು ನಮ್ಮ ದೇಶವನ್ನು ಫುಟ್ ಬಾಲ್‌ನಂತೆ ಆಡಿಸಲು ಅವಕಾಶವಾಗಿದೆ. ಹಿಮಾಲಯದಿಂದ ಕನ್ಯಾ ಕುಮಾರಿಯವರೆಗಿರುವ ಸಮಗ್ರ ಭಾರತ ದೇಶವೆ ನಮ್ಮದು. ಇದನ್ನು ಪುನಃ ಸಮಗ್ರ ಸಂಪೂರ್ಣವಾದ ಹಿಂದೂ ಸಾಮ್ರಾಜ್ಯವನ್ನಾಗಿ ಸಂಸ್ಥಾಪನೆ ಮಾಡುವುದೇ ನಮ್ಮ ಧ್ಯೇಯ. ಇದರಲ್ಲಿ ಯಾವ ಸಂಧಾನಕ್ಕೂ ನಾವು ಒಪ್ಪುವುದಿಲ್ಲ. ಇದಕ್ಕಾಗಿ ನಮ್ಮ ಪ್ರಾಣಗಳನ್ನೂ ಅರ್ಪಿಸಲು ಪಣ ತೊಡುತ್ತೇವೆ. ಅನಾದಿಕಾಲದಿಂದಲೂ ಪರಂಪರಾನುಗತವಾಗಿ ಬಂದಿರುವ ನಮ್ಮ ಪವಿತ್ರವಾದ ಸಂಸ್ಕೃತಿಗೆ ಅನುಗುಣವಾದ ಭವಿಷ್ಯದ ರಾಷ್ಟ್ರಕ್ಕೆ ಗಳಿಸಿಕೊಡಲು ನಾವು ಸಂಕಲ್ಪರಾಗಿದ್ದೇವೆ. ಇದಕ್ಕೆ ಬೇಕಾದ ಶಿಸ್ತು, ವ್ಯವಸ್ಥೆ ಮತ್ತು ಸಂಘಟನೆಯನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಕಲಿಸುತ್ತದೆ. ಅದಕ್ಕೆ ಸಕಲರ ಬೆಂಬಲ ಬೇಕೆಂದು ಹಾರೈಸುತ್ತೇನೆ.

ಗೂಡ್ಸ್ ಗಾಡಿ ಉರುಳಿತು

ಅರಸೀಕೆರೆಯಿಂದ ಬೆಂಗಳೂರು ಕಡೆ ಬರುತ್ತಿದ್ದ ಗೂಡ್ಸ್ ರೈಲು ಮೊನ್ನೆ ಚಿಕ್ಕ ಬಾಣಾವಾರ ಮತ್ತು ಗೊಲ್ಲಹಳ್ಳಿ ಮಧ್ಯೆ ಆಕಸ್ಮಿಕವಾಗಿ ಕಂಬಿ ತಪ್ಪಿದ್ದರಿಂದ ಎರಡು ವ್ಯಾಗನ್‌ಗಳು ಉರುಳಿದುವೆಂದು ತಿಳಿದುಬಂದಿದೆ.

ಬ್ರಿಟಿಷರೊಡನೆ ಸೇರುವ ಈಜಿಪ್ಟಿನವರಿಗೆ ಬರೆ

ಈಜಿಪ್ಟಿನ ಸೂಯೆಜ್ ಕಾಲುವೆ ಪ್ರದೇಶದ ಕಾವಲುಗಾರಿಕೆ ಪಡೆಯವರು ನೆನ್ನೆ ಪ್ರಕಟಣೆಯೊಂದನ್ನು ಹೊರಡಿಸಿ, ಈಜಿಪ್ಟಿನ ವಿರುದ್ಧವಾಗಿ ಅನ್ಯ ಯಾವ ಪ್ರಜೆಯೇ ಆಗಲೀ ಬ್ರಿಟಿಷ್ ಸೈನಿಕರೊಡನೆ ಸೇರಿ ರಾಷ್ಟ್ರದ್ರೋಹ ಕಾರ್ಯದಲ್ಲಿ ತೊಡಗಿದರೆ ಅಂತಹವರಿಗೆ ಸುಡಿ ಶಿಕ್ಷೆಯನ್ನು ವಿಧಿಸುವುದಲ್ಲದೆ ಅವರ ಹಣೆಯ ಮೇಲೆ ಕಾಯ್ದ ಕಬ್ಬಿಣದಿಂದ ಬರೆ ಹಾಕಲಾಗುವುದೆಂದೂ ಎಚ್ಚರಿಸಿದ್ದಾರೆ. ಇಂತಹ ಅಪರಾಧ ಮಾಡುವವರನ್ನು ಮಹಾ ಜನರ ನ್ಯಾಯಾಲಯದ ಮುಂದೆ ಬಹಿರಂಗ ವಿಚಾರಣೆಗೆ ಗುರಿಪಡಿಸಲಾಗುವುದೆಂದೂ ಸೂಚಿಸಲಾಗಿದೆ.

ಬ್ರಿಟಿಷ್ ರಾಜಕುಮಾರಿ ಅಪಾಯದಿಂದ ಪಾರು

ಕೆನಡಾಕ್ಕೆ ಪ್ರವಾಸ ಹೋಗಿದ್ದ ಬ್ರಿಟಿಷ್ ರಾಜಕುಮಾರಿ ಎಲಿಜಬೆತ್‌ರವರು ಮೊನ್ನೆ ಮಾಂಟ್ರೀಲ್ ಆಸ್ಪತ್ರೆಯನ್ನು ಭೇಟಿ ಮಾಡಿದ ಸಮಯದಲ್ಲಿ ಅಪಾಯಕ್ಕೀಡಾಗುವುದರಲ್ಲಿದ್ದು ಸ್ವಲ್ಪದರಲ್ಲಿಯೇ ಪಾರಾದರೆಂದು ಹೇಳಲಾಗಿದೆ. ಅವರು ಹೊರಕ್ಕೆ ಹೋದ ಒಂದು ನಿಮಿಷದ ನಂತರ, ಅವರು ನಿಂತಿದ್ದ ಸ್ಥಳದಲ್ಲಿ ಸೋಟು ಗೋಡೆಯೊಂದು ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಕಳಕ್ಕುರುಳಿತೆಂದು ವರದಿಯಾಗಿದೆ.

ಜಿನ್ನಾ-ಲಿಯಾಖತ್ ಗೋರಿ ಪ್ರತ್ಯೇಕಿಸಿದುದಕ್ಕೆ ಆಕ್ರೋಶ

ಜಿನ್ನಾ ಮತ್ತು ಲಿಯಾಖತ್ ಅಲಿಯವರ ಸಮಾಧಿಗಳನ್ನು ಪ್ರತ್ಯೇಕಿಸುತ್ತಿದ್ದ ಗೋಡೆಯೊಂದನ್ನು ಮೊನ್ನೆ ಕರಾಚಿಯ ಉದ್ರಿಕ್ತ ಜನರ ತಂಡವೊಂದು ಒಡೆದು ಹಾಕಿದುದಾಗಿ ಗೊತ್ತಾಗಿದೆ. ಲಿಯಾಖತ್‌ರ ಶರೀರವನ್ನು ಜಿನ್ನಾರವರ ಗೋರಿ ಎಳೆ ಕಾಂಪೌಂಡ್ ಗೋಡೆಯನ್ನು ಒಡೆದು ಸಮಾಧಿ ಮಾಡಲಾಗುತ್ತಿತ್ತು. ಅದರ ಗೋರಿಯೇ ಮಾರ್ಗವಾಗಿದ್ದ ಜನರೂ ತುಳಿಯುತ್ತಿದ್ದುದರಿಂದ ಜಿನ್ನಾರವರ ತಂಗಿ ಫಾತಿಮಾರವರು ಆಕ್ಷೇಪಣೆ ಮಾಡಲಾಗಿ ಪುನಃ ಗೋಡೆಯನ್ನು ಕಟ್ಟಲಾಗಿತ್ತೆಂದೂ ಅದನ್ನು ಕಂಡು ಜನರು ರೇಗಿದರೆಂದೂ ಹೇಳಲಾಗಿದೆ.

ಪ್ರಜಾ ಪಕ್ಷದಲ್ಲಿ ಜನತಾ ಪಕ್ಷದ ಐಕ್ಯ

ಬೆಂಗಳೂರು ೧

ಮೈಸೂರು ಜನತಾ ಪಕ್ಷವು ಕೃಷಕ್ ಮಜದೂರ್ ಪ್ರಜಾ ಪಕ್ಷದಲ್ಲಿ ಐಕ್ಯವಾಗಲು ನಿರ್ಧರಿಸಿರುತ್ತದೆ. ನೆನ್ನೆ ಶ್ರೀ ... ಪುಟ್ಟೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ಈ ತೀರ್ಮಾನವಾಯಿತು. ಪ್ರಜಾ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯ ... ನಡೆ ... ದಿನ ... ಸಂಜೆ ಜನತಾ ಪಕ್ಷದ ಕಛೇರಿಯಲ್ಲಿ ಪತ್ರಿಕಾ ಸಮ್ಮೇಳನವನ್ನು ನಡೆಸುವರೆಂದು ತಿಳಿದುಬಂದಿದೆ. ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಸಂಸ್ಥಾನಕ್ಕೆ ಅನ್ವಯಿಸುವಂತೆ ಕಿರಿದಾದ ಎಲ್ಲೆಯಲ್ಲಿ ಪಕ್ಷವನ್ನು ಕಟ್ಟುವುದು ಅಥವಾ ನಡೆಸುವುದು ಸರಿಯಾದುದಲ್ಲವೆಂದೂ, ಇಂಡಿಯಾ ರಾಜ್ಯಾಂಗಕ್ಕೆ ಒಳಪಟ್ಟಿರುವ ದೇಶಕ್ಕೆಲ್ಲಾ ಅಖಿಲ ಭಾರತ ಪಕ್ಷವಿರಬೇಕಾದುದು ವಿಹಿತವೆಂದೂ ಜನತಾ ಪಕ್ಷವು ತನ್ನ ನಿರ್ಣಯದಲ್ಲಿ ತಿಳಿಸಿರುತ್ತದೆ.

ನೆಹರೂರವರಿಗೆ ಚೀಣಾದ ಆಹ್ವಾನ

ಪ್ರಧಾನಿ ನೆಹರೂರವರು ಚೀಣಕ್ಕೆ ಭೇಟಿ ಕೊಡಬೇಕೆಂದು ಅಲ್ಲಿನ ಸರ್ಕಾರದವರು ಪೀಕಿಂಗಿನಲ್ಲಿರುವ ಭಾರತದ ರಾಯಭಾರಿ ಸರ್ದಾರ್ ಪಣಿಕ್ಕರ್‌ರ ಮೂಲಕ ಆಹ್ವಾನವನ್ನು ಕಳುಹಿಸಿರುವರೆಂದೂ ಸ್ವಲ್ಪವೂ ಬಿಡುವಿಲ್ಲದಿರುವುದರಿಂದ ಸಧ್ಯದಲ್ಲಿ ಅವರು ತೆರಳಲು ಸಾಧ್ಯವಿಲ್ಲವೆಂದೂ ಹೇಳಲಾಗಿದೆ.

ನಗರದಲ್ಲಿ ಉದ್ಯೋಗ ಒದಗಿಸುವ ಕಛೇರಿ

ರಾಜಧಾನಿಯ ಇಲವಾಲ ರಸ್ತೆ ೧ನೇ ನಂ. ಕಟ್ಟಡದಲ್ಲಿ ಉದ್ಯೋಗಗಳ ಉಪಕಛೇರಿಯೊಂದನ್ನು ತೆರೆಯಲಾಗಿದೆಯೆಂದು ಸಂಸ್ಥಾನದ ಪುನರ್ವ್ಯವಸ್ಥೆ ಮತ್ತು ಉದ್ಯೋಗಗಳ ಸಹಾಯಕ ಡೈರೆಕ್ಟರು ತಿಳಿಸಿರುತ್ತಾರೆ. ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಯವರ ಸೌಕರ್ಯಕ್ಕಾಗಿ ಇದನ್ನು ತೆರೆಯಲಾಗಿದೆ. ನಾಗರೀಕರೂ ಮತ್ತು ಕೆಲಸಕ್ಕೆ ಹೋಗುವವರೂ ಸಹ ಸದರಿ ಕಛೇರಿಯ ಉಪಯೋಗವನ್ನು ಪಡೆಯಬಹುದೆಂದು ಸೂಚಿಸಲಾಗಿದೆ.

ಭದ್ರಾವತಿ ಕಾರ್ಖಾನೆಗೆ ಕೇಂದ್ರದಿಂದ ೪೧ ಕೋಟಿ ರೂ. ಸಹಾಯ

[ಸ್ವಂ ಸು ವರ್ತ್ರ] ಬೆಂಗಳೂರು ೨

ಈ ದಿನ ಶಾಸನ ಸಭೆಯಲ್ಲಿ ಶ್ರೀ ಸಿ. ಆರ್. ಬಸಪ್ಪನವರ ಪ್ರಶ್ನೆಗೆ ಉತ್ತರವಿತ್ತು ಶ್ರೀ ಹೆಚ್. ಸಿ. ದಾಸಪ್ಪನವರು ಬೊಂಬಾಯಿ ಮುಂತಾದ ಕಡೆಗಳಲ್ಲೂ ಸಹ (ಮಲ್ಟಿ ಪಾಯಿಂಟ್) ಅನೇಕ ಕಡೆಗಳಲ್ಲಿ ಮಾರಾಟ ತೆರಿಗೆಯನ್ನು ವಸೂಲು ಮಾಡುತ್ತಿರುವುದಾಗಿಯೂ, ಒಂದೇ ಕಡೆ ಇದನ್ನು ವಿಧಿಸಿದರೆ ಎಷ್ಟು ಹಣದ ಆದಾಯ ಬರುವುದೆಂಬುದು ಗೊತ್ತಿಲ್ಲವೆಂದೂ ತಿಳಿಸಿದರು. ಅಖಿಲ ಭಾರತಕ್ಕೆಲ್ಲಾ ಇದು ಅನ್ವಯವಾಗುವುದರಿಂದ ಒಂದೇ ಕಡೆ ವಿಧಿಸುವಂತೆ ಸಂಸ್ಥಾನದಲ್ಲಿ ಏರ್ಪಡಿಸುವುದು ಸಾಧ್ಯವಿಲ್ಲವೆಂದೂ, ಮಾರಾಟ ತೆರಿಗೆಯನ್ನು ಯಾವ ಯಾವ ಪದಾರ್ಥಗಳ ಮೇಲೆ ಹಾಕಕೂಡದೆಂಬುದನ್ನು ತಿಳಿಸುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಗಿದೆಯೆಂದೂ, ಅದು ಕೊಟ್ಟಿರುವ ಹಲವು ಸಲಹೆಗಳನ್ನು ಜಾರಿಗೆ ಕೊಡಲಾಗಿದೆಯೆಂದೂ ಹೇಳಿದರು. ಈ ಬಗ್ಗೆ ಎಲ್ಲಾ ಸಂಸ್ಥಾನಗಳ ಸಮ್ಮೇಳನವನ್ನು ಕರೆಯಲು ಈಗಲೇ ಸಾಧ್ಯವಿಲ್ಲವೆಂದು ಕೇಂದ್ರ ಮಂತ್ರಿ ದೇಶ್‌ಮುಖ್‌ರವರು ತಿಳಿಸಿರುವುದಾಗಿಯೂ ಅವರು ಹೇಳಿದರು.

ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಹಾಕಿದ್ದ ಬಂಡವಾಳದಲ್ಲಿ ೮೭.೧೨ ಲಕ್ಷ ರೂ. ಗಳನ್ನು ವಜಾ ಮಾಡಲಾಯಿತೆಂದೂ, ಕಾರ್ಖಾನೆಯ ಅಭಿವೃದ್ಧಿಗೆ ಕೇಂದ್ರ ಸರ್ಕಾರದವರು ೪೧.೩೦ ಕೋಟಿ ರೂ. ಸಹಾಯ ಮಾಡುವ ನಿರೀಕ್ಷೆಯಿದೆಯೆಂದೂ ತಿಳಿಸಿದರು. ಅಲ್ಪ ಕಾಲಾವಧಿ ಪ್ರಶ್ನೆಗೆ ಉತ್ತರವಾಗಿ ಚುನಾವಣೆ ಬಗ್ಗೆ ಸಮರ್ಪಕವಾಗಿ ಏರ್ಪಾಟು ಮಾಡಿರುವುದನ್ನು ಚುನಾವಣಾ ಕಮಿಷನರು ಒಪ್ಪಿರುವರೆಂದೂ ತಿಳಿಸಲಾಯಿತು.

ಕಾಂಗ್ರೆಸ್ಸಿನ ಆಹ್ವಾನಕ್ಕೆ ಮುಸ್ಲಿಮರ ನಿರಾಕರಣೆ

ಚುನಾವಣೆಗಳಲ್ಲಿ ಸಂಸ್ಥಾನದ ಮುಸ್ಲಿಮರಿಗೆ ೨ ಸ್ಥಾನಗಳನ್ನು ಕೊಡಲು ಕಾಂಗ್ರೆಸ್ಸಿನ ಚುನಾವಣಾ ಸಮಿತಿಯು ಇತ್ತ ಆಹ್ವಾನವನ್ನು ಮುಸ್ಲಿಂ ಸಮ್ಮೇಳನವು ನಿರಾಕರಿಸಿ, ಮುಸ್ಲಿಮ್ ಉಮೇದುವಾರರನ್ನು ಸ್ವತಂತ್ರವಾಗಿ ನಿಲ್ಲಿಸಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಸಂಸ್ಥಾನಕ್ಕೆ ಶ್ಯಾಮಪ್ರಸಾದ್ ಮುಖರ್ಜಿ

ಭಾರತೀಯ ಜನ ಸಂಘದ ಅಧ್ಯಕ್ಷರಾದ ಡಾ|| ಶ್ಯಾಮ ಪ್ರಸಾದ್ ಮುಖರ್ಜಿಯವರು ಈ ತಿಂಗಳು ಮಧ್ಯ ಭಾಗದಲ್ಲಿ ಬೆಂಗಳೂರಿಗೆ ಆಗಮಿಸಿ, ಸಂಸ್ಥಾನದಲ್ಲೆಲ್ಲಾ ಪ್ರವಾಸ ಕೈಗೊಳ್ಳುವರೆಂದು ತಿಳಿದು ಬಂದಿದೆ.

ದೆಹಲಿಗೆ ರೆಡ್ಡಿ, ಸಿದ್ದಯ್ಯ ಮುಂತಾದವರು

ಈ ದಿನ ಬೆಳಿಗ್ಗೆ ಶ್ರೀ ಟಿ. ಸಿದ್ದಲಿಂಗಯ್ಯ, ಎ. ಜಿ. ರಾಮಚಂದ್ರರಾಯರು ದೆಹಲಿಗೆ ಪ್ರಯಾಣ ಮಾಡಿದರು. ನಾಳೆ ಬೆಳಿಗ್ಗೆ ಮತ್ತು ಶ್ರೀ ಹೆಚ್. ಸಿ. ದಾಸಪ್ಪನವರೂ ಪ್ರಾಯಶಃ ಶ್ರೀ ಕೆ. ಸಿ. ರೆಡ್ಡಿಯವರೂ ಹೋಗಲಿರುವರು. ಶ್ರೀ ಚೆನ್ನಯ್ಯ ಮತ್ತು ಶ್ರೀ ಸುಬ್ರಹ್ಮಣ್ಯನವರು ನೆನ್ನೆ ಅಲ್ಲಿಗೆ ತೆರಳಿದರು.

ನ್ಯಾಯಾಲಯದಲ್ಲೇ ಗಂಡಹೆಂಡಿರ ಗುದ್ದಾಟ

ಜಮ್ಮುವಿನ ಒಂದು ನ್ಯಾಯಾಲಯದಲ್ಲಿ ಕೆಲವು ದಿನಗಳ ಹಿಂದೆ ದಂಪತಿಗಳಿಬ್ಬರು ಪರಸ್ಪರ ಗುದ್ದಾಡಿದರೆಂದು ವರದಿಯಾಗಿದೆ. ಆಕೆಯು ತನ್ನ 'ಪತ್ನಿ'ಯೆಂದು ಗಂಡನು ಹೇಳದನೆಂದೂ, ಇದನ್ನು ಹೆಂಗಸು ನಿರಾಕರಿಸಲಾಗಿ, ಅವನು ಆಕೆಯ ಮೇಲೆ ಬಿದ್ದನೆಂದೂ, ನಂತರ ನ್ಯಾಯಾಧೀಶರು ಅವನನ್ನು ಬಂಧಿಸಲು ಆಜ್ಞೆ ಮಾಡಿ, ತರುವಾಯ ಜಾಮೀನಿನ ಮೇಲೆ ಬಿಡುವಂತೆ ಸೂಚಿಸಿದರೆಂದು ಹೇಳಲಾಗಿದೆ

ಈಜಿಪ್ಟಿನಲ್ಲಿ ಇಂಗ್ಲಿಷ್ ಭಾಷೆಯ ಪತ್ರಗಳ ತಿರಸ್ಕಾರ

ಇಂಗ್ಲಿಷ್ ಭಾಷೆಯಲ್ಲಿ ಪತ್ರಗಳನ್ನು ಬರೆದುದಕ್ಕಾಗಿ ಈಜಿಪ್ಟ್ ಸರ್ಕಾರದವರು ಅವುಗಳನ್ನು ಅಲ್ಲಿನ ಬ್ರಿಟಿಷ್ ವ್ಯಾಪಾರಿಗಳಿಗೆ ವಾಪಸು ಕಳುಹಿಸಿ, ಅರಬ್ಬಿ ಭಾಷೆಯಲ್ಲಿಯೇ ಪತ್ರಗಳನ್ನು ಬರೆಯಬೇಕೆಂದು ಸೂಚಿಸಿರುತ್ತಾರೆ.

ಅಮೆರಿಕದಲ್ಲಿ ಮತ್ತೊಂದು ಅಣು ಸಿಡಿತ

ಅಮೆರಿಕದ ಲಾಸ್ ವೆಗಾಸ್ ಬಳಿ ಮೊನ್ನೆ ದಿನ ಮೂರನೆ ಬಾರಿ ಅಣು ಸಿಡಿತವನ್ನು ಏರ್ಪಡಿಸಲಾಗಿತ್ತು. ಸೂರ್ಯನ ಬಿಂದು ಬರುವ ರೀತಿಯಲ್ಲಿ ಇದರ ಪ್ರಕಾಶವನ್ನು ಕಣ್ಣನ್ನು ಕೋರೈಸುವಂತೆ ಕಾಣಿಸಿತೆಂದು ಹೇಳಲಾಗಿದೆ. ಅಣು ಬಾಂಬನ್ನು ೩೦ ಸಾವಿರ ಅಡಿ ಎತ್ತರದಿಂದ ನೆಲಕ್ಕೆ ಹಾಕಲಾಯಿತು

ಮಾಧ್ಯಮಿಕ ಶಾಲಾ ಉಪಾಧ್ಯಾಯರ ಸಮ್ಮೇಳನ

ಮೊನ್ನೆ ದಿನ ಮರಿಮಲ್ಲಪ್ಪ ಶಾಲೆಯಲ್ಲಿ ಮಾಧ್ಯಮಿಕ ಶಾಲೆಯ ಪ್ರಾಧ್ಯಾಪಕರುಗಳು ಸಭೆ ಸೇರಿ ಉಪಾಧ್ಯಾಯರುಗಳ ಸಂಘಟನೆಗಾಗಿ ಒಂದು ಸಂಘವನ್ನು ಸ್ಥಾಪಿಸಲು ಎಲ್ಲಾ ಮಾಧ್ಯಮಿಕ ಶಾಲೆಯ ಬೋಧಕರ ಸಮ್ಮೇಳನವನ್ನು ಲಕ್ಷ್ಮೀಪುರಂ ಮಾಧ್ಯಮಿಕ ಶಾಲೆಯ ಶ್ರೀ ಸುಬ್ಬರಾಮಯ್ಯನವರು ಕರೆಯಬೇಕೆಂದು ನಿರ್ಧರಿಸಿದರು

ಒಲಂಪಿಯಾ

1-11-51 ರಿಂದ ಅಮೋಘ ಪ್ರಾರಂಭ

ಪರಿಶ್ಕಾರ ಚಿತ್ರ್ಪಕರವರ

ಬೀವಿ ಅಥವಾ ಪತ್ನಿ

ಪಾತ್ರ. ಮುಮ್ತಾಜ್ ಶಾಂತಿ, ಪ್ರಾಣ್, ವೀಣಾ, ಅಲ್ ನಸೀರ್ ಮತ್ತು ಮಾಧುರಿ

ಪ್ರತಿಯೊಬ್ಬರೂ ಸಂಸಾರ ಸಮೇತ ನೋಡಬೇಕಾದ ಉತ್ಕೃಷ್ಟ ಸಾಮಾಜಿಕ ಚಿತ್ರ

ಬೆಳಗಿನ ಪ್ರದರ್ಶನ 1-11-51 ರಿಂದ 4 ದಿನಗಳು

ದಿಲೀಪ್ ಕುಮಾರ್, ಕಾಮಿನಿ ಕೌಶಲ್ ಪಾತ್ರವಹಿಸಿರುವ ಆ ಜಿ ಬ್

ಚೀಣಾ ಸೈನ್ಯದಲ್ಲಿ ಟಿಬೆಟ್ ಸೇನೆಯ ಐಕ್ಯ

ಚೀಣಾದ ಕಮ್ಯೂನಿಸ್ಟ್ ಸೈನ್ಯಗಳೊಡನೆ ಟಿಬೆಟ್ ಸೇನೆಯನ್ನು ಐಕ್ಯಗೊಳಿಸಿ ಅದನ್ನು ಪುನರ್ವ್ಯವಸ್ಥೆಗೊಳಿಸಲು ಏರ್ಪಾಡಾಗಿರುವುದು ಚೀಣಾ ಸೈನ್ಯವು ಸಾಮಗ್ರಿಗಳ ಉತ್ಪತ್ತಿಯನ್ನು ಹೆಚ್ಚಿಸುವುದರಲ್ಲಿ ನಿರತವಾಗಿ, ದೇಶಕ್ಕೆ ಇರುವ ಎಲ್ಲ ತೊಂದರೆಗಳನ್ನು ನಿವಾರಿಸಲು ಪ್ರಯತ್ನಿಸುವುದೆಂದು ಹೇಳಲಾಗಿದೆ

ಬ್ರಿಟಿಷ್ ಮಂತ್ರಿಗಳ ಸಂಬಳ ಇಳಿಯಿತು

ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಸಂಬಳವನ್ನು ವರ್ಷಕ್ಕೆ ೧೦ ಸಾವಿರ ಪೌಂಡಿನಿಂದ ೭ ಸಾವಿರಕ್ಕೆ ಇಳಿಸಿಕೊಂಡಿರುತ್ತಾರೆ. ಮಿಕ್ಕೆಲ್ಲ ಸಚಿವರ ಸಂಬಳಗಳು ೫ ಸಾವಿರದಿಂದ ನಾಲ್ಕು ಸಾವಿರಕ್ಕೆ ಇಳಿಸಲ್ಪಟ್ಟಿವೆ

ದೀಪಾವಳಿ ಶುಭಾಶಯಗಳು

ರಾಜಧಾನಿಯ ಚಾಮುಂಡೇಶ್ವರಿ ಭವನ, ಶ್ರೀ ಕೃಷ್ಣ ಭವನ, ಬೊಂಬಾಯಿ ಇಂದ್ರಭವನ ಮತ್ತು ವೆಲ್ಕಂ ಲಾಡ್ಜಿನ ಮಾಲೀಕರುಗಳು ಕಳುಹಿಸಿರುವ ದೀಪಾವಳಿ ಶುಭಾಶಯ ಮತ್ತು ಸಿಹಿ ತಿಂಡಿಗಳನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ಪಂಡಿತ ಮಂಡಲದ ವಾರ್ಷಿಕೋತ್ಸವ

ಬರುವ ತಿಂಗಳು ೧೫ರಿಂದ ೧೭ರ ವರೆಗೆ ಮೈಸೂರು ಸಂಸ್ಥಾನದ ಪಂಡಿತ ಮಂಡಲದ ೧೭ನೇ ವಾರ್ಷಿಕೋತ್ಸವವು ರಾಜಧಾನಿಯಲ್ಲಿ ನಡೆಯುವುದು ಇಲ್ಲಿನ ಪೌರಸಭಾ ಅಧ್ಯಕ್ಷರಾದ ಶ್ರೀ ಎಂ ಎಸ್ ಸ್ವಾಮಿನಾಥರವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ ಶ್ರೀಗಳಾದ ಎ ವಿ ಪದ್ಮನಾಭಾಚಾರ್ಯರು ಮತ್ತು ಜಿ ಆರ್ ಶ್ರೀನಿವಾಸಯ್ಯಂಗಾರ್ಯರು ಕಾರ್ಯದರ್ಶಿಗಳಾಗಿರುತ್ತಾರೆ

CITY TUTORIAL COLLEGE

Near V V Market Mysore

ಮಿಡಲ್ ಸ್ಕೂಲ್ ಪರೀಕ್ಷೆಗೆ ತರಬೇತು ಮಾಡುವ ತರಗತಿಗಳು

ಬೆಳಗ್ಗೆ 11 30ರಿಂದ 4 30ರ ವರೆಗೆ ಮತ್ತು ಸಾಯಂಕಾಲ ೬ರಿಂದ ೮ರವರೆಗೆ

(ವಿದ್ಯಾರ್ಥಿನಿಯರಿಗೇ ಪ್ರತ್ಯೇಕ)

ಮೆಟ್ರಿಕ್ಯುಲೇಷನ್ ತರಗತಿಗಳು

ವಿವರಗಳಿಗೆ ವಿಚಾರಿಸಿ

ಲಿಯೋನಾರ್ಡ್ ಮ್ಯಾಟರ್ಸ್ ರವರ ನಿಧನ

ಇಂಗ್ಲೆಂಡಿನ ಕಾರ್ಮಿಕ ಮುಂದಾಳುಗಳ ಪೈಕಿ ಒಬ್ಬರೂ, ಪತ್ರಿಕೋದ್ಯೋಗಿಗಳೂ ಭಾರತದ ಹಿತೈಷಿಗಳೂ ಆದ ಲಿಯೋನಾರ್ಡ್ ಡಬ್ಲ್ಯೂ ಮ್ಯಾಟರ್ಸ್‌ರವರು ಮೊನ್ನೆ ೭೦ನೇ ವಯಸ್ಸಿನಲ್ಲಿ ಲಂಡನ್ನಿನಲ್ಲಿ ನಿಧನರಾದರು. ಅವರು ೧೯೩೫ರಲ್ಲಿ ಕಾರ್ಮಿಕ ಪಕ್ಷದ ಪರವಾಗಿ ಭಾರತಕ್ಕೆ ಬಂದಿದ್ದ ನಿಯೋಗದ ಸದಸ್ಯರಾಗಿದ್ದರು ಅವರು ಮೈಸೂರಿಗೂ ಆಗಮಿಸಿದ್ದರು ಭಾರತದ ಸ್ವಾತಂತ್ರ್ಯದ ಚಳುವಳಿಯಲ್ಲಿ ಆಸಕ್ತಿಯನ್ನು ವಹಿಸಿದ್ದರು

ಸ್ಥಾನಬದ್ಧರ ಬಿಡುಗಡೆಗೆ ಒತ್ತಾಯ

ಸಂಸ್ಥಾನದಲ್ಲಿ ಹಲವಾರು ರಾಜಕೀಯ ಕಾರ್ಯಕರ್ತರು ಸ್ಥಾನ ಬದ್ಧತೆಯಲ್ಲಿರುವರೆಂದೂ ದಾವಣಗೆರೆಯ ನೇತಾಜಿ ಮತ್ತು ಪುಡಾರಿ ಪತ್ರಿಕೆಗಳ ಸಂಪಾದಕರುಗಳಾದ ಶ್ರೀ ಇಟಗಿ ವೇದಮೂರ್ತಿ, ಶ್ರೀ ಮುರಿಗಯ್ಯ ಮತ್ತು ಕಾರ್ಯಕರ್ತರಾದ ಶ್ರೀಗಳು ಶೇಷಣ್ಣ, ರುದ್ರಯ್ಯ, ಲಿಂಗಪ್ಪ ಮುಂತಾದವರೂ ಸರ್ಕಾರದ ಲೋಪ ದೋಷಗಳನ್ನು ಟೀಕಿಸಿದುದಕ್ಕಾಗಿ ಬಂಧಿಸಲ್ಪಟ್ಟಿರುವರೆಂದೂ, ವಿಚಾರಣೆಯಿಲ್ಲದೆ ದೀರ್ಘಾವಧಿ ಸ್ಥಾನಬದ್ಧತೆಯಲ್ಲಿ ರಾಜಕೀಯ ಕೆಲಸಗಾರರನ್ನು ಇಡುವುದು ಯಾವ ಪ್ರಜಾ ಸರ್ಕಾರಕ್ಕೂ ಸಲ್ಲದ ಮಾರ್ಗವೆಂದೂ ಮೈಸೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಸೋಮ ಸುಂದರ ಶರ್ಮರವರು ಹೇಳಿಕೆಯೊಂದರಲ್ಲಿ ತಿಳಿಸಿರುತ್ತಾರೆ ಚುನಾವಣೆಗಳು ನಿರಾತಂಕವಾಗಿ ನಡೆಯಬೇಕಾದರೆ ಎಲ್ಲ ಸ್ಥಾನಬದ್ಧರೂ ಬಿಡುಗಡೆಯಾಗಬೇಕೆಂದು ಅವರು ಹೇಳಿ ಇದಕ್ಕಾಗಿ ಸರ್ಕಾರವನ್ನು ಎಲ್ಲ ಪಕ್ಷಗಳೂ ಒತ್ತಾಯ ಪಡಿಸಬೇಕೆಂದು ಸೂಚಿಸಿರುತ್ತಾರೆ

SRI GAYATHRI,

Daily 3 Shows

From 3-4 51 for 4 days

R K O's

TREASURE ISLAND

(In Technicolor)

— Morning Shows —

On 3rd & 4th

Prince & The Peasant

Starring - Errol Flynn

ನೌಕೆಗೆ ಬೆಂಕಿ ತಗಲಿ ೯ ಜನರ ಮರಣ

ನ್ಯೂಯಾರ್ಕ್ ಬಳಿ ಒಂದು [illegible] ಗೂ ೭ ಲಕ್ಷ ಟನ್ ಪೆಟ್ರೋಲ್ [illegible] ಮತ್ತೊಂದು ಟ್ಯಾಂಕರ್ ಹಡಗಿ[illegible]ನ್ನೆ ಡಿಕ್ಕಿಯಾಗಿ ಬೆಂಕಿ ತಗುಲಿತ್ತು [illegible] ದವರಲ್ಲಿದ್ದ ೧೨ ಜನರನ್ನು ಇಬ್ಬರು [illegible] ವಿಕರು ಅತ್ಯಂತ ಸಾಹಸದಿಂದ [illegible] ಕೊನೆಗೆ ತಾವು ಬೆಂಕಿಗೆ ಆಹು[illegible]ರೆಂದೂ ತಿಳಿದುಬಂದಿದೆ ಇತರ [illegible]ನರೂ ಸಹ ಮಡಿದಿರುತ್ತಾರೆ [illegible]ಲೆಯು ಸಮುದ್ರ ಮಟ್ಟದಿಂದ [illegible]ಡಿ ಎತ್ತರಕ್ಕೆ ಏರಿತ್ತು

೧ ಕ್ಕೊಂಚರ ಸ್ವಾಸ್ಥ್ಯವಾದ [illegible] ನಲ್ಲಿ ಉಪ್ಪಿನ ಅಭಾವವು ಕಳೆದ [illegible] ಗಳಿಂದ ವಿಪರೀತವಾಗಿ ಜನರು [illegible] ಒಂದು ಸೇರು ಉಪ್ಪಿಗೆ ೧ ರೂ [illegible] ಕೊಳ್ಳುತ್ತಿರುವರೆಂದು ವರದಿಯಾಗಿದೆ

M d Lng 419

ಸ್ಟ್ಯಾಂಪುಗಳು

ಪ್ರಾಮುಖ್ಯವಾದ ಘಟನೆಗಳ [illegible] ಸಂಗತಿಗಳನ್ನೂ ಮಹದ್ವ್ಯಕ್ತಿಗಳ [illegible] ನವನ್ನೂ ಗೌರವಿಸಲು ಸ್ಟ್ಯಾಂಪುಗಳ [illegible] ಮುದ್ರಿಸಿ ಹಂಚುವ ಪದ್ಧತಿಯ [illegible] ದೇಶಗಳಲ್ಲೂ ರೂಢಿಗೆ ಬರುತ್ತಿದೆ [illegible] ಪ್ರಕಟಿಸುವವರು ಹೊಸ [illegible] ಗಳನ್ನು ಪ್ರಪಂಚದಾದ್ಯಂತ [illegible] ಕೊಳ್ಳುವುದರಿಂದ ಅಂಚೆ ಇಲಾಖೆಗೆ [illegible] ಮ ಒಂದು ಲಾಭಕರವಾದ [illegible] ವೇ ಆಗಿರುತ್ತದೆ

ಸ್ಟ್ಯಾಂಪುಗಳು ಪ್ರಚಾರ ಕಾರ್ಯ[illegible] ಕ್ಕೆ ಉಪಯೋಗಿಸಲ್ಪಡುತ್ತಿವೆ [illegible] ಲ್ಲಾ ದೇಶಗಳಲ್ಲಿಯೂ ವೈದ್ಯರು [illegible] ದೆ ರೋಗನಿರೋಧಕ ಕಾರ್ಯ[illegible] ಸ್ಟ್ಯಾಂಪುಗಳು ಪ್ರಚಾರ ಸಾಧನಗಳ[illegible] ಉಪಯೋಗಿಸಲ್ಪಡುತ್ತವೆ ಮ[illegible] ಯಾ ವಿರುದ್ಧ ಹೋರಾಟದ ಪ್ರಚಾರ[illegible]ಕ್ಕಾಗಿ ಮೆಕ್ಸಿಕೊ ದೇಶವು ಒಹಳ [illegible] ಗಳಿಂದಲೂ ಸ್ಟ್ಯಾಂಪುಗಳನ್ನು [illegible]ತ್ತಿದೆ ಇಂತಹ ಉತ್ತಮ ದೇಶವು ಮಲೇರಿಯಾದಿಂದ ಭೀಕರವಾಗಿ ನರಳುತ್ತಿದೆ ನೂರಾರು ಜನಾಂಗ ಸಂಸ್ಥೆಯ ಮಲೇರಿಯಾ ಸಮಿತಿಯ ಸಲಹೆಗಳಂತೆ ಮೆಕ್ಸಿಕೊ ದೇಶದಲ್ಲಿ ಬಹಳ ಉತ್ಸಾಹದಿಂದ ಆಚರಿಸುತ್ತಿರುವುದರಲ್ಲಿ ಅತ್ಯುಪಯುಕ್ತವಾಗಿದೆ

ಮಲೇರಿಯಾ ನಿರೋಧಕ್ಕಾಗಿ ಡಿ ಡಿ ಟಿ ೬ ಅಂ ಮಿಲಿ ಗ್ರಾಂ ಮತ್ತು ಆಹಾರ [illegible] ಮಾರಕಕ್ಕಾಗಿ ದಿನವಹಿ ೧ [illegible] ಗ್ರಾಂ ಗಳಂತೆ ಕ್ವಿನೈನನ್ನು ೫ ರಿಂದ [illegible] ದಿನಗಳ ವರೆಗೆ ತೆಗೆದುಕೊಳ್ಳುತ್ತಿರುವ [illegible] ಸ್ಟ್ಯಾಂಪಿನಲ್ಲಿ ಒಬ್ಬ ಮನುಷ್ಯನನ್ನು [illegible] ದ್ದ ಸೊಳ್ಳೆಯು ಕತ್ತು ಮುರುಕಿ ಕೊ[illegible] ತ್ತಿರುವಂತೆ ಅರ್ಥ ಗರ್ಭಿತವಾಗಿ ಚಿತ್ರಿಸಲಾಗಿದೆ

Edited, Printed and Published by A R. Nagarajan, at Sadhvi Press D Subbiah Road, Mysore

ಅಬೀದ್ ರವರ ಅಮೋಘ ಹರಾಜು ಮಾರಾಟ

4-11-51ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ ಹೋಟೆಲ್ ರೂಂ ಬಳಿ

ಆರು ವಾಲ್ವುಗಳುಳ್ಳ ಒಂದು ಫಿಲಿಪ್ಸ್ ಎ.ಸಿ.-ಡಿ ಸಿ. ರೇಡಿಯೋ, ಬೀಟೆ ಮರದ ಡಬ್ಬಲ್ ಮಂಚ, ३Ⅹ(ಗ) ಅಡಿ ಇರುವ ಗಾಜಿನ ಷೀಟುಗಳು, ತೇಗದ ಡ್ರೆಸ್ಸಿಂಗ್ ಮೇಜು, ಎರಡು ಭಾಗಗಳುಳ್ಳ ಡ್ರಾಯರುಗಳ ಚೆಸ್ಟು, ಕಬ್ಬಿಣ ಮತ್ತು ಮರದ ಮಕ್ಕಳ ಮಂಚಗಳು, ಮರ್ಫಿ ಎ.ಸಿ.-ಡಿ.ಸಿ.ವಿದ್ಯುಚ್ಛಕ್ತಿ ಟೇಬಲ್ ಫ್ಯಾನ್, ಟೇಬಲ್ ಲ್ಯಾಂಪುಗಳು ಮತ್ತು ವಿದ್ಯುಚ್ಛಕ್ತಿಯ ಸ್ಟೌಗಳು

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ನಿ ಪೂನಾ, ನಾಗಪುರ್ ಸೀರೆಗಳಿಗೆ M. V. ಭೋಜಯ್ಯ ಶ್ರೀ ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಸಂಪುಟ ೧೦] ಶನಿವಾರ ೬-೧೧-೫೧ [ಸಂಚಿಕೆ ೮೪

ರಾಜೂ ಮೊಕದ್ದಮೆ ಹೊರಗಿನ ಕೋರ್ಟಿಗೆ

ವಿದ್ವಾಂಸರ ತಯಾರಿಕೆಯೇ ವಿಶ್ವವಿದ್ಯಾಲಯಗಳ ಗುರಿ

ಫಸ್ಟ್ ಗ್ರೇಡ್ ಕಾಲೇಜು ಸಂಘದಲ್ಲಿ ಗಿಸ್ವೋರವರ ಭಾಷಣ

ಮೈಸೂರು ೩

... ಸಂಜೆ ಮೈಸೂರು ಫಸ್ಟ್ ಗ್ರೇ
... ಕಾಲೇಜಿನಲ್ಲಿ ಅಮೆರಿಕದ ಮಿಸ್ಸೂರಿ
... ವಿದ್ಯಾಲಯದ ಸಾಮಾಜಿಕ ಶಾ
... ಪ್ರಾಧ್ಯಾಪಕರಾದ ಮಿ|| ಪಿ ನೋ
... ಗಿಸ್ವೋರವರು ಸಂಘದ ಆರಂಭ
... ವನ್ನು ಮಾಡಿದರು ಪ್ರಾರ್ಥನೆ
... ನಂತರ ಶ್ರೀ ಸುಂದರೇಶನ್‌ರವ
... ರನ್ನು ಸ್ವಾಗತಿಸಿದರು ಶ್ರೀ
... ರಾಜಗೋಪಾಲ್‌ರವರು ಉ
... ಕರನ್ನು ಸಭೆಗೆ ಪರಿಚಯ ಮಾ
... ದರು
... ಗಿಸ್ವೋರವರು ಭಾಷಣ ಮಾ
... ಸಮಾಜವೂ, ವಿಶ್ವ ವಿದ್ಯಾಲ
... ಒಂದನ್ನೊಂದು ಅವಲಂಬಿಸಿವೆ
... ಸರಿಯಾದ ವಿ ದ್ವಾಂ ಸ ರ ನ್ನು
... ವ್ಯಾನಿಲಯವು ಸೃಷ್ಟಿಸದಿದ್ದರೆ
... ಕರ್ತವ್ಯಲೋಪವನ್ನು
... ತಾಗುವುದೆಂದೂ ಮತ್ತು ಪ್ರ
... ತ್ವದಲ್ಲಿ ವಿಶ್ವ ವಿದ್ಯಾನಿಲಯ
... ತಂತ್ರ ವಾತಾವರಣವಿಲ್ಲದಿದ್ದ
... ಅವರೂ ರಾಜಕಾರಣಿಗಳ
... ನ್ನು ದುರುಪಯೋಗಪಡಿಸಿ
... ಸರ್ವಾಧಿಕಾರಿಗಳಾದರೆ ಆ
... ಗುವುದೆಂದೂ ನುಡಿದರು.
... ವಿ ದ್ಯಾ ನಿ ಲ ಯ ಗ ಳು
... ತಿ ಕ ಬೆ ಲೆ ಯ ನ್ನು ಕ
... ಡು ಬರಬೇಕೆಂದೂ ಮತ್ತು
... ಯರು ತಮ್ಮ ಅ ಧಿ ಕಾ ರ
... ಪ್ರದೇಶದಿಂದ ಕೆಲಸವನ್ನು
... ಕೆಂದೂ ಹೇಳಿದರು

ಬ್ರಿಟಿಷ್ ಸೈನ್ಯಾಧಿಕಾರಿಗಳಿಗೆ ಈಜಿಪ್ಟಿನ ಎಚ್ಚರಿಕೆ

... ನ ಸೂಯೆಜ್ ಕಾಲುವೆ
... ಎವ ಕೈರೋವಿಗೆ ರಸ್ತೆ ನದಿ
... ಬುಗಳ ಮೂಲಕ ಎಷ್ಟೆಯ
... ನ್ನು ಬ್ರಿಟಿಷರು ನೊನ್ನೆ ಮ
... ಯಿಂದ ನಿಷೇಧಿಸಿರುವರೆಂದು
... ಸೂಯೆಜ್ಜಿನ ಪೋಲೀಸರ
... ವಿರುದ್ಧವಾಗಿ ಪ್ರಚಾರ
... ಕಳ ಮಂದಿ ಈಜಿಪ್ಟ್ ಕಾರ್
... ರನು ಮತ್ತು ಉನ್ನತಾಧಿಕಾರಿ
... ಟಿಷರು ವಜಾ ಮಾಡಿರುವ
... ತಿಳಿದುಬಂದಿದೆ ಈಜಿಪ್ಟ್ ಸ
... ಬ್ರಿಟಿಷ್ ಸೈನ್ಯಾಧಿಕಾರಿಗ
... ಗೆ ಎಚ್ಚರಿಕೆ ಕೊಟ್ಟು ಈಜಿ
... ಸರ ಮೇಲಿನ ಈ ಕ್ರಮವ
... ತ್ರಿಯ ನಡಿಸದಿದ್ದರೆ ತೀವ್ರ
... ಯನ್ನು ಕೈಗೊಳ್ಳುವುದಾಗಿ
... ರು

ಶಾಸನ ಸಭೆಯಿಂದ ಸೆನೆಟ್ಟಿಗೆ ಚುನಾವಣೆ

... ರು ವಿಶ್ವ ವಿದ್ಯಾನಿಲಯದ
... ಗೆ ಶಾಸನ ಸಭೆಯಿಂದ ಈ
... ವರು ಅವಿರೋಧವಾಗಿ ಚು
... ಗಿದ್ದಾರೆ –
... ರತ್ನಮ್ಮ ಐಸಾಕ್, ಶ್ರೀಗ
... ಬಸಪ್ಪ, ಹನುಮಯ್ಯ,
... ಗೌಡ, ಎಂ ಎ ಜೋ
... ಮಾದಯ್ಯ, ಕೆ ಸಂಪಂ
... ಎಚ್ ಸಿದ್ದಪ್ಪ, ಜೆಚ್
... ಗೌಡ, ಕೆ ಸುಬ್ಬರಾವ್,
... ರಪ್ಪ ಮತ್ತು ಜ|| ಮಹಮ
...

ಚುನಾವಣೆಯಲ್ಲಿ ಕಾಂ||ಗೆ ಜಿಲ್ಲಾ ಸಮಿತಿ ಅಸಹಕಾರ?

ಉಮೇದುವಾರರ ಆಯ್ಕೆ ಬಗ್ಗೆ ಪ್ರತಿಭಟನೆ

ಮೈಸೂರು ೩

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಜರೂರು ಸಭೆಯು ನೆನ್ನೆ ಸಂಜೆ ನಗೂಡಿನಲ್ಲಿ ಸೇರಿ, ಜಿಲ್ಲೆಯಿಂದ ಕಾಂಗ್ರೆಸ್ ಪರವಾಗಿ ಉಮೇದುವಾರರನ್ನು ಪ್ರಾದೇಶಿಕ ಚುನಾವಣಾ ಸಮಿತಿಯು ಆರಿಸಿರುವುದನ್ನು ಪರಿಶೀಲಿಸಿತು ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ನಾರಾಯಣಗೌಡರು ಅಧ್ಯಕ್ಷತೆ ವಹಿಸಿದ್ದರು ಜಿಲ್ಲೆಯ ಮುಂದಾಳುಗಳು ಮತ್ತು ಜಿಲ್ಲಾ ಸಮಿತಿಗಳು ಕೊಟ್ಟಿದ್ದ ಸಲಹೆಗಳಿಗೆ ಸಂಸ್ಥಾನದ ಸಮಿತಿಯು ಪುರಸ್ಕಾರ ಕೊಡದಿರುವುದಕ್ಕಾಗಿ ಸಮಿತಿಯು ತೀವ್ರ ಪ್ರತಿಭಟನೆಯನ್ನು ಸೂಚಿಸಿರುತ್ತದೆ ಸ್ಥಳೀಯ ಅಭಿಪ್ರಾಯಗಳಿಗನುಗುಣವಾಗಿ ಅಗತ್ಯ ಕಂಡ ಬದಲಾವಣೆಗಳನ್ನು ಮಾಡದಿದ್ದರೆ, ಚುನಾವಣೆಯಲ್ಲಿ ಸಮಿತಿಯು ಸಹಕಾರ ನೀಡಲು ಸಾಧ್ಯವಾಗದ ಪರಿಸ್ಥಿತಿ ಪ್ರಾಪ್ತವಾಗುವುದೆಂದು ನಿರ್ಣಯ ಮಾಡಲಾಯಿತು

ಸರ್ ಮಿರ್ಜಾರ ಸ್ಥಿತಿ ಉತ್ತಮ

ಜಕಾರ್ತಾದ ಆಸ್ಪತ್ರೆಯಲ್ಲಿರುವ ಸರ್ ಮಿರ್ಜಾರವರ ದೇಹಸ್ಥಿತಿಯು ಸುಧಾರಿಸಿರುವುದಾಗಿಯೂ, ಇನ್ನೊಂದು ವಾರದಲ್ಲಿ ಅವರು ಆಸ್ಪತ್ರೆಯಿಂದ ಮನೆಗೆ ಬರುವರೆಂದೂ ತಿಳಿದುಬಂದಿದೆ ಶೀಘ್ರದಲ್ಲೇ ಅವರು ಬೆಂಗಳೂರಿಗೆ ಹಿಂತಿರುಗುವರೆಂದೂ ಗೊತ್ತಾಗಿದೆ

ನಾನ್‌ಗೆಜೆಟೆಡ್ ನೌಕರರಿಂದ "ಕಷ್ಟ ಪರಿಸ್ಥಿತಿಯ ಬ್ಯಾಡ್ಜು" ಗಳ ಧಾರಣೆ

ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನಾನ್‌ಗೆಜೆಟೆಡ್ ನೌಕರರು ನಿಷ್ಠಾವಂತರಾಗಿ ಸೇವೆ ಸಲ್ಲಿಸಲು ಹೆಚ್ಚು ತುಟ್ಟಿ ಭತ್ಯ ಮತ್ತು ಮನೆ ಬಾಡಿಗೆ ಭತ್ಯಗಳನ್ನು ಕೊಡಬೇಕೆಂದು ಕೋರುವ ನಿರ್ಣಯವು ನೆನ್ನೆ ಬೆಂಗಳೂರಿನಲ್ಲಿ ನಡೆದ ನೌಕರರ ಸಭೆಯಲ್ಲಿ ತೀರ್ಮಾನವಾಯಿತು ನೌಕರರು ಕೆಲಸದ ವೇಳೆ "ಕಷ್ಟ ಪರಿಸ್ಥಿತಿಯ ಬ್ಯಾಡ್ಜು" ಗಳನ್ನು ಧರಿಸಬೇಕೆಂದು ಗೊತ್ತು ಮಾಡಲಾಯಿತು

ಇಂಜನಿಯರಿಂಗ್ ಪರೀಕ್ಷೆ ಆರ್ಡಿನೆನ್ಸ್ ಬಗ್ಗೆ ನಿರ್ಣಯ

ಅಕೇಡಮಿಕ್ ಕೌನ್ಸಿಲಿನಲ್ಲಿ ಬಹುಮತದಿಂದ ತಿರಸ್ಕಾರ

ಮೈಸೂರು ೩

ಈ ವರ್ಷ ಮಾರ್ಚಿಯಲ್ಲಿ ನಡೆದ ಪರೀಕ್ಷೆಯಲ್ಲಿ ೩೦ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ತೇರ್ಗಡೆಯ ಸೌಲಭ್ಯವನ್ನು ಒದಗಿಸಲು ವಿಶ್ವ ವಿದ್ಯಾಲಯದ ಕೌನ್ಸಿಲಿನವರು ಹೊರಡಿಸಿದ ತಾತ್ಕಾಲಿಕ ಡ್ಯುಯಲ್ ಆರ್ಡಿನೆನ್ಸಿನ ಅನುಮೋದನೆಗಾಗಿ ನೆನ್ನೆ ದಿನ ಇಲ್ಲಿ ನಡೆದ ಅಕೇಡಮಿಕ್ ಕೌನ್ಸಿಲ್ ಸಭೆಯಲ್ಲಿ ನಿರ್ಣಯವೊಂದನ್ನು ಡಾ|| ವಿ ಆರ್ ನಾಯ್ಡು ರವರು ಮಂಡಿಸಿದರು ಶ್ರೀಗಳಾದ ಟಿ ಎಸ್ ರಾಜಗೋಪಾಲಯ್ಯಂಗಾರ್, ಎನ್ ಶ್ರೀನಿವಾಸಮೂರ್ತಿ, ಪಿ ಕೃಷ್ಣಪ್ಪ ಮತ್ತು ಓ ವೀರಬಸಪ್ಪನವರು ವಿರೋಧಿಸಿ, ಆರ್ಡಿನೆನ್ಸ್ ಹೊರಡಿಸಲು ಜರೂರು ಪರಿಸ್ಥಿತಿ ಇರಲಿಲ್ಲವೆಂದು ತಿಳಿಸಿದರು ಈ ಆರ್ಡಿನೆನ್ಸು ಖಾಯಂ ಆರ್ಡಿನೆನ್ಸಿಗೆ ತೀರ ವಿರೋಧವಾಗಿರುವುದೇ ದೂ, ವಿಶ್ವ ವಿದ್ಯಾನಿಲಯ ಕೌನ್ಸಿಲಿನವರು ಅಕೇಡೆಮಿಕ್ ಕೌನ್ಸಿಲ್ಲಿನ ಅಭಿಪ್ರಾಯವನ್ನು ಪಡೆಯದೆ ಇಂತಹ ಮುಖ್ಯ ವಿಷಯದಲ್ಲಿ ತಾವೇ ತೀರ್ಮಾನ ಮಾಡಿರುವುದು ಅನುಚಿತವಾದುದೆಂದೂ ಸದಸ್ಯರು ಪ್ರತಿಭಟಿಸಿದರು ನಿರ್ಣಯವು ಬಿದ್ದುಹೋಯಿತು

ಚಾಮುಂಡಿ ಎಕ್ಸ್‌ಪ್ರೆಸ್ ರೈಲು

ಬೆಂಗಳೂರಿಗೆ ರಾಜಧಾನಿಯಿಂದ ಪ್ರತಿನಿತ್ಯವೂ ಬೆಳಿಗ್ಗೆ ೭-೪೫ಕ್ಕೆ ಹೊರಡುವ ಎಕ್ಸ್‌ಪ್ರೆಸ್ ರೈಲಿನ ವೇಗವನ್ನು ಹೆಚ್ಚಿಸಿ, ಬೆಂಗಳೂರಿಗೆ ಅದು ೧೦ ಗಂಟೆಗೆ ಸೇರುವ ಮತ್ತು ಅಲ್ಲಿಂದ ಮಧ್ಯಾಹ್ನ ೪ ಗಂಟೆಗೆ ಹೊರಟು ಸಂಜೆ ೭-೩೦ಕ್ಕೆ ಇಲ್ಲಿಗೆ ಸೇರುವ ಏರ್ಪಾಡನ್ನು ಈ ತಿಂಗಳು ೭ನೇ ತಾ|| ನಿಂದ ಮಾಡಲಾಗುವುದು ಈ ರೈಲನ್ನು ಚಾಮುಂಡಿ ಎಕ್ಸ್‌ಪ್ರೆಸ್ ಎಂದು ಕರೆಯಲಾಗುವುದು

ರಾಜು ಮೊಕದ್ದಮೆಯನ್ನು ಸಂಸ್ಥಾನದಿಂದ ಹೊರಕ್ಕೆ ವರ್ಗಾಯಿಸಬೇಕು

ಮೈಸೂರು ಸರ್ಕಾರಕ್ಕೆ ರಾಷ್ಟ್ರಾಧ್ಯಕ್ಷರ ಆಜ್ಞೆ

ರಾಷ್ಟ್ರಾಧ್ಯಕ್ಷರ ಆಜ್ಞೆಗೆ ಶಾಸನ ಸಭೆಯ ಪ್ರತಿಭಟನೆ

ಸ್ವಂ ಸು ಪ್ರೇ] ಬೆಂಗಳೂರು ೬

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಭಾರತದ ರಾಜ್ಯಾಂಗದ ೨೦೦ನೇ ವಿಧಿಯ ಪ್ರಕಾರ ಆಜ್ಞೆಯೊಂದನ್ನು ಹೊರಡಿಸಿ ಸೆಷನ್ಸ್ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಯಾಗಬೇಕಾಗಿರುವ ಶ್ರೀ ಎಚ್. ಎಸ್ ರಾಜು ಮುಂತಾದವರ ಮೊಕದ್ದಮೆಯನ್ನು ಸಂಸ್ಥಾನದ ಹೊರಗಿನ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ಸೂಚಿಸಿರುವರು ಈ ಆದೇಶವನ್ನೊಳಗೊಂಡ ಪತ್ರವನ್ನು ಕೇಂದ್ರ ಸರ್ಕಾರದವರು ಅಕ್ಟೋಬರ್ ೩೧ನೇ ತಾ|| ಮೈಸೂರಿನ ಶ್ರೇಷ್ಠ ಕಾರ್ಯದರ್ಶಿಯವರಿಗೆ ಕಳುಹಿಸಿರುವುದನ್ನು ಈ ದಿನ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ೩-೪೫, ಪತ್ರವನ್ನು ಪೂರ್ತಿಯಾಗಿ ಓದಿದರು

ಬೆಂಗಳೂರಿನ ಸಿವಿಲ್ ಪ್ರದೇಶದ ನ್ಯಾಯಾಧೀಶರು ಮಾಡಿರುವ ಆಜ್ಞೆಯನ್ನು ಕೇಂದ್ರ ಸರ್ಕಾರದವರು ತೀವ್ರವಾಗಿ ಪರಿಶೀಲಿಸಿರುವುದಾಗಿಯೂ, ಆಪಾದಿತರುಗಳ ಕಡೆಯಿಂದ ಬಂದಿರುವ ಅನೇಕ ಮನವಿಗಳಲ್ಲಿ ನ್ಯಾಯ ನಿರ್ವಹಣೆ ವಿಷಯವಾಗಿ ಸರಿಯಾದ ಏರ್ಪಾಡು ಮಾಡಬೇಕಾಗಿರುವುದರಿಂದಲೂ ಸದರಿ ಮೊಕದ್ದಮೆಯನ್ನು ಸೆಷನ್ಸ್ ವಿಚಾರಣೆಗಾಗಿ ಸಂಸ್ಥಾನದಿಂದ ಹೊರಗಿನ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದೂ ಪತ್ರದಲ್ಲಿ ಸೂಚಿಸಲಾಗಿದೆ ಇದಕ್ಕಾಗಿ ಮೈಸೂರು ಸರ್ಕಾರದವರು ವಿಚಾರಣೆಯನ್ನು ನಡೆಸಲು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ತಿಳಿಸಲಾಗಿದೆ ಮೈಸೂರು ಹೈಕೋರ್ಟಿನ ವ್ಯಾಪ್ತಿಗೆ ಒಳಪಡದಿರುವ ಬೇರೊಂದು ನ್ಯಾಯಾಲಯಕ್ಕೆ ಈ ಮೊಕದ್ದಮೆಯನ್ನು ವರ್ಗಾಯಿಸಬೇಕೆಂದೂ, ನ್ಯಾಯನಿರ್ವಹಣೆಗೆ ಇದು ಅತ್ಯಗತ್ಯವೆಂದೂ ರಾಷ್ಟ್ರಾಧ್ಯಕ್ಷರಿಗೆ ಮನವರಿಕೆಯಾಗಿದೆಯೆಂದು ತಿಳಿಸಲಾಗಿದೆ

ಈ ರೀತಿಯ ವರ್ಗಾವಣೆಗೆ ಮೈಸೂರು ಸರ್ಕಾರದವರು ಇಚ್ಛೆ ಪಡದಿದ್ದರೆ, ಹೊರಗಿನ ಸೆಷನ್ಸ್ ನ್ಯಾಯಾಧೀಶರನ್ನು ಕರೆಸಿ ಈ ಮೊಕದ್ದಮೆ ವಿಚಾರಿಸುವಂತೆ ಮಾಡಬೇಕು ಮದ್ರಾಸು ಅಥವಾ ಬೊಂಬಾಯಿ ಕೋರ್ಟಿಗೆ ಕಳುಹಿಸಬೇಕೆಂದೂ ತಿಳಿಸಲಾಗಿದೆ

ಶ್ರೀ ಎ ಭೀಮಪ್ಪನಾಯಕರು ಒಂದು ನಿರ್ಣಯವನ್ನು ಮಂಡಿಸಿ ರಾಷ್ಟ್ರಾಧ್ಯಕ್ಷರ ಈ ಆಜ್ಞೆಯು ಅನ್ಯಾಯ ಮತ್ತು ಅನುಚಿತವಾದುದೆಂದು ಸೂಚಿಸಿದರು ಇದರ ಮೇಲೆ ವಿಶೇಷ ಚರ್ಚೆಯಾಯಿತು ಶ್ರೀ ಎಚ್ ಸಿದ್ದಯ್ಯ, ಜ|| ಮಹಮದ್ ಇಮಾಂ ಮುಂತಾದವರು ಮಾತನಾಡಿ, ರಾಷ್ಟ್ರಾಧ್ಯಕ್ಷರ ಸೂಚನೆಗೆ ತಮ್ಮ ವಿರೋಧವನ್ನು ಸೂಚಿಸಿದರು ಈ ಅಂಶದ ಮೇಲೆ ಮೈಸೂರು ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಹೇಳಿದರು

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಮಾತನಾಡಿ ೩೦೦ನೇ ವಿಧಿಯನ್ನು ಮೈಸೂರಿಗೆ ಅನ್ವಯಿಸುವುದಿಲ್ಲವೆಂದು ಹೇಳಲಾಗುತ್ತಿದ್ದರೂ ಇದು ಇಂತಹ ಆಜ್ಞೆಯು ಅಧ್ಯಕ್ಷರನ್ನು ಒಪ್ಪಿಕೊಂಡಿರುವುದಾಗಿ ಹೇಳಿದರು ಆ ಆಜ್ಞೆಯನ್ನು ಅಂಗೀಕರಿಸಬೇಕಾಗಿದೆಯೆಂದು ಹೇಳಿದರು. ಸರ್ಕಾರಕ್ಕೆ ಕಾಂಗ್ರೆಸ್ ಅನ್ವಯವು ಇರುವುದೆಂದೂ ಈ ಸಭೆಯು ಕೊಡುವ ಆದೇಶಕ್ಕೆ ತಕ್ಕಂತೆ ಸರ್ಕಾರವು ಎಲ್ಲ ಕ್ರಮವನ್ನು ಕೈಗೊಳ್ಳುವುದೆಂದೂ ಹೇಳಿದರು ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

(ಹಿಂದಿನ ಕಾಲಂ ನೋಡಿ)

ಕೊರಿಯಾ ಯುದ್ಧ ಪರಿಸಮಾಪ್ತಿಗೆ ಭಾರತದ ಯತ್ನ

ಕೊರಿಯದ ಯುದ್ಧವನ್ನು ಮುಕ್ತಾಯ ಮಾಡುವುದು ಮತ್ತು ವಿಶ್ವ ಸಂಸ್ಥೆಯಲ್ಲಿ ಚೀಣಕ್ಕೆ ಸ್ಥಾನವನ್ನು ಒದಗಿಸುವುದು-ಈ ಎರಡು ಕಾರ್ಯಗಳನ್ನು ಮಾಡಲು ಭಾರತವು ಪುನಃ ಪ್ರಯತ್ನ ನಡೆಸುವುದೆಂದು ತಿಳಿದುಬಂದಿದೆ ಚೀಣದಲ್ಲಿ ಭಾರತದ ರಾಯಭಾರಿಯಾಗಿರುವ ಸರ್ದಾರ್ ಪಣಿಕ್ಕರ್‌ರವರನ್ನು ವಿಶ್ವ ಸಂಸ್ಥೆಯ ಭಾರತದ ನಿಯೋಗದ ಸದಸ್ಯರನ್ನಾಗಿ ನೆಹರೂರವರು ಆರಿಸಿರುವುದು ಇದಕ್ಕೆ ಆಧಾರವಾಗಿದೆಯೆಂದು ನಂಬಲಾಗಿದೆ

ಮಹಾರಾಜಾ ಕಾಲೇಜಿನಲ್ಲಿ ವಿ. ಪಿ. ಮೆನನ್ನರ ಭಾಷಣ

ಮೈಸೂರು ಮಹಾರಾಜಾ ಕಾಲೇಜಿನ ರಾಜ ನೀತಿ ಶಾಸ್ತ್ರ ಸಂಘದ ಆಶ್ರಯದಲ್ಲಿ ಬರುವ ಸೋಮವಾರ ಸಂಜೆ ೫|| ಗಂಟೆಗೆ ಭಾರತ ಸರ್ಕಾರದ ನಿವೃತ್ತ ಸಂಸ್ಥಾನ ಶಾಖಾ ಕಾರ್ಯದರ್ಶಿ ಶ್ರೀ ವಿ ಪಿ ಮೆನನ್‌ರವರು ಸಂಘದ ಆರಂಭ ಭಾಷಣವನ್ನು ಮಾಡುವರು ಪ್ರೊ|| ಎಲ್ ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುವರು

ಹಿಂದೀ ತರಗತಿಗಳು

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿರುವ ವಿದ್ಯಾ ವರ್ಧಕ ಹೈಸ್ಕೂಲಿನಲ್ಲಿ ಹಿಂದಿ ತರಗತಿಗಳನ್ನು ಈ ತಿಂಗಳು ೫ನೇ ತಾ|| ತೆರೆಯಲಾಗುವುದು ಸರ್ವರೂ ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕೆಂದು ಕೋರಲಾಗಿದೆ

ಭಾರತ ಕ್ಷೇತ್ರ ಮಹಿಮೆ ಕಾಲಕ್ಷೇಪ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಘಂಟೆಗೆ ಅಲ್ಲಿನ ಬಾಲಕರ ಮಾಧ್ಯಮಿಕ ಶಾಲಾ ಆವರಣದಲ್ಲಿ ಶ್ರೀ ಗೊರೂರು ಸುಂದರ ರಾಜ ಅಯ್ಯಂಗಾರ್ಯರು ಭಾರತ ಕ್ಷೇತ್ರ ಮಹಿಮೆಯನ್ನು ಕುರಿತು ಹಿಂದಿ, ಗುಜರಾತಿ, ಮರಾಠಿ ಕೀರ್ತನೆಗಳೊಡನೆ ಕಾಲಕ್ಷೇಪವನ್ನು ಮಾಡುವರು

ಕಾಂಗ್ರೆಸ್ಸಿಗೆ ಬುಲುಸು ಸಾಂಬಮೂರ್ತಿ ರಾಜೀನಾಮೆ

ಮದ್ರಾಸಿನ ಶಾಸನ ಸಭಾ ಮಾಜಿ ಅಧ್ಯಕ್ಷರೂ, ಆಂಧ್ರದ ಕಾಂಗ್ರೆಸ್ ನಾಯಕರೂ ಆದ ಶ್ರೀ ಬುಲುಸು ಸಾಂಬಮೂರ್ತಿ ಮತ್ತು ಇತರ ಹಲವು ಕಾಂಗ್ರೆಸ್ಸಿಗೆ ರಾಜೀನಾಮೆಯನ್ನು ಸಲ್ಲಿಸಿ ಕೃಷಕ್ ಪ್ರಜಾ ಪಕ್ಷಕ್ಕೆ ಸೇರಿರುತ್ತಾರೆ

೨೪ ಗಂಟೆಯಲ್ಲಿ ೨೭ ಮೈಲಿ ಓಟ

ದಕ್ಷಿಣ ಕೊರಿಯದಲ್ಲಿ ಜೋಸಯರ್ಹಿಲ್ ಎಂಬುವನು ೨೭ ಮೈಲಿ ೨೪೫ ಗಜ ದೂರವನ್ನು ೩ ಗಂಟೆ ೨೫ ನಿಮಿಷ ೧೫ ಸೆಕೆಂಡುಗಳಲ್ಲಿ ಓಡಿ ಮುಗಿಸಿದನೆಂದು ಹೇಳಲಾಗಿದೆ ಇಲ್ಲಿನ ಓಟದ ಸಂದ್ಯರ್ಭೊಂದು ವಿಪರೀತವಾಗಿದ್ದಾಗ ಇವನು ಪ್ರಪಂಚದ ಹೊಸ ರಿಕಾರ್ಡನ್ನು ಸ್ಥಾಪಿಸಿರುತ್ತಾನೆ

ಪ್ರಜಾ ಸಂಘದಲ್ಲಿ ಸರ್ವಾಧಿಕಾರತ್ವವಿಲ್ಲ

ಸಂಘದ ಸದಸ್ಯರಾದ ಶ್ರೀ ಎಂ ಎಸ್ ಪುಟ್ಟಲಿಂಗಪ್ಪನವರು ತಾ ೩೦-೧೦-೫೧ ರ "ಸಾಧ್ವಿ ಪತ್ರಿಕೆ"ಯಲ್ಲಿ ಪ್ರಜಾ ಸಂಘದಲ್ಲಿ ಸರ್ವಾಧಿಕಾರತ್ವ ? ಎಂಬ ಶಿರೋನಾಮೆಯ ಮೇಲೆ ಕೊಟ್ಟಿರುವ ಹೇಳಿಕೆಯು ಕ್ರಮ ಬದ್ಧವಲ್ಲದ್ದು ಮತ್ತು ಸಂಕುಚಿತ ಮನೋಭಾವನೆಯನ್ನು ವ್ಯಕ್ತಪಡಿಸುವುದಾಗಿದೆ ಅವರು ಸಂಘದ ಸಭೆಗಳಿಗೆ ದಯಮಾಡಿಸಿ ತಮ್ಮ ಘನ ಸಲಹೆಗಳನ್ನು ನೀಡುತ್ತಿದ್ದಾಗ್ಯೂ ಸಭೆಗೆ ಬರಲು ಆಹ್ವಾನವಿದ್ದ ಸಂಘದಲ್ಲಿ ಅನೇಕ ನ್ಯೂನತೆಗಳು ಕಂಡುಬರುತ್ತಿವೆ ಎಂಬ ಆಪಾದನೆಯನ್ನು ಮಾಡಿರುವುದು ಅವರ ಘನತೆಗೆ ತಕ್ಕುದಲ್ಲವೆಂದು ವಿಷಾದದಿಂದ ಹೇಳಲು ಬಯಸುತ್ತೇನೆ ಎಂಬುದಾಗಿ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎಂ ಸಿ ನರಸಿಂಹಯ್ಯನವರು ತಿಳಿಸಿರುತ್ತಾರೆ

ಕಾಂಬೋಡಿಯ ಕಮಿಷನರರ ಕೊಲೆ

ಇಂಡೋಚೀಣದ ಒಂದು ಭಾಗವಾದ ಕಾಂಬೋಡಿಯಾ ದೇಶದ ಹೈಕಮಿಷನರಾದ ಫ್ರೆಂಚ್ ದೇಶಸ್ಥ ಎಂ ಡಿ ರೇಮಂಡ್‌ರವರ ಕೊಠಡಿಗೆ ಒಬ್ಬ ವಿಯಟ್‌ನಾಮ್ ಯುವಕನು ನುಗ್ಗಿ ಅವರನ್ನು ಇರಿದು ಕೊಂದನೆಂದು ವರದಿಯಾಗಿದೆ

ಚುನಾವಣೆಯಲ್ಲಿ ಜೋಧಪುರ ಮಹಾರಾಜರ ಸ್ಪರ್ಧೆ

ಭಾರತದ ಪಾರ್ಲಿಮೆಂಟಿನ ಪ್ರಜಾ ಸಭೆಗೆ ಜೋಧಪುರದ ಮಹಾರಾಜರು ಸ್ಪರ್ಧಿಸಲು ಅಪೇಕ್ಷಿಸಿರುತ್ತಾರೆ

ವಿದ್ಯಾ ಗಣಪತಿ ಮಂಗಳಾರತಿ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ ವಿದ್ಯಾ ಗಣಪತಿಯ ಮಹಾ ಮಂಗಳಾರತಿಯು ನಡೆಯುವುದು ಪತ್ರಿಕಾ ಕರ್ತರಾದ ಶ್ರೀ ಎನ್ ಶ್ರೀನಿವಾಸ ಮೂರ್ತಿಯವರು ಅಧ್ಯಕ್ಷತೆ ವಹಿಸುವರು ಆ|| ವಿ|| ದೇವೇಂದ್ರಪ್ಪನವರ ಸಂಗೀತ ಕಛೇರಿಯು ವಿ|| ಎಚ್ ವಿ ಕೃಷ್ಣರಾಯರ ಪಿಟೀಲು ಮತ್ತು ವಿ|| ಅನಂತಸ್ವಾಮಿಯವರ ಮೃದಂಗಗಳೊಡನೆ ನಡೆಯುವುದು ಸರ್ವರಿಗೂ ಆಹ್ವಾನವಿದೆ

ಸಂಸ್ಥಾನದಲ್ಲಿ ಡಾ|| ಲೋಹಿಯಾ ಪ್ರವಾಸ

ಡಾ|| ರಾಮ ಮನೋಹರ ಲೋಹಿಯಾರವರು ಈ ದಿನ ಬೆಂಗಳೂರಿಗೆ ಕಲ್ಕತ್ತದಿಂದ ವಿಮಾನದಲ್ಲಿ ಆಗಮಿಸಿ ಎರಡು ದಿನಗಳ ಕಾಲ ಸಂಸ್ಥಾನದಲ್ಲಿ ಪ್ರವಾಸ ಮಾಡುವರು ಚಿಕ್ಕಮಗಳೂರಿನಲ್ಲಿ ನಾಳೆ ಸಂಜೆ ಅವರು ಭಾಷಣ ಮಾಡುವರು ೫ ನೇ ತಾ|| ಅವರು ಹೈದರಾಬಾದಿಗೆ ತೆರಳುವರು

ರೈಲು ಪ್ರಯಾಣಿಕರ ಸ…ಕ್ಕೆ ೩ ಕೋಟಿ ರೂ. ವ…

ಕೆಳ ದರ್ಜೆ ತರಗತಿಗಳ ಪ್ರಯಾಣಿಕರ ಸೌಕರ್ಯವನ್ನು ಹೆಚ್ಚಿಸಲು ಬರುವ … ವರ್ಷಗಳಲ್ಲಿ ೩ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯವರು ವೆಚ್ಚ ಮಾಡುವರೆಂದು ತಿಳಿದುಬಂದಿದೆ.

ಸಹಕಾರಿಗಳ ದಿನಾಚರಣೆ

ರಾಜಧಾನಿಯ ನೂರಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ಜಿಲ್ಲಾ ಸಹಕಾರ ಸಂಸ್ಥೆಯ ಆಶ್ರಯದಲ್ಲಿ ಸಂಜೆ ೬ ಗಂಟೆಗೆ ೫ನೇ ಅ|| ಭಾ|| ಸಹಕಾರಿಗಳ ದಿನಾಚರಣೆಯು ಅಡ್ವೊಕೇಟ್ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗುವುದು. ಶ್ರೀ ಎಂ ಎ ದೊರೆಸ್ವಾಮಿ ಅಯ್ಯಂಗಾರ್, ಡಾ|| ಬಿ|| ಎಂ. ರಾಮಸ್ವಾಮಿ ಮುಂತಾದವರು ಭಾಷಣ ಮಾಡುವರು ಎಲ್ಲರಿಗೂ ಸ್ವಾಗತವಿದೆ.

ಗೃಹಕೃತ್ಯದ ನೋಟೀಸು

ಇದರಿಂದ ಸಮಸ್ತರಿಗೂ ತಿಳಿಸುವುದೇನೆಂದರೆ —

ಮೈಸೂರು ಸಿಟಿ ರಮಾವಿಲಾಸ ರಸ್ತೆಯಲ್ಲಿ ಡಾ|| ಬಿ ಎನ್ ಬೇ…ಟೆ… ವರ ಮನೆ ಹಿಂದೆ ಬಂಡೀಕೇರಿ … ಸುಮಾರು 100 X36 ಅಡಿ … ಜೇಶನ ಮತ್ತು ಸಾದಾ ಹೆಂಚಿನ … ಲ್ಲಿ ಈ ಕೆಳಗೆ ರುಜು ಮಾಡಿರುವ … ಗೆ ನಮ್ಮ ತಂದೆಯವರಿಂದ ಪಿತ್ರಾರ್ಜಿತವಾಗಿ ಬಂದಿರುವ ಭಾಗದ ಹತ್ತಿರ … ಮನೆಯನ್ನು ನಮ್ಮ ಅಕ್ಕ … ಲಕ್ಷಮ್ಮನವರಿಗೆ ಕೊಟ್ಟಿರುತ್ತೇವೆ … ಯ ಮುಂಭಾಗದ ಮತ್ತು ಹಿಂ… ವೇಶನ ಇವರಿಗೆ ಸೇರಿದ್ದಲ್ಲ … ಲಕ್ಷಮ್ಮನವರು ಶಾಶ್ವತವಾಗಿ … ಮಕ್ಕಳು ಹೀಗೆ ದಾನದ ಮತ್ತು ಮನೆ ಇರುವ ತನಗೆ ಸೇರಿದೆ ಇರುವ … ವೇಶನ ಸಮೇತ ಮನೆಯನ್ನು … ಕ್ಕೆ ಉದ್ದೇಶಪಟ್ಟಿರುವುದಾಗಿ … ಇದನ್ನು ನಮ್ಮಗಳ … ಯಾರಾದರೂ ಕ್ರಯ, ದಾನ … ತ್ತು ಭೋಗ್ಯ ವಗೈರೆ ಮಾಡಿ … ಅದರಿಂದ ನಮಗೆ ಉಂಟಾಗ… ಷ್ಟಗಳಿಗೆ ಅವರೇ ಜವಾಬ್ದಾರ… ಗುತ್ತಿಂದು ಅಂಶ ಈ ಮೂಲ… ತಿಳಿರುತ್ತೆ

ಬಿ ಆರ್ ಗೋಪಾಲಕೃ…
ಬಿ. ಸೀತಾರಾಮಯ್ಯ
ವೈ. ವಿ. ನಾರಾಣಪ್ಪ

ಶ್ರೀಹರ್ಷ ಮತ್ತು ಕಂಪೆನಿ
ನಾರಾಯಣ ಶಾಸ್ತ್ರಿ ರಸ್ತೆ,
ಫೋನ್ ನಂ 537
ಸರಕುಗಳನ್ನು ರವಾನಿಸುವ ಸಂಸ್ಥೆ

City Municipal Office,
Mysore, Dated 30 10 51

ABSTRACT SALE NOTIFICATION

Lorry bearing registration No MYZ 4202 belonging to the Food Supplies Department will be sold in public auction by the Municipal Engineer on Friday the 30th November 1951 at 11 A M in Jampanahalli forest, Heggadadevanakote Taluk about 3 miles from the main road running between Mysore and Manantody Further particulars in this behalf may be had from the Municipal Engineer or from the detailed notification published on the office notice board

(Sd) M. S. Swaminathan,
MUNICIPAL COMMISSIONER

REMEMBER
ABIDS
AUCTION SALE
To-morrow
AT 10 A. M.

MISS NOT
NALINS' GRAND AUCTION SALE
On Sunday the 4th Nov. 51 at 4 P. M.

Consisting of Teak-Wood & Rose Wood T… with draws & without draws, arm & armless c… Counter Tables Teapoys, Stools, Benche… several other useful articles

Edited, Printed and Published by A R N…rajan, at Sadhvi Press D Subbiah Road, Mysore

ಗಾ|| ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ನಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ
ಬಿ ಎ, ಇಂ… ಎದುರು, ಮೈ…

ರಿಜಿಸ್ಟರ್ಡ್ ನಂ 792 WELKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೬) ಭಾನುವಾರ ೪-೧೧-೫೧ [ಸಂಚಿಕೆ ೧೩

ರಾಷ್ಟ್ರಾಧ್ಯಕ್ಷರ ಆಜ್ಞೆಯ ನಿರಾಕರಣೆಯೇ ?

ಮೈಸೂರು ಸರ್ಕಾರಕ್ಕೆ ರಾಷ್ಟ್ರಾಧ್ಯಕ್ಷರ ಆದೇಶ

ಕೇಂದ್ರ ಸರ್ಕಾರದ ಸಲಹೆಯನ್ನು ನಿರಾಕರಿಸುವುದರ ಪರಿಣಾಮ

ಶಾಸನ ಸಭೆಯಲ್ಲಿ ವಿಪುಲ ಚರ್ಚೆ

ಬೆಂಗಳೂರು ೪

...ಷ್ಠ ನ್ಯಾಯಾಧೀಶರಾದ ಶ್ರೀ ಪಿ ...ಮೇದಪ್ಪನವರಿಗೆ ವಿಶೇಷ ಪ್ರಾಶನ ಮಾಡು... ಪ್ರಯತ್ನದ ಮೊಕದ್ದಮೆಯಲ್ಲಿ ಸೆಷನ್ ...ವಿಚಾರಣೆಗೆ ಗುರಿಯಾಗಿರುವ ಶ್ರೀ ...ಎಲ್ ಎಸ್ ರಾಜು, ಜಯರಾಂ, ದಾಸಪ್ಪ ನಾಯ್ಡು ಮತ್ತು ಅಗ್ನೆಸ್ ಇವರುಗಳ ವಿಚಾರಣೆಯನ್ನು ಸಂಸ್ಥಾನದ ...ಹೊರಗಡೆ ಬೊಂಬಾಯಿ ಅಥವಾ ಮದ್ರಾಸು ನ್ಯಾಯಾಲಯಕ್ಕೆ ವರ್ಗಾಯಿಸಬೇ...ಕೆಂದು ಸೂಚಿಸಿ ಕಳುಹಿಸಿರುವ ರಾಷ್ಟ್ರಾಧ್ಯಕ್ಷರ ನಿರೂಪವು ಈ ರೀತಿ ಇರುತ್ತದೆ

...ಲ್ಕಂಡ ಮೊಕದ್ದಮೆಯಲ್ಲಿ ಸಿವಿ...ಪ್ರದೇಶದ ನ್ಯಾಯಾಧೀಶರು ಮಾಡಿ...ಕ್ವಿಟಲ್ ಆಜ್ಞೆಯನ್ನು ಕೇಂದ್ರ ...ರವರು ತೀವ್ರವಾಗಿ ಪರಿಶೀಲಿಸಿ... ಜ|| ಮೇದಪ್ಪನವರಿಗೆ ವಿಷ ...ನ ಮಾಡಿ ಕೊಲೆ ಪ್ರಯತ್ನ ನಡೆ...ಕ್ರಮ ಕೂಟದಲ್ಲಿ ಆಪಾದಿತರು ...ವೆಂಬುದು ಆಪಾದನೆಗಳಲ್ಲಿ ಒಂ... ಸಂಸ್ಥಾನದ ಹೊರಗಿನ ನ್ಯಾ... ...ಕ್ಕೆ ಮೊಕದ್ದಮೆಯನ್ನು ವರ್ಗಾ...ಕೆಂದು ಕೋರಿ ಆಪಾದಿತರುಗ... ...ಂದ್ರ ಸರ್ಕಾರಕ್ಕೆ ನಾನಾ ತರ... ...ರ್ಜಿಗಳು ಬರುತ್ತಿವೆ

...ನಯವಾಗಿ ಕೇಂದ್ರ ಸರ್ಕಾರ... ಮೈಸೂರಿನ ಮುಖ್ಯ ಮಂತ್ರಿಗ... ...ತ್ತು ಇತರ ಮಂತ್ರಿಗಳೊಡನೆ ... ...ಚರ್ಚಿಸಿದ್ದಾರೆ

...ದ್ದಮೆಯ ಸಂದರ್ಭಗಳನ್ನೆಲ್ಲ ... ತಂದು ಕೊಂಡರೆ ಮೈಸೂರು ...ನ ನ್ಯಾಯಾಲಯದಲ್ಲಿ ಈ ವಿ... ...ಮು ನಡೆಯುವುದು ಸೂಕ್ತವಲ್ಲ ... ಮೊಕದ್ದಮೆಯನ್ನು ಹೊರಗಿ...ವುದಾದರೊಂದು ನ್ಯಾಯಾಲ... ವರ್ಗಾಯಿಸಲು ಕ್ರಮ ಕೈಗೊ... ಅವಶ್ಯಕವೆಂದೂ ಅವರಿಗೆ ಸ್ಪ... ತಿಳಿಸಲಾಯಿತು ಅ ಥ ವಾ ... ನಡೆಸಲು ಹೊರಗಿನ ನ್ಯಾ...ರೊಬ್ಬರನ್ನು ನೇಮಿಸುವ... ...ಯನ್ನು ಚರ್ಚಿಸಲಾಯಿತು

...ಮಂತ್ರಿ ಮಂಡಲದಲ್ಲಿ ಈ ವಿಷ... ಪರಿಶೀಲಿಸುವುದಾಗಿ ಸಚಿವ... ...ನವಸೆಯಿತ್ತಿದ್ದರು ಆದರೆ ಮೇ... ...ಂಡ ಎರಡು ಸಲಹೆಗಳಲ್ಲಿ ಯಾವು... ...ನ್ನು ಅನುಸರಿಸಲು ಮೈಸೂರು ...ರವರು ನಿರಾಕರಿಸಿರುತ್ತಾರೆ. ಆ... ರಾಷ್ಟ್ರಾಧ್ಯಕ್ಷರು ಯತ್ನವಿಸ್ಸದ... ...ನ ೩೭೧ ನೇ ನಿಬಂಧನೆಯ ... ತಮ್ಮ ಅಧಿಕಾರವನ್ನು ಉಪ...ಯೋಗಿಸಬೇಕಾಗಿದೆ

...ಪಾದಿತರುಗಳ ಅರಿಕೆ, ಪ್ರಾಸಿಕ್ಯೂ...ಷನ್ ಸಂಬಂಧದ ಎಲ್ಲ ಸಂದರ್ಭಗಳು ...ವನ್ನು ಗಮನಿಸಿ, ಈ ಮೊಕದ್ದಮೆ... ಹೊರಗಡೆಗೆ ವರ್ಗಾಯಿಸದಿದ್ದ... ...ಮವಾದ ಮತ್ತು ನಿಷ್ಪಕ್ಷಪಾತ ...ವಿಚಾರಣೆಯ ಲಾಭ ದೊರೆಯು... ...ಭಯವು ಆಪಾದಿತರಲ್ಲಿ ಉಂ... ...ಅವಕಾಶ ಕೊಡಕೂಡದೆಂಬ ...ದಿಂದ ಮೈಸೂರು ಹೈ ಕೋರ್ಟಿನ ವ್ಯಾಪ್ತಿಗೆ ಒಳಪಡದಿರುವ ಮತ್ತು ಹೊರಗಿನ ಹೈ ಕೋರ್ಟಿಗೆ ಅಧೀನವಾದ ಒಂದು ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ರಾಷ್ಟ್ರಾಧ್ಯಕ್ಷರು ನಿರ್ಧಾರಕ್ಕೆ ಬಂದಿರುವರು

ಆದ್ದರಿಂದ ಮೈಸೂರು ಸರ್ಕಾರದವರು ಕ್ರಿಮಿನಲ್ ಪ್ರೊಸೀಜರ್ ಕೋಡಿನ ೫೨೬ ನೇ ವಿಧಿ ಪ್ರಕಾರ ಮೊಕದ್ದಮೆಯನ್ನು ಮದ್ರಾಸು ಅಥವಾ ಬೊಂಬಾಯಿಗಳ ಯಾವುದಾದರೊಂದು ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾಯಿಸಲು ಕ್ರಮ ಕೈಗೊಳ್ಳತಕ್ಕದ್ದೆಂದು ರಾಷ್ಟ್ರಾಧ್ಯಕ್ಷರು ಸೂಚಿಸಿರುತ್ತಾರೆ

ಈ ಪತ್ರವನ್ನು ನೆನ್ನೆ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳು ಓದಿದ ನಂತರ ಈ ವಿಷಯದಲ್ಲಿ ಅಡಕವಾಗಿರುವ ಪ್ರಶ್ನೆಯನ್ನು ಸರ್ಕಾರದವರು ಸೂಕ್ಷ್ಮವಾಗಿ ಪರಿಶೀಲಿಸುತ್ತಿರುವರೆಂದು ಅವರು ತಿಳಿಸಿದರು

ಶ್ರೀ ಎ ಭೀಮಪ್ಪನಾಯಕರು ಈ ವಿಷಯವಾಗಿ ವಿಶೇಷ ನಿರ್ಣಯವೊಂದನ್ನು ಸಭೆಯು ಪರಿಶೀಲಿಸಲು, ಸಭಾ ಕಾರ್ಯವನ್ನು ಗೊತ್ತುಪಡಿಸುವ ಸ್ಟ್ಯಾಂಡಿಂಗ್ ಆರ್ಡರನ್ನು ಸಸ್ಪೆಂಡ್ ಮಾಡಬೇಕೆಂದು ಕೋರಿ, ನಂತರ ಅದನ್ನು ಮಂಡಿಸಿದರು ೩೭೧ ನೇ ವಿಧಿ ಪ್ರಕಾರ ಅಧಿಕಾರವನ್ನು ಉಪಯೋಗಿಸಿ, ರಾಷ್ಟ್ರಾಧ್ಯಕ್ಷರು ಮೈಸೂರು ಸರ್ಕಾರಕ್ಕೆ ಸೂಚನೆ ಇತ್ತು, ಸದರಿ ಮೊ ಕ ದ್ದ ಮೆ ಯ ನ್ನ ಬೊಂಬಾಯಿ ಅಥವಾ ಮದ್ರಾಸು ಕೋರ್ಟಿಗೆ ವರ್ಗ ಮಾಡಬೇಕೆಂದು ಆಜ್ಞೆ ಮಾಡಿರುವುದನ್ನು ಕೇಳಿ ಆಶ್ಚರ್ಯ ಮತ್ತು ವ್ಯಸನವಾಗಿದೆ ಈ ನಿರೂಪವು ಅನ್ಯಾಯ ಮತ್ತು ಅದನ್ನು ಕೊಡುವ ಪ್ರಮೇಯವೂ ಇಲ್ಲ ಆದ್ದರಿಂದ ಮೈಸೂರು ಸಂಸ್ಥಾನದ ಗೌರವ ಮತ್ತು ಸ್ಥಾನಮಾನಗಳನ್ನು ಕಾಪಾಡಲು ಎಲ್ಲ ಅವಶ್ಯಕವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಭೆಯು ಮಂತ್ರಿ ಮಂಡಲಕ್ಕೆ ತಿಳಿಸುತ್ತದೆ ಎಂದು ನಿರ್ಣಯದಲ್ಲಿ ತಿಳಿಸಲಾಗಿತ್ತು

ಈ ವಿಷಯದ ಮೇಲೆ ಶ್ರೀಗಳಾದ ಎಂ. ಗೋವಿಂದ ರೆಡ್ಡಿ, ಎಚ್ ಕೆ ವೀರಣ್ಣಗೌಡ್ರ, ಎಲ್ ಸಿದ್ದಪ್ಪ, ಗಾಂಜಿ ವೀರಪ್ಪ ಮುಂತಾದ ಅನೇಕ ಸದಸ್ಯರು ಮಾತನಾಡಿ ನಿರ್ಣಯವನ್ನು ಪುಷ್ಟೀಕರಿಸಿದರು ಅದನ್ನು ಪರಿಶೀಲಿಸಲು ಕಾಲಾವಕಾಶ ಬೇಕೆಂದು ಜ|| ಮಹಮದ್ ಷರೀಫರು ಮತ್ತು ಎಲ್ ಸಿದ್ದಪ್ಪನವರು ತಿಳಿಸಿದರು

ಮುಖ್ಯ ಮಂತ್ರಿಗಳು ಮಾತನಾಡಿ ನಾಡಿ ೩೭೧ ನೇ ನಿಬಂಧನೆ ಪ್ರಯೋಗದಿಂದ ಬಂದ ಆಜ್ಞೆ ಒಗ್ಗೆ ತಮ್ಮ ಸರ್ಕಾರದ ಕಳವಳವನ್ನ ವ್ಯಕ್ತಪಡಿಸಿದರು ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಈ ಆಜ್ಞೆಯಿಂದ ಪಾರಿ ಬಿಕ್ಕಟ್ಟು ಸಂಭವಿಸುವುದಾಗಿ ಶಾಸನ ಸಭೆಯ ಸದಸ್ಯರುಗಳಲ್ಲಿ ಚರ್ಚೆಯುಕ್ಲ ತಿಳಿದು ಬಂದಿದೆ.

ಬಿ. ಸಂಸ್ಥಾನಗಳಿಗೆ ಸಲಹೆಗಾರರ ನೇಮಕ

ಬಿ ಸಂಸ್ಥಾನ (ರಾಜ ಪ್ರಮುಖರು ಇರುವ) ಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಇರಬಹುದಾದ ವಿಶೇಷ ಜವಾಬ್ದಾರಿಯನ್ನು ನಿರ್ವಹಿಸಲು ಯಾವ ಕ್ರಮವನ್ನು ಕೈಗೊಳ್ಳಬೇಕೆಂದು ಪರ್ಯಾಲೋಚಿಸಲಾಗುತ್ತಿದೆಯೆಂದೂ, ಚುನಾವಣೆಗಳಾದ ನಂತರ ಸಂಸ್ಥಾನಗಳಲ್ಲಿರುವ ಪ್ರಜಾ ಸರ್ಕಾರಗಳಿಗೆ ಸಲಹೆಗಾರರನ್ನು ನೇಮಿಸುವ ಆಲೋಚನೆಯು ಭಾರತ ಸರ್ಕಾರಕ್ಕೆ ಇರುವುದಾಗಿಯೂ, ಹೈದರಾಬಾದಿನ ಮುಖ್ಯ ಮಂತ್ರಿ ಎಂ ಕೆ ವೆಲ್ಲೋಡಿಯವರು ತಿಳಿಸಿರುತ್ತಾರೆ

ಆರಂಭ ಭಾಷಣ

ರಾಜಧಾನಿಯ ಪ್ರಥಮ ದರ್ಜೆಯ ಕಾಲೇಜಿನ ಪ್ರಕೃತಿ ವಿಜ್ಞಾನ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ೩೦ ಗಂಟೆಗೆ ಪ್ರೊ|| ಎ ಎಲ್ ಲಿಂಗರಾಜುರವರು ಸಂಘದ ಆರಂಭ ಭಾಷಣವನ್ನು ಮಾಡುವರು ಡಾ|| ಪ್ರೊ|| ಎಂ ಆರ್ ಶ್ರೀನಿವಾಸರಾಯರು ಅಧ್ಯಕ್ಷಾಸನವನ್ನು ವಹಿಸುವರು

ದಿರಬಹುದೆಂದು ಭಾವಿಸಲಾಗಿದೆ

ಶ್ರೀ ರಾಜುರವರ ಮೊಕದ್ದಮೆಯಿಂದ ಉದ್ಭವಿಸಿರುವ ಈ ಪರಿಸ್ಥಿತಿಯು ಮೈಸೂರಿನ ಚರಿತ್ರೆಯಲ್ಲಿ ಮಾತ್ರವೇ ಅಲ್ಲದೆ ಭಾರತ ರಾಜ್ಯಾಂಗದ ಇತಿಹಾಸದಲ್ಲೂ ವಿಶೇಷ ಕುತೂಹಲ ಜಿಜ್ಞಾಸೆ ಮತ್ತು ಕೋಲಾಹಲಗಳಿಗೆ ಕಾರಣವಾದ ಘಟನೆಗಳನ್ನು ತಂದೊಡ್ಡಿರುತ್ತದೆ

ರಾಷ್ಟ್ರಾಧ್ಯಕ್ಷರ ನಿರೂಪವನ್ನು ನಿರಾಕರಿಸಲಾಗುವುದೇ

ಕಾಂಗ್ರೆಸ್ ಪಕ್ಷದಲ್ಲಿ ನಾಯಕರಿಗೆ ಸೂಚನೆ

(ಸ್ವಂ ಸು ಪ್ರೋ] ಬೆಂಗಳೂರು ೪

ಪುರಾತನ ಅಂತಃಕಲಹ, ಬೊಂಬಿಗಲಭೆ ಮುಂತಾದ ತೀವ್ರ ಪರಿಸ್ಥಿತಿಗಳಲ್ಲಿ ಪ್ರಯೋಗಿರುವ ರಾಜ್ಯಾಂಗ ವಿಧಿಯನ್ನು ಒಂದು ಅಲ್ಪ ವಿಚಾರಕ್ಕೆ ಉಪಯೋಗಿಸಿ ಶ್ರೀ ರಾಜುರವರ ಮೊಕದ್ದಮೆಯನ್ನು ಬೇರೆ ಪ್ರಾಂತ್ಯಕ್ಕೆ ವರ್ಗಾಯಿಸುವಂತೆ ಭಾರತ ರಾಷ್ಟ್ರಾಧ್ಯಕ್ಷರು ಮೈಸೂರು ಸರ್ಕಾರಕ್ಕೆ ಕೊಟ್ಟಿರುವ ನಿರೂಪವು ಈ ಸಂಸ್ಥಾನದ ಘನತೆ ಗೌರವಗಳಿಗೆ ಚ್ಯುತಿಯನ್ನು ಉಂಟು ಮಾಡುತ್ತದಾದುದರಿಂದ ಸಂಸ್ಥಾನದ ಆತ್ಮ ಗೌರವವನ್ನು ಸಂರಕ್ಷಿಸಲು ಸರ್ಕಾರದವರು ರಾಷ್ಟ್ರಾಧ್ಯಕ್ಷರ ಈ ಆಜ್ಞೆಗೆ ಪುರಸ್ಕಾರ ಕೊಡಕೂಡದೆಂದೂ ಇದರಿಂದ ಉದ್ಭವಿಸುವ ಪರಿಣಾಮಗಳಿಗೆ ಸಿದ್ಧರಾಗಿರಬೇಕೆಂದೂ ಮೈಸೂರು ಶಾಸನ ಸಭೆಯು ಕಾಂಗ್ರೆಸ್ ಪಕ್ಷವು ನಿರ್ಣಯ ಮಾಡಿ ನಾಯಕರಾದ ಶ್ರೀ ಕೆ ಸಿ ರೆಡ್ಡಿಯವರಿಗೆ ಸೂಚನೆಯಿತ್ತಿರುವುದಾಗಿ ತಿಳಿದು ಬಂದಿದೆ

ರಾಜುರವರ ಮೊಕದ್ದಮೆಯ ವರ್ಗಾವರ್ಗ ಅಥವಾ ಅದರಲ್ಲಿ ಶ್ರೀ ಮೇದಪ್ಪನವರ ಪಾತ್ರದ ವಿಚಾರಕ್ಕಿಂತಲೂ ಸಂಸ್ಥಾನದ ಪ್ರಭುತ್ವದಲ್ಲಿ ಕೇಂದ್ರದವರ ಪ್ರವೇಶದ ವಿಷಯವು ಹೆಚ್ಚು ಅಸಮಾಧಾನಕ್ಕೆ ಕಾರಣವಾಗಿರುವುದಾಗಿ ಹೇಳಲಾಗಿದೆ ಮೊಕದ್ದಮೆಯನ್ನು ವರ್ಗಾಯಿಸುವಂತೆ ಹೇಳುವುದಕ್ಕಿಂತಲೂ ಶ್ರೀ ಮೇದಪ್ಪನವರನ್ನೇ ಕೇಂದ್ರ ಸರ್ಕಾರದವರು ಬೇರೆ ಕಡೆಗೆ ವರ್ಗಾಯಿಸಿ ಈ ಬಿಕ್ಕಟ್ಟನ್ನು ತಪ್ಪಿಸಬಹುದಾಗಿತ್ತೆಂಬುದು ಹಲವರ ಅಭಿಪ್ರಾಯವಾಗಿದೆ

ರಾಜ್ಯಾಂಗದ ವಿಧಿಯನ್ನು ಪ್ರಯೋಗಿಸಿ ಸಂಸ್ಥಾನದ ಆಡಳಿತದಲ್ಲಿ ಪ್ರವೇಶಿಸುವುದಿಲ್ಲವೆಂದು ಭಾರತ ಸರ್ಕಾರದವರು ಕೊಟ್ಟಿದ್ದ ಭರವಸೆಯ ಉಲ್ಲಂಘನೆಯಾಗಿರುವುದೆಂದು ಪ್ರತಿಪಾದಿಸಲಾಗಿದೆ. ಇದೇ ರೀತಿ ಮುಂದೆ ಸಣ್ಣಪುಟ್ಟ ವಿಷಯಗಳಲ್ಲಿಯೂ ಪ್ರವೇಶಿಸಬಹುದೆಂಬ ಶಂಕೆಯೂ ಉಂಟಾಗಿರುತ್ತದೆ

ಅಂತ್ಯಲಾಗಿ ರಾಷ್ಟ್ರಾಧ್ಯಕ್ಷರ ಆಜ್ಞೆಯು ಜಾರಿಗೆ ಬರದೇ ಇರುವುದರ ಪರಿಣಾಮವೂ ಘೋರವಾಗಿಯೇ ಇರುತ್ತದೆ ಮೈಸೂರು ಶಾಸನ ಸಭೆಯ ನಿರ್ಣಯವು ಕೇಂದ್ರ ಸರ್ಕಾರಕ್ಕೆ ಶ್ರೀ ಕೆ ಸಿ ರೆಡ್ಡಿಯವರಿಂದ ತಲುಪಿದ ಒಡನೆಯೇ ಭಾರತ ಸರ್ಕಾರದವರು ರಾಷ್ಟ್ರಾಧ್ಯಕ್ಷರ ಆಜ್ಞೆಯನ್ನು ಜಾರಿಗೆ ತರಲು ಮೈಸೂರಿನಲ್ಲಿ ವಿಶೇಷ ಪರಿಸ್ಥಿತಿಯನ್ನು ಘೋಷಿಸಿ ಇಂದಿನ ಮಂತ್ರಿ ಮಂಡಲವನ್ನು ರದ್ದು ಮಾಡಿ ಪೂರ್ವ ಪಂಜಾಬಿನಂತೆ ಗವರ್ನರರ (ರಾಜಪ್ರಮುಖರ) ಆಡಳಿತವನ್ನೇ ಪ್ರತಿಷ್ಠಿಸಬಹುದು ಅಥವಾ ರಾಷ್ಟ್ರಾಧ್ಯಕ್ಷರ ಆಜ್ಞೆಯನ್ನು ಮಾರ್ಪಡಿಸಿ ರಾಜ್ಯಾಂಗದ ಬೇರೆ ವಿಧಿಯ ಪ್ರಕಾರ ಶ್ರೀ ಮೇದಪ್ಪನವರನ್ನೇ ಬೇರೆ ಪ್ರಾಂತಕ್ಕೆ ವರ್ಗಾಯಿಸಲು ಏರ್ಪಡಿಸಬಹುದು ಆದ್ದರಿಂದ ಮಂತ್ರಿ ಮಂಡಲವು ರಾಜೀನಾಮೆ ಕೊಡುವ ಪ್ರಶ್ನೆಯು ಏಳ

(ಹಿಂದಿನ ಕಾಲಂ ನೋಡಿ)

ವಾರ ಭವಿಷ್ಯ

ತಾ|| ೪-೧೧-೫೧ರಿಂದ ೧೧-೧೧-೫೧ರ ವರೆಗೆ

ಮೇಷ—ಬಹುದಿನಗಳ ಚಿಂತೆ ದೂರವಾಗುವುದು ಆರೋಗ್ಯ ಉತ್ತಮ. ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು. ತಾ|| ೭, ೮ ವಿಶೇಷ ಸುದ್ದಿ, ಧನಲಾಭ

ವೃಷಭ—ವಿಷಾದಕರ ಘಟನೆ ಜರುಗುವುದು. ಆಪ್ತರ ವಿಯೋಗ ಅಪಘಾತ ಭಯ. ಆರೋಗ್ಯ ಚೆನ್ನಾಗಿರದು ವ್ಯವಹಾರಗಳಲ್ಲಿ ಅಭಿವೃದ್ಧಿ ತಾ|| ೯ ೧೦ ಧನಾಗಮನ, ವಿಶೇಷ ಸುದ್ದಿ

ಮಿಥುನ—ಆರೋಗ್ಯ ಚೆನ್ನಾಗಿರದ. ಸಂಶಯಾತ್ಮಕ ಘಟನೆಗಳು ವ್ಯವಹಾರಗಳಲ್ಲಿ ಪ್ರಗತಿ ಪ್ರವಾಸಯೋಗ ತಾ|| ೫ ೬ ಖರ್ಚು. ಅತಿಥಿಗಳ ಆಗಮನ

ಕರ್ಕ—ಪರೋಪಕಾರಗಳು ಜರುಗುವುವು ಆರೋಗ್ಯ ಕಮ್ಮಿ ವ್ಯವಹಾರಗಳಲ್ಲಿ ಜಯ ಸುಖಪ್ರವಾಸ ತಾ|| ೭ ೮ ಸಿದ್ಧಾರ್ಥ ನಾರ ಖರ್ಚು ಹೆಚ್ಚು

ಸಿಂಹ—ಬಹುದಿನಗಳ ಚಿಂತೆ ದೂರವಾಗುವುದು ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು ಕಾತರದಿಂದ ತೆಪಿಕ್ಷಿಸುತ್ತಿದ್ದವರ ಭೇಟಿ ತಾ|| ೯ ೧೦ ವಿಶ್ರಾಂತಿ ಇಲ್ಲ, ಖರ್ಚು

ಕನ್ಯಾ—ವ್ಯಾಪಾರ ವ್ಯವಹಾರಗಳಲ್ಲಿ ಚಿಂತೆ ಹೆಚ್ಚು ಆರೋಗ್ಯ ಚೆನ್ನಾಗಿರದು ಆಪ್ತರ ಬಗ್ಗೆ ಸಂಶಯ ಖರ್ಚು ಅಧಿಕ. ತಾ|| ೭ ೮ ಕಳುವಿನ ಸಂಭವ ದುಷ್ಟರ ಸಹವಾಸ

ತುಲ—ಬಹುದಿನಗಳ ಆಸೆ ಈಡೇರುವುದು. ಆರೋಗ್ಯ ಉತ್ತಮ. ವ್ಯವಹಾರಗಳಲ್ಲಿ ಯಶಸ್ಸು ಸುಖ ಪ್ರವಾಸ ತಾ|| ೫, ೬ ಮನರಂಜನೆ, ಬಟ್ಟೆಬರೆ ಖರೀದಿ.

ವೃಶ್ಚಿಕ—ಪರಾಕ್ರಮದ ಕಾರ್ಯಗಳು ಜರುಗುವುವು ಆರೋಗ್ಯ ಉತ್ತಮ ಮನಶ್ಶಾಂತಿ ಲಭಿಸುವುದು. ನಾನಾರ ವ್ಯವಹಾರಗಳಲ್ಲಿ ಯಶಸ್ಸು ತಾ|| ೭, ೮. ಚೊಕ್ಕ ಭೋಜನ. ಹರ್ಷ ವಾತಾವರಣ.

ಧನು—ಶ್ರಮಪಟ್ಟಷ್ಟು ಧನಲಾಭ, ಆರೋಗ್ಯ ಚೆನ್ನಾಗಿರುವುದು ಆಸೆಗಳು ಈಡೇರುವುವು. ಎದುರಾಳಿಗಳ ರಾಜಿ ಸಂಭವ. ತಾ|| ೫, ೬ ಸುವಾರ್ತೆ ನಿರೀಕ್ಷಿತ ಸಹಾಗಮನ.

ಮಕರ—ಕಾರ್ಯಗಳಲ್ಲಿ ನಿರುತ್ಸಾಹ. ಕೈಗೊಂಡ ಕಾರ್ಯ ವಿಘ್ನ ಆರೋಗ್ಯ ಕಮ್ಮಿ. ಕೌಟುಂಬಿಕ ಚಿಂತೆ ತಾ|| ೯, ೧೦ ವ್ಯವಹಾರಗಳಿಗೆ ಸುದಿನ, ಧನಾಗಮನ

ಕುಂಭ—ಆರೋಗ್ಯ ಚೆನ್ನಾಗಿರದು ಅಪಘಾತ ಭಯ ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ. ಖರ್ಚು ಹೆಚ್ಚು

ಈಜಿಪ್ಟಿಗೆ ಹೆಚ್ಚು ಬ್ರಿಟಿಷ್ ಸೈನ್ಯ

ಇತ್ತೀಚಿನ ಕಾಲದಲ್ಲಿ ವಿಮಾನಗಳ ಮೂಲಕ ಸಾಗಿಸಬಹುದಾದ ಅತ್ಯಂತ ಭಾರಿ ಸಂಖ್ಯೆಯ ಬ್ರಿಟಿಷ್ ಸೈನ್ಯಗಳು ಈಗ ಸೂಯೆಜ್ ಕ್ಷೇತ್ರಗಳಿಗೆ ಬರುತ್ತಿರುವುದಾಗಿ ಗೊತ್ತಾಗಿದೆ. ಬ್ರಿಟನ್, ಟ್ರಿಪೋಲಿ ಮತ್ತು ಸೈಪ್ರಸ್‌ಗಳಿಂದ ಸೂಯೆಜ್ ಪ್ರದೇಶಕ್ಕೆ ವಿಮಾನಗಳ ಓಡಾಟವು ವಿಪರೀತವಾಗಿದೆ

ಆಹಾರ ವ್ಯಾಪಾರದಿಂದ ಸರ್ಕಾರಕ್ಕೆ ನಷ್ಟ

ಈ ವರ್ಷ ಸಾಲಿನಲ್ಲಿ ಸರ್ಕಾರದವರು ಆಹಾರವನ್ನು ಕೊಂಡು ಮಾರಾಟ ಮಾಡಿದ್ದರಲ್ಲಿ ಸುಮಾರು ... ಕೋಟಿ ರೂಪಾಯಿಗಳು ನಷ್ಟ ಬಂದಿದ್ದೇ ಎಂದು ಶ್ರೀ ಹೆಚ್. ... ಚೆನ್ನಬಸಪ್ಪನವರು ಶಾಸನ ಸಭೆಯಲ್ಲಿ ನೆನ್ನೆ ಪ್ರಶ್ನೆ ಮಾಡಿದಾಗ ... ಎಂದಿದ್ದೇನೆಂದೂ, ನಷ್ಟ ... ಸರ್ಕಾರದವರು ... ಆಹಾರವನ್ನು, ... ಗಳ ಧಾನ್ಯವನ್ನು ಕೊಂಡು ... ಮಾರಾಟ ಮಾಡಲಾಯಿತೆಂದೂ ... ವಚ್ಚ ಮಾಡಿತೆಂದೂ ... ವಸ್ತು ಕಡಿಮೆಯಾಗಿದ್ದ ... ಬಾಯಿತು

ಹುಚ್ಚರ ಆಸ್ಪತ್ರೆಯ ಭಾರಿ ಬದಲಾವಣೆ

ಬೆಂಗಳೂರಿನಲ್ಲಿರುವ ಹುಚ್ಚರ ಆಸ್ಪತ್ರೆಯನ್ನು ಭಾರತದಲ್ಲೇ ಅತ್ಯಂತ ದೊಡ್ಡದನ್ನಾಗಿ ಮಾಡಲು ಆಲೋಚನೆಯು ನಡೆದಿರುತ್ತದೆ ಇದನ್ನು ಕಪಿಲ ಭಾರತ ಶಾಲೆಯನ್ನಾಗಿ ಪರಿವರ್ತಿಸಿ ಎರಡು ವರ್ಷದ ಡಿಪ್ಲೊಮಾ ತರಗತಿಯನ್ನು ತೆರೆಯಲು ಆಲೋಚಿಸಲಾಗಿದೆ

ತಾ|| ೫ ೬ ಕೆಟ್ಟ ಸುದ್ದಿ, ವಿಶೇಷ ಸುದ್ದಿ

ಮೀನ—ಆರೋಗ್ಯ ಉತ್ತಮ ಚಿಂತೆ ಹೆಚ್ಚು ಕುಟುಂಬದಲ್ಲಿ ಕಲಹ ವ್ಯವಹಾರಗಳಲ್ಲಿ ಉತ್ತಮ ಪ್ರವಾಸ ಖುಷಿ. ತಾ|| ೭ ೮ ಗಡಿಬಿಡಿ ಖರ್ಚು ಹೆಚ್ಚು

ಪುನಃ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನ

ಮಧ್ಯ ಪೂರ್ವದ ರಕ್ಷಣೆ ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳ ಸರಬರಾಜು ಮಾರ್ಗಗಳ ಭದ್ರತೆ ಇವುಗಳನ್ನು ಕುರಿತು ಪರ್ಯಾಲೋಚಿಸಲು ಬರುವ ವರ್ಷದ ಆದಿ ಭಾಗದಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವನ್ನು ಚರ್ಚಿಲ್ಲರು ಕರೆಯಲಿರುವರು.

ಶ್ರೀ ರಾಮ ಪಟ್ಟಾಭಿಷೇಕ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀಗಳಾದ ಪುಟ್ಟಯ್ಯ ಗೌಡ ಮತ್ತು ... ರಣ್ಣಯ್ಯನವರುಗಳಿಂದ ರಾಮಾಯಣ ಪುರಾಣವು ನಡೆಯುತ್ತಿದ್ದು, ಈ ಸಂಜೆ ಶ್ರೀ ರಾಮ ಪಟ್ಟಾಭಿಷೇಕವು ಜರುಗುವುದು ತಾ|| ೫ ರಂ ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು ಉಪನ್ಯಾಸಗಳೂ ಆಗುವುವು ಅಮ್ಮನವರಿಗೆ ಕೋದಂಡರಾಮನ ಅಲಂಕಾರವಿದೆ

ಮೈಸೂರು ಬ್ಲೂಸ್ ಫುಟ್‌ಬಾಲ್ ಕ್ಲಬ್

ರಾಜಧಾನಿಯ ಮೈಸೂರು ಬ್ಲೂಸ್ ಫುಟ್‌ಬಾಲ್ ಕ್ಲಬ್ಬಿನ ಸರ್ವಸದಸ್ಯರ ಸಭೆಯು ಮೊನ್ನೆ ನಡೆದು ಪ್ರಸಕ್ತ ಸಾಲಿಗೆ ಶ್ರೀ ... ಅವರು ಅಧ್ಯಕ್ಷರು ಶ್ರೀ ... ಪುಟ್ಟಯ್ಯ, ಉಪಾಧ್ಯಕ್ಷ ಮತ್ತು ... ಶ್ರೀ ಎಂ ಎಸ್ ... ಕಾರ್ಯದರ್ಶಿ ಶ್ರೀ ಎಂ ಎಸ್ ನಂಜುಂಡಯ್ಯ ಕ್ಯಾಪ್ಟನ್ ಆಗಿ ಆರಿಸಲ್ಪಟ್ಟರು ಶ್ರೀಗಳಾದ ಪನ್ನೀರ್‌ರಾಜ್, ತಿಲಕ್ ಚಂದ್‌ಲಾಲ್, ರಾಮಚಂದ್ರ ಮೂರ್ತಿ ಸುಂದರ್‌ರಾಜ್, ಪೊನ್ನಂಗಯ್ಯ, ಯತಿರಾಜ್ ಮತ್ತು ವಿ ಶ್ರೀನಿವಾಸ್‌ರವರು ಸದಸ್ಯರಾಗಿರುವರು

ಪ್ರಭುದೇವಾ ಟಾಕೀಸ್

5-11 51ನೇ ... ಸೋಮವಾರದಿಂದ

2 ನೇ ವಾರ

ಮಾಯಪಿಲ್ಲ (ತೆಲುಗು)

ಶಾಸ್ತ್ರಿ—ರಘುರಾಮಯ್ಯ, ಕಾಂಚನ, ಕುಮಾರಿ, ರಿಲೀಫ್ ಜೂನಿಯರ್ ಲಕ್ಷ್ಮೀರಾಜ್ಯಂ

ವಜಾ ಆದ ಕಾರ್ಮಿಕನಿಂದ ಅಧಿಕಾರಿ ಮೇಲೆ ಬಾಂಬು

ಇಟಲಿಯ ಮಿಲಾನ್ ನಗರದ ... ಕಾರ್ಖಾನೆಯೊಂದರ ಪೈರೆಕ್ಟರು ತನ್ನನ್ನು ವಜಾ ಮಾಡಿದ ಸಿಟ್ಟಿಗಾಗಿ ಅಲ್ಲಿನ ಕಾರ್ಮಿಕನೊಬ್ಬನು ಕೆಲವು ದಿನಗಳ ಹಿಂದೆ ಕಾರ್ಖಾನೆಯ ಕಛೇರಿಯೊಳಗೆ ನುಗ್ಗಿ ಕಛೇರರು ತಡೆದವರೂ ಸಹ ಲೆಕ್ಕಿಸದೆ, ಅಧಿಕಾರಿಯ ಕೊಠಡಿಗೆ ಬಾಂಬನ್ನು ಎಸೆದನು. ಇದರಿಂದ ಅಧಿಕಾರಿ, ಆತನ ಕಾರ್ಯದರ್ಶಿ ಮತ್ತು ವಜಾ ಆದ ಕಾರ್ಮಿಕ ಈ ಮೂವರೂ ಮಡಿದಿರುತ್ತಾರೆ. ೭ ಜನ ಗುಮಾಸ್ತರಿಗೆ ಅಪಾಯಕರವಾದ ಗಾಯಗಳಾಗಿವೆ

ಕೌಟಿಲ್ಯ ಮಂಡಲಿ

ರಾಜಧಾನಿಯ ಕೌಟಿಲ್ಯ ಮಂಡಲಿಯ ಆಶ್ರಯದಲ್ಲಿ ನಾಳಿದ್ದು ಮಂಗಳವಾರ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ "ಗೀತೆಯಲ್ಲಿರುವ ನಾಮಜಿಕ ಧ್ಯೇಯಗಳು" ಎಂಬ ವಿಷಯವಾಗಿ ಕಾಲೇಜಿನ ತತ್ವಶಾಸ್ತ್ರದ ಪ್ರೊಫೆಸರರಾದ ಶ್ರೀ ಎಂ ಯಾಮುನಾಚಾರ್ಯರು ಭಾಷಣ ಮಾಡುವರು ಸರ್ದಾರ್ ಬಸವರಾಜ ಅರಸ್‌ರವರು ಅಧ್ಯಕ್ಷತೆ ವಹಿಸುವರು.

ಜಿಲ್ಲಾ ಮುದ್ರಣಾಲಯಗಳ ಕಾರ್ಮಿಕರ ಸಂಘ

ಮೈಸೂರು ಜಿಲ್ಲಾ ಮುದ್ರಣಾಲಯಗಳ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಶ್ರೀ ನರಸಿಂಹಲು ನಾಯ್ಡುರವರ ಅಧ್ಯಕ್ಷತೆಯಲ್ಲಿ ನಡೆದು ಕೃಷ್ಣಾ ಪ್ರೆಸ್ಸಿನ ... ಜನ ಕೆಲಸಗಾರರನ್ನು ವಜಾ ಮಾಡಿದುದಕ್ಕಾಗಿ ಖಂಡನೆಯನ್ನು ಸೂಚಿಸಿ ಒಂದು ವಾರದೊಳಗೆ ಅವರುಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿತು. ಹಾಗಿಲ್ಲದಿದ್ದರೆ ಕೊಟ್ಟಿರುವ ಅವಧಿಯ ನಂತರ ಸದರಿ ಮುದ್ರಣಾಲಯದ ಮುಂದೆ ಪಿಕೆಟಿಂಗ್ ಮಾಡಬೇಕೆಂದು ಸಭೆಯು ನಿರ್ಧರಿಸಿತು

CITY TUTORIAL COLLEGE

Near V V. Market, Mysore

ಮಿಡಲ್ ಸ್ಕೂಲ್ ಪರೀಕ್ಷೆಗೆ ತರಬೇತಿ ಮಾಡುವ ತರಗತಿಗಳು

ಬೆಳಗ್ಗೆ 11 ರಿಂದ 4-30ರ ವರೆಗೆ ಮತ್ತು ಸಾಯಂಕಾಲ 6ರಿಂದ 8ರವರೆಗೆ

(ವಿದ್ಯಾರ್ಥಿನಿಯರಿಗೆ ಪ್ರತ್ಯೇಕ)

ಮದ್ರಾಸು ಮೆಟ್ರಿಕ್ಯುಲೇಷನ್ ತರಗತಿಗಳು

ವಿವರಗಳಿಗೆ ದಯವಿಟ್ಟು ವಿಚಾರಿಸಿ

Edited, Printed and Published by A. R. Nagarajan, at Sadhvi Press D Subbiah Road, Mysore



ಮಲೇರಿಯಾ ಗೆಡ್ಡೆಗಳಿಗೆ

40 ವರ್ಷಗಳಿಂದ ಪ್ರಖ್ಯಾತವಾಗಿರುವ ಮೈಸೂರು ಎಸ್ ಎನ್. ಪಂಡಿತ್ ಅಂಡ್ ಸನ್ಸ್ ರವರ ಪಂಚಾಮೃತ, ಸ್ಪೆಷಲ್ ವಾಸಾದ ಲೇಪ್ಯ ಸುಗಂಧರಾಜ ತೈಲ-ಇವುಗಳನ್ನು ಉಪಯೋಗಿಸಿ

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ M. V. ಭೋಜಯ್ಯ ಶ್ರೀ ಬಿ ಎ., ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ಕುರ್ಚಿ ಬಟ್ಟೆ, ಛತ್ರಿ ಬಟ್ಟೆ, ಹಾಸಿಗೆ ಬಟ್ಟೆ, ಸೋಫಾ ಬಟ್ಟೆಗಳಿಗೂ

ಕ್ಯಾಂಪ್ ಕಾಟ್ ಕ್ಯಾನ್ವಾಸ್, ಸಿಂಗಲ್, ಡಬ್ಬಲ್ ಸೊಳ್ಳೆ ಪರದೆ, ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಷೀಟು ಇವುಗಳಿಗೂ ಬಾಬುಸಾಬ್ ಅಂಗಡಿ ಬ್ಯಾಂಕ್ ರಸ್ತೆ, ಮೈಸೂರು

ರಿಜಿಸ್ಟರ್ಡ್ ನಂ. 792 · ಏಕ ಸಂಚಿಕೆ ಬೆಲೆ ಮೂರು ಕಾಸು · ಅಂಚೆ ಸಹಿತ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೫-೧೧-೫೧ [ಸಂಚಿಕೆ ೪೫

ಮೈಸೂರಿನ ಬಗ್ಗೆ ದಿಲ್ಲಿಯಲ್ಲಿ ಆಶಾಕಿರಣ

ಭಾರತ ಮತ್ತು ಪಾಕಿಸ್ತಾನ ಒಪ್ಪಂದಕ್ಕೆ ನೆಹರೂ ಸಮ್ಮತಿ

ಆಕ್ರಮಣ ನಡೆಸಕೂಡದೆಂಬ ಒಪ್ಪಂದವನ್ನು ಪಾಕಿಸ್ತಾನದೊಡನೆ ಮಾಡಿಕೊಳ್ಳಲು ತಾವು ಸಿದ್ಧವಿರುವುದಾಗಿ ಪ್ರಧಾನಿ ನೆಹರೂರವರು ನೆನ್ನೆ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು. ಕಾಶ್ಮೀರ ಪ್ರಶ್ನೆಯೂ ಸಹ ಈ ಒಪ್ಪಂದದಲ್ಲಿ ಸೇರಿರಬೇಕೆಂದು ಅವರು ಸ್ಪಷ್ಟಪಡಿಸಿದರು.

ಅಸ್ಸಾಂ ಮಂತ್ರಿಗಳಿಂದ ಉಪವಾಸ

ಅಸ್ಸಾಂ ಪ್ರಜೆಗಳು ಭೀಕರ ಮುಂಬರುವ ತೊಂದರೆಗಳಿಗೀಡಾಗಿ ಪಡುತ್ತಿರುವ ಸಂಕಟವನ್ನು ಕಂಡು ಮರುಗಿದ ಅಸ್ಸಾಂ ಮಂತ್ರಿ ರೆವರೆಂಡ್ ನಿಕಾಲ್ಸ್ ರಾಯ್‌ರವರು ಮೂರು ದಿನಗಳ ಉಪವಾಸವನ್ನು ನೆನ್ನೆಯಿಂದ ಪ್ರಾರಂಭಿಸಿರುವರು. ಪ್ರಜಾ ವರ್ಗದ ಮೇಲೆ ದೇವರ ದಯೆ ತೋರಲೆಂದು ಅವರು ಉಪವಾಸ ಕಾಲದಲ್ಲಿ ಪ್ರಾರ್ಥನೆ ಸಲ್ಲಿಸುವರು.

ಬ್ಯಾಂಕ್ ಚುನಾವಣೆ ತಡೆ ಅಜ್ಞೆ, ಹೈಕೋರ್ಟಿಗೆ ಅರ್ಜಿ

ಬಳ್ಳಾರಿಯ ವಕೀಲರಾದ ಶ್ರೀ ಕೃಷ್ಣರಾಯರೂ ಮತ್ತು ಡಾ|| ರಂಗರಾಯರೂ ಹೈಕೋರ್ಟಿಗೆ ಮ್ಯಾಂಡಮಸ್ ಅರ್ಜಿಯನ್ನು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಚುನಾವಣೆಗಳು ನಡೆಯದಂತೆ ಡಿ|| ರಿಜಿಸ್ಟ್ರಾರ್‌ರವರು ಕೊಟ್ಟಿರುವ ತಡೆಯನ್ನು ತೆಗೆಯಬೇಕೆಂದು ಹಾಕಿರುವರೆಂದು ಗೊತ್ತಾಗಿದೆ.

ಇಂಗ್ಲೀಷ್ ಅರ್ಟ್ಸ್ ಜೊತೆಗೆ ಜನರಲ್ ಸೈನ್ಸ್ ಐಚ್ಛಿಕ ವಿಷಯ

ನೆನ್ನೆ ನಡೆದ ವಿಶ್ವ ವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ಲಿನ ಸಭೆಯಲ್ಲಿ, ಬಿ. ಎ. ಆರ್ಟ್ಸ್ ವಿಭಾಗಕ್ಕೆ ಸಾಮಾನ್ಯ ವಿಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ಇಡತಕ್ಕದ್ದೆಂದು ತೀರ್ಮಾನಿಸಲಾಯಿತು. ಅಕೆಡೆಮಿಕ್ ಕೌನ್ಸಿಲ್ ಸಭೆ ಸ್ಥಾಯೀ ಸಮಿತಿಯ ಕರ್ತವ್ಯಗಳನ್ನು ಗೊತ್ತುಪಡಿಸುವುದಕ್ಕಾಗಿ ೭ ಜನ ಸದಸ್ಯರನ್ನುಳ್ಳ ಒಂದು ಸಮಿತಿಯನ್ನು ನೇಮಿಸಲಾಯಿತು.

ಚೂರಿಯಿಂದ ಇರಿದುದಕ್ಕೆ ಜೀವಾವಧಿ ಶಿಕ್ಷೆ

ಚನ್ನಪಟ್ಟಣ ತಾಲ್ಲೂಕು ತಾಯೂರು ಗ್ರಾಮದ ಒಕ್ಕಲಿಗರ ಜಾತಿಯ ಕಂಬಳ್ಳಿ ಬಸವ ಎಂಬುವನು ಹ್ಯಾಟಿ ಎಂಬುವನ ಹೆಂಡತಿ ಮಲ್ಲಮ್ಮ ಎಂಬುವಳನ್ನು ಕಳೆದ ಮಾರ್ಚಿ ೫ನೇ ತಾರೀಕು ಚೂರಿಯಿಂದ ಇರಿದು ಕೊಂದ ಅಪರಾಧಕ್ಕಾಗಿ ಈ ದಿನ ಮೈಸೂರು ಅಧಿಕ ಸೆಷನ್ಸ್ ನ್ಯಾಯಾಧೀಶರು ಅವನಿಗೆ ಜೀವಾವಧಿ ಶಿಕ್ಷೆ ವಿಧಿಸಿರುವರು.

ಕೆ. ಎಂ. ಪಿ. ಪಕ್ಷದ ಕಾರ್ಯಕರ್ತರ ಸಭೆ

ಬಳ್ಳಾರಿಯ ಕಿಸಾನ್ ಮಜದೂರ್ ಪ್ರಜಾ ಪಕ್ಷದ ಕಾರ್ಯಕರ್ತರ ಸಭೆ ಇಂದು ರಾತ್ರಿ ೮ ಘಂಟೆಗೆ ಸಂಘದ ಕಚೇರಿಯಲ್ಲಿ ಸೇರುವುದು. ವಕೀಲರಾದ ಶ್ರೀ ಸುಬ್ಬರಾಯರು ಅಧ್ಯಕ್ಷತೆ ವಹಿಸುವರು. ಕಾರ್ಯಕರ್ತರೆಲ್ಲರೂ ಹಾಜರಾಗಬೇಕೆಂದು ಕೋರಲಾಗಿದೆ.

ಪೋಲೀಸರಿಂದ ಟೆಹರಾನ್ ವಿದ್ಯಾಲಯದ ಆಕ್ರಮಣ

ಪರ್ಷಿಯಾದ ರಾಜಧಾನಿ ಟೆಹರಾನಿನ ವಿಶ್ವ ವಿದ್ಯಾಲಯದಲ್ಲಿ ಕಮ್ಯೂನಿಸ್ಟ ವಿದ್ಯಾರ್ಥಿಗಳು ನಡೆಸುತ್ತಿದ್ದ ಪ್ರದರ್ಶನಗಳನ್ನು ತಡೆಗಟ್ಟುವ ಸಲುವಾಗಿ ನೆನ್ನೆ ಬೆಳಿಗ್ಗೆ ಪೋಲೀಸರು ವಿಶ್ವ ವಿದ್ಯಾಲಯವನ್ನು ಆಕ್ರಮಿಸಿಕೊಂಡು, ಎಲ್ಲಾ ವಿದ್ಯಾರ್ಥಿಗಳನ್ನೂ ಬಲಾತ್ಕಾರವಾಗಿ ಹೊರಕ್ಕೆ ಕಳುಹಿಸಿದರೆಂದು ವರದಿಯಾಗಿದೆ. ವಿಶ್ವ ವಿದ್ಯಾಲಯವನ್ನು ಪರ್ಷಿಯ ಸೈನಿಕರಿಗೆ ವಹಿಸಲಾಗಿದೆ. ಪೋಲೀಸರ ಈ ಕ್ರಮವನ್ನು ವಿದ್ಯಾರ್ಥಿಗಳು ತೀವ್ರವಾಗಿ ಖಂಡಿಸಿದ್ದಾರೆ.

ಸೂಯೆಜ್ ಕಾಲುವೆಯಿಂದ ಈಜಿಪ್ಟಿನವರ ಗಡೀಪಾರು

ಬ್ರಿಟಿಷರಿಗೆ ಸಹಾಯ ಮಾಡುತ್ತಿರುವ, ಈಜಿಪ್ಟ್ ಕಾರ್ಮಿಕರನ್ನು ಹೆದರಿಸುವ ಪ್ರಯತ್ನದಲ್ಲಿದ್ದ ೫೦ ಜನರನ್ನು ಬ್ರಿಟಿಷ್ ಅಧಿಕಾರಿಗಳು ಸೂಯೆಜ್ ಪ್ರದೇಶದಿಂದ ಹೊರಕ್ಕೆ ಕಳುಹಿಸಿರುತ್ತಾರೆ. ಇವರ ಪೈಕಿ ಒಬ್ಬ ಪೋಲೀಸು ಅಧಿಕಾರಿಯೂ ಇರುವನು.

ವೆಂಕಟಾಚಲಯ್ಯರ ಉಮೇದುವಾರಿಕೆ ವಾಪಸು

ಬೆಂಗಳೂರು ಬಸವನಗುಡಿ ಕ್ಷೇತ್ರದಿಂದ ಮೈಸೂರು ಶಾಸನ ಸಭೆಗೆ ಕಾಂಗ್ರೆಸ್ ಉಮೇದುವಾರರಾಗಿ ಆರಿಸಲ್ಪಟ್ಟಿದ್ದ ಶ್ರೀ ಎಲ್. ಎಸ್. ವೆಂಕಾಜಿರಾಯರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ.

ಪಬ್ಲಿಕ್ ಕಮಿಟಿ ಪರೀಕ್ಷೆಯ ಫಲಿತಾಂಶಗಳು

ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆದ ವಿಶ್ವ ವಿದ್ಯಾನಿಲಯದ ಪರೀಕ್ಷೆಗಳ ಫಲಿತಾಂಶಗಳು ಮುಂದಿನ ಸೋಮವಾರ ಪ್ರಕಟವಾಗುವುವೆಂದು ತಿಳಿದುಬಂದಿದೆ.

ಮಹಾರಾಜರೊಡನೆ ಭಾಷ್ಯಂ ಮತ್ತು ದಾಸಪ್ಪನವರ ಭೇಟಿ

ಹಣಕಾಸಿನ-ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಮತ್ತು ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂರವರು ನೆನ್ನೆ ರಾಜಧಾನಿಗೆ ಆಗಮಿಸಿ ರಾತ್ರಿ ಶ್ರೀ ಮನ್ಮಹಾರಾಜರನ್ನು ಭೇಟಿ ಮಾಡಿದ್ದರೆಂದು ತಿಳಿದುಬಂದಿದೆ.

ದೆಹಲಿಯಲ್ಲಿ ರೆಡ್ಡಿಯವರ ಸಂಧಾನ

ಯಶಸ್ವಿಯಾಗಿ ಸಾಗುತ್ತಿದೆ

ಸ್ವಂ. ಸು. ಫೋ[ನ್] ಬೆಂಗಳೂರು ೫

ದೆಹಲಿಗೆ ತೆರಳಿರುವ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ದಿನ ಪಂಡಿತ ನೆಹರೂರವರನ್ನು ಕಂಡು ಮೈಸೂರಿನ ವಿದ್ಯಮಾನಗಳನ್ನು ವಿವರಿಸಿದರೆಂದೂ ಬಿಕ್ಕಟ್ಟಿನ ಪರಿಹಾರದ ಮಾತುಕತೆಗಳು ಇಲ್ಲಿಯವರೆಗೆ ಯಶಸ್ವಿಯಾಗಿ ಸಾಗುತ್ತಿರುವುದಾಗಿಯೂ ವಾರ್ತೆ ಬಂದಿರುತ್ತದೆ. ಶ್ರೀ ರೆಡ್ಡಿಯವರು ದೆಹಲಿಯಿಂದ ನಾಳೆಯೇ ಹಿಂದಿರುಗುವ ನಿರೀಕ್ಷಣೆಯಿದೆ.

ತುರ್ಕಿಗೆ ರಷ್ಯದ ಎಚ್ಚರಿಕೆ

ಅಟ್ಲಾಂಟಿಕ್ ರಕ್ಷಣಾ ಒಪ್ಪಂದಕ್ಕೆ ತುರ್ಕಿಯು ಸೇರಿರುವುದನ್ನು ರಷ್ಯವು ತೀವ್ರವಾಗಿ ಖಂಡಿಸಿ ಮೊನ್ನೆ ದಿನ ತುರ್ಕಿಯಲ್ಲಿರುವ ತನ್ನ ರಾಯಭಾರಿಯ ಮೂಲಕ ತುರ್ಕಿ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಟ್ಟಿರುತ್ತದೆ. ಆಕ್ರಮಣದ ಉದ್ದೇಶವನ್ನು ಹೊಂದಿರುವ ಅಟ್ಲಾಂಟಿಕ್ ರಕ್ಷಣಾ ಒಪ್ಪಂದದ ರಾಷ್ಟ್ರಗಳಿಗೆ ತುರ್ಕಿಯೊಳಗೆ ರಷ್ಯದ ಗಡಿಯ ಸಮೀಪದಲ್ಲಿ ಮಿಲಿಟರಿ ಕೇಂದ್ರವನ್ನು ನಿರ್ಮಿಸಿಕೊಳ್ಳಲು ಅವಕಾಶ ಕೊಟ್ಟಿರುವುದನ್ನೂ ಎಚ್ಚರಿಕೆ ಪತ್ರದಲ್ಲಿ ಖಂಡಿಸಲಾಗಿದೆ. ವಿಶ್ವ ಶಾಂತಿ ಮತ್ತು ರಕ್ಷಣೆಗಳು ಅಟ್ಲಾಂಟಿಕ್ ಒಪ್ಪಂದದಿಂದ ಸಾಧಿತವಾಗುವುದಿಲ್ಲವೆಂದು ರಷ್ಯ ಅಭಿಪ್ರಾಯಪಟ್ಟಿದೆ.

ಮಧ್ಯ ಮತ್ತು ಪಶ್ಚಿಮ ರೈಲ್ವೆ ಕೇಂದ್ರಗಳ ಸ್ಥಾಪನೆ

ಮಧ್ಯ ಮತ್ತು ಪಶ್ಚಿಮ ರೈಲ್ವೆ ಕೇಂದ್ರಗಳು ಬೊಂಬಾಯಲ್ಲಿ ನೆನ್ನೆ ಸ್ಥಾಪಿತವಾದುವು. ಮಧ್ಯ ರೈಲ್ವೆಯಲ್ಲಿ ಜಿ.ಐ.ಪಿ., ನೈಜಾಂ, ಸಿಂಧ್ಯ ಮತ್ತು ಧೋಲ್‌ಪುರ ರೈಲ್ವೆಗಳು ಐಕ್ಯಗೊಂಡು ಒಟ್ಟು ಮಾರ್ಗವು ೫,೬೦೦ ಮೈಲಿ ಉದ್ದವಿರುವುದು. ಪಶ್ಚಿಮ ರೈಲ್ವೆ ವಿಭಾಗದಲ್ಲಿ ಬಿ. ಬಿ. ಮತ್ತು ಸಿ.ಐ., ಸೌರಾಷ್ಟ್ರ, ರಾಜಸ್ಥಾನ ಮತ್ತು ಜಯಪುರ ರೈಲ್ವೆಗಳು ಮಿಳಿತಗೊಂಡು ಒಟ್ಟು ಮಾರ್ಗವು ೫,೯೭೩ ಮೈಲಿ ಉದ್ದವಿರುವುವು.

ಕನ್ನಡವು ಸರ್ಕಾರಿ ಭಾಷೆಯಾಗಲು ಸೂಚನೆ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು. ಫೋ[ನ್] ಬೆಂಗಳೂರು ೫

ಕನ್ನಡವನ್ನು ಮಾಧ್ಯಮ ಭಾಷೆಯನ್ನಾಗಿ ಉಪಯೋಗಿಸಲು ಹೈಸ್ಕೂಲುಗಳಿಗೆ ಸೂಕ್ತ ಸಲಹೆ ನೀಡಲಾಗಿದೆ. ಹೈಸ್ಕೂಲುಗಳಲ್ಲಿ ಅದು ಯಶಸ್ವಿಯಾದ ಮೇಲೆ ವಿಶ್ವ ವಿದ್ಯಾಲಯದಲ್ಲೂ, ಅನಂತರ ಕ್ರಮೇಣ ಸರ್ಕಾರದ ವ್ಯವಹಾರಗಳಲ್ಲೂ ಕನ್ನಡ ಭಾಷೆಯನ್ನೇ ಉಪಯೋಗಿಸಲು ಏರ್ಪಾಡು ಮಾಡಲಾಗುವುದು. ಸದ್ಯದಲ್ಲಿ ಅಧ್ಯಾಪಕರುಗಳು ಮತ್ತು ಪಠ್ಯಪುಸ್ತಕಗಳ ಅಭಾವದಿಂದ ತೊಂದರೆಯಾಗಿದೆ ಎಂಬುದಾಗಿ ಶ್ರೀ ಚನ್ನಿಗರಾಮಯ್ಯನವರು ಪ್ರಶ್ನೆಯೊಂದಕ್ಕೆ ಈ ದಿನ ಶಾಸನ ಸಭೆಯಲ್ಲಿ ಉತ್ತರವಿತ್ತರು.

ನಾನ್ ಗೆಜೆಟೆಡ್ ನೌಕರರ ಕಷ್ಟಗಳ ವಿಚಾರದಲ್ಲಿ ಸರ್ಕಾರದವರಿಗೆ ಸಂಪೂರ್ಣ ಸಹಾನುಭೂತಿಯಿರುವುದೆಂದೂ, ಅವರ ತುಟ್ಟಿ ಭತ್ಯವನ್ನು ಹೆಚ್ಚಿಸುವ ವಿಷಯವನ್ನು ತೀವ್ರವಾಗಿ ಪರಿಶೀಲಿಸುತ್ತಿರುವುದಾಗಿಯೂ ಶ್ರೀ ಹೆಚ್. ಸಿ. ದಾಸಪ್ಪನವರು ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ನಿರಾಶ್ರಿತರ ಪುನರ್ವಸತಿಗಾಗಿ ತಗಲುವ ವೆಚ್ಚಗಳನ್ನು ಭಾರತ ಸರ್ಕಾರದವರೂ ವಹಿಸಲು ಒಪ್ಪಿರುವುದಾಗಿ ಶ್ರೀ ಭಾಷ್ಯಂರವರು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

೨೨ ಮಕ್ಕಳ ತಾಯಿಗೆ ಪುನರ್ವಿವಾಹ

೨೨ ಮಕ್ಕಳನ್ನು ಪಡೆದ ನ್ಯೂಯಾರ್ಕಿನ ಒಂದು ಭೋಜನ ಗೃಹದ ಮಾಲೀಕಳಾದ ಎಲ್ಸಿ ಮೇ ಮಾರ್ಷಲ್ ಎಂಬ ೪೭ ವರ್ಷದ ಮಹಿಳೆಯು ಅದೇ ಗೃಹದಲ್ಲಿ ತಂಗಿದ್ದ ೩೧ ವರ್ಷ ವಯಸ್ಸಿನ ಕೆರ್ರಿ ಎಂಬುವನೊಬ್ಬನನ್ನು ಮೊನ್ನೆ ದಿನ ಪುನರ್ವಿವಾಹವಾದ ಸುದ್ದಿ ಬಂದಿದೆ. ಆಕೆಗೆ ಈಗಾಗಲೇ ಅನೇಕ ಮಂದಿ ಮೊಮ್ಮಕ್ಕಳೂ ಇರುವುದಾಗಿ ಗೊತ್ತಾಗಿದೆ.

ಬಸ್ಸಿಗೆ ಬೆಂಕಿ ಬಿದ್ದು ೩೦ ಜನರ ಮರಣ

ಜಪಾನಿನ ಪೂರ್ವ ತೀರದ ಟೊಕೋರು ಎಂಬಲ್ಲಿ ಪ್ರಯಾಣಿಕರ ಬಸ್ ಒಂದಕ್ಕೆ ಆಕಸ್ಮಾತ್ ಬೆಂಕಿ ತಗುಲಿ, ಅದರಲ್ಲಿದ್ದವರ ಪೈಕಿ ೩೦ ಜನ ಪ್ರಯಾಣಿಕರು ಭಸ್ಮವಾದರೆಂದೂ ೧೧ ಜನರಿಗೆ ತೀವ್ರ ಗಾಯಗಳಾಗಿವೆಯೆಂದೂ ಗೊತ್ತಾಗಿದೆ.

ವಿದ್ಯಾ ವರ್ಧಕ ಹೈಸ್ಕೂಲು

ಕೌಲ್‌ಬಜಾರ್ ಶಾಲೆಯಲ್ಲಿ ನಾಳೆ ಬೆಳಿಗ್ಗೆ ೮-೩೦ಕ್ಕೆ ಜನತಾ ಶಿಕ್ಷಣ ಸಪ್ತಾಹ ಆರಂಭವನ್ನು ಪೌರಸಭಾಧ್ಯಕ್ಷರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿದೆ. ಇದರ ಅಂಗವಾಗಿ ಬೆಳಿಗ್ಗೆ ಧ್ವಜಾರೋಹಣ ಮತ್ತು ಅಧ್ಯಕ್ಷರ ಪ್ರಾರಂಭ ಭಾಷಣ, ೯ರಿಂದ ೯-೩೦ ನಿರ್ಮಲೀಕರಣ ಮತ್ತು ಮೆರವಣಿಗೆ, ಸಾಯಂಕಾಲ ೬ಕ್ಕೆ ಆರೋಗ್ಯ, ಜನತಾ ಶಿಕ್ಷಣ ಮತ್ತು ಪೌರ ಶಿಕ್ಷಣ ಎಂಬ ವಿಚಾರವಾಗಿ ಭಾಷಣಗಳು ಮತ್ತು ಚಲನ ಚಿತ್ರ ಪ್ರದರ್ಶನ ಮೊದಲಾದ ಕಾರ್ಯಕ್ರಮಗಳನ್ನು ನಡೆಸಲು ಏರ್ಪಡಿಸಿದೆ.

ಈಜಿಪ್ಟಿನಲ್ಲಿ ಅಪಾಯಕರ ಪರಿಸ್ಥಿತಿ

ಈಜಿಪ್ಟಿನಲ್ಲಿ ಅಪಾಯಕರ ಪರಿಸ್ಥಿತಿಯುಂಟಾಗಿರುವುದೆಂದು ಅಲ್ಲಿನ ಒಳಾಡಳಿತ ಮಂತ್ರಿ ಸಿರಾಗ್ ಎಲ್ ದ್ದೀನ್ ಪಾಷಾರವರು ತಿಳಿಸುತ್ತಾರೆ ಬ್ರಿಟಿಷ್ ಸೈನ್ಯವನ್ನು ಈಜಿಪ್ಟಿನಿಂದ ಹಿಂದಕ್ಕೆ ಕರೆಸುವುದೇ ಇದಕ್ಕೆ ಸೂಕ್ತ ಪರಿಹಾರ ಮಾರ್ಗವೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ ಬ್ರಿಟನ್ನು ಸೂಯೆಜ್ ಮೂಲಕ ಪೆಟ್ರೋಲ್ ರವಾನೆಗೆ ನಿರ್ಬಂಧ ಹಾಕಿರುವುದರಿಂದ ಈಜಿಪ್ಟಿನಲ್ಲಿ ಅವರ ಅಭಾವವು ವಿಪರೀತವಾಗಿದೆಯೆಂದೂ ಕೈರೋವಿನಲ್ಲಿ ೧ ವಾರಕ್ಕೆ ಆಗುವಷ್ಟು ಮಾತ್ರ ಎಣ್ಣೆ ಇರುವುದೆಂದೂ ಅವರು ಹೇಳಿದ್ದಾರೆ

ಪಶ್ಚಿಮ ಜರ್ಮನಿಯಲ್ಲಿ ಒಂದೇ ದಿನ-೪ ರೈಲು ಅಪಘಾತ

ಪಶ್ಚಿಮ ಜರ್ಮನಿಯಲ್ಲಿ ಮೊನ್ನೆ ದಿನ ನಾಲ್ಕು ಕಡೆ ರೈಲುಗಳ ಅಪಘಾತವಾಗಿ ಇಬ್ಬರು ಸತ್ತು ೭೫ ಮಂದಿಗೆ ಗಾಯಗಳಾಗಿವೆ. ಗಾಡಿಗಳು ಒಂದಕ್ಕೊಂದು ತಗುಲಿ ಈ ದುರಂತವು ನಡೆದಿರುವುದು

ಭಕ್ತ ಬಂಧು

ರಾಜಧಾನಿಯ ವಾಣೀವಿಲಾಸ ಮೊಹಲ್ಲೆಯ ಶ್ರೀ ಹೆಬ್ಬೂರು ವೆಂಕಟನಾರಾಯಣದಾಸರು ಹೊರಡಿಸಿರುವ "ಭಕ್ತ ಬಂಧು" ಎಂಬ ಕನ್ನಡ ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯ ಪ್ರತಿಯೊಂದು ನಮ್ಮ ಕೈ ಸೇರಿದೆ ಭಕ್ತಿ ಎಂದರೆ ಏನು ಎಂಬಿವೇ ಮುಂತಾದ ವಿಷಯಗಳನ್ನು ಪತ್ರಿಕೆಯಲ್ಲಿ ವಿವರಿಸಲಾಗಿದೆ ಬೆಲೆ ೦ ೪-೦

ದೀಪಾವಳಿ ಶುಭಾಶಯಗಳು

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಬ್ಯಾಂಕರ್ ಮತ್ತು ಜ್ಯೂಯಲರಿ ವ್ಯಾಪಾರಿಗಳಾದ ಪಾಮೂಕೇಶ್ ಚಂದ್ ಪುಖ್‌ರಾಜ್‌ರವರು ನಮಗೆ ಕಳುಹಿಸಿರುವ ದೀಪಾವಳಿ ಶುಭಾಶಯ ಮತ್ತು ಫಲ ಪುಷ್ಪಾದಿಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಜೈನ ವಾಣಿ

ರಾಜಧಾನಿಯ ಜೈನ ಸಾಹಿತ್ಯ ಪ್ರಚಾರ ಸಂಘದ ಮುಖ ಪತ್ರಿಕೆಯಾಗಿ ಜೈನ ವಾಣಿ ಎಂಬ ಕನ್ನಡ ಮಾಸ ಪತ್ರಿಕೆಯು ಹೊರಟಿರುತ್ತದೆ ಈ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಗಣ್ಯ ಜೈನ ಪಂಡಿತರು ಇರುತ್ತಾರೆ. ಜೈನ ಸಮಾಜದವರಿಗೆ ಉಪಯುಕ್ತವಾದ ಹಲವಾರು ಲೇಖನಗಳಿವೆ

ಕರ್ತವ್ಯ ನಿರತನಾದ ಪೋಲೀಸ್ ಅಧಿಕಾರಿ ವಜಾ

ಕೆಲವು ದಿವಸಗಳ ಕೆಳಗೆ ರಾಜಕೋಟೆಯ ಬಳಿ ಒಂದು ಹಳ್ಳಿಗೆ ಹಲವು ಮಂದಿ ಡಕಾಯಿತರು ನುಗ್ಗಿ ೩೦ ಸಾವಿರ ರೂ ಅನ್ನು ಕೊಳ್ಳೆ ಹೊಡೆಯುತ್ತಿರುವಲ್ಲಿ, ಈ ಸಂಗತಿ ತಿಳಿದ ಅಲ್ಲಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ತಮ್ಮಲ್ಲಿ ಬಂದೂಕ ಮತ್ತು ಗುಂಡು ಮೊದಲಾದ ರಕ್ಷಣಾ ಸಲಕರಣೆಗಳಿದ್ದರೂ, ಸ್ಥಳಕ್ಕೆ ಹೋಗಿ ಡಕಾಯಿತರನ್ನು ಎದುರಿಸದಿದ್ದುದಕ್ಕಾಗಿ ಅವರನ್ನು ಕೆಲಸದಿಂದ ವಜಾ ಮಾಡಲಾಗಿದೆ

ಟ್ರೂಮನ್ನರನ್ನು ಹೆದರಿಸಿದವನಿಗೆ ಜೈಲು

ಅಮೆರಿಕದ ಅಧ್ಯಕ್ಷ ಟ್ರೂಮನ್ನರನ್ನು ಕೊಲೆ ಮಾಡುವುದಾಗಿ ಹೆದರಿಸಿದ ಅಲ್ಲಿನ ೫೨ ವರ್ಷದ ಪೋರ್ಟನಾಕ್ಸ್ ಎಂಬ ಆಸಾಮಿಯನ್ನು ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಲಾಗಿದೆ

ಚೀಣಾ ನಿಯೋಗದವರ ಪ್ರವಾಸ

ಸೌಹಾರ್ದಾರ್ಥವಾಗಿ ಭಾರತಕ್ಕೆ ಆಗಮಿಸಿರುವ ಚೀಣದ ಸಾಂಸ್ಕೃತಿಕ ನಿಯೋಗದವರು ದೇಶಾದ್ಯಂತವೂ ಸಂಚರಿಸುವ ಬಗ್ಗೆ ಕೇಂದ್ರ ಸರ್ಕಾರದ ವಿದೇಶಾಂಗ ಇಲಾಖೆಯವರು ವ್ಯವಸ್ಥೆ ಮಾಡುತ್ತಿರುವುದರಿಂದ ಅವರು ನಿಯೋಗದವರ ಪ್ರವಾಸ ಪಟ್ಟಿಯಲ್ಲಿ ಮೈಸೂರು ನಗರವನ್ನೂ ಸೇರಿಸುವ ಏರ್ಪಾಡು ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಮೈಸೂರು ಸಂಸ್ಥಾನದ ಇಂಡೋ-ಚೀಣಾ ಸ್ನೇಹ ಸಂಘದವರು ಪ್ರಾರ್ಥಿಸಿರುತ್ತಾರೆ

ವಾಣೀವಿಲಾಸ ವಾಟರ್ ವರ್ಕ್ಸ್ ಕೆಲಸಗಾರರ ಸಭೆ

ಮೈಸೂರು ವಾಣೀವಿಲಾಸ ವಾಟರ್ ವರ್ಕ್ಸಿನ ಕೆಲಸಗಾರರ ಸಭೆಯು ಇದೇ ೮ನೇ ತಾರೀಖು ಸಂಜೆ ೪ ಘಂಟೆಗೆ ವಾಟರ್ ವರ್ಕ್ಸ್ ಕಛೇರಿಯ ಆವರಣದಲ್ಲಿ ಜರುಗುವುದು ಶ್ರೀ ಬಿ ಶ್ರೀಕಂಠಪ್ಪನವರು ಅಧ್ಯಕ್ಷತೆ ವಹಿಸುವರು

ಚಂದಾದಾರರಲ್ಲಿ ವಿನಂತಿ

ಮೈಸೂರು ಮತ್ತು ಇತರ ಕಡೆಗಳಲ್ಲಿರುವ ನಮ್ಮ ಚಂದಾದಾರರು ಮಾಹೇಯಾನಾ ಚಂದಾ ಮೊಬಲಗು ಎಂಟು ಆಣೆಯನ್ನು ನಮ್ಮ ಏಜೆಂಟರಿಗೆ ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ವಿನಂತಿ

—ವ್ಯವಸ್ಥಾಪಕ, ಸಾಧ್ವಿ.

ಉತ್ತರ ಪ್ರದೇಶದಿಂದ ಕೃಪಲಾನಿಯವರ ಸ್ಪರ್ಧೆ

ಪಾರ್ಲಿಮೆಂಟಿನ ಕೆಳ ಸಭೆಗೆ ಉತ್ತರ ಪ್ರದೇಶದ ಫೈಜಾಬಾದ್ ಕ್ಷೇತ್ರದಿಂದ ಕೃಷಕ್ ಪ್ರಜಾ ಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರು ಸ್ಪರ್ಧಿಸುವರು

ನಂಜರಾಜ ಬಹದ್ದೂರರಿಗೆ ಪತ್ನೀ ವಿಯೋಗ

ಮೈಸೂರು ಸಂಸ್ಥಾನದ ಸೈನ್ಯಗಳ ಸ್ಟೇಟ್ ಕಮ್ಯಾಂಡೆಂಟರಾಗಿದ್ದು ಮೊನ್ನೆ ತಾನೆ ನಿವೃತ್ತರಾಗಿರುವ ಕರ್ನಲ್ ಡಿ ಸಿ ನಂಜರಾಜ ಬಹದ್ದೂರ್‌ರವರ ಧರ್ಮ ಪತ್ನಿ ಶ್ರೀಮತಿ ಸುಂದರ ನಂಜಮ್ಮಣ್ಣಿಯವರು ಮೊನ್ನೆ ಬೆಳಗಿನ ಜಾವ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ ಮೊನ್ನೆ ಬೆಳಿಗ್ಗೆ ಸಕಲ ರಾಜ ಮರ್ಯಾದೆಗಳೊಡನೆ ಅವರ ಕಳೇಬರದ ಸಂಸ್ಕಾರವು ನಡೆಯಿತು. ಅವರಿಗೆ ಆರು ಜನ ಹೆಣ್ಣು ಮಕ್ಕಳೂ, ಮೂವರು ಗಂಡು ಮಕ್ಕಳೂ ಇರುವರು. ಅವರು ಕೇವಲ ದೈವ ಭಕ್ತರೂ, ಧರ್ಮ ಪರಾಯಣರೂ ಆಗಿದ್ದರು. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಬೇಡಿ ಬಂಧುವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸೂಚಿಸುತ್ತೇವೆ

ಗುಬ್ಬಿ ಕಂಪೆನಿ (ರಿ)

ಮೈಸೂರು

ತಾ॥ 5-11-51ರಲ್ಲಿ ಶಾರ್ವೆಂಟ್ ಪ್ರಸ್ಕೂಲಿಗೆ ಕೊಟ್ಟಿರುವ ಬೆನಿಫಿಟ್ ಧರ್ಮದಾಸ್ ಎಂಬ ನಾಟಕವನ್ನು ಕಾರಣಾಂತರಗಳಿಂದ ತಾ॥ 12-11-51ನೇ ಸೋಮವಾರಕ್ಕೆ ಬದಲಾಯಿಸಿರುತ್ತೆ

ಈ ರಾತ್ರಿ 10 ಘಂಟೆಗೆ

ರತ್ನಾವಳಿ ಥಿಯೇಟರಿನಲ್ಲಿ

ಬೇಡರ ಕಣ್ಣಪ್ಪ

ಎಂಬ ನಾಟಕವನ್ನು ಅಭಿನಯಿಸಲಾಗುತ್ತೆ

Edited, Printed and Published by A. R. Nagarajan, at Sadhvi Press D Subbiah Road, Mysore

ಕಾಂಗ್ರೆಸ್ಸಿಗೆ ರಾಜೀನಾಮೆ

ಚಾಮರಾಜನಗರ

ಈ ತಾಲ್ಲೂಕಿನ ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರೂ, ಮೈಸೂರು ಪ್ರದೇಶಿಕ ಕಾಂಗ್ರೆಸ್ ಮತ್ತು ... ಕಾಂಗ್ರೆಸ್ ಸಮಿತಿಗಳ ಸದಸ್ಯರೂ ಶ್ರೀ ಮಲೆಯೂರು ಸಿ. ಬಸಪ್ಪ... ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಇತ್ತಿರುವರೆಂದು ... ಬಂದಿದೆ ಅವರು ಬರುವ ಚುನಾವಣೆಯಲ್ಲಿ ಸ್ವತಂತ್ರ ಉಮೇದುವಾರರಾಗಿ ಸ್ಪರ್ಧಿಸುವರು

ಸಹಾಯಾರ್ಥ ಪ್ರದರ್ಶನ

ಶಾಶ್ವತದ ಶ್ರೀವೈಷ್ಣವ ಯುವಕ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ... ವಿದ್ಯಾರ್ಥಿಗಳ ಹಾಸ್ಟೆಲ್ ನಿಧಿಗಾಗಿ ... ಕಂಪೆನಿಯ ವ್ಯವಸ್ಥಾಪಕರಾದ ... ರತ್ನ ಜಿ ಹೆಚ್ ವೀರಣ್ಣನವರು ... ರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ ನಾಳೆ ರಾತ್ರಿ ೧೦ ಘಂಟೆಗೆ ಮೈಸೂರು ಜಿಲ್ಲಾಧಿಕಾರಿಗಳಾದ ಜನಾಬ್ ... ಹಮೀದ್ ಅಹಮದ್‌ರವರ ಅಧ್ಯಕ್ಷತೆಯಲ್ಲಿ "ರಾಜಾ ಗೋಪಿಚಂದ್" ಎಂಬ ನಾಟಕವನ್ನು ಪ್ರದರ್ಶಿಸುವರು ... ನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಕಾಂಗ್ರೆಸ್ಸಿಗೆ ಹೆಚ್ ಕೆ ಕುಪ್ಪುಸ್ವಾಮಿಯವರ ರಾಜೀನಾಮೆ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳೂ ... ಪತ್ರಿಕೆಯ ಸಂಪಾದಕರೂ ... ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಶ್ರೀ ಎಚ್ ಕೆ ಕುಪ್ಪುಸ್ವಾಮಿಯವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡಲು ನಿರ್ಧರಿಸಿರ ... ದು ಬಂದಿದೆ.

ರಾಜಕಮಲ್, ಮೈ...

2-11-51ರಿಂದ ಅಮೋಘ 3ನೇ ...

ಪಿ ಚ್ಚೈ ಕಾ

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ - ಹೀಗ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ

ತಡವಿಲ್ಲದ ವಿಮಾ ಮೊಬಲಗಿನ ಪಾವತಿ

ಸುಲಭವಾದ ಸಾಲದ ಸೌಕರ್ಯ

ಇಷ್ಟೇ ಭಾರತದಲ್ಲಿ ಅತ್ಯಧಿಕ ಬೋನಸ್ ಸಂದಾಯವು

ಇವೆಲ್ಲಾ ದೊರೆಯುವುದು

ಮೈಸೂರು ಸರ್ಕಾರದ ವಿಮಾ ಇಲಾಖೆ

ಪ್ರಶ್ನೆಗಳ ಶಾಖೆಯಲ್ಲಿ

ವಿಮೆ ಮಾಡಲು ಇಂದೇ ನಿರ್ಧರಿಸಿರಿ

ಸಾಕಿ ಎಜೆಂಟ



ಮಲೇರಿಯಾ ಗೆಡ್ಡೆಗಳಿಗೆ

40 ವರ್ಷಗಳಿಂದ ಪ್ರಖ್ಯಾತವಾಗಿರುವ

ಮೈಸೂರು ಎಸ್ ಎನ್ ಪಂಡಿತ್ ಅಂಡ್ ಸನ್ಸ್

ರವರ ಪಂಚಾಮೃತ, ಸ್ಪೆಷಲ್ ವಾತಾದಿ ಲೇಹ್ಯ

ಸುಂಗಧರಾಜ ತೈಲ-ಇವುಗಳನ್ನು ಉಪಯೋಗಿಸಿರಿ.

ಗೌ॥ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ

ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಬಿ ಎ, ಇಂಡಿಯನ್ ... ಎದುರು, ಮೈ...

ಫೋನ್ ನಂ 792 • ಸಂಜೆ ಪತ್ರಿಕೆ • ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೬-೧೧-೫೬ [ಸಂಚಿಕೆ ೮೬

ಈಜಿಪ್ಟಿನ ಸೈನ್ಯಗಳು - ಆಜ್ಞೆಗಾಗಿ ಕಾದಿವೆ -

ರಾಷ್ಟ್ರಾಧ್ಯಕ್ಷರ ಆಜ್ಞೆಯು ಉಚಿತ ಮತ್ತು ನ್ಯಾಯಬದ್ಧ

ಮೈಸೂರು ವಕೀಲರ ಸಂಘದ ನಿರ್ಣಯ

ಮೈಸೂರು ೬

ರಾಜಧಾನಿಯ ವಕೀಲರ ಸಂಘದ ಸದಸ್ಯರ ವಿಶೇಷ ಸಭೆಯು ನೆನ್ನೆ ನಡೆದು ರಾಷ್ಟ್ರಾಧ್ಯಕ್ಷರು ರಾಜ್ಯಾಂಗದ ...ನೇ ವಿಧಿ ಪ್ರಕಾರ ಇತ್ತಿರುವ ಆಜ್ಞೆ ... ಅದರ ಮೇಲೆ ಮೈಸೂರು ಶಾಸನ ಸಭೆಯ ನಿರ್ಣಯಗಳ ವಿಷಯವನ್ನು ಪರಿಶೀಲಿಸಿ, ಈ ರೀತಿಯ ಠರಾವನ್ನು ಸರ್ವಾನುಮತದಿಂದ ಮಾಡಿರುತ್ತಾರೆ

ಸಂಬಂಧಪಟ್ಟ ಮೊಕದ್ದಮೆಯು ... ಸಂಸ್ಥಾನದ ಹೊರಗಡೆಯ ನ್ಯಾಯಾಲಯಕ್ಕೆ ವರ್ಗಾಯಿಸಲು ಅಥವಾ ...ನೆಯ ನ್ಯಾಯಾಧೀಶರಿಂದ ವಿಚಾರಣೆ ನಡೆಸಲು ಭಾರತ ಸರ್ಕಾರದವರು ಇತ್ತಿದ್ದ ಸಲಹೆ, ಆಪಾದಿತರಿಗೆ ನ್ಯಾಯಸಮ್ಮತವಾದ ವಿಚಾರಣೆಯ ಭರವಸೆ ... ಏಕ ಮಾತ್ರ ಉದ್ದೇಶ್ಯಕ್ಕಾಗಿಯೇ ... ಪಟ್ಟಿರುವ ನಿರೂಪ ಮತ್ತು ಭಾರತ ಯೂನಿಯನ್ ಮತ್ತು ಮೈಸೂರು ...ನ ಇವುಗಳ ರಾಜ್ಯಾಂಗ ಸಂಬಂ... ಕಾರಣಗಳಿಗಾಗಿ ರಾಷ್ಟ್ರಾಧ್ಯಕ್ಷರ ...ಂಡ ಆಜ್ಞೆಯು ರಾಜ್ಯಾಂಗದ ...ರ ಸೂಕ್ತವಾಗಿರುವುದಲ್ಲದೆ, ನ್ಯಾಯಸಮ್ಮತವಾಗಿಯೂ ಮತ್ತು ಸಕಾರಣವಾಗಿಯೂ ಇರುವುದೆಂದು ವಕೀಲರ ಸಂಘದ ಸದಸ್ಯರು ಅಭಿಪ್ರಾಯಪಡುತ್ತಾರೆ.

...ದೆ, ಭಾರತದ ರಿಪಬ್ಲಿಕ್ಕಿನಲ್ಲಿ ಸೇರಿರುವ ಮೈಸೂರು ಸಂಸ್ಥಾನಕ್ಕೆ ರಾಷ್ಟ್ರಾಧ್ಯಕ್ಷರ ಆಜ್ಞೆಯಿಂದ ಅಗೌರವವಾಗುವುದೆಂಬ ಅರ್ಥವನ್ನು ಕಲ್ಪಿಸಬಾರದು ಈ ... ಮೈಸೂರಿನ ನ್ಯಾಯ ವಿಧಾಯಕ ಸಭೆಯು ಅಂಗೀಕರಿಸಿರುವ ...ಯವು ಉಚಿತವಲ್ಲ ಮತ್ತು ನ್ಯಾಯಸಮ್ಮತವಾದುದಲ್ಲ ಮೈಸೂರು ಶಾಸನ ಸಭೆಯ ಸದಸ್ಯರು ಪ್ರಮಾಣ ವಚನ ... ಸ್ವೀಕರಿಸಿರುವ ಭಾರತ ರಾಜ್ಯಾಂಗಕ್ಕೆ ನಿರ್ಣಯವು ಅಪಮಾನಕರವೂ ಇರುತ್ತದೆ"

...ಲ್ಲಂಡ ನಿರ್ಣಯದ ಪ್ರತಿಗಳನ್ನು ರಾಷ್ಟ್ರಾಧ್ಯಕ್ಷರ ಕಾರ್ಯದರ್ಶಿ, ... ಸರ್ಕಾರದ ಸಂಸ್ಥಾನ ಇಲಾಖೆ ಕಾರ್ಯದರ್ಶಿ, ಮೈಸೂರು ಸರ್ಕಾರದ ...ಪ್ಯ ಕಾರ್ಯದರ್ಶಿ ಮತ್ತು ಮೈಸೂರು ಶಾಸನ ಸಭೆಯ ಕಾರ್ಯದರ್ಶಿ ... ಗೆ ಕಳುಹಿಸಲಾಗಿದೆ

ಬರ್ಮದಲ್ಲಿ ಹುಲಿ ವೇಷದ ಡಕಾಯಿತರು

...ಗೂನಿಗೆ ವಾಯುವ್ಯ ಪ್ರದೇಶದ ...ತ್ಯಾದಿನಲ್ಲಿ ಕೆಲವು ದಿನಗಳಿಂದ ಹುಲಿಗ ... ಚರ್ಮವನ್ನು ಧರಿಸಿದ ... ಯಿತರ ಗುಂಪೊಂದು ... ಕೊಂಡು ಜನರ ಹುಲಿಗೆ ನಡೆಸುತ್ತಿ... ಮ ವರದಿಯಾಗಿದೆ. ನಿರ್ಜನವಾದ ... ಪ್ರದೇಶದಲ್ಲಿ ಡಕಾಯಿತರು ಜನರ ಮೇಲೆ ಬಿದ್ದು ಅವರ ಶಿರಚ್ಛೇದನ ಮಾಡುವುದೇ ಮೊದಲಾದ ದುಷ್ಕೃತ್ಯದಲ್ಲಿ ತೊಡಗಿರುವರೆಂದೂ, ಇದರಿಂದ ... ಸುತ್ತಮುತ್ತಿನ ಗ್ರಾಮಸ್ಥರು ಗಾಬರಿಗೊಂಡಿರುವರೆಂದೂ ಗೊತ್ತಾಗಿದೆ

ಪ್ರಜಾ ಪಕ್ಷದಲ್ಲಿ ಪ್ರಜಾ ಸಂಘದ ಐಕ್ಯ

ಮೈಸೂರು ೬

ರಾಜಧಾನಿಯ ಪ್ರಜಾ ಸಂಘದ ಸಭೆಯು ನೆನ್ನೆ ಸಂಜೆ ಶ್ರೀ ಎ ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಮೈಸೂರಿನ ಕೃಷಕ್ ಪ್ರಜಾ ಪಕ್ಷದಲ್ಲಿ ತಮ್ಮ ಸಂಘವು ಐಕ್ಯವಾಗಬೇಕೆಂದು ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿತು ನಂತರ ಸದಸ್ಯರುಗಳು ಶಿವರಾಂಪೇಟೆಯಲ್ಲಿರುವ ಪ್ರಜಾ ಪಕ್ಷದ ಕಛೇರಿಗೆ ತೆರಳಿದರು ಅಲ್ಲಿ ಎರಡು ಪಕ್ಷಗಳ ಸದಸ್ಯರ ಸಭೆಯು ಶ್ರೀ ಜಿ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆದು ೩೦ ಜನರ ಸಮಿತಿಯೊಂದನ್ನು ರಚಿಸಲಾಯಿತು ಶ್ರೀ ಎ ವೆಂಕಟೇಶಯ್ಯ ಅಧ್ಯಕ್ಷರು, ಶ್ರೀ ಜಿ ಸುಬ್ಬರಾವ್ ಉಪಾಧ್ಯಕ್ಷರು, ಶ್ರೀ ಜಿ ನರಸಿಂಹಯ್ಯ ಖಜಾಂಚಿ, ಶ್ರೀಗಳು ಎಂ ಎನ್ ತಿಮ್ಮಯ್ಯ ಮತ್ತು ಎಂ ಪಿ ನರಸಿಂಹಯ್ಯ ಕಾರ್ಯದರ್ಶಿಗಳಾಗಿ ಚುನಾಯಿತರಾದರು ಶ್ರೀಗಳಾದ ಜೆ ಸ್ವಾಮಿದಾಸ್, ಎಸ್ ಕೆ ಅನಂತ ಪಟ್ಟಿ, ಬಿ ಕೆ ರಾಮಕೃಷ್ಣಯ್ಯ, ಇಂದ್ರಸಿಂಗ್, ಟಿ ಪಿ ಕೋದಂಡರಾಮ ಶೆಟ್ಟಿ, ಎನ್ ಕೃಷ್ಣಯ್ಯಂಗಾರ್, ಟಿ ನಾರಣಪ್ಪ, ಹೆಚ್ ಎನ್ ಮುದ್ದಯ್ಯ, ಬಿ ಸುಬ್ಬಣ್ಣ, ಎಂ ಸಿ ಮಹದೇವಸ್ವಾಮಿ, ಎನ್ ಎಸ್ ಅನಂತರಾವ್, ಬಿ ಜಿ ದಾಸ್, ಜಿ ಎಸ್ ರಾಮಕೃಷ್ಣಯ್ಯ, ಟಿ ಎ ಎಸ್ ರಾಜನ್, ಮತ್ತು ಜ|| ಎ ಮಹಮದ್ ಸೇಟ್ ಇವರುಗಳು ಸದಸ್ಯರಾಗಿ ಆರಿಸಲ್ಪಟ್ಟರು.

ಪಾರ್ಲಿಮೆಂಟ್ ಮತ್ತು ಮೈಸೂರಿನ ಶಾಸನ ಸಭೆಗೆ ಉಮೇದುವಾರಿಕೆ ಅರ್ಜಿ ಕಳುಹಲು ನಾಳಿದ್ದು ೪ ಗಂಟೆಯೊಳಗೆ ಪ್ರಜಾ ಪಕ್ಷದ ಕಾರ್ಯದರ್ಶಿಯವರಿಗೆ ಅರ್ಜಿ ಸಲ್ಲಿಸಬೇಕೆಂದು ಗೊತ್ತುಮಾಡಲಾಯಿತು.

ಉಪನ್ಯಾಸ

ರಾಜಧಾನಿಯ ಕೌಟಿಲ್ಯ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ರಾಷ್ಟ್ರಾಧ್ಯಕ್ಷರ ನಿರೂಪ ಮತ್ತು ಮೈಸೂರು ಶಾಸನ ಸಭಾ ನಿರ್ಣಯ ಎಂಬ ವಿಷಯವಾಗಿ ಶ್ರೀ ಟಿ ಎಸ್. ರಾಜಗೋಪಾಲ ಅಯ್ಯಂಗಾರ್ಯರು ಭಾಷಣ ಮಾಡುವರು

ಈಜಿಪ್ಟ್ ವಿಮೋಚನಾ ಸೈನ್ಯ ಆಜ್ಞೆಗಾಗಿ ಕಾದಿದೆ

ವಿಮೋಚನಾ ಚಳುವಳಿಯನ್ನು ಪ್ರಾರಂಭಿಸಲು ಸರ್ಕಾರಿ ಆಜ್ಞೆಗೆ ಈಜಿಪ್ಟಿನ "ವಿಮೋಚನಾ ದಳಗಳು" ಕಾದು ನಿಂತಿವೆಯೆಂದು ಅವುಗಳ ಸೇನಾನಿ ಫೀ|| ಮಾ|| ಅಬ್ದೆಲ್ ಹಕೀಂ ಅಮೀರ್ ...ರು ಹೇಳಿರುತ್ತಾರೆ ತಮ್ಮಲ್ಲಿ ಬೇಕಾದಷ್ಟು ಶಸ್ತ್ರಾಸ್ತ್ರಗಳಿರುವುವೆಂದು ಅವರು ತಿಳಿಸಿರುತ್ತಾರೆ

ಸೂಯೆಜ್ ಬಗ್ಗೆ ಬ್ರಿಟನ್ನಿಗೆ ಅಮೆರಿಕದ ಬೆಂಬಲ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಬ್ರಿಟಿಷರು ಇರುವುದಕ್ಕೂ ಮತ್ತು ಪಾಶ್ಚಾತ್ಯ ಜನತೆಯ ಬಹಿರಂಗ ಒಪ್ಪಿಗೆಯು ... ಪ್ರದೇಶವನ್ನು ಈಜಿಪ್ಟಿಗೆ ಒಪ್ಪಿಸದಿರುವುದಕ್ಕೂ ಬದ್ಧವಾಗಿರುವ ಬ್ರಿಟನ್ನಿನ ನೀತಿಯನ್ನು ಅಮೆರಿಕವು ಸಂಪೂರ್ಣವಾಗಿ ಒಪ್ಪಿ ಅದಕ್ಕೆ ಬೆಂಬಲವೀಯುವುದೆಂದು ಅಮೆರಿಕದ ವಿದೇಶಾಂಗ ಮಂತ್ರಿ ಏಚಿಸನ್ನರು ಬ್ರಿಟಿಷ್ ವಿದೇಶಾಂಗ ಮಂತ್ರಿ ಈಡನ್ನರಿಗೆ ಭರವಸೆಯಿತ್ತಿರುವರು

ವಿದ್ಯಾರ್ಥಿಗೆ ಜುಲ್ಮಾನೆ

ಕಳೆದ ಶುಕ್ರವಾರ ಟೌನ್ ಹಾಲ್ ಆವರಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಆಶ್ರಯದಲ್ಲಿ ಶ್ರೀ ಗೊಲ್ವಾಲ್ಕರರ ಭಾಷಣವನ್ನು ಏರ್ಪಡಿಸಿದ್ದಾಗ ಬಸವರಾಜು ಎಂಬ ವಿದ್ಯಾರ್ಥಿಯು ವಿದ್ಯುದ್ದೀಪದ ತಂತಿಯನ್ನು ಕತ್ತರಿಸಿದನೆಂಬ ಕಾರಣದ ಮೇಲೆ ಹಲವು ಮಂದಿ ಸಂಘದ ಸ್ವಯಂ ಸೇವಕರು ಅವನನ್ನು ಹಿಡಿದು ಸಭೆಯು ಮುಗಿಯುವವರೆಗೆ ಒಂದು ಮರಕ್ಕೆ ಕಟ್ಟಿಹಾಕಿದ್ದು ಆನಂತರ ಪೋಲೀಸರ ವಶಕ್ಕೆ ಒಪ್ಪಿಸಿದರೆಂದೂ, ತರುವಾಯ ಅವನಿಗೆ ಎರಡು ರೂ ಜುಲ್ಮಾನೆ ವಿಧಿಸಲಾಯಿತೆಂದೂ ಗೊತ್ತಾಗಿದೆ.

ಫುಟ್‌ಬಾಲ್ ಪಂದ್ಯ

ನೆನ್ನೆ ಸಂಜೆ ನಡೆದ ಎಂ ಜಿ ಎಸ್. ಸೌತ್ ಜೋನ್ ಫುಟ್‌ಬಾಲ್ ಪಂದ್ಯದಲ್ಲಿ ರಾಜಧಾನಿಯ ಫಸ್ಟ್ ಗ್ರೇಡ್ ಕಾಲೇಜಿನವರು ಸೆಂಟ್ ಫಿಲೊಮಿನಾ ಕಾಲೇಜಿನವರನ್ನು ೧ ೦ ಗೋಲಿನಿಂದ ಸೋಲಿಸಿದರು

ನಿರೂಪವನ್ನು ಹಿಂದಕ್ಕೆ ತೆಗೆದುಕೊಳ್ಳಲು ರಾಷ್ಟ್ರಾಧ್ಯಕ್ಷರಿಗೆ ಮನವಿ

ಪಾರ್ಲಿಮೆಂಟಿನ ಮೈಸೂರು ಸದಸ್ಯರಿಬ್ಬರ ತಂತಿ

ಸ್ವಂ ಸು ಫೋ] ಬೆಂಗಳೂರು ೬

ಭಾರತ ಪಾರ್ಲಿಮೆಂಟಿನ ಮೈಸೂರು ಸಂಸ್ಥಾನದ ಸದಸ್ಯರಾದ ಶ್ರೀಗಳು ಎಂ. ಶಂಕರಯ್ಯ ಮತ್ತು ಜಿ ಎ ತಿಮ್ಮೇಗೌಡರು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರಿಗೆ ತಂತಿಯನ್ನು ಕಳುಹಿಸಿ ಮೈಸೂರು ಸಂಸ್ಥಾನಕ್ಕೆ ಕೊಡಲಾಗಿರುವ ನಿರೂಪದಿಂದ ಅತ್ಯಂತ ವ್ಯಾಕುಲವುಂಟಾಗಿದೆಯೆಂದು ತಿಳಿಸಿರುತ್ತಾರೆ. ಶ್ರೀಮಿಚಲ್ ಪ್ರೊ|| ಕೇಸನ್ನು ತಿದ್ದುಪಡಿ ಮಾಡಲು ಪಾರ್ಲಿಮೆಂಟಿನಲ್ಲಿ ನಡೆದ ಪ್ರಯತ್ನವು ವಿಫಲವಾದ ಅಂಶವನ್ನು ನಿರೂಪಿಸಿ, ಈ ಪ್ರಕರಣದಿಂದ ಅನೇಕ ತೊಡಕುಗಳು ಉದ್ಭವಿಸಿರುವುದೆಂದು ಹೇಳಿ, ನಿರೂಪವನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಅವರು ಬೇಡಿರುತ್ತಾರೆ

ಚುನಾವಣೆಯಲ್ಲಿ ಗ್ರಾಮಾಧಿಕಾರಿಗಳು ಯಾವ ಪಕ್ಷವನ್ನೂ ವಹಿಸಕೂಡದು

ಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಗ್ರಾಮಾಧಿಕಾರಿಗಳಾದ ಪಟೇಲರು ಮತ್ತು ಶ್ಯಾನುಭೋಗರುಗಳು ಯಾವುದಾದರೂ ಪಕ್ಷ ಅಥವಾ ಉಮೇದುವಾರರಿಗೆ ಬೆಂಬಲವೀಯುವರೆಂಬ ಅಥವಾ ಅವರ ಪರವಾಗಿ ಕೆಲಸ ಮಾಡುವರೆಂಬ ಅನುಮಾನಕ್ಕೆ ಸ್ವಲ್ಪ ಮಾತ್ರ ಎಡೆ ಕೊಟ್ಟರೂ ಅವರ ಮೇಲೆ ಉಗ್ರ ಕ್ರಮವನ್ನು ಕೈಗೊಳ್ಳಲಾಗುವುದೆಂದು ಸರ್ಕಾರದವರು ಎಚ್ಚರಿಕೆ ಇತ್ತಿರುತ್ತಾರೆ

ಶಾಸನ ಸಭೆ ಕಾರ್ಯಕಲಾಪ

ನುಗು ಜಲಾಶಯದಿಂದ ೩೦ ಸಾವಿರ ಎಕರೆ ಜಮೀನು ಮುಳುಗಡೆಯಾಗುವುದೆಂದೂ ಈ ಬಗ್ಗೆ ಅವಶ್ಯಕವಾದ ಕಾರ್ಯಕ್ರಮಗಳು ಮುಂದುವರಿಯುತ್ತಿವೆಯೆಂದೂ ಈ ದಿನ ಶಾಸನ ಸಭೆಯಲ್ಲಿ ಸರ್ಕಾರದವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು

ಈಗ ಸಿದ್ಧವಾಗಿರುವ ಅಮಲ್ದಾರರುಗಳ ಆಯ್ಕೆ ಪಟ್ಟಿಗೆ ಇನ್ನೂ ಹತ್ತು ಜನರ ಹೆಸರನ್ನು ಸೇರಿಸಲು ಸರ್ಕಾರದವರು ಆಲೋಚಿಸಿದ್ದಾರೆಂದೂ, ಅದನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಪರಿಶೀಲನೆಗೆ ಕಳುಹಿಸುವುದಿಲ್ಲವೆಂದೂ ಸಹ ತಿಳಿಸಲಾಯಿತು

೧ ಸೇರು ಉಪ್ಪಿಗೆ ೫ ರೂ.

ಪೂರ್ವ ಪಾಕಿಸ್ತಾನದ ಮುನ್ಷಿಗಂಜ್ ಎಂಬಲ್ಲಿ ಉಪ್ಪು ಸೇರಿಗೆ ೫ ರೂ ನಂತೆ ಮಾರಾಟವಾಗುತ್ತಿದೆ

ನೆಹರೂರವರೊಡನೆ ರೆಡ್ಡಿಯವರ ಭೇಟಿ

ಸ್ವಂ ಸು. ಫೋ] ಬೆಂಗಳೂರು ೬

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ದಿನವೂ ಪಂಡಿತ ನೆಹರೂರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರೆಂದೂ ಅನಂತರ ಸಂಸ್ಥಾನ ಕಾನೂನು ಮಂತ್ರಿ ಶ್ರೀ ಎನ್. ಗೋಪಾಲಸ್ವಾಮಿಯ್ಯಂಗಾರ್ಯರನ್ನೂ ಕಾಣುವರೆಂದೂ ತಿಳಿದುಬಂದಿದೆ ಅವರು ನಾಳಿದ್ದು ಹಿಂದಿರುಗುವ ನಿರೀಕ್ಷಣೆಯಿದೆ.

ಪ್ರಭುಗಳಿಗೆ ದೀಪಾವಳಿ ಶುಭಾಶಯ

ಮೈಸೂರಿನ ಶ್ರೀ ಕೃಷ್ಣಭವನ ಮತ್ತು ಚಾಮುಂಡೇಶ್ವರಿ ಭವನಗಳ ಮಾಲೀಕರಾದ ಶ್ರೀಗಳು ಮುನ್ನಿಲಾಲ್ ಮತ್ತು ಓ. ವಿ. ರಾಮಯ್ಯಂಗಾರ್‌ರವರು ಕಳೆದ ಶನಿವಾರ ಬೆಳಿಗ್ಗೆ ಅರಮನೆಯಲ್ಲಿ ಶ್ರೀಮನ್ಮಹಾರಾಜರನ್ನು ಸಂದರ್ಶನ ಮಾಡಿ ದೀಪಾವಳಿ ಶುಭಾಶಯಗಳನ್ನೂ, ಪುಷ್ಪ ಮಾಲಿಕೆಯನ್ನೂ, ಸಿಹಿ ಫಲಾಹಾರಗಳನ್ನೂ ಸಮರ್ಪಿಸಿದರು. ಪ್ರಭುಗಳು ಅವುಗಳನ್ನು ಸಂತೋಷದಿಂದ ಸ್ವೀಕರಿಸಿ ಅವರಿಗೆ ಶ್ರೇಯಸ್ಸುಂಟಾಗಲೆಂದು ಹಾರೈಸಿದರು.

ಮದ್ರಾಸಿನಲ್ಲಿ ರೈಲ್ವೆ ಗಾಡಿಗಳ ತಯಾರಿ

ವಿದೇಶೀ ಕಂಪೆನಿಗಳು ರೈಲ್ವೆ ಗಾಡಿಗಳನ್ನು ತಯಾರಿಸುವುದರಲ್ಲಿ ನಿಧಾನವಾಗುತ್ತಿರುವುದಾಗಿಯೂ, ಇದ್ದರಿಂದ ಕೇಂದ್ರ ಸರ್ಕಾರದವರು ಅವುಗಳನ್ನು ಮದ್ರಾಸು ನಗರದಲ್ಲಿ ಮಾಡಿಸಲು ನಿರ್ಧರಿಸಿರುವುದಾಗಿಯೂ ಸಂಚಾರ ಮಂತ್ರಿ ಎನ್. ಜಿ. ಅಯ್ಯಂಗಾರ್‌ರವರು ತಿಳಿಸಿರುತ್ತಾರೆ.

೨೨ ಜನ ಓಟರುಗಳಿಗಾಗಿ ಒಂದು ಚುನಾವಣಾ ಕ್ಷೇತ್ರ

ಕಾರವಾರ ಜಿಲ್ಲೆಯ ಒಂದು ಪ್ರದೇಶದಲ್ಲಿ ೨೨ ಜನ ಓಟರುಗಳಿಗಾಗಿ ಒಂದು ಚುನಾವಣಾ ಕ್ಷೇತ್ರವನ್ನು ನಿರ್ಮಾಡಲಾಗಿದೆ. ಬಹುಶಃ ಇದೇ ಅತ್ಯಂತ ಚಿಕ್ಕ ಸಂಖ್ಯೆಯ ಓಟುದಾರರ ಕ್ಷೇತ್ರವಾಗಿದೆ. ಅರಣ್ಯ ನಿಬಿಡವಾದ ಪ್ರದೇಶದಲ್ಲಿ ಇದು ಇರುವುದು.

CITY TUTORIAL COLLEGE
Near V V Market, Mysore
ಮಿಡಲ್ ಸ್ಕೂಲ್ ಪರೀಕ್ಷೆಗೆ ತರಪೇತು ಮಾಡುವ ತರಗತಿಗಳು
ಬೆಳಿಗ್ಗೆ 11 30ರಿಂದ 1 30ರ ವರೆಗೆ ಮತ್ತು ಸಾಯಂಕಾಲ 6ರಿಂದ 9ರವರೆಗೆ
(ವಿದ್ಯಾರ್ಥಿನಿಯರಿಗೇ ಪ್ರತ್ಯೇಕ)
ಮದ್ರಾಸು ಮೆಟ್ರಿಕ್ಯುಲೇಷನ್ ತರಗತಿಗಳು
ವಿವರಗಳಿಗೆ ದಯವಿಟ್ಟು ವಿಚಾರಿಸಿ

Edited, Printed and Published by A R Nagarajan, at Sadhvi Press D Subbiah Road, Mysore

ಚಿನ್ನದ ಹಲ್ಲಿಗಾಗಿ ಗೋರಿ ಅಗೆದ ಕಾರ್ಮಿಕರ ಬಂಧನ

ಪಿಪಾನ ಮರಂಡದಲ್ಲಿ ಮಡಿದವರನ್ನು ಹೂಳಿರುವ ಟೋಕಿಯೋವಿನ ಆರು ಸಾವಿರ ಗೋರಿಗಳ ಪೈಕಿ ಒಂದು ಸಾವಿರ ಗೋರಿಗಳನ್ನು ಅಗೆದು ಹೂಳಲ್ಪಟ್ಟವರ ಒಂಬತ್ತು ಸಾವಿರ ಬಂಗಾರದ ಹಲ್ಲುಗಳನ್ನು ಕದ್ದರೆಂದು ಅಲ್ಲಿನ ೩೭ ಜನ ಕೆಲಸಗಾರರನ್ನು ಮೊನ್ನೆ ದಸ್ತಗಿರಿ ಮಾಡಲಾಯಿತು.

ಹಗಲಿನಲ್ಲಿ ನಕ್ಷತ್ರದ ದರ್ಶನ

ಕಲ್ಕತ್ತಾದಲ್ಲಿ ಮೊನ್ನೆ ದಿನ ಪೂರ್ವಾಹ್ನದಲ್ಲಿ ಶುಕ್ರ ಗ್ರಹವು ಬಹಳ ಪ್ರಕಾಶಮಾನವಾಗಿ ಕಾಣಿಸಿಕೊಂಡಿತೆಂದೂ, ಸ್ವಲ್ಪ ಹೊತ್ತಿನ ನಂತರ ಮೋಡವು ಮುಚ್ಚಿಕೊಂಡದ್ದರಿಂದ ಅದು ಅದೃಶ್ಯವಾಯಿತೆಂದೂ ವರದಿಯಾಗಿದೆ.

ಅಮೆರಿಕಕ್ಕೆ ಡಾ|| ಒಚ್ಚಮುತ್ತು

ಅಮೆರಿಕದ ಸ್ಟೇಟ್ಸ್ ಇಲಾಖೆಯವರು ಅಲ್ಲಿನ ಖನಿಗೋಳ ವಿಜ್ಞಾನದ ಒಗ್ಗೆ ಪರಿಶೀಲನ ನಡೆಸಲು ಮೈಸೂರಿನ ಭೂಗರ್ಭ ಇಲಾಖೆಯ ಡೈರೆಕ್ಟರಾದ ಡಾ|| ಸಿ. ಎಸ್. ಪಿಚ್ಚಮುತ್ತುರವರನ್ನು ಆಹ್ವಾನಿಸಿರುವರೆಂದೂ ಬರುವ ಫೆಬ್ರವರಿ ತಿಂಗಳಲ್ಲಿ ಅವರು ಅಮೆರಿಕಕ್ಕೆ ಪ್ರಯಾಣ ಮಾಡುವರೆಂದೂ ಗೊತ್ತಾಗಿದೆ.

ರಾಷ್ಟ್ರಾಧ್ಯಕ್ಷರಿಗೆ ತಂತಿ

ಮೈಸೂರಿನ ಪ್ರೀಮಿಯರ್ ಮಹಾರಾಜರವರನ್ನು ಓಟರುಗಳ ಪಟ್ಟಿಯಿಂದ ಬೇರ್ಪಡಿಸಬೇಕೆಂದೂ, ಬ್ರಿಟಿಷ್ ಅರಸರಂತೆ ಅವರೂ ಸಹ ಚುನಾವಣೆಗಳಲ್ಲಿ ಓಟು ಮಾಡದಿರ ಬೇಕಾಗಬೇಕೆಂದೂ ತಿಳಿಸಿ ಇಲ್ಲಿನ ಪ್ರಜಾ ಮಂಡಲದ ಪ್ರ|| ಕಾರ್ಯದರ್ಶಿಯವರಾದ ಶ್ರೀ ವೆಂಕಟಸುಬ್ಬಯ್ಯ ಶರ್ಮರವರು ರಾಷ್ಟ್ರಾಧ್ಯಕ್ಷರಿಗ ತಂತಿಯನ್ನು ಕಳುಹಿಸಿರುತ್ತಾರೆ.

ಚಂದಾದಾರರಲ್ಲಿ ವಿನಂತಿ

ಮೈಸೂರು ಮತ್ತು ಇತರ ಕಡೆಗಳಲ್ಲಿರುವ ನಮ್ಮ ಚಂದಾದಾರರು ಮಾಹೇಯಾನಾ ಚಂದಾ ಬಾಬಲಗು ಎಂಟು ಆಣೆಯನ್ನು ನಮ್ಮ ಏಜೆಂಟರಿಗೆ ಮುಂಗಡವಾಗಿ ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ವಿನಂತಿ.

—ವ್ಯವಸ್ಥಾಪಕ, ಸಾಧ್ವಿ.

ಸಂಸ್ಥಾನಗಳ ವಿಲೀನೀಕರಣ

ಮಹಾರಾಜಾ ಕಾಲೇಜಿನಲ್ಲಿ ವಿ. ಪಿ. ಮೆನನ್ನರ ಭಾಷಣ

ಮೈಸೂರು ೭

ನೆನ್ನೆ ಸಂಜೆ ಮಹಾರಾಜಾ ಕಾಲೇಜಿನ ರಾಜ್ಯ ಶಾಸ್ತ್ರ ಸಂಘದ ಆರಂಭೋತ್ಸವವನ್ನು ಸಂಸ್ಥಾನ ಶಾಖಾ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್‌ರವರು ನೆರವೇರಿಸಿದರು. ಪ್ರೊ|| ಎಲ್. ಶ್ರೀಕಂಠಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಸಿ. ಎಂ. ಕೃಷ್ಣರವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಲ್. ಶ್ರೀಕಂಠಯ್ಯನವರು ಭಾಷಣಕಾರರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು.

ಶ್ರೀ ವಿ. ಪಿ. ಮೆನನ್ನರು ಭಾರತದಲ್ಲಿ ದೇಶೀಯ ಸಂಸ್ಥಾನಗಳ ಐಕ್ಯತೆಯ ವಿಚಾರವಾಗಿ ಮಾತನಾಡುತ್ತಾ ಈ ರೀತಿ ತಿಳಿಸಿದರು. ಈಗ್ಗೆ ಸುಮಾರು ನೂರೈವತ್ತು ವರ್ಷಗಳ ಹಿಂದೆ ಬ್ರಿಟಿಷರು ಭಾರತದಲ್ಲಿ ನೆಲಸಿಹೋಗುತ್ತಿದ್ದ ಮರಾಟರ ಮತ್ತು ಇತರ ರಾಜ್ಯಗಳ ಆಕ್ರಮಣದಿಂದ ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಂಡು ದೇಶದ ಆಳ್ವಿಕೆಯಲ್ಲಿ ತೊಡಗಿದರು. ಮುಂದೆ ತಮಗಾಗಬಹುದಾದ ಗಂಡಾಂತರವನ್ನು ಯೋಚಿಸಿಯೇ ಭಾರತದ ಸ್ವಾತಂತ್ರ್ಯ ಸಾಧನೆಗೆ ಅಡ್ಡಿಯಾಗಿರಲೆಂದು ದೇಶೀಯ ಸಂಸ್ಥಾನಗಳನ್ನು ಬೆಳೆಸಿದರು. ಅನಂತರ ಈ ದೇಶೀಯ ರಾಜರು ತಮ್ಮ ಒಂದು ಸಂಘವನ್ನು ಸ್ಥಾಪಿಸಿಕೊಳ್ಳಲು ತೊಡಗಿದಾಗ ೧೯೨೧ರಲ್ಲಿ ಅದನ್ನು ತಡೆದರು. ಅನಂತರ ೧೯೩೫ರ ಶಾಸನದ ಮೇರೆಗೆ ರಾಜರಿಗೆ ಕೆಲವು ರೀತಿಯ ಸ್ವಾತಂತ್ರ್ಯಗಳನ್ನು ಕೊಟ್ಟರು. ಇದರಿಂದ ಅವರುಗಳು ತಮಗೆ ತೋಚಿದಂತೆ ಮಾಡಲು ಅವಕಾಶವಾಯಿತು. ಯಾರ ತಡೆಯೂ ಇಲ್ಲದೆ ಶಸ್ತ್ರಾಸ್ತ್ರಗಳನ್ನು ಕೂಡಿಹಾಕಿಕೊಳ್ಳಲು ಅನುಕೂಲವಾಯಿತು. ಇದರಿಂದ ಕೇಂದ್ರ ಸರ್ಕಾರಕ್ಕೆ ಆಡಳಿತದಲ್ಲಿ ತೊಡಕು

ವಿದ್ಯುಚ್ಛಕ್ತಿ ಉಳಿತಾಯಕ್ಕೆ ಫ್ಯಾನುಗಳ ನಿಷೇಧ

ಬೊಂಬಾಯಿಯಲ್ಲಿ ವಿದ್ಯುಚ್ಛಕ್ತಿಯನ್ನು ಉಳಿತಾಯ ಮಾಡುವ ಸಲುವಾಗಿ ಅಲ್ಲಿನ ಮತ್ತು ಪೂನಾದ ಸರ್ಕಾರಿ ಕಛೇರಿಗಳಲ್ಲಿ ವಿದ್ಯುಚ್ಛಕ್ತಿ ಫ್ಯಾನುಗಳನ್ನು ಉಪಯೋಗಿಸಕೂಡದೆಂದು ಹೊಸ ಸರ್ಕಾರಿ ಆಜ್ಞೆಯು ಹೊರಟಿದೆ. ಸಿನಿಮಾ ಮಂದಿರಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಏರ್ ಕಂಡೀಷನ್ ವ್ಯವಸ್ಥೆಯನ್ನೂ ರದ್ದು ಮಾಡಿ ಆಜ್ಞೆಯನ್ನು ಹೊರಡಿಸಲಾಗಿದೆ.

ಗಳುಂಟಾದುವು. ಆದರೆ ಈ ದೇಶೀಯ ಸಂಸ್ಥಾನಗಳು ರಕ್ಷಣೆ, ಸಂಚಾರ, ಮತ್ತು ಹೊರಗಿನ ನೀತಿಗಳ ವಿಷಯದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಅಧೀನವಾಗಿದ್ದವು. ಹಾಗೆಯೇ ಅವು ಪೋಗದಿದ್ದರೂ ಸಲ್ಲಿಸುತ್ತಿದ್ದವು. ಕೇಂದ್ರ ಸರ್ಕಾರವು ಇವುಗಳನ್ನು ತನ್ನಲ್ಲಿ ಏಕ್ಕಗೊಳಿಸಲು ಸಂಪೂರ್ಣ ರಕ್ಷಣೆಯ ಭರವಸೆ ಕೊಟ್ಟು ಅವುಗಳ ಒಪ್ಪಿಗೆ ಪಡೆಯಿತು. ಹಿಂದುಳಿದ ಕೆಲವು ರಾಜ್ಯಗಳ ಅಭಿವೃದ್ಧಿ ಕಾಲದವರೆಗೂ ಕೇಂದ್ರವು ಅವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿರತಕ್ಕದ್ದೆಂದೂ ತೀರ್ಮಾನವಾಗಿ ಅಲ್ಲಲ್ಲಿ ಹೊಸ ರೀತಿಯ ಸರ್ಕಾರಗಳನ್ನು ಏರ್ಪಡಿಸಲಾಯಿತು.

ರಾಜ್ಯಾಂಗದ ೩೭೧ನೇ ವಿಧಿಯ ಬಗ್ಗೆ ಮಾತನಾಡಿ ರಾಜ್ಯಗಳು ಮುಂದುವರಿಯುವವರೆಗೂ ಅದು ಅತ್ಯವಶ್ಯಕವೆಂದು ಶ್ರೀ ಮೆನನ್ನರು ನುಡಿದರು. ಭಾಷಾವಾರು ಪ್ರಾಂತಗಳ ಬಗ್ಗೆ ಬಂದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ದೇಶದಲ್ಲಿ ಆಳಿತವು ಸುಭದ್ರವಾದ ಸ್ಥಿತಿಗೆ ಬರುವವರೆಗೂ ಭಾಷಾವಾರು ಪ್ರಾಂತಗಳನ್ನು ರಚಿಸಬಾರದೆಂದು ಹೇಳಿದರು. ಸಂಸ್ಥಾನಗಳ ಅಭಿವೃದ್ಧಿಗೆ ಸಾಧಕವಾದ ವಾರ್ಷಿಕ ಶಿಕ್ಷಣವನ್ನು ಮುಂದುವರಿಸಲು ವಿದ್ಯಾಭ್ಯಾಸದ ವಿಲೀನೀಕರಣವು ಅತ್ಯಗತ್ಯವೆಂದು ನುಡಿದರು.

|| ಶ್ರೀ ||
ಗಣೇಶಾ ಟಾಕೀಸ್
7-11-51ರಿಂದ 3ನೇ ವಾರ
ಕೊನೆಯ 3 ದಿನಗಳು ಮಾತ್ರ
ಜಗನ್ಮೋಹಿನಿ (ಕನ್ನಡ)
9-11-51 ರಿಂದ
ಮನ ಮಗಳ್ (ತಮಿಳು)

ಚಾಮುಂಡೇಶ್ವರಿ ಟಾಕೀಸು
7-11-51ರಿಂದ 2ನೇ ವಾರ
ಕೊನೆಯ 3 ದಿನಗಳು ಮಾತ್ರ
ರತ್ನ ಕುಮಾರ್ (ತಮಿಳು)
9-11-51 ರಿಂದ
ಮನ ಮಗಳ್ (ತಮಿಳು)

ಶ್ರೀ ಲಕ್ಷ್ಮೀ ಥಿಯೇಟರ್
7.11.51 ರಿಂದ ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
* ಮಂತ್ರಿ ಕುಮಾರಿ *
ಎಂ. ಜಿ. ರಾಮಚಂದ್ರನ್, ಮಾಧುರಿ ದೇವಿ, ಲಲಿತಾ ಪದ್ಮಿನಿ, ಕುಮಾರಿ ಕಮಲಾ ... ಪಾತ್ರ ವಹಿಸಿರುವ ತಮಿಳು ಚಿತ್ರ
ಬರುತ್ತದೆ ಮಂತ್ರ ದಂಡಂ, ಸಿಂಗಾರಿ, ಅಮರ ಕವಿ

ಮಲೇರಿಯಾ ಗೆಡ್ಡೆಗಳಿಗೆ



40 ವರ್ಷಗಳಿಂದ ಪ್ರಖ್ಯಾತವಾಗಿರುವ ಮೈಸೂರು ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ ಪಂಚಾಮೃತ, ಸ್ಪೆಷಲ್ ವಾಸಾವ ಲೇಹ್ಯ ಮಂಗಧರಾಜ ತೈಲ–ಇವುಗಳನ್ನು ಉಪಯೋಗಿಸಿರಿ

ಕ್ರೇಪ್ ಸಿಲ್ಕ್ ಸೀರೆಗಳು–ಧರ್ಮಾವರಂ–ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಶೆಟ್ಟಿ
ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿಜಿಸ್ಟರ್ ನಂ 792 • ವಂದೇ ಮಾತರಂ • ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೭-೧೧-೫೧ ಸಂಚಿಕೆ ೮೬

ಕಾಶ್ಮೀರದ ರಾಜರ ಪದಚ್ಯುತಿಗೆ ಏರ್ಪಾಟು

ಮೈಸೂರಿಂದ ಬೆಂಗಳೂರಿಗೆ ಎಕ್ಸ್‌ಪ್ರೆಸ್ ಬಸ್ಸು

ಮೈಸೂರು ೬

[illegible]ಸ್ಲಿಂದ ಬೆಂಗಳೂರಿಗೆ ನಾಳೆಯಿಂದ [illegible] ಎಕ್ಸ್‌ಪ್ರೆಸ್ ಎಂಬ ವೇಗವಾ[illegible]ಸ್ ಓಡಾಟವನ್ನು ಸರ್ಕಾರದ ರ[illegible]ಸಾರ ಇಲಾಖೆಯವರು ಏರ್ಪಡಿ[illegible]ದ್ದಾರೆ. ಪ್ರತಿ ದಿನ ಬೆಳಿಗ್ಗೆ ೭ ಘಂ[illegible] ಮೈಸೂರನ್ನು ಬಿಟ್ಟು, ಶ್ರೀರಂಗ[ಪ]ಟ್ಟಣ, ಮಂಡ್ಯ, ಮದ್ದೂರು, ಚೆನ್ನಪ[ಟ್ಟ]ಣ ಮತ್ತು ರಾಮನಗರಗಳಲ್ಲಿ ಮಾತ್ರ [illegible] ೧೦-೩೦ ಘಂಟೆಗೆ ಬೆಂಗಳೂರು [illegible]ವನ್ನು ಸೇರುವುದು. ಬೆಂಗಳೂರಿ[illegible] ಸಂಜೆ ೫ ಘಂಟೆಗೆ ಹೊರಟು ರಾ[illegible]೦ ಘಂಟೆಗೆ ಅದು ಇಲ್ಲಿಗೆ ಬರು[illegible] ದರಗಳು ಮಾಮೂಲಿನಂತೆಯೇ [illegible]ವು

ಚುನಾವಣಾ ಉಮೇದುವಾರಿಕೆ [illegible] ಕಳುಹಿಸುವ ಬಗ್ಗೆ ಸೂಚನೆ

[illegible] ಚುನಾವಣೆಗೆ ಉಮೇದು[illegible] ತಮ್ಮ ಅರ್ಜಿಗಳನ್ನು ಕೈಲಿ [illegible] ಅಥವಾ ರಿಜಿಸ್ಟರ್ ಮಾಡಿಯಾಗಲೀ [illegible]ಸಬಹುದೆಂದೂ, ಆದ್ದರಿಂದ ಅರ್ಜಿ[illegible]ನೆಗಳಲ್ಲೇ ಕಳುಹಿಸಬೇಕೆಂ[illegible] ವಿಲ್ಲವೆಂದೂ ತಿಳಿ[illegible] ಚುನಾವಣಾಧಿಕಾರಿಗಳು ಒಂದು [illegible]ಯನ್ನು ಹೊರಡಿಸಿರುವರು

ಉಪನ್ಯಾಸ

ಬೆಂಗಳೂರು ಕೌಟಿಲ್ಯ ಮಂಡಲಿ[illegible] ಆಶ್ರಯದಲ್ಲಿ ಮಹಾರಾಜಾ ಕಾಲೇ[ಜಿನ] [illegible] ನಾಳೆ ಸಂಜೆ ೬ ಗಂಟೆಗೆ ಕಾಲೇ[ಜಿನ] [illegible] ಪರಿಶ್ರೇಯ ಪ್ರೊ|| ಎಂ ವಿ ಕೃಷ್ಣ[illegible]ರು "ಪ್ರಜಾ ಸತ್ತಾತ್ಮಕ ಸರ್ಕಾರ" ಎಂಬ ವಿಷಯವಾಗಿ [ಉಪನ]ನ್ಯಾಸ ಮಾಡುವರು. ವಕೀಲರಾದ [illegible] ಟಿ ಎಸ್ ರಾಜಗೋಪಾಲಯ್ಯಂ[ಗಾ]ರು ಅಧ್ಯಕ್ಷತೆ ವಹಿಸುವರು

ಸಹಾಯಾರ್ಥ ನಾಟಕ

ಬೆಂಗಳೂರು ಹೋಟೆಲು ಕಾರ್ಮಿಕ [illegible] ಪುಸ್ತಕ ಭಂಡಾರದ ಸಹಾ[ಯಾರ್ಥ]ವಾಗಿ ಗುಬ್ಬಿ ನಾಟಕ ಮಂಡಲಿ[illegible] ನಾಳೆ ರಾತ್ರಿ ೧೦ ಘಂಟೆಗ[illegible] ಥಿಯೇಟರಿನಲ್ಲಿ ಅಕ್ಕ ಮಹಾ[ದೇವಿ] ಎಂಬ ನಾಟಕವನ್ನು ಅಭಿನಯಿ[illegible] ಪೌರಸಭಾಧ್ಯಕ್ಷರಾದ ಶ್ರೀ [illegible] ನರಸಿಂಹಯ್ಯಂಗಾರ್ಯರು ಅಗ್ರಾಸನ [illegible] ವಹಿಸುವರು

ಉಮೇದುವಾರಿಕೆ ಒಪ್ಪದಿದ್ದ[illegible] ೬೦೦ ಕಾಂ|| ಗಳವರ ರಾಜೀನಾಮೆ

[ಮೈ]ಸೂರಿನ ಶಾಸನ ಸಭೆಗೆ ಮುಖ್ಯ [ಮಂ]ತ್ರಿ ಶ್ರೀ ಕೆ ಸಿ ರೆಡ್ಡಿಯವರನ್ನು [ಕಾಂಗ್ರೆ]ಸ್ ಪರವಾಗಿ ಉಮೇದುವಾರರ[ನ್ನಾಗಿ] ನಿಲ್ಲಿಸಬೇಕೆಂದೂ ಇಲ್ಲವಾದಲ್ಲಿ [illegible] ಮಂದಿ ಕಾಂಗ್ರೆಸ್ ಸದಸ್ಯರು ರಾ[ಜೀನಾಮೆ] ಕೊಡಲು ಸಿದ್ಧರಿರುವರೆಂದೂ [illegible] ಕಾಂಗ್ರೆಸ್ ಚುನಾವಣಾ ಸಮಿ[ತಿಗೆ] [illegible]ಸಿಯರ್‌ರೀಫ್ ಚಿನ್ನದಗಣಿ ಪ್ರ[ದೇಶ]ದ ಕಾಂಗ್ರೆಸ್ ಸಮಿತಿಯವರು ತಿ[ಳಿ]ಸಿದ್ದಾರೆ

ಬ್ರಿಟಿಷರೊಡನೆ ಸಹಕರಿಸುವವರಿಗೆ ಮರಣ ದಂಡನೆ

[illegible] ತಿಂಗಳು ೮ನೇ ದಿನದ ನಂತರ ಸೂಯೆ[ಜ್] [ಕಾ]ಲುವೆ ಪ್ರದೇಶದಲ್ಲಿ ಬ್ರಿಟಿಷರ ಸೇವೆ[illegible] ನಿರತರಾಗಿರುವ ಈಜಿಪ್ಟ್ ಪ್ರಜೆಯ[illegible]ಪ್ರೇಪ ಮಾಡಿದ ಅಪರಾಧಕ್ಕೆ ಒಳಪ[illegible] ಮರಣ ದಂಡನೆ ಅಥವಾ ದೀರ್ಘಾವಧಿ [illegible] ಆಗುವ ಕಾನೂನು ಈಜಿಪ್ಟ[illegible] [illegible]ಗೆ ಬರಲಿದೆ

ಈಜಿಪ್ಟಿಗೆ ತೆರಳಲು ೫೦ ಸಾವಿರ ಬ್ರಿಟಿಷ್ ಸೇನೆ ಸಿದ್ಧ

ಸೂಯೆಜ್ ಪ್ರದೇಶದಲ್ಲಿ ಉಗ್ರವಾಗಿ ಬರ ಬಹುದಾದ ಯುದ್ಧ ಪರಿಸ್ಥಿತಿಯನ್ನು ಎದುರಿಸಲು ಸಮಯವು ಸನ್ನಿಹಿತವಾದೊಡನೆಯೇ ಆಫ್ರಿಕೆಗೆ ವಿಮಾನಗಳ ಮೂಲಕ ತೆರಳಲು ೫೦ ಸಹಸ್ರ ಬ್ರಿಟಿಷ್ ಸೈನ್ಯಗಳು ಸಿದ್ಧವಾಗಿರುವುದಾಗಿ ಗೊತ್ತಾಗಿದೆ

ಸೂಯೆಜ್ ಪ್ರದೇಶ ಯುದ್ಧ ಶಿಬಿರದಂತಿದೆ

ಪೂರ್ವ ಮತ್ತು ಪಶ್ಚಿಮಗಳ[illegible]ಗರ್ವಾದ ಸೂಯೆಜ್ ಕಾಲುವೆಯ ಪ್ರದೇಶವು ಯುದ್ಧದ ಶಿಬಿರವಾಗಿ ಕಾಣು[illegible]ತ್ತಿದೆಯೆಂದೂ ದ್ವಿತೀಯ ಪ್ರಪಂಚ ಯುದ್ಧದ ಹರಿಸ್ಥಿತಿಯನ್ನು [illegible] ಜ್ಞಾಪಕಕ್ಕೆ ತಂದುಕೊಡುವಂತಿದೆಯೆಂದೂ ಪತ್ರಿಕಾ ವರದಿಗಳು ತಿಳಿಸುತ್ತವೆ

ಹಿಂದೂ ಮತಕ್ಕೆ ವಾಪಸು ಬಂದವರು ಶುಲ್ಕ ಕೊಡಬೇಕಾಗಿಲ್ಲ

ಕ್ರೈಸ್ತ ಮತಾವಲಂಬಿಗಳಾಗಿದ್ದು ಪುನಃ ಹಿಂದೂ ಮತಕ್ಕೆ ವಾಪಸು ಬರುವ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕದ ವಿನಾಯಿತಿಯನ್ನು ತೋರಿಸಲು ತಿರುವಾಂಕೂರು ಸರ್ಕಾರದವರು ಆಜ್ಞೆಯಿತ್ತಿರುತ್ತಾರೆ

ಪತಿಯ ವಿದ್ಯಾಭ್ಯಾಸಕ್ಕಾಗಿ ಪತ್ನಿಯ ಸತ್ಯಾಗ್ರಹ

ಪೂನಾ ಬಳಿ ಎಂಪಲ್ ಸೌವಾಗಾಂವ್ ಎಂಬಲ್ಲಿ ಗಿರಣಿಯ ಕಾರ್ಮಿಕನೊಬ್ಬನು ಎಷ್ಟು ಹೇಳಿದರೂ ವಯಸ್ಕರ ಶಿಕ್ಷಣ ಶಾಲೆಗೆ ಹೋಗಲೊಪ್ಪದಿದ್ದುದರಿಂದ, ಗಂಡನು ತರಗತಿಗೆ ಹೋಗುವವರೆಗೂ ಮನೆಯಲ್ಲಿ ಅಡಿಗೆ ಮಾಡುವುದಿಲ್ಲವೆಂದು ಅವನ ಪತ್ನಿಯು ಸತ್ಯಾಗ್ರಹ ಹೂಡಲಾಗಿ, ಮೂರು ದಿನಗಳ ನಂತರ ಅವನು ವಿಧಿಯಿಲ್ಲದೆ ಶಾಲೆಗೆ ಹೋಗಬೇಕಾಗಿ ಬಂದಿತೆಂದು ವರದಿಯಾಗಿದೆ

○ ಕೈತನ ಗುತ್ತಿಗೆ ಅವಧಿ, ನ್ಯಾಯವಾದ ಗುತ್ತಿಗೆ ಜಮೀನುದಾರರು ಮತ್ತು ಕೃಷಿಕರುಗಳಲ್ಲಿ ಉತ್ತಮ ಸಂಬಂಧ ಈ ವಿಷಯಗಳನ್ನು ಗೊತ್ತುಪಡಿಸುವ ಕೃಷಿಕನ ಹಕ್ಕುದಾರಿ ಮಸೂದೆಯು ನೆನ್ನೆ ಮೈಸೂರು ಶಾಸನ ಸಭೆಯಲ್ಲಿ ಅಂಗೀಕೃತವಾಯಿತು.

ಕಾಶ್ಮೀರದ ಮಹಾರಾಜರಿಗೆ ಸಿಂಹಾಸನ ಚ್ಯುತಿ

ಕಾಶ್ಮೀರದ ರಾಜ್ಯಾಧಿಕಾರವನ್ನು ಬಿಟ್ಟು ಹೊರಗಿರುವ ಮಹಾರಾಜಾ ಹರಿಸಿಂಗರನ್ನು ಪದಚ್ಯುತಿಗೊಳಿಸಿ ಅವರ ಮಕ್ಕಳು ಯುವರಾಜರಾದ ಕರಣ್ ಸಿಂಗರವರನ್ನು ಸಂಸ್ಥಾನದ ಹೊಸ ಸಂವಿಧಾನದ ಪ್ರಕಾರ ಅಲ್ಲಿನ ರಾಜ್ಯಾಧಿಪತಿಯನ್ನಾಗಿ ಮಾಡುವ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲ್ಪಡುವುದಾಗಿ ನೆನ್ನೆ ಕಾಶ್ಮೀರ ರಾಜ್ಯಾಂಗ ಸಭೆಯಲ್ಲಿ ಮುಖ್ಯಮಂತ್ರಿ [ಶೇಖ್] ಅಬ್ದುಲ್ಲಾರವರು ಸೂಚನೆಯಿತ್ತರು. ಇಂದಿನ ಪರಿಸ್ಥಿತಿಗೆ ರಾಜತ್ವವು ಸರಿಹೋಗುವುದಿಲ್ಲವೆಂದು ಅವರು ಹೇಳಿದರು

ಭಾರತದ ಶ್ರೇಷ್ಠ ನ್ಯಾಯಾಧೀಶ ಕಾನಿಯಾರ ಮರಣ

ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಹರಿಲಾಲ್ ಜೆಕಿಸುಂದಾಸ್ ಕಾನಿಯಾರವರು ನೆನ್ನೆ ರಾತ್ರಿ ೯-೩೦ ಗಂಟೆಯಲ್ಲಿ ಹೃದಯ ವೇದನೆಯಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗ ೬೧ ವರ್ಷ ವಯಸ್ಸಾಗಿತ್ತು. ನಾಲ್ಕು ದಿನಗಳ ಹಿಂದೆ ಅವರಿಗೆ ರಕ್ತದ ಒತ್ತಡವುಂಟಾಗಿ ಹಾಸಿಗೆ ಹಿಡಿದಿದ್ದರು. ಅವರು ಸ್ವತಂತ್ರ ಭಾರತದ ಪ್ರಥಮ ಶ್ರೇಷ್ಠ ನ್ಯಾಯಾಧೀಶರಾಗಿದ್ದರು. ಅದಕ್ಕೆ ಹಿಂದೆ ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರಾಗಿದ್ದರು. ಅದಕ್ಕಿಂತ ಮುಂಚೆ ಬೊಂಬಾಯಿ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾಗಿದ್ದರು

ಕೋರ್ಟುಗಳಿಗೆ ರಜಾ

ಭಾರತದ ಶ್ರೇಷ್ಠನ್ಯಾಯಾಧೀಶರಾದ ಶ್ರೀ ಹರಿಲಾಲ್ ಕಾನಿಯಾರವರ ನಿಧನದ ಪ್ರಯುಕ್ತ ಈ ದಿನ ಮೈಸೂರು ಕೋರ್ಟುಗಳಿಗೆ ರಜಾ ಕೊಡಲಾಗಿದೆ

ಸಂತಾಪ ಸೂಚನೆ

ಶ್ರೇಷ್ಠ ನ್ಯಾಯಾಧೀಶ ಶ್ರೀ ಹರಿಲಾಲ್ ಕಾನಿಯಾರವರ ನಿಧನಕ್ಕಾಗಿ ಈ ದಿನ ಮಧ್ಯಾಹ್ನ ೨ ಘಂಟೆಗೆ ಮೈಸೂರು ವಕೀಲರ ಸಂಘದ ಸಭೆ ಸೇರಿ ಮೃತರ ಬಗ್ಗೆ ತನ್ನ ಸಂತಾಪವನ್ನು ವ್ಯಕ್ತಪಡಿಸಿತು

ಡಾ|| ಶ್ರೀಕಂಠೇಶ್ವರರ ಮೇಲೆ ಕಾರ್ಯಕ್ರಮವಿಲ್ಲ

ಶಾಸನ ಸಭೆಯ ತೀರ್ಮಾನ

ಸ್ವಂ ಸು ಪ್ರೋ॰] ಬೆಂಗಳೂರು ೭

ಭಾರತದ ಶ್ರೇಷ್ಠ ನ್ಯಾಯಾಧೀಶರ ನಿಧನದ ಬಗ್ಗೆ ಈ ದಿನ ಶಾಸನ ಸಭೆಯು ಸಂತಾಪ ಸೂಚಿಸಿ, ನಿರ್ಣಯವನ್ನು ಮಾಡಿತು

ಪ್ರಮಾಣ ವಚನವನ್ನು ತೆಗೆದುಕೊಳ್ಳದೆ ಸಭೆಯಲ್ಲಿ ಭಾಗವಹಿಸಿದ ಬಗ್ಗೆ ಡಾ|| ಶ್ರೀಕಂಠೇಶ್ವರರವರ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳಬೇಕಾಗಿಲ್ಲವೆಂದು ನಿರ್ಧರಿಸಲಾಯಿತು

ಚುನಾಯಿತ ಸಮಿತಿಯವರ ಸಲಹೆಗೆ ಅನುಗುಣವಾಗಿ ಬಂದಿದ್ದ ಕುದುರೆ ಜೂಜುಗಳ ಮಸೂದೆಯೂ ಮತ್ತು ಕೂಲಿ ದರಗಳನ್ನು ನಿಗದಿ ಮಾಡುವ ಮಸೂದೆಯೂ ಅಂಗೀಕೃತವಾದುವು

ಇನಾಮತಿಗಳನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳುವ ಮಸೂದೆಯನ್ನು ಸಚಿವ ಶ್ರೀ ಹೆಚ್ ಸಿದ್ಧಯ್ಯನವರು ಮಂಡಿಸಿ ಇದಕ್ಕಾಗಿ ಒಟ್ಟು ೧|| ಕೋಟಿ ರೂ ವೆಚ್ಚವಾಗುವುದೆಂದು ತಿಳಿಸಿದರು. ಅನೇಕ ಪ್ರಮುಖರ ಸಲಹೆಯಂತೆ ಶೃಂಗೇರಿ ಮಠಕ್ಕೆ ವಿನಾಯಿತಿಯನ್ನು ಕೊಡುವುದು ಸೂಕ್ತವಾಗಿದೆಯೆಂದೂ ಅವರು ತಿಳಿಸಿದರು

○ ಈ ದಿನ ಹೈಕೋರ್ಟಿನಲ್ಲಿ ಭಾರತ ಶ್ರೇಷ್ಠ ನ್ಯಾಯಾಧೀಶರ ನಿಧನದ ಬಗ್ಗೆ ಅಡ್ವೊಕೇಟ್ ಜನರಲ್ಲರು ಭಾಷಣ ಮಾಡಿ ಅವರ ಗುಣಗಾನ ಮಾಡಿದರು. ಶ್ರೇಷ್ಠ ನ್ಯಾಯಾಧೀಶರು ಅದೇ ಅಭಿಪ್ರಾಯವನ್ನು ಪ್ರಸ್ತಾಪಿಸಿ ಮಾತನಾಡಿದರು

○ ಶ್ರೀ ಕೆ ಸಿ ರೆಡ್ಡಿಯವರು ನಾಳೆ ದೆಹಲಿಯಿಂದ ಹಿಂದಿರುಗುವ ನಿರೀಕ್ಷೆಯಿದೆ

ಪ್ರಪಂಚ ಮುಸ್ಲಿಮರಿಂದ ಬ್ರಿಟಿಷರ ಮೇಲೆ ಬಹಿಷ್ಕಾರ

ಬ್ರಿಟಿಷರ ಮೇಲೆ ಬಹಿಷ್ಕಾರವನ್ನು ಪ್ರಪಂಚದಲ್ಲಿರುವ ಮುಸ್ಲಿಮರು ಹಾಕಬೇಕೆಂದು ಅವರನ್ನು ಕೋರಲಾಗುವುದಾಗಿ ಇಸ್ಲಾಂ ಗುರು ಸೇರಬೇಕಾಗಿದ್ದ ಕೈರೋವಿನ ಅಲ್ ಅಜ್‌ಹರ್ ವಿಶ್ವವಿದ್ಯಾಲಯದ ಒಬ್ಬ ಅಧಿಕಾರಿಯು ಹೇಳಿರುತ್ತಾರೆ. ಆ ವಿಶ್ವವಿದ್ಯಾಲಯದ ಮುಖ್ಯ ಅಧಿಕಾರಿಗಳು ಮುಸ್ಲಿಮರಿಗೆ ಮೇಲ್ಕಂಡಂತೆ ಪ್ರಾರ್ಥನೆ ಮಾಡುವರೆಂದು ಅವರು ತಿಳಿಸಿರುತ್ತಾರೆ

ಸಾಲ ಕೊಡದ ಸೇಡಿಗೆ ಕೊಲೆ ಮತ್ತು ಮನೆಗೆ ಬೆಂಕಿ

ಹಾಂಕಾಂಗಿನ ಒಂದು ಮನೆಗೆ ಒಬ್ಬ ತರುಣನು ಮೊನ್ನೆ ಹೋಗಿ ಮನೆಯವರಿಂದ ಸಾಲವನ್ನು ಕೇಳಲು ಅವರು ನಿರಾಕರಿಸಲಾಗಿ ಕೋಪಗೊಂಡು ಮನೆಯಲ್ಲಿದ್ದ ೪ ವರ್ಷದ ಗಂಡು ಮಗುವನ್ನು ಎತ್ತಿಹಾಕಿ ಕೊಂದುದಲ್ಲದೆ ಒಬ್ಬ ಹೆಂಗಸು ಮತ್ತು ಇನ್ನೊಂದು ಮಗುವನ್ನು ಮಚ್ಚಿನಿಂದ ಕತ್ತರಿಸಿ ಕೊಂದು ಇನ್ನಿಬ್ಬರು ಹೆಂಗಸರನ್ನೂ ಮತ್ತೊಂದು ಮಗುವನ್ನೂ ತೀವ್ರವಾಗಿ ಗಾಯಗೊಳಿಸಿರುವುದಾಗಿ ಗೊತ್ತಾಗಿದೆ. ಅಲ್ಲದೆ ಮನೆಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿ ಹಚ್ಚಿಸಿದನೆಂದೂ, ನಂತರ ಅದನ್ನು ಆರಿಸಲಾಯಿತೆಂದೂ ಹೇಳಲಾಗಿದೆ.

ಲಾರಿ-ಡಿಕ್ಕಿಯಿಂದ ಭಾರಿ ವಿದ್ಯುತ್ ಅನಾಹುತ

ಬ್ರೆಜಿಲ್ಲಿನ ರಾಜಧಾನಿ ರಿಯೋಡಿ ಜನೈರೊವಿನಲ್ಲಿ ಮೊನ್ನೆ ನಡೆದ ಫುಟ್‌ಬಾಲ್ ಪಂದ್ಯ ನೋಡಲು ಹೋದ ಜನರನ್ನೊಯ್ಯುತ್ತಿದ್ದ ಲಾರಿಯೊಂದು ವೇಗವಾಗಿ ಓಡುತ್ತಾ ೫ ಸಾವಿರ ವೋಲ್ಟಿನ ಒಂದು ವಿದ್ಯುತ್ ಕಂಭಕ್ಕೆ ಡಿಕ್ಕಿ ಯೊಡೆದುದರಿಂದ ಅದು ಬಿದ್ದು ವಿದ್ಯುಚ್ಛಕ್ತಿ ತಾಕಿ ೯ ಜನರು ಸತ್ತರೆಂದು ವರದಿಯಾಗಿದೆ ಇನ್ನಿಬ್ಬರು ಇದರ ವೇಗಕ್ಕೆ ಮಡಿದರು ಇತರ ೩೧ ಜನರಿಗೆ ಗಾಯಗಳಾದವು

ಸಮಾಜವಾದಿ ಪಕ್ಷದ ಉಮೇದುವಾರರು

ಚುನಾವಣೆಗಳಲ್ಲಿ ಸಮಾಜವಾದಿ ಪಕ್ಷದ ಪರವಾಗಿ ಉಮೇದುವಾರರನ್ನು ಈ ರೀತಿ ಆರಿಸಲಾಗಿದೆ –

ಪಾರ್ಲಿಮೆಂಟಿಗೆ-ಬೆಂಗಳೂರು ಉತ್ತರ ಸಿ ಜಿ ಕೆ ರೆಡ್ಡಿ, ತುಮಕೂರು ಜಿಲ್ಲೆ ಶ್ರೀ ಆರ್ ನರಸಿಂಹಯ್ಯ, ಚಿತ್ರದುರ್ಗ-ಶ್ರೀ ವಿ ಹೆಚ್ ಶಿವಾನಂದ ಸ್ವಾಮಿ

ಶಾಸನ ಸಭೆಗೆ ಮೈಸೂರು ನಗರ ದಕ್ಷಿಣ ಭಾಗಕ್ಕೆ ಶ್ರೀ ಬಿ ಶ್ರೀಕಂಠಪ್ಪ, ಟಿ ನರಸೀಪುರ-ಶ್ರೀ ಎಂ ನಾಗರಾಜಪ್ಪ, ಯಳಂದೂರು ಶ್ರೀ ಎಲ್ ವೆಂಕಟನಾರಣಪ್ಪ, ಶ್ರೀ ಎಂ ಮಾದಯ್ಯ (ರಿಸರ್ವ್) ಕೃಷ್ಣರಾಜನಗರ ಡಾ|| ಕೆ ಎಸ್ ಗೌಡ

ಚಿಕ್ಕಮಗಳೂರು-ಮೂಡಗೆರೆಗೆ ಶ್ರೀ ಎಂ ಲಕ್ಷ್ಮಣಗೌಡ

ಶಾಸನ ಸಭೆಯ ೯೯ ಸ್ಥಾನಗಳ ಪೈಕಿ ೬೦ಕ್ಕೂ, ಪಾರ್ಲಿಮೆಂಟಿನ ೧೧ ಸ್ಥಾನಗಳ ಪೈಕಿ ೮ಕ್ಕೂ ಸದರಿ ಪಕ್ಷವು ಉಮೇದುವಾರರನ್ನು ನಿಲ್ಲಿಸುವುದಾಗಿದೆ

ಒಲಂಪಿಯಾ

8-11-51 ರಿಂದ ಅಮೋಘ ೭ನೇ ವಾರ

ಫಿಲಿಸ್ತಾನ್ ಫಿಲ್ಮ್ಸ್ ರವರ

ಬೀವಿ ಅಥವಾ ಪತ್ನಿ

ಪಾತ್ರ ಮುಮ್ತಾಜ್ ಶಾಂತಿ, ಪ್ರಾಣ್, ವೀಣಾ, ಅಲ್ ನಸೀರ್, ಮಾಧುರಿ

—: ಬೆಳಗಿನ ಪ್ರದರ್ಶನ :—

8-11-51 ರಿಂದ 4 ದಿನಗಳು ಮಾತ್ರ

ಹಿಂದೂಸ್ತಾನ್ ಚಿತ್ರರವರ

ರಿಂ ಜಿಂ

RIM GIM

ಪಾತ್ರ- ರವೋಲ, ಕಿಶೋರ್ ಸಾಹು

Edited, Printed and Published by A R Nagarajan, at Sadhvi Press D Subbiah Road, Mysore

ಈ ತಿಂಗಳು ಆಖೈರಿಗೆ ಸರ್ ಮಿರ್ಜಾರವರು ವಾಪಸು

ಸರ್ ಮಿರ್ಜಾ ಇಸ್ಮಾಯಿಲರು ಪೂರ್ಣ ಗುಣಮುಖರಾಗುತ್ತಿರುವರೆಂದೂ ಅವರು ಈ ತಿಂಗಳು ಆಖೈರಿನಲ್ಲಿ ಭಾರತಕ್ಕೆ ಇಂಗ್ಲೆಂಡಿನಿಂದ ಹಿಂತಿರುಗುವರೆಂದೂ ಗೊತ್ತಾಗಿದೆ ಮೈಸೂರಿನ ಆಪ್ತಸ್ನೇಹಿತರೊಬ್ಬರಿಗೆ ಅವರು ಈ ವಿಷಯವನ್ನು ಪತ್ರದ ಮೂಲಕ ತಿಳಿಸಿರುತ್ತಾರೆ

ಹಿಂದಿ ಪರೀಕ್ಷೆ ಫಲಿತಾಂಶ

ಕಳೆದ ಆಗಸ್ಟಿನಲ್ಲಿ ನಡೆದ ದ|| ಭಾ|| ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಲ್ಲಿ ಮೈಸೂರು ನಗರದ ಹಿಂದೀ ಪ್ರಚಾರ ಸಭೆಯ ವಿದ್ಯಾಲಯದ ಪರವಾಗಿ ಕುಳಿತ ಹತ್ತು ಜನ ವಿಶಾರದ ಪರೀಕ್ಷೆ ವಿದ್ಯಾರ್ಥಿಗಳೆಲ್ಲರೂ, ಮತ್ತು ಪ್ರವೇಶಿಕಾ ಪರೀಕ್ಷೆಯಲ್ಲಿ ೧೭ರ ಪೈಕಿ ಹನ್ನೊಂದು ಜನರೂ ಉತ್ತೀರ್ಣರಾಗಿರುತ್ತಾರೆ ವಿಶಾರದ ಪರೀಕ್ಷೆಯಲ್ಲಿ ಒಬ್ಬರು ಪ್ರಥಮ ದರ್ಜೆಯಲ್ಲಿ ಬಂದಿರುತ್ತಾರೆ ಕಳೆದ ಹತ್ತು ವರ್ಷಗಳಿಂದ ಇಂತಹ ಉತ್ತಮ ಫಲಿತಾಂಶವು ಬಂದಿರಲಿಲ್ಲವೆಂದು ಹೇಳಲಾಗಿದೆ

ಕರ್ನಾಟಕ ಜನಪದ ಕಲಾ ಸಂಘ

ಮೈಸೂರು ಪೌರಸಭಾಧ್ಯಕ್ಷ ಶ್ರೀ ಟಿ ನರಸಿಂಹಯ್ಯಂಗಾರ್ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟಿ, ವರ್ತಕರಾದ ಶ್ರೀ ಎಂ ಆರ್ ಸಿ ಬಸಪ್ಪ ಮತ್ತು ಲಾವಣಿ ವಿದ್ವಾಂಸರಾದ ಶ್ರೀ ಎಂ ವಿಷಕಂಠರಾಯರು ರಾಜಧಾನಿಯ ಕರ್ನಾಟಕ ಜನಪದ ಕಲಾ ಸಂಘದ ಸದಸ್ಯರಾಗಿರುತ್ತಾರೆ

ಸುಪ್ರಸಿದ್ಧ

ಮಲೆಯಾಳ ಜ್ಯೋತಿಷ್ಯರು

ಕೆ. ಕುಮಾರಸ್ವಾಮಿ

ವಿಳಾಸ ರೂಂ ನಂ 1 ಅಂಬಳೆ ಅಣ್ಣಯ್ಯ ಪಂಡಿತರ ಛತ್ರ ಸೂರದಿ ರಸ್ತೆ ಮೈಸೂರು

ಇವರು ಕರಾರ ವಾಕ್ಯಾಗಿಯೂ ಶಾಸ್ತ್ರೀಯವಾಗಿಯೂ ಭೂತ ಭವಿಷ್ಯದ ವರ್ತಮಾನಗಳನ್ನು ಹೇಳುತ್ತಾರೆ ಇಂದೇ ಸಂದರ್ಶಿಸಿ

ರಷ್ಯಾ-ಇರಾನ್ ಗಡಿ ಒಪ್ಪಂದ

ರಷ್ಯಾ ಮತ್ತು ಪರ್ಷಿಯಗಳ ಗಡಿ ನಿರ್ದೇಶನದ ಸಂಬಂಧವಾಗಿ ಆ ಎರಡು ರಾಜ್ಯಗಳೂ ಒಪ್ಪಂದಕ್ಕೆ ಬಂದಿರುವುದಾಗಿ ಪರ್ಷಿಯದ ಅಧಿಕಾರಿ ತಿಳಿಸಿರುತ್ತಾರೆ ಇದನ್ನು ಕೇಳಿ ಪಶ್ಚಿಮ ರಾಷ್ಟ್ರಗಳಿಗೆ ಆಶ್ಚರ್ಯವಾಗಿರುವುದಾಗಿಯೂ ಹೇಳಲಾಗಿದೆ

ಟ್ರೈನಿಂಗ್ ಕಾಲೇಜುಗಳ ಸಮ್ಮೇಳನದ ಆರಂಭ

ನಾಳೆ ಮತ್ತು ಶುಕ್ರವಾರ ಬೆಳಿಗ್ಗೆ ೧೧ ಗಂಟೆಗೆ ಟೌನ್‌ಹಾಲಿನಲ್ಲಿ ಅ|| ಭಾ|| ಟ್ರೈನಿಂಗ್ ಕಾಲೇಜುಗಳ ದ್ವಿತೀಯ ಸಮ್ಮೇಳನದ ಆರಂಭೋತ್ಸವವನ್ನು ಮೈಸೂರು ವಿಶ್ವ ವಿದ್ಯಾಲಯದ ವೈಸ್‌ಚಾನ್ಸೆಲರಾದ ಡಾ|| ಬಿ ಎಲ್ ಮಂಜುನಾಥ್‌ರವರು ನೆರವೇರಿಸುವರು ಇದರ ಅಂಗವಾಗಿ ಕ್ರಾಫರ್ಡ್ ಭವನದಲ್ಲಿ ಪ್ರದರ್ಶನವೊಂದು ಏರ್ಪಾಡಾಗಿದೆ ೮ ದಿನ ಮಧ್ಯಾಹ್ನದಿಂದ ೧೧ನೇ ತಾ||ವರೆಗೆ ಸಾರ್ವಜನಿಕರು ಅದನ್ನು ನೋಡಬಹುದು

ರಾಷ್ಟ್ರಾಧ್ಯಕ್ಷರ ಆಜ್ಞೆಗೆ ಪ್ರಜಾ ಸಮ್ಮತಿ

ಶ್ರೀ ಎಲ್ ಎಸ್ ರಾಜು ರವರ ಮೊಕದ್ದಮೆ ಬಗ್ಗೆ ಅನುಸರಿಸಿರುವ ಕ್ರಮಕ್ಕಾಗಿ ಮೈಸೂರು ಪ್ರಜೆಗಳು ರಾಷ್ಟ್ರಾಧ್ಯಕ್ಷರಿಗೆ ಬೆಂಬಲ ನೀಡುವುದಾಗಿ ತಿಳಿಸಿ, ರಾಜಧಾನಿಯ ಪ್ರಜಾ ಮಂಡಲಿಯ ಕಾರ್ಯದರ್ಶಿ ಶ್ರೀ ವೆಂಕಟಸುಬ್ಬಯ್ಯರವರು ಅವರಿಗೆ ತಂತಿ ಕಳುಹಿಸಿರುತ್ತಾರೆ

SRI GAYATHRI,

TALKIES

On 7th and 8th

Universal's

WOMAN IN HIDING

(In Technicolour)

NEXT CHANGE

BLACK HAND

(In Technicolour)

ಫ್ರಾನ್ಸಿನ ಕಾರ್ಮಿಕ ಮುಖಂಡನಿಗೆ ಶಾಂತಿ ಬಹುಮಾನ

ಫ್ರಾನ್ಸಿನ ಟ್ರೇಡ್ ಯೂನಿಯನ್ ಮುಖಂಡರಾದ ಲಿಯಾನ್ ಜೋಹಾಗೆ ೧೯೫೧ನೇ ಸಾಲಿನ ನೊಬೆಲ್ ಶಾಂತಿ ಬಹುಮಾನವು ದೊರೆತಿರುವುದು

ತುಂಡೇರಳೆ ಸಾಹುಕಾರ್ ಸಿದ್ದಪ್ಪನವರ ನಿಧನ

ನಂಜನಗೂಡು ತಾಲ್ಲೂಕಿನ ತುಂಡೇರಳೆಯ ಸಾಹುಕಾರ್ ಶ್ರೀ ಟಿ ಸಿದ್ದಪ್ಪನವರು ಕೆಲವು ದಿನಗಳಿಂದ ಕ್ಷಯ ವಾಯು ರೋಗದಿಂದ ನರಳುತ್ತಿದ್ದು ಕಳೆದ ೩ನೇ ತಾ|| ತಮ್ಮ ೬೦ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಹಲವು ವರ್ಷಗಳ ಕಾಲ ಮೈಸೂರು ಪ್ರತಿನಿಧಿ ಸಭೆ ಮತ್ತು ಜಿಲ್ಲಾ ಬೋರ್ಡುಗಳ ಸದಸ್ಯರಾಗಿದ್ದರು ಇವರು ರಾಜಧಾನಿಯ ಹಳೆ ಅಗ್ರಹಾರದಲ್ಲಿ ಇರುವ ವಿದ್ಯಾನಿಲಯ ಮತ್ತು ನಂಜನಗೂಡಿನಲ್ಲಿ ಪಶುವೈದ್ಯ ಶಾಲೆಯ ಸ್ಥಾಪಕರಾಗಿದ್ದರು

ಶ್ರೀ ಲಕ್ಷ್ಮೀ ಥಿಯೇಟರ್

7-11-51 ರಿಂದ ಪ್ರತಿ ದಿನ 3 ಆಟಗಳು

ಮಾಂತ್ರಿ ಕುಮಾರಿ

(ತಮಿಳು)

WANTED

Agents for the Purum [illegible] ures Ltd Rs 2 per application Last date for receiving applications 20th November 19[illegible] Further details can be had from the Inspector in his Office. Interview between 11 and [illegible] A M and 1-30 and 3 P M

P M Pattaswamy

Inspector 2731 Room No Upstairs Old Post Office [illegible] Lashkar Mohalla Mysore

ಬಿಡಾರಂ ಕೃಷ್ಣಪ್ಪನವರ

ಪ್ರಸನ್ನ ಸೀತಾರಾಮ ಮಂದಿರ

ಮೈಸೂರು

11-11-51ನೇ ಭಾನುವಾರ

ಸಾಯಂಕಾಲ 6 ಘಂಟೆಗೆ

ವಿ|| ಸಾತ್ತೂರು ಸುಬ್ರಹ್ಮಣ್ಯಂರವರ

ಹಾಡುಗಾರಿಕೆ

ವಿ|| ತಂಜಾವೂರು ಟಿ. ಎ. ಕಲ್ಯಾಣ ಯ್ಯರ್‌ರವರ ಪಿಟೀಲು

ವಿ|| ಮೈಲತ್ತೂರು ರಾಮಚಂದ್ರರವರ ಮೃದಂಗ

ಮೆಂಬರುಗಳಲ್ಲದವರಿಗೆ

ಟಿಕೆಟ್ ಮೂಲಕ ಪ್ರವೇಶ

ಟಿಕೆಟ್ ದರ { ದೊಡ್ಡವರಿಗೆ 1-8 ಹುಡುಗರಿಗೆ 1 0

ಬಿ. ಕಪಿನೀಪತಿರಾವ್

ಆ ಸೆಕ್ರೆಟರಿ

ಪ್ರಭಾ ಪಿಕ್ಚರ್ ಹೌಸ್

ಅಮೋಘ ಪ್ರಾರಂಭ : 9—11—51 ರಿಂದ

ಪ್ರತಿ ದಿನ ಮೂರು ಆಟಗಳು

ಹೊಸ ಕಥಾ ಚಿತ್ರ ಮತ್ತು ಹೊಸ ತಾರಾಗಣದಿಂದ ಕೂಡಿದ

ಅತ್ಯುತ್ತಮ ಚಿತ್ರವನ್ನು ನಿರೂಪಿಸಿರುವ ನ್ಯೂ ಥಿಯೇಟರ್ಸ್‌ರವರ ಹಿಂದಿ ಚಿತ್ರ

ಪಹಿಲಾ ಆದ್ಮಿ*

ತಾರಾಗಣ –ಸ್ಮೃತಿ ಬಿಶ್ವಾಸ್ ಪಹರಿ ಸನ್ಯಾಲ್, ಆಸಿತ ಬರನ್

ಚಿತ್ರ ಸಂಗೀತ ಆರ್ ಸಿ ಬೊರಾಲ್ ನಿರ್ದೇಶನ ಬಿಮಲ್ ರಾಯ್

ಬೆಳಗಿನ ಪ್ರದರ್ಶನ 9—11—51 ರಿಂದ 3 ದಿನಗಳು ಮಾತ್ರ

ಕನ್ನನ್ ಬಾಲಾ ನಟಿಸಿರುವ ಅರೇಬಿಯನ್ ನೈಟ್ಸ್

ಗೌಡ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶ್ರೀ ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

- ಮಲೇರಿಯಾಹಾರಿ ಸೊಳ್ಳೆ ಪರದೆಗಳಿಗೆ ಬಾಹುಸಾರ್ -

ಮಕ್ಕಳ ತೊಟ್ಟಿಲಿಗೆ,ಮಂಚಕ್ಕೆ,ಸಿಂಗಲ್,ಡಬ್ಬಲ್ ಹಾಸಿಗೆಗಳಿಗೆ ಬಹಳ ಬಗ್ಗೆರಿಗೂ ಸಹ ಅನುಕೂಲವಾದ ಬೆಲೆ ಬಾಹುಸಾರ್ ಕಂಪೆನಿ,ಬ್ಯಾಂಕ್ ರೋಡ್,ಮೈಸೂರು

ಫೋನ್ ನಂ 792 (ಸಂಜೆ ಪತ್ರಿಕೆ) ಇಂದಿನ ಪತ್ರಿಕೆ ೩ ಕಾಸು

ಸಂಪುಟ ೧೧] ಗುರುವಾರ ೮-೧೧-೫೧ [ಸಂಚಿಕೆ ೪೮

ನೇಪಾಳ ವಿದ್ಯಾರ್ಥಿಗಳ – ಮೇಲೆ ಗುಂಡಿನೇಟು –

ಡಿ. ಹೆಚ್. ಚಂದ್ರಶೇಖರಯ್ಯನವರ ಸೇವೆಗಳ ಬಗ್ಗೆ ಪ್ರಶ್ನೆ

ಸ್ವಂ ಸು ಫೋನ್] ಬೆಂಗಳೂರು ೮ ... ಸನ ಸಭೆಯ ಸದಸ್ಯರಾಗಿರುವ ಶ್ರೀ ಡಿ ಎಚ್ ಚಂದ್ರಶೇಖರಯ್ಯನವರು ಭಕ್ಷ್ಯಾಕರ ಪರಿಹಾರ ಸಮಿತಿಯ ... ರನ್ನಾಗಿಯೂ ಮಾರ್ಚ್ ಎರಡು ತಿಂಗಳ ... ವೇತನ ಕೊಡುವುದು ಉಚಿತವೆ ... ಎಂಬುದಾಗಿ ಈ ದಿನ ಶಾಸನ ಸಭೆಯಲ್ಲಿ ಶ್ರೀ ಕೆ ಸಂಪಂಗಿ ರಾಮಯ್ಯನವರು ... ತಂದ ಅಲ್ಪಾವಧಿ ಪ್ರಶ್ನೆಗೆ ಸ... ರವರು ಉತ್ತರವಿತ್ತು ಅವರಿಗೆ ... ಕೊಡುತ್ತಿಲ್ಲವೆಂದೂ ಗೌರವದ ... ವನೆಯನ್ನು ಮಾತ್ರ ಕೊಡಲಾ... ವೆಂದೂ ಸಚಿವ ಶ್ರೀ ಕೆ ಟಿ ಭಾ... ವರು ನುಡಿದರು

... ವಾಮೋತಿಗಳ ರದ್ದಿನ ಮಸೂದೆಯ ... ಶ್ರೀ ಜಿ ಮಹಮದ್ ಷರೀಫರು ... ತಪಾದಿ ಶೃಂಗೇರಿ ಮಠಕ್ಕೆ ವಿನಾ... ಕೊಡುವುದು ಸೂಕ್ತವಾಗಿದೆಯೆಂ... ಳಿದರು

... ಸನ ಸಭೆ ಇನ್ನೂ ನಾಳೆ ಮತ್ತು ... ಸೇರಿ ನೂತನ ಪರಿಸ್ಥಿತಿಯ ... ಪರಿಶೀಲಿಸುವುದೆಂದು ತಿಳಿದುಬಂ... ದೆ

...ಪ್ರೀಂ ಕೋರ್ಟಿನ ಹೊಸ ಶ್ರೇಷ್ಠ ನ್ಯಾಯಾಧೀಶರು

... ನಂಗತರಾದ ಹರಿಲಾಲ್ ಕಾನಿಯವರ ಸ್ಥಾನದಲ್ಲಿ ಭಾರತದ ಸುಪ್ರೀಂ ... ನ ಶ್ರೇಷ್ಠ ನ್ಯಾಯಾಧೀಶರಾಗಿ ... ಪಂತಜಲಿ ಶಾಸ್ತ್ರಿಯವರನ್ನು ಖಾ... ವಾಗಿ ರಾಷ್ಟ್ರಾಧ್ಯಕ್ಷರು ನೇಮಿಸಿ... ದ್ದಾರೆ

ವಿಶ್ವ ಶಾಂತಿ ಸ್ಥಾಪನೆಗಾಗಿ ಸ್ಟಾಲಿನ್ನರಿಗೆ ನೆಹರೂ ಕರೆ

... ಷ್ಯದ ಮಹಾ ಕ್ರಾಂತಿಯ ... ವಾರ್ಷಿಕೋತ್ಸವದ ಸಂಬಂಧವಾಗಿ ಪ್ರ... ನೆಹರೂರವರು ಮಾರ್ಷಲ್ ಸ್ಟಾ... ರಿಗೆ ಭಾರತದ ಪ್ರಜೆಗಳ ಶುಭಾಶ... ಸಂದೇಶವನ್ನು ಕಳುಹಿಸಿ ವಿಶ್ವ... ಸ್ಥಾಪನೆಗೆ ಸ್ಟಾಲಿನ್ನರ ಸಹಕಾ... ವನ್ನೇ ಭಾರತವು ಇದಿರು ನೋಡುತ್ತಿ... ವದಾಗಿ ತಿಳಿಸಿರುತ್ತಾರೆ

ಮಂಗಳಾರತಿ

... ಮನೆಯ ಅವಸರದ ಹೋಬಳಿ... ಯ ಶ್ರೀಮನ್ಮಹಾರಾಜರ ಶ್ರೀ... ಪ್ರಾರ್ಥನಾ ಸಂಘದವರು ಶ್ರೀನ... ಶ್ವರ ಸ್ವಾಮಿ ದೇವಸ್ಥಾನದಲ್ಲಿ ಕ... ಸೋಮವಾರ ಕಾರ್ತಿಕ ಶುದ್ಧ ಷ... ಪ್ರಯುಕ್ತ ಬೆಳಗ್ಗೆ ಮಹಾ ಮಂಗ... ರತಿಯನ್ನು ಶ್ರೀಮನ್ಮಹಾರಾಜರ ... ನಲ್ಲಿ ನೆರವೇರಿಸಿದರು

... ಜಧಾನಿಯ ಸಿಟಿ ಕೋ ಆಪರೇ... ಬ್ಯಾಂಕಿನ ಬಳಿ ಇರುವ ಮಸೀದಿ... ಈ ದಿನ ಶ್ರೀಮನ್ಮಹಾರಾಜರ ... ಪ್ರಾರ್ಥನೆಯನ್ನು ದರ್ಬಾರ್ ... ಶ್ರೀ ಹೆಚ್ ಎಲ್ ದೇವರಾಜ... ನವರ ಅಧ್ಯಕ್ಷತೆಯಲ್ಲಿ ನೆರವೇರಿಸ... ಯಿತು ಶ್ರೀಮನ್ಮಹಾರಾಜರಿಗೆ ಶೀ... ಘ್ರದಲ್ಲೇ ಪುತ್ರ ಸಂತಾನವಾಗಲೆಂದೂ, ... ರ್ಘ ಆಯುರಾರೋಗ್ಯಗಳನ್ನು ಕರು... ಣಿಸಲೆಂದೂ ಭಗವಂತನನ್ನು ಪ್ರಾರ್ಥಿ... ಲಾಯಿತು

ಭಾರತಕ್ಕೆ ಗೋಧಿ ತರುತ್ತಿದ್ದ ಹಡಗಿಗೆ ಬೆಂಕಿ

ಭಾರತಕ್ಕೆ ಅಮೆರಿಕವು ಕಳುಹಿಸುವ ಗೋಧಿಯ ಪೈಕಿ ಸ್ವಲ್ಪ ಭಾಗವನ್ನು ತರುತ್ತಿದ್ದ ಅಮೆರಿಕದ ಹಡಗೊಂದರ ... ಜರ್ ... ರಡಿಯಲ್ಲಿ ಬೆಂಕಿ ... ಗಿ ಅದನ್ನು ಶಮನ ಮಾಡಲು ಸಾಧ್ಯವಿಲ್ಲದೆ ಅದರಲ್ಲಿರುವ ನಾವಿಕರ ಹಡಗನ್ನೇ ಪರಿತ್ಯಜಿಸಿ ... ರಾಗಿರುತ್ತಾರೆ ಅವರ ಸಹಾಯಕ್ಕಾಗಿ ... ನಾವೆಗಳನ್ನು ಕಳುಹಿಸಲಾಗಿದೆ

ರಷ್ಯದ ಪ್ರತಿಭಟನೆಗೆ ತುರ್ಕಿಯ ತಿರಸ್ಕಾರ

ಉತ್ತರ ಅಟ್ಲಾಂಟಿಕ್ ಒಪ್ಪಂದವನ್ನು ತುರ್ಕಿಯು ಅಂಗೀಕರಿಸಿರುವುದಕ್ಕೆ ಪ್ರತಿಭಟಿಸಿ ರಷ್ಯವು ಕಳುಹಿಸಿದ್ದ ... ಪತ್ರವನ್ನು ತುರ್ಕಿಯು ನಿರಾಕರಿಸಿರುವುದಾಗಿ ಗೊತ್ತಾಗಿದೆ

ಬಸ್ ಅನಾಹುತದಲ್ಲಿ ಕೇಂದ್ರ ಅಧಿಕಾರಿ ಮರಣ

ಸ್ವಂ ಸು] ಅರಸೀಕೆರೆ ...

ಕಳೆದ ...ನೇ ತಾ|| ಸಂಜೆ ಹೊಳೆನರಸೀಪುರದಿಂದ ಇಲ್ಲಿಗೆ ಬರುತ್ತಿದ್ದ ಜೈ ... ಮೋಟಾರು ಬಸ್ಸಿನ ಬ್ರೇಕುಗಳು ಹಿಡಿಯದೆ ಅದು ವೇಗವಾಗಿ ಹೋಗುತ್ತಾ, ಡ್ರೈವರ್ ಎಷ್ಟು ಪ್ರಯತ್ನ ಪಟ್ಟರೂ ಹತೋಟಿಗೆ ಸಿಗದೆ ಇದ್ದುದನ್ನು ಕಂಡು ಅದರಲ್ಲಿ ಪ್ರಯಾಣ ಮಾಡುತ್ತಿದ್ದ ಕೇಂದ್ರ ಸುಂಕದ ಅಧಿಕಾರಿ ಶ್ರೀ ಎಸ್ ವಿ ಹನುಮಂತರಾಯರು ಪ್ರಾಣವುಳಿಸಿಕೊಳ್ಳಲು ಅದರಿಂದ ಕೆಳಕ್ಕೆ ಧುಮುಕಿದರೆಂದೂ ತತ್ಪರಿಣಾಮವಾಗಿ ಮರಣ ಹೊಂದಿದರೆಂದೂ ತಿಳಿದುಬಂದಿದೆ

ಇಂಡಿಯಾ–ಚೀಣಾ ಸ್ನೇಹ ಸಂಘ

ರಾಜಧಾನಿಯ ವಾಣಿವಿಲಾಸ ಸರ್ಕಲ್ ಚೌಕದಲ್ಲಿರುವ ಕೈಲಾಸ್ ವಿಹಾರ್ ಭವನದಲ್ಲಿ ನಾಳೆ ಬೆಳಗ್ಗೆ ... ಗಂಟೆಗೆ ಮೈಸೂರು ಸಂಸ್ಥಾನದ ಇಂಡಿಯಾ ಚೀಣಾ ಸ್ನೇಹ ಸಂಘದ ಕಛೇರಿಯ ಆರಂಭೋತ್ಸವವನ್ನೂ, ಸಂಘದ ಬೋರ್ಡಿನ ಸ್ಥಾಪನೆಯನ್ನೂ ವಕೀಲರಾದ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ನೆರವೇರಿಸುವರು ಸಾರ್ವಜನಿಕರು ಭಾಗವಹಿಸಬೇಕೆಂದು ಕೋರಲಾಗಿದೆ

ದೆಹಲಿಯಲ್ಲಿ ರೆಡ್ಡಿಯವರ ಪ್ರಯತ್ನ ವಿಫಲವೇ ?

ಸ್ವಂ ಸು ಫೋನ್] ಬೆಂಗಳೂರು ೮

ದೆಹಲಿಯಲ್ಲಿ ಮೈಸೂರಿನ ಶಾಸನ ಸಭೆಯ ನಿರ್ಣಯದ ಬಗ್ಗೆ ಪ್ರಧಾನ ಮಂತ್ರಿಯ ಮನೋಭಾವವು ಕಾಣಬರುತ್ತಿದೆಯೆಂದೂ ರಾಷ್ಟ್ರಾಧ್ಯಕ್ಷರ ಆಜ್ಞೆಯು ಬದಲಾವಣೆ ಹೊಂದುವ ಸಂಭವವಿಲ್ಲವೆಂದೂ ತಿಳಿದುಬಂದಿದೆ ಶ್ರೀ ರೆಡ್ಡಿಯವರು ಈ ರಾತ್ರಿ ವಿಮಾನದಲ್ಲಿ ಹೊರಟು ನಾಳೆ ಬೆಳಗ್ಗೆ ಬೆಂಗಳೂರಿಗೆ ಹಿಂದಿರುಗುವರೆಂದು ಹೇಳಲಾಗಿದೆ

ನೇಪಾಳ ವಿದ್ಯಾರ್ಥಿಗಳ ಮೇಲೆ ಪೋಲೀಸರ ಗುಂಡು

ನೇಪಾಳದ ರಾಜಧಾನಿ ಖಟ್ಮಂಡುವಿನಲ್ಲಿ ಮೊನ್ನೆ ಪೋಲೀಸರು ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದ ಪರಿಣಾಮವಾಗಿ ... ಜನರಿಗೆ ಗಾಯವಾಯಿತೆಂದೂ, ... ಪೈಕಿ ಒಬ್ಬ ಹುಡುಗನು ನಿನ್ನೆ ರಾತ್ರಿ ಆಸ್ಪತ್ರೆಯಲ್ಲಿ ಮೃತಪಟ್ಟನೆಂದೂ ವರದಿಯಾಗಿದೆ ಹುಡುಗನ ದೇಹವನ್ನು ತಮಗೆ ಒಪ್ಪಿಸಬೇಕೆಂದು ನೆನ್ನೆ ವಿದ್ಯಾರ್ಥಿಗಳು ಆಸ್ಪತ್ರೆಯ ಎದುರಿನಲ್ಲಿ ಪ್ರದರ್ಶನ ನಡೆಸಿದರು ಪೋಲೀಸು ರಾಣಿಯಲ್ಲಿದ್ದ ಬಂದೂಕಗಳನ್ನು ಕಿತ್ತುಕೊಂಡು ಹೋಗಬೇಕೆಂದು ವಿದ್ಯಾರ್ಥಿಗಳು ಪ್ರಯತ್ನಪಟ್ಟುದರಿಂದಾಗಿ ಪೋಲೀಸರು ಗುಂಡು ಹಾರಿಸಬೇಕಾಗಿ ಬಂದಿತೆಂದು ಅಲ್ಲಿನ ಗೃಹ ಮಂತ್ರಿ ಕೋಯಿರಾಲಾರವರು ತಿಳಿಸಿರುತ್ತಾರೆ

ಭಾರತ ಸಮೀಪದ ಟಿಬೆಟ್ ನಗರಕ್ಕೆ ಚೀಣಾ ಸೈನ್ಯಗಳು

ಭಾರತದ ಗಡಿಯಲ್ಲಿರುವ ಕಾಲಿಂಪಾಂಗ್ ನಗರದ ಬಳಿ ಇರುವ ಟಿಬೆಟ್ಟಿನ ಗ್ಯಾಂಟ್ಸೆ ನಗರಕ್ಕೆ ನೂರುಗಟ್ಟಲೆ ಚೀಣಾ ಸೈನ್ಯಗಳು ಬರುತ್ತಿರುವುದಾಗಿ ವರದಿಯಾಗಿದೆ ಈ ಸ್ಥಳವು ಭಾರತ ಮತ್ತು ಟಿಬೆಟ್ಟುಗಳ ವ್ಯಾಪಾರಕ್ಕೆ ಪ್ರಮುಖ ನಗರವಾಗಿದೆ

ಶ್ರೀಕಂಠಪ್ಪನವರ ದಸ್ತಗಿರಿ

ರಾಜಧಾನಿಯ ಸಮಾಜವಾದಿ ಪಕ್ಷದ ಸದಸ್ಯರಾದ ಶ್ರೀ ಬಿ ಶ್ರೀಕಂಠಪ್ಪನವರನ್ನು ಕಾನೂನು ಸತ್ಯಾಗ್ರಹದ ಸಂಬಂಧವಾಗಿ ಈ ದಿನ ದಸ್ತಗಿರಿ ಮಾಡಲಾಯಿತು

ಯುವಕನು ಹೆಂಗಸಾಗಿ ಪುನಃ ಗಂಡಸಾದ ಪ್ರಸಂಗ

ಪಶ್ಚಿಮ ಜರ್ಮನಿಯಲ್ಲಿರುವ ವಿಸ್ಬಾಡೆನ್ನಿನ ಹತ್ತೊಂಭತ್ತು ವರ್ಷದ ಯುವಕ ಫ್ರೆಡರಿಕ್ ವಿಲ್ಹೆಂ ಮುನ್ಸೆಲ್ ಎಂಬುವನು ತನ್ನ ಜೀವಮಾನದಲ್ಲಿ ಎರಡು ಬಾರಿ ಲೈಂಗಿಕ ಬದಲಾವಣೆಗೆ ಒಳಗಾದ ಪ್ರಸಂಗವೊಂದು ವರದಿಯಾಗಿದೆ ... ರಲ್ಲಿ ಹುಟ್ಟಿದ ಈ ಹುಡುಗನು ಒಂದು ವರ್ಷದ ನಂತರ ಶಸ್ತ್ರ ಚಿಕಿತ್ಸೆಗೆ ಗುರಿಯಾಗಿ ಹೆಣ್ಣಾದನೆಂದೂ, ಅವನ ಹೆಸರನ್ನೂ ಸಹ ಹೆಂಗಸಿನದಕ್ಕೆ ಬದಲಾಯಿಸಲಾಯಿತೆಂದೂ ಹೇಳಲಾಗಿದೆ ಅವನು ಹುಡುಗಿಯಾಗಿದ್ದಾಗ ಗಂಡಸರನ್ನು ಕೆಲಸದಲ್ಲಿ ವಿಚಾರಿಸುತ್ತಿದ್ದನೆಂದೂ, ಈಚೆಗೆ "ಅವಳಿಗೆ" ಗಡ್ಡವು ಬೆಳೆದು ಎರಡು ದಿನಗಳಿಗೊಮ್ಮೆ ಅವಳು ಕ್ಷೌರ ಮಾಡಿಕೊಳ್ಳುತ್ತಿದ್ದಳೆಂದೂ ಗೊತ್ತಾಗಿದೆ ಪೋಲೀಸರು ಈ ದ್ವಂದ್ವ ಲಿಂಗದ ಯುವಕನನ್ನು ಹಿಂಬಾಲಿಸುತ್ತಿದ್ದುದನ್ನು ಕಂಡು ಅವನು ಬೇಸತ್ತು, ಅತ್ಯಂತ ಕೆಳಪುರಾದ ವೈದ್ಯರ ಮರೆಹೊಕ್ಕ ಮೇಲೆ ಅವರು ಅವನಿಗೆ ಎರಡು ಶಸ್ತ್ರ ಚಿಕಿತ್ಸೆಗಳನ್ನು ನಡೆಸಿದುದರಿಂದ ಪುನಃ ಲೈಂಗಿಕ ಬದಲಾವಣೆಯಾಗಿ ಅವನು ತನ್ನ ಸ್ತ್ರೀ ಉಡುಪುಗಳನ್ನು ತೆಗೆದು ಪುರುಷ ವಸ್ತ್ರಗಳನ್ನು ಧರಿಸುತ್ತಿರುವನೆಂದೂ, ತಲೆಯಲ್ಲಿ ಕ್ರಾಫನ್ನು ಬಿಟ್ಟಿರುವನೆಂದೂ ತಿಳಿದುಬಂದಿದೆ ಇನ್ನಾರು ತಿಂಗಳುಗಳಲ್ಲಿ ಇನ್ನೂ ಆರು ಚಿಕಿತ್ಸೆಗಳ ನಡೆದ ಮೇಲೆ ಅವನಿಗೆ ಸಂಪೂರ್ಣವಾದ ಪುರುಷ ಸ್ವರೂಪ ಬರುವುದೆಂದು ವೈದ್ಯರು ತಿಳಿಸಿದ್ದಾರೆ

ನರಿ ನಾಯಿಗಳಿಂದ ಮಕ್ಕಳ ಅಪಹಾರ

ಉತ್ತರ ಭಾರತದ ರಣಘಾಟ್ ಎಂಬಲ್ಲಿರುವ ನಿರಾಶ್ರಿತರ ಶಿಬಿರದ ಮಕ್ಕಳನ್ನು ಕೆಲವು ದಿನಗಳಿಂದ ನರಿ ನಾಯಿಗಳು ಎತ್ತಿಕೊಂಡು ಹೋಗುತ್ತಿರುವುದಾಗಿಯೂ, ಇಂತಹ ಹದಿನೈದು ಪ್ರಕರಣಗಳು ನಡೆದು ಎರಡು ಮಕ್ಕಳು ಪ್ರಾಣ ಬಿಟ್ಟುವೆಂದೂ ವರದಿಯಾಗಿದೆ ... ವರ್ಷದ ಹುಡುಗಿಯೊಬ್ಬಳ ಮೇಲೆ ನರಿಯೊಂದು ಬಿದ್ದು ಗಾಯಗೊಳಿಸಿತೆಂದೂ ಹೇಳಲಾಗಿದೆ ತಾಯಿಯ ಎದೆ ಹಾಲನ್ನು ಕುಡಿಯುತ್ತಾ ಮಲಗಿದ್ದ ಮಗುವೊಂದನ್ನು ನರಿಯು ಹೊತ್ತುಕೊಂಡು ಹೋಯಿತೆಂದು ಹೇಳಲಾಗಿದೆ

ದೇವಾಲಯ ಪ್ರವೇಶದ ಮಸೂದೆ ವಾಪಸು

ಕೇಂದ್ರ ಸರ್ಕಾರದ ಸೂಚನೆ

ಸ್ವಂ ಸು ಫೋನ್] ಬೆಂಗಳೂರು ೮

ದೇವಾಲಯ ಪ್ರವೇಶದ ಶಾಸನವು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಾದುದರಿಂದ ಸಂಸ್ಥಾನದ ಶಾಸನ ಸಭೆಯು ಅದನ್ನು ಮಾಡಲು ಅವಕಾಶವಿಲ್ಲವೆಂದು ಕೇಂದ್ರದಿಂದ ಬಂದಿರುವ ಸೂಚನೆಯನ್ನು ಅನುಸರಿಸಿ, ಈ ವಿಷಯವನ್ನು ಪುನರ್ವಿಮರ್ಶಿಸುವಂತೆ ರಾಜಪ್ರಮುಖರು ಸೂಚಿಸಿರುವುದರಿಂದ ಮೇಲ್ಕಂಡ ಮಸೂದೆಯನ್ನು ವಾಪಸು ತೆಗೆದುಕೊಳ್ಳುವ ಬಗ್ಗೆ ಸರ್ಕಾರದವರು ನಿರ್ಣಯವನ್ನು ಮಂಡಿಸಲಿರುವರೆಂದು ತಿಳಿದುಬಂದಿದೆ

ಉಮೇದುವಾರರ ವೆಚ್ಚದ ಬಗ್ಗೆ ಎಚ್ಚರಿಕೆ

ಚುನಾವಣೆಗಳಲ್ಲಿ ಸ್ಪರ್ಧಿಸುವ ಉಮೇದುವಾರರು ತಮ್ಮ ಎದುರಾಳಿಗಳು ಎಷ್ಟು ಹಣವನ್ನು ವೆಚ್ಚ ಮಾಡುವರೆಂಬ ಬಗ್ಗೆ ಹೆಚ್ಚು ಗಮನವಿತ್ತು ವಿಷಯಗಳನ್ನು ಸರ್ಕಾರಕ್ಕೆ ತಿಳಿಸಬೇಕೆಂದೂ, ಸ್ಪರ್ಧಿಗಾರರ ಪರ ಲಂಚ ಕೊಡುವುದಾಗಲೀ, ಅಥವಾ ಇತರ ವಿಧವಾದ ಪ್ರಭಾವ ಬೀರುವುದಾಗಲೀ, ವಾಹನ ಸೌಕರ್ಯಗಳನ್ನು ಕಲ್ಪಿಸುವುದಾಗಲೀ ಯಾವುದಕ್ಕೂ ಅವಕಾಶವೀಯಕೂಡದೆಂದೂ, ಭಾರತದ ಚುನಾವಣಾ ಕಮೀಷನರರಾದ ಸುಕುಮಾರ್ ಸೇನರವರು ಹೇಳಿರುತ್ತಾರೆ.

ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವವು ನಾಳೆ ಸಂಜೆ ೪ ಗಂಟೆಗೆ ಅಲ್ಲಿನ ಶ್ರೀಕಂಠಪುರದ ಜಾಪಲಿ ರಸ್ತೆಯಲ್ಲಿ ಬಿಜಮಾಡಿಸುವುದು. ಆಸ್ತಿಕ ಮಹಾಶಯರೆಲ್ಲರೂ ಯಥಾಶಕ್ತಿ ದೀಪೋತ್ಸವವನ್ನು ಅವರ ಮನೆಗಳ ಮುಂದೆ ಏರ್ಪಡಿಸಿ ಉತ್ಸವವು ವಿಜೃಂಭಣೆಯಿಂದ ನೆರವೇರಿಸಲು ಸಹಕಾರಿಗಳಾಗಬೇಕೆಂದು, ಶ್ರೀ ಬಿ. ವಿ. ಪಂಡಿತರು ಪ್ರಾರ್ಥಿಸಿರುತ್ತಾರೆ.

Wanted - An experienced English teacher for the S.S L C. class.

7.30 to 9 a.m. & 6 to 7 p.m. Please apply to "X, C/o Sadhvi, Mysore.

Edited, Printed and Published by A. R. Nagarajan, at Sadhvi Press D. Subbiah Road, Mysore

ಪ್ರಪಂಚ ಶಸ್ತ್ರಾಸ್ತ್ರಗಳ ಶೇಖರಣೆಯ ಸೆನ್ಸಸ್

ಪ್ರಪಂಚದ ವಿವಿಧ ರಾಷ್ಟ್ರಗಳು ಶಸ್ತ್ರಾಸ್ತ್ರಗಳನ್ನು ಗುಟ್ಟಾಗಿ ಶೇಖರಿಸುವುದನ್ನು ತಪ್ಪಿಸುವ ಸಲುವಾಗಿ ಅಣುಬಾಂಬು ಮುಂತಾದವೂ ಸೇರಿ ಎಲ್ಲ ಶಸ್ತ್ರಾಸ್ತ್ರಗಳ ಸೆನ್ಸಸ್ಸನ್ನು ತೆಗೆದುಕೊಳ್ಳಲು ಏರ್ಪಾಡಾಗಬೇಕೆಂದು ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸುಗಳು ವಿಶ್ವ ಸಂಸ್ಥೆಯಲ್ಲಿ ಸೂಚನೆ ಮಾಡಲಿವೆ.

ಅಮೆರಿಕದಲ್ಲಿ ಶೀತವಾತದಿಂದ ಅನೇಕರ ಮರಣ

ಅಮೆರಿಕದ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಅತಿ ಜೋರಾದ ಶೀತ ಗಾಳಿಯುಂಟಾದ ಪರಿಣಾಮವಾಗಿ ೪೦ ಜನರು ಮೃತಪಟ್ಟಿರುವರೆಂದು ವರದಿಯಾಗಿದೆ. ಇದರ ಜೊತೆಗೆ ಹಿಮವೂ ಸಹ ಯಥೇಚ್ಛವಾಗಿ ಬಿದ್ದು, ರಸ್ತೆಗಳಲ್ಲಿ ಹಲವು ಮರಣಗಳಾಗಿರುತ್ತವೆ.

ಸುಪ್ರಸಿದ್ಧ

ಮಲೆಯಾಳ ಜ್ಯೋತಿಷ್ಯರು ಕೆ. ಕುಮಾರಸ್ವಾಮಿ

ವಿಲಾಸ: ರೂಂ ನಂ. 1 ಅಂಬಳೆ ಅಣ್ಣಯ್ಯ ಪಂಡಿತರ ಛತ್ರ, ಸಯ್ಯಾಜಿ ರಸ್ತೆ, ಮೈಸೂರು

ಇವರು ಕೇರಳದವರಾಗಿಯೂ ಶಾಸ್ತ್ರೀಯವಾಗಿಯೂ, ಭೂತ, ಭವಿಷ್ಯದ್ವರ್ತಮಾನಗಳನ್ನು ಹೇಳುತ್ತಾರೆ. ಇಂದೇ ವಿಚಾರಿಸಿ.

ಸಿಪಾಯಿ ದಂಗೆಯ ಚಿತ್ರ

"ಗುಲಾಮ್" ಎಂಬ ಹೆಸರಿನ ಹೊಸ ಚಲನ ಚಿತ್ರವೊಂದನ್ನು ಬೊಂಬಾಯಿನ ಒಂದು ಚಿತ್ರ ತಯಾರಿಕಾ ಸಂಸ್ಥೆಯವರು ಶೀಘ್ರದಲ್ಲೇ ತೆಗೆಯಲುಪಕ್ರಮಿಸುತ್ತಾರೆಂದು ಗೊತ್ತಾಗಿದೆ. "ಅಂದಾಜ್" ಚಿತ್ರ ತಯಾರಕರಾದ ಶ್ರೀ ಶಾಂತಿಕುಮಾರ್ ದಾವೆಯವರು ಪ್ರಖ್ಯಾತ ಉರ್ದು ಬರಹಗಾರರಾದ ಖುಮಾರ್ ಬರಾಬಾಂಕಿಯವರ ಸಹಕಾರ ಪಡೆದು ತಾವೇ ಚಿತ್ರದ ಕಥೆಯನ್ನು ರಚಿಸುವರು. ಭಾರತದ ಸ್ವಾತಂತ್ರ್ಯದ ಪ್ರಥಮ ಯುದ್ಧ ಅಥವಾ ಸಿಪಾಯಿ ದಂಗೆಯ ಕಾಲದ ದಿನಗಳ ಚರಿತ್ರೆಯೇ ಇದರಲ್ಲಿ ಕಥಾ ಭಾಗವಾಗುವುದು. ಚಿತ್ರದಲ್ಲಿ ಪ್ರೇಮನಾಥ್, ರಂಜನ್ ಮತ್ತು ಟಿ. ಆರ್. ರಾಜಕುಮಾರಿ ಇವರುಗಳು ಪಾತ್ರ ವಹಿಸುವರು.

ಬ್ರಿಟಿಷ್ ಪ್ರಜೆಗಳ ಮೇಲೆ ಈಜಿಪ್ಟಿನವರ ದುರ್ವರ್ತನೆ

ಬ್ರಿಟಿಷ್ ಪ್ರಜೆಗಳ ಮೇಲೆ ಈಜಿಪ್ಟ್ ಜನರು ದುಂಡಾವರ್ತಿ ನಡೆಸಿದ ಪ್ರಸಂಗಗಳು ವರದಿಯಾಗಿವೆ. ಒಂದು ಕಡೆ ಕ್ರಾಂತಿಕಾರಿಗಳು ಇಬ್ಬರು ಬ್ರಿಟಿಷರ ಮೇಲೆ ಗುಂಡು ಹಾರಿಸಿ ಬೆದರಿಸಿದರು. ಮತ್ತೊಂದು ಕಡೆ ಒಬ್ಬ ಬ್ರಿಟಿಷ್ ಗುಮಾಸ್ತೆಯನ್ನು ಜನರು ಹೊಡೆಯುತ್ತಿದ್ದಾಗ ಈಜಿಪ್ಟ್ ಪೋಲೀಸರು ನೋಡುತ್ತಾ ನಿಂತಿದ್ದರೆಂದು ಹೇಳಲಾಗಿದೆ.

ಭಾಷಾ ಕಾಗದ ಮತ್ತು ಸ್ಟಾಂಪುಗಳ ಅಭಾವ

ಸ್ವಂ.ವ] ಚಾಮರಾಜನಗರ

ಭಾಷಾ ಕಾಗದ ಮತ್ತು ಕೋರ್ಟ್ ಫೀ ಸ್ಟಾಂಪುಗಳು ಇಲ್ಲಿ ದೊರೆಯುವುದು ಬಹಳ ತೊಂದರೆಯಾಗಿರುವುದು. ಅನೇಕರು ಸ್ಟಾಂಪುಗಳಿಗೆ ಸಾಕಷ್ಟು ಬೆಲೆ ತೆತ್ತು ಹೆಚ್ಚಿನ ಬೆಲೆಯ ಕಾಗದ ಮತ್ತು ಸ್ಟಾಂಪನ್ನು ಉಪಯೋಗಿಸಬೇಕಾಗಿರುವುದು. ಅವೂ ಸಿಗುವುದು ದುರ್ಲಭವಾಗಿರುವುದು.

ಉದಾರ ದಾ[ನ]

ಇಲ್ಲಿನ ಪೌರಸಭಾ ಹೈಸ್ಕೂಲ್ ಬಡಾಯಿಸಲು ಪುರಸಭಾ ಸದಸ್ಯರಾದ ಸಿ. ವಿ. ರಾಮಯ್ಯರವರು ೫ ಸಾವಿರ ರೂ ಗಳನ್ನೂ, ಜಿಲ್ಲಾ ಬೋರ್ಡಿನವರು ... ಸಾವಿರ ರೂ. ಗಳನ್ನೂ ಕೊಡಲೊಪ್ಪಿದ್ದಾರೆ. ಶಾಲೆಗೆ ಹೋಗುವ ವಿದ್ಯಾರ್ಥಿಯರಿಗಾಗಿ ಪೌರಸಭಾ ಸದಸ್ಯರಾದ ಶ್ರೀ ಟಿ. ನಾರಾಯಣ್‌ರವರು ... ವಾಗಿ ಬಸ್ಸೊಂದನ್ನು ಏರ್ಪಡಿಸಿ...

SRI GAYATHRI

TALKIES

On 7th and 8th

Universal's

WOMAN IN HIDING

(In Technicolour)

NEXT CHANGE:-

BLACK HAND

(In Technicolour)

ABIDS' OUT RIGHT AUCTION SALE

NEXT SUNDAY 11-11-1951 AT 10 A. M.

MURPHY RADIOS

Authorised Dealers:- **ABIDS,** Statue Square, Mysore.

MURPHY RADIOS SALES & SERVICE STATION

ಒಲಂಪಿಯ

8-11-51 ರಿಂದ ಅಮೋಘ ೩ನೇ ವಾ[ರ]

ಪರಿಸ್ತಾನ್ ಪಿಕ್ಚರ್ಸ್‌ರವರ

ಬೀವಿ ...

ಪಾತ್ರ:- ಮಮ್ತಾಜ್ ಶಾಂತಿ, ಪ್ರಾ[ಣ್] ವೀಣಾ, ಅಲ್ ನಸೀರ್, ಮಾಧು[ರಿ]

—: ಬೆಳಗಿನ ಪ್ರದರ್ಶನ :—

8-11-51 ರಿಂದ 4 ದಿನಗಳು ಮಾ[ತ್ರ]

ಹಿಂದೂಸ್ತಾನ್ ಚಿತ್ರರವರ

ರಿಂ ಜಿಂ

RIM GIM

ಪಾತ್ರ:- ರಮೋಲ, ಕಿಶೋರ್ ಸ[ಾಹು]

ರಾಜಕಮಲ್, ಮೈಸೂ[ರು]

4ನೇ ವಾರ

ಪಿಚ್ಚೈಕಾರ[ಿ]

—: ಬೆಳಗಿನ ಪ್ರದರ್ಶನ:—

9-11-51 ರಿಂದ 3 ದಿನ ಮಾತ್ರ

ವೀರ ಕುಣಾಲ್

(ಹಿಂದಿ ಚಿತ್ರ)

ಪಾತ್ರ :— ಕಿಶೋರ್ ಸಾಹು, ಶೋಭನಾ ಸಮರ್ಥ್

ಶ್ರೀ ಗಣೇಶಾ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ

9-11-51ನೇ ಶುಕ್ರವಾರದಿಂದ ಅಮೋಘ ಆರಂಭ

ಎಸ್. ಎಸ್. ಕೆ. ಫಿಲಂಸ್‌ರವರ ಅಮೋಘ ಸಾಮಾಜಿಕ ತಮಿಳು ಚಿತ್ರ

• ಮಣಮಗಳ್ •

ತಾರಾಗಣ :- ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ, ಲಲಿತ-ಪದ್ಮಿನಿ, ಸಹಸ್ರನಾಮಂ, ಬಾಲಯ್ಯ, ದೊರೈರಾಜ್, ಬಾಲ ಸುಬ್ರಹ್ಮಣ್ಯಂ, ಪುಳಿಮೂಟ್ಟೈ ಮುಂತಾದವರು

ಹಿನ್ನೆಲೆ ಸಂಗೀತ :- ಎಂ. ಎಲ್. ವಸಂತ ಕುಮಾರಿ

[ಮೊದಲನೇ ನಾಲ್ಕು ವಾರಗಳಲ್ಲಿ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ]

[N. S. FILMS RELEASE

ಗೌಡ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ **M. V. ಭೋಜಯ್ಯ ಶೆಟ್ಟಿ** ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿಜಿ.ನಂ. 792   1 ಸಂಚಿಕೆ ಮೂರು   ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦]   ಶುಕ್ರವಾರ ೯-೧೧-೫೧   [ಸಂಚಿಕೆ ೬೯

ಶಸ್ತ್ರ ಸನ್ಯಾಸಕ್ಕಾಗಿ ಪಂಚ ರಾಷ್ಟ್ರ ಸಮ್ಮೇಳನಕ್ಕೆ ಕರೆ

ಸಂಶೋಧನೆ ಮತ್ತು ಪ್ರಯೋಗದ ಪ್ರಾಮುಖ್ಯತೆ

...ನಿಂಗ್ ಕಾಲೇಜುಗಳ ಸಮ್ಮೇ... ...ದಲ್ಲಿ ಶ್ರೀಮತಿ ಹಂಸಾ ಮೆಹತಾ ...ರವರ ಅಧ್ಯಕ್ಷ ಭಾಷಣ

ಮೈಸೂರು ೯

...ಭಾರತದ ಟ್ರೈನಿಂಗ್ ಕಾಲೇಜುಗ... ...ನೆಯ ಸಮ್ಮೇಳನವು ಈ ದಿನ ಬೆ... ...ಪುರ ಭವನದಲ್ಲಿ ಮೈಸೂ... ...ವಿದ್ಯಾಲಯದ ಉಪ ಸ್ಥಾನಕ ...ದ ಡಾ|| ಬಿ. ಎಲ್. ಮಂಜುನಾ... ...ದ ಆರಂಭಗೊಳಿಸಲ್ಪಟ್ಟಿತು. ...ದ ವಿಶ್ವ ವಿದ್ಯಾಲಯದ ಉಪ... ...ಗಳಾದ ಶ್ರೀಮತಿ ಹಂಸಾ ಮೆ... ...ರವರು ಅಗ್ರಾಸನವನ್ನು ವಹಿಸಿದ್ದ... ...ದ ಅನೇಕ ಭಾಗಗಳಿಂದ ಒ... ...ಜನ ಪ್ರತಿನಿಧಿಗಳು ಬಂದಿದ್ದ...

...ನೆಯಾದ ನಂತರ ಮೈಸೂ... ...ಪಾಧ್ಯಾಯರ ಕಾಲೇಜಿನ ಅಧ್ಯ... ...ಶ್ರೀ ಎ. ಸಿ. ದೇವೇಗೌಡರು ...ನಿಗಳನ್ನು ಸ್ವಾಗತಿಸಿ ಭಾಷಣ ...ದರು.

...ಮಂಜುನಾಥ್‌ರವರು ತಮ್ಮ ...ಭಾಷಣದಲ್ಲಿ ವಿದ್ಯಾಭ್ಯಾಸದ ...ಕ್ಕಾಗಿ ಶುಶಿಕ್ಷಿತರಾದ ಉಪಾ... ...ಗಳ ಆವಶ್ಯಕತೆಯನ್ನು ಒ... ...ದರು. ಈಗಿರುವ ವಿದ್ಯಾಭ್ಯಾಸ ...ಯಾರಿಗೂ ಸಮರ್ಪಕವಾ... ...ಂಶವನ್ನು ವಿವರಿಸಿ ತರಬೇ... ...ವಿದ ಅಧ್ಯಾಪಕರುಗಳಿಂದ ಈ ...ನಿವಾರಣೆಯಾಗುವುದೆಂದು ...ದರು. ಈಗ ವಿದ್ಯಾಭ್ಯಾಸ ಕ್ರ... ...ಗುತ್ತಿರುವ ವ್ಯರ್ಥ ಶ್ರಮ ಮ... ...ಧ್ಯಾಪಕರೂ ಮತ್ತು ವಿದ್ಯಾರ್ಥಿ... ...ಶಾಭಾವನೆಯು ನಿವಾರಣೆ... ...ಕೆಂದು ಅವರು ಹೇಳಿದರು.

...ತದ ವಿದ್ಯಾಭ್ಯಾಸ ಕ್ರಮದ ಅ... ...ನುಗುಣವಾಗಿ ಗುರು ಶಿಷ್ಯರ ...ವನ್ನು ಪುನರುಜ್ಜೀವನಗೊಳಿಸ... ...ದು ಅವರು ಸೂಚಿಸಿದರು.

...ಕ್ಷಣೆಯರಾದ ಶ್ರೀಮತಿ ಹಂ... ...ಮೆಹತಾರವರು ತಮ್ಮ ಭಾಷಣದ ...ರತ ರಾಷ್ಟ್ರೀಯ ಯೋಜನೆಯ ...ನ್ನು ವಿವರಿಸಿ ಅದರಲ್ಲಿ ವಿದ್ಯಾ... ...ಪರಿಷ್ಕರಣಕ್ಕೆ ಕೊಟ್ಟಿರುವ ...ಮುಖ್ಯತೆಯನ್ನು ಸೂಚಿಸಿದರು. ಇ... ...ಬುಗಳಿಗೆ ಹೋಲಿಸಿದರೆ ವಿದ್ಯಾ... ...ಕ್ಕಾಗಿ ಒದಗಿಸಲಾಗಿರುವ ಮೊಬ... ...ರಾ ಅಲ್ಪವೆಂದು ಅವರು ಹೇಳಿ... ...ವಿದ್ಯಾಭ್ಯಾಸದ ಪ್ರಗತಿಗೆ ಸಂ... ...ನೆ ಮತ್ತು ಪ್ರಯೋಗಗಳ ಅಗ... ...ನ್ನು ಎಲ್ಲರೂ ಅಂಗೀಕರಿಸಿರುವ ...ವನ್ನು ಅವರು ಒತ್ತಿ ಹೇಳಿದರು ...ವಿದ್ಯಾಲಯಗಳಲ್ಲಿ ಮಾತ್ರವೇ ಅ... ...ಪ್ರಥಮಿಕ ಉಪಾಧ್ಯಾಯರುಗಳ ...ನಿಂಗ್ ಶಾಲೆಗಳಲ್ಲಿಯೂ ಸಂಶೋ... ...ನಾ ಕೇಂದ್ರಗಳನ್ನು ಸ್ಥಾಪಿಸಬೇಕೆಂ... ...ಅವರು ಸೂಚಿಸಿದರು. ಇದಲ್ಲದೆ ಸ... ...ರದವರೂ ಸಹ ವಿದ್ಯಾಭ್ಯಾಸ ಸಂ... ...ಧನೆಯ ಕೇಂದ್ರವೊಂದನ್ನು ಏರ್ಪ... ...ಸಬೇಕೆಂದು ಹೇಳಿದರು. ದೇಶದ ವಿ... ...ದ್ಯಾಭ್ಯಾಸದ ಪದ್ಧತಿಯಲ್ಲಿ ಸೂಕ್ತವಾದ ...ರ್ಪಾಡುಗಳನ್ನು ಮಾಡುವ ಬಗ್ಗೆ ...ತನ ಪ್ರಯೋಗಗಳನ್ನು ಕೈಗೊಳ್ಳು... ವುದೂ ಸಹ ಅವಶ್ಯಕವೆಂದು ಅವರು ತಿಳಿಸಿದರು. ರಾಷ್ಟ್ರೀಯ ಯೋಜನೆಯಲ್ಲಿ ಸೂಚಿಸಿರುವಂತೆ ನಮ್ಮ ದೇಶದ ಮಕ್ಕಳಿಗೆ ಆದರ್ಶಪ್ರಾಯವಾದ ವಿದ್ಯೆಯನ್ನು ಕಲಿಸಲು ಎಲ್ಲಾ ಟ್ರೈನಿಂಗ್ ಕಾಲೇಜುಗಳೂ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಈ ಸಮ್ಮೇಳನವು ಸಹಕಾರಿಯಾಗಲೆಂದು ಅವರು ಹಾರೈಸಿದರು.

ಶಸ್ತ್ರಾಸ್ತ್ರ ಸೆನ್ಸಸ್ ನಡೆದ ನಂತರ ಆಯುಧಗಳ ಖೋತಾ

ಅಣು ಬಾಂಬೂ ಸೇರಿ ಎಲ್ಲ ಆಯುಧಗಳನ್ನು ಪ್ರಪಂಚದಾದ್ಯಂತದವರೂ ಪತ್ತೆ ತೆಗೆದುಕೊಂಡ ನಂತರದ ಹತೋಟಿಗೆ ಒಳಪಡಿಸಿದ ಶಸ್ತ್ರ ಸನ್ಯಾಸನನ್ನು ಮಾಡಬೇಕೆಂದು ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸುಗಳು ಮನವಿ ಮಾಡಿರುತ್ತವೆ. ರಷ್ಯಕ್ಕೆ ಅವು ಕರೆಯನ್ನು ಕೊಟ್ಟು ಶಸ್ತ್ರಾಸ್ತ್ರಗಳ ಪೈಪೋಟಿಯನ್ನು ಕೊನೆಗಾಣಿಸಲು ತಮ್ಮೊಡನೆ ಸೇರಬೇಕೆಂದು ತಿಳಿಸಿ ಈ ತನಿಖೆಯಾದ ನಂತರ ಶಸ್ತ್ರಾಸ್ತ್ರಗಳ ಖೋತಾ ಮಾಡಲು ಅವು ಒಪ್ಪುವುದಾಗಿ ಗೊತ್ತಾಗಿದೆ. ವಿಶ್ವ ಸಂಸ್ಥೆಯೇ ಈ ಕೆಲಸವನ್ನು ಕೈಗೊಳ್ಳಲು ಅವು ಒಪ್ಪುವುವು.

ರಷ್ಯಕ್ಕೆ ಟ್ರೂಮನ್ ಮತ್ತು ಏಚಿಸನ್ನರ ಪ್ರಾರ್ಥನೆ

ಅಣು ಶಸ್ತ್ರಗಳ ಅಖೈರಾದ ನಿರೋಧವೂ ಒಳಗೊಂಡ ಪೂರ್ಣ ಮತ್ತು ವಿವರವಾದ ಶಸ್ತ್ರ ಸನ್ಯಾಸ ಸೂಚನೆಗಳಿಗೆ ರಷ್ಯ ಒಡಂಬಡಬೇಕೆಂದು ಅಮೆರಿಕದ ಅಧ್ಯಕ್ಷ ಟ್ರೂಮನ್ನರು ಪ್ರಾರ್ಥಿಸಿರುತ್ತಾರೆ. ವಿದೇಶಾಂಗ ಮಂತ್ರಿ ಏಚಿಸನ್ನರು ರಷ್ಯಕ್ಕೆ ಮೂರನೇ ಬಾರಿ ಪ್ರಾರ್ಥನೆ ಮಾಡಿ ಪಶ್ಚಿಮರಾಷ್ಟ್ರಗಳ ಶಾಂತಿ ಸಲಹೆಯನ್ನು ಒಪ್ಪಬೇಕೆಂದು ತಿಳಿಸಿರುತ್ತಾರೆ.

ಶ್ರೀಕಂಠಪ್ಪನವರ ಬಿಡುಗಡೆ

ನೆನ್ನೆ ದಿನ ವಸ್ತಗಿರಿಯಾದ ಸಮಾಜವಾದಿ ಪಕ್ಷದ ಪ್ರಮುಖ ಕಾರ್ಯಕರ್ತರಾದ ಶ್ರೀ ಬಿ. ಶ್ರೀಕಂಠಪ್ಪನವರನ್ನು ಜಾಮೀನಿನ ಮೇಲೆ ಬಿಡಬಹುದೆಂದು ಸಾಗರದಿಂದ ಬಂದ ಸೂಚನೆಯಂತೆ ನೆನ್ನೆಯೇ ಅವರನ್ನು ಬಿಡುಗಡೆ ಮಾಡಲಾಯಿತು.

ಮಲೆನಾಡು ಕೆರೆಗಳ ದುರಸ್ತು

ಬೆಂಗಳೂರು ೯

ನೆನ್ನೆ ಶಾಸನ ಸಭೆಯಲ್ಲಿ ಶ್ರೀ ಬಿ. ಎಲ್. ಬೋರಣ್ಣಾಗೌಡರ ಪ್ರಶ್ನೆಗೆ ಉತ್ತರವಾಗಿ ಮಲೆನಾಡಿನ ಪ್ರಾಯಶಃ ಎಲ್ಲ ಕೆರೆಗಳಲ್ಲಿರುವ ಹೂಳನ್ನೂ ತೆಗೆಸಲಾಗಿದೆಯೆಂದೂ, ೧೭೬೮ ಕೆರೆಗಳನ್ನು ಸರಿಪಡಿಸಲಾಗಿದೆಯೆಂದೂ ಗೃಹ ಮಂತ್ರಿ ಶ್ರೀ ಮರಿಯಪ್ಪನವರು ತಿಳಿಸಿದರು.

ಸೀರಾ ಮತ್ತು ಬೆಸ್ಲದ ತಯಾರಿಗಾಗಿ ಪಾನ ನಿರೋಧವು ಜಾರಿಯಲ್ಲಿರುವ ಪ್ರದೇಶದಲ್ಲಿನ ಈಚಲು ವನಗಳನ್ನು ಹರಾಜು ಹಾಕಲಾಗಿದೆಯೆಂದೂ, ಪಾನ ನಿರೋಧ ಕ್ರಮವನ್ನು ಬಿಟ್ಟು ಬಿಡುವ ಉದ್ದೇಶ್ಯದಿಂದ ಈಚಲು ವನಗಳನ್ನು ಹರಾಜು ಹಾಕಲಾಗಿಲ್ಲವೆಂದೂ ರೆವಿನ್ಯೂ ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಮತ್ತೊಂದು ಪ್ರಶ್ನೆಗೆ ಉತ್ತರವಿತ್ತು ತಿಳಿಸಿದರು.

ವಸಂತ ಕೋಕಿಲಂರವರ ನಿಧನ

ಮದ್ರಾಸಿನ ಸುಪ್ರಸಿದ್ಧ ಸಂಗೀತ ವಿದುಷಿ ಎನ್. ಸಿ. ವಸಂತ ಕೋಕಿಲಂರವರು ಮೊನ್ನೆ ಸಂಜೆ ನಿಧನರಾದರೆಂದು ವರದಿಬಂದಿದೆ ಅವರಿಗೆ ೩೨ ವರ್ಷ ವಯಸ್ಸಾಗಿತ್ತು. ಎರಡು ವಾರಗಳಿಂದ ಅವರು ಕ್ಷಯರೋಗದಿಂದ ನರಳುತ್ತಾ ನರ್ಸಿಂಗ್ ಹೋಮಿಗೆ ಔಷಧೋಪಚಾರಕ್ಕಾಗಿ ಸೇರಿದ್ದರು.

ಸಮಾಜವಾದಿ ಪಕ್ಷದ ಬಹಿರಂಗ ಸಭೆ

ರಾಜಧಾನಿಯ ಸಮಾಜವಾದಿ ಪಕ್ಷದ ಕಾರ್ಯಕರ್ತರ ಸಭೆಯು ಸಂತೇಪೇಟೆಯಲ್ಲಿರುವ ಪಕ್ಷದ ಕಛೇರಿಯಲ್ಲಿ ನಾಳೆ ಬೆಳಿಗ್ಗೆ ೧೧ ಘಂಟೆಗೆ ನಡೆಯುವುದು. ಪ್ರಾಂತ ಸಮಿತಿ ಅಧ್ಯಕ್ಷ ಶ್ರೀ ಸಿ. ಜಿ. ಕೆ. ರೆಡ್ಡಿಯವರು ಅಗ್ರಾಸನವನ್ನು ವಹಿಸುವರು ಅದೇ ಸಂಜೆ ೫ ೩೦ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಶ್ರೀ ಬಿ. ಶ್ರೀಕಂಠಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ. ಶ್ರೀ ಸಿ. ಜಿ. ಕೆ. ರೆಡ್ಡಿಯವರು ಭಾಷಣ ಮಾಡುವರು.

ಶಾಸನ ಸಭೆಯನ್ನು ಮುಕ್ತಾಯಮಾಡುವ ಪ್ರಶ್ನೆ

ಸ್ವಂ.ಸು ಫೋ೯]   ಬೆಂಗಳೂರು ೯

ಈ ದಿನ ಶಾಸನ ಸಭೆಯಲ್ಲಿ ಶ್ರೀ ಹೆಚ್. ಸಿ. ಲಿಂಗಾರೆಡ್ಡಿಯವರು ಹಾಕಿದ ಅಲ್ಪ ಕಾಲಾವಧಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹಣಕಾಸಿನ ಮಂತ್ರಿ ಶ್ರೀ ಹೆಚ್. ಸಿ. ದಾಸಪ್ಪನವರು ಬೆಂಗಳೂರು ಜಿಲ್ಲೆಯ ಒಂದು ಹಳ್ಳಿಯಲ್ಲಿ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಾದ ಶ್ರೀ ಪಿ. ಎಸ್. ಕೆ. ಚಾರಿಯವರು ಗ್ರಾಮಾಂತರ ಸಾಲದ ಸರ್ವೆಯನ್ನು ನಡೆಸುತ್ತಿರುವರೆಂದೂ, ಭಾರತದ ಯೋಜನಾ ಸಮಿತಿಯವರ ಸೂಚನೆ ಪ್ರಕಾರ ಈ ಕ್ರಮವನ್ನು ಕೈಗೊಳ್ಳಲಾಗಿದೆಯೆಂದೂ, ಆರು ತಿಂಗಳುಗಳಲ್ಲಿ ಕೆಲಸವು ಪೂರೈಸುವುದೆಂದೂ ತಿಳಿಸಿದರು. ೧೯೪೫ರಲ್ಲಿ ಗ್ರಾಮಾಂತರದವರ ಸಾಲವು ೨೩.೫೫ ಕೋಟಿ ರೂ. ನಷ್ಟು ಇದ್ದಿತೆಂದೂ ಅವರು ಹೇಳಿದರು.

ಶಾಸನ ಸಭೆಯನ್ನು ಡಿಸೆಂಬರ್‌ವರೆಗೆ ಮುಂದುವರೆಸುವುದೇ ಅಥವಾ ಈಗಲೇ ಮುಕ್ತಾಯ ಮಾಡಬೇಕೇ ಎಂಬ ವಿಷಯವನ್ನು ಸಭೆಯ ಮುಂದೆ ಹಲವು ಸದಸ್ಯರು ಇಡಲಾಗಿ, ಶ್ರೀ ಹೆಚ್. ಸಿ. ದಾಸಪ್ಪನವರು ಉತ್ತರವಿತ್ತು, ಮುಖ್ಯಮಂತ್ರಿಗಳು ಬಂದ ನಂತರ ಈ ವಿಷಯವನ್ನು ಪರಿಶೀಲಿಸಬಹುದೆಂದು ಸೂಚಿಸಿದರು

ಪಂಚ ಮಹಾ ರಾಷ್ಟ್ರಗಳ ಒಪ್ಪಂದಕ್ಕಾಗಿ ರಷ್ಯದ ಕರೆ

ಪಶ್ಚಿಮ ರಾಷ್ಟ್ರಗಳು ಇತ್ತ ಹೊಸ ಶಾಂತಿ ಸಲಹೆಯ ಪ್ರತಿಯಾಗಿ ರಷ್ಯದ ವಿದೇಶಾಂಗ ಮಂತ್ರಿ ಆಂಡ್ರಿ ವಿಷಿನ್‌ಸ್ಕಿಯವರು ನೆನ್ನೆ ಒಂದು ಸೂಚನೆಯನ್ನಿತ್ತು, ಚೀಣವೂ ಸೇರಿದ ಪಂಚಮಹಾರಾಷ್ಟ್ರಗಳ ಸಮ್ಮೇಳನವು ನಡೆಯಬೇಕೆಂದೂ, ಮುಂದಿನ ಜೂನ್ ತಿಂಗಳಿನೊಳಗೆ ಪ್ರಪಂಚದ ಶಸ್ತ್ರಸನ್ಯಾಸದ ಸಮ್ಮೇಳನವನ್ನು ಕರೆಯಬೇಕೆಂದೂ ತಿಳಿಸಿರುತ್ತಾರೆ. ಜೂನ್ ೧೫ರ ಹೊತ್ತಿಗಾದರೂ ಶಸ್ತ್ರಾಸ್ತ್ರಗಳಲ್ಲಿ ಖೋತಾ, ಅಣು ಶಸ್ತ್ರಗಳ ಪೂರ್ಣ ನಿರೋಧ ಮತ್ತು ಅವುಗಳ ಅಂತರರಾಷ್ಟ್ರೀಯ ಹತೋಟಿಯಾಗಬೇಕೆಂದು ವಿಷಿನ್‌ಸ್ಕಿಯವರು ಅಭಿಪ್ರಾಯಪಟ್ಟಿರುತ್ತಾರೆ

ರೆಡ್ಡಿಯವರು ನಾಳೆ ವಾಪಸು

ಸ್ವಂ.ಸು.ಫೋ೯]   ಬೆಂಗಳೂರು ೯

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಾಳೆ ದಿನ ದೆಹಲಿಯಿಂದ ಹಿಂತಿರುಗುವರೆಂದು ತಿಳಿದುಬಂದಿದೆ. ಮೈಸೂರಿನ ಶಾಸನ ಸಭೆಯ ನಿರ್ಣಯದ ವಿಷಯವಾಗಿ ಅವರು ನಡೆಸಿದ ಮಾತುಕತೆಗಳ ಪರಿಣಾಮವೇನೆಂಬುದು ನಿಖರವಾಗಿ ಗೊತ್ತಿಲ್ಲವಾದರೂ ಸಹ ರಾಜ್ಯಾಂಗ ವಿಧಿಗಳ ಒಳಗಡೆ ಯಾವುದಾದರೂ ಒಂದು ರೀತಿಯಲ್ಲಿ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನವಾಗುತ್ತಿದೆಯೆಂದೂ, ಮುಖ್ಯ ಮಂತ್ರಿಗಳು ಹಿಂದಿರುಗಿದ ನಂತರವೇ ಖಚಿತ ವಿಷಯವು ತಿಳಿಯಬಹುದೆಂದೂ ಗೊತ್ತಾಗಿದೆ. ಈ ಸಂಬಂಧವಾಗಿ ಯಾವ ಹೊಸ ಕ್ರಮ ಕೈಗೊಳ್ಳಬೇಕೆಂಬುದರ ಮೇಲೆ ಮಾತುಕತೆಗಳು ಅವಲಂಬಿಸಿವೆಯೆಂದು ತಿಳಿದುಬಂದಿದೆ.

ಒಂದು ಬಕೆಟ್ ಕುಡಿಯುವ ನೀರಿಗೆ ೪ ಆಣೆ

ರಂಗೂನ್ ನಗರದ ನೀರು ಸರಬರಾಜು ವ್ಯವಸ್ಥೆಯು ಸಂಕೆಕೋರರಿಂದ ತಡೆಯಲ್ಪಟ್ಟುದರಿಂದ ಒಂದು ಬಕೆಟ್ ಕುಡಿಯುವ ನೀರನ್ನು ಒಕೆಟ್ಟಿಗೆ ೪ ಆಣೆಯಂತೆ ಮಾರಾಟ ಮಾಡಲಾಗುತ್ತಿದೆ. ಹತ್ತಿರದ ಸರೋವರಗಳಿಂದ ಗಾಡಿಗಳಲ್ಲಿ ನೀರನ್ನು ತುಂಬಿಕೊಂಡು ಬರುವವರು ಮೊಷ್ಟ ವ್ಯಾಪಾರವನ್ನೇ ಮಾಡುತ್ತಿರುವರು

ಪ್ರಬಂಧ ಸ್ಪರ್ಧೆ

ರಾಜಧಾನಿಯ ಸುಪ್ರಭಾತ ಸಂಸ್ಥೆಯವರು ನಿರುದ್ಯೋಗ ಸಮಸ್ಯೆ ... ಕೇಜು ವಿದ್ಯಾಭ್ಯಾಸವೇ ಪರಿಹಾರ ... ಎಂಬ ವಿಷಯವಾಗಿ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿರುತ್ತಾರೆ ... ಗೆ ವಿಚಾರವಂತೆ ಅವನ್ನು ... ಡು ಆಣೆಯ ಪ್ರವೇಶ ಧನದೊಡನೆ ... ಪಾದಕ, ಸುಪ್ರಭಾತ ... ರಾಜಪುರಂ, ಮೈಸೂರು ... ವಿಳಾಸಕ್ಕೆ ಈ ತಿಂಗಳು ... ರೊಳಗೆ ಕಳುಹಿಸಬೇಕೆಂದು ಕೋರಲಾಗಿದೆ

ದತ್ತು ಸ್ವೀಕಾರ

ತಾ|| ... ರಾಜ ... ನವರ ಕಳೆದ ... ವಾರ ಮೈಸೂರ ... ಪದವೀಧರರಾಗಿರುವ ಶ್ರೀ ... ವಸನರಾಜ ಅರಸರ ಮಕ್ಕಳು ಶ್ರೀ ಪ್ರಸನ್ನರಾಜ ಅರಸರನ್ನು ದತ್ತು ಸ್ವೀಕರಿಸುವ ಸಮಾರಂಭವನ್ನು ಶ್ರೀ ... ರಾಜರ ಛತ್ರದಲ್ಲಿ ನೆರವೇರಿಸಿದರು.

ವಾರ್ಷಿಕೋತ್ಸವ

ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ಗಂಜಾಂ ಉಗ್ರಪ್ಪನವರ ಲಾಡ್ಜಿನ ವಿದ್ಯಾರ್ಥಿಗಳು ಶ್ರೀ ... ಮೋಕ್ಷ ಮಲ್ಲಯ್ಯನವರ ಅಧ್ಯಕ್ಷತೆಯಲ್ಲಿ ಲಾಡ್ಜಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವನ್ನು ಕಳೆದ ೪ನೇ ತಾ|| ನೆರವೇರಿಸಿದರು

ರಷ್ಯದೊಡನೆ ಈಜಿಪ್ಟಿನ ಗುಪ್ತ ಸಂಧಾನವೇ?

ಈಜಿಪ್ಟು ರಷ್ಯದೊಡನೆ ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ಅಲ್ಲಿನ ಹಿರಿಯ ಅಧಿಕಾರಿಗಳೊಬ್ಬರು ಗುಪ್ತ ಸಂಧಾನ ನಡೆಸಲು ಅಲ್ಲಿಗೆ ತೆರಳಿರುತ್ತಾರೆ

ಚುನಾವಣೆಯಲ್ಲಿ ನಿಷ್ಪಕ್ಷಪಾತದಿಂದ ವರ್ತಿಸಲು ನೌಕರರಿಗೆ ಸೂಚನೆ

ಮಹಾ ಚುನಾವಣೆಗಳ ಸಂಬಂಧವಾಗಿ ಸರ್ಕಾರದವರು ಒಂದು ಸೂಚನೆಯನ್ನು ಕಳುಹಿಸಿ, ಚುನಾವಣಾ ಕಾರ್ಯಕ್ರಮಕ್ಕೆ ಸಂಬಂಧಿಸಿದ ಪ್ರತಿಯೊಬ್ಬ ನೌಕರನೂ ಪ್ರಾಮಾಣಿಕ ನಿಷ್ಪಕ್ಷಪಾತ ರೀತ ಮತ್ತು ದಕ್ಷತೆಯ ರೀತಿಯಲ್ಲಿ ಕೆಲಸ ನಿರ್ವಹಿಸಬೇಕೆಂದು ತಿಳಿಸಿರುತ್ತಾರೆ. ಚುನಾವಣೆಯು ಪೂರ್ಣ ನಿಷ್ಪಕ್ಷಪಾತದಿಂದಲೂ, ಅತ್ಯಂತ ದಕ್ಷತೆಯಿಂದಲೂ ನಡೆಯಬೇಕೆಂಬುದೇ ಸರ್ಕಾರದ ಧ್ಯೇಯವಾಗಿರುತ್ತದೆಂದು ಸೂಚನೆಯಲ್ಲಿ ತಿಳಿಸಲಾಗಿದೆ

ಜನತಾ ಶಿಕ್ಷಣ ದಿನಾಚರಣೆ

ಕಳೆದ ೩ನೇ ತಾ|| ಜಲಪುರಿಯ ನರಸರಾಜಾ ಯೂನಿಯನ್ ಕ್ಲಬ್ಬಿನವರು ಜನತಾ ಶಿಕ್ಷಣ ದಿನಾಚರಣೆಯನ್ನು ಏರ್ಪಡಿಸಿದರು. ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಶ್ರೀ ಎಸ್. ಪಿ. ರಾಮರಾಜಯ್ಯಂಗಾರರು ಶಿಕ್ಷಣ ಯೋಜನೆಯನ್ನು ವಿವರಿಸಿದರು. ಶ್ರೀ ರಾಮಲಿಂಗಪ್ಪನವರು ಜಲಪುರಿಯಲ್ಲಿ ನಡೆಯುತ್ತಿರುವ ಶಿಕ್ಷಣದ ಕಾರ್ಯಕ್ರಮಗಳನ್ನು ಕುರಿತು ಭಾಷಣ ಮಾಡಿದರು. ವಂದನಾರ್ಪಣೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಸಾರ್ವಜನಿಕ ಪುಸ್ತಕ ಭಂಡಾರ

ರಾಜಧಾನಿಯ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಕಳೆದ ತಿಂಗಳಿನಲ್ಲಿ ... ಜನ ಪ್ರೇಕ್ಷಕರು ಬಂದಿದ್ದರೆಂದೂ, ... ಪುಸ್ತಕಗಳನ್ನು ಓದಲು ಕೊಡಲಾಗಿತ್ತೆಂದೂ ತಿಳಿದುಬಂದಿದೆ

ಗೌರ್ನರರ ಕೊಲೆಗಾಗಿ ಇಡೀ ಹಳ್ಳಿಯ ಜನರ ದಸ್ತಗಿರಿ

ಮಲಯದಲ್ಲಿ ಬ್ರಿಟಿಷ್ ಹೈ ಕಮಿಷನರಾಗಿದ್ದ ಸರ್ ಹೆನ್ರಿ ಗರ್ನಿಯವರ ಕೊಲೆ ಸಂಬಂಧವಾಗಿ ಅಲ್ಲಿನ ಪಹಾಂಗ್ ಎಂಬ ಹಳ್ಳಿಯ ಪ್ರಜೆಗಳಾದ ೩ ಸಾವಿರ ನಿವಾಸಿಗಳನ್ನು ದಸ್ತಗಿರಿ ಮಾಡಲಾಗಿದೆ. ಇಡೀ ಹಳ್ಳಿಯೇ ಅಪರಾಧಕ್ಕೆ ಗುರಿಯಾಗಿದೆ. ಪೋಲೀಸರು ಊರನ್ನು ಸುತ್ತುಗಟ್ಟಿ ದಸ್ತಗಿರಿಯಾದವರನ್ನು ಶಿಬಿರಗಳಿಗೆ ಕಳುಹಿಸಲು ತೊಡಗಿರುತ್ತಾರೆ

ಕಾಂ|| ಉಮೇದುವಾರರ ಬಗ್ಗೆ ಟೀಕೆಗಳು ಕೂಡದು

ಕಾಂಗ್ರೆಸ್ ಉಮೇದುವಾರರ ಆಯ್ಕೆಯ ಬಗ್ಗೆ ಗಂಭೀರವಲ್ಲದ ಪತ್ರವ್ಯವಹಾರಗಳು ನಡೆಯುತ್ತಿರುವವೆಂದೂ, ಕಾಂಗ್ರೆಸ್ಸಿನವರೂ, ಕಾಂಗ್ರೆಸ್ ಉಮೇದುವಾರರೂ ಈ ರೀತಿ ತಮ್ಮ ಅಭಿಪ್ರಾಯಗಳನ್ನು ಸೂಚಿಸದೆ ತಡೆಯಬೇಕೆಂದೂ ಅ|| ಭಾ|| ಕಾಂಗ್ರೆಸ್ ಸಮಿತಿಯಿಂದ ಸೂಚನೆಯು ಕೊಡಲ್ಪಟ್ಟಿರುತ್ತದೆ

ಸಂಸ್ಥಾನಕ್ಕೆ ನೆಹರೂರವರ ಭೇಟಿ

ಚುನಾವಣಾ ಪ್ರಚಾರವನ್ನು ಕೈಗೊಳ್ಳುವ ಸಲುವಾಗಿ ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ನೆಹರೂರವರು ಬರುವ ತಿಂಗಳು ಎರಡನೇ ವಾರದಲ್ಲಿ ಸಂಸ್ಥಾನಕ್ಕೆ ಭೇಟಿ ಕೊಡುವರೆಂದು ತಿಳಿದುಬಂದಿದೆ

ಸುಪ್ರಸಿದ್ಧ
ಮಲೆಯಾಳ ಜ್ಯೋತಿಷ್ಯರು
ಕೆ. ಕುಮಾರಸ್ವಾಮಿ
ವಿಳಾಸ ರೂಂ ನಂ 1 ಅಂಬಳೆ ಅಣ್ಣಯ್ಯ ಪಂಡಿತರ ಛತ್ರ ಸೂರಡಿ ರಸ್ತೆ ಮೈಸೂರು
ಇವರು ಕೇರಳದವರಾಗಿಯೂ ಶಾಸ್ತ್ರೀಯವಾಗಿಯೂ ಭೂತ ಭವಿಷ್ಯದ್ವರ್ತಮಾನಗಳನ್ನು ಹೇಳುತ್ತಾರೆ ಇಂದೇ ವಿಚಾರಿಸಿ

ಸಿಂಧ್ ಮುಖ್ಯಮಂತ್ರಿಯು ನಿರ್ದೋ...

ಕರಾಚಿಯ ಕೆಲವು ದೊಡ್ಡ ... ಸ್ಥರು ಸಿಂಧಿನ ಮುಖ್ಯ ಮಂ... ಮದ್ ಖುಹ್ರೋರವರ ಮೇಲೆ ... ಮುಂತಾದ ಆಪಾದನೆಗಳನ್ನು ... ಸಂದರ್ಭದಲ್ಲಿ ಗೌರ್ನರರು ವಿಚಾ... ಡಿಸಿ, ಅವರು ದೋಷಾರ್ಹ... ತೀರ್ಮಾನಿಸಿರುತ್ತಾರೆ

ಬಚ್ಚಿಟ್ಟ ಚಿನ್ನವನ್ನು ... ಮಾಡುವ ಸಾಧ...

ಮನುಷ್ಯನು ಶರೀರದಲ್ಲಾಗಲಿ ಅಥವಾ ತನ್ನ ಸಾಮಾನುಗಳಲ್ಲಾಗಲಿ ಬಚ್ಚಿಟ್ಟಿರುವ ಚಿನ್ನವನ್ನು ಪತ್ತೆ ... ಸಾಧನವೊಂದನ್ನು ಕಂಡುಹಿಡಿ... ದೆಯೆಂದು ಕೇಂದ್ರ ಹಣಕಾಸಿನ ಮಂತ್ರಿ ಮಹಾವೀರ ತ್ಯಾಗಿಯವರು ತಿಳಿಸಿರುತ್ತಾರೆ

ಚಿತ್ರದುರ್ಗ ಪತ್ರಿಕೋದ್ಯೋಗಿಗಳ ಸಮ್ಮೇಳನ

ಚಿತ್ರದುರ್ಗ ಜಿಲ್ಲೆಯ ಪ... ದ್ಯೋಗಿಗಳ ಪ್ರಥಮ ಸಮ್ಮೇಳನ... ರಿಯೂರಿನಲ್ಲಿ ಬರುವ ... ಳಿನ ಮಲ್ಲೇಶ್ವರ ಥಿಯೇಟರಿನ... ಯುವುದು. ಶಾಸನ ಸಭಾಧ್ಯಕ್ಷರಾದ ... ವಿ ವೆಂಕಟಪ್ಪನವರು ಅದರ ಉ... ತ್ಸವವನ್ನು ನೆರವೇರಿಸುವರು ... ಕರ್ನಾಟಕ ಪತ್ರಿಕೆ ಸಂಪಾದಕರಾದ ಎಸ್ ಎಸ್ ವೆಂಕೋಬರಾಯರು ಅಧ್ಯಕ್ಷತೆ ವಹಿಸುವರು

ಪ್ರಭಾ * ಇಂದಿ...
ಪ್ರತಿ ದಿನ 3 ಆಟಗಳು
ನ್ಯೂ ಥಿಯೇಟರ್ಸ್‌ರವರ ಹಿಂದಿ
ಪಹಲಾ ಆ...
ಪಾತ್ರ-ವರ್ಗ...
— ಬೆಳಗಿನ ಪ್ರದರ್ಶನ —
9 11 51 ರಿಂದ ... ದಿನಗಳು
... ನಟಿಸಿರುವ
— ಅರೇಬಿಯನ್ ನೈಟ್ಸ್

SRI GAYATHRI
TALKIES
From 9 11-51 Daily 3 Sh...
M G M's
THE BLACK HAND
With Gene Kelly
MORNING SHOWS
On 10th and 11th
THE BLACK SWAN
(In Technicolour)
With Tyrone Power

ಶ್ರೀ ಗಣೇಶಾ ಮತ್ತು ಚಾಮುಂಡೇಶ್ವರಿ
ಟಾಕೀಸುಗಳಲ್ಲಿ
9-11-51ನೇ ಶುಕ್ರವಾರದಿಂದ ಅಮೋಘ ಆರಂಭ

ಎಸ್. ಎಸ್. ಕೆ. ಫಿಲಂಸ್‌ರವರ ಅಮೋಘ ಸಾಮಾಜಿಕ
ತಮಿಳು ಚಿತ್ರ
• ಮಣಮಗಳ್ •
ತಾರಾಗಣ - ಎಸ್ ಎಸ್ ಕೃಷ್ಣನ್, ಟಿ ಎ ಮಧುರಂ, ಲಲಿತ ಪದ್ಮಿನಿ, ಸಹಸ್ರನಾಮಂ, ಬಾಲಯ್ಯ, ಡೋರೈರಾಜ್, ಬಾಲ ಸುಬ್ರಹ್ಮಣ್ಯಂ, ಪುಳಿಮೂಟೈ ಮುಂತಾದವರು
ಹಿನ್ನೆಲೆ ಸಂಗೀತ – ಎಂ. ಎಲ್. ವಸಂತ ಕುಮಾರಿ
[ಮೊದಲನೇ ನಾಲ್ಕು ವಾರಗಳಲ್ಲಿ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ]
[N S FILMS RELEASE]

Edited, Printed &
Published by A R Na...
rajan at Sadhvi Press
Subbiah Road, Mysore

...ಗಾಡಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ
ಬಿ ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ 792 • ವಂದೇ ಮಾತರಂ • ಇಂದಿನ ಪತ್ರಿಕೆ 3 ಆಣೆ

ಸಾಧ್ವಿ

ಸಂಪುಟ ೧೦] ಶನಿವಾರ ೧೦-೧೧-೫೧ [ಸಂಚಿಕೆ ೯೦

ಹೊರಗಿನ ಜಡ್ಜಿಗಳ -ನೇಮಕದ ಸಂಭವ-

ಮೈಸೂರು ಬಿಕ್ಕಟ್ಟನ್ನು ಸರಿಪಡಿಸದಿದ್ದರೆ ರಾಜೀನಾಮೆ

ಶ್ರೀ ಹೆಚ್. ಕೆ. ವೀರಣ್ಣಗೌಡರ ಅಭಿಪ್ರಾಯ

ಬೆಂಗಳೂರು ೧೦

ರಾಷ್ಟ್ರಾಧ್ಯಕ್ಷರ ಆಜ್ಞೆಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿದರೆ ಮೈಸೂರು ಶಾಸನ ಸಭೆಯ ತೀರ್ಮಾನವು ... ನಾಗಿರುವುದೆಂದು ಶಾಸನ ಸಭೆಯ ... ಪ್ರೆಸ್ ಪಕ್ಷದ ಕಾರ್ಯದರ್ಶಿಯವರಾದ ಹೆಚ್ ಕೆ ವೀರಣ್ಣಗೌಡರು ... ಯಪಟ್ಟಿರುತ್ತಾರೆ ಮೈಸೂರಿಗೆ ... ದ ಅಪಮಾನವನ್ನು ಕೇಂದ್ರ ಸರ್ಕಾರ ... ಸರಿಪಡಿಸದಿದ್ದರೆ, ರಾಜ್ಯಾಂಗಕ್ಕೆ ... ಗಿ, ಇಲ್ಲಿನ ಮಂತ್ರಿ ಮಂಡಲ ಮ... ಶಾಸನ ಸಭೆಗಳು ರಾಷ್ಟ್ರಾಧ್ಯಕ್ಷರ ... ವನ್ನು ಪ್ರತಿಭಟಿಸಿ ತಮ್ಮ ಸ್ಥಾನ ... ಬಿಡುವುದೇ ಸರಿಯಾದ ಮಾರ್ಗ ... ಎಂದವರು ಹೇಳಿರುತ್ತಾರೆ

ಮಹಾಸಭೆ ಪರವಾಗಿ ಮುಸ್ಲಿಂ ಉಮೇದುವಾರರು

... ಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಒಂದು ಕ್ಷೇತ್ರದಿಂದ ... ಜಬ್ಬಾರ್ ಎಂಬ ಮುಸ್ಲಿಂ ಉಮೇದುವಾರರನ್ನು ಅಲ್ಲಿನ ಹಿಂದೂ ಮಹಾಸಭೆಯು ಪರವಾಗಿ ಮಹಾ ಚು... ... ರಿಸಲಾಗಿದೆ

... ರತ ಚೀಣಾ ಸ್ನೇಹ ಸಂಘದ ಕಛೇರಿ ಆರಂಭೋತ್ಸವ

... ಸೂರು ಸಂಸ್ಥಾನದ ಭಾರತ ಚೀಣಾ ಸ್ನೇಹ ಸಂಘದ ಕಛೇರಿಯ ... ಭೋತ್ಸವವನ್ನು ನೆನ್ನೆ ಬೆಳಿಗ್ಗೆ ... ಎಸ್ ರಾಜಗೋಪಾಲಯ್ಯಂ... ರು ನೆರವೇರಿಸಿದರು ಕಾರ್ಯ... ಶ್ರೀ ಡಿ ಆರ್ ಕೃಷ್ಣಮೂರ್ತಿ ... ಯಿಂದ ಸ್ವಾಗತ ಭಾಷಣವಾದ ನಂ... ಸಂಘದ ಅಧ್ಯಕ್ಷರಾದ ಶ್ರೀ ತಗಡೂರು ... ರಾಮಚಂದ್ರ ರಾಯರು ಭಾಷಣ ... ಸಂಘದ ಉದ್ದೇಶಗಳನ್ನು ವಿವರಿ... ಶ್ರೀ ಟಿ ಎಸ್ ರಾಜಗೋಪಾ... ಚಾರ್ಯರು ಭಾಷಣ ಮಾಡಿ ... ತ ಚೀಣಾಗಳ ನಡುವೆ ಸಾಂಸ್ಕೃತಿಕ ... ಧ ಬಹಳ ಕಾಲದಿಂದಲೂ ಇದೆ ... ಯು, ಈ ರಾಷ್ಟ್ರಗಳ ಮೈತ್ರಿಯು ... ತಿಕ ಮತ್ತು ರಾಜಕೀಯ ವ್ಯ... ಗಳ ಪರಿಂದಲೂ ಅಗತ್ಯವೆಂದೂ ತಿ... ತು

... ಎಂ. ಸಿದ್ಧಲಿಂಗಯ್ಯನವರು ... ರ್ನಾಟಕ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್

... ಸೂರು ಟೀಚರ್ಸ್ ಟ್ರೈನಿಂಗ್ ... ಜಿನ ನಿವೃತ್ತ ಮುಖ್ಯೋಪಾಧ್ಯಾ... ದ ಡಾ|| ಎಂ ಸಿದ್ಧಲಿಂಗಯ್ಯನ... ಕರ್ನಾಟಕ ವಿಶ್ವ ವಿದ್ಯಾಲಯ ... ಸ್ಟ್ರಾರರನ್ನಾಗಿ ನೇಮಿಸಲಾಗಿದೆ ... ತಿಳಿದುಬಂದಿದೆ ಅವರು ಶೀ... ಘ್ರವೇ ಅಲ್ಲಿಗೆ ತೆರಳಲಿರುವರು

... ರಾಜಧಾನಿಗೆ ಎ.ಕೆ.ಗೋಪಾಲನ್

... ಮ್ಯುನಿಸ್ಟ್ ನಾಯಕರಾದ ಶ್ರೀ ... ಗೋಪಾಲನ್ನರು ಬರುವ ... ರಾಜಧಾನಿಗೆ ಆಗಮಿಸುವರೆಂದು ... ಬಂದಿದೆ ಅವರಿಗೆ ಅದ್ಭುತ ಸ್ವಾ... ಗತವನ್ನು ನೀಡಲು ಮತ್ತು ನಿಧಿ ಸಮ... ರ್ಪಣೆಯ ಸಿದ್ಧತೆಗಳು ನಡೆದಿವೆ

ಮೈಸೂರು ಶಾಸನ ಸಭೆಗೆ ರೆಡ್ಡಿಯವರ ಆಯ್ಕೆ

ಬೆಂಗಳೂರು ೧೦

ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿಯವರು ಮುಖ್ಯ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರನ್ನು ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನಿಂದ ಮೈಸೂರು ಶಾಸನ ಸಭೆಗೆ ಕಾಂಗ್ರೆಸ್ ಪರ ಉಮೇದುವಾರರನ್ನಾಗಿ ಆರಿಸಿದ್ದಾರೆ ... ತಿಳಿದುಬಂದಿದೆ

ಮೈಸೂರು ದಕ್ಷಿಣ ಕ್ಷೇತ್ರಕ್ಕೆ ಬಿ ನಾರಾಯಣಸ್ವಾಮಿ

ಮೈಸೂರು ನಗರದ ದಕ್ಷಿಣ ಕ್ಷೇತ್ರಕ್ಕೆ ಸೂಚಿಸಲ್ಪಟ್ಟಿದ್ದ ಶ್ರೀಮತಿ ಸುನಂದಮ್ಮನವರ ಬದಲು ಶ್ರೀ ಬಿ ನಾರಾಯಣಸ್ವಾಮಿಯವರನ್ನು ಕೇಂದ್ರ ಚುನಾವಣಾ ಸಮಿತಿಯವರು ಉಮೇದುವಾರರನ್ನಾಗಿ ಆರಿಸಿರುವರೆಂದು ತಿಳಿದುಬಂದಿದೆ

ಸ್ಥಳೀಯ ಸಂಸ್ಥೆಗಳೊಡನೆ ವ್ಯವಹಾರಕ್ಕೂ ಅಂಚೆ ಸ್ಟಾಂಪು ಅಗತ್ಯ

ಸರ್ಕಾರಕ್ಕೆ ಸಲ್ಲಿಸುವ ಅರ್ಜಿಗಳ ಬಗ್ಗೆ ಉತ್ತರ ಪಡೆಯಬಯಸುವವರು ... ಅಗತ್ಯ ಅಂಚೆ ಸ್ಟಾಂಪುಗಳನ್ನು ತಮ್ಮ ಅರ್ಜಿಯೊಡನೆ ಕಳುಹಿಸಬೇಕೆಂದು ಹಿಂದೆ ಸರ್ಕಾರದವರು ಇತ್ತ ಸೂಚನೆಯು ಇತರ ಸರ್ಕಾರಿ ಕಛೇರಿಗಳಿಗೂ, ಸ್ಥಳೀಯ ಸಂಸ್ಥೆಗಳಿಗೂ ಅನ್ವಯಿಸುವುದೆಂದು ಸರ್ಕಾರದವರು ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿರುತ್ತಾರೆ ಇಲ್ಲದಿದ್ದರೆ ಉತ್ತರವನ್ನು ಕಳಿಸುವುದಿಲ್ಲವೆಂದು ತಿಳಿಸಲಾಗಿದೆ

ಲ್ಯಾಂಕಾಷೈರಿನಲ್ಲಿ ಭಾರತದ ಜಮಖಾನೆ ಕೊಳ್ಳಲು ಕ್ಯೂ

ಬ್ರಿಟನ್ನಿನ ಹೊರಬಿದ್ದ ಹಡಗೊಂದಕ್ಕೆ ಬೆಂಕಿ ಬಿದ್ದ ಸಂದರ್ಭದಲ್ಲಿ ಸಂರಕ್ಷಿಸಲ್ಪಟ್ಟ ಜಮಖಾನೆಗಳನ್ನು ಅಗ್ಗದ ಬೆಲೆಗೆ ಕೊಳ್ಳುವ ಸಲುವಾಗಿ ಲ್ಯಾಂಕಾಷೈರಿನ ಒಂದು ಊರಿನಲ್ಲಿ ಒಂದು ಮೈಲಿ ಉದ್ದಕ್ಕೂ ಜನರು ಕ್ಯೂ ನಿಂತಿದ್ದರೆಂದು ಹೇಳಲಾಗಿದೆ ಒಂದು ಜಮಖಾನೆಯನ್ನು ೬|| ಪೌಂಡಿಗೆ ಮಾರಲಾಯಿತು ಪಕ್ಕದ ನಗರದಲ್ಲಿ ಒಂದೊಂದನ್ನು ೩೫ ಪೌಂಡಿನಂತೆ ಮಾರಲಾಗುತ್ತಿದೆ

ಹೊರಗಿನ ನ್ಯಾಯಾಧೀಶರ ನೇಮಕದ ಸಂಭವ

ಮೈಸೂರಿನ ಬಿಕ್ಕಟ್ಟಿನ ಬಗ್ಗೆ ದೆಹಲಿ ಮಾತುಕತೆಯ ಫಲ

ಸ್ವಂ ಸು. ಫೋನ್] ಬೆಂಗಳೂರು ...

ಶ್ರೀ ಕೆ ಸಿ ರೆಡ್ಡಿಯವರು ಈ ದಿನವೂ ... ಯಲ್ಲಿ ... ಇಲ್ಲಿನ ... ಕಾಂಗ್ರೆಸ್ ಪಕ್ಷದ ಸಭೆ ... ದಿಸಲಾಗಿದೆ

... ಹೊರಗಿನ ಜಡ್ಜಿಗಳನ್ನು ಇಲ್ಲಿ ಕರೆದು ... ದ ಪತ್ರವು ಮಧ್ಯಾಹ್ನ ... ಘಂಟೆಗೆ ಬಂದಿತೆಂದೂ ಅದೇ ದಿನ ... ಬಂದುಬಿಟ್ಟಿತೆಂದೂ ... ಸರಿಯಾಗಿ ಪರಿಶೀಲಿಸುವುದಕ್ಕೆ ಸಹ ಸಾವಕಾಶವು ದೊರಕಲಿಲ್ಲವೆಂದೂ ಶ್ರೀ ಕೆ ಸಿ ರೆಡ್ಡಿಯವರು ದೆಹಲಿಯಲ್ಲಿ ಮನವಿ ಮಾಡಿ, ಕೇಂದ್ರದ ಅಥವಾ ರಾಷ್ಟ್ರಾಧ್ಯಕ್ಷರ ನಿರೂಪಗಳನ್ನು ಉಲ್ಲಂಘಿಸುವ ಮನೋಭಾವವು ಮೈಸೂರು ಸರ್ಕಾರಕ್ಕೆ ಇಲ್ಲವೆಂದು ಸ್ಪಷ್ಟಪಡಿಸಿರುವುದಾಗಿ ಗೊತ್ತಾಗಿದೆ ... ಸಲಹೆಗಳನ್ನು ... ರಾಷ್ಟ್ರಾಧ್ಯಕ್ಷರೇ ... ನಿರ್ಣಯಿಸಬೇಕೆಂದೂ ಸಹ ... ಪಡಿಸಿರುವರೆಂದು ಹೇಳಲಾಗಿದೆ

ಮೊಕದ್ದಮೆ ವಿಚಾರಣೆಗೆ ಹೊರಗಿನ ಜಡ್ಜಿಯೊಬ್ಬರನ್ನು ಕರೆಸುವ ... ಪದ್ಧತಿಯನ್ನು ... ಭರವಸೆಯೂ ಕೊಡಲ್ಪಟ್ಟಿದೆಯೆಂದೂ ಆದ್ದರಿಂದ ಈ ಸಲಹೆಗೆ ಮೈಸೂರು ಸರ್ಕಾರದವರು ಒಪ್ಪಿಕೊಳ್ಳುವ ಸಂಭವವಿದೆಯೆಂದೂ ಹೇಳಲಾಗಿದೆ

ಸಾರ್ವಜನಿಕ ಸಾಲಕ್ಕೆ ಕೇಂದ್ರದ ಅನುಮತಿ ಇಲ್ಲ

ಸಂಸ್ಥಾನದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಲು ಎರಡು ಅಥವಾ ನೂರು ಕೋಟಿ ರೂಪಾಯಿಗಳ ಸಾರ್ವಜನಿಕ ಸಾಲವನ್ನೆತ್ತುವ ಮೈಸೂರು ಸರ್ಕಾರದ ಯೋಜನೆಗೆ ಕೇಂದ್ರ ಸರ್ಕಾರದವರು ಸಮ್ಮತಿ ಇತ್ತಿಲ್ಲವೆಂದು ತಿಳಿದುಬಂದಿದೆ ರಿಸರ್ವ್ ಬ್ಯಾಂಕಿನ ಸಲಹೆಯಂತೆ ಅವರು ಈ ನಿರ್ಧಾರಕ್ಕೆ ಬಂದಿರುವರೆಂದು ಗೊತ್ತಾಗಿದೆ

ದೇವಾಲಯ ಪ್ರವೇಶದ ಮಸೂದೆ ವಾಪಸು

ಶಾಸನ ಸಭೆಯಲ್ಲಿ ನಿರ್ಣಯ

ಸ್ವಂ ಸು ಫೋನ್] ಬೆಂಗಳೂರು ೧೦

ಕಳೆದ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಶ್ರೀಮನ್ ಮಹಾರಾಜರು ಸಂಸ್ಥಾನದ ಹೊರಗಡೆ ಪ್ರವಾಸ ಕೈಗೊಂಡಿದ್ದಾಗ ಅವರೊಡನೆ ತೆರಳಿದ್ದ ಮಂತ್ರಿಗಳಿಗೆ ಭತ್ಯವು ನಿಯಮಾವಳಿ ಪ್ರಕಾರ ಕೊಡಲ್ಪಟ್ಟಿತೆಂದೂ, ಮಹಾರಾಜರ ಪ್ರವಾಸದ ವ್ಯವಸ್ಥೆಯನ್ನು ಆಯಾ ಸ್ಥಳದವರೇ ನಿರ್ವಹಿಸಿದ್ದರೆಂದೂ ಈ ದಿನ ಶಾಸನ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು ತಿಳಿಸಿದರು

ಶ್ರೀ ಹೆಚ್ ಎಂ ಚನ್ನಬಸಪ್ಪನವರಿಗೆ ೧೦ ಸಾವಿರ ರೂ. ಶ್ರೀ ಎಸ್ ರಂಗಸ್ವಾಮಯ್ಯನವರಿಗೆ ೬,೦೦೦ ಮತ್ತು ಶ್ರೀಗಳಾದ ತಿಮ್ಮಾಬೋವಿ ಮತ್ತು ಹನುಮಯ್ಯ ಇವರುಗಳಿಗೂ ಹೆಚ್ಚು ಆಹಾರ ಬೆಳೆಗಾಗಿ ಸಾಲವನ್ನು ಕೊಡಲಾಗಿದೆಯೆಂದೂ, ಈ ಹಣಗಳು ಬಹುಮಟ್ಟಿಗೆ ಸರಿಯಾಗಿ ವಿನಿಯೋಗವಾಗಿರುವುವೆಂದೂ ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು

ಅಸ್ಪೃಶ್ಯತೆಯ ನಿವಾರಣೆಗಾಗಿ ವಿಧಿಸುವ ಶಿಕ್ಷೆಗೆ ಸಂಬಂಧಿಸಿದಂತೆ ಶಾಸನ ಮಾಡುವ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಸೇರಿರುವುದರಿಂದ ಈಗ ಮೈಸೂರು ಸಂಸ್ಥಾನದಲ್ಲಿ ಹರಿಜನರ ದೇವಾಲಯ ಪ್ರವೇಶದ ಬಗ್ಗೆ ಮಾಡಿರುವ ಶಾಸನವು ಕ್ರಮಬದ್ಧವಲ್ಲವೆಂದು ಕೇಂದ್ರದಿಂದ ಬಂದ ಸೂಚನೆಯ ಪ್ರಕಾರ ಈ ಶಾಸನವನ್ನು ರದ್ದು ಮಾಡಲು ಶ್ರೀ ಹೆಚ್ ಸಿದ್ದಯ್ಯನವರು ಮಂಡಿಸಿದ ನಿರ್ಣಯವು ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು

ಕೋಲಾರದ ಚಿನ್ನದಗಣಿ ಸ್ಯಾನಿಟರಿ ಬೋರ್ಡನ್ನು ನಗರ ಪೌರಸಭೆಯಾಗಿ ಪರಿವರ್ತಿಸುವ ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಲಾಯಿತು

ಸಭೆ ಸೋಮವಾರ ಮಧ್ಯಾಹ್ನ ಮತ್ತೆ ಸೇರುವುದು

ಬೃಂದಾವನೋತ್ಸವ

ಶ್ರೀರಂಗಪಟ್ಟಣದ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯವರ ಬೃಂದಾವನೋತ್ಸವವು ಅನೇಕ ವರ್ಷಗಳಿಂದಲೂ ನಿಂತು ಹೋಗಿದ್ದಿತು ಈ ದಿನ ಅದನ್ನು ಪುನಃ ವಿಜೃಂಭಣೆಯಿಂದ ನಡೆಸಲು ಹಲವು ... ಮಹನೀಯರು ಏರ್ಪಡಿಸಿರುತ್ತಾರೆ

ಉಪನ್ಯಾಸ

ನ್ಯೂ ಎಜುಕೇಷನ್ ಫೆಲೋಷಿಪ್ಪಿನ ಮೈಸೂರು ಶಾಖೆಯ ಆಶ್ರಯದಲ್ಲಿ ಈ ಸಂಜೆ ೭ ಗಂಟೆಗೆ ಉಪಾಧ್ಯಾಯರುಗಳ ಕಾಲೇಜಿನಲ್ಲಿ ಕಲ್ಕತ್ತಾ ವಿದ್ಯಾಲಯದ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದ ಪ್ರೊ|| ಜೆ ಎಂ ಸೇನರವರು ಉಪನ್ಯಾಸ ಮಾಡುವರು

ಇಂದು ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಈ ಸಂಜೆ ೭ ಗಂಟೆಗೆ ತಗಡೂರು ಶ್ರೀ ಎಸ್ ಶ್ರೀನಿವಾಸರಾಯರಿಂದ "ಶಿವಬಲಂಧರ" ಎಂಬ ಹರಿಕಥೆಯೂ, ಅಮ್ಮನವರಿಗೆ ಕೋಲು ಗೋಪಾಲಸ್ವಾಮಿ ಅಲಂಕಾರವೂ ಏರ್ಪಾಡಾಗಿವೆ

ಅಮೇರಿಕಕ್ಕೆ ರಷ್ಯದ ರಹಸ್ಯ ಪತ್ರ

ರಷ್ಯದ ಹಿಂದಿನ ವಿದೇಶಾಂಗ ಮಂತ್ರಿಗಳಾದ ಆಂದ್ರಿ ವ್ಯಾಷಿಂಕೊರವರು ಮೊನ್ನೆ ಮಾಸ್ಕೋವಿನಲ್ಲಿರುವ ಅಮೆರಿಕದ ರಾಯಭಾರಿ ಮ್ಯಾಕ್ ಕರ್ಮಿನ್ಸ್‌ರವರನ್ನು ಬರಮಾಡಿಕೊಂಡು, ಅರ್ಧ ಗಂಟೆ ಕಾಲ ಮಾತುಕತೆ ನಡೆಸಿ ಅಮೆರಿಕಾ ಸರ್ಕಾರಕ್ಕೆ ತಲುಪಿಸಲು ಅವರ ಕೈಗೆ ಮಹತ್ವದ್ದೆಂದು ಭಾವಿಸಲಾದ ರಹಸ್ಯ ಪತ್ರವೊಂದನ್ನು ಕೊಟ್ಟರೆಂದು ತಿಳಿದು ಬಂದಿದೆ

ಅಸ್ಸಾಂ ನಗರದಲ್ಲಿ ೩ ನಿಮಿಷ ಭೂಕಂಪ

ಅಸ್ಸಾಂ ಪ್ರಾಂತದ ಮಿಷ್ಮಿ ಗುಡ್ಡ ಪ್ರದೇಶದಲ್ಲಿರುವ ಸಾಡಿಯಾ ನಗರದಲ್ಲಿ ಕಳೆದ ಮಂಗಳವಾರ ೩ ನಿಮಿಷಗಳ ಕಾಲ ಭಾರಿ ಭೂಕಂಪವಾಯಿತೆಂದೂ ಅದೇ ಸಂಜೆ ಮತ್ತು ರಾತ್ರಿ ಮತ್ತೆರಡು ಬಾರಿ ಭೂಕಂಪಗಳಾದುವೆಂದೂ ವರದಿಯಾಗಿದೆ ಸಾವುಗಳೇನೂ ವರದಿಯಾಗಿಲ್ಲ

ಮಾಜಿ ನೀರು ಸರಬರಾಜು ನೌಕರರಿಗೆ ಪೆನ್ಷನ್ ಕೊಡಬೇಕು

ರಾಜಧಾನಿಯ ವಾಣೀವಿಲಾಸ ನೀರು ಸರಬರಾಜು ನೌಕರರ ಸಂಘದ ಸಭೆಯು ನೆನ್ನೆ ನಡೆದು ನಿವೃತ್ತರಾದವರಿಗೆ ಸಲ್ಲಬೇಕಾದ ಪೆನ್ಷನ್ ಹಣವು ಇನ್ನೂ ದೊರೆಯದಿರುವ ವಿಷಯವನ್ನು ಕುರಿತು ಪರಿಶೀಲಿಸಿ, ಅಂಥವರಿಗೆ ಪೆನ್ಷನ್ ಅಥವಾ ಗ್ರಾಂಟುಗಳನ್ನು ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲಾಯಿತು

ಯೂರೋಪು ಸೈನ್ಯ ನಿರ್ಮಾಣಕ್ಕೆ ಒಪ್ಪಿಗೆ

೫ ಲಕ್ಷ ಜನರ ೪೩ ತಂಡಗಳುಳ್ಳ ಯೂರೋಪು ಸೈನ್ಯವನ್ನು ನಿರ್ಮಾಣ ಮಾಡುವ ಬಗ್ಗೆ ಅಂದಾಜು ಪಟ್ಟಿಯನ್ನು ಪ್ಯಾರಿಸ್ ನಗರದಲ್ಲಿ ಸೇರಿರುವ ಆರು ಯೂರೋಪು ರಾಜ್ಯಗಳ ಸೈನ್ಯಗಳ ಪ್ರಮುಖರು ಒಪ್ಪಿರುತ್ತಾರೆ ಈ ಸೈನ್ಯವು ೧೪ ಫ್ರೆಂಚ್, ೧೨ ಜರ್ಮನ್, ೧೨ ಇಟಲಿ ಮತ್ತು ಹಾಲೆಂಡ್, ಬೆಲ್ಜಿಯಂ ಮತ್ತು ಲಕ್ಸೆಂಬರ್ಗ್‌ಗಳ ತಂಡಗಳಿಂದ ರಚಿಸಲ್ಪಡುತ್ತವೆ.

ದೆಹಲಿ ರೇಡಿಯೋವಿನಲ್ಲಿ ಹಿಂದೀ ನಾಟಕ

ದಹಲಿಯ ಆಲ್ ಇಂಡಿಯಾ ರೇಡಿಯೋ ಕೇಂದ್ರದಿಂದ ಈ ರಾತ್ರಿ ೧೦ ಗಂಟೆಗೆ ಮೈಸೂರು ರೇಡಿಯೋವಿನಲ್ಲಿರುವ ಶ್ರೀ ಆರ್ ರಾಜಪ್ಪ ಶೆಟ್ಟಿಯವರು ರಚಿಸಿರುವ ರಾಜಶೇಖರ ಎಂಬ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಐತಿಹಾಸಿಕ ಹಿಂದೀ ನಾಟಕವನ್ನು ಪ್ರಸಾರ ಮಾಡಲಾಗುವುದು

ಮದ್ರಾಸು ಬಸ್ಸುಗಳಲ್ಲಿ ಜೇಬುಗಳ್ಳರ ಚಿತ್ರಗಳು

ಮದ್ರಾಸು ನಗರದ ಬಸ್ಸುಗಳಲ್ಲಿ ಓಡಾಡುವ ಜನರು ಜಾಗ್ರತರಾಗಿರಲೂ, ಜೇಬು ಕಳ್ಳತನಗಳ ಪ್ರಸಂಗಗಳನ್ನು ಕಡಿಮೆ ಮಾಡಲೂ ಸಹ ಅಲ್ಲಿನ ಪೋಲೀಸು ಅಧಿಕಾರಿಗಳು ಬಸ್ಸುಗಳಲ್ಲಿ ಜೇಬುಗಳ್ಳರ ಚಿತ್ರಗಳನ್ನು ಇಡುವರೆಂದು ತಿಳಿದುಬಂದಿದೆ.

ಚುನಾವಣೆ ಕಾಲದಲ್ಲಿ ನೆಹರೂ ಸರ್ಕಾರಿ ಅತಿಥಿಗಳಲ್ಲ

ಚುನಾವಣಾ ಪ್ರವಾಸವನ್ನು ಕೈಗೊಳ್ಳುವ ಪಂಡಿತ ನೆಹರೂರವರು ಹೈದರಾಬಾದಿಗೆ ಹೋದಾಗ ತಮ್ಮನ್ನು ಸರ್ಕಾರದ ಅತಿಥಿಗಳನ್ನಾಗಿ ಸ್ವಾಗತಿಸ ಕೂಡದೆಂದು ತಿಳಿಸಿರುತ್ತಾರೆ ಅವರು ಹೈದರಾಬಾದು ಕಾಂಗ್ರೆಸ್ಸಿನ ಭವನದಲ್ಲೇ ತಂಗುವರೆಂದು ಹೇಳಲಾಗಿದೆ

ಶ್ರೀ GAYATHRI, TALKIES

From 9-11-51 Daily 3 Shows
M G M's

THE BLACK HAND

With Gene Kelly

MORNING SHOWS — On 10th and 11th

THE BLACK SWAN

(In Technicolour)

With Tyrone Power

LORRY FOR SALE

One BEDFORD LORRY in good running Condition Tyres, Batteries Body paint are all new Body is suitable *for* open & close Ex Military Vehicle

Apply to —

A. ANTHONY & SONS,
Behind Wellington Lodge
Mysore

City Improvement Trust Board, Mysore

NOTIFICATION

Dated 8th November 1951

It is hereby notified for the *information* of the public that the superstructure of acquired property detailed below will be auctioned by the Trust Board Engineer on 14-11-1951 at 9 A. M. for *dismantling* and removal of the materials and the debris and levelling the same to ground level within three days from the date of auction

(Sd.) P. Gopalakrishna Setty
Chairman

D Nos 1962, 2017, 2088 (?) and Portion of D. No 2083 and 2081 the circle for and in front of Prabhath Talkies K R Mohalla Mysore

Edited, Printed and Published by A R. Nagarajan at Sadhvi Press [ ] Subbiah Road, Mysore

ಅಬೀದರವರ
ಔಟ್‌ಡೋರ್ ಹರಾಜು ಮಾರಾಟ
ನಾಳೆ 11—11—51 ನೇ ಭಾನುವಾರ
ಬೆಳಗ್ಗೆ 10 ಘಂಟೆಗೆ

|| ಶ್ರೀ ||

ಗಣೇಶಾ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ

9-11-51 ನೇ ಶುಕ್ರವಾರದಿಂದ ಅಮೋಘ ಆರಂಭ

ಎನ್. ಎಸ್. ಕೆ. ಫಿಲಂಸ್‌ರವರ ಅಮೋಘ ಸಾಮಾಜಿಕ ತಮಿಳು ಚಿತ್ರ

• ಮಣಮಗಳ್ •

ತಾರಾಗಣ – ಎನ್ ಎಸ್ ಕೃಷ್ಣನ್, ಟಿ ಎ ಮಧುರಂ, ಲಲಿತ ಪದ್ಮಿನಿ, ಸಹಸ್ರನಾಮಂ, ಬಾಲಯ್ಯ, ಡೊರೈರಾಜ್, ಬಾಲ ಸುಬ್ರಹ್ಮಣ್ಯಂ, ಪುಳಿಮೂಟೈ ಮುಂತಾದವರು

ಹಿನ್ನೆಲೆ ಸಂಗೀತ – ಎಂ ಎಲ್. ವಸಂತ ಕುಮಾರಿ

[ಮೊದಲನೇ ನಾಲ್ಕು ವಾರಗಳಲ್ಲಿ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ]

ಇಂದಿನ ಭಾರತ 50 ಮತ್ತು ಮುಂದಿನ ಭಾರತ 60 ಎಂಬ ನಾಟಕವನ್ನು ನೋಡಲು ತಪ್ಪಬೇಡಿ

[N S FILMS RELEASE

ಮುಂದಿನ ಬದಲಾವಣೆ

ಮೋತಿಲಾಲ್ ಮತ್ತು ಶ್ರೀ ಲಕ್ಷ್ಮಿ ಥಿಯೇಟರುಗಳಲ್ಲಿ

ಜ್ಞಾನಾಂಬಿಕಾರವರ ತೆಲುಗು ಚಿತ್ರ

ಮಂತ್ರ ದಂಡಂ

ಸ್ಟುಡಿಯೋ:- ವಾಹಿನಿ

ತಾರಾಗಣ:— ನಾಗೇಶ್ವರರಾವ್, ಶಿವರಾವ್, ಲಿಂಗಮೂರ್ತಿ, ಸಿ ಎಸ್. ಆರ್, ಜಯಮ್ಮ, ಶ್ರೀರಂಜನಿ, ಬಾಲಸರಸ್ವತಿ, ಕೃಷ್ಣಕುಮಾರಿ

Now Running —

AT SRI LAKSHMI THEATRE

MANTRI KUMARI

(Tamil)

[R V Pictures Release

ಗೌಹ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶೆಟ್ಟಿ ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಸಂಚಿಕೆ ೨೦ ೧೮೨ WEEKLY EDITION ಬಿಡಿ ಪ್ರತಿಗೆ ೬ ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೧೧-೧೧-೫೧ [ಸಂಚಿಕೆ ೧೯

ಚುನಾವಣೆಯಲ್ಲಿ ಭಾಷ್ಯಂ ಸ್ಪರ್ಧಿಸುವುದಿಲ್ಲ

ಡಿ. ಜಿ. ಸೋಮಪ್ಪನವರ ನಿವೃತ್ತಿ

ಬೆಂಗಳೂರು ೧೧

ಕಳೆದ ಎರಡು ವರ್ಷಗಳಿಂದ ರಜದ ಮೇಲಿರುವ ಮೈಸೂರಿನ ಪೊಲೀಸ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ಲರಾದ ಶ್ರೀ ಜಿ. ಕೆ ಸೋಮಪ್ಪನವರು ಬರುವ ಜನವರಿ ತಿಂಗಳು ೧ನೇ ತಾರೀಕಿನಿಂದ ನಿವೃತ್ತರಾಗತಕ್ಕದ್ದೆಂದು ಸರ್ಕಾರದವರು ಆಜ್ಞೆ ಮಾಡಿರುವರು. ಪೊಲೀಸು ಶಾಖೆಯ ಸಿ. ಐ. ಡಿ ಮತ್ತು ಇತರ ವಿಶೇಷ ಶಾಖೆಗಳ ವೆಚ್ಚಕ್ಕಾಗಿ ಅವರಿಗೆ ... ಸಲಾದ ಧನದ ಲೆಕ್ಕವನ್ನು ಪರಿಶೀಲಿಸಲು ಸರ್ಕಾರದವರು ಒಬ್ಬ ಆಡಿಟರನ್ನು ನೇಮಿಸಿರುವರೆಂದು ತಿಳಿದು ... ಈ ಸಂಬಂಧವಾಗಿ ಹಣ ಪಡೆದಿರುವ ಇತರ ಅಧಿಕಾರಿಗಳು ಅವನ್ನು ... ಸರ್ಕಾರಕ್ಕೆ ಒಪ್ಪಿಸಲು ಆಡಿಟರು ... ಕ್ರಮ ಕೈಗೊಳ್ಳುವರೆಂದು ಹೇಳಲಾಗಿದೆ.

ಅಟ್ಲಾಂಟಿಕ್ ಸೈನ್ಯಗಳ ಬಳಕೆಗೆ ಅಣು ಬಾಂಬು

... ಂಟಿಕ್ ಕೌಲು ರಾಷ್ಟ್ರಗಳಾದ ..., ... ಇಂಗ್ಲೆಂಡ್, ಫ್ರಾನ್ಸ್ ಮತ್ತು ಇತರ ದೇಶಗಳ ಸೈನ್ಯಗಳನ್ನು ... ಗ ಯುದ್ಧ ಸನ್ನದ್ಧ ಸ್ಥಿತಿಗೆ ತರ ... ಗತ್ಯವಾದ ತರಪೇತು ಕೊಟ್ಟ ... ತಧುನಿಕ ಶಸ್ತ್ರಾಸ್ತ್ರಗಳನ್ನು ... ಸಲಾಗುವುದೆಂದೂ ಮತ್ತು ಅವುಗೆ ... ದಂಡನಾಯಕ ಐಸೆನ್ ಹೋವರ್ ... ಇಕ್ಕೆ ಅಣು ಬಾಂಬನ್ನು ಒಪ್ಪಿ ... ವುದೆಂದೂ ಹೇಳಲಾಗಿದೆ.

ಸಪದ್ರೂರವರಿಗೆ ೫ ಲಕ್ಷ ರೂ ನಿಧಿ

... ರಾಬಾದಿಗೆ ಪ್ರಧಾನಿ ನೆಹರೂರವರು ... ಟಿಕೊಡುವ ಸಮಯದಲ್ಲಿ ಅವ ... ಲಕ್ಷ ರೂ ನಿಧಿಯನ್ನು ಅರ್ಪಿಸ ... ವುದೆಂದು ತಿಳಿದುಬಂದಿದೆ

ಭಾರತೀಯ ಜನಸಂಘದ ಪರವಾಗಿ ... ಉಮೇದುವಾರರು

ಭಾರತೀಯ ಜನ ಸಂಘದ ಕರ್ನಾಟಕ ಶಾಖೆಯ ಪರವಾಗಿ ಮೈಸೂರು ಶಾಸನ ಸಭೆಯ ... ಸ್ಥಾನಗಳಿಗೂ, ಪಾರ್ಲಿಮೆಂಟಿನ ಆರು ಸ್ಥಾನಗಳಿಗೂ ... ಉಮೇದುವಾರರನ್ನು ನಿಲ್ಲಿಸಲಾಗುವು ... ಪಕ್ಷದ ಉಪಾಧ್ಯಕ್ಷರಾದ ಶ್ರೀ ... ಎಚ್ ಕೃಷ್ಣರಾಯರು ತಿಳಿಸಿರು ... ಪ್ರಚಾರಕ್ಕಾಗಿ ಡಾ|| ಶ್ಯಾಮಪ್ರ ... ಮುಖರ್ಜಿಯವರು ಈ ತಿಂಗಳು ... ನಲ್ಲಿ ಸಂಸ್ಥಾನದಲ್ಲಿ ಪ್ರವಾಸ ಮಾಡುವರೆಂದು ತಿಳಿದುಬಂದಿದೆ. ಮೈಸೂರು ನಗರದ ದಕ್ಷಿಣ ಭಾಗದಿಂದ ಶ್ರೀ ... ನಾರಾಯಣರವರನ್ನು ಆರಿಸಲಾಗಿ...

ಸರ್ಕಾರದಿಂದ ಸಾಲ

... ಸರಲ್ಲಿ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಶ್ರೀ|| ೪ ರೂ ಬಡ್ಡಿ ಪ್ರ ... ಸಾವಿರ ರೂ. ಗಳನ್ನು ಸರ್ಕಾರದಿಂದ ತೆಗೆದುಕೊಂಡಿರುವುದಾಗಿ ಶಾಸನ ಸಭೆಯಲ್ಲಿ ನೆನ್ನೆ ತಿಳಿಸಲಾಯಿತು ... ಸಾವಿರ ರೂ. ಎಂದು ನಮ್ಮ ... ನ ಪತ್ರಿಕೆಯಲ್ಲಿ ಬಿದ್ದುದನ್ನು ಮೇ ... ತಿದ್ದಿಕೊಳ್ಳಬೇಕಾಗಿ ವಿನಂತಿ

ರಾಷ್ಟ್ರಾಧ್ಯಕ್ಷರ ನಿರೂಪದ ಸಮರ್ಥನೆ

ಬೆಂಗಳೂರು ವಕೀಲರ ನಿರ್ಣಯ

ಬೆಂಗಳೂರು ೧೧

ಬೆಂಗಳೂರು ನಗರದ ವಕೀಲರ ಸಂಘದ ಜರೂರು ಸಭೆಯು ನೆನ್ನೆ ಮಧ್ಯಾಹ್ನ ಶ್ರೀ ಎಂ. ಪಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಟಿ ವಿ ಗೋವಿಂದರಾಜ ಅಯ್ಯಂಗಾರರು ರಾಷ್ಟ್ರಾಧ್ಯಕ್ಷರ ನಿರೂಪವನ್ನು ಸಮರ್ಥಿಸಿ ಮಂಡಿಸಿದ ನಿರ್ಣಯವು ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು

ಭಾರತಕ್ಕೆ ಕೆನಡಾದ ಗೋಧಿಯ ಬಹುಮಾನ

ಕೆನಡಾ ದೇಶವು ಭಾರತಕ್ಕೆ ೧ ಕೋಟಿ ಡಾಲರಿನ ಬೆಲೆಯ ಅತ್ಯುತ್ತಮ ವರ್ಜಾಯ ಗೋಧಿಯನ್ನು ಬಹುಮಾನವಾಗಿ ಕೊಡಲು ನಿರ್ಧರಿಸಿರುತ್ತದೆ

ವಸಂತ ಕೋಕಿಲಂರವರಿಂದ ೨|| ಲಕ್ಷ ರೂ. ದಾನ

ನಿಧನರಾದ ಮದ್ರಾಸಿನ ಎಂ. ಎಸ್ ವಸಂತ ಕೋಕಿಲಂರವರು ತಮ್ಮ ೨|| ಲಕ್ಷ ರೂ ಆಸ್ತಿಯನ್ನು ಸ್ತ್ರೀಯರ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸಲು ದಾನ ಮಾಡಿರುತ್ತಾರೆ. ಮದ್ರಾಸು ನಗರದ ಮತ್ತು ಗುರುವಾಯೂರ್ ದೇವಸ್ಥಾನಗಳಿಗೂ ಅವರ ಆಸ್ತಿಯಲ್ಲಿ ಸ್ವಲ್ಪ ಭಾಗವನ್ನು ಕೊಡಲಾಗುವುದು

ಮೋಟಾರ್ ಸೈಕಲ್ ಮತ್ತು ಕಾರಿಗೆ ಡಿಕ್ಕಿ

ನೆನ್ನೆ ಮಧ್ಯಾಹ್ನ ಚಾಮುಂಡೇಶ್ವರಿ ರಸ್ತೆಯ ಸಿದ್ದಪ್ಪ ಚೌಕದಲ್ಲಿ ಮೋಟಾರು ಕಾರೊಂದಕ್ಕೂ ಮೋಟಾರು ಸೈಕಲ್ಲಿಗೂ ಡಿಕ್ಕಿಯಾಗಿ ಸೈಕಲ್ ಸವಾರರಾದ ಶ್ರೀ ನಾಗೇಶ್ ಎಂಬುವರಿಗೆ ತುಂಬಾ ಗಾಯವಾಗಿರುತ್ತದೆ. ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲ್ಪಟ್ಟು ಗುಣಮುಖರಾಗುತ್ತಿರುವರು. ಸೈಕಲ್ಲಿಗೆ ತುಂಬಾ ನಷ್ಟವಾಗಿದೆ.

ಸಂಸ್ಥಾನದ ವೈದ್ಯರ ಸಮ್ಮೇಳನ

ಮೈಸೂರು ಸಂಸ್ಥಾನದ ವೈದ್ಯರ ಸಮ್ಮೇಳನವು ಬರುವ ತಿಂಗಳು ೨೯ನೇ ತಾರೀಖು ದಾವಣಗೆರೆಯಲ್ಲಿ ಸಮಾವೇಶಗೊಂಡು ಮೂರು ದಿನಗಳವರೆಗೆ ನಡೆಯುವುದೆಂದು ಗೊತ್ತಾಗಿದೆ

ಭಾಷ್ಯಂರವರ ಉಮೇದುವಾರಿಕೆ ಅರ್ಜಿ ವಾಪಸು

ಸಂಸ್ಥಾನ ಶಾಸನ ಸಭೆ ಕಾಂಗ್ರೆಸ್ ಉಮೇದುವಾರರ ಪಟ್ಟಿ

ಸ್ವಂ. ಸು] ಬೆಂಗಳೂರು ೧೧

ಕೇಂದ್ರ ಚುನಾವಣಾ ಸಮಿತಿಯವರು ಮೈಸೂರು ಸಂಸ್ಥಾನದ ಶಾಸನ ಸಭೆಗೆ ಕಾಂಗ್ರೆಸ್ ಪಕ್ಷದ ಉಮೇದುವಾರರ ಅಖೈರು ಪಟ್ಟಿಯನ್ನು ನೆನ್ನೆ ಪ್ರಕಟಿಸಿದರು. ಅದರ ಪ್ರಕಾರ ಒಬ್ಬ ಮುಸ್ಲಿಂ, ಒಬ್ಬ ಕ್ರೈಸ್ತ ಮತ್ತು ಮೂವರು ಪಂಗಡದ ಉಮೇದುವಾರರೂ ಸೇರಿ ... ಸ್ಥಾನಗಳಿಗೆ ಉಮೇದುವಾರರ ಆಯ್ಕೆ ನಡೆದು ಬೆಂಗಳೂರಿನ ಮಲ್ಲೇಶ್ವರ ಮತ್ತು ಚಿಕ್ಕಪೇಟೆ ಮತ್ತು ಮೈಸೂರು ಜಿಲ್ಲೆಯ ಗುಂಡ್ಲುಪೇಟೆ-ಹೆಗ್ಗಡದೇವನ ಕೋಟೆ ಈ ಮೂರು ಕ್ಷೇತ್ರಗಳು ಇನ್ನೂ ಖಾಲಿ ಬಿದ್ದಿವೆ.

ಶ್ರೀ ಕೆ ಪಟ್ಟಾಭಿರಾಮಯ್ಯರವರು ಕಾಂಗ್ರೆಸ್ಸಿಗೆ ರಾಜಿನಾಮೆ ಸಲ್ಲಿಸಿರುವುದರಿಂದ ಕೋಲಾರದ ತಾಲ್ಲೂಕಿನಿಂದ ಅವರಿಗೆ ಉಮೇದುವಾರಿಕೆ ಕೊಡಲಾಗಿದ್ದುದು ಈಗ ಖಾಲಿಯಾಗುವುದು.

ಶ್ರೀ ಕೆ. ಟಿ ಭಾಷ್ಯಂರವರು ಕೇಂದ್ರ ಪಾರ್ಲಿಮೆಂಟಿಗಾಗಲೀ ಸಂಸ್ಥಾನ ಶಾಸನ ಸಭೆಗಾಗಲೀ ಸ್ಪರ್ಧಿಸುವುದಿಲ್ಲವೆಂದೂ ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದಿರುವರೆಂದೂ ಗೊತ್ತಾಗಿದೆ. ಅವರನ್ನು ಬೆಂಗಳೂರು ಗಾಂಧೀ ನಗರದಿಂದ ಶಾಸನ ಸಭೆಗೆ ನಿಲ್ಲಿಸಲು ಪ್ರಾಂತ ಸಮಿತಿಯವರು ಶಿಫಾರಸು ಮಾಡಿದ್ದರು.

ಬೆಂಗಳೂರು ಬಸವನಗುಡಿ ಕ್ಷೇತ್ರದಿಂದ ಶ್ರೀ ಸಿ. ಆರ್ ರಾಮಯ್ಯ, ಗಾಂಧಿನಗರದಿಂದ ಶ್ರೀ ಆರ್ ಸುಬ್ಬಣ್ಣನವರನ್ನು ಶಾಸನ ಸಭೆಗೂ, ಶ್ರೀ ಎಂ. ವಿ. ಕೃಷ್ಣಪ್ಪನವರನ್ನು ಕೋಲಾರ ಜಿಲ್ಲೆ ಸಾಮಾನ್ಯ ಕ್ಷೇತ್ರದಿಂದ ಪಾರ್ಲಿಮೆಂಟಿಗೂ ಆರಿಸಲಾಗಿದೆ

ಬೃಂದಾವನ ಪೂಜೆ

ರಾಜಧಾನಿಯ ಚಾಮರಾಜ ಮೊಹಲ್ಲಾ ಗಂಗಾ ಮಹಲ್ಲ ಬೀದಿಯಲ್ಲಿರುವ ಕಾಶ್ಯಪಾಲರ್ಬ ಗ ರ ಡಿ ಯ ರಾಮಮಂದಿರದಲ್ಲಿ ನೆನ್ನೆ ಸಂಜೆ ಬೃಂದಾವನ ಪೂಜೆಯನ್ನು ನಡೆಸಲಾಯಿತು.

ಮೊದಲಿನಿಂದ ರಾಜು ಮೊಕದ್ದಮೆಯ ವಿಚಾರಣೆ

ಕೇಂದ್ರದ ಸೂಚನೆಗೆ ಮೈಸೂರು ಸರ್ಕಾರ ಒಪ್ಪಬಹುದೆಂಬ ಭಾವನೆ

ಬೆಂಗಳೂರು ೧೧

ಶ್ರೀ ಎಲ್. ಎಸ್ ರಾಜುರವರ ಮೊಕದ್ದಮೆಯನ್ನು ಪರಿ ಪ್ರಾಂತ್ಯದ ನ್ಯಾಯಾಧೀಶರನ್ನು ಕರೆಸಿ ಪುನಃ ಮೊದಲಿನಿಂದ ವಿಚಾರಣೆ ನಡೆಸಬೇಕೆಂದು ಕೇಂದ್ರದವರು ಮಾಡಿರುವ ಸೂಚನೆಯನ್ನು ಮೈಸೂರು ಸರ್ಕಾರವು ಒಪ್ಪಬಹುದೆಂದೂ ಇದಾದರೆ ಅಧ್ಯಕ್ಷರು ತಮ್ಮ ಆಜ್ಞೆಯನ್ನು ಪುನಃ ವಿಮರ್ಶಿಸಬಹುದೆಂದೂ ತಿಳಿದುಬಂದಿದೆ. ರಾಷ್ಟ್ರಾಧ್ಯಕ್ಷರು ಕೆಗೆ ಮಕೊಂಡ ಕ್ರಮದಿಂದ ಮೈಸೂರಿನಲ್ಲಿ ಸ್ವಲ್ಪ ಮಟ್ಟಿನ ರಾಜಕೀಯ ಪರಿಣಾಮದ ಕ್ರಮಗಳು ನಡೆಯಬಹುದೆಂದು ದೆಹಲಿಯಲ್ಲಿ ಮೊದಲೇ ನಿರೀಕ್ಷಿಸಲಾಗಿತ್ತೆಂದು ಮದ್ರಾಸಿನ ಪತ್ರಿಕೆಯೊಂದರ ಬಾತ್ಮೀದಾರರು ತಿಳಿಸಿರುತ್ತಾರೆ

ನೇಪಾಳದ ಪ್ರಧಾನಿಯಿಂದ ಕ್ರಾಂತಿಗಾಗಿ ಸಂಚು ?

ನೇಪಾಳದ ಪ್ರಧಾನ ಮಂತ್ರಿ ಮಹಾರಾಜಾ ಮೋಹನ್ ಶಂಷೇರ್‌ರವರು ಸಂಸ್ಥಾನದ ಪ್ರತಿಗಾಮಿ ಪಕ್ಷದವರೊಡನೆ ಸೇರಿಕೊಂಡು ಭಾರಿ ರಾಜಕೀಯ ಕ್ರಾಂತಿಯನ್ನೆಬ್ಬಿಸಲು ಸಂಚು ನಡೆಸುತ್ತಿರುವರೆಂದೂ, ಆದುದರಿಂದ ಅವರನ್ನು ಮಂತ್ರಿ ಮಂಡಲದಿಂದ ಹೊರಕ್ಕೆ ಹಾಕಬೇಕೆಂದೂ, ಅಲ್ಲಿನ ಗೃಹ ಸಚಿವರಾದ ಶ್ರೀ ಬಿ. ಪಿ. ಕೊಯಿರಾಲಾರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿ ಈ ವಿಷಯವಾಗಿ ತಾವು ನೇಪಾಳದ ಮಹಾರಾಜರಲ್ಲಿ ಮನವಿ ಸಲ್ಲಿಸಿರುವುದಾಗಿಯೂ ಹೇಳಿದರು. ಮಂತ್ರಿ ಮಂಡಲದಲ್ಲಿ ರಾಣಾ ಪಕ್ಷದವರಿಗೂ ಮತ್ತು ಕಾಂಗ್ರೆಸ್ ಪಕ್ಷದವರಿಗೂ ಸಾಮರಸ್ಯವಿಲ್ಲವೆಂದೂ ಅವರು ತಿಳಿಸಿದರು.

ಸಂಸ್ಥಾನದಿಂದ ಕೇಂದ್ರ ಪಾರ್ಲಿಮೆಂಟಿಗೆ ಚುನಾವಣಾ ವೇಳಾ ಪಟ್ಟಿ

ಮುಂದಿನ ಚುನಾವಣೆಗೆ ಮೈಸೂರಿನಿಂದ ಪಾರ್ಲಿಮೆಂಟಿಗೆ ಉಮೇದುವಾರರ ಆಯ್ಕೆ ಬಗ್ಗೆ ರಾಷ್ಟ್ರಾಧ್ಯಕ್ಷರು ಒಂದು ಘೋಷಣೆಯನ್ನು ಹೊರಡಿಸಿ, ಉಮೇದುವಾರಿಕೆ ಅರ್ಜಿ ಸಲ್ಲಿಸಲು ಕಡೆಯ ದಿನ ಇದೇ ... ನೇ ತಾರೀಕು ಅವುಗಳ ಪರಿಶೀಲನೆ ಇದೇ ... ಮತ್ತು ವಾಪಸು ತೆಗೆದುಕೊಳ್ಳಲು ಇದೇ ... ನೇ ತಾರೀಕುಗಳನ್ನು ಗೊತ್ತು ಪಡಿಸಿರುವರು. ಫೆಬ್ರವರಿ ೩೦ರೊಳಗೆ ಚುನಾವಣೆ ನಡೆಯಬೇಕೆಂದು ಗೊತ್ತುಪಡಿಸಲಾಗಿದೆ.

ಬ್ರಿಟಿಷರ ಮೇಲೆ ಈಜಿಪ್ಟ್ ವಿಮೋಚನಾ ಸೈನ್ಯದ ಕ್ರಮ

ಈಜಿಪ್ಟಿನಲ್ಲಿರುವ ಬ್ರಿಟಿಷರ ಮೇಲೆ ಅಲ್ಲಿನ ಕ್ರಾಂತಿಕಾರಿ "ವಿಮೋಚನಾ" ಸೈನ್ಯಗಳು ಉಗ್ರ ಕ್ರಮ ಕೈಗೊಳ್ಳುವ ತಾರೀಖನ್ನು ಗೊತ್ತುಪಡಿಸಿರುವುದಾಗಿ ಗೊತ್ತಾಗಿದೆ. ಯಾವ ಈಜಿಪ್ಟ್ ನವನಾದರೂ ಬ್ರಿಟಿಷರೊಡನೆ ಸಹಕರಿಸುವುದು ಕಂಡುಬಂದರೆ ಅಂತಹವನನ್ನು ಹಿಡಿದು ಪ್ರಜಾ ನ್ಯಾಯಾಲಯಗಳು ವಿಚಾರಿಸಿದ ನಂತರ ಬಹಿರಂಗವಾಗಿ ಗಲ್ಲಿಗೆ ಹಾಕಲಾಗುವುದೆಂದೂ ಹೇಳಲಾಗಿದೆ.

ವಾರ ಭವಿಷ್ಯ

ತಾ|| ೧೧-೧೧-೬೧ರಿಂದ ೧೭-೧೧-೬೧ರ ವರೆಗೆ

ಮೇಷ — ಗೃಹವಾರ್ತೆ ಉತ್ತಮ ಆರೋಗ್ಯ ನೆಟ್ಟಗೆ ಕಾರ್ಯಸಿದ್ಧಿ ಸಾಂಪತ್ತಿಕ ಸ್ಥಿತಿ ಚೆನ್ನಾಗಿದೆ ತಾ|| ೧೫ ೧೬ ಶುಭ ವಾರ್ತೆ ಮೃಷ್ಟಾನ್ನ ಲಾಭ

ವೃಷಭ — ಇದು ಕಳೆದ ವಾರಕ್ಕಿಂತ ಕೆಟ್ಟ ವಾರವಲ್ಲ ಪತ್ನಿಯೊಡನೆ ಭಿನ್ನತೆ ಮಾಯ ವಿದ್ಯಾರ್ಥಿ ಸವಿ [illegible] ಸ್ಯ ತಾ|| ೧೧ ೧೨ ಸಂತತಿಗೆ ಕ್ಲೇಶ ಖರ್ಚು ಹೆಚ್ಚು

ಮಿಥುನ — ಆರೋಗ್ಯ ನೆಟ್ಟಗಿರದು ಮಿತ್ರ ಶತ್ರುಗಳ ಅರಿವಾಗದು ಪ್ರವಾಸ ಚೆನ್ನಾಗಿಲ್ಲ ಕುಟುಂಬದವರಿಗೆ [illegible] ತಾ|| ೧೪, ೧೫ [illegible] ಅಪ್ರಿಯ ವಾರ್ತೆ

ಕರ್ಕ — ಆರೋಗ್ಯ ಹಿತವು ಸರ್ಕಾರಿ ವ್ಯಾಪಾರಾದಿಗಳು [illegible] ವರೆ [illegible] ತಾ|| ೧೫ ೧೬ ಪ್ರವಾಸ ಯೋಗ, ಧನ ಲಾಭ

ಸಿಂಹ — ಅನೇಕ ತೊಂದರೆಗಳು ದೂರವಾಗುವುವು ಆರೋಗ್ಯದ ಕಡೆ [illegible] ವಾರಾರಂಭ [illegible] ಅಲ್ಪ ಪ್ರವಾಸ [illegible] ಲಾಭ

ಕನ್ಯಾ — ಮಿತ್ರರಿಂದ ಸಹಾಯ ಆರೋಗ್ಯದ ಕಡೆ ಗಮನವಿರಲಿ ಪ್ರವಾಸ ಬೇಡ ಅಪಘಾತ ಭಯ ತಾ|| ೧೧ ೧೨ ೧೩ ವಿಯೋಗ [illegible]

ತುಲಾ — ಹಣದ ನೆಚ್ಚ ಹೆಚ್ಚು ವ್ಯಾಪಾರಾದಿಗಳಲ್ಲಿ ತೊಂದರೆ ಆರೋಗ್ಯ ನೆಟ್ಟಗಿರದು ಪ್ರವಾಸ ಒಳ್ಳೆಯದಾಗಿರದು ತಾ|| ೧೪, ೧೫ ಕಲಹ [illegible] ಜಯ

ವೃಶ್ಚಿಕ — ಉತ್ತೇಜನಕರ ವಾರ ಹಣಕಾಸಿನ ಸ್ಥಿತಿ ಸಮರ್ಪಕ ಆರೋಗ್ಯ ನೆಟ್ಟಗೆ ನೂತನ ಪರಿಚಯ ತಾ|| ೧೪, ೧೫ ಮಹತ್ವದ ಪತ್ರ, ಸುಖ ಪ್ರವಾಸ

ಧನು — ಸಮಾಜ ಸೇವೆ ಸತ್ಕಾರ್ಯಗಳು ಆರೋಗ್ಯ ನೆಟ್ಟಗೆ ಎದುರಾಳಿಗಳ ಸೋಲು ವ್ಯಾಪಾರಾದಿಗಳಲ್ಲಿ ಅನುಕೂಲ ತಾ|| ೧೪, ೧೫ ಖರ್ಚು, [illegible]

ಮಕರ — ಉತ್ತೇಜನಕರವಾದವಾರ ಹಣದ ಸಹಾಯ ಅನುಮಾನ ಜಯವಾಗುವುವು ತಾ|| ೧೬ ೧೭ ಮಹತ್ವದ ಆದೇಶ, ಆರ್ಥಿಕ ಲಾಭ

ಕುಂಭ — ಆರೋಗ್ಯ ನೆಟ್ಟಗಿರದು ವ್ಯಾಪಾರಾದಿಗಳಲ್ಲಿ ನೌಕರರ ಬೇಜವಾಬ್ದಾರಿತನ ಆರ್ಥಿಕ ಸ್ಥಿತಿ ಅಸಮರ್ಪಕ ತಾ|| ೧೪, ೧೫ ಕಲಹ, ವಿರಸ

ಮೀನ — ವಿಶ್ವಾಸ ಘಾತಕ ಜನರ ಭೀತಿ ಆರೋಗ್ಯದ ಕಡೆ ಗಮನವಿರಲಿ ಹಣಕಾಸಿನ ದೃಷ್ಟಿ ತೃಪ್ತಿಕರವಿರದು ಅಪಘಾತ ತಾ|| ೧೪, ೧೫ ಪತ್ನಿಗೆ ಅಪಘಾತ ಭಯ, ಆರ್ಥಿಕ ಹಾನಿ

ಭಿಕ್ಷುಕರಿಂದ ಅಕ್ಕಿಗೆ ಬದಲು ಉಪ್ಪಿನ ಯಾಚನೆ

ಪೂರ್ವ ಪಾಕಿಸ್ತಾನದಲ್ಲಿ ಉಪ್ಪಿನ ಅಭಾವದಿಂದ ೨೦ ರೂ ಗಳಿಗೆ ೧ ಸೇರಿನಂತೆ [illegible] ಸಂತೆಯಲ್ಲಿ ಮಾರಲ್ಪಡುತ್ತಿದೆಯೆಂದು ಗೊತ್ತಾಗಿದೆ ಭಿಕ್ಷುಕರು ಅಕ್ಕಿಯ ಬದಲಾಗಿ ಉಪ್ಪಿನ ಭಿಕ್ಷೆ ಬೇಡುತ್ತಿರುವರೆಂದು ಹೇಳಲಾಗಿದೆ

ಬಸ್ಸು ಮತ್ತು ರೈಲು ಡಿಕ್ಕಿಯಿಂದ ೧೬ ಜನರ ಮರಣ

[illegible] ಸಂಸ್ಥಾನದ [illegible] ಪ್ರಯಾಣಿಕರ ಬಸ್ಸೊಂದು [illegible] ಕ್ಸ್‌ಪ್ರೆಸ್ ರೈಲಿನ ಇಂಜಿನ್ನಿಗೆ [illegible] ಡಿಕ್ಕಿಯಾಗಿ ೧೬ ಜನ [illegible] ಪ್ರಯಾಣಿಕರು ಸತ್ತು ೧೧ ಜನರಿಗೆ ಗಾಯವಾಗಿರುತ್ತದೆ

ಸಮಾಜ ಶಿಕ್ಷಣದ ಸಪ್ತಾಹ

ಕಳೆದ ವಾರ ತಾ|| ಶ್ರೀರಂಗಪಟ್ಟಣದ ಪ್ರಾಥಮಿಕ ಮಾಧ್ಯಮ ಮತ್ತು ಪೌರ ಪ್ರೌಢಶಾಲೆಯ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು [illegible] ಸಮಾಜ ಶಿಕ್ಷಣ [illegible] ಸಪ್ತಾಹದ ಸಮಾಪ್ತಿ ಸಭೆಯನ್ನು [illegible] ಶ್ರೀ ವೆಂಕಣ್ಣನವರು ಅಧ್ಯಕ್ಷತೆ [illegible] ರು ವಿನೋದಾವಳಿ ಭಾಷಣ [illegible] ಬಹುಮಾನ [illegible] ತನ್ನ ನ ವರದಿ [illegible] ಶ್ರೀರಂಗನಗರ ಸದಸ್ಯ ವಯಸ್ಕರ [illegible] ರು ಅದೇ ಸಂಜೆ ಸಾಮಾಜಿಕ ಜನ ಜೀವನವನ್ನು ಚಿತ್ರಿಸುವ ಚಲನ ಚಿತ್ರವನ್ನು ಪ್ರದರ್ಶಿಸಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜ [illegible] ವಿಷಯಗಳನ್ನು ವಿವರಿಸಿದರು

ಅನೀತಿಯ ವರ್ತನೆಗಾಗಿ ಕಾಲು ಕತ್ತರಿಸಿದ ಪ್ರಸಂಗ

ಹೋಲಾಪುರದ ಬಳಿ ಅಕ್ಕಲ ಕೋಟೆ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಸ್ತ್ರೀಯೊಡನೆ ಅಸಭ್ಯ ರೀತಿಯಲ್ಲಿ ವರ್ತಿಸುತ್ತಿದ್ದ ಒಬ್ಬ ಯುವಕನ ಎರಡು ಕಾಲುಗಳನ್ನು ಯಾರೋ ಕತ್ತರಿಸಿ ಹಾಕಿರುವರೆಂದು ವರದಿಯಾಗಿದೆ

ಕಾಂಗ್ರೆಸ್ಸಿಗೆ ಕೆ. ಪಟ್ಟಾಭಿ ರಾಮನ್‌ರವರ ರಾಜೀನಾಮೆ

ಮೈಸೂರಿನ [illegible] ಪ್ರಮುಖ ವಕೀಲರೂ [illegible] ಶ್ರೀ ಕೆ ಪಟ್ಟಾಭಿರಾಮನ್‌ರವರು ಕಾಂಗ್ರೆಸ್ಸಿಗೆ ರಾಜೀನಾಮೆಯನ್ನು [illegible] ಕಾಂಗ್ರೆಸ್ ಸಮಿತಿಯ [illegible] ಉಮೇದುವಾರಿಕೆಯನ್ನು [illegible] ತೆಗೆದುಕೊಂಡಿರುತ್ತಾರೆ

ಶ್ರೀ ಪ್ಪಾಧ್ಯಕ್ಷರ ಆಜ್ಞೆ ವಿರೋಧಿಸಿ ತುಮಕೂರು ವಕೀಲರ ನಿರ್ಣಯ

ರಾಷ್ಟ್ರಾಧ್ಯಕ್ಷರು ಮೈಸೂರು ಸರ್ಕಾರಕ್ಕೆ ಕೊಟ್ಟಿರುವ ತೀರ್ಪಿಯು ನ್ಯಾಯವಾಗಿದೆಯೆಂದು [illegible] ಅವರ ಮೇಲೆ ಮೈಸೂರು ಶಾಸನ ಸಭೆಯಲ್ಲಿ ಆದ ಭಾಷಣ [illegible] ನಿರ್ಣಯವೂ ರಾಜ್ಯಾಂಗದ ಘನತೆ ಮತ್ತು ರಾಷ್ಟ್ರಾಧ್ಯಕ್ಷರ [illegible] ಅಪಮಾನ ಮಾಡುವಂತಿರುವುದೆಂದೂ ತುಮಕೂರು ವಕೀಲರ ಸಂಘದವರ ಸಭೆ [illegible] ನಿರ್ಣಯ ಮಾಡಿರುತ್ತಾರೆ

CITY TUTORIAL COLLEGE

[illegible]

ಮಿಡಲ್ ಸ್ಕೂಲ್ ಪರೀಕ್ಷೆಗೆ ತರಬೇತಿ ನೀಡುವ ತರಗತಿಗಳು

ಜೂನ್ 11 ರಿಂದ 4 ಗಂಟೆ ವರೆಗೆ ಮತ್ತು [illegible] ಯಿಂದ ರವರೆಗೆ (ವಿದ್ಯಾರ್ಥಿನಿಯರಿಗೆ ಪ್ರತ್ಯೇಕ)

ಮದ್ರಾಸು ಮೆಟ್ರಿಕ್ಯುಲೇಷನ್ ತರಗತಿಗಳು

ವಿವರಗಳಿಗೆ ವಯಿಸಿ [illegible]

ಶಿಶುವಿನ ಶ್ವಾಸಕೋಶದಲ್ಲಿ ಗುಂಡು ಸೂಜಿ

ಫಿಲಿಪ್ಪೈನ್ ದೇಶದ ಹಸುಗೂಸೊಂದು ತಿಂಗಳ ಹೆಣ್ಣು ಶಿಶುವನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಿದ ಜಿಂಗಾಗೋವಿನ ವೈದ್ಯರು ಕೇವಲ [illegible] ನಿಮಿಷಗಳೊಳಗಾಗಿ ಶ್ವಾಸಕೋಶದಲ್ಲಿ ಸೇರಿದ್ದ ಒಂದು ಗುಂಡು ಸೂಜಿಯನ್ನು ತೆಗೆದುದು ವರದಿಯಾಗಿದೆ ಮಗುವಿನ ಕರುಳಿನೊಳಕ್ಕೆ ಹೊಕ್ಕಿರುವ ಇನ್ನೊಂದು ಸೂಜಿಯಿಂದ ಮಗುವಿಗೆ ಅಪಾಯವಿಲ್ಲವೆಂದೂ ಅದನ್ನು [illegible] ಪಟ್ಟಿರುವುದಾಗಿ ಗೊತ್ತಾಗಿದೆ

ಅಮೇರಿಕಕ್ಕೆ ಡಾ|| ಮಂಜುನಾಥ್

ಮೈಸೂರು ವಿಶ್ವ ವಿದ್ಯಾಲಯದ ವಿಜ್ಞಾನ ಪದವೀಧರ ಡಾ|| ಬಿ ಎಲ್ ಮಂಜುನಾಥ್‌ರವರು ಅಮೇರಿಕದ ವಿಶ್ವ ವಿದ್ಯಾಲಯ [illegible] ಸಂದರ್ಶಿಸಲು [illegible] ಸರ್ಕಾರವು ಇತ್ತಿರುವ ಆಹ್ವಾನವನ್ನು ಅಂಗೀಕರಿಸಿರುತ್ತಾರೆ ಬರುವ [illegible] ತಿಂಗಳಲ್ಲಿ ಅವರು ತೆರಳಿ [illegible] ಗಳ ಕಾಲ ಅಲ್ಲಿ ಪ್ರವಾಸ ಮಾಡುವರು

ಸರ್ ಸಿ. ವಿ. ರಾಮನ್‌ರವರು [illegible] ಉಪಯೋಗಿಸ [illegible]

ಸ್ಪೈರೆಕ್ಸ್

ಕ್ಷಯ ರೋಗವನ್ನು ಹೋಗಲಾಡಿಸುತ್ತ, ಕ್ಷಯ ಸ್ರಾವವನ್ನು ನಿಲ್ಲಿಸುತ್ತದೆ ಕ್ಷಯದಂತ ರೋಗಗಳನ್ನು ತಡೆಗಟ್ಟುತ್ತದೆ

ತಯಾರಕರು:

ದಿ ಪಯೋರಿಯಾ ಕ್ಯೂರ್ ಕ್ಲಿನಿಕ್

ಕೋಟೆ — ಬೆಂಗಳೂರು-

ಮೈಸೂರಿನ ಏಜಂಟರು

ಎಸ್ ಗೋಪಾಲನ್,

[illegible] ಬಜಾರ್ [illegible] ರಸ್ತೆ ಮೈಸೂರು

City Municipal Office
Mysore, Dated 30 10-51

ABSTRACT SALE NOTIFICATION

— o —

Lorry bearing registration No MY7 1403 belonging to the Food Supplies Department will be sold in public auction by the Municipal Engineer on Friday the 30th November 1961 at 11 A M in Jampanthalli forest Heggadadevanakote Taluk about [illegible] miles from the main road running between Mysore and Mananthody Further particulars in this behalf may be had from the Municipal Engineer or from the detailed notification published on the office notice board

(Sd) **M S Swaminathan,**
Municipal Commissioner

GAYATHRI, [illegible]

[illegible] Daily [illegible] Shows

Warners

THE PRIVATE LIFE OF ELIZABETH & ESSEX

(In Technicolour)

With Errol Flynn
Bette Davis and
Olivia De Havilland

Edited, Printed and Published by A R Nagarajan at Sadhvi Press D Subbiah Road, Mysore

ಗೌಡ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶ್ರೇಷ್ಠಿ ಬಿ ಎ ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಕುರ್ಚಿ ಬಟ್ಟೆ, ಛತ್ರಿಬಟ್ಟೆ, ಹಾಸಿಗೆ ಬಟ್ಟೆ, ಸೋಫಾ ಬಟ್ಟೆಗಳಿಗೂ



[illegible] ಕ್ಯಾನ್ವಾಸ್, [illegible] ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಶೀಟ್ [illegible] ಬ್ಯಾಂಕ್ ರಸ್ತೆ, ಮೈಸೂರು

ಪುಟ 199 ... ಬೆಲೆ ಪ್ರತಿ 3 ಕಾಸು
ಸಂಪುಟ ೧೧] ಸೋಮವಾರ ೧೩-೧೧-೫೧ [ಸಂಚಿಕೆ ೯೯

ಮೈಸೂರು ಸಚಿವರಿಗೆ - ನೆಹರೂ ಹಿತೋಕ್ತಿ -

ಮೈಸೂರಿಗೆ ೩೭೧ ನೇ ನಿಯಮದ ವಿನಾಯಿತಿ

ಶ್ರೀ ರೆಡ್ಡಿಯವರ ಅಭಿಪ್ರಾಯ

ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ನೆಹರೂ ಹಿತೋಕ್ತಿ

ಬೆಂಗಳೂರು ೧೨

ರಾಜ್ಯಾಂಗದ ೩೭೧ ನೇ ನಿಯಮದ ಪ್ರಕಾರ ರಾಜ್ಯಾಧ್ಯಕ್ಷರು ಶ್ರೀ ಎಲ್. ... ರಾಜುರವರ ಮೊಕದ್ದಮೆಯನ್ನು ... ಕೋರ್ಟಿಗೆ ವರ್ಗಾಯಿಸಬೇಕೆಂದು ... ಹೊರಡಿಸಿದ್ದರ ಬಗ್ಗೆ ... ನಡೆಸಲು ದೆಹಲಿಗೆ ತೆರಳಿದ್ದ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಬೆಳಿಗ್ಗೆ ಇಲ್ಲಿಗೆ ಹಿಂದಿರುಗಿದರು. ನಿನ್ನೆ ಮಧ್ಯಾಹ್ನ ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿ ... ನಡೆದ ಚರ್ಚೆಯ ಬಗ್ಗೆ ... ವಿವರಣೆಗಳನ್ನಿತ್ತರು.

... ಮೊಕದ್ದಮೆಯ ಸಂಬಂಧದಲ್ಲಿ ಈಗ ಎರಡು ಮುಖ್ಯ ಸಮಸ್ಯೆಗಳಿರುವುವೆಂದೂ, ಒಂದನೆಯದು ... ಸೆಷನ್ಸ್ ಜಡ್ಜರನ್ನು ಕರೆಸುವುದು ಮತ್ತು ರಾಜ್ಯಾಂಗಕ್ಕೆ ವಿರೋಧವಿಲ್ಲದಂತಹ ರೀತಿಯಲ್ಲಿ ರಾಜ್ಯಾಧ್ಯಕ್ಷರ ... ಪವನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಎಂದು ಹೇಳಿ, ಸಂಸ್ಥಾನಕ್ಕೆ ರಾಜ್ಯಾಂಗದ ೩೭೧ ನೇ ನಿಯಮದಿಂದ ವಿನಾಯಿತಿ ದೊರೆಯುವ ಭರವಸೆ ತನಗಿತ್ತೆ-ಎಂದು ಶ್ರೀ ರೆಡ್ಡಿಯವರು ತಿಳಿಸಿದರು.

ಈ ಸಂಬಂಧವಾಗಿ ಪಂಡಿತ ನೆಹರೂರವರು ... ಎಂದು ಸೂಚನೆಯನ್ನಿತ್ತು ... ನಿರೂಪವನ್ನು ಜಾರಿಗೆ ತರಲು ... ಹೊರಗಿನ ಜಡ್ಜಿಗಳನ್ನು ... ಮೊಕದ್ದಮೆಯ ವಿಚಾರಣೆ ನಡೆಸ ... ಎಂದು ತಿಳಿಸಿರುವುದಾಗಿ ಗೊತ್ತಾಗಿದೆ. ... ೩೭೧ನೇ ನಿಯಮದ ವಿನಾಯಿತಿ ... ಸೂಕ್ತ ಕಾಲ ಸಮಯದಲ್ಲಿ ... ವಾಗುವುದೆಂದು ಕೇಂದ್ರ ಸರ್ಕಾರದ ... ಪುನಃ ಭರವಸೆ ನೀಡಿರುವುದಾಗಿ ಗೊತ್ತಾಗಿದೆ.

... ನಡೆದ ಮಂತ್ರಿ ಮಂಡಲದ ... ಯಲ್ಲಿ ಪಂಡಿತ ನೆಹರೂರವರ ಸಲಹೆ ಬಗ್ಗೆ ಪರಿಶೀಲನೆ ನಡೆಯಿತು.

ನಿನ್ನೆ ರಾತ್ರಿ ನಡೆದ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಶ್ರೀ ರೆಡ್ಡಿಯವರು ಪಂಡಿತ ನೆಹರೂರವರಿಂದ ತಮಗೆ ಬಂದ ಪತ್ರವನ್ನು ಓದಿದರು. ರಾಜ್ಯಾಂಗದ ನಿಯಮವನ್ನು ಉಲ್ಲಂಘಿಸಿದ ... ಅದರಂತೆ ... ವನ್ನು ಪುರಸ್ಕರಿಸಲೇಬೇಕೆಂದು ... ಪತ್ರದಲ್ಲಿ ಸೂಚಿಸಿ, ಸಂಸ್ಥಾನದ ಶಾಸನ ಸಭೆಯಲ್ಲಿ ಮೇಲ್ಕಂಡ ವಿಷಯದ ಸಂಬಂಧವಾಗಿ ನಡೆದ ಚರ್ಚೆ ... ಅಂಗೀಕೃತವಾದ ನಿರ್ಣಯಗಳ ... ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಾಗಿ ಗೊತ್ತಾಗಿದೆ. ಈ ಸಮಸ್ಯೆಯನ್ನೇ ... ವಾಗಿ ಇಟ್ಟುಕೊಂಡು ಮಂತ್ರಿ ಮಂಡಲದವರು ರಾಜೀನಾಮೆ ಕೊಟ್ಟು ... ನವಲ್ಲಿ ಸಂದಿಗ್ಧ ಪರಿಸ್ಥಿತಿಯುಂಟುಮಾಡಬಾರದೆಂದು ಪಂಡಿತ ನೆಹರೂರವರು ಸಲಹೆ ಮಾಡಿರುವುದಾಗಿ ಸಹ ತಿಳಿದುಬಂದಿದೆ.

ಸಭೆಯಲ್ಲಿ ಭಾಗವಹಿಸಿದ್ದ ಶ್ರೀಗಳಾದ ಎಚ್. ಕೆ. ವೀರಣ್ಣ ಗೌಡ, ಎಚ್. ... ಬಸಪ್ಪ ಮತ್ತು ಎಂ. ... ಗೋ ...

ಕೆ. ಟಿ. ಭಾಷ್ಯಂರವರ ರಾಜೀನಾಮೆಯೇ ?

ಬೆಂಗಳೂರು, ೧೨

ಕಾರ್ಮಿಕ ಮತ್ತು ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ತಮ್ಮ ಹುದ್ದೆಗೆ ರಾಜೀನಾಮೆ ಕೊಡಲು ನಿರ್ಧರಿಸಿರುವರೆಂದು ಬಲವಾದ ವದಂತಿ ಹರಡಿದೆ.

ಬ್ರಿಟಿಷರ ವಿರುದ್ಧ ಧರ್ಮಯುದ್ಧಕ್ಕಾಗಿ ಅರಬ್ಬರ ಕರೆ

ಸುಯೆಜ್‌ನಲ್ಲಿ ಬ್ರಿಟಿಷರು ... ಆಕ್ರಮಣವನ್ನು ನಿರೋಧಿಸುವ ಸಲುವಾಗಿ ಅಲ್ಲಿನ ಪ್ರಜೆಗಳು ಬ್ರಿಟಿಷರ ವಿರುದ್ಧ 'ಜಿಹಾದ್' ಧರ್ಮ ಯುದ್ಧವನ್ನು ಹೂಡಬೇಕೆಂದು ಹಲವು ಮುಸ್ಲಿಂ ರಾಷ್ಟ್ರಗಳು ಸುಡಾನಿಗೆ ಕರೆ ಕೊಟ್ಟಿರುವುದಾಗಿ ಕೈರೋ ರೇಡಿಯೋವು ವರದಿ ಮಾಡಿದೆ.

ರಂಗೂನಿನಲ್ಲಿ ಒಂದು ಬಕೆಟ್ ನೀರಿಗೆ ೧೫ ರೂ.

ಬರ್ಮಾದ ರಂಗೂನಿನಿಂದ ರಂಗೂನ್ ನಗರದ ನೀರು ಸರಬರಾಜು ವ್ಯವಸ್ಥೆಯು ಕೆಡಿಸಲ್ಪಟ್ಟಿರುವುದರಿಂದ ಮೊದಲೇ ಅಲ್ಲಿ ತಲೆದೋರಿರುವ ನೀರಿನ ಅಭಾವದ ಪರಿಸ್ಥಿತಿಯು ಮತ್ತಷ್ಟು ವಿಷಮಿಸಿ ಈಗ ಒಂದು ಬಕೆಟ್ಟು ನೀರಿಗೆ ಒಂದೂವರೆ ರೂ. ಬೆಲೆ ಕೊಟ್ಟು ಕೊಳ್ಳಬೇಕಾಗಿದೆಯೆಂದು ವರದಿಯಾಗಿದೆ.

ಬೊಂಬಾಯಿಯಲ್ಲಿ ತೈಲ ಶುದ್ಧೀಕರಣ ಕಾರ್ಖಾನೆ

ಭಾರತದಲ್ಲಿರುವ ಬರ್ಮಾ ಷೆಲ್ ಕಂಪೆನಿಯವರು ಬೊಂಬಾಯಿಯಲ್ಲಿ ಒಂದು ತೈಲ ಶುದ್ಧೀಕರಣ ಕಾರ್ಖಾನೆಯನ್ನು ಸ್ಥಾಪಿಸಲಿರುವರೆಂದು ಗೊತ್ತಾಗಿದೆ.

... ರೆಡ್ಡಿಯವರು ಮಾತನಾಡಿ ಪಂಡಿತ ... ನೆಹರೂರವರು ಮೊದಲಿನ ಸಲಹೆ ... ಮಾಡಕ್ಕೆ ಬದ್ಧರಾಗಿ ತಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕೆಂದು ತಿಳಿಸಿದರು. ಶ್ರೀ ಟಿ. ಸುಬ್ರಹ್ಮಣ್ಯರವರು ಕಾಂಗ್ರೆಸ್ಸಿನ ಅಧಿಕಾರ ವರ್ಗ ಮತ್ತು ಪಾರ್ಲಿಮೆಂಟರಿ ಸಮಿತಿಗಳೊಡನೆ ಸಮಾಲೋಚನೆ ನಡೆಸಿ ಮುಂದಿನ ನಿರ್ಧಾರವನ್ನು ಕೈಗೊಳ್ಳಬೇಕೆಂದು ಸೂಚಿಸಿದರು.

ಹೊರಗಿನ ನ್ಯಾಯಾಧೀಶರನ್ನು ಕರೆಸಲು ನಿರ್ಧಾರ ?

ಸ್ವಂ. ಸು. ಪ್ರೋ] ಬೆಂಗಳೂರು ೧೨

ಮೈಸೂರು ಮಂತ್ರಿ ಮಂಡಲವು ಈ ದಿವಸ ಸೇರಿ ರಾಜ್ಯಾಧ್ಯಕ್ಷರ ಆದೇಶದ ಬಗ್ಗೆ ... ಮಾತುಕತೆಯ ವಿಷಯವನ್ನು ಪರಿಶೀಲಿಸಿ, ಹೊರಗಿನ ಸೆಷನ್ ನ್ಯಾಯಾಧೀಶರನ್ನು ಕರೆಸಿ ಶ್ರೀ ಎಲ್. ಎಸ್. ರಾಜು ... ರವರ ಮೇಲಿನ ಮೊಕದ್ದಮೆಯ ... ವಿಚಾರಣೆ ನಡೆಸಲು ... ಗೊತ್ತಾಗಿದೆ.

ಮಂತ್ರಿ ಮಂಡಲದ ವರ್ತನೆ ಬಗ್ಗೆ ಕಾಂಗ್ರೆಸ್ ಪಕ್ಷದ ವಿರೋಧ

ಈ ದಿನ ಬೆಳಿಗ್ಗೆ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯು ಪುನಃ ಸೇರಿತ್ತು. ಶ್ರೀ ಎಲ್. ಎಸ್. ರಾಜುರವರ ಮೊಕದ್ದಮೆ ಸಂಬಂಧವಾಗಿ ಹೊರಗಿನ ನ್ಯಾಯಾಧೀಶರನ್ನು ಕರೆಸುವ ಬಗ್ಗೆ ಮಂತ್ರಿ ಮಂಡಲದ ನಿರ್ಧಾರವನ್ನು ಪಕ್ಷದ ಬಹುಮತ ಸದಸ್ಯರು ವಿರೋಧಿಸಿ ಶಾಸನ ಸಭೆಯು ... ನಿರ್ಣಯದಂತೆ ... ನಡೆಸಬೇಕೆಂದು ... ಒತ್ತಾಯ ಪಡಿಸಿದರೆಂದು ಗೊತ್ತಾಗಿದೆ. ಈ ವಿಷಯವಾಗಿ ಮಂತ್ರಿ ಮಂಡಲವೇ ಕಾರಣವೆಂದೂ, ... ಆದೇಶವನ್ನು ... ನಿರ್ಣಯದ ... ಸದಸ್ಯರು ... ಹೇಳಿದರೆಂದು ಗೊತ್ತಾಗಿದೆ. ... ಪಕ್ಷವು ಯಾವ ನಿರ್ಧಾರವನ್ನೂ ಕೈಗೊಳ್ಳಲಿಲ್ಲ. ಪುನಃ ಈ ರಾತ್ರಿ ೯ ಗಂಟೆಗೆ ಸೇರುವುದು.

ಅಧ್ಯಾಪಕರು ಇನ್‌ಸ್ಪೆಕ್ಟರನ್ನು ಹೊಡೆದ ಪ್ರಸಂಗ

ಮದುರೆ ಜಿಲ್ಲಾ ಬೋರ್ಡ್ ಪ್ರಾಥಮಿಕ ಶಾಲೆಯ ಅಧ್ಯಾಪಕರೊಬ್ಬರನ್ನು ಒಂದು ಗ್ರಾಮದಿಂದ ವರ್ಗಾಯಿಸಿದುದಕ್ಕಾಗಿ, ಜಿಲ್ಲಾ ವಿದ್ಯಾಧಿಕಾರಿಗಳನ್ನು ಕಲ್ಲಿನಿಂದ ಹೊಡೆದು ತಲೆಯ ಮೇಲೆ ಗಾಯಗೊಳಿಸಿದ ಪ್ರಸಂಗವು ವರದಿಯಾಗಿದೆ. ಉಪಾಧ್ಯಾಯರನ್ನು ಪೊಲೀಸರು ಬಂಧಿಸಿರುವರು.

ಹರಿಕಥೆ

ಹುಣ್ಣಿಮೆ ಪ್ರಯುಕ್ತ ನಾಳೆ ರಾತ್ರಿ ೯ ಗಂಟೆಗೆ ಸಾಧ್ವಿ ಪತ್ರಿಕಾ ಕಛೇರಿಯ ... ಮೇಲೆ ಬ್ರ|| ಶ್ರೀ|| ಪುರಂ ಶ್ರೀನಿವಾಸರಂಗಾಚಾರ್ಯರಿಂದ "ಭಕ್ತ ಮಯೂರಧ್ವಜ" ಎಂಬ ಹರಿಕಥೆಯು ನಡೆಯುವುದು. ಸರ್ವರಿಗೂ ಸ್ವಾಗತಕೋರುತ್ತೇವೆ

ಕರ್ನಾಟಕ ಪ್ರಾಂತ ರಚನೆ ಬಗ್ಗೆ ಪ್ರಶ್ನೆ

ಶಾಸನ ಸಭೆಯ ಕಾರ್ಯಕಲಾಪ

ಸ್ವಂ. ಸು. ಪ್ರೋ] ಬೆಂಗಳೂರು ೧೨

ಈ ದಿನ ಮಧ್ಯಾಹ್ನದ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಜ|| ಮಹಮದ್ ಇಮಾಂ ಮತ್ತು ಶ್ರೀ ಕೆ. ಸಂಗಿರಾಮಯ್ಯನವರುಗಳು ಕರ್ನಾಟಕ ಪ್ರಾಂತ ರಚನೆ ಸಂಬಂಧವಾಗಿ ಹಲವು ಪ್ರಶ್ನೆಗಳನ್ನು ಕೇಳಿದರು. ಪ್ರಾಂತ ರಚನೆಯ ವಿಷಯವು ರಾಜ್ಯಾಧ್ಯಕ್ಷರ ಅಧಿಕಾರಕ್ಕೆ ಒಳಪಟ್ಟಿರುವುದೆಂದೂ, ಈ ವಿಷಯವಾಗಿ ಮೈಸೂರಿನ ಪ್ರಜಾ ಸಮುದಾಯದ ಅಭಿಪ್ರಾಯವನ್ನು ಸರ್ಕಾರದವರು ತಿಳಿದುಕೊಳ್ಳುತ್ತಿರುವರೆಂದೂ, ಉತ್ತರ ಕರ್ನಾಟಕದ ಜನರ ಅಭಿಪ್ರಾಯಗಳಿಗೆ ಶ್ರೀಮನ್ಮಹಾರಾಜರು ಅಲ್ಲಿ ಪ್ರವಾಸ ಕೈಗೊಂಡಿದ್ದಾಗ ಉತ್ತರವಿತ್ತಿರುವರೆಂದೂ ಸರ್ಕಾರದವರು ತಿಳಿಸಿದರು. ಈ ಪ್ರಾಂತ ರಚನೆಯ ವಿಷಯವನ್ನು ಮಂತ್ರಿ ಮಂಡಲವು ಪರಿಶೀಲಿಸುತ್ತಿವೆಂದು ಹೇಳಿದರು.

ಇದಾದ ನಂತರ ಜ|| ಇಮಾಂರವರು ರಾಜ್ಯಾಧ್ಯಕ್ಷರ ಆಜ್ಞೆ ಸಂಬಂಧವಾದ ಬೆಳವಣಿಗೆ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿಕೆ ಕೊಡಬೇಕೆಂದು ತಿಳಿಸಿದರು. ಆದಕ್ಕಾಗಿ ಕಾಲವನ್ನು ನಿಗದಿ ಮಾಡಬೇಕೆಂದೂ ಕೋರಲಾಗಿ, ಮುಖ್ಯ ಮಂತ್ರಿಗಳು ನಾಳೆ ದಿನ ಹೇಳಿಕೆಯನ್ನೀಯುವುದಾಗಿ ಭರವಸೆಯಿತ್ತರು.

ಇಂಜಿನ್, ಗಾರ್ಡ್ ವ್ಯಾನ್‌ಗಳಲ್ಲಿ ೧೨೦ ಅಕ್ಕಿ ಚೀಲ ಪತ್ತೆ

ಕಳೆದ ಗುರುವಾರ ನೀಲಗಿರಿ ಎಕ್ಸ್‌ಪ್ರೆಸ್ ರೈಲು ತಿಂಡಿವನಕ್ಕೆ ಬಂದಾಗ ಅಲ್ಲಿನ ತಹಸೀಲ್ದಾರರು ಅನುಮಾನದ ಮೇಲೆ ರೈಲಿನ ಇಂಜನ್ನು ಮತ್ತು ಗಾರ್ಡ್ ಗಾಡಿಗಳನ್ನು ಶೋಧಿಸಲು ತಮ್ಮ ಸಿಬ್ಬಂದಿಯೊಡನೆ ಬಂದಾಗ ಸ್ಟೇಷನ್ ಮಾಸ್ಟರರು ಅವರನ್ನು ತಡೆದರೆಂದೂ, ಅನಂತರ ಸರ್ಕಾರಿ ನೌಕರರು ತಮ್ಮ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿದ ಆಪಾದನೆಗಾಗಿ ಸ್ಟೇಷನ್ ಮಾಸ್ಟರನ್ನು ಬಂಧಿಸಿ ಶೋಧನಾ ಕ್ರಮವನ್ನು ಜರುಗಿಸಲಾಯಿತೆಂದೂ ಗೊತ್ತಾಗಿದೆ. ಆ ವೇಳೆಗೆ ಡ್ರೈವರನು ಇಂಜನ್ನನ್ನು ಬೇರೆ ಲೈನಿಗೆ ತೆಗೆದುಕೊಂಡು ಹೋಗಿ ಅಲ್ಲಿ ಎರಡು ಮೂಟೆ ಅಕ್ಕಿಯನ್ನು ಕೆಳಕ್ಕೆ ಸುರಿದದ್ದನ್ನು ತಹಸೀಲ್ದಾರರು ಕಂಡು ಇಂಜನ್ನಿನಲ್ಲಿ ಕಲ್ಲಿದ್ದಲಿನ ರಾಶಿಯ ಮಧ್ಯೆ ಇದ್ದ ಇನ್ನೆರಡು ಮೂಟೆ ಮತ್ತು ಗಾರ್ಡ್ ಗಾಡಿಯಲ್ಲಿದ್ದ ಎಂಟು ಮೂಟೆ ಅಕ್ಕಿಯನ್ನು ಪತ್ತೆ ಹಚ್ಚಿದರು. ಡ್ರೈವರ್ ಮತ್ತು ಗಾರ್ಡುಗಳನ್ನೂ ಬಂಧಿಸಿ ವಿಚಾರಣೆಗೆ ಗುರಿಪಡಿಸಲಾಗಿದೆ.

ಬ್ರಿಟನ್ನಿನಲ್ಲಿ ವಿಮಾನ ಧಾಳಿ ಎಚ್ಚರಿಕೆ ಕ್ರಮ

ಪ್ರಪಂಚದ ಎರಡನೇ ಯುದ್ಧದ ಕಾಲದಲ್ಲಿ ಉಪಯೋಗಿಸುತ್ತಿದ್ದ ವಿಮಾನಧಾಳಿ ಸೂಚಕ ಸ್ವರಗಳನ್ನು ಪುನಃ ಸರಿ ಮಾಡಿ ಅವುಗಳನ್ನು ಸ್ಥಾಪಿಸಬೇಕೆಂದು ಬ್ರಿಟನ್ನಿನ ಗೃಹಮಂತ್ರಿ ಸರ್ ಡೇವಿಡ್ ಮ್ಯಾಕ್ಸ್‌ವೆಲ್-ಫೈಫ್‌ರವರು ಅಧಿಕಾರಿಗಳಿಗೆ ಸೂಚನೆಯಿತ್ತಿರುವರು

ಬ್ರಿಟಿಷ್ ಸೈನ್ಯದಲ್ಲಿ ಭಾರಿ ಶರೀರದ ಮನುಷ್ಯ

ಬ್ರಿಟಿಷ್ ಸೈನ್ಯದ ತೋಪು ಇಲಾಖೆಯಲ್ಲಿರುವ ಎರಿಕ್ ರಾಯಲ್ ಎಂಬುವನು ೩೭೬ ಪೌಂಡು ತೂಕವಿರುವನೆಂದು ತಿಳಿದುಬಂದಿದೆ. ಈತನಿಗಾಗಿ ಪ್ರತ್ಯೇಕವಾದ ಸಮವಸ್ತ್ರಗಳನ್ನು ಹೊಲಿಸಬೇಕಾಗಿದೆ. ಅವನ ನಡುವಿನ ಸುತ್ತಳತೆ ೫ ಅಡಿಯಷ್ಟಿರುವುದು

ನೇತ್ರವೈದ್ಯ ಮೋದಿಯವರಿಗೆ ೧ ಲಕ್ಷ ರೂ. ದಾನ

ಬೆಳಗಾವಿಯ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ|| ಎಂ. ಸಿ ಮೋದಿಯವರ ಸೇವಾ ಕಾರ್ಯಕ್ಕಾಗಿ ದಾವಣಗೆರೆಯ ಹನಗವಾಡಿ ಮಠದ ಶ್ರೀ ಮುರಿಗೈಯ್ಯನವರು ೧ ಲಕ್ಷ ರೂ ದಾನ ಮಾಡಲು ನಿರ್ಧರಿಸಿರುತ್ತಾರೆ ತಮ್ಮ ಮನೆಯನ್ನೂ, ಚಿಕಿತ್ಸಾಲಯಕ್ಕಾಗಿ ೧೦ ಸಾವಿರ ನಗದು ಹಣವನ್ನೂ, ಮೋದಿಯವರ ವಾಸಕ್ಕಾಗಿ ಒಂದು ಪ್ರತ್ಯೇಕ ಮನೆಯನ್ನೂ ಕೊಡಲು ಅವರು ಆಲೋಚಿಸಿರುತ್ತಾರೆ

ಚುನಾವಣೆಯಲ್ಲಿ ಓಟಿಂಗ್ ವಿಧಾನ ತಿಳಿಸಲು ಪ್ರಸಾರ

.ಮೊನ್ನೆಯಿಂದ ೨೫ನೇ ತಾ||ನವರೆಗೂ ಬೊಂಬಾಯಿ ರೇಡಿಯೋನವರು ಹಳ್ಳಿಯವರು, ಕಾರ್ಮಿಕರು ಮತ್ತು ಮಹಿಳೆಯರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಚುನಾವಣಾ ಕಾಲದ ಓಟಿಂಗ್ ವಿಧಾನವನ್ನು ಪ್ರಸಾರ ಮಾಡುವರು

ಕೆ. ಎಂ. ಪಿ. ಪಕ್ಷದ ವಿಸರ್ಜನೆ

ರಾಜಧಾನಿಯ ಕಿಸಾನ್ ಮಜದೂರ್ ಪ್ರಜಾ ಪಕ್ಷವನ್ನು ಕಳೆದ ೮ನೇ ತಾ|| ಸದರಿ ಪಕ್ಷದವರು ವಿಸರ್ಜನೆ ಮಾಡಿ ಅದರ ಸದಸ್ಯರು ನಗರ ಸಮಾಜವಾದಿ ಪಕ್ಷದಲ್ಲಿ ಸೇರಲು ಸರ್ವಾನುಮತದಿಂದ ತೀರ್ಮಾನಿಸಿರುತ್ತಾರೆ

ಮಂಗಳ

ಕಳೆದ ತಿಂಗಳು ೧೮ನೇ ತಾ|| ಶ್ರೀರಂಗಪಟ್ಟಣದ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶ್ರೀಮತಿಗಳಾದ ಸುಭದ್ರಾ, ಸಹೋದರಿಯರು ನಡೆಸುತ್ತಿದ್ದ ಹರಿಕಥೆಗಳ ಅಂಗವಾಗಿ ಬರುವ ಗುರುವಾರ ರಾತ್ರಿ ೮ ಗಂಟೆಗೆ ಮಂಗಳವು ಏರ್ಪಾಡಾಗಿದೆ. ಆಸ್ತಿಕ ಮಹಾಶಯರು ಬರಬೇಕೆಂದು ಕೋರಲಾಗಿದೆ

ಕಾಂಗ್ರೆಸ್ ಸಂದೇಶ

ಅಖಿಲ ಭಾರತ ಕಾಂಗ್ರೆಸ್ಸಿನ ಕೇಂದ್ರ ಪ್ರಕಟಣಾ ಸಮಿತಿಯವರು ಕಳೆದ ತಿಂಗಳು ೧೫ರಿಂದು ಕಾಂಗ್ರೆಸ್ ಸಂದೇಶ ಎಂಬ ಇಂಗ್ಲಿಷ್ ಪತ್ರಿಕೆಯನ್ನು ಹೊರಡಿಸಿರುತ್ತಾರೆ. ಅದರ ಪ್ರತಿಯೊಂದು ನಮ್ಮ ಹಸ್ತಗತವಾಗಿರುತ್ತದೆ. ರಾಷ್ಟ್ರಾಧ್ಯಕ್ಷರ ಸಂದೇಶವೂ, ನೆಹರೂ, ಗುಲ್ಜಾರಿಲಾಲ್ ನಂದಾ, ಡಾ|| ಪಟ್ಟಾಭಿ ಮುಂತಾದವರು ಬರೆದಿರುವ ಲೇಖನಗಳೂ ಇವೆ. ದೇಶಕ್ಕೆ ಕಾಂಗ್ರೆಸ್ ಏತಕ್ಕೆ ಬೇಕು ಎಂಬ ಅಗ್ರ ಲೇಖನವೂ ಇದೆ. ಈ ಪತ್ರಿಕೆಯು ಕಾಂಗ್ರೆಸ್ಸು ಈಗ ಮಾಡಬೇಕಾಗಿರುವ ಕಾರ್ಯವೇನೆಂಬುದನ್ನು ಜನತೆಗೆ ತಿಳಿಸುವುದಾಗಿದೆ. ಸಮಸ್ತರೂ ಅದನ್ನು ಪ್ರೋತ್ಸಾಹಿಸಬೇಕೆಂದು ನಾವು ಕೋರುತ್ತೇವೆ ಬೆಲೆ ೩ ಆಣೆ

ಸತ್ಕಾರಕೂಟ ಮತ್ತು ವಿವಿಧ ವಿನೋದಾವಳಿ

ಮೈಸೂರು ವಿಶ್ವ ವಿದ್ಯಾಲಯದ ಉಪ ಸ್ನಾತಕಪತಿಗಳಾದ ಡಾ|| ಬಿ ಎಲ್ ಮಂಜುನಾಥ್‌ರವರು ಕಳೆದ ಶುಕ್ರವಾರ ಟ್ರೈನಿಂಗ್ ಕಾಲೇಜುಗಳ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಮಹಾರಾಜಾ ಕಾಲೇಜಿನಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಮ್ಮೇಳನದ ಸ್ವಾಗತ ಸಮಿತಿಯವರು ನೆನ್ನೆ ಟೌನ್‌ಹಾಲಿನಲ್ಲಿ ಒಂದು ವಿವಿಧ ವಿನೋದಾವಳಿಯನ್ನು ನಡೆಸಿದರು.

ಕಾರ್ಮಿಕರ ಯೋಗಕ್ಷೇಮದ ಅಧಿಕಾರಿಗಳು

ರಾಜಧಾನಿಯ ಸರ್ಕಾರಿ ರೇಷ್ಮೆ ನೆಯ್ಗೆ ಕಾರ್ಖಾನೆ ಮತ್ತು ಗಂಧದೆಣ್ಣೆ ಕಾರ್ಖಾನೆ ಕಾರ್ಮಿಕರುಗಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಸರ್ಕಾರದವರು ಒಬ್ಬ ಅಧಿಕಾರಿಯನ್ನು ನೇಮಿಸಿರುವರೆಂದೂ, ಆದರೆ ಸದರಿ ಅಧಿಕಾರಿಗಳು ತಮಗೆ ಬೇಡವೆಂದು ಕಾರ್ಖಾನೆಯವರು ಶಿಫಾರಸು ಮಾಡಿರುವರೆಂದೂ, ಇಂತಹ ಪ್ರಸಂಗಕ್ಕೆ ಸರ್ಕಾರದವರು ಅವಕಾಶ ಕೊಡಕೂಡದೆಂದೂ ಕೋರಿ, ರೇಷ್ಮೆ ಕಾರ್ಖಾನೆ ಕಾರ್ಮಿಕ ಸಂಘದ ಶ್ರೀ ಕೆ. ಆರ್ ಪ್ರಸಾದ್‌ರವರು ಪತ್ರ ಬರೆದಿರುತ್ತಾರೆ

ಕೋರ್ಟಿನ ಆವರಣದಲ್ಲೇ ಕಳುವಿನ ಪ್ರಸಂಗ

ಕಲ್ಯಾಣದಲ್ಲಿ ಒಬ್ಬ ಪೊಲೀಸ್ ಕಾನ್ಸ್‌ಟೇಬಲನನ್ನು ಹೊಡೆದ ಆಪಾದನೆಗಾಗಿ ಒಬ್ಬ ಚೀಣಿ ಪ್ರಜೆಯು ಕೆಲವು ದಿನಗಳ ಹಿಂದೆ ಬಂಧಿಸಲ್ಪಟ್ಟು ಪೊಲೀಸರು ವಿಚಾರಣೆಗಾಗಿ ನ್ಯಾಯಸ್ಥಾನಕ್ಕೆ ಕರೆತಂದು ಅನಂತರ ವಾಪಸು ಕರೆದುಕೊಂಡು ಹೋಗುತ್ತಿದ್ದಾಗ ಕೋರ್ಟಿನ ಆವರಣದಲ್ಲಿದ್ದ ಒಬ್ಬ ಮಹಿಳೆಯು ಧರಿಸಿದ್ದ ಚಿನ್ನದ ಸರವನ್ನು ಅಪಹರಿಸಿದನೆಂದು ವರದಿಯಾಗಿದೆ. ಈ ಆಪಾದನೆಗಾಗಿ ಅವನಿಗೆ ಮತ್ತೆ ಮೂರು ತಿಂಗಳು ಕಠಿಣ ಸಜಾ ವಿಧಿಸಲಾಯಿತು.

ರೈಲ್ವೆ ವಿವಾದಗಳ ಪರಿಶೀಲನೆಗೆ ನ್ಯಾಯಂ ಸಮಿತಿ

ರೈಲ್ವೆ ಕೆಲಸಗಾರರ ಸಂಘದವರಿಗೂ ಭಾರತ ಸರ್ಕಾರದವರಿಗೂ ದೆಹಲಿಯಲ್ಲಿ ಸಂಧಾನ ನಡೆಯುತ್ತಿದ್ದು ಇನ್ನು ಮುಂದೆ ರೈಲ್ವೆ ಕೆಲಸಗಾರರ ಎಲ್ಲ ವಿವಾದಗಳನ್ನೂ ಇತ್ಯರ್ಥ ಪಡಿಸಲು ಒಂದು ನ್ಯಾಯಂ ಸಮಿತಿಯನ್ನು ನೇಮಿಸತಕ್ಕದ್ದೆಂದು ಮೊನ್ನೆ ತೀರ್ಮಾನವಾಯಿತು.

ಕಲಾಕ್ಷೇತ್ರ

ತಾರಾಗಣ ಎನ್ ಎಸ್ ಕೃಷ್ಣನ್ ಟಿ ಎ ಮಧುರಂ ಲಲಿತ ಪದ್ಮಿನಿ, ಸಹಸ್ರನಾಮಂ ಬಾಲಯ್ಯ, ದೊರೈರಾಜ್, ಬಾಲ ಸುಬ್ರಹ್ಮಣ್ಯಂ, ಪುಳಿಮೂಟ್ಟೈ ಮುಂತಾದವರು
ಹಿನ್ನೆಲೆ ಸಂಗೀತ – ಎಂ ಎಲ್ ವಸಂತ ಕುಮಾರಿ
[ಮೊದಲನೇ ನಾಲ್ಕು ವಾರಗಳಲ್ಲಿ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ]
[N S FILMS RELEASE

ನಾಯಿ ಕಡಿತಕ್ಕೆ ಔಷಧಿ
ಆರ್ ಎಸ್ ಪಂಡಿತರು
ರಾಮಗೋಪಾಲ ವೈದ್ಯಶಾಲೆ
ದಿವಾನರ ರಸ್ತೆ ಮೈಸೂರು

ರಾಜಕಮಲ
16-11-51 ರಿಂದ 5 ನೇ ವಾರ
ಪಿಚ್ಚೈಕಾರಿ
(ತಮಿಳು)
ಬೆಳಗಿನ ಪ್ರದರ್ಶನ
16-11-51 ರಿಂದ 3 ದಿನಗಳು
ಅಡ್ವೆಂಚರ್ಸ್ ಆಫ್ — ರೆಕ್ಸ್ ಅಂಡ್ ರಿ...
ಎಂಬ ರೋಮಾಂಚಕರ ಪೂರ್ತಿ ...

Edited Printed ... Published by A R Nagarajan at Sadhvi Press Subbiah Road Mysore

ಗೌಹಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ
ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಅಂಕ ೭೯೨ । ವಂದೇ ಮಾತರಂ । ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೨೧] ಶುಕ್ರವಾರ ೧೩-೧೧-೫೧ - [ಸಂಚಿಕೆ ೯೩

ಕೈಗಾರಿಕೆ ಕಾರ್ಮಿಕರಿಗೆ ಪ್ರಾವಿಡೆಂಟ್ ನಿಧಿ

...ಅಧಿಕಾರಿಗಳ ರಿವರ್ಟ್ ...ಸಮವಾಗಿ ಮಾತುಕತೆ

ಮೈಸೂರು ೧೫

ಮೈಸೂರು ಸಂಸ್ಥಾನದ ...ಕ್ಯವಾದನಂತರ ಹಲವು ...ನ್ನು ನಾನ್‌ಗೆಜೆಟೆಡ್ ದರ್ಜೆ ...ವರ ಬಗ್ಗೆ, ಸದರಿ ನೌಕ... ಗೆಜೆಟೆಡ್ ದರ್ಜೆಯನ್ನು ...ಬಂಧವಾಗಿ ಕರ್ನಾಟಕ ...ಗ್ರೆಸ್ ಅಧ್ಯಕ್ಷರಾದ ಶ್ರೀ ...ಗಪ್ಪನವರು ರೈಲ್ವೆ ಮಂ... ...ಜ ಅಯ್ಯಂಗಾರ್ಯರೊಡ... ...ತೆ ನಡೆಸಿದರೆಂದು ತಿಳಿದು

...ಯಾರ್ಥಿ ಪಾಟಕ

...ಚನ್ನಬಸವೇಶ್ವರಸ್ವಾಮಿ ...ಶಲಿಯವರು ಈ ಸಂಜೆ ...ರಾಜಾ ಗೋಪಿಚಂದ್ ...ವನ್ನು ರಾಜಧಾನಿಯ ...ದ್ದಲಿಂಗಯ್ಯನವರ ಸಂ... ...ಳಿಯ ಸಹಾಯಾರ್ಥ ...ಸುವರು

...ಸ್ವಾಮಿ ಗ್ರೋವ್

...ಮ ಒಂಟಿಕೊಪ್ಪಲು ಯಾ... ...ಲನೇ ನಂಬರು ಮನೆ ...ಸ್ವಾಮಿ ಗ್ರೋವಿನ ಪ್ರಾ... ...ನಾಳೆ ಸಂಜೆ ೫|| ಗಂಟೆ ...ಥಿಯಾಸಫಿ ಎಂದರೇ... ...ಮವಾಗಿ ಉಪನ್ಯಾಸವಾ... ...ಶ್ನೋತ್ತರಗಳಾಗುವುವು ...ಸ್ವಾನವಿದೆ

...ತ ಸೌಹಾರ್ದ ಸಂಘ

...ಲ್ಲಿರುವ ಸಂಸ್ಥಾನದ ಸೌಹಾರ್ದ ಸಂಘದ ...ರು ಬರೆದಿದ್ದ ಪತ್ರಕ್ಕೆ ...ಹಲಿಯಲ್ಲಿರುವ ಚೀಣಾ ...ಫೇರಿಯ ಕಾರ್ಯದರ್ಶಿ ...ರವರು ಸಂಘದ ಸ್ಥಾಪ... ...ಪವನ್ನು ವ್ಯಕ್ತಪಡಿಸಿ ...ಘದವರೂ ಕೃತಕೃತ್ಯನಾ... ...ಗುತ್ತಾರೆ

...ನಲ್ಲಿ ೧,೪೦೦ ...ಮಿ ಸರ್ಕಾರದ ವಶ

...ಮ-ಕೊಳ್ಳೆ ಸಂಸ್ಥಾನ ...ಹೆಚ್ಚಾಗಿ ಬೆಳೆಯುವ ...ಲ್ಲಿನ ಸರ್ಕಾರದವರು ...ತಾಲ್ಲೂಕಿನ ೧೪೦೦ ಎಕ... ...ನನ್ನು ಸಾರ್ವಜನಿಕರ ರ... ...ನ ಮೇರೆ ತಮ್ಮ ವಶದ... ...ವೆಂದೂ, ಸದರಿ ಜಮೀ... ...ವ್ಯವಸ್ಥೆಗಾಗಿ ಒಬ್ಬ ವ್ಯ... ...ರಿಯನ್ನು ನೇಮಿಸಲಾ... ...ಗಿತ್ತಾಗಿದೆ

...ಮಂತ್ರಿ ಮಂಡಲದ ...ಪಟ್ಟಿ

...ರಾಜಾ ತ್ರಿಭುವನರು ಮೊ... ...ಅಧ್ಯಕ್ಷ ಎಂ ಪಿ ಕೊಯಿ... ...ಕರೆಸಿಕೊಂಡು ಮಂ... ...ಂಡ ಪುನರ್ರಚನೆ ಮಾಡಬೇ... ...ಸೂ... ಮದರ ಅನುಸಾರವಾಗಿ ...ರವರು ತಮ್ಮ ಮಂತ್ರಿಮಂ... ...ಸದಸ್ಯರ ಪಟ್ಟಿಯನ್ನು ಒಪ್ಪಿಸಿದ ...ವರ ಗೃಹ ಮಂತ್ರಿ ಬಿ ಪಿ ...ಕೊಯಿರಾಲರವರ ಹೆಸರು ಸೇರಿಲ್ಲ

ರಾಜಧಾನಿಗೆ ಜೈಪ್ರಕಾಶರ ಆಗಮನ

ಮೈಸೂರು ೧೧

ಭಾರತದ ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಜಯ ಪ್ರಕಾಶ್ ನಾರಾಯಣರವರು ನಾಳೆ ರಾಜಧಾನಿಗೆ ಗಮಿಸುವರು ಸಂಜೆ ೫ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಅವರು ಭಾಷಣ ಮಾಡುವರು ಮೈಸೂರು ನಗರ ಪಕ್ಷದ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷದ ಮುಖಂಡರಾಗಿರುವ ಶ್ರೀ ಬಿ ಶ್ರೀ ಕಂಠಪ್ಪನವರು ಅಧ್ಯಕ್ಷತೆ ವಹಿಸುವರು ನಾಳೆ ಮಧ್ಯಾಹ್ನ ೧ ಗಂಟೆಗೆ ಯಳಂದೂರಿನ ಜಹಗೀರ್‌ದಾರರ ಭವನದ ಮುಂಭಾಗದಲ್ಲಿ ಸೇರುವ ಸಭೆಯಲ್ಲಿ ಶ್ರೀ ಜಯಪ್ರಕಾಶರು ಭಾಷಣ ಮಾಡುವರು

ಕಾರ್ಮಿಕರನ್ನು ತಿಲುಬೆಗೆ ಏರಿಸುವುದಾಗಿ ಬೆದರಿಕೆ

ಮಲಯದ ದಂಗೆಕೋರರು ನೆಗ್ರಿಸೆಂಬಿಯನ್ ಮತ್ತು ಮಲಕ್ಕಾ ಎಂಬಲ್ಲಿನ ರಬ್ಬರ್ ತೋಟಗಳ ಕೆಲಸಗಾರರನ್ನು ಬೆದರಿಸಿ ಅವರು ಮುಷ್ಕರ ಹೂಡದಿದ್ದರೆ ಅವರನ್ನು ಮರಗಳಿಗೆ ಮೊಳೆಗಳಿಂದ ಹೊಡೆದು ತಿಲುಬೆಗೆ ಏರಿಸುವುದಾಗಿ ಎಚ್ಚರಿಕೆ ಕೊಟ್ಟುದರಿಂದ ಸುಮಾರು ಏಳು ಸಾವಿರ ಮಂದಿ ರಬ್ಬರ್ ಕೆಲಸಗಾರರು ಕಳೆದ ಮಂಗಳವಾರ ಕೆಲಸಕ್ಕೆ ಹೋಗದೆ ಮುಷ್ಕರ ಕೈಗೊಂಡಿದ್ದರೆಂದು ಹೇಳಲಾಗಿದೆ

ರಾಷ್ಟ್ರಾಧ್ಯಕ್ಷರಿಂದ ಭೂ ದಾನ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಬಿಹಾರಿನಲ್ಲಿರುವ ತಮ್ಮ ಜಮೀನುಗಳ ಪೈಕಿ ಹಲವನ್ನು ಕೃಷಿಕಾರಿ ಜನರಿಗೆ ಹಂಚಲು ವಿನೋಬಾ ಭಾವೆಯವರಿಗೆ ದಾನ ಮಾಡಿರುತ್ತಾರೆ

ಉದಾರ ದಾನ

ಬೆಂಗಳೂರು ಲಿಂಗಾಯತರ ವಿದ್ಯಾನಿಧಿ ಸಂಘದವರಿಗೆ ೧೦೦೦ ರೂ ಮೈಸೂರು ವೀರಶೈವ ಅನಾಥಾಲಯ, ಅಕ್ಕನ ಬಳಗ ಮತ್ತು ಬೆಂಗಳೂರು ಭಾರತೀಯ ಜನತಾ ಸಂಘ ಇವುಗಳಿಗೆ ತಲಾ ಹತ್ತು ರೂ ಗಳನ್ನು ಶ್ರೀ ಯಜಮಾನ್ ವಿರೂಪಾಕ್ಷಯ್ಯನವರು ತಮ್ಮ ಪುತ್ರಿ ಶ್ರೀಮತಿ ತ್ರಿವೇಣಿಯವರ ವಿವಾಹ ಸಮಯದಲ್ಲಿ ದಾನ ಮಾಡಿರುತ್ತಾರೆ

ಕೈಗಾರಿಕೆ ಕಾರ್ಮಿಕರಿಗೆ ಪ್ರಾವಿಡೆಂಟ್ ನಿಧಿ

ದೇಶದ ಸಿಮೆಂಟ್, ಕಬ್ಬಿಣ, ಉಕ್ಕು, ಬಟ್ಟೆ ಸೆಣಬು, ರೇಷ್ಮೆ ಮುಂತಾದ ಹಲವು ಪ್ರಮುಖ ಕೈಗಾರಿಕೆಗಳಲ್ಲಿರುವ ನೌಕರರಿಗಾಗಿ ಪ್ರಾವಿಡೆಂಟ್ ನಿಧಿಯನ್ನು ಕೈಗಾರಿಕೆಯವರು ಕಡ್ಡಾಯವಾಗಿ ಏಪ ಡಿಸುವ ಎಗ್ಗೆ ಕೇಂದ್ರ ಸರ್ಕಾರದವರು ಒಂದು ವಿಶೇಷಾಜ್ಞೆಯನ್ನು ಹೊರಡಿಸಿರುವರೆಂದು ತಿಳಿದುಬಂದಿದೆ ಆ ಹಳತ ವರ್ಗದವರ ಸಂಬಳ ಮತ್ತು ತುಟ್ಟಿಭತ್ಯದ ಮೊಬಲಗಿನ ಮೇಲೆ ರೂಪಾಯಿಗೆ ೧ ಅಣೆಯಂತೆ ತೆಗೆದು ಇಡಬೇಕಾಗುವುದು ಕಾರ್ಮಿಕರು ಅಷ್ಟೇ ಮೊಬಲಗನ್ನು ಕೊಡಬೇಕಾಗುವುದು ಪರಮಾವಧಿ ಶೇ|| ೮ ೧/೩ ರಷ್ಟು ಸಂಬಳದ ಹಣವನ್ನೂ ನಿಧಿಗೆ ಕಾರ್ಮಿಕರು ಕೊಡಬಹುದು

ಪೋಲೀಸರು ಅಧ್ಯಾಪಕಿಯನ್ನು ಎಳೆದುಬಿಟ್ಟ ಪ್ರಸಂಗ

ಗಂಡಸರಿಗೆ ಕೊಡುತ್ತಿರುವಂತೆಯೇ ಅಧ್ಯಾಪಕಿಯರಿಗೂ ಸಮನಾದ ಸಂಬಳವನ್ನು ಕೊಡಬೇಕೆಂಬ ಬಗ್ಗೆ ಬ್ರಿಟನ್ನಿನಲ್ಲಿ ನಾಲ್ವೈದು ವರ್ಷಗಳಿಂದ ಚಳುವಳಿಯು ನಡೆಯುತ್ತಿದೆ ಅವರ ಬೇಡಿಕೆಯು ನಿರಾಕರಿಸಲ್ಪಟ್ಟಿರುವುದನ್ನು ಪ್ರತಿಭಟಿಸಲು ಲಂಡನ್ನಿನ ಹೌಸ್ ಆಫ್ ಕಾಮನ್ಸ್ ಭವನದಲ್ಲಿ ಕಳೆದ ಮಂಗಳವಾರ ಅಧ್ಯಾಪಕಿಯರ ಒಂದು ಸಭೆಯು ಸೇರಿದ್ದಿತು ಆ ಸಮಯದಲ್ಲಿ ಇಬ್ಬರು ಪೋಲೀಸರು ಎಂದು ೫೫ ವರ್ಷದ ಒಬ್ಬ ಉಪಾಧ್ಯಾಯಿನಿಯನ್ನು ಬಲಾತ್ಕಾರವಾಗಿ ಹೊರಕ್ಕೆ ಕಳುಹಿಸಬೇಕಾಗಿ ಬಂದಿತೆಂದೂ ವರದಿಯಾಗಿದೆ

ಪಾಕಿಸ್ತಾನದಲ್ಲಿ ಅಣು ಸಂಶೋಧನಾ ಕೇಂದ್ರ

ಏಷ್ಯಾಖಂಡದಲ್ಲೇ ಮೊದಲನೆಯದಾದ, ಅಣು ಸಂಶೋಧನೆಗೆ ಸಂಬಂಧಪಟ್ಟ, ಪ್ರಯೋಗಶಾಲೆಯನ್ನು ಬರುವ ವರ್ಷಾರಂಭದಲ್ಲಿ ಲಾಹೋರಿನಲ್ಲಿ ಸ್ಥಾಪಿಸಲು ಪಾಕಿಸ್ತಾನ ಸರ್ಕಾರದವರು ನಿರ್ಧರಿಸಿರುತ್ತಾರೆ ಹಾಲೆಂಡಿನಿಂದ ಈ ಬಗ್ಗೆ ಸಾಧನಗಳನ್ನು ತರಿಸಿಕೊಳ್ಳಲಾಗುವುದು ಇದಕ್ಕೆ ೫ ಲಕ್ಷ ರೂ ವೆಚ್ಚವಾಗುವುದೆಂದು ಅಂದಾಜಾಗಿದೆ

ಪರ್ಷಿಯದಲ್ಲಿ ಭೀಕರ ಆರ್ಥಿಕ ಬಿಕ್ಕಟ್ಟು

ಪರ್ಷಿಯದ ಪ್ರಧಾನಿ ಡಾ|| ಮುಸಾದಿಕ್‌ರವರು ವಾಷಿಂಗ್ಟನ್ನಿನ ಪತ್ರಿಕಾ ಸಂಸ್ಥೆಯೊಂದರಲ್ಲಿ ನೆನ್ನೆ ಭಾಷಣ ಮಾಡಿ, ತಮ್ಮ ದೇಶದ ಎಣ್ಣೆ ಕೈಗಾರಿಕೆಯನ್ನು ಪುನರಾರಂಭಿಸುವ ಸಲುವಾಗಿ ತಾವು ಅಮೆರಿಕವನ್ನು ಕೇಳಿದ್ದ ಸಾಲದ ಎಗ್ಗೆ ಯಾವ ಉತ್ತರವೂ ಬಂದಿಲ್ಲವೆಂದೂ, ಹಿಂದೆ ಅಮೆರಿಕವು ಪರ್ಷಿಯಕ್ಕೆ ಆರ್ಥಿಕ ಸಹಾಯ ನೀಡುವುದಾಗಿ ಭರವಸೆ ಕೊಟ್ಟಿದ್ದಿತೆಂದೂ ತಿಳಿಸಿದರು ಪರ್ಷಿಯದ ಎಣ್ಣೆ ವರಮಾನದ ಸೆಕ್ಯೂರಿಟಿಯ ಮೇಲೆ ಸಾಲ ಕೇಳಿದ್ದುದಾಗಿ ಅವರು ಹೇಳಿ, ಅಮೆರಿಕದವರು ಈಗ ಮೌನ ತಾಳಿರುವುದರಿಂದ ಇರಾನಿನಲ್ಲಿ ಭಾರಿ ಆರ್ಥಿಕ ಬಿಕ್ಕಟ್ಟು ಸಂಭವಿಸಿರುವುದಾಗಿ ತಿಳಿಸಿದರು ಈ ಸಾಲದಿಂದ ಎಣ್ಣೆ ಕೈಗಾರಿಕೆಯನ್ನು ಪುನರಾರಂಭಿಸಿ ಅದರ ವರಮಾನದಿಂದ ದೇಶದ ಆರ್ಥಿಕ ಸ್ಥಿತಿಯನ್ನೂ ಉತ್ತಮ ಪಡಿಸಿಕೊಂಡು ಸಾಲವನ್ನೂ ತೀರಿಸುವ ಆಸೆಯನ್ನು ಅವರು ಹೊಂದಿದ್ದರು

ಪಾಕಿಸ್ತಾನದಲ್ಲಿ ಐರೋಪ್ಯ ಸೇನಾ ಕೇಂದ್ರದ ಸ್ಥಾಪನೆ

ಪ್ಯಾರಿಸ್ಸಿನಲ್ಲಿ ನೆರೆದಿರುವ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ನೆನ್ನೆ ಉಕ್ರೇನಿನ ಪ್ರತಿನಿಧಿಯು ಮಾತನಾಡಿ, ಕಮ್ಯೂನಿಸ್ಟ್ ರಾಷ್ಟ್ರಗಳ ಸುತ್ತಲೂ ವ್ಯೂಹವನ್ನು ರಚಿಸಿ ಅವುಗಳ ಮೇಲೆ ಆಕ್ರಮಣ ನಡೆಸಲು ಅಮೆರಿಕ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಉತ್ತರ ಪಾಕಿಸ್ತಾನ, ಮೊರಾಕೊ ಮುಂತಾದ ಕಡೆಗಳಲ್ಲಿ ತಮ್ಮ ಸೈನ್ಯ ಕೇಂದ್ರಗಳನ್ನು ನಿರ್ಮಿಸಿಕೊಂಡಿವೆ ಎಂದು ಆಪಾದಿಸಿದರು

ಅಮೆರಿಕದ ಬಲವಂತಕ್ಕಾಗಿ ಬ್ರಿಟನ್ನು ೧೦ ಲಕ್ಷ ಸೈನ್ಯವು ಶಸ್ತ್ರ ಧರಿಸುವಂತೆ ಮಾಡಿದೆಯೆಂದೂ, ಫ್ರಾನ್ಸೂ ಸಹ ತನ್ನ ಶಸ್ತ್ರಾಸ್ತ್ರ ಶೇಖರಣೆಯನ್ನು ಹೆಚ್ಚಿಸುತ್ತಿರುವುದೆಂದೂ ಅವರು ಹೇಳಿದರು

೦ಹನ್ನೊಂದು ವರ್ಷದ ಹುಡುಗಿಯೊಬ್ಬಳಿಗೆ ಒಂದು ಹೆಣ್ಣು ಮಗುವು ಜನಿಸಿರುವುದಾಗಿ ಚಿಕಾಗೋ ವರ್ತಮಾನವು ತಿಳಿಸುತ್ತದೆ

ಬೃಂದಾವನೋತ್ಸವಗಳು

ಶ್ರೀರಂಗಪಟ್ಟಣ ೧೩

ಇಲ್ಲಿನ ಶ್ರೀ ರಂಗನಾಥಸ್ವಾಮಿ ದೇವರ ಹೂವಿನ ಬೃಂದಾವನೋತ್ಸವ, ಲಕ್ಷ್ಮೀನರಸಿಂಹಸ್ವಾಮಿಯ ಬೃಂದಾವನೋತ್ಸವ ಮತ್ತು ಶ್ರೀ ಗಂಗಾಧರೇಶ್ವರಸ್ವಾಮಿಯ ಅಷ್ಟಪಲ್ಲಕ್ಕಿ ಉತ್ಸವಗಳು ಕಳೆದ ೨೦ನೇ ತಾ|| ವೈಭವದಿಂದ ಜರುಗಿದುವು

ಸಕ್ಕರೆ ಇಲ್ಲ

ಒಬ್ಬರಿಗೆ ತಿಂಗಳೊಂದಕ್ಕೆ ೨ ಪೌಂಡು ಸಕ್ಕರೆ ಕೊಡಬೇಕೆಂದು ವಿಧಾಯಕವಾಗಿದ್ದರೂ ಸಹ ಇಲ್ಲಿ ಸಕ್ಕರೆಯೇ ದೊರೆಯುತ್ತಿಲ್ಲ ಅರ್ಧ ಪೌಂಡಿನಷ್ಟು ಸಕ್ಕರೆಯನ್ನು ಮಾತ್ರ ಈ ಊರಿನ ಸೈಕರ ಸಂಘದವರು ಕೊಡುತ್ತಲಿದ್ದಾರೆ ಇದರಿಂದ ತುಂಬಾ ತೊಂದರೆಯಾಗಿದೆ ಸಂಬಂಧಪಟ್ಟವರು ಕೂಡಲೇ ಸರಿಪಡಿಸಬೇಕೆಂದು ಕೋರಲಾಗಿದೆ.

ಮುತ್ತಯ್ಯಯರ್ ಅಪೀಲು ವಜಾ

ಪಾರ್ಲಿಮೆಂಟಿಗೆ [illegible] ಅರ್ಜಿ ಸಲ್ಲಿಸಿ ಅದು ತಿರಸ್ಕರಿಸಲ್ಪಟ್ಟುದ ರಿಂದ ತಿರುವಾಂಕೂರು ಹೈಕೋರ್ಟಿಗೆ ಅಪೀಲು ಮಾಡಿದ [illegible] ಮುತ್ತಯ್ಯ ಯ್‌ರವರ ಅರ್ಜಿಯನ್ನು ತಳ್ಳಿ [illegible] ಲಾಗಿದೆ ಸುಪ್ರೀಂ ಕೋರ್ಟಿಗೆ [illegible] ಹೋಗಲು ಅವರಿಗೆ [illegible] ಗಿದೆ

ಪ್ರಸಿದ್ಧ ಪತ್ರಿಕೆ

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ

Mis No 53 of 51 52

ಅರ್ಜಿದಾರ್ [illegible] ಜನಗರದ ಶ್ರೀ ವರದಾ [illegible] ಲಿಮಿಟೆಡ್

[illegible] ಸಿ ಆಕ್ಟ್ 12ನೇ ಸೆಕ್ಷನ್ ಪ್ರಕಾರ ಅರ್ಜಿದಾರ್ ಕಂಪನಿ 15-9 51 [illegible] ಕ್ಸ್ಟ್ರಾರ್ಡಿನರಿ ಜನರಲ್ [illegible] ಸ್ಪೆಷಲ್ ರಸಲೂಷನ್ [illegible] ಮಾನದ ಪ್ರಕಾರ [illegible] ಒಫ್ ಅಸೋಸಿಯೇಷನ್ [illegible] ಪ್ಪಗೆ ಪಡೆಯ [illegible] ಮೆ ಮಾಡಿದ [illegible] 21 11-51 ನೇ ದಿ 11 [illegible] ದ್ದನ್ನು [illegible] ಗುತ್ತ [illegible] ಕ ತಿಳಿಯಪಡಿಸಿರುತ್ತೆ

ಎಂ ಎಸ್ ರಂಗನಾಥ್,
ಅರ್ಜಿದಾರರ ಪರ ಅಡ್ವೊಕೇಟರು, ಮೈಸೂರು
16-11 51

Edited, Printed and Published by A R Nagarajan, at Sadhvi Press D Subbiah Road, Mysore

ಅರಕಲಗೂಡು ತಾಲ್ಲೂಕು ರೈತ ಸಮ್ಮೇಳನ

ಅರಕಲಗೂಡು ತಾಲ್ಲೂಕು ರೈತ ಸಮ್ಮೇಳನವು [illegible]ನೇ ತಾ|| ಸೋಮವಾರ [illegible] ನಡೆಯಲಿದೆ ಮೈಸೂರು ಸಂಸ್ಥಾನದ ಕೂಲಿಕಾರ [illegible] ಮತ್ತು ಕಮ್ಯೂನಿಸ್ಟ್ [illegible] ಶ್ರೀ ಎಸ್ ಡಿ ರಂಗ[illegible]ರವರ ಅಧ್ಯಕ್ಷತೆ ವಹಿಸುವರು ಶ್ರೀ ಟಿ ಸಿ ಕೃಷ್ಣಾರಾಯರು ಸಮ್ಮೇಳನದ [illegible] ಮಾಡುವರು ಈ ಸಂಬಂಧದಲ್ಲಿ ಶ್ರೀ ಎಸ್ ನಾರಾಯಣ [illegible] ಮೊದಲಾದವರನ್ನು [illegible] ಸಮಿತಿಯನ್ನು ರಚಿಸಲಾಗಿದೆ

ಪ್ರಸಿದ್ಧ ಪತ್ರಿಕೆ

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ

Mis No 52 of 51 52

ಅರ್ಜಿದಾರ್ [illegible] ಕಾಂಬಿ ವರ್ತಕಾ [illegible] ಲಿಮಿಟೆಡ್ — [illegible] 12 [illegible] ಪ್ರಕಾರ [illegible] 12 9-51 [illegible] ಎಕ್ಸ್‌ಟ್ರಾರ್ಡಿನರಿ ಜನರಲ್ [illegible] ಸ್ಪೆಷಲ್ ರಸಲೂಷನ್ [illegible] ನದ ಪ್ರಕಾರ [illegible] ಆಸೋಸಿಯೇಷನ್ [illegible] ಪಡೆಯಲು [illegible] ಮಾಡಿರು [illegible] 21 11 51 ನೇ ದಿ 11 [illegible] ದನ್ನು [illegible] ಕೋರ್ಟಿನಲ್ಲಿ ಕಾಣಿಸಲಾ ಗುತ್ತ [illegible] ಈ ಮೂಲಕ ತಿಳಿಯಪಡಿಸಿರುತ್ತೆ

ಎಂ ಎಸ್ ರಂಗನಾಥ್,
ಅರ್ಜಿದಾರರ ಪರ ಅಡ್ವೊಕೇಟರು, ಮೈಸೂರು
16-11 51

ಬ್ರಿಟಿಷರ ವಿರುದ್ಧ ಪಾಕಿಸ್ತಾನಿಗಳ ಪ್ರದರ್ಶನ

ಮೊನ್ನೆ ಕರಾಚಿಯಲ್ಲಿ ವಿದ್ಯಾರ್ಥಿಗಳು ಅಲ್ಲಿರುವ ಬ್ರಿಟಿಷ್ ಹೈಕಮಿಷನರ ಕಛೇರಿ ಮುಂದೆ ಪ್ರದರ್ಶನವನ್ನು ನಡೆಸಿ, ಈಜಿಪ್ಟಿನಲ್ಲಿರುವ ಬ್ರಿಟಿಷರ ಪ್ರತಿಗಾಮಿ ಚಟುವಟಿಕೆಗಳನ್ನು ಖಂಡಿಸಿ, ಹೈಕಮಿಷನರರಿಗೆ ಈ ಬಗ್ಗೆ ನಿರ್ಣಯವೊಂದನ್ನು ಕೊಟ್ಟರು

[illegible] ಮಂದಿ ಅಮೆರಿಕದ ಸೈನಿಕರು ಮತ್ತು ಹಲವು ಮಂದಿ ವೈಮಾನಿಕರಿಂದ ಕೂಡಿದ ಒಂದು ಅಮೆರಿಕಾ ವಿಮಾನವು ಫ್ರಾನ್ಸಿನಲ್ಲಿ ಎಲ್ಲೋ ಒಂದುಕಡೆ ಹತ್ತಿಯಿಸಿದೆ ಅದೃಶ್ಯವಾಗಿ ನೆನ್ನೆ ಮಧ್ಯ ಫ್ರಾನ್ಸಿನ ಪರ್ವತ ಪ್ರದೇಶದಲ್ಲಿ ಪತ್ತೆಯಾಯಿತೆಂದು ಗೊತ್ತಾಗಿದೆ

ಮಕ್ಕಳ ದಿನಾಚರಣೆ

ಅಧಿಕರ್ನಾಟಕಪುರದಲ್ಲಿರುವ [illegible] ಆರ್ ಟಿ. ಎಂ ಶಾಲಾ ಆವರಣ [illegible] ಮೊನ್ನೆ ಬೆಳಗ್ಗೆ [illegible] ಸಿದ್ಧಯ್ಯನವ[illegible] ಧ್ಯಕ್ಷತೆಯಲ್ಲಿ ಮಕ್ಕಳ ದಿನಾಚರಣೆ ನಡೆಯಿತು

ರಿಯಾಯಿತಿ ದರ!

ನಮ್ಮ ಉತ್ತಮವಾದ

ಫೋಟೋಗ್ರಾಫುಗಳನ್ನು

ನಮ್ಮಲ್ಲಿ ತೆಗೆಯಿರಿ

ನಾಗೇಶ್ ಸ್ಟೂಡಿಯೋ,

ನಾಣಿ ವಿಲಾಸ ರಸ್ತೆ, ಮೈಸೂರು
(ಕೆ ಆರ್ ಪೋಲೀಸ್ ಸ್ಟೇಷನ್ನಿನ [illegible])
ಪರ — ಕ್ಯಾಬಿನೆಟ್ ಸೈಜು 4 [illegible]
ಫುಲ್ ಪ್ಲೇಟ್ ಸೈಜು 6 ರೂ [illegible]
10 x 12 ಸೈಜು 12 ರೂ

ಶ್ರೀ ಲಕ್ಷ್ಮೀ ಥಿಯೇಟರ್
ಮತ್ತು ಮೋತಿಲಾಲ್

ಟಾಕೀಸುಗಳಲ್ಲಿ

16-11-51 ರಿಂದ ಅಮೋಘ ಆರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಜ್ಞಾನಾಂಬಿಕಾರವರ ತೆಲುಗು ಚಿತ್ರ

ಮಂತ್ರ ದಂಡಂ

ಸ್ಟೂಡಿಯೋ: ವಾಹಿನಿ

ಪಾತ್ರ:- ನಾಗೇಶ್ವರರಾವ್, ಶಿವರಾವ್, ಲಿಂಗಮೂರ್ತಿ, ಸಿ. ಎಸ್. ಆರ್., ಜಯಮ್ಮ, ಶ್ರೀರಂಜನಿ, ಬಾಲಸರಸ್ವತಿ, ಕೃಷ್ಣಕುಮಾರಿ

ಸೂಚನೆ - ಮೂರು ವಾರಗಳ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿರುತ್ತದೆ

ಪ್ರಭಾ * ಇಂದಿನಿಂದ ಅಮೋಘ ಪ್ರಾರಂಭ

ವಾಲ್ ಚಿಲ್ಡ್ರನ್‌ರವರಿಂದ ತಯಾರಿಸಲ್ಪಟ್ಟ ಅತ್ಯುತ್ತಮ ನಟ ವರ್ಗದಿಂದ ಕೂಡಿದ ಉತ್ತಮ ಹಿಂದಿ ಚಿತ್ರ

ಹಿಂದೂಸ್ತಾನ್ ಹಮಾರಾ

ನಟ ವರ್ಗ - ಪೃಥ್ವಿರಾಜ್, ಸುರೇಂದ್ರ, ದೇವಾನಂದ್ ಪ್ರೇಮಅದೀಬ್ ಶಾಸ್ತ್ರಿ, ಜಯರಾಜ್, ಕೆ ಎನ್ ಸಿಂಗ್, ದೇವಿಕಾ, ನಳಿನಿ ಜಯವಂತ್ ಯಶೋಧರಾ ಕಟ್ಜು, ದುರ್ಗಾಖೋಟೆ

ಚಿತ್ರ ಸಂಗೀತ **ವಸಂತದೇಸಾಯಿ.**

ಚಿತ್ರ ಕಥೆಯ ಆಧಾರ- [illegible] ಯವರ **ಅವರ್ ಇಂಡಿಯಾ**

ಗಣೇಶಾ ಮತ್ತು ಚಾಮುಂಡೇಶ್ವರಿ

ಟಾಕೀಸುಗಳಲ್ಲಿ

16-11-51 ರಿಂದ ಅಮೋಘ 2ನೇ ವಾರದಲ್ಲಿ

ಕಿಕ್ಕಿರಿದ ಜನಸ್ತೋಮಕ್ಕೆ ಯಶಸ್ವಿಯಾಗಿ ಪ್ರದರ್ಶಿಸಲಾಗುತ್ತಿದೆ

ಎಂ. ಎಸ್. ಕೆ. ಫಿಲಂಸ್‌ರವರ ಅಮೋಘ ಸಾಮಾಜಿಕ ತಮಿಳು ಚಿ[illegible]

★ ಮಣಮಗಳ್ ★

ತಾರಾಗಣ - ಎನ್ ಎಸ್ ಕೃಷ್ಣನ್, ಟಿ ಎ ಮಧುರಂ, ಲಲಿತ ಪದ್ಮಿನಿ, ಸಹಸ್ರನಾಮಂ, ಬಾಲಯ್ಯ, ಡೊರೈರಾಜ್, ಬಾಲ ಸುಬ್ರಹ್ಮಣ್ಯಂ, ಪುಲಿಮೂಟೈ ಮುಂತಾದವರು

ಹಿನ್ನೆಲೆ ಸಂಗೀತ — ಎಂ. ಎಲ್. ವಸಂತ ಕುಮಾರಿ

I N S FILMS RELEAS[illegible]

ಗಾಜ್ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶ್ರೀ ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಸಾಧ್ವಿ 792 · ಸಂಕೇ ಮಾತರಂ · ಇಂದಿನ ಪತ್ರಿಕೆ 3 ಪುಟ
ಸಂಪುಟ ೧೧] ಶನಿವಾರ ೧೭-೧೧-೫೦ [ಸಂಚಿಕೆ

ಆಂಧ್ರ ಪ್ರಾಂತಕ್ಕಾಗಿ ಶಾಸನ ಭಂಗ ಚಳುವಳಿ

ಭಾರತದ ರಾಜ್ಯಾಂಗದ ಕನ್ನಡ ಭಾಷಾಂತರ

ಬೆಂಗಳೂರು ೧೭

ಭಾರತದ ರಾಜ್ಯಾಂಗವನ್ನು ಕನ್ನಡ ಭಾಷಾಂತರ ಮಾಡಲು ಕೇಂದ್ರ ಸರ್ಕಾರದಿಂದ ನಿಯೋಜಿತವಾದ ಶ್ರೀ ಆರ್. ಆರ್. ದಿವಾಕರ್ ಸಮಿತಿಯು ನೆನ್ನೆ ಕಡೆ ಯಲ್ಲಿ ಆಖೈರು ಸಭೆಯನ್ನು ನಡೆಸಿ, ಕೆಲಸವನ್ನು ಪೂರೈಸಿರುವುದೆಂದು ಗೊತ್ತಾಗಿದೆ. ಈ ಸಮಿತಿಯಲ್ಲಿ ಶ್ರೀ ತೀ. ತ್ರೀಕಂಠಯ್ಯ, ರಾ|| ಸೇ|| ಸಿ. ಕೆ. ವೆಂಕಟ ರಾಮಯ್ಯ ಮತ್ತು ನ್ಯಾಯಾಂಗ ಕಾರ್ಯದರ್ಶಿಗಳು ಸದಸ್ಯರಾಗಿರುವರು, ದಿವಾಕರರು ಅಧ್ಯಕ್ಷರಾಗಿರುತ್ತಾರೆ. ಡಿಸೆಂಬರ್ ... ದಿನದಲ್ಲಿ ಅದನ್ನು ಪ್ರಕಟಿಸಲಾಗುವುದೆಂದು ಗೊತ್ತಾಗಿದೆ.

ಗಂಡನಿಗೆ ವಿಷ ಕೊಟ್ಟು ಕೊಂದ ಮಹಿಳೆಗೆ ಮರಣ ದಂಡನೆ

ಕೋಲಾರ ಜಿಲ್ಲೆ ಬಾಗೆಪಲ್ಲಿ ತಾಲ್ಲೂಕಿನ ... ರಾಜಲೇಂದ್ರ ಹಳ್ಳಿಯ ರಾಮಕ್ಕ ಎಂಬ ತರುಣಿಯನ್ನು ಅಕೆಯ ಇಚ್ಛೆಗೆ ವಿರುದ್ಧವಾಗಿ ರಾಮಪ್ಪ ಎಂಬುವನಿಗೆ ಮದುವೆ ಮಾಡಿದುದಕ್ಕಾಗಿ ಅಕೆಯು ... ವರ್ಷ ತನ್ನ ಗಂಡನಿಗೆ ವಿಷಕೊಟ್ಟು ಕೊಂದ ಅಪಾದನೆಗಾಗಿ ಅವಳನ್ನು ಮರಣದಂಡನೆ ಶಿಕ್ಷೆಗೆ ಗುರಿಪಡಿಸಲಾಗಿದೆ. ... ಕೃತ್ಯದಲ್ಲಿ ಸಾಮೀಲಾಗಿದ್ದ ರಾ... ರೆಡ್ಡಿ ... ಸಾಹೇಬ್ ಎಂಬುವನಿಗೆ ಜೀವಾವಧಿ ... ವಿಧಿಸಲಾಯಿತು

ಪಾಕಿಸ್ತಾನದ ರೂಪಾಯಿಗೆ ಲಿಯಾಖತ್ ಎಂದು ಹೆಸರು

... ಭಾರತದಲ್ಲಿ ಬೆಳ್ಳಿಯ ನಾಣ್ಯಕ್ಕೆ ರೂಪಾಯಿ ಎಂದು ಹೆಸರಿರುವುದರಿಂದ ಪಾಕಿಸ್ತಾನ ಸರ್ಕಾರದವರು ತಮ್ಮ ನಾಣ್ಯವನ್ನು ರೂಪಾಯಿ ಎಂದು ಕರೆಯುವುದಕ್ಕೆ ಬದಲು ಲಿಯಾಖತ್ ಎಂದು ಕರೆಯಲು ಆಲೋಚಿಸುತ್ತಿರುವುದಾಗಿ ತಿಳಿದು ಬಂದಿದೆ

ನಾಟಕ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಗಂಗಾ ಮತಸ್ಥರ ಬೀದಿ ಕಾವೇರಿ ನಗರದಿಯ ಹತ್ತಿರ ಈ ರಾತ್ರಿ ೯|| ಗಂಟೆಗೆ ವಿರಾಟ ಪರ್ವ ಎಂಬ ನಾಟಕವನ್ನು ಅಲ್ಲಿನ ನಿವಾಸಿಗಳು ಅಭಿನಯಿಸುವರು ಸಕಲರಿಗೂ ಆಹ್ವಾನವಿದೆ

ಕೃಷ್ಣಮೂರ್ತಿಯವರಿಗೆ ವಿಶ್ವಸಂಸ್ಥೆ ಹುದ್ದೆ

ಮಹಾರಾಜಾ ಕಾಲೇಜಿನಲ್ಲಿ ಅ|| ಪ್ರೊಫೆಸರ್ ಆಗಿರುವ ಶ್ರೀ ಟಿ. ಕೃಷ್ಣಮೂರ್ತಿಯವರು ಫಿಲಿಪ್ಪೈನ್ ದ್ವೀಪಗಳಲ್ಲಿ ವಿಶ್ವಸಂಸ್ಥೆಯ ಪರವಾಗಿ ವಯಸ್ಕರ ಶಿಕ್ಷಣ ಯೋಜನೆಯ ಮುಖ್ಯಾಧಿಕಾರಿಯಾಗಿ ನೇಮಿಸಲ್ಪಟ್ಟಿರುವರೆಂದು ಗೊತ್ತಾಗಿದೆ

ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆ

ರಾಜಧಾನಿಯ ಶ್ರೀ ವರಲಕ್ಷ್ಮಿ ... ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ... ಗಂಟೆಗೆ ಸಹಕಾರ ಭವನದಲ್ಲಿ ಶ್ರೀ ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆ ನೆರವೇರಿಸಲ್ಪಡುವುದು ದರ್ಬಾರ್ ಬಕ್ಷಿ ಶ್ರೀ ಹೆಚ್. ಎಲ್. ದೇವರಾಜ ಅರಸಿನವರು ಅಧ್ಯಕ್ಷತೆ ವಹಿಸುವರು ದೀಕ್ಷಿತರ ಕೃತಿಗಳನ್ನು ಹಾಡಲಾಗುವುದು ಮೈಸೂರು ಸಹೋದರರ ಹಾಡುಗಾರಿಕೆ ಮತ್ತು ವೀಣಾವಾದನಗಳು ನಡೆಯುವುವು. ಸಂ|| ಶಾ|| ವಿ. ಕೆ. ವಾಸುದೇವಾಚಾರ್ಯರು ದೀಕ್ಷಿತರ ಜೀವನದ ಬಗ್ಗೆ ಉಪನ್ಯಾಸ ಮಾಡುವರು

ಕೋಟಿ ರೂ. ವೆಚ್ಚದಲ್ಲಿ ವೈರ್ಲೆಸ್ ವರ್ತಮಾನದ ವ್ಯವಸ್ಥೆ

ಪ್ರಪಂಚದ ವೈರ್ಲೆಸ್ ಸುದ್ದಿ ... ಸುವ ರಾಷ್ಟ್ರಗಳಲ್ಲಿ ಅಗ್ರ ಸ್ಥಾನವನ್ನು ಭಾರತವು ಪಡೆಯಲಿರುವುದೆಂದೂ ಒಂದು ಕೋಟಿ ರೂ ವೆಚ್ಚದಿಂದ ಪ್ರಪಂಚದ ನಾನಾ ಭಾಗಗಳಿಗೆ ವೈರ್ಲೆಸ್ ಮೂಲಕ ವರ್ತಮಾನ ಕಳುಹಿಸುವ ಮತ್ತು ತರಿಸಿಕೊಳ್ಳುವ ಏರ್ಪಾಡು ... ಆಗುವುದೆಂದೂ ಹೇಳಲಾಗಿದೆ ದಹಲಿ ಮದ್ರಾಸು ಮತ್ತು ಕಲ್ಕತ್ತಾಗಳಲ್ಲಿ ... ಕೇಂದ್ರಗಳನ್ನು ಸ್ಥಾಪಿಸಲಾಗುವುದು

ಚುನಾವಣಾ ಪ್ರಚಾರಕ್ಕಾಗಿ ಆಗಮಿಸಿರುವ

ಸಮಾಜವಾದಿ ಮುಖಂಡರಾದ
ಜೈ ಪ್ರಕಾಶ್ ನಾರಾಯಣ್

ಲಂಚದ ನೋಟನ್ನು ಪೋಲೀಸನು ನುಂಗಿದ ಪ್ರಕರಣ

ಕರಾಚಿಯ ಒಂದು ಮಾರ್ಕೆಟ್ಟಿನ ಬಳಿ ಪಾಕಿಸ್ತಾನದ ಪೋಲೀಸನೊಬ್ಬನು ಲಂಚದ ೫ ರೂ ನೋಟನ್ನು ಪಡೆಯುತ್ತಿದ್ದಾಗ ಆತನನ್ನು ಹಿಡಿಯಲೆತ್ನಿಸಿದ ಸಮಯದಲ್ಲಿ ಪೋಲೀಸನು ನೋಟನ್ನು ನುಂಗಿದ ಪ್ರಸಂಗವು ವರದಿಯಾಗಿರುತ್ತದೆ ಅವನನ್ನು ಸಸ್ಪೆಂಡ್ ಮಾಡಿ, ಅವನ ಮೇಲೆ ಮೊಕದ್ದಮೆ ಹೂಡಲಾಗಿದೆ

ಹೊರಗಿನ ನ್ಯಾಯಾಧೀಶರನ್ನು ಕರೆಸುವ ವಿಷಯ

ಕೇ ದ್ರಕ್ಕೆ ಮೈಸೂರು ಸರ್ಕಾರದ ಪತ್ರ

ಬೆಂಗಳೂರು ೧೭

ಸಂಸ್ಥಾನದ ಹೊರಗಿನ ನ್ಯಾಯಾಧೀಶರೊಬ್ಬರನ್ನು ಕರೆಸಿ, ಶ್ರೀ ಎಲ್ ಎಸ್ ರಾಜುರವರ ಮೊಕದ್ದಮೆಯ ವಿಚಾರಣೆ ನಡೆಸುವ ಬಗ್ಗೆ ಸರ್ಕಾರದವರ ನಿರ್ಧಾರ ಮತ್ತು ಶಾಸನ ಸಭೆಯ ಅಭಿಮತ ಇವುಗಳನ್ನು ಕುರಿತು ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವರೆಂದು ಗೊತ್ತಾಗಿದೆ ರಾಷ್ಟ್ರಾಧ್ಯಕ್ಷರು ನಿರೂಪವನ್ನು ವಾಪಸು ತೆಗೆದುಕೊಳ್ಳುವುದಾಗಿ ಕೊಡಲಾಗಿದ್ದ ವಾಗ್ದಾನವನ್ನು ಸಲ್ಲಿಸಬೇಕೆಂದೂ, ತನಂತರ ಮದ್ರಾಸು ಅಥವಾ ಬೊಂಬಾಯಿಯ ಸರ್ಕಾರಗಳೊಡನೆ ವ್ಯವಹರಿಸಿ ನ್ಯಾಯಾಧೀಶರನ್ನು ಕರೆಸುವ ಏರ್ಪಾಡು ಮಾಡುವುದಾಗಿ ಅದರಲ್ಲಿ ತಿಳಿಸಿರುವರೆಂದೂ ಹೇಳಲಾಗಿದೆ

ಆಂಧ್ರ ಪ್ರಾಂತ ರಚನೆಗಾಗಿ ಸತ್ಯಾಗ್ರಹ

ಡಿಸೆಂಬರ್ ೧೧ರೊಳಗಾಗಿ ಆಂಧ್ರ ಪ್ರಾಂತ ರಚನೆಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಸತ್ಯಾಗ್ರಹ ಹೂಡಲು ನಿರ್ಧರಿಸಿರುವುದಾಗಿ ರಾಷ್ಟ್ರಸ್ಥಾಪಕ ಸಂಘದ ಕಾರ್ಯದರ್ಶಿ ಡಾ|| ಎ ಎಸ್ ಚಲಪತಿ ರಾಯರು ರಾಷ್ಟ್ರಾಧ್ಯಕ್ಷರು, ಪ್ರಧಾನಿ ನೆಹರೂ ಮತ್ತು ಆಚಾರ್ಯ ವಿನೋಬಾ ಭಾವೆಯವರ ಗಮನಕ್ಕೆ ತಂದಿರುವರೆಂದು ಗೊತ್ತಾಗಿದೆ. ಪಡಿತರ ಪದ್ಧತಿ, ಧಾನ್ಯ ವಸೂಲಿಗೆ ಸಂಬಂಧಪಟ್ಟ ಕಾನೂನುಗಳನ್ನು ಮುರಿಯುವುದು ಮತ್ತು ಗ್ರಾಮಾಂತರಗಳಲ್ಲಿ ಪ್ರದರ್ಶನ ನಡೆಸುವ ಮೂಲಕ ಸತ್ಯಾಗ್ರಹ ಕೈಗೊಳ್ಳಲಾಗುವುದೆಂದು ಹೇಳಲಾಗಿದೆ. ಉತ್ತರ ದೇಶದಲ್ಲಿ ಹಿಂದೂ-ಮುಸ್ಲಿಂ ಬೇಧದಷ್ಟೇ ದಕ್ಷಿಣದಲ್ಲಿ ಬಲವಾಗಿರುವ ಆಂಧ್ರ ತಮಿಳರ ಭಿನ್ನತೆಯನ್ನು ಹೋಗಲಾಡಿಸಲು ಆಂಧ್ರ ಪ್ರಾಂತ ರಚನೆಯೇ ಸೂಕ್ತ ಮಾರ್ಗವೆಂದೂ ತಿಳಿಸಲಾಗಿದೆ

○ ಈಜಿಪ್ಟಿನ ದೊರೆ ಫರೂಕರು ಸುಡಾನಿನ ರಾಜರೆಂಬ ಬಿರುದನ್ನು ಧರಿಸಿರುತ್ತಾರೆ.

ಜಿಲ್ಲಾ ಬೋರ್ಡುಗಳಿಗೆ ೬ ತಿಂಗಳು ಜೀವದಾನ

ಸ್ವಂ. ಸು ಪ್ರೋ|} ಬೆಂಗಳೂರು ೧೭

ಬರುವ ತಿಂಗಳು ಅಖೈರಿಗೆ ಮುಗಿಯುವ ಮೈಸೂರು ಸಂಸ್ಥಾನದ ಜಿಲ್ಲಾ ಬೋರ್ಡುಗಳ ಅವಧಿಯನ್ನು ಸರ್ಕಾರದವರು ಇನ್ನೂ ೬ ತಿಂಗಳ ಕಾಲ ಹೆಚ್ಚಿಸಿರುತ್ತಾರೆ. ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟಿದ್ದ ಪಂಚಾಯಿತಿ, ಜಿಲ್ಲಾ ಬೋರ್ಡುಗಳ ಮಸೂದೆಯು ಇನ್ನೂ ಕಾಯಿದೆಯಾಗಿಲ್ಲವಾದುದರಿಂದ ಮೇಲ್ಕಂಡಂತೆ ಆಜ್ಞೆ ಮಾಡಲಾಗಿದೆ

ಬೆಂಗಳೂರಿಗೆ ರೇಡಿಯೋ ಕೇಂದ್ರ

ಕೇಂದ್ರ ವಾರ್ತಾ ಮಂತ್ರಿ ಶ್ರೀ ಆರ್. ಆರ್ ದಿವಾಕರ್‌ರವರು ಈ ದಿನ ಪತ್ರಿಕಾ ಗೋಷ್ಠಿಯನ್ನು ನಡೆಸಿ, ಬೆಂಗಳೂರು ನಗರದಲ್ಲಿ ೫೦ ಕಿಲೊವಾಟಿನ ಮೀಡಿಯಂ ಟ್ರಾನ್ಸ್‌ಮಿಟರ್ ರೇಡಿಯೋ ಕೇಂದ್ರವನ್ನು ತೆರೆಯುವ ವಿಷಯವು ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿದೆಯೆಂದೂ, ಆದರೆ ಅದಕ್ಕಿನ್ನೂ ಮಂಜೂರಾತಿ ದೊರೆತಿಲ್ಲವೆಂದೂ ತಿಳಿಸಿದರು ವ್ಯಾಪಾರಕ್ಕೆ ಸಂಬಂಧಿಸಿದ ಪ್ರಚಾರ ಮತ್ತು ಅ|| ಭಾ|| ರೇ ಡಿ ಯೊ ಕೇಂದ್ರಗಳನ್ನಾಗಿ ಸಂಶೋಧನಾ ಸ್ಟೇಷನ್ ಇವುಗಳ ವಿಸ್ತಾರವನ್ನು ಮಾಡಿರುವುದಾಗಿ ಅವರು ತಿಳಿಸಿದರು.

ಜೈ ಪ್ರಕಾಶ ನಾರಾಯಣರ ಆಗಮನ

ಮೈಸೂರು ೧೭

ಈ ದಿನ ಮಧ್ಯಾಹ್ನ ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಜೈಪ್ರಕಾಶ ನಾರಾಯಣರವರು ಇಲ್ಲಿಗೆ ಕೃಷ್ಣರಾಜನಗರದಿಂದ ಆಗಮಿಸಿದರು ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಭಾಷಣಮಾಡಿ,ದೇಶದ ಉನ್ನತಿಯನ್ನು ಸಾಧಿಸಲು ವಿದ್ಯಾರ್ಥಿಗಳು ಶೀಲವಂತರಾಗಿರಬೇಕೆಂದು ತಿಳಿಸಿದರು. ಗಾಂಧಿ ಮತ್ತು ಸಮಾಜವಾದಿ ತತ್ವಗಳ ಗುರಿ ಒಂದೇ ಆದರೂ ಅವುಗಳ ಸಾಧನದ ಮಾರ್ಗದಲ್ಲಿ ಭಿನ್ನತೆಯಿರುವುದೆಂದು ಅವರು ಹೇಳಿದರು

ಭಾರತದ ಆಡಳಿತ ಶಾಖೆಗೆ ಮೈಸೂರು ಅಧಿಕಾರಿಗಳು

ಮೈಸೂರು ಸರ್ಕಾರದ ೩೦ ಜನ ಅಧಿಕಾರಿಗಳನ್ನು ಭಾರತದ ಆಡಳಿತ ಸರ್ವಿಸ್ಸಿಗೆ ತೆಗೆದುಕೊಳ್ಳಲಾಗಿದೆಯೆಂದು ರಾಷ್ಟ್ರಾಧ್ಯಕ್ಷರ ಆಜ್ಞೆಯಾಗಿರುತ್ತದೆ.

ಮೈಸೂರು ಸಂಸ್ಥಾನಕ್ಕೆ ಎ ಸ್ಥಾನಮಾನ

ಬೆಂಗಳೂರು ೧೭

ಮೈಸೂರು ಸಂಸ್ಥಾನಕ್ಕೆ ಕೇಂದ್ರದ ... ರಾಜ್ಯಾಂಗದ ೩೭೧ನೇ ನಿಬಂಧನೆಯ ಬಗ್ಗೆ ವಿನಾಯಿತಿಯನ್ನು ಕೊಡಲು ರಾಷ್ಟ್ರಾಧ್ಯಕ್ಷರ ಹಕ್ಕು ಆಜ್ಞೆಯನ್ನು ಹೊರಡಿಸಲಿರುವರೆಂದು ತಿಳಿದುಬಂದಿದೆ. ಇದರಿಂದ ಮೈಸೂರು "ಎ" ಸಂಸ್ಥಾನಗಳ ದರ್ಜೆಗೆ ಏರಲು ಅವಕಾಶವಾಗುವುದು. ಮೈಸೂರಿನ ಇತ್ತೀಚಿನ ಘಟನೆಗಳ ಸಂಬಂಧವಾಗಿ ಪ್ರಧಾನಿ ನೆಹರೂರವರು ರಾಜಕೀಯ ನಿರ್ಧಾರವನ್ನು ತೆಗೆದುಕೊಂಡು ಸಮಸ್ಯೆಯನ್ನು ಬಗೆಹರಿಸಿದರೆಂದು ತಿಳಿದುಬಂದಿದೆ.

ನೆಹರೂರಿಂದ ಚುನಾವಣಾ ಪ್ರಚಾರದ ಆರಂಭ

ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಜವಹರ ಲಾಲ್ ನೆಹರೂರವರು ಮೊನ್ನೆ ದಿನ ಚುನಾವಣಾ ಪ್ರಚಾರವನ್ನು ಆರಂಭಿಸಿದರು. ಅವರು ಪ್ರಥಮತಃ ಪಠಾಣ್‌ಕೋಟೆಯ ೫೦ ಸಾವಿರ ಜನರ ಸಭೆಯಲ್ಲಿ ಭಾಷಣ ಮಾಡಿ, ಕಾಂಗ್ರೆಸ್ಸಿಗೆ ಬೆಂಬಲ ಕೋರಿದರು ಇದೇ ತಿಂಗಳು ೨೫ನೇ ತಾರೀಕು ಅವರು ತಿರುವಾಂಕೂರು-ಕೊಚ್ಚಿಯಲ್ಲಿ ಚುನಾವಣಾ ಪ್ರವಾಸ ಮಾಡಿ ೨೭ನೇ ತಾರೀಕು ಮದ್ರಾಸಿಗೆ ಬಂದು ೮ ದಿನ ಅಲ್ಲೂ ಭಾಷಣ ಮಾಡುವರು.

ಚಲನಚಿತ್ರ ಉದ್ಯಮದಿಂದ ಚಾರ್ಲಿ ಚಾಪ್ಲಿನ್ ಹೊರಕ್ಕೆ

ಸುಪ್ರಸಿದ್ಧ ಸಿನಿಮಾ ನಟ ಚಾರ್ಲಿ ಚಾಪ್ಲಿನರು ಸಿನಿಮಾ ಪ್ರಪಂಚವನ್ನು ಬಿಡುವರು. ಅವರ ಸ್ಟುಡಿಯೋವನ್ನು ೧೪ ಲಕ್ಷ ಡಾಲರಿಗೆ ಮಾರಲಾಗುವುದೆಂದು ಹೇಳಲಾಗಿದೆ

ಅಮೆರಿಕದಲ್ಲಿ ಭಾರತದ ಹೊಸ ರಾಯಭಾರಿ

ಅಮೆರಿಕದಲ್ಲಿ ಭಾರತದ ಪರವಾಗಿ ರಾಯಭಾರಿಯಾಗಿರುವ ವಿಜಯಲಕ್ಷ್ಮಿ ಪಂಡಿತರು ತಮ್ಮ ಸ್ಥಾನವನ್ನು ಬಿಟ್ಟು ೨೧ನೇ ತಾ|| ವಾಪಸು ಭಾರತಕ್ಕೆ ಬರುವರು. ಅವರ ಸ್ಥಾನದಲ್ಲಿ ರೋಂ ನಗರದಲ್ಲಿ ರಾಯಭಾರಿಯಾಗಿರುವ ಬಿ ಆರ್ ಸೇನರವರನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ.

ನಗರದ ಕೆ. ಎಂ. ಪಿ. ಪಕ್ಷ ವಿಸರ್ಜನೆಯಾಗಿಲ್ಲ

ಮೈಸೂರು ನಗರದ ಕೆ ಎಂ. ಪಿ ಪಕ್ಷವು ವಿಸರ್ಜನೆಯಾಗಿ ಸೋಷಲಿಸ್ಟ್ ಪಕ್ಷಕ್ಕೆ ಸೇರಿದೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿ ನಿರಾಧಾರವಾದುದೆಂದೂ, ಪಕ್ಷವು ವ್ಯವಸ್ಥೆಗೊಂಡು ಕಾರ್ಯಕಲಾಪಗಳನ್ನು ನಡೆಸುತ್ತಿದೆ ಎಂದೂ ನಗರದ ಆ ಪಕ್ಷದ ಕಾರ್ಯದರ್ಶಿ ಶ್ರೀ ಎಂ. ಎಲ್ ತಿಮ್ಮಯ್ಯನವರು ತಿಳಿಸುತ್ತಾರೆ

SRI GAYATHRI,
TALKIES
From 18-11-51 Daily 3 Shows
Paramount's
RAINBOW ISLAND
(Technicolour)
With— Dorothy Lamur
Eddie Bracken
From 21-11-51
Paramount's
APPOINTMENT WITH DANGER

Edited, Printed and Published by A. R. Nagarajan at Sadhvi Press D. Subbiah Road, Mysore

ಪೋಲೀಸರಿಗೂ, ನಟರಿಗೂ ಘರ್ಷಣೆ

ಟೆಹರಾನಿನ ಒಂದು ನಾಟಕ ಸಂಸ್ಥೆಯ ಮಾಲೀಕರೂ, ವ್ಯವಸ್ಥಾಪಕರೂ ಮತ್ತು ನಟವರ್ಗದವರೂ ಕಮ್ಯೂನಿಸ್ಟ್ ಚಟುವಟಿಕೆಗಳಲ್ಲಿ ನಿರತರಾಗಿದ್ದ ಕಾರಣಕ್ಕಾಗಿ ಪೋಲೀಸರು ಸದರಿ ಸಂಸ್ಥೆಯನ್ನು ಮುಚ್ಚಿಸಿದ್ದರು ಮೊನ್ನೆ ರಾತ್ರಿ ನಾಟಕ ಸಂಸ್ಥೆಯವರೂ ಸೇರಿ ಸುಮಾರು ಸಾವಿರ ಮಂದಿ ಕಮ್ಯೂನಿಸ್ಟರು ನಾಟಕ ಮಂದಿರದ ಬೀಗವನ್ನು ಒಡೆಯಲು ಪ್ರಯತ್ನ ಪಟ್ಟಾಗ ಅವರ ವಿರೋಧ ಸಂಗಡದವರಿಗೂ ಅವರಿಗೂ ಘರ್ಷಣೆಯಾಗಿ ೩೭ ಮಂದಿಗೆ ಗಾಯವಾಯಿತು ಪೋಲೀಸರು ೭೫ ಮಂದಿಯನ್ನು ಬಂಧಿಸಿದರು ಪೋಲೀಸರ ಮೇಲೆ ಬಿದ್ದ ೪೦ ಮಂದಿ ನಟನಟಿಯರನ್ನು ನಾಟಕ ಮಂದಿರದಲ್ಲೇ ಬಂಧನದಲ್ಲಿಡಲಾಯಿತು

ನೆ ಹ ರೂ ಜ ಯ ಂ ತಿ

ರಾಜಧಾನಿಯ ಶಾರದಾ ವಿಲಾಸ ಕಾಲೇಜು ಸಂಘದ ಆಶ್ರಯದಲ್ಲಿ ಕಳೆದ ಬುಧವಾರ ನೆಹರೂರವರ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಕೆ ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗೋಪಾಲಕೃಷ್ಣ ಅಡಿಗಾರವರು ನೆಹರೂರವರ ವ್ಯಕ್ತಿತ್ವವನ್ನು ಕುರಿತು ಪ್ರಶಂಸಿಸಿ ಭಾಷಣ ಮಾಡಿದರು ನೆಹರೂರವರಿಗೆ ಶುಭವನ್ನು ಕೋರಿ ತಂತಿಯನ್ನು ಕಳುಹಲಾಯಿತು

○ ತುಮಕೂರು ಜಿಲ್ಲೆಯಿಂದ ಕಾಂಗ್ರೆಸ್ ಪರವಾಗಿ ಪಾರ್ಲಿಮೆಂಟಿಗೆ ಉಮೇದುವಾರರಾಗಿ ಆರಿಸಲ್ಪಟ್ಟಿರುವ ಶ್ರೀ ಎಂ ವಿ. ರಾಮರಾಯರು ಚುನಾವಣೆಗೆ ನಿಲ್ಲುವುದಿಲ್ಲವೆಂದು ತಿಳಿದುಬಂದಿದೆ

ನೆಹರೂ, ಅಜಾದ್. ಟಂಡನ್‌ರವರ ಉಮೇದುವಾರಿಕೆ

ಉತ್ತರ ಪ್ರದೇಶದ ಪ್ರಾಂತದಿಂದ ಪಾರ್ಲಿಮೆಂಟ್ ಸಭೆಗೆ ಪಂಡಿತ ನೆಹರೂ, ಮೌಲಾನಾ ಅಜಾದ್, ಪುರುಷೋತ್ತಮ ದಾಸ್ ಟಾಂಡನ್, ರಫಿ ಅಹಮದ್ ಕಿದ್ವಾಯ್, ವಿಜಯಲಕ್ಷ್ಮಿ ಪಂಡಿತ್, ಮೋಹನಲಾಲ್ ಸಾಕ್ಸೇನಾ ಮುಂತಾದವರನ್ನು ಕಾಂಗ್ರೆಸ್ ಪರವಾಗಿ ಉಮೇದುವಾರರಾಗಿ ಆರಿಸಲಾಗಿದೆ ಟಾಂಡನ್‌ರವರು ತಾವು ನಿಲ್ಲುವುದಿಲ್ಲವೆಂದು ಅಧ್ಯಕ್ಷ ನೆಹರೂರವರಿಗೆ ಪತ್ರ ಬರೆದಿರುತ್ತಾರೆ

ಅರಿಸಿನದ ಮಳೆ

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು ಒನಹಳ್ಳಿಯ ಗ್ರಾಮದ ಬಳಿ ಬೆಟ್ಟದ ಮೇಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯದ ಸುತ್ತಲೂ ಮತ್ತು ಅಲ್ಲಿಗೆ ಹೋಗುವ ದಾರಿಯಲ್ಲೂ ಅರಿಸಿನದ ಮಳೆಯು ಬೀಳುತ್ತಿರುತ್ತದೆ ಈ ಸ್ಥಳದಲ್ಲಿ ಕಳೆದ ೪೧ ದಿನಗಳಿಂದಲೂ ಹಗಲೂ ರಾತ್ರಿ ಪೂಜೆ ನಡೆಯುತ್ತಿದ್ದು ಪೂಜೆ ಮಾಡುವ ಕಾಲದಲ್ಲಿ ಮಳೆಯು ಬರುತ್ತಿರುವುದು ವಿಶೇಷ ವಿಸ್ಮಯಕ್ಕೆ ಕಾರಣವಾಗಿದೆ

ಶಕುಂತಲಾ ಪರಾಂಜಪೆಯವರ ಆಗಮನ

ಪೂನಾ ಪೌರ ಸಭಾ ಮಿತ ಸಂತಾನಾಧಿಕಾರಿಗಳಾದ ಶ್ರೀಮತಿ ಶಕುಂತಲಾ ಪರಾಂಜಪೆಯವರು ಈ ತಿಂಗಳು ೨೦ನೇ ತಾರೀಕು ರಾಜಧಾನಿಗೆ ಆಗಮಿಸಿ, ಇಲ್ಲಿ ಮಿತ ಸಂತಾನದ ಸಂಬಂಧವಾಗಿ ಭಾಷಣ ಮಾಡುವರು

ಶ್ರೀ ಅಂಬಾ ಪೂಜೆ

ಕೃಷ್ಣರಾಜ ಮೊಹಲ್ಲಾ ವಾಣಿ ವಿಲಾಸ ರಸ್ತೆಯ ಪಕ್ಕದಲ್ಲಿರುವ ಕೃಷ್ಣರಾಯರ ಗರಡಿಯಲ್ಲಿ 16-11 ನೇ ಶುಕ್ರವಾರ ಶ್ರೀ ಅಂಬಾ ಪೂಜೆ ಪೋಲೀಸ್ ಅಸಿಸ್ಟೆಂಟ್ ಸೂಪರಿಂಡೆಂಟರಾದ ಶ್ರೀ ಚಂದ್ರಶೇಖರಯ್ಯನವರ ಮತ್ತು ರೇಷನಿಂಗ್ ಅಧಿಕಾರಿ ಶ್ರೀ ಯರಾಘವ ರೆಡ್ಡಿಯವರ ಸಮ್ಮುಖ ವೈಭವದಿಂದ ಜರುಗಿತು.

ಅ ಬೀ ದ್ ರ ವ ರ
ಹರಾಜು - ಮಾರಾ
ನಾ ಳೆ
18—11—51 ರ ಬೆಳಿಗ್ಗೆ 10 ಘಂಟೆಗೆ
ನಗರಾಭಿವೃದ್ಧಿ ಸಮಿತಿ, ಮೈಸೂ

ಪ್ರ ಕ ಟ ಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.—

ಮೈಸೂರು ಲಷ್ಕರ್ ಮೊಹಲ್ಲಾ ಒಂಟಿಕೊಪ್ಪಲಿನಲ್ಲಿರುವ ಹೆಂಚಿನ ... ಯ ಪೂರ್ವ ದಿಕ್ಕಿನಲ್ಲಿ ಕಟ್ಟಿರುವ ೩ ಮನೆಗಳ ಪೈಕಿ ೨೫ ಮನೆಗಳ ಬಗ್ಗೆ ಮೈಸೂರಿನಲ್ಲಿ ಮನೆ ಇಲ್ಲದ ವಾಸ ಮಾಡುವ ಹರಿಜನ ಮತ್ತು ಹಿಂದುಳಿದ ವರ್ಗದವರಿಂದ (Harijans and Depress Classes) ಅರ್ಜಿಗಳನ್ನು 24-11 ರವರೆವಿಗೆ ಸ್ವೀಕರಿಸಲಾಗುತ್ತ ... ಮನೆಯ ಬೆಲೆ 2100 ರೂಪಾಯಿ ... ಅಪೇಕ್ಷಿಸುವವರು ... 100 ರೂಪಾಯಿ ... ಮನೆ ಕೊಟ್ಟ ಬಗ್ಗೆ ಆರ್ಡರ್ ... 15 ದಿನಗಳಲ್ಲಿ ... ಬಾಕಿ ಉಳಿಯುವ 2000 ರೂಪಾಯಿಯನ್ನು 96 ಸಮನಾದ ಮಾಹೆವಾರು ಕಂತುಗಳಲ್ಲಿ ... ದ್ಧಿ ಸೇರಿಸಿ ಪಾವತಿ ಮಾಡತಕ್ಕದ್ದು ... ವಿಧಾಯಕವಾದ ಅಗ್ರಿಮೆಂಟ್ ... ಕೊಟ್ಟನಂತರ ಮನೆ ಸ್ವಾಧೀನ ವಾಗುವುದು ತಪ್ಪಿದಲ್ಲಿ ... ಲಗು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮನೆ ಸಿಕ್ಕದಿದ್ದ ... ವಣಿ ಮೊಬಲಗು ವಾಪಸು ... ಗುವುದು. ವಿಧಾಯಕವಾದ ನಮೂನೆಯಲ್ಲಿಲ್ಲದ, ರೇವಣಿ ಸಮೇತ ಬರದಿರುವ ಅರ್ಜಿಗಳಿಗೆ ... ಈಗಾಗಲೇ ಅಪೂರ್ಣವಾಗಿ ... ಡಿಪಾಜಿಟ್ ಮಾಡಿರುವವರೂ ... ಯಕವಾದ ನಮೂನೆಯಲ್ಲಿ ... ಣಿ ಮೊಬಲಗು ಡಿಪಾಜಿಟ್ ... ಅರ್ಜಿ ಹಾಕಿಕೊಳ್ಳತಕ್ಕದ್ದು.

(ಸಹಿ) ಪಿ. ಗೋಪಾಲಕೃಷ್ಣ ಶೆ
ಅಧ್ಯಕ್ಷರು

ನೆನಪಿರಲಿ ! ನಾಳೆ ಸಂಜೆ 5 ಘಂಟೆಗೆ ನೆನಪಿರಲಿ !
ನಳಿಕೆ ನವರ ಹರಾಜು ಮಾರಾಟ
ತೇಗ ಮತ್ತು ಬೀಟೆ ಮರದ ಮೇಜಗಳು ಕುರ್ಚಿಗಳು, ಆರಾಮ ಕುರ್ಚಿಗಳು ಮತ್ತು ಫ್ಯಾನ್ಸಿ ಸಾಮಾನುಗಳು

ಮೈಸೂರು ಸಿಟಿ ಮುನಿಸಿಪಲ್ ಕಮೀಷನರ್‌ರವರ ಆಫೀಸು
ತಾರೀಖು ೧೪-೧೧-೧೯೫೧

ಟೆಂಡರ್ ನೋಟಿಫಿಕೇಷನ್

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ :—

ಇದೇ ಮುನಿಸಿಪಲ್ ಸೂಯೇಜ್ ಫಾರಮ್ಮಿನ ತೆಂಗಿನ ಫಸಲನ್ನು ೧೯೫೨ನೇ ಜನವರಿ ೧ನೇ ತಾರೀಕಿನಿಂದ ೧೯೫೬ನೇ ಡಿಸೆಂಬರ್ ೩೧ನೇ ತಾರೀಖಿನ ವರೆಗೂ (ಐದು ವರ್ಷಗಳು ಪೂರ್ತಾ) ಗುತ್ತಿಗೆಗೆ ಕೊಡುವ ಸಲುವಾಗಿ ಇದೇ ತಿಂಗಳು ೨೯ನೇ ತಾರೀಖು ಗುರುವಾರ ಮಧ್ಯಾಹ್ನ ನಾಲ್ಕು ಘಂಟೆಯೊಳಗೆ ಟೆಂಡರ್ ಅರ್ಜಿ ಜೊತೆಯಲ್ಲಿ ಟೆಂಡರ್ ಡಿಪಾಜಿಟ್‌ಗಾಗಿ ಒಂದು ಸಾವಿರ ರೂಪಾಯಿಗಳನ್ನು ಮೈಸೂರು ಸಿಟಿ ಮುನಿಸಿಪಲ್ ಖಜಾನೆಯಲ್ಲಿ ಜಮಾ ಮಾಡಿ ಅದರ ಚಲನನ್ನು ಟೆಂಡರು ಅರ್ಜಿಯೊಂದಿಗೆ ಲಗತ್ತು ಮಾಡಿ ಮುನಿಸಿಪಲ್ ಕಮಿಷನರ್‌ರವರಿಗೆ ತಮ್ಮ ಟೆಂಡರ್ ಅರ್ಜಿಗಳನ್ನು ಸೀಲು ಮಾಡಿದ ಕವರಿನಲ್ಲಿ ಕೊಡಬಹುದು.

ನಿಬಂಧನೆಗಳು ಮತ್ತು ಇನ್ನೂ ಹೆಚ್ಚಿನ ವಿವರಗಳಿಗೆ ಮುನಿಸಿಪಲ್ ಆಫೀಸಿನಲ್ಲಾಗಲಿ ಅಥವಾ ಮುನಿಸಿಪಲ್ ಫಾರಂನಲ್ಲಾಗಲಿ ತಿಳಿಯಬಹುದು.

ಎಂ. ಎಚ್. ಸ್ವಾಮಿನಾಥನ್,
ಮುನಿಸಿಪಲ್ ಕಮಿಷನರ್,
ಮೈಸೂರು ಸಿಟಿ ಮುನಿಸಿಪಾಲಿಟಿ, ಮೈಸೂರು.

ಗ್ರಾಂಡ್ ಕ್ರೇಪ್ ಸಿಲ್ಕ್, ಸೀರೆಗಳು-ಧರ್ಮಾವರಂ-ಆರ್ನಿ ಪೂನಾ, ನಾಗಪುರ್ ಸೀರೆಗಳಿಗೆ **M. V. ಭೋಜಯ್ಯ ಶೆಟ್ಟಿ** ಬಿ. ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಶೀರ್ಷಿಕೆ ನಂ 792 WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೫] ಶನಿವಾರ ೧೭-೧೧-೫೧ [ಸಂಚಿಕೆ ೧೭

ಹೃದಯ ವ್ಯಾಧಿಗಾಗಿ ಸ್ಟಾಲಿನ್ನರಿಗೆ ಶಸ್ತ್ರಚಿಕಿತ್ಸೆ?

ಜಾತ್ಯತೀತ ರಾಷ್ಟ್ರಕ್ಕೆ ಸಮಾಜವಾದಿಗಳ ಬೆಂಬಲ

ಕೋಮುವಾರು ಪಕ್ಷಗಳಿಗೆ ಬೆಂಬಲ ಕೊಡದೆಂದು ಜೈ ಪ್ರಕಾಶರು

ಮೈಸೂರು ೧೪

...ಗ್ರೆಸ್ಸಿಗೆ ಓಟು ಕೊಟ್ಟರೆ ನೆಹರೂ ...ಕೊಟ್ಟಂತೆಯೇ ಎಂದು ಕಾಂಗ್ರೆ...ಸು ಪ್ರಚಾರಮಾಡಬಹುದು. ದೇಶ...ನ್ನು ಸಾವಿರ ಕಾಂಗ್ರೆಸ್ ಉಮೇ...ರೂ ನೆಹರೂಗಳಲ್ಲ ಮತ್ತು ಅನ...ರಾಷ್ಟ್ರಪಿತ ಗಾಂಧಿಜಿಯವರ ಪೆ...ಈ ಚುನಾವಣಾ ಕಾರ್ಯಕ್ಕಾಗಿ...ತ್ರಮ ಅನುಚಿತ ಕಾಂಗ್ರೆಸ್ಸಿನ ಆ...ನ್ನು ಒರುವ ಮುನ್ನ ಇದ್ದ ಸ್ಥಿತಿ...ಗ ಅದು ಇಲ್ಲ ಅದರ ಈ ನಾ...ರ್ಗಗಳ ಆಳ್ವಿಕೆಯಲ್ಲಿ ಪ್ರಜಾ ಕ್ಷೇ...ಾಧಿಸಲ್ಪಡಲಿಲ್ಲ ಕಾಂಗ್ರೆಸ್ಸಿನವ...ೇಶ ಪ್ರೇಮದಿಂದ ಸಮಾಜವಾ...ಸ್ವಾತಂತ್ರ ಹೋರಾಟ ನಡೆಸಿರು...ಷ್ಟರಿಂದ ಜನ ಸಾಮಾನ್ಯರ...ಯಾಗಲು ಸಮಾಜವಾದಿ ಪಕ್ಷ...ತ ಇದೆ ಆ ಪಕ್ಷಕ್ಕೆ ಜನರು ತ...ಗಳನ್ನು ಕೊಟ್ಟು ಅದು ಜಯ...ುತ್ತ ಮಾಡಬೇಕಾದುದು ಆಗ...ಶ್ರೀ ಜೈಪ್ರಕಾಶ್‌ನಾರಾಯ...ನ್ ಚೌಕಹಾಲ್ ಮೈದಾನ...ಸಣ ಮಾಡುತ್ತಾ ತಿಳಿಸಿದರು ...ವವರು ಅಧಿಕಾರಕ್ಕೆ ಒಂದ...ಕೈಗೊಳ್ಳುವ ಮುಖ್ಯ ಕಾ...ನ್ನ ವಿವರಿಸಿ ಶ್ರೀ ಜಯಪ್ರಕಾ...ರೆಂತಿ ತಿಳಿಸಿದರು --

...ನ್ನ ಅನ್ನ ಮತ್ತು ವಸ್ತ್ರಗಳ ಸ...ು ಉಗ್ರ ರೂಪ ತಾಳಿವೆ ಕಾಳ...ಂಚಕೋರತನ ಇವು ಹಿಡಿದು...ನ್ನವೆ ಇವುಗಳನ್ನು ನಿರ್ಮೂಲ...ನೆಹರೂರವರ ಸರ್ಕಾರವು ಅ...ವಾಗಿದೆ

...ಜವಾದಿ ಪಕ್ಷವು ಮೇಲ್ಕಂಡ...ಗಳ ನಿವಾರಣೆ ಬಗ್ಗೆ ನಿರ್ದಿಷ್ಟ...ಯನ್ನು ತಾಳಿ, ಹಲವು ಯೋ...ನ್ನು ಸಿದ್ಧಪಡಿಸಿರುತ್ತದೆ ಆ ಪ...ವಿಕಾರಕ್ಕೆ ಬಂದಲ್ಲಿ ಮೊದಲಿನ...ರ್ಗಗಳಲ್ಲಿ ಆರ್ಥಿಕ ಅಸಮಾನತೆ ನಿವಾರಿಸಲು, ಮತ್ತು ಉತ್ಪತ್ತಿ...ಹೆಚ್ಚಿಸಲು, ಜಹಗೀರುದಾರಿ, ...ದಾರಿ ಮತ್ತು ಪಾಳೆಯಗಾರ ಇವುಗಳನ್ನು ರದ್ದುಗೊಳಿಸು... ಸಾಮಾನ್ಯ ಪ್ರಜೆ, ಧನಿಕರು ಮ...ರುಗಳ ವರಮಾನ ಮತ್ತು ಆ...ಜಗಜಾಂತರ ವ್ಯತ್ಯಾಸ ತ...ಸಮಾನವು ಒಂದಕ್ಕೆ ಹತ್ತರಷ್ಟು...ರದಂತೆ ಮಾಡಲಾಗುವುದು. ...ಬ್ಬನ ಆದಾಯವೂ ತಿಂಗಳಿಗೆ ...ರೂ ಗಳಿಗಿಂತ ಕಡಿಮೆಯಿಲ್ಲದೇ ...ಂದು ಸಾವಿರಕ್ಕೆ ಮೀರದಂತೆ ಮಾಡಲಾಗುವುದು ಜಮೀನು...ವ ಭೂಮಿಯನ್ನು ಪಡಪಡಿಸಿ ...ಅದರ ಸ್ವಾಮ್ಯವನ್ನು ಬೇಸಾ...ಯಸಿಗೆ ವಹಿಸಲಾಗುವುದು ಪ್ರತಿ ...ಬೇಸಾಯಗಾರನಿಗೂ ೧೦|| ಎ...ಡಿಮೆಯಿಲ್ಲದಂತೆ ೩೦ ಎಕರೆಗೆ ...ಂತೆ ಭೂಮಿಯ ಹಂಚಿಕೆ ಮಾ...ಗಾಲಕ ಧಾನ್ಯದ ಉತ್ಪತ್ತಿಯ...ಚ್ಚಿಸಲು ಉತ್ತೇಜನ ಕೊಡಲಾ...ುಖ ಕೈಗಾರಿಕೋದ್ಯಮಗಳು,

ನೇಪಾಳದ ಮಂತ್ರಿ ಮಂಡಲದಲ್ಲಿ ರಾಣಾಗಳಿಲ್ಲ

ನೇಪಾಳದ ಕಾಂಗ್ರೆಸ್ ಅಧ್ಯಕ್ಷ ಎಂ. ಪಿ. ಕೊಯಿರಾಲಾರವರ ನೂತನ ಮಂತ್ರಿ ಮಂಡಲವು ಮೊನ್ನೆ ದಿನ ಪ್ರಮಾಣ ವಚನವನ್ನು ತೆಗೆದುಕೊಂಡು ಅಧಿಕಾರವನ್ನು ವಹಿಸಿಕೊಂಡಿತು ಪದಗಳ ಆರು ಮಂದಿ ಕಾಂಗ್ರೆಸ್ ಪ ನವರೂ, ನಾಲ್ಕು ಮಂದಿ ಸ್ವತಂತ್ರರೂ ಇರುವರು ರಾಣಾ ಗುಂಪಿನವರಾರನ್ನೂ ಚುನಾಯಿಸಿಲ್ಲ

ಪ್ಯಾಂಕು ಮತ್ತು ವಿಮಾ ಸಂಸ್ಥೆಗಳ ಸಮಾಜವಾದಿ ಪಕ್ಷ ರಾಷ್ಟ್ರೀಕರಿಸುವ ಮ... ಒಳ ದೇಶದ ನೀತಿಯಂತೆ, ಪಕ್ಷವು ತನ್ನ ವಿದೇಶಾಂಗ ನೀತಿಯನ್ನು ಹೊಂದಿರುತ್ತವೆ. ರಷ್ಯಾ, ಅಮೇರಿಕಾ ಈ ಎರಡು ಪ್ರಬಲ ರಾಷ್ಟ್ರಗಳ ಪ್ರಾಬಲ್ಯಕ್ಕೆ ಸಿಕ್ಕದೆ ಇಂಡೋನೇಷ್ಯದಿಂದ ಈಜಿಪ್ಟ್ ವರೆಗಿರುವ ರಾಷ್ಟ್ರಗಳ ಬ್ಲಾಕನ್ನು ಭಾರತವು ರಚಿಸಬೇಕೆಂಬುದೇ ನಮ್ಮ ಆಸೆಯು ನೆಹರೂರವರ ವಿದೇಶಾಂಗ ನೀತಿಗೆ ನನ್ನ ಒಪ್ಪಿಗೆ ಇದ್ದರೂ ಅದು ತಟಸ್ಥವಾದ ನೀತಿಯೆಂದು ಹೇಳಬೇಕಾಗಿದೆ

ಎವರೆ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಹಿಂದೂ ಮಹಾ ಸಭೆ, ಭಾರತೀಯ ಜನ ಸಂಘ ಮುಸ್ಲಿಂ ಲೀಗು, ಮೈಸೂರಿನ ಮುಸ್ಲಿಂ ಕನ್ವೆಂಷನ್ ಇಂತಹ ಮುಂತಾದ ಕೋಮುವಾರು ಸಂಸ್ಥೆಗಳು ಬೆಳೆದರೆ ದೇಶಕ್ಕೆ ಒಳಿತಲ್ಲ. ಕೋಮುವಾರು ವ್ಯಾಜ್ಯಗಳಿಂದ ಹಾನಿಯು ಬಹಳವಾಗಿ ತಟ್ಟುವುದರಿಂದ ಅದನ್ನು ಪ್ರೋತ್ಸಾಹಿಸುವುದು ಸರಿಯಲ್ಲ ಅಲ್ಪ ಸಂಖ್ಯಾತ ಜನರು ಪ್ರತ್ಯೇಕ ಭಾವನೆ ಪಡುವುದು ಅವರಿಗೆ ಕ್ಷೇಮ.

ಕಾಂಗ್ರೆಸ್ಸನ್ನು ಅಧಿಕಾರದಿಂದ ಓಡಿಸುವಾಗ ಮುಂದೆ ಯಾರ ಕೈಗೆ ಅಧಿಕಾರ ಸೂತ್ರ ಬರುವುದೆಂಬುದನ್ನು ಜನತೆಯು ಗಮನದಲ್ಲಿಡಬೇಕು. ಜಾತ್ಯತೀತ ರಾಷ್ಟ್ರ ತತ್ವವು ನಮ್ಮ ದೇಶಕ್ಕೆ ಒಳ್ಳೆಯದು ಅದನ್ನೇ ಸಮಾಜವಾದಿ ಪಕ್ಷವೂ ಒಪ್ಪುತ್ತದೆ

ಅವರ ಭಾಷಣ ಮುಗಿದ ನಂತರ ಜನರು ಪ್ರಶ್ನೆ ಮಾಡಲಾಗಿ ನಾನ್ ಗೆಜೆಟೆಡ್ ನೌಕರರ ಬಗ್ಗೆ ಜೈ ಪ್ರಕಾಶರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು

ಮಾಸ್ಕೋವಿಗೆ ಚರ್ಚಿಲ್ಲರ ಭೇಟಿ

ಒರುವ ಜನವರಿ ತಿಂಗಳ ಆದಿಯಲ್ಲಿ ಬ್ರಿಟನ್ನಿನ ಪ್ರಧಾನಿ ಚರ್ಚಿಲರು ವಾಷಿಂಗ್ಟನ್ನಿಗೆ ಭೇಟಿ ಕೊಟ್ಟು ಹಿಂದಿರುಗಿದ ನಂತರ ಮಾಸ್ಕೋವಿಗೂ ತೆರಳಿ ಸ್ಟಾಲಿನ್ನರೊಡನೆ ಮಾತುಕತೆ ನಡೆಸುವರೆಂದು ಲಂಡನ್ನಿನಲ್ಲಿ ಹೇಳಲಾಗುತ್ತಿದೆ ಪ್ಯಾರಿಸ್ಸಿಗೆ ತೆರಳಿದ್ದ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಆಂತೋನಿ ಈಡನ್ನರು ರಷ್ಯದ ವಿದೇಶಾಂಗ ಮಂತ್ರಿ ವಿಷಿನ್ಸ್ಕಿಯವರೊಡನೆ ನೇರ್ಪಡುವ ಭೇಟಿಯನ್ನು ಕುರಿತು ಪ್ರಸ್ತಾಪಿಸಿದರೆಂದು ಗೊತ್ತಾಗಿದೆ ಸ್ಟಾಲಿನ್ನರು ಹೃದಯವ್ಯಾಧಿಯಿಂದ ನರಳುತ್ತಿರುವರೆಂದೂ, ಈ ಕಾರಣದಿಂದ ಚರ್ಚಿಲ್ ಮತ್ತು ಸ್ಟಾಲಿನ್ನರ ಭೇಟಿಯು ಸ್ವಲ್ಪ ತಡವಾಗಬಹುದೆಂದೂ ಹೇಳಲಾಗಿದೆ ನಾಲ್ಕು ಜನ ವೈದ್ಯರು ಅವರನ್ನು ಪರೀಕ್ಷಿಸಿ, ಅವರಿಗೆ ಶಸ್ತ್ರ ಚಿಕಿತ್ಸೆಯಾಗಬಹುದಾದ ಪರಿಸ್ಥಿತಿ ಒದಗಲಿದೆಯೆಂದು ತಿಳಿಸಿರುತ್ತಾರೆ

ಸುಡಾನಿನಿಂದ ಬ್ರಿಟಿಷ್ ಸೈನ್ಯ ವಾಪಸಿಗೆ ಈಜಿಪ್ಟ್ ಕರೆ

ಪ್ಯಾರಿಸ್ಸಿನಲ್ಲಿ ನಡೆದ ವಿಶ್ವ ಸಂಸ್ಥೆ ಸಭೆಯಲ್ಲಿ ಮೊನ್ನೆ ಈಜಿಪ್ಟಿನ ವಿದೇಶಾಂಗ ಮಂತ್ರಿ ಸಾಲಿ ಎಲ್ ದೀ ಪಾಷಾರವರು ಮಾತನಾಡುತ್ತಾ ಸುಡಾನಿನ ಭವಿಷ್ಯದ ನಿರ್ಧಾರಕ್ಕಾಗಿ ಜನಮತ ಗಣನೆ ತೆಗೆದುಕೊಳ್ಳಲು ಅನುಕೂಲಿಸುವಂತೆ ಬ್ರಿಟನ್ನು ಅಲ್ಲಿಂದ ತನ್ನ ಸೈನ್ಯಗಳನ್ನು ಹಿಂತೆಗೆದುಕೊಂಡಲ್ಲಿ, ಈಜಿಪ್ಟಿನ ಸೈನ್ಯವನ್ನೂ ವಾಪಸು ಕರೆಸಿಕೊಳ್ಳಲು ತಾವು ಸಿದ್ಧವಾಗಿರುವುದಾಗಿ ತಿಳಿಸಿದರು ಬ್ರಿಟಿಷರು ಸೂಯೆಜ್ ಪ್ರದೇಶವನ್ನು ವಶಪಡಿಸಿಕೊಂಡು ಅದನ್ನು ಪೂರ್ಣ ವಿ.ಟಿ.ರಿ ಆಡಳಿತಕ್ಕೆ ಒಪ್ಪಿಸಿ, ಅನೇಕ ಮಂದಿ ಈಜಿಪ್ಟಿನ ಪ್ರಜೆಗಳನ್ನೂ ಸೈನಿಕರನ್ನೂ ಕೊಲೆ ಮಾಡಿರುವುದಾಗಿಯೂ ಅವರು ಆಪಾದಿಸಿದರು

○ ಸಮಾಜವಾದಿ ಪಕ್ಷದ ಪರವಾಗಿ ಶಾಸನ ಸಭೆಗೆ ಮೈಸೂರು ನಗರದ ಉತ್ತರದಿಂದ ಜ|| ಪಿಾರ್ ನೂರ್ ಹುಸೇನ್ ಮತ್ತು ದಕ್ಷಿಣದಿಂದ ಶ್ರೀ ಬಿ. ಶ್ರೀಕಂಠಪ್ಪನವರನ್ನು ಉಮೇದುವಾರರನ್ನಾಗಿ ನಿಲ್ಲಿಸಲಾಗಿದೆ.

ಈಜಿಪ್ಟ್ ಕ್ರಾಂತಿಕಾರರಿಗೂ ಬ್ರಿ॥ ಸೈನಿಕರಿಗೂ ಘರ್ಷಣೆ

ಈಜಿಪ್ಟಿನ ಸೂಯೆಜ್ ಕಾಲುವೆ ಪ್ರದೇಶದಲ್ಲಿ ನೆನ್ನೆ ದಿನ ಬ್ರಿಟಿಷ್ ಸೈನಿಕರಿಗೂ ಮತ್ತು ಈಜಿಪ್ಟಿನ ಕ್ರಾಂತಿಕಾರರಿಗೂ ಘರ್ಷಣೆ ನಡೆದು ಎರಡು ಕಂಗಡಗಳವರೂ ಬಂದೂಕಗಳನ್ನು ಪ್ರಯೋಗಿಸಿದ ಪರಿಣಾಮವಾಗಿ ಒಬ್ಬನು ಮಡಿದು, ನಾಲ್ಕು ಜನರು ಗಾಯಗೊಂಡರೆಂದು ವರದಿಯಾಗಿದೆ. ಬ್ರಿಟಿಷ್ ಪಡೆಗುಗಳು ಟ್ಯಾಂಕುಗಳನ್ನೂ ಮತ್ತು ಬಂದೂಕಗಳನ್ನು ಹೊತ್ತು ನೆನ್ನೆ ಸೂಯೆಜ್ ಕಾಲುವೆಯ ಪೋರ್ಟ್‌ಸೆಡ್ ಬಂದರಿನ ಕಡೆಗೆ ಹೊರಟವೆಂದೂ, ತೀವ್ರ ಪರಿಸ್ಥಿತಿಯೊದಗಿದಾಗ ಬ್ರಿಟಿಷ್ ಸೈನಿಕರು ಅವನ್ನು ಬಳಸಲಿರುವರೆಂದೂ ಹೇಳಲಾಗಿದೆ.

ಟಾಂಡನ್‌ರವರ ಸ್ಪರ್ಧೆ ಇಲ್ಲ

ಮಾಜಿ ಕಾಂಗ್ರೆಸ್ ಅಧ್ಯಕ್ಷರಾದ ಪುರುಷೋತ್ತಮದಾಸ್ ಟಾಂಡನ್‌ರವರು ಚುನಾವಣೆಯಲ್ಲಿ ಭಾಗವಹಿಸುವುದಿಲ್ಲ.

ಶಾಸನ ಸಭೆ ಮುಂದಕ್ಕೆ

ಸಂಸ್ಥಾನದ ಶಾಸನ ಸಭೆಯನ್ನು ಮುಂದುವರಿಸುವ ಬಗ್ಗೆ ಶ್ರೀಮನ್ ಮಹಾರಾಜರು ಆಜ್ಞೆ ಮಾಡಿರುತ್ತಾರೆ.

ಚಾಮುಂಡಿಪುರದವರ ಕುಶಲ ವಿದ್ಯಾ ಶಿಕ್ಷಣದ ಮುಕ್ತಾಯ ಸಮಾರಂಭ

ನಗರದ ಚಾಮುಂಡಿಪುರದವರ ಕುಶಲ ವಿದ್ಯಾ ಶಿಕ್ಷಣದ ಮುಕ್ತಾಯ ಸಮಾರಂಭವು ಆ ದಿನ ಬೆಳಗ್ಗೆ ಪೌರ ಸಭೆಯ ಭವನದಲ್ಲಿ ನೆರವೇರಿತು ಪೌರಸಭಾಧ್ಯಕ್ಷರಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ಅಗ್ರಾಸನ ವಹಿಸಿದ್ದರು ಶ್ರೀ ನಂಜುಂಡಸ್ವಾಮಿಯವರು ವರದಿಯನ್ನು ಓದಿದ ನಂತರ ಶಿಕ್ಷಣ ಪಡೆದವರಿಗೆ ಪ್ರಶಸ್ತಿ ಪತ್ರಗಳನ್ನು ಅಧ್ಯಕ್ಷರು ವಿನಿಯೋಗ ಮಾಡಿದರು. ಚೀಫ್ ಸ್ಕೌಟ್ ಕಮಿಷನರರಾದ ಶ್ರೀ ಪಿ. ಶಿವಶಂಕರ್‌ರವರು ಭಾಷಣ ಮಾಡಿ, ಸಂಸ್ಥಾನದ ಸ್ಕೌಟುಗಳ ಜಂಬೂರಿಯನ್ನು ಶಿವಮೊಗ್ಗದಲ್ಲಿ ನಡೆಸಬೇಕೆಂದಿರುವುದಾಗಿ ತಿಳಿಸಿದರು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಮಹಾ ಚುನಾವಣೆಯ ಸಂಬಂಧದಲ್ಲಿ ಕಾರ್ಯಕ್ರಮಗಳನ್ನು ಗೊತ್ತುಪಡಿಸುವುದಕ್ಕಾಗಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ...ನೇ ತಾ|| ಬುಧವಾರ ಸಾಯಂಕಾಲ ೬|| ಗಂಟೆಗೆ ನಗರ ಕಾಂಗ್ರೆಸ್ ಕಛೇರಿಯಲ್ಲಿ ನಡೆಯಲೇರ್ಪಡಿಸಿದೆ. ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ತಪ್ಪದೆ ಬರಬೇಕೆಂದು ಈ ಮೂಲಕ ಕೋರಲಾಗಿದೆ. ಇದೇ ...ನೇ ತಾರೀಕು ಬೆಳಗ್ಗೆ ೧೧ ಘಂಟೆಗೆ ಮೈಸೂರು ನಗರ ಮತ್ತು ಜಿಲ್ಲೆಯ ಉಮೇದುವಾರರ ಅರ್ಜಿಗಳ ಪರಿಶೀಲನೆ ಬಗ್ಗೆ ಸಭೆಯು ಸೇರಲಿದೆ ಕಾಂಗ್ರೆಸ್ ಪಕ್ಷದ ಎಲ್ಲ ಉಮೇದುವಾರರೂ ಸದರಿ ಸಭೆಯಲ್ಲಿ ಭಾಗವಹಿಸಬೇಕೆಂದೂ ಕೋರಲಾಗಿದೆ.

○ ನೇಪಾಳದ ಸಂಸ್ಥಾನಕ್ಕೆ ಕೆಂಪು ಮಿಶ್ರಿತ ಕೇಸರಿ ಬಣ್ಣವುಳ್ಳ ಮತ್ತು ಮಧ್ಯದಲಿಯ ಸೂರ್ಯ ಚಂದ್ರ ಬಿಂಬಗಳಿಂದ ಕೂಡಿರತಕ್ಕ ರಾಷ್ಟ್ರ ಧ್ವಜವಿರತಕ್ಕದೆಂದು ಅಲ್ಲಿನ ನೂತನ ಮಂತ್ರಿ ಮಂಡಲವು ನಿರ್ಧರಿಸಿರುತ್ತದೆ.

ವಾರ ಭವಿಷ್ಯ

ತಾ|| ೧೮-೧೧-೫೧ರಿಂದ ೨೪-೧೧-೫೧ರ ವರೆಗೆ

ಮೇಷ – ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ ಪ್ರವಾಸ ಯೋಗ ವಿವಾಹದ ನಿಷ್ಕರ್ಷೆ ತಾ|| ೧೯, ೨೦ ಪರೋಪಕಾರ, ಖರ್ಚು

ವೃಷಭ – ಆರೋಗ್ಯ ನೆಟ್ಟಗೆ ಪರೀಕ್ಷೆಯಲ್ಲಿ ತೇರ್ಗಡೆ ಜೀವದ ಗೆಳೆಯರ ಭೇಟಿ ಪ್ರವಾಸ ಸಂಭವ ತಾ|| ೨೧, ೨೨, ಮನರಂಜನೆ ಹರ್ಷ

ಮಿಥುನ – ಪ್ರಥಮ ವಾರ ಮಕ್ಕಳಿಗೆ ಅನಾರೋಗ್ಯ ಹಣ ವ್ಯಯ ಉದ್ಯೋಗದಲ್ಲಿ ಬೇಸರ ಅಪೇಕ್ಷಾಭಂಗ ಪ್ರವಾಸದಲ್ಲಿ ಸಂಕಟ ತಾ|| ೧೮ ೨೧ ಗೆಳೆಯರ ಸಹಾಯ, ಆರ್ಥಿಕ ಚಿಂತೆ

ಕರ್ಕ – ಸತ್ಸಹವಾಸ ಮನಸ್ಸಿಗೆ ಹರ್ಷ, ಕೌಟುಂಬಿಕ ಸ್ಥಿತಿ ಉತ್ತಮ, ಉನ್ನತಿಯ ಲಾಭ ಪತ್ನಿಯ ಸಹಕಾರ ತಾ|| ೨೨, ೨೩ ಶುಭ ವಾರ್ತೆ, ಅಲ್ಪ ಪ್ರವಾಸ

ಸಿಂಹ – ಉತ್ತಮ ವಾರ ಕಾನೂನು ಪತ್ರಗಳಿಂದ ತೊಂದರೆ ಜಯ ಖರ್ಚು ಹೆಚ್ಚು ಕೆಟ್ಟ ಪರಿಸ್ಥಿತಿ ಇರದು. ತಾ|| ೧೯ ೨೦ ಗಡಿಬಿಡಿ, ಗೊಂದಲ

ಕನ್ಯಾ – ಆರೋಗ್ಯ ನೆಟ್ಟಗಿರದು ತಲೆಗೆ ಪೆಟ್ಟು ಪತ್ನಿಗೆ ಕ್ಲೇಶ ಹಣಕಾಸಿನ ಪರಿಸ್ಥಿತಿ ಅತ್ಯುತ್ಕರ ವನ ಪ್ರವಾಸ ತಾ|| ೧೯ ೨೦ ಚಿಂತಾ ನಿವಾರಣೆ ಸತ್ಪ್ರವಾಸ

ತುಲಾ – ಆರೋಗ್ಯ ನೆಟ್ಟಗಿರದ ಕಾಲಿಗೆ ಜಖಂ ಕಣ್ಣಿನ ನೋವು, ಅಭಿಮಾನ ಪ್ರವಾಸಕ್ಕೆ ಉತ್ತಮ ತಾ|| ೨೨, ೨೩ ಮಿತ್ರ ಸಹಾಯ, ಚಿಂತಾ ನಾಶ

ವೃಶ್ಚಿಕ – ಆರೋಗ್ಯ ನೆಟ್ಟಗೆ ಮಕ್ಕಳ ಉನ್ನತಿ ಮೇಲಿನವರಿಂದ ಪ್ರಶಂಸೆ ವ್ಯಾಪಾರಾದಿಗಳಲ್ಲಿ ಲಾಭ ಪ್ರವಾಸ ಯೋಗ ತಾ|| ೧೯ ೨೦ ಯಶಸ್ಸು ಶುಭ ವಾರ್ತೆ

ಧನು – ಪರಾಕ್ರಮದ ಕಾರ್ಯ ಆರೋಗ್ಯ ನೆಟ್ಟಗೆ ಎದುರಾಳಿಗಳ ಸೋಲು ಕಷ್ಟ ಸ್ಥಿತಿ ನಿರ್ಮೂಲ ಆದಿ.ಕ ಲಾಭ ತಾ|| ೧೯ ೨೦ ಖರ್ಚು, ಶ್ರಮ

ಮಕರ – ತೊಂದರೆ ನಿವಾರಣೆ ವ್ಯಾಪಾರಾದಿಗಳಲ್ಲಿ ವಿವಂಚನೆ ಇಲ್ಲ ಮಿತ್ರ ಸಹಾಯ ಉತ್ಸಾಹ ತಾ|| ೨೧, ೨೨ ಮಹತ್ವದ ಕಾರ್ಯ, ಖರ್ಚು

ಕುಂಭ – ಉತ್ಸಾಹವಿರದು ಆರೋಗ್ಯವೂ ಹಾಗೆಯೇ ಆರ್ಥಿಕ ಸ್ಥಿತಿ ಅಸಮರ್ಪಕ ವ್ಯಾಪಾರಾದಿಗಳಲ್ಲಿ ಬೇಸರ ತಾ|| ೧೯, ೨೦ ಅಪಘಾತ ಭಯ

ಮೀನ – ಪತ್ನಿ ಆರೋಗ್ಯ ನೆಟ್ಟಗಿರದು ಕೌಟುಂಬಿಕ ಕಲಹದ ಉಗ್ರತೆ ಪ್ರವಾಸದಲ್ಲಿ ಪಿಳ್ಳೆ ತಾ|| ೧೯, ೨೦ ಆರ್ಥಿಕ ಚಿಂತಾ ನಿವಾರಣೆ

ಪರ್ಷಿಯಕ್ಕೆ ಅಮೆರಿಕದ ಸಾಲದ ಭರವಸೆ

ಪರ್ಷಿಯಕ್ಕೆ ಅಮೆರಿಕದಿಂದ ಸಾಲವನ್ನು ಕೊಡಿಸಲು ತಾವು ಸರ್ವ ಪ್ರಯತ್ನವನ್ನು ಮಾಡುವುದಾಗಿ ಅಮೆರಿಕದ ಪ್ರೆಸಿಡೆಂಟ್ ಟ್ರೂಮನ್ನರು ತಮಗೆ ಭರವಸೆಯಿತ್ತಿರುವರೆಂದು ಪರ್ಷಿಯದ ವಿದೇಶಾಂಗ ಮಂತ್ರಿ ಮುಸ್ಸಾದೆಕ್ ಅವರು ವಾಷಿಂಗ್ಟನ್ನಲ್ಲಿ ತಿಳಿಸಿದರು

ಉಪನ್ಯಾಸ

ಸಂಸ್ಕೃತ ಮಹಿಳಾ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ವೈಸ್ ಪ್ರಿನ್ಸಿಪಾಲರು ಮೈಸೂರು ಸಮಾಜದಲ್ಲಿ ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಪಾತ್ರ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

೩೭ನೇ ವಿಧಿಗೆ ಸ್ವಾಗತ

ಭಾರತೀಯ ವಕೀಲರ ಸಂಘದ ವಿಶೇಷ ಸಭೆಯು ಇಂದು ಸೇರಿ ಸಂವಿಧಾನದ ೩೭ನೇ ವಿಧಿಯ ಪ್ರಸ್ತುತ ತಿದ್ದುಪಡಿಯನ್ನು ಸ್ವಾಗತಿಸಿದೆ

ಕಡಪಾ ಕೋಮುವಾರು ಗಲಭೆಯಲ್ಲಿ ಒಬ್ಬನ ಮರಣ

ಕಡಪಾ ಬಳಿ ರಾಯಚೋಟಿ ತಾಲ್ಲೂಕಿನ ಕೋಮಾರ ಕಲವಾ ಹಳ್ಳಿಯಲ್ಲಿ ಕಳೆದ ಸೋಮವಾರ ಕೋಮುವಾರು ವ್ಯಾಜ್ಯವುಂಟಾಗಿ ಒಬ್ಬನು ಸತ್ತು, ೮ ಜನರಿಗೆ ಗಾಯವಾಗಿರುತ್ತದೆ ಹೈದರಾಬಾದಿನ ಮಾಜಿ ರಜಾಕಾರ್ ಇನಾಯತುಲ್ಲಾ ಎಂಬುವನಿಗೂ ಪೆಟ್ಟು ಬಿದ್ದಿದೆ

ಪ್ರಶಸ್ತಿಗಳನ್ನು ಅಧಿಕಾರಿಯುತವಾಗಿ ಪ್ರಕಟಿಸ ಕೂಡದು

ವಂಶಪಾರಂಪರ್ಯವಾಗಿ ಒಂದು ಮತ್ತು ಪರಾಕ್ರಮ ಕಾರ್ಯಗಳಿಗಾಗಿ ಸೈನಿಕರಿಗೆ ಕೊಡಲ್ಪಟ್ಟ ಬಿರುದುಗಳನ್ನು ಇತರ ಪ್ರಶಸ್ತಿಗಳನ್ನು ಸರ್ಕಾರದ ಗಾಗದ ಪತ್ರಗಳಲ್ಲಿ ಪ್ರಕಟಿಸುವುದನ್ನು ನಿಲ್ಲಿಸಬೇಕೆಂದು ಭಾರತ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಮೈಸೂರು ಮಹಾರಾಜರು ಕೊಟ್ಟಿರುವ ಬಿರುದುಗಳಿಗೂ ಇದು ಅನ್ವಯಿಸುತ್ತದೆ ಈ ಬಿರುದುಗಳನ್ನು ವಾಪಸು ಕೊಡಬೇಕಾಗಿಲ್ಲ

ಇಂಜಿನ್ ಕಂಬಿ ತಪ್ಪಿತು

ಮೊನ್ನೆ ಸಂಜೆ ನಗರದ ರೈಲ್ವೆ ಸ್ಟೇಷನ್ನಿನಲ್ಲಿ ಒಂದು ಷಾಲಿಂಗ್ ಇಂಜನ್ನು ಕಂಬಿ ತಪ್ಪಿತು ಇದರ ಪರಿಣಾಮವಾಗಿ ಸಂಚಾರವು ೨೦ ನಿಮಿಷ ತಡವಾಗಿ ಹೋಯಿತು

ನಮ್ಮ ಗೆಡ್ಡೆಗಳಿಗೆ

ಪ್ರಖ್ಯಾತವಾದ ಮೈಸೂರು ಎಸ್ ಪಂಡಿತ್ ಅಂಡ್ ಸನ್ಸ್ ರವರ ಅಮೃತ ಸ್ಪೆಷಲ್ ವಾಸಾವ ಲೇಹ್ಯ ಸುಂಗಧರಾಜ ತೈಲ–ಇವುಗಳನ್ನು ಉಪಯೋಗಿಸಿರಿ

ಮೈಸೂರ ಸಿಟಿ ಮುನಿಸಿಪಲ್ ಕಮೀಷನರ್ ರವರ ಆಫೀಸು

ತಾರೀಖು ೧೬ ೧೧ ೧೯೫೧

ಟೆಂಡರ್ ನೋಟಿಫಿಕೇಷನ್

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ –

ಇದೇ ಮುನಿಸಿಪಲ್ ಸೂಯೇಜ್ ಫಾರಮ್ಮಿನ ತೆಂಗಿನ ಪಸಲನ್ನು ೧೯೫೧ ನೇ ಜನವರಿ ೧ ನೇ ತಾರೀಕಿನಿಂದ ೧೯೫೨ ನೇ ಡಿಸೆಂಬರ್ ೩೧ನೇ ತಾರೀಖಿನ ವರೆಗೂ (ಎರಡು ವರ್ಷಗಳು ಪೂರ್ತಾ) ಗುತ್ತಿಗೆ ಕೊಡುವ ಸಲುವಾಗಿ ಇದೇ ತಿಂಗಳು ೨೯ನೇ ತಾರೀಖು ಗುರುವಾರ ಮಧ್ಯಾಹ್ನ ನಾಲ್ಕು ಘಂಟೆಯೊಳಗೆ ಟೆಂಡರ್ ಅರ್ಜಿ ಜೊತೆಯಲ್ಲಿ ಟೆಂಡರ್ ಡಿಪಾಜಿಟ್ಟಿಗಾಗಿ ಒಂದು ಸಾವಿರ ರೂಪಾಯಿಗಳನ್ನು ಮೈಸೂರು ಸಿಟಿ ಮುನಿಸಿಪಲ್ ಖಜಾನೆಯಲ್ಲಿ ಜಮಾ ಮಾಡಿ ಅದರ ಚಲನನ್ನು ಟೆಂಡರು ಅರ್ಜಿಯೊಂದಿಗೆ ಲಗತ್ತು ಮಾಡಿ ಮುನಿಸಿಪಲ್ ಕಮೀಷನರ್ ರವರಿಗೆ ತಮ್ಮ ಟೆಂಡರ್ ಅರ್ಜಿಗಳನ್ನು ಸೀಲು ಮಾಡಿದ ಕವರಿನಲ್ಲಿ ಕೊಡಬಹುದು

ನಿಬಂಧನೆಗಳು ಮತ್ತು ಇನ್ನು ಹೆಚ್ಚಿನ ವಿವರಗಳಿಗೆ ಮುನಿಸಿಪಲ್ ಆಫೀಸಿನಲ್ಲಾಗಲಿ ಅಥವಾ ಮುನಿಸಿಪಲ್ ಪಾರಂನಲ್ಲಾಗಲಿ ತಿಳಿಯಬಹುದು

ಎಂ. ಎಚ್. ಸ್ವಾಮಿನಾಥನ್,
ಮುನಿಸಿಪಲ್ ಕಮೀಷನರ್
ಮೈಸೂರು ಸಿಟಿ ಮುನಿಸಿಪಾಲಿಟಿ, ಮೈಸೂರು

ಮೈಸೂರು ಜಿಲ್ಲಾ ಸಹಕಾರ ಸಮ್ಮೇಳನ

ನಂಜನಗೂಡು

ಈ ತಾಲ್ಲೂಕಿನ ಸಹಕಾರಿಗಳ ಸಭೆಯು ಮೊನ್ನೆ ಇಲ್ಲಿನ ಸಬ್ ಡಿವಿಜನಲ್ ಆಫೀಸರರವರ ಅಧ್ಯಕ್ಷತೆಯಲ್ಲಿ ಸೇರಿ ಮೈಸೂರು ಜಿಲ್ಲೆಯ ನಾಲ್ಕನೇ ಸಹಕಾರ ಸಮ್ಮೇಳನವನ್ನು ಬರುವ ತಿಂಗಳು ನೇ ತಾ|| ಇಲ್ಲಿ ನಡೆಸಲು ತೀರ್ಮಾನವಾಯಿತು ಅದಕ್ಕಾಗಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು ಸಮಿತಿಯ ಅಧ್ಯಕ್ಷರಾಗಿ ಸಬ್ ಡಿವಿಜನ್ ಅಧಿಕಾರಿಗಳೂ, ಉಪಾಧ್ಯಕ್ಷರಾಗಿ ಅಮಲ್ದಾರರೂ, ಕಾರ್ಯದರ್ಶಿಗಳಾಗಿ ಶ್ರೀಗಳು ಜಿ ನಂಜುಂಡಪ್ಪ ಮತ್ತು ಗೋವಿಂದರಾಜರವರೂ ಆರಿಸಲ್ಪಟ್ಟರು ಇದರ ಚಂದಾ ಕೊಡುವವರನ್ನು ಸ್ವಾಗತ ಸಮಿತಿಗೆ ಸೇರಿಸಿಕೊಳ್ಳಲು ತೀರ್ಮಾನವಾಯಿತು

ದ ಕೃ ಭಾರದ್ವಾಜರ ಷಷ್ಟ್ಯಬ್ದ ಮಹೋತ್ಸವ

ಸುಪ್ರಸಿದ್ಧ ಸಾಹಿತಿಗಳೂ ಕನ್ನಡ ನಾಟಕ ಕಾರ್ಯಗಳಲ್ಲಿ ವಿಶೇಷ ಶ್ರದ್ಧೆಯುಳ್ಳವರೂ ... ಶ್ರೀ ಡಿ. ಕೆ ಭಾರದ್ವಾಜರ ಷಷ್ಟ್ಯಬ್ದ ಮಹೋತ್ಸವವು ಬರುವ ... ತಿಂಗಳು ಏರ್ಪಾಡಾಗಿದೆ ಅದಕ್ಕಾಗಿ ಸಲುವು ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ ಬರುವ ... ಸುಮಾರು ಬೆಂಗಳೂರಿನಲ್ಲಿ ಸಭೆ ... ಈ ಬಗ್ಗೆ ಕಾರ್ಯಕ್ರಮವನ್ನು ... ಮಾಡುವುದು

ನೆಹರೂ ಜಯಂತಿ

ಕಳೆದ ಬುಧವಾರ ರಾಜಧಾನಿಯಲ್ಲಿ ಸಮಾರಂಭವು ನೆಹರೂ ಜಯಂತಿಯು ನೆರವೇರಿಸಲ್ಪಟ್ಟಿತು ಶ್ರೀ ... ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿ ದೇಶದ ಏಳಿಗೆಯು ನೆಹರೂರವರ ನೇತೃತ್ವದಲ್ಲಿ ಪ್ರಗತಿ ಹೊಂದುವದೆಂದೂ, ಸ್ತ್ರೀಯರು ದೇಶಾಭ್ಯುದಯ ಕಾರ್ಯದಲ್ಲಿ ತೊಡಗಬೇಕೆಂದೂ ಅವರು ತಮ್ಮ ಭಾಷಣದಲ್ಲಿ ತಿಳಿಸಿದರು

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರಲು, ಉಬ್ಬಸ, ಪರಿಣಾಮವಾಗಿ ಮತ್ತು ಗಲಾಯಕಿಕ್ಕೆ (TONSIL) ಬಹಳ ಒಯಾದ ಔಷಧಿ ದೊರೆಯುತ್ತದೆ ಈ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8

ಆರ್ ಎಸ್. ಪಂಡಿತರು
ರಾಮಗೋಪಾಲ ವೈದ್ಯಶಾಲೆ
ದಿವಾನರ ರಸ್ತೆ ಮೈಸೂರು

Edited, Printed and Published by A R Nagaraja, at Sadhvi Press Subbiah Road Mysore

ಗೌಳಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಬಿ ಎ ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಕುರ್ಚಿ ಬಟ್ಟೆ, ಛತ್ರಿ ಬಟ್ಟೆ, ಹಾಸಿಗೆ ಬಟ್ಟೆ, ಸೋಫಾ ಬಟ್ಟೆಗಳಿಗೂ

ಕ್ಯಾಂಪ್ ಕಾಟ್ ಕ್ಯಾನ್ವಾಸ್, ಸಿಂಗಲ್, ಡಬ್ಬಲ್ ಸೊಳ್ಳೆ ಪರದೆ, ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಶೀಟು ಇವುಗಳಿಗೂ ಚಾಮುಂಡಿ ಕಂಪೆನಿ ಬ್ಯಾಂಕ್ ರಸ್ತೆ ಮೈಸೂರು

ಕ್ರಮಸಂ 792 । ಹಿಂದೀ ಹಾಗು ಕನ್ನಡ । ೧೦ದಿನ ಚಿಲ್ಲರೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧೯-೧೧-೫೧ [ಸಂಚಿಕೆ ೯೬

ರಾಷ್ಟ್ರಾಧ್ಯಕ್ಷರ ಆಜ್ಞೆ ! ಶ್ರೇಷ್ಠ
- ವಾಪಸಾಯಿತು -

ಕಾಂಗ್ರೆಸ್ಸಿಗೆ ಸುನಂದಮ್ಮನವರ ರಾಜೀನಾಮೆ

ಸಂಸ್ಥೆಯ ಕರ್ತವ್ಯ ಲೋಪದ ಬಗ್ಗೆ ಅಧ್ಯಕ್ಷರಿಗೆ ದೂರು

ಮೈಸೂರು ೧೯

— ನಗರದ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀಮತಿ ಸುನಂದಮ್ಮನವರು ಈ ದಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ... ದೀರ್ಘವಾದ ಪತ್ರವನ್ನು ಬರೆದು ಕಾಂಗ್ರೆಸ್ಸಿಗೆ ತಮ್ಮ ರಾಜೀನಾಮೆಯನ್ನು ಕಳುಹಿಸಿರುವರು. ಅವರ ಪತ್ರದ ಸಾರಾಂಶ ಕೆಳಗೆ ಕಂಡಂತಿದೆ –

... ಪರಿಸ್ಥಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ನಾನು ಅನಿವಾರ್ಯವಾಗಿ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವಕ್ಕೆ ಈ ಮೂಲಕ ರಾಜೀನಾಮೆ ಕೊಡಬೇಕಾಗಿ ಬಂದಿರುವುದಕ್ಕಾಗಿ ವಿಷಾದಿಸುತ್ತೇನೆ. ಕೇಂದ್ರ ಚುನಾವಣಾ ಸಮಿತಿಯು ಮೈಸೂರು ನಗರದ ದಕ್ಷಿಣ ಕ್ಷೇತ್ರದಿಂದ ... ದ ಶಾಸನ ಸಭೆಗೆ ನನ್ನ ಉಮೇದುವಾರಿಕೆಯನ್ನು ಅಂಗೀಕರಿಸದಿದ್ದುದರ ... ರಾಜೀನಾಮೆಗೂ ಏನೂ ಸಂಬಂಧ ... ಶಾಸನ ಸಭೆಯಲ್ಲಿನ ಸ್ಥಾನ ಪಡೆಯಲು ನಾನು ಕಾತುರಳಾಗಿಲ್ಲ. ಸಂಸ್ಥಾನದ ಶಾಸನ ಸಭೆಗೆ ಚುನಾವಣೆ ನಡೆದಾಗ ... ದ ಕಾಂಗ್ರೆಸ್ ಅಧ್ಯಕ್ಷರ ಸಲಹೆಯಂತೆ ನಾನು ಕೂಡಲೇ ನನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡು ... ಯಿಂದ ನೀತಿಯನ್ನು ಪ್ರದರ್ಶಿಸಿದೆ. ಮತ್ತು ಈ ಅಂಶವು ತಮಗೆ ... ಗಿದೆ.

... ಸಭೆಯ ಏಕೈಕ ಗುರಿಯೆಂದರೆ ... ಸ್ಥಾನದ ಕಾಂಗ್ರೆಸ್ ಸ್ಥಾಪನೆಯಾಗಿನಿಂದಲೂ ಅದಕ್ಕಾಗಿ ಶ್ರಮಿಸಿದೆ. ಈಗ ನಾನು ರಾಜೀನಾಮೆ ... ಇರುವ ಹಲವಾರು ಕಾರಣಗಳಲ್ಲಿ ಬಹು ಮುಖ್ಯವಾದ ಎರಡನ್ನು ಮಾತ್ರ ಇಲ್ಲಿ ನಮೂದಿಸಲು ಬಯಸುತ್ತೇನೆ. ಮೊದಲನೆಯದಾಗಿ ಮುಂದಿನ ಹಿತ ಸಾಧನೆ ಬಗ್ಗೆ ಕಾಂಗ್ರೆಸ್ ಕರ್ತವ್ಯವನ್ನು ನಿರ್ವಹಿಸಲ್ಲ ... ರ್ಥವಾಗಿ ಕಾಂಗ್ರೆಸ್ಸಿಗರು ಪಂ ... ರೂರವರ ಸೂಚನೆಗಳನ್ನೂ ಅ ... ಸಿರುವರು.

... ರಡನೆಯದಾಗಿ ನನ್ನ ಬಗ್ಗೆ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷರೂ ಚುನಾವಣಾ ಸಮಿತಿಯ ಸದಸ್ಯರೂ ಶ್ರೀ ಎಸ್ ಚನ್ನಯ್ಯನವರ ... ನೂ ನನ್ನ ರಾಜೀನಾಮೆಗೆ ಕಾರಣವಾಗಿವೆ. ಸಂಸ್ಥಾನ ಶಾಸನ ಸಭೆಯ ... ಗೆ ನಾನು ಉಮೇದುವಾರಿಕೆಯನ್ನು ಸಲ್ಲಿಸಿದಾಗ ಅವರು ಬಂದು ನನ್ನ ಉಮೇದುವಾರಿಕೆ ವಾಪಸು ತೆಗೆದುಕೊಳ್ಳದಿದ್ದಲ್ಲಿ ... ವಿರುದ್ಧವಾಗಿ ಪ್ರಬಲ ಪ್ರಚಾರ ನಡೆಸಿ ನಾನು ಪೂರ್ಣ ಪರಾಜಿತಳಾಗುವಂತೆ ಮಾಡುವುದಾಗಿ ನನ್ನ ಮೈದುನ ... ಮೂಲಕವೇ ನನಗೆ ಬೆದರಿಕೆ ಕೊಟ್ಟರು ... ಕಾಂಗ್ರೆಸ್ ಕಾರ್ಯಕರ್ತರಿಗೆ ... ವಲ್ಲೂ ಪ್ರದೇಶ ಚುನಾವಣಾ ಸಮಿತಿಯ ಸದಸ್ಯರಿಗೆ ಇಂತಹ ವರ್ತನೆ ... ಕ್ಕನಲ್ಲ ಶ್ರೀ ಎಸ್ ಚನ್ನಯ್ಯನವರ ಈ ವರ್ತನೆಯಿಂದ ಕಾಂಗ್ರೆಸ್ ನ ನೈತಿಕ ಮಟ್ಟವು ಎತ್ತರ ಮುಟ್ಟಿಸುವುದೆಂಬುದು ವ್ಯಕ್ತಸಡು ... ಕಾಂಗ್ರೆಸ್ ಸಂಸ್ಥೆಯ ಕೀರ್ತಿ ಪ್ರತಿಷ್ಠೆಗೆ ಧಕ್ಕೆ ತರುವ ಇಂತಹ ವ್ಯಕ್ತಿ ... ವರ್ಜ್ಯ ಮಾಡಲು ತಾವು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಇದುವರೆಗೂ ನನಗೆ ಸಹಕಾರ ನೀಡಿದ ತಮಗೂ ಮತ್ತು ಇತರರಿಗೂ ನನ್ನ ಧನ್ಯವಾದಗಳು.

ಕುಮಾರಸ್ವಾಮಿಯವರು ಸ್ವತಂತ್ರರಾಗಿ ಸ್ಪರ್ಧಿಸುವರು

ಮೈಸೂರು ೧೯

ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳೂ ಮತ್ತು ತಾಲ್ಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಆದ ಶ್ರೀ ಎಚ್ ಕೆ ಕುಮಾರಸ್ವಾಮಿಯವರು ಕಳೆದ ಗುರುವಾರ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದರು. ತಮ ನೆನ್ನೆ ದಿನ ಅಂಗೀಕೃತವಾಯಿತು. ಅವರು ಮೈಸೂರು ತಾಲ್ಲೂಕಿನಿಂದ ಮುಂಬರುವ ಚುನಾವಣೆಗೆ ಸ್ವತಂತ್ರ ಉಮೇದುವಾರರಾಗಿ ಸ್ಪರ್ಧಿಸಲಿರುವರು.

ಮೈಸೂರು ಜಿಲ್ಲೆಯಲ್ಲಿ ಕೆ ಎಂ ಪಿ ಪಕ್ಷದ ಉಮೇದುವಾರರು

ಮೈಸೂರು ಜಿಲ್ಲೆಯಿಂದ ಪಾರ್ಲಿಮೆಂಟಿನ ಜನರಲ್ ಸ್ಥಾನಕ್ಕೆ ಕೆ. ಎಂ. ಪಿ ಪಕ್ಷದ ಪರವಾಗಿ ಶ್ರೀ ಎಂ ಎಸ್ ಗುರುಪಾದ ಸ್ವಾಮಿಯವರೂ, ರಿಸರ್ವ್ ಸ್ಥಾನಕ್ಕೆ ಶ್ರೀ ಎಸ್ ಎಂ ಸಿದ್ದಯ್ಯನವರೂ ಸ್ಪರ್ಧಿಸುವರು. ಸಂಸ್ಥಾನ ಶಾಸನ ಸಭೆಗೆ ನಗರದ ದಕ್ಷಿಣ ಕ್ಷೇತ್ರದ ಜನರಲ್ ಸ್ಥಾನಕ್ಕೆ ಶ್ರೀ ಟಿ ಸಿ ಹೊನ್ನಪ್ಪನವರೂ ರಿಸರ್ವ್ ಸ್ಥಾನಕ್ಕೆ ಶ್ರೀ ರಾಚಯ್ಯನವರೂ ಸ್ಪರ್ಧಿಸುವರು. ನಗರದ ಉತ್ತರ ಕ್ಷೇತ್ರದ ಮುಸ್ಲಿಂ ಉಮೇದುವಾರರಿಗೆ ಪಕ್ಷದವರು ಬೆಂಬಲ ಕೊಡುವರು. ಪಿರಿಯಾಪಟ್ಟಣದ ತಾಲ್ಲೂಕಿನಿಂದ ಶ್ರೀ ಎಚ್ ಎಂ ಚನ್ನಬಸಪ್ಪನವರ ವಿರುದ್ಧ ಶ್ರೀ ಪಿ ವೆಂಕಟಸುಬ್ಬಯ್ಯನವರು ಕಿಸಾನ್ ಮಜದೂರ್ ಪ್ರಜಾ ಪಕ್ಷದ ಪರವಾಗಿ ಸ್ಪರ್ಧಿಸುವರು.

ಒಂದೇ ದಿನ ೧೪ ಅಂಗುಲ ಮಳೆ

ಸೌರಾಷ್ಟ್ರದ ಪ್ರಸಿದ್ಧ ಹಿಂದೂ ಯಾತ್ರಾ ಸ್ಥಳವಾದ ದ್ವಾರಕಾದಲ್ಲಿ ಮೊನ್ನೆ ದಿನ ಬೆಳಗ್ಗೆ ಆರಂಭವಾದ ಮಳೆ ಇನ್ನೂ ನಿಂತಿಲ್ಲವೆಂದೂ, ನೆನ್ನೆ ಬೆಳಗ್ಗೆ ೮ ಘಂಟೆಯವರೆಗೆ ೧೪ ಅಂಗುಲ ಮಳೆಯಾಗಿದ್ದಿತೆಂದೂ ವರದಿಯಾಗಿದೆ.

ರಾಷ್ಟ್ರಾಧ್ಯಕ್ಷರ ನಿರೂಪ ವಾಪಸು

ಶ್ರೀ ಎಲ್ ಎಸ್ ರಾಜು ಮತ್ತಿತರರ ಮೇಲಿನ ಮೊಕದ್ದಮೆಯನ್ನು ಹೊರಗಿನ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ರಾಜ್ಯಾಂಗದ ೩೭೭ನೇ ವಿಧಿಯ ಮೇರೆಗೆ ರಾಷ್ಟ್ರಾಧ್ಯಕ್ಷರು ಮೈಸೂರು ಸರ್ಕಾರಕ್ಕೆ ಕೊಟ್ಟಿದ್ದ ನಿರೂಪವನ್ನು ವಾಪಸು ತೆಗೆದುಕೊಂಡಿರುವುದಾಗಿ ಕೇಂದ್ರ ಸರ್ಕಾರದವರು ಸಂಸ್ಥಾನ ಸರ್ಕಾರಕ್ಕೆ ತಂತಿ ಮೂಲಕ ನೆನ್ನೆ ತಿಳಿಸಿದ್ದಾರೆ. ಈ ಮೊಕದ್ದಮೆಯ ವಿಚಾರಣೆಗೆ ಸಂಸ್ಥಾನದ ಹೊರಗಿನಿಂದ ನ್ಯಾಯಾಧೀಶರನ್ನು ಕರೆಸಲು ಮೈಸೂರು ಸರ್ಕಾರದವರು ಒಪ್ಪಿರುವುದರಿಂದ ನಿರೂಪವನ್ನು ವಾಪಸು ತೆಗೆದುಕೊಳ್ಳಲಾಗಿದೆ.

ಮದ್ರಾಸು ಹಳ್ಳಿಯವರಿಂದ ನೀರಾವರಿ ಇಲಾಖೆ ಕೆಲಸ

ನೀರಾವರಿ ಇಲಾಖೆಯ ಯೋಜನೆಗಳನ್ನು ಜಾರಿಗೆ ತರುವಾಗ ಸ್ಥಳದ ಹಳ್ಳಿ ಜನರನ್ನು ನೇಮಿಸಿಕೊಳ್ಳಬೇಕೆಂಬ ಯೋಜನೆಯನ್ನು ಮದ್ರಾಸು ಸರ್ಕಾರದ ಯೋಜನಾ ಸಮಿತಿಯವರು ಮಂಜೂರು ಮಾಡಿರುತ್ತಾರೆ. ಇದಕ್ಕಾಗಿ ಸಹಕಾರ ಸಂಘಗಳನ್ನು ವ್ಯವಸ್ಥೆ ಮಾಡಲಾಗುವುದೆಂದು ತಿಳಿದುಬಂದಿದೆ. ಈ ರೀತಿಯ ಯೋಜನೆಯಿಂದ ಶೇ|| ೨೫ ರಷ್ಟು ವೆಚ್ಚವು ಕಡಿಮೆಯಾಗುವುದೆಂದು ಭಾವಿಸಲಾಗಿದೆ.

ಜಾಲಹಳ್ಳಿ ವಿಮಾನ ಶಿಕ್ಷಣ ಕಾಲೇಜಿಗೆ ಬ್ರಿಟನ್ನಿನ ಪ್ರಶಸ್ತಿ

ಇಂಗ್ಲೆಂಡಿನ ವಿಮಾನ ಸರ್ವಿಸ್ ಶಿಕ್ಷಣ ಸಂಸ್ಥೆಯವರು ಬೆಂಗಳೂರಿನ ಜಾಲಹಳ್ಳಿ ವಿಮಾನ ಶಿಕ್ಷಣ ಶಾಲೆಗೆ ಅಪ್ಪಟ ಬೆಳ್ಳಿಯ ಮೇಲೆ ಬೆಳ್ಳಿಯಲ್ಲಿ ಕೆತ್ತಿರುವ ಭಾರತ ವಿಮಾನ ಶಾಖೆಯ ಲಾಂಛನವಾದ ಹಿಮಾಲಯ ಪರ್ವತದ ಹದ್ದಿನ ಆಕೃತಿಯ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ.

ಪರೀಕ್ಷಾ ಫಲಿತಾಂಶ

ಮೈಸೂರು ೧೯

ಕಳೆದ ಸೆಪ್ಟೆಂಬರಿನಲ್ಲಿ ನಡೆದ ವಿಶ್ವವಿದ್ಯಾಲಯದ ಪರೀಕ್ಷಾ ಫಲಿತಾಂಶಗಳು ಇದೇ ೨೧ ನೇ ತಾರೀಕು ಬೆಳಗ್ಗೆ ೯ ಘಂಟೆಗೆ ಹೊರಬೀಳುವುವು.

ಸೂಯೆಜಿನಲ್ಲಿ ಬ್ರಿಟಿಷ್ ಪ್ರಜೆಯನ್ನು ಕಂಡ ಕಡೆ ಕೊಲ್ಲಲು ಆಜ್ಞೆ

ಈಜಿಪ್ಟಿನ ಸೂಯೆಜ್ ಕಾಲುವೆಯ ಪ್ರದೇಶದಲ್ಲಿ ಕಾಣಿಸಿಕೊಳ್ಳುವ ಮತ್ತು ಅಲ್ಲಿ ಈಜಿಪ್ಟಿನ ಪ್ರಜೆ ಅಥವಾ ಸಿಪಾಯಿಯನ್ನು ಎದುರಿಸುವ ಯಾವ ಬ್ರಿಟಿಷ್ ಪ್ರಜೆಯನ್ನಾದರೂ ಕಂಡಕಡೆಯಲ್ಲೇ ಬಂದೂಕದಿಂದ ಹೊಡೆದು ಸಾಯಿಸತಕ್ಕದ್ದೆಂದು ಈಜಿಪ್ಟ್ ಸರ್ಕಾರದವರು ಮೇಲ್ಕಂಡ ಪ್ರದೇಶದಲ್ಲಿರುವ ತಮ್ಮ ಪೋಲೀಸರಿಗೆ ಆಜ್ಞಾಪಿಸಿರುವರೆಂದು ಗೊತ್ತಾಗಿದೆ.

ಸುಡಾನ್ ಮತಗಣನೆಗೆ ಬ್ರಿಟಿಷರ ಸಮ್ಮತಿ

ಸುಡಾನಿನಲ್ಲಿ ಜನಮತ ಗಣನೆ ತೆಗೆದುಕೊಳ್ಳುವ ಬಗ್ಗೆ ಈಜಿಪ್ಟ್ ಕೃಮವಾದ ಯಾವ ಸಲಹೆಯನ್ನೂ ನೀಡಿಲ್ಲವೆಂದೂ ಅಂತಹ ಸಲಹೆ ಬಂದಲ್ಲಿ ಅದನ್ನು ಪರಿಶೀಲಿಸಲಾಗುವುದೆಂದೂ ಬ್ರಿಟನ್ನಿನ ಅಧಿಕಾರೀ ವರ್ತುಲಗಳಲ್ಲಿ ಹೇಳಲಾಗುತ್ತಿದೆ. ಆದರೆ ಸುಡಾನು ಈಗಾಗಲೇ ಈಜಿಪ್ಟಿನ ಎಲ್ಲೆಯೊಳಗೆ ಸೇರಿರುವುದೆಂದು ಈಜಿಪ್ಟ್ ಸಾರುತ್ತಿರುವುದೆಂದೂ, ಜನಮತಗಣನೆ ಬಗ್ಗೆ ನಿರ್ದಿಷ್ಟವಾದ ಯಾವ ತೀರ್ಮಾನವನ್ನೂ ತಮ ಕೈಗೊಂಡಿಲ್ಲವೆಂದೂ ಆಪಾದಿಸಲಾಗಿದೆ.

ಸಾದಿ ಅರೇಬಿಯದ ಬ್ರಿ|| ವೈಸ್ ಕಾನ್ಸಲ್ಲರ ಕೊಲೆ

ಸಾದಿ ಅರೇಬಿಯದ ಜೆಡ್ಡಾ ಎಂಬಲ್ಲಿದ್ದ ಬ್ರಿಟಿಷ್ ವೈಸ್ ಕಾನ್ಸಲ್ ಸಿರಿಲ್ ಔಸ್ಮನ್ ಎಂಬುವರನ್ನು ಕಳೆದ ಶುಕ್ರವಾರ ಅವರ ಭವನದಲ್ಲಿ ಯಾರೋ ಕೊಲೆ ಮಾಡಿದುದಾಗಿ ವರದಿಯಾಗಿದೆ.

ಪರ್ಷಿಯದ ಹೊರಗೆ ಮತ್ತೊಂದು ಬ್ರಿ|| ಎಣ್ಣೆಗಣಿ

ಪರ್ಷಿಯದ ಹೊರ ಭಾಗದಲ್ಲಿರುವ ಕುವಾಯಿತ್ ನಗರದ ತೈಲ ಪ್ರದೇಶದಲ್ಲಿ ಅಮೆರಿಕದವರು ಸ್ಥಾಪಿಸಿರುವ ಎಣ್ಣೆ ಶುದ್ಧಿ ಕಾರ್ಖಾನೆ ಕೇಂದ್ರದಲ್ಲಿ ಬ್ರಿಟಿಷರೂ ಸಮಾನವಾದ ಪಾಲುದಾರಿಕೆಯನ್ನು ಪಡೆದಿರುವುದರಿಂದ ಈಗ ಬ್ರಿಟಿಷರು ತಮಗೆ ಬೇಕಾಗುವಷ್ಟು ಎಣ್ಣೆಯನ್ನು ತಯಾರಿಸಲು ಆ ಕ್ಷೇತ್ರದಲ್ಲಿ ಉತ್ಪತ್ತಿ ಹೆಚ್ಚಿಸುವ ಆಲೋಚನೆಯಲ್ಲಿರುತ್ತಾರೆಂದು ಗೊತ್ತಾಗಿದೆ.

ರಂಗೂನಿನ ಬಳಿ ಪ್ರಯಾಣಿಕರ ದೋಣಿ ಮುಳುಗಿತು

ರಂಗೂನಿಗೆ ಪೂರ್ವ ದಿಕ್ಕಿನಲ್ಲಿರುವ ಟೆನಾಸರಿಂ ತೀರದ ಬಳಿ ಒಂದು ದೋಣಿಯಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದ ೧೧೦ ಜನರು, ಹತ್ತಿರದ ತೀರ ಪ್ರದೇಶದಲ್ಲಿ ದಂಗೆಕೋರರು ಗಲಭೆ ನಡೆಸುತ್ತಿರುವರೆಂಬ ಸುದ್ದಿ ಕೇಳಿ, ಗಾಬರಿಯಿಂದ ಎಲ್ಲರೂ ದೋಣಿಯ ಒಂದು ಪಾರ್ಶ್ವಕ್ಕೆ ಬರಲಾಗಿ ಅದು ತಲೆಕೆಳಗಾದುದರಿಂದ ಅವರು ನೀರಿಗೆ ಬಿದ್ದು ೯೦ ಮಂದಿ ಮಾತ್ರ ಈಜಿಕೊಂಡು ದಡ ಸೇರಿದರೆಂದೂ, ಉಳಿದವರು ಪತ್ತೆಯಿಲ್ಲವೆಂದೂ ವರದಿಯಾಗಿದೆ.

ಅಗ್ನಿ ಕುಂಡದಲ್ಲಿ ಬಿದ್ದು ಕಾಳಿ ಭಕ್ತನ ಆತ್ಮಬಲಿ

ಜಬ್ಬಲ್‌ಪುರದ ಕಾಳಿಜಾ ದೇವತೆಯ ಭಕ್ತನೊಬ್ಬನು ತನ್ನ ಭಕ್ತಿಯನ್ನು ಪ್ರದರ್ಶಿಸಲು ಅಗ್ನಿ ಕುಂಡಕ್ಕೆ ಹಾರಿದ ಪ್ರಸಂಗವು ವರದಿಯಾಗಿದೆ ಹಳ್ಳಿಯ ನಿವಾಸಿಯಾದ ಆತನು ತನ್ನ ಮನೆಯ ಮುಂದೆ ಕುಂಡವನ್ನು ಏರ್ಪಡಿಸಿ ಜೈ ಮಹಾಕಾಳಿಯೆಂದು ಕೂಗುತ್ತಾ ಅದರೊಳಗೆ ಹಾರಿ ದೇಹತ್ಯಾಗ ಮಾಡಿದನೆಂದು ಹೇಳಲಾಗಿದೆ

ಭಾರತದಲ್ಲಿ ಕಾಮನ್‌ವೆಲ್ತ್ ವಿಶ್ವ ವಿದ್ಯಾಲಯಗಳ ಸಮ್ಮೇಳನ

ಭಾರತದಲ್ಲಿ ಸಧ್ಯದಲ್ಲೇ ಕಾಮನ್‌ವೆಲ್ತ್ ರಾಜ್ಯಗಳ ವಿಶ್ವವಿದ್ಯಾಲಯಗಳ ಸಮ್ಮೇಳನವು ಮದರಾಸು ವಿಶ್ವವಿದ್ಯಾಲಯಗಳ ವೈಸ್ ಚಾನ್ಸಲರಾದ ಡಾ|| ಎ. ಲಕ್ಷ್ಮಣಸ್ವಾಮಿ ಮೊದಲಿಯಾರರ ಅಧ್ಯಕ್ಷತೆಯಲ್ಲಿ ನಡೆಯುವುದು

ಪಿ. ಆರ್ ರಾಮಯ್ಯನವರಿಂದ ಉಮೇದುವಾರಿಕೆ ಅರ್ಜಿ

ಬೆಂಗಳೂರು ಬಸವನಗುಡಿ ಕ್ಷೇತ್ರದಿಂದ ಮೈಸೂರು ಶಾಸನ ಸಭೆಗೆ ಕಾಂಗ್ರೆಸ್ ಪರವಾಗಿ ಉಮೇದುವಾರರಾಗಿ ಆರಿಸಲ್ಪಟ್ಟಿರುವ ತಾಯಿನಾಡು ಪತ್ರಿಕೆ ಮಾಲೀಕರಾದ ಶ್ರೀ ಪಿ ಆರ್ ರಾಮಯ್ಯನವರು ಮೊನ್ನೆ ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸಿದರು ಸಂಸ್ಥಾನದಲ್ಲೆಲ್ಲಾ ಪ್ರಾಯಶಃ ಇವರದೇ ಮೊದಲನೇ ಅರ್ಜಿ ಎಂದು ತಿಳಿದುಬರುತ್ತದೆ

ಸಂಗೀತ ಕಛೇರಿ

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಘದ ಆಶ್ರಯದಲ್ಲಿ ಆಸ್ಥಾನ ವಿದ್ವಾನ್ ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು ವಾದನವನ್ನು ನಾಳೆ ಸಂಜೆ ೬ ಘಂಟೆಗೆ ಏರ್ಪಡಿಸಲಾಗಿದೆ ಫಸ್ಟ್ ಗ್ರೇಡ್ ಕಾಲೇಜು ಪ್ರಿನ್ಸಿಪಾಲರಾದ ಡಾಕ್ಟರ್ ಸೀಬಯ್ಯನವರು "ಫಿಸಿಕ್ಸ್ ಆಫ್ ಮ್ಯೂಸಿಕ್" ಎಂಬ ವಿಚಾರವಾಗಿ ಮಾತನಾಡುವರು ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ

ನೆಹರೂ ಜಯಂತಿ

ರಾಜಧಾನಿಯ ಅನಾಥಾಲಯದ ಸಾಹಿತ್ಯ ಸಂಘದ ಆಶ್ರಯದಲ್ಲಿ ನೆನ್ನೆ ಪಂಡಿತ ನೆಹರೂರವರ ಅರವತ್ತ ಮೂರನೇ ವರ್ಷದ ಜಯಂತ್ಯುತ್ಸವವನ್ನು ಆಚರಿಸಲಾಯಿತು ಶ್ರೀ ಬಿ ಎ. ವೆಂಕಟಪತಯ್ಯನವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆ, ಸ್ವಾಗತ ಭಾಷಣಗಳಾದ ನಂತರ ಶ್ರೀಗಳಾದ ಎಸ್ ವೆಂಕಟರಮಣಯ್ಯ, ಎಸ್ ವಿ ಸೂರ್ಯನಾರಾಯಣ ನೊಧಭಾವವರು ನೆಹರೂರವರ ಆದರ್ಶಗಳನ್ನು ಕುರಿತು ಮಾತನಾಡಿದರು ಅಧ್ಯಕ್ಷರ ಭಾಷಣ, ವಂದನಾರ್ಪಣೆ, ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಗಾಂಧಿಜಿ ಚಿತ್ರವನ್ನು ಮಾರಾಟ ಚಿಹ್ನೆಯಾಗಿ ಬಳಸಕೂಡದು.

ವ್ಯಾಪಾರಿಗಳು ತಮ್ಮ ಸರಕುಗಳ ಮೇಲೆ ಗಾಂಧಿಜಿಯವರ ಚಿತ್ರವನ್ನು ಮುದ್ರಿಸಿ, ಅವುಗಳನ್ನು ಮಾರುವುದು ಅಪರಾಧವೆಂದು ಭಾರತ ಸರ್ಕಾರದವರು ಭಾವಿಸುತ್ತಾರೆ ಈ ಬಗ್ಗೆ ತಪ್ಪು ಮಾಡುವ ವರ್ತಕರುಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರದವರು ಕಾನೂನು ಪ್ರಕಾರ ಅವಕಾಶವಿದ್ದರೂ, ಗಾಂಧಿಜಿಯವರ ಹೆಸರಿನಲ್ಲಿ ಕ್ರಮ ಜರುಗಿಸಲು ಇಚ್ಛೆ ಉಳ್ಳವರಾಗಿಲ್ಲವೆಂದೂ, ವರ್ತಕರೇ ಈ ಮಾರ್ಗವನ್ನು ಬಿಟ್ಟುಬಿಡಬೇಕೆಂದೂ, ಸಾರ್ವಜನಿಕರು ತಪ್ಪು ಮಾಡುವ ವರ್ತಕರ ಗಮನಕ್ಕೆ ಅವರ ತಪ್ಪನ್ನು ತೋರಿಸುವುದಲ್ಲದೆ ಸರ್ಕಾರಕ್ಕೂ ತಿಳಿಸಬೇಕೆಂದೂ ಕೇಂದ್ರ ಸರ್ಕಾರದವರು ಕೋರಿರುತ್ತಾರೆ

ವಿಮಾನಾಪಘಾತದಲ್ಲಿ ೩೭ ಜನರ ಮರಣ

ಕಳೆದ ಮಂಗಳವಾರ ಫ್ರಾನ್ಕ್‌ಫರ್ಟ್ ಮತ್ತು ಬೋರ್ಡೋಗಳ ನಡುವೆ ಅನಾಹುತಕ್ಕೀಡಾದ ಅಮೇರಿಕದ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದ ೩೭ ಜನರೂ ಮರಣ ಹೊಂದಿದರೆಂದು ವರದಿಯಾಗಿದೆ

ಮಹಾತ್ಮರ ಭಾಷಣಗಳ ರೇಡಿಯೋ ರಿಕಾರ್ಡು

೨೦ ಗಂಟೆಗಳಲ್ಲಿ ಪ್ರಸಾರ ಮಾಡಬಹುದಾದ, ಗಾಂಧಿಜಿಯವರ ಪ್ರಾರ್ಥನಾ ಸಮಯದ ಭಾಷಣಗಳನ್ನು ಅಖಿಲ ಭಾರತ ರೇಡಿಯೋ ಶಾಖೆಯವರು ರಿಕಾರ್ಡು ಮಾಡಿಕೊಂಡಿರುತ್ತಾರೆ. ಆ ಪೈಕಿ ೩೭ ನಿಮಿಷಗಳಷ್ಟಾಗುವ ೭ ಸೆಟ್ಟುಗಳನ್ನು ಮಾರಾಟಕ್ಕೆ ಕೊಡಲಾಗಿದೆ

ಸಹಾಯಾರ್ಥ ನಾಟಕ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ವಿಶ್ವೇಶ್ವರ ಸ್ವಾಮಿಯವರಿಗೆ ಬೆಳ್ಳಿಯ ಕವಚವನ್ನು ಮಾಡಿಸುವಸಲುವಾಗಿ ಸುಪ್ರಸಿದ್ಧ ಶ್ರೀ ಚನ್ನ ಬಸವೇಶ್ವರ ಸ್ವಾಮಿ ನಾಟಕ ಮಂಡಲಿಯವರು ಬೇಡರ ಕಣ್ಣಪ್ಪ ಎಂಬ ಸಹಾಯಾರ್ಥ ನಾಟಕವನ್ನು ನಾಳೆ ರಾತ್ರಿ ೧೦ ಘಂಟೆಗೆ ಅಭಿನಯಿಸುವರು.

ರಾಜಕಮಲ್
16-11-51 ರಿಂದ 5 ನೇ ವಾರ
ಪಿಚ್ಚೈಕಾರಿ (ತಮಿಳು)

ಕನ್ನಡ ಟೈಪ್‌ರೈಟರ್ ಸಂಶೋಧನೆಯಲ್ಲಿ ಅನ್ಯಾಯವೇ

ಕನ್ನಡ ಭಾಷೆಯಲ್ಲಿ ಲಿಪಿ ಬದಲಾವಣೆ ಇಲ್ಲದೆ ಟೈಪ್‌ರೈಟರ್ ಮತ್ತು ಲಿನೋಟೈಪು ಯಂತ್ರಗಳನ್ನು ತಯಾರಿಸಿ ಇಡೀ ಕರ್ನಾಟಕದ ಅನೇಕ ಮಹನೀಯರಿಂದ ಪ್ರಶಂಸಿಸಲ್ಪಟ್ಟ ಸದರಿ ಯಂತ್ರವನ್ನು ತಯಾರಿಸಲು ಪಾಶ್ಚಾತ್ಯ ದೇಶದ ರೆಮಿಂಗ್ಟನ್ ಕಂಪೆನಿಯೊಡನೆ ತಾವು ವ್ಯವಹರಿಸುತ್ತಿದ್ದುದಾಗಿಯೂ, ಏತನ್ಮಧ್ಯೆ ಶ್ರೀ ಟಿ ಟಿ ಶರ್ಮರವರ ಸಮಿತಿಯು ನಿರ್ಧಾರವಾಗಿ ಯಂತ್ರ ನಿರ್ಮಾಣಕರಾದ ತಮ್ಮನ್ನು ಸಮಿತಿಗೂ ಸಹ ಸದಸ್ಯರನ್ನಾಗಿ ತೆಗೆದುಕೊಳ್ಳದೆ ತಾವು ಮಾಡಿದ ಸಂಶೋಧನೆ ಮತ್ತು ಸಾಹಿತ್ಯಗಳನ್ನೆಲ್ಲಾ ಸರ್ಕಾರಿ ಆಜ್ಞೆಯ ನೆಪದಲ್ಲಿ ತಮ್ಮ ಅನುಮತಿಯಿಲ್ಲದೆ ಪಡೆದುಕೊಂಡು ಅನ್ಯಾಯ ಮಾಡಿರುವುದಾಗಿ ರಾಜಧಾನಿಯ ಸೇವಕ ಪತ್ರಿಕೆ ಸಂಪಾದಕರೂ, ಸುಪ್ರಸಿದ್ಧ ಪತ್ರಿಕೋದ್ಯೋಗಿಗಳೂ ಆದ ಶ್ರೀ ಕೆ ಅನಂತಸುಬ್ಬರಾಯರು ತಿಳಿಸಿರುತ್ತಾರೆ ತಾವು ತಯಾರಿಸಿದ ಯಂತ್ರ ಕ್ರಮಕ್ಕೆ ಸಮಿತಿಯವರು ಲಿಪಿ ಸುಧಾರಣೆಯನ್ನು ಅಳವಡಿಸಿಕೊಂಡು ಅದನ್ನು ಸದರಿ ರೆಮಿಂಗ್ಟನ್ ಕಂಪೆನಿಗೆ ಕಳುಹಿಸಿ ಯಂತ್ರ ತಯಾರಿಸುವುದರಲ್ಲಿ ತೊಡಗಿರುವುದು ಸರಿಯಲ್ಲ ಈ ಬಗ್ಗೆ ಸರ್ಕಾರದವರೂ ಸಹ ಸಮಿತಿಯವರ ಸ್ವಾರ್ಥಕ್ಕೆ ಅವಕಾಶ ಮಾಡಿಕೊಟ್ಟಿರುವುದು ವಿಷಾದಕರ ಇದನ್ನು ಕನ್ನಡ ಪ್ರಜೆಗಳೆಲ್ಲರೂ ಖಂಡಿಸಬೇಕಾಗಿದೆ—ಎಂದು ಶ್ರೀಯುತರು ಪ್ರಾರ್ಥಿಸಿರುತ್ತಾರೆ

ಕೆ.ಎಂ.ಪಿ. ಪಕ್ಷಕ್ಕೆ ರಾಜೀನಾಮೆ

ರಾಜಧಾನಿಯ ಎಂಪೈರ್ ಮೋಟಾರ್ ಸರ್ವಿಸ್ ಮಾಲೀಕರಾದ ಶ್ರೀ ಎಂ ಎಸ್ ಪುಟ್ಟಲಿಂಗುರವರು ಕೆ ಎಂ ಪಿ ಪಕ್ಷಕ್ಕೆ ರಾಜೀನಾಮೆ ಕೊಟ್ಟಿರುವರು

ನಾಯಿ ಕೆಮ್ಮಿಗೆ ಔಷಧಿ
(WHOOPING COUGH REMEDY)
ಗೂರ್ಲು, ಉಬ್ಬಸ, ಪರಿಣಾಮಶೂಲೆ ಮತ್ತು ಗಲಾಯುಕಕ್ಕೆ (TONSIL) ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0
ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

ದೀಕ್ಷಿತರ ದಿನಾಚರಣೆ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಗಾನಕಲಾ ಮಂದಿರದಲ್ಲಿ ಕಳೆದ ಶನಿವಾರ ಶಾರದಾ ಜ್ಯೋತಿ, ಮುತ್ತುಸ್ವಾಮಿ ದೀಕ್ಷಿತರ ಪುಣ್ಯ ದಿನಾಚರಣೆಯನ್ನು ನಡೆಸಲಾಯಿತು. ಅನೇಕ ಮಂದಿ ವಿದ್ವಾಂಸರುಗಳು ಇದರಲ್ಲಿ ಭಾಗವಹಿಸಿದ್ದರು

ಶ್ರೀಮತಿ ತಂಗಮ್ಮ ಮತ್ತು ಪದ್ಮರವರುಗಳಿಂದ ಪ್ರಾರ್ಥನೆಯಾದ ನಂತರ ಸಂಗೀತ ಶಾಸ್ತ್ರ ವಿಶಾರದ ಶ್ರೀ ವಾಸುದೇವಾಚಾರ್ಯರು ಅಧ್ಯಕ್ಷತೆಯನ್ನು ವಹಿಸಿ ದೀಕ್ಷಿತರ ಕೃತಿಗಳ ಸ್ಪರ್ಧೆಗಳಲ್ಲಿ ಯಶಸ್ವಿಯಾದ ಶ್ರೀಮತಿಗಳಾದ ಬೇಬಿ ಕುಮಾರಿ ಲೀಲಾ ಮತ್ತು ಶ್ರೀಮತಿ ತಮ್ಮ ಇವರುಗಳಿಗೆ ಬಹುಮಾನವನ್ನು ಹಂಚಿದರು ಬೆಂಗಳೂರಿನಿಂದ ರಾಜಶ್ರೀಯವರು ಬಂದಿದ್ದು ಶ್ರೀ ದೀಕ್ಷಿತರ ಜೀವನಚರಿತ್ರೆಯನ್ನು ಕುರಿತು ಭಾಷಣ ಮಾಡಿದರು.

ವಿದ್ವಾಂಸರುಗಳಿಂದ ವೀಣಾವಾದನ ಸಂಗೀತ ಕಛೇರಿಗಳಾದ ನಂತರ ಮಂಗಳಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ವಿವಾಹ ಮಹೋತ್ಸವ

ಮೈಸೂರು ಹಳ್ಳಿಯ ವ್ಯವಸಾಯ ಕೇಂದ್ರದ ಮಾಲೀಕರಾದ ಶ್ರೀ ಎ ಆರ್ ಸಿ ಬಸಪ್ಪನವರು ತಮ್ಮ ಪುತ್ರಿ ಚಿ|| ಸೌ|| ನಿರ್ಮಲನನ್ನು ತ್ಯಾಮಗೊಂಡ್ಲುವಿನ ಶ್ರೀ ಟಿ ಕೆ ಸಂಪಂಗಪ್ಪನವರ ಪುತ್ರರಾದ ಶ್ರೀ ಟಿ ಎಸ್ ಸಿದ್ದಪ್ಪನವರಿಗೆ ಕೊಟ್ಟು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು. ನೆನ್ನೆ ಸಂಜೆ ನಡೆದ ಆರತಕ್ಷತೆಗೆ ಸಚಿವರುಗಳು ಶ್ರೀಗಳು ಎಚ್ ಸಿ ದಾಸಪ್ಪ, ಟಿ ಮರಿಯಪ್ಪ, ಎಚ್ ಸಿದ್ದಯ್ಯ, ಕೆ ಟಿ ಭಾಷ್ಯಂರವರೂ ಮತ್ತು ಅನೇಕ ಗಣ್ಯರೂ ಆಗಮಿಸಿ ವಧೂವರರಿಗೆ ಶುಭವನ್ನು ಕೋರಿದರು

ಡಾ|| ಎಫ್. ನರೋನ್ಹಾರವರ ನಿಧನ

ಬೆಂಗಳೂರು ಮುಷ್ಕರ ಆಸ್ಪತ್ರೆಯ ನಿವೃತ್ತ ಸೂಪರಿಂಟೆಂಡೆಂಟರಾದ ಡಾ|| ಎಫ್ ನರೋನ್ಹಾರವರು ನೆನ್ನೆ ದಿನ ಬೆಂಗಳೂರಿನಲ್ಲಿ ನಿಧನರಾದರೆಂದು ವರದಿಯಾಗಿದೆ

Reduced Rates for your
BEST PORTRAITS
AT
VAGEESHAN STUDIO
Vanivilas Road,
(Opp to K R Police Station)
-- Rates --
Cabinet Size Rs 4 1/2
Plate Size Rs 6 & 10 x 12
Size Rs 12 each.

Edited, Printed and Published by A. R. Nagarajan, at Sadhvi Press D Subbiah Road, Mysore

ಮಲೇರಿಯಾ ಗೆಡ್ಡೆಗಳಿಗೆ
40 ವರ್ಷಗಳಿಂದ ಪ್ರಖ್ಯಾತವಾಗಿರುವ
ಮೈಸೂರು ಎಸ್ ಎನ್ ಪಂಡಿತ್ ಅಂಡ್ ಸನ್ಸ್
ರವರ ಪಂಚಾಮೃತ, ಸ್ಪೆಷಲ್ ವಾಸಾವ ಲೇಹ್ಯ
ಸುಗಂಧರಾಜ ತೈಲ-ಇವುಗಳನ್ನು ಉಪಯೋಗಿಸಿರಿ.

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ನಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಶ್ರೇಷ್ಠಿ ಬಿ ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಪುಸ್ತಕ 792 ... ಅಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೦-೧೧-೫೧ [ಸಂಚಿಕೆ ೯೮

ಈಜಿಪ್ಟಿಗೆ ರಷ್ಯದ ಆರ್ಥಿಕ ಸಹಾಯ

...ನೆಗಳಲ್ಲಿ ನೌಕರರ ... ಸರಿಯಾಗಿರಬೇಕು

...ರ್ವ ಮಹಾರಾಜರ ಆಶಯ

ಬೆಂಗಳೂರು ೨೦

... ಸರ್ಕಾರದವರು ಪ್ರಕಟ ... ಹೊರಡಿಸಿ, ಬರುವ ಚು... ಸಂಪೂರ್ಣ ನಿಷ್ಪಕ್ಷಪಾತ ...ತ ದಕ್ಷತೆಯಿಂದ ನಡೆಯ ...ಮನ್ಮಹಾರಾಜರು ಅಪೇ... ತಿಳಿಸಿರುತ್ತಾರೆ ಚುನಾ... ಅಥವಾ ಇತರ ಯಾವ ಅ... ರೀ, ಪೋಲೀಸರು ಅಥವಾ ...ಲೀ ನ್ಯಾಯಾಧಿಕಾರಿಗಳಾ ... ಪೂರ್ಣವಾದ ತಿಳುವಳಿಕೆ ... ಕೆಲಸವನ್ನು ನಿಷ್ಪಕ್ಷ ... ಸಂಸ್ಥಾನದ ಪರಂಪರಾನು... ವನ್ನು ಉಳಿಸಬೇಕೆಂಬು... ಆಶಯವಾಗಿದೆ

...ಗ ಸಂಪಂಗಿರಾಮಯ್ಯ ... ಮಾಚಾರ್ಯರ ರಾಜೀನಾಮೆ

... ಸದಸ್ಯರಾದ ಚಿಕ್ಕಬ... ಶ್ರೀ ಸಂಪಂಗಿರಾಮಯ್ಯ ... ಕೋಲಾರದ ವಕೀಲ ... ರಾಮಾಚಾರ್ಯರೂ ...ರಾಜೀನಾಮೆ ಸಲ್ಲಿಸಿರುವು... ಗಿದೆ ಮೈಸೂರು ... ವಾಗ ಶ್ರೀ ಸಂಪಂಗಿರಾ... ಅವರ ಕಾರ್ಯಕಾರಿ ಸ... ಗಿದ್ದರು ಶ್ರೀ ಟಿ ... ಪ್ರಮುಖಾಸ್ಪತ್ರೆ ... ತಿಗೆ ಬಂದರು

...ಟಿ ...ವರಿಂದ ಚೂರಿ ಇರಿತ

...ವಾರ ರಾತ್ರಿ ಬೆಂಗಳೂರಿ... ವಸಂತಪುರದಿಂದ ದಿವಾನ ... ಕಡೆಗೆ ಹೋಗುತ್ತಿದ್ದ ನಾ... ...ವಿ ಮತ್ತು ಗೋವಿಂದ ... ನರನ್ನು ಇಬ್ಬರು ಮಿಲಿಟೆ... ಸಂದಿಸಿ ಅವರಲ್ಲಿದ್ದ ಗಡಿ... ಉಂಗುರಗಳನ್ನು ಕಿತ್ತು... ಕ್ಕಿಸಲಾಗಿ ಎರಡು ಪಕ್ಷದ ... ಟವಾಯಿತು ಮಿಲಿಟೆ... ಒಬ್ಬನು ನಾರಾಯಣ ... ರಿದನೆಂದೂ ಸುತ್ತ ಮುತ್ತ ... ಎಂದಾಗ ಮಿಲಿಟರಿಯವರ ... ನರೆಂದೂ, ಅವರ ಪೈಕಿ ಟಿ ... ಎಂಬುವನು ಸಿಕ್ಕಿಬಿದ್ದನೆಂ... ಗಿದೆ ಗಾಯಗೊಂಡಿರುವ ... ಸ್ವಾಮಿಯನ್ನು ಆಸ್ಪತ್ರೆಗೆ ... ಅವನ ಡೈಯಿಂಗ್ ಡಿಕ್ಲ... ...ಕೊಳ್ಳಲಾಗಿದೆ

...ನದಲ್ಲಿ ವಿಗ್ರಹಗಳ ... ಪಟ್ಟಿ

...ನದಲ್ಲಿ ಸಾರ್ವಜನಿಕ ಸ್ಥಳ... ವಿಗ್ರಹಗಳನ್ನೂ ಜಾತಿ... ರಕ್ಷವುವಿಲ್ಲವೆ, ತೆಗೆದು ಬಾ... ಸ್ತು ಸಂಗ್ರಹಾಲಯದಲ್ಲಿಡ ... ಸರ್ಕಾರವು ನಿರ್ಧರಿಸಿದೆ

...ಕ ವಿದ್ಯಾರ್ಥಿನಿಲಯಕ್ಕೆ ... ಕಾಣಿಕೆ

...ದ ಶ್ರೀ ಎಂ ಆರ್ ಸಿ ... ತಮ್ಮ ಪುತ್ರಿಯ ವಿವಾಹ ... ದಲ್ಲಿ ಮೇಲ್ಕಂಡ ವಿದ್ಯಾರ್ಥಿ... ...ರೂ ಕಾಣಿಕೆಯನ್ನು ...ದ್ದಾರೆ

ಹೊರಗಿನ ನ್ಯಾಯಾಧೀಶರನ್ನು ಕರೆಸುವ ಏರ್ಪಾಡು

ಸ್ವಂ ಸು] ಬೆಂಗಳೂರು ೨೦

ರಾಜ್ಯಾಂಗದ ೩೦ನೇ ವಿಧಿಯ ಪ್ರಕಾರ ಕೊಡಲಾಗಿದ್ದ ನಿರಂಕುಶವನ್ನು ... ನ್ಯಾಯಮೂರ್ತಿಗಳು ಹಿಂತೆಗೆದುಕೊಂಡಿರುವುದರಿಂದ ಸಂಸ್ಥಾನ ಸರ್ಕಾರದವರು ಶ್ರೀ ಎಲ್ ಎಸ್ ರಾಜುರವರ ಮೊಕದ್ದಮೆಯ ವಿಚಾರಣೆ ನಡೆಸಲು ... ವನ್ನು ಮಾರ್ಪಡಿಸಿಯ ... ನ್ಯಾಯಾಧೀಶರನ್ನು ಕರೆಸುವ ಬಗ್ಗೆ ... ಸರ್ಕಾರಗಳೊಡನೆ ಪತ್ರವ್ಯವಹಾರ ನಡೆಸಲಿರುವರೆಂದು ಗೊತ್ತಾಗಿದೆ

ಷೇಕ್ ಅಬ್ದುಲ್ಲಾರವರ ಅಪಹಾರ ಪ್ರಯತ್ನ

ಪಾಕಿಸ್ತಾನದ ಸಿತೂರಿಗಾರರು ಷೇಕ್ ಅಬ್ದುಲ್ಲಾರವರನ್ನು ಕಾಶ್ಮೀರದಿಂದ ಲಾಹೋರಿಗೆ ಅಪಹರಿಸಿಕೊಂಡು ಹೋಗುವ ಪ್ರಯತ್ನ ನಡಸಿ ಅದು ವಿಫಲವಾದ ಸುದ್ದಿಯು ಬಂದಿರುತ್ತದೆ ಕಾಶ್ಮೀರದ ಪ್ರಧಾನಿ ಮಂತ್ರಿಯು ದೆಹಲಿಗೆ ಪ್ರಯಾಣ ಮಾಡುವ ವಿಮಾನವನ್ನು ಕರಾಚಿಗೆ ಕೊಂಡೊಯ್ಯಬೇಕೆಂದು ಸಿತೂರಿಗಾರರು ವಿಮಾನದ ಚಾಲಕನನ್ನು ಕೇಳಿ, ... ಲಕ್ಷ ರೂಗಳ ಲಂಚವನ್ನು ಕೊಡುವುದಾಗಿ ಆಸೆ ತೋರಿಸಿದ್ದರೆಂದೂ ಚಾಲಕನು ಈ ವಿಷಯವನ್ನು ಸಂಗಡಿಗರಿಗೆ ತಿಳಿಸಲಾಗಿ, ... ರ ಕಿವಿಗೆ ಅದು ಮುಟ್ಟಿತೆಂದೂ, ಅಪಹಾರ ಪ್ರಯತ್ನವು ವಿಫಲಗೊಂಡಿತೆಂದೂ ಹೇಳಲಾಗಿದೆ ಚಾಲಕನ ಪಸ್ತಗಿರಿಯಾಗಿದೆ

ಸತ್ತ ಕಾಗೆಗಳೇ ಆಹಾರ

ಕಡೂರು ಜಿಲ್ಲೆಯ ಕೊಪ್ಪದಲ್ಲಿ ಹದಿನೈದು ಇಪ್ಪತ್ತು ದಿನಗಳಿಂದ ಭಿಕ್ಷುಕರ ಸಂಗಡವು ಅನ್ನದಲ್ಲಿ ಒಂದು ವಿಷವಾದ ವಸ್ತುವನ್ನು ಬೆರೆಸಿ, ಅದನ್ನು ಬಯಲಿನಲ್ಲಿ ಎರಚುತ್ತಿದ್ದು, ಅವುಗಳನ್ನು ತಿಂದ ಕಾಗೆಗಳು ಸಲ್ಪ ಹೊತ್ತಿನಲ್ಲೇ ಸತ್ತು, ನಂತರ ಅವನ್ನು ಭಿಕ್ಷುಕರು ತಿನ್ನುತ್ತಿರುವುದಾಗಿ ವರದಿಯಾಗಿದೆ ಈ ಜನ್ನ ಚೆಲ್ಲಿದ ಸ್ಥಳದಲ್ಲಿ ಹುಲ್ಲು ತಿಂದ ಜಾನುವಾರುಗಳೂ ಸತ್ತಿರುವ ಸುದ್ದಿಯಿದೆ. ಪೋಲೀಸರು ಇವರನ್ನು ಪತ್ತೆ ಮಾಡುವುದರಲ್ಲಿ ನಿರತರಾಗಿರುತ್ತಾರೆ

ಸಂಸ್ಥಾನದಲ್ಲಿ ಚೀಣಾ ನಿಯೋಗದವರ ಪ್ರವಾಸ

ಶ್ರೀವರ್ಣ ಮಹಾರಾಜರೊಡನೆ ಭೇಟಿ

ಬೆಂಗಳೂರು ೨೦

ನಮ್ಮ ದೇಶಕ್ಕೆ ಆಗಮಿಸಿರುವ ಚೀಣಾ ಸೌಹಾರ್ದ ಮಂಡಲಿಯ ಮುಖಂಡ ... ಟಿಂಗ್ ಸಿ ಲೀ, ಉಪನಾಯಕ ... ಮತ್ತು ಸದಸ್ಯರುಗಳ ನಾಳೆ ಮಧ್ಯಾಹ್ನ ವಿಮಾನದಲ್ಲಿ ಇಲ್ಲಿಗೆ ಆಗಮಿಸುತ್ತಾರೆ ಇವರು ಶ್ರೀ ... ವಿ ... ರಾಮನ್‌ರವರ ಇನ್‌ಸ್ಟಿಟ್ಯೂಟ್, ತಾತಾ ವಿದ್ಯಾನಿಲಯ, ಮುಂತಾದ ಸ್ಥಳಗಳಿಗೆ ಭೇಟಿಯಿತ್ತು ಮಾರನೇದಿನ ರಾಜಧಾನಿಗೆ ತೆರಳುವರು ರಾಜಧಾನಿಯ ಚಿತ್ರಶಾಲೆ, ಓರಿಯಂಟಲ್ ಲೈಬ್ರೆರಿ, ... ರ ಸಂಶೋಧನಾ ಕೇಂದ್ರಗಳಿಗೆ ಅವರು ಭೇಟಿಯಿಯುವರು ಅರಮನೆಯಲ್ಲಿ ಅವರ ಗೌರವಾರ್ಥವಾಗಿ ಸತ್ಕಾರ ಕೂಟವೂ ಏರ್ಪಾಡಾಗಿದೆ ಸಂಜೆ ೫|| ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದ ನಂತರ, ಪೌರಸಭೆಯವರು ಏರ್ಪಡಿಸುವ ಸನ್ಮಾನ ಸಮಾರಂಭದಲ್ಲಿ ನಿಯೋಗದವರು ಭಾಗವಹಿಸುವರು ... ನೇ ತಾ|| ಶ್ರೀಮನ್ಮಹಾರಾಜರನ್ನು ಅವರು ಭೇಟಿ ಮಾಡುವರು ೨೪ ನೇ ತಾರೀಕು ಕೊಚ್ಚಿಗೆ ತೆರಳುವರು

ಡಾ|| ಭಾರ್ಗವರವರಿಂದ ಹೊಸ ರಾಜಕೀಯ ಪಕ್ಷ

ಪಂಜಾಬಿನ ಕಾಂಗ್ರೆಸ್ ನಾಯಕರಾದ ಡಾ|| ಗೋಪಿಚಂದ್ ಭಾರ್ಗವರವರು ಕಾಂಗ್ರೆಸ್ಸನ್ನು ತ್ಯಜಿಸಿ "ಗಾಂಧಿ ನ್ಯಾಷನಲ್ ಕಾಂಗ್ರೆಸ್" ಎಂಬ ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಲಿರುವರು ಕಾಂಗ್ರೆಸ್ಸನ್ನು ತ್ಯಜಿಸಿದ ಅನೇಕ ಪ್ರಮುಖರು ಈ ಪಕ್ಷಕ್ಕೆ ಸೇರಲಿರುವರೆಂದೂ, ಬರುವ ಚುನಾವಣೆಗಳಲ್ಲಿ ಈ ಪಕ್ಷದವರು ಭಾಗವಹಿಸಲಿರುವರೆಂದೂ ಗೊತ್ತಾಗಿದೆ

ಈಜಿಪ್ಟಿನ ದೊರೆ ಎಂದು ಮಾತ್ರ ಸಂಬೋಧಿಸಿ ಸುಡಾನ್ ದೊರೆ ಎಂಬುದನ್ನು ಉಲ್ಲೇಖಿಸದೇ ಬ್ರಿಟಿಷ್ ರಾಯಭಾರಿಯು ಸಲ್ಲಿಸಿದ ಪತ್ರವನ್ನು ಈಜಿಪ್ಟಿನ ಅರಸರು ನಿರಾಕರಿಸಿರುವರೆಂದು ತಿಳಿದು ಬಂದಿದೆ

ನಗರದಿಂದ ಶಾಸನಸಭೆಗೆ ಉಮೇದುವಾರರ ಅರ್ಜಿ

ಮೈಸೂರು ೨೦

ಮೈಸೂರು ಶಾಸನ ಸಭೆಗೆ ನಗರದ ಉತ್ತರ ಭಾಗದಿಂದ ಪೌರಸಭಾ ಸದಸ್ಯರಾದ ಶ್ರೀ ಹೆಚ್ ಎಲ್ ಮುದ್ದಪ್ಪನವರೂ, ದಕ್ಷಿಣ ಭಾಗದಿಂದ ಮಾಜಿ ರೈಲ್ವೆ ಗಾರ್ಡ್ ಶ್ರೀ ರಾಘವೇಂದ್ರರವರೂ ಉಮೇದುವಾರಿಕೆ ಅರ್ಜಿಗಳನ್ನು ಈ ದಿನ ಸಲ್ಲಿಸಿದರು

ಈಜಿಪ್ಟಿಗೆ ರಷ್ಯದ ಆರ್ಥಿಕ ನೆರವು

ರಷ್ಯವು ಈಜಿಪ್ಟಿಗೆ ಆರ್ಥಿಕ ಸಹಾಯ ನೀಡಲು ಮುಂದೆ ಬಂದಿರುವುದಾಗಿಯೂ, ಈ ಬಗ್ಗೆ ವಿಶ್ವಸಂಸ್ಥೆಗೆ ಈಜಿಪ್ಟಿನ ಖಾಯಂ ಪ್ರತಿನಿಧಿ ಮಹಮದ್ ಫೌಜ ಬೇಯವರಿಗೂ ಮತ್ತು ರಷ್ಯದ ಪ್ರತಿನಿಧಿ ಎಂ ಸೆಮಿಯನ್ ಜರಾಪ್ಕಿನ್ ಎಂಬುವರಿಗೂ ಪ್ಯಾರಿಸ್ಸಿನಲ್ಲಿ ಎರಡು ಬಾರಿ ರಹಸ್ಯ ಮಾತುಕತೆ ನಡೆಯಿತೆಂದೂ ಹೇಳಲಾಗಿದೆ

ಮೋಟಾರು ಅಪಘಾತದಲ್ಲಿ ಸುಚೇತಾ ಕೃಪಲಾನಿಗೆ ಪೆಟ್ಟು

ಹಿಮಾಚಲ ಪ್ರದೇಶದ ಪಠಾಣ್‌ಕೋಟೆಯಲ್ಲಿ ಚುನಾವಣಾ ಪ್ರಚಾರವನ್ನು ಮುಗಿಸಿಕೊಂಡು ವಾಪಸ್ಸು ಬರುತ್ತಿದ್ದ ಆಚಾರ್ಯ ಕೃಪಲಾನಿಯವರ ಪತ್ನಿ ಸುಚೇತಾರವರ ಮೋಟಾರು ಒಂದು ಕಮರಿಯೊಳಕ್ಕೆ ಉರುಳಿದುದರಿಂದ ಅವರೂ ಮೋಟಾರು ಡ್ರೈವರನೂ ಇನ್ನೊಬ್ಬಾತನೂ ಗಾಯಗೊಂಡರೆಂದು ವರದಿಯಾಗಿದೆ

ಬೊಂಬಾಯಿ, ಮದ್ರಾಸುಗಳಲ್ಲಿ ಎಣ್ಣೆ ಕಾರ್ಖಾನೆಗಳು

ಹತ್ತು ಲಕ್ಷ ಟನ್ನು ಎಣ್ಣೆ ಶುದ್ಧೀಕರಣ ಕೇಂದ್ರಗಳನ್ನು ಭಾರತದಲ್ಲಿ ಸ್ಥಾಪಿಸುವ ಬಗ್ಗೆ ಇಲ್ಲಿನ ಸರ್ಕಾರದೊಡನೆ ಮಾತುಕತೆ ನಡೆಸಲು ಲಂಡನ್ನಿನಿಂದ ಐದು ಮಂದಿ ಪ್ರವೀಣರು ನೆನ್ನೆ ಬೊಂಬಾಯಿಗೆ ಆಗಮಿಸಿ ಅಲ್ಲಿಂದ ದೆಹಲಿಗೆ ತೆರಳಿದರು ಅಮೆರಿಕಾ ಮತ್ತು ಬ್ರಿಟನ್ನಿನ ಪ್ರವೀಣರೊಡನೆ ಇದುವರೆಗೂ ನಡೆಸಿರುವ ಸಂಧಾನದಿಂದ ಪ್ರತಿ ಕೇಂದ್ರಕ್ಕೂ ೧೫ ಕೋಟಿ ರೂ ವೆಚ್ಚದಿಂದ ಬೊಂಬಾಯಿನ ಬಳಿ ಟ್ರಾಂಬೆ ಎಂಬಲ್ಲಿ ಎರಡು ಎಣ್ಣೆ ಶುದ್ಧೀಕರಣ ಕೇಂದ್ರಗಳನ್ನೂ, ಮದರಾಸಿನಲ್ಲಿ ಒಂದನ್ನೂ ಸ್ಥಾಪಿಸಲಾಗುವುದೆಂದು ತಿಳಿದುಬಂದಿದೆ. ೩೦ ವರ್ಷಗಳ ಕಾಲ ಕಾರ್ಖಾನೆಯು ರಾಷ್ಟ್ರೀಕರಣವಾಗದಿರಬೇಕೆಂದೂ ಹೊರಗಿನ ಪೆಟ್ರೋಲಿನದರಕ್ಕಿಂತ ಇಲ್ಲಿನ ಪೆಟ್ರೋಲನ್ನು ಕಡಿಮೆ ದರದಲ್ಲಿ ಮಾರಬೇಕೆಂದು ಒತ್ತಾಯ ಪಡಿಸಕೂಡದೆಂದೂ ಮತ್ತು ಹೊರಗಿನಿಂದ ಕಚ್ಚಾ ಎಣ್ಣೆಯನ್ನು ಆಮದು ಮಾಡಿಕೊಳ್ಳಲು ಅವಕಾಶ ಕೊಟ್ಟು ಅದರ ಮೇಲೆ ಸುಂಕ ವಿಧಿಸಬಾರದೆಂದೂ ಷರತ್ತುಗಳನ್ನು ಸರ್ಕಾರಕ್ಕೆ ಹಾಕಲಾಗಿದೆ ಈ ಎಲ್ಲಾ ಅಂಶಗಳಿಗೂ ಭಾರತ ಸರ್ಕಾರದವರು ಒಪ್ಪಿರುವರೆಂದೂ, ಆದರೆ ಪೆಟ್ರೋಲಿನ ದರವನ್ನು ಶೇಕಡ ೧೧ ರಷ್ಟು ಹೆಚ್ಚಿಸಲು ಕಂಪೆನಿಯು ಹಕ್ಕು ಕೇಳಿರುವುದಕ್ಕೆ ಅವರು ಸಮ್ಮತಿಸಿಲ್ಲವೆಂದೂ ಹೇಳಲಾಗಿದೆ

ಕಾಂಗ್ರೆಸ್ಸಿಗೆ ಇ. ಪಿ. ನಂಜಪ್ಪನವರ ರಾಜೀನಾಮೆ

ಮೈಸೂರು ೨೦

ರಾಜಧಾನಿಯ ಪೌರಸಭಾ ಮಾಜಿ ಉಪಾಧ್ಯಕ್ಷರೂ, ಬಟ್ಟೆ ವರ್ತಕರೂ ಆದ ಶ್ರೀ ಇ ಪಿ ನಂಜಪ್ಪನವರು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಪತ್ರವೊಂದನ್ನು ಬರೆದು ಕಾಂಗ್ರೆಸ್ ಸದಸ್ಯತನಕ್ಕೆ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ ಅವರು ಸ್ವತಂತ್ರರಾಗಿ ಮೈಸೂರು ನಗರದ ಉತ್ತರ ಭಾಗದಿಂದ ಶಾಸನ ಸಭೆಗೆ ಸ್ಪರ್ಧಿಸುವರು ಅಧ್ಯಕ್ಷರಿಗೆ ಅವರು ಬರೆದಿರುವ ಪತ್ರದಲ್ಲಿ ಬಹುಸಂಖ್ಯಾತರ ಹಿತಕ್ಕಾಗಿ ಅನೇಕ ಸಣ್ಣಪುಟ್ಟ ಕೋಮುಗಳನ್ನು ನಿರ್ಲಕ್ಷಿಸಲಾಗಿದೆಯೆಂದೂ, ಕಳೆದ ನಾಲ್ಕು ವರ್ಷಗಳ ಕಾಂಗ್ರೆಸ್ ಸರ್ಕಾರದ ತಿಳ್ಳಿತನದಿಂದ ಜನತೆಯು ಕಂಗೆಟ್ಟಿರುವುದೆಂದೂ ತಿಳಿಸಿರುತ್ತಾರೆ ಕಂದಾಯವು ಹೆಚ್ಚಿದ್ದರೂ ಬೊಕ್ಕಸವು ಖಾಲಿಯಾಗಿರುವುದೆಂದು ಹೇಳಿರುತ್ತಾರೆ ಮಾರಾಟ ತೆರಿಗೆ ವಿಧಿಸುವಾಗ ಪದಾರ್ಥಗಳ ಮೇಲೆ ಸುಂಕವನ್ನು ತೆಗೆಯುವುದಾಗಿ ಸರ್ಕಾರದವರು ಇತ್ತ ವಚನವನ್ನು ನಿರ್ಲಕ್ಷಿಸಲಾಗಿದೆಯೆಂದು ತಿಳಿಸಿರುತ್ತಾರೆ

ಕ್ರಿಕೆಟ್ ಪಂದ್ಯ

ರಾಜಧಾನಿಯಲ್ಲಿ ನಡೆಯುತ್ತಿರುವ ಲೀಗ್ ಕ್ರಿಕೆಟ್ ಪಂದ್ಯಗಳಲ್ಲಿ ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ಅರಸು ಕ್ರಿಕೆಟ್ ಕ್ಲಬ್ಬಿನವರು ಮಹಾರಾಜಾ ಕಾಲೇಜು, ಟೀಚರ್ಸ್ ಕಾಲೇಜು, ಫಸ್ಟ್ ಗ್ರೇಡ್ ಕಾಲೇಜು ಸೆಂಟ್ ಫಿಲೊಮಿನಾ ಕಾಲೇಜು, ಮೆಡಿಕಲ್ ಕಾಲೇಜು – ಇವರೊಡನೆ ಆಟಗಳಲ್ಲಿ ಜಯಶೀಲರಾಗಿ ಮುಂದಿನ ಮುಕ್ತಾಯ ಆಟವಾಡಲು ತಮ್ಮ ಅರ್ಹತೆಯನ್ನು ಶ್ಲಾಘ್ಯ ರೀತಿಯಲ್ಲಿ ಪ್ರದರ್ಶಿಸಿರುತ್ತಾರೆ

ದೀಕ್ಷಿತರ ದಿನಾಚರಣೆ

ರಾಜಧಾನಿಯ ಶ್ರೀ ಸರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಆಶ್ರಯದಲ್ಲಿ ಮೊನ್ನೆ ಸಹಕಾರ ಭವನದಲ್ಲಿ ಮೇಲ್ಕಂಡ ಸಮಾರಂಭವು ಆಚರಿಸಲ್ಪಟ್ಟಿತು ಪ್ರಾರ್ಥನೆ, ರಾವ್‌ಬಹದ್ದೂರ್ ರಾಮಸ್ವಾಮಿಯವರಿಂದ ಸ್ವಾಗತ ಭಾಷಣ, ಮೈಸೂರು ಸಹೋದರರಿಂದ ದೀಕ್ಷಿತರು ಮಾಡಿರುವ ಕೃತಿಗಳ ಹಾಡುಗಾರಿಕೆಗಳಾದವು ಸಂಗೀತ ಶಾಸ್ತ್ರರತ್ನ ಕೆ ವಾಸುದೇವಾಚಾರ್ಯರು ದೀಕ್ಷಿತರ ಜೀವನದ ವಿಚಾರವಾಗಿ ಭಾಷಣ ಮಾಡಿ, "ವಾತಾಪಿ" ಎಂಬ ಹಂಸಧ್ವನಿ ರಾಗದ ಕೀರ್ತನೆಯಲ್ಲಿ 'ಅನಾದಿ ಗುರು ಗುಹ" ಎಂಬುದರ ಬದಲು "ಪರಾದಿ ಗುರು ಗುಹ" ಎಂದು ಹಾಡಬೇಕು ಎಂದು ತಿಳಿಸಿದರು. ಅಧ್ಯಕ್ಷರಾದ ಸರ್ದಾರ್ ದೇವರಾಜ ಅರಸಿನವರು ಭಾಷಣ ಮಾಡುತ್ತಾ ಸಕಲರೂ ದೀಕ್ಷಿತರಂತೆಯೇ ಮೋಕ್ಷ ಸಾಧನೆ ಮಾಡಬೇಕೆಂದು ಹೇಳಿದರು ವಂದನಾರ್ಪಣೆ, ಮಂಗಳಾರತಿ, ಪ್ರಸಾದ ವಿನಿಯೋಗಗಳೊಡನೆ ಸಭೆಯು ಮುಕ್ತಾಯಗೊಂಡಿತು

ಮದ್ರಾಸಿನ ನರ್ಸುಗಳಿಗೆ ಗಾಂಧಿ ಟೋಪಿ

ಮದರಾಸಿನ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ನರ್ಸುಗಳಿಗೆ ಅವರ ಸಮವಸ್ತ್ರದ ಜೊತೆಯಲ್ಲಿ ಕೊಡುತ್ತಿದ್ದ ಪೇಟದ ಬದಲು ಇನ್ನು ಮುಂದೆ ಗಾಂಧಿ ಟೋಪಿಗಳನ್ನು ಕೊಡುವ ಆಲೋಚನೆ ಮಾಡಲಾಗುತ್ತಿದೆ ಪುರುಷ ನರ್ಸುಗಳಿಗೆ ಹಳದಿ ಪಟ್ಟೆಯುಳ್ಳ ಕೆಂಪು ಟೋಪಿಗಳನ್ನೂ, ಕ್ಷೋಟಗಳಿಗೆ ಖಾದಿ ಟೋಪಿಗಳನ್ನೂ ಕೊಡಲಾಗುವುದು

ನೆಹರೂ ಜಯಂತಿ

ರಾಜಧಾನಿಯ ವಿದ್ಯಾವರ್ಧಕ ಸ್ಕ್ರೀಪ್‌ರಾಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕಳೆದ ಶುಕ್ರವಾರ ನೆಹರೂ ಜಯಂತಿಯನ್ನು ಆಚರಿಸಲಾಯಿತು ನಂಜನಗೂಡಿನ ಶ್ರೀ ಕೆ ವಿಶ್ವೇಶ್ವರ ಗೌಡರು ಅಧ್ಯಕ್ಷತೆ ವಹಿಸಿದ್ದರು ವಯಸ್ಕರ ಶಿಕ್ಷಣ ಸಮಿತಿಯ ಶ್ರೀ ಬಿ ಎ ಕೃಷ್ಣರಾಯರು ನೆಹರೂರವರ ಜೀವನ ಚರಿತ್ರೆಯನ್ನು ಕುರಿತು ಭಾಷಣ ಮಾಡಿದರು

ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಪಂಡಿತ ನೆಹರೂರವರ ೬೩ ನೇ ಜಯಂತ್ಯುತ್ಸವವು ಆಚರಿಸಲ್ಪಟ್ಟಿತು ಮಹಾರಾಜಾ ಕಾಲೇಜು ಕನ್ನಡ ಅಧ್ಯಾಪಕರಾದ ಶ್ರೀ ಕೆ ವಿ ರಾಘವಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು ಶ್ರೀ ನ ಬಸಪ್ಪಯ್ಯನವರು ನೆಹರೂರವರ ಗುಣಗಾನ ಮಾಡಿದರು ಅನಂತರ ಅಧ್ಯಕ್ಷರು ಮಾತನಾಡಿ ದೇಶದ ಸಲುವಾಗಿ ಪಂಡಿತ ನೆಹರೂರವರು ಕೈಗೊಳ್ಳುವ ಎಲ್ಲ ಕಾರ್ಯಗಳಲ್ಲೂ ನಾವು ಅವರಿಗೆ ಬೆಂಬಲ ನೀಡುವುದರಿಂದಲೇ ಅವರ ಜಯಂತಿಯನ್ನು ಸೂಕ್ತ ರೀತಿಯಲ್ಲಿ ಆಚರಿಸಿದಂತಾಗುವುದೆಂದು ತಿಳಿಸಿದರು

ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ಶ್ರೀ ಮಂಜುನಾಥ ಟ್ರೈಡ್ ರೀ ಬಿಲ್ಡಿಂಗ್ ಸಂಸ್ಥೆಯವರು ನಮಗೆ ಕಳುಹಿಸಿರುವ ೧೯೫೨ ನೇ ಇಸವಿಯ ಕ್ಯಾಲೆಂಡರನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ಪ್ರಭುಗಳಿಂದ ಆಗಮತ್ರಯ ಸಮ್ಮೇಳನದ ಆರಂಭ

ಸಂಸ್ಥಾನದ ಆಗಮತ್ರಯ ಮಹಾಮಂಡಲದ ಆಶ್ರಯದಲ್ಲಿ ಬರುವ ತಿಂಗಳು ೧೦, ೧೧ ಮತ್ತು ೧೨ನೇ ತಾ|| ನಂಜನಗೂಡಿನಲ್ಲಿ ನಡೆಯುವ ಆಗಮತ್ರಯ ಸಮ್ಮೇಳನದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರು ನಡೆಸುವರು ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ರಾಘವೇಂದ್ರಸ್ವಾಮಿಗಳ ಮಠಾಧಿಪತಿಗಳಾದ ಶ್ರೀಮತ್ಸುಯಮೀಂದ್ರ ತೀರ್ಥ ಶ್ರೀಪಾದಂಗಳವರು ವಹಿಸುವರು.

೨೦ ಕೊಲೆ ಮಾಡಿದ ಡಕಾಯಿತನ ದಸ್ತಗಿರಿ

ಸುಮಾರು ೨೦ ಕೊಲೆಗಳನ್ನೂ, ಅನೇಕ ದರೋಡೆಗಳನ್ನೂ ಮಾಡಿದನೆಂದು ಹೇಳಲಾದ ನಕ್ಷತ್ರ ಮಲಾಕರ್ ಎಂಬ ಭಾರಿ ಡಕಾಯಿತನನ್ನು ಪಶ್ಚಿಮ ಬಂಗಾಳ ಪೊಲೀಸರು ಸಾರ್ವಜನಿಕರ ಸಹಾಯದಿಂದ ಪೂರ್ಣಿಯಾ ಎಂಬಲ್ಲಿ ದಸ್ತಗಿರಿ ಮಾಡಿರುತ್ತಾರೆ ಇವನನ್ನು ಹಿಡಿದವರಿಗೆ ೧೦ ಸಾವಿರ ರೂ. ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದರು ದಸ್ತಗಿರಿ ಸಮಯದಲ್ಲಿ ಇವನು ಕೈ ಬಾಂಬು ಎಸೆಯಲಾಗಿ ಒಬ್ಬ ಪೊಲೀಸನಿಗೆ ಗಾಯವಾಯಿತೆಂದು ಗೊತ್ತಾಗಿದೆ

SRI GAYATHRI,

TALKIES

Daily 3 Shows

From 21-11-51 For 2 days

Paramount's

APPOINTMENT WITH DANGER

Edited, Printed and Published by A R Nagarajan, at Sadhvi Press D Subbiah Road, Mysore

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

‡ ಅತ್ಯುತ್ಕೃಷ್ಟವಾದ ಒಗೆಯುವ ಸಾಬೂನು

‡ ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು.

‡ ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ.

‡ ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಕೋತಿಗಳ ಹಾವಳಿ

ಶ್ರೀರಂಗಪಟ್ಟಣ, ಬನ್ನೂರು ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿ ಕೋತಿಗಳ ಹಾವಳಿಯು ಹೇಳಲಸಾಧ್ಯವಾಗಿದೆ ಇವರಿಂದ ಈಗೀಗ ಬರುತ್ತಿರುವ ಭತ್ತದ ಬೆಳೆಗೆ ವಿಪರೀತ ನಷ್ಟವುಂಟಾಗಿರುತ್ತದೆ ಹಸಿ ಭತ್ತವನ್ನು ಅವು ಕಿತ್ತು ಅದನ್ನು ನುಂಗಿ ಹೊಟ್ಟನ್ನು ಉಗುಳುತ್ತವೆ ಕೈಗೆ ಬರುವ ಮುನ್ನವೇ ಹಾಳು ಮಾಡುತ್ತಿವೆ ಹಳ್ಳಿಗಳಲ್ಲಿ ಮನೆ ಮನೆಯಲ್ಲೂ ಇವುಗಳ ಕಾಟ ಹೇಳತೀರದಾಗಿದೆ "ಹೆಚ್ಚು ಆಹಾರ ಬೆಳೆ" ಯ ಯೋಜನೆಯನ್ನು ಕೈಗೊಂಡಿರುವ ಸರ್ಕಾರದವರು ರೀತಿ ಬೆಳೆ ಹಾಳಾಗುತ್ತಲಿರುವುದನ್ನು ತಪ್ಪಿಸದಿದ್ದರೆ ಏನೂ ಪ್ರಯೋಜನವಾಗದು. ಸರ್ಕಾರದವರು ಈ ಕೋತಿಗಳನ್ನು ಕೊಲ್ಲಲು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಲೀ ಅಥವಾ ಜನರಿಗೆ ಬಂದೂಕಿನ ಲೈಸೆನ್ಸ್ ಕೊಟ್ಟು ಸಹಾಯ ಮಾಡಿಕೊಡಲೆಂದು ಪ್ರಾರ್ಥಿಸುತ್ತೇವೆ

ನೊಂದ ರೈತ

PRABHA

TO-NIGHT

HINDUSTHAN-HAMARA

Based on Minoo M... OUR INDIA

— Please Note

Concession to Students On 8 As for 13 As Class & 13 As for Re 1-3-0 Class

Students are requested to bring their membership or identification slips from the Heads of their Institutions

CITY IMPROVEMENT TRUST BOARD, Mysore

NOTIFICATION

No. Award 7/47-48

Dated 16-11-1951

It is hereby notified for the information of the public that site bearing Municipal No 2918 measuring 32 1/2'x47' facing Wellington Lodge, Irwin Road, Lashkar Mohalla Mysore, will be sold in public auction on Monday the 26th November 1951 at 9 A M The particulars and conditions of sale may be seen in the office notice Board

(Sd) P. Gopalakrishna Setty

Chairman

ಗೌಸ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಶ್ರೇಷ್ಠಿ ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿಜಿ. ನಂ. 792 : ಸಂಜೆ ಪತ್ರಿಕೆ : ಪ್ರತಿದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೨೧-೧೧-೫೧ [ಸಂಚಿಕೆ ೯೯

ಚುನಾವಣೆಯಲ್ಲಿ - ಪಕ್ಷಗಳ ತೀವ್ರಸ್ಪರ್ಧೆ -

ಶಾಸನ ಸಭೆಗೆ ಉಮೇದುವಾರರ ಅರ್ಜಿ

ನಗರ ಮತ್ತು ತಾಲ್ಲೂಕಿನ ಕ್ಷೇತ್ರಗಳಿಂದ

ಮೈಸೂರು ೨೧

[illegible]ಸೂರು ಶಾಸನ ಸಭೆಗೆ ಉಮೇದುವಾರಿಕೆ ಅರ್ಜಿಗಳನ್ನು ಕಳುಹಿಸಲು [illegible] ಕಡೇ ದಿನವಾಗಿದ್ದು, ವಿವಿಧ ಪಕ್ಷಗಳ ಮತ್ತು ಸ್ವತಂತ್ರ ಉಮೇದುವಾರರು ತಮ್ಮ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಮೈಸೂರು ನಗರ ಉತ್ತರ ಕ್ಷೇತ್ರಕ್ಕೆ- ಶ್ರೀಗಳು ಟಿ ಮರಿಯಪ್ಪ [illegible], ಹೆಚ್ ಎ. ಮುದ್ದಪ್ಪ, [illegible] [illegible]ದಪ್ಪ (ಸ್ವ), ಜಿ ಅಹಮದ್ [illegible] ಸ್ವ) ಮಿರ್ ನೂರ್ ಹುಸೇನ್ (ಸಮಾಜವಾದಿ ಪಕ್ಷ) ಶ್ರೀ ಟಿ ವೆಂಕಟರಮಣಯ್ಯ [illegible]ಗ್ರೆಸ್), ಶ್ರೀ ಚಂದ್ರಶೇಖರ ಜೋಯಿ[illegible] ಶ್ರೀ ಬಿ ಸುಬ್ಬಣ್ಣ ಮತ್ತು ಜ॥ ಮಹಮದ್ ಷರೀಫ್ (ಮುಸ್ಲಿಂ ಕನ್ವೆಂಷನ್) ಮೈಸೂರು ದಕ್ಷಿಣ ಕ್ಷೇತ್ರಕ್ಕೆ :- ಶ್ರೀ [illegible] ವಿ ನಾರಾಯಣಸ್ವಾಮಿ, [illegible] ಎ ವೆಂಕಟೇಶಯ್ಯ (ಕೆ ಎಂ [illegible]) ಫಿವರಾಜ್ (ಕೃಷಿಕ ಪಕ್ಷ ರೈತ ಪರ್ಟಿ) [illegible] ನಾರಾಯಣ (ಸ್ವ), ಎಂ ರಾಮ[illegible] (ಜನಸಂಘ), ಎಸ್ ರಂಗರಾ[illegible] ಬಿ ಶ್ರೀಕಂಠಪ್ಪ (ಸಮಾಜವಾದಿ) [illegible] ಜಿ ದಾಸ್ (ಸ್ವ) ಶ್ರೀ ಜಿ [illegible] ಸುಬ್ರಹ್ಮಣ್ಯ ಮತ್ತು ಶ್ರೀ ಕೆ [illegible] ಸೂರ್ಯನಾರಾಯಣರಾವ್ [illegible]

[illegible]ಕಿಗೆ :- ಶ್ರೀ ಶಿವನಂಜೇ[illegible] [illegible]), ಟಿ ಸಿ ಹೊನ್ನಪ್ಪ (ಕೆ[illegible]), ಶ್ರೀ ಹೆಚ್ ಕೆ ಕುಮಾರ[illegible] (ಸ್ವ), ಶ್ರೀ ಎಂ. ಎಸ್ ಬಸ[illegible] ಸ್ವ)

ಜಿಲ್ಲೆಯ ಪ್ರಜಾ ಪಕ್ಷದ ಉಮೇದುವಾರರು

[illegible]ಕ್ ಮಜದೂರ್ ಪ್ರಜಾ ಪಕ್ಷದ [illegible] ಶಾಖೆಯ ಪರವಾಗಿ ಈ ಜಿಲ್ಲೆ[illegible] [illegible]ಕೆಳಗೆ ಕಂಡವರನ್ನು ನಿಲ್ಲಿಸಲಾ[illegible] [illegible]ಮರಾಜನಗರ,- ಶ್ರೀ ಯು. [illegible] ಮಾದಪ್ಪ, ಗುಂಡ್ಲುಪೇಟೆ-ಹೆ[illegible] ಎನ್. ಕೆ ಶಿವರುದ್ರಪ್ಪ, ಶ್ರೀ [illegible]ಯ್ಯ (ರಿ), ಯಳಂದೂರ (ರಿ)- [illegible]ತಯ್ಯ, ಕೃಷ್ಣರಾಜನಗರ- ಶ್ರೀ [illegible] ಲಿಂಗಶೆಟ್ಟಿ, ನಂಜನಗೂಡು [illegible] ಎಸ್ ಲಿಂಗಪ್ಪ ಮತ್ತು (ರಿ)- [illegible] ಬಸವಯ್ಯ, ಟಿ ನರಸೀಪುರ- [illegible] ಶ್ರೀನಿವಾಸಯ್ಯಂಗಾರ್, [illegible]ಪಟ್ಟಣ- ಶ್ರೀ ಪಿ ವೆಂಕಟ[illegible]ಯ್ಯ,

ಟಿ ಆರ್. ಶ್ರೀನಿವಾಸನ್‌ರವರ ರೇಡಿಯೋ ಸಂಗೀತ

[illegible]ಸೂರಿನ ವಿ॥ ಟಿ. ಆರ್ ಶ್ರೀನಿ[illegible]ವರು ಈ ರಾತ್ರಿ ೮ ರಿಂದ ೯ ಗಂ[illegible]ಗೆ ಮೈಸೂರು ಆಕಾಶವಾಣಿ[illegible]ಯಿಂದ ಹಾಡಲಿರುವರು

ಭಾರತ-ಚೀನಾ ಸ್ನೇಹ ಸಂಘದ ಆರಂಭೋತ್ಸವ

[illegible] ಸೌಹಾರ್ದ ಮಂಡಲಿಯ [illegible]ದರಾದ ಟಿಂಗ್ ಸಿ ಲೀರವರು [illegible] ೭-೩೦ ಗಂಟೆಗೆ ಟೌನ್ ಹಾಲಿ[illegible] ಮೈಸೂರು ಸಂಸ್ಥಾನದ ಭಾರತ[illegible] ಚೀನಾ ಸ್ನೇಹ ಸಂಘದ ಆರಂಭೋ[illegible]ವನ್ನು ಮಾಡುವರು

ಕಾಂಗ್ರೆಸ್ಸಿಗೆ ರಂಗರಾಮಯ್ಯನವರ ರಾಜೀನಾಮೆ

ಮೈಸೂರು ೨೧

ಮೈಸೂರು ಶಾಸನ ಸಭೆಯ ಸದಸ್ಯರೂ, ಮಾಜಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ, ಆದ ಶ್ರೀ ಎಸ್ ರಂಗರಾಮಯ್ಯನವರು ಕಾಂಗ್ರೆಸ್ಸಿಗೆ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ ಇವರು ಸುಮಾರು ೨೦ ವರ್ಷಗಳಿಂದಲೂ ಕಾಂಗ್ರೆಸ್ಸಿನ ಸದಸ್ಯರಾಗಿದ್ದು ಅನೇಕ ಬಾರಿ ಜೈಲು ವಾಸಗಳನ್ನು ಅನುಭವಿಸಿದ್ದರು ನಂಜನಗೂಡಿನ ಶ್ರೀ ಹೆಜ್ಜಿಗೆ ಲಿಂಗಣ್ಣನವರೂ ಸಹ ರಾಜೀನಾಮೆ ಸಲ್ಲಿಸಿರುತ್ತಾರೆ ಅವರು ಶಾಸನ ಸಭೆಗೆ ತಾಲ್ಲೂಕಿನಿಂದ ಸ್ವತಂತ್ರರಾಗಿ ಸ್ಪರ್ಧಿಸುವರು

ರಾಜೀನಾಮೆ ವಾಪಸು ಪಡೆದು ಐಕ್ಯತೆ ಉಳಿಸಿರಿ

ಸಂಸ್ಥೆ ಬಿಟ್ಟ ಸದಸ್ಯರಿಗೆ ನಗರ ಕಾಂಗ್ರೆಸ್ ಸಮಿತಿಯ ಪ್ರಾರ್ಥನೆ.

ಮೈಸೂರು ೨೦

ನೆನ್ನೆ ಸಂಜೆ ನಗರ ಕಾಂಗ್ರೆಸ್ ಸಮಿತಿಯ ಸಭೆಯು ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಕಾಂಗ್ರೆಸ್ ಸಂಸ್ಥೆಗೆ ಅನೇಕರು ರಾಜೀನಾಮೆ ಕೊಡುತ್ತಿರುವುದನ್ನು ಸಮಿತಿಯು ವ್ಯಸನ ಪೂರ್ವಕವಾಗಿ ಗಮನಿಸಿರುವುದಲ್ಲದೇ, ಹಾಗೆ ಕೊಟ್ಟಿರುವವರು ತಮ್ಮ ರಾಜೀನಾಮೆಗಳನ್ನು ವಾಪಸು ಪಡೆದು ಸಂಸ್ಥೆಯ ಐಕ್ಯತೆಯನ್ನು ಕಾಪಾಡಬೇಕೆಂದು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು ಮತ್ತೊಂದು ನಿರ್ಣಯವನ್ನು ಮಾಡಿ ಶ್ರೀಮತಿ ಸುನಂದಮ್ಮನವರು ತಮ್ಮ ರಾಜೀನಾಮೆಯನ್ನು ವಾಪಸು ಪಡೆಯಬೇಕೆಂದು ಕೋರಲಾಯಿತು ಚುನಾವಣೆ ಸಂಬಂಧವಾಗಿ ನಡೆಸಬೇಕಾದ ಕಾರ್ಯಕ್ರಮಗಳನ್ನು ಈ ದಿನ ಸಂಜೆ ನಡೆಯುವ ಕಾರ್ಯಕರ್ತರ ಸಭೆಯಲ್ಲಿ ಗೊತ್ತುಪಡಿಸಬೇಕೆಂದು ನಿರ್ಧರವಾಯಿತು

○ ರಾಜಸ್ಥಾನದ ಬಿಕನೇರ್, ಜೋಧಪುರ, ಕರೌಲಿ ಮತ್ತು ಧುಂಗರಪುರದ ರಾಜರು ಭಾರತದ ಪಾರ್ಲಿಮೆಂಟ್‌ಗೆ ಚುನಾವಣೆಗೆ ಸ್ಪರ್ಧಿಸಲು ತೀರ್ಮಾನಿಸಿರುತ್ತಾರೆ. ಹಲವು ಸಣ್ಣ ರಾಜರುಗಳೂ ಸಹ ಸ್ಪರ್ಧಿಸುವರೆಂದು ಹೇಳಲಾಗಿದೆ

ಕೋಳಿ ಕದ್ದಿದ್ದಕ್ಕೆ ೩ ವರ್ಷ ಶಿಕ್ಷೆ ಮತ್ತು ೫೦೦ ರೂ. ದಂಡ

ಮೈಸೂರು ೨೧

ರಂಗಸ್ವಾಮಿ ಎಂಬುವನು ರಾಜಧಾನಿಯ ಮಂಡಿ ಮೊಹಲ್ಲಾ ಕಾಮಾಟಗೇರಿಯಲ್ಲಿರುವ ಶ್ರೀ ಎಲ್ಲಪ್ಪನವರ ಮನೆಯಲ್ಲಿ ಕೋಳಿಯನ್ನು ಮೊನ್ನೆ ಕದ್ದನೆಂಬ ಫಿರ್ಯಾದನೆಯು ಸ್ಥಿರಪಟ್ಟಿದ್ದರಿಂದ ೩ನೇ ದರ್ಜೆ ನ್ಯಾಯಾಧೀಶರಾದ ಶ್ರೀ ಮುನಿಸ್ವಾಮಯ್ಯನವರು ಅಪಾದಿತನಿಗೆ ೩ ವರ್ಷ ಕಠಿಣ ಸಜಾ ಮತ್ತು ೫೦೦ ರೂ ಜುಲ್ಮಾನೆ ತಪ್ಪಿದರೆ ೬ ತಿಂಗಳು ಕಠಿಣ ಸಜಾವನ್ನು ನೆನ್ನೆ ವಿಧಿಸಿದರ

ನಾನಾ ಪ್ರಾಂತಗಳಲ್ಲಿ ಚುನಾವಣಾ ಸ್ಪರ್ಧಿಗಳು

ಸಾರ್ವತ್ರಿಕ ಚುನಾವಣೆಗಳ ಅಂಗವಾಗಿ ಬೊಂಬಾಯಿ, ಮಧ್ಯ ಪ್ರದೇಶ, ಉತ್ತರ ಪ್ರದೇಶ, ಬಂಗಾಳಾ ಒರಿಸ್ಸಾ, ಮದ್ರಾಸು ಮುಂತಾದ ನಾನಾ ಪ್ರಾಂತಗಳಲ್ಲಿ ವಿವಿಧ ಪಕ್ಷಗಳ ಉಮೇದುವಾರರು ತಮ್ಮ ಅರ್ಜಿಗಳನ್ನು ಸಲ್ಲಿಸಿರುತ್ತಾರೆ ಬಂಗಾಳಾದ ಶಾಸನ ಸಭೆಯ ೨೩೮ ಸ್ಥಾನಗಳಿಗೆ ೨೫೫೦ ಅರ್ಜಿಗಳು ಬಂದಿವೆ ಉತ್ತರ ಪ್ರದೇಶದಲ್ಲಿ ೧೭ ಪಕ್ಷಗಳು ಸ್ಪರ್ಧಿಸುವುವು ಪಾರ್ಲಿಮೆಂಟಿಗೆ ಬೊಂಬಾಯಿ ಕ್ಷೇತ್ರಗಳಿಂದ ಡಾ॥ ಅಂಬೇಡ್ಕರ್, ಎಸ್ ಕೆ ಪಾಟೀಲ್, ಕಮಲಾದೇವಿ ಚಟ್ಟೋಪಾಧ್ಯಾಯ, ಶ್ರೀಮತಿ ಜಯಶ್ರೀ ರಾಯ್‌ಜಿ ಮುಂತಾದವರು ಸ್ಪರ್ಧಿಸಿರುವರು ಬಂಗಾಳಾ ಮುಖ್ಯ ಮಂತ್ರಿ ಬಿ ಸಿ. ರಾಯ್‌ರಿಗೆ ವಿರುದ್ಧವಾಗಿ ಫಾರ್ವರ್ಡ್ ಬ್ಲಾಕಿನ ಸತ್ಯಪ್ರಿಯ ಬ್ಯಾನರ್ಜಿಯವರು ನಿಂತಿರುತ್ತಾರೆ

ಉಮೇದುವಾರರ ಹೆಸರು ಸತ್ತವರ ಪಟ್ಟಿಯಲ್ಲಿ

ಬಿರಾರಿನ ಅಕೋಲಾ ನಗರದ ವಕೀಲ ಶ್ರೀ ಎಸ್ ಜಿ ಸಪ್ಕಾಲ್‌ರವರು ಮಧ್ಯಪ್ರದೇಶದ ಶಾಸನ ಸಭೆಗೆ ಉಮೇದುವಾರಿಕೆ ಅರ್ಜಿ ಸಲ್ಲಿಸಲು ಮೊನ್ನೆ ಅಧಿಕಾರಿಗಳ ಬಳಿ ಹೋದಾಗ, ಅವರ ಹೆಸರು "ಸತ್ತ" ವರ ಪಟ್ಟಿಯಲ್ಲಿ ಸೇರಿತ್ತೆಂದೂ, ಕೂಡಲೇ ೫೦ ರೂ ಗಳನ್ನು ಅವರು ಸಲ್ಲಿಸಿ, ಪಟ್ಟಿಯಲ್ಲಿ ಹೆಸರನ್ನು ಪುನಃ ಸೇರಿಸುವ ವೇಳೆಗೆ ಉಮೇದುವಾರಿಕೆ ಅರ್ಜಿ ಸಲ್ಲಿಸುವ ಕಾಲ ಮೀರಿ ಹೋಗಿತ್ತೆಂದೂ ವರದಿಯಾಗಿದೆ

ಉತ್ಪಾದನೆಯನ್ನನುಸರಿಸಿ ಜನಸಂಖ್ಯೆ ಬೆಳೆಯಬೇಕು

ಮಿತಸಂತಾನದ ಬಗ್ಗೆ ಶಕುಂತಲಾ ಪರಾಂಜಪೆಯವರ ಭಾಷಣ

ಮೈಸೂರು ೨೧

ಪೂನಾ ಪೌರ ಸಭೆಯಲ್ಲಿ ಮಿತ ಸಂತಾನ ಕಾರ್ಯದ ಅಧಿಕಾರಿಗಳಾದ ಶ್ರೀಮತಿ ಶಕುಂತಲಾ ಪರಾಂಜಪೆಯವರನ್ನು ನೆನ್ನೆ ಮಧ್ಯಾಹ್ನ ಮೈಸೂರು ಪುರಸಭೆಯವರು ಸಭಾ ಭವನದಲ್ಲಿ ಸತ್ಕರಿಸಿದರು ಅಧ್ಯಕ್ಷರಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿಯವರು ಮಾತನಾಡುತ್ತಾ ಈ ರೀತಿ ತಿಳಿಸಿದರು:-

ನಮ್ಮ ದೇಶದ ಈಗಿನ ಪರಿಸ್ಥಿತಿಯಲ್ಲಿ ಮಿತ ಸಂತಾನವು ಅವಶ್ಯಕವಾದುದು ಕಳೆದ ೫೦ ವರ್ಷಗಳಿಂದ ನಮ್ಮ ದೇಶದಲ್ಲಿ ಮರಣ ಸಂಖ್ಯೆಯು ಕ್ರಮೇಣ ಕಡಿಮೆಯಾಗುತ್ತಾ ಜನನ ಸಂಖ್ಯೆ ೩ ವರ್ಷಕ್ಕೆ ೧ ಕೋಟಿಯಂತೆ ಏರುತ್ತಿದೆ. ಜನಸಂಖ್ಯೆಯು ಯಾವಾಗಲೂ ಉತ್ಪಾದನೆಗೆ ಅನುಗುಣವಾಗಿ ಮಾತ್ರ ಬೆಳೆಯಬೇಕು ಆದುದರಿಂದ ಜನ ಸಂಖ್ಯೆಯನ್ನು ಹತೋಟಿಯಲ್ಲಿಡುವುದು ಅವಶ್ಯಕ ಇದಕ್ಕಾಗಿ ಮಿತ ಸಂತಾನ ಕಾರ್ಯವನ್ನು ಕೈಗೊಳ್ಳಬೇಕು ಮುಖ್ಯವಾಗಿ ಇದನ್ನು ವಿವಾಹಿತರು ಪ್ರಚಾರ ಮಾಡುವುದು ಒಳ್ಳೆಯದು

ಕಾಂಗ್ರೆಸ್ಸನ್ನು ತ್ಯಜಿಸುವ ಅಗತ್ಯವಿಲ್ಲವೆಂದು ಹೇಳಿಕೆ

ಬೆಂಗಳೂರು ಕಾರ್ಪೊರೇಷನ್ನಿನ ಮಾಜಿ ಸದಸ್ಯರಾದ ಶ್ರೀ ಜಿ. ಎಸ್ ದೇವದಾಸ್‌ರವರು ಒಂದು ಹೇಳಿಕೆಯಿತ್ತು, ಕಾಂಗ್ರೆಸ್ ಉಮೇದುವಾರರ ಪಟ್ಟಿಯು ಪ್ರಕಟವಾದನಂತರ ಸ್ಥಾನ ದೊರಕದಿರುವವರು, ಅವರ ಕಡೆಯವರೂ ಸಂಸ್ಥೆಗೆ ರಾಜೀನಾಮೆ ಕೊಡುತ್ತಿರುವರೆಂದೂ, ಕಾಂಗ್ರೆಸ್ಸಿನ ಮೇಲ್ಮೆ ಮತ್ತು ದೇಶದ ಹಿತಕ್ಕಾಗಿ ಜನರು ಅದಕ್ಕೆ ಸೇರಿದುದಾಗಿಯೂ, ಸೇವೆಯೇ ಮುಖ್ಯ ದೃಷ್ಟಿಯುಳ್ಳವರಿಗೆ ಸ್ಥಾನದ ಅವಶ್ಯಕತೆಯಿಲ್ಲವೆಂದೂ ತಿಳಿಸಿರುತ್ತಾರೆ ರಾಜಕೀಯ ಮಾತ್ರವಲ್ಲದೇ ರಚನಾತ್ಮಕ ಕಾರ್ಯಗಳನ್ನು ನಡೆಸಲು ಕಾಂಗ್ರೆಸ್ಸಿನಲ್ಲಿ ಅವಕಾಶವಿರುವುದಾಗಿಯೂ, ರಾಜಕೀಯ ಸ್ಥಾನಮಾನಗಳು ಕ್ಷಣಿಕವೆಂದು, ಇತರ ಕ್ಷೇತ್ರಗಳಲ್ಲಿ ದುಡಿಯುವವರ ಪದವಿ ಶಾಶ್ವತವೆಂದೂ ಅವರು ತಿಳಿಸಿ, ರುತ್ತಾರೆ

ಪ್ರಜಾ ಸಭೆಗೆ ಉಮೇದುವಾರರು

ಮೈಸೂರು ೨೧

ಈ ದಿನ ಮೈಸೂರು ಜಿಲ್ಲಾಧಿಕಾರಿಗಳೂ ಪಾರ್ಲಿಮೆಂಟಿನ ಪ್ರಜಾ ಸಭೆಯ ಚುನಾವಣಾಧಿಕಾರಿಗಳೂ ಆದ ಜ॥ ಮಹಮದ್ ಅಹಮದ್‌ರವರ ಸಮ್ಮುಖದಲ್ಲಿ ಕಾಂಗ್ರೆಸ್ಸಿನ ಪರವಾಗಿ ಹೆಚ್ ಸಿ ದಾಸಪ್ಪನವರೂ, ಕಿಸಾನ್ ಮಜದೂರ್ ಪ್ರಜಾ ಪಕ್ಷದ ಪರವಾಗಿ ಪ್ರಜಾಮತ ಸಂಪಾದಕರಾದ ಶ್ರೀ ಎಂ. ಎಸ್ ಗುರುಪಾದ ಸ್ವಾಮಿಯವರೂ ಶ್ರೀ ಎಂ. ಎನ್. ಮಹಂತದೇವರೂ, ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಭಾರತದ ನೋಟುಗಳ ಚಲಾವಣೆಗೆ ಪಾಕ್ ನಿಷೇಧ

ಪಾಕಿಸ್ತಾನದ ಸರ್ಕಾರ ಎಂಬುದಾಗಿ ಮುದ್ರಿತವಾಗಿರುವ ಭಾರತ ಸರ್ಕಾರ ಮತ್ತು ರಿಸರ್ವ್ ಬ್ಯಾಂಕುಗಳ ೧,೨,೫, ೧೦, ಮತ್ತು ೧೦೦ ರೂಪಾಯಿಗಳ ನೋಟುಗಳು, ಬರುವ ಜನವರಿ ೧ನೇ ರಿಂದ ಚಲಾವಣೆಯಲ್ಲಿರುವುದಿಲ್ಲವೆಂದು ಪಾಕಿಸ್ತಾನ ಸರ್ಕಾರದವರು ತಿಳಿಸಿರುತ್ತಾರೆ

ಚುನಾವಣೆಯಲ್ಲಿ ಶಿವರಾಮ ಕಾರಂತ್‌ರವರ ಸ್ಪರ್ಧೆ

ಕಿಸಾನ್ ಮಜದೂರ್ ಪಕ್ಷದ ಪರವಾಗಿ ಮದ್ರಾಸು ಶಾಸನ ಸಭೆಗೆ ಸುಪ್ರಸಿದ್ಧ ಕನ್ನಡ ಸಾಹಿತಿ ಶಿವರಾಂ ಕಾರಂತ್‌ರವರು ಸ್ಪರ್ಧಿಸುವರೆಂದು ಹೇಳಲಾಗಿದೆ ಮಾಜಿ ಮಂತ್ರಿ ಕೆ. ಆರ್ ಕಾರಂತರೂ, ಜನಾಬ್ ಹೆಗ್ಗಡೆಯವರೂ ಪಾರ್ಲಿಮೆಂಟಿಗೆ ಸ್ಪರ್ಧಿಸುವರು

ಆಕಾಶವಾಣಿಯಲ್ಲಿ

ಡಾ|| ಸೀಬಯ್ಯನವರ ಭಾಷಣ

ಈ ಸಂಜೆ ೭|| ಗಂಟೆಗೆ ಆಲ್ ಇಂಡಿಯಾ ರೇಡಿಯೋ ಮೈಸೂರು ಕೇಂದ್ರದಿಂದ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಲ್ ಸೀಬಯ್ಯನವರು "ಕೃತಕ ಮಳೆ ..." ವಿಷಯವಾಗಿ ಕನ್ನಡದಲ್ಲಿ ಭಾಷಣ ಮಾಡುವರು

ಎ. ಜಿ. ಬಂಡೀಗೌಡರಿಗೆ ಸನ್ಮಾನ

ಬನ್ನೂರು ಹೋಬಳಿ ಕೋಡಗಹಳ್ಳಿ ಗ್ರಾಮದ ಪಟೇಲರಾದ ಶ್ರೀ ಬಸವೇಗೌಡರು ಕಳೆದ ಭಾನುವಾರ ... ಸಕ್ಕರೆ ಕಂಪನಿಯ ಅಧ್ಯಕ್ಷರಾದ ಶ್ರೀ ಎ ಜಿ ಬಂಡೀಗೌಡರನ್ನು ಬರಮಾಡಿಕೊಂಡು ಸನ್ಮಾನಿಸಿದರು. ತಾಲ್ಲೂಕು ... ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು

Edited, Printed and Published by A R Nagarajan, at Sadhvi Press D Subbiah Road, Mysore

೧೨೦ ಕೋಟಿ ಪ್ರಜೆಗಳಿಗೆ ಸಾಕಷ್ಟು ಆಹಾರವಿಲ್ಲ

ವಿಶ್ವ ಸಂಸ್ಥೆಯ ಆಹಾರ ಮತ್ತು ವ್ಯವಸಾಯ ಶಾಖೆಯ ಸಮ್ಮೇಳನವನ್ನು ರೋಮ್ ನಗರದಲ್ಲಿ ಸೇರಿದಾಗ, ಡೈರೆಕ್ಟರ್ ಜನರಲ್ ನಾರಿಸ್ ಡಾಡ್‌ರವರು ಭಾಷಣ ಮಾಡಿ ಪ್ರಪಂಚದ ೧೨೦ ಕೋಟಿ ಪ್ರಜೆಗಳು ಸಾಕಷ್ಟು ಊಟ ಮಾಡುವ ಸ್ಥಿತಿಯಲ್ಲಿಲ್ಲವೆಂದು ತಿಳಿಸಿರುತ್ತಾರೆ

ಪೂರ್ವ ಪಂಜಾಬಿನಲ್ಲಿ ಪುನಃ ಪ್ರಜಾ ಸತ್ತಾತ್ಮಕ ಸರ್ಕಾರ ?

ಪೂರ್ವ ಪಂಜಾಬಿನಲ್ಲಿ ಪುನಃ ಪ್ರಜಾ ಸತ್ತಾತ್ಮಕ ಸರ್ಕಾರವನ್ನು ಏರ್ಪಡಿಸಲು ಮಾಜಿ ಮುಖ್ಯ ಮಂತ್ರಿ ಡಾ|| ಗೋಪಿಚಂದ್ ಭಾರ್ಗವರವರು ಬರುವ ವಾರ ಪ್ರಯತ್ನಿಸುವರೆಂದು ತಿಳಿದುಬಂದಿದೆ

ನೆಹರೂ ಜಯಂತಿ

ಶ್ರೀ ... ಭಾನುವಾರ ... ಕಳೆದ ಭಾನುವಾರ ನೆಹರೂ ಜಯಂತಿಯನ್ನು ಆಚರಿಸ... ಶ್ರೀ ... ಗೌಡರವರು ಅಧ್ಯಕ್ಷರಾಗಿದ್ದರು. ... ಗಂಧರ್ಭ ... ರವರು ನೆಹರೂರವರ ಗುಣಗಾನ ಮಾಡಿದರು ... ಸಭೆ ಮುಕ್ತಾಯವಾಯಿತು.

ಮುಖ್ಯ ದಿನಾಚರಣೆ

... ಮೈಸೂರಿನ ... ಶಾಲೆಯಲ್ಲಿ ಕಳೆದ ... ದಿನಾಚರಣೆಯು ಜರುಗಿತು. ... ಮುಖ್ಯೋಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು ... ನಂತರ ಸಂಘದ ಕಾರ್ಯದರ್ಶಿಗಳಾದ ಶ್ರೀ ನಾಗರಾಜರವರು ವಂದನಾರ್ಪಣೆ ಸಲ್ಲಿಸಿದ ತರುವಾಯ ಸಮಾರಂಭವು ಮುಕ್ತಾಯವಾಯಿತು

ಸನ್ಯಾಸಿ ಉಮೇದುವಾರರಿಗೆ ರಿಯಾಯಿತಿ

ಸನ್ಯಾಸಿಗಳು ಮತ್ತು ಸ್ತ್ರೀಯರು ತಮ್ಮ ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸುವಾಗ ಅವುಗಳಲ್ಲಿ ಅವರ ತಂದೆಯ ವರ ಹೆಸರುಗಳನ್ನು ಬರೆಯದಿದ್ದರೆ ನಾಮಪತ್ರಗಳನ್ನು ವಜಾ ಮಾಡಕೂಡದೆಂದು ಹೈದರಾಬಾದು ಸರ್ಕಾರದವರು ಆಜ್ಞಾಪಿಸಿರುತ್ತಾರೆ

ವಾರ್ಷಿಕೋತ್ಸವ

ಮೈಸೂರು ಕೀರ್ತನಕಾರ ಮಂಡಲಿಯ ಐದನೆಯ ವಾರ್ಷಿಕೋತ್ಸವವು ಮಿರ್ಜಾ ಆಸ್ಪತ್ರೆ ರೋಡು ಶ್ರೀ ಎಲ್ಲಮ್ಮ ದೇವಸ್ಥಾನದ ಶ್ರೀರಾಮಮಂದಿರದಲ್ಲಿ ತಾ|| ೨೫ನೇ ಭಾನುವಾರದಿಂದ ಆಗಾಯ್ತು ಸುಮಾರು ೩೦ ದಿನಗಳ ತನಕ ಪ್ರತಿ ದಿನ ಸಂಜೆ ೭ ಗಂಟೆಯಿಂದ ನಡೆಯಲಿದೆ ಈ ಸಂಬಂಧವಾಗಿ ಕಥೆ, ಪುರಾಣ, ಯಕ್ಷಗಾನ, ಉಪನ್ಯಾಸ ಮತ್ತು ಸಂಗೀತ ಕಾರ್ಯಕ್ರಮಗಳು ನಡೆಯಲೇರ್ಪಡಿಸಿರುವುದರಿಂದ ಆಯಾಯ ಕಳಾ ವಿದ್ವಾಂಸರು ಮತ್ತು ಮಹಾಜನರು ಸಹಕರಿಸಬೇಕಾಗಿ ಕೋರಲಾಗಿದೆ.

ADMISSIONS RECEIVED

Coaching For

B A & B. Sc { English Mathematics

INTER { English P C M C B Z

S S L C All Subjects

CITY TUTORIAL COLLEGE,

Near V V Market, Mysore.

ರಾಷ್ಟ್ರೀಯ ಮಾ...ಸೈನ್ಯ ಸಿದ್ಧವಾಗಿದೆ

ಫಾರ್ಮೋಸಾದಲ್ಲಿರುವ ರಾಷ್ಟ್ರೀಯ ಚೀಣರ ೫ ಲಕ್ಷ ಸೈನ್ಯಗಳು ಎಂತಹ ಹೋರಾಟ ... ಸಿದ್ಧವಾಗಿರುವುವೆಂದು ಅಮೆರಿಕದ ವೃತ್ತ ಪತ್ರಿಕೆಗಾರರು ತಿಳಿಸಿರುತ್ತಾರೆ

ಉಪನ್ಯಾಸ

ವಿಶ್ವಸಂಸ್ಥೆಯ ಮೈಸೂರು ಸಂಘದ ಕಾರ್ಯದರ್ಶಿಯವರಾದ ಶ್ರೀ ಟಿ.ಎ. ರಾಮಶಂಕರರವರು ಮೊನ್ನೆ ಕೇಂದ್ರ ಸಂಶೋಧನಾಲಯದಲ್ಲಿ "ಪ್ರಪಂಚ ... ಗಳ ಭಿನ್ನತೆಗಳು" ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ಶೋಧನಾಲಯದ 'ಡೈರೆಕ್ಟರ್ ಡಾ|| ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸಿದ್ದರು.

ಒಲಂಪಿಯಾ

23-11-51 ರಿಂದ ಜಯಪ್ರದ ಮೂರನೇ ವಾರ

ದೇವಾನಂದ್ ಮತ್ತು ಸುರಯ್ಯ ವಹಿಸಿರುವ

*** ವಿದ್ಯಾ ***

ಇದರ ಜೊತೆಯಲ್ಲಿ ಚೊಂಬಾಯಿ ನಡೆದ ನಟ ನಟಿಯರ ಕ್ರಿಕೆಟ್ ಪಂದ್ಯವನ್ನು ಸಹ ತೋರಿಸಲಾಗುತ್ತದೆ

ಬೇಗನೆ ಪ್ರದರ್ಶನ

23-11-51 ರಿಂದ 3 ದಿನಗಳು

ಚಾರ್ಲಿ, ಚಂದ್ರ ಮೋಹನ್, ಕೃಷ್ಣ ... ಮೋತಿಲಾಲ್ ಪಾತ್ರ ವಹಿಸಿದ

ರೋಶನಾ

ಶ್ರೀ ಚಾಮುಂಡೇಶ್ವರಿ ಟಾಕೀಸ್

23-11-51 ರಿಂದ :: ಯಶಸ್ವೀ 5ನೇ ವಾರ

• ಮಣ ಮಗಳ್ •

ತಾರಾಗಣ :- ಎನ್ ಎಸ್ ಕೃಷ್ಣನ್, ಟಿ. ಎ. ಮಧುರಂ, ಲಲಿತ-ಪದ್ಮಿನಿ ಸಹಸ್ರನಾಮಂ, ಬಾಲಯ್ಯ, ದೊರೈರಾಜ್, ಬಾಲಸುಬ್ರಹ್ಮಣ್ಯಂ, ಪುಳಿಮೂಟೈ ಮುಂತಾದವರು

30-11-51 ರಿಂದ — ದೀಕ್ಷಾ — (ತಮಿಳು)

ಶ್ರೀ ಗಣೇಶಾ ಟಾಕೀಸ್

23-11-51 ರಿಂದ :: ಆರಂಭ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

ಪ್ರಕಾಶ್ ಪಿಕ್ಚರ್ಸ್‌ರವರ ತೆಲುಗು ಚಿತ್ರ

*** ಮೊದಟಿ ರಾತ್ರಿ**

ಮುಖ್ಯಪಾತ್ರ :- ಜಿ ವರಲಕ್ಷ್ಮಿ, ಪ್ರಕಾಶ್ ರಾವ್, ಶಿವರಾವ್ ನಾರಾಯಣರಾವ್ ಮುಂತಾದವರು

[A PRAKASH RELEASE

ದಿ ಹಿಂದೂ ಬ್ಯಾಂಕ್ ಕರೂರು.

ಲಿಮಿಟೆಡ್ ಮೈಸೂರು

ಮೇಲ್ಕಂಡ ಬ್ಯಾಂಕಿನ ಗಿರಾಕಿಗಳಿಗೂ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಬ್ಯಾಂಕಿನ ಮೈಸೂರು ಶಾಖಾ ಕಛೇರಿಯನ್ನು ತಾರೀಕು 1 12-51 ರಿಂದ ಮುಚ್ಚಲಾಗುವುದು ಸದರಿ ಬ್ಯಾಂಕಿನಲ್ಲಿ ಆಭರಣಗಳ ಆಧಾರದ ಮೇಲೆ ಸಾಲ ಪಡೆದಿರುವವರು 30 11-51 ನೇ ತಾರೀಕಿನೊಳಗಾಗಿ ತಮ್ಮಿಂದ ಸಲ್ಲಬೇಕಾದ ಬಾಕಿಯನ್ನು ಪಾವತಿ ಮಾಡಿ ನಗಗಳನ್ನು ವಾಪಸು ಪಡೆಯತಕ್ಕದ್ದು. ಹಾಗೆ ಮಾಡಲು ತಪ್ಪಿದಲ್ಲಿ, ತಾ|| 30 11-51ರ ನಂತರ ನಗಗಳನ್ನು ಉತ್ತರ ಆರ್ಕಾಟು ಜಿಲ್ಲೆಯ ತಿರುಪತ್ತೂರಿನಲ್ಲಿರುವ ನಮ್ಮ ಬ್ಯಾಂಕಿನ ಶಾಖೆಗೆ ವರ್ಗಾಯಿಸಲಾಗುವುದರಿಂದ, ಮೈಸೂರಿನ ಶಾಖೆಯಲ್ಲಿ ಸಾಲ ಪಡೆದಿರುವವರೆಲ್ಲರೂ ತಮ್ಮ ಸ್ವಂತ ವೆಚ್ಚದಿಂದ ತಿರುಪತ್ತೂರಿಗೆ ಹೋಗಿ, ಸಾಲ ತೀರಿಸಿ, ತಮ್ಮ ನಗಗಳನ್ನು ಪಡೆಯಬೇಕಾಗುವುದು

ಕೆ. ವಿ. ರಾಮಕೃಷ್ಣ ರಾವ್,
ಆಕ್ಟಿಂಗ್ ಏಜೆಂಟ್.

- ಮಲೇರಿಯಾಹಾರಿ ಸೊಳ್ಳೆಪರದೆಗಳಿಗೆ ಬಾಹುಸಾರ್ -

ಮಕ್ಕಳ ತೊಟ್ಟಿಲಿಗೆ, ಮಂಚಕ್ಕೆ, ಸಿಂಗಲ್, ಡಬ್ಬಲ್ ಹಾಸಿಗೆಗಳಿಗೆ, ಬಡಬಗ್ಗರಿಗೂ ಸಹ ಅನುಕೂಲವಾದ ಬೆಲೆ. ಬಾಹುಸಾರ್ ಕಂಪೆನಿ, ಬ್ಯಾಂಕ್ ರೋಡ್, ಮೈಸೂರು

ಗಾ|| ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ **M. V. ಭೋಜಯ್ಯ** ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿಜಿ ನಂ. 792 । ಸಂಚೀ ಬೆಲೆ ೩೦ । ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೨೨-೧೧-೫೧ [ಸಂಚಿಕೆ ೧೦೦

ಪರ್ಷಿಯದಿಂದ ಬ್ರಿಟನ್ನಿಗೆ - ಎಣ್ಣೆಯ ಪರಿಹಾರ -

ಶಾಸನ ಸಭೆಗೆ ಜಿಲ್ಲೆಯ ಉಮೇದುವಾರರ ಪಟ್ಟಿ

ಮೈಸೂರು ೨೨

ಮೈಸೂರು ಶಾಸನ ಸಭೆಗೆ ನೆನ್ನೆ ಈ ಜಿಲ್ಲೆಯಿಂದ ತಾಲ್ಲೂಕು ಕ್ಷೇತ್ರಗಳಿಂದ ಉಮೇದುವಾರರು ತಮ್ಮ ಅರ್ಜಿಗಳನ್ನು ಸಲ್ಲಿಸಿರು:—

ಮೈಸೂರು ತಾ|| ಜಾಗ ೧ :— ಶ್ರೀ ... ಮಹದೇವಸ್ವಾಮಿ ಮತ್ತು ಶ್ರೀ ... ಸಿದ್ದಯ್ಯ (ಕಿ.ಪ), ಶ್ರೀ ಎಂ.ಎಸ್ ... (ಜನ ಸಂಘ) ನೆನ್ನೆ ಇತರ ... ಗಳು ಪ್ರಕಟವಾಗಿವೆ.

ಕೃಷ್ಣರಾಜನಗರ ತಾ|| ಜಾಗ ೧ ,— ಶ್ರೀ ... ದೇವ ಎಂ. ಎಲ್. ನಂಜರಾಜೆ ಅರಸ್ (ಕಾಂ), ಬಳಿ ಸಿದ್ದಲಿಂಗಶೆಟ್ಟಿ (ಕೆ. ... ಪಿ.), ಡಾ|| ಗೌಡಯ್ಯ (ಸಮಾಜವಾದಿ), ಎಸ್. ಹೆಚ್. ತಮ್ಮ ... (ಸ್ವ), ಬಿ. ಎಸ್ ಲಲಿತಾಂಗದೇವ (ಸ್ವ) ... ಮತ್ತು ಎಸ್. ಕೆ. ಸಿದ್ದಪ್ಪ.

ಹುಣಸೂರು ತಾ|| ಜಾಗ ೧ : ಶ್ರೀ ... ಡಿ ದೇವರಾಜೆಅರಸ್ (ಕಾಂ), ... ರಾಮರಾವ್ (ಜನ ಸಂಘ), ... ಮರಿ ಗೌಡ, ಕುಂಟಯ್ಯ ... ಚಂದ್ರಶೇಖರಯ್ಯ (ಸ್ವ)

... ರಾಸಿಟ್ಟಣ ತಾ|| ಜಾಗ ೧ — ... ದ ಹೆಚ್ ಎಂ. ಚನ್ನಬಸಪ್ಪ ... ಸಿ. ವೆಂಕಟಸುಬ್ಬಯ್ಯ (ಕೆ. ... ಮತ್ತು ಎಸ್.ಮರಿಯಪ್ಪ (ಸ್ವ)

... ಡ್ಲುಪೇಟೆ– ಹೆಗ್ಗಡದೇವನಕೋಟೆ ... ಜಾಗ– ಶ್ರೀ ಎಂ ... ಶಿವ ... ಡಾ|| ಗಫಾರ್ ಖಾನ್ (ಸ್ವ), ... ಶಿವರುದ್ರಪ್ಪ (ಸ್ವ) ಎಚ್ ... ಪ್ಪ (ಸ್ವ), ಎ ಲಿಂಗಪ್ಪ (ಸ್ವ), ... ಕ್ಷೇತ್ರ ಸಿ. ವೆಂಕಟರಮಣ ... ಸಿದ್ದಯ್ಯ ಉರುಫ್ ಕುನ್ನಯ್ಯ (ಸ್ವ)

... ನಗೂಡು ಜಾಗ೧- ಶ್ರೀಗಳಾದ ... ಸಿದ್ದಯ್ಯ (ಕಾಂ), ಎಸ್. ... ಕೆ ಎಂ ಪಿ.), ಬಿ.ಎಸ್ ಎಸ್. ... (ಸ್ವ), ಮತ್ತು ಹೆಜ್ಜಿಗೆ ಲಿಂಗ ... ರಿಸರ್ವ್ ಕ್ಷೇತ್ರ ೧ ಜಾಗ– ... ದ ನೇರಳೆ ಮಾದಯ್ಯ (ಕಾಂ), ... ರಂಗಯ್ಯ (ಸ್ವ.ಪ) ಮತ್ತು ಬಿ ... (ಕೆ.ಎಂ ಪಿ).

... ನರಸೀಪುರ ೧ ಜಾಗ– ಶ್ರೀಗ ... ಪಿ ಬೋರಯ್ಯ (ಕಾಂ), ... ನಿವಾಸಯ್ಯಂಗಾರ್ (ಕೆ ಎಂ. ... ಬೋರೆಗೌಡ (ಸ್ವ), ಎಸ್ ... ಗೇಗೌಡ (ಸ್ವ), ಮತ್ತು ಎಂ ... ಪ (ಕಾಂ)

... ಮೂರು ೧ ಜಾಗ– ಶ್ರೀಗಳಾ ... ಶಿವಾನಂದ ಶರ್ಮ (ಕಾಂ), ... ಬಟ್ಟಪ್ಪ (ಕೆ.ಎಂ.ಪಿ), ಎಚ್. ... ವೀರಣ್ಣ (ಸಮಾಜವಾದಿ), ... ವೀರಣ್ಣ (ಸ್ವ), ಕೆ ಪುಟ್ಟಮಲ್ಲ ... ಆರ್. ವೆಂಕಟರಂಗ್ನಾಯಕ ... ಮತ್ತು ಎಂ. ರಾಜಶೇಖರ ಮೂ ... (ಸ್ವ), ರಿಸರ್ವ್ ಕ್ಷೇತ್ರ ೧ ಜಾಗ– ... ಸಿ. ಹೆಚ್. ಬಸವಯ್ಯ (ಕಾಂ) ಬಿ ರಾಚಯ್ಯ (ಕೆ.ಎಂ.ಪಿ), ... ನಾವಯ್ಯ (ಸಮಾಜವಾದಿ), ... ಸಿದ್ದಪ್ಪ (ಸ್ವ) ಮತ್ತು ಎಂ. ... ಬಸವಯ್ಯ (ಸ್ವ).

ಚಾಮರಾಜನಗರ ೧ ಜಾಗ–ಶ್ರೀಗಳಾದ ಎಸ್. ಪುಟ್ಟನಂಜಪ್ಪ (ಕಾಂ), ಯು ಎಂ. ಮಾದಪ್ಪ (ಕೆ ಎಂ ಪಿ), ಕೆ. ಎ. ವೀರಣ್ಣ (ಸ್ವ), ಮತ್ತು ಎಂ. ಸಿ. ಬಸಪ್ಪ (ಸ್ವ).

ಬ್ರಿಟನ್ನಿಗೆ ಪರ್ಷಿಯದ ಪರಿಹಾರದ ಸೂಚನೆ

ಪರ್ಷಿಯವು ಆಂಗ್ಲೋ–ಇರಾನಿಯನ್ ಎಣ್ಣೆ ಕಂಪೆನಿಗೆ ಹಣದ ಬದಲು ಎಣ್ಣೆಯನ್ನು ಪರಿಹಾರವಾಗಿ ಕೊಡಲು ಸಿದ್ಧವಾಗಿರುವುದಾಗಿ ವಿಶ್ವಸಂಸ್ಥೆಯ ಇರಾನಿನ ಪ್ರತಿನಿಧಿ ನಸರುಲ್ಲಾ ಎಂತೆಜೆ ರವರು ಹೇಳಿರುತ್ತಾರೆ. ಪರ್ಷಿಯದ ಪ್ರಧಾನಿ ಮುಸಾದಿಕ್‌ರವರು ಬ್ರಿಟನ್ನಿಗೆ ಸೇಕ್ಯಂಡ ಸೂಚನೆಯಿತ್ತಿರುವುದಾಗಿ ಇವರು ತಿಳಿಸಿ, ಇವಕ್ಕೆ ಬ್ರಿಟನ್ನಿನಿಂದ ಇನ್ನೂ ಉತ್ತರ ಬಂದಿಲ್ಲವೆಂದು ಹೇಳಿರುತ್ತಾರೆ

ಪರ್ಷಿಯದ ಎಣ್ಣೆ ಕೈಗಾರಿಕೆ ವಿಶ್ವಬ್ಯಾಂಕಿನ ಪಹೋಟಿಗೆ

ಪರ್ಷಿಯದ ಎಣ್ಣೆ ಕೈಗಾರಿಕೆಯನ್ನು ವಿಶ್ವ ಬ್ಯಾಂಕಿಗೆ ವಹಿಸುವ ಬಗ್ಗೆ ಬ್ರಿಟನ್ನು ಒಂದು ಹೊಸ ಯೋಜನೆಯನ್ನು ಪರಿಶೀಲಿಸುತ್ತಿದೆಯೆಂದು ವರದಿಯಾಗಿದೆ. ಈ ಯೋಜನೆಯನ್ನು ಪರ್ಷಿಯಾ ಸರ್ಕಾರದ ಗಮನಕ್ಕೆ ತಂದಿಲ್ಲವೆಂದೂ ಗೊತ್ತಾಗಿದೆ. ಬ್ರಿಟನ್, ಪರ್ಷಿಯ ಮತ್ತು ವಿಶ್ವ ಬ್ಯಾಂಕುಗಳು ಒಪ್ಪಿದಲ್ಲಿ ದಕ್ಷಿಣ ಪರ್ಷಿಯದಲ್ಲಿ ಎಣ್ಣೆಯನ್ನು ತೆಗೆಯುವ ಮತ್ತು ಶುದ್ಧೀಕರಿಸುವ ವ್ಯವಸ್ಥೆಯನ್ನು ವಿಶ್ವ ಬ್ಯಾಂಕಿನ ಧರ್ಮದರ್ಶಿತ್ವಕ್ಕೆ ವಹಿಸಲಾಗುವುದೆಂದೂ, ಅಲ್ಲಿನ ಎಣ್ಣೆಯನ್ನು ತೆಗೆಯುವ ಮತ್ತು ಮಾರುವ ವ್ಯವಸ್ಥೆಯನ್ನೂ ಬ್ಯಾಂಕಿಗೇ ವಹಿಸಲಾಗುವುದೆಂದೂ ಗೊತ್ತಾಗಿದೆ. ಪರ್ಷಿಯವು ಎಣ್ಣೆ ಕೈಗಾರಿಕೆಯನ್ನು ರಾಷ್ಟ್ರೀಕರಿಸಿರುವುದರ ಬಗ್ಗೆ ಇನ್ನು ಮುಂದೆ ಕೈಗಾರಿಕೆಯ ಉತ್ಪನ್ನದಲ್ಲಿ ಶೇಕಡ ೨೫ ರಷ್ಟನ್ನು ಬ್ರಿಟನ್ನಿಗೆ ಕೊಡುವ ಜವಾಬ್ದಾರಿಯನ್ನು ವಿಶ್ವ ಬ್ಯಾಂಕು ವಹಿಸುವುದು.

ಜಪಾನ್ ಸ್ತ್ರೀಯನ್ನು ವರಿಸಲು ಅಮೆರಿಕ ಸೈನಿಕರಿಗೆ ಅಪ್ಪಣೆ

ಅಮೆರಿಕದ ಆರು ಸಾವಿರ ಮಂದಿ ಸಿಪಾಯಿಗಳು ಜಪಾನಿನ ಮಹಿಳೆಯರನ್ನು ವಿವಾಹವಾಗಲು ಅನುಮತಿ ಪಡೆದಿರುವರು.

ವಿಮಾನಾಪಘಾತದಲ್ಲಿ ದೇಶಬಂಧುಗುಪ್ತರ ಮರಣ

ಕಲ್ಕತ್ತಾ ಬಳಿ ಡಂಡಂ ವಿಮಾನ ನಿಲ್ದಾಣದ ಸಮೀಪದ ಒಂದು ಕಾಡಿನಲ್ಲಿ ನೆನ್ನೆ ಬೆಳಗ್ಗೆ ವಿಮಾನಾಪಘಾತವುಂಟಾಗಿ ೧೬ ಜನರು ಮಡಿದರು. ಅಖಿಲ ಭಾರತ ವೃತ್ತ ಪತ್ರಿಕಾ ಸಮ್ಮೇಳನದ ಅಧ್ಯಕ್ಷರೂ, ಪಾರ್ಲಿಮೆಂಟಿನ ಸದಸ್ಯರೂ ಆದ ಲಾಲಾ ದೇಶಬಂಧುಗುಪ್ತರವರು ಅಪಘಾತಕ್ಕೆ ಸಿಕ್ಕಿ ನಿಧನ ಹೊಂದಿದರು. ೧೨ ಜನ ಪ್ರಯಾಣಿಕರೂ ಮತ್ತು ನಾಲ್ಕು ಜನ ವಿಮಾನ ಸಿಬ್ಬಂದಿಯವರೂ ಮೃತರಾದರು ವಿಮಾನವು ಮರಕ್ಕೆ ಡಿಕ್ಕಿ ಹೊಡೆದುದರಿಂದ ಒಳಗಡೆ ಇದ್ದ ಪೆಟ್ರೋಲಿನ ಟ್ಯಾಂಕು ಹತ್ತಿಕೊಂಡು ಅನಾಹುತವಾಯಿತು. ಒಬ್ಬನು ಮಾತ್ರ ಬದುಕಿರುವನು.

ನೌಕರರ ಬೇಡಿಕೆ ಬಗ್ಗೆ ಕೋರ್ಟಿನಲ್ಲಿ ವ್ಯವಹಾರ

ತುಟ್ಟಿ ಭತ್ಯವನ್ನು ಹೆಚ್ಚಿಸಬೇಕೆಂದು ಸಲ್ಲಿಸಲಾಗಿದ್ದ ಮದರಾಸಿನ ಸರ್ಕಾರಗೆಜೆಟೆಡ್ ನೌಕರರ ಬೇಡಿಕೆಯು ನಿರಾಕರಿಸಲ್ಪಟ್ಟುದರಿಂದ ಕಳೆದ ಭಾನುವಾರ ಅವರುಗಳ ಸಂಘದ ಸಭೆಯು ಸೇರಿ, ರಾಜ್ಯಾಂಗದ ಮೂಲಭೂತ ಹಕ್ಕು ಮತ್ತು ಬಾಧ್ಯತೆಯ ನಿಯಮಗಳಿಗೆ ಅನುಸಾರವಾಗಿ, ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳಲು ನ್ಯಾಯಾಸ್ಥಾನದಲ್ಲಿ ವ್ಯವಹಾರ ಹೂಡಲು ನಿರ್ಧರಿಸಿತು

ನೆಹರೂರವರ ರೇಡಿಯೋ ಭಾಷಣ

ಪಂಡಿತ ಜವಹರ ಲಾಲ್ ನೆಹರೂರವರು ಈ ರಾತ್ರಿ ೮–೩೦ ಘಂಟೆಗೆ ಅಖಿಲ ಭಾರತ ರೇಡಿಯೋವಿನ ದೆಹಲಿ ಕೇಂದ್ರದಿಂದ ಭಾಷಣ ಮಾಡುವರು

ರಾಜಧಾನಿಯಲ್ಲಿ ಸೌದೆ ಬೆಲೆ ಏರಿದೆ

ಪೆಟ್ರೋಲ್ ಪಡಿತರ ನಿಂತಾಗಿನಿಂದ ರಾಜಧಾನಿಯಲ್ಲಿ ರೂಪಾಯಿಗೆ ೩ ರಿಂದ ೧೧ ಮಣದ ವರೆಗೆ ಸೌದೆ ಮಾರಾಟವಾಗುತ್ತಿರುವುದೆಂದು ತಿಳಿದುಬಂದಿರುವುದಾಗಿಯೂ, ಸೀಳದ ಸೌದೆ ೩ ಮಣ ಮತ್ತು ಉಂಡೆಯನು ಸೀಯಂತೆಯೂ ಮಾರಾಟ ಮಾಡಬೇಕೆಂದೂ ಸರ್ಕಾರದವರು ಪ್ರಕಟಿಸಿರುತ್ತಾರೆ.

ಪ್ರೊ|| ವಾಡಿಯಾರವರಿಂದ ಘಟಿಕೋತ್ಸವದ ಭಾಷಣ

ಮೈಸೂರು ೨೨

ಮೈಸೂರು ಮಾಜಿ ವಿದ್ಯಾಇಲಾಖಾ ಡೈರೆಕ್ಟರರೂ, ಬರೋಡಾ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರೂ ಆದ ಪ್ರೊ|| ಎ ಆರ್. ವಾಡಿಯಾರವರು ಬರುವ ತಿಂಗಳು ೮ನೇ ತಾ|| ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡುವರು. ಸಿಲೋನಿನ ಸರ್ ಇವಾರ್ ಜೆನಿನ್ಸ್‌ರವರು ಭಾಷಣ ಮಾಡುವರೆಂದು ಹಿಂದೆ ತಿಳಿಸಲಾಗಿತ್ತು.

ಮೈಸೂರು ಮೇಲಿನ ಸಭೆಯ ಚುನಾವಣಾ ಕ್ಷೇತ್ರಗಳು

ಮೈಸೂರಿನ ಲೆಜಿಸ್ಲೆಟಿವ್ ಕೌನ್ಸಿಲ್ ಸಭೆಗೆ ವಿಶ್ವವಿದ್ಯಾಲಯದ ಪದವೀಧರರ ಮತ್ತು ಮಾಧ್ಯಮ ಶಾಲಾ ಮತ್ತು ಮೇಲಿನ್ ತರಗತಿಗಳ ಉಪಾಧ್ಯಾಯರುಗಳ ಚುನಾವಣಾ ಕ್ಷೇತ್ರಗಳಿಗೆ ಓಟುದಾರರಾಗುವವರ ಹೆಸರುಗಳನ್ನು ಪಟ್ಟಿಗಳಲ್ಲಿ ಸೇರಿಸಿಕೊಳ್ಳಲು ಬರುವ ತಿಂಗಳು ೧೦ನೇ ತಾ|| ನೊಳಗೆ ಪದವೀಧರರು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಿಗೂ, ಉಪಾಧ್ಯಾಯರು ವಿದ್ಯಾ ಇಲಾಖಾ ಮುಖ್ಯ ಅಧಿಕಾರಿಗಳಿಗೂ ತಿಳಿಸಬೇಕೆಂದು ಸೂಚಿಸಲಾಗಿದೆ

ಚುನಾವಣಾ ದಿನಗಳು

ಚುನಾವಣಾ ದಿನಗಳನ್ನು ಸರ್ಕಾರದವರು ಈ ರೀತಿ ಗೊತ್ತುಪಡಿಸಿರುತ್ತಾರೆ

ಶ್ರೀರಂಗಪಟ್ಟಣ, ಚಿಕ್ಕಮಗಳೂರು–ಮೂಡಗೆರೆ, ಜನವರಿ ೪ ಮತ್ತು ೬; ಯಳಂದೂರು–ಜನವರಿ ೮ ಮತ್ತು ೧೦; ಟಿ ನರಸೀಪುರ, ಚಾಮರಾಜನಗರ–ಜನವರಿ ೧೨; ನಂಜನಗೂಡು– ಜನವರಿ ೧೩ ಮತ್ತು ೧೫; ಮೈಸೂರು ತಾಲ್ಲೂಕು, ಹುಣಸೂರು ಜನವರಿ ೧೭ ಮತ್ತು ೧೯, ಕೃಷ್ಣರಾಜಪೇಟೆ ಜನವರಿ ೧೯; ಪಿರಿಯಾಪಟ್ಟಣ, ಕೃಷ್ಣರಾಜ ನಗರ–ಜನವರಿ೨೪ ; ಗುಂಡ್ಲುಪೇಟೆ – ಹೆಗ್ಗಡದೇವನಕೋಟೆ ಜನವರಿ ೧೬.

ಹೈಕೋರ್ಟಿನಿಂದ ಸಂಪಾದಕರ ಅರ್ಜಿ ತಿರಸ್ಕೃತ

ದಾವಣಗೆರೆಯ ನೇತಾಜಿ, ಪ್ರಜಾರಿ ಮತ್ತು ಇನ್ನೊಂದು ಪತ್ರಿಕೆಯ ಸಂಪಾದಕರುಗಳು ತಮ್ಮ ಬಂಧನವು ಕಾರಣಯುತವಾಗಿಲ್ಲವೆಂದೂ ತಮ್ಮನ್ನು ಬಿಡುಗಡೆ ಮಾಡಬೇಕೆಂದೂ ಸಲ್ಲಿಸಿದ್ದ ಅರ್ಜಿಗಳನ್ನು ನೆನ್ನೆ ಹೈಕೋರ್ಟು ನ್ಯಾಯಾಧೀಶರಾದ ಶ್ರೀ ಆರ್. ವೆಂಕಟರಾಮಯ್ಯ ಮತ್ತು ಶ್ರೀ ಎನ್. ಬಾಲಕೃಷ್ಣಯ್ಯನವರು ತಿರಸ್ಕರಿಸಿದರು.

ನಿಜಲಿಂಗಪ್ಪನವರ ಪ್ರತಿಸ್ಪರ್ಧಿ

ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರ ವಿರುದ್ಧವಾಗಿ ಚಿತ್ರದುರ್ಗ ಜಿಲ್ಲೆಯಿಂದ ಕೆ.ಎಂ ಪಿ. ಪಕ್ಷದ ಪರವಾಗಿ ಶ್ರೀ ಮುರುಳಪ್ಪನವರೂ ಸಮಾಜವಾದಿ ಪಕ್ಷದ ಪರವಾಗಿ ಶ್ರೀ ಎ. ಹೆಚ್ ಶಿವಾನಂದ ಸ್ವಾಮಿಯವರೂ, ಸ್ವತಂತ್ರರಾಗಿ ಶ್ರೀಗಳಾದ ಕೊಟ್ರೆ ರುದ್ರಪ್ಪ, ಈಶ್ವರಪ್ಪ ಮತ್ತು ಹೆಚ್. ಎಸ್. ವೆಂಕಟಾಚಲಯ್ಯನವರೂ ಪಾರ್ಲಿಮೆಂಟಿಗೆ ಸ್ಪರ್ಧಿಸಿರುತ್ತಾರೆ.

ಮೈಸೂರು ವ್ಯವಸಾಯಕ್ಕೆ ಫೋರ್ಡ್ ಸಂಸ್ಥೆಯ ನೆರವು

ಭಾರತದಲ್ಲಿ ವ್ಯವಸಾಯದ ಅಭಿವೃದ್ಧಿ ಬಗ್ಗೆ ಐದು ವರ್ಷದ ಒಂದು ಯೋಜನೆಯನ್ನು ಸಿದ್ಧಗೊಳಿಸಿ ಕಾರ್ಯಗತ ಮಾಡುವ ಸಲುವಾಗಿ ಅಮೆರಿಕದ ಫೋರ್ಡ್ ಸ್ಮಾರಕ ನಿಧಿಯಿಂದ [illegible] ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ ಈ ಮೊತ್ತದಲ್ಲಿ ಮೈಸೂರು ಸಂಸ್ಥಾನಕ್ಕೂ ಒಂದು ಭಾಗವನ್ನು ಕೊಡಲಾಗುವುದೆಂದು ಗೊತ್ತಾಗಿದೆ

ಕಾಶ್ಮೀರಕ್ಕೆ ಪ್ರಜಾಸತ್ತಾತ್ಮಕ ಸರ್ಕಾರ

ಕಾಶ್ಮೀರ ಸಂಸ್ಥಾನದಲ್ಲಿ ಮೊನ್ನೆಯಿಂದ ಪ್ರಜಾ ಸತ್ತಾತ್ಮಕ ಸರ್ಕಾರವು ಏರ್ಪಟ್ಟಾಗಿ ಅಲ್ಲಿನ ಯುವರಾಜಾ ಕರಣ್ ಸಿಂಗರವರು ಶಾಸನಬದ್ಧ ರಾಜರಾಗಿರುವರು ಅಲ್ಲಿ ಒಂದೇ ಶಾಸನ ಸಭೆಯು ರಚಿಸಲ್ಪಟ್ಟು ಮಂತ್ರಿ ಮಂಡಲವು ಶಾಸನ ಸಭೆಗೆ ಜವಾಬ್ದಾರಿಯುತವಾಗಿರುವುದು ಈ [illegible] ಇದ್ದ ರಾಜ್ಯಾಂಗಕ್ಕೆ ತಿದ್ದುಪಡಿ ಮಾಡಲಾಗಿದೆ

ಚೀಣದೊಡನೆ ಒಪ್ಪಂದಕ್ಕೆ ಟಿಬೆಟ್ಟಿನ ಸಮ್ಮತಿ

ಈಗ್ಗೆ ಆರು ತಿಂಗಳ ಕೆಳಗೆ ನಡೆದ ಚೀಣಾ ಒಪ್ಪಂದಕ್ಕೆ ಟಿಬೆಟ್ ಸರ್ಕಾರವು ಸಮ್ಮತಿಯನ್ನು ಕೊಟ್ಟು ಟಿಬೆಟ್ಟಿನ ವಿದೇಶಾಂಗ ಮತ್ತು ರಕ್ಷಣಾ ವ್ಯವಸ್ಥೆಗಳು ಚೀಣದ ಹತೋಟಿಗೆ ಒಳಪಡಲು ಒಪ್ಪಿರುತ್ತದೆ

ದಕ್ಷಿಣ ಆಫ್ರಿಕದ ಸರ್ಕಾರವು ವಿಶ್ವಸಂಸ್ಥೆಗೆ ಬಹಿಷ್ಕಾರ ಹಾಕಿ ಆ ಸಂಸ್ಥೆಯಿಂದ ಹೊರಕ್ಕೆ ಬರುವುದೆಂದು ಜೋಹಾನ್ಸ್‌ಬರ್ಗ್ ಪತ್ರಿಕೆಯೊಂದು ವರದಿ ಮಾಡಿರುತ್ತದೆ

ವಿಮಾನ ಕಾರ್ಖಾನೆಗೆ [illegible] ಸಾವಿರ ರೂ. ಮೋಸ

ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಗೆ ಹಲವು ಸಾಮಾನುಗಳನ್ನು ಸರಬರಾಜು ಮಾಡುವುದರಲ್ಲಿ [illegible] ಸಾವಿರ ರೂ. ವರೆಗೆ ಮೋಸ ಮಾಡಿದ ಅಪಾದನೆಗಾಗಿ ಅಮೆರಿಕದ ವ್ಯಾಪಾರಿ ಮಿ|| ನೊಹನ್‌ಸ್ಕಿ ಎಂಬುವರನ್ನು ಪೊಲೀಸರು ದಸ್ತಗಿರಿ ಮಾಡಿರುತ್ತಾರೆ

SRI GAYATHRI, TALKIES

Daily 3 Shows
On 23rd & 24th
20th Century's
13TH LETTER
With Linda Darnell
— MORNING SHOWS
On 24th & 25th
MIDSUMMER-NIGHT'S DREAM

ರಣಜಿತ್ ಟಾಕೀಸ್
ಬೆಳಗಿನ ಪ್ರದರ್ಶನ
23-11-51 ರಿಂದ 3 ದಿನಗಳು
* ಲಾಡ್ಲಿ *
[illegible] ಜಯರಾಜ್ ಸುಲೋಚನಾ
[illegible] ದೇಸಾಯಿ

Edited, Printed and Published by A R Nagarajan at Sadhvi Press D Subbiah Road, Mysore

ರಾಜಕಮಲ್
23-11-51 ರಿಂದ ಅಮೋಘ 6ನೇ ವಾರ
ಪಿಚ್ಚೈಕ್ಕಾರಿ (ತಮಿಳು)
ಬೆಳಗಿನ ಪ್ರದರ್ಶನಗಳು
23-11-51 ರಿಂದ 3 ದಿನಗಳು ಮಾತ್ರ
ಶಾಂತಾ ಪಟೇಲ್ ಪ್ರಕಾಶ್ ಪಾತ್ರ ವಹಿಸಿರುವ ಹಿಂದಿ ಚಿತ್ರ
— ಖಿಲಾಡಿ —

ಒಲಂಪಿಯಾ
23-11-51 ರಿಂದ ಜಯಪ್ರದ
ಮೂರನೇ ವಾರ
ದೇವಾನಂದ್ ಮತ್ತು ಸುರಯ್ಯಾ ಪಾತ್ರ ವಹಿಸಿರುವ
-ವಿದ್ಯಾ-
ಇದರ ಜೊತೆಯಲ್ಲಿ ಬೊಂಬಾಯಿನಲ್ಲಿ ನಡೆದ ನಟ ನಟಿಯರ ಕ್ರಿಕೆಟ್ ಪಂದ್ಯವು ಸಹ ತೋರಿಸಲಾಗುತ್ತೆ.
ಬೆಳಗಿನ ಪ್ರದರ್ಶನ
23-11-51 ರಿಂದ 3 ದಿನಗಳು
ಚಾರ್ಲಿ ಚಂದ್ರ ಮೋಹನ್, ಸ್ವರ್ಣಲತಾ ಮೋತಿಲಾಲ್ ಪಾತ್ರ ವಹಿಸಿರುವ
ರೋಣಕ್

ಶ್ರೀ ಗಣೇಶಾ ಟಾಕೀಸ್
23-11-51 ರಿಂದ ಅಮೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಪ್ರಕಾಶ್ ಪಿಕ್ಚರ್ಸ್‌ರವರ ತೆಲುಗು ಚಿತ್ರ * **ಮೊದಟಿ ರಾತ್ರಿ** *
ಮುಖ್ಯಪಾತ್ರ - ಜಿ. ವರಲಕ್ಷ್ಮಿ, ಪ್ರಕಾಶ್ ರಾವ್, ಶಿವರಾವ್
ನಾರಾಯಣರಾವ್ ಮೊದಲಾದವರ
A PRAKASH RELEASE

ಜಯಪ್ರದ 2 ನೇ ವಾರ!
ಕಿಕ್ಕಿರಿದ ಜನ ಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ
ಮೋತಿಲಾಲ್ ಮತ್ತು ಶ್ರೀ ಲಕ್ಷ್ಮೀ ಥಿಯೇಟರುಗಳಲ್ಲಿ
ಪ್ರತಿ ದಿನ ಮೂರು ಆಟಗಳು
ಜ್ಞಾನಾಂಬಿಕಾರವರ ತೆಲುಗು ಚಿತ್ರ * **ಮಂತ್ರದಂಡಂ**
ಭೂಮಿಕೆ - ನಾಗೇಶ್ವರರಾವ್, ಶಿವರಾವ್, ಶ್ರೀರಂಜನಿ, ಜಮುನ

ಅಬೀಬ್‌ರವರ ಭಾರಿ ಹರಾಜು ಮಾರಾಟ
25-11-51 ನೇ · ಭಾನುವಾರ ಬೆಳಿಗ್ಗೆ · 10 ಘಂಟೆಗೆ
ಸೋಫಾ ಸೆಟ್ಟುಗಳು, ಗಾಜಿನ ಬಾಗಿಲುಗಳುಳ್ಳ ಅಲ್ಮೇರಾಗಳು ಕನ್ನಡಿಯುಳ್ಳ ಮತ್ತು ಇಲ್ಲದ ಕುರ್ಚಿಗಳು, ಟೀಪಾಯಿಗಳು, ಮೇಜುಗಳು, ಒಳ್ಳೆಯ ಸ್ಥಿತಿಯಲ್ಲಿರುವ ಫಿಲಿಪ್ಸ್ ಫಿಲ್ಕೊ ಮತ್ತು ಪೈಲಟ್ ರೇಡಿಯೋಗಳು ಎಲೆಕ್ಟ್ರಿಕ್ [illegible]ಗಳು ಸ್ಟೌವುಗಳು ಟೇಬಲ್ ಲ್ಯಾಂಪುಗಳು [illegible] ಆರಾಮ ಕುರ್ಚಿಗಳು ಹೊಸ ಗ್ಲಾಸ್ ಟಂಬ್ಲರುಗಳು ಬೀಟಿ ಮರದ ಡಬ್ಬಲ್ ಮಂಚ ಫೋಟೋಗಳು ಸೈಕಲ್ಲುಗಳು ಮತ್ತು ಹಲವಾರು ಉಪಯುಕ್ತ ಸಾಮಾನುಗಳೇ ಮೊದಲಾದ ಫರ್ನಿಚರುಗಳು ಮತ್ತು ಗೃಹೋಪಯುಕ್ತ ಸಾಮಾನುಗಳು
ದಯವಿಟ್ಟು ಶನಿವಾರ ಬಂದು ಪರೀಕ್ಷಿಸಬಹುದು

ಶ್ರೀ ಚಾಮುಂಡೇಶ್ವರಿ ಟಾಕೀಸ್
23-11-51 ರಿಂದ :: ಯಶಸ್ವೀ 5ನೇ ವಾರ
* **ಮಣ ಮಗಳ್** *
ತಾರಾಗಣ – ಎನ್ ಎಸ್ ಕೃಷ್ಣನ್, ಟಿ ಎ ಮಧುರಂ, ಲಲಿತ-ಪದ್ಮಿನಿ, ಸಹಸ್ರನಾಮಂ, ಬಾಲಯ್ಯ, ದೊರೈರಾಜ್, ಬಾಲ ಸುಬ್ರಹ್ಮಣ್ಯಂ, ಪುಳಿಮೂಟ್ಟೈ ಮುಂತಾದವರು
30-11-51 ರಿಂದ — ದೀಕ್ಷಾ — (ತೆಲುಗು)

ಮದುವೆ ಮನೆಗಳಿಗೆ ಮಂಗಳಕರವಾದ ಜವಳಿಗಳು ದೊರೆಯುತ್ತವೆ
ಸಾವಿರಾರು ಮಾದರಿ ರೇಷ್ಮೆ ಸೀರೆಗಳು, ನೂಲಿನ ಸೀರೆಗಳು ಕಲಾಪತ್ತು ಪಂಚೆ ರೇಷ್ಮೆ ಮಗುಟಗಳಿಗೆ
* **D L ನರಸಿಂಹಯ್ಯ ಅಂಡ್ ಬ್ರದರ್ಸ್,**
ಜವಳಿ ಅಂಗಡಿ, [illegible] ಅನಂದಭವನ ರಸ್ತೆ, ಮೈಸೂರು.

ಗೌನ್ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ
ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಶ್ರೀ ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಪ್ರಭುದೇವಾ ಟಾಕೀಸ್ 28—11—51 ನೇ ಬುಧವಾರದಿಂದ
ಅಮೋಘ ಪ್ರಾರಂಭ : ದಿನವಹಿ 3 ಆಟಗಳು
ತಮಿಳು
ಸುದರ್ಶನ
ತಮಿಳು
ಪಾತ್ರ:- ಪಿ. ಯು. ಚಿನ್ನಪ್ಪ, ಕಣ್ಣಾಂಬ, ಲಲಿತ, ಬಾಲಯ್ಯ ಮುಂತಾದವರು

ಫೋನ್ ನಂ 792 • ಸಂಜೆ ಪತ್ರಿಕೆ • ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೩-೧೧-೫೧ [ಸಂಚಿಕೆ ೧೯೧

ರಷ್ಯದಲ್ಲಿ ವಿನಾಶ ಕೃತ್ಯಕ್ಕೆ ಅಮೆರಿಕದ ಬೆಂಬಲ?

ನಗರದಲ್ಲಿ ಚೀಣಾ ಸಾಂಸ್ಕೃತಿಕ ಮಂಡಲಿಯವರು

ಪ್ರಭುಗಳಿಂದ ಸತ್ಕಾರ

ಮೈಸೂರು ೨೩

...ವ ಸಾಂಸ್ಕೃತಿಕ ಮಂಡಲಿಯ ...ರಾದ ಟಿಂಗ್ ಸಿ ಲೀ, ಮೇ ...ಂಗ್ ಮತ್ತು ಇತರ ಸದಸ್ಯರು ...ಪ್ಯಾಹ್ನ ೩-೩೦ ಗಂಟೆಗೆ ರಾಜ ... ಬೆಂಗಳೂರಿನಿಂದ ಆಗಮಿಸಿ ...ಮಾರ್ಗದಲ್ಲಿ ಅವರು ಚನ್ನಪಟ್ಟ ...ಡ್ಯ ಮತ್ತು ಶ್ರೀರಂಗಪಟ್ಟಣಗ ...ಟಿಯುತ್ತರು ಭಾರತ ಸರ್ಕಾರ ...ರಾಂಗ ಇಲಾಖೆಯ ಡಾ|| ಚ ...ಯುವರು ಅವರೊಡನೆ ಆಗಮಿಸಿ ...ಲ್ಲಿನ ಜಗನ್ಮೋಹನ ಭವನದಲ್ಲಿ ...ರಾಲೆಗೆ ಅವರು ಭೇಟಿಕೊಟ್ಟರು

...ಗೌರವಾರ್ಥವಾಗಿ ನೆನ್ನೆ ಸಂಜೆ ...ಡಿ ಜಮುನಾನೆಯಲ್ಲಿ ಶ್ರೀಮನ್ ...ಜರು ಒಂದು ಸತ್ಕಾರ ಕೂಟ ...ಡಿಸಿದ್ದರು ಸಂಸ್ಥಾನದ ಸಚಿ... ಶ್ರೇಷ್ಠ ನ್ಯಾಯಾಧೀಶರೂ, ...ಕಾರ್ಯದರ್ಶಿಗಳೂ, ನಗರದ ...ಅಧಿಕಾರಿಗಳೂ, ಖಾಸ... ಸೀಯರೂ, ಪತ್ರಿಕೋದ್ಯೋ... ...ಗವಹಿಸಿದ್ದರು ಮುಖ್ಯ ಮಂ ...ತಿಥಿಗಳ ಪರಿಚಯ ಮಾಡಿ

ಉಪನ್ಯಾಸ

...ರಾಣಿಯ ಕೌಟಿಲ್ಯ ಮಂಡಲಿ ...ಯದಲ್ಲಿ ಮಹಾರಾಜಾ ಕಾಲೇ... ...ಸಂಜೆ ೬ ಗಂಟೆಗೆ ಡಾ|| ಪ್ರೊ|| ...ರಾಮಾನುಜಾಚಾರ್ಯರು "ಗೀತೆಯ ...ಾಜಿಕ ಭಾವನೆ" ಎಂಬ ವಿಷ... ಉಪನ್ಯಾಸ ಮಾಡುವರು ಕಾ... ಸಂಸ್ಕೃತ ಇಲಾಖೆಗೆ ಸೇರಿದ ... ಶಿವರಾಮ ಶಾಸ್ತ್ರಿಯವರು ಅ... ವಹಿಸುವರು ಸಕಲರಿಗೂ ಆ... ...ದೆ

ಜಿಲ್ಲೆಗಳಿಂದ ಶಾಸನ ಸಭಾ ಉಮೇದುವಾರರು

...ಸ್ಥಾನದ ಶಾಸನ ಸಭೆಗೆ ನಾನಾ ...ಕ್ಷೇತ್ರಗಳಿಂದ ಕಾಂಗ್ರೆಸ್, ಪ್ರಜಾ, ಸಮಾಜವಾದಿ, ಜನ ... ಪಕ್ಷಗಳ ಪರವಾಗಿಯೂ ಸ್ವತಂ... ...ಯೂ ಉಮೇದುವಾರರು ಅರ್ಜಿ ಕೊಟ್ಟಿರುತ್ತಾರೆ ನಾಲ್ಕು ಜನ ...ರಗೂ, ಪ್ರಾದೇಶಿಕ ಕಾಂಗ್ರೆಸ್ ... ಶ್ರೀ ಕೆ ಹನುಮಂತಯ್ಯ, ಮಾ... ...ಂತ್ರಿಗಳಾದ ಶ್ರೀ ಟಿ ಸಿದ್ದಲಿಂಗ... ...ಲ್ ಸಿದ್ದಪ್ಪ, ಡಾ|| ಇಮಾಂ ರ... ...ರೂ, ಶಾಸನ ಸಭಾಧ್ಯಕ್ಷ ಶ್ರೀ ವಿ ... ...ಪ್ಪ, ಮಾಜಿ ಶ್ರೇಷ್ಠ ನ್ಯಾಯಾ... ...ೀ ಜಿ ಪರಮಶಿವಯ್ಯ, ಕೆ ಎಂ ...ನ ಅಧ್ಯಕ್ಷ ಶ್ರೀ ಬಿ ಹುಚ್ಚೇಗೌ... ...ಕೆ ಪಟ್ಟಾಭಿರಾಮ ಮುಂತಾ... ...ನಿಂತಿರುತ್ತಾರೆ

...ಸ್ಕಿಗೆ ಅಬ್ದುಲ್ಲಾ ಭೇಟಿ

...ಶ್ಮೀರದ ವಿಷಯವಾಗಿ ಭಾರತದ ... ಧಿ ಬಿ ಎನ್ ರಾಯರು ವಿಶ್ವ ಸಂ... ...ಕಾಶ್ಮೀರದ ಪ್ರತಿನಿಧಿ ಗ್ರಹಾಂ ... ಸಂಧಾನ ನಡೆಸಲು ಸಹಾಯ ...ವುದಕ್ಕಾಗಿ ಈ ದಿನ ಕಾಶ್ಮೀರದ ... ಮಂತ್ರಿ ಷೇಕ್ ಅಬ್ದುಲ್ಲಾರವ... ...ಸ್ಕಿಗೆ ತೆರಳುವರು

ಭಾರತ-ಚೀಣಾ ಸ್ನೇಹ ಚಿರಾಯುವಾಗಲಿ

ಚೀಣಾ ಸಾಂಸ್ಕೃತಿಕ ಮಂಡಲಿ ನಾಯಕರ ಭಾಷಣ

ಮೈಸೂರು ೨೩

ಚೀಣದ ಸಾಂಸ್ಕೃತಿಕ ಮಂಡಲಿಯವರ ಗೌರವಾರ್ಥವಾಗಿ ನೆನ್ನೆ ಸಂಜೆ ಪೌರ ಸಭೆಯವರು ಮತ್ತು ಭಾರತ ಚೀಣಾ ಸ್ನೇಹ ಸಂಘದವರ ಟೌನ್ ಹಾಲಿನಲ್ಲಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದರು ಪೌರ ಸಭಾಧ್ಯಕ್ಷರಾದ ಶ್ರೀ ಟಿ ನರಸಿಂಹಯ್ಯಂಗಾರ್ಯರೂ ಪುರ ಸಭಾ ಕಮಿಷನರ್ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರೂ, ಪೌರ ಸಭಾ ಉಪಾಧ್ಯಕ್ಷ ಶ್ರೀ ಎಂ ಎಸ್ ನಂಜಪ್ಪನವರೂ, ಇತರ ಸದಸ್ಯರೂ ಮಂಡಲಿಯವರನ್ನು ಸ್ವಾಗತಿಸಿದರು ಸಮಾರಂಭಕ್ಕೆ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿ, ಸಚಿವರುಗಳಾದ ಶ್ರೀಗಳು ಹೆಚ್ ಸಿ ದಾಸಪ್ಪ, ಟಿ ಮರಿಯಪ್ಪ ಮತ್ತು ಆರ್ ಚನ್ನಿಗರಾಮಯ್ಯ ಇವರುಗಳೂ ಇತರ ಅಧಿಕಾರಿ ಮತ್ತು ಖಾಸಗೀ ಮಹನೀಯರೂ ಆಗಮಿಸಿದ್ದರು

ವೀಣೆ ಮತ್ತು ಕೊಳಲುಗಳ ಸುಶ್ರಾವ್ಯ ವಾದನದ ನಂತರ ಪೌರ ಸಭಾಧ್ಯಕ್ಷರು ಭಾಷಣ ಮಾಡಿ, ಭಾರತ-ಚೀಣಾಗಳ ಬಾಂಧವ್ಯವು ಬಹು ಹಿಂದಿನಿಂದಲೂ ನಡೆದುಕೊಂಡುಬಂದಿದ್ದು ಹಲವು ಕಾರಣಗಳಿಗಾಗಿ ಇತ್ತೀಚೆಗೆ ಕಡಿಮೆಯಾಗಿತ್ತೆಂದೂ ತಿಳಿಸಿದರು ಸ್ವತಂತ್ರ ರಾಷ್ಟ್ರಗಳಾಗಿರುವ ಭಾರತ ಮತ್ತು ಚೀಣಗಳು ಪ್ರಪಂಚದ ಯಾವ ಭಾಗದಲ್ಲೇ ಆದರೂ ಯುದ್ಧವನ್ನು ತಡೆಗಟ್ಟಲು ತಕ್ಕ ಕೋಟೆಗಳೋಪಾದಿಯಲ್ಲಿದ್ದು, ಒಂದು ರಾಜ್ಯವು ಮತ್ತೊಂದರ ಮೇಲೆ ಆಧಿಪತ್ಯ ಮಾಡುವುದನ್ನು ಪ್ರತಿಭಟಿಸಲು ಸಾಮರ್ಥ್ಯ ಹೊಂದಿರುವುವೆಂದು ಹೇಳಿದರು

ನಂತರ ಮೈಸೂರು ಸಂಸ್ಥಾನದ ಭಾರತ-ಚೀಣಾ ಸ್ನೇಹ ಸಂಘದ ಅಧ್ಯಕ್ಷ ಶ್ರೀ ತಗಡೂರು ರಾಮಚಂದ್ರರಾಯರು ಭಾಷಣ ಮಾಡಿ ಚೀಣದಲ್ಲಿ ಈಚೆಗೆ ಸ್ಥಾಪಿಸಿರುವ ಆರ್ಥಿಕ ಸಮತ್ವವನ್ನು ಭಾರತದಲ್ಲೂ ಜಾರಿಗೆ ತರಬೇಕಾದುದು ಅವಶ್ಯಕವೆಂದು ಅಭಿಪ್ರಾಯಪಟ್ಟು, ತಮ್ಮ ಸಂಘದ ಆರಂಭ ಭಾಷಣ ಮಾಡಬೇ...

ಅಮೆರಿಕಕ್ಕೆ ರಷ್ಯಾ ಸರ್ಕಾರದ ಪ್ರತಿಭಟನೆ

ಅಮೆರಿಕಕ್ಕೆ ರಷ್ಯವು ಪತ್ರವೊಂದನ್ನು ಕಳುಹಿಸಿ, ರಷ್ಯಾ ಸರ್ಕಾರದ ವಿರುದ್ಧ ಆ ದೇಶದೊಳಗೆ ಬುಡಮೇಲು ಚಳುವಳಿ ನಡೆಸಲು ಮತ್ತು ವಿನಾಶ ಕೃತ್ಯಗಳನ್ನೆಸಗಲು ಅಮೆರಿಕವು ೧೦ ಕೋಟಿ ಡಾಲರು ಹಣ ಮಂಜೂರು ಮಾಡಿರುವುದನ್ನು ಪ್ರತಿಭಟಿಸಿರುತ್ತದೆ

ಕೆಂದು ಮಂಡಲಿಯ ನಾಯಕರನ್ನು ಕೋರಿದರು

ನಿಯೋಗದ ನಾಯಕ ಟಿಂಗ್ ಸಿ ಲೀರವರು ನಂತರ ಚೀಣೀ ಭಾಷೆಯಲ್ಲಿ ಮಾತನಾಡಿ ತಮ್ಮ ಮಂಡಲಿಯ ಪರವಾಗಿ ಅಭಿನಂದನೆಯನ್ನು ಸೂಚಿಸಿದರು. ಬೆಂಗಳೂರು ಮತ್ತು ಮೈಸೂರುಗಳಲ್ಲಿ ತಾವು ಸಂಶೋಧನಾ ಶಾಲೆಗಳು, ಕಾರ್ಖಾನೆಗಳನ್ನು ನೋಡಿ ಸಂತೋಷಿಸಿರುವುದಲ್ಲದೆ ಮೈಸೂರು ನಗರವು ನಿಜವಾಗಿಯೂ ಉದ್ಯಾನವನಗಳ ನಗರಿಯೆಂದು ಅಭಿಪ್ರಾಯಪಟ್ಟರು ಎರಡು ರಾಜ್ಯಗಳಿಗೂ ಒಂದೇ ರೀತಿಯ ಸಮಸ್ಯೆಗಳಿರುವುವು ಚೀಣವು ಪ್ರಪಂಚದ ಶಾಂತಿ ಕಾಪಾಡಲು ತನ್ನ ಸರ್ವ ಸಹಾಯವನ್ನೂ ನೀಡುವುದು, ಭಾರತ ಚೀಣಾಗಳ ಸ್ನೇಹವನ್ನು ಹೆಚ್ಚಿಸಲು ಸ್ಥಾಪಿತವಾಗಿರುವ ಮೈಸೂರು ಸಂಸ್ಥೆಯ ಆರಂಭ ಭಾಷಣ ಮಾಡಲು ನನಗೆ ತುಂಬಾ ಸಂತೋಷವಾಗಿದೆ ಎರಡು ರಾಜ್ಯಗಳ ಸ್ನೇಹವು ಚಿರಕಾಲ ಬಾಳಲಿ ಎಂದು ಟಿಂಗ್ ಸಿ ಲೀರವರು ನುಡಿದರು

ಮಂಡಲಿಯವರು ಇದಕ್ಕೆ ಮುಂಚೆ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿ ಚೀನಾದಲ್ಲಿ ಹಿಂದೆ ಇದ್ದ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಗಾರ ಆಡಳಿತವು ಅಳಿದು ರೈತ ಕಾರ್ಮಿಕರ ಸಂಘಟನೆಯುಂಟಾಗಿ ಜನತಾ ಸರ್ಕಾರ ಸ್ಥಾಪಿತವಾಗಿದೆಯೆಂದೂ, ಸಾವಿರಾರು ವರ್ಷಗಳಿಂದ ಸತತವಾಗಿ ನಡೆದುಕೊಂಡು ಬಂದ ಭಾರತ ಚೀಣಾ ಸ್ನೇಹವು ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಬಲಯುತವಾಗಬೇಕೆಂದೂ ನುಡಿದರು ವೈಸ್ ಛಾನ್ಸಲರಾದ ಡಾ|| ವಿ ಮಂಜುನಾಥರವರು ಅಧ್ಯಕ್ಷತೆ ವಹಿಸಿದ್ದರು

ಸುನಂದಮ್ಮನವರಿಗೆ ಕಾಂಗ್ರೆಸ್ ಅಧ್ಯಕ್ಷರ ಆಹ್ವಾನ

ಮೈಸೂರು ೨೩

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಶ್ರೀಮತಿ ಸುನಂದಮ್ಮನವರಿಗೆ ತಂತಿಯನ್ನು ಕಳುಹಿಸಿ ತನರೊಡನೆ ಮಾತುಕತೆ ನಡೆಸಲು ಬೆಂಗಳೂರಿಗೆ ಆಹ್ವಾನಿಸಿರುವರು. ಶ್ರೀಮತಿಯವರು ಬರುವ ಸೋಮವಾರ ಅಲ್ಲಿಗೆ ತೆರಳಿ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಹನುಮಂತಯ್ಯನವರನ್ನು ಭೇಟಿ ಮಾಡುವರು

ಪೌರಸಭಾಧ್ಯಕ್ಷರ ರಾಜೀನಾಮೆ

ಪೌರ ಸಭಾಧ್ಯಕ್ಷ ಶ್ರೀ ಟಿ ನರಸಿಂಹಯ್ಯಂಗಾರ್ಯರು ಪುರ ಸಭಾ ಕಾಂಗ್ರೆಸ್ ಪಕ್ಷದ ನಾಯಕರಿಗೆ ಪತ್ರ ಬರೆದು ತಮ್ಮನ್ನು ಹಿಂದೆ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದಾಗ, ಪಕ್ಷದ ಬಹು ಮತವು ತಮ್ಮ ಆಯ್ಕೆಯ ಬಗ್ಗೆ ಅನುಕೂಲವಾಗಿಲ್ಲದಿದ್ದುದರಿಂದಲೂ, ಈ ರೀತಿ ಪೌರ ಸಭಾಧ್ಯಕ್ಷರಾಗಿ ಮುಂದುವರಿಯುವುದು ಪ್ರಜಾ ಸತ್ತಾತ್ಮಕವಲ್ಲವೆಂದೂ ತಿಳಿಸಿ ತಮ್ಮ ಹುದ್ದೆಗೆ ರಾಜೀನಾಮೆಯನ್ನು ಈಯುವುದಾಗಿ ಪಕ್ಷಕ್ಕೆ ತಿಳಿಸಿರುತ್ತಾರೆ

ಆಕ್ಷೇಪಣೆಗಳ ವಜಾ

ಶ್ರೀ ರಾಘವರಾಜು ರವರ ವಿರುದ್ಧವಾಗಿ ಸಮಾಜವಾದಿ ಪಕ್ಷದ ಬಿ ಶ್ರೀಕಂಠಪ್ಪನವರು ಮತ್ತು ಜ|| ಮಹಮೂದ್ ಷರೀಫರ ವಿರುದ್ಧ ಜ|| ವಿಜಾರ್ ನೂರ್ ಮುಸ್ತೀನವರು ಎತ್ತಿದ್ದ ಆಕ್ಷೇಪಣೆಗಳನ್ನು ಈ ದಿನ ನಗರ ಕ್ಷೇತ್ರಗಳ ಚುನಾವಣಾಧಿಕಾರಿಗಳು ತಳ್ಳಿಹಾಕಿದರು ರಾರ್ಲಿಮೆಂಟಿನ ಕ್ಷೇತ್ರದ ಉಮೇದುವಾರರುಗಳ ಬಗ್ಗೆ ಯಾವ ಆಕ್ಷೇಪಣೆಯೂ ಬರಲಿಲ್ಲ

ವಿವಾಹ ಮಹೋತ್ಸವಗಳು

ರಾಜಧಾನಿಯ ಕಾಲೇಜು ರಸ್ತೆಯಲ್ಲಿರುವ ಶ್ರೀ ನಾಡಿಗ ಸುಬ್ಬರಾಯರು ತಮ್ಮ ಪುತ್ರಿ ಸೌ|| ಮಹಾಲಕ್ಷ್ಮಮ್ಮನನ್ನು ಬಾಣಾವರದ ಪಟ್ವಾರ್ ಶ್ರೀ ಅನಂತರಾಮಯ್ಯನವರ ಪುತ್ರರಾದ ಶ್ರೀ ಬಿ. ನಾರಾಯಣ ರಾವ್‌ರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು ಸಂಜೆ ನಡೆದ ಸ್ವಾಗತ ಸಮಾರಂಭಕ್ಕೆ ಅನೇಕ ಗಣ್ಯ ಮಹನೀಯರು ಆಹ್ವಾನಿಸಿ ವಧೂವರರಿಗೆ ಶುಭವನ್ನು ಕೋರಿದರು

ಶಿವರಾಂಪೇಟೆಯಲ್ಲಿರುವ ಲಕ್ಷ್ಮೀನರಸಿಂಹ ಪ್ರೆಸ್ಸಿನ ಮಾಲೀಕರಾದ ಶ್ರೀ ಡಿ ಅನಂತರಾಯರು ತಮ್ಮ ಪುತ್ರರಾದ ಶ್ರೀ ಎ ನಾಗೇಶ ಪೈರವರಿಗೆ ಶ್ರೀ ಆರ್ ಸುಬ್ಬರಾಯರ ಪುತ್ರಿ ಸೌ|| ಅಮಸೂಯಾಬಾಯಿಯನ್ನು ತಂದುಕೊಂಡು ನೆನ್ನೆ ವಿವಾಹವನ್ನು ನೆರವೇರಿಸಿದರು.

ಎರಡು ಚುನಾವಣಾ ಕ್ಷೇತ್ರಗಳ ಎಲ್ಲ ಅರ್ಜಿಗಳೂ ವಜಾ

ಪಶ್ಚಿಮ ಬಂಗಾಳದ ಶಾಸನ ಸಭೆಗೆ ಸುತಿ ಮತ್ತು ಫರಕ್ಕಾ ಎಂಬ ಕ್ಷೇತ್ರಗಳಿಂದ ಸಲ್ಲಿಸಲಾಗಿದ್ದ ಎಲ್ಲ ಉಮೇದುವಾರಿಕೆ ಅರ್ಜಿಗಳನ್ನೂ ತಿರಸ್ಕರಿಸಲಾಗಿದೆಯೆಂದೂ, ಇದಕ್ಕೆ ಕಾರಣವು ತಿಳಿದು ಬಂದಿಲ್ಲವೆಂದೂ ವರದಿಯಾಗಿದೆ.

ಪಾರ್ಲಿಮೆಂಟಿಗೆ ಸಂಸ್ಥಾನದ ಉಮೇದುವಾರರು

ಭಾರತದ ಪಾರ್ಲಿಮೆಂಟಿಗೆ ಕಳಗೆ ಕಂಡ ಉಮೇದುವಾರರು ಅರ್ಜಿಗಳನ್ನು ಸಲ್ಲಿಸಿರುವರು –

ಮೈಸೂರು ಜಿಲ್ಲೆ ರಿಸರ್ವ್ ಕ್ಷೇತ್ರ ೧ ಸ್ಥಾನ– ಶ್ರೀ ಎಚ್ ರಾಚಯ್ಯ ಮತ್ತು ಶ್ರೀ ಎಸ್ ಎಂ ಸಿದ್ದಯ್ಯ (ಸಿ ಫೆ ಮತ್ತು ಕೆ ಎಂ ಪಿ), ಸಾಮಾನ್ಯ ಸ್ಥಾನದ ಹೆಸರುಗಳನ್ನು ಮೊನ್ನೆಯೇ ಕೊಡಲಾಗಿದೆ

ಬೆಂಗಳೂರು ಉತ್ತರ ೧ ಭಾಗ ಶ್ರೀ ಎಚ್ ಕೇಶವಯ್ಯಂಗಾರ್ (ಕಾಂ) ಎಂ ಆರ್ ಲಕ್ಷ್ಮಮ್ಮ (ಕಾಂ) ಆ ಪಿ ಡಿಸೋಜಾ ಡಿಕಾಸ್ಟ (ಸ್ವ) ' ಜ ಕೆ ರೆಡ್ಡಿ (ಸಮಾಜವಾದಿ), ಡಿ ಎಸ್ ಹೊಸಾ (ಕೆ ಎಂ ಪಿ) ಜಿ ಪಿ ರಾಮಾಚಾರ್ (ಸ್ವ) ಜ|| ಹನೀಫ್ (ಸ್ವ) ಎಸ್ ಕೆ ವೆಂಕಟರಂಗಯ್ಯಂಗಾರ್ (ಸ್ವ) ಎ ಎಸ್ ಧರ್ಮಲಿಂಗಂ (ಸ್ವ) ೭ ಶೇಷಪ್ಪ (ಸ್ವ) ಮತ್ತು ಶ್ರೀಮತಿ ಎಚ್ ಕೆ ಪ್ರಭಮ್ಮ

ದಕ್ಷಿಣ ಕ್ಷೇತ್ರ ೧ ಭಾಗ ಶ್ರೀಗಳಾದ ಟಿ ಮಾದಯ್ಯಗೌಡ (ಕಾಂ) ಕೆ ಶ್ರೀನಿವಾಸರಾವ್ (ಕೆ ಎಂ ಪಿ) ಎಚ್ ಶ್ರೀನಿವಾಸರೆಡ್ಡಿ (ಸ್ವ) ಮತ್ತು ಬಿ ಎಸ್ ವಿಜಯದೇವ (ಜನಸಂಘ)

ತುಮಕೂರ ಜಿಲ್ಲೆ ೧ ಭಾಗ– ಶ್ರೀಗಳಾದ ಎಚ್ ಎಸ್ ಆರಾಧ್ಯ (ಕಾಂ) ಎಂ ಎಲ್ ಶ್ರೀಕಂಠಯ್ಯ (ಕೆ ಎಂ ಪಿ) ಕೆ ಪಿ ಸುಬ್ರಹ್ಮಣ್ಯ ಸ್ವಾಮಿ (ಜನಸಂಘ)

ಹಾಸನ ಜಿಲ್ಲೆ ೧ ಭಾಗ ಶ್ರೀಗಳಾದ ಹೆಚ್ ಸಿದ್ದನಂಜಪ್ಪ (ಕಾಂ) ಎಸ್ ಶಿವಪ್ಪ (ಸಮಾಜವಾದಿ) ಸಿ ವಾಸುದೇವಮೂರ್ತಿ (ಸ್ವ)

ಮಂಡ್ಯ ಜಿಲ್ಲೆ ೧ ಭಾಗ ಶ್ರೀಗಳಾದ ಶಿವನಂಜಪ್ಪ (ಕಾಂ), ಕೆ ಪಿ ಶಂಕರೇಗೌಡ (ಕಾಂ), ಜಿ ಎಸ್ ಬೋರೇಗೌಡ (ಕಾಂ) ಕೆ ಚಿಕ್ಕಲಿಂಗಯ್ಯ (ಕೆ ಎಂ ಪಿ), ಎಂ ಸಿ ಲಿಂಗೇಗೌಡ (ಕೆ ಎಂ ಪಿ) ಎಂ ಬೋರೇಗೌಡ (ಸ್ವ)

ಶಿವಮೊಗ್ಗ ೧ ಭಾಗ– ಶ್ರೀಗಳಾದ ಕೆ ಜಿ ಒಡೆಯರ್ (ಕಾಂ), ಕೆ ಎಚ್ ಹಾಲಪ್ಪ (ಕೆ ಎಂ ಪಿ) ಮಾಲಿಂಗರಾವ್ ಸುಬ್ಬರಾವ್ (ಜನಸಂಘ) ಟಿ ಕಲ್ಲಯ್ಯ (ಸಮಾಜವಾದಿ), ಉಕ್ಕೆ ಸೀತಾರಾಮ ಶಾಸ್ತ್ರಿ (ಸ್ವ)

ಕೋಲಾರ ಜಿಲ್ಲೆ ೧ ಭಾಗ– ಶ್ರೀಗಳಾದ ಎಂ ವಿ ಕೃಷ್ಣಪ್ಪ (ಕಾಂ) ಎಸ್ ರಾಮಪ್ಪ (ಕೆ ಎಂ ಪಿ), ವಿ ಎಂ ಗೋವಿಂದನ್ (ಕಮ್ಯೂ), ಕೆ ಸಂಜೀವರಾಮಯ್ಯ (ಸ್ವ), ಎಂ ಎಚ್ ಮಹದೇವ (ಸ್ವ), ಜೆ ಟಿ ಗೋಪಾಲಕೃಷ್ಣ (ಸ್ವ), ರಿಸರ್ವ್ ಕ್ಷೇತ್ರ ೧– ಶ್ರೀ ದೊಡ್ಡತಿಮ್ಮಯ್ಯ (ಕಾಂ), ಆರ್ ಎ ದಾಸ್ (ಸ್ವ)

೬೦ ವರ್ಷದ ವೃದ್ಧರಿಂದ ಹಟಯೋಗ ಪ್ರದರ್ಶನ

೬೦ ವರ್ಷದ ವಯೋವೃದ್ಧರಾದ ಪ್ರೊ|| ಶ್ರೀ|| ರಾಜ ಯೋಗೀಶ್ವರ ಬಿ ಪಿ ಶಂಕರ ನಾರಾಯಣಶಾಸ್ತ್ರಿಗಳು ಮೊನ್ನೆ ಬೆಂಗಳೂರಿನ ಮೇಯೊ ಹಾಲಿನ ಬಳಿ ಭೂಮಿಯೊಳಗೆ ೨ ಗಂಟೆ ಕಾಲ ಸಮಾಧಿಯಾಗಿದ್ದು ಅನಂತರ ಹರ್ಷ ಚಿತ್ತರಾಗಿ ಮೇಲಕ್ಕೆ ಎದ್ದು ಬಂದು ಹಟ ಯೋಗವನ್ನು ಪ್ರದರ್ಶಿಸಿದರು ಜೀಣಾದ ಸೌಹಾರ್ದ ನಿಯೋಗದವರು ಇದನ್ನು ನೋಡಿದರು

ಉಪಾಧ್ಯಾಯರುಗಳ ಶಿಕ್ಷಣ ಶಿಬಿರ

ಮೈಸೂರು ನಗರ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಕಳೆದ ಭಾನುವಾರ ಉಪಾಧ್ಯಾಯರುಗಳ ಶಿಕ್ಷಣ ಶಿಬಿರವನ್ನು ಏರ್ಪಡಿಸಲಾಗಿತ್ತು ಶ್ರೀ ಎಸ್ ವಿ ಮಂಜುನಾಥರವರು ಉಪಾಧ್ಯಾಯರುಗಳನ್ನು ಸ್ವಾಗತಿಸಿದರು ಪ್ರಾಂತಾಧಿಕಾರಿಗಳಾದ ಶ್ರೀ ಬಿ ವಿ ಸತ್ಯನಾರಾಯಣರವರು ವಯಸ್ಕರ ಶಿಕ್ಷಣ ತರಗತಿಗಳನ್ನು ನಡೆಸುವ ಕ್ರಮ ಪ ವಿಚಾರವಾಗಿ ಭಾಷಣ ಮಾಡಿದರು ಶ್ರೀ ಸ ಭದ್ರಯ್ಯನವರು ವಯಸ್ಕರ ಶಿಕ್ಷಣ ಸಮಿತಿಯ ಯೋಜನೆ ಮತ್ತು ಶಿಕ್ಷಣದ ಅವಶ್ಯಕತೆ ವಿಚಾರವಾಗಿ ಭಾಷಣ ಮಾಡಿದರು ಶ್ರೀ ಎಸ್ ವಿ ರಾಮರಾಜ ಅಯ್ಯಂಗಾರ್‌ರವರು ಪುಸ್ತಕ ಭಂಡಾರಗಳ ಅವಶ್ಯಕತೆಗಳನ್ನು ವಿವರಿಸಿದರು

ನಿಸ್ಪೃಹರಾದವರಿಗೇ ಓಟು ಕೊಡಬೇಕು

ಚುನಾವಣೆಯ ಕಾಲವು ಸಮೀಪಿಸುತ್ತಿರುವಂತೆಲ್ಲಾ ರಾಜೀನಾಮೆಯ ಪ್ರಕರಣಗಳು ಹೆಚ್ಚುತ್ತಿರುವುವೆಂದೂ, ಇದರ ಹಿನ್ನೆಲೆಯನ್ನು ಕಂಡುಹಿಡಿಯುವುದು ಜನತೆಯ ಕರ್ತವ್ಯವೆಂದೂ ತಿಳಿಸಿ ರಾಜಧಾನಿಯ ಎಂಪೈರ್ ಮೋಟಾರ್ ಸರ್ವಿಸಿನ ಮಾಲೀಕರೂ, ಪ್ರಜಾ ಸೇವಕರೂ ಆದ ಶ್ರೀ ಎಂ ಎಸ್ ಪುಟ್ಟಲಿಂಗುರವರು ಹೇಳಿಕೆಯನ್ನಿತ್ತಿರುವರು ಉಮೇದುವಾರರ ಯಾವ ಪ್ರಭಾವಕ್ಕೂ ಒಳಗಾಗದೆ ನಿಸ್ಪೃಹರಾಗಿ ದೇಶಕ್ಕೂ ಮತ್ತು ಸಮಾಜಕ್ಕೂ ಸೇವೆಸಲ್ಲಿಸುವವರಿಗೆಮಾತ್ರ ಚುನಾವಣೆಗಳಲ್ಲಿ ಮತದಾರರು ಓಟು ಕೊಡಬೇಕೆಂದೂ ಅವರು ಕೋರಿರುವರು

ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿ

ರಾಜಧಾನಿಯ ನಜರಬಾದಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಮೇಲ್ಕಂಡ ಲಾಂಡ್ರಿಯಲ್ಲಿ ವಿದ್ಯುಚ್ಛಕ್ತಿಯ ಯಂತ್ರಗಳನ್ನು ಸ್ಥಾಪಿಸಿ ಬಟ್ಟೆಗಳನ್ನು ಶುದ್ಧಿಮಾಡುವ ವ್ಯವಸ್ಥೆ ಮಾಡಲಾಗಿದೆ ಈ ಕ್ರಮದಲ್ಲಿ ವಿಶೇಷ ತರಬೇತು ಹೊಂದಿದವರ ಮೇಲ್ವಿಚಾರಣೆಯಲ್ಲಿ ಕೆಲಸವು ಕ್ರಮವಾಗಿ ನಡೆಯುತ್ತಿರುವುದರಿಂದ ನಗರದ ಅನೇಕ ಪ್ರಮುಖ ಅಧಿಕಾರಿಗಳೂ ಮತ್ತು ಖಾಸಗೀ ಮಹನೀಯರೂ ಸಂಸ್ಥೆಗೆ ಉತ್ತೇಜನ ನೀಡುತ್ತಿರುವರು ಬಟ್ಟೆಗಳನ್ನು ಶುದ್ಧೀಕರಿಸುವ ಈ ಹೊಸ ವ್ಯವಸ್ಥೆಯಿಂದ ಅವುಗಳು ಬಾಳಿಕೆ ಬರುವುದು ಸಂಸ್ಥೆಯು ಹೆಚ್ಚಿನ ಪುರೋಭಿವೃದ್ಧಿ ಹೊಂದುವುದರಲ್ಲಿ ಸಂದೇಹವಿಲ್ಲ

ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರ ಪ್ರವಾಸ

ಗುಂಡ್ಲುಪೇಟೆ,

ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರು ಕಳೆದ ೧೬ನೇ ತಾರೀಖಿನಿಂದ ಮೂರು ದಿನಗಳು ಗುಂಡ್ಲುಪೇಟೆ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಪ್ರವಾಸ ಕೈಗೊಂಡು ವಯಸ್ಕರ ಶಿಕ್ಷಣದ ಅವಶ್ಯಕತೆ, ಪುಸ್ತಕ ಭಂಡಾರಗಳು ಮತ್ತು ಗ್ರಾಮಕಲೆಗಳ ಅಭಿವೃದ್ಧಿಗಳ ಕುರಿತು ಭಾಷಣ ಮಾಡಿದರು. ಹಲವು ಕಡೆಗಳಲ್ಲಿ ವಯಸ್ಕರ ಶಿಕ್ಷಣದ ಚಲಚ್ಚಿತ್ರಗಳನ್ನು ಪ್ರದರ್ಶಿಸಲಾಯಿತು ಹಲವಾರು ವಯಸ್ಕರ ಶಿಕ್ಷಣ ತರಗತಿಗಳನ್ನೂ ತೆರೆಯಲಾಯಿತು ಸ್ಥಳೀಯ ಅಧಿಕಾರಿಗಳೂ ಮತ್ತು ಖಾಸಗಿ ಪ್ರಮುಖರೂ ಸಮಾರಂಭಗಳಲ್ಲಿ ಭಾಗವಹಿಸಿದ್ದರು

ಈ ತಾಲ್ಲೂಕಿನ ಕಬ್ಬಳ್ಳಿ ಗ್ರಾಮ ಹೈಸ್ಕೂಲಿನಲ್ಲಿ ಕಳೆದ ೧೪ನೇ ತಾರೀಖು ಪಂಡಿತ ನೆಹರೂರವರ ಜಯಂತಿಯನ್ನು ಆಚರಿಸಲಾಯಿತು ವಯಸ್ಕರ ಶಿಕ್ಷಣ ಸಮಿತಿಯ ಮೈಸೂರು ಪ್ರಾಂತ್ಯಾಧಿಕಾರಿಗಳಾದ ಶ್ರೀ ಬಿ ವಿ ಸತ್ಯನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು

CHAMUNDESWARI TALKIES
— MORNING SHOWS —
On Sat & Sun
DILLINGERS AND ANIMAL WONDER-LAND

ರಣಜಿತ್ ಟಾಕೀಸ್
ಬೆಳಗಿನ ಪ್ರದರ್ಶನ
24-11-51ರಿಂದ 3 ದಿನಗಳು
* ಲಾಡ್ಲಿ *
ಪಾತ್ರ – ಜಯರಾಜ್ ಸುಲೋಚನಾ ಚಟರ್ಜಿ ಕುಲದೀಪ್, ದೇವಿಕಾ

Edited, Printed and Published by A R Nagarajan, at Sadhvi Press D Subbiah Road, Mysore

ದಿ ಹಿಂದೂ ಬ್ಯಾಂಕ್ ಕರೂರು,
ಲಿಮಿಟೆಡ್, ಮೈಸೂರು

ಮೇಲ್ಕಂಡ ಬ್ಯಾಂಕಿನ ಗಿರಾಕಿಗಳಿಗೂ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ಬ್ಯಾಂಕಿನ ಮೈಸೂರು ಶಾಖಾ ಕಛೇರಿಯನ್ನು ತಾರೀಕು 1 12-51 ರಿಂದ ಮುಚ್ಚಲಾಗುವುದು ಸದರಿ ಬ್ಯಾಂಕಿನಲ್ಲಿ ಆಭರಣಗಳ ಆಧಾರದ ಮೇಲೆ ಸಾಲ ಪಡೆದಿರುವವರು 30 11-51 ನೇ ತಾರೀಖಿನೊಳಗಾಗಿ ತಮ್ಮಿಂದ ಸಲ್ಲಬೇಕಾದ ಬಾಕಿಯನ್ನು ಪಾವತಿ ಮಾಡಿ ನಗಗಳನ್ನು ವಾಪಸು ಪಡೆಯತಕ್ಕದ್ದು ಹಾಗೆ ಮಾಡಲು ತಪ್ಪಿದಲ್ಲಿ, ತಾ|| 30 11-51ರ ನಂತರ ನಗಗಳನ್ನು ಉತ್ತರ ಆರ್ಕಾಟು ಜಿಲ್ಲೆಯ ತಿರುಪತ್ತೂರಿನಲ್ಲಿರುವ ನಮ್ಮ ಬ್ಯಾಂಕಿನ ಶಾಖೆಗೆ ವರ್ಗಾಯಿಸಲಾಗುವುದರಿಂದ, ಮೈಸೂರಿನ ಶಾಖೆಯಲ್ಲಿ ಸಾಲ ಪಡೆದಿರುವವರೆಲ್ಲರೂ ತಮ್ಮ ಸ್ವಂತ ವೆಚ್ಚದಿಂದ ತಿರುಪತ್ತೂರಿಗೆ ಹೋಗಿ, ಸಾಲ ತೀರಿಸಿ, ತಮ್ಮ ನಗಗಳನ್ನು ಪಡೆಯಬೇಕಾಗುವುದು

ಕೆ. ವಿ. ರಾಮಕೃಷ್ಣ ರಾವ್,
ಆಕ್ಟಿಂಗ್ ಏಜೆಂಟ್

ಶ್ರೀ ಗಣೇಶಾ ಟಾಕೀಸ್
23-11-51 ರಿಂದ ಆ ನೋ ಳ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಪ್ರಕಾಶ್ ಪಿಕ್ಚರ್ಸ್‌ರವರ ತೆಲುಗು ಚಿತ್ರ * ಮೊದಟಿ ರಾತ್ರಿ *
ಮುಖ್ಯಪಾತ್ರ – ಜಿ ವರಲಕ್ಷ್ಮಿ ಪ್ರಕಾಶ್ ರಾವ್, ಶಿವರಾವ್ ನಾರಾಯಣರಾವ್ ಮುಂತಾದವರು
[A PRAKASH RELEASE

ಜಯಪ್ರದ 2 ನೇ ವಾರ !
ಕಿಕ್ಕಿರಿದ ಜನ ಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ
ಮೋತಿಲಾಲ್ ಮತ್ತು ಶ್ರೀ ಲಕ್ಷ್ಮೀ ಥಿಯೇಟರುಗಳಲ್ಲಿ
ಪ್ರತಿ ದಿನ ಮೂರು ಆಟಗಳು
ಜ್ಞಾನಾಂಬಿಕಾರವರ ತೆಲುಗು ಚಿತ್ರ * ಮಂತ್ರ ದಂಡಂ
ಭೂಮಿಕೆ – ನಾಗೇಶ್ವರರಾವ್ ಶಿವರಾವ್ ಶ್ರೀರಂಜನಿ, ಜಯಮ್ಮ

ಗೌಸ್ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ M. V. ಭೋಜಯ್ಯ ಶ್ರೀ ಬಿ ಎ, ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ 792 • ಪಂಡೀ ಸಾಸಕಂ • ಒಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೪-೧೧-೫೧ [ಸಂಚಿಕೆ ೧೮೨

ರಾಜು ಮೊಕದ್ದಮೆಗೆ - ಮದ್ರಾಸು ಜಡ್ಜರು -

...ದಪ್ಪನವರ ವರ್ಗದ ಸಂಭವ

...ಫೋ॰] ಬೆಂಗಳೂರು ೨೪

...ತ್ಯಾಂಗದ ...ನೇ ವಿಧಿಯ ...ರಾಷ್ಟ್ರಾಧ್ಯಕ್ಷರು ಶ್ರೇಷ್ಠ ನ್ಯಾ... ...ರ ಶ್ರೀ ಪಿ ಮೇದಪ್ಪನವರನ್ನು ...ಯಿಸುವ ಸಂಭವವಿರುವುದಾಗಿ ...ಗಿದೆ

...ಸಂಸ್ಥೆ ಸಮಿತಿಯಿಂದ ...ಫ್ರೆನ್ಸ್ ಪ್ರತಿನಿಧಿಯ ಸಭಾ ತ್ಯಾಗ

ಸಂಸ್ಥೆಯ ಧರ್ಮದರ್ಶಿಗಳ ಸ...ಭೆಯು ನೆ...ಸೇರಿದ್ದಾಗ ಇರಾ...ನಿಧಿಯು ಸ್ವಪ್ರಭುತ್ವಾಡಳಿತ ...ವಸಾಹತುಗಳ ಸಮಸ್ಯೆಗಳನ್ನು ಚರ್ಚಿಸಬೇಕೆಂದು ನಿರ್ಣಯ ...ಸೂಚಿಸಲಾಗಿ, ಅವನ್ನು ಫ್ರಾನ್ಸಿ...ನಿಧಿಯು ಪ್ರತಿಭಟಿಸಿ ಸಭಾ ತ್ಯಾ... ...ವರು ಇರಾಕಿನ ಪ್ರತಿನಿಧಿಯು ...ಇ ವಸಾಹತುಗಳ ರಾಷ್ಟ್ರಗಳು ಸಮಸ್ಯೆಗಳ ಚರ್ಚೆಗೆ ತಡ್ಡಿ ತ...ವುದಾಗಿ ತಿಳಿಸಿದರು ಅವರ...ಯು ಬಿದ್ದುಹೋಯಿತು

...ನನ್ನ ತನ್ನದೆಂದು ...ಮನ್ನಿನವರ ದೂರು

ಸಮುದ್ರದ ಎಳಿ ಇರುವ ...ವು ತನಗೆ ಸೇರಬೇಕೆಂದೂ ...ವನ್ನು ತಮ್ಮಿಂದ ...ಕಿ...ಮಕೊಂಡಿರುವರೆಂದೂ ...ಸೇರಿರುವ ವಿಶ್ವಸಂಸ್ಥೆ...ಳ ಸಮಿತಿಯಲ್ಲಿ ...ಗೊಂಡಾದ ಯೆಮೆನ್ನಿನ ಪ್ರ...ನಿಧಿ ದೂರನ್ನು ಸಲ್ಲಿ...ದಿಯಾಗಿದೆ

...ಸ್ಥೆಯು ಮತ್ತೊಂದು ...ತಿಯಲ್ಲಿ ಗೊಂದಲ

...ಸ್ವಾತಂತ್ರ್ಯದ ಬಗ್ಗೆ ಉಂ...ತಿಯನ್ನು ಕುರಿತು ವಿಶ್ವ... ...ಟ್ರಸ್ಟೀಶಿಪ್ ಸಮಿತಿಯು ಸೇ...ರುತ್ತಿದ್ದಾಗ ಅಗಂಟೆಗಳ ಕಾಲ ...ವಾಗಿ ಸಭೆಯು ನಡೆಯುವು...ದವಾಯಿತು ಗ್ರೀಸ್ ದೇಶದ ...ಯ ಸೈದಿಗಳನ್ನು ಖಾಸಿಗೆ ...ಕೊಡಬೇಕೆಂದು ರಷ್ಯವು ನಿರ್ಣ... ತಂದಿತು ಈ ಬಗ್ಗೆ ಪ್ರತಿನಿಧಿ ...ವಾದಗಳುಂಟಾಗಿ ಅಧ್ಯಕ್ಷ... ...ನ್ನು ... ಮ ಷ ಕಾ... ...ದರು

...ಹೊಟ್ಟೆಯಲ್ಲಿ ಬೆಕ್ಕಿನ ...ದ ಮರಿಯ ಜನನ

...ಪ್ರದೇಶ ಪ್ರಾಂತದ ಗ್ರಾಮ ...ನನ್ನೆ ಒಂದು ಆಡು ಬೆಕ್ಕಿನ ...ತ್ತು ಮನುಷ್ಯನ ಕೈಗಳಂತಿರು...ಳ್ಳ ಒಂದು ಮರಿಯನ್ನು ...ದೆ ಅದು ಹುಟ್ಟಿದಾಗ ಜೀವ... ...ಸ್ವಲ್ಪ ಮೇಲೆ ಕೂಡಲೂ ಸ...

...ಗೂನಿನಲ್ಲಿ ಭೂಕಂಪ

ಮಧ್ಯಾಹ್ನ ರಂಗೂನಿನಲ್ಲಿ ...ಜೋರಾಗಿ ನಗರವು ಜೋರಾಗಿ ...ಬಲವು ಮನೆಗಳಲ್ಲಿ ಬಿರುಕು ...ರಂಗೂನು ನಗರದ ನೀರು ಸರ...ಬರಾಜು ವ್ಯವಸ್ಥೆ ಪುನಃ ಸರಿಪಡಿಸಲ್ಪ...

ಮುಖ್ಯ ಮಂತ್ರಿ ಮನೆ ಬಳಿ ೩೦೦ ನಿರಾಶ್ರಿತರ ಉಪವಾಸ

ಪೂರ್ವ ಬಂಗಾಳದಿಂದ ಬಂದಿರುವ ನಿರಾಶ್ರಿತರ ಪೈಕಿ ೩೦೦ ಜನರು ಹಲವು ದಿನಗಳಿಂದಲೂ ಕಲ್ಕತ್ತಾದಲ್ಲಿ ಮುಖ್ಯ ಮಂತ್ರಿ ಡಾ|| ಬಿ ಸಿ ರಾಯರವರ ಮನೆ ಮುಂಬಾಗದಲ್ಲಿ ಕುಳಿತು ಉಪವಾಸ ಮಾಡುತ್ತಿರುವರು ಮನೆ ಕಟ್ಟಿಕೊಳ್ಳಲು ಮತ್ತು ವ್ಯಾಪಾರ ಮಾಡಲು ಸರಕಾರದವರು ಸಾಲ ಕೊಡಬೇಕೆಂದು ಅವರ ಬೇಡಿಕೆಯನ್ನಿಟ್ಟಿರುತ್ತಾರೆ

ಮಂಡ್ಯದ ವಿದ್ಯಾರ್ಥಿನಿಯರ ಮುಷ್ಕರ

ಮಂಡ್ಯದ ಸರ್ಕಾರಿ ಮಾಧ್ಯಮಿಕ ಶಾಲೆಯ ಮೂರು ಜನ ಉಪಾಧ್ಯಾಯರ ಅನುಚಿತ ವರ್ತನೆ ಬಗ್ಗೆ ಪ್ರತಿಭಟಿಸಲು ಅಲ್ಲಿನ ೨೦೦ ಜನ ವಿದ್ಯಾರ್ಥಿನಿಯರು ಕಳೆದ ಮೂರು ದಿನಗಳಿಂದ ಮುಷ್ಕರ ಹೂಡಿರುತ್ತಾರೆ ಶಾಲೆಯ ... ಸಂಘದ ಅಧ್ಯಕ್ಷರು ವಿದ್ಯಾ ಇಲಾಖೆ ಡೈರೆಕ್ಟರರಿಗೆ ತಂತಿ ಕಳುಹಿಸಿ ಈ ಸಂಬಂಧವಾಗಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ

ಹಿಂದೀ ಪ್ರಚಾರ ಸಭೆ

ಬರುವ ವರ್ಷ ಫೆಬ್ರವರಿ ೧೬, ೧೭ ಮತ್ತು ೧೮ನೇ ತಾ|| ನಡೆಯುವ ಮೈ|| ಭಾ|| ಹಿಂದೀ ಪ್ರಚಾರ ಸಭೆಯ ಪ್ರವೇಶಿಕಾ, ವಿಶಾರದ ಮತ್ತು ಪ್ರವೀಣ ಪರೀಕ್ಷೆಗಳಿಗೆ ಅರ್ಜಿ ಪತ್ರಗಳನ್ನು ಕಳುಹಿಸಲು ಮುಂದಿನ ತಿಂಗಳು ೩ನೇ ತಾ|| ಕಡೇ ದಿನವಾಗಿರುವುದು ಪತ್ರಗಳನ್ನು ರಾಜಧಾನಿಯ ಹಿಂದೀ ಪ್ರಚಾರ ಸಭಾ ಕಾರ್ಯಾಲಯದಲ್ಲಿ ಪಡೆಯಬಹುದು

ಮದ್ರಾಸಿಗೆ ನ್ಯಾಯಾಂಗ ಸಚಿವರ ಭೇಟಿ

ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಬರುವ ತಿಂಗಳು ೩ನೇ ತಾ|| ಮದ್ರಾಸಿಗೆ ತೆರಳಿ ಮೇಕೆದಾಟು ಯೋಜನೆಯ ಬಗ್ಗೆ ಅಲ್ಲಿನ ಮಂತ್ರಿಗಳೊಡನೆ ಮಾತುಕತೆ ನಡೆಸುವರು ೫ನೇ ತಾರೀಕು ಅವರು ಕೊಯಮತ್ತೂರಿಗೆ ಪ್ರಯಾಣ ಮಾಡಿ, ಅಲ್ಲಿಂದ ಮೆಟ್ಟುಪಾಳ್ಯಂ, ನೀಲಗಿರಿ ಮೂಲಕ ರಾಜಧಾನಿಗೆ ಆಗಮಿಸುವರು

ಕ್ರಿಸ್‌ಮಸ್ ವೇಳೆಗೆ ಕೊರಿಯಾ ಯುದ್ಧ ಸಮಾಪ್ತಿ

ಕೊರಿಯಾ ಯುದ್ಧ ಮುಕ್ತಾಯದ ಬಗ್ಗೆ ಕಳೆದ ನಾಲ್ಕು ತಿಂಗಳಿಂದ ಕಮ್ಯೂನಿಸ್ಟರಿಗೂ ವಿಶ್ವ ಸಂಸ್ಥೆ ಪ್ರತಿನಿಧಿಗಳಿಗೂ ನಡೆಯುತ್ತಿದ್ದ ಮಾತುಕತೆಗಳು ನೆನ್ನೆ ಯಶಸ್ವಿಯಾಗಿ ಮುಕ್ತಾಯಗೊಂಡವು ಇನ್ನು ಒಂದು ತಿಂಗಳೊಳಗೆ ನಿಶ್ಶಸ್ತ್ರೀಕೃತ ಪ್ರದೇಶವನ್ನು ನಿರ್ಮಿಸುವ ಸ್ತಂಭನ ರೇಖೆಯನ್ನು ಗೊತ್ತುಮಾಡತಕ್ಕದೆಂದೂ, ಇನ್ನು ೩೦ ದಿನಗಳೊಳಗೆ ಶಾಂತಿ ಒಪ್ಪಂದಕ್ಕೆ ರುಜುವಾಗದಿದ್ದರೆ, ಸಮರ ಕ್ಷೇತ್ರದಲ್ಲಿ ಯುದ್ಧ ನಿರೋಧದ ಬಗ್ಗೆ ಅವಶ್ಯಕವಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳತಕ್ಕದ್ದೆಂದೂ ತೀರ್ಮಾನವಾಯಿತು ಉಭಯ ಪಕ್ಷಗಳವರೂ ಸೆರೆ ಹಿಡಿದಿರುವ ಖೈದಿಗಳನ್ನು ಬಿಟ್ಟುಕೊಡತಕ್ಕದ್ದೆಂದೂ, ಆ ಪಕ್ಷಗಳ ಸೇನೆಗಳ ನಡುವೆ ಒಂದೂವರೆ ಮೈಲಿ ಅಂತರದ ನಿಶ್ಶಸ್ತ್ರೀಕೃತ ಪ್ರದೇಶವನ್ನು ಗೊತ್ತುಮಾಡತಕ್ಕದ್ದೆಂದೂ ನಿರ್ಧಾರವಾಯಿತು

ಎಂಟು ಕಾಲಿನ ಕುರಿಮರಿ

ಬಂಗಾರಪೇಟೆ ಹತ್ತಿರ ಇರುವ ಬೂದಿಕೋಟೆ ಗ್ರಾಮದ ಪಟೇಲ್ ಶ್ರೀ ನಾಗೇಗೌಡರ ಮನೆಯಲ್ಲಿ ಕಳೆದ ೨೦ನೇ ತಾ|| ಒಂದು ಕುರಿಗೆ ೧ ತಲೆ ಒಂದೇ ದೇಹ, ೨ ನಡು, ಎಂಟು ಕಾಲುಗಳುಳ್ಳ ಮರಿಯು ಹುಟ್ಟಿ, ನಾಲ್ಕು ಗಂಟೆಗಳ ಕಾಲ ಅದು ಬದುಕಿದ್ದು ನಂತರ ಪ್ರಾಣ ಬಿಟ್ಟಿತೆಂದು ಹೇಳಲಾಗಿದೆ

ಉಪನ್ಯಾಸ

ನಂಜನಗೂಡು ಭಾರತೀ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೫ ಘಂಟೆಗೆ ಅಲ್ಲಿನ ಬಾಲಕರ ಮಾಧ್ಯಮಿಕ ಶಾಲಾ ಸಭಾಂಗಣದಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಚರಿತ್ರೆಯ ಅಧ್ಯಾಪಕರಾದ ಡಾ|| ಎಸ್ ಶ್ರೀಕಂಠ ಶಾಸ್ತ್ರಿಯವರು "ಮಹಾ ಭಾರತ ಮತ್ತು ಭಾರತೀ ಸಂಸ್ಕೃತಿ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

○ ಈಜಿಪ್ಟಿಗೆ ಪರ್ಷಿಯದ ಪೆಟ್ರೋಲನ್ನು ಸರಬರಾಜು ಮಾಡುವ ಬಗ್ಗೆ ಆ ಎರಡು ರಾಜ್ಯಗಳಿಗೂ ಒಪ್ಪಂದವಾಗಿರುವುದಾಗಿ ಈಜಿಪ್ಟಿನ ವಿದೇಶಾಂಗ ಮಂತ್ರಿಗಳು ತಿಳಿಸಿರುತ್ತಾರೆ

ರಾಜೂ ಮೊಕದ್ದಮೆ ವಿಚಾರಣೆಗೆ ಮದ್ರಾಸಿನ ಜಡ್ಜರು

ಸ್ವಂ ಸು ಫೋ॰] ಬೆಂಗಳೂರು ೨೪

ಶ್ರೀ ಎಲ್ ಎಸ್ ರಾಜುರವರ ಮೇಲಿನ ಮೊಕದ್ದಮೆಯನ್ನು ನಡೆಸಲು ಮದ್ರಾಸಿನಿಂದ ಒಬ್ಬ ನ್ಯಾಯಾಧೀಶರನ್ನು ಕರೆಸುವ ವಿಷಯವು ಮೈಸೂರು ಮಂತ್ರಿ ಮಂಡಲದ ಪರ್ಯಾಲೋಚನೆಯಲ್ಲಿರುವುದಾಗಿಯೂ, ಈ ಸಂಬಂಧವಾಗಿ ಅಲ್ಲಿನ ಒಬ್ಬ ಸಚಿವರೊಡನೆ ಈಗಾಗಲೇ ಖಾಸಗಿಯಾಗಿ ಮಾತುಕತೆಗಳನ್ನು ನಡೆಸಲಾಗಿದೆಯೆಂದೂ ಗೊತ್ತಾಗಿದೆ

೩ ಜನ ಉಮೇದುವಾರರ ಅರ್ಜಿ ತಿರಸ್ಕಾರ

ಈ ನಗರದ ವಿವಿಧ ಕ್ಷೇತ್ರಗಳಿಂದ ಶಾಸನ ಸಭೆಗೆ ನಿಲ್ಲಲು ಅರ್ಜಿ ಸಲ್ಲಿಸಿದ್ದವರ ಪೈಕಿ ಶ್ರೀ ಭಗವಾನ್, ರಂಗನಾಥ್ ಮತ್ತು ಜ|| ಅಹಮದ್ ಖಾನರವರುಗಳ ೯ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಶ್ರೀಗಳಾದ ಪಿ ಎಸ್ ಕೃಷ್ಣಅಯ್ಯರ್ ಮತ್ತು ಪಿ ಕೆ ಗೋವಿಂದರಾಜುಲುರವರು ತಮ್ಮ ಅರ್ಜಿಗಳನ್ನು ವಾಪಸು ಪಡೆದಿರುತ್ತಾರೆ

ಬಾಬುರೆಡ್ಡಿಯವರ ಹುದ್ದೆ ಖಾಯಂ

ಡಿ ಐ ಜಿ ಶ್ರೀ ಎನ್ ಪಿ ಬಾಬು ರೆಡ್ಡಿಯವರನ್ನು ಕಳೆದ ಆಗಸ್ಟ್ ತಿಂಗಳಿಂದ ಅವರ ಸ್ಥಾನದಲ್ಲಿ ಖಾಯಂ ಗೊಳಿಸಲಾಗಿದೆ

ಪೋಲಿಸನಿಂದ ಅಧಿಕಾರಿಯ ಕೊಲೆ

ನೌಕರಿಯಲ್ಲಿ ಅಪದ್ದೆ ತೋರಿಸಿದ ಕಾರಣಕ್ಕಾಗಿ ವಜಾಗೊಂಡದ ಒಬ್ಬ ಪೋಲೀಸು ಕಾನ್‌ಸ್ಟೇಬಲ್ಲನನ್ನು ವಜಾ ಮಾಡಿದ ಅಧಿಕಾರಿಯನ್ನು ಮೊನ್ನೆ ಮಲಗಿದ್ದ ಸಮಯದಲ್ಲಿ ಸದರಿ ಪೋಲೀಸನು ಅಧಿಕಾರಿಯ ಕೊಠಡಿಗೆ ನುಗ್ಗಿ ಅವನ ಮೇಲೆ ಗುಂಡು ಹಾರಿಸಿ ತಾನೂ ಗುಂಡು ಹೊಡೆದುಕೊಂಡನೆಂದೂ ಇಬ್ಬರನ್ನೂ ಅಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಅಧಿಕಾರಿಯು ಮಡಿದನೆಂದೂ ವರದಿಯಾಗಿದೆ

ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ

ಮೈಸೂರು ೨೪

ರಾಜಧಾನಿಯ ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಬರುವ ತಿಂಗಳು ೧೯ ನೇ ತಾ|| ಮಧ್ಯಾಹ್ನ ೪ ಗಂಟೆಗೆ ಚುನಾವಣೆ ನಡೆಯುವುದು ಉಮೇದುವಾರಿಕೆ ಅರ್ಜಿಗಳನ್ನು ಡಿಸೆಂಬರ್ ೫ನೇ ತಾ|| ನೊಳಗೆ ಸಲ್ಲಿಸಬೇಕೆಂದು ವಿಧಾಯಕವಾಗಿದೆ

ಮದ್ರಾಸಿನಲ್ಲಿ ಪೇಜಾವರ ಮಠಾಧಿಪತಿಗಳು

ಉಡುಪಿಯ ಶ್ರೀ ಪೇಜಾವರ ಮಠಾಧಿಪತಿಗಳಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಕಳೆದ ತಿಂಗಳು ೩೧ನೇ ತಾ|| ಮದ್ರಾಸಿಗೆ ಆಗಮಿಸಿ ಈ ತಿಂಗಳು ೧೬ರ ವರೆಗೆ ಇದ್ದು ಕಾಂಚೀಪುರಕ್ಕೆ ಪ್ರಯಾಣ ಮಾಡಿದರು ಮದ್ರಾಸಿನ ದಾಸಪ್ರಕಾಶದ ಮಾಲೀಕರಾದ ಶ್ರೀ ಕೆ ಸೀತಾರಾಮರಾಯರೂ ಇತರರೂ ಶ್ರೀ ಶ್ರೀಯವರಿಗೆ ಭಿಕ್ಷೆ ನಡೆಸಿದರು ಈಗ ಅವರು ಬೆಂಗಳೂರಿಗೆ ಆಗಮಿಸಿರುತ್ತಾರೆ

ಮಹಾ ಚುನಾವಣೆ ಆದರ್ಶ ವಾಗಿರಲೆಂದು ನೆಹರೂ

ಪ್ರಧಾನಿ ನೆಹರೂರವರು ಮೊನ್ನೆ ರಾತ್ರಿ ರೇಡಿಯೋ ಭಾಷಣ ಮಾಡಿ ವಯಸ್ಕರ ಮತದಾನ ಪದ್ಧತಿ ಮೇಲೆ ಈಗ ಪ್ರಥಮತಃ ಏರ್ಪಾಡಾಗಿರುವ ಮಹಾ ಚುನಾವಣೆಯು-ಉನ್ನತ ಮಟ್ಟದಲ್ಲಿ ನಡೆದು, ಮುಂದೆ ಆಗುವ ಚುನಾವಣೆಗಳಿಗೆ ಮೇಲ್ಪಂಕ್ತಿಯಾಗಲೆಂದು ಹಾರೈಸಿದರು. ಚುನಾವಣೆಯಲ್ಲಿ ರಾಷ್ಟ್ರಧ್ವಜವನ್ನು ಉಪಯೋಗಿಸಕೂಡದೆಂದೂ ಅವರು ಎಚ್ಚರಿಸಿದರು. ಇತರ ಅಂಶಗಳನ್ನು ವಿವರಿಸಿ ೫೬ ಸಾವಿರ ಮೇಲ್ವಿಚಾರಣಾಧಿಕಾರಿಗಳೂ, ಇದಕ್ಕೆ ಐದರಷ್ಟು ಮಂದಿ ಗುಮಾಸ್ತರೂ, ನಾಲ್ಕರಷ್ಟು ಪೋಲೀಸರೂ ಬೇಕಾಗುವುದೆಂದೂ ತಿಳಿಸಿದರು. ಒಟ್ಟು ೩೪೦೫ ಚುನಾವಣಾ ಕ್ಷೇತ್ರಗಳಿದ್ದು, ಸುಮಾರು ೨೪ ಲಕ್ಷ ಓಟು ಮಾಡುವ ಕೇಂದ್ರಗಳಿರುವುವೆಂದೂ, ೪೪೫೧೩ ಸ್ಥಾನಗಳಿಗೆ ಚುನಾವಣೆಯಾಗಬೇಕೆಂದೂ, ಅದಕ್ಕಾಗಿ ಹತ್ತು ಕೋಟಿ ರೂ. ವೆಚ್ಚದ ಅಂದಾಜಾಗಿದೆಯೆಂದೂ ಅವರು ಹೇಳಿದರು.

ಭಾರತದ ಹೊಸ ಟಂಕಸಾಲೆ

ಕಲ್ಕತ್ತಾ ಬಳಿ ಅಲಿಪುರದಲ್ಲಿ ಹೊಸ ಟಂಕಸಾಲೆಯನ್ನು ತೆರೆಯಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ. ಬರುವ ವರ್ಷದ ಆದಿಯಲ್ಲಿ ಅದು ಪ್ರಾರಂಭವಾಗಿ ದಿನಕ್ಕೆ ೭½ ಲಕ್ಷ ನಾಣ್ಯಗಳನ್ನು ಮುದ್ರಿಸುವುದೆಂದೂ, ಇದನ್ನು ನಿರ್ಮಿಸಲು ೨.೨ ಕೋಟಿ ರೂ ವೆಚ್ಚವಾಯಿತೆಂದೂ ಹೇಳಲಾಗಿದೆ. ಕಲ್ಕತ್ತಾದಲ್ಲಿರುವ ಶಾಖೆಯು ಬದಲು ಇದು ಕೆಲಸ ಮಾಡುವುದು.

ಹಿಂದಿ ತರಗತಿಗಳು

ಚಾಮುಂಡಿಪುರದ ಶಾರದಾಂಬ ಹಿಂದಿ ನಿಕೇತನದ ಮುಖಾಂತರ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಆಗಸ್ಟ್ ಸಾರ ಹಿಂದೀ ಪ್ರಾಥಮಾ ಮತ್ತು ಮಾಧ್ಯಮಾ ಪರೀಕ್ಷೆಗಳಿಗೆ ಕಳುಹಿಸಲ್ಪಟ್ಟ ವಿದ್ಯಾರ್ಥಿಗಳಲ್ಲಿ ಶೇ|| ೮೦ ರಷ್ಟು ಉತ್ತೀರ್ಣರಾಗಿದ್ದಾರೆ. ಸಂಸ್ಥೆಯ ಆಶ್ರಯದಲ್ಲಿ ಮುಂದಿನ ಜನವರೀ ಫೆಬ್ರವರಿ ಪ್ರಾಥಮಾ, ಮಾಧ್ಯಮಾ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಶಿಕ್ಷಣವನ್ನು ಕೊಡಲಾಗುತ್ತಿದೆ. ಅಪೇಕ್ಷಿಸುವವರು ಜಾಗ್ರತೆಯಾಗಿ ಸೇರಬಹುದೆಂದು ವ್ಯವಸ್ಥಾಪಕರು ತಿಳಿಸುತ್ತಾರೆ.

ಚಲುವಾಂಬಾ ಆಸ್ಪತ್ರೆಯ ಅ|| ಸರ್ಜನರ ವರ್ಗ

ಮೈಸೂರು ಚಲುವಾಂಬಾ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ ಶ್ರೀಮತಿ ಅನಸೂಯಾಬಾಯಿಯವರು ಬೆಂಗಳೂರು ಸಿವಿಲ್ ಪ್ರದೇಶದ ಲೇಡಿ ಕರ್ಜನ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವರು.

ಪೂರ್ವ ಪಾಕಿಸ್ತಾನದ ಮಾಜಿ ಮಂತ್ರಿ ಮೇಲೆ ಕ್ರಮ

ಪೂರ್ವ ಪಾಕಿಸ್ತಾನದ ಮಾಜಿ ಹಣಕಾಸಿನ ಮಂತ್ರಿ ಹಮೀದ್ ಉಲ್ ಹಕ್ ಚೌಧುರಿಯವರು ಅಧಿಕಾರದಲ್ಲಿದ್ದಾಗ ಲಂಚ, ದುರಾಡಳಿತ, ಪಕ್ಷಪಾತ ಮತ್ತು ಇತರ ದೋಷಗಳಿಂದ ಕೂಡಿದ್ದರೆಂಬ ಆಪಾದನೆಯನ್ನು ಡಕ್ಕಾ ಹೈಕೋರ್ಟಿನವರು ಅಂಗೀಕರಿಸಿ ವರದಿ ಮಾಡಿದ ನಂತರ ಮೇಲೆ ಪಾಕಿಸ್ತಾನದ ಗೌರ್ನರ್ ಜನರಲ್ಲರು ಆಜ್ಞೆಯೊಂದನ್ನು ಹೊರಡಿಸಿ ಅಮೀರ್ ಉಲ್ ಹಕ್‌ರವರು ಯಾವ ಅಧಿಕಾರ ಸ್ಥಾನವನ್ನೂ ಆರು ವರ್ಷ ಕಾಲ ಇರಕೂಡದೆಂದು ಆಜ್ಞೆ ಮಾಡಿರುತ್ತಾರೆ

ರಷ್ಯದ ಶಸ್ತ್ರಾಸ್ತ್ರಗಳಲ್ಲಿ ಮೋತಾ

ಪಾಶ್ಚಾತ್ಯ ರಾಷ್ಟ್ರಗಳು ನಿಶ್ಶಸ್ತ್ರೀಕರಣದ ಸಂಬಂಧವಾಗಿ ತಯಾರಿಸಿರುವ ಯೋಜನೆಯ ಪಲವು ಅಂಶಗಳನ್ನು ರಷ್ಯವು ಅಂಗೀಕರಿಸಲು ಸಿದ್ಧವಾಗಿರುವುದೆಂದೂ, ಅಮೆರಿಕಾ ಬ್ರಿಟನ್, ಫ್ರಾನ್ಸುಗಳು ಮಂಡಿಸಿದ ಯೋಜನೆಯ ಇತರ ಅಂಶಗಳಿಗೆ ಒಪ್ಪಿದರೆ ರಷ್ಯವೂ ಶಸ್ತ್ರಾಸ್ತ್ರಗಳಲ್ಲಿ ಮೋತಾ ಮಾಡಿಕೊಳ್ಳಲಾಗುವುದೆಂದೂ ಹೇಳಲಾಗಿದೆ.

ಚೀಣಾ ಮಂಡಲಿಯವರ ಪ್ರಯಾಣ

ಚೀಣದ ಸಾಂಸ್ಕೃತಿಕ ಮಂಡಲಿಯವರು ನೆನ್ನೆ ಬೆಳಗ್ಗೆ ಅರಮನೆಯಲ್ಲಿ ಶ್ರೀ ಮನ್ಮಹಾರಾಜರನ್ನು ಭೇಟಿ ಮಾಡಿ, ಅನಂತರ ಬೇಲೂರು, ಹಳೇಬೀಡು, ಶ್ರವಣಬೆಳಗೊಳವನ್ನು ನೋಡಲು ನೆನ್ನೆ ಪ್ರಯಾಣ ಬೆಳಸಿ ರಾತ್ರಿ ಬೆಂಗಳೂರನ್ನು ತಲುಪಿದರು. ಈ ದಿನ ಅವರು ತಿರುವಾಂಕೂರಿಗೆ ತೆರಳಿದರು. ರಾಜಧಾನಿಯ ಕಾಲೇಜಿನ ಕನ್ನಡ ವ್ಯಾಸಂಗ ಗೋಷ್ಠಿಯವರು ಚಿತ್ರಾಂಗದ ಮತ್ತು ಅಂತಃಪುರದ ಗೀತೆ ಎಂಬ ಗ್ರಂಥಗಳನ್ನು ಅವರಿಗೆ ಅರ್ಪಿಸಿದರು.

AUCTION AT
ABIDS
TO-MORROW
At 10 a. m.

ರಂಗೂನ್ ಪುರಸಭಾ ನೌಕರರ ಅಪಹರಣ

ರಂಗೂನಿನ ನೀರು ಸರಬರಾಜು ವ್ಯವಸ್ಥೆಯನ್ನು ಕಮ್ಯೂನಿಸ್ಟರು ಕಡಿದು ಹಾಕಿದ್ದುದನ್ನು ಪರಿಶೋಧಿಸುತ್ತಿದ್ದ ನಾಲ್ಕು ಮಂದಿ ಪೌರಸಭಾ ನೌಕರರನ್ನು ಕಳೆದ ಸೋಮವಾರ ಕಮ್ಯೂನಿಸ್ಟ್ ದಂಗೆಕೋರರು ಅಪಹರಿಸಿಕೊಂಡು ಹೋದರೆಂದು ತಿಳಿದುಬಂದಿದೆ

ಧನ್ವಂತರಿ ಜಯಂತೀ ರಜತೋತ್ಸವ

ನಂಜನಗೂಡು ವೈದ್ಯ ಶಾಲೆಯ, ಶ್ರೀ ಪಿ. ಬಿ ಪಂಡಿತರು ತಮ್ಮ ಮನೆಯಲ್ಲಿ ಬರುವ ಸೋಮವಾರ [illegible] ಗಂಟೆಗೆ ಧನ್ವಂತರಿ ಜಯಂತಿಯ ರಜತ ಮಹೋತ್ಸವವನ್ನು ನೆರವೇರಿಸುವರು ಮದ್ರಾಸಿನ ಶ್ರೀ ಟಿ ಆರ್ [illegible] [illegible]ರವರ ಸಂಗೀತವು, ಮದ್ರಾಸಿನ ವಿ|| ಕೃಷ್ಣಸ್ವಾಮಿರವರ ಪಿಟೀಲು, [illegible] ಟಿ. ಎಂ ಪುಟ್ಟಸ್ವಾಮಯ್ಯನವರ ಮೃದಂಗ ಮತ್ತು [illegible] ವಿ|| ನಂಜನಗೂಡು ಸೀತಾರಾಮ ಶಾಸ್ತ್ರಿಯವರ [illegible] ನ್ ಸಮೇತ ನಡೆಯುವುದು.

ಅಕ್ರಮವಾಗಿ ೫೦೦ ತೊಲ ಗಾಂಜಾ ಹೊಂದಿದ್ದುದಕ್ಕೆ ದಂಡ

ರಾಜಧಾನಿಯ ಮಳವಳ್ಳಿಯ [illegible]ದ್ಧಲಿಂಗಪ್ಪ ಎಂಬುವರು ಅಕ್ರಮವಾಗಿ ೫೦೦ ತೊಲ ಗಾಂಜಾವನ್ನು ಹೊಂದಿದ್ದು ಅಬ್ಕಾರಿ ಅಧಿಕಾರಿಗಳಿಂದ ಪತ್ತೆ ಮಾಡಲ್ಪಟ್ಟುದರಿಂದ ಶ್ರೀ ಸಿದ್ಧಲಿಂಗಪ್ಪನವರ ಮೇಲೆ ಮೊಕದ್ದಮೆ ಹೂಡಲಾಗಿ ಅವರಿಗೆ ನೆನ್ನೆ ನಗರ ನ್ಯಾಯಾಧೀಶರು ೫೦೦ ರೂ. ದಂಡವನ್ನು ವಿಧಿಸಿದರು

SRI GAYATHRI
Daily 3 Shows
From 23-11-51 - For 3 Days
THREE LITTLE WORDS
In Technicolour
Starring- Fred Astaire
Red Skelton
—MORNING SHOWS:
On 24th and 25th
MID SUMMER
NIGHT'S DREAM

ತಲೆಗೆ ಗುಂಡು ಹೊಕ್ಕರೂ ಸಾಯಲಿಲ್ಲ

ವಿಯನ್ನದ [illegible] ಸ್ನೇಹಿತರ [illegible] ಜೀವನವನ್ನು ಮುಕ್ತಾಯ ಮಾಡಲು ನಿರ್ಧರಿಸಿ ಕಳೆದ [illegible] ಆತ್ಮಹತ ಮಾಡಿಕೊಳ್ಳುವಂತೆ [illegible] ಸಿದರು. ಅವರ ಪೈಕಿ ಒಬ್ಬನ [illegible] [illegible]ನ್ನು [illegible]ದಿಂದ [illegible] ಸಾಯಿಸಿ [illegible] ನಂತರ ತಾನೂ [illegible] ಗುಂಡು ಹೊಡೆದುಕೊಂಡನು [illegible] ತಲೆಬುರುಡೆಯೊಳಕ್ಕೆ ಗುಂಡು ಹೊಕ್ಕ[illegible] [illegible] [illegible] ಸ್ಪೃಹೀನ ತಪ್ಪಿತು. [illegible] [illegible] ನಾಗಿದ.

ಉದಾರ ದಾನ

ಮೈಸೂರು [illegible] [illegible] [illegible]

CITY IMPROVEMENT TRUST BOARD, MYSORE
NOTIFICATION
Dated 22nd November 1951

It is hereby notified for the information of the public that the released materials of the Lansdowne Buildings under demolition will be auctioned at the spot on Tuesday the 27th November 1951 at 9 a.m. by the Trust Board Engineer.

(Sd.) P. Gopalakrishna setty,
Chairman

Edited, Printed and Published by A. R. Nagarajan, at Sadhvi Press Subbiah Road, Mysore

ರಣಜಿತ್ ಟಾಕೀಸ್
23-11-51 ರಿಂದ
ದಿನವಹಿ 3 ಆಟಗಳು
ಧೀರೂ ಭಾಯಿ ದೇಸಾಯಿಯವರ ಚಮತ್ಕಾರ ಪೂರ್ಣ ತಯಾರಿಕೆ
* ಜೈ ಮಹಾಕಾಳಿ *
ಪಾತ್ರ:- ನಿರೂಪಾರಾಯ್, ಸಾಹು ಮೋದಕ್, ಉಲ್ಹಾಸ್, ಲಲಿತಾ ಪವಾರ್, ನಿರಂಜನ ಶರ್ಮ
[G. F. D. RELEASE

ಮದುವೆ ಮಣೆಗಳಿಗೆ ಮಂಗಳಕರವಾದ ಜವಳಿಗಳು ದೊರೆಯುತ್ತವೆ!
ಜಾಪಿರಾವು ಮಾದರಿ ರೇಷ್ಮೆ ಸೀರೆಗಳು, ನೂಲಿನ ಸೀರೆಗಳು, ಕಲಾಪತ್ತು, ಪಂಚೆ, ರೇಷ್ಮೆ ಮಗುಟಗಳಿಗೆ
*D. L. ನರಸಿಂಹಯ್ಯ
ಜವಳಿ ಅಂಗಡಿ, ಬಾಂಬೆ ಆನಂದ ಭವನ ಪಕ್ಕ, ಮೈಸೂರು

ಗೌಹ ಕ್ರೇಪ್ ಸಿಲ್ಕ್ ಸೀರೆಗಳು-ಧರ್ಮಾವರಂ-ಆರ್ಣಿ ಪೂನಾ, ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ
ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಸಂ. 792 WEEKLY EDITION ಅಂಚೆ ಪತ್ರಿಕೆ 6 ಕಾಸು

ಸಂಪುಟ ೧೬] ಭಾನುವಾರ ೨೫-೧೧-೫೧ [ಸಂಚಿಕೆ ೧೪

ಅಮೆರಿಕಾ-ರಷ್ಯಾ ಭಿನ್ನತೆಯಲ್ಲಿ - ಭಾರತದ ಮಧ್ಯಸ್ತಿಕೆ -

ಮಧ್ಯ ಪ್ರಾಚ್ಯರಾಷ್ಟ್ರಗಳಿಗೆ ರಷ್ಯದ ಎಚ್ಚರಿಕೆ

ಮಧ್ಯ ಪ್ರಾಚ್ಯ ರಾಷ್ಟ್ರಗಳ ರಕ್ಷಣಾ ... ಬಗ್ಗೆ ಪಾಶ್ಚಾತ್ಯ ದೇಶಗಳು ತ... ಸಿರುವ ಯೋಜನೆಯಲ್ಲಿ ಭಾಗವ... ಕೊಡದೆಂದೂ ಅದು ರಷ್ಯದ ವಿರು... ವ ಕಾರ್ಯವಾಗುವುದೆಂದೂ ತಿಳಿಸಿ... ವು ಈಜಿಪ್ಟ್, ಸಿರಿಯ, ಲೆಬನಾನ್ ... ಮತ್ತು ಇಸ್ರೇಲ್ ದೇಶಗಳಿಗೆ ... ಕೆಯನ್ನಿತ್ತಿರುವುದಾಗಿ ಗೊತ್ತಾಗಿ ...

ನಹಾಸ್ ಪಾಷಾರವರಿಂದ ಬ್ರಿಟಿಷ್ ಬಿರುದುಗಳ ತ್ಯಾಗ

ಈಜಿಪ್ಟಿನ ಪ್ರಧಾನಿ ನಹಾಸ್ ಪಾಷಾ ... ತಮಗೆ ಬ್ರಿಟಿಷ್ ಸರ್ಕಾರದವರು ... "ಸರ್" ಮತ್ತು ಇತರ ಬಿರು... ನ್ನು ತ್ಯಾಗ ಮಾಡಲು ನಿರ್ಧರಿ... ಬ್ರಿಟನ್ ಮತ್ತು ಈಜಿಪ್ಟುಗಳಿಗಿ... ಮನಸ್ತಾಪವುಂಟಾಗಿರುವುದೇ ... ಕಾರಣ

ಸಿಲೋನ್ ಮಂತ್ರಿ ಮಂಡಲದ ರಾಜೀನಾಮೆ

ಸಿಲೋನಿನ ಅಧ್ಯಕ್ಷ ಶ್ರೀಸೇನಾನಾಯಕರ ... ತವು ಸುಗಮವಾಗಿ ಯಾ... ತಡೆಯೂ ಇಲ್ಲದಂತೆ ಪುನರ್ವ್ಯ... ಡಿಸಲನುಕೂಲಿಸುವ ಸಲುವಾಗಿ ... ಮಂತ್ರಿ ಮಂಡಲವು ನೆನ್ನೆ ರಾ... ಮೆಯಿತ್ತಿರುವುದಾಗಿ ವರದಿಯಾ...

ನೆಹರೂರ ಉಮೇದುವಾರಿಕೆ ಅರ್ಜಿ

... ಡಿತ ನೆಹರೂರವರು ಪಾರ್ಲಿಮೆಂ... ಪ್ರಜಾ ಸಭೆಗೆ ನೆನ್ನೆ ಮಧ್ಯಾಹ್ನ ಅ... ಬಾದು-ಜಾ ಪುರ ಕ್ಷೇತ್ರದಿಂದ ಚು... ಣೆಗೆ ನಿಲ್ಲಲು ಉಮೇದುವಾರಿಕೆ ಅ... ನ್ನು ಸಲ್ಲಿಸಲಾಯಿತು.

ಎಂ. ಜಿ. ಎಸ್. ಫುಟ್‌ಬಾಲ್ ಫೈನಲ್ಸ್ ಪಂದ್ಯ

... ನ್ನೆ ಸಂಜೆ ನಡೆದ ಎಂ. ಜಿ. ಎಸ್. ... ಬಾಲ್ ಫೈನಲ್ಸ್ ಪಂದ್ಯದಲ್ಲಿ ಬೆಂ... ರು ಇಂಟರ್‌ಮೀಡಿಯೇಟ್ ಕಾಲೇ... ರು ಶ್ಲಾಘನೀಯವಾದ ಆಟವನ್ನು ... ಮೈಸೂರು ಫಸ್ಟ್ ಗ್ರೇಡ್ ಕಾಲೇ... ರನ್ನು ೨-೦ ಗೋಲುಗಳಿಂದ ... ಸಿದರು.

ಪಿ. ಸಿ. ಸಿ. ಕಾರ್ಯಕಾರಿ ಸಮಿತಿ ಸಭೆ

ಮೈಸೂರು ಪ್ರದೇಶ ಕಾಂಗ್ರೆಸ್ ಕಾ... ರಿ ಸಮಿತಿ ಸಭೆಯು ೨೫ ನೇ ... ಭಾನುವಾರ ಬೆಳಿಗ್ಗೆ ೯ ಗಂಟೆಗೆ ... ಊರಿನಲ್ಲಿ ಸೇರುವುದು. ಜಿಲ್ಲಾ ಸ... ಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿ... ಸಭೆಗೆ ಬರುವಂತೆ ಸೂಚಿಸಲಾ... ದೆ.

ಪ್ರತಿಷ್ಠಾಪನೆ-ಕಾಣಿಕೆ

ಬಸವನಗುಡಿಯ ಶ್ರೀ ಪ್ರಸನ್ನ ಸೀತಾ... ಮಂದಿರದಲ್ಲಿ ... ೭ ಗಂ... ಪ್ರತಿಷ್ಠಾಪನೆ ಪ್ರಯುಕ್ತ, ಶ್ರೀಮತಿ ... ಎಂ. ಪಿ. ಲಲಿತ ಮತ್ತು ರತ್ನರ... ಣೆ ಮತ್ತು ಹಾಡುಗಾರಿಕೆಯು ... ಪಕ್ಕ ವಾದ್ಯಗಳೊಡನೆ ನಡೆಯು... ಸರ್ವರಿಗೂ ಪ್ರವೇಶವಿದೆ.

ತಿರುವಾಂಕೂರು ಮಹಾರಾಣಿ ಮೇಲೆ ದಾವ

ತಿರುವಾಂಕೂರು ರಾಜ ಪ್ರಮುಖರ ತಾಯಿ ಮಹಾರಾಣಿ ಸೇತು ಪಾರ್ವತಿ ಬಾಯಿಯವರ ಮೇಲೆ ಅವರ ಅಳಿಯ ವಿಳಾಯ ರಾಜರ ನೌಕರರಾಗಿದ್ದ ಜನಾರ್ಧನ ಅಯ್ಯರ್, ಅವರ ಹೆಂಡತಿ ಗೋಮತಿ ಅಮ್ಮಾಳ್ ಮತ್ತು ಮಗಳು ಲಕ್ಷ್ಮಿ ಅಮ್ಮಾಳ್ ಇವರುಗಳ ಪರವಾಗಿ ಟಿ. ಕೆ. ನಾರಾಯಣ ಪಿಳ್ಳೆಯವರು ಅಲ್ಲಿನ ಜಿಲ್ಲಾ ಕೋರ್ಟೊಂದರಲ್ಲಿ ದಾವ ಹೂಡಿ, ಮಹಾರಾಣಿಯವರ ಹೆಸರಿಗೆ ಬರೆಯಲ್ಪಟ್ಟಿರುವ ಹಲವು ವಿಕ್ರಯದ ದಸ್ತಾವೇಜುಗಳನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ. ಮಹಾರಾಣಿಯವರಿಗೆ ಸೇರಿದ ಹಣದ ದುರ್ವಿನಿಯೋಗಕ್ಕಾಗಿ ಜನಾರ್ಧನ ಅಯ್ಯರವರನ್ನು ಬಲವಂತದಿಂದ ರಜದ ಮೇಲೆ ಕಳುಹಿಸಿ, ಅವರ ಮೇಲೆ ಮೊಕದ್ದಮೆ ಹೂಡುವುದಾಗಿ ಹೇಳಿ, ಠಾಣೆಗೆ ಸೆಲ್ಲಿನಲ್ಲಿ ಸೇರಿಸಲ್ಪಟ್ಟು ಅವರ ಜೀವವನ್ನು ತೆಗೆಯುವುದಾಗಿ ಹೆದರಿಸಲಾಗಿತ್ತೆಂದು ಹೇಳಲಾಗಿದೆ. ಜನಾರ್ಧನ ಅಯ್ಯರ ಕೈಕೆಳಗೆ ಇದ್ದ ಇಬ್ಬರು ಬೇರೆ ನೌಕರರನ್ನು ವಜಾ ಮಾಡಿ, ಅವರ ಪೈಕಿ ಒಬ್ಬನು ಇದೇ ರೀತಿ ಹೊರಡಲು ದಾವೆಯನ್ನು ಹೂಡಿ ನಂತರ ತನ್ನ ಹಕ್ಕು ಪಡೆದು ರಾಜಿ ಮಾಡಿಕೊಂಡಿದ್ದನೆಂದು ಹೇಳಲಾಗಿದೆ.

ಶಾಸನ ಸಭೆಗೆ ೬೦೦ಕ್ಕೂ ಹೆಚ್ಚು ಉಮೇದುವಾರರು

ಮೈಸೂರು ಶಾಸನ ಸಭೆಗೆ ಸಂಸ್ಥಾನದ ನಾನಾ ಕ್ಷೇತ್ರಗಳಿಂದ ೬೦೦ ಕ್ಕಿಂತ ಹೆಚ್ಚು ಜನ ಉಮೇದುವಾರರು ನಿಂತಿರುತ್ತಾರೆ. ಪಾರ್ಲಿಮೆಂಟಿನ ೧೧ ಸ್ಥಾನಗಳಿಗೆ ೫೩ ಮಂದಿ ಅರ್ಜಿಗಳನ್ನು ಸಲ್ಲಿಸಿರುವರು.

ಅಸೆಂಬ್ಲಿಗೆ ಉಮೇದುವಾರಿಕೆ ಅರ್ಜಿ

ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕು ಕ್ಷೇತ್ರದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ವಿರುದ್ಧವಾಗಿ ೩ ಜನರು ಸ್ಪರ್ಧಿಸಿರುತ್ತಾರೆ. ೩ ಜಿಲ್ಲೆಯ ಒಂದು ಕ್ಷೇತ್ರದಲ್ಲಿ ಓದಲು ಮತ್ತು ಬರೆಯಲು ಬಾರದವರೊಬ್ಬರು ಅರ್ಜಿ ಸಲ್ಲಿಸಿರುತ್ತಾರೆ

ರಷ್ಯಾ-ಅಮೆರಿಕಾ ಭಿನ್ನತೆ ನಿವಾರಣೆಗೆ ಭಾರತದ ಮಧ್ಯಸ್ತಿಕೆ

ಅಮೆರಿಕಾ ಮತ್ತು ರಷ್ಯಗಳಿಗಿರುವ ಭಿನ್ನತೆಯನ್ನು ಹೋಗಲಾಡಿಸಲು ಭಾರತವು ಬರುವ ವಾರ ಪ್ರಯತ್ನಿಸುವುದೆಂದು ವಿಶ್ವಸಂಸ್ಥೆಯ ವಿಶ್ವಾಸ್ಯ ವೃತ್ತಗಳಿಂದ ತಿಳಿದುಬಂದಿದೆ. ಕೊರಿಯಾ ಯುದ್ಧವನ್ನು ಜಾಗ್ರತೆ ನಿಲ್ಲಿಸಲೂ ಮತ್ತು ಚೀಣವನ್ನು ವಿಶ್ವ ಸಂಸ್ಥೆಗೆ ಸೇರಿಸಲೂ ಭಾರತವು ಸಲಹೆ ಮಾಡುವುದೆಂದು ಹೇಳಲಾಗಿದೆ.

ಒಳ ಚರಂಡಿಯಲ್ಲಿ ಮುಳುಗಿ ಇಬ್ಬರ ಮರಣ

ಮದ್ರಾಸಿನ ಒಂದು ಒಳ ಚರಂಡಿಯನ್ನು ಚೊಕ್ಕಟ ಮಾಡಲು ಮೊನ್ನೆ ಅದರೊಳಗೆ ಇಳಿದ ಇಬ್ಬರು ಜಾಡಮಾಲಿಗಳು ಚರಂಡಿಯಲ್ಲಿದ್ದ ೧೫ ಅಡಿ ನೀರಿನಲ್ಲಿ ಮುಳುಗಿ ಮೃತಪಟ್ಟ ಸಂಗತಿಯು ವರದಿಯಾಗಿದೆ. ಮತ್ತೊಬ್ಬನು ಇದನ್ನು ಕಂಡು ಗಾಬರಿಯಿಂದ ಕೂಗಿಕೊಂಡ ಮೇಲೆ ಇತರರು ಬಂದು ನೀರನ್ನು ಮೇಲಕ್ಕೆತ್ತಲಾಗಿ ಅವರಿಬ್ಬರ ಶವಗಳು ದೊರೆತುವೆಂದು ಹೇಳಲಾಗಿದೆ.

ಹರಿಕಥೆ

ತಗಡೂರಿನ ಶ್ರೀ ಶ್ರೀನಿವಾಸಯ್ಯನವರು ಈ ರಾತ್ರಿ ೬-೩೦ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದಲ್ಲಿ "ಭಕ್ತ ಕನಕದಾಸ" ಎಂಬ ಹರಿಕಥೆಯನ್ನು ಮಾಡುವರು.

ಪಟೇಲರ ಮಗನಾದ ಕಾರಣ ಅರ್ಜಿಯ ತಿರಸ್ಕಾರ

ಮದ್ದೂರು ಸಾರ್ವತ್ರಿಕ ಕ್ಷೇತ್ರದಿಂದ ಸ್ಪರ್ಧಿಸಿದ ಶ್ರೀ ಎಸ್. ಕೆ. ಚಿಕ್ಕಣ್ಣನವರು ಸೋಮನಹಳ್ಳಿಯ ಪಟೇಲರ ಮಗನೆಂಬ ಕಾರಣದಿಂದ ಅವರ ಅರ್ಜಿಯನ್ನು ವಜಾ ಮಾಡಲಾಗಿದೆ.

ನಗರದಲ್ಲಿ ೫೦ ಚುನಾವಣಾ ಕೇಂದ್ರಗಳು

ರಾಜಧಾನಿಯಲ್ಲಿ ಜನವರಿಯಲ್ಲಿ ನಡೆಯುವ ಶಾಸನ ಸಭಾ ಮತ್ತು ಪಾರ್ಲಿಮೆಂಟಿನ ಚುನಾವಣೆಗಳಿಗಾಗಿ ಒಟ್ಟು ೫೦ ಕೇಂದ್ರಗಳನ್ನು ಏರ್ಪಡಿಸಲಾಗುವುದು.

ಬೊಂಬಾಯಿಯ ಜಡ್ಜರನ್ನು ಕರೆಸಲು ನಿರ್ಧಾರ

ಸ್ವಂ. ವ] ಬೆಂಗಳೂರು ೨೫

ಮಂತ್ರಿಮಂಡಲದ ಸಭೆಯು ನೆನ್ನೆ ಕಾರಲ್ಟನ್ ಭವನದಲ್ಲಿ ನಡೆದು ಶ್ರೀ ಎಲ್. ಎಸ್. ರಾಜುರವರ ಮೊಕದ್ದಮೆಯ ವಿಚಾರಣೆಗೆ ಬೊಂಬಾಯಿಯಿಂದ ಒಬ್ಬ ಸೆಷನ್ಸ್ ನ್ಯಾಯಾಧೀಶರನ್ನು ಕರೆಸಿಕೊಳ್ಳಬೇಕೆಂದು ನಿರ್ಧರಿಸಲಾಯಿತೆಂದು ಗೊತ್ತಾಗಿದೆ. ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಪತ್ರಿಕಾ ವರದಿಗೆ ಈ ವಿಷಯವನ್ನು ತಿಳಿಸಿ, ಸಧ್ಯದಲ್ಲೇ ಬೊಂಬಾಯಿ ಸರ್ಕಾರದೊಡನೆ ವ್ಯವಹಾರ ನಡೆಸಲಾಗುವುದೆಂದೂ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ವರದಿ ಮಾಡಲಾಗುವುದೆಂದೂ ತಿಳಿಸಿದರು.

ಅಪಾದಿತರಾದ ಶ್ರೀಗಳು ಎಲ್. ಎಸ್. ರಾಜು ಮತ್ತು ಜಯರಾಂರವರು ಸಂಸ್ಥಾನ ಸರ್ಕಾರಕ್ಕೆ ಮತ್ತೊಂದು ಅರ್ಜಿಯನ್ನು ಸಲ್ಲಿಸಿ ಮೊಕದ್ದಮೆಯನ್ನು ಸಂಸ್ಥಾನದಿಂದ ಹೊರಕ್ಕೆ ವರ್ಗಾಯಿಸಬೇಕೆಂದು ಕೋರಿದ್ದುದಾಗಿಯೂ ವರದಿಯಾಗಿದೆ.

ಹುಂಜನಂತೆ ಕೋಳಿಯು ಕೂಗಿತು

ಬೆಂಗಳೂರು ಶೇಷಾದ್ರಿಪುರದಲ್ಲಿ ಕೋಳಿಯೊಂದು ನಿತ್ಯವೂ ಬೆಳಗಿನ ಹೊತ್ತು ಹುಂಜವು ಕೂಗುವಂತೆ ಕೂಗುತ್ತಿರುವುದೆಂದೂ, ಇದು ಆಶ್ಚರ್ಯಕರವಾಗಿದೆಯೆಂದೂ ಹೇಳಲಾಗಿದೆ.

ಅಣು ಬಾಂಬಿನ ನಿರೋಧಕ್ಕೆ ರಷ್ಯದ ಒತ್ತಾಯ

ಪ್ಯಾರಿಸ್ಸಿನಲ್ಲಿ ನಡೆಯುತ್ತಿರುವ ವಿಶ್ವ ಸಂಸ್ಥೆ ರಾಜಕೀಯ ಸಮಿತಿಯ ಸಭೆಯಲ್ಲಿ ನೆನ್ನೆ ರಷ್ಯದ ವಿದೇಶಾಂಗ ಮಂತ್ರಿ ವಿಷನ್ಸ್ಕಿಯವರು ಪಾಶ್ಚಾತ್ಯ ರಾಷ್ಟ್ರಗಳ ಠರಾವಿಗೆ ೧೨ ತಿದ್ದುಪಡಿಗಳನ್ನು ಸೂಚಿಸಿ ಅವು ಅಂಗೀಕೃತವಾದಲ್ಲಿ ವಿಶ್ವದ ಆದ್ಯಂತ ನಿಶ್ಶಸ್ತ್ರೀಕರಣ ಯೋಜನೆಯಲ್ಲಿ ರಷ್ಯವು ಭಾಗವಹಿಸಲು ಸಿದ್ಧವಿರುವುದಾಗಿ ತಿಳಿಸಿದರು. ಎಲ್ಲ ಅಣು ಶಸ್ತ್ರಾಸ್ತ್ರಗಳನ್ನು ನಿಷೇಧಿಸುವುದಕ್ಕೆ ಅವರು ಒತ್ತಾಯಮಾಡಿದರು.

ಬಹಿರಂಗ ಸಭೆ

ಈ ದಿನ ಸಂಜೆ ೬ ಘಂಟೆಗೆ ರಾಜಧಾನಿ ಟೌನ್‌ಹಾಲ್ ಮೈದಾನದಲ್ಲಿ ಪ್ರಜಾ ಮಂಡಲದ ಬಹಿರಂಗ ಸಭೆಯು ಶ್ರೀ ಟಿ. ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಶ್ರೀ ವೆಂಕಟಸುಬ್ಬಯ್ಯ ತಮ್ಮರು ಭಾಷಣ ಮಾಡುತ್ತಾರೆ.

ಮೈಸೂರು ಸಿ. ಎ. ಎಸ್. ಅಧಿಕಾರಿಗಳು

ಬೆಂಗಳೂರು ೨೫

ಸಂಸ್ಥಾನದಲ್ಲಿ ಸಿ. ಎ. ಎಸ್. ಅಧಿಕಾರಿಗಳ ವರ್ಗದ ಬಗ್ಗೆ ರಾಷ್ಟ್ರಾಧ್ಯಕ್ಷರು ವ್ಯವಸ್ಥೆ ಮಾಡಿ ಅಸಂಬಂಧವಾಗಿ ತಯಾರಿಸಿರುವ ಪಟ್ಟಿಯಲ್ಲಿ ಮೈಸೂರು ಸರ್ಕಾರದ ಪ್ರಧಾನ ಕಾರ್ಯದರ್ಶಿ, ರೆವಿನ್ಯೂ ಮತ್ತು ಕೆಲವು ಕಮೀಷನರುಗಳೂ, ಹಣಕಾಸು, ರೆವಿನ್ಯೂ, ಆಹಾರ, ವ್ಯವಸಾಯ ಮತ್ತು ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳೂ, ಕಾರ್ಮಿಕ ಕಮೀಷನರ್, ಆಹಾರ ಡೈರೆಕ್ಟರ್, ಬೆಂಗಳೂರು ಮತ್ತು ಮೈಸೂರು ಪೌರಸಭಾ ಕಮೀಷನರುಗಳು, ಮಹಾರಾಜರ ಆಪ್ತ ಮತ್ತು ಮುಜರಾಯಿ ಕಾರ್ಯದರ್ಶಿಗಳೂ ಮತ್ತು ಇತರ ೧೨ ಅಧಿಕಾರಿಗಳೂ ಸೇರಿರುತ್ತಾರೆ.

ವಾರ ಭವಿಷ್ಯ

ತಾ|| ೨೫-೧೧ ಇಂದ ೧-೧೨-೫೧ರ ವರೆಗೆ

ಬಹಳ ಉತ್ತಮವಾದ ಸಾಬೂನು
808


ದಿ ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ಆಬೀದ್‌ಗವರ ಬಹಿರಂಗ ಹರಾಜು

9-12-51ನೇ :: ಭಾನುವಾರ :: ಬೆಳಿಗ್ಗೆ 10 ಘಂಟೆಗೆ

ಫರ್ನಿಚರುಗಳು ಗೃಹಕೃತ್ಯದ ಅವಶ್ಯಕತೆಗೆ ಮತ್ತು ... ಸಾಮಾನುಗಳಾದ ... ಚೌಕಟ್ಟಿನ ಮರದ ... 6½'x2½' ... ಮತ್ತು ... ರೇಡಿಯೋಗಳು, ... ರೇಶ್ಮೆ ಬಟ್ಟೆಗಳು, ... ರೇಶ್ಮೆ ... ಸೀರೆಗಳು ಮತ್ತು ಇತರ ಅನೇಕ ... ಸಾಮಾನುಗಳು

8ನೇ ತಾರೀಖು ಶನಿವಾರ ಸಾಮಾನುಗಳನ್ನು ಪರೀಕ್ಷಿಸಬಹುದು.

ಒಲಂಪಿಯಾ 6-12-51 ರಿಂದ ಪ್ರತಿ ದಿನ 3 ಆಟಗಳು
ಫಿಲ್ಮ್ ಆರ್ಟ್ಸ್‌ರವರ ವರ್ಣರಂಜಿತ ಚಿತ್ರ
* ಬಾಬುಲ್ *
ಪಾತ್ರ ... ದಿಲೀಪ್ ಕುಮಾರ್ ... ನರ್ಗೀಸ್ ...
ಸಂಗೀತ — ನೌಷದ್

ಬೆಳಗಿನ ಪ್ರದರ್ಶನ 7-12-51 ರಿಂದ 3 ದಿನಗಳು ಮಾತ್ರ
1857 — (ಅಥವಾ ಸಿಪಾಯಿ ದಂಗೆ)
ಪಾತ್ರ — ಸುರೈಯ್ಯ ಸುರೇಂದ್ರ ...

MYSORE CITY MUNICIPALITY

NOTIFICATION

Sealed tenders will be received by the undersigned on the 8th December 1951 till 11 A. M. for the work of construction of a set of 11 shops in the vacant land adjacent to Chikkabasammaiah's Choultry (Facing Chamaraja Road). Intending tenderers should along with their tenders submit a chellan for having remitted in the Municipal Treasury a sum of Rs. 2150/- as earnest money as also the income tax clearance certificate. For details of drawing and abstract of work please see the detailed notification on office notice board or apply to the Municipal Engineer, City Municipal Council along with a fee of Rs 5/- who will furnish you with a copy of drawing and abstract estimate. Tenders without accompanying the requisite enclosures and tenders without furnishing itemwar rates will on no account be considered.

(Sd) V. K. MUKUNDAN,
Municipal Engineer

7-12-51ರಿಂದ : ಅನೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು
ಶ್ರೀ ಲಕ್ಷ್ಮೀ ನಾರಾಯಣ ಮೋತಿಲಾಲ್

... ಚಂದ್ರಿಕೆಗಳಲ್ಲಿ
... 2-30 ...
• ಸಿಂಗಾರಿ •
ನ್ಯಾಷನಲ್ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ
ತಾರಾಗಣ — ಟಿ ಆರ್ ರಾಮಚಂದ್ರನ್, ಸಹಸ್ರನಾಮಂ, ಲಲಿತ ಪದ್ಮಿನಿ, ರಾಗಿಣಿ,
ಟಿ. ಎಸ್ ಬಾಲಯ್ಯ ಮತ್ತು ಭಾಗ್ಯಂ
ಎಲ್ಲ ವಿಧವಾದ ಪಾಸುಗಳನ್ನೂ 3 ವಾರ ಮನ್ನಾ ಮಾಡಿರುತ್ತೆ
R V PICTURES RELEASE

ಮದುವೆ ಮನೆಗಳಿಗೆ ಬೇಕಾದ ಜವಳಿಗಳು ದೊರೆಯುತ್ತವೆ !
ಸಾದಾ ... ರೇಶ್ಮೆ ಸೀರೆಗಳು, ನೂಲಿನ ಸೀರೆಗಳು ... ರೇಶ್ಮೆ ಕುಪ್ಪಸಗಳು
* D. L. ನರಸಿಂಹಯ್ಯ
ಜವಳಿ ಅಂಗಡಿ ... ಭಜಾರ್ ... ಮೈಸೂರು

Edited, Printed and Published by A. R. Nagarajan, at Sadhvi Press D. Subbiah Road, Mysore

ರೀಜಿ ನಂ. 792 | ಶಂಕರ ಜಯಂತಿ | ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೭-೧೨-೫೧ [ಸಂಚಿಕೆ ೨೧೨

ಚತುರ್ರಾಷ್ಟ್ರ ಸಂಧಾನ ವಿಫಲವಾಯಿತು

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಮೈಸೂರು ೬

ನಗರ ಕಾಂಗ್ರೆಸ್ ಕಛೇರಿಯಲ್ಲಿ ನಿ[illegible] ಜೆ ರಾಜಧಾನಿಯ ಕಾಂಗ್ರೆಸ್ ಕಾರ್ಯಕರ್ತರ ಮತ್ತು ಹಿತೈಷಿಗಳ ಸಭೆ ನಡೆಯಿತು. ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಚುನಾವಣೆಗಳಲ್ಲಿ ಬೆಂಬಲ ದೊರಕಿಸುವ ಬಗ್ಗೆ [illegible]ಗಳಾದ ಸಿ ಸೀತಾರಾಮಯ್ಯ, [illegible] ರಾಜಗೋಪಾಲಯ್ಯಂಗಾರ್, [illegible] ಜೋಯಿಸ್, ಎ. ಜಿ. [illegible] ನಾರಾಯಣರಾವ್, ಎಂ. ಆರ್. ಸಿ[illegible] ಎಂ. ಸಿ ಕೃಷ್ಣಪ್ಪ, ಹಿ. ಕಾ. ಸು[illegible] ಸಿ ಜೆ ದೇವನಾಥ್, [illegible] ಪ್ಪ ಮತ್ತು ಡಾ|| ಅವಿನಾಶ್ [illegible]ರೇಷಿಯವರು ಭಾಷಣ ಮಾಡಿ [illegible] ವಿವಿಧ ಮೊಹಲ್ಲಾಗಳ ಸಮಿತಿಗಳನ್ನು ಏರ್ಪಡಿಸಿ, ಪ್ರಚಾರವನ್ನು ಭರದಿಂದ ಕೈಗೊಳ್ಳುವಂತೆ ನಿರ್ಣಯ ಮಾಡಲಾಯಿತು

ಭಾರತದ ಲೇಬರ್ ಕಮಿಷನರರಲ್ಲಿ ಮಾತುಕತೆ

[illegible]ಸೂರು ಸಂಸ್ಥಾನದ ರೈಲ್ವೆ ನೌಕರರ [illegible] ಸಂಘದ ಅಧ್ಯಕ್ಷರಾದ ಶ್ರೀ ಹೆಚ್. [illegible]ನಾಥರಾಜುರವರು ನೆನ್ನೆ ಭಾರತ [illegible] ಕಾರ್ಮಿಕ ಅಧಿಕಾರಿಗಳಾದ [illegible] ಸಿ ಜೈರವರನ್ನು ಬೆಂಗ[illegible] ಭೇಟಿ ಮಾಡಿ, ಕೇಂದ್ರ ಸರ್ಕಾ[illegible] ಕಾರ್ಮಿಕ ಶಾಸನಗಳು ಮೈ[illegible] ಅನ್ವಯಿಸಿದ್ದರೂ, ಅವುಗಳ [illegible] ವ್ಯ ದೊರೆಯದಿರುವ ಬಗ್ಗೆ ಮಾ[illegible] ಡಿದರು. ನೌಕರರ ಸಂಬಳ [illegible] ಕೂಡಲೇ ಕ್ರಮ ಕೈಗೊಳ್ಳ[illegible] ಸು ಅವರು ಒತ್ತಾಯಪಡಿಸಿ[illegible] ರೈಲ್ವೆ ನೌಕರರಿಗೆ ವಸತಿ ಒದಗಿ[illegible] ೧೫೦-೨೦೦ರ ಸಾಲಿನ ಆಯ[illegible] ತೆಗೆದಿಟ್ಟ ಹಣವನ್ನು ಪೂ[illegible] ಉಪಯೋಗಿಸಿಲ್ಲವೆಂದು ಅವ[illegible] ಶಾಸನದಲ್ಲಿ ಆಕ್ಷೇಪ ಮಾಡಿಕೊಂಡರು.

ಜೈಲಿನಲ್ಲಿ ಉಪವಾಸ?

[illegible]

ಶ್ರೀ ಬಿ. ಎನ್. ರಾವ್

ವಿಶ್ವ ನ್ಯಾಯಾಲಯಕ್ಕೆ ಚುನಾಯಿತರಾದ

ಶ್ರೀ ಬಿ. ಎನ್. ರಾವ್

ಫಿಲಿಪೈನ್ ಜ್ವಾಲಾಮುಖಿಯಲ್ಲಿ ಮತ್ತೆ ಸಾವಿರ ಮರಣ

ಫಿಲಿಪೈನ್ ದ್ವೀಪದ ಹಿಬೋಕ್ ಜ್ವಾಲಾಮುಖಿಯು ಮೊನ್ನೆ ಪುನಃ ಆರ್ಭಟಿಸಿದುದರಿಂದ ಇನ್ನೂ ಸಾವಿರ ಜನರು ಮಡಿದಿರುವರೆಂದು ಹೇಳಲಾಗಿದೆ. ಸಾವಿರ ಜನರಿಗೆ ಗಾಯವಾಗಿದೆ. ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸಾಗಿಸುವ ಕಾರ್ಯ ಒಂದು ಕಡೆ ನಡೆಯುತ್ತಿದ್ದರೆ ಮತ್ತೊಂದು ಕಡೆ ನಾಯಿಗಳು ಶವಗಳಿಗಾಗಿ ಜಗಳವಾಡುತ್ತಿದ್ದುವು. ಪರ್ವತದ ಸುತ್ತಲೂ ಇದ್ದ ಸಮೃದ್ಧವಾದ ಸಸ್ಯ ಪ್ರದೇಶವು ಶಿಲಾ ಪ್ರವಾಹದಿಂದ ಮುಚ್ಚಲ್ಪಟ್ಟು ಹಲವು ನಿವಾಸಿಗಳು ನಾಶವಾಯಿತು.

ಮನೆಯೊಳಗೆ ನುಗ್ಗಿದ ಚಿರತೆಯ ಕೊಲೆ

ಶಿವಮೊಗ್ಗದ ಕಂಟ್ರ್ಯಾಕ್ಟರ್ ಶ್ರೀ ಎಸ್. ಬಸಪ್ಪನವರ ಮನೆಗೆ ಮೊನ್ನೆ ಬೆಳಿಗ್ಗೆ ಒಂದು ಚಿರತೆ ಮರಿಯು ನುಗ್ಗಿತೆಂದೂ, ಒಳಗಿದ್ದವರು ಕೂಡಲೇ ಬಾಗಿಲು ಮುಚ್ಚಲಾಗಿ, ಅದು ಹೊರಕ್ಕೆ ಹೋಗಲು ಅವಕಾಶವಾಗದೇ ಸ್ಥಳೀಯ ಪೋಲೀಸ್ ಇನ್ಸ್‌ಪೆಕ್ಟರರು ಬಂದು, ಅದನ್ನು ಗುಂಡು ಹೊಡೆದು ಕೊಂದರೆಂದೂ ವರದಿಯಾಗಿದೆ.

ಪ್ಯಾರಿಸ್ಸಿನ ಚತುರ್ರಾಷ್ಟ್ರ ಮಾತುಕತೆ ಮುರಿದು ಬಿತ್ತು

ಪ್ಯಾರಿಸ್ಸಿನಲ್ಲಿ ನಡೆಯುತ್ತಿದ್ದ ಚತುರ್ರಾಷ್ಟ್ರಗಳ ನಿಶ್ಶಸ್ತ್ರೀಕರಣ ಮಾತುಕತೆಗಳು ನೆನ್ನೆ ಪೂರ್ಣವಾಗಿ ನಿಷ್ಫಲಗೊಂಡವು. ಪಶ್ಚಿಮ ರಾಷ್ಟ್ರಗಳ ಮತ್ತು [illegible] ವಿವಿಧ ಯೋಜನೆಗಳನ್ನು ಕ್ರೋಢೀಕರಿಸಿ ಬ್ರಿಟಿಷ್, ಫ್ರೆಂಚ್, ಅಮೆರಿಕಾ ಮತ್ತು ರಷ್ಯಾ ಪ್ರತಿನಿಧಿಗಳು [illegible] ಯೂನೊ [illegible] ಶಸ್ತ್ರದ [illegible] ತಪಸಣೆಗಳ ಬಗ್ಗೆಯೂ ಮಾತುಕತೆಗಳು ನಡೆದಿದ್ದುವು.

ಎವರೆಸ್ಟ್ ಪರ್ವತದಲ್ಲಿ ಹಿಮಭೂತ

ಗೌರೀಶಂಕರ ಅಥವಾ ಎವರೆಸ್ಟ್ ಎಂದು ಕರೆಯಲ್ಪಡುವ ಹಿಮಾಲಯದ [illegible] ಶಿಖರವನ್ನೇರಲು ಹೋಗಿ ವಾಪಸು ನೇಪಾಳಕ್ಕೆ ಹಿಂತಿರುಗಿರುವ ಬ್ರಿಟಿಷ್ ಪರ್ವತಾರೋಹಿಗಳು [illegible] ಪರ್ವತದಲ್ಲಿ ನಡೆಂಭೂತ[illegible] ಬಂಡಿಸುವ ಮನುಷ್ಯನು [illegible] ವೇಕೆಂದು ಗೊತ್ತಾಗಿದೆ [illegible] ಎಂಬ "ಇವನ" ಪಾದಗಳ ಗುರುತಿನ ಚಿತ್ರವನ್ನೂ ತೆಗೆದುಕೊಂಡು [illegible] ಕೊಂಡಿರುತ್ತಾರೆ. ಟಿಬೆಟ್, ನೇಪಾಳ [illegible] ಜನರು ಹೇಳುವ ಪ್ರಕಾರ [illegible] ದೊಡ್ಡ ಪ್ರಾಣಿಯೊಂದು [illegible] ಕಂಡೊಡನೆಯೇ ಮನುಷ್ಯನು [illegible] ಸಾಯುವನೆಂದೂ, [illegible] ಯಾಕ್ "ಎಂಬ ಭಾರಿ [illegible] ತಿನ್ನುವುದೆಂದೂ, [illegible] ನ್ನು ತಿಂದು [illegible] ಬಂದಿರುತ್ತದೆ ಎಂದು ಇರುವ ಪ್ರಾಣಿ[illegible] ನ್ನು ತೋರಿಸಲು ಯಾರೂ ಮುಂದೆ ಬರುವುದಿಲ್ಲ.

ಹಾಕಿ ಪಂದ್ಯದಲ್ಲಿ ಜಪಾನರ ಸೋಲು: ಮೈಸೂರಿನವರ ಜಯ

ಬೆಂಗಳೂರಿಗೆ ಜಪಾನಿನಿಂದ ಬಂದಿದ್ದ ಹಾಕಿ ಆಟಗಾರರೊಡನೆ ನೆನ್ನೆ ಮೈಸೂರು ಆಟಗಾರರು ಆಡಿದ ಪಂದ್ಯದಲ್ಲಿ ಮೈಸೂರಿನವರು ೯-೦ ಗೋಲುಗಳನ್ನು ಹೊಡೆದು ಜಯ ಗಳಿಸಿದರು. ನೆನ್ನೆ ರಾತ್ರಿ ಜಪಾನು ಟೀಮಿನವರು ಮದ್ರಾಸಿಗೆ ತೆರಳಿದರು.

ಕೆ. ಸಿ. ರೆಡ್ಡಿಯವರ ಭಾಷಣ

ಮೈಸೂರು ೬

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಾಳೆ ಸಂಜೆ ೬|| ಗಂಟೆಗೆ [illegible]ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಚುನಾವಣೆ ವಿಷಯವಾಗಿ ಭಾಷಣ ಮಾಡುವರು.

ಗೀತಾ ಸಪ್ತಾಹ

ರಾಜಧಾನಿಯ ಅಶೋಕಾ ರಸ್ತೆಯಲ್ಲಿ ಪೂರ್ವ ಶ್ರಾವಸ್ತಿನಲ್ಲಿರುವ ಗೀತಾ ಸದನದಲ್ಲಿ ೯ನೇ ತಾ|| ಭಾನುವಾರದಿಂದ ೧೬ನೇ ತಾ|| ವರೆಗೂ ಗೀತಾ ಜಯಂತಿಯ ಪ್ರಯುಕ್ತ ಸಪ್ತಾಹ ಮಹೋತ್ಸವವು ಏರ್ಪಡಿಸಲ್ಪಟ್ಟಿರುವುದು. ಪ್ರತಿನಿತ್ಯವೂ ಅಭಿಷೇಕ, ಪಾರಾಯಣ, ಶ್ರೀ ಶಂಕರಾನಂದ ಸ್ವಾಮಿಗಳಿಂದ ಉಪನ್ಯಾಸ ಮುಂತಾದುವೂ, ಸಂಜೆ ೫|| ಘಂಟೆಗೆ ಪ್ರತಿದಿನ ಸಂಗೀತ, ಹರಿಕಥೆ, ಉಪನ್ಯಾಸ ಮುಂತಾದುವೂ ನಡೆಯುವುವು. ೧೬ನೇ ತಾ|| ಬೆಳಗ್ಗೆ ೧೧ ಗಂಟೆಗೆ ಗೀತೆಯ ೧೮ ಅಧ್ಯಾಯಗಳನ್ನು ಕಂಠಪಾಠ ಮಾಡಿದವರ ಪರೀಕ್ಷೆಯು ನಡೆದು ಉತ್ತೀರ್ಣರಾದವರಿಗೆ ಬಹುಮಾನವು ಹಂಚಲ್ಪಡುತ್ತದೆ.

ಉಪಾಧ್ಯಾಯರ ಸಮ್ಮೇಳನ

ಮೈಸೂರು ಸಂಸ್ಥಾನದ ಉಪಾಧ್ಯಾಯರ ಸಮ್ಮೇಳನವು ನಾಳೆ ಬೆಳಿಗ್ಗೆ ೧೦ ಗಂಟೆಗೆ ರಾಜಧಾನಿಯ ಟ್ರೇನಿಂಗ್ ಕಾಲೇಜಿನಲ್ಲಿ ಸೇಂಟ್ ಫಿಲೋಮಿನಾ ಕಾಲೇಜಿನ ಪ್ರೊಫೆಸರ್ ಶ್ರೀ ಬಿ. ಎಸ್. [illegible]ರ್ಧನ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಂ. ವಿ. ಗೋಪಾಲಸ್ವಾಮಿಯವರು ಸಮ್ಮೇಳನದ ಉದ್ಘಾಟನೋತ್ಸವವನ್ನು ನೆರವೇರಿಸುವರು.

ಜೈಲಿನಲ್ಲಿ ಉಪವಾಸ ಕೊಬ್ಬರಿ ಉಪವಾಸ

ಬೆಂಗಳೂರು ೬

ದಾವಣಗೆರೆ ಪ್ರದೇಶದಿಂದ ಶಾಸನಸಭೆಗೆ ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸಿರುವ ಕಮ್ಯೂನಿಸ್ಟ್ ಪಕ್ಷದ ಶ್ರೀ ಬಿ. ಮುರುಗಯ್ಯನವರು ಇಲ್ಲಿನ ಸೆಂಟ್ರಲ್ ಜೈಲಿನಲ್ಲಿ ಮೊನ್ನೆಯಿಂದ ಅನಿರ್ದಿಷ್ಟಕಾಲದ ಉಪವಾಸ ಪ್ರಾರಂಭವನ್ನು ಮಾಡಿರುತ್ತಾರೆ. ಚುನಾವಣಾ ಪ್ರಚಾರ ಕೈಗೊಳ್ಳಲು ತಮ್ಮನ್ನು ಬಿಡಬೇಕೆಂದು ಅವರು ಸಲ್ಲಿಸಿದ್ದ ಬೇಡಿಕೆಯನ್ನು ಸರ್ಕಾರದವರು ತಿರಸ್ಕರಿಸಿದುದರಿಂದ ಮೇಲ್ಕಂಡಂತೆ ಅವರು ಪ್ರತಿಭಟನೆಯ ಮುಷ್ಕರ ನಡೆಸುತ್ತಿರುವರು.

ಆಶ್ರಮದ ನಾಯಿಯ ಮರಣಕ್ಕಾಗಿ ಸಂತಾಪ

ಸೂರತ್ ಬಳಿ ಇರುವ ಮರೋಲಿಯ ಕಸ್ತೂರಿಬಾ ಆಶ್ರಮದಲ್ಲಿ ೨೦ ವರ್ಷಗಳಿಂದಲೂ ಇದ್ದ ಒಂದು ನಾಯಿಯು ಮೃತಿ ಹೊಂದಿದುದಕ್ಕಾಗಿ ಆಶ್ರಮದ ನಿವಾಸಿಗಳು ಆದಕ್ಕೆ ಉಚಿತವಾದ ಗೌರವದ ಅಂತ್ಯಕ್ರಿಯೆಯನ್ನು ನಡೆಸಿದರು. ಅವರು ಉಪವಾಸ ಮಾಡಿದರು. ಮೃತ ಶರೀರದ ಮೇಲೆ ಹೂಗಳನ್ನು ಚಾಚಲಾಯಿತು. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆಯ ಪ್ರಾರ್ಥನೆಗೆ ನಾಯಿಯು ತಪ್ಪದೆ ಬರುತ್ತಿತ್ತೆಂದು ಹೇಳಲಾಗಿದೆ.

ಜೈತ್ಕರುಗಳ ಚುನಾವಣೆ

[illegible] ಮಹಾಸಭೆಯ ಕನ್ಯಕಾಪರಮೇಶ್ವರಿ [illegible] ಸಂಘದ ಕೈಪ್ರಸಕ್ತ ಸಾಲಿಗೆ [illegible]ವರು ಜೈತ್ಕರುಗಳಾಗಿ ಆರಿಸಲ್ಪಟ್ಟಿದ್ದಾರೆ—

[illegible] ಸಿ. ಗೋಪಾಲಕೃಷ್ಣ[illegible] ಎನ್ ನಾಗರಾಜ ಶೆಟ್ಟಿ, ಪಿ. ಎಸ್ ವೆಂಕಟರಮಣ ಶೆಟ್ಟಿ, ಎಲ್ [illegible] ನಾರಾಯಣ ಶೆಟ್ಟಿ, ಎಸ್. ವಿ. [illegible] ಶೆಟ್ಟಿ, ಕೆ. ಯಂಗಯ್ಯಶೆಟ್ಟಿ, [illegible] ನಾಗರಾಜ ಶೆಟ್ಟಿ, ಎ. ಎನ್. [illegible]ಟ್ಟಿ, ಬಿ ಎಲ್ ನಾರಾಯಣ [illegible]ಟ್ಟಿ, ಶ್ಯಾ ಚಾಮುಂಡಿ ಶೆಟ್ಟಿ, [illegible] ನಾರಾಯಣ ಶೆಟ್ಟಿ, ಬಿ ನಂಜ[illegible] ಬಿ ಎಲ್, ರಾಮಸ್ವಾಮಿ ಶೆ[illegible] ನಾಗಪ್ಪ ಶೆಟ್ಟಿ ಮತ್ತು ಬಿ. [illegible]ಂಕಟರಮಣ ಶೆಟ್ಟಿ.

ನೃತ್ಯ ಪ್ರದರ್ಶನ

[illegible] ಶ್ರೀ ವರಲಕ್ಷ್ಮಿ ಸಂ[illegible] ವಿದ್ಯಾ ಮಂದಿರದ ಕೃಷ್ಣಮೂರ್ತಿ [illegible] ಶಾಲೆಯಲ್ಲಿ ನಾಳೆ ಸಂಜೆ ೬ ಘಂ[illegible] ನಿಂದ ನಾಗಪುರದ ಶ್ರೀಮತಿ ವಿಜಯರ [illegible] ನೃತ್ಯ ಪ್ರದರ್ಶನವು ನಡೆಯುವುದು [illegible] ಅಭಿಮಾನಿಗಳಿಗೆ ಸ್ವಾಗತವಿದೆ.

ಚುನಾವಣೆಗಳ ಬಗ್ಗೆ ಕೋರ್ಟಿಗೆ ಅಪೀಲುಗಳಿಲ್ಲ

ಚುನಾವಣೆಗಳ ಸಂಬಂಧವಾದ ತ ರಾರು ಅಪೀಲುಗಳನ್ನು ವಿಚಾರಿಸಲು ಕೋರ್ಟುಗಳಿಗೆ ಅಧಿಕಾರವಿಲ್ಲವೆಂದು ತೀ ಳಿಸಿ ಬೊಂಬಾಯಿ ಹೈಕೋರ್ಟು ಚುನಾವಣೆಗೆ ಸಂಬಂಧಿಸಿದ ಅರ್ಜಿಗಳನ್ನು ವಜಾ ಮಾಡಿತು ಚುನಾವಣಾಧಿಕಾರಿಗಳು ನಾಮಪತ್ರವನ್ನು ತಿರಸ್ಕರಿಸಿದ ಎರಡು ಅಪೀಲುಗಳನ್ನು ಸಲ್ಲಿಸಲಾಗಿತ್ತು

ರೋವರ್ ಸ್ಕೌಟು ಶಿಕ್ಷಣ ಶಿಬಿರ

ಹೊಳೆನರಸೀಪುರದ ಬಳಿಯಿರುವ ಶ್ರೀ ರಾಮದೇವರಕಟ್ಟೆಯಲ್ಲಿ ನವೆಂಬರ್ ತಾ॥ ನಿಂದ ಡಿಸೆಂಬರ್ ೩ನೇ ತಾ ನವರೆಗೆ ತೆರೆಯಲಾಗಿದ್ದ ರೋವರ್ ಸ್ಕೌಟುಗಳ ಶಿಕ್ಷಣ ಶಿಬಿರದ ಚಿಕ್ಕಮಗಳೂರು, ಹಾಸನ, ಮಂಡ್ಯ ಮತ್ತು ಮೈಸೂರು ಕಾಲೇಜುಗಳ ರೋವರ್ ಸ್ಕೌಟುಗಳು ಪಡೆದರು ಮೈಸೂರು ಕಾಲೇಜಿನ ಬ್ಯಾಂಡ್ ಪಾರ್ಟಿಯು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿತ್ತು ಇದರಲ್ಲಿ ಭಾಗವಹಿಸಿದವರೆಲ್ಲ ಬೆಂಗಳೂರಿನಲ್ಲಿ ನಡೆಯಲಿರುವ ಅಖಿಲ ಭಾರತ ಸ್ಕೌಟು ಜಾಂಬೊರಿಯಲ್ಲಿ ಭಾಗವಹಿಸುವರು

ಚಿತ್ರಮಂದಿರ

7 12-51ರಿಂದ ಜಯಪ್ರದವಾಗಿ 2ನೇ ವಾರ

* ದಿ ಕ್ರಾ *

From 10-12 51

Tarzan's Magic Fountain

THEOSOPHY STUDY GROUP

Sadvidya Road

Vontikoppal

Saturday 8th Dec at 5.30 p m

Full talk ... by Questions & Answers

EVOLUTION

One Life or Several Lives)

ಕಾಂಗ್ರೆಸ್ಸಿಗೇ ಓಟುಕೊಡಿ



ಹೆಂಡತಿಯ ಮೂಗು, ತುಟಿ ಕತ್ತರಿಸಿದ್ದಕ್ಕೆ ೩ ವರ್ಷ ಸಜಾ

ಲಾಹೋರಿನ ಮಹಮದ್ ಷರೀಫ್ ಎಂಬುವನ ಹೆಂಡತಿ ಸಲಾಮತ್ ಬೀಬಿ ಮಲಗಿದ್ದಾಗ ಅವಳ ಮೂಗು ಮತ್ತು ತುಟಿಗಳನ್ನು ಕತ್ತರಿಸಿದುದಕ್ಕಾಗಿ ಅಲ್ಲಿನ ನ್ಯಾಯಾಧೀಶರು ಅವನಿಗೆ ೩ ವರ್ಷ ಕಠಿಣ ಸಜಾ ವಿಧಿಸಿದ್ದಾರೆ

ಜಿಲ್ಲಾ ಸಹಕಾರ ಸಮ್ಮೇಳನ

ಮೈಸೂರು ಜಿಲ್ಲೆಯ ನಾಲ್ಕನೆಯ ಸಹಕಾರ ಸಮ್ಮೇಳನವು ನಂಜನಗೂಡು ರೆಸಿಡೆನ್ಸಿ ಭವನದಲ್ಲಿ ಬರುವ ತಿಂಗಳು ೩೦ನೇ ತಾ॥ ರಾಜಧಾನಿಯ ಅಡ್ವೊಕೇಟರಾದ ಶ್ರೀ ಎಸ್ ಚನ್ನಸ್ವಾಮಿ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯುವುದು ರೆವಿನ್ಯೂ ಸಚಿವರಾದ ಶ್ರೀ ಹೆಚ್ ಸಿದ್ದಯ್ಯನವರು ಇದರ ಉದ್ಘಾಟನೋತ್ಸವವನ್ನು ನೆರವೇರಿಸುವರು

ಶ್ರೀ

ಗಣೇಶ ಟಾಕೀಸ್

7 12 51ರಿಂದ ದಿನವೂ ಪ್ರದರ್ಶನ

ಭಕ್ತ ಕುಂಬಾರ

(ಕನ್ನಡ)

ಮುಖ್ಯ ಪಾತ್ರ ಹೊನ್ನಪ್ಪಭಾಗವತರ್ ಲಕ್ಷ್ಮೀ ಬಾಯಿ, ಜಯಶ್ರೀ ಮುಂತಾದವರು

ರಷ್ಯದಲ್ಲಿ ೯೦ ವಿಮಾನ ತಯಾರಿಕಾ ಕಾರ್ಖಾನೆಗಳು

ರಷ್ಯದಲ್ಲಿ ೯೦ ವಿಮಾನ ತಯಾರಿಕಾ ಕಾರ್ಖಾನೆಗಳಿದ್ದು ೧೦ ಲಕ್ಷ ಜನ ಕೆಲಸಗಾರರು ವರ್ಷಕ್ಕೆ ೭ ಸಾವಿರ ಸಾಧಾರಣ, ೮ ಸಾವಿರದ ಹಗುರವಾದ, ಸಾವಿರ ಭಾರಿ ಬಾಂಬರ್ ೩॥ ಸಾವಿರ ಸಾಗಾಣಿಕೆ ವಿಮಾನಗಳನ್ನು ತಯಾರಿಸುವರೆಂದು ಗೊತ್ತಾಗಿದೆ ತಿಂಗಳಿಗೆ ಅಲ್ಲಿ ೧೩೦೦ ವಿಮಾನಗಳು ತಯಾರಾಗುತ್ತವೆ

ವನಿತಾ ಸದನಕ್ಕೆ ಉದಾರ ಸಹಾಯ

ರಾಜಧಾನಿಯ ಜಯನಗರದ ವನಿತಾ ಸದನಕ್ಕೆ ಸುಪ್ರಸಿದ್ಧ ಮನೋರೋಗ ಚಿಕಿತ್ಸಾ ಪ್ರವೀಣರಾದ ಡಾ॥ ಮುಕ್ತ ಸ್ವಾಮಿಗಳು ಭೇಟಿಯಿತ್ತು, ಅಲ್ಲಿನ ಚಟುವಟಿಕೆಗಳ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುವುದಲ್ಲದೆ ಸದನಕ್ಕೆ ರೂ ೧೦೦೧-೧-೧ ಉದಾರವಾಗಿ ಸಹಾಯ ಮಾಡಿರುತ್ತಾರೆ

CHANGE OF ADDRESS

We have pleasure in announcing to our patrons that we have changed our Premises from 88, Lansdowne Bazaar to **HANUMANTHA RAO'S STREET (Near Prabha Talkies)**

SREENIVASA STORES

(Regd), MYSORE

Grand Reduction Rate For

"Convocation Photo"

at

SRI KANTH STUDIOS

Up Stairs Tipson Watch Co

Near Prabha Talkies,

Mysore

ಕೈಲಾಸಂ ದಿನಾಚರಣೆ

"ಪ್ರಹಸನ ಪಿತಾಮಹ" ಟಿ ಪಿ ಕೈಲಾಸಂರವರ ದಿನಾಚರಣೆಯನ್ನು ಕಲ್ಪತರು ಭಾಷಾವಾರ್ ಕಲಾಶಾಲೆಯದ ನಾಟ್ಯ ಸಂಘದವರು ಶ್ರೀ ಸಿ. ಕೆ ಗುಂಡಣ್ಣನವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಪ್ರಾರ್ಥನೆ, ಸ್ವಾಗತ ಭಾಷಣಗಳ ನಂತರ ಶ್ರೀ ಕೈಲಾಸಂರವರ ವಿಷಯವಾಗಿ ಹಲವರು ಭಾಷಣ ಮಾಡಿದರು. ಶ್ರೀಮಂತರ ಎಂಬ ನಾಟಕವನ್ನು ಅಭಿನಯಿಸಲಾಯಿತು

ಮೈಸೂರು ವಿಶ್ವವಿದ್ಯಾಲಯ

ತಾ॥ 29-11-51

ಪ್ರಕಟಣೆ

ವಿಷಯ — 1951ನೇ ಸೆಪ್ಟೆಂಬರು ಇಂಟರ್‌ಮೀಡಿಯೆಟ್ ಮತ್ತು ಸಮ ಪರೀಕ್ಷೆಗಳ ಮಾರ್ಕ್ಸ್ ಕಾರ್ಡುಗಳು

ಕೆಳಗೆ ಕಾಣಿಸಿರುವ 1951ನೇ ಸೆಪ್ಟೆಂಬರಿನ ಪರೀಕ್ಷೆಗಳಿಗೆ ಕುಳಿತಿದ್ದ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಅವರುಗಳು ಪರೀಕ್ಷೆಗೆ ಕುಳಿತುಕೊಂಡ ಕಾಲೇಜುಗಳ ಮುಖ್ಯಾಧಿಕಾರಿಗಳಿಗೆ ಅವರ ಮಾರ್ಕ್ಸ್ ಕಾರ್ಡುಗಳನ್ನು ಕಳುಹಿಸಲಾಗಿರುವುದು

ಇಂಟರ್ ಆರ್ಟ್ಸ್, ಇಂಟರ್ ಸೈನ್ಸ್ ಬಿ ಎ ಬಿ ಎಸ್‌ಸಿ, ಬಿ ಎ (ಆನರ್ಸ್) ಪ್ರಿಲಿಮಿನರಿ, ಬಿ ಎಸ್‌ಸಿ (ಆನರ್ಸ್) ಪ್ರಿಲಿಮಿನರಿ ಎಲ್ ಎಂ. ಪಿ, ಎಫ್ ಎಲ್, ಬಿ ಎಲ್

ವಿದ್ಯಾರ್ಥಿಗಳು ತಮ್ಮ ಕಾರ್ಡುಗಳನ್ನು ಕಾಲೇಜುಗಳ ಮುಖ್ಯಾಧಿಕಾರಿಯಿಂದ 1951ನೇ ಡಿಸೆಂಬರ್ 10ನೇ ಸೋಮವಾರದ ದಿನ ಅಥವಾ ಅನಂತರ ಪಡೆಯಬಹುದು

ತಕ್ಕ ಮೇರೆ
ಸಿ ರಂಗಾಚಾರ್,
ರಿಜಿಸ್ಟ್ರಾರ್

ಗಾ॥ ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರಂ, ಆರ್ನಿ, ನಾಗಪುರ ಸೀರೆಗಳು ಮತ್ತು ಕಾರ್ತೀಕದ ಪಾಲುಗಳಿಗೆ **M.V. ಭೋಜಯ್ಯ** ಬಿ ಎ

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

7-12-51ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು

ಶ್ರೀಲಕ್ಷ್ಮೀ ಮತ್ತು ಮೋತಿಲಾಲ್

ಚಿತ್ರಮಂದಿರಗಳಲ್ಲಿ

2 30 6-15 ಮತ್ತು 9-45ಕ್ಕೆ

• ಸಿಂಗಾರಿ •

ನ್ಯಾಷನಲ್ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ

ತಾರಾಗಣ – ಟಿ ಆರ್ ರಾಮಚಂದ್ರ, ಸಹಸ್ರನಾಮಂ, ಲಲಿತ ಪದ್ಮಿನಿ, ರಾಗಿಣಿ,

ಬಿ ಎಸ್ ಸರೋಜ ಮತ್ತು ಭಾಗ್ಯಂ

ಎಲ್ಲ ವಿಧವಾದ ಪಾಸುಗಳನ್ನು 3 ವಾರ ಮನ್ನಾ ಮಾಡಿರುತ್ತೆ

[R V PICTURES RELEASE

ಬಹಳ ಉತ್ತಮವಾದ ಸಾಬೂನು

808



ದಿ ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ಮದುವೆ ಮನೆಗಳಿಗೆ ಮಂಗಳಕರವಾದ ಜವಳಿಗಳು ದೊರೆಯುತ್ತವೆ !

ನಾನಾ ತರಹ ಜರಿ ರೇಷ್ಮೆ ಸೀರೆಗಳು, ನೂಲಿನ ಸೀರೆಗಳು ಪಂಚೆ ಮತ್ತು ಶರ್ಟು ರೇಷ್ಮೆ ಪಂಚೆಗಳಿಗೆ

* **D. L.** ನರಸಿಂಹಯ್ಯ

ಹಳೆ ಅಂಗಡಿ ಬಾಂಬೆ ಅಂಗಡಿ ಇಂಡಿಯನ್ ಬ್ಯಾಂಕ್ ಮೈಸೂರು

Edited, Printed and Published by A R Nagarajan, at Sadhvi Press D Subbiah Road, Mysore

ಸಂಪುಟ ೧೧] ಶನಿವಾರ ೮-೧-೫೩ ರ [ಸಂಚಿಕೆ ೧೧೪

- ಸರ್ ಆರ್ಕಾಟರು - ಪ್ರೋ-ಚಾನ್ಸೆಲರೇ ?

ಇಂಗ್ಲಿಷ್ ಭಾಷೆಯನ್ನು ತ್ಯಜಿಸಲಾಗದು

ಘಟಿಕೋತ್ಸವದಲ್ಲಿ ವಾಡಿಯಾರವರ ಭಾಷಣ

ಮೈಸೂರು ೮

ಮೈಸೂರು ವಿಶ್ವ ವಿದ್ಯಾಲಯದ ಘಟಿಕೋತ್ಸವವು ಈ ಬೆಳಿಗ್ಗೆ ಕ್ರಾಫರ್ಡ್ ಹಾಲ್‌ನಲ್ಲಿ ನಡೆಯಿತು. ಚಾನ್ಸೆಲರಾದ ಶ್ರೀ ಮಹಾರಾಜರು ಅಧ್ಯಕ್ಷತೆ ವಹಿಸಿದ್ದರು.

... ವಿದ್ಯಾರ್ಥಿಗಳಿಗೆ ಪದವಿಗಳನ್ನು ಕೊಡಲಾಯಿತು. ... ಪ್ರಶಸ್ತಿಗಳನ್ನೂ, ಪಡೆದಿದ್ದ ಪದಕಗಳನ್ನೂ ಇತರ ಬಹುಮಾನಗಳನ್ನೂ ಹಂಚಲಾಯಿತು.

... ವಿಶ್ವ ವಿದ್ಯಾಲಯದ ವೈಸ್ ಚಾನ್ಸೆಲರಾದ ಪ್ರೊ॥ ಎ. ವಾಡಿಯಾರವರು ಘಟಿಕೋತ್ಸವದ ... ಭಾಷಣ ಮಾಡಿದರು. ... ವಿಷಯವನ್ನು ಈ ಕೂಡಲೇ ತ್ಯಜಿಸುವುದು ಸರಿಯಲ್ಲವೆಂದೂ ಇನ್ನೂ ... ವರ್ಷಗಳ ಕಾಲ ಅದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದೂ ಹೇಳಿದರು. ಭಾರತ ಖಂಡವನ್ನು ಕೂಡಿಸುವುದರಲ್ಲಿಯೂ ರಾಜಕೀಯ ... ವನ್ನು ಬೆಳೆಸುವುದರಲ್ಲಿಯೂ ... ಭಾಷೆಯು ವಹಿಸಿರುವ ಪಾತ್ರವನ್ನು ಸ್ಪಷ್ಟವಾಗಿ ವಿವರಿಸಿದರು. ... ಪ್ರಾದೇಶಿಯ ಭಾಷೆಗಳಲ್ಲಿ ಪಾಠ ಪ್ರವಚನಗಳನ್ನು ನಡೆಸಲು ಇರುವ ... ಪರಿಶೀಲಿಸಿ, ಇದಕ್ಕಾಗಿ ತಕ್ಕ ಪುಸ್ತಕಗಳು ಸಿದ್ಧವಾದ ನಂತರ ಇದನ್ನು ಕೈಗೊಳ್ಳಬೇಕೆಂದು ಹೇಳಿ ಈ ವಿಷಯದಲ್ಲಿ ಕೇವಲ ದುಡುಕಿನಿಂದ ವರ್ತಿಸದೆ ವಿಶಾಲ ಭಾವನೆಯಿಂದ ನಡೆದುಕೊಳ್ಳಬೇಕೆಂದು ತಿಳಿಸಿದರು.

... ವಿಷಯಗಳನ್ನು ಓದುವ ವಿದ್ಯಾರ್ಥಿಗಳಿಗೆ ಇರುವ ಹೆಚ್ಚಿನ ... ಯನ್ನು ಅವರು ಟೀಕಿಸಿ, ಪದವಿ ಪಡೆದ ಕೂಡಲೇ ಅವರು ತಮ್ಮ ವಿದ್ಯೆಯನ್ನು ಮರೆತು ಕಾರಕೂನರಾಗುವುದನ್ನು ನಿರೂಪಿಸಿದರು. ಆರ್ಟ್ಸ್ ... ವಿಭಾಗದ ವಿದ್ಯಾರ್ಥಿಗಳಲ್ಲಿ ಲೋಕ ವ್ಯವಹಾರ ಜ್ಞಾನವು ಇರುವುದನ್ನು ಅವರು ವಿವರಿಸಿ ... ವ್ಯಾಖ್ಯಾನಿಸಿದ ಪುನರ್ರಚನೆಯನ್ನು ... ನವೀನ ಪ್ರಪಂಚ ಜ್ಞಾನದ ತತ್ವ ಪಡೆಯುವ ಪ್ರಾಮುಖ್ಯತೆ ಕುರಿತು ಹೇಳಿದರು.

... ವಿದ್ಯಾಲಯದ ಪದವಿಗಳ ... ಇಲ್ಲದೆ ವಿಶ್ವ ಕಾರ್ಯ ಕ್ಷೇತ್ರ ... ಯಾಗಿ ಕೆಲಸ ಮಾಡುವ ... ವು ಇಂದಿನ ತರುಣ ತರುಣಿಯರು ... ದಿರುತ್ತವೆ. ಸಾಂಘಿಕ ಮತ್ತು ... ವ್ಯಕ್ತಿತ್ವವುಳ್ಳ ವಿದ್ಯಾವಂತರನ್ನು ... ಮಾಡಲು ವಿಶ್ವ ವಿದ್ಯಾಲಯ ... ಗಮನವನ್ನು ಕೇಂದ್ರೀಕರಿಸಬೇಕು. ... ಸ್ವತಂತ್ರ ಭಾರತದಲ್ಲಿ ಪದವೀಧರರಿಗೆ ವಿಶೇಷವಾದ ಸ್ಥಾನಮಾನ ... ಇರುವುದಿಲ್ಲ.

... ರ್ಥಿಗಳಲ್ಲಿ ಇಂದು ಕಾಣಬರುವ ... ಸಂಸ್ಕೃತಿಯ ಹೀನತೆಗೆ ನಮ್ಮ ... ವಿಧಾನವೇ ಮೂಲ ಕಾರಣ... ಗಳು ಒಂದು ಲಾಟರಿಯಂತೆ ... ನಡೆಯ ಪರೀಕ್ಷೆಗೆ ಪ್ರಾಧಾನ್ಯ ...

ಕಾಂಗ್ರೆಸ್ಸಿಗೇ ಏಕೆ ಓಟು ಕೊಡಬೇಕು ?

ಕಾಂಗ್ರೆಸ್ಸು ನೂರಾರು ವರ್ಷಗಳ ... ರತನಾನದಿಂದಲೂ ಬೆಳೆದ ಒಂದು ... ಸ್ಥೆ. ಅದರ ಧ್ಯೇಯ ಸ್ವತಂತ್ರವಾದ ... ಅದನ್ನು ಸಾಧಿಸಲು ಅದು ಆಗ ನಡೆಸಿದ ... ತ್ತಿರುವ ಪಾರಿ ಸಿದ್ಧವಾದುದು. ಈ ... ತಂತ್ರ್ಯದ ತರುಣದಲ್ಲಿ ಹಲವು ಸವ... ಗೊಂದಲದಲ್ಲಿ ಕೆಲಂತ ಕಪಟದಿಂದ ... ಗಿದೆ. ಎದರೆ ಮುಂದೆಯೂ ... ಒಂದೇ ದೇಶದ ಪ್ರಗತಿಯನ್ನು ತರಲು ಸಾಧ್ಯ.

ಆದರಿಂದಲೇ ಕಾಂಗ್ರೆಸ್ ಜಯಗಳಿಸಬೇಕು.

ಭಾಗವತನ್ನುನವರ ದೇವಾಲಯದಲ್ಲಿ ಪೂಜೆ

ರಾಜಧಾನಿಯ ಬೆಳ್ಳಿ ಕಟ್ಟೆಗೆ ಎದುರಿನಲ್ಲಿರುವ ಶ್ರೀ ಭಾಗವತನ್ನುನವರ ದೇವಾಲಯದಲ್ಲಿ ನಾಳೆ ಬೆಳಿಗ್ಗೆ ... ಗಂಟೆಗೆ ದೇವರಿಗೆ ಪೂಜೆ ಮತ್ತು ಮಂಗಳಾರತಿಗಳೂ ಚಾಮುಂಡಿ ಬೆಟ್ಟದ ಪಾದದಲ್ಲಿ ಪ್ರಸಾದ ವಿನಿಯೋಗವೂ, ಅನ್ನಸಂತರ್ಪಣೆಯೂ ಏರ್ಪಾಡಾಗಿದೆ.

ನ್ನ ಕೊಡುವ ಬದಲು ಮೊದಲಿನಿಂದಲೂ ವಿದ್ಯಾರ್ಥಿಯು ತರಗತಿಯಲ್ಲಿ ಹೇಗೆ ಪ್ರಗತಿ ಹೊಂದುತ್ತಾನೆಂಬುವಕ್ಕೆ ಹೆಚ್ಚು ಗಮನ ಕೊಡಬೇಕು. ನಮ್ಮ ದೇಶದಲ್ಲಿರುವ ಅಗಾಧವಾದ ಅನಕ್ಷರತೆಯನ್ನು ತೊಲಗಿಸಲು ವಿಶ್ವ ವಿದ್ಯಾಲಯಗಳೂ, ವಿದ್ಯಾರ್ಥಿಗಳೂ, ಸರ್ಕಾರಗಳೂ ಶ್ರಮಿಸಬೇಕು.

"ಪ್ರಪಂಚದ ಕಷ್ಟ ಸುಖಗಳನ್ನು ಸಮಾನವಾಗಿ ಎಣಿಸಿ ಸತ್ಯ ಮಾರ್ಗದಲ್ಲಿ ನಡೆದು ನಿಮ್ಮ ಸಹಪಾಠಿಗಳ ಪ್ರೀತಿ ವಿಶ್ವಾಸಗಳನ್ನು ಗಳಿಸಿ ಮುಂದುವರಿದರೆ ನಿಮ್ಮ ಜೀವನವು ಸಾರ್ಥಕವೂ ಸೌಂದರ್ಯಮಯವೂ ಆಗುವುದರಲ್ಲಿ ಸಂದೇಹವಿಲ್ಲ" ಎಂದು ಹೇಳಿದರು.

ಧಾನ್ಯದ ಬೆಲೆ ನಿಗದಿ

ಸ್ವಂ ಸು ಪ್ರೋ॥] ಬೆಂಗಳೂರು ೮

೧೯೫೨-೫೩ನೇ ಸಾಲಿನಲ್ಲಿ ಸರ್ಕಾರದವರು ಕೆಳಗೆ ಕಂಡಂತೆ ಧಾನ್ಯ ಕೊಳ್ಳುವ ಬೆಲೆಯನ್ನು ನಿಗದಿ ಮಾಡಿರುತ್ತಾರೆ.

ಭತ್ತ, ಮೊದಲನೆ ದರ್ಜೆ ೧೧೦ ಸೇರಿನ ಪಲ್ಲ ... ರೂ ಎರಡನೇ ದರ್ಜೆ ... ರೂ ... ರಾಗಿ ... ರೂ ... ರೂ ... ರೂ ಕಳೆದ ಎಂದು ವರ್ಷದ ... ಇದ್ದಂತೆಯೇ ಈ ಸಾರಿಯೂ ಅದೇ ಬೆಲೆಯನ್ನು ನಿಗದಿ ಮಾಡಲಾಗಿದೆ.

ಸಿಮೆಂಟ್ ಪರ್ಮಿಟ್ ಪದ್ಧತಿ ಸಡಿಲವಾಯಿತು

ಸಂಸ್ಥಾನದಲ್ಲಿ ಸಿಮೆಂಟು ವ್ಯಾಪಾರಿಗಳು ... ನರ ಉಪಯೋಗಕ್ಕಾಗಿ ... ಪರ್ಮಿಟ್ ... ಪಡೆಯಬೇಕಾಗಿಲ್ಲವೆಂದು ... ಸರ್ಕಾರದವರು ... ಸಿಮೆಂಟನ್ನು ... ಪಡೆಯಬೇಕಾಗಿಲ್ಲವೆಂದು ... ತಿಳಿಸಲಾಗಿದೆ.

ಸಿಂಧ ಪ್ರಧಾನಿಯು ರಾಜೀನಾಮೆಗೆ ಒತ್ತಾಯ

ಸಿಂಧಿನ ಗೌರ್ನರ್ ದೀನ್ ... ರವರು ಅಲ್ಲಿನ ಮುಖ್ಯ ಮಂತ್ರಿ ... ಖುರ್ರೋರವರು ರಾಜೀನಾಮೆ ಕೊಡಬೇಕೆಂದು ತಿಳಿಸಿರುತ್ತಾರೆ ... ಮಂತ್ರಿಯ ಮೇಲಿರುವ ಆಪಾದನೆಗಳನ್ನು ವಿಚಾರಿಸಲು ಒಂದು ನ್ಯಾಯಾಲಯವನ್ನೇರ್ಪಡಿಸಲಾಗಿದೆ.

ಯಕ್ಷಗಾನ

ರಾಜಧಾನಿಯ ಮಂಡಿ ಮೊಹಲ್ಲಾ ಮಿರ್ಜಾ ಅಪ್ಪಣ್ಣ ರಸ್ತೆಯಲ್ಲಿರುವ ಶ್ರೀ ಎ. ... ಮ್ಮನವರ ದೇವಾಲಯದ ಹಾಡು ಮುಂದಿರದಲ್ಲಿ ಕೀರ್ತನಕಾರರ ಮಂಡಲಿಯ ... ನೇ ವಾರ್ಷಿಕೋತ್ಸವದ ಅಂಗವಾಗಿ ಈ ಸಂಜೆ ೭ ಗಂಟೆಗೆ ಶ್ರೀ ಹನುಮಪ್ಪಂ ಕಲ್ಪಿತ ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯ ವರಿಂದ ... ದಾನ ಶೂರ ಕರ್ಣ' ಎಂಬ ಕಥೆಯು ಯಕ್ಷಗಾನ ರೂಪದಲ್ಲಿ ನಡೆಯುವುದು.

ವಿಶ್ವ ವಿದ್ಯಾಲಯದ ಪ್ರೋ ಚಾನ್ಸೆಲರ್ ಸ್ಥಾನ

ಆರ್ಕಾಟ್ ರಾಮಸ್ವಾಮಿ ಮೊದಲಿಯಾರರ ನೇಮಕವೇ ?

ಸ್ವಂ ಸು ಪ್ರೋ॥] ಬೆಂಗಳೂರು ೮

ದಿವಂಗತ ಸಿ ಆರ್ ರೆಡ್ಡಿಯವರು ಅಲಂಕರಿಸಿದ್ದ ಮೈಸೂರು ವಿಶ್ವವಿದ್ಯಾಲಯದ ಪ್ರೋ ಚಾನ್ಸೆಲರ್ ಸ್ಥಾನಕ್ಕೆ ತಿರುವಾಂಕೂರಿನಲ್ಲಿ ಈಗ ವೈಸ್ ಚಾನ್ಸೆಲರ್ ಆಗಿರುವ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರನ್ನು ನೇಮಿಸುವ ಆಲೋಚನೆಯಿರುವುದಾಗಿ ತಿಳಿದು ಬಂದಿದೆ.

ರೂ ಗೆ ೧ ಆಣೆ ಆರೋಗ್ಯದ ತೆರಿಗೆ

ಭೂ ಕಂದಾಯವಲ್ಲದೆ, ವಿದ್ಯಾ ಸೆಸ್ಸನ್ನು ಹಾಕುವ ಇತರ ತೆರಿಗೆಗಳ ಮೇಲೆ ರೂಪಾಯಿಗೆ ೧ ಆಣೆಯಂತೆ ಆರೋಗ್ಯ ತೆರಿಗೆಯನ್ನು ವಿಧಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ.

ತಿರುವಾಂಕೂರು ೧೫೦ ರನ್ನಿಗೆ ಔಟ್

ರಣಜಿ ಕ್ರಿಕೆಟ್ ಪಂದ್ಯದಲ್ಲಿ ಮೈಸೂರಿನವರ ಮೇಲೆ ಈ ದಿನ ತಿರುವಾಂಕೂರಿನವರು ೬ ವಿ ೧೫೦ ರನ್ನುಗಳನ್ನು ಮಾಡಿ ಔಟಾದರು.

ರೈಲ್ವೆ ಸ್ಟೇಷನ್ನಿನಲ್ಲಿ ಸೀನು ಎಸ್ಪೆ ಟೆಸ್ಸಿಗೆ ಬೆಂಕಿ

ತುಮಕೂರು ರೈಲ್ವೆ ಸ್ಟೇಷನ್ನಿನ ಗೂಡ್ಸ್ ಪ್ರದೇಶದಲ್ಲಿ ನೆನ್ನೆ ಮಧ್ಯಾಹ್ನ ಸೀಮೆಎಣ್ಣೆಯನ್ನು ವ್ಯಾಗನ್ನಿನಿಂದ ಇಳಿಸುವಾಗ ಬೆಂಕಿಯುಂಟಾಗಿ ೪೭ ಡಬ್ಬಗಳು ಉರಿದುಹೋದುವೆಂದು ವರದಿಯಾಗಿದೆ.

ಭತ್ತದ ಸೈರು ಕಟಾವಿಗೆ ಸಾರ್ವತ್ರಿಕ ನಿಷೇಧಕೂಡದು

ಸ್ವಂ ಸು ಪ್ರೋ॥] ಬೆಂಗಳೂರು ೮

ಸಂಸ್ಥಾನದ ಹಲವೆಡೆಗಳಲ್ಲಿ ಭತ್ತದ ಪೈರನ್ನು ಕುಯ್ಯಕೂಡದೆಂದು ಹಲವು ರೆವಿನ್ಯೂ ಅಧಿಕಾರಿಗಳು ಸಾರ್ವತ್ರಿಕವಾಗಿ ಹಾಕಿರುವ ನಿಷೇಧಾಜ್ಞೆಯ ಸಂಬಂಧವಾಗಿ ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಸೂಚನೆಯೊಂದನ್ನು ಕಳುಹಿಸಿ, ಮುಲ್ಲಂಥ ಉತ್ಪತ್ತಿಯಿಂದ ರೈತರಿಗೆ ಅನಾನುಕೂಲವಾಗುವುದರಿಂದ ಸಾರ್ವತ್ರಿಕವಾಗಿ ಅಂತಹ ಆಜ್ಞೆಗಳನ್ನು ಜಾರಿ ಮಾಡದೆ, ಅವಶ್ಯಕ ಕಂಡುಬಂದ ವೈಯಕ್ತಿಕ ಪ್ರಸಂಗಗಳಲ್ಲಿ ಅಂತಹ ಆಜ್ಞೆಯನ್ನು ಹೊರಡಿಸಬಹುದೆಂದು ಸೂಚಿಸಿರುತ್ತಾರೆ.

ಸ್ಕೂಲ್ ಫೈನಲ್ ಶಿಕ್ಷಣದ ತರಗತಿ

ಮೈಸೂರು ೮

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದಲ್ಲಿ ನಾಳಿದ್ದು ಸೋಮವಾರದಿಂದ ಸ್ಕೂಲ್ ಫೈನಲ್ ಶಿಕ್ಷಣ ತರಗತಿಗಳು ಆರಂಭವಾಗುವುವು. ಶುಲ್ಕವು ಅತ್ಯಂತ ಕಡಿಮೆಯಾಗಿರುತ್ತದೆ. ಈ ಸುಸಮಯವನ್ನು ಉಪಯೋಗಿಸಿಕೊಳ್ಳಬೇಕೆಂದು ಸಂಘದ ಸಂಚಾಲಕರು ಕೋರಿರುತ್ತಾರೆ.

ಸೋಡಾ ಫ್ಯಾಕ್ಟರಿಯ ಆರಂಭ

ರಾಜಧಾನಿಯ ... ದ ಸೋಡಾ ಫ್ಯಾಕ್ಟರಿಯ ... ದ ರಾಜಾ ಸೋಡಾ ಫ್ಯಾಕ್ಟರಿಯನ್ನು ಅದರ ಮಾಲೀಕರಾದ ಶ್ರೀ ಎಂ. ಗೋವಿಂದರಾಜರವರು ನೆನ್ನೆ ಬೆಳಿಗ್ಗೆ ಅಶೋಕಾ ರಸ್ತೆಯಲ್ಲಿ ಆರಂಭಿಸಿದರು. ಸಮಾರಂಭಕ್ಕೆ ಅನೇಕ ಗಣ್ಯ ಮಹನೀಯರು ಆಗಮಿಸಿದ್ದರು.

ಪ್ರಾಥಮಿಕ ಶಾಲಾ ಪ್ರಾರಂಭ

ಹೆಗ್ಗಡದೇವನಕೋಟೆ ತಾಲ್ಲೂಕಿನ ತಿಟ್ಟಹಳ್ಳಿ ಗ್ರಾಮದ ನೂತನ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವವು ... ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಗ್ರಾಮದ ಜನರು ... ಮಾಡಿಕೊಂಡು ... ನವಾಗಿರುವುದರಿಂದ ... ತೆಗೆಸಲು ... ದಿಂದ ... ಸಿನಲ್ಲಿ ಸ್ವಲ್ಪ ಭಾಗವನ್ನು ... ನಕ್ಕೀಲರಾದ ... ನರೂ ... ಗೊಳ್ಳಬೇಕೆಂದು ... ತಿಳಿಸಿದರು ... ಯನ್ನು ... ಯಿತ್ತರು.

ಸತುವಿನ ಗೊಬ್ಬರದಿಂದ ಹೆಚ್ಚು ರಾಗಿ ಬೆಳೆ

ಸತುವಿನ ಗೊಬ್ಬರವನ್ನು ... ಗಿನಿಂದ ಹೆಚ್ಚು ರಾಗಿ ... ಹುಲ್ಲು ಬೆಳೆಯುವುದೆಂದು ಮೈಸೂರು ಸರ್ಕಾರದ ವ್ಯವಸಾಯ ಇಲಾಖೆಯ ... ಪ್ರಯೋಗದಿಂದ ಗೊತ್ತಾಗಿದೆ ... ನಾಲ್ಕು ರೂಪಾಯಿಗಳಷ್ಟು ... ವೆಚ್ಚಮಾಡಿ ಗೊಬ್ಬರವನ್ನು ... ಎಕರೆಗೆ ... ದೊರೆಯುವುದೆಂದು ... ಬಗ್ಗೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪ್ರಯೋಗಗಳನ್ನು ನಡೆಸಲಾಗಿದೆ.

ಚುನಾವಣಾ ಸಭೆಗಳಿಗೆ ಅಪ್ಪಣೆ ಅವಶ್ಯಕ

ಚುನಾವಣಾ ಪ್ರಚಾರವನ್ನು ಕೈಗೊಳ್ಳುವ ಸಲುವಾಗಿ ಬೆಂಗಳೂರಿನ ನಗರ ಮತ್ತು ... ಪ್ರದೇಶಗಳಲ್ಲಿ ... ಸಭೆ ನಡೆಸಬೇಕಾದವರು ಅನುಮತಿ ಅವಶ್ಯಕವೆಂದು ಬೆಂಗಳೂರು ಜಿಲ್ಲಾಧಿಕಾರಿಗಳು ... ಹೊರಡಿಸಿದ್ದಾರೆ.

ಈಜಿಪ್ಟ್ ಸರ್ಕಾರವನ್ನು ಉರುಳಿಸಲು ಪಿತೂರಿ ?

... ವಿದ್ಯಾರ್ಥಿಗಳ ಪ್ರದರ್ಶನಗಳ ... ಸರ್ಕಾರ ... ಪ್ರಯತ್ನ ... ಎಂದು ... ಹೇಳಲಾಗಿದೆ.

ಉಪನ್ಯಾಸ

... ಸಿಕ್ಕಿ ... ನಡೆಯಿತು.

ಶ್ರೀಕಂಠೇಶ್ವರಸ್ವಾಮಿಯವರ ಚಿಕ್ಕ ರಥೋತ್ಸವ

... ಶ್ರೀ ... ಸ್ವಾಮಿಯವರ ಚಿಕ್ಕ ರಥೋತ್ಸವವು ... ನೆರವೇರಿತು ...

ತಿರುವಾಂಕೂರು ಕಾಲೇಜುಗಳ ಬಂದ್

ತಿರುವಾಂಕೂರು—ಕೊಚ್ಚಿಯ ... ಕಾಲೇಜಿನ ಒಬ್ಬ ವಿದ್ಯಾರ್ಥಿಯನ್ನು ... ಮಾಡಿದ ಸಂದರ್ಭದಲ್ಲಿ ... ನ ಕಾಲೇಜುಗಳ ವಿದ್ಯಾರ್ಥಿ... ಸೇರಿ, ಪರಿಸ್ಥಿತಿಯು ... ರುವುದರಿಂದ ಎಲ್ಲಾ ಕಾಲೇಜುಗಳನ್ನು ... ವರೆಗೆ ... ಅಧಿಕಾರಿಗಳು ನಿರ್ಧರಿಸಿರುತ್ತಾರೆ.

ವಿವಾಹ ಮಹೋತ್ಸವ

... ಸ್ವಾನಿಸನ ... ಪ್ರಸನ್ನರವರ ... ರಾಜಧಾನಿಯ ... ಸ್ಟೇಷನ್ ... ರೈ ... ಶ್ರೀ ... ನಾಗರತ್ನಮ್ಮನನ್ನು ಕೊಟ್ಟು ಮೊನ್ನೆ ರಾಜಧಾನಿಯಲ್ಲಿ ವಿವಾಹವು ನೆರವೇರಿತು.

ತಾ|| 9-12-51ನೇ ಭಾನುವಾರ ಬೆಂಗ್ಳೂರು ಕುರ್ಚಿ, ಮೇಜು ಬೆಂಚು ವಗೈರೆ

—: ಹರಾಜು :—

ಓಟಿ ಆಕ್ಷನೀರಿಂಗ್ ಕೋ., ಮೈಸೂರು

ಮನುಷ್ಯನ ಸಹಾಯವಿಲ್ಲದೆ ಕೆಲಸ ನಡೆಸುವ ಕಾರ್ಖಾನೆ

ರಷ್ಯದಲ್ಲಿ ಇದೇ ಮೊದಲಾಗಿ ಮನುಷ್ಯನ ಸಹಾಯವಿಲ್ಲದೆ ಕೇವಲ ಯಂತ್ರಗಳ ಮೂಲಕವೇ ನಡೆಯಬಲ್ಲ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗಿದೆ ... ಹುದು ಪ್ರಸಂಚದ ಇನ್ನೆಲ್ಲಿಯೂ ... ಈ ಕಾರ್ಖಾನೆಯಲ್ಲಿ ಮೋಟಾರುಗಳ ... ಪಿಸ್ಟನ್‌ಗಳು ತಯಾರಾಗುತ್ತವೆ ... ಜನರು ಮಾತ್ರ ಈ ಎಲ್ಲಾ ಕೆಲಸಗಳನ್ನೂ ನೋಡಿಕೊಳ್ಳುತ್ತಾರೆ.

ಹಿಂದೂ ವಿದ್ಯಾ ಮಂಡಲಿ

ರಾಜಧಾನಿಯ ನೂರಡಿ ರಸ್ತೆಯಲ್ಲಿರುವ ಕಾಳೀಶಕಿಲಾಯದಲ್ಲಿ ... ನಂಬರು ಮನೆಯಲ್ಲಿ ಪ್ರಾಥಮಿಕ ... ಮಾಧ್ಯಮಿಕ ತರಗತಿಗಳನ್ನು ... ಯಲಾಗಿದೆಯೆಂದೂ, ಹಿಂದಿ ಪರೀಕ್ಷೆಗೂ ... ವುದೆಂದೂ, ಸೇರಬಯಸುವವರು ... ಕಾರ್ಯಾಲಯದಲ್ಲಿ ವಿಚಾರಿಸಬೇಕೆಂದು ಮಂಡಲಿಯವರು ತಿಳಿಸಿರುತ್ತಾರೆ.

ಕಾಂಗ್ರೆಸ್ ಚುನಾವಣಾ ಪ್ರಚಾರ ಆರಂಭ

ಚಾಮರಾಜನಗರ.

ಮೈಸೂರು ಜಿಲ್ಲಾ ಕಾಂಗ್ರೆಸ್ ಚುನಾವಣಾ ಸಮಿತಿಯ ಆಶ್ರಯದಲ್ಲಿ ಇಲ್ಲಿನ ಬಸ್ ನಿಲ್ದಾಣದ ಮೈದಾನದಲ್ಲಿ ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಚುನಾವಣಾ ಪ್ರಚಾರ ಸಮಾರಂಭವನ್ನು ನೆರವೇರಿಸಿದರು. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಎಸ್. ಕುಮಾರಸ್ವಾಮಿಯವರು ಸ್ವಾಗತ ಭಾಷಣ ಮಾಡಿದನಂತರ, ಸಚಿವರ ಮಾನ್ಯ ... ಸರ್ಕಾರದವರು ನಾಲ್ಕು ವರ್ಷಗಳಲ್ಲಿ ನಡೆಸಿದ ಕೆಲಸಕಾರ್ಯಗಳನ್ನು ವಿವರಿಸಿದರು. ಪ್ರಚಾರ ಸಮಿತಿಯ ... ರಾದ ಶ್ರೀ ಎಸ್. ನಾರಾಯಣನಾ... ರು ಭಾಷಣ ಮಾಡಿ ಕಾಂಗ್ರೆಸ್ಸಿಗೇ ಓಟು ಕೊಡಬೇಕೆಂದು ಪ್ರಾರ್ಥಿಸಿದರು.

ಸಪ್ರದೇಶ ... ಸೇವೆ

ಪೂರ್ಣ ಭದ್ರತೆ ... ಕಡಿಮೆ ವೆಚ್ಚ

ಅತ್ಯಮೋಘವಾದ ಪ್ರೀಮಿಯಂ ದರ

ತಪ್ಪಿಲ್ಲದ ವಿಮಾ ವೊಬಲಿಗಿನ ಪಾವತಿ

ಸುಲಭವಾದ ಸಾಲದ ಸೌಕರ್ಯ

ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚಿರುವುದು

ಇವೆಲ್ಲಾ ... ದರೆ

ಮೈಸೂರು ಸರ್ಕಾರದ

ವಿಮಾ ಇಲಾಖೆ

ಪ್ರಜೆಗಳ ಶಾಖೆಯಲ್ಲಿ

ವಿಮೆ ಮಾಡಿಸಿ ಇಂದೇ ನಿರ್ಧರಿಸಿರಿ

ಬಾಳೆ ಎನಬೇಡಿ

ABIDS

AUCTION SALE

TO-MORROW

at 10 a. m.

7-12-51ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು

ಲಕ್ಷ್ಮಿ ಮೋತಿಲಾಲ್

ಚಿತ್ರ ಮಂದಿರಗಳಲ್ಲಿ

2-30, 6-15 ಮತ್ತು 9-45ಕ್ಕೆ

• ಸಿಂಗಾರಿ •

ನ್ಯಾಷನಲ್ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ

ತಾರಾಗಣ — ಟಿ. ಆರ್. ರಾಮಚಂದ್ರ, ಸಹಸ್ರನಾಮಂ, ಲಲಿತ ಪದ್ಮಿನಿ, ರಾಗಿಣಿ

ಟಿ. ಎಸ್. ಬಾಲಯ್ಯ ಮತ್ತು ಭಾಗ್ಯಂ

... ವಿದವಾದ ಪಾತ್ರಗಳನ್ನು ... ಮಾಡಿರುತ್ತಾರೆ

R. V. PICTURES RELEASE

ನಿಮ್ಮ ಓಟು ಯಾರಿಗೆ !

ಓಟು ಮಾಡುವ ಬಗೆ ಹೇಗೆ

ಎಂಬ ವಿಷಯಗಳನ್ನು ತಿಳಿಯಲು

ಒಲಿಂಪಿಯಾದಲ್ಲಿ

ಈಗ ನಡೆಯುತ್ತಿರುವ

* ಬಾಬುಲ್ *

ಚಿತ್ರದ ಜೊತೆಯಲ್ಲಿ ಪ್ರದರ್ಶಿಸಲಾಗುವ

ಚುನಾವಣಾ ಪ್ರಚಾರದ ಚಿತ್ರವನ್ನು

ನೋಡಲು ತಪ್ಪಬೇಡಿ

ಮದುವೆ ಮನೆಗಳಿಗೆ ಮಂಗಳಕರವಾದ ಜವಳಿಗಳು ದೊರೆಯುತ್ತವೆ !

... ಸೀರೆಗಳು ... ಕಲಾಪತ್ತು ...

ರೇಷ್ಮೆ ಮಂಗಲಸೂತ್ರ

* D. L. ನರಸಿಂಹಯ್ಯ

ಜವಳಿ ಅಂಗಡಿ ... ಮೈಸೂರು

Edited, Printed and Published by A. R. Nagarajan at Sadhvi Press D Subbiah Road, Mysore

[illegible] ನಂ 792 WEEKLY EDITION [illegible]

ಸಾಧ್ವಿ

ಸಂಪುಟ ೧೬] ಭಾನುವಾರ ೯-೧೨-೫೧ [ಸಂಚಿಕೆ ೧೯

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ಸಿಗೆ ಭಾರಿ ಜಯ

ಟಿ. ಸುಬ್ರಹ್ಮಣ್ಯರವರ ಭಾಷಣ

ಮೈಸೂರು ೯

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಮತ್ತು ಚುನಾವಣಾ ಉಪಸಮಿತಿ ಸದಸ್ಯರಾದ ಶ್ರೀ ಟಿ ಸುಬ್ರಹ್ಮಣ್ಯರವರು ನಾಳೆ ಸಂಜೆ ೬|| ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಚುನಾವಣಾ ಪ್ರಚಾರದ ಅಂಗವಾಗಿ ಭಾಷಣ ಮಾಡುವರು. ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ

ನಗರಕ್ಕೆ ಪೇಜಾವರ ಮಠಾಧೀಶರ ಆಗಮನ

ಉಡುಪಿಯ ಶ್ರೀ ಪೇಜಾವರದ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ನಾಳೆ ಸಂಜೆ ೪|| ಗಂಟೆಗೆ ರಾಜಧಾನಿಗೆ ಆಗಮಿಸುವರು. ಶ್ರೀರಂಗಪಟ್ಟಣದ ಉತ್ಸವದ ಬಳಿ ಅವರನ್ನು ಸಕಲ ರಾಜಮನೆ ಮರ್ಯಾದೆಗಳೊಡನೆ ಕರೆತರಲಾಗುವುದು. ಭಕ್ತಾದಿಗಳು ಉತ್ಸವಕ್ಕೆ ಬರಬೇಕೆಂದು ರಾಜಧಾನಿಯ ಭಕ್ತ ಮಂಡಲಿಯವರು ಕೋರಿರುತ್ತಾರೆ.

ಸಂಸ್ಥಾನಕ್ಕೆ ೧೩೬೦ ಲಕ್ಷ ಓಟು ಪತ್ರಗಳು

ಮೈಸೂರು ಸಂಸ್ಥಾನದ ಚುನಾವಣಾಧಿಕಾರಿಗಳಾದ ಶ್ರೀ ಕೆ ಪಿ ರಾಮನಾಥಯ್ಯನವರು ಈಗಾಗಲೇ ೫೮ ಸಾವಿರ ಓಟಿನ ಪೆಟ್ಟಿಗೆಗಳನ್ನು ವಿವಿಧ ಪ್ರದೇಶಗಳಿಗೆ ಕಳುಹಿಸಿರುತ್ತಾರೆ. ಜನವರಿ [illegible] ಚುನಾವಣಾ ಕ್ಷೇತ್ರದಿಂದ [illegible] ಸಾ ವಿ ರ ಪೋಲಿಂಗ್ [illegible] ಹೋಗುವುದಾಗಿ ಅವರು [illegible] ಲಕ್ಷ ಮತದಾರರಿಗಾಗಿ [illegible] ಲಕ್ಷ ಓಟಿನ ಪತ್ರಗಳೂ, [illegible] ಗುರುತಿನ ಚೀಟಿಗಳೂ ಬೇಕಾಗುವುವೆಂದು ತಿಳಿಸಿರುತ್ತಾರೆ

ಆಗಮತ್ರಯ ಮಹಾ ಮಂಡಲದ ಸಮ್ಮೇಳನ

ಆಗಮತ್ರಯ ಮಹಾ ಮಂಡಲದ [illegible]ಯ ಸಮ್ಮೇಳನವು ನಂಜನಗೂಡಿನಲ್ಲಿ ೧೦, ೧೧ ಮತ್ತು ೧೨ನೇ ತಾ|| ನಡೆಯುವುದು. ೧೧ನೇ ತಾ|| ಬೆಳಗ್ಗೆ ೧೦ ಗಂಟೆಗೆ ಅಲ್ಲಿನ ಅರಮನೆಯಲ್ಲಿ [illegible] ಸಮಾರಂಭೋತ್ಸವವನ್ನು ಶ್ರೀಮನ್ಮಹಾರಾಜರು ನೆರವೇರಿಸುವರು. ಉಡುಪಿ ಪೇಜಾವರ ಮಠದ ಸಂಸ್ಥಾನಾಧೀಶರಾದ ಶ್ರೀ [illegible] ವಿಶ್ವೇಶತೀರ್ಥ ಶ್ರೀಪಾದಂಗಳವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರು

ಉತ್ಕಲ ವಿಶ್ವವಿದ್ಯಾಲಯದ ಅಧಿಕಾರಿಗಳ ರಾಜೀನಾಮೆ

ಉತ್ಕಲ ವಿಶ್ವ ವಿದ್ಯಾಲಯದ ಪ್ರೊ ಚಾನ್ಸಲರ್ ಹರೇಕೃಷ್ಣ ಮೆಹತಾಬ್ ಮತ್ತು ವೈಸ್ ಚಾನ್ಸಲರ್ ಚಿಂತಾಮಣಿ ಆಚಾರ್ಯರವರು ತಮ್ಮ ಹುದ್ದೆಗಳಿಗೆ ರಾಜೀನಾಮೆಯನ್ನಿತ್ತಿರುತ್ತಾರೆ. ಮೆಹತಾಬರ ರಾಜೀನಾಮೆಯು ಅಂಗೀಕೃತವಾದ ನಂತರ ಆಚಾರ್ಯರು ತಮ್ಮ ರಾಜೀನಾಮೆಯನ್ನು ಸಲ್ಲಿಸಿರುವರು. ಅಲ್ಲಿನ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ ಚುನಾವಣೆ ಸಂಬಂಧವಾಗಿ ನಡೆದ ಘಟನೆಗಳೇ ರಾಜೀನಾಮೆಗಳಿಗೆ ಕಾರಣವಾದ[illegible]

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ಸಿಗೆ ಬಹುಮತ

ಹಿಮಾಚಲ ಪ್ರದೇಶ ಶಾಸನ ಸಭೆಯ ೩೬ ಸ್ಥಾನಗಳ ಪೈಕಿ ಕಾಂಗ್ರೆಸ್ಸಿಗೆ ೨೧ ಜಾಗಗಳು ದೊರಕಿ ಅದಕ್ಕೆ ಬಹುಮತವು ಬಂದಿದೆ. ಸ್ವತಂತ್ರರು ೭ ಮಂದಿ, ಕೆ ಎಂ ಪಿ ಪಕ್ಷ ೧ ಮತ್ತು ಹಿಮ್ಮ ಪಕ್ಷ ೧ — ಈ ರೀತಿ ಉಳಿದವರಿಗೆ ಬಂದಿವೆ. ಇನ್ನೂ ೬ ಸ್ಥಾನಗಳ ಫಲಿತಾಂಶವು ತಿಳಿದುಬಂದಿಲ್ಲ. [illegible] ಸಭೆಯವರು ನಿಲ್ಲಿಸಿದ್ದ ೩ ಜನರೂ ಮತ್ತು ರಾಮ ರಾಜ್ಯದ ಪರಿಷತ್ತಿನ ಏಕೈಕ [illegible] ಮೇದವಾರರೂ ಸೋಲನ್ನು ಹೊಂದಿರುತ್ತಾರೆ

ಜ್ವಾಲಾಮುಖಿ ದ್ವೀಪವನ್ನು ತ್ಯಜಿಸಲು ಜನರಿಗೆ ಆಜ್ಞೆ

ಫಿಲಿಪ್ಪೈನಿನ ಕಾಮಿಗ್ವಿನ್ ದ್ವೀಪದ ಜ್ವಾಲಾಮುಖಿಯು ಇನ್ನೂ ಭಯಂಕರವಾಗಿ ಉರಿಯುವ ಲೋಹ ಮತ್ತು [illegible]ಗಳನ್ನು ಉಗುಳುತ್ತಿರುವುದರಿಂದ, ಅಲ್ಲಿ ನೆಲೆಸಿರುವ ೩೫ ಸಾವಿರ ಪ್ರಜೆಗಳು ದ್ವೀಪವನ್ನು ಬಿಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ

ದ. ಆಫ್ರಿಕದಲ್ಲಿ ಭಾರತೀಯರ ವಿವಾಹಕ್ಕೆ ನಿಷೇಧ ?

ದಕ್ಷಿಣ ಆಫ್ರಿಕದ ಯೂನಿಯನ್ನಿನಲ್ಲಿ ಇರುವ ಭಾರತೀಯರು ಹೊರಗಿನ ಸ್ವದೇಶೀಯರೊಡನೆ ವಿವಾಹವಾಗುವುದನ್ನು ಅಲ್ಲಿನ ಸರ್ಕಾರವು ನಿಷೇಧಿಸುವುದೆಂಬ ವರದಿಯ ಸಂಬಂಧವಾಗಿ ಅಲ್ಲಿನ ಭಾರತೀಯ ಸಂಘವು ದಕ್ಷಿಣ ಆಫ್ರಿಕಾ ಪ್ರಧಾನಿ ಡಾ|| ಮಲಾನ್ ರವರಿಗೆ ಪತ್ರ ಬರೆದು ಈ ಸುದ್ದಿಯು ನಿಜವೇ- ಎಂದು ಪ್ರಶ್ನಿಸಿರುತ್ತದೆ. ಇದು ನಿಜವಾದಲ್ಲಿ ಓಟಿನ ಹಕ್ಕಿಲ್ಲದ ಪ್ರಜೆಗಳ ಮೇಲೆ ಇಂತಹ ಕಾನೂನನ್ನು ವಿಧಿಸಿ, ಅವರ ಸುಖಮಯ ಸಂಸಾರ ಜೀವನವನ್ನು ನಾಶ ಮಾಡುವುದನ್ನು ಆ ಸಂಸ್ಥೆಯು ಆಕ್ಷೇಪಿಸಿರುತ್ತದೆ

○ ಅರಸೀಕೆರೆ ತಾಲ್ಲೂಕು ಬಾಣಾವರದ ಹೋಬಳಿಯ ಚಿಟ್ಟನಪುರ ಮತ್ತು ಗರುಡನ ಗಿರಿ ಎಂಬ ಎರಡು ಹಳ್ಳಿಗಳ ಓಟರು ಪಟ್ಟಿಯಲ್ಲಿ ಸೇರಿಲ್ಲವೆಂದೂ, ೨೦೦ ಜನರು ತಮ್ಮ ಓಟಿನ ಹಕ್ಕನ್ನು ಕಳೆದು ಕೊಂಡಿರುವರೆಂದೂ ಗೊತ್ತಾಗಿದೆ

ವರ್ಣವಿಬೇಧ ನೀತಿ ವಿರುದ್ಧ ಮಣಿಲಾಲ್ ಕಾರ್ಯಕ್ರಮ

ದಕ್ಷಿಣ ಆಫ್ರಿಕಾ ಸರ್ಕಾರದ ಜನಾಂಗ ವರ್ಣ ವಿಭೇದದ ನೀತಿಯನ್ನು ಎದುರಿಸಲು ಮಹಾತ್ಮ ಗಾಂಧಿಯವರ ಮಗ ಮಣಿಲಾಲ್ ಗಾಂಧಿಯವರು ಹೊಸ ಕಾರ್ಯಕ್ರಮಗಳನ್ನು ನಡೆಸುವುದಾಗಿ ತಿಳಿಸಿದ್ದಾರೆ. ಆರೆಂಜ್ ಫ್ರೀಸ್ಟೇಟ್ ಪ್ರಾಂತ್ಯಕ್ಕೆ ಭಾರತೀಯರು ಬರಕೂಡದೆಂದು ವಿಧಿಸಲಾಗಿರುವ ಆಜ್ಞೆಯನ್ನು ಬರುವ ವಾರ ಮುರಿದು ಅವರು ಆ ಪ್ರಾಂತ್ಯದ ಮೂಲಕ ಅಲ್ಲಿನ ಆಫ್ರಿಕಾ ಜನರ ಸಮ್ಮೇಳನದಲ್ಲಿ ಭಾಗವಹಿಸುವರು. ಅಲ್ಲದೇ, ರಾಜಧಾನಿ ಪ್ರಿಟೋರಿಯಾದಿಂದ ನೆ ತೆರಳ, ಕೇವಲ ಬಿಳಿಯರನ್ನೇ ಕೂಡಿಸುವ ಬಸ್ಸುಗಳ ಮೇಲೆ ಪತ್ತುವರು

ಕಾಶ್ಮೀರದಲ್ಲಿ ಭೂಕಂಪನದ ಭವಿಷ್ಯ

ಇಟಲಿಯ ಭವಿಷ್ಯಕಾರನೊಬ್ಬನು [illegible] ರುವ ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಮಧ್ಯ ಅಮೆರಿಕಾ ಮತ್ತು ಕಾಶ್ಮೀರಗಳಲ್ಲಿ ಭೂಕಂಪಗಳಾಗುವುವೆಂದು ಭವಿಷ್ಯ ನುಡಿದಿರುತ್ತಾನೆ. ಅವನ ಕೆಲವು ದಿನಗಳ ಹಿಂದೆ ತಮ್ಮ ದೇಶದ ಸ್ಟ್ರಾಂಬೋಲಿ ಪರ್ವತದಿಂದ ಲಾವಾರಸ ಉಕ್ಕಿ ಬರುವುದೆಂದು ತಿಳಿಸಿದ್ದನು. ಅವನ ನಾಮಕನ್ನು ಕೇಳಿ ಅಲ್ಲಿನ ವಿಜ್ಞಾನಿಗಳು ಪರಿಹಾಸ್ಯ ಮಾಡಿದರೆಂದೂ, ಆದರೆ ಅವನು ಹೇಳಿದ ರೀತಿಯಲ್ಲಿ ಪ್ರವಾಹವಾಯಿತೆಂದೂ ಹೇಳಲಾಗಿದೆ

ದರೋಡೆಗಾರರು ಒಬ್ಬನನ್ನು ಜೀವಸಹಿತ ಸುಟ್ಟ ಪ್ರಸಂಗ

ಸಮ ವಸ್ತ್ರಗಳನ್ನು ಧರಿಸಿ ಸುಮಾರು ೧೫ ಮಂದಿ ಬಂದೂಕ ಹೊಂದಿದ ದರೋಡೆಗಾರರು ಪೂರ್ವ ಪಂಜಾಬಿನ ಒಂದು ಹಳ್ಳಿಗೆ ನುಗ್ಗಿ ೬ ಮನೆಗಳನ್ನು ಲೂಟಿ ಮಾಡಿ, ೨೨ ಸಾವಿರ ರೂ ಬೆಲೆಯುಳ್ಳ ನಗದು ಮತ್ತು ಆಭರಣಗಳನ್ನು ದೋಚಿದುದಲ್ಲದೇ, ಒಬ್ಬ ಹಳ್ಳಿಯವನ ಮೇಲೆ ಸೀಮೆಯೆಣ್ಣೆ ಸುರಿದು ಅವನನ್ನು ಸುಟ್ಟರೆಂದು ಗೊತ್ತಾಗಿದೆ. ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದವರನ್ನು ಶಿಕ್ಷೆ ಮಾಡಬೇಕೆಂದಿರುವ ಪೋಲೀಸರು ತಾವೇ, ಇವರು ಹೇಳಿಕೊಂಡು ಮೇಲ್ಮಂಡ ಕೃತ್ಯವನ್ನು ನಡೆಸಿರುತ್ತಾರೆ

ಪ್ರಜಾ ಪ್ರಭುತ್ವ ಪದ್ಧತಿ ತಳಹದಿ ಭದ್ರವಾಗಿರಬೇಕು

ಕೆ. ಸಿ. ರೆಡ್ಡಿಯವರ ಚುನಾವಣಾ ಪ್ರಚಾರ ಭಾಷಣ

ಮೈಸೂರು ೯

ಸುಮಾರು ೧೮ ಕೋಟಿ ಪ್ರಜೆಗಳು ಓಟು ಕೊಡುವ, ಪ್ರಪಂಚದ ಇತಿಹಾಸದಲ್ಲೇ ಪ್ರಥಮ ಮತ್ತು ಅಗಾಧವಾದ ಚುನಾವಣಾ ಪ್ರಯೋಗವು ಸ್ವತಂತ್ರ ಭಾರತದಲ್ಲಿ ಏರ್ಪಾಡಾಗಿ, ಪ್ರಜಾ ಪ್ರಭುತ್ವ ಪದ್ಧತಿಯು ಈ ದೇಶದಲ್ಲಿ ಜಾರಿಗೆ ಬಂದಿರುವುದರಿಂದ ಪ್ರಜಾ ತಂತ್ರದ ಸುಭದ್ರವಾದ ತಳಹದಿಯ ಮೇಲೆ ನಿಲ್ಲಲು ಸಾಧ್ಯ ಮಾಡಿಕೊಡುವ ಕರ್ತವ್ಯ ಮತ್ತು ಜವಾಬ್ದಾರಿಯು ಇಡೀ ಪ್ರಜಾ ಕೋಟಿಯ ಮೇಲೆ ಬಿದ್ದಿರುವುದಾಗಿ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರು ಟೌನ್ ಹಾಲ್ ಮೈದಾನದಲ್ಲಿ ನೆನ್ನೆ ಭಾಷಣ ಮಾಡುತ್ತಾ ತಿಳಿಸಿದರು.

ಸ್ವಾತಂತ್ರ್ಯ ಬರುವ ಪೂರ್ವದ ಪರಿಸ್ಥಿತಿ ಮತ್ತು ಬಂದ ನಂತರ ಉಂಟಾದ ಸನ್ನಿವೇಶಗಳನ್ನು ಶ್ರೀರೆಡ್ಡಿಯವರು ವಿವರಿಸಿ, ಪಾಕಿಸ್ತಾನವು ಬೇರೆ ರಾಜ್ಯವಾಗಿ ಪರಿಣಮಿಸಿದುದರಿಂದ ಉಂಟಾದ ಅನೇಕ ಹೊಸ ಸಮಸ್ಯೆಗಳ ಪರಿಹಾರವು ಅತ್ಯಂತ ಕಷ್ಟ ಸಾಧ್ಯವಾಯಿತೆಂದು ಹೇಳಿದರು. ಲಕ್ಷಾಂತರ ಪ್ರಜೆಗಳು ನಿರಾಶ್ರಿತರಾಗಿ ಭಾರತಕ್ಕೆ ವಲಸೆ ಬಂದುದು, ಆಹಾರದ ಕಷ್ಟಗಳು ಹೆಚ್ಚಿದುದು ಮತ್ತು ಇತರ ಕಾರಣಗಳಿಂದ ಪ್ರಜೆಗಳ ಆಕಾಂಕ್ಷೆಗಳು ಈಡೇರಲು ಸಾಧ್ಯವಾಗಲಿಲ್ಲವೆಂದು ಅವರು ತಿಳಿಸಿದರು. ಪ್ರಜಾ ಪ್ರಭುತ್ವವು ದೇಶದಲ್ಲಿ ಬೆಳೆಯಬೇಕಾದರೆ ಅದಕ್ಕೆ ಸರಿಯಾದ ಮಾರ್ಗ ಮತ್ತು ಶಿಸ್ತು ಅಗತ್ಯವೆಂದೂ, ಯಾವುದೇ ಸರ್ಕಾರವು ಎಂದರೂ ಈ ಎರಡು ಲಕ್ಷಣಗಳು ಅವಶ್ಯಕವೆಂದೂ ಇಲ್ಲದಿದ್ದರೆ ಸರ್ವಾಧಿಕಾರತ್ವಕ್ಕೆ ಎಡೆಯಾಗುವುದೆಂದೂ ಅವರು ಎಚ್ಚರಿಸಿದರು

ಅವರ ಭಾಷಣದ ಮಧ್ಯದಲ್ಲಿ ಪದೇ ಪದೇ ಪ್ರಶ್ನೆಗಳನ್ನು ಕೇಳುವುದು, ಅಡಚಣೆಗಳನ್ನು ಒಡ್ಡುವುದು- ಇವೇ ಮುಂತಾದುವು ನಡೆದುವು. ಆದರೂ ಅವರು ತಮ್ಮ ಭಾಷಣವನ್ನು ಮುಂದುವರಿಸಿ, ದೇಶದ ರಿಸರ್ವ್ ನಿಧಿಯನ್ನು ಕ್ಯಾಪಿಟಲ್ ವರ್ಕ್ಸ್‌ಗಳಿಗಾಗಿ ವಿನಿಯೋಗಿಸಿರುವ ವಿಷಯವನ್ನು ತಿಳಿಸಿ, ದೇಶದ ಆಸ್ತಿಯನ್ನು ಬೆಳೆಸಿರುವುದಾಗಿ ಹೇಳಿದರು. ಭಾರತದ ಎಲ್ಲ ಪ್ರಾಂತಗಳಲ್ಲೂ ಕಾಂಗ್ರೆಸ್ಸಿನ ಸರ್ಕಾರಗಳೇ ಪುನಃ ಅಧಿಕಾರಕ್ಕೆ ಬರುವುವೆಂಬ ಆಸೆಯನ್ನು ವ್ಯಕ್ತಪಡಿಸಿ, ಮೈಸೂರು ಸಂಸ್ಥಾನದಲ್ಲೂ ಸಹ ಅದೇ ಸಂಸ್ಥೆಗೆ ಮಹಾ ಜನರು ಬೆಂಬಲ ನೀಡಿ ದೇಶವು ಪ್ರಗತಿಯ ಮಾರ್ಗದಲ್ಲಿ ನಡೆಯಲು ಸಹಾಯಕರಾಗಬೇಕೆಂದು ಕೋರಿದರು

ಶೀಘ್ರ ಲಿಪಿಗಾರರ ಸಮ್ಮೇಳನ

ದಕ್ಷಿಣ ಭಾರತದ ಶೀಘ್ರ ಲಿಪಿಗಾರರ ಸಮ್ಮೇಳನವು ಈ ತಿಂಗಳು ೩೦ ಮತ್ತು ೩೧ನೇ ತಾ|| ಬೆಂಗಳೂರು ನಗರದಲ್ಲಿ ನಡೆಯುವುದು. ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಶ್ರೀ ಎಸ್ ಡಿ ಗಣೇಶ ರಾವ್‌ರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ

ವಾರ ಭವಿಷ್ಯ

ತಾ|| ೯-೧೨-೫೧ ರಿಂದ ೧೫-೧೨-೫೧ ರವರೆಗೆ

ಮೇಷ — ಆರೋಗ್ಯ ನೆಟ್ಟಗೆ. ಹಿಂಗಳ ಕಾರ್ಯ. ಆಪ್ತರ ಸಹವಾಸ. ಹಣಕಾಸಿನ ಸ್ಥಿತಿ ಉತ್ತಮ. ವ್ಯಾಪಾರಾದಿಗಳಲ್ಲಿ ಹಿತ ಘಟನೆ. ತಾ|| ೧೩, ೧೪, ಮಹತ್ವದ ಸಮಾಗಮನ, ಪತ್ರ ನಾದ

ವೃಷಭ - ಆರೋಗ್ಯ ನೆಟ್ಟಗೆ, ವ್ಯಾಪಾರಾದಿಗಳಲ್ಲಿ ಕೊಂಚ ಗಡಿಬಿಡಿ. ಹಣಕಾಸಿನ ಅಡಚಣೆ ಕಡಿಮೆ. ತಾ|| ೯,೧೦ ಅತಿಥಿಗಳ ಹಾವಳಿ, ಸಂತೋಷ.

ಮಿಥುನ — ಗೊಂದಲದ ಘಟನೆಗಳು ವ್ಯಾಪಾರ, ವ್ಯವಹಾರಗಳಲ್ಲಿ ಪೆಟ್ಟನೆ ತೊಂದರೆ. ಪ್ರವಾಸ ಉತ್ತಮವಿರದು. ತಾ|| ೧೧, ೧೨, ಪ್ರಿಯಜನ ವಿಯೋಗ, ಚತುಷ್ಪಾದಿಗಳಿಂದ ಹಾನಿ

ಕರ್ಕ—ಆರೋಗ್ಯ ಉತ್ತಮ. ಮನಸ್ಸಿನಲ್ಲಿ ಒಳ್ಳೆಯ ವಿಚಾರಗಳು. ನೌಕರಿಯಲ್ಲಿ ಪ್ರಶಂಸೆ. ತಾ|| ೧೧, ೧೨ ಧನ ಲಾಭ ಶುಭ ವಾರ್ತೆ.

ಸಿಂಹ— ಮಹತ್ವದ ಕಾರ್ಯ ಅರ್ಧಕ್ಕೆ ನಿಲ್ಲುವುದು. ಆರೋಗ್ಯ ನೆಟ್ಟಗೆ. ಹಣಕಾಸಿನ ವಿಷಯದಲ್ಲಿ ವಿ ತ್ತರ ವಿರೋಧ. ವ್ಯಾಪಾರಾದಿಗಳಲ್ಲಿ ಅನಾಸಕ್ತಿ, ತಾ|| ೧೨, ೧೩ ಅಲ್ಪ ಪ್ರವಾಸ. ನೂತನ ಪರಿಚಯ.

ಕನ್ಯಾ — ಅಪಮಾನದ ಘಟನೆ ಆರೋಗ್ಯ ನೆಟ್ಟಗಿರದು. ಹಣಕಾಸಿನ ಸ್ಥಿತಿ ತೀವ್ರವಾಗುವುದು. ಕುಟುಂಬದಲ್ಲಿ ಅಪ್ರಿಯ ಘಟನೆ. ವ್ಯಾಪಾರಾದಿಗಳಲ್ಲಿ ನೂ[illegible] ತಾ|| ೯, ೧೦, ತಳಮಳ ಬೇಡ

ತುಲಾ — ಹಣದ ಅಭಾವ ನೌಕರಿಯಲ್ಲಿ ಅಪಮಾನ ಆರೋಗ್ಯ ನೆಟ್ಟಗಿರದು ಪ್ರವಾಸ ಬೇಡ ತಾ|| ೧೧, ೧೨, ತಾಳಿಗೆ ಗಾಯ ಬೆಲೆಯ ವಸ್ತು ಕಳೆದುಕೊಳುವಿ

ವೃಶ್ಚಿಕ — ಅಂತರಿಕ ಶಾಂತಿ ಲಭ್ಯ, ಮಾನ ಸನ್ಮಾನ, ಕೋರ್ಟು ಕಾರ್ಯದಲ್ಲಿ ಜಯ, ಹಣದ ಲಾಭ ತಾ|| ೧೦, ೧೪ ನೂತನ ಪರಿಚಯ ಶುಭ ವಾರ್ತೆ

ಧನು - ಆರೋಗ್ಯ ನೆಟ್ಟಗೆ ಆಪ್ತರ ಸಹವಾಸ. ನೌಕರಿಯಲ್ಲಿ ಪ್ರಶಂಸೆ ಮೇಲ್ದರ್ಜೆ ಪ್ರಾಪ್ತಿ. ವ್ಯಾಪಾರ ವ್ಯವಹಾರಗಳಲ್ಲಿ ಲಾಭ. ಹಣ ಕಾಸಿಗೆ ಉತ್ತಮ ವಾರ, ತಾ|| ೯, ೧೦ ಮಾನ ಸನ್ಮಾನ, ಶುಭ ಕಾರ್ಯ,

ಮಕರ — ದೊಡ್ಡ ಮನುಷ್ಯರ ಪರಿಚಯ. ರಚನಾತ್ಮಕ ಕಾರ್ಯಗಳ ಕಡೆ ಗಮನ ಪ್ರವಾಸಕ್ಕೆ ಉತ್ತಮ. ವ್ಯಾಪಾರಾದಿಗಳ ಸ್ಥಿತಿಯ ಸುಧಾರಣೆ. ತಾ|| ೯, ೧೦ ಕಾಲ ಮತ್ತು ಧನ ವ್ಯಯ.

ಕುಂಭ — ಆರೋಗ್ಯ ನೆಟ್ಟಗಿರದು. ಪ್ರವಾಸದಲ್ಲಿ ಅಪಘಾತ. ವಿಷ ಜಂತುಗಳಿಂದ ತೊಂದರೆ. ವ್ಯಾಪಾರಾದಿಗಳ ಸ್ಥಿತಿ ತಳಮಳ. ತಾ|| ೨೦, ೧೩, ಗೊಂದಲ ಚಿಂತೆ

ಮೀನ — ಹಣದ ಖರ್ಚು ಹೆಚ್ಚಾಗುವುದು. ನೌಕರಿಯಲ್ಲಿ ಮಾನ ಹಾನಿ. ವ್ಯಾಪಾರಾದಿಗಳಲ್ಲಿ ದುರ್ಘಟನೆ, ಅಪಪ್ರಚಾರ. ಪತ್ನಿ ಆರೋಗ್ಯ ನೆಟ್ಟಗಿರದು ತಾ|| ೯, ೧೦, ಮೋಸದಿಂದ ಹಾನಿ. ಆಕಸ್ಮಿಕ ಸಹಾಯ.

ಸೂಯೆಜ್ಜಿಗೆ ಬ್ರಿಟಿಷ್ ಸೈನ್ಯ

ಸೂಯೆಜ್ ಕಾಲುವೆ ಪ್ರದೇಶಕ್ಕೆ ಅತಿ ದೂರದ ಬ್ರಿಟಿಷ್ ಪ್ಯಾರಾಚ್ಯೂಟ್ ಸೈನ್ಯಗಳನ್ನು ಕಳುಹಿಸಲಾಗಿದೆ.

ಸಂಸ್ಥಾನಕ್ಕೆ ಮುಕ್ಕಾಲು ಭಾಗ ಹೊರಗಿನ ಧಾನ್ಯ

ಬೆಂಗಳೂರು,

ಬರುವ ವರ್ಷ ಮೈಸೂರು ಸಂಸ್ಥಾನವು ಮುಕ್ಕಾಲು ಭಾಗ ಆಹಾರವನ್ನು ಹೊರಗಿನಿಂದ ತರಿಸಿಕೊಳ್ಳಬೇಕಾಗುವುದೆಂದು ಅಧಿಕಾರಿ ವಲಯಗಳಿಂದ ತಿಳಿದು ಬಂದಿದೆ. ಸ್ಥಳೀಯವಾಗಿ ೬೦ ಸಾವಿರ ಟನ್ ಅಕ್ಕಿಯೂ, ೧೨ ಸಾವಿರ ಟನ್ ಇತರೇ ಧಾನ್ಯಗಳೂ ವಸೂಲಾಗುವುವೆಂದು ಹಿಂದಿನ ಕಾಲದ ತಿಳಿಸಿನ [illegible] ಟನ್ ಧಾನ್ಯವೂ ಸೇರಿ, ಒಟ್ಟು ೧ [illegible] ಟನ್ ಆಹಾರವು ಸಂಸ್ಥಾನದಲ್ಲಿ [illegible] ಗುವುದೆಂದೂ ಹೇಳಲಾಗಿದೆ. ಸಡಿಕದ ಪ್ರಕಾರ ೪ ಲಕ್ಷ ಟನ್ ಧಾನ್ಯವನ್ನು [illegible] ಗಿಸಬೇಕಾಗಿ ಬಂದು ೩ ಲಕ್ಷ ಟನ್ ಕೊರತಾ ಉಂಟಾಗುವುದೆಂದೂ ಆ ಪೈಕಿ [illegible] ಯಂರಷ್ಟು ಅಕ್ಕಿಯ ಕೊರತೆಯಾಗಿರುವುದೆಂದೂ ಹೇಳಲಾಗಿದೆ

ಗ್ರೌ|| ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರಂ, ಆರ್ಣಿ, ನಾಗಪುರ ಸೀರೆಗಳು ಮತ್ತು ಕಾಶ್ಮೀರದ ಶಾಲುಗಳಿಗೆ

M.V. ಭೋಜಯ್ಯ ಬಿ.ಎ.

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

C. T. C. MYSORE

CLASSES BEGUN

INTER :- Eng and P.C.M.

S. S. L. C. For MARCH 1952

CLASSES TO BEGIN

B. Sc :- Mathematics & Chemistry

INTER :- C. B. Z.

THE CITY TUTORIAL COLLEGE

Near V. V. Market, Mysore

CHAMUNDESWARI TALKIES

From 10-12-51 For 3 Days

Daily 3 Shows

R. K. O.'s

TARZAN'S MAGIC FOUNTAIN

-: Featuring :-

Lex Parker & Brenda Joyce

13—12—51 ರಿಂದ

ನಲ್ಲತಂಬಿ

(ತಮಿಳು)

ಬಿಡಿಸಿ ಉತ್ತಮವಾದ

ಸಾಬೂನು

808

ದಿ ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ಮೈಸೂರು ಶಾಸನ ಸಭಾ ಚುನಾವಣೆ

ಮೈಸೂರು ಸಿಟಿ ದಕ್ಷಿಣ ಕ್ಷೇತ್ರದಿಂದ

ಮಹಾಶಯರೇ ದಯಮಾಡಿ

ಈ ಹೂವಿನ ಗುರ್ತಿಗೇ

ನಿಮ್ಮ ಘನವಾದ ಓಟನ್ನು ಕೊಟ್ಟು ತಮ್ಮ ಸೇವೆ ಸಲ್ಲಿಸಲು ಅವಕಾಶ, ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಮೈಸೂರು ಪತ್ರಿಕಾ ಸಂಪಾದಕ,

B. ನಾರಾಯಣ, ಸ್ವತಂತ್ರ ಉಮೇದುವಾರ

ಓಟು ಕೊಡಲು ಬರುವಾಗ ಮನೆಯ ಜೀಟಿ ನೆನ್ನರ್‌ನಂಬರು ತರಬೇಕು

GOOD NEWS TO BUS & LORRY OWNERS !

Full circle mould manufactured by Italian Engineers under erection supervised by the same engineers – Watch for the opening

MYSORE TYRES,

1474, Sayaji Rao, Road, Mysore.

ಕಂಬಳಿ, ರಗ್ಗು, ಶಾಲು, ಜಮಖಾನಗಳಿಗೆ ಬಾಹುಸಾರ್

ಗದ್ದಿಗೆ ಪಟ್ಟೆ, ಪಂಚೆ ಸಂಚು, ಘಾಪಳೆ, ಕಂಬಳಿ, ರತ್ನ ಕಂಬಳಿಗಳಿಗೆ ಹೆಸರುವಾಸಿಯಾದ ಅಂಗಡಿ — ಬಾಹುಸಾರ್ ಅಂಡ್ ಕೋ, ಬ್ಯಾಂಕ್ ರೋಡ್, ಮೈಸೂರು.

ಪ್ರಮುಖ ಮನೆತನಗಳಿಗೆ ಶುಭಸಮಾರಂಭಗಳಿಗೆ ಬೇಕಾದ ಜವಳಿಗಳು ದೊರೆಯುತ್ತವೆ !

ಸಾವಿರಾರು ಮಾದರಿ ರೇಷ್ಮೆ ಸೀರೆಗಳು, ನೂಲಿನ ಸೀರೆಗಳು, ಕಲಾಪತ್ತು, ಸಂಚಿ, ರೇಷ್ಮೆ ಜಂಗುಟಗಳಿಗೆ

* D. L. ನರಸಿಂಹಯ್ಯ

ಜವಳಿ ಅಂಗಡಿ, ಚಾಂದಿ ಅಂಗಡಿ ಛತ್ರ ಬಳ್ಳ, ಮೈಸೂರು

Edited, Printed and Published by A. R. Nagarajan, at Sadhvi Press D. Subbiah Road, Mysore

ಆಗಮತ್ರಯ ಮಹಾ ಮಂಡಲದ ಸಮ್ಮೇಳನ

ಶ್ರೀಮನ್ಮಹಾರಾಜರವರಿಂದ ಆರಂಭ

ನಂಜನಗೂಡು ೧೦

ಸಂಸ್ಥಾನದ ಆಗಮತ್ರಯ ಮಹಾ ಮಂಡಲದ ನಾಲ್ಕನೇ ಮಹಾ ಸಮ್ಮೇಳನದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ಈ ದಿನ ಬೆಳಗ್ಗೆ ಇಲ್ಲಿನ ... ಯಲ್ಲಿ ನೆರವೇರಿಸಿದರು.

ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಅಧ್ಯಕ್ಷತೆಯನ್ನು ವಹಿಸಿದ್ದರು. ಇದಕ್ಕಾಗಿ ಸಂಸ್ಥಾನದ ಅನೇಕ ಭಾಗಗಳಿಂದ ಮಹಾಮಂಡಲದ ಪ್ರತಿನಿಧಿಗಳೂ ಇತರ ... ಮಹಿಳೆಯರು ಮತ್ತು ಮಹ... ಆಗಮಿಸಿದ್ದರು. ಅರಮನೆಯ ... ಮತ್ತು ನಗರವೆಲ್ಲವೂ ಮ... ವಾಗಿ ಶೃಂಗರಿಸಲ್ಪಟ್ಟಿದ್ದವು. ... ವಿವಿಧ ಸಂಘ, ಸಂಸ್ಥೆ ಮತ್ತು ... ಗಳವರು ದಿವ್ಯವಾದ ಹಸಿರು ... ಸ್ವರಗಳನ್ನು ಹಾಕಿದ್ದರು. ಶ್ರೀಮನ್ಮಹಾರಾಜರು ಮೆರವಣಿಗೆಯಲ್ಲಿ ದಯಮಾಡಿಸಿ ಎಲ್ಲ ಕಡೆಗಳಲ್ಲಿಯೂ ಫಲ ತಾಂಬೂಲವನ್ನು ಸ್ವೀಕರಿಸಿದರು.

ಶ್ರೀಮತಿ ಲೀಲಾವತಿಯವರಿಂದ ದೇವತಾ ಪ್ರಾರ್ಥನೆಯಾದ ನಂತರ ವಿ|| ... ಸೂರ್ಯನಾರಾಯಣ ಶಾಸ್ತ್ರಿಗಳು ... ಬಿ. ಎಸ್. ರಾಮಯ್ಯರ್ ... ವೆ ಸ್ವಾಗತ ಪದ್ಯಪಠಣವಾಯಿತು. ಶ್ರೀಮತಿ ನೀಲಮ್ಮ ಕಡಾಂಬಿ ... ಸುಶ್ರಾವ್ಯವಾಗಿ ವೀಣಾವಾದನವನ್ನು ಮಾಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ... ಆಯುರ್ವೇದ ವಿದ್ವಾನ್ ಬಿ. ... ಪಂಡಿತರು ಪ್ರಭುಗಳನ್ನೂ ಶ್ರೀ ... ಗಳನ್ನೂ, ಪ್ರತಿನಿಧಿಗಳನ್ನೂ ಮ... ರನ್ನೂ ಸ್ವಾಗತಿಸಿ ಭಾಷಣ ಮಾಡಿದರು.

ಮಹಾಮಂಡಲದ ಕಾರ್ಯದರ್ಶಿ ವೇ|| ... ಆಗಮಿಕ ಕೃಷ್ಣದೀಕ್ಷಿತರು ... ಸ್ಥಾಪಿಸಿ ಸಮ್ಮೇಳನವು ನಡೆ... ಕಾರ್ಯಕಲಾಪಗಳನ್ನು ವಿವರಿಸಿದರು.

ಶ್ರೀ ಎ. ಎಸ್. ರಾಮರಾವ್ ಮತ್ತು ... ಮಂಡಲದ ಅಧ್ಯಕ್ಷ ಶ್ರೀ ಮಲ್ಲಿ... ಶಾಸ್ತ್ರಿಗಳವರು ಬಿನ್ನವತ್ತಳೆಯನ್ನು ಓದಿ ಶ್ರೀಮನ್ಮಹಾರಾಜರವರಿಗೂ ... ಶ್ರೀಪಾದಂಗಳವರಿಗೂ ಸಮರ್ಪಿಸಿದರು.

ಸಮ್ಮೇಳನಕ್ಕೆ ಯಶಸ್ಸನ್ನು ಕೋರಿ ... ರತ್ನಾ, ಮಂತ್ರಾಲಯ, ವ್ಯಾಸ... ಭಂಡಾರಿನ ಭುವನೇಶ್ವರಿ ಪೀ... ಬಂದಿದ್ದ ಶುಭ ಸಂದೇಶಗಳ... ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳ... ಓದಿದರು.

ಶ್ರೀಮನ್ಮಹಾರಾಜರವರು ತರುವಾಯ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ಮಾನವನ ಇಹಪರ ಸಾಧನೆಗೆ ದೇವತಾರಾಧನೆಯು ಎಷ್ಟು ಅವಶ್ಯವೆಂಬುದನ್ನು ವಿವರಿಸಿ, ಅದರಲ್ಲಿ ... ಗಳ ಪಾತ್ರವು ಅತ್ಯಂತ ಪವಿತ್ರವಾದುದೆಂದು ತಿಳಿಸಿದರು.

... ಸ್ವಾಮಿಗಳವರು ಸಮ್ಮೇಳನಕ್ಕೆ ಮಂಗಳವನ್ನು ಕೋರಿ ಶ್ರೀಮನ್ಮಹಾರಾಜರವರು ಸರ್ವಸ್ವವನ್ನೂ ಮತ್ತು ಇಡೀ ರಾಜ್ಯಭಾರವನ್ನೂ ಪ್ರಜೆಗಳಿಗೆ ಒಪ್ಪಿಸಿರುವ ಅಂಶವನ್ನು ಪ್ರಶಂಸಿಸಿ, ಅವರು ಇಡೀ ಕರ್ನಾಟಕದ ರಾಜಪ್ರಮುಖರಾಗಲೆಂದೂ, ಅವರಿಗೆ ಶೀಘ್ರವಲ್ಲಿಯೇ ಯುವರಾಜ ಸಂತಾನವು ಉಂಟಾಗಲೆಂದೂ ಹಾರೈಸಿದರು. ಗೂಡಿನಲ್ಲಿರುವ ಪಕ್ಷಿಯು ವಿಶಾಲವಾದ ಅಂತರಿಕ್ಷವನ್ನು ಪ್ರವೇಶಿಸಿ ಯಥೇಚ್ಛವಾಗಿ ವಿಹರಿಸುವಂತೆ ನಂಜನಗೂಡಿನಲ್ಲಿ ಪ್ರಭುಗಳಿಂದ ಉದ್ಘಾಟಿಸಲ್ಪಟ್ಟಿರುವ ಧರ್ಮಪಕ್ಷಿಯ ಪ್ರಭೆಯು ಇಡೀ ಜಗತ್ತನ್ನೇ ವ್ಯಾಪಿಸಲೆಂದೂ ಸಹಾ ಕೋರಿದರು.

ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧೦-೧೨-೫೧ [ಸಂಚಿಕೆ ೧೧೪

ಈಜಿಪ್ಟ್ ಮತ್ತು ಬ್ರಿಟನ್ ಸಂಬಂಧ ತ್ಯಾಗವೇ?!

ಸೂಯೆಜ್‌ನಲ್ಲಿ ಈಜಿಪ್ಷಿನವರ ಮನೆಗಳು ನೆಲಸಮ

ಸೂಯೆಜ್ ಪ್ರದೇಶದಲ್ಲಿ ಒಂದು ಕಡೆ ಅತ್ಯಂತ ಆಯಕಟ್ಟಾದ ರಸ್ತೆಯನ್ನು ನಿರ್ಮಿಸುವ ಸಲುವಾಗಿ ಅಲ್ಲಿನ ಬ್ರಿಟಿಷ್ ಸೈನಿಕರು ಸ್ವಯಂಚಾಲಿತ ಪಡೆಗಳ ರಕ್ಷಣೆ ಪಡೆದು ಈಜಿಪ್ಟಿನ ಹಳ್ಳಿಗಳಲ್ಲಿರುವ ಅನೇಕ ಮನೆಗಳನ್ನು ನೆಲಸಮ ಮಾಡುತ್ತಿರುವರು. ಈ ಕೆಲಸವನ್ನು ಹಳ್ಳಿಗರು ದೂರದಲ್ಲಿ ನಿಂತು ವಿಷಾದದಿಂದ ಪರಿಶೀಲಿಸುತ್ತಿದ್ದರು.

ಶಾಸನ ಸಭಾಸದರಿಗೆ ಪಾರ್ಲಿಮೆಂಟ್ ಭವನದಲ್ಲಿ ರಕ್ಷಣೆ

ಟೆಹರಾನಿನಲ್ಲಿ ಉದ್ಭವಿಸಿರುವ ಗಲಭೆ ಮತ್ತು ದರೋಡೆ ಪರಿಸ್ಥಿತಿಯಿಂದ ಪರ್ಷಿಯದ ಹಲವು ಶಾಸನ ಸಭಾ ಸದಸ್ಯರೂ ಮತ್ತು ಪತ್ರಿಕಾ ಪ್ರತಿನಿಧಿಗಳೂ ತಮ್ಮ ಶಾಸನ ಸಭಾ ಭವನದಲ್ಲೇ ಸೇರಿಕೊಂಡು ರಕ್ಷಣೆ ಪಡೆಯುತ್ತಿರುವರೆಂದು ಹೇಳಲಾಗಿದೆ.

ಸಿಂಧ್‌ನಲ್ಲಿ ಗೌರ್ನರ್ ಆಡಳಿತಕ್ಕೆ ಶಿಫಾರಸು

ಸಿಂಧ್ ಪ್ರಾಂತದಲ್ಲಿ ಗೌರ್ನರ್ ಆಡಳಿತವನ್ನು ಜಾರಿಗೆ ತರಲು ಪಾಕಿಸ್ತಾನಕ್ಕೆ ಆ ಪ್ರಾಂತದ ಗೌರ್ನರರು ಶಿಫಾರಸು ಮಾಡಿರುತ್ತಾರೆ. ಅಲ್ಲಿನ ಗೃಹ ಮಂತ್ರಿ ಖಾಜಿ ಫಜಲುಲ್ಲಾರ ಮೇಲೂ ಆಪಾದನೆಗಳನ್ನು ಮಾಡಿರುವ ಮತ್ತೊಂದು ಅರ್ಜಿಯು ಗೌರ್ನರರಿಗೆ ಕಳುಹಲ್ಪಟ್ಟಿರುವುದು.

ಈಜಿಪ್ಟಿನಲ್ಲಿ ಬ್ರಿಟಿಷ್ ಅಧಿಕಾರಿಗಳ ವಜಾ

ಈಜಿಪ್ಟಿನಲ್ಲಿ ಕೆಲಸದಲ್ಲಿರುವ ಎಲ್ಲ ಬ್ರಿಟಿಷ್ ಅಧಿಕಾರಿಗಳು ಮತ್ತು ಪ್ರವೀಣರನ್ನು ವಜಾ ಮಾಡಲು ಅಲ್ಲಿನ ಮಂತ್ರಿಮಂಡಲವು ನಿರ್ಧಾರವನ್ನು ಕೈಗೊಂಡಿದೆ. ಕೈರೋವಿನಲ್ಲಿ ಅಧಿಕ ಸಂಖ್ಯೆಯ ಬ್ರಿಟಿಷ್ ಸದಸ್ಯರಿಂದ ಕೂಡಿದ ಒಂದು ಕ್ರೀಡಾ ಸಂಸ್ಥೆಯನ್ನೂ ವಶಪಡಿಸಿಕೊಳ್ಳಲು ನಿರ್ಧರಿಸಲಾಗಿದೆ. ಇದರಿಂದ ಅಲ್ಲಿ ಸುಮಾರು ೧೫೦ ಮಂದಿ ಬ್ರಿಟನರು ಕೆಲಸ ಕಳೆದುಕೊಳ್ಳುವರು. ಸೂಯೆಜ್ ಪ್ರದೇಶದ ಒಂದು ಹಳ್ಳಿಯ ಹಲವು ಮನೆಗಳನ್ನು ಬ್ರಿಟಿಷ್ ಸೈನಿಕರು ನಾಶಪಡಿಸಿದ ಸಂಬಂಧವಾಗಿ ಈಜಿಪ್ಟ್ ಸರ್ಕಾರದವರು ತೀವ್ರ ಪ್ರತಿಕ್ರಿಯೆ ಕೈಗೊಳ್ಳಲು ಆಲೋಚಿಸಿ ಬ್ರಿಟನ್ನಿನೊಡನೆ ರಾಜತಾಂತ್ರಿಕ ಸಂಬಂಧವನ್ನೂ ಬಿಟ್ಟು ಬಿಡಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

೪೫ ಸಾವಿರ ಬೊಂಬಾಯಿ ಉಪಾಧ್ಯಾಯರ ಮುಷ್ಕರ

ಬೊಂಬಾಯಿ ಸಂಸ್ಥಾನದ ೪೫ ಸಾವಿರ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳು ಮುಷ್ಕರ ಹೂಡುವ ಬಗೆ ಅವರುಗಳ ಬೇಡಿಕೆಯನ್ನು ಪರಿಶೀಲನೆಯ ನ್ಯಾಯಾಲಯಕ್ಕೆ ಒಪ್ಪಿಸದಿದ್ದರೆ, ಒಂದು ವಾರದಲ್ಲಿ ಮುಷ್ಕರ ಹೂಡುವುದಾಗಿ ಸಂಘವು ಸರ್ಕಾರಕ್ಕೆ ಈ ತಿಂಗಳು ೧೬ನೇ ತಾ|| ನೋಟೀಸನ್ನು ಕೊಡುವುದೆಂದು ಹೇಳಲಾಗಿದೆ.

ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಿತಿ ಕಛೇರಿಗೆ ಫೋನ್

ಕಾಂಗ್ರೆಸ್ ಚುನಾವಣಾ ಪ್ರಚಾರದ ಸಂಬಂಧವಾಗಿ ನಗರ ಕಾಂಗ್ರೆಸ್ ಕಛೇರಿಯಲ್ಲಿ ತೆರೆಯಲಾಗಿರುವ ಪ್ರಚಾರ ಸಮಿತಿ ಕಛೇರಿಗೆ ಟೆಲಿಫೋನನ್ನು ಕೊಡಲಾಗಿದೆ. ಅದರ ನಂಬರು ೩೧೧

ಸಂಸ್ಥಾನಕ್ಕೆ ೮ ಸಾವಿರ ಟನ್ ಧಾನ್ಯ

ಇದೇ ನೊಟ್ಟ ಮೊದಲನೆಯದಾಗಿ ಈ ವರ್ಷ ಭಾರತ ಸರ್ಕಾರದಿಂದ ಮೈಸೂರು ಸಂಸ್ಥಾನಕ್ಕೆ ಏಳು ಸಾವಿರ ಟನ್ ಗೋಧಿ ಮತ್ತು ಒಂದು ಸಾವಿರ ಟನ್ ಅಕ್ಕಿಯು ಈ ತಿಂಗಳಲ್ಲಿ ಮಂಜೂರಾಗಿರುತ್ತವೆ.

ನೆಹರೂರವರ ಭೇಟಿ ಇಲ್ಲವೇ!

ಸ್ವಂ. ಸು. ಫೋ.] ಬೆಂಗಳೂರು ೧೦

ಪಂಡಿತ ನೆಹರೂರವರು ಚುನಾವಣಾ ಪ್ರಚಾರದ ಸಂಬಂಧದಲ್ಲಿ ಸಂಸ್ಥಾನಕ್ಕೆ ಭೇಟಿ ಕೊಡದೆ ಬರುವ ವಾರ ಒಂದು ಸಂದೇಶವನ್ನು ಮಾತ್ರ ಕಳುಹಿಸಬಹುದೆಂದು ತಿಳಿದುಬಂದಿದೆ.

ರಾಜೂರವರ ರಿವಿಜನ್ ಅರ್ಜಿ

ಸುಳ್ಳು ಪ್ರಮಾಣ ಪತ್ರಿಕೆಯನ್ನು ಕೊಟ್ಟ ಆಪಾದನೆಗಾಗಿ ಎರಡು ವರ್ಷದ ಕಠಿಣ ಶಿಕ್ಷೆಗೆ ಗುರಿಯಾಗಿರುವ ಶ್ರೀ ಎಲ್. ಎಸ್. ರಾಜುರವರ ಪರವಾಗಿ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿರುವ ರಿವಿಜನ್ ಅರ್ಜಿಯ ಬಗ್ಗೆ ಅಡ್ವೊಕೇಟ್ ಶ್ರೀ ಎಚ್. ವಿ. ಕೃಷ್ಣರಾಯರು ಈ ದಿನ ವಾದವನ್ನು ಮಾಡಿದನಂತರ ಅರ್ಜಿಯನ್ನು ಅಂಗೀಕರಿಸಿ ಅಡ್ವೊಕೇಟ್ ಜನರಲ್ಲರಿಗೆ ನೋಟೀಸು ಕೊಡುವಂತೆ ಅಪ್ಪಣೆಯಾಗಿದೆ.

ಕಾಂಗ್ರೆಸ್ಸಿಗರ ಮೇಲೆ ಶಿಸ್ತಿನ ಕ್ರಮ

ಕಾಂಗ್ರೆಸ್ಸನ್ನು ಬಿಟ್ಟು ಅಥವಾ ಬಿಡದೆ ಸ್ವತಂತ್ರವಾಗಿ ಚುನಾವಣೆಯಲ್ಲಿ ಉಮೇದುವಾರರಾಗಿರುವವರ ಮೇಲೆ ಬೇಗನೆ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿ ಮುಂದೆ ಬಂದಿರುವ ಸೂಚನೆಯ ಪ್ರಕಾರ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ೩೩ ಜನರ ಮೇಲೆ ಕ್ರಮವನ್ನು ಕೈಗೊಳ್ಳಲು ಆಲೋಚಿಸುತ್ತಿರುವರೆಂದು ತಿಳಿದುಬಂದಿದೆ.

ಭಾರತದ ಆಹಾರ ಪರಿಸ್ಥಿತಿ ಹದಗೆಡುವ ಸಂಭವ

ಪ್ಯಾರಿಸ್ಸಿನಲ್ಲಿ ಸಮಾವೇಶಗೊಂಡಿದ್ದ ವಿಶ್ವ ಆಹಾರ ಮತ್ತು ವ್ಯವಸಾಯ ಸಮ್ಮೇಳನಕ್ಕೆ ತೆರಳಿದ್ದ ಭಾರತದ ಆಹಾರ ಸಚಿವ ಶ್ರೀ ಕೆ. ಎಂ. ಮುನ್ಷಿಯವರು ಬೊಂಬಾಯಿನ ಪತ್ರಿಕಾ ಪ್ರತಿನಿಧಿಗಳನ್ನು ಭೇಟಿ ಮಾಡಿ ಇಟಲಿಯಲ್ಲಿ ಅಕ್ಕಿಯ ರಫ್ತಿಗೆ ಪ್ರತಿಬಂಧಕ ಹಾಕಿರುವುದರಿಂದ ಅಲ್ಲಿಂದ ಭಾರತಕ್ಕೆ ಅಕ್ಕಿಯು ಸರಬರಾಜಾಗುವ ಸಂಭವವಿಲ್ಲವೆಂದು ಹೇಳಿದರು. ಆದರೆ ಸೌಹಾರ್ದ ಸೂಚಕವಾಗಿ ಭಾರತಕ್ಕೆ ಕೇವಲ ಸ್ವಲ್ಪ ಅಕ್ಕಿಯನ್ನು ಹೆಚ್ಚಿನ ಬೆಲೆಯಲ್ಲಿ ಕೊಡುವುದಾಗಿ ಇಟಲಿಯು ತಿಳಿಸಿರುವುದೆಂದೂ, ಅದನ್ನು ಕೊಳ್ಳುವ ವಿಷಯವನ್ನು ಭಾರತ ಸರ್ಕಾರವು ಪರಿಶೀಲಿಸಲಿದೆಯೆಂದೂ ಅವರು ಹೇಳಿದರು. ವಿಶ್ವದ ಆಹಾರ ಪರಿಸ್ಥಿತಿಯು ಬಹಳ ತೀವ್ರಗೊಂಡು, ಆದರ ಬೆಲೆಯೂ ಏರುವ ಸಂಭವವಿರುವುದರಿಂದ ಇನ್ನು ಮುಂದೆ ಭಾರತಕ್ಕೆ ಆಹಾರವನ್ನು ಆಮದು ಮಾಡುವುದು ದುಸ್ತರವಾಗುವುದೆಂದೂ, ಇಲ್ಲಿನ ಉತ್ಪನ್ನವನ್ನು ಹೆಚ್ಚಿಸದಿದ್ದರೆ ತೀವ್ರ ಬಿಕ್ಕಟ್ಟು ಸಂಭವಿಸಬಹುದೆಂದೂ ಅವರು ಎಚ್ಚರಿಸಿದರು.

ಶ್ರೀ ಪೇಜಾವರ ಮಠಾಧೀಶರ ಭಾಷಣ

ಉಡುಪಿಯ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ನಾಳೆ ಸಂಜೆ ೬ ಗಂಟೆಗೆ ಸಂಸ್ಕೃತ ಪಾಠಶಾಲೆಯಲ್ಲಿ ಆಸ್ತಿಕ ದರ್ಶನ ಎಂಬ ವಿಚಾರವಾಗಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

ಅಂತರ ಕರ್ನಾಟಕ ಸಂಘ ಗಳ ಚರ್ಚಾ ಸ್ಪರ್ಧೆ

ನಂಜನಗೂಡು [illegible]

ನಂಜನಗೂಡಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಅಖಿಲ ಕರ್ನಾಟಕ ಅಂತರ ಕರ್ನಾಟಕ ಸಂಘಗಳ [illegible] ಸ್ಪರ್ಧೆಯು ಈ ತಿಂಗಳು ೧೬ ನೇ [illegible] ಘಂಟೆಗೆ ಜಿಲ್ಲಾ [illegible] ಶಾಲೆಯಲ್ಲಿ ನಡೆಯುವುದು ಈ ಸ್ಪರ್ಧೆಗೆ ಪರ್ಯಾಯ ಪಾರಿತೋಷಿಕವಾಗಿ ಸುಂದರವಾದ ಒಂದು ಬೆಳ್ಳಿಯ ಗುರಾಣಿಯನ್ನು ಸಂಸ್ಥೆ ಬಹುಮಾನ ರೂಪದಲ್ಲಿ [illegible] ಕೊಟ್ಟಿರುತ್ತಾರೆ ಚರ್ಚೆಯು ಕನ್ನಡ ಭಾಷೆಯಲ್ಲಿ ನಡೆಯುವುದು ಉತ್ತಮ ಸ್ಪರ್ಧಿಗಳನ್ನು ಪ್ರತಿನಿಧಿಸುವ ಸಂಘಕ್ಕೆ ಸಂಸ್ಥೆ ಬಹುಮಾನವನ್ನು ಅತ್ಯುತ್ತಮವಾಗಿ ಮಾತನಾಡುವವರಿಗೆ ಪ್ರತ್ಯೇಕವಾದ ಬಹುಮಾನಗಳನ್ನೂ ಕೊಡಲಾಗುವುದು ಕನ್ನಡ ಭಾಷಾ ಪ್ರೇಮವನ್ನು [illegible] ಸುವುದು ಮತ್ತು [illegible] ಪ್ರೋತ್ಸಾಹಿಸುವ [illegible] ಈ ಚರ್ಚಾ ಕೂಟದ [illegible] ಸಂಸ್ಥೆಯ ಕಾರ್ಯದರ್ಶಿ [illegible] ಉತ್ತಾರೆ

ಕಾಡು ಹಂದಿ ಮಾಂಸ ತಿಂದ ೨೫ ಜನರ ಮರಣ

ಟಿಹರಿ ಗರ್ವಾಲ್ ಜಿಲ್ಲೆಯ [illegible] ಹಳ್ಳಿಯ ಪಕ್ಕದ [illegible] ಳ ಬಳಿಗೆ ಶಿಕಾರಿಗೆ ಹೋದ ಜನರು ಕಾಡು ಹಂದಿಗಳನ್ನು ಕೊಂದು ಅವುಗಳ ಮಾಂಸವನ್ನು ತಿಂದನಂತರ ಅವರ ಪೈಕಿ ೨೫ ಜನರು ಕೂಡಲೆ ಮಡಿದರೆಂದೂ, ೩೦ ಜನರ ಸ್ಥಿತಿ ಚಿಂತಾಜನಕವಾಗಿದೆಯೆಂದೂ ತಿಳಿದು ಬಂದಿದೆ

ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸತ್ಕಾರ

ನೆನ್ನೆ ಸಂಜೆ [illegible] ಬೋರ್ಡಿಂಗ್ ಶಾಲೆಯ ಸಂಘದವರು ತಮ್ಮ ಶಾಲೆಯಿಂದ ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಮೈಸೂರು ವಿದ್ಯಾ [illegible] ಕಾರಿಗಳಾದ ಶ್ರೀ ಕೆ ಗುರುದತ್ತರವರು ಅಧ್ಯಾಸನವನ್ನು ವಹಿಸಿದ್ದರು ಪ್ರಾರ್ಥನೆಯಾದ ನಂತರ ಸಂಘದ ಅಧ್ಯಕ್ಷರು ಎಲ್ಲರನ್ನೂ ಸ್ವಾಗತಿಸಿ ಭಾಷಣ ಮಾಡಿದರು ಶ್ರೀ ಗುರುದತ್ತರವರು ಮಾತನಾಡಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚಾಗಿ ಸಾಂಸ್ಕೃತಿಕ [illegible] ಪಡೆಯಬೇಕೆಂದೂ, ಶ್ರದ್ಧೆ ಮನೋ [illegible] ದ ಧರ್ಮವನ್ನು ಕಾಪಾಡಿಕೊಂಡು ಜೀವನದಲ್ಲಿ ಮುಂದುವರಿಯಬೇಕೆಂದೂ ನುಡಿದರು ಶ್ರೀ ಲಿಂಗರಾಜೇ ಅರಸ್‌ರವರು ವಂದನಾರ್ಪಣೆಯನ್ನು ಮಾಡಿದರು ೧೦ ಜನ ವಿದ್ಯಾರ್ಥಿಗಳು ಶಾಲೆಯಿಂದ ಪದವೀಧರರಾಗಿರುತ್ತಾರೆ

ಕಾಂಗ್ರೆಸ್ಸಿಗೇ ಏಕೆ ಓಟು ಕೊಡಬೇಕು ?



ಚುನಾವಣೆಯ [illegible] ಸಂಘಗಳ ಕುತ್ತಿಗೆ [illegible] ಪಕ್ಷಪಾತ [illegible] ಆವಶ್ಯಕತೆ ಇಲ್ಲ [illegible]

[illegible] ಗಳಲ್ಲಿ [illegible] ಬೇಕಾಗಿದ ತನ್ನ ವಿಶಾಲವಾದ [illegible] ಸ್ಪಷ್ಟವಾದ [illegible] ಐಕ್ಯತೆಯನ್ನು [illegible] ಜಯ [illegible] ತ್ತು [illegible]

ಉಪಾಧ್ಯಾಯರ ವೃತ್ತಿಯ ಪುರೋಭಿವೃದ್ಧಿ

ನಗರದಲ್ಲಿ ಸಮ್ಮೇಳನ

ಮೈಸೂರು ೧೦

[illegible] ಉಪಾಧ್ಯಾಯರ ಹಿತ ಸಾಧನೆಯ [illegible] ಸಮಾಲೋಚನೆ ನಡೆಸಲು ಸಮ್ಮೇಳನವೊಂದು ನೆನ್ನೆ ನಗರದ ಟೀಚರ್ಸ್ ಕಾಲೇಜಿನಲ್ಲಿ ನಡೆಯಿತು ಸ್ಥಳೀಯ ಪರಿಸ್ಥಿತಿಗಳ [illegible] ೩೦ ಜನ ಪುರುಷ ಮತ್ತು ಮಹಿಳಾ ಉಪಾಧ್ಯಾಯರುಗಳು ಪ್ರತಿನಿಧಿಗಳಾಗಿ [illegible] ದ್ದರು

[illegible] ಶ್ರೀ [illegible] ಉಪಾಧ್ಯಾಯರುಗಳು [illegible] ಕೊರತೆಗಳನ್ನು [illegible] ವನ್ನು [illegible] ಮಾಗಲೆಂ [illegible]

[illegible] ಸ್ವಾಮಿ [illegible] ಅವರು [illegible]

GOOD NEWS TO BUS & LORRY OWNERS !

Full circle mould [illegible] red by Italian Engineers under erection supervised by the same engineers Watch for the opening

MYSORE TYRES,

1474 Sayaji Rao Road Mysore

ಚಾಮರಾಜನಗರ ಟವನ್ ಮುನಿಸಿಪಾಲಿಟಿ

ಸೈಟುಗಳ ಹರಾಜು ಇಸ್ತಿಹಾರು

Notification No O C 37 51 3 Dated 19 11 1951

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ

ಚಾಮರಾಜನಗರ ಟೌನಿನ್ನ ಈ ಕೆಳಗೆ ಕಂಡ ಸ್ಥಳಗಳಲ್ಲಿ (60 x 40') ಅಳತೆಯುಳ್ಳ ಸೈಟುಗಳನ್ನು ಮುನಿಸಿಪಲ್ ಪ್ರೆಸಿಡೆಂಟರು ಹರಾಜು ಷರತ್ತುಗಳನ್ನು ಅನುಸರಿಸಿ 28 12-1951 ನೇ ತಾರೀಖು ಆಗಾಯ್ತು ಹರಾಜು ಮಾಡಿಸುತ್ತಾರಾಗಿ ಛಡ ದರವಾನ್ನು ಮೂಲಕ ಸೈಟುಗಳನ್ನು ಪಡೆಯ ಬಯಸುದು ಸೈಟ ಪ್ಲಾನ ಮತ್ತು ಇಸ್ತಿಹಾರ್ ಷರತ್ತುಗಳನ್ನು ಮುನಿಸಿಪಲ್ ಆಫೀಸಿನಲ್ಲಿ ರಜಾ ದಿವಸಗಳು ವಿನಹ ಬೇರೆ ದಿನಗಳಲ್ಲಿ ಆಫೀಸ್ ನಡೆಯುವ ಕಾಲದಲ್ಲಿ ನೋಡಬಹುದು

ರಾವ ಸಮುದ್ರ ರಸ್ತೆಯಲ್ಲಿ (72+0+?)	81
, ಕ್ಲಬ್ ಹಿಂಭಾಗ	11
ಗುಂಡ್ಲುಪೇಟೆ ರಸ್ತೆ ಬಾಜು	6
ಹಾಸನೂರು ಘಾಟಿ ರಸ್ತೆ ಬಾಜೂ	15
ಕರಿನಂಜನಪುರದ ರಸ್ತೆ ಬಾಜೂ (V K ಶಾಲೋಸ್)	8

ಶ್ರೀ ವೆಂಕಟಸುಬ್ಬ ಶೆಟ್ಟಿ,

ಪ್ರೆಸಿಡೆಂಟ್

ಭಾರತಕ್ಕೆ ೨೫ ಮೈಲಿ ದೂರದಲ್ಲಿ ಚೀಣಾ ಸೈನ್ಯ

ಟಿಬೆಟ್ಟಿನಲ್ಲಿರುವ ಚೀಣಾ ಸೈನ್ಯಗಳು ಭಾರತದ ೨೫ ಮೈಲಿ ಸಮೀಪದ ಒಂದು ಕ್ಷೇತ್ರಕ್ಕೆ ಬಂದಿರುವುದಾಗಿ ಗೊತ್ತಾಗಿದೆ

ಸಿಟಿ ಟ್ಯುಟೋರಿಯಲ್ ಕಾಲೇಜು

ರಾಜಧಾನಿಯ ಸಿಟಿ ಟ್ಯುಟೋರಿಯಲ್ ಕಾಲೇಜು ಸಂಸ್ಥೆಯವರು ಎ ಎ ಮತ್ತು ಬಿ ಎಸ್‌ಸಿ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗಾಗಿ ಇಂಗ್ಲಿಷ್ ಮತ್ತು ಸೈನ್ಸ್ ಭಾಗಕ್ಕೆ ಪಾಠಗಳನ್ನೇರ್ಪಡಿಸಿದ್ದಾರೆ ಈ ತರಗತಿಗಳು ಮುಂದಿನ ವಾರದಲ್ಲಿಯೇ ಪ್ರಾರಂಭವಾಗುವುವು ಶುಲ್ಕವು ಬಹು ಕಡಿಮೆಯಾಗಿರುವುದರಿಂದ ಈ ತರಗತಿಗಳ ಪ್ರಯೋಜನವನ್ನು ಹೆಚ್ಚು ಮಂದಿ ಪಡೆಯುವರೆಂದು ಆಶಿಸಲಾಗಿದೆ

[illegible] ದ ಶ್ರೀ ಎಂ ಪಿ ಎಲ್ ಶಾಸ್ತ್ರಿಯವರು ಪ್ರತಿನಿಧಿಗಳನ್ನುದ್ದೇಶಿಸಿ ಭಾಷಣ ಮಾಡಿ ಉಪಾಧ್ಯಾಯರುಗಳಿಗೆ ಒರಕ್ಕುವ ವೇತನವು ಎಷ್ಟೇ ಕಡಿಮೆಯಾಗಿದ್ದರೂ ಅವರು ರಾಷ್ಟ್ರದ ಆಧಾರ ಸ್ತಂಭವಾದ ಮಕ್ಕಳ ಜ್ಞಾನ ಜ್ಯೋತಿಯನ್ನು ಬೆಳಗಿ, ಅವುಗಳು ಪ್ರಕಾಶಿಸುವುದನ್ನು ಕಂಡು ಸಹಜವಾದ ಆನಂದವನ್ನು ಹೊಂದುವವರೆಂದು ತಿಳಿಸಿದರು ಯಾವ ಸರ್ಕಾರವೂ ಈ ವೃತ್ತಿಯಲ್ಲಿರುವವರ ಹಿತವನ್ನು ನಿರ್ಲಕ್ಷಿಸಕೂಡದೆಂದ ಅವರು ಹೇಳಿದರು.

[illegible] ನದ ಅಧ್ಯಕ್ಷತೆ ವಹಿಸಿದ್ದ ಲಿಂಗಾಯತ ಕಾಲೇಜು ಪ್ರೊಫೆಸರ್ ಶ್ರೀ ಡಿ ಎಲ್ ನರಸಿಂಹಾಚಾರ್‌ರವರು ತಮ್ಮ ಭಾಷಣದಲ್ಲಿ ಉಪಾಧ್ಯಾಯರುಗಳ ಆರ್ಥಿಕ ಕುಂದುಕೊರತೆಗಳನ್ನು ವಿವರಿಸಿದರು, ಅವುಗಳ ಪರಿಹಾರಕ್ಕೆ ಕೇವಲ ಸರ್ಕಾರವನ್ನೇ ನಂಬಿಕೊಂಡು ಕುಳಿತಿರದೆ ಅವರು ನ್ಯಾಯಮಾರ್ಗಗಳಲ್ಲಿ [illegible] ಲಂಬನೆಯ ಮಾರ್ಗಗಳನ್ನು ಅನುಸರಿಸಬೇಕೆಂದು ಸೂಚಿಸಿದರು

ರಾಜಕಮಲ್ ಮೈಸೂರ್
7-12-51 ರಿಂದ ಪಿನೇ ವಾರ
ಮಂಗಳ
ಜೆಮಿನಿಯವರ ತೆಲುಗು ಚಿತ್ರ

CHAMUNDESWARI TALKIES
From 10-12 51 For 3 Days
Daily 3 Shows
R K O
TARZAN'S MAGIC FOUNTAIN
Featuring
Lex Barker & Brenda Joyce
13—12—51 ರಿಂದ
ನಲ್ಲ ತಂಬಿ
(ತಮಿಳು)

ಮದುವೆ ಮುಹೂರ್ತಗಳಿಗೆ ಮಂಗಳಕರವಾದ ಪದಾರ್ಥಗಳು ದೊರೆಯುತ್ತವೆ
ಸೀರೆಗಳು [illegible] ರೇಷ್ಮೆ ಸೀರೆಗಳು [illegible] ಟೋಪಿಗಳು [illegible]
ರೇಷ್ಮೆ ಮುಗುಟಗಳಿಗೆ
* D. L. ನರಸಿಂಹಯ್ಯ
[illegible] ಅಂಗಡಿ [illegible] ಮೈಸೂರು

Edited, Printed and Published by A R Nagarajan, at Sadhvi Press D Subbiah Road, Mysore

ಫೋನ್ ನಂ 792 ॥ ಸಂಚೀ ಮಾಸಿಕಂ ॥ ಇಂದಿನ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೧೧-೧೨-೫೧ [ಸಂಚಿಕೆ ೧೦೩

ಚರ್ಚಿಲ್ ಮತ್ತು ಸ್ಟಾಲಿನ್ ರವರ ಭೇಟಿ ಸಂಭವ

ಪುರಸಭಾಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಉಮೇದುವಾರಿಕೆ

ಮೈಸೂರು ೧೧

ರಾಜಧಾನಿಯ ಪೌರ ಸಭೆಯ ಮುಂದಿನ ಸಾಲಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಪೌರ ಸಭಾ ಕಾಂಗ್ರೆಸ್ ಪಕ್ಷದ ಪರವಾಗಿ ಶ್ರೀ ಎ. ಕೃಷ್ಣಮೂರ್ತಿ ರಾವ್ ಮತ್ತು ಶ್ರೀ ಎಂ ರಾಜಯ್ಯನವರುಗಳನ್ನು ನಿಲ್ಲಿಸಲಾಗಿದೆ ಅವರು ಈ ದಿನ ತಮ್ಮ ನಾಮಪತ್ರಗಳನ್ನು ಅಧಿಕಾರಿಗಳಿಗೆ ಸಲ್ಲಿಸಿದರು

ಸಾಧ್ವಿ ಪತ್ರಿಕಾಲಯಕ್ಕೆ ಉಡುಪಿ ಮಠಾಧೀಶರ ಭೇಟಿ

ನಾಳೆ ಬೆಳಗ್ಗೆ ೮ ಘಂಟೆಗೆ ಉಡುಪಿ ಶ್ರೀ ಪೇಜಾವರ ಮಠಾಧೀಶರು ೩ ನೆ ಮುಖ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯಕ್ಕೆ ಭೇಟಿ ದಯಪಾಲಿಸುವರು ಭಕ್ತ ಮಹಾಶಯರೆಲ್ಲರಿಗೂ ಸ್ವಾಗತವಿದೆ

ಕಾಂಗ್ರೆಸ್ಸಿಗೆ ಬೆಂಬಲ ನೀಡಲು ಟಿ ಸುಬ್ರಹ್ಮಣ್ಯರವರ ಮನವಿ

ನೆನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಮತ್ತು ಚುನಾವಣಾ ಸಮಿತಿಗಳ ಸದಸ್ಯರಾದ ಶ್ರೀ ಟಿ ಸುಬ್ರಹ್ಮಣ್ಯರವರು ಭಾಷಣ ಮಾಡಿ ಚುನಾವಣೆಗಳಲ್ಲಿ ಮಹಾ ಜನರು ಕಾಂಗ್ರೆಸ್ಸಿಗೆ ಬಲವೀಯಬೇಕೆಂದು ತಿಳಿಸಿದರು. ಕೆಲವರ ದೋಷಗಳಿಗಾಗಿ ಇಡೀ ಸಂಸ್ಥೆಯನ್ನು ತೆಗಳುವುದು ಸರಿಯಲ್ಲವೆಂದು ಅವರು ಹೇಳಿ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ಸು ಸಂಸ್ಥಾನದಲ್ಲಿ ಮಾಡಿರುವ ಕಾರ್ಯಗಳನ್ನು ವಿವರಿಸಿದರು ಗೋಪಾಲರಾವ್ ವಿಚಾರಣಾ ಸಮಿತಿಯವರು ನಡೆಸಿದ ಕಾರ್ಯಗಳಿಂದ ಸುಮಾರು ೧॥ ಕೋಟಿ ರೂ ಗಳ ಪೈಕಿ ೪೦ ಲಕ್ಷ ವಸೂಲಾಗಿ ಬಡಬಗ್ಗರಿಗೆ ಹಂಚಿದ ವಿಷಯವನ್ನು ತಿಳಿಸಿದರು

ಹನುಮಜ್ಜಯಂತಿ ಉತ್ಸವ

ರಾಜಧಾನಿಯ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಆ॥ ವಿದ್ವಾಂಸರಾದ ಗಾನ ವಿಶಾರದ ಬಿ. ದೇವೇಂದ್ರಪ್ಪನವರ ಗೃಹದಲ್ಲಿರುವ ಶ್ರೀ ಮಾರುತಿ ಮಂದಿರದಲ್ಲಿ ನೆನ್ನೆಯಿಂದ ಈ ತಿಂಗಳು ೧೮ನೇ ತಾ॥ ನ ವರೆಗೂ ಶ್ರೀ ಹನುಮಜ್ಜಯಂತಿ ಉತ್ಸವವನ್ನು ಏರ್ಪಡಿಸಲಾಗಿದೆ ನಿತ್ಯವೂ ಬೆಳಗ್ಗೆ ಅಭಿಷೇಕ ಮತ್ತು ಪಾರಾಯಣಗಳೂ, ಸಂಜೆ ಸಂಗೀತ ಗೋಷ್ಠಿಗಳೂ ನಡೆಯುವುವು ೧೮ನೇ ತಾ॥ ಬೆಳಗ್ಗೆ ಮಾರುತಿಯ ಪಟ್ಟಾಭಿಷೇಕವೂ, ಸಂಜೆ ೬ ಘಂಟೆಗೆ ನಾಗಸ್ವರದಿಂದ ಕೂಡಿದ ಮೆರವಣಿಗೆಯೂ ಏರ್ಪಾಡಾಗಿವೆ ಸಕಲರೂ ಈ ಉತ್ಸವಗಳಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ

ಬೆಂಗಳೂರಿನಲ್ಲಿ ನೆಹರೂ ಒಂದು ಘಂಟೆ ಇರುವರು

ಈ ತಿಂಗಳು ೨೬ನೇ ತಾ॥ ಬೆಳಗ್ಗೆ ೮ ಘಂಟೆಗೆ ಪಂಡಿತ ನೆಹರೂರವರು ಬೆಂಗಳೂರಿಗೆ ಆಗಮಿಸಿ ೧ ಘಂಟೆ ಕಾಲವಿದ್ದು ಅನಂತರ ಆಂಧ್ರ ದೇಶದಲ್ಲಿ ಚುನಾವಣಾ ಪ್ರಚಾರವನ್ನು ಕೈಗೊಳ್ಳಲು ವಿಶೇಷ ರೈಲಿನಲ್ಲಿ ಪ್ರಯಾಣ ಮಾಡುವರು ೮-೩೦ ಘಂಟೆಗೆ ಬೆಂಗಳೂರಿನ ಸಾರ್ವಜನಿಕ ಸಭೆಯೊಂದನ್ನು ಕರೆಯಲಾಗಿದೆ ಅಲ್ಲಿ ಅವರು ಭಾಷಣ ಮಾಡುವರು

ಧರ್ಮ ಮಂದಿರದ ಪ್ರಾಸಾದವನ್ನೇರುವ ಭಾಗ್ಯ ಲಭಿಸಲಿ

ಆಗಮ ತ್ರಯ ಸಮ್ಮೇಳನದಲ್ಲಿ ಪೇಜಾವರ ಮಠಾಧೀಶರ ಭಾಷಣ

ನಂಜನಗೂಡು, ೧೧

ನೆನ್ನೆ ಇಲ್ಲಿ ಸಂಸ್ಥಾನದ ಆಗಮ ತ್ರಯ ಮಹಾ ಮಂಡಲಿಯ ೬ನೇ ಮಹಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಉಡುಪಿಯ ಪೇಜಾವರ ಮಠಾಧಿಪತಿಗಳಾದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಈ ರೀತಿ ಭಾಷಣ ಮಾಡಿದರು --

ಆಧ್ಯಾತ್ಮಿಕ ಅನ್ವೇಷಣೆಯೇ ಮಾನವ ಜೀವನದ ಪರಮ ಲಕ್ಷ್ಯ. ಪರಮಾತ್ಮನ ಸಚ್ಚಿದಾನಂದ ಸ್ವರೂಪವನ್ನು ಅರಿಯುವುದರಲ್ಲಿಯೇ ಮಾನವನ ಆತ್ಯಂತಿಕ ಸಿದ್ಧಿಯಡಗಿದೆ ಅದರಲ್ಲಿಯೇ ಮಾನವತೆಯ ವೈಶಿಷ್ಟ್ಯವು ಅಡಗಿರುವುದು

ಹಿಂದೆ ಸೃಷ್ಟಿಕರ್ತನು ಪ್ರಪಂಚದ ವಿವಿಧ ಪ್ರಾಣಿಗಳನ್ನು ನಿರ್ಮಿಸಿದರೂ, ಪ್ರತಿಯೊಂದು ಪ್ರಾಣಿಗಳ ಮಾನಸಿಕ ಭೂಮಿಕೆಯಲ್ಲಿ ಕೊರತೆಯನ್ನನುಲಕ್ಷಿಸಿ ನಿರಾಶನಾದನಂತೆ ಅತೃಪ್ತನಾದನಂತೆ ಕೊನೆಗೆ ಆಧ್ಯಾತ್ಮ ವಿಚಾರದ ಚಿಂತನವಾದ ಮಾನವ ವರ್ಗವನ್ನು ನಿರ್ಮಿಸಿ ಕೃತಕೃತ್ಯತೆಯನ್ನು ಅನುಭವಿಸಿದನೆಂದು ಭಾಗವತದಲ್ಲಿ ವರ್ಣನೆಯಿದೆ ಇದರಿಂದ ಮಾನವಜೀವಿತದ ಪರಮೋದ್ದೇಶದ ಸ್ಪಷ್ಟಕಲ್ಪನೆ ನಮಗಾದೀತು ಪರಮಾತ್ಮನ ಅನ್ವೇಷಣ ಕಾರ್ಯದಲ್ಲಿ ಮಾನವನು ಪರಮಾತ್ಮನ ದಾರಿ ಹಿಡಿದು ಮಾನವತೆಯ ಪರಾಕಾಷ್ಠೆಯನ್ನೇರಲು ಅನುಕೂಲವಾಗುವಂತೆ ದೇವಾಲಯದ ಪದ್ಧತಿಯನ್ನು ನಮ್ಮ ಮಹರ್ಷಿಗಳು ಸಾಕ್ಷಾತ್ಕರಿಸಿದರು

ಪರಮಾತ್ಮನ ಮಂದಿರವನ್ನು ಪ್ರವೇಶಿಸುವ ಪ್ರಥಮ ದ್ವಾರವೆಂದು ಈ ಆಗಮೋಕ್ತ ವಿಗ್ರಹ ಪೂಜಾ ಪದ್ಧತಿಯನ್ನು ಸ್ವಾಗತಿಸಿದರು ವಿಶ್ವವ್ಯಾಪಿಯಾದ ಪರಬ್ರಹ್ಮನನ್ನು ಸಾಕ್ಷಾತ್ಕರಿಸುವ ಪುಣ್ಯಾತ್ಮರು ಸಹ ಅಪ್ರಬುದ್ಧ ಜನಾಂಗದ ದಿವ್ಯ ಮಾರ್ಗದರ್ಶನಕ್ಕಾಗಿ ವಿಗ್ರಹದಲ್ಲಿ ಪರಮಾತ್ಮನನ್ನು ಕಾಣುವ, ಆರಾಧಿಸುವ ವಿಧಾನವನ್ನು ಸಮಾಜಕ್ಕೆ ತೋರಿಸಿಕೊಟ್ಟಿರುತ್ತಾರೆ.

ವಿದ್ಯುತ್ ಶಕ್ತಿಯ ವ್ಯಾಪ್ತಿಯು ಭೂವಲಯದ ಪ್ರತಿ ಕಡೆಗಳಲ್ಲಿಯೂ ಅಡಗಿವೆ ಆದರೆ ಅದರ ಪ್ರಕಾಶವನ್ನು ನಾವು ವಿದ್ಯುದ್ದೀಪದಲ್ಲಿ ಮಾತ್ರ ಗೋಚರಿಸಬಹುದು ಬೇರೆ ಕಡೆಗಳಲ್ಲಿರುವ ವಿದ್ಯುದ್ದೀಪ್ತಿಯು ನಮ್ಮ ದೃಷ್ಟಿಗೆ ನಿಲುಕಲಾರದು ಪರಮಾತ್ಮನೂ ವಿಶ್ವ ವ್ಯಾಪಿಯಾಗಿ ಸಮಗ್ರ ಬ್ರಹ್ಮಾಂಡದಲ್ಲಿಯೇ ಅವನ ಅಧಿಕಾರದ ವ್ಯಾಪ್ತಿಯಿರಬಹುದು ಆದರೆ ಇಡೀ ಪ್ರಪಂಚದಲ್ಲಿ ದೇವರ ಆ ದಿವ್ಯ ಪ್ರಭೆಯನ್ನು ಸಾಕ್ಷಾತ್ಕರಿಸುವ ಪ್ರಭವ ನಮಗಿದೆಯೇ? ವಿದ್ಯುತ್ತಿನ ಪ್ರಕಾಶವು ವಿದ್ಯುದ್ದೀಪದಲ್ಲೇ ಅಭಿವ್ಯಕ್ತವಾಗುವಂತೆ ಭಗವಂತನ ದಿವ್ಯ ಜ್ಯೋತಿಯನ್ನು ನಾವು ವಿಗ್ರಹದಲ್ಲಿಯೇ ಅರಸಬೇಕಾಗಿದೆ

ಹಿಂದಿನ ಮಹರ್ಷಿಗಳಂತೆ ನಾವು ಧಾರ್ಮಿಕರೆಂದೆನಿಸಿಕೊಳ್ಳುತ್ತಿದ್ದರೂ ನಮ್ಮ ಹೃದಯವಿಂದು ಶೂನ್ಯವಾಗಿ ಪ್ರಭಾವಿಹೀನವಾಗಿದೆ ನಮ್ಮ ಪೂರ್ವಜರು ವಿದ್ಯುದ್ದೀಪಗಳಂತೆ ಬೆಳಗುತ್ತಿದ್ದರೆ ನಾವಿಂದು ಜ್ಯೋತಿಯಿಲ್ಲದ ವಿದ್ಯುತ್ತಿನ ಬಟ್ಟಲಿನಂತೆ ನಿಷ್ಪ್ರಭರಾಗಿರುವೆವು ಇಂತಹವರು ಬೇರೆಯವರಿಗೆ ಪ್ರಕಾಶವನ್ನು ತೋರಬಲ್ಲರು ಅವನ್ನು ಮನಗಂಡಾಗಲೇ ಧಾರ್ಮಿಕರ ಪ್ರಗತಿಯುಂಟಾದ ಸರ್ವದ ಉನ್ನತಿಯಿದೆ ಕರ್ತವ್ಯ ಭ್ರಷ್ಟತೆಯ ಕಲ್ಪನೆಯು ನಮ್ಮಲ್ಲಿ ಮೂಡಿದರೆ ಪಶ್ಚಾತ್ತಾಪವೂ ಕರ್ತವ್ಯ ಜಾಗೃತಿಯೂ ನೆಲೆಗೊಂಡು ದಿವ್ಯ ಪ್ರಚೋದನೆಯ ಸ್ರೋತಸ್ಸು ಹರಿದೀತು ಆಲಸ್ಯವು ತೊಲಗಿ ಕಾರ್ಯೋತ್ಸಾಹವು ಮೊಳಗುವುದು

ನಮ್ಮ ದೇವಾಲಯಗಳು ಸಮಾಜದ ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳ ಪ್ರತಿಬಿಂಬಗಳಾಗಿವೆ ನಾವು ದೇವಾಲಯಗಳ ಉದಾತ್ತತೆಯನ್ನೂ, ವಿಶಿಷ್ಟತೆಯನ್ನೂ ಭಂಗಗೊಳಿಸಿದರೆ ಅದು ಸಮಾಜದ ನಿಷ್ಕ್ರಿಯತೆಗೆ ಜ್ವಲಂತ ನಿದರ್ಶನವಾಗಬಹುದು. ಪ್ರತಿಬಿಂಬದಲ್ಲಿ ಕೊರತೆಯಿದ್ದರೆ ಬಿಂಬದಲ್ಲಿ ದೋಷವಿದೆಯೆಂದು ಊಹಿಸಲು ಎಡೆಯುಂಟು ಸಮಾಜದ ಚಟುವಟಿಕೆಗಳ ಪ್ರತಿಬಿಂಬವಾದ ದೇವಾಲಯದ ವೈಶಿಷ್ಟ್ಯತೆಗೆ ಧಕ್ಕೆಯಾದರೆ ಸಮಾಜದ ನ್ಯೂನತೆಯನ್ನೂ, ಆಲಸತನವನ್ನೂ, ಅದು ದಿಗ್ದರ್ಶಿಸಬಹುದು.

ಆಗಮಗಳ ಅಧ್ಯಯನದಿಂದ ನಮ್ಮ ಪ್ರತ್ಯಕ್ಷ ಬೆಳಕಳವನಾಗಿ ಸರಿಯಾದ ಪ್ರಯತ್ನ ಮಾರ್ಗದ ನಿರ್ಮಾಣವಾದೀತು ಎಲ್ಲರಿಗೂ ಧರ್ಮ ಮಂದಿರದ ಉನ್ನತ ಪ್ರಾಸಾದವನ್ನೇರುವ ಸೌಭಾಗ್ಯವು ದೊರಕಿ ದಿವ್ಯ ದರ್ಶನವಾಗಿ ಆತ್ಮ ಪ್ರಸಾದವನ್ನು ಪಡೆಯುವ ಸುವರ್ಣ ಸಂಧಿಯು ನಿಕಟವರ್ತಿಯಾಗದಿರಲಾರದು

ನಗರಕ್ಕೆ ಪೇಜಾವರ ಮಠಾಧೀಶರ ಆಗಮನ

ಮೈಸೂರು ೧೧

ಉಡುಪಿಯ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಪರಿವಾರದೊಡನೆ ನೆನ್ನೆ ಸಂಜೆ ರಾಜಧಾನಿಗೆ ಆಗಮಿಸಿದರು ಅವರನ್ನು ಶ್ರೀರಂಗಪಟ್ಟಣದ ಉತ್ತರದ ಬಳಿ ಊರಿನ ಗಣ್ಯ ಮಹನೀಯರುಗಳೂ, ಭಕ್ತಾದಿಗಳೂ ಸ್ವಾಗತಿಸಿದರು ಅರಮನೆಯ ಸಕಲ ಮರ್ಯಾದೆ ಮತ್ತು ವೇದ ಘೋಷಗಳೊಡನೆ ಅವರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯಿಂದ ಬಂದು ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದಲ್ಲಿ ಬಿಡಾರ ಮಾಡಿರುವರು

ಶ್ರೀ ಶ್ರೀಯವರಿಗೆ ಅರಮನೆ ಅಧಿಕಾರಿಗಳು ಮಿಷ್ಟುಗಳನ್ನು ಅರ್ಪಿಸಿದ ನಂತರ ಧರ್ಮಾಧಿಕಾರಿಗಳಾದ ಶ್ರೀ ಹೆಚ್ ಎನ್ ರಾಘವೇಂದ್ರಾಚಾರ್ಯರು ಸ್ವಾಮಿಜಿಯವರನ್ನು ಸ್ವಾಗತಿಸಿದರು ಶ್ರೀ ಶ್ರೀಯವರು ಮೈಸೂರು ಮಹಾರಾಜರ ಮತ್ತು ಜನರ ಉದಾರಾತಿಶಯವನ್ನು ಪ್ರಶಂಸಿಸಿ ಉಡುಪಿಯಲ್ಲಿ ನಡೆಯಲಿರುವ ಪರ್ಯಾಯ ಮಹೋತ್ಸವಕ್ಕೆ ಸಕಲರನ್ನೂ ಸ್ವಾಗತಿಸಿದರು ಶ್ರೀ ಕೆ ಎಲ್ ನ್ಯಾಸರಾಯ ಶಾಸ್ತ್ರಿಗಳು ತುಳವ ಪರವಾಗಿ ಶ್ರೀಮನ್ಮಹಾರಾಜರಿಗೂ ಇತರರಿಗೂ ಧನ್ಯವಾದಗಳನ್ನರ್ಪಿಸಿದರು ಸ್ವಾಮಿಜಿಯವರು ಇಲ್ಲಿ ೬ ದಿನಗಳಿದ್ದು ನಂತರ ತಲಕಾವೇರಿ, ಸುಬ್ರಹ್ಮಣ್ಯಗಳ ಮಾರ್ಗವಾಗಿ ಉಡುಪಿಗೆ ಪ್ರಯಾಣ ಬೆಳೆಸುವರು

ಚರ್ಚಿಲ್-ಸ್ಟಾಲಿನ್ ಭೇಟಿ ಸಂಭವ

ಚರ್ಚಿಲರು ರಷ್ಯಾಕ್ಕೆ ಬಂದ ತಮ್ಮನ್ನು ಭೇಟಿ ಮಾಡಲು ಸಿದ್ಧವಾಗಿದ್ದಲ್ಲಿ ಸ್ಟಾಲಿನ್ನರೂ ಅಂತಹ ಭೇಟಿಗೆ ಸಿದ್ಧವಾಗಿರುವುದಾಗಿಯೂ, ಅವರು ರಷ್ಯಾಕ್ಕೆ ಭೇಟಿ ಕೊಡುವುದರಲ್ಲಿ ತಮ್ಮ ನೀತಿಯನ್ನು ಬದಲಾಯಿಸುವ ಬಗ್ಗೆ ಕಳೆದ ವಾರ ತಮ್ಮ ರಹಸ್ಯ ಮಂತ್ರಾಲೋಚನಾ ಸಭೆಯಲ್ಲಿ ಸ್ಟಾಲಿನ್ನರು ಪರಿಶೀಲಿಸಿದರೆಂದೂ ಗೊತ್ತಾಗಿದೆ

ಪೇಜಾವರ ಮಠಾಧೀಶರಿಗೆ ನಿಧಿ ಸಮರ್ಪಣೆ

ನಾಳೆ ಸಂಜೆ ೫ ಘಂಟೆಗೆ ಶ್ರೀ ಪೇಜಾವರ ಮಠಾಧೀಶರನ್ನು ಗೋಪಾಲ ಕೃಷ್ಣ ದೇವಸ್ಥಾನದಿಂದ ವಾದ್ಯಘೋಷಗಳೊಡನೆ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಿ ಅಲ್ಲಿ ಶ್ರೀ ಸೀತಾರಾಮರಾಯರು ಮತ್ತು ಅವರ ಆಶ್ರಿತ ವರ್ಗದವರು ಶ್ರೀಗಳವರಿಗೆ ಮಾನಪತ್ರ ಮತ್ತು ನಿಧಿ ಸಮರ್ಪಿಸುವರು ರಾತ್ರಿ ೮ ಘಂಟೆಗೆ ಶ್ರೀಗಳವರು ದಿವಾನರ ರಸ್ತೆಯಲ್ಲಿರುವ ಶ್ರೀ ಕೆ ಗೋಪಾಲಾಚಾರ್ಯರ ಗೋವಿಂದ ಭಕ್ತಾಲಯದಲ್ಲಿ ದಾಸ ಕೂಟ ಮತ್ತು ವ್ಯಾಸ ಕೂಟ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಸಮಸ್ತರೂ ಸಹಕರಿಸಬೇಕಾಗಿ ಕೋರಲಾಗಿದೆ

ನಾರ್ ಗೆಜೆಟೆಡ್ ನೌಕರರ ಬೇಡಿಕೆ ಬಗ್ಗೆ, ಅವರ ಪತ್ನಿಯರ ಹೋರಾಟ

ಬೆಂಗಳೂರಿನ ನಾನ್ ಗೆಜೆಟೆಡ್ ನೌಕರರ ಪತ್ನಿಯರ ಸಭೆಯು ನಡೆದು ತಮ್ಮ ಪತಿಯರ ಜೀವನವು ಸುಗಮವಾಗಿ ನಡೆಯಲವ ಕೊಳ್ಳುವಂತೆ ಅವರ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂದು ಒತ್ತಾಯ ಪಡಿಸಲಾಯಿತು. ಬರುವ ಮುಷ್ಕರದ ಸೂಚನೆಯಲ್ಲಿ ಸರ್ಕಾರಿ ನೌಕರರ ಪತ್ನಿಯರು ಮತ್ತು ಅವರಿಗೆ ಸಂಬಂಧಪಟ್ಟವರು ಯಾವ ಬಗೆಯ ಪರ ಚಾರವನ್ನೂ ನಡೆಸಕೂಡದೆಂದು ಆಜ್ಞೆ ಮಾಡಿರುವುದನ್ನು ಪ್ರತಿಭಟಿಸಿ ಐ.ಜಿ.ಪಿ. ಆಫ್ ಅಧಿಕಾರಿಗಳ ಪತ್ನಿಯರ ಬಗ್ಗೆ ಇಲ್ಲದ ಈ ನಿರ್ಬಂಧವನ್ನು ತಮ್ಮ ಮೇಲೆ ಹೊರಿಸಿರುವುದನ್ನು ತೀವ್ರವಾಗಿ ಖಂಡಿಸಿದರು ಮತ್ತು ತಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳಲೂ ಮತ್ತು ತಮ್ಮ ಪತಿಯರ ಸಂಬಳ ಸಾರಿಗೆಗಳನ್ನು ಉತ್ತಮಪಡಿಸಲೂ ತೀವ್ರ ಹೋರಾಟ ನಡೆಸಲು ಮದರಾಸಿನ ಮಹಿಳೆಯರು ಸನ್ನದ್ಧರಾಗುತ್ತಿರುವರೆಂದು ಹೇಳಲಾಗಿದೆ.

ವಿ ದ್ಯಾ ರ್ಥಿ ಸ್ಪ ರ್ಧೆ

ರಾಜಧಾನಿಯ ಕುಂಚಿಟಿಗರ ವಿದ್ಯಾರ್ಥಿನಿಲಯದ ಆಶ್ರಯದಲ್ಲಿ ದೇಶದ ಈಗಿನ ಪರಿಸ್ಥಿತಿಯಲ್ಲಿ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಗೆಲ್ಲುವುದೇ ಒಳೆಯದು ಎಂಬ ವಿಷಯವಾಗಿ ಚರ್ಚಾ ಸ್ಪರ್ಧೆಯು ಏರ್ಪಡಿಸಲಾಗಿತ್ತು. ಕೊನೆಯಲ್ಲಿ ವಿಷಯದ ಪರವಾಗಿ ಶೀನಾರಾಯಣ ತುಪ್ಪಿಗಳಿಂದ ಬಿ ಆರ್ ರಂಗಸ್ವಾಮಿ ಮತ್ತು ಬಿ ಕೆ ಕೆಂಪಯ್ಯನವರು ಪ್ರಥಮ ಮತ್ತು ದ್ವಿತೀಯ ಬಹುಮಾನಗಳನ್ನು ಪಡೆದರು.

C T C MYSORE

CLASSES BEGUN

INTER — Eng and P.C.M.

S. S. L. C. For MARCH 1952

CLASSES TO BEGIN

B Sc. - Mathematics & Chemistry

INTER — C B Z

THE CITY TUTORIAL COLLEGE

Near V V Market Mysore

ನಗರಕ್ಕೆ ಹಳ್ಳಿಗಾಡಿನಿಂದ ಆಗಮಿಸಿರುವವರ ಸರ್ವೆ

ಮೈಸೂರು ೯

ನಗರದ ಪೌರ ಸಭಾಧ್ಯಕ್ಷರಾದ ಶ್ರೀ ಟಿ. ಸರ್ವಜ್ಞಯ್ಯಂಗಾರ್ಯರು ಮೈಸೂರು ಯೂನಿವರ್ಸಿಟಿ ಸಂಬಂಧವನ್ನು ತೊರೆದಿಸಿ, ಅಮೇರಿಕದ ಮಿಸ್ಸಿಂ ವಿಶ್ವ ವಿದ್ಯಾಲಯದ ಪ್ರೊ|| ನೋಯೆಲ್ ಗಿಸ್ಟ್‌ರವರು ರಾಜಧಾನಿಯಲ್ಲಿ ನಡೆಸುತ್ತಿರುವ ಸರ್ವೆಯ ಬಗ್ಗೆ ಪೌರನಿವಾಸಿಗಳು ಸಹಕಾರವೀಯಬೇಕೆಂದು ಕೋರಿರುತ್ತಾರೆ. ಗ್ರಾಮಾಂತರ ಪ್ರದೇಶಗಳಿಂದ ನಗರಕ್ಕೆ ಬರುವವರ ವಿಷಯವಾಗಿ ಸರ್ವೆಯನ್ನು ನಡೆಸಲಾಗುವುದು. ಈ ಸರ್ವೆಯಿಂದ ಯೋಜನೆಗಳ ತಯಾರಿಕೆಗೆ ತುಂಬಾ ಸಹಾಯವಾಗುವುದೆಂದೂ ಪ್ರೊ|| ಗಿಸ್ಟ್‌ರವರು ಒಂದು ಪ್ರಶ್ನಾವಳಿಯನ್ನು ಸಿದ್ಧಪಡಿಸಿರುವರೆಂದೂ, ಸಂಸಾರಗಳು ಪ್ರಶ್ನೆಗಳಿಗೆ ನಿಜವಾದ ಮತ್ತು ಸತ್ಯವಾದ ಉತ್ತರಗಳನ್ನು ಕೊಟ್ಟು ರಾಷ್ಟ್ರದ ಅಭಿವೃದ್ಧಿಯಲ್ಲಿ ಸಹಾಯ ಮಾಡಬೇಕೆಂದೂ ಕೋರಿರುತ್ತಾರೆ. ಈ ಸರ್ವೆಯಿಂದ ಸಂಸಾರಗಳ ವ್ಯಯಕ್ತಿಕ ವಿಷಯಗಳ ಬಗ್ಗೆ ಪ್ರವೇಶಿಸುವ ಅಭಿಲಾಷೆಯೇನೂ ಇಲ್ಲವೆಂದು ಅಧ್ಯಕ್ಷರು ಸ್ಪಷ್ಟಪಡಿಸಿ, ಗಿಸ್ಟರ ಸಹಾಯಕ್ಕಾಗಿ ನಿಂತಿರುವ ವಿದ್ಯಾರ್ಥಿಗಳ ತಂಡದವರಿಗೆ ಪೌರನಿವಾಸಿಗಳು ಸಹಾಯ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

An Experienced University Teacher, now retired provides instruction in Mathematics for students appearing for Intermediate, B.Sc (Pass) B.Sc (Hons) Examinations in Mysore University

For tuition fees & other particulars apply before 15th December 1951 to the undersigned

MATHEMATICUS

121 D Subbiah Road

MYSORE

ಪತ್ನಿಯರ ಜಗಳ ನಿಲ್ಲಿಸಲು ಪತಿಯ ಸತ್ಯಾಗ್ರಹ

ತನ್ನ ಇಬ್ಬರು ಹೆಂಡತಿಯರು ಪರಸ್ಪರ ಜಗಳವಾಡುವುದನ್ನು ನಿಲ್ಲಿಸಲು ಬೇರೆ ಮಾರ್ಗ ಕಾಣದೆ ದೆಹಲಿಯ ಬಳಿ ಮೊರಾದಾಬಾದಿನ ಸಿಪಾಯಿ ಹರಿಚರಣ ಸಿಂಗನು ರಾಜಧಾನಿಯಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದನು. ಈಗ ಅವನನ್ನು ಪೋಲೀಸರು ಬಂಧಿಸಿ ತನ್ನ ಮೇಲೆ ಆತ್ಮಹತ್ಯಾ ಪ್ರಯತ್ನದ ಆಪಾದನೆ ಹೊರಿಸಿದ್ದಾರೆ.

ಸು ಪ್ರ ಭಾ ತ

ಮೇಲ್ಕಂಡ ಕನ್ನಡ ಕೈಬರಹದ ಪತ್ರಿಕೆಯ ೬ನೇ ಸಂಚಿಕೆಯು ಈಗ ಹೊರಬಿದ್ದಿದೆ. ಪತ್ರಿಕೆಯು ... ವಿಶ್ವ ವಿದ್ಯಾಲಯದ ಪುಸ್ತಕ ಭಂಡಾರದಲ್ಲಿಡಲ್ಪಟ್ಟಿದೆ. ಶ್ರೀ ಜನಿವಾರದ ಕೊಳೆಗಾರ ಯಾರು? ಎಂಬ ಬಹುಮಾನ ಪಡೆದ ಕಥೆಯೂ, ಶ್ರೀ ಶ್ರೀನಿವಾಸರವರ ಸಂದೇಶವೂ ಅದರಲ್ಲಿವೆ.

BUNGALOW FOR SALE

One Bungalow situated in the main road of Chamaraja Road measuring 70'x90 Rs 40,000 (Rupees Forty Thousand only) or nearest offer Apply to

M ALI KHAN,

878, Laxmipuram,

MYSORE

|| ಶ್ರೀ ||

ಗಣೇಶಾ ಟಾಕೀಸ್

12 12 51ರಿಂದ ದಿನವಹಿ ೩ ಆಟಗಳು

ಲೈಲಾ ಮಜ್ನು

(ತಮಿಳು)

ಮುಖ್ಯ ಪಾತ್ರ - ಟಿ ಆರ್ ಮಹಾಲಿಂಗಂ ಎಂ ವಿ ರಾಜಮ್ಮ ಕೃಷ್ಣ ಮಧುರಂ

ಜನಾವರಣ ಪ್ರಚಾರಕ್ಕೆ ಆನೆ

ಮದ್ರಾಸು ಶಾಸನ ಸಭೆಗೆ ದಿಂಡಿಗಲ್ ಕ್ಷೇತ್ರದಿಂದ ಸ್ಪರ್ಧಿಸುವ ಒಬ್ಬ ಸ್ವತಂತ್ರ ಉಮೇದುವಾರರು ಪ್ರಚಾರಕ್ಕಾಗಿ ಆನೆಯನ್ನು ಬಾಡಿಗೆಗೆ ತೆಗೆದುಕೊಂಡಿರುತ್ತಾರೆ. ಅದರ ಮುಖ ಮತ್ತು ಕಿವಿಗಳ ಮೇಲೆ ಅವರು ತಮಗೆ ಕೊಟ್ಟಿರುವ ಚಿಹ್ನೆಯನ್ನು ಬಣ್ಣದಿಂದ ಬರೆಸಿ ಹಳ್ಳಿ ಹಳ್ಳಿಗೆ ಅದನ್ನು ಕಳುಹಿಸುತ್ತಿರುವರು.

ವಿದ್ಯಾರ್ಥಿಗಳಿಗಾಗಿ ಆಸ್ಪತ್ರೆಯಲ್ಲಿ ಪ್ರತ್ಯೇಕ ವಾರ್ಡು

ಮದರಾಸಿನ ಸ್ಟಾನ್ಲಿ ಮೆಡಿಕಲ್ ಆಸ್ಪತ್ರೆಯಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಾರ್ಡಿನ ಆರಂಭೋತ್ಸವವನ್ನು ಸೆನ್ನೆ ವಿನ ಕೇಂದ್ರ ಆರೋಗ್ಯ ಸಚಿವ ರಾಜಕುಮಾರಿ ಅಮೃತ್‌ಕೌರ್‌ರವರು ನೆರವೇರಿಸಿದರು.

ಬಹಳ ಉತ್ತಮವಾದ ಸಾಬೂನು

808

ದಿ ರಾ ಜಾ ಸೋ ಪ್ ಫ್ಯಾಕ್ಟರಿ, ಮೈಸೂರು.

ಗೌ|| ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರಂ, ಆರ್ಣಿ, ಜಾಕೆಟ್ಟಿನ ಸೀರೆಗಳು ಮತ್ತು ಶಾಸ್ತ್ರೀಯ ಶಾಲುಗಳಿಗೆ M.V. ಭೋಜಯ್ಯ ಶ್ರೇಷ್ಠಿ

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

GOOD NEWS TO BUS & LORRY OWNERS !

Full circle mould manufactured by Italian Engineers under erection supervised by the same Engineers — Watch for the opening

MYSORE TYRES,

1474, Sayaji Rao, Road, Mysore.

ಪ್ರಭು ದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

12—12—51 ರಿಂದ ಅಮೋಘ 3 ನೇ ವಾರ

ಮ್ಯಾಟಿನಿ 2-30 ಘಂಟೆಗೆ

ಸು ದ ರ್ಶ ನ

ಪಾತ್ರ - ಪಿ ಯು ಚಿನ್ನಪ್ಪ, ಕಣ್ಣಾಂಬ, ಲಲಿತ, ಬಾಲಯ್ಯ ಮುಂತಾದವರು

ಕಂಬಳಿ, ರಗ್ಗು, ಶಾಲು, ಜಮಖಾನಗಳಿಗೆ - ಬಾಷುಸಾಬ್

ಉಣ್ಣೆ ಪಟ್ಟು, ನೂಲಿನ ಸಂಚು ಧಾಬಲಿ, ಕಂಬಳಿ ರತ್ನ ಕಂಬಳಿಗಳಿಗೆ ಹೆಸರುವಾಸಿಯಾದ ಅಂಗಡಿ ಬಾಷುಸಾಬ್ ಸಂಸ್ಥೆ, ಮ್ಯಾಂಟಲ್ ರೋಡ್, ಮೈಸೂರು.

ಸುಮುವೆ ಮನೆಗಳಿಗೆ ಮುಂಗಳಕರವಾದ ಅವಶ್ಯಗಳು ದೊರೆಯುತ್ತವೆ! ಸಾಮಾನು ಮನವರಿ ರೇಷ್ಮೆ ಸೀರೆಗಳು, ನೂಲಿನ ಸೀರೆಗಳು ಕಳಸಿಪಟ್ಟು ಪಂಚೆ ರೇಷ್ಮೆ ಮಗುಟಗಳಿಗೆ

D. L. ನರಸಿಂಹಯ್ಯ

ಬಡವ ಅಂಗಡಿ ...

Edited, Printed and Published by A R Nagarajan, at Sadhvi Press D Subbiah Road, Mysore

ನೋಂ ನಂ 792 | ಬೆಂಗಳೂರು | ಇಂದಿನ ಪತ್ರಿಕೆ 3 ಆಣೆ

ಪ್ರಜಾ

ಸಂಪುಟ ೧೦] ಬುಧವಾರ ೧೬-೧೨-೫೧ [ಸಂಚಿಕೆ ೧೧೬

ಇರಾನ್ ಪಾರ್ಲಿಮೆಂಟ್ - ಸದಸ್ಯರಲ್ಲಿ ಕಾಳಗ -

ದೇವರಲ್ಲಿ ನಂಬಿಕೆಯೇ ಸಕಲ ಶ್ರೇಯಸ್ಸಿಗೂ ಕಾರಣ

ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ಪೇಜಾವರ ಮಠಾಧೀಶರ ಭಾಷಣ

ಮೈಸೂರು ೧೫

ಉಡುಪಿಯ ಶ್ರೀ ಪೇಜಾವರ ಮಠಾಧಿಪತಿಗಳು ನೆನ್ನೆ ಸಂಜೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಭಾಷಣ ಮಾಡಿ, ದೈವ ಮತ್ತು ಧರ್ಮಗಳಲ್ಲಿ ನಂಬಿಕೆಯನ್ನಿಡಬೇಕಾದ ಆವಶ್ಯಕತೆಯನ್ನು ಬಹಳ ಮನಮುಟ್ಟುವಂತೆ ವಿವರಿಸಿದರು. ಆಧುನಿಕ ವಿಕಾಸ ವಾದದ ಪ್ರತಿಪಾದಕ ಡಾರ್ವಿನ್ ಮತ್ತು ನಾಸ್ತಿಕ ವಾದ ಅನುಯಾಯಿಗಳೂ ಇಂದಿನ ದೊಡ್ಡ ವಿಜ್ಞಾನಿಗಳೂ ಆದ ಐನ್‌ಸ್ಟೀನ್, ನಾಸ್ತಿಕತೆಯಿಂದ ಆಸ್ತಿಕತೆಗೆ ತಿರುಗಿದ ಟಾಲ್‌ಸ್ಟಾಯ್ ಮತ್ತು ಅಣು ಪರಮಾಣುಗಳ ಸಂಶೋಧಕರ ತತ್ವಗಳನ್ನು ವಿಮರ್ಶಿಸಿ, ಅವೂ ಹೇಗೆ ಅಪರಿಪೂರ್ಣವಾಗಿರುವುವೆಂಬುದನ್ನು ತಿಳಿಸಿದರು. ಜಗತ್ತಿನಲ್ಲಿ ಇಂದು ಇರುವ ಅವ್ಯವಸ್ಥೆ, ಅಭಾವ ಮತ್ತು ಅಂಧಕಾರಗಳನ್ನು ನಿವಾರಿಸಲು ಕೇವಲ ರಾಜಕೀಯ ಶಾಸನಗಳಿಂದ ಸಾಧ್ಯವಿಲ್ಲವೆಂಬುದನ್ನೂ ತಿಳಿಸಿ, ಆಸ್ತಿಕತೆ ಮತ್ತು ಧರ್ಮ, ಶ್ರದ್ಧೆಗಳಿಂದಲೇ ಮಾನವ್ಯಗಳು ಬಗೆಹರಿಯಬೇಕೆಂದು ಸೂಚಿಸಿದರು. ಯಾವ ದೃಷ್ಟಿಯಿಂದ ನೋಡಿದರೂ ಜಗತ್ತಿನ ಸೃಷ್ಟಿಗೆ ಮೂಲ ಕಾರಣವಾದ ಮತ್ತು ಆಗೋಚರವಾದ ಒಂದು ಸತ್ಯವಾದ ವಸ್ತುವು ಇದೆಯೆಂದು ತಿಳಿಯುವುದೆಂದೂ, ಅದೇ ಪರಮಾತ್ಮನೆಂದು ನಂಬಿ ಅತನ ಮೆಚ್ಚುಗೆಗೆ ಪಾತ್ರವಾದ ಸದ್ವರ್ತನವನ್ನು ಬೆಳೆಸಿಕೊಳ್ಳುವುದರಿಂದಲೇ ಇಹಪರ ಸೌಖ್ಯಗಳು ಲಭಿಸುವುವೆಂದೂ ಅವರು ಸ್ಪಷ್ಟಪಡಿಸಿದರು.

ಆಶೀರ್ವಾದ

ಜಯನಗರದ ಶ್ರೀ ಕಾಂತರಾಜೇ ಅರಸರವರ ಭೇಟಿ ಸ್ಥಾನದ ಆವರಣದ ಗಣಪತಿಯ ಮಂಗಳಾರತಿ ಪ್ರಯುಕ್ತ ೧೫ ಸಂಜೆ ೭-೩೦ ಘಂಟೆಗೆ ಶ್ರೀ ಸಾಂಬಾ ಅವರ ಮಧುರ ಗಾನ ಕಲಾ ವಲಿಯವರಿಂದ ಆಶೀರ್ವಾದನವನ್ನೇರ್ಪಡಿಸಲಾಗಿದೆ.

ಚರ್ಚಾ ಸ್ಪರ್ಧೆ

ಜಯನಗರದ ಕುಂಚಿಟಿಗರ ವಿದ್ಯಾಲಯದ ಆಶ್ರಯದಲ್ಲಿ ದೇಶದ ಈ ಪರಿಸ್ಥಿತಿಯಲ್ಲಿ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಗೆಲ್ಲುವುದೇ ಒಳ್ಳೆಯದು ಎಂಬ ವಿಷಯವಾಗಿ ಚರ್ಚಾ ಸ್ಪರ್ಧೆಯು ನಡೆಸಲಾಗಿದ್ದು ಕೊನೆಯಲ್ಲಿ ವಿಷಯ ಪರವಾಗಿ ತೀರ್ಮಾನವಾಯಿತು. ಶ್ರೀ ಎಂ. ಬಿ. ಆರ್. ರಂಗಸ್ವಾಮಿ ಮತ್ತು ಶ್ರೀ ಟಿ. ಕೆಂಪಯ್ಯನವರು ಪ್ರಥಮ ದ್ವಿತೀಯ ಬಹುಮಾನಗಳನ್ನು ಪಡೆದರು.

೧೨೫ ವರ್ಷದ ವೃದ್ಧೆಯ ಮರಣ

ತೋರಿನ ಸಜೀರಾ ಬಿ ಎಂಬ ೧೨೫ ವರ್ಷದ ಮುದುಕಿಯು ಕಳೆದ ಅನೇಕ ದಿನ ನಿಧನ ಹೊಂದಿದಳು. ಆವಳು ಸಾಯುವವರೆಗೆ ಸಂಪೂರ್ಣವಾಗಿ ಆರೋಗ್ಯದಿಂದಿದ್ದಳೆಂದು ಹೇಳಲಾಗಿದೆ.

ಕೆ. ಸಿ. ರೆಡ್ಡಿಯವರ ಭಾಷಣ

ಮೈಸೂರು ೧೫

ಚುನಾವಣೆಯ ಪ್ರಚಾರದ ಅಂಗವಾಗಿ ನಾಳೆ ಸಂಜೆ ೬-೩೦ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಏರ್ಪಡಿಸಿರುವ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಭಾಷಣ ಮಾಡಲಿದ್ದಾರೆ. ಸರ್ವರೂ ಆಗಮಿಸಬೇಕೆಂದು ಕಾಂಗ್ರೆಸ್ ಸಮಿತಿಯವರು ಕೋರುತ್ತಾರೆ.

ಮದ್ರಾಸಿಗೆ ಶ್ರೀಮನ್ಮಹಾರಾಜರ ಭೇಟಿ ಇಲ್ಲ

ಶ್ರೀಮನ್ ಮಹಾರಾಜರು ಈ ತಿಂಗಳು ೨೧ನೇ ತಾ॥ ಮದ್ರಾಸಿಗೆ ಭೇಟಿ ಕೊಡಬೇಕಾಗಿದ್ದುದು ಈಗ ರದ್ದಾಗಿದೆ ಎನ್ನಲಾಗಿದೆ.

ಕಾಂಗ್ರೆಸ್ಸಿಗೇ ಓಟು ಕೊಡಿ



ಪರ್ಷಿಯದ ಪಾರ್ಲಿಮೆಂಟಿನಲ್ಲಿ ಭಾರಿ ಕಾಳಗ

ಎಣ್ಣೆಯ ಪರಿಸ್ಥಿತಿಯ ಬಗ್ಗೆ ನೆನ್ನೆ ಪರ್ಷಿಯದ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯ ಸಮಯದಲ್ಲಿ ಸದಸ್ಯರುಗಳಿಗೆ ಭಾರಿ ಕಾಳಗವೇ ನಡೆಯಿತೆಂದು ವರದಿಯಾಗಿದೆ. ಪ್ರಧಾನಿ ಮುಸಾದಿಕ್‌ರವರು ಸಭಾಂಗಣದಿಂದ ಶಸ್ತ್ರ ಸಜ್ಜಿತ ಕಾವಲುಗಾರರ ರಕ್ಷಣೆಯಿಂದ ತಪ್ಪಿಸಿಕೊಂಡು ಓಡಿದರೆಂದು ವರದಿಯಾಗಿದೆ.

ವಿಮಾನ ಮುರಿದು ಬಿತ್ತು

ಹಿಂದೂಸ್ಥಾನ ವಿಮಾನ ಕಾರ್ಖಾನೆಯವರಿಂದ ತಯಾರಾದ ಶಿಕ್ಷಣ ವಿಮಾನವು ನೆನ್ನೆ ಬೆಳಗ್ಗೆ ಪರೀಕ್ಷಾ ಹಾರಾಟಕ್ಕಾಗಿ ಹೊರಟಾಗ ಯಲಹಂಕದ ಬಳಿ ಮುರಿದುಬಿದ್ದಿತು. ಅದರೊಳಗಿದ್ದ ಚಾಲಕನು ವಿಮಾನದಿಂದ ಹಾರಿ ಸುರಕ್ಷಿತವಾಗಿ ಭೂಮಿಗೆ ಇಳಿದನೆಂದು ಹೇಳಲಾಗಿದೆ.

ಕಾಂಗ್ರೆಸ್ಸಿಗೇ ಬೆಂಬಲ ನೀಡಬೇಕು

ಮೈಸೂರು ಜನತೆಗೆ ನೆಹರೂ ಸಂದೇಶ

ಬೆಂಗಳೂರು ೧೫

ಕಾಂಗ್ರೆಸ್ ಅಧ್ಯಕ್ಷ ಹಾಗೂ ಪ್ರಧಾನ ಮಂತ್ರಿ ನೆಹರೂರವರು ಮೈಸೂರಿನ ಜನತೆಗೆ ಈ ಕೆಳಕಂಡ ಸಂದೇಶವನ್ನು ಕಳುಹಿಸಿರುತ್ತಾರೆ:

"ನನ್ನ ಚುನಾವಣಾ ಪ್ರಚಾರ ಪ್ರವಾಸ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ಕೊಡಬೇಕೆಂದು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಒತ್ತಾಯಪಡಿಸುತ್ತಿದ್ದಾರೆ. ಮೈಸೂರು ನನ್ನನ್ನು ಬಹಳ ಸಾರಿ ಆಹ್ವಾನಿಸಿರುವುದರಿಂದ ಸಂತೋಷದಿಂದ ಭೇಟಿ ಕೊಡುತ್ತಿದ್ದೆ. ಸಮಯವನ್ನು ಹೊಂದಿಸಲು ಬಹಳ ಪ್ರಯತ್ನಪಟ್ಟೆ. ಆದರೆ ನನಗೆ ಸಾಧ್ಯವಾಗಲಿಲ್ಲ. ಡಿಸೆಂಬರ್ ತಿಂಗಳಲ್ಲಿ ಭಾರತದ ಬಹುಭಾಗದಲ್ಲಿ ಪ್ರವಾಸ ಮಾಡಬೇಕಾಗಿರುವುದರಿಂದ ಕೆಲವು ಸ್ಥಳಗಳನ್ನು ಬಿಡುವುದು ಅನಿವಾರ್ಯ. ಈಚೆಗೆ ಎ. ಐ. ಸಿ. ಸಿ. ಸಭೆ ನಡೆದಾಗ ಮೈಸೂರಿಗೆ ಭೇಟಿಕೊಡುವ ಸುಯೋಗ ನನಗೆ ದೊರಕಿತ್ತು. ಆದುದರಿಂದ ಮೈಸೂರಿನಲ್ಲಿರುವ ನನ್ನ ಸಹೋದ್ಯೋಗಿಗಳೂ ಮತ್ತು ಸ್ನೇಹಿತರೂ ತೊಂದರೆಯನ್ನು ಗಮನಿಸಿ ನನ್ನನ್ನು ಕ್ಷಮಿಸುವರೆಂದು ನಿರೀಕ್ಷಿಸುತ್ತೇನೆ."

"ಸಾರ್ವತ್ರಿಕ ಚುನಾವಣೆಯಲ್ಲಿ ಮತದಾರರು ಸಂಪೂರ್ಣವಾಗಿ ಕಾಂಗ್ರೆಸ್ಸಿಗೆ ಬೆಂಬಲವಿತ್ತು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತಕೊಡುವರೆಂದು ನಂಬುತ್ತೇನೆ. ಹಳೆಯ ಮತ್ತು ಹೊಸ ಶಕ್ತಿಗಳ ಗೊಂದಲದಲ್ಲಿ ಕಾಂಗ್ರೆಸ್ ಸ್ವಾತಂತ್ರ್ಯ, ಭದ್ರತೆ ಮತ್ತು ಪ್ರಗತಿಯ ಸಂಕೇತವಾಗಿ ನಿಂತಿದೆ. ಇವುಗಳನ್ನು ಬಯಸುವವರೆಲ್ಲಾ ಕಾಂಗ್ರೆಸ್ಸಿಗೇ ಮತ ಕೊಡಬೇಕು" ಎಂದೂ ಸಹ ನೆಹರೂರವರು ಪ್ರಾರ್ಥಿಸಿರುತ್ತಾರೆ.

○ ಕಳೆದ ೧೫ನೇ ತಾ॥ನ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ರಾಜಾ ಸೋಡಾ ಫ್ಯಾಕ್ಟರಿಯು ಆರ್ಯೋಕಾ ರಸ್ತೆಯಲ್ಲಿರುವ ಅನಂದಾ ಸೋಡಾ ಫ್ಯಾಕ್ಟರಿಯ ಶಾಖೆಯಲ್ಲವೆಂದು ತಿಳಿದುಬಂದಿದೆ.

ಪತ್ರಿಕೋದ್ಯಮದ ಆದರ್ಶ

ಸಾಧ್ವಿ ಪತ್ರಿಕಾಲಯದಲ್ಲಿ ಪೇಜಾವರ ಮಠಾಧೀಶರ ಭಾಷಣ

ಮೈಸೂರು ೧೫

ಈ ದಿನ ಬೆಳಗ್ಗೆ ಉಡುಪಿಯ ಶ್ರೀ ಪೇಜಾವರ ಮಠಾಧೀಶರು ಸಾಧ್ವಿ ಪತ್ರಿಕಾಲಯಕ್ಕೆ ಪರವಾರ ಸಮೇತರಾಗಿ ಚಿತ್ತೈಸಿದ್ದರು. ಶ್ರೀ ಅಗರಂ ರಂಗಯ್ಯನವರು ಯಥಾವಿಧಿಯಾಗಿ ಅವರಿಗೆ ಪಾದ ಪೂಜೆಯನ್ನು ನಡೆಸಿದರು. ಶ್ರೀಗಳವರು ಶ್ರೀ ರಾಮ ವಿಠಲ ದೇವರ ಪೂಜೆ ಮಾಡಿ, ಸಕಲರಿಗೂ ಫಲಮಂತ್ರಾಕ್ಷತೆಗಳನ್ನು ಅನುಗ್ರಹಿಸಿದರು. ಸಾಧ್ವಿ ಪತ್ರಿಕೆಗೆ ಅವರು ಶುಭವನ್ನು ಕೋರಿ, ಪತ್ರಿಕೆಗಳ ಉನ್ನತವಾದ ಆದರ್ಶವನ್ನು ನಿರೂಪಿಸಿದರು. ಪತ್ರಿಕೆಯು ಒಳ್ಳೆಯದಕ್ಕಾಗಲಿ, ಕೆಡುಕಿಗಾಗಲೀ ಸಾಧನವಾಗಬಹುದು. ಆದರೆ ಅವುಗಳು ದೈವಭಕ್ತಿ, ಧರ್ಮನಿಷ್ಠೆ ಮತ್ತು ಸತ್ಯ ಪ್ರಚಾರಗಳಲ್ಲಿಯೇ ತೊಡಗಬೇಕು. ಹಾಗೆಯೇ ಕೊಳಕು ನೀರನ್ನು ಕುಡಿಯುವಂತಹ ಕಾಕ ತೀರ್ಥವಾಗದೆ, ಹಂಸಗಳೂ ಪರಮಹಂಸರೂ ಸವಿಯುವ ನಿರ್ಮಲವಾದ ಮತ್ತು ಕಮಲ ಪುಷ್ಪಗಳಿಂದ ಶೋಭಿಸುವಂತಹ ಹಂಸ ತೀರ್ಥಗಳಾಗಬೇಕೆಂದು ಅವರು ಹಾರೈಸಿದರು. ದೈವ ಭಕ್ತಿ, ಸತ್ಯ ಸಂಕಲ್ಪ ಮತ್ತು ಕ್ರಿಯಾ ಶಕ್ತಿಗಳಿಂದ ಕೂಡಿ, ಮಾನವರು ಕರ್ತವ್ಯದಲ್ಲಿ ತೊಡಗಬೇಕೆಂದು ಅವರು ಬೋಧಿಸಿದರು.

ಪೌರಸಭಾ ಸದಸ್ಯತ್ವಕ್ಕೆ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರ ರಾಜೀನಾಮೆ

ಪೌರಸಭೆಯ ಅಧ್ಯಕ್ಷ, ಉಪಾಧ್ಯಕ್ಷಸ್ಥಾನಗಳಿಗೆ ಕಾಂಗ್ರೆಸ್ಸಿನ ಉಮೇದುವಾರರ ನಾಮಕರಣದ ಬಗ್ಗೆ ನಿರ್ದಿಷ್ಟವಾದ ತತ್ವ ಮತ್ತು ನೀತಿಗಳನ್ನು ಅನುಸರಿಸಿಲ್ಲವೆಂಬ ಕಾರಣದ ಮೇಲೆ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಪೌರಸಭೆಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕಳುಹಿಸಿದ್ದಾರೆ. ಶ್ರೀಗಳಾದ ಪಿ. ಸೀತಾರಾಮಯ್ಯ ಮತ್ತು ಎಸ್. ಲಿಂಗಣ್ಣನವರನ್ನು ಬಿಟ್ಟರೆ ತಾವೇ ಪೌರಸಭೆಯಲ್ಲಿ ಅತ್ಯಂತ ಹಳೆಯ ಕಾಂಗ್ರೆಸ್ಸಿನವರೆಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರ ಚುನಾವಣಾ ಪ್ರವಾಸ

ಮೈಸೂರು ೧೫

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಚುನಾವಣಾ ಪ್ರಚಾರದ ಸಂಬಂಧವಾಗಿ ಮೈಸೂರು ಜಿಲ್ಲೆಯ ಕೆಳಗೆ ಕಂಡ ಸ್ಥಳಗಳಲ್ಲಿ ಪ್ರವಾಸ ಮಾಡಿ ಭಾಷಣ ಮಾಡುವರು: ಇದೇ ತಿಂಗಳು ೧೬ನೇ ತಾರೀಕು ಬೆಳಗ್ಗೆ ೧೧-೩೦ ಗಂಟೆಗೆ ಮಿರ್ಲೆ, ೪ ಗಂಟೆಗೆ ಸಾಲಿಗ್ರಾಮ, ಸಂಜೆ ೭ಕ್ಕೆ ಹೊಸೂರು, ೧೭ನೇ ತಾರೀಕು ಬೆಳಗ್ಗೆ ೯ ಗಂಟೆಗೆ ಹುಣಸೂರು, ಮಧ್ಯಾಹ್ನ ೩ ಪಿರಿಯಾಪಟ್ಟಣ, ಸಂಜೆ ೫ ಗುಂಡ್ಲುಪೇಟೆ, ೭-೩೦ ರಾಮಸಮುದ್ರ, ೧೮ನೇ ತಾರೀಕು ಬೆಳಗ್ಗೆ ೯ ಕುದೇರು, ೧೧-೩೦ ಕಾಗಲವಾಡಿ, ಮಧ್ಯಾಹ್ನ ೨-೩೦ ಸೊಸ್ಲೆಹಳ್ಳಿ, ಸಂಜೆ ೪-೩೦ ನಂಜನಗೂಡು ಮತ್ತು ೬-೩೦ ಮೈಸೂರು.

ಧರ್ಮರಕ್ಷಣೆಗಿಂತ ಬೇರೊಂದು ಕರ್ತವ್ಯವಿಲ್ಲ

ಆಗಮತ್ರಯ ಸಮ್ಮೇಳನದಲ್ಲಿ ಶ್ರೀಮನ್ಮಹಾರಾಜರ ಭಾಷಣ

ನಂಜನಗೂಡು ೮

ಮೊನ್ನೆ ಇಲ್ಲಿ ನಡೆದ ಆಗಮತ್ರಯ ಮಹಾ ಮಂಡಲಿಯ ನಾಲ್ಕನೇ ಸಮ್ಮೇಳನದಲ್ಲಿ ಶ್ರೀಮನ್ ಮಹಾರಾಜರು ಈ ರೀತಿ ಆರಂಭ ಭಾಷಣ ಮಾಡಿದರು

ಕೇವಲ ಭೌತಿಕವಾದ ಅನುಭವಗಳಲ್ಲೇ ಮಗ್ನರಾದ ಜನ ಸಾಮಾನ್ಯರಿಗೆ ಈ ಸ್ಥೂಲ ಪ್ರಪಂಚಕ್ಕೆ ಅನುಸ್ಯೂತವಾಗಿ ಸೂಕ್ಷ್ಮವಾದ ದೈವಿಕ ಪ್ರಪಂಚವೊಂದಿದೆ ಮತ್ತು ಅದರ ಅನುಭವವನ್ನು ಭಾವನಾ ಪ್ರಧಾನವಾದ ಉಪಾಸನೆಗಳಿಂದ ಪಡೆಯಬಹುದೆಂಬ ದೃಢ ವಿಶ್ವಾಸವೇ ಆಸ್ತಿಕ್ಯ. ಅಂಥ ಉಪಾಸನೆಯ ರಹಸ್ಯಗಳನ್ನು ಒಳಗೊಂಡಿರುವುದೇ ಆಗಮ ಶಾಸ್ತ್ರ ಆಗಮ ಶಾಸ್ತ್ರವು ಅನುಷ್ಠಾನ ಭೇದದಿಂದ ಶೈವಾಗಮ, ವೈಖಾನಸಾಗಮ, ಪಾಂಚರಾತ್ರಾಗಮ ಇತ್ಯಾದಿ ಪ್ರಧಾನ ಭೇದಗಳಿಂದ ನಮ್ಮ ದಕ್ಷಿಣ ದೇಶದಲ್ಲಿ ಕಂಡು ಬರುತ್ತದೆ ಮಂತ್ರ ಶಾಸ್ತ್ರದ ವಿಧಿ ವಿಧಾನಗಳು ಅಡಗಿರುವುದು ಆಗಮಗಳಲ್ಲಿ ಮಾನಸ ಪೂಜೆ ಬಾಹ್ಯಪೂಜೆಯ ವಿವರಗಳನ್ನು ಅರಿಯಬೇಕಾದರೆ ಆಗಮಗಳಿಂದಲೇ ಪೂಜೆಗೆ ಆಧಾರವಾದ ದೇವಸ್ಥಾನಗಳ ನಿರ್ಮಾಣ ಮೊದಲಾದ ವಿಶಿಷ್ಟ ಸಂಗತಿಗಳ ವಿವರಣೆ ಇರುವುದು ಆಗಮಗಳಲ್ಲೇ ವೇದಗಳಂತೆಯೇ ಆಗಮಗಳೂ ಅಪೌರುಷೇಯವೆಂದು ಋಷಿಮುನಿಗಳು ಸಾರಿದ್ದಾರೆ ಆಗಮಗಳಲ್ಲಿ ಸಾಮಾನ್ಯ ಧರ್ಮ ವಿಶೇಷ ಧರ್ಮಗಳೆರಡೂ ವಿವೃತವಾಗಿವೆ

ಆಗಮಶಾಸ್ತ್ರ ಸಂರಕ್ಷಣೆಯ ಕಾರ್ಯವಿಂದು ಅಗತ್ಯ ಸನಾತನ ಸಂಸ್ಕೃತಿಯು ಇತರ ಎಲ್ಲಾ ಸಂಸ್ಕೃತಿಗಳಿಗಿಂತಲೂ ಶ್ರೇಷ್ಠವಾದುದು, ಅನಾದಿಯಾದುದು, ಅನಂತವಾದುದು ಸನಾತನವಾದ ನಮ್ಮ ಸಂಸ್ಕೃತಿಯ ಜನ್ಮಸ್ಥಾನ ಭಾರತಭೂಮಿ ಭಾರತ ವರ್ಷವು ವಿಶ್ವವಿಖ್ಯಾತವಾಗಿರಲು ಇದೇ ಕಾರಣ ಇಂತಹ ಸರ್ವಾದರಣೀಯವಾದ ಆರ್ಯ ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ ಆಗಮಧರ್ಮಗಳು ಬಹಳ ಗಹನವಾದುವು ಮಂತ್ರಗಳ ಪ್ರಯೋಗ-ಉಪಸಂಹಾರಗಳೇ ದೇವರ ಕಳಾಕರ್ಷಣೆ-ಕಳಾವಾಹನೆಗಳು ಮಂತ್ರಮಂಡಲ-ಮುದ್ರಾರಚನಾದಿ ಅತ್ಯಂತ ಗಹನವಾದ, ಗೋಪ್ಯವಾದ ವಿಷಯಗಳಿಂದ ಕೂಡಿರುವ ಆಗಮಧರ್ಮವನ್ನು ಆಗಮ ದೀಕ್ಷಾಕುಟುಂಬಗಳಾದ ಆಗಮಿಕರು ಬಹು ಎಚ್ಚರಿಕೆಯಿಂದ ಕಾಪಾಡುತ್ತಾ ಬರಬೇಕು

ಮಾನುಷ ಶಕ್ತಿಗಿಂತಲೂ ದೈವಶಕ್ತಿ ಮೇಲೆಂಬುದನ್ನು ಅಲ್ಲಪನ್ನುವ ಧೈರ್ಯ ಯಾರಿಗೆ ತಾನೆ ಇದೆ? ಆದರೆ ದೈವ ಶಕ್ತಿಯನ್ನು ಸಂಪಾದಿಸಲು ಉಪಾಸನೆಯ ವಿನಾ ಬೇರೆ ಸಾಧನವೇ ಇಲ್ಲ ಆಂತರಿಕ ಉಪಾಸನೆಯ ಮಾರ್ಗವನ್ನು ಸರಿಪಡಿಸಿಟ್ಟುಕೊಂಡು, ಶ್ರದ್ಧಾ ಭಕ್ತಿಯಿಂದ ಪಾರಂಪರ್ಯ ಕ್ರಮದಲ್ಲಿ ಕಾಪಾಡಿಕೊಂಡು ಬರುವುದು ಆಗತ್ಯವಾಗಿದೆ ಇದಕ್ಕಾಗಿ ಆಗಮತ್ರಯದ ಆಗಮಿಕರು ಸುಸಂಘಟಿತರಾಗಿ ಆಗಮತ್ರಯ ಮಹಾಮಂಡಲವನ್ನು ಸ್ಥಾಪಿಸಿಕೊಂಡು ಅದರ ಆಶ್ರಯದಲ್ಲಿ ಪ್ರತಿವರ್ಷ ಮಹಾ ಸಮ್ಮೇಳನವನ್ನು ನಡೆಯಿಸುತ್ತಾ ವಿದ್ವಾಂಸ ಪಂಡಿತರುಗಳಿಂದ ಸದ್ಧರ್ಮ ಸದಾಚಾರ ಪುರಾತನ ಸಂಸ್ಕೃತಿ ಮತ್ತು ಮೂರ್ತಿ ಪೂಜೆಯ ಮೂಲತತ್ವಗಳನ್ನು ಪ್ರಚಾರ ಮಾಡುವ ಪ್ರಯತ್ನ ನಡೆಸಿರುವುದು ಪ್ರಶಂಸನೀಯವೇ ಆಗಿದೆ ದಕ್ಷಿಣ ಭಾರತದ ಅನೇಕ ತೀರ್ಥ ಕ್ಷೇತ್ರಗಳ, ಅಲ್ಲಿನ ತಿರುಪತಿ, ಶ್ರೀರಂಗ, ಕಾಳಹಸ್ತಿ ಮಧುರೆ ಮುಂತಾದ ದೇವಸ್ಥಾನಗಳನ್ನು ನೋಡಿದವರಿಗೆ ಹಾಗೆಯೇ ನಮ್ಮ ದೇಶದ ಸುಪ್ರಸಿದ್ಧ ಸ್ಥಳಗಳಾದ ನಂಜನಗೂಡು, ಚಾಮುಂಡಿಬೆಟ್ಟ ಮೇಲುಕೋಟೆ, ಬೇಲೂರು ಹಳೇಬೀಡು ಬಿಳಿಗಿರಿರಂಗನಬೆಟ್ಟ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿದವರಿಗೆ ಅನಾದಿಯೂ, ಅಪೌರುಷೇಯವೂ ಆದ ಆಗಮ ಶಾಸ್ತ್ರದ ಮಹತ್ವ, ಆ ಪರ ಕಟ್ಟು ಪಾಡುಗಳೇ ಇದುವರೆಗೆ ನಮ್ಮನ್ನು ಪರಿಷ್ಕರಣಕ್ಕಾಗಿ ಉಳಿಸಿಕೊಟ್ಟಿವೆ ಎಂಬುದೂ ಆಸ್ತಿಕರಿಗೆ ಅರಿವಾಗದಿರಲಾರದು ಎಂದೆನಿಸುತ್ತದೆ

ಧರ್ಮವು ದಾನಕ್ಕಿಂತ ಪಾಲನೆಯಲ್ಲಿ ಹೆಚ್ಚಿನ ಮಹತ್ವದಿಂದ ಕೂಡಿದೆಯೆಂದು ಶಾಸ್ತ್ರಗಳಿಂದ ತಿಳಿದುಬಂದಿರುತ್ತದೆ ಧರ್ಮರಕ್ಷಣೆಗಿಂತ ಬೇರೊಂದಿರಲಾರದೆಂಬುದು ನಮ್ಮ ಅರಿಯ ಕಾಲಗತಿಯಲ್ಲಿ ಆಂದೋಳನದ ಆರ್ಭಟವಲ್ಲ, ಧರ್ಮಚ್ಯುತಿ ಬಂದೀತೆಂಬ ಭಯಗೋಚರಿಸುವುದು ಸಹಜ "ಪಯಸ್ಕೃದ್ಭಯ ನಾಶನಃ" ಎಂಬ ಬಿರುದನ್ನು ಹೊತ್ತಿರುವ ಭಗವಂತನ ಉಪಾಸಕರಿಗೆ ಬರುವ ಭಯವನ್ನು ದೂರೀಕರಿಸಿ, ಕರುಣೆದೋರಿ ಶರಣಾಗತವಾತ್ಸಲ್ಯದಿಂದ ಕಾಪಾಡುವನು ಭಗವಂತನೇ ಆಗಿರುವಾಗ, ಅವನ ಉಪಾಸನೆಯನ್ನು ವಿಧ್ಯುಕ್ತವಾದ ಮಾರ್ಗದಲ್ಲಿ ಶ್ರದ್ಧಾ ಭಕ್ತಿಗಳಿಂದ ಆಚರಿಸುವುದೊಂದೇ ಆತ್ಮೋದ್ಧಾರದ ಸಾಧನ. ಇದಕ್ಕಾಗಿ ಶ್ರಮಿಸುವುದು ಮಾನವನ ಕರ್ತವ್ಯ

ವಿಶ್ವಕ್ಕೆಲ್ಲ ಬೆಳಕನ್ನು ಕೊಡಬಲ್ಲ ಭಾರತಭೂಮಿಯ ಬೆಳಕು ಸನಾತನ ಧರ್ಮ ಸದಾಚಾರ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಶ್ವವ್ಯಾಪಿಯಾಗುತ್ತಿದೆ ಆದರ ಆಚರಣೆಗಾಗಿ ಮಠ-ದೇವತಾಮಂದಿರಗಳು ಸ್ಥಾಪಿತವಾಗಿವೆ ಗಗನಚುಂಬಿತವಾದ ಗೋಪುರದಿಂದ ನೆಲಮಟ್ಟದಲ್ಲಿ ಅಡಗಿರುವ ಬಲಿಪೀಠದ ಕ್ರಮದಲ್ಲಿ ರಚಿತವಾದ ದೇವಸ್ಥಾನಗಳು, "ಅಣೋರಣೀಯಾನ್ ಮಹತೋಮಹೀಯಾನ್" ಎಂಬ ಪಿಂಡಾಂಡ ಬ್ರಹ್ಮಾಂಡದ ವೈಶಿಷ್ಟ್ಯವನ್ನು ತೋರಿಸಿಕೊಡತಕ್ಕ ನಿದರ್ಶನಗಳಾಗಿವೆ ಅಂತಹ ದೇವಸ್ಥಾನದಲ್ಲಿ ಪ್ರತಿಷ್ಠಿತವಾದ ಮೂರ್ತಿಯು ಪರಮಾತ್ಮನ ರೂಪದಲ್ಲಿದ್ದು ಆಗಮಶಾಸ್ತ್ರೋಕ್ತ ವಿಧಾನದ ಪೂಜೋತ್ಸವಾದಿಗಳಿಂದ ದೇವತಾ ಸಾನ್ನಿಧ್ಯ ಸಂಪೂರ್ಣತೆಯನ್ನು ಪಡೆದು ಭಕ್ತಾನುಗ್ರಹ ಶಕ್ತಿ ಸಂಪಾದನೆಗೆ ಸಾಧಕವಾಗುವುದು ಅಂತಹ ಮೂರ್ತಿಯಲ್ಲಿ ಭಕ್ತಿಯನ್ನು ತುಂಬುವ ಕಾರ್ಯದಲ್ಲಿ ಆಚಾರ್ಯಸ್ಥಾನವನ್ನು ಪಡೆದಿರುವ ಆಗಮತ್ರಯದ ಆಗಮಿಕರು, ಅರ್ಚಕರುಗಳು ಸದಧಿಕಾರಿಗಳು ಅವರ ಕರ್ತವ್ಯನಿಷ್ಠೆಯಿಂದ ನೆರವೇರಲು ಸಮಾಜವೂ, ಸರ್ಕಾರದವರೂ ಸೂಕ್ತವಾದ ಸಹಾಯ ನೀಡುವುದು ಅಗತ್ಯವಾಗಿದೆ ಇಂತಹ ಪುರಾತನ ಸಂಸ್ಕೃತಿ ರಕ್ಷಣೆಯ ಕಾರ್ಯಗಳಿಗೆ ಸರ್ವತೋಮುಖವಾದ ಸಹಾಯ ಬೇಕು. ನಮ್ಮ ಪ್ರಜೆಗಳು ಧರ್ಮನಿಷ್ಠರಾಗಿ ಈ ಸಂಸ್ಥೆಗಳ ಉನ್ನತಿಗೆ ತಮ್ಮ ಕಾಣಿಕೆಯನ್ನು ಸಲ್ಲಿಸಬೇಕು

|| ಶ್ರೀ ||

ಗಣೇಶ ಟಾಕೀಸ್

12 12 51 ರಿಂದ ದಿನವಹಿ 3 ಆಟಗಳು

ಲೈಲಾ ಮಜ್ನು (ತಮಿಳು)

ಮುಖ್ಯ ಪಾತ್ರ:- ಟಿ ಆರ್ ಮಹಾಲಿಂಗಂ ಎಂ ವಿ ರಾಜಮ್ಮ, ಕೃಷ್ಣ ಮಧುರಂ

ಪ್ರಭಾ 14-12-51 ರಿಂದ ಆ ಮೋಘ ವಾ 3 ನೇ ವಾರ

- ಸಜ್ಜಾ -

(ಹಿಂದಿ)

ಪಾತ್ರ ದೇವಾನಂದ್, ನಿಮ್ಮಿ

ಒಲಂಪಿಯಾ ಟಾಕೀಸ್

13-12-51 ರಿಂದ 2 ನೇ ವಾರ

* ಬಾಬುಲ್ *

ಚಿತ್ರದ ಜೊತೆಯಲ್ಲಿ ಪ್ರದರ್ಶಿಸಲಾಗು ಚುನಾವಣಾ ಪ್ರಚಾರದ ಫಿಲ್ಮನ್ನು ನೋಡಲು ತಪ್ಪಬೇಡಿ

ಬೆಳಗಿನ ಪ್ರದರ್ಶನ —

14 12-51 ರಿಂದ 4 ದಿನ ಮಾತ್ರ

— ಸಿಂಧೂರ್ —

ಪಾತ್ರ — ಕಿಶೋರ್ ಸಾಹು ಶೋಭನಾ

|| ಶ್ರೀ ||

ಚಾಮುಂಡೇಶ್ವರಿ

13 12 51 ರಿಂದ ದಿನವಹಿ 3 ಪ್ರದರ್ಶನ

- ನಲ್ಲತಂಬಿ -

ಮುಖ್ಯಪಾತ್ರ — ಎನ್ ಎಸ್ ಕೃಷ್ಣನ್ ಟಿ ಎ ಮಧುರಂ, ಸಹಸ್ರನಾಮಂ ಮುಂತಾದವರು

ಮಲೇರಿಯಾ ಗೆಡ್ಡೆಗಳಿಗೆ

40 ವರ್ಷಗಳಿಂದ ಪ್ರಖ್ಯಾತವಾಗಿರುವ ಮೈಸೂರು ಎಸ್ ಎನ್ ಪಂಡಿತ್ ಅಂಡ್ ಸನ್ಸ್ ರವರ ಪಂಚಾಮೃತ, ಸ್ಪೆಷಲ್ ವಾಸಾವಲೇಹ್ಯ ಸುಗಂಧರಾಜ ತೈಲ ಇವುಗಳನ್ನು ಉಪಯೋಗಿಸಿರಿ.

ಬಸ್ಸು ಮತ್ತು ಲಾರಿ ಮಾಲೀಕರುಗಳಿಗೆ

ಶುಭವಾರ್ತೆ

ಇಟಲಿಯ ಇಂಜನಿಯರುಗಳಿಂದ ತಯಾರಿಸಲ್ಪಟ್ಟ ಪೂರ್ಣ ಸರ್ಕ್ಯುಲಾಕಾರದ ಟೈರು ಎರಕದ ಕಾರ್ಖಾನೆಯನ್ನು ಸದ್ಯದಲ್ಲೇ ಸ್ಥಾಪಿಸಲಿದ್ದೇವೆ ಆರಂಭದ ದಿನವನ್ನು ಎದುರು ನೋಡಿರಿ

* ಮೈಸೂರು ಟೈರ್ಸ್ *

1474 ಸಯ್ಯಾಜಿರಾವ್ ರಸ್ತೆ ಮೈಸೂರು

CITY IMPROVEMENT TRUST BOARD,

MYSORE 11-12-1951

AUCTION SALE NOTIFICATION

It is hereby notified for the information of the public that the released materials of the Lansdowne Buildings under demolition will be auctioned at the spot on Thursday the 13th December 1951 at 9 A. M. by the Trust Board Engineer or any officer authorised by him

(Sd) T Gopalakrishna Setti Chairman

ಗೌ|| ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚೀ, ಆರ್ಣೀ, ಬನಾರಸ್, ಪೂನಾ ಸಾಂಗ್ಲಿ, ಇಳಕಲ್, ಬೆಂಗಳೂರು ಸೀರೆಗಳು ಮತ್ತು ಕಾಶ್ಮೀರ್ ಶಾಲುಗಳಿಗೆ * D. L. ನರಸಿಂಹಯ್ಯ ಜವಳಿ ಅಂಗಡಿ ಬಾಂಬೆ ಆನಂದ ಭವನ ಪಕ್ಕ, ಮೈಸೂರು

Edited, Printed and Published by A R Nagarajan, at Sadhvi Press D Subbiah Road, Mysore

ರಿಜಿ ನಂ. 792 [ಶಾಂತೀ ಮಾಕರಂ] ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೧೩-೧೨-೫೧ [ಸಂಚಿಕೆ ೧೧೭

ರಂಗೂನ್ ಆಕ್ರಮಣಕ್ಕೆ ದಂಗೆಕೋರರ ಯತ್ನ ?

ಹರಿಕಥೆ

ಮೈಸೂರು ೧೩

ಬಿ. ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ನಾಳೆ ರಾತ್ರಿ ೯ ಗಂಟೆಗೆ ಶ್ರೀ ಸದೀಭರಂ ಶ್ರೀನಿವಾಸ ರಂಗಾಚಾರ್ಯರಿಂದ ಭಕ್ತ ಸುಧಾಮ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ ಸಕಲರೂ ದಯಮಾಡಿಸಬೇಕೆಂದು ಪ್ರಾರ್ಥಿಸಲಾಗಿದೆ

ಉಡುಪಿ ಮಠಾಧೀಶರ ಕಾರ್ಯಕ್ರಮ

ಉಡುಪಿಯ ಶ್ರೀ ಪೇಜಾವರ ಮಠಾಧೀಶರು ಈ ಸಂಜೆ ೫|| ಘಂಟೆಗೆ ಉತ್ತರಾದಿ ಮಠದಲ್ಲಿ "ಸುಧಾ ಗಾಂಭೀರ್ಯ" ಎಂಬ ವಿಷಯವಾಗಿ ಉಪದೇಶ ಭಾಷಣ ಮಾಡುವರು. ರಾತ್ರಿ ೮ ಘಂಟೆಗೆ ವೇಣುಗೋಪಾಲ ಕೃಷ್ಣ ದೇವಾಲಯದಲ್ಲಿ ಶ್ರೀ ಶ್ರೀಗಳನ್ನು ಬೀಳ್ಕೊಡುವ ಸಮಾರಂಭವು ಜರುಗಿ, ಅವರಿಗೆ ಅಭಿನಂದನ ಪತ್ರವನ್ನು ಸಲ್ಲಿಸಲಾಗುವುದು ಶ್ರೀ ಶ್ರೀಯವರು ಭಾಷಣ ಮಾಡುವರು. ನಾಳೆ ಮುಂಜಾನೆ ೫ ಘಂಟೆಗೆ ಶ್ರೀ ಶ್ರೀಯವರು ಉಡುಪಿಗೆ ಚಿತ್ತೈಸುವರು

ರಾಜಧಾನಿಯಲ್ಲಿ ಪ್ರಾಯೋಗಿಕ ಚುನಾವಣೆ

ಬರುವ ಜನವರಿ ೩ ನೇ ತಾರೀಖು ರಾಜಧಾನಿಯಲ್ಲಿ ನಡೆಯಲಿರುವ ಮಹಾ ಚುನಾವಣೆಯ ಸಂಬಂಧವಾಗಿ ಇಲ್ಲಿನ ನಿವಾಸಿಗಳಿಗೆ ಮತದಾನದ ಸರಿಯಾದ ತಿಳುವಳಿಕೆಯನ್ನು ಕೊಡಲು ಇದೇ ೧೬ನೇ ತಾ|| ಭಾನುವಾರ ವಿವಿಧ ಮೊಹಲ್ಲಾಗಳ ಕೆಳಗೆ ಕಂಡ ಸ್ಥಳಗಳಲ್ಲಿ ಪ್ರಾತಃ ೧೧ ಘಂಟೆಯಿಂದ ಸಂಜೆ ೫ ಘಂಟೆಯವರೆಗೆ ಪ್ರಾಯೋಗಿಕ ಚುನಾವಣೆಯನ್ನು ಏರ್ಪಡಿಸಲಾಗಿದೆ ಈ ಕ್ರಮವು ಯಶಸ್ವಿಯಾಗಿ ನಡೆಯಲು ಪುರನಿವಾಸಿಗಳು ಸಹಕರಿಸಬೇಕೆಂದು ನಗರದ ಚುನಾವಣಾಧಿಕಾರಿಗಳು ಕೋರಿರುತ್ತಾರೆ — ಕೃಷ್ಣರಾಜ ಮೊಹಲ್ಲಾ- ಪುರಸಭಾ ಕಛೇರಿ, ಚಾಮರಾಜ ಮೊಹಲ್ಲಾ- ಮರಿಮಲ್ಲಪ್ಪ ಹೈಸ್ಕೂಲು, ದೇವರಾಜ ಮೊಹಲ್ಲಾ- ನೃತ್ಯಮಂಡಲಿ ನಜರ್‌ಬಾದ್- ಪೋಲೀಸ್ ಸ್ಟೇಷನ್ನಿನ ಹತ್ತಿರ ಕನ್ನಡ ಪ್ರೈಮರಿ ಬಾಯ್ಸ್ ಸ್ಕೂಲ್, ಮಂಡಿಮೊಹಲ್ಲಾ- ಬಾಲಕೃಷ್ಣಾಚಾರ್ ಛತ್ರ ಮತ್ತು ಲಷ್ಕರ್ ಮೊಹಲ್ಲಾ- ಜಗ್ಗೂಲಾಲ್ ಛತ್ರ

ಭಾವಚಿತ್ರಗಳ ಅನಾವರಣ

ರಾಜಧಾನಿಯ ಅಕ್ಕಿ ಗಿರಣಿಗಳ ಮಾಲೀಕರುಗಳ ಸಂಘದ ಆಶ್ರಯದಲ್ಲಿ ಹೊಸ ಸಂತೇಪೇಟೆಯಲ್ಲಿರುವ ಸಂಘದ ಕಛೇರಿಯಲ್ಲಿ ಮಹಾತ್ಮಾ ಗಾಂಧಿ, ಪಂಡಿತ ನೆಹರೂ, ಶ್ರೀಮನ್ಮಹಾರಾಜರು ಮತ್ತು ಧ|| ರಾ|| ಸಿ ಪೆರುಮಾಳ್ ಚೆಟ್ಟಿಯಾರವರುಗಳ ಭಾವಚಿತ್ರಗಳ ಅನಾವರಣವನ್ನು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿಯವರು ನೆರವೇರಿಸಿದರು ಅಧ್ಯಕ್ಷರು ಮಾತನಾಡಿ ಸಮಾಜದಲ್ಲಿ ವರ್ತಕರುಗಳ ಪಾತ್ರವನ್ನು ವರ್ಣಿಸಿ, ಸಂಸ್ಥಾನದ ಪ್ರಗತಿಗೆ ಅವರು ದುಡಿಯಬೇಕೆಂದು ಪ್ರಾರ್ಥಿಸಿದರು. ಪ್ರಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ರಟ್ಟೆಹಳ್ಳಿ ರಾಮಪ್ಪನವರು ಸ್ವಾಗತ ಭಾಷಣ ಮಾಡಿದರು

ಕೆ. ಸಿ. ರೆಡ್ಡಿ ಮತ್ತು ಕೆ. ಟಿ. ಭಾಷ್ಯಂರವರ ಭಾಷಣ

ಮೈಸೂರು ೧೩

ಈ ಸಂಜೆ ೬|| ಘಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಚುನಾವಣಾ ಪ್ರಚಾರದ ಅಂಗವಾಗಿ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿ ಮತ್ತು ಸಹೋದ್ಯೋಗಿ ಮಂತ್ರಿಗಳೂ, ಸಂಸ್ಥಾನದ ಚುನಾವಣಾ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಕೆ ಟಿ ಭಾಷ್ಯಂರವರೂ ಭಾಷಣ ಮಾಡುವರು ಸಮಸ್ತರೂ ದಯಮಾಡಿಸಬೇಕೆಂದು ಕೋರಲಾಗಿದೆ

ಸಹಾಯಾರ್ಥ ವಿವಿಧ ವಿನೋದಾವಳಿ

ಅನಾಥ ಮಕ್ಕಳ ಸಹಾಯಾರ್ಥವಾಗಿ ಮೈಸೂರು ಅರಸನಕೆರೆ ಗುಡ್‌ಷೆಪರ್ಡ್ ಕಾನ್ವೆಂಟಿನಲ್ಲಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿದೆ ೧೫ನೇ ತಾ|| ಸಂಜೆ ೬-೩೦ಕ್ಕೆ ರಾಜಕುಮಾರಿ ಶ್ರೀ ಗಾಯತ್ರೀದೇವಿಯವರ ೧೬ನೇ ಸಂಜೆ ನಾಯಕರ್ ಶ್ರೀ ಚನ್ನಯ್ಯನವರ ಮತ್ತು ೧೭ನೇ ತಾ|| ಸಂಜೆ ಡವೇಜರ್ ಮಹಾರಾಣಿಯವರ ಘನ ಅಧ್ಯಕ್ಷತೆಯಲ್ಲಿ ಸ್ತ್ರೀಯರಿಗಾಗಿ ಮೇಲ್ಕಂಡ ಕಾರ್ಯಕ್ರಮವು ನಡೆಯುವುದು ಟಿಕೆಟ್ ಮೂಲಕ ಪ್ರವೇಶ ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ರಾಜಧಾನಿಯ ಶಾರದಾವಿಲಾಸ ಕಾಲೇಜು ಸಂಘದವರು ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ನಾಳೆ ಸಂಜೆ ೬|| ಘಂಟೆಗೆ ಟೌನ್‌ಹಾಲಿನಲ್ಲಿ ನಾಟಕ, ಮತ್ತು ಸಂಗೀತಗಳಿಂದ ಕೂಡಿದ ವಿವಿಧ ವಿನೋದಾವಳಿಯನ್ನು ಏರ್ಪಡಿಸುತ್ತಾರೆ ಶ್ರೀ ವಿ ಸೀ ಯವರ "ಆಗ್ರಹ" ಎಂಬ ನಾಟಕವು ಅಭಿನಯಿಸಲ್ಪಡುವುದು

ಉಪನ್ಯಾಸ

ಮೈಸೂರು ಪ್ರಥಮ ದರ್ಜೆಯ ಕಾಲೇಜಿನಲ್ಲಿ ನಾಳೆ ಸಂಜೆ ೫|| ಗಂಟೆಗೆ ಪ್ರೊ|| ಕೆ ವಿ ಪುಟ್ಟಪ್ಪನವರು ಭಾಷಾ ಸಮಸ್ಯೆ-ಕನ್ನಡ ಮಾಧ್ಯಮದ ಅವಶ್ಯಕತೆ, ಎಂಬ ವಿಷಯವಾಗಿ ಕಾಲೇಜು ಸಂಘದ ಆಶ್ರಯದಲ್ಲಿ ಉಪನ್ಯಾಸ ಮಾಡುವರು.

ಬನ್ನೂರು ಬಳಿ ಕಾವೇರಿ ನದಿಗೆ ಸೇತುವೆ

ಶ್ರೀಮನ್ಮಹಾರಾಜರವರಿಂದ ಶಂಕು ಸ್ಥಾಪನೆ

ಮೈಸೂರು ೧೩

ಶ್ರೀಮನ್ಮಹಾರಾಜರು ನೆನ್ನೆ ಬನ್ನೂರು ಬಳಿ ಕಾವೇರಿ ನದಿಗೆ ಸೇತುವೆಯನ್ನು ಕಟ್ಟಲು ಅಸ್ತಿಭಾರದ ಶಿಲಾ ಸ್ಥಾಪನೆಯನ್ನು ನೆರವೇರಿಸಿದರು ಅದಕ್ಕಾಗಿ ಕಾವೇರಿ ತೀರದ ಬಳಿ ಭಾರಿ ಸಮಾರಂಭವು ಏರ್ಪಾಡಾಗಿತ್ತು ಇಪ್ಪತ್ತು ಸಾವಿರಕ್ಕೂ ಮೇಲ್ಪಟ್ಟ ಸುತ್ತಮುತ್ತಲಿನ ಜನರು ನೆರೆದಿದ್ದರು.

ಮಂಗಳಾಚರಣೆಯ ನಂತರ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಎಚ್. ಎಂ ಚನ್ನಬಸಪ್ಪನವರು ಪ್ರಭುಗಳಿಗೆ ವಿಜ್ಞಾಪನಪತ್ರಿಕೆಯನ್ನು ಒಪ್ಪಿಸಿ ಸೇತುವೆ ನಿರ್ಮಾಣದ ಬಗ್ಗೆ ಜಿಲ್ಲಾ ಬೋರ್ಡಿನವರು ಕೈಗೊಂಡಿರುವ ಕಾರ್ಯಕ್ರಮವನ್ನು ಅರಿಕೆಮಾಡಿದರು

ಚೀಫ್ ಇಂಜನಿಯರಾದ ಶ್ರೀ ಎ. ನೀಲಕಂಠಪ್ಪನವರು ಸೇತುವೆಯ ಅಂದಾಜು, ಆಕಾರ ಮತ್ತು ಅದರಿಂದಾಗುವ ಸೌಲಭ್ಯಗಳನ್ನು ವಿವರಿಸಿದರು

ಬನ್ನೂರು ಪೌರಸಭೆಯ ಪರವಾಗಿ ಉಪಾಧ್ಯಕ್ಷರಾದ ಶ್ರೀ ಟಿ ರಾಮಯ್ಯನವರು ಬಿನ್ನವತ್ತಳೆಯನ್ನು ಓದಿ ಪ್ರಭುಗಳಿಗೆ ಸಮರ್ಪಿಸಿದರು ಬನ್ನೂರನ್ನು ಒಂದು ತಾಲ್ಲೂಕಾಗಿ ಮಾರ್ಪಡಿಸಬೇಕೆಂದೂ, ಅಲ್ಲಿಗೆ ಕುಡಿಯುವ ನೀರು ಸರಬರಾಜಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದೂ ಅವರು ಅರಿಕೆ ಮಾಡಿದರು

ಶ್ರೀಮನ್ಮಹಾರಾಜರು ಉತ್ತರವಿತ್ತು ಸೇತುವೆಯ ನಿರ್ಮಾಣ ಕಾರ್ಯದ ಪ್ರಯತ್ನಕ್ಕಾಗಿ ತಮ್ಮ ಮೆಚ್ಚಿಗೆಯನ್ನು ತೋರಿ ಜಿಲ್ಲಾ ಬೋರ್ಡಿನವರು ಜನರ ಅಭಿವೃದ್ಧಿಗಾಗಿ ಮಾರ್ಗಾನುಕೂಲಗಳನ್ನೂ ಸೇತುವೆಗಳನ್ನೂ ನಿರ್ಮಿಸುತ್ತಿರುವ ಬಗ್ಗೆ ಸಂತೋಷವನ್ನು ಸೂಚಿಸಿದರು. ಹೊಸ ಸೇತುವೆ ನಿರ್ಮಾಣದಿಂದ ಬನ್ನೂರು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುವುದಾಗಿ ಹೇಳಿ, ಅಲ್ಲಿನ ಪೌರಸಭೆಯವರ ಅರಿಕೆಗಳನ್ನು ಸರ್ಕಾರದವರು ಪರಿಶೀಲಿಸಿ ಸೂಕ್ತ ರೀತಿಯಲ್ಲಿ ತೀರ್ಮಾನ ಮಾಡುವರೆಂದು ತಿಳಿಸಿದರು

ದಂಗೆಕೋರರಿಂದ ಬರ್ಮಾ ರಾಜಧಾನಿಗೆ ವಿಪತ್ತು !

ರಂಗೂನ್ ನಗರವನ್ನು ಆಕ್ರಮಿಸುವ ಗುರಿಯಿಂದ ಮಧ್ಯ ಮತ್ತು ದಕ್ಷಿಣ ಬರ್ಮಾದ ಕಡೆಯಿಂದ ದಂಗೆಕೋರರ ಮೂರು ತಂಡಗಳು ಪೆಗುವಿಗೆ ಈಶಾನ್ಯದಲ್ಲಿ ಜಮಾಯಿಸುತ್ತಿರುವುವೆಂದು ಹೇಳಲಾಗಿದೆ ಆದರೆ ಈ ಸುದ್ದಿಗೆ ರಂಗೂನಿನಲ್ಲಿ ಸಮರ್ಥನೆ ದೊರೆತಿಲ್ಲವೆಂದು ಗೊತ್ತಾಗಿದೆ

ಲಂಡನ್ನಿನಿಂದ ಈಜಿಪ್ಟ್ ರಾಯಭಾರಿಯ ವಾಪಸು

ಲಂಡನ್ನಿನಲ್ಲಿರುವ ತನ್ನ ರಾಯಭಾರಿಯನ್ನು ವಾಪಸು ಕರೆಸಲು ಈಜಿಪ್ಟ್ ಸರ್ಕಾರವು ನಿರ್ಧರಿಸಿರುವುದರ ಮೇರೆ ಶೀಘ್ರದಲ್ಲೇ ಅವರು ಸ್ವದೇಶಕ್ಕೆ ಹಿಂದಿರುಗುವರು ಬ್ರಿಟನ್ನಿನೊಡನೆ ಇರುವ ವ್ಯಾಜ್ಯದ ಪರಿಣಾಮವಾಗಿ ತನ್ನ ಪ್ರಜೆಗಳೆಲ್ಲರೂ ಸ್ವತಂತ್ರಿಸಿ ಶಸ್ತ್ರಾಸ್ತ್ರಗಳನ್ನು ಹೊಂದಲು ಈಜಿಪ್ಟ್ ಸರ್ಕಾರವು ಅವಕಾಶವೀಯುವುದು.

ಉತ್ತರ ಕೊರಿಯಾ ದ್ವೀಪ ಬಿಡಲು ವಿಶ್ವಸಂಸ್ಥೆ ಸೇನೆ ಸಿದ್ಧ

ಯುದ್ಧ ಮುಕ್ತಾಯದ ಮಾತುಕತೆಗಳನ್ನು ಸುಗಮಗೊಳಿಸಲು ವಿಶ್ವಸಂಸ್ಥೆಯ ಪ್ರತಿನಿಧಿಗಳು ಮುಖ್ಯವಾದ ರಿಯಾಯಿತಿಗಳನ್ನು ಕಮ್ಯೂನಿಸ್ಟರಿಗೆ ತೋರಿಸುವುದರಲ್ಲಿ ಸಿದ್ಧವಾಗಿರುತ್ತಾರೆಂದು ಹೇಳಲಾಗಿದೆ ತಾಟಸ್ಥ್ಯ ಪರಿಶೀಲನಾ ಸಮಿತಿಯನ್ನು ನೇಮಿಸಲೂ ಮತ್ತು ಉತ್ತರ ಕೊರಿಯಾ ತೀರದ ದ್ವೀಪಗಳಿಂದ ಕಾಲ್ತೆಗೆಯಲೂ ವಿಶ್ವ ಸಂಸ್ಥೆಯು ಒಪ್ಪಿರುವುದಾಗಿ ವರದಿಯಾಗಿದೆ

ಕಾಂಗ್ರೆಸ್ ವಿರುದ್ಧ ನಿಂತಿರುವ ಸಂಸ್ಥೆ ಸದಸ್ಯರ ಮೇಲೆ ಕ್ರಮ

ಕೇಂದ್ರ ಚುನಾವಣಾ ಸಮಿತಿಯವರಿಂದ ಆರಿಸಲ್ಪಡದೆ ಚುನಾವಣೆಗೆ ಅಧಿಕೃತ ಉಮೇದುವಾರರ ವಿರೋಧವಾಗಿ ಸ್ಪರ್ಧಿಸಿರುವ ಕಾಂಗ್ರೆಸ್ ಸದಸ್ಯರನ್ನು ಕೂಡಲೇ ಸಸ್ಪೆಂಡ್ ಮಾಡಲು ಅ. ಭಾ. ಕಾಂಗ್ರೆಸ್ ಸಮಿತಿಯು ಎಲ್ಲಾ ಪ್ರದೇಶ ಸಮಿತಿಗಳಿಗೂ ಸೂಚನೆಯನ್ನು ಕಳುಹಿಸಿರುತ್ತದೆ. ಇದೇ ನೋಟಿಗೆ ಅರ್ಜಿಗಳನ್ನು ವಾಪಸು ಪಡೆಯದ ಬಂಡಾಯ ಉಮೇದುವಾರರ ಮೇಲೂ ಕ್ರಮ ಕೈಗೊಳ್ಳಲಾಗುವುದು ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಕಳೆದ ೬ನೇ ತಾ|| ಇಲ್ಲಿನ ಪ್ರಾದೇಶಿಕ ಕಾರ್ಯಕಾರಿ ಸಮಿತಿಯು ಕೊಟ್ಟ ಅವಧಿಯಲ್ಲಿ ಇದುವರೆಗೆ ಯಾರೂ ತಮ್ಮ ಅರ್ಜಿಗಳನ್ನು ಹಿಂತೆಗೆದುಕೊಂಡಿಲ್ಲವೆಂದು ತಿಳಿದುಬಂದಿದೆ

ಬೆಂಗಳೂರಿನಲ್ಲಿ ಯಂತ್ರೋಪಕರಣ ತಯಾರಿಕಾ ಕಾರ್ಖಾನೆ

ಬರುವ ಎರಡು ವರ್ಷಗಳಲ್ಲಿ ಯಂತ್ರೋಪಕರಣಗಳನ್ನು ತಯಾರಿಸಬಲ್ಲ ಕಾರ್ಖಾನೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದು ಭಾರತದ ರೈಲ್ವೆ, ರಕ್ಷಣೆ ಮತ್ತು ಕೈಗಾರಿಕೆ ಶಾಖೆಗಳಿಗೆ ಕಾರ್ಖಾನೆಯಿಂದ ಯಂತ್ರಗಳನ್ನು ಒದಗಿಸಲಾಗುವುದು. ಈ ಕಾರ್ಖಾನೆಗೆ ಹತ್ತು ಕೋಟಿ ರೂ. ಬಂಡವಾಳ ತಗಲುವುದು.

ಮಧ್ಯ ಪ್ರಾಚ್ಯಕ್ಕೆ ಬ್ರಿಟೀ-ಅಮೇರಿಕಾ ರಕ್ಷಣೆ ಬೇಕಿಲ್ಲ

ಪಶ್ಚಿಮಧ್ಯ ಸಮುದ್ರ ಮತ್ತು ಮಧ್ಯ ಪ್ರಾಚ್ಯ ರಾಷ್ಟ್ರಗಳು ಸೇರಿ ತಮ್ಮ ರಕ್ಷಣೆ ಬಗ್ಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳುವ ಸಲುವಾಗಿ ಈಜಿಪ್ಟು ಹೊಸ ಯೋಜನೆಯೊಂದನ್ನು ಮುಂದಿಸಲಿರುವುದಾಗಿ ವರದಿಯಾಗಿದೆ. ಈ ಯೋಜನೆಯ ಪ್ರಕಾರ ಈ ದೇಶಗಳ ರಕ್ಷಣಾ ವ್ಯವಸ್ಥೆಗೆ ಬ್ರಿಟನ್ ಮತ್ತು ಅಮೇರಿಕಾಗಳನ್ನು ಸೇರಿಸುವುದಿಲ್ಲವೆಂದು ಹೇಳಲಾಗಿದೆ

ಕೋತಿಗಳ ಕೊಲೆ ಬೇಡ

ಕಳೆದ ತಿಂಗಳು ೧೯ನೇ ತಾ॥ ಸಾಧ್ವಿ ಪತ್ರಿಕೆಯಲ್ಲಿ 'ಕೋತಿಗಳ ಹಾವಳಿ' ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಂಡ ಬನ್ನೂರು, ಪಾಂಡವಪುರ ತಾಲ್ಲೂಕುಗಳ ನೊಂದ ರೈತರು ಕೋತಿಗಳನ್ನು ಕೊಲ್ಲುವ ಬಗ್ಗೆ ಸರ್ಕಾರಕ್ಕೆ ಸಲಹೆಯನ್ನು ಕೊಟ್ಟಿರುವುದೂ ಮತ್ತು ಅದಕ್ಕಾಗಿ ಬಂದೂಕದ ರಹದಾರಿ ಕೇಳಿರುವುದೂ ಆಶ್ಚರ್ಯವನ್ನು ಉಂಟುಮಾಡಿರುವುದಾಗಿಯೂ, ಮಾನವನ ನೈಜ ಗುಣವನ್ನು ಮರೆತು ಪಾಪದ ಎಲ್ಲೆಯಲ್ಲಿ ಹುಳಿದಾಡಲು ಭಾರತೀಯರಿಗೆ ಸಲ್ಲದೆಂದೂ ಕೋತಿಗಳ ಆವಾಸ ಸ್ಥಾನಗಳಾದ ತೋಪುಗಳು ಆಗ ನೆಡಿಸಿ, ಅವು ಗೆಡ್ಡೆ ಗೆಣಸು ಮತ್ತು ಹಣ್ಣುಗಳನ್ನು ತಿಂದು ಜೀವಿಸಲು ಅವಕಾಶವಿಲ್ಲವಾಗಿದೆಯೆಂದೂ, ಅವುಗಳಿಂದ ಬೆಳೆಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಒಳ್ಳೆಯದೆಂದೂ ತಿಳಿಸಿ ಕೋಲಾರದ ಜಿಲ್ಲೆಯ ಗೆಣಿಯ ಜೀವಕಾರುಣ್ಯ ಸಂಘದ ಕಾರ್ಯದರ್ಶಿ ಶ್ರೀ ಸಿ. ಎಸ್ ನಾರಾಯಣರಾವರು ಪತ್ರವೊಂದನ್ನು ಬರೆದಿರುತ್ತಾರೆ

ಸಂಸ್ಥಾನದ ಗ್ರಾಮಾಧಿಕಾರಿಗಳ ಸಂಘದ ಜರೂರು ಸಭೆ

ಮೈಸೂರು ಸಂಸ್ಥಾನದ ಗ್ರಾಮಾಧಿಕಾರಿಗಳ ಸಂಘದ ಕಾರ್ಯಕಾರಿ ಸಮಿತಿಯ ಜರೂರ ಸಭೆಯು ಈ ತಿಂಗಳು ೧೬ನೇ ತಾ॥ ಭಾನುವಾರ ೩ ಘಂಟೆಗೆ ಶ್ರೀರಾಂಪೇಟೆಯ ಕೊತ್ವಾಲರಾಮಯ್ಯನವರ ಬೀದಿಯಲ್ಲಿರುವ ಮೈಸೂರು ತಾಲ್ಲೂಕು ಗ್ರಾಮಾಧಿಕಾರಿಗಳ ಸಂಘದ ಕಛೇರಿಯಲ್ಲಿ ಸೇರುವ ಸಂಭವವೆಂದೂ ಕಳೆದ ೬ನೇ ತಾ॥ ರಾಜಧಾನಿಯ ಟೌನ್ ಹಾಲ್ ನಲ್ಲಿ ನಡೆದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ... ಪ್ರೆಸ್ ... ಭಾಷಣ ... ಆಹಾರಾಭಾವ ಮತ್ತು ಕಾಲಸಂತೆಗೆಗೆ ಗ್ರಾಮಾಧಿಕಾರಿಗಳೇ ಕಾರಣರೆಂದು ಮಂತ್ರಾಗಿ ಮಾಡಿರುವ ಆರೋಪಣೆಗಳನ್ನು ಈ ಸಮಿತಿಯು ಪರಿಶೀಲಿಸುವುದೆಂದೂ ಸಂಸ್ಥಾನದ ಗ್ರಾಮಾಧಿಕಾರಿಗಳ ಸಂಘದ ಉಪಾಧ್ಯಕ್ಷರು ತಿಳಿಸಿರುತ್ತಾರೆ

ರಾಜಕಮಲ್ ಮೈಸೂರು

14 12 51 ರಿಂದ ಅಮೋಘ ಪ್ರಾರಂಭ ಪ್ರತಿ ದಿನ ಮೂರು ಪ್ರದರ್ಶನಗಳು

ಎ. ವಿ. ಎಂ ರವರ

ಒಂದು ರಾತ್ರಿ

(ತಮಿಳು)

ಪಾತ್ರ ಲಲಿತಾ ಪದ್ಮಿನಿ ನಾಗೇಶ್ವರ ರಾವ್, ಬಾಲಯ್ಯ

AN EXPERIENCED UNIVERSITY TEACHER, now retired provides instruction in Mathematics for students appearing for INTERMEDIATE, B.SC (PASS), B SC (HONS) EXAMINATIONS in Mysore University

For tuition fees & other particulars apply before 15th December 1951 to the undersigned

MATHEMATICUS

321 D Subbiah Road

MYSORE

ಶಿವ ಮತ್ತು ವಿಷ್ಣು ದೀಪೋತ್ಸವ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಚಂದ್ರಮೌಳೀಶ್ವರಸ್ವಾಮಿಗೆ ನೂ ನ್ನೆ ಶಿವದೀಪೋತ್ಸವವು ನೆರವೇರಿಸಲ್ಪಟ್ಟಿತು ಈ ಸಂಚೆ ವಿಷ್ಣು ದೀಪೋತ್ಸವವೂ ನಡೆಯಲಿದೆ ಬ ... ಕಂಪನಿಯವರು ಈ ಉತ್ಸವಗಳಿಗ ಉಚಿತವಾಗಿ ಎಲ್ಲೆಯ ಸರಬರಾಜು ಮಾಡಿದ್ದರು

ಬೀಗದ ಕೈ ಗೊಂಚಲು ಸಿಕ್ಕಿದೆ

ರಾಜಧಾನಿಯ ಬಲಿಪಿಯಾ ಹಾಕೀಸ್ ಒಳ ಒಂದು ಬೀಗದ ಕೈಗೊಂಚಲು ಸಿಕ್ಕಿದೆ ಮಾಲೀಕರು ಸರಿಯಾದ ದುರುವಾಹು ಕೊಟ್ಟು ಸಾಧ್ವಿ ಕಚೇರಿಯಿಂದ ಪಡೆಯಬಹುದು

ABSTRACT NOTIFICATION

Dated 4th Dec 1951

Sealed Tenders for constructing Shop Godowns in premises of the Palace Mothikhana Building along Santhepet Road Mysore will be received till 3 30 P M on 27th Dec 1951

Please see Notification in the Mysore Gazette and on the Notice Board of his Office for details

H N Pandithuradhya,

Palace Engineer,

Mysore

ಧನುರ್ಮಾಸದಂ, ಅಡೀ, ಮೈಸೂರು ಸಿಲ್ಕ್ ನಾಗಪುರದ ಪೂನಾ ಸೀರೆಗಳಿಗೆ ಮತ್ತು ಶಾಲ್ಸ್ಟೀರ ಶಾಲುಗಳಿಗೆ

M. V. ಭೋಜಯ್ಯ

ಅಂಡ್ ಬ್ರದರ್ಸ್

ಮೈಸೂರ ... ಬ್ಯಾಂಕ್ ಬಳಿ

ಜಾಹೀರಾತು

ಮೈಸೂರು ದೇವರಾಜ ಮೊಹಲ್ಲಾ ಆನೆ ಸಾರೋಟು ಬೀದಿಯ ಭಜನೆ ವೆಂಕಟಪ್ಪನವರ ರಾಮ ಮಂದಿರ ಈ ಸಂಜೆ ೫॥ ಗಂಟೆಗೆ ಶ್ರೀ ಕೆ. ಗುರುರಾಯರು ದ್ರೌಪದಿ ದರ್ಬಾರು ಹರಿಕಥೆಯನ್ನು ಮಾಡುವರು

ಒಲಿಂಪಿಯಾ

13 12-51 ರಿಂದ ಅಮೋಘ ೨ನೇ ವಾರ ... ಜೆಮಿನಿ ...

ಬಾಬುಲ್

ಮುಂದಿನ ಆಕರ್ಷಣೆ — ಸೂಪರ್ ಪಿಕ್ಚರ್ಸ್ ರವರ:

ಬಡಿಭಯ್ಯ

(ಹಿಂದಿ ಚಿತ್ರ)

ಚಾಮುಂಡೇಶ್ವರಿ

13-12 51 ರಿಂದ ದಿನವಹಿ 3 ಪ್ರದರ್ಶನ

ನಲ್ಲತಂಬಿ

ಮುಖ್ಯಪಾತ್ರ — ಎನ್ ಎಸ್ ಕೃಷ್ಣ ಟಿ ಎ ಮಧುರಂ, ಸಹಸ್ರನಾಮ

ಬಹಳ ಉತ್ತಮವಾದ ಸಾಬೂನು

808

ದಿ ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

.C. T C MYSORE

CLASSES BEGUN

INTER :- Eng and P C M.

S S L C. For MARCH 1952

CLASSES TO BEGIN

B Sc - Mathematics & Chemistry

INTER . C B Z

THE CITY TUTORIAL COLLEGE

New V V Market Mysore

ಅಬೀದ್ ರವರ ಅಮೋಘ ಹರಾಜು

16ನೇ ತಾ॥ . ಭಾನುವಾರ ಬೆಳಿಗ್ಗೆ 10 ಘಂಟೆಗೆ :: ಹೋರೂಂ ಬಳಿ

ಕದಗಳ ಬೀರುಗಳು, ... ಕುರ್ಚಿಗಳು, ... ಮೇಜುಗಳು ... ಗ್ರಾಮಫೋನ್ ... ಗಾಜಿನ ಸಾಮಾನುಗಳು ... ಮತ್ತು ಇತರ ಉಪಯುಕ್ತ ಪದಾರ್ಥಗಳು

15 ನೇ ತಾ॥ ಶನಿವಾರ ಮಧ್ಯಾಹ್ನ 3 ರಿಂದ 6 ರ ವರೆಗೆ ಸಾಮಾನುಗಳನ್ನು ಅವಲೋಕಿಸಿ ನೋಡಬಹುದು.

ಬಸ್ಸು ಮತ್ತು ಲಾರಿ ಮಾಲೀಕರುಗಳಿಗೆ

ಶುಭವಾರ್ತೆ

ಇಟಲಿಯ ಇಂಜನಿಯರುಗಳಿಂದ ತಯಾರಿಸಲ್ಪಟ್ಟ, ಪೂರ್ಣ ವರ್ತುಲಾಕಾರದ ಪೈರು ಎರಕದ ಕಾರ್ಖಾನೆಯನ್ನು ಸಧ್ಯದಲ್ಲೇ ಸ್ಥಾಪಿಸಲಿದ್ದೇವೆ. ಆರಂಭದ ದಿನವನ್ನು ಎದುರು ನೋಡಿರಿ

* ಮೈಸೂರು ಟೈರ್ಸ್ *

1474 ಸಂತೆಪೇಟೆ ರಸ್ತೆ . ಮೈಸೂರು

ಗೌ॥ ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚಿ, ಅರ್ನಿ, ಬನಾರಸ್, ಪೂನಾ ಸಾಂಗ್ಲಿ, ವರಿಯೂರು ಸೀರೆಗಳು ಮತ್ತು ಶಾಲ್ಸ್ ಶಾಲುಗಳಿಗೆ

* D. L. ನರಸಿಂಹಯ್ಯ

ಅಡ್ಡ ರಸ್ತೆ ... ಧರ್ಮ ಛತ್ರ, ಮೈಸೂರು

Edited, Printed and Published by A R Nagarajan, at Sadhvi Press D. Subbiah Road, Mysore

ನೋಂ. ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೧೪-೦೬-೫೦ [ಸಂಚಿಕೆ ೧೧೮

- ಭಾರತೀಯರಿಗೆ -
ದ|| ಆಫ್ರಿಕದ ಉಚ್ಚಾಟನೆ

ಕಾಂಗ್ರೆಸ್ಸಿನಿಂದಲೇ ವ್ಯವಸ್ಥಿತ ಪ್ರಗತಿ ಸಾಧ್ಯ

ಚುನಾವಣಾ ಪ್ರಚಾರ ಸಭೆಯಲ್ಲಿ ಕೆ. ಟಿ. ಭಾಷ್ಯಂರವರ ಭಾಷಣ

ಮೈಸೂರು ೧೪

ದೇಶದಲ್ಲಿ ವ್ಯವಸ್ಥಿತವಾದ ಪ್ರಗತಿಯು ಸಾಧಿಸಲ್ಪಟ್ಟು, ಜನರಿಗೆ ಸಂತುಷ್ಟಿಯುಂಟಾಗಬೇಕಾದರೆ ಅದು ಕಾಂಗ್ರೆಸ್ ಸಂಸ್ಥೆಯಿಂದ ಮಾತ್ರ ಸಾಧ್ಯ ಎಂಬುದಾಗಿ ನೆನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಭಾಷಣ ಮಾಡುತ್ತಾ ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂರವರು ತಿಳಿಸಿದರು. ೬೦-೭೦ ವರ್ಷಗಳಿಂದಲೂ ದೇಶದ ಅಭ್ಯುದಯವನ್ನೇ ಗುರಿಯನ್ನಾಗಿಟ್ಟುಕೊಂಡು ಹೋರಾಡಿದ ಸಂಸ್ಥೆಯು ಪ್ರಜಾ ಹಿತಕ್ಕಾಗಿ ದುಡಿಯಲು ಸಾಧ್ಯವಾಗದಿದ್ದರೆ ಮತ್ತಾವ ಪಕ್ಷಗಳಿಂದ ಸಾಧ್ಯವೆಂದು ಅವರು ಪ್ರಶ್ನಿಸಿದರು.

ಬ್ರಿಟಿಷರು ಭಾರತದಿಂದ ಕಾಲ್ತೆಗೆದ ಸಮಯದಲ್ಲಿ ದೇಶದ ಬೊಕ್ಕಸವನ್ನು ಬರಿದು ಮಾಡಿ, ಸಂಸ್ಥಾನದ ರಾಜರುಗಳೂ ಸ್ವತಂತ್ರರೆಂದು ಘೋಷಿಸಿಹೋದ ನಂತರ ಉಂಟಾದ ಪರಿಸ್ಥಿತಿ ಮತ್ತು ದೇಶವು ವಿಭಾಗವಾದುದರಿಂದ ಉಂಟಾದ ಮಹತ್ಸಂಕಟಗಳಿಂದ ಪಾರಾಗಿ, ದೇಶವು ಸುಭದ್ರವಾಗಿರುವಂತೆ ಮಾಡುವ ಕೆಲಸವು ಸಾಮಾನ್ಯವಾದುದಲ್ಲವೆಂದು ಅವರು ಹೇಳಿದರು. ಆಹಾರದ ಅಭಾವವು ತುಂಬಾ ಆತಂಕಕ್ಕೆ ಕಾರಣವಾದ್ದರೂ ಸಹ, ಹೆಚ್ಚು ಆಹಾರ ಬೆಳೆಯುವ ಕೆಲಸಗಳು ನಡೆದು ಮುಂದಿನ ಕೆಲವು ವರ್ಷಗಳಲ್ಲಿ ಪರಿಸ್ಥಿತಿಯು ಹತೋಟಿಗೆ ಬರುವುದೆಂದು ಆಶಿಸಿದರು. ೬೦-೭೦ ವರ್ಷಗಳಲ್ಲಿ ಸಾಧಿಸದೇ ಇದ್ದ ಕಾರ್ಯಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಮಾಡಲಾಗಿದೆಯೆಂದು ಅಂಕಿ ಅಂಶಗಳಿಂದ ತಿಳಿಸಿದರು.

ಪ್ರಪಂಚದಲ್ಲಿ ಶಾಂತಿಯು ಶಾಶ್ವತವಾಗಿ ನಿಲ್ಲಬೇಕಾದರೆ ಭಾರತದ ಪ್ರಯತ್ನದಿಂದಲೇ ಅದು ಆಗಬೇಕೆಂದೂ, ಚರ್ಚಿಲ್, ಟ್ರೂಮನ್ ಮತ್ತು ಸ್ಟಾಲಿನರಿಗೆ ಬುದ್ಧಿವಾದ ಹೇಳಲು ನೆಹರೂರವರಿಗೆ ಮಾತ್ರ ಸಾಧ್ಯವೆಂದೂ, ಅಂತಹ ನಾಯಕರನ್ನು ಅಧ್ಯಕ್ಷರಾಗುಳ್ಳ ಕಾಂಗ್ರೆಸ್ಸಿಗಿಂತ ಬೇರೊಂದು ಉತ್ತಮ ಸಂಸ್ಥೆಯಿಲ್ಲವೆಂದೂ ಅವರು ಹೇಳಿ ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೇ ಬೆಂಬಲ ನೀಡಬೇಕೆಂದು ಪ್ರಾರ್ಥಿಸಿದರು.

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮಾತನಾಡಿ ಜನರು ತಮ್ಮ ಪವಿತ್ರವಾದ ಓಟುಗಳನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗಿಸಿ, ಪ್ರಜಾಪ್ರಭುತ್ವದ ಸತ್ಸಂಪ್ರದಾಯವನ್ನು ಹಾಕಬೇಕೆಂದು ಕೋರಿದರು.

ಸಭೆಯು ಶಾಂತಿಯಿಂದಲೂ ಅತ್ಯಂತ ಸೌಹಾರ್ದದಿಂದಲೂ ನಡೆಯಿತು. ಸುಮಾರು ಹತ್ತು ಸಾವಿರಕ್ಕೂ ಮೇಲ್ಪಟ್ಟು ಜನರು ಸೇರಿದ್ದರು.

ನೇ [illegible] ವಾ [illegible]

ರಾಜಧಾನಿಯ ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ವಿ|| ಪಲ್ಲಡಂ ನಾಗರಾಜರಾಯರ ವೇಣುವಾದನವೂ ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು.

ಬನ್ನೂರು ಬಳಿ ಕಾವೇರಿ ಸೇತುವೆಯ ವಿವರ

ಮೈಸೂರು ೧೪

ಬನ್ನೂರು ಬಳಿ ಕಾವೇರಿ ನದಿಗೆ ಸೇತುವೆಯನ್ನು ಕಟ್ಟುವ ಸಂಬಂಧವಾಗಿ ಮೊನ್ನೆ ತಂಲು ಶಾಸನಸಭೆಯನ್ನು ಎದುರಿಸಿದ ಸಮಯದಲ್ಲಿ ಸಂಸ್ಥಾನದ ಚೀಫ್ ಇಂಜನಿಯರಾದ ಶ್ರೀ ಎನ್. ಸೀಲಕಂ ಠಯ್ಯನವರು ಒಪ್ಪಿಸಿದ ವರದಿಯಲ್ಲಿ ಈ ರೀತಿ ತಿಳಿಸಿದರು.

ಮೈಸೂರು ಸಂಸ್ಥಾನದ ಪ್ರಧಾನ ಸಂಚಾರ ಮಾರ್ಗಗಳಲ್ಲಿ ಬಹುತರವಾಗಿ ಸೇತುವೆಗಳು ನಿರ್ಮಿತವಾಗಿವೆ. ಇನ್ನು ಕೆಲವೆಡೆಗಳಲ್ಲಿ ಮಾತ್ರವೇ ಅವು ನಿರ್ಮಿತವಾಗಬೇಕಾಗಿವೆ. ಬೆಂಗಳೂರು-ಮೈಸೂರು ರಸ್ತೆಯು ಒಂದು ಮುಖ್ಯ ಸಂಚಾರ ಮಾರ್ಗ. ಈ ರಸ್ತೆಯು ಬನ್ನೂರು ಬಳಿ ಕಾವೇರಿ ನದಿಯನ್ನು ದಾಟಿ ಹೋಗುತ್ತದೆ. ಬೇಸಿಗೆಯಲ್ಲಿ ನದಿಯನ್ನು ದಾಟಬಹುದು. ಪ್ರವಾಹ ಬಂದಾಗ ದಾಟುವುದು ಅಸಾಧ್ಯ. ಆದ್ದರಿಂದ ಇಲ್ಲಿ ಒಂದು ಸೇತುವೆಯ ನಿರ್ಮಾಣವು ಆಗತ್ಯವಾಗಿದೆ. ಇದರಿಂದ ೧೪ ಮೈಲಿ ದೂರ ಬಳಸಿ ಮೈಸೂರಿಗೆ ಹೋಗಬೇಕಾದುದು ತಪ್ಪುವುದು. ಹಲಗೂರಿನ ಬಳಿ ಶಿಂಷಾ ನದಿಗೆ ಸೇತುವೆ ನಿರ್ಮಿತವಾಗಿದೆ. ಕಾನಕಾನಹಳ್ಳಿ ಬಳಿ ಅರ್ಕಾವತಿ ನದಿಗೆ ಕಟ್ಟುತ್ತಿರುವ ಸೇತುವೆ ಮುಗಿಯುವುದರಲ್ಲಿದೆ. ಈ ಸೇತುವೆಯು ಮುಗಿದರೆ ಮದ್ದೂರು-ಕನಕಪುರ ರಸ್ತೆಯಲ್ಲಿ ನಡೆಯುತ್ತಿರುವ ಮೋಟಾರಿನ ಸಂಚಾರದ ಅನಾನುಕೂಲತೆಯು ಕಡಿಮೆಯಾಗಲು ಅವಕಾಶ ಲಭಿಸುತ್ತದೆ.

ಈ ಸೇತುವೆಗೆ ೪೦ ಅಡಿಗಳ ೩೨ ಕಣ್ಣುಗಳಿರುತ್ತವೆ. ನದಿಪಾತ್ರದ ಕಂಬಗಳೂ, ದಡಗಳ ಬಳಿಯ ಊರೆಗಂಬಗಳೂ, ಸ್ಪ್ರಿಂಗುಗಳು ಮತ್ತು ನಾರೆಗಳಿಂದ ಬಂಡೆಯ ತಳಹದಿ ಮೇಲೆ ನಿರ್ಮಿತವಾಗುತ್ತವೆ. ನದಿಪಾತ್ರದ ಕಂಬಗಳು ೩೪ ಅಡಿ ಇದ್ದು ೧೯೩೪ ನೇ ಇಸವಿಯಲ್ಲಿ ಬಂದ ಪ್ರವಾಹದ ಮಟ್ಟಕ್ಕಿಂತ ೮ ಅಡಿ ಎತ್ತರದಲ್ಲಿರುವುದು. ಸೇತುವೆ ಮೇಲೆ ಸಾಗುವ ರಸ್ತೆಯ ಅಗಲವು ೧೪ ಅಡಿ [illegible]. ಈ ಸೇತುವೆ ನಿರ್ಮಾಣಕ್ಕೆ ೫ ಲಕ್ಷ ೪೯ ಸಾವಿರ ರೂ. ವೆಚ್ಚವಾಗುವುದು. ಈ ಮೈಸೂರು ಸರ್ಕಾರದವರು ೬ ರ್ಥವನ್ನೂ, ಜಿಲ್ಲಾ ಬೋರ್ಡಿನವರು

ವಿಶ್ವ ಸಂಸ್ಥೆಗೆ ದ. ಆಫ್ರಿಕದ ತಾತ್ಕಾಲಿಕ ಬಹಿಷ್ಕಾರ

ಪ್ರಪಂಚ ಸಂಸ್ಥೆಗೆ ದಕ್ಷಿಣ ಆಫ್ರಿಕವು ತಾತ್ಕಾಲಿಕ ಬಹಿಷ್ಕಾರವನ್ನು ಹಾಕಿರುವುದು ಧರ್ಮದರ್ಶಿಗಳ ಸಮಿತಿಯ ಮೇಲೆ ದಕ್ಷಿಣ ಆಫ್ರಿಕವು ಕೊಟ್ಟಿರುವ ಮೊಕದ್ದಮೆಯನ್ನು ಇತ್ಯರ್ಥಗೊಳಿಸಿಕೊಳ್ಳುವ ವಿಷಯದಲ್ಲಿ ವಿಶ್ವ ಸಂಸ್ಥೆಯು ಪರಿಶೀಲಿಸದೆ ಇರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ತಿರುವಾಂಕೂರು ಚುನಾವಣೆಯಲ್ಲಿ ಪೂರ್ಣ ಮತದಾನ

ತಿರುವಾಂಕೂರು-ಕೊಚ್ಚಿಯ ಸ್ಥಾನದಲ್ಲಿ ನಡೆದ ಚುನಾವಣೆಯಲ್ಲಿ ಕೆಲವು ಕಡೆ ನೂರಕ್ಕೆ ನೂರರಷ್ಟು ಜನರು ಮತದಾನ ಮಾಡಿರುವರು. ೪ ಕ್ಷೇತ್ರಗಳಲ್ಲಿ ಶೇ|| ೯೦ ರಷ್ಟು ಓಟುಗಳನ್ನು ಕೊಟ್ಟಿರುತ್ತಾರೆ.

ರಾಜಧಾನಿಗೆ ಅಮೆರಿಕಾ ರಾಯಭಾರಿಯ ಭೇಟಿ

ಭಾರತದಲ್ಲಿ ಹೊಸದಾಗಿ ಅಮೆರಿಕದ ರಾಯಭಾರಿಯಾಗಿ ನೇಮಕವಾಗಿರುವ ಚೆಸ್ಟರ್ ಬೌಲ್ಸ್‌ರವರು ಮೊಬಾರಿನಿಂದ ದಕ್ಷಿಣ ಭಾರತದ ಪ್ರವಾಸವನ್ನು ಕೈಗೊಳ್ಳುವರು. ಅವರು ಈ ದಿನ ಬೆಂಗಳೂರಿನಲ್ಲಿದ್ದು, ನಾಳೆ ರಾಜಧಾನಿಗೆ ಆಗಮಿಸಿ, ಅರಮನೆಗೆ ಭೇಟಿ ಕೊಡುವರು. ನಂತರ ನೀಲಗಿರಿಗೆ ಪ್ರಯಾಣ ಬೆಳೆಸುವರು.

ಶ್ರೀ ಸುಯಮೀಂದ್ರ ತೀರ್ಥರ ಜಯಂತಿ

ರಾಜಧಾನಿಯ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶ್ರೀಮತ್ಸುಯಮೀಂದ್ರ ತೀರ್ಥರವರ ಜಯಂತ್ಯುತ್ಸವದ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ಉತ್ಸವವೂ, ೭|| ಗಂಟೆಗೆ ಮಂತ್ರಾಲಯದಿಂದ ಬಂದಿರುವ ಆರ್ಚಕ ಶ್ರೀ ರಾಘವೇಂದ್ರಾಚಾರ್ಯರಿಂದ "ಗುರು ಮಹಿಮಾ" ಎಂಬ ವಿಷಯದಲ್ಲಿ ಉಪನ್ಯಾಸವೂ ನಡೆಯುವುವು.

ರ್ಥ ಮೊಬಲಗನ್ನೂ ಕೊಡಲು ಒಪ್ಪಿರುತ್ತಾರೆ. ಸಾಧ್ಯವಾದ ಮಟ್ಟಿಗೆ ಸ್ಥಳದ ಸಾಮಾನುಗಳನ್ನೂ ಕೆಲಸಗಾರರನ್ನೂ ಉಪಯೋಗಿಸಲು ನಿರ್ಧಾರವಾಗಿದೆ. ಇದರಿಂದ ಈ ಪ್ರದೇಶದ ಜನರ ಸಂಪದಭಿವೃದ್ಧಿಗೆ ಬಹಳ ಸಹಾಯವಾಗುವುದು.

ದ. ಆಫ್ರಿಕಾ ಭಾರತೀಯರ ಉಚ್ಚಾಟನೆಯೋ ?

ವಿಶ್ವಸಂಸ್ಥೆಯಿಂದ ತಾತ್ಕಾಲಿಕವಾಗಿ ದಕ್ಷಿಣ ಆಫ್ರಿಕವು ಹೊರಬಂದಿರುವ ಪರಿಣಾಮವಾಗಿ ಅಲ್ಲಿ ಭಾರತೀಯ ಬುಡಕಟ್ಟಿನ ಸಹಸ್ರಗಟ್ಟಲೆ ಜನರು ತಮ್ಮ ಮನೆ ಮತ್ತು ವ್ಯಾಪಾರಗಳಿಂದ ಹೊರದೂಡಲ್ಪಡುವ ಸಂಭವವುಂಟಾಗಿದೆಯೆಂದು ತಿಳಿದುಬಂದಿದೆ. ವರ್ಣಭೇದದ ಶಾಸನದ ಪ್ರಕಾರ ದಕ್ಷಿಣ ಆಫ್ರಿಕಾ ಸರ್ಕಾರವು ಬಿಳಿಯರಿಂದ ಇತರರನ್ನು ಬೇರ್ಪಡಿಸುವ ಕಾರ್ಯವನ್ನು ಪ್ರಾರಂಭಗೊಳಿಸುವುದೆಂದು ಹೇಳಲಾಗಿದೆ.

ಬ್ರಿಟನ್ ಮತ್ತು ಈಜಿಪ್ಟ್ ಬಿಕ್ಕಟ್ಟಿನ ಮಧ್ಯಸ್ತಿಕೆ ವಿಫಲ

ಬ್ರಿಟನ್ ಮತ್ತು ಈಜಿಪ್ಟುಗಳ ನಡುವೆ ಇರುವ ಬಿಕ್ಕಟ್ಟನ್ನು ಪರಿಹರಿಸಲು ಪ್ರತ್ಯೇಕವಾಗಿ ಮಧ್ಯಸ್ತಿಕೆ ವಹಿಸಲೆತ್ನಿಸಿದ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಫರುಲ್ಲಾ ಮತ್ತು ಇರಾಕಿನ ಪ್ರಧಾನಿ ನೂರುಲ್ ಸೈಯದ್‌ರವರ ಪ್ರಯತ್ನಗಳು ವಿಫಲವಾದವೆಂದು ಹೇಳಲಾಗಿದೆ.

ತಿರುವಾಂಕೂರಿನಲ್ಲಿ ಕಾಂಗ್ರೆಸ್ಸಿಗೇ ಜಯ

ತಿರುವಾಂಕೂರ-ಕೊಚ್ಚಿಯ ಶಾಸನಸಭೆಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಅಂಬಟ್ ಶಿಚಾರ ಮೆನನ್‌ರವರು ಸಂಯುಕ್ತ ಎಡಪಕ್ಷ ಮತ್ತು ಸಮಾಜವಾದಿ ಉಮೇದುವಾರರನ್ನು ಸೋಲಿಸಿ ಜಯ ಗಳಿಸಿರುತ್ತಾರೆ. ಇದರಿಂದ ಅಲ್ಲಿ ಕಾಂಗ್ರೆಸ್ಸಿಗೆ ೨ ಸ್ಥಾನಗಳು ದೊರೆತಂತಾಗಿದೆ.

ಅಗ್ನಿಶಾಮಕ ಇಂಜನ್ನು ಮುರಿದು ೫ ಜನರ ಮರಣ

ಮದ್ರಾಸಿನ ರಸ್ತೆ ಚೌಕವೊಂದರಲ್ಲಿ ನೆನ್ನೆ ರಾತ್ರಿ ಒಂದು ಅಗ್ನಿ ಶಾಮಕ ಇಂಜನ್ನು ಕಲ್ಲಿಗೆ ಢಿಕ್ಕಿ ಹೊಡೆದು ಮುರಿದುಬಿದ್ದ ಪರಿಣಾಮವಾಗಿ ೫ ಜನರು ಮೃತಪಟ್ಟರು. ಒಬ್ಬ ದಾರಿಗನನ್ನು ತಪ್ಪಿಸಲು ಹೋದಾಗ ಈ ಪ್ರಮಾದವಾಯಿತೆಂದು ಹೇಳಲಾಗಿದೆ.

ರಾಜ ಪ್ರಮುಖರ ಭೇಟಿಗಾಗಿ ರಜಾ

ಗುಂಡ್ಲುಪೇಟೆ ಮತ್ತು ಚಾಮರಾಜನಗರಗಳಿಗೆ ೨೬ ನೇ ತಾ|| ಶ್ರೀಮನ್ಮಹಾರಾಜರು ಭೇಟಿ ಕೊಡುವುದರಿಂದ ಆ ದಿನ ಆ ಊರುಗಳ ಎಲ್ಲ ಸಾರ್ವಜನಿಕ ಕಛೇರಿ, ಶಾಲೆ ಮತ್ತು ಕೋರ್ಟುಗಳಿಗೆ ರಜಾ ಕೊಡಲಾಗಿದೆ.

ಸ್ಥಾನಬದ್ಧರ ಅಮರಣಾಂತ ಉಪವಾಸ

ಹಲವಾರು ತಿಂಗಳುಗಳಿಂದ ಜೈಲಿನಲ್ಲಿ ಸ್ಥಾನಬದ್ಧರಾಗಿರುವ ದಾವಣಗೆರೆಯ ನೇತಾಜಿ ಪತ್ರಿಕೆಯ ಸಂಪಾದಕರಾದ ಶ್ರೀ ಇಟಗಿ ವೇದಮೂರ್ತಿಯವರು ತಮ್ಮನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಬೇಕೆಂದು ಮಾಡಿದ್ದ ಪ್ರಾರ್ಥನೆಯನ್ನು ನಿರಾಕರಿಸುವುದರಿಂದ ಇದೇ ೧೭ನೇ ತಾ||ನಿಂದ ಅವರು ಅಮರಣಾಂತ ಉಪವಾಸವನ್ನು ಕೈಗೊಳ್ಳಲು ನಿರ್ಧರಿಸಿರುತ್ತಾರೆ. ಚುನಾವಣೆಗೆ ಅವರು ಉಮೇದುವಾರರಾಗಿ ನಿಂತಿರುವರು.

ಕಾಂಗ್ರೆಸ್ ಸರ್ಕಾರವು ಸಾಧಿಸಿರುವುದೇನು ?

ಸಂಸ್ಥಾನದಲ್ಲಿ ವಿದ್ಯಾ ಪ್ರಗತಿ

ಕಾಂಗ್ರೆಸ್ ಸರ್ಕಾರವು [illegible] ಸ್ಥಾಪಿಸಲ್ಪಟ್ಟ ಮೇಲೆ ವಿದ್ಯಾ ಪ್ರಗತಿಯು ಅಪಾರವಾಗಿದೆಯೆಂದು [illegible] ಗಳಿಂದ ತಿಳಿಸಲು [illegible] ಪೂರ್ವದಲ್ಲಿ ಸಂಸ್ಥಾನದಲ್ಲಿ ನಾನಾ ದರ್ಜೆಯ, ಸ್ಕೂಲು ಮತ್ತು ಕಾಲೇಜು ಗಳಂತಹ ವಿದ್ಯಾ ಸಂಸ್ಥೆಯ ಸಂಖ್ಯೆ [illegible] ಈಗ [illegible] ಕ್ಕೇರಿದೆ ಈ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡು[illegible] ತ್ತಿರುವ ವಿದ್ಯಾರ್ಥಿ ಮತ್ತು [illegible] ಸಿಯರ ಸಂಖ್ಯೆ [illegible] ದಿಂದ [illegible] ಕ್ಕೇರಿದೆ ವಿದ್ಯಾಭ್ಯಾಸದ ವೆಚ್ಚ ಕೂಡ ದ್ವಿಗುಣವಾಗಿದ್ದು [illegible] ನರೆ ಕೋಟಿಯಿಂದ [illegible] ನೂರು ಕೋಟಿ ರೂ [illegible] ಗೆ ಮೀರಿದೆ

ಹೈಸ್ಕೂಲ್, ಮಿಡಲ್ ಸ್ಕೂಲ್ ಕಾಲೇಜುಗಳ ಸಂಖ್ಯೆಯು ಹೆಚ್ಚಾಗಿ ಇದರ ಜೊತೆಗೆ ವಾಣಿಜ್ಯ ಕಾಲೇಜು ಎರಡು ಇಂಜನಿಯರಿಂಗ್ ಕಾಲೇಜು, ಹೊಸದಾಗಿ ಏರ್ಪಟ್ಟು ಪ್ರತಿ ವರ್ಷವು ಸು ಮಾರು [illegible] ಮಂದಿ [illegible] ಇಂಜನಿಯರಿಂಗ್ ಕಾಲೇಜಗಳಲ್ಲಿ ವ್ಯಾಭ್ಯಾಸ ಪಡೆಯುತ್ತಿರುವರು ಹಾಸನ ಚಿಂತಾಮಣಿ, ಭದ್ರಾವತಿ ಮತ್ತು ಮೈಸೂರಿನಲ್ಲಿ ಹೊಸದಾಗಿ [illegible] ಔದ್ಯೋಗಿಕ ಶಿಕ್ಷಣ ಶಾಲೆಗಳು ಏರ್ಪಟ್ಟಿವೆ ಈಗ ಸಂಸ್ಥಾನದಲ್ಲಿ [illegible] ಕಾಲೇಜುಗಳಿವೆ

ಸಂಸ್ಥಾನದಲ್ಲಿ [illegible] ಇದ್ದ ಪ್ರೈಮರಿ ಶಾಲೆ [illegible] ರಲ್ಲಿ [illegible] ಶಾಲೆಗಳಿಗೇರಿದೆ ಮಿಡಲ್ ಸ್ಕೂಲ್ [illegible] ರಿಂದ [illegible] ಹೈಸ್ಕೂಲ್ [illegible] ರಿಂದ [illegible], ಕಾಲೇಜು [illegible] ರಿಂದ [illegible], ಔದ್ಯೋಗಿಕ [illegible] ಶಾಲೆ [illegible] ರಿಂದ [illegible] ಕ್ಕೇರಿದೆ ಇದರ ಜೊತೆಗೆ ಸರ್ಕಾರವು ವಯಸ್ಕರ ಶಿಕ್ಷಣ ಸಮಿತಿಗೆ ವರ್ಷಕ್ಕೆ [illegible] ರ ವೆಚ್ಚ ಮಾಡುತ್ತಿದೆ

ಇದನ್ನೆಲ್ಲ ಪರಿಶೀಲಿಸಿದರೆ ಕಳೆದ [illegible] ವರ್ಷಗಳಲ್ಲಿ ಸಾಧಿಸಲಾಗದ ಪ್ರಗತಿ ಕಳೆದ [illegible] ವರ್ಷಗಳಲ್ಲಿ ಸಾಧಿಸಲಾಗಿದೆ ವಿದ್ಯಾಪ್ರಗತಿಯು ಇನ್ನೂ [illegible] ಬೇಕಾಗಿ [illegible] ಯೋಜನೆಯು [illegible] ಕಾರ್ಯಕ್ರಮ [illegible] ಬಾಗಿ [illegible] ಪ್ರಗತಿಯನ್ನು ಕಾಂಗ್ರೆಸ್ ಸರ್ಕಾರ ಸಾಧಿಸಿದೆ ಆದರಿಂದ [illegible] ಕಾಣಬೇಕೆಂದು [illegible] ಪ್ರಚಾರ ಸಮಿತಿ

ರಾಜೀನಾಮೆಗೆ ಸಿಂಧ್ ಮುಖ್ಯಮಂತ್ರಿ ನಿರಾಕರಣೆ

[illegible] ಸ್ವಾತಂತ್ರ್ಯ [illegible] ರವರು [illegible] ತ್ತಪ್ಪ ಮುಖ್ಯ ಮಂತ್ರಿಯ [illegible] ನೆ ಕೊಡುವುದಿಲ್ಲವೆಂದು [illegible] ಮ [illegible] ತಿಳಿಸಿರುತ್ತಾರೆ

ಬಿ ಕ ರಿ ಗಿ ದೆ

ದೊಡ್ಡ ಸ್ಟ್ಯಾಂಡಿನ [illegible] ಸ್ಟ್ಯಾಂಡರ್ಡ್ ಮಿಷನ್ ಬಿಕರಿಗಿದೆ

—: ಶಾಂತಿನಿಲಯ :—

[illegible] ಬ್ಯಾಂಕ್ ಎದುರು

ಮೈಸೂರು

ಆಂಧ್ರದಲ್ಲಿ ನೆಹರೂರವರಿಗೆ ಬಹಿಷ್ಕಾರವೇ ?

ಸ್ವಾಮಿ ಸೀತಾರಾಂರವರು ಪ್ರಧಾನಿ ನೆಹರೂರವರಿಗೆ ತಂತಿಯನ್ನು ಕಳುಹಿಸಿ ಆಂಧ್ರ ಪ್ರಾಂತ ರಚನೆಯ ಬಗ್ಗೆ ಸರ್ಕಾರದ ನಿಲುವೇನೆಂಬುದನ್ನು ಘೋಷಿಸಬೇಕೆಂದು ಕೋರಿರುತ್ತಾರೆ ಮುಂದಿನ ಕ್ರಮ ಕೈಗೊಳ್ಳುವ ಮುನ್ನ ಸೀತಾರಾಂರವರು ಒಂದು ವಾರದ ಪ್ರಾಯಶ್ಚಿತ್ತ ಉಪವಾಸವನ್ನು ಮಾಡಲಿರುವರೆಂದು ಹೇಳಲಾಗಿದೆ ಆಂಧ್ರದಲ್ಲಿ ನೆಹರೂರವರ ಪ್ರವಾಸದ ಸಮಯದಲ್ಲಿ ವ್ಯವಸ್ಥಿತವಾದ ಬಹಿಷ್ಕಾರವನ್ನು ಹಾಕಲು ಯೋಜನೆ ಯಾಗುತ್ತಿರುವುದೆಂ[illegible] ವರದಿಗ[illegible] [illegible] ದಿವೆ

THEOSOPHY STUDY GROUP

[illegible]

Saturday 15th Dec at 5-30 p m

[illegible] Questions & Answers [illegible]

THE LAW OF KARMA

ಬಟ್ಟೆ ಅಧಿಕಾರಿಗಳ ಭೇಟಿ

ಚಿಕ್ಕೇರಿ

ಇಲ್ಲಿನ ಮತ್ತು [illegible] ಹೋಗಿನ ಹಳ್ಳಿಯಲ್ಲಿನ ನೇಕಾರ ಸೊಸೈಟಿಗಳಿಗೆ ಮೈಸೂರು [illegible] ವಿಜನ್ನಿನ ಬಟ್ಟೆ ಸೂಪರಿಂಟೆಂಡೆಂಟರಾದ ಶ್ರೀ [illegible] ರಂಗಶೆಟ್ಟಿಯವರು ನೆನ್ನೆ ಭೇಟಿಯಿತ್ತು ಲೆಕ್ಕ ಪತ್ರಗಳನ್ನು ಪರಿಶೀಲಿಸಿ, ಅವುಗಳನ್ನು ಸರಿಯಾಗಿ ಇಡುವ ಬಗ್ಗೆ ಸೂಕ್ತ ಸಲಹೆಗಳನ್ನಿತ್ತರು [illegible] ಮಗ್ಗ[illegible] [illegible] ದುರುಪಯೋಗದ ಸಂಬಂಧವಾಗಿ ಬಂದಿದ್ದ ದೂರುಗಳನ್ನು ಅವರು [illegible] ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು

ಚಾಮುಂಡೇಶ್ವರಿ

13-12-51 ರಿಂದ ದಿನವಹಿ 3 ಪ್ರದರ್ಶನ

- ನಲ್ಲತಂಬಿ -

ಮುಖ್ಯಪಾತ್ರ — ಎನ್ ಎಸ್. ಕೃಷ್ಣ, ಟಿ ಎ ಮಧುರಂ, ಸಹಸ್ರನಾಮಂ

ನಾಯಿ ಕೆಮ್ಮಿಗೆ ಔಷಧಿ

ಆರ್. ಎಸ್. ಪಂಡಿತರು,

ರಾಮುಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು

ಶ್ರೀ ಲಕ್ಷ್ಮಿ ಮತ್ತು ಮೋತಿಲಾಲ್

ಚಿ ತ್ರ ಮಂ ದಿ ರ ಗ ಳ ಲ್ಲಿ

14-12-51 ರಿಂದ ಅಮೋಘವಾದ 2ನೇ ವಾರ

ಚಿಕ್ಕರಿಂದ ಜನಸಂದಣಿಗೆ ಪ್ರದರ್ಶಿತವಾಗುತ್ತಿದೆ

* ಸಿಂಗಾರಿ *

ನ್ಯಾಷನಲ್ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ

ತಾರಾಗಣ – ಟಿ ಆರ್ ರಾಮಚಂದ್ರನ್ ಸಹಸ್ರನಾಮಂ, ಲಲಿತ ಪದ್ಮಿನಿ, ರಾಗಿಣಿ ಟಿ ಎಸ್ ಬಾಲಯ್ಯ ಮತ್ತು ಭಾಗ್ಯಂ

R V PICTURES RELEASE

6 ಜೊತೆ ಭಾರಿ ಕುಸ್ತಿಗಳು



ಮೈಸೂರು ದೊಡ್ಡಕೆರೆ

ವ್ಯಾಯಾಮ ಶಾಲೆಯ ಆವರಣದಲ್ಲಿ

16-12-51ನೇ ಭಾನುವಾರ

ಮಧ್ಯಾಹ್ನ 4-30 ಗಂಟೆಗೆ

ತಪ್ಪದೆ ನಡೆಯುತ್ತವೆ

1 ಪೈ [illegible] — [illegible] ಪೈ [illegible],
2 ಪೈ [illegible] ಅವರ [illegible],
3 ಮೈಸೂರು ಪೈ [illegible] ಬೆಂಗಳೂರು ಪೈ [illegible],
4 [illegible] ಪೈ [illegible] ಪೈ [illegible],
5 [illegible] ಪೈ [illegible] ಬುಡ್ಡನ್ ಅವರೂ,
6 ಪೈ [illegible] ಅಗ್ರಹಾರದ ಪೈ [illegible],

ಈ ಕುಸ್ತಿಗಳು 4-30 ಘಂಟೆಗೆ ಸರಿಯಾಗಿ ನಡೆಯುವುದರಿಂದಲೂ ಮತ್ತು ಈ ಕುಸ್ತಿಗಳ ಪ್ರದರ್ಶನವನ್ನೂ ಪ್ರೇಕ್ಷಕರನ್ನೂ, ಸಹ ಸಿನಿಮಾ ಫಿಲಂನಲ್ಲಿ ತೆಗೆಯುವುದರಿಂದಲೂ ಮಹಾಜನಗಳು ಮುಂಚಿತವಾಗಿ ಬಂದು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

FOR IMMEDIATE SALE

BUNGALOWS, HOUSES & SITES

1 Cottage No [illegible] Hig[illegible] just completed & ready for [illegible] up Price Rs 7500 Open to [illegible]
2 Decent House with Drawing [illegible] Bed [illegible] & Office Rooms front and back verandahs compound & out houses at Edigah near Mission Hospital
3 Storyed Bungalow on [illegible] Road
4 Sites opposite Govt House [illegible] Road [illegible]
5 House No 1334 Fort Mohall Mysore
6 A very [illegible] property on [illegible] Road

For [illegible] apply to

Messrs. A B I D S,

House and Estate Agents Statue Square Mysore

ಬಸ್ಸು ಮತ್ತು ಲಾರಿ ಮಾಲೀಕರುಗಳಿಗೆ

ಶುಭ ವಾರ್ತೆ

ಇಟಲಿಯ ಇಂಜನಿಯರುಗಳಿಂದ ತಯಾರಿಸಲ್ಪಟ್ಟ, ಪೂರ್ಣ ವರ್ಕ್‌ಶಾಪಿನ ಬೈರು ಏರಡನೆ ಕಾರ್ಖಾನೆಯನ್ನು ಸಧ್ಯದಲ್ಲೇ ಸ್ಥಾಪಿಸಲಿದ್ದೇವೆ ಆರಂಭದ ದಿನವನ್ನು ಎದುರು ನೋಡಿರಿ

* ಮೈಸೂರು ಟೈರ್ಸ್ *

1474 ಸಯ್ಯಾಜಿರಾವ್ ರಸ್ತೆ ಮೈಸೂರು

ಗೌರಿ ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚಿ, ಆರ್ಣಿ, ಬನಾರಸ್, ಪೂನಾ ಸಾಂಗ್ಲಿ, ಮರಿಯಮೂರು ಸೀರೆಗಳು ಮತ್ತು ಕಾಶ್ಮೀರ್ ಶಾಲುಗಳಿಗೆ

* D. L. ನರಸಿಂಹಯ್ಯ

ಜವಳಿ ಅಂಗಡಿ ಚಾಂದೆ ಆನಂದ ಧರ್ಮ ಶಾಲೆ, ಮೈಸೂರು

Edited, Printed and Published by A R Nagarajan, at Sadhvi Press D Subbiah Road, Mysore

ಫೋನ್ ನಂ 792 ಸಂಪಾದಕ: ... ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೧೫-೧೨-೫೧ [ಸಂಚಿಕೆ ೧೧೯

ಒರಿಸ್ಸಾ ಜಡ್ಜರಾಗಿ ಮೋದಪ್ಪನವರ ವರ್ಗ ?

ತುಂಬಸೋಗೆ ಸೇತುವೆಯ ಪ್ರಾರಂಭೋತ್ಸವ

ಮೈಸೂರು ೧೫

ಶ್ರೀಮನ್ಮಹಾರಾಜರು ನೆನ್ನೆ ತುಂಬಸೋಗೆಗೆ ತೆರಳಿ, ಅಲ್ಲಿ ಕಪಿನೀ ನದಿಗೆ ಕಟ್ಟಲಾಗಿರುವ ಸೇತುವೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಬೋರ್ಡು ಮತ್ತು ನರಸೀಪುರ ಪೌರಸಭೆಯವರು ಶ್ರೀ ಮನ್ಮಹಾರಾಜರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದರು. ಶ್ರೀಮನ್ ಮಹಾರಾಜರು ಉತ್ತರವಿತ್ತು ಗ್ರಾಮಾಂತರ ಪ್ರದೇಶಗಳ ಜನರಿಗೆ ಸಂಚಾರ ಸೌಲಭ್ಯವನ್ನು ಕಲ್ಪಿಸಿ, ಅವರ ಜೀವನವು ಎಲ್ಲಾ ಬಗೆಯಿಂದ ಉತ್ತಮಗೊಳ್ಳುವ ಕೆಲಸ ಮಾಡುವುದು ಜಿಲ್ಲಾ ಬೋರ್ಡುಗಳ ಕರ್ತವ್ಯವೆಂದು ತಿಳಿಸಿದರು. ನುಗು ಜಲಾಶಯದ ಯೋಜನೆಯ ಫಲವಾಗಿ ಈ ಪ್ರಾಂತಕ್ಕೆ ಪ್ರಾಮುಖ್ಯತೆಯುಂಟಾಗಿದೆಯೆಂದೂ ಪ್ರಭುಗಳು ಹೇಳಿದರು.

ನರಸೀಪುರದಲ್ಲಿ ಹೆರಿಗೆ ಆಸ್ಪತ್ರೆ ಕಟ್ಟುವ ... ಮತ್ತು ಹೆಗ್ಗಡದೇವನಕೋಟೆ ಪೌರ ಸಭೆಯ ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ... ವಿದ್ಯುಚ್ಛಕ್ತಿ ದೀಪವನ್ನು ಒದಗಿಸುವ ... ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಶ್ರೀಮನ್ ಮಹಾರಾಜರು ತಿಳಿಸಿದರು.

ಭಗವದ್ಗೀತಾ ಜಯಂತ್ಯುತ್ಸವ

ರಾಜಧಾನಿಯ ಶ್ರೀ ಜ್ಞಾನಾನಂದ ಸಭಾ ... ಆಶ್ರಯದಲ್ಲಿ ಶ್ರೀಮದ್ಭಗವದ್ಗೀತಾ ಜಯಂತ್ಯುತ್ಸವವು ಈ ತಿಂಗಳು ... ನೇ ತಾ॥ ನವರೆಗೆ ಶ್ರೀ ... ಶ್ರೀಮತ್ಸ್ವತಂತ್ರ ಪರಮೇಶ್ವರ ... ನವಲ್ಲಿ ನಡೆಯುವುದು. ನಿತ್ಯವೂ ... ರ ವರೆಗೆ ಭಗವದ್ಗೀತಾ ಪಾರಾಯಣವು ಜರುಗುವುದು.

ಹರಿಕಥಾ ಸಪ್ತಾಹ

ರಾಜಧಾನಿಯ ಚೆಲುವಾಂಬಾ ಅಗ್ರಹಾರದ ... ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಈ ದಿ ... ನೇ ತಾ॥ ವರೆಗೆ ಪ್ರತಿನಿತ್ಯ ... ಗಂಟೆಗೆ ಭಾರವಾಡ ... ಪ್ರತಿಷ್ಠಿತ ... ಯಿಂದ ... ಉಪನಯನದ ಪ್ರಯುಕ್ತ ಹರಿಕಥಾ ಸಪ್ತಾಹವನ್ನು ನಡೆಸುವ ... ಆಸ್ತಿಕ ಮಹಾಶಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಹರಿಕಥೆ ಮತ್ತು ಶಂಕಾಭರಣದ ಅರ್ಚನೆ

... ಮೊಹಲ್ಲಾ ಕಾಳಮ್ಮನ ಗುಡಿ ... ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ... ಲಾಲಯದಲ್ಲಿ ಈ ಸಂಜೆ ೭ ಗಂಟೆಗೆ ... ಎಂ ಶಿವಲಿಂಗಸ್ವಾಮಿಯವರಿಂದ ... ಕೃಷ್ಣಗಾರುಡಿ ಎಂಬ ಹರಿಕಥೆ ... ನಾಳೆ ಸಂಜೆ ... ಗಂಟೆಗೆ ... ಶ್ರೀ ಹೆಚ್ ಎಲ್ ದೇವ ... ಅನವರ ಸಮ್ಮುಖದಲ್ಲಿ "ಗಿರಿಜಾ ಕಲ್ಯಾಣ" ಎಂಬ ಶಿವಕಥೆಯನ್ನೂ ... ರಾಜಧಾನಿಯ ದೇವಾಂಗ ಸಂಘದವರು ... ರುತ್ತಾರೆ. ಅಮ್ಮನವರಿಗೆ ಇಂ ... ಸಪ್ತ ಮತ್ತು ನಾಳೆ ಉತ್ಸವ ಶಾಲಂಕಾರಗಳೂ ಏರ್ಪಾಡಾಗಿವೆ.

ಮೈಸೂರಿಗೆ ಮದ್ರಾಸಿನಿಂದ ೩೫ ಸಾವಿರ ಟನ್ ಅಕ್ಕಿ ಸಾಲ

ಸ್ವಂ ವಾ ಫೋ॥] ಬೆಂಗಳೂರು ೧೫

ಸಂಸ್ಥಾನಕ್ಕೆ ಕೇಂದ್ರದಿಂದ ಅಕ್ಕಿಯ ಸರಬರಾಜು ತಡವಾಗಿ ಬರುತ್ತಿರುವುದರಿಂದಲೂ ಮತ್ತು ಇಲ್ಲಿಯ ಅಕ್ಕಿಯ ಪರಿಸ್ಥಿತಿಯು ಸಮರ್ಪಕವಾಗಿಲ್ಲದಿರುವುದರಿಂದಲೂ ಕೇಂದ್ರ ಸರ್ಕಾರದ ಅನುಮತಿ ಪಡೆದು ಮದರಾಸಿನಿಂದ ಸಂಸ್ಥಾನಕ್ಕೆ ೩೫,೦೦೦ ಟನ್ ಅಕ್ಕಿಯನ್ನು ಸಾಲ ಪಡೆಯುವ ವ್ಯವಸ್ಥೆಯನ್ನು ಮಾಡಲಾಗಿದೆಯೆಂದೂ ಮತ್ತು ಮದರಾಸು ಸರ್ಕಾರದವರು ಈ ಸಾಲವನ್ನು ಮಂಜೂರು ಮಾಡಿರುವರೆಂದೂ ಆಹಾರ ಶಾಖಾ ಕಾರ್ಯದರ್ಶಿ ಶ್ರೀ ಎಸ್ ಪುಟ್ಟರಂಗಸ್ವಾಮಿಯವರು ತಿಳಿಸಿರುವರು.

ಚುನಾವಣೆಯಲ್ಲಿ ಅಜ್ಞಾತ ಕಮ್ಯೂನಿಸ್ಟ್ ಸದಸ್ಯರ ಜಯ

ತಿರುವಾಂಕೂರು-ಕೊಚ್ಚಿ ಶಾಸನಸಭಾ ಚುನಾವಣೆಯಲ್ಲಿ ತಿರುಚ್ಚೂರು ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಮ್ಯೂನಿಸ್ಟ್ ಉಮೇದುವಾರರಾದ ಶ್ರೀ ಜೋಸೆಫ್ ಅಚ್ಯುತ ಮೆನನ್‌ರವರು ಇತರ ಎಲ್ಲ ಉಮೇದುವಾರರಿಗಿಂತಲೂ ಹೆಚ್ಚು ಮತಗಳಿಸಿ ಜಯಶೀಲರಾಗಿರುತ್ತಾರೆ. ಶ್ರೀ ಮೆನನ್‌ರವರು ತಲೆ ತಪ್ಪಿಸಿಕೊಂಡು ಮರೆಯಾಗಿದ್ದು, ಉಮೇದುವಾರಿಕೆಯನ್ನು ಸಲ್ಲಿಸಿದ್ದರು. ಆ ಪ್ರಾಂತದಲ್ಲಿ ಇದು ಎಡ ಪಕ್ಷದ ಪ್ರಥಮ ಜಯವಾಗಿರುತ್ತದೆ. ಜಯಶೀಲರಾದವರ ಚಿತ್ರವನ್ನು ಅವರ ಹಿಂಬಾಲಕರು ಮೆರವಣಿಗೆಯಲ್ಲಿ ಕೊಂಡೊಯ್ದರು.

ಸರ್ವೋದಯ ಸಮಾಜದ ಕಾರ್ಯಕ್ರಮ

ರಾಜಧಾನಿಯ ಸರ್ವೋದಯ ಸಮಾಜದವರು ಪ್ರತಿ ಭಾನುವಾರ ಬೆಳಿಗ್ಗೆ ೭॥ ಘಂಟೆಗೆ ದಿವಾನರ ಅಗ್ರಹಾರದಲ್ಲಿರುವ ಮಹಿಳಾ ಸದನದಲ್ಲಿ ಪ್ರಾರ್ಥನಾ ಸಭೆ, ನೂಲು ತೆಗೆಯುವುದು, ಗೀತಾ ವಾಚನ ಮತ್ತು ಗಾಂಧಿ ವಿನೋಬಾರವರ ವಿಚಾರ ಪರಿಚಯ ಮುಂತಾದುವನ್ನು ಕ್ರಮವಾಗಿ ನಡೆಯಲೇರ್ಪಡಿಸಿರುವರು. ಆಸಕ್ತಿಯುಳ್ಳ ಮಹನೀಯರೂ ಮಹಿಳೆಯರೂ ದಯಮಾಡಿಸಬೇಕೆಂದೂ ನೂಲುವವರು ಚರಕಗಳನ್ನು ತರಬೇಕೆಂದೂ ಕೋರಲಾಗಿದೆ.

ಭಾರತೀಯ ಸಂಸ್ಕೃತಿಯ ಹಿರಿಮೆ

ಪಂಡಿತರ ಮಹಾ ಸಮ್ಮೇಳನದಲ್ಲಿ ಶ್ರೀಮನ್ ಮಹಾರಾಜರವರ ಭಾಷಣ

ಮೈಸೂರು ೧೫

ಮೈಸೂರು ಸಂಸ್ಥಾನದ ಪಂಡಿತರ ಮಹಾ ಸಮ್ಮೇಳನದ ೧೦ನೇ ಅಧಿವೇಶನವು ಈ ದಿನ ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಸೇರಿತ್ತು. ಶ್ರೀ ಮನ್ಮಹಾರಾಜರು ಅದರ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಶ್ರೀ ... ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸಿದ್ದರು.

ವಿ॥ ವೆ॥ ವಿ॥ ನಂಜನಗೂಡು ... ರಂಗಶಾಸ್ತ್ರಿಗಳವರಿಂದ ವಿರಚಿತವಾದ ಸ್ವಾಗತ ಪದ್ಯಮಾಲಿಕೆಯನ್ನು ಶ್ರೀ ... ಎಸ್ ಮುಂಬಾರವರು ಸುಶ್ರಾವ್ಯವಾಗಿ ಓದಿದರು. ವಿ॥ ವಿ॥ ಸೀತಾರಾಮ ಶಾಸ್ತ್ರಿ ವೆಂಕಟನರಸಿಂಹಾಚಾರ್ಯರು ಸಂಸ್ಕೃತದ ಸ್ವಾಗತ ಪದ್ಯಮಾಲಿಕೆಯನ್ನು ಪಠಿಸಿದರು. ಸ್ವಾಗತಾಧ್ಯಕ್ಷರಾದ ಶ್ರೀ ಎಂ ಎಸ್ ಸ್ವಾಮಿನಾಥರವರು ಭಾಷಣ ಮಾಡಿ ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮನ್ಮಹಾರಾಜರಿಗೆ ಸಮ್ಮೇಳನದ ಕಾರ್ಯದರ್ಶಿಯವರಾದ ವಿ॥ ವಾ ವಾ ಪದ್ಮನಾಭಾಚಾರ್ಯರ ವಿಜ್ಞಾಪನಾ ಪತ್ರವನ್ನು ಅರ್ಪಿಸಿದರು.

ಶ್ರೀಮನ್ಮಹಾರಾಜರು ಭಾಷಣ ಮಾಡಿ, ರಾಷ್ಟ್ರದ ಮುನ್ನಡೆಯು ಕೇವಲ ರಾಜಕೀಯ ಸುಧಾರಣೆ, ಆರ್ಥಿಕ ಪ್ರಾಬಲ್ಯ ಇವುಗಳಿಂದ ಸಾಧ್ಯವಿಲ್ಲವೆಂದೂ, ಇವರಡೂ ಒಂದು ಗುರಿಯನ್ನು ಸಾಧಿಸುವ ಮಾರ್ಗಗಳೆಂದೂ ತಿಳಿಸಿ, ಪಾಶ್ಚಿಮಾತ್ಯ ದೇಶಗಳಲ್ಲಿ ಸಾಮಗ್ರಿ, ಸಂಪತ್ತಿ, ವಿಜ್ಞಾನ ಪ್ರಗತಿ, ಕೈಗಾರಿಕಾ ನೈಪುಣ್ಯತೆ ಇವುಗಳಿದ್ದರೂ ಸಹ ಅಲ್ಲಿ ಒಂದು ವಿಧವಾದ ಅತೃಪ್ತಿ, ಅಸಮಾಧಾನಗಳು ಹುಟ್ಟಿಕೊಳ್ಳುತ್ತಿರುವುದೆಂದೂ, ಈ ಪರಿಸ್ಥಿತಿಗೆ ಆ ದೇಶದ ಸಂಸ್ಕೃತಿಯೇ ಮೂಲಕಾರಣವೆಂದೂ ಹೇಳಿದರು.

ಭಾರತೀಯ ಸಂಸ್ಕೃತಿಯು ಹೆಚ್ಚಿನ ಮನ್ನಣೆ ಹೊಂದಿರುವುದನ್ನು ಅವರು ಪ್ರಸ್ತಾಪಿಸಿ, ಅದರ ವೈಶಿಷ್ಟ್ಯವನ್ನು ವರ್ಣಿಸಿದರು. ಈ ಅಮೂಲ್ಯ ಸನಾತನ ಸಂಸ್ಕೃತಿಯು ನಮ್ಮ ದೇಶದ ಭಾಷಾ ಭಂಡಾರಗಳಲ್ಲಿ ಅಡಗಿದ್ದು, ಅದನ್ನು ಜನ

ಒರಿಸ್ಸಾ ನ್ಯಾಯಾಧೀಶರಾಗಿ ಪಿ. ಮೇದಪ್ಪನವರ ವರ್ಗವೇ

ಸ್ವಂ ವಾ ಫೋ॥] ಬೆಂಗಳೂರು ೧೫

ಮೈಸೂರು ಸಂಸ್ಥಾನದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ಮೇದಪ್ಪನವರನ್ನು ಒರಿಸ್ಸಾ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರನ್ನಾಗಿ ವರ್ಗ ಮಾಡುವ ಸಲುವಾಗಿ ಕೇಂದ್ರದಿಂದ ಮೈಸೂರು ಸರ್ಕಾರಕ್ಕೆ ಪತ್ರ ಬಂದು ಬಿದ್ದಿರುವುದಾಗಿ ತಿಳಿದುಬಂದಿದೆ.

ಮೊಹತ್ವಮ ವರ್ಗಾವಣೆ ಅಧಿಕಾರ

ಒಂದು ಸಂಸ್ಥಾನದಿಂದ ಮತ್ತೊಂದಕ್ಕೆ ಪೊಲೀಸ್ ನ್ಯಾಯಾಧೀಶರನ್ನು ವರ್ಗ ಮಾಡುವ ಅಧಿಕಾರವನ್ನು ಸುಪ್ರೀಂ ಕೋರ್ಟಿಗೆ ವಹಿಸುವ ಬಗ್ಗೆ ಸಂಸ್ಥಾನ ಸರ್ಕಾರಗಳ ಅಭಿಪ್ರಾಯವನ್ನು ಕೇಳಿ ಕೇಂದ್ರ ಸರ್ಕಾರದವರು ಪ್ರಾಂತಗಳಿಗೆ ಸೂಚನೆಯೊಂದನ್ನು ಕಳುಹಿಸಿರುವುದಾಗಿ ತಿಳಿದುಬಂದಿದೆ.

ವರ್ಗಾವರ್ಗಿ

ಬೆಂಗಳೂರು ಜಿಲ್ಲಾಧಿಕಾರಿಗಳಾದ ಶ್ರೀ ಟಿ ಕೆ ... ನವರನ್ನು ಸರ್ಕಾರದ ರೆವಿನ್ಯೂ ಕಾರ್ಯದರ್ಶಿಯಾಗಿಯೂ ಆ ಹುದ್ದೆಯಲ್ಲಿರುವ ಶ್ರೀ ಟಿ ರಂಗನಾಥಯ್ಯನವರನ್ನು ಬೆಂಗಳೂರು ಜಿಲ್ಲಾಧಿಕಾರಿಗಳಾಗಿಯೂ ವರ್ಗಾಯಿಸಲಾಗಿದೆ.

ಅಸಿಸ್ಟೆಂಟ್ ಸೆಕ್ರೆಟರಿಯವರಾದ ಶ್ರೀ ಎಚ್ ಎಸ್ ರಾಮಚಂದ್ರರವರನ್ನು ಅವರ ಲಾ ಮತ್ತು ಲೆಜಿಸ್ಲೇಟಿವ್ ಸೆಕ್ರೆಟೇರಿಯಟ್ಟಿನ ಡೆಪ್ಯುಟಿ ... ಶ್ರೀ ಹಿ ರಾಮಸ್ವಾಮಿಯವರನ್ನು ಆ ಸೆಕ್ರೆಟರಿಯವರಾಗಿಯೂ ವರ್ಗಾಯಿಸಲಾಗಿದೆ.

ಸಾಮಾನ್ಯರಂತೆ ಪ್ರಭುಗಳು ಮತ ಚಲಾಯಿಸುವರು

ಶ್ರೀಮನ್ಮಹಾರಾಜರು ಮತಾಧಿಕಾರವನ್ನು ಮತ ಚಲಾಯಿಸುವ ಬಗ್ಗೆ ಯಾವ ವಿಶೇಷ ವ್ಯವಸ್ಥೆಯನ್ನೂ ಮಾಡಬೇಕೆಂದಾಗಲೀ, ಅಥವಾ ಅಂಚೆ ಮೂಲಕ ಓಟು ಕೊಡುವ ವ್ಯವಸ್ಥೆ ಮಾಡಬೇಕೆಂದಾಗಲೀ ಕೇಳಲಿಲ್ಲವೆಂದೂ, ಅವರು ಸಾಮಾನ್ಯ ಪ್ರಜೆಯಂತೆ ಬಂದು ಮತ ಚಲಾಯಿಸುವರೆಂದೂ, ಸಂಸ್ಥಾನದ ಚುನಾವಣಾ ಮುಖ್ಯಾಧಿಕಾರಿಗಳಾದ ಶ್ರೀ ಕೆ ಪಿ ರಾಮನಾಥಯ್ಯನವರು ತಿಳಿಸಿರುವರು.

ಹಿಮಾಚಲ ಪ್ರದೇಶದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ೧೫೫ ಮಂದಿ ಉಮೇದುವಾರರ ಪೈಕಿ ೬೩ ಜನರು ತಮ್ಮ ಠೇವಣಿ ಹಣವನ್ನು ಕಳೆದುಕೊಂಡರೆಂದು ವರದಿಯಾಗಿದೆ. ಆ ಪೈಕಿ ಕಾಂಗ್ರೆಸ್ ಪಕ್ಷದವರೇ ಹೆಚ್ಚಾಗಿರುವರು.

ಸಾಮಾನ್ಯರ ಪ್ರವರ್ತನಗಾಗುವ ಧಾನವು ಪಂಡಿತ ವರ್ಗದ ಪಾಲಿಗೆ ಬಂದ ಕರ್ತವ್ಯವಾಗಿರುವುದೆಂದು ಹೇಳಿದರು. ಕಳೆದ ಶತಮಾನವು ರಾಷ್ಟ್ರೀಯ ಭಾವನೆ ಬೆಳೆಯುವ ಕಾಲವಾದರೆ, ಈಗಿನದು ಅಂತರ ರಾಷ್ಟ್ರೀಯ ಭಾವನಾ ಕಾಲವೆಂದೂ, ಆದರೆ ಅದನ್ನು ಬೆಳೆಸುವ ಸಮಯದಲ್ಲಿ ಸನಾತನ ಧರ್ಮಗಳಿಗೆ ತಿಲಾಂಜಲಿಯನ್ನು ಕೊಡಬಾರದೆಂದೂ ಅವರು ಹೇಳಿ, ಮಹಾಸಮ್ಮೇಳನಕ್ಕೆ ಶುಭವನ್ನು ಕೋರಿದರು.

ಮಂತ್ರಾಲಯದ ಶ್ರೀ ಸುಯಮೀಂದ್ರ ತೀರ್ಥ ಸ್ವಾಮಿಗಳವರೂ, ಪರಕಾಲ ಮಠದ ಗುರುಗಳವರೂ, ಶೃಂಗೇರಿ ಮಠದವರೂ, ಸಿದ್ಧಗಂಗೆಯ ಮಠದವರೂ ನ್ಯಾಯಾಂಗ ಮಂತ್ರಿ ಶ್ರೀ ಭಾಷ್ಯಂ ಮತ್ತು ನ್ಯಾಯಾಧೀಶ ಶ್ರೀ ಪಿ ವಾಸುದೇವ ಮೂರ್ತಿಯವರುಗಳೂ ಕಳುಹಿಸಿದ್ದ ಸಂದೇಶಗಳನ್ನು ಓದಲಾಯಿತು.

ಕಾಂಗ್ರೆಸ್ ಸರ್ಕಾರವು ಸಾಧಿಸಿರುವುದೇನು ?

ಸಂಸ್ಥಾನದಲ್ಲಿ ವಿದ್ಯುತ್ ಪ್ರಗತಿ

೧೯೪೭ರಲ್ಲಿ ಕಾಂಗ್ರೆಸ್ ಸರ್ಕಾರವು ಅಧಿಕಾರ ವಹಿಸಿಕೊಂಡ ನಂತರ ಸಂಸ್ಥಾನದ ಎಲ್ಲಾ ಭಾಗಗಳಿಗೂ ವಿದ್ಯುಚ್ಛಕ್ತಿ ಸರಬರಾಯಿಗೆ [illegible] ಗಮನಿಸಿ ಈ ವಿಷಯವನ್ನು [illegible] ಲಕ್ಷ್ಯ ವಹಿಸಿತು. ಮಹಾತ್ಮಾ ಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಕಾಮಗಾರಿ [illegible] ಈಗ [illegible] ವಿದ್ಯುತ್ ಉತ್ಪಾದನೆ ಮಾಡಿ ಸಂಸ್ಥಾನದ ನಾನಾ ಭಾಗಗಳಿಗೆ [illegible] ಬೆಂಗಳೂರು [illegible] ಮತ್ತು ಮೈಸೂರಿಗೆ ಸರಬರಾಜು ಮಾಡುತ್ತಲಿದೆ. [illegible] ಮತ್ತು [illegible] ವಿದ್ಯುತ್ ಉತ್ಪಾದಿಸುವ ಕೆಲಸ [illegible] ಪೂರ್ಣಗೊಳಿಸಿ [illegible] ಮೈಸೂರಿನವರು [illegible] ವಿದ್ಯುತ್ [illegible] ನಗರಗಳಿಗೆ [illegible] ಮಾಡುತ್ತಲಿದ್ದು [illegible] ಮೂರು ವರ್ಷಗಳಲ್ಲಿ [illegible] ವಿದ್ಯುತ್ತನ್ನು ಒದಗಿಸುವುದು.

೧೯೪೭ಕ್ಕೆ ಪೂರ್ವ ಸಂಸ್ಥಾನದ [illegible] ಊರುಗಳಿಗೆ ವಿದ್ಯುತ್ ಸರಬರಾಜಾಗುತ್ತಲಿದ್ದು ಈಗ [illegible] ಊರುಗಳಿಗೆ ಸರಬರಾಜನ್ನು ಮಾಡಲಾಗುತ್ತಿದೆ. [illegible] ಮೊದಲು [illegible] ಹಂಪಿಗೆ ವಿದ್ಯುತ್ ಸರಬರಾಜಾಗುತ್ತಿದ್ದುದು ಈಗ [illegible] ಕ್ಕೆ ಏರಿದೆ. ಸಂಸ್ಥಾನದಲ್ಲಿ ಮೊದಲು ಇದ್ದ [illegible] ಅಶ್ವಶಕ್ತಿಯ ವಿದ್ಯುತ್ ಉತ್ಪಾದನೆಯನ್ನು ಈಗ [illegible] ಕ್ಕೆ ಏರಿಸಿದೆ. ವಿದ್ಯುತ್ ಶಕ್ತಿ ತಯಾರಿಕೆಯು [illegible] ಲಕ್ಷ ಕಿಲೋವಾಟಿನಿಂದ [illegible] ಲಕ್ಷಕ್ಕೇರಿದೆ. [illegible] ಮೈಲಿ ದೂರ ಪ್ರಸರಿಸಿದ್ದ ಟ್ರಾನ್ಸ್‌ಮಿಷನ್ ಈಗ [illegible] ಮೈಲಿ ದೂರಕ್ಕೆ ಪ್ರಸರಿಸಿದೆ. ದೀಪದ ಜೋಡಣೆಗಳ ಸಾವಿರದಿಂದ [illegible] ಸಾವಿರಕ್ಕೆ ಮತ್ತು ಬೀದಿಯ ದೀಪವು [illegible] ರಿಂದ ಈಗ [illegible] ಕ್ಕೇರಿದೆ. [illegible] ಯಂತ್ರಕ್ಕೆ ವಿದ್ಯುತ್ ಸರಬರಾಜಾಗುತ್ತಿದ್ದುದು ಈಗ [illegible] ಮಿಷನ್ನಿಗೆ ಒದಗಿಸಲಾಗಿದೆ. [illegible] ಪ್ರಗತಿಯಾಗಿರುವಾಗ [illegible] ಕಂಡಂತೆ [illegible] ಕೋಟಿಯಿಂದ [illegible] ಕೋಟಿಗೆ ಏರಿದೆ. ಸರ್ಕಾರವು ಸಂಸ್ಥಾನಕ್ಕೆಲ್ಲಾ ವಿದ್ಯುತ್ [illegible] ಒದಗಿಸಬೇಕೆಂಬ ಯೋಜನೆ ಹೊಂದಿ ಸಾಮಾನುಗಳ [illegible] ಭಾವದಿಂದ ವಿದ್ಯುತ್ತನ್ನು ಹಂಚುವ ವೇಗದಲ್ಲಿ ಸ್ವಲ್ಪ ಸಾವಕಾಶವಾಗಿದೆ.

ಇಷ್ಟು ಪ್ರಗತಿಯೂ ಕಾಂಗ್ರೆಸ್ ಸಂಸ್ಥೆಯ ಪ್ರತಿನಿಧಿಗಳ ಆಡಳಿತ ಫಲವಾಗಿ ಉಂಟಾಗಿದೆ. ಆದುದರಿಂದ ತಮ್ಮ ಓಟು ಕಾಂಗ್ರೆಸ್ಸಿಗಿರಲಿ.

ಉಡುಪಿ ಸ್ವಾಮಿಗಳನ್ನು ಬೀಳ್ಕೊಡುವ ಸಮಾರಂಭ

ಬಿನ್ನವತ್ತಳೆಯ ಸಮರ್ಪಣೆ

ಮೈಸೂರು ೧೫

ಉಡುಪಿಯ ಶ್ರೀ ಪೇಜಾವರ ಮಠಾಧೀಶರನ್ನು ಬೀಳ್ಕೊಡಲು ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಸಮಾರಂಭ [illegible] ಮೊನ್ನೆ ರಾತ್ರಿ ನಡೆಯಿತು. ಶ್ರೀ [illegible] ಬಿ. ಎಸ್. ಸುಬ್ಬರಾವ್, [illegible] ಮತ್ತು ಸೇವಾ [illegible] ಸ್ವಾಮಿಗಳ ಭೇಟಿ ಮತ್ತು [illegible] ಉಪದೇಶಗಳಿಗಾಗಿ [illegible] ಕೃತಜ್ಞತೆಗಳನ್ನು [illegible] ಮಾಡಿದರು.

ಧರ್ಮಾಧಿಕಾರಿ ಶ್ರೀ ಹೆಚ್. ಎಸ್. [illegible] ಭಕ್ತ ಮಂಡಲಿ [illegible] ಬಿನ್ನವತ್ತಳೆಯನ್ನು [illegible] ದರು.

ಶ್ರೀ ಸ್ವಾಮಿಗಳವರು ಭಕ್ತಿ ಪೂರ್ವಕ [illegible] ದಿವ್ಯವಾದ ಭಾಷಣವನ್ನು ಮಾಡಿ ಭಗವಂತನ ಉಪಾಸನೆಗೆ ಇರುವ [illegible] ಮಾರ್ಗವನ್ನೇ [illegible] ಸತ್ಯ [illegible] ಮತ್ತು ಜಗತ್ತಿನ ಸತ್ಯತೆ [illegible] ವೈಷ್ಣವ ಮತಾನುಯಾಯಿಗಳ [illegible] ಮೂಲಭೂತವಾಗಿರುವ [illegible] ವಿವರಿಸಿದರು. ಮುಂದಿನ [illegible] ನಡೆಯಲಿರುವ [illegible] ಮಹೋತ್ಸವಕ್ಕೆ ಎಲ್ಲರನ್ನೂ ಆಹ್ವಾನಿಸಿದರು.

ಶ್ರೀ ಕೆ. ಸೀತಾರಾಮರಾಯರ [illegible]

ಬಿಡುಗಡೆ

ದೊಡ್ಡ ಸ್ಟಾಂಡಿನ ಸಿಂಗರ್ ಸ್ಯಾಂಪಲ್ ಮಿಷನ್ ಬೆಕಾಗಿದೆ

—: ಶಾಂತಿವಿಲಾಸ :—

[illegible]

ಮೈಸೂರು

ವರರಾದ ಶ್ರೀ ಕೆ. ಗೋಪಾಲಾಚಾರ್ಯರು ಶ್ರೀ ಸ್ವಾಮಿಗಳವರಿಗೆ ೧೧೧ ರೂ ಕಾಣಿಕೆಯನ್ನು ಸಲ್ಲಿಸಿರುವರು

ಪ್ರಭುಗಳೊಡನೆ ಭೇಟಿ

ಶ್ರೀ ಸ್ವಾಮಿಗಳವರು ಮೊನ್ನೆ ಬೆಳಗ್ಗೆ ಅರಮನೆಗೆ ಚಿತ್ತೈಸಿ, ಶ್ರೀಮನ್ಮಹಾರಾಜರವರಿಗೆ ದರ್ಶನವನ್ನಿತ್ತು ಉಡುಪಿಯ ಪರ್ಯಾಯ ಮಹೋತ್ಸವಕ್ಕೆ ಬರಬೇಕೆಂದು ಅವರನ್ನು ಆಹ್ವಾನಿಸಿದರು. ಶ್ರೀಮನ್ಮಹಾರಾಜರು ಸ್ವಾಮಿಗಳಿಗೆ ವಸ್ತ್ರವನ್ನು ಸಮರ್ಪಿಸಿದರು. ಗುರುಗಳವರು ಪ್ರಭುಗಳಿಗೆ ವಸ್ತ್ರವನ್ನು ಅನುಗ್ರಹಿಸಿದರು.

ದಾಸಪ್ರಕಾಶದಲ್ಲಿ ರಾಮಮಂದಿರದ ಆರಂಭೋತ್ಸವ

ರಾಜಧಾನಿಯ ದಾಸಪ್ರಕಾಶ ಭವನದ ನಾಲ್ಕನೇ ಉಪ್ಪರಿಗೆಯ ಮೇಲೆ ನಿರ್ಮಿತವಾಗಿರುವ ನೂತನ ಸಭಾಂಗಣಕ್ಕೆ ಶ್ರೀ ರಾಮಮಂದಿರವೆಂದು ನಾಮಕರಣವನ್ನು ಮಾಡಿ ಶ್ರೀ ಸ್ವಾಮಿಗಳವರು ಕಳಶ ಸ್ಥಾಪನೆ [illegible] ಆರಂಭೋತ್ಸವವನ್ನು ನೆರವೇರಿಸಿದರು. ಅವರ ಮಾಲೀಕರಾದ ಶ್ರೀ ಕೆ. ಸೀತಾರಾಮರಾವ್ ಮತ್ತು ಅವರ ಅನುಯಾಯಿಗಳು ಬಿನ್ನವತ್ತಳೆಯನ್ನೂ [illegible] ರೂಗಳ ನಿಧಿಯನ್ನೂ ಶ್ರೀಗಳವರಿಗೆ ಸಮರ್ಪಿಸಿದರು. ವರ್ಣಾಶ್ರಮ ಧರ್ಮದ ಮಹತ್ವವನ್ನು ಕುರಿತು ಸ್ವಾಮಿಗಳವರು ವಿಚಾರಪೂರಿತ ಭಾಷಣವನ್ನು ಮಾಡಿದರು. ಇಂದಿನ ಬಂಡವಾಳ ಶಾಹಿ ಪದ್ಧತಿ, ಸಮಾಜವಾದ, ಕಮ್ಯೂನಿಸಂ ಮುಂತಾದ ಸಂಸ್ಥೆಗಳಲ್ಲಿರುವ ಲೋಪದೋಷಗಳನ್ನು ವಿವರಿಸಿ ವರ್ಣಾಶ್ರಮ ಧರ್ಮಾಚರಣೆಯೇ ಸಮಾಜದ ಉನ್ನತಿಗೆ ಸಂಪೂರ್ಣ ಸಹಕಾರಿಯೆಂದು ತಿಳಿಸಿದರು.

ಭಿಕ್ಷೆ ಮತ್ತು ಕಾಣಿಕೆ

ಶ್ರೀಗಳಾದ ನಾರಾಯಣಾಚಾರ್ ಮತ್ತು ನರಸಿಂಗರಾಯರ ನೇತೃತ್ವದಲ್ಲಿ ಉಡುಪಿ ಹೋಟೆಲುಗಳವರೆಲ್ಲರೂ ಪೇಜಾವರ ಮಠಾಧಿಪತಿಗಳಿಗೆ ವೈಭವದಿಂದ ಭಿಕ್ಷೆ ನಡೆಸಿ [illegible] ರೂ ಕಾಣಿಕೆಯನ್ನು ಮೊನ್ನೆ ದಿನ ಸಲ್ಲಿಸಿದರು.

ನೆನ್ನೆ ಬೆಳಗ್ಗೆ ೫॥ ಘಂಟೆಗೆ ಶ್ರೀಗಳವರು ಉಡುಪಿಗೆ ಪ್ರಯಾಣ ಬೆಳೆಸಿದರು.

ದಿ ಹಿಂದೂ ಬ್ಯಾಂಕ್ ಕರ್ಪೊರೇಷನ್ ಲಿಮಿಟೆಡ್, ಮೈಸೂರು ಶಾಖೆ.

ನೋಟೀಸು

7-10-51 ರಂದ ಬ್ಯಾಂಕಿನವರು ಮಾಡಿದ ಠಾಯಿರಾತುಗಳ ಬಗ್ಗೆ ಬ್ಯಾಂಕಿನ ವ್ಯವಸ್ಥಾಪಕ ಮಂಡಲಿಯವರು ಒಡವೆಗಳನ್ನು ಗಿರಾಕಿಗಳು ಬಿಡಿಸಿಕೊಂಡು ಹೋಗುವ ಅವಧಿಯನ್ನು 31-12-51 ರ ವರೆಗೆ ಹೆಚ್ಚಿಸಿರುತ್ತಾರೆ. ಈ ಅವಧಿಯಲ್ಲಿ ನಗಗಳನ್ನು ಬಿಡಿಸಿಕೊಳ್ಳತಕ್ಕವರು ಸದರಿ ಆಭರಣಗಳನ್ನು [illegible] ರ ಚಕಾರ್ಟ್ ಪೆಲ್ಲೆಯ ತಿರುಪತ್ತೂರಿನಲ್ಲಿರುವ ಬ್ಯಾಂಕ್ ಶಾಖೆಗೆ 1-1-52 ರಲ್ಲಿ ತೆಗೆದುಕೊಂಡು ಹೋಗಲಾಗುವುದು. ಅನಂತರ ಗಿರಾಕಿಗಳು ತಮ್ಮ ನಗಗಳನ್ನು ತಿರುಪತ್ತೂರು ಶಾಖೆಗೆ ಬಂದು ಅಲ್ಲಿ ಒಡವೆಗಳನ್ನು ಬಿಡಿಸಿಕೊಳ್ಳಬೇಕಾಗುವುದು. ಇನ್ನು ಹೆಚ್ಚು ಅವಧಿಯನ್ನು ಕೊಡಲಾಗುವುದಿಲ್ಲ.

ಕೆ. ಎ. ರಾಮಕೃಷ್ಣರಾವ್,
ಏಜೆಂಟ್

ಆಬಿದ್ ರವರ
ಹರಾಜು ಮಾರಾಟ
-: ನಾಳೆ ದಿನ :-
16 12—51 ನೇ ತಾರೀಖು
ಬೆಳಗ್ಗೆ 10 ಘಂಟೆಗೆ

6 ಜೊತೆ ಭಾರಿ ಕುಸ್ತಿಗಳು



ಮೈಸೂರು ದೊಡ್ಡಕೆರೆ
ಮೈದಾನದಲ್ಲಿ
16-12-51 ನೇ ಶನಿವಾರ
ಮಧ್ಯಾಹ್ನ 4-30 ಗಂಟೆಗೆ
ತಪ್ಪದೆ ನಡೆಯುತ್ತವೆ

1 [illegible]
2 [illegible]
3 [illegible]
4 [illegible]
5 [illegible]
6 [illegible]

ಈ ಕುಸ್ತಿಗಳು 4-30 ಘಂಟೆಗೆ ಸರಿಯಾಗಿ ನಡೆಯುವುದರಿಂದಲೂ ಮತ್ತು ಈ ಕುಸ್ತಿಗಳ ಪ್ರದರ್ಶನವನ್ನೂ ಪ್ರೇಕ್ಷಕರನ್ನೂ ಸಹ ಸಿನಿಮಾ ಫಿಲಂನಲ್ಲಿ ತೆಗೆಯುವುದರಿಂದಲೂ ಮಹಾಜನಗಳು ಮುಂಚಿತವಾಗಿ ಬಂದು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಬಹಳ
ಉತ್ತಮವಾದ
ಸಾಬೂನು
808



ದಿ ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ಗೌ॥ ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚೀ, ಆರ್ಣಿ, ಬನಾರಸ್, ಪೂನಾ ಸಾಂಗ್ಲಿ, ಧರಿಯಾವರು ಸೀರೆಗಳು ಮತ್ತು ಕಾಶ್ಮೀರ್ ಶಾಲುಗಳಿಗೆ ❋ D. L. ನರಸಿಂಹಯ್ಯ
[illegible]

Edited, Printed and Published by A R Nagarajan, at Sadhvi Press D. Subbiah Road, Mysore

ರಿಜಿ ನಂ. 792 [ಜನತೆಯ ಸೇವೆಯಲ್ಲಿ] ಬಿಡಿಪ್ರತಿ ಒಂದಾಣೆ

ಸಾಧ್ವಿ

ಸಂಪುಟ ೧೦] ಸೋಮವಾರ ೧೬-೧೨-೫೧ [ಸಂಚಿಕೆ ೨೨೦

ಶ್ರೀಮನ್ಮಹಾರಾಜರಿಗೆ ದ್ವಿತೀಯ ಪುತ್ರಿ ಜನನ

ಕಾಂಗ್ರೆಸ್ಸಿಗೆ ಕಾರ್ಮಿಕರ ಬೆಂಬಲ

ಕೃಷ್ಣರಾಜೇಂದ್ರ ಮಿಲ್ ಕಾರ್ಮಿಕರ ಪ್ರಚಂಡ ಮೆರವಣಿಗೆ

ಮೈಸೂರು ೧೬.

ಕೃಷ್ಣರಾಜೇಂದ್ರ ಮಿಲ್ಲಿನ ಸುಮಾರು ...ಸು ಸಹಸ್ರ ಕಾರ್ಮಿಕರು ನೆನ್ನೆ ದಿನ ...ಧ್ಯಾಹ್ನ ನಾಲ್ಕು ಘಂಟೆಯ ನಂತರ ...ಚಂಡ ಮೆರವಣಿಗೆ ನಡೆಸಿ ಕಾಂಗ್ರೆಸ್ಸಿ ...ಓಟು ಕೊಡಬೇಕೆಂಬ ಜಯ ಘೋ ...ಗಳೊಡನೆ ಕೃಷ್ಣರಾಜೇಂದ್ರ ಮಿಲ್ಲಿನಿಂ ... ಹೊರಟು ಅಶೋಕಾ ರಸ್ತೆಯಿಂದ ...ತ್ತ ಗಡಿಯಾರದ ಮೂಲಕ ಸಯ್ಯಾ ...ರಾವ್ ರಸ್ತೆ, ಲ್ಯಾನ್ಸ್‌ಡೌನ್ ಬಜಾ ...ತರಳಿ ಅಲ್ಲಿಂದ ಸಂತೇಪೇಟೆಗೆ ಬಂ ...ಪುನಃ ಸಯ್ಯಾಜಿ ರಾವ್ ರಸ್ತೆಯಿಂ ...ಮಂಡಿ ಮತ್ತು ಲಷ್ಕರ್ ಮೊಹಲ್ಲಾ ...ಗೆ ಹೋಗಿ ತಮ್ಮ ಸಂಘದ ಬಳಿ ಚ ...ಸಿದರು. ಮೆರವಣಿಗೆಯೊಡನೆ ಶ್ರೀಗ ...ನ ಟಿ ಮರಿಯಪ್ಪನವರು, ಸಾಹು ...ನ್ ಚನ್ನಯ್ಯನವರು, ಎ. ರಾಮಣ್ಣ, ... ಎಸ್ ಸತ್ಯನಾರಾಯಣರಾವ್, ...ಚ್. ನಾರಾಯಣರಾವ್‌ರವರುಗಳು ...ದ್ದರು. ಶ್ರೀ ಟಿ ಮರಿಯಪ್ಪನವ ...ಕಾಂಗ್ರೆಸ್ ಕಛೇರಿಯ ಬಳಿ ಕಾರ್ಮಿ ...ನ್ನುದ್ದೇಶಿಸಿ ಮಾತನಾಡಿ, ಕಾಂಗ್ರೆ ...ಸರ್ಕಾರವು ಕಾರ್ಮಿಕರ ಹಿತಚಿಂತ ...ಕೈಗೊಂಡ ಕಾರ್ಯಕ್ರಮವನ್ನು ...ವರಿಸಿ ಮುಂಬರುವ ಚುನಾವಣೆ ...ಲ್ಲಿ ಎಲ್ಲರೂ ಕಾಂಗ್ರೆಸ್ಸಿಗೇ ಓಟು ...ಬೇಕೆಂದು ಕೋರಿದರು.

ಚುನಾವಣೆ ಬಗ್ಗೆ ಪ್ರಚಾರ

...ವೈಸೂರು ಸಂಸ್ಥಾನದ ಚುನಾವಣೆ ...ಬಗ್ಗೆ ವಿದ್ಯಾರ್ಥಿ ಸಂಘದ ಸದಸ್ಯ ...ರಾಜಧಾನಿಯ ಮಂಡಿ ಮತ್ತು ...ಷ್ಕರ್ ಮೊಹಲ್ಲಾಗಳಲ್ಲಿ ಸಂಚರಿಸಿ ...ರಿಗೆ ಚುನಾವಣೆಯ ಬಗ್ಗೆ ವಿವರಣೆ ...ನೀಡುತ್ತಿದ್ದಾರೆ. ಅದಲ್ಲದೆ ಸುತ್ತ ...ತ್ತಲಿನ ಹಳ್ಳಿಗಳಿಗೂ ಹೋಗಿ ಜನ ...ಜಾಗೃತಿಯನ್ನು ಉಂಟುಮಾಡಿರುತ್ತಾರೆ. ...ಚುನಾವಣೆಯಲ್ಲೂ ಸಹ ಈ ಪ್ರಚಾರ ...ಕಾರ್ಯ ಯಶಸ್ವಿಯಾಗಿ ನಡೆಯುತ್ತಿರು ...ದಾಗಿ ಗೊತ್ತಾಗಿದೆ.

ಸಂಸ್ಕೃತೋತ್ಸವ

ರಾಜಧಾನಿಯ ಶ್ರೀಮನ್ಮಹಾರಾಜಾ ...ಸ್ಕೃತ ಮಹಾ ಪಾಠಶಾಲೆಯಲ್ಲಿ ನಾ ...ಸಂಜೆ ೫ ಘಂಟೆಗೆ ಗೃಹ ಸಚಿವ ಶ್ರೀ ... ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ...ಸ್ಕೃತ ಉತ್ಸವವು ನೆರವೇರುವುದು. ...ಮಹಾರಾಜಾ ಕಾಲೇಜಿನ ಸಂಸ್ಕೃತೋ ...ಪಾಧ್ಯಾಯರಾದ ಶ್ರೀ ಎ. ಟಿ. ತಿರುನಾ ...ರಾಯಣಾಚಾರ್ಯರು ಭಾಷಣ ಮಾಡುವ... ಬೆಳಗ್ಗೆ ೮॥ ಗಂಟೆಗೆ ಬ್ರ॥ ಶ್ರೀ॥ ...ದ್ವಾನ್ ಸಿ. ರಾಮಚಂದ್ರಾಚಾರ್ಯ ...ಅಧ್ಯಕ್ಷತೆಯಲ್ಲಿ ಸಂಸ್ಕೃತದಲ್ಲಿ ವಿ ...ದ್ವಾಂಸರುಗಳಿಂದ ಚರ್ಚಾಕೂಟವು ನಡೆ ...ಯುವುದು

ಜನರ ಇಡೀ ಸಂಸಾರದ ಸಜೀವ ದಹನ

ಗುಜರಾತಿನ ಕ್ಯಾಂಬೆ ಶೇವಿನಲ್ಲಿ ಒಂ ...ದು ಮನೆಗೆ ನೆನ್ನೆ ರಾತ್ರಿ ಇದ್ದಕ್ಕಿದ್ದಂ ...ತೆ ಬೆಂಕಿಯು ತಗುಲಿ, ಒಳಗೆ ಮ ...ಲಗಿದ್ದ ೭ ಜನರೂ ಜೀವಸಹಿತ ಸುಟ್ಟು ...ಹೋದರೆಂದು ವರದಿಯಾಗಿದೆ.

ಪ್ರಯೋಗಾರ್ಥ ಚುನಾವಣೆ

ಮೈಸೂರು ೧೬.

ಮೊದಲೇ ತಿಳಿಸಿದ್ದಂತೆ ನೆನ್ನೆ ದಿನ ರಾಜಧಾನಿಯ ಎಲ್ಲ ಮೊಹಲ್ಲಾಗಳಲ್ಲೂ ಪ್ರಯೋಗಾರ್ಥ ಚುನಾವಣೆಯು ನಡೆಯಿತು. ಸಂಸ್ಥಾನದ ಶಾಸನ ಸಭೆ ಮತ್ತು ಕೇಂದ್ರ ಪಾರ್ಲಿಮೆಂಟುಗಳಿಗೆ ಸ್ಪರ್ಧಿಸಿದ್ದ ಉಮೇದುವಾರರುಗಳ ಚಿಹ್ನೆಯಿಂದ ಕೂಡಿದ ಪೆಟ್ಟಿಗೆಗಳನ್ನು ಎಲ್ಲಾ ಚುನಾವಣಾ ಕೇಂದ್ರಗಳಲ್ಲೂ ಇಡಲಾಗಿತ್ತು. ಅನೇಕ ಮಂದಿ ಮತದಾರರು ಓಟು ಕೊಟ್ಟರು. ಚುನಾವಣಾಧಿಕಾರಿಗಳೂ ಮತ್ತು ಜಿಲ್ಲಾಧಿಕಾರಿಗಳೂ ಈ ವ್ಯವಹಾರಣೆಯನ್ನು ನೋಡಿಕೊಂಡು ಸೂಕ್ತ ಸಲಹೆಗಳನ್ನು ನೀಡಿದರು

ಸೂರ್ಯನಾರಾಯಣ ರಾಯರಿಗೆ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಸದಸ್ಯತ್ವ

ರಾಜಧಾನಿಯ ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಜನರಲ್ ಬಾಡಿಯು ಡಾ॥ ಬಿ. ಎಸ್ ಸೂರ್ಯನಾರಾಯಣ ರಾಯರನ್ನು ಸದಸ್ಯತ್ವದಿಂದ ವಜಾ ಮಾಡಿದ್ದುದನ್ನು ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರರು ಅಕ್ರಮವೆಂದು ತಿಳಿಸಿ ಅವರಿಗೆ ಕೂಡಲೇ ಸದಸ್ಯತ್ವವನ್ನು ಕೊಡಬೇಕೆಂದು ಆಜ್ಞೆ ಮಾಡಿರುವರು

ಬಿ. ಸಂಸ್ಥಾನಗಳಿಗೆ ಸಲಹೆಗಾರರ ನೇಮಕ

ಚುನಾವಣೆಗಳಾದನಂತರ ಹಲವು "ಬಿ"ಸಂಸ್ಥಾನಗಳಲ್ಲಿ ಸಲಹೆಗಾರರನ್ನು ನೇಮಿಸುವ ಸಂಭವವಿರುವುದೆಂದು ಪ್ರಧಾನಿ ನೆಹರೂರವರು ನೆನ್ನೆ ಹೈದರಾಬಾದಿನ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು. ರಾಜಪ್ರಮುಖರು ಹೆಚ್ಚು ಅವರುಗಳೊಡನೆ ಮಾಡಿಕೊಂಡಿರುವ ಒಪ್ಪಂದ ಇವುಗಳಿಂದ "ಬಿ"ಸಂಸ್ಥಾನಗಳನ್ನು "ಎ"ದರ್ಜೆಗೆ ಹೆಚ್ಚಿಸುವುದಕ್ಕೆ ಅಡಚಣೆಯಾಗಿರುವುದೆಂದು ಅವರು ಹೇಳಿದರು ಆದರೆ ನಿಜವಾದ ತೊಂದರೆಯೆಂದರೆ ಹಲವು ಸಂಸ್ಥಾನಗಳಲ್ಲಿ ಶಾಸನ ಸಭೆಗಳು ಇಲ್ಲದಿರುವುದೇ ಎಂದು —ಅವರು ಹೇಳಿರುತ್ತಾರೆ. ಶಾಸನ ಸಭೆಗಳು ಚಲ್ಲರಚನೆಯಾದ ನಂತರ ಪರಿಸ್ಥಿತಿಯು ಬದಲಾವಣೆ ಹೊಂದುವುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಪ್ರಭುಗಳವರಿಗೆ ದ್ವಿತೀಯ ಪುತ್ರಿಯ ಜನನ

ಮೈಸೂರು ೧೬.

ಶ್ರೀಮನ್ಮಹಾರಾಜರವರಿಗೆ ನೆನ್ನೆ ರಾತ್ರಿ ೧-೫೫ ಗಂಟೆ ಸಮಯದಲ್ಲಿ ದ್ವಿತೀಯ ಪುತ್ರಿಯು ಜನನವಾಯಿತೆಂದು ತಿಳಿಸಲು ಅತ್ಯಂತ ಸಂತೋಷಿಸುತ್ತೇವೆ. ಈ ಸಂಬಂಧವಾಗಿ ಈ ದಿನ ಬೆಳಗ್ಗೆ ಅರಮನೆ ಆಫೀಸಿನಿಂದ ೨೧ ಕುಶಾಲತೋಪುಗಳನ್ನು ಹಾರಿಸಲಾಯಿತು ಈ ಶುಭಸನ್ನಿವೇಶದಲ್ಲಿ ಶ್ರೀಮನ್ಮಹಾರಾಜರಿಗೂ ಮತ್ತು ರಾಜಕುಟುಂಬದವರಿಗೂ ನೂತನ ರಾಜಕುಮಾರಿಯವರಿಗೂ ಭಗವಂತನು ಸಕಲ ಸನ್ಮಂಗಳಗಳನ್ನು ಕರುಣಿಸಲೆಂದೂ ಮತ್ತು ಬೇಗನೆ ಪ್ರಭುಗಳಿಗೆ ಪುತ್ರೋತ್ಸವವಾಗಲೆಂದೂ ಹಾರೈಸುತ್ತೇವೆ.

ಈ ಸಂತೋಷಾರ್ಥವಾಗಿ ಅರಮನೆ ಕಛೇರಿ, ಎಲ್ಲಾ ಶಾಲಾ ಕಾಲೇಜು ಮತ್ತು ಸರ್ಕಾರಿ ಕಛೇರಿಗಳಿಗೆ ಈ ದಿನ ರಜಾ ಕೊಡಲಾಗಿತ್ತು.

ಅರಮನೆ ಮತ್ತು ಸಾರ್ವಜನಿಕ ಕಟ್ಟಡಗಳ ಮೇಲೆ ಧ್ವಜಾರೋಹಣ ಮಾಡಲಾಗಿತ್ತು ಈ ರಾತ್ರಿ ಅರಮನೆಯಲ್ಲಿ ದೀಪೋತ್ಸವವನ್ನು ಏರ್ಪಡಿಸಲಾಗಿದೆ.

ರಾಜಪುತ್ರಿಯ ಜನನದ ಸಂತೋಷಾರ್ಥವಾಗಿ ಪಾಯಸದ ವಿನಿಯೋಗ

ರಾಜಧಾನಿಯ ಅಂಬಳೆ ಪಂಡಿತರ ಅಗ್ರಹಾರದಲ್ಲಿರುವ ಶ್ರೀ ಅಂಬಳೆ ರಾಮಣ್ಣನವರು ಶ್ರೀಮನ್ಮಹಾರಾಜರಿಗೆ ದ್ವಿತೀಯ ಪುತ್ರಿಯು ಹುಟ್ಟಿದ ಸಂತೋಷ ಸಮಾರಂಭದಲ್ಲಿ ಈ ದಿನ ತಮ್ಮ ಇಷ್ಟ ಮಿತ್ರರು ಮತ್ತು ನೆರೆಹೊರೆಯ ಮಕ್ಕಳಿಗೆ ಈ ದಿನ ಪಾಯಸವನ್ನು ವಿನಿಯೋಗ ಮಾಡಿದರು

ಈಜಿಪ್ಟ್ ಕ್ರಾಂತಿಕಾರರಿಂದ ವಿನಾಶ ಕೃತ್ಯ

ಬ್ರಿಟಿಷ್ ವಿಮಾನ ಪಡೆಗೆ ಸೇರಿದ ರೇಡಿಯೋ ಸ್ತಂಭವನ್ನು ನೆನ್ನೆ ಈಜಿಪ್ಟ್ ಕ್ರಾಂತಿಕಾರರುಗಳು ಡೈನಮೈಟ್ ಹಾಕಿ ಒಡೆದುಹಾಕಿರುತ್ತಾರೆ. ಸೂಯೆಜ್ ಕಡೆ ಹೋಗುತ್ತಿದ್ದ ಒಂದು ಸೈನ್ಯದ ರೈಲನ್ನು ಉರುಳಿಸಲಾಗಿದೆಯೆಂದು ಹೇಳಲಾಗಿದೆ.

ಸ್ವಾಮಿ ಸೀತಾರಾಂರವರ ಸತ್ಯಾಗ್ರಹದ ನಿರ್ಧಾರ

ಆಂಧ್ರ ಪ್ರಾಂತ್ಯದ ರಚನೆ ಬಗ್ಗೆ ಆಚಾರ್ಯ ವಿನೋಬಾ ಭಾವೆಯವರು ಪಂಡಿತ ನೆಹರೂರವರೊಡನೆ ಮಾತುಕತೆ ನಡೆಸಿ ತೃಪ್ತಿಕರವಾದ ಫಲಿತಾಂಶವನ್ನು ತರುವರೆಂಬ ಆಶಾಭಾವನೆಯು ನಾಶವಾಗಿರುವುದರಿಂದ ಆಂಧ್ರದ ಕಾಂಗ್ರೆಸ್ ನಾಯಕ ಸ್ವಾಮಿ ಸೀತಾರಾಂರವರು ಸತ್ಯಾಗ್ರಹದ ನೇರ ಕಾರ್ಯಾಚರಣೆಯನ್ನು ಕೈಗೊಳ್ಳಲು ನಿರ್ಧರಿಸಿ ಇದಕ್ಕಾಗಿ ಸತ್ಯಾಗ್ರಹಿಗಳ ತಂಡದವರು ಮುಂದೆ ಬರಬೇಕೆಂದು ಕೋರಿರುತ್ತಾರೆ.

ಹೊಸ ಹಡಗಿನ ಜಲಪ್ರವೇಶ

ವಿಶಾಖಪಟ್ಟಣದ ಶೇವಿನಲ್ಲಿ ಸಿಂಧ್ಯ ಕಂಪೆನಿಯವರು ನಿರ್ಮಿಸಿರುವ ಜಲಉಷ್ಣ ಎಂಬ ೮ ಸಾವಿರ ಟನ್ ತೂಕದ ಹಡಗೊಂದನ್ನು ಸಮುದ್ರಯಾನ ಮಾಡಿಸುವ ಸಂಬಂಧವಾಗಿ ಬೊಂಬಾಯಿಯಲ್ಲಿ ನೆನ್ನೆ ವಿಶೇಷ ರೀತಿಯ ಸ್ಲಿಪ್ ಹಾಕುವ ಸಮಾರಂಭವನ್ನು ಕೇಂದ್ರ ಸರ್ಕಾರದ ಮಂತ್ರಿ ಎನ್ ವಿ. ಗಾಡ್ಗೀಳ್‌ರವರು ನೆರವೇರಿಸಿದರು. ಇದಕ್ಕೆ ಮುಂಚೆ ಬೊಂಬಾಯಿ ಮತ್ತು ವಿಶಾಖಪಟ್ಟಣಗಳಲ್ಲಿ ಪೂಜೆಗಳಾದುವು. ಮಂತ್ರಿಗಳು ಭಾಷಣ ಮಾಡಿ ಬರುವ ೫ ವರ್ಷಗಳಲ್ಲಿ ಹಡಗು ಕೈಗಾರಿಕೆಯ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ೧೨ ಕೋಟಿ ರೂ. ಗಳನ್ನು ವೆಚ್ಚ ಮಾಡುವರೆಂದು ತಿಳಿಸಿದರು.

ಬೊಂಬಾಯಿಯಲ್ಲಿ ಇನ್ನೊಂದು ಎಣ್ಣೆ ಕಾರ್ಖಾನೆ

ವರ್ಷಕ್ಕೆ ೧॥ ಲಕ್ಷ ಟನ್ ಎಣ್ಣೆ ಶುದ್ಧೀಕರಣ ಮಾಡಬಲ್ಲ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಬರ್ಮಾಷೆಲ್ ಕಂಪೆನಿಯವರ ಏರ್ಪಾಡಿಗೆ ಭಾರತ ಸರ್ಕಾರದವರು ಒಪ್ಪಿಗೆಯನ್ನು ಸೂಚಿಸಿರುತ್ತಾರೆ ಈಗಾಗಲೇ ಅಮೆರಿಕದ ಕಂಪೆನಿಯೊಡನೆ ಸರ್ಕಾರದವರು ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ಪೂರ್ವ ತೀರದಲ್ಲಿ ಇನ್ನೂ ಒಂದು ಕಾರ್ಖಾನೆಯನ್ನು ಸ್ಥಾಪಿಸಲು ಕಾಲ್ಟೆಕ್ಸ್ ಕಂಪೆನಿಯೊಡನೆ ಮಾತುಕತೆಗಳು ನಡೆಯುತ್ತಿವೆ.

ಭೂತಗಳು ತುಂಬಿದ ದ್ವೀಪ

ಸಿಂಗಪುರಕ್ಕೆ ದಕ್ಷಿಣದಲ್ಲಿರುವ ಪಾಪ ಎಂಬ ದೊಡ್ಡ ದ್ವೀಪವು ಭೂತಗಳಿಗೆ ಆವಾಸಸ್ಥಾನವಾಗಿರುವುದೆಂದೂ, ಅಲ್ಲಿಗೆ ಬಂದು ನೆಲಸಲಿಚ್ಛಿಸುವವರನ್ನೆಲ್ಲಾ ಅವು ಕೊಂದುಬಿಡುವುವೆಂದೂ, ಸಿಂಗಪುರದ ಆರೋಗ್ಯ ಇಲಾಖೆಯವರು ವರದಿಯೊಂದರಲ್ಲಿ ತಿಳಿಸಿದ್ದಾರೆ.

ವಿಮಾನ ಅಪಘಾತದಲ್ಲಿ ೩೩ ಜನರ ಮರಣ

ಅಮೆರಿಕದ ನ್ಯೂಜೆರ್ಸಿ ಪ್ರದೇಶದ ಎಲಿಜಬೆತ್ ಎಂಬಲ್ಲಿ ನೆನ್ನೆ ವಿಮಾನವು ಅಪ್ಪಳಿಸಿದ ಪರಿಣಾಮವಾಗಿ ಅದರೊಳಗಿದ್ದ ೩೩ ಜನರು ಮೃತಪಟ್ಟರೆಂದು ವರದಿಯಾಗಿದೆ.

○ ಅಮೆರಿಕದ ಪೂರ್ವ ತೀರದಲ್ಲಿ ನೆನ್ನೆ ದಿನ ಬೀಸಿದ ಪ್ರಚಂಡ ಬಿರುಗಾಳಿಗೆ ೩೭ ಜನರು ಸಿಕ್ಕಿ ಮೃತಪಟ್ಟರೆಂದು ವರದಿಯಾಗಿದೆ. ವಾಹನ ಸಂಚಾರಕ್ಕೂ ಸಹ ಅಡಚಣೆ ಸಂಭವಿಸಿದೆಯೆಂದೂ ಗೊತ್ತಾಗಿದೆ.

ಕಾಂಗ್ರೆಸ್ ಸರ್ಕಾರ ಸಾಧಿಸಿರುವುದೇನು ?

ಆಹಾರ ಸಮಸ್ಯೆ

ಶ್ರೀಮನ್ ಮಹಾರಾಜರ ದ್ವಿತೀಯ ಪುತ್ರಿಯವರಿಗೆ ಇಂದು ಬೆಳಿಗ್ಗೆ ನಾಮಕರಣವಾಗುವ ಸಂಬಂಧವಾಗಿ ಅರಮನೆಯಲ್ಲಿ ವಿಶೇಷ ಸಮಾರಂಭವು ಜರುಗಿತು. ಶ್ರೀಮನ್ ಮಹಾರಾಜರು ರಾಜಗುರುಗಳಾದ ಪರಕಾಲ ಸ್ವಾಮಿಗಳವರಿಗೆ ಪಾದಪೂಜೆಯನ್ನು ನೆರವೇರಿಸಿ, ಶಾಸ್ತ್ರೋಕ್ತವಾಗಿ ನೂತನರಾಜಪುತ್ರಿಗೆ ನಾಮಕರಣವನ್ನು ಮಾಡಿ ಮೀನಾಕ್ಷಿ ದೇವಿ ಎಂಬ ಹೆಸರನ್ನಿಟ್ಟರು. ಅರಮನೆಯ ಬತ್ತೇರಿ ಮಂಟಪ... ಕುಶಾಲು ತೋಪುಗಳನ್ನು ಹಾರಿಸಲಾಯಿತು. ಸಮಾರಂಭಕ್ಕೆ ಸಂಸ್ಥಾನದ ಸಚಿವರುಗಳೂ, ರಾಜ ಮಂತ್ರಿ... ಅಧಿಕಾರಿಗಳೂ ಮತ್ತು ಇತರ ... ದೊಡ್ಡ ಮನುಷ್ಯರೂ ಆಗಮಿಸಿದ್ದರು.

... ಮಧ್ಯಾಹ್ನ ಬಡಬಗ್ಗರಿಗೆ ವಿವಿಧ ... ಈ ಸಮಾರಂಭದ ಅಂಗವಾಗಿ ... ನನ್ನು ಏರ್ಪಡಿಸಲಾಗಿತ್ತು. ... ನ ... ಕೋರ್ಟ್ ಕಛೇರಿ ... ಈ ದಿನ ರಜಾ ಕೊಡಲಾಗಿ... ಶ್ರೀ ಅರಮನೆಯಲ್ಲಿ ದೀಪೋತ್ಸವವನ್ನು ಏರ್ಪಡಿಸಲಾಗಿದೆ.

ಬ್ಯಾಂಕಿನ ಚುನಾವಣೆ ತಡೆ

ವಿರುದ್ಧದ ಅಪೀಲು ವಜಾ

... ಪ್ರಾಂತೀಯ ... ಸಿಟಿ ಕೋ-ಆಪರೇಟಿವ್ ... ಕಿನ ಚುನಾವಣೆಯನ್ನು ತಡೆ... ಮ ಅ|| ರಿಜಿಸ್ಟ್ರಾರರು ಮಾಡಿ... ಮ ವಿರುದ್ಧವಾಗಿ ಬ್ಯಾಂಕಿನ ... ಆಡಳಿತ ಮಂಡಲಿಯು ರಿಜಿಸ್ಟ್ರಾರ... ನಲ್ಲಿ ಹೂಡಿದ್ದ ಅಪೀಲನ್ನು ... ದಲಾಗಿದೆ. ಬ್ಯಾಂಕಿನ ಚು... ಯವರಾಗಿದ್ದ ಡಾ|| ಬಿ.ಎಸ್. ... ನಾರಾಯಣರಾಯರು ತ... ಅ|| ರಿಜಿಸ್ಟ್ರಾರರಲ್ಲಿ ಮನವಿ ಮಾಡಿಕೊಂಡಿದ್ದರು.

ಟಿ. ಮರಿಯಪ್ಪನವರಿಂದ ಅಪಪ್ರಚಾರದ ಖಂಡನೆ

ಶ್ರೀ ಟಿ. ಮರಿಯಪ್ಪನವರು ಒಂದು ಹೇಳಿಕೆಯನ್ನಿತ್ತು, ಹಲವು ತಾಲ್ಲೂಕುಗಳ... ಕಾಂಗ್ರೆಸ್ಸೇತರ ಉಮೇದುವಾರರು ... ಬೆಂಬಲ ದೊರಕಿಸಿಕೊಳ್ಳಲು ತಮ್ಮ ಹೆಸರನ್ನು ಉಪಯೋಗಿಸುತ್ತಿರುವರೆಂ... ಹೀಗೆ ಉಪಯೋಗಿಸಲು ಅವರಿಗೆ ... ಅಧಿಕಾರವಿಲ್ಲವೆಂದೂ, ಇಂತಹ ಪ್ರಚಾರಕ್ಕೆ ಓಟರುಗಳು ಮರುಳಾಗದೆ ... ಉಮೇದುವಾರರಿಗೇ ಬೆಂಬಲವಿ...ಬೇಕೆಂದೂ ತಿಳಿಸಿರುತ್ತಾರೆ.

ಸ್ಕೌಟ್ ರ್‍ಯಾಲಿಯ ಅಧ್ಯಕ್ಷತೆ

ಕಳೆದ ಸೋಮವಾರ ಸಂಜೆ ಟೌನ್ ಹಾಲಿನಲ್ಲಿ ನಡೆದ ಸ್ಕೌಟ್ ರ್‍ಯಾಲಿಯ ಅಧ್ಯಕ್ಷತೆಯನ್ನು ವಹಿಸಲು ತಮ್ಮನ್ನು ... ಗಳ ಪರವಾಗಿ ಶ್ರೀ ಎಂ. ... ಸ್ವಾಮಿಯವರು ಕೇಳಿದಾಗ ತಮಗೆ ಬಾಲಾವಕಾಶವಿಲ್ಲವೆಂದು ತಿಳಿಸಿದ್ದ ... ತಮ್ಮ ಹೆಸರನ್ನು ಅನುಮತಿ ಇಲ್ಲದೆ ಅಧ್ಯಕ್ಷತೆಗೆ ಸೂಚಿಸಲಾಗಿತ್ತೆಂ... ಸಭೆಗೆ ಬರದಿದ್ದುದಕ್ಕೆ ತಮ್ಮ ಜವಾಬ್ದಾರಿಯೇನೂ ಇಲ್ಲವೆಂದೂ ಗೃಹ ಮಂತ್ರಿ ... ಟಿ. ಮರಿಯಪ್ಪನವರು ತಿಳಿಸಿರುತ್ತಾರೆ.

ಕಾಂಗ್ರೆಸ್ಸಿಗೇ ಓಟು ಕೊಡಿ



ರಾಜೀನಾಮೆ ಕೊಟ್ಟ ಮೈಸೂರು ಹೈಕೋರ್ಟ್ ನ್ಯಾಯಾಧೀಶರು

ಬೆಂಗಳೂರು ...

ಏಕ ಪ್ರಾಂತನ ಪ್ರಯತ್ನದ ಮೊದಲ... ಅಧಿಕಾರವಾದ ಶ್ರೀ ಎಲ್. ಎಸ್. ರಾಜು ಮತ್ತು ಇತರರನ್ನು ವಿಚಾರಿಸು... ಮೈ ಬೊಂಬಾಯಿ ಸರ್ಕಾರದವರು ಕನ್ನಡ ಭಾಷೆಯನ್ನು ಬಲ್ಲ ... ಜನ ನ್ಯಾಯಾಧೀಶರುಗಳ ಹೆಸರುಗಳ ಪಟ್ಟಿಯನ್ನು ಮೈಸೂರು ಸರ್ಕಾರಕ್ಕೆ ಕಳುಹಿಸಿರುತ್ತಾರೆಂದು ತಿಳಿದುಬಂದಿದೆ. ಮೈಸೂರು ಸರ್ಕಾರದವರು ಅವರ ಪೈಕಿ ಇಬ್ಬರನ್ನು ತೀವ್ರದಲ್ಲೇ ಆರಿಸಿ ಬೊಂಬಾಯಿ ಸರ್ಕಾರಕ್ಕೆ ಪತ್ರ ಬರೆಯುವರೆಂದು ಹೇಳಲಾಗಿದೆ.

ಅಂತರ ವಿಶ್ವ ವಿದ್ಯಾಲಯದ ಆಟಗಾರರ ಸ್ಪರ್ಧೆ

ನಾಳೆಯಿಂದ ೩೧ನೇ ತಾ|| ನ ವರೆಗೆ ಬೆಂಗಳೂರು ಸ್ಟೇಡಿಯಮ್ಮಿನಲ್ಲಿ ನಡೆಯುವ ಅಂತರ ರಾಷ್ಟ್ರೀಯ ವಿಶ್ವ ವಿದ್ಯಾಲಯದ ಕ್ರೀಡೆಗಳಲ್ಲಿ ಭಾರತದ ೨೨ ವಿಶ್ವ ವಿದ್ಯಾಲಯಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸುವರು. ಶ್ರೀಮನ್ ಮಹಾರಾಜರು ಬಹುಮಾನ ವಿನಿಯೋಗ ಮಾಡುವರು.

ಭಾರತದಿಂದ ಇರಾಣ್ ರಾಯಭಾರಿಯ ವಾಪಸು

ಪರ್ಷಿಯದ ಪ್ರಧಾನಿ ಮುಸ್ಸಾದಿಕ್ ಸರ್ಕಾರದ ಅಗ್ರಸಕ್ಕೆ ಪಾತ್ರರಾಗಿರುವ ೬ ಜನ ಇರಾಣ್ ರಾಯಭಾರಿಗಳನ್ನು ಹಿಂದಕ್ಕೆ ಕರೆಸಲಾಗುವುದು. ಅವರು ಈಗ ಬ್ರಿಟನ್, ಭಾರತ ಮತ್ತು ಇಟಲಿಯಲ್ಲಿರುತ್ತಾರೆ. ಇವರಲ್ಲದೆ ಇನ್ನೂ ಬೇರೆ ಕಡೆಗಳಲ್ಲಿರುವ ಸಣ್ಣ ಸಣ್ಣ ಅಧಿಕಾರಿಗಳ ವಾಪಸಿಗೆ ಅಪ್ಪಣೆಯೀಯಲಾಗುವುದು.

ಮಧ್ಯ ಪ್ರದೇಶದಲ್ಲಿ ಕಾಂಗ್ರೆಸ್ಸಿಗೆ ಪ್ರಥಮ ಜಯ

ಆಕ್ಟೋಬರ್ ... ಸಂದ ಪ್ರಾರಂಭ... ಮಧ್ಯ ಪ್ರದೇಶದ ಚುನಾವಣೆಗ... ನ ಫಲಿತಾಂಶಗಳ ಪ್ರಕಾರ ಅಲ್ಲಿನ ಶಾಸನ ಸಭೆಗೆ ಇಬ್ಬರು ಕಾಂಗ್ರೆಸ್ ಪ... ವಿರೋಧವಿಲ್ಲದೆ ... ಜನರ ಪೈಕಿ ... ಕಾಂಗ್ರೆಸ್ಸಿನವರು ಮತ್ತು ... ಸ್ವತಂತ್ರರಾಗಿದ್ದಾರೆ. ... ಜನರಿಂದ ... ವಾರದೊಳಗೆ ... ನ್ನು ಕಳೆದುಕೊಂಡಿರುತ್ತಾರೆ.

ಪಾಕಿಸ್ತಾನದಲ್ಲಿ ಇಬ್ಬರು ಮಂತ್ರಿಗಳ ಉಚ್ಚಾಟನೆ

ಪಾಕಿಸ್ತಾನದ ಪ್ರಧಾನಿ ಖ್ವಾಜಾ ನಜಿಮುದ್ದೀನರು ಅಲ್ಲಿನ ವ್ಯವಸಾಯ ಮಂತ್ರಿ ಪೀರ್ಜಾದಾ ಅಬ್ದುಲ್ ಸತ್ತಾರ್ ಮತ್ತು ಸಂಚಾರ ಮಂತ್ರಿ ಯಾಮ ... ಯವರನ್ನು ವಜಾ ಮಾಡಿ ಅವರ ಸ್ಥಾನಕ್ಕೆ ಬೇರೆ ಇಬ್ಬರನ್ನು ನೇಮಿಸಿರುತ್ತಾರೆ. ಪ್ರಾಂತದ ಪರ್ಲಮೆಂಟರಿ ಕಾರ್ಯದರ್ಶಿಯವರನ್ನೂ, ಕಾರ್ಮಿಕ ಮಂತ್ರಿ ಡಿ. ಕೆ. ... ಯವರನ್ನೂ ಕೆಲವು ಹುದ್ದೆಗಳಿಗೆ ನೇಮಿಸಿರುತ್ತಾರೆ.

ಈಜಿಪ್ಟು ಬಿಡಲು ಬ್ರಿಟನ್ನಿಗೆ ೨ ವರ್ಷ ಅವಧಿ ಬೇಕು

ಸೂಯೆಜ್ ಪ್ರದೇಶದಿಂದ ಬ್ರಿಟಿಷ್ ಸೈನ್ಯಗಳನ್ನು ಹಲವು ಷರತ್ತಿನೊಡನೆ ವಾಪಸು ಕರೆಸಲು ಬ್ರಿಟನ್ನು ಸಿದ್ಧವಾಗಿರುವುದು. ಆ ೨೨ ಕಾ ವಾಪಸಾಗಲು ೨ ವರ್ಷಗಳ ಅವಧಿಯು ಬೇಕೆಂದೂ ತಿಳಿಸುವುದು. ಈಜಿಪ್ಟು ಮಧ್ಯ ಪೂರ್ವದ ರಕ್ಷಣಾ ವ್ಯವಸ್ಥೆಗೆ ಸೇರಲು ಒಪ್ಪಬೇಕು, ಮತ್ತು ಸುಡಾನ್ ಜನರು ತಮ್ಮ ಭವಿಷ್ಯವನ್ನು ವಿಶ್ವ ಸಂಸ್ಥೆಯ ಹತೋಟಿಯಲ್ಲಿ ಸ್ವತಂತ್ರ ಜನಮತಗಣನೆಯ ಮೂಲಕ ನಿರ್ಧರಿಸಿಕೊಳ್ಳುವುದಕ್ಕೆ ಬ್ರಿಟನ್ನು ಒಪ್ಪತಕ್ಕದ್ದು ಎಂಬ ಸಲಹೆಯನ್ನು ಈಜಿಪ್ಟ್ ವಿದೇಶಾಂಗ ಮಂತ್ರಿಗೆ ಬ್ರಿಟಿಷ್ ವಿದೇಶಾಂಗ ಮಂತ್ರಿ ಈಡನ್ನರು ಕೊಟ್ಟಿರುತ್ತಾರೆ.

○ ಬರುವ ವರ್ಷದಲ್ಲಿ ಫಾರ್ಮೋಸಾದ ಚೀನಾ ರಾಷ್ಟ್ರೀಯ ಚೀನಾರು ಕಮ್ಯೂನಿಸ್ಟ್ ಚೀನಾದ ಮೇಲೆ ಧಾಳಿ ನಡೆಸುವರೆಂದು ಹೇಳಲಾಗಿದೆ.

ಕೈರೊ, ಅಲೆಕ್ಸಾಂಡ್ರಿಯಾಗಳಲ್ಲಿ ಜರೂರು ಪರಿಸ್ಥಿತಿ

ಈಜಿಪ್ಟಿನ ಕೈರೊ ಮತ್ತು ಅಲೆಕ್ಸಾಂಡ್ರಿಯಾ ನಗರಗಳಲ್ಲಿ ಭಾರಿ ಪ್ರದರ್ಶನಗಳು ನೆನ್ನೆ ನಡೆದು ಈಗ ಅಲ್ಲಿ ಜರೂರು ಪರಿಸ್ಥಿತಿಯೊದಗಿರುವುದೆಂದು ಘೋಷಿಸಲಾಗಿದೆ. ವಿದ್ಯಾರ್ಥಿಗಳು ಪ್ರದರ್ಶನ ಮಾಡಿದುದಕ್ಕಾಗಿ ಕೈರೊ ವಿಶ್ವವಿದ್ಯಾಲಯವನ್ನು ಅನಿರ್ದಿಷ್ಟ ಕಾಲದವರೆಗೆ ಮುಚ್ಚಲಾಗಿದೆ. ಈಜಿಪ್ಟಿನಲ್ಲಿ ಭಾರಿ ಆಂತರಿಕ ಬಿಕ್ಕಟ್ಟು ಪ್ರಾಪ್ತಿಯಾಗುತ್ತಿರುವುದಾಗಿಯೂ, ನಹಸ್ ಪಾಷಾರವರ ಮಂತ್ರಿ ಮಂಡಲವು ರಾಜೀನಾಮೆ ಕೊಡಬಹುದೆಂದೂ ವರ್ತಮಾನಗಳು ಹಬ್ಬಿವೆ.

ಸಿಂಧ್ ಶಾಸನ ಸಭೆಯ ಹೊಸ ನಾಯಕರ ಆಯ್ಕೆ

ಸಿಂಧ್ ಪ್ರಾಂತದ ಶಾಸನ ಸಭೆಯ ಮುಸ್ಲಿಂ ಲೀಗ್ ಪಕ್ಷವು ನೆನ್ನೆ ಸಭೆ ಸೇರಿ ಅಲ್ಲಿನ ರೆವಿನ್ಯೂ ಸಚಿವ ಗುಲಾಂ ಅಲಿ ತಾಲ್ಪುರ್‌ರವರನ್ನು ತನ್ನ ಹೊಸ ನಾಯಕನನ್ನಾಗಿ ಆರಿಸಿಕೊಂಡಿತು. ಸಭೆಯಲ್ಲಿ ತುಂಬಾ ಕೋಲಾಹಲವಾದ ನಂತರ ಮಾಜಿ ಮುಖ್ಯ ಮಂತ್ರಿ ಖುರ್‍ರೋ ಮತ್ತು ಅವರ ೧೦ ಜನ ಹಿಂಬಾಲಕರು ಸಭಾತ್ಯಾಗ ಮಾಡಿದರು. ಅವರೆ ಸಿಂಧ್ ಪ್ರಾಂತದ ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿಯು ಸಭೆ ಸೇರಿ, ಸಿಂಧಿನಲ್ಲಿ ಗೌರ್ನರ್ ಪ್ರಭುತ್ವವು ಸ್ಥಾಪನೆಯಾಗಬೇಕೆಂದು ನಿರ್ಣಯ ಮಾಡಿರುತ್ತದೆ. ಈ ನಿರ್ಣಯವು ಖುರ್‍ರೋರವರಿಗೆ ಬೆಂಬಲವೀಯುತ್ತದೆ.

ಚಿಹ್ನೆ ಸೂಚಿಸಲು ದೀಪ ಹಿಡಿದು ಪ್ರಚಾರ

ದೆಹಲಿಯಲ್ಲಿ ಚುನಾವಣೆಯ ಪ್ರಚಾರದ ಬಿರುಸು ಹೆಚ್ಚಿದಂತೆಲ್ಲಾ ಉಮೇದುವಾರರು ತಮ್ಮ ಗುರುತುಗಳನ್ನು ಹೆಚ್ಚು ಜನಪ್ರಿಯ ಮಾಡಲು ಹೊಸ ಯುಕ್ತಿಗಳನ್ನು ಕಂಡುಹಿಡಿಯುತ್ತಿರುವರು. ಜನಸಂಘದ ಉಮೇದುವಾರನೊಬ್ಬನು ಭಾನುವಾರ ರಾತ್ರಿ ತನ್ನ ಗುರುತನ್ನು ತೋರಿಸಲು ಒಂದು ದೀಪವನ್ನು ಹಿಡಿದು ಬೀದಿಗಳಲ್ಲಿ ಸುತ್ತಾಡಿದನೆಂದು ವರದಿಯಾಗಿದೆ.

ಕನ್ನಡ ಭಾಷೆಯಲ್ಲಿ ನೆಹರೂ ಸಂಬೋಧನೆ

ಹುಬ್ಬಳ್ಳಿಯಲ್ಲಿ ಮೊನ್ನೆ ಸೇರಿದ ಭಾರಿ ಬಹಿರಂಗ ಸಭೆಯಲ್ಲಿ ಪಂಡಿತ ನೆಹರೂರವರು "ಬಂಧುಗಳೇ" ಎಂದು ಕನ್ನಡದಲ್ಲಿ ಭಾಷಣವನ್ನು ಪ್ರಾರಂಭಿಸಿದಾಗ ಸಭೆಯಲ್ಲಿ ಭಾರಿ ಕೋಲಾಹಲವುಂಟಾಯಿತು. ಅಲ್ಲಿ ಅವರು ೧೦ ನಿಮಿಷಗಳ ಕಾಲ ಮಾತನಾಡಿ, ಬರುವ ವರ್ಷಗಳಲ್ಲಿ ನಡೆಯಬೇಕಾಗಿರುವ ಮಹತ್ತರ ಕಾರ್ಯಗಳಿಗೆ ಹೋಲಿಸಿದರೆ ಈಗ ಸಾಧಿಸಿರುವುದು ಅಲ್ಪವೆಂದು ಹೇಳಿದರು.

ಅಮ್ಮತಾಬಾಯಿಯವರ ನಿಧನ

ರಾಜಧಾನಿಯ ಭಗಿನೀ ಸೇವಾಸಮಾಜದ ಕಾರ್ಯದರ್ಶಿನಿಯಾಗಿದ್ದ ಶ್ರೀಮತಿ ವೈ. ಕೆ. ಅಮ್ಮತಾಬಾಯಿಯವರು ತಮ್ಮ ೩೫ನೇ ವಯಸ್ಸಿನಲ್ಲಿ ಕಳೆದ ಶನಿವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಕಾಂಗ್ರೆಸ್ಸಿಗೇ ಓಟು ಕೊಡಿ ಏಕೆ ?

ಮುಂದೆ ದೇಶದಲ್ಲಿ ಸರ್ವತೋಮುಖ [illegible] ಅಭಿವೃದ್ಧಿ ಉಂಟಾಗುವಂತೆ ಕಾಂಗ್ರೆಸ್ಸಿನ ಆಡಳಿತ ದಾರಿ ಮಾಡಿಕೊಟ್ಟಿದೆ. ದೊಡ್ಡ ದೊಡ್ಡ ಅಣೆಕಟ್ಟಿನ ಕಾರ್ಯಾರಂಭ ಮಾಡಿದೆ. ಇದರಿಂದ ದೇಶದ ಮುಂದೆ ಸಾಕಾದಷ್ಟು [illegible] ಅನುಕೂಲವಾಗುತ್ತದೆ. [illegible] ಅಭಿವೃದ್ಧಿ [illegible] ನಮ್ಮ ದೇಶದ ಸಂಪತ್ತು [illegible] ಯುಂಟಾಗಿದೆ. ಗಳಿಸಿದ ಸ್ವಾತಂತ್ರ್ಯವನ್ನು ಬೆಳೆಸಲು [illegible] ವಿದ್ಯಾ ಪ್ರಸಾರದ [illegible] ನಡೆದಿದೆ [illegible] ಸಮಾಜ [illegible] ತರಗೊಳಿಸಿದೆ.

ಹೀಗೆ ನಾನಾ [illegible] ಪ್ರಗತಿ ಮಾರ್ಗ [illegible] ಕಾಂಗ್ರೆಸ್ಸನ್ನು [illegible] ದೇಶದಲ್ಲಿ ಸಂಪತ್ಸಮೃದ್ಧಿಯಾಗ [illegible] ಮಾಡಲು ಅನುಕೂಲವಾಗ [illegible] ಸ್ವತಂತ್ರವಾದ [illegible] ಕಾರಣ [illegible] ಕಾಂಗ್ರೆಸ್ [illegible] ಪ್ರಜಾರಾಜ್ಯ [illegible] ಶಕ್ತಿ [illegible] ದೇಶದ ಪ್ರಗತಿ [illegible] ಕೊಟ್ಟು ಜಯ [illegible] ಪ್ರಾರ್ಥನೆ

(ಕಾಂಗ್ರೆಸ್ [illegible])

ಗಣಿ ಸಿಡಿತದಿಂದ [illegible] ಜನರ ಮರಣ

[illegible]

ಬೇಗ್ ಶೈನು ಸಿಕಿದೆ

[illegible]

ಶಿಕ್ಷಣಸಂಸ್ಥೆ ಮತ್ತು ಸಂಸ್ಕಾರ

ಶಿಕ್ಷಣದ [illegible] ಭಾಷಣ

ರಾಜಧಾನಿ [illegible] ಉಪಾಧ್ಯಾಯರುಗಳ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ [illegible] ಮತ್ತು [illegible] ವಿಷಯವಾಗಿ [illegible] ಕಾಲೇಜಿನಲ್ಲಿ ಭಾಷಣ ಮಾಡಿ, ಮೈಸೂರು ಸಂಸ್ಥಾನ [illegible] ನೀಡುತ್ತಿರುವ [illegible] ವಿವರಿಸಿದರು.

[illegible] ಸಮಿತಿ, ಮೈಸೂರು

ತಾ|| 26 12-51

ಹರಾಜು ಇಸ್ತಿಹಾರು

[illegible] 1160 1161 [illegible]

(ಸಹಿ) [illegible]

ಗೋವಾ ಮುಂತಾದ ಕಡೆ ವಿದೇಶೀ ಆಡಳಿತದ ಕೊನೆ

ಬೆಳಗಾಮಿನಲ್ಲಿ ಭಾಷಣ ಮಾಡುತ್ತಾ ಪಂಡಿತ ನೆಹರೂರವರು ಗೋವಾ, ಪಾಂಡಿಚೇರಿ, ಮಾಹಿ, ಮುಂತಾದ ಕಡೆಗಳಲ್ಲಿರುವ ವಿದೇಶೀ ಪ್ರಭುತ್ವಗಳು ಶೀಘ್ರ ಹಿಂತೆಗೆದುಕೊಳ್ಳುವುವೆಂದು ತಿಳಿಸಿದರು.

ಮನೆ ಮಾರಾಟಕ್ಕಿದೆ

ನಂ. ೧೧೧೧, ಗೀತಾ ರಸ್ತೆ, ಮೈಸೂರು.

ರೂ. 15,000|-

ವಿವರಗಳಿಗೆ —

ಜಯ ಅಂಡ್ ಕಂಪೆನಿ,

ಮನೆ, ಜಮೀನು ಮತ್ತು ಹಣಕಾಸಿನ ಏಜಂಟರು,

ಹಳೇ ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್, ಮೈಸೂರು

ಟೆಲಿಫೋನ್ — 520

ಬಹು ಶ್ರೇಷ್ಠ ಉತ್ತಮವಾದ ಸಾಬೂನು

308



ದಿ ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ರಾಜಕಮಲ್ ಮೈಸೂರು

ನಾಳೆಯಿಂದ 2 ನೇ ವಾರ

ಮಾಯಕ್ಕಾರಿ

(ತಮಿಳು)

ಮಾಸ್ಕ್ ಬಿಡುಗಡೆ

[illegible] 30ನೇ [illegible]

—: ಹರಾಜು :—

[illegible]

ಪ್ರಭಾ ಟಾಕೀಸ್

28-12-51ನೇ ಶುಕ್ರವಾರದಿಂದ ಅಪೋಹ 2ನೇ ವಾರ

ಸಂಸಾರಂ

ಲಕ್ಷ್ಮೀರಾಜ್ಯಂ, ನಾಗೇಶ್ವರ ರಾವ್, ಎಲ್ ವಿ ರಾಮರಾವ್, ರೇಲಂಗಿ ಪಾತ್ರ ವಹಿಸಿರುವ ತೆಲುಗು ಚಿತ್ರ

28-12-51 ಶುಕ್ರವಾರದಿಂದ ಅಮೋಘ ಆರಂಭ

ಶ್ರೀ ಲಕ್ಷ್ಮಿ, ಮೈಸೂರು

ಪ್ರತಿ ದಿನ 3 ಪ್ರದರ್ಶನಗಳು

ಸಕ್ಸರಾಜಾರವರ ತೆಲುಗು ಚಿತ್ರ

ಪೀದಲ ಪಾಟ್ಲು

ತಾರಾಗಣ – ನಾಗಯ್ಯ, ಬಾಲಯ್ಯ, ಲಲಿತಾ-ಪದ್ಮಿನಿ

ಒಲಂಪಿಯಾ, ಮೈಸೂರು

27-11-51 ರಿಂದ ಅಮೋಘವಾದ 2ನೇ ವಾರ

- ಬಡೀ ಬಹೆನ್ -

ಯಾಕೂಬ್, ಆಗ, ಸಿರೂಪ್ ರಾಯ್, ಮತ್ತು ಸುರೇಶ್ ಪಾತ್ರ ವಹಿಸಿರುವ ಹಿಂದೀ ಚಿತ್ರ

28- 12- 51 ರಿಂದ ಬೆಳಗಿನ ಪ್ರದರ್ಶನ

[illegible] ಕುಮಾರ್ ಪಾತ್ರ ವಹಿಸಿರುವ [illegible]

ಚಾಮುಂಡೇಶ್ವರಿ ಟಾಕೀಸ್

28-12 51ರಿಂದ ಜಯಪ್ರದವಾದ 2ನೇ ವಾರ ದಿನವಹಿ 3 ಪ್ರದರ್ಶನ

– [illegible] ಸರ್ವೋನ್ನತ ಪೌರಾಣಿಕ ತಮಿಳು ಚಿತ್ರ —

ಶನಿ ವಿಕ್ರಮ

(ಶನಿ ಮಹಾತ್ಮ್ಯ)

ತಾರಾಗಣ [illegible], ಬಿ. ಜಯಮ್ಮ, ಎಂ. ವಿ ರಾಜಮ್ಮ ಮುಂತಾದವರು

[PRAKASH RELEASE

ಗೌ|| ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚೀ, ಆರ್ಣಿ, ಬನಾರಸ್, ಪೂನಾ, ಸಾಂಸ್ಕೃ, ಮರಿಯ ಇರು ಸೀರೆಗಳು ಮತ್ತು ಕಾಸ್ಮೀರ್ ಶಾಲುಗಳಿಗೆ

D. L. ನರಸಿಂಹಯ್ಯ,

[illegible] ಆನಂದ ಭವನ ಪಕ್ಕ, ಮೈಸೂರು

Edited Printed and Published by A R Nagarajan, at Sadhvi Press [illegible]

ರೀಜ್ ನಂ. ೯೨ ೬ ಪುಟಗಳು ಬೆಲೆ ೩ ಕಾಸು

ವಿಶ್ವ

ಸಂಪುಟ ೧೦ | ಶುಕ್ರವಾರ ೨೨-೧೨-೫೧ | ಸಂಚಿಕೆ ೧೬೮

ಇರಾನ್ ಪಾರ್ಲಿಮೆಂಟ್ ಸಭೆಯಲ್ಲಿ ಗೊಂದಲ

ಕಾಂಗ್ರೆಸ್ಸಿಗೇ ಮಹಾಜನರು ಬೆಂಬಲ ನೀಡಬೇಕು

ಶ್ರೀ ಹನುಮಂತಯ್ಯನವರ ಭಾಷಣ

ಮೈಸೂರು ೨೧

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಚೆನ್ನಪಟ್ಟಣದ ಟೌನ್‌ಹಾಲ್ ಮೈದಾನದಲ್ಲಿ ಭಾಷಣ ಮಾಡಿ, ಕಾಂಗ್ರೆಸ್ ಸಂಸ್ಥೆಗೇ ಮಹಾಜನರು ಬೆಂಬಲ ನೀಡಬೇಕೆಂದು ಕೋರಿದರು.

ಪ್ರಜಾ ಪ್ರಭುತ್ವ ತತ್ವವು ಭಾರತಕ್ಕೆ ಹೊಸದಾಗಿರುವುದರಿಂದ ಇದನ್ನು ಬೆಳೆಸಲು ಮಹಾಜನರ ಸಹಕಾರವು ಬೇಕೆಂದು ಅವರು ಪ್ರಾರ್ಥಿಸಿದರು. ಸ್ವರಾಜ್ಯವನ್ನು ಸ್ಥಾಪಿಸಿದ ನಂತರ ದೇಶದ ಪ್ರಗತಿಗೆ ಪೂರ್ವ ಪೀಠಿಕೆಗಳನ್ನು ಹಾಕುವ ಸತ್ಸಂಪ್ರದಾಯಗಳನ್ನು ಬೆಳೆಸಿಕೊಂಡು ಬರಬೇಕೆಂದು ಹೇಳಿದರು. ಅನೇಕ ವರ್ಷಗಳ ಪ್ರಜಾ ಪ್ರಭುತ್ವದ ಅನುಭವವಿರುವ ಇಂಗ್ಲೆಂಡ್ ದೇಶದಲ್ಲಿ ಪಕ್ಷಗಳ ಪ್ರಭಾವವೇ ಹೆಚ್ಚೆಂದೂ, ಸ್ವತಂತ್ರರಿಗೆ ಸ್ಥಾನವೇ ಇಲ್ಲವೆಂದೂ ತಿಳಿಸಿದರು. ಗೊತ್ತಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡಿರುವ ಪಕ್ಷಗಳಿಗೇ ಜನತೆಯು ಬೆಂಬಲ ನೀಡುವುದು ಸಹಜವೆಂದೂ ಸ್ವತಂತ್ರರಿಂದ ದೇಶಕ್ಕೆ ತುಂಬಾ ನಷ್ಟ ಸಂಭವಿಸುವುದೆಂದೂ ಅವರು ಹೇಳಿದರು.

ಭಾರತದ ಸಮಾಜವಾದಿ ಪಕ್ಷ ಮತ್ತು ಜನ ಸಂಘಗಳ ಧ್ಯೇಯಗಳನ್ನು ವಿವರಿಸಿ, ಸಮಾಜವಾದಿ ಪಕ್ಷದ ನಿಲುವು ಪ್ರಸಕ್ತ ಕಾಲಕ್ಕೆ ಅಸಾಧ್ಯವಾದುದೆಂದೂ, ಜನ ಸಂಘದ "ಅಖಂಡ ಭಾರತ"ದ ಗುರಿಯು ಉಚಿತವಾದುದಲ್ಲವೆಂದೂ ಅಭಿಪ್ರಾಯಪಟ್ಟು ದೇಶದ ಭದ್ರತೆಯನ್ನು ಕಾಪಾಡಿ, ಸುವ್ಯವಸ್ಥೆಯ ಆರ್ಥಿಕ ಪ್ರಗತಿಯು ಸಮರ್ಪಕ ... ಕಾಂಗ್ರೆಸ್ಸಿಗೇ ಜನರು ಬೆಂಬಲ ನೀಡುವುದು ಧರ್ಮವೆಂದು ಸೂಚಿಸಿದರು. ಕಾಂಗ್ರೆಸ್ಸು ಪುನಃ ಅಧಿಕಾರಕ್ಕೆ ಬಂದ ನಂತರ, ಎಲ್ಲ ಕಷ್ಟಗಳೂ ಪರಿಹಾರವಾಗುವುದಿಲ್ಲವೆಂದೂ ಎಲ್ಲರೂ ದೇಶದ ಅಭ್ಯುದಯಕ್ಕಾಗಿ ದುಡಿಯಲೇ ಬೇಕೆಂದೂ ತಿಳಿಸಿದರು. ಕಾಂಗ್ರೆಸ್ಸಿನ ವಿರುದ್ಧವಾಗಿ ಟೀಕೆ ಮಾಡುವವರು ಹಾನಿಕಾರಕರಾಗಿರುವರೆಂದೂ, ಅವರು ಮತ್ತಷ್ಟು ... ಬಡವರ ... ಯಾತನೆ ಅಥವಾ ಪ್ರಾಣವೇ ಹೋಗುವ ಸಂಭವವುಂಟಾಗುವುದೆಂದೂ ಹೇಳಿದರು.

ಡಿಸೆಂಬರ್ ಸಂಬಳವನ್ನು ನಾಳೆ ಪಡೆಯಬಹುದು

ಚುನಾವಣೆಗಳಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರನ್ನು ವಿವಿಧ ಕೆಲಸಗಳಿಗೆ ನೇಮಿಸಲಾಗುವುದರಿಂದಲೂ ಅವರು ಬರುವ ತಿಂಗಳು ೩ನೇ ತಾರೀಖಿನ ನಂತರ ಪರವೂರುಗಳಿಗೆ ಹೋಗಬೇಕಾಗಿರುವುದರಿಂದಲೂ ಅವರುಗಳಿಗೆ ೩ನೇ ತಾ|| ಡಿಸೆಂಬರ್ ತಿಂಗಳು ಸಂಬಳವು ದೊರೆಯಲು ಸಾಧ್ಯವಿಲ್ಲದಿರುವ ಪ್ರಯುಕ್ತ ಈ ತಿಂಗಳಿನ ಸಂಬಳವನ್ನು ನಾಳೆ ಅಥವಾ ೩ನೇ ತಾ|| ಪಡೆಯಲು ವಿಶೇಷ ರೀತಿಯ ಅನುಕೂಲವನ್ನು ಸರ್ಕಾರದವರು ಕಲ್ಪಿಸಿರುತ್ತಾರೆ.

ಪರ್ಷಿಯಾದ ಪ್ರಧಾನಿಯ ವಿಚಾರಣೆಗಾಗಿ ನಿರ್ಣಯ

ಪರ್ಷಿಯಾದ ಪ್ರಧಾನಿ ಡಾ|| ಮಹಮ್ಮದ್ ಮುಸಾದಿಕ್‌ರವರ ವಿನಾಶಕಾರಕ ನೀತಿಗಾಗಿ ಅವರನ್ನು ವಿಚಾರಣೆಗೆ ಒಳಪಡಿಸಬೇಕೆಂದು ಇರಾನ ಪಾರ್ಲಿಮೆಂಟಿನ ವಿರೋಧ ಪಕ್ಷದ ಸದಸ್ಯರು ಒಂದು ನಿರ್ಣಯವನ್ನು ಸಭಾಧ್ಯಕ್ಷರಿಗೆ ಒಪ್ಪಿಸಿದ್ದಾರೆ. ಈ ಸಂಬಂಧವಾಗಿ ನಿನ್ನೆ ಸಭೆಯಲ್ಲಿ ಗೊಂದಲವಾಗಿ ಸಭೆಯು ಬೇಗ ಮುಕ್ತಾಯವಾಯಿತು. ಪ್ರಧಾನಿಯವರಿಂದ ಶಾಸನದ ಉಲ್ಲಂಘನೆ, ಪ್ರಜೆಗಳ ಸ್ವಾತಂತ್ರ್ಯ ಮತ್ತು ಭದ್ರತೆಯ ಹಾನಿ, ವಿನಾಶಕಾರಕ ಆರ್ಥಿಕ ನೀತಿಯ ಅನುಸರಣೆ ಮತ್ತು ಪಾರ್ಲಿಮೆಂಟಿನ ಅಗೌರವ, ಇವುಗಳು ನಡೆದಿವೆ ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ.

ಕೂಲಿ ಹೆಂಗಸನ್ನು ಮುಸ್ಲಿಂ ಮತಕ್ಕೆ ಸೇರಿಸಲು ಪ್ರಯತ್ನ

ತಿರುವಾಂಕೂರಿನ ... ಹಳ್ಳಿಯ ಹರಿಜನರ ಕೂಲಿ ಹೆಂಗಸೊಬ್ಬಳನ್ನು ಇಬ್ಬರು ಮುಸಲ್ಮಾನರು ಒಂದು ಮೋಟಾರಿನಲ್ಲಿ ಕರೆದುಕೊಂಡು ಹೋಗಿ ಇಸ್ಲಾಂ ಮತಕ್ಕೆ ಸೇರಿಸುವ ಪ್ರಯತ್ನ ನಡೆಯಿತೆಂದೂ ... ಮಹಾಜನರ ... ಹೋದಾಗ ... ಯಾಗಿದೆ. ... ಸಭೆಯವರ ... ಇಸ್ಲಾಂ ಮತಕ್ಕೆ ಆಕೆಯನ್ನು ಸೇರಿಸಲು ಪ್ರಯತ್ನಿಸಿದರೆಂದೂ, ಅವರ ತಿಳುವಳಿಕೆಯ ಅಭಿಪ್ರಾಯವನ್ನು ... ಆರ್ಯ ಸಮಾಜಕ್ಕೆ ಸೇರಿದವರೆಂದೂ ಹೇಳಲಾಗಿದೆ. ಸದರಿ ಏಜೆಂಟರುಗಳು ಆಕೆಯ ತಾಳಿಯನ್ನು ಬಲವಂತವಾಗಿ ಕಿತ್ತುಕೊಂಡರೆಂದೂ, ಆ ಅಪರಾಧಕ್ಕಾಗಿ ಅವರನ್ನು ವಸ್ತಗಿರಿ ಮಾಡಲಾಯಿತೆಂದೂ ತಿಳಿದುಬಂದಿದೆ.

ಆರೋಗ್ಯ ಪ್ರದರ್ಶನ

ರಾಜಧಾನಿಯ ಅಟ್ಲಾಸ್ ಥಿಯೇಟರಿನಲ್ಲಿ ನಾಳೆ ಸಂಜೆ ೫|| ಗಂಟೆಗೆ ಆರೋಗ್ಯ ಪ್ರದರ್ಶನವು ನಡೆಯುವುದು. ಗೃಹಮಂತ್ರಿ ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆ ವಹಿಸುವರು. ಹಣಕಾಸಿನ ಮಂತ್ರಿ ಶ್ರೀ ಹೆಚ್. ಸಿ. ದಾಸಪ್ಪನವರು ಭಾಷಣ ಮಾಡುವರು.

ಕಾಂಗ್ರೆಸ್ಸಿಗೇ ಓಟು ಕೊಡಿ

ಕೈಗಾರಿಕೆ ನೌಕರರುಗಳಿಗೂ ತುಟ್ಟಿ ಭತ್ಯ ಕೊಡಬೇಕು

ಸರ್ಕಾರಿ ನೌಕರರುಗಳಿಗೆ ೫ ರೂ. ಹೆಚ್ಚಿನ ತುಟ್ಟಿ ಭತ್ಯವನ್ನು ಮಂಜೂರು ಮಾಡಿರುವ ಸರಕಾರವು ... ಸರ್ಕಾರದ ಅಧೀನ ಕೈಗಾರಿಕೆಗಳ ನೌಕರರಿಗೆ ಅನ್ವಯಿಸುವುದಿಲ್ಲ ... ಕಾರ್ಖಾನೆಗಳ ... ಸಂಘಗಳು ... ಸರ್ಕಾರಿ ನೌಕರರಿಗೆ ಕೊಡುತ್ತಿರುವ ಪ್ರಮಾಣದಲ್ಲಿ ಸಂಬಳ ಮತ್ತು ತುಟ್ಟಿ ಭತ್ಯಗಳು ಕೈಗಾರಿಕಾ ನೌಕರರಿಗೆ ದೊರಕುತ್ತಿಲ್ಲ. ... ಸರ್ಕಾರಿ ನೌಕರರಿಗೆ ಕೊಟ್ಟಿರುವ ಹೆಚ್ಚು ತುಟ್ಟಿ ಭತ್ಯವನ್ನು ಕೈಗಾರಿಕೆಯಲ್ಲಿರುವವರಿಗೂ ಕೊಡಬೇಕೆಂದು ಸರ್ಕಾರದವರ ಅತ್ತ ... ಕೈಗಾರಿಕಾ ನೌಕರರ ಹಿತ್ತಸಿಗಳೊಬ್ಬರು ಕೋರಿ ಪತ್ರ ಬರೆದಿರುತ್ತಾರೆ.

ಚುನಾವಣಾ ಪ್ರಚಾರ ಸಭೆ

ರಾಜಧಾನಿಯ ಕೆ. ಎಂ. ಪಿ. ಪಕ್ಷದ ಆಶ್ರಯದಲ್ಲಿ ಕೃಷ್ಣಮೂರ್ತಿಪುರದಲ್ಲಿ ವನಿತಾ ಸದನದ ಆವರಣದಲ್ಲಿ ಈ ಸಂಜೆ ೬ ಗಂಟೆಗೂ, ಗೀತಾ ರಸ್ತೆಯಲ್ಲಿರುವ ಈಶ್ವರ ದೇವಸ್ಥಾನದ ಆವರಣದಲ್ಲಿ ೭|| ಗಂಟೆಗೂ ಚುನಾವಣಾ ಪ್ರಚಾರದ ಸಭೆಗಳು ನಡೆಯುತ್ತವೆ.

ರಾಜಧಾನಿಯ ಕೆ. ಆರ್. ಮೊಹಲ್ಲಾ ಗಂಗೋತ್ರಿ ... ಸಭೆಯಲ್ಲಿ ಈ ರಾತ್ರಿ ೯ ಘಂಟೆಗೆ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಚುನಾವಣಾ ಪ್ರಚಾರ ಸಭೆಯು ನಡೆಯುವುದು. ಶ್ರೀ ಟಿ. ಮರಿಯಪ್ಪನವರು ಭಾಷಣ ಮಾಡುವರು.

ಅನಾವೃಷ್ಟಿಗಾಗಿ ೩ ಜಿಲ್ಲೆಗಳಿಗೆ ೧೦ ಲಕ್ಷ ರೂ. ಪರಿಹಾರ

ಬೆಂಗಳೂರು ೨೧

ಮಳೆಯು ಬಾರದೆ ಬುಸ್ಸಿ ಬೆಳೆಯು ಕೆಟ್ಟು ಹೋಗಿರುವುದರಿಂದ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ಸರ್ಕಾರದವರು ೧೦ ಲಕ್ಷ ರೂಗಳನ್ನು ಮಂಜೂರು ಮಾಡಿರುತ್ತಾರೆ. ಬರುವ ವರ್ಷ ಈ ಪ್ರದೇಶಗಳ ಆಹಾರ ಸ್ಥಿತಿ ಬಗ್ಗೆ ಸರ್ಕಾರಕ್ಕೆ ಆತಂಕವುಂಟಾಗಿದೆಯೆಂದು ತಿಳಿದುಬಂದಿದೆ.

ವಿದ್ಯುಚ್ಛಕ್ತಿಯ ವಿಸ್ತರಣೆ

ಶೃಂಗೇರಿ, ಯಳಂದೂರು, ಜಗ್ಗನದೇವನ ಕೋಟೆ, ನರಸಿಂಹರಾಜಪುರ, ಬಾಳೆಹೊನ್ನೂರು, ಕೊಪ್ಪ, ಮತ್ತು ಹೊಸ ನಗರಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗುವುದೆಂದೂ, ಈ ಪಟ್ಟಣಗಳಲ್ಲದೆ ಇನ್ನೂ ಹಲವು ಹಳ್ಳಿಗಳನ್ನೂ ಸೇರಿಸಿ ಬರುವ ವರ್ಷ ಇವುಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನೊದಗಿಸಲು ಸರ್ಕಾರದವರು ೨೮ ಲಕ್ಷ ರೂ. ಮಂಜೂರು ಮಾಡಿರುವರೆಂದೂ ತಿಳಿದು ಬಂದಿದೆ.

ಈ ಜಿಲ್ಲೆಯಲ್ಲಿ ಓಟು ಕೊಡುವವರಿಗೆ ಜುಲ್ಮಾನೆ

ಈ ಜಿಲ್ಲೆಯಲ್ಲಿ ಜರುಗಲಿರುವ ಹೊಸ ಚುನಾವಣಾ ಶಾಸನದ ಪ್ರಕಾರ ಎರಡು ಮತದಾನ ಮಾಡಲು ಪ್ರಜೆಗಳಿಗೆ ಸೂಚನೆ ಕೊಡಲಾಗುವುದು. ಓಟು ಕೊಡದವರಿಗೆ ೫ ಪೌಂಡುಗಳ ದಂಡವನ್ನು ವಿಧಿಸಲಾಗುವುದೆಂದು ತಿಳಿಸಲಾಗಿದೆ.

ಎತ್ತು ಕಟ್ಟಿದ ಗಾಡಿಗೆ ಕಾಂಗ್ರೆಸ್ ಅನುಮೋದಕರ ಮೆರವಣಿಗೆ

ಶ್ರೀಗಳಾದ ಎಂ. ದಾಸಯ್ಯ, ಕೆ. ಸಿಂಗಾರಿಗೌಡ, ಮಾದಪ್ಪ ಗೌಡ, ಎಂ. ಎಲ್. ಎನ್. ಶಾಸ್ತ್ರಿ ಮುಂತಾದ ಕಾಂಗ್ರೆಸ್ ಕಾರ್ಯಕರ್ತರೊಡಗೂಡಿ ಶ್ರೀ ಹೆಚ್. ಸಿ. ದಾಸಪ್ಪನವರು ೨೦ನೇ ತಾ|| ನಾಗಮಂಗಲ ತಾಲ್ಲೂಕಿನ ಬೆಳ್ಳೂರು, ಬಿಂಡಿಗನವಿಲೆ, ಕಾಂತರಾಜಪುರ, ಕಟ್ಟೆಕೆರೆ ಮುಂತಾದ ಹಳ್ಳಿಗಳಲ್ಲಿ ಕಾಂಗ್ರೆಸ್ಸಿನ ಚುನಾವಣಾ ಪ್ರಚಾರ ಭಾಷಣಗಳನ್ನು ಮಾಡಿದರು. ೨೧ನೇ ತಾ|| ಕೃಷ್ಣರಾಜಪೇಟೆ ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ ಅವರು ಭಾಷಣ ಮಾಡಿದರು. ಕಾಂಗ್ರೆಸ್ಸಿಗೆ ಪೂರ್ಣ ಬೆಂಬಲ ಕೊಡುವ ... ಭರವಸೆಗಳನ್ನು ಕೊಡಲಾಯಿತು. ... ಶ್ರೀ ಕೆ. ಸಿ. ದಾಸಪ್ಪ, ಶ್ರೀ ಎಂ. ರಾಜಯ್ಯ ಮತ್ತು ಶ್ರೀ ಎಸ್. ಎಂ. ಲಿಂಗಪ್ಪನವರನ್ನು ... ಜೊತೆ ಎತ್ತುಗಳಿಂದ ಕಟ್ಟಿದ ಗಾಡಿಯ ಮೇಲೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಚುನಾವಣಾಧಿಕಾರಿಗಳಿಗೆ ಅಂಚೆ ಮೂಲಕ ಓಟು

ಚುನಾವಣಾ ಕ್ಷೇತ್ರಗಳಲ್ಲಿ ನೇಮಿಸಲ್ಪಡುವ ಅಧಿಕಾರಿಗಳು ಮತ್ತು ನೌಕರರುಗಳು ತಮ್ಮ ಓಟಿನ ಕ್ಷೇತ್ರಗಳಿಗೆ ಹೋಗಿ ಸ್ವಕ್ಷೇತ್ರಗಳಲ್ಲಿ ಓಟು ಕೊಡಲು ಅವಕಾಶವಾಗದಿದ್ದರೆ ತಮ್ಮ ಕ್ಷೇತ್ರಗಳ ಚುನಾವಣಾಧಿಕಾರಿಗಳಿಗೆ ಟಪಾಲಿನ ಮೂಲಕ ಓಟು ಕಳುಹಿಸಲು ಅವಕಾಶ ಕಲ್ಪಿಸಲಾಗುವುದೆಂದು ಸಂಸ್ಥಾನದ ಚುನಾವಣಾಧಿಕಾರಿಗಳು ತಿಳಿಸಿರುತ್ತಾರೆ.

ಮೈಸೂರು ಸಂಸ್ಥಾನಕ್ಕೆ ನೆಹರೂರವರ ಸಂದೇಶ

ಬೆಂಗಳೂರಿನಿಂದ ಬೊಂಬಾಯಿಪುರಕ್ಕೆ ತೆರಳುವ ಮುಂಚೆ ಮೊನ್ನೆ ಪಂಡಿತ ನೆಹರೂರವರು ಮೈಸೂರು ಸಂಸ್ಥಾನಕ್ಕೆ ಹೊಸ ವರ್ಷದ ಸಂದೇಶವೊಂದನ್ನು ಕೊಟ್ಟು ಮೈಸೂರು ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ ರಾಷ್ಟ್ರದ ಐಕ್ಯತೆಯು ಮನೋಭಾವವನ್ನು ಜನರ ಹೃದಯ ಮತ್ತು ಮನಸ್ಸುಗಳಲ್ಲಿ ತುಂಬ ... ರಿಯನ್ನು ಮುಖ್ಯವ ಕಾರ್ಯವು ಹೊಸ ವರ್ಷದಲ್ಲಿ ಪ ...ಯನಾಗಲಿ ದಾ ... ದಲ್ಲಿನ ಬಡತನ ನಿರುದ್ಯೋಗಗ... ಮೂಲೋತ್ಪಾಟನೆಯಾಗಿ ಸ್ವಾತಂತ್ರ್ಯ... ಯ ... ಸುಖವನ್ನು ಉತ್ತಮ ಗೊಳಿಸುವ ಹೋರಾಟವು ಯಶಸ್ವಿಯಾ ದ ಪ್ರಗತಿ ಪಥದಲ್ಲಿ ಮುನ್ನಡೆಯುತ್ತ...

ಶೀಘ್ರಲಿಪಿಗಾರರ ಸಮ್ಮೇಳನ

ಈ ತಿಂಗಳು ೩೦ ಮತ್ತು ೩೧ನೇ ತಾರೀಖು ಬೆಂಗಳೂರಿನಲ್ಲಿ ದಕ್ಷಿಣ ಭಾರತದ ಶೀಘ್ರ ಲಿಪಿಗಾರರ ಸಮ್ಮೇಳನವು ... ಡೆಪ್ಯುಟಿ ಕಮಿಷನರ್ ಶ್ರೀ ಎಸ್ ವೆಂಕಟರಮಣ ... ರವರ ಅಧ್ಯಕ್ಷತೆಯ ಲ್ಲಿನಡೆಯುವುದು ... ಲಾರದ ಚಿನ್ನದ ಗಣಿಗಳ ... ಎಂ ಎ ಶ್ರೀನಿವಾಸರವರು ... ಕ್ರಮವನ್ನು ನೆರವೇರಿಸುವರು. ಇದೇ ಸಂದರ್ಭದಲ್ಲಿ ಒಂದು ಕಲಾ ಪ್ರದರ್ಶನವೂ ... ಏರ್ಪಡಿಸಲಾಗಿದೆ

... ಮಹತ್ತರ ಜವಾಬ್ದಾರಿ ... ಜನರು ... ಪುನಾರಚನೆ ಪೂರ್ಣ ... ರತದ ಇತಿಹಾಸದಲ್ಲಿ ... ಯುಗವನ್ನು ಪ್ರಾರಂಭಿಸಬೇಕೆಂದೂ ಅವರು ಸೂಚಿಸಿರುತ್ತಾರೆ

ಮೈಸೂರು ಸಿಟಿ ರೀಜಿಸ್ಟ್ರೇಷನ್ ಅಧಿಕಾರಿಗಳ ಕಛೇರಿ

ಪ್ರಕಟಣೆ

ನಂ ಎ ಎಲ್ 123/51 52

ತಾ|| 21 1 1951

1951ನೇ ಡಿಸೆಂಬರ್ 30ನೇ ತಾ|| ಭಾನುವಾರ, 31ನೇ ತಾ|| ... ಜಯಂತಿ ದಿನ 1952ನೇ ಜನವರಿ 1 ನೇ ತಾ|| ಹೊಸ ವರ್ಷದ ದಿನ, 3 ನೇ ತಾ|| ... ದಿನ ಈ ದಿನಗಳು ಒಟ್ಟಿಗೆ ರಜ ... ಪ್ರಯುಕ್ತ, ಸಾರ್ವಜನಿಕರಿಗ ತೊಂದರೆಯಾಗುವುದನ್ನು ತಪ್ಪಿಸಲು ಮೈಸೂರು ನಗರದಲ್ಲಿರುವ ಎಲ್ಲಾ ಸ್ಥಾನ್ಯ... ಆಫೀಸುಗಳೂ ಈ ತಿಂಗಳು 30 ಮತ್ತು ಜನವರಿ 1ನೇ ತಾ|| ಗಳಲ್ಲಿ ಮಾಮೂಲಿನಂತೆ ತಿದ್ದು ವ್ಯಾಪಾರವನ್ನು ನಡೆಸಬೇಕೆಂದು ಆಜ್ಞೆ ಮಾಡಲಾಗಿದೆ (ರುಜು)

ಹೆಚ್ ಟಿ. ವಿಜಯಸಾರಥಿ ...

ರೀಜಿಸ್ಟ್ರೇಷನ್ ಅಧಿಕಾರಿಗಳು, ಮೈಸೂರು

THEOSOPHY STUDY SHOP
Vidyapuri Road
Vontikoppal
Saturday 29th Dec at 5 30 p.m
Talk followed by Question and Answers on
"Man and Superman"

ನಾಯಿ ವಿಮ್ಮಿಗೆ ಔಷಧಿ

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

ಚಾಮುಂಡೇಶ್ವರಿ ಟಾಕೀಸ್

28-12 51ರಿಂದ ಜಯಪ್ರದವಾಗಿ ... ದಿನವಹಿ 3 ಪ್ರದರ್ಶನ
ಕೆಂಪರಾಜ್‌ರವರ ... ತಮಿಳು ಚಿತ್ರ

* ರಾಜಾ ವಿಕ್ರಮ *

(ವನಿ ಮಹಾತ್ಮೆ)

ತಾರಾಗಣ ಕೆಂಪರಾಜ್ ಬಿ ಜಯಮ್ಮ, ಎಂ ವಿ ರಾಜಮ್ಮ ಮುಂತಾದವರು

[PRAKASH KELLAS]

ಇಂದಿನಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ಪ್ರಭಾ *

ಜೇಮ್ಸ್ ಪಿಕ್ಚರ್ಸ್‌ರವರ ಉತ್ತಮ ಸಂಗೀತದಿಂದ ಕೂಡಿದ ಹಿಂದೀ ಚಿತ್ರ

ದೋ ಸಿತಾರೆ

ಪಾತ್ರ ಸುರೈಯ್ಯಾ, ದೇವಾನಂದ್ ಪ್ರೇಮನಾಥ ಶಕುಂತಲಾ ಮತ್ತು ಕುಲದೀಪ್

ಬೆಳಗಿನ ಪ್ರದರ್ಶನ ಇಂದಿನಿಂದ 3 ದಿನ ಮಾತ್ರ
ಜಾನ್‌ಪೂಷ್ ಸಿಪಾಹೀ ★ ಪಾತ್ರ ನಿರೂಪ್, ಗೋಪ

28-12-51 ಶುಕ್ರವಾರದಿಂದ ಅಮೋಘ ಆರಂಭ

ಶ್ರೀ ಲಕ್ಷ್ಮೀ, ಮೈಸೂರು

ಪ್ರತಿ ದಿನ 3 ಪ್ರದರ್ಶನಗಳು
ಪಕ್ಷಿರಾಜಾರವರ ತೆಲುಗು ಚಿತ್ರ

• ಬೀದಲ ಪಾಟ್ಲು •

ತಾರಾಗಣ – ನಾಗಯ್ಯ, ಬಾಲಯ್ಯ, ಲಲಿತಾ–ಪದ್ಮಿನಿ

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ ತೀರ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ
ತಡವಿಲ್ಲದ ವಿಮಾ ಬೋನಸ್ ಗಿನ ಪಾವತಿ
ಸುಲಭವಾದ ಸಾಲದ ಸೌಕರ್ಯ

ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚುವುದು
ಇವರಲ್ಲದೆ ಬೇರಾರು

ಮೈಸೂರು ಸರ್ಕಾರದ ವಿಮಾ ಇಲಾಖೆ

ಪ್ರಜೆಗಳ ಕಾಮಧೇನು

ವಿಮೆ ಮಾಡಿಸಿ ಇಂದೇ ಅರ್ಜಿ ...



murphy radio

THE 152

TA & TU 152 Los Valves A C & AC DC fully tropicalized with plastic Cabinet in Fgy... ...

Operating Voltages 190–250 volts A C Cycles 200 250 volts or 250 volts, 25 100 Cycles

Rs. 325

Wave Ranges 13 7–3 ... meters (22 5–8 0 Mc/s) ... meters ... 185 560 meters (1630–535 Kc/s)

Tel ABIDS AUTHORISED DEALERS Phone

Abids

MURPHY RADIO

STATUES ... MYSO...

ಗೌ|| ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚೀ, ಆರ್ನಿ, ಬನಾರಸ್,
ಪೂನಾ, ಸಾಂಗ್ಲಿ, ವರಿಯೂರು ಸೀರೆಗಳು ಮತ್ತು ಕಾಶ್ಮೀರ್‌ಶಾಲುಗಳಿಗೆ * D. L. ನರಸಿಂಹಯ್ಯ
ಜವಳಿ ಅಂಗಡಿ ... ಭವನ ಹರ್ಷ ರಸ್ತೆ, ಮೈಸೂರು

Edited Printed and Published by A R Nagaraju at Sadhvi Press D Subbiah Road, Mysore

ರಿಜಿ ನಂ. 792 [ಬಿಡಿ ಪ್ರತಿ] ಒಂದಾಣೆ ಪುಟ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೯-೦೩-೫೨ [ಸಂಚಿಕೆ ೧೩೦

ಏಪ್ರಿಲ್ ೧ರಿಂದ ಹೊಸ ಮಂತ್ರಿ ಮಂಡಲಗಳು

ಅಧ್ಯಕ್ಷ, ಉಪಾಧ್ಯಕ್ಷರಿಗೆ ಪೌರ ಸಭೆಯ ಅಭಿನಂದನೆ

ಸಭೆಗೆ ಟಿ. ನರಸಿಂಹಯ್ಯಂಗಾರ್ಯರ ವರದಿ

ಮೈಸೂರು ೨೮

ನಗರದ ಪೌರಸಭೆಯ ಸಾಮಾನ್ಯ ಅಧಿವೇಶನವು ನೆನ್ನೆ ಶ್ರೀ ಟಿ ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ನರಸಿಂಹಯ್ಯಂಗಾರ್ಯರು ತಾವು ಅಧ್ಯಕ್ಷರಾಗಿದ್ದ ಒಂದು ವರ್ಷದಲ್ಲಿ ನಡೆದ ಕೆಲಸ ಕಾರ್ಯಗಳ ಬಗ್ಗೆ ಸ್ಥೂಲವಾದ ವರದಿಯನ್ನೊಂದನ್ನು ಸಭೆಯ ಮುಂದಿಟ್ಟರು

ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಸರಿಪಡಿಸಲು ೩೧ ಲಕ್ಷ ರೂ ವೆಚ್ಚದ ಹೊಸ ಯೋಜನೆಯನ್ನು ಅಂಗೀಕರಿಸಲಾಗಿದೆ; ಪೌರ ಸಭೆಯವರು ಹಲವು ವರ್ಷಗಳ ಹಿಂದೆ ತೆಗೆದುಕೊಂಡಿದ್ದ ಸಾಲದ ತೀರ್ವೆಯನ್ನು ಮಾಡಲಾಗಿದೆ ಶ್ರೀಮನ್ ಮಹಾರಾಜರವರ ಸ್ವಂತ ಪದಾತಿ ದಳದವರು ವಾಸಿಸುತ್ತಿದ್ದ ಮನೆಗಳನ್ನು ಕೊಂಡುಕೊಳ್ಳುವ ಬಗ್ಗೆ ವ್ಯವಹಾರಗಳಾಗುತ್ತಿವೆ ಎಂದು ಅಧ್ಯಕ್ಷರು ತಿಳಿಸಿದರು. ರಸ್ತೆಗಳಿಗೆ ಟಾರು ಗಳನ್ನು ಹಾಕಿಸಲು ೫ ಲಕ್ಷ ರೂ ಗಳನ್ನು ಮಂಜೂರು ಮಾಡಲಾಗಿದೆಯೆಂದೂ ತಿಳಿಸಿದರು ಮುಂದೆ ಬರುವವರು ಈ ಕೆಲಸಗಳನ್ನು ಮಾಡುವ ಬಗ್ಗೆ ತಮಗೆ ಭರವಸೆಯಿದೆಯೆಂದೂ ತಿಳಿಸಿದರು

ಪೌರ ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಾಗಿ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಮತ್ತು ಶ್ರೀ ಎಂ ಎಸ್ ನಂಜಪ್ಪನವರ ಸೇವೆಯನ್ನು ಪ್ರಶಂಸಿಸಿ ಶ್ರೀ ಪಿ ಸೀತಾರಾಮಯ್ಯನವರ ಅವರಿಬ್ಬರನ್ನು ಅಭಿನಂದಿಸುವ ನಿರ್ಣಯವನ್ನು ತಂದರು ಶ್ರೀ ಬಿ ಕೆ ರಾಮಕೃಷ್ಣಯ್ಯನವರು ಅನುಮೋದಿಸಿದರು ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಆಕಾಶವಾಣಿಯಲ್ಲಿ ಮಕ್ಕಳ ಕಾರ್ಯಕ್ರಮ

ಮೈಸೂರಿನ ಆಲ್ ಇಂಡಿಯಾ ರೇಡಿಯೋವಿನಲ್ಲಿ ಕಳೆದ ೨೪ ನೇ ತಾ|| ನಿಂದ ಮಕ್ಕಳ ಹಬ್ಬದ ಕಾರ್ಯಕ್ರಮವು ಪ್ರತಿದಿನ ಮಧ್ಯಾಹ್ನ ೨ ಗಂಟೆಗೆ ನಡೆಯುತ್ತಿದ್ದು ನಾಳೆಯೂ ನಡೆಯುವುದು ಈ ಕಾರ್ಯಕ್ರಮದಲ್ಲಿ ಜಗದಾಂಬಾ ಶಿಶುವಿಹಾರ, ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್, ಲಕ್ಷ್ಮೀಪುರದ ಶಿಶುವಿಹಾರ, ಮೈಸೂರು ಮಕ್ಕಳ ಕೂಟ, ಮಾರುತಿ ಮಕ್ಕಳ ಕೂಟ, ಗಜ ಶಾಲಾ ನರ್ಸರಿ ಶಾಲೆ, ಶೀಲಾ ಪ್ರೈಮರಿ ನರ್ಸರಿ ಕೇಂದ್ರ, ತ್ರಿವೇಣಿ ಮಾಲೀಗ್, ವನಿತಾ ಸದನ, ಶ್ರೀ ರಾಮಸಹಾಯ ಸಂಘ, ಹಿಮಾಂಶು ಶಿಶುವಿಹಾರ, ಮತ್ತು ಅಖಿಲ ಕರ್ನಾಟಕ ಮಕ್ಕಳ ಕೂಟ ಈ ಸಂಸ್ಥೆಗಳು ಭಾಗವಹಿಸಿದ್ದುವು ನಾಳೆ ದಿನ ಈ ಕಾರ್ಯಕ್ರಮದ ಸಾಮೂಹಿಕ ಕಾರ್ಯಕಲಾಪಗಳು ನಡೆಯುವುವು ಪ್ರೊ|| ಕೆ ವಿ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿ ಬಹುಮಾನ ವಿನಿಯೋಗ ಮಾಡುವರು

◯ ಕೇಂದ್ರ ಸರ್ಕಾರದ ಸಲಹೆಯ ಪ್ರಕಾರ ಮೈಸೂರು ಸರ್ಕಾರದವರು ಬರುವ ೯ ವರ್ಷಗಳಲ್ಲಿ ಅಫೀಮು ಸೇವನೆಯನ್ನು ಕ್ರಮವಾಗಿ ಕಡಿಮೆ ಮಾಡಲು ನಿಶ್ಚಯಿಸಿರುತ್ತಾರೆ.

ಈಜಿಪ್ಟ್ ಪೋಲೀಸರು ಮತ್ತು ವಿದ್ಯಾರ್ಥಿಗಳಿಗೆ ಕಾಳಗ

ಈಜಿಪ್ಟಿನ ಕೈರೋ ನಗರದಲ್ಲಿ ನೆನ್ನೆ ವಿದ್ಯಾರ್ಥಿಗಳಿಗೂ ಪೋಲೀಸರಿಗೂ ನಡೆದ ಕಾಳಗಗಳ ಪರಿಣಾಮವಾಗಿ ಅಲ್ಲಿನ ಎಲ್ಲ ಶಾಲಾ ಕಾಲೇಜುಗಳನ್ನೂ ಮುಚ್ಚಲು ಆಜ್ಞೆಯಾಗಿದೆ ಬ್ರಿಟನ್ನಿನೊಡನೆ ರಾಜಿ ಮಾಡಿಕೊಳ್ಳುವ ಸಂಬಂಧ ಸೂಚನೆಗಾಗಿ ಈಜಿಪ್ಟಿನ ಪ್ರಧಾನಿ ಭವನದ ಸಲಹೆಗಾರರಾಗಿರಲು ಇಬ್ಬರು ಬ್ರಿಟಿಷರನ್ನು ತೆಗೆದುಕೊಂಡುದನ್ನು ಪ್ರತಿಭಟಿಸಲು ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ ದೊರೆಗಳ ವಿರುದ್ಧ ಘೋಷಣೆಗಳನ್ನು ಕೂಗಿದರು ಪ್ರತ್ಯಕ್ಷ ಘರ್ಷಣೆ ಪೊಲೀಸರು ಘರ್ಷಣೆ ನಡೆದ ೨ ಗಂಟೆ ಕಾಲದಲ್ಲಿ ಆಕಾಶಕ್ಕೆ ಗುಂಡು ಹಾರಿಸಿ, ಜನಗಳ ಮೇಲೆ ಅಶ್ರುವಾಯುಗಳನ್ನೂ ಬಿಟ್ಟರೆಂದು ವರದಿಯಾಗಿದೆ

ಹೈದರಾಬಾದಿನಲ್ಲೂ ಕಾಂಗ್ರೆಸ್ಸಿಗೆ ಪ್ರಥಮ ಜಯ

ಹೈದರಾಬಾದಿನಲ್ಲಿ ಚುನಾವಣೆಗಳು ಪ್ರಾರಂಭವಾಗಿ ಅಲ್ಲಿನ ವಾರಂಗಲ್ ಕ್ಷೇತ್ರದಿಂದ ಶಾಸನ ಸಭೆಗೆ ಸ್ಪರ್ಧಿಸಿದ್ದ ಕಾಂಗ್ರೆಸ್ ಉಮೇದವಾರರಾದ ಶ್ರೀ ಎ ಎಸ್ ರಾಜಲಿಂಗಂರವರು ಭಾರಿ ಬಹುಮತಗಳಿಂದ ವಿಜಯಶಾಲಿಗಳಾಗಿರುತ್ತಾರೆ ಅವರ ವಿರುದ್ಧವಾಗಿ ಸ್ಪರ್ಧಿಸಿದ್ದ ೪ ಜನರ ಪೈಕಿ ಮೂರು ಮಂದಿ ಠೇವಣಿಗಳನ್ನು ಕಳೆದುಕೊಂಡಿರುವರು

ಸಹಕಾರ ಸಂಘಗಳ ಜಾಯಿಂಟ್ ರಿಜಿಸ್ಟ್ರಾರ್ ಹುದ್ದೆ

ಸಹಕಾರ ಸಂಘಗಳ ಇಲಾಖೆಯ ಕೆಲಸಕಾರ್ಯಗಳು ವಿಶೇಷವಾಗಿ ಹೆಚ್ಚಿರುವುದರಿಂದಲೂ ಸಂಸ್ಥಾನದಲ್ಲಿ ಈಗ ಸುಮಾರು ೫೧೬೦ ಸಂಘಗಳಿರುವುದರಿಂದಲೂ, ಈಗಿನ ರಿಜಿಸ್ಟ್ರಾರರೇ ಇವೆಲ್ಲವನ್ನೂ ನೋಡಿಕೊಳ್ಳಲು ಸಾಧ್ಯವಾಗದೇ ಇರುವುದಲ್ಲದೆ, ಅವರು ಗ್ರಾಮಾಭಿವೃದ್ಧಿ ಇಲಾಖೆ, ನಿಮ್ನವರ್ಗ ಮತ್ತು ಮಾರ್ಕೆಟಿಂಗ್ ಅಧಿಕಾರಿಗಳಾಗಿರುವುದರಿಂದಲೂ, ಸರ್ಕಾರದವರು ೬೦೦-೫೦-೭೦೦ರೂ ತಲಬಿನ ಮೇಲೆ ಇಲಾಖೆಗೆ ಜಾಯಿಂಟ್ ರಿಜಿಸ್ಟ್ರಾರ ಹುದ್ದೆಯನ್ನು ೨ ವರ್ಷ ಕಾಲಕ್ಕೆ ಏರ್ಪಡಿಸಿರುತ್ತಾರೆ

ಏಪ್ರಿಲ್ ೧ ರಂದು ನೂತನ ಮಂತ್ರಿ ಮಂಡಲಗಳು

ಬರುವ ಏಪ್ರಿಲ್ ೧ ರಂದು ಕೇಂದ್ರ ಮತ್ತು ಸಂಸ್ಥಾನಗಳಲ್ಲಿ ಹೊಸ ಮಂತ್ರಿ ಮಂಡಲಗಳು ರಚಿತವಾಗುವುವೆಂದು ತಿಳಿದುಬಂದಿದೆ ಅಲ್ಲಿಯವರೆಗೆ ಈಗಿರುವ ಮಂತ್ರಿ ಮಂಡಲಗಳೇ ಇರುವುವು. ಪಾರ್ಲಿಮೆಂಟಿನ ಪ್ರಜಾ ಸಭೆ ಮತ್ತು ಸಂಸ್ಥಾನಗಳ ಶಾಸನ ಸಭೆಗಳಿಗೆ ಚುನಾವಣೆಗಳು ಬರುವ ತಿಂಗಳು ಕಡೆಯ ವಾರದೊಳಗೆ ಮುಕ್ತಾಯವಾಗುವುದಾದರೂ, ಕೇಂದ್ರದ ಮತ್ತು ಸಂಸ್ಥಾನಗಳ ಮೇಲಿನ ಸಭೆಗಳಿಗೆ ಚುನಾವಣೆಗಳು ಮುಗಿಯಬೇಕಾಗಿರುವುದರಿಂದ ಹೊಸ ಸರ್ಕಾರಗಳನ್ನು ಸ್ಥಾಪಿಸುವ ಹಾಗಿಲ್ಲ ಮಾರ್ಚಿ ಮಧ್ಯಭಾಗದಲ್ಲಿ ಈ ಸಭೆಗಳಿಗೆ ಚುನಾವಣೆಗಳು ಮುಗಿಯುವುವು

ಮತದಾರರ ಗುರುತಿನ ಚೀಟಿ ಹಂಚಿಕೆ

ಬರುವ ೩ನೇ ತಾ|| ರಾಜಧಾನಿಯಲ್ಲಿ ನಡೆಯಲಿರುವ ಪೌರಸಭಾ ಚುನಾವಣೆಗಳ ಸಂಬಂಧವಾಗಿ ಮತದಾರರಿಗೆ ಗುರುತಿನ ಚೀಟಿಗಳನ್ನು ಹಂಚುವ ವ್ಯವಸ್ಥೆಯಾಗಿದೆ ಈ ಚೀಟಿಗಳನ್ನು ಓಟುದಾರರು ಆ ದಿನ ಚುನಾವಣಾ ಕ್ಷೇತ್ರಗಳಿಗೆ ತರುವುದು ಸೂಕ್ತವೆಂದೂ, ಕಾರಣಾಂತರಗಳಿಂದ ಈ ಚೀಟಿಗಳನ್ನು ತರದಿದ್ದರೂ, ಗುರ್ತಿಸಲ್ಪಟ್ಟ ಓಟುದಾರರುಗಳಿಗೆ ಆಯಾ ಕ್ಷೇತ್ರಗಳಲ್ಲಿ ಚೀಟಿಗಳನ್ನು ಕೊಡುವ ಏರ್ಪಾಡು ಮಾಡಲಾಗಿದೆಯೆಂದೂ ಚುನಾವಣಾಧಿಕಾರಿಗಳು ತಿಳಿಸಿರುತ್ತಾರೆ

೨೦೦ ಜನ ಭದ್ರಾವತಿ ಕಾರ್ಮಿಕರ ವಜಾ

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಸಿಮೆಂಟ್ ತಯಾರಿಕಾ ಕೇಂದ್ರದಲ್ಲಿರುವ ೨೦೦ ಜನ ಕಾರ್ಮಿಕರು ಹೆಚ್ಚು ಸಂಬಳ ಮುಂತಾದ ಸೌಲಭ್ಯಗಳನ್ನು ಕೇಳಿ ಹೂಡಿದ್ದ ಮುಷ್ಕರಕ್ಕಾಗಿ ಅವರನ್ನು ಕೆಲಸದಿಂದ ವಜಾ ಮಾಡಲಾಗಿದೆ ರೋಲಿಂಗ್ ಮಿಲ್ಸಿನಲ್ಲಿದ್ದ ೧೫ ಜನ ಲಿಫ್ಟಿಂಗ್ ಆಪರೇಟರುಗಳನ್ನು ತೆಗೆದುಹಾಕಲಾಗಿದೆ ಮುಷ್ಕರದಿಂದ ದಿನಕ್ಕೆ ೨೦೦ ಟನ್ ಉತ್ಪನ್ನವು ಕಡಿಮೆಯಾಗಿದೆಯೆಂದು ತಿಳಿದುಬಂದಿದೆ

ಮದ್ರಾಸಿನಲ್ಲಿ ಮಹಿಳಾ ವೈದ್ಯಾಧಿಕಾರಿಗಳ ನೇಮಕ

ಮದ್ರಾಸಿನಲ್ಲಿ ಇದೇ ಮೊದಲಾಗಿ ೪ ಜನ ಮಹಿಳಾ ಪಶುವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆ ಪೌರರಿಗಳಲ್ಲಿ ವ್ಯವಸ್ಥಿತ ತರಬೇತಿ ಪಡೆದೆಂದು ರಾಷ್ಟ್ರಾಂಗದಲ್ಲಿ ಉಕ್ತವಾಗಿರುವುದರಿಂದ ಈ ರೀತಿಯ ನೇಮಕಗಳಿಗೆ ಅವಕಾಶ ಕಲ್ಪಿಸಲಾಗಿದೆ ಸ್ತ್ರೀಯರು ಮತ್ತು ಪುರುಷರು ಎಂಬ ಪ್ರತ್ಯೇಕವಾದ ಅಧಿಕಾರಿಗಳ ವರ್ಗಗಳನ್ನು ತೆಗೆದು ಮದ್ರಾಸು ಸರ್ಕಾರದವರು ಒಂದೇ ವರ್ಗವನ್ನು ಏರ್ಪಡಿಸಿರುತ್ತಾರೆ

ಹಾವು ಹಿಡಿದು ಇಬ್ಬರು ಬಾಲಕರ ಮರಣ

ಅಮೃತಸರದ ಒಂದು ಹಳ್ಳಿಯಲ್ಲಿ ಬಾಲಕರಿಬ್ಬರು ಮನೆ ಹತ್ತಿರ ಹೊಲದಲ್ಲಿ ಮೊಣ್ಣ ಆಟವಾಡುತ್ತಿದ್ದಾಗ, ಹೊಲದಲ್ಲಿ ಬಿದ್ದಿದ್ದ ಹಾವನ್ನು ಎತ್ತಿಕೊಳ್ಳು ವಾಗ ಅದು ಕಚ್ಚಿದು ಇಬ್ಬರೂ ಕೂಡಲೇ ಮೃತರಾದರು

ಕೊರಿಯದಲ್ಲಿ ಪುನಃ ಹೋರಾಟ ಪ್ರಾರಂಭ

ಕೊರಿಯದಲ್ಲಿ ೩೦ ದಿನಗಳ ಶಾಂತಿಯ ನಂತರ ಈಗ ಪುನಃ ಹೋರಾಟವು ಪ್ರಾರಂಭವಾಗಿರುತ್ತದೆ ವಿಶ್ವ ಸಂಸ್ಥೆಯ ಸೈನ್ಯಗಳು ಕಮ್ಯುನಿಸ್ಟರಿಂದ ಒಂದು ಗುಡ್ಡವನ್ನು ಕಿತ್ತುಕೊಂಡಿರುತ್ತವೆ. ಯುದ್ಧ ಮುಕ್ತಾಯದ ಮಾತುಕತೆ ದಿನಗಳ ಅವಧಿಯ ಮುಗಿಯುವ ಮುಂಚೆಯೇ ಹೋರಾಟವು ನಡೆದಿದೆ

ಉಬ್ಬಸ ರೋಗವನ್ನು ನೋಡಲಾರದೆ ತಂದೆಯ ಕೊಲೆ

ಅಮೆರಿಕದ ಒಂದು ಊರಿನಲ್ಲಿ ೩೮ ವರ್ಷದ ಜೇಮ್ಸ್ ಹೆಂಡರ್ಸನ್ ಎಂಬ ಕೃಷಿ ಕೆಲಸಗಾರನು ಕ್ರಿಸ್‌ಮಸ್ ಹಬ್ಬದ ಹಿಂದಿನ ದಿನ ಉಬ್ಬಸ ರೋಗದಿಂದ ನರಳುತ್ತಿದ್ದ ತನ್ನ ತಂದೆಯನ್ನು ನೋಡಲಾರದೆ ಗುಂಡು ಹೊಡೆದುಕೊಂದು, ನಂತರ ತಂದೆಯನ್ನು ಬಿಟ್ಟು ತಾಯಿಯು ಇರುವುದಿಲ್ಲವೆಂದು ಭಾವಿಸಿ ಅವಳನ್ನೂ ಕೊಂದು ಪೋಲೀಸರಿಗೆ ಈ ಕೃತ್ಯಗಳನ್ನು ವರದಿ ಮಾಡಿ ದಸ್ತಗಿರಿಯಾದನೆಂದು ಹೇಳಲಾಗಿದೆ

ಹೊಸ ವರ್ಷದ ಶುಭಾಶಯ

ರಾಜಧಾನಿಯ ಗಾಯತ್ರೀ ಟಾಕೀಸಿನ ಮಾಲೀಕರಾದ ವಾಸ್ತು ಕಲಾ ಸೇವಾ ಸಕ್ತ ಟಿ ಜಲುವಾಚಾರ್ ಮತ್ತು ಶ್ರೀಗಳಾದ ಎಂ. ವೈ ಸ್ವಾಮಿ, ಎಂ ಸಿ ತಿಮ್ಮಯ್ಯಾಚಾರ್ ರವರು ಕಳುಹಿಸಿರುವ ಹೊಸ ವರ್ಷದ ಶುಭಾಶಯಗಳನ್ನು ಆದರದಿಂದ ಸ್ವೀಕರಿಸಿರುತ್ತೇವೆ

ಚುನಾವಣಾ ಪ್ರಚಾರ ಸಭೆ

ಕಿಸಾನ್ ಮಜದೂರ್ ಪ್ರಜಾ ಪಾರ್ಟಿ ನಗರದ ಸಮಿತಿ ಆಶ್ರಯದಲ್ಲಿ ಈ ದಿನ ಸಾಯಂಕಾಲ ೬ ಘಂಟೆಗೆ ಓಂಟಿ ಕೊಪ್ಪಲ್ ಮಾರ್ಕೆಟ್ ಮುಂಭಾಗದಲ್ಲಿಯೂ ಮತ್ತು ೭|| ಘಂಟೆಗೆ ಕುಂಬಾರ ಕೊಪ್ಪಲಿನಲ್ಲಿಯೂ ಸಭೆ ನಡೆಯುತ್ತದೆ ಪಾರ್ಟಿಯ ಮುಖಂಡರು ಭಾಷಣ ಮಾಡುತ್ತಾರೆ.

ಕಾಂಗ್ರೆಸ್ಸಿಗೇ ತಮ್ಮ ಓಟಿರಲಿ ಏಕೆ?

ಭಾರತಕ್ಕೆ ಸ್ವರಾಜ್ಯ ಬರುವ ಮುನ್ನ ಪರಕೀಯರ ಆಡಳಿತವನ್ನು ತಪ್ಪಿಸಲು ಮತ್ತು ಭಾರತದ ಸ್ವಾತಂತ್ರ್ಯಕ್ಕೆ, ಸ್ವರಾಜ್ಯ ಸ್ಥಾಪನೆಗೆ ಕಾಂಗ್ರೆಸ್ಸು ಶ್ರಮಿಸುವ ಶಕ್ತಿಯಾಗಿತ್ತು

ಕಾಂಗ್ರೆಸ್ಸು ಭಾರತದ ಸರ್ವ ಪ್ರಜೆಗಳಲ್ಲೂ ಸಮಾನತೆಯನ್ನುಂಟುಮಾಡಲು ಸಮಾನಾವಕಾಶ ಕಲ್ಪಿಸಲು ಶ್ರಮಿಸುವುದಾಗಿ ತಿಳಿಸಿತ್ತು ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮ ಕ್ಕನುಗುಣವಾಗಿ ಮುಂದುವರಿಯುವ ಭರವಸೆ ನೀಡಿತು. ಸಮಾಜವು ಬಹಳ ಕೀಳ ದೃಷ್ಟಿಯಿಂದ ಕಾಣುತ್ತಿದ್ದವರಿಗೆ ಕೂಡ ಒಂದು ಸ್ಥಾನ ಕಲ್ಪಿಸಲು ಶ್ರಮಿಸಿತು ಕಾಂಗ್ರೆಸ್ಸು ಸರ್ವರ ಹಕ್ಕು ಬಾಧ್ಯತೆಯನ್ನು ತನ್ನ ಸ್ವಾತಂತ್ರ್ಯವನ್ನು ಕಾಪಾಡಲು ಶ್ರಮಿಸಿ ಹಿಂದುಳಿದವರ ಅಭಿವೃದ್ಧಿಗೆ ವಿಶೇಷ ಗಮನ ಕೊಟ್ಟಿದೆ ಶ್ರಮಜೀವಿ, ವ್ಯತಿ ಬೇಸಾಯಗಾರ ಕಾರ್ಮಿಕ ಇವರುಗಳ ಅಭ್ಯುದಯ ಸಾಧನೆಯೇ ಕಾಂಗ್ರೆಸ್ಸಿನ ಗುರಿ ದೇಶವಲ್ಲ ಎಡತನವನ್ನು ಬ ಹುಕಾಲ ಮಾಡಿ ಪ ಥ್ಯ ಸ ವರ್ಗವನ ಹದಾಯ ಮೆ ಕ ಸ ಲು ಶ್ರಮಿಸ ತ್ತಿದೆ. ಮೇಲ್ಕಂಡ ಸಮಸ್ಯೆಗಳನ್ನು ಬಗೆಹರಿಸಲು ಕಾಂಗ್ರೆಸ್ಸು ನೊದಲು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿತು ಈಗ ರಾಜಕೀಯ ಸ್ವಾತಂತ್ರ್ಯ ಲಭ್ಯವಾಗಿ ಮೇಲ್ಕಂಡ ಸಮಸ್ಯೆಗಳನ್ನು ಪರಿಹರಿಸಲು ಒಂದು ಪಂಚ ವಾರ್ಷಿಕ ಯೋಜನೆ ತಯಾರಿಸಿದೆ ಈ ಯೋಜನೆಯಿಂದ ಸಧ್ಯದಲ್ಲೇ ನಮ್ಮ ಜನರ ಸರ್ವತೋಮುಖವಾದ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ

ಇಷ್ಟು ಘನವಾದ ಕಾರ್ಯಕ್ರಮವು ಹೊಂದಿರುವ ಕಾಂಗ್ರೆಸ್ಸಿಗೇ ತಮ್ಮ ಓಟು ಇರಲಿ

(ಕಾಂಗ್ರೆಸ್ ಪ್ರಕಟನಾ ಸಮಿತಿ)

ವಾರ್ಷಿಕೋತ್ಸವ

ನಂಜನಗೂಡಿನ ಸರ್ಕಾರಿ ಪ್ರೌಢಶಾಲೆಯ ಹಳೇ ವಿದ್ಯಾರ್ಥಿಗಳ ವಾರ್ಷಿಕೋತ್ಸವವು ಬರುವ ತಿಂಗಳು ೨೦ ನೇ ತಾ|| ನಡೆಯುವುದು ಅದರ ಅಂಗವಾಗಿ ೬ನೇ ತಾ|| ನಿಂದ ವಿವಿಧ ಸ್ಪರ್ಧೆಗಳು ಪ್ರಾರಂಭವಾಗುವುವು ಸಂಘದ ಚಂದಾ ಮೊಬಲಗನ್ನು ಅದರ ಅಧ್ಯಕ್ಷ ಶ್ರೀ ಬಿ ಎ ಬಾಲಸುಬ್ರಹ್ಮಣ್ಯಂರವರಿಗೆ ಕಳುಹಿಸಬೇಕೆಂದು ಕೋರಲಾಗಿದೆ

ಶಾರದಾವಿಲಾಸ ಪ್ರೌಢ ಶಾಲಾ ಸ್ಕೌಟುಗಳಿಗೆ ಬಹುಮಾನ

ಇದೇ ೨೨ ಮತ್ತು ೨೩ ನೇ ತಾ|| ನಡೆದ ನಗರದ ಸ್ಕೌಟ್ ರ್ಯಾಲಿಯ ವಿವಿಧ ಪಂದ್ಯಗಳಲ್ಲಿ ಶಾರದಾ ವಿಲಾಸ ಹೈಸ್ಕೂಲಿನ ಸ್ಕೌಟ್ ಗಳಿಗೆ ಮೂರು ಪಂದ್ಯಗಳಲ್ಲಿ ಪ್ರಶಸ್ತಿ ಪತ್ರಗಳು ಮತ್ತು ನಗರದ ಸ್ಕೌಟ್ ಕೌನ್ಸಿಲ್ ಸಂಸ್ಥೆಯ ಬೆಳ್ಳಿಯ ಬಟ್ಟಲು ಸಹ ಬಹುಮಾನಗಳಾಗಿ ದೊರೆತಿವೆ

ಕ್ರಿಸ್‌ಮಸ್ ಹಬ್ಬದ ದಿನ ೭೭೯ ಅಪಘಾತದ ಮರಣ

ಲಂಡನ್ನಿನಲ್ಲಿ ಕಳೆದ ೨೫ ನೇ ತಾ|| ಕ್ರಿಸ್‌ಮಸ್ ಹಬ್ಬದ ದಿನ ವಿವಿಧ ಅಪಘಾತಗಳಿಗೆ ಸಿಕ್ಕಿ ೭೭೯ ಜನರು ಮಡಿದಿರುವುದಾಗಿಯೂ ಗಾಯಗೊಂಡವರಲ್ಲಿ ೬೬೧ ಜನ ಮಡಿದಿದ್ದರೆಂದೂ, ಈ ಸಾರಿಯಷ್ಟು ಪ್ರಾಣಹಾನಿಯು ಹಿಂದೆ ಆಗಿರಲಿಲ್ಲವೆಂದೂ ಹೇಳಲಾಗಿದೆ

ಓಟು ಕೊಡಲು ಕಾರ್ಮಿಕರಿಗೆ ಸೌಲಭ್ಯ

ಚುನಾವಣೆಗಳಲ್ಲಿ ಕಾರ್ಮಿಕರು ಭಾಗವಹಿಸಲು ಸೂಕ್ತ ವ್ಯವಸ್ಥೆಗಳನ್ನು ಗಿರಣಿ ಮಾಲೀಕರು ಮಾಡಬೇಕೆಂದು ಭಾರತ ಸರ್ಕಾರದವರ ಸೂಚಿಸಿರುತ್ತಾರೆ ಆ ದಿನದ ಸಂಬಳವನ್ನು ಅವರು ಕಳೆದುಕೊಳ್ಳದಂತಿರಬೇಕೆಂದು ತಿಳಿಸಲಾಗಿದೆ ಕಾರ್ಮಿಕರ ಪಾಳಿ ರಜಾ ಇರುವ ದಿನದ ಬದಲು ಚುನಾವಣಾ ದಿನದಲ್ಲಿ ರಜೆ ಕೊಡಬೇಕೆಂದೂ ಪಟ್ಟಿ ಅವಶ್ಯಕವಾದರೆ ಕೊಡಬೇಕೆಂದು ಕೋರಲಾಗಿದೆ

ಕಾಂಗ್ರೆಸ್ಸಿಗೇ ಕಾರ್ಮಿಕರ ಬೆಂಬಲ

ಮೈಸೂರು ಸಿಲ್ಕ್ ಫಿಲೇಚರ್ಸ್, ಕೆಲಸಗಾರರ ಹೇಳಿಕೆ

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ನಮ್ಮ ಫಿಲೇಚರ್ಸ್‌ಗೆ ನಡ ಬೈಕನ್ನು ಬಂದಂತಾಯಿತು ಸುಮಾರು ಎರಡು ವರ್ಷಗಳಿಂದ ಕೆಲಸ ನಿಂತ ಫಿಲೇಚರ್ಸ್ ಕಾರ್ಖಾನೆ ಮುಚ್ಚಲ್ಪಟ್ಟಿದ್ದು ದಿಕ್ಕುಕಾಣದೆ ಪರಿತಪಿಸುತ್ತಿರುವ ಸಮಯದಲ್ಲಿ ಅಂದರೆ 1949 ನೇ ಇಸ್ವಿಯಲ್ಲಿ ಎಂಟು ಲಕ್ಷ ರೂಪಾಯಿಗಳ ಸುಧಾರ ಸಹಾಯ ನೀಡಿ ನಮ್ಮ ರೇಷ್ಮೆ ಉದ್ಯಮವನ್ನು ಪುನರುಜ್ಜೀವನಗೊಳಿಸಿದರು ಈ ಸಹಾಯದಿಂದ ನಾವು ತಲೆಯೆತ್ತಿ ಬಾಳುವಂತಾಯಿತು ಅದರ ಪೂರ್ಣ ಸದುಪಯೋಗವನ್ನು ಪ್ರಸ್ತುತ ಸಹಾಯ ಅನ್ನ ... ಸಿ ೧೧ ರಲ್ಲಿ ಈ ಕಾಂಗ್ರೆಸ್ ಸರ್ಕಾರವನು ಪ್ರಾರ್ಥನೆಗಾಗಿ ಯೋಜನ ಸಮೂಹ ಲ್ಲೂ ಎರಡು ಲಕ್ಷ ರೂಪಾಯಿಗಳ ಉದಾರ ಸಹಾಯ ನೀಡಿದ ಅಲ್ಲದೆ ಈಚೆಗೆ ನಮ್ಮ ರೇಷ್ಮೆ ಸಮ್ಮೇಳನಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಅನೇಕ ರೀತಿಯಲ್ಲಿ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವುದಲ್ಲದೆ, ಈ ನಮ್ಮ ರೇಷ್ಮೆಗಾರಿಕೆಯು ಬಹು ದುಃಖ ದೇಶೀಯ ದ್ಯಮವೆಂಬ ಧ್ಯೇಯದಿಂದ ಅನೇಕ ದಲ್ಲಿ ಸಹಾಯ ಸಂಪತ್ತಿಗಳನ್ನು ... ತ್ತಿರುವುದು ನಮ್ಮ ಭಾಗ್ಯೋದಯ ... ಅದ್ದರಿಂದ ನಾವುನಮ್ಮ ಕಾಂಗ್ರೆಸ್ ... ಕ್ಕೆ ಋಣಿಯಾಗಿರುವುದು ಸಹಜ

ಧರ್ಮಾವರಂ, ಆರ್ನಿ, ಮೈಸೂರು ಸಿಲ್ಕ್, ನಾಗಪುರ, ಪೂನಾ, ಸೀರೆಗಳಿಗೆ, ಮತ್ತು ಕಾಶ್ಮೀರ ಶಾಲುಗಳಿಗೆ

M. T. ಭೋಜಯ್ಯ

ಅಂಡ್ ಬ್ರದರ್ಸ್, ಮೈಸೂರು ಇಂಡಿಯನ್ ಬ್ಯಾಂಕ್ ...

ನಾಯಿ ಕೆಮ್ಮಿಗೆ ಔಷಧಿ

ಆರ್ ಎಸ್. ಪಂಡಿತರು, ರಾಮಗೋಪಾಲ ವೈದ್ಯಶಾಲಾ ದಿವಾನರ ರಸ್ತೆ ಮೈಸೂರು

ಮಲೇರಿಯಾ ಗೆದ್ದೆಗಳಿಗೆ

... ವರ್ಷಗಳಿಂದ ಪ್ರಖ್ಯಾತವಾಗಿರುವ ಮೈಸೂರು ಎಸ್ ಎನ್ ಪಂಡಿತ್ ಅಂಡ್ ಸನ್ಸ್ ರವರ ಸಂಶೋಧಿತ ... ರೇಷು ... ಉಪಯೋಗಿಸಿ

ಒಲಿಂಪಿಯಾ 3—1—52 ರಿಂದ ಅನೋಘ ಪ್ರಾರಂಭ

... ಚಿತ್ರಗಳ ಹೆಸರಾಂತ ತಾರೆಗಳಾದ
ನರ್ಗೀಸ್ ಮತ್ತು ದಿಲೀಪ್ ಕುಮಾರ್
... ಅಭಿನಯ ...
ಸುಮಧುರ ಸಂಗೀತಗಳಿಂದ ಕೂಡಿದ ಚಿತ್ರ

*** ಜೋಗನ್ ***

ಸಹಾಯಕ ವರ್ಗ ಪ್ರತಿಮಾದೇವಿ, ಪೂರ್ಣಿಮಾ, ಬೇಬಿ ತಬಸುಂ
ನಿರ್ದೇಶನ — ಕಿದಾರ್ ಶರ್ಮಾ

ಸಮಾಜದ ಮೋಸಕ್ಕೆ ಸಿಕ್ಕಿ ... ಸುಳಿಗೆ ಸಿಕ್ಕಿದ ಪ್ರಪಂಚವನ್ನು ಮದುವೆಯಾಗಬೇಕೆಂಬ ತಂದೆಯ ಬಲವಂತವನ್ನು ತಾಳಲಾರದ ಊರು ಮನೆ ತ್ಯಜಿಸಿದ ತರುಣಿಯೊಬ್ಬಳು ಸನ್ಯಾಸಿನಿಯಾಗಿ ತನ್ನ ಜೀವನವನ್ನೇ ದೈವ ಸೇವೆಗೆ ಮುಡುಪಾಗಿಟ್ಟ ಪವಿತ್ರ, ಶಿಕ್ಷಣ- ಚಿತ್ರವನ್ನು ಪ್ರತಿಯೊಬ್ಬರೂ ನೋಡಬೇಕಾದುದು ಅತ್ಯಗತ್ಯ

ಬಹಳ ಉತ್ತಮವಾದ ಸಾಬೂನು 808



ದಿ ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ಮಹಾಜನರಲ್ಲಿ ವಿನಂತಿ

2-1-1952 ರಲ್ಲಿ ನಡೆಯುವ ಮಹಾಚುನಾವಣೆಯಲ್ಲಿ
ಕಾಂಗ್ರೆಸ್ ಅಭ್ಯರ್ಥಿಗಳಾಗಿ ಮೈಸೂರು ವಿಧಾನ ಸಭೆಗೆ
ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿರುವ
ಶ್ರೀ ಬಿ ನಾರಾಯಣಸ್ವಾಮಿ
ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿರುವ
ಶ್ರೀ ಬಿ. ಮರಿಯಪ್ಪ
ಭಾರತದ ಪಾರ್ಲಿಮೆಂಟಿಗೆ ಸ್ಪರ್ಧಿಸಿರುವ
ಶ್ರೀ ಹೆಚ್. ಸಿ ದಾಸಪ್ಪ
ಮತ್ತು
ಶ್ರೀ ಎಸ್. ರಾಚಯ್ಯ
ಅವರುಗಳಿಗೆ ತಮ್ಮ ಅಮೂಲ್ಯವಾದ ಓಟುಗಳನ್ನು ಕೊಡಬೇಕಾಗಿ ವಿನಂತಿ

* ಕಾಂಗ್ರೆಸ್ಸಿನ ಗುರುತು



[ನಗರ ಕಾಂಗ್ರೆಸ್ ಸಮಿತಿ, ಮೈಸೂರು]

ಗೌ|| ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚಿ, ಆರ್ನಿ, ಬನಾರಸ್, ಪೂನಾ, ಕಾಂಚಿ, ಪರಿಯೂರು ಸೀರೆಗಳು ಮತ್ತು ಕಾಶ್ಮೀರ್ ಶಾಲುಗಳಿಗೆ * **D. L. ನರಸಿಂಹಯ್ಯ** ಅವರ ಅಂಗಡಿ ಚಾಂದಿ ಚೌಕದ ಬಳಿ, ಮೈಸೂರು

Edited Printed and Published by A R Nagarajan, at Sadhvi Press D Subbiah Road Mysore

ರೀ ನಂ 792 WEEKLY EDITION ಅಂಚೆಯ ಚಿತ್ರ 6 ಕಾಸು

ಸಂಪುಟ ೧೬] ಭಾನುವಾರ ೩೦ ೧೨-೫೧ [ಸಂಚಿಕೆ ೨೨

ಸಿಂಧ್ ಪ್ರಾಂತದಲ್ಲಿ - ಗೌರ್ನರ್ ಆಡಳಿತ -

ಆರೋಗ್ಯ ದಿನಾಚರಣೆ

ಮೈಸೂರು ೩೦

ಅಟ್ಲಾಸ್ ವ್ಯಾಯಾಮಾ ಶಾಲೆಯ ಆಶ್ರಯದಲ್ಲಿ ನೆನ್ನೆ ಸಂಜೆ ಆರೋಗ್ಯ ದಿನಾಚರಣೆಯು ವೈಭವದಿಂದ ನೆರವೇರಿಸಲ್ಪಟ್ಟಿತ್ತು. ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಅಗ್ರಾಸನವನ್ನು ವಹಿಸಿದ್ದರು. ಡಾ|| ಆರ್ ಎಸ್ ದೊರೆಸ್ವಾಮಿಯವರಿಂದ ಪ್ರಾರ್ಥನೆಯಾದ ನಂತರ ಕಾರ್ಯದರ್ಶಿಯವರು ಸ್ವಾಗತ ಭಾಷಣ ಮಾಡಿ ವರದಿಯನ್ನೊಪ್ಪಿಸಿದರು. ಶಾಲೆಯ ಸಂಚಾಲಕರಾದ ಡಾ|| ಎಂ ಎ ಅಬ್ದುಲ್ ಅಜೀಜ್‌ರವರು ಮತ್ತು ಸದಸ್ಯರುಗಳು ತಮ್ಮ ಅದ್ಭುತವಾದ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಿದರು. ತರ್ಫ ಪತಿಗಳಾದ ಶ್ರೀ ಹೆಚ್ ಸಿ ದಾಸಪ್ಪನವರು ಅಧ್ಯಕ್ಷರೂ ಭಾಷಣಮಾಡಿ, ಸಂಘದ ಉಪಯೋಗವಾದ ಕೆಲಸ ಕಾರ್ಯಗಳನ್ನು ಪ್ರಶಂಸಿಸಿ, ಅದು ಇನ್ನೂ ಹೆಚ್ಚು ಹೆಚ್ಚಿನ ಪ್ರಗತಿಯನ್ನು ಹೊಂದಲೆಂದು ಹಾರೈಸಿದರು. ಮಹಾ ಜನರು ಈ ಸಂಸ್ಥೆಗೆ ಸಂಪೂರ್ಣ ಬೆಂಬಲವನ್ನು ಸಲ್ಲಿಸಬೇಕೆಂದು ಕೋರಿದರು.

ನೂತನ ಪೌರಸಭಾಧ್ಯಕ್ಷರಿಗೆ ಸತ್ಕಾರ

ರಾಜಧಾನಿಯ ಸಹಕಾರ ಸಂಘ [illegible] ಮಾ ದ ಸಂಘದವರು ನೆನ್ನೆ ಸಂಜೆ ೩೦ ರ [illegible] ಭವನದಲ್ಲಿ ನೂತನ ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಗೃಹ ಸಚಿವ [illegible] ಟಿ ಮರಿಯಪ್ಪನವರು ಅಗ್ರಾಸನವನ್ನು ವಹಿಸಿದ್ದರು. ಅಥವ [illegible] ಶ್ರೀ ಹೆಚ್ ಸಿ ದಾಸಪ್ಪನವರೇ ಅನೇಕ ಮಾನ್ಯ ನಾಗರೀಕರು ಮತ್ತು ಅಧಿಕಾರಿ ಮಹನೀಯರು ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಎನ್ ಚಿನ್ನಸ್ವಾಮಿ ಚೆಟ್ಟಿರು ಅತಿಥಿಗಳನ್ನು ಸ್ವಾಗತಿಸಿ ಶ್ರೀ ಕೃಷ್ಣಮೂರ್ತಿಯವರ ಪೌರಸಭೆ, ಸಹಕಾರ ಸಂಸ್ಥೆಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳ ಮೂಲಕ ಮಾಡುತ್ತಿರುವ ಸೇವೆಯನ್ನು ಪ್ರಶಂಸಿದರು. ಈ ಸತ್ಕಾರ ಸಮಾರಂಭಕ್ಕಾಗಿ ಶ್ರೀ ಕೃಷ್ಣಮೂರ್ತಿರಾಯರು ಧನ್ಯವಾದವನ್ನು ಸಲ್ಲಿಸಿ ತಮ್ಮ [illegible] ದೊರೆತಿರುವ ಕಾಂಗ್ರೆಸ್ ನ [illegible] ಕೃತಜ್ಞತೆಗಳನ್ನು ಸೂಚಿಸಿದರು. [illegible] ಭಾಷಣ ಮಾಡಿ ಶ್ರೀ ಕೃಷ್ಣಮೂರ್ತಿರಾಯರಿಗೆ [illegible] ಯ ವಿಸ್ತರಿಸಿದರು.

ಚುನಾವಣೆಗಳಲ್ಲಿ ಅಧಿಕಾರಿಗಳು ಪಕ್ಷ ವಹಿಸದಂತೆ ಪುನಃ ಎಚ್ಚರಿಕೆ

ಸಾರ್ವತ್ರಿಕ ಚುನಾವಣೆಗಳಲ್ಲಿ ಸರ್ಕಾರಿ ನೌಕರರು ಅತಿಕ್ರಮವಾಗಿ ಪ್ರವೇಶಿಸಿ ಪಕ್ಷ ವಹಿಸಿದರೆ ಸರ್ಕಾರದವರು ತೀವ್ರವಾಗಿ ಗಮನಿಸುವರೆಂದು ಚುನಾವಣಾಧಿಕಾರಿಗಳು ಅವರಿಗೆ ಮತ್ತೆ ಸೂಚಿಸುವಂತೆ ಆಜ್ಞೆಯಾಗಿದೆ.

ಡಿ|| ೨೦ರ ವರೆಗೂ ಶಾಲೆಗಳ ರಜಾ

ಸಂಸ್ಥಾನದಲ್ಲಿ ನಡೆಯುವ ಚುನಾವಣೆಗಳಲ್ಲಿ ಶಾಲೆಗಳ ಮತ್ತು ಕಾಲೇಜುಗಳ ಉಪಾಧ್ಯಾಯರನ್ನು ವಿಶೇಷ ಕೆಲಸದ ಮೇಲೆ ತೆಗೆದುಕೊಳ್ಳಲಾಗುವುದರಿಂದ ಸಾಮಾನ್ಯ ಶಾಲೆ ಕಾಲೇಜುಗಳಲ್ಲಿಯೂ ಕ್ರಿಸ್‌ಮಸ್ ರಜದ ಜೊತೆಗೆ ಬರುವ ತಿಂಗಳು ೨೦ರ ವರೆಗೂ ರಜಾ ಕೊಡಲಾಗಿದೆ.

ಜನವರಿ ೭ ಮತ್ತು ೮ನೇ ತಾ|| ಟ್ರೂಮನ್- ಚರ್ಚಿಲ್ಲರ ಭೇಟಿ

ಬ್ರಿಟನ್ನಿನ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ಲರು ಬರುವ ತಿಂಗಳು ೭ ಮತ್ತು ೮ನೇ ತಾ|| ವಾಷಿಂಗ್‌ಟನ್ನಿನಲ್ಲಿ ಅಮೆರಿಕದ ಅಧ್ಯಕ್ಷರಾದ ಟ್ರೂಮನ್ನರನ್ನು ಭೇಟಿ ಮಾಡಲಿದ್ದಾರೆ. ಅನಂತರ [illegible] ಗೆ ತೆರಳಿ ಅಲ್ಲಿ ಕೆಲವು ದಿನಗಳಿದ್ದು ಕೆನಡಾ ದೇಶಕ್ಕೆ ಪ್ರಯಾಣ ಮಾಡಲಿದ್ದಾರೆ.

ಹಣಕ್ಕಾಗಿ ಬಾಲಕನೊಬ್ಬನ ಅಮಾನುಷ ಕೊಲೆ

ಕಲ್ಕತ್ತಾ ನಗರದ ಒಂದು ಮನೆಯಲ್ಲಿ ಒಡತಿಗಿದ್ದ ನರೇಂದ್ರನಾಥ [illegible] ಎಂಬುವನೊಬ್ಬನು [illegible] ಹಿಂದೆ ಮನೆಯ ಯಜಮಾನನ ಪುತ್ರನನ್ನು ಅಪಹರಿಸಿ, ಅವನನ್ನು ಬಿಡುಗಡೆ ಮಾಡಲು ೧೦ ಸಾವಿರ ರೂ [illegible] ಕೇಳಿ, ತಕ್ಷಣಕ್ಕೆ ೫ ಸಾವಿರ ರೂ [illegible] ವಸೂಲು ಮಾಡಿಕೊಂಡಿದ್ದನೆಂದೂ ಒಂದು ದಿನ ಆ ಹುಡುಗನ ಬೆರಳನ್ನು ಕತ್ತರಿಸಿ ಅದನ್ನು ತಂದೆಗೆ ಕಳುಹಿ, ಮತ್ತೊಂದು ದಿನ ಅವನ ರಕ್ತದಿಂದ ಬರೆದ ಪತ್ರವನ್ನೂ ಸಹ ರವಾನಿಸಿದ್ದನೆಂದೂ ಹೇಳಲಾಗಿದೆ. ಪೊಲೀಸರು ಅವನನ್ನು ಮೊನ್ನೆ ಒಂದು ಸಿನಿಮಾ ಮಂದಿರದಲ್ಲಿ ದಸ್ತಗಿರಿ ಮಾಡಿ ಅವನು ಕೊಟ್ಟ ಸೂಚನೆ ಪ್ರಕಾರ ಒಂದು ಕೊಳದಲ್ಲಿ ಮುಳುಗಿಸಿದ್ದ ಅಸ್ಥಿಗಳನ್ನು ಪತ್ತೆ ಮಾಡಿದ್ದಾರೆಂದು ಹೇಳಲಾಗಿದೆ. ಹುಡುಗನನ್ನು ಕತ್ತರಿಸಿ ಕೊಂದಿರಬೇಕೆಂದು ಹೇಳಲಾಗಿದೆ.

ಬಟ್ಟೆ ವರ್ತಕರ ಸಂಘದ ಅಧಿಕಾರ ವರ್ಗ

ರಾಜಧಾನಿಯ ಬಟ್ಟೆ ವರ್ತಕರ ಸಂಘದ ಅಧಿಕಾರ ವರ್ಗದ ಚುನಾವಣೆಯು ಮೊನ್ನೆ ನಡೆದು ಶ್ರೀ ಕೆ ಎಸ್ ಸತ್ಯನಾರಾಯಣ ರಾಯರು ಅಧ್ಯಕ್ಷರಾಗಿಯೂ ಶ್ರೀ ಎ ಎಸ್ ಅನಂತ ರಾಯರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ ಎಸ್ ಉದ್ದಪ್ಪನವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುತ್ತಾರೆ. ಶ್ರೀ ಆರ್ ಎಸ್ ನಾಗಪ್ಪ ಶೆಟ್ಟಿ ಮತ್ತು ಮೆ|| ತಿಮ್ಮಣ್ಣ ಮತ್ತು ಕಂಪೆನಿಯವರು ಜಾಯಿಂಟ್ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಚುನಾಯಿತರಾಗಿರುವರು.

ಶೀಘ್ರ ಲಿಪಿಗಾರರ ನಿಷ್ಠೆ

ದಕ್ಷಿಣ ಭಾರತದ ಸಮ್ಮೇಳನದಲ್ಲಿ ಎಂ. ಎ ಶಿವಾನಂದರವರ ಭಾಷಣ

[ಸ್ವಂತ ವರದಿಗಾರ] ಬೆಂಗಳೂರು ೩೦

ದಕ್ಷಿಣ ಭಾರತ ಶೀಘ್ರ ಲಿಪಿಗಾರರ [illegible] ಸಮ್ಮೇಳನದ ೩ನೆ ಅಧಿವೇಶನವನ್ನು ಈ ದಿನ ನಾಶನಲ್ ಹೈಸ್ಕೂಲಿನ [illegible] ನ್ಯಾಯ ಸಚಿವರಾದ ಶ್ರೀ ಎಂ ಎ ಶಿವಾನಂದಪ್ಪನವರು, ನೆರವೇರಿಸಿ, ದಕ್ಷಿಣ ಭಾರತ ಶೀಘ್ರ ಲಿಪಿಗಾರರ ನಿಷ್ಠೆ, [illegible] ಪ್ರಾಮಾಣಿಕತೆ ಕಾರ್ಯ ತತ್ಪರತೆಗಳನ್ನು ವಿಶೇಷವಾಗಿ ಪ್ರಶಂಸಿಸಿದರು. ಧರ್ಮ ನಿಷ್ಠೆಯು ಗುಣಾತಿಶಯಗಳಿಗೆ ಅವರ ಕಾರ್ಯ ಕೌಶಲ್ಯವನ್ನು ಹೋಲಿಸಿದರು. ಕಾಲವನ್ನು ಸರಿಯಾಗಿ ಕೋರಿಸುವುದರಲ್ಲಿ ಎಷ್ಟರಲ್ಲಿ-ಇನ ಗತಿಯಾದಗಳು ಎಷ್ಟು ಸಹಕಾರಿಯಾಗಿರುವುವೋ ಅಷ್ಟು ನಿಜವಾದ ರೀತಿಯಲ್ಲಿ ಈ ಶೀಘ್ರ ಲಿಪಿಗಾರರು ಕಾರ್ಯಗಳನ್ನು ಉಲ್ಲೇಖಿಸುವರೆಂದು ಹೇಳಿದರು. ಶೀಘ್ರ ಲಿಪಿಯು ಜನಪ್ರಿಯವಾಗಿ ಹರಡಬೇಕೆಂದೂ ಅಭಿಪ್ರಾಯ ಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಮದ್ರಾಸು ಧರ್ಮ ಸಂಸ್ಥೆಗಳ ಡೆಪ್ಯೂಟಿ ಕಮಿಷನರ್ ಶ್ರೀ ಎಸ್ ವೆಂಕಟರಾಮಯ್ಯನವರು ಶೀಘ್ರ ಲಿಪಿಯ ಉಪಯೋಗ, ಅದರ ವ್ಯಾಪ್ತಿ ಶೀಘ್ರ ಲಿಪಿಗಾರರಿಗೆ ಇರಬೇಕಾದ ಪ್ರಪಂಚ ಪರಿಜ್ಞಾನ, ಒಳ್ಳೆ ನಡತೆ ಮುಂತಾದುವುಗಳನ್ನು ವಿವರಿಸಿದರು. ಅವರಿಗೆ ಸರ್ಕಾರದವರೂ ಸಾರ್ವಜನಿಕ ಸಂಸ್ಥೆಯವರೂ ತಕ್ಕ ಉತ್ತೇಜನವನ್ನು ಕೊಡಬೇಕೆಂದು ಸೂಚಿಸಿದರು. ಹಿಂದೀ ಭಾಷೆಯಲ್ಲಿ ಶೀಘ್ರ ಲಿಪಿಯನ್ನು ಜಾರಿಗೆ ತರಬೇಕೆಂದು ಒತ್ತಾಯಪಡಿಸಿದರು.

ಸಮ್ಮೇಳನಕ್ಕೆ ದಕ್ಷಿಣ ಭಾರತದ ಅನೇಕ ಭಾಗಗಳಿಂದ ಸುಮಾರು ೨೦೦ ಜನ ಪ್ರತಿನಿಧಿಗಳು ಬಂದಿರುವರು.

ಶು ಭಾ ಶ ಯ

ರಾಜಧಾನಿಯ ಗಾಯತ್ರಿ ಟಾಕೀಸಿನ ಶ್ರೀ ಎಂ ಸಿ ಚೆಲುವಾಚಾರ್‌ರವರು ಕಳುಹಿಸಿರುವ ಹೊಸ ವರ್ಷದ ಶುಭಾಶಯವನ್ನು ಆದರದಿಂದ ಸ್ವೀಕರಿಸುತ್ತೇವೆ.

ಸಿಂಧ್ ಪ್ರಾಂತದಲ್ಲಿ ಗೌರ್ನರರ ರಾಜ್ಯಭಾರ

ಪಾಕಿಸ್ತಾನದ ಗೌರ್ನರ್ ಜನರಲ್ಲರು ಸಿಂಧ್ ಪ್ರಾಂತದ ರಾಜ್ಯಾಂಗವನ್ನು ರದ್ದುಗೊಳಿಸಿ ಅಲ್ಲಿನ ಗೌರ್ನರರೇ ರಾಜ್ಯಭಾರ ನಡೆಸುವಂತೆ ಆಜ್ಞೆ ಮಾಡಿರುತ್ತಾರೆ. ಈಗಿರುವ ಖುಹ್ರೋ ಮಂತ್ರಿ ಮಂಡಲವನ್ನು ಕೂಡಲೇ ವಿಸರ್ಜಿಸಿ, ಶಾಸನ ಸಭೆಯ ಅವಧಿ ಮುಗಿದ ನಂತರ ಹೊಸ ಚುನಾವಣೆಗಳನ್ನು ನಡೆಸಲೂ ಗೌರ್ನರರಿಗೆ ಅಧಿಕಾರ ಕೊಡಲಾಗಿದೆ. ಹಿಂದಿನ ಖುಹ್ರೋ ಮಂತ್ರಿ ಮಂಡಲದ ರಾಜೀನಾಮೆ ಇದಕ್ಕೆ ಕಾರಣವಾಗಿ ಅಲ್ಲಿ ಕೊನೆಗೊಂಡಿರುತ್ತದೆ.

ವಿವಿಧ ಪ್ರಾಂತಗಳಲ್ಲಿ ಕಾಂಗ್ರೆಸ್ಸಿನ ಅದ್ಭುತ ವಿಜಯ

ಹಿಮಾಚಲ ಪ್ರದೇಶದ ಒಂದು ಕ್ಷೇತ್ರದಿಂದ ಭಾರತದ ಪಾರ್ಲಿಮೆಂಟಿಗೆ ಕೇಂದ್ರ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್‌ರವರು ಆರಿಸಲ್ಪಟ್ಟಿರುತ್ತಾರೆ. ಅವರ ಪ್ರತಿ ಸ್ಪರ್ಧಿಗಳಿಗಿಂತಲೂ ೨೨ ಸಾವಿರ ಓಟುಗಳು ಅವರಿಗೆ ಹೆಚ್ಚಾಗಿ ಬಂದಿವೆ.

ತಿರುವಾಂಕೂರು ಕೊಚ್ಚಿಯಲ್ಲಿ [illegible] ವರೆಗೆ ಐದು ಸ್ಥಾನಗಳು ಕಾಂಗ್ರೆಸ್ಸಿಗೆ ದೊರೆತಿವೆ. ಅಲ್ಲಿ ಕಮ್ಯುನಿಸ್ಟರಿಗೆ [illegible] ಉಳಿದ ಪಕ್ಷಗಳಿಗೆ [illegible] ಸ್ಥಾನಗಳು ಬಂದಿವೆ.

ಮಧ್ಯ ಪ್ರದೇಶದಲ್ಲಿ ಕಾಂಗ್ರೆಸ್ಸಿಗೆ ೩ [illegible] ಸ್ಥಾನಗಳು ಲಭಿಸಿವೆ. ಒಂದು ಕ್ಷೇತ್ರದಲ್ಲಿ ಕಾಂಗ್ರೆಸ್ ಉಮೇದುವಾರರು ಅಲ್ಲಿನ ಆಬ್ಕಾರಿ ಮಂತ್ರಿ ಮಹಶೆಯವರು ಪರಾಜಯ ಪಡೆದಿರುತ್ತಾರೆ. ಇದು ವರೆಗೆ ೧೭ ಸ್ಥಾನಗಳು ಕಾಂಗ್ರೆಸ್ಸಿಗೆ, ೧ ಸ್ವತಂತ್ರರಿಗೆ, ೧ ಜನಸಂಘ ಪಕ್ಷಕ್ಕೆ ಬಂದಿವೆ.

ಹೈದರಾಬಾದಿನಲ್ಲೂ ಕಾಂಗ್ರೆಸ್ಸಿಗೆ ೫ ದೊರಕಿಗೆ [illegible] ಸ್ಥಾನಗಳು ಲಭ್ಯವಾಗಿ ಈಗ ಉಮೇದುವಾರರು, ಉಳಿದಿವೆ.

ಜನವರಿ ೨೦ರಿಂದ ಓಟುಗಳ ಎಣಿಕೆ

ಸಂಸ್ಥಾನದಲ್ಲಿ ಜನವರಿ ೨೦ನೇ ತಾ|| ಚುನಾವಣೆಗಳು ಮುಗಿಯುವುದರಿಂದ, ಚುನಾವಣಾಧಿಕಾರಿಗಳಿಗೆ ತಕ್ಕ ಸೂಚನೆ ಕೊಡಲು [illegible] ತಾ|| ಸಭೆ ನಡೆಯುವುದರಿಂದಲೂ, ೨೬ನೇ ತಾ|| ರಿಪಬ್ಲಿಕ್ ದಿನಾಚರಣೆ ಇರುವುದರಿಂದ, ೨೭ನೇ ತಾ|| ಓಟುಗಳ ಎಣಿಕೆಯು ಪ್ರಾರಂಭವಾಗುತ್ತದೆಂದು ತಿಳಿದುಬಂದಿದೆ.

ಜೈಲಿನಲ್ಲಿ ಖೈದಿಗಳಿಗೆ ಕೂಲಿ ಕೊಡುವ ಪದ್ಧತಿ

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದಿಗಳು ತಮ್ಮ ಕೂಲಿಯನ್ನು ಹುಟ್ಟಿಸಿಕೊಳ್ಳುವ ಪದ್ಧತಿಯನ್ನು ಜಾರಿಗೆ ತಂದಿರುತ್ತಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಶಾಖೆಗೆ ಇದನ್ನು ಮೊದಲನೇ ವರ್ಷದಲ್ಲಿ ಅನ್ವಯಿಸಲಾಗಿದೆ. ಖೈದಿಯು ಬಿಡುಗಡೆಯಾದ ನಂತರ ಅವನು ತನ್ನ ಜೀವನವನ್ನು ನಡೆಸಿಕೊಳ್ಳುವ ಉದ್ದೇಶದಿಂದ ಈ ಹೊಸ ಪದ್ಧತಿಯನ್ನು ಜಾರಿಗೆ ತರಲಾಗಿದೆ.

ವಾರ ಭವಿಷ್ಯ

ತಾ|| ೩೦ ೧೨-೫೧ ರಿಂದ ೬-೧ ೫೨ ರ ವರೆಗೆ

ಮೇಷ — ದ್ಯೂತ ಮೊದಲಾದವುಗಳಲ್ಲಿ ನಷ್ಟ ಗೊಳಗಾಗಬೇಕು. ಎಮಿರಾಳಿಗಳ ಮನೆ ತನ ಆರೋಗ್ಯ ನಷ್ಟ, ತಾ|| ೧ ೨ ರ ಧನಲಾಭ, ಮುಹನ್ನದ ಪತ್ರಕ್ಕೆ ಸುವರ್ಣ

ವೃಷಭ — ಶುಭವಾರ್ತೆ ಪ್ರಿಯತ ಆರೋಗ್ಯ ನಷ್ಟ ವಾಣಿ ಸವಾಸ ಪ್ರವಾಸ ಮುಖ ಪ್ರದ ವ್ಯಾಪಾರಾದಿಗಳಲ್ಲಿ ಧನಲಾಭ ಮೇಲಧಿಕಾರ ಪ್ರಶ್ನೆ ತಾ|| ೩ ೪ ಮಿತ್ರರ ಆತ್ಮೀಯ ವಸ್ತ್ರ ಪ್ರಾಪ್ತಿ

ಮಿಥುನ — ಸ್ನೇಹಿಂದ ಸಾಲಿ ಆಪ್ರಿಯ ಘಟನೆಗಳು ಆರೋಗ್ಯ ಸಾಧಾರಣ ವ್ಯಾಪಾರಾದಿಗಳಲ್ಲಿ ಪರಿಸ್ಥಿತಿಯ ಸುಧಾರಣೆ ಪ್ರವಾಸಕ್ಕೆ ಪಾರ ಉತ್ತಮ ವಿಲ್ಲ ತಾ|| ೩೦,೩೧ ಸಂತಾಪದ ಘಟನ

ಕರ್ಕ — ಪ್ರವಾಸಕ್ಕೆ ಉತ್ತಮ ವ್ಯಾಪಾರಾದಿಗಳಲ್ಲಿ ಪ್ರಗತಿ ಆತ್ರದ ತ ೧,೨ ನೀಚರಿಂದ ತೊಂದರೆ, ಶರತ ಪಾರಿ ಹಣದ ವೆಚ್ಚ

ಸಿಂಹ — ವಿಳಂಬಯ ದಿನಗಳು ವ್ಯಾಪಾರಾದಿಗಳಲ್ಲಿ ಉತ್ತಮ ವಾತಾವರಣ ಆರೋಗ್ಯ ನಷ್ಟಗೆ ಹಣ ಕಾಸಿನ ಲಾಭ ತಾ|| ೩ ಜಾಗರಣ

ಕನ್ಯಾ — ಸತ್ನಿಯ ಸಮಾಧಾನ ಮನಸ್ಸಿಗೆ ನೋವಾಗುವ ಘಟನೆ ೩ ಜು ಮೇಲೆ ಮಾರುವುದು ವ್ಯಾಪಾರಾದಿಗಳಲ್ಲಿ ಉತ್ತಾಹವಿರದು ತಾ|| ೩೦ ೩ ಮಿತ್ರರ ಸಹಾಯ ಮನಸ್ಸಂತಿ

ತುಲಾ — ವ್ಯಾಪಾರಾದಿಗಳಲ್ಲಿ ನಾಶ ದರ ವಿಧೇಯ ವರ್ತನೆ ಇಲ್ಲ ನೆರೆಯವರ ತಕರಾರು ಅನಾರೋಗ್ಯ, ಬಂಧನದ ಭಯ ತಾ|| ೩೦,೩೧ ಮುಹನ್ನದ ಕಾರ್ಯಗಳಿಗೆ ಅಡ್ಡಿ, ಅಪಘಾತ

ವೃಶ್ಚಿಕ — ಉತ್ಸಾಹಪ್ರದ ಸಮಾಜ ಸೇವೆ ಆರೋಗ್ಯ ಉತ್ತಮ ತಾ|| ೩೦, ೩೧ ಮಹತ್ವದ ಪತ್ರಾಗಮನ ಆಪ್ತರ ಸಹಾಯ

ಧನು — ಮಿತ್ರರಿಗಳ ಬಗ್ಗೆ ಸಹಾನುಭೂತಿ ವ್ಯಾಪಾರಾದಿಗಳಲ್ಲಿ ಲಾಭ ಸಿ ವಿಳಂಬ ಪ್ರವಾಸ ಮಹತ್ವದ ಮಾತುಕತೆಗೆ ಉತ್ತಮ ತಾ|| ೩,೪ ಖರ್ಚು ವಿಪರೀತ, ಅತಿಥಿಗಳ ಹಾವಳಿ

ಮಕರ — ಕೈಗೊಂಡ ಕಾರ್ಯದಲ್ಲಿ ಯಶಸ್ಸು ಕೀರ್ತಿಯ ಲಭ್ಯ ವ್ಯಾಪಾರಾದಿಗಳಲ್ಲಿ ಹಿತ ಘಟನೆ ಪ್ರವಾಸ ಉತ್ತಮ ಹಣ ಕಾಸಿನ ಲಾಭ ತಾ|| ೧ ೩ ಶುಭವಾರ್ತೆ, ನೂತನ ಪರಿಚಯ

ಕುಂಭ — ಆರೋಗ್ಯದ ಕಡೆ ಗಮನವಿರಲಿ ಮಹತ್ವದ ಗೊಂದಲಕ್ಕೆ ಕೈ ಹಾಕದಿರಿ, ವ್ಯಾಪಾರಾದಿಗಳಲ್ಲಿ ವೈಷಮ್ಯದಿಂದ ನಷ್ಟ ತಾ|| ೩೦, ೩೧ ಸಂತತಿಗೆ ಕ್ಲೇಶ, ವಾಹನ ಭಯ

ಕ್ರಿಸ್‌ಮಸ್ ಬಹುಮಾನವಾಗಿ ಮುಕ್ತತೆ ವಿನಿಮಯ

ಸ್ವಿಟ್ಜರ್ಲೆಂಡ್ ದಿನ ಎರಡು ಮನೆತನದವರು ಈ ಸಾರಿಯು ಕ್ರಿಸ್‌ಮಸ್ ಬಹುಮಾನವಾಗಿ ಮಕ್ಕಳನ್ನು ವಿನಿಮಯ ಮಾಡಿಕೊಂಡರು ಎರಡು ಕುಟುಂಬದ ಮಕ್ಕಳನ್ನು ಬದಲಾಯಿಸಿದರು ಇವರು ಆ ಮಕ್ಕಳನ್ನು ಬೆಳೆಸಲು ಅಮೆರಿಕಾ ಮತ್ತು ಸ್ವಿಟ್ಜರ್ಲೆಂಡ್ ಈ ಮೈತ್ರಿಯ ನಿದರ್ಶನವಾಗಿ ... ಮಕ್ಕಳನ್ನು ವಿನಿಮಯ ಮಾಡಿಕೊಂಡು ಪರಸ್ಪರ ಸಂಬಂಧ ವೃದ್ಧಿ ... ಪಾರ್ಥನೆ ... ಮಕ್ಕಳನ್ನು ಬದಲಾಯಿಸಿಕೊಳ್ಳುವ ಏರ್ಪಾಡು ಮಾಡಿದರು

ವಿಶೇಷ ಉತ್ಸವ

ರಾಜಧಾನಿಯ ಸುಬ್ಬರಾಯನ ಕೆರೆ ... ರಾಘವೇಂದ್ರ ಸ್ವಾಮಿಯವರ ದ ... ಗುರುವಾರ ... ವಿಶೇಷ ... ಉತ್ಸವ ... ಸಂಸ್ಥಾನದ ಮುಖಂಡ ... ಕಾಂಗ್ರೆಸ್ಸಿನವರು ... ನಡೆಸಿದರು

ಓಟು ಕೊಡುವ ಕ್ಷೇತ್ರಗಳ ... ಕುರಿಯಿರುವ ... ಓಟುಗಳನ್ನು ... ವಾರು ... ಕ್ಷೇತ್ರಗಳ ... ಡಿಯುವ ... ದಲಾಗುವುದೆಂದು ... ಗಿದೆ

ವಿನಾಶ — ತಾಪದಾಯಕ ... ವ್ಯಾಪಾರಾದಿಗಳಲ್ಲಿ ... ಭಿನ್ನಾಭಿಪ್ರಾಯ ... ವ್ಯವಹಾರಗಳಲ್ಲಿ ... ಮನಸ್ಸಿನಲ್ಲಿ ...

ಗೂಳಿ ಗುದ್ದಿ ಮರಣ

ಸ್ಪೇನಿನ ... ಮಾರ್ಗನ್ ತೋಟದಲ್ಲಿ ... ಎಂಬುವನನ್ನು ಒಂದು ಗೂಳಿಯು ... ಗುದ್ದಿ ಕೊಂದಿತೆಂದು ವರದಿಯಾಗಿದೆ ... ಲ್ಲಿನ ಸರ್ಕಾರದವರು ಕೋಟ್ಯ... ಯನ್ನು ಎರವಲು ಕೊಟ್ಟಿದ್ದರೆಂದು ... ದನ್ನು ಆತನು ಕೊಟ್ಟಿಗೆಗೆ ಕರೆದು ... ಹೋಗುವಾಗ, ಅದು ತಿವಿದು ... ದೂ ಹೇಳಲಾಗಿದೆ

ಒಲಿಂಪಿಯಾ 3—1—52 ರಿಂದ
ಆನೋಖ ಪ್ರಾರಂಭ
ಬಹು ... ಚಲನ ಚಿತ್ರಗಳ ... ನರ್ಗೀಸ್ ಮತ್ತು ದಿಲೀಪ್ ಕುಮಾರ್ ... ರಾಜಕಪೂರ್ ... ಅಕೃತ್ನೋಕ್ ... ಸುಮಧುರ ಸಂಗೀತ ... ಕೂಡಿದ ಚಿತ್ರ
* ಜೋಗನ್ *
ಸಹಾಯಕ ವರ್ಗ ... ಪೂರ್ಣಿಮಾ, ಬೇಬಿ ತಬಸುಂ
ನಿರ್ದೇಶನ — ಕಿದಾರ್ ಶರ್ಮ
ಸಮಾಜದ ... ವೃದ್ಧನನ್ನು ಮದುವೆಯಾಗಬೇಕೆಂಬ ... ಊರು ಮನೆ ... ಜೀವನವನ್ನೇ ದೈವ ಸೇವೆಗೆ ... ಚಿತ್ರವನ್ನು ಪ್ರತಿಯೊಬ್ಬರೂ ನೋಡಲೇಬೇಕು ... ಸ್ವಾಗತ

ನಿಮ್ಮ ಓಟು ಯಾರಿಗೆ ! ಕಿಸಾನ್ ಮಜ್ದೂರ್ ಪ್ರಜಾ ಪಾರ್ಟಿಗೆ
ನಿಮ್ಮ ಓಟು ... ಗುಡಿಸಲ ಗುರ್ತಿನ ಪೆಟ್ಟಿಗೆಗೆ
೩ | ೨ | 1952 ರ ... ನಡೆಯುವ ... ಚುನಾವಣೆಗೆ ಪಾರ್ಟಿಯು
ಮೈಸೂರು ಶಾಸನ ಸಭೆಗೆ :—
ಶ್ರೀ ಎ ವೆಂಕಟ ರೆಡ್ಡಿ ಬಿ ಎ , ಎಲ್ ಎಲ್ ಬಿ., ರವರು
ಪಾರ್ಲಿಮೆಂಟಿಗೆ —
ಶ್ರೀ ಎಂ ಎಸ್. ಗುರುಪಾದಸ್ವಾಮಿ,
ಎಂ ಎ , ಎಲ್ ಎಲ್ ಬಿ , ರವರು (ಜನರಲ್)
ಶ್ರೀ ಎಸ್ ಎಂ ಸಿದ್ದಯ್ಯ, ಬಿ ಎಸ್‌ಸಿ , ಎಲ್. ಎಲ್. ಬಿ.,
ರವರು (ರಿಸರ್ವ್ ಜಗ)
ಮತ್ತು ... ಕ್ಷೇತ್ರದಿಂದ ... ಪೂರ್ಣ ಸಹಕಾರದಿಂದ
ಮೈಸೂರು ಶಾಸನ ಸಭೆಗೆ ... ನಾಜಿ ಆರೋಗ್ಯ ಸಚಿವರಾದ
ಜನಾಬ್ ಮಹಮೂದ್ ಷರೀಫ್ , ಎ., ಎಲ್ ಎಲ್ ಬಿ
ಇವರ ಗುರುತು ಒಂಟೆ)
ರವರುಗಳು ಸ್ಪರ್ಧಿಸಿರುತ್ತಾರೆ ... ಇವರುಗಳಿಗೇ ತಮ್ಮ ಅಮೂಲ್ಯವಾದ ಓಟುಗಳನ್ನು ಕೊಟ್ಟು ಜಯ ... ಮಾಡಬೇಕಾಗಿ ಪ್ರಾರ್ಥನೆ

ಮಹಾಜನರಲ್ಲಿ ವಿನಂತಿ
2 1 1952 ರಲ್ಲಿ ನಡೆಯುವ ಮಹಾಚುನಾವಣೆಯಲ್ಲಿ
ಕಾಂಗ್ರೆಸ್ ಅಭ್ಯರ್ಥಿಯಾಗಿ ಮೈಸೂರು ... ಸಭೆಗೆ
ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸುವ
ಶ್ರೀ ಬಿ. ನಾರಾಯಣಸ್ವಾಮಿ
ಉತ್ತರ ಕ್ಷೇತ್ರದಿಂದ ಸ್ಪರ್ಧಿಸುವ
ಶ್ರೀ ಟಿ ಮರಿಯಪ್ಪ
ಭಾರತದ ಪಾರ್ಲಿಮೆಂಟಿಗೆ ಸ್ಪರ್ಧಿಸುವ
ಶ್ರೀ ಹೆಚ್ ಸಿ. ದಾಸಪ್ಪ
ಮತ್ತು
ಶ್ರೀ ಎನ್ ರಾಚಯ್ಯ
ಇವರುಗಳಿಗೆ ತಮ್ಮ ಅಮೂಲ್ಯವಾದ ಓಟುಗಳನ್ನು ಕೊಡಬೇಕಾಗಿ ವಿನಂತಿ

★ ಕಾಂಗ್ರೆಸ್ಸಿನ ಗುರುತು



[ನಗರ ಕಾಂಗ್ರೆಸ್ ಸಮಿತಿ, ಮೈಸೂರು]

ಸೊಳ್ಳೆ ಕಡಿತ ಸಾಲದೇ? ಇನ್ನೂ ಸೊಳ್ಳೆ ಪರದೆ ಬೇಡವೇ?
ಮಕ್ಕಳ ತೊಟ್ಟಿಲಿಗೆ ... ಮಂಚಕ್ಕೆ ... ದೊರೆಯುವ ... ಮ್ಯಾಚ್ ಫ್ಯಾಕ್ಟರಿ ರೋಡ್ ಮೈಸೂರು

ನೌ|| ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚೀ, ಆರ್ನಿ, ಬನಾರಸ್, ಪೂನಾ, ಸಾಂಗ್ಲಿ, ಮತ್ತು ಇತರ ಸೀರೆಗಳು ಮತ್ತು ಕಾಶ್ಮೀರ್ ಶಾಲುಗಳಿಗೆ * D. L. ನರಸಿಂಹಯ್ಯ
ಸವೆ ಅಂಗಡಿ ... ಅಶೋಕ ರಸ್ತೆ, ಮೈಸೂರು

Edited Printed and Published by A R Nagarajan at Sadhvi Press D ... Road Mysore

ರಿಜಿ ನಂ 792 [ಬೆಲೆ ಮೂರು ಕಾಸು] ಇಂಡಿಯ ಪತ್ರಿಕೆ ಬಾಬು

ಸಂಪುಟ ೧೦] ಸೋಮವಾರ ೨೧-೧೨-೫೧ [ಸಂಚಿಕೆ ೧೨೩

ಮಹಾರಾಜರವರು ಓಟು ಮಾಡುವುದಿಲ್ಲ

ಕಾಂಗ್ರೆಸ್ ಕೆಲಸಗಾರರ ಸಭೆ

ಮೈಸೂರು ೩೧

ಮಹಾ ಚುನಾವಣೆಗಳ ಸಂಬಂಧವಾಗಿ ಮಾಡಬೇಕಾದ ವ್ಯವಸ್ಥೆಗಳನ್ನು ನಿರ್ಧರಿಸುವುದಕ್ಕಾಗಿ ನಾಳೆ ಸಂಜೆ ೬ ಗಂಟೆಗೆ ಸಯ್ಯಾಜಿ ರಾವ್-ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಚುನಾವಣಾ ಪ್ರತಿನಿಧಿಗಳ ಮತ್ತು ಕೆಲಸಗಾರರ ಸಭೆ ನಡೆಯುತ್ತದೆ ಕಾರ್ಯಕರ್ತರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ

ಕನ್ನೇಗೌಡನ ಕೊಪ್ಪಲಿನಲ್ಲಿ ಭಾರಿ ಮೆರವಣಿಗೆ ಮತ್ತು ಸಭೆ

ಕಾಂಗ್ರೆಸ್ ಚುನಾವಣಾ ಪ್ರಚಾರದ ಅಂಗವಾಗಿ ನೆನ್ನೆ ರಾತ್ರಿ ಕನ್ನೆಗೌಡನ ಕೊಪ್ಪಲಿನಲ್ಲಿ ೮ ಜೋಡಿ ಎತ್ತುಗಳಿಂದ ಕೂಡಿದ ಭಾರಿ ಮೆರವಣಿಗೆಯು ಊರಿನ ಎಲ್ಲಾ ನಡೆಯಿತು ಶ್ರೀಗಳಾದ ಎಸ್ ಚನ್ನಯ್ಯ, ಟಿ ಮರಿಯಪ್ಪ, ಹೆಚ್ ಸಿ ದಾಸಪ್ಪ, ಸಿ ಜಿ ದೇವನಾಥ್, ಬಿ ನಾರಾಯಣಸ್ವಾಮಿ, ಎ ರಾಮಣ್ಣ ಮುಂತಾದವರು ಅಲ್ಲಿ ನೆರೆದಿದ್ದ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿ ಕಾಂಗ್ರೆಸ್ಸಿಗೆ ಮಹಾಜನರು ಬೆಂಬಲ ನೀಡಬೇಕೆಂದು ಕೋರಿದರು

ಜ್ಯೋತಿರ್ಮಹೇಶ್ವರ ಯುವಕ ಸಂಘ

ಪಂಡಿ ಮೊಹಲ್ಲಾ ಈದಿಗಾ ಎದುರಿನಲ್ಲಿ ನೆನ್ನೆ ರಾತ್ರಿ ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಮೇಲ್ಕಂಡ ಸಂಘದ ಆರಂಭೋತ್ಸವವನ್ನು ನೆರವೇರಿಸಿದರು ಯುವಕರು ದೇಶಾಭಿಮಾನಿಗಳಾಗಿಯೂ, ಒಳ್ಳೆ ನಡೆನುಡಿಗಳಾಗಿಯೂ ಗುಣ ಸಂಪನ್ನರಾಗಿಯೂ ವ್ಯಕ್ತಿ ಹೊಂದಿ ಸಮಾಜ ಸೇವೆಯನ್ನು ಮಾಡಬೇಕೆಂದು ಅವರು ಕೋರಿದರು ಬರುವ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಮಹಾಜನರು ಬೆಂಬಲ ನೀಡಬೇಕೆಂದು ಪ್ರಾರ್ಥಿಸಿದರು

ಕಾಂಗ್ರೆಸ್ಸಿಗೆ ನೇತಾಜಿ ಫುಟ್‌ಬಾಲ್ ಕ್ಲಬ್ಬಿನ ಬೆಂಬಲ

ರಾಜಧಾನಿಯ ನೇತಾಜಿ ಫುಟ್ ಬಾಲ್ ಕ್ಲಬ್ಬಿನ ಸರ್ವ ಸದಸ್ಯರ ಸಭೆಯು ನೆನ್ನೆ ಸಂಜೆ ನಡೆದು ಸಭೆಯ ಅಧ್ಯಕ್ಷತೆ ವಹಿಸಿದ್ದ ... ದೇಶದ ಹಿತದೃಷ್ಟಿಯಿಂದ ಮಹಾಜನರೆಲ್ಲರೂ ಕಾಂಗ್ರೆಸ್ಸಿಗೇ ಓಟು ಕೊಡಬೇಕೆಂದೂ ಮತ್ತು ಕ್ಲಬ್ಬಿನ ಸದಸ್ಯರೆಲ್ಲರೂ ಕಾಂಗ್ರೆಸ್ಸಿನ ಜಯಗಳಿಸಲು ಸಹಕಾರ ನೀಡಬೇಕೆಂದೂ ನಿರ್ಣಯಮಾಡಲಾಯಿತು

ಉಪನ್ಯಾಸ

ಸರಿಗಮ ಚಕ್ರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ... ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ಪಂಡಿತ ಪಿ ವೆಂಕಣ್ಣ ಭಟ್ಟರು ಧರ್ಮದ ವಿಚಾರವಾಗಿ ಭಾಷಣ ಮಾಡುವರು ಸರ್ವರಿಗೂ ಸ್ವಾಗತವಿದೆ.

ರಾಜಧಾನಿಯ ವೈಸರಾಯ್ ರಸ್ತೆಯಲ್ಲಿರುವ ಮಹಿಳಾ ಸಮಾಜದಲ್ಲಿ ನಾಳೆ ಸಂಜೆ ೫ ಗಂಟೆಗೆ ವೇಗ ದೇಶದ ರಾಮಕೃಷ್ಣಾಶ್ರಮದ ಸ್ವಾಮಿ ಯತೀಶ್ವರಾನಂದಜಿಯವರು ಆದಿಶಕ್ತಿ ಜಗನ್ಮಾತೆ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಭಗಿನಿಯರೆಲ್ಲರೂ ಆಗಮಿಸಬೇಕಾಗಿ ಕೋರಲಾಗಿದೆ

ಮಹಾರಾಜರಿಂದ ಮತದಾನವಿಲ್ಲ

ಮೈಸೂರು ೩೧

ನಾಡಿದ್ದಿನಿಂದ ಸಂಸ್ಥಾನದಾದ್ಯಂತ ಆರಂಭವಾಗುವ ಮಹಾ ಚುನಾವಣೆ ... ಶ್ರೀಮನ್ ಮಹಾರಾಜರು ಮತ್ತು ರಾಜಮನೆತನದವರೂ ಮತದಾನ ಮಾಡುವುದಿಲ್ಲವೆಂದು ನಿರ್ಧರಿಸಿರುವುದಾಗಿ ತಿಳಿದುಬಂದಿದೆ

ವಿಜಯ ಮುದ್ರಣಾಲಯ

ರಾಜಧಾನಿಯ ವಿಜಯಾ ಪತ್ರಿಕೆಯ ಮಾಲೀಕರಾದ ಶ್ರೀ ಎ ರಾಮಣ್ಣನವರು ಧನ್ವಂತರಿ ರಸ್ತೆಯಲ್ಲಿ ನೂತನವಾಗಿ ಸ್ಥಾಪಿಸಿರುವ ಮುದ್ರಣಾಲಯದ ಆರಂಭೋತ್ಸವವು ಈ ದಿನ ಬೆಳಿಗ್ಗೆ ವೈಭವದಿಂದ ನೆರವೇರಿತು ನಗರದ ಅನೇಕ ಮಾನ್ಯ ಅತಿಥಿಗಳು ದಯಮಾಡಿಸಿದ್ದರು ಶ್ರೀಗಳಾದ ಜೆ ಪುಟ್ಟಸ್ವಾಮಿ ಮತ್ತು ಕೆ ರಂಗಯ್ಯನವರು ಭಾಷಣ ಮಾಡಿ ಮುದ್ರಣಾಲಯದ ಸ್ಥಾಪಕರನ್ನು ಅಭಿನಂದಿಸಿ ಅವರಿಗೆ ಸಕಲ ಶ್ರೇಯಸ್ಸುಂಟಾಗಲೆಂದು ಹಾರೈಸಿದರು

ಬಹಿರಂಗ ಸಭೆ

ಈ ದಿವಸ ಸಾಯಂಕಾಲ ೬ ಘಂಟೆಗೆ ಚಾಮರಾಜ ಮೊಹಲ್ಲಾ ಸುಬ್ಬರಾಯನಕೆರೆ ಮೈದಾನದಲ್ಲಿ ಕಿಸಾನ್ ಮಜದೂರ್ ಪ್ರಜಾ ಪಾರ್ಟಿಯ ಬಹಿರಂಗ ಸಭೆ ನಡೆಯುತ್ತದೆ ಪಾರ್ಟಿಯ ಮುಖಂಡರು ಭಾಷಣ ಮಾಡುತ್ತಾರೆ ಸರ್ವರೂ ದಯಮಾಡಬೇಕಾಗಿ ಕೋರಲಾಗಿದೆ

ಕೊರಿಯಾ ಕಮ್ಯೂನಿಸ್ಟರಿಗೆ ಅಂತ್ಯ ಸೂಚನೆ

ಕೊರಿಯಾ ಯುದ್ಧ ಮಾತುಕತೆಗಳ ಸಂಬಂಧವಾಗಿ ವಿಶ್ವ ಸಂಸ್ಥೆ ಪ್ರತಿನಿಧಿಗಳು ಮೊನ್ನೆ ಕಮ್ಯೂನಿಸ್ಟರಿಗೆ ಅಂತ್ಯ ಎಚ್ಚರಿಕೆಯಿತ್ತು ತಾವು ಮುಂದೆ ಯಾವ ರಾಜಿ ಸಲಹೆಯನ್ನೂ ಕೊಡುವುದಿಲ್ಲವೆಂದು ತಿಳಿಸಿರುತ್ತಾರೆ ಉತ್ತರ ಕೊರಿಯಾದಲ್ಲಿ ನಷ್ಟವಾದ ವಿಮಾನ ನಿಲ್ದಾಣಗಳನ್ನು ಪರಿಶೀಲಿಸಲು ಕಮ್ಯೂನಿಸ್ಟರು ಅವಕಾಶ ಕೇಳಿದ್ದರು ಅದಕ್ಕೆ ವಿಶ್ವ ಸಂಸ್ಥೆಯವರು ತಮ್ಮ ಒಪ್ಪಿಗೆಯನ್ನೀಯಲಿಲ್ಲ ನೆನ್ನೆ ದಿನ ... ಬಳಿ ಬಹಳ ಪ್ರಬಲವಾದ ಕದನವು ನಡೆದು ವಿಶ್ವ ಸಂಸ್ಥೆ ಸೈನಿಕರು ಕಮ್ಯೂನಿಸ್ಟರನ್ನು ಎದುರಿಸಿ ೯೦೦ ಗಜಗಳಷ್ಟು ಮುನ್ನುಗ್ಗಿರುವುದಾಗಿ ವರದಿಯಾಗಿದೆ

ಕಾಂಗ್ರೆಸ್ಸಿನವರ ಮೇಲೆ ಅಧ್ಯಕ್ಷರ ಶಿಸ್ತಿನ ಕ್ರಮ

ಬೆಂಗಳೂರು ೩೦

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ ಹನುಮಂತಯ್ಯನವರು ಕಾಂಗ್ರೆಸ್ ಉಮೇದುವಾರರ ವಿರುದ್ಧವಾಗಿ ಸ್ಪರ್ಧಿಸಿರುವ ಕಾಂಗ್ರೆಸ್ಸಿನವರ ಮೇಲೆ ಸಂಸ್ಥೆಗೆ ರಾಜೀನಾಮೆಯಿತ್ತು ಸ್ವತಂತ್ರರಾಗಿ ಸ್ಪರ್ಧಿಸಿರುವವರ ಮೇಲೂ ಶಿಸ್ತಿನ ಕ್ರಮ ಕೈಗೊಂಡು ಅವರ ಸದಸ್ಯತ್ವವನ್ನು ಸಸ್ಪೆಂಡ್ ಮಾಡಿರುತ್ತಾರೆ ಕಾಂಗ್ರೆಸ್ ಒಳಗಿನ ಉಮೇದುವಾರರೊಬ್ಬರ ಮೇಲೂ ಕ್ರಮ ಕೈಗೊಳ್ಳಲಾಗಿದೆ

ದೋಣಿ ಮುಳುಗಿ ೨೦೦ ಜನರ ಮರಣ

ರಂಗೂನಿನ ... ವೈರಿಗೆ ಪಶ್ಚಿಮ ... ನಗರದ ಬಳಿ ಸಾಲ್ವೀನ್ ನದಿಯಲ್ಲಿ ಮೊನ್ನೆ ದೋಣಿಯೊಂದು ಮುಳುಗಿದುದರಿಂದ ೨೦೦ ಜನರು ಮೃತರಾದರೆಂದು ತಿಳಿದುಬಂದಿದೆ

ಚುನಾವಣೆಗಳ ದಿನ ಕಾರ್ಮಿಕರಿಗೆ ರಜಾ

ಚುನಾವಣೆಗಳ ದಿನಗಳಲ್ಲಿ ಆಯಾ ಪ್ರದೇಶದ ಸರ್ಕಾರಿ ಕೈಗಾರಿಕೆಯವರುಗಳು ಕಾರ್ಮಿಕರಿಗೆ ಸಂಬಳವಿಲ್ಲದ ರಜಾ ಕೊಡುವಂತೆ ಸರ್ಕಾರದವರ ಆಜ್ಞೆಯಾಗಿದೆ ಈ ಸಂಬಳವನ್ನು ಸರಿದೂಗಿಸಿಕೊಳ್ಳುವುದಕ್ಕಾಗಿ ಬೇರೊಂದು ರಜಾ ದಿನದಲ್ಲಿ ಅವರು ಕೆಲಸ ಮಾಡಲು ಅವಕಾಶ ಕಲ್ಪಿಸಲು ಸೂಚನೆಯಾಗಿದೆ ಇದೇ ಪ್ರಕಾರ ಖಾಸಗೀ ಕೈಗಾರಿಕೆಯವರೂ ಸಹ ರಜಾ ಕೊಡುವಂತೆ ಸರ್ಕಾರದವರು ಕೋರಿರುತ್ತಾರೆ.

ಮೈಸೂರಿನವರಿಗೆ ಕಾಶೀ ವಿಶ್ವವಿದ್ಯಾಲಯದ ಪ್ರಶಸ್ತಿ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಹಾಯಕ ... ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ಎಂ. ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ತೇರ್ಗಡೆ ಹೊಂದಿದ್ದ ಮೈಸೂರಿನ ಶ್ರೀ ಎಂ ಎಸ್ ಸುಬ್ಬರಾಯರಿಗೆ ಆ ವಿಶ್ವವಿದ್ಯಾಲಯದ ಡಾಕ್ಟರ್ ಆಫ್ ಫಿಲಾಸಫಿ ... ಎಂಬ ಪ್ರಶಸ್ತಿಯು ದೊರೆತಿರುತ್ತದೆ ಅವರು ನಡೆಸಿದ ಹಲವು ಸಂಶೋಧನೆಗಳಿಗಾಗಿ ಅವನ್ನು ಕೊಡಲಾಗಿದೆ

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಮಹಿಳಾ ಸ್ಪರ್ಧಿಗೆ ಜಯ

ಮಧ್ಯಪ್ರದೇಶದ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಇನ್ನೂ ಮೂರು ಸ್ಥಾನಗಳನ್ನು ಗಳಿಸಿದೆ ಇದರಲ್ಲಿ ಒಬ್ಬ ಮಹಿಳೆಯೂ ಸೇರಿದ್ದಾರೆ ಅಲ್ಲಿ ಕಾಂಗ್ರೆಸ್ಸಿಗೆ ಈವರೆಗೆ ಒಟ್ಟು ೨೦ ಸ್ಥಾನಗಳು ಲಭಿಸಿವೆ

ಹೈದರಾಬಾದಿನಲ್ಲಿ ಕಾಂಗ್ರೆಸ್ಸಿಗೆ ಇನ್ನೂ ... ಸ್ಥಾನಗಳು

ಹೈದರಾಬಾದಿನ ಚುನಾವಣೆಯಲ್ಲಿ ನೆನ್ನೆ ಪ್ರಕಟವಾದ ... ಸ್ಥಾನಗಳ ಫಲಿತಾಂಶದ ಪ್ರಕಾರ ಕಾಂಗ್ರೆಸ್ಸಿಗೆ ೬ ಸ್ಥಾನಗಳು, ಪೀಪಲ್ಸ್ ಡೆಮಾಕ್ರಾಟಿಕ್ ಫ್ರಂಟ್, ಕೃಷಿಕ ಮತ್ತು ಕಾರ್ಮಿಕ ಪಕ್ಷ ಮತ್ತು ಸ್ವತಂತ್ರರಿಗೆ ತಲಾ ಒಂದೊಂದು ಸ್ಥಾನವೂ ಲಭಿಸಿವೆ ಇದರಿಂದ ಕಾಂಗ್ರೆಸ್ಸಿಗೆ ಒಟ್ಟು ... ಸ್ಥಾನಗಳು ದೊರೆತಂತಾಗಿದೆ.

ಹೈದರಾಬಾದಿನಲ್ಲಿ ಪಾರ್ಲಿಮೆಂಟ್ ಸದಸ್ಯರ ಕೊಲೆ

ಹೈದರಾಬಾದಿನಿಂದ ಪಾರ್ಲಿಮೆಂಟ್ ಸದಸ್ಯರಾಗಿರುವ ಶ್ರೀ ಮಾಣಿಕ್‌ಲಾಲ್ ... ಅವರನ್ನು ಮೊನ್ನೆ ರಾತ್ರಿ ಅವರ ಸ್ವಗೃಹದಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಯಾರೋ ದುಷ್ಕರ್ಮಿಗಳು ಗುಂಡಿಟ್ಟು ಕೊಂದರೆಂದು ವರದಿಯಾಗಿದೆ

ಉಮೇದುವಾರರ ವಿರುದ್ಧ ಠೇವಣಿ ನಷ್ಟ

ಮಧ್ಯ ಪ್ರದೇಶದ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ಸು ಉಮೇದುವಾರರಾದ ಶ್ರೀಮತಿ ರಾಧಾದೇವಿ ಗೋಯೆಂಕಾರವರ ವಿರುದ್ಧವಾಗಿ ಸ್ಪರ್ಧಿಸಿದ್ದ ೬ ಜನ ... ರೂ ತಮ್ಮ ಠೇವಣಿಗಳನ್ನು ಕಳೆದುಕೊಂಡಿರುತ್ತಾರೆ

ಸತ್ಕಾರ ಸಮಾರಂಭ

ವಿದೇಶ ಪ್ರವಾಸವನ್ನು ಮುಗಿಸಿಕೊಂಡು ಹಿಂತಿರುಗಿದ ಶ್ರೀಗಳಾದ ಡಿ ಆರ್ ವಿಠಲೇಶ್ವರಂ, ಡಾ|| ಎ ಎಂ. ಫರೀದ್, ಡಾ|| ಎಂ ಎಲ್ ಲೋಕನಾಥ್, ಡಾ|| ಎಸ್ ಕೆ ಏಕಾಂಬರಂ ಮತ್ತು ಶ್ರೀ ಶಿವಪ್ರಕಾಶಕರವರನ್ನು ಗೌರವಿಸಲು ನೆನ್ನೆ ದಿನ ಸಂಜೆ ರಾಜಧಾನಿಯ ಪೆಲ್ಲಾಳ ಸಹಾಯದವರು 'ಶ್ರೀ ಚಾಮುಂಡೇಶ್ವರಿ ಭವನ'ದಲ್ಲಿ ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು ಶ್ರೀ ಎಸ್ ... ಕೃಷ್ಣಯ್ಯನವರು ಅಧ್ಯಕ್ಷತೆ ವಹಿಸಿದ್ದರು ಉಪಾಹಾರದ ನಂತರ ಡಾ|| ವಿ ಜಿ ರಾಂ ರವರು ಸ್ವಾಗತ ಭಾಷಣ ಮಾಡಿದರು ಅನಂತರ ಮುಖ್ಯ ಅತಿಥಿಗಳು ನೂತನರಿಗೆ ತಮ್ಮನ್ನು ಗೌರವಿಸಿದ ಬಗ್ಗೆ ಕೃತಜ್ಞತೆಯನ್ನು ಸೂಚಿಸಿದರು ಸುಶ್ರಾವ್ಯವಾದ ಸಂಗೀತ ಮತ್ತು ವಂದನಾರ್ಪಣೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು

○ ಮೈಸೂರು, ಬೆಂಗಳೂರು, ಮೈಸೂರು ಅರಸೀಕೆರೆ, ಮೈಸೂರು-ಚಾಮರಾಜನಗರ ಮತ್ತು ಇತರ ವಿಭಾಗಗಳಲ್ಲಿ ಕೆಲವು ಸ್ಟೇಷನ್‌ಗಳ ಹತ್ತಿರ ಜನಗಳ ಕ್ಷೇಮಕ್ಕಾಗಿ ಏರ್ಪಡಿಸಿದ್ದ ರೈಲ್ವೆ ... ವನ್ನು ... ರೈಲ್ವೆಯವರು ಫೆಬ್ರವರಿ ೧ ನೇ ತಾರೀಖಿನಿಂದ ವಜಾ ಮಾಡಲಿದ್ದಾರೆ ಸಂಚಾರಕ್ಕೆ ... ಇರುವ ... ಮುಂತಾದ ... ಗಳಲ್ಲಿ ಹೇಳಿದೆ

ಸಂಸ್ಥಾನದ ಅಭಿವೃದ್ಧಿಗಾಗಿ ರಿಸರ್ವ್ ನಿಧಿ ಉಪಯೋಗ

ಹಲವು ಕಾಂಗ್ರೆಸ್ ವಿರೋಧಿಗಳು ರಿಸರ್ವ್ ಫಂಡನ್ನು ಸರ್ಕಾರದವರು ಪೋಲು ಮಾಡುತ್ತಿದ್ದಾರೆಂದು ಅಪಪ್ರಚಾರ ಮಾಡುತ್ತಿದ್ದಾರೆ. ಸಾರ್ವಜನಿಕರು ಇದನ್ನು ನಂಬಬಾರದು ಇದು ಕೇವಲ ಚುನಾವಣೆಯ ಚಮತ್ಕಾರ ಸತ್ಯಾಂಶಕ್ಕೆ ದೂರವಾದದ್ದು ವಿಷಯ ಈ ರೀತಿ ಇದೆ —

[illegible]ರಲ್ಲಿ ಇದ್ದ ಹಣ [illegible] ಕೋಟಿ ರೂ [illegible]ರಲ್ಲಿ ಇರುವುದು [illegible] ಕೋಟಿ ರೂ ಖರ್ಚಾಗಿರುವುದು. [illegible] ಕೋಟಿ ರೂ ಇದಕ್ಕೆ ಇನ್ಷೂರನ್ಸ್ ಪ್ರಾವಿಡೆಂಟ್ ಫಂಡ್ ಡಿಪಾಜಿಟ್‌ಗಳು, ಡಿಪ್ರೀಸಿಯೇಷನ್ ಫಂಡ್ ಮುಂತಾದವನ್ನು ಸೇರಿಸಿದರೆ [illegible] ಕೋಟಿ ರೂ ಒಟ್ಟು [illegible] ಕೋಟಿ ರೂ

ಇಷ್ಟು ಹಣಕ್ಕೆ ಸತ್ಯದ ತಖ್ತೆ ಈ ರೀತಿ ಇದೆ — ಸಾಲ ಕೊಟ್ಟಿರುವುದು [illegible] ಕೋಟಿ ರೂ ಸ್ಟೇಟ್ ರೈಲ್ವೆ ಅಭಿವೃದ್ಧಿಗೆ [illegible] ಕೋಟಿ ರೂ ಆರ್ ಎಸ್ ವರ್ಕ್ಸ್ ಅಭಿವೃದ್ಧಿಗೆ [illegible] ಕೋಟಿ ರೂ ವಿದ್ಯುತ್ ಉತ್ಪಾದನೆಗೆ [illegible] ಕೋಟಿ ರೂ ನೀರಾವರಿ ಕಾಮಗಾರಿಗೆ [illegible] ಕೋಟಿ ರೂ ಸಣ್ಣ ಕೈಗಾರಿಕೆಗೆ [illegible] ಕೋಟಿ ರೂ ಭದ್ರಾವತಿಯ ಕಬ್ಬಿಣ, ಉಕ್ಕು, ಸಿಮೆಂಟ್ ಕಾರ್ಖಾನೆಯ ಅಭಿವೃದ್ಧಿಗೆ [illegible] ಕೋಟಿ ರೂ ಆಹಾರದ ಇಲಾಖೆಗೆ [illegible] ಕೋಟಿ ರೂ ಕಟ್ಟಡಗಳು, ರಸ್ತೆ, ನೀರು ಸರಬರಾಜು ಮುಂತಾದ ಕಾಮಗಾರಿ, ಆಹಾರದ ಸಬ್ ಸಿಡಿ, ಸರ್ಕಾರಿ ನೌಕರರ ಸಂಬಳ ವಗೈರೆ [illegible] ಕೋಟಿ ರೂ ಒಟ್ಟು [illegible] ಕೋಟಿ ರೂ ಈ ತಖ್ತೆಯಿಂದ ರಿಸರ್ವಿನ ಹಣವು ಅಭಿವೃದ್ಧಿ ಕಾರ್ಯಗಳಿಗೂ ಮತ್ತು ಸರ್ಕಾರಿ ನೌಕರರ ಸಂಬಳ ಆಹಾರದ ಸಬ್ ಸಿಡಿಗೂ ಖರ್ಚಾಗಿರುವುದು ಸ್ಪಷ್ಟವಾಗಿದೆ

ಆಹಾರದ ಇಲಾಖೆಗೆ ಸಬ್‌ಸಿಡಿ ಕೊಡದಿದ್ದಲ್ಲಿ ಆಹಾರ ಧಾನ್ಯಗಳನ್ನು ಇನ್ನೂ ಹೆಚ್ಚಿನ ಬೆಲೆಗೆ ಮಾರಬೇಕಾಗಿ ಬಂದು ಬಡ ಜನರಿಗೆ ಬಹಳ ತೊಂದರೆಯಾಗುತ್ತಿತ್ತು. ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡದಿದ್ದಲ್ಲಿ ಹಿರಿದ ಪ್ರಗತಿ ಸಾಧನಾ ಕಾರ್ಯಗಳು ನಿಂತುಹೋಗುತ್ತಿದ್ದುವು

ವರ್ಷೇವರ್ಷೇ ಬರುವ ಸರ್ಕಾರದ ಆದಾಯದಲ್ಲಿ ಬಹು ಭಾಗವನ್ನು ವಿದ್ಯಾಭ್ಯಾಸ, ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ವ್ಯವಸಾಯ, ವೆಟರ್ನರಿ, ಗ್ರಾಮಾಭಿವೃದ್ಧಿ ವಗೈರೆ ಕಾರ್ಯಗಳಿಗೆ ಖರ್ಚು ಮಾಡುತ್ತಿರುವುದರಿಂದ ಸಂಸ್ಥಾನದಲ್ಲಿ ಸ್ಕೂಲುಗಳ ಸಂಖ್ಯೆ, ಆರೋಗ್ಯ ಕೇಂದ್ರಗಳ ಸಂಖ್ಯೆ ಸಹಕಾರ ಸಂಘಗಳ ಸಂಖ್ಯೆ ಹೆಚ್ಚಾಗಿದೆ ಎಂಬುದನ್ನು ಈಗಾಗಲೇ ಮಹಾಜನರ ಗಮನಕ್ಕೆ ತರಲಾಗಿದೆ ರಿಸರ್ವ್ ನಿಧಿಯನ್ನು ದೇಶಾಭ್ಯುದಯ ಕಾರ್ಯಕ್ಕೆ ಬಳಸಲಾಗಿದೆ

ಅಚಾತುರ್ಯ

ಮೈಸೂರು [illegible]

ಈ ಚಲಿಗ್ಸ್ ಕಾಂಗ್ರೆಸ್ ಆಫೀಸಿನ ಎದುರು ರಸ್ತೆಯಲ್ಲಿ ಅಚಾತುರ್ಯವೊಂದು ನಡೆಯಿತು ಅದಕ್ಕೂ ಕಾಂಗ್ರೆಸ್ ಆಫೀಸಿಗೂ ಯಾವ ಸಂಬಂಧವೂ ಇಲ್ಲ ಪತ್ರಿಕೆ ಮಾರುವ ಹುಡುಗನೊಬ್ಬನು ನಿಶ್ಚಿಂತವಾಗಿ ಇಲ್ಲದಸಲ್ಲದ ರೀತಿಯಲ್ಲಿ ಕೂಗಿಕೊಂಡು ಹೋಗುತ್ತಿದ್ದನಂತೆ ಆ ಕೂಗು ಸಹಿಸದ ಪತ್ರಿಕೆಯವನೊಬ್ಬ ಕಾಂಗ್ರೆಸ್ಸಿನವರೊಬ್ಬರು ಆ ಹುಡುಗನನ್ನು ಗದರಿಸಿಕೊಂಡನಂತೆ ಆ ಹುಡುಗ ಕೂಗಿಕೊಂಡಾಗ ಅಲ್ಲಿ ಸೇರಿದವರು ಪತ್ರಿಕೆ ಮಾರುತ್ತಿದ್ದ ಹುಡುಗನನ್ನು ಗದರಿಸಿಕೊಂಡ ಪನ ಮೇಲೆ ಕುಗ್ಗಿ ಅವನನ್ನು ಹೊಡೆಯಲು ಪ್ರಯತ್ನಿಸಿದರು ಕಾಂಗ್ರೆಸ್ ಆಫೀಸಿನಲ್ಲಿದ್ದ ನಾನೂ, ಇತರ ಕಾರ್ಯಕರ್ತರೂ ಜನರನ್ನು ಸಮಾಧಾನ ಮಾಡಲು ಪ್ರಯತ್ನಪಡುತ್ತಿದ್ದೆವು ಅಷ್ಟರಲ್ಲಿ ಪೋಲೀಸಿನವರು ಬಂದು ಪರಿಸ್ಥಿತಿಯನ್ನು ಸಮಾಧಾನಕ್ಕೆ ತಂದರು ಇದು ಸಿದ್ಧಾಂತ ಇವನ್ನ ನೆಪವಾಗಿ ತೆಗೆದು ಕೊಂಡು ಕೆಲವರು ಇಲ್ಲದಸಲ್ಲದ ವಿಷಪ್ರಚಾರಕ್ಕೆ ತೊಡಗಿರುವುದು ಶೋಚನೀಯ ಮತ್ತು ಅಸಹ್ಯವಾಗಿದೆ. ಇದರಲ್ಲಿ ಯಾವ ರಾಜಕೀಯ ಕಾರಣವೂ ಇಲ್ಲವೆಂದೂ ಪ್ರಚಾರಕ್ಕೆ ಕಿವಿಗೊಡದಿರಬೇಕೆಂದು ಮಹಾಜನರಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ

ನಗರ ಕಾಂಗ್ರೆಸ್ ಪ್ರಕಟಣಾ ಸಮಿತಿ

—ಎಸ್ ಚನ್ನ[illegible]

ರಾಜ್‌ಕಮಲ್ ಮೈಸೂರು

2 ನೇ ವಾರ

ಮಾಯಕ್ಕಾರಿ

(ತಮಿಳು)

ಶೀಘ್ರದಲ್ಲಿಯೇ ಬರಲಿದೆ!

ಮೈಸೂರು ಶ್ರೀ ಗಣೇಶ್ ಮತ್ತು ಚಾಮುಂಡೇಶ್ವರಿ

ಬೆಂಗಳೂರು:— ಗೀತಾ, ಸೂಪರ್, ಪ್ರೀ

ದಾವಣಗೆರೆ:— ಜ್ಯೋತಿ ಟಾಕೀಸುಗಳಲ್ಲಿ

ಮನೋಹರ, ನೇತ್ರಾನಂದಕರ, ಮನೋಜ್ಞ ಶಿಲ್ಪ ಸುಂದರಿ!

ವಾಹಿನಿಯವರ ತೆಲುಗು ಚಿತ್ರ

* ಮಲ್ಲೀಶ್ವರಿ *

ನಾಯಕ ಎನ್ ಟಿ ರಾಮರಾವ್, ಭಾನುಮತಿ ನಿರ್ದೇಶನ ಬಿ ಎನ್. ರೆಡ್ಡಿ

A RAJSHRI RELEASE

ಒಲಿಂಪಿಯಾ 3—1—52 ರಿಂದ

ಆರ್ಭಾಟದ ಪ್ರಾರಂಭ

ಬಹು ದಿನಗಳಿಂದ ನಿರೀಕ್ಷಿಸುತ್ತಿದ್ದ [illegible] ತಾರೆಗಳಾದ

ನರ್ಗೀಸ್ ಮತ್ತು ದಿಲೀಪ್ ಕುಮಾರ್

ಪಾತ್ರವಹಿಸಿ ನಟಿಸಿರುವ [illegible]

ಸುಮಧುರ ಸಂಗೀತಗಳಿಂದ ಕೂಡಿದ ಉತ್ತಮ ಹಿಂದಿ ಚಿತ್ರ

* ಜೋಗನ್ *

ಸಹಾಯಕ ವರ್ಗ ಪ್ರತಿಮಾದೇವಿ ಪೂರ್ಣಿಮಾ [illegible]

ನಿರ್ದೇಶನ ಕಿದಾರ್ ಶರ್ಮ

ಚಂದಾದಾರರಲ್ಲಿ ವಿನಂತಿ

ಚಂದಾ ಹಣವನ್ನು ಮುಂಗಡ ತಾ|| ೧೦ ರೊಳಗೆ ಕೊಟ್ಟು ರಶೀದಿ ಪಡೆಯಬೇಕಾಗಿ ವಿನಂತಿ ವರ್ತಕರು ರಶೀತಿಯಿಲ್ಲದೆ ಕೊಟ್ಟ ಹಣಕ್ಕೆ ನಾವು ಜವಾಬ್ದಾರರಲ್ಲವೆಂಬುದನ್ನು ಖಂಡಿತವಾಗಿ ತಿಳಿಸಲು ಇಚ್ಛಿಸುತ್ತೇವೆ

ನ್ಯೂಸ್ ಪೇಪರ್ ಹೌಸ್,

ಏಜೆಂಟರು, "ಸಾಧ್ವಿ"

ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದ

ಕಾಂಗ್ರೆಸ್ಸಿಗೇ

ನಿಮ್ಮ ಓಟನ್ನು

ಮುಡುಪಾಗಿರಿಸಿರಿ

ಷಣ್ಮುಗ ವಿಲಾಸ್,

ಬ್ರಾಹ್ಮಣರ ಫಲಾಹಾರ ಮಂದಿರ

ಸರ್ಕಾರ್ ಮೈಸೂರು

ಬಹಳ ಉತ್ತಮವಾದ ಸಾಬೂನು

808

ದಿ ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ಮಹಾಜನರಲ್ಲಿ ವಿನಂತಿ

2-1-1952 ರಲ್ಲಿ ನಡೆಯುವ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾಗಿ, ಮೈಸೂರು ವಿಧಾನ ಸಭೆಗೆ

ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿರುವ

ಶ್ರೀ ಬಿ ನಾರಾಯಣಸ್ವಾಮಿ

ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿರುವ

ಶ್ರೀ ಟಿ ಮರಿಯಪ್ಪ

ಭಾರತದ ಪಾರ್ಲಿಮೆಂಟಿಗೆ ಸ್ಪರ್ಧಿಸಿರುವ

ಶ್ರೀ ಹೆಚ್. ಸಿ. ದಾಸಪ್ಪ

ಮತ್ತು

ಶ್ರೀ ಎನ್ ರಾಚಯ್ಯ

ಅವರುಗಳಿಗೆ ತಮ್ಮ ಘನವಾದ ಓಟುಗಳನ್ನು ಕೊಡಬೇಕಾಗಿ ವಿನಂತಿ

* ಕಾಂಗ್ರೆಸ್ಸಿನ ಗುರುತು



[ನಗರ ಕಾಂಗ್ರೆಸ್ ಸಮಿತಿ, ಮೈಸೂರು]

ನಂ|| ಕ್ರೇಪ್ ಸಿಲ್ಕ್ ಸೀರೆಗಳು, ಧರ್ಮಾವರ, ಕಂಚಿ, ಆರ್ನಿ, ಬನಾರಸ್, ಪೂನಾ, ಸಾಂಗ್ಲಿ, ವಗೈರಾ ಸೀರೆಗಳು ಮತ್ತು ಕಾಶ್ಮೀರ್ ಶಾಲುಗಳಿಗೆ * D. L. ನರಸಿಂಹಯ್ಯ [illegible] ಆನಂದ ಭವನ ಹತ್ತಿರ, ಮೈಸೂರು

Edited Printed and Published by A R Nagarajan, at Sadhvi Press D[illegible] Road, Mysore